ಕನ್ನಡ ಭಾಷಾಧ್ಯಯನ

ಡಾ. ಎಸ್. ಎಸ್. ಅಂಗಡಿ



ಕನ್ನಡ ಭಾಷಾಧ್ಯಯನ

ಭಾಷೆಯ ರಚನೆ, ಕಾವ್ಯಭಾಷೆ, ಶೈಲಿ, ಛಂದೋಲಯ ಕುರಿತು ಸಂಪ್ರಬಂಧಗಳ ಸಂಪುಟ

ಡಾ. ಎಸ್.ಎಸ್. ಅಂಗಡಿ

ಪೂಜ್ಯ ಗುರುಗಳಾದ
ಡಾ. ಕೆ. ವಿ. ನಾರಾಯಣ
ಅವರಿಗೆ, ಗೌರವಪೂರ್ವಕ
ಅಂಗಡಿ
3-3-2018

ಪ್ರಿಯದರ್ಶಿನಿ ಪ್ರಕಾಶನ
ನಂ. ೧೩೮, ೭ನೇ 'ಸಿ' ಮುಖ್ಯರಸ್ತೆ
ಹಂಪಿ ನಗರ, ಬೆಂಗಳೂರು ೫೬೦ ೧೦೪

KANNADA BHAASHAADHYAYANA

Research Articals on Kannada Linguistics

by

Dr. S.S. Angadi

Professer

Department of Manuscriptology

Kannada University, Hampi

Vidyaranya 583 276

Published by

Priyadarshini Publications

No.138, 7th 'C' Main Road

Hampi Nagar

Bangalore 560 104

Pages: XIV + ೯೪೨

Price: 700/-

First Impression : 2017

ಪ್ರಕಾಶಕರು

ಪ್ರಿಯದರ್ಶಿನಿ ಪ್ರಕಾಶನ

ನಂ. ೧೩೮, ೭ನೇ 'ಸಿ' ಮುಖ್ಯರಸ್ತೆ

ಹಂಪಿ ನಗರ

ಬೆಂಗಳೂರು ೫೬೦ ೧೦೪

ಬೆಲೆ: ರೂ. ೭೦೦/-

ಅಕ್ಷರ ಸಂಯೋಜನೆ

ಎಸ್.ವಿ. ಗ್ರಾಫಿಕ್ಸ್, ಕಮಲಾಪುರ

ಸೆಲ್: 98864 65386

ಮುದ್ರಕರು : ಸ್ನೇಹಾ ಪ್ರಿಂಟರ್ಸ್

ನಂ. 16, 1ನೇ ಬಿ ಮುಖ್ಯರಸ್ತೆ, ಶ್ರೀ ರಾಘವೇಂದ್ರ ಮಠದ ರಸ್ತೆ,

ಪಾಪರೆಡ್ಡಿಪಾಳ್ಯ, 11ನೇ ಬ್ಲಾಕ್, ನಾಗರಬಾವಿ 2ನೇ ಹಂತ,

ಬೆಂಗಳೂರು - ೭೨

ದೂ : 080 23212814, ಮೊ : 9845062549, 9986050012

ಅರ್ಪಣೆ

ಕಾಲವನ್ನು ಧೈರ್ಯದಿಂದ ಎದುರಿಸಿ
ಮನೆಗೆ ಬೆಳಕು ನೀಡಿದ
ನನ್ನ ಜೀವನ ದೇವತೆ
ಸೌ. ವೀಣಾಗೆ
ಒಲುಮೆಯ ಉಡುಗೊರೆ

ಅರಿಕೆ

'ಕನ್ನಡ ಭಾಷಾಧ್ಯಯನ' ಎಂಬ ಹೆಸರಿನ ನನ್ನ ಸಂಪ್ರಬಂಧಗಳ ಸಂಪುಟವನ್ನು ವಿದ್ವತ್ ಲೋಕಕ್ಕೆ ಸಾದರಪಡಿಸುತ್ತಿದ್ದೇನೆ. ಈ ಕೃತಿ ರಚನೆಗೆ ಪ್ರಚೋದನೆ ಬಂದ ಒಂದು ಸಂದರ್ಭ ಜ್ಞಾಪಕಕ್ಕೆ ಬರುತ್ತದೆ. ೧೯೯೬ರಲ್ಲಿ ಒಮ್ಮೆ ನಾನು ಆಚಾರ್ಯ ಡಾ.ಎಂ. ಚಿದಾನಂದಮೂರ್ತಿ ಅವರ ಮನೆಗೆ ಹೋದಾಗ ಅವರು ಭಾರತೀ ಭಾಷಾಕ್ಷೇತ್ರದಲ್ಲಿಯೇ ಈ ತಲೆಮಾರಿನ ಮೇರುಕೃತಿ, ಮಾನವನ ಬುದ್ಧಿಮತ್ತೆಯ ಮಹಾಸ್ಮಾರಕವಾದ ಡಾ. ಸುನೀತಕುಮಾರ ಚಟರ್ಜಿ ಅವರ 'The origin and Development of the Bengali language' ಎಂಬ ಗ್ರಂಥದಲ್ಲಿ ತಲ್ಲೀನರಾಗಿದ್ದರು.* ಅದು ತರುವಾಯದಲ್ಲಿ ನನ್ನ ಕುತೂಹಲವನ್ನು ಕೆರಳಿಸಿತು. ಈಗ ನನಗನಿಸುತ್ತದೆ: ಬಂಗಾಲಿಯಂತೆ ಕನ್ನಡ ಭಾಷೆಯ ಅವಸ್ಥೆಗಳಿಗೂ ಏಕಸೂತ್ರವಿದೆ, ಅವ್ಯಾಹತವಾದ ಒಂದು ಪರಂಪರೆಯಿದೆ. ಅಲ್ಲದೆ ಕರ್ನಾಟಕದಲ್ಲಿ ವೈವಿಧ್ಯಮಯವಾದ ಹಲವಾರು ಭಾಷಾಸಮುದಾಯಗಳಿವೆ. ಅವುಗಳಿಗೆ ಅವುಗಳದ್ದೇ ಆದ ಅನನ್ಯತೆಯಿದೆ. ಅವುಗಳ ಭಾಷೆಯ ರಚನೆ ಮತ್ತು ಬಳಕೆಯ ಸಾಮಾಜಿಕ ಆಯಾಮ ಕುರಿತು ಹೊಸ ಭಾಷಾಶಾಸ್ತ್ರ ದೃಷ್ಟಿಯಿಂದ ಅಧ್ಯಯನಕ್ಕೆ ವಿಪುಲ ಅವಕಾಶಗಳಿವೆ ಎಂಬ ಸಂಗತಿ ಸ್ಪಷ್ಟವಾಗಿ ಮನವರಿಕೆ ಆಯಿತು. ಈ ಹಿನ್ನೆಲೆಯಲ್ಲಿ ನನ್ನ ಸಂಪ್ರಬಂಧಗಳು ರಚನೆಗೊಂಡವು.

---

* ೨೮ ಆಗಸ್ಟ್, ೧೯೯೬ರಂದು ಕನ್ನಡ ವಿಶ್ವವಿದ್ಯಾಲಯದಲ್ಲಿ ಉಪಾಧ್ಯಾಯನಾಗಿ ನನ್ನ ಕೆಲಸ ಖಾಯಂ ಆಯಿತು. ಈ ವಿಷಯವನ್ನು ತಿಳಿಸಿ ಆಚಾರ್ಯ ಡಾ. ಎಂ. ಚಿದಾನಂದಮೂರ್ತಿ ಅವರ ಆಶೀರ್ವಾದ ತೆಗೆದುಕೊಂಡು ಬರಬೇಕೆಂದು ಬೆಂಗಳೂರಿಗೆ ಹೋಗಿದ್ದೆ. ಆಚಾರ್ಯರು ತುಂಬ ಸಂತೋಷ ಪಟ್ಟರಲ್ಲದೇ ತಕ್ಷಣವೇ ಕನ್ನಡ ವಿಶ್ವವಿದ್ಯಾಲಯದ ಮೇಲಧಿಕಾರಿಗಳಿಗೆ ದೂರವಾಣಿಯ ಮೂಲಕ ಅಭಿನಂದನೆ ಹೇಳಿದರು. 'ಸಂಶೋಧನೆ ಮುಂದುವರಿಸು' ಎಂದು ನನ್ನನ್ನು ಆಶೀರ್ವದಿಸಿದರು. 'ಚಿದಾನಂದಮೂರ್ತಿ' ಇದು ನನ್ನ ಮಟ್ಟಿಗೆ ಕೇವಲ ಒಂದು ವ್ಯಕ್ತಿನಾಮವಲ್ಲ. ಅದು ನನ್ನೊಳಗೆ ಯಾವಾಗಲು ಜೀವಂತವಾಗಿದ್ದು, ನನ್ನನ್ನು ನಿತ್ಯವೂ ಬೆಳೆಸುತ್ತಲಿರುವ ಜಲಧಾರೆಯಾಗಿದೆ. ಆ ಶಬ್ದವನ್ನು ನೆನೆದಾಗಲೆಲ್ಲ ನಾನು ಹೊಸ ಮನುಷ್ಯನಾಗುತ್ತೇನೆ. ನನ್ನ ಬದುಕಿಗೆ ಬಹುದೊಡ್ಡ ಆಸ್ತಿಯಾಗಿರುವ ಸಂಶೋಧನೆಯ ಆ ಕುಲಗುರುವಿನ ನೆನಪಾದಾಗಲೆಲ್ಲ ಕೃತಜ್ಞತೆಯಿಂದ ಕರಗಿಹೋಗುತ್ತೇನೆ. ಆ ಶ್ರೇಷ್ಠ ವಿದ್ವಾಂಸನ ಪಾದ ನನ್ನ ತಲೆಯ ಮೇಲೆ ಇರಲೆಂದು ಹೇಳಿ ತೃಪ್ತಿಪಟ್ಟುಕೊಳ್ಳುತ್ತೇನೆ.

ಈ ಬರೆಹದ ಹಿಂದೆ ಇಪ್ಪತ್ತು ವರ್ಷಗಳ ದುಡಿಮೆ ಇದೆ. ಇಂಗ್ಲಿಶ್‌ದಲ್ಲಿರುವ ಭಾಷಾಶಾಸ್ತ್ರಕ್ಕೆ ಸಂಬಂಧಿಸಿದ ಹಲವು ಪುಸ್ತಕಗಳನ್ನು, ಸಂಶೋಧನ ಪತ್ರಿಕೆಗಳನ್ನು ಕೈಮುಟ್ಟಿ ಮನಮುಟ್ಟಿ ಓದಿದ್ದೇನೆ. ಪಠ್ಯವಾಚನದೊಂದಿಗೆ ಬಿಡುವಿನ ಸಮಯದಲ್ಲಿ ಕ್ಷೇತ್ರಕಾರ್ಯ ಕೈಕೊಂಡು ವಿಷಯ ಸಂಗ್ರಹ ಮಾಡಿದ್ದೇನೆ. ಸಂಗ್ರಹಿಸಿದ ವಿಷಯವನ್ನು ಭಾಷಾಶಾಸ್ತ್ರದ ಅಧ್ಯಯನ ಶಿಸ್ತಿಗೆ ಒಳಪಡಿಸಿ ಎರಕ ಹೊಯ್ದು ನನ್ನದೇ ಆದ ಒಂದು ವಿನ್ಯಾಸದಲ್ಲಿ ರೂಪಿಸಿದ್ದೇನೆ.

ಕನ್ನಡ ಭಾಷಾಶಾಸ್ತ್ರ ಅಧ್ಯಯನ ಕ್ರಮವನ್ನು ಕುರಿತು ಕೆಲವು ಮಾತುಗಳನ್ನು ಹೇಳಬೇಕೆನಿಸುತ್ತದೆ. ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಸಿ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಬೇಕಾಗಿದೆ. ಕನ್ನಡ ಭಾಷಾಶಾಸ್ತ್ರ ಅರಿವಿನ ಆಧುನೀಕರಣದ ಈ ಕಾಲಘಟ್ಟದಲ್ಲಿ ತನ್ನನ್ನು ಸಕಾಲಿಕಗೊಳಿಸುವುದು ಅನಿವಾರ್ಯವಾಗಿದೆ. ಈ ದೃಷ್ಟಿಯಿಂದ ಕನ್ನಡ ಭಾಷಾಶಾಸ್ತ್ರದ ಅಧ್ಯಯವನ್ನು ಮರುಚಿಂತನೆಗೆ ಗುರಿಪಡಿಸುವ ಅವಶ್ಯಕತೆ ಇದೆ. ಭಾಷಾಶಾಸ್ತ್ರ ಎಂದರೆ ಕೇವಲ ಭಾಷೆಯ ರಚನೆ, ವ್ಯಾಕರಣ ವರ್ಗಗಳನ್ನು ಕುರಿತು ಅಧ್ಯಯನ ಮಾಡುವ ವಿಷಯವಲ್ಲ. ಆ ರಚನಾತ್ಮಕ ಅಧ್ಯಯನ ಭಾಷಾಶಾಸ್ತ್ರದ ಒಂದು ಶಾಖೆ ಅಷ್ಟೇ. ಅದನ್ನು ಮಾತ್ರ ಪ್ರಧಾನವಾಗಿ ಅಧ್ಯಯನ ಮಾಡುವುದು ಸೂಕ್ತ ಅಲ್ಲ. ಕನ್ನಡದ ಸಂದರ್ಭದಲ್ಲಿ ಹೇಳುವುದಾದರೆ ಇಲ್ಲಿಯವರೆಗೆ ಆ ತರಹದ ಅಧ್ಯಯನವನ್ನೇ ಮಾಡಲಾಗಿದೆ. ಅಂತಹ ಅಧ್ಯಯನ ಶುಷ್ಕವಾಗುತ್ತದೆ ಅಲ್ಲದೆ ಭಾಷಾಧ್ಯಯನ ಕಬ್ಬಿಣದ ಕಡಲೆ ಇದ್ದ ಹಾಗೆ; ಅದನ್ನು ಪಂಡಿತರು ಮಾತ್ರ ವ್ಯಾಸಂಗ ಮಾಡುತ್ತಾರೆ ಎಂಬ ಪ್ರವೃತ್ತಿಯೂ ಬೆಳೆದಿದೆ. ಈ ಪ್ರವೃತ್ತಿಯಿಂದ ಕನ್ನಡ ಭಾಷಾಶಾಸ್ತ್ರದ ಬೆಳವಣಿಗೆಗೆ ದೊಡ್ಡ ಪೆಟ್ಟು ಬಿದ್ದಿದೆ.

ಭಾಷೆ-ಸಮಾಜ-ಸಂಸ್ಕೃತಿ ಇವು ಪರಸ್ಪರ ಪೂರಕವಾಗಿವೆ. ಭಾಷಾಧ್ಯಯನದಲ್ಲಿ ಭಾಷೆಯ ಸಾಮಾಜಿಕ ಚಹರೆ ಮುಖ್ಯ. ಒಂದು ಭಾಷಾ ಸಮುದಾಯದ ಬಗೆಗೆ ಅಧ್ಯಯನ ಮಾಡುವಾಗ ಆ ಕುರಿತು ಇರಬಹುದಾದ ಅಧ್ಯಯನದ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳುತ್ತ, ಅಧ್ಯಯನ ಕ್ರಮವನ್ನು ಮತ್ತೆ ಮತ್ತೆ ಪ್ರಶ್ನಿಸಿಕೊಳ್ಳುತ್ತ ಆ ಮೂಲಕ ಹೊಸತನವನ್ನು ಅಳವಡಿಸಿಕೊಳ್ಳಬೇಕಾಗಿದೆ. ಭಾಷಾಧ್ಯಯನವನ್ನು ಕೂಡ ವೈಚಾರಿಕವಾಗಿ, ಸೃಜನಶೀಲ ಮಾದರಿಯನ್ನಾಗಿ ರೂಪಿಸಬೇಕಾಗಿದೆ. ಆ ಮೂಲಕ ಅಧ್ಯಯನ ಕ್ಷೇತ್ರ ಸಹೃದಯರನ್ನು ನಿರಾಯಾಸವಾಗಿ ತನ್ನತ್ತ ಸೆಳೆದುಕೊಳ್ಳುತ್ತದೆ. ಕನ್ನಡ ಭಾಷಾಲೋಕದ ಮೊದಲು ವಾರಸುದಾರರು ಸಾಮಾನ್ಯ ಜನರು. ಭಾಷೆಯನ್ನು ಬಳಸುವ ಅವರಿಗೆ ತಮ್ಮ ಭಾಷೆಯ ಬಳಕೆಯ ಬಗ್ಗೆ ಕುತೂಹಲ ಮೂಡಬೇಕು, ಆ ಕುರಿತು ಪ್ರೀತಿ ಬೆಳೆಸಿಕೊಳ್ಳಬೇಕು. ಬೇರೆ ಬೇರೆ ಬಳಕೆಯ ವಲಯಗಳಲ್ಲಿ ಬಳಕೆಯಾಗುವ ಭಾಷೆಯ ಸ್ವರೂಪ ಮಾತಾಡುವವರ ಅರಿವಿಗೆ ನಿಲುಕಬೇಕು. ಅದರ ಸ್ವರೂಪ ಸಾರ್ವತ್ರಿಕಗೊಳ್ಳಬೇಕು. ಆಗ ಭಾಷಾಧ್ಯಯನ ಜಡತೆಯಿಂದ ಚಲನಶೀಲತೆ ಕಡೆಗೆ

ಸಾಗುತ್ತದೆ. ಅಂದರೆ ಭಾಷಾಶಾಸ್ತ್ರ ಪಳೆಯುಳಿಕೆ ಶಾಸ್ತ್ರವಾಗದೆ ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನಗತಿಯನ್ನು ಬದಲಾಯಿಸಿಕೊಳ್ಳಬೇಕು ಎಂಬುದು ಮುಖ್ಯವಾದ ಸಂಗತಿ. ಈ ವೈಚಾರಿಕ ಪಾತಳಿಯಲ್ಲಿ ನನ್ನ ಭಾಷಾಧ್ಯಯನ ರೂಪುಗೊಳ್ಳುತ್ತದೆ.

ನನ್ನ ತಲೆಮಾರಿನವರು, ನಮ್ಮ ಹಿಂದಿನವರಿಗಿಂತ ಎಷ್ಟು ಮುಂದೆ ಹೋದೆವು, ಬೇರೆಯಾದೆವು ಅನ್ನುವುದನ್ನು ಬೇರೆಯವರು ಹೇಳಬೇಕು. ನಾನು ಸ್ವಲ್ಪಮಟ್ಟಿಗೆ ಅವರು ಮಾಡದೇ ಇದ್ದ ವಿಧಾನವನ್ನು ಅನುಸರಿಸಿದೆ. ಕ್ಷೇತ್ರಕಾರ್ಯದ ಕಡೆಗೇ ಹೆಚ್ಚು ಗಮನಕೊಟ್ಟೆ. ಅದು ನನ್ನ ಹಿಂದಿನವರಿಗಿಂತ ಸ್ವಲ್ಪ ಭಿನ್ನವಾದ ರೀತಿಯ ಶೋಧ. ಭಾಷೆಯ ಬಳಕೆಯನ್ನು ಸಂಸ್ಕೃತಿಯ ದೃಷ್ಟಿಯಿಂದ ನೋಡುವಂತಹ ಪ್ರಯತ್ನ ಮಾಡಿದೆ. ಅದಕ್ಕೆ ಕಾರಣ ಮೂಲಭೂತವಾಗಿ ನಾನು ಹಳ್ಳಿಯವನೇ ಆಗಿದ್ದು. ಇಂದು ಪಟ್ಟಣದಲ್ಲಿ ಬದುಕುತ್ತಿದ್ದರೂ 'ಹಳ್ಳಿತನ'ವನ್ನು ನನ್ನ ಸ್ವಭಾವದಲ್ಲಿ ಉಳಿದುಕೊಂಡಿರುವುದರಿಂದ ಗ್ರಾಮೀಣ ಬದುಕು, ಜನಜೀವನದ ಕಷ್ಟ ಸುಖ, ಏಳು ಬೀಳು ಇಂತಹ ಸಂದರ್ಭದಲ್ಲಿ ಭಾಷೆ ಹೇಗೆ ಅಭಿವ್ಯಕ್ತವಾಗುತ್ತದೆ ಎನ್ನುವುದನ್ನು ನೋಡುವ ಆಸಕ್ತಿ. ಈ ದೃಷ್ಟಿಯಿಂದ ಸಮುದಾಯವನ್ನು ಕೇಂದ್ರವಾಗಿಟ್ಟುಕೊಂಡು ನನ್ನ ಬರೆಹಗಳು ರೂಪುಗೊಂಡವು. ತತ್ಪರಿಣಾಮವಾಗಿ ಕ್ಷೇತ್ರ ಭಾಷಾವಿಜ್ಞಾನ, ಸಾಮಾಜಿಕ ಭಾಷಾವಿಜ್ಞಾನ, ಮಾನವ ಭಾಷಾವಿಜ್ಞಾನ, ನಿಘಂಟುಶಾಸ್ತ್ರ, ಸಾಹಿತ್ಯ ಮತ್ತು ಸಾಹಿತ್ಯ ರೂಪಗಳನ್ನು ಭಾಷೆಯ ದೃಷ್ಟಿಯಿಂದ ನೋಡುವುದು, ಛಂದೋಲಯವನ್ನು ಭಾಷೆಯ ರಚನೆಯ ನೆಲೆಯಲ್ಲಿ ಗುರುತಿಸುವುದು, ಹಸ್ತಪ್ರತಿಯಂತಹ ಪ್ರಾಚೀನ ಆಕರಗಳಲ್ಲಿ ಭಾಷೆಯ ಅವಸ್ಥಾಂತರದ ಕುರುಹುಗಳನ್ನು ಹುಡುಕುವುದು, ಇಂದಿನ ಓದುಗರ ಸಾಮರ್ಥ್ಯಕ್ಕೆ ತಕ್ಕಂತೆ ಪ್ರಾಚೀನ ವ್ಯಾಕರಣಗಳನ್ನು ವಿನ್ಯಾಸಗೊಳಿಸುವುದು ಇಂತಹ ಭಾಷಾಧ್ಯಯನದ ಶಾಖೆಗಳು ಕನ್ನಡದ ಸಂದರ್ಭದಲ್ಲಿ ನನ್ನಿಂದಲೇ ಅನಾವರಣಗೊಂಡವು ಎನ್ನುವುದನ್ನು ವಿನಮ್ರವಾಗಿ ಹೇಳಬಯಸುತ್ತೇನೆ. ಆ ಅಧ್ಯಯನ ಶಾಖೆಗಳ ಬೆಳವಣಿಗೆಗೆ ಸೈದ್ಧಾಂತಿಕ ಮತ್ತು ಪೂರಕ ಸಾಹಿತ್ಯವನ್ನು ಕನ್ನಡಕ್ಕೆ ಕೊಟ್ಟಿದ್ದೇನೆ. ಹೀಗೆ, ಹಲವು ನೆಲೆಗಳಲ್ಲಿ ಹಿಂದಿನವರಿಗಿಂತ ಭಿನ್ನವಾದರೂ ದೃಷ್ಟಿ ಒಂದೇ ಹೊಸತನ್ನು ಕಾಣುವುದು. ಪ್ರಸ್ತುತ ಕೃತಿಯೂ ಸಹಿತ ಆ ವೈಚಾರಿಕ ಪಾತಳಿಯಲ್ಲಿಯೇ ರೂಪುಗೊಂಡಿದೆ.

ಪ್ರಸ್ತುತ ಅಧ್ಯಯನ, ಸಿದ್ಧಮಾದರಿಯ ಭಾಷಾಧ್ಯಯನದ ವಿಧಾನಗಳನ್ನು ಹಾಗು ಭಾಷೆಯನ್ನು ಕುರಿತು ಅಧ್ಯಯನಕಾರರ ದೃಷ್ಟಿಯನ್ನು ಬದಲಾಯಿಸುತ್ತದೆ ಎಂಬ ಭರವಸೆ ನನಗಿದೆ. ನನ್ನ ಕೃತಿಯ ಮೌಲಿಕತೆಯ ಬಗೆಗೆ ನಾನು ಏನೂ ಹೇಳಬಾರದು. ಅದರ ಲೇಖಕನಾದ ನನಗೆ ವಸ್ತುನಿಷ್ಠ ದೃಷ್ಟಿ ಬರಲು ಹೇಗೆ ಸಾಧ್ಯ? ನನಗೇನೋ ಪ್ರತಿಯೊಂದು ಸಂಪ್ರಬಂಧದಲ್ಲೂ ಹೊಸದರ ಕಡೆಗೆ ದೃಷ್ಟಿಯಿದೆ. ಹೊಸತನ ಕಾಣುವುದರತ್ತ ನನ್ನ ಗಮನವಿದೆ ಎಂಬ ಆತ್ಮವಿಶ್ವಾಸದ ಮಾತನ್ನು ಹೇಳಿಕೊಳ್ಳಲು ಬಯಸುತ್ತೇನೆ. ಆದರೂ

ಈ ಅಧ್ಯಯನದ ಮೌಲ್ಯಮಾಪನವನ್ನು ಆ ಕ್ಷೇತ್ರದ ತಜ್ಞರಿಗೇ ಬಿಡುತ್ತೇನೆ. ಆಗ ಹೊಸ ಅಧ್ಯಯನದ ಬೆಳಕಿನಲ್ಲಿ ಕೃತಿ ಪರಿಷ್ಕಾರವಾಗುತ್ತದೆ. ಆ ಮೂಲಕ ಸಮುದಾಯದ ಅಧ್ಯಯನದ ಬಗೆಗೆ ಮಾರ್ಗದರ್ಶಕ ಹೊಸಸೂತ್ರಗಳು ರೂಪು ಗೊಳ್ಳುತ್ತವೆ ಎಂಬ ನಿಲುವು ನನ್ನದು. ಅಂತಹ ಆರೋಗ್ಯಪೂರ್ಣ ವಿಮರ್ಶೆಗಳನ್ನು ಸಂತೋಷದಿಂದ ಸ್ವಾಗತಿಸುತ್ತೇನೆ. ಇಷ್ಟು ಮಾತುಗಳೊಂದಿಗೆ 'ಕನ್ನಡ ಭಾಷಾಧ್ಯಯನ' ಎಂಬ ನನ್ನ ಮೇರುಕೃತಿಯನ್ನು ಕನ್ನಡ ಭಾಷಾ ಪ್ರಪಂಚಕ್ಕೆ ನೀಡುತ್ತೇನೆ.

ಈ ಗ್ರಂಥದ ಹಸ್ತಪ್ರತಿಯ ಬಹುಭಾಗ ಒಂದು ವರ್ಷದ ಹಿಂದೆಯೇ ಸಿದ್ಧವಾಗಿದ್ದಿತು. ಪ್ರಕಾಶನ ಸಮಸ್ಯೆ ಎದುರಾಯಿತು. ಒಮ್ಮೆ ಅಳುಕುತ್ತಲೆ ಬೆಂಗಳೂರಿನ ಪ್ರಿಯದರ್ಶಿನಿ ಪ್ರಕಾಶನದ ಒಡೆಯರರಿಗೆ ಶ್ರೀ ವಿ. ಮಹೇಶ್ ಅವರಿಗೆ ವಿಷಯ ತಿಳಿಸಿದೆ. ಅವರು ತುಂಬ ಸಂತೋಷದಿಂದ ಒಪ್ಪಿದರು. ಡಿ.ಟಿ.ಪಿ. ಕೆಲಸ ಮುಗಿದೊಡನೆ ಹೇಳಿ ಎಂದು ಆಗಾಗ್ಗೆ ಕೇಳುತ್ತ ನನ್ನ ಉತ್ಸಾಹವು ಕುಂದದಂತೆ ನೋಡಿಕೊಂಡರು. ಈಗ ಅದನ್ನು ಸುಂದರವಾಗಿ ಪ್ರಕಟಿಸಿದ್ದಾರೆ. ಅವರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುವುದು ಸಂತೋಷದ ಕೆಲಸವಾಗಿದೆ. ಅಕ್ಷರ ಸಂಯೋಜನೆಯನ್ನು ಪೂರೈಸಿದ ಕಮಲಾಪುರದ ಎಸ್.ವಿ. ಗ್ರಾಫಿಕ್ಸ್‌ನ ಶ್ರೀ ಜೆ. ಶಿವಕುಮಾರ ಅವರ ಸಹಕಾರ ನೆನೆದಷ್ಟು ಸಾಲದು.

ಡಾ. ಎಸ್.ಎಸ್. ಅಂಗಡಿ

ಪರಿವಿಡಿ

ಭಾಗ - ೧

ಭಾಷೆ : ಭಾಷೆಯ ರಚನೆ

೧

ಭಾಷೆಯ ಸುತ್ತಮುತ್ತ : ಒಂದು ವಿವೇಚನೆ

ಕೆ.ವಿ. ನಾರಾಯಣ ಅವರ **ಭಾಷೆಯ ಸುತ್ತಮುತ್ತ**(೧೯೯೮), **ಮತ್ತೆ ಭಾಷೆಯ ಸುತ್ತಮುತ್ತ**(೨೦೦೧) ಗ್ರಂಥಗಳಲ್ಲಿ ಅವರ ಪಾಂಡಿತ್ಯ ಮತ್ತು ಸಹೃದಯತೆಗಳ ಅಪೂರ್ವವಾದ ಸಮನ್ವಯತೆಯಿದೆ. ಆಚಾರ್ಯ ಎಂ. ಚಿದಾನಂದಮೂರ್ತಿ ಅವರಂತಹ ಶ್ರೇಷ್ಠ ವಿದ್ವಾಂಸರ ಹತ್ತಿರ ನಾರಾಯಣರು ಭಾಷಾಶಾಸ್ತ್ರವನ್ನು ಕಲಿತವರು. ಈ ಗ್ರಂಥಗಳ ಹಿಂದೆ ಕೂಡ ಚಿದಾನಂದಮೂರ್ತಿ ಅವರ ಪಾಠಗಳ ಪ್ರೇರಣೆ ನಿರಂತರವಾಗಿದೆ. ಈ ದೃಷ್ಟಿಯಿಂದ ನೋಡಿದಾಗ ಈ ಗ್ರಂಥದಲ್ಲಿರುವ ವಿದ್ಯೆ ಸಾಂಪ್ರದಾಯಿಕ ವಿದ್ಯೆಯಲ್ಲ; ಗುರುವಿನಿಂದ ಶಿಷ್ಯನಿಗೆ ಧ್ಯೇಯವಾದ ವಿದ್ಯೆ. ಅದು ಗುರುಶಿಷ್ಯರ ಎಚ್ಚರಿಕೆಯಿಂದ ಅಕ್ಷಯವಾಗಿ ಉಳಿಯುತ್ತಾದರೂ ಕೈ ಬದಲಾಗಿದ್ದರಿಂದ ಅದರ ಸ್ವರೂಪವೂ ಬದಲಾಗುತ್ತದೆ, ಆಗಬೇಕು. ದಂಡಿಯ ಕಾವ್ಯಾದರ್ಶನವನ್ನೇ ಕವಿರಾಜಮಾರ್ಗಕಾರ ಕನ್ನಡದ ಜಾಯಮಾನಕ್ಕೆ ತಕ್ಕಂತೆ ಬಳಸಿಕೊಂಡಿದ್ದಾನೆ. ನಿಜ, ಆದರೆ ಕವಿರಾಜಮಾರ್ಗಕಾರ ಅದನ್ನು ಗ್ರಹಿಸುವ ರೀತಿಯಲ್ಲೇ ಅದರ ಸ್ವರೂಪ ಬದಲಾಗುತ್ತದೆ.

ನಾರಾಯಣರು ತಮ್ಮ ಬರೆಹದ ಉದ್ದೇಶವನ್ನು ತಾವೇ 'ಅರಿಕೆ'(ಮೊದಲಿಗೆ)ಯಲ್ಲಿ "ಭಾಷಾಶಾಸ್ತ್ರದ ಅಧ್ಯಯನ ವಿಧಾನಗಳನ್ನು ಬಳಸುವ ತಜ್ಞ ಬರೆಹಗಳ ಮಾದರಿಯನ್ನು ಬಲ್ಲವರಿಗೆ ಈ ಸಂಕಲನದ ಟಿಪ್ಪಣಿಗಳು ಬೇರೆಯಾಗಿ ತೋರುವುದು ಸಹಜ. ತಜ್ಞರ ಚರ್ಚೆಗೆ ಅನುವು ಮಾಡಿಕೊಡುವ ಉದ್ದೇಶ ಮತ್ತು ಗುರಿಗಳನ್ನು ಹೊಂದಿದ ಬರೆಹಗಳ ವಿಧಾನವೂ ಭಿನ್ನ. ಆದರೆ ಇಲ್ಲಿಯ ಟಿಪ್ಪಣಿಗಳು ಭಾಷೆಯ ಸಾಧ್ಯತೆ ಮತ್ತು ವ್ಯಾಪಕತೆಗಳಲ್ಲಿ ಆಸಕ್ತರಾದ ತಜ್ಞರೇ ಆಗಬೇಕಿಲ್ಲ. ಓದುಗರೊಡನೆ ಸಂವಾದವನ್ನು ಬೆಳೆಯ ಬಯಸುತ್ತವೆ. ಹಾಗಾಗಿ ಇಲ್ಲಿ ವಾಗ್ವಾದದ ವಿಧಾನ ಮುಖ್ಯವಾಗುತ್ತದೆ" ಎಂದು ಮುಂತಾಗಿ ಬರೆದು ಸ್ಪಷ್ಟಪಡಿಸಿದ್ದಾರೆ. ಈ ನಿವೇದನೆಯಲ್ಲಿ ಮುಚ್ಚುಮರೆಯೇ ನಿಲ್ಲವೆನ್ನುವುದನ್ನು ಈ ಗ್ರಂಥಗಳನ್ನು ಓದಿದವರು ಸುಲಭವಾಗಿ ಗ್ರಹಿಸಬಲ್ಲರು.

ಈ ಗ್ರಂಥಕಾರರು ನಿರೂಪಣೆಯಲ್ಲಿ ಅನುಸರಿಸಿರುವ ಕ್ರಮ ವಿಶಿಷ್ಟವಾದುದು. ಕನ್ನಡ ಭಾಷಾ ಬಳಕಗೆ ಸಂಬಂಧಿಸಿದಂತೆ ಮುಖ್ಯ ಐದು ಆಯಾಮಗಳಿಗೆ ಸಂಬಂಧಿಸಿದಂತೆ ಅಂದರೆ ಭಾಷಾ ಪರಿಸರ, ಮಾತು-ಬರೆಹ, ಪದಲೋಕ, ಕಲಿಕೆ, ಬಳಕೆ ಈ ಅಧ್ಯಾಯಗಳನ್ನು ವಿಂಗಡಿಸಿ ಅದರಲ್ಲಿ ಉಪಶೀರ್ಷಿಕೆಗಳನ್ನು ಮಾಡಿ ವಿಷಯ ವಿವೇಚನೆ ಮಾಡಿರುವುದು ಕಾಣುತ್ತದೆ. ಸಾಮಾನ್ಯವಾಗಿ ಭಾಷೆಯ ರಚನೆ ಹಿಂದೆ ಹೇಗಿತ್ತು ಎಂಬುದರ ವಿವರಗಳನ್ನು ಹೆಚ್ಚು ಕೆದಕಲು ಹೋಗದೆ, ಇಂದಿನ ಕನ್ನಡ ಭಾಷಾಬಳಕೆಯ ಸ್ವರೂಪ, ಸಮಸ್ಯೆಗಳು, ಸವಾಲುಗಳು ಇವುಗಳನ್ನು ಮುಂದು ಮಾಡಿದೆಯೆನ್ನಬಹುದು. ಈ ಕೃತಿಗಳ ಸ್ವರೂಪ ಮತ್ತು ಆಶಯಗಳನ್ನು ಕುರಿತು ಈ ಸಂಪ್ರಬಂಧದಲ್ಲಿ ವಿವೇಚಿಸಲಾಗಿದೆ.

ನಾರಾಯಣರು **ಭಾಷಾಪರಿಸರದ** ಬಗ್ಗೆ ಮೌಲಿಕವಾಗಿ ಲೇಖನಗಳನ್ನು ರಚಿಸಿದ್ದಾರೆ. 'ಕನ್ನಡ ಉಳಿಯುವುದೇ?', 'ಕನ್ನಡ: ಆತಂಕಗಳು', 'ಭಾಷೆ ಮತ್ತು ಸತ್ಯ', 'ಭಾಷೆ, ಸಾಹಿತ್ಯ ಮತ್ತು ರಾಜಕಾರಣ', 'ಭಾಷೆ ಮತ್ತು ಸಾಹಿತ್ಯ', 'ಭಾಷಾಶಾಸ್ತ್ರದ ಜವಾಬ್ದಾರಿ', 'ಭಾಷೆಯೆಂಬ ಗೋಡೆ', 'ಕನ್ನಡಿಗರು ಆಡುವ ಇಂಗ್ಲಿಶ್', 'ಎಲ್ಲಾ ಭಾಷೆಗಳೂ ಸಮಾನ' ಈ ಲೇಖನಗಳಲ್ಲಿ ಭಾಷೆ, ಸಂಸ್ಕೃತಿಯ ಅಂಗವಾಗಿದೆ. ಸಂಸ್ಕೃತಿಗೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳಿಗೆ ಭಾಷೆ ಬುನಾದಿಯಾಗುತ್ತದೆ. ಭಾಷಿಕರಿಗೆ ಯೋಚಿಸುವ ಮತ್ತು ಮಾತನಾಡುವ ಶಕ್ತಿ ಇರುವುದರಿಂದಲೇ ಮನುಷ್ಯ ಇತರ ಪ್ರಾಣಿಗಳಿಗಿಂತ ಮುಂದುವರೆದಿದ್ದಾನೆ. ಮನುಷ್ಯ ಯಾವ ಪ್ರಾಣಿ ವರ್ಗದಲ್ಲಿಯೂ ಇಲ್ಲದಿರುವಷ್ಟು ವ್ಯವಸ್ಥಿತವಾಗಿ ಪರಸ್ಪರ ಸಂವಹಿಸಬಲ್ಲ ಭಾಷೆಯನ್ನು ಮನುಷ್ಯ ತನ್ನ ಸ್ವಪ್ರಯತ್ನದಿಂದ ಕಲಿತುಕೊಂಡ. ಅದರ ಮೂಲಕವೇ ಅವನ ಭಾಷಾ ವ್ಯವಹಾರ ಸಾಗುತ್ತದೆ. ಭಾಷೆ, ಮನುಷ್ಯನ ಉಳಿವಿನಷ್ಟೇ ಅನಿವಾರ್ಯ ಮತ್ತು ಅಗತ್ಯವಾಗಿದೆ.

ಭಾಷೆ, ವ್ಯಕ್ತಿಗೆ ಪರಂಪರಾಗತವಾಗಿ ಬರದೆ ಕಲಿಕೆಯಿಂದ, ಅನುಕರಣೆಯಿಂದ ಬರುವಂತಹುದಾಗಿದೆ. ಭಾಷೆಯ ಮೂಲಕವೇ ಸಮುದಾಯದ ನಡೆ-ನುಡಿ, ಆಚಾರ-ವಿಚಾರಗಳು, ಮನಸ್ಸಿನ ಭಾವನೆಗಳು ಪೀಳಿಗೆಯಿಂದ ಪೀಳಿಗೆಗೆ ಸಾಗಿಸಲ್ಪಡುತ್ತವೆ. ಭಾಷೆ ಕೇವಲ ಪದಗಳನ್ನಷ್ಟೇ ಒಳಗೊಳ್ಳದೆ ಆ ಪದಗಳ ಹಿಂದೆ ಆ ಭಾಷೆಯನ್ನಾಡುವ ಜನಗಳ ಬದುಕು, ಜೀವನ ಕ್ರಮದ ಅನೇಕ ಅಂಶಗಳನ್ನೊಳಗೊಂಡಿರುತ್ತದೆ. ಯಾವುದೇ ಪದಗಳ ಮೇಲುನೋಟಕ್ಕೆ ಸ್ವತಂತ್ರ ಎಂದು ಕಂಡುಬಂದರೂ ಅದರ ಹಿಂದೆ ಒಂದು ಜನಾಂಗದ ಸಂಸ್ಕೃತಿಯ ಗಾಢವಾದ ಸಂಬಂಧ ಇರುತ್ತದೆ. ಭಾಷೆಯು ಈ ಕಾರಣದಿಂದ ಸಂಸ್ಕೃತಿಯ ಅನೇಕ ಅಂಶಗಳನ್ನು ಪೀಳಿಗೆಯಿಂದ ಪೀಳಿಗೆಗೆ ಕೊಂಡೊಯ್ಯುತ್ತದೆ ಎನ್ನಬಹುದು. ಭಾಷೆಯು ಸಂಸ್ಕೃತಿಯ ಒಂದು ಅಂಗವಾಗಿಯೂ, ಸಮಗ್ರ ಸಂಸ್ಕೃತಿಯ ವಾಹಕವಾಗಿಯೂ ಕೆಲಸ ಮಾಡುತ್ತದೆ.

ಭಾಷೆಗಳ ನಡುವಿನ ವ್ಯತ್ಯಾಗಳಿಗೆ ಶಕ್ತಿ ರಾಜಕಾರಣವೂ ಸಹಿತ ಕಾರಣವಾಗದೆ. ಸಮುದಾಯಗಳಲ್ಲಿಯ ನಡೆಯುವ ಪಲ್ಲಟಗಳು ಭಾಷೆಯನ್ನು ನಿಯಂತ್ರಿಸುತ್ತವೆ. ಕನ್ನಡ ಭಾಷೆಗೆ ಯಾವ ಕಾಲಕ್ಕೂ ಆತಂಕಗಳಿಲ್ಲ. ಕನ್ನಡ ಭಾಷೆ ಸೃಷ್ಟಿಶೀಲವೂ ಚಲನಶೀಲವೂ ಆಗಿದೆ. ಅದು ಕೇವಲ ಮಾಧ್ಯಮವಾಗಿ ಅಷ್ಟೇ ಅಲ್ಲ ಅದರಾಚೆ ತನ್ನ ನಿರ್ಣಾಯಕ ಪಾತ್ರವಹಿಸುತ್ತದೆ ಎಂಬ ನಾರಾಯಣ ನಿಲುವುದ ಸರಿಯಾಗಿಯೇ ಬಂದಿದೆ.

'ಮಾತು' ಮತ್ತು 'ಬರೆಹ' ಭಾಷೆಯ ಎರಡು ಆವಿಷ್ಕಾರಗಳು. ಅವುಗಳ ಸ್ವರೂಪ ವನ್ನು ಕುರಿತು ಇಲ್ಲಿಯವರೆಗೆ ಬೇರೆ ಬೇರೆ ರೀತಿಯಾಗಿ ಅಭ್ಯಾಸ ಮಾಡಲಾಗುತ್ತಿದೆ. ನಾರಾಯಣರು ಅವು ಒಂದನ್ನೊಂದು ಪ್ರಭಾವಿಸುವ ಬಗೆಯನ್ನು ತುಂಬ ಅರ್ಥ ಪೂರ್ಣವಾಗಿ ವಿವೇಚಿಸಿದ್ದಾರೆ. 'ಕನ್ನಡ ಮಾತು ಮತ್ತು ಬರೆಹ', 'ಮಾತು ಮತ್ತು ಬರೆಹ: ಮತ್ತಷ್ಟು ವಿಚಾರಗಳು', 'ಮಾತು ಮೊದಲು, ಬರೆಹ ಆಮೇಲೆ, ಹೌದೆ?', 'ಲಲ್ಲೆ ಮಾತು', 'ಅ' ಲಿಪಿಯ ಎರಡು ವಿಚಾರಗಳು', 'ಬರೆಹದ ಸಾಮಾಜಿಕತೆ', 'ಮಾತು, ಬರೆಹ: ಕೊಡುಕೊಳೆ', 'ಕನ್ನಡ ಲಿಪಿ ಸುಧಾರಣೆ' - ಇಂತಹ ಬರೆಹಗಳು ತುಂಬ ಚಿಂತನೆಗೆ ಹಚ್ಚುತ್ತವೆ. ಮಾತು ಬಲ್ಲ ನಿರಕ್ಷರಿಗಳನ್ನು ಬರೆಹ ಬಲ್ಲವರನ್ನಾಗಿ ಪರಿವರ್ತಿಸುವ ಮೂಲಕ ನಾಗರಿಕತೆಯ ಬೆಳವಣಿಗೆ ಸಾಧ್ಯ ಎಂಬ ಭಾವನೆ ನಮ್ಮ ಶಿಕ್ಷಣವೆತ್ತವರಲ್ಲಿದೆ. ಅದಕ್ಕೆ ಒತ್ತಾಯಪೂರ್ವದ ಪ್ರಯತ್ನ ಸೂಕ್ತವಲ್ಲ. ನಾರಾಯಣರು ಬರೆಹದ ಸಾಧ್ಯತೆಗಳನ್ನು ಇನ್ನು ಅರಿಯಬೇಕಾಗಿದೆ ಎಂದು ಸೂಚಿಸಿದ್ದಾರೆ. ಲಿಪಿಯ ಬಗ್ಗೆ ಅವರ ಚಿಂತನೆಗಳು ತುಂಬ ಮಾರ್ಮಿಕವಾಗಿವೆ; ವಿಚಾರ ಯೋಗ್ಯವಾಗಿವೆ.

ಕನ್ನಡ ನಿಘಂಟುವಿಗೆ ನಾರಾಯಣರ ಕಾಣಿಕೆ ಮೌಲಿಕವಾದುದು. ಅವರು ತಮ್ಮ ಚಿಂತನೆಗಳಿಂದ ಕೋಶರಚನೆಗೆ ಹೊಸದೊಂದು ದಾರಿ ತೆರೆದದ್ದು ಐತಿಹಾಸಿಕವಾಗಿ ಬಹಳ ಮುಖ್ಯವಾಗಿದೆ. ಆ ಕುರಿತು ಅವರ ಬರೆಹಗಳು **ಪದಲೋಕ** ಭಾಗದಲ್ಲಿ ಸಮಾವೇಶಗೊಂಡಿವೆ. 'ಪದಕೋಶ', 'ಪದಕೋಶ: ಎರಡು ಬಗೆಗಳು', 'ಪದಕೋಶ ದಲ್ಲಿ ಒಳಚಲನೆ', 'ಕನ್ನಡ ಪದಕೋಶ', 'ಪಾರಿಭಾಷಿಕ ಪದಗಳು', 'ಹೊಸಗನ್ನಡಕ್ಕೆ ಒಂದು ಹೊಸ ನಿಘಂಟು', 'ಕನ್ನಡ-ಕನ್ನಡ ನಿಘಂಟಿನ ಕಂಪ್ಯೂಟರೀಕರಣ' ಈ ಬಗ್ಗೆ ಅವರ ಬರೆಹಗಳು ಆ ಕ್ಷೇತ್ರದಲ್ಲಿ ಪ್ರಥಮವಾಗಿ ಬಂದುವಾಗಿದ್ದು ಭಾಷಾಧ್ಯಯನ ಕಾರರಿಗೆ ಹೊಸದಿಗಂತವನ್ನು ತೋರಿಸಿದವು. ಭಾಷಿಕರು ಪದಕೋಶವನ್ನು ಪಡೆಯುವ, ಬಳಸುವ ವಿಧಾನ ಕೂಡ ಕುತೂಹಲಕಾರಿಯಾಗಿದೆ. ತಾತ್ಪರ್ಯವಿಷ್ಟೆ, ಹೊಸಗನ್ನಡ ಕೋಶಗಳ ರಚನೆಗೆ ನಾರಾಯಣರು ಕೆಲವು ಉಪಕರಣಗಳನ್ನು ಕೊಟ್ಟರು. ಇಂದಿಗೂ ಹೊಸ ನಿಘಂಟುಗಳನ್ನು ರಚಿಸುವವರು ಅವರ ಬರೆಹಗಳಿಂದಲೇ ಸ್ಫೂರ್ತಿಯನ್ನು, ಸೂಚನೆಯನ್ನು ಪಡೆಯಬೇಕಾಗಿದೆ ಎಂಬ ಮಾತು ಬಹುಮಟ್ಟಿಗೆ ನಿರ್ವಿವಾದವಾಗಿದೆ.

ನಾರಾಯಣರು ಭಾಷಾಕಲಿಕೆಯ ಬಗೆಗೆ ಮೌಲಿಕವಾದ ಲೇಖನಗಳನ್ನು ಬರೆದಿದ್ದಾರೆ. 'ಶಾಲೆಯಲ್ಲಿ ಕನ್ನಡ', 'ನಮಗೆಷ್ಟು ಕನ್ನಡ ಬೇಕು', 'ಶಾಲೆಯ ಮಕ್ಕಳಿಗೆ ವ್ಯಾಕರಣ', 'ಭಾಷೆಯಲ್ಲಿ ಹೇಗೆ ಮತ್ತು ಏಕೆ', 'ಇಂಗ್ಲಿಶ್‌ನ್ನು ಕನ್ನಡದ ಮೂಲಕ ಕಲಿಯುವುದು', 'ಪ್ರಾಥಮಿಕ ಶಿಕ್ಷಣ: ಭಾಷಾಬೋಧನೆ', 'ವಯಸ್ಕರ ಭಾಷಾಕಲಿಕೆಯ ಆರಂಭ', 'ಮಕ್ಕಳ ಭಾಷಾಕಲಿಕೆ', 'ಓದುವ ಹೊಸ ಬಗೆಗಳು', 'ಪದವಿ ಶಿಕ್ಷಣದಲ್ಲಿ ಭಾಷಾಕೌಶಲ್ಯಗಳ ನಿರ್ವಹಣೆ' ಅವರ ಈ ಲೇಖನಗಳ ಹಿಂದಿನ ತಾತ್ವಿಕತೆ ಏನೆಂದರೆ ಬ್ರಿಟಿಷರು ರೂಪಿಸಿಕೊಟ್ಟ ಭಾಷಾಕಲಿಕೆಯ ಚೌಕಟ್ಟನ್ನು ಉಲ್ಲಂಘಿಸುವುದು ನಮಗೆ ಸಾಧ್ಯವಾಗಿಲ್ಲ. ಅದನ್ನು ಉಲ್ಲಂಘಿಸಬೇಕು ಎಂಬುದೇ ಅವರ ಆಶಯವಾಗಿದೆ. ಇಂದಿನ ಭಾಷಾಕಲಿಕೆಯ ಸ್ವರೂಪ, ಇಂದಿನ ಶಿಕ್ಷಣ ವ್ಯವಸ್ಥೆ ಅದರ ಭಾಷಾನೀತಿ ಮತ್ತು ಯೋಜನೆಗಳು ಈ ಅಂಶಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ತಮ್ಮ ಲೇಖನಗಳಲ್ಲಿ ಚರ್ಚಿಸಿದ್ದಾರೆ. ಇಂಗ್ಲಿಶರು ಹಾಕಿಕೊಟ್ಟ ಯಾಂತ್ರಿಕ ಕಲಿಕೆಗಿಂತ ದೇಸಿ ಮಾದರಿಯ ಸಹಜ ಮತ್ತು ಕ್ರಿಯಾತ್ಮಕ ಕಲಿವು ಮತ್ತು ಸಂವೇದನ ರೂಪದ ಕಲಿವು ಮುಖ್ಯವೆಂದು ನಾರಾಯಣರ ನಿಲುವು ಗಟ್ಟಿ ಆಧಾರದ ಮೇಲೆ ನಿಂತಿದೆ.

ಭಾಷಾಕಲಿಕೆ, ಬೋಧನೆ, ಕೌಶಲ್ಯಗಳ ಅಭಿವೃದ್ಧಿ ಹಾಗೂ ಹಿಂದಿನ ಭಾಷಾ ಯೋಜನೆಗಳ ಶಕ್ತಿ-ಮಿತಿಗಳನ್ನು ಕುರಿತಂತೆ ನಾರಾಯಣರ ಲೇಖನಗಳು ಅಮೂಲ್ಯವೂ ಉಪಯುಕ್ತವೂ ಆಗಿವೆ. ಭಾಷಾಕಲಿಕೆಯಲ್ಲಿ ಸುಧಾರಣೆ ಅಗತ್ಯ. ಕಲಿಕೆ-ಬೋಧನೆ-ಮೌಲ್ಯಮಾಪನ ಇವುಗಳಲ್ಲಿಯ ಏರುಪೇರುಗಳು ನಿವಾರಣೆಯಾಗಬೇಕಾಗಿದೆ ಎಂಬುದು ಅವರ ಲೇಖನಗಳ ತಿರುಳು. ಕಲಿಕೆಯಲ್ಲಿ ನಮ್ಮ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳೇನು ಎಂಬುದರ ವಾಸ್ತವಿಕ ದೃಷ್ಟಿಕೋನ ಅವರಿಗೆ ಮುಖ್ಯವಾಗಿದೆ. ಹೀಗಾಗಿ ಲೇಖನಗಳ ಉದ್ದಕ್ಕೂ ನಾರಾಯಣರು ತೋರಿಸಿದ ಸೂಚನೆಗಳು ಕೇವಲ ಕರ್ನಾಟಕಕ್ಕೆ ಅಷ್ಟೇ ಅಲ್ಲ ಭಾರತದ ಭಾಷಾಶಿಕ್ಷಣ ವ್ಯವಸ್ಥೆಯ ಬದಲಾವಣೆಗೂ ತೋರುಬೆರಳುಗಳಾಗಿವೆ. ಅವರ ಬರೆಹಗಳಿಗೆ ಗಂಭೀರವಾದ ತಾತ್ವಿಕ ಚಿಂತನೆಯ ಹಿನ್ನೆಲೆಯಿದೆ. ನಾರಾಯಣರು ತಮ್ಮ ಲೇಖನಗಳ ಮೂಲಕ ಭಾಷಾಬೋಧನೆ ಮತ್ತು ಕಲಿಕೆ ಅಧ್ಯಯನಕ್ಕೆ ಹೊಸ ಮಾದರಿಯನ್ನು ರೂಪಿಸಿದರು. ಆ ಕ್ಷೇತ್ರಕ್ಕೆ ಅವರು ಹಾಕಿಕೊಟ್ಟ ಮಾರ್ಗ ಅದ್ವಿತೀಯವಾಗಿದೆ.

ನಿತ್ಯವೂ ನಾವು ಬಳಸುತ್ತಿರುವ ಭಾಷಾಬಳಕೆಯಲ್ಲಿ ಆ ಭಾಷೆಯ ವ್ಯಾಕರಣ ನಿಯಮಗಳನ್ನು (ಭಾಷೆಯ ರಚನೆ) ಪಾಲಿಸುತ್ತಿರುತ್ತೇವೆ, ನಿಜ. ನಮಗೆ ಅರಿಯದಂತೆ ಆ ಭಾಷೆಯ ಸಾಮಾಜಿಕ ನಿಯಮವನ್ನು ಅನುಸರಿಸುತ್ತೇವೆ ಎಂಬುದರ ಬಗ್ಗೆ ನಾರಾಯಣರು ತಮ್ಮ ಲೇಖನಗಳಲ್ಲಿ ಚರ್ಚಿಸಿದ್ದಾರೆ. 'ಭಾಷಾ ಕ್ರಿಯೆಗಳು', 'ಭಾಷೆ: ಖಚಿತತೆ ಎಂದರೇನು?', 'ಎರಡು ಪ್ರಸಂಗಗಳಲ್ಲಿ ಕನ್ನಡ', 'ಮದ್ಯಾಭಿಷೇಕ', 'ನುಡಿ ಬೆರಕೆ', 'ಕನ್ನಡ ಬಳಕೆಯ ಕೆಲವು ಪ್ರಸಂಗಗಳು' ಭಾಷಿಕ ಸಂಕಥನಗಳಲ್ಲಿ ಭಾಷೆಯ

ರಚನೆ(ಧ್ವನಿರಚನೆ, ಪದರಚನೆ)ಕ್ಕಿಂತ ಅದರ ಸಾಮಾಜಿಕ ಆಯಾಮ; ಭಾಷೆಯ ಸಾಮಾಜಿಕ ಚಹರೆ ಮುಖ್ಯವಾಗಿದೆ ಎಂಬುದು ನಾರಾಯಣರ ಆಶಯವಾಗಿದೆ. ಭಾಷಾಧ್ಯಯನ ಆ ದಾರಿಯಲ್ಲಿ ನಡೆಯಬೇಕಾಗಿದೆ. ಆ ಮೂಲಕ ಅವರು ಸಮಕಾಲೀನ ಭಾಷಿಕ ಸಂಕಥನಕ್ಕೆ ಅನೇಕ ಹೊಸ ಒಳನೋಟಗಳನ್ನು ನೀಡಿದ್ದಾರೆ.

ನಾರಾಯಣರು ಭಾಷೆಯ ಬಳಕೆ ಮತ್ತು ಅದರ ಸಾಮಾಜಿಕ ಚಹರೆ ಕುರಿತು ಬಹಳ ಹೃದ್ಯವಾದ ರೀತಿಯಲ್ಲಿ ನಿರೂಪಿಸುತ್ತಾರೆ. ಆ ಮೂಲಕ ಭಾಷಾಧ್ಯಯನಕ್ಕೆ ಸೃಜನಶೀಲತೆಯ ಲೇಪನ ಕೊಟ್ಟವರಲ್ಲಿ ಅವರೂ ಒಬ್ಬರು. ಅವರ ಬರೆಹಗಳ ಉದ್ದೇಶವೆಂದರೆ ಇಂದಿನ ಭಾಷಾಬಳಕೆಯ ವಾಸ್ತವವನ್ನು ದೃಢಪಡಿಸುವುದು. ಈ ಉದ್ದೇಶವನ್ನು ಈಡೆರಿಸಬೇಕಾದರೆ ಎಲ್ಲರಿಗೂ ಒಪ್ಪಿತವಾದ ಶಾಸ್ತ್ರ ವಿಧಾನವನ್ನು ಪರಿಶೀಲಿಸುವುದು; ಉಲ್ಲಂಘಿಸುವುದು; ಬದಲು ಮಾಡುವುದು. ಅಂದರೆ ಚರ್ಚೆಯನ್ನು ಬರೆವಣಿಗೆಗೆ ಒಳಪಡಿಸುವುದು. ಈ ಪ್ರಯತ್ನದಲ್ಲಿ ನಾರಾಯಣರು ಯಶಸ್ವಿಯಾಗಿದ್ದರೆಂದು ಬೇರೆ ಹೇಳುವ ಕಾರಣವಿಲ್ಲ. ಜೊತೆಗೆ ಅವರು ಆ ಶಾಸ್ತ್ರವನ್ನು ಸಂವಹನ ಯೋಗ್ಯವಾಗಿ ಮಾಡಿದರು. ನಾರಾಯಣರು ಭಾಷೆಯನ್ನು ಕುರಿತು ಇಂಗ್ಲಿಶರು ರೂಪಿಸಿಕೊಟ್ಟ ವಿಧಾನವನ್ನು ಮತ್ತೆ ಮತ್ತೆ ಪ್ರಶ್ನೆ ಮಾಡುತ್ತಾರೆ. ಕನ್ನಡ ಇಂದಿನ ರಚನೆ-ಬಳಕೆ-ಸ್ವರೂಪ ಅವರಿಗೆ ಮುಖ್ಯವಾಗಿದೆ. ಆ ಕುರಿತು ಅನೇಕ ಪ್ರಶ್ನೆಗಳನ್ನು ಅವರು ಕೇಳುತ್ತಾರೆ. ಭಾಷೆಯನ್ನು ಕುರಿತು ಹೊಸ ಚಿಂತನಕ್ರಮ ಹುಟ್ಟಬೇಕಾದರೆ ಹೊಸ ಮಾದರಿಬೇಕು. ಅಂತಹ ಮಾದರಿಯನ್ನು ನಾರಾಯಣರು ಈ ಬರೆಹಗಳಲ್ಲಿ ರೂಪಿಸಿದ್ದಾರೆ.

ನಾರಾಯಣರ ಬರೆಹಗಳಲ್ಲಿ ಹೊಸ ಮಾತುಗಳಿವೆ; ಹೊಸ ಸೂಚನೆಗಳಿವೆ. ಅವುಗಳ ಹಿಂದೆ ಗಾಢವಾದ ಚಿಂತನೆ, ತರ್ಕಬದ್ಧತೆ, ಗ್ರಾಹ್ಯವಾಗಬಲ್ಲ ನಿರ್ಣಯಗಳಿವೆ. ಕನ್ನಡ ಭಾಷಾಪರಿಸರ, ಮಾತು, ಬರೆಹ, ಪದಕೋಶ, ಕಲಿಕೆ-ಬಳಕೆ ಇವು ಅರಿವಿಗೆ ಎಟಕುವಂತೆ ಮಾಡಲು ನಾರಾಯಣರು ಪ್ರಯತ್ನಿಸಿರುವುದು ಸ್ತುತ್ಯವಾದುದು. ಪಾಶ್ಚಿಮಾತ್ಯ ವಿದ್ವಾಂಸರ ಭಾಷಾಧ್ಯಯನ ವಿಧಾನಗಳಿಗಿಂತ ಭಿನ್ನವಾಗಿ ದೇಸಿ ಅಧ್ಯಯನ ಕ್ರಮಗಳನ್ನು ಗುರುತಿಸುವುದು ಅವರ ಬರೆಹಗಳ ಹಿಂದಿರುವ ಆಶಯವಾಗಿದೆ. ನಿಜಕ್ಕೂ ಕನ್ನಡ ಭಾಷಾಧ್ಯಯನದಲ್ಲಿ ಮಾಡಬೇಕಾದ ಕೆಲಸ ಇದೇ. ಅದರಲ್ಲಿ ನಾರಾಯಣರು ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ. ಆ ಮೂಲಕ ಭಾಷೆಯ ಬಗೆಗೆ ಓದುಗರ ಅರಿವಿನ ಎಲ್ಲೆಯನ್ನು ವಿಸ್ತರಿಸಿದ್ದಾರೆ. ಹೀಗಾಗಿ ನಾರಯಣರು ಕನ್ನಡ ಭಾಷಾಧ್ಯಯನದ ಗಣ್ಯಭಾಗವಾಗಿ ಆ ಕ್ಷೇತ್ರಕ್ಕೆ ಹೊಸ ತಿರುವನ್ನು ಕೊಟ್ಟರು.

೨

ಕನ್ನಡ ವಾಕ್ಯಗಳು : ಒಂದು ವಿವೇಚನೆ

ಡಿ.ಎನ್. ಶಂಕರಭಟ್ಟರು ಕರ್ನಾಟಕ ಕಂಡಿರುವ ಶ್ರೇಷ್ಠ ಭಾಷಾಶಾಸ್ತ್ರಜ್ಞರು. ಕನ್ನಡ ಹಾಗು ಕನ್ನಡೇತರ ಭಾಷಾರಚನೆಯ ತಿಳಿವಳಿಕೆಯನ್ನು ತಮ್ಮದಾಗಿಸಿಕೊಂಡವರು. ಅವರು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ಹತ್ತು ಹನ್ನೆರಡು ಪುಸ್ತಕಗಳನ್ನು ಬರೆದಿದ್ದರೂ ಬರೆದದ್ದು ಒಂದೇ ಗ್ರಂಥವೆಂದು ಹೇಳಬಹುದು. ಆ ಗ್ರಂಥದ ವಸ್ತುವೆಂದರೆ ಕನ್ನಡದ್ದೇ ಆದ ಭಾಷೆಯ ರಚನೆಯನ್ನು ಹುಡುಕುವುದು. ಇಂದಿನ ತಿಳಿವಳಿಕೆಯ ಹಿನ್ನೆಲೆಗಿರುವ ಕನ್ನಡದ ರಚನೆಯನ್ನು ಪುನಃ ಸೃಷ್ಟಿಸುವುದು. ಆ ರಚನೆಯ ಬಗ್ಗೆ ನಿರಂತರವಾಗಿ ನಡೆಸಿದ್ದ ಚಿಂತನ ಅವರ ಗ್ರಂಥಗಳಲ್ಲಿ ಹಂಚಿ ಹೋಗಿದೆ. ಕನ್ನಡದ ರಚನೆ ಸಂಸ್ಕೃತ ಹಾಗೂ ಇಂಡೋ-ಆರ್ಯನ್ ರಚನೆಗಳಿಗಿಂತ ಯಾವ ರೀತಿಯಾಗಿ ಭಿನ್ನವಾಗಿದೆ ಎಂಬ ಐತಿಹಾಸಿಕ ಪ್ರಶ್ನೆಯನ್ನೆತ್ತಿಕೊಂಡು ಕನ್ನಡದ ರಚನೆಯ ಕ್ರಮವನ್ನು ಗುರುತಿಸಲು ಯತ್ನಿಸುತ್ತಾರೆ. ಇಂತಹ ಒಂದು ಸಾಹಸದ ಸಿದ್ಧಿಗಾಗಿ ಅವರು ತಮ್ಮದೇ ಆದ ಭಾಷಾಶಾಸ್ತ್ರವನ್ನು ಕಟ್ಟಿಕೊಂಡರು. ಈ ಹಿನ್ನೆಲೆಯಲ್ಲಿ ಶಂಕರಭಟ್ಟರ ಬರೆಹಗಳನ್ನು ಅವಲೋಕಿಸಬೇಕಾಗುತ್ತದೆ. ಪ್ರಸ್ತುತ ಲೇಖನದಲ್ಲಿ ಅವರ 'ಕನ್ನಡ ವಾಕ್ಯಗಳು' ಕೃತಿಯ ಸ್ವರೂಪ ಹಾಗೂ ಅದರ ತಾತ್ವಿಕತೆಯನ್ನು ಕುರಿತು ವಿವೇಚಿಸಲಾಗಿದೆ.

೧

ಶಂಕರಭಟ್ಟರ 'ಕನ್ನಡ ವಾಕ್ಯಗಳು' ಈ ಗ್ರಂಥ ಪ್ರಕಟವಾದದ್ದು ೧೯೭೮ರಲ್ಲಿ. ತಲಸ್ಪರ್ಶಿಯಾದ ಅಧ್ಯಯನದಿಂದ ಕೂಡಿರುವ ಬೃಹದ್ಗ್ರಂಥ ಇದಾಗಿದೆ. ಈ ಗ್ರಂಥದ ವಿಶೇಷತೆಯೆಂದರೆ ಕನ್ನಡ ವಾಕ್ಯಗಳ ಆಂತರಿಕ ರಚನೆ ಮತ್ತು ಅರ್ಥವ್ಯವಸ್ಥೆಯ ಸ್ವರೂಪವನ್ನು ಗುರುತಿಸುವುದು. ಕನ್ನಡ ವಾಕ್ಯಗಳಲ್ಲಿಯ ಘಟಕಗಳು ಹಾಗೂ ಅವುಗಳ ನಡುವಿನ ಸಂಬಂಧ ಆ ಘಟಕಗಳ ಬಳಕೆಯಿಂದ ಉಂಟಾಗುವ ಅರ್ಥ ಬದಲಾವಣೆ

ಗಳನ್ನು ಕುರಿತು ಈ ಕೃತಿಯಲ್ಲಿ ವಿಶ್ಲೇಷಿಸಲಾಗಿದೆ. ಒಟ್ಟಿನಲ್ಲಿ ಈ ಕೃತಿಗೆ ಅರ್ಥವೇ ಮುಖ್ಯ ಸ್ಥಾಯಿಯಾಗಿದೆ.

ಕನ್ನಡ ವಾಕ್ಯಗಳನ್ನು ಅರ್ಥ ಮಾಡಿಕೊಳ್ಳುವ ಮತ್ತು ಬಳಸುವ ಬಗೆ ಹೇಗೆ ಎಂಬುದನ್ನು ವಿವೇಚಿಸುವ ಈ ಕೃತಿಯಲ್ಲಿ ಹತ್ತು ಅಧ್ಯಾಯಗಳಿವೆ. ಮೊದಲನೆಯ ಅಧ್ಯಾಯದಲ್ಲಿ ಭಾಷಾ ವ್ಯಾಪಾರದ ಸ್ವರೂಪ ಮತ್ತು ವಾಕ್ಯದ ಅರ್ಥ ಭೇದಗಳು ಸೇರಿದಂತೆ ತಮ್ಮ ಕೃತಿರಚನೆಯ ಉದ್ದೇಶ ಮತ್ತು ಸ್ವರೂಪವನ್ನು ಹೇಳಿದ್ದಾರೆ. ವಾಕ್ಯಗಳಲ್ಲಿ ಕ್ರಿಯಾಪದದ ಪ್ರಾಧಾನ್ಯವನ್ನವಲಂಬಿಸಿ ವಾಕ್ಯಗಳನ್ನು ಕ್ರಿಯಾರ್ಥಕ ಮತ್ತು ವೈಷಯಿಕವೆಂದು ಎರಡು ಭೇದಗಳಾಗಿ ಕಲ್ಪಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಕ್ರಿಯಾರ್ಥಕ ವಾಕ್ಯಗಳ ಸ್ವರೂಪದ ಬಗೆಗೆ ಚರ್ಚಿಸಲಾಗಿದೆ. ಕ್ರಿಯಾರ್ಥಕ ವಾಕ್ಯಗಳಲ್ಲಿ ಕ್ರಿಯಾರೂಪವೇ ವಾಕ್ಯದ ಕೇಂದ್ರಬಿಂದುವಾಗಿರುತ್ತದೆ. ಇಂತಹ ವಾಕ್ಯಗಳಲ್ಲಿ ಬರುವ ಮುಖ್ಯ ಘಟಕಗಳಾದ ವಿಷಯ, ನಿಯೋಗಿ, ಅನುಭೋಗಿ ಮತ್ತು ಆಕರ ಇವು ಕ್ರಿಯಾರೂಪಕ್ಕೆ ಸಂಬಂಧಿಸಿವೆ ಎಂಬುದು ಮುಖ್ಯವಾದ ಸಂಗತಿ.

೧. ಬಾಗಿಲು ತೆರೆಯಿತು

೨. ಜಾನಕಿ ಬಾಗಿಲನ್ನು ತೆರೆದಳು

೩. ನರಿಗೆ ದ್ರಾಕ್ಷಿ ಹಣ್ಣು ಎಟಕಿತು

೪. ಮುರಳಿ ತೋಟಕ್ಕೆ ನೀರು ಬಿಡುತ್ತಿದ್ದಾನೆ

ಇಲ್ಲಿ ಮೊದಲನೆಯ ವಾಕ್ಯದ 'ಬಾಗಿಲು' ವಿಷಯವನ್ನು ಸೂಚಿಸುತ್ತದೆ. ಎರಡನೆಯ ವಾಕ್ಯದ 'ಜಾನಕಿ', ನಾಲ್ಕನೆಯ ವಾಕ್ಯದ 'ಮುರಳಿ' ಇವು ನಿಯೋಗಿಯನ್ನು ಸೂಚಿಸುತ್ತವೆ. ಮೂರನೆಯ ವಾಕ್ಯದ 'ನರಿ' ಅನುಭೋಗಿಯನ್ನು ಸೂಚಿಸಿದರೆ ನಾಲ್ಕನೆಯ ವಾಕ್ಯದ 'ತೋಟ' ಆಕರವನ್ನು ಸೂಚಿಸುತ್ತದೆ. ವಾಕ್ಯದ ಅಮುಖ್ಯ ಘಟಕಗಳಾದ ಕರಣ, ಹೇತು, ಕಾರಣ, ಉದ್ದೇಶ, ಸ್ಥಾನ, ಕಾಲ, ಅನುಸರಿಸಿ ಸಹಿತ ಕ್ರಿಯಾಪದದೊಂದಿಗೆ ಯಾವ ರೀತಿಯಾಗಿ ಸಂಬಂಧ ಹೊಂದಿವೆ ಎಂಬುದನ್ನು ಹಾಗೂ 'ಇಸು', 'ಕೊಳ್ಳು' ಪ್ರತ್ಯಯಗಳ ಪ್ರಯೋಗ, ಸಾಧಿತ ಕ್ರಿಯಾಪದಗಳು, ಕ್ರಿಯಾರ್ಥಕ ವಾಕ್ಯಗಳ ಆಂತರಿಕ ರಚನೆ ಇತ್ಯಾದಿ ಅಂಶಗಳನ್ನು ಕುರಿತು ಅರ್ಥಪೂರ್ಣವಾಗಿ ವಿವೇಚಿಸಿದ್ದಾರೆ. ಕ್ರಿಯಾರ್ಥಕ ವಾಕ್ಯಗಳು ಒಂದು ಘಟನೆಯನ್ನು ತಿಳಿಸುತ್ತವೆ. ವೈಷಯಿಕ ವಾಕ್ಯಗಳು 'ಇರು' ಎಂಬ ಧಾತುವಿನ ಮೂಲಕ ವಿವಿಧ ಸಂಗತಿಗಳ ಸ್ವರೂಪವನ್ನು ತಿಳಿಸುತ್ತವೆ. ವೈಷಯಿಕ ವಾಕ್ಯಗಳ ಸ್ವರೂಪವನ್ನು ಕುರಿತು ಮೂರನೆಯ ಅಧ್ಯಾಯದಲ್ಲಿ ಪರಿಶೀಲಿಸಲಾಗಿದೆ.

೧. ಆಕೆಗೆ ನಿಮ್ಮ ಮೇಲೆ ಬಹಳ ಕೋಪ ಬಂತು

೨. ಆಕೆಗೆ ನಿಮ್ಮ ಮೇಲೆ ಬಹಳ ಕೋಪ ಇದೆ

ಈ ವಾಕ್ಯಗಳಲ್ಲಿ ಮೊದಲನೆಯದು ಕ್ರಿಯಾರ್ಥಕ ವಾಕ್ಯವಾಗಿದ್ದು ಕೋಪ ಬರುವ ಘಟನೆಯನ್ನು ತಿಳಿಸುತ್ತದೆ. ಎರಡನೆಯದು ವೈಷಯಿಕ ವಾಕ್ಯವಾಗಿದ್ದು ಕೋಪ ಇರುವ ಸಂಗತಿಯನ್ನು ತಿಳಿಸುತ್ತದೆ. ವೈಷಯಿಕ ವಾಕ್ಯಗಳ ಪ್ರಕಾರಗಳಾದ ಆಕರವಾಚಿ, ಲಕ್ಷಣವಾಚಿ ಮತ್ತು ಸಂಬಂಧವಾಚಿ ವಾಕ್ಯಗಳ ರಚನೆಯನ್ನು ಕುರಿತು ಹಲವಾರು ಉದಾಹರಣೆಗಳ ಮೂಲಕ ವಿಶ್ಲೇಷಿಸಿದ್ದಾರೆ.

ಕ್ರಿಯಾರ್ಥಕ ಮತ್ತು ವೈಷಯಿಕ ವಾಕ್ಯಗಳನ್ನು ಬೇರೆ ಬೇರೆ ರೀತಿಯ ನಾಮರೂಪಗಳ ಆಂತರಿಕ ಸ್ವರೂಪವನ್ನು ಕುರಿತು ನಾಲ್ಕನೆಯ ಅಧ್ಯಾಯದಲ್ಲಿ ಚರ್ಚಿಸಿದ್ದಾರೆ.

೧. ಆ ಕೆಟ್ಟ ಹುಡುಗ ರಾಮುವಿನ ಅಂಗಿಯನ್ನು ಹರಿದು ಹಾಕಿದ್ದಾನೆ

೨. ಆ ಕೆಟ್ಟ ಹುಡುಗನಿಗೆ ರಾಮು ಎರಡೇಟು ಬಿಗಿದಿದ್ದಾನೆ

ಈ ವಾಕ್ಯಗಳಲ್ಲಿ 'ಆ ಕೆಟ್ಟ ಹುಡುಗ' ಎಂಬ ನಾಮಪದ ಪುಂಜವು ಹಲವು ವಾಚಿಕ ಘಟಕಗಳನ್ನು ನಿರ್ದೇಶಿಸುತ್ತದೆ. 'ಆ' ಎಂಬುದು ದೂರದರ್ಶಕ ಸರ್ವನಾಮವನ್ನು, 'ಕೆಟ್ಟ' ಎಂಬುದು ನಡತೆಯನ್ನು, 'ಹುಡುಗ' ಎಂಬುದು ವಿಷಯದ ಹಲವು ಸಂಗತಿಗಳನ್ನು (ಆತನ ಲಿಂಗ, ವಚನ, ವಯಸ್ಸು) ತಿಳಿಸುತ್ತದೆ. ಈ ಅಧ್ಯಾಯದಲ್ಲಿ ನಾಮಪದಪುಂಜದ ಕಕ್ಷೆಯಲ್ಲಿ ಬರುವ ವಿದಿತ, ಅವಿದಿತ, ನಿರ್ದಿಷ್ಟ, ಅನಿರ್ದಿಷ್ಟ ಸೂಚಕಗಳ ಸ್ವರೂಪ, ನಿರ್ದೇಶಕಗಳಾಗಿ ಪ್ರತಿನಾಮಗಳಾಗಿ ಸರ್ವನಾಮಗಳು, ಸಾಪೇಕ್ಷ, ನಿರಪೇಕ್ಷ, ಕ್ಷಣಿಕ, ನಿರಂತರ, ಸಾಂತ ಇಂತಹ ಕಾಲಸೂಚಕಗಳು, ಅನುರೂಪ, ಪ್ರತಿರೂಪ, ಸ್ಥಾಯಿ, ಅಸ್ಥಾಯಿ ಇಂತಹ ಸ್ಥಾನ ಸೂಚಕಗಳ ಬಗ್ಗೆ ವಿಸ್ತಾರವಾಗಿ ನಿರೂಪಿಸಲಾಗಿದೆ.

ಈ ನಾಲ್ಕು ಅಧ್ಯಾಯಗಳಲ್ಲಿ ಸರಳ ವಾಕ್ಯಗಳಲ್ಲಿ ಬರಬಹುದಾದ ಮುಖ್ಯ ಮತ್ತು ಅಮುಖ್ಯ ಘಟಕಗಳ ಸ್ವರೂಪವನ್ನು ಒಂದು ಘಟಕ ಇತರ ಘಟಕವನ್ನು ಅಗತ್ಯವಾಗಿ (ಐಚ್ಛಿಕ) ಅಪೇಕ್ಷಿಸುತ್ತದೆ ಹಾಗೂ ಇತರ ಯಾವ ಘಟಕವನ್ನು ನಿರಾಕರಿಸುತ್ತದೆ ಇಲ್ಲವೆ ಅಲ್ಲಗಳೆಯುತ್ತದೆ ಎಂಬ ಸಂಗತಿಗಳಿಗೆ ಒತ್ತುಕೊಡಲಾಗಿದೆ. ಇದನ್ನು ಆಧರಿಸಿ ಕ್ರಿಯಾಪದಗಳಲ್ಲಿ ಕೆಲವು ಉಪವಿಭಾಗಗಳನ್ನು ಮಾಡಲಾಗಿದೆ. ಉದಾಹರಣೆ: ವಿಷಯ ಘಟಕಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಸ್ವಪ್ರೇರಿತ–ಅಪ್ರೇರಿತ, ಸ್ವೇಚ್ಛಾಪ್ರವೃತ್ತಿ–ಪರೇಚ್ಛಾಪ್ರವೃತ್ತಿ, ಸಾಧಿತ–ಬಾಧಿತ ಅದರಂತೆ ಕ್ರಿಯಾರೂಪಗಳ ಸ್ಥಾಯಿ–ಅಸ್ಥಾಯಿ ಎಂಬ ವರ್ಗೀಕರಣವನ್ನು ಸಹಿತ ಈ ನಿಟ್ಟಿನಲ್ಲಿ ಗಮನಿಸಬಹುದು.

ಕ್ರಿಯಾರ್ಥಕ ವಾಕ್ಯಗಳಲ್ಲಿ ಕೇಂದ್ರ ಬಿಂದುಗಳಾಗಿ ಬರುವ ಕ್ರಿಯಾಪದಪುಂಜಗಳ ಆಂತರಿಕ ಸ್ವರೂಪವನ್ನು ಕುರಿತು ಐದನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಕ್ರಿಯಾರ್ಥಕ ಪುಂಜಗಳಲ್ಲಿ ಬರುವ ಘಟಕಗಳ ಸಂಖ್ಯೆ ಮತ್ತು ಸ್ವರೂಪ ಇವುಗಳನ್ನು ಮಾತ್ರವಲ್ಲದೆ ಬೇರೆ ಹಲವು ಸಂಗತಿಗಳನ್ನಾಧರಿಸಿಯೂ ಕ್ರಿಯಾಪದಗಳನ್ನು ವಿಭಜಿಸಬಹುದು. ಇವುಗಳ ಮೂಲಕ ಕ್ರಿಯಾಪದಗಳ ಆಂತರಿಕ ಸ್ವರೂಪವನ್ನು ತಿಳಿದುಕೊಳ್ಳ

ಬಹುದು. ಎರಡು ವೈಷಯಿಕ ವಾಕ್ಯಗಳು ತಿಳಿಸಿ ಹೇಳುವ ಸಂಗತಿಗಳನ್ನು ಒಂದು ಕ್ರಿಯಾರ್ಥಕ ವಾಕ್ಯವನ್ನಾಗಿ ಮಾಡಬಹುದು.

೧. ರಾಮು ಮರದ ಕೆಳಗಿದ್ದಾನೆ

೨. ರಾಮು ಮರದ ಮೇಲಿದ್ದಾನೆ

೩. ರಾಮು ಮರಕ್ಕೆ ಹತ್ತಿದ

ಇಲ್ಲಿ ೧ ಮತ್ತು ೨ನೇ ವೈಷಯಿಕ ವಾಕ್ಯಗಳು ತಿಳಿಸಿ ಹೇಳುವ ಸಂಗತಿಗಳನ್ನು ೩ನೆಯದು ಕ್ರಿಯಾರ್ಥಕ ವಾಕ್ಯ ನಡೆಸುತ್ತದೆ. ಈ ಅಧ್ಯಯನದಲ್ಲಿ ಕ್ರಮವಾದ ಕ್ರಿಯಾಪದ ಪುಂಜಗಳ ಸ್ವರೂಪವನ್ನು ಅನುಲಕ್ಷಿಸಿ ಅವುಗಳನ್ನು ನಿಯೋಗಿಯುಕ್ತ ಮತ್ತು ನಿಯೋಗಿ ವಿರಹಿತಗಳೆಂದು ಎರಡು ರೀತಿಯಾಗಿ ವರ್ಗೀಕರಿಸಲಾಗಿದೆ. ಕ್ರಿಯಾಪದಗಳನ್ನು ಸರಳ ಮತ್ತು ಸಾಧಿತವೆಂದು ವಿಭಜಿಸಲಾಗಿದೆ. ಸಂಯುಕ್ತ ಕ್ರಿಯಾರೂಪಗಳಾದ 'ಇರು' ಮತ್ತು 'ಇತರ' ಪ್ರಯೋಗಗಳ ಸ್ವರೂಪವನ್ನು ಹಾಗೂ ಕ್ರಿಯಾ ವಿಶೇಷಣಗಳ ರಚನೆಯನ್ನು ಕುರಿತು ಚರ್ಚಿಸಲಾಗಿದೆ.

ಎರಡು ಅಥವಾ ಹೆಚ್ಚು ವಾಕ್ಯಗಳನ್ನು ಅರ್ಥಕ್ಕೆ ಧಕ್ಕೆಯಾಗದಂತೆ ಸಂಕ್ಷಿಪ್ತಗೊಳಿಸಿ ಬೇರೊಂದು ವಾಕ್ಯವನ್ನಾಗಿ ಪರಿವರ್ತಿಸಿ ಅಥವಾ ಒಂದರೊಳಗೊಂದು ಅಂತರ್ಗತ ಗೊಳಿಸಿ ಪ್ರಯೋಗಿಸುವ ವಿಧಾವನ್ನು ಆರನೇ ಅಧ್ಯಾಯದಲ್ಲಿ ನಿರೂಪಿಸಲಾಗಿದೆ.

೧. ಮರದಿಂದ ಒಂದು ಹಣ್ಣು ಬಿದ್ದಿದೆ

೨. ಆ ಹಣ್ಣು ಚೆನ್ನಾಗಿಲ್ಲ

೩. ಮರದಿಂದ ಬಿದ್ದಿರುವ ಆ ಹಣ್ಣು ಚೆನ್ನಾಗಿಲ್ಲ

ಮೊದಲನೆಯ ವಾಕ್ಯವನ್ನು ಎರಡನೆಯ ವಾಕ್ಯದೊಳಗೆ ಸೇರಿಸಿ ಮೂರನೆಯ ವಾಕ್ಯವನ್ನು ರಚಿಸಲಾಗಿದೆ. ಈ ಮೂರನೆಯ ವಾಕ್ಯದಲ್ಲಿ ಮೊದಲನೆಯ ವಾಕ್ಯವು ಅಂತರ್ಗತ ವಾಕ್ಯವಾಗಿಯೂ ಮತ್ತು ಎರಡನೆಯ ವಾಕ್ಯವು ಮಾತೃಕೆಯಾಗಿಯೂ ಬಂದಿದೆಯೆಂದು ಹೇಳಬಹುದು. ಅಂತರ್ಗತ ವಾಕ್ಯದ ಕಕ್ಷೆಯಲ್ಲಿ ಬರುವ ಉದ್ಧೃತ ವಾಕ್ಯಗಳು, ನಾಮಗಳು ಮತ್ತು ಭಾವನಾಮಗಳು, ಮಾತೃಕೆಗಳ ಸ್ವರೂಪ, ಕೃದಂತಗಳು, ವಿಶೇಷ್ಯ. ಪುಷ್ಯಂತಗಳು ಇವುಗಳ ಚರ್ಚೆ ವಿವರವಾಗಿ ನಿರೂಪಿತವಾಗಿದೆ.

ಕನ್ನಡದಲ್ಲಿ ಒಂದು ಘಟನೆ ನಡೆದಿರುವುದೆಂಬ ಸಂಗತಿಯನ್ನು ನೇರವಾಗಿ ಪ್ರಸ್ತಾಪಿಸ ಬಹುದು ಇಲ್ಲವೆ ಘಟನೆ ನಡೆಯಿತ್ತೆಂಬುದನ್ನು ಗೃಹೀತವಾಗಿಟ್ಟುಕೊಂಡು ಅಂತಹ ಘಟನೆಯಲ್ಲಿ ಯಾವುದಾದರೊಂದು ನಿರ್ದಿಷ್ಟ ಘಟಕವು ಬಳಕೆಯಾಗಿದೆಯೇ? ಇಲ್ಲವೇ? ಎಂಬುದನ್ನು ವಾಕ್ಯದ ಮೂಲಕ ಪ್ರಸ್ತಾಪಿಸಬಹುದು.

೧. ನಿನ್ನೆ ನಮ್ಮ ಶಾಲೆಯಲ್ಲಿ ಒಂದು ನಾಟಕ ನಡೆದಿತ್ತು

೨. ನಿನ್ನೆ ಒಂದು ನಾಟಕ ನಡೆದದ್ದು ನಮ್ಮ ಶಾಲೆಯಲ್ಲಿ

ಇಲ್ಲಿಯ ಮೊದಲನೆಯ ವಾಕ್ಯವು ಒಂದು ಘಟನೆಯನ್ನು ನೇರವಾಗಿ ತಿಳಿಸುತ್ತದೆ. ಎರಡನೆಯದು ಘಟನೆಯನ್ನು ನೇರವಾಗಿ ಪ್ರಸ್ತಾಪಿಸುವ ಬದಲು ಅದು ನಡೆದಿತ್ತೆಂಬುದನ್ನು ಗೃಹೀತವಾಗಿಟ್ಟುಕೊಂಡು ಆ ಘಟನೆಯಲ್ಲಿ ಆಕರಕ್ಕೂ (ನಮ್ಮ ಶಾಲೆ) ಮತ್ತು ಘಟನೆಗೆ ಇರುವ ಸಂಬಂಧವನ್ನು ಪ್ರಸ್ತಾಪಿಸುತ್ತದೆ. ಒಂದು ಘಟನೆ ನಡೆದಿಲ್ಲವೆಂದು ನಿಷೇದಾರ್ಥದಲ್ಲಿಯು ಒಂದು ವಾಕ್ಯವನ್ನು ಬಳಸಬಹುದು. ಅದಕ್ಕಾಗಿ 'ಇಲ್ಲ' ಮತ್ತು 'ಅಲ್ಲ' ಎಂಬ ಎರಡು ರೀತಿಯ ನಿಷೇದಾರ್ಥ ಪದಗಳನ್ನು ಬಳಸಲಾಗಿದೆ.

೧. ಅವರು ಮಂಗಳೂರಿಗೆ ಹೋಗಲಿಲ್ಲ

೨. ಅವರು ಹೋದದ್ದು ಮಂಗಳೂರಿಗಲ್ಲ

ಕ್ರಿಯಾರ್ಥಕ ವಾಕ್ಯವನ್ನು ನಿಷೇದಿಸುವುದಕ್ಕಾಗಿ 'ಇಲ್ಲ' ಎಂಬ ಪದವನ್ನು ೧ನೇ ವಾಕ್ಯದಲ್ಲಿ ಬಳಸಲಾಗಿದೆ. ಅವುಗಳ ಸಂಬಂಧಾರ್ಥಕ ರೂಪಗಳನ್ನು ನಿಷೇಧಿಸಲು 'ಅಲ್ಲ' ಎಂಬ ಪದವನ್ನು ೨ನೇ ವಾಕ್ಯದಲ್ಲಿ ಬಶಲಾಗಿದೆ. ಹೀಗೆ ಈ ಅಧ್ಯಾಯದಲ್ಲಿ ಸಂಬಂಧಾರ್ಥಕ ಮತ್ತು ನಿಷೇಧಾರ್ಥಕ ವಾಕ್ಯಗಳ ಅರ್ಥ ರಚನೆಯ ಬಗ್ಗೆ ವಿಸ್ತೃತವಾಗಿ ಪರಿಶೀಲಿಸಲಾಗಿದೆ.

ಭಾಷೆಯ ಮೂಲಕ ನಾವು ನಡೆಸುವ ಹೇಳು, ಕೇಳು, ತೆಗಳು, ಹೊಗಳು ಮೊದಲಾದ ಬೇರೆ ಬೇರೆ ಕಾರ್ಯಗಳನ್ನು ಭಾಷಾ ವ್ಯಾಪಾರಗಳೆಂದು ಕರೆಯಬಹುದು. ವಾಕ್ಯಗಳು ಎಂತಹ ಭಾಷಾ ವ್ಯಾಪಾರದಲ್ಲಿ ತೊಡಗಿಸಿಕೊಂಡಿವೆ ಹಾಗೂ ಆ ಭಾಷಾ ವ್ಯಾಪಾರಗಳ ಸ್ವರೂಪ ಎಂತಹದ್ದು ಎಂಬುದನ್ನು ಕುರಿತು ಎಂಟನೆಯ ಅಧ್ಯಾಯದಲ್ಲಿ ಪರಿಶೀಲಿಸಲಾಗಿದೆ.

೧. ಟೋಪಿ ಕೆಳಗೆ ಬಿದ್ದಿದೆ

೨. ಟೋಪಿಯನ್ನು ಕೆಳಗೆ ಬೀಳಿಸು

೩. ಟೋಪಿ ಕೆಳಗೆ ಬಿದ್ದಿದೆಯೇ

೪. ಟೋಪಿ ಕೆಳಗೆ ಬಿದ್ದೀತು

ಈ ವಾಕ್ಯಗಳು 'ಟೋಪಿ ಕೆಳಗೆ ಬೀಳುವುದೆಂಬ' ಘಟನೆಯನ್ನು ಪ್ರಸ್ತಾಪಿಸುತ್ತವೆ. ಈ ವಾಕ್ಯಗಳು ಕ್ರಮವಾಗಿ ಪ್ರತಿಪಾದನೆ, ಪ್ರಶ್ನೆ, ವಿಧಿ ಮತ್ತು ಸಂಭಾವನೆ ಎಂಬ ನಾಲ್ಕು ಬೇರೆ ಪ್ರಕಾರಗಳಾದ ನಿರ್ವಾಹಕ, ಪ್ರಶ್ನಾರ್ಥಕ, ಆಶ್ಚರ್ಯ ಸೂಚಕ, ಸಂಭಾವನಾರ್ಥಕ ಮತ್ತು ವಿದ್ಯಾರ್ಥಕ ವಾಕ್ಯಗಳ ಸ್ವರೂಪವನ್ನು ವಿವೇಚಿಸಲಾಗಿದೆ.

ಒಂದಕ್ಕೊಂದು ಸಂಬಂಧಿಸಿರುವಂತಹ ಎರಡು ವಾಕ್ಯಗಳನ್ನು ಜೋಡಿಸುವುದಕ್ಕಾಗಿ 'ಮತ್ತು', 'ಅಥವಾ', 'ಆದರೆ' ಇಂತಹ ಸಂಯೋಜಕ ಪದಗಳನ್ನು 'ಉ', 'ಓ' ಇಂತಹ ಸಂಯೋಜಕ ಪ್ರತ್ಯಯಗಳನ್ನು ಬಳಸುವ ಕ್ರಮ ಕನ್ನಡದಲ್ಲಿದೆ. ಈ ಸಂಯೋಜಕ ರೂಪಗಳನ್ನು ಯಾವ ಸಂದರ್ಭದಲ್ಲಿ ಬಳಸಬಹುದು ಹಾಗೂ ಅವುಗಳನ್ನು ಬಳಸಿದಾಗ ಆಗುವ ಬದಲಾವಣೆಗಳೇನು? ಇಂತಹ ಸಂಗತಿಗಳನ್ನೊಳಗೊಂಡ ಸಂಯುಕ್ತ ವಾಕ್ಯಗಳ

ಸ್ವರೂಪವನ್ನು ಕುರಿತು ಒಂಬತ್ತನೆಯ ಅಧ್ಯಾಯದಲ್ಲಿ ವಿವೇಚಿಸಲಾಗಿದೆ. 'ಮತ್ತು', 'ಆದರೆ' ಇವುಗಳ ಬಗೆಗೆ ಹೇಳುವುದಾದರೆ

೧. ಮೂವರು ಉಪ್ಪರಿಗೆಗೆ ಹೋಗಿರಲಿ ಮತ್ತು ಇಬ್ಬರು ಇಲ್ಲೇ ಕುಳಿತಿರಲಿ

೨. ಅವನು ಯಾವ ಊರಿನಿಂದ ಬಂದಿದ್ದಾನೆ ಮತ್ತು ಅವನನ್ನು ಯಾರು ಒಳಕ್ಕೆ ಬರಲು ಹೇಳಿದರು

೩. ಆ ಮನೆಯಲ್ಲಿ ಬೆಕ್ಕುಗಳು ಮೂರಿವೆ ಆದರೆ ಇಲಿಗಳ ಗಲಾಟೆ ಮಾತ್ರ ಕಡಿಮೆ ಯಾಗಿಲ್ಲ.

ಮೇಲಿನ ವಾಕ್ಯಗಳಲ್ಲಿ ಮೊದಲನೆಯದು ಎರಡು ವಿಧಿಗಳನ್ನು, ಎರಡನೆಯದು ಎರಡು ಪ್ರಶ್ನೆಗಳನ್ನು, ಮೂರನೆಯದು ಎರಡು ಪ್ರತಿಪಾದನೆಗಳನ್ನು ಒಟ್ಟು ಸೇರಿಸಿದೆ. ಸಂಯೋಜಕ ರೂಪಗಳ ಬಳಕೆಯಿಂದ ವಾಕ್ಯಗಳಲ್ಲಿ ನಡೆಯುವ ಬೇರೆ ಬೇರೆ ಭಾಷಾಸ್ವರೂಪವನ್ನು ಕುರಿತು ನಿರೂಪಿಸಲಾಗಿದೆ.

ಹತ್ತನೆಯ ಅಧ್ಯಾಯ ಸಮಾರೋಪ ಭಾಗವಾಗಿದೆ. ಈ ಅಧ್ಯಾಯದಲ್ಲಿ ವಾಕ್ಯ ಮತ್ತು ಅದರ ಅರ್ಥ, ವಾಕ್ಯ ಘಟಕಗಳು ಕುರಿತು ಸಾಧಾರಣವಾಗಿ ಹೇಳಲಾಗಿದೆ. ಅರ್ಥ ವಿಶ್ಲೇಷಣೆಯ ಪ್ರಯತ್ನವನ್ನು ಕುರಿತು ಹಾಗೂ ಅದಕ್ಕಾಗಿ ಬಳಸಲಾದ ನಿಯೋಗಿ, ಅನುಭೋಗಿ ಮುಂತಾದ ಪದರೂಪಗಲ ಬಳಕೆಯ ಬಗೆಗಿನ ಸಮರ್ಥನೆಯ ಪರವಾದ ಮಾತುಗಳಿವೆ. ಕನ್ನಡ ವ್ಯಾಕರಣದ ಸಂದರ್ಭದಲ್ಲಿ ಈ ಅಧ್ಯಾಯದ ಸೇರ್ಪಡೆ ಉಚಿತವಾದದ್ದು.

೨

'ಕನ್ನಡ ವಾಕ್ಯಗಳು' ಕನ್ನಡ ವಾಕ್ಯಗಳ ಹಿಂದೆ ಅಡಗಿದ ಅರ್ಥ ರಚನೆಯನ್ನು ಸಮರ್ಥವಾಗಿ ವಿಶ್ಲೇಷಿಸುತ್ತದೆ. ಯಾವುದೇ ಒಂದು ಭಾಷೆಯ ರಚನೆಯನ್ನರಿಯಲು ಎರಡು ಬಗೆಯ ಕ್ರಮಬದಧತೆ ಕಂಡುಬರುತ್ತದೆ. ಒಂದು ವ್ಯಾಕರಣ ನಿಯಮದ್ದು ಇನ್ನೊಂದು ಅರ್ಥ ರಚನೆಗೆ ಸಂಬಂಧಿಸಿದ್ದು. ಕನ್ನಡದಲ್ಲಿ (ಪ್ರಾತಿಪದಿಕ+ ಪ್ರಥಮಾ +ವಿಭಕಿ) + (ಪ್ರಾತಿಪದಿಕ+ದ್ವಿತೀಯಾ ವಿಭಕ್ತಿ) + (ಸಕರ್ಮಕ ಧಾತು+ಕಾಲ ಪ್ರತ್ಯಯ+ ವಿಭಕ್ತಿ) ಈ ರಚನೆಯ ಹಲವಾರು ವಾಕ್ಯಗಳಿವೆ. ಉದಾ.'ಮಂಗ ಮರವನ್ನು ಏರಿತು' ಈ ವಾಕ್ಯದಲ್ಲಿ 'ಧಾತು' ಎಂಬುದಕ್ಕೆ ಸಕರ್ಮಕ ಎಂಬ ವಿಶೇಷಣವನ್ನು ಬಳಸಲಾಗಿದೆ. ಆ ವಿಶೇಷಣ ಅಗತ್ಯವಿದೆಯೇ? ಕೇವಲ ಧಾತು ಎಂದಿಷ್ಟೆಯಿದ್ದರೆ 'ಮಂಗ ಮರವನ್ನು ಓಡಿತು' ಇದನ್ನು ಸಹಿತ ಕನ್ನಡದ ವಾಕ್ಯವೆಂದೇ ಕರೆಯಬೇಕಾಗುತ್ತದೆ. ಇದಕ್ಕೆ ಅರ್ಥವಿಲ್ಲವೆಂದಲ್ಲ ಅದು ಕನ್ನಡ ವಾಕ್ಯರಚನೆಯ ನಿಯಮಗಳನ್ನು ಭಂಗಿಸಿದೆಂದರ್ಥ. ಅರ್ಥದ ಭಾರವನ್ನು ವ್ಯಾಕರಣ ಹೊರಬಾರದು.

ಅರ್ಥವಿಶ್ಲೇಷಣೆಯನ್ನಾಧರಿಸಿದ ವ್ಯಾಕರಣ ಸಂಕೀರ್ಣವೂ ಅಸಮಗ್ರವೂ ಆಗುತ್ತದೆ ಯೆಂದು ಪ್ರಸ್ತುತ ಕೃತಿಯ ಮುನ್ನುಡಿಯಲ್ಲಿ ಡಾ. ಎಚ್.ಎಸ್. ಬಿಳಿಗಿರಿಯವರು

ಹೇಳಿದ್ದಾರೆ. ಅವರ ಹೇಳಿಕೆಯನ್ನು ಪುಷ್ಟೀಕರಿಸುವಂತೆ ಕೃತಿಯ ಉದ್ದಕ್ಕೂ ವಾಕ್ಯ ಘಟಕಗಳ ವರ್ಗೀಕರಣವಿದೆ. ಶಂಕರಭಟ್ಟರಂತೆಯೇ ಅರ್ಥ ಭಾರವನ್ನು ವ್ಯಾಕರಣದ ಮೇಲೆ ಹೊರಿಸುವ ಪ್ರಯತ್ನವನ್ನು ಫಿಲ್‌ಮೋರ್, ಲಯನ್ಸ್, ಹೌಸ್ ಮುಂತಾದವರ ಪ್ರಯತ್ನಗಳು ಯಶಸ್ವಿಯಾಗಲಿಲ್ಲ.

ಶಬ್ದಗಳ ಅರ್ಥದ ಆಧಾರದ ಮೇಲೆ ವಿಶ್ಲೇಷಣೆ ನಡೆಬಾರದೆಂದರ್ಥವಲ್ಲ ಅದರ ಜೊತೆಗೆ ವ್ಯಾಕರಣ ನಿಯಮಗಳನ್ನು ಅನುಲಕ್ಷಿಸಬೇಕು. ಕನ್ನಡ ವಾಕ್ಯಗಳಲ್ಲಿ ಕರ್ತೃವನ್ನು ಸೂಚಿಸುವ ಪ್ರಾತಿಪದಿಕ ಲಿಂಗದ ವಚನಗಳಿಗೂ ಕ್ರಿಯಾಪದದಲ್ಲಿರುವ ವಿಭಕ್ತಿ ಪ್ರತ್ಯಯಗಳ ಲಿಂಗವಚನಗಳಿಗೂ ಹೊಂದಾಣಿಕೆಯಿರಬೇಕು ಎಂಬುದು ವ್ಯಾಕರಣ ನಿಯಮವಾಗಿದೆ. ಭಟ್‌ರಿಗೆ ಕನ್ನಡ ವಾಕ್ಯಗಳ ಆಂತರಿಕ ರಚನೆ ಮತ್ತು ಅರ್ಥವ್ಯವಸ್ಥೆ ಸ್ವರೂಪವನ್ನು ಗುರುತಿಸುವುದು ಮುಖ್ಯವಾಗಿದೆಯೇ ಹೊರತು ನಿಯಮಗಳನ್ನು ರಚಿಸುವುದಲ್ಲ. ಆದರೆ ಈ ವ್ಯತ್ಯಾಸದ ಅರಿವು ಭಟ್‌ರಿಗೆಯಿದೆ. ವಾಕ್ಯಗಳ ಅರ್ಥ ರಚನೆಯೇ ಅವರ ಕೃತಿಯ ಭಿತ್ತಿ. ಅವರೇ ಒಂದೆಡೆ ಹೇಳುವಂತೆ 'ಜಗತ್ತಿನಲ್ಲಿರುವ ಬೇರೆ ಬೇರೆ ವಾಕ್ಯಗಳು ವಾಕ್ಯ ರಚನೆಯಲ್ಲಿ ಒಂದರಿಂದೊಂದು ತೀರ ಭಿನ್ನವಾಗಿವೆ ಯಾದರೂ, ಅರ್ಥ ರಚನೆಯಲ್ಲಿ ಮಾತ್ರ ಅವು ಒಂದನ್ನೊಂದು ಹೋಲುತ್ತಿರುವ ಹಾಗೆ ಕಾಣಿಸುತ್ತದೆ.'(ಕನ್ನಡ ವಾಕ್ಯಗಳು. ಪು. ೫೬) ವಾಕ್ಯಗಳಲ್ಲಿಯ ಘಟಕ ಮತ್ತು ಅರ್ಥಗಳ ಸಂಬಂಧವನ್ನು ಇದು ಸಮರ್ಥವಾಗಿ ಪರಿಚಯಿಸುತ್ತದೆ.

ಕನ್ನಡ ವಾಕ್ಯಗಳನ್ನು ಬಳಸುವ, ಗ್ರಹಿಸುವ ಬಗೆ ಹೇಗೆ ಎಂಬುದನ್ನು ಈ ಕೃತಿಯಲ್ಲಿ ದೀರ್ಘವಾಗಿ ಪರಿಶೀಲನೆ ನಡೆಸಿದರೂ ಕೆಲವು ಪ್ರಶ್ನೆಗಳು ಏಳುವುದು ಸಹಜ. 'ರಾಮ ಮರ ಕಡಿದ', 'ಆ ಆಲದ ಮರ ನೂರಾರು ಹಕ್ಕಿಗಳಿಗೆ ಆಶ್ರಯ ನೀಡಿದೆ', 'ಹೂವು ನಕ್ಕಿತು' ಈ ವಾಕ್ಯಗಳನ್ನು ಗಮನಿಸಿದಾಗ ಮೊದಲನೆಯ ವಾಕ್ಯದಲ್ಲಿಯ 'ರಾಮ' ಎಂಬ ಘಟಕ ಕ್ರಿಯಾ ಪದದ ಮೂಲಕ ಮರದ ಮೇಲೆ ಪರಿಣಾಮ ಬೀರಬಲ್ಲ ನಿಯೋಗಿ ಘಟಕ. ಎರಡು ಮತ್ತು ಮೂರನೆಯ ವಾಕ್ಯಗಳಲ್ಲಿನ 'ಆಲದ ಮರ', 'ಹೂವು' ಈ ಘಟಕಗಳು ರಾಮನಂತೆ ನಿಯೋಗಿಗಳೆಂದು ಸಾಧಿಸು ವುದು ಸರಿಯಲ್ಲ. ಏಕೆಂದರೆ 'ರಾಮ' ಘಟಕದಂತೆ ಪರಿಣಾಮ ಬೀರುವ ಶಕ್ತಿ (ಆಲದಮರ) ಮತ್ತು (ಹೂವು) ಇವುಗಳಿಗಿಲ್ಲ. ಇಂತಹ ರಚನೆಗಳಿಗೆ ಅನ್ಯದಾರಿ ಹುಡುಕಬೇಕಾಗಿದೆ. ಭಟ್‌ರು ದಕ್ಷಿಣ ಕನ್ನಡ ಜಿಲ್ಲೆಯವರಾದ್ದರಿಂದ ಆ ಪ್ರದೇಶದ ವಾಕ್ಯರಚನೆಯ ಉದಾಹರಣೆಗಳನ್ನೇ ಹೆಚ್ಚಾಗಿ ತೆಗೆದುಕೊಳ್ಳುತ್ತಾರೆ. ಅವರಿಗೆ ಸಮ್ಮತವಾಗಿ ತೋರಿವು ಕೆಲವು ವಾಕ್ಯಗಳು ಇನ್ನೊಂದು ಪ್ರದೇಶದವರಿಗೆ ಅಸಮ್ಮತವಾಗಿ ಕಾಣಿಸುವ ಸಾಧ್ಯತೆಯಿದೆ. ಇಂತಹ ಗಂಭೀರವಲ್ಲದ ಚಿಕ್ಕ-ಪುಟ್ಟ ಕೊರತೆಗಳು ಅಲ್ಲಲ್ಲಿ ಇವೆ.

ಕೃತಿ ರಚನೆಗೆ ಶಂಕರಭಟ್‌ರು ತುಂಬ ಶ್ರಮಪಟ್ಟಿದ್ದಾರೆ. ಕನ್ನಡ ವಾಕ್ಯಗಳ ಆಂತರಿಕ ರಚನೆ ಮತ್ತು ಅರ್ಥವ್ಯವಸ್ಥೆಯನ್ನು ಕುರಿತ ಎಲ್ಲ ಮಗ್ಗಲುಗಳನ್ನು ವಿವರವಾಗಿ

ಪರಿಶೀಲಿಸಿದ್ದಾರೆಂಬುದಕ್ಕೆ ಇಲ್ಲಿಯ ಶೀರ್ಷಿಕೆ, ಉಪಶೀರ್ಷಿಕೆ ಹಾಗೂ ವಿಪುಲವಾದ ಉದಾಹರಣೆಗಳೇ ಸಾಕ್ಷಿ. ಈ ಕೃತಿ ಕನ್ನಡ ಭಾಷಾಧ್ಯಯನಕ್ಕೆ ಬೆಲೆಯುಳ್ಳ ಕಾಣಿಕೆಯಾಗಿದೆ. ತಮ್ಮ ಕೃತಿ ರಚನೆಯ ಉದ್ದೇಶವನ್ನು ಕುರಿತು ಭಟ್‌ರು ಒಂದೆಡೆ ಹೀಗೆ ಹೇಳಿದ್ದಾರೆ. 'ಕನ್ನಡ ವಾಕ್ಯಗಳ ಕುರಿತು ನಮಗೆ ತಿಳಿದಿರುವ ಸಂಗತಿಗಿಂತಲೂ ತಿಳಿಯದೇ ಇರುವ ಸಂಗತಿಗಳೇ ಬಹಳ ಜಾಸ್ತಿ. ಹೀಗೆ ತಿಳಿದಿರುವವುಗಳನ್ನೂ ಕೂಡ ಸ್ಪಷ್ಟವಾಗಿ ತಿಳಿಸಿ ಹೇಳಲು ಅದಕ್ಕೇ ಬೇಕಾಗುವ ಪಾರಿಭಾಷಿಕ ಪದಗಳು, ಅವುಗಳ ಪ್ರಯೋಗ, ಇತ್ಯಾದಿ ಗಳನ್ನು ಕನ್ನಡದಲ್ಲಿ ಸಾಕಷ್ಟು ಬೆಳೆದು ಬಂದಿಲ್ಲ. ಈ ಎರಡು ಕಾರಣಗಳಿಗಾಗಿ, ಕನ್ನಡ ವಾಕ್ಯರಚನೆಯ ನಿಯಮಗಳನ್ನು ಈ ಪುಸ್ತಕದಲ್ಲಿ ಹೆಚ್ಚು ಕಟ್ಟುನಿಟ್ಟಾಗಿ ಮತ್ತು ಶಾಸ್ತ್ರೀಯವಾಗಿ ಹೇಳುವ ಪ್ರಯತ್ನವನ್ನು ಮಾಡಿಲ್ಲ. ಆದಷ್ಟು ಹೆಚ್ಚು ಮಂದಿ ಈ ವಿಷಯದಲ್ಲಿ ಆಸಕ್ತಿಯನ್ನು ತಾಳಬೇಕು ಮತ್ತು ಹೊಸ ಹೊಸ ಸಂಗತಿಗಳನ್ನು ಬೆಳಕಿಗೆ ತರುವ ಪ್ರಯತ್ನ ನಡೆಸಬೇಕು ಎಂಬ ಆಶಯದಿಂದ ಇಂತಹ ನಿಯಮಗಳ ಅಸ್ತಿತ್ವವನ್ನು ಬರಿಯ ಉದಾಹರಣೆಗಳ ಕಡೆಗೆ ಗಮನಹರಿಸುವುದರ ಮೂಲಕವೇ ನಿರ್ದೇಶಿಸಲಾಗಿದೆ' (ಪು. ೬೦೩–೬೦೪). ಈ ಮಾತುಗಳ ಹಿಂದೆ ಇರುವ ಶುದ್ಧ ಅಧ್ಯಯನಕಾರನ ದೃಷ್ಟಿಯ ಮಾತು ಹಾಗಿರಲಿ. ತಮ್ಮ ವಿಚಾರಗಳನ್ನು ಮುಂದಿನವರು ಬೆಳೆಸಲಿ, ಪರಿಷ್ಕರಿಸಲಿ ಎಂಬ ಕಳಕಳಿಯನ್ನು ಗುರುತಿಸಬೇಕು. ಆದರೆ ದುರದೃಷ್ಟ ವಶಾತ್ ಶಂಕರಭಟ್‌ರ ನಂತರ ವಾಕ್ಯರಚನೆಗೆ ಸಂಬಂಧಿಸಿದಂತೆ ಬಂದಿರುವ ಬರೆಹಗಳು ಸಂಖ್ಯಾಯಲ್ಲೂ ತುಂಬ ಕಡಿಮೆ. ಹೊಸ ಆಲೋಚನೆಯನ್ನು ಬಿಂಬಿಸುವ ಬರೆಹಗಳಂತೂ ಇಲ್ಲವೆಂದೇ ಹೇಳಬೇಕು. ಇಂದಿಗೂ ವಾಕ್ಯರಚನೆಗೆ ಸಂಬಂಧಿಸಿದಂತೆ ಶಂಕರಭಟ್‌ರ 'ಕನ್ನಡ ವಾಕ್ಯಗಳು' ಅದ್ವಿತೀಯವಾಗಿ ಉಳಿದಿರುವುದು ನಿಜ. ಅದು ಅವರಿಗೆ ಗೌರವ ತರವಂತಹದ್ದು. ಆದರೆ ಅವರ ವಿಚಾರಗಳನ್ನು ನಾವು ಯಾರು ಮುಂದುವರಿಸಲಿಲ್ಲವಾದ್ದರಿಂದ ಅದು ನಮಗೆ ಶೋಭೆ ತರುವಂತಹದಲ್ಲ. ಅವರ ಬರೆಹಗಳನ್ನು ಪರಿಷ್ಕರಿಸಿ ಅವರ ವಿಚಾರಗಳನ್ನು ಮುಂದುವರಿಸುವಂತಹ ಬರೆಹಗಳು ಬಂದಿದ್ದರೆ ಶಂಕರಭಟ್ಟರಿಗೆ(ಆತರಹದ ವಿದ್ವಾಂಸರಿಗೆ) ಸಂತೋಷವಾಗುತ್ತಿತ್ತು.

ಆಕರಗ್ರಂಥ

೧. ಡಿ.ಎನ್. ಶಂಕರಭಟ್(೧೯೭೮), ಕನ್ನಡ ವಾಕ್ಯಗಳು. ಗೀತಾ ಬುಕ್‌ಹೌಸ್. ಮೈಸೂರು.

೩

ಕನ್ನಡ ಶಬ್ದರಚನೆ : ಒಂದು ವಿವೇಚನೆ

ಡಿ.ಎನ್. ಶಂಕರಭಟ್ಟರು ಸಿದ್ಧವ್ಯಾಕರಣ ನಿಯಮಗಳನ್ನು ಪಲ್ಲಟಗೊಳಿಸುವ ಭಾಷಾಶಾಸ್ತ್ರಜ್ಞರು. ಅವರ ಈ ಗ್ರಂಥ ಪ್ರಕಟವಾಗಿದ್ದು ೧೯೯೯ರಲ್ಲಿ. ತಲಸ್ಪರ್ಶಿಯವಾದ ಸಂಶೋಧನೆ ಮತ್ತು ಹರಿತವಾದ ವೈಚಾರಿಕ ಚಿಂತನೆ ಎರಡೂ ಕೂಡಿರುವ ಗ್ರಂಥ ಇದಾಗಿದೆ. ಈ ಗ್ರಂಥದ ವಿಶೇಷತೆಯೆಂದರೆ ಸಂಶೋಧನೆ ಮತ್ತು ವೈಚಾರಿಕತೆ ಇವು ಒಂದಕ್ಕೊಂದು ಪೂರಕವಾಗಿರುವುದು. ಈಗ ಬಳಕೆಯಲ್ಲಿರುವ ವ್ಯಾಕರಣ ಸಂಸ್ಕೃತದ ರಚನೆಯನ್ನು ತಿಳಿಸಿಕೊಡುತ್ತದೆ ವಿನಃ ಕನ್ನಡದ ರಚನೆಯನ್ನಲ್ಲ ಎಂಬುದು ಶಂಕರಭಟ್ಟರ ವಾದದ ಮುಖ್ಯ ತಿರುಳಾಗಿದೆ. ಈ ಪುಸ್ತಕದಲ್ಲಿ ಶಂಕರಭಟ್ಟರು ಕನ್ನಡ ಶಬ್ದಗಳ ಆಂತರಿಕ ರಚನೆಯನ್ನು ಪರಿಶೀಲಿಸಿದ್ದಾರೆ. ಕನ್ನಡ ಶಬ್ದಗಳಿಗೂ ಅವುಗಳಿಗೆ ಹತ್ತಿಕೊಳ್ಳುವ ಪ್ರಯತ್ನಗಳಿಗೂ ಎಂತಹ ಸಂಬಂಧವಿದೆ? ಮತ್ತು ಪ್ರತ್ಯಯಗಳು ಬೇರೊಂದು ಶಬ್ದದ ಅಂಗಗಳಾಗಿ ಬಂದಾಗ ಅವು ಎಂತಹ ಬದಲಾವಣೆಗೆ ಒಳಗಾಗುತ್ತವೆ? ಇಂತಹ ಪ್ರಶ್ನೆಗಳನ್ನು ಎತ್ತಿಕೊಂಡು ಅವರು ಚರ್ಚೆ ಆರಂಭಿಸುತ್ತಾರೆ. ಕನ್ನಡದ ಮೂಲಕ ಕನ್ನಡದ ರಚನೆಯನ್ನು ನೋಡುವುದು ಶಂಕರಭಟ್ಟರ ಚಿಂತನೆಯ ಮುಖ್ಯಧಾರೆಯಾಗಿದೆ. ಅದಕ್ಕೆ ಬೇಕಾದ ಎಲ್ಲ ಭಾಷಿಕ ಪುರಾವೆಗಳನ್ನು ಒಟ್ಟುಗೂಡಿಸಿ ಅವರು ತಮ್ಮ ಸಿದ್ಧಾಂತವನ್ನು ಮಂಡಿಸುತ್ತಾರೆ.

ಭಾಷೆಯಲ್ಲಿ ಸಾಮಾನ್ಯವಾಗಿ ಎರಡು ರೀತಿಯ ಪ್ರತ್ಯಯಗಳಿರುತ್ತವೆ. ಪದವೊಂದನ್ನು ರಚಿಸಲು ಬಳಕೆಯಾದ ಪ್ರತ್ಯಯ 'ಪದ ಪ್ರತ್ಯಯ' (ಕುಣಿ+ತ). ಒಂದು ಪದದಿಂದ ಅದರ ರೂಪವೊಂದನ್ನು ರಚಿಸಲು ಬಳಕೆಯಾದ ಪ್ರತ್ಯಯ 'ಪದರೂಪ ಪ್ರತ್ಯಯ'. ಉದಾ. 'ಬೆದರು' ಎಂಬ ಪದ 'ಬೆದರಿ', 'ಹೆದರಿ' ಎಂಬ ಪದರೂಪವನ್ನು ರಚಿಸಲು ಬಳಸಿರುವ 'ಇ' ಎಂಬ ಪ್ರತ್ಯಯ. ಕನ್ನಡದಲ್ಲಿ ಈ ಎರಡು ಪ್ರತ್ಯಯಗಳು ಬಳಕೆಯಲ್ಲಿವೆ. ಅವುಗಳ ಸ್ವರೂಪವನ್ನು ಹೇಳಿ ಕನ್ನಡ ಪದ ವರ್ಗಗಳನ್ನು ಕುರಿತು ನಿರೂಪಿಸುತ್ತಾರೆ.

ಕನ್ನಡದಲ್ಲಿ ಮೂರು ಬಗೆಯ ಪದಗಳಿವೆ. ವ್ಯಕ್ತಿ, ವಸ್ತುಗಳನ್ನು ಗುರುತಿಸುವ ಶಬ್ದಗಳು ನಾಮಪದಗಳು(ಮೇಘನ, ವಿಶಾಲಾಕ್ಷಿ ಮುಂತಾದವು). ಘಟನೆಗಳನ್ನು ನಿರ್ದೇಶಿಸುವ ಪದಗಳು ಕ್ರಿಯಾಪದಗಳು(ಹೇಳು, ತಿನ್ನು ಮುಂತಾದುವು). ವ್ಯಕ್ತಿ, ವಸ್ತು ಹಾಗೂ ಘಟನೆಗಳ ಗುಣಧರ್ಮವನ್ನು ಸೂಚಿಸುವ ಮತ್ತು ಕ್ರಿಯಾಪದ ಎಂಬ ಎರಡು ವರ್ಗದ ಶಬ್ದಗಳಿವೆ. ತಾತ್ಪರ್ಯವಿಷ್ಟೇ ಪದ ವರ್ಗದಲ್ಲಿ ಕನ್ನಡ ಸಂಸ್ಕೃತಕ್ಕಿಂತ ಭಿನ್ನವಾಗಿದೆ.

ಹೆಸರಿಸುವ ಮತ್ತು ವರ್ಣಿಸುವ ವಿಧಾನದ ಮೂಲಕ ನಾಮಪದಗಳನ್ನು ಮತ್ತು ನಾಮಪದ ಗುಚ್ಛಗಳನ್ನು ಗುರುತಿಸಲಾಗಿದೆ. 'ರಾಜು ಅವನ ಹೆಂಡತಿಗೆ ಬೆಳಗಾವಿಯಿಂದ ರೇಷ್ಮೆ ಸೀರೆ ತಂದಿದ್ದಾನೆ'. ಇಲ್ಲಿ ರಾಜು, ಬೆಳಗಾವಿ ಎಂಬ ನಾಮ ರೂಪಗಳು ಹೆಸರಿಸುವ ವಿಧಾನದ ಮೂಲಕ ಸಮಸ್ತ ಪದವನ್ನು ಗುರುತಿಸುತ್ತವೆ. 'ರೇಷ್ಮೆ ಸೀರೆ' ಎಂಬ ನಾಮರೂಪ ವರ್ಣಿಸುವ ವಿಧಾನದ ಮೂಲಕ ನಾಮಪದ ಗುಚ್ಛವನ್ನು ಗುರುತಿಸುತ್ತದೆ. ಅವುಗಳ ಸಾಮ್ಯ ವೈಷಮ್ಯಗಳನ್ನು ಶಂಕರಭಟ್‌ರು ಸ್ಥಿರವಾಗಿಸಿದ್ದಾರೆ. ಕನ್ನಡದಲ್ಲಿ ಮುಖ್ಯವಾಗಿ ಮೂರು ರೀತಿಯ 'ಪ್ರತ್ಯಯಯುಕ್ತ ನಾಮಪದಗಳು' ಬಳಕೆಯಲ್ಲಿವೆ. ಅವು ಕ್ರಮವಾಗಿ ನಾಮಪದ (ಗಾಣ+ಇಗ=ಗಾಣಿಗ), ಕ್ರಿಯಾಪದ (ಅಗಲು+ಇಕೆ=ಅಗಲಿಕೆ), ವಿಶೇಷಣ (ಬಡ+ವ)ಗಳಿಗೆ ಪ್ರತ್ಯಯಗಳನ್ನು ಸೇರಿಸುವುದರ ಮೂಲಕ ರಚಿತವಾಗಿವೆ. ಕ್ರಿಯಾಪದಗಳಿಂದ ಕ್ರಿಯಾರೂಪವೊಂದನ್ನು ಸಾಧಿಸುವುದಕ್ಕಾಗಿ ಬಳಸುವ 'ಇಕೆ' ಎಂಬ ಪದರೂಪ ಪ್ರತ್ಯಯವೂ ಕನ್ನಡದಲ್ಲಿ ಬಳಕೆಯಲ್ಲಿದೆ. ಇದನ್ನು ಬಳಲುವಿಕೆ, ಹಿಡಿಯುವಿಕೆ ಮೊದಲಾದ ಕ್ರಿಯಾರೂಪಗಳಲ್ಲಿ ಕಾಣಬಹುದು. ಇದು ಸಾಮಾನ್ಯವಾಗಿ ಎಲ್ಲ ಕ್ರಿಯಾಧಾತುಗಳಲ್ಲಿ ಬಳಕೆಯಾಗುತ್ತದೆ.

ಕನ್ನಡದಲ್ಲಿ ಈಗ ಬಳಕೆಯಲ್ಲಿರುವ ಸಮಾಸ ನಿಯಮಗಳು ತುಂಬ ಗೋಜಲಮಯ ವಾಗಿವೆ. ಅವು ಸಂಸ್ಕೃತ ಸಮಾಸಗಳ ಪರಿಶೀಲನೆಯ ಮೂಲಕ ಕನ್ನಡ ಸಮಾಸಗಳನ್ನು ವಿವರಿಸಲು ಯತ್ನಿಸಿರುವುದು ಇದಕ್ಕೆ ಒಂದು ಕಾರಣವಾದರೆ, ಸಮಸ್ತ ಪದಗಳಿಗೂ ಪದಗುಚ್ಛಗಳಿಗೂ ನಡುವಿರುವ ವ್ಯತ್ಯಾಸವನ್ನು ಸರಿಯಾಗಿ ಗ್ರಹಿಸಿಕೊಳ್ಳದಿರುವುದು ಇನ್ನೊಂದು ಕಾರಣ. ಕನ್ನಡ ಸಮಸ್ತ ಪದಗಳ ರಚನೆ ಸಂಸ್ಕೃತಕ್ಕಿಂತ ಭಿನ್ನವಾಗಿದೆ. ಸಂಸ್ಕೃತದ ಸಮಸ್ತ ಪದಗಳಲ್ಲಿ ಉತ್ತರಪದ ಪ್ರಧಾನವಾಗಿದ್ದರೆ ತತ್ಪುರುಷ. ಆದರೆ ಕನ್ನಡದ ಸಮಸ್ತ ಪದಗಳಲ್ಲಿ ಉತ್ತರ ಪದವೇ ಪ್ರಧಾನವಾಗಿರುವುದರಿಂದ ಎಲ್ಲ ಸಮಸ್ತ ಪದಗಳನ್ನು ತತ್ಪುರುಷ ಎಂದೇ ಕರೆಯಬೇಕಾಗುತ್ತದೆ! ಕರ್ಮಧಾರೆಯದ ಕನ್ನಡದ ಉದಾಹರಣೆಗಲ್ಲಿ ಪೂರ್ವಪದ ವಿಶೇಷಣವಾಗುತ್ತದೆ(ಹೆಜ್ಜೇನು, ಹೆಮ್ಮರ ಮುಂತಾದುವು). ಕನ್ನಡದಲ್ಲಿ ವಿಶೇಷಣಗಳು ಪ್ರತ್ಯೇಕ ಪದವರ್ಗಕ್ಕೆ ಸೇರಿರುವುದರಿಂದ ಸಂಸ್ಕೃತದ ಹಾಗೆ ತತ್ಪುರುಷದ ಪ್ರಭೇದವಾಗುವುದಿಲ್ಲ. ಸಂಸ್ಕೃತದಲ್ಲಿ ಸಂಖ್ಯಾವಾಚಕಗಳು ನಾಮಪದದಲ್ಲಿಯೇ ಸಮಾವೇಶವಾಗುತ್ತವೆ. ಕನ್ನಡದಲ್ಲಿ ಅವು ವಿಶೇಷಣ ವರ್ಗದಲ್ಲಿ ಸೇರುತ್ತವೆ(ಇರ್ಮಡಿ, ಇಮ್ಮಾವು ಮುಂತಾದುವು). ಹೀಗಾಗಿ ದ್ವಿಗುವನ್ನು ತತ್ಪುರುಷದಲ್ಲಿ

ಸೇರಿಸಲು ಸಾಧ್ಯವಾಗದು. ಅದರಂತೆ ಕನ್ನಡದಲ್ಲಿ ದ್ವಂದ್ವ(ಗಿಡ ಮರ ಬಳ್ಳಿಗಳು), ಗಮಕ (ಆ ಮನೆ), ಕ್ರಿಯಾ (ಚುಚ್ಚುವ ಕತ್ತಿ) ಇವು ಪದಪುಂಜಗಳೇ ವಿನಃ ಸಮಸ್ತ ಪದಗಳಲ್ಲ. ಈ ಎಲ್ಲ ಅಂಶಗಳನ್ನು ಶಂಕರಭಟ್‌ರು ಸೋದಾಹರಣವಾಗಿ ಪರಿಶೀಲಿಸಿದ್ದಾರೆ. ಇದನ್ನು ಗಮನಿಸಿದಾಗ ಈಗಿರುವ ಸಮಾಸ ನಿಯಮಗಳೇ ಪಲ್ಲಟವಾಗುತ್ತವೆ. ತನ್ಮೂಲಕ ಶಂಕರಭಟ್‌ರು ಕನ್ನಡದ್ದೇ ಆದ ಸಮಸ್ತ ಪದಗಳ ತಾತ್ವಿಕ ಚೌಕಟ್ಟನ್ನು ಸ್ಥಿರಪಡಿಸಿದ್ದಾರೆ. ಕನ್ನಡ ಸಮಸ್ತ ಪದಗಳನ್ನು ವಿಶ್ಲೇಷಿಸುವ ರೀತಿಯನ್ನು ಅವರು ಶಾಸ್ತ್ರೀಯ ತಿಳಿವಳಿಕೆಯಿಂದ ಪಡೆದಿರಬಹುದು ಆದರೂ ಅವರದು ನವೀನ ದೃಷ್ಟಿ.

ಶಂಕರಭಟ್‌ರು ಕನ್ನಡ ಕ್ರಿಯಾಪದಗಳನ್ನೂ ಕೂಡ ಆಂತರಿಕ ರಚನೆಯಿರುವವುಗಳು ಮತ್ತು ಇಲ್ಲದವುಗಳು (ಎಂದರೆ ಕ್ರಿಯಾಧಾತುಗಳು) ಎಂಬುದಾಗಿ ಎರಡು ವರ್ಗಗಳಲ್ಲಿ ವಿಂಗಡಿಸುತ್ತಾರೆ. ಕ್ರಿಯಾಧಾತುಗಳನ್ನು ಅವುಗಳ ಕೊನೆಯ ಸ್ವರದ ಆಧಾರದ ಮೇಲೆ ವಿಂಗಡಿಸಲು ಸಾಧ್ಯವಿದೆ. ಅವುಗಳಲ್ಲಿ ಎಕಾರಾಂತ(ಅಗೆ, ಒಗೆ, ನಡೆ ಮುಂತಾದುವು), ಇ ಕಾರಾಂತ (ಕಡಿ, ಕುಡಿ, ಮುರಿ ಮುಂತಾದವು) ಉ ಕಾರಾಂತ (ನಗು, ಅಳು, ಬರು ಮುಂತಾದವು)ಗಳೆಂದು ಮೂರು ರೀತಿಯಾಗಿ ವಿಂಗಡಿಸಿದ್ದಾರೆ. ಉ ಕಾರಾಂತ ಧಾತುಗಳಲ್ಲಿ ಮಾತ್ರ ಅಕ್ಷರಗಳ ಸಂಖ್ಯೆಯಲ್ಲಿ ಮತ್ತು ಸ್ವರೂಪದಲ್ಲಿ ವೈವಿಧ್ಯತೆ ಕಾಣಿಸುತ್ತದೆ (ನಗು, ಓಡು, ನುಂಗು, ಉಜ್ಜು, ಅಡಗು ಮುಂತಾದವು). ನಾಮಪದಗಳಿಗೆ 'ಇಸು' ಪ್ರತ್ಯಯ ಸೇರಿಸಿ ಕ್ರಿಯಾಪದಗಳನ್ನು ರಚಿಸುವ ಕ್ರಮ ಕನ್ನಡದಲ್ಲಿ ಬಳಕೆಯಲ್ಲಿದೆ(ಅಬ್ಬರ–ಅಬ್ಬರಿಸು, ಹಂಗು–ಹಂಗಿಸು ಮುಂತಾದುವು). ವಿಶೇಷಣಗಳಿಗೂ ಕೂಡ 'ಇಸು' ಪ್ರತ್ಯಯ ಸೇರಿಸಿ ಕ್ರಿಯಾಪದಗಳನ್ನು ರಚಿಸುವ ಕ್ರಮವೂ ಕನ್ನಡದಲ್ಲಿದೆ (ಎತ್ತರ–ಎತ್ತರಿಸು, ತಂಪು–ತಂಪಿಸು). ಕೆಲವು ಶಬ್ದಗಳು 'ಇಕೆ' ಅಥವಾ 'ಕೆ' ಎಂಬ ಪ್ರತ್ಯಯ ಸೇರಿದಾಗ ನಾಮಪದಗಳಾಗಿಯೂ ಮತ್ತು 'ಇಸು' ಪ್ರತ್ಯಯ ಸೇರಿದಾಗ ಕ್ರಿಯಾಪದಗಳಾಗಿಯೂ ಬಳಕೆಯಾಗುತ್ತವೆ(ಆಕಳಿಕೆ–ಆಕಳಿಸು, ಬೆದರಿಕೆ–ಬೆದರಿಸು ಮುಂತಾದುವು). ಹೊಸಗನ್ನಡದಲ್ಲಿ ಬಳಕೆಯಲ್ಲಿರುವ ಆಗು, ಆಡು, ಕೊಡು, ಬರು, ಬಿಡು, ಕಚ್ಚು, ಬೀಳು, ಮಾಡು, ಹಾಕು ಮೊದಲಾದ ಕ್ರಿಯಾಪದಗಳು ಇತರ ಪದರೂಪಗಳೊಡನೆ ಸೇರಿ ಸಂಯುಕ್ತ ಕ್ರಿಯಾಪದಗಳಾಗುತ್ತವೆ(ನಾಮಪದದೊಂದಿಗೆ–ಪೆಟ್ಟಾಗು, ಬಲಿಯಾಗು, ವಿಶೇಷಣದೊದಿಗೆ–ಬಡವಾಗು, ಕಪ್ಪಾಗು, ಕ್ರಿಯಾಪದದೊಂದಿಗೆ–ಬೇಕಾಗು, ಸಾಕಾಗು).

ಕನ್ನಡದಲ್ಲಿ 'ವಿಶೇಷಣ' ಎಂಬ ಪದ ಮತ್ತೊಂದು ವರ್ಗವಿದೆ. ನಾಮಪದಗಳನ್ನು ಗುರುತಿಸುವ ವ್ಯಕ್ತಿ, ವಸ್ತುಗಳ ಗುಣಧರ್ಮವನ್ನು ಸೂಚಿಸುವ ವಿಶೇಷಣಗಳನ್ನು 'ನಾಮ ವಿಶೇಷಣ'ಗಳೆಂದು ಕರೆದರೆ ಕ್ರಿಯಾಪದಗಳನ್ನು ನಿರ್ದೇಶಿಸುವ ಘಟನೆಗಳ ಗುಣಧರ್ಮವನ್ನು ಸೂಚಿಸುವ ವಿಶೇಷಣಗಳನ್ನು 'ಕ್ರಿಯಾ ವಿಶೇಷಣ'ಗಳೆಂದು ಕರೆಯಲಾಗಿದೆ. ನಾಮ ವಿಶೇಷಣಗಳು ಪದಗುಚ್ಛಗಳಲ್ಲಿ ಸಾಮಾನ್ಯವಾಗಿ ನಾಮಪದಗಳೊಡನೆ ಸೇರಿ ಬರುತ್ತವೆ(ಕೆಂಪು ಹೂ, ಕರಿ ಟೊಪ್ಪಿಗೆ ಮುಂತಾದುವು). ಆದರೆ ಕ್ರಿಯಾ

ವಿಶೇಷಣಗಳು ಈ ರೀತಿ ಕ್ರಿಯಾಪದಗಳೊಂದಿಗೆ ಸೇರಿ ಬರುವ ಬದಲು ವಾಕ್ಯದಲ್ಲೆಲ್ಲೋ ಬರಬಲ್ಲುವು(ರಾಜು ಮಡಿಕೆಯನ್ನು ನೆಲದ ಮೇಲೆ ಮೆಲ್ಲಗೆ ಇರಿಸಿದ, ರಾಜು ಮಡಿಕೆಯನ್ನು ಮೆಲ್ಲಗೆ ನೆಲದ ಮೇಲೆ ಇರಿಸಿದ ಮುಂತಾದುವು). ಕನ್ನಡದಲ್ಲಿ ಆಂತರಿಕ ರಚನೆಯಿಲ್ಲದ ನಾಮ ವಿಶೇಷಣ ಧಾತುಗಳಿವೆ(ಕರಿ, ಬಿಳಿ, ಬಿಸಿ ಮುಂತಾದುವು). ನೇರವಾಗಿ ಕ್ರಿಯಾ ವಿಶೇಷಣಗಳಾಗಿಯೇ ಬಳಕೆಯಾಗುವಂತಹ ಧಾತುಗಳು ಕನ್ನಡದಲ್ಲಿ ಹೆಚ್ಚಿಲ್ಲ. ಆದರೆ ಅನುಕರಣಾರ್ಥದಲ್ಲಿ ಬರುವ ಶಬ್ದಗಳಲ್ಲಿ ಹಲವು 'ಅನೆ' ಇಲ್ಲವೇ 'ನೆ' ಎಂಬ ಪ್ರತ್ಯಯದೊಂದಿಗೆ ಸೇರಿ ಕ್ರಿಯಾ ವಿಶೇಷಣವಾಗಿ ಬಳಕೆಯಾಗುತ್ತವೆ(ಸರ್ರನೆ, ಸರಕ್ಕನೆ, ಸರಸರನೆ). ಕೆಲವು ಅನುಕರಣ ಶಬ್ದಗಳು 'ಅನೆ' ಎಂಬ ಪ್ರತ್ಯಯದ ಸಹಾಯದಿಂದ ಕ್ರಿಯಾ ವಿಶೇಷಣವಾಗಿಯೂ (ಗಮಗಮನೆ) ಮತ್ತು 'ಇಸು' ಎಂಬ ಪ್ರತ್ಯಯದ ಸಹಾಯದಿಂದ ಕ್ರಿಯಾಪದಗಳಾಗಿಯೂ (ಗಮಗಮಿಸು) ಬಳಕೆಯಾಗಿವೆ. ನಾಮ ವಿಶೇಷಣಗಳಿಂದ ಕ್ರಿಯಾ ವಿಶೇಷಣಗಳನ್ನೂ ಸಾಧಿಸಲು ಬಳಕೆಯಾಗುವ ಪ್ರತ್ಯಯಗಳಲ್ಲಿ 'ಅಗೆ' ಎಂಬುದು ಮುಖ್ಯವಾಗಿದೆ (ತೆಳು–ತೆಳ್ಳಗೆ, ಕರಿ–ಕರ್ರಗೆ, ಬಿಳಿ–ಬೆಳ್ಳಗೆ). ವಿಶೇಷಣಗಳ ಚಾರಿತ್ರಿಕ(ಹಳಗನ್ನಡದ) ಅವಶೇಷಗಳನ್ನು ಗಮನದಲ್ಲಿಟ್ಟುಕೊಂಡು ವರ್ತಮಾನ ಕಾಲದ ವಿಶೇಷಣಗಳ ಸ್ವರೂಪವನ್ನು ಲಿಖಿತ ಪ್ರಮಾಣಗಳೊಡನೆ ಖಚಿತವಾಗಿ ತಿಳಿಸಿದ್ದಾರೆ.

ಕನ್ನಡದಲ್ಲಿ ಸಂಸ್ಕೃತ, ಇಂಗ್ಲಿಶ್, ಪರ್ಶಿಯನ್ ಮೊದಲಾದ ಅನ್ಯಭಾಷೆಯ ಶಬ್ದಗಳು ಎರವಲಾಗಿ ಬಂದಿವೆ. ಆದರೆ ಅವುಗಳ ಆಂತರಿಕ ರಚನೆ ಕನ್ನಡಕ್ಕಿಂತ ಭಿನ್ನವಾಗಿದೆ. ಸಂಸ್ಕೃತ ರೂಪಗಳು ತತ್ಸಮ–ತದ್ಭವ ಪ್ರಕ್ರಿಯೆಯ ಮೂಲಕ ಕನ್ನಡಕ್ಕೆ ಬಂದಿವೆ (ವೀಧಿ>ಬೀದಿ, ಸಂಸ್ಥೆ>ಸಂತೆ) ಸಂಸ್ಕೃತದಿಂದ ಕನ್ನಡಕ್ಕೆ ಬಂದ ಶಬ್ದಗಳಲ್ಲಿ ಹೆಚ್ಚಾಗಿ ನಾಮಪದಗಳೇ ಆಗಿವೆ. ಅವು ಕನ್ನಡಕ್ಕೆ ಬಂದಾಗ ವಿಶೇಷಣಗಳಾಗಿ ಬಳಕೆಯಾಗುತ್ತವೆ (ಗ್ರಾಮ, ಪಾಠ ಮುಂತಾದವು). ಕನ್ನಡದಲ್ಲಿ ಪರ ಪ್ರತ್ಯಯಗಳಿಗೆ ವಿನಃ ಸಂಸ್ಕೃತದ ಹಾಗೆ ಪೂರ್ವ ಪ್ರತ್ಯಯ(ಉಪಸರ್ಗ)ಗಳಿಲ್ಲ. ಅ, ನೀರ್, ವಿ ಇಂತಹ ಪೂರ್ವ ಪ್ರತ್ಯಯಯುಕ್ತ ರೂಪಗಳು ಕನ್ನಡದಲ್ಲಿ ಬಳಕೆಯಾಗುತ್ತವೆ(ತೃಪ್ತಿ–ಅತೃಪ್ತಿ, ಅಪರಾಧಿ–ನಿರಪರಾಧಿ, ನಾಶ–ವಿನಾಶ). ಸಂಸ್ಕೃತದಿಂದ ಎರವಲಾಗಿ ಬಂದ ನಾಮಪದಗಳಲ್ಲಿ ಕಾಣಿಸುವ ಪರಪ್ರತ್ಯಯಗಳಲ್ಲಿ ಪ್ರಾಮುಖ್ಯವಾದುವು ತೆ, ಇ, ಯ ಮತ್ತು ಇಕ(ಅಧ್ಯಕ್ಷ–ಅಧ್ಯಕ್ಷತೆ, ಅಧಿಕಾರ–ಅಧಿಕಾರಿ, ಕವಿ–ಕಾವ್ಯ, ಸಮಾಜ–ಸಾಮಾಜಿಕ) ಸಂಸ್ಕೃತದಿಂದ ಕ್ರಿಯಾಪದಗಳು ನೇರವಾಗಿ ಕನ್ನಡಕ್ಕೆ ಎರವಲಾಗಿ ಬರುವುದಿಲ್ಲ. ಅದಕ್ಕೆ ಬದಲಾಗಿ ಅವು ಬೇರೆ ರೂಪಗಳಲ್ಲಿ ಕನ್ನಡ 'ಇಸು' ಪ್ರತ್ಯಯದೊಂದಿಗೆ ಸೇರಿ ಕ್ರಿಯಾಪದಗಳಾಗುತ್ತವೆ(ಆಲೋಚಿಸು, ಚಲಿಸು ಮುಂತಾದವು). ಅನ್ಯಭಾಷೆಯ ಪದಗಳು ಕನ್ನಡಕ್ಕೆ ಎರವಲಾಗಿ ಬಂದಾಗ ಕನ್ನಡದ ಪದರಚನೆಯ ನಿಯಮಗಳನ್ನು ಅನ್ವಯಿಸಿಕೊಳ್ಳುತ್ತವೆ ಎಂಬುದು ಗಮನಿಸಬೇಕಾದ ಸಂಗತಿ.

ಡಿ.ಎನ್. ಶಂಕರಭಟ್‌ರು ಈ ಕೃತಿಯಲ್ಲಿ ಕನ್ನಡ ಶಬ್ದರಚನೆಯ ಸ್ವರೂಪವನ್ನು ರೇಖಿಸಿದ್ದಾರೆ. ಅಲ್ಲದೆ ಸಂಸ್ಕೃತ ಮಾದರಿಯ ಸಿದ್ಧ ವ್ಯಾಕರಣ ರಚನೆಯನ್ನು ಪ್ರಶ್ನಿಸಿದ್ದಾರೆ. ಕನ್ನಡದ್ದೇ ಆದ ವ್ಯಾಕರಣದ ಮೂಲಸೂತ್ರವನ್ನು ಶೋಧಿಸುವ ಅವರ ಪ್ರಮೇಯ ಈ ಕೃತಿಯಲ್ಲಿ ಸಿದ್ಧಾಂತವಾಗಿ ರೂಪುಗೊಂಡಿದೆ. ಕನ್ನಡ ಶಬ್ದರಚನೆಯನ್ನು ಓದುವಾಗ ಗಮನಕ್ಕೆ ಬರುವ ಮತ್ತೊಂದು ಸಂಗತಿಯೆಂದರೆ ಉದಾಹರಣೆಗಳ ಬಾಹುಲ್ಯ. ಉದಾಹರಣೆಗಳ ಮೂಲಕ ಕನ್ನಡ ವ್ಯಾಕರಣದ ಮೂಲಸೂತ್ರಗಳನ್ನು ಶಂಕರಭಟ್ಟರು ಅಚ್ಚುಕಟ್ಟಾಗಿ ಹಿಡಿದಿದ್ದಾರೆ. ಆ ಮೂಲಕ ಕನ್ನಡ ವ್ಯಾಕರಣದ ಹೊಸ ತಾತ್ವಿಕ ಚೌಕಟ್ಟನ್ನು ರೂಪಿಸಿದ್ದಾರೆ. ದೇಶಿಯ ಭಾಷೆಯೊಂದರ ರಚನೆಯನ್ನು ಕುರಿತಂತಹ ಇಂತಹ ಲಕ್ಷಣ ಗ್ರಂಥ ಬಹುಶಃ ಇತರ ಭಾರತೀಯ ಭಾಷೆಗಳಲ್ಲಿ ಬಂದಿರಲಾರದು. ಈ ಕೃತಿ ಕನ್ನಡ ವ್ಯಾಕರಣ ಮೀಮಾಂಸೆಯ ಚರಿತ್ರೆಯಲ್ಲಿ ಮೈಲುಗಲ್ಲಾಗಿದೆ.

ಆಕರಗ್ರಂಥ

೧. ಶಂಕರಭಟ್ ಡಿ.ಎನ್., ೧೯೯೯, 'ಕನ್ನಡ ಶಬ್ದರಚನೆ', ಕನ್ನಡ ಸಂಘ ಕ್ರೈಸ್ಟ್ ಕಾಲೇಜು, ಬೆಂಗಳೂರು.

೪

ಕನ್ನಡದಲ್ಲಿ ದ್ವಿರುಕ್ತಿ ಪದಗಳು

'ದ್ವಿರುಕ್ತಿ' ಎಂದರೆ ದ್ವಿ: ಎರಡು, ಉಕ್ತಿ=ಮಾತು/ಶಬ್ದ ಎಂದರ್ಥ. ಹೀಗೆ ಒಂದು ವಿಶೇಷಾರ್ಥವನ್ನು ವ್ಯಕ್ತಪಡಿಸುವುದಕ್ಕಾಗಿ ಹಾಗು ಭಾವನೆಗಳ ಸ್ಪಷ್ಟತೆಗಾಗಿ ಒಂದು ಪದವನ್ನು ಅಥವಾ ಒಂದು ವಾಕ್ಯವನ್ನು ಅವಕಾಶ ಅಥವಾ ಬಿಡುವು ಇಲ್ಲದೇ ಎರಡು ಸಲ ಪ್ರಯೋಗಿಸುವುದನ್ನು ದ್ವಿರುಕ್ತಿ ಎನ್ನುವರು.

ಉದಾ: ಜಾತ್ರೆಯ ದಿನ ಮನೆ ಮನೆಯಲ್ಲಿಯೂ ಸಂಭ್ರಮ
ಜಾತ್ರೆಗೆ ಜನ ಹಿಂಡು ಹಿಂಡಾಗಿ ಬಂದರು

ಇಲ್ಲಿ ಗಮನಿಸಬೇಕಾದ ಸಂಗತಿಗಳು ಎರಡು:

೧. ದ್ವಿರುಕ್ತಿಗಳಲ್ಲಿ ಮೂಲಪದ ಇಡಿಯಾಗಿ ಮುಗುಚಿ ಬರುತ್ತದೆ. ಅಲ್ಲಿಯ ರೂಪಗಳು ಸ್ವತಂತ್ರವಾಗಿ ಬಳಕೆಯಾಗುತ್ತವೆ. ಅವು ಸ್ವತಂತ್ರ ರೂಪಗಳು.
೨. ದ್ವಿರುಕ್ತಿಗಳಿಗೂ ಪ್ರತಿಧ್ವನಿಪದ ಹಾಗೂ ಜೋಡುನುಡಿಗಳಿಗೂ ರಚನೆ ಮತ್ತು ಅರ್ಥದಲ್ಲಿ ವ್ಯತ್ಯಾಸಗಳುಂಟು.

ಶಾಲೆ ಶಾಲೆಗೆ - ಪ್ರತಿಯೊಂದು ಶಾಲೆಗೆ
ಶಾಲೆಗೀಲಿಗೆ - ಶಾಲೆ ಅಥವಾ ಅಂತಹ ಜಾಗಕ್ಕೆ
ಹುಳಹುಪ್ಪಡಿ, ಕಾಳುಕಡಿ

ದ್ವಿರುಕ್ತಿಗಳು ವಸ್ತು, ಕ್ರಿಯೆಗಳ ಉತ್ಸಾಹ, ಆಧಿಕ್ಯ, ಕೋಪ ಇಂತಹ ಭಾವನೆಗಳನ್ನು ಸೂಚಿಸಿದರೆ ಪ್ರತಿಧ್ವನಿ ಪದಗಳು ಸಾಮಾನ್ಯವಾಗಿ 'ಅಂತಹ ಇತರ' ಎಂಬರ್ಥ ಪದಕ್ಕೆ ಪುಷ್ಟಿಕೊಡುತ್ತವೆ.

ಸಾಮಾನ್ಯವಾಗಿ ಉತ್ಸಾಹ, ಆಧಿಕ್ಯ, ವೀಪ್ಸೆ, ಕೋಪ, ಸಂಭ್ರಮ(ಆದರ, ಆಶ್ಚರ್ಯ, ಆಕ್ಷೇಪ(ತಿರಸ್ಕಾರ), ಹರ್ಷ, ಸಮ್ಮತಿ, ತ್ವರೆ(ಅವಸರ), ದುಃಖ, ಕೃದಂತ, ಕ್ರಿಯಾಪದ,

ಅವ್ಯಯ ಇವುಗಳನ್ನು ಎಡಬಿಡದೆ ಎರಡೆರಡು ಸಾರಿ ಉಚ್ಚರಿಸುವುದುಂಟು. ಕೆಲವೊಮ್ಮೆ ಎರಡಕ್ಕಿಂತ ಹೆಚ್ಚಿನ ಸಾರಿ ಸಹ ಉಚ್ಚರಿಸುವುದುಂಟು.

ಉತ್ಸಾಹ : i. ಹೌದು ಹೌದು ನಾನೇ ಗೆದ್ದೆ
ii. ನಿಲ್ಲು ನಿಲ್ಲು ನಾನೂ ಬರುವೆ

ಆಧಿಕ್ಯ : i. ಹಿಂದೆ ಹಿಂದೆ ಹೋದನು
ii. ಹೆಚ್ಚು ಹೆಚ್ಚು ಜನ
iii. ಸಣ್ಣ ಸಣ್ಣ ಹಣ್ಣುಗಳು

ವೀಪ್ಸೆ(ಪ್ರತಿಯೊಂದು) : i. ಮನೆ ಮನೆ ಗಣತಿ
ii. ಕೇರಿ ಕೇರಿ ಅಲೆದನು
iii. ಊರು ಊರು ತಿರುಗು

ಕೋಪ : i. ಎಲೇ ಎಲೇ ಹೋಗಬೇಡ
ii. ಎಲೇ ಕಳ್ಳಾ ಕಳ್ಳಾ ನಿಲ್ಲು ನಿಲ್ಲು
iii. ಎಲಾ ಮೂರ್ಖಾ ಹೋಗು ಹೋಗು

ಸಂಭ್ರಮ(ಆದರ) : i. ಅಗೋ ಅಗೋ ಅಲ್ಲಿ ನೋಡು ಎಷ್ಟು ಚೆನ್ನಾಗಿದೆ
ii. ಬನ್ನಿ ಬನ್ನಿ ಕುಳಿತುಕೊಳ್ಳಿ
iii. ಹತ್ತಿರ ಹತ್ತಿರ ಬನ್ನಿರಿ

ಆಶ್ಚರ್ಯ : i. ಅಬ್ಬಬ್ಬಾ! ಎಂಥ ರಮ್ಯ ದೃಶ್ಯ
ii. ಅಹಹಾ! ಅವನ ಆಟ ಅದ್ಭುತ

ಆಕ್ಷೇಪ(ತಿರಸ್ಕಾರ) : i. ಬೇಡ ಬೇಡ ಕೊಡಬೇಡ
ii. ನಡೆ ನಡೆ ಸುಮ್ಮನೆ

ಹರ್ಷ : i. ಅಮ್ಮಾ ಅಮ್ಮಾ ಇದು ನಾನು ಬರೆದ ಚಿತ್ರ
ii. ಅಪ್ಪಾ ಅಪ್ಪಾ ನಾನು ತರಗತಿಗೇ ಪ್ರಥಮ

ಸಮ್ಮತಿ(ಒಪ್ಪಿಗೆ) : i. ಹೌದು ಹೌದು ಯೋಗ್ಯ ಆಯ್ಕೆ
ii. ಇರಲಿ ಇರಲಿ, ಅವನೇ ಇರಲಿ

ತ್ವರೆ(ಅವಸರ) : i. ಓಡು ಓಡು ಬೇಗ ಸಿಗುತ್ತಾನೆ
ii. ಹಿಡಿ ಹಿಡಿ
iii. ನಡೆ ನಡೆ ಹೊತ್ತಾಯಿತು

ದುಃಖ : i. ಅಯ್ಯೋ ಅಯ್ಯೋ, ಹೀಗಾಯಿತೆ!
ii. ದೇವರೇ ದೇವರೇ, ರಕ್ಷಿಸು
iii. ಹಾ ಮಗನೇ ಹಾ ಮಗನೇ ಎಲ್ಲಿ ಹೋದೆಯಾ

ಆವೃತ್ತಿ : i. ಉಂಡುಂಡು ಹೋದನು
ii. ನೋಡಿ ನೋಡಿ ನಕ್ಕನು

ಭಯ : i. ಹಾವು ಹಾವು
ii. ಅಯ್ಯೋ ಅಯ್ಯೋ ಬೆಂಕಿ ಬೆಂಕಿ

ಭರ್ತ್ಸನ : i. ದುರುಳಾ ದುರುಳಾ
ii. ಪೆಣ್ಣು ಪೆಣ್ಣಿಂದೇತಕೆ ಬಿಳುಗಳೆವರು?

ಪ್ರಾರ್ಥನೆ : i. ಚಿಲಿಮಿಲಿ ಎಂದೋದುವ ಗಿಳಿಗಳಿರಾ
ii. ನೀವು ಕಾಣಿರೇ, ನೀವು ಕಾಣಿರೇ

ದ್ವಿರುಕ್ತಿಯಲ್ಲಿ ಬರುವ ಕೆಲವು ವಿಶೇಷ ರೂಪಗಳು;

i. ಪದಗಳು ಸೇರುವಾಗ(ದ್ವಿರುಕ್ತಿಯ ಸಂದರ್ಭಗಳಲ್ಲಿ) ಪೂರ್ವಪದದ ಅಂತ್ಯಕ್ಕೆ ಲೋಪವಾಗುತ್ತದೆ. ಅದನ್ನು ಕೇಶಿರಾಜ ಈ ರೀತಿ ಹೇಳಿದ್ದಾನೆ.

ಅತಿಶಯತರಾರ್ಥ ವೀಪ್ಸಾ
ನ್ವಿತ ನಾಂತಾವ್ಯಯ ಪದಕ್ಕ ಮನು ಕೃತಿ ಪದಕಂ
ಕೃತ ಮಂತ್ಯ ಲೋಪಮಿತರಾ
ಗತವತ್ವಂ ನಡುವಿನಂತೆ ಕಡೆಗಂ ಟತ್ವಂ [ಸೂ. ೧೯೬]

ನಾಂತಗಳಾದ ಅವ್ಯಯ ಪದಕ್ಕೂ, ಅನುಕರಣ ಪದಕ್ಕೂ ಅಂತ್ಯ ಲೋಪವಾಗುತ್ತದೆ (ಪೂರ್ವಪದದಲ್ಲಿ). ನಡು, ಕಡೆ ಎಂಬವುಗಳ ಅಂತ್ಯ ಸ್ವರ ಲೋಪವಾಗಿ 'ಡ' ಕಾರಕ್ಕೆ 'ಟ' ಕಾರದೇಶವಾಗುತ್ತದೆ.

ಅಂತ್ಯ ಲೋಪಕ್ಕೆ

ಉದಾ: ಕಮ್ಮನೆ+ಕಮ್ಮನೆ > ಕಮ್ಮಕಮ್ಮನೆ
ಮೆಲ್ಲನೆ+ಮೆಲ್ಲನೆ >ಮೆಲ್ಲಮೆಲ್ಲನೆ
ತಣ್ಣನೆ+ತಣ್ಣನೆ > ತಣ್ಣತಣ್ಣನೆ
ಸಪ್ಪನೆ+ಸಪ್ಪನೆ > ಸಪ್ಪಸಪ್ಪನೆ

ಡ > ಟ

ನಡು+ನಡು > ನಟ್ಟನಡು
ಕಡೆ+ಕಡೆ > ಕಟ್ಟಕಡೆ

ii. ತುದಿ, ಮೊದಲು ಎಂಬ ಪದಗಳು ಪುನರಾವೃತ್ತಿಯಾದಾಗ ದ > ತ್ತ ಎಂದಾಗಿ ಮೊದಲ್ ಎಂಬಲ್ಲಿಯ ಕೊನೆಯ 'ಲ' ಕಾರಕ್ಕೆ ಲೋಪವೊದಗುತ್ತದೆ. ಈ ಬಗೆಗೆ ಕೇಶಿರಾಜ ಈ ರೀತಿ ಹೇಳಿದ್ದಾನೆ.

ತುದಿಮೊದಲೆಂಬ ದಕಾರ
ಕ್ಕುದಯಿಸುಗುಂ ದ್ವಿತ್ತ ವೃತ್ತಿಯಿಂದೆ ತಕಾರಂ
ಮೊದಲೆಂಬ ಲಕಾರಕ್ಕ
ಪ್ಪುದದರ್ಶನವಿಧಿ ವಿಶೇಷಮಂ ನುಡಿವಡೆಯೊಳ್ (ಸೂ.೧೯೭)

ತುದಿ+ತುದಿ > ತುತ್ತತುದಿ
ಮೊದಲ್+ಮೊದಲ್ > ಮೊತ್ತಮೊದಲ್

iii. ಪೂರ್ವಪದದ ಅಂತ್ಯಾಕ್ಷರವನ್ನು ಮಾತ್ರ ಲೋಪಿಸಿದವು(ನಾಂತ ಪದಗಳನ್ನು ಹೊರತುಪಡಿಸಿ, ಹೆಚ್ಚಾಗಿ ಗಾಂತ ಪದಗಳು).

ಕೆಳಗೆ+ಕೆಳಗೆ > ಕೆಳಕೆಳಗೆ
ಮೆಲ್ಲಗೆ+ಮೆಲ್ಲನೆ > ಮೆಲ್ಲಮೆಲ್ಲಗೆ
ಒಳಗೆ+ಒಳಗೆ > ಒಳಗೊಳಗೆ/ಒಳೊಳಗೆ
ಕೊನೆಗೆ+ಕೊನೆಗೆ > ಕೊನೆಕೊನೆಗೆ

iv. ದ್ವಿರುಕ್ತಿಗಳ ಮೂಲಕ ಕಡೆ, ನಡು, ತುದಿ, ಬಯಲು, ಮೊದಲು ಎಂಬ ಶಬ್ದಗಳು 'ಎಲ್ಲಕ್ಕಿಂತ ತುದಿ', 'ಎಲ್ಲಕ್ಕಿಂತ ಕಡೆ' ಎಂಬ ಅರ್ಥ ಕೊಡಬಲ್ಲವು. ಆ ಬಗೆಯವು ಗಳಲ್ಲಿ ಪದಾಂತ್ಯ ವ್ಯಂಜನ ಯಾವುದಿರುತ್ತದೆಯೋ ಅದಕ್ಕೆ ಅನುಗುಣವಾಗಿ ಆ ವ್ಯಂಜನದ ವರ್ಗ ಪ್ರಥಮಾಕ್ಷರವು ದ್ವಿತ್ವಗೊಂಡು ಬರುವುದು ಸಾಮಾನ್ಯ.

ಕಟ್ಟ ಕಡೆ
ನಟ್ಟ ನಡು
ತುತ್ತ ತುದಿ
ಬಟ್ಟ ಬಯಲು
ಮೊಟ್ಟಮೊದಲು/ಮೊತ್ತಮೊದಲು

'ಮೊದಲು' ಶಬ್ದದಲ್ಲಿ ಮಾತ್ರ ನಡುವಣ ವರ್ಗೀಯ ವ್ಯಂಜನವನ್ನು ಅನುಸರಿಸಿದೆ.

ಮೊದಲು - ಮೊತ್ತಮೊದಲು

ರೂಢಿಯಲ್ಲಿ 'ಮೊಟ್ಟಮೊದಲು' ಎಂದು ಕೇಳಿ ಬರುವುದು. ಬಹುಶಃ ಕಟ್ಟಕಡೆ, ನಟ್ಟನಡು ಎಂಬ ದ್ವಿರುಕ್ತಿಗಳ ಸಾದೃಶ್ಯದಿಂದಾಗಿ ಎಂದು ತೋರುತ್ತದೆ.

ದ್ವಿರುಕ್ತಿಗಳಿಗೆ ಅರ್ಥ ಇದೆಯೆ? ಇದೆ. ಇವು ಹೇಳಬೇಕಾದ ವಿಷಯವನ್ನು ಸ್ಪಷ್ಟ ಪಡಿಸುತ್ತವೆ, ಮಾತಿಗೆ ಶಕ್ತಿಯುತ ಓಘವನ್ನು ತೋರಿಸುತ್ತವೆ. ಅನೌಪಚಾರಿಕ ಸನ್ನಿವೇಶ

ಗಳಲ್ಲಿ ಇವು ಹೆಚ್ಚಾಗಿ ಬಳಕೆಯಾಗುತ್ತವೆ. ಸಾಹಿತ್ಯದಲ್ಲಿ/ಬರೆಹದ ಭಾಷೆಯಲ್ಲಿ ಅವುಗಳ ಬಳಕೆ ಕಡಿಮೆ.

ಅಱಿಸಿ ಅಱಿಸಿ ಹಾಹಾ ಎನ್ನುತ್ತಿದ್ದೆನು
ಬೆದಕಿ ಬೆದಕಿ ಬೆದಬೆದ ಬೆವುತ್ತಿದ್ದೆನು
ಗೊಗ್ಗೇಶ್ವರ ಕಣ್ಣ ಮೊದಲಲ್ಲಿದ್ದವನ ಕಾಣೆನು
(ಅಲ್ಲಮನ ವಚನ)

ನಾಟಕಗಳ ಸಂಭಾಷಣೆಯ ಸಂದರ್ಭದಲ್ಲಿ ಇವು ಧಾರಾಳವಾಗಿ ಬಳಕೆಯಾಗುತ್ತವೆ. ಉದಾ. 'ಸೊಹ್ರಾಬ್-ರುಸ್ತುಂ'ನಾಟಕದಲ್ಲಿ ಇರಾನಿ ಸೈನಿಕರು ಸೊಹ್ರಾಬ್‌ನ ರಾಜ್ಯವನ್ನು ಮುತ್ತಿಗೆ ಹಾಕಿದಾಗ ನಡೆಯುವ ಸಂಭಾಷಣೆ.

ಸುಲೇಮಾನ್ > ಬೆಂಕಿಯೆಂದು ತಿಳಿದು ತಿಳಿದು ಮುಂದೆ ನುಗ್ಗುವರೆ?
ಸೊಹ್ರಾಬ್ > ಬೆಂಕಿಯೆಂದು ಹೆದರಿ ಹೆದರಿ ನಿಂತರೆ ಕೆಲಸವಾದೀತೆ?

ಜಾನಪದ ಗೀತರೂಪಕದಲ್ಲಿ ಒಂದು ಘಟನೆ/ಕ್ರಿಯೆಯ ಭಾವನೆಗಳನ್ನು ಅತಿಶಯ ಅಥವಾ ಉತ್ಕಟಗೊಳಿಸಲಿಕ್ಕೆ ದ್ವಿರುಕ್ತಿಗಳು ಬರುತ್ತವೆ. ಉದಾ: ಸಂಗ್ಯಾಬಾಳ್ಯಾದಲ್ಲಿ ಗಂಗಾಳ ರೂಪ ವೈಯಾರವನ್ನು ಸಂಗ್ಯಾ, ಬಾಳ್ಯಾನಿಗೆ ಹೇಳುವ ಪದಗಳು, ಪದಪುಂಜ ಗಳು ಪುನರಾವರ್ತನೆಯಾಗಿ ಕಾವ್ಯಸೌಂದರ್ಯಕ್ಕೆ ಕಾರಣವಾಗುತ್ತವೆ.

ಒಂದು ಹೆಣ್ಣ । ಒಂದ ಹೆಣ್ಣ ಕಂಡಿನೊ ಬಾಳಣ್ಣ ಕಣ್ಣಾರೆ ನೋಡಿನೊ ॥
ಊರೊಳಗೆ । ಊರೊಳಗ ಇದ್ದಾಂಗೊ ಬಾಳ್ಯಾ ರತೀದೇವಿ ॥
ನಡಿನ್ಯಾಗ । ನಡಿನ್ಯಾಗ ಇಟ್ಟಾಳೊ ಬಾಳ್ಯಾ ಒಡ್ಡಾಣ ॥

ಕೆಲವು ಸಂದರ್ಭದಲ್ಲಿ ಸನ್ನಿವೇಶವನ್ನು ಯಥಾವತ್ತಾಗಿ ಚಿತ್ರಿಸಲಿಕ್ಕೂ ಇವು ನೆರವಾಗುತ್ತವೆ. ಉದಾ. 'ರಾತ್ರಿ ಆದ ಕೂಡಲೇ ಕುಡದ ಜೋಲಿ ಹೊಡಕೊತ, ಜೋಲಿ ಹೊಡಕೊತ ಬರ್ತಾನ' ಎನ್ನುವಲ್ಲಿ ವ್ಯಕ್ತಿ ಬಹುಪಾಲು ಮಧ್ಯಪಾನ ಮಾಡಿದ್ದಾನೆ ಎಂಬುದನ್ನು ಸೂಚಿಸುತ್ತದೆ. ಒಬ್ಬ ವ್ಯಕ್ತಿ /ವಸ್ತುವಿನ ಬಗ್ಗೆ ನಮ್ಮ ಭಾವನೆಯನ್ನು ವ್ಯಕ್ತಪಡಿಸುವಾಗ ಇವು ಅರ್ಥವತ್ತಾಗಿ ಬಳಕೆಯಾಗುತ್ತವೆ. ಉದಾ: 'ಮಾವ ಬಂದ ಮರೆಯಾಗು' ಎಂಬ ವಾಕ್ಯ 'ಮಾವ ಬಂದ ಮರೆಯಾಗು, ಮರೆಯಾಗು' ಎಂಬ ವಾಕ್ಯಕ್ಕಿಂತ ಹೆಚ್ಚು ಪರಿಣಾಮಕಾರಿ.

ದ್ವಿರುಕ್ತಿಗಳ ಬಗ್ಗೆ ಗಂಭೀರವಾಗಿ ವಿಚಾರ ಮಾಡಿ ನೋಡಿದಾಗ ಅವುಗಳ ರಚನೆ ಯಲ್ಲಿ ಒಂದು ಕ್ರಮವಿರುವುದನ್ನು ಗುರುತಿಸಬಹುದು. ಅರ್ಥ ಅಥವಾ ನಿಯೋಗದ ದೃಷ್ಟಿಯಿಂದಲೂ ಅವು ಭಾಷೆಯಲ್ಲಿ ಮುಖ್ಯವಲ್ಲದಿದ್ದರೂ ಗಣನೀಯವಾದ ಪಾತ್ರ ವಹಿಸುತ್ತವೆಂಬುದನ್ನು ಗಮನಿಸಬೇಕು.

---

* ಸ್ಥಳನಾಮ, ವ್ಯಕ್ತಿನಾಮ ಇಂತಹ ಅಂಕಿತನಾಮಗಳು ದ್ವಿರುಕ್ತಿಯಾಗುವುದಿಲ್ಲ. ಈ ಅಂಶದ ಕಡೆಗೆ ನನ್ನ ಗಮನಸೆಳೆದವರು ನನ್ನ ಪ್ರಾಧ್ಯಾಪಕರಾದ ಡಾ. ಕೆ.ವಿ. ನಾರಾಯಣ ಅವರು.

೫

ಶಬ್ದಮಣಿದರ್ಪಣದ ಧಾತುಪಾಠ : ಒಂದು ವಿವೇಚನೆ

ಯಾವುದೇ ಭಾಷೆಯ ಸ್ಥಿರ ಆಸ್ತಿಯೆಂದರೆ ಅದರ ದೇಶೀ ಪದಗಳು. ಕಾಲ, ದೇಶ, ಪರಿಸರಗಳಲ್ಲಿ ಭಾಷೆ ಎಷ್ಟೇ ವ್ಯತ್ಯಾಸವಾದರೂ ಕೆಲವು ದೇಶೀ ಶಬ್ದಗಳು ಅದರಲ್ಲಿ ಸ್ಥಿರವಾಗಿರುತ್ತವೆ. ಅವುಗಳನ್ನು 'ಬೀಜಶಬ್ದ'ಗಳೆಂದೂ 'ಬೇರುಶಬ್ದ'ಗಳೆಂದೂ ಕರೆಯುತ್ತಾರೆ. ಇವೇ ಧಾತು ಪದಗಳು.

ಧಾತುವಿನ ಲಕ್ಷಣವನ್ನು ಕೇಶಿರಾಜ ಒಂದು ಸೂತ್ರದಲ್ಲಿ ಹೀಗೆ ಹೇಳಿದ್ದಾನೆ.

ಕ್ರಿಯೆಯರ್ಥದ ಮೂಲಂ ಪ್ರ
ತ್ಯಯರಹಿತಂ ಧಾತುವದನಭಾವಕ್ರಿಯೆಯೊ ।
ಳ್ನಿಯತಂ ನಿಶ್ಚಯಿಪುದು ಬುಧ
ಚಯಮಾ ಧಾತುವಿಗೆ ವಿಭಕ್ತಿಯಾಱೆಗಿರ್ಕುಂ ॥ಸು. ೨೨೭॥

೧. ಧಾತು ಕ್ರಿಯಾರ್ಥದ ಮೂಲಘಟಕ ೨. ಇದು ಪ್ರತ್ಯಯ ರಹಿತವಾದುದು. ೩. ಅಭಾವಕ್ರಿಯೆ, ಎಂದರೆ ನಿಷೇಧಾರ್ಥದಲ್ಲಿ ಇದನ್ನು ಕಂಡುಕೊಳ್ಳಬಹುದು. ೪. ಧಾತುವಿನ ಮೇಲೆ ಹತ್ತುವ(ಆಖ್ಯಾತ) ಪ್ರತ್ಯಯಗಳು ಆರು ಎಂಬುದು ಈ ಸೂತ್ರದ ಅರ್ಥ.

ಹಳಗನ್ನಡ ಕಾವ್ಯಗಳಲ್ಲಿ ಬಳಕೆಯಾದ ನೂರಾರು ಧಾತುಗಳನ್ನು ಕೇಶಿರಾಜ ಧಾತು ಪ್ರಕರಣದಲ್ಲಿ ಕಲೆಹಾಕಿದ್ದಾನೆ.[೧] ಅವನು ಬಹುಶಃ ಪಾಣಿನಿಯ ಪದ್ಧತಿಯನ್ನು ಅನುಸರಿಸಿ ತನ್ನ ವ್ಯಾಕರಣದಲ್ಲಿ ಧಾತುಪಾಠವನ್ನು ಪ್ರತ್ಯೇಕ ಪ್ರಕರಣವಾಗಿ ಸೇರಿಸಿದಂತೆ ಕಾಣುತ್ತದೆ. ಕೇಶಿರಾಜನು ಕನ್ನಡ ಧಾತುಗಳ ಅರ್ಥವನ್ನು ಸಂಸ್ಕೃತದಲ್ಲಿ ಕೊಟ್ಟಿರುವುದು ಏಕೆ? ಎಂಬ ಪ್ರಶ್ನೆ ಏಳುತ್ತದೆ. ಬಹುಶಃ ಸಂಸ್ಕೃತ ಎಲ್ಲ ಕನ್ನಡದ ವಿದ್ವಾಂಸರಿಗೆ, ಕವಿಗಳಿಗೆ ಕನ್ನಡ ಧಾತುಗಳ ಅರ್ಥವನ್ನು ತಿಳಿಸಿಕೊಡಬೇಕೆಂಬುದು ಅವನ ಉದ್ದೇಶ

ವಾಗಿದ್ದಂತೆ ಕಾಣುತ್ತದೆ. ಅಲ್ಲದೆ, ಎಷ್ಟೋ ಸಂದರ್ಭಗಳಲ್ಲಿ ಕನ್ನಡ ಶಬ್ದಗಳಿಗೆ ಸಂಕ್ಷೇಪವಾಗಿ ಕನ್ನಡದಲ್ಲಿಯೇ ಅರ್ಥವಿವರಣೆ ನೀಡುವ ಕಷ್ಟವೂ ಅವನನ್ನು ಬಾಧಿಸಿರಬೇಕು.[೨]

ಕೇಶಿರಾಜನ ಧಾತುಪಾಠ ಕನ್ನಡ ಕೋಶದ ಅಧ್ಯಯನದ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣವಾಗಿದೆ. ಅವನು ಕೊಟ್ಟ ಧಾತುಗಳ ಪಟ್ಟಿ ಪ್ರಮಾಣಪೂರ್ವಕವಾದುದು. ಈ ಬಗೆಗೆ ಅವನು ಅಧಿಕಾರವಾಣಿಯಿಂದ ಹೀಗೆ ಹೇಳಿದ್ದಾನೆ.

ವೇದಸಮನಾಗಿ ಭೀಮನಿ
ನಾದುದು ಸಂಸ್ಕೃತದ ಧಾತುಪಾಠೆಜದಿಂದಂ ।
ಯಾದವ ಕಟಕಾಚಾರ್ಯನಿಂ
ದಾದುದು ಕರ್ಣಾಟ ಧಾತು ಕವಿಕೇಶವನಿಂ ॥ಸು. ೨೬೪॥

ಸಂಸ್ಕೃತದಲ್ಲಿ ಧಾತು ಸಂಗ್ರಹಕಾರ್ಯವನ್ನು ವೇದಪ್ರಮಾಣವಾಗಿ ಭೀಮನು ಮಾಡಿದಂತೆ ಕನ್ನಡ ಧಾತುಗಳನ್ನು ತಾನು ಸಂಗ್ರಹಿಸಿದೆನೆಂದು ಅವನ ಅಭಿಪ್ರಾಯ.[೩] ಪ್ರಾಚೀನ ಕಾವ್ಯ ಸಾಹಿತ್ಯದಲ್ಲಿ ಧಾತುಗಳನ್ನು ಆಯ್ಕೆ ಮಾಡುವಲ್ಲಿ, ಧಾತುಗಳ ಅರ್ಥ ನಿರ್ಣಯಿಸುವಲ್ಲಿ ಅವನ ಪಾಂಡಿತ್ಯ, ಪರಿಶ್ರಮಗಳನ್ನು ಯಾರೂ ಮೆಚ್ಚಿಕೊಳ್ಳಬೇಕು. ಕನ್ನಡ ಧಾತುಗಳ ವೈಲಕ್ಷಣ್ಯಗಳನ್ನು ಕೇಶಿರಾಜ ಹೀಗೆ ಗುರುತಿಸಿದ್ದಾನೆ.

ದೊರೆವಡೆದ ಮಹಾಪ್ರಾಣಾ
ಕ್ಷರಾಂತದಿಂ ಙಞಶಷಾಂತ ಹಾಂತಕ್ಷಾಂತೋ ।
ದ್ಧರಣದಿನುದ್ಭವಿಸವು ಬ
ಲ್ಲರ ಮತದಿಂ ಧಾತು ತಿಳಿವುದವನೀ ಕ್ರಮದಿಂ ॥ಸು. ೨೬೫॥

ಧಾತುಪಾಠದ ಪರಿಶೀಲನೆ ಹಾಗೂ ಈ ಸೂತ್ರದ ವಿಶ್ಲೇಷಣೆಯಿಂದ ಕನ್ನಡ ಧಾತುಗಳ ಕೆಲವು ವೈಲಕ್ಷಣಗಳನ್ನು ಹೀಗೆ ಗಮನಿಸಬಹುದು.

೧. ಈ, ಓ ಎಂಬಿವು ಎರಡೇ ಸ್ವರಧಾತುಗಳು

೨. ಮಹಾಪ್ರಾಣಾಕ್ಷರಗಳು, ಙ, ಞ, ಶ, ಷ, ಹ, ಕ್ಷ ಗಳು ಅಂತ್ಯದಲ್ಲಿರುವ ಧಾತುಗಳು ಕನ್ನಡದಲ್ಲಿ ಇಲ್ಲ. ಅವನ ಕಾಲದಲ್ಲಿಯೇ ಮಹಾಪ್ರಾಣಗಳ ಕನ್ನಡ ವರ್ಣಮಾಲೆಯಲ್ಲಿದ್ದವು. ಒಂದು ಸೂತ್ರದಲ್ಲಿ "ಒಳವು ಮಹಾಪ್ರಾಣಂಗಳ್..." (ಸು.೨೫) ಎಂದಿದ್ದಾನೆ. ಕನ್ನಡ ವರ್ಣಮಾಲೆಯಲ್ಲಿ ಮಹಾಪ್ರಾಣಗಳಿರುವುದು ಮಹಾಪ್ರಾಣಯುಕ್ತ ಕನ್ನಡವೆನಿಸಿದ ಪದಗಳಿರುವುದು ಇದು ಕೇಶಿರಾಜನ ಗಮನಕ್ಕೆ ಬಂದುದರಿಂದ. ಈ ಕಾರಣಕ್ಕಾಗಿಯೇ ವರ್ಣಮಾಲೆಯಲ್ಲಿ ಅವಿದ್ದರೂ ಧಾತ್ವಂತ್ಯದಲ್ಲಿಲ್ಲ. ಹಾಗೆಯೇ ಭಾಷಾಶಾಸ್ತ್ರಜ್ಞರು ಅನುನಾಸಿಕಗಳಲ್ಲಿ ಙ, ಞಗಳನ್ನು ತೆಗೆದುಹಾಕಿದ್ದಾರೆ. ಕೇಶಿರಾಜನೂ ಒಂದು ಬಗೆಯಲ್ಲಿ ಅವು ಕನ್ನಡಕ್ಕೆ ಸೇರದಿದ್ದರೂ ಅನುಸ್ವರವು ಅದನ್ನು ಪೂರೈಸುವುದೆಂದು ಸೂಚಿಸುತ್ತಾನೆ. 'ಶ', 'ಷ' ಗಳೆಂಬ ಉಷ್ಮಗಳು ಕನ್ನಡಕ್ಕೆ ಸಹಜ ವಾದವುಗಳಲ್ಲ,

ಕನ್ನಡದ ಯಾವ ಶಬ್ದಗಳಲ್ಲಿಯೂ ಇವುಗಳಿಗೆ ಅಸ್ತಿತ್ವವಿಲ್ಲ. 'ಹ'ಕಾರವು ಕನ್ನಡದಲ್ಲಿ ಕಾಲಾಂತರದಲ್ಲಿ ಸೇರಿದುದೆಂದು ಕೇಶಿರಾಜನಿಗೂ ಗೊತ್ತಿದೆ. ಹಾಗೆಂದು ಅದನ್ನು ಕಳೆಯುವುದಕ್ಕೆ ಸಾಧ್ಯವಿಲ್ಲದಂತಹ ಪರಿಸ್ಥಿತಿ ಅವನ ಕಾಲಕ್ಕೆ ಬಂದಿತು. ವರ್ಣಮಾಲೆಯಲ್ಲಿ ಅದು ಇತ್ತು. ಧಾತುಗಳಲ್ಲಿ 'ಹ' ಕಾರಾಂತವಾದ ಧಾತುವಿಲ್ಲ. ಆದರೆ 'ಹ' ಕಾರ ಯುಕ್ತ ಪದಗಳಿಲ್ಲ ಎಂಬರ್ಥವಲ್ಲ ಕೇಶಿರಾಜನದು. ಕ್ಷಾಂತವಾದ ಧಾತುಗಳೂ ಇಲ್ಲವೆಂದು ಹೇಳುವುದರಿಂದ ವರ್ಣಮಾಲೆಯಲ್ಲಿ 'ಕ್ಷ' ಎಂಬ ಸಂಯುಕ್ತ ವರ್ಣವನ್ನು ಆ ಕಾಲದಲ್ಲಿ ಸೇರಿಸಿಕೊಳ್ಳಲಾಗುತ್ತಿತ್ತೆಂದು ನಿರ್ಧರಿಸ'ಬಹುದು. ಇದನ್ನು ಗಮನಿಸಿದಾಗ ಕೇಶಿರಾಜನಿಗೆ ಕನ್ನಡ ಭಾಷೆಯ ಜಾಯಮಾನ ಚೆನ್ನಾಗಿ ಗೊತ್ತಿತ್ತು.

೩. ಸಾಂತಧಾತುಗಳಲ್ಲಿ, ಅಚ್ಚಕನ್ನಡ ಧಾತುಗಳಲ್ಲದೆ, ಸಂಸ್ಕೃತ ಕೃದಂತಗಳು ಸ್ವಯಂಕರ್ತೃಕಾರ್ಥದಲ್ಲಿ 'ಇಸು' ಪ್ರತ್ಯಯವನ್ನು ಹೊಂದಿ ಧಾತುವಾದ ಶಬ್ದಗಳು (ಪೂಜಿಸು, ರಕ್ಷಿಸು ಇತ್ಯಾದಿ); ಸ್ವಯಂ ಕರ್ತೃಕಾರ್ಥ ಮತ್ತು ಹೇಥು ಕರ್ತೃಕಾರ್ಥಗಳಲ್ಲಿ 'ಇಸು' ಪ್ರತ್ಯಯವನ್ನು ಹೊಂದಿ ಭಿನ್ನಕರ್ತೃಕಾರ್ಥದಲ್ಲಿ ಪ್ರಯೋಗವಾಗುವ ಕನ್ನಡ ಧಾತುಗಳು(ಆಡಿಸು, ಪಾಡಿಸು, ಮಾಡಿಸು ಇತ್ಯಾದಿ); ಇವುಗಳನ್ನು ಬೇರೆ ಬೇರೆಯಾಗಿ ಕೊಟ್ಟಿರುವುದು ಒಂದು ವಿಶೇಷ(-ಇಸು ಪ್ರತ್ಯಯದ ಬಗೆಗೆ ಇದೇ ಭಾಗದಲ್ಲಿ ಮುಂದೆ ಚರ್ಚಿಸಲಾಗಿದೆ).

ವಿಧಗಳು: ಧಾತುಗಳಲ್ಲಿ ಎರಡು ವಿಧ. ಏಕಾಕ್ಷರ, ದ್ವ್ಯಕ್ಷರ ಧಾತು(ಮೂಲಧಾತು) ಮತ್ತು ತ್ರ್ಯಕ್ಷರ, ಚತಃಕ್ಷರ ಧಾತು(ಸಾಧಿತ ಧಾತು)[೯]. ಮೂಲಧಾತುಗಳಿಗೆ ಪ್ರತ್ಯಯ ಸೇರುವುದಿಲ್ಲ. ಅವು ಅರ್ಥವತ್ತಾದ ಚಿಕ್ಕ ಘಟಕಗಳಾಗಿರುತ್ತವೆ.

ಏಕಾಕ್ಷರ ಧಾತುಗಳು: ಧಾತುಗಲು ಮೂಲತಃ ಏಕಾಕ್ಷರಗಳಾಗಿರುವುದನ್ನು ನಾವು ಕನ್ನಡದಲ್ಲಿ ಮಾತ್ರವಲ್ಲದೆ ಪ್ರಪಂಚದಲ್ಲಿ ಇನ್ನಿತರ ಭಾಷೆಗಳಲ್ಲಿಯೂ ಕಾಣುತ್ತೇವೆ. ಇಂಗ್ಲಿಶಿನಲ್ಲಿ Man, Cut ಮುಂತಾದವು. ಏಕಾಕ್ಷರಗಳಾಗಿದ್ದು ಮುಕ್ತ ಆಕೃತಿಮಾಗಳಾಗಿವೆ.[೫] ಅಚ್ಚಗನ್ನಡದಲ್ಲಿ ಏಕಾಕಷರ ಘಟಿತವಾದ ಸ್ವರಾಂತಧಾತುಗಳ ಸಂಖ್ಯೆ ೭೦ ಎಂಬುದಾಗಿ ಪ್ರ.ಗೋ. ಕುಲಕರ್ಣಿಯವರು ಅಭಿಪ್ರಾಯಿಸಿದ್ದಾರೆ[೬].

ಸ್ವರಾಂತಧಾತುಗಳು

ಆ	ಈ	ಊ	ಏ	ಓ	
ಕಾ	ಚಾ	ತಾ	ನೀ	ಬಾ	
ಕೂ	ಚೀ	ತೂ	ನೂ	ಬೇ	
ಕೋ	ಚೂ	ತೇ	ನೋ	ಮಿ	
ಗೀ	ಜೇ	ದಾ	ಪಾ	ಮೇ	
ಗೂ	ಜೂ	ನಾ	ಪೀ	ಸೋ	ಮುಂತಾದವು

ವ್ಯಂಜನಾಂತ ಹ್ರಸ್ವ ದೀರ್ಘಾದಿ ಏಕಾಕ್ಷರಧಾತುಗಳು

ಉಣ್	ಪೇನ್	ಕೊಳ್	ಸೆರ್	ಸೋಲ್
ಕಾಣ್	ಈನ್	ಸೂಯ್	ಬಾರ್	ನೂಲ್
ಪಣ್	ತಿನ್	ತೂಯ್	ಕಾರ್	ಪೇಲ್
ನಾನ್	ಪೂಯ್	ಕಾಯ್	ಹೀರ್	ಊಟ್
ಆನ್	ಬಯ್	ಆಯ್	ಆರ್	ಬಾಟ್
ಕೂನ್	ಗೆಯ್	ಪಾಯ್	ಜೋಲ್	ಪೂಟ್
ಕಳ್	ಕೊಯಂ	ನೇರ್	ನಿಲ್	ಸೀಳ್ ಮುಂತಾದವು

ದ್ವ್ಯಕ್ಷರಧಾತುಗಳು: ದ್ವ್ಯಕ್ಷರಧಾತುವೆಂದರೆ ಎರಡು ಅಕ್ಷರಗಳು ಅರ್ಥವತ್ತಾದ ಘಟಕವಾಗಿದ್ದು ಉಚ್ಚಾರಣಾದೃಷ್ಟಿಯಿಂದ ಸ್ವತಂತ್ರವೂ ಪ್ರತ್ಯಯರಹಿತವೂ ಆಗಿರುವ ಪದಗಳು.

ಉದಾ.	ಮುಡಿ	ಕಟ್ಟು	ನೆಡು	ಅರೆ	ಬೆಳೆ
	ಪಿಡಿ	ನೋಡು	ಪತ್ತು	ಒರೆ	ಕೊಚೆ
	ಮೆಟ್ಟು	ಮಾಡು	ಅಪ್ಪು	ಸುರಿ	ತಡೆ ಮುಂತಾದವು

ಸಾಧಿತ ಧಾತುಗಳು: ಮೂಲಧಾತುಗಳಿಗೆ ಆಖ್ಯಾತಪ್ರತ್ಯಯಗಳು ಹಾಗೂ ಪ್ರೇರಣಾರ್ಥಕ 'ಇಸು' ಪ್ರತ್ಯಯ ಸೇರಿದಾಗ ಸಾಧಿತಕ್ರಿಯಾರೂಪಗಳಾಗುವುವು. ಕ್ರಿಯಾಪದಗಳಾಗುವಾಗ ಧಾತು ಮತ್ತು ಆಖ್ಯಾತ ಪ್ರತ್ಯಯಗಳ ನಡುವೆ ಕಾಲಸೂಚಕಗಳು ಬರುವವು. ಹೀಗೆ ಧಾತುಗಳಿಗೆ ಕಾಲಸೂಚಕಗಳು ಹಾಗೂ ಆಖ್ಯಾತ ಪ್ರತ್ಯಯಗಳು ಸೇರಿ ಮೂರು ಕಾಲಗಳನ್ನೂ ಮೂರು ಅರ್ಥಗಳನ್ನೂ ತಿಳಿಸುತ್ತವೆ. ಅವು ಮೂರು ಪುರುಷ. ಲಿಂಗ ಹಾಗೂ ಎರಡು ವಚನಗಳ ಲಕ್ಷಣಗಳನ್ನು ತಿಳಿಸುತ್ತವೆ.

ಧಾತುವಿಗೂ ಅಖ್ಯಾತ ಪ್ರತ್ಯಕ್ಕೂ ನಡುವೆ ಕಾಲಸೂಚಕ 'ಉತ್' ಆಗಮ ಬಂದು ವರ್ತಮಾನಕಾಲದ ಕ್ರಿಯಾಪದವಾದರೆ 'ವ', 'ಉವ' ಆಗಮಗಳಾಗಿ ಭವಿಷತ್ ಕಾಲದ ಕ್ರಿಯಾಪದಗಳಾಗುತ್ತವೆ. 'ದ' ಆಗಮವಾಗಿ ಭೂತಕಾಲದ ಕ್ರಿಯಾಪದಗಳಾ ಗುತ್ತವೆ. ಭೂತಕಾಲದ ಕ್ರಿಯಾಪದಗಳು ಎರಡು ಲಕ್ಷಣಗಳನ್ನು ಹಂದಿವೆ. ಅ. ಭೂತಕಾಲದಲ್ಲಿ ಬರುವ ಆಗಮವು ವಿಕಾರ ಹೊಂದದ ಕ್ರಿಯಾಪದರೂಪ ಆ. ಆಗಮವು ವಿಕಾರ ಹಂಒದುವ ಕ್ರಿಯಾಪದರೂಪ. ವಿಕಾರ ಹೊಂದದ ಕ್ರಿಯಾಪದ ರೂಪ ಭೂತಕಾಲದಲ್ಲಿ ಧಾತುವಿಗೂ ಕ್ರಿಯಾಪದರೂಪ. ವಿಕಾರ ಹೊಂದದ ಕ್ರಿಯಾಪದ ರೂಪ ಭೂತಕಾಲದಲ್ಲಿ ಧಾತುವಿಗೂ ಅಖ್ಯಾತ ಪ್ರತ್ಯಯಕ್ಕೂ ನಡುವೆ ಕಾಲಸೂಚಕ 'ದ' ಆಗಮ ಬಂದು ಭೂತಕಾಲದ ಕ್ರಿಯಾಪದ ರೂಪ ಹೊಂದುವದು('ದ' ಆಗಮ ಇವುಗಳಲ್ಲಿ ವಿಕಾರ ಹೊಂದುವುದಿಲ್ಲ.) ಉದಾ. ನೋಡು+ದ+ಅನು=ನೋಡಿ ದನು. ಕೆಲವು ಧಾತುಗಳು ಕ್ರಿಯಾಪದಗಳಾಗುವಾಗ ಭೂತಕಾಲದಲ್ಲಿರುವ 'ದ' ಆಗಮವು

ಆಗಮವು ಲೋಪವಾಗಿ ಕ್ರಿಯಾಪದವು ವಿಕಾರ ಹೊಂದುವುದು('ದ' ಸ್ಥಳದಲ್ಲಿ ಹೊಸದೊಂದು ಅಕ್ಷರ ಬರುತ್ತದೆ.) ಉದಾ. ಕಲಿ+ದ+ಅನು=ಕಲಿತನು.

ಕ್ರಿಯಾಪದ ವಿಕಾರ ಹೊಂದದ ಭೂತಕಾಲದ ಕೆಲವು ಧಾತುಗಳು: ನೋಡು-ನೋಡಿದ ಹಾಗೆಯೇ ಮಾಡು, ಬೇಡು, ಕಾಡು, ಓಡು, ಹಾಡು, ಬಾಡು, ಕೇಳು, ಹೇಳು, ಏರು, ಸಾಗು, ರೇಗು, ಕೂಗು, ಮಾಗು, ತೂಗು, ಬೀಗು, ಓದು, ತೆರೆ, ತೆಗೆ, ಒಗೆ, ನಡೆ ಕೊರೆ, ಎಳೆ, ಹಿಡಿ, ಕುಡಿ, ಬಡಿ ಕಡಿ, ಮಡಿ, ಸುಳಿ, ಬಳಿ, ಇಳಿ, ತಿಳಿ, ನುಡಿ, ಬರೆ, ಬಾಗು, ಬಿಗಿ, ಅಗಿ, ಹುಗಿ, ಮಿಂಚು, ಹಿಂಡು, ನುಂಗು, ತಂಗು, ಕರಿ, ಹರಿ, ಸುರಿ, ಮುರಿ, ಮಲಗು, ಹಚ್ಚು, ಹೇರು, ಬೀಸು ಮುಂತಾದವು.

ಕ್ರಿಯಾಪದ ವಿಕಾರ ಹೊಂದುವ ಭೂತಕಾಲದ ಕೆಲವು ಧಾತುಗಳು: ನಗು-ನಕ್ಕ ಹಾಗೆಯೇ ಹೋಗು, ಸಿಗು, ಇರು, ಆಗು, ಕೊಡು, ಬಿಡು, ಇಡು, ನಡು, ಕೆಡು, ತೆರು, ಹೊರು, ಸಾಯು, ಕೀಳು, ಮರೆ, ಬೀಳು, ಕರೆ, ಹೆರೆ, ಒರೆ, ಏಳು, ಕೊಲ್ಲು, ಸೋಲು, ನಿಲ್ಲು, ತಿನ್ನು, ತರು, ಬರು, ಮೀ, ಬೇ, ನೋ, ಕಲಿ, ಬಲಿ ಮುಂತಾದವು.

ಒಂದೇ ಧಾತುವಿನ ವರ್ತಮಾನ, ಭೂತ, ಭವಿಷ್ಯತ್ ಕಾಲಗಳ ಕ್ರಿಯಾಪದದ ಸಿದ್ಧರೂಪಗಳನ್ನು ಮೂರು ಪುರುಷ ಎರಡೂ ವಚನಗಳಲ್ಲಿ ಕೊಟ್ಟಿದೆ. ಉದಾ: 'ಬರು'

ವರ್ತಮಾನ ಕಾಲ		ಭೂತಕಾಲ		ಭವಿಷ್ಯತ್ ಕಾಲ	
ಏ.ವ	ಬ.ವ.	ಏ.ವ	ಬ.ವ.	ಏ.ವ.	ಬ.ವ.
ಬರುತ್ತಾನೆ	ಬರುತ್ತಾರೆ	ಬಂದನು	ಬಂದರು	ಬರುವನು	ಬರುವರು
ಬರುತ್ತಾಳೆ	ಬರುತ್ತಾರೆ	ಬಂದಳು	ಬಂದರು	ಬರುವಳು	ಬರುವರು
ಬರುತ್ತದೆ	ಬರುತ್ತವೆ	ಬಂದಿತು	ಬಂದವು	ಬರುವುದು	ಬರುವವು
			(ಬಂದುವು)	(ಬರುವುದು)	(ಬರುವುವು)
ಬರುತ್ತೀಯೆ	ಬರುತ್ತೀರಿ	ಬಂದೆ	ಬಂದಿರಿ	ಬರುವೆ	ಬರುವಿರಿ
ಬರುತ್ತೇನೆ	ಬರುತ್ತೇವೆ	ಬಂದೆನು	ಬಂದೆವು	ಬರುವೆನು	ಬರುವೆವು

ಧಾತುಗಳಿಗೆ ಕಾಲಸೂಚಕಗಳೂ ಆಖ್ಯಾತ ಪ್ರತ್ಯಯಗಳೂ ಸೇರಿ ಮೂರು ಕಾಲಗಳನ್ನು ತಿಳಿಸಿದಂತೆ ಮೂರು ಅರ್ಥಗಳನ್ನು ತಿಳಿಸುತ್ತವೆ. ಧಾತುವಿಗೆ 'ಅಲಿ', 'ಉಮದು', 'ಉವೆ' ಈ ವಿಧ್ಯರ್ಥದ ಆಖ್ಯಾತ ಪ್ರಯಯಗಳು ಸೇರಿ ವಿಧ್ಯರ್ಥಕ ಕ್ರಿಯಾಪದ ರೂಪಗಳಾಗುವವು(ಇವುಗಳಿಗೆ ಕಾಲಸೂಚಕಗಳು ಬರುವುದಿಲ್ಲ). ಧಾತುವಿಗೆ ಆನು, ಆಳು, ಆರು, ಆವು ಈ, ಈರಿ. ಏನು. ಏವು ಇಂತಹ ಸಂಭಾವನಾರ್ಥಕ ಆಖ್ಯಾತಗಳು ಸೇರಿ ಸಂಭಾವನಾರ್ಥಕ ಕ್ರಿಯಾರೂಪಗಳಾಗುತ್ತವೆ. ಧಾತುವಿಗೆ ಅನು, ಅಳು, ಅದು, ಅವು. ಎ. ಅರಿ. ಎನು, ಎವು ಇಂತಹ ನಿಷೇದಾರ್ಥಕ ಆಖ್ಯಾತಗಳು ಸೇರಿ ನಿಷೇದಾರ್ಥಕ ಕ್ರಿಯಾಪದಗಳಾಗುತ್ತವೆ. ರೂಢಿಗಾಗಿ 'ಬರೆ' ಎಂಬ ಧಾತುವಿನ

ವಿಧ್ಯರ್ಥ, ಸಂಭಾವನಾರ್ಥ ಹಾಗೂ ನಿಷೇಧಾರ್ಥಗಳ ಕ್ರಿಯಾಪದರೂಪಗಳನ್ನು ಮಾದರಿಗಾಗಿ ಕೊಟ್ಟಿದೆ.

ವಿಧ್ಯರ್ಥ		ಸಂಭಾವನಾರ್ಥ		ನಿಷೇಧಾರ್ಥ	
ಏ.ವ	ಬ.ವ.	ಏ.ವ	ಬ.ವ.	ಏ.ವ.	ಬ.ವ.
ಬರೆಯಲಿ	ಬರೆಯಲಿ	ಬರೆದಾನು	ಬರೆದಾರು	ಬರೆಯನು	ಬರೆಯರು
ಬರೆಯಲಿ	ಬರೆಯಲಿ	ಬರೆದಾಳು	ಬರೆದಾರು	ಬರೆಯಳು	ಬರೆಯರು
ಬರೆಯಲಿ	ಬರೆಯಲಿ	ಬರೆದೀತು	ಬರೆದಾವು	ಬರೆಯದು	ಬರೆಯವು
ಬರೆ	ಬರೆಯಿರಿ	ಬರೆದೀಯೆ	ಬರೆದೀರಿ	ಬರೆಯೆ	ಬರೆಯರಿ
ಬರೆವೆ	ಬರೆಯುವ ಬರೆಯುವಾ ಬರೆಯೋಣ	ಬರೆದೇನು	ಬರೆದೇವು	ಬರೆಯೆಯ	ಬರೆಯೆವು

ಕ್ರಿಯಾಪದ ರೂಪ ಹೊಂದುವಾಗ ವಿಧ್ಯರ್ಥ, ಸಂಭಾವನಾರ್ಥ, ನಿಷೇದಾರ್ಥಗಳಲ್ಲಿ ಮತ್ತು ಎಲ್ಲ ಪುರುಷ ಲಿಂಗ, ವಚನಗಳಲ್ಲಿ ಧಾತುಗಳಿಗೆ ಸೆರುವ ಆಖ್ಯಾತ ಪ್ರತ್ಯಯಗಳ ಪಟ್ಟಿಯನ್ನು ಮುಂದಿನ ಪುಟದಲ್ಲಿ ಕೊಡಲಾಗಿದೆ.

'ಇಸು' ಪ್ರತ್ಯಯ ಕುರಿತು: ಕನ್ನಡದಲ್ಲಿ ಹೆಚ್ಚು ಕಡಿಮೆ ಎಲ್ಲ ಕ್ರಿಯಾಧಾತುಗಳಿಗೂ ಕೂಡ 'ಇಸು' ಪ್ರತ್ಯಯ ಸೇರಿಸಿ ಸಾಧಿತ ಕ್ರಿಯಾರೂಪಗಳನ್ನು ರಚಿಸಲು ಸಾಧ್ಯವಿದೆ. ಈ ನಿಯಮಕ್ಕೆ ಅಪವಾದಗಳಾಗಿ ಕೆಲವು ಕ್ರಿಯಾಧಾತುಗಳನ್ನು ಮಾತ್ರವೇ ಉದಾಹರಿಸಲು ಸಾಧ್ಯವಿದೆ. ಇಂತಹ ಅಪವಾದಕಗಳಾಗಿ ಬರುವ ಧಾತುಗಳು ಮುಖ್ಯವಾಗಿ ಮೂರು ರೀತಿಯವುಗಳೆಂದು ಡಿ.ಎನ್. ಶಂಕರಭಟ್ ಅವರು ಅಭಿಪ್ರಾಯಪಟ್ಟಿದ್ದಾರೆ[೯]. ಅವು ಇಂತಿವೆ.

೧. ನೈಸರ್ಗಿಕ ಘಟನೆಗಳು: ಮಿಂಚು, ಗುಡುಗು, ಜಿನುಗು, ಕಂದು ಇತ್ಯಾದಿ
೨. ಅನೈಚ್ಛಿಕ ಕ್ರಿಯೆಗಳು: ಉಳುಕು, ಕೆಮ್ಮು, ಸೀನು, ತೆಗು ಇತ್ಯಾದಿ
೩. ಮಾನಸಿಕ ಅವಸ್ಥೆಗಳು: ರೋಸು, ಮರುಗು, ಒಗ್ಗು ಇತ್ಯಾದಿ

ಸಾಮಾನ್ಯವಾಗಿ ಒಬ್ಬ ನಿಯೋಗಿಕ ಇಲ್ಲವೆ ಪ್ರೇರಕನ ಹತೋಟಿಯಲ್ಲಿ ಉಳಿಯಲಾರದಂತಹ ಕ್ರಿಯೆಗಳನ್ನು ಇಲ್ಲವೇ ಘಟನೆಗಳನ್ನು ಸೂಚಿಸುವ ಕ್ರಿಯಾಧಾತುಗಳು ಮಾತ್ರವೇ ಹೀಗೆ, ಇಸು, ಪ್ರತ್ಯಯದೊಂದಿಗೆ ಸೇರಿಕೊಳ್ಳುವಲ್ಲಿ ಅಪವಾದಗಳಾಗಿ ಉಳಿಯುತ್ತವೆ. ಉದಾ. ಅ. ಉಮೇಶನ ಕಾಲ ಉಳುಕಿತು ಆ. ಆಕೆ ಉಮೇಶನ ಕಾಲನ್ನು ಉಳುಕಿಸಿದಳು. ಈ ಘಟನೆ ಇಲ್ಲವೇ ಕ್ರಿಯೆಗಳಲ್ಲಿ ಯಾವುದನ್ನಾದರೂ ಹತೋಟಿಯಲ್ಲಿ ಇಟ್ಟುಕೊಳ್ಳಬಲ್ಲ ವ್ಯಕ್ತಿ ಇಲ್ಲವೇ ಶಕ್ತಿಯನ್ನು(ಉದಾ. ದೇವರು) ಊಹಿಸಿಕೊಳ್ಳಲು ಸಾಧ್ಯವಿದೆಯಾದಲ್ಲಿ ಅಂತಹ ಪ್ರಯೋಗಗಳು ಸಮ್ಮತವಾಗಬಲ್ಲವು. ಉದಾ. ಮಂತ್ರವಾದಿಯು ಆಕೆಯನ್ನು ನಾಲ್ಕು ದಿವಸ ಕೆಮ್ಮಿಸಿದನು. ಅಂದರೆ ಯಾವುದೆ ಒಂದು

ಕ್ರಿಯಾಧಾತುವನ್ನು 'ಇಸು' ಪ್ರತ್ಯಯದೊಂದಿಗೆ ಬಳಸಲು ಸಾಧ್ಯವಿದೆಯೇ ಅಥವಾ ಇಲ್ಲವೆ ಎಂಬ ವಿಷಯವು ವ್ಯಾವಹಾರಿಕ ಕಾರಣಗಳ ಮೇಲೆ ಅವಲಂಬಿಸಿದೆಯಲ್ಲದೆ ವೈಯಾಕರಣಿಗಳ ಕಾರಣ ಮೇಲಲ್ಲ. ಕ್ರಿಯಾಧಾತುಗಳಿಗೆ 'ಇಸು' ಪ್ರತ್ಯಯ ಸೇರಿದಾಗಿ (ಹೆಚ್ಚಾಗಿ) ಪ್ರೇರಣಾರ್ಥಕ ಕ್ರಿಯಾರೂಪ ಸಿದ್ಧವಾಗುತ್ತದೆ(ಮಲಗಿಸು, ಓಡಿಸು, ಮುಂತಾದವು)[೯].

೨

ಕನ್ನಡ ಧಾತುಗಳಿಂದ ಕ್ರಿಯಾಪದಗಳ ರೂಪಸಿದ್ಧಿಯನ್ನು ಮಾಡಿಕೊಳ್ಳುವಾಗ ಆಗುವ ಕೆಲವು ಲೋಪಾಗಮಾದೇಶ ಕ್ರಿಯೆಗಳನ್ನು ಗಮನಿಸಬಹುದು. ಭಾಷಾಶಾಸ್ತ್ರಜ್ಞರು ಅಭಿಪ್ರಾಯ ಪಡುವಂತೆ ಕೆಲವು ಧಾತುಗಳು ಸ್ವರೂಪಗಳು ಕೇಶಿರಾಜನು ಹೇಳಿದಂತಿರದೆ ಭಿನ್ನವಾಗಿವೆ. 'ಬೇ', 'ಮೀ' ಮುಂತಾದವುಗಳು ಬೆಯ್, ಮಿಯ್ ಎಂಬಂತಿದ್ದಿರ ಬೇಕೆಂದೂ, ಇಲ್ಲಿರುವ 'ಯ'ಕಾರವು ಸಾನುನಾಸಿಕವಾಗಿದ್ದಿರಬೇಕೆಂದೂ, ಆದುದರಿಂದ 'ಬೆಂದಂ', 'ಮಿಂದಂ' ಎಂಬ ಕ್ರಿಯಾ ಪದರೂಪಗಳುಂಟಾಗುವುವೆಂದೂ ಭಾವಿಸಬೇಕಾಗುತ್ತದೆ(ಆದರೆ, ಕೇಶಿರಾಜನು ಹಾಗೆ ತಿಳಿದುಕೊಂಡಿಲ್ಲ). ನಿಷೇಧ ರೂಪದಿಂದ ಧಾತುವನ್ನು ನಿಶ್ಚಯಿಸಬೇಕೆಂಬ ಲಕ್ಷಣದಂತೆ 'ಬೇಯಂ', 'ಮೀಯಂ' ಎಂಬವುಗಳು 'ಧಾತು', 'ಬೇ', 'ಮೀ' ಎಂದೇ ಆಗುತ್ತದೆ.

ಕೇಶಿರಾಜ ಹೇಳಿದ ತ್ರ್ಯಚತುಃಪಂಚಕ್ಷರ ಧಾತುಗಳ ಬಗೆಗೆ ಸಂದೇಹ ಮೂಡುತ್ತದೆ. ಅವಕ್ಕೆಲ್ಲ ಏಕಾಕ್ಷರ ಧಾತುಗಳೇ ಮೂಲವಾಗಿರಬೇಕು. ಉದಾ. ಒಡಂ+ಪಡು= ಒಡಂಬಡು, ಅಳ್ಕ+ಜಂ+ಪಡು=ಅಳ್ಕಜಂಬಡು. ಕನ್ನಡ ಧಾತುಗಳಲ್ಲಿ ದೀರ್ಘಾವೃತ್ತಿ ಸಹಜವಾಗಿದ್ದರೂ ಬಿಂದು ವೃತ್ತಿ ವಿಕಲ್ಪವಾಗಿದೆ. ಬರ್ದುಂಕು>ಬರ್ದುಕು>ಬದುಕು. ಮುಂ ಕದಕ್ಕದಿಸು, ಅಳ್ಕಜಂಬಡು ಮೊದಲಾದ ಪಂಚಾಕ್ಷರ ಧಾತುಗಳನ್ನು ಕೇಶಿರಾಜ ಹೇಳಿದರೂ ಅವು ಅನುಕರಣ ಇಲ್ಲವೆ ಸಮಾಸರೂಪದ ಪದಗಳಾಗಿವೆ. ಸಂಸ್ಕೃತದಲ್ಲಿ ದೀರ್ಘ ಹಾಗೂ ಸಮಾಸ್ತೋಕ್ತ ಧಾತು ನಿರ್ಮಾಣ ಹೆಚ್ಚಿರುವುದರ ಪ್ರಭಾವ ಕೇಶಿರಾಜನ ಮೇಲಾಗಿದೆ.

ಧಾತುಪಾಠದಲ್ಲಿ 'ಇರು' ಎಂದು 'ಉ'ಕಾರಾಂತವಾಗಿ ಧಾತುಸ್ವರೂಪವನ್ನು ಕೊಟ್ಟಿದ್ದರೂ ಆಖ್ಯಾತ ಪ್ರಕರಣದಲ್ಲಿ 'ಇರು' ಎಂಬ ಧಾತು "ಪೊಂದರ್ಕೆ ಮುತ್ತಮಕ್ಕುಂ" ಎಂದು ೨೪ಗನೆಯ ಸೂತ್ರದ ವೃತ್ತಿಯಲ್ಲಿ ಹೇಳಲಾಗಿದೆ. ಇದನ್ನು ಗಮನಿಸಿದಾಗ ಕೇಶಿರಾಜನ ಧಾತುಪಾಠವನ್ನು ಪ್ರತಿ ತೆಗಯುವವರು ಕೆಲವನ್ನು ಪ್ರಮಾದದಿಂದ ಬಿಟ್ಟಿರಲೂಬಹುದು. ಕೆಲವು ಧಾತುಗಳು ಕೇಶಿರಾಜನ ಕಣ್ಣುತಪ್ಪಿಸಿ ಉಳಿದು ಹೋಗಿದ್ದಿರ ಬಹುದು ಎಂಬುವಕ್ಕೆ ಧಾತುಪಾಠದಲ್ಲಿ ಪೇಟ್, ಉಳ್(=ಇರು) ಕುಳ್, ಆಗಲ್ ಎಂಬವುಗಳಿಲ್ಲದಿರುವುದೂ ಒಂದು ಪ್ರಮಾಣವಾಗುತ್ತದೆ. ಅವನ ಕಾಲಕ್ಕಿಂತ ಹಿಂದಣ ಗ್ರಂಥಗಳನ್ನು ಪರಿಶೀಲಿಸಿದರೆ ಅವನ ಗಮನಕ್ಕೆ ಬಾರದ ಇನ್ನೂ ಕೆಲವು ಧಾತುಗಳು

ಇರಬಹುದು ಎಂದು ತೋರುತ್ತದೆ. ಹಾಗೆಯೇ ಅವನ ಕಾಲದಲ್ಲಿದ್ದ ಧಾತ್ವರ್ಥವು ಕಾಲಾಂತರದಲ್ಲಿ ಬದಲಾಗಿಯೂ ಇದ್ದಿರಬಹುದು. ಕೆಲವು ಧಾತುಗಳಿಗೆ ಮೂಲಾರ್ಥವೊಂದಿದ್ದು ಅದರ ಲಕ್ಷಣಾರ್ಥವು ಮುಂದೆ ಅದಕ್ಕೊದಗಿ ಕೆಲವು ಸಲ ಎರಡೂ ಅರ್ಥಗಳು ಆ ಧಾತುವಿಗಿರುವಂತೆ ಕಾಣಬಹುದು. ಉದಾ. 'ಸಾ' ಎಂಬ ಧಾತುವಿಗೆ ಮೃತ್ಯರ್ಥವಿದೆ ಎಂದು ಕೇಶಿರಾಜ ಹೇಳುತ್ತಾನೆ. ಇಂದು ಕೆಲವರು 'ದೂರಹೋಗು' ಎಂಬಂರ್ಥದಲ್ಲಿಯೂ ಪ್ರಯೋಗಿಸುತ್ತಾರೆ. ಹೀಗೆ ಧಾತುಗಳ ಅರ್ಥನಿರ್ಣಯದಲ್ಲಿ ಭಿನ್ನತೆಯಿದೆ.

ಹಳಗನ್ನಡದ ವ್ಯಂಜನಾಂತ ಧಾತುಗಳಾದ 'ಪೋೞ್', 'ಊಳ್', 'ಕೂಳ್', 'ಪೊಗೞ್' ಎಂಬವು ನಡುಗನ್ನಡ, ಹೊಸಗನ್ನಡದಲ್ಲಿ ಸ್ವರಾಂತ್ಯಗಳಾಗಿರುತ್ತವೆ. ಕೇಶಿರಾಜನು ಹೇಳುವ ಧಾತುಗಳು ಹೆಚ್ಚಾಗಿ, 'ಉ'ಕಾರಾಂತವಾಗಿರುವುದು ಕಂಡು ಬರುತ್ತದೆ. ಇ-ಎ, ಉ-ಒಗಳಲ್ಲುಂಟಾದ ಪರಿವರ್ತನೆ ದ್ರಾವಿಡ ಭಾಷೆಗಳಲ್ಲಿ ಸಾಮಾನ್ಯ ನಿಯಮವಾಗಿರುವಂತೆ ಕನ್ನಡದಲ್ಲೂ ಆಗಿದೆ. ಧಾತುಗಳು ಎಷ್ಟೋ ಸಲ ತಮ್ಮ ರೂಪ ವ್ಯತ್ಯಾಸವನ್ನು ಪಡೆದುಕೊಳ್ಳುವ ಬಗೆಯನ್ನು ಕೂಡ ಕೇಶಿರಾಜ ಗಮನಿಸಿದ್ದಾರೆ. ಸುಡು-ಸೂಡು, ಕುಡು-ಕೂಡು, ಬಳೆ-ಬೆಳೆ ಎಂಬಂತಹ ರೂಪಗಳು ಕೇವಲ ಧ್ವನಿ ವ್ಯತ್ಯಾಸಕ್ಕೆ ಮಾತ್ರವಲ್ಲ ಅರ್ಥ ವ್ಯತ್ಯಾಸಕ್ಕೂ ಕಾರಣವಾಗಿವೆ. 'ಒಲ್' ಧಾತು ಇದರರ್ಥ 'ಪ್ರೀತಿಸು' ಎಂದಾಗುತ್ತದೆ. ಇದರ ನಿಷೇಧಾರ್ಥಕ ರೂಪಗಳು ಬಳಕೆಯಲ್ಲಿವೆ. ಉದಾ. ಒಲ್ಲನು, ಒಲ್ಲಳು, 'ಉಳ್' ಧಾತು ಇದರರ್ಥ 'ಇರು' ಎಂದಾಗುತ್ತದೆ. ಇದರ ಪ್ರಥಮ ಪುರುಷ ನಪುಂಸಕಲಿಂಗ ಏಕವಚನ ರೂಪ 'ಉಂಟು' ಎಂದು ಬಳಕೆಯಲ್ಲಿವೆ. ಇದನ್ನು ವರ್ತಮಾನ ಮತ್ತು ಭೂತಕಾಲಗಳಲ್ಲಿ ಮತ್ತು ಎಲ್ಲ ಲಿಂಗ, ವಚನಗಳಲ್ಲಿಯೂ ಪ್ರಯೋಗಿಸಲಾಗುತ್ತದೆ. ಉದಾ. ಮನೆಯಲ್ಲಿ ಅಪ್ಪನು ಉಂಟು, ಗುರುಗಳು ಉಂಟು. ಗೆಳೆಯರು ಉಂಟು, ಕೇಶಿರಾಜನು "ಬೆಳೆಯೆಂಬ ಧಾತು ಸಸ್ಯಾವಳಿಯೊಳ್ ಬಳೆಯೆಂಬ ಧಾತು ಮಿಕ್ಕೆಡೆಯೊಳ್ ಸಂಗಳಿಕುಂ" ಎಂದು ಹೇಳಿದ್ದಾನೆ. ಈ ಎರಡು ಶಬ್ದಗಳ ನಡುವೆ ಇದ್ದಿರಬಹುದಾದ ವ್ಯತ್ಯಾಸವು ಬಹುಕಾಲದ ಹಿಂದೆಯೇ, ಅಂದರೆ ವಡ್ಡಾರಾಧನೆ, ಪಂಪಭಾರತಗಳ ಕಾಲದಿಂದಲೂ ಮರೆಯಾಗಿರಬೇಕು ಆದರೆ ಕೇಶಿರಾಜನ ಹೇಳಿಕೆಯನ್ನು ಗಮನದಲ್ಲಿಟ್ಟುಕೊಂಡು 'ಬೆಳೆ' ಸಸ್ಯ ಸಮೃದ್ಧಿಗಾಗಿ 'ಬಳೆ' ಉಳಿದೆಡೆಯಲ್ಲಿ ಪ್ರಯೋಗವಾಗುತ್ತವೆ.

ಕೆಲವು ಧಾತುಗಳ ಸ್ವರೂಪವನ್ನು ಗಮನಿಸಿದಾಗ ಅವುಗಳು ಧಾತುಗಳಾಗಿರದೆ ನಾಮಗಳಾಗಿರಬಹುದೇ ಎಂದು ಸಂದೇಹಿಸುವಂತಿದೆ. ಮುಳ್-ಕಂಟಕೇ, ಜಿಡು (ಅವುದು)-ದಂತಚರ್ವಣೆ ಎಂಬವುಗಳನ್ನು ಮುಳಂ, ಜಾಡಿದಂ ಎಂದು ಮುಂತಾಗಿ ಪ್ರಯೋಗಿಸುದುದು ಇದೆಯೆ? ಪ್ರಾಯಶಃ ಇಲ್ಲ ಹಾಗಿದ್ದ ಮೇಲೆ ಇವುಗಳನ್ನು ಧಾತುವೆನ್ನ ಬಹುದು? ಕೆಲವು ಧಾತುಗಳು ನಾಮಗಳೂ ಆಗಿದ್ದು ಆ ಎರಡೂ ಅರ್ಥಗಳನ್ನು

ಧಾತುಪಾಠದಲ್ಲಿ ಕೊಡಲಾಗಿದೆ. ಒಜಿ-ಸ್ರವಣೇ, ಶಸ್ತ್ರಕೋಶೇ ಚಃ ತೊಜಿ-ವಿಸರ್ಜನೇ, ನದ್ಯಾಂ ಚಃ ಸೆಳ-ಆಕರ್ಷಣೇ, ಬಾಲಶಿಕ್ಷಾದಂಡೇ ಚ ಇತ್ಯಾದಿ. ಧಾತ್ವರ್ಥ ನಿರೂಪಣೆಯ ಸಂದರ್ಭದಲ್ಲಿಯೂ ಜಟಿಕುಳಗಳ ಬಗೆಗೆ ಕೇಶಿರಾಜನು ವಿಶೇಷ ಗಮನ ನೀಡಿದ್ದಾರೆ. ಅಜ್-ಜಲ ನಿಮಜ್ಜನೇ, ಸೇವಕೇ ಕುಳಂ ಬಾಟ್- ಜೀವನೇ; ಖಡ್ಗೇ ಕುಳಂ ಇತ್ಯಾದಿ ಧಾತುಪಾಠವು ಆದ್ಯಕ್ಷರಾನುಕ್ರಮದಿಂದಿರದೆ ನಮ್ಮ ಶಾಸ್ತ್ರ ಪರಂಪರೆಯಲ್ಲಿ ಕಂಡು ಬರುವಂತೆ ಅಂತ್ಯವರ್ಣಕ್ಕನುಗುಣವಾಗಿ ನಿರೂಪಿತವಾಗಿದೆ.

ಹೊಸಗನ್ನಡದಲ್ಲಿಯೂ ಒಂದು ಪದ ನಾಮಪದವಾಗಿರುವಂತೆ ಕ್ರಿಯಾಪದವು ಆಗುತ್ತದೆ. ಉದಾ. ಒಲೆ-ಒಪ್ಪು, ಶೋಭಿಸು(ಕ್ರಿ), ಬೆಂಕಿ ಉರಿಸುವ ಸ್ಥಳ(ನಾ) ಕಟ್ಟು ಹಿಡಿದಿಡು(ಕ್ರಿ), ಸಂಕೋಲೆ(ನಾ) ಇತ್ಯಾದಿ.

ಪ್ರಾದೇಶಿಕ ಪ್ರಭೇದಗಳಲ್ಲಿ ಕಂಡುಬರುವ ಉಚ್ಚಾರಣೆ ಮತ್ತು ವರ್ಣವ್ಯತ್ಯಾಸಗಳು ಕ್ರಿಯಾರೂಪಗಳಲ್ಲೂ ಕಂಡುಬರುತ್ತವೆ. ಉದಾ. 'ಬಾ' ಎಂದು ಬಾರೋ, ಬರಬೆಕು, ಬಾರಾಕೋ, ಬಾರಲೋ, 'ಹೋಗು' ಎಂಬುದು ಹೋಗನು(ಕಿತ್ತೂರು ಕರ್ನಾಟಕ), ಹೋಗೋಣ(ಹಳೇಮೈಸೂರು). ಸ್ವರಾಂತವಾದ ಧಾತುಗಳು ಉಚ್ಚಾರಣೆಯಲ್ಲಿ ವ್ಯಂಜನಾಂತಗಳಾಗುವ ಸಂಭವ ಹೆಚ್ಚು. ಉದಾ. ಬೀಸು-ಬೀಸು, ಮುಕ್ಕು-ಮುಕ್ ಇತ್ಯಾದಿ.

ಹಲವು ಧಾತುಗಳು ನಾಮಪದಗಳ ಜೊತೆಗೆ ಸೇರಿ ವಿಶಿಷ್ಟವಾದ ಧಾತುಗಳಾಗಿ ವಿವಿಧ ಅರ್ಥಗಳಲ್ಲಿ ಬಳಕೆಯಾಗುತ್ತವೆ. ಉದಾ. 'ಬಡಿ'- ಕಾಲ್ಬಡಿ, ಬಾಯ್ಬಡಿ, ಸಿಡಿಲ್ಬಡಿ ಇತ್ಯಾದಿ. 'ಬಿಗಿ' - ಏಟುಬಿಗಿ, ಭಾಷಣ ಬಿಗಿ ಇತ್ಯಾದಿ. ಕೆಲವು ವೃತ್ತಿ ಸಮುದಾಯದಲ್ಲಿ ಬಳಕೆಯಾಗುವ ಕ್ರಿಯಾರೂಪಗಳು ಆ ವೃತ್ತಿಯ ಕ್ರಿಯೆಯನ್ನು ತಿಳಿಸಿಕೊಡುತ್ತವೆ. ಉದಾ. 'ತುಂಬ್ಸು' ಈ ಕ್ರಿಯಾರೂಪ ಸಾಮಾನ್ಯಾರ್ಥದಲ್ಲಿ 'ಭರ್ತಿಮಾಡು' ಎಂಬರ್ಥದಲ್ಲಿ ಬಳಕೆಯಾಗುತ್ತದೆ. ಬಡಿಗವೃತ್ತಿ ಸಮುದಾಯದಲ್ಲಿ ಆ ರೂಪ 'ಸಜ್ಜುಗೊಳಿಸು' ಎಂಬರ್ಥ ಪಡೆದುಕೊಳ್ಳುತ್ತದೆ. ಮೇಳಿತುಂಬ್ಸು, ಈಸ್‌ತುಂಬ್ಸು ಮುಂತಾದವುಗಳನ್ನು ಹಾಕಿ ಗಳೆಯನ್ನು ಸಜ್ಜುಗೊಳಿಸುವುದು. ಅಂತಹ ಕ್ರಿಯಾರೂಪಗಳು ವೃತ್ತಿಯ ವಿವಿಧ ಮಜಲುಗಳನ್ನು ವಿವರಿಸುತ್ತವೆ.

೩

ವಿಭಜನೆ/ವರ್ಗೀಕರಣ: ಪ್ರತಿಯೊಂದು ಭಾಷೆಯಲ್ಲೂ ಇರುವ ಕ್ರಿಯಾಪದಗಳ ಸಂಖ್ಯೆ ಸೀಮಿತ. ಆದರೆ ಸಾಧಿತ ರೂಪಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಅವುಗಳ ಸಂಖ್ಯೆ ಹೆಚ್ಚಾಗುತ್ತದೆ(ಅಪರಿಮಿತ?). ಪ್ರತಿಕ್ರಿಯಾಪದದ ಬಳಕೆಯಲ್ಲೂ ಉದ್ದೇಶಗಳು ಎಲ್ಲ ಸಂದರ್ಭದಲ್ಲೂ ಒಂದೇ ಆಗಿರುವುದಿಲ್ಲ. ಆದ್ದರಿಂದ ಕ್ರಿಯಾಪದಗಳ ಬಳಕೆಯ ಉದ್ದೇಶಗಳು ಅಸಂಖ್ಯ. ಅವುಗಳ ಉದ್ದೇಶಗಳನ್ನು ಗಮನಿಸಿ ಭಾಷಾಶಾಸ್ತ್ರಜ್ಞರು ಕ್ರಿಯಾಪದಗಳನ್ನು ವರ್ಗೀಕರಿಸಲು ಪ್ರಯತ್ನಿಸಿದ್ದಾರೆ. ಇದ್ದೊಂದು ಕಷ್ಟಸಾಧ್ಯದ ಕೆಲಸ. ಏಕೆಂದರೆ ಕ್ರಿಯಾಪದಗಳ ಉದ್ದೇಶಗಳಾಗಲೀ ಅವು ಬಳಕೆಯಾಗುವ

ಸ್ವರೂಪಗಳಾಗಲೀ ಯಾವಾಗಲೂ ಸ್ಪಷ್ಟವಾಗಿರುವುದಿಲ್ಲ. ಹೀಗಿದ್ದರೂ ಕ್ರಿಯಾಪದಗಳ ಉದ್ದೇಶ ಮತ್ತು ಕ್ರಿಯಾರ್ಥಕಗಳ ಸ್ವರೂಪಗಳನ್ನಾಧರಿಸಿ ವರ್ಗೀಕರಿಸುವ ಪ್ರಯತ್ನಗಳು ನಡೆದೇ ಇವೆ. ಈ ಕುರಿತು ಡಿ.ಎನ್. ಶಂಕರಭಟ್‌ರು ಮಾಡಿರುವ ವಿಭಜನೆ ಹೀಗಿದೆ.[೧೦]

ವಾಕ್ಯವೊಂದರಲ್ಲಿ ಬರುವ ಪದಪುಂಜಗಳು ಅದರಲ್ಲಿ ಬರುವ ಕ್ರಿಯಾಪದಗಳನ್ನಾಧರಿಸಿವೆ. ಉದಾ. 'ಬೀಳು' ಎಂಬ ಕ್ರಿಯಾಪದವಿರುವ ವಾಕ್ಯಗಳಲ್ಲಿ ಒಬ್ಬ ವ್ಯಕ್ತಿ/ವಸ್ತುವನ್ನು ಸೂಚಿಸುವಂತಹ ಒಂದೇ ಒಂದು ಪದಪುಂಜವಿದ್ದರೆ ಸಾಕಾಗುತ್ತದೆ. ಏಕೆಂದರೆ ಬೀಳುವ ಕ್ರಿಯೆಯಲ್ಲಿ ಒಬ್ಬ ವ್ಯಕ್ತಿ/ವಸ್ತು ಕಾರ್ಯಪ್ರವೃತ್ತವಾಗಿರುತ್ತದೆ. ಉದಾ. ಭೀಮಬಿದ್ದ, ಮಳೆ ಬಿತ್ತು ಆದರೆ 'ಬೀಳಿಸು' ಎಂಬ ಕ್ರಿಯಾಪದವಿರುವ ವಾಕ್ಯದಲ್ಲಿ ಎರಡು ಬೇರೆ ಬೇರೆ ವ್ಯಕ್ತಿ, ವಸ್ತುಗಳನ್ನು ಹೆಸರಿಸುವಂತಹ ಎರಡು ಬೇರೆ ಬೇರೆ ಪದಗುಚ್ಛಗಳನ್ನು ಬಳಸುವ ಅವಶ್ಯಕತೆ ಇದೆ. ಏಕೆಂದರೆ 'ಬೀಳಿಸುವ' ಕ್ರಿಯೆಯಲ್ಲಿ 'ಬೀಳುವ' ವ್ಯಕ್ತಿ/ವಸ್ತು ಹಾಗೂ ಬೀಳಿಸುವಂತಹ ಇನ್ನೊಂದು ವ್ಯಕ್ತಿ ಕಾರ್ಯಪ್ರವೃತ್ತವಾಗುತ್ತದೆ. ಉದಾ. 'ಮಲ್ಲಪ್ಪ' ಮತ್ತು 'ಕೊಡ' ಬೀಳುವ ವ್ಯಕ್ತಿ/ವಸ್ತು. 'ಪರಪ್ಪ', 'ಚೆನ್ನಮ್ಮ' ಬೀಳಿಸುವ ವ್ಯಕ್ತಿ. ಈ ರೀತಿಯಾಗಿ ವಾಕ್ಯದಲ್ಲಿ ಕ್ರಿಯಾಪದದೊಂದಿಗೆ ಪ್ರಯುಕ್ತವಾಗಿರುವಂತಹ ಪದಪುಂಜಗಳೆಲ್ಲ ಆ ವಾಕ್ಯವು ತಿಳಿಸುವ ಕ್ರಿಯೆಯ ಬೇರೆ ಬೇರೆ ಘಟಕಗಳು ಯಾವುವು ಎಂಬುದನ್ನು ನಿರ್ದೇಶಿಸುತ್ತವೆ(ಕ್ರಿಯಾರ್ಥಕ). ವಾಕ್ಯಗಳಲ್ಲಿ ಬರುವ ಪದಪುಂಜಗಳನ್ನು ಅ. ವಿಷಯ ಆ. ನಿಯೋಗಿ ಇ. ಅನುಭೋಗಿ ಈ. ಆಕರ ಉ. ಪ್ರೇರಕಗಳೆಂಬ ಐದು ಮುಖ್ಯ ಘಟಕಗಳಾಗಿ ವಿಂಗಡಿಸಬಹುದು. ಕೆಳಗಿನ ಉದಾಹರಣೆಗಳ ಮೂಲಕ ಅವುಗಳ ಸ್ವರೂಪವನ್ನು ಗಮನಿಸಬಹುದು.

೧. ಕಿಟಕಿ ತೆರೆಯಿತು
೨. ರಾಮನು ಕಿಟಕಿಯನ್ನು ತೆರೆದನು
೩. ರಾಮನಿಗೆ ಪೆನ್ನು ಸಿಕ್ಕಿತು
೪. ಈರಪ್ಪನು ಹೊಲಕ್ಕೆ ನೀರು ಹಾಯಿಸುತ್ತಿದ್ದಾನೆ
೫. ಬಸಪ್ಪನು ತನ್ನ ಎತ್ತುಗಳನ್ನು ಮಾಂತಪ್ಪನಿಗೆ ಕೊಟ್ಟಿದ್ದಾನೆ
೬. ಕೂಸು ಆಡುತ್ತಿದೆ
೭. ಮಲ್ಲವ್ವಳು ಕೂಸನ್ನು ಅಳಿಸುತ್ತಿದ್ದಾಳೆ
೮. ರಮೇಶನು ಎರಡನೆ ಮಹಡಿಯಿಂದ ಬಿದ್ದ

ಅ. ವಿಷಯ: ಮೊದಲನೆಯ ವಾಕ್ಯದಲ್ಲಿ 'ತೆರೆ' ಎಂಬ ಕ್ರಿಯಾಪದದೊಂದಿಗೆ 'ಕಿಟಕಿ' ಎಂಬ ಒಂದೇ ಒಂದು ಪದ ಬಂದಿದೆ. ಈ ಪದವನ್ನು ಸೂಚಿಸುವ ಘಟಕ 'ವಿಷಯ' ಎಂಬುದಾಗಿ ನಿರ್ದೇಶಿಸಬಹುದು. ಕನ್ನಡದ ಕ್ರಿಯಾರ್ಥಕ ವಾಕ್ಯಗಳಲ್ಲಿ ಒಂದು ಸೂಚಕ ಪದಪುಂಜ ಇರುತ್ತದೆಂದು ಸಾಧಾರಣವಾಗಿ ಹೇಳಬಹುದು.

ಎರಡನೆಯ ವಾಕ್ಯದಲ್ಲಿ 'ಕಿಟಕಿ' ಮೂರನೆಯದಲ್ಲಿ 'ಪೆನ್ನು' ನಾಲ್ಕನೆಯದಲ್ಲಿ 'ನೀರು' ಐದನೆಯದಲ್ಲಿ 'ರಮೇಶ' ಈ ಪದಪುಂಜಗಳು ಮೇಲಿನ ವಾಕ್ಯಗಳಲ್ಲಿ 'ವಿಷಯ'ವೆಂಬ ಘಟಕವನ್ನು ಸೂಚಿಸುತ್ತವೆ.

ಆ. ನಿಯೋಗಿ: ಸ್ವಪ್ರೇರಣೆಯಿಂದ ಕ್ರಿಯೆಯೊಂದನ್ನು ನಡೆಸಬಲ್ಲ ವ್ಯಕ್ತಿ, ಪ್ರಾಣಿ ಮೊದಲಾದುವನ್ನು ನಿರ್ದೇಶಿಸುವ ಪದಪುಂಜಗಳು ವಾಕ್ಯಗಳಲ್ಲಿ ನಿಯೋಗಿ ಘಟಕವನ್ನು ಸೂಚಿಸುತ್ತವೆ. ಈ ಘಟಕದ ಕ್ರಿಯೆಯ ಮೂಲಕ ಒಂದು ವಿಷಯದ ಮೇಲೆ ಪರಿಣಾಮ ಬೀರುವ ಶಕ್ತಿಯಿರುತ್ತದೆಂಬುದನ್ನು ಗಮನಿಸಬೇಕು. ಉದಾ. ಎರಡನೆಯ ವಾಕ್ಯದಲ್ಲಿ ತೆರೆಯುವ ಕ್ರಿಯೆಯ ಮೂಲಕ ರಾಮನು ಕಿಟಕಿಯನ್ನು ತೆರೆಯುವಂತೆ ಮಾಡಿದನು. ನಾಲ್ಕನೆಯ ವಾಕ್ಯದಲ್ಲಿ 'ಈರಪ್ಪ', ಐದನೆಯ ವಾಕ್ಯದಲ್ಲಿ 'ಬಸಪ್ಪ', ಏಳನೆಯ ವಾಕ್ಯದಲ್ಲಿ 'ಮಲ್ಲವ್ವ' ಈ ಪದಪುಂಜಗಳು ಕೂಡ ನಿಯೋಗಿಯನ್ನು ನಿರ್ದೇಶಿಸುತ್ತವೆ.

ಇ. ಅನುಭೋಗಿ: ಮೂರನೆಯ ವಾಕ್ಯದ 'ರಾಮ' ಎಂಬ ಪದವು 'ಅನುಭೋಗಿ' ಎಂಬ ಘಟಕವನ್ನು ಸೂಚಿಸುತ್ತದೆ. ನಿಯೋಗಿ ಅನುಭೋಗಿಗಳಲ್ಲಿರುವ ವ್ಯತ್ಯಾಸವೆಂದರೆ 'ನಿಯೋಗಿಯ ಸ್ವಪ್ರಯತ್ನದಿಂದ ಮತ್ತು ಸ್ವಪ್ರೇರಣೆಯಿಂದ ಒಂದು ಕಾರ್ಯದಲ್ಲಿ ಭಾಗವಹಿಸುತ್ತಿದೆಯಾದರೆ, ಅನುಭೋಗಿಯ ಬೇರಾವುದೋ ಕಾರಣಕ್ಕಾಗಿ ಒಂದು ಕಾರ್ಯದಲ್ಲಿ ಸೇರಿಕೊಂಡಿರುತ್ತದೆ' ಉದಾ. 'ರಾಮ' ಎಷ್ಟು ಪ್ರಯತ್ನ ಬೇಕಿದ್ದರೂ ಮಾಡಲಿ 'ಪೆನ್ನು' ಅವನಿಗೆ ಸಿಗುವುದೇ ಅಥವಾ ಇಲ್ಲವೇ ಎಂಬುದು ಅವನ ಅಧೀನದಲ್ಲಿರುವುದಿಲ್ಲ. ಆ ಪೆನ್ನು ಎಲ್ಲಿತ್ತು ಎಂಬುದರ ಮೇಲೆ ಅದು ಅವಲಂಬಿಸಿರುತ್ತದೆ. ಹೀಗೆಯೇ ಐದನೆಯ ವಾಕ್ಯದಲ್ಲಿ 'ಮಾಂತಪ್ಪ' ಎಂಬ ಪದವೂ ಕೂಡ ಅನುಭೋಗಿಯನ್ನು ನಿರ್ದೇಶಿಸುತ್ತದೆ. ಕೊಡುವ ಕ್ರಿಯೆಯಲ್ಲಿ ಮಾಂತಪ್ಪನ ಸ್ಥಾನ ತಟಸ್ಥವಾದುದು. ಅದು ಕೊಡುವ ಕ್ರಿಯೆಯೊಂದಿಗೆ ಸೇರಿಕೊಂಡಿರುತ್ತದೆ.

ಈ. ಆಕರ: ನಾಲ್ಕನೆಯ ವಾಕ್ಯದಲ್ಲಿ 'ಹೊಲ' ಎಂಬ ಪದವೂ ಮತ್ತು ಎಂಟನೆಯ ವಾಕ್ಯದಲ್ಲಿ 'ಅಟ್ಟದ ಮೇಲಿಂದ' ಎಂಬ ಪದಪುಂಜವು ಆಕರ ಎಂಬ ಘಟಕವನ್ನು ನಿರ್ದೇಶಿಸುತ್ತವೆ. ಕ್ರಿಯೆ ರೂಪಗೊಳ್ಳಲಿಕ್ಕೆ ಯಾವುದು ಕಾರಣವಾಗಿರುತ್ತದೆಯೊ ಅದು ಆಕರ.

ಉ. ಪ್ರೇರಕ: ಕನ್ನಡ ಕ್ರಿಯಾಪ್ರಕೃತಿಗಳಿಗೆ - 'ಇಸು' ಪ್ರತ್ಯಯ ಸೇರಿಸಿ ಸಾಧಿತರೂಪಗಳನ್ನು ನಿರ್ಮಿಸಲು ಸಾಧ್ಯವಿದೆ. ಅಂತಹ ಸಾಧಿತರೂಪಗಳಲ್ಲಿ ಕೆಲವನ್ನು ಬಳಸಿದಾಗ ಅವುಗಳೊಂದಿಗೆ ಮೇಲೆ ಸೂಚಿಸಿದ ಮುಖ್ಯ ಘಟಕಗಳು ಮಾತ್ರವಲ್ಲದೆ 'ಪ್ರೇರಕ'ವೆಂಬ ಇನ್ನೊಂದು ಘಟಕವೂ ಕೂಡ ಪ್ರಯುಕ್ತವಾಗುತ್ತದೆ. ೧. ಅವನೊಂದು ಹಣ್ಣು ತಿಂದನು ೨. ರಮೇಶನು ಅವನ ಕೈಯಿಂದ ಒಂದು ಹಣ್ಣ ತರಿಸಿದ. ಎರಡನೆಯ ವಾಕ್ಯವಲ್ಲಿ

'ತರಿಸು' ಎಂಬ 'ಸಾಧಿತ' ರೂಪ ಹಾಗೂ ಅವರೊಂದಿಗೆ ಬಂದಿರುವ 'ರಮೇಶ' ಎಂಬ ಪದವು ಪ್ರೇರಕ ಘಟಕವನ್ನು ನಿರ್ದೇಶಿಸುತ್ತದೆ. ಇಂತಹ ಪ್ರೇರಕಯುಕ್ತ ವಾಕ್ಯಗಳನ್ನು ಸರಳವಾಕ್ಯಗಳೆಂದು ಪರಿಗಣಿಸುವ ಬದಲು ಸಾಧಿತವಾಕ್ಯಗಳೆಂದು ಪರಿಗಣಿಸಬೇಕು. ಕ್ರಿಯಾರ್ಥಕ ವಾಕ್ಯಗಳಲ್ಲಿ ಮೇಲಿನ ಐದು ಮುಖ್ಯ ಘಟಕಗಳಲ್ಲದೆ ಕರಣ, ಹೆತು, ಕಾರಣ, ಉದ್ದೇಶ, ಸ್ಥಾನ, ಕಾಲ, ಅನುನಯಿ, ಸದೃಶ್ಯವೆಂಬ ಅಮುಖ್ಯ ಘಟಕಗಳು ಪ್ರಭಾವ ಬೀರುತ್ತವೆ.[೧೧]

ಕ್ರಿಯಾರ್ಥಕ ವಾಕ್ಯಗಳಲ್ಲಿಯ ಮುಖ್ಯ ಘಟಕಗಳಾದ 'ನಿಯೋಗಿ', 'ಅನುಭೋಗಿ' ಮತ್ತು 'ಆಕರ'ಗಳ ಆಧಾರದ ಮೇಲೆ ಕ್ರಿಯಾಪದಗಳನ್ನು ವಿಂಗಡಿಸಬಹುದು.[೧೨] ಒಂದು ಕ್ರಿಯಾಪದದೊಂದಿಗೆ ನಿಯೋಗಿಯನ್ನು ಸೂಚಿಸುವ ಪದಪುಂಜ ಬರಬಲ್ಲುದೆ ಅಥವಾ ಬರಲಾರದೇ ಎಂಬುದರ ಮೇಲೆ ನಿಯೋಗಿಯುಕ್ತ, ನಿಯೋಗಿವಿರಹಿತಗಳೆಂದು ಕ್ರಿಯಾಪದಗಳನ್ನು ಎರಡು ರೀತಿಯಾಗಿ ವಿಂಗಡಿಸಲು ಸಾಧ್ಯವಿದೆ. ೧. ಆ ಬೆಕ್ಕು ಒಂದು ಇಲಿಯನ್ನು ಕೊಲ್ಲುತ್ತಿದೆ. ೨. ಅಲ್ಲೊಂದು ಬೆಕ್ಕು ಸಾಯುತ್ತಿದೆ. ಮೊದಲನೆಯ ವಾಕ್ಯದಲ್ಲಿ 'ಆ ಬೆಕ್ಕು' ಎಂಬ ಪದಪುಂಜ ನಿಯೋಗಿಯಾಗಿಯೂ ಮತ್ತು 'ಒಂದು ಇಲಿ' ಎಂಬ ಪದಪುಂಜ ವಿಷಯವಾಗಿ ಕಾರ್ಯನಿರ್ವಹಿಸಿದೆ. 'ಬೆಕ್ಕು' ಕೊಲ್ಲುವ ಕಾರ್ಯವನ್ನು ನಡೆಸುತ್ತಿದ್ದು ಅದರ ಪರಿಣಾಮವಾಗಿ 'ಇಲಿ ಸಾಯುತ್ತಿದೆ' ಎಂಬ ಅರ್ಥವನ್ನು ಈ ವಾಕ್ಯ ಕೊಡುತ್ತಿದೆ. ಇದರಲ್ಲಿ ಹೀಗೆ 'ಬೆಕ್ಕು' ಎಂಬುದು ನಿಯೋಗಿ ಯಾಗಿಯೂ 'ಇಲಿ' ಎಂಬುದು ವಿಷಯವಾಗಿಯೂ ಬಂದಿದೆ. ಎರಡನೆಯ ವಾಕ್ಯದಲಿ 'ಒಂದು ಇಲಿ' ಎಂಬ ಪದಪುಂಜ ನಿಯೋಗಿ ಇಲ್ಲ. ೧. ಹೀಗೆ 'ಕೊಲ್ಲು' ಎಂಬ ಕ್ರಿಯಾಪದದೊಂದಿಗೆ ನಿಯೋಗಿ ಬರಬಲ್ಲುದಾದ್ದರಿಂದ ಅದು ನಿಯೋಗಿಯುಕ್ತವಾಗಿದೆ. ೨. 'ಸಾಯು' ಎಂಬ ಕ್ರಿಯಾಪದದೊಂದಿಗೆ ನಿಯೋಗಿ ಬರಲಾರದಾದ್ದರಿಂದ ಅದು ನಿಯೋಗಿವಿರಹಿತವಾಗಿದೆ.

ಕನ್ನಡದಲ್ಲಿ ಮಾಡು, ಕಚ್ಚು, ಒಗೆ, ಕುಡಿ, ಹಿಂಡು, ಹಾಸು, ತಿನ್ನು, ಹಂಚು ಮೊದಲಾದ ಕ್ರಿಯಾಪದಗಳು ನಿಯೋಗಿಯುಕ್ತಗಳಾಗಿ ಕಾರ್ಯನಿರ್ವಹಿಸುತ್ತವೆ. ಎಂದರೆ ಅವು ಬರುವ ವಾಕ್ಯಗಳಲ್ಲೆಲ್ಲ ಒಂದಲ್ಲ ಒಂದು ಪದಪುಂಜ ನಿಯೋಗಿಯಾಗಿ ಬಂದಿರಲು ಸಾಧ್ಯವಿದೆ. ೧. ಅವ್ವ ರೊಟ್ಟಿಯನ್ನು ಚೆನ್ನಾಗಿ ಮಾಡುತ್ತಾಳೆ. ೨. ಶಾಲೆಯಲ್ಲಿ ಹುಡುಗಿಯರಿಗೆ ಮಾತ್ರ ತಿಂಡಿ ಹಂಚುತ್ತಿದ್ದಾರೆ. ೩. ಮಲ್ಲಪ್ಪನು ಒಂದು ಲೋಟ ಹಾಲು ಕುಡಿದ. ಈ ವಾಕ್ಯಗಳಲ್ಲಿ ಅವ್ವ, ಶಾಲೆಯಲ್ಲಿ, ಮಲ್ಲಪ್ಪ ಈ ಪದಗಳು ನಿಯೋಗಿಗಳಾಗಿ ಬಂದಿವೆ. ರೊಟ್ಟಿಯನ್ನು, ಹುಡುಗಿಯರಿಗೆ, ಒಂದು ಲೋಟ ಇವು ವಿಷಯಗಳಾಗಿ ಬಂದಿವೆ. ಆಡಗು, ನಗು, ಬರು, ಅಳು, ಮಾಡು, ಒಣಗು, ಓಡು ಮೊದಲಾದ ಕ್ರಿಯಾಪದಗಳು ನಿಯೋಗಿವಿರಹಿತಗಳಾಗಿ ಕಾರ್ಯನಿರ್ವಹಿಸುತ್ತವೆ. ಅಂದರೆ ಅವು ಬರುವ ವಾಕ್ಯಗಳಲ್ಲಿ ನಿಯೋಗಿಯನ್ನು ನಿರ್ದೇಶಿಸುವ ಪದಪುಂಜವನ್ನು

ಬಳಸುವುದಿಲ್ಲ. ೪. ಆ ಕರಡಿ ಗುಹೆಯಲ್ಲಿ ಅಡಗಿತು. ೫. ಈ ಬಾರಿ ಮಹಾನವಮಿಗೆ ಎಲ್ಲ ಮಕ್ಕಳು ಬಂದಿದ್ದಾರೆ. ೬. ಹಿತ್ತಲದಲ್ಲಿ ಬಟ್ಟೆಗಳು ಒಣಗುತ್ತಿವೆ. ಈ ವಾಕ್ಯಗಳಲ್ಲಿ 'ಆ ಕರಡಿ', 'ಎಲ್ಲ ಮಕ್ಕಳು' ಮತ್ತು 'ಬಟ್ಟೆಗಳು' ಇವು ವಿಷಯಗಳಾಗಿ ಬಂದಿದ್ದು ಇಲ್ಲಿ ನಿಯೋಗಿಯನ್ನು ಸೂಚಿಸುವ ಪದಪುಂಜವಿಲ್ಲ ಎಂಬುದನ್ನು ಗಮನಿಸಬಹುದು.

ವಿಷಯಗಳಲ್ಲಿ ಸ್ವಯಂಪ್ರೇರಿತ ಮತ್ತು ಪರಪ್ರೇರಿತಗಳೆಂಬ ಎರಡು ಮುಖ್ಯ ವಿಭಾಗಗಳನ್ನು ಮಾಡಲಾಗಿದೆ. ಅ. ಓಡು, ಅಡಗು, ನಗು ಮೊದಲಾದ ಕ್ರಿಯಾಪದಗಳೊಂದಿಗೆ ಸ್ವಪ್ರೇರಿತ ವಿಷಯಗಳು ಬರುತ್ತವೆ. ಆ. ಒಡೆ, ಒಣಗು, ಅರಳು, ಸಾಯು ಕ್ರಿಯಾಪದಗಳೊಂದಿಗೆ ಪರಪ್ರೇರಿತ ವಿಷಯಗಳು ಬರುತ್ತವೆ. ಮುಳುಗು, ಬೀಳು, ಹಾರು ಮೊದಲಾದ ಕ್ರಿಯಾಪದಗಳೊಂದಿಗೆ ಸ್ವಪ್ರೇರಿತ ಮತ್ತು ಪರಪ್ರೇರಿತ ಎರಡು ರೀತಿಯ ವಿಷಯಗಳು ಬರಬಲ್ಲವು. ೧. ಮೊಲ ಕಾಡಿನಲ್ಲಿ ಅಡಗಿತು ೨. ಬಿಸಿಲಿಗೆ ಬಟ್ಟೆ ಒಗಿದೆ. ೩. ಸಂಗಪ್ಪ ಬಾವಿಯಲ್ಲಿ ಮುಳುಗಿದ. ೪. ಬಾವಿಯಲ್ಲಿಯ ತಿರುವಿಗೆ ಸಿಕ್ಕು ಸಂಗಪ್ಪ ಮುಳುಗಿದ. ಈ ವಾಕ್ಯಗಳಲ್ಲಿ ಯಾವುದದರಲ್ಲಿಯೂ ಒಬ್ಬ ವ್ಯಕ್ತಿ/ಪ್ರಾಣಿ ಇನ್ನೊಬ್ಬ ವ್ಯಕ್ತಿ/ಪ್ರಾಣಿಯ ಮೇಲೆ ಪರಿಣಾಮವನ್ನು ಬೀರುವಂತಹ ಕಾರ್ಯ ಮಾಡಿರುವುದಿಲ್ಲವಾದ್ದರಿಂದ ಅವೆಲ್ಲವೂ ನಿಯೋಗಿವಿರಹಿತಗಳೇ.

ಒಂದನೆಯ ವಾಕ್ಯದಲ್ಲಿ 'ಮೊಲ' ಸ್ವಪ್ರೇರಣೆಯಿಂದ ಎರಡನೆಯ ವಾಕ್ಯದಲ್ಲಿ 'ಬಟ್ಟೆ' ಪರಪ್ರೇರಣೆಯಿಂದ ಕಾರ್ಯ ಪ್ರವೃತ್ತವಾಗಿರುವುದನ್ನು ಸೂಚಿಸುತ್ತದೆ. ಮೂರನೆಯ ವಾಕ್ಯದಲ್ಲಿ 'ಮುಳುಗು' ಎಂಬ ಕ್ರಿಯಾರೂಪದಲ್ಲಿ 'ಸಂಗಪ್ಪ' ಸ್ವಪ್ರೇರಣೆಯಿಂದಲೂ ನಾಲ್ಕನೆಯ ವಾಕ್ಯದಲ್ಲಿ 'ಸಂಗಪ್ಪ' ಪರಪ್ರೇರಣೆಯಿಂದಲೂ ತೊಡಗಿರುವುದನ್ನು ಸೂಚಿತವಾಗಿವೆ.

ಸಾಮಾನ್ಯವಾಗಿ ನಿಯೋಗಿಯುಕ್ತ ಮತ್ತು ನಿಯೋಗಿವಿರಹಿತ ಕ್ರಿಯಾಪದಗಳಿಗಿರುವ ವ್ಯತ್ಯಾಸವನ್ನು ಅವು ಸೇರಿರುವ ವಾಕ್ಯಗಳಿಗೆ ಪ್ರೇರಕ ಪದವನ್ನು ನೇರವಾಗಿ ಸೇರಿಸಲು ಸಾಧ್ಯವೇ ಅಥವಾ ಇಲ್ಲವೇ ಎಂಬುದನ್ನು ತಿಳಿದುಕೊಳ್ಳಲು ಸಾಧ್ಯವಿದೆ. ೧. ಯಜಮಾನರು ಆಳುಗಲನ್ನು ಗೋಡಾವನದೊಳಗೆ ತಳ್ಳಿದರು. ೨. ಮಲ್ಲಪ್ಪನು ಯಜಮಾನರ ಮೂಲಕ ಆಳುಗಳನ್ನು ಗೋಡಾವನದೊಳಗೆ ತಳ್ಳಿಸಿದ. 'ತಳ್ಳು' ಎಂಬುದು ನಿಯೋಗಿಯುಕ್ತ ಕ್ರಿಯಾಪದವಾಗಿದೆಯಾದ್ದರಿಂದ ಒಂದನೆಯ ವಾಕ್ಯಕ್ಕೆ ನೇರವಾಗಿ 'ಮಲ್ಲಪ್ಪ' ಎಂಬ ಪ್ರೇರಕ ಪದವನ್ನು ಸೇರಿಸಿ ಎರಡನೆಯ ವಾಕ್ಯವನ್ನು ರಚಿಸಲು ಸಾಧ್ಯವಾಗಿದೆ. ಆದರೆ 'ನಗು' ಎಂಬುದು ನಿಯೋಗಿ ವಿರಹಿತ ಕ್ರಿಯಾಪದವಾಗಿದೆಯಾದ್ದರಿಂದ ಅದು ಬರುವ ವಾಕ್ಯಕ್ಕೆ ಹೀಗೆ ನೇರವಾಗಿ ಪ್ರೇರಕ ಪದಗುಚ್ಛವನ್ನು ಸೇರಿಸಲು ಸಾಧ್ಯವಾಗದೆಂಬುದನ್ನು ಕೆಳಗಿನ ವಾಕ್ಯಗಳಿಂದ ತಿಳಿಯಬಹುದು. ೧. ಕೂಸು ಆಡುತ್ತಿದೆ. ೨. ಅಮ್ಮ ಕೂಸನ್ನು ಆಡಿಸುತ್ತಿದ್ದಾಳೆ. ೩. ಪಾರಮ್ಮ, ಚೆನ್ನಮ್ಮನ ಮೂಲಕ ಮಗುವನ್ನು ನಗಿಸುತ್ತಿದ್ದಾಳೆ. ಇಲ್ಲಿ ಒಂದನೇ ವಾಕ್ಯಕ್ಕೆ ನೇರವಾಗಿ ಪ್ರೇರಕ ಪದವನ್ನು ಸೇರಿಸಲು

ಸಾಧ್ಯವಾಗಿಲ್ಲವೆಂಬುದನ್ನು ಗಮನಿಸಬೇಕು. 'ಅಮ್ಮ' ಎಂಬ ನಿಯೋಗಿ ಪದವನ್ನು ಒಂದನೇ ವಾಕ್ಯಕ್ಕೆ ಸೇರಿಸಿ ಎರಡನೇ ವಾಕ್ಯವನ್ನು ಮತ್ತು ಆ ವಾಕ್ಯಕ್ಕೆ 'ಪಾರಮ್ಮ' ಎಂಬ ಪ್ರೇರಕ ಸೂಚಕ ಪದವನ್ನು ಸೇರಿಸಿ ಮೂರನೆಯ ವಾಕ್ಯವನ್ನು ರಚಿಸಲಾಗಿದೆ.

ಈ ರೀತಿ ನಿಯೋಗಿಯ ಪ್ರಯೋಗವನ್ನಾಧರಿಸಿ ಎರಡು ಮುಖ್ಯ ವಿಭಾಗಗಳಾಗಿ ವಿಂಗಡಿಸಿರುವ ಕ್ರಿಯಾಪದಗಳನ್ನು ಅನುಭೋಗಿ ಮತ್ತು ಆಕರಗಳ ಪ್ರಯೋಗವನ್ನಾಧರಿಸಿ ಮೂರು ಬೇರೆ ಬೆರೆ ಉಪವಿಭಾಗಗಳನ್ನಾಗಿ ವಿಂಗಡಿಸಲು ಸಾಧ್ಯವಿದೆ. ಸಾಮಾನ್ಯವಾಗಿ ಆಕರ ಮತ್ತು ಅನುಭೋಗಿಗಳಲ್ಲಿ ಯಾವುದಾದರೂ ಒಂದು ಮಾತ್ರ ಒಂದು ಕ್ರಿಯಾಪದ ದೊಂದಿಗೆ ಪ್ರಯುಕ್ತವಾಗಲು ಸಾಧ್ಯವಿದೆ. ಅವೆರಡು ಒಟ್ಟಾಗಿ ಒಂದೇ ಸರಳ ವಾಕ್ಯಗಳಲ್ಲಿ ಬರಲಾರವು. ಅಲ್ಲದೆ, ಎಲ್ಲ ಕ್ರಿಯಾರ್ಥಕ ವಾಕ್ಯಗಳಲ್ಲೂ ಅನುಭೋಗಿ ಮತ್ತು ಆಕರ ಈ ಎರಡು ಘಟಕಗಳಲ್ಲಿ ಒಂದಾದರೂ ಬಂದೇ ತೀರಬೇಕೆಂಬ ನಿಯಮವೇನೂ ಇಲ್ಲ. ಉದಾ. ೧. ಅವನ್ನೊಂದು ಉಂಡಿಯನ್ನು ತಿನ್ನುತ್ತಿದ್ದಾನೆ. ೨. ಅವನು ಮಣ್ಣಿನ ಮುದ್ದೆಯಿಂದ ಬಸವಣ್ಣನನ್ನು ಮಾಡುತ್ತಿದ್ದಾನೆ. 'ಸ್ಥಾನ' ಮತ್ತು 'ಆಕರ'ಗಳೊಳಗೆ ವ್ಯತ್ಯಾಸವಿದ್ದು ಈ ವಾಕ್ಯಗಳಲ್ಲಿ ಅಮುಖ್ಯವಾದ ಸ್ಥಾನ ಸೂಚಕಪದ ಬರಬಲ್ಲುದು ಆದರೆ ಮುಖ್ಯ ಘಟಕವಾದ ಆಕರ ಬರಲಾರದೆಂಬುದನ್ನು ಗಮನಿಸಬೇಕು. ೧. ಅವನು ಮನೆಯಲ್ಲಿ ಒಂದು ಉಂಡಿಯನ್ನು ತಿಂದನು. ೨. ಅವನು ಪಡಶಾಲೆಯಲ್ಲಿ ಮಣ್ಣಿನ ಮುದ್ದೆಯಿಂದ ಬಸವಣ್ಣನನ್ನು ಮಾಡುತ್ತಿದ್ದಾನೆ.

ಹೀಗೆಯೇ 'ಅನುಭೋಗಿ' ಮತ್ತು 'ಫಲಾನುಭವಿ'ಗಳೊಳಗೆ ವ್ಯತ್ಯಾಸವಿದ್ದು ಈ ವಾಕ್ಯಗಳಲ್ಲಿ ಅಮುಖ್ಯವಾದ ಫಲಾನುಭವಿ ಬರಬಲ್ಲುದಾದರೂ ಮುಖ್ಯ ಘಟಕವಾದ ಅನುಭೋಗಿ ಬರಲಾರದೆಂಬುದನ್ನು ಗಮನಿಸಬೇಕು. ಉದಾ. 'ಅವನು ಹಬ್ಬಕ್ಕಾಗಿ ಮಣ್ಣಿನ ಮುದ್ದೆಯಿಂದ ಬಸವಣ್ಣನನ್ನು ಮಾಡುತ್ತಿದ್ದಾನೆ' ಇತ್ಯಾದಿ.

ಆಕರ ಮತ್ತು ಅನುಭೋಗಿಗಳ ಕುರಿತಾಗಿ ಮೇಲೆ ಕೊಟ್ಟಿರುವ ಸಂಗತಿಗಳನ್ನಾಧರಿಸಿ ಕ್ರಿಯಾಪದಗಳನ್ನು ಆಕರಯುಕ್ತ, ಅನುಭೋಗಿಯುಕ್ತ ಮತ್ತು ಇತರ(ಎಂದರೆ ಆಕರ ಮತ್ತು ಅನುಭೋಗಿ ವಿರಹಿತ) ಎಂದು ಮೂರು ಉಪವಿಭಾಗಗಳನ್ನಾಗಿ ವಿಂಗಡಿಸಲು ಸಾಧ್ಯವಿದೆ. ಈ ಮೂರು ಉಪವಿಭಾಗಗಳು ಮೇಲೆ ಕೊಟ್ಟಿರುವ ನಿಯೋಗಿಯುಕ್ತ ಮತ್ತು ನಿಯೋಗಿವಿರಹಿತಗಳೆಂಬ ವಿಭಜನೆಗೆ ಅಡ್ಡಲಾಗಿ ಬರುವುದರಿಂದ ಒಟ್ಟು ಕ್ರಿಯಾಪದಗಳನ್ನು ಆರು ಮುಖ್ಯ ವಿಭಾಗಗಳನ್ನಾಗಿ ವಿಂಗಡಿಸಬಹುದು.

ನಿಯೋಗಿಯುಕ್ತ-ಅನುಭೋಗಿಯುಕ್ತ

ಉದಾ. ಕೊಡು, ಹಂಚು ಇತ್ಯಾದಿ

೧. ರಾಣಿ ತನ್ನ ಸೇವಕರಿಗೆ ಒಂದು ಚಿನ್ನದ ಸರವನ್ನು ಕೊಟ್ಟಳು

೨. ಸುಲ್ತಾನನು ಭಿಕ್ಷುಕರಿಗೆ ಕೊಳೆತ ಬಟಾಟೆಯನ್ನು ಹಂಚುತ್ತಿದ್ದಾನೆ

ನಿಯೋಗಿಯುಕ್ತ-ಆಕರಯುಕ್ತ

ಉದಾ. ಹಿಂಡು, ಅದ್ದು, ಹಾಕು ಇತ್ಯಾದಿ

೧. ಆತ ಎಳ್ಳಿನಿಂದ ಎಣ್ಣೆ ಹಿಂಡುತ್ತಿದ್ದಾನೆ

೨. ಆಕೆ ಕೈಯನ್ನು ಮಜ್ಜಿಗೆಯಲ್ಲಿ ಅದ್ದಿದಳು

೩. ಪಾರಮ್ಮ ಹೋಳಿಗೆಯನ್ನು ಬುಟ್ಟಿಯೊಳಗೆ ಹಾಕಿದಳು

ನಿಯೋಗಿಯುಕ್ತ-ಇತರ

ಉದಾ. ಕಚ್ಚು, ಹೇಳು ಇತ್ಯಾದಿ

೧. ನೆರಮನೆಯ ನಾಯಿ ಮಗುವಿನ ಕಾಲನ್ನು ಕಚ್ಚಿತು

೨. ಪಾರಮ್ಮ ಹಾಡು ಹೇಳುತ್ತಿದ್ದಳು

ನಿಯೋಗಿರಹಿತ-ಅನುಬೋಗಿಯುಕ್ತ

ಉದಾ. ಎಟಕು, ತೋರು

೧. ನರಿಗೆ ದ್ರಾಕ್ಷಿ ಹಣ್ಣು ಎಟುಕಿತು

೨. ರಾಮನು ಹೊಸ ಚಿತ್ರವನ್ನು ತೋರಿಸಿದನು

ನಿಯೋಗಿವಿರಹಿತ-ಆಕರಯುಕ್ತ

ಉದಾ. ತಲಪು, ಹಬ್ಬು ಇತ್ಯಾದಿ

೧. ರಾಯರು ಊರಿಗೆ ತಲುಪಿದ್ದಾರೆ

೨. ಮಾವಿನಕಾಯಿ ಪಾಡಿಗೆ ಬಂದಿದೆ

ನಿಯೋಗಿವಿರಹಿತ-ಇತರ

ಉದಾ. ನಗು, ಒಣಗು ಇತ್ಯಾದಿ

೧. ಪುಟ್ಟ ಮಗು ನಗುತ್ತಿದೆ

೨. ಬಟ್ಟೆ ಒಣಗಿದೆ

ಕ್ರಿಯಾಪದಗಳನ್ನು ಇನ್ನೊಂದು ಬಗೆಯ ವರ್ಗೀಕರಣವಿದೆ.[೧೩] ೧. ಒಪ್ಪಿತಗಳು ೨. ಸೂಕಗಳು ೩. ಆಣೆಗಳು ೪. ಭಾವವಾಚಿಗಳು ಮತ್ತು ೫. ಘೋಷಣೆಗಳು ಎಂಬ ಐದು ವರ್ಗಗಳನ್ನು ಗುರುತಿಸಬಹುದು. ಮಾತನಾಡುವ ವ್ಯಕ್ತಿ ಕ್ರಿಯಾಪದ ಸೂಚಿಸುವ ಸಂಗತಿಯನ್ನು ಒಪ್ಪುವಂತಿದ್ದರೆ ಆ ಬಗೆಯ ಕ್ರಿಯಾಪದಗಳು ಒಪ್ಪಿತಗಳು. ಉದಾ. ನಂಬು, ನಿರಾಕರಿಸು ಸೂಚಕಗಳೆಂದರೆ ಯಾವುದಾದರೊಂದು ಕ್ರಿಯೆಯನ್ನು ಮಾಡಲು ಕೇಳುವ ವ್ಯಕ್ತಿಯನ್ನು ಪ್ರೇರೇಪಿಸುವ ಕ್ರಿಯಾಪದಗಳು. ಉದಾ. ಕೇಳು, ಬೇಡು, ಆಣೆಗಳಂತೂ ಹೇಳು ವ್ಯಕ್ತಿಯೇ ತಾವೊಂದು ಕ್ರಿಯೆಯನ್ನು ಮಾಡುವುದಾಗಿ ಒಪ್ಪುವ ಬದ್ಧವಾಗುವ ಕ್ರಿಯಾಪದಗಳಾಗಿರುತ್ತವೆ. ಉದಾ. ಶಪಥ ಮಾಡು, ಒಪ್ಪು. ಯಾವುದಾದರೊಂದು ಘಟನೆಯ ಬಗ್ಗೆ ಹೇಳುವ ವ್ಯಕ್ತಿಯ ದೃಷ್ಟಿಕೋನವನ್ನು ಸೂಚಿಸುವ ಕ್ರಿಯಾಪದಗಳೇ ಭಾವನಾಚಿಗಳು. ಉದಾ. ಕ್ಷಮೆಕೋರು, ವಂದಿಸು ಇತ್ಯಾದಿ. ಹೇಳುವ

ವ್ಯಕ್ತಿ ಕೆಲವು ಕ್ರಿಯಾಪದಗಳನ್ನು ಬಳಸುವ ಮೂಲಕವೇ ವಸ್ತು ಜಗತ್ತಿನಲ್ಲಿ ಕೆಲವು ಪರಿವರ್ತನೆಯನ್ನು ತರುವುದು ಸಾಧ್ಯವಿದ್ದರೆ ಆಗ ಅಂತಹ ಕ್ರಿಯಾಪದಗಳನ್ನು ಘೋಷಣೆಗಳು ಎನ್ನುತ್ತೇವೆ. ಉದಾ. ಹೆಸರಿಸು, ರಾಜೀನಾಮೆ ನೀಡು. ಈ ಬಗೆಯ ವಿಂಗಡನೆ ನಾಮಪ್ರಕೃತಿ ಕ್ರಿಯಾಪ್ರಕೃತಿಗಳಿಗೆ ಪ್ರತ್ಯಯಗಳು ಹತ್ತುವುದನ್ನು ಒಳಗೊಂಡಿದೆ. ಕ್ರಿಯಾಪದಗಳ ಸಾಂಪ್ರದಾಯಿಕ ವಿಂಗಡಣೆಯೊಂದಿದೆ.[೧೦]

ಅಡಿಟಿಪ್ಪಣಿಗಳು

೧. ಕಿಟ್ಟೆಲ್ ಆವೃತ್ತಿಯಲ್ಲಿ ಧಾತುಗಳ ಸಂಖ್ಯೆ ೯೬೮, ಡಿ.ಎಲ್.ಎನ್. ಆವೃತ್ತಿಯಲ್ಲಿ ೯೮೫, ಲಿಂಗಣಾರಾಧ್ಯನ ವೃತ್ತಿಸಹಿತವಾದ ಮದರಾಸು ಆವೃತ್ತಿಯಲ್ಲಿ ೯೯೨, ಡಿ.ಕೆ. ಭೀಮಸೇನರಾವ ಆವೃತ್ತಿಯಲ್ಲಿ ೯೮೮.

೨. ಎಂ.ವಿ. ಸೀತಾರಾಮಯ್ಯ, ಪ್ರಾಚೀನ ಕನ್ನಡ ವ್ಯಾಕರಣಗಳು(೧೯೮೮) (ಪು.೨೭೯).

೩. (ಸಂಸ್ಕೃತ ಲಾಕ್ಷಣಿಕ) ಭೀಮ ಯಾರು? ಎಂಬುದರ ಬಗ್ಗೆ ಇನ್ನೂ ಸ್ಪಷ್ಟವಾಗಿಲ್ಲ. ಈ ಬಗೆಗೆ ವಿದ್ವಾಂಸರಲ್ಲಿ ಅಭಿಪ್ರಾಯ ಭೇದಗಳಿವೆ.

೪. Bh. Krishnamurti, 'Telugu Verbal Bases', (1961) P. 58

೫. L. Bloomfield - Language (1933) P. 243

೬. ಪ್ರಗೋ. ಕುಲಕರ್ಣೀ ಕನ್ನಡ ಭಾಷೆಯ ಚರಿತ್ರೆ(೧೯೬೭) ಪು. ೨೩೦.

೭. ವಾಕ್ಯದಲ್ಲಿಯ ಕ್ರಿಯೆಯ ಅರ್ಥವನ್ನು ಪೂರ್ಣಗೊಳಿಸುವ ಅಥವಾ ಕ್ರಿಯೆಯು ಪೂರ್ಣವಾಗಿರುವುದನ್ನು ತಿಳಿಸುವ ಶಬ್ದವು ಕ್ರಿಯಾಪದ.

೮. ಡಿ.ಎನ್. ಶಂಕರಭಟ್, ಕನ್ನಡ ವಾಕ್ಯಗಳು, ೧೯೭೮, ಪು. ೧೧೨-೩.

೯. ನಾಮಪ್ರಕೃತಿಗಳಿಗೆ, ಅನುಕರಣವಾಚಕಗಳಿಗೆ ಸಂಸ್ಕೃತದ ಭಾವನಾಮಗಳಿಗೆ 'ಇಸು' ಪ್ರತ್ಯಯ ಸೇರಿ ಕ್ರಿಯಾರೂಪಗಳಾಗುತ್ತವೆ. ಉದಾ. ಸಿಂಗರಿಸು, ಕನ್ನಡಿಸು, ಥಳ ಥಳಿಸು, ಧಗಧಗಿಸು, ಯತ್ನಿಸು, ಭಾವಿಸು ಮುಂ. ನಾಮಪ್ರಕೃತಿಗಳಿಗೆ ಇಸು ಪ್ರತ್ಯಯ ಸೇರಿ ನವೀನಕ್ರಿಯಾರೂಪಗಳು ಸೃಷ್ಟಿಯಾಗುತ್ತಿವೆ.

೧೦. ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಭಿವೃದ್ಧಿ ವಿಭಾಗದಲ್ಲಿ ಪ್ರತಿ ಬುಧವಾರ ನಡೆಯುವ ವಾರದ ಚರ್ಚೆಯಲ್ಲಿ ೧೯೯೯ ಸೆಪ್ಟೆಂಬರ್ ೧೫, ೨೨, ೨೯ರಂದು ಡಿ.ಎನ್. ಶಂಕರಭಟ್‌ರ 'ಕನ್ನಡ ವಾಕ್ಯಗಳು' ಪುಸ್ತಕದಲ್ಲಿ 'ಕ್ರಿಯಾರ್ಥಕ ವಾಕ್ಯದ ಸ್ವರೂಪ'ದ ಬಗೆಗೆ ಮಾತನಾಡಿದ್ದೆ. ಚರ್ಚೆಯ ಸಂದರ್ಭದಲ್ಲಿ ಪ್ರಾಧ್ಯಾಪಕರಾದ ಡಾ. ಕೆ.ವಿ. ನಾರಾಯಣರು ನನ್ನ ಸಂದೇಹಗಳನ್ನು ನಿವಾರಿಸಿದರು. ಸಹೋದ್ಯೋಗಿ ಮಿತ್ರರು ಚರ್ಚೆಯಲ್ಲಿ ಪಾಲ್ಗೊಂಡು ಭಟ್‌ರ ವಿಚಾರಗಳನ್ನು ಹಂಚಿಕೊಂಡರು. ಭಟ್‌ರು ವರ್ಗೀಕರಿಸಿದ ಕ್ರಿಯಾಪದಗಳ ವಿಭಜನೆಯನ್ನು ವಿಚಾರಮಾಡಿ ಒಪ್ಪಿಕೊಂಡೆ(ಒಪ್ಪಿಕೊಂಡೆವು). ಆ ಮೂರು ದಿನಗಳ ಕಾಲದ ನಡೆದ ಚರ್ಚೆಯ ಸಾರವನ್ನು ಇಲ್ಲಿ ಕೊಡಲಾಗಿದೆ.

೧೧. ಅಮುಖ್ಯ ಘಟಕಗಳ ಬಗೆಗೆ ಹೆಚ್ಚಿನ ವಿವರಣೆಗಾಗಿ ನೋಡಿ: ಡಿ.ಎನ್. ಶಂಕರಭಟ್ 'ಕನ್ನಡ ವಾಕ್ಯಗಳು' (೧೯೭೮) ಪು. ೪೬-೪೭

೧೨. ಕ್ರಿಯಾರ್ಥಕ ವಾಕ್ಯಗಳಲ್ಲಿಯ ಪ್ರೇರಕ ಘಟಕಗಳು - 'ಇಸು', ಪ್ರತ್ಯಯ ಯುಕ್ತವಾಗಿರುವಂತಹ ಕ್ರಿಯಾಪದಗಳೊಂದಿಗೆ ಮಾತ್ರ ಅದನ್ನು ಸಾಧಿತ ಕ್ರಿಯಾರೂಪವೆಂದು ಪರಿಗಣಿಸಲಾಗಿದೆ. ಈ ಭಾಗದ-'ಇಸು ಪ್ರತ್ಯಯ ಕುರಿತು' ಎಂಬಲ್ಲಿ ಈ ಬಗೆಗೆ ಚರ್ಚಿಸಲಾಗಿದೆ. ಕ್ರಿಯಾರ್ಥಕ ವಾಕ್ಯಗಳಲ್ಲೆಲ್ಲ ವಿಷಯಸೂಚಕ ಪದ ಇದ್ದೇ ಇರುತ್ತದೆ. ಆದ್ದರಿಂದ ಅದನ್ನಾಧರಿಸಿ ಕ್ರಿಯಾಪದಗಳನ್ನು ವಿಭಜಿಸಲು ಸಾಧ್ಯವಾಗದು.

೧೩. ಈ ವರ್ಗೀಕರಣದ ಕಡೆಗೆ ನನ್ನ ಗಮನ ಸೆಳೆದವರು ಡಾ. ಕೆ.ವಿ. ನಾರಾಯಣ ಅವರು.

೧೪. ಕ್ರಿಯಾಪದಗಳು ವಾಕ್ಯಗಳಲ್ಲಿ ಕೆಲಸಕ್ಕೆ ಅನುಗುಣವಾಗಿ ಹಾಗೂ ರೂಪಕ್ಕೆ ಅನುಗುಣವಾಗಿ ಬಳಕೆಯಾಗುತ್ತವೆ. ಈ ಆಧಾರದ ಮೇಲೆ ಕ್ರಿಯಾಪದಗಳನ್ನು ಮೂರು ವಿಭಾಗಗಳನ್ನಾಗಿಸಿ ವಿಂಗಡಿಸಬಹುದು. ಮೂರು ಕಾಲರೂಪಗಳನ್ನೂ ಮತ್ತು ಮೂರು ಅರ್ಥರೂಪಗಳನ್ನೂ ಹೊಂದಿರುವ ಸಂಪೂರ್ಣ ಕ್ರಿಯಾಪದಗಳು ವಾಕ್ಯಗಳ ಅರ್ಥವನ್ನು ಪೂರ್ಣಗೊಳಿಸುತ್ತವೆ. ಆದ್ದರಿಂದಲೇ ಇಂತಹ ಕ್ರಿಯಾಪದಗಳಿಗೆ 'ಸಂಪೂರ್ಣ ಕ್ರಿಯಾಪದಗಳು' ಎಂದು ಹೆಸರು. ಉದಾ. 'ಪಾರಮ್ಮಳು ಹಾಲನ್ನು ಕುಡಿದಳು' ಇಲ್ಲಿ ಕುಡಿದಳು ಎಂಬ ಕ್ರಿಯಾಪದ ಭೂತಕಾಲದಲ್ಲಿದೆ. ಮೇಲಿನ ವಾಕ್ಯದ ಅರ್ಥವನ್ನು ಇದು ಪೂರ್ಣಗೊಳಿಸುತ್ತದೆ. ಇದೇ ರೀತಿ ವರ್ತಮಾನ ಹಾಗೂ ಭವಿಷ್ಯತ್ ಕಾಲದಲ್ಲಿ ಬರುವ ಕ್ರಿಯಾಪದಗಳೂ ಪೂರ್ಣ ಕ್ರಿಯಾಪದಗಳಾಗಿ ಬಂದು ವಾಕ್ಯಗಳ ಅರ್ಥವನ್ನು ಪೂರ್ಣಗೊಳಿಸುತ್ತವೆ. ಕೆಲವು ಕ್ರಿಯಾಪದಗಳು ವಾಕ್ಯದ ಅರ್ಥವನ್ನು ಪೂರ್ಣಗೊಳಿಸಲು ಬೇರೊಂದು ಪೂರ್ಣ ಕ್ರಿಯಾಪದದ ಸಹಾಯವನ್ನು ಅಪೇಕ್ಷಿಸುತ್ತವೆ. ಇಂತಹ ಕ್ರಿಯಾಪದಗಳಿಗೆ 'ಸಹಾಯಕ ಕ್ರಿಯಾಪದ'ಗಳೆಂದು ಹೆಸರು ಉದಾ. ಪಾರಮ್ಮಳು 'ಕುಣಿಯುತ್ತಾ' ತವರಿಗೆ ಹೋದಳು ಇಲ್ಲಿ ಕುಣಿಯುತ್ತಾ ಎಂಬುದು ವಾಕ್ಯದ ಅರ್ಥವನ್ನು ಪೂರ್ಣಗೊಳಿಸಲು 'ಹೋದಳು' ಎಂಬ ಪೂರ್ಣಕ್ರಿಯಾಪದದ ನೆರವನ್ನು ಅಪೇಕ್ಷಿಸುತ್ತದೆ. ಇಲ್ಲಿ 'ಕುಣಿಯುತ್ತಾ' ಎಂಬುದು ಸಹಾಯಕ ಕ್ರಿಯಾಪದ. ಎರಡು ಅಥವಾ ಹಲವು ಧಾತುಗಳು ಒಟ್ಟು ಸೇರಿ ಆಗುವ ಕ್ರಿಯಾರೂಪಕ್ಕೆ 'ಸಂಯುಕ್ತ ಕ್ರಿಯಾಪದ' ಎನ್ನುವರು. ಉದಾ. ಹೋಗುತ್ತಿದ್ದಾನೆ. ನೋಡಬಹುದು, ಕುಡಿಯುತ್ತಿದ್ದೇನೆ, ಬರುತ್ತಿದ್ದಾನೆ ಮುಂತಾದವುಗಳಲ್ಲಿ ಎರಡು ಬೇರೆ ಬೇರೆ ಕ್ರಿಯಾರೂಪಗಳು ಸಂಯುಕ್ತವಾಗಿರುವುದನ್ನು ಗುರುತಿಸಬಹುದು.

೬

'ಬಹುದು' - ಸಹಾಯಕ ಕ್ರಿಯಾಪದವನ್ನು ಕುರಿತು

ಕನ್ನಡ ಕ್ರಿಯಾಪದಗಳನ್ನು ಪ್ರಧಾನ ಮತ್ತು ಸಹಾಯಕ ಕ್ರಿಯಾಪದಗಳೆಂದು ಎರಡು ರೀತಿಯಗಿ ವರ್ಗೀಕರಿಸಬಹುದಾಗಿದೆ. ಸಹಾಯಕ ಕ್ರಿಯಾಪದಗಳು ವಾಕ್ಯದಲ್ಲಿ ಪ್ರಧಾನ ಕ್ರಿಯಾಪದಕ್ಕೆ ಸಹಾಯಕವಾಗಿ ಬಂದು ಕರ್ತೃವಿನ ಪ್ರಧಾನ ಕ್ರಿಯೆಗೆ ಹೆಚ್ಚು ಒತ್ತನ್ನು ಕೊಡುತ್ತದೆ. ಉದಾ: 'ಕೂಡದು' ಎಂಬುದು ಸ್ವತಂತ್ರವಾಗಿ ಯಾವ ಅರ್ಥವನ್ನು ಸೂಚಿಸದೆ ಪ್ರಧಾನ ಕ್ರಿಯಾರೂಪಗಳ ಜೊತೆಗೆ ಸೇರಿ ಕ್ರಿಯೆಯ ಒಂದು ಸ್ಥಿತಿಯನ್ನು ಸೂಚಿಸುತ್ತದೆ. ಹೋಗ ಕೊಡದು, ಮಾಡದು. ಮುಂತಾದವು. ಕೆಲವು ಸಹಾಯಕ ಕ್ರಿಯಾಪದಗಳು ಸ್ವತಂತ್ರವಾಗಿಯೂ ಪ್ರಯೋಗವಾಗುತ್ತದೆ. ಉದಾ: ಬೇಕು, ಬೇಡ, ಇಲ್ಲ, ಅಲ್ಲ ಮುಂತಾದವು. ಸಹಾಯಕ ಕ್ರಿಯಾಪದಗಳ ಸ್ವರೂಪವನ್ನು ಖಚಿತಪಡಿಸ ಬೇಕಾಗಿದೆ.

ಕ್ರಿಯಾಪ್ರಕೃತಿಗಳಿಗೆ ಸಹಾಯಕ ಕ್ರಿಯಾಪದಗಳು ಸೇರಿದಾಗ ವ್ಯತ್ಯಾಸವಾಗುವುದಿಲ್ಲ ವಾದ್ದರಿಂದ ಅವುಗಳಿಗೆ 'ಕ್ರಿಯಾರ್ಥಕ ಅವ್ಯಯ'ಗಳೆಂದು ಕರೆಯುತ್ತಾರೆ. ಅಂತಹುಗಳಲ್ಲಿ 'ಬಹುದು' ಎಂಬುದು ಒಂದಾಗಿದೆ. 'ಬಹುದು' ಇದರ ಪ್ರಾಚೀನ ರೂಪ ಏನಿರಬಹು ದೆಂದು ಇನ್ನು ಖಚಿತವಾಗಿಲ್ಲ. ಬರ್ಪುದು>ಬಹುದು ಎಂದು ವಿದ್ವಾಂಸರು ಹೇಳಿದ್ದಾರೆ (ಗಾಯಿ ೧೯೪೬, ನೇಗಿನಹಾಳ ೧೯೬೨). ಏಕೆಂದರೆ 'ಬಹುದು' ಎಂದು 'ಬಾ' ಕ್ರಿಯಾಪ್ರಕೃತಿಗೆ ಮಾತ್ರ ಹತ್ತುವುದಿಲ್ಲ. ಮಾಡು, ತಿನ್ನು ಇಂತಹುಗಳಿಗೆ ಹತ್ತುತ್ತದೆಂಬುದನ್ನು (ಮಾಡಬಹುದು, ತಿನ್ನಬಹುದು ಮುಂತಾದವು) ಗಮನಿಸಬೇಕಾದ ಸಂಗತಿ. ಪ್ರಸ್ತುತ ಈ ಟಿಪ್ಪಣಿಯಲ್ಲಿ ಡಿ.ಎನ್. ಶಂಕರಭಟ್ಟರ ವಿಚಾರಗಳನ್ನು ಬಳಸಿಕೊಂಡು 'ಬಹುದು' ಸಹಾಯಕ ಕ್ರಿಯಾಪದದ ಚಲನಶೀಲತೆಯನ್ನು ಕುರಿತು ಚರ್ಚಿಸಲಾಗಿದೆ.

'ಬಹುದು' ಸಂಭಾವನಾರ್ಥ ಕೊಡುವ ಸಹಾಯಕ ಕ್ರಿಯಾಪದ. ಅದು ಅನಿಶ್ಚತೆ ಯನ್ನು ಸೂಚಿಸುತ್ತದೆ. ಸಂಭಾವನಾರ್ಥ ಪ್ರತ್ಯಯಗಳಿರುವ ವಾಕ್ಯಗಳನ್ನು ಬಹುದು ರಚನೆಗಳಿರುವ ವಾಕ್ಯಗಳೊಡನೆ ಅನ್ವಯಿಸಿ ನೋಡಿದಾಗ ಈ ಸಹಾಯಕ ಕ್ರಿಯಾಪದದ

ಆಂತರಿಕ ರಚನೆ ಮತ್ತು ಅರ್ಥಬಾಹುಳ್ಯ ತುಂಬ ಕುತೂಹಲ ಕೆರಳಿಸುತ್ತದೆ. ಒಂದು ಮಾತು ಸಂಭಾವನಾರ್ಥ ಪ್ರತ್ಯಯಗಳಿರುವ ವಾಕ್ಯಗಳಿಗೂ 'ಬಹುದು' ಸಹಾಯಕ ಕ್ರಿಯಾಪದದ ವಾಕ್ಯಗಳಿಗೂ ಸಾಮ್ಯ ಮತ್ತು ವ್ಯತ್ಯಾಸ ಏನಿರಬಹುದು ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ.

ಉದಾ: ಅ. ಕಮಲೆಯು ನಾಳೆ ಬೆಳಗಾವಿಗೆ ಹೋದಾಳು
ಆ. ಕಮಲೆಯು ನಾಳೆ ಬೆಳಗಾವಿಗೆ ಹೋಗಬಹುದು

ಕ್ರಿಯಾಪದದ ಮುಂದೆ-'ಆಳು' ಎಂಬ ಸಂಭಾವನಾರ್ತಕ ಪ್ರತ್ಯಯ ಹಾಗೂ ಅಭೂತ ನೂನ್ಯರೂಪ 'ಬಹುದು' ಎಂಬುದನ್ನು ಬಳಸಿಯೂ ಸಂಭಾವನಾರ್ಥಕ ವಾಕ್ಯಗಳನ್ನು ರಚಿಸಲು ಸಾಧ್ಯವಿದೆ. ಅನುಮತಿ ಇಲ್ಲವೇ ಸೂಚನೆಯನ್ನು ಸೂಚಿಸುವ ಅರ್ಥ 'ಬಹುದು' ಎಂಬುದನ್ನು ಒಳಗೊಂಡಿರುವ ವಾಕ್ಯಗಳಿಗೆ ಮಾತ್ರ ಬರಲು ಸಾಧ್ಯವಿದೆ ಯಲ್ಲದೆ ಸಂಭಾವನಾರ್ಥಕ ಕ್ರಿಯಾರೂಪಗಳನ್ನೊಳಗೊಂಡಿರುವ ವಾಕ್ಯಗಲಿಗೆ ಬರಬಾರದು.

ಉದಾ: ಅ. ಉಮೇಶನು ಈ ಸಾರಿ ಹೆಚ್ಚು ಅಂಕಗಳನ್ನು ಪಡೆದು ತೇರ್ಗಡೆಯಾಗಬಹುದು
ಆ. ಉಮೇಶನು ನಾಳೆ ಸಂಜೆ ಬೆಳಗಾವಿಗೆ ಹೋದಾನು

ಮೇಲಿನ ವಾಕ್ಯಗಳಲ್ಲಿ ಅ. ಮಾತನಾಡುವವನ ಅಭಿಪ್ರಾಯದ ಜೊತೆ ಅನುಮತಿ ಅಥವಾ ಸೂಚನೆಯ ಅರ್ಥವನ್ನು ತಿಳಿಸುತ್ತದೆ(ಮುಂದೆ ನಡೆಯಲಿರುವ ಘಟನೆ ಇಲ್ಲಿ ಅಂತರ್ಗತ ವಾಗಿದೆ). ಆ ವಾಕ್ಯ ಮಾತನಾಡುವವನ ಅಭಿಪ್ರಾಯ ಮಾತ್ರ ವ್ಯಕ್ತಪಡಿಸುತ್ತದೆ.

'ಬಹುದು' ಸಹಿತ ವಾಕ್ಯಗಳ ಮೂಲಕ ಮಾತನಾಡುವವನು ಒಂದು ಘಟನೆಯ ಸಂಭಾವ್ಯತೆಯ ಕುರಿತು ತನ್ನ ಅಭಿಪ್ರಾಯವೇನೆಂಬುದನ್ನು ತಿಳಿಯಲು ಸಾಧ್ಯವಿದೆ. ಉಮೇಶ ನಾಳೆ ಸಂಜೆ ಬೆಳಗಾವಿಗೆ ಬರಬಹುದು. ಇದನ್ನು ಮೂರು ರೀತಿಯಲ್ಲಿ ಅರ್ಥೈಸಬಹುದು.

ಅ. ಉಮೇಶ ನಾಳೆ ಬೆಳಗಾವಿಗೆ ಬರುವ ಸಾಧ್ಯತೆ ಇದೆ.
ಆ. ಉಮೇಶನಿಗೆ ನಾಳೆ ಬೆಳಗಾವಿಗೆ ಬರಲು ಸೂಚನೆ ಕೊಡಲಾಗಿದೆ.
ಇ. ಉಮೇಶನಿಗೆ ನಾಳೆ ಬೆಳಗಾವಿಗೆ ಬರಲು ಒಪ್ಪಿಗೆ ಕೊಡಲಾಗಿದೆ.

ಸಾಧ್ಯತೆಯ ಅರ್ಥವನ್ನು ಕೊಡುವ 'ಅ' ವಾಕ್ಯದಲ್ಲಿ ಕರ್ತೃಪದ ಪ್ರಥಮ ವಿಭಕ್ತಿ ಯಲ್ಲಿದ್ದರೆ ಸೂಚನೆ ಮತ್ತು ಒಪ್ಪಿಗೆ ಅರ್ಥವನ್ನು ಕೊಡುವ ಆ ಮತ್ತು ಇ ವಾಕ್ಯಗಳು ಚತುರ್ಥಿಯಲ್ಲಿವೆ. 'ಬಹುದು' ಸಹಿತ ವಾಕ್ಯಗಳ ಅರ್ಥ ಪಲ್ಲಟಕ್ಕೆ ಕರ್ತೃ ಪಡೆದುಕೊಳ್ಳುವ ವಿಭಕ್ತಿಗಳೂ ಕಾರಣವಾಗಿರಬಹುದು. ಈ ಬಗ್ಗೆ ಯೋಚಿಸಬೇಕಾಗಿದೆ. ಸಾಧ್ಯತೆ, ಸೂಚನೆ, ಒಪ್ಪಿಗೆ ಇವುಗಳ ನಡುವೆ ಇನ್ನು ಸ್ಪಷ್ಟತೆ ತರಲು ವಾಕ್ಯರಚನೆಯನ್ನು ನಿಷೇದಾರ್ಥಕ್ಕೆ ಪರಿವರ್ತಿಸುವುದರಿಂದ ಸಾಧಿಸಬಹುದಾಗಿದೆ. ಉಮೇಶ ನಾಳೆ ಬೆಳಗಾವಿಗೆ ಬರದೆ ಇರಬಹುದು.

ಕೆಲವು ಸಂದರ್ಭದಲ್ಲಿ ಈ ಸಹಾಯಕ ಕ್ರಿಯಾಸೂಚಕದ ಮೂಲಕ ಒಂದು ಘಟನೆಯು ನಡೆಯುವ ಸಾಧ್ಯತೆಯನ್ನು ಸೂಚಿಸುವ ಬದಲು ಒಬ್ಬ ವ್ಯಕ್ತಿ ಅದನ್ನು ನಡಸಲು 'ಶಕ್ತನೇ' ಅಥವಾ ಇಲ್ಲವ ಎಂಬುದನ್ನು ಸೂಚಿಸಲು ಸಾಧ್ಯವಿದೆ.

ಉಮೇಶ ಪ್ರಪ್ರಥಮ ಶ್ರೇಣಿಯಲ್ಲಿ ಪಾಸಾಗಬಹುದು. 'ಬಹುದು' ಎಂಬುದರ ಮೂಲಕ ಸಾಧಿಸಲಾಗಿರುವ ವಾಕ್ಯಗಳಲ್ಲಿ ಮಾತನಾಡುವವನ ಅಭಿಪ್ರಾಯವನ್ನು ತಿಳಿಸುವಂತಹ ಬೇರೊಂದು ವಾಕ್ಯ(ಅದರೊಳಗೆ) ಅಂತರ್ಗತವಾಗಿರಬಹುದು.

ಅ. ಬಹುಶಃ ಪ್ರಾಧ್ಯಾಪಕರು ಇವತ್ತು ರಜೆ ಇರಬಹುದು

ಆ. ನಾಳೆ ಪ್ರಾಧ್ಯಾಪಕರು ಖಂಡಿತವಾಗಿಯೂ(ಬಂದೇ) ಬರಬಹುದು.

ಮೊದಲನೆಯ ವಾಕ್ಯದಲ್ಲಿ 'ಬರಬಹುದು' ಎಂಬುದರಿಂದ ಅವಧಾರಣೆಯನ್ನು ಕೊಡುತ್ತದೆ. ಎರಡನೆಯದಲ್ಲಿ 'ಇರಬಹುದು' ಎಂಬುದರಿಂದ ಸೂಚಿತವಾಗು ಸಂಭಾವ್ಯತೆಯನ್ನು ಬಹುಶಃ ಎಂಬುದು ಸ್ವಲ್ಪಮಟ್ಟಿಗೆ ಕಡಿಮೆ ಮಾಡುತ್ತದೆ.

'ಬಹುದು' ಎಂಬುದು ಒಂದು ಕಾರ್ಯ ನಡೆಸಲು ಇಲ್ಲವೆ ನಡೆಯದಿರಲು ಸಾಧ್ಯವೇ ಅಥವಾ ಇಲ್ಲವೇ ಎಂಬುದರ ಸಂಭಾವ್ಯತೆಯನ್ನು ಕೊಡಬಹುದು.

ಅ. ಅಂಚೆ ಕಚೇರಿ ಎಂಟು ಗಂಟೆಗೇನೇ ತೆರೆದಿರಬಹುದು(ನಡೆದಿರುವ ಘಟನೆ)

ಆ. ಅವನು ಆಫೀಸಿಗೆ ಹತ್ತು ಗಂಟೆಯೊಳಗೆ ಬರಬಹುದು(ನಡೆಯಲಿರುವ ಘಟನೆ)

ಘಟನೆಯೊಂದು ನಡೆಯುವುದು ಅಥವಾ ನಡೆಯದಿರುವ ನಿಶ್ಚಿತವಾಗಿದ್ದರು ಅದರಲ್ಲಿಯ ಘಟಕಗಳು ವಿಕಲ್ಪವನ್ನು ಸೂಚಿಸುತ್ತವೆ. ಉಮೇಶ ಬೆಳಗಾವಿಯಿಂದ ಇಂದು ಅಥವಾ ನಾಳೆ ಬರಬಹುದು. ಎರಡು ಬೇರೆ ಬೇರೆ ಘಟನೆಗಳನ್ನು ಸಹಿತ ಈ ರೀತಿ ವಿಕಲ್ಪಗಳಾಗಿ ಜೋಡಿಸುವ ಸಾಧ್ಯತೆ ಇದೆ.

ಉಮೇಶ ತನ್ನ ವಿಭಾಗಕ್ಕೆಯಾದರೂ ಹೋಗಿರಬಹುದು ಅಥವಾ ಗ್ರಂಥಾಲಯಕ್ಕೆ ಯಾದರೂ ಹೋಗಿರಬಹುದು. 'ಬಹುದು' ನಿಷೇಧಾರ್ಥ ಸೂಚಕ ಅವ್ಯಯಗಳ ಜೊತೆಗೆ ಒಂದು ಪ್ರಶ್ನಾರ್ಥಕವನ್ನು ಕೊಡುತ್ತದೆ. ಅವನು ಹೋಗಬಹುದಲ್ಲ? ಉಮೇಶನು ಆ ಕೆಲಸವನ್ನು ಮಾಡಬಹುದಾದ ಹುಡುಗ. 'ಆಗು'ವಿನೊಂದಿಗೆ ಸೇರಿ ನಾಮವಿಶೇಷಣ ವಾಗಿಯೂ ವರ್ತಿಸುತ್ತದೆ. ಆಗು, ಇರು, ಸಹಾಯಕ ಕ್ರಿಯಾಪದಗಳೊಡನೆ ಸೇರಿ ಪೂರ್ಣತೆಯನ್ನು ವ್ಯಕ್ತ ಮಾಡುತ್ತದೆ. ಉಮೇಶನು ಅದನ್ನು ಬರೆದು ಬಿಡಬಹುದಾಗಿತ್ತು

ಹೀಗೆ, 'ಬಹುದು' ಎಂಬ ಕ್ರಿಯಾಸೂಚಕ ಮೂಲಕ ಭಾಷಿಕ ಕ್ರಿಯೆಯ ಸುತ್ತಮುತ್ತ ನಡೆಯುವ ಸಂಭಾವ್ಯತೆಯನ್ನು ಕುರಿತು(ಅನುಮತಿ, ಸೂಚನೆ, ಸಾಧ್ಯತೆ, ನಿಷೇಧ, ಪೂರ್ಣತೆ, ನಾಮವಿಶೇಷಣ, ಪ್ರಶ್ನೆ ವಿಕಲ್ಪ) ಭಾಷಿಕರ ಅಭಿಪ್ರಾಯಗಳನ್ನು ಒಲವುಗಳನ್ನು ತಿಳಿದುಕೊಳ್ಳಬಹುದು.

ಆಕರಗ್ರಂಥ

೧. ಶಂಕರಭಟ್ಟ ಡಿ.ಎನ್. ೧೯೭೮, ಕನ್ನಡ ವಾಕ್ಯಗಳು ಆಂತರಿಕ ರಚನೆ ಮತ್ತು ಅರ್ಥವ್ಯವಸ್ಥೆ, ಗೀತಾ ಬುಕ್‌ಹೌಸ್, ಮೈಸೂರು.

೭

ವಚನ ಸಾಹಿತ್ಯ : ವಾಕ್ಯ ರಚನೆ

ವರ್ಣನಾತ್ಮಕ ವ್ಯಾಕರಣದ ಒಂದು ಭಾಗ ಪದರಚನೆಯ ಶಾಸ್ತ್ರವಾದರೆ ಮತ್ತೊಂದು ಭಾಗ ವಾಕ್ಯರಚನೆಯ ಶಾಸ್ತ್ರವಾಗಿದೆ. ಆಕೃತಿಮಾಗಳಿಂದಾದ ಶಬ್ದರಚನೆಯ ಬಗ್ಗೆ ಆಕೃತಿಮಾ ಶಾಸ್ತ್ರದಲ್ಲಿ ಅಭ್ಯಸಿಸುತ್ತೇವೆ. ಇಂತಹ ಶಬ್ದಗಳಿಂದ ನಿರ್ಮಿತವಾದ ವಾಕ್ಯಗಳ ಬಗ್ಗೆ ವಾಕ್ಯ ರಚನಾಶಾಸ್ತ್ರದಲ್ಲಿ ಅಭ್ಯಸಿಸುತ್ತೇವೆ. ಆಕೃತಿಮಾ ಹಾಗೂ ಅವು ಗಳಿಂದಾದ ಅಸಾಂದ್ರರಚನೆಯು ವಾಕ್ಯರಚನೆಯ ಶಾಸ್ತ್ರದಲ್ಲಿ ಕಕ್ಷೆಯಲ್ಲಿ ಬರುತ್ತದೆ. ಆಂತರಿಕ ಬೆಳವಣಿಗೆ ಹೊಂದಲು ಸಾಧ್ಯವಾಗುವ ರಚನೆಗಳನ್ನು ಅಸಾಂದ್ರರಚನೆಗಳೆನ್ನುವರು. ಉದಾ.

ಆ ಹುಡುಗ

ಆ ಸುಂದರ ಹುಡುಗ

ಆ ಸುಂದರ ಜಾಣ ಹುಡುಗ

ಆ ಸುಂದರವಾದ ಬೆಳ್ಳನೆಯ ಜಾಣ ಹುಡುಗ

ಹೀಗೆ ಆಂತರಿಕ ಬೆಳವಣಿಗೆ ಹೊಂದಬಲ್ಲ ರಚನೆಗಳು ಅಸಾಂದ್ರರಚನೆಗಳು. ಭಾಷೆಯಲ್ಲಿ ವಾಕ್ಯವು ಪೂರ್ಣ ಅರ್ಥ ನೀಡುವ ರಚನೆಯಾದ್ದರಿಂದ ಅದು ಭಾಷಾರಚನೆ ಯಲ್ಲಿ ಅತ್ಯಂತ ದೊಡ್ಡರಚನೆಯಾಗಿದೆ. ಭಾಷೆಯಲ್ಲಿ ಅತಿ ಚಿಕ್ಕ ಭಾಷಾಘಟಕ ಧ್ವನಿ ಯಾದರೆ, ಅತಿದೊಡ್ಡ ರಚನೆ ವಾಕ್ಯವಾಗಿದೆ.

೧

ವಚನಕಾರರು ತಮ್ಮ ಕಾಲದ ಆಡುಮಾತಿನ ವಾಕ್ಯಗಳನ್ನೇ ಲಯಬದ್ಧಗೊಳಿಸಿ ಹಾಗೂ ಆ ಬಗೆಯ ವಚನಗಳನ್ನು ತಾವೇ ಸೃಷ್ಟಿಸಿ ವಚನಗಳನ್ನು ರೂಪಿಸಿದರು. ವಚನಕಾರರು ಬಳಸಿದ ವಾಕ್ಯಗಳನ್ನು ವರ್ಣನಾತ್ಮಕ ಭಾಷಾವಿಜ್ಞಾನದ ತತ್ವಗಳ ಹಿನ್ನೆಲೆಯಲ್ಲಿ ಈ ಸಂಪ್ರಬಂಧದಲ್ಲಿ ಚರ್ಚಿಸಲಾಗಿದೆ. ವಚನಸಾಹಿತ್ಯದಲ್ಲಿ ಬಳಕೆಯಾದ ವಾಕ್ಯಗಳನ್ನೆಲ್ಲ

ಮುಖ್ಯವಾಕ್ಯ ಮತ್ತು ಉಪವಾಕ್ಯ ಎಂದು ಸ್ಥೂಲವಾಗಿ ವಿಂಗಡಿಸಬಹುದು. ಕಾರಕಗಳ ಸಹಾಯದಿಂದ ವಾಕ್ಯಗಳನ್ನು ವಿವರಿಸಬಹುದೇನೋ ನಿಜ. ಆದರೆ ಲಭ್ಯವಿರುವ ಆರು ಕಾರಕಗಳಿಂದ ಎಲ್ಲ ರೀತಿಯ ಮಿಶ್ರವಾಕ್ಯಗಳಲ್ಲಿ ಬರುವ ಸಂಬಂಧವನ್ನು ವಿವರಿಸುವುದು ಸಂದೇಹಗಳಿಗೆ ಎಡೆ ಮಾಡಿಕೊಡುವ ಸಂಭವವಿರುತ್ತದೆ. ಆದುದರಿಂದ ವಾಕ್ಯಗಳನ್ನು ಸ್ಥೂಲವಾಗಿ ವಿಂಗಡಿಸಿಕೊಂಡು ವಿವರಿಸುವುದು ಸೂಕ್ತವೆನಿಸು ತ್ತದೆ. ವಚನ ಸಾಹಿತ್ಯದಲ್ಲಿ ಬಳಕೆಯಾದ ಮುಖ್ಯ ವಾಕ್ಯಗಳನ್ನು ಮೂರು ರೀತಿಯಾಗಿ ವಿಂಗಡಿಸಬಹುದು.

೧. ಸರಳ ವಾಕ್ಯ

೨. ಪ್ರಶ್ನಾರ್ಥಕ ವಾಕ್ಯ

೩. ಉದ್ಗಾರವಾಚಕ ವಾಕ್ಯ

ಎಂದು ವಿಂಗಡಿಸಬಹುದು.

ಸರಳ ವಾಕ್ಯಗಳು

ಸಾಮಾನ್ಯವಾಗಿ ಒಂದು ನಾಮಪದ ಅಥವಾ ಒಂದು ಕ್ರಿಯಾಪದ ಅಥವಾ ಒಂದು ನಾಮಪದ ಒಂದು ಕ್ರಿಯಾಪದ ಉಳ್ಳ ವಾಕ್ಯವೇ ಸರಳವಾಕ್ಯವೆನಿಸುತ್ತದೆ.

ಉದಾ. ನಾಮಪದ ಮಾತ್ರ ಇರುವಂತಹ ವಾಕ್ಯಗಳು

- ನಿರಾಳ ಕೂಸಿಂಗೆ
- ಐವರು ಸಂಗ
- ಪಶುಪತಿ ನೀನು
- ಎಲ್ಲರೂ ಪ್ರಮಥರು
- ಬಿಸಿಲೆಂಬ ಗುರುವಿಂಗೆ
- ಎಲ್ಲರೂ ಧೀರರು
- ಶಿವಶಕ್ತಿ ಸಂಪುಟ

ಕ್ರಿಯಾಪದ ಮಾತ್ರ ಇರುವಂತಹ ವಾಕ್ಯಗಳು

- ಕಂಡೆ
- ಅಂಜದಿರು
- ಬೆಂದಿತ್ತು

ನಾಮಪದ ಮತ್ತು ಕ್ರಿಯಾಪದಗಳು ಇರುವಂತಹ ವಾಕ್ಯಗಳು

- ಭ್ರಾಂತು ಬೆಂದಿತ್ತು
- ಹಾವ ಕಂಡೆ
- ಲಜ್ಜೆಗೆಟ್ಟೆನು

- ತನುವನಲ್ಲಾಡಿಸು
- ಜಂಗಮವನೋಡು

ಪ್ರಶ್ನಾರ್ಥಕ ವಾಕ್ಯ

ಪ್ರಶ್ನೆ ಕೇಳುವ ರಚನೆಗಳೇ ಪ್ರಶ್ನಾರ್ಥಕ ವಾಕ್ಯಗಳು. ವಾಕ್ಯದ ಮೊದಲಿಗೆ ಅಥವಾ ಮಧ್ಯದಲ್ಲಿ ಏಕೆ, ಏನು, ಹೇಗೆ ಮೊದಲಾದವುಗಳನ್ನು ಅಥವಾ ಎ, ಏ, ಓ ಮೊದಲಾದ ಪ್ರಶ್ನಾರ್ಥಕ ಅವ್ಯಯಗಳನ್ನು ವಾಕ್ಯದ ಕೊನೆಯಲ್ಲಿ ಹೊಂದಿರುತ್ತವೆ. ಉದಾ.

- ಮೊನೆ ತಪ್ಪಿದ ಬಳಿಕ
  ಅಲಗೇನ ಮಾಡುವುದು?
  ವಿಷ ತಪ್ಪಿದ ಬಳಿಕ
  ಹಾವೇನ ಮಾಡುವುದು?
  ಭಾಷೆ ತಪ್ಪಿದ ಬಳಿಕ
  ದೇವನೆ ಬಲ್ಲಿದ
  ಭಕ್ತನೇನ ಮಾಡವನಯ್ಯಾ? - ಬಸವಣ್ಣ

- ಎಲ್ಲಿಯದು ಲಿಂಗ?
  ಎಲ್ಲಿಯದು ಜಂಗಮ?
  ಎಲ್ಲಿಯದು ಪಾದೋದಕ ಪ್ರಸಾದವಯ್ಯ? - ಅಲ್ಲಮಪ್ರಭು

- ಮರವಿದ್ದು ಫಲವೇನು? ನೆರಳಿಲ್ಲದನ್ನಕ?
  ಧನವಿದ್ದು ಫಲವೇನು? ದಯವಿಲ್ಲದನ್ನಕ?
  ಹಸುವಿದ್ದು ಫಲವೇನು? ಹಯನಿಲ್ಲದನ್ನಕ? -ಅಕ್ಕಮಹಾದೇವಿ

ಎಂಬ ಪ್ರಶ್ನಾರ್ಥಕ ವಾಕ್ಯಗಳಲ್ಲಿ ವಿವಿಧ ವಿನ್ಯಾಸ ಕಾಣಬಹುದು.

ಉದ್ಗಾರ ವಾಚಕ ವಾಕ್ಯ

ಆ ಕ್ಷಣದ ಭಾವನೆಯನ್ನು ಬಿಂಬಿಸುವಂತಹ ವಾಕ್ಯಗಳು ಉದ್ಗಾರ ವಾಚಕ ವಾಕ್ಯಗಳಾಗಿವೆ. ಆ ಭಾವನೆ ನೋವು, ಆತಂಕ, ಆನಂದ, ಆಶ್ಚರ್ಯ ಯಾವುದಾದರೂ ಆಗಿರಬಹುದು. ಉದ್ಗಾರ ವಾಚಕ ಅವ್ಯಯಗಳಾದ ಹೊ ಹೋ, ಅಯ್ಯಾ, ಅಬ್ಬಾ ಮೊದಲಾದವು ವಾಕ್ಯದ ಆರಂಭ, ಮಧ್ಯ ಅಥವಾ ಅಂತ್ಯದಲ್ಲಿ ಇರುತ್ತವೆ.

ಉದಾ. ಕರ್ಮವೆಂಬ ಕದಳಿಯೆನಗೆ, ಕಾಯವೆಂಬ ಕದಳಿ ನಿನಗೆ!
ಮಾಟವೆಂಬ ಕದಳಿ ಚೆನ್ನಬಸವಣ್ಣಂಗೆ!
ಬಂದ ಬಂದ ಭಾವಸಲೆ ಬಂದಿತ್ತು! - ಅಕ್ಕಮಹಾದೇವಿ

ಹಿಡಿವ ಕೈಯ ಮೇಲೆ ಕತ್ತಲೆಯಯ್ಯ!
ನೋಡುವ ಕಂಗಳ ಮೇಲೆ ಕತ್ತಲೆಯಯ್ಯ!
ನೆನೆವ ಮನದ ಮೇಲೆ ಕತ್ತಲೆಯಯ್ಯ!
ಗುಹೇಶ್ವರನೆಂಬುದು ಅತ್ತಲೆಯಯ್ಯ! - ಅಲ್ಲಮಪ್ರಭು

ವೇದಕ್ಕೆ ಒರೆಯಕಟ್ಟುವೆ!
ಶಾಸ್ತ್ರಕ್ಕೆ ನಿಗಳವ ನಿಕ್ಕುವೆ!
ತರ್ಕದ ಬೆನ್ನ ಬಾರ ನೆತ್ತುವೆ!
ಆಗಮದ ಮೂಗ ಕೊಯ್ವೆ!
ನೋಡಯ್ಯ, ಮಹಾದಾನಿ ಕೂಡಲಸಂಗಮದೇವ
ಮಾದರ ಚೆನ್ನಯ್ಯನ ಮನೆಯ ಮಗ ನಾನಯ್ಯ! - ಬಸವಣ್ಣ

ಮುಂತಾದ ವಾಕ್ಯಗಳನ್ನು ನೋಡಬಹುದು. ಮೇಲೆ ವಿವರಿಸಿದ ಮುಖ್ಯ ವಾಕ್ಯಗಳು ಕ್ರಿಯಾಪದದೊಡನೆ ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧಿಕರಣ ಎಂಬ ಆರು ಕಾರಕ ಸಂಬಂಧಗಳನ್ನು ಸೂಚಿಸುವ ಪದಗಳನ್ನು ಹೊಂದಿ ವಿಸ್ತಾರಗೊಳ್ಳಬಹುದು. ಒಂದು ವಾಕ್ಯದಲ್ಲಿ ಎಲ್ಲ ಕಾರಕಗಳನ್ನು ಸೂಚಿಸುವ ಪದಗಳು ಇರಬಹುದು ಅಥವಾ ಇರದೇ ಇರಬಹುದು. ವಚನ ಸಾಹಿತ್ಯದಲ್ಲಿ ಜನಸಾಮಾನ್ಯರ ತಿಳಿವಳಿಕೆಗಾಗಿ ಚಿಕ್ಕ ಚಿಕ್ಕ ವಾಕ್ಯಗಳೇ ಹೆಚ್ಚು ಪ್ರಯೋಗವಾಗುತ್ತವೆ. ಆದುದರಿಂದ ಒಂದೇ ವಾಕ್ಯದಲ್ಲಿ ಒಂದೆರಡಕ್ಕಿಂತ ಹೆಚ್ಚು ಕಾರಕಗಳು ಬಳಕೆಯಾಗಿರುವುದು ವಿರಳವಾಗಿವೆ.

೨

ಉಪವಾಕ್ಯವು ಕೂಡ ತನ್ನದೇ ಆದ ಕರ್ತೃ, ಕರ್ಮಾದಿ ಆರು ಕಾರಕಗಳನ್ನು ಪಡೆದು ಕೊಂಡಿರಬಹುದು. ಆದರೆ ಅದರಲ್ಲಿ ಪೂರ್ಣ ಕ್ರಿಯಾಪದ ಇರದೇ ಇರುವುದರಿಂದ ಅದು ಅಪೂರ್ಣ ವಾಕ್ಯವಾಗಿಯೇ ಉಳಿಯುತ್ತದೆ. ಇಂಥ ಉಪವಾಕ್ಯಗಳು ಮುಖ್ಯ ವಾಕ್ಯದ ಪ್ರಾರಂಭದಲ್ಲಿ, ಮಧ್ಯದಲ್ಲಿ ಅಥವಾ ಕೊನೆಯಲ್ಲಿ ಬರಬಹುದು. ಬಿ.ಬಿ. ರಾಜಪುರೋಹಿತ ಅವರು ಅಭಿಪ್ರಾಯ ಪಡುವಂತೆ ಉಪವಾಕ್ಯಗಳಲ್ಲಿ ನಾಮನಿರ್ದೇಶಕ ಮತ್ತು ಕ್ರಿಯಾ ನಿರ್ದೇಶಕ ಎಂಬ ಎರಡು ಗುಂಪುಗಳನ್ನು ಮಾಡಬಹುದು.[೧]

ನಾಮನಿರ್ದೇಶಕ ಉಪವಾಕ್ಯಗಳು ಅಂತೆ, ಅನ್ನಕ್ಕ, ಅನ್ನಬರ, ಓಸುಗು, ಓಸ್ಕರ ಎಂಬ ಅವ್ಯಯಗಳನ್ನು ಒಳಗೊಂಡಿರುತ್ತವೆ.

- ನಿಮ್ಮ ಶರಣರ ಸಂಗವ ಮಾಡಿದಡೆ
  ಕರ್ಪೂರದ ಗಿರಿಯನುರಿಕೊಂಬಂತೆ -ಶಿವಶರಣೆಯರ ವಚನ
- ಅಂಗದಲ್ಲಿ ಮಾಡುವ ಸುಖವದು
  ಲಿಂಗಕ್ಕೆ ಭೂಷಣವಾಯಿತ್ತು

ಕಾಡುಗಿಚ್ಚಿನ ಕೈಯಲ್ಲಿ
ಕರಡವ ಕೊಯ್ಸುವಂತೆ. - ಅಲ್ಲಮ

- ಕುಂದಣದ ಚಿನ್ನವ ಪುಟಕ್ಕೆ ಹಾಕಿದಂತೆ - ಹಡಪದ ಅಪ್ಪಣ್ಣ

ಕ್ರಿಯಾನಿರ್ದೇಶಕ ಉಪವಾಕ್ಯಗಳು ಯಾವುದಾದರೂ ಒಂದು ಅಪೂರ್ಣ ಕ್ರಿಯಾಪಾಚಿಯನ್ನು ಒಳಗೊಂಡಿರುತ್ತವೆ. ಅವುಗಳಲ್ಲಿ ಪ್ರಯೋಗವಾದ ಅಪೂರ್ಣ ಕ್ರಿಯೆಯನ್ನು ಆಧರಿಸಿ ಆರು ಪ್ರಕಾರದ ಕ್ರಿಯಾನಿರ್ದೇಶಕ ಉಪವಾಕ್ಯಗಳನ್ನು ಗುರುತಿಸಬಹುದು.

ಅಪೂರ್ಣ ವರ್ತಮಾನ ಉಪವಾಕ್ಯ

- ರಚ್ಚೆಯ ನೆರವಿಗೆ ನಾಡನುಡಿ ಇಲ್ಲದಿಹುದೆ?
  ಅದರಂತೆನಬಹುದೇ ಸಜ್ಜನ ಸ್ತ್ರೀಯ?
  ಅದರಂತೆನಬಹುದೇ ಭಕ್ತಿರತಿಯ?
  ಕರುಳಕಲೆ - ಪ್ರಕಟಿತ ಉಂಟೆ ಕೂಡಲಸಂಗಮದೇವ? - ಬಸವಣ್ಣ

- ತುಂಬಿ ಬಂದಂಡೆ
  ಪರಿಮಳ ಓಡಿತ್ತ ಕಂಡೆ !
  ಏನು ಸೋಜಿಗ ಹೇಳಾ ?
  ಮನಬಂದಡೆ
  ಬುದ್ಧಿ ಓಡಿತ್ತ ಕಂಡೆ !
  ದೇವ ಬಂದಡೆ
  ದೇಗುಲ ಓಡಿತ್ತ ಕಂಡೆ ಗುಹೇಶ್ವರ! - ಅಲ್ಲಮ

ಅಪೂರ್ಣಭೂತವಾಕ್ಯ

- ಉದಕದ ರಸದಂತೆ, ಅಗ್ನಿಯ ಉಭಯದಂತೆ
  ವಿಷ ನಿಮಿಷದಂತೆ, ಕಾಬ ಕಾಣಿಸಿಕೊಂಬ ಭೇದ
  ......ಶರಣನ ನಿಜದೈಕ್ಯ ನಿಃಕಳಂಕ ಮಲ್ಲಿಕಾರ್ಜುನ - ಸಕಲ ಪುರಾತನರ ವಚನ

- ಉದಕದೊಳಗಣ ಬಿಂದು ಉದಯರತ್ನದಂತೆ
  ಕೂಡಲಸಂಗನ ಶರಣರ ನಿಲುವು - ಬಸವಣ್ಣ

- ...... ಶರಣನ ಇರವು
  ಕಬ್ಬುನ ಉಂಡ ಉದಕದಂತೆ - ಆದಯ್ಯ

ನಿಷೇಧ ಉಪವಾಕ್ಯ

- ಸೂರ್ಯನ ಮಂಜು ಮುಸುಕ ಬಲ್ಲುದೇ! - ಸಕಲಪುರಾತನರ ವಚನ

- ಮುಟ್ಟಲೀಯದಿರ್ದಿತ್ತು
  ಸದಾಶಿವನ ಕುಂದದೆ ನೆನೆಯಲೀಯದೆ ಕೊಂದುದು - ಬಸವಣ್ಣ

ಇಚ್ಛಾರ್ಥಕ ವಾಕ್ಯ

- ನಿಮ್ಮ ಶರಣರು ಲಿಂಗನೆನಹೆಂಬ ಕಿಚ್ಚ ಹಿಡಿಯಲು
  ಅಂಗಜನ ಅರಮನೆ ಉರಿದು, ಭವ ಹೆರೆ ಹಿಂಗಿತ್ತು ನೋಡಾ - ತೋಂಟದ ಸಿದ್ಧಲಿಂಗ
- ಉರಿಯನೊಳಕೊಂಡ ಕಲ್ಲಿನಂತಿರಬೇಕು - ಸಕಲಪುರಾತನರ ವಚನ
- ಕಾಷ್ಠದೊಳಗಣ ಅಗ್ನಿ, ಉರಿ ಉಷ್ಣದೋರದಂತೆ....
  ಲಿಂಗವಾರು ಭೇದಿಸಬಾರದಯ್ಯಾ - ಆದಯ್ಯ
- ಕಿಚ್ಚಿನೊಳಗೆ ಹುರಿದ ಹುಳ್ಳಿಯಂತಾದೆನಯ್ಯ - ಅಲ್ಲಮ
- ವಾರಿಯ ಕೂಡಿದ ಕ್ಷೀರದಂತೆ.......
- ನಿಶ್ಚಯವಾದ ಮಹಾತ್ಮಂಗೆ ನಮೋ ನಮೋ - ಸಕಲಪುರಾತನರ ವಚನ

ಕಾರ್ಯಕಾರಣ ಉಪವಾಕ್ಯ

- ಉದಕದೊಳಗಣ ಪ್ರತಿಬಿಂಬದಂತೆ... ನಿಮ್ಮ ಶರಣರ ಸಂಬಂಧ - ಅಲ್ಲಮ
- ಆಗ ಭಿತ್ತಿ ಆಗ ಬೆಳೆವಂತೆ, ರೋಗಿ ಬಯಸಿತ್ತ ವೈದ್ಯ ಕೊಡುವಂತೆ
  ಪಾಪದಂತಾದುದನು ಪುಣ್ಯವನೆ ಮಾಡುವುದು ಇಂತಪ್ಪ
  ಪ್ರಸಾದವನ್ನು ನಿಮ್ಮ ಶರಣ ಬಸವಣ್ಣ ತೋರಿದನಾಗಿ
  ಎನ್ನಭವಂ ನಾಸ್ತಿಯಾಯಿತ್ತು - ಮಡಿವಾಳ ಮಾಚಯ್ಯ

೩

ವಚನಗಳು ಲಯಬದ್ಧ ಗದ್ಯ ರಚನೆಯಲ್ಲಿರುವುದರಿಂದ ಕರ್ತೃ ಮತ್ತು ಕ್ರಿಯಾಪದಗಳ ನಡುವೆ ಇತರ ಕಾರಕಗಳನ್ನು ಸೂಚಿಸುವ ಪದಗಳು ಇರಬೇಕೆಂಬ ಪದವಿನ್ಯಾಸ ಕ್ರಮ ಕಟ್ಟುನಿಟ್ಟಾಗಿ ಅನ್ವಯವಾಗುವುದಿಲ್ಲ. ವಚನ ವಾಕ್ಯದಲ್ಲಿ ಕಂಡುಬರುವ ಪದವಿನ್ಯಾಸ ಕ್ರಮ ಹೀಗಿದೆ.

೧. ಗುಣವಾಚಕಗಳು ಯಾವಾಗಲೂ ನಾಮ ಪ್ರಕೃತಿಯ ಪೂರ್ವದಲ್ಲಿಬರುತ್ತವೆ.

- ಹೊಳೆವ ಕೆಂಜೆಡೆ
- ಹಿರಿಯ ಶರಣ
- ದೊಡ್ಡ ತನುವ
- ಬಿಸಿಲು ಅಂಗಕ್ಕೆ ಹಿತವಾಯಿತ್ತು

೨. ಕೃದಂತಗಳು ಯಾವಾಗಲೂ ನಾಮಪ್ರಕೃತಿಯ ಪೂರ್ವದಲ್ಲಿ ಬರುತ್ತವೆ.

- ಕುಣಿವ ನವಿಲು
- ಹಾಡುವ ಕೋಗಿಲೆ
- ಎಂಬ ನುಡಿ
- ಹೇಳು ಸೋರೆ

೩. ಸಂಖ್ಯಾವಾಚಕಗಳು ನಾಮಪ್ರಕೃತಿಯ ಪೂರ್ವದಲ್ಲಾಗಲಿ, ಪರದಲ್ಲಾಗಲಿ ಬರುತ್ತವೆ.

- ಎರಡು ಯುಗ
- ದಿವಸ ಒಂಬತ್ತು
- ಮೂಲೋಕ
- ಪಂಚೇಂದ್ರಿಯದ

೪. ಷಷ್ಠಿ ವಿಭಕ್ತಿ ಪ್ರತ್ಯಯದಿಂದ ಕೂಡಿದ ವಿಶೇಷಣಗಳು, ನಾಮಪ್ರಕೃತಿಯ ಪೂರ್ವದಲ್ಲಿ ಅಥವಾ ಪರದಲ್ಲಿ ಬರಬಹುದು.

- ಕಾಳಿಕೆಯ/ಕಳೆ
- ಮೂರನೆಯ/ಕಣ್ಣು
- ಹಿಂದನ/ಜನ್ಮ
- ಜಲಧಿಯ/ಮಡು
- ಮೋಹರದ/ತುದಿ
- ಸದ್ಗುರುವಿನ/ಶಿಷ್ಯ

೫. ನಿಷೇಧ ನ್ಯೂನಗಳು ಯಾವಾಗಲೂ ನಾಮಪ್ರಕೃತಿಯ ಪೂರ್ವದಲ್ಲಿ ಬರುತ್ತವೆ.

- ಅಯ್ಯ, ನೀ ಮಾಡಲಾದ ಜಗತ್ತು;
  ಅಯ್ಯ, ನೀ ಮಾಡಲಾದ ಸಂಸಾರ;
  ಅಯ್ಯ, ನೀ ಮಾಡಲಾದ ಮರವೆ;
  ಅಯ್ಯ, ನೀ ಮಾಡಲಾದ ದುಃಖ!
- ಅರಿಯದ ಪತಿ
- ಒಲ್ಲದ ದಾಯ
- ಒಲ್ಲವಿಲ್ಲದ ಪೂಜೆ, ನೇಹವಿಲ್ಲದ ಮಾಟ;

೬. ಸ್ಥಾನ ಸೂಚಕಗಳಾದ ಸಪ್ತಮಿ ಘಟಕಗಳಲ್ಲದೆ ಮತ್ತೆ ಕೆಲವು ನಾಮಪದಗಳು ಕ್ರಿಯಾ ವಿಶೇಷಣಗಳಾಗಿ ವರ್ತಿಸುತ್ತವೆ.

- ಋಣ ತಪ್ಪಿದ ಹೆಂಡಿರಲ್ಲಿ
  ಗುಣ ತಪ್ಪಿದ ನಂಟರಲ್ಲಿ
  ಜೀವವಿಲ್ಲದ ದೇಹದಲ್ಲಿ ಫಲವೇನೋ?
- ಅಲ್ಲಿಯೋ ಮೊಳಗಿದನು ಸೂರ್ಯನು
- ಶರಣರು ಆವಲ್ಲಿ ಇಹನು

೭. ಪೂರ್ಣ ಕ್ರಿಯಾಪದದಿಂದ ಕೂಡಿರದ ಘಟಕಗಳು ಮತ್ತು ಪೂರ್ಣ ಕ್ರಿಯಾಘಟಕವನ್ನು ಹೊಂದಿರದ ಘಟಕ ಸರಣಿಗಳು ಅಪ್ರಾಪ್ತ ವಾಕ್ಯಗಳೆನಿಸಿಕೊಳ್ಳುತ್ತವೆ. ಆದರೆ ಅವು ಸ್ವತಂತ್ರವಾಗಿ ನಿಲ್ಲುವಂತಿರಬೇಕಾಗುತ್ತದೆ. ಅಲ್ಲದೆ ಸ್ವತಂತ್ರವಾಗಿ ಪ್ರಯೋಗ ವಾಗಬಲ್ಲ ಆಶ್ಚರ್ಯ ಸೂಚಕಾವ್ಯಯಗಳೂ ಸಹ ಅಪ್ರಾಪ್ತ ವಾಕ್ಯಗಳಿಗೆ ಉದಾಹರಣೆಗಳಾಗಿವೆ.

- ಏನಿ ಬಂದಿರಿ? (ಕ್ಷೇಮಾಲಾಪ)
- ಹದುಳವಿದ್ದಿರಾ? (ಕ್ಷೇಮಾಲಾಪ)
- ಏನಯ್ಯ? ಹೇಳು? (ಪ್ರಶ್ನೆ)
- ಅವಪರಿ ?

೮. ಪದಪುಂಜ ರಚನಾ ನಿಯಮಗಳು ವಾಕ್ಯ ರಚನೆಯನ್ನು ನೀಡುತ್ತವೆ. ಅಂದರೆ ಈ ನಿಯಮಗಳು ವಾಕ್ಯದ ನಿಕಟತಮ ಘಟಕಗಳ ವರ್ಗಗಳನ್ನು ಅವುಗಳ ವ್ಯಾಕರಣ ಸಂಬಂಧವನ್ನು ಸೂಚಿಸುತ್ತವೆ. ಸಾಮಾನ್ಯವಾಗಿ ಪದಪುಂಜ ರಚನೆಯ ನಿಯಮ ಹೀಗಿರುತ್ತದೆ.

ವಾಕ್ಯ → ನಾಮಪುಂಜ+ಕ್ರಿಯಾಪುಂಜ

ನಾಮಪುಂಜ → ವಿಶೇಷಣ+ನಾಮಪದ

ನಾಮಪದ → ನಾಮಪ್ರಕೃತಿ+ವಚನ

ಕ್ರಿಯಾಪದ → ಕ್ರಿಯಾಪ್ರಕೃತಿ+ಕಾಲರೂಪ

ಕಾಲರೂಪ → ಕಾಲಪ್ರತ್ಯಯ+ರೂಪ ಪ್ರತ್ಯಯಿ

ಉದಾ. ಶಾಸ್ತ್ರ ಪುರಾಣ ಕೇಳಿದರೇನು

ನಾಮಪ್ರಕೃತಿ₁ → ಶಾಸ್ತ್ರ


ನಾಮಪ್ರಕೃತಿ₂ → ಪುರಾಣ

ಕ್ರಿಯಾಪ್ರಕೃತಿ → ಕೇಳು

ಕಾಲ ಪ್ರತ್ಯಯ → ದ

ರೂಪ ಪ್ರತ್ಯಯ → ಏನು

ಇದನ್ನು ವೃಕ್ಷ ರೇಖಾಚಿತ್ರದ ಮೂಲಕ ಸ್ಪಷ್ಟಪಡಿಸಬಹುದು.



ಹೀಗೆ, ವಚನಕಾರರು ತಮ್ಮ ವಚನಗಳಲ್ಲಿ ವೈವಿಧ್ಯಮಯ ವಾಕ್ಯಗಳನ್ನು ಬಳಸಿದ್ದಾರೆ. ಅವೆಲ್ಲ ಹೊಸ ಹೊಸ ಪ್ರಯೋಗಗಳಿಗೆ ನಿದರ್ಶನಗಳಾಗಿವೆ. ಒಬ್ಬರ ವಿಚಾರ ಇನ್ನೊಬ್ಬರಿಗೆ ತಿಳಿಯಬೇಕಾದರೆ ಅಥವಾ ಅರ್ಥವಾಗಬೇಕಾದರೆ ಪ್ರತಿಯೊಂದು ಪದವು ಒಂದು ಅರ್ಥವನ್ನು ಸೂಚಿಸುತ್ತಿರಬೇಕಾಗುತ್ತದೆ. ಆಗ ಆ ವಾಕ್ಯದ ವಿಚಾರ ಪೂರ್ಣಗೊಳ್ಳುತ್ತದೆ. ಹೀಗೆ ಅರ್ಥವತ್ತಾದ ಪದಗಳ ಕೂಡುವಿಕೆಯ ಅವಶ್ಯಕತೆಯು ವಾಕ್ಯವಾಗಲು ಸಹಾಯ ಮಾಡುತ್ತದೆ. ಅಂತಹ ಅರ್ಥವತ್ತಾದ ವಾಕ್ಯಗಳನ್ನು ವಚನಕಾರರು ಬಳಸಿದ್ದಾರೆ.

ಅಡಿಟಿಪ್ಪಣಿ

೧. ಬಿ.ಬಿ. ರಾಜಪುರೋಹಿತ 'ವಚನ ವ್ಯಾಕರಣ' (೨೦೦೩, ಪು. ೭೮) ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು

ಆಕರಗ್ರಂಥ

೧. ಎಲ್. ಬಸವರಾಜು (ಸಂ.). ಬಸವಣ್ಣನವರ ವಚನಗಳು. ಜೇಡರದಾಸಿಮಯ್ಯರ ವಚನಗಳು. ಅಕ್ಕಮಹಾದೇವಿ ವಚನಗಳು. ಅಲ್ಲಮಪ್ರಭುದೇವರ ವಚನಗಳು. ಗೀತಾ ಬುಕ್‌ಹೌಸ್, ಬೆಂಗಳೂರು.

೮

ಭಾಷೆಯ ಆಧುನೀಕರಣ ಪ್ರಕ್ರಿಯೆ ಮತ್ತು 'Ization/'Isation' ಸಂವಾದಿಯಾಗಿ 'ಈಕರಣ' ಪ್ರತ್ಯಯದ ಬಳಕೆ

೧

ಭಾಷೆಯ ಆಧುನೀಕರಣವನ್ನು ಕುರಿತಾದ ವಿವೇಚನೆ ಕನ್ನಡದಲ್ಲಿ ಸ್ವಲ್ಪಮಟ್ಟಿಗೆ ನಡೆದಿದೆ.[೧] ಇಂಗ್ಲಿಶಿನಲ್ಲಿ ಈ ಕುರಿತು ಸಾಕಷ್ಟು ಬರಹಗಳು ಬಂದಿವೆ. ಶಬ್ದಕೋಶ ವಿಸ್ತರಣೆ, ವ್ಯಾಕರಣ ನಿಯಮಗಳು ಸಡಿಲಗೊಳ್ಳುವಿಕೆ ಹಾಗೂ ಭಾಷಾ ಬೆಳವಣಿಗೆಗೆ ಭಾಷಾಆಧುನೀಕರಣ ತುಂಬ ಸಹಾಯಕಾರಿಯಾಗಿದೆ ಎಂಬುದರ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ಕನ್ನಡ ಭಾಷೆ ಹತ್ತಾರು ರೀತಿಯಲ್ಲಿ ದಿನದಿನವೂ ಬದಲಾಗುತ್ತಿದೆ. ಈ ಬದಲಾವಣೆಯ ದಿಕ್ಕು ದಿಸೆಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನು ನಾವು ಮಾಡಬೇಕಾಗಿದೆ. ಸಮೂಹ ಮಾಧ್ಯಮಗಳಲ್ಲಿ ಸಮೃದ್ಧ ಪ್ರಮಾಣದಲ್ಲಿ ಹೊಸ ಹೊಸ ಪದಗಳು, ವಾಕ್ಯಗಳು ದಿನವೂ ಬಳಕೆಯಾಗುತ್ತಿವೆ. ಅವುಗಳನ್ನು ಸಂಗ್ರಹಿಸುವುದು ವಿಶ್ಲೇಷಿಸುವುದು ದೊಡ್ಡ ಸಾಹಸವೇ ಸರಿ. ಈ ಕೆಲಸ ಇತ್ತಿತ್ತಲಾಗಿ ನಡೆಯುತ್ತಿದೆ.[೨] ನಾನು ಈ ಲೇಖನದ ಭಾಷಾ ಆಧುನೀಕರಣದ ಪರಿಶೀಲನೆಗಾಗಿ ಸಾಮಗ್ರಿಗಳನ್ನು ಕಲೆ ಹಾಕುವ ಕೆಲಸವನ್ನು ಮಾಡಿದ್ದೇನೆ. ಅದರಂತೆ ಕನ್ನಡದಲ್ಲಿ ಧಾರಾಳವಾಗಿ ಬಳಕೆಯಾಗುತ್ತಿರುವ ಆಂಗ್ಲ ಭಾಷೆಯ Ization/Isation ಸಂವಾದಿಯಾಗಿ 'ಈಕರಣ' ಪ್ರತ್ಯಯ ಬಳಕೆಯಾದ ರೀತಿಯ ಬಗ್ಗೆ ಚರ್ಚಿಸಿದ್ದೇನೆ. ಇದು ಪರಿಮಿತ ವ್ಯಾಪ್ತಿಯ ಆಕರ ಲೇಖನವಾಗಿದೆ.

ಅಭಿವೃದ್ಧಿ ಹೊಂದಿದ ಭಾಷೆಗಳಲ್ಲಿಯ ತಂತ್ರಜ್ಞಾನ ಹಾಗೂ ಔದ್ಯೋಗಿಕ ಕ್ಷೇತ್ರಗಳಲ್ಲಿನ ಜ್ಞಾನವನ್ನು, ಭಾಷಾ ಸಂಪತ್ತನ್ನು ಅಭಿವೃದ್ಧಿ ಹೊಂದುತ್ತಿರುವ ಭಾಷೆಗಳು

ತಮ್ಮ ಅಗತ್ಯತೆಗಳನ್ನು ಪೂರೈಸಲು ತಮ್ಮ ಪದಕೋಶವನ್ನು ವೃದ್ಧಿಪಡಿಸಿಕೊಂಡು ತಮ್ಮತನವನ್ನು ಸ್ಥಾಪಿಸಿಕೊಳ್ಳಲು ಸದಾ ಹವಣಿಸುತ್ತಿರುತ್ತವೆ. ಆ ವೇಳೆಯಲ್ಲಿ ಸಂವಹನಕ್ಕೆ ಅನುಕೂಲವಾಗುವಂತೆ ಭಾಷಾರಚನೆ ಮತ್ತು ಬಳಸುವ ರೀತಿಯಲ್ಲಿ ಬದಲಾವಣೆ ಅನಿವಾರ್ಯವಾಗುತ್ತದೆ. ಈ ರೀತಿಯ ಬದಲಾವಣೆಯೇ ಭಾಷಾ ಆಧುನೀಕರಣ. ಕನ್ನಡ ಭಾಷೆ ಬೇರೆ ಬೇರೆ ವಲಯಗಳಲ್ಲಿ ಬೇರೆ ಬೇರೆ ರೀತಿಯಾಗಿ ಬಳಕೆಯಾಗಿ ಬೆಳವಣಿಗೆ ಹೊಂದುತ್ತಿದೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳಲ್ಲಿ ಭಾಷೆ ಬಳಕೆಯಾಗುವಾಗ ಧ್ವನ್ಯುಚ್ಚಾರಣೆ, ಪದರಚನೆಯಿಂದ ಹಿಡಿದು ವಾಕ್ಯ ರಚನೆಯವರೆಗೆ ಬದಲಾವಣೆ ಕಂಡುಬರುತ್ತದೆ. ಆ ವೇಳೆಯಲ್ಲಿ ಹೊಸ ಪದಗಳು ಭಾಷೆಗೆ ಬಂದು ಸೇರುತ್ತವೆ. ಹಳೆಯ ಪದಗಳು ಬಿದ್ದು ಹೋಗಿ ಹೊಸ ಅರ್ಥದಲ್ಲಿ ಬಳಕೆಯಾಗುತ್ತವೆ. ಅಭಿವ್ಯಕ್ತಿಗೆ ಮತ್ತು ಗ್ರಹಿಕೆಗೆ ತೊಂದರೆ ಉಂಟಾಗದಂತೆ ಭಾಷಾ ಸಮುದಾಯಕ್ಕೆ ಸ್ಪಂದಿಸುವಂತೆ ಭಾಷಿಕರ ಸಂವಹನಕ್ಕೆ ಸಹಾಯಕವಾಗಲು ಭಾಷಿಕರ ಭಾಷಾ ಮನೋವೃತ್ತಿಗಳಲ್ಲಿ ಬದಲಾವಣೆಯನ್ನು ತರುವುದು ಭಾಷಾ ಆಧುನೀಕರಣದ ಮುಖ್ಯ ಉದ್ದೇಶವಾಗಿದೆ.

ಭಾಷಾ ಆಧುನೀಕರಣವು ಭಾಷಾಮಿಶ್ರಣ, ಭಾಷಾಪಲ್ಲಟ, ಭಾಷಾ ಸ್ವೀಕರಣ, ಡೈಗ್ಲಾಸಿಯಾ ಮುಂತಾದ ಸಾಮಾಜಿಕ ಭಾಷಾವಿಜ್ಞಾನದ ಪರಿಕಲ್ಪನೆಗಳ ಮೂಲಕ ನಡೆಯುವ ಅಧ್ಯಯನವಾಗಿದೆ. ಭಾಷಾ ಬಳಕೆಯ ರಚನೆಯ ಸ್ವರೂಪವನ್ನು ಸಾಮಾಜಿಕ ಭಾಷಾವಿಜ್ಞಾನದ ನೆಲೆಗಳಿಂದ ನೋಡಬೇಕಾಗುತ್ತದೆ. ಇಂಗ್ಲಿಶ್ ಪ್ರಭಾವಶಾಲಿ ಮಾಧ್ಯಮವಾಗಿದೆ. ವಿವಿಧ ವಿಷಯಗಳ ಜ್ಞಾನ ಇಂಗ್ಲಿಶ್ ಮಾಧ್ಯಮದ ಮೂಲಕ ದೊರೆಯುವುದರಿಂದ ವಿದ್ಯಾವಂತ ಕನ್ನಡಿಗರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಇಂಗ್ಲಿಶ್‌ನ್ನು ಬಹುವಾಗಿ ಅವಲಂಬಿಸಬೇಕಾಗಿದೆ. ಅಲ್ಲಿಯ ಪದರಚನೆ, ವಾಕ್ಯರಚನೆಯ ಕ್ರಮವನ್ನು ಕನ್ನಡ ತನ್ನ ಜಾಯಮಾನಕ್ಕೆ ತಕ್ಕಂತೆ ಅಳವಡಿಸಿಕೊಂಡಿದೆ. ಆ ವೇಳೆಯಲ್ಲಿ ಆಂಗ್ಲರೂಪಗಳನ್ನು ಕನ್ನಡಿಕರಿಸುವಾಗ ಟಂಕೀಕರಣ, ತದ್ಭವೀಕರಣ, ಸಾದೃಶ್ಯದೃಷ್ಟಿ, ಸ್ವೀಕರಣ ಮತ್ತು ಅನುವಾದ ಮುಂತಾದ ಭಾಷಿಕ ಕ್ರಿಯೆಗಳು ನಡೆಯುತ್ತಿವೆ (ಇವುಗಳ ಬಗ್ಗೆ ಇದೇ ಲೇಖನದಲ್ಲಿ ಮುಂದೆ ಚರ್ಚಿಸಲಾಗಿದೆ). ಕನ್ನಡದಲ್ಲಿ ಭಾಷಾ ಆಧುನೀಕರಣ ಪದರಚನೆಯ ನೆಲೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಭಾಷಾ ಕ್ಷೇತ್ರದಲ್ಲಿ ನಡೆಯುವ ಹೊಸ ಹೊಸ ಶೋಧನೆಗಳಿಂದ ಭಾಷಾ ರಚನೆಯಲ್ಲಿ ಬದಲಾವಣೆ ಕಂಡುಬರುತ್ತದೆ. ಇದರಿಂದ ಇದುವರೆಗೆ ಒಪ್ಪಿಗೆಯಾಗದ ಪದರಚನೆಗಳು ಈಗ ಕನ್ನಡ ಭಾಷೆಯ ಜಾಯಮಾನಕ್ಕೆ ಅನುಗುಣವಾಗಿ ಬಳಕೆಯಾಗುತ್ತವೆ.

ಕನ್ನಡ ಭಾಷೆ ಆಧುನೀಕರಣವನ್ನು ಮೈಗೂಡಿಸಿಕೊಳ್ಳುತ್ತಿರುವಾಗ ಮತ್ತು ಅವರ ಅಭಿವ್ಯಕ್ತಿಗಾಗಿ, ಹೊಸ ಪರಿಭಾಷೆಗಳಿಗಾಗಿ ಹೊಸ ಹೊಸ ವಿಧಾನಗಳನ್ನು ಕನ್ನಡವು ಹುಡುಕುತ್ತಿದೆ. ಕನ್ನಡದಲ್ಲಿ ಆಧುನೀಕರಣದ ಪ್ರಭಾವವಿರುವ ಭಾಷಿಕ ಪ್ರಕ್ರಿಯೆಗಳ ರಚನಾ ಕ್ರಮವನ್ನು ಇಲ್ಲಿ ಕ್ರಮವಾಗಿ ಹೇಳಲಾಗಿದೆ.

'ಇಸು' ಪ್ರತ್ಯಯ ಮೊದಲ ಕ್ರಿಯಾಧಾತುಗಳಿಗೆ ಮಾತ್ರ ಹತ್ತಿ ಪ್ರೇರಣಾರ್ಥಕವನ್ನು ಕೊಡುತ್ತಿತ್ತು. ಉದಾ. ಮಾಡಿಸು, ಓಡಿಸು, ಕಾಡಿಸು, ತಿನಿಸು ಮುಂತಾದವು. ಈಗ ಅನ್ಯಭಾಷೆಗಳಿಂದ ಎರವಲು ಪಡೆದ ನಾಮರೂಪಗಳಿಗೆ 'ಇಸು' ಪ್ರತ್ಯಯ ಹತ್ತಿ ಕ್ರಿಯಾರೂಪಗಳನ್ನು ಸಾಧಿಸುವ ಪ್ರವೃತ್ತಿ ಕನ್ನಡದಲ್ಲಿ ಕಂಡುಬರುತ್ತದೆ. ಶೋಧಿಸು, ಆನಂದಿಸು, ಸುಖಿಸು, ರೂಪಿಸು, ಖೇದಿಸು, ಮಿಶ್ರಿಸು, ರವಾನಿಸು, ಟೈಪಿಸು ಮುಂತಾದುವು. ಕೆಲವು ಕ್ರಿಯಾರೂಪಗಳಿಗೆ 'ಇಸು' ಪ್ರತ್ಯಯ ಹತ್ತಿದ ನಂತರ ಹತ್ತಿದ ನಂತರ 'ಇಕೆ' ತದ್ಧಿತ ಪ್ರತ್ಯಯ ಸೇರಿಸುವ ಕ್ರಮವೂ ಇದೆ ಉದಾ. ಚಿಂತಿಸುವಿಕೆ, ವಿಚಾರಿಸುವಿಕೆ, ವಿವರಿಸುವಿಕೆ.

ಅನ್ಯಭಾಷೆಯ ಸ್ವೀಕೃತ ಶಬ್ದಗಳಿಗೆ ನಮ್ಮ ಭಾಷಾ ಭಂಡಾರದಲ್ಲಿರುವ ಸಾಮಗ್ರಿಗಳ ಸಹಾಯದಿಂದ ಹೊಸ ಪದಗಳನ್ನು ನಿರ್ಮಿಸಿ ಚಲಾವಣೆಗೆ ತರುವ ಟಂಕೀಕರಣ ಕ್ರಿಯೆ ಇತ್ತಿತ್ತಲಾಗಿ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿದೆ. ಭಾಷಾ ಆಧುನೀಕರಣಕ್ಕೆ ಕನ್ನಡ ಆಯ್ದುಕೊಂಡ ಪರ್ಯಾಯ ತಂತ್ರವಿದು. ಇದರ ಉದ್ದೇಶ ಕನ್ನಡದ ಪ್ರತ್ಯೇಕತನ ವನ್ನು ಸ್ಥಾಪಿಸುವುದೇ ಆಗಿದೆ ಪತ್ರಿಕೆಗಳಲ್ಲಿ ಬರುತ್ತಿರುವ ಕೆಲವು ಪ್ರಯೋಗಗಳನ್ನು ಗಮನಿಸಬೇಕು.

Input -	ಒಳಸುರಿತ	Pink -	ಕೆನ್ನೀಲ
Inner truth -	ಒಳನನ್ನಿ	Fiord -	ಕಿರುಕೊಲ್ಲಿ
Invester -	ವಿನಿಯೋಜಕ	Trend-setter -	ಮಾರ್ಗಸ್ಥಾಪಕ

ಮುಂತಾದವು.

ಅನ್ಯಭಾಷೆಯ ಶಬ್ದಗಳನ್ನು ಸ್ವೀಕರಿಸುವುದರ ಜೊತೆಗೆ ಅದನ್ನು ನಿರ್ದೇಶಿಸುವ ಶಬ್ದಗಳನ್ನು ತೆಗೆದುಕೊಳ್ಳದ ಕ್ರಿಯೆ ಈಗಾಗಲೇ ನಡೆಯುತ್ತಿದೆ. ಉದಾ. ಬಸ್ > ಬಸ್ಸು, ಕಾರ್ > ಕಾರು, ಬ್ಯಾಕ್ > ಬ್ಯಾಂಕು ಮುಂತಾದವು. ಆ ವೇಳೆಯಲ್ಲಿ ಕನ್ನಡ ಭಾಷೆಯ ರಚನೆಗೆ ತಕ್ಕಂತೆ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಮಾಡಬಹುದು. ವ್ಯಂಜನಾಂತ ಗಳನ್ನು ಸ್ವರಾಂತಗಳಾಗಿ ಪರಿವರ್ತಿಸುವ ಕ್ರಿಯೆ ಉತ್ತರ ಕರ್ನಾಟಕದ ವ್ಯವಹಾರಿಕ ಶಿಷ್ಟ ಕನ್ನಡದಲ್ಲಿ ಮತ್ತು ಪತ್ರಿಕೆಗಳಲ್ಲಿ ಕಂಡುಬರುತ್ತದೆ. ಅನ್ಯಭಾಷಾ ಸ್ವೀಕರಣ ಪದಗಳಿಗೆ -ತನ, ಗಾರ' ತದ್ಧಿತ ಪ್ರತ್ಯಯಗಳು ಹತ್ತಿಸಿ ಅನೇಕ ಹೊಸಪದಗಳು ಕನ್ನಡದಲ್ಲಿ ಬಳಕೆಯಾಗುತ್ತಿವೆ. ಉದಾ. ಕಳಪೆತನ, ದಿಲ್ದಾರತನ, ಉಡಾಫೆತನ, ಜವಾಬ್ದಾರಿತನ, ಬಾಲುಗಾರ, ಡಿಸ್ಕವರಿಗಾರ, ಬ್ಯಾಟುಗಾರ, ಹೊಡೆತಗಾರ, ಎಸೆತಗಾರ, ಪೋರ್ಟೈಗಾರ ಮುಂತಾದವು. ಗಾರ ಪ್ರತ್ಯಯ ಹತ್ತಿದ ನಂತರ 'ಇಕೆ' ಪ್ರತ್ಯಯ ಸರಿಸುವ ವಾಡಿಕೆಯೂ ಕಂಡುಬರುತ್ತದೆ. ಉದಾ. ಬಾಲುಗಾರಿಕೆ, ಬ್ಯಾಟುಗಾರಿಕೆ, ಇಂತಹ ಹೊಸ ರೂಪಗಳ ಸೃಷ್ಟಿಗೆ ಸಾದೃಶ್ಯ ಸೃಷ್ಟಿ ಕಾರಣವಾಗಿದೆ.

ಕನ್ನಡದ ಕೆಲವು ರೂಪಗಳಿಗೆ-'ಇಕೆ' ಪ್ರತ್ಯಯವನ್ನು ನೇರವಾಗಿ ಹಚ್ಚಬಹುದು. ಉದಾ. ಕೇಳಿಕೆ, ಹೇಳಿಕೆ, ಸಲ್ಲಿಕೆ, ಬೇಡಿಕೆ, ಪ್ರಣಾಳಿಕೆ ಮುಂತಾದವು 'ತೆ' ಪ್ರತ್ಯಯವನ್ನು ನಾಮರೂಪಗಳಿಗೆ ಹಚ್ಚಿ ಹೊಸ ರೂಪಗಳನ್ನು ಸೃಷ್ಟಿಯಾಗುತ್ತವೆ. ಉದಾ. ಗಂಭೀರತೆ, ಉದಾರತೆ, ಧೀರತೆ, ಉಚಿತತೆ ಮುಂತಾದವು 'ಗ' ಪ್ರತ್ಯಯ ಬಳಸಿ ನಾಮರೂಪಗಳನ್ನು ಸೃಷ್ಟಿಸುವ ಬಗೆ ಇತ್ತೀಚಿಗಾಗಿ ಕಾಣಬಹುದಾಗಿದೆ. ಉದಾ. ಓಮಗ, ಅದರಂತೆ ಕ್ರೀಡಾಳು, ಭಾಗಾಳು, ಸ್ಪರ್ಧಾಳು, ಬುದ್ಧಿಗೇಡಿ, ತಿಳಿಗೇಡಿ, ಕಿಡಿಗೇಡಿ ಮುಂತಾದ ರೂಪಗಳು ಸಾದೃಶ್ಯ ಮೂಲದಿಂದ ಬಳಕೆಯಾಗುತ್ತಲಿವೆ.

ಕನ್ನಡದಲ್ಲಿ ಬಳಕೆಯಾಗುವ ಸಂಸ್ಕೃತ ವಿಶೇಷಣಗಳಿಗೆ ಈಯ, ಅರ್ಹ, ಪ್ರತ್ಯಯಗಳು ಮೊದಲು ಸಮೂಹ ಮಾಧ್ಯಮಗಳಲ್ಲಿ ಮಾತ್ರ ಬಳಕೆಯಾಗುತ್ತಿದ್ದವು. ಈಗ ಔಪಚಾರಿಕ ಸಂದರ್ಭಗಳಲ್ಲಿಯೂ ಧಾರಾಳವಾಗಿ ಬಳಕೆಯಾಗುತ್ತಿವೆ(ಸಭೆ, ಸಮಾರಂಭಗಳಲ್ಲಿ, ಪಾಠ ಪ್ರವಚನಗಳಲ್ಲಿ, ಭಾಷಣಗಳಲ್ಲಿ). ಉದಾ. ಪ್ರಶಂಸನೀಯ, ಪ್ರಸಂಸನಾರ್ಹ, ಮಾನವೀಯ, ಶಿಕ್ಷಾರ್ಹ ಮುಂತಾದುವು. ಸಂಸ್ಕೃತ ಪದಗಳನ್ನು ಸ್ವೀಕರಿಸಿದ ನಂತರ ಸಂಸ್ಕೃತ ಪದರಚನೆಗಳಲ್ಲಿ ಕಂಡುಬರುವ ಪೂರ್ವ ಪ್ರತ್ಯಯ ಹಚ್ಚುವ ಕ್ರಮ ಕನ್ನಡ ಪದಗಳಿಗೂ ರೂಢಿಯಾಯಿತು. ಉದಾ. ಅಸಹಾಯಕ, ಅನಿವಾಸಿ ಕನ್ನಡ ಧಾತುಗಳಿಗೆ ಕೆಲವು ದೇಸಿ ಪದಗಳು ಪೂರ್ವ ಪ್ರತ್ಯಯಗಳಾಗಿ ಬಳಕೆಯಾಗುತ್ತಿವೆ. ಉದಾ. ಮೇಲ್ಮನೆ, ಮೇಲ್ಜಾತಿ, ಮುಂಬಡ್ತಿ, ಹಿಂಪುಟ ಇವು ಈಗಾಗಲೇ ಔಪಚಾರಿಕ ಮತ್ತು ಅನೌಪಚಾರಿಕ ಸಂದರ್ಭಗಳಲ್ಲಿ ಕಂಡುಬರುತ್ತವೆ.

ಇಂಗ್ಲಿಶ್ ಭಾಷೆಯ ಸಂಪರ್ಕ ನಮಗೆ ಉಂಟಾದ ಮೇಲೆ ಅನೇಕ ಪದಗಳನ್ನು, ನುಡಿಕಟ್ಟುಗಳನ್ನು ಶಬ್ದಶಃ ಭಾಷಾಂತರಿಸಿದ್ದೇವೆ. Anti-body-ಪ್ರತಿಕಾಯ, Ply-wood-ಪದರ ಹಲಗೆ, Soft-Ware-ಮೃದು ಉಪಕರಣ, Rain forest-ಮಳೆಕಾಡು, Search-light-ಶೋಧಕ ದೀಪ, Home State-ತೌರುರಾಜ್ಯ, Red Indian-ಕೆಂಭಾರತಿ ಮುಂತಾದುವು ಆಂಗ್ಲ ಭಾಷೆಯ ಪದಪುಂಜದಲ್ಲಿ ಒಂದು ಭಾಗವನ್ನು ಮಾತ್ರ ಭಾಷಾಂತರಿಸಿ ಇನ್ನೊಂದನ್ನು ಶಬ್ದ ಸ್ವೀಕರಣ ಮಾಡಿಕೊಳ್ಳುತ್ತವೆ(ನಮ್ಮ ಪ್ರಾಚೀನರ ಪ್ರಕಾರ ಇದು ಅರಿಸಮಾಸ). ಉದಾ. Hand pumb-ಕೈ ಪಂಪು, Atom bomb-ಆಟಂಬಾಬ್ ರೈಲ್ ಗಾಡಿ, ಬಸ್ ಗಾಡಿ ಈ ಪದಪುಂಜಗಳಲ್ಲಿ ಪಂಪ್, ಬಾಂಬ್ ಇವು ಈಗಾಗಲೇ ಕನ್ನಡದಲ್ಲಿ ಸ್ವೀಕೃತ ಶಬ್ದಗಳಾಗಿವೆ. ಅವುಗಳನ್ನು ಅನುವಾದಿಸಲು ಹೊರಟರೆ ಸಂವಹನ ಸಮಸ್ಯೆ ಉಂಟಾಗುತ್ತದೆ. ಆಧುನೀಕರಣ ಪ್ರಕ್ರಿಯೆಯಲ್ಲಿ ಇಂತಹ ಹಲವಾರು ಕಸಿ ರೂಪಗಳು ಬಳಕೆಯಾಗುತ್ತವೆ.

ಕನ್ನಡ ಪದಗಳಿಗೆ ಅನ್ಯಭಾಷೆಯ ಪದಗಳು ಸೇರಿ ಮಿಶ್ರ ಸಮಾಸಗಳು ಸಿದ್ಧವಾಗುತ್ತವೆ. ಉದಾ. ಅದ್ಯತಾಪಟ್ಟಿ, ನಡುಗಾಲ, ಎದುರು ಕೋಪಿ, ಹಗಲು ಗುರುಡ, ಛಾಯಾಪರೀಕ್ಷೆ, ಅಸುರವೇಗ ಮುಂತಾದುವು. ಕ್ರೀಡಾ ರಜಿಸ್ಟರಿನಲ್ಲಿ ಇಂಗ್ಲೀಷ

ನಾಮಪದಗಳಿಗೆ ಕನ್ನಡ ನಾಮಪದ, ಕ್ರಿಯಾಪದಗಳು ಸೇರಿ ಸಮಾಸ ಪದಗಳು ಬಳಕೆಯಾಗುತ್ತಿವೆ. ಉದಾ. ಸ್ಕೋರ್ ಬಾಲ್, ಬ್ಯಾಟಿಂಗ್ ಬಾಲ್, ಟೆಸ್ಟ್ ವಿರಾಮ, ಟೆಸ್ಟ್ ವಿಜಯ, ಕ್ಯಾಚ್ ಇತ್ತು, ರನ್ ಚಚ್ಚು, ವಿಕೆಟ್ ನಷ್ಟ, ಬ್ಯಾಟ್ ಬೀಸು, ಅಡ್ಜಸ್ಟ್ ಮಾಡು, ಅಂಪೈರ್ ನಿರ್ಣಯ, ಆಂಗ್ಲ ಪದಗಳು ಭಾಷಾಂತರವಾಗಿ ಕನ್ನಡದಲ್ಲಿ ಸಮಾಸ ಪದಗಳಾಗುತ್ತವೆ. Mass-Media-ಸಮೂಹ ಮಾಧ್ಯಮ, Rain forest-ಮಳೆಕಾಡು, Tri-party-ತ್ರಿಪಕ್ಷೀಯ, Auditorin-ಶ್ರಾವಕ ಸ್ಥಾನ ಮುಂತಾದ ಪದಗಳು ಕನ್ನಡ ಭಾಷೆಯ ಜಾಯಮಾನಕ್ಕೆ ತಕ್ಕಂತೆ ಬಳಕೆಯಾಗುತ್ತವೆ.

ಕನ್ನಡ ವಾಕ್ಯ ರಚನೆಗಳ ಮೇಲೆ ಆಧುನೀಕರಣ ಪ್ರಭಾವ ಸಾಕಷ್ಟು ಆದರೂ ಈ ಬಗ್ಗೆ ಅಧ್ಯಯನಗಳು ನಡೆದಿಲ್ಲ ಕನ್ನಡದಲ್ಲಿ(ದ್ರಾವಿಡ ಭಾಷೆಗಳಲ್ಲಿ) ಇಲ್ಲದ ಕರ್ಮಣಿ ಪ್ರಯೋಗ ದಿನಪತ್ರಿಕೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಉದಾ. ಮಂತ್ರಿಗಳು ಹೇಳಲ್ಪಟ್ಟರು, ಇದು ಅವರಿಂದ ಹೇಗೆ ಸಾಧಿಸಲ್ಪಟ್ಟವು ಮುಂತಾದವು. ಅರ್ಥ ಸಂದಿಗ್ಧತೆಯನ್ನು ಹೊಂದಿದ ವಾಕ್ಯ ರಚನೆಗಳು ವೃತ್ತಪತ್ರಿಕೆಗಳಲ್ಲಿ ಬಳಕೆಯಾಗುತ್ತವೆ. ಉದಾ. ತಮ್ಮ ಭ್ರಷ್ಟ ಅಧಿಕಾರಿಗಳನ್ನು ಮಂತ್ರಿಗಳು ವರ್ಗಾಯಿಸಿದರು. ತನ್ನ ಪುಸ್ತಕವನ್ನು ಹರಿದ ಹುಡುಗನಿಗೆ ರಾಜು ಬೈದನು. ಈ ವಾಕ್ಯಗಳಲ್ಲಿ ಬಳಕೆಯಾದ ವ್ಯಾಕರಣ ಘಟಕಗಳ ನಿಕಟ ಸಂಬಂಧವನ್ನು ಗುರುತಿಸುವುದು ಕಷ್ಟ, ಇದರಿಂದ ಅರ್ಥ ಸಂದಿಗ್ಧತೆ ಉಂಟಾಗುತ್ತದೆ. ಪತ್ರಿಕೆಗಳಲ್ಲಿ ಸೂಚಿತಾರ್ಥವನ್ನು ಕೊಡುವ ವಾಕ್ಯಗಳು ಕಾಣಿಸುತ್ತವೆ. ಉದಾ. ಅವನು ದುಡ್ಡು ಎಂದರೆ ಸಾಯುತ್ತಾನೆ(ಹಣದ ಬಗ್ಗೆ ಆಸೆ ಇದೆ). ಸಿನಿಮಾ ಎಂದರೆ ಪ್ರಾಣ ಬಿಡುತ್ತಾನೆ(ಸಿನಿಮಾ ನೋಡುವುದರ ಬಗ್ಗೆ ತುಂಬ ಉತ್ಸಾಹವಿದೆ).

ಪತ್ರಿಕೆಗಳ ಕ್ರೀಡಾ ಭಾಗದಲ್ಲಿಯ ಶೀರ್ಷಿಕೆ ಬರಹಗಳಲ್ಲಿ ಆಟದ ಪರಿಣಾಮ, ಗತಿಯನ್ನು ಹೇಳುವಾಗ, ವಾಕ್ಯಗಳ ಮಧ್ಯ ಆಂಗ್ಲಪದಗಳು ವಿಪುಲವಾಗಿ ಸೇರುತ್ತವೆ. ಆಟದಲ್ಲಿ ಚೆನ್ನಾಗಿ ಆಡಿದ ತಂಡದ ಪರವಾಗಿ ಹೇಳುವಾಗ

ಭಾರತಕ್ಕೆ ಇನ್ನಿಂಗ್ಸ್ ಜಯ
ಇನ್ನಿಂಗ್ಸ್ ಜಯದ ಹಾದಿಯಲ್ಲಿ ಭಾರತ
ಸತತ ಇನ್ನಿಂಗ್ಸ್ ಜಯದತ್ತ ಭಾರತ
ಭಾರತಕ್ಕೆ ಇನ್ನಿಂಗ್ಸ್ ವಿಜಯದ ಹ್ಯಾಟ್ರಿಕ್
ಉತ್ತಮ ಸ್ಥಿತಿಯಲ್ಲಿ ಭಾರತ
ಗೆಲುವಿನತ್ತ ಭಾರತ ದಾಪುಗಾಲು ಮುಂತಾದವು.

ಚೆನ್ನಾಗಿ ಆಡಿದ ತಂಡದ ಸ್ಥಿತಿಯನ್ನು ಹೇಳುವಾಗ

ಶ್ರೀಲಂಕಾಕ್ಕೆ ಫಾಲೋ ಆನ್ ಭೀತಿ
ಸ್ಪಿನ್ನಿಗೆ ಮತ್ತೆ ಕುಸಿದ ಶ್ರೀಲಂಕಾ

ಭಾರತದ ಸ್ಪಿನ್ನಿಗೆ ಚಡಪಡಿಸಿದ ಆಸ್ಟ್ರೇಲಿಯಾ
ಮತ್ತೆ ಕಾಲು ಜಾರಿದ ಶ್ರೀಲಂಕಾ

ಮುಂತಾದವು ಇಂಗ್ಲೀಷ ವಾಕ್ಯ ರಚನೆಯ ಮಾದರಿಯಲ್ಲಿ ಕನ್ನಡದಲ್ಲಿ ಅನುವಾದಗಳಾಗಿವೆ. ಇಂತಹ ವಾಕ್ಯಗಳು ಕನ್ನಡದಲ್ಲಿ ಬಳಕೆಯಾಗುತ್ತಿವೆ.

ಉಪಭಾಷಾ ರೂಪಗಳು ಬರವಣಿಗೆಯ ರೂಪದಲ್ಲಿ ಪಡೆಮುಕೊಂಡಿವೆ. ಸಣ್ಣ ಪತ್ರಿಕೆಗಳಲ್ಲಿ ಈ ಪ್ರಕ್ರಿಯೆ ಧಾರಾಳವಾಗಿ ಕಂಡುಬರುತ್ತಿದೆ. ಲೋಕ ದರ್ಶನ, ಗೋಕಾಕ ಟೈಮ್ಸ್ ಮುಂತಾದ ಬೆಳಗಾವಿ ಪ್ರದೇಶದ ಸಣ್ಣ ಪತ್ರಿಕೆಗಳಲ್ಲಿ ಆ ಭಾಗದ ಉಪಭಾಷೆ ರೂಪಗಳು ದೊರೆಯುತ್ತವೆ. ಚಲೋ, ರೊಕ್ಕ. ಸೊಂಡಿ. ಲವುಟ್. ಗೆಬಿಕಿ ಮುಂತಾದವು ಮೈಸೂರು ಪ್ರದೇಶದ ಸಣ್ಣ ಪತ್ರಿಕೆಗಳಲ್ಲಿ ಬೋಕ್ಗ. ಸಾಮ್ಮೆ. ಸೊಗಸು. ತರುಗಣೆ ಮುಂತಾದವು ಆ ಪ್ರದೇಶದ ನಿತ್ಯಜೀವನದಲ್ಲಿ ಬಳಕೆಯಾಗುವ ಆಡುರೂಪಗಳು ಬರಹಕ್ಕಿಳಿದಿವೆ. ಆಗಾಗ್ಗೆ ಮೈಸೂರು ಪ್ರದೇಶದ ಉಪಭಾಷಾ ರಚನೆಗಳು. ವಾಕ್ಯಸರಣಿ ಬೆಳಗಾವಿ ಪ್ರದೇಶದ ಸಣ್ಣ ಪತ್ರಿಕೆಗಳಲ್ಲಿ ಹಾಗೂ ಬೆಳಗಾವಿ ಪ್ರದೇಶದ ಆಡುರೂಪಗಳು. ಮೈಸೂರು ಪ್ರದೇಶದ ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳುತ್ತವೆ. ಉದಾ. ಸೊಗಸು. ರೊಕ್ಕ. ಮಂದಿ. ಜನ ಮುಂತಾದ ರೂಪಗಳು ಎಲ್ಲ ಪ್ರದೇಶದ ಕನ್ನಡಿಗರಿಗೆ ಸುಲಭವಾಗಿ ಈಗ ಅರ್ಥವಾಗುತ್ತವೆ. ಭಾಷೆಯ ಆಧುನೀಕರಣ ಪ್ರಭಾವದಿಂದ ಉಪಭಾಷಾ ರೂಪಗಳು ಬರಹಕ್ಕೆ ಇಳಿದಿರುವುದರಿಂದ ಭಾಷಿಕರಿಗೆ ಸಂವಹನ ಸಮಸ್ಯೆ ನಿವಾರಣೆಯಾಗಿದೆ ಎಂದೇ ಹೇಳಬೇಕು.

ಭಾಷಾ ಆಧುನೀಕರಣ ಪ್ರಕ್ರಿಯೆ ನಿರಂತರವಾಗಿ ಹರಿಯುವ ಧಾರೆಯಿದಂತೆ. ಪರಿವರ್ತನ ಶೀಲತೆ ಅದರ ಲಕ್ಷಣ. ಮೇಲೆ ಹೇಳಿದ ನಿಯಮಗಳು. ಉದಾಹರಣೆಗಳು ಸ್ಥಿರವಾಗಿ ನಿಲ್ಲಲಾರವು. ಅಭಿವ್ಯಕ್ತಿಸುವ. ಅರ್ಥೈಸುವ. ವಿಧಾನಗಳಲ್ಲಿ ಬದಲಾವಣೆಯಾಗುತ್ತಾ ಹೋಗುತ್ತವೆ ಎಂಬುದನ್ನು ಮರೆಯಬಾರದು. ಆಧುನೀಕರಣದ ಅಧ್ಯಯನ ಕನ್ನಡದಲ್ಲಿ ನಿರೀಕ್ಷಿಸಿದ ಮಟ್ಟದಲ್ಲಿ ನಡೆದಿಲ್ಲ. ಪತ್ರಿಕೋದ್ಯಮ. ಭಾಷಾವಿಜ್ಞಾನ. ಮನೋವಿಜ್ಞಾನ. ಸಮಾಜಶಾಸ್ತ್ರ ಮುಂತಾದ ವಿಷಯಗಳ ಸಹಾಯ ಪಡೆದು ಆಧುನೀಕರಣ ಅಧ್ಯಯನ ನಡೆಯಬೇಕಾಗಿದೆ. ಶಿಕ್ಷಣ. ಆಡಳಿತ. ಸಮೂಹ ಮಾಧ್ಯಮ. ವ್ಯವಹಾರ ಮುಂತಾದ ವಲಯಗಳಲ್ಲಿ ಭಾಷೆ ಬಳಕೆಯಾಗುತ್ತಿದೆ. ಅದು ವ್ಯವಸ್ಥಿತವಾಗಿ ಬಳಕೆಯಾಗಬೇಕು. ಭಾಷಾವಿಜ್ಞಾನಿಗಳು ಮೇಲೆ ಹೇಳಿದ ವಿವಿಧ ವಿಷಯಗಳ ವಿದ್ವಾಂಸರ ಸಹಾಯ ಪಡೆದು ಭಾಷಾ ಯೋಜನೆಗಳನ್ನು ರೂಪಿಸಬೇಕು. ಆ ವೇಳೆಯಲ್ಲಿ ಆಧುನೀಕರಣಕ್ಕೆ ಆದ್ಯ ಗಮನಕೊಡಬೇಕು. ಕನ್ನಡ ಭಾಷೆಯನ್ನು ಸಾರ್ಥಕವಾದ ರೀತಿಯಲ್ಲಿ ಬಳಸಲಿಕ್ಕೆ. ಬೆಳೆಸಲಿಕ್ಕೆ ಆಧುನೀಕರಣ ಮತ್ತು ಪ್ರಮಾಣೀಕರಣದ ಚೌಕಟ್ಟಿನಲ್ಲಿ ಕನ್ನಡ ಭಾಷೆಯ ಅಧ್ಯಯನ ನಡೆಯಬೇಕಾಗಿದೆ ಎಂದು ಸೂಚಿಸಬಯಸುತ್ತೇನೆ.

೨

ಆಂಗ್ಲದಿಂದ ಕನ್ನಡಕ್ಕೆ ಅನುವಾದವಾದ ಕೆಲವು ಪದಗಳಲ್ಲಿ ಆಂಗ್ಲಪದಗಳ ಅಂತ್ಯ Ization/Isation ಪ್ರತ್ಯಯವಿದ್ದರೆ ಅದಕ್ಕೆ ಸಂವಾದಿಯಾಗಿ 'ಈಕರಣ' ಪ್ರತ್ಯಯವನ್ನು ಕನ್ನಡದಲ್ಲಿ ಬಳಸುವ ರೂಢಿ ಇದೆ. ಉದಾ:

Modernization	ಆಧುನೀಕರಣ
Standernization	ಪ್ರಮಾಣೀಕರಣ
Nationalization	ರಾಷ್ಟ್ರೀಕರಣ
Westernization	ಪಾಶ್ಚಾತೀಕರಣ
Sanskrization	ಸಂಸ್ಕೃತೀಕರಣ
Urbanization	ನಗರೀಕರಣ
Politicization	ರಾಜಕೀಕರಣ
Traditionalization	ಸಾಂಪ್ರದಾಯೀಕರಣ
Islamization	ಇಸ್ಲಾಮೀಕರಣ
Centralization	ಕೇಂದ್ರೀಕರಣ
Industrialization	ಔದ್ಯೋಗೀಕರಣ
D-Centralization	ವಿಕೇಂದ್ರೀಕರಣ
labialization	ಓಷ್ಠಿಕರಣ
palatalization	ತಾಲವೀಕರಣ
Velarization	ಕಂಠೀಕರಣ
Nationalization	ರಾಷ್ಟ್ರೀಕರಣ
Commercialization	ವಾಣಿಜ್ಯಕರಣ

ಮುಂತಾದುವು.

ಇಂತಹ ಅನೇಕ ರೂಪಗಳು ಕನ್ನಡ ಭಾಷಾ ಬಳಕೆಯ ಬೇರೆ ಬೇರೆ ವಲಯಗಳಲ್ಲಿ ಬಳಕೆಯಾಗುತ್ತವೆ. Ization/Isation ಸಮಾನವಾಗಿ 'ಈಕರಣ' ಪ್ರತ್ಯಯ ಹತ್ತುವಲ್ಲಿ ಒಂದು ನಿಯಮವಿರುವಂತೆ ಕಾಣುತ್ತದೆ.

ಆಧುನಿಕ + ಈಕರಣ - ಆಧುನೀಕರಣ
ಕೇಂದ್ರೀಯ + ಈಕರಣ - ಕೇಂದ್ರೀಕರಣ
ಔದ್ಯೋಗಿಕ + ಈಕರಣ - ಔದ್ಯೋಗೀಕರಣ

ಈ ಉದಾಹರಣೆಗಳನ್ನು ಗಮನಿಸಿದಾಗ ಅವು ಮುಂದೆ ಸಮಾಸ ಪದಗಳಾಗುವಾಗ ಪೂರ್ವಪದ ಕೊನೆಯ ವರ್ಣ ಲೋಪವಾಗುತ್ತವೆ(ಕ.ಯ.ಕ.) (ಅದರ ಹಿಂದಿನ ವರ್ಣ

ದೀರ್ಘವಾಗುತ್ತದೆ). ಈ ನಿಯಮ 'ಈಕರಣ' ಹತ್ತುವ ಎಲ್ಲ ಪದರಚನೆಗಳಲ್ಲಿಯೂ ಕಂಡುಬರುತ್ತದೆ. ಇದು ಹೆಚ್ಚಾಗಿ ಕನ್ನಡದಲ್ಲಿ ಬಳಕೆಯಾಗುವ ಸಂಸ್ಕೃತ ನಾಮಪದ ಪುಂಜಗಳಿಗೆ ಮಾತ್ರ ಅನ್ವಯವಾಗುತ್ತದೆ. ಸಂಸ್ಕೃತ ಪ್ರಕೃತಿ ರೂಪಕ್ಕೆ 'ಈಕರಣ' ಪ್ರತ್ಯಯ ಹಚ್ಚಿ ಸಮಾಸ ರೂಪಗಳು ಸಿದ್ಧವಾಗುತ್ತವೆ.

ಆಧುನಿಕ + ಈಕರಣ - ಆಧುನೀಕರಣ - ಆಧುನೀಕರಣ

ಆಧುನೀಕರಣವಾಗುವಲ್ಲಿ ಸೌಲಭ್ಯಾಕಾಂಕ್ಷೆ ಕಾರಣವಲ್ಲ, ಸಂಧಿಕ್ರಿಯೆ ನಡೆಯುತ್ತದೆ ಎಂಬುದನ್ನು ಗಮನಿಸಬೇಕು. 'ಈಕರಣ' ಎಂದರೆ ಮಾಡುವಂತಹದು ಎಂಬರ್ಥವನ್ನು ಸೂಚಿಸುತ್ತದೆ.

ಉದಾಹರಣೆಗೆ: ಕೇಂದ್ರೀಕರಣ-ಕೇಂದ್ರೀಕರಣ ಮಾಡುವುದು ಎಂದರ್ಥ. ಕೈಗಾರೀಕರಣ-ಕೈಗಾರೀಕರಣ ಮಾಡುವುದು(ಮಾಡುವಂತಹದು) ಎಂಬರ್ಥ. ಭಾಷೆಯಲ್ಲಿ ಬಳಕೆಯಾಗುವ ಇಂತಹ ಪದರಚನೆಗಳನ್ನು ಅವುಗಳ ಹಿಂದಿನ ಸಮಾಜೋ-ಭಾಷಿಕ ಕ್ರಿಯೆಗಳ ಸಂದರ್ಭವನ್ನು ಗಮನಿಸಬೇಕಾಗುತ್ತದೆ.

ಮೇಲಿನ ಉದಾಹರಣೆಗಳಲ್ಲಿ ಪೂರ್ವಪದಗಳಾದ Moder, Standard, Central ಮುಂತಾದವುಗಳನ್ನು ನಮ್ಮ ಭಾಷಾ ರಚನೆಗೆ ಅನುಗುಣವಾಗಿ ಸ್ವೀಕರಿಸಿದ್ದೇವೆ (ಅವೆಲ್ಲ ಶಬ್ದ ಸ್ವೀಕರಣಗಳಾಗಿವೆ). ಆದರೆ Ization ಮತ್ತು ಅದಕ್ಕೆ ಸಂವಾದಿಯಾಗಿ ಬರುವ 'ಈಕರಣ' ಪ್ರತ್ಯಯ ಕನ್ನಡದಲ್ಲಿ ಬಳಕೆಯಾಗುವ ಸಂಸ್ಕೃತ ಪದಗಳಿಗೆ ಅನ್ವಯವಾಗುತ್ತವೆ. ಸಾದೃಶ್ಯ ಸೃಷ್ಟಿಯಿಂದ ಅನೇಕ ಹೊಸ ಪದಗಳು ಸೃಷ್ಟಿಯಾಗಿ ಬಳಕೆಯಾಗುತ್ತವೆ. ಇದರಿಂದ ಕನ್ನಡ ಶಬ್ದಕೋಶ ಬೆಳವಣಿಗೆಯೂ ಆಗುತ್ತದೆ. ಅಲ್ಲದೆ ನಾವು ಬಳಸುವ ಈ ಮಾದರಿಯ ರೂಪಗಳು ವಿದ್ಯಾವಂತ ಅವಿದ್ಯಾವಂತ ಭಾಷಿಕರಿಗೆ ಅರ್ಥಗ್ರಹಣಕ್ಕೆ, ಅಭಿವ್ಯಕ್ತಿಕರಣಕ್ಕೆ ಹಾಗೂ ಸಂವಹನಕ್ಕೆ ಯಾವುದೇ ರೀತಿಯ ತೊಂದರೆಯಾಗದಿರುವುದರಿಂದ ಕನ್ನಡ ಭಾಷೆಯ ಪದರಚನೆಯ ಜಾಯಮಾನಕ್ಕೆ ಅವು ಹೊಂದಿಕೆಯಾಗಿವೆ. ಆದರೂ ಒಂದು ಮಾತು Ization/Isation ಸಂವಾದಿಯಾಗಿ 'ಈಕರಣ' ಪ್ರತ್ಯಯದ ಬಳಕೆಯ ಬಗ್ಗೆ ನಾನು ಹೇಳಿರುವ ನಿಯಮ ಕೊನೆ ಅಲ್ಲ. ಊಹೆ ಮಾಡಿದೆನಷ್ಟೇ ಆ ಊಹೆಗೆ ಹೆಚ್ಚಿನ ಆಧಾರಗಳು ಖಂಡಿತವಾಗಿ ಅಗತ್ಯ. ಈ ಬಗ್ಗೆ ಅಥವಾ ಆಧುನೀಕರಣ ಪ್ರಭಾವದಿಂದ ಭಾಷೆಯಲ್ಲಿ ಕಾಣಿಸಿಕೊಳ್ಳುವ ಇಂತಹ ಭಾಷಿಕ ಪ್ರಕ್ರಿಯೆಗಳ ಬಗ್ಗೆ ಯಾರಾದರೂ ತಮ್ಮ ವಿಚಾರಗಳನ್ನು ಮುಂದುವರಿಸಬಹುದಾಗಿದೆ.

ಅಡಿಟಿಪ್ಪಣಿಗಳು

೧. ಎಂ. ಚಿದಾನಂದಮೂರ್ತಿ-ವಾರ್ತಾ ಮಾಧ್ಯಮದಲ್ಲಿ ಕನ್ನಡ ಭಾಷೆಯ ಆಧುನೀಕರಣ(ವಾಗರ್ಥ) ಎಸ್.ಎನ್. ಶ್ರೀಧರ-ಭಾಷಾ ಆಧುನೀಕರಣ; ರಾಚನಿಕ ಮತ್ತು ಸಮಾಜೋಭಾಷಿಕ ಆಯಾಮಗಳು 'ಸಂಶೋಧನ' (ಎಂ. ಚಿದಾನಂದ ಮೂರ್ತಿ ಗೌರವ ಸಂಪುಟ) ಸಂ. ಲಕ್ಷ್ಮಣ ತೆಲಗಾವಿ.

೨. ಸಮೂಹ ಮಾಧ್ಯಮಗಳಲ್ಲಿ ಬಳಕೆಯಾಗುವ ಹೊಸ ಹೊಸ ಪದಗಳನ್ನು ಗುರುತಿಸಿ ಅವುಗಳಿಗೆ ಅರ್ಥವನ್ನು ದಾಖಲಿಸುವ ಪ್ರಯತ್ನವನ್ನು ಕನ್ನಡ ವಿಶ್ವವಿದ್ಯಾಲಯದ 'ನಮ್ಮ ಕನ್ನಡ' ಮಾಸಪತ್ರಿಕೆ ಮಾಡಿಕೊಡುತ್ತದೆ (ಸಂ.) ಕೆ.ವಿ. ನಾರಾಯಣ, ಬಿ. ಸುಜ್ಞಾನಮೂರ್ತಿ.

೩. ೧೯೯೪ಳರಲ್ಲಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಭಿವೃದ್ಧಿ ವಿಭಾಗವು ಕನ್ನಡದಲ್ಲಿ ನಡೆಯುತ್ತಿರುವ ಭಾಷಾ ಬಳಕೆಯ ಬದಲಾವಣೆಗಳನ್ನು ಕಂಡುಕೊಳ್ಳುವ 'ದಿನದಿನ' ಎಂಬ ಯೋಜನೆಯನ್ನು ಹಮ್ಮಿಕೊಂಡಿತ್ತು. ಪ್ರತಿದಿನ ಭಾಷಾ ಬಳಕೆಯ ಹೊಸ ಸಾಧ್ಯತೆಗಳ ಬಗೆಗೆ ವಿಶಿಷ್ಟ ಪದ, ವಾಕ್ಯ ಪ್ರಯೋಗದ ಬಗ್ಗೆ ಕೆಲವು ಸಮಸ್ಯೆಗಳನ್ನು ಕೊಟ್ಟು ಅವುಗಳಿಗೆ ಪ್ರತಿಕ್ರಿಯೆಗಳನ್ನು ಕೇಳಲಾಗುತ್ತಿತ್ತು. ನಾನೂ ಸೇರಿದಂತೆ ಅನೇಕರು ಪ್ರತಿಕ್ರಿಯಿಸುತ್ತಿದ್ದರು. ಆ ಸಮಸ್ಯೆಗಳಿಗೆ ಉತ್ತರ ರೂಪದಲ್ಲಿ ನನ್ನ ಪ್ರತಿಕ್ರಿಯೆಗಳನ್ನು ಈ ಲೇಖನದಲ್ಲಿ ಬಳಸಿಕೊಂಡಿದ್ದೇನೆ.

೪. 'ಗಾರ' ತದ್ಧಿತ ಪ್ರತ್ಯಯ ಹತ್ತಿದ ರೂಪಗಳು ಕ್ರೀಡಾ ರಿಜಿಸ್ಟರಿನಲ್ಲಿ ಕಂಡುಬರುತ್ತವೆ.

ಸಹಾಯಕ ಗ್ರಂಥಗಳು ಮತ್ತು ಲೇಖನಗಳು

೧. J.A.Fishman (Eds), 1977, Reddings in the Sociology of Language.

೨. Rene Appel and Pienter Muysken, 1992, Language Contact and Bilingualisom.

೩. ಚಿದಾನಂದಮೂರ್ತಿ ಎಂ., ೧೯೮೨, 'ವಾರ್ತಾ ಮಾಧ್ಯಮದಲ್ಲಿ ಕನ್ನಡ ಭಾಷೆಯ ಆಧುನೀಕರಣ', ವಾಗರ್ಥ, ಭಾಷ್ಕ ಪ್ರಕಾಶನ, ಬೆಂಗಳೂರು.

೪. ನಾರಾಯಣ ಕೆ.ವಿ. ಮತ್ತು ಸುಜ್ಞಾನಮೂರ್ತಿ ಬಿ. (ಸಂ.), 'ನಮ್ಮ ಕನ್ನಡ' (೧ ರಿಂದ ೮ ಸಂಚಿಕೆಗಳು), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ಶ್ರೀಧರ ಎಸ್.ಎನ್., ೧೯೯೩, 'ಭಾಷಾ ಆಧುನೀಕರಣ: ರಾಚನಿಕ ಮತ್ತು ಸಮಾಜೋಭಾಷಿಕ ಆಯಾಮಗಳು' (ಅನು: ಡಾ. ಎಸ್.ಎಸ್. ರೇಣುಕಾರಾಧ್ಯ), 'ಸಂಶೋಧನ' (ಎಂ. ಚಿದಾನಂದಮೂರ್ತಿ ಗೌರವ ಸಂಪುಟ), ಸಂ. ಲಕ್ಷ್ಮಣ ತೆಲಗಾವಿ.

೯

ಎರಡು ಉಪಭಾಷಾ ಪರಿಸರದಲ್ಲಿ ಧ್ವನಿ ವ್ಯತ್ಯಾಸಗಳು

ಭಾಷೆ ನಿರಂತರವಾಗಿ ಬದಲಾಗುತ್ತ ಬೆಳೆಯುತ್ತಿರುತ್ತದೆ. ಬಳಕೆ ಮತ್ತು ಉಚ್ಚಾರಣೆಯಲ್ಲಿ ಆದಷ್ಟು ಸರಳ ಹಾಗೂ ಸುಲಭಗೊಳಿಸುವುದು ಈ ಬದಲಾವಣೆ ಮುಖ್ಯ ಉದ್ದೇಶ. ಭಾಷೆಯ ರಚನೆಯಲ್ಲಾಗುವ ಬದಲಾವಣೆ ಮೊದಲು ಧ್ವನಿರಚನೆ, ಪದರಚನೆಯಲ್ಲಿ ಕಾಣಿಸಿಕೊಂಡು ನಂತರ ಉಪಭಾಷೆಗಳ ಅಸ್ತಿತ್ವಕ್ಕೆ ಕಾರಣವಾಗುವುದು. ಒಂದು ಭಾಷಾರಚನೆಯಲ್ಲಿ ಕಂಡುಬರುವ ಬದಲಾವಣೆಗೆ ಆ ಭಾಷೆಯಲ್ಲಿ ಕಂಡು ಬರುವ ಧ್ವನಿ ಬದಲಾವಣೆ ಪ್ರಮುಖ ಪಾತ್ರವಹಿಸುತ್ತದೆ.[೧] ಇದಕ್ಕೆ ಆ ಪ್ರದೇಶದ ಪರಿಸರ, ಕಾಲ, ಸಾಮಾಜಿಕ ವರ್ಗಗಳು ಕಾರಣವಾಗಿ ತತ್ಪರಿಣಾಮ ಧ್ವನಿ ವ್ಯತ್ಯಾಸಗಳು ಉಂಟಾಗಿ ಭಾಷಾ ಬಳಕೆಯಲ್ಲಿ ಭಿನ್ನತೆ ಕಂಡುಬರುತ್ತದೆ. ಈ ಲೇಖನದಲ್ಲಿ ಕನ್ನಡದ ಎರಡು ಉಪಭಾಷಾವಲಯಗಳಲ್ಲಿ ಕಾಣಿಸಿಕೊಂಡಿರುವ ಧ್ವನಿ ವ್ಯತ್ಯಾಸಗಳ ಬಗ್ಗೆ ಚರ್ಚಿಸಲಾಗಿದೆ.

೧

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ, ಕಂಪ್ಲಿ ಹಾಗೂ ರಾಯಚೂರು ಜಿಲ್ಲೆಯ ಸಿಂಧನೂರು, ಮಾನ್ವಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಶಬ್ದಾದಿಯ 'ಕ'ದ ಮುಂದೆ ಸಜಾತಿಯ ದ್ವಿತ್ವವಿದ್ದರೆ ಶಬ್ದಾದಿಯ 'ಕ'ದಲ್ಲಿಯ 'ಅ' ಧ್ವನಿ 'ಒ' ಆಗಿ ಪರಿವರ್ತನೆ ಹೊಂದುವುದು ತುಂಬ ಸ್ವಾರಸ್ಯದ ಸಂಗತಿಯಾಗಿದೆ.[೨] ಆ ಪ್ರದೇಶದ ಎಲ್ಲ ಸಾಮಾಜಿಕ ವರ್ಗಗಳ ವಿದ್ಯಾವಂತ, ಅವಿದ್ಯಾವಂತರ ಆಡುನುಡಿಯಲ್ಲಿ ಈ ಕ್ರಿಯೆ ಧಾರಾಳವಾಗಿ ನಡೆಯುತ್ತದೆ ಯಾದರೂ ಆಧುನೀಕರಣ ಮತ್ತು ನಗರೀಕರಣಗಳ ಪ್ರಭಾವದಿಂದ ಈಗ ವಿದ್ಯಾವಂತರ ಆಡುನುಡಿಯಲ್ಲಿ ಕಡಿಮೆಯಾಗುತ್ತಿದ್ದು ಅವಿದ್ಯಾವಂತರಲ್ಲಿ ಉಳಿದಿದೆ.

ಕಲ್ಲು > ಕೊಲ್ಲು
ಕಣ್ಣು > ಕೋಣ್ಣು
ಕಬ್ಬು > ಕೊಬ್ಬು
ಕಪ್ಪು > ಕೊಪ್ಪು
ಕಪ್ಪೆ > ಕೊಪ್ಪೆ

ಇಲ್ಲಿ ಪದಾದಿಯಲ್ಲಿರುವ 'ಅ' ಧ್ವನಿ 'ಒ' ಆಗಿದೆ(ಅ<ಒ) 'ಅ' ಪೂರ್ವಸ್ವರ 'ಒ' ಪಶ್ವಸ್ವರವಾಗಿ ಬದಲಾವಣೆಯಾಗಿದೆ. ನಾಲಿಗೆಯ ಸ್ಥಿತಿ ಬದಲಾಗದೆ ತುಟಿಗಳ ಸ್ಥಿತಿ ಮಾತ್ರ ಬದಲಾಗುತ್ತದೆ. ಆವೃತ್ತ ಸ್ವರ ಸಂವೃತ್ತ ಸ್ವರವಾಗಿ ಪರಿವರ್ತನೆಯಾಗಿದೆ. ಈ ಕ್ರಿಯೆ ಪದಾದಿಯ 'ಕ' ವ್ಯಂಜನ ಧ್ವನಿಯಿದ್ದಾಗ ಮಾತ್ರ ನಡೆಯುತ್ತದೆ. ಉಳಿದೆಡೆ ನಡೆಯುವುದಿಲ್ಲ.

ಗಲ್ಲ ಗೊಲ್ಲ
ಬಣ್ಣ ಬೊಣ್ಣ
ಹಕ್ಕಿ ಹೊಕ್ಕಿ
ಮಣ್ಣು ಮೊಣ್ಣು

ಪದಾದಿ 'ಕ' ಹೊರತುಪಡಿಸಿ ಬೇರೆ ಧ್ವನಿಗಳಿದ್ದರೆ 'ಒ' ಅಗುವುದಿಲ್ಲ ಎಂಬುದು ಗಮನಿಸಬೇಕಾದ ಸಂಗತಿ.

ಪದಾದಿ 'ಕ' ಧ್ವನಿಯಲ್ಲಿ 'ಅ' ಸಜಾತಿಯ ದ್ವಿತ್ವವಿದ್ದಾಗ 'ಒ' ಅಗುವ ಈ ಕ್ರಿಯೆಗೆ ಅಪವಾದಗಳಿವೆ. ಕಟ್ಟಿ, ಕಡ್ಡಿ ಇವು ಕ್ರಮವಾಗಿ ಕೊಟ್ಟಿ, ಕೊಡ್ಡಿ ಆಗಬೇಕಿತ್ತು. ಆದರೆ ಅಗಿಲ್ಲ ಕೆಲವು ವರ್ಷಗಳ ಹಿಂದೆ ಅವುಗಳಿಗೆ ಕೊಟ್ಟಿ, ಕೊಡ್ಡಿ ಎಂದು ಕರೆಯುತ್ತಿದ್ದರು, ಈಗ ಕರೆಯುವುದಿಲ್ಲ ಎಂದು ಕೆಲವು ವಯೋವೃದ್ಧರು ನನಗೆ ತಿಳಿಸಿದರು. ಈ ರೀತಿಯ ಧ್ವನಿ ಬದಲಾವಣೆ ಕೆಲವು ಶಬ್ದಗಳಿಗೆ ಮಾತ್ರ ಸೀಮಿತವಾಗದೆ ಸಾವಕಾಶವಾಗಿ ಆ ಪ್ರದೇಶದ ಭಾಷೆಯನ್ನು ವ್ಯಾಪಿಸಿರಬೇಕು ಮುಂದೆ ಸ್ವಜಾತಿಯ ದ್ವಿತ್ವವಿದ್ದಾಗ ನಿಯಮಿತವಾಗಿ ನಡೆಯುತ್ತಿದ್ದಿರಬೇಕೆಂದು ಹೇಳಬಹುದು.

ಅ, ಒ ಧ್ವನಿ ವ್ಯತ್ಯಾಸ ಯಾವಾಗ ಪ್ರಾರಂಭವಾಯಿತು? ಅನ್ಯಭಾಷೆಯ(ನೆರೆಯ ತೆಲುಗು ಭಾಷೆಯ) ಪ್ರಭಾವ ಕಾರಣವಾಗಿದೆಯೇ? ಇವುಗಳಿಗೆ ಉತ್ತರಿಸುವುದು ಕಷ್ಟಸಾಧ್ಯ. ದ್ರಾವಿಡ ಭಾಷೆಗಳಲ್ಲಿ ಒಂದಾದ ತೊದ ಭಾಷೆಯಲ್ಲಿ 'ಕೊಲ್ಲ' ರೂಪವಿದೆ. ಆ ಭಾಷೆಯ ಪ್ರಭಾವ ಈ ಪ್ರದೇಶದ ಭಾಷೆಯ ಮೇಲೆ ಆಗಿರಬಹುದು ಎಂದು ಊಹಿಸಿದೆ. 'ಕೊಲ್ಲ' ಹೊರತುಪಡಿಸಿ ಕೊಬ್ಬು, ಕೊಣ್ಣು ಮುಂತಾದ ರೂಪಗಳು ತೊದ ಭಾಷೆಯಲ್ಲಿ ದೊರಕುವುದಿಲ್ಲ ಎಂದು ತಿಳಿದಿದ್ದರಿಂದ ಅಷ್ಟಕ್ಕೆ ಕೈಬಿಟ್ಟೆನು(ಅದು ಸೂಕ್ತವೂ ಅಲ್ಲ). ನೆರೆಯ ತೆಲುಗು ಭಾಷೆಯ ಪ್ರಭಾವ ಆಗಿರಬಹುದೆಂಬುದಕ್ಕೆ ಸುಳುಹುಗಳು ದೊರಕುವುದಿಲ್ಲ. ಇನ್ನೊಮ್ಮೆ ಆ ಪ್ರದೇಶಗಳತ್ತ ಕ್ಷೇತ್ರಕಾರ್ಯ ಕೈಕೊಂಡು

ಹೆಚ್ಚು ಹೆಚ್ಚು ಸಾಮಗ್ರಿಗಳನ್ನು ಸಂಗ್ರಹಿಸಿದಾಗ ಹೊಸ ಅಂಶಗಳು ಗೋಚರವಾಗ ಬಹುದು. ಆಗ ಈ ಟಿಪ್ಪಣಿಯನ್ನು ಇನ್ನೂ ಉತ್ತಮಗೊಳಿಸುತ್ತೇನೆ. ಇದು ಒಂದು ಪ್ರದೇಶದ ಉಪಭಾಷೆಯಲ್ಲಿ ಕಂಡುಬರುವ ಧ್ವನಿ ಬದಲಾವಣೆಯಾಗಿದೆ.

೨

ಕರ್ನಾಟಕ ಮಹಾರಾಷ್ಟ್ರ ಗಡಿ ಪ್ರದೇಶವಾದ ಬೆಳಗಾವಿ ಸುತ್ತಮುತ್ತಲಿನ ಪ್ರದೇಶದಲ್ಲಿ ವಿಶಿಷ್ಟವಾದ ಕನ್ನಡವೇ ಬಳಕೆಯಲ್ಲಿದೆ.[೨] ಈ ಜಿಲ್ಲೆಯನ್ನು ಭಾಷೆಯ ದೃಷ್ಟಿಯಿಂದ ಮೂರು ಘಟಕಗಳಾಗಿ ವಿಂಗಡಿಸಬಹುದು. ಅ. ಚಿಕ್ಕೋಡಿ ಸುತ್ತಮುತ್ತಲಿನ ಕನ್ನಡ, ಉತ್ತರ ಬೆಳಗಾವಿಯ ದಕ್ಷಿಣ ಮತ್ತು ಪೂರ್ವಭಾಗ. ಆ. ಸವದತ್ತಿ ಕನ್ನಡ, ದಕ್ಷಿಣ ಬೆಳಗಾವಿ ತಾಲೂಕಿನ ಪ್ರದೇಶದ, ಗೋಕಾಕ, ಸವದತ್ತಿ, ಬೈಲಹೊಂಗಲ ಮತ್ತು ರಾಮದುರ್ಗ ಪ್ರದೇಶದ ಕನ್ನಡ. ಇಲ್ಲಿ ಸಮಾವೇಶಗೊಳ್ಳುವುದು. ಇ. ಮಹಾರಾಷ್ಟ್ರದ ಗಡಿನಾಡಿನ ಕನ್ನಡ-ಬೆಳಗಾವಿಯ ತಾಲೂಕು(ಬಾಗೇವಾಡಿ ಭಾಗವನ್ನು ಹೊರತುಪಡಿಸಿ) ಚಿಕ್ಕೋಡಿ ತಾಲೂಕಿನ ನಿಪ್ಪಾಣಿ ಭಾಗ, ಖಾನಾಪುರ ಪಶ್ಚಿಮ ಭಾಗ ಇಲ್ಲಿ ಸಮಾವೇಶ ಗೊಳ್ಳುತ್ತವೆ. ಈ ಪ್ರದೇಶದ ಕನ್ನಡವನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದರೆ ಕುತೂಹಲವಾದ ಭಾಷಿಕ ಕ್ರಿಯೆಗಳು ಕಂಡುಬರುತ್ತವೆ. ಅದು ಬೇರೊಂದು ಸಂಪ್ರಬಂಧದ ವಸ್ತುವಾಗುತ್ತದೆ. ಇಲ್ಲಿ ನಾನು ಆ ಪ್ರದೇಶದ ವ್ಯವಹಾರಿಕ ಕನ್ನಡದಲ್ಲಿ ಕಂಡುಬರುವ ಕೆಲವು ಧ್ವನಿ ವ್ಯತ್ಯಾಸಗಳನ್ನು ಮಾತ್ರ ಕಲೆಹಾಕಿ ಬರಹದ ಕನ್ನಡಕ್ಕಿಂತ ಅವು ಹೇಗೆ ಭಿನ್ನವಾಗಿದೆ ಎಂಬುದನ್ನು ಗುರುತಿಸುವುದೇ ಆಗಿದೆ.

ತೃತೀಯಾಕ್ಷರ ಯುಕ್ತವಾದ ಪದ ರಚನೆಯಲ್ಲಿ ದ್ವಿತೀಯಾಕ್ಷರ 'ರ' ಕಾರವಿದ್ದು ತೃತೀಯಾಕ್ಷರ ಪರಿವೇಷ್ಟಿತ ಧ್ವನಿಗಳಾದ ಟ.ಠ.ಡ.ಢ.ಣ. ಳ ಗಳಿದ್ದರೆ 'ರ' ಕಾರದ ಮುಂದಿನ ಸ್ವರವು ಲೋಪಹೊಂದಿ ವ್ಯಂಜನದೊಡನೆ ಸಮರೂಪಧಾರಣೆಯಾಗುತ್ತದೆ.[೪]

ಕರಡಿ > ಕಡ್ಡಿ/ಖಡ್ಡಿ
ಅರಳೆ > ಅಳ್ಳಿ
ಕರುಳು > ಕಳ್ಳ
ಒರಳು > ಒಳ್ಳು
ಅರಳು > ಅಳ್ಳ
ಹೊರಳು > ಹ್ವಳ್ಳ
ಕೊರಳು > ಕ್ವಳ್ಳ
ಜಿರಡಿ > ಜಿಡ್ಡಿ
ಬೆರಳು > ಬೆಳ್ಳ/ಬಳ್ಳು

ಪದರಚನೆಯಲ್ಲಿ ಪರಿವೇಷ್ಟಿತ ಧ್ವನಿಗಳನ್ನುಳಿದು ಬೇರೆ ವ್ಯಂಜನಗಳಿದ್ದರೆ ಸಮರೂಪ ಧಾರಣಾ ಕ್ರಿಯೆ ನಡೆಯುವುದಿಲ್ಲ.

ಬೆರಕೆ   ಬೆರಕೆ/ಬೆರಕಿ
ಕರಿಕೆ   ಕರಿಕೆ/ಕರಿಕಿ
ಗೊರಕೆ   ಗೊರಕೆ/ಗ್ವರಿಕಿ
ಬರಲು   ಬರ್ಲ(ಪೊರಕೆ)
ಉರಲು   ಉರ್ಲ(ನೇಣು)

ಪದಾದಿಯ ಒ, 'ಒ' ಧ್ವನಿಗಳ 'ವ'ಕಾರವಾಗುತ್ತದೆ.

ತೋಟ > ತ್ವಾಟ
ಕೋಟೆ > ಕ್ವಾಟಿ
ಜೋಳ > ಜ್ವಾಳ
ಕೋರೆ > ಕ್ವಾರಿ
ಒರಗೆ > ವಾರ್ಗಿ

ಕೆಲವೆಡೆ ಈ ಪರಿವರ್ತನೆಯಾಗಿಲ್ಲ ಜೋರು-ಜೋರು, ಗೋಣು-ಗೋಣು (ಕುತ್ತಿಗೆ) 'ಅ' ಕಾರಾದಿಯಾದ ಸಂಬಂಧವಾಚಕ ಪದಗಳು ಸಂಬೋಧಿಸುವಾಗ ಮಾತ್ರ 'ಯ' ಕಾರಾದಿಯಾಗಿ ಬಳಸಲ್ಪಡುತ್ತವೆ. ಉದಾ. ಯಪ್ಪಾ ಲವೂಟ್ ಬಾ (ಅಪ್ಪ ಬೇಗ ಬಾ).

ಅಪ್ಪ > ಯಪ್ಪ
ಅಕ್ಕ > ಯಕ್ಕ
ಅವ್ವ > ಯವ್ವ
ಅಣ್ಣ > ಯಣ್ಣ
ಅಜ್ಜ > ಯಜ್ಜ
ಅತ್ತೆ > ಯತ್ತಿ

'ಉ' ಕಾರಾಂತ ನಾಮಪದಗಳು 'ಅ' ಕಾರಾಂತವಾಗುತ್ತವೆ. ಬಾಗಿಲು > ಬಾಗ್ಲ, ಮುಳ್ಳು > ಮುಳ್ಳ ಪದ ಮಧ್ಯದಲ್ಲಿರುವ 'ಎ', 'ಆ್ಯ' ಆಗುತ್ತದೆ.

ಬೇಸಿಗೆ > ಬ್ಯಾಸಿಗೆ
ಪೇಟೆ > ಪ್ಯಾಟಿ
ಬೇಟೆ > ಬ್ಯಾಟಿ
ಮೇಲೆ > ಮ್ಯಾಲೆ

ಆದರೆ ಕೇಳು, ಹೇಳು, ಸೇರು ಮುಂತಾದ ಕ್ರಿಯಾಪದಗಳಲ್ಲಿ ಈ ಕ್ರಿಯೆ ಕಂಡು ಬರುವುದಿಲ್ಲ. ಪದಾದಿಯಲ್ಲಿ 'ಸ'ಕಾರವಿದ್ದು ಅನಂತರದ ದ್ವಿತೀಯಾಕ್ಷರದಲ್ಲಿ 'ಚ', 'ಜ' ಗಳಿದ್ದರೆ ಪದಾದಿಯ 'ಸ' ಕಾರ 'ಚ' ಆಗಿ ವ್ಯತ್ಯಾಸ ಹೊಂದುವುದು. ಸಜ್ಜಿ > ಚಜ್ಜಿ, ಸೂಜಿ > ಚೂಜಿ, ಸಂಜೆ > ಪಂಜೆ. ಸ, ಶ, ಷ ಧ್ವನಿಗಳಲ್ಲಿ 'ಷ' ಧ್ವನಿಬಳಕೆ

ಕಡಿಮೆ. ಸ, ಶ ಗಳಲ್ಲಿ ಅರ್ಥ ವ್ಯತ್ಯಾಸಗಳಿರುವದರಿಂದ ಅವೆರಡು ಪ್ರತ್ಯೇಕ ಧ್ವನಿಮಾಗಳಾಗಿವೆ. (Phonemes)/ಸಾಲು/ಶಾಲು/ಅದರೂ 'ಶ'ದ ಬಳಕೆ ತುಂಬ ಕಡಿಮೆ. ಸ ಹೆಚ್ಚು ಬಳಕೆಯಲ್ಲಿದೆ. ಉಚ್ಚಾರಣೆಯಲ್ಲಿ ಮರಾಠಿ ಭಾಷೆಯ ಪ್ರಭಾವದಿಂದಾಗಿ ಗಡಿಪ್ರದೇಶದಲ್ಲಿ ಮಹಾಪ್ರಾಣಗಳ ಬಳಕೆ ಇದೆ.

ವ್ಯವಹಾರಿಕ ಕನ್ನಡ		ಗಡಿನಾಡಿನ ಕನ್ನಡ
ಕಣ	>	ಖಣ
ಕರೆ	>	ಖರೆ (ಸತ್ಯ, ನಿಜ)
ಕುರುಪಿ	>	ಖುರುಪಿ
ತಾಲಿ	>	ಥಾಲಿ
ದನಿ	>	ಧ್ವನಿ

ಸ್ವರಗಳಲ್ಲಿ ಅನುನಾಸಿಕತೆ ಕಂಡುಬರುತ್ತದೆ.

ನಾನು	ನಾ̃
ನೀನು	ನಿ̃
ನಾವು	ನಾ̃ವ

ಅನುನಾಸಿಕತೆ ಪ್ರತ್ಯೇಕ ಧ್ವನಿಮಾಕ್ಕೂ ಕಾರಣವಾಗಿವೆ. ಹೂ̃ - Flower - ಹೂ ಹೌದು (Yes) ಪದಾದಿಯಲ್ಲಿ ಪೂರ್ವಮಧ್ಯಮಸ್ವರಗಳಾದ ಎ, ಏಗಳು ಯ, ಯಾಗಳಾಗಿ ಪರಿವರ್ತನೆ ಹೊಂದುತ್ತವೆ.

ಎಲೆ > ಯಲಿ   ಕೆನಿ > ಕ್ಯನಿ   ಏಲಕಿ > ಯಾಲಕ್ಕಿ

ಎಲ್ಲ > ಯಲ್ಲ   ಏಕೆ > ಯಾಕೆ   ಏನಾದರೂ > ಯಾನಾದರೂ

ಕೆಲವೆಡೆ ಈ ಕ್ರಿಯೆ ನಡೆಯುವುದಿಲ್ಲ ಉದಾ: ಬೇಕು > ಬೇಕ್, ತೇರು > ತೇರ್ ಸ್ವೀಕರಣ ಪದಗಳಲ್ಲಿ ಆದಿ 'ವ'ಕಾರ 'ಇ'ಕಾರವಾಗುತ್ತದೆ. ವಿಮಾನ > ಇಮಾನ. ವಿಚಾರ > ಇಚಾರ, ವಿಷ > ಇಸ 'ಇ' ಕಾರಾದಿಯಾಗಿ ಬಂದಿರುವ ಪದಗಳು ಹಾಗೆಯೇ ಉಳಿಯುತ್ತವೆ. ಉದಾ. ಇಂಜೇನ್, ಇಂಜಕ್ಷನ್ ಬದಲಾವಣೆಯಾವುದಿಲ್ಲ.

ಈ ಧ್ವನಿಮಾ ಪ್ರಕ್ರಿಯೆಗಳನ್ನು ನೋಡಿದಾಗ ಬೆಳಗಾವಿ ಪ್ರದೇಶದ ಕನ್ನಡ ತನ್ನದೇ ಆದ ವೈಶಿಷ್ಟ್ಯಗಳನ್ನು ಹೊಂದಿ ಪ್ರತ್ಯೇಕ ಉಪಭಾಷೆಯಾಗಿ ಕಾಣಿಸಿಕೊಂಡಿದೆ. ಇಂತಹ ಧ್ವನಿ ವ್ಯತ್ಯಾಸಗಳು ಆ ಪ್ರದೇಶದ ಭಾಷಿಕರ ಪರಸ್ಪರ ಅರಿವಿಗೆ ಯಾವ ತೊಂದರೆ ಯನ್ನುಂಟು ಮಾಡಲಾರವು ಎಂಬುದು ಗಮನಾರ್ಹ, ಭಾಷಿಕರ ಆಡುಮಾತಿನಲ್ಲಿ ಆರಂಭವಾಗುವ ಈ ಧ್ವನಿ ವ್ಯತ್ಯಾಸಗಳು ವ್ಯಾಪಕವಾಗಿ ಹರಡಿ ಇತರ ಭಾಷಾ ಪ್ರದೇಶಗಳ ಕಡೆಗೂ ವ್ಯಾಪಿಸಿ ಅಲ್ಲಿಯ ಭಾಷಾ ರಚನೆಯ ಮೇಲೆ ಪ್ರಭಾವ ಬೀರುತ್ತವೆ.

ಅಡಿಟಿಪ್ಪಣಿಗಳು

೧. ಧ್ವನ್ಯುಚ್ಚಾರಣೆ ಮತ್ತು ಕೇಳುವಿಕೆಯಲ್ಲಾಗುವ ಬದಲಾವಣೆಯೇ ಧ್ವನಿ ಬದಲಾವಣೆ.

೨. ೧೯೯೩-೧೯೯೪ರಲ್ಲಿ ಕನ್ನಡ ವಿಶ್ವವಿದ್ಯಾಲಯದ 'ಕೃಷಿ ಪದಕೋಶ' ಯೋಜನೆಯಲ್ಲಿ ಕೆಲಸ ಮಾಡುತ್ತಿರುವಾಗ ಕೃಷಿ ಪದಗಳ ಸಂಗ್ರಹಣೆಗಾಗಿ ಬಳ್ಳಾರಿ, ರಾಯಚೂರು ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯ ನಡೆಸಿದಾಗ ಈ ಪ್ರಕ್ರಿಯೆ ನನ್ನ ಗಮನಕ್ಕೆ ಬಂದಿತು.

೩. ಎಂ.ಬಿ. ಬೋಯಿಯವರು (ನೇಗಿನಹಾಳ), ಬೆಳಗಾವಿ ಜಿಲ್ಲೆಯ ಭಾಷಾಸ್ವರೂಪ ವನ್ನು ಪರಿಚಯಿಸುವ 'ಬೆಳಗಾವಿ ಜಿಲ್ಲೆಯ ಉಪಭಾಷೆಗಳು' ಎಂಬ ಲೇಖನವನ್ನು ಬರೆದಿದ್ದಾರೆ(೧೯೭೪ ಕರ್ನಾಟಕ ಭಾರತಿ, ಸಂ.೬, ಸಂಚಿಕೆ ೪). ಅವರು ಜಿಲ್ಲೆಯ ಭಾಷೆಯನ್ನು ನಾಲ್ಕು ಘಟಕಗಳಾಗಿ ವಿಂಗಡಿಸಿದ್ದಾರೆ. ೧. ಮಹಾರಾಷ್ಟ್ರದ ಗಡಿನಾಡಿನ ಕನ್ನಡ ೨. ಗೋಕಾಕ ಕನ್ನಡ ೩. ಬೈಲಹೊಂಗಲ ಕನ್ನಡ ೪. ರಾಮದುರ್ಗ ಕನ್ನಡ ಎಂದು ವಿಂಗಡಿಸಿದ್ದಾರೆ. ನಾನು ಈ ಲೇಖನವನ್ನು ಓದುವುದಕ್ಕಿಂತಲೂ ಮೊದಲು ಬೆಳಗಾವಿ ಪ್ರದೇಶದ ಭಾಷಿಕ ರಚನೆಯ ಪ್ರಕ್ರಿಯೆ ಗಳನ್ನು ಗುರುತಿಸಿದ್ದೆ. ಧ್ವನಿ ವ್ಯತ್ಯಾಸಕ್ಕೆ ಸಂಬಂಧಿಸಿದ ಕೆಲವು ಅಂಶಗಳನ್ನು ಮಾತ್ರ ಇಲ್ಲಿ ಚರ್ಚಿಸಲಾಗಿದೆ.

೪. ಉಚ್ಚಾರಣೆಯಲ್ಲಿ ಎರಡು ವಿಭಿನ್ನ ಧ್ವನಿಗಳು ಒಂದರ ಮಗ್ಗುಲಲ್ಲಿ ಇನ್ನೊಂದು ಇದ್ದಾಗ ಒಂದು ಧ್ವನಿ ಇನ್ನೊಂದು ಧ್ವನಿಯ ಮೇಲೆ ಪ್ರಭಾವ ಬೀರಿ ಸಮರೂಪ ಧರಿಸುವುದೇ ಸಮರೂಪಧಾರಣೆ.

೧೦

ಕನ್ನಡ–ಮರಾಠಿ ದ್ವಿಭಾಷಿಕತೆ

ಭಾಷೆ ಸಂಸ್ಕೃತಿಯ ಮುಖ್ಯ ಅಂಗ, ಸಂಸ್ಕೃತಿಗೆ ಸಂಬಂಧಿಸಿದ ಎಲ್ಲ ಚಟುವಟಿಕೆಯ ಬುನಾದಿ ಭಾಷೆಯಾಗಿರುತ್ತದೆ. ಭಾಷೆ, ಸಮಾಜ ಮತ್ತು ಸಂಸ್ಕೃತಿ ಒಂದನ್ನೊಂದು ಅವಲಂಬಿಸಿವೆ. ಇವು ಪರಸ್ಪರ ಪೂರಕವಾದವುಗಳು. ಭಾಷೆಯು ಸಮಾಜ ಹಾಗೂ ಸಂಸ್ಕೃತಿಯ ಭಾಗವಾದರೂ ಅವುಗಳ ಸ್ವರೂಪವನ್ನು ಅಧ್ಯಯನ ಮಾಡಲು ಅದು ಅಗತ್ಯ ಸಾಧನವಾಗಿದೆ, ಭಾಷೆಯ ಮೂಲಕ ಒಂದು ಸಮಾಜದ ಇತಿಹಾಸವನ್ನು ತಿಳಿದುಕೊಳ್ಳಬಹುದು. ಉದಾ: ದ್ರಾವಿಡ ಭಾಷೆಗಳ ನೆರವಿನಿಂದ ಮೂಲದ್ರಾವಿಡ ಭಾಷೆಯನ್ನಾಡುತ್ತಿದ್ದ ಜನರ ಜೀವನವನ್ನು, ಸಂಸ್ಕೃತಿಯನ್ನು ಅರಿಯ ಬಹುದಾಗಿದೆ. ಆಯಾ ಭಾಷೆಯನ್ನು ಆಡುವವರ ಸಂಸ್ಕೃತಿ ಮತ್ತು ನಾಗರಿಕತೆಗಳನ್ನು ಭಾಷೆ ಪ್ರತಿಬಿಂಬಿಸುತ್ತದೆ. ಮನೆಯ ವಾತಾವರಣ, ನೆರೆಹೊರೆಯ ಪರಿಸರ, ಶಾಲಾ ಕಾಲೇಜು, ಸಮುದಾಯ, ಆಟಗಳು, ಸ್ನೇಹಿತರು, ಚಲನಚಿತ್ರಗಳು ಮುಂತಾದವುಗಳು. ಮಗು ಅಥವಾ ವ್ಯಕ್ತಿಯ ಭಾಷೆಯ ಮೇಲೆ ಪ್ರಭಾವ ಬೀರುತ್ತದೆ.

ಒಂದು ಭಾಷಾ ಕ್ಷೇತ್ರದಲ್ಲಿ ಏಕಭಾಷಿಕರು, ದ್ವಿಭಾಷಿಕರು ಹಾಗು ಬಹುಭಾಷಿಕರು ಇರುತ್ತಾರೆ. ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಏಕಭಾಷಿಕರು ಹೆಚ್ಚು, ಇವರು ಹೆಚ್ಚಾಗಿ ಅವಿದ್ಯಾವಂತರಾಗಿರುತ್ತಾರೆ. ದ್ವಿಭಾಷಿಕರು ಮತ್ತು ಬಹುಭಾಷಿಕರು ಪಟ್ಟಣ ಪ್ರದೇಶಗಳಲ್ಲಿ ಮತ್ತು ಗಡಿ ಪ್ರದೇಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿರುತ್ತಾರೆ. ಇವರು ಹೆಚ್ಚಾಗಿ ವಿದ್ಯಾವಂತರು, ಈಗಿನ ವಿಜ್ಞಾನ ಹಾಗೂ ತಂತ್ರಜ್ಞಾನ ಯುಗದಲ್ಲಿ ಮನುಷ್ಯ ಒಂದೇ ಪ್ರದೇಶದಲ್ಲಿ ಒಂದು ಭಾಷೆಯನ್ನು ಕಲಿತು ಒಂದೇ ರೀತಿಯಾಗಿ ಬದುಕಲಾರ, ಬಾಳಲಾರ. ತನ್ನ ಅವಶ್ಯಕತೆಗಳನ್ನು ಪೂರೈಸಲು, ತನ್ನ ಜೀವನವನ್ನು ಸುಗಮವಾಗಿಸಲು ಬೇರೆ ಬೇರೆ ಪ್ರದೇಶಗಳಲ್ಲಿ ಸಂಚರಿಸಬೇಕಾಗುತ್ತದೆ. ಕೆಲವು ವೇಳೆ ಅಲ್ಲಿಯೆ ವಾಸಿಸ ಬೇಕಾಗುತ್ತದೆ. ಆಗ ಆ ಪ್ರದೇಶದ ಭಾಷೆಯನ್ನು ಕಲಿತು ಅದರಲ್ಲಿ ವ್ಯವಹರಿಸ

ಬೇಕಾಗುವುದು ಅನಿವಾರ್ಯ. ಅಂತಹ ಪ್ರಸಂಗಗಳಲ್ಲಿ ದ್ವಿಭಾಷಿಕ, ಬಹುಭಾಷಿಕ ಸಮುದಾಯಗಳು ಕಾಣಿಸಿಕೊಳ್ಳುತ್ತವೆ. ಈ ಲೇಖನದಲ್ಲಿ ದ್ವಿಭಾಷಿಕತೆಯ ಬಗ್ಗೆ ಒತ್ತು ಕೊಡಲಾಗಿದೆ.[೧]

ಒಂದು ಭಾಷಾ ಸಮುದಾಯದಲ್ಲಿ ಭಾಷಿಕರು(ಮಾತೃಭಾಷಿಕರು) ಆರ್ಥಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ವಲಸೆ ಮುಂತಾದ ಕಾರಣಗಳಿಂದಾಗಿ ಅನ್ಯಭಾಷೆಯನ್ನು ಕಲಿತು ಅದರಲ್ಲಿ ವ್ಯವಹರಿಸಬೇಕಾಗುತ್ತದೆ. ಮಾತೃಭಾಷೆ ಮತ್ತು ಪರಿಸರದಿಂದ ಕಲಿತ ದ್ವಿತೀಯ ಭಾಷೆ ಇವುಗಳಲ್ಲಿ ಭಾಷಾ ಸಂಪರ್ಕ ಹೆಚ್ಚಾಗುತ್ತಾ ಹೋದಂತೆ ದ್ವಿಭಾಷಾ ಪರಿಸರ ನಿರ್ಮಾಣವಾಗುವುದು. ಒಬ್ಬ ವ್ಯಕ್ತಿ ಒಂದು ಭಾಷೆಯನ್ನು ದ್ವಿಭಾಷೆಯಾಗಿ ಸ್ವೀಕರಿಸಿದರೆ ಅದು ಸಾಮಾನ್ಯವಾಗಿ ಜೀವನ ಪರ್ಯಂತ ಇರುತ್ತದೆ. ಏಕೆಂದರೆ ಅದು ಅವನು ವಾಸಿಸುವ ಸಾಮಾಜಿಕ ಪರಿಸರದಿಂದ ರೂಪಿಸಿ ಕೊಂಡಿರುವ ಭಾಷೆಯಾಗಿರುವುದರಿಂದ ಆ ವ್ಯಕ್ತಿ ತಾನು ವಾಸಿಸುವ ಸಮುದಾಯದ ಸಂಪರ್ಕಕ್ಕಾಗಿ ಅದನ್ನು ಮಾಧ್ಯಮವನ್ನಾಗಿ ಮಾಡಿಕೊಂಡಿರುತ್ತಾನೆ. ಹೀಗಾಗಿ ಅವನು ಜೀವನ ಪರ್ಯಂತ ಅದನ್ನು ಬಳಸುತ್ತಿರುತ್ತಾರೆ. ಉದಾ: ಕರ್ನಾಟಕವನ್ನು ತೆಗೆದುಕೊಂಡರೆ ಬೆಳಗಾವಿ, ಬೀದರ, ಕೋಲಾರ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಬೆಂಗಳೂರು ಮತ್ತು ಮೈಸೂರಿನ ದಕ್ಷಿಣ ಭಾಗದಲ್ಲಿ ಕ್ರಮವಾಗಿ ಮರಾಠಿ, ತೆಲುಗು, ತುಳು, ತಮಿಳು ದ್ವಿಭಾಷಾ ಪರಿಸರಗಳಿವೆ. ಈ ಪ್ರದೇಶದ ಜನರು ತಮ್ಮ ಮಾತೃಭಾಷೆಯ ಜೊತೆಗೆ ಸುತ್ತಲಿನ ಪರಿಸರದ ಭಾಷೆಯನ್ನು ಬಳಸಬಲ್ಲರು. ಅವರು ಕಲಿತ ಪರಿಸರದ ಭಾಷೆ(ದ್ವಿತೀಯ ಭಾಷೆ) ಜೀವನ ಪರ್ಯಂತ ಉಳಿಯುತ್ತದೆ.

ದ್ವಿಭಾಷಿಕ ಸಮುದಾಯಗಳಿಂದ ಎರಡು ಭಾಷಾ ಸಮುದಾಯಗಳ ಬೆಳವಣಿಗೆಯ ವಿವಿಧ ಹಂತಗಳನ್ನು, ಸಾಮ್ಯ, ವೈಷಮ್ಯಗಳನ್ನು ತಿಳಿದುಕೊಳ್ಳಲು, ಎರಡೂ ಭಾಷಿಕರ ಭಾವನೆ ಆಲೋಚನೆಗಳ ವಿಚಾರ ವಿನಿಮಯಕ್ಕೆ, ಎರಡೂ ಸಮುದಾಯಗಳ ಸಂಸ್ಕೃತಿಯನ್ನರಿಯಲು, ಎರಡೂ ಭಾಷೆಗಳ ಸಾಹಿತ್ಯ ಕೃತಿಗಳನ್ನು ಅನುವಾದಿಸಲು ಎರಡರಲ್ಲೂ ವ್ಯವಹರಿಸಲು ಹಾಗೂ ಎರಡು ಭಾಷೆಗಳ ಶಬ್ದ ಸ್ವೀಕರಣದಿಂದಾಗಿ ಉಭಯ ಭಾಷೆಗಳ ಪದಕೋಶ ಬೆಳವಣಿಗೆಗೂ ನೆರವಾಗುತ್ತದೆ. ಈ ದ್ವಿಭಾಷಿಕತೆಯ ಪರಿಣಾಮದಿಂದಾಗಿ ಭಾಷಾಮಿಶ್ರಣ, ಭಾಷಾಪಲ್ಲಟ, ಭಾಷಾಸ್ವೀಕರಣ ಮುಂತಾದ ಭಾಷಿಕ ಕ್ರಿಯೆಗಳು, ಭಾಷಾ ಸಮುದಾಯಗಳಲ್ಲಿ ಕಾಣಿಸಿಕೊಳ್ಳುತ್ತವೆ.

ದ್ವಿಭಾಷಿಕತೆಯ ಅಧ್ಯಯನ ಕುತೂಹಲಕಾರಿಯಾಗಿದೆ ತುಂಬ ಉಪಯುಕ್ತವೂ ಆಗಿದೆ, ಅಮೇರಿಕಾ, ಯುರೋಪ ದೇಶಗಳಲ್ಲಿ ದ್ವಿಭಾಷಿಕತೆಯ ಕುರಿತಾದ ಶಾಸ್ತ್ರೀಯ ಅಧ್ಯಯನಗಳು ನಡೆದಿವೆ. ಅದಕ್ಕಾಗಿ ಸಂಘ ಸಂಸ್ಥೆಗಳು, ಅಧ್ಯಯನ ಕೇಂದ್ರಗಳು ಹುಟ್ಟಿಕೊಂಡಿವೆ. ಅಂತರರಾಷ್ಟ್ರೀಯ ಸಮ್ಮೇಳನಗಳು, ವಿಚಾರ ಸಂಕಿರಣಗಳು ನಡೆದಿವೆ. ಸಂಪತ್ರಿಕೆಗಳು ಬಂದಿವೆ. ಇಂಡಿಯಾನ ವಿಶ್ವವಿದ್ಯಾಲಯದಿಂದ Anthropological

Linguistics Society of Americaದ Linguistics ಸಂಪತ್ರಿಕೆ, ಭಾರತದಲ್ಲಿ Linguistric Society of Indiaದ Indian Linguistic, Draavidian Associationದ International Journol of Dravidian Linguistics ಈ ಸಂಪತ್ರಿಕೆಗಳಲ್ಲಿ ದ್ವಿಭಾಷಿಕತೆಯ ಬಗ್ಗೆ ಅನೇಕ ಬರಹಗಳಿವೆ ಅಲ್ಲದೆ ಆಂಗ್ಲ ಭಾಷೆಯಲ್ಲಿ, ಅನೇಕ ಗ್ರಂಥಗಳು ಪ್ರಕಟವಾಗಿವೆ. ಭಾರತದಲ್ಲಿ ತಮಿಳುನಾಡು, ಕೇರಳ ರಾಜ್ಯಗಳಲ್ಲಿ ದ್ವಿಭಾಷಿಕತೆಯ ಬಗ್ಗೆ ಸ್ವಲ್ಪ ಕೆಲಸ ನಡೆದಿದೆ. ಆದರೆ ಕರ್ನಾಟಕದಲ್ಲಿ ಈ ಬಗ್ಗೆ ಈವರೆಗೂ ನಿರೀಕ್ಷಿತ ಪ್ರಮಾಣದಲ್ಲಿ ಅಧ್ಯಯನ ನಡೆದಿಲ್ಲವೆಂದು ವಿಷಾದದಿಂದ ಹೇಳಲಾಗಿದೆ.

ಕರ್ನಾಟಕದಲ್ಲಿ ದ್ವಿಭಾಷಿಕತೆಯ ಬಗ್ಗೆ ನಡೆದಿರುವ ಕೆಲಸ ತೀರ ಕಡಿಮೆ, ಕರ್ನಾಟಕ ಭಾರತೀಯ ವಿಶೇಷ ಸಂಚಿಕೆಯಲ್ಲಿ ಮಹಾರಾಷ್ಟ್ರದ ಕನ್ನಡ, ಆಂಧ್ರದ ಕನ್ನಡ, ಕೇರಳದ ಕನ್ನಡ, ತಮಿಳುನಾಡಿನ ಕನ್ನಡದ ಬಗೆಗೆ ಕ್ರಮವಾಗಿ ಡಾ. ಕೆ.ಜಿ. ಶಾಸ್ತ್ರಿ, ಡಾ. ಜೆ. ರಾಮಸ್ವಾಮಿ, ಬಿ. ರಾಮಚಂದ್ರರಾವ್ ಇವರು ಲೇಖನಗಳನ್ನು ಬರೆದಿದ್ದಾರೆ.[೨] ಮಿರ್ಜಿ ಅಣ್ಣಾರಾಯರು ಮಹಾರಾಷ್ಟ್ರದ ಗಡಿನಾಡಿನ ಕನ್ನಡ ಎಂಬ ಲೇಖನಗಳನ್ನು ಬರೆದಿದ್ದಾರೆ.[೩] ಇವರೆಲ್ಲರೂ ದ್ವಿಭಾಷಿಕರ ಕನ್ನಡವನ್ನು ವರ್ಣನಾತ್ಮಕವಾಗಿ ವಿಶ್ಲೇಷಿಸಿದ್ದಾರೆ. ಕೃಷ್ಣಪರಮೇಶ್ವರ ಭಟ್ಟರ ಕನ್ನಡ ತೆಲುಗು ದ್ವಿಭಾಷಿಕತೆಯ ಅಧ್ಯಯನ ಎಂಬ ಪಿಎಚ್.ಡಿ. ನಿಬಂಧ ಪ್ರಕಟವಾಗಿದೆ.[೪] ಮೊದಲೆರಡು ಅಧ್ಯಾಯಗಳಲ್ಲಿ ದ್ವಿಭಾಷಿಕತೆಯ ಸೈದ್ಧಾಂತಿಕ ಅಂಶಗಳನ್ನು ಹಾಗೂ ಕನ್ನಡದ ಮೇಲೆ ತೆಲುಗುವಿನ ಪ್ರಭಾವವನ್ನು ಗುರುತಿಸಿರುವುದು ಉಚಿತವಾಗಿದೆ. ನಂತರ ಭಟ್ಟರು ಕನ್ನಡ ತೆಲುಗು ದ್ವಿಭಾಷಿಕರ ಕನ್ನಡವನ್ನು ವರ್ಣನಾತ್ಮಕ ಭಾಷಾವಿಜ್ಞಾನದ ತತ್ವಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತಾ ಹೋಗುತ್ತಾರೆ. ಎಸ್.ಎನ್. ಶ್ರೀಧರರವರ ಸಂಪ್ರಬಂಧಗಳ ಸಂಕಲನ ಪ್ರಕಟವಾಗಿದೆ.[೫] ಭಾಷಾ ಮಿಶ್ರಣ, ಭಾಷಾಸ್ವೀಕರಣ, ಭಾಷಾಪಲ್ಲಟದ ಪ್ರಕ್ರಿಯೆಗಳನ್ನು ಕನ್ನಡದ ಬಳಕೆಯ ಸಂದರ್ಭದಲ್ಲಿ ಬರೆದ ಇಲ್ಲಿಯ ಲೇಖನಗಳು ಉಪಯುಕ್ತವಾಗಿವೆ. ವ್ಯಾಕರಣದ ಸಮಸ್ಯೆಗಳನ್ನು ಬಿಡಿಸುವಾಗ ವಿಲ್ಯಂ ಮಾಡ್ತಾರವರು ತಮ್ಮ ಬರಹಗಳಲ್ಲಿ ಆಗಾಗ್ಗೆ, ದ್ವಿಭಾಷಿಕತೆಯ ಬಗ್ಗೆ ಕೆಲವು ಸಮಸ್ಯೆಗಳನ್ನು ಎತ್ತಿದ್ದಾರೆ ಅವು ತುಂಬ ಮಹತ್ವಪೂರ್ಣವಾಗಿವೆ(ಮಾಡ್ತಾರವರು ಎಂ.ಎ. ತರಗತಿಗಳಲ್ಲಿ ಸಾಮಾಜಿಕ ಭಾಷಾವಿಜ್ಞಾನ. ದ್ವಿಭಾಷಿಕತೆ. ಕರ್ನಾಟಕದಲ್ಲಿ ದ್ವಿಭಾಷಿಕತೆಯ ಬಗ್ಗೆ ಹಲವಾರು ಉಪನ್ಯಾಸಗಳನ್ನು ಕೊಟ್ಟಿದ್ದರು. ಅವುಗಳನ್ನೆ ಬರೆದು ಅವರು ಪ್ರಕಟಿಸಿದ್ದರೆ ಕನ್ನಡ ದ್ವಿಭಾಷಿಕತೆಯ ಅಧ್ಯಯನಕ್ಕೆ ಅಮೂಲ್ಯವಾದ ಕೊಡುಗೆಯಾಗುತ್ತಿತ್ತು ಎಂಬುದರ ಬಗ್ಗೆ ಅನುಮಾನವಿಲ್ಲ). ಶಂ.ಬಾ. ಜೋಶಿಯವರು 'ಮರಾಠೀ ಸಂಸ್ಕೃತಿ ಕೆಲವು ಸಮಸ್ಯೆಗಳು' ರಂ.ಶಾ. ಲೋಕಾಪುರವರು 'ಹಳಗನ್ನಡ ಮತ್ತು ಮರಾಠಿ' ಎಂಬ ಶಾಸ್ತ್ರ ಕೃತಿಗಳನ್ನು ರಚಿಸಿದ್ದಾರೆ. ಅಲ್ಲಿ ದ್ವಿಭಾಷಿಕತೆ

ಬಗ್ಗೆ ಚರ್ಚೆ ಇರದಿದ್ದರೂ ಕನ್ನಡ ಮರಾಠಿ ಭಾಷೆ ಸಂಸ್ಕೃತಿಗಳ ಬಗ್ಗೆ ಉಪಯುಕ್ತವಾದ ಮಾಹಿತಿಗಳನ್ನು ಇವು ಕೊಡುತ್ತವೆ. ಕನ್ನಡದಲ್ಲಿ ದ್ವಿಭಾಷಿಕತೆಯ ಬಗೆಗೆ ಬಂದಿರುವ ಮೇಲಿನ ಎಲ್ಲ ಬರೆಹಗಳು, ಗ್ರಂಥಗಳು ಉಪಯುಕ್ತವಾಗಿವೆ ಯಾದರೂ ದ್ವಿಭಾಷಿಕತೆಯ ಸ್ವರೂಪ ಅದಕ್ಕೆ ಕಾರಣಗಳು ದ್ವಿಭಾಷಿಕತೆಯ ಪರಿಣಾಮಗಳ ಬಗ್ಗೆ ಸ್ಥೂಲರೂಪವನ್ನು ಅವು ಕೊಡುವುದಿಲ್ಲ.

ದ್ವಿಭಾಷಾ ಪ್ರದೇಶವನ್ನು ವರ್ಣನಾತ್ಮಕ ಅಧ್ಯಯನದಿಂದ ನೋಡದೆ ಆ ಪ್ರದೇಶದ ಸಾಮಾಜಿಕ ಸಂದರ್ಭದ ಹಿನ್ನೆಲೆಯಲ್ಲಿ ಅಭ್ಯಸಿಸಿದರೆ ಕುತೂಹಲಕಾರವಾದ ಸಂಗತಿ ಗಳನ್ನು ಗುರುತಿಸಬಹುದಾಗಿದೆ. ಒಂದು ಪ್ರದೇಶದ ಮಾತೃಭಾಷೆಯ ಮೇಲೆ ನೆರೆಯ ಪ್ರಾಂತದ ಭಾಷೆಯ ಪ್ರಭಾವ, ಮಾತೃ ಭಾಷಾಬಳಕೆಯ ಬೇರೆ ಬೇರೆ ವಲಯಗಳಲ್ಲಿ (ಶಿಕ್ಷಣ, ಆಡಳಿತ, ವ್ಯವಹಾರ ಮುಂತಾದವು) ಎಷ್ಟರಮಟ್ಟಿಗೆ ಇದೆ. ದ್ವಿತೀಯ ಭಾಷೆಯ ಪ್ರಭಾವ ಮಾತೃಭಾಷೆಯ ಮೇಲೆ ಯಾವ ರೀತಿಯಾಗಿ ಪ್ರಭಾವ ಬೀರಿದೆ ಅದರಿಂದ ಉಂಟಾಗುವ ಪರಿಣಾಮಗಳೇನು? ಮಾತೃಭಾಷೆಯುಳ್ಳವರ ಕಲಿಕೆಯ ತೊಡಕುಗಳೇನು? ಅವರು ದ್ವಿತೀಯ ಭಾಷೆಯನ್ನು ಕಲಿಯುವಾಗ ಆಗುವ ತೊಂದರೆ ಗಳೇನು? ಒಂದು ಪ್ರದೇಶ ಭಾಷಾಭಿವೃದ್ಧಿಗೆ ಆ ಪ್ರದೇಶದ ಪ್ರಥಮ ಭಾಷೆ(ಮಾತೃಭಾಷೆ) ರೂಪಗೊಳ್ಳುವಂತೆ ದ್ವಿತೀಯ ಭಾಷೆ ರೂಪುಗೊಳ್ಳುತ್ತದೆಯೇ? ಇತ್ಯಾದಿ ಹಂತಗಳಲ್ಲಿ ದ್ವಿಭಾಷಿಕತೆಯ ಅಧ್ಯಯನ ನಡೆಯಬೇಕಾಗಿದೆ. ಪ್ರಸ್ತುತ ಅಧ್ಯಯನವು ಕನ್ನಡ-ಮರಾಠಿ ದ್ವಿಭಾಷಿಕ ಪ್ರದೇಶವನ್ನು ಕೇಂದ್ರವಾಗಿಟ್ಟುಕೊಂಡು ಕನ್ನಡದ ಮೇಲೆ ಮರಾಠಿ ಭಾಷೆ, ಸಂಸ್ಕೃತಿಯ ಪ್ರಭಾವ ಮರಾಠಿಯ ಮೇಲೆ ಕನ್ನಡ ಭಾಷೆ ಸಂಸ್ಕೃತಿಯ ಪ್ರಭಾವ ಯಾವ ರೀತಿಯಾಗಿದೆ. ಇದರಿಂದಾಗುವ ಪರಿಣಾಮ ಯಾವ ತೆರನಾದುದು ಎಂಬುದನ್ನೊಳಗೊಂಡಿದೆ.

ಸುಮಾರು ಎಂಟು ನೂರು ವರ್ಷಕ್ಕೂ ಹೆಚ್ಚು ಕಾಲ ಕನ್ನಡದ ಮೇಲೆ ಮರಾಠಿ. ಮರಾಠಿ ಮೇಲೆ ಕನ್ನಡ ಭಾಷೆ ಸಂಸ್ಕೃತಿಯ ಅರಸರು ಆಡಳಿತ ನಡೆಸಿದ್ದು ಭಾರತದ ಇತಿಹಾಸದಲ್ಲಿ ಅನನ್ಯವಾದುದು. ಇದರಿಂದ ಕನ್ನಡ ನುಡಿಯ ಅನೇಕ ವೈಶಿಷ್ಟ್ಯಗಳು ಮರಾಠಿಯಲ್ಲಿ ಮೈಗೂಡಿ ಹೋದವು, ಅದರಂತೆ ಮರಾಠಿಯ ನುಡಿಯ ಅನೇಕ ವೈಶಿಷ್ಟ್ಯಗಳು ಕನ್ನಡದಲ್ಲಿ ಬಳಕೆಯಾದವು. ಒಂದು ಭಾಷೆ ಇನ್ನೊಂದು ಭಾಷೆಯ ಮೇಲೆ ಪ್ರಭಾವ ಬೀರಿದಾಗ ಅರಿತೋ ಅರಿಯದೆಯೋ ನಾವು ಅದರ ಹಿನ್ನೆಲೆಯ ಸಂಸ್ಕೃತಿಯೊಂದಿಗೆ ಮೈಗೂಡಿಸಿಕೊಳ್ಳುತ್ತೇವೆ. ಇದಕ್ಕೆ ಕನ್ನಡ ಮರಾಠಿ ಭಾಷೆಗಳು ಹೊರತಲ್ಲ.

ಕನ್ನಡ ಮರಾಠಿ ದ್ವಿಭಾಷಿಕತೆಯನ್ನು ಅರಿಯಬೇಕಾದರೆ ಕರ್ನಾಟಕ ಮಹಾರಾಷ್ಟ್ರ ಗಡಿಪ್ರದೇಶವನ್ನು ಗಮನದಲ್ಲಿಡಬೇಕಾಗುತ್ತದೆ. ಮಹಾರಾಷ್ಟ್ರದ ಸೊಲ್ಲಾಪುರ, ಕೊಲ್ಲಾಪುರ, ಸಾಂಗಲಿ, ಮಿರಜ್ ಸುತ್ತಮುತ್ತಲಿನ ಪ್ರದೇಶಗಳು ಕರ್ನಾಟಕದ ಬೆಳಗಾವಿ, ಬೀದರ, ಗುಲಬರ್ಗಾ ಹಾಗೂ ವಿಜಯಪುರ ಜಿಲ್ಲೆಗಳ ಪಶ್ಚಿಮೋತ್ತರ ಭಾಗಗಳು ಕನ್ನಡ

ಮರಾಠಿ ಸೀಮೆಗೆ ಹೊಂದಿಕೊಂಡಿವೆ. ಈ ಪ್ರದೇಶಗಳ ಕನ್ನಡ, ಮರಾಠಿ ಭಾಷೆಯಿಂದ ಪ್ರಭಾವಿತವಾದ ಕನ್ನಡವಾಗಿದೆ.[೬] ಈ ಭಾಗದಲ್ಲಿ ಕನ್ನಡಿಗರಾದ ಜೈನ ಮತ್ತು ವೀರಶೈವ ಜನರಿದ್ದು ಅವರು ಕನ್ನಡವನ್ನು ಶೇ.೭೫ರಷ್ಟು ಮನೆ ಮಾತಾಗಿಯೂ, ಮರಾಠಿಯನ್ನು ಶೇ.೨೫ರಷ್ಟು ತಮ್ಮ ತಮ್ಮೊಳಗೆ ವ್ಯವಹಾರಿಕ ಭಾಷೆಯಾಗಿಯೂ ಬಳಸುತ್ತಿರುವುದು ಕಂಡುಬರುತ್ತದೆ. ಅದರಂತೆ ಕರ್ನಾಟಕದ ಉತ್ತರ ಕನ್ನಡ, ಬೆಳಗಾವಿ ಸುತ್ತಮುತ್ತಲ ಪ್ರದೇಶಗಳಲ್ಲಿರುವ ಸಿದ್ದಿಗಳು, ಗೌಳಿಗರು, ಆಡುವ ಕನ್ನಡದಲ್ಲಿ ಮರಾಠಿ ಶಬ್ದಗಳು ಹೆಚ್ಚು ಬಳಕೆಯಲ್ಲಿರುವುದನ್ನು ಗುರುತಿಸಬಹುದಾಗಿದೆ. ಕರ್ನಾಟಕದಲ್ಲಿರುವ ಮರಾಠಿ ಭಾಷಿಕರು ಔಪಚಾರಿಕ ಮತ್ತು ಅನೌಪಚಾರಿಕ ಸಂದರ್ಭಗಳಲ್ಲಿ ಕನ್ನಡ ಮತ್ತು ಮರಾಠಿ ಎರಡರನ್ನು ಶೇ.೫೦ರಷ್ಟು ಬಳಸುತ್ತಾರೆ.

೧೯೫೬ರಲ್ಲಿ ಭಾಷಾವಾರು ಪ್ರಾಂತಗಳು ರಚನೆಯಾಗುವವರೆಗೆ ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳು ಮುಂಬೈ ರಾಜ್ಯದ ಅಧೀನಕ್ಕೊಳಪಟ್ಟಿದ್ದವು[೭] ಹಾಗೂ ಆ ಪ್ರದೇಶದ ಆಡಳಿತ ಭಾಷೆ, ಶಿಕ್ಷಣದ ಭಾಷೆ ಮರಾಠಿಯಾಗಿತ್ತು. ಮರಾಠ ಪೇಶ್ವೆಗಳ ಸಂಸ್ಥಾನಗಳು ಈ ಪ್ರದೇಶದ ತುಂಬೆಲ್ಲ ಇದ್ದವು. ಪೇಶ್ವೆಯವರ ಮಾತೃಭಾಷೆಯು ರಾಜಕೀಯದಂತೆ, ಭಾಷಾದೃಷ್ಟಿಯಿಂದಲೂ ಮಹತ್ವದ ಬದಲಾವಣೆಯನ್ನು ತಂದಿತು.

ಕನ್ನಡ-ಮರಾಠಿ ಬೇರೆ ಬೇರೆ ಭಾಷಾವಂಶಗಳಿಗೆ ಸೇರಿದ ಭಾಷೆಗಳಾಗಿವೆ.[೮] ಆದರೂ ಕನ್ನಡದಲ್ಲಿ ಮರಾಠಿ ಭಾಷೆಯ ಅಂಶಗಳು, ಮರಾಠಿಯಲ್ಲಿ ಕನ್ನಡದ ಭಾಷೆ ಅಂಶಗಳು ಹೇರಳವಾಗಿವೆ. ಭಾಷಾ ಸಂಪರ್ಕದ ಕಾರಣ ಈ ಎರಡು ಭಾಷೆಗಳಲ್ಲಿ ಆಂತರ್ಗತವಾದ ರೂಪ ಸಾಮ್ಯಗಳು ಸ್ವೀಕರಣದ ಹಂತದಲ್ಲಿ ಮಾತ್ರ ಉಳಿದಿಲ್ಲ. ಈ ಎರಡೂ ಭಾಷಾ ಪ್ರದೇಶಗಳಲ್ಲಿರುವ ದ್ವಿಭಾಷಿಕತೆಯ ವ್ಯಾಪಕತೆಯಿಂದಾಗಿ ಭಾಷಾಮಿಶ್ರಣ, ಭಾಷಾಪಲ್ಲಟ, ದ್ವಿಸ್ತರತೆ ಮುಂತಾದ ಭಾಷಾ ಬಳಕೆಯ ಸಾಮಾಜಿಕ ಪ್ರಕ್ರಿಯೆಗಳಿಗೆ ಸಾಕಷ್ಟು ನಿದರ್ಶನಗಳು ದೊರೆಯುತ್ತವೆ. ಅದರಂತೆ ಸ್ಥಳವಾಚಕಗಳು, ವ್ಯಕ್ತಿವಾಚಕಗಳು, ಸಂಖ್ಯಾವಾಚಕಗಳಲ್ಲಿಯೂ ಈ ಎರಡು ಭಾಷೆಗಳ ಪ್ರಭಾವ ಒಂದು ಇನ್ನೊಂದರ ಮೇಲೆ ಆಗಿದೆ.

ಕರ್ನಾಟಕ ಮತ್ತು ಮಹಾರಾಷ್ಟ್ರ ಈ ಎರಡು ಪ್ರಾಂತಗಳ ಜನರ ನಡುವೆ ತುಂಬ ಪ್ರಾಚೀನದಿಂದಲೂ ನಿಕಟವಾದ ಸಂಬಂಧವಿತ್ತೆಂದು ಕನ್ನಡ, ಮರಾಠಿ ಪ್ರಾಚೀನ ಕಾವ್ಯಗಳಲ್ಲಿ ಸುಳುಹುಗಳು ಸಿಗುತ್ತವೆ. ಮರಾಠಿಯ ಪದಪ್ರಯೋಗಗಳನ್ನು ಹಳಗನ್ನಡ ಕಾವ್ಯದಲ್ಲಿ ಬಳಸಲಾಗಿದೆ. ಜನ್ನನ ಅನಂತನಾಥ ಪುರಾಣದಲ್ಲಿ(೧೨೦೦) ಒಬ್ಬ ಪ್ರತಿಹಾರಿಕ ಬಾಯಲ್ಲಿ ಊರಿ ಊರಿ ಮಾಗುಬೈಸ ಜಾತೂ ಹಳೂ(ಏಳು ಸಾವಕಾಶವಾಗಿ ನೀನು ಹಿಂದೆ ಹೋಗಿ ಕೂಡ್ರು) ಎಂಬ ಮಾತು ಬರುತ್ತದೆ. ಆ ಕಾಲದಲ್ಲಿ ಕನ್ನಡ ಅರಸರ ಆಶ್ರಯದಲ್ಲಿ ಕೆಲಸಕ್ಕಿದ್ದ 'ಆರ'ಯರು. ಬಳಸುವ ಭಾಷೆಯ ಪರಿಣಾಮವಾಗಿ ಇಂತಹ ಶಬ್ದಗಳು ಕನ್ನಡ ಸಾಹಿತ್ಯಕ್ಕೆ ಸೇರಬಹುದೆಂದು ಶಂ.ಬಾ. ಜೋಶಿಯವರು ಅಭಿಪ್ರಾಯ ಪಡುತ್ತಾರೆ. ಆಂಡಯ್ಯನ ಕೃತಿಯಲ್ಲಿ ರಾಹುತರ ಬಾಯಿಂದ ಬರುವ 'ಝಾರೇ

ಜರ್ಝಾರೇ ಹಳೂರೇ ಹೋಹೋ ಮರ್ಝಾ' ಈ ವಾಕ್ಯದಲ್ಲಿ 'ಓ' ಶಬ್ದದ ಬದಲಾಗಿ ಮಹಾಪ್ರಾಣದ ಉಪಯೋಗವಿದೆ. ಈ ಉದಾಹರಣೆಯಿಂದ ಶುದ್ಧ ಕರ್ನಾಟಕದ ಕೇಂದ್ರದಲ್ಲಿಯೂ ಕೂಡ ಮರಾಠಿಯ ಪ್ರಯೋಗ ಜೀವಂತವಾಗಿತ್ತು ಮತ್ತು ಕೆಲವು ಕಡೆ ಮರಾಠಿ ಉಪಯೋಗದಲ್ಲಿತ್ತೆಂದು ಕಂಡುಬರುತ್ತದೆ.[೯]

ವಚನ ಸಾಹಿತ್ಯದಲ್ಲಿ ಬರುವ ಕೆಲವು ಸಂದರ್ಭಗಳನ್ನು ನೋಡಬಹುದು. 'ಹೆಂಡತಿ ಇಲ್ಲದ ಗಂಡಂಗೆ ಆರು ಮಾವಿನ ಮಕ್ಕಳು ಅಖಂಡಿತ ಗುಹೇಶ್ವರ ಹಾ ನೀರಾಳು ರೇ'. 'ಅಲ್ಲಮನ ಈ ವಚನದಲ್ಲಿ', 'ನಿರಾಳ' ಎಂದರೆ ಬೇರೆಯವನು ಎನ್ನುವುದು ಸಂದರ್ಭದ ದೃಷ್ಟಿಯಿಂದಲೂ ಸೊಗಸಾಗಿದೆ. ಅಲ್ಲಮನ ಇನ್ನೊಂದು ವಚನದಲ್ಲಿ 'ತ್ರಾಸುಕಾಂಟಲಾ' ಎಂಬ ಶಬ್ದಪ್ರಯೋಗವಾಗಿದೆ. 'ಕಾಂಟಲಾ' ಎಂಬ ಮರಾಠಿ ರೂಪ ತಕ್ಕಡಿಯನ್ನು ಸೂಚಿಸುತ್ತದೆ. ಬಸವಣ್ಣನವರ ವಚನಗಳಲ್ಲಿ ಕೂಡ ಅನೇಕ ಮರಾಠಿ ರೂಪಗಳು ಬಳಕೆಯಾಗಿವೆ. 'ಕೊಂಡ ಮಾರಿಂಗೆ ಪೋಪುದು ತಪ್ಪದು' ಎಂಬ ಒಂದು ಸಂದರ್ಭ ಬರುತ್ತದೆ. ಮರಾಠಿಯಲ್ಲಿ 'ಕೋಡಣೇ' ಎಂದರೆ ಬಂದಿಸುವುದು (ಅಲೆಮಾರಿ ದನಗಳನ್ನು ಬಂಧಿಸಿಡುವ ಜಾಗಕ್ಕೆ ಕೊಂಡವಾಡ ಕೊಂಡವಾಡೆ ಎನ್ನುವುದು ಈಗಲೂ ಉತ್ತರ ಕರ್ನಾಟಕದಲ್ಲಿ ರೂಢಿಯಲ್ಲಿದೆ). ಹನ್ನೆರಡನೆಯ ಶತಮಾನದ ವಚನ ಸಾಹಿತ್ಯ ದಲ್ಲಿ ಇನ್ನೂ ಕೆಲವು ಮರಾಠಿ ಶಬ್ದಗಳು ಬಳಕೆಯಲ್ಲಿದ್ದವು. ಅಪುಡು-ಮುರುವರೆ, ಕರೋಟಿ-ತಲೆಬುರುಡೆ, ಬಜಾವಣಿ-ವಾದ್ಯ ಬಾರಿಸುವಿಕೆ ಶರಣರು ಸಂಚರಿಸುವಾಗ ಮರಾಠಿ ಭಾಷೆಯ ಛಾಯೆ ಶರಣರ ಭಾಷೆಯ ಮೇಲೆ ಬಿದ್ದಿರುವುದು ಸಹಜವಾಗಿದೆ.

ಮರಾಠಿ ಸಂಖ್ಯಾ ವಾಚಕಗಳ ಪ್ರಭಾವ ಈ ಪ್ರದೇಶದ(ಮರಾಠಿ ಪ್ರಭಾವಿತ ಕನ್ನಡ ಪ್ರದೇಶ) ಕನ್ನಡದ ಮೇಲೆ ದಟ್ಟವಾಗಿದೆ. ನಿತ್ಯ ವ್ಯವಹಾರದಲ್ಲೇ ಮರಾಠಿ ಸಂಖ್ಯಾವಾಚಕ ಗಳೇ ಬಳಕೆಯಾಗುತ್ತಿವೆ.[೧೦] ಸಂಖ್ಯಾವಾಚಕಗಳು ಮೂಲಾಂಶ ಮತ್ತು (Ordinal) ಕ್ರಮಾಂಕ (Cardinal)ಎಂದು ಎರಡು ವಿಧದಲ್ಲಿ ಕಾಣಿಸಿಕೊಳ್ಳುತ್ತವೆ. ಮೂಲಾಂಶಗಳ ಮೂಲ ಪ್ರಕೃತಿಗಳೇ ಆಗಿರುತ್ತವೆ.

ಏಕ	ಒಂದು	ಸಾತ್	ಏಳು
ದೋನ	ಎರಡು	ಆಠ	ಎಂಟು
ತೀನ	ಮೂರು	ನವ್	ಒಂಬತ್ತು
ಚಾರ	ನಾಲ್ಕು	ದಸ್	ಹತ್ತು
ಪಾಂಚ	ಐದು		
ಛೆ	ಆರು		

ಈ ಮೂಲ ಪ್ರಕೃತಿಗಳಿಂದ ಹೆಚ್ಚಿನ ಸಂಖ್ಯೆಗಳನ್ನು ನಿಷ್ಪನ್ನಗೊಳಿಸುವಾಗ ಮೂಲ ಪ್ರಕೃತಿಗಳು ರೂಪ ವ್ಯತ್ಯಾಸ ಹೊಂದುತ್ತವೆ.

ಬೀಸ	ಇಪ್ಪತ್ತು	ದೋನಸೆ	ಎರಡು ನೂರು
ತೀಸ	ಮೂವತ್ತು	ತೀನಸೆ	ಮೂರು ನೂರು
ಚಾಳೀಸ	ನಲವತ್ತು	ಚಾರಸೆ	ನಾಲ್ಕು ನೂರು
ಪಂಚವೀಸ್	ಐವತ್ತು	ಪಾಂಚಸೆ	ಐನೂರು

ಒಂದರಿಂದ ಒಂಬತ್ತರವರೆಗಿನ ಮೂಲಾಂಶಗಳು ಹತ್ತರ ನಂತರ ಬಂದಾಗ ಅವುಗಳ ಪೂರ್ವ ಪದಗಳ, ಏಕ, ದೂ, ತೀ, ಪಚ್, ಸಾತ್, ಆಠ್, ಅಡ್, ಏಕೋಣ ಗಳೆಂದು ವ್ಯತ್ಯಾಸ ಹೊಂದುತ್ತವೆ. ಒಂದರಿಂದ ಒಂಬತ್ತರವರೆಗಿನ ಮೂಲಾಂಶಗಳು ವಿಶೇಷಣದಲ್ಲಿ ಕಾಣಿಸಿಕೊಂಡಾಗ

ಪಹೀಲಾ	ಮೊದಲನೆಯ
ದೂಸರಾ	ಎರಡನೆಯ
ತೀಸರಾ	ಮೂರನೆಯ
ಚವಥಾ	ನಾಲ್ಕನೆಯ
ಪಾಂಚವಾ	ಐದನೆಯ - ಮುಂತಾದವು.

ಅನುಕ್ರಮವನ್ನು ಸೂಚಿಸುವಾಗ ಕನ್ನಡದಲ್ಲಿ -ನೆಯ ಪ್ರತ್ಯಯ ಹಚ್ಚಿ ಪ್ರಾರಂಭವಾಗುವ ಸಂಖ್ಯಾವಾಚಕಗಳಿವು. ಭಿನ್ನರೂಪಗಳಾದ (Fractional Forms).

ಪಾವ	ಕಾಲು
ಸವ್ವಾ	ಒಂದು ಕಾಲು
ಪಾವಣೆ(ಪೋಣೆ)	ಮುಕ್ಕಾಲು
ಪಾವಣೆದೋನ	ಒಂದು ಮೂಕ್ಕಾಲು

ಇಂತಹ ರೂಪಗಳು ಮರಾಠಿಯಂತೆ ಕನ್ನಡದಲ್ಲಿ ಬಳಕೆಯಾಗಿವೆ. ಗಡಿನಾಡಿನ ಸಾಮಾಜಿಕ ಜೀವನದಲ್ಲಿ ಕುಟುಂಬದ ಸಂಬಂಧವನ್ನು ಸೂಚಿಸುವ ಮರಾಠಿ ಸಂಬಂಧ ವಾಚಕಗಳು ಕನ್ನಡದಲ್ಲಿ ಬಳಕೆಯಾಗಿವೆ.

ಪಾವಣೆರು	ಬೀಗರು	ಮುಲಗಾ	ಹುಡುಗ
ವೈನಿ	ಅಣ್ಣನ ಹೆಂಡತಿ	ಮುಲಗೀ	ಹುಡುಗಿ
ಬಾಇ	ಸಹೋದರ	ಬಹೀಣ	ಸಹೋದರಿ
ಬಾಪ	ತಂದೆ	ವಗತಾನ	ಮನೆತನ
ಆಈ	ಅಜ್ಜಿ	ಮಾ	ತಾಯಿ
ಚುಲತಾ	ಕಕ್ಕ	ಚುಲತಿ	ಕಕ್ಕಿ

ಕನ್ನಡಿಗರು ಬೇರ ಬೇರೆ ಸಂದರ್ಭದಲ್ಲಿ ಬಳಸುವ ಚುಥ್ಯಾ, ಲವಡಿ. ಇಂತಹ ಬಯ್ಗುಳಗಳು ಮರಾಠಿ ಮೂಲದವುಗಳಾಗಿವೆ. ಒಂದು ಪ್ರದೇಶದ ಭಾಷೆ ಸಂಸ್ಕೃತಿಯ

ಇತಿಹಾಸವನ್ನು ತಿಳಿಸುವಲ್ಲಿ ಸ್ಥಳನಾಮಗಳು ಮಹತ್ವದ ಪಾತ್ರವಹಿಸುತ್ತವೆ. ಬೆಳಗಾವಿ, ಬೀದರ್ ಜಿಲ್ಲೆಗಳ ಪಶ್ಚಿಮೋತ್ತರ ಭಾಗಗಳಲ್ಲಿ ಸ್ಥಳನಾಮಗಳ ಮೇಲೆ ಕನ್ನಡ ಭಾಷೆಯ ಪ್ರಭಾವವಿದೆ.

ವಾಡ/ವಾಡಿ ಕೊನೆಯಾಗುವ ಹೆಸರುಗಳು.

ಟಿಳಕವಾಡಿ	ಧೋಪರವಾಡಿ
ಹಿಂದವಾಡಿ	ದನಗರವಾಡಿ
ಚೌಕಿವಾಡಿ	ಬಸ್ತವಾಡಿ
ಪುಲದಾರವಾಡಿ	ಅತ್ತಿವಾಡ
ನವಚಂದವಾಡಿ	ಕಾಗವಾಡ
ಬಂಡಗಾರವಾಡಿ	

ವಾಡಿ //ವಾಡ ಎಂದರೆ ಪ್ರದೇಶ ಎಂದರ್ಥವಿದೆ.

'ಗಾಂವ' ಕೊನೆಯಾಗುವ ಹೆಸರುಗಳು.

ಬೆಳಗಾಂವ	ಬೊರಾಗಾಂವ
ಖನಗಾಂವ	ಬಾಲಗಾಂವ
ಉಚಗಾಂವ	ತೆಲಗಾಂವ
ವಡಗಾಂವ	ಸಾವಲಗಾಂವ
ಸಂಪಗಾಂವ	ಮಾಳೆಗಾಂವ
ಮಜಗಾಂವ	ಬೀಜಲಗಾಂವ

ಗಾಂವ ಎಂದರೆ ಊರು, ಹಳ್ಳಿ ಎಂದರ್ಥ. ಕನ್ನಡದ 'ಗ್ರಾಮ'>'ಗಾಂವ' ಎಂದಾಗಿದೆ. ಕನ್ನಡದಲ್ಲಿ ಊರು ಕೊನೆಯಾಗುವ ಹೆಸರುಗಳು ಸಾಕಷ್ಟಿವೆ. ಉದಾ. ಬೆವೂರು, ಹೊಸೂರು, ಮಮದಾಪೂರ, ಕಬ್ಬೂರು, ಲೋಕಾಪುರ ಮುಂತಾದವು. ಸಾಂಬ್ರಾ, ಸದಲಗಾ, ಎಕ್ಸಂಬಾ, ಫೇಪಾಲ, ಉರ್ಕಿ ಈ ಗ್ರಾಮನಾಮಗಳ ಮರಾಠಿ ಉಚ್ಚಾರಾಂಸಗಳ ಪ್ರಭಾವವಿದೆ. ಸ್ಥಳನಾಮಗಳು ತಮ್ಮದೇ ಆದ ಪ್ರಾದೇಶಿಕ ಪ್ರಸಾರವನ್ನು ಹೊಂದಿವೆ. ಸ್ಥಳನಾಮಗಳಂತೆ ವ್ಯಕ್ತಿನಾಮಗಳ ಮೇಲೂ ಮರಾಠಿ ಭಾಷೆಯ ಪ್ರಭಾವ ವಿದೆ. ಮರಾಠಿಯಲ್ಲಿರುವ -'ರಾವ್' ಕೊನೆಯಲ್ಲಿರುವ ಹೆಸರುಗಳು ಕನ್ನಡಿಗರಲ್ಲಿಯೂ ಇವೆ. -'ರಾವ್' ರೂಪ ನೆರೆಯ ಮಹಾರಾಷ್ಟ್ರದಿಂದ ಬಂದಂತೆ ಕಾಣುತ್ತದೆ.

ಅಶೋಕ ರಾವ
ಗಣಪತಿ ರಾವ್
ಗೋವಿಂದ ರಾವ
ಪ್ರಭಾಕರ ರಾವ
ವಿಠ್ಠಲ ರಾವ

ಕುಲನಾಮಗಳ ಮೇಲೆಯೂ ಮರಾಠಿಯ ಛಾಯೆಯಿದೆ.

ಕೋರೆವಾಲ	ಬೋಸಲೆ
ಪಟೇವಾಲ	ಪೋತದಾರ
ಪೋರ ವಾಲ	ಭುಲಭುಲ
ಶಿಂಧೆ	ಕಾಪಸೆ
ಜಾಧವ	

ಬೆಳಗಾವಿ ಸುತ್ತಮುತ್ತಲಿನ ಪ್ರದೇಶದ ಕನ್ನಡ ಮಾತೃಭಾಷಿಕರಲ್ಲಿ ಇಂತಹ ಕುಟುಂಬ ನಾಮಗಳಿವೆ. ಕನ್ನಡ ಮರಾಠಿ ಭಾಷೆಗಳ ಸಂಪರ್ಕದಿಂದ ಪರಸ್ಪರ ಕೊಡುಕೊಳ್ಳುವಿಕೆಯ ಕ್ರಿಯೆ ಧಾರಾಳವಾಗಿ ನಡೆದಿವೆ. ಇಲ್ಲಿ ಹೆಚ್ಚಾಗಿ ನಡೆದಿರುವುದು ಶಬ್ದ ಸ್ವೀಕರಣಗಳಾಗಿದ್ದು ಅವು ಸಾಂಸ್ಕೃತಿಕ ಭಾಷಾಸ್ವೀಕರಣಕ್ಕೆ ಉತ್ತಮ ಉದಾಹರಣೆಗಳಾಗಿವೆ.

ಭಾತಿ (ಎದೆ)	<	ಮ. ಭಾತಿ
ಪಲಂಗ (ಮಂಚ)	<	ಮ. ಪಲಂಗ
ಖಾನಾವಳಿ (ಭೋಜನ ಗೃಹ)	<	ಮ. ಖಾನಾವಳಿ
ಅಡತಿ (ದಲ್ಲಾಳಿ)	<	ಮ ಅಡತಾ. ಅಡತಿ

ಇದರಂತೆ ವಟಾಣಿ, ಪಾನ, ದಾಲಚಿನ್ನಿ, ದವಾಖಾನೆ, ಪಾಯಖಾನೆ ಲಾಡೂ, ಮಿರಚೀ ಬದಾಮ ಮುಂತಾದ ಅನೇಕ ರೂಪಗಳು ಮರಾಠಿಯಿಂದ ಕನ್ನಡದಲ್ಲಿ ನೇರವಾಗಿ ಬಂದಿವೆ. ಮರಾಠಿಯ ಕೆಲವು ವ್ಯಂಜನಾಂತ ಪದಗಳು ಕನ್ನಡಕ್ಕೆ ಬರುವಾಗ ಸ್ವರಾಂತಗಳಾಗಿವೆ.

ಅಡಚಣ್	<	ಅಡಚಣೆ (ತೊಂದರೆ
ಅಡೀಚ್	<	ಅಡೀಚು (ಎರಡೂವರೆ)
ಅಪೂಟ್	<	ಅಪೂಟ (ಸ್ವಲ್ಪ)
ಅಚಾನಕ್	<	ಅಚಾನಕ (ಅನಿರೀಕ್ಷಿತ)

ಅಲ್ಪಸ್ವಲ್ಪ ವ್ಯತ್ಯಾಸದಿಂದ ಕನ್ನಡದಿಂದ ಮರಾಠಿಗೆ ಬಂದಿರುವ ರೂಪಗಳು:

ಹಂಡಾ	<	ಹಂಡೆ
ಚಮಚಾ	<	ಚಮಚೆ
ಪಣತ	<	ಪಟಣಿ
ಖಾಂಬ	<	ಕಂಬ/ಖಂಬ
ಗಾಜರ	<	ಗಜ್ಜರೆ
ಧಬಧಬಾ	<	ಧಬಧಬ

ಕನ್ನಡ ಮೂಲದಿಂದ ಬಂದಿರುವ ಕೆಲವು ವಿಶಿಷ್ಟ ರೂಪಗಳು ಮರಾಠಿಯಲ್ಲಿ ಬಳಕೆಯಲ್ಲಿವೆ. ಕಾಸಡೇನ (ಬೆಲೆಯಿಲ್ಲದ) ದವಳಕ್ಕಿ (ಸಿರಿಮಂತಿಕೆ) ನಂದೋಸು (ಬಾಳು, ಸೊಸೆಯಾಗಿ ಬಾಳುವಿಕೆ) ಕನ್ನಡ ಮರಾಠಿ ಮಿಶ್ರಿತ ಕಸಿ ರೂಪಗಳು ಬಳಕೆಯಲ್ಲಿವೆ. ಕೋಲ-ಕಾಠೀ, ಚೂಲ-ವೈಲ, ಕೀಂಗ-ಕಾಕುಳರೇ, ಒಲೇ-ಶೇಲಾ ಮುಂತಾದ ಜೋಡು ಶಬ್ದಗಳು, ಛಪ್ಪನ್ನೈವತ್ತಾರು, ಎಕ್ಕಸರ, ಚತ್ತೀಸಕೋಟಿ ಅಠಾರಾ ಕಛೇರಿ ಮುಂತಾದ ಶಬ್ದಗಳು ಕನ್ನಡ ಮತ್ತು ಮರಾಠಿಗಳ ಆಡುಮಾತಿನಲ್ಲಿ ದೊರೆಯುತ್ತವೆ. ಕನ್ನಡ ಭಾಷಿಕರು ತಮ್ಮ ಮಾತಿನಲ್ಲಿ ಮರಾಠಿ ಶಬ್ದಗಳನ್ನು ಬಳಸಿದರೂ ಅವುಗಳಿಗೆ ಹಚ್ಚುವ ಪ್ರತ್ಯಯಗಳು ಮಾತ್ರ ಕನ್ನಡವಾಗಿರುತ್ತವೆ(ಪದರಚನೆಯ ಹಂತದಲ್ಲಿ).

ಪಾವಣೇರು - ಬೀಗರು

ನಾವಾಚಾಸತ್ಯನ - ನಾನು ಬರುತ್ತೇನೆ

ಅವಳ ತಾಜಾಸ್ಥಾಳ - ಅವನು ನಾಚುತ್ತಾಳೆ

ಭಾಷಾಮಿಶ್ರಣ, ಭಾಷಾಪಲ್ಲಟಗಳಿಂದಾಗಿ ಕನ್ನಡದ ಅನೇಕ ನುಡಿಗಟ್ಟುಗಳು ಹೇರಳವಾಗಿ ಮರಾಠಿಯಲ್ಲಿ ಉಪಯೋಗವಾಗುತ್ತವೆ. ಹರಕ ಹೆಂಗಸು-ತಾಳ್ಮೆಯಿಲ್ಲದ ಹೆಂಗಸು, ನೆಲಹಿಡಿ-ಮುಪ್ಪಾಗಿ ಮಲಗು, ಕಣ್ಣಕಿತ್ತು-ದೊಡ್ಡವನಾಗು, ಬೆಳೆ, ದೈವದೂಟ-ಸಮಾಜದ ಊಟ ಇವು ಕನ್ನಡ ಮೂಲವೆಂದು ಶ್ರೀ ಮಿರ್ಜಿ ಅಣ್ಣಾರಾಯರವರು ಅಭಿಪ್ರಾಯಪಟ್ಟಿದ್ದಾರೆ. ಇದರ ಬಗ್ಗೆ ಇನ್ನೂ ವಿಚಾರಿಸಬೇಕಾಗಿದೆ. ಇಂತಹ ನಾಣ್ಣುಡಿಗಳಿಗೆ ಲೆಕ್ಕವೇ ಇಲ್ಲ ಸ್ವಾಭಾವಿಕವಾಗಿ ಮಾತನಾಡುವಾಗ ಇವು ಜನರ ಬಾಯಿಂದ ನುಸುಳಿಬರುತ್ತವೆ. ಮರಾಠಿ ಭಾಷೆಯ ಪ್ರಭಾವದಿಂದ ಗಡಿ ಕನ್ನಡದಲ್ಲಿ ಮಹಾಪ್ರಾಣಗಳಿವೆ.

ಗಡಿ ಪ್ರದೇಶದ ಕನ್ನಡ	ವ್ಯವಹಾರಿಕ ಕನ್ನಡ
ಘಮ್ಮ	ಗಮ್ಮ
ಖಸಖಸ	ಕಸಕಸ
ಖೋಬ್ಬರಿ	ಕೋಬ್ಬರಿ
ಧೋತರ	ದೋತರ
ಥಾಲಿ	ತಾಲಿ
ಖುರಪಿ ಕುರುಪಿ	

ಮರಾಠಿ ಮಾತನಾಡುವವರಂತೆ ಉಚ್ಚಾರ ಕ್ರಮದಲ್ಲಿ ಆಘಾತ ಪ್ರತಿ ಪದದ ಮೊದಲನೆಯ ಅಕ್ಷರದ ಮೇಲೆ ಬೀಳದೆ ಸಾಮಾನ್ಯವಾಗಿ ಎರಡನೆಯ ಅಕ್ಷರದ ಮೇಲೆ ಬೀಳುವುದು.

ಪುಸ್ತಕ ಪುಸ್ತಕ

ಕನ್ನಡ ಕನ್ನಡ

ಮರಾಠಿಯಲ್ಲಿ 'ಭೀ' ಪ್ರತ್ಯಯ ವಾಕ್ಯದ ಮಧ್ಯದಲ್ಲಿ ಬಂದು ಸಮುಚ್ಚಯ ಪ್ರತ್ಯಯದ ಕಾರ್ಯನಿರ್ವಹಿಸುತ್ತದೆ. 'ಸಾಲಿಗಿ ಬಸಪ್ಪ ಭೀ ಮಲ್ಲಪ ಹ್ವಾದರು' (ಶಾಲೆಗೆ ಬಸಪ್ಪ ಮತ್ತು ಮಲ್ಲಪ್ಪ ಹೋದರು) ಒಂದು ಘಟನೆಯ ಬಗ್ಗೆ ಮಾತನಾಡುವಾಗ 'ಮುಂದೆ ಏನಾಯಿತು' ಎಂಬುದನ್ನು ಹೇಳುವಾಗ 'ಐಂತ' ಪ್ರತ್ಯಯ ಬಳಕೆಯಾಗುತ್ತದೆ. 'ನಿಪ್ಪಾಣಿ ಹತ್ಯಾಕ ಗಾಡಿಗೋಳ್ ಡಿಕ್ಕಿ ಆದು ಐಂತ ನಾಕ್ ಮಂದಿಸತ್ತು ಇನ್ನ ನಾಕ್ ಮಂದಿಗ ತಲಿಗ ಪೆಟ್ಟ ಬಿದ್ದೈತಿ. ಅಂತ ಅವರ್ನ ನಿಪ್ಪಾಣಿ ದವಾಖಾನ್ಯಾಗ್ ಹಾಕ್ಯಾರ್' ಕನ್ನಡ ಮರಾಠಿ ಗಡಿ ಪ್ರದೇಶದಲ್ಲಿ ಏ<ಯಾ ಆಗಿ ಪರಿವರ್ತನೆಗೊಳ್ಳುತ್ತದೆ.

ಏಕೆ < ಯಾಕೆ

ಏನು < ಯಾನು

ಏನಾದರೂ < ಯಾನಾದರೂ

ಮರಾಠಿ ಭಾಷೆಯ ಪ್ರಭಾವದಿಂದ 'ಜೆ' ಪ್ರತ್ಯಯ ಗೌರವವಾಚಕವಾಗಿ ಬಳಕೆಯಲ್ಲಿದೆ.

ಗುರುಗಳು - ಗೂರೂಜಿ

ಪಾಟೀಲರು - ಪಾಟೀಲಜಿ

ಕನ್ನಡ ಮರಾಠಿ ಭಾಷಾ ಸಂಪರ್ಕದಿಂದ ಮರಾಠಿ ರೂಪಗಳು ಕನ್ನಡ ಭಾಷಿಕರಲ್ಲಿ ಕನ್ನಡ ರೂಪಗಳು ಮರಾಠಿ ಭಾಷಿಕರಲ್ಲಿ ಕಂಡುಬರುತ್ತಿವೆ. ಭಾಷಾ ಮಿಶ್ರಣ ಕ್ರಿಯೆ ತುಂಬಾ ಸಹಜವಾದ ರೀತಿಯಲ್ಲಿ ನಡೆದಿದೆಯೆಂದು ಹೇಳಬಹುದು ಕೆಲವು ಪ್ರಯೋಗ ಗಳನ್ನು ಗಮನಿಸಬಹುದು.[೧೧]

ಐಸಿರಿ (ವೈಭವ) ಪೋರಿ ಮದಿವ್ಯಾಗ ಐಸಿರಿ ಆಗಲಿಲ್ಲ(ಹುಡುಗಿಯ ಮದುವೆಯಲ್ಲಿ ವೈಭವ ಆಗಲಿಲ್ಲ).

ಖಬರ(ಎಚ್ಚರ) ಅವನ್ ಮೈಮ್ಯಾಲ ಖಬರ ಇಲ್ಲ(ಅವನ ಮೈಮೇಲೆ ಎಚ್ಚರವಿಲ್ಲ).

ವೈನಿ(ಅತ್ತಿಗೆ) ನಾಳೆ ವೈನಿ ಬರತಾಳ(ನಾಳೆ ಅತ್ತಿಗೆ ಬರುವಳು).

ಆಗಾವ(ಮುಂಚಿತ) ಅಗಾವ ರೊಖ್ಖಾ ಕೊಟೀನಿ(ಮುಂಚಿತವಾಗಿ ದುಡ್ಡು ಕೊಟ್ಟಿದ್ದೇನೆ).

ಚಾಳಿ(ನಡತೆ) ಮುಲಗಾನ ಚಾಳಿ ನೆಟ್ಟಗಿಲ್ಲ(ಹುಡುಗನ ನಡತೆ ಸರಿಯಿಲ್ಲ).

ಧಡಧಡೀತ(ಗಟ್ಟಿ) ಮುದಕಿ ಧಡಧಡೀತ ಐತಿ(ಮುದಿಕಿ ಗಟ್ಟಿ ಯಿದ್ದಾಳೆ).

ವಗತಾನ(ಮನೆತನ) ಪೋರಿಗೆ ವಗತಾನ ಬಂದಿಲ್ಲ(ಹುಡುಗಿಗೆ ಮನೆತನ ಬಂದಿಲ್ಲ).

ಚಾಲು(ಪ್ರಾರಂಭ/ಶುರು) ಖಾನಾವಳಿ ಚಾಲು ಐತಿ(ಬೋಜನ ಗೃಹ ಶುರುವಾಗಿದೆ).

ಧೀಡ್(ಒಂದೂವರೆ) ಭೆಂಡಿಧೀಡ್ ರೂಪಾಯಿಗೆ ಕಿಲೋ(ಭೇಂಡಿಕಾಯಿ ಒಂದೂವರೆ ರೂಪಾಯಿಗೆ ಕಿಲೋ).

ಸಂಭಾಷಣೆಯೊಂದರ ಭಾಷಾ ಮಿಶ್ರಣ ಇಂತಿದೆ. ಲಗ್ನದ ಸಮಾರಂಭವನ್ನು ಮುಗಿಸಿಕೊಂಡು ಮಿರಜ ರೇಲ್ವೆ ನಿಲ್ದಾಣದಲ್ಲಿ ಹೆಣ್ಣಿನ ಕಡೆಯವರು ಬಂದು ತಂಗಿದ್ದಾರೆ

ರೈಲು ದಾರಿಯನ್ನು ಕಾಯುತ್ತಿದ್ದಾರೆ. ಆಗ ಅಲ್ಲಿ ನಡೆಯುವ ಮಾತುಕತೆಗಳು ಹೀಗಿರುತ್ತವೆ.

ಒಬ್ಬಳು: ಪಾರಗೋಳೆಲ್ಲಾ ಪಿಂಗಾಳಸ ಹತಿದ್ದರು ಮಾತ ಹೊಂಟೀವಲ್ದು ಧಗಿಭಗಿ ಯಾತ ಅಟಾಪಸವಾರೋಯಾನೋ? ಭಾಜಿಗೆ ಹೋರ್ಗ ಹೋಗಿ ಯಾವಾಗ ವರಾತ ಹೊಟಿತೇಂತಿ ಕೇಳು ಅಂದರೆ ಅವರ ಹಿಂದೆ ಮುಂದ ನೋಡ ಖ್ಯದಾರ ಅದ್ದೆ ನಮ್ಮವರ ಬಂದ್ರ ತಾಯಿ.

(ಕೂಸುಗಳೆಲ್ಲ ತೂಕಡಿಸ ಹತ್ತಿದವು ಮೆರವಣಿಗೆಯೂ ಹೊರಡವಲ್ಲದು ಬೇಗ ಬೇಗ ಏಕೆ ತೀರಿಸಲಿಲ್ಲರೋ ಏನೋ, ಭಾವನವರೇ ಹೊರಗೆ ಹೋಗಿ ಯಾವಾಗ ಮೆರವಣಿಗೆ ಹೊರಡುವುದು ಕೇಳಿರಿ ಎನ್ನಲು ಅವರು ಅನುಮಾನಿಸತೊಡಗಿದರು ಅಷ್ಟರಲ್ಲಿ ನಮ್ಮವರು ಬಂದರವ್ವ).

ಇನ್ನೊಬ್ಬಳು: ನಿನ್ನ ಗಂಡ ಹೂಂದದೇ? ಅವ್ವಾನ ಸಾಲೀ ಕಲ್ಯು ಮನಸ್ಯಾ ಇಂಥವರಲ್ಲಿ ಅಂಜತಾಹೊಯಿಂದ?

(ನಿನ್ನ ಗಂಡನು ಹೌದೇನವ್ವಾ? ಅವನೇನು ಶಾಲೆಯನ್ನು ಕಲಿಯುವ ಮನುಷ್ಯನು ಇಂಥವರಿಗೆ ಅಂಜುತ್ತಾನೆ?).

ಕನ್ನಡ. ಮರಾಠಿ ಮಿಶ್ರಿತ ಇಂತಹ ವಾಕ್ಯಗಳು ಔಪಚಾರಿಕ ಮತ್ತು ಅನೌಪಚಾರಿಕ ಸಂದರ್ಭದಲ್ಲಿ ಬಳಕೆಯಾಗುತ್ತವೆ.

ಮಹಾರಾಷ್ಟ್ರದಲ್ಲಿ ಅನೇಕ ಸಣ್ಣಾಟಗಳು ಪ್ರಚಾರದಲ್ಲಿವೆ, ಅವು ಸಂತರ ಕಥೆಗಳನ್ನು ಒಳಗೊಂಡಿವೆ. ಲಳಿತ, ತಮಶಾ, ಬೋಂಧಳ ಮುಂತಾದವುಗಳು ಗಡಿಪ್ರದೇಶದಲ್ಲಿ ತುಂಬ ಜನಪ್ರಿಯವಾಗಿವೆ. ಮರಾಠಿ ಭಾಷೆಯ ಪ್ರಭಾವ ಕನ್ನಡ ನಾಟಕಗಳ ಮೇಲೆ ಆಗಿದೆ. ಸು. ೧೮೮೦ರಲ್ಲಿ ರಚಿತವಾದ 'ಸಂಗ್ಯಾ ಬಾಳ್ಯಾ' ಗೀತ ರೂಪಕದಲ್ಲಿ ಬರುವ ಮಾರವಾಡಿ ಮಾತುಗಳಲ್ಲಿ ಮರಾಠಿ ಪದಗಳೇ ತುಂಬಿವೆ. ಶಾರ(ಶಹರ), ಹಜಾರ (ಸಾವಿರ), ಜಾಕೀಟು(ಅರೆ ತೋಳಿನ ಕೋಟು), ಪೈರಾಣ, ಸಾಂಟಿನಂಬರ, ಪಡ್ಕಿ ಮುಂತಾದವು. ಸಂಗ್ಯಾ ಬಾಳ್ಯಾ ಪಗಡಿ ಆಡಲಿಕ್ಕೆ ಕುಳಿತಾಗ ಅವರಲ್ಲಿ ಬಳಕೆಯಾಗುವ ದಶ್ಯಾ, ಪಾಶೇ, ಚಕ್ಕಾ, ತೀನೀ ಮೊದಲಾದ ಸಂಖ್ಯಾವಾಚಕಗಳು ಮರಾಠಿ ಪದಗಳೇ ಆಗಿವೆ. ಇವುಗಳಿಗೆ ಪರ್ಯಾಯ ಪದಗಳು ಕನ್ನಡದಲ್ಲಿ ಇಲ್ಲವೆಂದಲ್ಲ. ಆಟ, ವ್ಯಾಪಾರ ಸಂಬಂಧಗಳಲ್ಲಿ ಮರಾಠಿಗರು ನಮಗಿಂತ ಹೆಚ್ಚು ತೊಡಗಿಸಿಕೊಂಡವರು. ಹೀಗಾಗಿ ಅವರು ತಮ್ಮ ಪದಗಳನ್ನು ಸಹಜವಾಗಿ ರೂಢಿಯಲ್ಲಿ ತರಬಲ್ಲರು. ಕನ್ನಡ ಅವುಗಳನ್ನು ಅನುಕರಿಸುವುದು, ಸ್ವೀಕರಿಸುವುದು ಅನಿವಾರ್ಯ. ಇದರಿಂದ ಕನ್ನಡದ ಅಭಿವ್ಯಕ್ತಿಗೆ ಹೊಸಕಳೆ, ಕಸುವು ಬರುತ್ತದೆ ಎನ್ನುವುದನ್ನು ಅಲ್ಲಗಳೆಯಲಾಗದು. ಕನ್ನಡ ಮರಾಠಿ ಗಡಿಪ್ರದೇಶದ ಬರಹಗಾರರ ಕೃತಿಗಳಲ್ಲಿ ಮರಾಠಿ ರೂಪಗಳು ಸಹಜವಾಗಿ ಬಳಕೆ ಯಾಗಿವೆ. ಪೇಶ್ವೆಯವರ ಆಳ್ವಿಕೆಯ ಪ್ರಭಾವದಿಂದಾಗಿ 'ಬಾಲಾಜಿ', 'ಘೋಮಾಜಿ'

ಎಂಬ ರೂಪಗಳು ಕನ್ನಡದಲ್ಲಿ ವ್ಯಂಗ್ಯಾರ್ಥದಲ್ಲಿ ಬಳಕೆಯಾಗುತ್ತಿದೆ. ಹೀಗೆ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಮೇಲೆ ಮರಾಠಿ ಭಾಷೆ ಪ್ರಭಾವ ಅದರಂತೆ ಮರಾಠಿ ಭಾಷೆ- ಸಂಸ್ಕೃತಿಯ ಮೇಲೆ ಕನ್ನಡದ ಪ್ರಭಾವವನ್ನು ಗುರುತಿಸಬಹುದಾಗಿದೆ.

ಕನ್ನಡ ಭಾಷೆ ಸಂಸ್ಕೃತಿಯ ಮೇಲೆ ಮರಾಠಿ ಭಾಷೆಯ ಪ್ರಭಾವವಾದಂತೆ ಮರಾಠಿಯ ಮೇಲೆ ಕನ್ನಡ ಭಾಷೆ, ಸಂಸ್ಕೃತಿಯ ಪ್ರಭಾವವಿದೆ. ಮಹಾರಾಷ್ಟ್ರದ ಚಾಂದಾ, ಭಂಡಾರ ಜಿಲ್ಲೆಗಳ ಕುರುಂಬ ಮತ್ತು ಹೊಲಿಯ ಜಾತಿಯ ನಾಲ್ಕು-ಐದು ಸಾವಿರದಷ್ಟು ಜನ ಕನ್ನಡ ಮಾತನಾಡುತ್ತಾರೆಂದು ಗ್ರಿಯರಸನ ತಮ್ಮ Linguistic Survery of India (Vol-IV, P.p. 446)ದಲ್ಲಿ ಬರೆಯುತ್ತಾರೆ. ಅವರ ಈ ಕನ್ನಡ ವಿಜಯಪುರದ ಇಂದಿನ ಆಡುಮಾತಿಗೆ ಸಮೀಪದ್ದಾಗಿದೆಯೆಂದು ಹೇಳಿದ್ದಾರೆ. ಮಹಾರಾಷ್ಟ್ರದಿಂದ ಅತಿ ದೂರದಲ್ಲಿರುವ ಶ್ರವಣಬೆಳಗೊಳದ ಹತ್ತನೆಯ ಶತಮಾನದ ಶಿಲಾಲೇಖನದಲ್ಲಿಯ ಮಾರಟೀ ವಾಕ್ಯ ಮಹಾರಾಷ್ಟ್ರದ ಮುಂದೆ ಒಂದು ಒಗಟಾಗಿರು ವಂತೆ ಇಂದು ಕರ್ನಾಟಕದಿಂದ ಬಹಳ ದೂರದಲ್ಲಿರುವ ಚಾಂದಾ, ಭಂಡಾರ ಜಿಲ್ಲೆ ಯಲ್ಲಿಯ ಕನ್ನಡ ಭಾಷೆಯನ್ನಾಡುವವರ ಅಸ್ತಿತ್ವ ಕನ್ನಡಿಗರಿಗೆ ಒಂದು ಒಗಟಾಗಿದೆ.[೨] ಇಂದಿಗೂ ಈ ಎರಡು ಪ್ರಾಂತದವರ ಪ್ರಾಂತಾಭಿಮಾನದ ದೃಷ್ಟಿಕೋನದಿಂದ ಈ ಒಗಟಿಗೆ ಉತ್ತರ ದೊರೆಯುವದು ಶಕ್ಯವಿಲ್ಲದಾಗಿದೆ.

ಉತ್ತರ ಕರ್ನಾಟಕದ ರೈತಾಪಿ ಜನರಲ್ಲಿ ಸಾರು ಪಲ್ಯಗಳಿಗೆ 'ಒಣಗ್ಗ' ಎಂಬ ಶಬ್ದ ಬಂದಿತು. ಮರಾಠಿಯಲ್ಲಿ ಇದೇ ಕಲ್ಪನೆ ಈ ಶಬ್ದದಲ್ಲಿ ಕಾಣಬರುತ್ತದೆ. ಮನೆಯಿಂದ ಹೋಗುವಾಗ ಹೋಗುತ್ತೇನೆ ಎನ್ನಬಾರದು 'ಹೋಗಿ ಬರುತ್ತೇನೆ' ಎನ್ನಬೇಕು (ವಾಸ್ತು ತಥಾಸ್ತು ಎನ್ನುವ ಕಲ್ಪನೆ) ಇದು ಕನ್ನಡ ಜನಜೀವನದ ರೂಢಿ ಈ ವಿಶ್ವಾಸ ಇಂದಿಗೂ ಮಹಾರಾಷ್ಟ್ರದಲ್ಲಿದೆ. ಕೂಸು ಹುಟ್ಟಿದ ಐದನೆಯ ದಿವಸ ವಿಧಿದೇವಿ ಅದರ ಹಣೆ ಬರಹ ಬರೆಯುತ್ತಾಳೆಂದು ನಮ್ಮಲ್ಲಿಯ ಕಲ್ಪನೆ ಅದಕ್ಕಾಗಿ ಹಣೆ ಬರಹಕ್ಕೆ ಐದೇಶಿ (ಅಯದೇಶಿ) ಎನ್ನುವ ಜನಪದ ಪ್ರತಿಶಬ್ದವೂ ಇದೆ ಇಂತಹ ನಂಬಿಕೆ ಮಹಾರಾಷ್ಟ್ರ ದಲ್ಲಿದೆ. 'ಪಾಂಚವೀಲಾ ಪುಜರೇ ಲೀಜಾ' ಎನ್ನುವ ಪಡೆನುಡಿಯೂ ಅಲ್ಲಿ ಪ್ರಚಾರ ದಲ್ಲಿದೆ.[೩] ಕನ್ನಡ ಮರಾಠಿ ಸಾಂಸ್ಕೃತಿಕ ಸಂಬಂಧವನ್ನು ಸೂಚಿಸುವ ಈ ಶಬ್ದ ಕನ್ನಡ ಮರಾಠಿಯ ಸಂಸ್ಕೃತಿಯ ಬೆಸುಗೆಯಾಗಿದೆ. ಕನ್ನಡದ 'ಜೋಕುಮಾರ' ಎಂಬ ಜಾನಪದ ದೇವತೆಯ ಹೆಸರನ್ನು ಒಬ್ಬ ವ್ಯಕ್ತಿಯನ್ನು ಬೈಯುವಾಗ, ಹಿಂಕರಿಸುವಾಗ ಬಳಸುತ್ತಾರೆ. ಇದು ಮಹಾರಾಷ್ಟ್ರದಲ್ಲಿಯೂ ಬಳಕೆ ಯಾಗುತ್ತಿದೆ.

ಕನ್ನಡದ ಪ್ರಭಾವ ಮರಾಠಿಯ ಸಂಸ್ಕೃತಿಗಷ್ಟೇ ಸೀಮಿತವಾಗದೆ ಭಾಷೆಗೂ ಅನ್ವಯಿಸು ತ್ತದೆ. ಕನ್ನಡದ ಸಂಪರ್ಕದಿಂದಾಗಿ ಮರಾಠಿಯಲ್ಲಿ ಸ್ವರಲೋಪ ಸಂಧಿ ಕಾಣಿಸಿದೆ. ಅದು ಮೊದಲ ಶಬ್ದಯಿದ್ದಾಗ ಗೋಚರವಾಗುತ್ತದೆ. ಉದಾ. ನೌಉರೇ -ಮರೇನ+ ಅಪೇ=ವಪೇ ಷಷ್ಠಿ ವಿಭಕ್ತಿಯ 'ನ' ಅ. ಆ ಪ್ರತ್ಯಯಗಳು ಮರಾಠಿಯಲ್ಲಿ ಚಾ, ಚೀ,

ಚೇ ಆಗಿವೆ. ಈ ಆರ್ಯನ್ ಭಾಷೆ ಹಳಗನ್ನಡದ ಅನೇಕ ವ್ಯಾಕರಣ ರೂಪಗಳನ್ನು ಶಬ್ದಗಳನ್ನು ತನ್ನದಾಗಿಸಿಕೊಂಡಿವೆ. ಜ್ಞಾನೇಶ್ವರಿಕಾಲೀನ ಮರಾಠಿಯಲ್ಲಿ ಹಳಗನ್ನಡದ ೩೦೦ ಕ್ಕಿಂತ ಹೆಚ್ಚು ಪ್ರಯೋಗಗಳು ಬಳಕೆಯಲ್ಲಿವೆ. ರಂ.ಶಾ. ಲೋಕಾಪುರರವರು ಜ್ಞಾನೇಶ್ವರೀ ಕಾಲದ ಮರಾಠಿ ರೂಪಗಳನ್ನು ಅವು ಬಳಕೆಯಾದ ಬಗೆಯನ್ನು ವಿವರಿಸಿದ್ದಾರೆ.[೧೪] ಜ್ಞಾನೇಶ್ವರೀ ಮೊದಲಾದ ಹಳೆಯ ಗ್ರಂಥಗಳಲ್ಲಿ ಕಾಣುವ ನೀಚ, ಚೋಖ, ಅಗಳ, ಜಟ್ಟಿ, ಸಣ್ಣ, ದಿಟ್ಟಿ, ಸದ್ದು ಶಬ್ದಗಳ ಪೂರ್ವರೂಪಗಳು ಕನ್ನಡ ಮಾತಿನಲ್ಲಿ ಜೀವಂತವಾಗಿವೆ.

ಮರಾಠಿ	ಕನ್ನಡ	ಸಂಸ್ಕೃತ
ನೀಚ	ನಿಚ್ಚ	ನಿತ್ಯ
ಚೋಖ	ಚೊಕ್ಕ	-
ಅಗಳಾ	ಅಗಳ	ಅರ್ಪು
ಜೇಠಿ	ಜಟ್ಟಿ	-
ಸಾನ	ಸಣ್ಣ	-
ದೀಠೀ	ದಿಟ್ಟಿ	ದೃಷ್ಟಿ
ಸಾದ	ಸದ್ದು/ಸದ್ದ	ಶಬ್ದ

ಮರಾಠಿ ಕನ್ನಡ ಭಾಷೆಯಿಂದ ಅನೇಕ ಶಬ್ದಗಳನ್ನು ಸ್ವೀಕರಿಸಿದೆ.[೧೫]

ಅಳಿ(ಅಳು)	<	ಕ. ಅಳು
ಉರ(ಇರು)	<	ಕ. ಉರನ/ಉರ
ಒಡರ(ಒಡೆಯ)	<	ಕ. ಒಡೆಯರ್
ಕೇರು(ಹೊಟ್ಟು)	<	ಕ. ಕೇಯಿ
ತೂಕ(ತೂಕ)	<	ಕ. ತೂಕ
ಬಿಢಾರ(ವಸತಿ)	<	ಕ. ಬೆಡಾರ
ಪರಿ(ರೀತಿ, ಕ್ರಮ)	<	ಕ. ಪರಿ
ಮುದಲ(ಮೊದಲನೆಯ)	<	ಕ. ಮೊದಲ

ಕನ್ನಡ ಮತ್ತು ಮರಾಠಿ ಸಾಂಸ್ಕೃತಿಕ ಸ್ವೀಕರಣಕ್ಕೆ ಇವು ಉತ್ತಮ ಉದಾಹರಣೆಗಳಾಗಿವೆ.[೧೬] ಕನ್ನಡದಂತೆ ಮರಾಠಿಯಲ್ಲಿ ಸಂಬೋಧನೆಗೆ ಪ್ರತ್ಯೇಕವಾದ ಪ್ರತ್ಯಯವಿಲ್ಲ.

ಕೊಲ್ಲಾಪುರ, ಸೊಲ್ಲಾಪುರ ಸುತ್ತಮುತ್ತಲಿನ ಪ್ರದೇಶಗಳಲ್ಲಿ 'ಊರ' ಕೊನೆಯಾಗುವ ಹೆಸರುಗಳಿವೆ. ಪಾಡಯಿಂದ ವಾಡಿ ಶಬ್ದ ನಿಷ್ಪನ್ನವಾಯಿತು. ಪಾಡ/ವಾಡಿ ಶಬ್ದಕ್ಕೆ 'ಪ್ರದೇಶ' ಎಂಬರ್ಥವಿದೆ. ಗಂಗವಾಡಿ, ನೊಳಂಬವಾಡಿ, ಹಿಂದವಾಡಿ ಮೊದಲಾದ ಸ್ಥಳವಾಚಕಗಳು ಕನ್ನಡದ ಶಿಲಾಲೇಖನಗಳಲ್ಲಿ, ತಾಮ್ರಪಟಗಳಲ್ಲಿ ದೊರೆಯುತ್ತವೆ.

ಇದನ್ನು ಗಮನಿಸಿದಾಗ ಪಾಡ, ವಾಡಾ, ವಾಡ ರೂಪಗಳು ಕರ್ನಾಟಕದಿಂದ ನೆರೆಯ ಮಹಾರಾಷ್ಟ್ರದ ಮೇಲೆ ಪ್ರಭಾವ ಬೀರಿರಬೇಕೆಂದು ಕಾಣುತ್ತದೆ. ಮಹಾರಾಷ್ಟ್ರದಲ್ಲಿ ಆಳುತ್ತಿದ್ದ ದೇವಗಿರಿಯ ಯಾದವರ ಮನೆತನದಲ್ಲಿ ಲಕ್ಷ್ಮಿಯವ್ವ, ಧಾಡಿಯವ್ವ ಮೊದಲಾದ ವ್ಯಕ್ತಿನಾಮಗಳು ರೂಢಿಯಲ್ಲಿದ್ದವು. ಅವ್ವ ಕೊನೆಯಾಗುವ ಈ ಹೆಸರುಗಳು ಕರ್ನಾಟಕದ ತುಂಬೆಲ್ಲ ಇವೆ(ಕಾಶವ್ವ, ಗಂಗವ್ವ, ಕಮಲವ್ವ ಮುಂತಾದವು). ಇವುಗಳ ಮೇಲಿಂದ ವ್ಯಕ್ತಿನಾಮಗಳ ಮೇಲಿಯೂ ಕನ್ನಡಿಗರ ಪ್ರಭಾವ ಮರಾಠಿಗರ ಮೇಲೆ ಆಗಿರಬೇಕು ಎಂದು ಊಹಿಸಬಹುದಾಗಿದೆ.

ಕರ್ನಾಟಕ ಯಕ್ಷಗಾನ ಪ್ರಸಂಗಗಳು, ಗೊಂಬಿಯಾಟಗಳು ಹಾಗೂ ಸಂಗ್ಯಾಬಾಳ್ಯಾ ವಂತಹ ಸಣ್ಣಾಟಗಳ ಪ್ರಭಾವ ಮಹಾರಾಷ್ಟ್ರದ ಜನಪದ ರಂಗಭೂಮಿಯ ಮೇಲೆ ಆಗಿದೆ. ಕರ್ನಾಟಕ ಮಾದರಿಯಲ್ಲಿಯ ಅವು ಮಹಾರಾಷ್ಟ್ರದಲ್ಲಿ ಪ್ರಯೋಗವಾಗುತ್ತಿವೆ. ಅಲ್ಲಿಯೂ ಕನ್ನಡ ರೂಪಗಳು ಬಳಕೆಯಾಗಿವೆ.

ಕನ್ನಡದ ಮೇಲೆ ಮರಾಠಿ ಭಾಷೆ ಸಂಸ್ಕೃತಿಯ ಪ್ರಭಾವ, ಮರಾಠಿಯ ಮೇಲೆ ಕನ್ನಡ ಭಾಷೆ ಸಂಸ್ಕೃತಿಯ ಪ್ರಭಾವ ಉಂಟಾಗಿ ಒಂದರ ಅಂಶಗಳು ಇನ್ನೊಂದರಲ್ಲಿ ಬೆರೆತಿವೆ ಎಂಬುದು ಮೇಲಿನ ಸಂಗತಿಗಳಿಂದ ತಿಳಿದುಬಂದಿತು. ಎರಡು ಭಾಷಾ ಸಮುದಾಯಗಳ ನಡುವೆ ವ್ಯಾಪಾರ ವ್ಯವಹಾರ ಹೆಚ್ಚಾಗುತ್ತಾ ಹೋದಂತೆ ಭಾಷಿಕರ ನಡುವೆ ದ್ವಿಭಾಷಾ ವರ್ಗ ನಿರ್ಮಾಣವಾಗುತ್ತದೆ. ಎರಡು ಭಾಷೆಗಳ ಮಾತೃಭಾಷಿಕರು ಪರಸ್ಪರರ ಭಾಷೆಯನ್ನು ಅರ್ಥ ಮಾಡಿಕೊಳ್ಳುತ್ತಾರೆ. ಅವರಲ್ಲಿ ಪರಸ್ಪರ ಅರಿವು ಹೆಚ್ಚಿನ ಪ್ರಮಾಣದಲ್ಲಿದೆ.

ದ್ವಿಭಾಷಾ ಸಂಪರ್ಕ ಈ ಗಡಿಪ್ರದೇಶದ ಎಲ್ಲ ಜನರ ಮೇಲೆ ಒಂದೇ ರೀತಿಯಾಗಿ ರುತ್ತದೆ ಎಂದು ಹೇಳಲು ಬರುವುದಿಲ್ಲ. ಅದು ಭಾಷಿಕರ ವಯಸ್ಸು, ಲಿಂಗ, ಸಾಮಾಜಿಕ ವರ್ಗ, ಶಿಕ್ಷಣ(ವಿದ್ಯಾವಂತರು, ಅವಿದ್ಯಾವಂತರು) ಈ ಅಂಶಗಳನ್ನು ಅವಲಂಬಿಸಿದೆ. ಈ ಪ್ರದೇಶದ ದ್ವಿಭಾಷಾ ಸ್ಥಿತಿಯು ಒಂದೇ ತೆರನಾಗಿಲ್ಲ. ಕನ್ನಡ ಮಾತೃಭಾಷೆಯುಳ್ಳವರಿಗೆ ಮರಾಠಿಯನ್ನು, ಮರಾಠಿ ಮಾತೃಭಾಷೆಯುಳ್ಳವರಿಗೆ ಕನ್ನಡವನ್ನು ಅರ್ಥಮಾಡಿಕೊಳ್ಳುವ, ಅಭಿವ್ಯಕ್ತಪಡಿಸುವ, ಬರೆಯುವ, ಓದುವ ಸಾಮರ್ಥ್ಯವಿದೆ. ಇಂತಹ ಪೂರ್ಣ ದ್ವಿಭಾಷಾ ಸ್ಥಿತಿ ಒಂದೆಡೆಯಿದ್ದರೆ ಒಬ್ಬರು ಇನ್ನೊಂದು ಭಾಷೆಯನ್ನು ಅರ್ಥಮಾಡಿಕೊಳ್ಳುತ್ತಾರೆ, ಆದರೆ ಅಭಿವ್ಯಕ್ತಪಡಿಸುವ ಸಾಮರ್ಥ್ಯವಿಲ್ಲ. ಇಂತಹ ಅರ್ಧ ದ್ವಿಭಾಷಿಕತೆ ಇನ್ನೊಂದೆಡೆ ಕಾಣಿಸಿಕೊಂಡಿದೆ. ಕೆಲವೆಡೆ ನಿಪ್ಪಾಣಿ ಸುತ್ತಮುತ್ತಲಿನ ಪ್ರದೇಶ ಮರಾಠಿ ಭಾಷೆ ಕನ್ನಡಿಗರ ಬದುಕಿನ ಎಲ್ಲ ವಲಯಗಳನ್ನು ನಿಧಾನವಾಗಿ ಆಕ್ರಮಿಸಿಕೊಳ್ಳುತ್ತಿದೆ. ಇಂತಹ ಸಮಗ್ರ ಭಾಷಾ ಪಲ್ಲಟವೂ ಕಾಣಿಸಿಕೊಂಡಿದೆ.

ದ್ವಿಭಾಷಿಕತೆಯ ಪರಿಣಾಮದಿಂದಾಗಿ ಭಾಷಾಮಿಶ್ರಣ ಭಾಷಾಪಲ್ಲಟ ಕ್ರಿಯೆಗಳನ್ನು ಈ ಪ್ರದೇಶದಲ್ಲಿ ಗುರುತಿಸಬಹುದಾಗಿದೆ.(ಕನ್ನಡ ಮರಾಠಿ ಭಾಷಾ ಮಿಶ್ರಣಕ್ಕೆ ಕೆಲವು

ಉದಾಹರಣೆಗಳನ್ನು ಇದೇ ಲೇಖನದಲ್ಲಿ ಕೊಟ್ಟಿದ್ದೇನೆ) ಬ್ಯಾಂಕು, ಅಂಚೆ ಕಚೇರಿ, ಹೋಟೆಲು ಮುಂತಾದ ಸಾರ್ವಜಿಕ ಸೇವಾ ಸಂಸ್ಥೆಗಳಲ್ಲಿ ಗುಮಾಸ್ತರು ಹಾಗೂ ಸಿಬ್ಬಂದಿ ವರ್ಗದವರು ಜನರೊಡನೆ ಹೆಚ್ಚಾಗಿ ಕನ್ನಡದಲ್ಲಿ ವ್ಯವಹರಿಸುತ್ತಾರೆ. ಇದರಲ್ಲಿ ಗುಮಾಸ್ತರು ಮರಾಠಿ ಭಾಷಿಕರೊಂದಿಗೆ ಮರಾಠಿಯಲ್ಲಿ ವ್ಯವಹರಿಸುತ್ತಾರೆ. ಇದರಲ್ಲಿ ಸಂದರ್ಭ ಬದಲಾದ್ದರಿಂದ ಭಾಷಾ ಬಳಕೆ ಬದಲಾಯಿತು. ಇದರಂತೆ ಮರಾಠಿ ಮಾತೃಭಾಷೆಯುಳ್ಳವರು ಭಾಷಿಕರು ಬದಲಾದರೆ ತಮ್ಮ ಭಾಷೆಯನ್ನು ಬದಲಾಯಿಸಿ ಕೊಳ್ಳುತ್ತಾರೆ. ಕರ್ನಾಟಕದಲ್ಲಿ ಮರಾಠಿ ಮಾತೃಭಾಷಿಕರು ಮಹಾರಾಷ್ಟ್ರದಲ್ಲಿ ಕನ್ನಡ ಮಾತೃಭಾಷಿಕರು ವ್ಯವಹಾರ ಹಾಗೂ ಬದುಕಿನ ಕೆಲವು ವಲಯಗಳಲ್ಲಿ ಆಯಾ ಪ್ರಾಂತೀಯ ಭಾಷೆಗಳನ್ನು(ಕನ್ನಡ/ಮರಾಠಿ) ಉಪಯೋಗಿಸಿ ಇತರ ಸಂದರ್ಭಗಳಲ್ಲಿ ತಮ್ಮ ಮಾತೃಭಾಷೆಯಲ್ಲಿ ವ್ಯವಹರಿಸುವ ಕ್ರಿಯೆ ಕಂಡುಬಂದಿದೆ. ಕನ್ನಡ ಮರಾಠಿ ಬಳಕೆಯಾಗುವ ಲಯಗಳೆಂದರೆ ಚಲನಚಿತ್ರ ಮಂದಿರಗಳು, ಪೇಟೆ, ರಸ್ತೆಯ ಅಕ್ಕಪಕ್ಕದಲ್ಲಿ, ಶಾಲಾ ಕಾಲೇಜುಗಳೆಂದು ಸ್ಥೂಲವಾಗಿ ವಿಂಗಡಿಸಬಹುದು. ಆವೇಶ, ಕ್ರೋಧ, ಹರಟೆ, ಜಗಳ ಮುಂತಾದ ಸನ್ನಿವೇಶಗಳಲ್ಲಿಯೂ ಕನ್ನಡ ಮರಾಠಿ ದ್ವಿಭಾಷಿಕತೆಯನ್ನು ಗುರುತಿಸಬಹುದಾಗಿದೆ. ಉದಾ. ಕನ್ನಡ ಮಾತೃಭಾಷೆಯುಳ್ಳ ಮಕ್ಕಳು ಶಾಲೆಯಲ್ಲಿ, ಆಟದ ಮೈದಾನದಲ್ಲಿ ತಮ್ಮ ಸಹಪಾಠಿಗಳೊಂದಿಗೆ ಕನ್ನಡದಲ್ಲಿ ವ್ಯವಹರಿಸುತ್ತಾರೆ, ಒಮ್ಮೊಮ್ಮೆ ಮಕ್ಕಳು ಶಾಲೆಯಲ್ಲಿ ಮರಾಠಿಯಲ್ಲಿ ಮಾತನಾಡಿದರೆ ತಂದೆ ತಾಯಿಗಳು ಮರಾಠಿಯಲ್ಲಿ ಉತ್ತರಿಸುವರು ಅಥವಾ ಕನ್ನಡದಲ್ಲಿ ಉತ್ತರಿಸುವರು. ಹೀಗೆ ಒಂದು ಕುಟುಂಬದಲ್ಲಿ ಪಾಲಕರು ಮತ್ತು ಮಕ್ಕಳ ನಡುವೆ ಭಿನ್ನ ಭಾಷಾ ಬಳಕೆಯ ರೀತಿ ಕುತೂಹಲಕಾರಿ ಅಂಶವಾಗಿದೆ. ಕನ್ನಡ ಮರಾಠಿ ಭಾಷಿಕರು ಮಾತನಾಡುವಾಗ ಕೆಲವು ಸಂದರ್ಭಗಳಲ್ಲಿ ಉದಾ. ಹಳ್ಳಿಗಳಿಂದ ವ್ಯಾಪಾರಕ್ಕಾಗಿ ಬಂದಂತಹ ಕನ್ನಡ ಮಾತೃ ಭಾಷೆಯ ರೈತರು ಮರಾಠಿ ವರ್ತಕರೊಡನೆ ಮತನಾಡುವಾಗ ಪರಸ್ಪರರ ಭಾಷೆ ಅರ್ಥವಾಗದ ಸ್ಥಿತಿಯಲ್ಲಿ ಕೆಲವು ಕನ್ನಡ ಕೆಲವು ಮರಾಠಿ ಪದಗಳನ್ನು ಸೇರಿಸಿ ಆ ಸಂದರ್ಭದ ಪರಿಮಿತ ಬಳಕೆಗಾಗಿ ಸಂವಹನವನ್ನು ಮಾಡಿಕೊಳ್ಳುವ 'ಪಿಜಿನ್' ಕ್ರಿಯೆಯೂ ಇಲ್ಲಿ ನಡೆಯುತ್ತದೆ.

ಕನ್ನಡ ಮರಾಠಿ ದ್ವಿಭಾಷಿಕರ ಮಧ್ಯ ನಡೆಯುವ ವ್ಯವಹಾರಗಳು(ಪೇಟೆಯಲ್ಲಿ) ಮರಾಠಿಯಲ್ಲಿರುತ್ತವೆ. ಕನ್ನಡ ಮಾತೃಭಾಷಿಕರು ಮರಾಠಿಯನ್ನು ಕಲಿತು ದ್ವಿಭಾಷಿಕರಾದ ಪ್ರಮಾಣವೇ ಹೆಚ್ಚು (ಶೇ.೫೦) ಇದರಿಂದ ಮರಾಠಿ ಭಾಷಿಕರು ಕನ್ನಡವನ್ನು ಕಲಿಯುವ ಅವಶ್ಯಕತೆಗಿಂತ ಕನ್ನಡ ಭಾಷಿಕರು ಮರಾಠಿಯನ್ನು ಕಲಿಯುವಂತೆ ಒತ್ತಾಯಿಸುವ ಸನ್ನಿವೇಶವಿದೆ. ಕನ್ನಡಿಗರು ಮರಾಠಿ ಚಲನಚಿತ್ರ ನೋಡುವುದು, ಮರಾಠಿ ಗೀತೆಗಳನ್ನು ಕೇಳುವುದು ಹೆಚ್ಚು. ಸ್ಥಳೀಯ ವಿದ್ಯಮಾನಗಳು, ಜಾಹೀರಾತುಗಳು, ಪ್ರಕಟಣೆಗಳು ಮೊದಲು ಮರಾಠಿಯಲ್ಲಿ ಸಿದ್ಧವಾಗಿ, ಮರಾಠಿ ಪತ್ರಿಕೆಗಳಲ್ಲಿ ಪ್ರಕಟವಾಗಿ ಅನಂತರ

ಕನ್ನಡ ಆವೃತ್ತಿಯಲ್ಲಿ ಬರುತ್ತವೆ. ಆ ಗಡಿ ಪ್ರದೇಶದಲ್ಲಿ ನಡೆಯುವ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕನ್ನಡಿಗರ ಭಾಷಾ ಒಲವು ಮರಾಠಿ ಕಡೆಗೆ ಮರಾಠಿಗರ ಭಾಷಾ ಒಲವು ಕನ್ನಡದ ಕಡಗೆಯಿದೆ. ಅವೆರಡರ ನಡುವೆ ಭಾಷಾ ಸಾಮರಸ್ಯತೆ ಉಂಟಾಗಿದೆ ಎಂಬ ಅಂಶ ಕಂಡುಬರುತ್ತದೆ.

ಈ ಗಡಿ ಪ್ರದೇಶದಲ್ಲಿ ಕನ್ನಡ-ಮರಾಠಿ ಮಾತೃಭಾಷಿಕರೇ ಅಧಿಕವಾಗಿರುತ್ತಾರೆ. ಉಳಿದ ಭಾಷೆಗಳನ್ನಾಡುವ ಜನರ ಪ್ರಮಾಣ ಕಡಿಮೆ. ಅದರಲ್ಲೂ ಕನ್ನಡ ಪ್ರಥಮ ಭಾಷೆಯಾಗಿರುವ ಮರಾಠಿ ದ್ವಿತೀಯ ಭಾಷೆಯಾಗಿರುವ ಪ್ರಮಾಣವೇ ಹೆಚ್ಚಾಗಿದೆ. ಕನ್ನಡ ಮಾತೃಭಾಷಿಕರಲ್ಲಿ ಹೆಂಗಸರಿಗಿಂತ ಗಂಡಸರು ಅದರಲ್ಲಿ ಹೆಚ್ಚಾಗಿ ವಿದ್ಯಾವಂತರು ದ್ವಿಭಾಷಿಕರಾಗಿರುತ್ತಾರೆ. ಉದಾ: ಕನ್ನಡ ಮಾತೃಭಾಷೆಯುಳ್ಳ ಪದವೀಧರರು ವೃತ್ತಿಗಾಗಿ ಮಹಾರಾಷ್ಟ್ರದ ಪುಣೆಗೆ ಹೋದಾಗ ಸುಮಾರು ವರ್ಷ ಅಲ್ಲಿಯೆ ತಂಗಿ ನಂತರ ತನ್ನ ಹಳ್ಳಿಗೆ ವಾಪಸಾದಾಗ ಅವರ ಭಾಷಾ ಭಂಡಾರದಲ್ಲಿ ಮರಾಠಿ ರೂಪಗಳೇ ತುಂಬಿರುತ್ತವೆ. ಅವರ ಹಳ್ಳಿಯ ಉಪಭಾಷಾ ರೂಪಗಳು ಅವರಿಗೆ ತಕ್ಷಣವೇ ಹೊಳೆಯು ವುದಿಲ್ಲ.

ಮಹಾರಾಷ್ಟ್ರದಲ್ಲಿ ಕನ್ನಡ ಮಾತೃಭಾಷಿಕರು ಮರಾಠಿಯನ್ನು, ಕರ್ನಾಟಕದಲ್ಲಿ, ಮರಾಠಿ ಮಾತೃಭಾಷಿಕರು ಕನ್ನಡವನ್ನು ದ್ವಿತೀಯ ಭಾಷೆಯನ್ನಾಗಿ ಕೇವಲ ಶಾಲಾ ಕಾಲೇಜುಗಳ ವಿಷಯಕವಾಗಿ ಮಾತ್ರ ಅಭ್ಯಸಿಸುತ್ತಾರೆ. ಅವರಲ್ಲಿ ಕನ್ನಡ/ಮರಾಠಿ ಔಪಚಾರಿಕ ಸಂದರ್ಭಗಳಲ್ಲಿ ಮಾತ್ರ ಉಪಯೋಗವಾಗುತ್ತದೆ. ಮನೆಯಲ್ಲಿ ತಮ್ಮ ಮಾತೃಭಾಷೆಗಳನ್ನು ಬಳಸುತ್ತಾರೆ. ಕನ್ನಡ-ಮರಾಠಿ ಈ ಎರಡು ಭಾಷೆಗಳು ಭಿನ್ನ ಭಾಷಾವಂಶಕ್ಕೆ ಬಳಸುತ್ತಾರೆ. ಕನ್ನಡ-ಮರಾಠಿ ಈ ಎರಡು ಭಾಷೆಗಳು ಭಿನ್ನ ಭಾಷಾ ವಂಶಕ್ಕೆ ಸೇರಿದರೂ ದೀರ್ಘಕಾಲದಿಂದ ಇವೆರಡರ ನಡುವೆ ಸಂಪರ್ಕ ಇರುವುದರಿಂದ ಪರಸ್ಪರ ಸಾಮ್ಯತೆಯ ಅಂಶಗಳಿವೆ. ಈ ಎರಡು ಭಾಷಿಕರ ನಡುವೆ ವಿವಾಹ ಸಂಬಂಧ ಗಳು(ರಕ್ತಸಂಬಂಧಗಳು) ಏರ್ಪಟ್ಟಿವೆ. ಇದರಿಂದ ಒಂದು ಭಾಷಾ ಸಂಸ್ಕೃತಿ ಇನ್ನೊಂದು ಭಾಷಾ ಸಂಸ್ಕೃತಿಯ ನಡುವೆ ಸಾಂಸ್ಕೃತಿಕವಾಗಿ, ಭಾಷಿಕವಾಗಿ ಬೆರೆಯುವ, ವಿಲೀನ ಗೊಳ್ಳುವ ಕ್ರಿಯೆ ನಡೆದಿದೆ.

ಕನ್ನಡ ಮರಾಠಿ ದ್ವಿಭಾಷಿಕತೆಯ ಅಧ್ಯಯನ ತುಂಬ ಕುತೂಹಲಕಾರಿಯಾಗಿದೆ. ಆದರೆ ಇಂದು ಹಿಂದೆಂದೂ ಕಾಣದಂತಹ ಪ್ರಾಂತಾಭಿಮಾನ ಹಾಗೂ ಕನ್ನಡ - ಮರಾಠಿ ದ್ವಿಭಾಷಿಕರ ಭಾವನಾತ್ಮಕ ಕ್ರಿಯೆಗಳಿಂದ ಈ ಗಡಿಪ್ರದೇಶ ಭಾಷಾ ಸಮಸ್ಯೆಗಳಿಗೆ ಬೆನ್ನು ತಿರುಗಿಸಿರುವುದು ಒಂದು ವಿಪರ್ಯಾಸವೇ ಸರಿ. ಭಾಷೆಯ ಹೆಸರಿನಲ್ಲಿ ಮಹಾರಾಷ್ಟ್ರ ನಡೆಸಿರುವ ಪ್ರಾದೇಶಿಕ ಆಕ್ರಮಣವು ಅದೊಂದು ಬರಿ ರಾಜಕೀಯ. ಆಗಾಗ ಎಬ್ಬಿಸುವ ಗುಲ್ಲಷ್ಟೆ ಇದರಿಂದ ಕನ್ನಡ-ಮರಾಠಿ ಭಾಷಾ ಬಾಂಧವ್ಯ ಹಾಗೂ ಸಾಂಸ್ಕೃತಿಕ ಬಾಂಧವ್ಯದ ಅನೇಕ ಸ್ವಾರಸ್ಯಕರವಾದ ಸಂಗತಿಗಳು ಮರೆಯಾಗುತ್ತಿವೆ. ಆ ಪ್ರದೇಶದಲ್ಲಿ ಜನರ ಮಾನಸಿಕ ನೆಮ್ಮದಿಗಾಗಿ ಬೇಕಾಗಿರುವುದು ಎರಡು ಭಾಷಿಕರ

ನಡುವೆ ನಿಕಟ ಸಂಪರ್ಕ, ಸಾಮರಸ್ಯತೆಯಿಂದ ಕೂಡಿದ ವ್ಯವಹಾರ, ಪರಸ್ಪರರಲ್ಲಿ ರಾಜಕೀಯ, ಸಾಮಾಜಿಕ, ಆರ್ಥಿಕ ಜೀವನದಲ್ಲಿ ಸಮರಸ ಬೆರೆತಾಗ ಭಾಷಾಸಾಮರಸ್ಯ ಹಾಗೂ ಸಾಂಸ್ಕೃತಿಕ ಸಾಮರಸ್ಯತೆಗಳನ್ನು ಹೆಚ್ಚಿಸಲು ಸಾಧ್ಯ. ಅದಕ್ಕಾಗಿ ಭಾಷೆ ಭಾಷೆಗಳ ಬಗೆಗಿರುವ ಅಂಧವಿಶ್ವಾಸ, ಭಾಷಾ ದುರಾಭಿಮಾನಗಳನ್ನು ದೂರಮಾಡಲು ಸೂಕ್ತವಾದ ಭಾಷಾಯೋಜನೆಗಳನ್ನು ಸಿದ್ಧಪಡಿಸುವುದು ಈಗ ತುಂಬ ಅವಶ್ಯಕವಾಗಿದೆ.

ಈ ಲೇಖನದಲ್ಲಿ ಕನ್ನಡ ಮರಾಠಿ ದ್ವಿಭಾಷಿಕತೆಯ ಸ್ಥೂಲ ಸ್ವರೂಪವನ್ನು ಕೊಡುವುದೇ ನನ್ನ ಉದ್ದೇಶವಾಗಿದೆ. ಈ ಪ್ರದೇಶದ ದ್ವಿಭಾಷಿಕತೆಯ ಬಗ್ಗೆ ವಿಸ್ತಾರವಾದ ಮತ್ತು ಸೂಕ್ಷ್ಮ ರೀತಿಯ ಅಧ್ಯಯನಕ್ಕೆ ಇದು ಪ್ರಸ್ತಾವನೆ ಒದಗಿಸಿದರೆ ಸಾಕು. ಭಾಷಾಶಾಸ್ತ್ರ, ಸಮಾಜಶಾಸ್ತ್ರ, ಮನಶ್ಶಾಸ್ತ್ರಗಳ ನೆರವಿನಿಂದ ಕರ್ನಾಟಕದ ದ್ವಿಭಾಷಿಕ ಪ್ರದೇಶಗಳ ಭಾಷಾಸ್ವರೂಪವನ್ನು ಸಾಮಾಜಿಕ ಸಂದರ್ಭದ ಹಿನ್ನೆಲೆಯಲ್ಲಿ ಆಳವಾದ ಅಧ್ಯಯನ ಆಗಬೇಕಾಗಿದೆ.

ಅಡಿಟಿಪ್ಪಣಿಗಳು

೧. ಈ ಲೇಖನದ ಉದ್ದಕ್ಕೂ ಬಳಕೆಯಾದ ಭಾಷಾ ಸಮುದಾಯ, ದ್ವಿಭಾಷಿಕತೆ, ಅರ್ಧದ್ವಿಭಾಷಿಕತೆ, ಪಿಜಿನ್, ಕ್ರಿಯೋಲ್, ಭಾಷಾಮಿಶ್ರಣ, ಭಾಷಾಪಲ್ಲಟ, ದ್ವಿಸ್ತರತೆ ಈ ಎಲ್ಲ ಪಾರಿಭಾಷಿಕ ಪದಗಳ ಅರ್ಥವನ್ನು ಲೇಖನದ ಕೊನೆಯಲ್ಲಿರುವ 'ಟಿಪ್ಪಣಿಗಳು' ಎಂಬ ಭಾಗದಲ್ಲಿ ಕೊಡಲಾಗಿದೆ.

೨. ಕರ್ನಾಟಕ ಭಾರತಿ, ಸಂ.೯ ಸಂಚಿಕೆ ೧-೨, ೧೯೭೬, ಎಂ.ಎಸ್. ಸುಂಕಾಪುರ. ಎಂ.ಎಂ. ಕಲಬುರ್ಗಿ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩. ಸುವರ್ಣ ಸಂಚಯ, ೧೯೬೭. ಮೈಸೂರು ವಿಶ್ವವಿದ್ಯಾಲಯ.

೪. ಡಾ. ಕೃಷ್ಣಪರಮೇಶ್ವರ ಭಟ್ಟ, 'ಕನ್ನಡ ತೆಲುಗು ದ್ವಿಭಾಷಿಕತೆಯ ಅಧ್ಯಯನ' (೧೯೯೫ ಕ.ಸಾ.ಪ. ಬೆಂಗಳೂರು).

೫. ಡಾ. ಎಸ್.ಎನ್. ಶ್ರೀಧರ, 'ಇಂದಿನ ಕನ್ನಡ ರಚನೆ ಮತ್ತು ಬಳಕೆ' (೧೯೯೫ ಕನ್ನಡ ವಿಶ್ವವಿದ್ಯಾಲಯ ಹಂಪಿ).

೬. ಮಹಾರಾಷ್ಟ್ರ ಮತ್ತು ಕರ್ನಾಟಕ ಗಡಿಪ್ರದೇಶದಲ್ಲಿ ಬಳಕೆಯಾಗಿರುವ ಕನ್ನಡ ಮತ್ತು ಮರಾಠಿ ಭಾಷೆಗಳು ಒಂದು ಇನ್ನೊಂದರ ಮೇಲೆ ಪ್ರಭಾವ ಬೀರಿರುವುದರಿಂದ ಅವು ಅನ್ಯಭಾಷೆ ಪ್ರಭಾವಿತ ಉಪಭಾಷೆಗಳಾಗಿವೆ.

೭. ಬೆಳಗಾವಿ, ಧಾರವಾಡ, ವಿಜಯಪುರ ಹಾಗೂ ಉತ್ತರ ಕನ್ನಡ ಈ ಪ್ರದೇಶಕ್ಕೆ ಮುಂಬೈ ಕರ್ನಾಟಕವೆಂದೂ ಕರೆಯುತ್ತಾರೆ. ಈ ಪ್ರದೇಶಕ್ಕೆ ಡಾ. ಎಂ. ಚಿದಾನಂದ ಮೂರ್ತಿಯವರು 'ಕಿತ್ತೂರು ಕರ್ನಾಟಕ'ವೆಂದು ಕರೆಯಲು ಸೂಚಿಸಿರುವುದು ಸೂಕ್ತವಾಗಿದೆ.

೮. ಮರಾಠಿ, ಇಂಡೋ ಆರ್ಯನ್ ಭಾಷಾ ಪರಿವಾರಕ್ಕೆ ಸೇರಿದ ಭಾಷೆಯಾದರೆ, ಕನ್ನಡ, ದ್ರಾವಿಡ ಭಾಷಾ ಪರಿವಾರಕ್ಕೆ ಸೇರಿದೆ.
೯. ಶಂ.ಬಾ.ಜೋಶಿ, 'ಮರಾಠೀ ಸಂಸ್ಕೃತಿ–ಕೆಲವು ಸಮಸ್ಯೆಗಳು' (ಅನು. ಕುರ್ತಕೋಟಿ), ಪು. ೧೧೪.
೧೦. ಸಂಖ್ಯಾವಾಚಕಗಳು ಬಹಳಷ್ಟು ಬದಲಾಗದ ಭಾಷಾ ಅಂಶಗಳಲ್ಲಿ ಸೇರ್ಪಡೆಯಾಗುತ್ತವೆ. ಇನ್ನೊಂದು ಭಾಷೆಯಿಂದ ಸಂಖ್ಯಾವಾಚಕಗಳನ್ನು ಕೊಂಡುಕೊಳ್ಳುವ ಭಾಷೆ ಆ ಭಾಷೆಗೆ ಬಹಳ ಋಣಿಯಾಗಿರಬೇಕಾಗುತ್ತದೆಂದು ಭಾಷಾಶಾಸ್ತ್ರಜ್ಞರ ಅಭಿಪ್ರಾಯವಿದೆ.
೧೧. ಇಲ್ಲಿಯ ಕೆಲವು ಉದಾಹರಣೆಗಳನ್ನು ಮಿರ್ಜಿ ಅಣ್ಣಾರಾಯರ 'ಮಹಾರಾಷ್ಟ್ರದ ಗಡಿನಾಡಿನ ಕನ್ನಡ' ಎಂಬ ಲೇಖನದಿಂದ ತೆಗೆದುಕೊಂಡಿದ್ದೇನೆ. ಆ ಲೇಖನಕ್ಕೆ ಉಪಕೃತ.
೧೨. ಶಂ.ಬಾ. ಜೋಶಿ, ಪೂರ್ವೋಕ್ತ, ಪು. ೧೧೫.
೧೩. ರಂ.ಶಾ. ಲೋಕಾಪುರ. 'ಹಳಗನ್ನಡ ಮತ್ತು ಮರಾಠಿ', ಪು. ೨, ೩.
೧೪. ರಂ.ಶಾ. ಲೋಕಾಪುರ, ಪೂರ್ವೋಕ್ತ, ಪು. ೧೦೪-೩೪೦.
೧೫. ಶಂ.ಬಾ. ಜೋಶಿ, ಪೂರ್ವೋಕ್ತ, ಪು. ೧೧೧-೧೧೨.
೧೬. ಅಲ್ಫಡ ಮಾಸ್ಟರ ಅವರ A. Grammar of Old Marthi ಎಂಬ ಗ್ರಂಥದಿಂದ ಮರಾಠಿ ಭಾಷೆ ಕನ್ನಡದಿಂದ ಸ್ವೀಕರಿಸಿದ ಪದಗಳ ಪಟ್ಟಿಯನ್ನು ಹಂಪನಾ ತಮ್ಮ 'ಭಾಷಾವಿಜ್ಞಾನ' (೧೯೬೮) ಗ್ರಂಥದಲ್ಲಿ ಕೊಟ್ಟಿದ್ದಾರೆ. ಪು. ೧೩೭-೧೪೦.

ಟಿಪ್ಪಣಿಗಳು

೧. Janet Holmes Lonman. 1993. A Introducation to Sociolinguistics.
೨. Rene Appel and Pieter Muysken, 1992, Language Contact and Bilingualism.
೩. Suzanne romain, 1989, Bilingualism.
೪. ಕೃಷ್ಣಪರಮೇಶ್ವರ ಭಟ್ಟ, ೧೯೯೫, ಕನ್ನಡ ತೆಲುಗು ದ್ವಿಭಾಷಿಕತೆಯ ಅಧ್ಯಯನ.
೫. ರಂ.ಶಾ. ಲೋಕಾಪುರ, ೧೯೯೪, ಹಳಗನ್ನಡ ಮತ್ತು ಮರಾಠಿ.
೬. ಶಂ.ಬಾ. ಜೋಶಿ, ಕೀರ್ತಿನಾಥ ಕುರ್ತಕೋಟಿ(ಅನು.), ೧೯೯೦, ಮರಾಟೀ ಸಂಸ್ಕೃತಿ–ಕೆಲವು ಸಮಸ್ಯೆಗಳು.
೭. ಎಸ್.ಎನ್. ಶ್ರೀಧರ, ೧೯೯೫, ಇಂದಿನ ಕನ್ನಡ ರಚನೆ ಮತ್ತು ಬಳಕೆ.
೮. ಕನ್ನಡ ಕೈಪಿಡಿ ಸಂ.೧, ೧೯೭೫, ಕನ್ನಡ ಭಾಷೆಯ ಚರಿತ್ರೆ, ಭಾಗ ೪, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಲೇಖನಗಳು
೧. ಅಶೋಕ ಕೇಳ್ಕರ, ಎಚ್.ಎಸ್. ರಾಘವೇಂದ್ರರಾವ್ (ಸಂ.), ೧೯೯೪, ಭಾರತದಲ್ಲಿ ಭಾಷಾಯೋಜನೆ: ಮರಾಠಿಯ ಪ್ರಾಯೋಗಿಕ ಅಧ್ಯಯನ, ಕನ್ನಡ ಅಧ್ಯಯನ.
೨. ಎಂ.ಬಿ. ಬೋಯಿ, ೧೯೭೪, ಬೆಳಗಾವಿ ಜಿಲ್ಲೆಯ ಉಪಭಾಷೆಗಳು, ಕರ್ನಾಟಕ ಭಾರತಿ, ಸಂ.೬, ಸಂಚಿಕೆ ೪.
೩. ಮಿರ್ಜಿ ಅಣ್ಣಾರಾಯ, ೧೯೬೭, ಮಹಾರಾಷ್ಟ್ರದ ಗಡಿನಾಡಿನ ಕನ್ನಡ, ಸುವರ್ಣ ಸಂಚಯ.
೪. ಕೆ.ಜಿ. ಶಾಸ್ತ್ರಿ, ೧೯೭೬, ಮಹಾರಾಷ್ಟ್ರದ ಕನ್ನಡ, ಕರ್ನಾಟಕ ಭಾರತಿ, ಸಂ.೯, ಸಂಚಿಕೆ ೧–೨.

೧೧

‘ಕಂಪನಿ’ - ಒಂದು ವಿವೇಚನೆ

ಆಂಗ್ಲ ಭಾಷೆಯ ಸಂಪರ್ಕ ನಮಗೆ ಉಂಟಾದ ಮೇಲೆ ನಮ್ಮ ಅವಶ್ಯಕತೆಗಳನ್ನು ಪೂರೈಸಲು ನಮ್ಮಲ್ಲಿಲ್ಲದ ವಸ್ತು, ವಿಚಾರಗಳನ್ನು ಆಂಗ್ಲಭಾಷೆಯಿಂದ ಸ್ವೀಕರಿಸುವುದರ ಜೊತೆಗೆ ಅವುಗಳನ್ನು ನಿರ್ದೇಶಿಸುವ ಪದಗಳನ್ನು ಸ್ವೀಕರಿಸಿದೆವು. ಉದಾ: ಬಸ್, ಬ್ಯಾಂಕ್, ಫ್ಯಾನ್, ಕಂಪನಿ ಮುಂತಾದವು. ಇವುಗಳಲ್ಲಿ ‘ಕಂಪನಿ’ ಕನ್ನಡ ಮತ್ತು ಇತರ ಭಾರತೀಯ ಭಾಷೆಗಳಲ್ಲಿ ಯಾವಾಗ ಪ್ರವೇಶಿಸಿತು? ಅದು ಯಾವ ಯಾವ ಅರ್ಥಗಳಲ್ಲಿ ಬಳಕೆಯಾಗುತ್ತದೆ? ಎಂಬುದನ್ನು ವಿವೇಚಿಸುವುದು ಪ್ರಸ್ತುತ ಲೇಖನದ ವಿಷಯವಾಗಿದೆ.

‘ಕಂಪನಿ’ ಪದದ ಉಲ್ಲೇಖ ಪ್ರಾಚೀನ ಸಾಹಿತ್ಯದಲ್ಲಿಯಾಗಲಿ, ಶಾಸನಗಳಲ್ಲಿಯಾಗಲಿ ಇಲ್ಲ. ಯೂರೋಪಿಯನ್ನರಾದ ಇಂಗ್ಲಿಶ್‌ರು, ಡಚ್ಚರು ಮತ್ತು ಫ್ರೆಂಚರು, ಭಾರತದ ಮೇಲೆ ಹಿಡಿತ ಸಾಧಿಸಲು ವ್ಯಾಪಾರದ ಉದ್ದೇಶವನ್ನು ಮುಂದೆ ಮಾಡಿಕೊಂಡು ಭಾರತವನ್ನು ಪ್ರವೇಶಿಸಿದರು. ಅವರು ಕ್ರಮವಾಗಿ ೧೬೦೦ರಲ್ಲಿ ಇಂಗ್ಲಿಶ್, ‘ಇಂಗ್ಲಿಶ್ ಈಸ್ಟ್ ಇಂಡಿಯಾ ಕಂಪನಿ’ ೧೬೦೨ರಲ್ಲಿ ಡಚ್ಚರು ‘ಡಚ್ಚ ಈಸ್ಟ್ ಇಂಡಿಯಾ ಕಂಪನಿ’, ೧೬೪ರಲ್ಲಿ ಫ್ರೆಂಚರು ‘ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿ’ಗಳನ್ನು ಭಾರತದಲ್ಲಿ ಸ್ಥಾಪಿಸಿದರು. ಯೂರೋಪಿಯನ್ನರ ‘ಈಸ್ಟ್ ಇಂಡಿಯಾ ಕಂಪನಿ’ ಜೊತೆಗೆನೆ ಕಂಪನಿ ಪದ ಭಾರತದ ಭಾಷೆಗಳನ್ನು ಪ್ರವೇಶಿಸಿರಬೇಕೆಂದು ಊಹಿಸಿದ್ದೇನೆ. ಈಸ್ಟ್ ಇಂಡಿಯಾ ಕಂಪನಿಗೆ ‘ಕಂಪನಿ ಸರಕಾರ’ವೆಂದು ಕರೆಯುತ್ತಾರೆ. ಈ ವೇಳೆಯಲ್ಲಿ ಕಂಪನಿ ಎಂದರೆ ‘ವ್ಯಾಪಾರಿ ಮಳಿಗೆ’, ‘ವರ್ತಕ ವರ್ಗ’ ಎಂಬ ಅರ್ಥಗಳು ಪ್ರಾಪ್ತವಾಗಿರಬೇಕು. ಕಂಪನಿ ಪದದ ಮೂಲಾರ್ಥವು ಅದೇ ಆಗಿದೆ.

‘ಕಂಪನಿ’ ಈ ಪದ ಹಳೆಯ ಫ್ರೆಂಚ್ ಭಾಷೆಯಲ್ಲಿದ್ದು Compaignie ಎಂಬ ಶಬ್ದದಿಂದ ಬಂದಿದೆ.[೧] ಇಂಗ್ಲಿಶ್‌ನಲ್ಲಿ ಕಂಪನಿ, ಕಂಪೆನಿ ಎಂದು ಕರೆಯುತ್ತಾರೆ. ಬೇರೆ ಬೇರೆ ಭಾರತೀಯ ಭಾಷೆಗಳಲ್ಲಿ ಬೇರೆ ಬೇರೆ ರೀತಿಯಾಗಿ ಉಚ್ಚರಿತವಾಗುತ್ತದೆ.

ಹಿಂದಿ	ಕಂಪನಿ
ಮರಾಠಿ	ಕಂಪನಿ
ತಮಿಳ	ಕುಮ್ಬಿನಿ
ಕನ್ನಡ	ಕಂಪನಿ
ತೆಲುಗು	ಕುಂಪಿಣಿ, ಕುಂಪೆಣಿ
ತುಳು	ಕಂಪೆನಿ
ಮಲಯಾಳಂ	ಕಂಪೆನಿ

'ಕಂಪನಿ' ಪದ ಭಾರತದ ಭಾಷೆಗಳಲ್ಲಿ ಆಯಾ ಸಂದರ್ಭಕ್ಕೆ ತಕ್ಕಂತೆ ಅರ್ಥ ವ್ಯತ್ಯಾಸವನ್ನುಂಟು ಮಾಡುತ್ತದೆ(ಅರ್ಥ ವ್ಯತ್ಯಾಸದ ಬಗ್ಗೆ ಇದೇ ಲೇಖನದಲ್ಲಿ ಮುಂದೆ ಚರ್ಚಿಸಲಾಗಿದೆ).

ಕನ್ನಡದಲ್ಲಿ 'ಕಂಪನಿ' (ಕುಂಪನಿ) ಪದ ಮುದ್ದಣನ ತನಕ ಕ್ವಚಿತ್ತಾಗಿ ಬರಹದಲ್ಲಿ ಬಳಕೆಯಾಗುತ್ತಿರಬೇಕು. ಮೆಕೆಂಝಿಯ ಕೈಫಿಯತ್ತುಗಳಲ್ಲಿ ಕುಂಪಣಿ ಸರಕಾರವೆಂದು ಧಾರಾಳವಾಗಿ ಬಳಕೆಯಾಗಿದೆ. ನವೋದಯ ಪ್ರಾರಂಭವಾಗುವ ತನಕ ಅದು ಹೆಚ್ಚಾಗಿ ವಿದ್ಯಾವಂತರ, ಅವಿದ್ಯಾವಂತರ ಆಡುಮಾತಿನಲ್ಲಿ ಮಾತ್ರ ಬಳಕೆಯಾಗುತ್ತಿದ್ದು ನಂತರ ಅದು ಕನ್ನಡ ಲಿಪಿಗೆ ಇಳಿದಿರಬೇಕು.[೨] ಈ ಪದ ಬರೆಹದಲ್ಲಿ ಕಾಣಿಸಿಕೊಂಡಾಗ ಅದಕ್ಕೆ ಏಕರೂಪತೆಯೂ ಇರಲಿಲ್ಲ. ಮೆಕೆಂಝಿ ಕೈಫಿತ್ತುಗಳಲ್ಲಿ 'ಕಂಪನಿ' ಎಂದು ಎಂ.ಎಸ್. ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಯಲ್ಲಿ 'ಕುಂಪನಿ' ಎಂದು, ಬಿ.ಎಸ್. ಗದ್ದಗಿಮಠರ ನಿಬಂಧದಲ್ಲಿ 'ಕುಂಪಣಿ' ಎಂದು ಬಳಕೆಯಾಗಿದೆ. ಉದಯವಾಣಿ ದಿನಪತ್ರಿಕೆಯಲ್ಲಿ 'ಕಂಪೆನಿ'ಯೆಂದು ಬಳಕೆಯಾಗುತ್ತಿದೆ. ಕುಂಪಣಿ, ಕುಂಪೆನಿ, ಕುಂಪನಿ, ಕಂಪೆನಿ ಎಂದು ಬರೆಹದಲ್ಲಿ ಕಾಣಿಸಿಕೊಂಡರೆ ಆಡುಮಾತಿನಲ್ಲಿ ಕಂಪನ್ಯಾ, ಕಂಪ್ಯಾನ ಎಂದು ಬಳಕೆಯಾಗುತ್ತವೆ.[೩] ಕಾಲಕ್ರಮೇಣ 'ಕಂಪನಿ' ಎಂದು ಪ್ರಮಾಣ ರೂಪ ಬಳಕೆಯಾಗಿದೆ.

'ಕಂಪನಿ' ಕನ್ನಡ ಭಾಷೆಯಲ್ಲಿ ಸ್ವೀಕೃತವಾದ ನಂತರ ಕನ್ನಡ ವ್ಯಾಕರಣದ ನಿಯಮಗಳನ್ನು ಅಳವಡಿಸಿಕೊಳ್ಳುತ್ತದೆ. ಅದು ನಾಮಪದವಾಗಿರುವುದರಿಂದ ವಿಭಕ್ತಿ ಪ್ರತ್ಯಯಗಳನ್ನು ಹತ್ತಿಸಿಕೊಳ್ಳುತ್ತದೆ. ಕಂಪನಿ, ಕಂಪನಿಯನ್ನು, ಕಂಪನಿಯಿಂದ ಮುಂತಾದವು. ಆಗ ಅದಕ್ಕೆ ಕನ್ನಡ ಶಬ್ದಕೋಶಗಳನ್ನು ಪ್ರವೇಶಿಸಲು ಅರ್ಹತೆ ಸಿಕ್ಕಂತಾಗುತ್ತದೆ. ಕಿಟೆಲ್ ಮಹಾಕೋಶದಲ್ಲಿ ಈ ಪದದ ಉಲ್ಲೇಖವಿಲ್ಲ. ಮುಂದೆ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟನಲ್ಲಿ(ಸಂಪುಟ ೨) ಇದಕ್ಕೆ ಸ್ಥಾನವಿದೆ ಎಂಬುದನ್ನು ಗಮನಿಸಬೇಕು.[೪]

ಒಂದು ಪದದ ಬಗ್ಗೆ ವಿಚಾರಿಸುವಾಗ, ವಿವೇಚನೆ ಮಾಡುವಾಗ ಆ ಪದದ ಹರಡುವಿಕೆ(ಪ್ರಸಾರ) ಅಂದರೆ ಆ ಪದ ಎಲ್ಲೆಲ್ಲಿ, ಹೇಗೆ ಮತ್ತು ಯಾವ ಅರ್ಥದಲ್ಲಿ

ಪ್ರಯೋಗವಾಗುತ್ತದೆ ಎಂಬುದನ್ನು ಆಲೋಚಿಸಬೇಕು. ಏಕೆಂದರೆ ಪದಗಳಿಗೂ, ಅದರ ಅರ್ಥಕ್ಕೂ ಅದು ಬರುವ ಸನ್ನಿವೇಶಗಳಿಗೂ ಇರುವ ಸಂಬಂಧ ಯಾದೃಚ್ಛಿಕವಾದುದು. ಈ ಕಾರಣದಿಂದ ಒಂದು ಪದಕ್ಕಿರುವ ಅರ್ಥ ಕಾಲಾಕ್ರಮೇಣ ಬದಲಾಗುವುದು ಸಹಜ. ಅದು ಆ ಭಾಷಾಬೆಳವಣಿಗೆಯ ಹಾಗೂ ಶಬ್ದಕೋಶ ಬೆಳವಣಿಗೆಯ ಲಕ್ಷಣವಾಗಿದೆ. ನಾನು ಗುರುತಿಸಿದಂತೆ 'ಕಂಪನಿ' ಪದದ ಬಳಕೆಯ ಸಂದರ್ಭ ನಾಲ್ಕು ರೀತಿಯದಾಗಿದೆ.

ಬಳಕೆಯಾದ ಸಂದರ್ಭ	ಅರ್ಥ
೧. ಪಾಟೀಲ ಆ್ಯಂಡ್ 'ಕಂಪನಿ'	ಪಾಲುಗಾರ
೨. ಕೋ-ಆಪರೇಟಿವ್ ಬ್ಯಾಂಕ್ ಆ್ಯಂಡ್ 'ಕಂಪನಿ'	ಸಂಸ್ಥೆ, ಸಂಘ
೩. ನಮ್ಮ ಊರಿಗೆ ನಾಟಕ 'ಕಂಪನಿ' ಬಂದಿದೆ	ತಂಡ, ಗುಂಪು, ಮಂಡಳಿ
೪. ಪೇಟೆಯ ತನಕ 'ಕಂಪನಿ' ಕೊಡು	ಜೊತೆ, ಒಡನಾಟ, ಸಹವಾಸ

ಇಂದು ನಿತ್ಯ ವ್ಯವಹಾರದಲ್ಲಿ, ಬರಹದಲ್ಲಿ ಕಂಪನಿ ಪದವನ್ನು ಈ ಎಲ್ಲ ಅರ್ಥಗಳಲ್ಲಿ ಯಥೇಷ್ಟವಾಗಿ ಬಳಸುತ್ತೇವೆ. ಮೇಲಿನ ಉದಾಹರಣೆಗಳಲ್ಲಿ 'ಕಂಪನಿ' ಪದ ಬರುವ ಸನ್ನಿವೇಶ ಬದಲಾಗುತ್ತಾ ಹೋದಂತೆ ಅರ್ಥ ವ್ಯತ್ಯಾಸವಾಗುತ್ತ ಹೋಗುತ್ತದೆ. ಒಂದು ಸಾಮಾಜಿಕ ಸಂದರ್ಭಗಳಲ್ಲಿ ಸಂಸ್ಥೆ, ಸಂಘ ಎಂಬ ವಿಸ್ತಾರವಾದ ಅರ್ಥ ಹೊಂದಿದ್ದು ಕ್ರಮೇಣ ತಂಡ, ಜೊತೆ, ಒಡನಾಟ ಎಂಬ ಸಂಕುಚಿತ ಅರ್ಥವನ್ನು ಹೊಂದಿದೆ. ಒಂದು ಪದವು ಅರ್ಥ ವಿಕಾಸ, ಅರ್ಥ ಸಂಕೋಚ ಈ ರೀತಿ ಅರ್ಥ ವ್ಯತ್ಯಾಸ ಹೊಂದಿದರೆ ಮತ್ತು ಆ ಪದದ ಅರ್ಥ ವ್ಯತ್ಯಾಸದ ಹರವು ವಿಸ್ತಾರವಾಗುತ್ತ ಹೋದರ ಅದು ಸಾಂಸ್ಕೃತಿಕ ಪದವಾಗಿ ಬಿಡುತ್ತದೆ. ಈ ಕಾರಣಗಳಿಂದಾಗಿ 'ಕಂಪನಿ' ಪದವನ್ನು ಸಾಂಸ್ಕೃತಿಕ ಪದವೆಂದು ಕರೆಯಲಾಗಿದೆ.

ಅಡಿಟಿಪ್ಪಣಿಗಳು

೧. ಈ ಅಂಶವನ್ನು ನನಗೆ ತಿಳಿಸಿದವರು ಪ್ರೊ.ಜಿ. ವೆಂಕಟಸುಬ್ಬಯ್ಯ ಅವರು ನನ್ನ ಕಾಗದಕ್ಕೆ ಪ್ರತ್ಯುತ್ತರ ರೂಪವಾಗಿ 'ಇಗೋ ಕನ್ನಡ'(28.5.1995)ದಲ್ಲಿ ಕಂಪನಿ ಪದದ ಬಗ್ಗೆ ಪ್ರಸ್ತಾಪಿಸಿ ಅದು ಬೇರೆ ಬೇರೆ ಸಂದರ್ಭಗಳಲ್ಲಿ ಐದು ಅರ್ಥಗಳನ್ನು ಪಡೆಯುತ್ತದೆ ಎಂದು ತಿಳಿಸಿ ಉಪಕಾರಿಸಿದ್ದಾರೆ. ಇದನ್ನು Cultural Key word ಎಂದು ಕರೆಯಬಹುದು ಎಂಬ ನನ್ನ ಅಭಿಪ್ರಾಯಕ್ಕೆ ಸಮ್ಮತಿ ಸೂಚಿಸಿದ್ದಾರೆ.

೨. ಯಾವುದೆ ಒಂದು ಅನ್ಯಭಾಷಾಪದ ಒಮ್ಮೆಲೇ ಸ್ವೀಕೃತ ಭಾಷೆಯಲ್ಲಿ ಒಂದು ಅಸ್ತಿತ್ವವನ್ನು ಪಡೆದುಕೊಳ್ಳುವುದಿಲ್ಲ. ಅದಕ್ಕೆ ಕಾಲಾವಕಾಶ ಬೇಕಾಗುತ್ತದೆ.

೩. ನನ್ನ ಹಳ್ಳಿಯ ಪಕ್ಕದ ಹಳ್ಳಿಯಲ್ಲಿ ಸೊಂಡುರು ಎಂಬ ವರ್ತಕ ಮನೆತನವಿದೆ, ಆ ಮನೆತನದ ಹಿರಿಯರೊಬ್ಬರು ನಾಲ್ಕು ಜನರನ್ನು ಸೇರಿಸಿಕೊಂಡು ಅಕ್ಕಿ,

ಗೋಧಿ, ಜೋಳ, ಬೆಲ್ಲ ಮುಂತಾದವುಗಳನ್ನು ಸಂಗ್ರಹಿಸಿದಂತೆ ಸಂತೆಗೆ ಹೋಗಿ ಮಾರುತ್ತಿದ್ದರು. ಅವರಿಗೆ 'ಕಂಪನ್ಯಾರು' ಎಂದು ಕರೆಯುತ್ತಿದ್ದರು. ಇಂದು ಈ ಮನೆತನದವರು ಆ ಕಾರ್ಯ ಮಾಡುತ್ತಿಲ್ಲವಾದರು ಅವರಿಗೆ ಕಂಪನ್ಯಾರು ಎಂದೆ ಕರೆಯುತ್ತಾರೆ. ಅದು ಅವರ ಅಡ್ಡ ಹೆಸರಿನಂತೆ ಬಳಕೆಯಾಗಿದೆ.

೪. ಕನ್ನಡ ಸಾಹಿತ್ಯ ಪರಿಷತ್ತ, ಕನ್ನಡ ನಿಘಂಟು, ಸಂಪುಟ ೨, ಪು. ೧೩೫೦.

ಗ್ರಂಥಋಣ

೧. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೧೯೭೬, ಕನ್ನಡ ನಿಘಂಟು ಸಂ. ೨
೨. ಚಿದಾನಂದಮೂರ್ತಿ ಎಂ., ೧೯೮೬ (ದ್ವಿ.ಮು.), ಭಾಷಾವಿಜ್ಞಾನದ ಮೂಲತತ್ವಗಳು
೩. ಜೋಶಿ ಡಿ.ಟಿ., ೧೯೮೫, ಆಧುನಿಕ ಭಾರತದ ಇತಿಹಾಸ, ವಿದ್ಯಾನಿಧಿ ಪ್ರಕಾಶನ. ಗದಗ.

೧೨

ಸಂಗ್ಯಾ-ಬಾಳ್ಯಾ : ಭಾಷೆಯ ರಚನೆ

ಕನ್ನಡ ಜಾನಪದಶಾಸ್ತ್ರದ ಹಲವು ಪ್ರಕಾರಗಳಲ್ಲಿ ಬಯಲಾಟಗಳು ಒಂದು. ಬಯಲಾಟಗಳಲ್ಲಿ ದೊಡ್ಡಾಟ ಮತ್ತು ಸಣ್ಣಾಟಗಳೆಂದು ಎರಡು ವಿಧ. ಸಾಂಪ್ರದಾಯಕ ವಸ್ತುಗಳನ್ನಾಧರಿಸಿ ದೊಡ್ಡಾಟಗಳನ್ನು ನೋಡಿ ಜನಪದರು ಬೇಸತ್ತಿರಬೇಕು. ಆ ವೇಳೆಯಲ್ಲಿ ಜನಪದದ ರೀತಿ ನೀತಿಗಳನ್ನು ಪ್ರತಿಬಿಂಬಿಸುವ ಸಣ್ಣಾಟಗಳು ಬಯಲಾಟಗಳಿಂದ ಸಿಡಿದು ಬಂದಿರಬೇಕು. ಸಣ್ಣಾಟಗಳಲ್ಲಿ ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ಎಂದು ಮೂರು ವಿಧ. ಜಾನಪದ ರಂಗಭೂಮಿಯ ಮೇಲೆ ಸಾಮಾಜಿಕ ಸಣ್ಣಾಟವಾಗಿ ಸಂಗ್ಯಾ-ಬಾಳ್ಯಾ ಕಾಣಿಸಿಕೊಳ್ಳುತ್ತದೆ. ಜಾನಪದ ಸಣ್ಣಾಟಗಳ ಪಂಕ್ತಿಯಲ್ಲಿ ಸಂಗ್ಯಾ-ಬಾಳ್ಯಾ ಅತ್ಯಂತ ಶ್ರೇಷ್ಠವಾದುದು ಮತ್ತು ಜನಪ್ರಿಯವಾದುದಾಗಿದೆ. ಇದರ ಜನಪ್ರಿಯತೆಗೆ ಮೂರು ಕಾರಣಗಳಿವೆ.

೧. ಸಾಮಾಜಿಕ ವಸ್ತುವನ್ನೊಳಗೊಂಡ ವಾಸ್ತವಿಕ ಘಟನೆಯ ಮೇಲೆ ಈ ನಾಟಕ ರಚನೆಯಾಗಿದೆ.

೨. ನಾಟಕದ ಉದ್ದಕ್ಕೂ ಹಾಸ್ಯ, ಪ್ರಣಯ, ಶೃಂಗಾರಗಳೇ ತುಂಬಿಕೊಂಡಿವೆ. ಮೈಮನ ಸೆಳೆಯುವ ಹಾಡುಗಳು ಪ್ರೇಕ್ಷಕರನ್ನು ಸೆರೆ ಹಿಡಿಯುತ್ತವೆ(ಅವುಗಳ ಒಡಲಲ್ಲಿ ದುರಂತ ಅಗಿದೆ ಎಂಬುದನ್ನು ಮರೆಯಬಾರದು).

೩. ಪ್ರಾದೇಶಿಕ ಭಾಷಾವೈಶಿಷ್ಟ್ಯಗಳು ಅದು ಬಳಸಿಕೊಂಡಿರುವುದರಿಂದ ಪ್ರೇಕ್ಷಕರಿಗೆ ಹೆಚ್ಚು ಹತ್ತಿರವಾಗಿದೆ. ಇದರಿಂದ ಭಾಷಾ ಸಂಕೀರ್ಣತೆ ದೂರವಾಗಿ ನಾಟಕದ ಆಶಯ ಜನರಿಗೆ ಸುಲಭವಾಗಿ ಅರ್ಥವಾಗುತ್ತದೆ.

ಈ ಎಲ್ಲ ಅಂಶಗಳಿಂದ ಈ ಸಣ್ಣಾಟ ಕನ್ನಡ ಜಾನಪದ ರಂಗಭೂಮಿಯ ಮೇಲೆ ತನ್ನದೇ ಆದ ಅನನ್ಯತೆಯನ್ನು ಪಡೆದುಕೊಂಡಿದೆ. ಸಂಗ್ಯಾಬಾಳ್ಯಾ ಈಗ ಉತ್ತರ ಕರ್ನಾಟಕದ ವ್ಯಾಪ್ತಿಯನ್ನು ಮೀರಿ ಪಶ್ಚಿಮ ಮತ್ತು ದಕ್ಷಿಣ ಕರ್ನಾಟಕಗಳನ್ನೂ ದಾಟಿದೆ. ಇತ್ತೀತ್ತಲಾಗಿ

ಚಲನಚಿತ್ರವಾಗಿ ನಾಡಿನ ತುಂಬೆಲ್ಲ ಪರಿಚಿತವಾಗಿದೆ. ಕರ್ನಾಟಕದ ಹೊರಗಡೆ ಇರುವ ನೆರೆಯ ಮಹಾರಾಷ್ಟ್ರದಲ್ಲೂ ಅಷ್ಟೇ ಜನಪ್ರಿಯವಾಗಿದೆ. ಪ್ರದೇಶದಿಂದ ಪ್ರದೇಶಕ್ಕೆ ಪ್ರದರ್ಶನಗೊಳ್ಳುವಾಗ ನಾಟಕದ ಹಾಡುಗಳ ರಚನೆಯಲ್ಲಿ ಬೇರೆ ಬೇರೆ ಪ್ರದೇಶದ ಪ್ರಾದೇಶಿಕ ವೈಶಿಷ್ಟ್ಯತೆಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸೇರುತ್ತವೆ. ಈ ಭಾಗವನ್ನು ಬರೆಯುವಾಗ ಉದ್ದಕ್ಕೂ ನನ್ನ ಗಮನದಲ್ಲಿರುವುದು. ಬೆಳಗಾವಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ಬಳಕೆಯಲ್ಲಿರುವ ಸಂಗ್ಯಾಬಾಳ್ಯಾ ಪ್ರಯೋಗಿಸುವ ರೀತಿ ಮತ್ತು ಹಾಡುಗಳ ರಚನೆ. ಸಂಗ್ಯಾಬಾಳ್ಯಾ ಹಾಡುಗಳ ರಚನೆಯ ಮೇಲೆ ಬೆಳಗಾವಿಯ ಉಪಭಾಷೆಯಲ್ಲಿ ಕಂಡುಬರುವ ಕೆಲವು ಧ್ವನಿರಚನಾ ಪ್ರಕ್ರಿಯೆಗಳು, ಅನುನಾಸಿಕೀಕರಣ, ಜಾರುಧ್ವನಿಗಳ ಬಳಕೆ ಹಾಗೂ ಕೆಲವು ಅಕೃತಿಮಾ ಪ್ರಕ್ರಿಯೆಗಳು ಕಾಣಿಸುತ್ತವೆ. ಇವು ನಾಟಕದ ಹಾಡುಗಳಿಗೆ ಪ್ರಾದೇಶಿಕ ಸೊಗಡನ್ನು ತಂದುಕೊಟ್ಟಿವೆ. ಅವುಗಳ ವರ್ಣನಾತ್ಮಕ ಭಾಷಾವಿಶ್ಲೇಷಣೆ ನನಗಿಲ್ಲಿ ಮುಖ್ಯವಲ್ಲ. ಆ ನಾಟಕದ ರಂಗಪ್ರಯೋಗದ ಭಾಷಾಸ್ವರೂಪವನ್ನು ಎತ್ತಿತೋರಿಸುವುದೇ ಆಗಿದೆ.

ಈ ಜಾನಪದ ಗೀತರೂಪಕ ಬೆಳಗಾವಿಯಂತಹ ದ್ವಿಭಾಷಾ ಪ್ರದೇಶದಲ್ಲಿ ರಚನೆಗೊಂಡಿರುವುದರಿಂದ ನೆರೆಯ ಮರಾಠಿ ಭಾಷೆಯ ಪ್ರಭಾವ ದಟ್ಟವಾಗಿದೆ. ಆ ಭಾಷೆಯ ಅನೇಕ ಪದಗಳು, ಪದಗುಚ್ಛಗಳು ಸಹಜವಾಗಿಯೇ ನುಗ್ಗಿ ಬಂದಿವೆ. ಅಲ್ಲದೆ ಅರೇಬಿಕ್, ಉರ್ದು, ಹಿಂದಿ ಮತ್ತು ಸಂಸ್ಕೃತ ಭಾಷೆಗಳ ಪ್ರಭಾವವೂ ಈ ಗೀತರೂಪಕದ ಮೇಲೆ ಆಗಿದೆ. ಹೀಗಾಗಿ ಭಾಷಾಬಳಕೆಯ ರೀತಿಯಲ್ಲಿ ಕೆಲವು ವೇಳೆ ಭಾಷಾಮಿಶ್ರಣ ಕಂಡುಬಂದರೆ ಧಾರಾಳವಾಗಿ ಭಾಷಾಸ್ವೀಕರಣವೂ ಕಂಡುಬರುತ್ತದೆ. ಇಲ್ಲಿ ನಡೆಯುವ ಸ್ವೀಕರಣ, ಸಾಂಸ್ಕೃತಿಕ ಸ್ವೀಕರಣವಾಗಿದೆ ಎಂಬುದನ್ನು ಗಮನಿಸಬೇಕು.

ಸಂಗ್ಯಾಬಾಳ್ಯಾ ಪೇಟೆಯಲ್ಲಿ ಮಾರವಾಡಿ ಅಂಗಡಿಯಲ್ಲಿ ಬಟ್ಟೆ ತೆಗೆದುಕೊಳ್ಳುವಾಗ ಸೇಡಜಿ ಮತ್ತು ಸಂಗ್ಯಾಬಾಳ್ಯಾರ ಮಾತುಗಳಲ್ಲಿ ಬರುವ ಹಜಾರ, ಪೈರಾಣ, ಜಾಕೀಟ್, ಸಾಟೀ ನಂಬರ್, ಪಾಡ್ಕಿ, ರೋಖ, ಅಬರೂ ಮುಂತಾದವು ಮರಾಠಿ ಮತ್ತು ಹಿಂದಿ ಭಾಷೆಯ ಪದಗಳೇ ಆಗಿವೆ. ಸಂಗ್ಯಾಬಾಳ್ಯಾ ಪಗಡಿ ಆಡಲಿಕ್ಕೆ ಕುಳಿತಾಗ ಪರಸ್ಪರರ ಸಂಭಾಷಣೆಯಲ್ಲಿ ಮರಾಠಿ ಭಾಷೆಯ ಸಂಖ್ಯಾವಾಚಕಗಳು ಕಂಡುಬರುತ್ತವೆ.

ದಶಾಪಾಶೇಕ ಹೊಡತಾ |
ಚಕ್ಕಾ ತೀನೀಗೆ ಕಡತಾ ಕೂಡಿ ಪಗಡಿಯ ಆಡೋಣ ||

ಇಲ್ಲಿ ಬಳಕೆಯಾದ ದಶಾ, ಪಾಶೇ, ಚಕಾ, ತೀನಿ ಇವು ಮರಾಠಿ ರೂಪಗಳಾಗಿವೆ. ಸಂಗ್ಯಾ ಗಂಗಾಳ ಎದುರಿಗೆ ತನ್ನ ಮೋಹವನ್ನು ತೋಡಿಕೊಳ್ಳುವಾಗ ಬರುವ

ರಾಜ ಹೆಣ್ಣ ಸಾಜನಡಿಗಿ ನಾಜೂಕಾ
ಸಿಕ್ಕಿ ಬಿದ್ದಿ ಬಯಲಾಕಾ
ಹೆಂಗಾರ ಮಡಿ ತೋರ ದಯಾ ಕರುಣಾ

ಈರ್ಯಾ, ಇರಪಕ್ಷಿ-ಬಸವಂತ ಸೇರಿ ಸಂಗ್ಯಾನ ಕೊಲೆ ಮಾಡುವಾಗ 'ಇವನ (ಸಂಗ್ಯಾನ) ಶಿರಾ ಹರಿ ಹರಿ' ಎನ್ನುವಲ್ಲಿ ಸಾಜೂಕ ಅರೇಬಿಕ್‌ದಿಂದ ಬಂದಿದೆ. ದಯೆ, ಕರುಣೆ, ಸಂಸ್ಕೃತದಿಂದ ಬಂದಿವೆ. ಪರಮ್ಮ ತನ್ನ ಅಳಿಯ ಸಂಗ್ಯಾನ ಸಾವನ್ನು ಕಂಡು ಸರಕಾರಕ್ಕೆ ದೂರು ಹೇಳುತ್ತಾಳೆ. ಆಗ ಈರ್ಯಾ ಮತ್ತು ಪರಮ್ಮರ ನಡುವೆ ನಡೆಯುವ ಸಂಭಾಷಣೆಯಲ್ಲಿ ಅರ್ಜಿ, ಪೋಜದಾರ, ಮಾಮಲೆದಾರ ಮುಂತಾದ ಪದಗಳು ಪರ್ಶಿನ್ ಭಾಷೆಗಳಿಂದ ಬಂದಿವೆ. ಇತರ ನಾಟಕಗಳ ಮೇಲೆ ಆಗಿರುವಂತೆ ಸಂಗ್ಯಾ ಬಾಳ್ಯಾದ ಮೇಲೆಯೂ ಅನ್ಯಭಾಷೆಗಳ ಪ್ರಭಾವ ಆಗಿದೆ. ನಾಟಕದಂತಹ ಜನಪ್ರಿಯ ಮಾಧ್ಯಮ, ಅನ್ಯಭಾಷೆಗಳ ಪ್ರಭಾವದಿಂದ ಹೊರತಾಗಿರಲು ಸಾಧ್ಯವೇ ಇಲ್ಲ. ಭೌಗೋಳಿಕ ಮತ್ತು ಸಾಂಸ್ಕೃತಿಕ ಅಗತ್ಯತೆಗಳ ಹಿನ್ನೆಲೆಯಲ್ಲಿ ಅನ್ಯಭಾಷೆಗಳ ಪ್ರಭಾವ ಈ ರೂಪಕದ ಮೇಲೆ ಆಗಿದೆ. ನಾಟಕದ ವಿಚಾರಗಳನ್ನು, ಆಶಯಗಳನ್ನು ಅಭಿವ್ಯಕ್ತಪಡಿಸಲು, ಪ್ರೇಕ್ಷಕರೊಡನೆ ಸಂವಹನ ಶಕ್ತಿ ಹೆಚ್ಚಿಸಲು ಅನ್ಯಭಾಷೆಗಳ ಪ್ರಭಾವ ಸಹಾಯಕಾರಿಯಾಗಿದೆ.

ಮದುವೆಯಾದ ಹೆಣ್ಣು ಹಾದರಕ್ಕಿಳಿಯುವುದು ಜನಪದರು ಒಪ್ಪಲಾರದ ಮಾತು. ಅದು ಅಪರಾಧವೇ ಸರಿ. ಗಂಗಿಯು ಪರಮ್ಮ ಹಾಗೂ ಬಾಳ್ಯಾರ ಪ್ರೇರಣೆಯಿಂದ ಸಂಗ್ಯಾನ ಜೊತೆ ಹಾದರಕ್ಕಿಳಿದು, ತಪ್ಪು ಹೆಜ್ಜೆ ಇಡುತ್ತಾಳೆ. ಅದು ಗಂಡ ಈರ್ಯಾನ ಕಿವಿಗೆ ಮುಟ್ಟಿದಾಗ ಈರ್ಯಾ ಗಂಗಿಯರ ರೋಷಯುಕ್ತವಾದ ಸಂಭಾಷಣೆಯಲ್ಲಿ ಅನೇಕ ಬೈಗುಳಗಳು ಸೃಷ್ಟಿ ಯಾಗುತ್ತವೆ. ಅವು 'ದ್ವೇಷ' ಮತ್ತು 'ಕಾಮದ' ಸುತ್ತ ಇವೆಯೆಂದು ಬೇರೆ ಹೇಳಬೇಕಾಗಿಲ್ಲ. ಅಲ್ಲಿ ಬಳಕೆಯಾದ ಜಾನಪದ ಬೈಗುಳಗಳನ್ನು ಈ ರೀತಿಯಾಗಿ ಕಲೆಹಾಕಬಹುದು. ರಂಡಿ, ಕೆಟ್ಟರಂಡಿ, ಸೂಳಿಮಕ್ಕಳು, ಹಾದರಗಿತ್ತಿ, ಕುಂಟಲಗಿತ್ತಿ, ಹೊಯ್ಮಾಲಗಿತ್ತಿ ಮುಂತಾದುವು.

ಕೆಟ್ಟ	+	ರಂಡಿ	-	ಕೆಟ್ಟರಂಡಿ
ಛೀ	+	ರಂಡಿ	-	ಛೀರಂಡಿ
ಸೂಳಿ	+	ಮಕ್ಕಳು	-	ಸೂಳಿಮಕ್ಕಳು

ಇಲ್ಲಿ ಎರಡು ಭಾಷಾ ಘಟಕಗಳಿವೆ. ಅವು ಎರಡೂ ಸ್ವತಂತ್ರ ಆಕೃತಿಮಾಗಳಾಗಿವೆ. ಬೈಗುಳಗಳಲ್ಲಿ ರಚನೆಗಿಂತಲೂ ಅರ್ಥ ಮುಖ್ಯವಾಗಿರುವುದರಿಂದ ಇವು ನುಡಿಗಟ್ಟುಗಳಾಗಿವೆ.

ಹಾದರ	+	ಗಿತ್ತಿ	-	ಹಾದರಗಿತ್ತಿ (ಹಾದರತನ)
ಕುಂಟಲ	+	ಗಿತ್ತಿ	-	ಕುಂಟಲಗಿತ್ತಿ, ಕುಂಟಲತನ
ಹೊಯ್ಮಾಲ	+	ಗಿತ್ತಿ	-	ಹೊಯ್ಮಾಲಗಿತ್ತಿ, ಹೊಯ್ಮಾಲತನ

ತದ್ಧಿಂತ ಪ್ರತ್ಯಯಗಳು ಸೇರಿರುವುದರಿಂದ ಇವು ತದ್ಧಿತಾಂತ ನಾಮಪದ ಪುಂಜಗಳಾಗಿವೆ. ಇವು ಒಬ್ಬ ವ್ಯಕ್ತಿಯ ಗುಣ ಸ್ವಭಾವಗಳನ್ನು ಸೂಚಿಸುವುದರ ಜೊತೆಗೆ ಒಂದು ರೀತಿಯ ಶಬ್ದಿಕ ಹೊಡೆತಗಳಾಗಿವೆ. ಈರ್ಯಾ, ಗಂಗಿಯರ ನಡುವೆ ಮಾತಿಗೆ ಮಾತು ಹತ್ತಿ ಸನ್ನಿವೇಶ ಕಾವೇರಿದಾಗ ಈರ್ಯಾ, ಗಂಗಿಯನ್ನು ಬೈದರೆ ಅವಳು ಪ್ರತಿಯಾಗಿ ಬೈಯುತ್ತಾಳೆ.

ಪಾಪಕಟ್ಟಿ ಕೊರೆ ಪದರಾಗ
ಮರುಗುವೆ ಮನದಾಗ
ಸುಳ್ಳು ಅನ್ನೇದ ಮಾತ ಆಡಬ್ಯಾಡ
ಹ್ವಾದಿ ನರಕಕ್ಕೆ

ಆಕೆಗೆ ಪ್ರತಿಯಾಗಿ ಈರ್‍ಯಾನ ರೋಷವನ್ನು ಮಾತಿನಲ್ಲಿ ಹಿಡಿಯುವುದು ಕಷ್ಟಸಾಧ್ಯ. 'ಬಿಡರೋ ತಮ್ಮ ಗಳೀರಾ ಈ ಹಾದರಗಿತ್ತಿ ಬೆನ್ನತ್ತ್ಯಾಟಕ್ಕೆತ್ತ, ಕಾಲ ಮ್ಯಾಲ ಮಾಡಿ ಗೋಣ ಕೊದ, ತಲಿ ಬಿಡಿಸಿ ಚೆಲ್ಲುವೆಬಾವ್ಯಾಗ' ಎಂದ ಮೇಲೆ ಗಂಗಿಯ ಮನಸ್ಸಿಗೆ ಏಟು ಬಿದ್ದು ಮಾನಸಿಕ ಸಮತೋಲನ ತಪ್ಪುತ್ತದೆ. ಸಮಾಜದ ಕಣ್ಣಲ್ಲಿ, ತಾನು ಕೀಳಾದಂತೆ ಭಾಸವಾಗುತ್ತದೆ. ಆಗ ಆಕೆಯ ಮನಸ್ಸಿನ ಅಹಂ ಎನ್ನುವುದು ಮೇಲೆದ್ದು ತನ್ನ ಹಿಂದಿನ ಸ್ಥಿತಿಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತದೆ. ಇಂತಹ ಬೈಗುಳುಗಳು ಬೆಳಗಾವಿ ಸುತ್ತಮುತ್ತಲಿನ ಪ್ರದೇಶದಲ್ಲಿ ಧಾರಾಳವಾಗಿ ಬಳಕೆಯಾಗುತ್ತವೆ. ಅವು ಈ ಸಣ್ಣಾಟದಲ್ಲಿ ಬಳಕೆಯಾಗಿ ಪ್ರಾದೇಶಿಕತೆಯನ್ನು ಪ್ರತಿನಿಧಿಸಿವೆ.

ಉತ್ತರ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಮತ್ತು ದೈನಂದಿನ ಬದುಕಿನಲ್ಲಿ ವ್ಯವಹಾರಕ್ಕಾಗಿ ಬಳಸುವ ನುಡಿಗಟ್ಟುಗಳು ನಾಟಕದಲ್ಲಿ ಸಹಜವಾಗಿ ಬಳಕೆಯಾಗಿವೆ.

- ಮೂಗ ಕೋದ ಕನ್ನಿ
- ಹಲ್ಲತಿನ್ನು
- ಚಂಡಿ ಚಿವುಟ
- ನಿರವಂಶ ಆಗಲಿ
- ಕಡಬೇರಿಕೆ
- ಕೋಲ್ ಮಿಂಚ ಹೊಡದಾಂಗಾತ ಏಕಾ ಏಕಿ

ಮುಂತಾದ ನುಡಿಗಟ್ಟುಗಳಂತೆ ಹಲವಾರು ಅನುಭವೋಕ್ತಿಗಳು, ಪಾತ್ರಗಳ ಮಾತಿನ ಮೂಲಕ ಅಭಿವ್ಯಕ್ತಗೊಂಡಿವೆ. ಸಂಗ್ಯಾ ಗಂಗಾನ ಹತ್ತಿರ ಬಂದು ತನ್ನ ಮೋಹವನ್ನು ತೋಡಿಕೊಂಡಾಗ ಗಂಗಿ ಅವನಿಗೆ ಬುದ್ಧಿ ಹೇಳುತ್ತಾಳೆ.

ದಶಮುಖದ ರಾವಣ | ಒಯ್ದಾನೊಸೀತಾನ
ಆತೇನೊ ಏಕ್ಯಾಣಾ ಅವನ ಗತಿ |
ಈ ಕಪ್ಪತ ಗುಡ್ಡ | ಕಣ್ಣಿಗಿ ಛಾಯಾ
ಹೋದೇನಂತೀಯಾ ನೀನಾ |
ಇದು ಹುಲ್ಲ ಜೀವ | ಅಲ್ಲ ಮತ್ತ ಹುಟ್ಯಾಕ ಕೇಳ ಕ್ಯಾಣಾ
ತುಡಗ ಪಟಿಂಗ ಹಾದರತನ ಅಡಗದೊ ಮೂರ ದಿನಾ |

ಗ್ರಾಮೀಣ ಪರಿಸರದ ಜನರ ರೀತಿ ನೀತಿಗಳನ್ನು ಅವರು ಬದುಕಿನಲ್ಲಿ ಅನುಭವಿಸುವ ಭಾವನೆಗಳನ್ನು ನುಡಿಗಟ್ಟುಗಳು, ಅನುಭವೋಕ್ತಿಗಳು ಚೆನ್ನಾಗಿ ಚಿತ್ರಿಸುತ್ತವೆ. ಆ ಉಕ್ತಿಗಳ

ಒಂದೆ ಜೀವನವನ್ನು ಕಂಡುಂಡ ಜನಪದರ ಮನಸ್ಸಿನ ತಾತ್ವಿಕ ಚಿಂತನೆಯ ಸ್ವರೂಪವನ್ನು ಗುರುತಿಸಬಹುದಾಗಿದೆ. ಇಂತಹ ವಿಶಿಷ್ಟ ಪದಪ್ರಯೋಗಗಳಲ್ಲಿ ಜಾನಪದ ಭಾಷೆಯ ಸತ್ವ, ಸೊಗಡು, ಎದ್ದು ಕಾಣುತ್ತದೆ.

ಈ ರೂಪಕದಲ್ಲಿ ನುಡಿಗಟ್ಟು, ಅನುಭವೋಕ್ತಿಗಳಂತೆ ಅನುಕರಣವಾಚಕಗಳು ಬಳಕೆ ಯಾಗಿವೆ. ಆಯಾ ಸನ್ನಿವೇಶಗಳನ್ನು ವರ್ಣಿಸುವಾಗ ಸಂಭಾಷಣೆಯಲ್ಲಿ ಅನುಕರಣವಾಚಕ ಗಳು ಜೀವನಾಡಿಯಂತೆ ಪ್ರವೇಶಿಸಿ ನಾಟಕಕ್ಕೆ ಕಳೆತರಲು ಸಹಾಯಕವಾಗಿವೆ.

ಹುಡಿಗಿ ಪಿರಿ ಪಿರಿ ಓಡಿ ಬಂದ

ಖಳಾಖಳಾ ಹೊಳಿತಿ

ಮಿರಿ ಮಿರಿ ಮಿಂಚತಿ

ಮರಮರ ವರಗತನ ಮನದಾಗ

ಮುಂತಾದ ಉದಾಹರಣೆಗಳನ್ನು ನೋಡಿದಾಗ ಅನುಕರಣವಾಚಕ ಶಬ್ದಗಳು ಕ್ರಿಯೆ ಯನ್ನು ಅಭಿನಯಿಸುವಂತೆ ಭಾಸವಾಗಿ ನಾಟಕದ ಸೌಂದರ್ಯವನ್ನು ಹೆಚ್ಚಿಸಿವೆ. ಇವು ಕಲಾತ್ಮಕವಾಗಿ, ಸಹಜವಾಗಿ ಮೂಡಿಬಂದಿವೆಯೇ ಹೊರತು ಹೊರೆಯಾಗಿ ಬಂದಿಲ್ಲ. ಇದು ಸಂಗ್ಯಾಬಾಳ್ಯಾ ನಾಟಕದ ವೈಶಿಷ್ಟ್ಯಗಳಲ್ಲಿ ಒಂದಾಗಿದೆ.

ಈರ್ಯಾ ವ್ಯಾಪಾರಕ್ಕೆ ಹೋಗುವ ಸಿದ್ಧತೆಯಲ್ಲಿದ್ದಾಗ ಈರ್ಯಾ ಮತ್ತು ಗಂಗಾರ ನಡುವೆ ನಡೆಯುವ ಸಂಭಾಷಣೆಯ ಸಂದರ್ಭದಲ್ಲಿ ಕೆಲವು ಸಂಬೋಧನೆಗಳು ಕಂಡುಬರುತ್ತವೆ. ಅವುಗಳ ರಚನೆ ಸರಳವಾಗಿದ್ದರೂ ನಾಟಕದಲ್ಲಿ ಬಂದಾಗ ನಾಟಕೀಯ ಎನಿಸುತ್ತವೆ.

ಸಖಿ ಬಾಬಾ |

ಪ್ರಿಯಾ ನಿಮಗೆ ಕೈ ಮುಗಿಯುವೆ |

ಪ್ರಾಣಕಾಂತಾ ಹಾ ಹೇಂಗ ಜೀವಿಸಲೋ |

ಕಾಂತಾ ಕರಸೀದ ಕಾರಣ ಏನೊ ಕಾಂತಾ |

ಕೇಳ ಕಾಂತೇ |

ಉತ್ತರ ಕರ್ನಾಟಕದ ಆಡುನುಡಿಯಲ್ಲಿ ಇಂತಹ ಸಂಬೋಧನೆಗಳು ಬಳಸುವುದಿಲ್ಲ. ಆದರೆ ಇವು ಈ ಜಾನಪದ ರೂಪಕದಲ್ಲಿ ಕಾಣಿಸಿಕೊಂಡ ಕೃತಕವಾಗಿ, ನಾಟಕೀಯವಾಗಿ ಬಳಕೆಯಾಗಿವೆ. ಅಂದರೆ ದ್ವಿಸ್ತರತೆ ಇಲ್ಲಿ ಕಂಡುಬಂದಿದೆ. ಬಹುಶಃ ಕಂಪನಿ ಮತ್ತು ಸಾಮಾಜಿಕ ನಾಟಕಗಳ ಪ್ರಭಾವ ಸಂಗ್ಯಾ ಬಾಳ್ಯಾ ಮೇಲೆ ಆಗಿರಬೇಕು.

ಈ ಜಾನಪದ ರೂಪಕದಲ್ಲಿ ಸಂಭಾಷಣೆಗೆ ಹೆಚ್ಚಿನ ಮಹತ್ವವಿದೆ. ಪಾತ್ರಗಳು ಹಾಡು ಹೇಳಿ ಹಾಡಿನಲ್ಲಿರುವ ಅರ್ಥವನ್ನು ಹೆಚ್ಚು ಸ್ಪಷ್ಟಗೊಳಿಸಲು ಮಾತು ಬೆಳೆಸುತ್ತವೆ. ತರ್ಕಬದ್ಧವಾಗಿ, ಗಟ್ಟಿಯಾಗಿ ಹೇಳಬೇಕಾದುದ್ದನ್ನು ಹೇಳುತ್ತಾರೆ. ಮಾತುಗಳು ಪಾತ್ರಧಾರಿಗಳ ಬಾಯಲ್ಲಿ ಬಂದಾಗ ಗ್ರಾಮ್ಯವಾಗಿ ನಿಲ್ಲುತ್ತವೆ. ಆಗ ಸಂಭಾಷಣೆ ಹೆಚ್ಚು ನೈಜವಾಗಿ ಇರುತ್ತದೆ.

ಅಲ್ಲದೆ ಅಲ್ಲಿಯ ವಾಕ್ಯಗಳು ಚಿಕ್ಕ ಚಿಕ್ಕವಾಗಿದ್ದು ತುಂಬ ಸರಳವಾಗಿರುತ್ತವೆ. ಸಂಗ್ಯಾಬಾಳ್ಯಾನಿಗೆ ಸಂಗಿಯನ್ನು ಒಲಿಸಿಕೊಂಡು ಬರುವಂತೆ ಆಕೆಯ ಮನೆಯ ವಿಳಾಸವನ್ನು ಕೊಡುತ್ತಾನೆ.

ಸಂಗ್ಯಾ : ಗೆಳೆಯಾ ಬಾಳಣ್ಣಾ ಹೊಂಗಲ ಊರಾಗ ಚದರಂಗ ಚಾವಡಿ ಐತಿ

ಬಾಳ್ಯಾ : ಗೆಳೆಯಾ ಮುಂದೆ

ಸಂಗ್ಯಾ : ಗೆಳೆಯಾ ಚದರಂಗ ಚಾವಡಿ ಮುಂದೆ, ಗೊಂಬಿ ಗುಡಿ ಐತಿ ಅದರ ಅಚಕ ಘೌಜಗಟ್ಟಿ ಐತಿ

ಬಾಳ್ಯಾ : ಗೆಳೆಯಾ ಅದರ ದಾಟಿ ಏನ್ ಐತಿ

ಸಂಗ್ಯಾ : ಗೆಳೆಯಾ ಒಂದ ತೆಂಗಿನ ಗಿಡಾ ಐತಿ, ತೆಂಗಿನ ಗಿಡಕ್ಕೆ ಲಗಳ್ಯಾರ ಮನಿಗೆ ಸರತಾನ್ ಸರತ್ ಐತಿ ಗೆಳೆಯ

ಬಾಳ್ಯಾ : ಗೆಳೆಯಾ ಲಗಳ್ಯಾರ ಮನಿಗೆ ಹ್ಯಾಂಗ್ ಹೋಗಲಿ

ಸಂಗ್ಯಾ : ಗೆಳೆಯಾ, ಎಕ್ಕಿ ಎಲಿ ತೊಗೊಬೇಕು, ಬತ್ತಿ ಕಟ್ಟಬೇಕು, ಅದರೊಳಗ ತಂಬಾಕ ಹಾಕೋ ಬೇಕು, ಗೆಳೆಯಾ ಕಡ್ಡಿ ಆಸೆಕಾಗಿ ಲಗಳ್ಯಾರ ಮನಿಗೆ ಹೋಗಬೇಕು

ಸಂಭಾಷಣೆಯಲ್ಲಿ, ಪಾತ್ರಧಾರಿಗಳ ಹಾವಭಾವಗಳಲ್ಲಿ ಅವರ ಮನೋವೃತ್ತಿ ವ್ಯಕ್ತವಾಗುತ್ತದೆ. ಸಂಭಾಷಣೆಯಲ್ಲಿ ಪ್ರಾದೇಶಿಕ ಭಾಷಾ ಲಕ್ಷಣಗಳು ಬೆರೆತುಕೊಂಡಿರುತ್ತವೆ. ಸಂಭಾಷಣೆಯ ಮಧ್ಯದಲ್ಲಿ.

- ಗೆಳೆಯಾ ಹೇಳುತ್ತೇನೆ ಕೇಳುವಂತನಾಗು
  ಅದೇ ನೀರುವುದು ಚೆಂದವಾಗಿ ಹೇಳುವಂತನಾಗು
- ಗೆಳೆಯಾ ನನಗೇನು ತಿಳಿಯಲಿಲ್ಲ ಇನ್ನೊಮ್ಮೆ
  ಹೇಳುವಂತನಾಗು

ಮುಂತಾದ ಪದಗಳು ಪ್ರೇಕ್ಷಕರ ಗಮನವನ್ನು ಸೆಳೆಯುತ್ತವೆ. ಮುಂದಿನದನ್ನು ಕೇಳಬೇಕು, ನೋಡಬೇಕು ಎನ್ನುವುದರತ್ತ ಪ್ರೇಕ್ಷಕರ ಕುತೂಹಲವನ್ನು ಸೆಳಯುತ್ತವೆ. ಸಂಭಾಷಣೆಯಲ್ಲಿ ಜನಪದ ಗಾದೆ, ಪಡೆನುಡಿಗಳು ಕಾಣಿಸಿಕೊಳ್ಳುತ್ತವೆ. ಜಾನಪದ ಆಡುನುಡಿಯನ್ನು ಕವಿ ಈ ಸಣ್ಣಾಟಕ್ಕೆ ಸಮರ್ಥವಾಗಿ ದುಡಿಸಿಕೊಂಡಿದ್ದಾನೆ. ಅದು ಪಾತ್ರಗಳ ಸಂಭಾಷಣೆಯಲ್ಲಿ ಕಣ್ಣಿಗೆ ಹೊಡೆಯುತ್ತದೆ.

ಸಂಗ್ಯಾ ಬಾಳ್ಯಾದಲ್ಲಿ ಕಾವ್ಯಸೌಂದರ್ಯವನ್ನುಂಟು ಮಾಡಲು ಅಲಂಕಾರಗಳು ಮತ್ತು ಪ್ರತಿಮೆಗಳು ಲೀಲಾಜಾಲವಾಗಿ ಬಳಕೆಯಾಗಿವೆ. ಗಂಗಾಳ ಚೆಲುವಿಕೆಗೆ ಮಾರುಹೋದ ಗುಡಿಯಲ್ಲಿಯ ಪೂಜಾರಿ ಆಕೆಯ ರೂಪವನ್ನು ವರ್ಣಿಸುವಾಗ

ಹಿಂದಿನ ಹುಡಿಗಿ ಮೈಬಣ್ಣಾ
ಥೇಟ ಲಿಂಬೆಯ ಹಣ್ಣಾ

ನೋಡಿ ಮುಚ್ಚ್ಯಾವ ಕಣ್ಣಾ
ಏ, ಯಮ್ಮಾ | ಯಾರದಿ ಹೇಳ ನೀನಾ |
ನಡ ಸಣ್ಣ ಕಾಡಿಗಿಗಣ್ಣಾ |
ನಾಗರ ಬಣ್ಣ | ನೋಡಲಾರೋ ಈಕಿ ವರ್ಣಾ

ಹೆಣ್ಣಿನ ಆಕರ್ಷಣೆ ಅತಿಮುಖ್ಯವಾದುದು ದೇಹದ ಮಾಟಕ್ಕಿಂತಲೂ ಅದನ್ನೂ ಮೀರಿದ ಲಾವಣ್ಯ ಎನ್ನುವುದು ಈ ವರ್ಣನೆ ಧ್ವನಿಸುತ್ತದೆ. ಗಂಗಿಯ ಅಂಗಾಂಗಗಳ ಸೌಂದರ್ಯವನ್ನು ಒನಪು, ವೈಯಾರವನ್ನು, ಕಾಂತಿ ಕಳೆಯನ್ನು ವರ್ಣಿಸುವುದನ್ನು ನೋಡಿದರೆ ಹೆಣ್ಣು ಅಂದರೆ ಕಾಮೋಪಭೋಗದ ವಸ್ತುವೆನ್ನುವಂತಾಗಿದೆ. ಸಂಗ್ಯಾ ಬಾಳ್ಯಾನಿಗೆ ಗಂಗಾಳ ರೂಪವನ್ನು ವರ್ಣಿಸುವ ಮಾತುಗಳು ಉಪಮಾಲಂಕಾರಗಳ ಮೂಲಕ ವ್ಯಕ್ತವಾಗಿವೆ.

ಬಾಳಿದಿಂಡಿನ ಹಂಗ |
ಸೂತ್ರದ ಗೊಂಬಿ ಸುಳಿಧಾಂಗ |
ಚಕಮಕಿ ಕಡದಂಗ, ತಾರಕ್ಕಿ ಮೂಡಿದಂಗ |
ಹುಡಿಗಿ ರೂಪಾ |
ಹಚ್ಚಿಧಾಂಗ ದೀಪಾ |
ಉಂಡಾಂಗಾತು ಹೋಳಿಗಿ ತುಪ್ಪಾ |

ಇಲ್ಲಿ ಭಾವ ಭಾಷೆಗಳ ಮೇಳ ರೋಮಾಂಚಕಾರಿಯಾಗಿದ್ದು ಜನಪದ ಭಾಷಾ ಪ್ರಯೋಗದ ದೃಷ್ಟಿಯಿಂದಲೂ ಮಹತ್ವದ್ದಾಗುತ್ತದೆ. ಗಂಗಾ, ಸಂಗ್ಯಾನಿಗೆ ಬುದ್ಧಿ ಹೇಳುವಾಗ 'ನಾಳಿ ಸುಣ್ಣಾತಿಂದ ಮಂಗ್ಯಾನಂಗ ಹಲ್ಲ ಕಿಸದೀಯಾ ನೀನಾ' ಎಂಬ ಉತ್ತಮ ದೃಷ್ಟಾಂತಗಳು ಅಲ್ಲಲ್ಲಿ ಕಾಣಿಸುತ್ತದೆ. ಉತ್ತರ ಕರ್ನಾಟಕದ ಕೆಚ್ಚುಳ್ಳ ಅಡುನುಡಿಯ ಬಳಕೆ ಇಲ್ಲಿದೆ, ಗ್ರಾಮ್ಯದ ಸಹಜತೆ, ಸೊಗಡು ಚೆನ್ನಾಗಿ ವ್ಯಕ್ತವಾಗಿದೆ.

ಸಂಗ್ಯಾ ಬಾಳ್ಯಾದಲ್ಲಿ ಅಲಂಕಾರಗಳಂತೆ ಪ್ರತಿಮೆಗಳು (ಶಬ್ದ ಚಿತ್ರಗಳು) ಹೇರಳವಾಗಿ ಬಳಕೆಯಾಗಿ ನಾಟಕದ ಸೌಂದರ್ಯವನ್ನು ಹೆಚ್ಚಿಸಿವೆ. ಇಲ್ಲಿ ಬಳಕೆಯಾದ ಪ್ರತಿಮೆಗಳು ದೇಸಿಯ ಮೂಲವಾಗಿವೆ. ಪರಮ್ಮ ಮತ್ತು ಬಾಳ್ಯಾರ ಪ್ರೇರಣೆಯಿಂದ ಅನಿವಾರ್ಯಕ್ಕೆ ತಲೆಬಾಗಿ ಗಂಗಿ, ಸಂಗ್ಯಾನೊಂದಿಗೆ ಹಾದರಕ್ಕಿಳಿಯುತ್ತಾಳೆ. ಸಂಗ್ಯಾನೊಂದಿಗೆ ಬೆರತು ಸುಖ ಪಡುತ್ತಾಳೆ. ಸಂಗ್ಯಾ ಗಂಗಿಯ ಮನೆಗೆ ಬಂದಾಗ ಅವನನ್ನು ಸತ್ಕರಿಸುತ್ತಾಳೆ. ತನ್ನ ಪ್ರೀತಿಯನ್ನು ವಿವಿಧವಾಗಿ ತೋರಿಸುತ್ತಾಳೆ. ಆಗ ಬರುವ ಪ್ರತಿಮೆಗಳು.

ಹಾಲೀಗಿ ಹಾಕಿ ಧಾಂಗ ಹೆಪ್ಪಾ |
ಕಣ್ಣೀಗಿ ಹತ್ತಿಧಾಂಗ ಜಂಪಾ |
ಹವಳಾ ಮುತ್ತ ಜೋಡಿಲೆ ಕೂಡಿಸಿಧಾಂಗ |

ಎನ್ನುವಲ್ಲಿ ಬದುಕಿನ ಶೃಂಗಾರ, ಪ್ರಣಯದ ತೀವ್ರತೆಯ ಅನುಭವವನ್ನು ಹಿಡಿಯುತ್ತವೆ. ಇಂತಹ ಶಬ್ದಚಿತ್ರಗಳಿಂದ ಹೊಸ ಅರ್ಥವಂತಿಕೆ ಹೊಳೆಯುತ್ತದೆ. ಈ ಗೀತರೂಪಕವನ್ನು ಪ್ರಾರಂಭದಿಂದ ಕೊನೆಯ ತನಕ ನೋಡಿದಾಗ ಅಲಂಕಾರ ಮತ್ತು ಪ್ರತಿಮೆಗಳ ಮೂಲಕ ಮಾತನಾಡಿದಂತೆ ಭಾಸವಾಗುತ್ತದೆ. ಈ ರೂಪಕದಲ್ಲಿ ಹಾಸ್ಯ, ಶೃಂಗಾರ ಮತ್ತು ರೌದ್ರ ಈ ಮೂರು ರಸಗಳು ಪ್ರಮುಖವಾಗಿ ಬಂದಿವೆ. ಮುದುಕ ಮುದುಕಿಯರ ಸಂವಾದ, ಗುಡಿಯಲ್ಲಿ ಪರಮ್ಮ, ಗಂಗಾ ಮತ್ತು ಪೂಜಾರಿಯ ಸಂವಾದದಲ್ಲಿ ಹಾಸ್ಯ, ವಿಡಂಬನೆ ಕಂಡುಬಂದರೆ, ಸಂಗ್ಯಾ ಗಂಗಾರ ಸರಸದಲ್ಲಿ ಶೃಂಗಾರ ಹೆಪ್ಪುಗಟ್ಟಿದೆ. ಈರ್ಯಾ, ಇರಪಕ್ಷಿ, ಬಸವಂತರು ಸೇರಿ ಸಂಗ್ಯಾನ ಕೊಲೆ ಮಾಡುವ ಸನ್ನಿವೇಶ, ರೌದ್ರಕ್ಕೆ ಉತ್ತಮ ಉದಾಹರಣೆ ಯಾಗಿದೆ.

ಸಂಗ್ಯಾ ಬಾಳ್ಯಾದಲ್ಲಿ ಬಳಕೆಯಾದ ಶೈಲಿ ದೇಶಿ ಶೈಲಿ ಅಥವಾ ಜಾನಪದ ಶೈಲಿ. ಅದು ಸರಳ ಮತ್ತು ನೇರವಾಗಿದೆ. ಅನಾವಶ್ಯಕವಾದ ವರ್ಣನೆಗಳಾಗಲಿ, ಉಪಕಥೆಗಳಾಗಲಿ ಇಲ್ಲವೆಂದೇ ಹೇಳಬೇಕು. ಮುದುಕ ಮುದಿಕಿಯರ ಸರಸ ಸಂಭಾಷಣೆಯನ್ನು ಗಮನಿಸಿದಾಗ ಅಂತಹ ಸನ್ನಿವೇಶಕ್ಕೆ ತಕ್ಕಂತೆ ಸ್ವತಂತ್ರ ಸೃಷ್ಟಿಗಳೇ ಆಗಿವೆ. ಈ ಗೀತರೂಪಕದ ಉದ್ದಕ್ಕೂ ಶಿಷ್ಟ ಭಾಷೆ ಕಡಿಮೆಯಾಗಿ ಪ್ರಾದೇಶಿಕವಾದ ಸರಳ ರಚನೆಗಳು ಸಮರ್ಪಕವಾಗಿ ಮೂಡಿ ಬಂದಿವೆ. ಸಂಗ್ಯಾ ಬಾಳ್ಯಾ ಇಬ್ಬರು ಬಹಳ ದಿವಸಗಳ ನಂತರ ಒಬ್ಬರನ್ನೊಬ್ಬರು ಕಂಡಾಗ ಸಂಗ್ಯಾ ಬಾಳ್ಯಾನನ್ನು ನೋಡಿ

ನಿನ್ನ ಮಾರಿ ನೋಡಿ ಆತೆ ಎಂಟ ದಿನಾ
ಹಾ ಮಿತ್ರಾ | ಬ್ಯಾಸರಾದಾವೊ ಗೆಳೆತನಾ |
ಕೊಳ ನೀರ್ ಸಿವಿ ಹತ್ತಿಲ್ಲೊ
ನಿನ್ನ | ಮಾರಿ ಮಖಾ ಯಾಕ ಬಾಡ್ಯಾವೊ |

ಇಂತಹ ಸಂಭಾಷಣೆ, ಸನ್ನಿವೇಶಗಳಲ್ಲಿ ಕ್ಲಿಷ್ಟ ಪದಗಳಿಲ್ಲ ಅರ್ಥ ಮಾಡಿಕೊಳ್ಳಲಿಕ್ಕೆ ಯಾವ ತೊಡಕೂ ಇಲ್ಲ. ಆಯಾ ಸನ್ನಿವೇಶದ ವಸ್ತು, ಘಟನೆ, ದೃಶ್ಯ ನಮ್ಮ ಮುಂದೆ ನಿಲ್ಲುವಂತೆ ಮಾಡಬಲ್ಲ ವಾಸ್ತವ ನಿರೂಪಣೆಗಳಿವು. ಸಂಭಾಷಣೆಯೂ ಭಾವಪೂರ್ಣವಾಗಿ, ನಿರರ್ಗಳವಾಗಿ ಸಾಗುತ್ತದೆ. ವಾಸ್ತವಿಕ ಜೀವನವನ್ನು ಪ್ರತಿಬಿಂಬಿಸುವಂತಹ ಈ ಗೀತರೂಪಕ ಆಡುಮಾತಿನ ಶೈಲಿಯಿಂದ ನಾಟಕ ಎನಿಸದೆ, ಜೀವನದಲ್ಲಿ ನಡೆಯುತ್ತಿರುವ ಸಂಗತಿಯಾಗಿ ನಮ್ಮ ಕಣ್ಮುಂದೆ ನಿಲ್ಲುತ್ತದೆ. ಜಾನಪದ ಗೀತನಾಟಕಗಳಲ್ಲಿ ಕಂಡುಬರುವ ಶೈಲಿಯ ಮುಖ್ಯಲಕ್ಷಣಗಳು ಸಂಗ್ಯಾಬಾಳ್ಯಾದಲ್ಲಿ ಹಸಿಯಾಗಿ ಕಂಡುಬರುತ್ತವೆ. ದೇಸಿಯ ಛಂದಸ್ಸಿನ ಕಕ್ಷೆಯಲ್ಲಿ ಈ ಜಾನಪದ ರೂಪಕದ ಗೀತೆಗಳು ಅಭಿವ್ಯಕ್ತಗೊಂಡಿವೆ.

ಸಂಗ್ಯಾಬಾಳ್ಯಾ ಆಡುನುಡಿಯ ಮೂಲಕ ಸಾಗುವುದರಿಂದ ಪ್ರಾದೇಶಿಕ ವೈವಿಧ್ಯತೆಯ ಶಬ್ದಗಳು ನಾಟಕದ ಉದ್ದಕ್ಕೂ ದೊರೆಯುತ್ತವೆ ಎಂಬುದರ ಬಗ್ಗೆ ಬೇರೆ ಹೇಳಬೇಕಾಗಿಲ್ಲ ಕೆಲವೊಂದನ್ನು ಇಲ್ಲಿ ಕೊಡಲಾಗಿದೆ.

ಅಗಳಿ, ಅನ್ನ, ಎಕಸಾರ, ಒಗತಾನ, ಎತ್ತರ, ಒಲ್ಲಿ,
ಕಸರ, ಕಸಾರಕಿ, ಕುವ್ವತ್ತ, ಕೊಲ್ಲರಿ, ಖುದ್ದ, ಕುಸಿ,
ಗುಲ್ಲ, ಗೊಂಡೆ, ಜಲಮು, ಜೌಲ, ತಂಗಳ, ತರಬ,
ತಾಕೀತ, ತುಡುಗ, ದರಕಾರ, ದಿಗರ, ಧನೇರ, ತಿಪಿ
ನಸಕ್, ಸದರ, ನಿಗಧಿ, ನಿವಳ, ಪಡಿಕಿ, ಪರಸಾದ, ಪಾವಡ,
ಬಡಿವಾರ, ಬುಗುಡಿ, ಬಿರಸ, ಬೇತ, ಭಂಡ್, ಭರೋಸ್,
ಮಸಲತ್ತ, ಮಾರಿ, ಮ್ಯಾರಿ, ಮುಕ್ಕ, ಮೂಲ, ಯುಗತಿ,
ರೊಕ್ಕ, ಲಗು, ಲಂಗೋಟಿ, ವೆಸನ, ಸಕನಾ. ಸಮೆ. ಸರಿಗಿ,
ಸುಮ್ನ, ಸಾಜಿ, ಹರ್‍ಯಾಗ, ಸುಸ್ತ, ಹ್ವಾರೆ

ಮುಂತಾದ ಅನೇಕ ಶಬ್ದಗಳು ಸಹಜವಾಗಿ ಬಳಕೆಯಾಗವೆ. ಪಾತ್ರಗಳು ಇಂತಹ ಪದಗಳನ್ನು ಬಳಸುವುದರಿಂದ ಪ್ರೇಕ್ಷಕರಿಗೆ ಹೆಚ್ಚು ಹತ್ತಿರವಾಗಿವೆ. ನಾಟಕಕಾರ ಪ್ರಾದೇಶಿಕ ಪ್ರಭೇದವನ್ನು ಬಳಸುವುದರ ಮೂಲಕ ಭಾಷಾ ಸಂಕೀರ್ಣತೆಯನ್ನು ದೂರಮಾಡಿ ಹೆಚ್ಚು ಘನವಾಗುವ ವಿಚಾರಗಳನ್ನು ದ್ರವ್ಯರೂಪಗೊಳಿಸಿ(ತಿಳಿಗೊಳಿಸಿ) ನಿಚ್ಚಳವಾಗಿ ಕಥೆಯ ಆಶಯ ಜನರಿಗೆ ಸುಲಭವಾಗಿ ಅರ್ಥವಾಗುವಂತೆ ಮಾಡುತ್ತಾನೆ. ಇದು ನಾಟಕಗಳಲ್ಲಿ ಪ್ರಾದೇಶಿಕ ಶಬ್ದಗಳ ಬಳಕೆಯ ಮಹತ್ವವನ್ನು ತಿಳಿಸುತ್ತದೆ.

ಈ ಗೀತರೂಪಕದ ಕಾವ್ಯಭಾಷೆಯಲ್ಲಿ ಆಡುನುಡಿಯ ಜೊತೆಗೆ ಅಗಾಗ ಶಿಷ್ಟ ಭಾಷೆಯೂ ಬಳಕೆಯಾಗಿದೆ. ಇಂತಹ ಸಂದರ್ಭಗಳು ತುಂಬ ಕಡಿಮೆ. ಇಲ್ಲಿ ಪಾತ್ರಗಳ ಸ್ವಭಾಷೆ ಮತ್ತು ನಟಕದ ಭಾಷೆ ಎರಡರಲ್ಲಿಯೂ ಬಹುಮಟ್ಟಿಗೆ ಸಾಮ್ಯತೆ ಇದೆ. ಅಂದರೆ ಜನಪದಭಾಷೆ, ರಂಗಭೂಮಿಯನ್ನೇರಿದರೂ ಅದು ಶಿಷ್ಟ ಭಾಷೆಯಾಗಲಾರದು ಎಂಬುದನ್ನು ಇಲ್ಲಿ ಗಮನಿಸಬೇಕು. ಉತ್ತರ ಕರ್ನಾಟಕದ ಆಡುನುಡಿಯಲ್ಲಿ ಕಂಡುಬರುವ ಭೂತಕಾಲ ರೂಪಗಳ ಮುಂದೆ ಕ್ಯಾಸ, ಕಾರ್‍ಯ ಪ್ರತ್ಯಯಗಳು ಹತ್ತಿವೆ.

- ಹೋಗಿ ಕ್ಯಾಸ್ ಕೇಳಿಬಾರೊ ಆಕಿ ಮನದಾನ ಮಾತಾ
  ಹಿಂತಾ ಅನ್ನೆದ ಮಾತಾ ಆಡಿ ಕ್ಯಾರಿ ಹಾಳಾಗಿ ಹ್ವಾದಿ ನೀನಾ
- ಇವಳ ಕಾಲಮೇಳ ಮಾಡಿ ಕ್ಯಾರಿ ತೂಗ ಹಾಕುವ ಗಿಡಕ
  ಈಗಿಂದೀಗ ಕಡದ ಕ್ಯಾರಿ ಚೆಲ್ಲುವೆ ಬಾವ್ಯಾಗ

ಕ್ಯಾಸ, ಕ್ಯಾರ ರೂಪಗಳು ಸ್ವಚ್ಛಂದ ಪರಿವರ್ತನೆಯಲ್ಲಿ ಬಳಕೆಯಾಗಿವೆ. ಅವುಗಳ ಅರ್ಥ 'ಮಾಡಿ (ಮುಗಿಸಿ) ಬಂದೆ' ಎಂದಾಗಿದೆ.

ಸಂಗ್ಯಾಬಾಳ್ಯಾದ ಹಾಡುಗಳಲ್ಲಿ ವಾಕ್ಯಗಳು ಚಿಕ್ಕ ಚಿಕ್ಕವಾಗಿದ್ದು ಆಡುಮಾತಿಗೆ ಹತ್ತಿರವಾಗಿವೆ. ವಾಕ್ಯಗಳ ಕರ್ತೃ, ಕರ್ಮ, ಕ್ರಿಯಾಪದಗಳಿಗಿರುವ ಕ್ರಮ ಬದಲಾವಣೆಯಾಗುವುದರ ಮೂಲಕ ಪಾತ್ರಧಾರಿಗಳು ಪ್ರೇಕ್ಷಕರ ಮೇಲೆ ಹೆಚ್ಚು ಪ್ರಭಾವ ಬೀರುತ್ತಾರೆ. ವಾಕ್ಯಗಳಲ್ಲಿ ಅರ್ಥಕ್ಕೆ ಹೆಚ್ಚಿನ ಪ್ರಾಧಾನ್ಯತೆ ಇದೆ.

‘ಆಡೋಣ ಬಾ ಬಾಳ್ಯಾ | ಜೋಡಿಲೆ ಗೆಳೆಯರ |’

‘ಕೇಳಬೇಕಂದ್ರ ಒಣ್ಯಾಗ ಯಾರ್ಯಾರ್ ಇಲ್ಲ |’

‘ಹೋಗಬ್ಯಾಡ ಮುದಿಕಿ ತಂಡಿ ತಾಳಾಣಿಲ್ಲ |’

ಸಣ್ಣಾಟಗಳ ಭಾಷಾ ಬಳಕೆಗೆ ಸಂಗ್ಯಾಬಾಳ್ಯಾದ ವಾಕ್ಯಗಳು ಮಾದರಿಯಾಗುತ್ತವೆ. ಸನ್ನಿವೇಶದ ಜೀವಂತಿಕೆಯ ದೃಷ್ಟಿಯಿಂದಲೂ ಇವು ಮುಖ್ಯವಾಗುತ್ತವೆ.

ಈ ಜಾನಪದ ರೂಪಕದಲ್ಲಿ ಏಳು ಪ್ರಮುಖ ಪಾತ್ರಗಳಿವೆ. ಸಂಗ್ಯಾ ಬಾಳ್ಯಾ, ಈರ್ಯಾ, ಇರಪಕ್ಷಿ, ಬಸವಂತ, ಪೂಜಾರಿ ಎನ್ನುವ ಆರು ಪುರುಷ ಪಾತ್ರಗಳು, ಪರಮ್ಮ, ಗಂಗಿ ಎಂಬ ಎರಡು ಸ್ತ್ರೀ ಪಾತ್ರಗಳಿವೆ. ಪಾತ್ರಗಳು ಆಯಾ ಸಂದರ್ಭಕ್ಕೆ ಅವರನ್ನು ಸಂಬೋಧಿಸುವ ವಿಧಾನದಲ್ಲಿಯೂ ಬದಲಾವಣೆ ಕಂಡುಬರುತ್ತದೆ.

ಸಂಗಪ್ಪ > ಸಂಗಣ್ಣ > ಸಂಗ > ಸಂಗ್ಯಾ

ಬಾಳಪ್ಪ > ಬಾಳಣ್ಣ > ಬಾಳ್ಯಾ

ಈರಪ್ಪ > ಈರಣ್ಣ > ಈರ > ಈರ್ಯಾ

ಗಂಗಾ > ಗಂಗಿ

ಪರಮ್ಮ, ಇರಪಕ್ಷಿ, ಬಸವಂತ

ಈ ಎಲ್ಲ ವ್ಯಕ್ತಿನಾಮಗಳನ್ನು ಬಳಸುವವನಿಗೂ, ಆಯಾವ್ಯಕ್ತಿಗಳಿಗೂ ಇರುವ ಸಂಬಂಧ ತಿಳಿದುಬರುತ್ತದೆ. ಉದಾ. ಮೇಲು, ಕೀಳು, ಆತ್ಮೀಯತೆ, ಇವೆಲ್ಲವು ಗಮನಾರ್ಹವಾಗಿರುತ್ತವೆ. ಬಾಳ್ಯಾ ಕೀಳಾಗಿ, ಬಾಳಣ್ಣ ಸ್ನೇ ಆತ್ಮೀಯತೆ, ಬಾಳಪ್ಪ ಹೆಮ್ಮೆಪಡುವಂತಹ ಸನ್ನಿವೇಶ, ಸಭ್ಯತೆ ಅವು ಒಂದು ರೀತಿಯಲ್ಲಿ ಸಾಮಾಜಿಕ ಸ್ಥಾನಮಾನದ ಸೂಚಕಗಳಾಗಿರುತ್ತವೆ. ನಾಟಕದಲ್ಲಿ ಪಾತ್ರಧಾರಿಗಳ ಆಯಪ್ರಾವನ್ನುದ್ದೇಶಿಸಿ ಮಾತನಾಡುವಾಗ, ಆಯಾವ್ಯಕ್ತಿಗಳನ್ನು ಕರೆಯುವಾಗ ಅವರ ಬಗ್ಗೆ ಪ್ರೇಕ್ಷಕರ ಮನೋಧೋರಣೆಯೂ ಬದಲಾಗುತ್ತದೆ. ಆಯಾ ವ್ಯಕ್ತಿಗಳನ್ನು ಸಂಬೋಧಿಸುವಾಗ ಹೆಚ್ಚು ಒತ್ತು ಕೊಟ್ಟು, ದೀರ್ಘವಾಗಿ ಉಚ್ಚರಿಸುತಾರೆ. ಈ ರೀತಿಯ ಉಚ್ಚಾರಣೆ ನಾಟಕೀಯವಾಗಿರದೆ ತುಂಬ ಸಹಜವಾಗಿರುತ್ತದೆ. ನಾಟಕದಲ್ಲಿ ಆಗ ಮೇಲ್ಮನಿ ಸಂಗ್ಯಾ, ಹುರಕಡ್ಲಿ ಬಾಳ್ಯಾ, ಲಗಳೇರ ಈರ್ಯಾ ಎಂದು ಬಳಕೆಯಾಗುತ್ತವೆ. ಮೇಲ್ಮನಿ, ಹುರಕಡ್ಲಿ, ಲಗಳಿ ಇವು ಅಡ್ಡಹೆಸರುಗಳಾಗಿ ಕಾಣಿಸಿಕೊಳ್ಳುತ್ತವೆ.

ಸಂಗ್ಯಾಬಾಳ್ಯಾದ ಪಾತ್ರಗಳ ಸಂಬಂಧವನ್ನು ಮೂರು ಗುಂಪುಗಳಲ್ಲಿ ವರ್ಗೀಕರಿಸಬಹುದು.

ಅ. ಗಂಡ-ಹೆಂಡತಿ-ತಮ್ಮಂದಿರರು
ಈರ್ಯಾ-ಗಂಗಾ-ಇರಪಕ್ಷಿ-ಬಸವಂತ

ಆ. ಗೆಳೆಯರು-ಅತ್ತಿ
ಸಂಗ್ಯಾ-ಬಾಳ್ಯಾ-ಪರಮ್ಮ

೩. ಮಿಂಡ-ರಂಡಿ

ಸಂಗ್ಯಾ-ಗಂಗಾ

ಮೊದಲನೆಯ ಗುಂಪಿನಲ್ಲಿ ಗಂಗಿಯ ಕೌಟುಂಬಿಕ ಸಂಬಂಧವಿದೆ. ಅಲ್ಲಿ ಗಂಗಿಯ ಪಾತ್ರ ಗರತಿಯಂತಿದೆ. ಆಕಿ ಸಂಗ್ಯಾನ ಕೂಡ ಹಾದರ ಮಾಡಿ ಕೌಟುಂಬಿಕ ಸಂಬಂಧದಿಂದ ಕಳಚಿ ಅಪರಾಧಿಯಾಗಿ ಸಂಪೂರ್ಣ ದುರಂತದ ದೆಸೆ ಹೊಂದುತ್ತಾಳೆ. ಜನರಿಂದ, ಗಂಡ ಮೈದುನರಿಂದ 'ರಂಡಿ' ಎಂದು ಕರೆಯಲ್ಪಡುತ್ತಾಳೆ. ಸಂಬಂಧವಾಚಿಗಳು ಆಯಾವ್ಯಕ್ತಿಗಳ ನೇರ ಸಂಬಂಧವನ್ನು ಸೂಚಿಸುತ್ತವೆ.

ಸಂಗ್ಯಾಬಾಳ್ಯಾ ಗೀತರೂಪಕದ ಸೌಂದರ್ಯ ವ್ಯಕ್ತವಾಗುವುದು ಅದು ಹಾಡಾಗಿ ಹರಿದಾಗ ಆ ಗೀತರೂಪಕದ ಭಾಷೆ, ಸಂಗೀತ ಭಾಷೆ. ಅಲ್ಲಿ ಬಳಕೆಯಾಗುವ ಸಂಗೀತ, ಜನಪದ ಸಂಗೀತ. ಈ ರೂಪಕದ ಸಂಗೀತದಲ್ಲಿ ಕುಣಿತ, ಹಾಡುವಿಕೆ ಮತ್ತು ಬಾರಿಸುವಿಕೆ ಇವು ಒಳಗೊಳ್ಳುತ್ತವೆ. ಇಲ್ಲಿಯ ಹಾಡುಗಳನ್ನು ಹಾಡುವಾಗ ದಪ್ಪು, ತಾಳಗಳ ಬಳಕೆ ಪ್ರಮುಖ ವಾಗಿದೆ. ಇಲ್ಲಿ ಸರಳವಾದ ಐದು ಆರು ಧಾಟಿಗಳಿರುತ್ತವೆ. ಅವುಗಳೇ ಪುನರಾವರ್ತನೆ ಗೊಳ್ಳುತ್ತಿರುತ್ತವೆ. ಹಾಡುಗಳ ಪ್ರಾರಂಭ ಮತ್ತು ಮುಕ್ತಾಯಗಳಲ್ಲಿ ರಭಸ ಹೆಚ್ಚು. ಸಂಗೀತ ವನ್ನು ಹೊರತಾಗಿಸಿ ಈ ಆಟವನ್ನು ನೋಡಿದರೆ ಅದು ಬಹುನೀರಸವೆನಿಸುತ್ತದೆ. ಆದರೆ ಸಂಗೀತದೊಂದಿಗೆ ರಂಗಭೂಮಿಯ ಮೇಲೆ ಪ್ರದರ್ಶನಗೊಂಡಾಗ ಒಂದು ಹೊಸ ರಸಪ್ರಪಂಚವನ್ನು ಸೃಷ್ಟಿಸುತ್ತದೆ. ಸಂವಹನ ಕ್ರಿಯೆ ಬಹುಸಮರ್ಥವಾಗಿ ನಡೆಯುತ್ತದೆ.

ಮೇಲಿನ ಅಂಶಗಳನ್ನು ಗಮನಿಸಿದಾಗ ಸಂಗ್ಯಾಬಾಳ್ಯಾ ಕನ್ನಡ ಸಣ್ಣಾಟಗಳ ಪಂಕ್ತಿಯಲ್ಲಿ ಮಹತ್ವದ ಸ್ಥಾನವನ್ನು ಪಡೆದಿದೆ ಎನ್ನುವುದರ ಬಗ್ಗೆ ಸಂದೇಹವಿಲ್ಲ. ಇಲ್ಲಿಯವರೆಗೆ ಈ ಗೀತರೂಪಕದ ಭಾಷಾಸ್ವರೂಪವನ್ನು, ಭಾಷಾ ಬಳಕೆಯ ರೀತಿಯನ್ನು ಸ್ಥೂಲವಾಗಿ ಪರಿಚಯ ಮಾಡಿಕೊಡಲು ಪ್ರಯತ್ನಿಸಲಾಗಿದೆ. ಈ ಗೀತರೂಪಕವನ್ನು ರಂಗಪ್ರಯೋಗದಲ್ಲಿ ನೋಡಿ ಅದರ ಅಭ್ಯಾಸ ಮೂಲಕ ಭಾಷಾ ವೈಶಿಷ್ಟ್ಯಗಳ ಜೊತೆಗೆ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಅರಿಯ ಬಹುದಾಗಿದೆ.

ಆಕರಗ್ರಂಥಗಳು

೧. ಅಂಗಡಿ ಎಸ್.ಎಸ್., ೨೦೧೭, ಕನ್ನಡ ಜನಪದ ಸಾಹಿತ್ಯ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

೨. ಸಂಗ್ಯಾ-ಬಾಳ್ಯಾ, ೧೯೬೬, (ಸಂ.) ಕೀರ್ತಿನಾಥ ಕುರ್ತಕೋಟಿ, ಚಂದ್ರಶೇಖರ ಕಂಬಾರ, ಮನೋಹರ ಗ್ರಂಥಮಾಲೆ. ಧಾರವಾಡ.

೧೩

ತೀ.ನಂ.ಶ್ರೀ. : ಭಾಷಿಕ ಚಿಂತನೆಗಳು

ಆಧುನಿಕ ಭಾಷಾವಿಜ್ಞಾನದ ದೃಷ್ಟಿಯಿಂದ ಕನ್ನಡವನ್ನು ಮೊದಲು ನಡೆಸಿದ ಶ್ರೇಯಸ್ಸು ತೀ.ನಂ.ಶ್ರೀ. ಅವರಿಗೆ ಸಲುತ್ತದೆ. ಕರ್ನಾಟಕದಲ್ಲಿ ಭಾಷಾವಿಜ್ಞಾನ ಮಾರ್ಗವನ್ನು ತೆರೆದ ಪ್ರಥಮರಲ್ಲಿ ತೀ.ನಂ.ಶ್ರೀ. ಅವರು ಪ್ರಮುಖರು. ಅದರ ಬೆಳವಣಿಗೆಯ ಹೊಣೆಯನ್ನು ಕೆಲವು ಕಾಲ ಅವರೊಬ್ಬರೆ ಹೊತ್ತು ನಡೆದರೆಂಬುದು ಐತಿಹಾಸಿಕ ಸತ್ಯ. ದ್ರಾವಿಡ ಭಾಷಾವಲಯಗಳಲ್ಲಿ ಭಾಷಾವಿಜ್ಞಾನವನ್ನು ನಿರಂತರ ಪ್ರತಿನಿಧಿಸಿದ ಕನ್ನಡಿಗರಲ್ಲಿ ತೀ.ನಂ.ಶ್ರೀ. ಅವರು ಮೊದಲಿಗರೆಂಬುದು ಗಮನಿಸಬೇಕಾದ ಸಂಗತಿ.

ಭಾಷಾಧ್ಯಯನ ಆರಂಭದಲ್ಲಿ ವ್ಯಾಕರಣವಾಗಿ ನಂತರ ಭಾಷಾಶಾಸ್ತ್ರವಾಗಿ ಆಧುನಿಕ ಕಾಲದಲ್ಲಿ ಭಾಷಾವಿಜ್ಞಾನವಾಗಿ ಪರಿವರ್ತಿತವಾಗಿದೆ. ಹಿಂದಿನ ಭಾಷಾಭ್ಯಾಸದ ರೀತಿಗೂ ಇಂದಿನ ರೀತಿಗೂ ಅನೇಕ ಮೂಲಭೂತ ವ್ಯತ್ಯಾಸಗಳನ್ನು ಕಾಣುತ್ತೇವೆ. ವ್ಯಾಕರಣ ಅಧ್ಯಯನ ನಿಗಮನ ರೀತಿಯದು. ಭಾಷಾವಿಜ್ಞಾನ ಅಧ್ಯಯನ ಅನುಗಮನ ರೀತಿಯದು. ವ್ಯಾಕರಣ ಅಧ್ಯಯನವು ನಿಯಮಗಳನ್ನು ನೀಡಿ ಅವುಗಳಿಗೆ ಅನುಗುಣವಾಗಿ ಉದಾಹರಣೆಗಳನ್ನು ನೀಡುತ್ತದೆ. ಭಾಷಾವಿಜ್ಞಾನ ಅಧ್ಯಯನವು ಸಂಗ್ರಹಿಸಿದ ದತ್ತದ ಆಧಾರದಿಂದ ನಿಯಮಗಳನ್ನು ನೀಡುತ್ತದೆ. ಭಾಷಾವಿಜ್ಞಾನಿ, ಭಾಷೆ ಹೇಗಿರಬೇಕು ಎಂದು ಹೇಳುವುದಿಲ್ಲ; ಭಾಷೆ ಹೇಗಿದೆ ಎಂದು ವಿವರಿಸುತ್ತಾನೆ. ಪರಂಪರಾಗತ ವ್ಯಾಕರಣಕಾರರು ಲಿಖಿತ ರೂಪಗಳಿಗೆ ಹೆಚ್ಚು ಮಹತ್ವ ಕೊಡುತ್ತಿದ್ದರು. ಆಧುನಿಕ ಭಾಷಾವಿಜ್ಞಾನಿಗಳು ಆಡುಮಾತಿಗೆ ಪ್ರಾಶಸ್ತ್ಯ ನೀಡುತ್ತಾರೆ. ಬರೆಹ, ಮಾತಿನ ಪ್ರತಿಬಿಂಬ ಎಂಬುದನ್ನು ಅವರು ಅರಿತಿದ್ದಾರೆ. ಭಾಷೆ ಬದಲಾಗುವ ಪ್ರಕ್ರಿಯೆ ಎಂಬುದನ್ನು ತಿಳಿದು ಭಾಷೆಯ ವಿವಿಧ ರೀತಿಗಳನ್ನು ಅಭ್ಯಸಿಸುತ್ತಾರೆ. ಭಾಷೆಯ ಆಂತರಿಕ ರಚನೆಯ ಶೋಧವು ಭಾಷಾವಿಜ್ಞಾನಿಗೆ ಮುಖ್ಯವಾದುದಾಗಿದೆ.

ಕರ್ನಾಟಕದ ಪ್ರಥಮ ಭಾಷಾವಿಜ್ಞಾನಿಯಾದ ತೀ.ನಂ.ಶ್ರೀ. ಅವರಿಗೆ, ಕರ್ನಾಟಕದಲ್ಲಿ ಭಾಷಾವಿಜ್ಞಾನದ ಅಧ್ಯಯನಕ್ಕೆ ಅಡಿರಚನೆ ಹಾಕುವ ಸಂದರ್ಭದಲ್ಲಿ ಅವರು ಸಹಜವಾಗಿ ಆಗ ಹೆಚ್ಚು ಪ್ರಚುರವಾಗಿದ್ದ ವರ್ಣನಾತ್ಮಕ ಮತ್ತು ಐತಿಹಾಸಿಕ ಭಾಷಾವಿಜ್ಞಾನ ಅಧ್ಯಯನ ವಿಧಾನಗಳಿಗೆ ಒಲವು ತೋರಿಸಿದರು. ಒಂದು ಕಾಲದ ಒಂದು ಪ್ರದೇಶದ ಭಾಷೆಯ ರಚನೆಯನ್ನು ನೀಡುವುದು, ಭಾಷೆಯ ಐತಿಹಾಸಿಕ ಮೆಟ್ಟಲುಗಳನ್ನು ಗುರುತಿಸುತ್ತ ಅದರ ಇತಿಹಾಸವನ್ನು ಶೋಧಿಸುವುದು, ಅದು ಪರಿವರ್ತನೆಗೊಳಗಾಗಿ ನಡೆದು ಬಂದ ರೀತಿಯನ್ನು ವಿವರಿಸುವುದು, ಆಧುನಿಕ ಮತ್ತು ಪ್ರಸ್ತುತ ಚೌಕಟ್ಟಿನಲ್ಲಿ ಕನ್ನಡವನ್ನು ಇರಿಸಿ ನೋಡುವುದು ತೀ.ನಂ.ಶ್ರೀ. ಅವರಿಗೆ ಮುಖ್ಯವಾಗುತ್ತದೆ. ಜೊತೆಗೆ ಕನ್ನಡ ನಿದರ್ಶನಗಳಿಂದ ತಮ್ಮ ಕಾಲದ ಭಾಷಾವಿಜ್ಞಾನ ವಾಗ್ವಾದಗಳಿಗೆ ಅವರು ಹೊಸ ಎಳೆಗಳನ್ನು ಸೇರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ತೀ.ನಂ.ಶ್ರೀ. ಅವರ ಬರೆಹಗಳನ್ನು ಗಮನಿಸಬೇಕಾಗಿದೆ.

'ಭಾಷೆ' ಎರಡು ಅಂಶಗಳನ್ನು ಒಳಗೊಂಡಿದೆ. ಒಂದು ಬಾಹ್ಯರೂಪ, ಇನ್ನೊಂದು ಅಂತಃರೂಪ. ಅಂದರೆ ಒಂದು ಶಬ್ದ, ಧ್ವನಿಗಳನ್ನು ಹೊಂದಿ ಬಾಹ್ಯರೂಪವನ್ನು ಸಂಪಾದಿಸಿಕೊಂಡಂತೆ ಅರ್ಥವನ್ನು ಒಳಗೊಂಡು ಅಂತಃರೂಪವನ್ನು ಪಡೆಯುತ್ತದೆ. ಈ ಎರಡು ಅಂಶಗಳು ಭಾಷೆಯ ಧ್ವನಿ. ಧ್ವನಿಮಾ, ಆಕೃತಿಮಾ. ವಾಕ್ಯ ಈ ಘಟಕಗಳಿಗೆ ಕಾರಣವಾಗುತ್ತದೆ. ಇವುಗಳಲ್ಲಿ ತೀ.ನಂ.ಶ್ರೀ. ಅವರು ಕನ್ನಡ ಭಾಷೆಯ ಧ್ವನಿಗಳ ರಚನೆಯನ್ನು ಕುರಿತು ಮತ್ತು ಭಾಷಾ ಧ್ವನಿಗಳ ಚಲನಶೀಲತೆಯನ್ನು ಕುರಿತು ತಮ್ಮ ಚಿಂತನೆಗಳನ್ನು ಮಂಡಿಸಿದ್ದಾರೆ. ಧ್ವನಿಶಾಸ್ತ್ರ ಮತ್ತು ಧ್ವನಿಮಾಶಾಸ್ತ್ರ ಈ ಅಧ್ಯಯನ ಕ್ಷೇತ್ರಗಳಿಗೆ ತೀ.ನಂ.ಶ್ರೀ. ಅವರ ಕಾಣಿಕೆ ಅಮೂಲ್ಯವಾಗಿದೆ. ಅವರ ಭಾಷಾಧ್ಯಯನದ ಅನನ್ಯತೆಯನ್ನು ಕುರಿತು ಈ ಸಂಪ್ರಬಂಧದಲ್ಲಿ ವಿವೇಚಿಸಲಾಗಿದೆ.

ತೀ.ನಂ.ಶ್ರೀ. ಅವರ ಮೊದಲ ಭಾಷಾವಿಜ್ಞಾನ ಸಂಪ್ರಬಂಧ 'The Mutation of i,u,e and o in Kannada' ಈ ಸಂಪ್ರಬಂಧದಲ್ಲಿ ಕನ್ನಡದಲ್ಲಿ ಇ>ಎ, ಉ>ಒ ಸ್ವರ ಪರಿವರ್ತನೆಯ ಪ್ರಕ್ರಿಯೆ ವೈಶಿಷ್ಟ್ಯಪೂರ್ಣವಾಗಿದೆ. ಉಚ್ಚಾರದಲ್ಲಿ ಒಂದು ಸ್ವರ ಇನ್ನೊಂದು ಸ್ವರದ ಮೇಲೆ ಪ್ರಭಾವ ಬೀರಿ ಪರಿವರ್ತನೆಗೆ ಕಾರಣವಾಗುತ್ತದೆ. ಶಬ್ದಾದಿಯ ಅಕ್ಷರದಲ್ಲಿರುವ 'ಇ' ಹಾಗೂ 'ಉ' ಸ್ವರಗಳು ವಿಶಿಷ್ಟ ಪರಿಸರದಲ್ಲಿ 'ಎ' ಹಾಗೂ 'ಒ'ಗಳಾಗಿ ಪರಿವರ್ತನೆಗಂಬಡಿವೆ. ಉದಾ. ಹಳಗನ್ನಡದ ಕಿಡು-ಕೆಡು, ಕುಡು-ಕೊಡು. ಈ ಪ್ರಕ್ರಿಯೆ ನಡೆಯಲು ನಿರ್ದಿಷ್ಟ ಕಾರಣಗಳು ಯಾವುವು? ಎಂಬ ಬಗೆಗೆ ಖಚಿತವಾಗಿ ಹೇಳಲು ಇನ್ನೂ ಸಾಧ್ಯವಾಗಿಲ್ಲವಾದರೂ ತೀ.ನಂ.ಶ್ರೀ. ಅವರು ಆ ಧ್ವನಿ ಪರಿವರ್ತನೆಯ ಸ್ವರೂಪವನ್ನು ಕುರಿತು ಸಾಕಷ್ಟು ವಿವರವಾಗಿ ಚರ್ಚಿಸಿದ್ದಾರೆ. ಕನ್ನಡದಲ್ಲಿ ಧ್ವನಿ ಪರಿವರ್ತನೆಯ ಸಾಧ್ಯತೆಗಳ ಬಗ್ಗೆ ಅವರು ಎತ್ತಿದ ಚರ್ಚೆ ಮುಖ್ಯವಾದುದು.

'English as the Kannada Speaks it' ಚರ್ಚಾರ್ಹ ನಿಲುವನ್ನು ತಳೆದ ಸಂಪ್ರಬಂಧವಿದು. ಕನ್ನಡಿಗರು ಮಾತನಾಡುವ ಇಂಗ್ಲಿಶ್, ಮೂಲ ಇಂಗ್ಲಿಶ್‌ಗಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ವಿಶದೀಕರಿಸಿದ್ದಾರೆ. ತೀ.ನಂ.ಶ್ರೀ ಅವರು ಈ ಸಂಪ್ರಬಂಧಕ್ಕಾಗಿ ತಮ್ಮ ಉಚ್ಚಾರಣೆಯಿಂದಲೇ ಮಾಹಿತಿ ಪಡೆದುಕೊಂಡಿದ್ದಾರೆ. ಟಿಕೆಟ್ (ತಿಕೇಟು), ಡೆಟ್(ದಿನಾಂಕ) ಮೊದಲಾದ ಶಬ್ದಗಳಲ್ಲಿ ಬರುವ ಇಂಗ್ಲಿಶಿನ ವತ್ಸ್ಯಸ್ಪರ್ಶ ಧ್ವನಿಗಳಾದ ತ, ದ ಗಳು ಕನ್ನಡದಲ್ಲಿ ಮೂರ್ಧನ್ಯ ಸ್ಪರ್ಶ ಟ್, ಡ್‌ಗಳಾಗುತ್ತವೆ. ಇದು ಕನ್ನಡಿಗರ ಭಾಷೆಯ ದೋಷವಲ್ಲ, ಕನ್ನಡಿಗರು ತಮ್ಮ ಭಾಷೆಯ ಧ್ವನಿ ರಚನೆಯ ಜಾಯಮಾನಕ್ಕೆ ಇಂಗ್ಲಿಶ್‌ನ್ನು ಅಳವಡಿಸಿಕೊಳ್ಳುತ್ತಾರೆ. ತೀ.ನಂ.ಶ್ರೀ ಅವರ ಈ ಲೇಖನ ಕನ್ನಡಿಗರು ಮಾತನಾಡುವ ಇಂಗ್ಲಿಶ್ ಧ್ವನಿ ವ್ಯವಸ್ಥೆಯನ್ನು, ಕನ್ನಡಿಗರು ಉಚ್ಚರಿಸುವ ಇಂಗ್ಲಿಶಿನ ಉಚ್ಚಾರಣೆಯ ರೀತಿಯನ್ನು ಪರಿಚಯ ಮಾಡಿಕೊಡುತ್ತದೆ.

ಕನ್ನಡ ಧ್ವನಿ ಚರ್ಚೆಯಲ್ಲಿ ತುಂಬ ಮಹತ್ವದ ಇನ್ನೊಂದು ಸಂಪ್ರಬಂಧ 'Affricates in Kannada Speeach'. ಈ ಸಂಪ್ರಬಂಧದಲ್ಲಿ ಸ್ಪರ್ಶ ಹಾಗೂ ಘರ್ಷಗಳೆರಡರ ಗುಣಧರ್ಮಗಳನ್ನು ಹೊಂದಿದ ಈಷತ್ ಸ್ಪರ್ಶ ಧ್ವನಿಗಳ ಸ್ವರೂಪವನ್ನು ಹೇಳಿದ್ದಾರೆ. ಚ್. ಜ್ ಈಷತ್ ಸ್ಪರ್ಶಗಳು ಕಿತ್ತೂರು ಕರ್ನಾಟಕ ಪ್ರದೇಶದಲ್ಲಿ ತಾಲವ್ಯ ಸ್ಪರ್ಶಗಳಾಗದೆ ದಂತ ಸ್ಪರ್ಶಗಳಾಗಿವೆ ಎಂಬುದನ್ನು ಹಾಗೂ ಕಿತ್ತೂರು ಕರ್ನಾಟಕದ ವ್ಯಾವಹಾರಿಕ ಕನ್ನಡದಲ್ಲಿ 'ಚ'ಕಾರವು ಎರಡು ಬಗೆಯಾಗಿ ಪದಾದಿಯಲ್ಲಿ ಮತ್ತು ಪದ ಮಧ್ಯದಲ್ಲಿ ಉಚ್ಚರಿಸುವ ಬಗೆಯನ್ನು ಗುರುತಿಸುವ ಮೂಲಕ ತೀ.ನಂ.ಶ್ರೀ ಅವರು ಧ್ವನಿರಚನೆಯ ನೆಲೆಯ ಅಭ್ಯಾಸಕ್ಕೆ ಸಮರ್ಥನೆಯನ್ನು ಹುಡುಕುತ್ತಿದ್ದಾರೆ.

'ಕರ್ನಾಟಕ' ಎಂಬ ಶಬ್ದದಲ್ಲಿಯ ಅನುವಾಸಿಕ 'ನ' ಕಾರವು ದಂತ್ಯವಾಗಿರಬೇಕೆ? ವತ್ಸ್ಯವಾಗಿರಬೇಕೆ? ಎಂಬುದಕ್ಕೆ 'ಉಳ್' ಎಂಬುದು ಆದೇಶವಲ್ಲ. ಇರ್>ಎರಡು ಎಂಬಲ್ಲಿರುವಂತೆ 'ಉಳ್' ಎಂಬುದೇ ಮೂಲರೂಪ. ಉಳ್>ಒಳ್>ಒಳಗು ಆಗಿದೆ. ಆದರೆ ಶಬ್ದಾದಿಯ 'ಉ' ಕಾರವು ಏಕೆ 'ಒ' ಕಾರವಾಯಿತೆಂಬುದು ಕುತೂಹಲದ ಪ್ರಶ್ನೆ. ಅದನ್ನು ಮುಂದಿನವರ ಗಮನಸೆಳೆದಿದ್ದಾರೆ. ಈ ಎಲ್ಲ ಸಂಪ್ರಬಂಧಗಳಲ್ಲಿ ತೀ.ನಂ.ಶ್ರೀ. ಅವರಿಗೆ ಧ್ವನಿ ಪರಿವರ್ತನೆಯ ಪ್ರಕ್ರಿಯೆ ಬಹಳ ಮುಖ್ಯವಾಗಿದೆ. ಆ ಮೂಲಕ ಕನ್ನಡ ಭಾಷೆಯ ರಚನೆ ಹಾಗೂ ಬಳಕೆಯಲ್ಲಿ ನಡೆಯುತ್ತಿರುವ ಭಾಷಿಕ ಸಂಕಥನಗಳಲ್ಲಿ ಧ್ವನಿ ವಿಶ್ಲೇಷಣೆಯ ಕಡೆಗೆ ತೀ.ನಂ.ಶ್ರೀ ಅವರು ವಿಶೇಷ ಗಮನ ಹರಿಸುತ್ತಾರೆ.

ಭಾಷಿಕ ಸಾಮಗ್ರಿಗಳನ್ನು ಸಂಸ್ಕೃತಿ ಅಧ್ಯಯನಕ್ಕೆ ಬಳಸಿಕೊಂಡವರಲ್ಲಿ ತೀ.ನಂ.ಶ್ರೀ ಅವರೂ ಒಬ್ಬರು. ಭಾಷಿಕರ ಪ್ರದೇಶ, ವರ್ಗ, ಜಾತಿ-ಲಿಂಗ, ವಯಸ್ಸನ್ನಾಧರಿಸಿ ಸಂಬೋಧನೆಗಳ ಬಳಕೆಯಲ್ಲಿ ಭಿನ್ನತೆ ಕಂಡುಬರುತ್ತದೆ. ಭಾಷಾ ಸಮುದಾಯದಲ್ಲಿ ಭಾಷಿಕರ ಜೀವನ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಸಂಬೋಧನ ರೂಪಗಳು

ಮಹತ್ವದ ಪಾತ್ರವಹಿಸುತ್ತವೆ. ತೀ.ನಂ.ಶ್ರೀ ಅವರು ಪ್ರಾಚೀನ ಪಠ್ಯಗಳಲ್ಲಿ ಕಂಡುಬರುವ 'ಏನಿ-ಗಡಿಂ-ರೀ' ಸಂಬೋಧನ ರೂಪಗಳ ಸ್ವರೂಪವನ್ನು ವಿಸ್ತಾರವಾಗಿ ವಿವೇಚಿಸಿದ್ದಾರೆ. (ಏನ್+ಇಂ=ಏನಿಂ>ಏನಿ) (ಗಡ+ಇಂ=ಗಡಿಂ) (ಇರ್+ಇರಿ=ರೀ) ಸಂಬೋಧನೆಗಳ ಬಗ್ಗೆ ಕನ್ನಡದಲ್ಲಿ ಬಂದಿರುವ ಮೊದಲ ಸಂಪ್ರಬಂಧ ಇದಾಗಿದೆ.

'ಗೊಮ್ಮಟ' ಶಬ್ದ ಕುರಿತು ಕೆ.ಜಿ. ಕುಂದಣಗಾರ, ಆ.ನೆ. ಉಪಾಧ್ಯೆ, ಎಂ. ಗೋವಿಂದ ಪೈ ಮುಂತಾದ ವಿದ್ವಾಂಸರು ಚರ್ಚೆ ಮಾಡಿದ್ದಾರೆ. ಅದುವರೆಗೂ ವಿದ್ವಾಂಸರ ಗಮನಕ್ಕೆ ಬಾರದಿದ್ದ ಹೊಸ ಅಂಶದ ಕಡೆಗೆ ತೀ.ನಂ.ಶ್ರೀ. ಅವರು ವಿದ್ವಾಂಸರ ಗಮನ ಸೆಳೆದಿದ್ದಾರೆ. ಚಾವುಂಡರಾಯನಿಗೆ 'ಗೊಮ್ಮಟ' ಎಂಬ ಹೆಸರು ಏಕೆ ಬಂದಿತು ಎಂಬ ಪ್ರಶ್ನೆಯನ್ನು ಎತ್ತಿಕೊಂಡಿದ್ದಾರೆ. ಇಪ್ಪತ್ತೆರಡನೆಯ ತೀರ್ಥಂಕರ ನೇಮಿನಾಥನ ಯಕ್ಷಿಯಾದ ಕೂಷ್ಮಾಂಡಿಯನ್ನು ಸ್ಮರಿಸಬಹುದು. ಚಾವುಂಡರಾಯ ಕೂಷ್ಮಾಂಡಿ ಯಕ್ಷಿಯ ಆರಾಧಕನಾಗಿರಬೇಕೆಂದೂ ಬಾಹುಬಲಿ ವಿಗ್ರಹ ನಿರ್ಮಾಣ ಮೊದಲಾದ ಕಾರ್ಯದಲ್ಲಿ ಆಕೆಯಿಂದ ಪ್ರೇರಣೆ ಪಡೆದನೆಂಬ ವಾರ್ತೆ ಜನಜನಿತವಾಗಿತ್ತು. ಕೂಷ್ಮಾಂಡಿ ಯಕ್ಷಿಯ ಹೆಸರು ನಮ್ಮ ನಾಡಿನಲ್ಲಿ 'ಗುಮ್ಮಡಿ' ಎಂಬ ರೂಪದಲ್ಲಿ ಪ್ರಚುರವಾಗಿತ್ತು (ಬಸವಣ್ಣನವರ ಒಂದು ವಚನದಲ್ಲಿಯೂ ಈ ರೂಪ ಪ್ರಯೋಗವಾಗಿದೆ). ಕೂಷ್ಮಾಂಡಿ ಎಂಬುದರಿಂದ 'ಗುಮ್ಮಡಿ' ಎಂಬ ತದ್ಭವವನ್ನು ಏನೊಂದು ಕ್ಲೇಶವೂ ಇಲ್ಲದೆ ನೇರವಾಗಿ ಸಾಧಿಸಬಹುದು. ಚಾವುಂಡರಾಯನಿಗೆ 'ಗೊಮ್ಮಟ' ಎಂಬ ಹೆಸರು ಬಂದದ್ದು ಈ 'ಗುಮ್ಮಡಿ' ಯಕ್ಷಿನಿಯ ಅನುಗ್ರಹದಿಂದಿರಬೇಕು. ಆಕೆಯ ಪ್ರೇರಣೆಯಿಂದ ಪ್ರತಿಷ್ಠಾಪಿಸಿದ ಬಾಹುಬಲಿ ಮಹಾಮೂರ್ತಿಗೆ 'ಗೊಮ್ಮಟೇಶ್ವರ' ಎಂಬ ಹೆಸರು ಬಳಕೆಗೆ ಬಂದಿರಬೇಕು ತೀ.ನಂ.ಶ್ರೀ ಅವರ ಈ ವಾದ ಒಪ್ಪತಕ್ಕುದಾಗಿದೆ. ತೀ.ನಂ.ಶ್ರೀ ಅವರು 'ಗೊಮ್ಮಟ' ಶಬ್ದದ ಭಾಷಾವೈಜ್ಞಾನಿಕ ಶೋಧದೊಡನೆ ಐತಿಹಾಸಿಕ, ಸಾಂಸ್ಕೃತಿಕ ಶೋಧವನ್ನು ಈ ಲೇಖನದಲ್ಲಿ ನಡೆಸಿದ್ದಾರೆ.

ದ್ರಾವಿಡ ಹಾಗೂ ಇಂಡೋ ಆರ್ಯನ್ ಭಾಷೆಗಳಲ್ಲಿ 'ಕುದುರೆ'ಗೆ ಇರುವ ಶಬ್ದಗಳನ್ನೆಲ್ಲ ಪರಿಶೀಲಿಸಿ ಅವು ಮೂಲದ್ರಾವಿಡದ 'ಘುರ್ರ'ದಿಂದ ಬಂದಿರಬೇಕೆಂದು ಐತಿಹಾಸಿಕ ಭಾಷಾವಿಜ್ಞಾನದ ತತ್ತ್ವಗಳ ಹಿನ್ನೆಲೆಯಲ್ಲಿ ಪರಿಶೀಲಿಸಿದ್ದಾರೆ. ಪ್ರಥಮ ಆಧುನಿಕ ಕನ್ನಡ ವ್ಯಾಕರಣವಾದ ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯರ 'ಹೊಸಗನ್ನಡ ನುಡಿಗನ್ನಡಿ'ಯ ಸ್ವರೂಪ, ಕನ್ನಡ ವ್ಯಾಕರಣ ಕೃತಿಗಳಲ್ಲಿ ಅದರ ಸ್ಥಾನ ಕುರಿತು ಒಂದು ಲೇಖನದಲ್ಲಿ ವಿವೇಚಿಸಿದ್ದಾರೆ. ಚಾರಿತ್ರಿಕ ಭಾಷಾವಿಜ್ಞಾನ ತತ್ವಗಳ ಹಿನ್ನೆಲೆಯಲ್ಲಿ ರೂಪುಗೊಂಡ ಆಕ್ಸಫರ್ಡ್ ಇಂಗ್ಲಿಶ್ ಡಿಕ್ಷನರಿಯ ರಚನೆಯ ವಿಧಾನವನ್ನು ಕುರಿತು ಹಾಗೂ ಆ ಮಾದರಿಯಲ್ಲಿ ಕನ್ನಡದ ಲಭ್ಯವಿರುವ ಸಾಮಗ್ರಿಯನ್ನು ಬಳಸಿಕೊಂಡು ಕನ್ನಡ ನಿಘಂಟು ಸಿದ್ಧವಾಗಬೇಕಾಗಿದೆ ಎಂಬುದನ್ನು 'ಆಕ್ಸಫರ್ಡ್ ಇಂಗ್ಲಿಶ ಡಿಕ್ಷನರಿ' ಎಂಬ ಲೇಖನದಲ್ಲಿ ಸೂಚಿಸಿದ್ದಾರೆ. ೧೯೪೩ರ ಸುಮಾರಿಗೆ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ-ಕನ್ನಡ

ನಿಘಂಟು ರಚನೆ ಕೆಲಸಕ್ಕೆ ಸಿದ್ಧವಾದಾಗ ತೀ.ನಂ.ಶ್ರೀ ಅವರ ಕನಸು ನನಸಾಯಿತು. ಕನ್ನಡ-ಕನ್ನಡ ನಿಘಂಟುವಿಗೆ ವೈಜ್ಞಾನಿಕ ರೂಪುಕೊಡುವಲ್ಲಿ ತೀ.ನಂ.ಶ್ರೀ ಅವರು ಮಹತ್ವದ ಪಾತ್ರವಹಿಸಿದ್ದಾರೆ. ಅವರ ಬಹುಶಿಸ್ತೀಯ ಜ್ಞಾನದಿಂದ ಹಲವಾರು ಶಾಬ್ದಿಕ ಸಮಸ್ಯೆಗಳು ಪರಿಹಾರವಾದವು. ೧೯೫೪-೬೬ರ ಸುಮಾರಿಗೆ ತೀ.ನಂ.ಶ್ರೀ ಅವರು ಕನ್ನಡ ನಿಘಂಟು ಸಂಪಾದಕ ಸಮಿತಿಯ ಅಧ್ಯಕ್ಷರಾಗಿದ್ದರು ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ.

ಕನ್ನಡ ಭಾಷಾಧ್ಯಯನದಲ್ಲಿ ಚರ್ಚೆಗೆ ಒಳಗಾಗಿರುವ ಅಥವಾ ಚರ್ಚೆಗೆ ಒಳಗಾಗ ಬೇಕೆನ್ನುವ ಸಮಕಾಲೀನ ತಾತ್ವಿಕ ಸಮಸ್ಯೆಗಳನ್ನು ಎತ್ತಿಕೊಂಡು ಅದರ ವಿಶ್ಲೇಷಣೆಯಲ್ಲಿ ಕನ್ನಡದ ಮಾಹಿತಿ ಹೇಗೆ ಪ್ರಮುಖ ಪಾತ್ರವಹಿಸಬಲ್ಲದೆಂದು ಹಾಗೂ ಹೊಸ ಸಾಧ್ಯತೆಗಳಿಗೆ ಕನ್ನಡವನ್ನು ಸಜ್ಜುಗೊಳಿಸುವ ಬಗೆಯನ್ನು ತೋರಿಸುವುದು ತೀ.ನಂ.ಶ್ರೀ ಅವರ ಭಾಷಾಧ್ಯಯನದ ವಿಧಾನವಾಗಿದೆ. ಹಾಗೆಯೇ ಕನ್ನಡ ಭಾಷೆಯ ರಚನೆ, ಸಾಮಾಜಿಕ-ಸಾಂಸ್ಕೃತಿಕ ಸಂದರ್ಭಗಳಲ್ಲಿ ಅದರ ಬಳಕೆಯ ವಿನ್ಯಾಸಗಳು ಇವನ್ನು ವಿಶ್ಲೇಷಿಸುತ್ತ ಅಂತಹ ವಿಶ್ಲೇಷಣೆಗೆ ಆಧುನಿಕ ಭಾಷಾತತ್ವಗಳು ಹೇಗೆ ಆಳ, ಹರಹುವನ್ನು ನೀಡಬಲ್ಲವು ಎಂದು ಅನ್ವೇಷಿಸುವುದು ಅವರ ಇನ್ನೊಂದು ಅಧ್ಯಯನ ವಿಧಾನವಾಗಿದೆ. ಈ ಎರಡು ವಿಧಾನಗಳಲ್ಲಿಯೂ ತತ್ವ ಹಾಗೂ ಮಾಹಿತಿ ಒಂದನ್ನೊಂದು ಪೋಷಿಸಿ ಕೊಂಡು ಬರುತ್ತವೆ ಎಂಬುದು ತುಂಬ ಮುಖ್ಯವಾದ ಅಂಶವಾಗಿದೆ.

ಮೈಸೂರು ವಿದ್ಯಾ ಇಲಾಖೆಯ ಸೂಚನೆಯ ಮೇರೆಗೆ ತೀ.ನಂ.ಶ್ರೀ ಅವರು 'ಕನ್ನಡ ಮಧ್ಯಮ ವ್ಯಾಕರಣ'ವನ್ನು ರಚಿಸಿದ್ದಾರೆ. ಅದಕ್ಕಿಂತ ಹಿಂದೆ ಶಾಲಾ ಶಿಕ್ಷಣದ ಪ್ರಚುರವಾಗಿದ್ದ ಬಿ. ಮಲ್ಲಪ್ಪ ಅವರ 'ಶಬ್ದಾದರ್ಶ', ಮ.ಪ್ರ. ಪೂಜಾರರ 'ನುಡಿಗನ್ನಡಿ' ಇವುಗಳಿಗಿಂತಲೂ ತೀ.ನಂ.ಶ್ರೀ ಅವರ ವ್ಯಾಕರಣ ಮುಂದುವರೆದಿದೆ; ಹೆಚ್ಚು ಜನಾದರಣೀಯವಾಗಿದೆ. ಇದಕ್ಕೆ ಮುಖ್ಯಕಾರಣ ತೀ.ನಂ.ಶ್ರೀ ಅವರ ಭಾಷಾವಿಜ್ಞಾನ ದೃಷ್ಟಿ. ಭಾಷೆಗೆ ವ್ಯಾಕರಣ ನಿಯಮಗಳನ್ನು ನಿಗದಿಪಡಿಸುವ ಬದಲು 'ಪ್ರಯೋಗ ಶರಣಾಃ ವೈಯಾಕರಣ' ಎಂಬ ಧೋರಣೆಯಿಂದ ಭಾಷೆಗೆ ವ್ಯಾಕರಣದ ವಿವರಣೆ ಜೋಡಿಸಿದರು. ಸಾಂಪ್ರದಾಯಿಕ ವ್ಯಾಕರಣದಲ್ಲಿ ನಿಯಮ ಹೇಳಿ ಆಮೇಲೆ ಉದಾಹರಣೆ ಕೊಡುವುದು ಸಾಮಾನ್ಯ ಪದ್ಧತಿಯಾಗಿದ್ದರೂ ಮಧ್ಯಮ ವ್ಯಾಕರಣದಲ್ಲಿ ಮೊದಲು ಪ್ರಯೋಗಗಳನ್ನು ಉದ್ಧರಿಸಿಕೊಂಡು ಅವುಗಳಿಂದ ನಿಯಮವನ್ನು ರೂಪಿಸುವ ಭಾಷಾ ವಿಜ್ಞಾನದ ಧೋರಣೆಯನ್ನು ನೋಡುತ್ತೇವೆ. ಇದರಿಂದಾಗಿ 'ಕನ್ನಡ ಮಧ್ಯಮ ವ್ಯಾಕರಣ' ವು ಭಾಷೆ-ವ್ಯಾಕರಣ ಕ್ಷೇತ್ರದಲ್ಲಿ ಮಹತ್ವದ ಕೃತಿಯಾಗಿದೆ.

ತೀ.ನಂ.ಶ್ರೀ ಅವರು ತಮ್ಮ ವ್ಯಾಕರಣದಲ್ಲಿ 'ಪಂಚಮೀ ವಿಭಕ್ತಿ'ಯನ್ನು ಕೈಬಿಟ್ಟಿರುವ ಔಚಿತ್ಯ ತಿಳಿಯುವುದಿಲ್ಲ. ವಾಸ್ತವವಾಗಿ ಕನ್ನಡದಲ್ಲಿ ಪಂಚಮೀ ವಿಭಕ್ತಿಯಿದೆ. ಕಾರಕದ ನೆಲೆಯಿಂದ ನೋಡಿದಾಗ ಅದು ಸ್ಪಷ್ಟವಾಗುತ್ತದೆ. ಈ ಕುರಿತು ಸೇಡಿಯಾಪು ಅವರು

'ಕನ್ನಡದಲ್ಲಿ ಪಂಚಮೀ ವಿಭಕ್ತಿ' ಎಂಬ ವಿಸ್ತಾರವಾದ ಸಂಪ್ರಬಂಧವನ್ನು ಬರೆದಿದ್ದಾರೆ. ಇತ್ತೀಚೆಗೆ ಡಿ.ಎನ್. ಶಂಕರಭಟ್ಟರು ಕನ್ನಡದ ಮಾದರಿಯಲ್ಲಿ ಕನ್ನಡವನ್ನು ನೋಡಲು ಅವಶ್ಯವಾದ ತಾತ್ವಿಕ ಚೌಕಟ್ಟನ್ನು ರೂಪಿಸಿದ್ದಾರೆ. ಅವುಗಳ ಹಿನ್ನೆಲೆಯಲ್ಲಿ ತೀ.ನಂ.ಶ್ರೀ ಅವರ ಶಾಲಾ ವ್ಯಾಕರಣವನ್ನು ಪರಿಶೀಲಿಸಿದರೆ ತೀ.ನಂ.ಶ್ರೀ ಅವರ ಚಿಂತನೆಗಳಲ್ಲಿ ಹಲವು ಮಾರ್ಪಾಡುಗಳನ್ನು ತರುವುದರ ಅವಶ್ಯಕತೆ ಹೆಚ್ಚಿದೆ. ತೀ.ನಂ.ಶ್ರೀ ಅವರು ಶಬ್ದಮಣಿದರ್ಪಣಕ್ಕೆ 'ದೀಪಿಕೆ' (ವ್ಯಾಖ್ಯಾನ) ಬರೆಯಬೇಕೆಂದು ಉದ್ದೇಶಿಸಿದ್ದರು. ಆಧುನಿಕ ಭಾಷಾವಿಜ್ಞಾನದಲ್ಲಿ ವಿಶೇಷ ಪರಿಣತಿಯನ್ನು ಪಡೆದಿದ್ದ ಅವರಿಂದ ದರ್ಪಣಕ್ಕೆ ಭಾಷ್ಯ ಬಂದಿದ್ದರೆ ವ್ಯಾಕರಣ ಕ್ಷೇತ್ರಕ್ಕೊಂದು ಅಪೂರ್ವ ಕೊಡುಗೆಯಾಗುತ್ತಿತ್ತು. ಆದರೆ ಕಾಲ ಅದಕ್ಕೆ ಅವಕಾಶ ಕೊಡಲಿಲ್ಲ.

ಭಾಷಾವಿಜ್ಞಾನದಲ್ಲಿ ತೀ.ನಂ.ಶ್ರೀ ಅವರ ಮತ್ತೊಂದು ಮಹತ್ವದ ಕೆಲವೆಂದರೆ 'Phonemic and Morphemic Frequency Count for Kannada' ಕನ್ನಡದಲ್ಲಿ ಧ್ವನಿಮಾ ಮತ್ತು ಆಕೃತಿಮಾಗಳ ಆವೃತ್ತಿ ಸಾಮರ್ಥ್ಯ ಎಂಬ ಯೋಜನೆಯನ್ನು ಎಂ.ಆರ್. ರಂಗನಾಥ ಅವರಿಗೆ ನಿರ್ದೇಶನ ಮಾಡಿದ್ದು. ಆ ಕೃತಿ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಿಂದ ಪ್ರಕಟವಾಗಿದೆ. ತೀ.ನಂ.ಶ್ರೀ ಅವರಿಗೆ ರಾಷ್ಟ್ರೀಯ ಭಾಷಾವಿಜ್ಞಾನಿಗಳ ನಿಕಟ ಸಂಪರ್ಕವಿತ್ತು. ಎಂ.ಬಿ.ಎಮಿನೋ, ಟಿ. ಬರೋ, ಸುಕುಮಾರಸೇನ್, ಎಸ್.ಕೆ. ಚಟರ್ಜಿ, ಎಸ್.ಎಂ. ಕತ್ರೆ ಇವರ ವಿದ್ವತ್ತನ್ನು ಕರ್ನಾಟಕಕ್ಕೆ ಪರಿಚಯಿಸಿದ್ದು ಭಾಷಾಧ್ಯಯನ ದೃಷ್ಟಿಯಿಂದ ತೀ.ನಂ.ಶ್ರೀ ಅವರ ದೊಡ್ಡ ಸಾಧನೆಯಾಗಿದೆ.

ತೀ.ನಂ.ಶ್ರೀ ಅವರು ಪುಣೆ, ಮೈಸೂರುಗಳಲ್ಲಿ ಹಲವಾರು ಭಾಷಾವಿಜ್ಞಾನದ ಬೇಸಿಗೆ ಶಾಲೆಯನ್ನು ನಡೆಸಿದರು. ಆ ಶಾಲೆಯ ನಿರ್ದೇಶಕರಾಗಿ, ಸಂಚಾಲಕರಾಗಿ ಕನ್ನಡವನ್ನು ಕೇಂದ್ರವಾಗಿಟ್ಟುಕೊಂಡು ದ್ರಾವಿಡ ಭಾಷಾವಿಜ್ಞಾನ ಮೇಲೆ ಮೌಲಿಕ ಉಪನ್ಯಾಸಗಳನ್ನು ನೀಡಿದ್ದಾರೆ. ಅವು ಆ ಕ್ಷೇತ್ರದ ಎಲ್ಲೆಯನ್ನು ವಿಸ್ತರಿಸಿವೆ. ತೀ.ನಂ.ಶ್ರೀ ಅವರು ಅನೇಕ ಹೊಸ ಪದಗಳನ್ನು ಟಂಕಿಸಿ, ಕನ್ನಡ ಶಬ್ದಭಂಡಾರದ ವಿಕಾಸಕ್ಕೂ ಕಾರಣರಾಗಿದ್ದಾರೆ.

Phone - ಸ್ವನ
Phoneme - ಸ್ವನಿಮಾ
Thesis - ನಿಬಂಧ
President - ರಾಷ್ಟ್ರಪತಿ
ಅಂಶಷಟ್ಪದಿ - ಷಟ್ಪದ

ಅವರು ಟಂಕಿಸಿದ ಈ ಪದಗಳು ಈಗ ಚಲಾವಣೆಯಲ್ಲಿವೆ. ಅವು ಕೇವಲ ಅನುವಾದಗಳಲ್ಲ ಪ್ರಬುದ್ಧ ಭಾಷೆಗೆ ಸರಿಸಮಾನವಾಗಿ ನಮ್ಮ ಸಾಮಗ್ರಿಗಳ ಮೂಲಕ ನಡೆಯುವ ಹೊಸ ಸೃಷ್ಟಿಗಳವು. ಅದು ಕನ್ನಡ ಭಾಷೆಯ ಆಧುನೀಕರಣ ವಿಧಾನಗಳಲ್ಲಿ

ಒಂದಾಗಿದೆ. ಹೊಸ ಪದಗಳನ್ನು ಟಂಕಿಸಿ, ಬಳಕೆಗೆ ಬರುವಂತೆ ಮಾಡಿ ಮಾತೃಭಾಷೆಯ ಶಬ್ದ ಭಂಡಾರದ ಬೆಳವಣಿಗೆ ಮಾಡುವುದು ಭಾಷಾ ಆಧುನೀಕರಣದ ಲಕ್ಷಣವಾಗಿದೆ. ತೀ.ನಂ.ಶ್ರೀ ಅವರು ಈ ಕಾರ್ಯವನ್ನು ಯಶಸ್ವಿಯಾಗಿ ಪೂರೈಸಿದ್ದಾರೆ.

ತೀ.ನಂ.ಶ್ರೀ ಅವರು ತೂಕವುಳ್ಳ ಬರೆಹಗಳಿಂದ ಕನ್ನಡ ಭಾಷಾಧ್ಯಯನ ಕ್ಷೇತ್ರಕ್ಕೆ ಮೌಲಿಕ ಕೊಡುಗೆಗಳನ್ನು ಸಲ್ಲಿಸಿ, ಆ ಕ್ಷೇತ್ರದ ಎಲ್ಲೆಯನ್ನು ವಿಸ್ತರಿಸಿದ್ದಾರೆ. ಕನ್ನಡ ಭಾಷಾಧ್ಯಯನ ಸಂದರ್ಭದಲ್ಲಿ ತೀ.ನಂ.ಶ್ರೀ ಅವರು ಮುಖ್ಯ ಮಾದರಿಯಾಗಿದ್ದಾರೆ.

ಆಕರಗ್ರಂಥಗಳು

೧. ತೀ.ನಂ. ಶ್ರೀಕಂಠಯ್ಯ, ೧೯೭೪, ಸಮಾಲೋಕನ, ಶಾರದಾ ಮಂದಿರ, ಮೈಸೂರು.

೨. ತೀ.ನಂ. ಶ್ರೀಕಂಠಯ್ಯ, ೧೯೭೨, ಕನ್ನಡ ಮಧ್ಯಮ ವ್ಯಾಕರಣ, ಗೀತಾ ಬುಕ್‌ಹೌಸ್, ಮೈಸೂರು.

೩. ಬಿ.ಬಿ. ರಾಜಪುರೋಹಿತ, ೧೯೭೬, ಕನ್ನಡ ಭಾಷಾಶಾಸ್ತ್ರಕ್ಕೆ ತೀ.ನಂ.ಶ್ರೀ ಕೊಡುಗೆ, ಶ್ರೀಕಂಠ ತೀರ್ಥ (ಸಂ. ಎಂ. ಚಿದಾನಂದಮೂರ್ತಿ ಮತ್ತು ಇತರರು).

೧೪

ಡಿ.ಎಲ್.ಎನ್. : ವ್ಯಾಕರಣ ಗ್ರಹಿಕೆ

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಮೌಲಿಕ ಕೊಡುಗೆಗಳನ್ನು ಸಲ್ಲಿಸಿ ಕನ್ನಡಿಗರ ಗೌರವಕ್ಕೆ ಪಾತ್ರರಾದ ಕೆಲವೇ ಕೆಲವರಲ್ಲಿ ಡಿ.ಎಲ್. ನರಸಿಂಹಾಚಾರ್ ಅವರು ಒಬ್ಬರು. ನರಸಿಂಹಾಚಾರ್ಯರು ಸಾಹಿತ್ಯ, ಸಂಸ್ಕೃತಿ, ಭಾಷೆ, ವ್ಯಾಕರಣ, ಛಂದಸ್ಸು ಹೀಗೆ ಹಲವು ಪ್ರಕಾರಗಳಲ್ಲಿ ತಮ್ಮ ನಿಚ್ಚಳವಾದ ಹೆಜ್ಜೆ ಗುರುತುಗಳನ್ನಿಟ್ಟಿದ್ದಾರೆ. ಆ ಶ್ರೇಷ್ಠರ ಭಾಷಾಧ್ಯಯನದ ಸಾಧನೆಯನ್ನು ಕುರಿತು ಒಂದು ಪುನರಾವಲೋಕನದ ಪ್ರಯತ್ನವನ್ನು ಈ ಸಂಪ್ರಬಂಧದಲ್ಲಿ ಕಾಣಬಹುದು.

I

ಶಬ್ದ ಪ್ರಪಂಚದ ಆಗು-ಹೋಗುಗಳನ್ನು ತಿಳಿಯಬೇಕೆನ್ನುವವರಿಗೆ ಡಿ.ಎಲ್.ಎನ್‌ರ ಶಬ್ದಾರ್ಥ ವಿವೇಚನೆಗೆ ಸಂಬಂಧಿಸಿದ ಲೇಖನಗಳು ಕುತೂಹಲಕಾರಿಯಾಗಿವೆ. ನರಸಿಂಹಾಚಾರ್ಯರು ಶಬ್ದಗಳ ಚರಿತ್ರೆಯನ್ನು ಬಹುಸ್ವಾರಸ್ಯವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ. ಆಧುನಿಕ ಪದ್ಧತಿಗಳನ್ನನುಸರಿಸಿ ಶಬ್ದಗಳ ರೂಪ ನಿಷ್ಕರ್ಷೆಯನ್ನೂ ಅರ್ಥ ನಿಷ್ಕರ್ಷೆಯನ್ನೂ ಮಾಡಿರುತ್ತಾರೆ. ಅಲ್ಲಿ ಕಂಡುಬರುವ ವಿಷಯ ಸ್ವಾರಸ್ಯ, ಸಂವಿಧಾನ ಮತ್ತು ಮಹತ್ವವನ್ನು ಗುರುತಿಸಿ ತೋರಿಸುವುದೇ ಈ ಭಾಗದ ಉದ್ದೇಶವಾಗಿದೆ.

ಅಚ್ಚಗನ್ನಡದ **ಪೊಜಿಸು, ಕಾಳಸೆ** ಈ ಶಬ್ದಗಳ ಚರಿತ್ರೆಯನ್ನು ತಿಳಿಯಲು ಪ್ರಾಚೀನ ಕವಿಗಳ ಪ್ರಯೋಗಗಳನ್ನು ಹೇಗೆ ಅವಲಂಬಿಸಿದ್ದಾರೆ ಎಂಬುದನ್ನು ನೋಡಬಹುದು. ಪ್ರಾಚೀನ ಗ್ರಂಥಗಳನ್ನು ಸಂಸ್ಕರಿಸಿ ಪ್ರಕಟಿಸುವಾಗ ಯಾವ ರೂಪವು ನಮಗೆ ಅತ್ಯಂತ ಕಠಿಣವೆನಿಸುತ್ತದೆಯೋ ಅದೇ ಮೂಲಪಾಠವಿರಬಹುದೆಂದು ಊಹಿಸಿರುವುದುಂಟು. ಈ ಮಾತಿಗೆ 'ಕಾಳಸೆ' ಎಂಬ ಶಬ್ದವೇ ಉದಾಹರಣೆ. ಕನ್ನಡ ನುಡಿಯಲ್ಲಿ ಕಂಡುಬಂದ ಸುಲಭ ಪಾಠವೊಂದು ಲೇಖಕರನ್ನು ಈ ವಿಚಾರದ ಕಡೆಗೆ ಸೆಳೆಯಿತು. ಅದರ ವಿವಿಧ

ಪ್ರಯೋಗಗಳನ್ನು ಹೆಕ್ಕಿ, ಆಯ್ದು, ಕಲೆಹಾಕಿ ಕಡೆಗೆ 'ಕಾಳಸೆ' ಎಂದರೆ 'ಜೋಡಣೆ' ಎಂಬ ಅರ್ಥವನ್ನು ನಿಶ್ಚಯಿಸುತ್ತಾರೆ. 'ಪೊರಸು-ಪೊಜಿಸು'ಗಳ ಭೇದವನ್ನೂ ಆಧಾರ ಸಹಿತವಾಗಿ ಮಾಡಿಕೊಟ್ಟಿರುತ್ತಾರೆ. 'ಪೊರಸು' ಎಂದರೆ ಪಾರಿವಾಳ. ಅದು ಅಪಶಕುನದ ಹಕ್ಕಿಯೆಂದು ಆ ಕಾಲದ ಜನತೆಯ ನಂಬಿಕೆಯಾಗಿತ್ತು. 'ಬಾದುಬೆ' ಎಂಬುದು ದೇವತೆಯ ಹೆಸರಿರ ಬೇಕೆಂದು ಊಹಿಸಿದ್ದಾರೆ. ಇಂತಹ ಶಬ್ದಗಳ ಮಹತ್ವವನ್ನು ಕುರಿತು ಹೇಳುವಾಗ ಅವು ಹೇಗೆ ಕನ್ನಡಿಗರ ಆಚಾರ, ವಿಚಾರ, ನಂಬಿಕೆಗಳ ಮೇಲೆ ಬೆಳಕು ಬೀರುತ್ತವೆ ಎನ್ನುವು ದನ್ನು ಮನಗಾಣಬಹುದು.

ಒಲ್ಲಣಿಗೆ ಎಂಬ ಶಬ್ದವನ್ನು ಕುರಿತು ಶ್ರೀಯುತರು ಮಾಡಿರುವ ವಿಚಾರವಂತೂ ಎಂತಹವರಿಗಾದರೂ ಕಣ್ಣು ತೆರೆಯಿಸುವಂತಹದು. ಪಿ.ಬಿ. ದೇಸಾಯಿ ಅವರ ಲೇಖನದಿಂದ ಪ್ರಚೋದಿತರಾಗಿ ಅದು ಅಚ್ಚಗನ್ನಡ ಶಬ್ದವಲ್ಲವೆಂದೂ "ಆರ್ದಪಟಿಕಾ" ಎಂಬ ಸಂಸ್ಕೃತ ಪದವೇ ಮಾರ್ಪಟ್ಟು ಆ ರೂಪ ತಾಳಿದೆಯೆಂದೂ ಆಧಾರ ಸಹಿತವಾಗಿ ಸಮರ್ಥಿಸುತ್ತಾರೆ. ಪ್ರಾಕೃತದ ಮೂಲಕ ಅದರ ರೂಪನಿಷ್ಪತ್ತಿಯ ರಹಸ್ಯವನ್ನು ಭೇದಿಸುತ್ತಾರೆ. ಆರ್ದ್ರಪಟಿಕಾ >ಒಲ್ಲವಡಿಗೆ>ಒಲ್ಲವಟಿಗೆ>ಒಲ್ಲಳಿಗೆ>ಒಲ್ಲಣಿಗೆ ಅದರಂತೆ ಡಿ.ಎಲ್.ಎನ್ ಅವರು **ಬಾಚಣಿಗೆ, ಮೆಱಿವಣಿಗೆ, ಬೀಸಣಿಗೆ, ಅಡ್ಡಣಿಗೆ** ಶಬ್ದಗಳ ಅರ್ಥಸ್ವರೂಪವನ್ನು ಖಚಿತವಾಗಿ ನಿರ್ಧರಿಸಿದ್ದಾರೆ. ಇಲ್ಲೆಲ್ಲ ನರಸಿಂಹಾಚಾರ್ಯರ ಆಳವಾದ ವಿದ್ವತ್ತು, ಸತ್ಯಾನ್ವೇಷಣ ದೃಷ್ಟಿ ಪ್ರಕಟವಾಗಿದೆ. ಕನ್ನಡದ ಕಾವ್ಯಗಳಲ್ಲಿ ಬಳಕೆಯಾದ ಫಾರಶಿ ಮೂಲದ ತ್ರಾಸ ಎಂಬ ಶಬ್ದ ತಕ್ಕಡಿ ಎಂಬರ್ಥ ಪಡೆದಿದೆ. ತರಾಜು>ತ್ರಾಸ ಆಗಿ ಮಾರ್ಪಟ್ಟಿದೆ. ಈ ಶಬ್ದ ಹರಿಹರನ ಕಾಲಕ್ಕೆ (೧೨೦೦) ಕರ್ನಾಟಕವನ್ನು ಪ್ರವೇಶ ಮಾಡಿರಬೇಕು. ಶಬ್ದಗಳ ರೂಪ ಮೇಲುನೋಟಕ್ಕೆ ಕಾಣುವಷ್ಟು ಸುಲಭವಲ್ಲವೆಂಬ ಅಂಶವನ್ನು ಡಿ.ಎಲ್.ಎನ್‌ರು ತಮ್ಮ ಲೇಖನಗಳಲ್ಲಿ ತುಂಬ ಸ್ವಾರಸ್ಯಕರವಾಗಿ ತೋರಿಸಿಕೊಟ್ಟಿದ್ದಾರೆ.

ಅಗ್ರಹಾರ ಎಂಬ ಶಬ್ದವನ್ನು ಕುರಿತು ವಿಚಾರಿಸುವಾಗ ಲೇಖಕರು ಅನೇಕ ಶಾಸನ ಗಳನ್ನು ಉದಾಹರಿಸಿರುವುದು ಗಮನಿಸಬೇಕಾದ ಅಂಶ. ಪ್ರಾಚೀನ ಗ್ರಂಥಗಳಲ್ಲಿ ಕಾಣದ ಅನೇಕ ರೂಪಗಳು ನಮಗೆ ಶಾಸನಗಳಲ್ಲಿ ದೊರೆಯುತ್ತವೆ. ಪ್ರಕೃತದಲ್ಲಿ 'ಅಗ್ರಹಾರ' ಎಂಬ ಪೂರ್ವರೂಪವೂ 'ಅಘಾರ' ಎಂಬ ಹ್ರಸ್ವ ರೂಪವೂ ಖಚಿತವಾಗಿ ಕಂಡುಬರುವುದು. ಅಗ್ರಹಾರ ಶಬ್ದವು ಅಗ್ರ+ಆಹಾರ ಎಂಬ ಎರಡು ಶಬ್ದಗಳಿಂದ ಕೂಡಿದ ಒಂದು ಸಮಸ್ತ ಪದವೆಂದೂ 'ಆಹಾರ' ಎಂಬುದು ವಿಷಯ ವಾಚಕವೆಂದೂ 'ಆಹಾರ'ದ ಸವೆದ ರೂಪ 'ಹಾರ'ವೆಂದೂ ಆ ಸಮಸ್ತ ರೂಪ ಸೌಲಭ್ಯಾಕಾಂಕ್ಷೆಯ ಮೂಲಕ 'ಅಗ್ರಾಹಾರ' ಎನ್ನುವುದು 'ಅಗ್ರಹಾರ' ಎಂಬ ರೂಪವನ್ನು ತಾಳಿದೆಯೆಂದೂ ಶ್ರೀಯತರ ವಿಚಾರದ ಮೂಲಕ ವ್ಯಕ್ತವಾಗುತ್ತದೆ. ಆದರೆ ಈ ಕುರಿತು ಡಿ.ಎಲ್.ಎನ್‌ರ ಈ ವಾದ ಸೂಕ್ತವಾಗಿಲ್ಲ. ಅಗ್ರಹಾರ ಈ ಸಮಾಸವನ್ನು ಅಗ್ರ+ಹಾರ ಎಂದು ಬಿಡಿಸು ವುದು ಉಚಿತ. (ಹಾರ < ಹೃ=ಕೊಡು, ತೆಗೆದುಕೊ) ಅಗ್ರಹಾರ, ಬ್ರಾಹ್ಮಣರಿಗೆ (ಅಗ್ರ)

ಕೊಟ್ಟ ಕೊಡುಗೆಗಳನ್ನು (ಹಾರ) ಹೇಳುತ್ತದೆ. **ಡಂಗಹಾಕು** ಎಂಬ ಶಬ್ದದ ಬಗ್ಗೆ ಬರೆಯುತ್ತ ಸಂಸ್ಕೃತದ 'ದ್ರಂಗ' ಶಬ್ದವೇ 'ಡಂಗ'ವೆಂದು ರೂಪತಾಳಿತು. ಅದು 'ಸುಂಕವನ್ನು ವಸೂಲು ಮಾಡುವ ಕಟ್ಟೆ' ಎಂಬರ್ಥವನ್ನು ವ್ಯಕ್ತಪಡಿಸುತ್ತದೆ.

ರಪಣ>ರವಣ ಎಂಬುದರ ಅರ್ಥ ಮತ್ತು ನಿಷ್ಪತ್ತಿಯನ್ನು ನಿರ್ಧರಿಸಲು ಲೇಖಕರು ಕನ್ನಡ ಕವಿಗಳ ಪ್ರಯೋಗಗಳನ್ನು ಹೇಗೆ ರಾಶಿ ಹಾಕಿದ್ದಾರೆ ಎಂಬುದನ್ನು ನೋಡಬೇಕು. ಶಬ್ದಾರ್ಥ ವಿವೇಚನೆಯಲ್ಲಿ ಪ್ರಯೋಗಗಳ ಸಂಗ್ರಹ ಬಹುಪ್ರಧಾನವಾದದ್ದು. ಪ್ರಾಚೀನ ಮತ್ತು ಅರ್ವಾಚೀನ ರೂಪಗಳಿಗೂ ಅರ್ಥ ವ್ಯತ್ಯಾಸಗಳಿಗೂ ವಿವಿಧ ಪ್ರಯೋಗಗಳೇ ನಮಗೆ ಕೈದೀವಿಗೆಗಳು. ಪ್ರಕೃತದಲ್ಲಿ ಡಿ.ಎಲ್.ಎನ್‌ರು ಪಂಪ, ಕುಮಾರವ್ಯಾಸರ ಪ್ರಯೋಗಗಳನ್ನು ಉಲ್ಲೇಖಿಸಿ ಆ ಶಬ್ದಕ್ಕೆ ಸಾಮರ್ಥ್ಯ, ಸಂಪತ್ತು ಎಂಬರ್ಥವಿದೆಯೆಂದು ತಿಳಿಸಿದ್ದಾರೆ. ಅದರ ರೂಪ ನಿಷ್ಪತ್ತಿ ಇನ್ನೂ ಸೊಗಸು, ರೈ+ಪಣ>ರಯ್ಪಣ>ರಪಣ>ರವಣ ಸಂಸ್ಕೃತ ಕನ್ನಡ ಶಬ್ದಗಳೆರಡು ಹೆಣೆದುಕೊಂಡು ಸಿದ್ಧವಾಗಿರುವ ರಪಣವು 'ಯಮಳ ಶಬ್ದ'ವೆಂದು ಗುರುತಿಸಿದ್ದಾರೆ. **ಮದನಾವತಾರ** ಎಂಬ ಪದಕ್ಕೆ ಅರ್ಥವನ್ನು ನಿರ್ಧರಿಸುವಾಗ ಅದು ಒಂದು ಬಗೆಯ 'ಛತ್ರಿ'ಯ ಹೆಸರೆಂದು ಸೂಚಿಸುತ್ತಾರೆ ಕರ್ನಾಟಕದ ದೊರೆಗಳು ತಮ್ಮ ಅಸ್ಥಾನ ಕವಿಗಳಿಗೆ ಗೌರವ ಸೂಚಕವಾಗಿ ಅದನ್ನು ಕೊಡುತ್ತಿದ್ದರೆಂದು ಹೇಳಿದ್ದಾರೆ. ಪ್ರಾಚೀನ ಕಾವ್ಯದಲ್ಲಿ ಬಳಕೆಯಾಗುವ **ಕಾರೋಹಣದ ಪಟಿಯ** ಬಗ್ಗೆ ವಿವೇಚಿಸುತ್ತ ಕಾರೋಹಣ ಎಂಬ ಊರಿನಲ್ಲಿ ತಯಾರಾದ ವಸ್ತ್ರವೆಂದು ಹೇಳಿದ್ದಾರೆ. ಪಂಪನ ಕಾಲದಲ್ಲಿ ಕಾರೋಹಣ ಎಂಬ ಊರಿನಲ್ಲಿ ಉತ್ತಮ ಗುಣಮಟ್ಟದ ಬಟ್ಟೆಗಳು ತಯಾರಾಗುತ್ತಿದ್ದಿರಬೇಕು.

ಅಪೂರ್ವವಾದ ಶಬ್ದಗಳ ರೂಪ ನಿರ್ಧಾರದ ಕೆಲಸ ಎಷ್ಟು ಕಷ್ಟವೆನಿಸುತ್ತದೆಯೋ ಅದಕ್ಕೂ ಮಿಗಿಲಾಗಿ ಅರ್ಥವನ್ನು ಇತ್ಯರ್ಥ ಮಾಡುವ ಕೆಲಸ ತುಂಬ ಪ್ರಯಾಸವೆನಿಸುತ್ತದೆ. ಪ್ರಕೃತದಲ್ಲಿ ಡಿ.ಎಲ್.ಎನ್‌ರು ಮಾಡಿರುವ ಒಂದೊಂದು ಪ್ರಯತ್ನವೂ ಈ ಅಂಶಗಳ ಕಡೆಗೆ ನಮ್ಮ ಗಮನ ಸೆಳೆಯುತ್ತದೆ. **ಬರಡಗೆ, ಪಟಿಂಗಾಸು** ಶಬ್ದಗಳ ಚರಿತ್ರೆಯನ್ನು ಹೇಳುತ್ತ 'ಬರಡಗೆ' ಎಂದರೆ ಮರದ ದಿಮ್ಮಿಗಳಿಂದ ಕಟ್ಟಿದ ಕೋಟೆ. 'ಪಟಿಂಗಾಸು' ಎಂಬುದು ನಾಣ್ಯಕ್ಕೆ ಉಪಯೋಗಿಸುತ್ತಿದ್ದ ಚಿನ್ನ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. **ಗುಯ್ಯಲ್** ಎಂಬ ಪದದ ಕುರಿತು ಹೇಳುವಾಗ ತೆಲುಗಿನ ಕಡೆಗೆ ನಮ್ಮ ಗಮನ ಸೆಳೆಯುತ್ತಾರೆ. ಗುಯ್ಯಲ್ ಶಬ್ದ ತೆಲುಗು-ಕನ್ನಡ ಗಡಿನಾಡ ಶಬ್ದವೆಂದೂ ಕನ್ನಡಕ್ಕೆ ತೆಲುಗಿನಿಂದ ಎರವಲಾಗಿ ಬಂದ ಹಳೆಯ ಶಬ್ದಗಳಲ್ಲಿ ಅದು ಒಂದೆಂದೂ 'ನೀರೊಸರು ವಗುಣಿ' ಅದರ ಅರ್ಥವೆಂದೂ ಹೇಳಬಹುದು. ಶಬ್ದದ ರೂಪವನ್ನು ನಿಷ್ಕರ್ಷಿಸುವಾಗ ವಿದ್ವಾಂಸನಾದವನಿಗೆ ಎಷ್ಟು ಭಾಷೆಗಳನ್ನು ತಿಳಿದಿದ್ದರೂ ಕಡಿಮೆಯೇ. **ಮೇಕು** ಪದದ ಅರ್ಥ ಮತ್ತು ನಿಷ್ಪತ್ತಿ ನಿರ್ಧರಿಸುವಾಗಲೂ ತೆಲುಗಿನ 'ಮ್ರೇಂಕು/ಮ್ರೇಂಗು' ರೂಪಗಳ ಕಡೆಗೆ ಅಧ್ಯಯನಕಾರರ ಗಮನ ಸೆಳೆಯುತ್ತಾರೆ. ಅದರರ್ಥ ಬಳಿ, ಲೇಪಿಸು.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಬಳಕೆಯಾದ 'ಈಜಿಲ್' ಎಂಬುದರ ನಿಷ್ಪತ್ತಿ ಕುರಿತು ಹೇಳುವಾಗ ಈಜು>ಈಜಿ+ಇಲ್ =ಈಜಿಲ್ ಎಂದಾಯಿತು 'ಈಜು' ಎಂದರೆ ಹೆರಿಗೆ, ಮರಿಹಾಕುವುದು. 'ಇಲ್' ಎಂದರೆ ಮನೆ. ಈಜಿಲ್ ಎಂದರೆ ಹೆರಿಗೆ ಮನೆಯೆಂದರ್ಥ. ಎಂತಹ ಕಠಿಣ ವಿಷಯವನ್ನೂ ಅತ್ಯಂತ ಸುಲಭವಾಗಿ ಅರ್ಥ ನಿರ್ಧರಿಸುವ ಬಗೆ ಡಿ.ಎಲ್.ಎನ್‌ರಿಗೆ ಸಾಧಿಸಿದೆ. ಶನಿವಾರ ದಿನ ಭಿಕ್ಷೆ ಬೇಡಲು ಬಂದ ಹಳ್ಳಿಯ ಹೆಂಗಸರೊಬ್ಬಳು "ಬುದ್ಧಿ ಇವತ್ತು ವಡ್ಡವಾರ ಅಕ್ಕಿ ಕೋಡಿ" ಎಂದು ಕೇಳಿದ್ದು, ಕನ್ನಡ ಕಾವ್ಯ, ಶಾಸನಗಳಲ್ಲಿ ಹಲವು ಸಲ ಬರುವ 'ವಡ್ಡವಾರ' ಪದದ ಅರ್ಥ ತಿಳಿಯಲು ಅವರಿಗೆ ಸಾಧ್ಯವಾಯಿತು. ತಕ್ಕೂರ್ಮೆ ಪದದ ನಿಷ್ಪತ್ತಿಯನ್ನು ತುಕ್ಕು+ಊರ್ಮೆ ಎಂದು ಬಿಡಿಸಿ ಸಂಧಿಯಾಗುವಾಗ ಪೂರ್ವ ಪದಾಂತ್ಯ ಸ್ವರಲೋಪವಾಗಿ 'ತಕ್ಕೂರ್ಮೆ' ಎಂದು ಸಹಜವಾಗಿಯೇ ರೂಪಸಿದ್ಧಿಯಾಗುತ್ತದೆ. ಅದು 'ಅತಿಶಯವಾದ ಯೋಗ್ಯತೆ' ಎಂಬರ್ಥ ಪಡೆದುಕೊಂಡಿದೆ. ದ್ರಾವಿಡ ಭಾಷೆಯಲ್ಲಿ 'ಪುಳ್/ಪುಳು' ಶಬ್ದ 'ಪಕ್ಷಿ' ಎಂಬರ್ಥ ದಲ್ಲಿ ದೊರೆಯುತ್ತದೆ. ಈಗ ಸಂಸ್ಕೃತ ಜನ್ಯ 'ಹಕ್ಕಿ' ಶಬ್ದ, ಒಂದು ದೇಶ್ಯ ಮೂಲದ 'ಪುಳು' ಲೋಪವಾಗಿದೆಯೆಂದು ಪಕ್ಷಿ<ಹಕ್ಕಿಗೆ ಸಮಾನ ಕನ್ನಡ ಶಬ್ದ ಎಂಬ ಲೇಖನದಲ್ಲಿ ವಿವೇಚಿಸಿದ್ದಾರೆ.

ನರಸಿಂಹಾಚಾರ್ಯರು ಶಬ್ದದ ಮೂಲವನ್ನು ಕೆದಕಿ, ಬೆದಕಿ, ಸಿಕ್ಕು, ಬಿಡಿಸಿ ತಲಸ್ಪರ್ಶಿಯ ವಾಗಿ ಪರಿಶೀಲಿಸಿ, ಅವುಗಳ ಮೌಲ್ಯವನ್ನು ನಿರ್ಧರಿಸಿದ್ದಾರೆ. ಶಬ್ದಗಳ ಅರ್ಥಸೂಕ್ಷ್ಮತೆ ಯನ್ನು ಗ್ರಹಿಸುವಲ್ಲಿ ಡಿ.ಎಲ್.ಎನ್‌ರು ತೋರಿದ ವಿವೇಕ ಪ್ರಶಂಸನೀಯವಾದುದೇ ಸರಿ. ಅಲ್ಲೆಲ್ಲ ಅವರದ್ದೇ ಆದ ವಿಶಿಷ್ಟ ರೀತಿಯಿದೆ. ಶಬ್ದಾರ್ಥ ವಿವೇಚನೆಗೆ ಸಂಬಂಧಿಸಿದ ಅವರ ಲೇಖನಗಳು ಆ ಕೃತಿಯಲ್ಲಿ ಕಿರಿದಾದರೂ ಆಲೋಚನಾ ಸಂಪತ್ತಿ ನಲ್ಲಿ ಅತ್ಯಂತ ಹಿರಿದಾದವು. ಶಬ್ದಗಳನ್ನು ಕುರಿತು ವಿಚಾರ ಮಾಡುವವರಿಗೆ ಒಳ್ಳೆಯ ಮಾರ್ಗದರ್ಶಕವಾಗಿವೆ. ರೂಪ ಮತ್ತು ಅರ್ಥಗಳನ್ನು ನಿರ್ಣಯಿಸುವಾಗ ಭಾಷಾಶಾಸ್ತ್ರದ ಮುಖ್ಯ ಸೂತ್ರಗಳನ್ನು ಹೇಗೆ ಅನ್ವಯಿಸಬೇಕೆಂಬುದು ಅವರ ಬರೆಹಗಳಿಂದಲೇ ಕಲಿಯ ಬೇಕು. ಹೀಗೆ ಶಬ್ದಾರ್ಥ ವಿವೇಚನೆಗೆ ಅವರ ಕಾಣಿಕೆ ಮೌಲಿಕವಾಗಿದೆ.

ಕನ್ನಡ ಕಾವ್ಯಗಳಲ್ಲಿ ಅಧ್ಯಯನ ಮಾಡುವವರಿಗೆ ಕೋಶಗಳು ತುಂಬ ನೆರವಾಗುತ್ತವೆ. ಪ್ರಾಚೀನ ಕಾವ್ಯಗಳನ್ನು ಇಡೀಯಾಗಿ ಓದಿದವರಿಗೆ ಕನ್ನಡಕ್ಕೆ ಹೊಸ ನಿಘಂಟು ಇದ್ದಿ ದ್ದರೆ ಚೆನ್ನಾಗಿರುತ್ತಿತ್ತು ಎಂಬ ಭಾವನೆ ಬರದಿರದು. ಕಿಟೆಲ್ ಕೋಶದ ಮಿತಿಯನ್ನು ಹೇಳಿದ್ದಾರೆ. ಕಿಟೆಲ್ ಕೋಶ ತನ್ನ ಕಾಲದವರೆಗೆ ಪ್ರಕಟವಾಗಿದ್ದ ಎಲ್ಲ ಕಾವ್ಯ ಪ್ರಯೋಗ ಗಳನ್ನು ದಾಖಲಿಸಿಲ್ಲ. ಈ ಕಾರಣದಿಂದ ಅವನ ಕೋಶ ಕನ್ನಡ ಶಬ್ದ ಭಂಡಾರವನ್ನೆಲ್ಲ ತೆರೆದು ತೋರಿಸಲು ಅಸಮರ್ಥವಾಗಿದೆ. ಅವರು ಮಾಡಿದ ಕೆಲಸವನ್ನು ಮುಂದುವರಿಸು ವುದು ಕನ್ನಡಿಗರ ಮೇಲೆ ಬಿದ್ದಿರುವ ಹೊಣೆಯಾಗಿದೆ. ಪದಗಳ ಮೂಲವನ್ನು, ಚರಿತ್ರೆ ಯನ್ನು ಬೆದಕಿ ಕಂಡುಹಿಡಿಯುವ ಪ್ರಯತ್ನ ನಡೆಯಬೇಕು. ಅದಕ್ಕೆ ಶಬ್ದಾರ್ಥಜ್ಞಾನ,

ಶಾಸ್ತ್ರ ಪರಿಚಯ ಅವಶ್ಯವಾಗಿಬೇಕು. ಡಿ.ಎಲ್.ಎನ್ ಅವರು ಅದೇ ಕ್ರಮವನ್ನು ಹಿಡಿದು **ಕನ್ನಡಕ್ಕೆ ಹೊಸ ನಿಘಂಟು** ಎಂಬ ಲೇಖನದಲ್ಲಿ ಕೆಲವು ಪದಗಳ ಅರ್ಥವನ್ನು ನಿರ್ಣಯಿಸಿದ್ದಾರೆ.

ಹರಿಶ್ಚಂದ್ರ ಕಾವ್ಯದಲ್ಲಿ ಬಳಕೆಯಾದ 'ಹುಡುಕು ನೀರು' ಇದರ ಹಿಂದಿನ ರೂಪ 'ಪುಡುಕು ನೀರು'. ಪುಡುಕು+ನೀರ್. ಪುಡುಕು ಶಬ್ದದ ಅರ್ಥ ಪುಡು+ಕು ಇಲ್ಲಿ 'ಕು' ಎಂಬುದು ಪ್ರತ್ಯಯ. 'ಪುಟ್ಟು' ಎಂಬ ಧಾತುವನ್ನು ಕೇಶಿರಾಜ ಕೊಟ್ಟು, ಅದಕ್ಕೆ 'ದಹನ ಕ್ರಿಯೆ' ಎಂಬರ್ಥವನ್ನು ತಿಳಿಸಿದ್ದಾನೆ. 'ಪುಡುಕು' ಎಂಬುದು ಕುದಿ, ಬೇಯು ಎಂಬರ್ಥವನ್ನು ಪಡೆದಿದೆ. 'ಪುಡುಕುನೀರು' ಎಂದರೆ ಕುದಿಯುವ ನೀರು/ಬಿಸಿನೀರು ಎಂದರ್ಥವಾಗುತ್ತದೆ. ಇದರಂತೆ ಡಿ.ಎಲ್.ಎನ್ ಅವರು ಮೇಗಾಳಿ/ಕಿಗ್ಗಾಳಿ, ಬಡಪ, ಓಹರಿ, ಸಾಹರಿ, ಒಲ್ಲಣಿಗೆ, ಮಾವಿಟ್ಟಿ ಇಂತಹ ರೂಪಗಳನ್ನು ಪ್ರಾಚೀನ ಸಾಹಿತ್ಯ ಮತ್ತು ಮೌಖಿಕ ಆಕರಗಳಿಂದ ಬಿಡಿಸಲು ಯತ್ನಿಸಿದ್ದಾರೆ. ಅವರ ಬಹುಶ್ರುತ ಪಾಂಡಿತ್ಯ ಇದರಿಂದ ವ್ಯಕ್ತವಾಗುತ್ತದೆ.

ಡಿ.ಎಲ್.ಎನ್‌ರು ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಪಡಿಸುತ್ತಿದ್ದ ಕನ್ನಡ-ಕನ್ನಡ ನಿಘಂಟುವಿನ ರಚನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು(೧೯೪೬-೧೯೬೬). ಕನ್ನಡ ಭಾಷೆಯ ಚಾರಿತ್ರಿಕ ಬೆಳವಣಿಗೆಯನ್ನು ಸೂಚಿಸುವ ಈ ನಿಘಂಟುವಿನ ವೈಜ್ಞಾನಿಕ ಸ್ವರೂಪಕ್ಕೆ ಡಿ.ಎಲ್.ಎನ್‌ರೂ ಕಾರಣವಾಗಿದ್ದಾರೆ. ನಿಘಂಟುಕಾರನಿಗೆ ವಿವಿಧ ಶಾಸ್ತ್ರ ಪರಿಭಾಷೆಗಳ ಪರಿಚಯ, ಗ್ರಾಮಜೀವನದ ಅರಿವು ಮತ್ತು ತಾಳ್ಮೆ, ಸಹೃದಯತೆ ಇರಬೇಕೆಂದು **ನಿಘಂಟು ರಚನೆ** ಎಂಬ ಲೇಖನದಲ್ಲಿ ಹೇಳಿದ್ದಾರೆ. ಶಬ್ದ ಪ್ರಪಂಚದಲ್ಲಿ ಅನೇಕ ವಿಚಿತ್ರ ವ್ಯಾಪಾರಗಳು ನಡೆಯುತ್ತವೆ. ಸಾವಧಾನವಾಗಿ ಪರೀಕ್ಷಿಸಿ ನೋಡಿದರೆ ಅನೇಕ ಅದ್ಭುತ ಸಂಗತಿಗಳು ಬೆಳಕಿಗೆ ಬರುತ್ತವೆ. ಶಬ್ದಾರ್ಥದಲ್ಲಿ ಸಂಕುಚಿತತೆ, ವಿಸ್ತರಣೆ ಆಗುತ್ತದೆ. ಕನ್ನಡಕೋಶ ರಚನೆಗೆ ಡಿ.ಎಲ್.ಎನ್ ಕಾಣಿಕೆ ಅತ್ಯಮೂಲ್ಯವಾಗಿದೆ.

II

ನರಸಿಂಹಾಚಾರ್ಯರ ವ್ಯಾಕರಣ ಚಿಂತನೆಗಳು ಶಬ್ದಾರ್ಥ ವಿವೇಚನೆಯ ಕಡೆಗೆ ಹೆಚ್ಚು ಒಲವು ತೋರಿದರೂ ವ್ಯಾಕರಣಕ್ಕೇ ಸಂಬಂಧಿಸಿದ ಅವರ ಲೇಖನಗಳು ಗಮನಾರ್ಹವಾಗಿವೆ. ವ್ಯಾಕರಣವನ್ನು ನರಸಿಂಹಾಚಾರ್ಯರು ಮೀಮಾಂಸೆಯ ದೃಷ್ಟಿಯಿಂದ ನೋಡುತ್ತಾರೆಂಬುದಕ್ಕೆ ಅವರ **'ಕನ್ನಡದಲ್ಲಿ ಶಬ್ದರಚನೆ'** ಎಂಬ ದೀರ್ಘ ಸಂಪ್ರಬಂಧವನ್ನು ಒಮ್ಮೆ ಪರಿಶೀಲಿಸಬೇಕು. ಅದೊಂದು ವಿದ್ವತ್‌ಯಾತ್ರೆ. ವಿಷಯವನ್ನು ಸಂಗ್ರಹ ಮಾಡುವಲ್ಲಿ, ತರ್ಕಬದ್ಧವಾಗಿ ಅಳವಡಿಸಿ, ವ್ಯಾಖ್ಯಾನಿಸುವಲ್ಲಿ ಅವರದ್ದೇ ಆದ ಛಾಪುಯಿದೆ. ಆ ಸಂಪ್ರಬಂಧ ಅವರ ಆಳವಾದ ವ್ಯಾಸಂಗವನ್ನು ಎತ್ತಿ ಹೇಳುತ್ತದೆ.

ಸಾಮಾನ್ಯವಾಗಿ ಮಾತಿನಲ್ಲಿ ವ್ಯಕ್ತಪಡಿಸಬಹುದಾದ ಅತಿ ಕನಿಷ್ಠ ಆಲೋಚನಾಂಶವನ್ನು ಶಬ್ದವೆಂದು ಹೇಳಬಹುದು. ಮಾಡ್ (ಧಾತು)+ಉ+ಇ(ಎಂಬೆರಡು ಪ್ರತ್ಯಯಗಳು)+ದ+ಅನ್+ಉ=ಮಾಡಿದನು. ಕನ್ನಡದಲ್ಲಿ ಉಪಸರ್ಗಗಳಿಲ್ಲ. ಇಸ್ಕೂಲು, ಇಸ್ಲೇಟು ಮುಂತಾದವುಗಳಲ್ಲಿ ಉಚ್ಚಾರಣೆಯ ಸೌಲಭ್ಯಕ್ಕಾಗಿ ಶಬ್ದಾದಿಯಲ್ಲಿ ಸ್ವರಗಳನ್ನು ಸೇರಿಸ ಲಾಗಿದೆ. ಡಿ.ಎಲ್.ಎನ್‌ರು ಕನ್ನಡ ಶಬ್ದರಚನೆಯ ರೀತಿಯನ್ನು ಹಾಗೂ ಕನ್ನಡದಲ್ಲಿ ಅದರ ವೈಲಕ್ಷಣ್ಯಗಳನ್ನು ಕುರಿತು ವಿವರಿಸಿದ್ದಾರೆ. ಶಬ್ದಕ್ಕೆ ಬೀಜರೂಪವಾದ ಧಾತುವಿನ ಸ್ವರೂಪವನ್ನು ಖಚಿತವಾಗಿ ಹೇಳಿದ್ದಾರೆ.

ಕನ್ನಡ ಧಾತುಗಳು (ದ್ರಾವಿಡ ಭಾಷಾ ಧಾತುಗಳು) ಮೂಲತಃ ಏಕಾಕ್ಷರಯುಕ್ತ ವಾಗಿದ್ದುವು. ಹ್ರಸ್ವ+ವ್ಯಂಜನ, ದೀರ್ಘ+ವ್ಯಂಜನ ಒಂದೇ ಧಾತು ನಾಮಪದ, ಕ್ರಿಯಾಪದ ಮತ್ತು ಗುಣವಚನಾರ್ಥದಲ್ಲಿ ಬಳಕೆಯಾಗುತ್ತದೆ. ಕಲ್(ಧಾತು), ಶಿಲೆ (ನಾಮರೂಪ), ಕಲ್ಲೆರ್ದೆ(ಗುಣವಚನ). ಶಬ್ದದ ಅರ್ಥದಲ್ಲಿ ಒಂದಕ್ಕೊಂದು ಸಂಬಂಧ ವಿಲ್ಲ. ಧಾತುಗಳಿಗೆ ಪ್ರತ್ಯಯಗಳು ಸೇರಿ ಬೇರೆ ಬೇರೆ ಪದರಚನೆಗಳು ನಿರ್ಮಾಣವಾಗುತ್ತವೆ. ಅಣ್+ಎ=ಅಣೆ(ಸೋಕು, ಕೆರೆಯಕಟ್ಟೆ), ಅಣ್+ಕೆ=ಅಣ್ಕೆ(ಲೇಪನ) ಧಾತುಗಳ ದೀರ್ಘಿ ಕರಣದಿಂದ ಹೊಸಪದಗಳನ್ನು ನಿರ್ಮಿಸಿಕೊಳ್ಳಬಹುದು. ಉದಾ. ಪಡು-ಪಾಡು ಎರಡು ಧಾತುಗಳ ಸಂಯೋಗದಿಂದ ಹೊಸ ರೂಪಗಳು ಪ್ರಯೋಗವಾಗುತ್ತವೆ. ಕ್ರಿಯಾಧಾತು+ ಕ್ರಿಯಾಧಾತು (ಈಸು+ಆಡು>ಈಸಾಡು), ನಾಮಧಾತು+ಕ್ರಿಯಾಧಾತು (ಕೈ+ಮಾಡು>ಕೈ ಮಾಡು) ಒಂದು ಧಾತು ಪುನರುಕ್ತವಾಗಿ ನಾಮವಾಚಕವಾಗಿಯೋ, ಕ್ರಿಯಾವಾಚಕ ವಾಗಿಯೋ ಆಗುತ್ತದೆ. ತಿಣೆ+ತಿಣೆ=ತಿಂತಣೆ, ಒರಸು+ಒರಸು=ಒರಸೊರಸು ಕ್ರಿಯಾಪದ ರಚನೆ ಕನ್ನಡದಲ್ಲಿ ಹೇಗಾಗುತ್ತದೆಂಬುದನ್ನು ಸುದೀರ್ಘವಾಗಿ ಹೇಳಿದ್ದಾರೆ.

ಕೇಶಿರಾಜ, ಭಟ್ಟಾಕಳಂಕ ಹೇಳಿರುವ ಕೃತ್ ಪ್ರತ್ಯಯಗಳ ಸ್ವರೂಪವನ್ನು ಹೇಳಿದ್ದಾರೆ. ಅ (ಗೆಲ್ಲ, ಸೊಲ್ಲ), ಅಮೆ (ತೀರಮೆ), ಅವಿ (ಬಳವಿ) ಭಾಷೆಯನ್ನು ಬೆದಕುತ್ತ ಹೋದಂತೆ ಇನ್ನೂ ಹಲವು ಪ್ರತ್ಯಯಗಳು ದಲ್, ದಲೆ (ತವುದಲೆ, ಅಗುಂದಲೆ), ದಿ (ಕೆಡುದಿ, ಉರುದಿ) ದೊರೆಯುತ್ತವೆ. ಕನ್ನಡದಲ್ಲಿ 'ಡ' ಕಾರಕ್ಕೆ 'ಟ' ಕಾರವಾಗುತ್ತದೆ. (ಆಡು-ಆಟ, ಪಾಡು-ಪಾಟ) ಒಂದೇ ಧಾತುವಿಗೆ ಬೇರೆ ಬೇರೆ ಪ್ರತ್ಯಯಗಳು ಸೇರಿ ಅನೇಕ ಭಾವನಾಮಗಳಾಗುತ್ತವೆ. 'ತವು' ಎಂಬುದರಿಂದ ತವಿಲ್, ತವುದಲೆ. ಡಿ.ಎಲ್. ನರಸಿಂಹಾಚಾರ್ಯ ಅವರು ಕ್ರಿಯಾಧಾತುಗಳಿಂದ ಅವುಗಳಿಗೆ ಸೇರುವ ಪ್ರತ್ಯಯಗಳಿಂದಲೂ ಬೇರೆ ಬೇರೆ ಶಬ್ದಗಳ ನಿಷ್ಪತ್ತಿಯನ್ನು ಗಮನಿಸಿದ್ದಾರೆ. ನಾಮಧಾತುಗಳಿಂದಲೂ ಅವಕ್ಕೆ ಸೇರುವ ಪ್ರತ್ಯಯಗಳಿಂದಲೂ ಶಬ್ದ ಸೃಷ್ಟಿ ಆಗುವ ವಿಧಾನವನ್ನು ಸಂಕ್ಷಿಪ್ತವಾಗಿ ಹೇಳಿದ್ದಾರೆ. ನಾಮರೂಪಕ್ಕೆ ಸಾಧಾರಣವಾಗಿ ಸೇರುವ ಪ್ರತ್ಯಯಗಳು (ಲಿಂಗ, ವಚನ ಸೂಚಕ ಪ್ರತ್ಯಯಗಳು, ವಿಭಕ್ತಿ, ಆಖ್ಯಾತ, ತದ್ಧಿತ ಪ್ರತ್ಯಯಗಳೆಂದು ವಿಂಗಡಿಸಲಾಗಿದೆ).

ಕನ್ನಡದಲ್ಲಿ ಕೃತ್ ಪ್ರತ್ಯಗಳಂತೆ ತದ್ಧಿತ ಪ್ರತ್ಯಯಗಳು ಹೇರಳವಾಗಿವೆ. ಕೇಶಿರಾಜ ಮತ್ತು ಭಟ್ಟಾಕಳಂಕರು ಈ ಪ್ರತ್ಯಯಗಳನ್ನು ಕುರಿತು ವಿವೇಚಿಸಿದ್ದಾರೆ. ಆದರೆ ಅವರು ಈ ಪ್ರತ್ಯಯಗಳ ಮೂಲಗಳೇನಿರಬಹುದೆಂಬ ವಿಚಾರವನ್ನು ಮಾಡಿಲ್ಲ. ಡಿ.ಎಲ್.ಎನ್‌ರು ಆ ಕುರಿತು ಚರ್ಚೆ ಬೆಳೆಸಿದ್ದಾರೆ. ತನ ಎಂಬುದು ವಸ್ತುವಿನ ಭಾವವನ್ನು ನಿರ್ದೇಶಿಸುವ ಪ್ರತ್ಯಯ. ಇದರ ಮೂಲ ಸಂಸ್ಕೃತದ ತ್ವ, ತ್ವನ, ಅಥವಾ ಅಪಭ್ರಂಶದ ತ್ತಣ ಆಗಿರಬಹುದು. ವಳ, ವಳ್ಳ ಎಂಬುದಕ್ಕೆ ಸಂಸ್ಕೃತದ 'ಪಾಲ' ಶಬ್ದ ಆ ಪ್ರತ್ಯಯಗಳಿಗೆ ಮೂಲ ಆಗಿರಬಹುದು. ಇತಿ/ತಿಗಳು ಸಂಸ್ಕೃತದ 'ಸ್ತ್ರೀ'ರೂಪದ ಸವಕಳಿಯಾಗಿರಬಹುದು. ಡಿ.ಎಲ್.ಎನ್ ಅವರ ಈ ವಿಚಾರ ಸರಣಿಯನ್ನು ಒಪ್ಪಬಹುದಾಗಿದೆ. ಕೆಲವು ತದ್ಧಿತ ಪ್ರತ್ಯಯಗಳು ಕನ್ನಡ ಧಾತುಗಳಿಂದ ನಿಷ್ಪನ್ನವಾಗಿವೆ. 'ಉಳ್' ಎಂಬುದರಿಂದ ಉಳ್ಳ, ಉಳಿಗ ಎಂಬುದು, ಉಣ್ ಎಂಬುದರಿಂದ ಉಣಿ ಎಂಬುದು ಸಿದ್ಧಿಯಾಗಿದೆ. ಕನ್ನಡ ವ್ಯಾಕರಣಗಳಲ್ಲಿ ಹೇಳಿರುವ ತದ್ಧಿತ ಪ್ರತ್ಯಯಗಳನ್ನು ಇಲ್ಲಿ ಸಂಗ್ರಹವಾಗಿ ವಿಮರ್ಶಿಸಿದ್ದಾರೆ. ಈವರೆಗೂ ದಾಖಲಾಗದ ಕೆಲವು ಪ್ರತ್ಯಯಗಳನ್ನು ಡಿ.ಎಲ್.ಎನ್‌ರು ಶೋಧಿಸಿದ್ದಾರೆ. ಅಸಿಗ (ಕಳ್ಳಸಿಗಂ), ತಿನಿತೀನಿ (ಪಿಜಿತಿನಿ), ಪಣ (ಶೌರ್‍ಯಪಣ).

ಭಾಷೆಯಲ್ಲಿಯ ಮೂಲ ಸಾಮಗ್ರಿಗಳಿಂದ ಹೊಸರೂಪಗಳು ಸಿದ್ಧವಾಗುತ್ತವೆ. ದ್ವಿಗು ಸಮಾಸದ ವಿಶೇಷತೆಯನ್ನು ಹೇಳಿದ್ದಾರೆ. ಒಂಬೈನೂರು ಈ ಶಬ್ದದ ಮಾದರಿಯಲ್ಲಿ ಯಾವ ಭಿನ್ನಾಂಕವನ್ನಾದರೂ ನಿರ್ದೇಶಿಸುವ ಶಬ್ದವನ್ನು ರಚಿಸಬಹುದು. ನೂರೊಂದಿ ೧/೧೦೦, ನೂರುಮೂರಿ ೩/೧೦೦ ಇಂತಹ ನೂತನ ರಚನೆ ಎಂದರೆ ಒಂದು ಕಾಲದಲ್ಲಿ ಕಣ್ಮರೆಯಾಗಿ ತಿರುಗಿ ಕಣ್ಣಿಗೆ ಬಿದ್ದಿರುವ ಸಂಕ್ಷಿಪ್ತತೆಯನ್ನು, ಶಕ್ತಿಯನ್ನು ತರುವ ವಿಧಾನವಾಗಿದೆ. ಡಿ.ಎಲ್.ಎನ್ ಅವರು ಕೂಡುನುಡಿಗಳ/ಯಮಳ ಶಬ್ದಗಳ (ಗೆಡ್ಡೆ-ಗೆಣಸು ಹುಳು-ಹುಪ್ಪಟೆ) ಸ್ವರೂಪವನ್ನು ಹೇಳಿದ್ದಾರೆ. 'ಮನೆಗಿನೆ'ಯನ್ನು ಯಮಳ ಶಬ್ದಗಳೆಂದು ಕರೆದಿರುವುದು ಸರಿಯಲ್ಲ. ಅದು ಪ್ರತಿಧ್ವನಿರೂಪ. ಭಾಷೆಯಲ್ಲಿ ಈಗಾಗಲೇ ಬಳಕೆಯಲ್ಲಿರುವ ರೂಪಗಳ ಆಧಾರದ ಮೇಲೆ ಅವಕ್ಕೆ ಸದೃಶ್ಯವಾದ ಹೊಸರೂಪಗಳ ಸೃಷ್ಟಿ ಸಾದೃಶ್ಯ ಮೂಲ ರಚನೆ. ಇದು ಹೊಸಶಬ್ದ ನಿರ್ಮಾಣಕ್ಕೆ ಕಾರಣವಾಗಿದೆ. ಸಹಕರಿಸು ಶಬ್ದದಂತೆ ಚಹಕರಿಸು (ಚಹೋಪಚಾರ ಏರ್ಪಡಿಸುವುದು)

ಭಾಷೆಯಲ್ಲಿ ಹೊಸಪದಗಳು ಬೆಳೆದು ಬಂದಿರುವ ವಿಧಾನಗಳನ್ನು ಡಿ.ಎಲ್.ಎನ್ ವಿಸ್ತಾರವಾಗಿ ವಿವೇಚಿಸಿದ್ದಾರೆ. ೧. ಒಂದು ರೂಪ ಬೇರೊಂದು ಸಂದರ್ಭದಲ್ಲಿ ಪ್ರಯೋಗವಾಗುವುದರಿಂದ ಹೊಸರೂಪ ನಿರ್ಮಾಣವಾಗುತ್ತದೆ. ಪಾದಪೂಜೆ: ೧. ಪೂಜ್ಯ ವ್ಯಕ್ತಿಗಳಿಗೆ ತೋರಿಸುವ ಭಕ್ತಿ, ಗೌರವ. ೨ ಒದೆತ ಎಂಬರ್ಥವೂ ಇದೆ. ೩. ಸೌಲಭ್ಯಾಕ್ಷಾಂಕ್ಷೆ ಉದಾ-Examination-exam. ೪. ಕೆಲವು ಶಬ್ದಗಳ ಆದ್ಯ ಅಕ್ಷರಗಳನ್ನು ಒಟ್ಟಿಗೆ ಸೇರಿ ಹೊಸಶಬ್ದ ನಿರ್ಮಿಸುವುದು. ಕುವೆಂಪು(ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ). ಒಂದು ಭಾಷೆಯಲಿಲ್ಲದ ವಸ್ತು, ವಿಷಯ ಅನ್ಯ ಭಾಷೆಯಲ್ಲಿದ್ದರೆ ಆ ವಿಷಯವನ್ನು ನಿರ್ದೇಶಿಸುವ ಶಬ್ದವನ್ನು ಆ ಭಾಷೆಯ ಜಾಯಮಾನಕ್ಕೆ ತಕ್ಕಂತೆ ತೆಗೆದುಕೊಳ್ಳುವುದೇ ಸ್ವೀಕರಣ.

ಪಾರಸಿ, ಮರಾಠಿ, ಇಂಗ್ಲಿಶ್ ಭಾಷೆಯ ಅನೇಕ ರೂಪಗಳು (ಬ್ಯಾಂಕ್, ಬಸ್, ಕಾಗದ, ಮುಂ) ತೆಗೆದುಕೊಳ್ಳುವ ಭಾಷೆಗೆ ಸೇರುತ್ತವೆ. 'ರಾಗಿ', 'ಮೆಣಸಿನಕಾಯಿ' ಈ ಪದಗಳ ಪ್ರಾಚೀನತೆಯನ್ನು ಹೇಳುತ್ತ ಇವು ಯಾವ ರೀತಿಯಾಗಿ ಕನ್ನಡಕ್ಕೆ ಬಂದವು ಎಂಬುದನ್ನು ತುಂಬಾ ಸ್ವಾರಸ್ಯಕರವಾಗಿ ಹೇಳಿದ್ದಾರೆ. ಯಾವುದೇ ಭಾಷೆ ತನಗೆ ಅವಶ್ಯವಿದ್ದಾಗ ಅನ್ಯ ಭಾಷೆಯ ರೂಪಗಳನ್ನು ಸ್ವೀಕರಿಸಬೇಕು. ಅದು ಒಂದು ಭಾಷೆ ಬೆಳೆಯುವ ವಿಧಾನವಾಗಿದೆ.

ಕನ್ನಡ ಧಾತುಗಳ ಸ್ವರೂಪವನ್ನು ಡಿ.ಎಲ್.ಎನ್‌ರು ಹೇಳಿದ್ದಾರೆ. ೧. **ಒಂದಕ್ಷರ ಧಾತುಗಳು.** ಅ, ಈ, ಓ ಮುಂತಾದವು ೨. **ಎರಡಕ್ಷರ ಧಾತುಗಳು** VCV (ಅಗಿ), VCC (ಆಳ್), CVCV (ನೆರೆ), CVC (ನಿಲ್), VNCVC (ಇಂಗು), CVNCV (ತಂಗು), CVCCVC (ನಕ್ಕು), VCCVC (ಇಕ್ಕು) ೩. **ಮೂರಕ್ಷರದ ಧಾತುಗಳು** CVCVCV (ತುಜುಗು), VCVC (ಅಡರ್), VCVCV (ಅಡಕು) ಈ ಮಾದರಿಗಳಿಗೆ ಅನುಸಾರವಾಗಿ ಹೊಸಧಾತುಗಳು ನಿರ್ಮಾಣವಾಗುತ್ತವೆ. ಕನ್ನಡ ಪದರಚನೆಯ ಜಾಯಮಾನ ವನ್ನು ಅವರು ಸರಿಯಾಗಿ ಗುರುತಿಸಿದ್ದಾರೆ.

ಡಿ.ಎಲ್.ಎನ್ ಅವರು ಈ ಲೇಖನದಲ್ಲಿ ಕನ್ನಡ ಶಬ್ದಶಿಲ್ಪದ ಸ್ವರೂಪವನ್ನು ವಿಸ್ತಾರ ವಾಗಿ ವಿವೇಚಿಸಿದ್ದಾರೆ. ಇತರ ದ್ರಾವಿಡ ಭಾಷೆಗಳಲ್ಲಿರುವಂತೆ ಕನ್ನಡದಲ್ಲಿ ಅಂತ್ಯ ಪ್ರತ್ಯಯಗಳ ಪ್ರಯೋಗದಿಂದ ನೂತನ ಶಬ್ದ ನಿರ್ಮಾಣದ ಸಾಧ್ಯತೆಯನ್ನು ಹೇಳಿದ್ದಾರೆ. ಡಿ.ಎಲ್.ಎನ್‌ರ ಈ ಎಲ್ಲ ವಿಚಾರಗಳನ್ನು ಈಗ ಹೊಸ ಸಿದ್ಧಾಂತಗಳನ್ನು ಮಂಡಿಸುತ್ತಿ ರುವ ಡಿ.ಎನ್. ಶಂಕರಭಟ್‌ರ ವಿಚಾರಗಳ ಹಿನ್ನೆಲೆಯಲ್ಲಿ ಮತ್ತೆ ಪರಿಶೀಲಿಸಬೇಕಾಗಿದೆ.

ಡಿ.ಎಲ್.ಎನ್ ಅವರು ತಾವು ಸಂಪಾದಿಸಿದ **ಶಬ್ದಮಣಿದರ್ಪಣಕ್ಕೆ** ಬರೆದ ಪ್ರಸ್ತಾವನೆ ತುಂಬ ಮೌಲಿಕವಾಗಿದೆ. ತಮಗಿಂತ ಹಿಂದಿನ ಆವೃತ್ತಿಗಳ(ಗ್ಯಾರೆಟ್, ಕಿಟಲ್, ಕನ್ನಡ ಸಾಹಿತ್ಯಪರಿಷತ್ತು ಆವೃತ್ತಿ, ಮದ್ರಾಸ್ ವಿಶ್ವವಿದ್ಯಾಲಯ ಆವೃತ್ತಿ) ಸ್ವರೂಪವನ್ನು ಪರಿಶೀಲಿಸಿದ್ದಾರೆ. ತಮ್ಮ ಆವೃತ್ತಿಗೆ ೨ ಓಲೆಯ ಹಾಗೂ ೨ ಮುದ್ರಿತ ಪ್ರತಿಗಳನ್ನು ಬಳಸಿಕೊಂಡಿದ್ದಾರೆ. ಸೂತ್ರ, ವೃತ್ತಿ, ಪ್ರಯೋಗ ಈ ಮೂರಕ್ಕೆ ಸಂಬಂಧಿಸಿದ ಪಾಠ ಸಮಸ್ಯೆಗಳ ಕುರಿತು ಚರ್ಚಿಸಿದ್ದಾರೆ. ಶಬ್ದಮಣಿದರ್ಪಣದ ಸಶಾಸ್ತ್ರೀಯ ಸವಿಮರ್ಶೆ ಪರಿಷ್ಕರಣದ ಅಗತ್ಯವನ್ನು ಡಿ.ಎಲ್.ಎನ್‌ರು ಸಕಾರಣವಾಗಿಯೇ ಹೇಳಿದ್ದಾರೆ. ಕೇಶಿರಾಜ ತನಗಿಂತ ಹಿಂದಿನ ಕಾವ್ಯಗಳಿಂದ ಹಾಗೂ ಸೂಕ್ತಿ ಸುಧಾರ್ಣವದಿಂದ ಆತ ಬಳಸಿಕೊಂಡ ಆಕರಗಳ ಸ್ವರೂಪವನ್ನು ಹೇಳಿದ್ದಾರೆ. ಕೇಶಿರಾಜನ ವ್ಯಕ್ತಿತ್ವ ರೂಪುಗೊಳ್ಳಲಿಕ್ಕೆ ಅವನು ಬೆಳೆದು ಬಂದ ಪರಿಸರ ಮತ್ತು ಪರಿಕರಗಳು ಹೇಗೆ ಪ್ರಭಾವ ಬೀರಿದವು ಎಂಬುದನ್ನು ವಿವೇಚಿಸಿದ್ದಾರೆ. ಶಬ್ದಮಣಿದರ್ಪಣ ಕಾವ್ಯಲೇಪನ ಪಡೆದಿರುವ ಶಾಸ್ತ್ರವಾಗಿದೆ. ಡಿ.ಎಲ್. ನರಸಿಂಹಾಚಾರ್ಯ ಅವರು ಹಂಪನಾ ಅವರ 'ಭಾಷಾವಿಜ್ಞಾನ' ಕೃತಿಗೆ ಅಭ್ಯಾಸಪೂರ್ಣ ಮುನ್ನುಡಿ ಬರೆದಿದ್ದಾರೆ. ಸಾಹಿತ್ಯಾಭ್ಯಾಸಿಗಳಿಗೆ ಭಾಷಾವಿಜ್ಞಾನದ ಆಳವಾದ ಪರಿಚಯ ಎಷ್ಟು ಅಗತ್ಯವೆಂಬುದನ್ನು ತುಂಬ ಅರ್ಥಪೂರ್ಣವಾಗಿ ಹೇಳಿದ್ದಾರೆ.

ಡಿ.ಎಲ್.ಎನ್‌ರ ವ್ಯಾಕರಣ ಅಧ್ಯಯನದಲ್ಲಿ ಕಾಣುವ ಮಹತ್ವದ ಅಂಶವೆಂದರೆ ಕಾಲನಿಕ ದೃಷ್ಟಿ. ಬಹುಜ್ಞತೆಯ ಮುಖ್ಯ ಗುಣವಾಗಿರುವ ಅವರ ಬರಹಗಳು ಈ ಕಾಲನಿಕ ದೃಷ್ಟಿಗೆ ಸೂಚಕಗಳಾಗಿವೆ. ಅವರ 'ಕನ್ನಡದಲ್ಲಿ ಶಬ್ದರಚನೆ' ಕನ್ನಡ ವ್ಯಾಕರಣದ ಹೊಸಸಾಧ್ಯತೆಗಳನ್ನು ಕುರಿತು ವಿಚಾರ ಮಾಡುವವರಿಗೆ ಉತ್ತಮ ಮಾರ್ಗ ದರ್ಶಕವಾಗಿದೆ.

III

ಕನ್ನಡ ಛಂದಸ್ಸಿನ ಸಂವರ್ಧನೆಗೆ ನಿರಂತರವಾಗಿ ದುಡಿದವರಲ್ಲಿ ಡಿ.ಎಲ್.ಎನ್ ಅವರು ಮುಖ್ಯರು. ಪ್ರಾಚೀನ ಕಾವ್ಯ, ಶಾಸನಗಳಲ್ಲಿರುವ ಛಂದೋರೂಪಗಳನ್ನು ಶೋಧಿಸಿದ್ದಾರೆ; ವಿಶ್ಲೇಷಿಸಿದ್ದಾರೆ. ಛಂದಸ್ಸಿಗೆ ಸಂಬಂಧಿಸಿದ ಅವರ ಸಂಪ್ರಬಂಧಗಳು ತುಂಬ ಮೌಲಿಕವಾಗಿವೆ. ತೋಮರ ರಗಳೆ ಈ ಹೆಸರಿನ ರಗಳೆ ದಕ್ಷಿಣ ಭಾರತದ ಶಾಸನವೊಂದರಲ್ಲಿ ದೊರೆಯುತ್ತದೆ. ಆ ರಗಳೆಯು ೫ ಮಾತ್ರೆಗಳ ೪ ಗಣಗಳಿರುವ ಹಾಗೂ ಎರಡೆರಡು ಪಾದಗಳಿಗೆ ಆದಿ ಮತ್ತು ಅಂತ್ಯ ಪ್ರಾಸಗಳಿಂದ ಕೂಡಿದೆ. ಇದು ಸ್ಥೂಲವಾಗಿ ಲಲಿತ ರಗಳೆಯ ಲಕ್ಷಣದ ವಿನ್ಯಾಸದಲ್ಲಿದೆ. ಆದರೆ ಶಾಸನದಲ್ಲಿ 'ತೋಮರ ರಗಳೆ' ಎಂದು ಏಕೆ ಕರೆದರು? ಈ ಕುರಿತು ಡಿ.ಎಲ್.ಎನ್ ಅವರು ಬಹುಶಃ ಈಗ ಲಲಿತ ರಗಳೆಯೆಂದು ಕರೆಯಿಸಿ ಕೊಂಡಿರುವ ಪದ್ಯ ಜಾತಿಗೆ ಆ ಹೆಸರು ಆ ಶಾಸನ ಕಾಲದಲ್ಲಿ (೧೦೫೫) ಇದ್ದಿರಲಾರದು? ಅದರ ವಿನ್ಯಾಸದಿಂದಾದ ಈ ರಗಳೆಗೆ 'ತೋಮರ ರಗಳೆ' ಎಂಬ ಹೆಸರು ಬಂದಿದೆ.

'ಧವಳ' ಎಂದರೆ ಮದುವೆ ಮುಂತಾದ ಮಂಗಳ ಸಮಯದಲ್ಲಿ ಹೇಳುವ ಒಂದು ಬಗೆಯ ಹಾಡು. ಈ ಜಾತಿಯ ಹಾಡು ೧೦ನೇ ಶತಮಾನದಲ್ಲಿ ಕನ್ನಡ ಜನತೆಯಲ್ಲಿ ಪ್ರಚುರವಾಗಿತ್ತೆಂಬುದಕ್ಕೆ ರನ್ನನೇ ಸಾಕ್ಷಿ. ಕನ್ನಡದಲ್ಲಿ ಹಿಂದಿನ ಕಾಲದಿಂದಲೂ ಜನ ಪ್ರಿಯವಾಗಿರುವ ಈ ಹಾಡಿನ ಸ್ವರೂಪವನ್ನು ತಿಳಿಯಲಿಕ್ಕೆ 'ಧವಳ'ವೆಂಬ ಹಾಡಿನ ಸ್ವರೂಪ ಎಂಬ ಲೇಖನದಲ್ಲಿ ವಿವರಿಸಿದ್ದಾರೆ. ಕನ್ನಡ ಜಾನಪದ ಸಾಹಿತ್ಯದಲ್ಲಿಯೂ (ಸೀಮಂತ, ಉಪನಯನ ಇಂತಹ ಸಂದರ್ಭಗಳಲ್ಲಿ) ಹೆಂಗಳೆಯರು ಹಾಡುತ್ತಾರೆ.

೧ ೨
ತನ್ನ ಕುಲದ | ಹಿರಿಯರನು
೩ ೪
ಮನ್ನಿಸಿಕರೆ | ಯಿಸಿಮನೆಗೆ
೧ ೨
ಭಿನ್ನವಿಸಿದ | ನವರಿಗೆ
೩ ೪
ತನ್ನಂತ | ಸ್ಥವನು

ಇಲ್ಲಿಯ ನಾಲ್ಕು ಪಾದಗಳಲ್ಲಿ ಆದಿಪ್ರಾಸವಿದೆ. ಪಾದವೊಂದಕ್ಕೆ ಎರಡೆರಡಂತೆ ೬ ಮಾತ್ರೆಗಳ ಗಣವಿನ್ಯಾಸವಿದೆ. ತೆಲುಗು ಸಾಹಿತ್ಯದಲ್ಲಿಯೂ ಈ ಹಾಡಿನ ಉಲ್ಲೇಖವಿದೆ. ತೆಲುಗಿನ ಧವಳದ ಜೊತೆಗೆ ಕನ್ನಡದ ಧವಳಗಳನ್ನು ತೌಲನಿಕವಾಗಿ ವಿವೇಚಿಸಿದ್ದಾರೆ. ೫ ಮತ್ತು ೬ ಮಾತ್ರೆಗಳ ಗಣದ ವಿನ್ಯಾಸದಲ್ಲಿ ಆಧುನಿಕ ಕನ್ನಡ ಕವಿಗಳು (ಬಿ.ಎಂ.ಶ್ರೀ, ಕುವೆಂಪು, ಪುತಿನ) ಸುಂದರವಾದ ಪದ್ಯಗಳನ್ನು ರಚಿಸಿದ್ದಾರೆ.

ರನ್ನನ ಕಾಲದಿಂದಲೂ ರೂಢಿಯಲ್ಲಿದ್ದ ಧವಳವು ಕಾಲಸಾಗರದಲ್ಲಿ ಕಣ್ಮರೆಯಾಗಿದ್ದು ನಮ್ಮ ಕಾಲದ ಕವಿದೃಷ್ಟಿಗೆ ಹೇಗೋ ಗೋಚರವಾಗಿ ಕೊಂಚ ರೂಪಾಂತರ ಗೊಂಡಿದ್ದರೂ ಮೂಲ ಸ್ವಭಾವವನ್ನು ನೀಗಿಕೊಳ್ಳದೆ ಪುನರುಜ್ಜೀವನಗೊಂಡು ಶ್ರವಣ ಸುಖದಾಯಿಯಾಗಿ ರಾರಾಜಿಸುತ್ತದೆ.

ಕಲ್ಯಾಣ ಚಾಲುಕ್ಯರ ಮೂರನೆಯ ಸೋಮೇಶ್ವರನ 'ಮಾನಸೋಲ್ಲಾಸ' ಎಂಬುದು ಲೌಕಿಕ ಶಾಸ್ತ್ರ ಕೃತಿ. ಕಾವ್ಯದ ದೃಷ್ಟಿಯಿಂದ ಹೇಗೋ ಛಂದಸ್ಸಿನ ದೃಷ್ಟಿಯಿಂದಲೂ ಮುಖ್ಯವಾದುದು. ಅದರಲ್ಲಿಯ ೧೬ನೇ ಅಧ್ಯಾಯ ಛಂದಸ್ಸಿಗೆ ಮೀಸಲಾಗಿದೆ. ಡಿ.ಎಲ್.ಎನ್‌ರು **ಮಾನಸೊಲ್ಲಾಸದಲ್ಲಿ ಛಂದಸ್ಸು** ಎಂಬ ಲೇಖನದಲ್ಲಿ ನಿರೂಪಿತವಾಗಿ ರುವ ಸಂಸ್ಕೃತ/ಪ್ರಾಕೃತ ವೃತ್ತ ವಿವರಗಳಾದ ಚರ್ಚರೀ, ಏಲಾ, ಜಯಮಾಲಿಕಾ, ಮಾಲತೀ, ಲಲಿತಾ, ಭೋಗವತೀ ಈ ವೃತ್ತಗಳನ್ನು ದೀರ್ಘವಾಗಿ ಹೇಳಲಾಗಿದೆ. ಕನ್ನಡ ಮಟ್ಟುಗಳಾದ ಕಂದ, ತ್ರಿಪದಿ, ಷಟ್ಪದಿ ಇವುಗಳ ಸ್ವರೂಪವನ್ನು ಸ್ಥೂಲವಾಗಿ ಹೇಳಲಾಗಿದೆ. ಡಿ.ಎಲ್.ಎನ್ ಆ ಕೃತಿಯಲ್ಲಿ ನಿರೂಪಿಸಲಾದ ಛಂದಸ್ಸಿನ ಇತರ ಕೆಲವು ಸಾಮಾನ್ಯ ಅಂಶಗಳನ್ನು ಸಂಗ್ರಹವಾಗಿ ಹೇಳಿದ್ದಾರೆ. ಅಂಶಗಣಾನ್ವಿತವಾದ ಷಟ್ಪದದ ಕೆಲವು ಪದ್ಯಗಳು ಇದುವರೆಗೆ ದೊರೆತಿವೆ. (ಚಂದ್ರರಾಜನ ಮದನತಿಲಕ, ಶಾಂತಿನಾಥನ ಸುಕುಮಾರ ಚರಿತ್ರೆ ಮುಂತಾದ ಕಾವ್ಯಗಳಲ್ಲಿ ಮತ್ತು ಕೆಲವು ಶಾಸನಗಳಲ್ಲಿ) ಈಗ ಅಂತಹ ಷಟ್ಪದಗಳು ವಿಜಾಪುರ ಜಿಲ್ಲೆಯ ಚಡಚಣ ಗ್ರಾಮದ ಶಾಸನದಲ್ಲಿಯೂ ದೊರಕಿವೆ. ಡಿ.ಎಲ್.ಎನ್‌ರು ಆ ಷಟ್ಪದಗಳ ಲಕ್ಷಣವನ್ನು ಕುರಿತು **ಮೂರು ಷಟ್ಪದ ಗಳು** ಎಂಬ ಲೇಖನದಲ್ಲಿ ಹೇಳಿದ್ದಾರೆ. ಈ ಷಟ್ಪದಗಳ ೧೧ನೇ ಶತಮಾನದಲ್ಲಿ ರಚಿತ ವಾಗಿರುವುದನ್ನು ನೋಡಿದರೆ ಆ ಕಾಲದಲ್ಲಿ ಅಂತಹ ಷಟ್ಪದಿಗಳನ್ನು ಬರೆಯುವ ವಾಡಿಕೆ ಅಧಿಕವಾಗಿದ್ದಿತೆಂದು ಊಹಿಸಬಹುದಾಗಿದೆ.

ಡಿ.ಎಲ್.ಎನ್ ಅವರು ಟಿ.ವಿ. ವೆಂಕಟಾಚಲಶಾಸ್ತ್ರೀ ಅವರ **'ಕನ್ನಡ ಛಂದಸ್ಸು'** ಕೃತಿಗೆ ಅಭ್ಯಾಸ ಪೂರ್ಣವಾದ ಮುನ್ನುಡಿ ಬರೆದಿದ್ದಾರೆ. ಪ್ರಾಸರಹಿತವಾದ ಸಂಸ್ಕೃತ ವರ್ಣವೃತ್ತ ಗಳನ್ನು ಕನ್ನಡಕ್ಕೆ ತರುವಾಗ ದ್ವಿತೀಯಾಕ್ಷರ ಪ್ರಾಸವನ್ನು ಸೇರಿಸಿದ್ದೂ ಯತಿಯನ್ನು ಉಲ್ಲಂಘಿಸಿದ್ದೂ ಅರ್ಥಯತಿಗೆ ಪ್ರಾಧ್ಯಾನ್ಯತೆಯನ್ನು ಕೊಟ್ಟಿದ್ದು ಇವೆಲ್ಲವನ್ನು ಕಾಣು ತ್ತೇವೆ. ಇಂತಹ ಬೆಲೆಯುಳ್ಳ ಸಲಹೆಗಳನ್ನು ಕೊಟ್ಟಿದ್ದಾರೆ. ರಗಳೆ ಅಂಶ ವೃತ್ತವೇ, ಪ್ರಾಕೃತಜನ್ಯವೇ ಎಂಬ ಸಮಸ್ಯೆಯನ್ನು ಎತ್ತಿಕೊಂಡು ರಗಳೆಯ ರಹಸ್ಯವನ್ನು ಬಿಡಿಸಲು ಯತ್ನಿಸಿದ್ದಾರೆ.

ಅರ್ಧಶತಮಾನ ಕನ್ನಡ ಭಾಷೆಯ ಆಳ-ಅಗಲಗಳನ್ನು ವಿಸ್ತರಿಸಿ, ಕನ್ನಡ ಅಧ್ಯಯನಕ್ಕೆ ನೆರವಾಗುವ ಆಚಾರ್ಯ ಗ್ರಂಥಗಳನ್ನು, ತೂಕವುಳ್ಳ ಸಂಪ್ರಬಂಧಗಳನ್ನು ರಚಿಸಿದ ಡಿ.ಎಲ್. ನರಸಿಂಹಾಚಾರ್ಯರು ಕನ್ನಡ ಭಾಷಾಧ್ಯಯನ ಕ್ಷೇತ್ರಕ್ಕೆ ಭದ್ರ ಬುನಾದಿ ಹಾಕಿದರು. ಹೊಸ ವಾಗ್ವಾದಕ್ಕೆ ಹುಟ್ಟುಹಾಕಿದ ಅವರ ಒಂದೊಂದು ಬರೆಹಗಳೂ ಅವರ ಅಪಾರ ವಿದ್ವತ್ತಿಗೆ ಸಾಕ್ಷೀಭೂತವಾಗಿ ನಿಂತಿವೆ. ಡಿ.ಎಲ್.ಎನ್‌ರು ಕನ್ನಡ ಭಾಷಾಧ್ಯಯನಕ್ಕೆ ಸಲ್ಲಿಸಿರುವ ಸೇವೆಯಿಂದ ಅವರ ಹೆಸರು ಆ ಕ್ಷೇತ್ರದಲ್ಲಿ ಚಿರಸ್ಥಾಯಿಯಾಗಿ ನಿಲ್ಲುವಂತಹದ್ದಾಗಿದೆ.

ಆಕರಗ್ರಂಥ

೧. ಡಿ.ಎಲ್. ನರಸಿಂಹಾಚಾರ್, ೧೯೭೧, ಪೀಠಿಕೆಗಳು–ಲೇಖನಗಳು, ಡಿ.ವಿ.ಕೆ. ಮೂರ್ತಿ, ಮೈಸೂರು.

* 'ವ್ಯಾಕರಣ' ಎಂಬ ಪದವನ್ನು 'ಭಾಷಾಜ್ಞಾನ' ಎಂಬರ್ಥದಲ್ಲಿ ಬಳಸಲಾಗಿದೆ.

೧೫

ಎಂ. ಚಿದಾನಂದಮೂರ್ತಿ : ಭಾಷಿಕ ಶೋಧಗಳು

ಕನ್ನಡದಲ್ಲಿ ಭಾಷಾವಿಜ್ಞಾನವನ್ನು ಪರಿಚಯಿಸಿ ಬೆಳೆಸಿದ ವ್ಯಕ್ತಿಗಳನ್ನು ಎರಡು ವರ್ಗಗಳನ್ನಾಗಿ ಮಾಡಬಹುದು. ಕನ್ನಡವನ್ನು ಬೋಧನೆ ಹಾಗೂ ಸಂಶೋಧನೆಯನ್ನು ವೃತ್ತಿಯನ್ನಾಗಿಸಿಕೊಂಡು ಭಾಷಾವಿಜ್ಞಾನದಲ್ಲಿ ಕೆಲಸ ಮಾಡಿದವರು. ಭಾಷಾವಿಜ್ಞಾನವನ್ನು ಬೋಧನೆ ಮತ್ತು ಸಂಶೋಧನೆಯಾಗಿಟ್ಟು ಕೊಂಡವರು. ಇದರಲ್ಲಿ ಚಿದಾನಂದಮೂರ್ತಿ ಅವರು ಕನ್ನಡ ಪ್ರಾಧ್ಯಾಪಕರಾಗಿ ಭಾಷಾವಿಜ್ಞಾನದಲ್ಲಿ ಕೆಲಸ ಮಾಡಿದ ಭಾಷಾವಿಜ್ಞಾನಿಗಳು. ಈ ಕ್ಷೇತ್ರದಲ್ಲಿ ಅವರ ಸಾಧನೆ ಗಮನಾರ್ಹವಾದುದು. ಕನ್ನಡ ಭಾಷಾಧ್ಯಯನಕ್ಕೆ ಅವರು ನೀಡಿದ ಕೊಡುಗೆಯ ಸ್ವರೂಪವೇನು, ಅವರ ಕೆಲಸಕ್ಕಿರುವ ಐತಿಹಾಸಿಕ ಮಹತ್ವವೇನು, ಅವರ ಬರಹಗಳ ಅಂತಃಸತ್ವವೇನು ಎಂಬುದನ್ನು ವಿವೇಚಿಸುವುದೇ ಈ ಬರಹದ ಉದ್ದೇಶವಾಗಿದೆ.

ಚಿದಾನಂದಮೂರ್ತಿ ಅವರ ಭಾಷಾ ಶೋಧನೆಗಳ ಬಗ್ಗೆ ಪ್ರಸ್ತಾಪಿಸುವಾಗ 'ಭಾಷಾವಿಜ್ಞಾನದ ಮೂಲತತ್ವಗಳು' ಹಾಗೂ 'ವಾಗರ್ಥ' ಎಂಬ ಗ್ರಂಥಗಳನ್ನು ಇಲ್ಲಿ ಗಮನಿಸಲಾಗಿದೆ. ಒಂದು ಸ್ವತಂತ್ರ ಗ್ರಂಥ, ಇನ್ನೊಂದು ಸಂಪ್ರಬಂಧಗಳ ಸಂಕಲನ.

'ಭಾಷಾವಿಜ್ಞಾನದ ಮೂಲತತ್ವಗಳು' ಎಂಬ ಗ್ರಂಥವು ೧೯೬೫ರಲ್ಲಿ ಪ್ರಕಟವಾಯಿತು. ಈ ಗ್ರಂಥದ ಮುಖ್ಯ ಉದ್ದೇಶವೆಂದರೆ ಭಾಷಾವಿಜ್ಞಾನದ ಮೂಲತತ್ವಗಳನ್ನು ತಿಳಿಯ ಬಯಸುವವರಿಗೆ ಇದೊಂದು ಅತ್ಯುತ್ತಮ ಪ್ರವೇಶಿಕೆ. ಕನ್ನಡದಲ್ಲಿ ಭಾಷಾಧ್ಯಯನ ಕ್ಷೇತ್ರ ಶೈಶವಾವಸ್ಥೆಯಲ್ಲಿದ್ದಾಗಲೇ ಅದಕ್ಕೆ ಸಂಬಂಧಿಸಿದ ಗ್ರಂಥಗಳಾಗಲಿ, ಲೇಖನಗಳಾಗಲಿ ವಿರಳವಾಗಿದ್ದ ಕಾಲದಲ್ಲಿ ಚಿದಾನಂದಮೂರ್ತಿ ಅವರು ಇಂತಹ ಗ್ರಂಥವನ್ನು ರಚಿಸಿದರು. ಇದು ಇಂದಿಗೂ (ಯಾವ ಕಾಲಕ್ಕೂ) ಭಾಷಾಭ್ಯಾಸಿಗಳಿಗೆ ಕೈಪಿಡಿಯಾಗಿದೆ. ಇಂಗ್ಲಿಷಿನಲ್ಲಿ ಪ್ರಕಟವಾದ ಎಲ್ಲ ಗ್ರಂಥ, ಲೇಖನಗಳನ್ನು ಅಧ್ಯಯನ ಮಾಡಿ ಮತ್ತು ತಾವೇ ಸ್ವತಃ ನಡೆಸಿದ ಆಲೋಚನೆಯ ಪರಿಣಾಮವಾಗಿ ಈ ಕೃತಿ ರೂಪತಾಳಿದೆ.

ಆಸಕ್ತರಾದ ವಿದ್ಯಾರ್ಥಿಗಳನ್ನು, ವಿದ್ವಾಂಸರನ್ನು ಗಮನದಲ್ಲಿಟ್ಟುಕೊಂಡು ಹೊರತರ ಬೇಕೆಂಬ ಕೃತಿಯ ಉದ್ದೇಶ ಸಾರ್ಥಕವಾಗಿದೆ. ಕನ್ನಡವನ್ನು ಅನುಲಕ್ಷಿಸಿ ವರ್ಣನಾತ್ಮಕ, ಐತಿಹಾಸಿಕ ಮತ್ತು ಸಾಮಾನ್ಯ ಭಾಷಾವಿಜ್ಞಾನ ಕ್ಷೇತ್ರಗಳಿಗೆ ಚಿದಾನಂದಮೂರ್ತಿ ಅವರು ಭದ್ರವಾದ ತಾತ್ವಿಕ ಬುನಾದಿಯನ್ನು ಹಾಕಿದರು.

ಈ ಗ್ರಂಥದಲ್ಲಿ ಹದಿಮೂರು ಅಧ್ಯಾಯಗಳಿವೆ. ಅವುಗಳನ್ನು ಸಾಮಾನ್ಯ ಭಾಷಾ ವಿಜ್ಞಾನ, ಐತಿಹಾಸಿಕ ಮತ್ತು ವರ್ಣನಾತ್ಮಕ ಭಾಷಾವಿಜ್ಞಾನಗಳೆಂದು ಮೂರು ರೀತಿ ಯಾಗಿ ವರ್ಗೀಕರಿಸಬಹುದು. ಮೊದಲ ಮೂರು ಅಧ್ಯಾಯಗಳಾದ ಭಾಷೆಯೆಂದ ರೇನು? ಭಾಷೆಯ ಉಗಮ, ಭಾಷಾವರ್ಗೀಕರಣ ಇವು ಭಾಷೆಯ ಸ್ವರೂಪವನ್ನು ತಿಳಿಯಪಡಿಸು ವುದರಿಂದ ಸಾಮಾನ್ಯ ಭಾಷಾವಿಜ್ಞಾನದ ಕಕ್ಷೆಗೆ ಒಳಪಡುತ್ತವೆ. ಭಾಷೆಯ ಅರ್ಥ ಮತ್ತು ಸ್ವರೂಪದ ಬಗೆಗೆ ಬ್ಲಾಕ್ ಮತ್ತು ಟ್ರೆಗರ್, ಸ್ಟುಟೆವಾಂಟ್ ಮುಂತಾದ ಭಾಷಾವಿಜ್ಞಾನಿಗಳ ವ್ಯಾಖ್ಯೆಗಳನ್ನು ಉದ್ಧರಿಸಿ ವ್ಯಾಖ್ಯಾನಿಸಿದ್ದಾರೆ. ಭಾಷಾವಿಜ್ಞಾನದಲ್ಲಿ ಭಾಷೆಯ ಉಗಮವನ್ನು ಕುರಿತು ಹೊರಟಷ್ಟು, ಭಿನ್ನ ರೀತಿಯ ಸಿದ್ಧಾಂತಗಳು. ವಾದಗಳು, ತರ್ಕ ವಿತರ್ಕಗಳು ಇನ್ನಾವ ವಿಷಯದ ಮೇಲೂ ಹೊರಟಿಲ್ಲ. ಭಾಷೆಯ ಉಗಮದ ವಿಷಯವಾಗಿ ಹೊರಟಿರುವ ವಾದಗಳಾದ ಅನುಕರಣವಾದ, ಉದ್ಗಾರ ವಾದ, ಅನುಸರಣವಾದ ಯಾ-ಹೆ-ಹೊವಾದ, ಸಂಜ್ಞಾಭಾಷೆಯೇ ಪ್ರಾಚೀನವಾದುದು ಎಂಬ ವಾದ, ತೊದಲ್ನುಡಿಯೇ ಭಾಷೆಗೆ ಮೂಲ ಎಂಬ ವಾದಗಳನ್ನು ಸಂಗ್ರಹಿಸಿ ಸರಳವಾದ ರೀತಿಯಲ್ಲಿ ನಿರೂಪಿಸಿದ್ದಾರೆ. ಪ್ರಪಂಚದ ಎಲ್ಲ ಪ್ರಾಚೀನ, ಅರ್ವಾಚೀನ ಭಾಷೆಗಳನ್ನು ಅಧ್ಯಯನದ ಸೌಕರ್ಯಕ್ಕಾಗಿ ಕೆಲವು ವರ್ಗಗಳಾಗಿ ವಿಂಗಡಿಸಬೇಕಾ ಗುತ್ತದೆ. ಹಾಗೆ ವರ್ಗೀಕರಿಸುವಾಗ ಎರಡು ತತ್ವಗಳನ್ನು ಅನುಸರಿಸಬೇಕು. ಒಂದು ಪದರಚನೆ ಮತ್ತು ವಾಕ್ಯರಚನೆ, ಮತ್ತೊಂದು, ಭಾಷೆಗಳ ವಂಶ. ಮೊದಲನೆಯದನ್ನು ರಾಚನಿಕ ವರ್ಗೀಕರಣವೆಂದೂ ಮತ್ತೊಂದು ವಾಂಶಿಕ ವರ್ಗೀಕರಣವೆಂದೂ ಕರೆಯ ಬಹುದು. ಆ ಎರಡೂ ವರ್ಗೀಕರಣದ ಸ್ವರೂಪವನ್ನು, ಗುಣದೋಷಗಳನ್ನು ಭಾಷಾ ವರ್ಗೀಕರಣ ಎಂಬ ಅಧ್ಯಾಯದಲ್ಲಿ ಚರ್ಚಿಸಿದ್ದಾರೆ.

ಒಂದು ಭಾಷೆಯ ಕಾಲಘಟ್ಟವನ್ನು ವಿವರಿಸುವ ಅಥವಾ ಒಂದು ಭಾಷೆ ಬೆಳೆದು ಬಂದ ಬಗೆಯನ್ನು ಸೂಚಿಸುವ ಅಂಶಗಳು ಐತಿಹಾಸಿಕ ಭಾಷಾವಿಜ್ಞಾನದ ಕಕ್ಷೆಗೆ ಒಳಪಡುತ್ತವೆ. ಅದರಲ್ಲಿ ಭಾಷಾವ್ಯತ್ಯಾಸ, ಧ್ವನಿವ್ಯತ್ಯಾಸ, ಅರ್ಥವ್ಯತ್ಯಾಸ, ಭಾಷಾಸ್ವೀಕರಣ ಹಾಗೂ ಸಾಮ್ಯಮೂಲವ್ಯತ್ಯಾಸಗಳು ಸಮಾವೇಶಗೊಳ್ಳುತ್ತವೆ. ಪ್ರತಿಯೊಂದು ಅಂಶಗಳ ಬಗ್ಗೆ ಪ್ರತ್ಯೇಕ ಅಧ್ಯಾಯದಲ್ಲಿ ಕನ್ನಡದ ಉದಾಹರಣೆಗಳ ಮೂಲಕ ವಿಷಯ ನಿರೂಪಣೆ ಯಿದೆ. ಭಾಷೆಯು ಅನ್ಯಭಾಷಾಸಂಸರ್ಗ, ಸೌಲಭ್ಯಾಕಾಂಕ್ಷೆ, ಪ್ರಭಾವಶಾಲಿ ವ್ಯಕ್ತಿಗಳು ಹಾಗೂ ವಿದ್ಯಾವಂತರ ಭಾಷೆಗಳಿಂದ ವ್ಯತ್ಯಾಸವಾಗುತ್ತದೆ. ಧ್ವನಿಬದಲಾವಣೆಯು ಭಾಷೆಯ ಬದಲಾವಣೆಯ ವಿಧಗಳಲ್ಲಿ ಒಂದು. ಅಲ್ಲದೆ ಅದು ಭಾಷೆಯಲ್ಲಿ

ಮೂಲಭೂತವಾದ ಬದಲಾವಣೆಯನ್ನುಂಟು ಮಾಡುವ ಅತಿಪ್ರಮುಖ ತಂತ್ರ. ಧ್ವನಿ ಬದಲಾವಣೆಗೆ ಕಾರಣವಾದ ಸಮರೂಪಧಾರಣೆ, ಅಕ್ಷರಪಲ್ಲಟ, ಸದ್ಯಶ್ಯಾಕ್ಷರಲೋಪ ಹಾಗೂ ಆದಿಸ್ವರಾಗಮಗಳು ಕಾರಣವಾಗಿವೆ. ಧ್ವನಿ ಬದಲಾವಣೆಯಂತೆ ಸ್ವೀಕರಣ ಕ್ರಿಯೆಯು ಭಾಷಿಕ ಬದಲಾವಣೆಯ ಮಹತ್ವದ ತಂತ್ರಗಳಲ್ಲಿ ಒಂದು. ಎರಡು ಭಾಷೆಗಳು ಒಂದರೊಡನೊಂದು ಸಂಪರ್ಕ ಹೊಂದಿದಾಗ ಎರಡರ ನಡುವೆ ಕೊಡು ಕೊಳ್ಳುವಿಕೆ ನಡೆಯುವುದು ಭಾಷೆಯಲ್ಲಿ ಸ್ವಾಭಾವಿಕ ಘಟನೆ. ಒಂದು ಭಾಷೆಯ ವಿಚಾರಗಳನ್ನು, ವಸ್ತುಗಳನ್ನು ನಿರ್ದೇಶಿಸುವ ಶಬ್ದಗಳನ್ನು ಇನ್ನೊಂದು ಭಾಷೆ ಸ್ವೀಕರಿಸು ವುದು ಸಹಜವೇ. ಸ್ವೀಕರಣ ಕಾರ್ಯ ಸಾಮಾನ್ಯವಾಗಿ ನಡೆಯುವುದು ಸಾಂಸ್ಕೃತಿಕ ಪದಕೋಶದಲ್ಲಿ ಮಾತ್ರ ಎಂಬ ಚಿದಾನಂದಮೂರ್ತಿ ಅವರ ಅಭಿಪ್ರಾಯ ಸೂಕ್ತವಾಗಿದೆ. ಸ್ವೀಕರಣ ಕ್ರಿಯೆಯ ಸ್ವರೂಪ, ಭಾಷಿಕ ಬದಲಾವಣೆಯಲ್ಲಿ ಅದರ ಪಾತ್ರ ಮುಂತಾದ ಅಂಶಗಳನ್ನು ಕನ್ನಡ ಉಪಭಾಷೆಗಳ ಉದಾಹರಣೆಗಳ ಮೂಲಕ ಚರ್ಚಿಸಲಾಗಿದೆ. ಲಂಬಾಣಿ ಭಾಷಾಸಮುದಾಯದಲ್ಲಿ ಕನ್ನಡ ಪದಗಳನ್ನು ಗುರುತಿಸಿ ವಿದ್ವಾಂಸರ ಗಮನಕ್ಕೆ ತಂದಿದ್ದಾರೆ. ಉಚ್ಚಾರಣೆಯ ಒಂದು ಅಂಶದಂತೆ ಇನ್ನೊಂದು ಅಂಶವಾಗು ವುದು ಸಮರೂಪಧಾರಣೆ. ಇದರಿಂದ ಹೊಸಪದಗಳು ಭಾಷೆಗೆ ಬಂದು ಸೇರುತ್ತವೆ. ಆ ಕ್ರಿಯೆಯು ಅಕ್ರಮ ರೂಪಗಳನ್ನು ಕ್ರಮಬದ್ಧಗೊಳಿಸುತ್ತವೆ. ಈ ಅಂಶವನ್ನು ಪ್ರತ್ಯೇಕ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಭಾಷಿಕ ಬದಲಾವಣೆಯ ಈ ಎಲ್ಲ ತಂತ್ರ ಗಳನ್ನು ಹೇಳುವಾಗ ಚಿದಾನಂದಮೂರ್ತಿ ಅವರು ನೂತನ ಪರಿಭಾಷೆಗಳನ್ನು ಬಳಸಿ ಭಾಷೆಯ ಬೆಳವಣಿಗೆಗೆ ಮಹೋಪಕಾರ ಮಾಡಿದ್ದಾರೆ.

ವ್ಯಕ್ತಿಭಾಷೆ, ಉಪಭಾಷೆ ಮತ್ತು ಉಪಭಾಷಾ ಪರಿವೀಕ್ಷಣೆಗೆ ಸಂಬಂಧಪಟ್ಟಂತೆ ಒಂದು ಅಧ್ಯಾಯವಿದೆ. ವ್ಯಕ್ತಿಭಾಷೆಯು ಭಾಷೆ, ಉಪಭಾಷೆಗಳ ಸಂಬಂಧ ಮತ್ತು ವ್ಯತ್ಯಾಸಗಳನ್ನು ನಿರ್ಣಯಿಸುತ್ತದೆ. ಒಂದು ಭಾಷೆಯ ಮೂಲರೂಪಗಳನ್ನು ಪುನರ್ ರಚಿಸುವಾಗ ಆ ಭಾಷೆಯ ಉಪಭಾಷೆಗಳ ಪರಿವೀಕ್ಷಣೆ ಮಾಡಬೇಕಾಗುತ್ತದೆ. ಅದರಿಂದ ಭಾಷೆ, ಉಪಭಾಷೆಗಳ ರಚನೆಯ, ಸೀಮಾರೇಖೆಗಳು, ಭಾಷಾ ಭೂಪಟ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಉಪಯುಕ್ತ ಅಂಶಗಳು ತಿಳಿದುಬರುತ್ತವೆ. ಉಪಭಾಷಾ ಪರಿವೀಕ್ಷಣೆ ಯನ್ನು ಯಾವ ರೀತಿಯಾಗಿ ಮಾಡಬೇಕೆನ್ನುವುದರ ಬಗ್ಗೆ ಉಪಯುಕ್ತ ಸೂಚನೆಗಳನ್ನು ಕೊಟ್ಟಿದ್ದಾರೆ. ವರ್ಣನಾತ್ಮಕ, ಐತಿಹಾಸಿಕ ಮತ್ತು ತೌಲನಿಕ ಭಾಷಾವಿಜ್ಞಾನದ ಸ್ಥೂಲ ಪರಿಚಯನವನ್ನು ಒಂದು ಅಧ್ಯಾಯದಲ್ಲಿ ಮಾಡಿದ್ದಾರೆ.

ಭಾಷಾವಿಜ್ಞಾನದ ಇತಿಹಾಸ ಎಂಬ ಅಧ್ಯಾಯದಲ್ಲಿ ಭಾಷಾಧ್ಯಯನದ ಚರಿತ್ರೆಗೆ ಸಂಬಂಧಿಸಿದ ಸ್ಥೂಲಸಮೀಕ್ಷೆ ಇದೆ. ಪ್ರಾರಂಭದಲ್ಲಿ ಭಾಷೆಗಳ ಅಧ್ಯಯನ ವ್ಯಾಕರಣ ಗಳಲ್ಲಿ ಕಾಣಬಹುದಿತ್ತು. ಭಾರತದ ಪಾಣಿನಿ, ಪತಂಜಲಿ, ಕಾತ್ಯಾಯನ, ಪಶ್ಚಿಮದ ಗ್ರೀಕ್ ಮತ್ತು ಲ್ಯಾಟಿನ್ ವೈಯಾಕರಣಿಗಳ ವಿಚಾರಗಳನ್ನು ಚರ್ಚಿಸಿದ ನಂತರ

ಭಾಷಾಶಾಸ್ತ್ರ, ಭಾಷಾವಿಜ್ಞಾನವಾಗಿ ಯಾವ ರೀತಿಯಾಗಿ ಹೊಸ ಹೊಸ ದಿಕ್ಕುಗಳಲ್ಲಿ ಬೆಳೆಯಿತು. ವರ್ಣಾತ್ಮಕ, ಐತಿಹಾಸಿಕ ಭಾಷಾಧ್ಯಯನದ ಶಾಖೆಗಳು ಆವಿಷ್ಕಾರಗೊಂಡ ಬಗೆ, ಆಧುನಿಕ ಭಾಷಾವಿಜ್ಞಾನದ ಬೆಳವಣಿಗೆಗೆ ಕಾರಣಕರ್ತರಾದ ರಾಸ್ಕ, ಬಾಪ್, ಡಿ. ಸಸ್ಸೂರ್, ಸಫೀರ್, ಬ್ಲೂಮ್ ಫಿಲ್ಡ್ ಮುಂತಾದ ಭಾಷಾವಿಜ್ಞಾನಿಗಳ ಕೊಡುಗೆಗಳನ್ನು ಸೋದಾಹರಣವಾಗಿ ವಿವರಿಸಿದ್ದಾರೆ. ಭಾಷೆ ಮತ್ತು ಬರಹಗಳ ಸಂಬಂಧ ಮತ್ತು ವ್ಯತ್ಯಾಸ ಹಾಗೂ ಲಿಪಿಯ ಉಗಮ ಮತ್ತು ವಿಕಾಸವನ್ನು ಪರಿಚಯಿಸುವ ಪ್ರತ್ಯೇಕ ಅಧ್ಯಾಯವಿರುದು ಸ್ವಾಗತಾರ್ಹ. ಅನುಬಂಧ ಭಾಗದಲ್ಲಿರುವ ಅಂತರಾಷ್ಟ್ರೀಯ ಧ್ವನಿಲಿಪಿ. ಧ್ವನ್ಯಂಗಗಳ ಚಿತ್ರ, ಪಾರಿಭಾಷಿಕ ಪದಸೂಚಿ, ಶಬ್ದಸೂಚಿ ಇವೆಲ್ಲವು ಗ್ರಂಥಾಭ್ಯಾಸಕ್ಕೆ ತುಂಬ ನೆರವಾಗುತ್ತವೆ. ಭಾಷಾವಿಜ್ಞಾನದ ತತ್ವಗಳನ್ನು ವಿಶ್ಲೇಷಿಸಿ, ವಿವರಿಸುವ 'ಭಾಷಾವಿಜ್ಞಾನದ ಮೂಲತತ್ವಗಳು' ಕೃತಿಗೆ ಸರಿಸಮಾನವಾದ ಕೃತಿ ಇನ್ನೂ ಬಂದಿಲ್ಲ. ಅದು ಭಾಷಾಭ್ಯಾಸಿಗಳಿಗೆ Standard Text Book ಆಗಿದೆ. ಅದರಲ್ಲಿ ಪ್ರತಿಪಾದಿತವಾದ ಅಂಶಗಳು ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರಿಗೆ ಸುಪರಿಚಿತವಾಗಿವೆ. ಭಾಷಾ ವಿಜ್ಞಾನದ ತತ್ವಸಿದ್ಧಾಂತಗಳು ಅದು ಬೆಳೆದು ಬಂದ ರೀತಿಯನ್ನು ತೋರಿಸಿ ಮುಂದಿನ ದಾರಿಯನ್ನು ಆ ಕೃತಿ ನಿರ್ದೇಶಿಸಿತು.

೨

ಚಿದಾನಂದಮೂರ್ತಿ ಅವರ ಭಾಷಾಧ್ಯಯನಕ್ಕೆ ಸಂಬಂಧಿಸಿದ ಸಂಪ್ರಬಂಧಗಳು 'ವಾಗರ್ಥ'(೧೯೮೧)ದಲ್ಲಿ ಮಡುಗಟ್ಟಿವೆ. 'ವಾಗರ್ಥ' ಭಾಷೆಯನ್ನು ಕುರಿತಾಗಿದ್ದರೂ ಅದರ ಉದ್ದೇಶ ಇತಿಹಾಸ, ಸಂಸ್ಕೃತಿಯನ್ನು ಅರ್ಥೈಸಿಕೊಳ್ಳುವುದೇ ಆಗಿದೆ. ಚಿದಾನಂದ ಮೂರ್ತಿ ಅವರು ಕರ್ನಾಟಕ ಸಂಸ್ಕೃತಿಯನ್ನು ಭಾಷಾಸಾಮಗ್ರಿಗಳ ಮೂಲಕ ಹುಡುಕುತ್ತಾರೆ. ಅರ್ಥೈಸಲು ಹವಣಿಸುತ್ತಾರೆ, ಪುನರ್‌ರಚಿಸಲು ಯತ್ನಿಸುತ್ತಾರೆ. ಸಾಂಸ್ಕೃತಿಕ ಮೌಲ್ಯಗಳೇ ಅವರಿಗೆ ಮುಖ್ಯವಾಗುತ್ತವೆ. ಆ ಬಗ್ಗೆ ಅವರ ಸಂಪ್ರಬಂಧಗಳು ಬಹುಶಃ ಆ ಕ್ಷೇತ್ರದಲ್ಲಿ ಪ್ರಥಮವಾಗಿ ಬಂದುವಾಗಿದ್ದು, ಭಾಷಾ ಸಂಶೋಧಕರಿಗೆ ಹೊಸ ಲೋಕವನ್ನು ತೋರಿಸಿದವು. ವಾಗರ್ಥದಲ್ಲಿಯ ೨೪ ಸಂಪ್ರಬಂಧಗಳನ್ನು ನಾಮಶಾಸ್ತ್ರ, ಸಾಮಾಜಿಕ ಭಾಷಾಧ್ಯಯನ ಮತ್ತು ವರ್ಣನಾತ್ಮಕ ವ್ಯಾಕರಣವೆಂದು ಮೂರು ರೀತಿಯಾಗಿ ವಿಂಗಡಿಸಬಹುದು.

ಹೆಸರುಗಳು ಒಂದು ಜನಾಂಗದ ಸಂಸ್ಕೃತಿಯ ಬೇರುಗಳು. ಅವುಗಳ ಕ್ರಮಬದ್ಧವಾದ ಅಧ್ಯಯವನ್ನು ನಾಮವಿಜ್ಞಾನವೆಂದು ಕರೆಯುತ್ತಾರೆ. ಇದರ ಮುಖ್ಯ ಅಂಗಗಳು ಎರಡು ಸ್ಥಳನಾಮಗಳು ಮತ್ತು ವ್ಯಕ್ತಿನಾಮಗಳು. ಇತ್ತೀಚಿಗೆ ನಾಮಗಳ ಅಧ್ಯಯನವು ಪ್ರತ್ಯೇಕ ಜ್ಞಾನಶಾಖೆಯಾಗಿ. ಅಧ್ಯಯನಯೋಗ್ಯ ವಿಷಯವಾಗಿದೆ. ಚಿದಾನಂದಮೂರ್ತಿ ಅವರ ಬರಹಗಳು ನಾಮಗಳ ವೈಜ್ಞಾನಿಕ ಅಧ್ಯಯನದ ಬಗ್ಗೆ ಸಂಶೋಧಕರ ಆಸಕ್ತಿಯನ್ನು ಕೆರಳಿಸಿದವು.

ಈ ದೃಷ್ಟಿಯಿಂದ ಅವರ 'ಕರ್ನಾಟಕ ಸ್ಥಳನಾಮಗಳು' ಮತ್ತು 'ಕರ್ನಾಟಕ ವ್ಯಕ್ತಿನಾಮಗಳು' ಎಂಬ ಮೌಲಿಕ ಲೇಖನಗಳನ್ನು ನೋಡುವುದು ಅಗತ್ಯಗತ್ಯ. ಆ ಲೇಖನಗಳ ಮೂಲಕ ನಾಮಶಾಸ್ತ್ರದ ಅಧ್ಯಯನಕ್ಕೆ ವೈಜ್ಞಾನಿಕ ತಳಹದಿಯನ್ನು ಒದಗಿಸಿ ಶಾಸ್ತ್ರ ಪರಿಭಾಷೆಯನ್ನು ರೂಪಿಸಿದರು. ನಾಮಗಳಲ್ಲಿ ಎರಡು ಆಕೃತಿಮಾಗಳಿರುತ್ತವೆ. ಪೂರ್ವಭಾಗವನ್ನು 'ನಿರ್ದಿಷ್ಟ'ವೆಂದೂ ಉತ್ತರಭಾಗವನ್ನು 'ವಾರ್ಗಿಕ'ವೆಂದೂ ಕರೆದಿದ್ದಾರೆ. ಈ ಪರಿಕಲ್ಪನೆಗಳನ್ನು ಮೊದಲಿಗೆ ರೂಪಿಸಿ ಕೊಟ್ಟವರು ಚಿದಾನಂದಮೂರ್ತಿ ಅವರು. ಅವು ನಾಮಗಳ ರಚನೆಯ ಸ್ವರೂಪವನ್ನು ತಿಳಿಸುತ್ತವೆ. ಸ್ಥಳನಾಮಗಳು ಕಾಲದಿಂದ ಕಾಲಕ್ಕೆ, ದೇಶದಿಂದ ದೇಶಕ್ಕೆ ವ್ಯತ್ಯಾಸವಾಗುತ್ತವೆ. ಶಾಸನೋಕ್ತವಾದ ಹೆಸರುಗಳನ್ನು ಚರ್ಚಿಸಿದ್ದಾರೆ. ಪಸುಮಡಿ(೧೦ನೇ ಶತಮಾನ) >ಅಸುಂಡಿ(ಧಾರವಾಡ ಜಿಲ್ಲೆ), ಬೆಳ್ತುರು>ಬೇತೂರು(ಚಿತ್ರದುರ್ಗ ಜಿಲ್ಲೆ) ಮುಂತಾದುವು. ಸ್ಥಳನಾಮಗಳಲ್ಲಿಯ ಧ್ವನಿ ಬದಲಾವಣೆಗೆ ಸದೃಶಾಕ್ಷರಲೋಪ, ಸಮರೂಪಧಾರಣೆಯ ಪ್ರಕ್ರಿಯೆಗಳು ಕಾರಣವಾಗಿವೆ. ಸ್ಥಳನಾಮಗಳಲ್ಲಿಯ ಧ್ವನಿವ್ಯತ್ಯಾಸಗಳು ಯಾಂತ್ರಿಕವಾಗಿ ನಡೆಯುವುದಿಲ್ಲವೆಂಬುದು ಈ ಅಂಶಗಳಿಂದ ತಿಳಿದುಬರುತ್ತವೆ. ಸ್ಥಳನಾಮಗಳು ಯಾವುದಾದರೂ ಒಂದು ರಾಜಕೀಯ ಅಥವಾ ಸಾಮಾಜಿಕ ಘಟಕಗಳೊಡನೆ ಸಮೀಕರಿಸಿಕೊಂಡಿರುತ್ತದೆ. ಒಂದು ಪ್ರದೇಶದ ಉಪಭಾಷಾ ಅಧ್ಯಯನದಲ್ಲಿಯೂ ಅವು ಮಹತ್ವದ ಪಾತ್ರವಹಿಸುತ್ತವೆ.

ಸ್ಥಳನಾಮಗಳಂತೆ, ವ್ಯಕ್ತಿನಾಮಗಳು ಒಂದು ಪ್ರದೇಶದ ಸಂಸ್ಕೃತಿಯ ಅಧ್ಯಯನದ ದೃಷ್ಟಿಯಿಂದ ಬಹುಮುಖ್ಯವಾದ ಆಕರಗಳಾಗಿವೆ. ವ್ಯಕ್ತಿನಾಮಗಳಲ್ಲಿಯ ವಾರ್ಗಿಕಗಳನ್ನು ಸಂಬಂಧವಾಚಗಳು ಮತ್ತು ಜಾತಿವಾಚಕಗಳೆಂದು ಎರಡು ಬಗೆಯಾಗಿ ವರ್ಗೀಕರಿಸಿದ್ದಾರೆ. ಈ ವಾರ್ಗಿಕಗಳ ಅಧ್ಯಯನದ ಹಿನ್ನೆಲೆಯಲ್ಲಿ ಸಂಸ್ಕೃತಿ ಶೋಧನೆ ಚಿದಾನಂದ ಮೂರ್ತಿ ಅವರಿಗೆ ಮುಖ್ಯವಾಗುತ್ತದೆ. ವ್ಯಕ್ತಿನಾಮಗಳಲ್ಲಿ ಕಂಡುಬರುವ ಅಡ್ಡ ಹೆಸರು, ಕುಲನಾಮಗಳ ವ್ಯತ್ಯಾಸ ಮತ್ತು ಸ್ವರೂಪವನ್ನು ಚರ್ಚಿಸಲಾಗಿದೆ. ಹೆಸರುಗಳು ಸಂಸ್ಕೃತೀಕರಣ ಮತ್ತು ನಗರೀಕರಣದ ಪ್ರಭಾವದಿಂದ ಆಗಿರುವ ಪರಿಣಾಮಗಳನ್ನು ಪಟ್ಟಿಮಾಡುತ್ತಾರೆ.[೧] ಚಿದಾನಂದಮೂರ್ತಿ ಅವರ ನಂತರ ವ್ಯಕ್ತಿನಾಮಗಳ ಅಧ್ಯಯನಕ್ಕೆ ಯಾರು ಕೈ ಹಾಕಿದಂತೆ ಕಾಣುವುದಿಲ್ಲ. ಹೀಗಾಗಿ ವ್ಯಕ್ತಿನಾಮಗಳ ಬಗ್ಗೆ ಕನ್ನಡದಲ್ಲಿ ಆಧುನಿಕ ದೃಷ್ಟಿಯ ವ್ಯಾಪಕ ಅಧ್ಯಯನ ಇದಾಗಿದೆ. ಈ ಎರಡು ಲೇಖನಗಳು ನಾಮಗಳ ರಚನೆಯನ್ನು ವಿವರಿಸುವುದರ ಜೊತೆಗೆ ಐತಿಹಾಸಿಕವಾದ ಮಾಹಿತಿಗಳನ್ನು ಕೊಡುತ್ತವೆ. ಕಾವ್ಯ, ಶಾಸನ ಹಾಗೂ ಕ್ಷೇತ್ರಕಾರ್ಯಗಳ ವಿವರವಾದ ಅಧ್ಯಯನ ಇವುಗಳ ಹಿಂದಿರುವುದರಿಂದ ಲೇಖನಗಳು ಸುಪುಷ್ಟವಾಗಿವೆ. ಈ ವಿಷಯನವನ್ನು ಕುರಿತಂತೆ ಇಷ್ಟು ಕ್ರಮಬದ್ಧವಾದ ಅಧ್ಯಯನ ನಡೆದದ್ದು (ಬಹುಶಃ ಭಾರತೀಯ ಭಾಷೆಗಳಲ್ಲಿಯೇ!) ಇದೇ ಮೊದಲು.

'ವರ' ಅಥವಾ 'ವಾರ' ಎಂದು ಕೊನೆಯಾಗುವ ಊರು ಹೆಸರುಗಳು ಎಂಬ ಲೇಖನದಲ್ಲಿ 'ವರ' ಮತ್ತು 'ವಾರ' ಈ ಎರಡು ರೂಪಗಳು ಸಂಸ್ಕೃತದ 'ಪುರ' ಎಂಬುದರಿಂದ ಬಂದಿವೆ. ಈ ರೂಪಗಳ ಹಿಂದಿನ(ಹೆಸರಿನ) ಭಾಗವು ಹೃಸ್ವ ಅಥವಾ ದೀರ್ಘ ಸ್ವರಗಳನ್ನು ಒಳಗೊಂಡಿದೆ. ಅವು ಪರಸ್ಪರ ವ್ಯಾವರ್ತಕವಾಗಿ ಬಳಕೆಯಾಗುತ್ತವೆ. 'ಹೊನ್ನವರ'ದಂತಹ ಹೆಸರು 'ಹೊನ್ನಾವರ'ವಾಗಿ ಬಳಕೆಯಾಗಬಹುದಿತ್ತು. ಆದರೆ 'ಹೊನ್ನವರ', 'ಹೊನ್ನಾವರ' ಈ ರೂಪಗಳಲ್ಲಿ ಕಾಣಿಸಿಕೊಳ್ಳಲು ಸಾಧ್ಯವೇ ಇಲ್ಲ. ಆದ್ದರಿಂದ 'ವರ' - 'ವಾರ'ಗಳು ಒಂದೇ ಆಕೃತಿಮಾದ ಎರಡು ಉಪ ಆಕೃತಿಮಾಗಳೆಂದೂ ಅದರಲ್ಲೂ ಸ್ವನ ನಿಯಂತ್ರಿತ ಉಪ ಆಕೃತಿಗಳೆಂದೂ ಹೇಳಬಹುದು' ಎಂಬ ಖಚಿತ ತೀರ್ಮಾನಕ್ಕೆ ಬಂದಿದ್ದಾರೆ.

'ಊರುಗಳಿಗೆ ಎರಡೆರಡು ಹೆಸರುಗಳು' ಎಂಬ ಲೇಖನವು ಲಂಬಾಣಿ ಗ್ರಾಮ ನಾಮಗಳಿಗೆ ಸಂಬಂಧಿಸಿದೆ. ಲಂಬಾಣಿಗಳು ವಾಸಿಸುವ ಸ್ಥಳಕ್ಕೆ (ತಾಂಡಗಳಿಗೆ) ಎರಡು ಹೆಸರುಗಳಿರುತ್ತವೆ. ಅವು ಅವರಿಗೆ ಮಾತ್ರ ತಿಳಿದಿರುತ್ತವೆ. ೧. ಆ ತಂಡದ ಸಮೀಪ ಊರಿನ ಹೆಸರನ್ನು ಪಡೆದಿರುವ ಹೆಸರು. ಇದಕ್ಕೆ ಸಾಮಾಜಿಕ ಮತ್ತು ಆಡಳಿತಾತ್ಮಕ ಮುದ್ರೆ ಬಿದ್ದಿರುತ್ತದೆ. ೨. ಲಂಬಾಣಿಗಳೇ ಕಲ್ಪಿಸಿಕೊಂಡು ತಮ್ಮ ತಮ್ಮಲ್ಲಿ ಬಳಸಲು ಇಟ್ಟುಕೊಂಡ ಹೆಸರು. ಇದು ಸಾಮಾನ್ಯವಾಗಿ ಅವರು ಅಲ್ಲಿ ತಾಂಡ ಹೂಡಿದಾಗ ಇದ್ದ ಅವರ ಮುಖ್ಯಸ್ಥನ ಹೆಸರನ್ನು ಹೊಂದಿರುತ್ತದೆ. ೩. ಮೊದಲ ವರ್ಗದ ಹೆಸರು 'ತಾಂಡ'/'ತಾಂಡೆ' ಎಂಬ ಕೊನೆಯದಾದರೆ, ಎರಡನೆಯ ವರ್ಗದ ಹೆಸರು 'ತಾಂಡೋ' ಎಂದು ಕೊನೆಯಾಗುತ್ತದೆ. ಉದಾ. ಬೆಳಧಡಿತಾಂಡೆ, ನರಸಿಂಗ ನಾಯಕನ ತಾಂಡೋ, ನಭಾಪೂರತಾಂಡೆ-ಲಾಲನಾಯಕನತಾಂಡೋ ಮುಂತಾದವು. ಲಂಬಾಣಿಗಳು ತಮ್ಮ ಅನನ್ಯತೆಯನ್ನು ಉಳಿಸಿಕೊಳ್ಳುವ ಪ್ರಯತ್ನದ ಕುರುಹು ಇದಾಗಿದೆ.

ಸ್ಥಳನಾಮಗಳು ಒಂದು ಸಮುದಾಯದ ಸಂಸ್ಕೃತಿಯನ್ನು ಗುರುತಿಸಲು ನೆರವಾಗುತ್ತವೆ ಎಂಬುದಕ್ಕೆ 'ಬ್ರಾಹ್ಮಣರಿಗೆ ದಾನವಾಗಿ ಕೊಟ್ಟ ಊರ ಹೆಸರುಗಳ ಸೂಚಕಾಂಶಗಳು' ಎಂಬ ಲೇಖನ ಸಾಕ್ಷಿಯಾಗಿದೆ. ಅಗ್ರಹಾರ, ಅಗರ, ಅರಗ, ಆರಗ, ಮಹಾಜನ, ಹಾರೋ, ಹಾರನ್, ಶ್ರೋತ್ರಿಯ, ಮಂಗಲ, ಗಾಲ ಈ ಭಾಷಿಕ ಅಂಶಗಳು ಸ್ವತಂತ್ರವಾಗಿ ಅಥವಾ ಕೊನೆಯಾಗುವ ಊರುಗಳು, ಬ್ರಾಹ್ಮಣರಿಗೆ ದತ್ತಿಯಾಗಿ ಕೊಡುತ್ತಿದ್ದ ಅಗ್ರಹಾರಗಳಾಗಿದ್ದವು ಎಂಬುದನ್ನು ಶಾಸನಧಾರಗಳಿಂದ ಶೋಧಿಸಿ ಗುರುತಿಸಿದ್ದಾರೆ. ಅದರಂತೆ ಬೇರೆ ಬೇರೆ ರೀತಿಯ ಜನರಿಗೆ ಸಂಬಂಧಿಸಿದ ಗ್ರಾಮಗಳನ್ನು ಗುರುತಿಸುವ ಸೂಚನೆಗಳು ಈ ಬರಹದಲ್ಲಿವೆ.

ಬೆಳಕೂರ ಗ್ರಾಮದ ದೇಕಬ್ಬೆ ಶಾಸನದಲ್ಲಿ ಬರುವ ಸ್ಥಳನಾಮಗಳಾದ ನುಗುನಾಡು, ಎಡೆನಾಡು, ನವಲೆನಾಡು, ಬೆಳತೂರು. ಪೆರ್ವಯಲು. ಬಗ್ಗೆ 'ದೇಕಬ್ಬೆ ಶಾಸನದ ಸ್ಥಳಗಳನ್ನು (ಮತ್ತು ಇತರ ಸಂಗತಿಗಳನ್ನು ಕುರಿತು)' ಎಂಬ ಲೇಖನದಲ್ಲಿ ವಿವರಿಸಿದ್ದಾರೆ.

ಆ ಗ್ರಾಮಗಳನ್ನು ಗುರುತಿಸಲು ತೊಡಗುತ್ತಾರೆ. ದೇಕಬ್ಬೆಯ ಸಹಗಮನ ಕ್ರಿಯೆಯ ಪೂರ್ಣಚಿತ್ರವನ್ನು ತೋರಿಸುತ್ತಾರೆ. ಇಲ್ಲಿಯೂ ಸಂಸ್ಕೃತಿ ಶೋಧನವೇ ಅವರಿಗೆ ಮುಖ್ಯವಾಗುತ್ತದೆ.

ಜೈನ ಜೈನೇತರ (ವಚನಕಾರರ)ವ್ಯಕ್ತಿನಾಮಗಳ ಹಿನ್ನೆಲೆಯಲ್ಲಿ "ಆದಯ್ಯ" ಹೆಸರಿನ ನಿಷ್ಪತ್ತಿ ಮತ್ತು ಅದರಿಂದ ಹೊರಡುವ ಕೆಲವು ಧ್ವನಿಗಳು' ಎಂಬ ಲೇಖನದಲ್ಲಿ ಚರ್ಚಿಸುತ್ತಾರೆ. ಹಿಂದಿನ ಶಾಸನಗಳಲ್ಲಿ ಆದಿಯಣ್ಣ, ಆದಿಶೆಟ್ಟಿ, ಆದ್ಯಕ್ಕ ಎಂಬ ಜೈನ ವ್ಯಕ್ತಿನಾಮಗಳಿವೆ. 'ಆದಿಯಣ್ಣ' ಎಂಬಂತಹ ಹೆಸರುಗಳು ಜೈನೇತರರಲ್ಲೂ ಪ್ರಚಾರ ವಾಗಿದ್ದವು ಎಂಬುದನ್ನು ಸೋದಾಹರಣವಾಗಿ ಚರ್ಚಿಸಿದ್ದಾರೆ.

'ಅಣ್ಣ' ಕೊನೆಯಲ್ಲಿರುವ ಹೆಸರುಗಳು ಪ್ರಾಯಶಃ ಕರ್ನಾಟಕದ ಎಲ್ಲ ಭಾಗ ಗಳಲ್ಲಿಯೂ ಪ್ರಚಲಿತವಾಗಿದ್ದವು. ಈಗಲೂ ಅಷ್ಟೇ. ಆದರೆ 'ತಮ್ಮ' ಕೊನೆಯಲ್ಲಿರುವ ಹೆಸರುಗಳಿಗೆ ಒಂದು ಮಿತವಾದ ವ್ಯಾಪ್ತಿ ಇದ್ದಂತೆ ಕಾಣುತ್ತದೆ. ಅಂತಹ ಹೆಸರುಗಳು ಎಲ್ಲೆಲ್ಲಿ ಸಿಕ್ಕಿವೆ ಎಂಬುದನ್ನು 'ತಮ್ಮ' ಕೊನೆಯಲ್ಲಿರುವ ಹೆಸರುಗಳು' ಎಂಬ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ. ತಮ್ಮ ಕೊನೆಯಲ್ಲಿರುವ ಹೆಸರುಗಳು (ಮಲ್ಲಿ ತಮ್ಮ, ಮಸಣಿತಮ್ಮ, ಭೈರಿತಮ್ಮ, ಕಾಳಿತಮ್ಮ, ಮುಂತಾದವು) ಹೆಚ್ಚಾಗಿ ಇವು ದಕ್ಷಿಣ ಕರ್ನಾಟಕದ ಬೆಂಗಳೂರು, ಮೈಸೂರು, ಹಾಸನ, ಚಿಕ್ಕಮಂಗಳೂರು ಜಿಲ್ಲೆಗಳಲ್ಲಿ ಪ್ರಚಲಿತವಾಗಿದ್ದವು. ಈ ಭಾಗದಲ್ಲಿ ಮೇಲುವರ್ಗದ ಜನರಲ್ಲಿ 'ತಮ್ಮ' ಕೊನೆಯಲ್ಲಿರುವ ಹೆಸರುಗಳು ಬಹುಮಟ್ಟಿಗೆ ರೂಢಿಯಿಂದ ತಪ್ಪಿಹೋಗಿವೆ ನಿಜ, ಅವಿದ್ಯಾವಂತರು, ಹಿಂದುಳಿದವರು ಅವುಗಳನ್ನು ಉಳಿಸಿಕೊಂಡಿದ್ದಾರೆ. ಪ್ರಾಸಂಗಿಕವಾಗಿ ಅಯ್ಯ, ಅಣ್ಣ, ಅವ್ವ, ಅಜ್ಜ, ಅಕ್ಕ, ತಂಗಿ ಇಂತಹ ಸಂಬಂಧವಾಚಕಗಳ ಹೆಸರುಗಳ ಬಗ್ಗೆ ಚರ್ಚಿಸಿದ್ದಾರೆ. ಕರ್ನಾಟಕದ ಸಂಬಂಧ ವಾಚಕ ಪದಗಳ ಬಗ್ಗೆ ಮೊದಲಬಾರಿಗೆ ಶಾಸ್ತ್ರೀಯವಾಗಿ ಆಲೋಚಿಸಿದವರಲ್ಲಿ ಚಿದಾನಂದಮೂರ್ತಿ ಅವರು ಪ್ರಮುಖರು.

ಗೋದಾವರೀ ತೀರದ ಪ್ರದೇಶವು (ಮಹಾರಾಷ್ಟ್ರದ ನಾಂದೇಡ ಜಿಲ್ಲೆ) ಹಿಂದೆ ಕನ್ನಡ ಪ್ರದೇಶವಾಗಿತ್ತೆಂಬುದನ್ನು ಆ ಭಾಗದ ಶಾಸನಗಳಲ್ಲಿ ಸಿಗುವ ಸ್ಥಳಗಳ, ವ್ಯಕ್ತಿಗಳ, ತೆರಿಗೆಯ ಹೆಸರುಗಳು ಹಾಗೂ ಅಧಿಕಾರಿಗಳ ಹೆಸರುಗಳನ್ನು ಗಮನಿಸಿ ಹೇಳಲಾಗಿದೆ. ನಾಮಗಳು ಪ್ರಾಚೀನ ಕರ್ನಾಟಕದ ಸೀಮೆಗಳನ್ನು ಗುರುತಿಸುವುದಕ್ಕೆ ತುಂಬ ನೆರವಾಗುತ್ತ ವೆಂಬುದಕ್ಕೆ ಈ ಬರಹದಿಂದ ಸ್ಪಷ್ಟವಾಗುತ್ತದೆ, (ನಾಮಗಳನ್ನು ಕುರಿತು) ಮೇಲೆ ವಿವೇಚಿಸಿದ ಲೇಖನಗಳು ನಾಮಶಾಸ್ತ್ರದ ಮೇಲೆ ವಿಶೇಷ ಬೆಳಕು ಚೆಲ್ಲುತ್ತವೆ. ಇಂದಿಗೂ ನಾಮಗಳ ಬಗ್ಗೆ ಬರೆಯಲಿಚ್ಛಿಸುವವರು ಚಿದಾನಂದಮೂರ್ತಿ ಅವರ ಬರಹಗಳಿಂದಲೇ ಸ್ಫೂರ್ತಿ ಸೂಚನೆಗಳನ್ನು ಪಡೆಯಬೇಕಾಗಿದೆ ಎಂಬ ಮಾತು ಬಹುಮಟ್ಟಿಗೆ ನಿರ್ವಿವಾದ ವಾಗಿದೆ. ಚಿದಾನಂದಮೂರ್ತಿ ಅವರ ದೃಷ್ಟಿಯಲ್ಲಿ ಭಾಷೆಯೆಂಬುದು ಸಮಾಜದಿಂದ ಪ್ರತ್ಯೇಕವಾದ ಅಂಶವಲ್ಲ. ಭಾಷೆಯನ್ನು ಸಾಮಾಜಿಕ ಚೌಕಟ್ಟಿನಲ್ಲಿ ಅವರು ನೋಡಬಯ

ಸುವುದರಿಂದ ಅದರ ಭಾಷಾ ಬರಹಗಳಲ್ಲಿ ಸಮಾಜ, ಸಂಸ್ಕೃತಿ, ಜಾನಪದದ ಲೇಪನ ಇರುತ್ತದೆ. ಅಂತಹ ಬರಹಗಳು ಸಾಮಾಜಿಕ ಭಾಷಾಧ್ಯಯನದ ಕಕ್ಷೆಗೆ ಒಳಪಡುತ್ತವೆ.

ಲಂಬಾಣಿ ಜನರ ಭಾಷೆ ಮತ್ತು ಸಂಸ್ಕೃತಿಯನ್ನು ವಿವೇಚಿಸುವ 'ಲಂಬಾಣಿ ಜನ ಮತ್ತು ಅವರ ಭಾಷೆ' ಎಂಬ ಲೇಖನದಲ್ಲಿ ಲಂಬಾಣಿಗಳ ವೃತ್ತಿ, ವೇಷಭೂಷಣ, ಅವರ ವೈಶಿಷ್ಟ್ಯಗಳನ್ನು ಆರಂಭದಲ್ಲಿ ತಿಳಿಸಿ ಅವರ ಗಂಡಸರ ಹೆಸರುಗಳು 'ನಾಯ್ಕ' ಎಂದೂ (ಪೀಕನಾಯ್ಕ, ಗಂಗಾನಾಯ್ಕ ಮುಂತಾದವು) ಹೆಗಸರ ಹೆಸರುಗಳು 'ಬಾಯಿ' ಎಂದೂ (ರುದ್ರೀಬಾಯಿ, ರೂಪಾಬಾಯಿ ಮುಂತಾದುವು) ಕೊನೆಯಾಗುತ್ತವೆ. ಆ ಭಾಷೆಯ ವ್ಯಾಕರಣ ವಿಶೇಷಗಳನ್ನು ಗಮನಿಸಿದಾಗ ಮೂರು ಅಂಶಗಳು ಕಂಡು ಬರುತ್ತವೆ. ೧. ನಾಮಪದಗಳಲ್ಲಿ ಏಕವಚನ ಮತ್ತು ಬಹುವಚನ ರೂಪಗಳಲ್ಲಿ ಭೇದವಿಲ್ಲ. ಸಂದರ್ಭಾನುಸಾರ ಒಂದು ಪದವು ಏಕವಚನ, ಬಹುವಚನಗಳನ್ನು ಸೂಚಿಸುತ್ತದೆ. ಉದಾ. ಬೇಟ-ಮಗ. ಮಕ್ಕಳು, ದಾಮತ್-ಹಲ್ಲು, ಹಲ್ಲುಗಳು, ೨. ಕ್ರಿಯಾಪದದ ರೂಪಗಳಲ್ಲಿ ಸ್ತ್ರೀಲಿಂಗ, ನಪುಂಸಕ ಲಿಂಗಗಳಿಗೆ ವ್ಯತ್ಯಾಸವಿಲ್ಲ. ಉದಾ. ವೂ ಚಾರೀಚೆ ಅ=ಅವಳು ಹೋಗುತ್ತಾಳೆ. ವೂಚಾರೀಚೆ ಅ=ಅದು ಹೋಗುತ್ತದೆ, ೩. ಮಹಾಪ್ರಾಣಗಳು ಸ್ಪಷ್ಟವಾಗಿ ಉಚ್ಚಾರವಾಗುತ್ತವೆ. ಅವು ಭಾಷೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಉದಾ. ಘಾಲ್=ಗಲ್ಲ, ಘಾಲ್=ಹಾಕು, ಮುಂತಾದುವು. ಅನೇಕ ಪದಗಳಲ್ಲಿ ಅನುನಾಸೀ ಕರಣ ಕಂಡುಬರುತ್ತದೆ. ಹಸ್(=ನಗು) ಆಕಿ(=ಕಣ್ಣು), ಕೆಲವೆಡೆ ಅದು ಅರ್ಥವ್ಯತ್ಯಾಸಕ್ಕೆ ಕಾರಣವಾಗುತ್ತದೆ. ಉದಾ. ಬಾಯಿ(=ಅಕ್ಕ), ಬಾಯಿ (=ಸಂಬಳ).

ಲಂಬಾಣಿ ಭಾಷೆ ಕನ್ನಡದಿಂದ ನೂರಾರು ಪದಗಳನ್ನು ಸ್ವೀಕರಿಸಿದೆ (ವ್ಯವಸಾಯ, ವೃತ್ತಿಪದಗಳು, ಶಿಕ್ಷಣ ಕ್ಷೇತ್ರಗಳಿಗೆ ಸಂಬಂಧಿಸಿದಂತೆ). ಕನ್ನಡವು ಮಾತ್ರ ಲಂಬಾಣಿಯಿಂದ ಏನನ್ನೂ ಸ್ವೀಕರಿಸಿಲ್ಲ ಆದರೆ ಈ ಸ್ವೀಕರಣವು ಏಕಪಕ್ಷೀಯವಾದುದು.[೫] ಇಂತಹ ಸಂದರ್ಭದಲ್ಲಿ ಹಲವು ಪದಗಳು ಧ್ವನಿ ವ್ಯತ್ಯಾಸಗಳನ್ನೂ ಅರ್ಥ ವ್ಯತ್ಯಾಸಗಳನ್ನೂ ಪಡೆದಿವೆ. ಸ್ವರಾಂತಗಳನ್ನು ವ್ಯಂಜನಾಂತಗಳನ್ನಾಗಿ ಮಾಡಿದೆ. ಖೀಲ್ (=ಕೀಲು), (ಮೂಕ್, ಮೂಕು) ಮುಂತಾದುವು. ಕಿರುಬ ಎಂದರೆ ಕನ್ನಡದಲ್ಲಿ ಹುಲಿಯಲ್ಲ, ಅದೇ ಜಾತಿಯ ದುಷ್ಟ ಕಾಡುಪ್ರಾಣಿ, ಲಂಬಾಣಿಯಲ್ಲಿ 'ಹುಲಿ' ಎಂದರ್ಥವಾಗುತ್ತದೆ. ಅನುಬಂಧ ಭಾಗದಲ್ಲಿ ಲಂಬಾಣಿ ಭಾಷೆಯ ಕೆಲವು ವಾಕ್ಯಗಳನ್ನು, ಕಥೆಗಳನ್ನು ಕೊಟ್ಟಿದ್ದಾರೆ. ಆ ಭಾಷೆಯ ಬಗ್ಗೆ ವಿಸ್ತಾರವಾಗಿ ಅಧ್ಯಯನ ಮಾಡುವವರಿಗೆ ಈ ಬರಹ ಉತ್ತಮ ಪ್ರವೇಶಿಕೆಯಾಗಿದೆ. ವಿಸ್ತಾರವಾದ ಕ್ಷೇತ್ರಕಾರ್ಯ, ಸಾಮಾಜಿಕ ಭಾಷಾ ವಿಜ್ಞಾನದ ತತ್ವಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ ರೀತಿ ಅನುಕರಣೀಯವಾದುದು ಒಂದು ಭಾಷಿಕ ಸಮುದಾಯದ ಸ್ವರೂಪವನ್ನು ಪರಿಶೀಲಿಸುವಾಗ ಶೋಧಕನಿಗೆ ಅಗತ್ಯವಾಗಿ ಇರಬೇಕಾದ ಸಾಮಾಜಿಕ ಕಳವಳಿ ಹಾಗೂ ಪ್ರಗತಿಪರ ಮನೋಧರ್ಮವನ್ನು

ಚಿದಾನಂದಮೂರ್ತಿ ಅವರು ತಮ್ಮ ವಿದ್ವತ್ತಿನೊಡನೆ ಬೆಳೆಸಿಕೊಂಡು ಬಂದಿದ್ದಾರೆ ಎಂಬುದಕ್ಕೆ ಈ ಲೇಖನವೇ ಸಾಕ್ಷಿಯಾಗಿದೆ.

ಯಾವುದೇ ಭಾಷೆ ತನ್ನ ಕಾಲದ ಸಾಮಾಜಿಕ, ರಾಜಕೀಯ, ಆಡಳಿತಾತ್ಮಕ ಹಾಗೂ ಇತರ ಅಗತ್ಯತೆಯನ್ನು ಪೂರೈಸಲು ವಿಭಿನ್ನ ಹಂತಗಳಲ್ಲಿ ಪಾರಿಭಾಷಿಕಗಳನ್ನು ರೂಪಿಸಿಕೊಂಡು ಆಧುನೀಕರಣಗೊಳ್ಳುತ್ತದೆ. ಭಾಷಾ ಆಧುನೀಕರಣ ಪ್ರಕ್ರಿಯೆಯಲ್ಲಿ ವೃತ್ತ ಪತ್ರಿಕೆಗಳಂತಹ ಸಮೂಹ ಮಾಧ್ಯಮಗಳು ಮಹತ್ವದ ಪಾತ್ರವಹಿಸುತ್ತವೆ. 'ವಾರ್ತಾ ಮಾಧ್ಯಮದಲ್ಲಿ ಕನ್ನಡ ಭಾಷೆಯ ಆಧುನೀಕರಣ' ಎಂಬ ಲೇಖನದಲ್ಲಿ ಆ ಕುರಿತು ವಿವರವಾಗಿ ಚರ್ಚಿಸಿದ್ದಾರೆ. ಆಧುನೀಕರಣದಿಂದ ಶಬ್ದಭಂಡಾರ ವಿಕಾಸವಾಗುವುದು. ಆ ವಿಕಾಸ ಎರಡು ಬಗೆಯದು. ಸ್ವೀಕರಣ ಮತ್ತು ಸಾದೃಶ್ಯ ಸೃಷ್ಟಿ. ಕನ್ನಡವು ಅನ್ಯ ಭಾಷೆಗಳಿಂದ(ವಿಶೇಷವಾಗಿ ಇಂಗ್ಲಿಷ್) ಸ್ವೀಕರಣ, ಟಂಕೀಕರಣ, ಕಸಿರೂಪ ಹಾಗೂ ಭಾವಾನುವಾದ ಪ್ರಕ್ರಿಯೆಗಳಿಂದ ಅನೇಕ ಪದಗಳನ್ನು ತನ್ನದಾಗಿಸಿಕೊಂಡಿದೆ. ಆಧುನೀಕರಣದ ಪರಿಣಾಮದಿಂದ ಡೈಗ್ಲಾಸಿಯಾ (ದ್ವಿಸ್ತರತೆ) ಪ್ರಕ್ರಿಯೆ ಭಾಷೆಯಲ್ಲಿ ಕಾಣಿಸಿಕೊಳ್ಳುತ್ತದೆ. ಈ ಬರಹವು ಅನ್ವಯಿಕ ಸಾಮಾಜಿಕ ಭಾಷಾವಿಜ್ಞಾನದ ಕಕ್ಷೆಯಲ್ಲಿ ಬರುತ್ತದೆ. ಅನ್ಯಭಾಷೆಯ ಶಬ್ದಗಳನ್ನು ನಮ್ಮ ಭಾಷೆಯ ಜಾಯಮಾನಕ್ಕೆ ತಕ್ಕಂತೆ ಯಾವ ರೀತಿಯಾಗಿ ಅನ್ವಯಿಸಿಕೊಳ್ಳಬೇಕು, ಅನುವಾದಿಸಿಕೊಳ್ಳಬೇಕು ಎಂಬುದರ ಬಗ್ಗೆ ಸೋದಾಹರಣವಾಗಿ ವಿವೇಚಿಸಿದ್ದಾರೆ. ಭಾಷಾ ಆಧುನೀಕರಣದ ಬಗ್ಗೆ ಕನ್ನಡದಲ್ಲಿ ಮೊದಲ ಬಾರಿಗೆ ಆಲೋಚಿಸಿ ಅದರ ವಿಧಿ-ವಿಧಾನಗಳನ್ನು ಸೈದ್ಧಾಂತಿಕ ಚೌಕಟ್ಟಿಗೆ ಒಳಪಡಿಸಿದವರಲ್ಲಿ ಚಿದಾನಂದಮೂರ್ತಿ ಅವರು ಮೊದಲಿಗರು ಎಂಬುದನ್ನು ಗಮನಿಸಬೇಕು.

ಉಂಬಳಿ ಅಥವಾ ಉಂಬಟೆ ಇವುಗಳ ಪ್ರಾಚೀನ ರೂಪದ ಬಗ್ಗೆ ಪ್ರತ್ಯೇಕವಾಗಿ ಒಂದು ಬರಹದಲ್ಲಿ ಚರ್ಚಿಸಿದ್ದಾರೆ.[೬] 'ಟ' ಧ್ವನಿಮಾ ಜನರ ಉಚ್ಚಾರಣೆಯಲ್ಲಿ ನಿಂತು ಹೋಗಿ ಬೇರೆ ಪರಿಸರದಲ್ಲಿ ಕುಳ ಸಮೇತವಾದ 'ಳ' ಬಳಕೆಯಾಗುತ್ತಿತ್ತು. 'ಱಟ' ಉಚ್ಚಾರಣೆ ಮತ್ತು ಪ್ರಯೋಗಗಳ ವಿಷಯದಲ್ಲಿ ಕೇಶಿರಾಜನ ಕಾಲಕ್ಕೆ ಅವ್ಯವಸ್ಥೆ ಇತ್ತು. ಶಾಸನಗಳಲ್ಲಿ 'ಕುಳ' ಸಮೇತ 'ಉಂಬಳಿ' ರೂಪ ಮಾತ್ರ ದೊರೆಯುತ್ತದೆ. ಇತರ ದ್ರಾವಿಡ ಭಾಷೆಗಳಲ್ಲಿ 'ಉಂಬಳಿಯ' ಜ್ಞಾತಿ ಪದಗಳಿವೆ. 'ಉಂಬಳಿ' ಎಂಬುದೇ ಸರಿಯಾದ ರೂಪವಾಗಿದೆ ಎಂಬ ತೀರ್ಮಾನಕ್ಕೆ ಬಂದಿರುವುದು ಸೂಕ್ತವಾಗಿದೆ. 'ಗುಬ್ಬಚ್ಚಿ' ಪದದ ಕೊನೆಯಲ್ಲಿರುವ ಅಚ್ಚಿ ಪದದ ವಿವೇಚನೆಗೆ ತೊಡಗಿದ್ದಾರೆ. ಅದು ವಾತ್ಸಲ್ಯ ಸೂಚಕವೆಂದು ಗುರುತಿಸಿ, ಗುಬ್ಬಿ ಮಕ್ಕಳಿಗೆ ಬಾಲ್ಯದಲ್ಲಿ ಪ್ರಿಯವಾದ ಪುಟ್ಟ ಹಕ್ಕಿಯಾಗಿರುವುದರಿಂದ ಅದನ್ನು ಗುಬ್ಬಚ್ಚಿ ಎಂದು ವಾತ್ಸಲ್ಯದಿಂದ ಕರೆಯುತ್ತಾರೆ.[೭] ನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿ ಗುಬ್ಬಚ್ಚಿಗೆ ಸಂವಾದಿಯಾದ ಪದ ಪ್ರಯೋಗಗಳನ್ನು ತಿಳಿಸಿದ್ದಾರೆ.

ಕವಿರಾಜಮಾರ್ಗಕಾರ, ಪಂಪ ಮುಂತಾದ ಪ್ರಾಚೀನ ಕವಿಗಳು ಪುಲಿಗೆರೆ, ಒಕ್ಕುಂದದ ಸುತ್ತಮುತ್ತಣ ಪ್ರದೇಶವನ್ನೇ ಕನ್ನಡದ ತಿರುಳ್ ಎಂದು ಕರೆದಿದ್ದಾರೆ. ಅವರು ತಮ್ಮ ಕೃತಿಗಳಲ್ಲಿ ಬಳಸಿರುವ ಭಾಷೆ ಆ ಪ್ರದೇಶದ ವಿದ್ಯಾವಂತರ ಭಾಷೆ, ಅದುವೇ ಆ ಕಾಲದ ಶಿಷ್ಟ ಭಾಷೆಯಾಗಿದ್ದಿತು. ಎಂಬುದನ್ನು '೧೦ನೇ ಶತಮಾನದ ಶಿಷ್ಟಭಾಷೆಯ ಪ್ರದೇಶ' ಎಂಬ ಲೇಖನದಲ್ಲಿ ವಿವೇಚಿಸಿದ್ದಾರೆ. ೧೦ನೇ ಶತಮಾನದ ಕನ್ನಡವನ್ನು ಚಾರಿತ್ರಿಕ ಭಾಷಾವಿಜ್ಞಾನದ ತತ್ತ್ವಗಳ ಹಿನ್ನೆಲೆಯಲ್ಲಿ ವಿವೇಚಿಸಿ ಪುನಾರಚಿಸಿದ್ದಾರೆ.

"ಅಮ್ಮ"; "ಅಬ್ಬೆ"; "ಅಲ್ಲಮ"; "ಬಾದುಬ್ಬೆ" ಎಂಬ ಲೇಖನವು ಶಬ್ದಾರ್ಥ ವಿವೇಚನೆಗೆ ಸಂಬಂಧಿಸಿದ್ದರೂ ಪದಗಳ ರೂಪ ಬದಲಾವಣೆಯ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಮೌಲ್ಯಗಳನ್ನು ಪುನರ್‌ರಚಿಸುವುದೇ ಅದರ ಉದ್ದೇಶವಾಗಿದೆ. ಹಳಗನ್ನಡದಲ್ಲಿ "ಅಮ್ಮ" ಎಂದರೆ ತಂದೆ. "ಅಬ್ಬೆ" ಎಂದರೆ ತಾಯಿ ಎಂಬರ್ಥಗಳಿವೆ. ದ್ರಾವಿಡ ಭಾಷೆಗಳ ನೆರವಿನಿಂದ 'ಅಮ್ಮನ್' ಪದಕ್ಕೆ ತಂದೆ ಅರ್ಥ ಬರುವ ಕಾರಣಗಳನ್ನು ಹುಡುಕುತ್ತಾರೆ. 'ಅಬ್ಬೆ'ಯ ಸವೆದ ರೂಪ 'ಬೇ' ಈಗಿನ ಹೆಂಗಸರ ಹೆಸರುಗಳಲ್ಲಿ ಉಳಿದು ಬಂದಿರುವಂತೆ ಕಾಣುತ್ತದೆ. ಉತ್ತರ ಕರ್ನಾಟಕದಲ್ಲಿ ಹೆಂಗಸರನ್ನು ಕರೆಯುವಾಗ ಬೇ ಎಂಬಲ್ಲಿ (ಯವ್ವಾಬೇ) ಹಿಂದಿನ 'ಅಬ್ಬೆಯ ಅವಶೇಷವಿದೆ. ಮಧ್ಯ ಕರ್ನಾಟಕದಲ್ಲಿ ಎಂದರೆ ದಾವಣಗೆರೆಯ ಸುತ್ತಮುತ್ತ ಇದು 'ಅಬ್ಬೆ' ಅಥವಾ 'ಬೇ' ಆಗಿ ಸ್ವಲ್ಪ ಹೀನಾರ್ಥವನ್ನು ಪಡೆದುಕೊಂಡಿದೆ'.[೮] ಆದರೆ ಬೆಳಗಾವಿ ಸುತ್ತಮುತ್ತ ಪ್ರದೇಶದಲ್ಲಿ ಅದು ಗೌರವಸೂಚಕವಾಗಿ ಬಳಕೆಯಲ್ಲಿದೆ ಎಂಬುದನ್ನು ಗಮನಿಸಬೇಕು. ತಾಯಿ ಅಥವಾ ತಾಯಿಯ ಸಮವಯಸ್ಕರನ್ನು ಹಾಗೂ ಹಿರಿಯ ಹೆಂಗಸರನ್ನು ಸಂಬೋಧಿಸುವಾಗ ಬೇ ರೂಪ ಧಾರಾಳವಾಗಿ ಬಳಕೆಯಾಗುತ್ತದೆ. 'ಯತ್ತಿಬೇ ಲವುಟ್ ರೊಟ್ಟಿ ಹಚ್ಚಬೇ ಸಾಲಿಗೆ ಯಾಳೇ ಆಗೇತಿ' (ಹತ್ತಿಬೇ=ಅತ್ತಿಯವರೆ, ಹಚ್ಚಬೇ=ಹಚ್ಚಿರಿ). 'ಅಮ್ಮ', 'ಅಬ್ಬೆ' ಇವು ಒಂದೇ ಮೂಲದಿಂದ ಬಂದಿರಬಹುದೆಂದು ಊಹಿಸುತ್ತಾರೆ. ಹಳಗನ್ನಡದ 'ಅಮ್ಮನ್' ಪದ ಪುರುಷವಾಚಕವಾಗಿ ಬಳಕೆಯಾಗುತ್ತಿತ್ತು. ಕ್ರಮೇಣ ೧೨ನೇ ಶತಮಾನದಿಂದ ಈಚೆಗೆ ಸ್ತ್ರೀವಾಚಕವಾಗಿ ಬಳಕೆಯಾಗುತ್ತಿದೆ. 'ಅಲ್ಲಮ'ದಲ್ಲಿಯ - 'ಮ'. 'ಅಮ್ಮ'ದ ಸವೆದ ರೂಪವೆಂದು ಧ್ವನಿ ನಿಯಮಗಳ ಹಿನ್ನೆಲೆಯಲ್ಲಿ ವಿವೇಚಿಸಿದ್ದಾರೆ. ಎಂ.ಆರ್. ಶ್ರೀ ಅವರು ಅಲ್ಲಮ ಪ್ರಭುದೇವರ ನಿಜವಾದ ಹೆಸರು 'ಅಲ್ಲಮ' ಇನ್ನೂ ಮುಂದುವರಿದು ಅಲ್ಲಮನಿಗೆ ನಿರ್ಮಾಯನೆಂಬ ಮತ್ತೊಂದು ಹೆಸರಿತ್ತು ಎಂದು ಸೂಚಿಸುತ್ತಾರೆ. ಚಿದಾನಂದಮೂರ್ತಿ ಅವರು ಅಲ್ಲಮ ಎಂಬುದೇ ಪ್ರಾಚೀನ ರೂಪ ಅದು ನಿರ್ಮಾಯವೆಂಬುದರ ಕನ್ನಡ ರೂಪವಲ್ಲವೆಂದು ಕಾವ್ಯ ಶಾಸನಗಳ ಆಧಾರದಿಂದ ಸಾಬೀತು ಪಡಿಸಿದ್ದಾರೆ. 'ಬಾದುಬ್ಬೆ' ಪ್ರಾಚೀನ ಕರ್ನಾಟಕದ ಸ್ತ್ರೀದೇವತೆ. ಪ್ರಾಚೀನ ಕಾವ್ಯ, ಶಾಸನಗಳಲ್ಲಿ ಬಾದುಬ್ಬೆಯ ಉಲ್ಲೇಖಗಳಿವೆ. ಬಾದಾಮಿ ಬಳಿಯ ಬನಶಂಕರಿ (ಬನದಬ್ಬೆ) ಬಾದುಬ್ಬೆ ಆಗಿರಬೇಕೆಂದು ಆಧಾರಸಮೇತವಾಗಿ ಶೋಧಿಸಿದ್ದಾರೆ. ಐತಿಹಾಸಿಕ ಭಾಷಾ

ವಿಜ್ಞಾನದ ಗಟ್ಟಿ ತಳಹದಿ ಅವರಿಗಿರುವುದರಿಂದ ಲೇಖನ ಸುಪುಷ್ಟವಾಗಿದೆ. ಸವಕಳಿ ಕ್ರಿಯೆಯ ಬಗೆಗೆ ಇಷ್ಟು ಸೂಕ್ಷ್ಮವಾಗಿ ಅವಲೋಕಿಸಿದವರಲ್ಲಿ ಚಿದಾನಂದ ಮೂರ್ತಿ ಅವರೇ ಮೊದಲಿಗರು. ಈ ಶಾಬ್ದಿಕ ಸಮಸ್ಯೆಗಳಿಗೆ ನಿರ್ಣಾಯಕ ಪರಿಹಾರ ನೀಡಿದರು.

ಚಿದಾನಂದಮೂರ್ತಿ ಅವರ ಕೆಲವು ಬರಹಗಳು ಭಾಷೆಯ ಸ್ವರೂಪವನ್ನು ವಿವೇಚಿಸುವ ವರ್ಣನಾತ್ಮಕ ವ್ಯಾಕರಣಕ್ಕೆ ಸಂಬಂಧಿಸಿವೆ.

'ಱ್' ಧ್ವನಿಮಾದ ಉಚ್ಚಾರಣೆಯಲ್ಲಾದ (ಪ್ರಾಸಸ್ಥಾನದಲ್ಲಿ) ಗೊಂದಲವನ್ನು ಹೋಗಲಾಡಿಸಲು ಕೇಶಿರಾಜನ ವಿಚಾರವನ್ನು 'ಶಾಸನಗಳಲ್ಲಿ ಱ್ ಧ್ವನಿಮಾಕ್ಕೆ ಸಂಬಂಧಿಸಿದ ಲಿಪಿಸಮಸ್ಯೆ ಮತ್ತು ಕೇಶಿರಾಜ' ಎಂಬ ಲೇಖನದಲ್ಲಿ ವಿವೇಚಿಸಲಾಗಿದೆ. ಈ ಏರುಪೇರನ್ನು ಡಾ. ಎಚ್.ಎಸ್. ಬಿಳಗಿರಿಯವರು ಗುರುತಿಸಿದರೂ ಅವರು ಅದರ ಸಮಗ್ರ ಚರ್ಚೆಗೆ ಕೈಹಾಕಿಲ್ಲ. ಅವರು 'ಱ್' ವು 'ಳ್' ಮತ್ತು 'ರ್' ಆಗಿ ಅಭ್ಯಾಸ ಹೊಂದಿದ ರೀತಿಯನ್ನು ವೈಜ್ಞಾನಿಕವಾಗಿ ಚರ್ಚಿಸಿದ್ದಾರೆ. ಈ ವ್ಯತ್ಯಾಸ ಜನರ ಆಡುಮಾತಿನಲ್ಲಿ ಮೊದಲು ಘಟಿಸಿರಬೇಕು. ಆಡುಮಾತಿನಿಂದ ಶಿಷ್ಟಭಾಷೆಗೆ ಬರಲು ಸ್ವಲ್ಪ ಕಾಲ ಹಿಡಿದಿರಬೇಕು. ಇಱ್ದ್ > ಇರ್ದ್ ಪದಗಳಲ್ಲಿ ಱ್, ರ್, ಬರಹದ ಭೇದವೇ ಹೊರತು ಉಚ್ಚಾರದ್ದಲ್ಲ ಎಂಬುದನ್ನು ಸಕಾರಣವಾಗಿಯೇ ಹೇಳಿದ್ದಾರೆ. 'ಱ್' ಮತ್ತು 'ರ್' ಬಳಕೆಯ ಗೊಂದಲ ಕೇಶಿರಾಜನ ಕಾಲಕ್ಕೆ ಇತ್ತು. 'ಱ್'ದಿಂದ ಬಂದಿರುವ 'ರ್'ವನ್ನು 'ಱ್' ಆಗಿ ಉಚ್ಚರಿಸುವುದಿಲ್ಲ. 'ಱ್'ದಿಂದ ಬಂದಿರುವ ಸಹಜವಾಗಿ 'ರ್' 'ಱ್' ಆಗಿ ಉಚ್ಚರಿಸುತ್ತಾರೆ.

ಪ್ರತಿಧ್ವನಿ ಪದಗಳ ರಚನೆಯ ಸ್ವರೂಪವನ್ನು 'ಕನ್ನಡದಲ್ಲಿ ಪ್ರತಿಧ್ವನಿ ಪದಗಳು' ಎಂಬ ಲೇಖನದಲ್ಲಿ ಚರ್ಚಿಸಿದ್ದಾರೆ. ಹುಲಿ-ಗಿಲಿ, ಸಂತೆ-ಗಿಂತೆ ಈ ರೂಪಗಳಲ್ಲಿಯ ಉತ್ತರಾರ್ಧಗಳು ಪ್ರತಿಧ್ವನಿ ಪದಗಳಾಗಿವೆ. ಮೂಲವಾದದ ಒಂದು ಭಾಗ ಮುಗುಚಿ ಬರುವುದು. ಕನ್ನಡದಲ್ಲಿ ಗಿ (ಗೀ) ಎಂಬ ಭಾಗ ಹೊಸದಾಗಿ ಬಂದು, ಸೇರಿಕೊಂಡು ಸೃಷ್ಟಿಯಾಗುವ ಪ್ರತಿಧ್ವನಿಗಳೇ ಹೆಚ್ಚು. ಹುಲಿ, ಸಂತೆ ಸ್ವತಂತ್ರ ರೂಪಗಳಾದರೆ ಗಿಲಿ, ಗಿಂತೆ ಬದ್ಧರೂಪಗಳಾಗಿವೆ. ಕನ್ನಡದಲ್ಲಿ ಗಿ (ಗೀ)ದಿಂದ ಪ್ರಾರಂಭವಾಗುವ ಪದಗಳಿದ್ದರೆ, 'ಪ' ಆಗುತ್ತದೆ. ಗಿಡ-ಪಡ, ಗಿಳಿ-ಪಳಿ ಮುಂತಾದವು. ಕನ್ನಡದಲ್ಲಿ ನಾಮಪದ, ಕ್ರಿಯಾಪದ, ಕ್ರಿಯಾವಿಶೇಷಣಗಳಿಗೆ ಪ್ರತಿಧ್ವನಿ ರಚನೆ ಸಾಧ್ಯ, ಸರ್ವನಾಮ, ಗುಣವಾಚಕ, ಸಂಖ್ಯಾವಾಚಕ ಮತ್ತು ಉದ್ಗಾರಗಳಿಗೆ ಪ್ರತಿಧ್ವನಿಗಳಿಲ್ಲ. ಪ್ರಸ್ತುತ ಸಂಪ್ರಬಂಧದಲ್ಲಿ ಪ್ರತಿಧ್ವನಿಗಳು ಶಬ್ದಾರ್ಥವನ್ನು ಸೂಕ್ಷ್ಮವಾಗಿ ಬದಲಿಸುವ ರೀತಿಯನ್ನು ಹಾಗೂ ಪ್ರತಿಧ್ವನಿ ಪದಗಳ ನಿಯೋಗವನ್ನು ಕುರಿತು ಚರ್ಚಿಸಿದ್ದಾರೆ.

'ಕನ್ನಡ ಉಪಭಾಷೆಯೊಂದರಲ್ಲಿ ತಾಲವ್ಯೀಕರಣ ಮತ್ತು ಕಂಠ್ಯೀಕರಣ' ಎಂಬ ಭಾಷಿಕ ಪ್ರಕ್ರಿಯೆಯನ್ನು ಮೊದಲು ಗುರುತಿಸಿದ ಶ್ರೇಯಸ್ಸು ಚಿದಾನಂದಮೂರ್ತಿ

ಅವರಿಗೆ ಸಲ್ಲುತ್ತದೆ. ಕನ್ನಡ ಉಪಭಾಷೆಯೊಂದರಲ್ಲಿ ತಾಲವ್ಯೀಕರಣದ ಜೊತೆಗೆ ಅದಕ್ಕೆ ಪ್ರತಿಸ್ಪರ್ಧಿಯೆಂಬಂತೆ ಕಂಠ್ಯೀಕರಣ ಕ್ರಿಯೆಯೂ ನಡೆದಿರುವುದು ಸ್ವಾರಸ್ಯಕರವಾದ ಅಪೂರ್ವ ಸಂಗತಿಯಾಗಿದೆ. ಪೂರ್ವಸ್ವರಗಳಾದ ಇ. ಈ. ಎ. ಐ.ಗಳ ಹಿಂದಿನ (ಕ್) (ಗ್) ಗಳು ನಿಯಮಿತವಾಗಿ ಚ್ ಗಳಾಗುತ್ತವೆ. ಉದಾ. ಕಿವಿ > ಚಿವಿ, ಕೆರೆ > ಚೆರೆ ಇದು ತಾಲವ್ಯೀಕರಣ. ಚೆಂಬು >ಕೆಂಬು, ಚೆನ್ನಾಗಿ > ಕೆನ್ನಾಗಿ ಇದು ಕಂಠ್ಯೀಕರಣ, ಹಾಸನ ಜಿಲ್ಲೆಯ ಹೊಳೆ ನರಸಿಂಹಪುರ, ಚನ್ನರಾಯಪಟ್ಟಣ, ಅರಕಲಗೂಡು, ಸಕಲೇಶ ಪುರ ತಾಲೂಕುಗಳ ಸುತ್ತಮುತ್ತಲ ಪ್ರದೇಶದ ಹರಿಜನರ ಭಾಷೆಯಲ್ಲಿ ಈ ಪ್ರಕ್ರಿಯೆ ಕಂಡುಬಂದಿದೆ. IJDL ಪತ್ರಿಕೆಯಲ್ಲಿ ಅವರ ತಾಲವ್ಯೀಕರಣ ಮತ್ತು ಕಂಠ್ಯೀಕರಣ ಲೇಖನ ಪ್ರಕಟವಾದಾಗ ಐತಿಹಾಸಿಕ ಭಾಷಾವಿಜ್ಞಾನಿಗಳು ಕುತೂಹಲದಿಂದ ಹುಬ್ಬೇರಿಸಿ ಈ ಶೋಧವನ್ನು ಮೆಚ್ಚಿದರು. ಕೇರಳ ವಿಶ್ವವಿದ್ಯಾಲಯದ ಪ್ರೊ. ವಿ.ಆಯ್. ಸುಬ್ರಹ್ಮಣ್ಯಂ ಅವರು ಈ 'ಕ್ರಿಯೆ, ಪ್ರತಿಕ್ರಿಯೆಗಳು ಭೌತವಿಜ್ಞಾನದಲ್ಲಷ್ಟೇ ಅಲ್ಲ. ಭಾಷಾವಿಜ್ಞಾನದಲ್ಲೂ ನಡೆಯುತ್ತವೆ' ಎಂಬ ಕುತೂಹಲಕಾರಿ ಪ್ರಹೇಳಿಕೆಯನ್ನು ಕೊಟ್ಟರು. ಇದು ಈ ಶೋಧದ ಮಹತ್ವವನ್ನು ಎತ್ತಿತೋರಿಸುತ್ತದೆ.'

'ವ್ಯಾವಹಾರಿಕ ಶಿಷ್ಟ ಕನ್ನಡದಲ್ಲಿ ವಿಭಕ್ತಿ ವ್ಯವಸ್ಥೆ' ಎಂಬ ಲೇಖನದಲ್ಲಿ ಬೆಂಗಳೂರು, ಮೈಸೂರು ಪ್ರದೇಶದ ಆಡುನುಡಿಯನ್ನು ವ್ಯಾವಹಾರಿಕ ಕನ್ನಡವೆಂದು ಕರೆದು (ಅದು ಚಿದಾನಂದಮೂರ್ತಿಯವರ ವ್ಯಕ್ತಿ ಭಾಷೆಯಾಗಿದೆ) ಅಲ್ಲಿಂದ ಭಾಷಾಸಾಮಗ್ರಿಯನ್ನು ಸಂಗ್ರಹಿಸಿ, ವಿಭಕ್ತಿ ಪ್ರತ್ಯಯಗಳ ಬಗ್ಗೆ ಚರ್ಚಿಸಿದ್ದಾರೆ. ವಿಭಕ್ತಿ ಪಲ್ಲಟ, ಉತ್ತರಸ್ಥಾನೀಯಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಪ್ರತಿಗಮನ ವಿಭಕ್ತಿ, ಸಹವಿಭಕ್ತಿಗಳ ಬಗೆಗಿನ ವಿಚಾರಗಳು ಅಲ್ಲಿಯ ಚರ್ಚೆಗೆ ಎಡೆಮಾಡಿಕೊಟ್ಟಿವೆ. ಇದೊಂದು ಮಹತ್ವದ ಲೇಖನ, ವಿಭಕ್ತಿಗಳ ವಿವಿಧ ಆವಿಷ್ಕಾರಗಳ ಬಗ್ಗೆ ಇಲ್ಲಿ ಮೊದಲ ಬಾರಿಗೆ ಹೊಸ ಬಗೆಯಿಂದ ಆಲೋಚಿಸ ಲಾಗಿದೆ.

ಕನ್ನಡ ವ್ಯಾಕರಣಕಾರರಾದ ಕವಿರಾಜಮಾರ್ಗಕಾರ, ೨ನೇ ನಾಗವರ್ಮ, ಕೇಶಿರಾಜ, ಭಟ್ಟಾಕಳಂಕರು ಕನ್ನಡ ಭಾಷೆಯ ಶಬ್ದಕೋಶವನ್ನು ವರ್ಗೀಕರಿಸಿದ ರೀತಿಯನ್ನು ಪ್ರಸ್ತಾಪಿಸಿ ಹಳಗನ್ನಡದ ಅಧಿಕೃತ ವ್ಯಾಕರಣವಾದ ಶಬ್ದಮಣಿದರ್ಪಣವನ್ನು ಕೇಂದ್ರ ವಾಗಿಟ್ಟುಕೊಂಡು ಅಲ್ಲಿ ಚರ್ಚಿತವಾಗಿರುವ ಸ್ವೀಕರಣ ವಿಚಾರಗಳನ್ನು 'ಕನ್ನಡ ವ್ಯಾಕರಣ ಕಾರರು ಮತ್ತು ಸ್ವೀಕರಣ ವಿಚಾರ' ಎಂಬ ಸಂಪ್ರಬಂಧದಲ್ಲಿ ಗಮನಿಸಲಾಗಿದೆ. ಕೇಶಿರಾಜ ಕನ್ನಡ ಕೋಶವನ್ನು ೧. ಸಮಸಂಸ್ಕೃತ ೨. ಅಪ್ರಭ್ರಂಶ(ತದ್ಭವ) ೩. ತತ್ಸಮ ೪. ದೇಶ್ಯ ವೆಂದು ನಾಲ್ಕು ಗುಂಪುಗಳಾಗಿ ವಿಂಗಡಿಸಿದ್ದಾನೆ. ಸ್ವೀಕರಣದ ಕ್ರಿಯೆಯಲ್ಲಿ ಪದರಚನೆ ಯಲ್ಲಾಗುವ ಪ್ರಕ್ರಿಯೆಗಳ ಬಗ್ಗೆ ಶಾಸ್ತ್ರೀಯವಾಗಿ ವಿವೇಚಿಸಿದ್ದಾರೆ. ಸಂಸ್ಕೃತ ಮತ್ತು ಪ್ರಾಕೃತ ಶಬ್ದಗಳು ಕನ್ನಡಕ್ಕೆ ಬರುವಾಗ ನಡೆಯುವ ಧ್ವನಿ ವ್ಯತ್ಯಾಸಗಳನ್ನು ಹೇಳಿದ್ದಾರೆ. ಯಾವ ವ್ಯತ್ಯಾಸವೂ ಇಲ್ಲದೆ ಕನ್ನಡಕ್ಕೆ ಬಂದಿರುವ ಪ್ರಾಕೃತ ಪದಗಳು ಸಸಿ (ಶಸಿ),

ಪಸು (ಪಶು), ಸಗ್ಗ (ಸ್ವರ್ಗ) ಮುಂತಾದ ಆದ್ಯೇತರ ದೀರ್ಘಸ್ವರಗಳು ಹ್ರಸ್ವವಾಗುತ್ತವೆ. ಕುಡೀ >ಗುಡಿ (ಕುಟೀ), ಮಸಾನ >ಮಸಣ (ಶ್ಮಶಾನ), ಸುಂಝಾ >ಸಂಜೆ ಮುಂತಾದ ಸ್ವೀಕರಣ ಕ್ರಿಯೆಯಲ್ಲಿ ನಡೆಯುವ ಇನ್ನು ಕೆಲವು ಪ್ರಮುಖ ಧ್ವನಿ ವ್ಯತ್ಯಾಸಗಳ ಬಗ್ಗೆ ವಿವೇಚಿಸಿದ್ದಾರೆ. ಸ್ಥೂಲವಾಗಿ ಹೇಳುವುದಾದರೆ ಶಬ್ದಮಣಿ ದರ್ಪಣದ ಅಪಭ್ರಂಶ ಪ್ರಕರಣವನ್ನು ಆಧುನಿಕ ಭಾಷಾವಿಜ್ಞಾನದ ಹಿನ್ನೆಲೆಯಲ್ಲಿ ಇಲ್ಲಿ ವ್ಯಾಖ್ಯಾನಿಸ ಲಾಗಿದೆ.

ದ್ರಾವಿಡ ಭಾಷೆಗಳು ಸಂಸ್ಕೃತ ಮತ್ತು ಇತರ ಇಂಡೋಆರ್ಯನ್ ಭಾಷೆಗಳಿಂದ ಯಥೇಷ್ಟವಾಗಿ ಪದಗಳನ್ನು ಸ್ವೀಕರಿಸಿದೆ. ಸ್ವೀಕೃತವಾದ ಅನೇಕ ಪದಗಳಲ್ಲಿ ಗಮನಾರ್ಹ ವಾದ ಅರ್ಥ ವ್ಯತ್ಯಾಸಗಳಾಗುತ್ತವೆ (ಅರ್ಥಾಂತರ, ಅರ್ಥವಿಕಾಸ, ಅರ್ಥವ್ಯತ್ಯಾಸ). ಅರ್ಥವ್ಯತ್ಯಾಸ ಯಾವ ರೀತಿಯಾಗಿ ನಡೆಯುತ್ತದೆ ಎಂಬುದರ ಬಗೆಗೆ 'ದ್ರಾವಿಡ ಶಿಷ್ಟ ಭಾಷೆಗಳಲ್ಲಿನ ಸಂಸ್ಕೃತ ಸ್ವೀಕರಣಗಳಲ್ಲಿ ಅರ್ಥ ವ್ಯತ್ಯಾಸ' ಎಂಬ ಲೇಖನದಲ್ಲಿ ನಿರೂಪಿಸಿದ್ದಾರೆ. ಅನೇಕ ಸ್ವೀಕೃತ ಪದಗಳಿಗೆ ಹೀನಾರ್ಥ ಪ್ರಾಪ್ತಿಯಾಗಿದೆ. ಉದಾ. ದೆವ್ವ ghost, evil, spirt (ಸಂ.ದೈವ 'God') ಅರ್ಥವ್ಯತ್ಯಾಸಕ್ಕೆ ಸಾಮಾಜಿಕ ಆಯಾಮ ವಿರಬೇಕೆಂದು ಚಿದಾನಂದಮೂರ್ತಿ ಊಹಿಸುತ್ತಾರೆ. ತೌಲನಿಕ ದ್ರಾವಿಡ ಭಾಷಾ ವಿಜ್ಞಾನದ ಅಧ್ಯಯನಕ್ಕೆ ಅವರ ಈ ವಿಚಾರಗಳು ಹೊಸದಾರಿಯನ್ನು ತೋರಿಸಿದವು.

'ಕನ್ನಡದಲ್ಲಿ ಮಣಿಪ್ರವಾಳ' ಎಂಬ ಲೇಖನದಲ್ಲಿ ತಮಿಳು, ಮಲಯಾಳಂ, ತೆಲುಗು ಭಾಷೆಗಳಲ್ಲಿರುವಂತೆ ಕನ್ನಡದಲ್ಲಿಯೂ ಸಂಸ್ಕೃತ ಮಿಶ್ರವಾದ ಕನ್ನಡ ವಾಕ್ಯಗಳ ಬಳಕೆಯ ಮಣಿಪ್ರವಾಳ ಶೈಲಿ ಇತ್ತು ಎಂಬುದರ ಬಗ್ಗೆ ಸಕಾರಣವಾಗಿಯೇ ವಿವೇಚಿಸಿ ದ್ದಾರೆ. ಪಾರ್ಶ್ವನಾಥ ಪುರಾಣ, ಕಬ್ಬಿಗರಕಾವ, ರಾಮಾಶ್ವಮೇದ ಮತ್ತು ಕೆಲವು ಶಾಸನಗಳಲ್ಲಿ ಈ ಶೈಲಿ ಕಾಣಿಸುತ್ತದೆ ಎಂಬುದನ್ನು ಮೊದಲ ಬಾರಿಗೆ ಗುರುತಿಸಿದ್ದಾರೆ. ವಾಕ್ ಮತ್ತು ಅರ್ಥ ಈ ಭಾಷಿಕ ಚಿಹ್ನೆಗಳು ನಿಕಟ ಸಂಬಂಧವನ್ನು ಹೊಂದಿದ್ದು ಅವು ಪರಸ್ಪರ ಪೂರಕ ಪೋಷಕಗಳಾಗಿವೆ ಎಂಬುದನ್ನು, 'ವಾಗರ್ಥ : ಒಂದು ಟಿಪ್ಪಣಿ' ಎಂಬ ಲೇಖನದಲ್ಲಿ ಚರ್ಚಿಸಿದ್ದಾರೆ.

ಚಿದಾನಂದಮೂರ್ತಿ ಅವರ ಸಂಪ್ರಬಂಧಗಳಲ್ಲಿ ಅನೇಕ ಮೂಲಗಳಿಂದ ತಂದಿರುವ ಸಾಮಗ್ರಿ ಇದೆ. ಅವರು ತಲುಪುವ ತೀರ್ಮಾನಗಳ ಲಾಭವನ್ನು ಪಡೆದಂತೆಯೇ ಹೆಚ್ಚಿನ ಸಂಶೋಧನೆಗೆ ಅವರು ಸಂಗ್ರಹಿಸಿಕೊಟ್ಟ ಮಾಹಿತಿಯನ್ನು ಬಳಸಿಕೊಳ್ಳಬಹುದು. ಅಂತರಶಿಸ್ತೀಯ ಅಧ್ಯಯನ ವಿಧಾನದಿಂದ ಮೂಡಿಬಂದ ವಾಗರ್ಥದ ಲೇಖನಗಳು ಅದ್ವಿತೀಯವಾಗಿವೆ. ಪ್ರತಿಯೊಂದು ಲೇಖನದಲ್ಲಿಯೂ ತಮ್ಮ ವಿಚಾರಗಳನ್ನು ಮುಂದಿ ನವರು ಬೆಳೆಸಲಿ, ಪರಿಷ್ಕರಿಸಲಿ ಎನ್ನುವಲ್ಲಿ ಅವರ ಕಳಕಳಿಯನ್ನು ಗುರುತಿಸಬೇಕು.

ಮೈಸೂರು ವಿಶ್ವವಿದ್ಯಾಲಯದಲ್ಲಿ ನಡೆದ ಇಂದಿನ ಕನ್ನಡದ ಪ್ರಾದೇಶಿಕ ಸ್ವರೂಪಗಳು ಎಂಬ ಗೋಷ್ಠಿಯಲ್ಲಿ 'ಹಳೆ ಮೈಸೂರು ಕನ್ನಡ' ಎಂಬ ಸಂಪ್ರಬಂಧವನ್ನು ಮಂಡಿಸಿ ದ್ದರು.[೧೦] ಅದರಲ್ಲಿ ಹಳೆ ಮೈಸೂರು ಪ್ರದೇಶಗಳಾದ ಮೈಸೂರು, ಮಂಡ್ಯ, ಕೋಲಾರ,

ತುಮಕೂರು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ ಈ ಪ್ರದೇಶಗಳ ಭಾಷಾಸ್ವರೂಪವನ್ನು ಸ್ಥೂಲವಾಗಿ ಹೇಳಿದ್ದಾರೆ. ಕೋಲಾರ ಜಿಲ್ಲೆಯ ಕನ್ನಡ ತೆಲುಗು ದ್ವಿಭಾಷಿಕತೆಯ ಸ್ವರೂಪದ ಬಗೆಗಿನ ವಿವರಣೆ ಹೊಸ ಬಗೆಯ ಆಲೋಚನೆಯಿಂದ ಕೂಡಿದೆ.

ಗೋವಿಂದ ಪೈ ಅವರ ಭಾಷೆ, ಸಾಹಿತ್ಯಗಳನ್ನು ಕುರಿತು ಸಂಶೋಧನೆಯ ಬಗೆಗೆ ಲೇಖನವನ್ನು ಬರೆದಿದ್ದಾರೆ.[೧೯] ಪೈಯವರು ಭಾಷೆ ಸಾಹಿತ್ಯಗಳನ್ನು ಕುರಿತಂತೆ ನಡೆಸಿರುವ ಸಂಶೋಧನೆಗಳನ್ನು ಕವಿಕಾಲ, ಮತವಿಚಾರ, ಕರ್ತೃತ್ವ ವಿಚಾರ ಇತ್ಯಾದಿ ಏಳು ಗುಂಪುಗಳಾಗಿ ವಿಂಗಡಿಸಿದ್ದಾರೆ. ಅವುಗಳಿಗೆ ಸಂಬಂಧಿಸಿದಂತೆ ಪೈ ಅವರ ಕೆಲವು ಲೇಖನಗಳನ್ನು ಕೇಂದ್ರವಾಗಿಟ್ಟುಕೊಂಡು ಪೈಯವರ ಸಂಶೋಧನ ವಿಧಾನ ಸಂಶೋಧನ ಕ್ಷೇತ್ರಕ್ಕೆ ಅವರ ಕೊಡುಗೆ ಯಾವ ರೀತಿಯದು ಎಂಬ ವಿಚಾರಗಳನ್ನು ಸವಿಸ್ತಾರವಾಗಿ ತಿಳಿಸಿದ್ದಾರೆ. ಪೈ ಅವರ ಬರಹಗಳ ಇತಿಮಿತಿಯನ್ನೂ ಹೇಳಿದ್ದಾರೆ. ಹಂಪಿಯ, ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆದ 'ಭಾಷಾಶಾಸ್ತ್ರ ಶಿಶಿರಶಾಲೆ'ಯಲ್ಲಿ (೧೯೯೧ ನವೆಂಬರ್) ಧ್ವನಿವ್ಯತ್ಯಾಸದ ಬಗ್ಗೆ ವಿಶೇಷ ಉಪನ್ಯಾಸ ಕೊಟ್ಟರು. ಆ ಸಂದರ್ಭದಲ್ಲಿ ಅವರು ವ್ಯಕ್ತಪಡಿಸಿದ ವಿಚಾರಗಳು ತುಂಬ ಮೌಲಿಕವಾಗಿದ್ದವು. ಅವರು ಆ ಉಪನ್ಯಾಸದ ಟಿಪ್ಪಣಿ ನನ್ನ ಬಳಿ ಇದೆ. ಚಿದಾನಂದಮೂರ್ತಿ ಅವರು ಕನ್ನಡ ಚಳುವಳಿಯ ಮಧ್ಯದಲ್ಲಿಯೂ ಅಧ್ಯಯನದ ನಿರಂತರತೆಯನ್ನು ಸಂಶೋಧನೆಯ ಪ್ರಗತಿಯನ್ನು ಕಾಪಾಡಿ ಕೊಂಡು ಬಂದಿರುವುದು ಗೌರವ ಹೆಚ್ಚಿಸುವಂತಹುದು.

'ಮಾತೃಭಾಷೆಯಲ್ಲಿ ಶಿಕ್ಷಣ' ಎಂಬ ಲೇಖನದಲ್ಲಿ ಬೋಧನ ಮಾಧ್ಯಮದ ಬಗೆಗ ಚರ್ಚಿಸಿದ್ದಾರೆ.[೨೦] ಮಾತೃಭಾಷೆಯಲ್ಲಿ ಶಿಕ್ಷಣ ನೀಡಬೇಕೆಂದು ಸರ್ವೋನ್ನತ ನ್ಯಾಯಾಲಯವು ತೀರ್ಪು ನೀಡಿದೆ. ಆ ತೀರ್ಪಿನ ಸ್ವರೂಪ ಮತ್ತು ಕರ್ನಾಟಕ ಸರ್ಕಾರ ಕೈಗೊಳ್ಳಬೇಕಾದ ಕ್ರಮ ಇತ್ಯಾದಿ ಅಂಶಗಳನ್ನು ಪರಿಶೀಲಿಸಿ ಮಾತೃಭಾಷೆ ಯಲ್ಲಿಯೇ ಶಿಕ್ಷಣ ನೀಡುವಂತೆ ಸಲಹೆ ಮಾಡಿದ್ದಾರೆ. ಈ ರೀತಿಯಲ್ಲಿ ನಾಡು. ನುಡಿಯ ಬಗೆಗೆ ಅವರಿಗಿರುವ ಕಳಕಳಿ ವ್ಯಕ್ತವಾಗಿದೆ.

೩

ಚಿದಾನಂದಮೂರ್ತಿ ಅವರು ಅನೇಕ ಹೊಸ ಪದಗಳನ್ನು ಟಂಕಿಸಿ, ಚಲಾವಣೆಗೆ ತಂದು ಕನ್ನಡ ಶಬ್ದಭಂಡಾರದ ವಿಕಾಸಕ್ಕೂ ಕಾರಣರಾಗಿದ್ದಾರೆ.

Antigueliore	ಪುರಾವಸ್ತುಶಾಸ್ತ್ರ
Concordance	ಪ್ರಕೋಶ
Folklore	ಜಾನಪದಶಾಸ್ತ್ರ
Generic	ವಾರ್ಗಿಕ
Glide	ಧ್ವನಿಜಾರು

Identification	ಅಭಿಜ್ಞೆ
Nickname	ಅಡ್ಡಹೆಸರು
Research Jounal	ಸಂಪತ್ರಿಕೆ
Research Paper	ಸಂಪ್ರಬಂಧ
Research Statement	ಪ್ರಹೇಳಿಕೆ
Specific	ನಿರ್ದಿಷ್ಟ
Socio-Cultural Study	ಸಮಾಜೋ ಸಾಂಸ್ಕೃತಿಕ ಅಧ್ಯಯನ
Socio-Religious Study	ಸಮಾಜೋ ಧಾರ್ಮಿಕ ಅಧ್ಯಯನ
Surname	ಕುಲನಾಮ

ಅವರು ಕಮ್ಮಟಿಸಿದ ಈ ಪದಗಳು, ಪದಪುಂಜಗಳು ಈಗ ಚಲಾವಣೆಯಲ್ಲಿವೆ. ಅವು ಕೇವಲ ಅನುವಾದಗಳಲ್ಲ, ಪ್ರಬುದ್ಧ ಭಾಷೆಗೆ ಸರಿಸಮಾನವಾಗಿ ನಮ್ಮ ಸಾಮಗ್ರಿಗಳ ಮೂಲಕ ನಡೆಯುವ ಹೊಸ ಸೃಷ್ಟಿಗಳವು. ಅದು ಕನ್ನಡ ಭಾಷೆಯ ಆಧುನೀಕರಣ ವಿಧಾನಗಳಲ್ಲಿ ಒಂದಾಗಿದೆ. ಹೊಸಪದಗಳನ್ನು ಟಂಕಿಸಿ, ಬಳಕೆಗೆ ಬರುವಂತೆ ಮಾಡಿ ಮಾತೃಭಾಷೆಯ ಶಬ್ದಭಂಡಾರ ಬೆಳವಣಿಗೆ ಮಾಡುವುದು ಆಧುನೀಕರಣದ ಲಕ್ಷಣ ವಾಗಿದೆ. ಚಿದಾನಂದಮೂರ್ತಿಯವರು ಈ ಕಾರ್ಯವನ್ನು ಯಶಸ್ವಿಯಾಗಿ ಪೂರೈಸಿದ್ದಾರೆ.

ಶಬ್ದಾರ್ಥಗಳ ನಿರ್ಣಯದಲ್ಲಿ ಚಿದಾನಂದಮೂರ್ತಿ ಅವರ ಕೊಡುಗೆ ಮಹತ್ವ ಪೂರ್ಣವಾಗಿದೆ. ಸಟ್ಟಿಂಗ, ಕೇಳಿಕೆ, ಕೊಟ್ಟಣಹಾಕಿಸು, ಅಂಟಿಗೆ-ಪಂಟಿಗೆ, ವರ್ಷದ ತೊಡಕು, ದಂತಕತೆ, ಒಡಪು, ಒಗಟು, ಕರಪಲ್ಲ, ಜನಿವಾರ, ಸಂಬಳಿಗೋಲು, ಅಡ್ಡಾಯುಧ, ನೇಯ್ಯೇಜಿಸು ಮುಂತಾದ ಶಬ್ದಗಳ ನಿಷ್ಪತ್ತಿ ಮತ್ತು ಅರ್ಥವನ್ನು ಕುರಿತಾದ ಬರೆಹಗಳು ಸಂಶೋಧನ ತರಂಗ, ಗ್ರಾಮೀಣ, ಹೊಸತು ಹೊಸತುಗಳಲ್ಲಿ ಬಂದಿವೆ. ತಮ್ಮ ಬಹುಶಿಸ್ತೀಯ ಪಾಂಡಿತ್ಯದಿಂದ ಕನ್ನಡದ ಅನೇಕ ಶಾಬ್ದಿಕ ಸಮಸ್ಯೆಗಳಿಗೆ ಸಮರ್ಪಕ ಪರಿಹಾರ ಕೊಟ್ಟಿದ್ದಾರೆ. ಶಬ್ದ ನಿಷ್ಪತ್ತಿಗೆ ತೊಡಗುವಾಗ ಕಾವ್ಯ, ಶಾಸನ, ನಿಘಂಟುಗಳ ನೆರವನ್ನು ಪಡೆಯುತ್ತಾರೆ. ತಮ್ಮ ವಿಚಾರಗಳನ್ನು ಸಮರ್ಥಿಸುವುದಕ್ಕೆ ಅನೇಕ ಆಧಾರಗಳನ್ನು ಕೊಡುತ್ತಾರೆ. ಅವರು ವಿವೇಚಿಸಿದ ಶಬ್ದಾರ್ಥಗಳು ಬಹುಮಟ್ಟಿಗೆ Cultural Key word's ಗಳಾಗಿವೆ ಎಂಬುದನ್ನು ಗಮನಿಸಬೇಕು. ಅಲ್ಲಿಯೂ ಸಹ ಸಂಸ್ಕೃತಿಯ ಪುನಾರಚನೆಯೇ ಅವರಿಗೆ ಮುಖ್ಯವಾಗುತ್ತದೆ.

ಚಿದಾನಂದಮೂರ್ತಿ ಅವರ ಭಾಷಾಧ್ಯಯನದ ಕೊಡುಗೆಯನ್ನು ಅನುಲಕ್ಷಿಸಿ ಭಾಷಾತಜ್ಞರು ಅವರನ್ನು ದ್ರಾವಿಡ ಭಾಷಾವಿಜ್ಞಾನದ ಸಂಸ್ಥೆಯ ಅಧ್ಯಕ್ಷರಾಗಿ ಹಾಗೂ ೧೯೮೬ರಲ್ಲಿ ನಡೆದ ಅಖಿಲಭಾರತ ದ್ರಾವಿಡ ಭಾಷಾವಿಜ್ಞಾನ ಸಮ್ಮೇಳನದ ಅಧ್ಯಕ್ಷರನ್ನಾಗಿ ನಿಯುಕ್ತ ಮಾಡಿದರು ಎಂಬುದನ್ನು ಗಮನಿಸಬೇಕು.

ಭಾಷಾಧ್ಯಯನಕ್ಕೆ ಸಂಬಂಧಿಸಿದಂತೆ ಯಾವ ತಾತ್ವಿಕ ಸಮಸ್ಯೆಯನ್ನು ತೆಗೆದುಕೊಂಡರು ವಿದ್ವಾಂಸರು ಮೊದಲು ಚಿದಾನಂದಮೂರ್ತಿ ಅವರ ಅಭಿಪ್ರಾಯವನ್ನು ಪರಿಶೀಲನೆಗೆ ತೆಗೆದುಕೊಳ್ಳುವುದು ಕನ್ನಡ ವಿದ್ವತ್ ವಲಯದಲ್ಲಿ ಒಂದು ಪರಂಪರೆಯಾಗಿದೆ. ಆ ಕುರಿತು ಚಿದಾನಂದಮೂರ್ತಿ ಅವರು ಏನು ಹೇಳಿದ್ದಾರೆ ಎಂಬುದನ್ನು ಗಮನಿಸಿಯೇ ಮುಂದೆ ಹೋಗಬೇಕಾಗಿದೆ. ಅವರ ಬರವಣಿಗೆಯಲ್ಲಿ ತೂಕವಿದೆ, ಕ್ರಮವಿದೆ, ಬೆಲೆಯಿದೆ ತಮ್ಮ ಕಾಲದ ಭಾಷಾಧ್ಯಯನವನ್ನು ತಮ್ಮದೇ ಆದ ರೀತಿಯನ್ನು ಅತ್ಯುತ್ತಮ ರೀತಿಯಲ್ಲಿ ಪ್ರತಿನಿಧಿಸುತ್ತಾರೆ. ಕನ್ನಡ ಭಾಷಾವಿಜ್ಞಾನದ ಇತಿಹಾಸದಲ್ಲಿ ಅವರದು ಬಹುದೊಡ್ಡ ಹೆಸರಾಗಿ ಉದ್ದಕ್ಕೂ ಬೆಳಗುತ್ತದೆ ಎಂಬುದರ ಬಗೆಗೆ ಅನುಮಾನವೇ ಇಲ್ಲ.

ಅಡಿಟಿಪ್ಪಣಿಗಳು

೧. ವಾಗರ್ಥ (೧೯೮೧), ಬಾಪ್ಕೊ ಪ್ರಕಾಶನ, ಬೆಂಗಳೂರು, ಪು.೭೬-೭೭.
೨. ಅದೇ, ಪು. ೭೯.
೩. ಅದೇ, ಪು. ೧೨೮.
೪. ಅದೇ, ಪು. ೨೪೧-೨೪೨.
೫. ಅದೇ, ಪು.೧೦೬.
೬. ಅದೇ, ಪು. ೧೯೩-೧೯೭.
೭. ಅದೇ, ಪು. ೧೯೮-೨೦೧.
೮. ಅದೇ, ಪು. ೨೪೬.
೯. ಬಿ.ಬಿ. ರಾಜಪುರೋಹಿತರ 'ವಾಗರ್ಥ'ದ ಮುನ್ನುಡಿ.
೧೦. ಸುವರ್ಣ ಸಂಚಯ (೧೯೬೭), ಮೈಸೂರು ವಿಶ್ವವಿದ್ಯಾಲಯ.
೧೧. 'ಪೈಯವರ ಸಂಶೋಧನೆ : ಭಾಷೆ, ಸಾಹಿತ್ಯಗಳನ್ನು ಲಕ್ಷಿಸಿ, ಗೋವಿಂದ ಪೈ ಶತಮಾನ ಸ್ಮರಣೆ' (ಸಂ.), ಎನ್.ಎಸ್. ಲಕ್ಷ್ಮೀ ನಾರಾಯಣಭಟ್ಟ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೪.
೧೨. ಮಾತೃಭಾಷೆಯಲ್ಲಿ ಶಿಕ್ಷಣ, ಕನ್ನಡ ವಾರ್ಷಿಕ (೧೯೯೩), ಸಂ. ಕರೀಗೌಡ ಬೀಚನಹಳ್ಳಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

* ಒಂದು ಅವಧಿಯಲ್ಲಿ ಒಬ್ಬ ವ್ಯಕ್ತಿ ಯಾವುದಾದರೊಂದು ಭಾಷಾಸ್ವರೂಪವನ್ನು ಆಡುವುದು ಅದು ವ್ಯಕ್ತಿ ಭಾಷೆಯೆನಿಸಿಕೊಳ್ಳುತ್ತದೆ. ಒಬ್ಬ ವ್ಯಕ್ತಿ ಎಲ್ಲ ಸಂದರ್ಭದಲ್ಲಿಯೂ ಒಂದೇ ರೀತಿಯಲ್ಲಿ ಮಾತನಾಡುವುದಿಲ್ಲ ಎಂದ ಮೇಲೆ ಅವನ ಪ್ರತಿಮಾತು, ಸನ್ನಿವೇಶ ಹಾಗೂ ಪರಿಸ್ಥಿತಿಗೆ ತಕ್ಕಂತೆ ಬೇರೆ ಬೇರೆಯಾಗುತ್ತದೆ.

* ಕರ್ನಾಟಕ ಸ್ಥಳನಾಮಗಳ ಮೇಲೆ ಮೊಟ್ಟಮೊದಲು ಕ್ಷಕಿರಣ ಹರಿಸಿದವರೆಂದರೆ ಶಂಬಾ ಮತ್ತು ಸೇಡಿಯಾಪು ಅವರು. ಶಂಬಾ ಅವರು ಕರ್ನಾಟಕ ಸಂಸ್ಕೃತಿಯ

ನೆಲೆಯನ್ನು ಶೋಧಿಸುವಾಗ, ಸೇಡಿಯಾಪು ಅವರು ಶಬ್ದಾರ್ಥಗಳನ್ನು ವಿವೇಚಿಸುವಾಗ ಸ್ಥಳನಾಮಗಳನ್ನು ಪೂರಕವಾಗಿ ಬಳಸಿಕೊಳ್ಳುತ್ತಾರೆ. ನಾಮಘಟಕಗಳ ಅಧ್ಯಯನ ಅಂಕುರಾರ್ಪಣೆಯಾದದ್ದು ಶಂಬಾ ಮತ್ತು ಸೇಡಿಯಾಪು ಅವರ ಬರೆಹಗಳಲ್ಲಿ. ಈ ಜ್ಞಾನಶಾಖೆಯನ್ನು ವಿಕಸಿಸಿ ಇದೊಂದು ಪ್ರತ್ಯೇಕ ಅಧ್ಯಯನ ವಿಷಯವೆಂದು ತಿಳಿದುದು ಎಂ. ಚಿದಾನಂದಮೂರ್ತಿ ಅವರ ಬರೆಹಗಳಿಂದ. ಇಂದು ಬಹುಜನರಿಗೆ ಗೊತ್ತಿರುವ ನಾಮಶಾಸ್ತ್ರದ ತತ್ವ-ಸಿದ್ಧಾಂತಗಳು ಶಂಬಾ, ಸೇಡಿಯಾಪು ಮತ್ತು ಚಿದಾನಂದಮೂರ್ತಿ ಈ ಮೂರು ವಿದ್ವಾಂಸರ ದತ್ತಿಯೇ ಆಗಿದೆ.

೧೬

ಟಿ.ವಿ. ವೆಂಕಟಾಚಲಶಾಸ್ತ್ರೀ : ಭಾಷಾಧ್ಯಯನ

ಕನ್ನಡಕ್ಕೆ ತನ್ನದೇ ಆದ ಭಾಷಾಧ್ಯಯನ ಪರಂಪರೆಯಿದೆ. ಆಧುನಿಕ ಭಾಷಾ ವಿಜ್ಞಾನದ ದೃಷ್ಟಿಯಿಂದಲೂ ಕನ್ನಡ ಹಿಂದು ಬಿದ್ದಿಲ್ಲ. ಆ ದಿಸೆಯಲ್ಲಿ ಕನ್ನಡವನ್ನು ಮೊದಲು ನಡೆಸಿದ ಶ್ರೇಯಸ್ಸು ಮಿಶನರಿ ವಿದ್ವಾಂಸರಿಗೆ ಸಲ್ಲುತ್ತದೆ. ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಜರ್ಮನಿಯಿಂದ ಬಂದ ಮಿಶನರಿ ವಿದ್ವಾಂಸರು ಕನ್ನಡ ಭಾಷೆಗೆ ವ್ಯಾಕರಣಗಳನ್ನು ಮುಖ್ಯವಾಗಿ ಇಂಗ್ಲಿಶಿನಲ್ಲಿ ಕೆಲವೊಮ್ಮೆ ಕನ್ನಡದಲ್ಲಿ ಬರೆಯುವುದರಿಂದ ಹೊಸ ದಿಕ್ಕಿನಲ್ಲಿ ಕನ್ನಡ ಭಾಷಾಧ್ಯಯನ ಆರಂಭಿಸಿದರು. ಅದೇ ವೇಳೆಯಲ್ಲಿ ದೇಶೀಯ ಪಂಡಿತರು(ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯ, ಬಿ. ಮಲ್ಲಪ್ಪ) ಕನ್ನಡ ಭಾಷೆಗೆ ತಕ್ಕ ವ್ಯಾಕರಣ ರಚನೆಯನ್ನು ಮಾಡಿದರು. ಆದರೆ ಕನ್ನಡ ಭಾಷೆಯ ಸ್ವರೂಪವನ್ನು ದೃಷ್ಟಿಯಲ್ಲಿರಿಸಿಕೊಂಡು ತಕ್ಕ ಹದ ಹರವುಗಳೊಂದಿಗೆ ರಚಿತವಾಗಿರುವ ಭಾಷೆ-ವ್ಯಾಕರಣ ಕೃತಿಗಳು ಸಾಮಾನ್ಯವಾಗಿ ಕಂಡುಬರುವುದಿಲ್ಲ. ಇಂತಹ ಸಂದರ್ಭದಲ್ಲಿ ವೆಂಕಟಾಚಲಶಾಸ್ತ್ರೀ ಅವರ ಬರೆಹಗಳು ಅಧ್ಯಯನಾರ್ಥಿಗಳ ಗಮನಸೆಳೆಯುತ್ತವೆ.

೧

ವ್ಯಾಕರಣ ಶಾಸ್ತ್ರೀಗಳ ಉಸಿರು. ಸಾಹಿತ್ಯ, ಶಾಸ್ತ್ರ, ಛಂದಸ್ಸು, ನಿಘಂಟು ಈ ಅಧ್ಯಯನ ಕ್ಷೇತ್ರಗಳಲ್ಲಿಯೂ ಅವರು ಮಿಂಚಿನಂತೆ ಕಾರ್ಯ ಮಾಡಿದ್ದಾರೆ. ಹಳಗನ್ನಡ ಪದಗಳ ರಚನೆ, ವಿಕಲ್ಪ, ಐತಿಹಾಸಿಕ ಬೆಳವಣಿಗೆ ಇತ್ಯಾದಿ ತಿಳಿವಳಿಕೆಗಳು ಅವರಲ್ಲಿ ಸ್ಪರ್ಧಾತ್ಮಕವಾಗಿ ಕೆಲಸ ಮಾಡಿವೆ. ಅವರ ಭಾಷಾಧ್ಯಯನವನ್ನು ಕುರಿತು ಯೋಚಿಸುವಾಗ ಅವರ ಗಟ್ಟಿ ಹಿಡಿತ ವ್ಯಾಕರಣವಾಗಿದೆ. ಅವರ ವ್ಯಾಕರಣ ವಿಚಾರಗಳೂ ಭಾಷಾವಿಜ್ಞಾನದ ದೃಷ್ಟಿಕೋನವನ್ನು ಹೊಂದಿವೆ. ಈ ಭಾಗದಲ್ಲಿ ಶಾಸ್ತ್ರೀ ಅವರ ಭಾಷೆ-ವ್ಯಾಕರಣ ಸಂಬಂಧಿ ಬರೆಹಗಳನ್ನು ಪುನರ್ ಅವಲೋಕಿಸಲಾಗಿದೆ.

ಹೊಸಗನ್ನಡ ರಚನೆಯನ್ನು ಅನುಲಕ್ಷಿಸಿ ಕನ್ನಡ ವ್ಯಾಕರಣದ ಕೊರತೆಯನ್ನು ಮನಗಂಡು ಬಿ.ಎಂ.ಶ್ರೀ. ಪ್ರತಿಷ್ಠಾನವು ಶಾಸ್ತ್ರೀ ಅವರಿಗೆ 'ಹೊಸಗನ್ನಡ ವ್ಯಾಕರಣ' ರಚಿಸಬೇಕೆಂದು ಸೂಚಿಸಿತು. ಆ ಪ್ರಕಾರ ಶಾಸ್ತ್ರೀ ಅವರು ಹೊಸಗನ್ನಡದ ಪದರಚನೆ ಮತ್ತು ಆಡುನುಡಿಯನ್ನು ಗಮನದಲ್ಲಿಟ್ಟುಕೊಂಡು 'ಹೊಸನ್ನಡ ವ್ಯಾಕರಣ'ವನ್ನು ರಚಿಸಿದರು(೧೯೯೦). ಅದರ ಶಿಲ್ಪ ಈ ಮೊದಲಿನ ಶಾಲಾ ವ್ಯಾಕರಣಗಳ ಹಾಗೆಯೇ ಇದ್ದರೂ ಕೆಲವು ಅಂಶಗಳಲ್ಲಿ ಅವುಗಳ ವ್ಯಾಪ್ತಿಯನ್ನು ಹಿಗ್ಗಿಸಲು ಯತ್ನಿಸಲಾಗಿದೆ. ಸಾಂಪ್ರದಾಯಿಕ ವಿವೇಚನೆಯ ಜೊತೆಗೆ ಭಾಷಾಶಾಸ್ತ್ರೀಯ ನಿರೂಪಣಾ ಕ್ರಮವನ್ನು ಅಲ್ಲಿ ಕಾಣಬಹುದಾಗಿದೆ. ಈ ಕೃತಿಯಲ್ಲಿ ವ್ಯಾಕರಣದ ಪ್ರಯೋಜನ, ವರ್ಣಮಾಲೆ, ಶಬ್ದಕೋಶ ರಚನೆ, ಸಂಧಿಗಳು ಮತ್ತು ಸಂಧಿಕಾರ್ಯಗಳು, ಕ್ರಿಯಾಪದ ರಚನೆ, ವಾಕ್ಯರಚನೆಯ ಭೇದಗಳು, ವಿರಾಮ ಚಿಹ್ನೆಗಳು ಈ ಎಲ್ಲ ಅಂಶಗಳು ಕ್ರಮವಾಗಿ ಚರ್ಚಿಸಲ್ಪಟ್ಟಿವೆ. ಶಾಸ್ತ್ರೀ ಅವರು ಅನೇಕ ವ್ಯಾಕರಣ ಸಮಸ್ಯೆಗಳ ಮೇಲೆ ಹೊಸ ಬೆಳಕು ಚೆಲ್ಲಿದ್ದಾರೆ.

ಹಿಂದಿನ ವ್ಯಾಕರಣಗಳು ಬರೆಹ, ಭಾಷೆಯನ್ನು ಅನುಲಕ್ಷಿಸಿ ರಚಿತವಾದರೆ ಪ್ರಸ್ತುತ ವ್ಯಾಕರಣ ಕೃತಿ ಕನ್ನಡದ ಆಡುರೂಪಗಳನ್ನು ಮಾನ್ಯ ಮಾಡಿದೆ. ಉದಾ. ಮೈಸೂರು ಪ್ರಾಂತದಲ್ಲಿ ಬಳಕೆಯಲ್ಲಿರುವ ಹೆಂಗಸ್ರು, ಮನೆಗ್ಳು, ಗುರುಗ್ಳು, ಅತ್ತೇರು, ಮಾವಿನ್ಮರ, ಒಲೆಬೂದಿ ಇಂತಹ ಪದರೂಪಗಳು ಈ ವ್ಯಾಕರಣದಲ್ಲಿ ಬಳಕೆಯಾಗಿವೆ. ಇದು ತುಂಬ ಮಹತ್ವದ ವಿಷಯ. ಬರೆಹದ ಕನ್ನಡ-ಆಡುಕನ್ನಡ ಇವು ಕನ್ನಡದ ಬಳಕೆಯ ಮುಖಗಳು. ಎರಡಕ್ಕೂ ಸಮಾನವಾದ ಸ್ಥಾನವಿದೆ.

ಈ ವ್ಯಾಕರಣದ ರಚನೆಯನ್ನು ಕುರಿತು ಹೇಳುವುದಾದರೆ ಹೊಸಗನ್ನಡದ ರಚನೆಯನ್ನು ಸೂತ್ರದಲ್ಲಿ ಹೇಳಿರುವ ವಿಧಾನ ಅನಂತರ ಸೂತ್ರದಲ್ಲಿ ಒಳಗೊಳ್ಳುವ ವ್ಯಾಕರಣ ಪ್ರಕ್ರಿಯೆಗಳನ್ನು ಉದಾಹರಣೆ ಸಮೇತವಾಗಿ ಚರ್ಚಿಸಲಾಗಿದೆ. ನಿಯಮದಿಂದ ಉದಾಹರಣೆ, ಉದಾಹರಣೆಗಳಿಂದ ನಿಯಮ ರೂಪಿಸುವ ಭಾಷಾಶಾಸ್ತ್ರದ ನೀತಿ ನೆನಪಾಗುತ್ತದೆ. ಇದರಿಂದಾಗಿ ತೀ.ನಂ.ಶ್ರೀ. ಅವರ 'ಕನ್ನಡ ಮಾಧ್ಯಮ ವ್ಯಾಕರಣ'ದ ನಂತರ ಶಾಸ್ತ್ರೀ ಅವರ ಈ ಗ್ರಂಥ ವ್ಯಾಕರಣ ಮತ್ತು ಭಾಷಾವಿಜ್ಞಾನ ಕ್ಷೇತ್ರದಲ್ಲಿ ಮಹತ್ವದ ಕೃತಿಗಾಗಿ ಹೆಚ್ಚು ಜನಾದರಣೀಯಾಗಿದೆ.

ಶಾಸ್ತ್ರೀಗಳು 'ಶಬ್ದಮಣಿದರ್ಪಣ'ದ ಉತ್ತಮ ಆವೃತ್ತಿಯನ್ನು ಹೊರತಂದಿದ್ದಾರೆ (೧೯೯೪). ಪ್ರಸ್ತುತ ಪರಿಷ್ಕರಣದ ಪಥ್ಯದಲ್ಲಿ ಅವರು ಅನುಸರಿಸಿದ ಕ್ರಮಗಳು ಹೀಗಿವೆ. ೧. ಆಕರಗಳು ದೊರೆಯುವಂತಿದ್ದರೆ ಅಂತಹ ಕಡೆ ಪ್ರಯೋಗಗಳನ್ನು ಅವುಗಳ ಮೂಲದೊಂದಿಗೆ ಹೋಲಿಸಿ ಒಪ್ಪಿತ ಪಾಠವನ್ನು ಗೊತ್ತು ಮಾಡಿದ್ದಾರೆ. ೨. ಸೂತ್ರ, ವೃತ್ತಿ, ಪ್ರಯೋಗಗಳಲ್ಲಿ ಗಮನಾರ್ಹವಾದ ಪಾಠ ವ್ಯತ್ಯಾಸಗಳಿದ್ದರೆ ಸಮರ್ಪಕವಾಗಿ ತಿದ್ದಿದ್ದಾರೆ. ವ್ಯಾಕರಣ ಸಮಸ್ಯೆಗಳಿದ್ದರೆ ಅಡಿಟಿಪ್ಪಣಿಯಲ್ಲಿ ಚರ್ಚಿಸಿದ್ದಾರೆ. ಅಭ್ಯಾಸಪೂರ್ಣ

ಉಪೋದ್ಘಾತದಲ್ಲಿ ಶಬ್ದಮಣಿದರ್ಪಣದ ಎಲ್ಲ ಪ್ರಕರಣಗಳ ಸಾರವನ್ನು ಸಂಕ್ಷಿಪ್ತವಾಗಿ ಸಮೀಕ್ಷೆ ಮಾಡಿದ್ದಾರೆ. ಗ್ರಂಥಾಂತ್ಯದಲ್ಲಿ ಸೂತ್ರ ಮತ್ತು ಪ್ರಯೋಗಗಳ ಅಕಾರಾದಿಯನ್ನೊಳಗೊಂಡ ಎರಡು ಅನುಬಂಧಗಳಿವೆ. ಪ್ರಸ್ತುತ ಪರಿಷ್ಕರಣವು ವಿದ್ಯಾರ್ಥಿಗಳಿಗೂ, ವಿದ್ವಾಂಸರಿಗೂ ತುಂಬ ಉಪಯುಕ್ತವಾಗಿದೆ.

ಹಳಗನ್ನಡ ವ್ಯಾಕರಣ ಗ್ರಂಥಗಳಲ್ಲಿ ಶಬ್ದಮಣಿದರ್ಪಣವು ಶ್ರೇಷ್ಠವಾದುದು. ಅದು ಹೆಚ್ಚಿನ ವಿಮರ್ಶೆಗೆ, ಪರಿಷ್ಕರಣಕ್ಕೆ ಗುರಿಯಾದುದು ಅದರ ವಿದ್ವಜ್ಜನ ಪ್ರೀತಿಗೆ ಸಾಕ್ಷಿ. ಅದರ ನೇರ ಅಧ್ಯಯನ ಸಾಂಪ್ರದಾಯಿಕ ಹಾಗೂ ಆಧುನಿಕ ದೃಷ್ಟಿಯಿಂದ ಗಣನೀಯ ಪ್ರಮಾಣದಲ್ಲಿ ನಡೆಯುತ್ತಲಿದೆ. ಶಾಸ್ತ್ರೀ ಅವರ 'ದರ್ಪಣ ವಿವರಣ'(೨೦೦೧)ವು ಶಬ್ದಮಣಿದರ್ಪಣದ ಎಲ್ಲ ಸೂತ್ರ ಮತ್ತು ವೃತ್ತಿಗಳ ವಸ್ತು ವಿವರಣೆಯನ್ನು ಸುಲಭವಾಗಿ ಅರ್ಥವಾಗುವಂತೆ ಹೊಸಗನ್ನಡದಲ್ಲಿ ನಿರೂಪಿಸುತ್ತದೆ. ಈ ಕೃತಿ ವಿದ್ಯಾರ್ಥಿಗಳಿಗೆ ತುಂಬ ಉಪಯುಕ್ತವಾಗುತ್ತದೆ. ಇದರ ಹಿಂದಿನ ಅಭ್ಯಾಸದ ಗಾತ್ರವನ್ನು ಊಹಿಸಿದರೆ ಯಾರಿಗೂ ಗೌರವಾದರಗಳು ಹುಟ್ಟುತ್ತವೆ. ಭಾಷೆ-ವ್ಯಾಕರಣಕ್ಕೆ ಸಂಬಂಧಪಟ್ಟಂತೆ ಅವರ ಸಂಪ್ರಬಂಧಗಳು 'ಶಾಸ್ತ್ರೀ ಸಂಪುಟ ೧'(೧೯೯೯)ರಲ್ಲಿ ಸಮಾವೇಶಗೊಂಡಿವೆ. ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅವರ ಪ್ರಕಟಿತ ಲೇಖನಗಳ ಪರಿಚಯವನ್ನಿಲ್ಲಿ ನೋಡಬಹುದು.

'ತೆ' ಎಂಬ ಅವ್ಯಯ ವಿಚಾರ ಎಂಬ ಸಂಪ್ರಬಂಧದಲ್ಲಿ 'ತೆ' ಎಂಬ ಅವ್ಯಯ ಪಂಪಭಾರತ, ಅಜಿತನಾಥಪುರಾಣ, ಜಗನ್ನಾಥವಿಜಯ ಇಂತಹ ಪ್ರಾಚೀನ ಕಾವ್ಯಗಳಲ್ಲಿ ಅಲ್ಲಲ್ಲಿ ವಿರಳವಾಗಿ ಕಂಡುಬಂದಿದೆ. ಕೇಶಿರಾಜನನ್ನು ಒಳಗೊಂಡು ಎಲ್ಲ ಹಳಗನ್ನಡ ವೈಯಾಕರಣಿಗಳ ಕಣ್ಣು ತಪ್ಪಿಸಿರುವ ಈ ಅವ್ಯಯವನ್ನು ಶಾಸ್ತ್ರೀ ಅವರು ವಿದ್ವಾಂಸರ ಗಮನಕ್ಕೆ ತಂದಿದ್ದಾರೆ. 'ತೆ' ಇದು ಬಹುಮಟ್ಟಿಗೆ 'ಛೀ' ಎಂಬರ್ಥ ಕೊಡುವ ನಿಪಾತಾವ್ಯ ಅದರ ಸ್ವರೂಪವನ್ನು ಹೇಳಿ ಈ ಅವ್ಯಯವನ್ನು ಹೋಲುವ ಯಾವ ರೂಪವು ದ್ರಾವಿಡ ಭಾಷೆಗಳಲ್ಲಿ ಕಂಡುಬರುವುದಿಲ್ಲ. ಈ ನಿಪಾತಾವ್ಯಯ ಕನ್ನಡಕ್ಕೆ ವಿಶಿಷ್ಟವಾಗಿದೆ ಎಂಬುದನ್ನು ಸೋದಾಹರಣವಾಗಿ ತೋರಿಸಿಕೊಟ್ಟಿದ್ದಾರೆ.

'ತವು' ಎಂಬ ಧಾತು ಕ್ಷಯಿಸು, ಕುಗ್ಗು, ಸವೆ, ನಾಶವಾಗು, ವ್ಯಯವಾಗು ಮುಂತಾದ ಹಲವು ಅರ್ಥಗಳನ್ನು ಕೊಡುತ್ತದೆ. ಆ ಧಾತುವಿನ ಕ್ರಿಯೆ ಮತ್ತು ಕಾರಕ ರೂಪಗಳನ್ನು ನಿಷ್ಪನ್ನಗೊಳಿಸುವಾಗ ಪ್ರಾಚೀನ ಮತ್ತು ಅರ್ವಾಚೀನ ವ್ಯಾಕರಣಕಾರರು ಸಂದಿಗ್ಧ ರೂಪ ಭೇದಗಳನ್ನು ಕಾಣಿಸಿ ಸಾಕಷ್ಟು ಗೊಂದಲವನ್ನುಂಟು ಮಾಡಿದ್ದಾರೆ. ಶಾಸ್ತ್ರೀ ಅವರು ಆ ಸಂದಿಗ್ಧತೆಯ ಸ್ಥಾನಗಳನ್ನು ಪರಿಶೀಲಿಸಿ ಆ ಧಾತುವಿನ ರೂಪ ಭೇದಗಳನ್ನು 'ತವು', 'ಧಾತುವಿನ ವ್ಯಾಕರಣ ವಿಚಾರ' ಎಂಬ ಸಂಪ್ರಬಂಧದಲ್ಲಿ ವಿಶದೀಕರಿಸಿದ್ದಾರೆ.

ಹಳಗನ್ನಡದ ಶ್ರೇಷ್ಠ ವ್ಯಾಕರಣ ಗ್ರಂಥವಾದ ಶಬ್ದಮಣಿದರ್ಪಣ(೧೨೬೦) ರಚಿತವಾದ ಮೇಲೆ, ನಂತರ ಈ ಗ್ರಂಥದ ಅಭ್ಯಾಸ ಎಷ್ಟರಮಟ್ಟಿಗೆ ನಡೆದಿದೆ ಅದರ

ಪ್ರಯೋಜವನ್ನು ಕವಿಗಳು, ಕೋಶಕಾರರು, ಇತರರು ಹೇಗೆ ಪಡೆದುಕೊಂಡಿದ್ದಾರೆ ಎಂಬುದನ್ನು 'ಶಬ್ದಮಣಿದರ್ಪಣ ಮತ್ತು ಉತ್ತರಕಾಲೀನ ಸಾಹಿತ್ಯ' ಎಂಬ ಸಂಪ್ರಬಂಧದಲ್ಲಿ ವಿವೇಚಿಸಿದ್ದಾರೆ. ಶಬ್ದಮಣಿದರ್ಪಣದ ಮಂಗಲ ಶ್ಲೋಕವಾದ 'ಶ್ರೀ ವಾಗ್ದೇವಿಗೆ ಶಬ್ದದಿ/ನಾನಾವಿಂದ್ರಿಯದ ವಿಷಯಮಂ ಶ್ರೋತ್ರದೊಳು...' ಇಲ್ಲಿ 'ನಾನಾವಿಂದ್ರಯದ' ಎಂಬ ವಾಕ್ಯ ಭಾಗವನ್ನು ನಿಟ್ಟೂರ ನಂಜಯ್ಯ ಆದಿಯಾಗಿ ಬಹುಪಾಲು ದರ್ಪಣದ ಪರಿಷ್ಕರಣದ ಸಂಪಾದಕರು 'ಆ ಆ ಇಂದ್ರಿಯದ ವಿಷಯಂ' ಎಂದೇ ಉಪಾಧೇಯವೆಂದು ಒಪ್ಪಿದ್ದಾರೆ. ಶಾಸ್ತ್ರೀ ಅವರು ಆ ವಾಕ್ಯ ಭಾಗವನ್ನು ಪರಿಶೀಲಿಸಿ 'ಆವಾವ' (ಆವ ಆವ) 'ಇಂದ್ರಿಯದ ವಿಷಯಮಂ' ಎಂದು ಪರಿಷ್ಕರಿಸಿದ್ದಾರೆ. 'ಆವಾವ' (ಒಂದೊಂದು/ಸಮಸ್ತ) ಈ ಶಬ್ದ ಹಳಗನ್ನಡ ಕಾವ್ಯ ಪ್ರಯೋಗದಲ್ಲಿ ನಾಲ್ಕು ಸಾರಿ ಕಂಡುಬರುತ್ತದೆ. ಅದು ದರ್ಪಣಕ್ಕೂ ಅನ್ವಯವಾಗುತ್ತದೆ ಎಂದು 'ಶಬ್ದಮಣಿದರ್ಪಣ'ದ 'ಮಂಗಲ ಶ್ಲೋಕದ ಒಂದು ವ್ಯಾಕರಣಾಂಶ' ಎಂಬ ಲೇಖನದಲ್ಲಿ ನಿರ್ಣಯಿಸಿದ್ದಾರೆ.

ಇಮ್ಮಡಿ ನಾಗವರ್ಮನು ಕಾವ್ಯಾವಲೋಕನ, ಕರ್ಣಾಟ ಭಾಷಾಭೂಷಣ, ಅಭಿಧಾನ ವಸ್ತುಕೋಶ, ಹಲಾಯುಧ ಟೀಕೆ, ಛಂದೋವಿಚಿತೀ(?) ಹೆಸರಿನಿಂದ ಅಲಂಕಾರ, ವ್ಯಾಕರಣ, ನಿಘಂಟು, ಛಂದಸ್ಸು ಗ್ರಂಥಗಳನ್ನು ಬರೆದ. ಈತನೊಬ್ಬ ಸಮಷ್ಟಿಶಾಸ್ತ್ರಜ್ಞ. ಅವರ ಕೃತಿಗಳನ್ನು 'ನಾಗವರ್ಮನ ಲಕ್ಷಣ ಗ್ರಂಥಗಳು' ಎಂಬ ಸಂಪ್ರಬಂಧದಲ್ಲಿ ಸ್ಥೂಲವಾಗಿ ಪರಿಚಯಿಸಿದ್ದಾರೆ. ಭಾಷೆ ಹಾಗೂ ಸಾಹಿತ್ಯದ ದೃಷ್ಟಿಯಿಂದ ಗಮನಾರ್ಹ ಕೃತಿಗಳಲ್ಲಿ ವಡ್ಡಾರಾಧನೆಯೂ ಒಂದು. ಅಲ್ಲಿ ಬಳಕೆಯಾದ ಬಂಧುವಾಚಕಗಳು, ಪ್ರಾಣಿವಾಚಕಗಳು, ಆಹಾರ ವಾಚಕಗಳು, ನುಡಿಗಟ್ಟುಗಳು ಹೆಚ್ಚಾಗಿ ಇವು ದೇಸೀಯ ಮೂಲವಾಗಿವೆ. ಇವುಗಳ ಸ್ವರೂಪವನ್ನು ಕುರಿತು 'ವಡ್ಡಾರಾಧನೆಯ ದೇಸಿ' ಎಂಬ ಸಂಪ್ರಬಂಧದಲ್ಲಿ ಸಾಧಾರವಾಗಿ ತೋರಿಸಿದ್ದಾರೆ. ಪ್ರಾಚೀನ ಕನ್ನಡ ಶಾಸ್ತ್ರ ಕೃತಿಗಳಲ್ಲಿ ಕನ್ನಡ ಪಾರಿಭಾಷಿಕ ಪದಗಳು ದೊರೆಯುತ್ತವೆ. ಕೇಶಿರಾಜ ವರ್ಣಮಾಲೆಯನ್ನು ಶುದ್ಧಗೆ (ಸಂ<ಶುದ್ಧಕಾ) ಅಲ್ಲಿಯ ಲಭಿಸುವ ದಡ್ಡಕ್ಕರ (<ದ್ವಿತ್ವ) ಪೂರ್ವಕ್ಕೆ ಪೆಜಗು, ಪಿಂತೆ, ಮೊದಲು ಎಂಬ ರೂಪಗಳು ಉತ್ತರಕ್ಕೆ ಇದಿರ್, ಎರಡು ಎಂಬುದನ್ನು ಅಂತ್ಯಕ್ಕೆ ಕಡೆ ಎಂದು ಕೇಶಿರಾಜ, ನಾಗವರ್ಮರು ಬಳಸಿದ್ದಾರೆ. ಅದರಂತೆ ಛಂದಸ್ಸು ಮತ್ತು ಅಲಂಕಾರಶಾಸ್ತ್ರ ಕೃತಿಗಳಲ್ಲಿಯೂ ಅನೇಕ ಕನ್ನಡ ಪಾರಿಭಾಷಿಕ ಶಬ್ದಗಳು ದೊರೆಯುತ್ತವೆಂಬುದನ್ನು 'ಪ್ರಾಚೀನ ಕನ್ನಡ ಲಕ್ಷಣ ಗ್ರಂಥಗಳಲ್ಲಿ ಕನ್ನಡ ಪಾರಿಭಾಷಿಕ ಶಬ್ದಗಳು' ಎಂಬ ಸಂಪ್ರಬಂಧಧಲ್ಲಿ ಕಲೆಹಾಕಿ ಅವುಗಳ ಸ್ವರೂಪವನ್ನು ಕುರಿತು ವಿವೇಚಿಸಿದ್ದಾರೆ. ಈ ಲೇಖನದ ಓಂದೆ ಶಾಸ್ತ್ರೀ ಅವರ ವ್ಯಾಕರಣ ಓದು ಸಹೃದಯ ಓದುಗರ ಗಮನಕ್ಕೆ ಬಾರದೆ ಇರದು. ಕನ್ನಡದಲ್ಲಿ ಪ್ರಕಟವಾದ ವ್ಯಾಕರಣ ಸಾಹಿತ್ಯವನ್ನು ಕುರಿತು 'ಕನ್ನಡ ವ್ಯಾಕರಣ ಸಾಹಿತ್ಯ' ಎಂಬ ಲೇಖನದಲ್ಲಿ ಸೋದಾಹರಣವಾಗಿ ನಿರೂಪಿಸಿದ್ದಾರೆ. ಈ ಲೇಖನ ಸಾಕಷ್ಟು ಮಾಹಿತಿಗಳಿಂದ ಕೂಡಿದ್ದು ದೀರ್ಘ ಚರ್ಚೆಗೆ

ಅವಕಾಶ ಮಾಡಿಕೊಡುತ್ತದೆ. ಪ್ರಾಚೀನ ಕಾವ್ಯ ಮತ್ತು ಕಾವ್ಯೇತರ ಸಂದರ್ಭದಲ್ಲಿ 'ಗಮಕ' ಶಬ್ದದ ಅರ್ಥ ಛಾಯೆಗಳನ್ನು ಕುರಿತು 'ಗಮಕ : ಒಂದು ಶಬ್ದಾರ್ಥ ವಿವೇಚನೆ' ಎಂಬ ಲೇಖನದಲ್ಲಿ ಚರ್ಚಿಸಿದ್ದಾರೆ. ಗಮಕ ಶಬ್ದದ ಭಾಷಾವೈಜ್ಞಾನಿಕ ಶೋಧದೊಡನೆ ಸಾಂಸ್ಕೃತಿಕ ಶೋಧವೂ ಈ ಲೇಖನದಲ್ಲಿ ನಡೆದಿದೆ ಎಂಬುದು ಗಮನಿಸಬೇಕಾದ ಸಂಗತಿ.

ಭಾಷಾ ವ್ಯವಹಾರದಲ್ಲಿ ಬಳಕೆಯಾಗುವ ವಾಗ್ರೂಢಿಗಳಲ್ಲಿ ಯಮಳ ಶಬ್ದಗಳೂ (ಕೂಡುನುಡಿಗಳು) ಪ್ರಮುಖವಾಗಿವೆ. ಹಳ್ಳಿಗಳಲ್ಲಿ ಮಾತು ಮಾತಿಗೆ ಕೂಡುನುಡಿಗಳು ಬಳಕೆಯಾಗುತ್ತವೆ. ಪ್ರಾಚೀನ ಕಾಲದಲ್ಲಿಯೂ ಅವು ಇಂದಿನಂತೆ ಬಳಕೆಯಾಗುತ್ತಿದ್ದವು. ಅವುಗಳ ಸ್ವರೂಪವನ್ನು 'ಕನ್ನಡ ಯಮಳ ಶಬ್ದಗಳು' ಎಂಬ ಸಂಪ್ರಬಂಧಧಲ್ಲಿ ವಿವೇಚಿಸಿದ್ದಾರೆ. ರಪಣ, ಜಲ್ಲಮಲ್ಲ, ಅಚ್ಚಮಲ್ಲ, ಹಣ್ಣುಹಂಪಲ, ಗುಡಿಗುಂಡಾರ, ಕಪ್ಪುಕಾಣಿಕೆ ಮುಂತಾದ ಯಮಳ ಶಬ್ದಗಳ ಸ್ವರೂಪವನ್ನು ಅವು ಸ್ಪಷ್ಟಪಡಿಸುವ ಹೊಸ ಅರ್ಥಛಾಯೆಗಳನ್ನು ಕುರಿತು ಚರ್ಚಿಸಿದ್ದಾರೆ.

ಭಾಷಾ ಬಳಕೆಗೆ ಎರಡು ದಾರಿಗಳಿರುತ್ತವೆ. ೧. ಆಡುಮಾತು, ೨. ಬರೆಹ. ಬಳಕೆಯ ಔಪಚಾರಿಕ ಮತ್ತು ಅನೌಪಚಾರಿಕ ಸಂದರ್ಭದಲ್ಲಿ ಆಡುಮಾತಿನ ವ್ಯಾಪ್ತಿ ವಿಶಾಲವಾಗಿದೆ. ಶಾಸ್ತ್ರೀಗಳು 'ಕನ್ನಡ ಆಡುಮಾತು ಬರವಣಿಗೆಗಳಲ್ಲಿ ವಿಕಲ್ಪ ರೂಪಗಳು, ಸಾಮಾನ್ಯ ಪ್ರಮಾದಗಳು' ಎಂಬ ಲೇಖನದಲ್ಲಿ ಬರವಣಿಗೆಯ ಕೆಲವು ವಿಕಲ್ಪಗಳನ್ನು ಅಪಪ್ರಯೋಗಗಳೆಂದು ಕರೆಯುತ್ತಾರೆ. ಉದಾ. ಅಲ್ಪಪ್ರಾಣ-ಮಹಾಪ್ರಾಣ (ಕಡ್ಗ-ಖಡ್ಗ) ಅವರ ದೃಷ್ಟಿಯಲ್ಲಿ ಖಡ್ಗ ಅಪ್ರಯೋಗ. ಇದರಂತೆ ಅಂಕಿತ ನಾಮಗಳು, ಕಾಲವಾಚಕಗಳು, ನಾಮವಾಚಕಗಳಲ್ಲಿ ವಿಭಕ್ತಿ ಸಂಘಟನೆ ಮುಂತಾದ ೧೩ ಅಂಶಗಳನ್ನು ಪಟ್ಟಿಮಾಡಿದ್ದಾರೆ. ಆದರೆ ಬರೆಹದ ಭಾಷೆ ಮತ್ತು ಆಡುಭಾಷೆ ಇವು ಭಾಷಾ ಬಳಕೆಯ ಎರಡು ಮುಖಗಳೇ ವಿನಃ ಅಪಪ್ರಯೋಗದ ಪ್ರಶ್ನೆಯೇ ಬರುವುದಿಲ್ಲ. ಆಡುಮಾತಿನ ಅನೇಕ ಅಂಶಗಳು ಈಗ ಬರೆಹದ ಭಾಷೆಯಲ್ಲಿ ನುಸುಳಿವೆ. ಅದು ಸಹಿತ ಭಾಷಾ ಬೆಳವಣಿಗೆಯ ಲಕ್ಷಣವಾಗಿದೆ. ಭಾಷೆಯಲ್ಲಿ ಶುದ್ಧಾ-ಶುದ್ಧತೆಯ ಪ್ರಶ್ನೆ ಬಹುಜಟಿಲವಾದುದು. ವ್ಯಾಕರಣಕ್ಕೆ ಸರಿಯಾಗಿ ಭಾಷೆಯನ್ನು ಬಳಸಬೇಕು ಎಂಬ ಕಲ್ಪನೆ ಹಿಂದೆ ಇದ್ದಿತು. ಭಾಷಿಕ ಪ್ರಪಂಚದಲ್ಲಿ ಮುಖ್ಯವಾದುದು ಅದನ್ನು ಆಡುವ ವ್ಯಕ್ತಿ, ಆತನು ಆಡಿದುದು ಇನ್ನೊಬ್ಬರಿಗೆ ಅರ್ಥವಾದರೆ ಅದು ವ್ಯಾಕರಣ ಬದ್ಧವಾದ ಶುದ್ಧವಾದ ಭಾಷೆ ಎಂದೇ ಅರ್ಥ.

ಭಾಷಾ ಬದಲಾವಣೆಯ ತಂತ್ರಗಳಲ್ಲಿ ವರ್ಣಪಲ್ಲಟವೂ ಒಂದು. ಆಕೃತಿಮಾದಲ್ಲಿಯ ಧ್ವನಿಮಾಗಳ ಸ್ಥಾನಾಂತರವೇ ವರ್ಣಪಲ್ಲಟ. ಶಾಸ್ತ್ರೀಗಳು 'ಕನ್ನಡದಲ್ಲಿ ವರ್ಣಪಲ್ಲಟದ ಕೆಲವಂಶಗಳು' ಎಂಬ ಸಂಪ್ರಬಂಧದಲ್ಲಿ ವರ್ಣಪಲ್ಲಟದ ಎರಡು ಪ್ರಕ್ರಿಯೆಗಳನ್ನು ಗುರುತಿಸಿದ್ದಾರೆ. ಅವು ಸ್ವರಪಲ್ಲಟ ಮತ್ತು ವ್ಯಂಜನಪಲ್ಲಟ. ಸ್ವರ ಧ್ವನಿಮಾಗಳು

ಸ್ಥಾನಾಂತರವಾದರೆ ಸ್ವರಪಲ್ಲಟ ಉದಾ. ಆದಿನಿ>ದಾನಿ, ಇದಿನಿ>ದೀನಿ ಮುಂತಾದುವು. ವ್ಯಂಜನ ಧ್ವನಿಮಾಗಳು ಸ್ಥಾನಾಂತರವಾದರೆ ವ್ಯಂಜನಪಲ್ಲಟ ಉದಾ. ಅಸಗ>ಅಗಸ, ಅಗಳು>ಅಳುಗ ಮುಂತಾದುವು. ವರ್ಣಪಲ್ಲಟ ಪ್ರಕ್ರಿಯೆಯ ನಿರ್ದಿಷ್ಟ ಪರಿಸರಗಳನ್ನು ಗುರುತಿಸಿದ್ದಾರೆ. ಈ ಲೇಖನವು ಕನ್ನಡ ಧ್ವನಿ ಚರ್ಚೆಯಲ್ಲಿ ಅತಿಮಹತ್ವದ ಲೇಖನ ವಾಗಿದೆ.

ನವರತ್ನ ರಾಮರಾಯರ 'ಕೆಲವು ನೆನಪುಗಳು' ಎಂಬ ಗದ್ಯ ಕೃತಿಯ ಶೈಲಿ ಮತ್ತು ಭಾಷಾದೃಷ್ಟಿಯಿಂದ ಗಮನಾರ್ಹವಾಗಿದೆ. ಆ ಕೃತಿಯಲ್ಲಿಯ ದೇಶ್ಯ, ಅನ್ಯದೇಶ್ಯ ಗ್ರಾಮ್ಯಮೂಲಪದ ರೂಪಗಳನ್ನು, ಕೂಡುನುಡಿ, ನುಡಿಗಟ್ಟುಗಳನ್ನು ಹಾಗೂ ಚಿಂತನ ಯೋಗ್ಯ ಮಾತುಗಳನ್ನು ಒಂದೆಡೆ ಕಲೆಹಾಕಿದ್ದಾರೆ. ಅವುಗಳ ವಿವೇಚನೆಯನ್ನು ಮುಂದಿನ ಅವಕಾಶಕ್ಕಾಗಿ ಬಿಟ್ಟುಕೊಟ್ಟಿದ್ದಾರೆ. ಕರ್ನಾಟಕದಲ್ಲಿ ಪೂರ್ವ ಪ್ರಾಥಮಿಕದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಕನ್ನಡವೇ ಬೋಧನಾ ಮಾಧ್ಯಮವಾಗಬೇಕೆಂದು ಶಾಸ್ತ್ರೀಯವರು 'ಶಿಕ್ಷಣ ರಂಗದಲ್ಲಿ ಕನ್ನಡ' ಎಂಬ ಲೇಖನ ದಲ್ಲಿ ಪ್ರತಿಪಾದಿಸಿದ್ದಾರೆ. ಆ ಬಗ್ಗೆ ಎಂಟು ಉಪಯುಕ್ತ ಸಲಹೆಗಳನ್ನು ನೀಡಿದ್ದಾರೆ.

ಶಾಸ್ತ್ರೀ ಅವರು ಭಾಷಾಧ್ಯಯನಕ್ಕೆ ಸಂಬಂಧಿಸಿದ ಕೃತಿಗಳು ಮತ್ತು ಸಂಶೋಧನೆಯ ಪ್ರಬಂಧಗಳು ಒಳನೋಟಗಳಿಂದ ಕೂಡಿವೆ. ಪ್ರತಿಬರೆಹದಲ್ಲಿಯೂ ಅವರು ಕೊಡುವ ಅಡಿಟಿಪ್ಪಣಿಗಳು, ಪರಿಶಿಷ್ಟಗಳು, ಗ್ರಂಥ/ಲೇಖನ ಸೂಚಿಗಳು ಮುಂದಿನ ಅಧ್ಯಯನಕ್ಕೆ ಪ್ರೇರಣೆ ಕೊಡುತ್ತವೆ. ಕನ್ನಡ ಭಾಷೆ-ವ್ಯಾಕರಣ ಕ್ಷೇತ್ರದಲ್ಲಿ ಶಾಸ್ತ್ರೀಗಳು ಮಾಡಿದ ಕೆಲಸ ಮೂಲಭೂತವಾದುದು. ಆ ಕ್ಷೇತ್ರದಲ್ಲಿ ಅವರು ತೋರಿಸಿಕೊಟ್ಟ ಮಾರ್ಗ ಅದ್ವಿತೀಯವಾಗಿದೆ.

೨

ವೆಂಕಟಾಚಲ ಶಾಸ್ತ್ರೀ ಅವರು ಕನ್ನಡ ನಿಘಂಟು ಕ್ಷೇತ್ರಕ್ಕೆ ಅನುಪಮವಾದ ಕೊಡುಗೆಗಳನ್ನು ನೀಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ನಿಘಂಟು ರಚನೆಗಾಗಿ ನೇಮಿಸಿದ ಸಲಹಾ ಸಮಿತಿಯ ಸದಸ್ಯರಾಗಿಯೂ ಪ್ರಾಧ್ಯಾಪಕ ವೃತ್ತಿಯಿಂದ ನಿವೃತ್ತರಾದ ಮೇಲೆ ನಿಘಂಟು ಪರಿಷ್ಕರಣದ ಸಂಪಾದಕ ಸಮಿತಿಯ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ. ತಮ್ಮ ಅಧ್ಯಯನದ ಬಹುಮಟ್ಟಿನ ಸಮಯವನ್ನು ಅವರು ನಿಘಂಟು ರಚನೆಗೆ ಧಾರೆಯೆರೆದಿದ್ದಾರೆ. ನಿಘಂಟು ರಚನೆಗೆ ಬೇಕಾಗಿರುವುದು ಬೇಸರ ರಹಿತ ಶ್ರಮ, ತಾಳ್ಮೆ ಹಲವಾರು ಭಾಷೆಗಳ ಪರಿಚಯ, ಕೆಲವರು ಭಾಷೆಗಳಲ್ಲಿ ಪಾಂಡಿತ್ಯ ಶಾಸ್ತ್ರೀ ಅವರಿಗೆ ದ್ರಾವಿಡ ಭಾಷೆಗಳ ಪರಿಚಯವೂ ಇಂಗ್ಲಿಶ್ ಭಾಷೆಯಲ್ಲಿ ಆಳವಾದ ಪಾಂಡಿತ್ಯವೂ ಇದೆ. ಜೊತೆಗೆ ಭಾಷಾಶಾಸ್ತ್ರದಲ್ಲಿ ಉತ್ತಮವಾದ ತಿಳಿವಳಿಕೆಯಿದೆ. ಹೀಗಾಗಿ ಯಾವುದೇ ಉಲ್ಲೇಖವನ್ನು ತೆಗೆದುಕೊಂಡರೂ ಅದನ್ನು ಸಮಗ್ರವಾಗಿ ಸಿದ್ಧಪಡಿಸುವ ಸಾಧನ ಸಂಪತ್ತು ಅವರಲ್ಲಿದೆ.

ನಿಘಂಟು ಅಧ್ಯಯನಕ್ಕೆ ಶಾಸ್ತ್ರೀ ಅವರ ಸಾಧನೆಯನ್ನು ಎರಡು ರೀತಿಯಾಗಿ ವಿಂಗಡಿಸಬಹುದು. ೧. ಎರಡು ವಿಶಿಷ್ಟ ನಿಘಂಟುಗಳ ರಚನೆ ೨. ನಿಘಂಟು ರಚನೆಗೆ ಸಂಬಂಧಿಸಿದ ಸಂಪ್ರಬಂಧಗಳು ಸಾಮಾನ್ಯ ನಿಘಂಟುಗಳಲ್ಲಿ ವಿಶಿಷ್ಟ ವಿಷಯ ಗಳಿಗೆ ಸಂಬಂಧಿಸಿದ ಪದಗಳು ದಾಖಲಾಗಿರುವುದು ತುಂಬ ಕಡಿಮೆ. ಒಂದು ವೇಳೆ ದಾಖಲಾದರೂ ಅದು ಯಾವ ಅರ್ಥ ಕೊಡಬೇಕಾಗಿತ್ತೋ ಆ ಅರ್ಥ ಕೊಡುವುದಿಲ್ಲ. ಇದು ಸಾಮಾನ್ಯ ನಿಘಂಟಿನ ಮಿತಿಯೂ ಆಗಿದೆ. ವಿಶಿಷ್ಟ ವಿಷಯ ಕ್ಕಾಗಿಯೇ ಪ್ರತ್ಯೇಕ ನಿಘಂಟುಗಳನ್ನು ರಚಿಸಬೇಕಾಗುತ್ತದೆ. ಇದನ್ನು ಮನಗಂಡ ಶಾಸ್ತ್ರೀಗಳು ಎರಡು ವಿಶಿಷ್ಟ ವಿಷಯಕ್ಕೆ ಸಂಬಂಧಿಸಿದ ನಿಘಂಟುಗಳನ್ನು ರಚಿಸಿದ್ದಾರೆ.

ಶ್ರೀವತ್ಸ ನಿಘಂಟು (೧೯೭೧, ದ್ವಿಮು. ೧೯೯೯) ಇದು ಸಂಖ್ಯಾ ವಿಶಿಷ್ಟ ಪಾರಿಭಾಷಿಕ ಪದಗಳನ್ನು ಒಳಗೊಂಡಿರುವ ವಿಶಿಷ್ಟ ಕೋಶ. ಸಾಹಿತ್ಯ, ಕಲೆ, ಧರ್ಮ, ತತ್ವಶಾಸ್ತ್ರ, ರಾಜಶಾಸ್ತ್ರ, ವೈದ್ಯಶಾಸ್ತ್ರ ಮೊದಲಾದ ಜ್ಞಾನಶಾಖೆಗಳಲ್ಲಿ ಬಳಕೆಯಾಗಿ ಸಾಮಾನ್ಯ ವಿವರಣೆಯಿಲ್ಲದೆ ವ್ಯವಹಾರಗೊಳ್ಳುತ್ತಿರುವ ಸಂಖ್ಯಾ ವಿಶಿಷ್ಟ ಪದಗಳಲ್ಲಿ ಸಂಖ್ಯೆಗೆ ಒಂದು-ಎರಡು ವಿವರಣೆಯನ್ನು ಹುಡುಕುವುದು ಸುಲಭ. ಆದರೆ, ಸಂಖ್ಯೆಗೆ ಮೂರಕ್ಕಿಂತ ಹೆಚ್ಚು ಅರ್ಥಗಳಿದ್ದರೆ ಅವುಗಳಿಗೆ ವಿವರಣೆಯನ್ನು ಹುಡುಕುವುದು ತುಂಬ ಕಷ್ಟ, ಅಂತಹ ಸಂದರ್ಭದಲ್ಲಿ ಸಂಖ್ಯಾ ವಿಶಿಷ್ಟ ಕೋಶಗಳು ಅಧ್ಯಯನಕಾರರ ನೆರವಿಗೆ ಬರುತ್ತವೆ. ಈ ದಿಶೆಯಲ್ಲಿ ಶಾಸ್ತ್ರಿಗಳ 'ಶ್ರೀವತ್ಸ ನಿಘಂಟು' ಆ ಬಗೆಯ ಒಂದು ಸಹಾಯಕ ಕೋಶ. ಇದರಲ್ಲಿ ಸುಮಾರು ನಾಲ್ಕು ಸಾವಿರ ಸಂಖ್ಯಾ ವಿಶಿಷ್ಟ ಪದಗಳಗೆ ವಿವರಣೆ ದೊರೆಯುತ್ತದೆ.

ಈ ಕೋಶದಲ್ಲಿ ಸಂಖ್ಯಾ ವಿಶಿಷ್ಟ ಪದವನ್ನು ಮುಖ್ಯ ನಮೂದವನ್ನಾಗಿಸಿ ವಿವರಣೆ ಕೊಡಲಾಗಿದೆ. ನಂತರ ಅದು ಬರುವ ಆಕರವನ್ನು ಕೊಡಲಾಗಿದೆ. ಉದಾ. ಅಂಗ-೬೪: ಮುಖಸಂಧಿಯ ೧೨ ಅಂಗಗಳು, ಪ್ರತಿಮುಖ ಸಂಧಿಯ ೧೩ ಅಂಗಗಳು, ಗರ್ಭಸಂಧಿಯ ೧೨ ಅಂಗಗಳು, ಅಮಮರ್ಶಸಂಧಿಯ ೧೩ ಅಂಗಗಳು. ನಿರ್ವಹಣ ಸಂಧಿಯ ೧೪ ಅಂಗಗಳು(ದಶರೂಪಕ). ಆತ್ಮ-೮, ಅಂಗ-೬, ಅಂಗ-೭, ಕಲಾ-೬೪, ಕಲಾ-೭೨ ಇಂತಹ ನಮೂದುಗಳ ವಿವರಣೆ ಪುಟಗಟ್ಟಲೆ ನಿರೂಪಿತವಾಗಿದೆ. ನಮೂದು ಗಳನ್ನು ಆಕಾರಾದಿಯಾಗಿ ಜೋಡಿಸಲಾಗಿದೆ. ಕೋಶ ಸಿದ್ಧತೆಯಲ್ಲಿ ಶಾಸ್ತ್ರೀಗಳ ಆಳವಾದ ವಿದ್ವತ್ತು, ನೂರಾರು ಆಕರಗಳಿಂದ ಸಂಖ್ಯಾ ವಿಶಿಷ್ಟ ಪದಗಳನ್ನು ಹೆಕ್ಕಿ ತೆಗೆಯುವಲ್ಲಿ ಅವರ ತಾಳ್ಮೆ, ಖಚಿತ ನಿರೂಪಣೆ ಎಲ್ಲವೂ ಮೇಲ್ಮಟ್ಟದ್ದು.

ಶಾಸ್ತ್ರೀ ಅವರು ಸಿದ್ಧಪಡಿಸಿದ ಇನ್ನೊಂದು ವಿಶಿಷ್ಟ ಪದಗಳ ಕೋಶ 'ಗಜಶಾಸ್ತ್ರ ಶಬ್ದಕೋಶ'(೧೯೯೪). ಪ್ರಾಚೀನ ಕನ್ನಡ ಸಾಹಿತ್ಯದ ಕೃತಿಗಳನ್ನು ಅಭ್ಯಾಸ ಮಾಡುವಾಗ ಪುರ, ಪರ್ವತ, ಯುದ್ಧ ಮೊದಲಾದ ವರ್ಣನೆಗಳ ಭಾಗವಾಗಿ ಬರುವ ಆನೆಗಳ ದೇಹಾಕೃತಿ, ಗುಣ-ಸ್ವಭಾವಕ್ಕೆ ಸಂಬಂಧಿಸಿದ ಪದಗಳ ಅರ್ಥಗಳನ್ನು ತಿಳಿದುಕೊಳ್ಳಲು

ಹಾಗೂ ಆನೆಗೆ ಸಂಬಂಧಿಸಿದ ಅರ್ಥ ಕ್ಲೇಶ ಪದಗಳನ್ನು ನಿವಾರಿಸಲು ಈ ಕೋಶ ನೆರವಾಗುತ್ತದೆ. ವಿಶಿಷ್ಟ ಪದಗಳನ್ನು ಮುಖ್ಯ ನಮೂದವನ್ನಾಗಿರಿಸಿ ಅದರ ಅರ್ಥವನ್ನು ಸರಳ ಕನ್ನಡದಲ್ಲಿ ನೀಡಿದ್ದಾರೆ. ಪದ ಜೋಡಣೆಯಲ್ಲಿ ಅಕಾರಾದಿ ಕ್ರಮವನ್ನು ಅನುಸರಿಸಿದ್ದಾರೆ. ಉದಾ. ಅಂಸ, ಆನೆಯ ಹೆಗಲು, ಅಕ್ಷಿಗುಹ: ಕಣ್ಣಿನ ಒಂದು ಅಂಗ ಭಾಗ. ಅಂಜಕುಕ್ಷಿ: ಆಡಿನ ಹೊಟ್ಟೆಯಂತೆ ತೆಳ್ಳಗಿರುವ ಹೊಟ್ಟೆಯುಳ್ಳ ಆನೆ 'ಸಮಪಾರ್ಶ್ವನುಂ ಅಜಕುಕ್ಷಿಯುಂ'(ಆದಿಪುರಾಣ ೧೨-೫೬). ಅನುಗತ ಬಂಧ, ಅವಗ್ರಹ, ಅಪಪಾತಬಂಧ, ಮಂದ, ಭದ್ರ ಇಂತಹ ನಮೂದುಗಳ ವಿವರಣೆ ಪುಟಗಟ್ಟಲೆ ಸಾಗುತ್ತದೆ. ಆಯಾ ನಮೂದುಗಳ ಅಂತ್ಯ ಆ ಪದದ ಆಕರವನ್ನೂ ಕೊಟ್ಟಿದ್ದಾರೆ.

ಈ ಕೋಶದಲ್ಲಿ ಆನೆಯ ಪ್ರಕಾರಗಳು, ಅಂಗಾಂಗಗಳು, ಆನೆಯನ್ನು ಪಳಗಿಸುವ ಕ್ರಿಯೆ, ಅದನ್ನು ನಿಯಂತ್ರಿಸುವ ಸಾಧನಗಳು, ಯುದ್ಧಕ್ಕೆ ಆನೆಯನ್ನು ಸಿದ್ಧಪಡಿಸುವ ಕ್ರಮ ಇತ್ಯಾದಿಗಳಿಗೆ ಸಂಬಂಧಿಸಿದ ಪದಗಳ ವಿವರಣೆಯಿದೆ. ಈ ಕೋಶ ಸಿದ್ಧತೆಗೆ ಶಾಸ್ತ್ರೀಗಳು ಸಂಸ್ಕೃತ ಮತ್ತು ಕನ್ನಡ ಭಾಷೆಗಳ ಸಾಮಾನ್ಯ ನಿಘಂಟುಗಳನ್ನು, ಪ್ರಾಚೀನ ಕನ್ನಡ ಕಾವ್ಯಗಳನ್ನು ಹಾಗೂ ಆನೆಗೆ ಸಂಬಂಧಿಸಿದ ಶಾಸ್ತ್ರಕೃತಿಗಳನ್ನು ಪರಿಶೀಲಿಸಿದ್ದಾರೆ. ಪಾಲಕಾಪ್ಯ ಮುನಿಯ 'ಹಸ್ತ್ಯಾಯುರ್ವೇದ' ಎಂಬ ಉದ್ಗ್ರಂಥದ ಪ್ರಯೋಜನವನ್ನು ಈ ಕೋಶ ಸಿದ್ಧತೆಯಲ್ಲಿ ಬಹುವಾಗಿ ಪಡೆಯಲಾಗಿದೆ. 'ಹಸ್ತ್ಯಾಯುರ್ವೇದ'ದ ಶಲ್ಯಸ್ಥಾನದೊಳಗಿನ ಹಸ್ತಿ ಪ್ರದೇಶ ಜ್ಞಾನವೆಂಬ ಅಧ್ಯಾಯದ ಅನುವಾದ ಭಾಗವನ್ನು ಅನುಬಂಧದಲ್ಲಿ ಕೊಟ್ಟಿದ್ದಾರೆ. ನಮಗೆ ತಿಳಿದಿರುವ ಮಟ್ಟಿಗೆ ಭರತ ಖಂಡದ ಯಾವುದೇ ಭಾಷೆಯಲ್ಲಿ ಇಲ್ಲಿಯವರೆಗೆ ಆನೆಗೆ ಸಂಬಂಧಿಸಿದ ವಿಶಿಷ್ಟ ಶಬ್ದಕೋಶ ರಚಿತವಾಗಿಲ್ಲ. ಇದು ಮೊದಲನೆಯದು.

ಶಾಸ್ತ್ರೀಯವರು ತುಂಬ ಶ್ರಮವಹಿಸಿ 'ಶ್ರೀವತ್ಸನಿಘಂಟು', 'ಗಜಶಾಸ್ತ್ರ ಶಬ್ದಕೋಶ' ಎಂಬ ನಿಘಂಟುಗಳನ್ನು ರಚಿಸಿದ್ದಾರೆ. ಇದರಿಂದ ಕನ್ನಡ ಭಾಷೆ ಮತ್ತು ಸಾಹಿತ್ಯ ವಿದ್ಯಾರ್ಥಿಗಳಿಗೆ ಒಂದು ಸಿದ್ಧ ಆಕರ ಸಾಮಗ್ರಿ ದೊರೆತಂತೆ ಆಗಿದೆ. ತನ್ಮೂಲಕ ಕನ್ನಡದಲ್ಲಿ ವಿಶಿಷ್ಟ ವಿಷಯಗಳ ಕೋಶ ರಚನೆಗೆ ವೆಂಕಟಾಚಲಶಾಸ್ತ್ರೀಗಳು ಮೇಲ್‌ಪಂಕ್ತಿ ಹಾಕಿದ್ದಾರೆ. ಶಾಸ್ತ್ರೀಗಳು ನಿಘಂಟು ಸಾಹಿತ್ಯ-ನಿಘಂಟು ರಚನೆಗೆ ಸಂಬಂಧಿಸಿದಂತೆ ಅನೇಕ ಸಂಪ್ರಬಂಧಗಳನ್ನು ಪ್ರಕಟಿಸುವುದರ ಮೂಲಕ ಆ ಕ್ಷೇತ್ರದ ಎಲ್ಲೆಯನ್ನು ಹಿಗ್ಗಿಸಿದ್ದಾರೆ. ಅವರ ಸಂಪ್ರಬಂಧಗಳ ಸ್ವರೂಪವನ್ನು ಗಮನಿಸೋಣ.

'ಕರ್ಣಾಟಕ ನಿಘಂಟು' ಎಂಬ ಸಂಪ್ರಬಂಧದಲ್ಲಿ ಆ ನಿಘಂಟಿನ ಕರ್ತೃ ಮತ್ತು ಕಾಲ ಯಾವುದೆಂಬುದಾಗಲಿ ತಿಳಿಯದು. ಈ ನಿಘಂಟಿನಲ್ಲಿ ನಡುಗನ್ನಡ ಶಬ್ದರೂಪಗಳು ಬಳಕೆಯಾಗಿರುವುದರಿಂದ ಅದು ಸು. ೧೪೦೦ರಲ್ಲಿ ರಚಿತವಾಗಿರಬೇಕೆಂದೂ ನಿಘಂಟಿನಲ್ಲಿ ಶಿವಪರವಾದ ಪರ್ಯಾಯ ಶಬ್ದಗಳು ಬಂದಿರುವುದರಿಂದ ಕೋಶಕಾರ ಶೈವನೋ ವೀರಶೈವನೋ ಇರಬಹುದೆಂದು ಊಹಿಸಿದ್ದಾರೆ. ಈ ನಿಘಂಟು ದೇಶ್ಯ ಮತ್ತು

ತದ್ಭವ ಶಬ್ದಗಳಿಗೆ ಸರಳವಾಗಿ ಅರ್ಥ ಹೇಳುವ ಒಂದು ಲಘುನಿಘಂಟು(ಕನ್ನಡ-ಕನ್ನಡ ನಿಘಂಟು). ಅದರಲ್ಲಿ ೯೮ ವೃತ್ತ ಕಂದಗಳಿವೆ. ಈ ಲೇಖನದಲ್ಲಿ ಆ ನಿಘಂಟಿನ ಸ್ವರೂಪವನ್ನು ಪರಿಶೀಲಿಸಿದ್ದಾರೆ.

'ಕರ್ಣಾಟಕ ಶಬ್ದಸಾರ' ಎಂಬ ಸಂಪ್ರಬಂಧದಲ್ಲಿ ಆ ನಿಘಂಟಿನ ಕರ್ತೃ ಮತ್ತು ಕಾಲ ಯಾವುದೆಂಬುದಾಗಲಿ ತಿಳಿಯದು ಅದರಲ್ಲಿ ಬಳಕೆಯಾದ ನಡುಗನ್ನಡ ಶಬ್ದ ರೂಪಗಳಿಂದ ಆ ನಿಘಂಟು ಸು. ೧೪೦೦ರಲ್ಲಿ ರಚಿತವಾಗಿರಬೇಕೆಂದೂ ಆ ನಿಘಂಟಿನಲ್ಲಿ ಈಶ್ವರ, ಪಾರ್ವತಿ ಇತ್ಯಾದಿ ಶೈವ ದೇವತೆಗಳ ಉಲ್ಲೇಖ ಬಂದಿರುವುದರಿಂದ ಅದರ ಕರ್ತೃ ವೀರಶೈವ ಇದ್ದಿರಬಹುದೆಂದೂ ಊಹಿಸಿದ್ದಾರೆ. ಆ ನಿಘಂಟಿನ ಸ್ವರೂಪವನ್ನು ಕುರಿತು ಪರಿಶೀಲನೆ ಮಾಡಿದ್ದಾರೆ.

'ಮಂಗರಾಜ II'(೧೩೯೮) ಎಬ ಸಂಪ್ರಬಂಧದಲ್ಲಿ ಮಂಗರಾಜನ ಕಾಲ, ದೇಶ, ಮತ ಇತ್ಯಾದಿ ಅಂಶಗಳನ್ನು(ಇತಿವೃತ್ತ) ಕುರಿತು ಚರ್ಚಿಸಿ ಅವನ ನಿಘಂಟು 'ಅಭನವಾಭಿಧಾನಂ'ವನ್ನು ಕುರಿತು ಕೂಲಂಕುಷವಾಗಿ ಪರಿಶೀಲಿಸಿದ್ದಾರೆ. ಮಂಗರಾಜನ ಈ ನಿಘಂಟು ನಾಗವರ್ಮನ 'ಅಭಿಧಾನ ವಸ್ತುಕೋಶ'ದ ಬಳಿಕ ಎರಡನೆಯ ಪ್ರಸಿದ್ಧ ಸಂಸ್ಕೃತ-ಕನ್ನಡ ನಿಘಂಟು. ಇದರಲ್ಲಿ ಸ್ವರ್ಗ-ಭೂಮಿ, ಪಾತಾಳ, ಸಾಮಾನ್ಯ ಮತ್ತು ನಾನಾರ್ಥ ಎಂಬ ೫ ಕಾಂಡಗಳಿವೆ. ಒಟ್ಟು ೫೩೬ ವಾರ್ಧಕ ಷಟ್ಪದಿಗಳಿವೆ. ಈ ನಿಘಂಟಿನ ರಚನೆಯ ಶಿಲ್ಪವನ್ನು ಕುರಿತು ಉದಾಹರಣೆ ಸಮೇತ ವಿವೇಚಿಸಿದ್ದಾರೆ. ಮಂಗರಾಜ ನಿಘಂಟನ್ನು ಕೇಂದ್ರವಾಗಿಟ್ಟುಕೊಂಡು ಹಳಗನ್ನಡ ನಿಘಂಟುಗಳನ್ನು ಕುರಿತು ಅಧ್ಯಯನ ನಡೆಯಬೇಕೆಂದು ಸೂಚಿಸಿದ್ದಾರೆ.

ಸಂಸ್ಕೃತ ಮತ್ತು ಕನ್ನಡ ನಿಘಂಟು ಸಾಹಿತ್ಯದ ಸ್ಥೂಲ ಸಮೀಕ್ಷೆಯನ್ನು ಒಂದು ಸಂಪ್ರಬಂಧದಲ್ಲಿ ಮಾಡಿದ್ದಾರೆ. ಸಂಸ್ಕೃತದ ಬಹುಪ್ರಾಚೀನವಾದ ವೈದಿಕ ನಿಘಂಟು, ಅಮರಸಿಂಹನ ಅಮರಕೋಶ, ಹೇಮಚಂದ್ರನ ಅಭಿಧಾನ ಚಿಂತಾಮಣಿ ಮೊದಲುಗೊಂಡು ಈಚಿನ ಅಷ್ಟೇ ಕೋಶದತನಕ ಈ ಲೇಖನದಲ್ಲಿ ಚರ್ಚಿಸಿದ್ದಾರೆ. ಅದರಂತೆ ರನ್ನಕಂದ ಆದಿಯಾಗಿ ಸೂರ್ಯ ಕವಿಯ ಕವಿಕಂಠಹಾರದವರೆಗೆ, ರೀವ್ ಆದಿಯಾಗಿ ಕ.ಸಾ.ಪ. ನಿಘಂಟಿನ ತನಕ ಎಲ್ಲ ಕನ್ನಡ ನಿಘಂಟುಗಳ ರಚನೆ, ರಚನಾ ಕ್ರಮವನ್ನು ಕುರಿತು ಶಾಸ್ತ್ರೀ ಅವರು ಕೂಲಂಕಷವಾಗಿ ಚರ್ಚಿಸಿದ್ದಾರೆ. ನಿಘಂಟಿನ ಮೂಲದ್ರವ್ಯಗಳಾದ ಶಬ್ದಗಳು ಕೋಶ ರಚನೆಯಲ್ಲಿ ಅವು ಪಡೆದುಕೊಳ್ಳುವ ಅರ್ಥಾಂತರ ಮತ್ತು ಅರ್ಥಛಾಯೆಗಳನ್ನು ಕುರಿತು 'ಕನ್ನಡ ನಿಘಂಟು ರಚನೆಯಲ್ಲಿ ಶಬ್ದಾರ್ಥ ವಿಚಾರದ ಕೆಲವಂಶಗಳು' ಎಂಬ ಲೇಖನದಲ್ಲಿ ವಿವೇಚಿಸಿದ್ದಾರೆ. ನಿಘಂಟು ರಚನೆಯ ತಾತ್ವಿಕಾಂಶಗಳನ್ನೊಳಗೊಂಡಿರುವ ಈ ಲೇಖನ ಶಬ್ದ ಸಮಸ್ಯೆಗಳ ಎಲ್ಲ ಮೈಗಳನ್ನು ಬಿಡಿಸಿ ತೋರಿಸುತ್ತದೆ. ಪ್ರಾಸಂಗಿಕವಾಗಿ ನಿಘಂಟಿನ ಪ್ರಯೋಜನ, ನಿಘಂಟುಕಾರನ ಲಕ್ಷಣಗಳನ್ನು ಕುರಿತು ಹೇಳಿದ್ದಾರೆ.

ಪ್ರಾಣಿವಾಚಕಗಳು ಕನ್ನಡ ಜನಜೀವನ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲಿಕ್ಕೆ ಸಹಾಯಕವಾಗಿವೆ. ಕನ್ನಡ ನಿಘಂಟಿನಲ್ಲಿ ಅವುಗಳ ದಾಖಲಾತಿಗೆ ಅಗ್ರಸ್ಥಾನವಿದೆ. ಸಾಮಾನ್ಯ ನಿಘಂಟುವಿನಲ್ಲಿ ಪ್ರಾಣಿವಾಚಕಗಳ ದಾಖಲಾತಿಗಿರುವ ಇತಿಮಿತಿಗಳನ್ನು ಉದಾಹರಣೆ ಸಮೇತವಾಗಿ ತೋರಿಸಿಕೊಟ್ಟಿದ್ದಾರೆ. 'ಆನೆ' ಎಂಬ ಶಬ್ದದ ಅರ್ಥ ಸುಲಭ ಮತ್ತು ಸರಳ. ಇದು ಸಾಮಾನ್ಯ ನಿಘಂಟಿನಲ್ಲಿ ನಿಶ್ಚಿತವಾಗಿಯೂ ದಾಖಲಾಗುತ್ತದೆ. ಆದರೆ ಆನೆಯ ವಸ್ತು ಪ್ರಪಂಚ ವಿಶಾಲವಾದುದು ಅದರ ಅಂಗೋಪಾಂಗಗಳು, ರೋಗ-ರುಜಿನಗಳು, ಪ್ರಕಾರಗಳು ಅವುಗಳನ್ನು ನಿರ್ದೇಶಿಸುವ ಶಬ್ದಗಳು ಸಾಮಾನ್ಯ ನಿಘಂಟಿನಲ್ಲಿ ದಾಖಲಾಗಿರುವುದಿಲ್ಲ. ಒಂದು ವೇಳೆ ದಾಖಲಾದರೂ ತುಂಬ ಕಡಿಮೆ. ಆಗ ಆನೆಗೆ ಸಂಬಂಧಿಸಿದ ವಿಶಿಷ್ಟ ಪದಕೋಶವನ್ನು ಸಿದ್ಧಪಡಿಸಬೇಕಾಗುತ್ತದೆ ಎಂಬ ಶಾಸ್ತ್ರೀಯವರ ಈ ಸಲಹೆ ನಿಸ್ಸಂಶಯವಾಗಿಯೂ ಮೌಲಿಕವಾದುದು.

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ರಚನೆಯ ಮುನ್ನ ಕಿಟೆಲ್‌ರ ನಿಘಂಟು ಸಾರ್ವಜನಿಕ ಜೀವನದಲ್ಲಿ ಪ್ರಚಲಿತವಾಗಿತ್ತು. ಕನ್ನಡ ಭಾಷೆಯ ಚಾರಿತ್ರಿಕ ಬೆಳವಣಿಗೆ ಹಾಗೂ ಆಧುನಿಕ ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ಇನ್ನೊಂದು ನಿಘಂಟಿನ ಅಗತ್ಯತೆಯೂ ಇತ್ತು. ಕನ್ನಡ ಸಾಹಿತ್ಯ ಪರಿಷತ್ತು ಆ ಕೆಲಸವನ್ನು ಹಮ್ಮಿಕೊಂಡು ಪೂರ್ತಿಗೊಳಿಸಿದೆ (ಎಂಟು ನಿಘಂಟುಗಳು ಪ್ರಕಟವಾಗಿವೆ). ಶಾಸ್ತ್ರೀಗಳು 'ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು' ಎಂಬ ಸಂಪ್ರಬಂಧದಲ್ಲಿ ಕ.ಸಾ.ಪ. ನಿಘಂಟಿನ ಆರಂಭಿಕ ಚಟುವಟಿಕೆಗಳು, ಶಬ್ದ ಸಂಗ್ರಹಕಾರ್ಯ, ಆ ನಿಘಂಟಿನ ಸ್ವರೂಪ, ವ್ಯಾಪ್ತಿ, ಪರಿಷ್ಕರಣೆ ಹಾಗೂ ಶಬ್ದ ಸಂಗ್ರಹಕಾರ್ಯ, ಆ ನಿಘಂಟಿನ ಸ್ವರೂಪ, ವ್ಯಾಪ್ತಿ, ಪರಿಷ್ಕರಣೆ ಹಾಗೂ ಪ್ರಯೋಜನಗಳನ್ನೂ ಕುರಿತು ಸ್ಥೂಲವಾಗಿ ವಿವೇಚಿಸಿದ್ದಾರೆ. ಕನ್ನಡ ನಾಡು-ನುಡಿಯ ಅಭಿವೃದ್ಧಿಗಾಗಿ ಶ್ರಮಿಸಿದ ವಿದೇಶಿ ಪಂಡಿತರಲ್ಲಿ ಕಿಟೆಲ್‌ರು ಪ್ರಮುಖರು. 'ರೆ॥ ಎಫ್. ಕಿಟೆಲ್ ಸ್ಮರಣೆ' ಎಂಬ ಲೇಖನದಲ್ಲಿ ಶಾಸ್ತ್ರೀ ಅವರು ಕಿಟೆಲ್‌ರ ಜೀವನ ವೃತ್ತಾಂತ ಹಾಗೂ ಅವರ ಅಧ್ಯಯನ ಕ್ಷೇತ್ರಗಳಾದ ವ್ಯಾಕರಣ, ಛಂದಸ್ಸು, ನಿಘಂಟು, ಗ್ರಂಥಸಂಪಾದನೆ ಹಾಗೂ ಇಂಡಿಯನ್ ಆಂಟಿಕ್ವರಿ ಪತ್ರಿಕೆಯ ಲೇಖಕರಾಗಿ ಅವರ ಸಾಧನೆಯನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿದ್ದಾರೆ.

ಹೀಗೆ, ಭಾಷೆ ಮತ್ತು ನಿಘಂಟು ಕ್ಷೇತ್ರದಲ್ಲಿ ವೆಂಕಟಾಚಲಶಾಸ್ತ್ರೀ ಅವರು ಶ್ರಮ, ಮಾಡಿದ ಆಲೋಚನೆ ಅಪಾರ. ಭಾಷಾಧ್ಯಯನ ಕ್ಷೇತ್ರಕ್ಕೆ ಅವರು ನೀಡಿರುವ ಕಾಣಿಕೆ ಮೌಲಿಕವಾದುದು. ಆ ಕ್ಷೇತ್ರದಲ್ಲಿ ಅವರ ಕೃತಿಗಳು, ಸಂಪ್ರಬಂಧಗಳು ಅಧ್ಯಯನಕಾರರಿಗೆ ಹೊಸ ದಿಗಂತವನ್ನು ತೋರಿಸಿದುವು ಎಂಬುದರ ಬಗ್ಗೆ ಸಂದೇಹವಿಲ್ಲ. ಶಾಸ್ತ್ರೀ ಅವರು ಮಾಡಿರುವ ವಿವೇಚನೆಯನ್ನು ಮುಂದಿನವರು ಬೆಳೆಸಬೇಕಾಗಿದೆ. ಅದುವೇ ನಾವು ಶಾಸ್ತ್ರೀ ಅವರಿಗೆ ಸಲ್ಲಿಸುವ ನುಡಿ ಗೌರವವಾಗಿದೆ.

೧೭

ಕಂಬಾರರ ಕಾವ್ಯಭಾಷೆ : ರಾಚನಿಕ ವಿಶ್ಲೇಷಣೆ

ಆಧುನಿಕ ಕನ್ನಡದ ಅನೇಕ ಕವಿಗಳು ತಮ್ಮ ಕಾವ್ಯ ಭಾಷೆಯನ್ನು ಒಂದು ಸ್ಥಿರೀಕೃತ ರೂಪದಲ್ಲಿ ಬಳಸುತ್ತಾರೆ. ಅಂದರೆ, ಯಾವುದೇ ವಸ್ತುವಿನ ಬಗ್ಗೆ ಯಾರಿಗೂ ಅನಿಸಿರದೆ ತಮಗೆ ಮಾತ್ರ ಅನಿಸಿದ್ದನ್ನು ಪರಿಣಾಮಕಾರಿಯಾಗಿ ಒಂದು ಭಾಷಾ ಚೌಕಟ್ಟಿನಲ್ಲಿ ಹೇಳುತ್ತಾರೆ. ಆದರೆ ಕಂಬಾರವರು ತಮ್ಮ ಕಾವ್ಯ ಭಾಷೆಯೊಂದಿಗೆ ಸತತ ಪ್ರಯೋಗ ಮಾಡುತ್ತಿರುತ್ತಾರೆ. ತಮ್ಮ ಕಾವ್ಯದಲ್ಲಿ ಬಳಸುವ ಭಾಷೆ ತಮಗಾಗಿ ಮಾಡಬೇಕಾದ ಕಾರ್ಯವನ್ನು ಸತತವಾಗಿ ನಿರ್ದೇಶಿಸುತ್ತ ಬರುತ್ತಾರೆ. ಕಂಬಾರರು ತಮ್ಮ ಕಾವ್ಯದಲ್ಲಿ ಜಾನಪದ ಭಾಷೆಯನ್ನು ಬಳಸಿದರು ಎಂಬ ಮಾತು ಜನಜನಿತವಾಗಿ ಕೇಳಿಬರುತ್ತದೆ. ಹಾಗೆಂದರೆ ಅವರ ಕಾವ್ಯಭಾಷೆಯ ಬಗ್ಗೆ ಹೆಚ್ಚೇನೂ ಹೇಳಿದಂತಾಗುವುದಿಲ್ಲ. ಕಂಬಾರರ ಕಾವ್ಯಭಾಷೆ ಕಾಲಕ್ರಮದಲ್ಲಿ ರೂಪಗೊಳ್ಳುತ್ತ ಬರುತ್ತದೆ. ಕೊನೆಗೆ ಅದು ಭಾಷಾತೀತ ಕಾವ್ಯದ ಸ್ಥಿತಿಯನ್ನು ಮುಟ್ಟುತ್ತದೆ. ಹೀಗೆ ಅದರ ಸ್ಥಿತಿ ಗುಣಗಳನ್ನು ಸಂಕ್ಷೇಪದಲ್ಲಿ ನಿರೂಪಿಸುವುದೇ ಈ ಅಧ್ಯಾಯದ ಗುರಿ.

ಭಾಷಾಶಾಸ್ತ್ರಜ್ಞರು ಯಾವುದೇ ಭಾಷೆಯ ಸ್ವರೂಪ-ಗುಣಗಳನ್ನು ಗುರುತಿಸುವಾಗ ನಾಲ್ಕು ಮುಖ್ಯ ಹಂತಗಳಲ್ಲಿ ಅದನ್ನು ಗುರುತಿಸುತ್ತಾರೆ. ೧. ಧ್ವನಿಮಾಹಂತ, ೨. ಆಕೃತಿಮಾ ಹಂತ, ೩. ವಾಕ್ಯರಚನಾ ಹಂತ, ೪. ವಿಶಿಷ್ಟ ಪದಪ್ರಯೋಗ ಹಂತ. ಈ ನಾಲ್ಕು ಹಂತಗಳಲ್ಲಿ ಕಂಬಾರರ ಭಾಷೆ ಹೇಗೆ ಜಾನಪದದ ಇನ್ನೂ ಸೂಕ್ತವಾಗಿ ಹೇಳಬೇಕೆಂದರೆ ಆಡುಭಾಷೆಯ ಸೊಗಡಿನಿಂದ ಕೂಡಿಕೊಂಡಿದೆ ಎಂಬುದನ್ನು ನೋಡಬಹುದು.

ಧ್ವನಿಮಾಹಂತ: ಲಿಖಿತ ಪದ್ಯಗಳನ್ನು ಆಧಾರವಾಗಿಟ್ಟುಕೊಂಡು ಧ್ವನಿ ಸ್ವರೂಪದ ಬಗ್ಗೆ ಹೆಚ್ಚು ಹೇಳಲು ಸಾಧ್ಯವಾಗುವುದಿಲ್ಲ. ಆದರೂ ಕಂಬಾರರ ಬಾಯಿಯಿಂದಲೇ ಅವರ ಕಾವ್ಯವನ್ನು ಕೇಳಿದ ನಾವು ಅವರ ಕಾವ್ಯದಲ್ಲಿ ಬೆಳಗಾವಿಯ ಭಾಷೆಯ ಧ್ವನಿಗಳು ಹೇಗೆ ಬರುತ್ತಿದ್ದವು ಎಂಬುದನ್ನು ಎತ್ತಿತೋರಿಸಬಹುದು.

ಸ್ವರ ಧ್ವನಿಮಾಗಳು

ಅ, ಇ, ಉ, ಎ, ಒ ಹಾಗೂ ಇವುಗಳ ದೀರ್ಘಸ್ವರಗಳು ಇವಲ್ಲದೆ ಒ [ )] ಮತ್ತು ಆ್ಯ ಹೀಗೆ ಒಟ್ಟು ಹನ್ನೆರಡು ಸ್ವರ ಧ್ವನಿಮಾಗಳು, ಯ್, ವ್ ಗಳು ಅರ್ಧ ಸ್ವರಗಳಾಗಿ ಕಂಬಾರರ ಭಾಷೆಯಲ್ಲಿ ಬಳಕೆಯಲ್ಲಿವೆ. 'ಅ' ಹಾಗೂ ಅs ವೈದೃಶ್ಯ ಸೀಮಿತವಾಗಿ ದೊರೆಯುತದೆ. ಸಂವೃತ್ತ ಹಾಗೂ ವಿವೃತ್ತ ಆ ಸ್ವರ ಭಿನ್ನತೆಯೂ ಕಾಣುತ್ತದೆ.

ವಿಶಿಷ್ಟ ಸ್ವರಗಳಿಗೆ ಉದಾಹರಣೆಗಳು

ಮರಿ	(ಅ)	-	ಚಿಕ್ಕದು-ನಾಯಿ ಮರಿ ಎಂಬಂತೆ
ಮರಿ	(ಅ)	-	ಮರೆ
ಮಾರಿ	(ಆ)	-	ಮುಖ
ಪಡ	(ಅ)	-	ಬರಡು
ಜಾಡ	(ಆ)	-	ಪಕ್ಕ
ಬಿರಿ	(ಇ)	-	ಕಠಿಣ
ಬೆರಿ	(ಎ)	-	ಕೂಡು
ಪಾಟಿ	(ಆ್ಯ)	-	ಸ್ಲೇಟು
ಪ್ಯಾಟಿ	(ಆ)	-	ಪೇಟೆ
ಅತಿ	(ಅ)	-	ಬಹಳ
ಅsತಿ	(ಆ್ಯ)	-	ಇದೆ
ತಾಟ	(ಆ)	-	ಛಪ್ರ
ತ್ವಾಟ	( ])	-	ತೋಟ
ಕೋಲಿ	(ಓ)	-	ದಂಟಿನ ಬೇರು
ಕ್ವೊಲಿ	( ])	-	ಕೊಲೆ
ಕೊರಿ	(ಒ)	-	ಕೋರೆ
ಕ್ವರಿ	( ])	-	ಅರ್ಧ

ಇನ್ನುಳಿದ ಸ್ವರಗಳಿಗೆ ಸಾಮಾನ್ಯವಾಗಿ ಕಿತ್ತೂರು ಕರ್ನಾಟಕದ ಇತರೆಡೆಗೆ ದೊರೆಯುವ ಉದಾಹರಣೆಗಳೇ ದೊರೆಯುತ್ತವೆ. ಬರೆಹದ ಕನ್ನಡದ ಏ, ಒ ಸ್ವರಗಳು ದ್ವ್ಯಕ್ಷರ ಪದಾದಿಯ ಅಕ್ಷರದಲ್ಲಿ ಇದ್ದರೆ ಕಂಬಾರರದಲ್ಲಿ ಸಾಮಾನ್ಯವಾಗಿ ಆ, ಎ, ಏ, ಒ ಗಳಾಗಿ ಬಳಕೆಗೊಳ್ಳುತ್ತವೆ.

ಬೇಡ	-	ಬ್ಯಾಡ
ಮೇಲೆ	-	ಮ್ಯಾಲ

ಬೇಳೆ - ಬ್ಯಾಳಿ

ಕೊರೆ - ಕ್ವಾರಿ

ತೊಡೆ - ತ್ವಡಿ

ಪದಾದಿ ಅಕ್ಷರದಲ್ಲಿರುವ ಬರೆಹ ಕನ್ನಡ 'ಒ' ಸ್ವರ ಕಂಬಾರರಲ್ಲಿ 'ಅ'ಕಾರವಾಗಿ ಉಚ್ಚರಿಸಲ್ಪಡುತ್ತದೆ.

ಮೊರ - ಮರ

ಮೋಜು - ಮಜಾ

ಮೋಡ - ಮಾಡ

ಮೊಳೆ - ಮಳಿ

ಬೊಡ್ಡೆ - ಬಡ್ಡಿ

ಈ ಬಗೆ ಯಾದೃಚ್ಛಿಕವಾಗಿದ್ದು ವ್ಯವಸ್ಥೆಗೆ ಒಳಪಟ್ಟಿಲ್ಲ. ಉದಾಹರಣೆಗೆ ಹೊಳೆ-ಹ್ವಳಿ, ಕೊಡ-ಕ್ವಡ ಇತ್ಯಾದಿ ಆಗುವುದಿಲ್ಲ. ಕಂಬಾರರ ಕಾವ್ಯ ಭಾಷೆಯಲ್ಲಿ ಸ್ವರಗಳು ಅನುನಾಸಿಕರಣಗೊಳ್ಳುವುದು. ಅದರಲ್ಲೂ ವಿಶೇಷವಾಗಿ ಅರ್ಧಸ್ವರ 'ಯ್', 'ವ್'ಗಳಿದ್ದಾಗ ಅವುಗಳ ಹಿಂದಿನ ಸ್ವರ ಅಥವಾ ಎರಡೂ ಅನುನಾಸಿಕ ಧ್ವನಿಯೊಡನೆ ಸಹೋಚ್ಚಾರಗೊಳ್ಳುತ್ತದೆ.

ಅವ - ಅವನು

ಇವ - ಇವನು

ನಾ - ನಾನು

ಯಾವ - ಯಾವನು

ಸಾವಕ್ಕ - ಸಾವಿತ್ರಿ

ಮಾವ - ಮಾವ

ಬಾವಿ - ಬಾವಿ

ಪಾವಟಗಿ - ಪಾವಟಿಗೆ

ಬರಹದ ಕನ್ನಡದಲ್ಲಿಲ್ಲದ 'ಗಾವ' (ಅನುಕೂಲ) ಎಂಬಂಥ ಅನುನಾಸಿಕಯುಕ್ತ ಪದಗಳು ಕಂಬಾರರ ಕಾವ್ಯದಲ್ಲಿವೆ. ಚ್, ಟ್, ಣ್, ದ್, ಹಾಗೂ ಲ್ ಈ ವ್ಯಂಜನಗಳೊಡನಿದ್ದ ಸ್ವರಗಳಿಗೆ ಅನುನಾಸಿಕತೆ ಇಲ್ಲದಿರುವುದನ್ನು ಗಮನಿಸಬೇಕು.

ವ್ಯಂಜನಗಳು

ಕ್, ಗ್, ಚ್, ಜ್

ಡ್, ತ್, ದ್, ಪ್

ಬ್, ಮ್, ನ್, ಣ್

ಯ್, ರ್, ಲ್, ವ್, ಸ್, ಹ್, ಳ್

ಈ ಇಪ್ಪತ್ತು ವ್ಯಂಜನಗಳು ಕಂಬಾರರ ಕಾವ್ಯ ಭಾಷೆಯಲ್ಲಿವೆ. ಮಹಾಪ್ರಾಣಗಳ ಬಳಕೆ ಕಡಿಮೆ. 'ಶ್' ಎಂಬ ಸಂಸ್ಕೃತ ಧ್ವನಿಮಾವನ್ನು ಅವರಲ್ಲಿ ಕ್ವಚಿತ್ತಾಗಿ ಕಾಣಬಹುದು.

ರ್‍ಯಾಣ್ಯಾ - ಜಾಣ

ಇಂತಹ ಕೆಲವು ವಿಶಿಷ್ಟ ಶಬ್ದಗಳಲ್ಲಿ ಮಾತ್ರ ಬಳಕೆಗೊಳ್ಳುತ್ತದೆ. ಕಂಬಾರರ ಕಾವ್ಯ ಭಾಷೆಯ ಇನ್ನೊಂದು ಎದ್ದುಕಾಣುವ ವೈಶಿಷ್ಟ್ಯವೆಂದರೆ ಅನುನಾಸಿಕ 'ಣ್' ಹಾಗೂ 'ನ್' ಗಳಲ್ಲಿ ಭಿನ್ನತೆ ಕಂಡುಬರುವುದಿಲಲ. 'ಣ್' ಬದಲಾಗಿ 'ನ್' ಉಚ್ಚಾರವನ್ನೇ ವ್ಯಾಪಕವಾಗಿ ಬಳಸುವ ವಾಡಿಕೆ ಇಲ್ಲಿದೆ. ಇಲ್ಲಿಯ ಜನಪದ ಭಾಷೆಯಲ್ಲೆಲ್ಲ ಇದನ್ನು ಗುರುತಿಸಬಹುದು.

ಅನ್ನ - ಅಣ್ಣ

ಸಾಮಾನ್ಯವಾಗಿ ಪದ ಮಧ್ಯ ಹಾಗೂ ಕೊನೆಗೆ 'ಹ್' ಕಾರದ ಉಚ್ಚಾರ ಇಲ್ಲ. ಅನ್ಯಭಾಷೆಯ ಅಥವಾ ಕನ್ನಡ ಶಬ್ದಗಳ ಮಧ್ಯ ಹಾಗೂ ಅಂತ್ಯದಲ್ಲಿ 'ಹ್' ಇದ್ದರೆ ಕಂಬಾರರಲ್ಲಿ ಅವು ಲೋಪವಾಗುತ್ತವೆ. ಇಲ್ಲವೆ ವರ್ಣಪಲ್ಲಟವಾಗಿ ಶಬ್ದಾದಿಗೆ ಸರಿಯುತ್ತವೆ.

ಮಾಲ್ - ಮಲ್

ಅಂತಹ - ಹಂತಾ

ಅಹುದು - ಹೌದ

ಕಂಬಾರರ ಕಾವ್ಯಭಾಷೆಯಲ್ಲಿ ಮೂರ್ಧನ್ಯ ವ್ಯಂಜನಗಳು ಬಳಕೆಗೊಳ್ಳುವುದು ಕಂಡು ಬರುತ್ತದೆ. ಉದಾಹರಣೆಗೆ ಡಬ್ಬಣ-ದಬ್ಬಣ, ಟೆಂಗಿನಕಾಯಿ-ತೆಂಗಿನಕಾಯಿ, ಟಿಕ್ಕೆ-ತೆಕ್ಕೆ ಅದರಂತೆ ಸ್-ಚ್ ಧ್ವನಿಮಾಗಳು ಸ್ವಚ್ಛಂದವಾಗಿ ಬಳಕೆಗೊಳ್ಳುತ್ತವೆ. ಸಂಜಿ-ಚಂಜಿ, ಸೂಚಿ-ಚೂಜಿ ಇತ್ಯಾದಿ ತೃತೀಯಾಕ್ಷರ ಯುಕ್ತವಾದ ಪದರಚನೆಯಲ್ಲಿ ದ್ವಿತೀಯಾಕ್ಷರ 'ರ' ಕಾರವಿದ್ದು ತೃತೀಯಾಕ್ಷರ ಪರಿವೇಷ್ಟಿತ ಧ್ವನಿಗಳಾದ ಟ, ಠ, ಡ, ಢ, ಣ, ಳ ಗಳಿದ್ದರೆ 'ರ' ಕಾರದ ಮುಂದಿನ ಸ್ವರವು ಲೋಪ ಹೊಂದಿ ವ್ಯಂಜನದಡನೆ ಸಮರೋಪಧಾರಣೆ ಯಾಗುತ್ತದೆ.

ಕರಡಿ - ಕಡ್ಡಿ/ಖಡ್ಡಿ

ಅರಳೆ - ಕಳ್ಳಿ

ಕರುಳ - ಕಳ್ಳ

ಒರಳು - ಒಳ್ಳ

ಹೊರಳು - ಹ್ವಳ್ಳ

ಕೊರಳು - ಕೊಳ್ಳ

ಬೆರಳು - ಬೆಳ್ಳ
ಬೆರಕೆ - ಬೆರಕಿ
ಬರಲು - ಬರ್ಲ (ಪೊರಕೆ)

'ಅ' ಕಾರಾದಿಯಾದ ಸಂಬಂಧವಾಚಕ ಪದಗಳು ಸಂಬೋಧಿಸುವಾಗ ಮಾತ್ರ 'ಯ' ಕಾರಾದಿಯಾಗಿ ಬಳಸಲ್ಪಡುತ್ತವೆ.

ಅಪ್ಪ - ಯಪ್ಪ
ಅಕ್ಕ - ಯಕ್ಕ
ಅವ್ವ - ಯವ್ವ
ಅಣ್ಣ - ಯಣ್ಣ
ಅಜ್ಜ - ಯಜ್ಜ
ಅತ್ತೆ - ಯತ್ತಿ

ಈ ಧ್ವನಿಮಾ ಪ್ರಕ್ರಿಯೆಗಳನ್ನು ನೋಡಿದಾಗ ಕಂಬಾರರ ಕನ್ನಡ ತನ್ನದೇ ಆದ ವೈಶಿಷ್ಟ್ಯಗಳನ್ನು ಹೊಂದಿದೆ. ಇಂತಹ ಧ್ವನಿ ವ್ಯತ್ಯಾಸಗಳು ಕಂಬಾರರ ಕಾವ್ಯ ಅರಿಯಲು ಯಾವುದೇ ತೊಂದರೆ ಯನ್ನುಂಟು ಮಾಡಲಾರವು ಎಂಬುದು ಗಮನಾರ್ಹ.

ಆಕೃತಿಮಾ ಹಂತ

ಈ ಭಾಗದಲ್ಲಿ ಪ್ರಕೃತಿಗೆ ಪ್ರತ್ಯಯ ಸೇರಿ ಹೇಗೆ ಪದಗಳಾಗುತ್ತವೆ ಎಂಬುದನ್ನು ವಿಚಾರಿಸ ಬಹುದು. ಕಂಬಾರರ ಸಮಗ್ರ ಕಾವ್ಯದ ವರ್ಣನಾತ್ಮಕ ವ್ಯಾಕರಣವನ್ನು ರಚಿಸಲು ಪ್ರಯತ್ನಿಸುತ್ತಿಲ್ಲವಾದ್ದರಿಂದ ಅವರ ಕಾವ್ಯದಲ್ಲಿ ಬರುವ ಬರೆಹದ ಭಾಷೆ ಮತ್ತು ಆಡುಭಾಷೆ ಎಂಬ ಎರಡು ಸ್ತರಗಳ ಭಾಷಾಸ್ವರೂಪವನ್ನು ಎರಡು ಬೇರೆ ಬೇರೆ ಹಂತಗಳಲ್ಲಿಯೇ ವಿವರಿಸುವುದು ಸೂಕ್ತವೆನಿಸುತ್ತದೆ. ಬರೆಹದ ಭಾಷೆಗೆ ಬರೆಹದ ಭಾಷೆಯ ವ್ಯಾಕರಣವೇ ಅನುವರ್ತಿಸುತ್ತದೆ. ಆದರೆ ಅವರ ಕಾವ್ಯದಲ್ಲಿ ಬರುವ ಆಡುಭಾಷೆಗೆ ಆ ನಿಯಮಗಳು ಹತ್ತುವುದಿಲ್ಲ. ಆದುದರಿಂದ ಕಂಬಾರರು ಬಳಸುವ ಆಡುಭಾಷೆಯ ಆಕೃತಿಮಾ ಸ್ವರೂಪದ ರೂಪುರೇಷೆಗಳನ್ನು ಇಲ್ಲಿ ಗುರುತಿಸಬಹುದು.

ನಾಮಪದ ವಿಭಾಗ

ಬರೆಹದ ಕನ್ನಡದ ಬಹುವಚನ ಪ್ರತ್ಯಯಗಳಾದ 'ರು', 'ಗಳು' ಕಂಬಾರರಲ್ಲಿ 'ಗೋಳ' ಆಗುತ್ತದೆ.

ಗಿಡಗೋಳ - ಗಿಡಗಳು
ಮಾಸ್ತರಗೋಳ - ಮಾಸ್ತರರು
ಎಮ್ಮಿಗೋಳ - ಎಮ್ಮೆಗಳು

ಅರ್/ಅರು ಪ್ರತ್ಯಯವು 'ಇ' ಕಾರಾಂತ ಶಬ್ದಗಳಲ್ಲಿ 'ಆ್ಯರ್' ಎಂಬುದಾಗಿ ಬಳಕೆಯಾಗುತ್ತದೆ.

ಮುದುಕ್ಯಾರ - ಮುದುಕಿಯರು

ಹುಡುಗ್ಯಾರ - ಹುಡುಗಿಯರು

ಪ್ರಥಮ ಪುರುಷ ಸರ್ವನಾಮಗಳಲ್ಲಿ - ಅವನು ಎಂಬುದಕ್ಕೆ ಅವ, ಅವಳು ಎಂಬುದಕ್ಕೆ ಆಕಿ ಎಂಬ ಪ್ರಯೋಗಗಳೇ ಬಳಕೆಯಲ್ಲಿವೆ. ವಿಭಕ್ತಿ ಪ್ರತ್ಯಯಗಳಲ್ಲಿ ಬರೆಹದ ಕನ್ನಡದಿಂದ ಭಿನ್ನವೆನಿಸುವ ಪ್ರತ್ಯಯಗಳೆಂದರೆ ದ್ವಿತೀಯಾ-ಅನ್ನು ಕಂಬಾರರ ಕಾವ್ಯದಲ್ಲಿ ಅನ್ನ/ದ,

ಅಂತ್ಯಸ್ವರ ದೀರ್ಘೀಕರಣ :

ಹುಡುಗಿನ್ನ ನೋಡ - ಹುಡುಗಿಯನ್ನು ನೋಡು

ರೊಟ್ಟಿ ತಿನ್ನ - ರೊಟ್ಟಿಯನ್ನು ತಿನ್ನು

ತೆನೀ ಕೊಯ್ಯಿ - ತೆನೆಯನ್ನು ಕೊಯ್ಯು

ತೃತೀಯಾ : ಲೆ

ಕೈಯಿಲೆ - ಕೈಯಿಂದ

ಬಡಿಗೀಲೆ - ಬಡಗಿಯಿಂದ

ಚತುರ್ಥಿ : ಗಿ, ಗ

ಮನಿಗಿ ನಡಿ - ಮನೆಗೆ ನಡೆ

ಅವಗ ಕೊಡ್ - ಅವನಿಗೆ ಕೊಡು

ಷಷ್ಠೀ : ಅಂತ್ಯಸ್ವರ ದೀರ್ಘೀಕರಣ

ಬಿಳೀ ಎತ್ತು - ಬಿಳಿಯ ಎತ್ತು

ತಿನ್ನೂ ದಿನಸ - ತಿನ್ನುವ ವಸ್ತುಗಳು

ಸಪ್ತಮಿ : ಆಗ, ಆ್ಯಗ

ಊರಾಗ - ಊರಲ್ಲಿ

ಬೇಲ್ಯಾಗ- ಬೇಲೆಯಲ್ಲಿ

ತಲ್ಯಾಗ - ತಲೆಯಲ್ಲಿ

ಕಾರಣಿತ ವಿಭಕ್ತಿ ಸೂಚಿಸಲು 'ದಸಿಂದ' ಎಂಬ ರೂಪ ಬಳಕೆಯಲ್ಲಿದೆ. 'ಮಳಿದಸಿಂದ ತಡಾ ಆಯ್ತು'. ಕಂಬಾರರ ಕಾವ್ಯದಲ್ಲಿ ಸಹತ್ವವನ್ನು ಸೂಚಿಸಲು 'ಹಿಂಬಾಲ-ಜೋಡಿ', 'ಕೂಡಿ-ಜತಿಗಿ' ಎಂಬ ರೂಪಗಳು ಬಳಕಯಲ್ಲಿವೆ.

ಅವರ ಹಿಂಬಾಲ ಹೋಗೋಣ
ಅವನ ಜೋಡಿ ಬಂದ್ರ
ಆಕಿ ಕೂಡ ಹ್ವಾದ
ನಿಮ್ಮ ಜತಿಗಿ ಬರ್‍ತಾನ

ಸಮುಚಕಾವ್ಯಯ 'ಸೈತ' ಕಂಬಾರರ ಕಾವ್ಯದಲ್ಲಿ ಬಳಕೆಯಲ್ಲಿದೆ. ಇದು 'ಸಹಿತ' ಎಂಬುದರ ಜನಪದ ರೂಪ.

ನಾನು ಸೈತ ಬರಲಿಲ್ಲ - ನಾನು ಸಹ ಬರಲಿಲ್ಲ

ಕ್ರಿಯಾಪದಗಳು

ಕ್ರಿಯಾಪದಗಳಲ್ಲಿ ಎರಡು ಸ್ತರಗಳಿವೆ. ಒಂದನೆಯದ ಮೂಲರೂಪ ಕ್ರಿಯಾಪದ, ಎರಡನೆಯದ ಸಾಧಿತ ಕ್ರಿಯಾಪದ ಕಂಬಾರರ ಕಾವ್ಯದಲ್ಲಿ ಎರಡು ರೀತಿಯ ಕ್ರಿಯಾಪದಗಳು ಬಳಕೆಯಲ್ಲಿವೆ. ನಡಿ, ತಡಿ, ಬಡಿ, ಕಡಿ ಎಂಬ ಕೆಲವು ಧಾತುಗಳು ಪೂರ್ಣ ಕ್ರಿಯಾಪದ ರೂಪ ಪಡೆಯುವಾಗ ಭೂತೇತರ ಕಾಲಗಳಲ್ಲಿ ನಡು, ತಡು, ಬಡು, ಕಡು ಎಂದಾಗಿ ನಡುತಾನ, ತಡಿತಾಳ, ಬಡುತಾನ/ಬಡಿತಾನ ಎಂಬಂತೆ ಬಳಕೆಗೊಳ್ಳುತ್ತವೆ.

'ಇರು' ಎಂಬುದು ಕ್ರಿಯಾಪ್ರಕೃತಿಯೊಡನೆ 'ಇಲ್ಲ' ಎಂಬ ನಿಷೇಧ ರೂಪವನ್ನು ಪೂರ್ಣ ಭೂತಕಾಲದಲ್ಲಿ ಬಳಸುವ ಒಂದು ವಿಶಿಷ್ಟ ಪ್ರಯೋಗ ಕಂಬಾರರ ಕಾವ್ಯದಲ್ಲಿ ಕಂಡುಬರುತ್ತದೆ.

ಅವ್ರ ಇರಾಕಿಲ್ಲ - ಅವರು ಇರಲಿಲ್ಲ

'ಇರು' ಎಂಬುದರೊಡನೆ ಇನ್ನಿತರ ಭೂತಕಾಲದ ರೂಪಗಳು:

ಹೇಳ್ಯಾರ - ಹೇಳಿದ್ದಾರೆ
ಕುಂತಾಳ - ಕುಳಿತುಕೊಂಡಿದ್ದಾಳೆ
ಬಂದಾರ - ಬಂದಿದ್ದಾರೆ

ಭೂತಕಾಲದಲ್ಲಿ ನಪುಂಸಕಲಿಂಗವಿದ್ದಾಗ 'ಐತಿ' ಆಖ್ಯಾತ ಪ್ರತ್ಯಯವಾಗಿ ಬಳಕೆಗೊಳ್ಳುತ್ತದೆ.

ಹೋಗ್ಯೈತಿ - ಹೋಗಿದೆ
ಬಂದೈತಿ - ಬಂದಿದೆ

ಇದು ಇತರ ಭೂತೇತರ ಕಾಲದಲ್ಲೂ ಉಂಟು

ತಿಂತೈತಿ - ತಿನ್ನುತ್ತದೆ
ಬರತೈತಿ - ಬರುತ್ತದೆ

ಅಪೂರ್ಣಕಾಲವನ್ನೂ ಸೂಚಿಸುವ ಅರ್ಥವಿದ್ದಲ್ಲಿ ಮುಖ್ಯ ಕ್ರಿಯಾಪದದ ಮುಂದೆ 'ಹತ್ತು' ಎಂಬ ಸಹಾಯಕ ಕ್ರಿಯಾಪದವೊಂದನ್ನು ಹಚ್ಚುವ ವಾಡಿಕೆ ಕಂಬಾರರ ಕಾವ್ಯದಲ್ಲಿದೆ.

ಮರ್‍ಯಾಕ ಹತ್ತೀದಿ - ಮರೆಯುತ್ತಿರುವಿ

ಬರಾಕ ಹತ್ತಿದಿ - ಬರತೊಡಿದ್ದನು

ತಿನ್ನಾಕ ಹತ್ತಿದ್ದ - ತಿನ್ನಲು ತೊಡಗಿದ್ದನು

ಇನ್ನಿತರ ಕೆಲವು ಆಕೃತಿಮಾ ವೈಶಿಷ್ಟ್ಯಗಳು

ರೂಢನಾಮಗಳ ಪದಾಂತ್ಯ ಅಕ್ಷರದಲ್ಲಿದ್ದ 'ಯ್'ಕಾರವನ್ನು ಅದರ ಹಿಂದಿರುವ 'ಇ'ಕಾರಯುಕ್ತ ಅಕ್ಷರದೊಡನೇ ಸೇರಿಸಿ ಉತ್ತರಿಸುವ ಬಗ್ಗೆ ಕಂಬಾರರಲ್ಲಿದೆ.

ಕರ್‍ಯಾ - ಕರಿಯ

ಗೆಣ್ಯಾ - ಗೆಣೆಯ

ಗೆಳ್ಯಾ - ಗೆಳೆಯ

ಹಿರ್‍ಯಾ - ಹಿರಿಯ

ಇದೇ ಮಾದರಿಯನ್ನಿಟ್ಟುಕೊಂಡು 'ಯ್'ಕಾರಾಂತವಿಲ್ಲದಲ್ಲೂ ಈ ಉಚ್ಚಾರ ರೂಢಿಯಾಗಿದೆ.

ಮಂಗ್ಯಾ - ಮಂಗ

ಮುಂಸ್ಯಾ - ಕರಿಮುಖದ ಮಂಗ

ಶಾಣ್ಯಾ - ಜಾಣ

ಅಂಕಿತನಾಮಗಳಲ್ಲಿ 'ಯ'ಕಾರವನ್ನು ಸಂಬೋಧನೆಗೆ ಬಳಸುವ ಬಗೆ ಇದೆ. ಇದು ಸಾಮಾಜಿಕವಾಗಿ ಮೇಲ್ತರಗತಿಯಲ್ಲಿ ಮಾತ್ರ ಕಂಡುಬರುತ್ತದೆ. ಸುಶಿಕ್ಷಿತರಲ್ಲಿ ಕಡಮೆ.

ಈರ್‍ಯಾ - ಈರಪ್ಪ

ಬಾಳ್ಯಾ - ಬಾಳಪ್ಪ

ಗುರ್‍ಯಾ - ಗುರಪ್ಪ

ದುರಗ್ಯಾ - ದುರಗಪ್ಪ

ಹಿರಿಯರಾದ ಸ್ತ್ರೀಯರನನು ಕುರಿತು ಸಂಬೋಧಿಸುವಾಗ ಬೆ ಪ್ರಾಚೀನರೂಪ ಅಬ್ಬೆಯ ನವೇದ ರೂಪಯನ್ನು ಬಳಸಲಾಗಿದೆ.

ಹಾಡಬೆ - ಹಾಡವ್ವ

ನೋಡಬೆ - ನೋಡವ್ವ

ಕಂಬಾರರ ಕಾವ್ಯದಲ್ಲಿ -ಕ್ಯಾರ, -ಕ್ಯಾಸ ಎಂಬ ರೂಪಗಳು ಭೂತನ್ಯೂನ ಸಹ ಕ್ರಿಯಾಪದದ ಮುಂದೆ ಬಳಕೆಯಾಗುವುದು. ಸಹಾಯಕ ಕ್ರಿಯಾಪದಗಳಂತೆ ಬಳಕೆಯಾಗುತ್ತ 'ಕ್ಯಾರ', 'ಕ್ಯಾಸ್'ಗಳು ಎರಡು ಕ್ರಿಯೆಗಳ ನಡುವಿನ ಕಾಲಾಂತರ ಸೂಚಕವೂ ಪೂರ್ಣಭೂತಕಾಲ ಸೂಚಕವೂ ಆಗಿದೆ.

ಮಾಡಿಕ್ಯಾರ ಬಂದ - ಮಾಡಿ ಮುಗಿಸಿ ಬಂದ

ನಿಂತ ಕ್ಯಾಸ ಕರದ - ನಿಂತು ಮುಗಿಸಿ ಬಂದ

ಕಂಬಾರರಲ್ಲಿ ಬೇಗನೆ ಎಂಬುದಕ್ಕೆ 'ಲಗ್ಗ' ಎಂಬ ಪದದ ಬಳಕೆ ವ್ಯಾಪಕವಾಗಿದೆ. ಕಂಬಾರರ ಕಾವ್ಯಭಾಷೆಯಲ್ಲಿ ಮರಾಠಿ ಪದಗಳು ಅಲ್ಲಲ್ಲಿ ಬಳಕೆಯಾಗಿವೆ.

ಖರೆ - ನಿಜ

ರಗಡ - ಬಹಳ

ಜರೂರು - ಅವಶ್ಯಕತೆ

ಇಂತಹ ನೂರಾರು ಶಬ್ದಗಳು ಕಂಬಾರ ಕಾವ್ಯಭಾಷೆಯಲ್ಲಿ ಬಳಕೆಯಾಗಿವೆ.

ವಾಕ್ಯರಚನಾ ಹಂತ

ಕವಿತೆಯ ಆಕಾರದಲ್ಲಿ ವಾಕ್ಯರಚನೆಯ ಮೂರು ಹಂತಗಳಲ್ಲಿ ವಿಚಾರಿಸಬಹುದು. ಒಂದು, ಶಿಷ್ಟಭಾಷೆಯ ಶೈಲಿ ಪದ್ಯಗಳಲ್ಲಿ ಕಾಣುವ ರಚನಾ ವಿಶೇಷ. ಎರಡು, ಆಡುಭಾಷೆಯ ಶೈಲಿಯ ಪದ್ಯಗಳಲ್ಲಿ ಕಾಣುವ ಉಕ್ತಿಸಾಮರ್ಥ್ಯ. ಮೂರು, ಬೇರೆ ಭಾಷೆಗಳ ವಾಕ್ಯರಚನಾ ಪ್ರಭಾವ. ಶಿಷ್ಟ ಭಾಷಾಶೈಲಿಯ ಪದ್ಯಗಳಲ್ಲಿ ಮುಖ್ಯವಾಗಿ ವಾಕ್ಯರಚನೆಯ ಪದಕ್ರಮ ಹಿಂದು ಮುಂದಾಗಿರುವುದು ಕಂಡುಬರುತ್ತದೆ.

ಸಿಂಪಡಿಸಿದಳು ಅಲ್ಲಿ ಇಲ್ಲಿ ಎಲ್ಲಿ
ಇಳಿದಾಳೋ ದಾರಿಯಲ್ಲಿ

ಇಲ್ಲಿ ಕ್ರಿಯಾಪದವು ಪ್ರಾರಂಭದಲ್ಲಿ ಬಂದಿದೆ. ಆದ್ದರಿಂದ ಕ್ರಿಯಾರ್ಥವು ಮಹತ್ವ ಪಡೆಯುತ್ತದೆ ಎಂಬುದನ್ನು ನೋಡುತ್ತೇವೆ. ಇನ್ನು ಕೆಲವು ಕಡೆ ಕ್ರಿಯಾಪದದ ಪ್ರಯೋಗವೇ ಇರುವುದಿಲ್ಲ.

ಖರೆ ಖೊಟ್ಟಿ ಏನ ಹೇಳಿದರೂನು ಕೇಳುತ್ತಿ
ನನ್ನಾಣೆ, ನಿನ್ನಾಣೆ, ಕೆಟ್ಟದೇವರ ಆಣೆ
ಬಿರಿ ಬಿರೀ ಬಿರಿ ಬಿರೀ
ನೆನೆದರೀಗಲು ಅಬ್ಬ ಮೈಗೆ ಮುಳ್ಳುಗಳೆದ್ದು

ಕ್ರಿಯಾಪದ ರಹಿತ ವಾಕ್ಯಗಳದ್ದೇ ಒಂದು ಸೌಂದರ್ಯ. ಮೇಲಿನ ಸಾಲುಗಳಲ್ಲಿ ಯಾವ ಕ್ರಿಯಾಪದ ಸೇರಿಸಿದರೂ ಅದಕ್ಕೆ ಈ ಬೆಡಗು ಇರಲಾರದು. ಆಡುಭಾಷೆಯ ಶೈಲಿಯಲ್ಲಿ ಧ್ವನಿರೂಪಗಳಷ್ಟೇ ಅಲ್ಲ, ಶಬ್ದಯೋಜನೆಯೂ ವಿಶಿಷ್ಟವಾಗಿರುತ್ತದೆ. ಆಡುಭಾಷೆಯ ಪ್ರತಿಯೊಂದು ಉಕ್ತಿಗೂ ಶಿಷ್ಟಭಾಷೆಯಲ್ಲಿ ಸಮರೂಪವಿರುತ್ತದೆ. ಆದರೆ ಒಂದು ಪ್ರಕಾರ ಉಕ್ತಿಯನ್ನು ಇನ್ನೊಂದು ಪ್ರಕಾರಕ್ಕೆ ಪರಿವರ್ತಿಸಿದರೆ ಉಕ್ತಿಗಳಿಗೆ ಆಯಾ ಬಲ ಉಳಿಯುವುದಿಲ್ಲ. ಈ ಮಾತಿನ ಸತ್ಯಾಸತ್ಯತೆಯನ್ನು ವಾಕ್ಯರಚನಾಶಾಸ್ತ್ರಕ್ಕಿಂತ ಶೈಲಿಶಾಸ್ತ್ರದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ವಿಶ್ಲೇಷಿಸಬಹುದು.

ಅವಸತ್ತ ಬಗೆ ಪೋಲಿಸರಿಗೆ, ಅವರ ನಾಯಿಗೆ
ಪತ್ರಿಕೆಗೂ ಬಗೆಹರಿಯದೆ ಹಾಗೆಯೇ ಇದೆ

ಮತ್ತು

ಬ್ಯಾಟಿ ಬ್ಯಾಟಿಯ ನಾಡಿದಾ
ಬ್ಯಾಡರ ಹುಡುಗ
ಕಾಡ ಬ್ಯಾಟಿಯ ನಾಡಿದಾ

ಮತ್ತು

ಆಳ ಆಳ ಪಾತಾಳದಾಗಿನ
ಮೋಸದಾಗಿನ ಕಸಾ ಸೋಸಿ ನಾ

ಈ ಉಕ್ತಿಗಳು ಶಿಷ್ಟರೂಪಗಳಿಗೆ ಪರಿವರ್ತಿಸಿ ನೋಡಿದಾಗ ಇವುಗಳ ಅನನ್ಯ ಶಕ್ತಿ ಗೋಚರವಾಗುತ್ತದೆ. ಆಡುಭಾಷೆಯ ಅನೇಕ ವಾಕ್ಯಖಂಡಗಳನ್ನು ಪರಿಣಾಮಕಾರಿಯಾಗಿ ಬಳಸುತ್ತಾರೆ.

ದಿನವಿಲ್ಲ ದೆಶೆಯಿಲ್ಲ
ಬೆಕ್ಕಿನ್ಹಾಂಗ
ಇಲ್ಲದಿರಕ
ಕಡತನಕುಳದಾವೇನs
ನಿದ್ದೀಯ ಭಗರ್ಯಾಗಿ
ಹೇಳತೇನ ಕೇಳ
ಕರದರ
ಮರೆಯಲೊ ಒಲ್ಲೆ
ಯಾರೋ ಯಾರೋ ಮೈಬಂಗಾರ

ಮನೀಗೆ ಸಾಗಿತ್ತ
ತೆಕಿಮುಕ್ಕಿ ಬಿದ್ದಾಂಗ
ಬಂದೇವ
ಯಾಕಾಗಿ
ಹ್ಯಾಂಗಾರ
ಅಂತರಕೀರ್ತಿ
ಹುಡುಗಾಟ
ಕಡಗೊಂಡ ಬಿತ್ತ

ಮೊದಲಾದ ಉಕ್ತಿಗಳು ಆಡುಭಾಷೆಯಲ್ಲೇ, ಅದರಲ್ಲೂ ಬೆಳಗಾವಿಯ ಆಡುಭಾಷೆಯಲ್ಲೇ ರಂಗಾಗಿ ತೋರುತ್ತವೆ.

ಕೇಳೀರೇನರಿ ಕತಿಯ ಕೇಳೀರೇನು ।
ಕುದುರಿ ಸಿದ್ದನ ಕತಿಯ ಕೇಳೀರೇನು ॥

ಒಂದಾನೊಂದೂರಾಗ ಸರದಾರ ಇದ್ದಾ
ಅವನ ನಾಮಾಂಕಿತ ಕುದುರೀ ಸಿದ್ದಾ
ಕಣ್ಣಾ ಮಿಂಚಿನ ಚೂರಿ ಇಟಗೊಂಡಿದ್ದ
ಎದೆಯಾಗಿನ ದಯಮಾಯ ಒಣಗಿಸಿದ್ದ

ಮೊದಲಾದ ಚರಗಳು ಬ್ರಾಹ್ಮಣೇತರ ಸಾಮಾಜಿಕ ಉಪಭಾಷಾ ಪ್ರಕಾರಗಳಿಗೆ ಉದಾಹರಣೆಗಳಾಗಿವೆ. ಅಲ್ಲದೆ ಕಾವ್ಯಸೌಂದರ್ಯವನ್ನು ಹುಟ್ಟಿಸಲು ಅವ್ಯವಹಿತ ಸಂಬಂಧಗಳನ್ನು ಬಿಡಿಸಿ ಬೆಳೆಸಲಾಗುತ್ತದೆ.

ಮಂದೀಯ ಮೈತ್ರೀಗೆ ಎರವಾಗಿ ಒಂದಿನ
ಒಬ್ಬಂಟಿ ಕಾಡಿನಾಗಿದ್ದ
ಸದ್ದಿಲ್ಲ ಸರಿರಾತ್ರಿ ನಿದ್ದಿ ಬಂದಿರಲಿಲ್ಲ
ಕುದುರಿ ಸದ್ದಿಗೆ ಬೆಚ್ಚಿ ಬಿದ್ದ

'ಸದ್ದಿಲ್ಲ ಸರಿರಾತ್ರಿ ನಿದ್ದಿ ಬಂದಿರಲಿಲ್ಲ' ಎಬ ವಾಕ್ಯ ಖಂಡ ಎಷ್ಟು ಸೊಗಸಾಗಿದೆ. ಅಂತ ವಾಕ್ಯಗಳು ಬೆಳಗಾವಿಯ ಸಾಮಾನ್ಯ ಭಾಷೆಯಲ್ಲಿಯೂ ಕಂಡುಬರುತ್ತದೆ. ಇದರಿಂದ ಅವರ ಕನ್ನಡ ಶಬ್ದಭಂಡಾರಕ್ಕೂ ವಾಕ್ಯರಚನೆಗೂ ಏನೂ ಚ್ಯುತಿಯಿಲ್ಲ. ಕೆಲವು ವಾಕ್ಯಖಂಡಗಳು ಆಡುನುಡಿಯ ಸೊಗಡನ್ನು ಪರಿಣಾಮಕಾರಿಯಾಗಿ ಹಿಡಿದಿವೆ.

ಕಂಡಂಗಾಡು	ವಸ್ತಿಗಂತ
ಇಂದಿನ ತೊಟ್ಟು	ಮಾರಿತೆಗೆ
ಎದಿಕದಾ	ದಬ್ಬ ಬಿತ್ತು
	ಮದ್ದ ಇಳಿಸು

ಮೊದಲಾದ ಪದಪ್ರಯೋಗಗಳನ್ನು ಗಮನಿಸಬೇಕು. ಈ ರೀತಿಯ ಪ್ರಯೋಗಗಳು ಆಡು ಭಾಷೆಯಲ್ಲಿಯೇ ಅರ್ಥಪೂರ್ಣವಾಗಿರುತ್ತವೆಯೇ ಹೊರತು ಅವುಗಳನ್ನು ಶಿಷ್ಟೀಕರಿಸಿದರೆ ಅವುಗಳ ಅರ್ಥ ವಿವಕ್ಷೆ ಬೇರೆಯಾಗುತ್ತದೆ ಅಥವಾ ಇಲ್ಲದಾಗುತ್ತದೆ. ಉದಾಹರಣಗೆ ನೋಡಿ: 'ಕಂಡಂಗಾತು' ಎಂಬಲ್ಲಿ ಕಂಡ ಅನುಭವ ಸತ್ಯವಾಗಿರುತ್ತದೆ. ಅದನ್ನೇ 'ಕಂಡಂತೆ ಆಯಿತು' ಎಂದು ಹೇಳಿದರೆ ಕಂಡ ಅನುಭವ ನಿಜವೆಂದೆನಿಸುವುದಿಲ್ಲ. ಈ ಮುಂದಿನ ವಾಕ್ಯಗಳನ್ನು ಗಮನಿಸಿ 'ನಿನ್ನ ಬೆಳಿಗ್ಗೆ ಅವನನ್ನು ಕಂಡಂಗಾತು' ಎಂದಾಗ ಅವನನ್ನು ನೋಡಿದ ಅನುಭವದ ನಿಜ ವರದಿ ಎನಿಸುತ್ತದೆ. ಅದೇ 'ನಿನ್ನೆ ಬೆಳಿಗ್ಗೆ ಅವನನ್ನ ಕಂಡಂತೆ ಆಯಿತು' ಎಂದಾಗ ಕಾಣಲಿಲ್ಲ. ಆದ ಕಂಡ ಭ್ರಮೆ ಆಯಿತು ಎಂದೆನಿಸುತ್ತದೆ. ಈ ಪ್ರಕ್ರಿಯೆ ಎಲ್ಲ

ಪ್ರಯೋಗಗಳಿಗೂ ಅನ್ವಯಿಸುತ್ತದೆ ಎಂದಾಗದಿದ್ದರೂ ಅದು ಆಡು ನುಡಿಯ ಅನನ್ಯತೆಯನ್ನು ಸೂಚಿಸುತ್ತದೆ. ಈ ಉದಾಹರಣೆಗಳು ವಾಕ್ಯಖಂಡಗಳ ಅನನ್ಯತೆಯನ್ನು ತೋರಿಸಿದಂತೆ ಇನ್ನೂ ಕೆಲವು ವಾಕ್ಯಗಳು ಬೆಳಗಾವಿ ಆಡುನುಡಿಯ ಅನನ್ಯತೆಯನ್ನು ತೋರಿಸುತ್ತವೆ.

ಜಯ ಜಯ ಶಿವಾಪೂರಿಗೆ ||ಪ||

- ಹಸಿರಿನ ತವರೂರಿಗೆ
- ಹಾಡು ಬೆಳೆದ ಕಾಡಿಗೆ
- ನಮ್ಮ ಚಳಿ ಬಿಸಿಯಾಗುವ
- ಕಣ್ಣುಗಳಿಗೆ ಕನಸು ಕೊಡುವ
- ಯೌವನವನ್ನು ಕಾಪಾಡುವ

ಈ ಮೊದಲಾದ ವಾಕ್ಯಗಳು ಶಿಷ್ಟೀಕರಿಸಿದಂತೆಯೆ ಆದರೂ ಅವುಗಳ ಸೊಗಸು ಮೂಡಿ ಬರುವುದು ಅವನ್ನು ಆಡುನುಡಿಯ ಪ್ರಕಾರದಲ್ಲಿ ಆಡಿಕೊಂಡು ನೋಡಿದಾಗ. ವಿಶೇಷವಾಗಿ 'ಹಸಿರಿನ ತವರೂರಿಗೆ', 'ಹಾಡು ಬೆಳೆದ ಕಾಡಿಗೆ' ಈ ಪ್ರಯೋಗಗಳನ್ನು ನೋಡಿದರೆ ಅವು ಶಿಷ್ಟಭಾಷೆ ಮಾತ್ರ ಗೊತ್ತಿದ್ದವರಿಗೆ ಅರ್ಥವಾಗುವುದೇ ಇಲ್ಲ. ಕೆಲವು ವಾಕ್ಯಗಳಲ್ಲಿ ಶ್ಲೇಷವನ್ನು ಪರಿಣಾಮಕಾರಿಯಾಗಿ ಬಳಸಿದ್ದಾರೆ.

- ಬಿಟ್ಟಂಥ ಬೇರ ಹರಿದಾವ । ಕೂಸ ಚೀರ್‍ಯಾವ
- ಮುಗಲ ನೋಡ್ಯಾವ । ಮಣ್ಣ ಬಗದಾವ
- ಖೂನ ಗುರುತ । ಎಲ್ಲಾ ಪಾಕ ಮರತ ತಿರಗ್ಯಾವ ಸುತ್ತಮುತ್ತಾ ॥

ಮೊದಲಾದ ಉಕ್ತಿಗಳನ್ನು ಬೇರೆ ಭಾಷೆಗೆ ಭಾಷಾಂತರಿಸಿದಾಗ ಭಾಷಾಂತರದಲ್ಲಿ ಅವು ಯಶಸ್ವಿಯಾಗಿ ಸಿಗಲು ಸಾಧ್ಯವಿಲ್ಲ. ಈ ರೀತಿಯ ಶ್ಲೇಷವನ್ನು ಕಂಬಾರರು ಬೆಳಗಾವಿ ಪರಿಸರದ ಆಡುಭಾಷೆಯಿಂದ ಸ್ಫೂರ್ತಿ ಪಡೆದು ಸೃಷ್ಟಿಸುತ್ತಾರೆ. ಈ ಪ್ರಕ್ರಿಯೆಯನ್ನು ಸಮರ್ಥವಾಗಿ ವಿಶ್ಲೇಷಿಸುವ ಶೈಲಿಶಾಸ್ತ್ರದ ಅಧ್ಯಯನಕ್ಕೆ ಮೊರೆ ಹೋಗಬೇಕು.

ವಿಶಿಷ್ಟ ಪದಪ್ರಯೋಗ ಹಂತ

ಯಾವುದೇ ಕೃತಿಯ ಭಾಷೆಯನ್ನು ಕುರಿತು ಚರ್ಚಿಸುವಾಗ ಮೊದಲು ಗೋಚರವಾಗುವುದು ಅದರಲ್ಲಿ ಬಳಕೆಯಾದ ವಿಶಿಷ್ಟ ಶಬ್ದ ಭಂಡಾರ. ಕಂಬಾರರ ಕಾವ್ಯಭಾಷೆ ಸಂಸ್ಕೃತ ಪ್ರಚುರವಲ್ಲವಾದ್ದರಿಂದ ಹಾಗೂ ಬಳಕೆಯಲ್ಲಿರುವ ಶಬ್ದಗಳನ್ನೇ ಬಳಸಿರುವುದರಿಂದ ಅವರ ಕಾವ್ಯ ಕನ್ನಡ ನಾಡಿನ ಜನಮನವನ್ನು ಬೇಗನೆ ಹಿಡಿಯಿತು. ಅಲ್ಲದೆ ಅವರು ಕನ್ನಡ ನಾಡಿನಾದ್ಯಂತ ಅಡ್ಡಾಡಿದ್ದುದರಿಂದ ಆಯಾಪ್ರದೇಶದಲ್ಲಿ ಬಳಕೆಯಿರುವ ಪದಗಳನ್ನು ಗ್ರಹಿಸಿ ಅವನ್ನು ತಮ್ಮ ಕಾವ್ಯದಲ್ಲಿ ಪ್ರಯೋಗಿಸಿದ್ದಾರೆ. ಉದಾಹರಣೆಗೆ ಗುಲಬುರ್ಗಾ ಕಡೆಗೆ ಬಳಕೆಯಲ್ಲಿರುವ ಇದ್ದಾನೆ ಅರ್ಥದ 'ಹಾದ', ಮೈಸೂರು ಸೀಮೆಯ ತಿಂಡಿ, ಹಾಸನ ಸೀಮೆಯ ನೀರಿನ ಕೋಡಿ ಅಥವಾ 'ತೂಬು' ಅಥವಾ 'ಮದಗ', ಕಾರವಾರ ಸೀಮೆಯ ಅಳು ಅರ್ಥದ

'ತೀಡು' ಮೊದಲಾದ ಶಬ್ದಗಳನ್ನು ನೋಡಬಹುದು. ಪ್ರಮುಖವಾಗಿ ಕಂಬಾರರ ಕಾವ್ಯಭಾಷೆಯಲ್ಲಿ ಬೆಳಗಾವಿ ಸೀಮೆಯ ಶಬ್ದಗಳು ಕಾಣದೊರೆಯುತ್ತವೆ.

ಸಸಾರ	ಹಾಕ್ಯಾಟ
ಅಸರಂತ	ಅಕಲು
ಮಾರಿ	ಹುಂಬ
ನದರು	ಸಂಗಾತ
ಪಾಲು	ಬೊಟ್ಟು
ಕೌದಿ	ಗೆಣತಿ
ಸರತಿ	ಮಾರಿ
ಒದರು	ಸಾಬಾಣ
ಖಂಬ (ಕಂಬ)	

ಮೊದಲಾದ ಶಬ್ದಗಳು ಬೆಳಗಾವಿ ಕನ್ನಡದ ಭಾಷಾಪ್ರಭೇದದಲ್ಲಿ ವಿಶಿಷ್ಟ ಅರ್ಥದಲ್ಲಿ ಬಳಕೆಯಾಗುತ್ತಿವೆ. ಚೌಕಾಸಿ, ನದರು ಮೊದಲಾದವು ಮರಾಠಿ ಮೂಲದಿಂದ ಬಂದ ಶಬ್ದಗಳು 'ಉಲ್ಲಟಿಸು' ಎಂಬ ಪದವು ಮರಾಠಿ ಮೂಲದ 'ಉಲಟ್' ಶಬ್ದಕ್ಕೆ ಕನ್ನಡದ-ಇಸು ಪ್ರತ್ಯಯ ಸೇರಿಸಿ ತಯಾರು ಮಾಡಿದ ಪದ. ಇಂತಹ ಎಲ್ಲ ಶಬ್ದಗಳು ಪ್ರಾದೇಶಿಕ ಶಬ್ದಭಂಡಾರ ಕೋಶವು ಸಿದ್ಧವಾದಾಗ ಅಲ್ಲಿ ಸ್ಥಾನ ಪಡೆಯುತ್ತಿವೆ. ಶಿವರಾಮ ಕಾರಂತರು ತಮ್ಮ ಸಿರಿಗನ್ನಡ ಅರ್ಥಕೋಶದಲ್ಲಿ ಮತ್ತು ಜಿ.ಎ. ಕವಲಿಯವರು ತಮ್ಮ ಕಸ್ತೂರಿ ಕನ್ನಡ ಕೋಶದಲ್ಲಿ ಪ್ರಾದೇಶಿಕ ಶಬ್ದಗಳನ್ನು ಸೇರಿಸಲು ಸಾಧ್ಯವಾದಷ್ಟು ಪ್ರಯತ್ನಿಸಿದರು. ಆದರೂ ಈ ಕಾರ್ಯ ವ್ಯವಸ್ಥಿತ ಸಂಶೋಧನೆಯಿಂದ ನಡೆದಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿ ನಲ್ಲಿ ಈ ಕಾರ್ಯ ಗೊತ್ತಿಲ್ಲದಂತೆ ಸಾಮಗ್ರಿ ಸಂಗ್ರಾಹಕರಿಂದ ನಡೆದಿದೆ. ಆದರೆ ಇಂದು ಪ್ರಾದೇಶಿಕ ಶಬ್ದಭಂಡಾರ ರಚನೆಗಾಗಿಯೇ ಯೋಜನೆಯನ್ನು ಕೈಕೊಳ್ಳಬೇಕಾಗಿದೆ. ಇರಲಿ ಈ ಬಗ್ಗೆ ಹೇಳಬೇಕಾದುದು ಬೇಕಾದಷ್ಟಿದೆ. ಬೆಳಗಾವಿ ಸೀಮೆಯ ಕೆಲವು ಸಮಸ್ತ ಪದಗಳನ್ನು ಕಂಬಾರರು ಅರ್ಥಪೂರ್ಣವಾಗಿ ಬಳಸುತ್ತಾರೆ.

ಕವಿನೆರಳು (ಕೌನೆಳ್ಳು)	ಆಡಿಸ್ಯಾಡು (ಚೇಷ್ಟೆ ಮಾಡು)
ಕಣ್ಣಳತಿ	ಬಿಟ್ಟಿಬ್ಯಾಸರಕಿ
ಘಜಾರಗಟ್ಟಿ	ಹೊಡಮಳ್ಳಿ ತಿರುಗಿ
ಹಾಡೆ ಹಗಲು	ರಾವು ಮುಖ
ಕಳ್ಳ ಹುದುಲು	ಗುಬ್ಬಿ ಬಳಸಿ
ಅಡವಿ ಮಲ್ಲಿಗೆ	ಜಡಿಮಳಿ
ಗೊಂದಲ ಹಾಕು	ಕಣ್ ಒಳಗ

ಭಣಗೂಡು	ಮಳ್ಳನಗಿ
ಮಿತಿಮೀರು	ಚವರಿ ಜ್ವಾಳ

ಮೊದಲಾದ ಸಮಸ್ತ ಪದಗಳ ಅರ್ಥವನ್ನು ವಿವರಿಸಿದ ಹೊರತು ಬೇರೆ ಪ್ರದೇಶದವರಿಗೆ ತಿಳಿಯುವುದಿಲ್ಲ. ಪ್ರಾದೇಶಿಕ ಪದಕೋಶದೊಡನೆ ಪ್ರಾದೇಶಿಕ ಪದಗುಚ್ಛ ಕೋಶವು ಸಿದ್ಧವಾಗಬೇಕಾಗಿದೆ. ಅಲ್ಲಿಯವರೆಗೆ ಇಂತಹ ಬಿಡಿ ಉದಾಹರಣೆಗಳಿಂದಲೇ ಸಮಾಧಾನ ಪಟ್ಟುಕೊಳ್ಳಬೇಕಾಗುತ್ತದೆ. ಹೀಗೆ, ಇಲ್ಲಿಯವರೆಗೆ ಕಂಬಾರರ ಕಾವ್ಯಭಾಷೆಯ ಆಂತರಿಕ ರಚನೆಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಯಿತು. ಈ ಅಧ್ಯಾಯದಲ್ಲಿ ವ್ಯಾಕರಣ ವಿಚಾರಗಳ ಸ್ಥೂಲ ಪರಿಚಯದ ಪ್ರಯತ್ನ ತಕ್ಕಮಟ್ಟಿಗೆ ನಡೆದಿದೆ. ಇನ್ನೂ ಈ ಕುರಿತು ಅಧ್ಯಯನ ಆಗಬೇಕಾಗಿದೆ.

ಆಕರಗ್ರಂಥ

೧. ಚಂದ್ರಶೇಖರ ಕಂಬಾರ ಸಮಗ್ರ ಕಾವ್ಯ, ೨೦೧೧, ಸಪ್ನ ಬುಕ್‌ಹೌಸ್, ಬೆಂಗಳೂರು

೧೮

ಎಂ.ಎಂ. ಕಲಬುರ್ಗಿ : ಭಾಷಿಕ ಶೋಧಗಳು

ಎಂ.ಎಂ. ಕಲಬುರ್ಗಿ ಅವರ ಸಾಹಿತ್ಯಿಕ ಕಾರ್ಯ ಬಹುಮುಖಿಯಾಗಿ ನಡೆದು ಬಂದಿದೆ. 'ಮಾರ್ಗಸಂಪುಟ'ಗಳಲ್ಲಿ ಅವರ ವಿದ್ವತ್ತು, ಪರಿಶ್ರಮ, ಸ್ವತಂತ್ರ ಆಲೋಚನೆ, ಪ್ರತಿಭೆಗಳು ಸ್ಫುಟವಾಗಿ ಕಾಣಿಸಿಕೊಂಡಿವೆ. ಭಾಷೆ-ವ್ಯಾಕರಣ ಕ್ಷೇತ್ರಗಳಲ್ಲಿಯೂ ಅವರು ನಿಚ್ಚಳವಾಗಿ ಕೆಲಸ ಮಾಡಿದ್ದಾರೆ. ಸಾಮಾನ್ಯವಾಗಿ ಸಾಹಿತ್ಯದ ರಸ ಕ್ಷೇತ್ರದಲ್ಲಿ ಮಿಂದು ನಲಿದಾಡುತ್ತಿರುವವರಿಗೆ ಭಾಷಾಶಾಸ್ತ್ರ, ವ್ಯಾಕರಣದಂತಹ ಶಾಸ್ತ್ರ ಕ್ಷೇತ್ರಗಳು ಸ್ವಲ್ಪ ಶುಷ್ಕವಾಗಿ ತೋರಬಹುದು. 'ಇರು ಮರುಳೆ ಶುಷ್ಕ ವೈಯಾಕರಣ' ಎಂದು ಪಂಪನೇ ಹೇಳಿರುವನು. ಆದರೆ ಲೋಕದಲ್ಲಿ ಕೆಲವು ವ್ಯಕ್ತಿಗಳು ಯಾವ ಕ್ಷೇತ್ರದಲ್ಲಿ ಬೇಕಾದರೂ ತಮ್ಮ ಪ್ರತಿಭೆಯನ್ನು ತೋರಿಸುವುದುಂಟು, ಆಯಾ ಕ್ಷೇತ್ರದಲ್ಲಿಯೂ ತಮ್ಮ ಸ್ವಂತಿಕೆಯನ್ನು ಪ್ರಕಟಿಸುವುದುಂಟು. ನಮ್ಮ ಪರಿಸರದಲ್ಲಿ ಡಾ. ಕಲಬುರ್ಗಿ ಅವರು ಇದಕ್ಕೆ ನಿದರ್ಶನ ವಾಗಿದ್ದಾರೆ.

ಭಾಷೆ-ವ್ಯಾಕರಣಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಕಾಲಗಳಲ್ಲಿ ಹನ್ನೊಂದು ಲೇಖನಗಳನ್ನು ಅವರು ರಚಿಸಿದ್ದಾರೆ. ಅವರಿಂದ ವಿಶೇಷ ಪರಿಶೀಲನೆ ಒಳಗಾಗಿರುವುದು ಎಂದರೆ ವ್ಯಾಕರಣ ಮತ್ತು ಕನ್ನಡ ಭಾಷೆಯ ರಚನೆ. ಭಾಷಾಶಾಸ್ತ್ರದ ವಿವಿಧ ಮುಖಗಳ ವ್ಯಾಪಕವಾದ ಅಧ್ಯಯನ ಇಲ್ಲಿ ವಿಷಯವಾಗಿ ಇರದಿದ್ದರೂ ಕನ್ನಡ ವ್ಯಾಕರಣದ ಸಮಸ್ಯೆಗಳನ್ನು ತೆಗೆದುಕೊಂಡು ಅವುಗಳನ್ನು ವಿಶ್ಲೇಷಿಸುವ, ಬಿಡಿಸುವ ಪ್ರಯತ್ನ ಎಲ್ಲ ಲೇಖನಗಳಲ್ಲಿಯೂ ಇದೆ. ಆ ಪ್ರಯತ್ನದ ಸ್ವರೂಪ ಮತ್ತು ಶಕ್ತಿ-ಮಿತಿಗಳನ್ನು ಇಲ್ಲಿ ಗಮನಿಸಬಹುದು.

ಕರ್ನಾಟಕದ ಪ್ರಾದೇಶಿಕ ಭಾಷೆಗಳನ್ನು ಸ್ಥೂಲವಾಗಿ ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕಗಳೆಂದು ವಿಂಗಡಿಸಬಹುದು. ಅವುಗಳ ರಚನೆ ಮತ್ತು ಬಳಕೆಯಲ್ಲಿ ಪಲವು ಭಾಷಿಕ ವ್ಯತ್ಯಾಸಗಳಿವೆ-ಅಂತಹವುಗಳಲ್ಲಿ ಉತ್ತರ ಭಾಗದಲ್ಲಿ ಕಂಡುಬರುವ

ಪೂರ್ಣಭೂತಕಾಲದ ಪ್ರತ್ಯಯಗಳೆಂದರೆ **-ಕೇಸಿ, -ಕೇರಿ**. ಇವು ಬಳಕೆ ಮತ್ತು ರಚನೆಯ ದೃಷ್ಟಿಯಿಂದ ಬಹುಮುಖ್ಯವಾಗಿವೆ. ಕಲಬುರ್ಗಿ ಅವರು ಅವುಗಳ ಸ್ವರೂಪವನ್ನು ಕುರಿತು ಚರ್ಚಿಸಿದ್ದಾರೆ. ದಕ್ಷಿಣ ಕರ್ನಾಟಕದ 'ಹೋಗಿಬಿಟ್ಟು ಬಂದೆ' ಎಂಬುದು ಉತ್ತರ ಕರ್ನಾಟಕದಲ್ಲಿ 'ಹೋಗಿಕೇಸಿ ಬಂದೆ' ಅಥವಾ 'ಹೋಗಿಕೇರಿ ಬಂದೆ' ಎಂದಾಗುತ್ತದೆ. ಅ>ಆ್ಯ ನಿಯಮಕ್ಕನುಗುಣವಾಗಿ ಅವು ಕ್ಯಾಸಿ/ಕ್ಯಾರಿ ಎಂದೂ ಪರಿವರ್ತನೆಯಾಗುತ್ತವೆ. 'ಕೇಸಿ' ಎಂಬುದರ ಮೂಲರೂಪ 'ಕೆಯ್', ಇದರರ್ಥ 'ಮಾಡು'. ಇದರ ಸಾಧಿಕ ರೂಪವಾಗಿರುವ ಮೂಲದ್ರಾವಿಡದ ಕೆಯ್ಸಿ ಎಂಬುದು ತೆಲುಗಿನಲ್ಲಿ 'ಚೇಸಿ' ಎಂದಾಗುತ್ತದೆ. ಹಳಗನ್ನಡದಲ್ಲಿ ಈ 'ಕೆಯ್ಸಿ'ಯೇ ಮುಂದುವರಿದಿದ್ದು, ಅದರ ಪ್ರಯೋಗಗಳನ್ನು ಕಲಬುರ್ಗಿಯವರು ಹುಡುಕಿ ಹೇಳಿದ್ದಾರೆ. ಇದೇ ಮುಂದೆ 'ಕೇಸಿ' ಎಂದಾಗಿದೆ. ಇಲ್ಲಿ 'ಹೋಗಿ ಕೇಸಿ ಬಂದೆ' ಎಂಬುದಕ್ಕೆ ಹೋಗಿ ಮಾಡಿ ಬಂದೆ. ಅಂದರೆ ಹೋಗುವ ಕೆಲಸವನ್ನು ಮಾಡಿ (ಮುಗಿಸಿ) ಬಂದೆ, ಎಂದರ್ಥ. ಕಲಬುರ್ಗಿ ಅವರು ಈ -ಕೇಸಿ, -ಕೇರಿಗಳ ಭಾಷಿಕ ಪರಿಸರವನ್ನು ಅನುಲಕ್ಷಿಸಿ ಅವು ಸ್ವಚ್ಛಂದ ಪರಿವರ್ತನೆ(Free variation)ತತ್ವದಂತೆ ಬಳಕೆಯಾಗಿವೆ ಎಂದು ಸರಿಯಾಗಿಯೇ ತಿಳಿಸಿದ್ದಾರೆ. ಕಲಬುರ್ಗಿ ಅವರು ಇನ್ನೂ ಮುಂದುವರಿದು ಕೇರಿ ಎಂಬುದು ಉರ್ದು ಮೂಲದ 'ಕರ್'ದಿಂದ ಬಂದಿದೆ ಎಂದು ಊಹಿಸುತ್ತಾರೆ. ಇದನ್ನು ಸ್ವಲ್ಪ ಯೋಚಿಸಬೇಕಾಗಿದೆ. ಏಕೆಂದರೆ ಪ್ರತ್ಯಯಗಳು ಹೆಚ್ಚಾಗಿ ದೇಸಿ ಮೂಲದವುಗಳು -ಕೇಸಿ, -ಕೇರಿಗಳಂತೂ ದೇಸಿ ಮೂಲದ ಪ್ರತ್ಯಯಗಳು.

ಕಲಬುರ್ಗಿ ಅವರು **ಹುಡುಗ-ಹುಡುಗಿ** ಇವುಗಳ ಸರಿಯಾದ ರೂಪಗಳನ್ನು ತಿಳಿದುಕೊಳ್ಳಲು ನಿಷ್ಪತ್ತಿಗೆ ತೊಡಗುತ್ತಾರೆ. 'ಪುಡಿ' ಎಂಬುದು 'ಕಿರಿದು' ಎಂಬರ್ಥ ಸೂಚಿಸುವ ಪ್ರಕೃತಿ. ಅದಕ್ಕೆ 'ಇಗ' ಎಂಬ ತದ್ಧಿತ ಪ್ರತ್ಯಯ ಹತ್ತಿ, ಪುಡಿ>ಹುಡಿ+ಇಗ= ಹುಡಿಗ ರೂಪ ತಾಳಿದೆ. ಇಲ್ಲಿ ಆದಿಯ 'ಹು' ಅಕ್ಷರದ ಪ್ರಭಾವದಿಂದ ತರುವಾಯದ 'ಡಿ' ಎಂಬುದು 'ಡು' ಆಗಿ ಹುಡುಗ ರೂಪತಾಳಿತು. ಅದೇ ರೀತಿ ಅಂತ್ಯದ 'ಗ'ದ ಪ್ರಭಾವದಿಂದ ಹಿಂದಿನ 'ಡಿ'>ಡ ಆಗಿ ಹುಡುಗ ರೂಪುತಾಳಿತು. ಹೀಗೆ ಹುಡಿಗ ಎಂಬುದು ಹುಡುಗ, ಹುಡುಗ ಎಂದು ವ್ಯತ್ಯಾಸ ಹೊಂದಿದೆ. ಕಲಬುರ್ಗಿ ಇದರ ಸ್ತ್ರೀವಾಚಿರೂಪವು ಹುಡಿಗಿ>ಹುಡುಗಿ>ಹುಡಿಗಿ ಎಂದು ಬದಲಾದುದನ್ನು ಸರಿಯಾಗಿಯೇ ಪ್ರತಿಪಾದಿಸಿದ್ದಾರೆ.

ಅಂಶಲಯದ ನೆಲೆಯಲ್ಲಿ ಕನ್ನಡ ದೇಸಿ ರೂಪಗಳ ಉಚ್ಚಾರ ಸ್ವರೂಪವನ್ನು **ಪ್ರಾಚೀನ ಕನ್ನಡ ಒಂದು ಉಚ್ಚಾರ** ಎಂಬ ಲೇಖನದಲ್ಲಿ ಕಲಬುಗಿ ಅವರು ಸರಿಯಾಗಿ ಗುರುತಿಸಿದ್ದಾರೆ. ಕನ್ನಡದ ಆಡುಭಾಷೆಯ ಶಬ್ದಗಳಲ್ಲಿ ದೀರ್ಘೀಕರಣ ನಿಯಮಕ್ಕನು ಗುಣವಾಗಿ ಅಕ್ಷರ ಲೋಪವನ್ನು ದೀರ್ಘಗಳು ತುಂಬಿಕೊಳ್ಳುತ್ತವೆ. ಉದಾ. ಹಿರಿಯಮಠ> ಹಿರೇಮಠ, ಜವರಯ್ಯಗೌಡ>ಜವರೇಗೌಡ ಇತ್ಯಾದಿ. ಆದರೆ ಈ

ತತ್ತ್ವಕ್ಕೆ ಹೊರತಾಗಿ ವಚನ ಸಾಹಿತ್ಯದಲ್ಲಿ ಮಾದಾರ ಚೆನ್ನಯ್ಯ-ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ-ಡೋಹಾರ ಕಕ್ಕಯ್ಯ ಎಂಬ ಹ್ರಸ್ವ-ದೀರ್ಘರೂಪದ ಉಚ್ಚಾರಗಳು ಸಿಗುತ್ತವೆ. ಇದಕ್ಕೆ ಕಾರಣ, ಅಂಶಗಣದ ದ್ವಿತೀಯ ಅಂಶ ಹ್ರಸ್ವವಿದ್ದರೂ ದೀರ್ಘ ವಾಗುತ್ತದೆ ಎಂಬ ತತ್ತ್ವ. ಈ ಮೇರೆಗೆ ಅವು ಮಾದ**ಽ**ರ, ಡೋಹ**ಽ**ರ ಎಂದು ತರಂಗ ಯುಕ್ತವಾಗಿ ಉಚ್ಚರಿಸಲ್ಪಟ್ಟು, ಆ ತರಂಗ ತುಂಬಿಕೊಳ್ಳಲು ದೀರ್ಘವಾಗುತ್ತವೆ. ಕನ್ನಡ ಅಕ್ಷರ ರಚನೆ(Syllable structure)ವಿಷ್ಣುಗಣವನ್ನು ಹೆಚ್ಚು ಅವಲಂಬಿಸಿರುತ್ತದೆ. ನಾದ ಶಿಖರತೆ ಇರುವುದೇ ಎರಡನೆಯ ಸ್ವರ ಧ್ವನಿಮಾದ ಮೇಲೆ. ಈ ನಾದ ಗುಣದಿಂದ ಉಚ್ಚಾರಕ್ಕೆ ನಿಖರತೆ ಮತ್ತು ಸ್ಪಷ್ಟತೆ ಪ್ರಾಪ್ತವಾಗುತ್ತದೆ. ಆದುದರಿಂದ ಒಂದು ಪದರಚನೆಯ ಎರಡನೆಯ ಸ್ವರವೇ ಅಕ್ಷರ ಕೇಂದ್ರವಾಗಿರುತ್ತದೆ.

ಕರ್ನಲ್ ಮೆಕೆಂಜೆ ಸಂಗ್ರಹಿಸಿದ ಹಸ್ತಪ್ರತಿ ಸೂಚಿಯಲ್ಲಿ 'ಯಾದಾಸ್ತು ಘಟ್ಟದ ಕೆಳಗಿನ ಭಾಷೆಗಳು' ಎಂಬ ಕಾಗದ ಪ್ರತಿ ಲಭಿಸಿದೆ. ಘಟ್ಟದ ಕೆಳಗಿನ ಭಾಷೆಯಲ್ಲಿ ಬಳಕೆಯಲ್ಲಿದ್ದ ಕೆಲವು ಅಪೂರ್ವ ಪದಗಳಿಗೆ ಅರ್ಥ ಹೇಳುವುದು ಅದರ ವಸ್ತು. ಉದಾ. i. ಬೆಂಗೆರೆಯೆಂದರೆ ಸಮುದ್ರ ii. ಕೀಳು ಕಿರಕಟ್ಟೆಯೆಂದರೆ ಸಣ್ಣ ಸಣ್ಣ ಹುಡುಗರು. ಇಂತಹ ಮರೆಯಾಗಿ ಹೋಗಿರುವ ೫೧ ಪದಗಳಿಗೆ ವಿವರಣೆಯಿದೆ. ಇಲ್ಲಿ ಬಳಕೆಯಾದುದು ೧೮ನೆಯ ಶತಮಾನದಲ್ಲಿ ಪ್ರಚಲಿತವಿದ್ದ ವ್ಯಾವಹಾರಿಕ ಭಾಷೆ. ಆ ಭಾಷೆಯ ಸ್ವರೂಪ, ಬರೆವಣಿಗೆಯ ರೀತಿಗಳಿಗೆ ಧಕ್ಕೆ ಬರದಂತೆ ಇದ್ದದ್ದನ್ನು ಇದ್ದಂತೆಯೇ ಕಲಬುರ್ಗಿ ಅವರು **ಯಾದಾಸ್ತು ಘಟ್ಟದ ಕೆಳಗಿನ ಭಾಷೆಗಳು** ಎಂಬ ಶೀರ್ಷಿಕೆಯಲ್ಲಿ ಸಂಪಾದಿಸಿದ್ದಾರೆ. ಇಲ್ಲಿ ಆ ದಾಖಲೆಯ ಮಹತ್ವವನ್ನು ಕುರಿತು ಸ್ವಲ್ಪ ಹೇಳಬಹುದಾಗಿತ್ತು. ಏಕೆಂದರೆ ಉಚ್ಚಾರಕ್ಕೆ ತಕ್ಕಂತೆ ಬರವಣಿಗೆ ಈ ದಾಖಲೆ ಯದಲ್ಲಿದೆ. ಉದಾ. ಎಂದರೆ -ಯೆಂದರೆ, ಒಂದು-ವೊಂದು, ಇಲ್ಲಿ-ಯಿಲ್ಲಿ. ಇವು ಉಪಭಾಷಾ ವಿಜ್ಞಾನ ಮತ್ತು ಒಂದು ಕಾಲಘಟ್ಟದ ರಚನೆಯ ದೃಷ್ಟಿಯಿಂದ ತುಂಬ ಪ್ರಾಮುಖ್ಯತೆ ಪಡೆಯುತ್ತವೆ. ಚಾರಿತ್ರಿಕ ಭಾಷಾವಿಜ್ಞಾನದ ದೃಷ್ಟಿಯಿಂದಲೂ ಈ ದಾಖಲೆ ಅಮೂಲ್ಯವಾಗಿದೆ.

ಭಾಷೆಯ ಸಾರ್ಥಕತೆ ಇರುವುದು ಅದರ ಸಂವಹನದಲ್ಲಿ. ಅದನ್ನು ಕಲಬುರ್ಗಿ ಅವರು **ಆಡಳಿತದಲ್ಲಿ ಅನುವಾದಿತ ಭಾಷೆ-ಪ್ರಾದೇಶಿಕ ಭಾಷೆ** ಎಂಬ ಲೇಖನದಲ್ಲಿ ಸಮರ್ಥವಾಗಿ ಪ್ರತಿಪಾದಿಸಿದ್ದಾರೆ. ಕರ್ನಾಟಕದಲ್ಲಿ ಭಾಷಾನೀತಿ ವೈಜ್ಞಾನಿಕವಾಗಿ ರೂಪಿತವಾಗಿಲ್ಲ. ಇದರಿಂದ ಪ್ರಾದೇಶಿಕ ಭಾಷಾಭಿವೃದ್ಧಿ ಕುಂಠಿತವಾಗುತ್ತಿದೆ. ಕರ್ನಾಟಕ ದಲ್ಲಿ ಕನ್ನಡ ಆಡಳಿತ ಭಾಷೆ ಆಗಬೇಕಾಗಿದೆ. ಇಂದು ಇಂಗ್ಲಿಶ್ ಆಡಳಿತ ಪದ್ಧತಿ ಅಸ್ತಿತ್ವಕ್ಕೆ ಬಂದಿದೆ. ಇದರಿಂದ ಹಲವು ಭಾಷಿಕ ಸಮಸ್ಯೆಗಳು ಉದ್ಭವಿಸಿವೆ. ಭಾಷೆಯ ಮುಖ್ಯ ಉದ್ದೇಶ ಸಾಮಾಜಿಕ ಸಂಪರ್ಕ. ಅದಕ್ಕಾಗಿ ಕರ್ನಾಟಕದ ಆಡಳಿತದಲ್ಲಿ ಅನುವಾದಿತ ಮತ್ತು ಪ್ರಾದೇಶಿಕ ಭಾಷೆಯ ಕನ್ನಡವನ್ನು ರೂಢಿಸಬೇಕಾಗಿದೆ.

ಏಕೀಕರಣ ಪೂರ್ವದ ಆಡಳಿತದಲ್ಲಿ ನೇರವಾಗಿ ಇಂಗ್ಲಿಶ್ ಭಾಷೆಯನ್ನು ಬಳಸಲಾಗುತ್ತಿತ್ತು. ನಂತರ ಕನ್ನಡ ಜಾಗೃತಿಯ ಪರಿಣಾಮವಾಗಿ ಭಾಷಾಂತರ ಪ್ರಕ್ರಿಯೆ ನಮ್ಮಲ್ಲಿ ಪ್ರಾರಂಭವಾಯಿತು. ಇದರಿಂದ ಆಡಳಿತ ಕ್ಷೇತ್ರದಲ್ಲಿ ಪದ ಮತ್ತು ವಾಕ್ಯಗಳ ಕೃತಕ ರೂಪಗಳು ನುಗ್ಗಿ ಬಂದವು. ಉದಾ. ಆರಕ್ಷಕ (ಪೊಲೀಸ), ಅಭಿಯಂತರ (ಇಂಜನಿಯರ್). ಇಂತಹ ಸಂಸ್ಕೃತ ರೂಪಗಳು ಸಾಮಾಜಿಕ ಸಂಪರ್ಕಕ್ಕೆ ತೊಂದರೆಯನ್ನುಂಟು ಮಾಡುತ್ತವೆ. ಆಡಳಿತವು ಸೇರಿದಂತೆ ಸಾರ್ವಜನಿಕ ಕ್ಷೇತ್ರಗಳಲ್ಲಿ ಕನ್ನಡ ಜಾಯಮಾನಕ್ಕೆ ಹೊಂದುವಂತಹ ಪದರಚನೆ, ವಾಕ್ಯರಚನೆಗಳನ್ನು ಅನುವಾದಿಸಬೇಕೆಂದು ಕಲಬುರ್ಗಿ ಅವರ ವಿಚಾರ ಸರಿಯಾಗಿದೆ.

ಕರ್ನಾಟಕದ ಪ್ರಾದೇಶಿಕ ಭಾಷಾವಲಯಗಳನ್ನು ಸ್ಥೂಲವಾಗಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಮತ್ತು ಕರಾವಳಿ ಕರ್ನಾಟಕಗಳೆಂದು ಮೂರು ರೀತಿಯಾಗಿ ವಿಂಗಡಿಸಬಹುದು. ಆಯಾ ಗಡಿ ಪ್ರದೇಶಗಳಲ್ಲಿ ಅನ್ಯಭಾಷಾ ಪ್ರಭಾವವಿರುವುದು ಸಹಜ. ಅಲ್ಲಿ ಕನ್ನಡ ಪರಿಸರ ನಿರ್ಮಾಣ ಮಾಡಲು ಸೂಕ್ತ ಭಾಷಾಯೋಜನೆ ಹಾಕಿಕೊಳ್ಳಬೇಕು. ಅದರಂತೆ ಯಾವ ಪ್ರದೇಶದಲ್ಲಿ ಆಡಳಿತ ಕೇಂದ್ರವಿರುತ್ತದೆಯೋ ಅಲ್ಲಿಯ ಆಡಳಿತ ಪದಗಳು ಎಲ್ಲ ಪ್ರದೇಶಗಳನ್ನು ಆಕ್ರಮಿಸುತ್ತವೆ. ಉದಾಹರಣೆಗೆ 'ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ರಾಜಧಾನಿ ಬೆಂಗಳೂರು ಪ್ರದೇಶದ ಆಡಳಿತ ಪದಗಳು ಮಿಕ್ಕ ಪ್ರದೇಶದ ಪದಗಳನ್ನು ಮೂಲೆಗುಂಪಾಗಿಸಿ ತಮ್ಮ ಅಧಿಕಾರ ನಡೆಸುತ್ತವೆ'. ಆಡಳಿತ ಭಾಷಾ ವಿಷಯವಲ್ಲಿ ಇದು ಅನಿವಾರ್ಯವೇ ಸರಿ. ಅದಕ್ಕಾಗಿಯೇ 'ಆಡಳಿತದ ಶಿರೋಸಂಸ್ಥೆಯಾದ ವಿಧಾನ ಸೌಧ ಮೊದಲು ಸುಧಾರಿಸಬೇಕು' ಎಂದಿದ್ದಾರೆ. ಕನ್ನಡ ಭಾಷಾಬಳಕೆಗೆ ಮೊದಲು ಕನ್ನಡಿಗರನ್ನು ಸಜ್ಜುಗೊಳಿಸಬೇಕು. ಇದು ಮುಖ್ಯ. ಇರಲಿ, ಕಲಬುರ್ಗಿ ಅವರು ತುಂಬ ಕಳಕಳಿಯಿಂದ ಬರೆದ ಲೇಖನ ಇದು, ಚಿಂತನಾರ್ಹವಾಗಿದೆ.

ವಚನಕಾರರ ವಚನಗಳ ಸಾಧನೆ ಅವರ ಭಾಷೆಯ ಬಳಕೆಯಲ್ಲಿದೆ. ಕಲಬುರ್ಗಿ ಅವರು ವಚನಗಳ ರಾಚನಿಕ ಆಯಾಮವನ್ನು ಕುರಿತು **ವಚನಕಾರರು:ಭಾಷೆ, ಕನ್ನಡ ಭಾಷೆ ಮತ್ತು ವಚನ ಭಾಷೆ** ಎಂಬ ಲೇಖನದಲ್ಲಿ ಭಾಷೆಯ ರಚನೆ ಕುರಿತು ಶರಣರು ತಳೆದ ನಿಲುವುಗಳನ್ನು, ಮಾಡಿದ ಪ್ರಯೋಗಗಳನ್ನು ವಿಶ್ಲೇಷಿಸಿದ್ದಾರೆ. ವಚನಕಾರರ ಪ್ರಕಾರ ಭಾಷೆಗೆ ಎರಡು ಮಗ್ಗಲುಗಳಿವೆ. ಅದನ್ನು ಅವರದ್ದೇ ಆದ ವಚನಭಾಷೆಯಲ್ಲಿ ಹೇಳುವುದಾದರೆ "ತನ್ನ ಬಣ್ಣಿಸಬೇಡ, ಇದಿರು ಹಳಿಯಲು ಬೇಡ" ಇವೆರಡನ್ನು ದೂರವಿಟ್ಟು ಭಾಷಾಶುದ್ಧತೆಯನ್ನು ಉಳಿಸಬೇಕೆಂದು ಶರಣರು ವಾದಿಸುತ್ತಾರೆ. 'ತನ್ನ ಬಣ್ಣಿಸಬೇಡ' ಎಂದರೆ ತನ್ನನ್ನು/ತಮ್ಮನ್ನು ಬಣ್ಣಿಸಬಾರದು ಎಂದರ್ಥ. 'ಇದಿರು ಹಳಿಯಲು ಬೇಡ' ಎಂದರೆ ನಿಂದಿಸಿದವರಿಗೆ ಪ್ರತಿಯಾಗಿ ನಿಂದಿಸಬೇಡ ಎಂದು

ಅರ್ಥ. ಈ ಎಲ್ಲ ಭ್ರಮೆಗಳಿಂದ ಅವರನ್ನು ಮುಕ್ತ ಮಾಡಿ ಭಾಷೆಯ ಶುದ್ಧತೆಯನ್ನು ಪುನಃ ಸ್ಥಾಪಿಸಿದ ಶರಣರು 'ನುಡಿದರೆ ಮುತ್ತಿನ ಹಾರದಂತಿರಬೇಕು' ಎಂಬ ವಚನದಲ್ಲಿ ಭಾಷೆಯ ನಿಜಸ್ವರೂಪವನ್ನು ಸ್ಪಷ್ಟಪಡಿಸಿದ್ದಾರೆ. ಶರಣರ 'ಭಾಷಾನೀತಿ' ಎಂಬುದು ಮಾಲಿನ್ಯದಿಂದ ಮಾತನ್ನು ಮುಕ್ತಗೊಳಿಸುವುದು ಮತ್ತು ಅದನ್ನು ಸಾಮಾಜಿಕ ನ್ಯಾಯಕ್ಕಾಗಿ ಬಳಸುವುದಾಗಿದೆ. ಈ ಕುರಿತು ಕಲಬುರ್ಗಿ ಅವರ ವಿಚಾರ ಸರಣಿ ಸ್ವಾಗತಾರ್ಹವಾಗಿದೆ.

ಹೀಗೆ, ಭಾಷೆಯನ್ನು ಕುರಿತು ನಿರ್ವಚಿಸಿದ ಶರಣರು ಕನ್ನಡ ಭಾಷೆಯನ್ನು ಕುರಿತು ಆಡಿದ ಮಾತು, ಮಾಡಿದ ಕಾರ್ಯ ಅಷ್ಟೇ ಮಹತ್ವದ್ದು. ಶರಣರು ಭಾಷಾಕ್ಷೇತ್ರದಲ್ಲಿ ಚಲನಶೀಲತೆ ತಂದರು. ಅವರಿಗಿಂತ ಹಿಂದಿನ ಕವಿಗಳಲ್ಲಿ ಕೆಲವರು ಸಂಸ್ಕೃತದ ಸಂಬಂಧದಿಂದ ಕನ್ನಡವನ್ನು ಜಟಿಲಗೊಳಿಸಿದ್ದರು. ಇನ್ನು ಕೆಲವರು ಅಚ್ಚಕನ್ನಡದಲ್ಲಿಯೇ ಕಾವ್ಯ ರಚಿಸಿ ಅತಿರೇಕದ ನಿಲುವು ತಾಳಿದ್ದರು. ಇವು ಕನ್ನಡ ಭಾಷಾಭಿವೃದ್ಧಿಗೆ ಅಂಟಿಕೊಂಡಿದ್ದ ಮಾಲಿನ್ಯಗಳು. ಈ ಕುರಿತು ಶರಣರು ಪಾದದ ನಿಯತತೆ, ಪ್ರಾಸದ ಕಟ್ಟು, ಸಂಸ್ಕೃತ ಸಮಾಸಗಳ ಹೆಣಿಕೆ, ಪೆಡಸು ಶೈಲಿ ಈ ಎಲ್ಲ ಬಂಧನಗಳಿಂದ ಮುಕ್ತವಾಗಲು ಅವರು ದೇಸಿ ಮಾದರಿಯ ವಚನ ರೂಪವನ್ನು ಬಳಸಿಕೊಂಡರು. ಈ ಕುರಿತು ಶರಣರು ಅನ್ಯಭಾಷಾ ಪದಗಳು ಕನ್ನಡ ಭಾಷೆಯ ಜಾಯಮಾನಕ್ಕೆ ಹೊಂದುತ್ತಿದ್ದರೆ ಅವುಗಳನ್ನು ಧಾರಾಳವಾಗಿ ಬಳಸಿದರು. ಅದಕ್ಕೆ ಅನುಗುಣವಾದ ಕನ್ನಡ ಭಾಷೆಯನ್ನು ಮರುಹುಟ್ಟಿಸಿದರು, ಅರ್ಥವತ್ತಾಗಿ ಬಳಸಿದರು.

ಸೃಜನಶೀಲ ಲೇಖಕರಾದ ವಚನಕಾರರು ಕನ್ನಡ ಭಾಷೆಯನ್ನು ಸಾಹಿತ್ಯ ಭಾಷೆಯನ್ನಾಗಿ ಹೇಗೆ ಬೆಳೆಸಿದ್ದಾರೆ, ಬಳಸಿದ್ದಾರೆ ಎಂಬುದನ್ನು ಕುರಿತು ಕಲಬುರ್ಗಿ ಅವರು ಚರ್ಚಿಸುತ್ತಾರೆ. ಅವರು 'ವಚನಗಳೆಂದರೆ ವಾಕ್ಯರಾಶಿ' ಎನ್ನುತ್ತ ಅವುಗಳ ಮಾದರಿಗಳ ಬಗ್ಗೆ ತಜ್ಞರ ಗಮನ ಸೆಳೆದಿದ್ದಾರೆ ಎಂಬುದು ಮುಖ್ಯವಾದ ಸಂಗತಿಯಾಗಿದೆ.

ಶರಣರು ಲಯಬದ್ಧವಾದ ಪದರಚನೆಯನ್ನು ಬಳಸಿದ್ದಾರೆ. ವಚನಗಳ ಆದಿಯಲ್ಲಿ ಕ್ರಿಯಾಪದಗಳು (ಮುರಿ, ಉರಿ, ಹಿಡಿ ಮುಂತಾದುವು) ಬಳಕೆಯಾಗುವುದರಿಂದ ಅದರಿಂದಾಗುವ ಪರಿಣಾಮ ಅನನ್ಯವಾದುದು. ಅಲ್ಲದೆ ವಚನಕಾರರು ತಮ್ಮ ರಚನೆಗಳಲ್ಲಿ ಆಡುಭಾಷೆಯ ಎಲ್ಲ ಕಾಕುಗಳನ್ನು ಬಳಸಿಕೊಂಡಿದ್ದಾರೆ. ಸಂದರ್ಭಕ್ಕೆ ತಕ್ಕಂತೆ ಉಚ್ಚಾರದಲ್ಲಿ ವ್ಯತ್ಯಾಸವಾದಂತೆ ಅರ್ಥದಲ್ಲಿಯೂ ವ್ಯತ್ಯಾಸವಾಗುತ್ತದೆ. ಕೆಲವು ವೇಳೆ ಪ್ರಶ್ನಾರ್ಥಕ ಚಿಹ್ನೆಯಿಟ್ಟರೆ ಒಂದು ಅರ್ಥ, ಉದ್ಗಾರ ಚಿಹ್ನೆಯಿಟ್ಟರೆ ಇನ್ನೊಂದು ಅರ್ಥ. ಉದಾ.

- ಎತ್ತಣ ಮಾಮರ ಎತ್ತಣ ಕೋಗಿಲೆ
ಎತ್ತಣಿಂದೆತ್ತ ಸಂಬಂಧವಯ್ಯ?

- ಎತ್ತಣ ಮಾಮರ ಎತ್ತಣ ಕೋಗಿಲೆ
  ಎತ್ತಣಿಂದೆತ್ತ ಸಂಬಂಧವಯ್ಯ!
- ಎತ್ತಣ ಮಾಮರ ಎತ್ತಣ ಕೋಗಿಲೆ
  ಎತ್ತಣಿಂದೆತ್ತ ಸಂಬಂಧವಯ್ಯ

ಉಚ್ಚಾರದಲ್ಲಿ ಕಂಡುಬರುವ ಧ್ವನಿಯ ಏರಿಳಿತವನ್ನು ಶ್ರುತಿ ಎನ್ನುವರು. ಧ್ವನಿಯು ನಾದಶಕ್ತಿಯ ಕಂಪನದ ತೀವ್ರತೆಯೇ ಶ್ರುತಿ. ಸ್ವರತಂತುಗಳ ಕಂಪನದಿಂದ ಶ್ರುತಿ ಉಂಟಾಗುತ್ತದೆ. ಶ್ರುತಿ ಧ್ವನಿಗಳ ಹಂತದಲ್ಲಿ ಕಾಣಿಸಿಕೊಳ್ಳದೆ, ಪದರಚನೆಯ ಹಂತದಿಂದಲೂ ಗೋಚರಿಸುತ್ತದೆ. ಧ್ವನಿಯನ್ನು ಏರಿಸಿ ಉದಾತ್ತ ಶ್ರುತಿಯನ್ನು ನಿರ್ಮಾಣ ಮಾಡಬಹುದು. ಇದು ಸಾಮಾನ್ಯವಾಗಿ ಪ್ರಶ್ನೆಗಳೊಡನೆ ಬರುತ್ತದೆ. ಧ್ವನಿಯನ್ನು ಕ್ರಮಕ್ರಮವಾಗಿ ಇಳಿಸುತ್ತ ಅನುದಾತ್ತ ಶ್ರುತಿಯನ್ನು ನಿರ್ಮಿಸಬಹುದು. ಇದು ಸಾಮಾನ್ಯವಾಗಿ ಉದ್ಗಾರಗಳೊಡನೆ ಬರುತ್ತದೆ. ನಾದಕಂಪನ ಸಾಮಾನ್ಯವಾದ ರೀತಿಯಲ್ಲಿ ಇರುವುದನ್ನು ಸ್ವರಿತ ಶ್ರುತಿ ಎನ್ನುತ್ತಾರೆ. ಇದು ಹೇಳಿಕೆಗಳನ್ನು ನೀಡುತ್ತದೆ. ಸಾಮಾನ್ಯವಾಗಿ ಈ ಮೂರು ರೀತಿಯ ಶ್ರುತಿಗಳನ್ನು ವಚನಗಳಲ್ಲಿ ಗುರುತಿಸಬಹುದು. ಶ್ರುತಿಯ ಆ ವಿಧಗಳು ಪದಪುಂಜಗಳನ್ನು ವಿಂಗಡಿಸಲು, ಪದಪುಂಜದ ಕೇಂದ್ರ ಸೂಚಿಸಲು ಭಾಷಾಶಾಸ್ತ್ರಜ್ಞರಿಗೆ ನೆರವಾಗುತ್ತವೆ. ವಚನ ಭಾಷೆಯಲ್ಲಿ ಪದ ಇಲ್ಲವೇ ಪದಪುಂಜಗಳು ಸಮಪ್ರಮಾಣದಲ್ಲಿದ್ದು ಲಯಾತ್ಮಕವಾಗಿವೆ. ಉದಾ. ನೀನೊಲಿದರೆ ಕೊರಡು ಕೊನರುವುದಯ್ಯ ನೀನೊಲಿದರೆ ಬರಡು ಹಯನಹುದಯ್ಯ. ಇಲ್ಲಿ ಕೊರಡು-ಬರಡು, ಕೊನರುವುದಯ್ಯ-ಹಯನಹುದಯ್ಯ ಮುಂತಾದ ರಚನೆಗಳು ಅರ್ಥಪೂರ್ಣವಾಗಿವೆ. 'ಛಲಬೇಕು ಶರಣಂಗೆ ಪರಧನನೊಲ್ಲೆನೆಂಬ' ಈ ವಚನವಲ್ಲಿ 'ಛಲಬೇಕು ಶರಣಂಗೆ' ಎಂಬ ಪದಪುಂಜವೇ ಪುನರಾವರ್ತನೆಯಾಗಿದೆ. ಇದರಿಂದ ಅವಧಾರಣೆ ಪ್ರಾಪ್ತವಾಗಿ ಪರಿಣಾಮ ಆಳವಾಗುತ್ತದೆ. ವಚನಗಳಲ್ಲಿ ಹಿತಮಿತವಾದ ಪ್ರಾಸವಿದೆ. ಉದಾ. ಕಳಬೇಡ-ಕೊಲಬೇಡ, ಹುಸಿಯ ನುಡಿಯಲು ಬೇಡ. ಅಂತ್ಯದ 'ಡ' ಆವೃತ್ತವಾಗಿ ವಚನ ಶಿಲ್ಪವೇ ಗಮನಾರ್ಹವಾಗಿದೆ.

ವಚನಕಾರರು ನಡೆಸಿದ ಸಾಮಾಜಿಕ ಆಂದೋಲನಕ್ಕೆ ಅವರ ಭಾಷಾಪ್ರಯೋಗವೇ ತುಂಬ ಸಹಕಾರಿಯಾಯಿತು. ಕನ್ನಡ ಭಾಷೆಯ ಚಲನಶೀಲತೆಯನ್ನು ವಚನಕಾರರು ಸರಿಯಾಗಿಯೇ ಗ್ರಹಿಸಿದ್ದಾರೆ. ವಚನಗಳಲ್ಲಿ ಏಕತಾನತೆಯನ್ನು ಮುರಿಯುವುದಕ್ಕಾಗಿ ಹಲವಾರು ತಂತ್ರಗಳು ಬಳಕೆಯಾಗಿವೆ. ಆತ್ಮೀಯ ಸಂಭಾಷಣೆ, ಪ್ರಶ್ನೋತ್ತರಗಳ ವಿಧಾನ, ಬರಿಯ ಪ್ರಶ್ನೆಗಳನ್ನು ಹಾಕುತ್ತ ಉತ್ತರಗಳನ್ನು ಧ್ವನಿಸುವ ಬಗೆ, ಎಲೆವ್ವೋ, ಅಣ್ಣಗಳಿರಾ, ನೋಡಾ, ಅಯ್ಯೋ, ಭೋ ಮೊದಲಾದ ಸಂಬೋಧನಾ ರೂಪಗಳ ಬಳಕೆ, ಸಹಜವಾಗಿ ಬರುವ ಪ್ರಾಸ, ಗಾದೆ, ನುಡಿಗಟ್ಟುಗಳು, ಶಬ್ದಗಳ ಪುನರುಕ್ತಿತಂತ್ರ, ಶ್ಲೇಷೆ, ಸ್ವಭಾವೋಕ್ತಿಗಳ ಬಳಕೆ - ಇವು ವಚನ ರಚನೆಯ ವೈಶಿಷ್ಟ್ಯಗಳು ಎನ್ನಬಹುದು.

ಸವೆದ ದಾರಿಯಾಗಿದ್ದ ಸಿದ್ಧಶೈಲಿಯನ್ನು ಬಿಟ್ಟು ಮುಕ್ತಗೇಯ ರಚನೆಗಳನ್ನು ಅವರು ಸೃಷ್ಟಿಸಿಕೊಂಡರು. ಅದಕ್ಕೆ ಆಡುಮಾತಿನ ಧಾಟಿ ಅವರಿಗೆ ಪ್ರಾಪ್ತವಾಯಿತು. ಅದುವೇ ಭಾಷಾಕ್ಷೇತ್ರದಲ್ಲಿ ವಚನಕಾರರು ಮಾಡಿದ ವೈಚಾರಿಕ ಕ್ರಾಂತಿಯಾಗಿದೆ. ಹೀಗೆ, ವಚನಕಾರರ ಭಾಷಾ ಪ್ರಯೋಗಗಳ ಹಲವು ಆಯಾಮಗಳು ಕಲಬುರ್ಗಿ ಅವರು ಗುರುತಿಸಿದ್ದಾರೆ.

'ಶಬ್ದಮಣಿದರ್ಪಣ' ಹಳಗನ್ನಡ ಭಾಷೆಯ ಅಧಿಕೃತ ವ್ಯಾಕರಣ ಗ್ರಂಥವಾಗಿದೆ. ಅದರ ಸ್ಥಾನ ಕೇವಲ ಕನ್ನಡದಲ್ಲಿ ಅಷ್ಟೇ ಅಲ್ಲ, ಭಾರತೀಯ ವ್ಯಾಕರಣ ಕ್ಷೇತ್ರದಲ್ಲಿಯೇ ಹಿರಿದಾಗಿದೆ. ಅಂತಹ ವೈಯಾಕರಣಿ ಕೇಶಿರಾಜ, ಕನ್ನಡ ಭಾಷೆಯ ಹಿಂದಿನ ವ್ಯಾಕರಣ ಗ್ರಂಥಗಳೆಲ್ಲವನ್ನು ಆಳವಾಗಿ ಅಭ್ಯಸಿಸಿ, ತನ್ನ ಕಾಲದವರೆಗೆ ಬೆಳೆದು ಬಂದ ಸಾಹಿತ್ಯವನ್ನು ಸೂಕ್ಷ್ಮವಾಗಿ ಅವಲೋಕಿಸಿ, ಶಬ್ದಮಣಿದರ್ಪಣವನ್ನು ರಚಿಸಿರುವನು. ಭಾಷೆಯ ಮೂಲತತ್ವವನ್ನು, ಅದರಲ್ಲಿ ತೋರುವ ವ್ಯತ್ಯಾಸಗಳನ್ನು ಗುರುತಿಸಿ, ಅವನ್ನು ಕ್ರೋಡೀಕರಿಸಿ ಸೂತ್ರರೂಪದಲ್ಲಿ ಹೇಳುವ ಶಕ್ತಿ ಕೇಶಿರಾಜನಿಗೆ ಹಸ್ತಗತವಾಗಿದೆ. ಆತನ ಸೂತ್ರಗಳು ನಮ್ಮ ವ್ಯಾಕರಣ ಕ್ಷೇತ್ರದಲ್ಲಿಯೇ ಅಪೂರ್ವವೆನಿಸಿರುವುದರಿಂದ ಅವಕ್ಕೆ ವೃತ್ತಿ, ಟೀಕೆ, ಟಿಪ್ಪಣಿಗಳನ್ನು ಬರೆಯುವುದು ಅವಶ್ಯವೆನಿಸಿದೆ. ಕೇಶಿರಾಜನ ಈ ಸೂತ್ರಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದ ವಿರಳ ವಿದ್ವಾಂಸರಲ್ಲಿ ಕಲಬುರ್ಗಿ ಅವರೂ ಒಬ್ಬರಾಗಿದ್ದಾರೆ.

ಎಸ್. ತಿಮ್ಮಣ್ಣ ಭಟ್ಟ ಎಂಬವರು ಶಬ್ದಮಣಿದರ್ಪಣದ ಕ್ಷಳಸೂತ್ರ ಕುರಿತು 'ಕುಳ-ಕ್ಷಳ ನಿಯಮ' ಎಂಬ ಲೇಖನವನ್ನು ಬರೆದಿದ್ದಾರೆ. ಅಲ್ಲಿ ಅವರು ಸೂತ್ರ, ವೃತ್ತಿಗಳನ್ನು ವಿಭಜಿಸಿದ ರೀತಿ, ಎತ್ತಿದ ಪ್ರಶ್ನೆ, ಕೊಟ್ಟ ನಿರ್ಣಯಗಳು ಕುತೂಹಲಕಾರಿಯಾಗಿವೆ. ಕಲಬುರ್ಗಿ ಅವರು **ಕ್ಷಳಸೂತ್ರ** ಎಂಬ ಲೇಖನದಲ್ಲಿ ಭಟ್ಟರ ನಿಲುವುಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿದ್ದಾರೆ. ಭಟ್ಟರು ಕ್ಷಳ ಸೂತ್ರದ ಸೂತ್ರ-ವೃತ್ತಿ-ಪ್ರಯೋಗ ಎಲ್ಲವನ್ನು ತುಂಡು ತುಂಡು ಮಾಡಿ ಅರ್ಥನಿರ್ಣಯಿಸಲು ಹೊರಟು ಎಡವಿದ್ದಾರೆ. ಕೇಶಿರಾಜನ ಸೂತ್ರ-ವೃತ್ತಿ-ಪ್ರಯೋಗದಲ್ಲಿ ಸಾಮ್ಯತೆ ಇಲ್ಲವೆಂದು, ಅವನು ಕ್ರಮತಪ್ಪಿದ್ದಾನೆಂದು ಭಟ್ಟರ ಆಕ್ಷೇಪಣೆ. ಆದರೆ ಆ ಸೂತ್ರ-ವೃತ್ತಿ-ಪ್ರಯೋಗಗಳಲ್ಲಿ ಕೇಶಿರಾಜ ಕ್ರಮತಪ್ಪಿಲ್ಲ ಎಂಬುದು ಕಲಬುರ್ಗಿಯವರ ವಾದ.

ಸಂಸ್ಕೃತ ಶಬ್ದಗಳು ಕನ್ನಡದಲ್ಲಿ ಬಳಕೆಯಾಗುವಾಗ ಅವುಗಳಲ್ಲಿ ಇರಬಹುದಾದ ಸ್ವರಮಧ್ಯ 'ಲ'ಕಾರವು ವಿಕಲ್ಪವಾಗಿ 'ಳ'ಕಾರವಾಗುವುದು. ಕಮಲ-ಕಮಳ, ಜಲ-ಜಳ ಎಂಬ ಯುಗ್ಮಗಳನ್ನು ನೋಡಬಹುದು. ಹೀಗೆ ಸಂಸ್ಕೃತ ಶಬ್ದಗಳ 'ಲ'ಕಾರದ ಸ್ಥಾನದಲ್ಲಿ ವಿಕಲ್ಪವಾಗಿ ಬರುವ 'ಳ'ಕಾರಕ್ಕೆ ಕ್ಷಳ ಎಂದು ಹೆಸರು. ಅಚ್ಚಗನ್ನಡ ಶಬ್ದಗಳಲ್ಲಿ ಕಂಡುಬರುವ 'ಳ'ಕಾರಕ್ಕೆ 'ಕುಳ' ಎಂದು ಹೆಸರು. ಉದಾ. ಕಿಳಿಜು,

ಓಕುಳಿ ಎಂದು ಶಬ್ದಗಳಲ್ಲಿರುವ 'ಳ'ಕಾರ. ಈ ಕುಳಕ್ಕೆ ವಿಕಲ್ಪವಾಗಿ 'ಲ'ಕಾರ ಬರುವಂತಿಲ್ಲ. ಕುಳದ ಪ್ರಾಸ ಸಂದರ್ಭದಲ್ಲಿ ಸಂಸ್ಕೃತ ಶಬ್ದಗಳಲ್ಲಿರುವ 'ಲ'ಕಾರಕ್ಕೆ ಪರ್ಯಾಯವಾಗಿರುವ ಕ್ಷಳವಲ್ಲದ ಬೇರೆ ಯಾವುದನ್ನೂ ವಿಕಲ್ಪವಾಗಿ ಹೇಳುವಂತಿಲ್ಲ. ಈ ರೀತಿ ವರ್ತಿಸುತ್ತಿರುವ ಕ್ಷಳವನ್ನು ಮೇಲಿನ ಸೂತ್ರದಲ್ಲಿ ಹೇಳಿದ್ದೇನೆ-ಎಂಬುದು ಕೇಶಿರಾಜನ ಅಭಿಪ್ರಾಯ. ಆದರೆ ಇದನ್ನು ಅರ್ಥ ಮಾಡಿಕೊಳ್ಳದೆ ಭಟ್ಟರು ಕೆಳಗಿನಂತ ಬೇರೆ ರೀತಿ ಅನ್ವಯ ಮಾಡಿ ಇಲ್ಲದ ಪ್ರಶ್ನೆ ಹುಟ್ಟಿಸಿದ್ದಾರೆ.

ಭಟ್ಟರ ಅರ್ಥ ನಿರ್ಣಯ

ಅನ್ವಯ	ಅರ್ಥ
೧. ಕುಳದ ನಿಯಾಮದೊಳೆಂದುಂ ಲಾಕ್ಷರ ವಿಕಲ್ಪಮಿಲ್ಲ	ಕುಳದ ನಿಯಮದಲ್ಲಿ ಯಾವಾಗಲೂ 'ಲ' ಎಂಬ ಅಕ್ಷರ ವಿಕಲ್ಪವಿಲ್ಲ.
೨. ವಿಕಲ್ಪಂ ಕ್ಷಳಕ್ಕೆ	ಕ್ಷಳದ ನಿಯಮದಲ್ಲಿ ಯಾವಾಗಲೂ 'ಲ' ಎಂಬ ಅಕ್ಷರ ವಿಕಲ್ಪವಿದೆ.
೩. ಅಲ್ಲದೆ	ಅದೂ ಅಲ್ಲದೆ.
೪. ಸಂಸ್ಕೃತದೊಳ್ ಆ 'ಲ'ಕಾರಕ್ಕೆ ಕ್ಷಳಂ ಇಲ್ಲ	ಸಂಸ್ಕೃತ ಭಾಷೆಯಲ್ಲಿ 'ಲ'ಕಾರಕ್ಕೆ ಕ್ಷಳದ ಪ್ರಯೋಗವಿಲ್ಲ.
೫. ಅದಱಿಂ ಪೇೞ್ದೆಂ ಕ್ಷಳನಂ	ಆದ್ದರಿಂದ ನಾನು ಇಲ್ಲಿ ಕನ್ನಡದ ಕ್ಷಳದ ಹೇಳಿದೆನು.

ಮೇಲಿನ ಅನ್ವಯವನ್ನು ನೋಡಿದರೆ ಭಟ್ಟರು ವೃತ್ತಿಯನ್ನು ಲಕ್ಷಿಸದೆ ಕೇವಲ ಸೂತ್ರವನ್ನು ಗಮನಿಸಿದ್ದಾರೆಂದು ತೋರುತ್ತದೆ. ಅರ್ಥಸ್ಪಷ್ಟತೆಗಾಗಿ ಅನ್ವಯ ಮಾಡಿ ಕೊಳ್ಳುವಲ್ಲಿ ಒಂದು ವಾಕ್ಯವನ್ನು ಪೂರ್ತಿಯಾಗಿ ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ಹಾಗೆ ಮಾಡದ ಭಟ್ಟರು "ಕುಳದ ನಿಯಾಮದೊಳೆಂದು ಲಾಕ್ಷರ ವಿಕಲ್ಪಂ ಇಲ್ಲ" ಎಂದು ಅನ್ವಯ ಹೊಂದಿಸಿಕೊಂಡು ಕುಳದ ನಿಯಮ ಸ್ಥಾಪಿಸಿದ್ದಾರೆ. ಇದರಿಂದ ಆಗಿನ ಕಾಲದಲ್ಲಿ ಕುಳವು ವಿಕಲ್ಪಗಾಗಿ 'ಲ'ಕಾರದಂತೆ ಉಚ್ಚರಿಸಲ್ಪಡುತ್ತಿತ್ತೆ? ಎಂಬ ಸಂದೇಹ ಉದ್ಭವಿಸುತ್ತದೆ. ಹೀಗಾಗಿ ಇಲ್ಲಿ 'ಕ್ಷಳಕ್ಕೆ' ಎಂಬುದನ್ನು ಸೇರಿಸಿಕೊಂಡರೆ "ಕುಳದ ನಿಯಮಾದೊಳೆಂದುಂ ಕ್ಷಳಕ್ಕೆ ಲಾಕ್ಷರ ವಿಕಲ್ಪ ಇಲ್ಲ" ಎಂಬ ವೃತ್ತಿ ಭಾಗ ಸರಿಯಾಗಿ ಹೊಂದಿಕೊಂಡು, ಸೂತ್ರ ವೃತ್ತಿಗಳಲ್ಲಿ ಸಮನ್ವಯ ಸಾಧ್ಯವಾಗುತ್ತದೆ. ಇದರರ್ಥ ಕುಳ ಪ್ರಾಸಕ್ಕೆ ಕ್ಷಳಾಕ್ಷರವನ್ನಲ್ಲದೆ ವಿಕಲ್ಪವಾಗಿಯಾದರೂ ಲಾಕ್ಷರವನ್ನು ಪ್ರಯೋಗಿಸ ಕೊಡದು. ಇದೇ ರೀತಿ ಭಟ್ಟರ ಎಲ್ಲ ಅನ್ವಯ ಮತ್ತು ಅರ್ಥಗಳನ್ನು ಕಲಬುರ್ಗಿ ಅವರು ಸಕಾರಣವಾಗಿಯೇ ನಿರಾಕರಿಸಿ, ಸೂತ್ರ-ವೃತ್ತಿ-ಅರ್ಥಗಳನ್ನು ಹೀಗೆ ಸಮೀಕರಿಸಿದ್ದಾರೆ.

ಕಲಬುರ್ಗಿಯವರ ಅರ್ಥ ನಿರ್ಣಯ

ಸೂತ್ರ	ವೃತ್ತಿ
೧. ಕುಳದ ನಿಯಾಮದೊಳೆಂದುಂ ಲಾಕ್ಷರ ವಿಕಲ್ಪಮಿಲ್ಲ	ಕುಳ ಪ್ರಾಸವಾಗಿ ಪೇೞ್ದ ಕನ್ನಡಗಬ್ಬಂ ಕ್ಷಳನಂ ಸೆಱಗೆಯ್ವುದಾಗಿ ಲಕಾರಮಂ ವಿಕಲ್ಪ ಮಾಡಬಾರದು ['ಲ'ಕಾರ ಪ್ರಾಸ ಮಾಗಿ ಪೇೞ್ದ ಕನ್ನಡ ಗಬ್ಬದೊಳ್ ಕ್ಷಳನಂ ವಿಕಲ್ಪ ದಿನಿರಿಸಲ್ಬಾರದುಮಾಗಿಯದುವು ಮಾಗದು].
೨. ವಿಕಲ್ಪಂ ಕ್ಷಳನಲ್ಲದಿಲ್ಲ ಸಂಸ್ಕೃತ ದೊಳಾ 'ಲ'ಕಾರಕ್ಕೆ [ಅನ್ವಯ: ಸಂಸ್ಕೃತದೊಳ್ ಆ 'ಲ'ಕಾರಕ್ಕೆ ಕ್ಷಳಂ ವಿಕಲ್ಪಂ ಅಲ್ಲದೆ ಇಲ್ಲ]	ಕ್ಷಳನೆಂಬುದಿಲ್ಲದೆ ಸಂಸ್ಕೃತ ಪದದ 'ಲ' ಕಾರಕ್ಕೆ ವಿಕಲ್ಪಮಂ ಪೇಳಲ್ಬಾರದು.
೩. ಪೇೞ್ದೆಂನದರಿಂ ಕ್ಷಳನಂ	ಆಗಿ ಅದಱಿಂ ಕ್ಷಳನನಿದಱೊಳೆ (ಮೇಲಿನ ವರ್ಣಮಾಲೆಯಲ್ಲಿ) ಬೆರಸಿ ಪೇೞ್ದಿಂ.

ಕಲಬುರ್ಗಿ ಅವರು ಆ ಸೂತ್ರವನ್ನು ಸರಿಯಾಗಿ ಅನ್ವಯ ಮಾಡಿಕೊಂಡು, ಅರ್ಥವನ್ನು ಸರಿಯಾಗಿಯೇ ಹೀಗೆ ಹೇಳಿದ್ದಾರೆ: ಪ್ರಾಸ ವಿಷಯದಲ್ಲಿ ಕುಳಕ್ಕೆ ಕ್ಷಳವಲ್ಲದೆ 'ಲ'ಕಾರದ ವಿಕಲ್ಪವಿಲ್ಲ. 'ಲ'ಕಾರಕ್ಕೆ 'ಲ'ಕಾರವಲ್ಲದೆ ಕ್ಷಳದ ವಿಕಲ್ಪವಿಲ್ಲ. ಸಂಸ್ಕೃತ ಪದದ 'ಲ'ಕಾರಕ್ಕೆ ವಿಕಲ್ಪವಾಗಿ (ಸಂಸ್ಕೃತ ಮತ್ತು ಸಂಸ್ಕೃತೇತರ ಭಾಷೆಗಳಲ್ಲಿ) ಕ್ಷಳ ಬರುತ್ತದೆ. ಇದಕ್ಕಾಗಿ ಆ ಕ್ಷಳವನ್ನು ಒಂದು ವರ್ಣವೆಂದು ಗ್ರಹಿಸಿ ಮೇಲಿನ ವರ್ಣಮಾಲೆಯಲ್ಲಿ ಹೇಳಿದೆನು ಎಂದಿದ್ದಾನೆ ಕೇಶಿರಾಜ. ಹೀಗೆ, ಈವರೆಗೆ ತಪ್ಪಾಗಿ ಅರ್ಥೈಸುತ್ತ ಬಂದಿದ್ದ ದರ್ಪಣದ ಕ್ಷಳ ಸೂತ್ರಕ್ಕೆ ಮೊದಲ ಸಲ ಸರಿಯಾದ ಅರ್ಥ ಕಲಬುರ್ಗಿ ಅವರು ನಿರೂಪಿಸಿದ್ದಾರೆ. ಇದೇ ಮಾದರಿಯಲ್ಲಿಯೇ ದರ್ಪಣ ಸೂತ್ರ-ವೃತ್ತಿ-ಪ್ರಯೋಗಗಳು ಪರಿಷ್ಕರಣವಾದರೆ ಅಭ್ಯಾಸಿಗಳಿಗೆ ಪ್ರಮಾಣಭೂತವಾದ ಆವೃತ್ತಿ ಸಿದ್ಧವಾಗುತ್ತದೆ ಎಂಬುದರ ಬಗ್ಗೆ ಸಂದೇಹವಿಲ್ಲ. ಪಾಠಪರಿಷ್ಕರಣ ಕುರಿತು ಅವರ ಆಳವಾದ ಅಧ್ಯಯನ ಈ ಲೇಖನದ ಉದ್ದಕ್ಕೂ ಕೆಲಸ ಮಾಡಿದೆ.

ಕೇಶಿರಾಜ, ತದ್ಧಿತ ಪ್ರಕರಣದಲ್ಲಿ ಪುರುಷರಿಗೆ ಸಂಬಂಧಿಸಿದ ಪ್ರತ್ಯಯಗಳು ೨೬. ಸ್ತ್ರೀಯರಿಗೆ ಸಂಬಂಧಿಸಿದ ಪ್ರತ್ಯಯಗಳು ೩-ಹೀಗೆ ಒಟ್ಟು ೨೯ ತದ್ಧಿತ ಪ್ರತ್ಯಯಗಳನ್ನು ಹೇಳಿದ್ದಾನೆ ಎನ್ನುತ್ತ ಕಲಬುರ್ಗಿ ಅವರು **ಶಬ್ದಮಣಿದರ್ಪಣದ ತದ್ಧಿತ ಪ್ರಕರಣ** ಎಂಬ ಲೇಖನದಲ್ಲಿ ಮೊದಲು ಅವುಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಮುಂದುವರಿದು, ಅವು ಒಂದರೊಳಗೊಂದು ಅಂತರ್ಗತವಾಗುತ್ತಿರುವುದನ್ನು ಗಮನಿಸಿ, ಕೇಶಿರಾಜ ಅಸ್ತವ್ಯಸ್ತ

ಪಟ್ಟಿಯನ್ನು ವ್ಯಸ್ತಗೊಳಿಸಿ ಕೆಲವೇ ಗುಂಪುಗಳಾಗಿ ಮಾಡಿರುವುದು ತುಂಬ ವೈಜ್ಞಾನಿಕವಾಗಿದೆ. ಆದರೆ ದರ್ಪಣದ ತದ್ಧಿತ ಪ್ರಕರಣವನ್ನು ಕನ್ನಡ ಪದ ರಚನೆಯ ನೆಲೆಯಲ್ಲಿ ವಿಶ್ಲೇಷಣೆ ಮಾಡಬಹುದಿತ್ತು.

ಶಬ್ದಮಣಿದರ್ಪಣವನ್ನು ಕಳೆದ ಏಳು ನೂರು ವರ್ಷಗಳಿಂದ ಕನ್ನಡಿಗರು ಶ್ರದ್ಧೆಯಿಂದ ಅಭ್ಯಾಸ ಮಾಡುತ್ತ ಬಂದಿದ್ದಾರೆ. ಅದರ ಪರಿಣಾಮವಾಗಿ ಕೆಲವರು ಅದಕ್ಕೆ ವ್ಯಾಖ್ಯಾನ, ಟೀಕೆ, ಅನ್ವಯ ಇತ್ಯಾದಿ ಸಹಾಯಕ ಸಾಹಿತ್ಯವನ್ನು ನಿರ್ಮಿಸಿದರು. **ಶಬ್ದಮಣಿದರ್ಪಣದ ಸಮುಚ್ಚಯಗಳು** ಅಂತಹ ಸಹಾಯಕ ಸಾಹಿತ್ಯವರ್ಗಕ್ಕೆ ಸೇರುತ್ತದೆ. ಕರ್ನಾಟಕ ವಿಶ್ವವಿದ್ಯಾಲಯದ ವಚನ ವಾಙ್ಮಯದ ಸಂಶೋಧನ ವಿಭಾಗದಲ್ಲಿ ಶಬ್ದಮಣಿದರ್ಪಣದ ಏಕೈಕ ತಾಳೆ ಪ್ರತಿಯಿದೆ. ಕೊನೆಯ ಮೂರು ಗರಿಗಳ ಮೇಲೆ ಸಮುಚ್ಚಯಗಳ ವಿವರಣೆಯಿದೆ. ಅದರ ಕರ್ತೃವಿನ ಹೆಸರು ಮಾತ್ರ ಇಲ್ಲ. ಕಲಬುರ್ಗಿ ಅವರು ಅಪ್ರಕಟಿತವಾದ ಆ ಹಸ್ತಪ್ರತಿಯನ್ನು ಪರಿಶೀಲಿಸಿ ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ. ಅಲ್ಲಿ ಬಳಕೆಯಾದ ಸಮುಚ್ಚಯಗಳ ಬಳಕೆ ಹೀಗಿದೆ. ೧. ಅಕ್ಕರಮುಂ ವರ್ಣಮು ಎಂಬ ಸಮುಚ್ಚಯದಿಂದ 'ಲ'ಕಾರಕ್ಕೆ ಕ್ಷಳವಿಕಲ್ಪಮಿಲ್ಲ (ಸೂತ್ರ-೧೫) ೨. ತಿಳಿದೇಶಿಯಮುಮೆಂಬ ಸಮುಚ್ಚಯದಿಂ ಱಟಿ, ಜ, ಕುಳ, ಎ, ಒ ಯೆಂಬಲ್ಲಿ ಕ್ಷಳನುಮುಂಟು (ಸೂತ್ರ-೪೩). ಇಂತಹ ಸಮುಚ್ಚಯಗಳಿಗೆ ಇರುವ ಅರ್ಥ ವಿಶೇಷತೆಯನ್ನು ವಿವರಿಸಲಾಗಿದೆ. ದರ್ಪಣದ ಸಮುಚ್ಚಯಗಳಲ್ಲಿ ಮುಚ್ಚಿಹೋಗಿದ್ದ ವಿಷಯವನ್ನು ಅಭ್ಯಾಸಿಯೊಬ್ಬ ಜಿಜ್ಞೆ ಬರೆದಿದ್ದಾನೆ. ಕಲಬುರ್ಗಿ ಅವರು ಅದನ್ನು ಶಾಸ್ತ್ರೀಯವಾಗಿ ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಕೇಶಿರಾಜನ ಸಮುಚ್ಚಯಗಳನ್ನು ಅಧ್ಯಯನ ಮಾಡಲಿಕ್ಕೆ ಅದು ಮಹತ್ವದ ಆಕರವಾಗುತ್ತದೆ.

ಕಲಬುರ್ಗಿ ಅವರು **ಶಬ್ದಮಣಿದರ್ಪಣದ ಅರ್ಥವೃತ್ತಿ ಮತ್ತು ಅನ್ವಯವೃತ್ತಿ** ಎಂಬ ಲೇಖನದಲ್ಲಿ ದರ್ಪಣದ ವೃತ್ತಿಗಳ ಲಕ್ಷಣ ಮತ್ತು ಸ್ವರೂಪವನ್ನು ಕುರಿತು ವಿವೇಚಿಸಿದ್ದಾರೆ. ಈಗ ತಿಳಿದ ಮಟ್ಟಿಗೆ ದರ್ಪಣಕ್ಕೆ ಬರೆಯಲಾದ ವೃತ್ತಿ-ವ್ಯಾಖ್ಯಾನಗಳು ನಾಲ್ಕು. ಮದ್ರಾಸ ಆವೃತ್ತಿಯು ಕೇಶಿರಾಜನೇ ಮೂಲವೃತ್ತಿ ಬರೆದನೆಂದೂ ಇನ್ನೊಂದು ವೃತ್ತಿಯನ್ನು ಕಂಸಪ್ಪ ಎಂಬುವನು ಬರೆದನೆಂದೂ ಸ್ಪಷ್ಟಪಡಿಸಿದೆ. ಡಿ.ಕೆ. ಭೀಮಸೇನ ರಾವ್ ಅವರು ತಮ್ಮ ಆವೃತ್ತಿಯ ವ್ಯಾಖ್ಯಾನಕಾರ ಕಂಸಪ್ಪನಿಂದ ಭಿನ್ನವೆಂದು ಅಭಿಪ್ರಾಯ ತಾಳಿದ್ದಾರೆ. ಮದ್ರಾಸ ದರ್ಪಣನಕ್ಕೆ ಲಿಂಗಣಾರಾಧ್ಯನೆಂಬುವನು ವೃತ್ತಿ ಬರೆದಿರುವ ವಿಷಯ ಸಾಹಿತ್ಯಲೋಕಕ್ಕೆ ಪರಿಚಿತವಾಗಿದೆ. ಈ ನಾಲ್ಕರಲ್ಲಿ ಕಂಸಪ್ಪನ ವ್ಯಾಖ್ಯಾನ ಉಪಲಬ್ಧವಿಲ್ಲ. ಕೇಶಿರಾಜನ ವೃತ್ತಿ ಮತ್ತು ಲಿಂಗಣಾರಾಧ್ಯರ ವೃತ್ತಿಗಳನ್ನು ಈ ಲೇಖನದಲ್ಲಿ ಗಮನಿಸಿ, ಕೇಶಿರಾಜನದು 'ಅರ್ಥವೃತ್ತಿ', ಲಿಂಗಣಾರಾಧ್ಯರ 'ಅನ್ವಯವೃತ್ತಿ' ಎಂದು ಕಲಬುರ್ಗಿ ಅವರು ಸರಿಯಾಗಿಯೇ ಹೇಳಿದ್ದಾರೆ. ಇದರಿಂದಾಗಿ ವೃತ್ತಿಗೆ ಸಂಬಂಧಿಸಿದ ಸಮಸ್ಯೆ ಪರಿಹಾರವಾಗಿ, ಖಚಿತ ನಿಲುವಿಗೆ ಬಂದಿತು.

ಪ್ರಾಸಚ್ಛಂದೋನ್ವಯ ವಿ
ನ್ಯಾಸದಿನಂತಿಂತು ಶಬ್ದಮಿರ್ಕುಂ ವೃತ್ತಿ
ವ್ಯಾಸಂ ತದ್ವ್ಯಾಕುಳಮೆಂ
ದಾ ಸೂತ್ರಕ್ಕರ್ಥವೃತ್ತಿ ವರ್ತಿಸೆ ಪೇೞ್ವೆಂ (ಸೂತ್ರ-೬)

ಇಲ್ಲಿ ಸೂತ್ರಕ್ಕರ್ಥವೃತ್ತಿ ವರ್ತಿಸೆ ಪೇೞ್ವೆಂ' ಎಂಬ ಮಾತಿನ ಮೂಲಕ ಕೇಶಿರಾಜನು ತನ್ನದು 'ಅರ್ಥವೃತ್ತಿ' ಎಂದು ಸ್ಪಷ್ಟಪಡಿಸಿದ್ದಾನೆ. ಇದು 'ಸಂಸ್ಕೃತ ಕರ್ಣಾಟಕ ಭಾಷಾವಿಶಾರದ ಶ್ರೀ ವೀರಶೈವ ಲಿಂಗಣಾರಾಧ್ಯ ವಿರಚಿತಮಪ್ಪ ಸೂತ್ರಾನ್ವಯರತ್ನ ಮಾಲೆಯೆನಿಪ ಶಬ್ದಮಣಿದರ್ಪಣ ನಾಮಾಧ್ಯಾಯಂ ಸಮಾಪ್ತಂ' ಎಂಬ ಪ್ರಕರಣಾಂತ್ಯ ಗದ್ಯದಲ್ಲಿ 'ಸೂತ್ರಾನ್ವಯ ರತ್ನಮಾಲೆಯೆನಿಪ ಶಬ್ದಮಣಿದರ್ಪಣ' (ವೃತ್ತಿ) ಎಂಬ ಮಾತಿನ ಮೂಲಕ ಲಿಂಗಣಾರಾಧ್ಯನು ತನ್ನದು 'ಅನ್ವಯವೃತ್ತಿ' ಎಂದು ಸೂಚಿಸಿದ್ದಾನೆ.

ಸೂತ್ರವೊಂದರ ಆಶಯವನ್ನರಿಯಲು ಅದರ ಪದಗಳನ್ನು ಮೊದಲು ಅನ್ವಯ ರೂಪದಲ್ಲಿ ಹೊಂದಿಸಿಕೊಳ್ಳಬೇಕಾಗುತ್ತದೆ. ತರುವಾಯ ಆ ಅನ್ವಯಕ್ಕೆ ಅರ್ಥರೂಪ ಕೊಡಬೇಕಾಗುತ್ತದೆ. ಈ ಎರಡರಲ್ಲಿ ಲಿಂಗಣಾರಾಧ್ಯನದು ಅನ್ವಯದೃಷ್ಟಿ, ಕೇಶಿರಾಜನದು ಅರ್ಥದೃಷ್ಟಿ. ಅದಕ್ಕಾಗಿ ಒಬ್ಬನದು ಅರ್ಥವೃತ್ತಿ ಇನ್ನೊಬ್ಬನದು ಅನ್ವಯವೃತ್ತಿ. ಇವು ದರ್ಪಣದ ಎರಡು ಲಕ್ಷಣಗಳೆಂದು ಕಲಬುರ್ಗಿ ಅವರು ಉದಾಹರಣೆ ಸಮೇತವಾಗಿ ಸ್ಪಷ್ಟಪಡಿಸಿದ್ದಾರೆ. ಕೇಶಿರಾಜ ಮತ್ತು ಲಿಂಗಣಾರಾಧ್ಯರ ಈ ವೃತ್ತಿಗಳು ಹಲವು ಸ್ವರೂಪ ಗಳಲ್ಲಿ ಕಂಡುಬರುತ್ತವೆ. ಕೇಶಿರಾಜನ ಅರ್ಥವೃತ್ತಿಗಳು ಮೂರು ಬಗೆಯಾಗಿವೆ: ಸಂಗ್ರಹವೃತ್ತಿ, ಮಿಶ್ರಣವೃತ್ತಿ, ವ್ಯಾಖ್ಯಾನವೃತ್ತಿ. ಇವುಗಳಲ್ಲಿ ಲಿಂಗಣಾರಾಧ್ಯ ಹೆಚ್ಚಾಗಿ ರಚಿಸಿದ್ದು ಸಂಗ್ರಹವೃತ್ತಿಯನ್ನು. ಕೆಲವು ವೇಳೆ ಲಿಂಗಣಾರಾಧ್ಯನಲ್ಲಿ ಸ್ಪಷ್ಟತೆಗಾಗಿ ಅರ್ಥವೃತ್ತಿಗಳೂ ಕಂಡುಬರುತ್ತವೆ. ಅದನ್ನು ಹೀಗೂ ಹೇಳಬಹುದು: ಒಂದು ಸ್ವರಚಿತ ಮತ್ತೊಂದು ಕೇಶಿರಾಜನಿಂದ ಸ್ವೀಕೃತ. ಅವುಗಳ ಸ್ವರೂಪವನ್ನು ಕಲಬುರ್ಗಿ ಅವರು ಸಮರ್ಥವಾಗಿ ಪ್ರತಿಪಾದಿಸಿದ್ದಾರೆ.

ಶಾಸನಗಳು ಪ್ರಾಚೀನ ಬದುಕಿನ ಸಮಸ್ತ ಸಂವೇದನೆಗಳು. ಅವುಗಳನ್ನು ಹೊರತುಪಡಿಸಿ ಬರೆದರೆ ಭಾಷಾಚರಿತ್ರೆ-ಸಾಹಿತ್ಯ ಚರಿತ್ರೆ ಯಾವ ಕಾಲಕ್ಕೂ ಅಪೂರ್ಣ. **ಶಾಸನಗಳ ಭಾಷೆ**ಯನ್ನು ಕುರಿತು ಬರೆಯುತ್ತ ಕಲಬುರ್ಗಿ ಅವರು ಅಲ್ಲಿರುವುದು ಗ್ರಂಥಸ್ಥ ಭಾಷೆ ಮತ್ತು ಕಂಠಸ್ಥಭಾಷೆಗಳೆಂದು ಗುರುತಿಸಿದ್ದಾರೆ. ಹಲ್ಮಿಡಿ ಶಾಸನದ ಬಹುಪಾಲು ಭಾಷೆ ಗ್ರಂಥಸ್ಥ ಭಾಷೆ. ಮಂಗಳೀಶನ ಬಾದಾಮಿ ಶಾಸನದ ಬಹುಪಾಲು ಭಾಷೆ ಕಂಠಸ್ಥಭಾಷೆ. ಕೆಲವು ಸಲ ಹಳಗನ್ನಡ ಕಾಲಘಟ್ಟದ ಶಾಸನಗಳಲ್ಲಿ ನಡುಗನ್ನಡ ಭಾಷೆ ಬಳಕೆಯಾಗಿವೆ. ಉದಾ. 'ಹಾಡುವ ಕಾಮವೆ ನಾಗವೆಯ ಮಗಳುಂ, ಶ್ರೀ ಕಲಿದೇವನ ತೊತ್ತು ಪಾತ್ರದ ಸಿರಿಯವೆ...'. ದಾವಣಗೆರೆ ಜಿಲ್ಲೆಯ ಈ ಬಾಗಳಿ ಶಾಸನ (೧೦೩೫) ಹಳಗನ್ನಡ ಕಾಲದ್ದು. ಆದರೆ ಶಾಸನಗಳ ಭಾಷಾರಚನೆ ತೀರ

ನಡುಗನ್ನಡ. ಹೊಳೆನರಸಿಂಹಪುರ ತಾಲೂಕಿನ ಬಾಗವಾಳ (೧೩೦೩) ಶಾಸನ ನಡುಗನ್ನಡದ್ದಾಗಿದೆ. ಇದಲ್ಲದೆ ಪ್ರಾಚೀನ ಕರ್ನಾಟಕದ ಆಡುಭಾಷೆ ಅರಿಯಲು ಶಾಸನಗಳು ತಕ್ಕಮಟ್ಟಿಗೆ ಆಕರಗಳಾಗಿವೆ. ಉದಾ.

- ಕೇಕಯ ಪಲ್ಲರವಂ ಕಾದೆಱಿದು ಪೆತ್ತಜಯನ್
- ದೇಶಾಧಿಪತಿಗಳಪ್ಪೊರ್ಗೆ ಕುಡುವ ತೆಱಿ
- ಬಾರಣಾಸಿಯೊಳ್ ಸಾಸಿರ ಕವಿಲೆಯನ್ ಕೊನ್ದೋನ ಲೋಕಕ್ಕೆ ಸದ್ದೋನುಮಕ್ಕುಂ

ಇದನ್ನು ಗಮನಿಸಿದಾಗ ಹತ್ತನೆಯ ಶತಮಾನದ ವೇಳೆಗೆ ಶಾಸನ ಸಾಹಿತ್ಯ ಕನ್ನಡ ಭಾಷಾದೃಷ್ಟಿಯಿಂದ ಸಂಸ್ಕೃತ ಹಿಡಿತವನ್ನು ಬಿಡಿಸಿಕೊಂಡು ಹೊರಬರುತ್ತಿತ್ತು. ಕೆಲವೆಡೆ ಕನ್ನಡ-ಸಂಸ್ಕೃತಗಳು ಸಮಸಮವಾಗಿ ಬಳಕೆಯಾಗುವುದುಂಟು. ಕನ್ನಡ ಮೊದಲ ಶಾಸನ ಹಲ್ಮಿಡಿ ಶಾಸನದಲ್ಲಿಯೇ ಸಂಸ್ಕೃತ ಮೇಲುಗೈ ಪಡೆದಿದೆ.

ಹಲ್ಮಿಡಿ ಶಾಸನದ ತರುವಾಯ ಎಂಟನೆಯ ಶತಮಾನದ ಅನಂತರ ಶಾಸನಗಳ ಭಾಷೆಯಲ್ಲಿ ಅನೇಕ ಧ್ವನಿ ಬದಲಾವಣೆಗಳು ಕಂಡುಬಂದಿವೆ. ಉದಾಹರಣೆಗೆ. ದೀರ್ಘಸ್ವರದ ನಂತರ ಬರುವ ರೇಫೆಯಿಂದೊಡಗೂಡಿದ ವ್ಯಂಜನ ದ್ವಿತ್ವಗಳ ಬಳಕೆ ಕಡಿಮೆಯಾಗಿದ್ದು, ಅನುನಾಸಿಕಗಳ ಬದಲಿಗೆ ಬಿಂದುವಿನ ಬಳಕೆ, ಉ>ಒ, ವ್>ಬ್, ಪ್>ಹ್ ಬದಲಾವಣೆ, ಪದಾಂತ್ಯ ದೀರ್ಘಸ್ವರವು ಹ್ರಸ್ವವಾಗುವಿಕೆ ಇತ್ಯಾದಿ. ಪೂರ್ವ್ವ> ಪೂರ್ವ, ಪಿನ್ದಣ>ಪಿಂದಣ, ಪುಗಲ್>ಪೊಗಲ್, ಕಿಸುಪೊಳಲ್>ಕಿಸುವೊಳಲ್, ಪೊಲ> ಹೊಲ ಈ ರೀತಿ ಕನ್ನಡ ಭಾಷೆಯ ಬೆಳವಣಿಗೆ ಶಾಸನಗಳಲ್ಲಿ ಗೋಚರಿಸುತ್ತದೆ. ಪೂರ್ವದ ಹಳಗನ್ನಡದ ನಾಮ-ಆಖ್ಯಾತ ಪ್ರತ್ಯಯಗಳಲ್ಲಿ ದೀರ್ಘೀಕರಣ ಕಾಣುವುದು ಇನ್ನೊಂದು ಸಾಮಾನ್ಯ ಕ್ರಿಯೆ.

ಹಳಗನ್ನಡದಿಂದ ನಡುಗನ್ನಡಕ್ಕೆ ಪರಿವರ್ತನೆಗೊಂಡ ಭಾಷೆಯನ್ನು ಸಾಮಾನ್ಯವಾಗಿ ಪದಾರಂಭದಲ್ಲಿ ಘೋಷವರ್ಣಗಳ ಬಳಕೆ, ವ್ಯಂಜನಾಂತಪದಗಳು ಸ್ವರಾಂತಗಳಾಗಿ ಬಳಕೆಗೊಳ್ಳುವಿಕೆ, ಸಬಿಂದುಕ ಪದಗಳು ಅಬಿಂದುಗಳಾಗುವಿಕೆ. ಅನುನಾಸಿಕಗಳ ಬದಲು ಬಿಂದು ಬಳಕೆ, ಪದಮಧ್ಯ 'ಒ'ಕಾರ ಅ ಕಾರವಾದುದು ಮುಂತಾದ ಭಾಷಿಕ ಪ್ರಕ್ರಿಯೆಗಳೂ ನಡೆದವು. ಉದಾ. ಬೀರಾಂಗನೆ>ವೀರಾಂಗನೆ, ಅರಸರ್>ಅರಸರು, ಮಂಡಳ>ಮಣ್ಡಳ, ಎಂದು>ಎನ್ನು, ಬೆಳ್ವೊಲ>ಬೆಳುವಲ ಇಂತಹ ಹಲವಾರು ಬದಲಾವಣೆಗಳು ಶಾಸನಗಳಲ್ಲಿ ಕಂಡುಬಂದವು. ಶಾಸನಗಳ ಭಾಷಿಕ ಅಧ್ಯಯನ ಕೈಕೊಳ್ಳುವಾಗ ಶಾಸನಗಳ ನಿಶ್ಚಿತ ಕಾಲವನ್ನು ಪರಿಗಣಿಸಬೇಕು. ಆ ಬಳಿಕ ಬೇರೆ ಬೇರೆ ಕಾಲದ ಅಥವಾ ಪ್ರದೇಶದ ಶಾಸನಗಳನ್ನು ತೌಲನಿಕವಾಗಿ ವಿವೇಚಿಸಬಹುದು. ಒಟ್ಟಿನಲ್ಲಿ ಶಾಸನಗಳ ಭಾಷಿಕ ಅಧ್ಯಯನವು ಭಾಷೆಯ ಬೆಳವಣಿಗೆಯ ಮಹತ್ವದ ಅಂಶಗಳ ಮೇಲೆ ಬೆಳಕು ಬೀರುತ್ತದೆ.

ಶಾಸನಗಳಿಂದ ಭಾಷೆಯ ಅವಸ್ಥಾ ಭೇದಗಳು ಅರಿವಿಗೆ ಬರುವಂತೆ, ಕಂಠಸ್ಥ ಭಾಷೆಯ ಶಾಸನಗಳ ಸೂಕ್ಷ್ಮ ಅಭ್ಯಾಸದಿಂದ ಆ ಕಾಲದ ಪ್ರಾಂತಭೇಧಗಳೂ ಒಡೆದು ಕಾಣುತ್ತವೆ: ಅಂಥ ಪದ, ವಾಕ್ಯ ಪ್ರಯೋಗಗಳು ಶಾಸನಗಳಲ್ಲಿ ಸಿಗುತ್ತವೆ. ಅದರಂತೆ ಆಡಳಿತ, ಯುದ್ಧ, ಜೀವನ ವ್ಯಾಪಾರಗಳಿಗೆ ಸಂಬಂಧಿಸಿದಂತೆ ಅನೇಕ ಸಾಂಸ್ಕೃತಿಕ ಪದಗಳು ಶಾಸನಗಳಲ್ಲಿ ಧಾರಾಳವಾಗಿ ಸಿಗುತ್ತವೆ. ಉದಾ. ಎಱುತ್ತು, ಪೆಟಿನ್‌ಕೊತ್ತಳಿ, ಬಾಳ್ಗಳ್ಚು, ಬೀಳವೃತ್ತಿ ಮುಂತಾದುಗಳಿಂದ ಭಾಷೆಯ ಸಾಮಾಜಿಕ ಆಯಾಮವನ್ನು ತಿಳಿದುಕೊಳ್ಳಬಹುದು. ಒಟ್ಟಾರೆ ಗ್ರಂಥಸ್ಥವಿರಲಿ, ಕಂಠಸ್ಥವಿರಲಿ ಶಾಸನಗಳಲ್ಲಿ ಬಳಕೆಯಾದ ಭಾಷೆ ಕುತೂಹಲಕಾರಿಯಾಗಿದೆ.

'ಶಬ್ದಮಣಿದರ್ಪಣ'ಕ್ಕೆ ಕನ್ನಡದ ಯಾವ ಕೃತಿಗೂ ಇಲ್ಲದಷ್ಟು ಟೀಕೆ-ವ್ಯಾಖ್ಯಾನಗಳು ಬಂದಿವೆ. ಜೆ. ಗ್ಯಾರೆಟ್ (೧೮೬೮) ಆದಿಯಾಗಿ ಎಲ್. ಬಸವರಾಜು (೧೯೮೭) ಅವರ ತನಕ ಹಲವು ಆವೃತ್ತಿಗಳು ಪ್ರಕಟವಾಗಿವೆ. ಬಿ.ಟಿ. ಸಾಸನೂರ ಮತ್ತು ಕಲಬುರ್ಗಿ ಅವರು ಜೊತೆ ಸೇರಿ ಸಂಪಾದಿಸಿದ **ಶಬ್ದಮಣಿದರ್ಪಣ ಸಂಗ್ರಹ** ವಿದ್ಯಾರ್ಥಿಗಳನ್ನು ಹಾಗೂ ಆಸಕ್ತರನ್ನು ಅನುಲಕ್ಷಿಸಿ ವಿನ್ಯಾಸಗೊಳಿಸಿದುದಾಗಿದೆ. ವೃತ್ತಿಗೆ ಸಂಬಂಧಿಸಿದ ಸಮಸ್ಯೆಗಳನ್ನು ನಿವಾರಿಸುವ ರೀತಿಯಲ್ಲಿ ಸೂತ್ರಕ್ಕೆ ತಕ್ಕಷ್ಟು ವೃತ್ತಿಯನ್ನು ಹೊಸಗನ್ನಡದಲ್ಲಿ ಬರೆದಿದ್ದಾರೆ. ವೃತ್ತಿಗೆ ತಕ್ಕಷ್ಟು ಪ್ರಯೋಗ ಕೊಟ್ಟಿದ್ದಾರೆ. ಇದರಿಂದ ಮೂಲವೃತ್ತಿ ಸಂಗ್ರಹ ರೂಪಕ್ಕಿಳಿದಿದೆ.

ಕಲಬುರ್ಗಿ ಅವರು ಈ ಅವೃತ್ತಿಗೆ ಅಭ್ಯಾಸಪೂರ್ಣ ಪ್ರಸ್ತಾವನೆ ಬರೆದಿದ್ದಾರೆ. **ಕನ್ನಡದಲ್ಲಿ ವ್ಯಾಕರಣ ಪಂಥಗಳು ಮತ್ತು ಗ್ರಂಥಗಳು** ಎಂಬ ಭಾಗದಲ್ಲಿ ಕನ್ನಡದಲ್ಲಿ ಶಂಖವರ್ಮ, ಗುಣವರ್ಮ ಮತ್ತು ನಾಗವರ್ಮ ಪ್ರವರ್ತಿತ ಮೂರು ವ್ಯಾಕರಣ ಪಂಥಗಳಿದ್ದವೆಂದು ಹೇಳಿ, ಕವಿರಾಜಮಾರ್ಗವು ವ್ಯಾಕರಣ ದೃಷ್ಟಿಯಿಂದ ಮಹತ್ವದ ಕೃತಿಯೆಂದು ತಿಳಿಸಿ, ನಂತರ ದುರ್ವಿನೀತನ (ಸು.ಕ್ರಿ.ಶ. ೬ನೇ ಶತಮಾನ) ಶಬ್ದಾವತಾರ, ರನ್ನ, ನಯಸೇನರ ಅನುಪಲಬ್ಧ ಕೃತಿ, ಎರಡನೆಯ ನಾಗವರ್ಮ, ಭಟ್ಟಾಕಳಂಕರ ಲಭ್ಯ ಕೃತಿ - ಹೀಗೆ ವ್ಯಾಕರಣ ಗ್ರಂಥಗಳ ಸೃಷ್ಟಿಕಾರ್ಯ ಮತ್ತು ಅಧ್ಯಯನ ಸಾಗಿಬಂದ ಕ್ರಮವನ್ನು ಕುರಿತು ಚರ್ಚಿಸಿದ್ದಾರೆ. ಈ ಭಾಗದಲ್ಲಿ ಈಗಾಗಲೇ ತಿಳಿದಿರುವ ಸಂಗತಿಗಳ ಸಾರವಿದೆ. ಇವು ಲಭ್ಯವಾದರೆ ಪ್ರಾಚೀನ ಕನ್ನಡ ವ್ಯಾಕರಣ ಕ್ಷೇತ್ರದಲ್ಲಿ ಹೊಸಲೋಕ ಹೊರಬರುವ ಸಾಧ್ಯತೆ ಇದೆ. **ಕೇಶಿರಾಜ** ಎಂಬ ಎರಡನೆಯ ಭಾಗದಲ್ಲಿ

ಕವಿ ಸಮನೋಬಾಣನ ಯಾ|
ದವಕಟಕಾಚಾರ್ಯನೆಸೆವ ದೌಹಿತ್ರನೆನಾಂ||
ಕವಿಕೇಶವನೆಂ ಯೋಗಿ|
ಪ್ರವರ ಚಿದಾನಂದ ಮಲ್ಲಿಕಾರ್ಜುನ ಸುತನೆಂ||

ಈ ಪದ್ಯದ ಪ್ರಕಾರ ಯಾದವ (ಹೊಯ್ಸಳ ನರಸಿಂಹ II, ಕ್ರಿ.ಶ.ಸು.೧೨೨೦-೧೨೩೮)ನ ಬಳಿ ಕಟಕೋಪಾಧ್ಯಯನಾದ ಕವಿಸುಮನೋಬಾಣನ ಮಗಳ ಮಗ ನಾನು, ನನ್ನ ತಂದೆ ಯೋಗಿಪ್ರವರ ಚಿದಾನಂದ ಮಲ್ಲಿಕಾರ್ಜುನ, ನನ್ನ ಹೆಸರು ಕೇಶವ. ಕೇಶಿರಾಜನು ಈ ಪದ್ಯದಲ್ಲಿ ತನ್ನ ಪರಿಚಯ ಮಾಡಿಕೊಂಡಿದ್ದಾನೆ. ನಂತರ ಕಲಬುರ್ಗಿ ಅವರು ತುಂಬ ಮಹತ್ವದ ಪ್ರಶ್ನೆಯನ್ನು ಎತ್ತಿದ್ದಾರೆ. ಕೇಶಿರಾಜ ಜೈನನೆಂಬುದು ಈಗ ವಿದ್ವಾಂಸರ ಒಪ್ಪಿತ ವಿಷಯ. ಕಲಬುರ್ಗಿ ಅವರು ಅವನು ಜೈನೇತರ ವ್ಯಕ್ತಿಯೆಂದು ಸಕಾರಣವಾಗಿಯೇ ಹೇಳಿದ್ದಾರೆ. ಕೇಶಿರಾಜನ ತಂದೆಯ ಹೆಸರು ಮಲ್ಲಿಕಾರ್ಜುನ, ಅವನ ವಿಶೇಷವಾದ 'ಬ್ರಹ್ಮವಿದ್ಯೆಗಾಸ್ಪದ ರೂಪಂ' ಎಂಬುದು ಜೈನವಲ್ಲದ ಪರಿಭಾಷೆ, ಮಲ್ಲಿಕಾರ್ಜುನನ ತಂದೆಯ ಹೆಸರು 'ಪರಮ ಪ್ರಕಾಶ ಯೋಗೀಶ್ವರ' ಇದು ಸಹಿತ ಜೈನವಲ್ಲದ ಹೆಸರು. ಹೀಗೆ ತಂದೆಯ ಸಂಬಂಧದ ಹಿನ್ನೆಲೆಯಲ್ಲಿಯೂ ಕೇಶಿರಾಜ ಅಜೈನವಾಗಿಯೇ ತೋರುತ್ತಾನೆ. ಜನ್ನನು ಕೇಶಿರಾಜನ ಅಜ್ಜನಾದ ಸುಮನೋಬಾಣನ ಮಗನಲ್ಲ, ಶಿಷ್ಯನೆಂದು ಕಲಬುರ್ಗಿಯವರ ವಾದ. ಇದರಿಂದ ಜನ್ನ-ಕೇಶಿರಾಜರ ಸೋದರಮಾವ-ಸೋದರಳಿಯರ ಸಂಬಂಧವೇ ಸಡಿಲಾಗಿ ಕೇಶಿರಾಜನ ಜೈನತ್ವದ ಪ್ರಬಲ ಆಧಾರವೇ ಕುಸಿದು ಬಿದ್ದಿದೆ. ಕೇಶಿರಾಜ ಅಜೈನ ಎಂದು ಆಧಾರ ಸಮೇತವಾಗಿ ಹೇಳಿದುದು, ಜನ್ನನು ಗುರು ನಾಗವರ್ಮನಲ್ಲ ಸುಮನೋಬಾಣ ಎಂದು ಶೋಧಿಸಿದುದು ಇವು ನಿಶ್ಚಿತವಾಗಿಯೂ ಕಲಬುರ್ಗಿ ಅವರ ಶೋಧಗಳು, ಹೊಸವಿಚಾರಗಳು. **ಕೇಶಿರಾಜನ ಕೃತಿಗಳು** ಎಂಬ ಮೂರನೆಯ ಭಾಗದಲ್ಲಿ

> ದೊರೆವಡೆದ ಚೋಟಿಪಾಲಕ |
> ಚರಿತಂ ಶ್ರೀ ಚಿತ್ರಮಾಲೆಯಂತೆ ಸುಭದ್ರಾ |
> ಹರಣಂ ಪ್ರಬೋಧಚಂದ್ರಂ |
> ಕಿರಾತಮಿವು ಕೇಶಿರಾಜಕವಿ ರಚಿತಂಗಳ್ |

ಈ ಪದ್ಯದಲ್ಲಿ ಐದು ಕೃತಿಗಳು ಮತ್ತು ಶಬ್ದಮಣಿದರ್ಪಣ ಹೀಗೆ ಒಟ್ಟು ಆರು ಕೃತಿಗಳು ಕೇಶಿರಾಜನ ಸಾರಸ್ವತ ಸಂಪತ್ತು. ಚೋಟಿಪಾಲಕ ಚರಿತೆ, ಶ್ರೀಚಿತ್ರಮಾಲೆ, ಸುಭದ್ರಾಹರಣ, ಪ್ರಬೋಧಚಂದ್ರ, ಕಿರಾತ ಕೃತಿಗಳು ಅಲಭ್ಯವಾಗಿರುವುದರಿಂದ ಅವುಗಳ ವಸ್ತುರೂಪದ ಬಗ್ಗೆ ಖಚಿತವಾಗಿ ಹೇಳಲಿಕ್ಕಾಗದು. ಸಾಧಾರ ಊಹೆ ಮಾಡಲಿಕ್ಕೂ ಕಷ್ಟವಾಗುತ್ತದೆ. **ಶಬ್ದಮಣಿದರ್ಪಣಂ** ಎಂಬ ನಾಲ್ಕನೆಯ ಭಾಗದಲ್ಲಿ ಅದರ ಸ್ವರೂಪ ವಿವೇಚನೆ ಮಾಡಿದ್ದಾರೆ. ಕೇಶಿರಾಜ ನಡುಗನ್ನಡ ಕಾಲಘಟ್ಟದಲ್ಲಿ ಬದುಕಿದ್ದರೂ ಹಳಗನ್ನಡ ಅವಸ್ಥೆಗೆ ವ್ಯಾಕರಣ ಬರೆದ. ಒಂದು ಭಾಷೆಯ ಒಂದು ಅವಸ್ಥೆಯನ್ನು ವಿವರಿಸುವ ಅವನ ವ್ಯಾಕರಣ ಆಧುನಿಕ ಪರಿಭಾಷೆಯಲ್ಲಿ ವರ್ಣನಾತ್ಮಕ ಭಾಷಾಶಾಸ್ತ್ರ

ವರ್ಗಕ್ಕೆ ಸೇರುತ್ತದೆ. ಭಾಷೆಯ ಮೂರು ಪ್ರಮುಖ ಘಟಕಗಳು, ಧ್ವನಿಮಾ, ಆಕೃತಿಮಾ, ವಾಕ್ಯ. ಇವುಗಳನ್ನು ಕುರಿತು ಅಧ್ಯಯನಕ್ಕೆ ಕ್ರಮವಾಗಿ ಧ್ವನಿರಚನಾಶಾಸ್ತ್ರ, ಆಕೃತಿಮಾಶಾಸ್ತ್ರ ಮತ್ತು ವಾಕ್ಯರಚನಾಶಾಸ್ತ್ರಗಳೆಂದು ಕರೆಯುವರು. ಶಬ್ದಮಣಿದರ್ಪಣದಲ್ಲಿ ಧ್ವನಿರಚನೆ (ವರ್ಣಮಾಲ ವಿವೇಚನ) ಹಾಗು ಪದರಚನೆ(ನಾಮಪದ, ಕ್ರಿಯಾಪದ ಮುಂತಾದುವು) ಗಳ ಬಗ್ಗೆ ಚರ್ಚೆಯಿದೆಯೇ ವಿನಃ ವಾಕ್ಯರಚನೆಯ ಬಗ್ಗೆ ಚರ್ಚೆ ಅಷ್ಟಾಗಿ ಇಲ್ಲವೆಂದು ಕಲಬುರ್ಗಿಯವರು ಸರಿಯಾಗಿಯೇ ಹೇಳಿದ್ದಾರೆ. ಹೀಗೆ ಪ್ರಸ್ತಾವನೆಗಾಗಿ ಬಹಳ ಶ್ರಮವಹಿಸಿದ್ದರೂ, ಇಲ್ಲಿ ದರ್ಪಣದ ವ್ಯಾಕರಣ ವಿಷಯದ ಚರ್ಚೆ ಇನ್ನಷ್ಟು ಬೇಕಿತ್ತು. ಕಲಬುರ್ಗಿ ಅವರು ದರ್ಪಣ ಜನಪ್ರಿಯವಾಗಲು ಕಾರಣಗಳನ್ನು ಸರಿಯಾಗಿಯೇ ಹೇಳಿದ್ದಾರೆ. ಆದರೆ ಪ್ರಸ್ತಾವನೆಯ ಮಧ್ಯ ಮಧ್ಯ ಬಂದಿರುವ 'ಶಬ್ದಮಣಿದರ್ಪಣ ಕನ್ನಡ ವ್ಯಾಕರಣ ಸಾಹಿತ್ಯದ ಆಚಾರಕೃತಿ', 'ಒಂದರ್ಥದಲ್ಲಿ ಅದು ಕೇಶಿರಾಜನ ಮಹಾಕಾವ್ಯ' ಇಂತಹ ಹೇಳಿಕೆಗಳು ಸಂಶೋಧನ ಬರೆಹಗಳಿಗೆ ಸಾಧುವಲ್ಲ.

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಆಶ್ರಯದಲ್ಲಿ ಜರುಗಿದ **ಭಾಷಾಬೋಧನ ಪದ್ಧತಿ ಶಿಬಿರದ ಉದ್ಘಾಟನೆ ಭಾಷಣವು** ಹಲವು ಮಹತ್ವದ ಅಂಶಗಳಿಂದ ಕೂಡಿದೆ. ಭಾಷೆಯಲ್ಲಿ ಹಲವು ಪ್ರಾಂತಭೇದಗಳು, ಸಾಮಾಜಿಕ ಪ್ರಭೇದ ಗಳು ಇರುವುದರಿಂದ 'ಏಕವಿಧ' ಭಾಷಾಬೋಧನ ಪದ್ಧತಿಯನ್ನು ರೂಪಿಸುವುದು ಕಷ್ಟದ ಕೆಲಸ. ತರಗತಿಯಲ್ಲಿ ಬುಡಕಟ್ಟು ಸಮುದಾಯ ಮತ್ತು ಬುಡಕಟ್ಟೇತರ ಸಮುದಾಯದಿಂದ ಬಂದಂತಹ ವಿದ್ಯಾರ್ಥಿಗಳಿರುತ್ತಾರೆ. ಅವರ ಭಾಷಿಕ ಪರಿಸರವನ್ನು, ಬುದ್ಧಿಮತ್ತೆ ಹಾಗೂ ವೈಯಕ್ತಿಕ ಭಿನ್ನತೆಗಳನ್ನು ಗಮನದಲ್ಲಿಟ್ಟುಕೊಂಡು ಭಾಷಾಬೋಧನ ವಿಧಾನಗಳನ್ನು ರೂಪಿಸಬೇಕು ಎಂಬುದು ಮಹತ್ವದ ಸಲಹೆಯಾಗಿದೆ. ವಿದ್ಯಾರ್ಥಿಗಳ ಪದಭಂಡಾರ ಹೆಚ್ಚಿಸಲಿಕ್ಕೆ ಹೊಸಪದ. ವಾಕ್ಯರಚನೆ, ಗಾದೆ, ನುಡಿಗಟ್ಟು ಇಂತಹ ವಾಗ್ರೂಢಿಗಳ ಬಳಕೆಗೆ ಭಾಷಾಬೋಧನೆ ಮತ್ತು ಕಲಿಕೆಯಲ್ಲಿ ಹೆಚ್ಚಿನ ಅವಕಾಶವಿರಬೇಕು. ಭಾಷಾಬೋಧನೆ ಮತ್ತು ಕಲಿಕೆಯೆಂದರೆ ಭಾಷಾಕೌಶಲ್ಯಗಳ ಅಭಿವೃದ್ಧಿ(ಗ್ರಹಿಕೆ, ಮಾತು, ಓದು, ಬರೆಹ). ಆ ದೃಷ್ಟಿಯಿಂದ ಕಲಬುರ್ಗಿ ಅವರ ಸಲಹೆಗಳು ಅರ್ಥಪೂರ್ಣ ವಾಗಿವೆ. ಭಾಷಾಬೋಧನೆಗೆ ಸಂಬಂಧಪಟ್ಟಂತೆ ಆಗಿರುವ ಅಧ್ಯಯನಗಳು ಕನ್ನಡದಲ್ಲಿ ತುಂಬ ಕಡಿಮೆ. ಅಂತಹ ಸಂದರ್ಭದಲ್ಲಿ ಭಾಷಾಶಿಕ್ಷಣದ ಅಧ್ಯಯನಕ್ಕೆ ಈ ಲೇಖನ ಹೊಸಸೇರ್ಪಡೆ. ಪಠ್ಯಪುಸ್ತಕ ರಚನೆಗೆ ಇಂತಹ ಸಲಹೆಗಳು ಸಹಕಾರಿಯಾಗುತ್ತವೆ ಎಂಬುದರಲ್ಲಿ ಸಂದೇಹವಿಲ್ಲ.

ಭಾಷೆ-ಸಮಾಜ-ಸಂಸ್ಕೃತಿ ಇವು ಪರಸ್ಪರ ಪೂರಕವಾಗಿವೆ. ಭಾಷಾಧ್ಯಯನದಲ್ಲಿ ಭಾಷೆಯ ಸಾಮಾಜಿಕ ಚಹರೆ ಮುಖ್ಯ. ಒಂದು ಭಾಷಾಸಮುದಾಯದ ಬಗೆಗೆ ಅಧ್ಯಯನ ಮಾಡುವಾಗ ಆ ಕುರಿತು ಇರಬಹುದಾದ ಅಧ್ಯಯನ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳುತ್ತ, ಅಧ್ಯಯನ ಕ್ರಮವನ್ನು ಮತ್ತೆ ಮತ್ತೆ ಪ್ರಶ್ನಿಸಿಕೊಳ್ಳುತ್ತ, ಆ ಮೂಲಕ

ಹೊಸದನ್ನು ಅಳವಡಿಸಿಕೊಳ್ಳಬೇಕಾಗಿದೆ. ಭಾಷಾಧ್ಯಯನವನ್ನು ಕೂಡ ವೈಚಾರಿಕವಾಗಿ, ಸೃಜನಶೀಲ ಮಾದರಿಯನ್ನಾಗಿ ರೂಪಿಸಬೇಕಾಗಿದೆ. ಈ ದೃಷ್ಟಿಯಿಂದ ಕಲಬುರ್ಗಿ ಅವರು ಶಾಲಿನಿ ರಘುನಾಥ ಅವರ ಸಂಪ್ರಬಂಧ ಸಂಕಲನ **ಭಾಷೆ ಸಾಹಿತ್ಯ ಸಂಸ್ಕೃತಿ** ಕೃತಿಗೆ ಬರೆದ ಬೆನ್ನುಡಿ ತುಂಬ ಮಹತ್ವದ್ದಾಗಿದೆ. ಪ್ರತಿಯೊಂದು ಲೇಖನಗಳ ಸ್ವರೂಪವನ್ನು ಕುರಿತು ಭಾಷೆ ಸಾಹಿತ್ಯ ಸಂಸ್ಕೃತಿಗಳ ಅಂತರ್ ಸಂಬಂಧದ ನೆಲೆಯಲ್ಲಿ ಸಂಕ್ಷಿಪ್ತವಾಗಿ ಹೇಳಿದ್ದಾರೆ. ಲೇಖಕಿಯರು ಭಾಷೆಯ ರಾಚನಿಕತೆಯನ್ನು ಅದು ಕಲಾತ್ಮಕವಾಗುವ ರೀತಿಯನ್ನು ಮತ್ತು ಸಂಸ್ಕೃತಿ ಘನೀಕೃತಗೊಳ್ಳುವ ಪರಿಯನ್ನು ತಿಳಿದುಕೊಂಡಿದ್ದಾರೆಂದು ಅವರನ್ನು ಅಭಿನಂದಿಸಿದ್ದಾರೆ.

ಹೆಸರುಗಳು, ಭಾಷೆ ಮತ್ತು ಸಂಸ್ಕೃತಿಯೊಡನೆ ಹೆಣೆದುಕೊಂಡಿವೆ. ಅವು ಸಂಸ್ಕೃತಿಯ ಘಟಕಗಳು. ಇತ್ತೀಚೆಗೆ ಭಾಷಾಶಾಸ್ತ್ರದಲ್ಲಿ ನಾಮವಿಜ್ಞಾನ ಅನ್ವಯಿಕ ಭಾಷಾಶಾಸ್ತ್ರದ ಭಾಗವಾಗಿ ಬೆಳೆಯುತ್ತಿದೆ. ಕನ್ನಡ ನಾಮವಿಜ್ಞಾನ ಕ್ಷೇತ್ರಕ್ಕೆ ಕಲಬುರ್ಗಿ ಅವರ ಕೊಡುಗೆ ಅನನ್ಯವಾಗಿದೆ. ಒಂದು ಹೆಸರಿನ ಸುತ್ತಲೂ ಇರುವ ಮಾಹಿತಿಯನ್ನು ಕಲೆ ಹಾಕುವಾಗ ಶಾಸನ, ಜಾನಪದ, ಗಾದೆ, ಪಡೆನುಡಿ ಇವುಗಳ ಮೂಲಕ ಒಂದು ನಿಲುವಿಗೆ ಬರುತ್ತಾರೆ. ಅಂತರ್‌ಶಿಸ್ತೀಯ ಅಧ್ಯಯನ ವಿಧಾನದಿಂದ ಅವರ ನಾಮವ್ಯಾಸಂಗ ಸಾಗಿದೆ. ಈ ಹಿನ್ನೆಲೆಯಲ್ಲಿ ಭೈರವ, ಜುಂಜಪ್ಪ, ಮೈಲಾರ, ಬೂದುಗ, ವಿರೂಪಾಕ್ಷ, ಬಾದುಬ್ಬೆ, ಹರಿಹರ, ಎಲ್ಲಮ್ಮ, ಎರೆಯಪ್ಪ, ಬಳರಿದೇವತೆ, ಅರಿಕೇಸರಿ ಇಂತಹ ವ್ಯಕ್ತಿನಾಮಗಳನ್ನು, ಬನವಾಸಿ, ಧಾರವಾಡ, ಚಿತ್ರದುರ್ಗ, ಪುಟೆ. ಇಂತಹ ಗ್ರಾಮನಾಮಗಳನ್ನು ಪಟ್ಟಣಶೆಟ್ಟಿ, ಕತ್ತಿಶೆಟ್ಟಿ, ವಾರದ, ಪಂಚಮಸಾಲಿ ಇಂತಹ ಕುಟುಂಬ ನಾಮಗಳನ್ನು-ಕುಲನಾಮಗಳನ್ನು ವಿಶ್ಲೇಷಿಸುತ್ತಾರೆ. ಅಲ್ಲಲ್ಲಿ ಹೆಸರು ಹಿಂದಿನ ಸಾಂಸ್ಕೃತಿಕ ಆಯಾಮ ಅವರಿಗೆ ಮುಖ್ಯವಾಗುತ್ತದೆ.

ಛಂದೋಗತಿಗೆ ಪದ್ಯದ ಹೊರಗಿನ ಕಟ್ಟಳೆಗಳಿಗಿಂತ ಒಳಗೆ ಪ್ರವಹಿಸುವ ರಸ-ಲಯ-ನಾದಗಳೇ ಮುಖ್ಯ. ಪದ್ಯವನ್ನು ಸಶಬ್ದವಾಗಿ ಓದಿಕೊಂಡು ಅಥವಾ ಕೇಳಿಕೊಂಡು ಕಾವ್ಯದ ಲಯವಿನ್ಯಾಸವನ್ನು ಗುರುತಿಸಬೇಕಾಗುತ್ತದೆ. ಕಲಬುರ್ಗಿ ಅವರು ರಸ-ಭಾವ-ನಾದ ಮತ್ತು ಲಯದ ನೆಲೆಯಲ್ಲಿ ಛಂದೋಲಯವನ್ನು ವಿಶ್ಲೇಷಿಸುತ್ತಾರೆ. ಛಂದಸ್ಸು ಅವರಿಗೆ ಪ್ರಿಯವಾದ ವಿಷಯವಾಗಿರುವುದರಿಂದ ಕಾವ್ಯ, ಶಾಸನಗಳನ್ನು ಅರ್ಥಮಾಡಿಕೊಳ್ಳಲಿಕ್ಕೆ ಛಂದಸ್ಸು ಹೇಗೆ ನೆರವಾಗುತ್ತದೆ ಎಂಬುದರ ಕಡೆಗೆ ಅವರ ಒಲವಿದೆ. ಕನ್ನಡ ಛಂದಸ್ಸಿಗೆ ಸಂಬಂಧಿಸಿದ ಒಂದೊಂದೆ ಸಮಸ್ಯೆಗಳನ್ನು ತೆಗೆದುಕೊಂಡು ಅವರು ಬಿಡಿಸುವ ರೀತಿ ತುಂಬ ಮನೋಜ್ಞವಾಗಿದೆ. ಆ ದಿಕ್ಕಿನಲ್ಲಿ ಕೆಲಸ ಮಾಡಿ ಅವರ ಬರೆಹಗಳು ವಿದ್ವಾಸರ ಗಮನ ಸೆಳೆದಿವೆ. ಅಂಶಗಣದ ಇತಿಹಾಸ, ಷಟ್ಪದಿಯ ಉಗಮ ವಿಕಾಸ, ಮಾನಸೊಲ್ಲಾಸದಲ್ಲಿ ಕನ್ನಡ ಪದ್ಯಗಳು, ಕುವೆಂಪು ಛಂದಸ್ಸು,

ಶಾಸನ ಛಂದಸ್ಸು, ಶಾಸನದಲ್ಲಿ ಭಾಮಿನಿ, ಶಾಸನಗಳಲ್ಲಿ ಇನ್ನಷ್ಟು ಅಂಶವೃತ್ತಿ-ಮಾತ್ರಾ ವೃತ್ತಗಳು ಮುಂತಾದ ಲೇಖನಗಳು ಯೋಚನೆಗೆ ಹಚ್ಚುತ್ತವೆ.

ಒಟ್ಟಿನಲ್ಲಿ, ಅವರ ಭಾಷಾಧ್ಯಯನ ಬರೆಹಗಳಲ್ಲಿ ಒಂದಲ್ಲ ಒಂದು ಹೊಸ ವಿಷಯ, ಹೊಸ ದೃಷ್ಟಿಕೋನ, ಹೊಸಬಗೆಯ ವಿಶ್ಲೇಷಣೆ ಪ್ರಕಟವಾಗಿರುವುದನ್ನು ಗಮಿಸಬಹುದು. ಕಲಬುರ್ಗಿ ಅವರ ಬರವಣಿಗೆ ಶಕ್ತಿಯುತವಾಗಿದೆ; ಅವರು ಅಭಿವ್ಯಕ್ತಿ ಶೈಲಿ ಸಂವಹನ ಯುಕ್ತವಾಗಿದೆ.

ಆಕರಗ್ರಂಥ

೧. ಅಂಗಡಿ ಎಸ್.ಎಸ್.(ಸಂ.), ೨೦೧೧, ಛಂದಸ್ಸಿನ ಅಧ್ಯಯನದ ನೆಲೆಗಳು(ಛಂದಸ್ಸಿನ ಅಧ್ಯಯನ ಕುರಿತು ಎಂ.ಎಂ. ಕಲಬುರ್ಗಿ ಅವರ ಸಂಪ್ರಬಂಧಗಳು), ಸಂವಹನ ಪ್ರಕಾಶನ, ಮೈಸೂರು.

೧೯

ಎ.ವಿ. ನಾವಡ : ಭಾಷಾಧ್ಯಯನ

ಕರಾವಳಿ ಪ್ರದೇಶದ ಪಂಡಿತವರ್ಯರಾದ ಮುಳಿಯ, ಸೇಡಿಯಾಪು. ಕಡೆಂಗೋಡ್ಲು, ಕುಕ್ಕಿಲ, ತೆಕ್ಕುಂಜ ಈ ಕೆಲವರ ವಿರಳ ಹೆಜ್ಜೆ ಗುರುತುಗಳನ್ನು ಹಿಡಿದು ನಡೆದಿದ್ದಾರೆ ಎ.ವಿ. ನಾವಡರು. ಅವರ ಸಜ್ಜನಿಕೆ, ವಿದ್ವತ್ತೆಯ ಪ್ರೀತಿ, ವಾಗ್ಮಿತೆ ಇವುಗಳ ಬಗೆಗೆ ನನಗೆ ತುಂಬ ಮೆಚ್ಚಿಕೆಯಿದೆ. ಗೌರವವಿದೆ. ನಾವಡರ ಆಸಕ್ತಿ ಹಾಗೂ ಅಭಿರುಚಿಯ ಕ್ಷೇತ್ರಗಳು ಜಾನಪದ, ಕೋಶ ರಚನೆ, ಹಸ್ತಪ್ರತಿಶಾಸ್ತ್ರ ಮತ್ತು ಭಾಷಾವಿಜ್ಞಾನ. ನಾವಡರು ನಾಲ್ಕು ದಶಕಗಳಿಂದ ಆ ಅಧ್ಯಯನ ಕ್ಷೇತ್ರಗಳಲ್ಲಿ ನಿರಂತರವಾಗಿ ಕೃಷಿ ಮಾಡಿದ್ದಾರೆ. ಈ ಸಂಪ್ರಬಂಧದಲ್ಲಿ ಭಾಷಾಧ್ಯಯನ ಕ್ಷೇತ್ರದಲ್ಲಿ ನಾವಡರ ಸಾಧನೆಯನ್ನು ಗುರುತಿಸುವುದಾಗಿದೆ. ಅವರ ಭಾಷಾಧ್ಯಯನದ ಹತ್ತು ಸಂಪ್ರಬಂಧಗಳು 'ವಿವಕ್ಷೆ' (೧೯೮೪)ಯಲ್ಲಿ ಸಂಕಲಿತವಾಗಿವೆ. ಮಿಕ್ಕ ಎಂಟು ಸಂಪ್ರಬಂಧಗಳು ವಿವಿಧ ಸಂಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಶಬ್ದಕೋಶದ ವಿಸ್ತರಣೆ ಭಾಷಾ ಆಧುನೀಕರಣಕ್ಕೆ ಒಂದು ದಾರಿ. ಅದು ಎರಡು ಬಗೆಯಲ್ಲಿ ಸಾಧ್ಯ. ಅ. ಹೊರಗಿನಿಂದ ಸ್ವೀಕರಿಸುವುದು ಆ. ತನ್ನ ಸಾಮಗ್ರಿಯ ಮೂಲಕವೇ ಹೊಸ ಪದಗಳನ್ನು ಟಂಕಿಸುವುದು. ಕನ್ನಡ ಶಬ್ದಕೋಶ ವಿಸ್ತರಿಸಿ. ಭಾಷಾ ಆಧುನೀಕರಣಕ್ಕೆ ಕಾರಣರಾದವರಲ್ಲಿ ಗೋವಿಂದ ಪೈ ಅವರೂ ಒಬ್ಬರು. 'ಗೋವಿಂದ ಪೈ ಅವರ ಭಾಷಾ ಪ್ರಯೋಗಗಳು' ಎಂಬ ಸಂಪ್ರಬಂಧದಲ್ಲಿ ಪೈ ಅವರ ಭಾಷಾ ಕಾರ್ಯದ ಸಮೀಕ್ಷೆಯನ್ನು ನಾವಡರು ಮಾಡಿದ್ದಾರೆ. ಪೈ ಅವರು ದಕ್ಷಿಣ ಕನ್ನಡದ ಬಳಕೆಯ ನುಡಿಗಳನ್ನು ಕಾವ್ಯದಲ್ಲಿ ಬಳಸಿ ಚಲಾವಣೆಗೆ ತಂದರು. ಅವುಗಳಲ್ಲಿ ಕೆಲವು ತುಳು, ಕೊಂಕಣಿ ಇನ್ನು ಕೆಲವು ಹಿಂದೂಸ್ತಾನಿ ಇರಬಹುದು. ಉದಾ. ನೂಲ ಮದುವೆ(ತು) ಉಪಯನಯ; ತೀಂತೇರಾ ಆಗು (ಕೊಂ) ನಾಶವಾಗು, ನವಾಯಿಸು (ಹಿಂ) ಹೊಸದಾಗಿಸು ಅದರಂತೆ ಪೈ ಅವರು ಹಳಗನ್ನಡ ಕಾವ್ಯದಲ್ಲಿ ಬಳಕೆಯಲ್ಲಿದ್ದ

ಅನೇಕ ಪದಗಳನ್ನು ಚಲಾವಣೆಗೆ ತಂದರು. ಅಳೆ(=ಮಜ್ಜಿಗೆ), ತಳಿ (=ಧರ್ಮಶಾಲೆ) ಇಂಗ್ಲೀಷಿನಿಂದ ನೇರವಾಗಿ ಭಾಷಾಂತರದ ಮೂಲಕ ಕೆಲವು ಪದಗಳನ್ನು ಸಿದ್ಧಿಸಿಕೊಂಡಿದ್ದಾರೆ. ಬೇಕುಗಳು (Wants), ರಚಕ (Creator) ಪೈ ಅವರು ಅಪಾರ ಸಂಖ್ಯೆ ಸಮಾಸ ಪದಗಳನ್ನು ಹೊಸದಾಗಿ ಟಂಕಿಸಿದ್ದಾರೆ. ಮೇಕೆ ದಾರಿ-ಕಿರಿದಾದ ದಾರಿ, ಹಿಂಡುಗತ್ತಲೇ-ಕಡುಗತ್ತಲೆ ಅದರಂತೆ ಕೂರು, ಮಲಗು ಮುಂತಾದ ಕ್ರಿಯಾರೂಪಗಳನ್ನು ನಾಮವಾಚಕಗಳಾಗಿಯೂ ಬಳಸಿದ್ದಾರೆ. ಆ ಮೂಲಕ ಭಾಷೆಯ ಅಭಿವ್ಯಕ್ತಿಯ ಸಾಮರ್ಥ್ಯವನ್ನು ಹೆಚ್ಚಿಸಿದ್ದಾರೆ. ಆಡಳಿತ ಭಾಷೆಯಾಗಿ, ಶಿಕ್ಷಣ ಮಾಧ್ಯಮವಾಗಿ ಅಣಿಗೊಳ್ಳುತ್ತಿರುವ ಕನ್ನಡ ಭಾಷೆ ಪೈ ಯವರಂತಹ ಭಾಷಾತಜ್ಞರಿಂದ ಪದಗಳಿಗೆ ಕಸಿ ಕಟ್ಟುವುದು, ಭಾಷಾ ಪ್ರಭೇದಗಳಿಗೆ ಜೀವ ತುಂಬುವುದು ಆ ಮೂಲಕ ಅವರು ಭಾಷಾಭಿವೃದ್ಧಿಗೆ ಕಾರಣರಾಗಿದ್ದಾರೆ. ಹೀಗೆ ಅವರ ಮಾರ್ಗದಲ್ಲಿ ನಮ್ಮನ್ನು ನಾವು ಕ್ರಿಯಾತ್ಮಕಗೊಳಿಸಿದಾಗಲೇ ನಮ್ಮ ನಾಡು-ನುಡಿಯ ಜೀವಂತಿಕೆ ಶಕ್ತಿಯುತವಾಗುತ್ತದೆ. ನಾವಡರು ಪೈ ಅವರ ಶಬ್ದ ಪ್ರಯೋಗಗಳ ಸ್ಥೂಲ ಸ್ವರೂಪವನ್ನು ವಿಸ್ತೃತವಾಗಿ ಈ ಲೇಖನದಲ್ಲಿ ಹೇಳಿದ್ದಾರೆ.

ಹನ್ನೆರಡನೆಯ ಶತಮಾನದ ವಚನಗಳು ರೂಪ-ವಸ್ತು-ಭಾಷೆ ಎಲ್ಲದರಲ್ಲಿಯೂ ಪೂರ್ವದ ಸಾಹಿತ್ಯಕ್ಕಿಂತ ಭಿನ್ನವಾಗಿದೆ. 'ವಚನಕಾರರ ಭಾಷೆ' ಎಂಬ ಸಂಪ್ರಬಂಧದಲ್ಲಿ ವಚನಕಾರರು ತಮ್ಮ ಸಮಕಾಲೀನ ಪರಿಸರದ ವಾಗ್ರೂಢಿಗಳನ್ನು ಮುಕ್ತ ಛಂದಃದ ನಿಯಮಗಳನ್ನು, ಆಡುಮಾತಿನ ಸೊಗಡನ್ನು, ಸಂಕ್ಷೇಪಿಕರಣ, ಅರಿಸಮಾಸ ಪ್ರಕ್ರಿಯೆಯನ್ನು ವಚನಗಳಲ್ಲಿ ಹೇಗೆ ಬಳಸಿಕೊಂಡರು ಎಂಬುದನ್ನು ಈ ಲೇಖನದಲ್ಲಿ ವಿಶದೀಕರಿಸಿದ್ದಾರೆ. ವಚನಕಾರರು ಸಾಮಾಜಿಕವಾಗಿ ಕ್ರಾಂತಿ ಮಾಡಿದಂತೆ ಭಾಷಾ ಕ್ಷೇತ್ರದಲ್ಲಿಯೂ ದೊಡ್ಡ ಮಾರ್ಪಾಡು ಮಾಡಿದರು. ವಚನಗಳ ಭಾಷೆಯ ಸ್ವರೂಪವನ್ನು ಸ್ಥೂಲವಾಗಿ ಗುರುತಿಸುವ ಕಾರ್ಯ ಈ ಲೇಖನದಲ್ಲಿ ಸಾಧಿಸಿದೆ ಎಂದು ಹೇಳಬಹುದು. 'ದಾಸ ಸಾಹಿತ್ಯದ ಜಾನಪದ ಅಂಶಗಳು' ಎಂಬ ಸಂಪ್ರಬಂಧವು ಜಾನಪದ ಶಾಸ್ತ್ರಕ್ಕೆ ಸಂಬಂಧಿಸಿದರೂ ಸಂಪ್ರಬಂಧದ ಉದರದಲ್ಲಿ ಭಾಷಿಕ ವಿಚಾರಗಳಿವೆ ಎಂಬುದು ಗಮನಿಸಬೇಕಾದ ಸಂಗತಿ. ಹರಿದಾಸ ಸಾಹಿತ್ಯ ತನ್ನ ಕಾಲದ ಪರಿಸರದ ಭಾಷೆಯನ್ನು ಅಳವಡಿಸಿಕೊಂಡು ಅಭಿವ್ಯಕ್ತಿಯಲ್ಲಿ ಆಡುಮಾತಿನ ಲಯ ಹಾಗೂ ಜನಪದ ವಾಗ್ರೂಢಿಗಳು ದಟ್ಟವಾಗಿ ಗೋಚರಿಸುತ್ತವೆ. ಈ ಲೇಖನ ಸಾಮಾಜಿಕ ಭಾಷಾಧ್ಯಯನಕ್ಕೆ ಮಹತ್ವದ ಆಕರವಾಗಿದೆ.

ಕನ್ನಡ ನಾಡು ನುಡಿಯ ಅಧ್ಯಯನಕ್ಕೆ ದುಡಿದ ಮಿಶನರಿಗಳಲ್ಲಿ ಕಿಟೆಲ್‌ರು ಪ್ರಮುಖರು. ನೂರು ವರ್ಷ ಕಳೆದರು ಅವರ ಕನ್ನಡ-ಇಂಗ್ಲೀಷ್ ನಿಘಂಟಿಗೆ ಹೆಗಲಣೆಯಾಗಿ ನಿಲ್ಲತಕ್ಕ ದ್ವಿಭಾಷಾ ನಿಘಂಟನ್ನು ನಾವಿನ್ನೂ ರಚಿಸಿಕೊಂಡಿಲ್ಲ. ಇದು ಆ ಕೋಶದ ಘನತೆಗೆ ಸಾಕ್ಷಿಯಾಗಿದೆ. 'ರೆವರೆಂಡ್ ಎಫ್. ಕಿಟೆಲ್' ಎಂಬ ಲೇಖನದಲ್ಲಿ

ನಾವಡರು ಕಿಟೆಲ್‌ರು ಅಧ್ಯಯನ ಕ್ಷೇತ್ರಗಳಾದ ಭಾಷೆ, ವ್ಯಾಕರಣ, ಗ್ರಂಥ ಸಂಪಾದನೆ, ಛಂದಸ್ಸು ಮತ್ತು ಕೋಶರಚನೆ ಈ ಕ್ಷೇತ್ರದಲ್ಲಿ ಅವರ ಸಾಧನೆಯನ್ನು ಹೃದ್ಯವಾಗಿ ನಿರೂಪಿಸಿದ್ದಾರೆ.

ದಕ್ಷಿಣ ಕನ್ನಡದ ಕುಂದಾಪುರ ಪರಿಸರದ ಬೆಳಾರಿ ಜನಾಂಗದ ಭಾಷೆಯನ್ನು ಕುರಿತು 'ಬೆಳಾರಿ ಭಾಷೆ' ಎಂಬ ಸಂಪ್ರಬಂಧದಲ್ಲಿ ವಿವೇಚಿಸಿದ್ದಾರೆ. ಬೆಳಾರಿ ಜನಾಂಗದ ಭಾಷಿಕ ಸಾಮಗ್ರಿಗಳನ್ನು ಕಲೆ ಹಾಕಿ ವರ್ಣನಾತ್ಮಕ ಭಾಷಾವಿಜ್ಞಾನದ ತತ್ವಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಬೆಳಾರಿ ಭಾಷೆ, ಕನ್ನಡ ಮತ್ತು ತುಳುವಿಗಿಂತ ಭಿನ್ನವಾದ ಭಾಷೆಯಾಗಿದೆ. ಈ ಭಾಷೆಯ ಮೇಲೆ ತುಳುವಿನ ಪ್ರಭಾವವಿದೆಯೆಂದು ನಾವಡರು ಗುರುತಿಸಿದ್ದಾರೆ. ತುಳುವಿನಲ್ಲಿ ಮೂಲದ್ರಾವಿಡ* ಇ ಮತ್ತು ಎ ಸ್ವರಗಳ ಹಿಂದೆ ಉಭಯೋಷ್ಠ್ಯ ವ್ಯಂಜನವೂ ಮುಂದೆ ಮೂರ್ಧನ್ಯವು ಬಂದಾಗ* ಇ ಮತ್ತು ಎ ಗಳು ಉ ಮತ್ತು ಒ ಗಳಾಗಿ ಬದಲಾಗುವುದು ಕಂಡುಬರುತ್ತದೆ. ಈ ಪ್ರಕ್ರಿಯೆ ತುಳುವಿನಂತೆ ಬೆಳಾರಿ ಭಾಷೆಯಲ್ಲಿಯೂ ಇದೆ. ತುಳುವಿನ ಪದಾದಿಯ 'ಪ' ಬೆಳಾರಿಯಲ್ಲಿ 'ಹ' ಆಗಿದೆ. ಪಣ್(ತು) ಹಣೆ(ಬೆ) (ಹೇಳು) ಆ ಸಾಮಾಜಿಕ ಉಪಭಾಷೆಯ ಧ್ವನಿರಚನೆ, ವಚನ ವ್ಯವಸ್ಥೆ, ವಿಭಕ್ತಿ, ಸರ್ವನಾಮ ಹಾಗೂ ಆಖ್ಯಾತ ಪ್ರತ್ಯಯಗಳ ಸ್ವರೂಪವನ್ನು ಶಾಸ್ತ್ರೀಯವಾಗಿ ವಿಶ್ಲೇಷಿಸಿದ್ದಾರೆ.

ದಕ್ಷಿಣ ಕನ್ನಡ ಕೋಟ ಎಂಬ ಇನ್ನೊಂದು ಸಾಮಾಜಿಕ ಉಪೆಯನ್ನು ಕುರಿತು 'ಮಂಗಳೂರು ಪರಿಸರದ ಕೋಟದವರ ಆಡುನುಡಿ ಮತ್ತು ತುಳು' ಎಂಬ ಸಂಪ್ರಬಂಧ ದಲ್ಲಿ ವಿವರಣಾತ್ಮಕವಾಗಿ ವಿಶ್ಲೇಷಿಸಿದ್ದಾರೆ. ಬೆಳಾರಿ ಭಾಷೆಯಂತೆ ಈ ಭಾಷೆಯ ಮೇಲೆಯೂ ತುಳುವಿನ ಪ್ರಭಾವವಾಗಿದೆ ಎಂಬುದನ್ನು ನಾವಡರು ಗುರುತಿಸಿದ್ದಾರೆ. ಮಂಗಳೂರು ಪರಿಸರದ ಕೋಟದವರ ಭಾಷೆಯ ದತ್ತಗಳನ್ನು ತೌಲನಿಕವಾಗಿಯೂ ವಿವೇಚಿಸಿದ್ದಾರೆ.

ಕುಂದಾಪುರ ಕೋಟ ಕನ್ನಡ	**ಮಂಗಳೂರು ಕೋಟ**	**ಕನ್ನಡ ತುಳು**
ಮೂಗು	ಮೂಂಕು	ಮೂಂಕು
ತೂಂಗು	ತೂಕು	ತೂಕು

ಮಂಗಳೂರು ಕೋಟ ನುಡಿಯು ತುಳುವಿನಿಂದ ಸ್ವೀಕರಿಸಿದ ಪದಗಳಲ್ಲಿ ಪ > ಹ ಧ್ವನಿ ಬದಲಾವಣೆಯಾಗಿದೆ. ಕುಂದಾಪುರ ಕೋಟದವರಲ್ಲಿ ಈ ಪ್ರಕ್ರಿಯೆ ನಡೆದಿಲ್ಲ.

ಕುಂದಾಪುರ ಕೋಟ ಕನ್ನಡ	**ಮಂಗಳೂರು ಕೋಟ**	**ಕನ್ನಡ ತುಳು**
ಬೆಕ್ಕು	ಹುಚ್ಚೆ	ಪುಚ್ಚೆ
ವಿನಿಮಯ	ಹಗರ	ಪಗರ

ಮಂಗಳೂರು ಕೋಟ ಭಾಷೆಯು ತುಳುವಿನ ಅನೇಕ ಪದಗಳನ್ನು ಎರವಲು ಪಡೆದುಕೊಂಡಿದೆ. ಒಟ್ಟಾರೆ ತುಳು ಭಾಷೆಯ ಪ್ರಭಾವ ಮಂಗಳೂರು ಕೋಟದವರ ಮೇಲೆ ಹೇರಳವಾಗಿದೆ. ಕುಂದಾಪುರ ಕೋಟದವರ ಮೇಲೆ ತುಂಬ ವಿರಳವೆಂದು ನಾವಡರು ಅನೇಕ ಉದಾಹರಣೆಗಳ ಮೂಲಕ ಮೊದಲ ಬಾರಿಗೆ ತೋರಿಸಿಕೊಟ್ಟಿದ್ದಾರೆ.

'ದಕ್ಷಿಣ ಕನ್ನಡದ ಉಪಭಾಷೆಗಳು' ಎಂಬ ಸಂಪ್ರಬಂಧದಲ್ಲಿ ತುಳು ಭಾಷೆಯನ್ನು ಸ್ಥೂಲವಾಗಿ ಬ್ರಾಹ್ಮಣರ ತುಳು, ಬ್ರಾಹ್ಮಣೇತರರ ತುಳು ಎಂದು ವರ್ಗೀಕರಿಸಿದ್ದಾರೆ. ಪ್ರಾದೇಶಿಕವಾಗಿ ಕುಂದಾಪುರ ಪರಿಸರದ ಕನ್ನಡ, ಸುಳ್ಯ ಮತ್ತು ಮಂಗಳೂರು ಪರಿಸರದ ಕನ್ನಡವೆಂದು ಮೂರು ರೀತಿಯಾಗಿ ವರ್ಗೀಕರಿಸಿದ್ದಾರೆ. ಜನಾಂಗಿಕವಾಗಿ ಬೆಳಾರಿ, ಕೊರಗ, ಕೋಟ, ಬಂಟ, ಗೌಡ ಭಾಷೆಗಳೆಂದು ವರ್ಗೀಕರಿಸಿ ಅವುಗಳ ಸಾಮಾನ್ಯ ಸ್ವರೂಪವನ್ನು ಕುರಿತು ಸಮಾಲೋಚನೆ ಮಾಡಿದ್ದಾರೆ. ತುಳು ಭಾಷಾಧ್ಯಯನ ಕ್ಷೇತ್ರದಲ್ಲಿ ತುಳುವಿನ ಎಲ್ಲ ಭಾಷಾ ಪ್ರಭೇದಗಳ ಸಮೀಕ್ಷೆ, ದಕ್ಷಿಣ ಕನ್ನಡದ ಶಾಸನಗಳ ಭಾಷೆ ಹಾಗೂ ಜಿಲ್ಲೆಯುದ್ದಕ್ಕೂ ಹಬ್ಬಿರುವ ಕೊಂಕಣಿ ಭಾಷೆಯ ಅಧ್ಯಯನ ಆಗಲೇ ಬೇಕೆಂದು ನಾವಡರು ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ.

ನಾವಡರು ಉಡುಪಿಯ 'ತುಳು ನಿಘಂಟು ಯೋಜನೆ'ಯಲ್ಲಿ ಸಂಶೋಧಕರಾಗಿ, ತಜ್ಞರಾಗಿ ಕೆಲಸ ಮಾಡುತ್ತಿದ್ದ ವೇಳೆಯಲ್ಲಿ ತುಳು ಕ್ಷೇತ್ರ ಕಾರ್ಯದಲ್ಲಿ ಅತ್ಯಂತ ಶ್ರದ್ಧೆಯಿಂದ ದುಡಿದುದರ ಫಲವಾಗಿ ತುಳು ಭಾಷೆ ಮತ್ತು ಲಿಪಿಯನ್ನು ಕುರಿತು ಮೌಲಿಕ ಲೇಖನಗಳು ಅವರಿಂದ ರಚಿತವಾದವು.

ದ್ರಾವಿಡ ಭಾಷಾ ಪರಿವಾರದಲ್ಲಿ ತುಳುವಿಗೆ ವಿಶಿಷ್ಟ ಸ್ಥಾನವಿದೆ. ಆದರೆ ತುಳು ಸಾಹಿತ್ಯ ರಚನೆ ತುಳು ಲಿಪಿಯಲ್ಲಿಯೇ ಲಿಖಿತಗೊಳ್ಳದಿರುವುದು ಆಶ್ಚರ್ಯದ ಸಂಗತಿಯಾಗಿದೆ. ತುಳು ಲಿಪಿಯ ಬಗ್ಗೆ ಕೆಲಸ ಮಾಡಿದ ಮ್ಯಾನರ್, ಕಾಲ್ಡವೆಲ್, ಎಸ್.ಯು. ಪಣಿಯಾಡಿ ಅವರ ವಿಚಾರಗಳನ್ನು ಹಿನ್ನೆಲೆಯಾಗಿಟ್ಟುಕೊಂಡು 'ತುಳು ಲಿಪಿ–ಕೆಲವು ವಿಚಾರಗಳು' ಎಂಬ ಸಂಪ್ರಬಂಧದಲ್ಲಿ ಚರ್ಚಿಸಿದ್ದಾರೆ. ಕಾಸರಗೋಡು ಸಮೀಪದ ಕುಂಬಳೆ ಸಮೀಪದ ತುಳು ಶಾಸನ ಹಾಗೂ ಕುಂದಾಪುರ ಹತ್ತಿರ ಬಸ್ರೂರ ಶಾಸನ ಇವು ತುಳು ಲಿಪಿಯಲ್ಲಿವೆ. ಇಂತಹ ಶಾಸನಗಳು ಅಪರೂಪವಾದರೂ ಅರಸರು ಶಾಸನಗಳಲ್ಲಿ ತುಳು ಲಿಪಿಯನ್ನು ಬಳಸುತ್ತಿದ್ದರು ಎಂದು ನಾವಡರು ಸರಿಯಾಗಿಯೇ ಊಹಿಸಿದ್ದಾರೆ. ಒಂದು ಕಾಲದಲ್ಲಿ ತುಳುವಿಗೆ ತನ್ನದೇ ಆದ ಲಿಪಿಯಿತ್ತು ಎಂದು ಪುರಾವೆಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ಹಾಗಿದ್ದಲ್ಲಿ ತುಳು ಭಾಷೆಯ ಬರವಣಿಗೆಗೆ ಆ ತುಳು ಲಿಪಿಯನ್ನು ಬಳಸಿಕೊಳ್ಳಬೇಕೆ ಎಂಬ ಪ್ರಶ್ನೆಗೆ ಬೇಕಿಲ್ಲ ಎಂದೇ ನಾವಡರ ಅಭಿಪ್ರಾಯ. ಅದಕ್ಕೆ ಅವರು ಕೊಡುವ ಕಾರಣ ಹೀಗಿದೆ. 'ತುಳುವರೆಲ್ಲರಿಗೂ ಕನ್ನಡ ಬರುತ್ತಿರುವುದರಿಂದ ತುಳು ನಾಡು ಕನ್ನಡದ ಸರಿಹದ್ದಿನೊಳಗೆ ಇರುವುದರಿಂದ ಕನ್ನಡ ಲಿಪಿಯ ಸೂಕ್ತ ನವೀಕರಣದೊಂದಿಗೆ ತುಳುವನ್ನು ಬರೆಯಬಹುದು ಇದು

ಬರವಣಿಗೆ ಹಾಗೂ ಮುದ್ರಣದ ದೃಷ್ಟಿಯಿಂದ ತುಂಬ ಸುಲಭ ಹಾಗೂ ಸೂಕ್ತ'(ವಿವಕ್ಷೆ, ಪು. ೬೧). ಗುಣದೋಷವನ್ನು ತೆರೆದು ತೋರುವಲ್ಲಿ ಲೇಖಕರ ನಿಷ್ಪಕ್ಷಪಾತ ಮನೋಧರ್ಮ ಮೆಚ್ಚತಕ್ಕದ್ದು.

ತುಳು ಭಾಷೆ ಶ್ರೀಮಂತ ಮೌಖಿಕ ಸಂಪ್ರದಾಯಕ್ಕೆ ಹೆಸರಾಗಿದ್ದು ಅದರಲ್ಲಿ ಪಾಡ್ದನಗಳು ಪ್ರಧಾನವಾದವು ತುಳು ಪಾಡ್ದನಗಳಿಗೆ ಜನಪದ ಲಾವಣಿಗಳು ಹತ್ತಿರ ವಾಗಿವೆ. 'ತುಳು ಪಾಡ್ದನಗಳು' ಎಂಬ ಸಂಪ್ರಬಂಧದಲ್ಲಿ ಪಾಡ್ದನಗಳ ಸ್ವರೂಪ ಮತ್ತು ಆಶಯಗಳನ್ನು ಹೇಳಿದ್ದಾರೆ. ಪಾಡ್ದನಗಳು ತುಳುವಿನ ಆಡುಮಾತಿನ ಸೊಗಸನ್ನು ಕಾಣಬಹುದು. ಉದಾ. ಕಾಲ್ತೆ(ಬೆಳಿಗ್ಗೆ), ಮಾಲ್ತೆ(ಸಂಜೆ) ತುಳು ಪಾಡ್ದನಗಳು ತುಳು ಸಂಸ್ಕೃತಿಯ ಅಧ್ಯಯನಕ್ಕೆ ಆಕರಗಳಾಗುತ್ತವೆ. ತುಳುವನ್ನು ಎಲ್ಲರೂ ತಮ್ಮ ದೈನಂದಿನ ಅವಶ್ಯಕತೆ ಪೂರೈಸಲು ಬಳಸುತ್ತಾರೆ. ಆದರೆ ಬೌದ್ಧಿಕ ಕ್ರಿಯೆಗಳಿಗೆ ಬಳಸುವುದೇಯಿಲ್ಲ. ತುಳು ಭಾಷೆಯ ಪ್ರಗತಿಗೆ ಹೆಣಗಿದ ಮಿಶನರಿ ಪಾದ್ರಿಗಳು, ೧೯೪೦-೫೦ರ ಸುಮಾರಿನ ತುಳು ಚಳುವಳಿಗಾರರು ಮುಂತಾದವರ ಸಾಧನೆಯನ್ನು 'ತುಳು ಭಾಷೆಯ ಪ್ರಗತಿ' ಎಂಬ ಸಂಪ್ರಬಂಧದಲ್ಲಿ ನಿರೂಪಿಸಿದ್ದಾರೆ. ಭವಿಷ್ಯದಲ್ಲಿ ತುಳು ಭಾಷೆ ಮತ್ತು ಸಂಸ್ಕೃತಿಯ ಪುನರುಜ್ಜೀವನದ ಕೆಲಸ ತುರ್ತಾಗಿ ಆಗಬೇಕಾಗಿದೆ ಎಂದು ನಾವಡರು ಒತ್ತಿಹೇಳಿದ್ದಾರೆ. ಇದಕ್ಕೆ ಅವರು ಕೆಲವು ಉಪಕ್ರಮಗಳನ್ನು ಕೊಟ್ಟಿದ್ದಾರೆ. ಈ ಲೇಖನದಲ್ಲಿ ಅವರ ಸಾಮಾಜಿಕ ಕಳಕಳಿ ವ್ಯಕ್ತವಾಗಿದೆ. ನಾವಡರು ತಮ್ಮ ಕಾಲದಲ್ಲಿ ಆಗುತ್ತಿದ್ದ ಮಾರ್ಪಾಡು ಗಳನ್ನು ಸೂಕ್ಷ್ಮವಾಗಿ ಗಮನಿಸಿದ್ದಾರೆ.

ಮೌಖಿಕ ಆಕರಗಳನ್ನು ಕೇಂದ್ರವಾಗಿಟ್ಟುಕೊಂಡು ತುಳು ನಿಘಂಟುಗಳು ರಚಿತ ವಾಗಿವೆ. ತುಳು ನಿಘಂಟುಗಳಾದ ಮ್ಯಾವರ್‌ರ ತುಳು-ಇಂಗ್ಲೀಷ್ ನಿಘಂಟು (೧೮೮೬), ಇಂಗ್ಲಿಷ್-ತುಳು ನಿಘಂಟು(೧೮೮೮), ಎಂ. ಮರಿಯಪ್ಪ ಭಟ್ ಮತ್ತು ಕೆದಿಲಾಯರ ಜತೆ ಸೇರಿ ಸಿದ್ಧಪಡಿಸಿದ ತುಳು ನಿಘಂಟು(೧೯೬೭) ಹಾಗು ಡಾ. ಯು.ಪಿ. ಉಪಾಧ್ಯಾಯರು ಸಿದ್ಧಪಡಿಸಿದ ತುಳು-ಕನ್ನಡ ಇಂಗ್ಲೀಷ್ ಬಹುಭಾಷಿಕ ನಿಘಂಟುಗಳ ಸ್ವರೂಪವನ್ನು 'ತುಳು ನಿಘಂಟು' ಎಂಬ ಸಂಪ್ರಬಂಧದಲ್ಲಿ ಪರಿಶೀಲಿಸಿದ್ದಾರೆ.

'ಏಳೆ : ರೂಪಾಂಶವನ್ನು ಕುರಿತು ಒಂದು ಸ್ಥೂಲ ವಿವೇಚನೆ' ಎಂಬ ಸಂಪ್ರಬಂಧದ ದಲ್ಲಿ ಏಳೆಯ ಸ್ವರೂಪವನ್ನು ಕುರಿತು ಹೇಳಿದ್ದಾರೆ. ಏಳೆಯಲ್ಲಿ ಏಳುಗಣಗಳಿರುತ್ತವೆ. ಮೊದಲನೆಯ ಗಣ ರುದ್ರ ಬರುತ್ತದೆಂದು ನಾಗವರ್ಮ, ಕೈಪಿಡಿಕಾರರು ಮತ್ತು ಕರ್ಕಿಯವರು ಹೇಳಿದ್ದಾರೆ. ನಾವಡರು ಅವರ ವಿಚಾರಗಳನ್ನು ಪರಿಶೀಲಿಸಿ ಲಯ ಮತ್ತು ಗೇಯತೆಯ ದೃಷ್ಟಿಯಿಂದ ಮೊದಲ ಗಣ ರುದ್ರವಾಗದೆ ವಿಷ್ಣುವಾಗುತ್ತದೆ ಎಂಬ ಹೊಸ ಸಂಗತಿಯನ್ನು ವಿದ್ವಾಂಸರ ಗಮನಕ್ಕೆ ತಂದಿದ್ದಾರೆ.

ಎಸ್.ವಿ. ಪರಮೇಶ್ವರ ಭಟ್ಟರು ಸಾಹಿತ್ಯ ಲೋಕದಲ್ಲಿ ಹಲವು ದಾಖಲೆಗಳನ್ನು ನಿರ್ಮಿಸಿದರು. ದೇಸೀಯ ಮಟ್ಟುಗಳಿಗೆ ಮರುಹುಟ್ಟು ಕಾಣಿಸಿದರು. 'ಎಸ್.ವಿ.

ಪರಮೇಶ್ವರ ಭಟ್ಟರ ಪ್ರಯೋಗಶೀಲತೆ ಹಾಗು ಛಂದೋಲಯಗಳು' ಎಂಬ ಸಂಪ್ರಬಂಧದಲ್ಲಿ ಭಟ್ಟರು ಏಳೆ, ತ್ರಿಪದಿ, ಸಾಂಗತ್ಯಗಳನ್ನು ಮತ್ತೆ ರೇಖಿಸಿ ವರ್ತಮಾನದ ನೋವು-ನಲಿವುಗಳಿಗೆ, ಅನುಭವಗಳಿಗೆ ವಾಹಕವಾಗಿಸಿದರು. ಭಾವಕ್ಕೆ ತಕ್ಕಂತೆ ಛಂದ ಅಳವಡಿಸಿದರು. ಇಂದ್ರಚಾಪ, ಗಾಥಾಸಪ್ತಶತಿ, ಚಂದ್ರವೀದಿ, ಕೃಷ್ಣಮೇಧ ಇವು ಅವರ ಸಾಂಗತ್ಯ ಕೃತಿಗಳು. 'ಸುರಗಿಸುರ ಹೊನ್ನೆ' ತ್ರಿಪದಿಯ ಬಿಡಿಮುಕ್ತಕಗಳು. ಕಾಳಿದಾಸ ಮಹಾಸಂಪುಟದಲ್ಲಿ ಅಂಶಲಯಕ್ಕಿಂತ ಮಾತ್ರಾಲಯವನ್ನು ಬಳಸಿ ಕೊಂಡಿದ್ದಾರೆ. ಭಟ್‌ರು ಹಳೆಯ ಛಂದೋಲಯಗಳಿಗೆ ಹೊಸ ಉಸಿರನ್ನು ತುಂಬಿ ತಾವು ಒಲಿದಂತೆ ಹಾಡಿದ್ದಾರೆ. ಅಂಶಲಯದ ವಿವಿಧ ನಡೆಗಳನ್ನು ಆಧುನಿಕ ಸಾಹಿತ್ಯದಲ್ಲಿ ತಂದಿದ್ದಾರೆ. ಹೊಸ ಸಾಧ್ಯತೆಗಳನ್ನು ತೋರಿಸಿ ಕೊಟ್ಟಿದ್ದಾರೆ. ನಾವಡರು ಹೆಚ್ಚಾಗಿ ಹೊಚ್ಚ ಹೊಸ ಉದಾಹರಣೆಗಳನ್ನು ಆಯ್ದುಕೊಂಡು ವಿಶ್ಲೇಷಿಸಿದ ಈ ಲೇಖನ ಲವಲವಿಕೆಯಿಂದ ಕೂಡಿದೆ. ಮೌಖಿಕ ಕಾವ್ಯದ ಸಂಯೋಜನ ಪ್ರಕ್ರಿಯೆ, ಪ್ರಸರಣ, ಲಯ ಮತ್ತು ಛಂದಸ್ಸು ಕುರಿತು 'ಮೌಖಿಕ ಕಾವ್ಯ ಸಂಯೋಜನ ಪ್ರಕ್ರಿಯೆ' (೧೯) ಎಂಬ ಕಿರುಕೃತಿಯಲ್ಲಿ ವಿವೇಚಿಸಿದ್ದಾರೆ.

ಮೋಹನ ತರಂಗಿಣಿಯ ಕನಕದಾಸರ ಕೃತಿಗಳಲ್ಲಿ ಗುಣ ಮತ್ತು ಗಾತ್ರದಲ್ಲಿಯೂ ದೊಡ್ಡದು. 'ಮೋಹನ ತರಂಗಿಣಿಯ ಶೈಲಿ' ಎಂಬ ಸಂಪ್ರಬಂಧದಲ್ಲಿ ಕನಕದಾಸರ ಭಾಷಾನಿರ್ವಹಣೆ ಕೀರ್ತನೆಗಳಿಗಿಂತ ಮೋಹನ ತರಂಗಿಣಿಯಲ್ಲಿ ಹೇಗೆ ಭಿನ್ನವಾಗಿದೆ ಹಾಗೂ ಆ ಕಾವ್ಯದ ಶೈಲಿಯ ಸ್ವರೂಪವನ್ನು ಭಾರತೀಯ ಕಾವ್ಯ ಮೀಮಾಂಸೆ ಮತ್ತು ಪಾಶ್ಚಾತ್ಯ ಶೈಲಿಶಾಸ್ತ್ರದ ಬೆಳಕಿನಲ್ಲಿ ಚರ್ಚಿಸಿದ್ದಾರೆ. ಮೋಹನ ತರಂಗಿಣಿಯಲ್ಲಿ ಬಳಕೆಯಾದ ಉಪಮೆಗಳು, ಶ್ಲೇಷೆ, ಗಾದೆ, ಆಡುಮಾತಿನ ಗತಿ ಇತ್ಯಾದಿಗಳನ್ನು ಸೋದಾಹರಣವಾಗಿ ಚರ್ಚಿಸಿದ್ದಾರೆ. ಮೋಹನ ತರಂಗಿಣಿಯ ಜನಪದ ಮಹಾಕಾವ್ಯವೊಂದರ ರೂಪ ಮತ್ತು ಅಭಿವ್ಯಕ್ತಿಯ ವಿಧಾನವನ್ನು ಮೂಲ ಪದರಲ್ಲೂ ಮೇಲ್ ಪದರಲ್ಲಿ ಪಾಂಡಿತ್ಯದ ಪ್ರದರ್ಶನವನ್ನು ಹೆಣೆಗೆ ಗೊಳಿಸುವ ಒಂದು ವಿಶಿಷ್ಟ ಕಾವ್ಯವಾಗಿದೆ. ಮೋಹನ ತರಂಗಿಣಿಯ ಶೈಲಿಯ ವೈಶಿಷ್ಟ್ಯತೆಯನ್ನು ವಿಸ್ತೃತವಾಗಿ ನಿರೂಪಿಸಿದ್ದಾರೆ.

ಶಬ್ದಾರ್ಥ ವಿವೇಚನೆಯಲ್ಲಿಯೂ ನಾವಡರು ಹಿಂದೆ ಬಿದ್ದಿಲ್ಲ. ಪಂಪ ಭಾರತದಲ್ಲಿ ಬಳಕೆಯಾದ 'ಪರಡು' ಶಬ್ದಕ್ಕೆ ಪಂಪ ಭಾರತ ನಿಘಂಟಿನಲ್ಲಿ ಕಾಲಿನ ಹರಡು ಎಂದು ಕೇಶಿರಾಜನ ಧಾತು ಪಾಠದಲ್ಲಿ ನೆಲವನ್ನು ಕೆದರು ಎಂಬರ್ಥವಿದೆ. ಕಿಟೆಲ್ ಕೋಶದಲ್ಲಿ ಹರಡು, ಮಂಗಳೂರು ಪರಿಸರದಲ್ಲಿ ಕತ್ತಲಲ್ಲಿ ಒಂದು ವಸ್ತು ಕಾಣದಾದಾಗ ಕೈಬೆರಳು ಅರ್ಥ ವಿಕಾಸವನ್ನು ಅವರು ಶೋಧಿಸುವ ಕ್ರಮ ಅನುಕರಣೀಯ. ಅದರಂತೆ 'ಆಪುಣ್ಣ' - ಪದ ವಿವೇಚನೆಯೂ ತುಂಬ ಸ್ವಾರಸ್ಯಕರವಾಗಿದೆ. ಅದು ತುಳುನಾಡಿನ ಅರಮನೆಯ ದೇವಾಲಯದಲ್ಲಿ ಅಥವಾ ಊರ ದೇವಾಲಯಗಳಲ್ಲಿ ಅರ್ಚಕ ಪರಿವಾರ

ದಲ್ಲಿದ್ದ ಒಂದು ಕುಲನಾಮ. ಇವರ ಕೆಲಸ ನಂದಾದೀಪ ನಂದದಂತೆ ನೋಡಿ ಕೊಳ್ಳುವುದು. ತುಳು ಅರಸರ ಅರಮನೆಯಲ್ಲಿ ಪೂಜೆಗಾಗಿ ನಿಯುಕ್ತರಾದ ಬ್ರಾಹ್ಮಣವನ್ನು ಅರಸ್ತಾನ(ಅರತ್ತಾನ) 'ಅಣ್ಣೆರ್' ಎಂದು ಕರೆಯಲಾಗುತ್ತಿದ್ದು ಅದೇ ಪದ ಮುಂದೆ ಆಪುಣ್ಣವಾಯಿತು ಎಂದು ನಾವಡರು ಸರಿಯಾಗಿಯೇ ಗುರುತಿಸಿದ್ದಾರೆ. ಸಾಮಾನ್ಯವಾಗಿ ತುಳು ಬ್ರಾಹ್ಮಣ ವರ್ಗದವರನ್ನು ಇಂದಿಗೂ ಅಣ್ಣೆರ್ ಎಂದು ಗೌರವದಿಂದ ಕರೆಯು ತ್ತಾರೆ. ಇದರಂತೆ 'ಪಂಗನಾಮ' ಶಬ್ದ ವಿವೇಚನೆಯೂ ಅಷ್ಟೇ ಕುತೂಹಲಕಾರಿಯಾಗಿದೆ. ಇದರಂತೆ ನಾವಡರು 'ತುಳು ಮತ್ತು ಕುಂದಾಪುರ ಕನ್ನಡ ತೌಲನಿಕ ಅಧ್ಯಯನ', 'ಕುಂದಾಪುರ ಪ್ರದೇಶದ ಕೃಷಿ ಪದಕೋಶ' ಎಂಬ ಮೌಲಿಕ ಸಂಪ್ರಬಂಧಗಳನ್ನು ಬರೆದಿದ್ದಾರೆ.

'ಜಾಗತೀಕರಣ : ಕನ್ನಡ ಸವಾಲು' ಇದು ನಾವಡರ ವೈಚಾರಿಕ ಲೇಖನವಾಗಿದೆ. ಜಾಗತೀಕರಣಕ್ಕೆ ಬದುಕಿನ ಅಪಾರ ವೈವಿಧ್ಯವನ್ನು ಮಟ್ಟಗೊಳಿಸುವ ಪ್ರಕ್ರಿಯೆಯನ್ನು ಎಚ್ಚರಿಕೆಯಿಂದ ಗಮನಿಸಬೇಕಾಗಿದೆ. ಅದು ತರಬಲ್ಲ ಸಾಂಸ್ಕೃತಿಕ ಧಾಳಿಯ ವಿರುದ್ಧ ನಮ್ಮ ರಕ್ಷಣೆ ಮಾಡಿಕೊಳ್ಳಬೇಕಾಗಿದೆ. ಕನ್ನಡ ಎದುರಿಸುವ ತಲ್ಲಣಗಳನ್ನು ಮೀರಿ ಭಾಷಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕಾಗಿದೆಯೆಂಬ ನಾವಡರ ಸಲಹೆ ಮೌಲಿಕವಾದುದು.

ನಾವಡರು ಸಿ. ಉಪೇಂದ್ರ ಸೋಮಯಾಜಿ ಅವರ ಜತೆ ಸೇರಿ 'ಗೋವಿಂದ ಪೈ ಪದ ಪ್ರಯೋಗಕೋಶ'ವನ್ನು ರಚಿಸಿದ್ದಾರೆ(೧೯೮೬). ಹೊಸ ಪದರಚನೆಗಳನ್ನು ಸೃಷ್ಟಿಸಿ ಪ್ರಯೋಗಿಸುವುದು ಭಾಷಾ ಆಧುನೀಕರಣದ ಲಕ್ಷಣಗಳಲ್ಲಿ ಒಂದಾಗಿದೆ. ಈ ದೆಶೆಯಲ್ಲಿ ಗೋವಿಂದ ಪೈ ಅವರು ಹಲವಾರು ರೀತಿಯ ಪ್ರಯೋಗಗಳನ್ನು ಮಾಡಿದ್ದಾರೆ. ಕೆಲವು ಹಳೆಯ ಹಾಗೂ ಚಾಲ್ತಿಯಿಂದ ಬಿದ್ದು ಹೋದ ರೂಪಗಳಿಗೆ ಪುನರ್ಜೀವ ಕೊಟ್ಟಿದ್ದಾರೆ. ಇಂಗ್ಲಿಷ್ ಭಾಷೆಯ ಪ್ರಯೋಗಗಳ ಮಾದರಿಯಲ್ಲಿ ಕನ್ನಡ ಜಾಯಮಾನಕ್ಕೆ ತಕ್ಕಂತೆ ಇತರ ಪದಗಳನ್ನು ಮಾರ್ಪಡಿಸಿದ್ದಾರೆ. ಕನ್ನಡ ಧಾತುಗಳಿಗೆ ಪ್ರತ್ಯಯಗಳನ್ನು ಸೇರಿಸಿ ಹೊಸ ರೂಪಗಳನ್ನು ಟಂಕಿಸಿದ್ದಾರೆ. ಪೈಯವರ ಪ್ರತಿಯೊಂದು ಪದವು ಅವರ ವ್ಯಾಕರಣ ಪ್ರಜ್ಞೆಯ ಪರೀಕ್ಷೆಯಲ್ಲಿ ತೇರ್ಗಡೆಯಾಗಿಯೇ ಬಂದವುಗಳು ಕೆಲವು ಪದರೂಪಗಳು ಇಂತಿವೆ.

ಪದ	ಸಾಂಪ್ರದಾಯಿಕ ಅರ್ಥ	ಪೈಯವರ ಹೊಸರ್ಥ
ಅಕ್ಷರಿಕೆ	ಅಕ್ಷರಗಳು(ಉಚ್ಚಾರಾಂಶ)	ಕಾಗುಣಿತ
ಅಡಿಮೆ	ಕೆಳಗಿರುವಿಕೆ	ದಾಸ್ಯ
ಒಪ್ಪಯಿಕೆ	ಒಪ್ಪಿಸುವಿಕೆ	ರಾಜೀನಾಮೆ ಪತ್ರ

ಒಂದು ಭಾಷೆಯನ್ನು ಹಿಂದೆಯೇ ಇದ್ದ ಭಾಷಿಕ ಸರಕನ್ನು ಬಳಸಿಕೊಂಡು ನೂತನ ಪದಗಳನ್ನು ಸೃಷ್ಟಿಸಿದ್ದಾರೆ. ಮರುಕಾಣಿಕೆ(ಪುನರ್ಮುದ್ರಣ), ಒಳಮಾರು

(ಆಮದು), ಹೊರಮಾರು(ರಫ್ತು) ಪೈಯವರು ಬಳಕೆಗೆ ತಂದ ವಿಶೇಷ ಪದಗಳನ್ನು ಉದ್ಧರಣೆಯೊಂದಿಗೆ ಕೊಟ್ಟಿದ್ದಾರೆ. ಉದಾ. ಅಕಾಂಡ(ನಾ), ಅನಿರೀಕ್ಷಿತ, ಆಕಸ್ಮಿಕ, 'ಹೀಗೆ ಸಾಹಿತ್ಯ ಮಂದಿರದ ಹೊಸ್ತಿಲಲ್ಲಿ ಅಕಾಂಡವಾಗಿ ಎಡವಿದೆ' (ಕನ್ನಡದ ಮೊರೆ, ಪು.೧೩). ಪದ, ಅದರ ವ್ಯಾಕರಣ ವರ್ಗ, ಅರ್ಥ, ಪ್ರಯೋಗ, ನಿಷ್ಪತ್ತಿ ಹೀಗೆ ಈ ಪ್ರಕೋಶ ರಚನೆಯಾಗಿದೆ.

ಪೈಯವರ ಕಾವ್ಯಗಳ ರಸಸ್ಥಾನಗಳ ಆಸ್ವಾದನೆಗೆ ಅಗತ್ಯವಾಗಿರುವ ಒಂದು ಕೊರತೆಯನ್ನು ಈ ಪ್ರಕೋಶ ಹೋಗಲಾಡಿಸಿದೆ. ಇದು ಪೈಯವರ ಶಬ್ದ ನಿರ್ಮಾಣ ಕಲೆಯನ್ನು ಎತ್ತಿ ತೋರಿಸುವುದಲ್ಲದೆ ನಮಗೆ ಸ್ವಂತವಾಗಿ ನೂತನ ಶಬ್ದ ನಿರ್ಮಾಣಕ್ಕೆ ಸಹಾಯವನ್ನು ಒದಗಿಸುತ್ತದೆ. ಪೈಯವರ ಕೃತಿಗಳನ್ನು ಓದುವಾಗ ಈ ಕೋಶವು ಕೈಪಿಡಿಯಂತೆ ನೆರವಾಗುತ್ತದೆಯಲ್ಲದೆ ಕನ್ನಡದಲ್ಲಿ ಹೊಸ ಪಾರಿಭಾಷಿಕಗಳನ್ನು ಸೃಷ್ಟಿ ಮಾಡುವವರಿಗೆ ಮಾರ್ಗದರ್ಶಕವಾಗಿದೆ. ನಾವಡರ ಈ ಕೋಶ ಕನ್ನಡ ನಿಘಂಟು ಕ್ಷೇತ್ರಕ್ಕೆ ಹಾಗೂ ಕನ್ನಡ ವಿಕಾಸಕ್ಕೆ ಒಂದು ಮಹತ್ತರ ಕೊಡುಗೆಯಾಗಿದೆ.

ನಾವಡರು ಭಾಷಾವಿಜ್ಞಾನ ಕ್ಷೇತ್ರದಲ್ಲಿ ಆಳವಾದ ಜ್ಞಾನ ಹಾಗೂ ವ್ಯಾಪಕವಾದ ತಿಳಿವಳಿಕೆಯನ್ನು ಪಡೆದಿದ್ದಾರೆಂಬುದಕ್ಕೆ ಆ ಕ್ಷೇತ್ರದಲ್ಲಿ ಅವರು ಬರೆದ ಮೇಲಿನ ಸಂಪ್ರಬಂಧಗಳೇ ಸಾಕ್ಷಿ. ಕನ್ನಡ ಭಾಷಾಧ್ಯಯನವನ್ನು ಜೀವಂತವಾಗಿಟ್ಟಿರುವ, ಮುನ್ನಡೆಸಿರುವ ಪ್ರೊ. ನಾವಡರ ಪ್ರಯತ್ನ ಶ್ಲಾಘ್ಯವಾಗಿದೆ.

ಆಕರಗ್ರಂಥ

೧. ನಾವಡ ಎ.ವಿ., ೨೦೧೫, ಸಾಹಿತ್ಯ ಶೋಧ, ಶೋಧನ ಪ್ರಕಾಶನ, ಮಂಗಳೂರು.

೨೦

ಸವದತ್ತಿಮಠ ಅವರ 'ಭಾಷಾಲೇಖ' - ಒಂದು ವಿವೇಚನೆ

ಕನ್ನಡ ವ್ಯಾಕರಣ ಪರಂಪರೆಯು ಇತ್ತೀಚಿನ ಕೆಲವು ದಶಕಗಳಲ್ಲಿ ತನ್ನ ಜಾಡನ್ನು ಕ್ರಮೇಣ ಭಾಷಾವಿಜ್ಞಾನದ ಕಡೆಗೆ ತಿರುಗಿಸಿತು. ಭಾಷಾವಿಜ್ಞಾನ ಅದರಲ್ಲೂ ವರ್ಣನಾತ್ಮಕ ವಿಶ್ಲೇಷಣೆ ಕನ್ನಡದಲ್ಲಿ ತನ್ನ ಪ್ರಸ್ಥಾನವನ್ನು ಹೇಗೆ ಹಬ್ಬಿಸಿಕೊಂಡಿತೆಂಬುದನ್ನು ನೆನೆದು ಕೊಂಡರೆ ಸವದತ್ತಿ ಮಠರ ಹೆಸರು ಪ್ರಮುಖವಾಗಿ ಕಾಣುತ್ತದೆ. ಅವರ ಭಾಷಾವಿಜ್ಞಾನ ಸಂಪ್ರಬಂಧಗಳ ಸಂಕಲನ 'ಭಾಷಾಲೇಖ'ವನ್ನು ಕೇಂದ್ರವಾಗಿಟ್ಟು ಕೊಂಡು ಸವದತ್ತಿ ಮಠರ ಭಾಷಾಕ್ಷೇತ್ರದ ಸಾಧನೆಯನ್ನು ಸ್ಥೂಲವಾಗಿ ಈ ಲೇಖನದಲ್ಲಿ ವಿವೇಚಿಸಲಾಗಿದೆ.

೧

ಸವದತ್ತಿಮಠರು ಭಾಷಾಸಂಶೋಧನೆಗೆ ತೊಡಗುವ ಮುನ್ನ ಕನ್ನಡ ಭಾಷಾಪ್ರಭೇದ ಗಳ ರಚನೆಯನ್ನು ಕುರಿತು ಇಂಗ್ಲಿಶಿನಲ್ಲಿ ವರ್ಣನಾತ್ಮಕ ಭಾಷಾವಿಜ್ಞಾನ ಶೋಧಗಳು ತಕ್ಕಮಟ್ಟಿಗೆ ನಡೆದಿದ್ದವು. ವರ್ಣನಾತ್ಮಕ ಭಾಷಾವಿಜ್ಞಾನದ ಶೋಧಗಳನ್ನು ಕಾಲಕ್ರಮದಲ್ಲಿ ಇಟ್ಟು ನೋಡುವ, ಬದಲಾವಣೆಗಳ ಸೂತ್ರ ಕಂಡುಹಿಡಿಯುವ, ಇತರ ಜ್ಞಾತಿ ಭಾಷೆ ಗಳೊಡನೆ ಹೋಲಿಸಿ ನೋಡುವ ಕಾರ್ಯ ಶೈಶವಾವಸ್ಥೆಯಲ್ಲಿದ್ದಿತು. ಆ ಹೊತ್ತಿಗಾಗಲೇ ತೀ.ನಂ.ಶ್ರೀ., ಆರ್.ಸಿ. ಹಿರೇಮಠ, ಎಚ್.ಎಸ್. ಬಿಳಿಗಿರಿ, ಡಿ.ಎನ್. ಶಂಕರಭಟ್. ಎಂ. ಚಿದಾನಂದಮೂರ್ತಿ, ಜೆ.ಎಸ್. ಕುಳ್ಳಿ, ವಿಲ್ಯಂ ಮಾಡ್ತ ಮುಂತಾದ ವಿದ್ವಾಂಸರು ಕನ್ನಡ ಭಾಷಾಧ್ಯಯನ ಕ್ಷೇತ್ರಕ್ಕೆ ಭದ್ರವಾದ ಅಡಿರಚನೆ ಹಾಕಿದ್ದರು. ಅಂತಹ ಕಾಲಘಟ್ಟದ ಸಂದರ್ಭದಲ್ಲಿಯೇ ಸವದತ್ತಿಮಠರು ಭಾಷಾವಿಜ್ಞಾನ ಭೂಮಿಕೆಯಲ್ಲಿ ಕಾಣಿಸಿಕೊಂಡರು.

ಸವದತ್ತಿಮಠರು ವಿದ್ಯಾರ್ಥಿಗಳನ್ನು ಹಾಗೂ ಭಾಷಾವಿಜ್ಞಾನದ ಪರಿಚಯ ಮಾಡಿ ಕೊಳ್ಳಲು ಬಯಸುವ ವಿದ್ಯಾವಂತರನ್ನು ಗಮನದಲ್ಲಿಟ್ಟುಕೊಂಡು ಕನ್ನಡದಲ್ಲಿ ಸರಳವಾದ ಶೈಲಿಯಲ್ಲಿ ಭಾಷಾವಿಜ್ಞಾನದ ಮೇಲೆ ಪುಸ್ತಕಗಳನ್ನು ಬರೆಯುವ ಯೋಜನೆಯನ್ನು ಹಾಕಿಕೊಂಡರು. ತತ್ಪರಿಣಾಮವಾಗಿ 'ದ್ರಾವಿಡ ಭಾಷಾ ವ್ಯಾಸಂಗ' (೧೯೭೬), 'ಕನ್ನಡ

ಭಾಷಾ ವ್ಯಾಸಂಗ' (೧೯೭೯) ಇಂತಹ ಪ್ರಮಾಣೀಕೃತ ಪಠ್ಯಗಳು ಮೂಡಿಬಂದವು. ಈ ಎರಡು ಕೃತಿಗಳು ಕನ್ನಡ ಭಾಷಾವಿಜ್ಞಾನಕ್ಕೆ ಮಹತ್ವದ ಕೊಡುಗೆಗಳಾಗಿವೆ.

ದ್ರಾವಿಡ ಭಾಷಾವಿಜ್ಞಾನ ಕ್ಷೇತ್ರದಲ್ಲಿ ಕಾಲ್ಡ್‌ವೆಲ್‌ರ ತರುವಾಯ ನೂರಿಪ್ಪತ್ತೈದು ವರ್ಷಗಳಲ್ಲಿ ಅನೇಕ ಗ್ರಂಥಗಳು, ಲೇಖನಗಳು ಪ್ರಕಟವಾಗಿದ್ದವು. ಎಂ.ಬಿ. ಎಮಿನೊ, ಟಿ. ಬರೊ. ಭ. ಕೃಷ್ಣಮೂರ್ತಿ ಮುಂತಾದವರು ದ್ರಾವಿಡ ಭಾಷಾವಿಜ್ಞಾನ ಕ್ಷೇತ್ರಕ್ಕೆ ಮೌಲಿಕ ಕೊಡುಗೆಗಳನ್ನು ಸಲ್ಲಿಸಿದ್ದಾರೆ. ಇವರ ಬರೆಹಗಳು ಇಂಗ್ಲಿಶಿನಲ್ಲಿವೆ. ಆದರೆ ದ್ರಾವಿಡ ಭಾಷಾವಿಜ್ಞಾನದ ಮೂಲತತ್ವಗಳನ್ನು ಕನ್ನಡದಲ್ಲಿ ಪರಿಚಯಿಸುವ ಅಧಿಕೃತ ಕೃತಿಗಳು ಬಂದಿರಲಿಲ್ಲ ಆ ಕೊರತೆಯನ್ನು ಸವದತ್ತಿಮಠರ 'ದ್ರಾವಿಡ ಭಾಷಾ ವ್ಯಾಸಂಗ' ಪೂರೈಸಿತು. ಆ ಕೃತಿಯ ಸ್ವರೂಪದ ಬಗ್ಗೆ ಲೇಖಕರೇ ಅರಿಕೆ ಮಾಡಿಕೊಂಡಿರುವಂತೆ 'ತೀರ ಆಳವೂ ಅಲ್ಲದ ಸಾಮಾನ್ಯವೂ ಅಲ್ಲದ ವ್ಯಾಸಂಗಿಗಳಿಗೆ ಅಗತ್ಯವೆನಿಸುವ ವಿಷಯಗಳನ್ನು ಕ್ರೋಢಿಕರಿಸಲಾಗಿದೆ' ಎಂಬುದು ಎಲ್ಲವನ್ನು ಹೇಳುತ್ತದೆ.

'ದ್ರಾವಿಡ ಭಾಷಾವ್ಯಾಸಂಗ'ದಲ್ಲಿ ದ್ರಾವಿಡ ಮತ್ತು ದ್ರಾವಿಡರು, ದ್ರಾವಿಡ ಭಾಷಾ ವಿಜ್ಞಾನದ ಘಟ್ಟಗಳು, ದ್ರಾವಿಡ ಭಾಷೆಗಳು, ದ್ರಾವಿಡ ಭಾಷೆಗಳ ವರ್ಗೀಕರಣ, ದ್ರಾವಿಡ ವರ್ಗದ ವೈಲಕ್ಷಣಗಳು, ದ್ರಾವಿಡ ಭಾಷಾ ಧ್ವನಿಮಾತ್ಮಕ ಬೆಳವಣಿಗೆಗಳು (ಇ>ಎ>, ಎ>ಒ, ಕ್>ಚ್, ಚ್>ಸ್ ಲೋಪ ಮುಂತಾದ ಪ್ರಕ್ರಿಯೆಗಳು), ದ್ರಾವಿಡ ಭಾಷೆಗಳ ಆಕೃತಿಮಾತ್ಮಕ ಬೆಳವಣಿಗೆಗಳು(ಲಿಂಗ-ವಚನ, ವಿಭಕ್ತಿ, ಸರ್ವನಾಮಗಳು ಇತ್ಯಾದಿ ಪ್ರಕ್ರಿಯೆಗಳು) ಮೂಲ ದ್ರಾವಿಡ ಸ್ವರೂಪ ಮುಂತಾದ ಹತ್ತು ವಿಭಾಗಗಳಿವೆ. ತಮಿಳ್, ತೆಲುಗು, ಕನ್ನಡ, ಮಲಯಾಳಂ ಮತ್ತು ತುಳು ಭಾಷೆಗಳ ಪ್ರಯೋಗಗಳ ಹಿನ್ನೆಲೆಯಲ್ಲಿ ದ್ರಾವಿಡ ಭಾಷೆಗಳ ಸ್ವರೂಪವನ್ನು ಸರಳವಾದ ಶೈಲಿಯಲ್ಲಿ ಹೇಳಿದ್ದಾರೆ.

ದ್ರಾವಿಡ ಭಾಷಾ ವ್ಯಾಸಂಗದ ನಂತರ ಸವದತ್ತಿಮಠರು ಕನ್ನಡದ ರಚನೆಯನ್ನು ಬಿಂಬಿಸುವ 'ಕನ್ನಡ ಭಾಷಾವ್ಯಾಸಂಗ' ಕೃತಿಯನ್ನು ಸಿದ್ಧಪಡಿಸಿದರು. ಇದರಲ್ಲಿ ಹಳಗನ್ನಡದ ಅವಸ್ಥೆಯಿಂದ ಇಲ್ಲಿಯವರೆಗಿನ ಕನ್ನಡ ವ್ಯಾಕರಣ ವಿಚಾರಗಳನ್ನು ಆಧುನಿಕ ಭಾಷಾವಿಜ್ಞಾನದ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ಇದರಲ್ಲಿ ಧ್ವನಿಮಾ, ಆಕೃತಿಮಾ ಮತ್ತು ವಾಕ್ಯವಿಶ್ಲೇಷಣೆ ಎಂಬ ಮೂರು ಮುಖ್ಯ ವಿಭಾಗಗಳಿವೆ. ಮೊದಲನೆಯ ಧ್ವನಿಮಾ ವಿಭಾಗದಲ್ಲಿ ಸ್ವರ ಮತ್ತು ವ್ಯಂಜನ ಧ್ವನಿಮಾಗಳ ವಿವರಣೆ, ಧ್ವನಿಗಳ ಪರಿಮಿತ ಹಾಗೂ ಸಂಧಿ ವಿವರಗಳು ಹೇಳಲ್ಪಟ್ಟಿವೆ. ಎರಡನೆಯ ಭಾಗದಲ್ಲಿ ನಾಮಪದ, ಕ್ರಿಯಾಪದಗಳ ಆಕೃತಿಮಾ ವಿವರಣೆಯಿದೆ. ಮೂರನೆಯ ಭಾಗದಲ್ಲಿ ವಾಕ್ಯರಚನೆಯ ಚರ್ಚೆಯಿದೆ. ಹೆಚ್ಚು ಪರಿಚಯವಿರುವ ಪ್ರಯೋಗಗಳನ್ನು ಬಳಸಿಕೊಂಡು ಕನ್ನಡದ ರಚನೆಯನ್ನು ನಿರೂಪಿಸಿದ್ದಾರೆ. ಲೇಖಕರ ಉತ್ಸಾಹ ಮತ್ತು ಪ್ರಾಮಾಣಿಕ ಯತ್ನ ಇಲ್ಲಿ ವ್ಯಕ್ತವಾಗಿದೆ. ಅಲ್ಲಲ್ಲಿ ಚರ್ಚೆಗೆ ಸಾಧ್ಯವಿರುವ ಕಡೆಗಳಲ್ಲಿ ವಿದ್ವಾಂಸರ ಅಭಿಪ್ರಾಯಗಳನ್ನು ದಾಖಲಿಸಿ ಸೂಕ್ತ ಉತ್ತರಗಳನ್ನು ಕಂಡುಕೊಳ್ಳಲು ಯತ್ನಿಸಿದ್ದಾರೆ.

ಈ ಕೃತಿಗಳ ನಂತರ ಸವದತ್ತಿಮಠರು ದ್ರಾವಿಡ ಮತ್ತು ಕನ್ನಡದ ರಚನೆಯನ್ನು ಸಂಕ್ಷಿಪ್ತವಾಗಿ ಪರಿಚಯಿಸುವ 'ದ್ರಾವಿಡ ಭಾಷೆಗಳು', 'ದ್ರಾವಿಡ ಜನಾಂಗ', 'ಕನ್ನಡ ಭಾಷೆ', 'ಕನ್ನಡ ಭಾಷಾ ಕೈಪಿಡಿ', 'ಕನ್ನಡ ಭಾಷಾ ಸಂಪದ', 'ಕನ್ನಡ ಭಾಷಾ ಪ್ರಭೇದಗಳು' ಹಾಗೂ 'ಆರ್ಯನ್ ಭಾಷೆಗಳ ಸ್ವರೂಪ'ವನ್ನು ಪರಿಚಯಿಸುವ 'ಆರ್ಯ ಭಾಷಾ ವ್ಯಾಸಂಗ' ಇಂತಹ ಕೃತಿಗಳು ಭಾಷಾವಿಜ್ಞಾನದ ಪರಿಚಯ ಮಾಡಿಕೊಳ್ಳುವ ವಿದ್ಯಾವಂತರಿಗೆ ತುಂಬ ಪ್ರಯೋಜನವಾಗುತ್ತವೆ.

ಭಾಷೆ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದ ಕವಿಗಳಲ್ಲಿ ಹರಿಹರನು ಒಬ್ಬ. ಹರಿಹರನ ಭಾಷೆಯ ರಚನೆಯನ್ನು ಕುರಿತ ಅವರ ಪಿಎಚ್.ಡಿ. ನಿಬಂಧ Harihara's Ragales-A Linguistic Analysis' ತುಂಬ ಮೌಲಿಕವಾಗಿದೆ. ಹರಿಹರನ ರಗಳೆಗಳ ಭಾಷಾರಚನೆಯ ಎಲ್ಲ ಅಂಶಗಳನ್ನು ಹೋಲಿಸಿ ನೋಡಿದ್ದು ಈ ನಿಬಂಧದ ಮುಖ್ಯ ವೈಶಿಷ್ಟ್ಯ; ಒಂದು ರೀತಿಯಲ್ಲಿ ಸಾಹಸವೂ ಹೌದು. ಇದರಲ್ಲಿ ಧ್ವನಿರಚನೆ, ಸಂಧಿ ಪ್ರಕ್ರಿಯೆ, ನಾಮಆಕೃತಿಮಾ, ಕ್ರಿಯಾಪದಆಕೃತಿಮಾ ಪದಗುಂಚಗಳು ಇಂತಹ ಎಂಟು ಅಧ್ಯಾಯಗಳಿವೆ. ಹರಿಹರನ ರಗಳೆಗಳ ಭಾಷಿಕ ವೈಲಕ್ಷಣಗಳನ್ನು ಖಚಿತವಾಗಿ ಗುರುತಿಸಿದ್ದಾರೆ. ಆಧುನಿಕ ಕನ್ನಡ ಭಾಷಾವಿಜ್ಞಾನ ಕ್ಷೇತ್ರಕ್ಕೆ ಈ ಗ್ರಂಥವು ಒಂದು ಮಹತ್ವದ ಕೊಡುಗೆ. ಜೊತೆಗೆ ಮಧ್ಯಕಾಲದ ಕನ್ನಡದ ರಚನೆಯನ್ನು ತಿಳಿದುಕೊಳ್ಳಲಿಕ್ಕೆ ವಿಪುಲವಾದ ದತ್ತ ಸಾಮಗ್ರಿಯೂ ಇದರಲ್ಲಿ ಸಂಗ್ರಹಿಸಲ್ಪಟ್ಟಿದೆ.

೨

ಸವದತ್ತಿಮಠರ ಭಾಷಾವಿಜ್ಞಾನಕ್ಕೆ ಸಂಬಂಧಿಸಿದ ಸಂಪ್ರಬಂಧಗಳು 'ಭಾಷಾಲೇಖ' ದಲ್ಲಿ ಮಡುಗಟ್ಟಿವೆ(೧೯೯೯). ಭಾಷಾಶಾಸ್ತ್ರದಲ್ಲಿ ಅವರ ವಿದ್ವತ್ತಿನ ಆಳ ವೈಶಾಲ್ಯತೆ ಅವರ ಸಂಪ್ರಬಂಧಗಳಲ್ಲಿ ಅಡಗಿದೆ. ಅವರ ಭಾಷಾಶಾಸ್ತ್ರೀಯ ಬರೆಹಗಳ ಶೀರ್ಷಿಕೆ ಯನ್ನಷ್ಟೇ ನೋಡಿದರೂ ಸಾಕು, ಅವರ ಕಾರ್ಯ ವ್ಯಾಪ್ತಿ ಎಂಥದೆಂಬ ಕಲ್ಪನೆ ಬರುತ್ತದೆ. ಅವರ ಸಂಶೋಧನೆಯನ್ನು ನಮ್ಮ ತಿಳಿವಳಿಕೆಯ ಅನುಕೂಲಕ್ಕಾಗಿ ವರ್ಣನಾತ್ಮಕ ಭಾಷಾವಿಜ್ಞಾನ, ಉಪಭಾಷಾವಿಜ್ಞಾನ, ನಾಮವಿಜ್ಞಾನ ಮತ್ತು ಕಾವ್ಯಭಾಷೆ ಎಂದು ನಾಲ್ಕು ಭಾಗಗಳಲ್ಲಿ ವರ್ಗೀಕರಿಸಬಹುದು.

ಸವದತ್ತಿಮಠರ ಭಾಷಾಧ್ಯಯನದ ಕಾರ್ಯಕ್ಷೇತ್ರ ಗುಲಬರ್ಗಾ. ಅವರು ಅಲ್ಲಿ ಏಕಾಂಗಿಯಾಗಿಯೇ ತಮ್ಮ ಅಧ್ಯಯನವನ್ನು ಮುಂದುವರಿಸಿದರು. ಅದನ್ನೇ ಅವರೇ ಭಾಷಾಲೇಖದ 'ಮುಮ್ಮಾತು' ಭಾಗದಲ್ಲಿ ಹೀಗೆ ಹೇಳಿಕೊಂಡಿದ್ದಾರೆ(ತಮ್ಮ ಗುರುಗಳಾದ ಆರ್.ಸಿ. ಹಿರೇಮಠ ಮತ್ತು ಜೆ.ಎಸ್. ಕುಳ್ಳಿ ಅವರನ್ನು ಸ್ಮರಿಸುತ್ತ) 'ನನ್ನ ಗುರುಗಳು ದೂರದ ಧಾರವಾಡದಲ್ಲಿ ಅವರಿಗೋ ನೂರೆಂಟು ಕ್ಷೇತ್ರಗಳ ಸಾವಿರಾರು ಕಾರ್ಯ ಬಾಹುಳ್ಯ. ಹೀಗಾಗಿ ನಾನು ಒಬ್ಬೊಂಟಿಗನಾಗಿಯೇ ಸ್ವಪ್ರಯತ್ನದಿಂದ ನನ್ನಷ್ಟಕ್ಕೇ ನಾನೇ ಕೈಕಾಲು ಬಡಿಯುತ್ತ ಈ ಅಲಕ್ಷಿತ ಭಾಷಾವಿಜ್ಞಾನ ಸಾಗರದಲ್ಲಿ ತೇಲಾಡುತ್ತ

ಸಾಗಿದೆ. ಯಾವ ಆಸರೆ ನನಗೆ ದೊರೆಯಲಿಲ್ಲ' ಎಂಬ ಮಾತು ಅವರ ಒಟ್ಟು ಅಧ್ಯಯನದ ಧೋರಣೆಯನ್ನು ಬಿಂಬಿಸುತ್ತದೆ. ಪ್ರಸ್ತುತ ಭಾಷಾಲೇಖದಲ್ಲಿ ಭಾಷೆ-ಉಪಭಾಷೆ-ಕಾವ್ಯಭಾಷೆಗಳಿಗೆ ಸಂಬಂಧಿಸಿದಂತೆ ಮೂವತ್ತೈದು ಲೇಖನಗಳು ಒಂಬತ್ತು ದಳಗಳಲ್ಲಿ ಹಂಚಿಕೆಯಾಗಿವೆ.

'ಭಾಷೆಯ ಅಧ್ಯಯನ ಸಾಂಪ್ರದಾಯಿಕ–ಆಧುನಿಕ' ಲೇಖನದಲ್ಲಿ ಭಾಷೆಯ ಅಧ್ಯಯನ ಆರಂಭ ಹಂತದಲ್ಲಿ ಹೆಚ್ಚಾಗಿ ಸಂಸ್ಕೃತ ವ್ಯಾಕರಣಗಳ ಹಿನ್ನೆಲೆಯಲ್ಲಿಯೇ ನಡೆಯುತ್ತಿತ್ತು. ೧೯೪೬ರ ನಂತರ ಆಧುನಿಕ ಭಾಷಾವಿಜ್ಞಾನದ ಶಾಖೆಗಳಾದ ಐತಿಹಾಸಿಕ, ವರ್ಣನಾತ್ಮಕ, ತೌಲನಿಕ ವ್ಯಾಕರಣ ತತ್ತ್ವಗಳ ಹಿನ್ನೆಲೆಯಲ್ಲಿ ಭಾಷೆಯ ರಚನೆಯ ಶೋಧ ಆರಂಭವಾಯಿತೆಂದು ಕನ್ನಡ ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. 'ಕನ್ನಡ ಭಾಷಾ ಪ್ರಭೇದಗಳ ನಿರ್ಮಾಣ ಕಾರಣಗಳು' ಎಂಬ ಲೇಖನದಲ್ಲಿ ಭಾಷೆಯ ಬೆಳವಣಿಗೆಯಲ್ಲಿ ಭೌಗೋಳಿಕ ಅಡೆತಡೆಗಳು, ಅನ್ಯಭಾಷಾ ಸಂಸರ್ಗ ಹಾಗೂ ಸಾಮಾಜಿಕ ಅಂಶಗಳು ಬಹುಮುಖ್ಯ ಕಾರಣಗಳಾಗಿವೆ ಎಂದು ಸಕಾರಣವಾಗಿಯೇ ವಾದಿಸಿದ್ದಾರೆ. ಅದಕ್ಕೆ ಸಂಬಂಧಿಸಿದಂತೆ ಅನೇಕ ವಿವರಗಳನ್ನು ಕೊಡಲು ಯತ್ನಿಸಿದ್ದಾರೆ.

ಮಕ್ಕಳ ಭಾಷೆಯ ಸ್ವರೂಪವನ್ನು ಕುರಿತು ಗಂಭೀರ ಅಧ್ಯಯನ ಕನ್ನಡದಲ್ಲಿ ನಡೆದಿಲ್ಲ. ಸವದತ್ತಿಮಠರ ಎರಡು ಬರಹಗಳ ಆ ಕೊರತೆಯನ್ನು ಹೋಗಲಾಡಿಸಿವೆ. ಮಕ್ಕಳು ಅನುಕರಣೆಯಿಂದ ಭಾಷೆಯನ್ನು ರೂಢಿಸಿಕೊಳ್ಳುತ್ತಾರೆ; ಶಬ್ದಗಳನ್ನು ಹೊಂದಾಣಿಕೆ ಮಾಡಿಕೊಳ್ಳುತ್ತಾರೆ. ೧-೧೬ರ ವಯಸ್ಸಿನಲ್ಲಿ ಮಕ್ಕಳ ಕಲಿಕೆಯ ೫ ಹಂತಗಳನ್ನು ಗುರುತಿಸಿದ್ದಾರೆ. ೧೬ನೇ(೧-೪, ೫-೫, ೫-೮, ೮-೧೧, ೧೧-೧೬) ವಯಸ್ಸಿನಲ್ಲಿ ಮಗುವಿಗೆ ಕಲಿಕೆಯ ಗ್ರಹಿಕೆಯ ಸಾಮರ್ಥ್ಯ ಬಂದಿರುತ್ತದೆ. ಮಕ್ಕಳ ಕಲಿಕೆಯ ವಿಕಾಸ ಕ್ರಮವನ್ನು ಕುರಿತು 'ಮಕ್ಕಳ ಭಾಷೆ', 'ಮಕ್ಕಳ ಸಾಹಿತ್ಯ: ಭಾಷಿಕ ಅಧ್ಯಯನ' ಈ ಬರೆಹಗಳಲ್ಲಿ ಚರ್ಚಿಸಿದ್ದಾರೆ. ಕನ್ನಡ ಶಾಸನಗಳ ಭಾಷಿಕ ಸ್ವರೂಪವನ್ನು ಒಂದು ಲೇಖನದಲ್ಲಿ ಪರಿಚಯಿಸಿದ್ದಾರೆ.

ಒಂದು ಭಾಷಾ ಸಮುದಾಯದಲ್ಲಿ ಎರಡು ಭಿನ್ನ ಭಾಷೆಯನ್ನು ಉಪಯೋಗಿಸುವ ಭಾಷಿಕರು ಪರಸ್ಪರ ಭಾಷೆಗಳನ್ನು ಅರ್ಥಮಾಡಿಕೊಳ್ಳುವ, ಅಭಿವ್ಯಕ್ತಿಸುವ ಸಾಮರ್ಥ್ಯ ವಿದ್ದರೆ ಅಂತಹ ದ್ವಿಭಾಷಾ ಸಮುದಾಯದ ಸ್ಥಿತಿ ದ್ವಿಭಾಷಿಕತೆ. ದ್ವಿಭಾಷೆಗಳಲ್ಲಿ ಪರಸ್ಪರ ಸಂಪರ್ಕದಲ್ಲಿರುವ ಪರಿಸರ ದ್ವಿಭಾಷಿಕ ಪರಿಸರ. ತಮ್ಮ ಮಾತೃಭಾಷೆಯ ಜೊತೆಗೆ ಇನ್ನೊಂದು ಭಾಷೆಯಲ್ಲಿ ಗ್ರಹಿಸುವ, ಮಾತನಾಡುವ, ಓದುವ ಹಾಗೂ ಬರೆಯುವ ಕೌಶಲ್ಯಗಳಲ್ಲಿ ಮೊದಲೆರಡರಲ್ಲಿ ಪರಿಣಿತರಾಗಿದ್ದರೆ ಅವರು ದ್ವಿಭಾಷಿಕರು. ಎರಡು ಭಿನ್ನ ಭಾಷೆಗಳನ್ನು ಆಡುವ ವ್ಯಕ್ತಿಗಳು ಪರಸ್ಪರರ ಭಾಷೆಯನ್ನು ಅರ್ಥಮಾಡಿ ಕೊಳ್ಳಬಲ್ಲರು. ಆದರೆ ಅಭಿವ್ಯಕ್ತಪಡಿಸುವ ಸಾಮರ್ಥ್ಯವಿರುವುದಿಲ್ಲ. ಅಂತಹ ಭಾಷಾಸ್ಥಿತಿ ಅರ್ಧ ದ್ವಿಭಾಷಿಕತೆ ಎನಿಸಿಕೊಳ್ಳುತ್ತದೆ.

ಈ ಹಿನ್ನೆಲೆಯಲ್ಲಿ 'ಕಲಬುರ್ಗಿ ಕನ್ನಡ' ಲೇಖನದಲ್ಲಿ ಕಲಬುರ್ಗಿ ಕನ್ನಡದ ವ್ಯವಹಾರಿಕ ಭಾಷಾ ಸ್ವರೂಪವನ್ನು ಗುರುತಿಸಿದ್ದಾರೆ. ಕಲಬುರ್ಗಿಯ ಮುಸಲ್ಮಾನರ ಕನ್ನಡದ ರಚನೆಯನ್ನು ಕುರಿತು ಒಂದು ಲೇಖನದಲ್ಲಿ ಪರಿಚಯ ಮಾಡಿಕೊಟ್ಟಿದ್ದಾರೆ. ಹೈದ್ರಾಬಾದ ಕರ್ನಾಟಕ ಕನ್ನಡದ ಸ್ಥೂಲವಾದ ವಿವರಣೆ ಒಂದು ಬರೆಹದಲ್ಲಿದೆ. ಹೈದ್ರಾಬಾದ ಕರ್ನಾಟಕದ ಕನ್ನಡ ಭಾಷೆಯಲ್ಲಿ ಉರ್ದು ಬಳಕೆಯನ್ನು ಒಂದು ಲೇಖನದಲ್ಲಿ ನಿರೂಪಿಸಿದ್ದಾರೆ. ಸವದತ್ತಿಮಠರು ರಾಶಿ ರಾಶಿಯಾಗಿ ಮಾಹಿತಿ ಕಲೆ ಹಾಕುತ್ತಾರೆ. ನಿಜ, ಆದರೆ ದ್ವಿಭಾಷಿಕತೆಯ ಬಗೆಗೆ ಬರೆಯುವಾಗ ಸಾಮಗ್ರಿಯನ್ನು ಸಾಮಾಜಿಕ ಚೌಕಟ್ಟಿಗೆ ಒಳಪಡಿಸುವ ಕೆಲಸ ನಡೆಯದೇ ಲೇಖನಗಳು ಭಾಷೆಯ ವರ್ಣನಾತ್ಮಕ ನೆಲೆಯ ಸರಳ ಗ್ರಹಿಕೆಯನ್ನೇ ಪ್ರಧಾನವಾಗಿ ಮಾಡಿಕೊಂಡಿವೆ.

ಸವದತ್ತಿಮಠರು ಸಾಹಿತ್ಯಿಕ ಕನ್ನಡ ಭಾಷೆಯ ಸ್ವರೂಪವನ್ನು ಏಳು ಲೇಖನಗಳಲ್ಲಿ ಚರ್ಚಿಸಿದ್ದಾರೆ. ಕಾವ್ಯ ಭಾಷೆ, ಲಯ, ಬಂಧ ಇವುಗಳನ್ನು ಸಮೀಕರಿಸಿಯೇ ಲೇಖಕರು ನೋಡಿರುವುದು ಮೆಚ್ಚತಕ್ಕುದಾಗಿದೆ. ಕಾವ್ಯಭಾಷೆಯನ್ನು ಕೇವಲ ವರ್ಣನಾತ್ಮಕ ನೆಲೆಯಲ್ಲಿಯೇ ನೋಡಿದರೆ ಬರೆಹ ಶುಷ್ಕವಾಗುತ್ತದೆ ಎಂಬುದನ್ನು ಸವದತ್ತಿಮಠರು ಬಲ್ಲವರಾಗಿದ್ದಾರೆ. ಧರ್ಮಾಮೃತ, ಭಾರತ ಸಿಂಧು ರಶ್ಮಿ, ಪ್ರಭುಲಿಂಗಲೀಲೆ ಭವ್ಯ ಮಾನವ, ಬಸವಣ್ಣನವರ ವಚನಗಳು, ಮಹಾದೇವಿಯಕ್ಕಳ ವಚನಗಳು, ಮೇದಾರ ಕೇತಯ್ಯನ ವಚನಗಳು ಈ ಲೇಖನಗಳನ್ನು ಗಮನಿಸಿದಾಗ ಆ ಕವಿಗಳು, ವಚನಕಾರರು ತಮ್ಮ ಅಭಿವ್ಯಕ್ತಿಗಾಗಿ ತಮ್ಮ ಸಮಕಾಲೀನ ಪರಿಸರದ ವಾಗ್ರೂಢಿಗಳನ್ನು, ಗಾದೆಗಳನ್ನು ಬಳಸಿದ ರೀತಿಯನ್ನು ಅನುಲಕ್ಷಿಸ ಅವುಗಳನ್ನು ಸಮೀಕರಿಸಿ ಬರೆದಿದ್ದಾರೆ. ಇದರಿಂದ ಭಾಷೆಯ ಜೊತೆಗೆ ಸಾಂಸ್ಕೃತಿಕ ವಿಶಿಷ್ಟತೆಗಳನ್ನು ಗುರುತಿಸಲು ಲೇಖಕರು ಯಶಸ್ವಿಯಾಗಿ ದ್ದಾರಲ್ಲದೆ ಕಾವ್ಯದ ಒಟ್ಟು ಆಕೃತಿಯ ಸ್ವರೂಪ ಗ್ರಹಿಸಿದಂತಾಗುತ್ತದೆ. 'ಕಾಯಕ', 'ಪಾದೋದಕ', 'ಪ್ರಸಾದ', 'ದಾಸೋಹ' ಇಂತಹ ವೀರಶೈವ ಸಾಂಸ್ಕೃತಿಕ ಶಬ್ದಗಳು ವಚನಕಾರರಲ್ಲಿ ಬದುಕಿನ ಮೌಲ್ಯಗಳ ಉನ್ನತಿಯನ್ನು ಪ್ರತಿನಿಧಿಸುತ್ತವೆ. ಸಮಕಾಲೀನ ಮೌಲ್ಯಗ್ರಹಿಕೆಯನ್ನು ಹಿಂದಿನ ಭಾಷಿಕ ದಾಖಲೆಗಳ ಮೂಲಕ ಹೇಗೆ ಗ್ರಹಿಸುತ್ತವೆ ಎನ್ನುವ ವಿಚಾರ ಆ ಸಾಂಸ್ಕೃತಿಕ ಪದಗಳ ಚರ್ಚೆಯ ಹಿನ್ನೆಲೆಯಲ್ಲಿದೆ. ಕೆ. ಕುಶಾಲಪ್ಪ ಗೌಡರ 'ಕನ್ನಡ ಭಾಷಾವಲೋಕನ'ದ ಪರಿಶೀಲನೆ ಒಂದು ಲೇಖನದ ವಸ್ತುವಾಗಿದೆ. 'ದೂರದರ್ಶನ ನಾಟಕಗಳ ಭಾಷೆ' ಲೇಖನದಲ್ಲಿ ನಾಟಕದಲ್ಲಿ ಲೇಖಕರು ಬಳಸಿದ ಭಾಷೆ, ಭಾಗವಹಿಸಿದ ಕಲಾವಿದರ ಬಳಸಿದ ಭಾಷೆ ಇವುಗಳ ಹಿನ್ನೆಲೆಯಲ್ಲಿ ದೂರದರ್ಶನದಲ್ಲಿ ನಾಟಕಗಳ ಭಾಷಾಸ್ವರೂಪವನ್ನು ಗುರುತಿಸಿದ್ದಾರೆ.

ಭಾಷೆಯ ಮುಖ್ಯ ಉದ್ದೇಶ ಸಾಮಾಜಿಕ ಸಂಪರ್ಕ. ಭಾಷೆಯಷ್ಟು ಪರಸ್ಪರ ವಿನಿಯಮ ಸಾಮರ್ಥ್ಯ ಬೇರಾವ ಸಂವಹನಕ್ಕೂ ಇಲ್ಲ. ಭಾಷೆ ಸಂಸ್ಕೃತಿಯ ಮುಖ್ಯ ಅಂಗವಾಗಿರುವುದರಿಂದ ಭಾಷಾ ಸಮುದಾಯದಲ್ಲಿ ಭಾಷಿಕರು ಪರಸ್ಪರ ಆಂತರಿಕ

ಸಂಪರ್ಕ ಹೊಂದಿರುತ್ತಾರೆ. ಭಾಷಾವಿಜ್ಞಾನಿಗಳು ಬರೆಹದ ಭಾಷೆಗಿಂತ ಆಡುಭಾಷೆಗೆ (ಜನಪದ ಭಾಷೆ) ಹೆಚ್ಚು ಗಮನಹರಿಸುತ್ತಾರೆ. ಒಂದು ಭಾಷಾ ಸಮುದಾಯದ ಸಂಸ್ಕೃತಿಯನ್ನರಿಯಲು ಅವರ ಆಡುಭಾಷೆಯೇ ಮುಖ್ಯಆಕರವಾಗಿರುತ್ತದೆ. ಭಾಷೆ-ಸಮಾಜ ಮತ್ತು ಸಂಸ್ಕೃತಿ ಒಂದಕ್ಕೊಂದು ಪೂರಕವಾಗಿರುಕ್ತವೆ.

ಈ ಹಿನ್ನೆಲೆಯಲ್ಲಿ ಸವದತ್ತಿಮಠರ ಉಪಭಾಷಾ ಬರೆಹಗಳು ಮೂಡಿಬಂದಿವೆ. ಬೀದರ್ ಮತ್ತು ಕಲಬುರ್ಗಿ ಜಿಲ್ಲೆಗಳ ಎರಡು ಪ್ರಾತಿನಿಧಿಕ ಕಥೆಗಳನ್ನು ಭಾಷಾ ದೃಷ್ಟಿಯಿಂದ ತೌಲನಿಕವಾಗಿ ವಿಶ್ಲೇಷಿಸಿದ್ದಾರೆ. ಬೀದರ್ ಜಿಲ್ಲೆಯ ಕಥೆಯಲ್ಲಿ ಬೀದರ ಜನಪದ ಭಾಷೆಯ ಹಾಗೂ ಕಲಬುರ್ಗಿ ಜಿಲ್ಲೆಯ ಕಥೆಯಲ್ಲಿ ಕಲಬುರ್ಗಿ ಜನಪದ ಭಾಷೆಯ ಸ್ಥೂಲ ಸ್ವರೂಪ ತಿಳಿದುಬರುತ್ತದೆ. ಜನಪದ ಕತೆಗಳು ಬಳಕೆಯಾದ ಪ್ರದೇಶದ ಭಾಷಾಸ್ವರೂಪವನ್ನು ಗುರುತಿಸಲು ಸಹಕಾರಿಯಾಗಿವೆ ಎಂಬುದನ್ನು ಎರಡು ಲೇಖನದಲ್ಲಿ ತೋರಿಸಿದ್ದಾರೆ. ತಮ್ಮ ವಾದನ್ನು ತರ್ಕಬದ್ಧವಾಗಿ ನಿರೂಪಿಸುವಲ್ಲಿ ಗ್ರಂಥಕರ್ತರು ಯಶಸ್ವಿಯಾಗಿದ್ದಾರೆ. ಜನಪದ ಹಾಡುಗಳ ಸಂಪಾದನೆಯಲ್ಲಿ ಸಂಪಾದಕನಿಗೆ ಭಾಷಾವಿಜ್ಞಾನದ ಮೂಲತತ್ವಗಳ ಪರಿಚಯವಿರಬೇಕು ಎಂಬುದನ್ನು ಒಂದು ಲೇಖನದಲ್ಲಿ ಸಮರ್ಥಿಸಿದ್ದಾರೆ. ಬೈಲಹೊಂಗಲ ಪ್ರದೇಶದ ಜನಪದ ಭಾಷೆ ಮತ್ತು ಸಾಹಿತ್ಯವನ್ನು ಕುರಿತು ಹಾಗೂ ಬೆಟಗೇರಿಯವರ ಕೃತಿಗಳಲ್ಲಿ ಜನಪದ ಭಾಷೆಯನ್ನು ಕುರಿತು ವರ್ಣನಾತ್ಮಕ ನೆಲೆಯಲ್ಲಿ ಪ್ರತ್ಯೇಕವಾಗಿ ಚರ್ಚಿಸಿದ್ದಾರೆ. ಈ ಬರೆಹಗಳು ವಿವರಗಳಿಂದ ಕೂಡಿದ್ದು ಅಧ್ಯಯನಕಾರರಿಗೆ ಆಸಕ್ತಿ ಮೂಡಿಸುವ ದಾಖಲೆಗಳಾಗಿವೆ.

ಹೆಸರುಗಳು ಸಂಸ್ಕೃತಿಕ ಘಟಕಗಳಾಗಿವೆ. ಇತ್ತೀತ್ತಲಾಗಿ ಅವು ಭಾಷಾವಿಜ್ಞಾನಿಗಳ ಗಮನಸೆಳೆದಿವೆ. ನಾಮಗಳ ಬಗ್ಗೆ ಗಂಭೀರವಾಗಿ ಅಧ್ಯಯನ ಮಾಡುತ್ತಿರುವವರಲ್ಲಿ ಸವದತ್ತಿಮಠರು ಒಬ್ಬರು. 'ಊರ ಹೆಸರುಗಳು' ಎಂಬ ಲೇಖನದಲ್ಲಿ ಗ್ರಾಮನಾಮಗಳ ಮಹತ್ವವನ್ನು ಹೇಳಿದ್ದಾರೆ. 'ಹರಿಹರ ದೇವನ ರಗಳೆಗಳಲ್ಲಿ ವ್ಯಕ್ತಿನಾಮಗಳು' ಎಂಬ ಲೇಖನದಲ್ಲಿ ತಮಿಳುನಾಡು, ಕರ್ನಾಟಕ ಮತ್ತು ಆಂಧ್ರ ಪ್ರದೇಶದ ೧೫ ಪ್ರಾತಿನಿಧಿಕ ಶಿವಭಕ್ತರ ರಗಳೆಗಳಲ್ಲಿ ಉಕ್ತವಾದ ಹೆಸರುಗಳು ವಿಶ್ಲೇಷಿಸಿದ್ದಾರೆ. ಅಲ್ಲಿ ನಡೆಯುವ ಧ್ವನಿಮಾ ಮತ್ತು ಆಕೃತಿಮಾ ಬದಲಾವಣೆಯ ಪ್ರಕ್ರಿಯೆಯನ್ನು ಗುರುತಿಸಿದ್ದಾರೆ. 'ಮನೆತನದ ಅಡ್ಡ ಹೆಸರುಗಳು' ಎಂಬ ಲೇಖನ ತುಂಬ ಮೌಲಿಕವಾಗಿದೆ. ಉತ್ತರ ಕರ್ನಾಟಕದ ಮನೆತನದ ಹೆಸರುಗಳನ್ನು ಶಾಸ್ತ್ರೀಯವಾಗಿ ವಿಶ್ಲೇಷಿಸಿದ್ದಾರೆ. ಹೈದ್ರಾಬಾದ್ ಕರ್ನಾಟಕದ ಸ್ಥಳನಾಮಗಳ ಸ್ಥೂಲನೋಟ ಒಂದು ಬರೆಹದಲ್ಲಿದೆ. ಇಂತಹ ಸಂಪ್ರಬಂಧಗಳ ಮೂಲಕ ಸವದತ್ತಿಮಠರು ನಾಮಗಳ ಅಧ್ಯಯನಕ್ಕೆ ಮೌಲಿಕ ಕೊಡುಗೆ ಸಲ್ಲಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಅನ್ಯಜ್ಞಾನ ಶಿಸ್ತುಗಳ ನೆರವು ಪಡೆದು ಭಾಷಾಧ್ಯಯನವು ತಾತ್ವಿಕವಾಗಿ ಹೊಂದುವ ವಿಸ್ತಾರವನ್ನು ಈ ಲೇಖನಗಳು ಪರಿಚಯಿಸುತ್ತವೆ.

ಸವದತ್ತಿಮಠರು ಒಂದು ಲೇಖನದಲ್ಲಿ 'ದ್ರಾವಿಡ' ಪದದ ನಿಷ್ಪತ್ತಿಗೆ ತೊಡಗಿದ್ದಾರೆ. ಕಾಲ್ಡ್‌ವೆಲ್, ಕಿಟೆಲ್ ಆದಿಯಾಗಿ ಎಸ್.ಕೆ. ಚಟರ್ಜಿ ಅವರ ತನಕ ವಿವಿಧ ವಿದ್ವಾಂಸರ ವಿಚಾರಗಳನ್ನು ಕಲೆಹಾಕಿ ವ್ಯಾಖ್ಯಾನಿಸಿದ್ದಾರಲ್ಲದೆ ದ್ರಾವಿಡ ಭಾಷೆ ಮತ್ತು ಜನಾಂಗ ಬೆಳವಣಿಗೆಯ ಹಂತಗಳನ್ನು ಗುರುತಿಸಿದ್ದಾರೆ. ದ್ರಾವಿಡ ಭಾಷೆಗಳಲ್ಲಿ 'ಕ್' ಕಾರದ ಬೆಳವಣಿಗೆಯ ಹಿನ್ನೆಲೆಯಲ್ಲಿ 'ಚಿಕ್ಕ' ಪದದ ವಿವೇಚನೆಗೆ ತೊಡಗಿದ್ದಾರೆ. ಕೋಶಕಾರನಿಗೆ ಭಾಷಾವಿಜ್ಞಾನದ ತಿಳಿವಳಿಕೆ ಅಗತ್ಯವೆಂಬುದನ್ನು ಒಂದು ಲೇಖನದಲ್ಲಿ ಸಾಬೀತು ಪಡಿಸಿದ್ದಾರೆ. ಐ, ಔ ಈ ಸಂಧ್ಯಕ್ಷರಗಳ ಅಸ್ತಿತ್ವವನ್ನು ಪರಿಶೀಲಿಸುವ ಒಂದು ಬರೆಹವಿದೆ.

ಸವದತ್ತಿಮಠರ ಭಾಷಾಶಾಸ್ತ್ರೀಯ ಬರೆಹಗಳು ಭಾಷೆಯ ರಚನೆಗೆ ಒತ್ತುಕೊಟ್ಟಿವೆ. ಕನ್ನಡ ಭಾಷಾ ವ್ಯಾಸಂಗ ಆಗಿರಬಹುದು, ಉಪಭಾಷೆಗಳನ್ನು ಕುರಿತಂತೆ ಸಮೀಕ್ಷಾತ್ಮಕವಾಗಿ ಬರೆಹಗಳಿರಬಹುದು, ಬರೆಹದ ಕನ್ನಡದ ರಚನೆಯ ಶೋಧವಾಗಿರಬಹುದು. ರಚನೆ ಮತ್ತು ಅದರ ಹಿಂದಿರುವ ನಿಯಮವನ್ನು ಗುರುತಿಸುವುದು ಅವರಿಗೆ ಮುಖ್ಯವಾಗಿರುವುದರಿಂದ ಅನುಗಮನ ಮತ್ತು ನಿಗಮನ ಪದ್ಧತಿಗಳನ್ನು ಅವರು ಉಪಯೋಗಿಸುತ್ತಾರೆ. ಕಲಬುರ್ಗಿ ಕನ್ನಡ, ಬೈಲಹೊಂಗಲ ಜನಪದ ಭಾಷೆ ಮತ್ತು ಸಾಹಿತ್ಯ, ಜನಪದ ಕತೆಗಳ ಭಾಷಾವಿವೇಚನೆ ಇಂತಹ ಲೇಖನಗಳು ಕ್ಷೇತ್ರಕಾರ್ಯವನ್ನವಲಂಬಿಸಿವೆ. ಮಿಕ್ಕ ಲೇಖನಗಳು ವರ್ಣನಾತ್ಮಕ ಮತ್ತು ಐತಿಹಾಸಿಕ ಸಂಶೋಧನೆಯ ವಿಧಾನಗಳನ್ನು ಅವಲಂಬಿಸಿವೆ. ಡಾ. ಎಂ. ಚಿದಾನಂದಮೂರ್ತಿ ಅವರು ಹೇಳಿರುವಂತೆ 'ಇಲ್ಲಿ ಬಳಕೆಯಾಗಿರುವ ಭಾಷಿಕ ಮಾಹಿತಿಯ ಆಳವಾದ ವಿಶ್ಲೇಷಣೆಯು ಭಾಷೆಯಲ್ಲಿ (ಉಪಭಾಷೆಯಲ್ಲಿ) ಪ್ರವರ್ತಿಸುವ ಸೂಕ್ಷ್ಮನಿಯಮಗಳನ್ನು ಗುರುತಿಸಲು ಸಹಾಯವನ್ನು ಮಾಡಬಹುದು'(ಭಾಷಾಲೇಖ-ಬೆನ್ನುಡಿ). ಭಾಷಾಧ್ಯಯನ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಸವದತ್ತಿಮಠರ ಬರೆಹಗಳು ಸಂದರ್ಭ ಬಿಂದುಗಳಾಗಿವೆ.

ಹೀಗೆ, ಸವದತ್ತಿಮಠರು ಭಾಷಾವಿಜ್ಞಾನದ ಎಲ್ಲ ಶಾಖೆಗಳನ್ನು ಸಮಗ್ರವಾಗಿ ಅವಲೋಕಿಸಿದ್ದಾರೆ. ಕನ್ನಡ ಭಾಷಾಶಾಸ್ತ್ರಕ್ಕೆ ಸಂಬಂಧಿಸಿದ ಯಾವ ಸಮಸ್ಯೆಯೇ ಇರಲಿ ಅದರ ಬಗೆಗಿನ ಕೂಲಂಕುಷವಾದ ಪರಾಮರ್ಶೆ ಸವದತ್ತಿಮಠರಿಂದ ನಡೆದಿದೆ ಎಂದು ನಿಸ್ಸಂಕೋಚವಾಗಿ ಹೇಳಬಹುದು. ಈ ನಿಟ್ಟಿನಲ್ಲಿ ಅವರ ಕೃತಿಗಳು ಕಾರ್ಯಶೀಲವಾಗಿ ಕನ್ನಡ ಭಾಷಾಶಾಸ್ತ್ರವನ್ನು ಮುಂದುವರಿಸಿವೆ.

ಆಕರಗ್ರಂಥ

೧. ಸಂಗಮೇಶ ಸವದತ್ತಿಮಠ, ೧೯೯೯, ಭಾಷಾಲೇಖ, ರೂಪರಶ್ಮಿ ಪ್ರಕಾಶನ, ಗುಲಬರ್ಗಾ.

ಭಾಗ - ೨

ಭಾಷೆ : ಕ್ಷೇತ್ರಕಾರ್ಯ

೨೧

ಭಾಷೆ : ಕ್ಷೇತ್ರಕಾರ್ಯ ಮತ್ತು ಕ್ಷೇತ್ರಕರ್ತ

ಕ್ಷೇತ್ರಕಾರ್ಯದ ಅರ್ಥ ಮತ್ತು ಉದ್ದೇಶ

ಕ್ಷೇತ್ರಕಾರ್ಯ(Field work) ಸಂಶೋಧನೆಯಲ್ಲಿ ಇಂದು ಬಹುಮುಖ್ಯ ಅಂಗವಾಗಿ ಬೆಳೆದಿದೆ. ಭಾಷೆ-ಸಾಹಿತ್ಯ ಸಂಶೋಧಕರು ತಮ್ಮ ಅಧ್ಯಯನ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಮೂಲನೆಲೆಗೆ ಹೋಗಿ ಪ್ರತ್ಯಕ್ಷವಾಗಿ ಸಾಮಗ್ರಿಯನ್ನು, ಮಾಹಿತಿಯನ್ನು ಸಂಗ್ರಹಿಸುವ ವಿಧಾನವಿದು. ಇದರಿಂದ ಅಧ್ಯಯನಕ್ಕೆ ಯೋಗ್ಯವಾದ, ವಸ್ತುನಿಷ್ಠವಾದ ಮೂಲಸಾಮಗ್ರಿಗಳು ದೊರಕುತ್ತವೆ. ಕ್ಷೇತ್ರಕಾರ್ಯವನ್ನು ಕ್ಷೇತ್ರಾಧ್ಯಯನವೆಂದು ಕರೆಯುತ್ತಾರೆ. ಕ್ಷೇತ್ರಕಾರ್ಯ ಒಂದಲ್ಲ ಒಂದು ರೀತಿಯಿಂದ ಅನೇಕ ಜ್ಞಾನಶಾಖೆಗಳಿಗೆ ಸಂಬಂಧಿಸಿದೆ. ಸಮಾಜಶಾಸ್ತ್ರ, ಭಾಷಾಶಾಸ್ತ್ರ, ಜಾನಪದಶಾಸ್ತ್ರದ ವಿಷಯಗಳನ್ನು ಸಂಶೋಧನೆಗೆ ಆರಿಸಿಕೊಂಡಾಗ ಮಾಹಿತಿ ಸಂಗ್ರಹಕ್ಕೆ ಕ್ಷೇತ್ರಕಾರ್ಯ ಅನಿವಾರ್ಯ. ಆಯಾ ಜ್ಞಾನಶಾಖೆಗಳಿಗೆ ಅನುಗುಣವಾಗಿ ಕ್ಷೇತ್ರಕಾರ್ಯದ ಸ್ವರೂಪ ಬೇರೆ ಬೇರೆಯಾಗುತ್ತದೆ. ಭಾಷಾಶಾಸ್ತ್ರ ಕ್ಷೇತ್ರಕಾರ್ಯಕ್ಕೆ ಸಂಬಂಧಪಟ್ಟಂತೆ ಕೆಲವು ವಿಚಾರಗಳನ್ನು ಪ್ರಸ್ತುತಪಡಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಇತ್ತೀಚೆಗೆ ಭಾಷಾವಿಜ್ಞಾನ ಕ್ಷೇತ್ರದಲ್ಲಿ ಕ್ಷೇತ್ರ ಭಾಷಾವಿಜ್ಞಾನದ(Field linguistics) ಪ್ರತ್ಯೇಕ ಶಾಖೆ ಪ್ರಾರಂಭವಾಗಿದೆ. ಸಂಶೋಧನೆಯಲ್ಲಿ 'ಕ್ಷೇತ್ರಸಂಶೋಧನೆ' ಎಂಬ ಪ್ರತ್ಯೇಕ ಸಂಶೋಧನ ವಿಧಾನವೂ ರೂಪುಗೊಂಡಿದೆ. ಕ್ಷೇತ್ರಕಾರ್ಯ ಇಂದು ವೈಜ್ಞಾನಿಕತೆಯನ್ನು ಪಡೆದುಕೊಳ್ಳುವುದರ ಜೊತೆಗೆ ವ್ಯಾಪಕತೆಯನ್ನೂ ಹೊಂದಿದೆ.

ಭಾಷಾ ಸಂಶೋಧಕ ನೇರವಾಗಿ ಭಾಷಿಕ ಕ್ಷೇತ್ರಕ್ಕೆ ಹೋಗಿ, ನಿರೂಪಕರನ್ನು ಆರಿಸಿಕೊಂಡು, ಅವರ ನೆರವಿನಿಂದ ಭಾಷಾಸಾಮಗ್ರಿಗಳನ್ನು ಪ್ರತ್ಯಕ್ಷವಾಗಿ ಸಂಗ್ರಹಿಸುವ ವೈಜ್ಞಾನಿಕ ಕ್ರಮವೇ ಭಾಷಾ ಕ್ಷೇತ್ರಕಾರ್ಯವಾಗಿದೆ. ಭಾಷಾಧ್ಯಯನದಲ್ಲಿ ಕ್ಷೇತ್ರಕಾರ್ಯದ ಪಾತ್ರ ಬಹಳ ಹಿರಿದು. ಒಂದು ಭಾಷೆ, ಉಪಭಾಷೆಯ ಸ್ವರೂಪವನ್ನು ತಿಳಿಯಲು

ಕೇವಲ ಗ್ರಂಥಗಳನ್ನು, ಲೇಖನಗಳನ್ನು ಅವಲಂಬಿಸಿಕೊಂಡರೆ, ನಮ್ಮ ಜ್ಞಾನ ಸೀಮಿತಗೊಳ್ಳುವುದಷ್ಟೇ ಅಲ್ಲ. ನಮ್ಮ ಭಾಷಾವಿಶ್ಲೇಷಣೆಯು ಅವೈಜ್ಞಾನಿಕವಾಗುತ್ತದೆ. ಮೂಲ ಆಕರಗಳು ಅಥವಾ ಮೂಲಸಾಮಗ್ರಿಗಳು ಇರುವಲ್ಲಿಗೆ ಹೋಗಿ ವಿಷಯ ಸಂಗ್ರಹಣೆ ಮಾಡಿದರೆ ಭಾಷಾ ಸ್ವರೂಪದ ಬಗ್ಗೆ ನಾವು ಮಾಡುವ ಊಹೆಗಳಿಗೆ, ಮಂಡಿಸುವ ಸಿದ್ಧಾಂತಗಳಿಗೆ ತೂಕ ಬರುತ್ತದೆ. ನಮ್ಮ ವಿಶ್ಲೇಷಣೆಯೂ ವೈಜ್ಞಾನಿಕ ವಾಗುತ್ತದೆ.

ಭಾಷಾ ಕ್ಷೇತ್ರಕಾರ್ಯವು ಕೇವಲ ಕನ್ನಡ, ಹಿಂದಿ, ತಮಿಳು, ಇಂಗ್ಲಿಶ್ ಮುಂತಾದ ಸಾಹಿತ್ಯಕ ಭಾಷೆಗಳಿಗಷ್ಟೆ ಸಂಬಂಧಪಡದೆ, ಅಧ್ಯಯನ ಮಾಡದೆ ಇರುವ ಲಿಪಿರಹಿತ ಭಾಷೆಗಳನ್ನು ವಿಶ್ಲೇಷಣೆ ಮಾಡುವುದೂ ಭಾಷಾಕ್ಷೇತ್ರದ ಮುಖ್ಯ ಉದ್ದೇಶವಾಗಿದೆ.

ಎಂ.ಬಿ. ಎಮಿನೋ ಅವರು ಕ್ಷೇತ್ರಕಾರ್ಯದ ನೆರವಿನಿಂದ ತೋದ. ಕೋತ, ಕೊಡವ, ಕೊಲಾಮಿ ಭಾಷೆಗಳನ್ನು ಗುರುತಿಸಿ, ಅವುಗಳ ಸ್ವರೂಪವನ್ನು ತಿಳಿಸಿದುದನ್ನು ಇಲ್ಲಿ ನೆನೆಯಬಹುದು. ಲಿಪಿರಹಿತ ಭಾಷೆಗಳ ಆಡುನುಡಿಯನ್ನು ಆ ಭಾಷೆಗಳಲ್ಲಿರುವ ಒಗಟು, ಗಾದೆ, ಗೀತೆ ಮುಂತಾದವುಗಳನ್ನು ಸಂಗ್ರಹಿಸಿ, ಸಂಯೋಜಿಸಿ, ವಿಶ್ಲೇಷಣೆ ಮಾಡಿದರೆ ಅವುಗಳ ಸ್ವರೂಪ ತಿಳಿದುಬರುತ್ತದೆ. ನಮ್ಮ ದೇಶದಲ್ಲಿ ಅನೇಕ ಬುಡಕಟ್ಟು ಜನಾಂಗಗಳ ಭಾಷೆಗಳಿವೆ. ಅವು ಅಸಂಸ್ಕೃತವೆಂದು ತಿರಸ್ಕೃತವಾಗಿವೆ. ಅವುಗಳ ಪರಿವೀಕ್ಷಣೆ ಮಾಡಿ, ಅಂತಹ ಭಾಷೆಗಳನ್ನು ಗುರುತಿಸಿ, ಭಾಷಾವಿಜ್ಞಾನದ ದೃಷ್ಟಿಯಿಂದ ವಿಶ್ಲೇಷಣೆ ಮಾಡಬೇಕಾಗಿದೆ. ಈ ದಿಶೆಯಲ್ಲಿ ಕ್ಷೇತ್ರಕಾರ್ಯ ಅನಿವಾರ್ಯ.

ಒಂದು ಭಾಷಾ ಪರಿವಾರದ(Language Family) ಮೂಲಭಾಷೆಯನ್ನು ಪುನಾರಚಿಸಿಕೊಳ್ಳುವಾಗ ಕ್ಷೇತ್ರಕಾರ್ಯ ಅತ್ಯವಶ್ಯವಾಗಿದೆ. ಅದರಂತೆ ಇಂದು ಭಾಷಾಧ್ಯಯನ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗದೆ(ಐತಿಹಾಸಿಕ, ರಾಚನಿಕ, ಭಾಷಾ ಬೋಧನೆ-ಕಲಿಕಾ ಹಂತದಲ್ಲಿ) ಅವುಗಳಿಗೆ ಸಮರ್ಪಕ ಪರಿಹಾರ ಕಂಡುಹಿಡಿಯುವಾಗ ಕ್ಷೇತ್ರ ಕಾರ್ಯದ ನೆರವು ನಮಗೆ ಬೇಕೇಬೇಕು.

ಒಂದು ರಾಷ್ಟ್ರ-ರಾಜ್ಯದಲ್ಲಿಯ ಭಾಷೆ-ಉಪಭಾಷೆಗಳನ್ನು ಪರಿವೀಕ್ಷಣೆ ಮಾಡಿ (Survey) ಅವುಗಳ ಅಭಿವದ್ಧಿಗೆ ಸೂಕ್ತವಾದ `ಭಾಷಾ ಯೋಜನೆ`(Language Planning) ರೂಪಿಸಲಿಕ್ಕೆ ಕ್ಷೇತ್ರಕಾರ್ಯ ಅವಶ್ಯವಾಗದೆ. ಒಂದು ಪ್ರದೇಶದಲ್ಲಿ ಪ್ರಥಮ ಭಾಷೆಯಾಗಿ, ಆಡಳಿತ ಭಾಷೆಯಾಗಿ, ಸಮೂಹ ಮಾಧ್ಯಮವಾಗಿ ಮತ್ತು ಶಿಕ್ಷಣ ಮಾಧ್ಯಮವಾಗಿ ಯಾವ ಭಾಷೆಯನ್ನು ಆರಿಸಿಕೊಳ್ಳಬೇಕು? ಇಂದಿನ ವಿಜ್ಞಾನಯುಗದಲ್ಲಿ ಭಾಷೆ-ಭಾಷೆಗಳ, ಭಾಷೆ-ಉಪಭಾಷೆಗಳ, ಉಪಭಾಷೆ-ಉಪಭಾಷೆಗಳ ವಿಚಾರ ವಿನಿಮಯ ನಡೆಸಲು ಯಾವ ರೀತಿಯಾಗಿ ಭಾಷಾ ಬದಲಾವಣೆ ತರಬೇಕು. ಭಾಷಿಕರ ಭಾಷಾ ಮನೋವೃತ್ತಿಗಳು ಯಾವ ರೀತಿಯಾಗಿವೆ ಎಂಬುದನ್ನು ತಿಳಿಯಲು, ಉಪಭಾಷೆಗಳ ಆಧುನೀಕರಣ, ಪ್ರಮಾಣೀಕರಣ ಮಾಡುವ ಬಗೆ ಹೇಗೆ? ಶಾಲಾ ಕಾಲೇಜುಗಳಲ್ಲಿ

ಭಾಷಾ ಪಠ್ಯಕ್ರಮದ ಸಿದ್ಧತೆ ಮುಂತಾದ ವಿಷಯಗಳ ಬಗ್ಗೆ ವಿವೇಚನೆ ಮಾಡುವುದು ಭಾಷಾ ಕ್ಷೇತ್ರಕಾರ್ಯದ ಉದ್ದೇಶವಾಗಿದೆ.

ಒಂದು ಭಾಷೆ, ಉಪಭಾಷೆಗಳ ವ್ಯಾಕರಣವನ್ನು, ಶಬ್ದಕೋಶವನ್ನು, ವೃತ್ತಿ ಸಮುದಾಯಗಳ ವೃತ್ತಿಪದಕೋಶವನ್ನು ತಯಾರಿಸಿಕೊಳ್ಳಲು ಮತ್ತು ಆ ಭಾಷೆಯನ್ನಾಡುವ ಸಮಾಜ, ಸಂಸ್ಕೃತಿಯನ್ನು ಅರಿಯಬೇಕಾದರೆ ಕ್ಷೇತ್ರಕಾರ್ಯ ನೆರವಾಗುತ್ತದೆ. ಭಾಷಾಕ್ಷೇತ್ರ ಭಾಷಾವಿಜ್ಞಾನಿಯ ಪ್ರಯೋಗಶಾಲೆ. ಭಾಷಾವಿಜ್ಞಾನದ ಬೆಳವಣಿಗೆಗೆ ಕ್ಷೇತ್ರಕಾರ್ಯ ಅತ್ಯವಶ್ಯಕವಾಗಿದೆ. ಕ್ಷೇತ್ರಕಾರ್ಯದ ನೆರವಿನಿಂದ ಆಯಾ ಭಾಷಾ ಸಮುದಾಯದ ಭಾಷೆಯನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ಅದರ ರಚನೆಯ ಸ್ವರೂಪವನ್ನು ತಿಳಿಯುವುದರ ಜೊತೆಗೆ ಆ ಭಾಷೆ ಮತ್ತು ಸಮುದಾಯಕ್ಕೆ ಸಂಬಂಧಪಟ್ಟ ಹೊಸ ನಿಯಮಗಳು, ಸಂಗತಿಗಳು ಬೆಳಕಿಗೆ ಬರುತ್ತವೆ.

ಕ್ಷೇತ್ರಕರ್ತ

ಕ್ಷೇತ್ರಕಾರ್ಯದಲ್ಲಿ ಕ್ಷೇತ್ರಕರ್ತ (Field Worker), ಭಾಷಾಸಮುದಾಯದ (Speech Community) ಮತ್ತು ನಿರೂಪಕ(Informent) ಈ ಮೂರು ಮಾನವೀಯ ಅಂಶಗಳು ಬಹಳ ಪ್ರಭಾವ ಬೀರುತ್ತವೆ. ಕ್ಷೇತ್ರಕರ್ತ ನಿರೂಪಕರ ಸಹಾಯದಿಂದ ಭಾಷಾ ರೂಪಗಳನ್ನು ಪಡೆದುಕೊಳ್ಳಲು ಹವಣಿಸುತ್ತಾನೆ. ಒಂದು ಭಾಷಾಸಮುದಾಯದ ಭಾಷಿಕ ರೂಪಗಳನ್ನು ಸಂಗ್ರಹಿಸಿ, ವಿಶ್ಲೇಷಿಸುವ ಈ ವ್ಯಕ್ತಿಯನ್ನು 'ಕ್ಷೇತ್ರಸಂಶೋಧಕ'ನೆಂದೂ ಕರೆಯುತ್ತಾರೆ. ಕ್ಷೇತ್ರಸಂಶೋಧನೆಯ ಬಗ್ಗೆ ಆಸಕ್ತಿ ಹೊಂದಿದ ಪ್ರತಿಯೊಬ್ಬ ವ್ಯಕ್ತಿ ಕ್ಷೇತ್ರಕರ್ತ ಆಗಲಾರ. ಅವನು ಕೆಲವು ಅರ್ಹತೆಗಳನ್ನು ಹೊಂದಿರಬೇಕಾಗುತ್ತದೆ.

ಕ್ಷೇತ್ರಕರ್ತ ಭಾಷಾವಿಜ್ಞಾನದ ಮೂಲತತ್ವಗಳನ್ನು, ಕ್ಷೇತ್ರಕಾರ್ಯದ ವಿಧಾನಗಳನ್ನು ಅರಿತವನಾಗಿರಬೇಕು, ವಿಶೇಷವಾಗಿ ಧ್ವನಿರಚನಾಶಾಸ್ತ್ರದ ಧ್ವನ್ಯುತ್ಪಾದನಾ ಧ್ವನಿಶಾಸ್ತ್ರದಲ್ಲಿ ತರಬೇತಿ ಹೊಂದಿರಬೇಕು. ಭಾಷಾಸಾಮಗ್ರಿಗಳನ್ನು ಸಂಗ್ರಹಿಸುವಾಗ, ವಿಶ್ಲೇಷಿಸುವಾಗ ಕ್ಷೇತ್ರಕರ್ತನು ಧ್ವನಿಮಾ, ಆಕೃತಿಮಾ, ವಾಕ್ಯರಚನೆ, ಶಬ್ದಕೋಶದ ನಿಯಮಗಳು ಹಾಗೂ ಧ್ವನ್ಯಾಲೇಖ, ಧ್ವನಿಮಾಲೇಖ ಮುಂತಾದವುಗಳಲ್ಲಿ ಪರಿಣತಿ ಮತ್ತು ಪ್ರಭುತ್ವ ಹೊಂದಿರಬೇಕಲ್ಲದೆ ಅವುಗಳನ್ನು ಸಂದರ್ಭಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳುತ್ತಾ ಹೋಗಬೇಕಾಗುತ್ತದೆ. ಭಾಷಾಸಮುದಾಯದ ಔಪಚಾರಿಕ-ಅನೌಪಚಾರಿಕ ಸಂದರ್ಭದಲ್ಲಿ ಭಾಷಾ ಬಳಕೆಯ ರೀತಿಯನ್ನು ತಿಳಿದವನಾಗಿರಬೇಕು. ಸಮುದಾಯದ ಸದಸ್ಯರ ವರ್ತನೆಗಳು, ನಿಲುವುಗಳನ್ನು ಅರಿಯಲು ಕ್ಷೇತ್ರಕರ್ತನಿಗೆ ಮನಃಶಾಸ್ತ್ರ, ಸಮಾಜಶಾಸ್ತ್ರ, ಜಾನಪದಶಾಸ್ತ್ರ ಮತ್ತು ಮಾನವಶಾಸ್ತ್ರಗಳ ತಕ್ಕಮಟ್ಟಿನ ಜ್ಞಾನ ಇರಬೇಕಾಗುತ್ತದೆ. ಭಾಷಾ ವಿಶ್ಲೇಷಣೆಯ ಆಧುನಿಕ ಸಿದ್ಧಾಂತಗಳಾದ ಜರ್ಮನ್ ಭಾಷಿಕ ಪಂಥ, ರಶಿಯನ್, ಸಸೂರ್, ಬ್ಲೂಮ್‌ಫೀಲ್ಡ್ ಮತ್ತು ನವವೈಯಾಕರಣಿಗಳ ಭಾಷಿಕ ಪಂಥಗಳ

ಸ್ಪಷ್ಟವಾದ ತಿಳಿವಳಿಕೆ ಹೊಂದಿರಬೇಕಲ್ಲದೆ ಅವುಗಳನ್ನು ಸಂದರ್ಭಕ್ಕೆ ತಕ್ಕಂತೆ ಕ್ಷೇತ್ರಕಾರ್ಯ ದಲ್ಲಿ, ವಿಶ್ಲೇಷಣೆಯಲ್ಲಿ ಬಳಸಿಕೊಳ್ಳಬೇಕು.

ಕ್ಷೇತ್ರಕರ್ತನಿಗೆ ತನ್ನ ಭಾಷಾಕ್ಷೇತ್ರದ ವಾಸ್ತವಿಕ ಪರಿಸ್ಥಿತಿಯ ಅರಿವಿರಬೇಕು, ಕ್ಷೇತ್ರಕರ್ತ ಕೇವಲ ಕಲ್ಪನಾಜೀವಿಯಾಗಿರಬಾರದು. ತಾನು ಆಯ್ದುಕೊಂಡ ಭಾಷಾಕ್ಷೇತ್ರದ ವಿಸ್ತೀರ್ಣ, ಜನಸಂಖ್ಯೆ, ವೃತ್ತಿಗಳು, ಆರ್ಥಿಕ ವ್ಯವಹಾರ, ಸಾಮಾಜಿಕ ವರ್ಗಗಳು ಮುಂತಾದವುಗಳ ಜ್ಞಾನ ಇರಲೇಬೇಕು. ತಾನು ವಿಶ್ಲೇಷಿಸುವ ಭಾಷಾಸಮುದಾಯದ ಸಂಸ್ಕೃತಿಯ ಬಗೆಗ, ಆ ಭಾಷೆಯ ಬಗೆಗೆ ಈ ಮೊದಲು ಆದ ಕಾರ್ಯಗಳನ್ನು ತಿಳಿದವನಾಗಿರಬೇಕು. ಅವು ಆ ಕ್ಷೇತ್ರದ ಭಾಷೆಯ ಬಗೆಗೆ ಅಮೂಲ್ಯವಾದ ಸಲಹೆ ಸೂಚನೆಗಳನ್ನು ಕೊಡಬಲ್ಲವು ಮತ್ತು ಕ್ಷೇತ್ರಕರ್ತನಿಗೆ ತನ್ನ ಕಾರ್ಯದ ಬಗ್ಗೆ 'ಕುತೂಹಲ'ವನ್ನು ಮೂಡಿಸುತ್ತವೆ.

ಕ್ಷೇತ್ರಕರ್ತ ನಡೆಯುವುದು ಸಮುದಾಯದಲ್ಲಿ, ಜನಪದರ ಮಧ್ಯೆ, ಆದಕಾರಣ ಕ್ಷೇತ್ರಕಾರ್ಯಕ್ಕೆ ಹೊರಟುನಿಂತ ಕ್ಷೇತ್ರಕರ್ತನಲ್ಲಿ ಜಾನಪದದ ಒಂದು ಸ್ವಂತ ಬತ್ತಳಿಕೆ ಇರಲೇಬೇಕು. ಜಾನಪದ ಸಾಹಿತ್ಯ ಪ್ರಕಾರಗಳಾದ ಕಥೆ, ಗೀತೆ, ಲಾವಣಿ, ಒಗಟು, ಒಡಪು, ಗಾದೆ ಮುಂತಾದವುಗಳನ್ನು ಅಭ್ಯಾಸ ಮಾಡಿ ರೂಢಿಸಿಕೊಳ್ಳಬೇಕು. ಕ್ಷೇತ್ರಕರ್ತ ಕ್ಷೇತ್ರಕಾರ್ಯಕ್ಕೆ ಹೋಗುವುದಕ್ಕಿಂತ ಮುಂಚಿತವಾಗಿಯೇ ತನ್ನ ವಿಷಯಕ್ಕೆ ಸಂಬಂಧಿಸಿ ದಂತೆ ಅಭ್ಯಾಸಸೂಚಿಯನ್ನು ತಯಾರುಮಾಡಿಕೊಳ್ಳಬೇಕು(ಪೂರ್ವಸಿದ್ಧತೆ). ಅದರ ಆಧಾರದ ಮೇಲೆ ಸಮಯೋಚಿತವಾಗಿ ಪ್ರಶ್ನೆಗಳನ್ನು ಪೋಣಿಸಲು, ಕೇಳಲು ಸಾಧ್ಯ ವಾಗುತ್ತದೆ. ಕ್ಷೇತ್ರಕಾರ್ಯಕ್ಕೆ ಅಗತ್ಯವಾಗಿ ಬೇಕಾದ ವಸ್ತುಗಳು, ಯಂತ್ರ, ಪರಿಕರಗಳಾದ ಕಾಗದ, ಪೆನ್ಸಿಲ್, ಫೈಲ್ಸ್, ಕ್ಷೇತ್ರಕಾರ್ಯದ ಪುಸ್ತಕಗಳು, ಕೈಪಿಡಿಗಳು, ನಿಯತಕಾಲಿಕೆಗಳು, ಕಾರ್ಡುಗಳು ಅವನ ಹತ್ತಿರ ಇಟ್ಟುಕೊಂಡಿರಬೇಕು. ಅಲ್ಲದೆ ಆಧುನಿಕ ಉಪಕರಣಗಳಾದ ಟೇಪ್‌ರೆಕಾರ್ಡರ್, ಲ್ಯಾಪ್‌ಟಾಪ್, ಗಣಕಯಂತ್ರ ಮುಂತಾದವುಗಳನ್ನು ಬಳಸುವ ವಿಧಾನ ಕ್ಷೇತ್ರಕರ್ತನಿಗೆ ಗೊತ್ತಿರಬೇಕು.

ಕ್ಷೇತ್ರಕರ್ತನ ವ್ಯಕ್ತಿತ್ವದ ಬಗ್ಗೆ ಇಲ್ಲಿ ಒಂದೆರಡು ಮಾತನ್ನು ಹೇಳಬೇಕು. ಕ್ಷೇತ್ರಕರ್ತ ಭಾಷಾಸಮುದಾಯದ ಸದಸ್ಯರೊಡನೆ ಮುಕ್ತ ಮನಸ್ಸಿನಿಂದ ಬೆರೆಯುವ ಸರಳ ವ್ಯಕ್ತಿಯಾಗಿದ್ದು, ಸ್ನೇಹಿತರಂತೆ ಹೃದಯಪೂರ್ವಕವಾಗಿ ಅವರೊಡನೆ ಮಾತನಾಡಬೇಕು. ಇದರಿಂದ ಸಮುದಾಯದ ಸದಸ್ಯರು ಮತ್ತು ಕ್ಷೇತ್ರಕರ್ತರ ನಡುವೆ ಆತ್ಮೀಯ ಸಂಬಂಧ ಉಂಟಾಗುವುದರ ಜೊತೆಗೆ ಭಾಷಿಕರು ತಮಗರಿವಿಲ್ಲದಂತೆಯೇ ಭಾಷೆಯ ನಿಜರೂಪ ಗಳನ್ನು ಹೊರಗೆಡಹುತ್ತಾರೆ. ಅದಕ್ಕಾಗಿ ಕ್ಷೇತ್ರಕರ್ತ ಕ್ಷೇತ್ರದ ಜನರೊಡನೆ 'ಸಹನೆ', 'ಸಹಾನುಭೂತಿ'ಯಿಂದ ಹೊಂದಿಕೊಂಡು ಹೋಗಬೇಕು.

ಕ್ಷೇತ್ರಕಾರ್ಯ ಕ್ಷೇತ್ರಕರ್ತನ 'ಶ್ರಮ'ವನ್ನು ಅವಲಂಬಿಸಿದ ಕಷ್ಟದ ಕೆಲಸ. ಮಾಹಿತಿ ಸಂಗ್ರಹಕ್ಕೆ ತಾನು ಅಧ್ಯಯನಕ್ಕೆ ಆಯ್ದುಕೊಂಡ ಭಾಷಾಸಮುದಾಯಕ್ಕೆ ಪುನಃ ಪುನಃ ಭೇಟಿ ನೀಡಬೇಕಾಗುತ್ತದೆ. ಆ ವೇಳೆಯಲ್ಲಿ ಕ್ಷೇತ್ರಕರ್ತ ಬೇಸರಪಟ್ಟುಕೊಳ್ಳಬಾರದು.

ಕ್ಷೇತ್ರಕ್ಕೆ ಹೋಗಿ ಒಂದೇ ಸಾರಿಯೇ ಕ್ಷೇತ್ರಕಾರ್ಯ ಮುಗಿಸಿಕೊಂಡು ಬರಬೇಕೆಂಬ ಆತುರತೆಯೂ ಇರಬಾರದು. ಆತುರತೆ, ಆವೇಶ, ಪೂರ್ವಗ್ರಹ, ಉದ್ವೇಗ ಇವು ಕ್ಷೇತ್ರಕರ್ತನ ವೈರಿಗಳು ಎಂಬುದರಲ್ಲಿ ಅನುಮಾನವಿಲ್ಲ. ಕ್ಷೇತ್ರಕಾರ್ಯದ ಪ್ರತಿಯೊಂದು ಹಂತದಲ್ಲಿಯೂ 'ತಾಳ್ಮೆ' ಮತ್ತು 'ಪ್ರಾಮಾಣಿಕತೆ' ಬೇಕು. ಇವು ಅವನ ಸಂಶೋಧನೆಯ ಯಶಸ್ಸಿನ ಗುಟ್ಟಿಗೆ ಮುಖ್ಯ ಕಾರಣ. ಆಯ್ದುಕೊಂಡ ಕ್ಷೇತ್ರಕ್ಕೆ ಪುನಃ ಪುನಃ ಭೇಟಿ ಕೊಡುವುದರಿಂದ ಆ ಭಾಷೆಗೆ ಸಂಬಂಧಿಸಿದ ಹೊಸ ಹೊಸ ಅಂಶಗಳು, ಸಂಗತಿಗಳು ತಿಳಿದುಬರುತ್ತವೆ. ಇದರಿಂದ ಅವನ ಸಂಶೋಧನೆ ಸತ್ವಯುತವಾಗುತ್ತದೆ. ಹೊಸ ಅಂಶಗಳು, ಸಂಗತಿಗಳು ದೊರೆತಾಗ ವಿಚಾರ ಮಾಡಿ ಒಪ್ಪಿಕೊಂಡು ಹಳೆಯ ಅಭಿಪ್ರಾಯಗಳನ್ನು ಬದಲಾಯಿಸಿಕೊಳ್ಳಬೇಕು. ಶಾಂತಚಿತ್ತದಿಂದ ಮತ್ತು ತುಂಬಾ ಚಟುವಟಿಕೆಯಿಂದ ಕ್ಷೇತ್ರದಲ್ಲಿ ವ್ಯವಹರಿಸಬೇಕು.

ಕ್ಷೇತ್ರಕರ್ತ ಸದೃಢವಾದ ಆರೋಗ್ಯವಂತನಾಗಿರಬೇಕು. ಚಳಿಗಾಲ, ಮಳೆಗಾಲ, ಬೇಸಿಗೆ ಕಾಲದಲ್ಲಿಯೂ ಕ್ಷೇತ್ರಕಾರ್ಯಕ್ಕೆ ಹೋಗಬೇಕಾಗುತ್ತದೆ. ವಿವಿಧ ತೆರನಾದ ಹವಾಗುಣವನ್ನು ಎದುರಿಸಬೇಕಾಗುವುದರಿಂದ ಉತ್ತಮ ಆರೋಗ್ಯ ಹೊಂದಿರಬೇಕು. ಅದರಂತೆ ಕ್ಷೇತ್ರಕರ್ತನ ಮಾನಸಿಕ ಮೈಕಟ್ಟು(ಧೈರ್ಯ) ಅಷ್ಟೇ ಪ್ರಧಾನವಾದುದು. ಕ್ಷೇತ್ರದಲ್ಲಿ ಒದಗುವ ಆಯಾಸ, ಆತಂಕ, ಭಯ ಮುಂತಾದವುಗಳನ್ನು ಸಮರ್ಥವಾಗಿ ಎದುರಿಸಬೇಕು.

ಕೆಲವು ಸಣ್ಣಪುಟ್ಟ ಕಾರಣಗಳಿಂದಾಗ ಕ್ಷೇತ್ರಕಾರ್ಯ ಅರ್ಧಕ್ಕೆ ನಿಂತರೆ ಕ್ಷೇತ್ರಕರ್ತ ಧೈರ್ಯ ಕಳೆದುಕೊಳ್ಳಬಾರದು. ನಾವು ಮಾಡಿದ ಕ್ಷೇತ್ರಕಾರ್ಯ ಇಂದಿಲ್ಲ ನಾಳೆ ಅನುಕೂಲಕ್ಕೆ ಬಂದೇ ಬರುತ್ತದೆ ಎಂಬ ಆತ್ಮವಿಶ್ವಾಸವನ್ನೂ, ಆಶಾಭಾವನೆಯನ್ನೂ ತಾಳಬೇಕಾಗುತ್ತದೆ, ಕ್ಷೇತ್ರಕಾರ್ಯದಲ್ಲಿ ಕ್ಷೇತ್ರಕರ್ತನದೇ ಪ್ರಧಾನ ಪಾತ್ರ, ಭಾಷಾ ವಿಶ್ಲೇಷಣೆಯಲ್ಲಿ ಅವನೇ ಸೂತ್ರಧಾರನಾಗಿರುವುದರಿಂದ ಭಾಷಾಸಾಮಗ್ರಿಗಳನ್ನು ಸಂಗ್ರಹಿಸುವಾಗ ಭಾಷಾಸಮುದಾಯದಲ್ಲಿ ಕ್ಷೇತ್ರಕರ್ತನ ವ್ಯಕ್ತಿತ್ವವು ಕಾರ್ಯರಂಗಕ್ಕೆ ಇಳಿಯಬೇಕು.

ಭಾಷಾಕ್ಷೇತ್ರದಲ್ಲಿ ಕ್ಷೇತ್ರಕರ್ತ

ಭಾಷಾಕ್ಷೇತ್ರ ಎಂಬುದನ್ನು ಭಾಷಾಸಮುದಾಯ ಎಂಬರ್ಥದಲ್ಲಿ ಬಳಸಲಾಗಿದೆ. ಒಂದು ನಿರ್ದಿಷ್ಟ ಪ್ರದೇಶದಲ್ಲಿ ಅನೇಕ ಭಾಷಾಸಮುದಾಯಗಳಿರಬಹುದು. ಕ್ಷೇತ್ರಕರ್ತ ಒಂದು ನಿರ್ದಿಷ್ಟ ಭಾಷಾಸಮುದಾಯವನ್ನು ಮಾತ್ರ ತನ್ನ ವಿಶ್ಲೇಷಣೆಗೆ ಆಯ್ಕೆ ಮಾಡಿಕೊಳ್ಳಬೇಕು. ಭಾಷಾಸಮುದಾಯಗಳು ಸಮುದಾಯಜೀವನ ಅವಿಭಾಜ್ಯ ಅಂಗಗಳಾಗಿ ಬೆಳೆದು ಬಂದಿರುತ್ತವೆ. ಕ್ಷೇತ್ರಕಾರ್ಯದಲ್ಲಿ ಕ್ಷೇತ್ರಕರ್ತನಂತೆ ಭಾಷಾ ಸಮುದಾಯವು ಪ್ರಮುಖ ಪಾತ್ರವಹಸುತ್ತದೆ. ಭಾಷಾಸಮುದಾಯದಲ್ಲಿ ಕ್ಷೇತ್ರಕರ್ತ ಯಾವ ರೀತಿಯಾಗಿ ವರ್ತಿಸಬೇಕು ಎಂಬುದನ್ನು ಇಲ್ಲಿ ಚರ್ಚಿಸೋಣ.

ಸ್ನಾತಕೋತ್ತರ ತರಗತಿಯಲ್ಲಿದ್ದಾಗ ವಿದ್ಯಾರ್ಥಿಗಳು ರವಿವಾರ, ಇತರ ಸರ್ಕಾರಿ ರಜಾದಿನಗಳಲ್ಲಿ ಮತ್ತು ಬೇಸಿಗೆ ರಜೆಗಳಂತಹ ದೀರ್ಘಕಾಲಿಕ ರಜೆಗಳಲ್ಲಿ, ವಿದ್ಯಾಭ್ಯಾಸ ಮುಗಿಸಿ, ತಮ್ಮ ತಮ್ಮ ಹಳ್ಳಿಗಳಿಗೆ ಹಿಂತಿರುಗಿದಾಗ, ತಮ್ಮ ಹಳ್ಳಿಯ ಸುತ್ತಮುತ್ತಲಿನ ಪ್ರದೇಶದ ಭಾಷೆ, ಭಾಷಾಸಮುದಾಯ, ಸ್ಥಳನಾಮ, ವ್ಯಕ್ತಿನಾಮಗಳು, ಶಾಸನಗಳ ಸಂಗ್ರಹಣೆ ಮುಂತಾದ ವಿಷಯಗಳಿಗಾಗಿ ಕ್ಷೇತ್ರಕಾರ್ಯಕ್ಕೆ ಹೋಗುವುದು ಒಳ್ಳೆಯದು. ವಿರಾಮ ವೇಳೆಯ ಸದುಪಯೋಗವಾಗುವುದರ ಜೊತೆಗೆ ಕ್ಷೇತ್ರಕಾರ್ಯದ ಬಗೆಗೆ ಅವರಿಗಿರುವ ಆಸಕ್ತಿ, ಶ್ರದ್ಧೆ ತೋರಿಸುತ್ತದೆ. ಮುಂದೆ ಕ್ಷೇತ್ರಕಾರ್ಯದಲ್ಲಿ ಸಂಶೋಧನೆಗೆ ಇಳಿದಾಗ ಇದು ತುಂಬ ಅನುಕೂಲವಾಗುವುದು. ಕ್ಷೇತ್ರಕಾರ್ಯದ ಬಗೆಗೆ ಮಾನಸಿಕ ಸಿದ್ಧತೆ, ಜನಗಳ ಜೊತೆಗೆ ಬೆರೆಯುವ ರೀತಿ ವಿದ್ಯಾರ್ಥಿಗಳಿದ್ದಾಗಲೇ ರೂಢಿಸಿ ಕೊಳ್ಳುವುದು ಒಳ್ಳೆಯದು.

ಭಾಷಾಸಾಮಗ್ರಿಗಳನ್ನು ಸಂಗ್ರಹಿಸುವಾಗ ಕ್ಷೇತ್ರಕಾರ್ಯದಲ್ಲಿ ಅಡೆತಡೆಗಳಿರುವುದು ಅನಿವಾರ್ಯ. ಅವುಗಳನ್ನು ಸಮರ್ಥವಾಗಿ ಎದುರಿಸಿ ಯಶಸ್ವಿಯಾಗಬೇಕಾದರೆ ಭಾಷಾಸಮುದಾಯದಲ್ಲಿ ಯಾವ ರೀತಿಯಾಗಿರಬೇಕು ಎಂಬುದನ್ನು ಮೊದಲೇ ತಿಳಿದಿರುವುದು ಒಳ್ಳೆಯದು. ಹೊಸದಾಗಿ ಕಾರ್ಯರಂಗಕ್ಕಿಳಿದ ಸಂಗ್ರಹಕಾರನಿಗೂ ಸಮುದಾಯದ ಸದಸ್ಯರಿಗೂ ಪರಸ್ಪರ ಅನ್ಯೋನ್ಯತೆ ಬೆಳೆಯಬೇಕಾದುದು ಅತಿಮುಖ್ಯ ವಾದುದು. ಸಮುದಾಯದ ಸದಸ್ಯರು ತಕ್ಷಣವೇ ಸಂಶೋಧಕನನ್ನು ಬರಮಾಡಿ ಕೊಳ್ಳುವುದಿಲ್ಲ; ಸಂಶಯ ತಾಳುತ್ತಾರೆ. ಸಂಶೋಧಕನನ್ನು ದೂರದಿಂದಲೇ ನೋಡಿ ಭಾಷಿಕರು ತಮ್ಮ ತಮ್ಮಲ್ಲಿಯೇ, ಇವನು ಯಾರು? ಇವನು ಯಾರ ಊರಿನಿಂದ ಬಂದಿದ್ದಾನೆ? ನಮ್ಮ ಊರಿಗೆ, ನಮ್ಮ ಕೇರಿಗೆ ಏಕೆ ಬಂದ? ಸರಕಾರಿ ಅಧಿಕಾರಿ ಇರಬಹುದೆ? ಎಂದು ನಾನಾ ರೀತಿಯಲ್ಲಿ ವಿಚಾರಿಸಿ ಸಂಶಯ ತಾಳುವುದು ಸಹಜ. ಅಷ್ಟೇ ಏಕೆ ಕ್ಷೇತ್ರಕರ್ತನೊಂದಿಗೆ ಮಾತನಾಡಲು, ಅವನ ಪ್ರಶ್ನೆಗಳಿಗೆ ಉತ್ತರಿಸಲು ಮುಂದೆ ಬರದಿರಬಹುದು. ಕ್ಷೇತ್ರಕರ್ತ ಶುರುವಿನಲ್ಲಿ ಪ್ರಶ್ನೆಗಳನ್ನು ಕೇಳಲು ಪ್ರಾರಂಭಿಸಿ ದರೆ, ಸಮುದಾಯದ ಸದಸ್ಯರು ಯೋಗ್ಯ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸುವುದಿಲ್ಲ. ಇಂತಹ ಸಂದರ್ಭದಲ್ಲಿ ಕ್ಷೇತ್ರಕರ್ತ ಹತಾಶನಾಗದೆ ಜಾಣತನದಿಂದ ವರ್ತಿಸಬೇಕಾ ಗುತ್ತದೆ. ಆಗ ಅವನ ವ್ಯಕ್ತಿತ್ವ ಕಾರ್ಯರಂಗಕ್ಕೆ ಇಳಿಯಬೇಕು.

ಸಮುದಾಯದ ಜನರಿಗೆ ಭಾಷಾವಿಶ್ಲೇಷಣೆಯ ಬಗೆಗೆ ತಿಳಿವಳಿಕೆ ಇರುವುದಿಲ್ಲ. ಕ್ಷೇತ್ರಕರ್ತ, ಜನತೆಯ ಜೊತೆಗೆ ವ್ಯವಹರಿಸುವಾಗ ತನ್ನ ಕಾರ್ಯದ ಉದ್ದೇಶಗಳನ್ನು, ಸ್ವರೂಪವನ್ನು, ಆ ಭಾಷೆಯ ಮಹತ್ವವನ್ನು ಪ್ರಾಮಾಣಿಕವಾಗಿ ಮುಕ್ತಮನಸ್ಸಿನಿಂದ ವಿವರಿಸಬೇಕು. ಆಗ ಅವರಿಗೆ ಧೈರ್ಯ, ಅಭಿಮಾನ ಮೂಡಿ ಭಾಷೆಯ ನಿಜರೂಪ ಗಳನ್ನು ಹೇಳಬಲ್ಲರು.

ಭಾಷಾಸಮುದಾಯದ ವಾಸ್ತವಿಕ ರೀತಿ ಸಂಪ್ರದಾಯಗಳನ್ನು ಅವಲೋಕಿಸಿದಾಗ ಭಾಷಿಕರ ಒಲವುಗಳು, ವಿರೋಧ ತೀರ್ಮಾನಗಳು, ಅವರ ಮನೋಪಟಲವನ್ನು ಆವರಿಸಿಕೊಂಡಿರುವ ಅಂಜಿಕೆಗಳನ್ನು, ಮಾನಸಿಕ ಪ್ರತಿಸ್ಪಂದನೆಗಳನ್ನು ಕ್ಷೇತ್ರಕರ್ತ ಗಮನಿಸಲೇಬೇಕು. ಏಕೆಂದರೆ ಭಾಷಾಕ್ಷೇತ್ರಕಾರ್ಯ ಅವರ ಆಡುನುಡಿಯನ್ನು ಅವಲಂಬಿಸಿರುವುದು. ಹೊರಜಗತ್ತಿನ ಸಂಪರ್ಕವಾಗಲಿ, ಆಧುನಿಕ ಸಂಪರ್ಕಮಾಧ್ಯಮದ ಪ್ರಭಾವವಾಗಲಿ ಜನಪದರಿಗೆ ಕಡಿಮೆ. ಕ್ಷೇತ್ರಕರ್ತ ಜನರು ಏನನ್ನು ಮನ್ನಿಸುತ್ತಾರೆ ಮತ್ತು ಏನನ್ನು ವಿರೋಧಿಸುತ್ತಾರೆ ಎಂಬುದನ್ನು ಕಂಡುಹಿಡಿಯಲು ಪ್ರಯತ್ನಿಸಬೇಕು. ಕ್ಷೇತ್ರಕರ್ತ ಮಾನಸಿಕ ಸಮತೋಲನವನ್ನು ಕೆಡಿಸಿಕೊಳ್ಳದೆ ಭಾಷಾಸಮುದಾಯದ ಪೂರ್ವಾಪರಗಳನ್ನೆಲ್ಲ ಗಣನೆಗೆ ತೆಗೆದುಕೊಂಡು ಸಮುದಾಯದೊಡನೆ ಸಹಕರಿಸಿ ಕೊಂಡು ಹೋಗಬೇಕು.

ಭಾಷಾಸಮುದಾಯದಲ್ಲಿ ನಡೆಯುವ ಹಬ್ಬ, ಮದುವೆ, ಜಾತ್ರೆಗಳಲ್ಲಿಯ ನಾಟಕ, ಒಡಪು, ಒಗಟು, ಗಾದೆ ಮತ್ತು ಗೀತೆಗಳನ್ನು ಕ್ಷೇತ್ರಕರ್ತ ಪ್ರತ್ಯಕ್ಷವಾಗಿ ನೋಡಬೇಕು, ಕೇಳಬೇಕು. ಇದರಿಂದ ಜನರ ಔಪಚಾರಿಕ ಸಂಭಾಷಣೆಗೂ ಅವರ ಸಾಮಾನ್ಯ ಮಾತಿಗೂ ಇರಬಹುದಾದ ವ್ಯತ್ಯಾಸವನ್ನು ಗುರುತಿಸಲು ಅನುಕೂಲವಾಗುವುದು. ಅದರಂತೆ ಭಾಷಾಸಮುದಾಯದಲ್ಲಿ ಧರ್ಮ, ನಂಬಿಕೆ, ಆಚರಣೆಯ ಬಗ್ಗೆ ಕೆಲವು ನಿರ್ಬಂಧನೆಗಳಿರುತ್ತದೆ. ಇಂತಹ ಬೇರೆ ಬೇರೆ ಸಾಮಾಜಿಕ ಪ್ರಸಂಗಗಳಲ್ಲಿ ಕ್ಷೇತ್ರಕರ್ತ ಜಾಗರೂಕತೆಯಿಂದ ವರ್ತಿಸಬೇಕು. ತನ್ನ ಸಂಶೋಧನೆಯ ಯಶಸ್ಸಿನ ದೃಷ್ಟಿಯಿಂದ ಇದು ಪ್ರಮುಖವಾಗಿರುತ್ತದೆ.

ಭಾಷಾಕ್ಷೇತ್ರದಲ್ಲಿ ಗಣ್ಯವ್ಯಕ್ತಿಗಳು ಯಾರೆಂದು ತಿಳಿದು ಅವರನ್ನು ತನ್ನ ಉದ್ದೇಶ ಸಿದ್ಧಿಗಾಗಿ ಹೇಗೆ ಅನುವುಗೊಳಿಸಬಹುದು ಎಂಬುದನ್ನು ಕ್ಷೇತ್ರಕರ್ತ ಅಲೋಚಿಸಬೇಕು. ಸಾಮಗ್ರಿ ಸಂಗ್ರಹದಲ್ಲಿ ಅವರ ಸಲಹೆ, ಸಹಕಾರ ಬೇಡಬೇಕು. ಅವರ ನೆರವಿನಿಂದ ಸ್ಥಳೀಯ ಜನತೆಯ ಮೇಲೆ ಒಲವಿನ ಬಲೆ ಬೀರಬಹುದು. ಕ್ಷೇತ್ರದ ಪ್ರಮುಖರ ಸ್ನೇಹ ಸೌಹಾರ್ದತೆ ಸಂಪಾದಿಸುವುದು ಕ್ಷೇತ್ರಕರ್ತನ ಆದ್ಯಕರ್ತವ್ಯ. ಅವರ ಜೊತೆಗೆ ಹೃದಯ ಸಂವಾದ ನಡೆಸಿ ಅವರ ಪ್ರೀತಿ, ವಿಶ್ವಾಸ ಸಂಪಾದಿಸಿಕೊಳ್ಳಬೇಕು.

ಭಾಷಾಕ್ಷೇತ್ರದಲ್ಲಿ ರಾಜಕೀಯ ಪಕ್ಷ-ಪ್ರತಿಪಕ್ಷಗಳು, ಸಮುದಾಯದ ಸದಸ್ಯರಲ್ಲಿ ಒಳ ಜಗಳಗಳು ಇರಬಹುದು. ಕ್ಷೇತ್ರಕರ್ತ ಯಾವ ಪಕ್ಷದಲ್ಲಿಯೂ ಭಾಗವಹಿಸಬಾರದು. ಈ ವಿಷಯದಲ್ಲಿ ಎಚ್ಚರ ತಪ್ಪಿದರೆ ತನ್ನ ಕಾರ್ಯ ನಿರ್ವಹಣೆ ಸಾಧ್ಯವಾಗುವುದಿಲ್ಲ ವೆಂಬುದನ್ನು ಗಮನದಲ್ಲಿಟ್ಟುಕೊಂಡಿರಬೇಕು. ಸಂಶೋಧಕರ ಗಮನ ಅವರ ಭಾಷಿಕ ಅಂಶಗಳ ಕಡೆಗೆ, ಭಾಷಾರೂಪಗಳ ಕಡೆಗೆ ಕೇಂದ್ರೀಕೃತವಾಗಿರಬೇಕು. ಸಮುದಾಯದ ಸದಸ್ಯರ ನಿಜಜೀವನದಲ್ಲಿ ಬರುವ ಚಿಕ್ಕಪುಟ್ಟ ಸಮಸ್ಯೆಗಳನ್ನು ಅಂದರೆ ಪತ್ರ, ಬರೆಹ, ಓದು, ಆರೋಗ್ಯ ಮುಂತಾದವುಗಳಿಗೆ ಸಂಬಂಧಪಟ್ಟಂತೆ ಕ್ಷೇತ್ರಕರ್ತ ಸಲಹೆ,

ಮಾರ್ಗದರ್ಶನಗಳನ್ನು ನೀಡುತ್ತ ಇರಬೇಕು. ಇವುಗಳಿಂದ ಸಮುದಾಯದ ಸದಸ್ಯರಿಗೆ ಕ್ಷೇತ್ರಕರ್ತನ ಬಗ್ಗೆ ಪ್ರೀತಿ, ವಿಶ್ವಾಸ ಹುಟ್ಟುತ್ತದೆ, ಅಲ್ಲದೆ ಅವನಿಗೆ ಎಲ್ಲ ವಿಧದ ಸಹಕಾರ ದೊರೆಯುತ್ತದೆ.

ಆಯ್ದುಕೊಂಡ ಭಾಷಾಸಮುದಾಯದ ಸಮಾಜೋ-ಭಾಷಿಕ ಸಂದರ್ಭದ ಒಂದು ಸ್ಪಷ್ಟ ತಿಳಿವಳಿಕೆ ಕ್ಷೇತ್ರಕರ್ತನಿಗೆ ಇರಲೇಬೇಕು. ತಾನು ಆಯ್ದುಕೊಂಡ ಭಾಷಾ ಸಮುದಾಯ ಯಾವ ಪ್ರಕಾರದ್ದಿರುತ್ತದೆ? ದ್ವಿಭಾಷಿಕವೆ? ಬಹುಭಾಷಿಕವೆ? ಎಂಬುದನ್ನು ಮೊದಲು ಮನದಟ್ಟು ಮಾಡಿಕೊಳ್ಳಬೇಕು. ಭಾಷಾಸಮುದಾಯದಲ್ಲಿ ಭಾಷಾಮಿಶ್ರಣ, ಭಾಷಾಪಲ್ಲಟ ಯಾವ ರೀತಿಯಾದ ಪ್ರಭಾವ ಬೀರಿವೆ. ಭಾಷಾಸಮುದಾಯದಲ್ಲಿ ಭಾಷಾಕ್ರಿಯೆ(Speech act), ದ್ವಿಸ್ತರತೆ ಇವು ಭಾಷೆ ಮತ್ತು ಸಮಾಜದ ಸದಸ್ಯರ ನಡುವೆ ಸಾಮಾಜಿಕ ಸಂಬಂಧವನ್ನು ಸ್ಥಾಪಿಸಲು ಮಹತ್ವದ ಪಾತ್ರ ವಹಿಸುತ್ತವೆ. ಸಮುದಾಯದಲ್ಲಿರುವ ದ್ವಿಸ್ತರತೆ(Diglossia) ಪ್ರಕ್ರಿಯೆಯ ಬಗ್ಗೆ ಕ್ಷೇತ್ರಕರ್ತನಿಗೆ ತಿಳಿದಿರಬೇಕು. ಭಾಷಾಸಮುದಾಯ ತನ್ನದೇ ಆದ ಆಡುನುಡಿಯನ್ನು ಇಟ್ಟುಕೊಂಡಿರುತ್ತದೆ. ಕೆಲವು ಸಂದರ್ಭದಲ್ಲಿ ನಿರ್ದಿಷ್ಟ ಉದ್ದೇಶಗಳಿಗಾಗಿ ಶಿಷ್ಟಭಾಷೆಯನ್ನು ಬಳಸುತ್ತಾರೆ. ಈ ಭಾಷಾಸ್ಥಿತಿಗೆ ಡೈಗ್ಲೋಸಿಯಾ ಎಂದು ಹೆಸರು. ಈ ದ್ವಿಸ್ತರತೆಯ ಸಂದರ್ಭದಲ್ಲಿ ಭಾಷಾರೂಪಗಳು ಯಾವ ಯಾವ ಭಾಷಾವಲಯದಲ್ಲಿ ವ್ಯಾಪಿಸಿವೆ, ಭಾಷಾಸಮುದಾಯದ ಭಾಷಾಸಂಪತ್ತು(Speech repertaire) ಕ್ಷೇತ್ರಕರ್ತನಿಗೆ ಚೆನ್ನಾಗಿ ತಿಳಿದಿರಬೇಕು.

ಭಾಷಾವಿಶ್ಲೇಷಣೆಗೆ ಭಾಷಾಸಾಮಗ್ರಿಗಳನ್ನು ಪಡೆಯುವಾಗ ಭಾಷಾಕ್ಷೇತ್ರ ಪ್ರಮುಖ ಪಾತ್ರ ವಹಿಸುತ್ತದೆ. ಕ್ಷೇತ್ರಕಾರ್ಯ ನಡೆಯುವಾಗ ಸಮುದಾಯ ಮತ್ತು ಕ್ಷೇತ್ರಕರ್ತನ ನಡುವೆ ನಿಕಟ ಸಂಬಂಧವಿರಬೇಕು. ಆಗ ಮಾತ್ರ ಭಾಷಾವಿಶ್ಲೇಷಣೆ ಸುಗಮವಾಗುವುದರ ಜೊತೆಗೆ ಸಮಂಜಸವಾಗುತ್ತದೆ. ಭಾಷಾಕ್ಷೇತ್ರಕಾರ್ಯ ಮುಖ್ಯವಾಗಿ ಭಾಷಾಸಮುದಾಯವನ್ನು ಅವಲಂಬಿಸಿರುತ್ತದೆ ಎಂಬುದನ್ನು ಕ್ಷೇತ್ರಕರ್ತ ಮರೆಯಬಾರದು.

ಆಕರಗ್ರಂಥಗಳು

೧. Willium Samarin, Field Linguistic.
೨. ಅಂಗಡಿ ಎಸ್.ಎಸ್., ೧೯೯೬, ಭಾಷಾ ಕ್ಷೇತ್ರಕಾರ್ಯ, ಸಮಾಜ ಪುಸ್ತಕಾಲಯ, ಧಾರವಾಡ.

೨೨

ಭಾಷೆ : ನಿರೂಪಕ

ಭಾಷಾಸಮುದಾಯದಲ್ಲಿ ಕ್ಷೇತ್ರಕರ್ತನಿಗೆ ಭಾಷಾಸಾಮಗ್ರಿಗಳನ್ನು ಒದಗಿಸುವ ವ್ಯಕ್ತಿಗೆ ನಿರೂಪಕ (ಇನ್‌ಫಾರ್‌ಮೆಂಟ್) ಎಂದು ಕರೆಯುವರು. ಕ್ಷೇತ್ರಕಾರ್ಯದಲ್ಲಿ ನಿರೂಪಕರು ಪ್ರಮುಖ ಪಾತ್ರ ವಹಿಸುತ್ತಾರೆ. ಕ್ಷೇತ್ರಾಧ್ಯಯನದಲ್ಲಿ ಕ್ಷೇತ್ರಕರ್ತ ಬಾಹ್ಯವಾಗಿ ಕೆಲಸ ಮಾಡಿದರೆ ನಿರೂಪಕ ಆ ಸಮುದಾಯದ ಒಳಗಿದ್ದು ಕ್ಷೇತ್ರಕರ್ತನಿಗೆ ಸಹಾಯ ಮಾಡುತ್ತಾನೆ. ನಿರೂಪಕರು ಆ ಸಮುದಾಯದ ಪ್ರತಿನಿಧಿಗಳಾಗಿರುತ್ತಾರೆ. ಅವರು ಭಾಷಾಸಮುದಾಯ ಮತ್ತು ಕ್ಷೇತ್ರಕರ್ತರ ನಡುವೆ ಸೇತುವೆಯಾಗಿ ಕೆಲಸ ಮಾಡುತ್ತಾರೆ. ಈ ಭಾಗದಲ್ಲಿ ನಿರೂಪಕರ ಅವಶ್ಯಕತೆ, ಆಯ್ಕೆ, ಅರ್ಹತೆಗಳು ಮತ್ತು ತರಬೇತಿ ಈ ಎಲ್ಲ ವಿಷಯಗಳ ಕುರಿತು ತಿಳಿಯೋಣ.

ಅವಶ್ಯಕತೆ

ಕ್ಷೇತ್ರಕಾರ್ಯದಲ್ಲಿ ನಿರೂಪಕರು ಏಕೆ ಬೇಕು? ಕ್ಷೇತ್ರಕರ್ತ ಮತ್ತು ಭಾಷಾಸಮುದಾಯ ವಿರುವಾಗ ನಿರೂಪಕರ ಅವಶ್ಯಕತೆಯಿದೆಯೆ? ಎಂಬ ಪ್ರಶ್ನೆಗಳು ಸಹಜವಾಗಿ ಹುಟ್ಟುತ್ತವೆ. ಕ್ಷೇತ್ರಕರ್ತ ಭಾಷಾಸಮುದಾಯದ ಎಲ್ಲ ಸದಸ್ಯರ ಜೊತೆಗೆ ಸಂಪರ್ಕ ಇಟ್ಟುಕೊಳ್ಳಲು ಆಗುವುದಿಲ್ಲ. ಆ ಭಾಷಾಸಮುದಾಯವನ್ನು ಪ್ರತಿನಿಧಿಸುವಂತಹ ಕೆಲವರ ಜೊತೆಗೆ ಮಾತ್ರ ಅವನ ಸಂಪರ್ಕವಿರಬೇಕಾಗುತ್ತದೆ. ಅವರ ನಿರೂಪಕರು ಕ್ಷೇತ್ರಕಾರ್ಯದ ಮಾಹಿತಿ ಸಂಗ್ರಹಣೆಯಲ್ಲಿ ಕ್ಷೇತ್ರಕರ್ತನಿಗೆ ನಿರೂಪಕರು ಪ್ರತ್ಯಕ್ಷವಾಗಿ ನೆರವಾಗುತ್ತಾರೆ.

ಭಾಷಾಸಾಮಗ್ರಿಗಳನ್ನು ಸಂಗ್ರಹಿಸುವಾಗ, ಅವುಗಳನ್ನು ತಪಾಸಿಸುವಾಗ ನಿರೂಪಕರು ಮಹತ್ವದ ಪಾತ್ರ ವಹಿಸುತ್ತಾರೆ. ಭಾಷಾಸಾಮಗ್ರಿಗಳನ್ನು ಆಲೇಖಿಸುವಾಗ ವಿಶ್ಲೇಷಿಸುವಾಗ ಅನೇಕ ದೋಷಗಳಾಗುವುದುಂಟು.

೧. ಧ್ವನಿಗಳಲ್ಲಾಗುವ ವ್ಯತ್ಯಾಸ

೨. ಕೇಳುವಿಕೆಯಲ್ಲಾಗುವ ವ್ಯತ್ಯಾಸ

೩. ಅವಿಭಾಜಕಗಳಿಂದಾಗುವ ವ್ಯತ್ಯಾಸ

ಮುಂತಾದವುಗಳಿಂದಾಗಿ ಧ್ವನಿಮಾಗಳಲ್ಲಿ ಅಧಿಕ ವ್ಯತ್ಯಾಸ, ಅಪೂರ್ಣ ವ್ಯತ್ಯಾಸಗಳು ಕಾಣಿಸಿಕೊಳ್ಳುತ್ತವೆ. ಈ ದೋಷಗಳನ್ನು ನಿವಾರಿಸಲು, ಸಂಶಯಗಳನ್ನು, ಗೊಂದಲ ಗಳನ್ನು ಪರಿಹರಿಸಲು ನಿರೂಪಕರು ಅತಿ ಅವಶ್ಯ.

ಭಾಷಾವಿಶ್ಲೇಷಣೆಯಲ್ಲಿ ಕೆಲವು ವೇಳೆ ನಿರೂಪಕರ ಹಾವಭಾವಗಳಾದ ತಲೆ ದೂಗುವುದು, ಮುಗುಳ್ನಗೆ ಮುಂತಾದವು, ಅದರಂತೆ ಸಮೀಪದಿಂದ ಮತ್ತು ದೂರದಿಂದ ಅವರೊಡನೆ ಸಂಪರ್ಕಿಸುವಾಗ ಅವರ ಮಾತಿನ ಸರಣಿ, ಶೈಲಿ ಇವು ಗಳಿಂದ ಭಾಷೆಯ ರಚನಾಂಶಗಳನ್ನು ತಿಳಿಯಲು ಸಹಾಯವಾಗುತ್ತವೆ. ಸಮುದಾಯದ ಸದಸ್ಯರ ಸಾಮಾಜಿಕ ಅಂತಸ್ತು, ಲಿಂಗ, ವಯಸ್ಸುಗಳಿಗೆ ತಕ್ಕಂತೆ ಭಾಷಾ ಬಳಕೆ ಭಿನ್ನವಾಗಿರುತ್ತದೆ. ಉದಾ. 'ಕೊಸಾಟ' ಎಂಬ ಉಪಭಾಷೆಯಲ್ಲಿ ಲಿಂಗಕ್ಕೆ ಅನುಸರಿಸಿ ಸ್ತ್ರೀಯರ ಭಾಷೆ, ಪುರಷರ ಭಾಷೆಗಿಂತಲೂ ಬೇರೆಯಾಗಿರುತ್ತದೆ. ಅದರಂತೆ ಬಡಗ ಎಂಬ ಉಪಭಾಷೆಯಲ್ಲಿ ಮುದಕರ ಭಾಷೆ ಯುವಕರ ಭಾಷೆಗಿಂತ ಭಿನ್ನವಾಗಿರುತ್ತದೆ. ಭಾಷಾಸಮುದಾಯದ ಲಿಂಗ, ವಯಸ್ಸುಗಳಿಗೆ ತಕ್ಕಂತೆ ನಿರೂಪಕರನ್ನು ನೇಮಿಸಿ ಕೊಳ್ಳುವುದರಿಂದ ಆ ಭಾಷೆಯ ಭಾಷಿಕ ಅಂಶಗಳು, ಅಲ್ಲಿರುವ ವ್ಯತ್ಯಾಸಗಳು ಕ್ಷೇತ್ರ ಕರ್ತನಿಗೆ ಸ್ಪಷ್ಟವಾಗಿ ತಿಳಿದುಬರುತ್ತದೆ.

ಕ್ಷೇತ್ರಕಾರ್ಯದಲ್ಲಿ ಸಾಮಗ್ರಿಗಳನ್ನು ಸಂಗ್ರಹಿಸುವಾಗ ಕೆಲವೊಮ್ಮೆ ಸಂದಿಗ್ಧತೆ, ಆತಂಕ ಇನ್ನಿತರ ಸಮಸ್ಯೆಗಳು ಬರುತ್ತವೆ. ಆ ವೇಳೆಯಲ್ಲಿ ನಿರೂಪಕರ ಸಲಹೆ ಅನಿವಾರ್ಯ. ಸಾಮಗ್ರಿ, ಸಂಗ್ರಹ ಮತ್ತು ವಿಶ್ಲೇಷಣೆಯಲ್ಲಿ ನಿರೂಪಕರು ತುಂಬ ಉಪಯುಕ್ತ.

ಆಯ್ಕೆ

ಭಾಷಾಸಮುದಾಯದಲ್ಲಿ ಆ ಭಾಷೆಯನ್ನು ಆಡಬಲ್ಲವರೆಲ್ಲರೂ ನಿರೂಪಕರಾಗ ಲಾರರು. ಭಾಷಾಕ್ಷೇತ್ರಕಾರ್ಯವು ನಿರೂಪಕರನ್ನು ಅವಲಂಬಿಸಿರುವುದರಿಂದ ಉತ್ತಮ ನಿರೂಪಕರನ್ನು ಆಯ್ಕೆ ಮಾಡಿಕೊಳ್ಳುವಾಗ ಕೆಲವು ಅಂಶಗಳನ್ನು ಕ್ಷೇತ್ರಕರ್ತ ಗಮನ ದಲ್ಲಿಟ್ಟುಕೊಳ್ಳಬೇಕು.

ಕ್ಷೇತ್ರಕಾರ್ಯ ಸಾಕಷ್ಟು ವೇಳೆ ತೆಗೆದುಕೊಳ್ಳುತ್ತದೆ. ಕ್ಷೇತ್ರಕರ್ತ ನಿರೂಪಕರನ್ನು ನಿಯತತೆಯಿಂದ ಭೇಟಿಯಾಗಿ ಭಾಷಾದತ್ತಗಳನ್ನು ಸಂಗ್ರಹಿಸುವಾಗ ವಿಷಯದ ಖಚಿತತೆಗಾಗಿ, ಸಂಶಯಗಳ ನಿವಾರಣೆಗಾಗಿ, ನಿರೂಪಕರಿಂದ ಉದ್ದೇಶಿತ ಮಾಹಿತಿ ಯನ್ನು ಪಡೆಯಲು ನಿರೂಪಕರನ್ನು ಪುನಃ ಪುನಃ ಪ್ರಶ್ನಿಸಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ನಿರೂಪಕರು ಬೇಸರಿಸದೆ ತಾಳ್ಮೆಯಿಂದ ಉತ್ತರಿಸಬೇಕು. ಕ್ಷೇತ್ರಕಾರ್ಯ ದಲ್ಲಿ ನಿರೂಪಕರ ವಿಶ್ವಾಸ, ಸಹಕಾರವಿಲ್ಲದೆ ಕ್ಷೇತ್ರಕರ್ತ ಏನೂ ಮಾಡಲಾರ. ಕ್ಷೇತ್ರಕಾರ್ಯದ ಪ್ರತಿ ಹಂತದಲ್ಲಿಯೂ ಪ್ರತಿ ಸಂದರ್ಭದಲ್ಲಿಯೂ ನಿರೂಪಕರ ಸಹಕಾರ, ತಾಳ್ಮೆ ಅತಿಅವಶ್ಯ. ಕ್ಷೇತ್ರಕರ್ತ ನಿರೂಪಕರನ್ನು ಆಯ್ಕೆ ಮಾಡಿಕೊಳ್ಳುವುದಕ್ಕಿಂತ ಪೂರ್ವ ದಲ್ಲಿಯೇ ವಿಚಾರಿಸಬೇಕು.

ನಿರೂಪಕರು ಪ್ರೌಢ ವಯಸ್ಸಿನವರಿರಬೇಕು, ಚಿಕ್ಕ ವಯಸ್ಸಿನವರು ನಿರೂಪಕರಾಗಲು ಅನರ್ಹರು. ಭಾಷೆಯ ಅನೇಕ ರೂಪಗಳು, ಎಷ್ಟೋ ವಿಷಯಗಳ ಜ್ಞಾನ ಅವರಿಗಿರುವುದಿಲ್ಲ. ಅಂತೆಯೇ ಉಚ್ಚಾರ ಸ್ಪಷ್ಟವಿಲ್ಲದ ಮುದುಕರು ನಿರೂಪಕರಾಗಲು ಅನರ್ಹರು. ಆದ್ದರಿಂದ ಕ್ಷೇತ್ರಕಾರ್ಯಕ್ಕೆ ಹೆಚ್ಚು ಅನುಭವವುಳ್ಳ ಉತ್ಸಾಹಿ, ಪ್ರಾಮಾಣಿಕ ವಯಸ್ಕರು ನಿರೂಪಕರಾಗಲು ಯೋಗ್ಯ.

ಕ್ಷೇತ್ರಕರ್ತ, ನಿರೂಪಕರನ್ನು ದಿನವೂ ಭೇಟಿ ಮಾಡಿ ಅವರಿಂದ ದತ್ತವನ್ನು ಸಂಗ್ರಹಿಸಬೇಕಾಗುತ್ತದೆ. ನಿರೂಪಕರು ದಿನವೂ ಎಷ್ಟೋ ಸಮಯವನ್ನು ಇವರೊಡನೆ ಕಳೆಯಬೇಕಾಗಿರುವುದರಿಂದ ಕ್ಷೇತ್ರಕರ್ತ ಸಂಭಾವನೆಯ ರೂಪದಲ್ಲಿ ಹಣವನ್ನು ಅಥವಾ ಕಾಣಿಕೆಯನ್ನು ನಿರೂಪಕರಿಗೆ ಕೊಟ್ಟರೆ ಒಳ್ಳೆಯದು. ಇದರಿಂದ ನಿರೂಪಕರಿಗೂ ಜವಾಬ್ದಾರಿ ಬಿದ್ದು ತಪ್ಪದೆ ತಮ್ಮ ಕೆಲಸಕ್ಕೆ ಹಾಜರಾಗಲು ಸಾಧ್ಯವಾಗುತ್ತದೆ. ಆದರೆ ಕೇವಲ ಹಣದಾಸೆಯುಳ್ಳ ವ್ಯಕ್ತಿಗಳನ್ನು ನಿರೂಪಕರನ್ನಾಗಿ ನೇಮಿಸಿಕೊಳ್ಳಬಾರದು. ಸಮುದಾಯದಲ್ಲಿ ಬಹಳ ದಿನಗಳವರೆಗೆ ಇದ್ದು ಸೇವೆಯಲ್ಲಿರುವವರನ್ನು ನಿರೂಪಕರನ್ನಾಗಿ ಆಯ್ಕೆ ಮಾಡಿಕೊಳ್ಳಬಹುದು. ಇವರು ಇದನ್ನು ಸ್ನೇಹಕಾರ್ಯ ಎಂದು ಪರಿಗಣಿಸಿ ಪ್ರಾಮಾಣಿಕವಾಗಿ ತಪ್ಪದೆ ಕೆಲಸ ನಿರ್ವಹಿಸಿದರೆ ಸಂಭಾವನೆಯ ಅಗತ್ಯವೂ ಇರುವುದಿಲ್ಲ.

ನಿರೂಪಕರನ್ನು ಆಯ್ಕೆ ಮಾಡಿಕೊಳ್ಳುವಾಗ ಆ ಸಮುದಾಯದ ಗಣ್ಯರ (ಧರ್ಮಾಧಿಕಾರಿಗಳು, ಶಿಕ್ಷಕರು, ಪಂಚಾಯಿತಿ ಪ್ರಮುಖರು) ಸಹಾಯ ಪಡೆಯ ಬಹುದು. ಆಯ್ಕೆ ಮಾಡಿಕೊಳ್ಳುವ ನಿರೂಪಕರು ಸ್ತ್ರೀಯರಾಗಲಿ, ಪುರುಷರಾಗಲಿ ಆ ಸಮುದಾಯದೊಡನೆ ಒಳ್ಳೆಯ ಸಂಬಂಧ ಇಟ್ಟುಕೊಂಡ ವಿಶ್ವಾಸದ ವ್ಯಕ್ತಿಯಾಗಿರಬೇಕು. ನಿರೂಪಕರು ಸಮುದಾಯದ ಸಂಸ್ಕೃತಿಯ ಅನೇಕ ಅಂಶಗಳ ಜ್ಞಾನ ಹೊಂದಿರಬೇಕು. ಜಾನಪದದ ವಿವಿಧ ಪ್ರಕಾರಗಳಾದ ಕಥೆ, ಒಗಟು, ಒಡಪು, ಲಾವಣಿ ಮುಂತಾದವುಗಳ ಪೂರ್ಣಜ್ಞಾನ ಅವರಿಗಿರಬೇಕು. ಇದರಿಂದ ಕ್ಷೇತ್ರಕರ್ತರಿಗೆ ಆನಂದ, ಆಸಕ್ತಿ ಉಂಟಾಗಿ ಸಮುದಾಯದ ಅನೇಕ ಸಂಗತಿಗಳನ್ನು ತೆಗೆದುಕೊಳ್ಳುತ್ತಾನೆ. ನಿರೂಪಕರು ಆ ಭಾಷೆಯನ್ನು ನಿರರ್ಗಳವಾಗಿ ಮತ್ತು ಸ್ಪಷ್ಟವಾಗಿ ಮಾತನಾಡುವವನಾಗಿರಬೇಕು. ಅಂದರೆ ಕ್ಷೇತ್ರಕರ್ತ ಕೇಳಿದ್ದಕ್ಕಿಂತ ಹೆಚ್ಚಿನ ಮಾಹಿತಿ ದೊರಕುವುದು. ನಿರೂಪಕರು ಕ್ಷೇತ್ರಕರ್ತರಂತೆ ಉತ್ತಮ ಆರೋಗ್ಯವಂತರಾಗಿರಬೇಕಲ್ಲದೆ, ಸಾಮಾನ್ಯ ಜ್ಞಾನವೂ ಅವರಿಗೆ ಇರಬೇಕಾದುದು ಅವಶ್ಯಕ.

ಆಯ್ಕೆಯಾಗುವ ನಿರೂಪಕರು ಆ ಸಮುದಾಯದಲ್ಲಿ ಬಹಳಷ್ಟು ದಿವಸಗಳ ಕಾಲ ಇದ್ದವರಾಗಿರಬೇಕು. ಸಮುದಾಯದ ಸಂಪ್ರದಾಯಗಳು, ಹವ್ಯಾಸಗಳು, ಜನನ, ಮದುವೆ, ಮರಣ ಮುಂತಾದ ಸಂದರ್ಭಗಳಲ್ಲಿ ಆಚರಣೆಯಾಗುವ ಧಾರ್ಮಿಕ ವಿಧಿ-ವಿಧಾನಗಳು ಇವುಗಳ ಬಗ್ಗೆ ನಿರೂಪಕರಿಗೆ ಪೂರ್ಣಜ್ಞಾನವಿರಬೇಕಲ್ಲದೆ

ಸಮುದಾಯದ ಪ್ರಾಣಿಗಳ, ಸಸ್ಯಗಳ, ಹೆಸರುಗಳು, ಪ್ರಕಾರಗಳು ಅವುಗಳ ಉಪಯೋಗ ನಿರೂಪಕರಿಗೆ ಗೊತ್ತಿರಬೇಕು. ಇದರಿಂದ ನಮ್ಮ ಉದ್ದೇಶ ಸಿದ್ಧಿಗಾಗಿ ಬೇಕಾದ ಮಾಹಿತಿ ಪಡೆಯಲು ಸಾಧ್ಯವಾಗುತ್ತದೆ. ಕ್ಷೇತ್ರಕಾರ್ಯದಲ್ಲಿ ನಿರೂಪಕರ ಪಾತ್ರ ಪ್ರಮುಖ ವಾಗಿರುವುದರಿಂದ ಅವರನ್ನು ಆಯ್ಕೆ ಮಾಡಿಕೊಳ್ಳುವಾಗ ಕ್ಷೇತ್ರಕರ್ತರು ಶ್ರದ್ಧೆ, ದಕ್ಷತೆ ಮತ್ತು ತಾಳ್ಮೆಯಿಂದಿರಬೇಕಾಗುತ್ತದೆ.

ಸಂಖ್ಯೆ

ಕ್ಷೇತ್ರಕಾರ್ಯದಲ್ಲಿ ಸಾಮಗ್ರಿ ಸಂಗ್ರಹಕ್ಕೆ ಆರಿಸಿಕೊಳ್ಳಬಹುದಾದ ನಿರೂಪಕರ ಸಂಖ್ಯೆ ಎಷ್ಟಿರಬೇಕೆಂಬುದು ಒಂದು ಸಮಸ್ಯೆ. ಕ್ಷೇತ್ರಕರ್ತ ಒಬ್ಬನೇ ನಿರೂಪಕರನ್ನು ಅರಿಸಿಕೊಳ್ಳ ಬೇಕೆಂಬ ನಿರ್ಬಂಧನೆಯಿಲ್ಲ. ಏಕೆಂದರೆ ಉಪಭಾಷಾ ವ್ಯಾಕರಣವು ಆ ಭಾಷೆಯ ರಚನೆಯನ್ನು ತೋರಿಸುವುದರಿಂದ ಸಮುದಾಯದ ಎಲ್ಲರ ಭಾಷೆಯೂ ಮಹತ್ವವಾಗಿ ರುವುದು. ಅವರ ಭಾಷಾಸಾಮಗ್ರಿಗಳನ್ನು ಪ್ರತಿನಿಧಿಸುವಂತಹ ಅನೇಕ ನಿರೂಪಕರು ಅವಶ್ಯವಾಗಿರಬೇಕು. ಸಾಮಗ್ರಿ ಸಂಗ್ರಹಕ್ಕೆ, ಆರಿಸಿಕೊಂಡ ಕ್ಷೇತ್ರಕ್ಕೆ ಅನುಗುಣವಾಗಿ ಮತ್ತು ಉಪಭಾಷಾ ವಿಜ್ಞಾನ, ಸಾಮಾಜಿಕ ಭಾಷಾವಿಜ್ಞಾನದ ತತ್ವಗಳಿಗೆ ಅನುಗುಣವಾಗಿ ನಿರೂಪಕರ ಸಂಖ್ಯೆ ಇರಬೇಕು.

ಮಧ್ಯ ಆಫ್ರಿಕಾದ 'ಸ್ಯಾಂಗೊ' ಎಂಬ ಭಾಷಾಸಮುದಾಯವನ್ನು ವಿಶ್ಲೇಷಣೆ ಮಾಡುವಾಗ ಸಾಮಗ್ರಿ ಸಂಗ್ರಹ ೩೭೦೦ ಶಬ್ದಗಳಾದವು. ವಿಶ್ಲೇಷಕ ಸಮುದಾಯದ ಲಿಂಗ, ವಯಸ್ಸು, ಸಾಮಾಜಿಕ ವರ್ಗಗಳಿಗೆ ಅನುಸಾರವಾಗಿ ೫೬ ಜನ ನಿರೂಪಕರನ್ನು ಆರಿಸಿಕೊಂಡರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಭಾಷಾಸಮುದಾಯದ ಎಲ್ಲ ವಿಷಯಗಳ ಖಚಿತವಾದ ಮಾಹಿತಿ ದೊರೆಯಲು ಕ್ಷೇತ್ರಕರ್ತನು ಮಾಧ್ಯಮ ವಯಸ್ಸಿನ, ಭಿನ್ನ ಲಿಂಗದ, ವಿವಿಧ ವೃತ್ತಿಯ, ಆರ್ಥಿಕವಾಗಿ, ಸಾಮಾಜಿಕವಾಗಿ ಭಿನ್ನಭಿನ್ನ ವರ್ಗಕ್ಕೆ ಸೇರಿದ, ಬೇರೆ ಬೇರೆ ಕೇರಿಗಳಿಗೆ ಸಂಬಂಧಿಸಿದ ಆರು ಅಥವಾ ಏಳು ಜನ ನಿರೂಪಕರನ್ನು ಆರಿಸಿಕೊಳ್ಳುವುದು ಅಧ್ಯಯನಕ್ಕೆ ಉತ್ತಮ ವಾದುದಾಗಿದೆ. ಅವರು ಸಮುದಾಯದ ವರ್ತಮಾನದ ವಿಷಯಗಳನ್ನು ತಿಳಿದವ ರಾಗಿದ್ದು, ಆ ಸಮುದಾಯದ ಭಾಷೆಯನ್ನು ಪ್ರತಿನಿಧಿಸುತ್ತಿರಬೇಕು. ಅಂತಹವರನ್ನು ನಿವೇದಕರನ್ನಾಗಿ ಆಯ್ಕೆ ಮಾಡಿಕೊಳ್ಳುವುದು ನಮ್ಮ ಕೆಲಸಕ್ಕೆ ಹೆಚ್ಚು ಉಪಯುಕ್ತ.

ಅರ್ಹತೆಗಳು

ನಿವೇದಕರನ್ನು ಆರಿಸಿಕೊಳ್ಳುವಾಗ ಅವರ ವಯಸ್ಸು, ಲಿಂಗ, ಶಿಕ್ಷಣ, ಭಾಷೆ ಮುಂತಾದವುಗಳ ಕಡೆಗೆ ಗಮನಹರಿಸಬೇಕು. ಆ ಭಾಷೆಯನ್ನು ಆಡಬಲ್ಲವರೆಲ್ಲರೂ ನಿವೇದಕರಾಗಲಾರರು. ಅವರು ಕೆಲವು ಅರ್ಹತೆಗಳನ್ನು ಹೊಂದಿರಬೇಕಾಗುತ್ತದೆ. ಅವು ಇಂತಿವೆ.

ಅ. ವಯಸ್ಸು : ನಿರೂಪಕರನ್ನಾಗಿ ಆರಿಸಿಕೊಳ್ಳುವ ವ್ಯಕ್ತಿ ಚಿಕ್ಕವರಾಗಿದ್ದರೆ ಉದ್ದೇಶಿತ ಸಾಮಗ್ರಿ ದೊರೆಯದೆ ಹೋಗಬಹುದು. ಪ್ರಶ್ನಾವಳಿಯಲ್ಲಿ ಕಂಡುಬರುವ ಪ್ರಶ್ನೆಗಳಿಗೆ ಚಿಕ್ಕವಯಸ್ಸಿನ ಮಕ್ಕಳು ಹೆಚ್ಚು ಉತ್ಸಾಹದಿಂದ ಉತ್ತರಿಸಬಹುದಾದರೂ ಆ ಭಾಷಾ ಕ್ಷೇತ್ರದ ಸಂಸ್ಕೃತಿಯ ಪೂರ್ಣಜ್ಞಾನ, ಅದಕ್ಕಿಂತ ಹೆಚ್ಚಾಗಿ ಜೀವನಾನುಭವ ಅವರಿಗೆ ತೀರ ಕಡಿಮೆ. ಆ ಕ್ಷೇತ್ರದ ರಾಜಕೀಯ, ಧಾರ್ಮಿಕ, ಪೇಟೆಯ ಇನ್ನಿತರ ವಿಷಯಗಳ ಬಗ್ಗೆ ಸರಿಯಾದ ತಿಳಿವಳಿಕೆ ಇರುವುದಿಲ್ಲ. ಮಕ್ಕಳ ಆಸಕ್ತಿ, ಅವಧಾನ ಸ್ಥಿರವಾಗಿರುವುದಿಲ್ಲ. ಕೆಲವು ಸಂದರ್ಭದಲ್ಲಿ ಸಾಮಗ್ರಿಗಳ ಪುನರಾವರ್ತನೆಗೆ ಮಕ್ಕಳು ಅವಶ್ಯ ಎಂಬುದನ್ನು ಕ್ಷೇತ್ರಕರ್ತ ಮರೆಯಬಾರದು.

ನಿರೂಪಕರನ್ನಾಗಿ ಆರಿಸಿಕೊಳ್ಳಬೇಕಾದ ವ್ಯಕ್ತಿ ಮುದುಕರಾಗಿದ್ದರೆ, ಅವನಿಗೆ ಸಾಕಷ್ಟು ಹೆಚ್ಚು ಅನುಭವಗಳಿದ್ದರೂ ವಯಸ್ಸಾಗಿರುವುದರಿಂದ ಜ್ಞಾಪಕ ಶಕ್ತಿ ಕುಂದಿರುವುದರಿಂದ ಆಸಕ್ತಿಗಳಾಗಲಿ, ಅವಧಾನ, ಚೈತನ್ಯಗಳು ಕಡಿಮೆಯಾಗಿರುವುದರಿಂದ ಆ ಭಾಷೆಯ ಧ್ವನಿಗಳ ಉಚ್ಚಾರ ಸರಿಯಾಗಿ ಇಲ್ಲದ್ದರಿಂದ; ಮುದುಕರು ಹೆಚ್ಚಾಗಿ ದಮ್ಮು, ಕೆಮ್ಮು ಮುಂತಾದ ಶ್ವಾಸಕೋಶಗಳ ಕಾಯಿಲೆಗೆ ಒಳಗಾಗಿರಬಹುದಾದ್ದರಿಂದ ಇಂತಹ ವ್ಯಕ್ತಿಗಳು ನಿರೂಪಕರಾಗಲು ಅನರ್ಹರು.

ನಿರೂಪಕರಾಗಲು ಮಾಧ್ಯಮ ವಯಸ್ಸಿನ ಅಂದರೆ ೩೦-೩೫ ವರ್ಷಗಳ ನಡುವಿನ ವಯಸ್ಸಿನವರನ್ನು ಆರಿಸಿಕೊಳ್ಳುವುದು ಹೆಚ್ಚು ಸಹಕಾರಿ. ಏಕೆಂದರೆ ಅವರಿಗೆ ಆಸಕ್ತಿ, ಅವಧಾನ, ಜವಾಬ್ದಾರಿ, ಆ ಭಾಷೆ, ಸಂಸ್ಕೃತಿ, ವ್ಯವಹಾರದ ಬಗ್ಗೆ ಸ್ಪಷ್ಟ ತಿಳಿವಳಿಕೆ ಇರುವುದರಿಂದ ಸಾಮಗ್ರಿ ಸಂಗ್ರಹಕ್ಕೆ ಮತ್ತು ವಿಶ್ಲೇಷಣೆಗೆ ಹೆಚ್ಚು ಸಹಾಯಕಾರಿಯಾಗುತ್ತದೆ.

ಆ. ಲಿಂಗ: ಭಾಷಾಸಾಮಗ್ರಿಗಳನ್ನು ಸಂಗ್ರಹಿಸುವಾಗ ಸಂದರ್ಭಕ್ಕೆ ತಕ್ಕಂತೆ ಪುರುಷ ಮತ್ತು ಸ್ತ್ರೀ ನಿರೂಪಕರು ಅವಶ್ಯವಾಗಿ ಬೇಕು. ಸ್ತ್ರೀ ನಿರೂಪಕರನ್ನು ಆಯ್ಕೆ ಮಾಡಿಕೊಳ್ಳುವುದು ಅನೇಕ ವೇಳೆ ಕಷ್ಟ ಸಾಧ್ಯ. ಏಕೆಂದರೆ ಅವರ ಉಚ್ಚಾರಣಾವಯವಗಳು ಪುರುಷರಿಗಿಂತ ಹೆಚ್ಚು ತೀವ್ರವಾಗಿ ಚಲಿಸುವುದರಿಂದ ಮತ್ತು ಶ್ರುತಿ ಹಂತದಲ್ಲಿ ಉದಾತ್ತ ಶ್ರುತಿ ಇರುವುದರಿಂದ ಅವರ ಉಚ್ಚಾರದಲ್ಲಿ ಹೊರಬರುವ ಧ್ವನಿಗಳನ್ನು ಕೆಲವು ವೇಳೆ ಸ್ಪಷ್ಟವಾಗಿ ಗುರುತಿಸಿಕೊಳ್ಳಲು, ಧ್ವನಿಯನ್ನು ಅಲೇಖಿಸಲು ಕಠಿಣವಾಗುವುದು.

ಸ್ತ್ರೀಯರೊಡನೆ ಸ್ವತಂತ್ರವಾಗಿ ವರ್ತಿಸಲು ಬರುವುದಿಲ್ಲ. ಸಮುದಾಯದಲ್ಲಿ ಅನೇಕ ನಿಯಮಗಳಿರುತ್ತವೆ. ಆದರೆ ಭಾಷಾವಿಶ್ಲೇಷಣೆಯಲ್ಲಿ ಅವರ ಉಚ್ಚಾರಣೆಗಳನ್ನು ನಿರೀಕ್ಷಿಸಬೇಕಾಗುತ್ತದೆ. ಆ ಭಾಷೆಯಲ್ಲಿ ಸ್ಪರ್ಶಗಳಾವುವು? ಘರ್ಷಗಳಾವುವು? ಮುಂತಾದವುಗಳನ್ನು ಉಚ್ಚರಿಸುವಾಗ ಸ್ತ್ರೀಯರ ತುಟಿಗಳ ಸ್ಥಿತಿ ನಾಲಿಗೆಯ ಆಕಾರ ಇವುಗಳನ್ನು

ಕ್ಷೇತ್ರಕರ್ತ ನಿರೀಕ್ಷಿಸುವಾಗ ಅನೇಕ ಸಮಸ್ಯೆಗಳೆನಿಸುತ್ತವೆ(ಸಂಶಯಾಸ್ಪದ). ಇದು ಕಷ್ಟಸಾಧ್ಯದ ಕೆಲಸ.

ಕೆಲವು ಅನಿವಾರ್ಯ ಸಂದರ್ಭದಲ್ಲಿ ಅಂದರೆ ಸೋಬಾನ ಪದಗಳು, ಒಡಪುಗಳು, ಬೀಸುವ ಕಲ್ಲಿನ ಪದಗಳು ಮುಂತಾದ ಅನೌಪಚಾರಿಕ ಸಂದರ್ಭಗಳಲ್ಲಿ ಕ್ಷೇತ್ರಕರ್ತ ಸ್ತ್ರೀ ನಿರೂಪಕರನ್ನು ಆರಿಸಿಕೊಳ್ಳಲೇಬೇಕು. ಆದರೆ ಅವರ ಸಂಖ್ಯೆ ಕಡಿಮೆ ಇರಬೇಕಲ್ಲದೆ ಆರಿಸಿಕೊಂಡ ಸ್ತ್ರೀ ನಿರೂಪಕರೊಡನೆ ಕ್ಷೇತ್ರಕರ್ತ ತುಂಬ ಎಚ್ಚರಿಕೆಯಿಂದ ವರ್ತಿಸ ಬೇಕೆಂಬುದನ್ನು ಮರೆಯಬಾರದು. ನಿರೂಪಕರನ್ನಾಗಿ ಸ್ತ್ರೀಯರಿಗಿಂತ ಪುರುಷರನ್ನು ನೇಮಿಸಿಕೊಳ್ಳುವುದು ಕ್ಷೇತ್ರಕಾರ್ಯದ ಎಲ್ಲ ಸಂದರ್ಭದಲ್ಲಿಯೂ ಹೆಚ್ಚು ಪ್ರಯೋಜನ ಕಾರಿಯಾಗಿದೆ.

ಇ. **ಉಚ್ಚಾರಣೆ:** ನಿರೂಪಕರಾಗಲು ಬೇಕಾದ ಅನೇಕ ಅರ್ಹತೆಗಳಲ್ಲಿ ಅವರು ಆ ಭಾಷೆಯನ್ನು ಉಚ್ಚರಿಸುವ ರೀತಿಯೂ ಒಂದಾಗಿದೆ. ಕ್ಷೇತ್ರಕರ್ತ ವಿಶ್ಲೇಷಿಸುವ ಭಾಷೆ ನಿರೂಪಕರ ಮಾತೃಭಾಷೆ ಇಲ್ಲವೆ ಸ್ವಭಾಷೆಯಾಗಿರಬೇಕಲ್ಲದೆ ನಿರರ್ಗಳವಾಗಿ ಮತ್ತು ತಪ್ಪಿಲ್ಲದಂತೆ ಸ್ಪಷ್ಟವಾಗಿ ಮಾತನಾಡುವವರಾಗಿದ್ದು ಆ ಸಮುದಾಯಕ್ಕೆ ಮಾದರಿ ಯಾಗಿರಬೇಕು.

ನಿರೂಪಕರ ವಾಕ್ಯಸರಣಿ(ವಾಕ್ಯ ಪ್ರಯೋಗ) ಉತ್ತಮವಾಗಿರಬೇಕು. ಆ ಭಾಷೆಯ ಕಂಪಿತಗಳು, ಅನುನಾಸಿಕಗಳು, ಅರೆವ್ಯಂಜನಗಳು ಮುಂತಾದ ಧ್ವನಿಗಳು ಸ್ಪಷ್ಟವಾಗಿ ಕೇಳುವಂತಿರಬೇಕು. ಕ್ಷೇತ್ರಕರ್ತ ಇವುಗಳನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ಅವರು ಉಚ್ಚರಿಸುವ ಭಾಷೆ ಕರ್ಕಶವಾಗಿದೆಯೆ, ಇಂಪಾಗಿದೆಯೆ, ಅಸ್ಪಷ್ಟತೆಯಿಂದ ಕೂಡಿದೆಯೆ, ಜೊಲ್ಲು ಸುರಿಸುತ್ತಾ ಮಾತನಾಡುತ್ತಾರೆಯೆ, ಬಿರುಸಾಗಿದೆಯೆ ಎಂಬುದನ್ನು ಗಮನಿಸಬೇಕು. ಇಂತಹ ಉಚ್ಚಾರಣೆಯಿದ್ದವರು ನಿರೂಪಕರಾಗಲು ಅನರ್ಹರು ಎಂದು ಕ್ಷೇತ್ರಕರ್ತನು ನೆನಪಿಟ್ಟುಕೊಳ್ಳಬೇಕಾಗುತ್ತದೆ.

ನಿರೂಪಕರು ಆ ಸಮುದಾಯದ ಕೆಲವು ವ್ಯಾಕರಣ ಅಂಶಗಳಾದ ನಾಮಪದ, ಕ್ರಿಯಾಪದ, ವಾಕ್ಯರಚನೆ ಇವುಗಳ ಬಗ್ಗೆ ಸ್ವಲ್ಪಮಟ್ಟಿಗಾದರೂ ತಿಳಿದಿದ್ದರೆ ಕ್ಷೇತ್ರಕರ್ತನಿಗೆ ತುಂಬ ಅನುಕೂಲವಾಗುತ್ತದೆ. ನಿರೂಪಕನು ಸಾಮಾನ್ಯಮಟ್ಟದ ಶಿಕ್ಷಣ ಮಾತ್ರ ಪಡೆದಿರಬೇಕು(ಎಸ್.ಎಸ್.ಎಲ್.ಸಿ.). ಉನ್ನತ ಮಟ್ಟದ ಶಿಕ್ಷಣ ಪಡೆದಿದ್ದರೆ ಆ ಪ್ರದೇಶದ ವಿಶಿಷ್ಟ ರೂಪಗಳು ಅವನಲ್ಲಿ ಉಳಿದಿರುವುದಿಲ್ಲ, ಕಾರಣ ನಿರೂಪಕರು ಬಹುಕಾಲ ಆ ಭಾಷಾ ಸಮುದಾಯದಲ್ಲಿ ವಾಸಿಸುತ್ತಿರಬೇಕು.

ನಿರೂಪಕರು ಆ ಸಮುದಾಯದ ಕೇಳುವಿಕೆ, ಮಾತನಾಡುವಿಕೆ, ಓದುವಿಕೆ ಮತ್ತು ಬರಹ ಈ ನಾಲ್ಕು ಭಾಷಾಕೌಶಲ್ಯಗಳನ್ನು ಚೆನ್ನಾಗಿ ಕರಗತ ಮಾಡಿಕೊಂಡಿರಬೇಕು. ಏಕೆಂದರೆ ಭಾಷಾವಿಶ್ಲೇಷಣೆ ಮಾಡುವಾಗ ಇದು ತುಂಬ ಅನುಕೂಲವಾಗುತ್ತದೆ.

ಈ. ಸಾಂಸ್ಕೃತಿಕ ಮತ್ತು ಮಾನಸಿಕ ಲಕ್ಷಣಗಳು: ಭಾಷೆಗೂ ನಿರೂಪಕರಿಗೂ ಮತ್ತು ಆ ಭಾಷಾಸಮುದಾಯಕ್ಕೂ ಆಂತರಿಕ ಸಂಬಂಧವಿರಲೇಬೇಕು. ಭಾಷೆ ಸಮಾಜದ ಬೆಳವಣಿಗೆಗೆ ಸಹಾಯಕವಾಗಿದೆ ಮಾತ್ರವಲ್ಲದೆ ಸಮಾಜದ ಜಾತಿ, ಧರ್ಮ, ವೃತ್ತಿ, ಶಿಕ್ಷಣ ಆಚಾರ-ವಿಚಾರ, ಜನಜೀವನ ಈ ಎಲ್ಲ ಅಂಶಗಳೊಡನೆ ಬೆರೆತುಹೋಗಿದೆ. ಇವುಗಳ ಹಿನ್ನೆಲೆಯಲ್ಲಿ ಆಡುನುಡಿಯ ಸ್ವರೂಪವನ್ನು ಪರಿಶೀಲಿಸಬೇಕಾಗುತ್ತದೆ. ಆಯ್ಕೆ ಮಾಡಿಕೊಂಡ ನಿರೂಪಕನು ಭಾಷಾಸಮುದಾಯದ ಸಂಸ್ಕೃತಿಯ ಅನೇಕ ಅಂಶಗಳನ್ನು(ಕೌಟುಂಬಿಕ ಜೀವನ, ವಿದ್ಯಾಭ್ಯಾಸ, ಸಾಮಾಜಿಕ ಜೀವನ, ಮನರಂಜನೆ ಮುಂತಾದವು) ತಿಳಿದವನಾಗಿರಬೇಕು. ಕ್ಷೇತ್ರಕರ್ತರಂತೆ ನಿರೂಪಕರು ಕೂಡ ತಾಳ್ಮೆ, ಪ್ರಾಮಾಣಿಕತೆ, ಉತ್ಸಾಹ, ಜವಾಬ್ದಾರಿತನ, ಈ ಎಲ್ಲ ಗುಣಲಕ್ಷಣಗಳನ್ನು ಹೊಂದಿರಬೇಕು. ನಿರೂಪಕನು ಭಾಷಾ ಸಂಗ್ರಹಕಾರ್ಯ ತನ್ನ ಸ್ವಂತದ ಕೆಲಸ ಮತ್ತು ಜವಾಬ್ದಾರಿತನದಿಂದ ಮಾಡುವವನಾಗಿದ್ದು ಕ್ಷೇತ್ರಕರ್ತನ ವಿಶ್ವಾಸ ಗಳಿಸಿದ ವ್ಯಕ್ತಿಯಾಗಿರಬೇಕು.

ನಿರೂಪಕರ ಗ್ರಹಣಶಕ್ತಿ, ಆಲೋಚನಾಶಕ್ತಿ, ಬುದ್ಧಿಶಕ್ತಿ, ತಿಳಿವಳಿಕೆ, ಸ್ಮರಣಶಕ್ತಿ ಇವೆಲ್ಲವೂ ಉನ್ನತ ಮಟ್ಟದವಾಗಿರಬೇಕಲ್ಲದೆ ನಿರೂಪಕರ ಮಾನಸಿಕ ಚಟುವಟಿಕೆಗಳು ಅವರು ಆಡುವ ಭಾಷೆಯ ಮುಖಾಂತರ ವ್ಯಕ್ತವಾಗುತ್ತವೆ. ಇವರ ಮಾನಸಿಕ ಸ್ಥಿತಿ ಕ್ಷೇತ್ರಕಾರ್ಯದಲ್ಲಿ ಮಹತ್ವದ ಪ್ರಭಾವ ಬೀರುತ್ತದೆ. ನಿರೂಪಕರು ಸಮುದಾಯದ ಸಾಂಸ್ಕೃತಿಕ ಹಿನ್ನೆಲೆಯನ್ನು ಸ್ಪಷ್ಟವಾಗಿ ತಿಳಿದವರಾಗಿದ್ದು ಮಾನಸಿಕವಾಗಿಯೂ ತುಂಬ ಕ್ರಿಯಾಶೀಲರಾಗಿರಬೇಕು.

ತರಬೇತಿ: ನಿವೇದಕರನ್ನು ಅವರ ಅರ್ಹತೆಯ ಮೇಲಿಂದ ಆಯ್ಕೆ ಮಾಡಿಕೊಂಡ ನಂತರ ಇವರಿಗೆ ಭಾಷಾವಿಶ್ಲೇಷಣೆಗೆ ಅನುಗುಣವಾಗಿ ತರಬೇತಿ ಕೊಡಬೇಕಾಗುತ್ತದೆ. ಪ್ರತಿಯೊಬ್ಬ ನಿರೂಪಕನಿಗೂ ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ತರಬೇತಿ ಕೊಡಬೇಕು. ತರಬೇತಿ ಕೊಡುವುದಕ್ಕಿಂತ ಪೂರ್ವದಲ್ಲಿ -

ನಿರೂಪಕರ ಪೂರ್ಣ ಹೆಸರು,

ಅವರ ವಯಸ್ಸು, ಲಿಂಗ, ಉದ್ಯೋಗ,

ನಿರೂಪಕರ ಖಾಯಂ ವಿಳಾಸ ಮತ್ತು ವರ್ತಮಾನದ ವಿಳಾಸ

ತರಬೇತಿ ನಡೆಯುವ ಸ್ಥಳ, ದಿನಾಂಕ ಮತ್ತು ಸಮಯ ಮುಂತಾದ ವಿವರಗಳನ್ನು ಮೊದಲೇ ನೋಂದಾಯಿಸಿ ಸಿದ್ಧಪಡಿಸಿಕೊಳ್ಳಬೇಕು. ನಿರೂಪಕರು ನಿಯತತೆಯಿಂದ ತರಬೇತಿಗೆ ಒಳಪಡುವಂತೆ ಮೊದಲೇ ಅವರಿಗೆ ಮೃದು ಸೂಚನೆ ಕೊಡಬೇಕು.

ಕ್ಷೇತ್ರಕರ್ತ, ನಿರೂಪಕರಿಗೆ ತಮ್ಮ ಕ್ಷೇತ್ರಕಾರ್ಯದ ವ್ಯಾಪ್ತಿ, ಉದ್ದೇಶ, ಸ್ವರೂಪ ಮುಂತಾದವುಗಳನ್ನು ತಿಳಿಸಿಕೊಡಬೇಕು.

ತರಬೇತಿ ಸ್ಥಳಕ್ಕೆ ಯಾವಾಗ ಕೂಡಬೇಕು,

ಯಾವಾಗ ಪ್ರಾರಂಭಿಸಬೇಕು,

ಯಾವಾಗ ವಿಶ್ರಾಂತಿಗೆ ಬಿಡಬೇಕು,

ಯಾವಾಗ ಮುಕ್ತಾಯ ಮಾಡಬೇಕು.

ಇವುಗಳ ಒಂದು ವೇಳಾಪಟ್ಟಿ ಕ್ಷೇತ್ರಕರ್ತನಲ್ಲಿರಬೇಕು. ವೇಳಾಪಟ್ಟಿಯ ಒಂದು ಪ್ರತಿಯನ್ನು ನಿರೂಪಕರಿಗೆ ಒದಗಿಸಬೇಕು.

ಕ್ಷೇತ್ರಕರ್ತ ತನಗೆ ಬೇಕಾದ ವಿಷಯಗಳನ್ನು ಸಂಗ್ರಹಿಸುವಾಗ ಪ್ರಶ್ನೆಗಳ ಚೌಕಟ್ಟನ್ನು ಮುಂಚಿತವಾಗಿಯೇ ತಯಾರು ಮಾಡಿಕೊಂಡಿರಬೇಕು.

ಪ್ರಶ್ನೆಗಳನ್ನು ಹೇಗೆ ಕೇಳಬೇಕು.

ಪ್ರಶ್ನೆಗಳ ಭಾಷೆ ಹೇಗಿರಬೇಕು.

ಪ್ರಶ್ನೆಗಳಿಗೆ ಯಾವ ರೀತಿಯಾಗಿ ಪ್ರತಿಕ್ರಿಯೆ ಕೊಡಬೇಕು ಮುಂತಾದವುಗಳ ಬಗ್ಗೆ ನಿರೂಪಕರಿಗೆ ತಿಳಿಸಿ ಹೇಳಬೇಕು.

ಸಾಮಗ್ರಿಗಳನ್ನು ಒದಗಿಸುವಾಗ ಅವರ ಧ್ವನಿಯ ಏರಿಳಿತ, ತಾನ, ಘಾತ(Stress) ಮುಂತಾದವುಗಳಲ್ಲಿ ಅವಸರಿದೆ ನಿಧಾನವಾಗಿ ಹೇಳುವಂತೆ ಸಲಹೆ ಕೊಡಬೇಕಾಗುತ್ತದೆ. ಕನಿಷ್ಠ ಮೂರು ಸಲವಾದರೂ ಕೇಳಬೇಕು. ಇದರಿಂದ ಕ್ಷೇತ್ರಕರ್ತನಿಗೆ ಧ್ವನಿಲಿಪಿಯಲ್ಲಿ ಬರೆಯಲು ಅನುಕೂಲವಾಗುತ್ತದೆ. ಕ್ಷೇತ್ರಕರ್ತನಿಗೆ ಭಾಷಾವಿಶ್ಲೇಷಣಾ ತಂತ್ರಗಳ ಬಗ್ಗೆಯೂ ನಿರೂಪಕರಿಗೆ ತರಬೇತಿ ಕೊಡಬೇಕಾಗುತ್ತದೆ. ಭಾಷಾರೂಪಗಳಲ್ಲಿ ಕನಿಷ್ಠ ತಮ ಯುಗ್ಮ, ಸಂದಿಗ್ಧ ಯುಗ್ಮ, ಸಾದೃಶ್ಯ, ಸಮಾನ ಪರಿಸರ, ಪರಸ್ಪರ ವ್ಯಾವರ್ತಕ ಪರಿಸರ, ಸ್ವಚ್ಛಂದ ಪರಿವರ್ತನೆ, ವಿರೋಧ ಪ್ರಸಾರ, ಪೂರಕ ಪ್ರಸಾರ ಮುಂತಾದ ಧ್ವನಿಮಾ ವಿಶ್ಲೇಷಣೆಯ ವಿಧಾನಗಳ ಬಗ್ಗೆ ತರಬೇತಿ ಕೊಡುವುದು ತೀರ ಅವಶ್ಯಕ. ಅದರಂತೆ ಔಪಚಾರಿಕ, ಅನೌಪಚಾರಿಕ, ಸಾಮಾಜಿಕ ಸಂದರ್ಭಗಳಲ್ಲಿ ಭಾಷಾ ಬಳಕೆಯ ರೀತಿಯನ್ನು ಸಹಜವಾಗಿಯೇ ಹೇಳುವಂತೆ ನಿರೂಪಕರಿಗೆ ಸೂಚನೆ ಕೊಡಬೇಕು. ನಿರೂಪಕರಿಗೆ ಟೇಪರಿಕಾರ್ಡರ್, ಕಂಪ್ಯೂಟರ್ ಮುಂತಾದ ಆಧುನಿಕ ಉಪಕರಣಗಳನ್ನು ಬಳಸುವ ವಿಧಾನ ಮತ್ತು ಅವುಗಳ ಉಪಯೋಗದ ಬಗ್ಗೆ ತರಬೇತಿ ಕೊಡಬೇಕಾಗುತ್ತದೆ. ಸಾಮಗ್ರಿ ಸಂಗ್ರಹ ಮತ್ತು ವಿಶ್ಲೇಷಣೆಯನ್ನು ಮಾಡುವುದಕ್ಕಿಂತ ಪೂರ್ವದಲ್ಲಿ ನಿರೂಪಕರಿಗೆ ತರಬೇತಿ ಕೊಡುವುದು ತುಂಬ ಉಪಯುಕ್ತ.

ವಿವರಣಕರ್ತರ ಉಪಯೋಗ

ಭಾಷಾಸಮುದಾಯದಲ್ಲಿ ಸೂಕ್ತ ನಿವೇದಕರು ಕೆಲವೊಮ್ಮೆ ಸಿಗದೆ ಇದ್ದಾಗ ಕ್ಷೇತ್ರಕರ್ತ, ವಿವರಣಕರ್ತರನ್ನು ಉಪಯೋಗಿಸಬೇಕಾಗುತ್ತದೆ(ಇಂತಹ ಸಂದರ್ಭಗಳು ಬಹಳ ಕಡಿಮೆ). ಇವರ ಮುಖ್ಯ ಕಾರ್ಯವೆಂದರೆ ಕ್ಷೇತ್ರಕರ್ತ ಮತ್ತು ಭಾಷಾ ಸಮುದಾಯದ ನಡುವೆ ಸಂಪರ್ಕವನ್ನುಂಟು ಮಾಡುವುದು. ಮಧ್ಯಸ್ಥಿಕೆ ವಹಿಸುವುದು. ಆದ್ದರಿಂದ ಇವರಿಗೆ ಮಧ್ಯಸ್ಥರೆಂದು ಕರೆಯುವರು. ವಿವರಣಕರ್ತರು ಸಮುದಾಯದ ಭಾಷೆ ಮತ್ತು ಕ್ಷೇತ್ರಕರ್ತನ ಭಾಷೆ ಎರಡರಲ್ಲೂ ಪ್ರಭುತ್ವ ಹೊಂದಿರಬೇಕಾಗುತ್ತದೆ. ಕ್ಷೇತ್ರಕರ್ತ

ತನ್ನ ಅಧ್ಯಯನದ ಉದ್ದೇಶ, ಸ್ವರೂಪಗಳನ್ನು ವಿವರಣಕರ್ತರಿಗೆ ತಿಳಿಸಿಕೊಡಬೇಕು. ಅವರಿಗೂ ಸೂಕ್ತ ತರಬೇತಿ ಕೊಡಬೇಕಾಗುತ್ತದೆ.

ಭಾಷಾಸಮುದಾಯ ೦ ☐ ೦ ಕ್ಷೇತ್ರಕರ್ತ

೦ ವಿವರಣಕರ್ತ

ವಿವರಣಕರ್ತ ಭಾಷಾಂತರದಲ್ಲಿ ವಿಶೇಷ ತರಬೇತಿ ಪಡೆದಿರಬೇಕಾಗುತ್ತದೆ. ಭಾಷಾ ವಿಶ್ಲೇಷಣಾ ಕಾರ್ಯದಲ್ಲಿ ಕೆಲವು ಸಂದರ್ಭದಲ್ಲಿ ವಿವರಣಕರ್ತ ಉಪಯುಕ್ತ ವ್ಯಕ್ತಿಯಾಗಿ ಪರಿಣಮಿಸುತ್ತಾನೆ.

ಹೀಗೆ, ಭಾಷಾ ಕ್ಷೇತ್ರಕಾರ್ಯದಲ್ಲಿ ನಿರೂಪಕರು ಮಹತ್ವದ ಪಾತ್ರ ವಹಿಸುತ್ತಾರೆ ಅವರು ನೀಡುವ ಸಾಮಗ್ರಿಗಳ ಆಧಾರದ ಮೇಲೆಯೇ ಸಂಶೋಧನೆಯ ಫಲಿತಾಂಶ ರೂಪಗೊಳ್ಳುತ್ತದೆ.

ಆಕರಗ್ರಂಥಗಳು

೧. Willium Samarin, Field Linguistic.

೨. ಅಂಗಡಿ ಎಸ್.ಎಸ್., ೧೯೯೬, ಭಾಷಾ ಕ್ಷೇತ್ರಕಾರ್ಯ, ಸಮಾಜ ಪುಸ್ತಕಾಲಯ, ಧಾರವಾಡ.

೨೩

ಭಾಷೆ : ಸಾಮಗ್ರಿ ಸಂಗ್ರಹ

ಕ್ಷೇತ್ರಕರ್ತ ಒಂದು ನಿರ್ದಿಷ್ಟ ಉಪಭಾಷೆಯನ್ನು ವಿಶ್ಲೇಷಣೆ ಮಾಡಬೇಕೆಂದು ಅಂತಿಮವಾಗಿ ತೀರ್ಮಾನವಾದ ನಂತರ ತನ್ನ ಮಾರ್ಗದರ್ಶಕರೊಡನೆ ಚರ್ಚೆ ಮಾಡಿ ಅವರ ಸಲಹೆ; ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಸಾಮಗ್ರಿ ಸಂಗ್ರಹಿಸಲು ಕ್ಷೇತ್ರಕಾರ್ಯಕ್ಕೆ ಹೋಗಬೇಕಾಗುತ್ತದೆ. ಸಾಮಗ್ರಿಗಳನ್ನು ಸಂಗ್ರಹಿಸುವುದು ಕ್ಷೇತ್ರಕಾರ್ಯದಲ್ಲಿ ಮಹತ್ವದ ಘಟ್ಟವಾಗಿದೆ. ಇನ್ನೊಂದು ಅಂಶವನ್ನು ಇಲ್ಲಿ ಹೇಳಬೇಕು. ಕ್ಷೇತ್ರಕರ್ತ ಕ್ಷೇತ್ರಕ್ಕೆ ಹೊರಡುವ ಮುನ್ನ ತನ್ನ ಕಾರ್ಯಕ್ಕೆ ಅನುಕೂಲವಾಗುವಂತೆ ಕೆಲವು ಸಹಾಯಕರನ್ನು ಆರಿಸಿಕೊಳ್ಳುವುದು ಉತ್ತಮ. ಕ್ಷೇತ್ರಕಾರ್ಯ ಮಾಡಿ ಅನುಭವವಿದ್ದವರನ್ನು, ಸಮುದಾಯದಲ್ಲಿ ಹೆಚ್ಚು ಜನಸಂಪರ್ಕ ಹೊಂದಿದದವರನ್ನು ಸಹಾಯಕರನ್ನಾಗಿ ಆರಿಸಿಕೊಳ್ಳಬೇಕು. ಕ್ಷೇತ್ರಕರ್ತ ತನಗಿಂತಲೂ ಮೊದಲು, ಆ ಕ್ಷೇತ್ರದಲ್ಲಿ ಸಾಮಗ್ರಿ ಸಂಗ್ರಹ ಮಾಡಿದವರನ್ನೂ ತನ್ನ ನೆರವಿಗೆ ತೆಗೆದುಕೊಳ್ಳುವುದು ಉತ್ತಮ.

ಕ್ಷೇತ್ರಕರ್ತ ಇನ್ನೊಂದು ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು. ನಿರೂಪಕರು ಮತ್ತು ಕ್ಷೇತ್ರ ಸಹಾಯಕರೊಡಗೂಡಿ ತಾವು ವಿಶ್ಲೇಷಿಸುವ ಕ್ಷೇತ್ರವನ್ನು ಒಮ್ಮೆ ಸರ್ವೇಕ್ಷಣ ಮಾಡಿ, ಆ ಭಾಷಾಸಮುದಾಯಕ್ಕೆ ತಕ್ಕಂತೆ ಒಂದು ನೀಲನಕ್ಷೆ ತಯಾರಿಸಿದ ನಂತರವೇ ಸಾಮಗ್ರಿ ಸಂಗ್ರಹಕ್ಕೆ ತೊಡಗಬೇಕು. ಸಾಮಗ್ರಿ ಸಂಗ್ರಹಿಸುವಾಗ ಉದ್ದಕ್ಕೂ, ನಿರೂಪಕರಿಗೆ, ಕ್ಷೇತ್ರಸಹಾಯಕರಿಗೆ ಕ್ಷೇತ್ರಕರ್ತ ಪ್ರೇರಣೆ ಕೊಡುತ್ತಾ ಇರಬೇಕು. ಇದು ಬಹಳ ಮಹತ್ವದ್ದು. ಸಮುದಾಯದಲ್ಲಿ ಬಳಕೆಯಾಗುವ ಮಾತುಗಳು ಬಹಳ ಬೆಲೆಯುಳ್ಳವು. ಅವು ಒಂದಿಲ್ಲಾ ಒಂದು ರೀತಿಯಲ್ಲಿ ಭಾಷಾವಿಶ್ಲೇಷಣೆಗೆ ನೆರವಾಗುತ್ತವೆ ಎಂಬುದನ್ನು ಕ್ಷೇತ್ರಕರ್ತ ಸದಾ ಗಮನದಲ್ಲಿಟ್ಟುಕೊಳ್ಳಬೇಕು.

ಸಾಮಗ್ರಿಗಳನ್ನು ಸಂಗ್ರಹಿಸುವಾಗ ಗಮನಿಸಬೇಕಾದ ಅಂಶಗಳು

ಕ್ಷೇತ್ರದಲ್ಲಿ ಭಾಷಾಸಮುದಾಯಕ್ಕೆ ಸಂಬಂಧಿಸಿದಂತೆ, ಮೂಲ ಆಕರಗಳಿಂದ, ಸಾಮಗ್ರಿಗಳನ್ನು ಸಂಗ್ರಹಿಸಬೇಕಾಗುತ್ತದೆ. ಭಾಷಾವಿಶ್ಲೇಷಣೆಯಲ್ಲಿ ಮೂಲಸಾಮಗ್ರಿಗಳಿಗೆ ಪ್ರಥಮ ಸ್ಥಾನವಿದೆ, ಒಂದು ಉಪಭಾಷಾ ರಚನೆಯು ವಸ್ತುನಿಷ್ಠವಾಗಿ ತಿಳಿಯಬೇಕಾದರೆ, ಮೂಲಸಾಮಗ್ರಿಗಳು ತುಂಬ ಸಹಾಯಕವಾಗುತ್ತವೆ. ಮೂಲಸಾಮಗ್ರಿಗಳು ಮೂಲ ಆಕರಗಳಲ್ಲಿ ದೊರೆಯುತ್ತವೆ. ಕ್ಷೇತ್ರದಲ್ಲಿ ಸಿಗುವ ಮೂಲ ಆಕರಗಳೆಂದರೆ:

ಸಂಗ್ರಹಾಲಯಗಳು

ದಾಖಲೆ ಸಂಗ್ರಹಾಲಯಗಳು

ವಸ್ತುಸಂಗ್ರಹಾಲಯಗಳು

ಇತರ ವಸ್ತುಗಳು

ಗ್ರಂಥಾಲಯಗಳು

ಚಲನಚಿತ್ರಗಳು

ವಿಡಿಯೋ ಕ್ಯಾಸೆಟ್‌ಗಳು

ಸ್ಥಳೀಯ ಸಣ್ಣ ಪತ್ರಿಕೆಗಳು

ಕ್ಷೇತ್ರಕಾರ್ಯ ಪ್ರಾರಂಭವಾದಾಗ ಕ್ಷೇತ್ರಕರ್ತ ಮೇಲಿನ ಮೂಲ ಆಕರಗಳು ಇರುವಲ್ಲಿಗೆ ಹೋಗಿ ಸಾಮಗ್ರಿಗಳನ್ನು ಸಂಗ್ರಹಿಸಬೇಕು. ಮೂಲಆಕರಗಳು ದೊರೆಯುವ ಸ್ಥಳದಲ್ಲಿ ಕ್ಷೇತ್ರಕರ್ತ ಜಾಗರೂಕತೆಯಿಂದ ವರ್ತಿಸಬೇಕೆಂಬುದನ್ನು ಮರೆಯಬಾರದು.

ದಾಖಲೆಗಳ ಸಂಗ್ರಹಾಲಯಗಳು

ಕ್ಷೇತ್ರಕರ್ತ ತನ್ನ ಕ್ಷೇತ್ರದಲ್ಲಿ ಅಥವಾ ಕ್ಷೇತ್ರದ ಸುತ್ತಮುತ್ತಲಿನ ಪ್ರದೇಶದಲ್ಲಿರುವ ದಾಖಲೆಗಳ ಸಂಗ್ರಹಾಲಯಗಳಿಗೆ ಭೇಟಿ ಕೊಡಬೇಕು. ಅವು ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಅಮೂಲ್ಯವಾದ ಮಾಹಿತಿಗಳನ್ನು ಒದಗಿಸಿಕೊಡುತ್ತವೆ. ಕ್ಷೇತ್ರಕರ್ತ ತನ್ನ ಅಧ್ಯಯನಕ್ಕೆ ಅವಶ್ಯವಾಗಿರುವ ಮಾಹಿತಿಗಳನ್ನು ಪಡೆದುಕೊಳ್ಳಲು ಮತ್ತು ಭಾಷಾಸಮುದಾಯದ ಸಂಸ್ಕೃತಿ ಬಗೆಗಿನ ಅನೇಕ ವಿಷಯಗಳನ್ನು ತಿಳಿದುಕೊಳ್ಳಲು ಈ ಸಂಗ್ರಹಾಲಯದಲ್ಲಿ ಸಿಗುವ ದಾಖಲೆಗಳ ಅಧ್ಯಯನ ಮತ್ತು ವೀಕ್ಷಣೆ ತುಂಬ ನೆರವಾಗುತ್ತದೆ.

ದಾಖಲೆಗಳ ಸಂಗ್ರಹಾಲಯದಲ್ಲಿ ಆ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಆರ್ಥಿಕ, ಆಡಳಿತಾತ್ಮಕ, ಶೈಕ್ಷಣಿಕ, ಸಾಮಾಜಿಕ, ರಾಜಕೀಯ ಮತ್ತು ಸಾಹಿತ್ಯಕ ಮಾಹಿತಿಗಳು ದೊರೆಯುತ್ತವೆ. ಆ ಕ್ಷೇತ್ರದಲ್ಲಿಯ ಪಾಳೇಗಾರರ, ದೇಶಗತಿಗಳ, ಸಂಸ್ಥಾನಿಕರ ಕರಪತ್ರಗಳು, ಕಡತಗಳು, ಆದೇಶಗಳು ಮುಂತಾದವುಗಳನ್ನೂ ಅಲ್ಲಿ ವೈಜ್ಞಾನಿಕವಾಗಿ ಸಂರಕ್ಷಿಸಿ ಸಂಗ್ರಹಿಸಿಟ್ಟಿರುತ್ತಾರೆ. ಕ್ಷೇತ್ರಕರ್ತ ಅಧ್ಯಯನಕ್ಕೆ ಇವೆಲ್ಲವೂ ಅವಶ್ಯವಾಗಿರುವುದರಿಂದ, ಈ ತರಹದ ಸಂಗ್ರಹಾಲಯಗಳು ಕ್ಷೇತ್ರಕರ್ತನ ಯೋಜನೆಗೆ ಸಹಾಯಕವಾಗಿ ನಿಲ್ಲುತ್ತವೆ.

ವಸ್ತುಸಂಗ್ರಹಾಲಯಗಳು

ಕ್ಷೇತ್ರಕರ್ತನಿಗೆ ನೆರವಾಗುವ ಮುಖ್ಯ ಆಕರಗಳಲ್ಲಿ ವಸ್ತುಸಂಗ್ರಹಾಲಯಗಳು ಮಹತ್ವದ ಪಾತ್ರ ವಹಿಸುತ್ತವೆ. ಆ ಕ್ಷೇತ್ರಕ್ಕೆ ಸಂಬಂಧಪಟ್ಟ ಸಾಂಸ್ಕೃತಿಕ ಅವಶೇಷಗಳಾದ ಶಾಸನಗಳು, ನಾಣ್ಯಗಳನ್ನು ಇಲ್ಲಿ ಒಂದೆಡೆ ಸಂಗ್ರಹಿಸಿಟ್ಟಿರುತ್ತಾರೆ. ಅದರಂತೆ ಸಮುದಾಯದ ಛಾಯಾ ಚಿತ್ರಗಳು, ಹಳೆಯ ಉಡಿಗೆ-ತೊಡಿಗೆಗಳು, ಕಲಾತ್ಮಕ ವಸ್ತುಗಳು ಇಲ್ಲಿರುತ್ತವೆ. ಕ್ಷೇತ್ರದಲ್ಲಿಯ ಜಾನಪದ ವಸ್ತು ಸಂಗ್ರಹಾಲಯಗಳು ಕ್ಷೇತ್ರಕರ್ತರಿಗೆ ಕ್ಷೇತ್ರದ ಸಂಸ್ಕೃತಿಯನ್ನು ಅರಿಯಲು ಪರೋಕ್ಷವಾಗಿ ಮಾರ್ಗದರ್ಶನ ಮಾಡುತ್ತವೆ. ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅಮೂಲ್ಯ ಮಾಹಿತಿಗಳು ವಸ್ತು ಸಂಗ್ರಹಾಲಯಗಳಿಂದ ದೊರೆಯುತ್ತವೆ.

ಇತರ ಆಕರಗಳು

ಕ್ಷೇತ್ರಗಳಲ್ಲಿಯ ಸಂಗ್ರಹಾಲಯಗಳಲ್ಲದೆ, ಇತರ ಕೆಲ ಆಕರಗಳಿಂದಲೂ ಮೂಲ ಸಾಮಗ್ರಿಗಳನ್ನು ನಾವು ಪಡೆಯಬಹುದು. ಅವು ಇಂತಿವೆ.

ಗ್ರಂಥಾಲಯಗಳು

ಕ್ಷೇತ್ರದಲ್ಲಿ ಅಥವಾ ಕ್ಷೇತ್ರದ ಸುತ್ತಮುತ್ತಲಿನ ಪ್ರದೇಶದಲ್ಲಿರುವ ಸಾರ್ವಜನಿಕ ಗ್ರಂಥಾಲಯಗಳು, ಊರ ಪ್ರಮುಖರ ಮನೆಯಲ್ಲಿರುವ ವೈಯಕ್ತಿಕ ಗ್ರಂಥಭಂಡಾರಗಳು, ಆ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೆಲವು ಉಪಯುಕ್ತ ಮಾಹಿತಿಗಳನ್ನು ನಮಗೆ ಒದಗಿಸುತ್ತವೆ. ಹಳ್ಳಿಗಳಲ್ಲಿ ಗ್ರಂಥಾಲಯಗಳಿಗೆ ವಾಚನಾಲಯಗಳೆಂದು ಕರೆಯುತ್ತಾರೆ. ಅಲ್ಲಿ ಜಾನಪದ ಕಥೆಗಳು, ಹಾಡುಗಳು, ಸರ್ಕಾರಿ ರಿಪೋರ್ಟುಗಳು, ಕೈಫಿಯತ್ತುಗಳು, ಬಖೈರುಗಳು, ಆ ಪ್ರದೇಶದ ಪ್ರಮುಖರ ಜೀವನಚರಿತ್ರೆಗಳು, ಹಬ್ಬ ಹರಿದಿನಗಳಲ್ಲಿ ನಡೆಯುವ ಆಚರಣೆಗಳ ವಿವರಗಳು ಇಲ್ಲಿ ದೊರೆಯುತ್ತವೆ. ಇವು ಒಂದಲ್ಲ ಒಂದು ರೀತಿಯಲ್ಲಿ ಕ್ಷೇತ್ರಕರ್ತನಿಗೆ ನೆರವಾಗುತ್ತವೆ. ಕ್ಷೇತ್ರಕರ್ತ ಬಿಡುವಿನ ವೇಳೆಯನ್ನು ಗ್ರಂಥಾಲಯದಲ್ಲಿ ಕಳೆಯುವುದು ಒಳ್ಳೆಯದು.

ಚಲನಚಿತ್ರಗಳು ಮತ್ತು ವಿಡಿಯೋ ಕ್ಯಾಸೆಟ್‌ಗಳು

ವಿಷಯ ಸಂಗ್ರಹದಲ್ಲಿ ಚಲನಚಿತ್ರಗಳು, ವಿಡಿಯೋ ಕ್ಯಾಸೆಟ್‌ಗಳು ಬಹಳ ಸಹಾಯಕ ವಾಗಿವೆ. ಆ ಕ್ಷೇತ್ರಕ್ಕೆ ಸಂಬಂಧಿಸಿದ ಚಲನಚಿತ್ರಗಳು, ಕ್ಯಾಸೆಟ್‌ಗಳು ಬಂದಿದ್ದರೆ ಕ್ಷೇತ್ರಕರ್ತ ಅವುಗಳನ್ನು ನೋಡಬೇಕು, ಕೇಳಬೇಕು. ಅವುಗಳನ್ನು ಅರ್ಥ ಮಾಡಿಕೊಳ್ಳಲಿಕ್ಕೆ ಎಷ್ಟು ಸಮಯ ಕಳೆದರೂ ನಷ್ಟವಿಲ್ಲ. ಇದರಿಂದ ಆ ಭಾಷಾಸಮುದಾಯದ ಸಂಸ್ಕೃತಿ, ಸಂಪ್ರದಾಯಗಳ ಪ್ರತ್ಯಕ್ಷ ಪರಿಚಯವಾಗುತ್ತದೆ. ಸಮುದಾಯ ಜೀವನದ ವಿವಿಧ ಘಟನೆಗಳ ಬಗ್ಗೆ ಸ್ಪಷ್ಟ ಜ್ಞಾನ ಉಂಟಾಗುತ್ತದೆ. ಕಣ್ಣಿಟ್ಟು ನೋಡುವುದರಿಂದ ದೊರೆತ ಜ್ಞಾನ ದೃಢವಾಗಿ ಮನಸ್ಸಿನಲ್ಲಿ ಬಹುಕಾಲ ಉಳಿಯುತ್ತದೆ. ಆ ಭಾಷಾ ಸಮುದಾಯದ ಸಾಹಿತ್ಯ, ಕಲೆ, ಸಂಗೀತ ಮುಂತಾದ ಅನೇಕ ಸಂಗತಿಗಳು ನಮಗೆ ತಿಳಿದು ಬರುತ್ತದೆ.

ಸ್ಥಳೀಯ ಸಣ್ಣ ಪತ್ರಿಕೆಗಳು

ಪತ್ರಿಕೆಗಳು ಮಾಹಿತಿಯನ್ನು ನೀಡುವ ಮಹತ್ವದ ಸಾಧನಗಳಾಗಿವೆ. ಪ್ರಜಾಪ್ರಭುತ್ವ ಪದ್ಧತಿಯಲ್ಲಂತೂ ಅವುಗಳ ಪಾತ್ರ ಹಿರಿದು, ಸಣ್ಣ ಪತ್ರಿಕೆಗಳು ಒಂದು ನಿರ್ದಿಷ್ಟ ಪ್ರದೇಶದ ಸುದ್ದಿ ಸಮಾಚಾರವನ್ನು, ವರದಿ ಮಾಡುತ್ತಿರುತ್ತವೆ. ಸಮಾಜ ಸೇವಕರ, ರಾಜಕಾರಣಿಗಳ, ಧಾರ್ಮಿಕ ಗುರುಗಳ ಭಾಷಣಗಳ ಸಾರ ಅಲ್ಲಿರುತ್ತವೆ. ಇದರಿಂದ ಕ್ಷೇತ್ರಕರ್ತ, ಆ ಕ್ಷೇತ್ರದ ಪ್ರಚಲಿತ ವಿಷಯಗಳ ಬಗ್ಗೆ ಇರುವ ವಿವಿಧ ಅಭಿಪ್ರಾಯಗಳನ್ನು ಮಂಡಿಸುತ್ತವೆ ಮತ್ತು ಸಾರ್ವಜನಿಕರ ಅಭಿಪ್ರಾಯಗಳನ್ನೂ ತಿಳಿಸುತ್ತವೆ. ಇವು ಕ್ಷೇತ್ರಕರ್ತನಿಗೆ ನೆರವಾಗುತ್ತವೆ. ಅದರಂತೆ ಆ ಸಮುದಾಯ ಜೀವನದ ಜಾತ್ರೆಗಳು, ಸುಗ್ಗಿದಿನಗಳು, ವಿವಿಧ ಪ್ರಾಕೃತಿಕ ಸನ್ನಿವೇಶಗಳಿಗೆ ಸಂಬಂಧಿಸಿದ ಚಿತ್ರಗಳು ಹಾಗೂ ಪಟಗಳು ಆ ಸಮುದಾಯದ ಅಮೂರ್ತ ವಿಷಯಗಳನ್ನು ಮೂರ್ತಗೊಳಿಸುತ್ತವೆ ಮತ್ತು ಆ ಸಮುದಾಯದ ಸಾಂಕೇತಿಕ ರೂಪದಲ್ಲಿ ವಿಷಯ ವಿವರಣೆ ನೀಡುತ್ತವೆ ಮತ್ತು ಆ ಸಮುದಾಯದ ಜನಸಂಖ್ಯೆಯ, ಆರ್ಥಿಕ ಉತ್ಪಾದನೆಯ ಅಂಕಿ-ಅಂಶಗಳನ್ನು ತಿಳಿದುಕೊಳ್ಳಲು ಕೋಷ್ಟಕಗಳು ನೆರವಿಗೆ ಬರುತ್ತವೆ.

ಕ್ಷೇತ್ರಕರ್ತ, ಕ್ಷೇತ್ರಕಾರ್ಯದಲ್ಲಿ ಮೇಲಿನ ಆಕರಗಳ ಸಹಾಯದಿಂದ ಸಾಮಗ್ರಿಗಳನ್ನು ಸಂಗ್ರಹಿಸಬೇಕು. ತನಗೆ ಯಾವ ಸಾಮಗ್ರಿ ಉಪಯುಕ್ತ, ಯಾವುದು ಅನುಪಯುಕ್ತ ಎಂಬುದನ್ನು ಲಕ್ಷ್ಯದಲ್ಲಿಟ್ಟುಕೊಂಡು ಸಾಮಗ್ರಿಗಳನ್ನು ದಾಖಲಿಸಿಕೊಳ್ಳಬೇಕು. ಸುಮ್ಮನೆ ಎಲ್ಲವನ್ನೂ ಬರೆದುಕೊಳ್ಳುತ್ತಾ ಹೋದರೆ ಶ್ರಮ ಮತ್ತು ವೇಳೆಯ ಅಪವ್ಯಯವಾಗುತ್ತದೆ. ಕ್ಷೇತ್ರಕರ್ತ ಮೂಲ ಆಕರಗಳನ್ನು ಸರಿಯಾಗಿ ಬಳಸಿಕೊಳ್ಳುವುದು ಅವನ ಜವಾಬ್ದಾರಿಯ ಕಾರ್ಯವಾಗಿದೆ.

ಭಾಷಾ ಕಲಿಕೆ

ಕ್ಷೇತ್ರಕರ್ತ ಸಾಮಗ್ರಿಗಳನ್ನು ಸಂಗ್ರಹಿಸುವಾಗ ಗಮನಿಸಬೇಕಾದ ಮಹತ್ವದ ಸಂಗತಿ ಯೆಂದರೆ 'ಭಾಷಾ ಕಲಿಕೆ'. ಕ್ಷೇತ್ರಕರ್ತ ವಿಶ್ಲೇಷಿಸುವ ಭಾಷೆ ಒಂದು ವೇಳೆ ಪರಭಾಷೆ, ಪರಭಾಷೆಯಾಗಿದ್ದರೆ, ಎಷ್ಟೇ ಕಷ್ಟವಾದರೂ ಚಿಂತೆಯಿಲ್ಲ, ಆ ಭಾಷೆಯ ಭಾಷಾ ಕೌಶಲ್ಯಗಳನ್ನು(ಗ್ರಹಿಸುವಿಕೆ, ಮಾತುಗಾರಿಕೆ, ಓದುಗಾರಿಕೆ ಮತ್ತು ಬರವಣಿಗೆ) ಕರಗತ ಮಾಡಿಕೊಂಡು, ತಾನು ವಿಶ್ಲೇಷಿಸುವ ಉಪಭಾಷೆಯನ್ನು ಕಲಿತು ರೂಢಿಸಿಕೊಳ್ಳು ವುದರಿಂದ ಭಾಷಿಕರ ಆಡುನುಡಿಯಲ್ಲಿ ಬಳಿಕೆಯಾಗುವ ನುಡಿಗಟ್ಟುಗಳು, ಗಾದೆ, ಒಗಟುಗಳು ಮುಂತಾದ ಭಾಷಿಕ ಚಟುವಟಿಕೆಗಳನ್ನು ಭಾಷಿಕರ ಆಲೋಚನೆಗಳನ್ನು, ಭಾವನೆಗಳನ್ನು ವ್ಯಕ್ತಪಡಿಸುವುದನ್ನು ಗುರುತಿಸಿ ಗ್ರಹಿಸುವ ತೀಕ್ಷ್ಣತೆ ಬರುತ್ತದೆ. ಕ್ಷೇತ್ರಕರ್ತ ತಾನು ವಿಶ್ಲೇಷಿಸುವ ಸ್ಥಳೀಯ ಭಾಷೆಯನ್ನು ಅರಿಯುವುದರಿಂದ

- ಭಾಷಾ ಸಾಮಗ್ರಿಗಳನ್ನು ಸಂಗ್ರಹಿಸಲು ಸುಲಭವಾಗುವುದು.
- ವಿಶ್ಲೇಷಿಸುವಾಗ ಭಾಷಿಕ ಗೊಂದಲಗಳು ನಿವಾರಣೆಯಾಗುತ್ತವೆ.

- ಸಮುದಾಯದ ಸದಸ್ಯರು ಮತ್ತು ಕ್ಷೇತ್ರಕರ್ತರ ನಡುವೆ ವಿಚಾರ ವಿನಿಮಯ ನಡೆಸಲು ಅನುಕೂಲವಾಗುತ್ತದೆ.
- ಆ ಭಾಷಾಸಮುದಾಯದ ಸಂಸ್ಕೃತಿಯನ್ನು ತಿಳಿದುಕೊಳ್ಳಲು ಸಹಾಯಕ ವಾಗುವುದು.
- ಕ್ಷೇತ್ರಕರ್ತ ತನ್ನ ಅಧ್ಯಯನದ ಆವಶ್ಯಕತೆಯನ್ನು ಪೂರೈಸಿಕೊಳ್ಳಲು ಅನುಕೂಲ ವಾಗುತ್ತದೆ.

ಸಾಮಗ್ರಿಗಳನ್ನು ಸಂಗ್ರಹಿಸುವಾಗ ಕ್ಷೇತ್ರದಲ್ಲಿ ಕ್ಷೇತ್ರಕರ್ತ ಹೆಚ್ಚು ಸಮಯವನ್ನು ಕಳೆಯಬೇಕಾಗಿರುವುದರಿಂದ, ಆ ಪರಿಸರದ ಭಾಷೆಯನ್ನು ಕಲಿತುಕೊಳ್ಳುವುದು. ಸಾಮಗ್ರಿ ಸಂಗ್ರಹ ಮತ್ತು ವಿಶ್ಲೇಷಣೆಯ ದೃಷ್ಟಿಯಿಂದಲೂ ತುಂಬ ಅವಶ್ಯಕವಾಗಿದೆ.

ಶಬ್ದಕೋಶದ ಸಿದ್ಧತೆ

ಸಾಮಗ್ರಿ ಸಂಗ್ರಹಿಸುವಾಗ ಆ ಭಾಷಾಸಮುದಾಯಕ್ಕೆ ಸಂಬಂಧಪಟ್ಟಂತೆ ಶಬ್ದಕೋಶ ವನ್ನು ಸಿದ್ಧಪಡಿಸಿಕೊಳ್ಳಬೇಕು. ಭಾಷಾಸಮುದಾಯದ ಭಾಷಾರೂಪಗಳನ್ನು ವ್ಯವಸ್ಥಿತ ವಾಗಿ ಸಂಯೋಜಿಸುವುದೇ ಶಬ್ದಕೋಶವಾಗಿದೆ. ಕ್ಷೇತ್ರಕಾರ್ಯದಲ್ಲಿ ಮೌಖಿಕದತ್ತಗಳನ್ನು ಸಂಗ್ರಹಿಸುವುದರ ಮೂಲಕವೂ ಕ್ಷೇತ್ರದಲ್ಲಿ ಲಭ್ಯವಿರುವ ಬರಹದ ಸಾಹಿತ್ಯದಿಂದಲೂ ದತ್ತಗಳನ್ನು ಸಂಗ್ರಹಿಸಬೇಕು. ಆ ವೇಳೆಯಲ್ಲಿ ಕ್ಷೇತ್ರಕರ್ತ ಪ್ರಶ್ನಾವಳಿ. ಸಂದರ್ಶನ ಮುಂತಾದ ಸಾಧನ-ತಂತ್ರಗಳನ್ನು ಉಪಯೋಗಿಸಬೇಕು(ಇವುಗಳ ಬಗ್ಗೆ ಮುಂದೆ ಚರ್ಚಿಸಲಾಗಿದೆ). ಶಬ್ದಕೋಶವನ್ನು ಸಿದ್ಧಪಡಿಸುವಾಗ ಕ್ಷೇತ್ರಕರ್ತನಿಗೆ ಆ ಉಪಭಾಷೆಯ ಪೂರ್ಣ ಪರಿಜ್ಞಾನ ಇರಬೇಕಾಗುತ್ತದೆ. ಶಿಷ್ಟಭಾಷೆಗೂ ತಾನು ವಿಶ್ಲೇಷಿಸುವ ಉಪ ಭಾಷೆಗೂ ಹೋಲಿಕೆ ಮತ್ತು ವ್ಯತ್ಯಾಸ ತಿಳಿದಿರಬೇಕು.

ಶಬ್ದಕೋಶಕ್ಕೆ ಸಾಮಗ್ರಿಗಳನ್ನು ಸಂಗ್ರಹಿಸುವಾಗ ಒಂದೊಂದೇ ಶಬ್ದವನ್ನು ಒಂದೊಂದು ಕಾರ್ಡಿನ ಮೇಲೆ ಬರೆಯಬೇಕು. ಅದರ ಜೊತೆಯಲ್ಲಿಯೇ ಆ ಶಬ್ದದ ಬಳಕೆಯ ಭಾಷಿಕ ಮತ್ತು ಸಾಮಾಜಿಕ ಸಂದರ್ಭವನ್ನು ಸ್ಪಷ್ಟವಾಗಿ ನಮೂದಿಸಬೇಕು ನಂತರ ಆ ಶಬ್ದದ ಅರ್ಥ. ವಿವರ. ವ್ಯಾಕರಣ ಸಾಧ್ಯವಾದರೆ ಆಯಾ ಶಬ್ದದ ಉತ್ಪತ್ತಿ. ಅನ್ಯಭಾಷಾ ಸ್ವೀಕರಣ ಪದಗಳಾಗಿದ್ದರೆ ಯಾವ ಭಾಷೆಗಳಿಂದ ಬಂದಿವೆ ಪ್ರಸ್ತುತ ನಾವು ವಿಶ್ಲೇಷಿಸುವ ಭಾಷೆಯಲ್ಲಿ ಯಾವ ರೀತಿ ಬದಲಾವಣೆಗಳಾಗಿವೆ. ಆ ಶಬ್ದಗಳ ವಾಚ್ಯಾರ್ಥ. ವ್ಯಂಗ್ಯಾರ್ಥ ಈ ಎಲ್ಲ ಅಂಶಗಳನ್ನು ಕ್ಷೇತ್ರಕರ್ತ ದಾಖಲಿಸಬೇಕು ಅಲ್ಲದೆ ಸಮಾನಾರ್ಥಕ ಪದಗಳನ್ನು. ಪರ್ಯಾಯ ರೂಪಕಗಳನ್ನು. ಭಿನ್ನಾರ್ಥ ರೂಪ ಗಳನ್ನು, ವಿರುದ್ಧಾರ್ಥಕ ಪದಗಳನ್ನು. ಸಂಯುಕ್ತ ಪದಗಳನ್ನು ಸಂದರ್ಭ ಸಹಿತವಾಗಿ ವಿವರವಾಗಿ ಸೂಚಿಸಬೇಕು.

ಮೂಲಶಬ್ದಕೋಶವನ್ನು ಸಿದ್ಧಪಡಿಸುವಾಗ ಕೆಳಗಿನ ಅಂಶಗಳು ಉಪಯುಕ್ತ ಮಾರ್ಗದರ್ಶನ ಮಾಡುತ್ತವೆ.

- ಮಾನವ ಮತ್ತು ಪ್ರಾಣಿಗಳ ಶರೀರದ ಅಂಗಾಂಗಗಳು.
- ಬಟ್ಟೆಗಳು ಮತ್ತು ಆಲಂಕಾರಿಕ ಸಾಮಾನುಗಳು.
- ಭಾಷಾ ಸಮುದಾಯದಲ್ಲಿ ದೊರೆಯುವ ವಿವಿಧ ಯಂತ್ರೋಪಕರಣಗಳು ಮತ್ತು ಪೀಠೋಪಕರಣಗಳು.
- ವಿವಿಧ ವೃತ್ತಿಗಳಿಗೆ ಸಂಬಂಧಿಸಿದ ಪದಗಳು.
- ವಿವಿಧ ತೆರನಾದ ಮಣ್ಣುಗಳು, ಗಾಳಿಗಳು, ಕಲ್ಲುಗಳು ಮುಂತಾದ ಭೌಗೋಳಿಕ ಅಂಶಗಳು.
- ಅಳತೆ, ವೇಳೆ ಮತ್ತು ತೂಕವನ್ನು ಸೂಚಿಸುವ ಪದಗಳು.
- ರೋಗಗಳು ಮತ್ತು ಅವುಗಳ ಪ್ರಕಾರಗಳು ಔಷಧೋಪಚಾರ.
- ಆ ಸಮುದಾಯದಲ್ಲಿ ಆಡುವ ಆಟಗಳು ಮತ್ತು ಅವುಗಳ ಪ್ರಕಾರಗಳು.
- ಆ ಸಮುದಾಯದಲ್ಲಿಯ ಧಾರ್ಮಿಕ ವಿಷಯಗಳಿಗೆ, ಜಾನಪದ ನಂಬಿಕೆ ಹಾಗೂ ಆಚರಣೆಗಳಿಗೆ ಸಂಬಂಧಪಟ್ಟ ಪದಗಳು.

ಕ್ಷೇತ್ರಕರ್ತ ಈ ಮುಂತಾದ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಆ ಸಮುದಾಯದ ಮೂಲ ಶಬ್ದಕೋಶವನ್ನು ಸಿದ್ಧಪಡಿಸಿಕೊಳ್ಳಬೇಕು. ಬೇರೆ ಬೇರೆ ಸಾಮಾಜಿಕ ಸ್ತರಗಳ ಜನರನ್ನು ಸಂಪರ್ಕಿಸಿ ವ್ಯಾಪಕ ಸಾಮಗ್ರಿಗಳನ್ನು ಕಲೆಹಾಕಬೇಕು. ನಂತರ ವ್ಯವಸ್ಥಿತವಾಗಿ ಕಾರ್ಡುಗಳನ್ನು ಅಕಾರಾದಿಯಾಗಿ ಹೊಂದಿಸಿಕೊಳ್ಳಬೇಕಾಗುತ್ತದೆ. ಮೊದಲು ಪ್ರಧಾನಪದಗಳನ್ನು ದಾಖಲಿಸಿ, ನಂತರ ಮೇಲೆ ಹೇಳಿದಂತೆ ಅದರ ವ್ಯಾಕರಣ ವರ್ಗ, ಬಳಕೆಯ ಸಂದರ್ಭ ಮುಂತಾದವುಗಳನ್ನು ವಿಸ್ತಾರವಾಗಿ ಕೊಡಬೇಕು. ಶಬ್ದಗಳ ಉಚ್ಚಾರಣೆಯನ್ನು ಸಾಧ್ಯವಾದರೆ ಧ್ವನ್ಯಾಲೇಖದಲ್ಲಿ ಕೂಡುವುದು ಒಳ್ಳೆಯದು. ಭಾಷಾಸಮುದಾಯದ ಶಬ್ದಕೋಶವನ್ನು ಸಿದ್ಧಪಡಿಸುವುದರಿಂದ ಆಯಾ ಭಾಷೆಯ ರಚನಾತ್ಮಕ ಅಂಶಗಳನ್ನು ತಿಳಿದುಕೊಳ್ಳಲೂ ಮತ್ತು ಆ ಸಮುದಾಯದ ಸಂಸ್ಕೃತಿ ಅರಿಯಲೂ ಸಹಾಯಕವಾಗುತ್ತದೆ.

ಸಾಧನಗಳು-ತಂತ್ರಗಳು

ನಿರೂಪಕರಿಂದ ಉದ್ದೇಶಿತ ಸಾಮಗ್ರಿಗಳನ್ನು ಹೊರತೆಗೆಯುವುದು ಸುಲಭದ ಕೆಲಸವಲ್ಲ. ಸಾಮಗ್ರಿಗಳು ಸಮಂಜಸತೆ ಮತ್ತು ವಿಶ್ವಸನೀಯತೆಯಿಂದ ಕೂಡಿರಬೇಕಾದರೆ ಹಾಗೂ ಕ್ಷೇತ್ರಕಾರ್ಯ ಯಶಸ್ವಿಯಾಗಲು, ಪರಿಣಾಮಕಾರಿಯಾಗಲು ಕ್ಷೇತ್ರಕರ್ತ ಅನೇಕ ಸಾಧನಗಳನ್ನು, ತಂತ್ರಗಳನ್ನು ಸಂಯೋಜಿತವಾಗಿ ಬಳಸಬೇಕು. ಅವುಗಳನ್ನು ಬಳಸುವ ವಿಧಾನವನ್ನು ಚೆನ್ನಾಗಿ ಅರಿತವನಾಗಿರಬೇಕು. ಕ್ಷೇತ್ರಕಾರ್ಯದಲ್ಲಿ ಅವಶ್ಯವಾಗಿ ಬೇಕಾಗುವ ಹಲವು ಸಾಧನ-ತಂತ್ರಗಳನ್ನು ಇನ್ನು ಮುಂದೆ ಚರ್ಚಿಸೋಣ.

ಪ್ರಶ್ನಾವಳಿ: ಭಾಷೆಯ ಆಂತರಿಕ ರಚನೆಯನ್ನು ಅರಿಯಲು, ಸಮುದಾಯದಲ್ಲಿ ಭಾಷಾ ಬಳಕೆಯ ರೀತಿಯನ್ನು ತಿಳಿದುಕೊಳ್ಳಲು ಕ್ಷೇತ್ರಕಾರ್ಯದಲ್ಲಿ ಪ್ರಶ್ನಾವಳಿ ಬಹಳ

ಮುಖ್ಯ ಸಾಧನವಾಗಿದೆ. ಕ್ಷೇತ್ರಕರ್ತ ಮತ್ತು ನಿರೂಪಕನ ನಡುವೆ ವಿಚಾರ ವಿನಿಮಯ ನಡೆಸಲು ಪ್ರಶ್ನಾವಳಿಯೇ ಮಾಧ್ಯಮವಾಗುತ್ತದೆ. ಪ್ರಶ್ನಾವಳಿಯೆಂದರೆ ಕ್ಷೇತ್ರಕರ್ತ ಸಮಗ್ರ ಮಾಹಿತಿಯನ್ನು ಕಲೆ ಹಾಕುವುದಕ್ಕಾಗಿ ಕ್ರಮಬದ್ಧವಾಗಿ ಸಿದ್ಧಪಡಿಸ ಲಾದ ಪ್ರಶ್ನೆಗಳ ವ್ಯವಸ್ಥಿತ ಸಂಕಲನವಾಗಿದೆ. ಈ ಸಾಧನವನ್ನು ರಚಿಸುವಾಗ ಮತ್ತು ಬಳಸುವಾಗ ಕ್ಷೇತ್ರಕರ್ತ ತುಂಬ ಜಾಗರೂಕನಾಗಿರಬೇಕು.

ಕ್ಷೇತ್ರಕರ್ತ ತನ್ನ ಉದ್ದೇಶ, ವ್ಯಾಪ್ತಿಗೆ ಅನುಸಾರವಾಗಿ ಪ್ರಶ್ನಾವಳಿಯನ್ನು ರಚಿಸ ಬೇಕಾಗುತ್ತದೆ. ತನಗಿಂತ ಹಿಂದೆ ಕ್ಷೇತ್ರಕಾರ್ಯ ಮಾಡಿದ ಕ್ಷೇತ್ರಕರ್ತರು ಯಾವ ರೀತಿಯಾಗಿ ಪ್ರಶ್ನಾವಳಿಗಳನ್ನು ರಚಿಸಿದ್ದಾರೆ. ಅಲ್ಲಿರುವ ಮಹತ್ವದ ಗುಣಲಕ್ಷಣಗಳೇ ನೆಂಬುದನ್ನು ಗಮನದಲ್ಲಿಟ್ಟುಕೊಂಡಿರಬೇಕು, ಪ್ರಶ್ನಾವಳಿಯಲ್ಲಿಯ ಪ್ರಶ್ನೆಗಳು ಸ್ಪಷ್ಟವಾಗಿರಬೇಕು, ನಿರ್ದಿಷ್ಟವಾಗಿರಬೇಕು, ಪ್ರಶ್ನೆಗಳು ಆದಷ್ಟು ಸರಳ, ಸುಲಭ ಮತ್ತು ಸಂಕ್ಷಿಪ್ತವಾಗಿರಬೇಕು. ಅವು ನಿರೂಪಕರ ಆಸಕ್ತಿ, ಅಭಿರುಚಿ, ಅನುಭವಗಳಿಗೆ ತಕ್ಕಂತಿದ್ದು ಸಮಂಜಸ ಉತ್ತರಗಳನ್ನು ಬಯಸುವಂತಿರಬೇಕು. ಯಾವುದೇ ರೀತಿಯ ಅಸಂಬದ್ಧ ಪ್ರಶ್ನೆಗಳಿರಬಾರದು. ಅವು ಕ್ಷೇತ್ರಕಾರ್ಯವನ್ನು ಅಸ್ತವ್ಯಸ್ತಗೊಳಿಸಬಹುದು ಎಂಬುದನ್ನು ಕ್ಷೇತ್ರಕರ್ತ ಗಮನಿಸಬೇಕು.

ಕ್ಷೇತ್ರಕರ್ತ ಎರಡು ವಿಧದ ಪ್ರಶ್ನಾವಳಿಗಳನ್ನು ರಚಿಸಬೇಕಾಗುತ್ತದೆ. ಅವು ನಿರ್ಬಂಧಿತ ಪ್ರಶ್ನಾವಳಿ ಮತ್ತು ಮುಕ್ತ ಪ್ರಶ್ನಾವಳಿ. ನಿರ್ಬಂಧಿತ ಪ್ರಶ್ನಾವಳಿಯಲ್ಲಿ ಕ್ಷೇತ್ರಕರ್ತ ಮೊದಲೇ ಪ್ರಶ್ನೆಗಳನ್ನು ಸಿದ್ಧಪಡಿಸುವುದರ ಜೊತೆಗೆ ಅವುಗಳ ಉತ್ತರಗಳನ್ನು ಸಿದ್ಧಪಡಿಸ ಬೇಕಾಗುತ್ತದೆ. ಕೇಳಬೇಕಾದ ಪ್ರಶ್ನೆಗಳನ್ನು ಮೊದಲೇ ಸಿದ್ಧಪಡಿಸುವುದರಿಂದ ವೇಳೆ ಮತ್ತು ಶ್ರಮದ ಉಳಿತಾಯವಾಗುತ್ತದೆ. ಅಲ್ಲದೆ ವಸ್ತುನಿಷ್ಠತೆ ಪ್ರಾಪ್ತವಾಗುತ್ತದೆ. ಇವುಗಳ ಉತ್ತರಗಳ ಮೌಲ್ಯ ನಿರ್ಧರಿಸುವುದು ಸುಲಭ. ಮುಕ್ತ ಪ್ರಶ್ನಾವಳಿ ಹೆಸರೇ, ಸೂಚಿಸುವಂತೆ ನಿರೂಪಕರು ಉತ್ತರಿಸುವಲ್ಲಿ ಪೂರ್ಣ ಸ್ವಾತಂತ್ರ್ಯ ಇರುತ್ತದೆ. ಇಲ್ಲಿ ಪ್ರಶ್ನೆಗಳು ನಿರ್ಬಂಧಿತ ಪ್ರಶ್ನಾವಳಿಗಳಂತೆ ಮೊದಲೇ ಸಿದ್ಧಗೊಂಡಿರುವುದಿಲ್ಲ. ಆಯಾ ಭಾಷಿಕ ಸಂದರ್ಭಕ್ಕೆ ತಕ್ಕಂತೆ ಪ್ರಶ್ನೆಗಳನ್ನು ಬೆಸೆಯಬೇಕಾಗುತ್ತದೆ. ಕ್ಷೇತ್ರಕಾರ್ಯ ಮುಗಿಯುವವರೆಗೂ ಪ್ರಶ್ನಾವಳಿ ಪರಿಷ್ಕರಣಕ್ಕೆ ಒಳಗಾಗುತ್ತಲೇ ಇರುವುದು, ಇದನ್ನು ಕ್ಷೇತ್ರಕರ್ತ ಗಮನಿಸ ಬೇಕು. ಕ್ಷೇತ್ರಕರ್ತ ಸಂದರ್ಭಕ್ಕೆ ತಕ್ಕಂತೆ ಎರಡೂ ರೀತಿಯ ಪ್ರಶ್ನಾವಳಿಗಳನ್ನು ಉಪಯೋಗಿಸಬೇಕು.

ಪ್ರಶ್ನಾವಳಿಯಲ್ಲಿ ಪ್ರಶ್ನೆಗಳು ಒಂದಕ್ಕೊಂದು ಸಂಬಂಧ ಹೊಂದಿರಬೇಕು. ಇದರಿಂದ ಆ ಭಾಷೆಯ ಸ್ವರೂಪವನ್ನು ತಿಳಿಯಲು ಅನುಕೂಲವಾಗುತ್ತದೆ. ಆಯಾ ಭಾಷಾ ಸಮುದಾಯಕ್ಕ ತಕ್ಕಂತೆ ಮಹತ್ವದ ಅಂಶಗಳು ಅಡಿಯಲ್ಲಿಯೂ. ಪೂರಕ ವಿಷಯಗಳು ನಂತರವೂ ಬರಬೇಕು. ಪ್ರಶ್ನಾವಳಿಯಲ್ಲಿ ಪ್ರಶ್ನೆಗಳ ಜೋಡಣೆ ಬಹಳ ಮಹತ್ವದ್ದು. ಪ್ರಶ್ನಾವಳಿಗಳಲ್ಲಿ ನಾಮವಿಶ್ಲೇಷಣ. ಕ್ರಿಯಾವಿಶೇಷಣಗಳನ್ನು ಬಹಳ ಎಚ್ಚರಿಕೆಯಿಂದ

ಬಳಸಬೇಕು. ದ್ವಂದ್ವಾರ್ಥವಿರುವ ಪ್ರಶ್ನೆಗಳ ಬಳಕೆ ಮಿತವಾಗಿರಬೇಕು. ಕ್ಷೇತ್ರಕರ್ತನ ಅಧ್ಯಯನದ ಉದ್ದೇಶಕ್ಕೆ ಅನುಗುಣವಾಗಿ ಏನು, ಯಾವಾಗ, ಎಲ್ಲಿ, ಯಾರು, ಹೇಗೆ, ಏಕೆ-ಮುಂತಾದ ಅಂಶಗಳಿಗೆ ಉತ್ತರ ಬರುವ ಪ್ರಶ್ನೆಗಳು ಪ್ರಶ್ನಾವಳಿಯಲ್ಲಿರಬೇಕು.

ಅಂಚೆಯ ಮೂಲಕ ಕಳಿಸುವ ಪ್ರಶ್ನಾವಳಿಯಲ್ಲಿ ನಿರೂಪಕರು ಉತ್ತರಿಸಲು ಅನುಕೂಲವಾಗಿರುವಂತೆ ಒಂದು ಪ್ರಶ್ನೆಯಿಂದ ಇನ್ನೊಂದು ಪ್ರಶ್ನೆಯ ಮಧ್ಯದಲ್ಲಿ ಸಾಕಷ್ಟು ಸ್ಥಳಾವಕಾಶವಿರಬೇಕು. ಪ್ರಶ್ನಾವಳಿಯ ಮೇಲ್ಭಾಗದಲ್ಲಿ ನಿರೂಪಕರು ತಮ್ಮ ಹಸ್ತಾಕ್ಷರ ಹಾಕಿ ಪೂರ್ಣ ವಿವರಗಳನ್ನು ಬರೆಯಲು ಸ್ಥಳವಿರಬೇಕಾಗುತ್ತದೆ.

ಹೆಸರು:	ವಯಸ್ಸು:
ಲಿಂಗ:	ಭಾಷೆಗಳು:
ಸಾಮಾಜಿಕ ವರ್ಗ:	ಶಿಕ್ಷಣ:

ಪ್ರಶ್ನಾವಳಿಯ ರಚನೆಯಲ್ಲಿ ಕ್ಷೇತ್ರಕರ್ತನ ಶ್ರದ್ಧೆ ಮತ್ತು ಸಾಮಾನ್ಯ ಜ್ಞಾನ ಸಹಾಯಕ ವಾಗುವುವು. ತನ್ನ ಅಧ್ಯಯನದ ಉದ್ದೇಶ, ಆಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಪ್ರಶ್ನಾವಳಿಗಳನ್ನು ಸಿದ್ಧಪಡಿಸಬೇಕು.

ಪ್ರಶ್ನಾವಳಿಗಳು ಒಳಗೊಂಡಿರಬೇಕಾದ ಇನ್ನೂ ಕೆಲವು ಅಂಶಗಳು ಇಂತಿವೆ. ಪ್ರಶ್ನಾವಳಿಗಳು ಭಾಷಾಸಮುದಾಯದ ಕೌಟುಂಬಿಕ ಜೀವನ, ಸಾಮಾಜಿಕ, ಧಾರ್ಮಿಕ, ಆಡಳಿತ ಮತ್ತು ವಿದ್ಯಾಭ್ಯಾಸ ಮುಂತಾದ ಅಂಶಗಳಿಗೆ ಸಂಬಂಧಪಟ್ಟಂತೆ ಬೇರೆ ಬೇರೆ ವಿಷಯಗಳನ್ನು ಒಳಗೊಂಡಿರಬೇಕು. ಸಮುದಾಯದ ಜಾನಪದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಭಾಷಿಕ ಚಟುವಟಿಕೆಗಳಾದ ಗಾದೆ, ಒಗಟು, ಒಡಪು, ಕಥೆ, ಗೀತೆ, ವ್ಯಕ್ತಿನಾಮಗಳು, ಸಂಬಂಧವಾಚಕಗಳು ಮತ್ತು ನುಡಿಗಟ್ಟುಗಳು ಮುಂತಾದವುಗಳಲ್ಲಿ ಭಾಷಾ ಬಳಕೆಯ ರೀತಿಯನ್ನು ಕ್ಷೇತ್ರಕರ್ತ ಪ್ರಶ್ನೆ ಕೇಳುವುದರ ಮೂಲಕ ನಿರೂಪಕರ ಉತ್ತರಗಳನ್ನು ಸೂಕ್ಷ್ಮವಾಗಿ ಗಮನಿಸಿ, ಸರಿಯಾಗಿ ದಾಖಲಿಸಿಕೊಳ್ಳಬೇಕು. ಭಾಷಾ ಬಳಕೆಯ ಪ್ರತಿ ಸಂದರ್ಭದಿಂದಲೂ ಕ್ಷೇತ್ರಕರ್ತ ಲಾಭ ಪಡೆಯಬಲ್ಲನು. ಸಮುದಾಯ ಜೀವನದಲ್ಲಿ ಮೇಲೆ ಹೇಳಿದ ಭಾಷಿಕ ಚಟುವಟಿಕೆಗಳು ಜನಪದದ ನೋವು, ನಲಿವು, ಆಸರ, ಬೇಸರ, ಉಲ್ಲಾಸಗಳಲ್ಲಿ ಬಳಕೆಯಾಗುತ್ತವೆ. ಅಲ್ಲಿ ಆಡುನುಡಿಗೆ ಪ್ರಾಮುಖ್ಯತೆ ಇರುತ್ತದೆ. ಇವು ಸಾಹಿತ್ಯಕ ಮೌಲ್ಯಗಳಂತೆಯೆ ಭಾಷಿಕ ಮೌಲ್ಯಗಳನ್ನು ಒಳಗೊಂಡಿ ರುತ್ತವೆ. ವ್ಯಕ್ತಿನಾಮಗಳು, ಸ್ಥಳನಾಮಗಳು, ಸಂಬಂಧವಾಚಕ ಪದಗಳು, ನುಡಿಗಟ್ಟುಗಳು, ಆ ಸಮುದಾಯದ ಭಾಷೆ, ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆಯಲ್ಲದೆ, ಇವುಗಳನ್ನು ಸಂಬೋಧಿಸುವಾಗ ನಡೆಯುವ ಧ್ವನಿ ಬದಲಾವಣೆ, ಸದೃಶಾಕ್ಷರಲೋಪ, ಸ್ವರೂಪ ಧಾರಣೆ, ಹೆಸರುಗಳ ವೈವಿಧ್ಯತೆ ಮುಂತಾದ ಭಾಷಿಕ ಅಂಶಗಳ ಕಡೆಗೂ ಕ್ಷೇತ್ರಕರ್ತ ಗಮನಕೊಡಬೇಕು. ಔಪಚಾರಿಕ ಮತ್ತು ಅನೌಪಚಾರಿಕ ಸನ್ನಿವೇಶದಲ್ಲಿ ಭಾಷಾ ಬಳಕೆಯ ಎಲ್ಲಾ ಸಂದರ್ಭಗಳು ಪ್ರಶ್ನಾವಳಿಯಲ್ಲಿರಬೇಕು.

ಪ್ರಶ್ನಾವಳಿಯಲ್ಲಿಯ ಪ್ರಶ್ನೆಗಳನ್ನು ಕೇಳುವುದು ಒಂದು ಕಲೆ. ಕ್ಷೇತ್ರಕರ್ತ ಈ ಕಲೆಯನ್ನು ಅರಿತವನಾಗಿರಬೇಕು. ಪ್ರಶ್ನೆಗಳನ್ನು ನಿರೂಪಕರಿಗೆ ಸ್ಪಷ್ಟವಾಗಿ ಕೇಳಿಸುವಂತೆ ಕೇಳಬೇಕು. ಒಂದೇ ಪ್ರಶ್ನೆಯಲ್ಲಿ ಏಕಕಾಲಕ್ಕೆ ಎರಡೂ ಉತ್ತರಗಳು ಬರುವಂತೆ ಕೇಳಬಾರದು. ಕೇಳುವಾಗ ನಿರೂಪಕರ ಬಗ್ಗೆ ಸಹಾನುಭೂತಿ, ಪ್ರೀತಿ ಅವಶ್ಯಕ. ಯಾವುದೇ ರೀತಿಯ ಭೀತಿಯಿಲ್ಲದೆ ಸಮಾಧಾನದಿಂದ ಉತ್ತರಿಸುವಂತೆ ಸೂಚಿಸಬೇಕು ಮತ್ತು ಕ್ಷೇತ್ರಕರ್ತನಿಗೂ ದಾಖಲಿಸಿಕೊಳ್ಳಲು ಅನುಕೂಲವಾಗುತ್ತದೆ. ಅನೇಕ ಕ್ಷೇತ್ರಕರ್ತರು ಈ ಸಾಧನವನ್ನು ಸರಿಯಾಗಿ ಬಳಸದೇ ಇರುವುದು ವಿಷಾದದ ಸಂಗತಿ. ಪ್ರಶ್ನಿಸುವಿಕೆಯ ಸಾಧನವನ್ನು ಸರಿಯಾಗಿ ಬಳಸದ ಕ್ಷೇತ್ರಕರ್ತ ಯಶಸ್ವಿ ಕ್ಷೇತ್ರಕರ್ತ ಆಗಲಾರ.

ವಿಸ್ತಾರವಾದ ಕ್ಷೇತ್ರವನ್ನು ಈ ಸಾಧನದ ಸಹಾಯದಿಂದ ಕಡಿಮೆ ಅವಧಿಯಲ್ಲಿ ಅಧ್ಯಯನಕ್ಕೆ ಒಳಪಡಿಸುವುದರಿಂದ, ಹಣ, ಶ್ರಮ ಮತ್ತು ವೇಳೆಯ ಉಳಿತಾಯ ವಾಗುವುದು. ನಿರೂಪಕರಿಂದ ನೇರ ಮಾಹಿತಿ ಸಂಗ್ರಹಣೆಯಾಗುವುದು. ಪ್ರಶ್ನಾವಳಿಯು ಉತ್ತರಿಸುವವರನ್ನು ಉದ್ವೇಗಕ್ಕೆ ಒಳಪಡಿಸುವುದು ಕಡಿಮೆ. ಪ್ರಶ್ನಾವಳಿಗೆ ತನ್ನದೇ ಆದ ಇತಿಮಿತಿಗಳಿವೆ. ಅಶಿಕ್ಷಿತರಿಂದ ಪ್ರಶ್ನಾವಳಿಯ ಉದ್ದೇಶ ಸಾರ್ಥಕವಾಗಲಾರದು. ಅಪೂರ್ಣ ಉತ್ತರಗಳು ಪ್ರಶ್ನಾವಳಿಯ ಮತ್ತೊಂದು ಸಮಸ್ಯೆ. ಇಂತಹ ಕೆಲವು ಸಮಸ್ಯೆಗಳಿದ್ದರೂ ಕ್ಷೇತ್ರಕರ್ತ ಸುಲಭವಾಗಿ ಪರಿಹರಿಸಬಹುದು. ಆ ಭಾಷಾ ಸಮುದಾಯದ ಅನುಭವವಿರುವ ಸುಶಿಕ್ಷಿತರಿಗೆ ಪ್ರಶ್ನಾವಳಿಗಳನ್ನು ಒದಗಿಸಬೇಕು. ಪ್ರಶ್ನಾವಳಿಗಳನ್ನು ಅಂಚೆ ಮೂಲಕ ಕಳಿಸುವುದಕ್ಕಿಂತ ಕ್ಷೇತ್ರಕರ್ತ ತನಗೆ ಎಷ್ಟು ತೊಂದರೆಯಾದರೂ ಚಿಂತೆಯಿಲ್ಲ, ಸ್ವತಃ ತಾನೇ ನಿರೂಪಕರನ್ನು ಖುದ್ದಾಗಿ ಭೇಟಿಯಾಗಿ ಪ್ರಶ್ನಾವಳಿಗಳನ್ನು ಹಂಚಿ ಪ್ರಶ್ನೆಗಳನ್ನು ಕೇಳುವುದು, ದಾಖಲಿಸಿಕೊಳ್ಳುವುದು ಒಳ್ಳೆಯದು. ಪ್ರಶ್ನಾವಳಿಗಳನ್ನು ಕೊಡುವ ಮೊದಲು ಸೂಕ್ತ ಮಾಹಿತಿಗಳನ್ನು ಒದಗಿಸಬೇಕು. ಕ್ಷೇತ್ರಕಾರ್ಯದಲ್ಲಿ ಉದ್ದೇಶಿತ ಮಾಹಿತಿಗಳನ್ನು ಸಂಗ್ರಹಿಸಲಿಕ್ಕೆ ಪ್ರಶ್ನಾವಳಿ ತುಂಬ ಉಪಯುಕ್ತ ಸಾಧನವಾಗಿದೆ.

ಸಂದರ್ಶನ: ಸಾಮಗ್ರಿ ಸಂಗ್ರಹಕಾರ್ಯದಲ್ಲಿ ಪ್ರಶ್ನಾವಳಿಯಂತೆ ಬಹಳ ಮಹತ್ವ ಪೂರ್ಣ ಸಾಧನವೆಂದರೆ ಸಂದರ್ಶನ. ಕ್ಷೇತ್ರಕರ್ತ ನಿರೂಪಕರನ್ನು ಮುಖತಃ ಭೇಟಿ ಯಾಗಿ ಭಾಷಾಸಾಮಗ್ರಿಗಳನ್ನು ನೇರವಾಗಿ ಸಂಗ್ರಹಿಸುವ ವಿಧಾನವಿದು. ಸಂದರ್ಶನದಲ್ಲಿ ಸಂದರ್ಭಕ್ಕೆ ತಕ್ಕಂತೆ ಮುಖೋದ್ಗತ ಪ್ರಶ್ನೆಗಳಿಗೆ ಮುಖೋದ್ಗತ ಪ್ರತಿಕ್ರಿಯೆಗಳು ಕಂಡುಬರುತ್ತವೆ. ಇಲ್ಲಿ ಕ್ಷೇತ್ರಕರ್ತ ಮತ್ತು ನಿರೂಪಕರ ನಡುವೆ ಸಹಕಾರಾತ್ಮಕ ಸಂಬಂಧ ಏರ್ಪಟ್ಟಿರಬೇಕು. ಇವರಿಬ್ಬರ ನಡುವೆ ನಡೆಯುವ ಸಂಭಾಷಣಾ ಕಾರ್ಯವಿದು.

ಸಾಮಗ್ರಿ ಸಂಗ್ರಹಿಸುವಾಗ ಕ್ಷೇತ್ರಕರ್ತ ಮೂರು ರೀತಿಯ ಸಂದರ್ಶನಗಳನ್ನು ನಡೆಸಬೇಕಾಗುತ್ತವೆ. ನಿರ್ಬಂಧಿತ, ಮುಕ್ತ ಮತ್ತು ಕೇಂದ್ರೀಕೃತ. ಆಯಾ ಭಾಷಿಕರ ಮತ್ತು ಸಾಮಾಜಿಕ ಸಂದರ್ಭಕ್ಕೆ ತಕ್ಕಂತೆ ಈ ಸಂದರ್ಶನಗಳನ್ನು ಉಪಯೋಗಿಸಬೇಕು.

ನಿರ್ಬಂಧಿತ ಸಂದರ್ಶನದಲ್ಲಿ ಸಂದರ್ಶನ ಕಾಲದಲ್ಲಿ ಕೇಳಬೇಕಾದ ಪ್ರಶ್ನೆಗಳನ್ನು, ಕೇಳುವ ಕ್ರಮಗಳು ಮೊದಲೇ ನಿರ್ಧರಿತವಾಗಿರುವುದರಿಂದ, ಇದು ಔಪಚಾರಿಕವಾಗಿ ರುತ್ತದೆ, ಮುಕ್ತ ಸಂದರ್ಶನದಲ್ಲಿ ಪ್ರಶ್ನೆಗಳು ಮತ್ತು ಅವುಗಳ ವಿಧಿ-ವಿಧಾನಗಳು ಪ್ರಾರಂಭದಲ್ಲಿಯೇ ರಚಿತವಾಗಿರುವುದಿಲ್ಲ. ಈ ಸಂದರ್ಶನದಲ್ಲಿ ಪ್ರಶ್ನೆಗಳು ಸಂದರ್ಭಜನ್ಯ ವಾದವುಗಳು. ಇಲ್ಲಿ ಭಾಗವಹಿಸುವ ಕ್ಷೇತ್ರಕರ್ತ ಮತ್ತು ನಿರೂಪಕರಿಬ್ಬರಿಗೂ ಪೂರ್ಣ ಸ್ವಾತಂತ್ರ್ಯವಿರುವುದರಿಂದ, ಭಾಷಾ ಬಳಕೆಯ ರೀತಿ ನಮಗೆ ಗೋಚರಿಸುತ್ತವೆ. ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಶ್ನೆಗಳನ್ನು ಹೆಣೆದು ಸಂದರ್ಶನ ಏರ್ಪಡಿಸಿದರೆ ಅದು ಕೇಂದ್ರಿತ ಸಂದರ್ಶನವಾಗುತ್ತದೆ. ಈ ಮೂರು ವಿಧದ ಸಂದರ್ಶನದಲ್ಲಿ ನಿರೂಪಕರು 'ಏನು' ಉತ್ತರ ಕೊಡುತ್ತಾರೆ ಎಂಬುದರ ಜೊತೆಗೆ 'ಹೇಗೆ' ಉತ್ತರ ಕೊಡುತ್ತಾರೆ ಎನ್ನುವುದನ್ನು ಕ್ಷೇತ್ರಕರ್ತ ದಾಖಲಿಸಬೇಕಾಗುತ್ತದೆ. ಕ್ಷೇತ್ರಕರ್ತ ಕೆಲವು ಸನ್ನಿವೇಶಗಳಲ್ಲಿ ನಿರೂಪಕರನ್ನು ವೈಯಕ್ತಿಕವಾಗಿ, ಕೆಲವು ಸಲ ಸಾಮೂಹಿಕವಾಗಿ ಸಂದರ್ಶಿಸಬಹುದು. ಇದರಿಂದ ಆ ಸಮುದಾಯದ ಭಾಷೆ, ಸಂಸ್ಕೃತಿಯ ಬಗ್ಗೆ ನಿರೂಪಕರ ವೈಯಕ್ತಿಕ, ಸಾಮೂಹಿಕ ಪ್ರತಿಕ್ರಿಯೆಗಳನ್ನು, ಭಾವನೆಗಳನ್ನು ಹಾಗೂ ಮನೋವಿಚಾರಗಳನ್ನು ತಿಳಿಯಲು ಸಾಧ್ಯ.

ಸಂದರ್ಶನ ಸಾಧನವನ್ನು ಬಳಸುವಾಗ ಕ್ಷೇತ್ರಕರ್ತ ಪೂರ್ವಸಿದ್ಧತೆಯನ್ನು, ಕೌಶಲ್ಯ ಪೂರ್ಣವಾಗಿ ನೆರವೇರಿಸುವುದು ಮತ್ತು ಯಥೋಚಿತವಾಗಿ ದಾಖಲೆ ಮಾಡುವುದೂ ವಿವರಣೆ ಕೊಡುವುದು - ಈ ಮೂರು ಅಂಶಗಳನ್ನು ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಸಂದರ್ಶನ ಯಶಸ್ವಿಯಾಗಬೇಕಾದರೆ, ಕ್ಷೇತ್ರದ ವಾಸ್ತವಿಕ ಪರಿಸ್ಥಿತಿ, ಅಲ್ಲಿ ಎದುರಾಗುವ ಸಮಸ್ಯೆಗಳು, ಕೇಳಬೇಕಾದ ಪ್ರಶ್ನೆಗಳ ಬಗ್ಗೆ ಪೂರ್ವಸಿದ್ಧತೆ ಆವಶ್ಯಕ. ನಮ್ಮ ಅಧ್ಯಯನದ ಉದ್ದೇಶಕ್ಕೆ ಯಾವ ವಿಧವಾದ ಸಂದರ್ಶನ ಯೋಗ್ಯವಾದುದು ಎಂಬುದನ್ನು ಮೊದಲೇ ನಿರ್ಧರಿಸಬೇಕು. ಸಂದರ್ಶನದ ವೇಳೆಯಲ್ಲಿ ಬೇಕಾಗುವ ಯಂತ್ರೋಪಕರಣಗಳನ್ನು ಮೊದಲೇ ವ್ಯವಸ್ಥೆ ಮಾಡಿರಬೇಕು. ಕ್ಷೇತ್ರಕರ್ತ ನಿರೂಪಕರನ್ನು ಮೊದಲೇ ಭೇಟಿಯಾಗಿ ಸಂದರ್ಶನ ವೇಳೆ, ಸ್ಥಳ ಮೊದಲಾದವುಗಳನ್ನು ನಿರ್ಧರಿಸುವುದು ಕ್ಷೇಮಕರ.

ಸಂದರ್ಶನ ಆತ್ಮೀಯ ಸಂಭಾಷಣೆಯಿಂದ ಕೂಡಿದ್ದು, ಕೌಶಲ್ಯಪೂರ್ಣವಾಗಿ ನೆರವೇರಬೇಕು. ಯಾವುದೇ ರೀತಿಯ ಪೂರ್ವಗ್ರಹ ಪೀಡಿತವಾಗಿರಬಾರದು. ನಿರೂಪಕರು ತಮ್ಮ ಅನುಭವಗಳನ್ನು, ಆಲೋಚನೆಗಳನ್ನು ಬಿಚ್ಚು ಮನಸ್ಸಿನಿಂದ ಹಂಚಿಕೊಳ್ಳುವ ಸ್ಥಿತಿಯನ್ನು ಕ್ಷೇತ್ರಕರ್ತ ಕಲ್ಪಿಸಬೇಕಲ್ಲದೆ, ಸಂದರ್ಶನ ಸ್ವತಂತ್ರ ಮತ್ತು ಆತ್ಮೀಯವೆನಿಸುವಂತೆ ಮಾಡಲು ಪ್ರಯತ್ನಿಸಬೇಕು. ಅಂದರೆ ಮಾತ್ರ ಅವಶ್ಯಕ ಮಾಹಿತಿಗಳು ದೊರೆಯುವವು. ನಿರೂಪಕರು ನೀಡುವ ಉತ್ತರಗಳನ್ನು ಸಹನೆಯಿಂದ, ನಿರ್ಲಿಪ್ತಭಾವನೆಯಿಂದ ಆಲಿಸುವುದು ಕ್ಷೇತ್ರಕರ್ತನ ಆದ್ಯ ಕರ್ತವ್ಯವಾಗಿದೆ. ಅವರ ಉತ್ತರಗಳಿಗೆ ಆಶ್ಚರ್ಯವನ್ನಾಗಲಿ, ಸಂಶಯವನ್ನಾಗಲಿ ಅಭಿವ್ಯಕ್ತಗೊಳಿಸಿದರೆ

ನಿರೂಪಕರು ಶಂಕೆಯಿಂದ ಮುಂದೆ ಹೇಳುವುದನ್ನು ಮೊಟಕುಗೊಳಿಸುತ್ತಾರೆ. ಅವರ ಉತ್ತರಗಳನ್ನು ಆಸಕ್ತಿಯಿಂದ, ಕುತೂಹಲದಿಂದ ಆಲಿಸುತ್ತಾ ಹೋದರೆ ನಿರೂಪಕರು ಹೆಚ್ಚು ಉತ್ಸಾಹದಿಂದ ಹೆಚ್ಚಿನ ಮಾಹಿತಿಗಳನ್ನು ನೀಡುತ್ತಾರೆ. ಕ್ಷೇತ್ರಕರ್ತ ಯಾವುದೇ ಕಾರಣದಿಂದಲೂ ನಿರೂಪಕರ ಮೇಲೆ ತನ್ನ ಅಭಿಪ್ರಾಯಗಳನ್ನು ಹೇರುವ ಗೋಜಿಗೆ ಹೋಗಬಾರದು. ಕೆಲವು ಸಂದರ್ಭಗಳಲ್ಲಿ ನಿರೂಪಕರು ಅನಾವಶ್ಯಕ ವಿವರಣೆ ಕೊಡುವಾಗ ಕ್ಷೇತ್ರಕರ್ತ ತಕ್ಷಣವೇ ಅವರನ್ನು ಅವಮಾನಗೊಳಿಸುವುದಾಗಲಿ, ಮುಖಭಂಗ ಮಾಡುವುದಾಗಲಿ ಎಂದೆಂದೂ ಮಾಡಬಾರದು. ಒಂದು ವೇಳೆ ನಿರೂಪಕರು ಕೋಪಿಸಿಕೊಂಡರೆ, ಕ್ಷೇತ್ರಕರ್ತ ತಾಳ್ಮೆ ಯಿಂದಲೇ ಅವರ ಮನ ಒಲಿಸಬೇಕು. ಸಂದರ್ಶನದಲ್ಲಿ ನಿರೂಪಕರಿಗೆ ಸ್ವತಂತ್ರವಾಗಿ ಮಾತನಾಡುವಂತೆ ಪ್ರೇರಣೆ ಮತ್ತು ಉತ್ತೇಜನ ಕೊಡಬೇಕು. ಆದರೆ ಪರಸ್ಪರರಲ್ಲಿ ಒಣ ಹರಟೆ ತಲೆದೋರಬಾರದು. ಕೆಲವು ವೇಳೆ ಒಬ್ಬನೇ ನಿರೂಪಕನನ್ನು ಬೇರೆ ಬೇರೆ ಸಂದರ್ಭದಲ್ಲಿ ಸಂದರ್ಶನ ನಡೆಸಿ ಮಾಹಿತಿ ಸಂಗ್ರಹಿಸಬೇಕು.

ಸಂದರ್ಶನ ನಡೆಯುವಾಗ ಸಂಗ್ರಹಿಸಿದ ವಿವರಗಳನ್ನು, ಪ್ರಶ್ನೋತ್ತರಗಳನ್ನು ದಾಖಲೆ ಮಾಡಿಕೊಳ್ಳುವುದು ಅತಿಮುಖ್ಯ ಅಂಶವಾಗಿದೆ. ಪ್ರಶ್ನೋತ್ತರದ ಸಮಯ ದಲ್ಲಿಯೇ ಧ್ವನಿಮುದ್ರಿಸಿಕೊಳ್ಳಬೇಕಾಗುತ್ತದೆ. ಆ ವೇಳೆಯಲ್ಲಿ ಶೀಘ್ರ ಲಿಪಿಕಾರರ ಸಹಾಯ ಮತ್ತು ಟೇಪ್‌ರಿಕಾರ್ಡರ್‌ಗಳನ್ನು ಉಪಯೋಗಿಸಬೇಕು. ಇದರಿಂದ ವಿಶ್ಲೇಷಿಸುವಾಗ ಪುನರವಲೋಕನ ಮಾಡಲಿಕ್ಕೆ ಅನುಕೂಲವಾಗುತ್ತದೆ. ಕ್ಷೇತ್ರಕರ್ತ ಕ್ಷೇತ್ರಕ್ಕೆ ಹೋಗಿ ನಿರೂಪಕರನ್ನು ಸಮಕ್ಷಮವಾಗಿ ಸಂಪರ್ಕಿಸಿ ಸಂದರ್ಶನ ಮಾಡುವುದರಿಂದ ಉದ್ದೇಶಿತ ಸಾಮಗ್ರಿಗಳನ್ನು ಸಂಗ್ರಹಿಸುವುದು ಸುಲಭ. ನಿರೂಪಕರ ಭಾವನೆಗಳನ್ನು, ಪ್ರತಿಕ್ರಿಯೆಗಳನ್ನು ಸಂಗ್ರಹಿಸಲು ಇದು ಉತ್ತಮ ಸಾಧನವೆಂದು ಬೇರೆ ಹೇಳಬೇಕಿಲ್ಲ. ಆದರೂ ಈ ಸಾಧನದಲ್ಲಿ ತನ್ನದೇ ಆದ ಕೆಲವು ಇತಿಮಿತಿಗಳಿವೆ. ಇಲ್ಲಿ ಕೇವಲ ಪ್ರಶ್ನೋತ್ತರ ಗಳಿರುವುದರಿಂದ ನಿರೂಪಕರು ಉತ್ತರಿಸಲು ವ್ಯಕ್ತಿಸ್ವಾತಂತ್ರ್ಯ ಕಡಿಮೆ. ಏನೇ ಆದರೂ ಕ್ಷೇತ್ರಕರ್ತ ಇವುಗಳನ್ನು ಪರಿಹರಿಸಬಹುದು. ಭಾಷಾ ಸಮುದಾಯದಲ್ಲಿ ಭಾಷಾ ಬಳಕೆಯ ಹೊಸ ಹೊಸ ಸಂಗತಿಗಳು ಈ ಸಾಧನ ಬಳಸುವುದರಿಂದ ತಿಳಿದುಬರುತ್ತದೆ.

ವೀಕ್ಷಣೆ: ಭಾಷಾಸಮುದಾಯದಲ್ಲಿ ಸಾಮಗ್ರಿಗಳನ್ನು ಸಂಗ್ರಹಿಸುವಾಗ ನಿರೂಪಕರ ಸಮುದಾಯದ ಸದಸ್ಯರ ಬಾಹ್ಯ ಹಾಗೂ ಆಂತರಿಕ ವರ್ತನೆಯನ್ನರಿಯಲು ವೀಕ್ಷಣೆಗೆ ಅನುಕೂಲವಾಗುವುದು. ಸಮುದಾಯದ ವಿವಿಧ ಸಂದರ್ಭದಲ್ಲಿ ಭಾಷಾ ಬಳಕೆಯನ್ನು ಉದ್ದೇಶಪೂರ್ವಕವಾಗಿ ಗಮನಿಸಿ ಸಾಮಗ್ರಿಗಳನ್ನು ಸಂಗ್ರಹಿಸುವ ವಿಧಾನವಿದು. ಕ್ಷೇತ್ರಕರ್ತ ಸಮುದಾಯದ ಸದಸ್ಯರೊಡನೆ ನೇರವಾಗಿ ಬೆರೆತು ಅವರ ಕಾರ್ಯ ಚಟುವಟಿಕೆಗಳನ್ನು ಗಮನಿಸಬಹುದು. ಅಥವಾ ಅವರೊಡನೆ ಬೆರೆಯದೆ ಅವರ

ಕಾರ್ಯ ಚಟುವಟಿಕೆಗಳನ್ನು ಗಮನಿಸಿ ಮಾಹಿತಿ ಸಂಗ್ರಹಿಸಬಹುದು. ಅವುಗಳನ್ನೇ ಸಹಭಾಗೀ, ಅಸಹಭಾಗೀ ಅವಲೋಕನವೆಂದು ಕರೆಯುವರು.

ಕ್ಷೇತ್ರಕರ್ತ ತಾನು ವಿಶ್ಲೇಷಣೆ ಮಾಡುತ್ತಿರುವ ಉಪಭಾಷಾ ಸಮುದಾಯದ ಬೇರೆ ಬೇರೆ ಸನ್ನಿವೇಶಗಳಲ್ಲಿ ಪಾಲ್ಗೊಳ್ಳುತ್ತಾನೆ. ಧಾರ್ಮಿಕ ಕೇಂದ್ರಗಳಲ್ಲಿ, ಹಬ್ಬ ಹರಿದಿನಗಳಲ್ಲಿ, ಸಭೆ-ಸಮಾರಂಭಗಳಲ್ಲಿ ಭಾಗಿಯಾಗಿ ಅಲ್ಲಿಯ ಭಾಷಾ ಬಳಕೆಯನ್ನು ಗ್ರಹಿಸುತ್ತಾ ಮಾಹಿತಿ ಸಂಗ್ರಹಿಸುತ್ತಾನೆ. ಇಲ್ಲಿ ಕ್ಷೇತ್ರಕರ್ತ ಪ್ರಥಮತಃ ಅವಲೋಕನ ಕಾರನಾಗಿ ನಂತರ ಭಾಷಾಸಮುದಾಯದ ಸದಸ್ಯನಾಗಿ ಭಾಗವಹಿಸಬೇಕು. ಇಲ್ಲಿ ಒಂದು ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಕ್ಷೇತ್ರಕರ್ತ ಸಮುದಾಯದ ಸದಸ್ಯ ರೊಡನೆ ನಿಕಟವಾಗಿ ಬೆರೆತಿರುವುದರಿಂದ ಭಾವೋದ್ವೇಗಗಳಿಗೆ ಸಿಲುಕಿ ತಾನೊಬ್ಬ ಸಂಶೋಧಕ ಎಂಬುದನ್ನು ಮರೆಯಬಾರದು.

ಕ್ಷೇತ್ರಕರ್ತ, ಭಾಷಾಸಮುದಾಯದಲ್ಲಿ ನೇರವಾಗಿ ಪಾಲ್ಗೊಳ್ಳದೆ ಕೇವಲ ವೀಕ್ಷಕನಂತೆ ಗಮನಿಸಿದರೆ ಅದು ಅಸಹಭಾಗೀ ಅವಲೋಕನವಾಗುತ್ತದೆ. ಕ್ಷೇತ್ರದ ಚಟುವಟಿಕೆಗಳನ್ನು ದೂರದಿಂದಲೇ ನೋಡಿ ಮಾಹಿತಿ ಸಂಗ್ರಹಿಸುವ ವಿಧಾನವಿದು. ಈ ವಿಧಾನದಿಂದ ಕ್ಷೇತ್ರಕರ್ತನಿಗೆ ತನ್ನ ವಿಷಯಕ್ಕೆ ಸಂಬಂಧಿಸಿರುವಂತೆ ಯಾವುದೇ ರೀತಿಯ ಪೂರ್ವಕಲ್ಪನೆ ಗಳನ್ನು ಮಾಡಲು ಬರುವುದಿಲ್ಲ. ಅವಲೋಕನ ಮಾಡಿಯೇ ವಿಷಯ ಸಂಗ್ರಹಿಸ ಬೇಕಾಗುವುದರಿಂದ ವಸ್ತುನಿಷ್ಠ ಮಾಹಿತಿಗಳನ್ನು ಪಡೆಯಬಹುದು. ಆದರೆ ಇಲ್ಲಿ ಸಮುದಾಯದ ಸದಸ್ಯರು ಮತ್ತು ಕ್ಷೇತ್ರಕರ್ತನ ಸಂಬಂಧ ನಿಕಟವಾಗಿರುವುದಿಲ್ಲ. ಸಂಕೀರ್ಣವಾದ ಕೆಲವು ಸಂದರ್ಭಗಳಲ್ಲಿ ಭಾಷಾ ಬಳಕೆಯ ಸ್ವರೂಪ ಈ ಪದ್ಧತಿಯಿಂದ ಅರಿಯಲು ಕಷ್ಟಸಾಧ್ಯವಾಗುತ್ತದೆ. ಕ್ಷೇತ್ರಕರ್ತ ವೀಕ್ಷಿಸುವಾಗಲೆಲ್ಲ ಭಾಷಿಕ ಸಂದರ್ಭದ ಹೊಂದಿರುವ ನೈಜ ಅರ್ಥವನ್ನು ಗ್ರಹಿಸಲು ಹವಣಿಸುತ್ತಿರಬೇಕು.

ಕ್ಷೇತ್ರಕರ್ತ ವೀಕ್ಷಿಸುವಾಗ ಸಮಂಜಸವಾದ ಯೋಜನೆ ಹಾಕಿಕೊಳ್ಳುವುದು, ದಕ್ಷತೆ ಯಿಂದ ನೆರವೇರಿಸುವುದು ಮತ್ತು ದಾಖಲಿಸುವುದು ಈ ಮೂರು ಅಂಶಗಳನ್ನು ಗಮನದಲ್ಲಿಟ್ಟುಕೊಂಡಿರಬೇಕು. ವೀಕ್ಷಣೆಯನ್ನು ಮಾಡುವುದಕ್ಕಿಂತ ಪೂರ್ವದಲ್ಲಿಯೇ ವೀಕ್ಷಿಸಬೇಕಾದ ಸಂದರ್ಭಗಳು, ಯಾವ ಪ್ರಕಾರದ ವೀಕ್ಷಣೆಯನ್ನು ನಡೆಸಬೇಕು, ವೀಕ್ಷಣೆಯ ಕಾಲಾವಧಿ ಮುಂತಾದ ಅಂಶಗಳಿಗೆ ಸಂಬಂಧಿಸಿದಂತೆ ವಿಸ್ತಾರವಾದ ಯೋಜನೆಯನ್ನು ಹಾಕಿಕೊಳ್ಳಬೇಕು. ವೀಕ್ಷಣೆಯ ಯೋಜನೆಯನ್ನು ಸಿದ್ಧಪಡಿಸಿದ ಮೇಲೆ ಅದನ್ನು ಕೌಶಲ್ಯಪೂರ್ಣವಾಗಿ, ದಕ್ಷತೆಯಿಂದ ನೆರವೇರಿಸಬೇಕು. ನೇರವಾಗಿ (ಭಾಗಿಯಾಗಿ) ವೀಕ್ಷಿಸುವಾಗ, ವೇಳೆ, ಆಗಬಹುದಾದ ಶ್ರಮವನ್ನು ಗಮನದಲ್ಲಿಡಬೇಕು. ಭಾಷಾ ಬಳಕೆಯ ಚಟುವಟಿಕೆಗಳಲ್ಲಿ ಅವಧಾನ ಕೇಂದ್ರೀಕರಿಸಬೇಕಲ್ಲದೆ ವೀಕ್ಷಿಸುವಾಗ ಅದೇ ಸಮಯದಲ್ಲಿ ಅಲ್ಲಿ ನಡೆಯುವ ಚಟುವಟಿಕೆಗಳನ್ನು ಗಮನಿಸಿ, ದತ್ತಗಳನ್ನು

ದಾಖಲಿಸಬೇಕಾಗುತ್ತದೆ. ಮಾಹಿತಿಗಳನ್ನು ದಾಖಲಿಸುವಾಗ ಧ್ವನಿಮುದ್ರಿಸುವ ಯಂತ್ರ, ವರ್ಜಾಮಾಪನಿ, ತಾಳೆಪಟ್ಟಿ ಮುಂತಾದ ಸಾಧನಗಳನ್ನು ಬಳಸಬೇಕು.

ಕ್ಷೇತ್ರಕಾರ್ಯದಲ್ಲಿ ವೀಕ್ಷಣೆ ಎಂತಹ ಸನ್ನಿವೇಶದಲ್ಲಿಯೇ ನಡೆಯಲಿ, ನಿರೂಪಕರಿಗೆ, ಸಮುದಾಯದ ಸದಸ್ಯರಿಗೆ ಕ್ಷೇತ್ರಕರ್ತ ನಮ್ಮನ್ನು ವೀಕ್ಷಿಸುತ್ತಿದ್ದಾನೆ ಎಂಬ ಅರಿವು ಮೂಡದವಂತೆ ಎಚ್ಚರಿಕೆ ವಹಿಸಬೇಕು. ಒಂದು ವೇಳೆ ಕ್ಷೇತ್ರಕರ್ತ ತಮ್ಮನ್ನು ಗಮನಿಸುತ್ತಿದ್ದಾನೆ ಎಂಬುದು ತಿಳಿದರೆ ಸಮುದಾಯದ ಸದಸ್ಯರ ಭಾಷಾ ಬಳಕೆಯ ನೈಜತೆ ಪ್ರಕಟವಾಗದೆ ಇರಬಹುದು. ಕೇವಲ ಒಂದೇ ಸಂದರ್ಭದಲ್ಲಿ ವೀಕ್ಷಣೆ ಮಾಡಿ ಅಲ್ಲಿಯ ಆಧಾರದ ಮೇಲೆ ಮಾಹಿತಿ ಸಂಗ್ರಹಿಸಿ ತೀರ್ಮಾನ ಕೈಕೊಳ್ಳಬಾರದು. ಔಪಚಾರಿಕ ಮತ್ತು ಅನೌಪಚಾರಿಕ ಸಂದರ್ಭಗಳಲ್ಲಿ ಭಾಷಾ ಬಳಕೆಯ ರೀತಿಯನ್ನು ವೀಕ್ಷಿಸಿ ದತ್ತಗಳನ್ನು ಸಂಗ್ರಹಿಸಿ ದಾಖಲೆ ಮಾಡಿಕೊಳ್ಳಬೇಕು.

ಸಾಮಗ್ರಿಗಳನ್ನು ಸಂಗ್ರಹಿಸುವಾಗ ವೀಕ್ಷಣೆಯು ಮಹತ್ವದ ಸಾಧನಗಳಲ್ಲಿ ಒಂದಾಗಿದೆ. ಭಾಷಾಸಮುದಾಯದ ಕಾರ್ಯ ಚಟುವಟಿಕೆಗಳನ್ನು ಏಕಾಗ್ರವಾಗಿ ನೋಡುವುದರಿಂದ ಸಮಂಜಸವಾದ ಭಾಷಾದತ್ತಗಳನ್ನು ಸಂಗ್ರಹಿಸಿದಂತಾಗುವುದು. ಕೆಲವು ಸಂಕೀರ್ಣ ಸನ್ನಿವೇಶಗಳಲ್ಲಿ ಭಾಷಾ ಬಳಕೆಯನ್ನು ವೀಕ್ಷಿಸುವುದು ಕಷ್ಟವಾದರೂ ಕ್ಷೇತ್ರಕರ್ತ ಇತರ ಸಾಧನ ತಂತ್ರಗಳನ್ನು ಬಳಸಿ ಆ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ.

ಮಾದರಿ: ಕ್ಷೇತ್ರಕಾರ್ಯದಲ್ಲಿ ಕ್ಷೇತ್ರಕರ್ತ, ಭಾಷಾಸಮುದಾಯದ ಪ್ರತಿಯೊಂದು ಕೇರಿಯನ್ನು, ಮನೆ ಮನೆಯನ್ನು ಸಂಪರ್ಕಿಸಲು ಆಗುವುದಿಲ್ಲ. ಅಂತಹ ಸಮಯದಲ್ಲಿ ಆ ಭಾಷಾಸಮುದಾಯವನ್ನು ಪ್ರತಿನಿಧಿಸುವಂತಹ ಭಾಗಾಂಶಗಳನ್ನು, ಉಪಗುಂಪುಗಳನ್ನು ಆಯ್ಕೆ ಮಾಡಿಕೊಂಡು ಕ್ಷೇತ್ರಕರ್ತನು ತನ್ನ ಅಧ್ಯಯನಕ್ಕೆ ಬಳಸಿಕೊಳ್ಳಬೇಕಾಗುತ್ತದೆ. ಭಾಷಾಸಮುದಾಯವನ್ನು ಪ್ರತಿನಿಧಿಸುವಂತಹ ಚಿಕ್ಕ ಘಟಕವೇ ಮಾದರಿಯಾಗಿದೆ. ಕ್ಷೇತ್ರಕರ್ತ ಆ ಭಾಷಾಸಮುದಾಯ ಗಾತ್ರ, ಸಂಖ್ಯೆ, ತನ್ನ ಅಧ್ಯಯನದ ಉದ್ದೇಶ, ವ್ಯಾಪ್ತಿ, ಆ ಸಮುದಾಯದಲ್ಲಿ ಭಾಷಾ ಬಳಕೆಯ ಸಂದರ್ಭ, ಪರಿಸರ ಮುಂತಾದವುಗಳನ್ನು ಗಮನದಲ್ಲಿಟ್ಟುಕೊಂಡು ಮಾದರಿಯನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಮಾದರಿಗಳಲ್ಲಿ ಅನೇಕ ವಿಧಗಳಿವೆ. ಸ್ತರೀಕೃತ, ಯಾದೃಚ್ಛಿಕ, ಗುಚ್ಛ, ಪಾಲು ಮತ್ತು ಬಹುಹಂತ ಮಾದರಿಗಳು ಬಳಕೆಯಲ್ಲಿವೆ. ಕ್ಷೇತ್ರಕರ್ತ ತನ್ನ ಅನುಕೂಲ ಮತ್ತು ಸಂದರ್ಭಗಳಿಗೆ ತಕ್ಕಂತೆ ಬೇರೆ ಬೇರೆ ಮಾದರಿಗಳನ್ನು ಉಪಯೋಗಿಸಬೇಕಾಗುತ್ತದೆ.

ಭಾಷಾಸಮುದಾಯದ ಸಾಮಾಜಿಕ, ಧಾರ್ಮಿಕ, ಕೌಟುಂಬಿಕ ಮತ್ತು ಆಡಳಿತ ಈ ಎಲ್ಲಾ ಸಂದರ್ಭಗಳಲ್ಲಿಯ ಭಾಷಾ ಬಳಕೆಯನ್ನು ಸಂಗ್ರಹಿಸಿ ಆ ಸಂದರ್ಭಗಳಿಗೆ ಪ್ರಾತಿನಿಧ್ಯ ದೊರಕಿಸಿಕೊಡುವ ಉದ್ದೇಶದಿಂದ ಅಂತಹ ಎಲ್ಲ ಕ್ಷೇತ್ರಗಳ ನಿರೂಪಕರು ಮಾದರಿಯಲ್ಲಿ ಸೇರುವಂತೆ ಕ್ಷೇತ್ರಕರ್ತ ಎಚ್ಚರಿಕೆ ವಹಿಸಬೇಕು. ಇದರಿಂದ ಮಾದರಿ

ಹೆಚ್ಚು ಅರ್ಥಪೂರ್ಣವಾಗುತ್ತದೆ. ಮಾದರಿಯ ಮುಖ್ಯ ಉದ್ದೇಶವೆಂದರೆ, ಭಾಷಾ ಕ್ಷೇತ್ರದ ಮೇಲೆ ನಿಯಂತ್ರಣ ಸಾಧಿಸುವುದು. ಕಡಿಮೆ ಸಮಯದಲ್ಲಿ, ಯೋಗ್ಯವಾದ ರೀತಿಯಲ್ಲಿ ಜನರನ್ನು ಸಂಪರ್ಕಿಸಿ ಸಾಮಗ್ರಿಗಳನ್ನು ಸಂಗ್ರಹಿಸಲಿಕ್ಕೆ ಮಾದರಿಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಸಮುದಾಯದ ಎಲ್ಲ ಸಾಮಾಜಿಕ ಮತ್ತು ಭಾಷಿಕ ಸಂದರ್ಭಗಳನ್ನು ಒಳಗೊಳ್ಳುವಂತೆ ಮಾದರಿ ಇರಬೇಕಾಗುತ್ತದೆ. ಕ್ಷೇತ್ರಕರ್ತ ತನ್ನ ಉದ್ದೇಶಕ್ಕೆ ಯುಕ್ತವಾದ ಮಾಹಿತಿಗಳನ್ನು ಸಂಗ್ರಹಿಸಲು ಮಾದರಿಗಳು ಮಹತ್ವದ ಪಾತ್ರ ವಹಿಸುತ್ತವೆ. ಉತ್ತಮವಾದ ಸಾಮಗ್ರಿಗಳು ಇದರಿಂದ ದೊರೆಯುತ್ತವೆ. ಆದರೂ ಮಾದರಿಗಳಲ್ಲಿ ಕೆಲವು ಇತಿಮಿತಿಗಳಿವೆ. ಸಮಾಜದಲ್ಲಿ ಅನೇಕ ಸ್ತರಗಳಿರುವುದರಿಂದ ಭಾಷಾ ಬಳಕೆಯ ಬಗ್ಗೆ ಸೂಕ್ತ ನಿರ್ಣಯ ತೆಗೆದುಕೊಳ್ಳಲು ಕ್ಷೇತ್ರಕರ್ತರಿಗೆ ಕಠಿಣ ವಾಗುವುದು. ಒಂದು ಮಾದರಿಯ ಪರಿಮಿತಿಯನ್ನು ಸೀಮಿತಗೊಳಿಸುವುದು ಕಠಿಣದ ಕೆಲಸ. ಅದೇನೇ ಇದ್ದರೂ ಕ್ಷೇತ್ರಕರ್ತ ತನ್ನ ವ್ಯಾವಹಾರಿಕ ಬುದ್ಧಿಮತ್ತೆಯನ್ನು ಬಳಸಿ ಇಂತಹ ಕೆಲವು ದೋಷಗಳನ್ನು ಪರಿಹರಿಸಿಕೊಳ್ಳಬಹುದು.

ತಪಶೀಲು ಪಟ್ಟಿ: ಕ್ಷೇತ್ರಕರ್ತ ಸಾಮಗ್ರಿಗಳನ್ನು ಪಡೆಯುವಾಗ ತನ್ನ ಗುರಿ, ಉದ್ದೇಶ ಮತ್ತು ವ್ಯಾಪ್ತಿಗೆ ಅನುಗುಣವಾಗಿ ಒಂದು ಚೌಕಟ್ಟನ್ನು ಹಾಕಿಕೊಳ್ಳಬೇಕಾಗುತ್ತದೆ. ಭಾಷಾಸಮುದಾಯದ ಧ್ವನಿಮಾಗಳನ್ನು, ಅಕ್ಷರವ್ಯವಸ್ಥೆ, ಪದರಚನೆ, ವಾಕ್ಯಗಳು ಮುಂತಾದವುಗಳ ಬಗ್ಗೆ ಪ್ರಶ್ನೆಗಳನ್ನು ಕ್ಷೇತ್ರಕರ್ತ ಚೌಕಟ್ಟಿನಲ್ಲಿ ಮೊದಲೇ ಸಿದ್ಧಪಡಿಸಿ ಕೊಳ್ಳಬೇಕಾಗುತ್ತದೆ. ಇಂತಹ ಚೌಕಟ್ಟಿಗೆ ತಪಶೀಲುಪಟ್ಟಿ ಎಂದು ಹೆಸರು.

ಕ್ಷೇತ್ರಕರ್ತ ನಿರೂಪಕರನ್ನು ಮುಖತಃ ಭೇಟಿಯಾಗಿ ಪ್ರಶ್ನೆಗಳನ್ನು ಕೇಳುವ, ತಾನೇ ಸ್ವತಃ ಉತ್ತರಗಳನ್ನು ಭರ್ತಿಮಾಡಿಕೊಳ್ಳುವ ವ್ಯವಸ್ಥೆ ಇಲ್ಲಿರುತ್ತದೆ. ತಪಶೀಲು ಪಟ್ಟಿಯಲ್ಲಿ ಹೌದು-ಅಲ್ಲ ಮಾದರಿಯ ಪ್ರಶ್ನೆಗಳು, ಸಮ್ಮತಿ-ಅಸಮ್ಮತಿ ಸೂಚಿಸುವ ಹೇಳಿಕೆಗಳು ಇರುತ್ತವೆ. ನಿರೂಪಕರ ಆಸಕ್ತಿ-ಅಭಿರುಚಿ ಮತ್ತು ಮನೋಧೋರಣೆಗಳು ಇಲ್ಲಿ ಸ್ಪಷ್ಟವಾಗಿ ನಿರ್ಧಾರವಾಗುತ್ತವೆ. ನಿರೂಪಕರ ಹತ್ತಿರ ಕ್ಷೇತ್ರಕರ್ತ ಇರುವುದರಿಂದ ನಿರೂಪಕರಿಗೆ ಸಮಸ್ಯೆಗಳು ಬಂದರೆ ಪರಿಹಾರವಾಗುತ್ತವೆ. ಆದರೂ ಅಶಿಕ್ಷಿತರಿಂದ ತಪಶೀಲು ಪಟ್ಟಿಯ ಉದ್ದೇಶ ಸಾರ್ಥಕವಾಗಲಾರದು. ಕ್ಷೇತ್ರಕರ್ತನಿಗೆ ದೀರ್ಘವಾದ ವಿವರಣೆ ಬೇಕಾಗಿದ್ದರೆ ತಪಶೀಲು ಪಟ್ಟಿ ವಿಫಲವಾಗುತ್ತದೆ. ಆದರೂ ಕ್ಷೇತ್ರಕಾರ್ಯದಲ್ಲಿ ಮಾಹಿತಿ ಸಂಗ್ರಹಿಸು ವಾಗ ಕೆಲವು ಸಂದರ್ಭಗಳಲ್ಲಿ ತಪಶೀಲುಪಟ್ಟಿ ನೆರವಾಗುತ್ತದೆ.

ಪ್ರಶ್ನಾವಳಿ ಮತ್ತು ತಪಶೀಲು ಪಟ್ಟಿಗಳಗಳ ನಡುವೆ ಸಾಕಷ್ಟು ಸಾಮ್ಯತೆಯಿದ್ದರೂ ಕೆಲವು ವ್ಯತ್ಯಾಸಗಳಿವೆ. ಪ್ರಶ್ನಾವಳಿಗಳಲ್ಲಿ ವಿವಿಧ ಕ್ಷೇತ್ರಗಳಿವೆ. ಸಂಬಂಧಿಸಿದ ಪ್ರಶ್ನೆಗಳಿ ರುತ್ತವೆ. ತಪಶೀಲು ಪಟ್ಟಿಯಲ್ಲಿ ನಿರ್ದಿಷ್ಟ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಶ್ನೆಗಳು ಮಾತ್ರ ಇರುತ್ತವೆ. ಪ್ರಶ್ನಾವಳಿಯಲ್ಲಿ ಪ್ರಶ್ನೆಗಳ ಕಟ್ಟನ್ನು ಅಂಚೆಯ ಮೂಲಕ ಕಳಿಸುವ ವ್ಯವಸ್ಥೆ ಇರುವುದು. ತಪಶೀಲು ಪಟ್ಟಿಯಲ್ಲಿ ಪ್ರಶ್ನೆಗಳ ಪಟ್ಟಿಯನ್ನು ಕ್ಷೇತ್ರಕರ್ತನು ತನ್ನ ಜೊತೆ

ಯಲ್ಲಿಯೇ ತನಗೆ ಸಂಬಂಧಿಸಿದ ಸ್ಥಳಕ್ಕೆ ತೆಗೆದುಕೊಂಡು ಹೋಗುತ್ತಾನೆ. ಕ್ಷೇತ್ರಕರ್ತ ಅವುಗಳ ಸಾಮ್ಯ-ವ್ಯತ್ಯಾಸಗಳನ್ನು ಗಮನದಲ್ಲಿಟ್ಟುಕೊಂಡು ಎರಡನ್ನೂ ಉಪಯೋಗಿಸ ಬೇಕಾಗುತ್ತದೆ.

ತಾಳೆಪಟ್ಟಿ: ಕ್ಷೇತ್ರಕಾರ್ಯದಲ್ಲಿ ಭಾಷಾಸಾಮಗ್ರಿಗಳನ್ನು ವೀಕ್ಷಣೆಯ ಮೂಲಕ ದಾಖಲಿಸುವಾಗ ತಾಳೆಪಟ್ಟಿಗಳು ಸಹಾಯಕವಾಗುತ್ತವೆ. ಅತಿ ಸಂತೋಷವಾದಾಗ, ಕೋಪಿತರಾದಾಗ, ಉದ್ರೇಕಗೊಂಡಾಗ, ಭಾಷಿಕರು ವ್ಯಕ್ತಪಡಿಸುವ ಪದಗಳನ್ನು, ವಾಕ್ಯಗಳನ್ನು ತಾಳೆ ಗುರುತುಹಾಕುವುದರ ಮೂಲಕ. ಭಾಷಿಕರು ಪ್ರಕಟಪಡಿಸುವ ಪ್ರತಿಕ್ರಿಯೆಗಳನ್ನು ಕ್ಷೇತ್ರಕರ್ತ ವೀಕ್ಷಿಸಿ ದಾಖಲೆ ಮಾಡಿಕೊಳ್ಳಬೇಕಾಗುತ್ತದೆ. ಭಾಷಾ ಸಾಮಗ್ರಿಗಳನ್ನು ಸಂಗ್ರಹಿಸಿ ನಂತರ ಅವುಗಳ ಮೌಲ್ಯ ನಿಷ್ಕರ್ಷ ಮಾಡುವಾಗ ತಾಳೆಪಟ್ಟಿಗಳು ನೆರವಾಗುತ್ತವೆ.

ಸಮಾಜ ಆಲೇಖ: ಭಾಷಾಸಮುದಾಯವನ್ನು ಸಾಮಾಜಿಕ ಭಾಷಾಧ್ಯಯನದ ದೃಷ್ಟಿಯಿಂದ ಅಧ್ಯಯನ ಮಾಡುವಾಗ ಮತ್ತು ನಿರೂಪಕರನ್ನು ಆಯ್ಕೆ ಮಾಡಿಕೊಳ್ಳುವಾಗ ಈ ಸಾಧನ ತುಂಬ ನೆರವಾಗುತ್ತದೆ. ಭಾಷಾಸಮುದಾಯದಲ್ಲಿ ಭಾಷಿಕರು ತಮ್ಮ-ತಮ್ಮಲ್ಲಿ ತಳೆದಿರುವ ಅಭಿಮಾನ, ಒಲವು, ಬೇಕಾದವರು, ಬೇಡವಾದವರು ಮುಂತಾದ ಅಂಶಗಳ ಮೇಲಿಂದ ಸಮುದಾಯದ ವ್ಯಕ್ತಿ-ವ್ಯಕ್ತಿಗಳ ಸಂಬಂಧವನ್ನು ತೋರಿಸುವ ನಕ್ಷೆಗೆ ಸಮಾಜ ಆಲೇಖ ಎಂದು ಹೆಸರು. ಸಮುದಾಯದಲ್ಲಿ ನಡೆಯುವ ಹಬ್ಬ ಹರಿದಿನಗಳಲ್ಲಿ, ಸಭೆ-ಸಮಾರಂಭಗಳಲ್ಲಿ, ಭಾಷಿಕರ ಸಾಮಾಜಿಕ ಸಂಬಂಧ, ಸಾಮಾಜಿಕ ಅಂತಸ್ತುಗಳನ್ನು ಗಮನಿಸಲು, ಅವರ ಮನೋವೃತ್ತಿಗಳನ್ನು ತಿಳಿಸಲು ಸಮಾಜ ಮಿತಿ ತಂತ್ರ ಸಹಾಯ ಮಾಡುತ್ತದೆ.

ಭಾಷಾಸಮುದಾಯದಲ್ಲಿ ಎಲ್ಲರಿಂದಲೂ ಮೆಚ್ಚುಗೆ ಗಳಿಸಿದವರು, ಎಲ್ಲರಿಂದಲೂ ತಿರಸ್ಕರಿಸಲ್ಪಟ್ಟವರು ಮತ್ತು ಕೆಲವೇ ಜನರ ಆಕರ್ಷಣೆಗೆ ಒಳಗಾದವರು ಇರುತ್ತಾರೆ. ಇವರಿಂದ ಭಾಷಾ ಕ್ಷೇತ್ರಕರ್ತರಿಗೆ ಆ ಸಮುದಾಯದ ರಚನೆ, ಭಾಷಿಕರ ಪರಸ್ಪರ ಸಂಬಂಧಗಳನ್ನು ಅರಿಯಲು ಸಾಧ್ಯವಾಗುವುದು.

ಮನೋಧೋರಣೆಯ ಮಾಪಕಗಳು

ಒಂದು ಭಾಷಾ ಸಮುದಾಯದಲ್ಲಿ ಅನೇಕ ಭಾಷೆಗಳು ಗೊತ್ತಿರುವ ಭಾಷಿಕರಿರುತ್ತಾರೆ. ಆ ಭಾಷಿಕರು ಬೇರೆ ಬೇರೆ ಭಾಷಿಕ ಸಂದರ್ಭದಲ್ಲಿ ಆ ಸಮುದಾಯದ ಮಾತೃಭಾಷೆ ಯನ್ನು ಅಲ್ಲದೆ ತಮಗೆ ಗೊತ್ತಿರುವ ಇತರ ಭಾಷೆಯನ್ನು ಯಾವ ಸಂದರ್ಭದಲ್ಲಿ, ಹೇಗೆ ಬಳಸುತ್ತಾರೆ ಎಂಬ ಅವರ ಭಾಷಾ ಮನೋಧೋರಣೆಗಳನ್ನು ಅಳೆಯಲು ಕ್ಷೇತ್ರಕಾರ್ಯದಲ್ಲಿ ಮನೋಧೋರಣೆಯ ಮಾಪಕಗಳನ್ನು ಬಳಸುತ್ತಾರೆ. ಮನೋ

ಧೋರಣೆಗಳನ್ನು ಅಳೆಯುವ ಆಧುನಿಕ ವಿಧಾನಗಳಾದ ಥರ್ಸ್ಟನ್ ಪದ್ಧತಿ ಮತ್ತು ಲಿಂಕರ್ಟ್ ಪದ್ಧತಿಗಳನ್ನು ಬಳಸುವ ರೀತಿ ಕ್ಷೇತ್ರಕರ್ತ ತಿಳಿದವನಾಗಿರಬೇಕು.

ಭಾಷಾ ಮನೋಧೋರಣೆಗಳು ಭಾಷಿಕರು ಮಾತನಾಡುವ ವಿವಿಧ ಸಂದರ್ಭಗಳಲ್ಲಿ, ಅವರ ಪ್ರಶ್ನೆಗಳಲ್ಲಿ, ಪ್ರಶ್ನೆಗಳಿಗೆ ನೀಡುವ ಉತ್ತರಗಳಲ್ಲಿ, ಹೇಳಿಕೆಗಳಿಗೆ ತೋರುವ ಪ್ರತಿಕ್ರಿಯೆಗಳಲ್ಲಿ ಪ್ರತಿಬಿಂಬಿಸಲ್ಪಡುತ್ತದೆ. ಥರ್ಸ್ಟನ್ ಪದ್ಧತಿಯ ಮುಖ್ಯ ಉದ್ದೇಶವು ಬೇರೆ ಬೇರೆ ಭಾಷಿಕ ಚಟುವಟಿಕೆಗಳಲ್ಲಿಯ ಹೇಳಿಕೆಗಳನ್ನು ಸಂಗ್ರಹಿಸಿ, ಅವುಗಳನ್ನು ವರ್ಗೀಕರಿಸಿ ಪ್ರತಿಯೊಂದು ಹೇಳಿಕೆಗೆ ವ್ಯಕ್ತವಾಗುವ ಅಭಿಪ್ರಾಯವನ್ನು ತಪಾಸಣೆ ಮಾಡಬೇಕಾಗುತ್ತದೆ. ಲಿಂಕರ್ಟ್ ಪದ್ಧತಿಯಲ್ಲಿ ಹೇಳಿಕೆಗಳಿಗೆ ಸಮ್ಮತಿ, ಅಸಮ್ಮತಿಯನ್ನು ಸೂಚಿಸಬೇಕು. ಹೇಳಿಕೆಗಳು ಸಂಕೀರ್ಣವಾಗಿರಬಾರದು, ಹೌದು, ಅಲ್ಲ ನಮೂನೆಯ ಹೇಳಿಕೆಗಳನ್ನು ಕೊಡಬಾರದು, ಹೇಳಿಕೆಗಳು ಚಿಕ್ಕಚಿಕ್ಕ ವಾಕ್ಯಗಳಿಂದ ಕೂಡಿದ್ದು ಇಪ್ಪತ್ತು ಶಬ್ದಗಳಿಗಿಂತ ಹೆಚ್ಚಿರಬಾರದು. ಹೇಳಿಕೆಗಳಲ್ಲಿ ಭಾಷಾಪ್ರಭುತ್ವ ತೋರಿಸುವ ಅವಶ್ಯಕತೆ ಇಲ್ಲ. ಸರಳ ಭಾಷೆಯಾಗಿದ್ದು ಎಲ್ಲರಿಗೂ ತಿಳಿಯುವಂತಾಗಬೇಕು. ಸಮುದಾಯದಲ್ಲಿ ಭಾಷೆಯನ್ನು ಬಳಸುವಾಗ ಮಾತೃಭಾಷೆ ಮತ್ತು ಸಮುದಾಯದಲ್ಲಿರುವ ಇತರ ಭಾಷೆಗಳ ಬಗ್ಗೆ ಭಾಷಿಕರ ಒಲವನ್ನು ತಿಳಿದುಕೊಳ್ಳುವುದೇ ಈ ಮಾಪಕಗಳ ಉದ್ದೇಶ.

ದರ್ಜಾಮಾಪನಿ

ಭಾಷಾಸಮುದಾಯದಲ್ಲಿ ಭಾಷಿಕರ ಮನೋಭಾವಗಳನ್ನು ತಿಳಿದುಕೊಳ್ಳಲು ದರ್ಜಾಮಾಪನಿ ನೆರವಾಗುತ್ತದೆ. ಮನೆಗಳಲ್ಲಿ, ಧಾರ್ಮಿಕ ಕೇಂದ್ರಗಳಲ್ಲಿ, ಗೆಳೆಯರ ಜೊತೆ ಸೇರಿದಾಗ, ಕ್ರೀಡೆಗಳಲ್ಲಿ ಭಾಷಿಕರು ಯಾವ ಭಾಷೆಯನ್ನು ಬಳಸುತ್ತಾರೆ, ಅವರ ಮಾತುಗಳಲ್ಲಿ ಅನ್ಯ ಭಾಷೆಗಳ ಪ್ರಭಾವ ಹೆಚ್ಚಾಗಿರುತ್ತದೆಯೇ? ಅವರು ಇತರ ಭಾಷೆಗಳನ್ನು ಸಹಜವಾಗಿ ಬಳಸುತ್ತಾರೆಯೇ ಅಥವಾ ಉದ್ದೇಶಪೂರ್ವಕವಾಗಿಯೇ ಬಳಸುತ್ತಾರೆಯೇ? ಎಂಬುದನ್ನು ಕ್ಷೇತ್ರಕರ್ತನು ಪ್ರಶ್ನಾವಳಿ, ಸಂದರ್ಶನ ಮತ್ತು ವೀಕ್ಷಣೆ ಮುಂತಾದ ಸಾಧನ-ತಂತ್ರಗಳಿಂದ, ನಿರೂಪಕರು ವ್ಯಕ್ತಪಡಿಸುವ ಪ್ರತಿಕ್ರಿಯೆಗಳನ್ನು, ವರ್ತನೆಯನ್ನು ದಾಖಲೆ ಮಾಡಿಕೊಳ್ಳಬೇಕಾಗುತ್ತದೆ. ಇದರಿಂದ ನಿರೂಪಕರ ಭಾಷಾ ಒಲವು, ಆಸಕ್ತಿ, ಅಭಿರುಚಿ ತಿಳಿದುಕೊಳ್ಳಲು ಕ್ಷೇತ್ರಕರ್ತನಿಗೆ ದರ್ಜಾಮಾಪನಿಯು ಸಹಾಯವಾಗುತ್ತದೆ.

ಭಾಷಾಸಮುದಾಯದಲ್ಲಿ ಕ್ಷೇತ್ರಕರ್ತ ಸಾಮಗ್ರಿಗಳನ್ನು ಸಂಗ್ರಹಿಸುವಾಗ ಮೇಲ್ಕಾಣಿಸಿದ ಎಲ್ಲ ಸಾಧನ-ತಂತ್ರಗಳನ್ನು ಸಂದರ್ಭಕ್ಕನುಸಾರವಾಗಿ ಬಳಕೆ ಮಾಡಿಕೊಳ್ಳುವುದು ಅವಶ್ಯಕ. ಈ ಸಾಧನಗಳನ್ನು ಬಳಸದೆ ಕ್ಷೇತ್ರಕಾರ್ಯ ಮಾಡುವುದು ಸಾಧುವಲ್ಲ. ಮಾಡಿದರೂ ಅದು ಯಶಸ್ವಿ ಕ್ಷೇತ್ರಕಾರ್ಯ ಆಗಲಾರದು. ಕ್ಷೇತ್ರಕಾರ್ಯ ಪರಿಣಾಮಕಾರಿಯಾಗಲು ಕ್ಷೇತ್ರಕರ್ತನಿಗೆ ಈ ಸಾಧನ-ತಂತ್ರಗಳು ತೀರಾ ಅವಶ್ಯಕ. ಪ್ರತಿಯೊಂದು

[illegible]

ಯನ್ನು ಕಂಡುಹಿಡಿಯಲಿಕ್ಕೆ ಸಾಧ್ಯವಿಲ್ಲ.

[illegible]

ಸಾಲಿ (Sali) (School)

ಮನಿ (Mani) (House)

ಗಿಡಾ (Gida) (Tree)

ಈ ಭಾಗದ ಭಾಷೆಯನ್ನು [illegible]

ಶಾಲೆ (Sale) 'School'

ಮನೆ (Mane) 'House'

ಗಿಡ (Gida) 'Tree'

[illegible]

ಸ್ಪಷ್ಟವಾಗುತ್ತದೆ ಮತ್ತು ಸಮಂಜಸವಾಗುತ್ತದೆ.

ವೈವಿಧ್ಯತೆ

ಸಮುದಾಯದಲ್ಲಿ [illegible]

ಗಳು ಇಂತಿವೆ.

ಅ. ಭಾಷಿಕರ ವಯಸ್ಸು ಮತ್ತು ಲಿಂಗ

[illegible]

ಯಾಗುತ್ತದೆ. 'ಬಡಗ' ಎಂಬ ಉಪಭಾಷೆಯಲ್ಲಿ ಮುದುಕರ ಭಾಷೆ ಯುವಕರ ಭಾಷೆಗಿಂತ ಭಿನ್ನವಾಗಿರುತ್ತದೆ. ಅದರಂತೆ ಲಿಂಗಕ್ಕೆ ಅನುಗುಣವಾಗಿ ಪುರುಷರ ಭಾಷೆ ಮತ್ತು ಸ್ತ್ರೀಯರ ಭಾಷಾ ಬೇರೆ ಬೇರೆಯಾಗುತ್ತದೆ. ಉದಾ. 'ಕೊಸಾಟ, ಎಂಬ ಉಪಭಾಷೆಯಲ್ಲಿ ಸ್ತ್ರೀಯರ ಭಾಷೆ ಪುರುಷರ ಭಾಷೆಗಿಂತ ವ್ಯತ್ಯಾಸವಾಗಿರುತ್ತದೆ'. ಕ್ಷೇತ್ರಕರ್ತ ಈ ಭಿನ್ನತೆಯನ್ನು ಸರಿಯಾಗಿ ತಿಳಿದಿರಬೇಕು ಮತ್ತು ಅವರು ಉಚ್ಚರಿಸಿದಂತೆ ದಾಖಲಿಸಿಕೊಳ್ಳಬೇಕು.

ಆ. ಸಾಮಾಜಿಕ ವರ್ಗಗಳು ಮತ್ತು ವೃತ್ತಿಗಳು

ಒಂದು ಸಮುದಾಯದಲ್ಲಿ ಒಂದೇ ಭಾಷೆಯನ್ನಾಡುವ ಜನಸಮೂಹವಿದ್ದರೆ, ಭಾಷಿಕವಾಗಿ ಅದೊಂದು ಸಾಮಾಜಿಕ ವರ್ಗವಾಗುತ್ತದೆ. ಸಮುದಾಯದಲ್ಲಿ ಅನೇಕ ಸ್ತರಗಳಿರುವುದರಿಂದ ಭಾಷಾ ಬಳಕೆಯಲ್ಲಿ ಇತರರಿಗಿಂತ ಭಿನ್ನವಾದ ಸ್ಥಾನಮಾನ ಹೊಂದಿದ ಜನಸಮೂಹವಿದ್ದೇ ಇರುತ್ತದೆ. ಬೇರೆ ಬೇರೆ ಸಾಮಾಜಿಕ ವರ್ಗ, ವೃತ್ತಿಗಳಿಗೆ ತಕ್ಕಂತೆ ಭಾಷಾ ಬಳಕೆಯಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಉದಾ. ಒಂದೇ ಸಮುದಾಯದಲ್ಲಿ ಸಾಮಾಜಿಕ ವರ್ಗಗಳಿಗೆ ತಕ್ಕಂತೆ ಬ್ರಾಹ್ಮಣರ ಭಾಷೆ, ಬ್ರಾಹ್ಮಣೇತರ ಭಾಷೆಗಳಿಗಿಂತ ವ್ಯತ್ಯಾಸವಾಗಿರುತ್ತದೆ. ಅದರಂತೆ ಕೃಷಿಕರು, ವಿಶ್ವಕರ್ಮರು, ಚಮ್ಮಾರರು ಮಾತನಾಡುವ ರೀತಿ ಮತ್ತು ಅವರ ವೃತ್ತಿಪದಗಳು ಬೇರೆ ಬೇರೆಯಾಗಿರುತ್ತವೆ. ಕ್ಷೇತ್ರಕರ್ತ ಸಾಮಾಜಿಕ ವರ್ಗ ಮತ್ತು ವೃತ್ತಿಗಳಿಗೆ ಸಂಬಂಧಿಸಿದಂತೆ ಅನೇಕ ಭಾಷಾ ರೂಪಗಳನ್ನು ಸಂಗ್ರಹಿಸಬೇಕಾಗುತ್ತದೆ.

ಇ. ಆವೇಶದ ಸನ್ನಿವೇಶಗಳಲ್ಲಿಯ ಭಾಷೆ

ಭಾಷಿಕರು ಕೆಲವು ಸಂದರ್ಭದಲ್ಲಿ ಧಾರ್ಮಿಕ ವಿಷಯಗಳನ್ನು ಚರ್ಚಿಸುವಾಗ, ಹಬ್ಬ-ಹರಿದಿನಗಳಲ್ಲಿ, ಉಲ್ಲಾಸವಾದಾಗ, ತೊಂದರೆಗಳು ಬಂದಾಗ, ಮದುವೆ, ಜಾತ್ರೆ ಗಳಲ್ಲಿ ತಮಗೆ ಸಂತೋಷವಾದಾಗ, ಕೆಲವು ಸಂದರ್ಭದಲ್ಲಿ ಕೋಪಗೊಂಡಾಗ, ರೇಗಿದಾಗ, ದುಃಖವಾದಾಗ, ಹೆದರಿದಾಗ ಮುಂತಾದ ಆವೇಶದ ಸನ್ನಿವೇಶಗಳಲ್ಲಿ ಅವರ ಭಾಷಾ ಬಳಕೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಕ್ಷೇತ್ರಕರ್ತ ಆಯಾ ಸನ್ನಿವೇಶ ಗಳಲ್ಲಿ ತಕ್ಷಣವೇ ಅವರು ಬಳಸುವ ರೂಪಗಳನ್ನು ಸಂಗ್ರಹ ಮಾಡಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಭಾಷಾ ಬಳಕೆ ಕೃತ್ರಿಮತೆಗಿಂತ ಸಹಜತೆ ಇರುವುದು ಎಂಬುದನ್ನು ಕ್ಷೇತ್ರಕರ್ತ ಗಮನದಲ್ಲಿಟ್ಟುಕೊಳ್ಳಬೇಕು.

ಈ. ವೇಗೋಚ್ಚಾರಣೆ

ಈ ಬಗೆಯ ವ್ಯತ್ಯಾಸಗಳು ಭಾಷಾಸಮುದಾಯದಲ್ಲಿ ಸಾಮಾನ್ಯವಾಗಿ ಕಾಣಿಸಿ ಕೊಳ್ಳುತ್ತವೆ. ಹೇಳಬೇಕಾಗಿರುವುದನ್ನು ಬೇಗನೆ ಹೇಳಿ ಮುಗಿಸಬೇಕೆಂಬ ಆತುರವು ವೇಗೋಚ್ಚಾರಣೆಗೆ ಮುಖ್ಯ ಕಾರಣ. ಅದು ಸಹಜವಾಗಿ ಎಲ್ಲರಲ್ಲೂ ಇದ್ದೇ ಇರುತ್ತದೆ. ಅದರ ಪರಿಣಾಮ ಭಾಷೆಯನ್ನು ವಿಶ್ಲೇಷಿಸುವಾಗ ಧ್ವನಿಮಾಹಂತ ಮತ್ತು ಸಂಧಿ

ಸಮಾಸ ರಚನೆಗಳಲ್ಲಿ ವ್ಯತ್ಯಾಸಗಳು ಕಾಣಿಸಿಕೊಳ್ಳುತ್ತವೆ, ಅದರಂತೆ ದೀರ್ಘವಾದ ಪದಗಳನ್ನು ಮೊಟಕುಗೊಳಿಸಿ ಉಚ್ಚರಿಸುತ್ತಾರೆ. ಇದು ರೂಪ ಬದಲಾವಣೆಗೂ ಕಾರಣವಾಗುತ್ತದೆ. ಕ್ಷೇತ್ರಕರ್ತ ವೇಗೋಚ್ಚಾರಣೆಯ ವೇಳೆಯಲ್ಲಿ ಬಳಸುವ ರೂಪಗಳನ್ನು ಬರೆದಿಟ್ಟುಕೊಳ್ಳಬೇಕು.

ಸಂಭಾಷಣೆ

ಭಾಷಾಸಮುದಾಯದಲ್ಲಿ ಭಾಷಿಕರು ತಮ್ಮ ತಮ್ಮಲ್ಲಿ ವಿಷಯವನ್ನು ಹಂಚಿಕೊಂಡು ಪರಸ್ಪರವಾಗಿ ಮಾತನಾಡುತ್ತಾರೆ. ಆ ಸಂದರ್ಭದಲ್ಲಿ ಕ್ಷೇತ್ರಕರ್ತ ಅವರು ಮಾತನಾಡುವ ರೂಪಗಳನ್ನು ಗಮನಿಸಬೇಕು. ಅವು ಉತ್ತಮ ಭಾಷಾಸಾಮಗ್ರಿಗಳನ್ನು ಪ್ರತಿನಿಧಿಸುತ್ತವೆ. ಸಂಭಾಷಣೆ ಮಾಡುವಾಗ ಅವರ ಉಚ್ಚಾರ, ಮಾತನಾಡುವ ರೀತಿ, ಘಾತ, ಶ್ರುತಿ, ವಿರಾಮ ಮುಂತಾದ ಅವಿಭಾಜಕ ಅಂಶಗಳನ್ನು ವಿಷಯಾಭಿವ್ಯಕ್ತಿ ಇವುಗಳನ್ನು ತಿಳಿಯಲು ಕ್ಷೇತ್ರಕರ್ತನಿಗೆ ಆ ಬಾಯ್ದೆರೆ ಕೆಲಸ ತುಂಬ ಅನುಕೂಲವಾಗುತ್ತದೆ. ಸಮುದಾಯದ ಸದಸ್ಯರು ಯಾವುದೇ ಒಂದು ವಿಷಯದ ಬಗ್ಗೆ ಸಂಭಾಷಣೆ ನಡೆಸಿದಾಗ ಕ್ಷೇತ್ರಕರ್ತ ತಾನೂ ಭಾಗವಹಿಸಬೇಕು. ಈ ವೇಳೆಯಲ್ಲಿ ಕ್ಷೇತ್ರಕರ್ತ ಪ್ರಶ್ನೋತ್ತರ ಪದ್ಧತಿಗೆ ಮಾರುಹೋಗಬೇಕು. ಆದಷ್ಟು ಸರಳವಾದ ಪ್ರಶ್ನೆಗಳನ್ನು ಕೇಳಬೇಕು. ಆ ವೇಳೆಯಲ್ಲಿ ಕ್ಷೇತ್ರಕರ್ತ ಬಹಳ ಎಚ್ಚರಿಕೆಯಿಂದ ವರ್ತಿಸಬೇಕೆಂಬುದನ್ನು ಮರೆಯಬಾರದು.

ಭಾಷಾಸಮುದಾಯದಲ್ಲಿ ನಡೆಯುವ ಸಾಂಸ್ಕೃತಿಕ ಚಟುವಟಿಕೆಗಳ ಔಪಚಾರಿಕ ಮತ್ತು ಅನೌಪಚಾರಿಕ ಸನ್ನಿವೇಶಗಳಲ್ಲಿ ಮಾತನಾಡುವಾಗ ಭಾಷಾ ಬಳಕೆ ಬೇರೆ ಬೇರೆಯಾಗುತ್ತದೆಂದು ಈಗಾಗಲೇ ಹೇಳಲಾಗಿದೆ. ಜಾನಪದ ಕತೆಗಳನ್ನು, ಪುರಾಣಗಳನ್ನು ಹೇಳುವಾಗ, ಹೇಳುವವರ ಕೇಳುವವರ ನಡುವೆ ನಡೆಯುವ ಸಂಭಾಷಣೆಗಳಲ್ಲಿ ಅಂದರೆ ಕತೆ, ಪುರಾಣಗಳ ಬಗ್ಗೆ ಗಂಭೀರ ವಿಷಯವನ್ನು ಕುರಿತು ಚರ್ಚೆ ಮಾಡುವಲ್ಲಿ ಬಳಕೆಯಾಗುವ ರೂಪಗಳನ್ನು ಸಂಗ್ರಹಿಸಬೇಕು. ಹಳ್ಳಿಗಳಲ್ಲಿ ನಡೆಯುವ ಧಾರ್ಮಿಕ ಕೇಂದ್ರಗಳಲ್ಲಿ, ಸಭೆ ಸಮಾರಂಭಗಳಲ್ಲಿ ಗ್ರಾಮಕ್ಕೆ ಸಂಬಂಧಪಟ್ಟಂತೆ ಯಾವುದೇ ಒಂದು ವಿಷಯ, ಘಟನೆಯ ಬಗ್ಗೆ ಗಂಭೀರವಾಗಿ ಮಾತುಕತೆಗಳು ನಡೆದಾಗ ಕ್ಷೇತ್ರಕರ್ತ ಅವುಗಳನ್ನು ವೀಕ್ಷಿಸಿ ದಾಖಲಿಸಿಕೊಳ್ಳಬೇಕಾಗುತ್ತದೆ. ಇದರಿಂದ ಆ ಭಾಷಾ ಬಳಕೆಯನ್ನು ತಿಳಿದುಕೊಂಡಂತಾಗುತ್ತದೆಯಲ್ಲದೆ ಆ ಭಾಷೆಯನ್ನಾಡುವ ಸಮುದಾಯ ಸಂಸ್ಕೃತಿಯನ್ನು ತಿಳಿದಂತಾಗುತ್ತದೆ.

ಭಾಷಾಸಮುದಾಯದಲ್ಲಿ ನಡೆಯುವ ನಾಟಕ, ಮದುವೆಗಳಲ್ಲಿಯ ಒಗಟು, ಗಾದೆ ಅವುಗಳ ಅರ್ಥವನ್ನು ಬಿಡಿಸಿ ಹೇಳುವಾಗ ಮಾತನಾಡುವ ರೀತಿ ಬೇರೆ ಯಾಗುತ್ತದೆ. ನಾಟಕದಲ್ಲಿ ಪ್ರಯೋಗವಾಗುವ ಭಾಷಾ ಬಳಕೆಯನ್ನು ಕ್ಷೇತ್ರಕರ್ತ ಎಚ್ಚರಿಕೆಯಿಂದ ಗಮನಿಸಬೇಕು. ಪಾತ್ರಧಾರಿಗಳು ಸಮುದಾಯದಲ್ಲಿ ಬಳಸುವ ಭಾಷೆಗೂ ಅವರು

ನಾಟಕದಲ್ಲಿ ಭಾಗವಹಿಸಿದಾಗ ನಡೆಸುವ ನಾಟಕೀಯ ಸಂಭಾಷಣೆಗೂ ಇರುವ ವ್ಯತ್ಯಾಸಗಳನ್ನು ಗಮನಿಬೇಕು. ನಾಟಕೀಯ ಸಂಭಾಷಣೆಯಲ್ಲಿ ಭಾಷಿಕರಲ್ಲಿ ತಮ್ಮ ಉಪಭಾಷೆಯ ರೂಪಗಳು ಬರುತ್ತವೆಯೋ ಹೇಗೆ? ಪ್ರಮಾಣಭಾಷೆಯ ಉಪಯೋಗವಾಗುತ್ತದೆಯೆ? ಆ ವೇಳೆಯಲ್ಲಿ ಅವರ ಉಚ್ಚಾರಣೆ, ಅಭಿನಯ ಇವೆಲ್ಲವುಗಳನ್ನು ಕ್ಷೇತ್ರಕರ್ತ ಗಮನಿಸುತ್ತಲೇ ಇರಬೇಕು. ಪ್ರತಿಯೊಂದು ಭಾಷಾ ಸಮುದಾಯಕ್ಕೂ ತನ್ನದೇ ಆದ ಆಡುಮಾತಿನ ಶೈಲಿ ಇದ್ದೇ ಇರುತ್ತದೆ. ಆ ಭಾಷಾ ಸಮುದಾಯಕ್ಕೆ ಸಂಬಂಧಿಸಿದ ಅನೇಕ ಅಂಶಗಳನ್ನು ಭಾಷಿಕರು ಮಾತನಾಡುವ ರೀತಿಯಿಂದಲೇ ಕ್ಷೇತ್ರಕರ್ತ ತಿಳಿಯಬಹುದು. ಆ ವೇಳೆಯಲ್ಲಿ ಕ್ಷೇತ್ರಕರ್ತ ಟೇಪ್‌ರಿಕಾರ್ಡ್‌ನಂತಹ ಆಧುನಿಕ ಧ್ವನಿಯಂತ್ರಗಳನ್ನು ಬಳಸಿ ಭಾಷಿಕರು ಮಾತನಾಡುವ ರೀತಿಯನ್ನು ತಿಳಿದುಕೊಳ್ಳಬಹುದು.

ಪೂರ್ಣತೆ

ಕ್ಷೇತ್ರದಲ್ಲಿ ಉದ್ದೇಶಿತ ಭಾಷಾಸಾಮಗ್ರಿಗಳು ಪೂರ್ಣ ಪ್ರಮಾಣದಲ್ಲಿ ದೊರೆಯುವ ತನಕ ಕ್ಷೇತ್ರಕರ್ತ ಕ್ಷೇತ್ರದಲ್ಲಿಯೇ ಇರಬೇಕಾಗುತ್ತದೆ. ತನ್ನ ಅಧ್ಯಯನದ ಉದ್ದೇಶಕ್ಕೆ ಅನುಗುಣವಾಗಿ ಭಾಷಾಸಾಮಗ್ರಿಗಳು ಸಿಗುವ ತನಕ ಹಿಂದೇಟನ್ನು ಹಾಕಬೇಕು. ಈ ವೇಳೆಯಲ್ಲಿ ಕ್ಷೇತ್ರಕರ್ತ ಅವಸರ ಮಾಡಬಾರದು. ಭಾಷಾ ಸಮುದಾಯದ ಎಲ್ಲ ಸಾಮಾಜಿಕ ಮತ್ತು ಭಾಷಿಕ ಸಂದರ್ಭಗಳಲ್ಲಿಯ ಹಾಗೂ ಔಪಚಾರಿಕ, ಅನೌಪಚಾರಿಕ ಸನ್ನಿವೇಶಗಳಲ್ಲಿಯ ಭಾಷಾಬಳಕೆಯ ರೂಪಗಳನ್ನು ಸಂಗ್ರಹಿಸಬೇಕು. ಕ್ಷೇತ್ರಕರ್ತ ಸಮುದಾಯದ ಭಾಷಾಬಳಕೆಯ ಯಾವ ಸಂದರ್ಭವನ್ನೂ ಬಿಡಬಾರದು. ಭಾಷಾ ಬಳಕೆಯ ವಿಶ್ಲೇಷಣೆಯನ್ನು ಮಾಡುವಾಗ ಅವು ಒಂದಿಲ್ಲ ಒಂದು ರೀತಿಯಲ್ಲಿ ಕ್ಷೇತ್ರಕರ್ತನಿಗೆ ನೆರವಾಗುತ್ತವೆ. ಭಾಷಾಸಾಮಗ್ರಿಗಳು ಪೂರ್ಣ ಪ್ರಮಾಣದಲ್ಲಿರಬೇಕು. ಅವುಗಳನ್ನು ಸಂಗ್ರಹಿಸುವಾಗ ತೊಂದರೆಗಳು ಕಂಡುಬಂದರೆ ಅನೇಕ ಸಾಧನ-ತಂತ್ರಗಳ ಮೂಲಕ ತೊಂದರೆಗಳನ್ನು ನಿವಾರಿಸಬೇಕಾಗುತ್ತದೆ. ಕ್ಷೇತ್ರಕರ್ತ ಆ ಭಾಷಾ ಸಮುದಾಯದ ಎಲ್ಲ ಬಗೆಯ ಭಾಷಿಕ ರೂಪಗಳನ್ನು ಕಲೆ ಹಾಕುವಾಗ ಅವುಗಳ ಗುಣಮಟ್ಟವನ್ನು ಖಚಿತಪಡಿಸಲು ಪುನರಾವೃತ್ತಿ ಅತಿ ಅವಶ್ಯಕವಾಗಿರುತ್ತದೆ(ಇದರ ಬಗ್ಗೆ ಮುಂದೆ ಚರ್ಚಿಸಲಾಗಿದೆ). ಕ್ಷೇತ್ರಕಾರ್ಯದಲ್ಲಿ ಕ್ಷೇತ್ರಕರ್ತ ಬಹಳ ಜಾಣತನದಿಂದ. ಜಾಗರೂಕತೆಯಿಂದ ಅನೇಕ ಸಾಧನ-ತಂತ್ರಗಳನ್ನು ಸಂದರ್ಭೋಚಿತವಾಗಿ ಬಳಸಿ ಉತ್ತಮ ಭಾಷಾಸಾಮಗ್ರಿಗಳನ್ನು ಸಂಗ್ರಹಿಸಬೇಕಾಗುತ್ತದೆ.

ಸಾಮಗ್ರಿ ಸಂಗ್ರಹದ ಹಂತಗಳು

ಕ್ಷೇತ್ರಕಾರ್ಯ ಒಂದು ಜೀವಂತ ಕಲೆ, ಭಾಷಾ ಸಮುದಾಯದಲ್ಲಿಯ ಎಲ್ಲ ಮಾಹಿತಿಗಳನ್ನು ಕಲೆ ಹಾಕುವುದಲ್ಲ, ಕ್ಷೇತ್ರಕರ್ತನ ಅಧ್ಯಯನದ ಉದ್ದೇಶಕ್ಕೆ ಅನುಗುಣ

ವಾಗಿ ಉತ್ತಮವಾದ ಭಾಷಾಸಾಮಗ್ರಿಗಳನ್ನು ವ್ಯವಸ್ಥಿತವಾಗಿ, ಕ್ರಮಬದ್ಧವಾಗಿ ಹಾಗೂ ಯೋಜನಾಪೂರಿತವಾಗಿ ಸಂಗ್ರಹಿಸುವ ಕ್ರಿಯೆಯಾಗಿದೆ. ಈ ರೀತಿ ಸಂಗ್ರಹಿಸಲಿಕ್ಕೆ ಕ್ಷೇತ್ರಕರ್ತ ಕೆಲವು ಹಂತಗಳನ್ನು ಉಪಯೋಗಿಸಬೇಕಾಗುತ್ತದೆ. ಅವು ಸಾಮಗ್ರಿಗಳನ್ನು ಸಂಗ್ರಹಿಸುವಾಗ ಕ್ಷೇತ್ರಕರ್ತನಿಗೆ ಉತ್ತಮ ಮಾರ್ಗದರ್ಶಿಯಾಗಿವೆ. ಇವು ಇಂತಿವೆ.

ಅ. ಪೂರ್ವಸಿದ್ಧತೆ

ಕ್ಷೇತ್ರಕಾರ್ಯ ಸುಲಭ ಹಾಗೂ ಯಶಸ್ವಿಯಾಗಲು ಕ್ಷೇತ್ರಕರ್ತ ಕ್ಷೇತ್ರಕಾರ್ಯಕ್ಕೆ ಹೋಗುವ ಮುನ್ನ ಕ್ಷೇತ್ರಕಾರ್ಯದ ಸಾಮಾನ್ಯ ಹಾಗೂ ನಿರ್ದಿಷ್ಟ ಗುರಿಗಳನ್ನು ಅರಿತವನಾಗಿದ್ದು, ಆ ಸಮಯದಲ್ಲಿ ಬಳಸಬೇಕಾದ ಸಾಧನ-ತಂತ್ರಗಳ, ಕ್ಷೇತ್ರೋಪಕರಣ ಗಳ ಬಳಕೆ ಮತ್ತು ತಾನು ಉಪಯೋಗಿಸುವ ವಿಧಾನಗಳನ್ನು ತಿಳಿದವನಾಗಿರಬೇಕು. ಕ್ಷೇತ್ರದ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಅಲ್ಲಿಯ ಆಡಳಿತ ವ್ಯವಸ್ಥೆಯ ವಾಸ್ತವಿಕ ಪರಿಸ್ಥಿತಿಯ ಅರಿವಿರಬೇಕು. ಇದಕ್ಕಾಗಿ ಕ್ಷೇತ್ರಕರ್ತ ಸ್ಥಳೀಯ ವ್ಯವಹಾರಗಳನ್ನು ತಿಳಿದುಕೊಳ್ಳಲು ಸ್ಥಳೀಯ ಯೋಜನೆಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಕ್ಷೇತ್ರದ ಜನಸಾಮಾನ್ಯರ ಮನೋವೈಜ್ಞಾನಿಕ ಹಿನ್ನೆಲೆಯ ಅರಿವಿರಬೇಕು.

ಕ್ಷೇತ್ರಕರ್ತನಿಗೆ ಮೊದಲು ತನ್ನ ಅಧ್ಯಯನಕ್ಕೆ ಸಂಬಂಧಿಸಿದಂತೆ ಮಾನಸಿಕ ಪೂರ್ವ ಸಿದ್ಧತೆ ಇರಬೇಕು. ಸಾಮಗ್ರಿಗಳನ್ನು ಹೊರತೆಗೆಯುವಾಗ ನಿರೂಪಕರಿಗೆ ಪ್ರೇರಣೆ ಯನ್ನುಂಟು ಮಾಡಿ ಅವರನ್ನು ಮಾನಸಿಕವಾಗಿ ಸಿದ್ಧವಾಗಿಸುವ ಕಲೆಯು ಕ್ಷೇತ್ರಕರ್ತನಿಗೆ ತಿಳಿದಿರಬೇಕು. ಅದರ ಜೊತೆಗೆ ಕ್ಷೇತ್ರದ ಭೌತಿಕ ಪರಿಸರಗಳ ಬಗ್ಗೆ ಕೆಲ ಅಂಶಗಳನ್ನು ತಿಳಿದವನಾಗಿರಬೇಕಲ್ಲದೆ ತಾನು ಹೋಗಬೇಕಾದ ಕ್ಷೇತ್ರದ ವಾಹನ ಸೌಕರ್ಯ, ವಾಸಸ್ಥಳ, ಮೊದಲು ಯಾರನ್ನು ಭೇಟಿಯಾಗಬೇಕು ಮೊದಲಾದ ವಿಷಯಗಳ ಬಗ್ಗೆ ಪೂರ್ವ ತಯಾರಿ ಮಾಡಿಕೊಂಡಿರಬೇಕು. ಇದಕ್ಕಾಗಿ ಕ್ಷೇತ್ರಕರ್ತ ಸಮೀಕ್ಷಾ ಯೋಜನೆಯೊಂದನ್ನು ರೂಪಿಸಿಕೊಳ್ಳುವುದು ಒಳ್ಳೆಯದು. ನಂತರ ಮೊದಲೇ ಹೇಳಿದಂತೆ ಭಾಷಾವೈಜ್ಞಾನಿಕ ಕ್ಷೇತ್ರಗಳ ಪುಸ್ತಕ, ಕೈಪಿಡಿಗಳು, ನಿಯತಕಾಲಿಕೆಗಳು, ಪತ್ರಿಕೆಗಳನ್ನು ಜೋಡಿಸಿಕೊಳ್ಳಬೇಕು.

ಕ್ಷೇತ್ರಕಾರ್ಯ ಯಾವ ರೀತಿಯಾಗಿ ಮಾಡಬೇಕು? ಕ್ಷೇತ್ರದಲ್ಲಿಯ ಭಾಷಿಕರನ್ನು, ನಿರೂಪಕರನ್ನು ಹಾಗೂ ಅಲ್ಲಿಯ ಸಂಪನ್ಮೂಲಗಳನ್ನು ಯಾವ ರೀತಿಯಾಗಿ ಬಳಸಿ ಕೊಳ್ಳಬೇಕು? ಕ್ಷೇತ್ರಕಾರ್ಯದ ಸಮಯದಲ್ಲಿ ಯಾವ ಯಾವ ಸಮಸ್ಯೆಗಳು ಉಂಟಾಗ ಬಹುದು? ಈ ಎಲ್ಲ ವಿಷಯಗಳನ್ನು ಒಳಗೊಂಡಂತೆ ಪೂರ್ಣ ಯೋಜನೆಯನ್ನು ಕ್ಷೇತ್ರಕರ್ತ ಹಾಕಿಕೊಳ್ಳಬೇಕು. ಅದರಂತೆ ಕ್ಷೇತ್ರದಲ್ಲಿ ಉತ್ತಮ ವಾತಾವರಣ ಸೃಷ್ಟಿಸಿ ಕೊಳ್ಳಲು, ಅನಾವಶ್ಯಕ ವಿಷಯಗಳನ್ನು ಕಡಿಮೆಗೊಳಿಸಿ, ಉತ್ತಮವಾದ ಭಾಷಾ ಸಾಮಗ್ರಿಗಳನ್ನು ಸಂಗ್ರಹಿಸುವಾಗ ಕ್ಷೇತ್ರಕಾರ್ಯದ ಎಲ್ಲ ಕಾರ್ಯಕಲಾಪಗಳು ಯಶಸ್ವಿ

ಯಾಗಲು ಕ್ಷೇತ್ರಕಾರ್ಯಕ್ಕೆ ಹೊರಟುನಿಂತ ಕ್ಷೇತ್ರಕರ್ತ ಪೂರ್ವಸಿದ್ಧತೆಯನ್ನು ಮಾಡಿ ಕೊಳ್ಳುವುದು ಅವಶ್ಯ. ಯುದ್ಧಕ್ಕೆ ಹೊರಟುನಿಂತ ಯೋಧನಂತೆ ಕ್ಷೇತ್ರಕರ್ತ ಇರಬೇಕು.

ಅ. ಸಾಮಗ್ರಿಗಳ ಬೆಳವಣಿಗೆ

ಸಾಮಗ್ರಿ ಸಂಗ್ರಹದಲ್ಲಿ ಇದು ಎರಡನೆಯ ಮೆಟ್ಟಿಲಾಗಿದೆ. ಸಾಮಗ್ರಿಗಳ ಸಂಗ್ರಹ ಇಲ್ಲಿ ಸಾಂಗವಾಗಿ ಜರುಗುತ್ತದೆ. ಕ್ಷೇತ್ರಕರ್ತ ತಾನು ಹಾಕಿಕೊಂಡ ಪೂರ್ವಯೋಜನೆಯನ್ನು ಇಲ್ಲಿ ಕಾರ್ಯರೂಪಕ್ಕೆ ತರುತ್ತಾನೆ. ತನ್ನ ಅಧ್ಯಯನದ ಉದ್ದೇಶವನ್ನು ಸಮುದಾಯದ ಸದಸ್ಯರಿಗೆ ತಿಳಿಸಿ ಅವರ ಗಮನವನ್ನು ತನ್ನೆಡೆಗೆ ಸೆಳೆದುಕೊಳ್ಳಬೇಕು. ಈ ವೇಳೆಯಲ್ಲಿ ಕ್ಷೇತ್ರಕರ್ತ ತನ್ನ ಜಾಣ್ಮೆ, ಕುಶಲತೆ ಪ್ರದರ್ಶಿಸಬೇಕಾಗುತ್ತದೆ. ಈ ಹಂತದಲ್ಲಿ ಭಾಷಾಸಮುದಾಯಕ್ಕೆ ಸಂಬಂಧಪಟ್ಟಂತೆ ಬೆಳವಣಿಗೆಯ ಪ್ರಶ್ನೆಗಳನ್ನು ಹಾಕಿ ನಿರೂಪಕರು ಉತ್ತರಿಸುವಂತೆ ಪ್ರಚೋದಿಸಬೇಕು. ನಿರೂಪಕರೊಡನೆ ಮುಕ್ತ ಚರ್ಚೆ, ವಿಚಾರವಿನಿಮಯದ ಕಾರ್ಯ ಇಲ್ಲಿ ಸಾಗುತ್ತದೆ. ನಿರೂಪಕರ ಸಲಹೆ ಸೂಚನೆಗಳಿಗೂ ಅವಕಾಶವಿರಬೇಕು. ಇದೇ ವೇಳೆಯಲ್ಲಿಯೆ ಸಂಗ್ರಹಾಲಯಗಳನ್ನು, ಗ್ರಂಥಾಲಯಗಳನ್ನು ಕ್ಷೇತ್ರಕರ್ತ ಬಳಸಿಕೊಳ್ಳಬೇಕಾಗುತ್ತದೆ.

ಭಾಷಾಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳಲ್ಲಿ ಭಾಷೆ ಬಳಕೆಯಾಗುವಾಗ ಭಾಷಾದತ್ತಗಳು ಸ್ವಾಭಾವಿಕವಾಗಿ ಬರುವಂತೆ ಸಂಗ್ರಹಿಸಬೇಕಾಗುತ್ತದೆ. ನಿರೂಪಕರು ಅತಿ ಸಾವಕಾಶವಾಗಿ ಮಾತನಾಡುವುದರಿಂದ ಅಥವಾ ಜೋರಾಗಿ ಮಾತನಾಡುವುದರಿಂದ ಬಹಳ ಸಂದಿಗ್ಧತೆ ಉಂಟಾಗುತ್ತದೆ. ಸಾಮಾನ್ಯವಾಗಿ, ಸಹಜವಾಗಿ ಮಾತನಾಡುವುದರಿಂದ ಆ ಭಾಷೆಯ ಸ್ವಾಭಾವಿಕ ಅಂಶಗಳು ಗೋಚರಿಸುತ್ತವೆ. ವಿರಾಮ, ಕಾಲಾವಧಿ, ಅಕ್ಷರ ಮುಂತಾದವುಗಳನ್ನು ಗಮನದಲ್ಲಿಟ್ಟುಕೊಂಡು ಆ ಭಾಷಾ ಸಮುದಾಯದ ಸ್ವರೂಪಕ್ಕೆ ಅನುಗುಣವಾಗಿ ಭಾಷಾದತ್ತಗಳನ್ನು ಸಂಗ್ರಹಿಸುವುದು ಕ್ಷೇತ್ರಕಾರ್ಯದಲ್ಲಿ ಬಹಳ ಮುಖ್ಯ.

ಇ. ಆಲೇಖಿಸುವುದು

ನಿರೂಪಕರು ಉಚ್ಚರಿಸಿದ ಭಾಷಾಘಟಕಗಳನ್ನು ಅವರು ಉಚ್ಚರಿಸುವಾಗ ಅವರು ಬಳಸಿದ ಕರಣ, ಸ್ಥಾನ ಹಾಗೂ ಅವರ ಉಚ್ಚಾರಣೆಯ ರೀತಿಯನ್ನು ಆಧರಿಸಿ ಅಂತಾರಾಷ್ಟ್ರೀಯ ಧ್ವನಿಪಟ್ಟಿಯ ಸಂಕೇತಗಳ ಸಹಾಯದಿಂದ ಆಲೇಖಿಸಿಕೊಳ್ಳಬೇಕು. ನಿರೂಪಕರು ಉಚ್ಚರಿಸಿದ ಉಚ್ಚಾರಣೆಯ ಸೂಕ್ಷ್ಮ ಅಂಶಗಳನ್ನು ಬಿಡದಂತೆ ಆಲೇಖಿಸಿ ಕೊಳ್ಳಬೇಕು. ಇಂತಹ ವೇಳೆಯಲ್ಲಿ ಕ್ಷೇತ್ರಕರ್ತ ತನ್ನ ಸ್ವಭಾಷೆಯ ಅಂಶಗಳು ಅಲ್ಲಿ ಸೇರದಂತೆ ಎಚ್ಚರಿಕೆ ವಹಿಸಬೇಕು. ಭಾಷಾಸಾಮಗ್ರಿಗಳನ್ನು ಮೊದಲು ನೋಟ್‌ಬುಕ್‌ದಲ್ಲಿ ಪೆನ್ಸಿಲ್(ಸೀಸ) ಸಹಾಯದಿಂದ ಬರೆದಿಟ್ಟುಕೊಳ್ಳುವುದು ಉತ್ತಮ. ನಂತರ ಒಂದೊಂದು ದತ್ತಾಂಶದ ಬಗ್ಗೆ ಪ್ರತ್ಯೇಕವಾಗಿ ಕಾರ್ಡ್(ಪಟ್ಟಿ)ಗಳಲ್ಲಿ ಬರೆಯುತ್ತ ಹೋಗಬೇಕು.

ಉದಾ.:

ಅ ನಂ.	ಧ್ವನ್ಯಾಲೇಖ	ಧ್ವನಿಮಾಲೇಖ
1	h [P in]	/ Pin /

ಅ ನಂ.	ಧ್ವನ್ಯಾಲೇಖ	ಧ್ವನಿಮಾಲೇಖ
2	h [8 in]	/ thin /

ಸಾಂಪ್ರದಾಯಕ ಲಿಪಿಯಿಂದ ಬೇರ್ಪಡಿಸಿ ತೋರಿಸಲು ಧ್ವನ್ಯಾಲೇಖಕ್ಕೆ [ ] ಈ ರೀತಿ, ಧ್ವನಿಮಾಲೇಖಕ್ಕೆ / / ಈ ರೀತಿಯ ಗೆರೆಗಳನ್ನು ಉಪಯೋಗಿಸಬೇಕು. ಆ ಪಟ್ಟಿಗಳ ಹಿಂದೆ ಆ ಪದಗಳು ಎಷ್ಟು ಸಾರಿ ಬಂದಿವೆ ಎಂಬುದನ್ನು ರೋಮನ್ ಸಂಖ್ಯೆಯಲ್ಲಿ ಬರೆಯಬೇಕು. ಪಟ್ಟಿಗಳು ಸಾಮಾನ್ಯವಾಗಿ 5.5 X 3.5 ಅಥವಾ 4 X 6 ಅಳತೆಯಲ್ಲಿರಬೇಕು. ಆ ಪಟ್ಟಿಯ ಹಿಂದೆ ದಾಖಲಿಸಿದ ಪದ/ವಾಕ್ಯ ಯಾವ ಆಕರದಿಂದ ತೆಗೆದುಕೊಂಡಿದ್ದೇವೆ ಎಂಬುದನ್ನು ತಪ್ಪದೆ ಗುರುತಿಸಿಕೊಳ್ಳಬೇಕು. ಭಾಷಾ ಸಾಮಗ್ರಿಗಳಲ್ಲಿರುವ ನಾಮಪದ, ಕ್ರಿಯಾಪದ ವಿಶ್ಲೇಷಣೆಗಳು ಇತರ ವ್ಯಾಕರಣ ವರ್ಗ ಗಳಿಗೆ ಸಂಬಂಧಪಟ್ಟಂತೆ ಬಣ್ಣದ ಕಾರ್ಡುಗಳನ್ನು ಉಪಯೋಗಿಸುವುದು ಒಳ್ಳೆಯದು. ಮುಂದೆ ಕ್ಷೇತ್ರಕರ್ತನಿಗೆ ಸಾಮಗ್ರಿಗಳನ್ನು ವರ್ಗೀಕರಿಸಲಿಕ್ಕೆ, ಸಂಯೋಜಿಸಲಿಕ್ಕೆ ತುಂಬ ಅನುಕೂಲವಾಗುತ್ತದೆ.

ಅಂತಾರಾಷ್ಟ್ರೀಯ ಧ್ವನ್ಯಾಲೇಖದಲ್ಲಿ ಆಲೇಖಿಸುವುದು ಕಷ್ಟದ ಕೆಲಸದ್ದು. ರೂಢಿಯಾಗುತ್ತ ಹೋದರೆ ಕಷ್ಟವಾಗುವುದಿಲ್ಲ. ಕ್ಷೇತ್ರಕರ್ತ ಬೇಸರಿಸದೆ ಶ್ರದ್ಧೆ, ತಾಳ್ಮೆಯಿಂದ ಈ ಕೆಲಸವನ್ನು ಮಾಡಬೇಕಾಗುತ್ತದೆ. ನಿರೂಪಕರ ಉಚ್ಚಾರಣೆಗೂ, ಲಿಪಿಗೂ ಅನುರೂಪತೆಯನ್ನು ತರುವುದೇ ಆಲೇಖದ ಮುಖ್ಯ ಉದ್ದೇಶವಾಗಿದೆ. ಅಲ್ಲದೆ ಕ್ಷೇತ್ರಕರ್ತನ ಸಾಮಗ್ರಿಗಳ ದಾಖಲೀಕರಣವೂ ವೈಜ್ಞಾನಿಕವಾಗುತ್ತದೆ.

ಈ. ಪುನರಾವರ್ತನೆ

ಪುನರಾವರ್ತನೆಯ ಮುಖ್ಯ ಉದ್ದೇಶ ಸಾಮಗ್ರಿ ಸಂಗ್ರಹದಲ್ಲಿ ಆಗಿರುವ ಲೋಪ ದೋಷಗಳನ್ನು ತಿದ್ದಿ ಸರಿಪಡಿಸಿಕೊಳ್ಳುವುದು. ನಿರೂಪಕರಿಗೆ ಕೆಲವು ಪ್ರಶ್ನೆಗಳನ್ನು ಕೇಳುವುದರ ಮೂಲಕ ಈ ಕಾರ್ಯ ಮಾಡಬಹುದು. ಭಾಷೆಯ ಎಲ್ಲ ವ್ಯಾಕರಣಾಂಶ ಗಳು ಆ ಭಾಷೆಯಲ್ಲಿ ಇರುವಂತೆ ಬಂದಿರುವುವೊ ಇಲ್ಲವೊ ಎಂಬುದರ ಬಗ್ಗೆ ವಿವೇಚಿಸಲು ಮತ್ತು ಧ್ವನಿಮಾಗಳನ್ನು, ಆಕೃತಿಮಾಗಳನ್ನು ಗುರುತಿಸುವಾಗ ವೈದೃಶ್ಯ.

ಪೂರಕ, ಸ್ವಚ್ಛಂದ ಪರಿವರ್ತನೆಗಳಲ್ಲಿ ವಿವರಿಸುವಾಗ ಆ ಭಾಷೆಯ ಎಲ್ಲ ಭಾಷಿಕ ಅಂಶಗಳು ವಸ್ತುನಿಷ್ಠವಾಗಿವೆಯೋ ಇಲ್ಲವೋ ಎಂಬುದನ್ನು ನೋಡಿ ದಾಖಲಿಸಲು ಪುನರವಲೋಕನ ಅತ್ಯಾವಶ್ಯವಾಗಿದೆ.

ಉ. ತಪಾಸಣೆ

ಕ್ಷೇತ್ರಕರ್ತನ ಸಾಮಗ್ರಿ ಸಂಗ್ರಹ ಯಾವ ರೀತಿಯಾಗಿ ನಡೆಯಿತು? ಕ್ಷೇತ್ರಕರ್ತನ ಗುರಿಗಳು ಎಷ್ಟರಮಟ್ಟಿಗೆ ಸಫಲವಾಗಿವೆ? ಎಂಬುದನ್ನು ನಿರ್ಧರಿಸುವ ಕಾರ್ಯದ ಮೌಲ್ಯಮಾಪನ ಮಾಡುವುದೇ ತಪಾಸಣೆಯಾಗಿದೆ. ಕ್ಷೇತ್ರಕರ್ತನ ಸ್ವಭಾಷೆಯ ಪ್ರಭಾವ ದಿಂದಲೋ ಅಥವಾ ತಪ್ಪು ಕಲ್ಪನೆಗಳಿಂದಲೋ ಸಾಮಗ್ರಿಗಳನ್ನು ಸಂಗ್ರಹಿಸುವಾಗ ಅನೇಕ ದೋಷಗಳು ಉಂಟಾಗುತ್ತವೆ. ಅವುಗಳ ನಿರವಾರಣೆಗಾಗಿ ಎಚ್ಚರಿಕೆಯಿಂದ ತಪಾಸಣೆ ಮಾಡಬೇಕಾಗುತ್ತದೆ. ಗೊಂದಲವನ್ನುಂಟು ಮಾಡುವ ಸಾಮಗ್ರಿಗಳನ್ನು ಸಾರಾಸಾರವಾಗಿ ವಿಚಾರಿಸಿ ಒಂದು ಪ್ರತ್ಯೇಕ ಫೈಲ್‌ನಲ್ಲಿ ಇಡಬೇಕಾಗುತ್ತದೆ. ಸಂಗ್ರಹದಲ್ಲಿ ಕಂಡುಬರುವ ಸಂಧಿ ಬದಲಾವಣೆ, ಧ್ವನಿ ಬದಲಾವಣೆ ಮುಂತಾದವುಗಳನ್ನು ಸೂಕ್ಷ್ಮವಾಗಿ ನೋಡಬೇಕು. ಇದರಿಂದ ಆ ಭಾಷೆಯ ವಾಸ್ತವಾಂಶಗಳನ್ನು ಸಂಗ್ರಹಿಸಿ ದಂತಾಗುತ್ತದೆ. ಭಾಷಾಸಾಮಗ್ರಿಗಳನ್ನು ತಪಾಸಣೆ ಮಾಡುವುದರಿಂದ ಮುಂದೆ ಭಾಷಾ ವಿಶ್ಲೇಷಣೆಯ ಕಾರ್ಯ ಸುಲಭವಾಗುವುದು ಮತ್ತು ಸಮಂಜಸವಾಗುವುದು. ಕ್ಷೇತ್ರ ಕಾರ್ಯದ ಸರ್ವ ಕಾರ್ಯಗಳ ಮೌಲ್ಯ ನಿಷ್ಕರ್ಷಿಸಿ ಉತ್ತಮವಾದ ಭಾಷಾ ಸಂಶೋಧನೆಗೆ ಅವಕಾಶ ಕಲ್ಪಿಸುವುದೇ ತಪಾಸಣೆಯ ಉದ್ದೇಶವಾಗಿದೆ. ಕ್ಷೇತ್ರಕರ್ತ ಈ ಕಾರ್ಯವನ್ನು ತುಂಬ ಜಾಗರೂಕತೆಯಿಂದ ಮಾಡಬೇಕಾಗುತ್ತದೆ.

ಊ. ಇನ್ನೂ ಕೆಲವು ಹಂತಗಳು

ಕ್ಷೇತ್ರಕರ್ತ ನಿರೂಪಕರಿಂದ ಮಾಹಿತಿಗಳನ್ನು ತೆಗೆದುಕೊಳ್ಳಬೇಕಾದರೆ ಕೆಲವು ಹಂತಗಳು ಬಹಳ ಉಪಯುಕ್ತವಾಗಿವೆ. ಭಾಷಾಸಾಮಗ್ರಿಗಳನ್ನು ವಿಶ್ಲೇಷಿಸುವ ಉಪಭಾಷೆ ಯಿಂದ ಉದ್ದಿಷ್ಟ ಭಾಷೆಗೆ ರೂಪಾಂತರಿಸುವಾಗ-Revers translation elicitation ಉಪಯೋಗವಾದರೆ, ಧ್ವನಿಮಾ ವಿಶ್ಲೇಷಣೆಯಲ್ಲಿ, ಧ್ವನಿಮಾಗಳ ಪರಿಸರವನ್ನು ಗುರುತಿಸುವಲ್ಲಿ Substitution elicitation ಉಪಯೋಗವಾಗುತ್ತದೆ. ಕ್ಷೇತ್ರಕರ್ತ ಸಂಗ್ರಹಿಸಿದ ಭಾಷಾಸಾಮಗ್ರಿಗಳಲ್ಲಿ ಕೆಲವೊಂದು ತಪ್ಪುಗಳಾಗಿದ್ದರೆ ನಿರೂಪಕರ ಸಹಾಯ ದಿಂದ ಪುನರಾವರ್ತಿಸಿ ಸರಿಪಡಿಸಿಕೊಳ್ಳುವಾಗ Corrective elicitation ಸಹಾಯಕ್ಕೆ ಬರುತ್ತದೆ. ಕ್ಷೇತ್ರದಲ್ಲಿ ದೊರೆಯುವ ಪಠ್ಯಸಾಮಗ್ರಿಯನ್ನು ಪಡೆಯುವಲ್ಲಿ ಮತ್ತು ವಿಶ್ಲೇಷಣೆಯ ವೇಳೆಯಲ್ಲಿ ಆಕೃತಿಮಾ ಮತ್ತು ವಾಕ್ಯರಚನೆಯ ಹಂತಗಳಲ್ಲಿ Ancillary elicitation ತುಂಬ ಉಪಯುಕ್ತವಾಗುತ್ತದೆ. ಒಂದು ವಿಷಯವನ್ನು ಬೇರೆ ಬೇರೆ ರೀತಿಯಲ್ಲಿ ಹೇಳುವಾಗ ಮತ್ತು ಒಂದು ಸಂದರ್ಭದಲ್ಲಿ ಬಳಕೆಯಾದ ವಾಕ್ಯಗಳನ್ನು ಕ್ರಮಬದ್ಧವಾಗಿ ಬರುವಂತೆ ದಾಖಲಿಸುವಾಗ Paraphrasing ಉಪಯೋಗವಾಗುತ್ತದೆ.

ಕ್ಷೇತ್ರಕರ್ತ ನಿವೇದಕರಿಂದ ಭಾಷಾರೂಪಗಳನ್ನು ಪಡೆದುಕೊಂಡು ಅವುಗಳನ್ನು ಧ್ವನಿ ಲಿಪಿಯಲ್ಲಿ ದಾಖಲಿಸಿಕೊಳ್ಳುತ್ತಾನೆ. ಅವುಗಳನ್ನು ಬರೆಹದ ಭಾಷೆಯಲ್ಲಿ ಪರಿವರ್ತನೆ ಮಾಡಿಕೊಳ್ಳುವಾಗ Convert eliciation ಅನುಕೂಲವಾಗುತ್ತದೆ. ಸಾಮಗ್ರಿಗಳನ್ನು ಪಡೆಯುವಾಗ ಕ್ಷೇತ್ರಕರ್ತ ಆಯಾ ಸಂದರ್ಭಕ್ಕೆ ತಕ್ಕಂತೆ ಮೇಲಿನ ಕೆಲವು ಹಂತಗಳನ್ನು ಜಾಗರೂಕತೆಯಿಂದ ಉಪಯೋಗಿಸಬೇಕಾಗುತ್ತದೆ.

ಸಾಮಗ್ರಿಗಳ ಗಾತ್ರ

ಕ್ಷೇತ್ರಕಾರ್ಯದಲ್ಲಿ ಕ್ಷೇತ್ರಕರ್ತ ಅನೇಕ ಸಾಧನ ತಂತ್ರಗಳನ್ನು ಉಪಯೋಗಿಸಿ ಸಾಮಗ್ರಿಗಳನ್ನು ಸಂಗ್ರಹಿಸುತ್ತಾನೆ. ಕ್ಷೇತ್ರಕರ್ತನಿಗೆ ಬೇಕಾದ ಸಾಮಗ್ರಿಗಳಿಗಿಂತಲೂ ಹೆಚ್ಚಿನ ಸಾಮಗ್ರಿಗಳು ಸಂಗ್ರಹವಾಗಿದ್ದರೆ, ಕ್ಷೇತ್ರಕಾರ್ಯದ ಉದ್ದೇಶ, ವ್ಯಾಪ್ತಿ ಮತ್ತು ಅವಶ್ಯಕತೆಗೆ ಅನುಗುಣವಾಗಿ ಹಾಗೂ ಭಾಷಾಸಾಮಗ್ರಿಗಳ ಅರ್ಹತೆ, ಅನುರೂಪತೆಗೆ ತಕ್ಕಂತೆ ಸಾಮಗ್ರಿಗಳ ಗಾತ್ರವನ್ನು ಮಿತಗೊಳಿಸಬೇಕು. ಸಂಗ್ರಹಿಸಿದ ಸಾಮಗ್ರಿಗಳಲ್ಲಿ ಯಾವ ಸಾಮಗ್ರಿಗಳು ನಿರೀಕ್ಷಿತ ಫಲ ಕೊಡುವುದಿಲ್ಲವೋ, ಕ್ಷೇತ್ರಕರ್ತನಿಗೆ ಅನೇಕ ಸಮಸ್ಯೆಗಳನ್ನು ಉಂಟು ಮಾಡುತ್ತವೆಯೋ ಅವು ಉಪಯುಕ್ತ ಸಾಮಗ್ರಿಗಳಲ್ಲವೆಂದು ತಿಳಿದು ಅವುಗಳನ್ನು ಮಿತಗೊಳಿಸುವುದು ಅಥವಾ ಅವುಗಳನ್ನು ತೆಗೆದು ಒಂದೆಡೆ ಫೈಲ್ ಮಾಡಿ ಇಡುವುದು ಒಳ್ಳೆಯದು. ಮಿತಗೊಳಿಸುವಾಗ ಇನ್ನೊಂದು ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಕ್ಷೇತ್ರಕರ್ತ ನಿರೂಪಕರೊಡನೆ ಮುಖಾಮುಖಿಯಾಗಿ ಚರ್ಚಿಸಿಯೇ ಭಾಷಾ ಸಾಮಗ್ರಿಗಳನ್ನು ಮಿತಗೊಳಿಸಬೇಕು. ಆ ಸಮಯದಲ್ಲಿ ಟೇಪ್‌ರಿಕಾರ್ಡರ್, ಆ ಸಮುದಾಯದ ಬಗ್ಗೆ ದೊರೆಯುವ ಪಠ್ಯಗಳನ್ನು (ಸಂಬಂಧಪಟ್ಟ ಸಾಹಿತ್ಯ) ಉಪಯೋಗಿಸಬೇಕು. ಸಾಮಗ್ರಿಗಳ ಗಾತ್ರವು ಕ್ಷೇತ್ರಕರ್ತ ಸಂಗ್ರಹಿಸಿದ ಸಂಗ್ರಹಣೆಯನ್ನು, ಆ ಭಾಷಾ ಸಮುದಾಯವನ್ನು ಮತ್ತು ಆ ಭಾಷೆಯನ್ನು ಅವಲಂಬಿಸಿರುತ್ತದೆ.

ವಿಶ್ಲೇಷಣೆ

ಸಾಮಗ್ರಿಗಳನ್ನು ಸಂಗ್ರಹಿಸಿದ ನಂತರ ಕ್ಷೇತ್ರಕರ್ತ ಸಮುದಾಯದ ಸದಸ್ಯರಿಗೆ ಮತ್ತು ನಿರೂಪಕರಿಗೆ ಕೃತಜ್ಞತೆಗಳನ್ನು ಹೇಳಿ, ತಾನು ಯಾವ ಸಂಸ್ಥೆಯ ವತಿಯಿಂದ ಕ್ಷೇತ್ರಕಾರ್ಯಕ್ಕೆ ಹೊರಟಿದ್ದನೋ ಮರಳಿ ಆ ಸಂಸ್ಥೆಗೆ ಹೋಗಬೇಕು. ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿಗಳನ್ನು ವ್ಯವಸ್ಥಿತವಾಗಿ ಒಂದೆಡೆ ಫೈಲ್ ಮಾಡಿ ಇಡಬೇಕು, ನಂತರ ಆ ಭಾಷಾ ಸಮುದಾಯಕ್ಕೆ ಸಂಬಂಧಪಟ್ಟ ಬರಹದ-ಸಾಹಿತ್ಯದ ಮೂಲಕವೋ ಮಾಹಿತಿಗಳನ್ನು ಕಲೆ ಹಾಕಬೇಕು. ಕ್ಷೇತ್ರಕರ್ತ ತಾನು ಆರಿಸಿಕೊಂಡ ಭಾಷಾ ಸಮುದಾಯಕ್ಕೆ ಸಂಬಂಧಪಟ್ಟ ಸಾಹಿತ್ಯವನ್ನೂ ದುಂಬಿಯಂತೆ ಶೋಧಿಸಬೇಕು. ಹೆಚ್ಚು ಹೆಚ್ಚು ಸಾಮಗ್ರಿಗಳಿದ್ದರೆ ವಿಶ್ಲೇಷಣೆ ಸಮಂಜಸವಾಗುತ್ತದೆ. ಕ್ಷೇತ್ರಕರ್ತನ ಅಧ್ಯಯನಕ್ಕೆ

ನೆರವಾಗುವ ಸಹಾಯಕ ಸಾಹಿತ್ಯಗಳೆಂದರೆ ಪುಸ್ತಕ, ನಿಯತಕಾಲಿಕೆ, ವಿಶ್ವಕೋಶಗಳು, ನಿಘಂಟುಗಳು ಮತ್ತು ಪತ್ರಿಕೆಗಳು ಮುಂತಾದವು. ಅವು ಆಯ್ದುಕೊಂಡ ವಿಷಯಕ್ಕೆ ಸಾಕಷ್ಟು ಮಾಹಿತಿಗಳನ್ನು ಕೊಡುತ್ತವೆ. ಕ್ಷೇತ್ರಕರ್ತ ವಿಶ್ಲೇಷಿಸುವಾಗ, ಭಾಷಿಕ ಸಮಸ್ಯೆಗಳನ್ನು ಬಿಡಿಸುವಾಗ, ಹೊಸ ಹೊಸ ಸಿದ್ಧಾಂತಗಳನ್ನು ರೂಪಿಸಿ, ಸೂಕ್ತ ಯೋಜನೆ ತಯಾರಿಸಿಕೊಳ್ಳಲು ಸಂಬಂಧಪಟ್ಟ ಸಾಹಿತ್ಯದ ಅಧ್ಯಯನ ತುಂಬ ಅವಶ್ಯಕ.

ಕ್ಷೇತ್ರಕರ್ತನು ಕ್ಷೇತ್ರದ ಕಾರ್ಯದಿಂದ ಸಂಗ್ರಹಿಸಿದ ಸಾಮಗ್ರಿಗಳನ್ನು ಮತ್ತು ಸಹಾಯಕ ಸಾಹಿತ್ಯಗಳಿಂದ ಸಂಗ್ರಹಿಸಿದ ಸಾಮಗ್ರಿಗಳನ್ನು ವ್ಯವಸ್ಥಿತವಾಗಿ ಸಂಕಲಿಸಿ, ಸಂಯೋಜಿಸುವಾಗಲೇ ಅವನ ಮನಸ್ಸಿನಲ್ಲಿ ವಿಶ್ಲೇಷಣೆಯ ವಿಚಾರಗಳು ಬರುತ್ತಿರುತ್ತವೆ. ಕ್ಷೇತ್ರಕಾರ್ಯದಲ್ಲಿ ಮೊದಲನೆಯ ಹಂತ ಸಾಮಗ್ರಿ ಸಂಗ್ರಹವಾದರೆ, ಎರಡನೆಯ ಹಂತ ವಿಶ್ಲೇಷಣೆಯಾಗಿದೆ. ಆ ಭಾಷಾಸಮುದಾಯದ ಸ್ವರೂಪವನ್ನು ವಸ್ತುನಿಷ್ಠವಾಗಿ ವಿವರಿಸಿ, ಸಮಸ್ಯೆಗಳಿದ್ದರೆ ಸೂಕ್ತ ಪರಿಹಾರ ಕಂಡುಹಿಡಿಯುವ ಪ್ರಯತ್ನ ಇಲ್ಲಿ ನಡೆಯುತ್ತದೆ. ಇಲ್ಲಿ ಭಾಷಾ ಸಮುದಾಯದ ಭಾಷಾಸ್ವರೂಪವನ್ನು ಕಂಡು ಹಿಡಿಯುವುದರ ಜೊತೆಗೆ ಈಗಾಗಲೇ ಆ ಸಮುದಾಯದ ಬಗ್ಗೆ ಕೆಲಸ ನಡೆದಿದ್ದರೆ ಅವುಗಳ ಪರಿಶೀಲನೆಯೂ ನಡೆಯುತ್ತದೆ.

ಕ್ಷೇತ್ರಕರ್ತನ ಮುಂದೆ ಸಾಮಗ್ರಿಗಳ ರಾಶಿಯೇ ಇರುತ್ತದೆ. ತನ್ನ ಮಾರ್ಗದರ್ಶಕರೊಡನೆ, ಅವರ ಸಲಹೆ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು, ಆ ಭಾಷಾ ಸಮುದಾಯದ ಭಾಷೆಯನ್ನು ವಿಶ್ಲೇಷಿಸಲು ತೊಡಗಬೇಕು. ಮೊದಲು ಸಾಮಗ್ರಿಗಳನ್ನು ಸಂಯೋಜಿಸಬೇಕು. ಒರೆಗಚ್ಚಿ ನೋಡಬೇಕು. ಅಧ್ಯಯನಕ್ಕೆ ಅನವಶ್ಯಕವಾದ ಸಾಮಗ್ರಿಗಳನ್ನು ತ್ಯಜಿಸಿಬಿಡಬೇಕು. ವಿಶ್ಲೇಷಿಸುವಾಗ ಊಹೆ, ಸಂಶೋಧನೆಯ ನಕ್ಷೆ ಮುಂತಾದವುಗಳ ಮೂಲಕ ಸಂಶೋಧನೆಯ ರೂಪುರೇಷೆ ಹಾಕಿಕೊಳ್ಳಬೇಕು. ವಿಶ್ಲೇಷಿಸುವಾಗ ಕ್ಷೇತ್ರಕರ್ತ ತನ್ನ ಸ್ವಭಾಷೆಯ ಪ್ರಭಾವವಾಗದಂತೆ ತುಂಬ ಎಚ್ಚರಿಕೆ ಮತ್ತು ಜಾಗರೂಕತೆಯಿಂದಿರಬೇಕಾಗುತ್ತದೆ. ಕ್ಷೇತ್ರಕರ್ತನ ಉದ್ದೇಶ ವರ್ಣನಾತ್ಮಕವಾಗಿದ್ದರೆ ವರ್ಣನಾತ್ಮಕ ಭಾಷಾವಿಜ್ಞಾನದ ತತ್ವಗಳ ಹಿನ್ನೆಲೆಯಲ್ಲಿ, ಸಾಮಾಜಿಕ ವಿಶ್ಲೇಷಣೆಯಾಗಿದ್ದರೆ ಸಾಮಾಜಿಕ ಭಾಷಾವಿಜ್ಞಾನದ ತತ್ವಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಬೇಕು. ಹೊಸ ಹೊಸ ಚಿಂತನೆಗಳನ್ನು ಗಮನದಲ್ಲಿಟ್ಟುಕೊಂಡಿರಬೇಕು. ವಿಶ್ಲೇಷಿಸುವಾಗ ಆಯಾ ಸಂದರ್ಭಕ್ಕೆ ತಕ್ಕಂತೆ ಮೂಲ ಸಂಶೋಧನೆ, ಆನ್ವಯಿಕ ಸಂಶೋಧನೆ, ಕ್ರಿಯಾತ್ಮಕ ಮತ್ತು ವರ್ಣನಾತ್ಮಕ ಸಂಶೋಧನೆಯ ವಿಧಾನಗಳನ್ನು ಅಳವಡಿಸಿಕೊಳ್ಳುವ ರೀತಿಯನ್ನು ಅವನು ತಿಳಿದವನಾಗಿರಬೇಕು.

ಅಧ್ಯಯನದ ಸ್ವರೂಪಕ್ಕೆ ಅನುಗುಣವಾಗಿ ಕ್ಷೇತ್ರಕರ್ತ ವಿಷಯವನ್ನು ಐದು ಅಥವಾ ಆರು ಅಧ್ಯಾಯಗಳಾಗಿ ವಿಭಜಿಸಿಕೊಳ್ಳಬೇಕು. ಒಂದೊಂದು ಅಧ್ಯಾಯದಲ್ಲಿಯೂ ಮತ್ತೆ ವಿಭಾಗಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಇದರಿಂದ ಔಚಿತ್ಯಪೂರ್ಣವಾಗಿ ವಿಶ್ಲೇಷಿಸಲು ಅನುಕೂಲವಾಗುವುದು. ಕ್ಷೇತ್ರಕರ್ತ ವಿಶ್ಲೇಷಣೆಯಲ್ಲಿ, ವಿಷಯ ನಿರೂಪಣೆ

ಯಲ್ಲಿ ಉದ್ದಕ್ಕೂ ಅಲಂಕಾರರಹಿತವಾದ, ವಸ್ತುನಿಷ್ಠೆಯಿಂದ ಕೂಡಿದ ವಾಚ್ಯಾರ್ಥಕ ಲಕ್ಷಣ ಹೊಂದಿರುವ ಭಾಷೆಯನ್ನು ಬಳಸಬೇಕಲ್ಲದೆ ಭಾಷೆ ಲವಲವಿಕೆಯಿಂದ ಕೂಡಿರಬೇಕು; ಪುಟ್ಟ ಪುಟ್ಟ ವಾಕ್ಯಗಳಿರಬೇಕು. ಕ್ಷೇತ್ರಕರ್ತ ವಿಷಯ ನಿರೂಪಿಸುವಾಗ ಅಡಿಟಿಪ್ಪಣಿಗಳನ್ನು ಕೊಡಬೇಕು. ತನ್ನ ಅಧ್ಯಯನಕ್ಕೆ ಯಾವ ಯಾವ ಆಕರಗಳಿಂದ ಸಾಮಗ್ರಿಗಳನ್ನು ಸಂಗ್ರಹಿಸಿದ್ದಾನೆ ಎಂಬುದನ್ನು ಇವು ಸೂಚಿಸುತ್ತವೆ. ವಿಷಯದ ಖಚಿತತೆಗೂ ಇವು ಅನುಕೂಲ. ವಿಶ್ಲೇಷಣೆಯ ಕೊನೆಯಲ್ಲಿ ಅನುಬಂಧಗಳು, ಶಬ್ದಸೂಚಿ, ಮೂಲ ಶಬ್ದಕೋಶ, ಗ್ರಂಥಸೂಚಿ ಇರಲೇಬೇಕು. ಗ್ರಂಥಾಭ್ಯಾಸ ಮಾಡಲು ಇವು ಅನುಕೂಲವಾಗುತ್ತವೆ.

ಕ್ಷೇತ್ರವರದಿ

ಕ್ಷೇತ್ರಕಾರ್ಯದಲ್ಲಿ ಕೊನೆಯ ಹಂತವೆಂದರೆ ವರದಿ ಸಿದ್ಧಪಡಿಸುವುದು. ಕ್ಷೇತ್ರಕಾರ್ಯದಲ್ಲಿ ಕ್ಷೇತ್ರಕರ್ತ ತಾನು ವಿಶ್ಲೇಷಣೆಗೆ ಆಯ್ದುಕೊಂಡ ಭಾಷಾಸಮುದಾಯದ ಭಾಷಾ ಸ್ವರೂಪವನ್ನು, ಅಧ್ಯಯನದ ಫಲಿತಾಂಶಗಳನ್ನು ವ್ಯವಸ್ಥಿತ ರೀತಿಯಲ್ಲಿ ಬರೆದಿಡುವುದೇ ಕ್ಷೇತ್ರವರದಿ ತಯಾರಿಕೆ. ವರದಿ ಸಿದ್ಧಪಡಿಸುವುದು ಸುಲಭದ ಕೆಲಸವಲ್ಲ. ಕ್ಷೇತ್ರಕರ್ತ ಕ್ಷೇತ್ರಕಾರ್ಯದಲ್ಲಿ ಸಾರಾಂಶವನ್ನು ಇಲ್ಲಿ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಕ್ಷೇತ್ರವರದಿ ಮೂರು ಮುಖ್ಯ ಅಂಶಗಳನ್ನು ಒಳಗೊಂಡಿರಬೇಕು. ಆರಂಭದ ವಿಷಯಗಳು, ಮುಖ್ಯ ವಿಷಯಗಳು ಮತ್ತು ಪರಾಮರ್ಶನ ವಿಭಾಗ. ಆರಂಭದ ವಿಷಯಗಳು ಎಂಬ ಭಾಗದಲ್ಲಿ ಕ್ಷೇತ್ರಕರ್ತ ತನ್ನ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ, ಪರಿವಿಡಿ, ಕೋಷ್ಟಕಗಳು ಹಾಗೂ ಚಿತ್ರಗಳ ಪಟ್ಟಿಗಳನ್ನು ಒಳಗೊಂಡಿರಬೇಕು. ಮುಖ್ಯ ವಿಷಯಗಳು ಎಂಬ ಭಾಗದಲ್ಲಿ ಅಧ್ಯಯನದ ನಕ್ಷೆ, ಉಪಯೋಗಿಸಿದ ಪದ್ಧತಿ-ವಿಧಾನ, ಸಾಧನ-ತಂತ್ರಗಳು, ಮಾಹಿತಿಗಳ ವಿಶ್ಲೇಷಣೆ ಮತ್ತು ಫಲಿತಾಂಶಗಳ ಚರ್ಚೆಗಳನ್ನು ಒಳಗೊಂಡಿರಬೇಕು. ಕೊನೆಯ ಪರಾಮರ್ಶನ ಭಾಗದಲ್ಲಿ ಕ್ಷೇತ್ರಕರ್ತ ಬಳಸಿಕೊಂಡ ಗ್ರಂಥಗಳ ಪಟ್ಟಿಯನ್ನು ಕೊಡಬೇಕು. ನಂತರ ಪರಿಶಿಷ್ಟ, ಶಬ್ದಸೂಚಿಯನ್ನು ಕೊಡಬೇಕಾಗುತ್ತದೆ. ಕ್ಷೇತ್ರವರದಿಯಲ್ಲಿ ಈ ಎಲ್ಲ ಅಂಶಗಳು ಇದ್ದರೆ ಅದಕ್ಕೆ ಸಮಗ್ರತೆ ಪ್ರಾಪ್ತವಾಗುತ್ತದೆ.

ಆರಂಭದ ವಿಷಯವನ್ನು ಸ್ಥೂಲವಾಗಿ ಪ್ರಸ್ತಾವನೆಯೆಂದು ಕರೆಯಬಹುದು. ಕ್ಷೇತ್ರಕರ್ತನ ಅಧ್ಯಯನದ ಉದ್ದೇಶ, ಗುರಿ, ವ್ಯಾಪ್ತಿ ಮತ್ತು ಮಹತ್ವವನ್ನು ಇಲ್ಲಿ ಹೇಳಬೇಕಾಗುತ್ತದೆ. ಅಲ್ಲದೆ ತನ್ನ ಅಧ್ಯಯನದ ಭಾಷಾಕ್ಷೇತ್ರದ ವ್ಯಾಪ್ತಿ, ಅಲ್ಲಿಯ ಭಾಷಿಕ ಸ್ಥಿತಿ, ಭೌಗೋಳಿಕ ಸನ್ನಿವೇಶ, ತನ್ನ ಮತ್ತು ನಿರೂಪಕರ ಪರಿಚಯವನ್ನು ಸಂಕ್ಷಿಪ್ತವಾಗಿ ಮಾಡಿಕೊಡಬೇಕು. ಆ ಭಾಷಾಸಮುದಾಯದ ಮೇಲೆ ಈಗಾಗಲೇ ಕ್ಷೇತ್ರಕಾರ್ಯ ಮತ್ತು ಸಂಶೋಧನೆ ನಡೆದಿದ್ದರೆ ಪ್ರಸ್ತುತ ಕ್ಷೇತ್ರಕಾರ್ಯ ಮಾಡುವ ಸಂಶೋಧನೆಗಿಂತ ಯಾವ ರೀತಿಯಾಗಿ ಭಿನ್ನವಾಗಿದೆ ಎಂಬುದನ್ನು ಸ್ಪಷ್ಟವಾಗಿ.

ಸ್ಪಷ್ಟವಾಗಿ ಹೇಳಬೇಕು. ಇದು ಬಹಳ ಮಹತ್ವದ್ದು. ಈ ಎಲ್ಲ ಅಂಶಗಳನ್ನು ಈ ಭಾಗದಲ್ಲಿ ಸ್ಪಷ್ಟಪಡಿಸಬೇಕು.

ಮುಖ್ಯ ವಿಷಯಗಳು ಎಂಬ ಎರಡನೆಯ ಭಾಗ ಕ್ಷೇತ್ರವರದಿಯ ಹೃದಯವಿದ್ದಂತೆ. ಕ್ಷೇತ್ರಕರ್ತ ಭೌಗೋಳಿಕ ಸಮೀಕ್ಷೆ ನಡೆಸಿ ಒಂದು ನೀಲನಕ್ಷೆ ಸಿದ್ಧಪಡಿಸಿಕೊಂಡಿರುತ್ತಾನೆ. ಅದರ ತಿರುಳನ್ನು ದಾಖಲಿಸಬೇಕು. ಅಲ್ಲದೆ ಕ್ಷೇತ್ರಕಾರ್ಯದಲ್ಲಿ ಯಾವ ಯಾವ ಸಾಧನ ತಂತ್ರಗಳನ್ನು ಬಳಸಿಕೊಂಡನು, ನಿರೂಪಕರಿಂದ ಭಾಷಾ ಘಟಕಗಳನ್ನು ಪಡೆಯುವಲ್ಲಿ ಅವನಿಗೆ ಯಾವ ಸಾಧನ ತಂತ್ರ ಹೆಚ್ಚು ಪ್ರಯೋಜನಕಾರಿಯಾಯಿತು. ಅವನು ಹೆಚ್ಚಾಗಿ ಬಳಸಿಕೊಂಡ ಸಾಧನದ ಒಂದು ಪ್ರತಿಯನ್ನು ಕ್ಷೇತ್ರವರದಿಗೆ ಅಂಟಿಸಬೇಕು. ಅದರಂತೆ ಕ್ಷೇತ್ರಕರ್ತ, ಕ್ಷೇತ್ರಕಾರ್ಯಕ್ಕೆ ಯಾವ ಮಾದರಿಗಳನ್ನು ಆಯ್ಕೆ ಮಾಡಿಕೊಂಡನು. ಅವುಗಳ ಉಪಯುಕ್ತತೆ, ಸಾಮಗ್ರಿ ಸಂಗ್ರಹಿಸುವಾಗ ಆತನು ಮಾಡಿರುವ ಕ್ಷೇತ್ರದ ಬಗ್ಗೆ ಅವನ ಮನಸ್ಸಿನಲ್ಲಿ ಮೂಡಿರುವ ಸಂಶೋಧನೆಯ ನಕ್ಷೆ ಮೊದಲಾದ ವಿವರಗಳನ್ನು ಈ ಭಾಗದಲ್ಲಿ ಹೇಳಬೇಕು. ಕ್ಷೇತ್ರಕಾರ್ಯದಲ್ಲಿ ಬಳಸಿದ ಚಿತ್ರಗಳ, ಭೂಪಟಗಳ, ಕೋಷ್ಟಕಗಳ, ನಕ್ಷೆಗಳ ವಿವರಣೆ ಕೊಡಬೇಕು. ಸಾಮಗ್ರಿಗಳನ್ನು ಯಾವ ರೀತಿಯಾಗಿ ಸಂಯೋಜಿಸಲಾಯಿತು ಎಂಬುದನ್ನು ದಾಖಲಿಸಬೇಕು. ಕ್ಷೇತ್ರ ಕಾರ್ಯದಲ್ಲಿ ಕ್ಷೇತ್ರಕರ್ತ ತಾನು ಕಂಡುಕೊಂಡ ಹೊಸ ಅಂಶಗಳನ್ನು, ಭಾಷಾಕ್ಷೇತ್ರಕ್ಕೆ ತನ್ನ ಸಂಶೋಧನೆಯಿಂದಾದ ವಿಶೇಷ ಕೊಡುಗೆ ಏನು ಎಂಬುದನ್ನು ಸರಿಯಾಗಿ ಹೇಳಬೇಕು. ಫಲಿತಾಂಶಗಳ ಚರ್ಚೆ ಇಲ್ಲಿ ನಡೆಯುತ್ತವೆ. ಭಾಷಾಧ್ಯಯನದಲ್ಲಿ ಮುಂದಿನ ವರು ಮಾಡಬೇಕಾದ ಸಲಹೆಗಳನ್ನು ಹೇಳಬೇಕು. ಮೂರನೆಯ ಭಾಗದಲ್ಲಿ ಕ್ಷೇತ್ರಕರ್ತ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಾನು ಪರಾಮರ್ಶನಕ್ಕಾಗಿ ಉಪಯೋಗಿಸಿಕೊಂಡ ಗ್ರಂಥಗಳ, ಲೇಖನಗಳ, ನಿಯತಕಾಲಿಕೆಗಳ ಪಟ್ಟಿಯನ್ನು ಕೊನೆಯಲ್ಲಿ ಕೊಡಬೇಕಾಗುತ್ತದೆ. ಕ್ಷೇತ್ರಕರ್ತ ವರದಿಯಲ್ಲಿಯೇ ಕ್ಷೇತ್ರಕಾರ್ಯ ಮಾಡುವಾಗ ತನಗಾದ ತೊಂದರೆಗಳನ್ನು, ಅವುಗಳನ್ನು ಎದುರಿಸಿದ ರೀತಿಯನ್ನು ಬಿಚ್ಚುಮನಸ್ಸಿನಿಂದ ದಾಖಲಿಸಬೇಕು. ಏಕೆಂದರೆ ಇದು ಮುಂದಿನವರಿಗೆ ಅನುಕೂಲವಾಗುತ್ತದೆ. ಕ್ಷೇತ್ರಕಾರ್ಯಕ್ಕೆ ತೆಗೆದುಕೊಂಡ ಅವಧಿ. ತಗುಲಿದ ವೆಚ್ಚ ಸ್ಪಷ್ಟವಾಗಿ ಹೇಳಬೇಕು. ನಿರೂಪಕರಿಗೆ ಕೊಡುವ ಸಂಭಾವನೆ, ಕ್ಷೇತ್ರದಲ್ಲಿ ತಂಗಿದಾಗ ವಸತಿ, ಊಟದ ಖರ್ಚು, ಪ್ರಯಾಣದ ಭತ್ಯೆ ಮುಂತಾದವುಗಳ ಬಗೆಗೆ ಖರ್ಚು ಮಾಡಿದ ಹಣದ ಸರಿಯಾದ ಲೆಕ್ಕ ಇಟ್ಟಿರಬೇಕು. ಅಂಕಿ-ಅಂಶಗಳ ಮೂಲಕ ವರದಿಯಲ್ಲಿ ದಾಖಲಿಸಬೇಕು.

ಕ್ಷೇತ್ರಕಾರ್ಯದಲ್ಲಿ ಕ್ಷೇತ್ರಕರ್ತ ಕಂಡುಕೊಂಡ ತೀರ್ಮಾನಗಳನ್ನು ಪ್ರಕಟಪಡಿಸಿ, ಪರಿಶೀಲಿಸಿ, ವಿಮರ್ಶೆ ಮಾಡಿಕೊಳ್ಳುವುದೇ ಕ್ಷೇತ್ರವರದಿಯ ಮುಖ್ಯ ಉದ್ದೇಶ. ವರದಿ ತಯಾರಿಕೆಯಿಂದ ಕ್ಷೇತ್ರಕರ್ತನ ಸಾಮರ್ಥ್ಯವನ್ನು ಅಳೆಯಬಹುದು. ಇದರಿಂದ ಕ್ಷೇತ್ರಕಾರ್ಯದಲ್ಲಿ ನುಸುಳಿಕೊಂಡಿರುವ ತಪ್ಪು ತಡೆಗಳನ್ನು ಹೋಗಲಾಡಿಸಲು

ಸಾಧ್ಯವಾಗುತ್ತದೆ. ಭಾಷಾ ಸಂಶೋಧನೆಯ ಬಗ್ಗೆ ಒಳನೋಟಗಳನ್ನು ಕೊಡುವಲ್ಲಿ ಕ್ಷೇತ್ರವರದಿ ಮಹತ್ವದ ಪಾತ್ರ ವಹಿಸುತ್ತದೆ.

ಕೊನೆಯ ಮಾತುಗಳು

ಕನ್ನಡದಲ್ಲಿ ಭಾಷಾಧ್ಯಯನ ತುಂಬ ಮಂದಗತಿಯಿಂದ ನಡೆದಿದೆ. ನಿರೀಕ್ಷಿತ ಪ್ರಮಾಣದಲ್ಲಿ ನಡೆಯುತ್ತಿಲ್ಲದಿರುವುದು ಎದ್ದು ಕಾಣುತ್ತದೆ. ಕೇವಲ ವರ್ಣನಾತ್ಮಕ ಭಾಷಾವಿಜ್ಞಾನ ಕ್ಷೇತ್ರದಲ್ಲಿ ಮಾತ್ರ ಸ್ವಲ್ಪ ಕೆಲಸ ನಡೆದಿದೆ. ಇದುವರೆಗೂ ಭಾಷಾ ವಿಜ್ಞಾನದ ಇತರ ಶಾಖೆಗಳಿಗೆ ಸಂಶೋಧಕರ ಪ್ರವೇಶವೇ ಆಗಿಲ್ಲ! ಕನ್ನಡದಲ್ಲಿಯಂತೂ ಭಾಷಾವಿಜ್ಞಾನವೆಂದರೆ ಕೇವಲ ವರ್ಣನಾತ್ಮಕ ಭಾಷಾವಿಜ್ಞಾನ ಆಗಿಬಿಟ್ಟಿದೆ. ಕನ್ನಡದ ಉಪಭಾಷೆ ಮತ್ತು ಗ್ರಂಥಸ್ಥ ಭಾಷೆಗಳನ್ನು ವರ್ಣನಾತ್ಮಕ ವಿಧಾನದ ಮೂಲಕ ಅಧ್ಯಯನಕ್ಕೆ ಒಳಪಡಿಸುತ್ತ ಹೋದರೆ ಪ್ರಯೋಜನ ಕಡಿಮೆ. ಪಾಶ್ಚಿಮಾತ್ಯರು ತಮಗೆ ಅಪರಿಚಿತ ಭಾಷೆಯನ್ನು ಕಲಿಯುವುದಕ್ಕೆ ವರ್ಣನಾತ್ಮಕ ಅಧ್ಯಯನವನ್ನು ರೂಢಿಸಿ ಕೊಂಡರು ಮತ್ತು ಅವರಿಗೆ ಅದರ ಅವಶ್ಯಕತೆಯೂ ಇತ್ತು. ಅವರು ಹಾಕಿಕೊಟ್ಟ ಚೌಕಟ್ಟು ಧ್ವನಿಮಾಹಂತ, ಆಕೃತಿಮಾಹಂತ, ವಾಕ್ಯರಚನೆ - ಈ ಅಸ್ಥಿಪಂಜರದಲ್ಲಿ ಕನ್ನಡದ ಉಪಭಾಷೆ, ಗ್ರಂಥಸ್ಥ ಭಾಷೆಯನ್ನು ಅಭ್ಯಸಿಸುವವರು. ತಾವು ವಿಶ್ಲೇಷಿಸುವ ಭಾಷಾಸಮುದಾಯದ ಭಾಷಾರೂಪಗಳನ್ನು ತುಂಬುತ್ತಾ ಹೋಗುತ್ತಾರೆ. ಇದರಿಂದ ಎಷ್ಟು ಶ್ರಮ? ಎಷ್ಟು ಪ್ರಯೋಜನ? ಎಂಬುದು ನಮ್ಮ ಮುಂದೆ ನಿಲ್ಲುತ್ತದೆ.

ವರ್ಣನಾತ್ಮಕ ವಿಧಾನದಿಂದ ಒಂದು ಭಾಷೆ. ಉಪಭಾಷೆಯ ಮೇಲ್ಮೈರಚನೆ ಮಾತ್ರ ತಿಳಿದುಬರುತ್ತದೆ. ಉದಾಹರಣೆಗೆ ಬೆಳಗಾವಿ ಕನ್ನಡದ ಆಡುನುಡಿಯನ್ನು ವಿಶ್ಲೇಷಣೆ ಮಾಡಿ, ನಂತರ ಧಾರವಾಡ ಕನ್ನಡದ ಆಡುನುಡಿಯನ್ನು ವಿಶ್ಲೇಷಣೆ ಮಾಡಿ. ನಂತರ ಎರಡನ್ನೂ ಹೋಲಿಸಿ ನೋಡಿದಾಗ ಎಷ್ಟು ತಾನೆ ವ್ಯತ್ಯಾಸಗಳು ಸಿಗುತ್ತವೆ? ಅದರಂತೆ ದಕ್ಷಿಣ ಕನ್ನಡ ಹವ್ಯಕರ ಭಾಷೆ. ಉತ್ತರ ಕನ್ನಡದ ಹವ್ಯಕರ ಭಾಷೆ ವಿಶ್ಲೇಷಿಸಿದರೆ ಎಷ್ಟು ವ್ಯತ್ಯಾಸಗಳು ಸಿಗಬಹುದು? ಈ ರೀತಿಯ ಅಧ್ಯಯನ ಆ ಪ್ರದೇಶ ಅಥವಾ ಆ ಸಮುದಾಯಕ್ಕೆ ಸ್ಪಂದಿಸುತ್ತದೆಯೇ? ಎಂದು ಕೇಳಿದಾಗ ನಿರುತ್ತರಿಯಾಗುತ್ತೇವೆ.

ಭಾಷಾಧ್ಯಯನ ಸಮಾಜಮುಖಿಯಾಗಬೇಕು. ಜನಮುಖಿಯಾಗಬೇಕು. ವರ್ತಮಾನಕ್ಕೆ ಸ್ಪಂದಿಸಬೇಕು. ಕನ್ನಡ ಭಾಷೆಯನ್ನು ಹೊಸ ಹೊಸ ಆಯಾಮಗಳಿಂದ ಈಗ ನೋಡಬೇಕಾಗಿದೆ. ಭಾಷಾಧ್ಯಯನ ವಿಧಾನದಲ್ಲಿ ಹೊಸ ಹೊಸ ದೃಷ್ಟಿಕೋನ ಸಾಧಿಸಬೇಕಾಗಿದೆ. ಆಧುನಿಕ ಭಾಷಾತತ್ವಗಳನ್ನು, ಸಿದ್ಧಾಂತಗಳನ್ನು ಕನ್ನಡ ಭಾಷೆಗೆ ಅನ್ವಯಿಸಿ ನೋಡುವುದು ಈಗ ಅತ್ಯಂತ ಅಗತ್ಯವಾಗಿದೆ. ಭಾಷಾಧ್ಯಯನದಲ್ಲಿಯೂ ಅಂತರ್‌ಶಿಸ್ತಿನ ಅಧ್ಯಯನ ಪ್ರಾರಂಭ ಮಾಡಬೇಕು. ಭಾಷೆ, ಸಾಹಿತ್ಯ ಜಾನಪದ ಮತ್ತು ಚರಿತ್ರೆ ಇವೆಲ್ಲ ವಿಷಯಗಳು ಒಂದಕ್ಕೊಂದು ಪೂರಕ, ಪೋಷಕವಾಗಿರುವುದರಿಂದ.

ಒಂದು ಉಪಭಾಷೆಯನ್ನು ಅಧ್ಯಯನ ಮಾಡುವಾಗ ಕ್ಷೇತ್ರಕಾರ್ಯದ ಮೂಲಕ ವ್ಯಾಪಕವಾದ ಸಾಮಗ್ರಿಗಳನ್ನು ಕಲೆಹಾಕಿ ಮೇಲೆ ಹೇಳಿದ ಪೂರಕ ವಿಷಯಗಳನ್ನು ಆ ಉಪಭಾಷಾ ಸಮುದಾಯದ ವಿವಿಧ ಸಂದರ್ಭದ ಭಾಷಾಬಳಕೆಯೊಡನೆ ಹೆಣೆದು ಅಧ್ಯಯನ ಮಾಡಬೇಕು. ಇದರಿಂದ ಒಂದು ಭಾಷೆ ಮತ್ತು ಆ ಭಾಷಾ ಸಮುದಾಯದ ಸಂಸ್ಕೃತಿಯನ್ನು ತಿಳಿದಂತಾಗುತ್ತದೆ. ಅಂದರೆ ಭಾಷೆಯನ್ನು ಸಾಮಾಜಿಕ ಚೌಕಟ್ಟಿಗೆ ಒಳಪಡಿಸಬೇಕು. ಭಾಷಾಧ್ಯಯನ ಆ ಭಾಷಾಸಮುದಾಯದ ಸಂಸ್ಕೃತಿ ಶೋಧದತ್ತ ಮುಖ ಮಾಡಬೇಕು ಎಂಬುದನ್ನು ಒತ್ತಿ ಹೇಳಬೇಕಾಗಿದೆ. ಕೇವಲ ಸಮಾಜದ ಭಾಷಾರಚನೆಯನ್ನು ನೋಡುವುದಷ್ಟೇ ಅಲ್ಲ, ಸಮಾಜದ ವಿವಿಧ ಸ್ತರಗಳಲ್ಲಿ ಭಾಷಾ ಬಳಕೆಯ ರೀತಿಯನ್ನು, ಭಾಷಾಬಳಕೆಯಲ್ಲಾಗುವ ಮಾರ್ಪಾಟುಗಳನ್ನು ಶೋಧಿಸಬೇಕು. ಇದರಿಂದ ನಮ್ಮ ಅಧ್ಯಯನಕ್ಕೂ ತೂಕ ಬರುತ್ತದೆ. ಇಂತಹ ವೇಳೆಯಲ್ಲಿ ವರ್ಣನಾತ್ಮಕ ವಿಶ್ಲೇಷಣೆ ಒಂದು ಅಧ್ಯಾಯವಾಗಿ ಮಾತ್ರ ಸೇರ್ಪಡೆಯಾಗಬೇಕು. ಇಡಿ ಅಧ್ಯಯನವೇ ಆಗಬಾರದು ಎಂಬುದು ಗಮನಿಸಬೇಕಾದ ಸಂಗತಿ. ಗ್ರಂಥಸ್ಥ ಮತ್ತು ಶಾಸನಗಳ ಭಾಷೆಯನ್ನು ವಿಶ್ಲೇಷಿಸುವಾಗ, ಕೇವಲ ವರ್ಣನಾತ್ಮಕವಾಗಿ ನೋಡದೆ ಐತಿಹಾಸಿಕ, ತೌಲನಿಕ ಭಾಷಾವಿಜ್ಞಾನದ ತತ್ವಗಳ ಹಿನ್ನೆಲೆ ಮತ್ತು ಆ ಕಾಲದ ಸಾಹಿತ್ಯವನ್ನು ಗಮನದಲ್ಲಿಟ್ಟು ಅಧ್ಯಯನ ಮಾಡಿದರೆ ಒಂದು ಸಮಗ್ರತೆ ಪ್ರಾಪ್ತವಾಗುತ್ತದೆ.

ಕನ್ನಡ ಭಾಷಾಧ್ಯಯನಕ್ಕೆ ಸಾಕಷ್ಟು ಅವಕಾಶಗಳಿವೆ. ಅದು ವ್ಯವಸ್ಥಿತವಾಗಿ ನಡೆಯ ಬೇಕಾದರೆ ಮೊದಲು ಆಕರಗಳ ಶೋಧ ಭರದಿಂದ ಸಾಗಬೇಕು. ಅದಕ್ಕೆ ಉಪಭಾಷೆಗಳ ಕೋಶ, ವೃತ್ತಿಪದ ಕೋಶಗಳ ಸಿದ್ಧತೆ, ಉಪಭಾಷೆಗಳ ಪರಿವೀಕ್ಷಣೆ, ಸ್ಥಳನಾಮ ನಿಘಂಟು, ಈ ಪ್ರಾಥಮಿಕ ಕೆಲಸಗಳನ್ನು ನಾವು ಮೊದಲು ಕೈಕೊಂಡು ನಂತರ ದ್ವಿಭಾಷಿಕತೆ, ಭಾಷಾ ಆಧುನೀಕರಣ, ಪ್ರಮಾಣೀಕರಣ, ಭಾಷಾ ಮನೋವೃತ್ತಿಗಳು, ಮನೋಭಾಷಾವಿಜ್ಞಾನ, ಭಾಷಾಬೋಧನೆ-ಭಾಷಾಕಲಿಕೆ, ಭಾಷಾಯೋಜನೆ, ನಿಘಂಟು ಶಾಸ್ತ್ರ, ಭಾಷಾಂತರ, ಶೈಲಿ ಮತ್ತು ಅರ್ಥ ವಿಜ್ಞಾನ ಮುಂತಾದ ಭಾಷಾ ವಿಜ್ಞಾನದ ವಿವಿಧ ಜ್ಞಾನಶಾಖೆಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳುತ್ತಾ ಹೋಗಬೇಕು. ಇಲ್ಲಿನ ಭಾಷಾತತ್ವಗಳನ್ನು ಕನ್ನಡ ಭಾಷೆಗೆ ಅನ್ವಯಿಸಿಕೊಂಡರೆ ಮಾತ್ರ ಕನ್ನಡ ಭಾಷಾ ಅಭಿವೃದ್ಧಿ ಸಾಧ್ಯ.

ಕನ್ನಡ ಭಾಷಾಧ್ಯಯನಕ್ಕೆ ಸಾಕಷ್ಟು ಅವಕಾಶಗಳಿವೆಯೆಂದು ಹೇಳಿದೆ. ಆದರೆ ಆಸಕ್ತಿಯಿಲ್ಲದೆ ಅನಿವಾರ್ಯವೆಂಬಂತೆ ಸಂಶೋಧಕರು ಈ ಕ್ಷೇತ್ರವನ್ನು ಪ್ರವೇಶಿಸುತ್ತಾರೆ. ಅನಿವಾರ್ಯವೆಂಬಂತೆ ಬಂದರೂ ಸಹಿತ ಉದ್ದೇಶಪೂರ್ವಕವಾಗಿಯಾದರೂ ಆಸಕ್ತಿ ಯನ್ನು ತೊಡಗಿಸಿಕೊಳ್ಳುವುದಿಲ್ಲ. ಇದು ಕನ್ನಡದ ದುರದೃಷ್ಟ(ಇದು ಇತರ ಶಾಸ್ತ್ರ, ವಿಷಯಗಳಿಗೂ ಅನ್ವಯವಾಗುತ್ತದೆ). ಇದಕ್ಕೆ ಇನ್ನೊಂದು ಕಾರಣವೂ ಇದೆ. ವಿದ್ಯಾ ಸಂಸ್ಥೆಗಳಲ್ಲಿ ಪ್ರೀತಿ, ಸ್ನೇಹ, ಮುಕ್ತತೆಯಿಂದ ಕೂಡಿದ ಉತ್ಸಾಹಪೂರ್ಣವಾದ ಶೈಕ್ಷಣಿಕ

ವಾತಾವರಣ ಈಗ ತುಂಬ ಕಡಿಮೆಯಾಗುತ್ತಿದೆ. ಬೆಳೆಯುವ ಬಳ್ಳಿಗಳಿಗೆ ಇದೊಂದು ದೊಡ್ಡ ತೊಡಕು. ಹೀಗಾಗಿ ಕನ್ನಡ ಭಾಷಾಧ್ಯಯನದಲ್ಲಿ ಕೆಲಸ ಮಾಡಲು ಸಾಕಷ್ಟು ಅವಕಾಶಗಳಿದ್ದರೂ, ಅವುಗಳನ್ನು ಕಾರ್ಯರೂಪಕ್ಕೆ ತರುವ ಸಾಹಿತ್ಯಕ ವಾತಾವರಣ ಕೊರತೆ ಎದ್ದುಕಾಣುತ್ತಿದೆ. ಶಾಸ್ತ್ರ ಸಂಶೋಧನೆಗೆ ಉತ್ತಮವಾದ ಪರಿಸರ, ಪರಿಕರಗಳು ಲಭ್ಯವಿದ್ದರೆ, ಅನೇಕ ಭಾಷಿಕ ಮತ್ತು ಸಾಹಿತ್ಯಕ ಸಮಸ್ಯೆಗಳನ್ನು ಸುಲಭವಾಗಿ ಬಿಡಿಸಿ, ಸಮರ್ಪಕ ಪರಿಹಾರಗಳನ್ನು ಕಂಡುಕೊಳ್ಳಬಹುದು.

ಆಕರಗ್ರಂಥಗಳು

೧. Willium Samarin, Field Linguistic.
೨. ಅಂಗಡಿ ಎಸ್.ಎಸ್., ೧೯೯೬. ಭಾಷಾ ಕ್ಷೇತ್ರಕಾರ್ಯ, ಸಮಾಜ ಪುಸ್ತಕಾಲಯ, ಧಾರವಾಡ.

ಭಾಗ - ೩

ಭಾಷೆ : ಕಾವ್ಯ ಮತ್ತು ಕಥನಭಾಷೆ

೪೩ ಬುರಡಿ ಬಾಬಾನ ಲಕ್ಷಾಪಹರಣ ಪವಾಡ : ಭಾಷೆ-ಸಾಮಾಜಿಕ ವಿಡಂಬನೆ

೪೪ ನಳಕವಿಯ ಮಸ್ತಕಾಭಿಷೇಕ : ಭಾಷೆ-ಸಾಮಾಜಿಕ ವಿಡಂಬನೆ

೪೫ ವಂದಿಮಾಗಧ : ಭಾಷೆ-ಸಾಮಾಜಿಕ ಪ್ರತಿಭಟನೆ

೪೬ 'ಹವನ' ಕಾದಂಬರಿ : ಭಾಷಿಕ ವಿವೇಚನೆ

೪೭ ರಾಘವೇಂದ್ರ ಪಾಟೀಲ ಅವರ ಕಥನಭಾಷೆ

೨೪

ಕವಿರಾಜಮಾರ್ಗ ಪರಿಸರದ ಸಾಹಿತ್ಯ ಭಾಷೆ

ಕನ್ನಡ ಸಾಹಿತ್ಯದ ಬೆಳವಣಿಗೆ ಮತ್ತು ಭಾಷಾ ಸಮುದಾಯದ ವಿಕಾಸದಲ್ಲಿ ಕವಿರಾಜಮಾರ್ಗಕ್ಕೆ ಹಲವು ಕಾರಣಗಳಿಂದ ಮಹತ್ವವಿದೆ. ಆ ಪಠ್ಯವನ್ನು ಅದರ ಕಾಲಘಟ್ಟದಲ್ಲಿ ಮಾತ್ರವಲ್ಲ ಸಮಕಾಲೀನ ಸಾಮಾಜಿಕ ಮತ್ತು ಸಾಂಸ್ಕೃತಿಕ ಚೌಕಟ್ಟಿನಲ್ಲಿ ಇಟ್ಟು ನೋಡಿದಾಗ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಅಧ್ಯಯನದಲ್ಲಿ ಹೊಸದಾರಿ ತೆರೆಯಬಹುದು. ಆಗ ನಮ್ಮ ಕಾಲದ ಆತಂಕಗಳಿಗೆ ಉತ್ತರ ಸಿಗುತ್ತದೆ. ಆ ದೃಷ್ಟಿಯಿಂದ ಕವಿರಾಜಮಾರ್ಗವು ತನ್ನ ಕಾಲದ ಕನ್ನಡ ಕೈಪಿಡಿಯೂ ಮುಂದಿನ ಕಾವ್ಯ ಮಾರ್ಗದ ಕಾಲದ ಕನ್ನಡ ಕೈಪಿಡಿಯೂ ಮುಂದಿನ ಕಾವ್ಯ ಮಾರ್ಗದ ಕೈದೀವಿಗೆಯೂ ಆಗಿದೆ.

ಕವಿರಾಜಮಾರ್ಗ ಪರಿಸರದ ಭಾಷೆ ಎಂದರೆ ಸ್ಥೂಲವಾಗಿ ಹಲ್ಮಿಡಿ ಶಾಸನ ಮೊದಲಗೊಂಡು ವಡ್ಡಾರಾಧನೆಯವರೆಗೆ ಅದರ ಭಾಷಾ ಸೀಮಾರೇಖೆಗಳನ್ನು ಗುರುತಿಸಬಹುದು. ಕವಿರಾಜಮಾರ್ಗ ಕೇಂದ್ರವಾಗಿಟ್ಟುಕೊಂಡು ಆ ಕಾಲಘಟ್ಟದ ಭಾಷಾಪ್ರಯೋಗವನ್ನು ಹಾಗೂ ಭಾಷಿಕ ವೈಲಕ್ಷಣಗಳನ್ನು ಸ್ಥೂಲವಾಗಿ ಕಲೆ ಹಾಕಲಾಗಿದೆ. ಈ ಸಂಪ್ರಬಂಧವನ್ನು ಈ ಎರಡು ರೀತಿಯಾಗಿ ವರ್ಗೀಕರಿಸಲಾಗಿದೆ. ೧. ಕವಿರಾಜಮಾರ್ಗದ ಭಾಷೆಯ ತಾತ್ವಿಕ ಚಿಂತನ ಕ್ರಮವನ್ನು ಗುರುತಿಸುವುದು. ೨. ಕವಿರಾಜಮಾರ್ಗದ ಭಾಷೆಯ ಪ್ರಯೋಗಿಕ ಚಿಂತನಕ್ರಮವನ್ನು ಹುಡುಕುವುದು.

೧

೧. ಕವಿರಾಜಮಾರ್ಗವು ಒಳಕೊಳ್ಳುವ ನಾಡು ನುಡಿ ಹಾಗೂ ಕನ್ನಡ ಜನವನ್ನು ಕುರಿತ ಅತ್ಯಂತ ಅಭಿಮಾನ ಪೂರ್ವಕವಾದ ಉಕ್ತಿಗಳಿಂದ ಪಂಡಿತರಲ್ಲದ ಸಾಮಾನ್ಯ ಜನದ ನೆನಪಿನಲ್ಲಿ ಉಳಿದುಕೊಂಡಿದೆ. ಕನ್ನಡಪರ ಕಾಳಜಿಯ ಭಾವುಕ ಹೃದಯಗಳಿಗಂತೂ ಮಾರ್ಗಕಾರನು ವರ್ಣಿಸುವ ಸಂಗತಿಗಳು, ವಿಷಾದ, ಅಭಿಮಾನ ಹಾಗೂ ಸಂಭ್ರಮ

ಗಳನ್ನು ಏಕಕಾಲಕ್ಕೆ ಪ್ರೇರಿಸಬಲ್ಲವು. ಮೊದಲ ಪರಿಚ್ಛೇದದ 'ಕಾವೇರಿಯಿಂದಮಾ ಗೋದಾವರಿವಪಮಿರ್ದ' (೧-೩೬) ಎಂಬ ಕನ್ನಡ ನಾಡಿನ ಭೌಗೋಳಿಕ ಮೇರೆಗಳನ್ನು ಕುರಿತ ಉಲ್ಲೇಖದಿಂದ ಮೊದಲುಗೊಂಡು, ಆ ನಾಡಿನ ಜನಪದ 'ಕಾವ್ಯಪ್ರಯೋಗ ಪರಿಣತಮತಿ'ಯನ್ನೂ, 'ಅವರ ವಿವೇಕ ಹಾಗೂ ವಿಮರ್ಶನ ಪ್ರಜ್ಞೆಯನ್ನೂ ಪ್ರಶಂಸಿಸುವ, ಐದು ಪದ್ಯಗಳ' (೧-೩೬-೪೦) ಜತೆಗೆ, ಎರಡನೆಯ ಪರಿಚ್ಛೇದ ಕನ್ನಡ ಜನದ ಶೌರ್ಯ-ಸಾಹಸಗಳನ್ನು ಬಾಯ್ತುಂಬ ಹೊಗಳುವ 'ಸುಭಟರ್ಕಳ್, ಸುಪ್ರಭುಗಳ್, ಚೆಲ್ವರ್ಕಲ್...' (೨-೨೮) ಎಂಬ ಪದ್ಯವನ್ನೂ ಸೇರಿಸಿಕೊಂಡೂ ನೋಡಿದರೆ, ಒಟ್ಟಾರೆಯಾಗಿ ಈ ನಾಡು-ನುಡಿ ಹಾಗೂ ಜನದ ಚಿತ್ರಣದ ಒಂದು ಚೌಕಟ್ಟನ್ನು ಪಡೆದುಕೊಳ್ಳುತ್ತದೆ. ಜತೆಗೆ ಕನ್ನಡ ಸಂಸ್ಕೃತಿಯ ಮುಖ್ಯಲಕ್ಷಣ ಗಳನ್ನು ಎತ್ತಿಹಿಡಿಯುವ ಇನ್ನೂ ಅನೇಕ ಸಂಗತಿಗಳೂ ನಡು ನಡುವೆ ಹರಡಿಕೊಂಡಿವೆ.

೨. ಕವಿರಾಜಮಾರ್ಗ ತನ್ನ ಕಾಲದ ಭೂತ ಮತ್ತು ವರ್ತಮಾನ ಕಾಲವನ್ನು ಹಿನ್ನೆಲೆಯಾಗಿಟ್ಟು ಕೊಂಡು, ಕನ್ನಡಕ್ಕೆ ಕನ್ನಡದ್ದೇ ಆದ ಕಾವ್ಯ ಭಾಷೆ ರೂಪಿಸುವುದು ಮಾರ್ಗಕಾರನ ಉದ್ದೇಶವಾಗಿತ್ತು. ಕನ್ನಡ ಕಾವ್ಯರಚನೆಯ ಮುಖ್ಯವಾದ ಆದಿಪ್ರಾಸದ ಬಳಕೆ, ಯತಿ ಬಳಸದಿರುವುದು, ಬೆದಂಡೆ, ಚತ್ತಾನ ಇಂತಹ ದೇಸಿ ಕಾವ್ಯ ರೂಪಗಳ ಬಳಕೆ ವಿಧಾನ ವನ್ನು ಅವನು ಗುರುತಿಸಿದ್ದಾನೆ. ಇಂತಹ ಸಂದರ್ಭದಲ್ಲಿ ಮಾರ್ಗಕಾರ ಸಂಸ್ಕೃತ ಮಾದರಿ ಯನ್ನು ಮೀರುತ್ತಾನೆ. ಸಂಸ್ಕತ ಲಕ್ಷಣ ಶಾಸ್ತ್ರದ ಚೌಕಟ್ಟನ್ನು ಉಲ್ಲಂಘಿಸುವುದರ ಮೂಲಕ ತನ್ನ ವಿಶಿಷ್ಟತೆಯನ್ನು ಉಳಿಸಿಕೊಂಡಿದೆ. ಈ ಹೊಸ ನಿಯಮಗಳನ್ನು ರೂಪಿಸುವಲ್ಲಿ ಕನ್ನಡ ರಚನೆ ಅಡಗಿದೆ. ಈ ಹೊಸ ಮಾದರಿ ಒಂದು ಸಾವಿರ ವರ್ಷಗಳ ಕಾಲ ಕನ್ನಡ ಕಾವ್ಯ ಭಾಷೆ ಮತ್ತು ಛಂದಸ್ಸನ್ನು ನಿಯಂತ್ರಿಸಿತು (ಗೋವಿಂದ ಪೈ ಕಾಲದವರೆಗೆ). ಇದರಿಂದ ಕವಿರಾಜಮಾರ್ಗದ ಪ್ರಾಮುಖ್ಯತೆ ಅರಿವಾಗುತ್ತದೆ.

೩. ಕನ್ನಡದಲ್ಲಿ ಮಾತನಾಡುವಾಗ ಮತ್ತು ಬರೆಯುವಾಗ ಹಲವಾರು ರೀತಿಯ ಪದ ಮತ್ತು ಪದರೂಪಗಳನ್ನು ಲೀಲಾಜಾಲವಾಗಿ ಬಳಸಲಾಗುತ್ತವೆ. ಹೀಗೆ, ಮಾಡುವಾಗ ಹಲವಾರು ಬಹಳ ಕ್ಲಿಷ್ಟವಾದ ನಿಯಮಗಳನ್ನು ಪಾಲಿಸುತ್ತಿರಬೇಕಾಗುತ್ತದೆ ಎಂಬ ವಿಷಯ ಸಹೃದಯ ವಾಚಕರ ಗಮನಕ್ಕೆ ಬರುವುದಿಲ್ಲ. ಈ ನಿಯಮಗಳು ಮಿದುಳಿನಲ್ಲಿ ಅರಿವಿಗೆ ಎಟುಕದ ರೂಪದಲ್ಲಿ ಅಡಗಿಕೊಂಡಿರುವುದು ಅದಕ್ಕೆ ಕಾರಣವಾಗಿದೆ. ಈ ಅರಿವು ಮಾರ್ಗಕಾರನಿಗೆ ಗೊತ್ತಿತ್ತು. ಕನ್ನಡ ಮತ್ತು ಸಂಸ್ಕೃತ ರಚನೆಗಳು ಬೇರೆ ಬೇರೆ. ಸಂಸ್ಕೃತ ರಚನೆಗಳು ಎಲ್ಲ ಸಂದರ್ಭದಲ್ಲಿ ಕನ್ನಡ ಜಾಯಮಾನಕ್ಕೆ ಹೊಂದಿಕೆ ಯಾಗುವುದಿಲ್ಲ. ಕನ್ನಡ ಲಯಕ್ಕೆ ಅದ್ದರದ್ದೇ ಆದ ನಿಯಮಗಳಿವೆ. ಈ ಬಿಕ್ಕಟ್ಟನ್ನು ಎದುರಿಸಿದ ಬಗೆ ಆಸಕ್ತಿದಾಯಕವಾಗಿದೆ (ಕಾವ್ಯದೋಷಗಳು, ಶ್ರುತಿಕಷ್ಟ, ಶ್ರುತಿದುಷ್ಟ, ಚಿತ್ರಕವಿತ್ವ ಇತ್ಯಾದಿ).

೪. ಕವಿರಾಜಮಾರ್ಗ ಮುಖ್ಯವಾಗಿ ಒಂದು ಲಕ್ಷಣ ಗ್ರಂಥವಾದರೂ ಅದು ಸಂಸ್ಕೃತ ಲಕ್ಷಣ ಶಾಸ್ತ್ರ ಪರಂಪರೆಯಿಂದ, ಭಿನ್ನವಾಗುತ್ತ ಕನ್ನಡ ಭಾಷೆ, ವ್ಯಾಕರಣ, ಛಂದಸ್ಸು, ಸಾಹಿತ್ಯಚರಿತ್ರೆ ಹಾಗೂ ಕನ್ನಡ ಸಂಸ್ಕೃತಿಯೊಳಗೆ ತನ್ನನ್ನು ವಿಸ್ತರಿಸಿಕೊಂಡ ಕೃತಿಯಾಗಿದೆ. ಸಂಸ್ಕೃತ ಲಕ್ಷಣ ಗ್ರಂಥಗಳ ಪ್ರಭಾವ ಅದರ ಮೇಲಾದರೂ ಕನ್ನಡದ್ದೇ ಆದ ಕಾವ್ಯ ಮೀಮಾಂಸೆ ಕಟ್ಟುವ ಉದ್ದೇಶ ಆ ಕೃತಿಯಲ್ಲಿದೆ. ಅದನ್ನು ಹೀಗೂ ಹೇಳಬಹುದು : ಸಂಸ್ಕೃತ ಕಾವ್ಯಮೀಮಾಂಸೆಯ ತಿಳಿವಳಿಕೆಯಿಂದ ಕನ್ನಡ ಕಾವ್ಯ ಮೀಮಾಂಸೆಯ ಮಾರ್ಗಯೊಂದನ್ನು ಪ್ರಾರಂಭಿಸುವ ಪ್ರಥಮ ಪ್ರಯತ್ನ ಇಲ್ಲಿದೆ. ಕೃತಿಯ ವಸ್ತು, ವಿನ್ಯಾಸ, ದೃಷ್ಟಿಕೋನ ಇತ್ಯಾದಿಗಳಿಂದ ಅದು ವ್ಯಕ್ತವಾಗುತ್ತದೆ.

೫. ಕವಿರಾಜಮಾರ್ಗದಲ್ಲಿ ಬರುವ ಮಾರ್ಗ ಎಂಬುದು ಬರವಣಿಗೆಯ ಕ್ರಮ ಎಂಬುದನ್ನು ನೆನಪಿಗೆ ತರುತ್ತದೆ. ಆದರೆ ಕವಿರಾಜಮಾರ್ಗ ಎಂಬ ಶೀರ್ಷಿಕೆಯಲ್ಲಿರುವ ಮಾರ್ಗ ಎನ್ನುವುದು ಸಂಸ್ಕೃತದ ಕಾವ್ಯ ಮೀಮಾಂಸೆಗೆ ಸಂಬಂಧಿಸಿದ ಆ ಅರ್ಥದಿಂದ ಭಿನ್ನವಾಗಿ, ಕ್ರಮ, ನಿರ್ದೇಶನ, ನಡೆಯಬೇಕಾದ ನಾಳಿನ ದಾರಿ ಎಂಬ ಅರ್ಥಗಳನ್ನು ಸೂಚಿಸುತ್ತದೆ. ಎಂದರೆ, ಕನ್ನಡ ಸಾಹಿತ್ಯದ ಮೊದಲ ದಿನಗಳಲ್ಲಿ ಕನ್ನಡ ಕಾವ್ಯವು ಇನ್ನು ಮುಂದೆ ಕ್ರಮಿಸಬೇಕಾದ ಮಾರ್ಗವೊಂದನ್ನು ಸೂಚಿಸುವುದು, ಕವಿಗಳಿಗೆ ಒಂದು ರಾಜಮಾರ್ಗವನ್ನು ಹಾಕಿಕೊಡುವುದು ಅದರ ಉದ್ದೇಶವಾಗಿದೆ. ಆದುದರಿಂದಲೇ ಅದು ಕವಿರಾಜಮಾರ್ಗ! ಹಾಗೆ ಮಾರ್ಗದರ್ಶನ ಮಾಡುವಂಥ ಒಂದು ಪರಿಸ್ಥಿತಿ ಅಂದು ಪ್ರಾಪ್ತವಾಗಿತ್ತು. ಆ ಪರಿಸ್ಥಿತಿಯ ಹಿನ್ನೆಲೆಯನ್ನೂ ಹಾಗೂ ಅಗಿನ ಭಾಷೆ ಹಾಗೂ ಸಾಹಿತ್ಯಕ್ಕೆ ಒದಗಿದ ಒಂದು ಗೊಂದಲದ ಚಿತ್ರವನ್ನು ಕವಿರಾಜಮಾರ್ಗ ಸ್ಪಷ್ಟವಾಗಿ ಉಲ್ಲೇಖಿಸುತ್ತದೆ. ಆ ಗೊಂದಲ ಯಾವುದೆಂದರೆ ಕವಿರಾಜಮಾರ್ಗದ ಕಾಲಕ್ಕೆ, ನೆಲೆಸಿದ್ದ ಹಳಗನ್ನಡ ಭಾಷಾ ಪರಿಸರದಲ್ಲಿ, ಆಗಮ ಬಲಹೀನರಾದ ಕವಿಗಳು ಕಾವ್ಯ ರಚನೆತೊಡಗಿ ಕಾವ್ಯದ ದಾರಿ ದಿಕ್ಕು ತಪ್ಪಿತ್ತು. ಕಾವೇರಿಯಿಂದ, ಗೋದಾವರಿಯವರೆಗೆ ವಿಸ್ತರಿಸಿದ್ದ ಕನ್ನಡ ನಾಡಿನಲ್ಲಿ ಅಥವಾ ಅಂದಿನ ರಾಷ್ಟ್ರಕೂಟರ ಸಾಮ್ರಾಜ್ಯದಲ್ಲಿ ಹಲವು ಬಗೆಯ ಕನ್ನಡಗಳು ಬಳಕೆಯಲ್ಲಿದ್ದವು. ಹೀಗಾಗಿ ನುಡಿಗೆ ಸಲ್ಲುವ ಈ ಪ್ರಾದೇಶಿಕ ಭಾಷಾಭೇದಗಳನ್ನು ಸರಿಪಡಿಸಿ ನುಡಿಗೆಲ್ಲ ಸಲ್ಲುವಂಥ ಸಮಾನ ಅಧಿಕೃತ ಭಾಷೆಯೊಂದನ್ನು ರೂಪಿಸುವ ಮೊದಲ ಕಾಳಜಿ ಹಾಗೂ ಒಂದು ಪ್ರೌಢವಾದ ಕಾವ್ಯಮಾರ್ಗವನ್ನು ನಿರ್ಮಾಣ ಮಾಡಬೇಕೆಂಬ ಸಂಕಲ್ಪ ಕವಿರಾಜ ಮಾರ್ಗದ ಪೂರ್ವಪೀಠಿಕೆಯಾಗಿದೆ.

೬. ಕವಿರಾಜಮಾರ್ಗ ಏಕಕಾಲಕ್ಕೆ ಕವಿಗಳಿಗೂ ರಾಜಮಾರ್ಗ (ಕಾವ್ಯಲಕ್ಷಣ ಹೇಳುವುದರಿಂದ), ರಾಜರಿಗೂ ರಾಜಮಾರ್ಗ (ರಾಜ್ಯಾಡಳಿತದ ಪರಿಕರಗಳಾದ ಭೂಗೋಳ, ಚರಿತ್ರೆ ಹೇಳುವುದರಿಂದ). ಆ ಮೂಲಕ ಕನ್ನಡಕ್ಕೆ ಕಾವ್ಯ ಭಾಷೆ, ಜನ ಭಾಷೆ ಮತ್ತು

ರಾಜಮನ್ನಣೆ ಭಾಷೆ ಅಗತ್ಯ ಎಂಬ ಪರಿಕಲ್ಪನೆ ಮಾರ್ಗಕಾರನಲ್ಲಿತ್ತು. ಏಕತೆ ತರಲು ಭಾಷಾ ಪ್ರಮಾಣೀಕರಣ ಮುಖ್ಯ ಗುರಿಯಾಗಿತ್ತು. ಕವಿರಾಜಮಾರ್ಗ ಆಡುಮಾತು, ಕಾವ್ಯಭಾಷೆಯಾಗಿ ರೂಪುಗೊಳ್ಳುತ್ತಿದ್ದ ಕಾಲದಲ್ಲಿ ರಚನೆಯಾಗಿದೆ ಎಂಬುದು ಗಮನಿಸ ಬೇಕಾದ ಸಂಗತಿಯಾಗಿದೆ. ಪ್ರಮಾಣೀಕರಣ ಎಂಬುದು ಒಂದು ಸಾಮಾಜಿಕ ಪ್ರಕ್ರಿಯೆ. ಸಮಾಜದ ಪ್ರಗತಿಯ ಜೊತೆಗೆ ಭಾಷೆಯೂ ತನ್ನ ಹೆಜ್ಜೆಯನ್ನು ಹಾಕಬೇಕು ಮತ್ತು ಸಂವಹನ ಸಾಮರ್ಥ್ಯದಲ್ಲಿ ಸಮಾಜಕ್ಕೆ ಸಹಾಯಕವಾಗಿ ನಿಲ್ಲಬೇಕು ಎಂಬುದು ಮಾರ್ಗಕಾರನ ಆಶಯವಾಗಿರಬೇಕು.

೭. ಕವಿರಾಜಮಾರ್ಗದಲ್ಲಿ ಕನ್ನಡ ಕಾವ್ಯಭಾಷೆಯ ಅರ್ಥವ್ಯವಸ್ಥೆಗಿಂತ; ಆಂತರಿಕ ರಚನೆ ಬಗ್ಗೆ ಹೆಚ್ಚು ಚರ್ಚೆ ಮಾಡಲಾಗಿದೆ. ಕನ್ನಡದಂತಹ ದೇಸಿ ಭಾಷೆಗಳು ಎದುರಿಸುವ ಬಿಕ್ಕಟ್ಟುಗಳು, ಗತದ ಅರಿವಿನ ಮೂಲಕ ವರ್ತಮಾನವನ್ನು ಪ್ರವೇಶಿಸುವ ಪ್ರಯತ್ನ ಇಲ್ಲಿದೆ. ಕನ್ನಡ ಕಾವ್ಯಭಾಷೆಯ ನಿರ್ಮಾಣದಲ್ಲಿ ಎಂತಹ ನಿಯಮಗಳೆಲ್ಲ ಬಳಕೆ ಯಾಗುತ್ತದೆ. ಆ ನಿಯಮಗಳ ಹಿಂದಿರುವ ಮೂಲತತ್ವಗಳಾವುವು, ಎಂತಹುವು ಎಂಬುದನ್ನು ತಿಳಿದುಕೊಳ್ಳುವ ಪ್ರಯತ್ನ ಈ ಕೃತಿಯಲ್ಲಿ ಮೂಡಿಬಂದಿದೆ. ಇಲ್ಲಿಯ ವಿಚಾರಗಳನ್ನು ಮುಂದಿನ ಎಲ್ಲ ಕವಿಗಳು ಬಳಸಿದರು, ವಿಸ್ತರಿಸಿದರು.

೮. ಕಾವ್ಯದೋಷಗಳನ್ನು ಕನ್ನಡಕ್ಕೆ ಅನ್ವಯಿಸಿ ಹೇಳುವಲ್ಲಿ ಮಾರ್ಗಕಾರನ ಶಾಸ್ತ್ರ ಪ್ರತಿಭೆಯ ವೈಶಿಷ್ಟ್ಯ ಸ್ಪಷ್ಟವಾಗಿದೆ. ಈ ಗ್ರಂಥದಲ್ಲೆಲ್ಲ ಅತಿಮಹತ್ವದ ಭಾಗವೇ ಕನ್ನಡಕ್ಕೆ ಮಾತ್ರ ಕೇಂದ್ರಿತವಾದ ದೋಷ ವಿವೇಚನೆಯ ಪ್ರಕರಣ. ದೋಷಾದೋಷ ನಿರ್ಣಯಕ್ಕೆ ಮೊದಲ ಮಾನ್ಯತೆ ನೀಡಿ, ತನ್ನ ವಿಸ್ತಾರವಾದ ಪ್ರತಿಪಾದನೆಯ ಮೂಲಕ ಕನ್ನಡ ವ್ಯಾಕರಣ ನಿರ್ಮಾಣಕ್ಕೂ ನಿರ್ದುಷ್ಟವಾದ ಕಾವ್ಯರಚನಾ ಪದ್ಧತಿಗೂ ಭದ್ರವಾದ ಬುನಾದಿಯನ್ನು ಮಾರ್ಗಕಾರ ಹಾಕಿಕೊಟ್ಟಿದ್ದಾನೆ.

ಈ ಹಿನ್ನೆಲೆಯಿಂದ ಮುಂದಿನ ಕನ್ನಡ ಕಾವ್ಯಭಾಷೆ ಹೇಗಿರಬೇಕು ಎಂಬುದರ ಚರ್ಚೆ 'ಕವಿರಾಜಮಾರ್ಗ'ದಲ್ಲಿ ಮೌಲಿಕವಾದುದಾಗಿದೆ. 'ಕವಿರಾಜಮಾರ್ಗ'ವು ಸಂಸ್ಕೃತ ಸಾಹಿತ್ಯ ಹಾಗೂ ಕಾವ್ಯಮೀಮಾಂಸೆಯ ತಿಳಿವಳಿಕೆಯಿಂದ ರಚಿತವಾದ ಕೃತಿ ಎಂಬುದನ್ನು ನೆನೆದರೆ, ಕನ್ನಡ ಸಾಹಿತ್ಯದ ಮೊದಲ ಕಾಲವೇ ದಟ್ಟವಾದ ಸಂಸ್ಕೃತ ಪ್ರಭಾವಕ್ಕೆ ಒಳಗಾದ ಕಾಲವಾಗಿತ್ತೆಂಬುದು ಸ್ಪಷ್ಟವಾಗುತ್ತದೆ [ಆ ಕಾಲದ ಯುಗಧರ್ಮ]. ಇಂಥ ಪರಿಸ್ಥಿತಿಯಲ್ಲಿ ಮುಂದಿನ ಕವಿಗಳಿಗೊದಗಿದ ಮುಖ್ಯ ಸಮಸ್ಯೆ ಎಂದರೆ, ಎಷ್ಟರಮಟ್ಟಿಗೆ ತಮ್ಮ (ಕನ್ನಡದ) ಅಭಿವ್ಯಕ್ತಿಯಲ್ಲಿ ಸಂಸ್ಕೃತವನ್ನು ಹೊಂದಿಸಿ ಕೊಳ್ಳಬೇಕು ಎನ್ನುವುದೇ ಆಗಿದೆ.

೯. ಆ ಕಾಲದ ಯುಗಧರ್ಮವನ್ನು ಅನುಲಕ್ಷಿಸಿ ಹೇಳುವುದಾದರೆ ೧. ಸಂಸ್ಕೃತವನ್ನು ಕನ್ನಡ ಕಾವ್ಯರಚನೆಗೆ ಒಂದು ಆತಂಕವೆಂದು ಭಾವಿಸದೆ, ಅದೊಂದು ಅನುಕೂಲವೆಂದೇ

ತಿಳಿದ ಧೋರಣೆ. ೨. ಕನ್ನಡ ಭಾಷೆಗೆ ತನ್ನದೇ ಆದೊಂದು ಸತ್ವವಿರುವಾಗ, ಸಂಸ್ಕೃತದ ಸಂಪರ್ಕ ಪ್ರಭಾವಗಳನ್ನು ದೂರವಿರಿಸಿ ಅಚ್ಚಗನ್ನಡದಲ್ಲಿ ಆಡುನುಡಿಗೆ ಸಮೀಪವಾದೊಂದು ರೀತಿಯನ್ನು ರೂಪಿಸಿಕೊಳ್ಳಬಹುದು ಎಂಬ ಧೋರಣೆ. ಇದರಿಂದ ನಿಷ್ಪನ್ನವಾದದ್ದು ದೇಸಿ. ೩. ಕನ್ನಡದಂತೆಯೇ ಸಂಸ್ಕೃತವೂ ನಮ್ಮದೇ, ಆದರೆ ಅದು ಕನ್ನಡದ ಸೊಗಸನ್ನು ಕಬಳಿಸದಂತೆ ನೋಡಿಕೊಂಡು ಸಂಸ್ಕೃತದ ಪ್ರೌಢತೆಯನ್ನು (ಮಾರ್ಗವನ್ನು) ಕನ್ನಡದ ಆಡುನುಡಿಯ ಸೊಗಸಿನೊಂದಿಗೆ (ದೇಸೀಯತೆಯೊಂದಿಗೆ) ಹೊಂದಿಸಿ, ಒಂದು ಬಗೆಯ ಒಡಂಬಡಿಕೆಯನ್ನು ಸಾಧಿಸುವುದು ಹೇಗೆ ಎನ್ನುವ ಧೋರಣೆ. ಇದನ್ನು ಮಾರ್ಗ ದೇಸಿಗಳ 'ಸಮನ್ವಯ' ಎಂದು ಬೇಕಾದರೂ ಕರೆಯಬಹುದು. ಈ ಮೂರು ನಿಲುವುಗಳು ಇಡೀ ಕನ್ನಡ ಸಾಹಿತ್ಯದ ಉದ್ದಕ್ಕೂ (ಆಧುನಿಕ ಸಾಹಿತ್ಯವನ್ನೂ ಒಳಗೊಂಡು) ಇಂದಿಗೂ ಕ್ರಿಯಾಶೀಲವಾಗಿವೆ ಎಂಬುದನ್ನು ಯಾರಾದರೂ ಗುರುತಿಸಬಹುದು. ಈ ವಿಷಯವನ್ನು ಹೇಳಲಪೇಕ್ಷಿಸುವ ಮುಖ್ಯವಾದ ಮಾತೆಂದರೆ, ಕನ್ನಡ ನಾಡು ನುಡಿಯ ಬಗ್ಗೆ ಅತೀವ ಅಭಿಮಾನವುಳ್ಳ ಮಾರ್ಗಕಾರನು ಮೊಟ್ಟಮೊದಲಿಗೆ ಎತ್ತಿಹಿಡಿದದ್ದು ಈ ಮೂರನೆಯ ಒಡಂಬಡಿಕೆಯ ಮಾರ್ಗವಾಗಿದೆ.

೧೦. 'ಕವಿರಾಜಮಾರ್ಗ'ದ ಕಾಲಕ್ಕೆ ಆಗಲೇ ಕನ್ನಡ ಕವಿಗಳು ಸಂಸ್ಕೃತದ ಅಕ್ಷರ ವೃತ್ತಗಳನ್ನು ಒಪ್ಪಿಕೊಂಡು, ಅವುಗಳಲ್ಲಿ ಎರಡು ಮುಖ್ಯವಾದ ಮಾರ್ಪಾಟುಗಳನ್ನು ಮಾಡಿದ್ದರು. ಒಂದು ಅಕ್ಷರ ವೃತ್ತಗಳ ಯತಿ ಸ್ಥಾನಗಳನ್ನು ನಿಯತವಾಗಿ ಅನುಸರಿಸಿದೆ, 'ಯತಿ ವಿಲಂಘಟನೆ' ಮಾಡಿದ್ದು, ಎರಡನೆಯದು ಹೊಸದಾಗಿ ದ್ವಿತೀಯಾಕ್ಷರ ಪ್ರಾಸದ ನಿರ್ಬಂಧವನ್ನು ಅಳವಡಿಸಿದ್ದು. ಈ ಬದಲಾವಣೆಗಳಿಂದ ಕನ್ನಡ ಕಾವ್ಯದ ಪದಬಂಧ, ಸಂಸ್ಕೃತದ ಪದ್ಯರಚನಾ ಕ್ರಮದಿಂದ ಬೇರೆಯೆ ಆದ ಲಕ್ಷಣವನ್ನು ಪಡೆದುಕೊಂಡಿತು. ಮಾರ್ಗಕಾರ ಈ ಬರವಣಿಗೆಯ ಕ್ರಮವನ್ನು ಅನುಮೋದಿಸಿದ್ದಲ್ಲದೆ, ಇಡೀ ತನ್ನ ಕೃತಿಯನ್ನು ಈ ವಿಧಾನದಲ್ಲಿಯೆ ರಚಿಸಿ ಮುಂದಿನ ಕನ್ನಡ ಕಾವ್ಯ ರೂಪದ ಮಾರ್ಗದರ್ಶನ ಮಾಡುವುದರ ಜತೆಗೆ, ಕೃತಿ 'ರೀತಿ'ಯ ಸ್ವರೂಪದ ಬಗೆಗೆಯೂ ಮೌಲಿಕವಾದ ಸೂಚನೆಗಳನ್ನು ನೀಡಿದ್ದಾನೆ.

೧೧. ಮಾರ್ಗಕಾರನಿಗೆ, ತನ್ನ ಕಾಲದಲ್ಲಿ ಕ್ರಮತಪ್ಪುತಿದ್ದ ವಿವಿಧ ದೇಸಿಗಳನ್ನು ಪರಿಷ್ಕರಿಸಿ ಒಂದು ಸಮಾನ ಭಾಷೆಯನ್ನು ರೂಪಿಸುವ ಉದ್ದೇಶದ ಜತೆಗೆ, ಕಾವ್ಯ ಭಾಷೆಗೂ ಸಿದ್ಧವಾಗುತ್ತಿದ್ದ ತನ್ನ ಕಾಲದ ಕನ್ನಡವನ್ನು ಸಂಸ್ಕೃತ ಸಾಹಚರ್ಯದಿಂದ ಒಂದು ಗಟ್ಟಿಮುಟ್ಟಾದ ಕಾವ್ಯಸಂಪ್ರದಾಯ ನಿರ್ಮಾಣಕ್ಕೆ ನಿಯೋಜಿಸುವುದು ಹೇಗೆಂಬ ಕಾಳಜಿಗಳೂ ಪ್ರಧಾನವಾಗಿದ್ದವು. ಮಾರ್ಗಕಾರನಿಗೆ ಗೊತ್ತು, ಸಂಸ್ಕೃತವನ್ನು ನಿರಾಕರಿಸಿ ಕನ್ನಡ ಬೆಳೆಯಲಾರದು ಎಂದು. (ಈಗ ಇಂಗ್ಲೀಷ್ ನಿರಾಕರಿಸಿ ಕನ್ನಡ ಬೆಳೆಯಲಾರದು) ಆದ್ದರಿಂದ ಸಂಸ್ಕೃತವನ್ನು ಕನ್ನಡವನ್ನೂ ಒಂದು ಸಮತೂಕದಲ್ಲಿ ಹೊಂದಿಸಿ ಒಂದು

ಕಾವ್ಯಭಾಷೆ ಕ್ರಮವನ್ನು ರೂಪಿಸುವ ಧೋರಣೆಯೊಂದನ್ನು 'ಕವಿರಾಜಮಾರ್ಗ' ಮಂಡಿಸುತ್ತದೆ. ಮುಖ್ಯವಾಗಿ 'ಕವಿರಾಜಮಾರ್ಗ'ದ ಮೊದಲ ಪರಿಚ್ಛೇದವೇ 'ದೋಷ-ಅದೋಷ'ಗಳ ವಿಚಾರಕ್ಕೆ ಮೀಸಲಾಗಿದ್ದು, ಅದರಲ್ಲಿ ಮಾರ್ಗಕಾರ ಕನ್ನಡ-ಸಂಸ್ಕೃತಗಳ ಸಂಬಂಧವನ್ನು 'ಕಾವ್ಯಭಾಷೆ'ಯ ಮೂಲಕ ಚರ್ಚೆಗೆ ಗುರಿಪಡಿಸುತ್ತಾನೆ.

೨

೧. ಕನ್ನಡವು ಸಾಮಾನ್ಯವಾಗಿ ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಎಂಬ ನಾಲ್ಕು ಅವಸ್ಥೆಗಳನ್ನು ಪಡೆದಿದೆ. ಕವಿರಾಜಮಾರ್ಗವು ಹಳಗನ್ನಡ ಅವಸ್ಥೆಯ ಕೃತಿ. ಇಲ್ಲಿ 'ಕನ್ನಡ', 'ಪಟಗನ್ನಡ' ಎಂಬ ಎರಡು ಪದಗಳು ಬಳಕೆಯಾಗಿವೆ. 'ಕಾವೇರಿಯಿಂದಮಾ ಗೋದಾವರಿವರಂ ಇರ್ದ ನಾಡದಾ ಕನ್ನಡ' ಎಂಬಲ್ಲಿ ದೇಶ ವಾಚಕವಾಗಿ, 'ಮಿಗೆ ಕನ್ನಡಗಬ್ಬಂಗಳೊಳ್' ಎಂಬಲ್ಲಿ ಭಾಷಾವಾಚಕವಾಗಿ ಕನ್ನಡ ಬಳಕೆಯಾಗಿದೆ. ಇವುಗಳೊಂದಿಗೆ 'ಪಟಗನ್ನಡಂ' ಎಂಬುದು ಒಂದು. ಕವಿರಾಜಮಾರ್ಗದಲ್ಲಿ ಪಟಗನ್ನಡವನ್ನು ಕುರಿತು ೩ ಪದ್ಯಗಳಿವೆ.

ನೆಲಸಿದ ಕಾವ್ಯಂ, ಕಾವ್ಯಕ್ಕೆ
ಲಕ್ಷಣಂ, ಸತತಂ ಎಂದೆ
ಪಟಗನ್ನಡಮಂ
ಪೊಲಗೆಡಿಸಿ ನುಡಿವರ್, ಆಗಮ ಬಲಹೀನರ್
ದೇಶಿಯಲ್ಲದೆಂದು ಅಜ್ಞಿದಿರ್ದುಂ

ಆಗಮ ಬಲಹೀನತೆಯ ಮೂಲಕ ಪಟಗನ್ನಡವನ್ನು ಪೊಲಗೆಡಿಸುವರು ಎಂದು ಈ ಪದ್ಯದ ಅರ್ಥ. ಕವಿರಾಜಮಾರ್ಗದ ಹಿಂದಣ ಶಾಸನಗಳನ್ನು ಗಮನಿಸಿದರೆ ಕನ್ನಡದ ಪೂರ್ವದ ಹಳಗನ್ನಡವೆಂಬ ಅವಸ್ಥೆಯಿದುದು ಸ್ಪಷ್ಟ. ಆದರೆ ಕವಿರಾಜಮಾರ್ಗದಲ್ಲಿ ಈ ಕುರಿತು ಪದರಚನೆಯಾಗಲಿ ವಾಕ್ಯರಚನೆಯಾಗಲಿ ಇಲ್ಲ. ಅಲ್ಲದೇ ಭಾಷೆಯಲ್ಲಿ ಅವಸ್ಥೆ ಯನ್ನು ಗುರುತಿಸುವ ದೃಷ್ಟಿ ನಮಗೆ ಇಲ್ಲ. ಅಲ್ಲದೆ ಭಾಷೆಯಲ್ಲಿ ಅವಸ್ಥೆಯನ್ನು ಗುರುತಿಸುವ ದೃಷ್ಟಿಯಾಗಲಿ ಇಲ್ಲ. ಅಲ್ಲದೆ ಭಾಷೆಯಲ್ಲಿ ಅವಸ್ಥೆಯನ್ನು ಗುರುತಿಸುವ ದೃಷ್ಟಿ ನಮಗೆ ಬಂದುದು ತೀರ ಇತ್ತೀಚೆಗೆ (ಮಿಶನರಿ ರೈಸ್-ಕಿಟೆಲ್ ವಿದ್ವಾಂಸರಿಂದ) ಅದಕ್ಕಾಗಿ ಇಲ್ಲಿಯ ಪಟಗನ್ನಡವು ಪೂರ್ವದ ಹಳಗನ್ನಡ ಅವಸ್ಥೆಯ ಸೂಚನೆಯಾಗಲಾರದು.

೨. ಮೂಲತಃ ಅಲಂಕಾರಿಕನಾದ ಮಾರ್ಗಕಾರನಿಗೆ ಭಾಷೆಯಲ್ಲಿ ತೋರಿದ ಅವಸ್ಥಾ ವ್ಯತ್ಯಾಸಗಿಂತ ಕಾವ್ಯ ಭಾಷೆಯಲ್ಲಿ ತೋರಿದ ಶೈಲಿ ವ್ಯತ್ಯಾಸವೇ ಮುಖ್ಯವಾಗಿ ಕಂಡಿರಬೇಕು. ಆ ಕಾಲಕ್ಕೆ ಹೊಸಶೈಲಿಗೆ ಒಲವು ತೋರಿಸಿ ಹೋದ ಕನ್ನಡದ ಒಂದು ಹಳೆಯ ಶೈಲಿಯನ್ನೇ ಮಾರ್ಗಕಾರನ್ನು 'ಪಟಗನ್ನಡ'ವೆಂದು ಕರೆದಿರಬೇಕು. ಇದರಿಂದ ಕವಿರಾಜಮಾರ್ಗದ ರಚನೆಯ ಕಾಲಕ್ಕೆ ಕನ್ನಡದಲ್ಲಿ ಕಾವ್ಯಶೈಲಿಯ ಒಂದು ಪ್ರಕಾರ

ಮುಗಿದು ಇನ್ನೊಂದು ಪ್ರಕಾರ ಸಾಗಿ ಬಂದಿರಬೇಕೆನಿಸುತ್ತದೆ. ಇಂತಹ ಸಮಯದಲ್ಲಿ ಪಟಿಗನ್ನಡ ಭಾಷೆ, ಶೈಲಿ, ವ್ಯಾಮೋಹ ಬಿಟ್ಟಿರದ, ಸಮರ್ಪಕವಾಗಿ ಬಳಸುವ ಸಾಮರ್ಥ್ಯವಿರದ ಸಂಪ್ರದಾಯಸ್ಥರಿಂದ ಹಳೆಯ ಶೈಲಿ ಹೊಲಗೆಡುವುದು ಸಹಜ. ಆದರೆ ಮಾರ್ಗಕಾರನಿಗೆ ಪಟಿಗನ್ನಡದ ಬಗ್ಗೆ ಅನಾದಾರವಿಲ್ಲ, ಯುಗಧರ್ಮವೇ ವಿರೋಧಿಸುವಾಗ ಅದನ್ನು ಬಲಸುವವರ ಬಗ್ಗೆ ಅನಾದಾರವಿದೆಯೆಂಬುದು ಸ್ಪಷ್ಟ (ಸಾಹಿತ್ಯ ಮತ್ತು ಯುಗಧರ್ಮ ಇವು ಒಂದು ಕಾಲಘಟ್ಟವನ್ನು ನಿರ್ಧರಿಸುತ್ತವೆ).

ಹೀಗೆ, ಮಾರ್ಗಕಾರನ ಕಾಲಕ್ಕೆ ಕನ್ನಡ ಕಾವ್ಯ ಭಾಷೆಯಲ್ಲಿ ಒಂದು ಕಡೆಯಿಂದ ಪೊಲಗೆಡಿಸಿ ನುಡಿವ ದೇಸಿ ಪದ್ಧತಿಯ ಬಳಕೆ ಕಡಮೆಯಾಗುತ್ತಿದ್ದರೆ, ಇನ್ನೊಂದು ಕಡೆ ಸಂಸ್ಕೃತ ಭೂಮಿಷ್ಟ ಮಾರ್ಗಪದ್ಧತಿ ಶುರುವಾಗಿತ್ತು. ಇಂತಹ ಬಿಕ್ಕಟ್ಟಿನಲ್ಲಿ ಕವಿರಾಜಮಾರ್ಗ ರಚನೆಯಾಗಿದೆ. ಅದಕ್ಕಾಗಿ ಮಾರ್ಗಕಾರ ಹೊಲಗೆಟ್ಟ 'ಪಟಿಗನ್ನಡ'ವನ್ನು ಬಳಸಬಾರದೆಂದು ಎಚ್ಚರಿಕೆ ನೀಡುವುದರೊಂದಿಗೆ ಕನ್ನಡದ ಜಾಯಮಾನಕ್ಕೆ ತಕ್ಕಂತೆ ಸಂಸ್ಕೃತವನ್ನು ಹೇಗೆ ಬಳಸಬೇಕೆಂದು ಕೂಡ ಹೇಳಿದ್ದಾನೆ.

೩. ಕವಿರಾಜಮಾರ್ಗಕಾರನು ಕನ್ನಡ ಶಬ್ದಕೋಶವನ್ನು ಎರಡು ರೀತಿಯಾಗಿ ವರ್ಗೀಕರಿಸಿದ್ದಾನೆ.

೧. ಸಮಸಂಸ್ಕೃತ : ಅ. ಸಂಸ್ಕೃತ ಮತ್ತು ಕನ್ನಡದಲ್ಲಿ ಬಳಕೆಯಾಗುವ ಪದಗಳು.
ಆ. ಯಾವ ವ್ಯತ್ಯಾಸವನ್ನು ಪಡೆಯದ ಸಂಸ್ಕೃತ ಪದಗಳು.
ಇ. ಕೊನೆಯಲ್ಲಿ ಮಾತ್ರ ಅತ್ಯಲ್ಪ ವ್ಯತ್ಯಾಸವನ್ನು ಪಡೆಯುವ ಸಂಸ್ಕೃತ ಪದಗಳು.

೨. ಕನ್ನಡ : ದೇಶ್ಯ ಪದಗಳು ಅಥವಾ ಕನ್ನಡಕ್ಕೆ ವಿಶಿಷ್ಟವಾದ ಪದಗಳು.

ಸಮಸಂಸ್ಕೃತದ ಬಗ್ಗೆ ಮಾರ್ಗಕಾರನ ಅಭಿಪ್ರಾಯ ಹೀಗಿದೆ :

ಸಮಸಂಸ್ಕೃತಂಗಳೊಳ್
ಸ್ಯೆತಂ, ಅರ್ಮರ್ದಿರೆ,
ಕನ್ನಡಂ ಅಱಿದು
ಪೇೞ್ಗಿಂ ಎಂಬುದು
ಆಗಮ ಕೋವಿದ
ನಿಗದಿತ ಮಾರ್ಗಂ,
ಇದಂ ಬೆರಸಲ್ಕಂ ಆಗದು, ಈ ಸಕ್ಕದದೊಳ್

ಸಮಸಂಸ್ಕೃತ ಪದಗಳನ್ನು ಕನ್ನಡದ ಜೊತೆಗೆ ಬಳಸಬಹುದು. ಆದರೆ ಕನ್ನಡ ಧಾತು + ಸಮಸಂಸ್ಕೃತಧಾತುಗಳನ್ನು ಬೆರಸಿ ಸಮಸ್ತ ಪದವನ್ನು ಮಾಡಕೂಡದು. ನಾಗವರ್ಮ, ಕೇಶಿರಾಜರ ಆಶಯವು ಇದೇ ಆಗಿದೆ.

೪. ಸಂಸ್ಕೃತ - ಕನ್ನಡಗಳ ಸಮಾಸವು (ಸಮಸ್ತಪದ) ಕನ್ನಡ ಜಾಯಮಾನಕ್ಕೆ ಹೊಂದಿಕೆಯಾಗುವುದಿಲ್ಲ. ಅದನ್ನೇ ಹೀಗೆ ಹೇಳಿದ್ದಾನೆ :

ತಱಿಸಂದ ಆ ಸಕ್ಕದಮುಮಂ,
ಅಱಿಯದೆ ಕನ್ನಡಮುಮಂ
ಸಮಾಸೋಕ್ತಿಗಳೊಳ್;
ಕುಱಿತು ಬೆರೆಸಿದಡೆ ವಿರಸಂ
ಮಱುಗುವ ಪಾಲ್ಗಳೆಯ
ಪನಿಗಳಂ ಬೆರಸಿದವೋಲ್

ಸಂಸ್ಕೃತವನ್ನೂ ಕನ್ನಡವನ್ನು ಸರಿಯಾಗಿ ಅರಿಯದೆ ಒಂದೇ ಸಮಾಸದಲ್ಲಿ ಕೂಡಿಸಿ ಬೆರಸಿ ಬಿಟ್ಟರೆ, ಕುದಿಯುತ್ತಿರುವ ಹಾಲಿನಲ್ಲಿ ಮಜ್ಜಿಗೆ ಹನಿಗಳನ್ನು ಬೆರಸಿದಂತೆ ವಿರಸವಾಗುವುದು. ಕನ್ನಡ ಮತ್ತು ಸಂಸ್ಕೃತ ರಚನೆಗಳು ಹೊಂದಿಕೆಯಾಗದಿದ್ದಾಗ ಒತ್ತಾಯ ಪೂರ್ವಕವಾಗಿ ಅವುಗಳನ್ನು ಸೇರಿಸಿ ಸಮಾಸ ಮಾಡಬಾರದು. ಒಂದು ವೇಳೆ ಹಾಗೆ ಮಾಡಿದರೆ ಅರ್ಥಕ್ಕೆ ಧಕ್ಕೆಯಾಗುತ್ತದೆ ಎಂದು ಎಚ್ಚರ ನೀಡಿರುವನು. "ಅರಸುಕುಮಾರ" ಮೊದಲಾದುವು ಸಂಸ್ಕೃತ-ಕನ್ನಡ ಬೆರಕೆಯ ಅರಿಸಮಾಸಗಳು. ಇದಕ್ಕೆ ತಿದ್ದುಪಡಿಯಾಗಿ "ನರಪತಿತನಯ" ಎಂಬಂತಹ ಸಮಾಸ ಪದಗಳ ಬಳಕೆಗೆ ಕನ್ನಡದಲ್ಲಿ ಮನ್ನಣೆಯಿದೆ.

ಎಂದು ಇಂತು ಸಮಾಸೋಕ್ತಿಯೊಳ್
ಒಂದಾಗಿರೆ, ಸಕ್ಕದಂಗಳುಂ
ಕನ್ನಡಮುಂ । ಸುಂದರಂ ಅಕ್ಕುಂ
ಕವಿಪದಂ ಒಂದಿದ ವೋಲ್
ಕನಕರಚನೆಯೊಳ್ ಮಣಿನಿಕರಂ

ಹೀಗೆ, ಸಂಸ್ಕೃತ ಪದಗಳೂ ಕನ್ನಡ ಪದಗಳೂ ಸಮಾಸದಲ್ಲಿ ಹಿತವಾಗಿ ಬಂದಾಗ ಮಾತ್ರ ಕವಿಯ ಪದ ಪ್ರಯೋಗಗಳು ಚಿನ್ನದಕಟ್ಟಿನಲ್ಲಿ ಕೂಡಿ ಶೋಭಿಸುವ ರತ್ನ ಸಮೂಹದಂತೆ ಸುಂದರವೆನಿಸುವವು. ಸಂಸ್ಕೃತ+ಕನ್ನಡ ಪದಗಳು ಹದವರಿತು ಬೆರೆತಾಗ ಭಾಷೆಯ ಅರ್ಥಸೌಂದರ್ಯ, ಕಾವ್ಯಸೌಂದರ್ಯ ಹೆಚ್ಚುತ್ತದೆ. ಇದರಿಂದ ಕನ್ನಡ ಯಾವ ವೈಯಾಕರಣಿಗಳಿಗೂ ಇಲ್ಲದ ಸಂಸ್ಕೃತ, ಸಮಸಂಸ್ಕೃತಗಳ ವಿಚಿತಜ್ಞಾನ ಮಾರ್ಗಕಾರನಿಗೆ ಇದೆಯೆಂದು ವ್ಯಕ್ತವಾಗುತ್ತದೆ.

೫. ದಂಡಿ, ಭಾಮಹರಂತೆ ಮಾರ್ಗಕಾರನು ಕಾವ್ಯದ ನಾಲ್ಕು ದೋಷಗಳನ್ನು ಕುರಿತು ಹೇಳುತ್ತಾನೆ. ಶ್ರುತದುಷ್ಟ (ಕೇಳಲು ಅಹಿತ), ಅರ್ಥದುಷ್ಟ (ಅಹಿತವಾದ ಅರ್ಥ),

ಶ್ರುತಿಕಷ್ಟ (ಕಿವಿಗೆ ಕರ್ಕಶ) ಮತ್ತು ಕಲ್ಪನೋಕ್ತಿಕಷ್ಟಂ (ಕಲ್ಪಿತ ವಚನದಲ್ಲಿ ಅಸಹ್ಯತೆ) ಇವುಗಳ ಬಗ್ಗೆ ಹೇಳಿ ಕಾರಕ, ವಚನ, ಸಮುಚ್ಚಯ, ವಿಕಲ್ಪ, ಅವಧಾರಣೆ, ವಿಶಂಕೆ, ನೇಯಗಳ ಗುಣದೋಷಗಳ ವಿವೇಚನೆ ಇವು ಕನ್ನಡ ಭಾಷೆಯ ದೃಷ್ಟಿಯಿಂದ ಮೌಲಿಕ ಭಾಗವಾಗಿವೆ. ಸಂಸ್ಕೃತದಲ್ಲಿ ಏಕ, ದ್ವಿ, ಬಹು ಎಂದು ವಚನಗಳು ಮೂರು ಇದಕ್ಕೆ ಮಾರುಹೋಗದೆ ಮಾರ್ಗಕಾರನು "ವಚನಮೇಕ ಬಹುಕ್ರಮದಿಂದೆಜಿಟ್ಟಿಜಿತ್ತು" ಎಂದು ಕನ್ನಡ ವಚನ ಸಂಖ್ಯೆಯನ್ನು ಸ್ಪಷ್ಟಪಡಿಸಿರುವನು. ಈ ಬಗ್ಗೆಯೂ ಸಹಿತ ಅವನಿಗೆ ಖಚಿತತೆಯಿದೆ (ಕೇಶಿರಾಜನಿಗೆ ಖಚಿತತೆ ಇಲ್ಲ).

೬. ಭಾಷೆಯ ಕುರಿತು ಹೇಳುವಾಗ ಮಾರ್ಗಕಾರನ "ದಕ್ಷಿಣೋತ್ತರಮಾರ್ಗಂ" ಎಂಬ ಪರಿಕಲ್ಪನೆ ಮುಖ್ಯವಾದುದು. ದಂಡಿಯ ವೈದರ್ಭಿ, ಗೌಡಿ ಮಾರ್ಗಗಳನ್ನೇ ಈತನು ದಕ್ಷಿಣ ಮಾರ್ಗ, ಉತ್ತರಮಾರ್ಗಗಳೆಂದು ಕರೆದಿರುವುದು. ಸ್ಪಷ್ಟವಾಗುತ್ತದೆ. ಹೀಗಾಗಿ ಕವಿರಾಜಮಾರ್ಗದ ಮಾರ್ಗವಿಚಾರವು ಕಾವ್ಯಲಕ್ಷಣಕ್ಕೆ ಸಂಬಂಧಿಸಿದೆ. ಅವನೇ ಹೇಳಿದ ಪ್ರಕಾರ ನೋಡುವೆನ್, ಬೇಡುವೆನ್, ಬರಿಸುವೆನ್, ಇರಿಸುವೆನ್, ತರಿಸುವೆನ್ ಎಂಬ ಕ್ರಿಯಾಪದವನ್ನೊಳಗೊಂಡ ರಚನೆ ಉತ್ತರಮಾರ್ಗ. ಈ ಕ್ರಿಯಾಪದಗಳ ಇನ್ನೊಂದು ರೂಪವಾದ ನೋಟ್ಟಿನ್, ಬೇಟ್ಟಿನ್, ಬರಿಪೆನಂ, ಇರಿಪೆನ್, ತರಿಪೆನ್ ಎಂಬವುಗಳ ನ್ನೊಳಗೊಂಡ ರಚನೆ ದಕ್ಷಿಣಮಾರ್ಗ ಎಂದು ಈತ ಹೇಳುವನು. ಇವು ಕ್ರಿಯಾಪದ ಗಳಲ್ಲಿ ಕಂಡುಬರುವ ಶಾಬ್ದಿಕ ವಿಕಲ್ಪಗಳೇ ಹೊರತು ಪ್ರಾಂತಭೇದಗಳಲ್ಲ. ಭಾಷಾ ಪ್ರಭೇದಗಳಲ್ಲಿ ಅರ್ಥವ್ಯತ್ಯಾಸವಿದ್ದರೆ ಮಾತ್ರ ಪ್ರಾಂತಭೇದಗಳಾಗುತ್ತವೆ.

ಒಟ್ಟಾರೆ, ಕವಿರಾಜಮಾರ್ಗವು ಕೇವಲ ಕನ್ನಡ ಭಾಷಾಭಿಮಾನವನ್ನು ರೂಪಿಸುವ, ಪ್ರೇರೇಪಿಸುವ ಕೃತಿಯಲ್ಲ; ಸಂಸ್ಕೃತ ಅಲಂಕಾರ ಗ್ರಂಥಗಳ ಛಾಯಾನುವರ್ತಿಯೂ ಅಲ್ಲ; ಕನ್ನಡ ಕಾವ್ಯಭಾಷೆಯ ಆರಂಭದ ಘಟ್ಟದಲ್ಲಿ ಕನ್ನಡ ನಾಡು, ನುಡಿ, ಸಂಸ್ಕೃತಿಯ ಸ್ವರೂಪ, ಸ್ಥಿತಿಗತಿಯನ್ನು ತಿಳಿಸುವ ಸಾಂಸ್ಕೃತಿಕ ಪಠ್ಯವಾಗಿದೆ. ಕನ್ನಡ ಭಾಷೆ, ಸಂಸ್ಕೃತಿಗೆ ಸಂಬಂಧ ಪಟ್ಟಂತೆ ಹಲವಾರು ವೈಶಿಷ್ಟ್ಯಗಳು ಈ ಕೃತಿಯಲ್ಲಿ ಅಡಕವಾಗಿವೆ. ಕವಿರಾಜಮಾರ್ಗದ ಉದ್ದೇಶ ಪ್ರಮಾಣ ಕನ್ನಡದ ಹುಡುಕುವಿಕೆ; ಕನ್ನಡದ ಸಾತತ್ಯ ಶೋಧಿಸುವಿಕೆ; ಭಾಷೆಯ ಚರಿತ್ರೆಯನ್ನು ಕಟ್ಟಿಕೊಡುವುದು; ಕನ್ನಡದ ಜಯಮಾನ ಹುಡುಕುವುದು ಹಾಗೂ ಕನ್ನಡ ಭಾಷೆಯ ಚಲನಶೀಲತೆಯನ್ನು ಗುರುತಿಸುವುದೇ ಆಗಿದೆ. ಈ ಎಲ್ಲ ಕಾರಣಗಳಿಂದ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸಮರ್ಥನೆಗೆ ಕವಿರಾಜಮಾರ್ಗ ಅಧಿಕೃತ ಪ್ರಾಚೀನ ಪುರಾವೆಯಾಗಿದೆ.

ಆಕರಗ್ರಂಥ

೧. ಅಂಗಡಿ ಎಸ್.ಎಸ್., ೨೦೦೯, ಸರಳ ಕವಿರಾಜಮಾರ್ಗ, ಮಂಗಳಾ ಪ್ರಕಾಶನ, ಹೊಸಪೇಟೆ.

೨೫

ವಚನ ಸಾಹಿತ್ಯ : ಸ್ತ್ರೀ ಸಂವೇದನೆ ಮತ್ತು ಭಾಷೆ

ಕನ್ನಡ ಸಾಹಿತ್ಯಕ್ಕೆ ಸುಮಾರು ಸಾವಿರದ ಐನೂರು ವರ್ಷಗಳ ಇತಿಹಾಸವಿದೆ. ಆದರೆ ಅಷ್ಟು ವರ್ಷಗಳ ಕಾಲವೂ ಸ್ತ್ರೀಪರವಾದ, ಸ್ತ್ರೀ ವಿಚಾರಗಳನ್ನು ಪ್ರತಿಧ್ವನಿಸುವ ಸಾಹಿತ್ಯ ರಚನೆಯಾದುದು ತುಂಬ ಕಡಿಮೆ. ಹತ್ತನೆಯ ಶತಮಾನದಲ್ಲಿ ಅತ್ತಿಮಬ್ಬೆ ತಾನು ಬರೆಹಗಾರ್ತಿಯಾಗದಿದ್ದರೂ ತನ್ನ ಸಂಪತ್ತನ್ನು ಜೈನಧಾರ್ಮಿಕ ಕೃತಿಯಾದ ಶಾಂತಿಪುರಾಣ ವನ್ನು ಪ್ರಚಾರ ಮಾಡಲು ಬಳಸಿದ್ದು ಹಾಗೂ ರನ್ನನ ಸಾಹಿತ್ಯಕ ಚಟುವಟಿಕೆಗಳಿಗೆ ಪ್ರೋತ್ಸಾಹವನ್ನು ನೀಡಿದ್ದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸ್ಮರಿಸುವಂತಹ ಮಹತ್ವದ ಘಟ್ಟ.

ಹನ್ನೆರಡನೆಯ ಶತಮಾನದ ವಚನ ಸಾಹಿತ್ಯ ಸ್ತ್ರೀಪರವಾದ ಚಳುವಳಿಗೆ ವೈಚಾರಿಕವಾದ ಭದ್ರಬುನಾದಿಯನ್ನು ಹಾಕಿತು ಎಂದು ಹೇಳಿದರೆ ಉತ್ಪ್ರೇಕ್ಷೆಯಾಗಲಿಕ್ಕಿಲ್ಲ. ಸಂಸಾರದ ಸಾಂಸ್ಥಿಕ ಬಂಧನದಿಂದ ಹೊರಬಂದು ಮಹಿಳೆ ತನ್ನ ಮಾರ್ಗವನ್ನು ತಾನೇ ಆಯ್ದುಕೊಳ್ಳ ಬಹುದು ಎಂಬ ಸಿದ್ಧಾಂತಕ್ಕೆ ಒಂದು ವಿಶಿಷ್ಟವಾದ ತಿರುವನ್ನು ನೀಡಿದ ಅಕ್ಕಮಹಾದೇವಿಯ ಬದುಕು-ಬರೆಹಗಳು ಕನ್ನಡ ಸಾಹಿತ್ಯದ ಸ್ತ್ರೀಪರ ಚಿಂತನೆಯ ಚರಿತ್ರೆಯಲ್ಲಿ ಮಹತ್ವದ ಘಟ್ಟಗಳು. ಅಕ್ಕಮಹಾದೇವಿಯ ಮಾರ್ಗದಲ್ಲಿ ಮುನ್ನಡೆದ ಮುಕ್ತಾಯಕ್ಕ, ಕಾಳವ್ವೆ, ಗಂಗಾಬಿಕೆ ಮುಂತಾದ ಶರಣರ ಬರೆಹಗಳಲ್ಲಿ ಸ್ತ್ರೀವಾದಿ ತತ್ವಗಳ ಛಾಯೆಯನ್ನು ಗುರುತಿಸಬಹುದು. ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಸಾಂಸ್ಕೃತಿಕ ನೆಲೆಗಳನ್ನು ಹುಡುಕುವಾಗ ಶರಣರ ವಚನಗಳಿಗೆ ಆದ್ಯತೆ ನೀಡಬೇಕಾಗುತ್ತದೆ.

ಸಾಹಿತ್ಯದ ಪ್ರತಿಯೊಂದು ಸಾಮಾಜಿಕ ಚಳುವಳಿಯ ಅತ್ಯಂತ ಪ್ರಬಲ ಸಾಧನಗಳಲ್ಲಿ ಭಾಷೆಯೂ ಒಂದು. ಭಾಷಿಕರ ಭಾವನೆಗಳನ್ನು, ಅನುಭವಗಳನ್ನು ಹೊರತರುವ ಅತ್ಯಂತ ಪ್ರಬಲ ಮಾಧ್ಯಮ ಭಾಷೆಗಿರುವುದರಿಂದ ಅದು ಬದುಕಿನ ದಿಕ್ಕನ್ನೇ ಬದಲಾಯಿಸುತ್ತದೆ.

ಮಹಿಳೆಯರ ಸಂವೇದನೆಗಳಿಗೆ ಸೂಕ್ಷ್ಮ ಗ್ರಹಿಕಾಶಕ್ತಿಗೆ ಅವರ ಭಾಷಾ ನಿರ್ವಚನ ಪ್ರಮುಖ ಪಾತ್ರವಹಿಸುತ್ತದೆ. ಸ್ತ್ರೀಯ ಭಾಷೆ-ಲಯ-ನಾದ ಪುರುಷರಿಗಿಂತ ಭಿನ್ನವಾಗಿರುತ್ತದೆ. ತನ್ನ ತನದ ಅಭಿವ್ಯಕ್ತಿಗೆ ಆಕೆ ಬಳಸುವ ಭಾಷೆ ಅವಳ ಅಸ್ತಿತ್ವವನ್ನು ಪುರುಷ ಲೋಕದ ವೈಭವೀಕರಣಕ್ಕೆ ವಿರುದ್ಧ ನಡೆಯುವ ತತ್ಪರಿಣಾಮವಾಗಿ ಲಿಂಗ ಸಮಾನತೆಯನ್ನು ಬಿಂಬಿಸುತ್ತದೆ. ಕೌಟುಂಬಿಕ ಪರಿಸರದಲ್ಲಿ ನಡೆಯುವ ಸಾಮಾಜೀಕರಣ ಪ್ರಕ್ರಿಯೆ ಭವಿಷ್ಯದಲ್ಲಿ ಜೀವನವನ್ನು ಕುರಿತಂತೆ ತಳೆಯಬಹುದಾದ ಭಾಷಿಕ ನಿಲುವು, ಒಲವುಗಳಿಗೆ ಭದ್ರ ಬುನಾದಿಯನ್ನು ಹಾಕಿ ಕೊಡುತ್ತದೆ. ಭಾಷಿಕ ಕ್ರಿಯೆಗಳು ಬದುಕಿನ ಹಲವು ವಲಯಗಳಲ್ಲಿ ನಡೆಯುವುದರಿಂದ ಆ ವಿಭಿನ್ನ ಸಾಮಾಜೀಕರಣದ ಪರಿಣಾಮಗಳನ್ನು ಭಾಷಿಕರು ಎದುರಿಸಬೇಕಾಗುತ್ತದೆ. ಬದಲಾಗುತ್ತಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರು ತಮ್ಮ ಭಾವನೆಗಳನ್ನು, ಆಲೋಚನೆಗಳನ್ನು ನಿರ್ಭಯವಾಗಿ ಅಭಿವ್ಯಕ್ತಿಸಿದ್ದಾರೆ. ಸ್ತ್ರೀಪರವಾದ ಧೋರಣೆಯ ಪುನರ್ ಮೌಲೀಕರಣದಲ್ಲಿ ಅವರು ಬಳಸುವ ಭಾಷೆ ತುಂಬ ಮಹತ್ವದ ಪಾತ್ರವಹಿಸುತ್ತದೆ. ವಚನಕಾರರ ರಚನೆಗಳು ಇದಕ್ಕೆ ಹೊರತಲ್ಲ. ವಚನಕಾರರು ತಮಗೆ ಅನಿಸಿದ್ದನ್ನು ತಮ್ಮ ಸಾಮಾಜಿಕ ಸಂದರ್ಭದ (ಔಪಚಾರಿಕ ಮತ್ತು ಅನೌಪಚಾರಿಕ) ಭಾಷೆ ಮತ್ತು ಲಯದಲ್ಲಿ ಅಭಿವ್ಯಕ್ತಿಸಿದ್ದಾರೆ. ಆ ಸಂದರ್ಭದಲ್ಲಿ ಒಂದು ಬಗೆಯ ಸಾಂಸ್ಕೃತಿಕ ಕಾವ್ಯ ಸಂಯೋಜನೆಯ ಕ್ರಿಯೆ ಅವರ ರಚನೆಗಳಲ್ಲಿ ನಡೆದಿದೆ.

೧

ಮಹಿಳೆಯ ಸಂವೇದನೆ ಗ್ರಹಿಕೆಯ ಲಯ, ಗತಿ ಪುರುಷ ಸಂವೇದನೆಗಳಿಂಗಿಂತ ಭಿನ್ನವಾಗಿದೆ. ಕೆ.ವಿ. ನಾರಾಯಣ ಅವರು ಒಂದು ಸಂದರ್ಭದಲ್ಲಿ ಹೇಳಿದ ಮಾತುಗಳನ್ನೇ ಬಳಸಿ ಹೇಳುವುದಾದರೆ 'ಸ್ತ್ರೀ ಭಾಷೆ ಸದ್ದಿನಿಂದ ಮೌನದ ಕಡೆಗೆ ಚಲಿಸುತ್ತದೆ. ಅದು ಸಂಬಂಧ ಮೂಲವಾದುದು. ಭಾವನೆಗಳನ್ನು ಪಡೆದುಕೊಳ್ಳುವ ಮತ್ತು ಶೇಖರಿಸಿಟ್ಟುಕೊಳ್ಳುವ ಭಾಷಿಕ ಕ್ರಿಯೆ ಅಲ್ಲಿರುತ್ತದೆ. ಸ್ತ್ರೀವಾದಿ ಚಿಂತನೆ ಸ್ತ್ರೀ ಸಂವೇದನೆಯ ಜೈವಿಕ ಪರಿಗ್ರಹಿಕೆಯನ್ನು ನಿರಾಕರಿಸುತ್ತದೆ'. ಲಿಂಗಾಧರಿತ ವ್ಯವಸ್ಥೆಯಲ್ಲಿ ಹೆಣ್ಣು ಗಂಡಿಗೆ ವಿಭಿನ್ನ ಅನುಭವಗಳಿವೆ ಎಂಬುದು ತಾತ್ವಿಕ ಸತ್ಯ. ಈ ವಿಭಿನ್ನ ಅನುಭವಗಳನ್ನು ಅಭಿವ್ಯಕ್ತಿಸಲು ವಿಭಿನ್ನ ಭಾಷಾರೂಪ ಅಗತ್ಯವಿದೆ. ಹೆಣ್ಣಿನ ಅಸ್ತಿತ್ವದ ಬಗ್ಗೆ ನೇತ್ಯಾತ್ಮಕವಾದ ಪುರುಷ ಲಯ ಭಾಷೆಯಲ್ಲಿ ಹೆಣ್ಣು ತನ್ನ ಅನುಭವವನ್ನು ಅಭಿವ್ಯಕ್ತಿಸುವುದು ಹೇಗೆ? ಭಾಷೆ ಎನ್ನುವುದು ಕೇವಲ ಪದಗಳ ಗುಂಪಲ್ಲ. ಅದು ಒಂದು ಸಂಸ್ಕೃತಿಯ ನಿರ್ದಿಷ್ಟ ದೃಷ್ಟಿಕೋನದ ಪ್ರತಿಬಿಂಬ. ಒಂದು ಸಂಸ್ಕೃತಿಯ ನಡೆ-ನುಡಿ, ನಂಬಿಕೆ-ಆಚರಣೆಗಳು-ಆಲೋಚನೆಗಳು ಭಾಷೆಯ ಮೂಲಕ ಹೊರಹೊಮ್ಮುತ್ತಲೇ ಅಸ್ತಿತ್ವ ಪಡೆದುಕೊಳ್ಳುತ್ತವೆ. ಒಂದು ಭಾಷಾ ಸ್ವರೂಪದ ಹಿಂದೆ ಒಟ್ಟು ಆ ಭಾಷಾಸಮುದಾಯದ ಅನುಭವ, ಆಲೋಚನೆಗಳು ಕೆಲಸ ಮಾಡುತ್ತವೆ. ವಚನ

ಸಾಹಿತ್ಯದ ಉಗಮಕ್ಕಿಂತ ಹಿಂದೆ ಸ್ತ್ರೀಯರ ಪರಿಸ್ಥಿತಿ ತುಂಬ ಶೋಚನೀಯವಾಗಿತ್ತು. ಮನೆಬಿಟ್ಟು ಆಚೆ ಅವರು ಹೋಗುವಂತಿರಲಿಲ್ಲ. ಅವರಿಗೆ ವ್ಯಕ್ತಿ ಸ್ವಾತಂತ್ರ್ಯವಿರಲಿಲ್ಲ. ಅಂತಹ ಉಸಿರುಗಟ್ಟುವ ವಾತಾವರಣದ ಸಂದರ್ಭದಲ್ಲಿ ಹುಟ್ಟಿಕೊಂಡ ವಚನಕಾರರು ಸ್ತ್ರೀ ಸಮಾಜವನ್ನು ಸಾಮಾಜಿಕ ನ್ಯಾಯದ ಮೇಲೆ ಕಟ್ಟಲು ಹೆಣಗಿದರು. ಸ್ತ್ರೀಯರು ಪುರುಷರಷ್ಟೇ ಸಮಾನರು ಎಂಬ ಲಿಂಗ ಸಮಾನತೆಯ ತತ್ವವನ್ನು ಅವರು ಪ್ರತಿಪಾದಿಸಿದರು.

ಮೊಲೆ ಮುಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮ
ಗಂಡು ಅಲ್ಲ ಹೆಣ್ಣು ಅಲ್ಲ ಕಾಣಾ ರಾಮನಾಥ - ಜೇಡರ ದಾಸಿಮಯ್ಯ

ದಾಸಿಮಯ್ಯನ ಪ್ರಕಾರ ಗಂಡು-ಹೆಣ್ಣಿನ ವ್ಯತ್ಯಾಸ ಕೇವಲ ದೈಹಿಕ ವ್ಯತ್ಯಾಸಗಳ ಮೇಲೆ ಸ್ಥಾಪಿತವಾಗದೆ ಅವರೊಳಗಿನ ಆತ್ಮಕ್ಕೆ ಭೇದವಿಲ್ಲ ಎಂದು ಹೇಳಿ ಲಿಂಗಭೇದವನ್ನು ಅಳಿಸಿಹಾಕಿದರು. ಗೊಗ್ಗವ್ವೆ, ಸತ್ಯಕ್ಕರು ತಮ್ಮ ವಚನಗಳಲ್ಲಿ ಆತ್ಮಕ್ಕೆ ಲಿಂಗಭೇದವಿಲ್ಲವೆಂದು ಒತ್ತಿ ಹೇಳಿ ಲಿಂಗ ಸಮಾನತೆಯನ್ನು ಪ್ರತಿಪಾದಿಸಿದರು. ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣು-ಹೊನ್ನು-ಮಣ್ಣು ಇವು ಮೂರನ್ನು ಮಾಯೆಯೆಂದು ಪರಿಗಣಿಸಿ ಅನರ್ಥಕ್ಕೆ ಗುರಿಪಡಿಸಲಾಗಿತ್ತು. ಈ ವಿಷಮ ಸ್ಥಿತಿಯನ್ನು ಶರಣರು 'ಮಾಯೆ' ಎಂಬ ಪರಿಕಲ್ಪನೆಯ ಬಗೆಗಿದ್ದ ತಪ್ಪು ನಂಬಿಕೆಯಿಂದ ಹೊಡೆದು ಹಾಕಿ ಹೆಣ್ಣನ್ನು ಮಾಯಾ ಸೆರೆಯಿಂದ ಮುಕ್ತಗೊಳಿಸಿದರು.

ಹೊನ್ನು ಮಾಯೆಯೆಂಬರು
ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬರು
ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬರು
ಮಣ್ಣು ಮಾಯೆಯಲ್ಲ
ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರ - ಅಲ್ಲಮ

ಅಲ್ಲಮನ ಪ್ರಕಾರ ಕೇವಲ ಹೆಣ್ಣು-ಹೊನ್ನು-ಮಣ್ಣುಗಳು ಮಾತ್ರ ಮಾಯೆಯಲ್ಲ. ಮನದ ಮುಂದಣ ಆಸೆಯೇ ಮಾಯೆ ಎಂದು ಸಾರಿ ಸಮಾಜದಲ್ಲಿ ಹೆಣ್ಣಿನ ಬಗೆಗಿದ್ದ ತಪ್ಪು ಕಲ್ಪನೆ ತೊಡೆದುಹಾಕಿ ಅವಳು ಪುರುಷನಂತೆ ಒಂದು ಜೀವ ಎಂಬ ಹಿತಕರ ವಾತಾವರಣವನ್ನು ಸಮಾಜದಲ್ಲಿ ಮೂಡಿಸಿದರು. ಹೆಣ್ಣಿಗೆ ಕೊಟ್ಟ ಈ ಸಮಾನತೆ ವಚನಕಾರರ ಅಭೂತಪೂರ್ವ ಸಾಧನೆಯಾಗಿದೆ. ಆದರೆ ಸ್ತ್ರೀ ಕುರಿತು ಬಸವಣ್ಣನವರ ನಿಲುವುಗಳನ್ನು ಪರಿಶೀಲಿದಾಗ ಅವರ ಮನೋಧೋರಣೆ ಸ್ಪಷ್ಟವಾಗುತ್ತದೆ.

ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ
ಮೋಹಕ್ಕೆ ಮಗಳಾಗಿ ಹೆತ್ತಳು ಮಾಯೆ
ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ
ಇದಾವ ಪರಿಯಲ್ಲು ಕಾಡಿತ್ತು ಮಾಯೆ
ಈ ಮಾಯೆಯ ಕಳೆವಡೆ ಎನ್ನಳವಲ್ಲ ನೀವೆ ಬಲ್ಲಿರಿ ಕೂಡಲ ಸಂಗಮದೇವ

ಬಸವಣ್ಣನವರಿಗೆ ಹೆಣ್ಣು ಮಾಯೆಯಾಗಿಯೇ ಕಂಡಳು. ಅದು ಅವರ ಮೂರು-ನಾಲ್ಕು ವಚನಗಳಲ್ಲಿ ಪುನರಾವರ್ತನೆಯಾಗುತ್ತದೆ. ಅವರೇ ಬೇರೊಂದು ವಚನದಲ್ಲಿ

ಗಂಡನ ಮೆಲೆ ಸ್ನೇಹವಿಲ್ಲದ ಹೆಂಡತಿ
ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತಿ
ಇದ್ದರೇನೋ ಶಿವಶಿವಾ ಹೋದರೇನೋ
ಕೂಡಲಸಂಗಮದೇವ, ಕೇಳಯ್ಯ

ಗಂಡನ ಮೇಲೆ ಸ್ನೇಹ ಇಲ್ಲದಿದ್ದರೆ ಅದು ನಿಜವಾದ ದಾಂಪತ್ಯವಲ್ಲ, ಸರಿ. ಆದರೆ ಹೆಣ್ಣಿನ ಮೇಲೆ ಗಂಡನಿಗಿರಬೇಕಾದ ಸ್ನೇಹದ ಬಗ್ಗೆ ಬಸವಣ್ಣನವರು ಯೋಚಿಸುವುದಿಲ್ಲ. ಹೆಣ್ಣನ್ನು ಕುರಿತು ಬಸವಣ್ಣನವರ ನಿಲುವು ಸಾಂಪ್ರದಾಯಕವಾಗಿತ್ತು; ವ್ಯವಸ್ಥೆಗೆ ಪೂರಕವಾಗಿತ್ತು. ಅದಕ್ಕೆ ಮುಖ್ಯಕಾರಣ ಆ ಕಾಲದ ಸಾಮಾಜಿಕ ಒತ್ತಡವನ್ನು ಮೀರುವುದು ಅವರಿಗೆ ಸಾಧ್ಯವಾಗಲಿಲ್ಲ. ವ್ಯವಸ್ಥೆ ಬಸವಣ್ಣನಂತಹವರನ್ನು ತನ್ನ ಮುಷ್ಟಿಯೊಳಗೆ ಹಾಕಿಕೊಂಡಿತ್ತು.

ವಚನ ಸಂಸ್ಕೃತಿಯಲ್ಲಿ ಶರಣರು ದಾಂಪತ್ಯ ಜೀವನ ನಡೆಸುತ್ತಲೇ ತುಂಬ ಕಾಯಕ ನಿಷ್ಠರಾಗಿದ್ದರು ಅಂತಹ ಶರಣ ದಂಪತಿಗಳು ನಮಗೆ ದೊರೆಯುತ್ತಾರೆ. ಆಯ್ದಕ್ಕಿ ಮಾರಯ್ಯ-ಆಯ್ದಕ್ಕಿ ಲಕ್ಕಮ್ಮ, ಮೋಳಿಗೆ ಮಾರಯ್ಯ-ಮೋಳಿಗೆ ಮಹಾದೇವಿಯಮ್ಮ, ಉರಿಲಿಂಗ ಪೆದ್ದಿ- ಕಾಳವ್ವೆ ಮುಂತಾದವರು. ಅವರ ವಿಶೇಷವೆಂದರೆ ವಚನ ಸಂಸ್ಕೃತಿಯಲ್ಲಿ ಶರಣ ದಂಪತಿಗಳು ಮಕ್ಕಳಿಗಾಗಿ ಹಂಬಲಿಸುವ ಉದಾಹರಣೆಗಳು ದೊರೆಯುವುದಿಲ್ಲ. ಕಾಯಕ, ದಾಸೋಹ ಅವರಿಗೆ ಮುಖ್ಯವಾಗುತ್ತದೆ. ಆಯ್ದಕ್ಕಿ ಮಾರಯ್ಯ ಅಗತ್ಯಕ್ಕಿಂತ ಹೆಚ್ಚು ಅಕ್ಕಿ ತಂದಾಗ ಅವನ ಹೆಂಡತಿ ಲಕ್ಕಮ್ಮ ಪ್ರಶ್ನಿಸುತ್ತಾಳೆ. "ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ...... ಅಲ್ಲಿಯೇ ಸುರಿದು ಬನ್ನಿ" ಎಂದು ಗಂಡನಿಗೆ ಆಜ್ಞೆ ಮಾಡುತ್ತಾಳೆ. ವಚನ ಸಂಸ್ಕೃತಿಯಲ್ಲಿ ಗಂಡನಿಗೆ ತಿಳಿಹೇಳುವ ಅಧಿಕಾರ ಹೆಣ್ಣಿಗಿದೆ. ವಚನಕಾರರ ಕಾಲಕ್ಕೆ ಅಂತಹ ಒಂದು ವೈಚಾರಿಕ ಸಂಪ್ರದಾಯ ನಿರ್ಮಾಣವಾಗಿತ್ತು. ಅಕ್ಕಮಹಾದೇವಿ ಸಿದ್ಧಮಾದರಿಯ ಸಮಾಜರಚನೆಯನ್ನು ಪ್ರಶ್ನಿಸಿದ ಚಿಂತನೆಗಳು ಅವಳ ವಚನಗಳಲ್ಲಿವೆ.

ಅತ್ತೆ ಮಾಯೆ ಮಾವ ಸಂಸಾರಿ
ಮೂವರು ಮೈದುನರು ಹುಲಿಯಂಥಾ ಅವದಿರು

ನಾಲುವರು ನಗೆವೆಣ್ಣು ಕೇಳು ಕೆಳದಿ !
ಐವರು ಭಾವದಿರನೊಯ್ಯು ದೈವವಿಲ್ಲ!
ಆರು ಪ್ರಜೆಯತ್ತಿಗೆಯರ ಮೀರಲಾರೆನು ತಾಯೆ!
ಹೇಳುವೆಡೆ, ಏಳು ಪ್ರಜೆ ತೊತ್ತಿರ ಕಾವಲು!
ಕರ್ಮವೆಂಬ ಗಂಡನ ಬಾಯಿ ಟೊಣೆದು
ಹಾದರವ ನಾಡುವೆನು ಹರನ ಕೂಡೆ!
ಮನವೆಂಬ ಸಖಿಯ ಪ್ರಸಾದದಿಂದ
ಅನುಭವವ ಕಲಿತೆನು ಶಿವನೊಡನೆ
ಕರಚೆಲುವ ಶ್ರೀಶೈಲ ಚೆನ್ನಮಲ್ಲಿಕಾರ್ಜುನನ
ಸಜ್ಜನದ ಗಂಡನ ಮಾಡಿಕೊಂಬೆನು

ಸಾಂಪ್ರದಾಯಕ ಸಂಸಾರ ವ್ಯವಸ್ಥೆಯನ್ನು ಅಲ್ಲಿ ಬರುವ ಎಲ್ಲ ಕೌಟುಂಬಿಕ ಸಂಬಂಧ ಗಳನ್ನು ಅಕ್ಕ ಸಾರಾಸಗಟವಾಗಿ ತಿರಸ್ಕರಿಸಿದ್ದಾಳೆ. ತನ್ನೊಳಗಿನ ಒಳತುಟಿಯ ಅನುಭವವನ್ನು ಸೊಗಸಾಗಿ ವಿವರಿಸಿದ್ದಾಳೆ. ಕರ್ಮಠ ವಾತಾವರಣದ ಸಂಸಾರವನ್ನು ಧಿಕ್ಕರಿಸಿ, ಬಿಡುಗಡೆ ಹೊಂದಿ ಸ್ವಾತಂತ್ರ್ಯ ಬಯಸಿದ್ದಾಳೆ. ಸಾಮಾಜಿಕ ವ್ಯವಸ್ಥೆ ವಿಧಿಸಿದ ಎಲ್ಲ ನಿಯಮಗಳನ್ನು ಧಿಕ್ಕರಿಸಿ ತನ್ನಿಚ್ಛೆಯನ್ನು ಮೆರೆದ ವ್ಯಕ್ತಿ ಸ್ವಾತಂತ್ರ್ಯ ಅಕ್ಕನ ಬಾಳಿನ ವಿಶೇಷವಾಗಿದೆ. ಅಕ್ಕ ತನ್ನ ಹೆಣ್ತನವನ್ನೇ ಲಿಂಗಪತಿಗೆ ಒಡ್ಡಿದ ಭಾವ ಅವಳ ವಚನಗಳಲ್ಲಿ ಸೋಪಜ್ಞತೆಯಿಂದ ಮೂಡಿಬಂದಿವೆ. 'ಶರಣಸತಿ-ಲಿಂಗಪತಿ' ಈ ಭಾವ ಶರಣರ ವಚನಗಳ ಸ್ಥಾಯಿ ಭಾವ ವಾಗಿದೆ. ಈ ಕಾರಣಗಳಿಂದಾಗಿ ವಚನಗಳಿಗೆ ವಿಶಿಷ್ಟವಾದ ಭಾವತೀವ್ರತೆಯಿದೆ; ಒಂದು ವಿಶಿಷ್ಟವಾದ ಸ್ವಭಾವ ಲಯವಿದೆ. ವೈದಿಕ ಸಂಸ್ಕೃತಿಯು ಹೆಣ್ಣನ್ನು ಸೂತಕದ, ಹೊಲೆತನದ ರೂಪವಾಗಿ ಪರಿಭಾವಿಸಿತ್ತು. ವಚನ ಸಂಸ್ಕೃತಿಯು ಅದನ್ನು ತಿರಿಸ್ಕರಿಸಿತು. ಸೂತಕದಿಂದ ಬಿಡುಗಡೆ ಹೊಂದುವ ದಾರಿಯನ್ನು ವಚನಕಾರರು ಕಂಡುಕೊಂಡರು.

ಹೆಣ್ಣು ಹೆಣ್ಣಾದೊಡೆ ಗಂಡಿನ ಸೂತಕ
ಗಂಡು ಗಂಡಾದೊಡೆ ಹೆಣ್ಣಿನ ಸೂತಕ
ಮನದ ಸೂತಕ ಹಿಂಗಿದೊಡೆ!
ತನುವಿನ ಸೂತಕ ತೆರೆಹುಂಟೇ ಅಯ್ಯಾ?
ಮೊದಲಿಲ್ಲದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲ!
ಎನ್ನದೇವ ಚೆನ್ನಮಲ್ಲಿಕಾರ್ಜುನಯ್ಯನೆಂಬ
ಗುರುವಂಗೆ ಜಗವೆಲ್ಲಾ ಹೆಣ್ಣು ನೋಡಾ!

ಅಕ್ಕಮಹಾದೇವಿಯ ಈ ಆಲೋಚನೆ ಕ್ರಾಂತಿಕಾರಿಯಾಗಿದೆ. ಹೆಣ್ಣು ಸೂತಕವೆಂದು ಪರಿಗಣಿಸಿದರೆ ಈ ಜಗತ್ತು ಸೂತಕ! ಎಂದು ಹೇಳಿ ಅವಳನ್ನು ಸೂತಕದ ಪಾತಕದಿಂದ

ಬಿಡುಗಡೆ ಮಾಡಿದಳು. ಹೆಣ್ಣನ್ನು ಮಾಯೆ ಮತ್ತು ಸೂತಕದ ಸಂಕೋಲೆಯಿಂದ ಬಿಡಿಸಿದ ಶರಣರು ಅವಳಲ್ಲಿ ದೇವತ್ವವನ್ನು ಕಂಡರು.

ಕನಿಷ್ಠದಲ್ಲಿ ಹುಟ್ಟಿದೆ, ಉತ್ತಮದಲ್ಲಿ ಬೆಳೆದೆ
ಸತ್ಯ ಶರಣರ ಪಾದವಿಡಿದೆ
ಆ ಶರಣರ ಪಾದ ವಿಡಿದು ಗುರುವಿನ ಕಂಡೆ, ಲಿಂಗವ ಕಂಡೆ,
ಜಂಗಮವ ಕಂಡೆ, ಪಾದೋದಕವ ಕಂಡೆ, ಪ್ರಸಾದವ ಕಂಡೆ
ಇಂತಿವರ ಕಂಡೆನ್ನ ಕಂಗಳ ಮುಂದಣ ಕತ್ತಲೆ ಹರಿಯಿತ್ತು
ಕಂಗಳ ಮುಂದಣ ಕತ್ತಲೆ ಹರಿಯಲೊಡನೆ
ಮಂಗಳದ ಮಹಾಬೆಳಗಿನೊಳಗೋಲಾಡಿ ಸುಖಿಯಾದೆನಯ್ಯಾ
ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣಾ - ಹಡಪದ ಲಿಂಗಮ್ಮ

ನೀತಿಯ ನೆಲೆಗಟ್ಟಿನ ಮೇಲೆ 'ಸಮತಾವಾದ ಸಮಾಜ ರಚನೆ' ಶರಣರ ಗುರಿಯಾಗಿತ್ತು. ಹೆಣ್ಣನ್ನು ಕೇವಲ ಭೋಗದ ವಸ್ತು ಎಂದು ಭಾವಿಸಿದ್ದ ಪುರುಷ ಅವಳ ಮೇಲೆ ಕಾಕ ದೃಷ್ಟಿ ಬೀರಿದಾಗ ಅದನ್ನು ಶರಣರು ಖಂಡಿಸಿದರು. ಮೊದಲು ಅವರು ನಯವಾದ ಮಾತುಗಳಲ್ಲಿ ಎಚ್ಚರಿಸುತ್ತಾರೆ.

ಭಲಬೇಕು ಶರಣಂಗೆ ಪರಸತಿಯನೊಲ್ಲೆಂಬ - ಬಸವಣ್ಣ
ಪರಸ್ತ್ರೀಯರ ಕೂಡದಿಪ್ಪುದೇ ಶೀಲ - ಶಿವಲೆಂಕ ಮಂಚಣ್ಣ
ಪರಧನ ಪರಸ್ತ್ರೀಯ ವಿಸರ್ಜಿಸಿ ಪೂಜಿಸು ಪರಶಿವನ - ಸಿದ್ಧರಾಮ

ಶರಣರು ನೆಮ್ಮದಿ ಜೀವನಕ್ಕೆ ಪ್ರಾಶಸ್ತ್ಯಕೊಟ್ಟರು. ಸತಿಪತಿಗಳ ಅಂತರಂಗ ಬಹಿರಂಗ ಏಕವಾಗಿ ಅವರ ಆಚಾರ-ವಿಚಾರಗಳಲ್ಲಿ ತಾದಾತ್ಮ್ಯ ತೋರಬೇಕೆಂದರು. ಜೇಡರದಾಸಿಮಯ್ಯ ಹೇಳುವಂತೆ "ಸತಿಪತಿಗಳೊಂದಾದ ಭಕ್ತಿಹಿತವಪ್ಪುದು ಶಿವಂಗೆ" ದಂಪತಿಗಳ ಏಕಭಕ್ತಿಯ ಪರಿಣಾಮವನ್ನು ತಿಳಿಸುತ್ತದೆ. ಇದರಿಂದ ಹೆಣ್ಣು-ಗಂಡು, ಮೇಲು-ಕೀಳೆಂಬ ಭೇದ ಉಳಿಯುವುದಿಲ್ಲ. ಆಚಾರ-ವಿಚಾರ ಸ್ವಾತಂತ್ರ್ಯದಿಂದ ಅವರು ಬದುಕು ಸಾಗಿಸುತ್ತಾರೆ. ವಚನಗಳಲ್ಲಿ ಸ್ತ್ರೀ ಸಂವೇದನೆ ಹೃದಯ ಸ್ಪರ್ಶಿಯವಾಗಿ ಮೂಡಿಬಂದಿದೆ. ಇಂತಹ ಸಂದರ್ಭದಲ್ಲಿ ಭಾಷೆ ಒಂದು ಸಂಸ್ಕೃತಿಯ ಬದುಕಿನ ವಾಹಕವಾಗಿರುವಂತೆ ಆ ಬದುಕಿನ ಸಾತತ್ಯತೆಯನ್ನು ಉಳಿಸಿಕೊಂಡು ಬರುತ್ತದೆ.

೨

ದ್ರಾವಿಡ ಭಾಷೆಗಳಲ್ಲಿ ಲಿಂಗ ಅರ್ಥವನ್ನು ಅವಲಂಬಿಸಿರುತ್ತದೆ. ಅಲ್ಲಿ ಬುದ್ಧಿಗೆ ಪ್ರಾಧಾನ್ಯವನ್ನೀಯಲಾಗಿದೆ. ಇದರಿಂದಾಗಿ ಬುದ್ಧಿಸಹಿತವಾದ ವಸ್ತುಗಳು ಮಹತ್‌ಲಿಂಗವಾಗಿ, ಬುದ್ಧಿರಹಿತವಾದ ವಸ್ತುಗಳು ಅಮಹತ್ ಲಿಂಗವಾಗಿ ಪ್ರಯೋಗವಾಗುತ್ತವೆ. ಈ

ಬಗೆಯ ಮಾನವೀಯ ಲಿಂಗಭೇದವನ್ನು ವಚನಕಾರರು ಬೌದ್ಧಿಕತೆಗಿಂತ ಮಿಗಿಲಾಗಿ ತಾತ್ವಿಕ ದೃಷ್ಟಿಯಿಂದ ಆಲೋಚಿಸಿದ್ದಾರೆ. ಗಂಡು-ಹೆಣ್ಣು ಎಂಬ ಭೇದಭಾವ ಮನುಷ್ಯ-ಮನುಷ್ಯ ರಲ್ಲಿನ ಶ್ರೇಷ್ಠ-ಕನಿಷ್ಠ ಅಥವಾ ನೈಸರ್ಗಿಕ ಲಿಂಗ ಆಧಾರದ ಮೇಲಿಂದ ಉಂಟಾಗಿದೆ. ಇದನ್ನೇ ಜೇಡರ ದಾಸಿಮಯ್ಯ 'ಮೊಲೆ ಮುಡಿಗಳು ಬಂದರೆ ಹೆಣ್ಣೆಂಬರು, ಗಡ್ಡ ಮೀಸೆಗಳು ಬಂದರೆ ಗಂಡೆಂಬರು, ಒಳಗೆ ಸುಳಿವಾತ್ಮ ಹೆಣ್ಣು ಅಲ್ಲ-ಗಂಡು ಅಲ್ಲ' ಎಂದು ವಿವರಿಸುತ್ತಾರೆ. ಅಕ್ಕಮಹಾದೇವಿ 'ಭಾವಿಸಲು ತಾನು ಗಂಡುರೂಪು' ಎಂದೂ ಇನ್ನೊಂದೆಡೆ 'ಹೆಣ್ಣ ಬಿಟ್ಟ ಬಳಿಕ ಆಕೆಯನಾರು ಕೂಡಿದರೇನು?' ಎಂದು ನುಡಿಯುತ್ತಾಳೆ. ಒಟ್ಟಿನಲ್ಲಿ, ಸಾಮಾಜಿಕ ವ್ಯವಹಾರ ಪ್ರಣಾಲಿ ಮತ್ತು ಅಲ್ಲಿನ ವಾಸ್ತವಿಕತೆಗನುಸರಿಸಿ ಮತ್ತು ತಾತ್ವಿಕ ತಳಹದಿಯ ಮೇಲಿಂದ ವಚನಕಾರರ ಪ್ರಯೋಗಗಳಲ್ಲಿ ಲಿಂಗಭೇದವು ಭಾಷೆಯ ವ್ಯತ್ಯಾಸಕ್ಕೆ ಕಾರಣವಾಗಿರುವುದಕ್ಕೆ ಈ ಕೆಳಗಿನ ಭೇದಗಳಲ್ಲಿ ನಿದರ್ಶನಗಳನ್ನೀಯಲಾಗಿದೆ.

ಪುಲ್ಲಿಂಗ - ಕರಿಕ ಕೆಂಚನ ನೆನೆದಡೆ ಕೆಂಚನಾಗಬಲ್ಲನೆ?
ಕೆಂಚ ಕರಿಕನ ನೆನೆದಡೆ ಕರಿಕನಾಗಬಲ್ಲನೆ?

ಸ್ತ್ರೀಲಿಂಗ - ಗಂಗಾದೇವಿ ಮುಂಡೆಯಾದಳು, ಗೌರೀ ದೇವಿ ಒಲೆಯ ಕಳೆದಳು

ನಪುಂಸಕ - ಏತ ತಲೆವಾಗಿದರೇನು ಗುರುಭಕ್ತನಾಗಬಲ್ಲುದೆ?
- ಇಕ್ಕಳ ಕೈಮುಗಿದರೇನು ಭೃತ್ಯಾಚಾರಿಯಾಗಬಲ್ಲುದೆ?
- ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯಿತ್ತು
- ಪಶುವೇತ್ತ ಬಲ್ಲುದು ಹಸುರೆಂದೆಳಸುವುದು

ಮಹತ್‌ಲಿಂಗ - ಬುದ್ಧಿ ಪ್ರಾಧಾನ್ಯ :
- ತಂದೆ ತಾಯಿಗಳಿಲ್ಲದ ಕಂದಾ ನಿನಗೆ ನೀನೆ ಹುಟ್ಟಿದೆಯಲ್ಲಾ!
- ನಿನ್ನ ಚಾರಿತ್ರ್ಯ ನಿನಗೆ ಸಹಜ ಗುಹೇಶ್ವರ
- ಸೂರ್ಯನುದಯ ತಾವರೆಗೆ ಜೀವಾಳ
- ಚಂದ್ರಮನುದಯ ನೈದಿಲೆಗೆ ಜೀವಾಳ
- ಹೆಣ್ಣು ಸಾಕ್ಷಾತ್ ಕಪಿಲ ಸಿದ್ಧಮಲ್ಲಿಕಾರ್ಜುನ

ಇಲ್ಲಿ 'ಕಂದ'ನ ಬಗೆಗಿನ ತಿಳಿವಳಿಕೆ, ಸೂರ್ಯ ಚಂದ್ರರ ಕ್ರಿಯಾಶೀಲತ್ವ, ಹೆಣ್ಣು ಮಾಯೆಯಾಗಿರದೆ ಅವಳು ಸಾಕ್ಷಾತ್ ದೇವತೆ ಎಂಬ ವೈಚಾರಿಕ ಹಿನ್ನೆಲೆಯಿಂದ ಇವೆಲ್ಲವೂ ಬೇರೆ ಬೇರೆ ಲಿಂಗಗಳಾಗಿದ್ದರೂ 'ಮಹತ್' ವರ್ಗದಲ್ಲಿ ಪ್ರಯೋಗಗೊಂಡಿವೆ.

ಅಮಹತ್‌ಲಿಂಗ - 'ಎಮ್ಮ ಕುನ್ನಿಗೆ ಕೂಸು ಕೊಡಬೇಡ' ಎಂಬಲ್ಲಿ ಕೂಸು-ಕುನ್ನಿ ಪದಗಳು ಅಮಹತ್‌ದ್ದಾಗಿ ತೋರಿವೆ. 'ಹೆಣ್ಣು ಮಾಯೆಯೆಂಬರು' ಎಂಬಲ್ಲಿ 'ಮಾಯೆ' ಯೆಂಬುದು ಅಮಹತ್ ಸೂಚಕವಾಗಿದೆ. 'ಮಾಯೆಯ ಕೈಯಲ್ಲಿ ಓಲೆ ಕಂಠವ ಕೊಟ್ಟರೆ ಲಗುನ-ವಿಗುನವ ಬರೆಯಿತ್ತು' ಎಂಬ ಅಲ್ಲಮನ ಮಾತಿನಲ್ಲಿ ಮಾಯೆ ಬುದ್ಧಿಹೀನವಾಗಿ

ತೋರುತ್ತದೆ. ಆದರೆ ಇದನ್ನೇ 'ಮಾಯೆಯೆಂಬ ರಕ್ಕಸಿ' ಎಂದು ಬಣ್ಣಿಸುವಲ್ಲಿ ಇದನ್ನು ಮಹತ್ ವರ್ಗಕ್ಕೆ ಸೇರಿಸಲಾಗಿದೆ. ಬಸವಣ್ಣನವರು ಅರಸಿ ಮತ್ತು ತೊತ್ತು ಪದಗಳನ್ನು ಮಹತ್‌ದಲ್ಲಿ ಪ್ರಯೋಗಿಸಿರುವಂತಿದೆ.

ಸಾಮಾನ್ಯವಾಗಿ ಪುರುಷರೇ ಅಧಿಕ ಸಂಖ್ಯೆಯಲ್ಲಿ ಬರೆದಿರುವ ಇಲ್ಲವೆ ಮಾತನಾಡಿರುವ ಸಾಧ್ಯತೆಗಳಿರುವ ಸಮಾಜದಲ್ಲಿ ಪುಲ್ಲಿಂಗವೇ ಭಾಷೆಯ ಅಭಿವ್ಯಕ್ತಿಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಆದರೆ ಪುರುಷನಿಗಿಂತ ಭಿನ್ನವಾಗಿ ಸ್ತ್ರೀ ಸಹ ತನ್ನ ಸ್ತ್ರೀವಾದಿತ್ವವನ್ನಾಗಲಿ ಇಲ್ಲವೆ ವೈಚಾರಿಕತೆಯನ್ನಾಗಲಿ ಪ್ರಕಟಪಡಿಸಲು ಆಕೆ ಸ್ತ್ರೀಲಿಂಗ ಭಾಷೆಯನ್ನು ಅಷ್ಟೇ ಕಾಳಜಿಯಿಂದ ಉಳಿಸಿಕೊಂಡಾಗ ಸ್ತ್ರೀಯ ಸ್ಥಾನ ಪುರುಷನಿಗಿರುವಷ್ಟೇ ಮಹತ್ವದ್ದಾಗಿ ತೋರುತ್ತದೆ. ಹನ್ನೆರಡನೆಯ ಶತಮಾನದಲ್ಲಿ ವಚನಕಾರ್ತಿಯರಲ್ಲಿ ಮಾಹಾದೇವಿಯಕ್ಕ ಇದನ್ನು ಅತ್ಯಂತ ಸ್ಪಷ್ಟವಾಗಿ ಪ್ರಕಟಿಸಿದ್ದಾಳೆ. ಬಹುಶಃ ಉಳಿದ ಸ್ತ್ರೀ ವಚನಕಾರ್ತಿಯರು ತಮ್ಮ ತಮ್ಮ ಪತಿ ಅಧೀನದಲ್ಲಿ ಇಲ್ಲವೆ ಪುರುಷ ಪ್ರಧಾನ ಸಮಾಜದ ಪ್ರಭಾವಮುದ್ರೆಯಿಂದ ಹೊರಬರಲು ಅಷ್ಟಾಗಿ ಸಾಧ್ಯವಾಗಿಲ್ಲ. ಆದರೆ ಅಕ್ಕಮಹಾದೇವಿ ಸ್ವತಂತ್ರ, ಮುಕ್ತವಿಚಾರ ವುಳ್ಳ ಧೀರ ಹಾಗೂ ದಿಟ್ಟ ಸ್ತ್ರೀವಾದಿ ವಚನಕಾರ್ತಿಯಾಗಿ ನಮಗೆ ತೋರುತ್ತಾಳೆ. ಒಟ್ಟಿನಲ್ಲಿ ಸ್ತ್ರೀವಾದಿತ್ವವನ್ನು ಲಿಂಗವೈದೃಶ್ಯದ ಆಧಾರದ ಮೇಲಿಂದ ನಾವು ಕೆಳಗಿನ ಅಂಶಗಳಲ್ಲಿ ಗುರುತಿಸಲು ಶಕ್ಯವಾಗುತ್ತದೆ.

ಶಿವಶರಣೆಯರ ಅಂಕಿತನಾಮಗಳು	:	ಅಕ್ಕಮಹಾದೇವಿ, ಮಹಾದೇವಮ್ಮ ಲಿಂಗಮ್ಮ, ನೀಲಾಂಬಿಕೆ ಮುಂತಾದುವು
ಸ್ತ್ರೀಲಿಂಗ ಸೂಚಕ/ಳ್/ಪ್ರತ್ಯಯ	:	'ಕೂಡಲಸಂಗನ ಶರಣಳ' 'ಕೂಡಲ ಸಂಗನ ಶರಣನ ಸತಿಯಳು'
ಸ್ತ್ರೀವಾಚಕ ಸರ್ವನಾಮಗಳು	:	'ಅವಳ ಕಂದ ಬಾಲಸಂಗ' 'ಕಂಗಳ ಮುತ್ತ ಪವಣಿಸುವಾಕೆ ನೀನಾರು ಹೇಳಾ?'
ಸ್ತ್ರೀಸಂಬಂಧ ಕೃದ್ವಾಚಕಗಳು	:	'ಚೆನ್ನಬಳಿಯವಳಾನು' 'ಚೆನ್ನಮಲ್ಲಿಕಾರ್ಜುನದೇವನ ಒಳಗಾದವಳ', 'ಗಂಡನುಳ್ಳಮ್ಮನ ಗೌರಿಯುಂದು', 'ನಾನು ನಿಮ್ಮವಳಲ್ಲಯ್ಯ'
ಸ್ತ್ರೀ ಕೌಟುಂಬಿಕ ವಾಚಿಗಳು	:	'ಮಾದರ ಚೆನ್ನಯ್ಯನ ಮೊಮ್ಮಗಳು'
ಸ್ತ್ರೀ ಸಂಬೋಧಕಗಳು	:	'ಪುರಷನ ಒಲವಿಲ್ಲದ ಲಲನೆ ಯಂತಾಗಿರ್ದೆನವ್ವ!' 'ಅಕ್ಕ ಕೆಳವ್ವ! ನಾನೊಂದು ಕನಸು ಕಂಡೆ'

'ತಾರೌ, ನೀಡೌ, ಉಣ್ಣೌ, ಎಂಬಲ್ಲಿನ
'ಔ ' ಪ್ರತ್ಯಯ
'ಎಲೆ ಎಲೆಗೆ' ಪ್ರತ್ಯಯಗಳು

ಸ್ತ್ರೀ ಬೈಗುಳಗಳು : ಚಾಂಡಾಲಗಿತ್ತಿ, ಮುಂಡೆ, ಸೂಳೆ,
ಹಾದರಗಿತ್ತಿ ಮುಂತಾದುವು

'ಶರಣಸತಿ-ಲಿಂಗಪತಿ' ಎಂಬ ಭಾವವನ್ನು ಜೀವನದಲ್ಲಿ ಅನುಸಂಧಾನಕ್ಕೆ ತಂದುಕೊಂಡ ಅಕ್ಕಮಹಾದೇವಿ ಅದನ್ನು ಪುರುಷ ಶರಣರಿಗಿಂತ ಹೆಚ್ಚು ನಿಕಟವಾಗಿ, ಆತ್ಮೀಯವಾಗಿ ಪ್ರಕಟಿಸುತ್ತಾಳೆ. ಆಕೆಯ ನುಡಿಗಳಲ್ಲಿ ಆಧ್ಯಾತ್ಮಿಕ ವಿರಹ-ಶೃಂಗಾರಗಳ ಸುಮಧುರ ಸಮನ್ವಯವನ್ನು ಕಾಣುತ್ತೇವೆ. ಹೆಣ್ಣಿನ ಸಹಜ ಸಂವೇದನ ಶೀಲತೆ, ಭಾವೋತ್ಕರ್ಷಗಳು ಮಿಡಿಯುವಂತೆ ಭಾಷೆ ಅಭಿವ್ಯಕ್ತಗೊಳ್ಳುತ್ತದೆ. ಭಾಷೆಯ ಪರಿಕರಗಳಾದ ಧ್ವನಿಮಾ, ಆಕೃತಿಮಾ ಹಾಗೂ ವಾಕ್ಯಗಳಲ್ಲಿ ತನ್ನದೇ ಆದ ಲಯಗಾರಿಕೆಯನ್ನು ತರುವುದು ಹಾಗೂ ವರ್ಣನಾತ್ಮಕ ಶೈಲಿ ಆಕೆಯ ವ್ಯಕ್ತಿ ಭಾಷೆಯ ವೈಲಕ್ಷಣ್ಯಗಳಾಗಿವೆ.

ಸಂವೇದನಾತ್ಮಕ ಗುಣ :
- ಆವಿಗೆಯ ಕಿಚ್ಚಿನಂತೆ
  ನೀವು ಕಾಣಿರೇ ನೀವು ಕಾಣಿರೇs
- ಕಂಡರೆ ನೀವು ಹೇಳಿರೇs
- ನೀವು ಹೇಳಿರೇs
- ಅಹುದಹುದು ಮತ್ತೇನು?
  ಮರಹಿಂಗೆ ಹಿರಿದು ಕಿರಿದುಂಟಲ್ಲದೆ
  ಅರಿವಿಂಗೆ ಹಿರಿದು ಕಿರಿದುಂಟೆ ಹೇಳಯ್ಯಾ?
- ಈಳೆ-ನಿಂಬೆ-ಮಾವು-ಮಾದಲಕ್ಕೆ
  ಹುಳಿನೀರನೆರದವರಾರಯ್ಯ? !
- ಎನ್ನ ಕಾಯ ಮಣ್ಣು, ಜೀವ ಬಯಲು!
  ಆವುದ ಹಿಡಿವೆನಯ್ಯ ದೇವ?

ಭಾವೋತ್ಕರ್ಷತೆ :
- ಅಯ್ಯಾ ನೀ ಕೇಳಿದಡೆ ಕೇಳು ಇಲ್ಲದಿರೆ ಮಾಣು
  ನಾ ಹಾಡಿದಲ್ಲದೆ ಸೈರಿಸೆನು ನೋಡಾ
- ವನವೆಲ್ಲ ನೀವೆ, ವನದೊಳಗಣ ದೇವ
  ತರುವೆಲ್ಲ ನೀವೆ
- ಸಾಯುವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು
- ಬೆಂದ ಸಂಸಾರ ಬೆಂಬಿಡದೆ ಕಾಡುತ್ತಿರುವುದಯ್ಯಾ!
  ಏವೆನಯ್ಯ ಏವೆನಯ್ಯ ?

- ಕಾಯಕಕೆ ನೆಳಲಾಗಿ ಕಾಡಿತ್ತು ಮಾಯೆ!
ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ!
ಮನಕ್ಕೆ ನೆನಹವಾಗಿ ಕಾಡಿತ್ತು ಮಾಯೆ!
ನೆನಹಿಂಗೆ ಅರಿವಾಗಿ ಕಾಡಿತ್ತು ಮಾಯೆ!
ಜಗದ ಜಂಗುಳಿಗ ಬೆಂಗೋಲನೆತ್ತಿ ಕಾಡಿತ್ತು ಮಾಯೆ!
ಚೆನ್ನಮಲ್ಲಿಕಾರ್ಜುನ, ನೀನೊಡ್ಡಿದ ಮಾಯೆಯ
ನಾರೂ ಗೆಲಬಾರದು

ಆಧ್ಯಾತ್ಮಿಕ ಶೃಗಾರ-ವಿರಹ :- ಎನ್ನ ಮಾಯದ ಮದವ ಮುರಿಯಯ್ಯ!
ಎನ್ನ ಕಾಯದ ಕಳವಳ ಕೆಡಿಸಯ್ಯ!

- ಶಿವನೇ, ಉಳಿವ ಕರೆವ ನೇಹವುಂಟೆ?
ಸಂಸಾರಕ್ಕೆಂ ನಿಮ್ಮಲ್ಲಿಗೆಡೆಯಾಡುವ ಭಕ್ತಿಯುಂಟೇ?
ಏನಯ್ಯ ಶಿವನೇ .
ಏಳೆಂದು ಪೇಳ್ವೆ ಲಜ್ಜೆಯ ಮಾತ ಚೆನ್ನಮಲ್ಲಿಕಾರ್ಜುನ

- ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವ!
ಏರಿಲ್ಲದ ಘಾಯದಲಿ ನೊಂದೆನವ್ವ!

- ಅರಸಿನವನೆಮಿಂದು ಹೊಂದೊಡಿಗೆಯನು ತೊಟ್ಟು
... ಪುರುಷ ಬಾರಾ, ಬಟ್ಟೆಗಳ ನೋಡಿ ಬಾಯಾರುತ್ತಿಹೆನು

- ಹರನೇ ನೀನೆನಗೆ ಗಂಡನಾಗಬೇಕೆಂದು ಅನಂತಕಾಲ
ತಪಿಸಿರ್ದೆ ನೋಡಾ

ಧ್ವನಿಮಾಗಳಲ್ಲಿನ ಲಯ : - ಎರೆಯಂತೆ ಕರಕರಗಿ ಮಳಲಂತೆ ಜರಿಜರಿದು
ಗಾರಿಕೆ/ಸ್ವರಾಘಾತ ಕನಸಿನಲಿ ಕಳವಳಿಸಿ ಆನುಬೆರಗಾದೆ

- ಕಾಯ ಕರ್ರನೆ ಕಂದಿದರೇನಯ್ಯ?
- ಮಾಯ ಮಿರ್ರನೆ ಮಿಂಚಿದರೇನಯ್ಯ?
- ಚಿಲಿ ಪಿಲಿ ಎಂದೋದುವ ಗಿಳಿಗಳಿರಾ
- ಶೀಲ! ಶೀಲ! ಎಂತೆಂಬಿರಯ್ಯ?
ಶೀಲದ ನೆಲೆಯ ಒಲ್ಲಡೆ ಹೇಳಿರೋ!

- ತುಂಬಿದುದು ತುಳುಕದು ನೋಡಾ
ನಂದಿದುದು ಸಂದೇಹಿಸದು ನೋಡಾ!

ವಾಕ್ಯಾತ್ಮಕ ಲಯ : - ಸಜ್ಜನಳಾಗಿ ಮಜ್ಜನ ಕ್ಕೆರವೆ
- ಅಳಿಸಂಕುಳವೆ, ಮಾಮರವೆ! ಬೆಳುದಿಂಗಳೆ
ಕೋಗಿಲೆಯೆ......

- ಲಿಂಗವೆನ್ನ, ಲಿಂಗವನ್ನ ಸಂಗವೆನ್ನ ಸಮರಸವೆನ್ನ
- ಊರ ನಡುವೆ ಒಂದು ಬೇಟೆ ಬಿದ್ದಿತ್ತು!
  ಆರು ಕಂಡವರು ಕೊಡಿರಯ್ಯ!
- ಕದಳಿಯೆಂಬುದು ತನು! ಕದಳಿಯೆಂಬುದು ಮನ!
  ಕದಳಿಯೆಂಬುದು ವಿಷಯಂಗಳು
  ಕದಳಿಯೆಂಬುದು ಭವಘೋರಾರಣ್ಯ!

ಅಕ್ಕ ಮಹಾದೇವಿ, ಕೌಟುಂಬಿಕ ಪದಗಳನ್ನು ಬಳಸುವ ಹಾಗೂ ಅವನ್ನು ಸಂಬೋಧನೆಯಲ್ಲಿ ಜೋಡಿಸಿಕೊಳ್ಳುವ ಬಗೆ ಆಕೆಯ ವಾಕ್ಯಶೈಲಿಯನ್ನು ಪುರುಷ ಭಾಷೆಯಿಂದ ಪ್ರತ್ಯೇಕಿಸುವಂತಿರುತ್ತದೆ. 'ಅವ್ವ' ಪದಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ತದನಂತರ 'ಅಕ್ಕ', 'ಅಣ್ಣ'ಗಳು ಪ್ರಯೋಗಗೊಳ್ಳುತ್ತವೆ. 'ಗಂಡ' ಪದಕ್ಕೆ 'ಪುರುಷ' ಪದವೂ ಸಹ ಪರ್ಯಾಯವಾಗಿ ಬಳಕೆಗೊಳ್ಳುತ್ತದೆ. 'ಗಂಡ' ಪದ ಹತ್ತಾರು ರೂಪಗಳಲ್ಲಿ ವಿಶೇಷಣಯುಕ್ತವಾಗಿ ಇಲ್ಲವೆ ಅಲಂಕಾರಿಕವಾಗಿ ಪ್ರಯೋಗವಾಗುವುದು ಇನ್ನೊಂದು ವೈಶಿಷ್ಟವಾಗಿದೆ. ಉದಾ. 'ಪರಗಂಡ', 'ಮಿಕ್ಕನಗಂಡ', 'ಲೋಕದ ಗಂಡ', 'ತಲೆಯಿಲ್ಲದ ಗಂಡ', 'ಎಲ್ಲರಗಂಡ' ಮುಂತಾದವು. 'ವಿವಾಹ ಸಂಬಂಧಿ' ಶಬ್ದಗಳ ವಿಫುಲ ಬಳಕೆಯನ್ನು ಅಕ್ಕಮಹಾದೇವಿಯಲ್ಲಿ ಕಾಣುತ್ತವೆ. ಉದಾ. ತೆತ್ತಿಗ, ಮದವಳಿ, ಮದುವಳಿಗ, ಹಸ, ಬಾಸಿಗ, ಚಪ್ಪರ, ನಿಬ್ಬಣಿಗ, ಕಂಕಣ, ಕೈಧಾರೆ, ಸೇಸೆ, ಪ್ರಾಕೃತಿಕ ಆವರಣದಲ್ಲಿ ಹೆಚ್ಚಿನ ವಚನಗಳು ಹೊರಹೊಮ್ಮಿರುವುದರಿಂದ ಪ್ರಕೃತಿ ಶಬ್ದಗಳಾದ ವನ, ಗಿರಿ, ಬೆಟ್ಟ, ಮೊರಡಿ, ಸಮುದ್ರ, ಕೆರೆ, ತೊರೆ, ತರು, ಮರ, ಈಳೆ, ಲಿಂಬೆ, ಹಂಸೆ, ಗಿಳಿ, ಕೋಗಿಲೆ, ಮಾಮರ, ತಳಿರು ಮುಂತಾದವು ವಿಫುಲವಾಗಿ ದೊರೆಯುತ್ತವೆ. ನೋಡಿರೋ, ಕೇಳಿರೋ ಮುಂತಾದ ಪುರುಷ ಸಂಬೋಧನಪರ 'ಓ' ಪ್ರತ್ಯಯವನ್ನು 'ಏ' ಪ್ರತ್ಯಯಾಂತ್ಯದಲ್ಲಿ ಸೇರಿಸಿ ನೋಡಿರೇ, ಕೇಳಿರೇ ಎಂದು ನುಡಿಯುವುದರಿಂದ ಆಕೆ ಸ್ತ್ರೀವಾದಿ ಭಾಷೆಯನ್ನು ಸಹಜವಾಗಿ ಉಪಯೋಗಿಸಿಕೊಳ್ಳುತ್ತಾಳೆ. ಅನೇಕ ಕಡೆಗಳಲ್ಲಿ ಅಕ್ಕಮಹಾದೇವಿಯ ಕೆಲವು ವಚನಗಳನ್ನು ಮೊದಲಿಗೆ ಹಾಡಾಗಿಸಿಕೊಂಡು ಅನಂತರ ಅವುಗಳನ್ನು ವಚನ ರೂಪದಲ್ಲಿ ಪರಿವರ್ತಿಸಿರುವುದರಿಂದ ಅಕ್ಕನ ವಚನಭಾಷೆ ಗದ್ಯ ಪದ್ಯಗಳೆರಡರ ನಡುವಿನ ಬಂಧವಾಗಿ 'ಶಿಷ್ಟ' ಸ್ವರೂಪವನ್ನು ಪ್ರತಿನಿಧಿಸುತ್ತದೆ.

ಅಕ್ಕಮಹಾದೇವಿಯ ವಚನಗಳನ್ನು ಕುರಿತು ರಾಜೇಂದ್ರ ಚೆನ್ನಿ ಅವರು ಹೇಳುವಂತೆ 'ಕನ್ನಡ ಭಾಷೆಯ, ಮನಸ್ಸಿನ ಜಾಯಮಾನವೆನ್ನಬಹುದಾದ ಅಂಶಗಳು ಅಕ್ಕನ ಕಾವ್ಯಗಳಲ್ಲಿ ಸ್ಫುಟವಾಗಿಯೇ ಇವೆ. ಪದಜೋಡಣೆಯ ರಚನೆಯ ಸಾಂದ್ರತೆ, ಸಂಸ್ಕೃತ ಮತ್ತು ಕನ್ನಡದ ಹದವಾದ ಬೆರಸುವಿಕೆ, ಅನುಭವದ ಮಂಡನೆಯಲ್ಲಿ ವಿನಮ್ರತೆ, ಹಿಡಿತದ ಭಾವತೀವ್ರತೆ, ಸಂಕೀರ್ಣ ಅನುಭವದ ಹೊರೆಯನ್ನು ಸಹಜವಾಗಿ ಹೊರಬಲ್ಲ ಅಚ್ಚದೇಸೀಯ

ಕ್ರಿಯಾಪದಗಳ ನಡೆ, ಭಾಷೆಯ ಸಹಜ ಗತಿ ಇವೆಲ್ಲವು ಅಕ್ಕನ ವಚನಗಳಲ್ಲಿವೆ'*. ಈ ಕಾರಣಗಳಿಂದಾಗಿ ಅಕ್ಕನ ವಚನಗಳು ಸಮಾಜಮುಖಿ ಚಿಂತನೆಗಳಿಂದ ಕೂಡಿವೆ.

ಈ ಚರ್ಚೆಯ ಹಿನ್ನೆಲೆಯಲ್ಲಿ ನಮ್ಮ ಮನಸ್ಸಿನಲ್ಲಿ ಮೂಡುವ ಪ್ರಮುಖ ಪ್ರಶ್ನೆಯೆಂದರೆ ಮಹಿಳಾವಿಚಾರಗಳಿಗೆ ಸಂಬಂಧಿಸಿದ ಭಾಷೆ ಸಾಹಿತ್ಯದ ಸ್ವರೂಪ ಹೇಗಿರಬೇಕು ಎನ್ನುವುದು. ಈ ಪ್ರಶ್ನೆಗೆ ವಚನಕಾರರು ಉತ್ತರಿಸಿದ್ದಾರೆ. ವಾಸ್ತವ್ಯಗಳನ್ನು ವಿಶ್ಲೇಷಿಸುವುದು ಅವರ ಧೋರಣೆಯಾಗಿತ್ತು. ಭಾಷೆಯೆನ್ನುವುದು ಆಯಾ ಸಮಾಜದ ಒಟ್ಟು ಜನಜೀವನದ ಕ್ರಮವನ್ನೂ ಮೌಲ್ಯಗಳನ್ನೂ ಬಿಂಬಿಸುವಂತಹ ವಾಹಕ. ಅಲ್ಲಿ ನಿರಂತರತೆಯೂ ಇದೆ. ಚಲನಶೀಲತೆಯೂ ಇದೆ. ವಚನಕಾರರು ಭಾಷೆಯನ್ನು ಈ ಎರಡೂ ಆಯಾಮಗಳಲ್ಲಿಯೂ ಬಳಸಿದರು.

ಆಕರಗ್ರಂಥ

೧. ಎಲ್. ಬಸವರಾಜು (ಸಂ.), ಬಸವಣ್ಣ, ಅಕ್ಕ, ಅಲ್ಲಮ, ಜೇಡರ ದಾಸಿಮಯ್ಯರ ವಚನಗಳು, ಗೀತಾ ಬುಕ್‌ಹೌಸ್, ಮೈಸೂರು.

---

* ರಾಜೇಂದ್ರಚೆನ್ನಿ-ಮಹಾದೇವಿಯಕ್ಕ ಮತ್ತು ವಚನಸಂಪ್ರದಾಯ, 'ನಮುಹಗಲಿನಲ್ಲಿ ಕಂದೀಲುಗಳು' (೨೦೦೪), ಪು. ೧೫೮, ಲೋಹಿಯಾ ಪ್ರಕಾಶನ, ಬಳ್ಳಾರಿ

೨೬

ವಚನಸಾಹಿತ್ಯ : ಬೈಗುಳಗಳ ಅರ್ಥವಿನ್ಯಾಸ

ಬೈಗುಳಗಳು ಭಾಷೆಯ ಪರಿಣಾಮಕಾರಿ ಘಟಕಗಳಾಗಿವೆ. ಅವು ಒಂದು ರೀತಿಯಲ್ಲಿ ಭಾಷಿಕ ಹೊಡೆತ ಎನ್ನಬಹುದು. ಬೈಗುಳವು ಹೊಡೆತಕ್ಕಿಂತ ಸೂಕ್ಷ್ಮವಾದುದು ಮತ್ತು ಸಂಕೀರ್ಣವಾದುದು. ವ್ಯಕ್ತಿಗೆ ದೈಹಿಕ ಮತ್ತು ಮಾನಸಿಕ ಯಾತನೆಯಾದಾಗ ಬೈಗುಳಗಳು ಸೃಷ್ಟಿಯಾಗುತ್ತವೆ. ಬೈಗುಳಕ್ಕೆ ಸಾಮಾಜಿಕ ಒಪ್ಪಿಗೆ ಬಿದ್ದಾಗ ಅದಕ್ಕೆ ಅರ್ಥ ಪ್ರಾಪ್ತಿಯಾಗುತ್ತದೆ. ಬೈಗುಳಗಳಿಗೆ ಭಾಷಿಕ ನಿಯೋಗಗಳಿವೆ. ಯಾರಾದರೂ ಮನಸ್ಸಿಗೆ ನೋವಾಗುವಂತೆ ಬೈದರೆ, ಬೈಯಿಸಿಕೊಂಡವ ಪ್ರತಿಯಾಗಿ ಬೈದರೆ ಮನಸ್ಸಿನ ತಳಮಳ ಉಪಶಮನವಾಗುತ್ತದೆ. ರಕ್ಷಣೆ ಮತ್ತು ಸಮತೋಲನಕ್ಕೂ ಬೈಗುಳಗಳು ನೆರವಾಗುತ್ತವೆ.[೧] ಬೈಗುಳಗಳಿಗೆ ಭಾಷಿಕರ ಇಲ್ಲವೆ ಭಾಷಾ ಸಮುದಾಯದ ಸುಧಾರಣೆಯ ಗುಣವಿದೆ. 'ಬೈದು ಹೇಳಿದವ ಬುದ್ಧಿ ಹೇಳಿದ; ನಕ್ಕು ಹೇಳಿದವ ಕೆಟ್ಟದ್ದು ಹೇಳಿದ', 'ಬೈದು ಹೇಳುವವನನ್ನು ನಂಬು: ನಕ್ಕು ಹೇಳುವವನನ್ನು ನಂಬಬೇಡ' ಇಂತಹ ಗಾದೆಗಳು ಬೈಗುಳಗಳ ಮಹತ್ವವನ್ನು ಎತ್ತಿ ತೋರಿಸುತ್ತವೆ. ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಬೈಗುಳಗಳು ತುಂಬ ಪರಿಣಾಮಕಾರಿಯಾಗಿವೆ.

ಶರಣರು ಬಳಸಿದ ಬೈಗುಳ ಪದಗಳಲ್ಲಿ ಸಾಮಾಜಿಕ ಕಳಕಳಿಯಿದೆ. ವ್ಯಕ್ತಿ ಅಥವಾ ಸಮಾಜವನ್ನು ತಿದ್ದುವ, ಅದನ್ನು ಸರಿದಾರಿಗೆ ತರುವ ಆಶಯವಿದೆ. ಶರಣರು ಬೈಗುಳಗಳನ್ನು ಬಳಸುವುದರ ಮೂಲಕ ಮಡಿವಂತ ಯಥಾಸ್ಥಿತಿವಾದಿಗಳ ಗಡಿಗೇರೆಗಳನ್ನು ಮೀರುವ ಪ್ರಯತ್ನ ಮಾಡಿದ್ದಾರೆ. ಜನಸಾಮಾನ್ಯರು ದೈನಂದಿನ ಬದುಕಿನಲ್ಲಿ ಸಹಜವಾಗಿ ಬಳಸುವ ಪದಗಳನ್ನೇ ಅವರು ಬಳಸಿದ್ದಾರೆ. ಶರಣರ ಬದುಕು ಒಂದು ತೆರೆದ ಪುಸ್ತಕದಂತೆ. ಮಡಿಮೈಲಿಗೆ ಇಲ್ಲದ ಮಾತುಗಳು ಅವರ ವಾಸ್ತವ ಬದುಕನ್ನು ಚಿತ್ರಿಸುತ್ತವೆ. ಒಂದು ಜನಸಮುದಾಯದ ಸಂಸ್ಕೃತಿಯೆಂದರೆ ಕೇವಲ ಅವರ ಉನ್ನತ ಆಚಾರ-ವಿಚಾರ, ಧರ್ಮ ಇವಷ್ಟೆ ಅಲ್ಲ ಅವುಗಳ

ಜೊತೆ ಜೊತೆಯಲ್ಲೇ ಸಾಗಿ ಬಂದಿರುವ ಜಗಳ, ವೈಮನಸ್ಸು, ಅಸಹನೆ, ದ್ವೇಷ ಇವು ಸಮಾವೇಶಗೊಳ್ಳುತ್ತವೆ. ಶರಣರಂತೂ ಸಮಾಜದ ಎಲ್ಲಾ ಗುಣಾವಗುಣಗಳನ್ನು ಒರೆಗೆ ಹಚ್ಚಿದರು. ಬೈದವರನ್ನು ಬಂಧುಗಳೆಂದು, ಹೊಯ್ಯುವರನ್ನು ಹೊರೆದವರೆಂದು ಬೈಗುಳಗಳನ್ನು ಸ್ವೀಕರಿಸಿದರು. ಬಸವಣ್ಣನವರು.

ಹೊಯಿದವರೆನ್ನ ಹೊರೆದವರೆಂಬೆ
ಬಯಿದವರೆನ್ನ ಬಂಧುಗಳೆಂಬೆ
ನಿಂದಿಸಿದವರೆನ್ನ ತಂದೆ ತಾಯಿಗಳೆಂಬೆ
ಆಳಿಗೊಂಡವರೆನ್ನ ಆಳ್ದವರೆಂಬೆ
ಜರಿದವರೆನ್ನ ಜನ್ಮಬಂಧುಗಳೆಂಬೆ
ಹೊಗಳಿದವರೆನ್ನ ಹೊನ್ನಶೂಲದಲಿಕ್ಕಿದರೆಂಬೆ - ಕೂಡಲಸಂಗಮದೇವಾ

ಎಂದಿದ್ದಾರೆ. ಅವರ ಉದ್ದೇಶ ಲೋಕ ಕಲ್ಯಾಣವಾಗಿತ್ತು.

ಬೈಗುಳಗಳು ಔಪಚಾರಿಕ ಮತ್ತು ಅನೌಪಚಾರಿಕ ಸಂದರ್ಭಗಳಲ್ಲಿ ಬಳಕೆಯಾಗುತ್ತವೆ. ವಚನಕಾರರು ಆ ಕಾಲದಲ್ಲಿ ಬಳಕೆಯಲ್ಲಿದ್ದ ದೇಸಿ ಮೂಲದಿಂದ ಹಾಗೂ ಇನ್ನೂ ಕೆಲವು ತತ್ಕಾಲೀನ ಸನ್ನಿವೇಶಗಳಿಂದ ಹುಟ್ಟಿಕೊಂಡ ರೂಪಗಳಾಗಿವೆ. ಅಂತಹ ಸಂದರ್ಭದಲ್ಲಿ ಪ್ರಾಣಿ ರೂಪಕಗಳಿಂದ ಸಮುದಾಯದ ಮೇಲೆ ತಮ್ಮ ಛೂಬಾಣ ಎಸೆಯುತ್ತಾರೆ.

- ಎಲುವ ಕಡಿವ ಸ್ವಾನನಂತೆ........ ವಚ್ಚಿ ಹೊತ್ತಿನ ಭೋಗಕ್ಕೆ
  ಮೆಚ್ಚಿ ಹುಚ್ಚಾದಿರಲ್ಲಾ - ತೋಂಟದ ಸಿದ್ಧಲಿಂಗೇಶ್ವರ

- ನಾನು ಬಲ್ಲೆ ತಾನು ಬಲ್ಲೆನೆಂದು ನುಡಿವ ಹೀನ ಮನುಜರ
  ಕೂಗಾಟ ಬೇಟಕ್ಕೆ ನಾಯಿ ಬೊಗುಳಿದಂತಾಯಿತು - ಹಡಪದಪ್ಪಣ್ಣ

- ಜೆನ್ನು ಹುಳಿತ ಕೋಣನಂತೆ ಮನೆ ಮನೆಯ ತಿರಿದುಂಡಡೇನು?
  ಮಹಾಜ್ಞಾನಿಯಾಗಬಲ್ಲರೆ - ಶಿವಶರಣೆಯರ ವಚನ

ಇಂತಹ ನೂರಾರು ಪ್ರಾಣಿರೂಪಕಗಳನ್ನು ಬಳಸಿ ಬೈಗುಳಗಳನ್ನು ಬಳಸಿದ್ದಾರೆ. ಅವು ಮನುಷ್ಯರ ಪ್ರಾಣಿತನವನ್ನು ಪ್ರತಿಬಿಂಬಿಸುತ್ತವೆ. ಇವುಗಳಲ್ಲಿ ಸೊಣಗವು ಚಪಲತೆ, ಅಜ್ಞಾನ, ಕ್ಷುದ್ರಭಾವ ಹೀಗೆ ಹಲವು ರೂಪಗಳಿಗೆ, ಮರ್ಕಟ, ಕೋಡಗಗಳು ಚಪಲತೆಗೆ ಪ್ರತೀಕಗಳಾಗಿವೆ. ಕೆಲವು ವಚನಕಾರರು ಬೈಗುಳು ರೂಪಗಳನ್ನು ನೇರವಾಗಿ ಪ್ರಯೋಗಿಸುತ್ತಾರೆ.

- ಜಡಜೀವಿ, ತೊತ್ತಿನ ಮಕ್ಕಳು, ಕುನ್ನಿಗಳು, ನಾಯಿಗಳು, ಒಂಟಿಯ ಮಕ್ಕಳು
  - ಜೇಡರ ದಾಸಿಮಯ್ಯ

- ಉಭಯ ಭ್ರಷ್ಟ, 'ಕೊಟ್ಟ ಕುದುರೆಯ ನೇರದವರು' ಸೂಳೆ, ತುಡುಗುಣಿ,
  ಭವಿ, ಸರ್ವಾನ್ಯಾಯಿಪುಂಡ, 'ಏನೆಂದರಿಯರು, ಎಂತೆಂದರಿಯರು' ಜನಮರಳೊ

ಜಾತ್ರೆ ಮರಳೋ? 'ನಾಯಾಗಿ ಬೊಗಳುವರು', 'ಅರೆಮರುಳೆಂಬ ಶಿವ ನೆರೆಮರುಳೆಂಬ ಜಗ' - ಅಲ್ಲಮಪ್ರಭು

- ಛಪಿ, ಅಷ್ಟದೊಷ್ಟ, ದೊಡ್ಡ ಬಸುರುಳ್ಳವರು, ಹಡೆದುಂಬ ಸೂಳೆ, ಮಾತಂಗಿಯ ಮಗ. ಅಂದಣವೇರಿದ ಸೊಣಗ, ಕುನ್ನಿ ಛೀ ಕೆಡೆಹಿಮೂಗ ಕೊಯ್ಯಿ, ಕುರಿನರ, ಮಾತಿನ ಬಣಬೆಯ ಒಳಲೊಟ್ಟಿ ನುಡಿವರು - ಬಸವಣ್ಣ

- ಒಲೆಯೊಳಗಿಕ್ಕು, ಮೂಗುಕೊಯ್ಯಿ - ಅಕ್ಕಮಹಾದೇವಿ

- ಹಲ್ಲುಕಳೆ, ಹಂತವ ಮುರಿ ಆಚಾರ ಭ್ರಷ್ಟ - ಚೆನ್ನಬಸವಣ್ಣ

- ಜೀವಿಗಳ್ಳ, ಪಾಪಾತ್ಮ, ಎಡ್ಡ - ಸಿದ್ಧರಾಮ

- 'ಬಾಯಲ್ಲಿ, ಬಾಲಹುಳ ಸುರಿಯಲಿ'
'ತಿಪ್ಪೆಯ ಕೆದರು [illegible]
'ತನ್ನಡೆಯಲ್ಲಿ ಕತ್ತೆಸತ್ತು ಬಿದ್ದಿರುವಾಗ ಪರರೆಡೆಯಲ್ಲಿ'
'ನೋಣವನಾರಿಸುವ ಕುನ್ನಿ ಮಾನವ'
'ಹಂದಿ ಹಡಕಯ ನೆನಸಿ ಹಾಳುಗೇರಿಗೆ ಹೋದಂತೆ'
'ಕೆರಹಿನಟ್ಟೆಯಲ್ಲಿ ಹೊಯ್' - ಷಣ್ಮುಖ ಶಿವಯೋಗಿ

ಇಂತಹ ಬೈಗುಳ ರೂಪಗಳು ವಚನಗಳಲ್ಲಿ ಬಳಕೆಯಾಗಿವೆ. ಅವುಗಳನ್ನು ನಾಲ್ಕು ರೀತಿಯಾಗಿ ವರ್ಗೀಕರಿಸಬಹುದು. **ವ್ಯಕ್ತಿಯ ದೈಹಿಕ ಮತ್ತು ಮಾನಸಿಕ ದೋಷಗಳಿಗೆ ಸಂಬಂಧಿಸಿದ ಬೈಗುಳಗಳು.** ಉದಾ. ನೀಚಕುನ್ನಿ, ವಿಚಾರ ಗೇಡಿ. ಗಂಡುಗೂಳಿ. ಜೀವಗಳ್ಳ, ಹೆಡ್ಡಮೂಳ, ಆಚಾರ ಭ್ರಷ್ಟ, ದುರುಳ ಮುಂತಾದುವು. **ಅನೈತಿಕತೆಗೆ ಸಂಬಂಧಿಸಿದ ಬೈಗುಳು.** ಉದಾ. ಹಾದರಗಿತ್ತಿ, ಮಿಂಡ, ಹಾದರಿಗ, ಕುಂಟಲಗಿತ್ತಿ, ಸೂಳೆ, ಸೂಳೆಗಾರ, ಮಾನಿಸಗಳ್ಳೆ, ಮುಂತಾದುವು. **ಜಾತಿ-ವರ್ಗ, ವೃತ್ತಿಗೆ ಸಂಬಂಧಿಸಿದ ಬೈಗುಳಗಳು.** ಉದಾ. ದಾಸಿ. ಮಾದರಗಿತ್ತಿ, ಶುದ್ಧ ಹೊಲೆಯ, ನೀಚ, ಲಜ್ಜೆಮಾರಿತೊತ್ತು, ಭಂಡಮಾದಿಗ, ಜೂಜುಗಾರ ಮುಂತಾದುವು. **ಸಂಕೀರ್ಣ ಬೈಗುಳಗಳು**, ಉದಾ. ಲಜ್ಜೆ, ಹೀನ, ಕುನ್ನಿ, ಕತ್ತೆನಾಯಾಗಿ ಬೊಗಳು, ಹಂದಿಯಂತೆ ಬೊಗಳು ಮುಂತಾದವು. ಇವೆಲ್ಲವು ಪದರಚನೆಯ ಮತ್ತು ವಾಕ್ಯ ರಚನೆಯ ಕಕ್ಷೆಯಲ್ಲಿ ಬರುತ್ತವೆ. ಬೈಗುಳಗಳ ಬಳಕೆಯ ಸಂದರ್ಭದ ಮೇಲಿಂದ ಅವುಗಳನ್ನು ಮುಖ್ಯವಾಗಿ ಈ ಕೆಳಗಿನ ವಿಧದಲ್ಲಿ ವಿಂಗಡಿಸಬಹುದು.[೭]

ಕೋಪ : ಕೋಪಿ, ಪಾಪಿ, ಭಂಡ, ಚಾಂಡಾಲ, ಕುನ್ನಿ, ಚಾಂಡಾಲಗಿತ್ತಿ
ಫಡಫಡ, ಮುಖದ ಮೇಲೆ ಹೊಡೆ ಮುಂತಾದುವು

ಆಹ್ವಾನಿ: ಎಲ್ಲವೋ ಮಾತಂಗಿಯ ಮಗ, ನೀಚಪರವಾದಿಗಳಿರಾ, ಭವಿ ಬಿಜ್ಜಳನ ಓಲೈಸಿಹೆನೆಂದು ನುಡಿವರು ಕುಡುವೆನುತ್ತರವ (ಇಲ್ಲಿ ಇನ್ನೊಬ್ಬ ವ್ಯಕ್ತಿಯನ್ನು, ಮಾತುಗಾರನು ಜರಿದು, ಅವನಿಗೆ ಆಹ್ವಾನ ವನ್ನೊಡ್ಡುವ ರೂಪದಲ್ಲಿ ಬೈಗುಳಗಳು ಪ್ರಯೋಗವಿರುತ್ತವೆ)

ತಾತ್ಸಾರ : ಛೀ ಸುಡುಸುಡು

ಅನಿಷ್ಟಸಂಭಾವ್ಯ : ಇವರ ಮನೆಯ ಮಾರಿ ಹೋಗಲಿ! (ಮಾರಿ-ಕ್ಷುದ್ರದೇವತೆ)

ವ್ಯಂಗ್ಯಾರ್ಥ : ಹಾಲನೇಮ ಹಿಡಿದಾತ ಬೆಕ್ಕಾಗಿ ಹುಟ್ಟುವ

ಬೈಗುಳ ಪದಗಳಲ್ಲಿ ಒಂದೇ ಪದವನ್ನು ನುಡಿಯುವಾಗ ಹತ್ತಾರು ರೀತಿಯಲ್ಲಿ ಅದು ಪಲ್ಲಟವಾಗುತ್ತದೆ. ಕುಂಟ-ಕುಂಟ್ಯಾ, ಕುಂಟನಂತವನ. ಹೊಲೆಯ-ಶುದ್ಧಹೊಲೆಯ, ಹಾಳುಮೂಳೆ ಹೊಲೆಯ. ಹಾದರತಿ-ಹಾದರಗಿತ್ತಿ, ಹಾದರಗಿತ್ತಿ ಮಗನೆ ಮುಂತಾದ ಮೂಲರೂಪಗಳಿಂದ ಸಾಧಿತರೂಪಗಳು ನಿಷ್ಪನ್ನವಾಗಿವೆ. ಅಂತಹ ಪದಗಳ ಬಳಕೆಯಲ್ಲಿ ಶರಣರ ಭಾಷೆ ಬಡಿಗೆಯಾಗುತ್ತದೆ.

ಶರಣರು ಸಮಾಜದಲ್ಲಿ ಶೋಷಣೆ, ಅನ್ಯಾಯಗಳನ್ನು ಬೈಗುಳಗಳ ಮೂಲಕ ಪ್ರತಿಭಟಿಸಿದ್ದಾರೆ. ಅವು ಅಸಹ್ಯ ರೂಪಗಳಲ್ಲ. ಭಗವಂತನು ಭಕ್ತರಿಗೆ, ಗುರು ಶಿಷ್ಯರಿಗೆ, ಪಾಲಕರು ಮಕ್ಕಳಿಗೆ ಬೈಯುವ ಪದಗಳಾಗಿವೆ. ಅವು ಮೇಲ್ನೋಟಕ್ಕೆ ಬೈಗುಳ ಎನಿಸಿದರು ಅಲ್ಲಿ ನೀತಿ ಹೇಳುವುದಾಗಿದೆ. ಅವುಗಳ ಹಿಂದೆ ಪ್ರೀತಿ ತುಂಬಿದೆ. ಶರಣರು ಬೈಗುಳಗಳ ಮೂಲಕ ತಮ್ಮ ಭಾವನೆಗಳ ಅಭಿವ್ಯಕ್ತಿಯಾದ ಭಾಷೆಗೆ ಮೊನಚನ್ನು, ಕ್ರಾಂತಿಧ್ವನಿಯನ್ನು ತಂದುಕೊಟ್ಟಿದ್ದಾರೆ. ವಚನಕಾರರ ಭಾಷಾಕ್ರಾಂತಿಗೆ ಬೈಗುಳಗಳು ಬಹುಮಟ್ಟಿಗೆ ಕಾರಣವಾಗಿವೆ ಎಂಬುದು ಗಮನಾರ್ಹ.

ಶರಣರು ಪ್ರಯೋಗಿಸಿದ ಬೈಗುಳಗಳನ್ನು ಸಮಾಜೋಮಾನವಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನ ನಡೆಸಿದರೆ ಇನ್ನೂ ಸ್ವಾರಸ್ಯಕರವಾದ ಅಂಶಗಳು ಗೋಚರಿಸುತ್ತವೆ. ಅವರ ಎಲ್ಲ ಬೈಗುಳಗಳಲ್ಲಿ ಸಮಕಾಲೀನ ಸಮಾಜದ ಸಾಂಸ್ಕೃತಿಕ ಚಿತ್ರಣವನ್ನು ನೀಡಿದ್ದಾರೆ. ಬೈಗುಳಗಳ ವೈಜ್ಞಾನಿಕ ಅಧ್ಯಯನಕ್ಕೆ ವಚನಕಾರರು ಬಳಸಿದ ಬೈಗುಳಗಳು ಹೊಸದಿಕ್ಕನ್ನು ತೆರೆದುತೋರಿಸುತ್ತವೆ.

ಅಡಿಟಿಪ್ಪಣಿಗಳು

೧. ಹೆಚ್ಚಿನ ಮಾಹಿತಿಗಾಗಿ ನೋಡಿ : ಎಂ. ಚಿದಾನಂದಮೂರ್ತಿ, 'ಬೈಗುಳುಗಳು', ಗ್ರಾಮೀಣ (೧೯೭೭) ಬಾಪ್ಕೊ ಪ್ರಕಾಶನ, ಬೆಂಗಳೂರು-೧೮

೨. ವಚನ ಸಾಹಿತ್ಯದಲ್ಲಿ ಸಮಾಜೋಭಾಷಿಕ ಅಂಶಗಳು, ವಿ. ಶಿವಾನಂದ, (೨೦೦೪) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಆಕರಗ್ರಂಥ

೧. ಎಲ್. ಬಸವರಾಜು (ಸಂ.), ಬಸವಣ್ಣ, ಅಕ್ಕ, ಅಲ್ಲಮ, ಜೇಡರ ದಾಸಿಮಯ್ಯರ ವಚನಗಳು, ಗೀತಾ ಬುಕ್‌ಹೌಸ್, ಮೈಸೂರು.

೨೭

ಕೀರ್ತನೆಗಳು : ಸ್ವೀಕರಣ ಕ್ರಿಯೆ

ಒಂದು ಭಾಷಾ ಕ್ಷೇತ್ರದಲ್ಲಿ ಎರಡು ಅಥವಾ ಎರಡಕ್ಕಿಂತ ಹೆಚ್ಚು ಭಾಷಾ ಸಮುದಾಯಗಳು ಪರಸ್ಪರ ಸಂಪರ್ಕದಲ್ಲಿ ಬಂದಾಗ ಪರಸ್ಪರ ಕೊಡುಕೊಳ್ಳುವಿಕೆ ನಡೆಯುವುದು ಸಹಜ. ಒಂದು ಭಾಷಾ ಸಮುದಾಯದಲ್ಲಿಲ್ಲದ ವಸ್ತು, ವಿಚಾರ, ವ್ಯವಹಾರಕ್ಕೆ ಸಂಬಂಧಿಸಿದ ಶಬ್ದಗಳು ಅನ್ಯಭಾಷೆಯ ಸಮುದಾಯದಲ್ಲಿದ್ದರೆ ಅದನ್ನು ಇನ್ನೊಂದು ಭಾಷಾ ಸಮುದಾಯ ಸ್ವೀಕರಿಸುತ್ತದೆ. ಅನ್ಯ ಭಾಷಾ ಸಮುದಾಯದಲ್ಲಿಲ್ಲದ ವಸ್ತು, ವಿಚಾರ, ವ್ಯವಹಾರಕ್ಕೆ ಸಂಬಂಧಿಸಿದ ಶಬ್ದಗಳು ಇನ್ನೊಂದು ಸಮುದಾಯದಲ್ಲಿದ್ದರೆ ಅದು ಅನ್ಯಭಾಷಾ ಸಮುದಾಯಕ್ಕೆ ನೀಡುತ್ತದೆ. ಹೀಗೆ ಎರಡು ಭಾಷೆಗಳ ನಡುವೆ ನಡೆಯುವ ಎರವಲು ಕ್ರಿಯೆಗೆ ಭಾಷಾಸ್ವೀಕರಣ ಎಂದು ಹೆಸರು. ಭಾಷೆಯು ಸಂಸ್ಕೃತಿಯ ವಾಹಕವಾಗಿದೆ. ಸ್ವೀಕರಣ ಕ್ರಿಯೆ ನಡೆಯುವುದು ಎರಡು ಭಾಷಿಕ ಸಂಸ್ಕೃತಿಗಳಲ್ಲಿ. ಸಮುದಾಯಗಳ ಭಾವನೆಗಳು ಭಾಷೆಯ ಮೂಲಕ ವ್ಯಕ್ತವಾಗುತ್ತವೆ.

ಎರಡು ಅಥವಾ ಹೆಚ್ಚು ಭಾಷಾ ಸಮುದಾಯಗಳು ರಾಜಕೀಯ, ಧಾರ್ಮಿಕ, ಸಾಮಾಜಿಕ ಕಾರಣಗಳಿಂದ ಪರಸ್ಪರ ನಿಕಟತ್ವವನ್ನು ಪಡೆಯುತ್ತವೆ. ಒಂದು ಸಮುದಾಯದ ಪ್ರಭಾವ ಇನ್ನೊಂದು ಸಮುದಾಯದ ಮೇಲೆ ಥಾಳವಾಗಿ ಪ್ರಭಾವ ಬೀರುತ್ತದೆ. ಅಂತಹ ಭಾಷಿಕ ಸನ್ನಿವೇಶದಲ್ಲಿ ಎರಡು ಭಾಷಾಸಮುದಾಯದ ಭಾಷೆಗಳಲ್ಲಿಯ ಶಬ್ದಗಳು ವಿನಿಮಯ ವಾಗುತ್ತವೆ. ಕಿತ್ತೂರು ಕರ್ನಾಟಕದ ಪ್ರದೇಶದಲ್ಲಿ ಸುಮಾರು ಇನ್ನೂರು ವರ್ಷಗಳ ಕಾಲ (ಸು. ೧೫-೧೭ ಶತಮಾನ) ಮುಸ್ಲಿಂಮರು ಮತ್ತು ಪೇಶ್ವೆಗಳು ಆಡಳಿತ ನಡೆಸಿದ್ದರಿಂದ ಸಾವಿರಾರು ಉರ್ದು ಮತ್ತು ಮರಾಠಿ ಪದಗಳು ಕರ್ನಾಟಕದ ಉತ್ತರ ಭಾಗದಲ್ಲಿ ಸೇರಿ ಕೊಂಡಿವೆ(ಶಿಕ್ಷಣ, ವ್ಯಾಪಾರ ಮುಂತಾದ ವಲಯಗಳಲ್ಲಿ). ಅಲ್ಲದೆ ಅವು ಸಹಜವಾಗಿ ಬಳಕೆಯಾಗಿವೆ. ವಿಜಾಪುರ ಪರಿಸರದ ಆದಿಲ್‌ಶಾಹಿ ಕಾಲದಲ್ಲಿ ಸಾಹಿತ್ಯ ಕೃಷಿ ಮಾಡಿದ

ರುಕ್ಮಾಂಗದ ಪಂಡಿತರು, ಕಾಖಂಡಕಿ ಮಹಿಪತಿರಾಯರು, ಕಷ್ಣರಾಯರು, ಗಲಗಲಿ ಅವ್ವ ಮುಂತಾದವರ ಕೃತಿಗಳಲ್ಲಿ ಕನ್ನಡದ ಜೊತೆಗೆ ಉರ್ದು, ಮರಾಠಿ, ಪರ್ಶಿಯನ್ ಭಾಷೆಗಳು ಸಹಜವಾಗಿ ಬೆರೆತಿವೆ ಈ ಅಧ್ಯಾಯದಲ್ಲಿ. ಕಾಖಂಡಕಿ ಮಹಿಪತಿ ದಾಸರ ಕೃತಿಗಳಲ್ಲಿ ಸ್ವೀಕರಣ ಕ್ರಿಯೆ ಯಾವ ರೀತಿ ನಡೆದಿದೆ ಅದರ ಸ್ವರೂಪ ಎಂತಹದು ಈ ಕುರಿತು ಚರ್ಚೆ ಬೆಳೆಸಲಾಗಿದೆ. ಒಂದು ರೀತಿಯ ಧಾರ್ಮಿಕ ಹಾಗೂ ಭಾಷಾ ಸಾಮರಸ್ಯತೆಯು ತುಡಿತ ಅವರ ರಚನೆಗಳ ತಾತ್ತ್ವಿಕತೆಯಾಗಿತ್ತು. ಜೊತೆಗೆ ಆದಿಲ್‌ಶಾಹಿಯ ಕಾಲದಲ್ಲಿ ವಿಜಾಪುರದಲ್ಲಿ ಅಂದು ಹಲವಾರು ಭಾಷೆಗಳ ಸಂಗಮವಾಗಿ ಪರಸ್ಪರ ಪ್ರೇರಣೆ ಮತ್ತು ಪ್ರಭಾವದಿಂದಾಗಿ ಭಾಷಾ ಮಿಶ್ರಣದ ಸಾಹಿತ್ಯ ಕೃತಿಗಳು ರೂಪುಗೊಂಡಿರುತ್ತವೆ. ಈ ಹಿನ್ನೆಲೆಯಲ್ಲಿ ಮಹಿಪತಿದಾಸರ ಕೆಲವು ರಚನೆಗಳನ್ನು ಗಮನಿಸಬಹುದು.

> ಜ್ಞಾನಾಭ್ಯಾಸ ಮಾಡಿ ಹೀಗೆ
> ತಾನೊಲಿದು ಜ್ಞಾನಗುರು ಖುನಾಗುವ್ಹಾಂಗೆ
> ಮನದಲಿ ಬಾವ್ಹಾಂಗೆ ನೆನದಲಿ ಕಾಂಬ್ಹಾಂಗೆ
> ತನುವಿನಲಿ ಖಾತ್ರಿಗೊಂಡೆ ತಾನೆಲೆ ಗೊಂಬ್ಹಾಂಗೆ
> ....
> ....
> ದಿಂಡಿಬಂದಿತು ಭಾರಿಸುತ ಬಾಹ್ಯಾಂತ್ರಲಿಂವ್ಹಾಂಗೆ
> ಲೇಸಾಗಿ ಮಹಿಪತಿಸ್ವಾಮಿ ಒಲುವ್ಹಾಂಗೆ

ಈ ಕೀರ್ತನೆಯಲ್ಲಿ ಖೂನ, ಖಾತ್ರಿ ಇಂತಹ ಪರ್ಸೊ ಅರ್‍ಯಾಬಿಕ್ ಶಬ್ದಗಳು ಹಜವಾಗಿ ಬಳಕೆಯಾಗಿವೆ. 'ಖೂನ' ಎಂಬ ರೂಪ ಅಲ್ಲಿ ಕೊಂತಿ, ವಧೆ ಎಂಬರ್ಥದಲ್ಲಿ ಬಳಕೆಯಾಗಿದೆ. ವಿಜಾಪೂರ ಪರಿಸರದಲ್ಲಿ ಆ ಅರ್ಥಗಳ ಜೊತೆಗೆ 'ಗುರುತು', 'ಪರಿಚಯ' ಎಂಬರ್ಥದಲ್ಲಿಯೂ ಆ ರೂಪ ಬಳಕೆಯಾಗಿದೆ. ಅದರಂತೆ ಖಾತರ>ಖಾತ್ರಿ ಆಗಿ ರೂಪ ಬದಲಾವಣೆಯಾಗಿದೆ. ಅದರರ್ಥ ನಂಬುಗೆ, ವಿಶ್ವಾಸ. 'ದಿಂಡಿ' ಎಂಬುದು ಮರಾಠಿ ರೂಪ (ದಿಂಡೀ>ದಿಂಡಿ) ಅದರರ್ಥ ಭಜನೆ ಮೇಳ.

> ನಮ್ಮಪ್ಪನ ಕಂಡೆ ಅಪಾರ ಮಹಿಮೆಯುಳ್ಳವ
> ಅಪ್ಪನ ಕಂಡೆನಗೆ ತಾ ಅಪಾರ ಖುಶಿಯಾಯಿತು
> ....
> ....
> ತುಂಬಿ ತುಳುಕಿತಾನಂದ ಹೋಯಿತು ನನ್ನ
> ಬೇಅಬರು, ಬೇಕೂಫ್ ಕುಂಬಿನಿಯೊಳಗೆ
> ಪೂರ್ಣ ಅಂಬುಜಾಕ್ಷಿ........ ಮಹಿಪತಿಸ್ವಾಮಿ

ಇಲ್ಲಿ ಬಳಕೆಯಾದ 'ಬೇ ಅಬರು' ಎಂಬುದು ಹಿಂದೂಸ್ತಾನಿ ಪದ. ಅದರರ್ಥ ಅವಮರ್ಯಾದೆ, ತಿರಸ್ಕಾರ, 'ಬೇಕೂಫ್' ಎಂಬ ಪದದ ಅರ್ಥ ಅವಿವೇಕಿ. ಅದೇ ಮೂಲದ 'ಖುಶಿ' ಎಂದರೆ ಹಿಗ್ಗು, ಸಂತೋಷ. ರಾಯರ ಕೀರ್ತನೆಗಳಲ್ಲಿ ಇಂತಹ ನೂರಾರು ಅನ್ಯದೇಶಿಯ ಪದಗಳು ಸಿಗುತ್ತವೆ. ಜಬರ್ದಸ್ತು-ಒತ್ತಾಯ, ಜಕೀರ-ದಾಸ್ತಾನು, ಸಂಗ್ರಹ, ತರಿತೀಪು-ಪ್ರೀತಿ, ಪ್ರೇಮ, ದಾನಿ-ಕರಂಡಕ ಪಾತ್ರೆ, ಗುಲಾಮೀ-ಆಳುತನ ಮುಂತಾದವು. ಇಂತಹ ರೂಪಗಳು ಸಹಜವಾಗಿ ಮತ್ತು ಅರ್ಥಪೂರ್ಣವಾಗಿ ಬಳಕ ಯಾಗಿವೆ. ಅವೆಲ್ಲ ಈಗಲೂ ಪ್ರತಿನಿತ್ಯ ಜನರ ಬಾಯಲ್ಲಿ ಉಪಯೋಗದಲ್ಲಿವೆ. ಒಂದು ಭಾಷೆಗೆ ಬೇರೊಂದು ಭಾಷೆಯಿಂದ ಎರವಲಾಗಿ ಬಂದಿರುವ ಶಬ್ದಗಳನ್ನು ಚಾರಿತ್ರಿಕವಾಗಿ ಅಭ್ಯಾಸ ಮಾಡಿದರೆ ಆ ಭಾಷೆಯ ಸಾಂಸ್ಕೃತಿಕ ಚರಿತ್ರೆಯನ್ನು ಪುನರ್ ಸೃಷ್ಟಿಸಬಹುದು. ಮಹಿಪತಿದಾಸರು ಬಹುಭಾಷಾ ವಿಶಾರದವರಾಗಿದ್ದರು. ಕನ್ನಡದ ಹೊರತಾಗಿ ಮರಾಠಿ, ಉರ್ದು, ತೆಲುಗು, ಅಂದಿನ ದಖನಿ ಭಾಷೆಯಲ್ಲಿ ಕೆಲವು ಕೀರ್ತನೆಗಳನ್ನು ರಚಿಸಿದ್ದಾರೆ. 'ಭಾಷಾಮಿಶ್ರಣ' ಕ್ರಿಯೆ ಅವರ ರಚನೆಗಳಲ್ಲಿ ಧಾರಾಳವಾಗಿ ನಡೆದಿದೆ. ಅಂತಹ ಕೆಲವು ಮಿಶ್ರಭಾಷಾ ಕೃತಿಗಳು ಇಂತಿವೆ.

ಸಮಾಜೋ ಭಾಯಿ ಸಕುನಾ ಚಾರೋ ಖುದಾಕಾ
ತೆಲುಗು ಕನ್ನಡ ತುರಕಾರೆ ವಂದೇ ಸುಖ ||ಧ್ರು||

ದೇಖೋ ಭಾಯಿ ದಿಸತಾ ತುಮನಾ ನಜರೋಮೆ-ನಜರೋಮೆ
ತನ್ನೊಳಗದೆ ಅತಿ ಸೂಕ್ಷ್ಮವಾಗಿ ತಿಳಕೋಮೆ ತಿಳಕೋವೆ
ಸದ್ಗುರು ವಚನ ಶೋಧುನಿ ಪಾಹಾ ಸಪ್ರೇಮ ಸಪ್ರೇಮ
ಚುಡುವಯ್ಯ ಉನ್ನದಿ ಪೂರ್ಣಘನ ಮಹಿಮೆ ||೧||

....

....

ಆನಂದ ಆಹೆ ತುಜ ಮಹಿಪತಿ ಸುಖ ಮ್ಹೋತಾ
ಸಿದ್ಧ ನೋಡಿರೋಯ ಸಾಕ್ಷಾತ್ಕಾರವ ||ಧ್ರು||
ಸಾಧುಕಾದಸ್ತೆ ಪಂಜಲೇಣಾ
ಸಾಧುಕೆ ಸಂಗ ಕರಣಾ ಸಾಧ್ಯವಾಹುವುದು
ಸದ್ಗುರು ಕರುಣಾ ನಿಧರಿಯೊ ಜಾಣಾ

....

....

ಮಹಾಗುರು ಉಪದೇಶಾ ಮಹಿಪತಿಗಾಯಿತು
ಅತಿಸಂತೋಷಾ ಜೀವಕ ಭವ ಭಯನಾ ಶಾ ||೨||

ಬಾಟ ಪಕಡೊ ಸೀದಾ । ನಘುಡೇ ತೇಥೆ ಬಾಧಾ ।
ಇದುವೆ ಗುರು ನಿಜಬೋಧ । ಸ್ವಸುಖ ಸಮ್ಮತದಾದಾ ॥ಧ್ರು॥
ಬಂದಗೀ ಕರ್ತಾ ಕರಕೇ ಝುತಾ । ತಿಳಿಯದು ನಿಜಘನದಾಟಾ
ಮರ್ಮನ ಕಳತಾ ಕರಣೇ ಖೋಟಾ । ಕೇಳಿ ಶ್ರೀ ಗುರುವಿಗೆ ನೀಟಾ
....
....
ಮಹೀಪತಿಗಾಯಿತು ಬಲು ಆನಂದಾ । ಹರೀಮ್ಹಣಾ ಗೋವಿಂದಾ ॥

ಬಹುಭಾಷಿಕ ಕ್ಷೇತ್ರದಲ್ಲಿ ಬದುಕಿದ ಮಹಿಪತಿರಾಯರಿಗೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ಭಾಷೆಗಳನ್ನು ಉಪಯೋಗಿಸುವ ಮತ್ತು ತಮ್ಮ ಭಾವನೆಗಳನ್ನು ಆ ಭಾಷೆಗಳಲ್ಲಿ ಅಭಿವ್ಯಕ್ತಿಸುವ ಸಾಮರ್ಥ್ಯವಿತ್ತು ಎಂಬುದು ಮೇಲಿನ ಅವರ ಕೀರ್ತನೆಗಳಿಂದ ವ್ಯಕ್ತವಾಗುತ್ತದೆ. ವಿಜಾಪುರ ಪರಿಸರದ ಭಾಷೆಯನ್ನು ಅಧ್ಯಯನ ಮಾಡುವಾಗ ಮಹಿಪತಿರಾಯರ ಕೀರ್ತನೆಗಳು ಬಹುಮುಖ್ಯ ಆಕರಗಳಾಗುತ್ತವೆ.

ಮುಸ್ಲಿಂ ಕೋಮಿಗೆ ಸೇರಿದ ರಾಮದಾಸರು (ಸು. ೧೮ನೆಯ ಶತಮಾನ) ಸ್ವ ಪ್ರಯತ್ನ, ಸಾಧನೆಗಳ ಮೂಲಕ ದಾಸಸಾಹಿತ್ಯಕ್ಕೆ ಅಮೂಲ್ಯ ಕಾಣಿಕೆ ಸಲ್ಲಿಸಿದ್ದಾರೆ. ಅವರ ರಚನೆಗಳಲ್ಲಿರುವ ಭಾಷೆ, ಛಂದಸ್ಸು, ಶೈಲಿ, ವಸ್ತು ಮುಂತಾದ ವಿಷಯಗಳ ಅಧ್ಯಯನ ಯೋಗ್ಯವಾಗಿವೆ. ರಾಮದಾಸರು ತಮ್ಮ ಭಾವನೆಗಳನ್ನು ಅಭಿವ್ಯಕ್ತಿಸುವಾಗ ಸಹಜವಾಗಿ ಉರ್ದು ರೂಪಗಳು ಅವರ ರಚನೆಗಳಲ್ಲಿ ಬೆರೆತುಕೊಂಡಿವೆ.

ದಾತ ಹೈ ತೂಹೀ ಮೇರಾ ಹರಿಯೇ
ಕೃಪಾಕರ ಚರಣ ತುಮ್ಹಾರೇ |ಪ|

ಕೋಯೀ ನಹೀ ದುನಿಯಾಮೇ ಮೇರೇ ಹಿಮ್ಮತ
ಜಾನಕೀನಾಥ ತುಮ್ಹಾರೇ ಶಿವಾಯ್ ರಹಕೇ
ದೇವತಾ ಕೋಯೀನಹಿ ದಿಖತಾ ||೧||

ಹಿರಸ್ಕೇ ಚಕ್ಕರ್ಮೇ ಗಿರ್ಕರ್ ಬಹುತ್ ಮೈ
ಟಕ್ಕರ್ ಖಾಯಾರೇ ಮುರಾರಿ
ಜಗ್ ಲೇನ್‌ದೇನ್ ಕಾ ಬಜಾರ ಹೈ ಇಜ್ಜತ್ ಬಚ್ಯಾರೇ ||೨||

....
....
....

ಗಫಲತ್ ದುನಿಯಾ ದರಿಯಾಸೇ ತೀರ್ಕರ್

ಪಾರ್ ಹೋನೇಕಾ ಸೂರತ್ ದಿಖಾದೇ ಶ್ರೀರಾಮ
ಜಲ್ದೀಸೇ ಬಚಾಲೇ ಅಘತ್ಸೇ

ರಾಮದಾಸರ ಇಂತಹ ರಚನೆಗಳಲ್ಲಿ ಉರ್ದುರೂಪಗಳು ಕನ್ನಡದೊಂದಿಗೆ ಮಿಶ್ರಣವಾಗಿವೆ. ಕೀರ್ತನೆಗಳಲ್ಲಿ ಕಂಡುಬರುವ ಸ್ವೀಕರಣ ಪದಗಳ ಅಭ್ಯಾಸ ಮಾಡುವಾಗ ನಾವು ಬಹುಮುಖ್ಯವಾಗಿ ಗಮನಿಸಬೇಕಾಗಿರುವುದು ಅರಬ್ಬಿ, ಪಾರಸಿ, ಮರಾಠಿ ಮತ್ತು ಉರ್ದು ಭಾಷೆಗಳಿಂದ ಬರುವ ಪದಗಳನ್ನು. ಈ ಭಾಷೆಗಳಿಂದಲೇ ನಮಗೆ ಅತಿಹೆಚ್ಚು ಪದಗಳು ಬಂದಿವೆ. ಅವುಗಳ ರಚನೆ ಕನ್ನಡದ ರಚನೆಯೊಂದಿಗೆ ಹೊಂದಿಕೆಯಾದ ಬಗೆಯನ್ನು ಕುರಿತು (ಸಂವಹನದ ದೃಷ್ಟಿಯಿಂದ) ಅಧ್ಯಯನ ಆಗಬೇಕಾಗಿದೆ.

ಒಂದು ಭಾಷೆಯಿಂದ ಶಬ್ದಗಳು ಇನ್ನೊಂದು ಭಾಷೆಗೆ ಬಂದರೆ ಶಬ್ದಕೋಶ ವಿಸ್ತರಣೆಯಾಗುತ್ತದೆ. ಎರವಲು ಪದಗಳನ್ನು ಕುರಿತಾದ ವ್ಯಾಸಂಗವು ಭಾಷಾಶಾಸ್ತ್ರದ ಬಹುಮುಖ್ಯವಾದ ಅಂಗವಾಗಿದೆ. ಭಾಷೆಯ ರಚನೆಯ ದೃಷ್ಟಿಯಿಂದ ಅದು ಎಷ್ಟು ಮುಖ್ಯವೋ ಸಂಸ್ಕೃತಿಯ ದೃಷ್ಟಿಯಿಂದಲೂ ಅಷ್ಟೇ ಮುಖ್ಯವಾದುದು.

ಅಡಿಟಿಪ್ಪಣಿಗಳು

* ಒಂದು ಭಾಷೆಯನ್ನು ಮಾತನಾಡುವಾಗ ಮತ್ತೊಂದು ಭಾಷೆಯ ಪದಗಳನ್ನು, ವಾಕ್ಯಗಳನ್ನು ಬೆರೆಸುವುದು ಭಾಷಾಮಿಶ್ರಣವಾಗಿದೆ (code Mixing).
* ಇಲ್ಲಿ ಉಕ್ತವಾದ ಕೀರ್ತನೆಗಳನ್ನು ಜಿ. ವರದರಾಜರಾವ್ ಅವರ ಸಂಪಾದಿಸಿದ 'ಶ್ರೀ ಮಹಿಪತಿರಾಯರ ಕೃತಿಗಳು' (೧೯೭೬) ಸ್ವಾಮಿರಾವ ಕುಲಕರ್ಣಿ ಅವರು ಸಂಪಾದಿಸಿದ 'ಶ್ರೀ ರಾಮದಾಸರ ಕೀರ್ತನೆಗಳು' (೨೦೦೧) ಎ.ಪಿ. ನಾವಡರು ಸಂಪಾದಿಸಿದ 'ಈಸಬೇಕು ಇದ್ದು ಜಯಿಸಬೇಕು' (೨೦೦೨) ಈ ಕೃತಿಗಳಿಂದ ಆಯ್ಕೆ ಮಾಡಿಕೊಳ್ಳಲಾಗಿದೆ. ಅದರಂತೆ ಇಲ್ಲಿ ಉಕ್ತವಾದ ಮಿಶ್ರ ಭಾಷಾ ಕೃತಿಗಳನ್ನು ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರ ಕಾಖಂಡಕಿ ಮಹಿಪತಿರಾಯರು (೧೯೮೯) ಎಂಬ ಕೃತಿಯ ಅನುಬಂಧ ಭಾಗದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ. ಆ ಬರೆಹಗಳಿಗೆ ಉಪಕೃತ.

೨೮

ಕೀರ್ತನೆಗಳು : ಬಾಲಭಾಷೆ

ಮಗು ಅಥವಾ ವ್ಯಕ್ತಿಯ ಜ್ಞಾನ ಸಂಪಾದನೆಗೆ ಭಾಷೆ ಮಹತ್ವ ಪೂರ್ಣ ಕಾರ್ಯ ಮಾಡುತ್ತದೆ. ಮಗುವಿನ ಬೌದ್ಧಿಕ ವಿಕಾಸಕ್ಕೆ ಭಾಷೆ ಮೂಲಭೂತ ಅವಶ್ಯಕತೆಗಳಲ್ಲಿ ಒಂದಾಗಿದೆ. ಮನುಷ್ಯನ ಚಿಂತನೆ, ಕಲ್ಪನೆ, ಭಾವನೆ ಮತ್ತು ಜ್ಞಾನಗಳಿಗೆ ಭಾಷೆಯೇ ಮಾಧ್ಯಮವಾಗಿದೆ. ಭಾಷಾಕಲಿಕೆಯ ಪ್ರಕ್ರಿಯೆಯು ಬೇರೆ ಬೇರೆ ಮಕ್ಕಳಲ್ಲಿ ಬೇರೆ ಬೇರೆ ತೆರನಾಗಿದ್ದರೂ ಭಾಷಾ ಕಲಿಕೆಯ ಸ್ತರಗಳು ಸಾಮಾನ್ಯವಾಗಿ ಎಲ್ಲ ಮಕ್ಕಳಲ್ಲಿ ಒಂದೇ ಆಗಿರುತ್ತವೆ. ಮಗುವಿನ ಭಾಷಾಕಲಿಕೆಯ ವಿಕಾಸ ಕ್ರಮವನ್ನು ಡಾ. ಎಚ್.ಎಂ. ಮಹೇಶ್ವರಯ್ಯನವರು ಎಂಟು ಹಂತಗಳಲ್ಲಿ ವಿಂಗಡಿಸಿದ್ದಾರೆ.[೧] ಭಾಷಾ ಕಲಿಕೆಯಲ್ಲಿ ಅನುಕರಣೆಗೆ ಪ್ರಮುಖ ಸ್ಥಾನವಿದೆ. ಅನುಕರಣೆ ಇಲ್ಲದಿದ್ದರೆ ಭಾಷಾಕಲಿಕೆ ಅಸಾಧ್ಯ. ಧ್ವನಿಗಳ ಪುನರಾವರ್ತನೆ, ತನಗೆ ತಾನೆ ಸ್ವಗತ ಸಂಭಾಷಣೆಗೆ ತೊಡಗುವುದು ಇವು ಕಲಿಕೆಯಲ್ಲಿ ಮಹತ್ವದ ಪಾತ್ರವಹಿಸುವವು. ಹೆಚ್.ಆರ್.ಭಾಟಿಯಾರವರು ಹೇಳುವಂತೆ ಮಗು ಶೈಶವಾವಸ್ಥೆ ಮತ್ತು ಬಾಲ್ಯಾವಸ್ಥೆಯಲ್ಲಿದ್ದಾಗ ಸರಿ-ತಪ್ಪುಗಳ ಭೇದ ಗೊತ್ತಾಗುವುದಿಲ್ಲ. ತಂದೆ-ತಾಯಿ ಮಾತನ್ನು ಅನುಕರಿಸುತ್ತದೆ. ಆ ಹಂತದಲ್ಲಿ ಭಾಷಾ ಕಲಿಕೆಯಲ್ಲಿ ಆಸಕ್ತಿ ಹೆಚ್ಚಿರುತ್ತದೆ. ಇತರರಾಡುವ ಮಾತುಗಳನ್ನು ತನ್ನಷ್ಟಕ್ಕೆ ತಾನೆ ಅನುಕರಿಸುತ್ತದೆ.[೨] ಮಗು ಅನುಕರಣೆಯಿಂದ ಹಾಗೂ ಪ್ರಯತ್ನ ದೋಷವಿಧಾನದಿಂದ ಮಾತನಾಡಲು ಕಲಿಯುತ್ತದೆ.

ಬಾಲ್ಯಾವಸ್ಥೆಯು ೬ನೆಯ ವರ್ಷದಿಂದ ಪ್ರಾರಂಭವಾಗುತ್ತದೆ. (೬ ರಿಂದ ೧೨ನೆಯ ವಯಸ್ಸು) ಅಥವಾ ಮಗು ಶಾಲೆಗೆ ಸೇರಿದಾಗಿನಿಂದ ಈ ಅವಧಿ ಪ್ರಾರಂಭವಾಗುತ್ತದೆ. ಈ ಹಂತದಲ್ಲಿ ಮಗುವಿಗೆ ತಿಳಿವಳಿಕೆ ಶುರುವಾಗುತ್ತದೆ. ಆದ್ದರಿಂದ ಮಗುವಿನ ಬಾಳಿನಲ್ಲಿ ಇದೊಂದು ಮೈಲಿಗಲ್ಲು. ಶಾಲೆಗೆ ಕಾಲಿಟ್ಟಾಗ ಪರಿಸರ ಬದಲಾವಣೆಯಿಂದ ಅವನ ವರ್ತನೆಗಳಲ್ಲಿ ಸಾಕಷ್ಟು ಮಾರ್ಪಾಡುಗಳಾಗುತ್ತವೆ. ಬಾಲ್ಯಾವಸ್ಥೆಯಲ್ಲಿ ಮಗು ಮಾನಸಿಕವಾಗಿ ಬೆಳವಣಿಗೆಯಾಗಿರುತ್ತದೆ. ಯಾವುದಾದರೂ ಒಂದು ಇಂದ್ರಿಯದಿಂದ ಬರುವ

ಸಂವೇದನೆಯಿಂದ ಕೆಲವು ವಸ್ತುಗಳ ಸನ್ನಿವೇಶಗಳನ್ನು ಅರ್ಥಮಾಡಿಕೊಳ್ಳುತ್ತದೆ. ದೃಶ್ಯ, ಶಬ್ದ, ರುಚಿ, ವಾಸನೆ ಹಾಗೂ ಸ್ಪರ್ಶಗಳ ಪ್ರತ್ಯಕ್ಷಾನುಭವದಿಂದ ಮಕ್ಕಳು ಬಾಹ್ಯ ಪರಿಸರವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಮಗುವಿನ ಬೆಳವಣಿಗೆ ಮುಂದು ವರೆದಂತೆ ಹೆಚ್ಚು ಹೆಚ್ಚು ಸ್ಪರ್ಶಾನುಭವಗಳು ದೊರೆತಂತೆ ಭಾವನೆಗಳು ರೂಪುಗೊಳ್ಳುತ್ತವೆ ಪದಗಳ ಪರಿಚಯ, ಅರ್ಥ ವ್ಯತ್ಯಾಸದ ತಿಳಿವಳಿಕೆ ಹೆಚ್ಚಿದಂತೆಲ್ಲ ವಸ್ತುಗಳ ಬದಲಾಗಿ ಪದಗಳನ್ನು ಕೇಳಿ ಇಲ್ಲವೆ ತಿಳಿದು ಸ್ಮರಿಸಿಕೊಂಡಾಗ ಭಾವನೆಗಳು ಪರಿಚಯಕ್ಕೆ ಬರುತ್ತವೆ. ಬಾಲ್ಯಾವಸ್ಥೆ ಯಲ್ಲಿ ಸಂವೇದನೆಗಳಿಗೆ ಕೂಡಲೆ ನಿಶ್ಚಿತ ಅರ್ಥವಾಗುವುದಿಲ್ಲ. ಮಗುವಿಗೆ ಪ್ರತ್ಯಕ್ಷಾನುಭವ ಬೆಳೆದಂತೆ ಸಂವೇದನೆಗಳಿಗೆ ನಿಶ್ಚಿತ ಅರ್ಥವುಂಟಾಗುತ್ತದೆ.

ಶಾಲೆಗಳಲ್ಲಿ ಮಕ್ಕಳು ಅನೇಕ ಸಂಗತಿಗಳನ್ನು ಪದಗಳ ಮೂಲಕವೇ ಕಲಿಯುತ್ತಾರೆ. ಈ ಪದಗಳು ಒಳಗೊಂಡಿರುವ ಭಾವನೆಗಳ ಅರ್ಥ ಎಷ್ಟು ಸ್ಪಷ್ಟವಾಗಿರುತ್ತದೆಯೋ ಅಷ್ಟೇ ಚೆನ್ನಾಗಿ ಕಲಿವು ಸಿದ್ಧಿಸುತ್ತದೆ. ಶಾಲೆಯಲ್ಲಿ ಮಕ್ಕಳು ವಿಷಯಗಳನ್ನು ಕಲಿಯಲು ಆಲೋಚಿಸಬೇಕು. ಈ ಕಾರ್ಯದಲ್ಲಿ ಭಾಗವಹಿಸುವ ವಸ್ತುಗಳ, ಭಾವನೆಗಳ ಅರ್ಥ ಸ್ಪಷ್ಟವಾಗಬೇಕಾದರೆ ಪದಗಳ ಪರಿಚಯ ಅಗತ್ಯ. ಪದಸಂಪತ್ತು ಹೆಚ್ಚಾದಷ್ಟು ಆಲೋಚನೆ ತೀವ್ರವಾಗಿ ನಡೆಯುತ್ತದೆ. ಆದ್ದರಿಂದ ಪ್ರಾಥಮಿಕ ಶಾಲೆಗಳಲ್ಲಿ ಪದಸಂಪತ್ತು ಹೆಚ್ಚು ಹೆಚ್ಚು ಬೆಳೆಯುವಂತೆ ವಿವಿಧ ಕಾರ್ಯಗಳನ್ನು(ಭಾಷಣ, ಪ್ರಬಂಧ ಸ್ಪರ್ಧೆ, ಇಂತಹ ಭಾಷಿಕ ಚಟುವಟಿಕೆಗಳನ್ನು ಏರ್ಪಡಿಸುವುದು)ರೂಪಿಸಬೇಕು. ಮಕ್ಕಳ ಪೂರ್ವಾನುಭವಕ್ಕೆ ಹೆಚ್ಚಿನ ಆದ್ಯತೆ ಕೊಡುವುದರಿಂದ ಹೊಸ ಜ್ಞಾನ ಹಳೆಯ ಅನುಭವದೊಂದಿಗೆ ಹೆಣೆದುಕೊಂಡು ರೂಪುತಾಳುತ್ತದೆ. ಇದು ಶಾಲೆಯಲ್ಲಿ ಮಕ್ಕಳ ಶಿಕ್ಷಣಕ್ಕೆ ಅನ್ವಯಿಸುತ್ತದೆ. ಅದಕ್ಕಾಗಿ ಮಕ್ಕಳ ಪೂರ್ವಾನುಭವವನ್ನು ಪ್ರಚೋದಿಸಿ ಹೊಸ ಅನುಭವಗಳನ್ನು ಸ್ವೀಕರಿಸುವಂತೆ ಮಕ್ಕಳ ಮನಸ್ಸನ್ನು ಕಲಿಕೆಗೆ ಸಿದ್ಧಗೊಳಿಸಬೇಕು. ಕೆಲವೊಮ್ಮೆ ಶಬ್ದಗಳ ಮೂಲಕ ಮಾಡುವ ವಿವರಣೆಗಿಂತ ಆ ಕೃತಿಯ ಮೂಲಕ ಮಾಡುವ ವಿವರಣೆ ಭಾಷಾ ಕಲಿಕೆಯ ದೃಷ್ಟಿಯಿಂದ ಹೆಚ್ಚು ತಿಳಿವಳಿಕೆ ಮೂಡಿಸುತ್ತದೆ. ಹೀಗಾಗಿ ಪ್ರತ್ಯಕ್ಷಾನುಭವದಿಂದ ಮಕ್ಕಳು ಬಾಹ್ಯ ಪರಿಸರ ವನ್ನು ಗ್ರಹಿಸಲು ಹಾಗೂ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ.[೬] ಈ ಹಿನ್ನೆಲೆಯಲ್ಲಿ ಕೀರ್ತನೆಗಳಲ್ಲಿ ಉಕ್ತವಾದ ಬಾಲಭಾಷೆಯ ಸ್ವರೂಪವನ್ನು ಈ ಅಧ್ಯಾಯದಲ್ಲಿ ವಿವೇಚಿಸಲಾಗಿದೆ.

೧

'ಶ್ರೀ ಕೃಷ್ಣಲೀಲೆ' ಎಂಬ ಭಾಗದ ಕೀರ್ತನೆಗಳಲ್ಲಿ ದಾಸರ ಭಕ್ತಿ, ನಿಷ್ಠೆ ಸ್ಫುಟವಾಗಿ ಮೂಡಿದೆ. ಭಕ್ತಿಮಾರ್ಗದಲ್ಲಿ ಕೃಷ್ಣನನ್ನು ಕುರಿತು ಭಜನೆ, ಕೀರ್ತನೆ, ಸ್ಮರಣೆಗಳಿಗೆ ವಿಶೇಷ ಮಹತ್ವವಿರುತ್ತದೆ. ಇಲ್ಲಿಯ ವಾತ್ಸಲ್ಯಭಾವ ಕಣ್ಣು ಕುಕ್ಕುತ್ತದೆ. ಭಕ್ತನು ದೇವರೊಡನೆ ತಾಯಿ ಮಗುವಿನ ಸಂಬಂಧ ಕಲ್ಪಿಸಿಕೊಳ್ಳುವನು. ದಾಸ್ಯ ಹಾಗೂ ಸಖ್ಯ ಭಾವಗಳಲ್ಲಿ ಇಲ್ಲದ ನಿಷ್ಕಾಮತೆ ಇಲ್ಲಿದೆ. ಕೌಸಲ್ಯೆ ಶ್ರೀರಾಮನನ್ನು ಕಂಡದ್ದು ಈ ಭಾವದಿಂದ. ಯಶೋಧೆ

ಬಾಲಕೃಷ್ಣನಲ್ಲಿ ತೋರಿದ ಪ್ರೀತಿ ವಾತ್ಸಲ್ಯ ಅಸಾಧಾರಣ, ಅನುಕರಣೀಯ, ರಾಧೆ-ಕೃಷ್ಣರ ಅಮರ ಪ್ರೇಮದ ಸವಿಯೂ ಇಲ್ಲಿದೆ. ಗೋಪಿಕಾ ಸ್ತ್ರೀಯರೊಡನೆ ಕೃಷ್ಣನಡೆಸಿದ ಕಣ್ಣು ಮುಚ್ಚಾಲೆ ಆಟದ ನೋಟವೂ ದಾಸರ ಗಮನ ಸೆಳೆದಿದೆ. ಶ್ರೀ ಕೃಷ್ಣನ ಹಲವಾರು ಬಾಲಲೀಲೆ ಗಳನ್ನು ದಾಸರು ನೆನೆದು ಕೊಂಡ ಬಗೆ ಮನಗಂಬುವಂತಿದೆ. ಆ ಸಂದರ್ಭದಲ್ಲಿ ಕೃಷ್ಣನನ್ನು ಸಂಬೋಧಿಸುವಾಗ ಬಾಲಭಾಷೆ ಲೀಲಾಜಾಲವಾಗಿ, ಮುಕ್ತವಾಗಿ ಹರಿದಿದೆ. ತಾಯಿಯ ಶೋಧೆಯ ಪುತ್ರ ವಾತ್ಸಲ್ಯ ಹೀಗಿದೆ.

ಎಲ್ಲಾಡಿ ಬಂದ್ಯೋ ಮುದ್ದುರಂಗಯ್ಯ ನೀ ॥ಪ॥
ನೆಲ್ಲಾಡಿ ಬಂದ್ಯೋ ಕೃಷ್ಣಯ್ಯ
ಎಲ್ಲಾಡಿ ಬಂದ್ಯೋ ಎನ್ನ ಕಣ್ಣ ಮುದ್ದಾಡದೆ ॥ಅ.ಪ॥

ಆಲಯದೊಳಗೆ ನೀನಾಡದೆ ಬೆಣ್ಣೆ
ಪಾಲು ಸಕ್ಕರೆಯ ನೀ ಮೆಲ್ಲದೆ, ಚಿಕ್ಕ
ಬಾಲರೊಡಗೂಡಿ ಆಡದೆ
ಬಾಲಯ್ಯ ನೀನೆನ್ನ ಕಣ್ಣಮುಂದಾಡದೆ ॥೧॥

ಪದಕ ರತ್ನವ ನೀನೊಲ್ಲದೆ, ದಿವ್ಯ
ಮಧುರ ಭಾಷಣವ ನೀನಾಡದೆ
ಸುದತಿಯರೊಡಗೂಡ್ಯಾಡದೆ, ಮುದ್ದು
ಚದುರ ಕೃಷ್ಣಯ್ಯ ಎನ್ನ ಕಣ್ಣ ಮುಂದಾಡದೆ ॥೨॥

ಅಷ್ಟ ದಿಕ್ಕಿನಲಿ ಅರಸಿ ಕಾಣದೆ, ಬಲು
ದೃಷ್ಟಿಗೆಟ್ಟಿತೊ ನಿನ್ನ ನೋಡದೆ, ನಾ
ನೆಷ್ಟು ಹೇಳಲು ಕೇಳಬಾರದೆ, ರಂಗ
ವಿಠಲ ನೀನೆನ್ನ ಕಣ್ಣ ಮುಂದಾಡದೆ ॥೩॥

ಶ್ರೀ ಪಾದರಾಯರ ಈ ಕೀರ್ತನೆಯಲ್ಲಿ ಯಶೋಧೆಯ ಪುತ್ರವಾತ್ಸಲ್ಯದ ಭಾವ ಕೆನೆಗಟ್ಟಿದೆ. ಕೃಷ್ಣ ಆಟವಾಡಿ ಬಂದಾಗ ನನ್ನ ಕಣ್ಣಮುಂದೆ ಆಡಬೇಕೆಂದು ಪ್ರೀತಿಯಿಂದ ಹೇಳುತ್ತಾಳೆ. ಮನೆಯಲ್ಲಿ ಬೆಣ್ಣೆ, ಹಾಲು ಸಕ್ಕರೆ ತಿನ್ನುತ್ತಾ ಕಣ್ಣ ಮುಂದೆಯೇ ಆಟವಾಡಬೇಕೆಂದೂ ಹೇಳುತ್ತಾಳೆ. ತಾಯಿಯ ಹಂಬಲ, ಪುತ್ರ ವಾತ್ಸಲ್ಯ ಸೊಗಸಾಗಿ ಬಂದಿದೆ. 'ಕೃಷ್ಣಯ್ಯ, 'ಮುದ್ದು ರಂಗಯ್ಯ', 'ಎಲ್ಲಾಡಿ ಬಂದ್ಯೋ' ಇಂತಹ ವಾತ್ಸಲ್ಯಭರಿತ ಸಂಬೋಧನೆಗಳು ಅರ್ಥಪೂರ್ಣವಾಗಿ ಬಳಕೆಯಾಗಿವೆ. ಮುಗ್ಧಮಗು ತಾಯಿಗೆ ಹೆದರಿ, ಹೇಳಿದಂತೆ ಕೇಳುವುದು ವಾತ್ಸಲ್ಯದ ಇನ್ನೊಂದು ಮುಖ. ಪುರಂದರದಾಸರ ಒಂದು ಕೀರ್ತನೆ ಯಲ್ಲಿ ಆ ಭಾವ ಸೊಗಸಾಗಿ ಚಿತ್ರಿತವಾಗಿದೆ.

ಗುಮ್ಮನ ಕರೆಯದಿರೆ ಅಮ್ಮ ನೀನು
ಗುಮ್ಮನ ಕರೆಯದಿರೆ ||ಪ||
ಸುಮ್ಮನೆ ಇದ್ದೇನು ಅಮ್ಮಿಯ ಬೇಡೆನು
ಮಮ್ಮು ಉಣ್ಣುತೇನೆ ಅಮ್ಮ ಅಳುವುದಿಲ್ಲ ||ಅ.ಪ||

ಹೆಣ್ಣುಗಳಿರುವಲ್ಲಿ ಪೋಗಿ ಅವರ
ಕಣ್ಣುಮುಚ್ಚುವುದಿಲ್ಲವೆ
ಚಿಣ್ಣರ ಬಡಿಯೆನು, ಅಣ್ಣನ ಬೈಯೆನು
ಬೆಣ್ಣೆಯ ಬೇಡೆನು ಮಣ್ಣು ತಿನ್ನುವುದಿಲ್ಲ ||೧||

ಬಾವಿಗೆ ಪೋಗೆ ಕಾಣೆ, ಅಮ್ಮನಾನು
ಹಾವಿನೊಳಾಡೆ ಕಾಣೆ
ಆವಿನ ಮೊಲೆಯೊಡೆ, ಕರುಗಳ ಬಿಡೆ, ನೋಡೆ
ದೇವರಂತೆ ಒಂದು ಠಾವಿಲಿ ಕೂಡುವೆ ||೨||

ಮಗನ ಮಾತ ಕೇಳಿ ಗೋಪಿದೇವಿ
ಮುಗುಳು ನಗೆಯ ನಗುತ
ಜಗದೊಡೆಯನ ಶ್ರೀ ಪುರಂದರವಿಠಲನ
ಬಿಗಿದಪ್ಪಿಕೊಂಡಳು ಮೋಹದಿಂದಲಾಗ ||೩||

ಯಶೋದೆ ಪ್ರೀತಿಪೂರ್ವಕವಾಗಿ ಮಗನನ್ನು ಬೆದರಿಸಿದಾಗ ಆಗ ಕೃಷ್ಣನು ಇನ್ನು ಮೇಲೆ ಹಠ ಮಾಡುವುದಿಲ್ಲವೆಂದು ತಾಯಿಯ ಮುಂದೆ ಪ್ರಾರ್ಥಿಸುತ್ತಾನೆ. ಆತನ ದೈನ್ಯತೆಯ ಹಿಂದೆ ಬಾಲಭಾಷೆ ಕಣ್ಮುಂದೆ ಕಟ್ಟಿದಂತೆ ಬಳಕೆಯಾಗಿದೆ. 'ಗುಮ್ಮನ ಕರೆಯದಿರೆ' ಎಂದಾಗ ಮಗುವಿನ ಅಂತರಂಗದಲ್ಲಿಯ ತಳಮಳ ಭಾಷೆಯ ಮೂಲಕ ಅಭಿವ್ಯಕ್ತವಾಗಿದೆ. ಭಾವನಾತ್ಮಕ ವಾತಾವರಣ ಸೃಷ್ಟಿಯಾಗುತ್ತದೆ. ಒಂದುಬಗೆಯ ಚಿತ್ರಕ ಶೈಲಿ ಅಲ್ಲಿ ಮೂಡಿದೆ. ಗುಮ್ಮ-ದೆವ್ವ, ಭಯ, ಅಮ್ಮಿ-ಮೊಲೆಹಾಲು, ಮಮ್ಮು-ಅನ್ನ, ಆಹಾರ ಮುಂತಾದ ಪದರೂಪಗಳು ಸೊಗಸಾಗಿ ಬಳಕೆಯಾಗಿವೆ. ಪ್ರಾಸಯುಕ್ತವಾದ ಈ ಮಾತುಗಳು ಸರಳವಾಗಿದ್ದು ನೆನಪಿಟ್ಟುಕೊಳ್ಳಲು ಸುಲಭವಾಗುತ್ತವೆ. ಗೋಪಿಕಾ ಸ್ತ್ರೀಯರು ಕೃಷ್ಣನೊಡನೆ ನಡೆಸಿದ ಕಣ್ಣುಮುಚ್ಚಾಲೆಯ ಆಟ, ಅವರು ಅವನನ್ನು ಕುರಿತು ಬೆಳೆಸಿಕೊಂಡ ವ್ಯಾಮೋಹದಿಂದ ಯಶೋದೆ ತನ್ನ ಮಗನನ್ನು ಯಾರಾದರೂ ಎತ್ತಿಕೊಂಡು ಹೋದಾರೆಂಬ ಭಯದಿಂದ ಬಾಗಿಲಿನಿಂದಾಚೆಗೆ ಹೋಗಬಾರದೆಂದು ಅವನಿಗೆ ಹೇಳುತ್ತಾಳೆ. ಆಗ ಕೃಷ್ಣನನ್ನು ಸಂಬೋಧಿಸುವಾಗ ಬಾಲಭಾಷೆ ಸೊಗಸಾಗಿ ಮೂಡಿಬಂದಿದೆ.

ಪೋಗದಿರಲೊ ರಂಗ, ಬಾಗಿಲಿಂದಾಚೆಗೆ ||ಪ||
ಭಾಗವತರು ಕಂಡರೆತ್ತಿ ಕೊಂಡೊಯ್ವರೊ ||ಅ.ಪ||

ಸುರಮುನಿಗಳು ತಮ್ಮ ಹೃದಯ ಗಹ್ವರದಲ್ಲಿ
ಪರಮಾತ್ಮನ ಕಾಣದರಸುವರೊ
ದೊರಕದ ವಸ್ತು ದೊರಕಿತು ನಮಗೆಂದು
ಹರುಷದಿಂದಲಿ ಬಂದು ಕರೆದೆತ್ತಿಕೊಂಬರೊ ॥೧॥

ಅಗಣಿತ ಗುಣ ನಿನ್ನ ಜಗದ ನಾರಿಯರೆಲ್ಲ
ಹಗರಣ ಮಾಳ್ಪರು ಗೋಪಾಲನೇ
ಮಗುಗಳ ಮಾಣಿಕ್ಯ ತಗಲಿತು ಕರಕೆಂದು
ಮಿಗಿಲು ವೇಗದಿ ಬಂದು ಬಿಗಿದಪ್ಪಿಕೊಂಬರೊ ॥೨॥

ದುಷ್ಟ ನಾರಿಯರು ತಮ್ಮಿಷ್ಟವ ಸಲಿಸೆಂದು
ಅಟ್ಟಟ್ಟಿ ಬೆನ್ಹತ್ತಿ ತಿರುಗುವರೊ
ಸೃಷ್ಟೀಶ ಪುರಂದರ ವಿಠ್ಠಲರಾಯನೆ
ಇಷ್ಟಿಷ್ಟು ಬೆಣ್ಣೆಯ ಕೊಟ್ಟೇನೊ ಗೋಪಾಲ ॥೩॥

ಇಂತಹ ಕೀರ್ತನೆಗಳಲ್ಲಿ ಭಕ್ತದೇವರಲ್ಲಿ ಬೆಳೆಸಿಕೊಂಡ ಅನ್ಯೋನ್ಯತೆ ಸೊಗಸಾಗಿ ಬಂದಿದೆಯಲ್ಲದೆ ಮುಗ್ಧವಾದ ವಾತ್ಸಲ ಭಾವ ಹೊರಹೊಮ್ಮಿದೆ. 'ಬಗೆ ಬಗೆ ಆಟಗಳಲ್ಲಿ ಕಲಿತಯ್ಯ', 'ಆಡಿದನೊ ರಂಗ ಅದ್ಭುತದಲಿ ಕಾಳಿಂಗನ ಫಣೆಯಾಟ' ಈ ಕೀರ್ತನೆಗಳು ಹೃದಯಂಗಮವಾಗಿವೆ. 'ಎಲೆ ಎಲೆ ಸಿಡಿಲು ಮಿಂಚೆ ಗರ್ಜಿಸದಿರಿ ನೀವು', 'ಕಡಗ ಕಂಕಣ ಕಟಿಯ ತೊಡರು', 'ಗಲಭೆ ಇದೇನೋ ಬೊಮ್ಮಾದಿಗಳ' ಈ ಸುಳಾದಿಗಳಲ್ಲಿ ಕೃಷ್ಣಲೀಲೆ ಹೃದಯಂಗಮವಾಗಿದೆ. ಯಶೋಧೆ ಮೊಸರು ಕಡೆಯುವಾಗ ಕೃಷ್ಣನು ನಡೆಸಿದ ಕಿಡಿಗೇಡಿತನವನ್ನು ಕಂಡು

ಮಂಥನ ಮಾಡಲೀಯೆ ಮಾಧವ ಮೊಸರು ಮೀಸಲು
ಇಂಥದುಂಟೇ ರಂಗ ಬಿಡುಬಿಡು ಕಂಡೆಯಾ ಕಡೆಗೋಲು
ಎಂಥವನೋ ನೀನು ಏಳುತ್ತಾಗಳೇ ಜಗಳ
ಇಂಥದುಂಟೆ ರಂಗ ಬಿಡುಬಿಡು ಕಂಡೆಯಾ ಕಡೆಗೋಲು

ಎಂದು ಹೇಳುವ ನುಡಿಗಳಲ್ಲಿ ವಾತ್ಸಲ್ಯದ ಸೊಗಸು ಹೃದಯಂಗಮವಾಗಿದೆ. ಮುದ್ದು ಕೃಷ್ಣನ ಚೆಲುವನ್ನು ದಾಸರು ಸೊಗಸಾಗಿ ಬಣ್ಣಿಸಿದ್ದಾರೆ.

ಕಟವಾಯ ಬೆಣ್ಣೆ ಕಾಡಿಗೆಗಣ್ಣು ಕಟಿಸೂತ್ರ
ಪಟವಾಳಿ ಕೈಪ ಕೊರಳೊಳು ಪದಕ
ಸಟ್ಟೆಯಲ್ಲ ಬ್ರಹ್ಮಾಂಡ ಹೃದಯದೊಳಿರುತಿರಲು
ಮಿಟಮಿಟಿ ನೋಡುವ ಈ ಮುದ್ದುಕೃಷ್ಣ

ಎಂಬ ಕೀರ್ತನೆಯಲ್ಲಿ ಬಾಲಕೃಷ್ಣನ ವ್ಯಕ್ತಿತ್ವ ಸೊಗಸಾಗಿ ಚಿತ್ರಿತವಾಗಿದೆ. 'ಕಟವಾಯ ಬೆಣ್ಣೆ', 'ಕಾಡಿಗೆಗಣ್ಣು' ಎಂತಹ ಸುಂದರವಾದ ಪದಪುಂಜಗಳಿವು. ಈಗಲೂ ಉತ್ತರ ಕರ್ನಾಟಕದ ವ್ಯಾವಹರಿಕ ಕನ್ನಡದಲ್ಲಿ ಈ ಪದ ಪುಂಜಗಳು ಬಳಕೆಯಲ್ಲಿವೆ ಎಂಬುದು ಗಮನಾರ್ಹ.

ಮುಂಗುರುಳು ಮುಂಜೆಡೆ ಬಂಗಾರದರಳೆಲೆ
ರಂಗುಮಾಣಿಕದ ಉಂಗುರವಿಟ್ಟು
ಪೊಂಗೆಜ್ಜೆ ಕಾಲಲಂದುಗೆ ಘಿಲ್ಲುಘಿಲುನುತ
ಅಂಗಳದೊಳಗಾಡುತಿಹ ಮುದ್ದುಕೃಷ್ಣ

ತಾಯಿ ಯಶೋದೆಯು ಬಗೆ ಬಗೆಯ ಅಲಂಕಾರಗಳಿಂದ ಮಗನನ್ನು ಶೃಂಗರಿಸುತ್ತಾಳೆ. ಆ ವರ್ಣನೆ ಈ ಕೀರ್ತನೆಯಲ್ಲಿ ಹೃದಯಂಗಮವಾಗಿ ಚಿತ್ರಿತವಾಗಿವೆ. ಯಶೋಧೆಯ ಕೃಷ್ಣನನ್ನು ಮಲಗಿಸುವ ಸನ್ನಿವೇಶ ಅದ್ಭುತವಾಗಿದೆ. ತೊಟ್ಟಿಲಲ್ಲಿ ಹಾಕಿ 'ಹೊನ್ನುತಾಗುಬ್ಬಿ ತಾಹೊನ್ನು ತಾ' ಎಂದು ಬಣ್ಣಿಸಿ ಹಾಡುತ್ತಾಳೆ. ಹಣೆಗೆ ತಿಲಕವಿಟ್ಟು, ಕೊರಳಿಗೆ ಹಾರ ಹಾಕಿ 'ಕುಣಿಯೊ ಕುಣಿಯೊ' ಎಂದು ಕುಣಿಸಿ ಆಡಿಸುತ್ತಾಳೆ. ಇಲ್ಲಿಯ ಕಥನ, ನಾಟ್ಯ, ನಿರೂಪಣೆ ಮತ್ತು ಸಾಂಕೇತಿಕ ಧ್ವನಿ ನಾದ ಮಯವಾಗಿ ತೋರುತ್ತದೆ. ಶ್ರೀ ಕೃಷ್ಣನನ್ನು ಯಶೋದೆ ಲಾಲಿಸುವ ಪಾಲಿಸುವ ಬಗೆಯನ್ನು ದಾಸರು ಬಹಳ ಮನೋಹರವಾಗಿ ವರ್ಣಿಸಿದ್ದಾರೆ. ಇಲ್ಲೆಲ್ಲ ಜೋಗುಳ ಹಾಡಿನ ಧಾಟಿ ಸ್ಪಷ್ಟವಾಗಿ ಗೋಚರಿಸುತ್ತದೆ.

ಗಂಗಾ ಜನಕನಿಗೆ ಹೊಂಗಲಶಗಳಿಂದ
ಮಂಗಳ ಮಜ್ಜನ ಮಾಡಿಸುವಳು
ಅಂಗನೆ ದ್ರೌಪದಿಗೆ ಅಕ್ಷಯಾಂಬರವಿತ್ತ
ರಂಗಗೆ ಪೊಂಬಟ್ಟೆಯ ಉಡಿಸುವಳು
ಅಂಗಜನಯ್ಯನ ಅನರ್ಘ್ಯರತ್ನಾಭರ
ಗಳಿಂದಲಿ ಸಿಂಗರಿಪಳು
ಇಂಗಡಲೊಡೆಯಗೆ ಕೆನೆಹಾಲ ನೈವೇದ್ಯ
ಸಂಗ್ರಾಮ ಭೀಮಗೆ ರಕ್ಷೆಬೊಟ್ಟು

ಎಂತಹ ಸೊಗಸಾದ ನಿರೂಪಣೆಯಿದು ! ಪದಲಾಲಿತ್ಯ, ಲಲಿತ ಲಯದ ಗತಿಗಳಿಂದ ಕೂಡಿದ ಇಂತಹ ಕೀರ್ತನೆಗಳು ಜನತಾ ದೃಷ್ಟಿಯಿಂದ ಕೂಡಿವೆ. ಅದ್ಭುತ ಸೃಷ್ಟಿಲೀಲೆಯ ರಹಸ್ಯವನ್ನು ತಿಳಿಗನ್ನಡದಲ್ಲಿ ಜನರ ಮನ ಸೂರೆಗೊಳ್ಳುವಂತೆ, ಹೃದಯಕ್ಕೆ ನೇರವಾಗಿ ತಟ್ಟುವಂತೆ ದಾಸರು ನಿರೂಪಿಸಿದ್ದಾರೆ.

ಬೊಮ್ಮಾಂಡ ಕೋಟಿಗಳ ಗೊಂಬೆ ಮನೆಯ ಮಾಡಿ
ಬೊಮ್ಮಭವಾದಿಗಳ ಗೊಂಬೆಗಳ ಮಾಡಿ
ಒಮ್ಮೊಮ್ಮೆ ನಲಿಯುತ ಗೊಂಬೆಯಾಟವಾಡುವ

ಶ್ರೀ ಕೃಷ್ಣನ ಬಾಲಲೀಲೆ ಸೊಗಸಾಗಿ ಇಲ್ಲಿ ಮೂಡಿದೆ. ಪುರಂದರದಾಸರ ಇಂತಹ ಕೀರ್ತನೆಗಳು ಸತ್ವಪೂರ್ಣವಾಗಿವೆ. ಅಲ್ಲಲ್ಲಿ ದಾಸರು ಕೊಡುವ ಉಪಮೆ, ರೂಪಕಗಳ ಸೊಗಸು ಮೆಚ್ಚುವಂತಹದಿದೆ. ಅಮೂರ್ತವಾದ ವಿಷಯವನ್ನು ಮೂರ್ತಗೊಳಿಸುವಲ್ಲಿ, ಕವಿಯ ಭಾವನೆಯನ್ನು ಸಹೃದಯವ ಹೃದಯದಲ್ಲಿ ಪುನರ್‌ನಿರ್ಮಿಸುವಲ್ಲಿ ದಾಸರು ತರುವ ಶಬ್ದಚಿತ್ರಗಳು ತುಂಬ ಮನೋಜ್ಞವಾಗಿವೆ. ಕೃಷ್ಣನ ಹಾವಭಾವಗಳನ್ನು ವರ್ಣಿಸು ವಾಗ ನಿರಾಡಂಬರ ಶೈಲಿ ಲೀಲಾಜಾಲವಾಗಿ ಹರಿದಿದೆ.

ಪ್ರಸನ್ನ ವೆಂಕಟದಾಸರ ಹಲವಾರು ಕೀರ್ತನೆಗಳಲ್ಲಿ ಬಾಲಭಾಷೆ ಪರಿಣಾಮಕಾರಿಯಾಗಿ ಬಳಕೆಯಾಗಿದೆ. ಯಶ್ಶೋಧೆಯು ಶ್ರೀ ಕೃಷ್ಣನನ್ನು ತೊಟ್ಟಿಲಲ್ಲಿ ಮಲಗಿರುವ ದೃಶ್ಯವು ಜೋಗುಳ ಹಾಡನ್ನು ನೆನೆಪಿಗೆ ತರುತ್ತದೆ. ಮಗುವನ್ನು ನಾನಾ ರೀತಿಯಿಂದ ಗುಣಗಾನ ಮಾಡಿ ಮಲಗಿಸುತ್ತಾಲೆ. ಆ ಕೀರ್ತನೆ ಹೀಗಿದೆ.

ಲಾಲಿ ಮುಕುಂದ ಲಾಲಿ ಗೋವಿಂದ
ಲಾಲಿಮಯ್ಯಾ ಲಾಲಿ
ಲಾಲಿ ಮೂರ್ಕೈದಾಲಿಪ್ಪೆ ಲಾಲಿಯರ ಪ್ರಭುಲಾಲಿ ||ಪ||

ಜಗ ಜಗುಳಿಸಿ ವಟಪತ್ರದಿ ಮಲಗಿದೆ
ಲಾಲಿಮಯ್ಯಾ ಲಾಲಿ
ಮಗುವಾಗಿ ವ್ರಜದೊಳು ತೊಟ್ಟಿಲೊಳೊಪ್ಪಿದೆ
ಲಾಲಿಮಯ್ಯಾ ಲಾಲಿ ||೧||

ಸ್ವಗತಭೇದ ವರ್ಜ್ಯ ಪರಮಾತ್ಮ ಪರಬ್ರಹ್ಮ
ಲಾಲಿಮಯ್ಯಾ ಲಾಲಿ
ಜಗದ ಜೀವರ ಬಿಂಬಮೂರ್ತಿ ತನಂತಾನೆ
ಲಾಲಿಮಯ್ಯಾ ಲಾಲಿ ||೨||

ಪಯೋನಿಧಿವಾಸ ಪರೇಶ ಪರಿಪೂರ್ಣ
ಲಾಲಿಮಯ್ಯಾ ಲಾಲಿ
ಶ್ರೀಯರಸ ವೈಕುಂಠವಲ್ಲಭ ಶ್ರೀ ಕೃಷ್ಣಾ
ಲಾಲಿಮಯ್ಯಾ ಲಾಲಿ ||೩||

ಧರೆಯ ಪಾವನಮಾಡಿ ಪಾಂಡವರಿಗಾಗಿ ಬಂದೆ
ಲಾಲಿಮಯ್ಯಾ ಲಾಲಿ
ಸುರರ ಪುಣ್ಯದ ಬಳ್ಳಿ ಫಲಿಸಲಿಕ್ಕುದಿಸಿದೆ
ಲಾಲಿಮಯ್ಯಾ ಲಾಲಿ ||೪||

ಅಜಾಮಿಳ ಗಜ ಧ್ರುವ ಅಂಬರೀಷ ಪಾಲಾ
ಲಾಲಿಮಯ್ಯಾ ಲಾಲಿ
ಸುಜೀವಿ ಪ್ರಹ್ಲಾದನ ಸಲಹಿದ ನರಹರಿ
ಲಾಲಿಮ್ಯಾಯಾ ಲಾಲಿ ||೫||

ಅಸಮ ಬಾಲಕ ಅವ್ಯಾಕೃತಾಂಗನೆ
ಲಾಲಿಮಯ್ಯಾ ಲಾಲಿ
ವಿಷಮ ವಿದೂರ ಅಗಣಿತ ಸುಗುರ್ಣವ
ಲಾಲಿಮಯ್ಯಾ ಲಾಲಿ ||೬||

ಸ್ಮೃತಿ ಗಿರಿಧರ ಶಿಶುಮೃಗ ಶೈಲಧರ
ಲಾಲಿಮಯ್ಯಾ ಲಾಲಿ
ಕೃತಕೃಷ್ಣೆ ಧರ್ಮಪಾಲ ಪ್ರಸನ್ವೆಂಕಟೇಶ
ಲಾಲಿಮಯ್ಯಾ ಲಾಲಿ

ಕೀರ್ತನೆಯ ಉದ್ದಕ್ಕೂ ಜೋಗುಳ ಹಾಡಿನಲ್ಲಿ ಬರುವ ಜೋ ಜೋ ಎನ್ನುವ ನಾದದಂತೆ 'ಲಾಲಿಮಯ್ಯಾ ಲಾಲಿ' ಎಂಬುದರ ಪುನರುಕ್ತಿ ಕಾವ್ಯ ಸೌಂದರ್ಯವನ್ನು ಹೆಚ್ಚಿಸಿದೆ. ಅದು ಗೆಜ್ಜೆಯ ನಾದದಂತೆ ಕಿವಿಯನ್ನು ಸ್ಪರ್ಶಿಸುತ್ತದೆ. ಬಾಲ ಭಾಷೆಯನ್ನೊಳಗೊಂಡ ಇಂತಹ ಕೀರ್ತನೆಗಳಲ್ಲಿ ಛಂದೋಗತಿ ಮತ್ತು ಪ್ರಾಸಾನುಪ್ರಾಸ ಇವೆಲ್ಲವೂ ಒಟ್ಟಾಗಿ ಸೇರಿ ಭಾಷೆಯ ಸೊಗಸನ್ನು ಹೆಚ್ಚಿಸಿವೆ. ನಾದ ಮತ್ತು ಅರ್ಥ ಅವುಗಳ ಹೊಂದಾಣಿಕೆಯೇ ಭಾಷೆ ಅದು. ಕಾವ್ಯದಲ್ಲಿ ಪಡೆಯುವ ರೀತಿ ಪರಿಣಾಮಕಾರಿಯಾಗಿದೆ.

ಹಿರಿಯರು ತಮ್ಮ ಮಕ್ಕಳು ಆಡಿಸುವಾಗ ಬಳಕೆಯಾಗುವ ಭಾಷೆ ಸಹಜವಾಗಿ ಕೀರ್ತನೆಗಳಲ್ಲಿ ಒಡಮೂಡಿರುವುದನ್ನೂ ಕಾಣಬಹುದು. ಅವರ ಭಾಷೆ ಸ್ವಯಂ ಪ್ರೇರಿತವಾದ ಭಾವ, ಧ್ವನಿ, ಕಲ್ಪನೆಗಳಿಂದ ಹೆಚ್ಚು ಚಿತ್ರವತ್ತಾಗಿರುತ್ತದೆ. 'ಇಂದು ಸೈರಿಸಿರಿ ಶ್ರೀ ಕೃಷ್ಣನ ತಪ್ಪ ಮುಂದಕೆ ನಿಮ್ಮ ಮನೆಗೆ ಬಾರನಮ್ಮ' ಎನ್ನುವಲ್ಲಿ ಪಾಲಕರು ತಮ್ಮ ಮಗನ ತುಂಟಾಟವನ್ನು ನೋಡಿ ಇದೊಂದು ಸಾರಿ ಕ್ಷಮಿಸಿರಿ ಇನ್ನೊಮ್ಮೆ ಹೀಗಾಗದಂತೆ ನೋಡಿಕೊಳ್ಳುತ್ತೇವೆ ಎನ್ನುವ ಭಾವ ಇಂತಹ ಕೀರ್ತನೆಗಳಲ್ಲಿದೆ. ಎಷ್ಟೋ ಸಾರಿ ಮಕ್ಕಳ ನೋವು ನಲಿವುಗಳ ಬಗ್ಗೆ ಪಾಲಕರ ಮನಸ್ಸುಗಳಲ್ಲಿ ನಡೆದ ಚಿಂತನೆ ಹಾಗೂ ಮಾತಿನಲ್ಲಿ ಮೂಡಿದ ಅಭಿವ್ಯಕ್ತಿಗಳು ಸಾಮ್ಯವಿರುವುದು ಕಂಡುಬರುತ್ತದೆ. ಮುಗ್ಧವಾದ ಮಕ್ಕಳ ಭಾವಮಯತೆ ತೆರೆದಿಟ್ಟ ಅಂತಃಕರಣ ಇವು ಕೀರ್ತನೆಗಳ ಜೀವಾಳ. ಮಕ್ಕಳ ಮುಗ್ಧ ಮನಸ್ಸು ಸಹೃದಯರ ಹೃದಯ ತಟ್ಟುತ್ತದೆ.

ಪ್ರಸನ್ ವೆಂಕಟದಾಸರು ಬಾಲಭಾಷೆಯನ್ನು ಅತ್ಯಂತ ಸಮರ್ಥವಾಗಿ ಬಳಸಿದ್ದಾರೆ. ಮಕ್ಕಳಿಗೆ 'ಹ' ಕಾರ, 'ಪ' ಕಾರ ಮತ್ತು 'ರ' ಯುಕ್ತ ರೂಪಗಳು ತೊಡಕಾಗುತ್ತವೆ ಎಂಬುದನ್ನು ಒಂದು ರಚನೆಯಿಂದ ತಿಳಿಯಬಹುದು.

ಎತ್ತೋದಯಮ್ಮಾ ನಂಗನೆತ್ತಿಕೋ ಅಮ್ಮಾ
ಬಾಲು ವತ್ತು ಅತ್ತು ಬಂದೀನೆ ಇತ್ತೆ ಅಮ್ಮಿ ತಿಂದೇನೆ ॥ಪ॥

ತುತಿ ಬಾಯಿ ವಂಗ್ಯಾವೆ ಬಿತಿ ಅವು ವಾತತ್ತಿ ಬತ್ತಾವೆ
ಅತ್ತಿ ಅವು ಉಪ್ಪುಕಾಯಿ ಅಮ್ಮ ಮಮ್ಮಾಲ್ಲೆ
ಉತ್ತತ್ತಿ ಬೆನ್ನಿ ತಿಂದೇನೆ

ಕೃಷ್ಣನ ಬಾಲಲೀಲೆಗಳನ್ನು ಬಣ್ಣಿಸುವಾಗ ಕೃಷ್ಣ ತನ್ನ ತಾಯಿಯಲ್ಲಿ ಯಾವ ಯಾವ ಬಗೆಯ ಊಟವನ್ನು ಅಪೇಕ್ಷಿಸುತ್ತಾನೆಂಬುದನ್ನು ಪುರಂದರದಾಸರ ಒಂದು ಕೀರ್ತನೆಯಿಂದ ಅಭಿವ್ಯಕ್ತವಾಗುತ್ತದೆ. ಮಕ್ಕಳು ತಾಯಿಯ ಹತ್ತಿರ ಸಹಜವಾಗಿ ಮಾತಾಡುವ ರೀತಿ ಕೀರ್ತನೆಯಲ್ಲಿ ಸೊಗಸಾಗಿ ಮೂಡಿಬಂದಿದೆ.

ಹಸಿವೆಯಾಗುತಿದೆ ಅಮ್ಮಕೇಳೆ
ಹಸನಾದ ಅವಲಕ್ಕಿ ಬೆಲ್ಲ ಕಲಸಿಕೊಡೆ ॥ಪ॥

ಬಿಸಿಬಿಸಿ ಅನ್ನ ಕೈಸುಡುತಿದೆ ಬದಿಯಲ್ಲಿ ಕೂಡೆ
ಖಾರಸಾರು ಮಾಡಬೇಡ ಉಮ್ಮಬಾರನೆ ಎನಗೆ ನೀ
ಸಾರು ಮಾಡಿದರೆ ಬೇಗ ನುಂಬುವೆ

ತೋಡ ತುಪ್ಪ ಹಾಕಿದರೆ ನೆಲಕೆ ಒತ್ತುವೆ । ಎನಗೆ
ಗಟ್ಟಿ ತುಪ್ಪ ಹಾಕಿದರೆ ಬೇಗ ನುಂಗುವೆ
ನೀರು ಮೊಸರು ಹಾಕಿದರೆ ನೆಲಕೆ ಒತ್ತುವೆ । ಎನಗೆ
ಗಟ್ಟಿ ಮೊಸರು ಹಾಕಿದರೆ ತಟ್ಟ ನುಂಗುವೆ

ಮಗು ತಾಯಿಯ ಹತ್ತಿರ ಆತ್ಮೀಯವಾಗಿ ಮಾತನಾಡುವ ಮಾತ್ರ ವಾತ್ಸಲ್ಯ ಇಲ್ಲಿ ವ್ಯಕ್ತವಾಗಿದೆ. ಈ ಕೀರ್ತನೆಗಳಲ್ಲಿ ಮಗುವಿನ ಮನೋಧರ್ಮದ ಸಹಜ ಚಿತ್ರಣವಿದೆ. ಮಕ್ಕಳ ಊಟ-ತಿಂಡಿಯ ವಿವರಗಳು, ಮಕ್ಕಳ ಕಲ್ಪನೆಗಳು ಕೀರ್ತನೆಗಳಲ್ಲಿ ಸೊಗಸಾಗಿ ಬಂದಿವೆ.

ಮಕ್ಕಳ ಭಾಷೆ ತನ್ನದೇ ಆದ ಶಬ್ದಕೋಶವನ್ನು ಒಳಗೊಂಡಿರುತ್ತದೆ. ಅವುಗಳಿಗೆ ಅವುಗಳದ್ದೇ ಆದ ಅರ್ಥವಿರುತ್ತದೆ. ಕೀರ್ತನೆಯಲ್ಲಿ ಉಕ್ತವಾದ ಕೆಲವು ಬಾಲಭಾಷೆಯ ಪದಗಳನ್ನು ಕಲೆ ಹಾಕಲಾಗಿದೆ.

ಅಮ್ಮಿ-ಮೊಲೆಹಾಲು	ಹಾ-ನೋವು
ಬುಶ್-ಸ್ನಾನ, ಜಳಕ	ಶಂಬೋ-ದೇವರು
ಚಿಕ್ಕಾಲಿ-ಸಣ್ಣ ರೊಟ್ಟಿ	ಪೈಯಾ-ಹಣ, ದುಡ್ಡು
ಬೂ-ಊರು	ಅಚ್ಚಿ-ರೊಟ್ಟಿ

ಬಾಜಿ-ಮಲಗು	ಭೌವಾ-ದೆವ್ವ, ಭಯ
ಮಮ್ಮ-ಆಹಾರ	ಗುಮ್ಮ-ದೆವ್ವ, ಭಯ
ಜೋಜೋ-ಮಲಗು	ಆಬು-ನೀರು
ಬೆಲ್ಲ-ಮುದ್ದು	ಬುಬುಶಿ-ಸ್ನಾನ

ಇಂತಹ ಶಬ್ದಗಳು ಒಂದು ಪರಿಸರದಲ್ಲಿ ಮೂಡಿಬಂದಿರುವುದರಿಂದ ಅವು ಕೀರ್ತನೆಗಳಲ್ಲಿ ಬಳಕೆಯಾದಾಗ ಅವುಗಳ ಭಾಷೆ, ಲಯ, ಧಾಟಿ, ಧೋರಣೆಗಳು ಮಕ್ಕಳ ಲೋಕದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಅಲ್ಲಿ ಆಡುಮಾತಿನ ಲಯಕ್ಕೆ, ಶಬ್ದಸಂಪತ್ತಿಗೆ ವಿಶಿಷ್ಟವಾದ ಸಂವೇದೆಯಿದೆ. 'ಎಲ್ಲಾಡಿ ಬಂದ್ಯೋ', 'ಸಿಕ್ಕಿದನೆಲೆ ಜಾಣೆ', 'ರಂಗಯ್ಯ ಮನೆಗೆ ಬಂದರೆ', 'ಒಲ್ಲೆನವ್ವ ನಮ್ಮವಲ್ಲ ಬಾರದಿರೆ', 'ಮೊಸರು ತಂದಿನೊ' ಇಂತಹ ಕೀರ್ತನೆಗಳಲ್ಲಿ ಸವಿಯಾದ ಸೌಖ್ಯ ಭಾವಕ್ಕೆ ಪ್ರತೀಕವಾಗಿರುವುದಲ್ಲದೆ ಆತ್ಮೀಯ ವಾತಾವರಣವನ್ನು ಸೃಷ್ಟಿಸಿ ಅಂತಃಕರಣವನ್ನು ಬೆಳಗುತ್ತವೆ. ಮಗುವಿಗೆ ಬಾಗಿಲಿಂದಾಚೆಗೆ ಹೋಗಬೇಡ ಎನ್ನುವುದರ ಹಿಂದೆ ತನ್ನ ಕೂಸನ್ನು ಯಾರಾದರೂ ಕದ್ದುಕೊಂಡು ಹೋದಾರು ಎಂಬ ಭಯ ಅದರ ಹಿಂದಿರುವ ಭಾವತೀವ್ರತೆ ಇಲ್ಲಿ ಸಹಜವಾಗಿ ಮತ್ತು ಸಮರ್ಥವಾಗಿ ಅಭಿವ್ಯಕ್ತಿ ಗೊಂಡಿದೆ. ಇಂತಹ ಮಾತುಗಳು ತಾಯಂದಿರರ ಮನೋಧರ್ಮ ಎಂತಹದು ಎನ್ನುವುದನ್ನು ಎತ್ತಿತೋರಿಸುತ್ತದೆ. 'ಗುಮ್ಮನ ಕರೆಯದಿರೆ' ಎಂದಾಗ ಮಕ್ಕಳ ಭಾವನೆಯ ಸೂಕ್ಷ್ಮ ಸಂವೇದನೆ ತಿಳಿದುಬರುತ್ತದೆಯಲ್ಲದೆ ಅದುವೆ ಕಾವ್ಯ ಭಾಷೆಯಾಗುತ್ತದೆ.

೨

ತಾಯಿ ಮಗುವಿನ ಅಸದೃಶ್ಯ ಪ್ರೇಮವನ್ನು ಯಶೋದಾ ಕೃಷ್ಣನ ಆದರ್ಶನದಲ್ಲಿ ದಾಸರು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಶಿಶುವಿನ ಆಟ-ಪಾಟಗಳನ್ನು ತಾಯಿಯ ಶಂಕೆ, ಆತಂಕಗಳು, ಆರೈಕೆ ಹಾರೈಕೆಗಳು ಯಶೋದೆಯ ಭಾಗ್ಯ ಕೃಷ್ಣನ ತುಂಟಾಟ. ತಾಯಿ ಕೃಷ್ಣನಿಗೆ ಹೆದರಿಸಿ ಎಚ್ಚರಿಸುವುದು, ಅಕ್ಕರೆಯಿಂದ ಹಾಲು ಬೆಣ್ಣೆಯ ನೂಡುವುದು. ಕೃಷ್ಣನ ಹರ ಗೋಪಿಯರ ದೂರು ಮೊದಲಾದ ವಿಷಯಗಳನ್ನು ಗುರುತಿಸ ಬಹುದು.

ಪುರಂದರದಾಸರು ಬಾಲಕೃಷ್ಣನನ್ನು ವರ್ಣಿಸುವಾಗ ಒಮ್ಮೆ ತಾವು ವರ್ಣಿಸಿದಂತೆಯೂ ಮತ್ತೊಮ್ಮೆ ಯಶೋದೆ ಆಡಿಸಿದಂತೆಯೂ ಮೊಗದೊಮ್ಮೆ ಗೋಪಿಕಾಸ್ತ್ರೀಯರು ಆಡಿಸಿದಂತೆಯೂ ಕೃತಿಗಳನ್ನು ರಚಿಸಿದ್ದಾರೆ. ಕೃಷ್ಣನು ಯಶೋದೆಯ ಮಗನಾದದ್ದನ್ನು ಕಂಡು ಅವಳ ಭಾಗ್ಯವನ್ನು ಕೊಂಡಾಡುತ್ತಾರೆ.

ಗೋಪಿಯ ಭಾಗ್ಯವಿದು
ಆ ಪರಮಾತ್ಮನ ಅಪ್ಪಿ ಮುದ್ದಾಡುವುದು

ಈ ಕೀರ್ತನೆಯಲ್ಲಿ ದಾಸರು ಯಶೋದ ತನ್ನ ಕಂದನಿಗೆ ನಿರ್ವಹಿಸಿದ ಮಾತೃ ಸಹಜ ಪಾಲನೆ ಪೋಷಣೆಯನ್ನು ನೋಡಿ ಅವಳ ಭಾಗ್ಯದ ಬಗ್ಗೆ ಆಶ್ಚರ್ಯಚಕಿತರಾಗಿ ತನ್ಮೂಲಕ

ಬಂದ ವಾಣಿಯನ್ನು ಅವಳ ಪಾಲನೆ ಪೋಷಣೆ ಶಬ್ದದಲ್ಲಿ ಹಿಡಿದಿಟ್ಟಿದ್ದಾರೆ. ಒಂಬತ್ತು ನುಡಿಗಳ ಈ ಕೀರ್ತನೆ ಬಹು ಸ್ವಾರಸ್ಯವಾಗಿದೆ. ಹಾಗೂ ವೈಚಿತ್ರ್ಯಪೂರ್ಣವಾಗಿದೆ. ಅದರ ಒಂದು ನುಡಿ ಹೀಗಿದೆ.

ನಮ್ಮಪ್ಪ ರಂಗಯ್ಯ ಅಳಬೇಡವೊ ದೊಡ್ಡ
ಗುಮ್ಮ ಬಂದಿದೆ ಸುಮ್ಮನಿರು ಎನುತ ||
ಅಮ್ಮಿಯನೀಯುತ ಅಮರರನಾಳ್ದ |
ರಮ್ಮಿಸಿ ರಮ್ಮಿಸಿ ಮುದ್ದಾಡುವಳೊ

ಈ ಪದ್ಯದಿಂದ ದಾಸರು ತಾಯ್ತನದ ಅಕ್ಕರೆಯನ್ನು ಎಷ್ಟರಮಟ್ಟಿಗೆ ಅರಿತಿದ್ದರು ಎಂದು ವಿದಿತವಾಗುತ್ತದೆ. ಭಾಷೆ, ಪದಲಾಲಿತ್ಯ, ಪ್ರಾಸಜೋಡಣೆಯ ಓಟ ನೋಡಿದರೆ ತಾಯಿಯ ಮಾತೃ ವಾತ್ಸಲ್ಯದ ವ್ಯಾಖ್ಯಾನದಂತಿದೆ, "ರಮ್ಮಿಸಿ ರಮ್ಮಿಸಿ" ಎನ್ನುವಲ್ಲಿ ಪದದ ದ್ವಿರುಕ್ತಿಯಿಂದ ಭಾವುಕರ ಮನಸ್ಸಿನ ಮೇಲೆ ಚಿತ್ರ ಅಚ್ಚೊತ್ತಿ ಹೃದಯಾಹ್ಲಾದವಾಗುತ್ತದೆ.

ಕರ್ನಾಟಕದ ಹರಿದಾಸ ಸಾಹಿತ್ಯದ ಶ್ರೀಕಾರ ಪುರುಷರಾದ ಶ್ರೀಪಾದರಾಜರ ಅಂಕಿತ ರಂಗವಿಠಲ. ಅವರ ಅಂಕಿತದಲ್ಲಿಯ ರಂಗ ಎಂಬ ಶಬ್ದ ಬಾಲಕೃಷ್ಣನಿಗೆ ಮೀಸಲಿದ್ದಂತೆ. ಈಗಿನ ಕಾಲದ ಪ್ರೀತಿಯ ಹೆಸರುಗಳಾದ ರಾಜು, ಪುಟ್ಟು, ರಾಮು ಮೊದಲಾದವುಗಳಂತೆ ಶ್ರೀಪಾದರಾಜರು ಬಾಲ ಕೃಷ್ಣನಿಗೆ ಇಟ್ಟ ಹೆಸರು ರಂಗ, ರಂಗಯ್ಯಾ. ಶ್ರೀಪಾದರಾಜರ ದೊರೆತ, ಪ್ರಕಟಗೊಂಡ ಕೃತಿಗಳಲ್ಲಿ ಸುಮಾರು ಹತ್ತು ಕೃತಿಗಳು ಕೃಷ್ಣನ ಬಾಲಲೀಲೆಗೆ ಮೀಸಲಾಗಿವೆ. ಹೊರಗೆ ಹೋಗಿ ಆಟವಾಡಿ ಬಳಲಿಬಂದ ಕೃಷ್ಣನನ್ನು ಕುರಿತು

ಎಲ್ಲಾಡಿ ಬಂದ್ಯೋ ಎನ್ನ ರಂಗಯ್ಯಾ ನೀ
ನೆಲ್ಲಾಡಿ ಬಂದ್ಯೋ ಎನ್ನ ಕಣ್ಣ ಮುಂದಾಡದೆ

ಈ ಕೀರ್ತನೆಯಲ್ಲಿ ಕೃಷ್ಣನಲ್ಲಿರುವ ಭಕ್ತಿಯಿಂದ ತಾಯಿ ಗೋಪಿಯ ಮೂಲಕ ಮಗುವಿಗೆ ಕೌತಕದಿಂದ ಕೇಳುತ್ತಿರುವಂತೆ ಚಿತ್ರಿಸಿದ್ದಾರೆ. ತಾಯಿಯಾದರೂ ಕೂಡಾ ಯಶೋದೆಗೆ ಆಗಾಗ ಆ ಮಹಿಮನ ಸರ್ವೋತ್ತಮತ್ವದ ಜ್ಞಾನ ಬರುತ್ತಿರುತ್ತದೆ.

ಯಶೋದೆಯೂ ಕೃಷ್ಣನ ಆಟಪಾಟಗಳನ್ನು ನೋಡಲು ಬಹಳ ಉತ್ಸುಕಳಾಗಿದ್ದಳು. ಮನೆಯಲ್ಲಿ ಅವನಿಗೆ ವಿವಿಧ ರೀಯ ಭಕ್ಷ್ಯ, ಭೋಜ್ಯಗಳನ್ನು, ಉಡಿಗೆ ತೊಡಿಗೆಗಳನ್ನು ಅಣಿ ಮಾಡಿದ್ದಳು. ಕೃಷ್ಣನು ಮನೆ ಬಿಟ್ಟು ಹೊರಗೆ ಆಡಿ ಬರುವುದನ್ನು ಮಾತೃಹೃದಯ ಸಹಿಸದಾಗಿದೆ. ಮನೆಯಲ್ಲಿ ನೀಡಿದ ಚಿನಿಪಾಲು ಕುಡಿದು ಓರಗೆಯ ಮಕ್ಕಳೊಡನೆ ಮುದ್ದಾಗಿ ಮನೆಯಲ್ಲಾಡದೆ ಎಲ್ಲಾಡಿ ಬಂದೆ? ಎಂದು ಪ್ರಶ್ನಿಸುವಳು. ಏಕೆಂದರೆ ತಾಯಿಯ ಮಗುವಿನ ಆಟಪಾಟಗಳನ್ನು ನೋಡಿ ಕೃತಾರ್ಥಳೂ ಸಂತುಷ್ಟಳೂ ಆಗಲಪೇಕ್ಷಿಸಿದ್ದಾಳೆ. ನಂತರ ಮಗು ಆಡಲು ಹೋದರೆ ಹೋಗಲಿ ಕನಿಷ್ಟಪಕ್ಷ ಹೇಳಿಯಾದರು ಹೋಗಬಾರದೆ, ಹಾಗೆ ಹೇಳದುದರಿಂದಾಗಿ ತಾಯಿಯ ನೆರಮನೆ, ಗುಡಿಗುಂಡಾರಗಳನ್ನು ಹುಡುಕುವಳು. ಸಹಜ

ಪ್ರಪಂಚದಲ್ಲಿ ತಾಯಿಯ ತನ್ನ ಮಗು ಒಂದು ಕ್ಷಣ ಕಾಣದಿದ್ದರೆ ಎಷ್ಟು ಕಾತರದಿಂದ ಅಲ್ಲಿ ಇಲ್ಲಿ ಹುಡುಕುವಳೊ ಹಾಗೆ ಯಶೋದೆಯೂ ಬಾಲಕೃಷ್ಣನಿಗಾಗಿ ಅಷ್ಟದಿಕ್ಕುಗಳಲ್ಲಿ ಅರಸಿದಳು, ಅಲ್ಲೆಲ್ಲಿಯ ಕಾಣದಾದಾಗ ಅವರ ದೃಷ್ಟಿಯೇ ಕೆಟ್ಟು ಹೋಯಿತು. ಇನ್ನೆಷ್ಟು ಹೇಳಲಿ ನನ್ನ ಕಣ್ಣ ಮುಂದಾಡಬಾರದೆ? ಎಂದು ತಾಯಿಯು ತನ್ನ ಮಗನಿಗೆ ಪ್ರಶ್ನಿಸುವ ರೀತಿಯಲ್ಲಿ ಶ್ರೀಪಾದರಾಜರ ಕೀರ್ತನೆ ಮುಕ್ತಾಯವಾಗುತ್ತದೆ. ಈಗಾಗಲೇ ಹೇಳಿದಂತೆ ಅವರ ಇನ್ನೊಂದು ಕೀರ್ತನೆ ಬಹಳ ಸುಂದರವಾಗಿದೆ. ಅದನ್ನು ಅವರ ಶಬ್ದಗಳಲ್ಲಿಯೇ ಇನ್ನೊಮ್ಮೆ ಕೇಳೋಣ,

ಎಲ್ಲಾಡಿ ಬಂದ್ಯೋ ನೀ ಹೇಳಯ್ಯಾ
ನಿಲ್ಲು ನಿಲ್ಲು ಗೋಪಾಲ ಕೃಷ್ಣಯ್ಯ

ನೊಸಲಲಿ ಕಿರು ಬೆವರಿಟ್ಟಿದೆ ಅಲ್ಲಿ
ಹೊಸಪರಿ ಸುದ್ದಿಯು ಹುಟ್ಟಿದೆ
ಪುಸಿಯಲ್ಲ ಈ ಮಾತು ಮುಟ್ಟಿದೆ ನಿನ್ನ
ನಸುನಗೆ ಕೀರ್ತಿ ಹೆಚ್ಚಿದೆ

ಬೆರಳ ಉಂಗುರವೆಲ್ಲಿ ಹೋಗಿದೆ ನಿನ್ನ
ಕೊರಳ ಪದಕವೆಲ್ಲಿ ನೀಗಿದೆ
ಸರತೆಲ್ಲ ಅವಳಲ್ಲಿ ಸಾಗಿದೆ ಆ
ತರುಣಿ ಮಹಿಮೆ ಹೀಗಾಗಿದೆ

ಕಳ್ಳತನವ ಹೀಗೆ ಮಾಡಿದೆ ನಿನ್ನ
ಸುಳ್ಳು ಕಡೆಗೆ ನಾ ನೋಡಿದೆ
ಎಲ್ಲರಿಗೂ ಠಕ್ಕು ಮಾಡಿದೆ
ಚೆಲುವ ರಂಗ ವಿಠಲ ನಗೆಗೀಡಾದೆ.

ಈ ಕೀರ್ತನೆಯಲ್ಲಿ ಸಕಲ ಗೋಪೀಜಾರ ಎಂದು ದೂರುವ ಕೃಷ್ಣನ ಬಗ್ಗೆ ಕಳ್ಳವಾರ್ತೆ ಗೋಕುಲವೆಲ್ಲಾ ಹರಡಿದ್ದು. ಅದರಿಂದ ಅವನ ತಾಯಿ ನೊಂದದ್ದು ಬಹುರಮ್ಯವಾಗಿ ಚಿತ್ರಿಸಿದ್ದಾರೆ. ಈ ಕೀರ್ತನೆಯ ಭಾಷೆ ಎಷ್ಟು ಮೃದುವಾಗಿದೆಯೊ ಭಾವವೂ ಅಷ್ಟೇ ಸರಳವಾಗಿದೆ. ಇಂತಹ ಕೀರ್ತನೆಗಳು ದಾಸಸಾಹಿತ್ಯದಲ್ಲಿ ಕಳಶಪ್ರಾಯವಾಗಿದೆ. ಗೋಕುಲದಲ್ಲಿ ಇಷ್ಟೆಲ್ಲ ವಾರ್ತೆ ಹುಟ್ಟಿರುವುದರಿಂದ ಚೆಲುವ ರಂಗ ವಿಠಲ ನಗೆಗೀಡಾದೆ ಎಂದು ಕೊನೆಗೆ ತಾಯಿಯು ಮಗನಿಗೆ ಇನ್ನು ಮುಂದಾದರೂ ಪಾಠಕಲಿಯಲಿ ಎಂಬ ಬುದ್ಧಿವಾದದ ಹೇಳಿಕೆಯನ್ನು ಇಲ್ಲಿ ಊಹಿಸಬಹುದಾಗಿದೆ. ಇನ್ನೊಂದು ಕೀರ್ತನೆ,

ಕೇಳಿದ್ಯಾ ಕೌತುಕವನ್ನು ಕೇಳಿದ್ಯಾ
ಕೇಳಿದ್ಯಾ ಕೌತುಕವನ್ನು ನಾ

ಕೇಳಿದ್ಯಾ ನಿನಗಿಂತ ಮುನ್ನ 'ಅಹಾ'
ಚಾಳಿಕಾರ ಕೃಷ್ಣ ಪೇಳವೆ ಮಧುರೆಗೆ
ಕೋಳಿ ಕೂಗದ ಮುನ್ನನಾಳೆ ಪಯಣವಂತೆ

ಈ ಕೀರ್ತನೆಯಲ್ಲಿ ಅಕ್ರೂರನು ಕೃಷ್ಣನನ್ನು ಕರೆಯಲು ಬಂದದ್ದು; ಕೃಷ್ಣನು ಹೋಗಲು ಸಿದ್ಧನಾಗಿರುವುದನ್ನು ಚಿತ್ರಿಸಲಾಗಿದೆ. ಈ ಕೀರ್ತನೆಯ ಪ್ರಾರಂಭವೇ ಬಹುಸ್ವಾರಸ್ಯವಾಗಿದೆ. ನಾಟಕೀಯ ಶೈಲಿಯಲ್ಲಿ ಪ್ರಾರಂಭವಾಗಿ, ಅಸಹಾಯಕ ಭಾವದಲ್ಲಿ ಮುಕ್ತಾಯವಾಗುತ್ತದೆ. ಕೃಷ್ಣನು ಮಧುರೆಗೆ ಹೋಗಿರುವ ಸುದ್ದಿ ಗೋಪಿಯರೆಲ್ಲರಿಗೆ ಕೌತುಕವಾಗಿದೆ. ಅವರು ಪರಸ್ಪರ ಹೇಳಿಕೊಳ್ಳುತ್ತಿರುವಾಗ ಅವರಲೊಬ್ಬಳು ನಾನು ನಿನಗಿಂತ ಮುಂಚೆ ಕೇಳಿದ್ದೇನೆ ಎಂದು ತನ್ನ ಹೆಗ್ಗಳಿಕೆಯನ್ನು ಸ್ಥಾಪಿಸುವುದನ್ನು ನಾವು ಕಾಣಬಹುದು. ಕೃಷ್ಣನು ಮಧುರೆಗೆ 'ಪೇಳದೆ' ಹೋಗುತ್ತಿರುವುದರಿಂದ ಅವನಿಗೆ ಚಾಳಿಗಾರ ಎಂದು ಸಂಬೋಧಿಸಿರುವುದು ಔಚಿತ್ಯಪೂರ್ಣವಾಗಿದೆ.

ಮುಂದಿನ ನುಡಿಗಳಲ್ಲಿ ಕರೆಯಲು ಬಂದವನು ಯಾರು, ಕೃಷ್ಣನು ಮಾವನ ಮನೆಗೆ ಹೋಗುತ್ತಿರುವುದು ಏಕೆ, ಅಲ್ಲಿಯ ಸ್ವಾಗತದ ವೈಭವಗಳನ್ನು ವರ್ಣಿಸಲಾಗಿದೆ. ಕೊನೆಯಲ್ಲಿ ಗೋಪಿಯೊಬ್ಬಳು ಕೃಷ್ಣನು ಮಾವನ ಮನೆಗೆ ಹೋಗುವುದು ತಮಗೆ ಆಗದ ಸುದ್ದಿ, ಅದನ್ನು ಎಷ್ಟೆಂದು ಹೇಳಲಿ ಎಂದು ಹತಾಶಳಾಗುವಳು.

ಗೋಕುಲದಲ್ಲಿ ಕೃಷ್ಣನು ನಡೆಸಿದ ಹಾವಳಿ ಅಷ್ಟಿಷ್ಟಲ್ಲ. ಹಾಲು ಮೊಸರು ಬೆಣ್ಣೆಗಳನ್ನು ಸೂರೆ ಮಾಡಿದ್ದು, ಗೋಪಿಯರು ಎಷ್ಟು ಸಿಟ್ಟುಮಾಡಿದರೂ ಲೆಕ್ಕಿಸಿದೆ ಅವರಿಗೆ ಕಿರುಕುಳ ಕೊಟ್ಟಿದ್ದೆ ಕೊಟ್ಟಿದ್ದು. ಅವನ ಕೀಟಲೆಗಳನ್ನು ಸಹಿಸದೆ ಗೋಪಿಯರು ಗುಂಪು ಗುಂಪಾಗಿ ಬಂದು ಯಶೋದೆಯಲ್ಲಿ ತಮ್ಮ ತಮ್ಮ ದೂರುಗಳನ್ನು ಹೇಳಿಕೊಳ್ಳುವರು. ಈ ಚಿತ್ರವನ್ನು ಶ್ರೀಪಾದರಾಜರು ಬಹುಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಗೋಪಿಯರು ಯಶೋದೆಯ ಇದಿರಿನಲ್ಲಿಯೇ ದೂರುವುದು ಒಂದು ಪರಿಯಾದರೆ, ಕೃಷ್ಣನು ಅದೆಲ್ಲವು ಸುಳ್ಳು ಎಂದು ವಾದಿಸುವುದು, ಸಾಕ್ಷಾಧಾರಗಳಿಂದ ಸಮರ್ಥಿಸುವುದು ಇನ್ನೊಂದು ಪರಿ. ಬಾಲಗೋಪಾಲನ ಮುಗ್ಧ ಪ್ರಶ್ನೆಗಳಿಗೆ ಯಾರಿಂದಲೂ ಸರಿಯಾದ ಉತ್ತರ ಕೊಡಲಾಗದು. ಆ ಕೀರ್ತನೆಯ ಸವಿ ಹೀಗಿದೆ,

ಗೊಲ್ಲತಿಯರೆಲ್ಲ ಕೂಡಿ ಎನ್ನ ಮೇಲೆ ಇಲ್ಲದ ಸುದ್ದಿಪುಟ್ಟಿಸಿ
ಕಳ್ಳನೆಂದು ದೂರುತ್ತಾರೆ ಗೋಪಿ ಎನ್ನು ಕೊಲ್ಲಬೇಕೆಂದು ಬಗೆದು

ಹರಿವಿಯ ಹಾಲು ಕುಡಿಯಲು ಎನ್ನ ಹೊಟ್ಟೆ,
ಕೆರೆಯೇನೆ ಹೇಳಮ್ಮಯ್ಯ
ಕರೆದು ಅಣ್ಣನ್ನ ಕೇಳಮ್ಮ ಉಂಟಾದರೆ
ಒರಳಿಗೆ ಕಟ್ಟಮ್ಮಯ್ಯ........ ||೧||

ಮೀಸಲು ಬೆಣ್ಣೆಯನು ಮೆಲುವದು ಎನಗೆ
ದೋಷವಲ್ಲಮೇನಮ್ಮಯ್ಯ
ಆಸೆ ಮಾಡಿದರೆ ದೇವರು ಕಣ್ಣ
ಮೋಸದಿ ಕುಕ್ಕೂನಮ್ಮಯ್ಯ........ ||೨||

ಅಟ್ಟವನೇರಿ ಹಿಡಿವುದು ಅದು ಎನಗೆ
ಕಷ್ಟವಲ್ಲವೆ ಹೇಳಮ್ಮಯ್ಯ ನೀ
ಕೊಟ್ಟ ಹಾಲು ಕುಡಿಯಲಾರದೆ ನಾನು
ಬಟ್ಟಲೊಳಗಿಟ್ಟು ಪೋದೆನೆ.......... ||೩||

ಪುಂಡತನದ ಮಾಡಲು ನಾನು ದೊಡ್ಡ
ಗಂಡಸೇನೆ ಹೇಳಮ್ಮಯ್ಯ ಎನ್ನ
ಕಂಡವರು ದೂರುತಾರೆ ಗೋಪಮ್ಮ ನಾನಿನ್ನ
ಕಂದನಲ್ಲವೆ ಅಮ್ಮಯ್ಯ........ ||೪||

ಉಂಗುರದ ಕರದಿಂದ ಗೋಪಮ್ಮ ತನ್ನ
ಶೃಂಗಾರದ ಮಗನೆತ್ತಿ
ರಂಗವಿಠಲನ ಪಾಡಿ ಉಡುಪಿನ ಉ
ತ್ತುಂಗ ಕೃಷ್ಣನ ತೂಗಿದಳು........ ||೫||

ಇಲ್ಲಿ ಗೋಪಿಯರೆಲ್ಲರು ಕೂಡಿ ಯಶೋದೆಯ ಮುಂದೆ ಕೃಷ್ಣನು, ಹರವಿಗಟ್ಟಲೆ ಹಾಲು ಕುಡಿದದ್ದು, ಮೀಸಲಿಟ್ಟ ಬೆಣ್ಣೆಮೆದ್ದದ್ದು, ಅಟ್ಟವೇರಿ ಹಾಲು ಕುಡಿದದ್ದು ಹಾಗೂ ತಮಗೆಲ್ಲ ಪುಂಡತನ ಮಾಡಿದ ದೂರುಗಳ ವರದಿ ಒಪ್ಪಿಸಿ ಹೋದಮೇಲೆ, ತಾಯಿಯು ಕೃಷ್ಣನಿಗೆ ಅವುಗಳ ನ್ಯಾಯ ವಿಚಾರಣೆ ಮಾಡುವ ವಿಷಯದ ಮೇಲೆ ಕೀರ್ತನೆ ರಚಿತವಾಗಿದೆ. ಯಶೋದೆಯು ಗೋಪಿಯರು ಒಪ್ಪಿಸಿದ ದೂರಿನ ವರದಿಯಲ್ಲಿ ಒಂದೊಂದಾಗಿ ವಿಚಾರಿಸಿದರೆ ಕೃಷ್ಣನು ಕೊಡುವ ಉತ್ತರ ಸ್ವಾರಸ್ಯವಾಗಿಯೂ ತರ್ಕಬದ್ಧವಾಗಿಯೂ ಇದೆ. ನ್ಯಾಯಾಲಯದಲ್ಲಿಯ ವಾಗ್ವಾದದಂತೆ ಈ ಕೀರ್ತನೆ ರಚಿತವಾಗಿದೆ.

ಕೃಷ್ಣನ ಮೊದಲನೆ ವಾದ-ಹರವಿಯ ಹಾಲು ಕುಡಿಯಲು ನನ್ನ ಹೊಟ್ಟೆಯೇನು ಕೆರೆಯೆ? ಬೇಕಾದರೆ ಅಣ್ಣನ ಕೇಳು. ಇಲ್ಲಿ ಅಣ್ಣನೇ ಸಾಕ್ಷಿ, ಕುಡಿದಿದ್ದು ನಿಜವಾದರೆ ಶಿಕ್ಷೆ ಒರಳಿಗೆ ಕಟ್ಟು ಎನ್ನುವುದು. ಎರಡನೇವಾದ ಮೀಸಲು ಬೆಣ್ಣೆ ತಿನ್ನುವುದಕ್ಕೆ ದೇವರೇ ಸಾಕ್ಷಿ, ತಿಂದರೆ ದೇವರು ಕಣ್ಣು ಕಳೆಯಲಿ ಎನ್ನುವ ಶಿಕ್ಷೆ. ಅದಾವ ದೇವರು ಕಣ್ಣು ಕಳೆಯಬೇಕೋ! ಮೂರನೇ ದೂರು-ಅಟ್ಟವನ್ನೇರಿ ಹಾಲು ಕದ್ದದ್ದು, ಅದಕ್ಕೆ ತಾಯಿ ಯಶೋದೆಯ ಸಾಕ್ಷಿ, ಏಕೆಂದರೆ ಅಟ್ಟವೇರುವುದು ಪುಟ್ಟ ಮಗುವಾದ ಕೃಷ್ಣನಿಗೆ ಕಷ್ಟ, ಮೇಲಾಗಿ ಯಶೋದೆ

ಕೊಟ್ಟ, ಬಟ್ಟಲು ಹಾಲಿನಲ್ಲಿಯೇ ಕುಡಿದು ಉಳಿಸಿ ಹೋದವನಿಗೆ ನೆರೆಮನೆಯ ಅಟ್ಟದ ಮೇಲಿನ ಹಾಲು ಕದ್ದು ಕುಡಿಯುವ ಅವಶ್ಯಕತೆಯಾದರು ಎಲ್ಲಿದೆ. ಕೊನೆಯ ದೂರು ಎಂದರೆ, ಸಕಲ ಗೋಪಿ ಜಾರತ್ವ, ಅವರೆಲ್ಲರ ಮಾನಹಾನಿ ಮಾಡಿದ ಪುಂಡ ಎಂಬುದು. ಅದಕ್ಕೆ ಕೃಷ್ಣನ ಉತ್ತರ ಬಹುಸ್ವಾರಸ್ಯವಾಗಿದೆ. ನನ್ನನ್ನು ಪುಂಡನೆಂದು ದೂರಲು ನಾನೇನು ದೊಡ್ಡಗಂಡೆ? ನಿನ್ನಯ ಪುಟ್ಟ ಕಂದನಲ್ಲವೆ? ನನ್ನ ಗುಣ ನಿನಗೆ ಗೊತ್ತಿಲ್ಲವೆ? ಎಂದು ತಾಯಿಗೆ ಬಹು ದೈನ್ಯದಿಂದ ಬೇಡಿದಂತೆ ವಾದಿಸುವನು. ಗೋಪಿಯರೆಲ್ಲರು ಸೇರಿ ತನ್ನನ್ನು ಹೊಡೆಯುವ ಉಪಾಯದಿಂದ ಬಂದು ನಿನ್ನ ಮುಂದೆ ದೂರು ಹೇಳುತ್ತಿರುವರು. ಅದೆಲ್ಲ ಸುಳ್ಳು ಎಂದು ಸಾಧಾರವಾಗಿ ಸಮರ್ಥಿಸಿ ಗೆಲ್ಲುವನು. ಮಗನ ಮಾತು ಸತ್ಯ ಎಂದು ತಿಳಿದ ಮೇಲೆ ಯಶೋದೆಯೂ ಅವನನ್ನು ಎತ್ತಿ ಮುದ್ದಾಡಿದಳು. ತಾಯಿಗೆ ಮಗನ ಮೇಲೆ ಮಮತೆ ಇದ್ದಾಗ್ಯೂ ಎಷ್ಟು ಶಿಕ್ಷೆಯಲ್ಲಿಟ್ಟಿದ್ದಳು. ಅವಳ ಸಂಯಮ ಹಾಗೂ ಆದರ್ಶ ಅನುಕರಣೀಯವಾಗಿದೆ. ಯಶೋದೆಯು ಅಷ್ಟು ಶಿಕ್ಷೆಯಲ್ಲಿಟ್ಟಿದ್ದರೂ ಅವಳ ಕಣ್ಣು ತಪ್ಪಿಸಿ ಅವನೆಷ್ಟು ಸ್ವತಂತ್ರ ತುಂಟನಿದ್ದನೆಂಬ ಹಲವಾರು ವಿಷಯಗಳು ನಮಗೆ ದಾಸರ ಕೃತಿಗಳಲ್ಲಿ ತಿಳಿದುಬರುತ್ತದೆ. ತಾಯಿ ಮಕ್ಕಳ ಮಾತೃ ವಾತ್ಸಲ್ಯದಲ್ಲಿ ಕೋಪಕ್ಕೆ ತಾವಿಲ್ಲ! ಅದು ಬಿಸಿಲಿಗೆ ಮಂಜು ಕರಗಿದಂತೆ ಗಾಢವಾದ ವಾತ್ಸಲ್ಯ ಪ್ರೇಮದಿಂದ ಕೂಡಲೆ ಕರಗಿ ನೀರಾಗಿ ಬಿಡುತ್ತದೆ.

"ದೃಷ್ಟಿ ತಾಕೀತೋ ಬೀದಿ ಮೆಟ್ಟಬ್ಯಾಡವೊ"

ಈ ಕೀರ್ತನೆಯಲ್ಲಿ ದೃಷ್ಟಿತಾಕುವುದೆಂಬ ಭಯದಿಂದ ಮಾತೃ ಹೃದಯದಲ್ಲಿ ವ್ಯಕ್ತವಾದ ಪ್ರೀತಿ ಏಳುನುಡಿಗಳ ಶಬ್ದ ಮೂಡಿಬಂದಿದೆ.

"ಬಾರೋ ನಮ್ಮ ಮನೆಗೆ ಗೋಪಾಲ ಕೃಷ್ಣ"

ಗೋಪಾಲನ ಹಾವಳಿ ಸಹಿಸಲಾರದೆ ದೂರು ಹೇಳುವ ಗೋಪಿಯರು ಹಲವರಿದ್ದಾರೆ. ಅವನ ಆಗಮನಕ್ಕಾಗಿಯೇ ಸದಾ ಎದುರು ನೋಡುವವರು ಹಲವರುಂಟು. ಅವರೆಲ್ಲಬಂದು 'ಬಾರೋ ನಮ್ಮ ಮನೆಗೆ' ಎಂದು ಆಹ್ವಾನ ಮಾಡುವ ಕೀರ್ತನೆಯು ಬಹು ಸೊಗಸಾಗಿದೆ. ಅವರು ಅವನಿಗೆ 'ಮೊರನೆಲ್ಲ ಸವಿದ ಕೃಷ್ಣ ಅಂಗನೆಯರ ವ್ರತಭಂಗ ಮಾಡಿದ ರಂಗವಿಠಲ' ಎಂದು ಸಂಬೋಧಿಸಿ ಕರೆಯವುದರಿಂದ ಅವರು ಇಷ್ಟೆಲ್ಲಾ ಕೋಟಲೆಗಳನ್ನು ಸಹಿಸಿಯೂ ಅವನನ್ನು ಬಿಟ್ಟು ಒಂದು ಕ್ಷಣವೂ ಇರಲೊಲ್ಲರು, ಮನಸ್ಸೇಬಾರದೆಂದು ಬಹು ಸ್ವಾರಸ್ಯ ವಾಗಿ ಚಿತ್ರಿಸಿದ್ದಾರೆ. ಶ್ರೀಪಾದರಾಜರಿಗೆ-ತಾವು, ಗೋಪಿಯರು, ಯಶೋದೆ ಮೊದಲಾದವರು ಕೃಷ್ಣನನ್ನು ಸ್ತುತಿಸುತ್ತ ಆಡಿಸಿರುವುದು ಸಾಲದೇನೋ ಎಂಬಂತೆ ಗೆಳೆಯನೊಬ್ಬನ ಪಾತ್ರ ಸೃಷ್ಟಿಸಿ ಅವನಿಂದ ಅವರಿಬ್ಬರ ಬಾಲ್ಯದ ಸವಿ ನೆನಪುಗಳನ್ನು ಓದುಗರ ಗಮನಕ್ಕೆ ತರುತ್ತಾರೆ.

"ಮರೆತೆಯೇನೋ ರಂಗಾ ಮಂಗಳಾಂಗ
ತುರುಕರು ಕಾಯುವಲ್ಲಿ ತೊಂಡನಾಗಿದ್ದೆನ್ನ"

ಇಲ್ಲಿ, ಒಬ್ಬ ಗೆಳೆಯನಿಂದ ಅವರಿಬ್ಬರೂ ಚಿಕ್ಕಂದಿನಲಿ ಹಸು ಕಾಯುವಾಗ ಆಡಿದ ಆಟ ಪಾಡಿ ಕಂಡುಂಡ ರಸನಿಮಿಷಗಳನ್ನು ನೆನಪಿಗೆ ತಂದು ಕೃಷ್ಣನಿಗೆ ತನ್ನ ಪರಿಚಯ ಮಾಡಿಕೊಂಡುವಂತಿದೆ.

"ಯಾಕೆ ಇಂಥ ದುಡುಕು ಕೃಷ್ಣಯ್ಯಾ ನಿನ್ನ
ಗೇಕೆ ಇಂಥ ದುಡುಕು
ಪಾಕಶಾಸನ ವಂದ್ಯ ಪೋರತನಗಳು
ಸಾಕು ಸಾಕಯ್ಯ ಕೃಷ್ಣ।

ಇದರಲ್ಲಿ ಹುಡುಗಾಟದ ಮಗುವಿಗೆ ದುಡುಕುತನವನ್ನು ಬಿಡಲು ತಾಯಿ ಬುದ್ಧಿ ಹೇಳಿದ್ದು ಕಂಡುಬರುತ್ತದೆ. ಈ ಕೀರ್ತನೆಯಲ್ಲಿ ಬಾಲಕೃಷ್ಣನ ಬಾಲಲೀಲೆಗಳ ಸರಸ ಸಮನ್ವಯವನ್ನು ಬಗೆಮ ಚಿತ್ರಿಸಿದ್ದಾರೆ. ಮೊಸರು ಕದ್ದದ್ದು, ಪೂತನಾವಧೆ, ಕಂಸ ಸಂಹಾರ, ಯಮಳಾರ್ಜುನ ಬಂಧ ವಿಮೋಚನ, ಚಾಣೂರ ಮುಷ್ಟಿಕರವಧೆ ಮೊದಲಾದವುಗಳನ್ನು ಬಾಲಕೃಷ್ಣನ ಲೀಲೆಗಳೊಂದಿಗೆ ಸಮನ್ವಯಗೊಳಿಸಿದ್ದಾರೆ. ಒಟ್ಟಿನಲ್ಲಿ ದಾಸಸಾಹಿತ್ಯದಲ್ಲಿ ವಾತ್ಸಲ್ಯ ಭಾವದ ಕೀರ್ತನೆಗಳು ಆರಂಭದಲ್ಲಿ ಮೂಡಿಬಂದಿದೆ. ಮುಂದಿನ ಹರಿದಾಸ ಪೀಳಿಗೆಗೆ ಪ್ರೋತ್ಸಾಹದ ಕೀರ್ತನೆಗಳಾದವು. ವಾತ್ಸಲ್ಯ ಭಾವದ ಮೇಲೆ ನೂರಾರು ಕೀರ್ತನೆಗಳನ್ನು ರಚಿಸಿದ ಕೀರ್ತಿ ಪುರಂದರದಾಸರದಾದರೆ ಕೃಷ್ಣನ, ಬಾಲಲೀಲೆಯನ್ನೊಳಗೊಂಡ ಭಾಗವತ ದಶಮ ಸ್ಕಂಧ ಪೂರ್ವಾರ್ಧವನ್ನು ಕೀರ್ತನರೂಪದಲ್ಲಿ ಕನ್ನಡಿಸಿದ ಹಿರಿಮೆ ಪ್ರಸನ್ನವೆಂಕಟ ದಾಸರದಾಗಿದೆ. ಅವರೆಲ್ಲರ ರಚನೆಗಳಲ್ಲಿ ಬಾಲಭಾಷೆ ಅರ್ಥಪೂರ್ಣವಾಗಿ ಮೂಡಿಬಂದಿದೆ.

ಕೀರ್ತನೆಗಳಲ್ಲಿ 'ಏನು ಸುಕೃತವ ಮಾಡಿದಳೊ', 'ಅಮ್ಮ', ಸಿಕ್ಕಿದನೆಲೆ ಜಾಣೆ. ಛಿನಿನ್ನ ಮೊರೆ ಮೇಲೆ, ಚಿನ್ನಾ, ಗೋಪಾಲ ಏನು ಬೇಕು ಬಾರಯ್ಯರಂಗ. ಇಂತಹ ಸಂಬೋಧನೆಗಳು ಸುಂದರವಾಗಿ ಅಭಿವ್ಯಕ್ತಗೊಂಡಿವೆ. ಅವು ಕೀರ್ತನೆಗಳಲ್ಲಿ ಬಳಕೆಯಾಗಿ ಒಂದು ಆತ್ಮೀಯ ಸನ್ನಿವೇಶವನ್ನು ಹಾಗೂ ಭಾವನಾತ್ಮಕ ವಾತಾವರಣವನ್ನು ನಿರ್ಮಾಣ ಮಾಡುತ್ತವೆ. ಕೀರ್ತನೆಗಳಲ್ಲಿಯ ಬಾಲಭಾಷೆಯು ಸರಳ ಮತ್ತು ನೇರವಾಗಿ ಬಳಕೆಯಾಗಿದೆ. ಪ್ರಾಸಗಳಲ್ಲಿ ಯಾವುದೇ ರೀತಿಯ ತೊಡಕ್ಕಿಲ್ಲ. ಬಾಲ ಭಾಷೆಯ ಕೀರ್ತನೆಗಳಲ್ಲಿಯ ಲಯ, ನಾದ, ಗುಣ, ದ್ರವ್ಯ, ಮನೋಧರ್ಮ ಇವೆಲ್ಲಕ್ಕೂ ವಿಶಿಷ್ಟವಾದ ಸಂವೇದನೆಯುಂಟು. ಅವು ತನ್ನದೇ ಆದ ಅಂತಸ್ಸತ್ವದಿಂದ, ಅನನ್ಯತೆಯಿಂದ ಕೂಡಿವೆ. ಒಟ್ಟಿನಲ್ಲಿ ಬಾಲಭಾಷೆಯನ್ನೊಳಗೊಂಡ ಶ್ರೀ ಕೃಷ್ಣಲೀಲೆಯ ಕೀರ್ತನೆಗಳು ಮಕ್ಕಳ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಗಳಾಗಿವೆ.

ಅಡಿಟಿಪ್ಪಣಿಗಳು

೧. ಹೆಚ್.ಎಂ. ಮಹೇಶ್ವರಯ್ಯ 'ಮಗು ಮತ್ತು ಭಾಷೆ' ಅ. ಪ್ರಾರಂಭಿಕ ಸರೋಚ್ಚಾರ ಹಂತ ಆ. ಕಿಲಕಿಲನೆ ನಗುವ ಹಂತ ಇ. ತೊದಲು ನುಡಿಯ ಹಂತ ಈ. ಅನುಕರಣೆಯ

ಹಂತ ಉ. ಶಬ್ದ ವಾಕ್ಯದ ಹಂತ ಊ. ಸರಳವಾಕ್ಯಗಳ ಹಂತ ಎ. ಕ್ಲಿಷ್ಟವಾಕ್ಯಹಂತ (Holorhra stri stage) ಏ. ಸಂಕಲನಾತ್ಮಕ ಹಂತ, ವಿವರಣೆಗಾಗಿ ನೋಡಿ ಜಾನಪದ ಸಂವಹನ ೧೯೯೦ ಪು. ೭೭-೮೩

೨. H.R Bhatia-elements of Educational psychology page. 49

* ಇಲ್ಲಿ ಉಕ್ತವಾದ ಕೀರ್ತನೆಗಳನ್ನು 'ಸಾವಿರ ಕೀರ್ತನೆಗಳು' (೨೦೦೦) ಸಂ. ಎ.ವಿ.ನಾವಡ ಮತ್ತು ಗಾಯತ್ರೀ ನಾವಡ, ಕ.ವಿ.ವಿ, ಹಂಪಿ 'ಕೀರ್ತನ ಮಂಜರಿ' (೧೯೮೫) ಸಂ. ವಿ.ಎ. ಜೋಶಿ ಸಮಾಜ ಪುಸ್ತಕಾಲಯ, ಧಾರವಾಡ ಈ ಸಂಕಲನಗಳಿಂದ ಆಯ್ದುಕೊಳ್ಳಲಾಗಿದೆ. ಪುರಂದರದಾಸರು ಚಿತ್ರಿಸಿದ ಬಾಲಕೃಷ್ಣನನ್ನು ಕುರಿತು ಹೆಚ್ಚಿನ ಮಾಹಿತಿಗಾಗಿ 'ಪುರಂದರದಾಸರು ಚಿತ್ರಿಸಿದ ಬಾಲಕೃಷ್ಣ' (೧೯೯೧) ಡಾ. ವಾಸುದೇವ ಅಗ್ನಿಹೋತ್ರಿ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ ಈ ಕೃತಿಯನ್ನು ಗಮನಿಸಬಹುದು.

೨೯

ಬೆಟಗೇರಿ ಅವರ ಕಾವ್ಯಭಾಷೆ

ಕನ್ನಡ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಂಡು ಭಾಷೆಯ ಅರ್ಥವಲಯವನ್ನು ವಿಸ್ತರಿಸಿದ ಈ ಶತಮಾನದ ಮಹತ್ವದ ಕವಿ ಬೆಟಗೇರಿ ಕೃಷ್ಣಶರ್ಮರು. ಅರ್ಧಶತಮಾನಕ್ಕೂ ಹೆಚ್ಚುಕಾಲ ನಿರಂತರವಾಗಿ ರಚಿಸಿದ ಅವರ ಕಾವ್ಯಲೋಕದಲ್ಲಿ ಕಂಡುಬರುವ ಭಾಷಾವೈವಿಧ್ಯತೆ ಅರ್ಥದ ಅನಂತ ಲೋಕವನ್ನೇ ನಿರ್ಮಿಸಿದೆ. ಆನಂದಕಂದರು ಭಾಷೆಗೆ ಹೊಸ ಜೀವಂತಿಕೆಯನ್ನು, ಸಾಫಲ್ಯತೆಯನ್ನು ತಂದುಕೊಟ್ಟರು. ಆ ಮೂಲಕ ಕನ್ನಡದ ಅರ್ಥದಿಗಂತವನ್ನು ವಿಸ್ತರಿಸಿದ್ದಾರೆ. ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಆನಂದಕಂದರ ಪಾತ್ರ ಬಹಳ ಮುಖ್ಯವಾದುದು. ಈ ಕಾರಣದಿಂದಲೇ ಆನಂದಕಂದರ ಭಾಷಾಸಾಮರ್ಥ್ಯವನ್ನು ಪ್ರತ್ಯೇಕವಾಗಿ ಅಭ್ಯಸಿಸುವ ಅವಶ್ಯಕತೆ ಇದೆ.

ಆನಂದಕಂದರು ಬರೆಯತೊಡಗಿದ ಆರಂಭಕಾಲದಲ್ಲಂತೂ ಹೊಸಕನ್ನಡ ಕಾವ್ಯಭಾಷೆ ಇನ್ನೂ ಶೈಶವಾವಸ್ಥೆಯಲ್ಲಿತ್ತು. ಅವರ ಕಾವ್ಯಮಾರ್ಗ ತನ್ನದೇ ಆದ ವಿಶಿಷ್ಟ ಮಾದರಿ ಭಾಷಾಶೈಲಿಯಲ್ಲಿ ಮುನ್ನಡೆಯಿತು. ಅವರ ಭಾಷೆ ಆಡುಮಾತಿನಿಂದ ದೂರ ಆಗಿಲ್ಲ; ಆಡುಮಾತಿನ ಬಳಕೆಯ ಪೂರ್ಣಪ್ರಮಾಣದಲ್ಲಿ ಆರಂಭವಾಗದಿದ್ದ ಕಾಲದಲ್ಲಿ ಆಡುಮಾತನ್ನು ಬಳಸಿದ ಕವಿಗಳು ಆ ಪರಿಸರದಲ್ಲಿ ಕರ್ನಾಟಕದಲ್ಲಿದ್ದರು. ಬೇಂದ್ರೆ ಮುಂತಾದವರು ಧಾರವಾಡದ ವ್ಯಾವಹಾರಿಕ ಕನ್ನಡವನ್ನು ಪೂರ್ಣವಾಗಿಯೇ ಬಳಸುತ್ತಿದ್ದರು. ದೇಸಿಯ ಎಲ್ಲ ಸೊಗಸಿನೊಂದಿಗೆ ಅದಕ್ಕೆ ಗೇಯತೆಯ ಇಂಪು ಕೂಡುತ್ತಿತ್ತು. ಬೇಂದ್ರೆ ಅವರಂತೆ ಧಾರವಾಡ ಗೆಳೆಯರ ಗುಂಪಿನ ಆನಂದಕಂದರು ಬೆಳಗಾವಿ ಪರಿಸರದ ವ್ಯವಹಾರಿಕ(ಪ್ರಾದೇಶಿಕ) ಭಾಷೆಯನ್ನು ಅರ್ಥಪೂರ್ಣವಾಗಿ ಬಳಸಿದ್ದಾರೆ.

ಕವಿ ತನ್ನ ಅಂತರಂಗದ ಅನುಭವವನ್ನು ಭಾಷೆಯ ಮೂಲಕ ವ್ಯಕ್ತಪಡಿಸುತ್ತಾನೆ. ಆನಂದಕಂದರ ಭಾಷೆ ಸಹೃದಯರ ಜೊತೆಗೆ ಸಂವಾದ ರೂಪದಲ್ಲಿ ಅಭಿವ್ಯಕ್ತವಾಗುತ್ತದೆ.

ಭಾಷೆಯ ಕ್ರಿಯೆ ಪೂರ್ಣಗೊಳ್ಳುವುದು ಅಭಿವ್ಯಕ್ತಿ ಮತ್ತು ಪ್ರತಿಕ್ರಿಯೆಗಳ ಪರಸ್ಪರ ಸಂವಾದದಿಂದ ಎಂಬುದನ್ನು ಗಮನಿಸಬೇಕು.

ಒಬ್ಬಳು

ಹೆಜ್ಜಿ ಹೆಜ್ಜಗೂ ಘಲಿಘಲಿ ಘಲಿಘಲಿ
ಗೆಜ್ಜಿಯ ಕುಣಿಸುತ ಬರುವಾಕಿ
ಉಜ್ವಳ ಬಣ್ಣಾ-ಕಾಡಿಗಿ ಗಣ್ಣಾ
ಹೊಸದರತಿಯ ಹೆಣ್ಣ್ಯಾರಿಕಿ?

ಇನ್ನೊಬ್ಬಳು

ಗೊತ್ತಿಲ್ಲೇನs ಗೌಡರ ಮನಿಸೊಸಿ
ಮೊನ್ನೆ ಮೊನ್ನೆಯೇ ಬಂದಾಕಿ
ಸುತ್ತಮುತ್ತಿನೀ ಹಳ್ಳ್ಯಾಗೆಲ್ಲಾ
ಚೆಲಿವಿಯಂತ ಹೆಸರಾದಾಕಿ!

-ಗೌಡರ ಮನಿ ಸೊಸಿ; ನಲ್ವಾಡುಗಳು

ಎಂದು ಕವಿ ಹಾಗೂ ಸಹೃದಯರ ಅನಿವಾರ್ಯತೆಯನ್ನು ವಿವರಿಸಿದ್ದಾರೆ. ಆನಂದ ಕಂದರ ದೃಷ್ಟಿಯಲ್ಲಿ ಕವಿ ಹಾಗೂ ಸಹೃದಯರು ಒಂದೇ ಭಾಷಾಕ್ರಿಯೆಯ ಎರಡು ಮಗ್ಗಲುಗಳು. ಒಬ್ಬರು ಮತ್ತೊಬ್ಬರನ್ನು ಅವಲಂಬಿಸಿಯೇ ಬದುಕಬೇಕೆಂಬ ಅವರ ದೃಢವಾದ ನಂಬಿಕೆಯಾಗಿದೆ. ಕವನದ ಭಾಷಾಕ್ರಿಯೆಯೂ ಸಹಿತ ಆ ಧಾಟಿ ಲಯ ದಲ್ಲಿಯೇ ಸಾಗುತ್ತದೆ. ಭಾಷೆಯ ಬಳಕೆ ಬಂದಾಗಲೆಲ್ಲ ಆನಂದಕಂದರಿಗೆ ಅದು ಕೇವಲ ಸಂವಹನ ಮಾಧ್ಯಮ ಮಾತ್ರ ಆಗುವುದಿಲ್ಲ. ಅದು ಅನುಭವದ ಆಳವನ್ನು ಕೆದಕಿ ಇಡುವ ಸತ್ವಯುತವಾದ ಅರ್ಥವನ್ನು ಪಡೆಯುತ್ತ ಹೋಗುತ್ತದೆ. ಆಡುಮಾತಿನ ನಾದ ಅವರ ಕವನಗಳಿಗೆ ಸ್ಪರ್ಶ ಇರುವುದರಿಂದ ಕವನಗಳು ಆಕರ್ಷಕವೆನಿಸುತ್ತವೆ.

ಕಾವ್ಯ ಶಿಲ್ಪ, ಪ್ರತಿಮೆ, ಭಾಷೆ, ವಸ್ತು ಹಾಗೂ ಜೀವನ ದರ್ಶನಗಳ ದೃಷ್ಟಿಯಿಂದ ಇವರ ಕಾವ್ಯವನ್ನು ಪರಿಶೀಲಿಸಿ ಅಲ್ಲಿ ಕಂಡುಬರುವ ಬೆಳವಣಿಗೆಯನ್ನು ಗುರುತಿಸ ಬಹುದು. ಈ ಕೆಳಗಿನ ಉದಾಹರಣೆಗಳ ಮೂಲಕ:

೧. ಊರಿಗಿ ಹೋಗಿ-ವಾರ ತಿರಿಗಿತವ್ವ
ಇನ್ನೂ ಬರಲಿಲ್ಲ-ನನ್ನವ
ಇನ್ನೂ ಬರಲಿಲ್ಲs
ಮೂರುಯಾಳೇ ದಾರಿ ನೋಡಿ ನೋಡಿ
ಕೊರಗತ್ಯೆತಿ ಕಳ್ಳ-ಮರಮರ
ಮರಗತ್ಯೆತಿ ಕಳ್ಳs ! (ನಂದ್ಯಾತರ ಚಿಂತಿ? ನಲ್ವಾಡುಗಳು)

೨. ಬಂದೆ ಬರುವನಂತೆ ಆತ
ಬಂದೆ ಬರುವನಂತೆ!
ಚೆಂದ ದೊಸಗೆಯನ್ನು ಕೇಳಿ
ನವಿರ ಹೊರೆಯದಾಂತೆ!
ನಿಂದೆ ಮರುಳೆಯಂತೆ...
ನಿಂದೆ ಮರುಳೆಯಂತೆ, ನೆರೆಯೆ
ಮೈಮರೆವಿನ ಸಂತೆ

(-ಉನ್ಮಾದಿನಿ, ವಿರಹಿಣಿ)

೩. ಬಿಸಿಲಲ್ಲಿ ಆಡಾಡಿ ಬಹಳ ನಾ ಬಳಲಿದೆನು
ಉಸುರುಗಳೆಯುತೆ ಬಂದು ಮನೆಯಲ್ಲಿ ಮಲಗಿದೆನು
ಮಲಗಿರಲು ಕೆಟ್ಟ ಕನಸೊಂದು ನೋಡಿದನು
ಕಳೆದುಕೊಂಡೆನು ಕನಸಿನಲಿ ನಿನ್ನನ್ನು

(-ಅಲೆದಾಟ, ಮುದ್ದನಮಾತು)

ಒಂದು, ಮೂರನೆಯ ಉದಾಹರಣೆಗಳಲ್ಲಿ ನಿಯತವಾದ ಛಂದೋಬದ್ಧತೆಯಿದೆ. ಪದ್ಯ ಮಾತನಾಡಿದಷ್ಟು ಸಹಜವಾಗಿದೆ. ಅಭಿವ್ಯಕ್ತಿಯಲ್ಲಿ ಸರಳತೆ, ಮುಗ್ಧತೆ ಇವೆಲ್ಲ ಭಾಷೆಯಲ್ಲಿ ಕಾಣಿಸಿಕೊಳ್ಳುತ್ತವೆ. ಎರಡನೆಯ ಉದಾಹರಣೆಯಲ್ಲಿ ಭಾಷೆ ಪದ್ಯವೂ ಹೌದು; ಗದ್ಯವೂ ಹೌದು. ಅದಕ್ಕೆ ತಕ್ಕಂತೆ ಭಾಷೆ ಮತ್ತು ಲಯಗಳಲ್ಲಿ ವಿಡಂಬನೆಯ ಎಳೆತವಿದೆ. ಅಲ್ಲಿ ಗಹನವಾದ ಉದ್ದೇಶವನ್ನು ಭಾಷೆ ಮತ್ತು ಲಯಗಳು ನಿರ್ವಹಿಸುತ್ತವೆ. ಎರಡನೆಯ ಉದಾಹರಣೆಯಲ್ಲಿ ವ್ಯಾವಹಾರಿಕ ಶಿಷ್ಟಭಾಷೆ ಬಳಕೆಯಾದರೆ ಒಂದು ಮತ್ತು ಮೂರನೆಯ ಉದಾಹರಣೆಗಳಲ್ಲಿ ಆಡುಮಾತನ್ನೇ ಕವಿ ಅರ್ಥಪೂರ್ಣವಾಗಿ ಬಳಸಿದ್ದಾನೆ. ಛಂದಸ್ಸಿನ ಅತಿನಿಯಮಗಳನ್ನು ಕಳಚಿ ಸ್ವಚ್ಛಂದ ಛಂದದ ಕಡೆ ಇವರ ಭಾಷೆ ವಾಲುತ್ತಿದೆ. ಕಾರಹುಣ್ಣಿಮೆಯ ಪದ್ಯಗಳಂತೂ ಭಾಷೆ ನಿರಾಡಂಬರವಾಗಿ ಗುರಿಮುಟ್ಟಲು ಹೊರಟ ಬಾಣದಂತೆ ಇದೆ.

ಆನಂದಕಂದರ ಭಾಷೆ ಹಾಗೂ ಮನೋವೃತ್ತಿಗಳೆರಡೂ ಒಂದೇ ಆಗಿವೆ. ಕವಿ. ಆರಿಸಿಕೊಂಡಿರುವ ಭಾಷೆ ಕವಿಯ ಮನೋವೃತ್ತಿಯನ್ನು ಸೂಚಿಸುತ್ತವೆ. ಕವಿ ತಮ್ಮ ಮನೋವೃತ್ತಿಗೆ ಹೊಂದುವ ತಮ್ಮ ಪರಿಸರದ ಭಾಷೆಯನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಹಳ್ಳಿಯ ಜೀವನ, ತಾರುಣ್ಯದ ಉತ್ಸಾಹ, ಅಣ್ಣ ತಂಗಿಯರ ಬಾಂಧವ್ಯ, ಹಬ್ಬ-ಹರಿದಿನಗಳು ಹೀಗೆ ಬದುಕಿನ ಹಲವು ಮಗ್ಗುಲುಗಳನ್ನು ಕುರಿತು ಅವರ ಕವನಗಳಲ್ಲಿ ನಯ-ನಾಜೂಕತೆಯಿದೆ; ಭಾಷೆಯ ತಾಜಾತನವಿದೆ.

೧. ಯಾರು ಇವಳು ಪೋರಿ? - ವಯ ಹದಿ
ನಾರರ ನವನಾರಿ
ಮಂಚಿಕಿ ಮ್ಯಾಲೇರಿ - ಹಕ್ಕಿಯ
ಕಾಯತಾಳ ಚೀರಿ!

೨. ಯಾರಿವ ಗಂಭೀರಾ - ಮೈಯಾಗ
ಹರೆಯ ಭಾರ ಪೂರಾ
ಹಾಯತಾನ ಎದುರಾ

(- ನಲ್ವಾಡುಗಳು)

೩. ಮೊನ್ನೆ ಮೊನ್ನೆ ನಮ್ಮ ಮನಿಗೆ
ಚಿನ್ನತ್ತಿಯ ಮಗ ಬಂದಿದ್ದ
ಕಣ್ಣು ಕಟ್ಟಿ ನಾಟಾ ಆಡಿ
ನನ್ನ ಪ್ರೀತಿ ಕಳವಿಂದೊಯ್ದು!

ಸಣ್ಣ ಹುಡುಗಿ ನಾನಿರುವಾಗ - ಚಿನ್ನತ್ತಿಯ ಮನಿಗ್ಹೋದಾಗ ಇನ್ನ್ಸ್ ಅತ ಚನ್ನದ ಹುಡುಗ - ಕಲಿಯುತ್ತಿದ್ದ ಸಾಲಿಯೊಳಗ

ನನ್ನ ಕರೆದು ಕೆನ್ನೀ ಚಿವುಟಿ
ಹೊಡೆದು ಮೋಜು ಮಾಡುತ್ತಿದ್ದ
ಮೊನ್ನೆ ಮೊನ್ನೆ ನಮ್ಮ ಮನಿಗೆ
ಚಿನ್ನತ್ತಿಯ ಮಗ ಬಂದಿದ್ದ

(-ನಲ್ವಾಡುಗಳು ಚಿನ್ನತ್ತಿಯ ಮಗ)

ಆನಂದಕಂದರ ಉತ್ತರ ಕರ್ನಾಟಕದ ಬೆಳವಲುನಾಡಿನ ಜನರ ಅಂತರ್ಜೀವನವನ್ನು ಅವರ ಆಡುನುಡಿಯಲ್ಲಿಯೇ ಬಣ್ಣಿಸಿ ತೋರಿಸಿದ್ದಾರೆ. ಅವರ ಭಾಷೆಯನ್ನು ಜಾನಪದ ಭಾಷೆಯೆಂದು ಉಪೇಕ್ಷಿಸುವಂತಿಲ್ಲ. ಜಾನಪದವಾದರೂ ಅದೊಂದು ವಿಶಿಷ್ಟ ಬಗೆಯ ವ್ಯಾಕರಣ ನಿಯಮಕ್ಕೆ ಒಳಗಾದುದೇ ಆಗಿದೆ. ಅದರ ಗತಿಯು ಶಕ್ತಿ ಸತ್ವಗಳಿಂದ ತುಂಬಿಕೊಂಡಿದೆ. ತಾರುಣ್ಯ ಪ್ರಾರಂಭದ ಸ್ತ್ರೀ-ಪುರುಷರ ನೈಸರ್ಗಿಕ ಆಕರ್ಷಣೆಯಿಂದ ಮೊದಲು ಮಾಡಿ, ದಾಂಪತ್ಯ ಜೀವನದ ಪರಿಪಕ್ವ ಹೃದಯದವರೆಗೆ ಪ್ರೀತಿಯ ಬೇರೆ ಬೇರೆ ಸ್ವರೂಪವನ್ನು ಆನಂದಕಂದರು ಅರ್ಥಪೂರ್ಣವಾಗಿ ಭಾಷೆಯ ಮೂಲಕ ಸೆರೆ ಹಿಡಿದಿದ್ದಾರೆ. ನಲ್ವಾಡುಗಳು, ಕಾರಹುಣ್ಣಿಮೆ ಕವನ ಸಂಕಲನಗಳಲ್ಲಿ ಜಾನಪದ ಸತ್ವದ ಕೂಡಿದ ಒಳ್ಳೆಯ ಕವಿತೆಗಳಿವೆ. ಹೀಗಾಗಿಯೆ ಆ ಸಂಕಲನಗಳು ಭಾಷೆಯ ದೃಷ್ಟಿಯಿಂದ ಪ್ರಮುಖ ಘಟ್ಟ.

ಆನಂದಕಂದರು ತಮ್ಮ ಅಭಿವ್ಯಕ್ತಿಗೆ ಹಲವಾರು ಪ್ರತಿಮೆಗಳನ್ನು ಬಳಸುತ್ತಾರೆ. ಅವು ಕವಿ ಅನುಭವದ ಅಭಿವ್ಯಕ್ತಿಯ ಪರಿಣಾಮಗಳಾಗಿವೆ. ಲೋಕ ವ್ಯವಹಾರದ ಸಂಗತಿಗಳು ಅವರ ಹಾಡುಗಳಲ್ಲಿ ಸಹಜವಾಗಿ ಅಭಿವ್ಯಕ್ತವಾಗಿವೆ. ಕವಿಯಾದವನು ಅಮೂರ್ತ ಭಾವನೆಗಳನ್ನು ಅಭಿವ್ಯಕ್ತಿಸುವಾಗ ಮೂರ್ತ ಪ್ರಪಂಚದ ಚಿತ್ರಗಳನ್ನು ಅಭಿವ್ಯಕ್ತಿಸಲಿಕ್ಕೆ ಉಕ್ತಿ ವೈಚಿತ್ರ್ಯಗಲು ಅವನ ಮನಸ್ಸಿನಲ್ಲಿ ಬಿಂಬಿತವಾಗುತ್ತವೆ. ಈ ಉಕ್ತಿ ವೈಚಿತ್ರ್ಯಗಳೇ ಅಲಂಕಾರಗಳು. ಅಲಂಕಾರಗಳನ್ನು ಶಬ್ದದಿಂದ ಮತ್ತು ಅರ್ಥದಿಂದ ಎರಡು ಬಗೆಯಾಗಿ ಗುರುತಿಸುತ್ತಾರೆ. ಮೊದಲನೆಯದು ಶಬ್ದ ಚಮತ್ಕಾರ ಮೂಲವಾದ 'ಶಬ್ದಾಲಂಕಾರ'ಗಳಾದರೆ ಎರಡನೆಯದು ಅರ್ಥಸೌಂದರ್ಯ ಮೂಲವಾದ 'ಅರ್ಥಾಲಂಕಾರ'ಗಳು. ಆನಂದಕಂದರು ಭಾಷೆಯ ಸಂದರ್ಭ-ಸನ್ನಿವೇಶಗಳನ್ನು ಅನುಲಕ್ಷಿಸಿ ಎರಡೂ ಬಗೆಯ ಶಬ್ದ ವೈಚಿತ್ರ್ಯಗಳನ್ನು ಬಳಸುತ್ತಾರೆ.

- ತಿದ್ದಿ ತೀಡಿ ಮಡಿದ್ಹಾಂಗ; ಕಣ್ಣು ಮೂಗು ಕೆನ್ನಿಯ ಗದ್ದ
- ಬೆಳಗಾಗಿನ ಉಂಗುರ ಹರಳಾ; ಮಿರಗಿ ಕಾಣುತ್ತಿತ್ತs ಎದ್ದ
- ಭಾರಿ ಭಾರಿ ಮನಿತಾನಂತ; ಊರಗೌಡರs ಹಿರಿಮಗನಂತ
- ಕಾಮನ್ಹಾಂಗ ರೂಪವಂತ; ಭೀಮನಂಗ ಬಂಟನಂತ
- ಬಂದನಾಕು ದಿನ ಸಕ್ಕರಿ ಸವಿಹಾಲು; ನನಗ ದೊರಕಿತವ್ವ ಗೆಣತೀ
- ಕುರಡನಾಗಲಿಕೆ ನಾನೊಲ್ಲೆ ನಮ್ಮಯ್ಯ! ನಾ ಕುರಡನಾಗಲಿ ಕೊಲ್ಲೆನು
- ಇಲ್ಲಿ ಕತ್ತಲು ಕವಿದ ಕಿರುಮನೆ; ಯಲ್ಲಿ ಸುಮ್ಮನೆ ನಲ್ಲಬಾರದಿರ

ಸಮಾಜಮುಖಿಯಾದ ಇಂತಹ ಮಾತಿನ ಘಟಕಗಳು ಬದುಕಿನ ಹಲವು ಮಗ್ಗಲುಗಳನ್ನು ಬಿಚ್ಚಿಕೊಡುತ್ತವೆ. ಅವು ಸಾಹಿತ್ಯಿಕ ಮೌಲ್ಯವನ್ನೊಳಗೊಂಡಿದ್ದು ತೀವ್ರವಾದ ಸಾಮಾಜಿಕ ಚಿಂತನೆಯ ಫಲವಾಗಿ ಮೂಡಿ ಬಂದು ನೇರವಾಗಿ ಸಹೃದಯರಿಗೆ ತಲುಪಿವೆ. ಆತ್ಮೀಯ ಸಂಭಾಷಣೆ, ಪ್ರಾಸ, ಆಡುನುಡಿಯ ಬಳಕೆ, ಶ್ಲೇಷೆ ಇವು ಅವರ ಹಾಡುಗಳ ವೈಶಿಷ್ಟ್ಯವಾಗಿವೆ. ಕನ್ನಡ ಭಾಷೆಗೆ ಸಹಜವಲ್ಲದ ಸುದೀರ್ಘ ಸಮಾಸಗಳು, ದೀರ್ಘವಾಕ್ಯಗಳು ಇವುಗಳನ್ನು ಸಂಪೂರ್ಣವಾಗಿ ಕೈಬಿಟ್ಟು ಸರಳ ಪದರಚನೆಯನ್ನು ಇರಿಸಿದ್ದು ಆನಂದಕಂದರ ಬಹುದೊಡ್ಡ ಭಾಷಾಸಾಧನೆಯಾಗಿದೆ. ಅಲ್ಲಿ ಬಳಕೆಯಾದ ಶಬ್ದಚಿತ್ರಗಳು ಸುತ್ತಮುತ್ತಣ ಬದುಕಿನ ನೆಲೆಯಿಂದ ಮೂಡಿಬಂದಿವೆ. ಹೀಗಾಗಿ ಅವರ ಹಾಡುಗಳಲ್ಲಿ ಸಹಜತೆಯಿದೆ. ಅವುಗಳ ಪಟ್ಟಿ ಹೀಗೆ ಬೆಳೆಯುತ್ತ ಹೋಗುವಷ್ಟು ಸಮೃದ್ಧಿಯಾಗಿದೆ ಅವರ ಕಾವ್ಯದಲ್ಲಿ. ಅವು ಕಣ್ಣಿಗೆ ಕಟ್ಟುವಂತೆ ಬಳಕೆಯಾಗುವುದರಿಂದ ಕಾವ್ಯಸೌಂದರ್ಯ ಹೆಚ್ಚು ಕವಿತೆಗಳು ಧ್ವನಿಪೂರ್ಣವಾಗುತ್ತವೆ. ಇದರಿಂದ ಅವರ ಕವಿತೆಗಳು ಮಂದ್ರಸ್ವರದ ಸಂಗೀತದಂತೆ ಸದ್ದುಗದ್ದಲವಿಲ್ಲದೆ ನಿರಾಡಂಬರವಾಗಿ ಅನುಭವದ ಸಾಂದ್ರತೆಯಿಂದ ಮಹತ್ತರವಾಗಿವೆ. ಆ ಸಂದರ್ಭದಲ್ಲಿ

ಭಾಷೆ ಕ್ರಿಯಾತ್ಮಕವಾಗಿದೆ. ಅವರ ಕಾವ್ಯದಲ್ಲಿ ಕೆಲವು ಸಲ ಆಡುಭಾಷೆ ಸಾಹಿತ್ಯ ಭಾಷೆಯಾಗಿ ರೂಪಾಂತರಗೊಳ್ಳುತ್ತದೆ. ಇದಕ್ಕೆ ಅವರ 'ಸೀಗಿ ಹುಣ್ಣಿವಿ' ಕವನವನ್ನು ನೋಡಬಹುದು.

ಅನ್ನಕುಮಾರನ ಬಸುರಿಯದಳೌ ನಮ್ಮ ಭೂಮಿದೇವಿ
ಬಯಕಿ ಊಟಾ ಉಣಿಸಬೇಕಽ ಬಂದ್ಯೆತಿ ಸೀಗಿಹುಣ್ಣಿವಿ!

ಮುಂಗಾರಿನ ನೆಲ ಹೊಂದೆನಿದಂಟಿನ ಹಂದರ ಹಾಕೆಯ್ತೆ
ಹೆಸರು ಹುರುಳಿ ಅಲಸಂದಿ ಅವರಿಬಳ್ಳಿ ತ್ವಾರಣ ಬಿಗಿದಯ್ತೆ
ಹುಚ್ಚೆಳ್ಳಿನ ಹೊಲ ಹೂಗಳ ಅರಳಿಸಿ ಕುಚ್ಚನು ಕುಟ್ಟೆಯ್ತೆ
ಉಡಿಯ ತುಂಬಲಾಕ ಮಾಗಿ ಬಾಗಿ ನಿಂತಾವ ನವಣಿ-ಸಾವಿ
ಅನ್ನಕುಮಾರನ ಬಸುರಿಯದಾಳೌ ನಮ್ಮ ಭೂಮಿದೇವಿ

ಈ ಕವನದ ಒಟ್ಟು ಭಾಷಾವ್ಯಾಪಾರ ಕ್ರಿಯಾಪದಗಳಾದ ಹಾಕು, ಬಿಗಿ. ಕಟ್ಟು ಇವುಗಳ ಪುನರಾವರ್ತನೆಯಾಗುವುದರಿಂದ ಕಾವ್ಯದ ಒಟ್ಟು ಆಶಯ ವ್ಯಕ್ತವಾಗುತ್ತದೆ. ಸೀಗಿಹುಣ್ಣಿಮೆಯ ಒಟ್ಟು ಸಾಂಸ್ಕೃತಿಕ ಸಂದರ್ಭ ಅಂದರೆ ಅಡುಗೆ, ಅಡಗಾಳುಪಲ್ಲೆ, ಪಾಂಡವರ ಪೂಜೆ ಇವುಗಳನ್ನು ಕವಿ ಅರ್ಥಪೂರ್ಣವಾಗಿ ಹೇಳಿದ್ದಾನೆ; ಕಾವ್ಯದಲ್ಲಿ ಪೋಣಿಸಿದ್ದಾನೆ. ಅಲ್ಲಿ ಶಬ್ದಗಳ ಸಂಯೋಜನೆ, ವಾಕ್ಯಸರಣಿಗಳು ಕಾವ್ಯದ ಅಂಗ ಗಳಾಗುತ್ತವೆ. ಇವುಗಳ ಮೂಲಕವೇ ಕವಿ ಅರ್ಥದಾಚೆಯ ಸುಂದರ ಪ್ರಪಂಚವನ್ನು ಸಂಕೇತಿಸುತ್ತಾನೆ. ಈ ಕಾರಣದಿಂದ ಆನಂದಕಂದರ ಕಾವ್ಯಭಾಷೆ ರಚನೆ-ಅರ್ಥದ ರೂಪಾಂತರವನ್ನು ಹೊಸದೃಷ್ಟಿಯಿಂದ ನೋಡಲು ಸಾಧ್ಯವಾಗುತ್ತದೆ. ಹೆಣ್ಣುಮಕ್ಕಳಿಗೆ ತಮ್ಮ ತವರುಮನೆಯ ಬಗ್ಗೆ, ತಮ್ಮ ಸಹೋದರ-ಸಹೋದರಿಯರ ಬಗ್ಗೆ ಅಪಾರ ಪ್ರೀತಿ ಅಭಿಮಾನ ನಮ್ಮೂರ ಜಾತ್ರಿಗೆ ನಮ್ಮ ಅಣ್ಣ ಕರೆಯಲಿಕ್ಕೆ ಬರುತ್ತಾನೆ ಎಂಬ ಹಿಗ್ಗು ಅವಳಿಗೆ. ಅದನ್ನೆ ಆನಂದಕಂದರು ತುಂಬ ಅರ್ಥಪೂರ್ಣವಾಗಿ ಹೇಳಿದ್ದಾರೆ.

ನಮ್ಮೂರ ಜಾತ್ರಿ ಬಲೆ ಜೋರಾ
ಕರಿಯಾಕಽ ಬಂದಾರಽ ತವರವರಾ!

ಅಣ್ಣನ ಪ್ರೀತಿ ನನ್ನ ಮ್ಯಾಗ ಭಾರಿ
ಎಲ್ಲಾ ಕೆಲಸಾನೂ ಬಿಟ್ಟು ತರಾತೂರಿ
ಹೊಂಟು ಬಂದಾನ ಸ್ವತಾ ರಾತರಿ
ಸನಿಯಲ್ಲಽ ಹದಿನೆಂಟು ಮೈಲಿದೂರಾ
ಕರಿಯಾಕಽ ಬಂದಾರಽ ತವರವರಾ!

ಇಲ್ಲಿ ಭಾಷೆ ಭಾವವನ್ನು ಹಿಂಜಿ ಹಿಗ್ಗಿದರೂ ಅದಕ್ಕನುಗುಣವಾಗಿ ಉತ್ಸಾಹವನ್ನು ಪ್ರಕಾಶಿಸಿದೆ. 'ಸವಾರಿ ಬಂಡಿ', 'ಗೂಳ್ಯಾ-ಬಾಳ್ಯಾ ಮೂಡಲ ಹೋರಿ', 'ಬಂಗಾರದ

ಕಳಸ' ಇಡೀ ಆ ಜಾತ್ರೆಯ ಸಡಗರವನ್ನು ಕವಿ ಚಿತ್ರಿಸಿದ್ದಾನೆ. 'ಹರಿತ್ಯೆತೇ ತವರಿನ ಕಡೆ ಜೀವ' ಎನ್ನುವಲ್ಲಿ ತವರೂರು, ತವರುಮನೆ ಬಗೆಗೆ ಆ ಹೆಣ್ಣುಮಗಳ ಪ್ರೀತಿ ಧ್ವನಿಪೂರ್ಣವಾಗಿದೆ. 'ಯಾತಕವ್ವಾ ಹುಬ್ಬಳ್ಳಿ-ಧಾರ್ವಾಡ' ಕವನದಲ್ಲಿಯು ಹಳ್ಳಿಯ ಬದುಕನ್ನು ಅವರು ಚಿತ್ರಿಸಿದ್ದಾರೆ. ಬೆಳುವಲನಾಡಿನ ಸೊಗಸನ್ನು ಕವಿ 'ಬೆಳವಲ ಒಕ್ಕಲಿತಿ' ಕವನದಲ್ಲಿ ಕಣ್ಮುಂದೆ ಕಟ್ಟುವಂತೆ ಚಿತ್ರಿಸಿದ್ದಾರೆ.

ಬುತ್ತಿ ತೊಗೊಂಡು ಹೋಗ್ತೀನಿ ಹೊಲಕ ನಾ
ಬರತೀನಿ ಹೊತ್ತು ಮುಣುಗುದುಕ

ಹೋಳೀ ದಂಡೀ ಮ್ಯಾಗ ನಮ್ಮ ಹೊಲಾ
ಬೆಳೆದು ನಿಂತೈತಿ ಬಿಳಿಜೋಳ ನೆಲಾ
ತೆನಿಗsಳು ಮುತ್ತಿನ ಗೊಂಚsಲಾ
ಅದನs ನೋಡ್ನೋಡಿ ಹಿಗ್ಗಿ ಹಾಡುದಕ
ಬುತ್ತಿ ತೊಗೊಂಡು ಹೋಗ್ತೀನಿ ಹೊಲಕ!

ಇದರಂತೆ ಹಾಡಿನ ಉದ್ದಕ್ಕೂ ಬರುವ ಅವರಿ ಸಾಲಾ, ಬದನಿ ಮಿಡಿ, ಸುಲಗಾಯಿ, ಕುಸುಬಿ ಹೂ ಇಂತಹ ಹಲವಾರು ಕೃಷಿ ಮೂಲದ ಪದಪುಂಜಗಳು ಕೃಷಿ ಸಂಸ್ಕೃತಿ ಯನ್ನು ನೆನೆಪಿಗೆ ತರುತ್ತವೆ. ಹಳ್ಳಿಯ ಒಕ್ಕಲಗಿತ್ತಿಯರಿಗೆ ತನ್ನ ಗಂಡನ ಮೇಲೆಯೂ ಅಪಾರ ಪ್ರೀತಿ-ಗೌರವ.

- ದುಡಿ-ದುಡಿದು ಹಸಿದ ನನ್ನ ದೊರಿ
  ನೋಡsತಿರತಾನ ನಾ ಬರುವ ದಾರಿ
- ಊರಿಗೆ ಹೋಗಿ-ವಾರ ತಿರಿಗಿತವ್ವ
  ಇನ್ನೂ ಬರಲಿಲ್ಲ-ನನ್ನವ ಇನ್ನೂ ಬರಲಿಲ್ಲs

ಇಂತಹ ಹಲವಾರು ಪದ್ಯದ ಘಟಕಗಳು ದೊರೆಯುತ್ತವೆ. ಇವು ಭಾಷಾದೃಷ್ಟಿಯಿಂದ ಸತ್ವಪೂರ್ಣ ಎನಿಸುತ್ತವೆ. ಕವಿಗೆ ಭಾಷೆಯ ಮೂಲಕ ಹೊಸ ಅರ್ಥ ಪ್ರಪಂಚವನ್ನು ನಿರ್ಮಿಸುವ ಕಡೆಗೆ ಗಮನವಿರುತ್ತದೆ. ಅದಕ್ಕಾಗಿ ಅವನು ಭಾಷೆಯನ್ನು ಹದಗೊಳಿಸಿ ಕೊಂಡಿರುತ್ತಾನೆ. ಆನಂದಕಂದರ ಶಬ್ದಗಳನ್ನು ಹದಗೊಳಿಸುವುದಷ್ಟೇ ಅಲ್ಲ ಭಾವನೆ ಗಳನ್ನು ಹದಗೊಳಿಸಿಕೊಂಡು ಕಾವ್ಯದಲ್ಲಿ ಎರಕ ಹೊಯ್ಯುತ್ತಾರೆ. ಹಾಗಾಗಿ ಅವರ ಕಾವ್ಯದ ಸಾಮರ್ಥ್ಯ ನೂರ್ಮಡಿ ಕ್ರಿಯಾಶೀಲವಾಗುತ್ತದೆ. ಅವರು ಭಾವನೆಗಳನ್ನು ಭಾಷೆಯ ಮೂಲಕ ಸಂಕೇತಗೊಳಿಸುವಾಗ ಭಾವಾತಿರೇಖ, ತಾಳ-ಲಯಗಳ ಸುಂದರ ಸಂಯೋಜನೆಯೇ ವ್ಯಾವಹಾರಿಕ ಭಾಷೆಯನ್ನು ವ್ಯಾವಹಾರಿಕ ಶಿಷ್ಟ ಭಾಷೆಯಾಗಿ ರೂಪುಗೊಳಿಸುತ್ತಾರೆ. ಆನಂದಕಂದರ ಹಾಡುಗಳು ನಮ್ಮ ನಾಡಿನ ಸಂಸ್ಕೃತಿ ಪರಂಪರೆ ಗಳ ಜೀವಂತ ಸಾಕ್ಷಿಯಾಗಿವೆ. ಅವರ ಸೃಜನಾತ್ಮಕ 'ದೇಸಿ'ಯಿಂದ ಪ್ರೇರಣೆ ಹೊಂದಿ

ಕಾಲಾನಂತರದಲ್ಲಿ ತನ್ನದೇ ಆದ ಮಾರ್ಗವನ್ನು ರೂಪಿಸಿಕೊಂಡಿತು. ಅವರ 'ನಲ್ವಾಡುಗಳು', 'ಕಾರಹುಣ್ಣಿವಿಯ' ಸಂಕಲನದ ಹಾಡುಗಳನ್ನು ಹಾಡುತ್ತ ಹೋದರೆ ನಾದ ಗುಂಗುಗಳನ್ನು ಒಡನೆ ಹೊತ್ತು ಅಲೆಯಾಗಿ ಬರುತ್ತವೆ. ಸಹೃದಯವಾಚಕರಿಗೆ-ಕೇಳುಗರಿಗೆ ಪುನಃ ಪುನಃ ಹಾಡಬೇಕೆನಿಸುತ್ತದೆ. ಅಲ್ಲಿಯ ಆಡುಮಾತು ಸಹಜವಾಗಿ ಛಂದಸ್ಸಾಯಿತು; ಛಂದಸ್ಸಿಗೆ ಒಗ್ಗಿತು; ಅದೇ ಹಾಡಾಯಿತು. ಆಡುಮಾತಿನ ಲಯದ ವಿನ್ಯಾಸದ ಸಾಧ್ಯತೆಗಳನ್ನು ಆನಂದಕಂದರು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಕವಿಯ ಕಾವ್ಯದ ಸಾಹಿತ್ಯದ ಗುರಿಯೇ ಸಾಮಾನ್ಯ ಜನತೆಯಾಗಿರುವುದರಿಂದ ಅಲ್ಲಿ ಅವರ ದೈನಂದಿನ ಅನುಭವಗಳಿಗೆ, ಅನಿಸಿಕೆಗಳಿಗೆ ಅಭಿವ್ಯಕ್ತಿ ದೊರಕಿದೆ.

ಆನಂದಕಂದರು ತಮ್ಮ ಕಾವ್ಯದುದ್ದಕ್ಕೂ ಬಳಸಿಕೊಂಡಿರುವ ಭಾಷೆ ತಮ್ಮ ಸ್ವಂತ ಅನುಭವದ ತುರ್ತಿನಿಂದ ಸೃಷ್ಟಿಯಾದುದು. ಹೀಗಾಗಿ ಅವರು ಬಳಸುವ ಭಾಷೆಯಲ್ಲಿ ಹೊಸ ಅರ್ಥಛಾಯೆಗಳು ಮೂಡುತ್ತವೆ. ಅಭಿವ್ಯಕ್ತಿಯ ಕ್ರಿಯೆಯು ಅಗತ್ಯತೆಯಿಂದ ಮೂಡಿಬಂದ ಪದಪುಂಜಗಳಲ್ಲಿ ಅರ್ಥಕ್ಕಿಂತ ಮಿಗಿಲಾಗಿ ಜೀವಂತಿಕೆಯಿದೆ. ಅದನ್ನು ಅರ್ಥಮಾಡಿಕೊಳ್ಳಲು ಅವರ ಅಂತರಂಗದ ಸಮೀಪಕ್ಕೆ ಹೋಗಬೇಕಾಗುತ್ತದೆ. ಅವರ ಕಾವ್ಯವೆಲ್ಲ ಒಂದು ರೀತಿಯ ಹೃದಯ ಸಂವಾದವಿದ್ದಂತೆ. ಅದನ್ನು ಅರಿಯಲು ಅವರ ಕಾವ್ಯ ನಿರ್ಮಿತಿಯ ಒಳನೋಟಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಅವರ 'ಮುದ್ದನ ಮಾತು' ಎಂಬ ಸಂಕಲನದ ಕವಿತೆಗಳಲ್ಲಿ ಬಾಲಭಾಷೆ ಲೀಲಾಜಾಲವಾಗಿ, ಮುಕ್ತವಾಗಿ ಹರಿದಿದೆ.

-ಗುಮ್ಮನಿಲ್ಲಿಯು ಬಂದಾಗ ತೊಡೆ ಮಡಿಲಲ್ಲಿ
ಅಮ್ಮ ನಿನ್ನ ಸನ್ನಿಹ ಮಲಗುವೆನು

-ಎನಿತು ಕೋಮಲ, ಎನಿತು ಮಿದು, ನಿನ್ನ ಮೆಯ್ಯಿಹುದು?

-ಒಲ್ಲೆನಿವರೊಡ ನಾಟವ-ಅಮ್ಮ! ನಾ ಒಲ್ಲೆ ಇವರೊಡನಾಟವ

-ಬುರುಬುರು ಬಸವಣ್ಣದೊ, ಹಾವುಗಾರರದೊ
ಡೋಲಸಪ್ಪಳ ವಿದೇನೆ?

-ಅಮ್ಮ ! ನಾ ಹುಡುಗರೊಡನಾಟವಾಡಿದರೆ
ಸುಮ್ಮ ಸುಮ್ಮನೆ ನನ್ನ ಗಾಸಿ ಗೊಳಿಸುವರೆ!

-ಅಮ್ಮ ! ನೀನೆಲ್ಲಿರುವೆ? ಕರೆದರೂ
ಸುಮ್ಮನೇತಕೆ ಇರುವೆಯೆ?

ತಾಯಿಯ ಪುತ್ರವಾತ್ಸಲ್ಯ ಹಾಗೂ ಮಗುವಿನ ತುಂಟಾಟವನ್ನು ಆನಂದಕಂದರು ತುಂಬ ಸೊಗಸಾಗಿ ಹೇಳಿದ್ದಾರೆ. ಅವುಗಳನ್ನು ಗಮನಿಸಿದಾಗ ಹರಿದಾಸರ 'ಶ್ರೀಕೃಷ್ಣ ಬಾಲಲೀಲೆ'ಯ ಕೀರ್ತನೆಗಳು ಜ್ಞಾಪಕಕ್ಕೆ ಬರುತ್ತವೆ. ಬಾಲಭಾಷೆಯಲ್ಲಿ ರಚನೆಗೊಂಡ

ಹಾಡುಗಳ ಲಯ, ನಾದ, ಮನೋಧರ್ಮ ಇವೆಲ್ಲಕ್ಕೂ ವಿಶಿಷ್ಟವಾದ ಸಂವೇದನೆ ಯುಂಟು. ಅವು ತನ್ನದೇ ಆದ ಅಂತಸ್ಸತ್ವದಿಂದ, ಅನನ್ಯತೆಯಿಂದ ಕೂಡಿವೆ. ಬಾಲಭಾಷೆ ಯನ್ನೊಳಗೊಂಡ 'ಮುದ್ದನಮಾತು' ಸಂಕಲನದ ಹಾಡುಗಳು ಮಕ್ಕಳ ಸಾಹಿತ್ಯಕ್ಕೆ ಅವು ಮಹತ್ವದ ಕೊಡುಗೆಗಳಾಗಿವೆ. ಆನಂಕಂದರ ಕವನಗಳು ಹೆಚ್ಚಾಗಿ ಆಡುನುಡಿಯ ಮೂಲಕ ಸಾಗುವುದರಿಂದ ಪ್ರಾದೇಶಿಕ ವೈವಿಧ್ಯತೆಯ ಶಬ್ದ ಕಾವ್ಯದ ಉದ್ದಕ್ಕೂ ದೊರೆಯುತ್ತವೆ ಎಂಬುದರ ಬಗ್ಗೆ ಬೇರೆ ಹೇಳಬೇಕು. ಅನುಕರಣವಾಚಕಗಳು, ಜೋಡು ನುಡಿಗಳು, ಪ್ರತಿಧ್ವನಿ ಪದಗಳು ಮುಂತಾದವು ಲೀಲಾಜಾಲವಾಗಿ ಬಳಕೆಯಾಗಿವೆ. ಉದಾಹರಣೆಗೆ ಬೆನ್ನುಗುಂಟ, ಹರೆಹೊತ್ತು, ಶಾಣೆತನ, ಮೊಕಳೀಕ, ಹಚಡ-ಪಚಡಾ, ಗಿಡಿಗಿ-ಇಡಿಕಿ, ಅರಿವಿ-ಅಂಚಿಡಿ ಮುಂತಾದ ಸಾವಿರಾರು ದೇಸಿ ರೂಪಗಳು ಅವರ ಕಾವ್ಯದಲ್ಲಿ ಸಹಜವಾಗಿ ಬಳಕೆಗೊಳ್ಳುವುದರಿಂದ ಇಲ್ಲಿಯ ಭಾಷೆ ಜಾನಪದೀಯವೂ ಸತ್ವಪೂರ್ಣವೂ ಆಗಿ ಇಡೀ ಕಾವ್ಯದ ಭಾಷಿಕ ಸಂದರ್ಭ ತೀರ ವಾಸ್ತವಿಕವೆನಿಸುತ್ತದೆ.

ಮೇಲಿನ ಅಂಶಗಳನ್ನು ಗಮನಿಸಿದಾಗ ಆನಂದಕಂದರಿಗೆ ಕನ್ನಡ ಸಾಹಿತ್ಯದಲ್ಲಿ ಮಹತ್ವದ ಸ್ಥಾನವಿದೆ ಎಂಬ ಅಂಶ ಮನದಟ್ಟಾಗುತ್ತದೆ. ಇಲ್ಲಿಯವರೆಗೆ ಅವರ ಕಾವ್ಯದ ಭಾಷಾಸ್ವರೂಪವನ್ನು, ಭಾಷಾ ಬಳಕೆಯ ರೀತಿಯನ್ನು ಸ್ಥೂಲವಾಗಿ ನೋಡಲಾಯಿತು. ಅವರ ಹಾಡುಗಳನ್ನು ಸಂಗೀತದ ಪರಿಪೇಕ್ಷದಲ್ಲಿಟ್ಟು ನೋಡಿದರೆ ಇನ್ನೂ ಹಲವಾರು ಭಾಷಿಕ ವೈಶಿಷ್ಟಗಳನ್ನು ಅರಿಯಬಹುದಾಗಿದೆ.

ಆಕರಗ್ರಂಥ

೧. ಬೆಳುವಲದ ಸುಗ್ಗಿ–ಆನಂದಕಂದರ ಸಮಗ್ರ ಕಾವ್ಯ, ೨೦೧೧. (ಸಂ.) ರಾಘವೇಂದ್ರ ಪಾಟೀಲ, ಸುರೇಶ ಬೆಟಗೇರಿ, ಬೆಟಗೇರಿ ಕೃಷ್ಣಶರ್ಮ ಟ್ರಸ್ಟ್, ಬೆಳಗಾವಿ.

೩೦

ಕಂಬಾರರ ಕಾವ್ಯಶಿಲ್ಪ

ಕಂಬಾರರ ಮೊದಲ ಕವನ ಸಂಗ್ರಹ 'ಮುಗುಳು' ಪ್ರಕಟವಾದದ್ದು ೧೯೫೮ರಲ್ಲಿ. ಆದರೆ ಅವರ ಕಾವ್ಯದ ಅಧಿಕೃತ ಸ್ವರೂಪ ಅವರ ಎರಡನೆಯ ಸಂಕಲನ 'ಹೇಳತೇನ ಕೇಳ'ದಲ್ಲಿ, ೧೯೬೪ರಲ್ಲಿ ಕಾಣಿಸಿಕೊಳ್ಳುತ್ತದೆ. ಅಲ್ಲಿಂದೀಚೆಗೆ ಅವರ ಕಾವ್ಯ-ಹಾಡು ಮತ್ತು ನಾಟಕಗಳ ಮೂಲಕವಾಗಿ ಅಭಿವ್ಯಕ್ತಿಯನ್ನು ಪಡೆಯುತ್ತ ಬಂದಿದೆ. ಅವರ ಶ್ರೇಷ್ಠ ಕವಿತೆಗಳೆಲ್ಲ ಕಥನಾತ್ಮಕವಾದುವುಗಳು; ಜಾನಪದ ಭೂಮಿಯಲ್ಲಿ ಬೇರು ಬಿಟ್ಟವುಗಳಾಗಿವೆ. ಕಂಬಾರರಿಗಿಂತ ಮೊದಲೇ ಆ ನಾಡಿನಲ್ಲಿ 'ಖ್ವಾಜಾ ಸಾಹೇಬನ ಲಾವಣಿಗಳು' ಮತ್ತು 'ಕೃಷ್ಣ ಪಾರಿಜಾತ', 'ಸಂಗ್ಯಾ-ಬಾಳ್ಯಾ'ನಂತಹ ನಾಟಕಗಳು ಪ್ರಚಲಿತವಾಗಿದ್ದವು. ಈ ಸಾಹಿತ್ಯ ಅವರಿಗೆ ಒಂದು ಜಾನಪದ-ಪೌರಾಣಿಕ ಕತೆಯನ್ನು ಕೊಟ್ಟಿತ್ತು. ಕಂಬಾರರ ಕಾವ್ಯ ಈ ಕತೆಯ ಮೂಲಕ ಜೀವನವನ್ನು ಅರ್ಥವಿಸತೊಡಗಿತು. ಒಮ್ಮೊಮ್ಮೆ ಸ್ವಂತದ ಅನುಭೂತಿಯ ಉದ್ರೇಕ ಹೆಚ್ಚಾದಾಗ ಸುಶಿಕ್ಷಿತ ಕಾವ್ಯದ ಬಲದಿಂದ ಈ ಅನುಭೂತಿಯನ್ನು ಭೇದಿಸ ಬೇಕಾಯಿತು. ಅವರ ಪ್ರತಿಭೆಯ ಸಹಜತೆ ಹಾಗೂ ಕಾವ್ಯ ನಿರ್ಮಾಣ ಶಕ್ತಿಯ ಸಾತತ್ಯತೆ, ಅವರು ಎಂತಹ ಜೀವಂತ ಕವಿಯಾಗಿದ್ದಾರೆಂಬುದಕ್ಕೆ ನಿದರ್ಶನಗಳಾಗಿವೆ. ಒಂದರ್ಥದಲ್ಲಿ ಇವರ ಕಾವ್ಯ ಹೊಸಗನ್ನಡ ಕಾವ್ಯದ ಇತಿಹಾಸದಂತೆ ಕುತೂಹಲಕಾರಿಯಾಗಿದೆ.

'ಮುಗುಳು'ನಿಂದ ಆರಂಭವಾದ ಇವರ ಕಾವ್ಯರಚನೆ ಇಂದಿಗೂ ಮುಂದುವರಿಯುತ್ತಾ ಬಂದಿದ್ದು, ಅವರ ಕೃತಿಗಳನ್ನು ಅಭ್ಯಾಸ ಮಾಡುವವರಿಗೆ ತಟ್ಟನೆ ಗೋಚರವಾಗುತ್ತದೆ ಅವರ ಕಾವ್ಯದ ಬೆಳವಣಿಗೆ. 'ಹೇಳತೇನ ಕೇಳ' ಕಂಬಾರರ ಕಾವ್ಯದ ಇತಿಹಾಸದಲ್ಲಿ ಒಂದು ಪ್ರಮುಖವಾದ ಘಟ್ಟ. ಆ ವೇಳೆಗಾಗಲೇ ಕನ್ನಡದಲ್ಲಿ ನವ್ಯಕಾವ್ಯ ಬೇರೂರಿತ್ತು. ಕಾವ್ಯಕರ್ಮ ಹಾಗೂ ಶಿಲ್ಪಗಳಲ್ಲಿ ಅತ್ಯಂತ ಪ್ರಜ್ಞಾಪೂರ್ಣ ಪ್ರಯತ್ನಗಳು ನಡೆದು ಶ್ರೀ ಅಡಿಗರ ಕಾವ್ಯವಂತೂ ಸಾಕಾದಷ್ಟು ಯಶಸ್ವಿಯಾಗಿತ್ತು. ಕಂಬಾರರು ನವ್ಯಕಾವ್ಯ ಘಟ್ಟದಲ್ಲಿ ಬದುಕಿದ್ದರೂ ಬೇಂದ್ರೆ, ಬೆಟಗೇರಿ ಇಂತಹ ಕವಿಗಳ ಕಾವ್ಯಗಳಿಂದ ಸಂಸ್ಕಾರ ಪಡೆದಿದ್ದರು.

ಹೀಗಾಗಿ ನವ್ಯಕಾವ್ಯದ ಹಿನ್ನೆಲೆಯಲ್ಲಿ ಅವರು ತಮ್ಮ ಕಾವ್ಯಕ್ಕೊಂದು ಏಕ್ಸನ್ನು ಕಂಡು ಕೊಂಡರು. ಭಾಷಾಶಿಲ್ಪ, ಪ್ರತಿಮೆ, ಭಾಷೆ, ವಸ್ತು ಹಾಗೂ ಜೀವನ ದರ್ಶನಗಳ ದೃಷ್ಟಿಯಿಂದ 'ಹೇಳತೇನ ಕೇಳ'ದಲ್ಲಿ ಹೊಸತನ ಕಾಣಿಸಿಕೊಂಡಿತು. ಈ ಹೊಸತನ ಮುಂದೆ ಅವರ ಕಾವ್ಯಮಾರ್ಗದಲ್ಲಿ ಹೊಸ ತಿರುವು ಪಡೆಯುತ್ತ ಹೋಯಿತು. ಅವರ ಸಹಜ ಕಾವ್ಯಮಾರ್ಗದ ಬೆಳವಣಿಗೆಗೆ ಕಾರಣವಾದದ್ದೇ 'ಹೇಳತೇನ ಕೇಳ' ಸಂಕಲನದ ವೈಶಿಷ್ಟ್ಯ.

೧

ಮೊದಲು ಭಾಷೆ ಹಾಗೂ ಲಯದ ದೃಷ್ಟಿಯಿಂದ ಇವರ ಕಾವ್ಯವನ್ನು ಸಂಕ್ಷಿಪ್ತವಾಗಿ ಪರಿಶೀಲಿಸಿ ಅಲ್ಲಿ ಕಂಡುಬರುವ ಬೆಳವಣಿಗೆಯನ್ನು ಗುರುತಿಸಬಹುದು.* ಈ ಕೆಲವು ಉದಾಹರಣೆಗಳ ಮೂಲಕ

೧. ಇಲ್ಲಿ ಕುಳಿತಿದ್ದೇನೆ, ಸುತ್ತ ವರ್ತುಳ ಕೊರೆದು
ಒಳಗು ಹೊರಗುಗಳನ್ನು ಹೊರತು ಪಡಿಸಿ;
ಎಂದೊ ತಿಂದದ್ದನ್ನು ಮತ್ತೆ ಬಾಯಿಗೆ ತಂದು
ಬರಿಯ ಮೆಲುಕಾಡಿಸುವೆ, ಜೊಲ್ಲುಸುರಿಸಿ;

೨. ಗಾಣದೆತ್ತಿನ್ಹಾಂಗ ಕಣ್ಣ ಕಟ್ಟಿಸಿಕೊಂಡು
ಕಾಶಿಗೆ ಬಂದೇ ವಂದಾವ |
ಬತಗೆಟ್ಟ ಕುರಿಗೋಳ ಬಲ್ಹಾಂಗ ಕುಣದಾವ
ಸ್ವರ್ಗಕ ಕಣ್ಣ ಕಿಸದಾವ ||

೩. ಬೆಳ್ಳಿ ತೊಡಿಯ ಬಿಳಿಯ ಕುದುರಿ ಬೆರಗ ಕಂಡಿನೆ
ಬೆನ್ನನೇರಿ ಚಿನ್ನದುರಿಯ ಕಾಡ ಕಂಡಿನೆ ||

೪. ದೂರದೂರ ಹಸರ ಹಾರೇತಿ | ಹಸಿಸರದ್ಯೆತಿ
ಬಾವಲಿ ಜೋತಾವ | ಹದ್ದ ಹಾರ್‍ಯಾವ
ಕಣ್ಣಮುಚ್ಚಿ | ದಾನೊ ಒಳಗೆದೊರಿ ಜರಾ ಕಣ್ಣತೆರಿ ||

೫. ಆಳ ಆಳ ಪಾತಾಳದಾಗಿನ
ಮೋಸದಾಗಿನ ಕಸಾ ಸೋಸಿ ನಾ
ಅಸಲ ಹಾಡ ಹೇಳಿದರೂ
ನಂಬಾಣಿಲ್ಲನನ ನಚ್ಚಾಣಿಲ್ಲ ಹುಸಿ
ಹುಸೀ ಎಂಬರವರು

೬. ಕನಸು ಬಿಸಿಲು ಗುದುರೆಯೇರಿ
ರಾಜನಾಗುತ್ತಿದ್ದ

ಎಚ್ಚರದಲಿ ಕೂಲಿ ಮಾಡಿ
ಆಳಾಗಿರುತಿದ್ದ

ಒಂದು, ಎರಡು ಮತ್ತು ಮೂರನೆಯ ಉದಾಹರಣೆಗಳಲ್ಲಿ ನಿಯತವಾದ ಛಂದೋಬದ್ಧತೆಯಿದೆ, ಆಡುರೂಪಗಳಿವೆ. ಮೂರನೆಯ ಉದಾಹರಣೆಯ ಪದ್ಯದ ಲಯ ಮಾತನಾಡಿದಷ್ಟು ಸಹಜವಾಗಿದೆ. ನಾಲ್ಕು, ಐದು ಮತ್ತು ಆರನೆಯ ಉದಾಹರಣೆಗಳಲ್ಲಿ ಛಂದೋಬದ್ಧತೆಯಿದ್ದರೂ ಅವು ನಿಯಮಗಳಿಂದ ಬಂಧಿತವಾಗಿಲ್ಲ. ಲಯವೂ ಸಹಜವಾಗಿದೆ. ಕಾವ್ಯಭಾಷೆಯಲ್ಲಿ ಅನವಶ್ಯವಾದ 'ಭರ್ತಿ' ಹಾಕುವ ಪದಗಳಿಲ್ಲ. 'ನಾನು' ಎಂಬ ಸರ್ವನಾಮ ಪದ್ಯದ ರೀತಿಯಲ್ಲಿ 'ನಾ' ಎಂದು ಬಳಕೆಯಾಗಿರುವುದನ್ನು ಬಿಟ್ಟರೆ ಈ ಮೂರು ಕಡೆಗಳಲ್ಲಿಯೂ ಆತ್ಮೀಯತೆಯ ಸಂಭಾಷಣೆಯ ಧ್ವನಿ ಎದ್ದು ಕಾಣುತ್ತದೆ. ಅಭಿವ್ಯಕ್ತಿಯಲ್ಲಿ ನಯ, ಸರಳತೆ, ಭಯ, ಮುಗ್ಧತೆ ಇವೆಲ್ಲ ಭಾಷೆಯಲ್ಲಿ ಕಾಣಿಸಿಕೊಳ್ಳುತ್ತವೆ. ಐದನೆಯ ಉದಾಹರಣೆಯ ಭಾಷೆ ಗದ್ಯವೂ ಹೌದು; ಪದ್ಯವೂ ಹೌದು. ಅದನ್ನು ಹಾಡಲೂ ಬಹುದು. ಇಲ್ಲಿ ಇವರ ಗದ್ಯ, ಪದ್ಯಗಳ ವಿಂಗಡಣೆ ಮಾಡದಷ್ಟು ಸಹಜವಾಗಿದೆ. ಯಾವುದನ್ನು ಒಪ್ಪದ ಕುಚೋದ್ಯ ಮನೋವೃತ್ತಿಯನ್ನು ವ್ಯಂಗ್ಯಕ್ಕೆ, ವಾಸ್ತವಕ್ಕೆ ಅನ್ವಯಿಸುವುದು ಇಲ್ಲಿ ಕವಿಯ ಉದ್ದೇಶ. ಅದಕ್ಕೆ ತಕ್ಕಂತೆ ಭಾಷೆ ಹಾಗೂ ಲಯಗಳು ವಿಡಂಬನೆಯ ಎಳೆಯಿಂದ ಬನಿಗೊಂಡಿವೆ. ಆರನೆಯ ಉದಾಹರಣೆಯಲ್ಲಿ ಬರುವ ಲಯ ಹಾಗೂ ಭಾಷೆಗಳು ಇನ್ನಷ್ಟು ಬಲವಾಗಿವೆ. ಇಲ್ಲಿ ವಿಡಂಬನೆಗಿಂತ ಗಹನವಾದ ಉದ್ದೇಶವನ್ನು ಭಾಷೆ ಮತ್ತು ಲಯಗಳು ನಿರ್ವಹಿಸುತ್ತಿವೆ. ಇಡಿಯಾಗಿ ಬದುಕಿನ ಯಾತ್ರೆಯು ಈ ಕವನದಲ್ಲಿ ಚಿತ್ರಿತವಾಗಿದೆ. ಕನಸಿನಲ್ಲಿ ಕುದುರೆ ಏರಿ ರಾಜನಾದರೆ ಎಚ್ಚರದಿಂದ ಮೇಲೆದ್ದ ಕೂಡಲೇ ಶ್ರೀಮಂತರ ಮನೆಯ ಆಳಾಗಿರುತ್ತಿದ್ದ ವ್ಯಕ್ತಿಯೊಬ್ಬನ ಚಿತ್ರ ಇಲ್ಲಿದೆ. ವಿನೋದದ ಎಳೆಯನ್ನು ತಂದು ಬದುಕಿನ ಸಮಸ್ಯೆಗಳನ್ನು ಎದುರಿಸಲು ಸಿದ್ಧರಾಗೋಣ ನೀನು ಏಳು ಎನ್ನುವ ನಿರ್ಣಯವನ್ನು ಮೂಡಿಸುತ್ತದೆ. ಒಂದು ಸಾಲಿನ ಕೊನೆಯಿಂದ ಮತ್ತೊಂದು ಸಾಲಿನ ಮಧ್ಯದವರೆಗೆ ಹೀಗೆ ವಾಕ್ಯಗಳು ಆರಂಭವಾಗಿ ಛಂದಸ್ಸು ಅಳತೆಗಾಗಿ ಮಾತ್ರ, ಲಯ ಅರ್ಥಕ್ಕಾಗಿ ಎಂದು ವಿಶದೀಕರಿಸುವಷ್ಟು ಸಹಜ ಲಯದಿಂದ ವಿಜೃಂಭಿಸುತ್ತದೆ. ಆರನೆಯ ಉದಾಹರಣೆಯ ಪದ್ಯದ ಭಾಷೆ ಹಾಗೂ ಲಯಗಳು ಬಹಳ ಸಹಜವಾಗಿದೆ; ಅರ್ಥಪೋಷಕವಾಗಿದೆ. ಕಂಬಾರರ ಮೊದಲ ಕವನ ಸಂಕಲನದಿಂದಲೂ ಇವರ ಭಾಷೆ ಆಡುಮಾತಿನಿಂದ ದೂರವಾಗಿಲ್ಲ. ಆಡುಮಾತಿನ ಬಳಕೆಯನ್ನು ಸಮರ್ಥವಾಗಿ ಬಳಸಿದವರಲ್ಲಿ ಬೇಂದ್ರೆ, ಬೆಟಗೇರಿ ಅವರ ನಂತರ ಕಂಬಾರರೇ. ಬೆಳಗಾವಿ ಪರಿಸರದ ಭಾಷೆಯನ್ನು ಶಕ್ತಿಯುತ್ತವಾಗಿಯೇ ಬಳಸಿದಾಗ ಆಡುಮಾತಿನ ಲಯ ಮತ್ತು ಗತ್ತುಗಳು ಶಕ್ತಿಯುತವಾಗಿ ಮೂಡುತ್ತಿದ್ದವು. ದೇಸಿಯ ಎಲ್ಲ ಸೊಗಸಿನೊಂದಿಗೆ ಅದಕ್ಕೆ ಗೇಯತೆಯ ಇಂಪೂ ಕೂಡುತ್ತಿತ್ತು. ದೇಸಿ ಮೂಲದಿಂದ ಬಂದ ಕಂಬಾರರು ತಮ್ಮದೇ ಆದ ಭಾಷೆಯನ್ನು ನಿರ್ಮಿಸಿಕೊಂಡರು. ಹೀಗಾಗಿ ಅವರ ಭಾಷೆ ಬೇಂದ್ರೆಯವರ ಭಾಷೆಗಿಂತ ಒಂದು ಹೆಜ್ಜೆ ಮುಂದಿಟ್ಟಿತು.

ಆಗಲಿ ಇರಲಾರೆನೋ
ಮರೆತು ಇರಲಾರೆನೋ ನಿನ್ನನ್ನಾ ॥

ಒಲಿದವನೆ ನಲಿದವನೆ
ಹೃದಯವನೆ ಗೆಲಿದವನೆ
ಫಾಸಿಯಾಗುವೆನೊ ನಾನಾ । ಮದನಾ
ಮರೆತಿರಲಾರೆ ನಿನ್ನಾ ॥

ಗದ್ಯ ಲಯ ಮಿಶ್ರಿತವಾದ ಅವರ ಭಾಷೆ ವಚನಕಾರರಿಂದ ಪ್ರಭಾವಿತವಾಗಿದೆ. ಛಂದಸ್ಸಿನ ಅತಿನಿಯಮಗಳನ್ನು ಕಳಚಿ ಸ್ವಚ್ಛಂದ ಛಂದದ ಕಡೆಗೆ ಇವರ ಭಾಷೆ ವಾಲುತ್ತಿದೆ ಎನ್ನುವುದಕ್ಕಿಂತ ಹೆಚ್ಚಾಗಿ ಭಾಷೆಯನ್ನು ಭಾವವಾಹಿನಿಯಾಗಿ ಮಾಡುವ ಕವಿಯ ಯಶಸ್ಸನ್ನು ಭಾಷೆ ಪಡೆಯತೊಡಗಿದೆ ಎನ್ನಬೇಕು. ಈ ಹಿಂದೆ ಹೇಳಿದಂತೆ ವಚನಕಾರರ ಪ್ರಭಾವ ಇವರ ಭಾಷೆಯ ಮೇಲೆ ಇರಬಹುದಾದರೂ ಇವರ ಭಾಷಾಸಾಧನೆಯೇನೂ ಸಾಮಾನ್ಯವಲ್ಲ. ಇತ್ತೀಚಿಗಿನ ಪದ್ಯಗಳಂತೂ ಭಾಷೆ ಸರಳವಾಗಿ ನಿರಾಡಂಬರವಾಗಿ ಗುರಿ ಮುಟ್ಟಲು ಹೊರಟ ಬಾಣದಂತಿದ್ದು ಆಡುಮಾತಿನ ಲಯದಿಂದ ಕೂಡಿದೆ. 'ಹೇಳತೇನ ಕೇಳ' ಕವಿತೆಗಳಲ್ಲಿ ಕೂಡ ಕವಿ ನಿಯತ ಛಂದೋರೂಪಗಳನ್ನು ಬಳಸಿಯೂ ಭಾಷೆ ಆಡುಮಾತಿಗೆ ದೂರವಾಗಿಲ್ಲವೆಂಬುದನ್ನು ಗಮನಿಸಿದರೆ ಇತ್ತೀಚೆಗಂತೂ ಭಾಷೆಯ ದೃಷ್ಟಿಯಿಂದ ಮಾಗುತ್ತ ಬಂದಿದೆ.

ಕಂಬಾರರು ತಮ್ಮ ಮೊದಲ ಸಂಕಲನ 'ಮುಗುಳು'ದಲ್ಲಿ ಆಧುನಿಕ ಕಾವ್ಯದ ಮುಖ್ಯವಾಗಿ ನವೋದಯ ಕಾವ್ಯದ ಭಾಷೆ ಮತ್ತು ಮೌಲ್ಯಗಳನ್ನು ಒಪ್ಪಿಕೊಂಡೇ ಮುಂದುವರಿದರು. ಆದರೆ ಅವರ ಎರಡನೆಯ ಸಂಗ್ರಹ 'ಹೇಳತೇನಿ ಕೇಳ' ಸಂಪೂರ್ಣವಾಗಿ ಅಕ್ಷರಸಂಸ್ಕೃತಿಯನ್ನು ನಿರಾಕರಿಸಿದ ಕಾವ್ಯವಾಗಿದೆ. ನವೋದಯ ಕಾವ್ಯದ ಛಂದೋಗತಿ ಎಂದರೆ ಮಾತ್ರಾಗಣಗಳನ್ನು ಆಧರಿಸಿದ ಛಂದೋ ಪದ್ಧತಿ. ಈ ತಾಳಗತಿಯಲ್ಲಿ ಹುಟ್ಟಿದ ಕವಿತೆಯನ್ನು ಹಾಡಬಹು ದಾದರೂ ಆ ಹಾಡಿಗೆ ಅಂಶಗಣದ ಮುಕ್ತತೆ ಇರಲಾರದು. ಕಂಬಾರರ 'ಹೇಳತೇನಿ ಕೇಳ'ದ ಛಂದೋಗತಿ ಲಾವಣಿಗಳ ಛಂದೋಗತಿಯನ್ನು ಅನುಸರಿಸಿರುವದರಿಂದ ಅದನ್ನು ಬೀಸಾಗಿ ಹಾಡಬಹುದು. ಈ ಹಾಡಿನ ಲಯದಲ್ಲಿ ಆದಿಮ ಜನಾಂಗದ ಕುಣಿತದ ನಾದ ಮತ್ತು ಶಕ್ತಿಗಳಿವೆ. ಇದನ್ನೇ ಬಳಸಿಕೊಂಡು ನಮ್ಮ ಸುಶಿಕ್ಷಿತ ಕಾವ್ಯ ಹುಟ್ಟಿ ಬಂದಿತು. ಮೌಖಿಕ ದನಿ ಬರೆವಣಿಗೆಯಲ್ಲಿ ಭಾಷಾಂತರಗೊಂಡು ಕೆಲವು ಗುಣಗಳನ್ನು ಕಳೆದುಕೊಂಡು ಮತ್ತೆ ಕೆಲವು ಹೊಸ ಗುಣಗಳನ್ನು ಪಡೆದುಕೊಂಡಿತು. ಶಬ್ದ ಅಕ್ಷರದಲ್ಲಿ ಪರಿವರ್ತಿತವಾದಾಗ ಅದರ ಅರ್ಥವಂತಿಕೆಯಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಲಕ್ಷ್ಮೀಶನ "ತಾಯೆನಗೆ ತಾಯೆ ನಗೆಗೂಡಿ ನೋಡಿ" ಎಂಬ ಸಾಲಿನಲ್ಲಿ ಶಬ್ದ ಮತ್ತು ಅಕ್ಷರಗಳ ಚತುರವಾದ ಹೊಂದಾಣಿಕೆಯಲ್ಲಿ ಅರ್ಥಗಳನ್ನು ಸೃಷ್ಟಿಸುತ್ತಾನೆ. ಕನ್ನಡ ಕಾವ್ಯ ಮೊದಲಿನಿಂದ ಆಡುಮಾತು ಮತ್ತು ಬರೆವಣಿಗೆಗಳ ನಡುವೆ ಸಮನ್ವಯವನ್ನು ಸಾಧಿಸುತ್ತಲೇ ಬಂದಿದೆ. ಬೇಂದ್ರೆಯವರು ಆಡುಮಾತನ್ನು ಗಂಭೀರ ಭಾವಗಳ ಅಭಿವ್ಯಕ್ತಿಗಾಗಿ ಕೂಡ ಉಪಯೋಗಿಸಿ ಅದಕ್ಕೆ ಕಾವ್ಯ

ಗೌರವವನ್ನು ತಂದುಕೊಟ್ಟರು. ಕಂಬಾರರು ಅದಕ್ಕೂ ಮುಂದೆ ಹೋಗಿ ಕಾವ್ಯದ ದನಿಯನ್ನು ಸ್ಪಷ್ಟವಾಗಿ ಕೇಳಿಸುವಂತೆ ಮಾಡಿದರು. ಈ ದನಿಯ ನಿರಂತರವಾದ ಅನುರಣನದಿಂದ ಹೊಸಲೋಕ ಸೃಷ್ಟಿಯಾಗುತ್ತದೆ. "ಹೇಳತೇನ ಕೇಳೊ ಗೆಳೆಯಾ ಕತಿಯೊಂದ ನಿನ ಮುಂದೆ। ಹೀಂಗ ನನ್ನ ಮುಂದ ಕುಂಡ್ರೊ ತೆರದ ಮನಾ" ಕತೆಯನ್ನು ಹೇಳುವ ಕವಿ ಮತ್ತು ಅದನ್ನು ಕೇಳುವ ಗೆಳೆಯ ಇಬ್ಬರೂ ಕತೆಯಾಗಿ ಬಿಡುತ್ತಾರೆ.

ಕಂಬಾರರ ಕಾವ್ಯವನ್ನು ತಿಳಿದುಕೊಳ್ಳುವದಕ್ಕಿಂತ ಅದನ್ನು ಅನುಭವಿಸಲು ಇದು ಸಹಾಯ ಮಾಡುತ್ತದೆ. ಗೇಯತೆ ಕವಿತೆಯ ಒಂದು ಅಲಂಕಾರವಾಗದೆ ಅದೇ ಕವಿತೆಯ ಮಾಧ್ಯಮವಾಗುತ್ತದೆ. 'ಚಂದಿರನ ಬೇಟೆಗೆ ಹೋದಾ' ಎಂಬ ಕವನದ ನಾಯಕ ಚಂದ್ರನ ಬೇಟೆಗೆ ಹೋಗುತ್ತಾನೆ. ಆದರೆ ಅವನು ಹೋಗುವ ದಾರಿ ವಿಶಿಷ್ಟವಾಗಿದೆ. 'ಬಿಸಿಲ ಗುದುರೆಯನೇರಿ ಹೋದಾ' ಅಂದಾಗ ಮೂರು ಬಗೆಯ ಸಂಭಾವ್ಯತೆಗಳು ಕಾಣಿಸಿಕೊಳ್ಳುತ್ತವೆ. ಬಿಸಿಲುಗುದುರೆ ಅವನ ಮನಸ್ಸಿನ ಆಸೆಯನ್ನು ಸೂಚಿಸುವದರ ಜೊತೆಗೆ ಅವನ ಆಸೆ ವ್ಯರ್ಥವೆಂದೂ ಹೇಳುತ್ತದೆ. ಆದರೆ ಇದೂ ಶಬ್ದಾರ್ಥವಾಗಿದೆ. 'ಬಿಸಿಲುಗುದುರೆ' ಎಂಬ ಶಬ್ದದ ನಾದದ ಗತಿಯನ್ನು ಬದಲುಮಾಡಿ ಹಾಡಿದರೆ ಬಿಸಿಲನ್ನು ಮೀರಿ ನಿಂತ ಚಂದ್ರ ಕಾಣತೊಡಗುತ್ತಾನೆ. ಈ ಅಸಂಭವದ ಸಂಭಾವ್ಯತೆ ಇಲ್ಲಿಯ ಕಾವ್ಯವಸ್ತುವಾಗಿದೆ. 'ಕೈಮೀರಿದ ಚಂದಿರನ ಬೇಟೆ' ಹೇಗಿರಬಹುದೆಂಬ ಕಲ್ಪನೆ ಬೇಟೆಗಾರನಿಗೂ ಇಲ್ಲ. ಗೊತ್ತಿರುವದನ್ನು ಕಾವ್ಯಭಾಷೆ ದಾಖಲಿಸಿದರೆ ಕಾವ್ಯದ ನಾದ ಇನ್ನೂ ಸಿಗದಿರುವದನ್ನು ಬೇಟೆಯಾಗುತ್ತದೆ. ಆದರೆ ಇಂಥ ಸಾಹಸವನ್ನು ಕೈಕೊಳ್ಳುವ ಅಪಾಯವೇ ಕಾವ್ಯಪ್ರತಿಭೆಗೆ ಆಹ್ವಾನವಾಗುತ್ತದೆ. ಅಂತಲೇ ಕವಿತೆಯಲ್ಲಿ ನಿರೂಪಕಿ ಚಂದಿರನ ಬೇಟೆಗೆ ಹೋದ ಹುಡುಗನಿಗಾಗಿ ಕಾತರದಿಂದ ಕಾಯುತ್ತಿದ್ದಾಳೆ. ಕನಸಿನ ಸತ್ಯವೆಂದರೆ ಲೋಕಾಂತರದ ಸತ್ಯ ಕನಸಿಗೂ ಹಾಡಿಗೂ ಬಿಡಲಾರದ ಸಂಬಂಧವಿದೆ. ಬೆಳದಿಂಗಳಲ್ಲಿ ಈಜಾಡೂವ ಬೆಳ್ಳಿಮೀನು ಚಂದ್ರನೇ ಈ ಕನಸುಗಳನ್ನು ಹುಟ್ಟಿಸುವಾತ. "ಕನಸಿನಣುಗನೋ ಇವನ ಬಸಿರಿನಲೆ ಕನಸು ಬಂದವೇನೋ" ಬೇಂದ್ರೆಯವರ 'ಅಪರೂಪರಾಗ' ಎಂಬ ಕವಿತೆಯ ಸಾಲು ಈ ಸನ್ನಿವೇಶವನ್ನು ಸರಿಯಾದ ಶಬ್ದಗಳಲ್ಲಿ ಬಣ್ಣಿಸಿ ಹೇಳುತ್ತದೆ. 'ಕಾಡು-ನಾಡು' ಎಂಬ ಕವಿತೆಯಲ್ಲಿ ಕಂಬಾರರು ಈ ಸನ್ನಿವೇಶವನ್ನು ವಿಶದವಾಗಿ ತಿಳಿಸಿದ್ದಾರೆ. ಕಾಡಿನಲ್ಲಿ ಚಂದ್ರ ಬೆಳಗಿದರೆ ಆಟ ಕಳೆಗಟ್ಟುತ್ತದೆ. ಚಂದ್ರ ಗಿಡಕ್ಕೆ ಹೂವಿನ ಕನಸನ್ನು ಕೊಡುತ್ತಾನೆ, ಗಾಳಿಗೆ ಹಾಡಿನ ಕನಸನ್ನು ಕೊಡುತ್ತಾನೆ. ಆದರೆ ಸಚರಾಚರ ಜಗತ್ತಿಗೆ ಕನಸುಗಳ ವಾಸ್ತವ ಸತ್ತೆಯನ್ನು ಚಂದ್ರನ ಬೆಳಕಿನಲ್ಲಿ ಮಾತ್ರ ಗುರುತಿಸಬಹುದು. ಅಂಬಿಗರ ಹುಡುಗ ನದಿಯ ಮೈಯಲ್ಲಿ ಬೆಳ್ಳಿಮೀನಾಗಿ ತೇಲುವ ಚಂದ್ರನನ್ನು ಬಲೆಬೀಸಿ ಹಿಡಿಯಲು ಹೋಗುತ್ತಾನೆ. ಗೋರಿಯಿಂದ ಎದ್ದು ಬಂದ ಮುದುಕ ಕೂದಲ ಬಲೆಯನ್ನು ಹಾಕಲು ಸಲಹೆ ನೀಡುತ್ತಾನೆ. ಈ ಪ್ರಯತ್ನ ವ್ಯರ್ಥವಾದರೂ ಅಡ್ಡಿಯಿಲ್ಲ. ಕಂಬಾರರ ಒಂದು ಕವಿತೆ ಇದೇ ಸನ್ನಿವೇಶದ ಕತೆಯನ್ನು ಹಾಡು ಮಾಡಿ ಹೇಳುತ್ತದೆ. ಕವಿತೆಯ ಹೆಸರು 'ನವಿಲೇ ನವಿಲೇ' ಎಂದಿದೆ.

ನವಿಲೇ ನವಿಲೇ ಚೆಂದೊಳ್ಳೆ ನವಿಲೇ
ನಾದಗಳು ನುಡಿಯಾಗಲೇ|
ಹಾಡಾದ ನುಡಿಯೊಳಗೆ ಬೆಳಕಾಡಿ ಹಾಡಿನ
ಆಚೆಸೀಮೆಯ ತೋರಲೇ

ಶಿವದೇವನಾಯ್ಕರು ಶಿವಪೂರ ಕೊಡೆಯರು
ವಾರಿಗೆಯ ಮಡದಿ ಮಾದೇವಿ|
ಬಳ್ಳಿಯಂಥವಳಲ್ಲಿ ಸರುವ ಸದ್ಗುಣಗಳು
ಅರಳಿವೆ ಚಂದ ಹೂವಾಗಿ|
ಸತಿಪತಿಯ ಪ್ರೀತಿ ಹಿತವಾದರೂ ಶಿವಗೆ
ನೀರಿಲ್ಲ ಶಿವಪೂರಿಗೆ||

ಮಳೆಗಾಲ ಬಂದರೂ ಮಳೆಯಿಲ್ಲ ಶಿವಪುರಿಗೆ
ತೊಟ್ಟು ನೀರಿಲ್ಲ ಕುಡಿವುದಕೆ|
ಮಳೆ ಬರಲಿ ಶಿವಲಿಂಗ ಸಾವಳಗಿ ಮಠ ತನಕ
ಒದ್ದೆಯಲ್ಲಿ ಕೈ ಮುಗಿದು ಬರುವೆ|
ಸಿಹಿನೀರ ತರುವುದಕೆ ಮಹಾದೇವಿ ಹೊರಟಾಳು
ದೂರ ಬೆಂಗಾಡಿನ ಕೆರೆಗೆ||

ಕಾಡಿನಂಗಳದಲ್ಲಿ ಕನ್ಯೆ ಕಾಲಿಟ್ಟಾಗ
ಸಣ್ಣಾನ ದನಿ ದೋರಿದಾವ|
ದನಿಯಿಲ್ಲದಲ್ಲಿಂದ ದನಿ ಹೆಂಗ ಬಂದಾವು?
ಹೊನ್ನೀಯ ಮರದಾಗ ಕತ್ತೆತ್ತಿದಾವ|
ಹೊನ್ನೀಯ ಮರದಾಗ ಬಣ್ಣಬಣ್ಣದ ಹಕ್ಕಿ
ಅವ್ ನೋಡ ನವಿಲು ನಿಂತಾವ||

ಶಿವಪುರದ ಗೌಡ ಶಿವದೇವನಾಯಕ ಅವನ ಹೆಂಡತಿ ಮಹಾದೇವಿ ಇವರದು ಅಪರೂಪದ ದಾಂಪತ್ಯ. ಅವರ ಪ್ರೀತಿಗೆ ಶಿವನಿಗೆ ಪ್ರಿಯವಾದದ್ದು, ಆದರೂ ಶಿವಪುರಕ್ಕೆ ನೀರಿಲ್ಲ. ಮಹಾದೇವಿ ಮುಟ್ಟಾದ ಮೈಲಿಗೆಯನ್ನು ಕಳೆದುಕೊಳ್ಳಲು ಕೊಡ ತೆಗೆದುಕೊಂಡು ನೀರಿಗೆ ಹೊರಡುತ್ತಾಳೆ. ಆದರೆ ನವಿಲು ಕಂಡು ಮುಗ್ಧಳಾಗಿ ಹಾಗೆಯೇ ನೀರಿಲ್ಲದೆ ತಿರುಗಿ ಬರುತ್ತಾಳೆ. ಮಳೆಯಾದರೆ ಸಾವಳಗಿಯ ಮಠಕ್ಕೆ ಒದ್ದೆಯಲ್ಲಿ ಹೋಗಿ ಬರುವೆನೆಂದು ಹರಕೆ ಹೊತ್ತಿದ್ದಾಳೆ. ಅವಳ ಬಯಕೆ, ನವಿಲಿನ ಕರೆ ಸಫಲವಾಗುವಂತೆ ಮಳೆ ಬರುತ್ತದೆ. ಮಳೆ 'ಸೂರ್ಯನಾರಾಯಣನ ವೀರ್ಯ ವರದಾವೇನ' ಎಂಬಂತೆ ಧಾರಾಕಾರವಾಗಿ ಬೀಳುತ್ತದೆ. ಮಳೆಯಲ್ಲಿ ತೋಯಿಸಿಕೊಂಡು ತಿರುಗಿ ಬಂದ ಮಡದಿಗೆ ಶಿವದೇವನಾಯ್ಕ ಹೊಸ

ಸೀರೆಯೊಂದನ್ನು ಕೊಡುತ್ತಾನೆ. ಅದು ನವಿಲಿನ ಗರಿಗಳಿಂದ ನೇಯ್ದ ಸೀರೆ; ನವಿಲಿನ ರಕ್ತ ಚಿಮುಕಿಸಿದ ಅಂಚಿನ ನವಿಲು ಬಣ್ಣದ ಸೀರೆ. ಮಹಾದೇವಿ ಆ ಸೀರೆಯನ್ನೊಲ್ಲದೆ ಒದ್ದೆ ಸೀರೆಯಲ್ಲಿಯೇ ಮನೆಬಿಟ್ಟು ಹೊರಟು ಕತ್ತಲೆಯಲ್ಲಿ ಮಾಯವಾಗುತ್ತಾಳೆ.

ಈ ಕತೆ ಒಂದು ಜಾನಪದ-ಪೌರಾಣಿಕ ಕತೆಯೇ ಆಗಿದೆ. ಬರಗಾಲದಲ್ಲಿ ಮಹಾದೇವಿಯ ಹಂಬಲ ಮತ್ತು ನವಿಲಿನ ಉನ್ಮಾದದ ಕೂಗಿನಿಂದ ಮಳೆಯಾಗುತ್ತದೆ. ಸಂಯಮ ತುಸು ಸಡಿದರೆ ಇದೂ ಒಂದು ನೈತಿಕದ ಕತೆಯಾಗಿ ಬಿಡಬಹುದು. ಕತೆಯ ಬಂಧ 'ಕೆರೆಗೆ ಹಾರ'ವನ್ನು ನೆನಪಿಗೆ ತಂದುಕೊಡುತ್ತದೆ. ಆದರೆ ಕಂಬಾರರ ಕಾವ್ಯಶಕ್ತಿ ಅದನ್ನು ಬೇರೆ ದಿಕ್ಕಿಗೆ ಕರೆದುಕೊಂಡು ಹೋಗುತ್ತದೆ. 'ನೀರಿಲ್ಲ ಶಿವಪುರಿಗೆ' ಇದು ಕತೆಯಲ್ಲಿಯ ವಸ್ತುಸ್ಥಿತಿ. ಮೊದಲನೆಯ ನುಡಿಯಲ್ಲಿಯ 'ಸತಿ ಪತಿಯರ ಪ್ರೀತಿ' ಹಿತವಾದರೂ ಶಿವಗೆ ನೀರಿಲ್ಲ ಶಿವಪುರಿಗೆ' ಎಂಬ ಹೇಳಿಕೆ ಯೋಚನೆ ಮಾಡಲು ಪ್ರೇರಿಸುತ್ತದೆ. ಪ್ರಾಚೀನ ಜಗತ್ತಿನಲ್ಲಿ ಇದ್ದದ್ದೇ ಹೀಗೆ. ಋಷ್ಯಶೃಂಗನಂಥ ಯುವಕ ಹೆಣ್ಣಿನ ಸಂಗದಿಂದ ದೂರವಿದ್ದರೆ ಬರಗಾಲ ಬೀಳುತ್ತದೆ. ಇದು ಕಂಬಾರರ ಮೊದಲ ನಾಟಕದಲ್ಲಿಯ ವಸ್ತು ಆಗಿದೆ. ಆದರೆ ಇಲ್ಲಿ ಶಿವದೇವನಾಯಕ ಮಹಾದೇವಿಯರ ದಾಂಪತ್ಯ ಪ್ರೀತಿಕರವಾಗಿದ್ದರೂ ಮಳೆಯಿಲ್ಲ. ಇಂಥ ದಾಂಪತ್ಯದಿಂದೇನು ಪ್ರಯೋಜನವೆಂದು ಮಹಾದೇವಿ ನವಿಲಿನೊಡನೆ ತನ್ನ ಪ್ರಣಯ ಪ್ರಸಂಗವನ್ನು, ತನ್ನ ಮುಟ್ಟಿನ ಅವಧಿಯಲ್ಲಿ, ನಡೆಸುತ್ತಾಳೆ ಅಥವಾ ಎರಡು ದಿನ ನವಿಲಿನ ಕರೆಯನ್ನು ತಿರಸ್ಕರಿಸಿ ಮೂರನೆಯ ದಿನ ಶರಣಾಗುತ್ತಾಳೆ. ಒಳ್ಳೆಯ ಅರ್ಥದಲ್ಲಿ ಅವಳು ಗರತಿ. ಅವರದು ಅನುರೂಪವಾದ ದಾಂಪತ್ಯ. ಆದರೂ ಶಿವಪುರಕ್ಕೆ ಕುಡಿಯಲು ನೀರಿಲ್ಲ. ನವಿಲಿನೊಡನೆ ಅವಳ ಪ್ರಣಯ ಪ್ರಸಂಗ ಊರಿಗೆ ಮಳೆಯನ್ನು ತರಿಸುತ್ತದೆಂಬ ಸಂಗತಿ ಈ ಸನ್ನಿವೇಶವನ್ನು ಕುರಿತು ಆಳವಾಗಿ ಪರ್ಯಾಲೋಚಿಸುವಂತೆ ಮಾಡುತ್ತದೆ. ನವಿಲಿನ ಕುಣಿತದಲ್ಲಿಯ ಉನ್ಮಾದ ಮತ್ತು ತನ್ಮಯತೆಗಳು ಅವಳ ದಾಂಪತ್ಯದಲ್ಲಿ ಇಲ್ಲ. ಅವರ ದಾಂಪತ್ಯಕ್ಕೆ ಸಾಮಾಜಿಕ ಮನ್ನಣೆಯಿದೆ, ನವಿಲಿನ ಕುಣಿತ ನಡೆಯುವದು ಕಾಡಿನಲ್ಲಿ. ಕಾಡೇ ಎದ್ದು ಕುಣಿಯುವಂತೆ ನವಿಲು ಕುಣಿಯುತ್ತದೆ. ಅದು 'ಸೂರ್ಯನ ಥರ ಹೊಳೆವ ನವಿಲು' ಈ ಪ್ರಣಯ ಅಲೌಕಿಕವಾದರೂ ಅದು ಸಮಾಜಬಾಹಿರವಾದದ್ದು ಎಂಬ ಮಾತು ಇಲ್ಲಿ ಮಹತ್ವದ್ದಾಗಿದೆ. ಮಳೆ ಬಂದ ಮೇಲೆ ನವಿಲು ಉಳಿಯುವದಿಲ್ಲ. ಅದರ ಗರಿ, ತುರಾಯಿ, ನೆತ್ತರಗಳೆಲ್ಲ ಈಗ ಶಿವದೇವನಾಯ್ಕ ತಂದ ಸೀರೆಯಲ್ಲಿಯ ಅಲಂಕಾರದ ವಸ್ತುಗಳಾಗಿವೆ. ಈ ಘಟನೆಗಳೆಲ್ಲ ಸಾಂಕೇತಿಕವಾಗಿವೆ. ಕಾರಣವೆಂದರೆ ಒಂದು ಮಹತ್ವದ ಸಾಂಕೇತಿಕ ಕ್ರಿಯೆಯನ್ನು ಇವು ಧ್ವನಿಸುತ್ತವೆ.

ಶಿವದೇವನಾಯ್ಕ ಮತ್ತು ಮಹಾದೇವಿಯರದು ಅನುರೂಪವಾದ ದಾಂಪತ್ಯವೆಂದು ಈಗಾಗಲೇ ಹೇಳಲಾಗಿದೆ. ಇಲ್ಲಿ ಯಾವ ವ್ಯಂಗ್ಯವನ್ನೂ ಕವಿತೆ ಉಪಯೋಗಿಸುವದಿಲ್ಲ. 'ಪತಿವರತಿ ಮಿಂದ ನೀರು' ಎಂದು ಹೇಳುವಾಗ ಕೂಡ ವ್ಯಂಗ್ಯವಿಲ್ಲ. ವಾಗರ್ಥಗಳ ದಾಂಪತ್ಯ ಇಲ್ಲಿ ನೆನಪಾಗಬೇಕು. ಈ ಕವಿತೆಯ ಮೊದಲ ನುಡಿಯಲ್ಲಿಯ ಹಾರ್ಯಕೆಯನ್ನು

ಪರಿಶೀಲಿಸಬೇಕು. 'ನಾದಗಳು ನುಡಿಯಾಗಲೆ। ಹಾಡಾದ ನುಡಿಯೊಳಗೆ ಬೆಳಕಾಡಿ ಹಾಡಿನ। ಆಚೆ ಸೀಮೆಯ ತೋರಲೇ' ನಾದಗಳು ನುಡಿಯಾಗಬೇಕು, ಹಾಡಾದ ನುಡಿಯೊಳಗೆ ಬೆಳಕಾಡಿ ಆಚೆಯ ಸೀಮೆಯನ್ನು ತೋರಬೇಕು. ಈ ನುಡಿ ಕವಿತೆಯ ಕೊನೆಗೆ ಪುನರುಕ್ತವಾಗುವದರಿಂದ ಕವಿತೆಯ ವಸ್ತುನಿರ್ದೇಶನ ಇಲ್ಲಿದೆ ಎಂದು ತಿಳಿಯಬೇಕಾಗುತ್ತದೆ. ನಾದಗಳು ನುಡಿಯಾದರ ಆ ನುಡಿಗಳು ಅರ್ಥವನ್ನು ಬೀರುವದಿಲ್ಲ. ಅರ್ಥವೆಂದರೆ ಲೌಕಿಕದ ಪರಿಮಿತ ಪ್ರಪಂಚ. ಶಬ್ದ ಮತ್ತು ಅರ್ಥಗಳೆರಡೂ ಸೇರಿಕೊಂಡು ತಮ್ಮ ಪರಸ್ಪರ ಸಂಕೇತ ಕ್ರಿಯೆಯ ಮೂಲಕ ಪ್ರಪಂಚದ ತಿಳಿವನ್ನು ಪ್ರತಿಫಲಿಸುತ್ತ ಒಂದು ಸಾಂಸ್ಕೃತಿಕ ವ್ಯವಸ್ಥೆಯನ್ನು ಕಟ್ಟಿಕೊಳ್ಳುತ್ತವೆ. ಭಾಷೆಯ ಗುರಿ ಎಂದರೆ ಯಾವ ರೀತಿಯ ಗೊಂದಲಕ್ಕೂ ಆಸ್ಪದ ಕೊಡದ ವ್ಯವಸ್ಥೆಯ ನಿರ್ಮಾಣ. ದಾಂಪತ್ಯವೂ ಇಂಥದೇ ಒಂದು ವ್ಯವಸ್ಥೆ ಎಂದು ಬೇರೆ ಹೇಳಬೇಕಾಗಿಲ್ಲ. ಭಾಷೆಯಲ್ಲಿಯೇ ಆಗಲಿ ದಾಂಪತ್ಯದಲ್ಲಿಯೇ ಆಗಲಿ ಸಾಮಾಜಿಕ ಪ್ರೇರಣೆ ಹಾಗೂ ಮನ್ನಣೆಗಳು ಅವುಗಳ ಗಮ್ಯವಾಗಿರುತ್ತದೆ. ಅವುಗಳ ಸಾಂಕೇತಿಕ ಕ್ರಿಯೆ ಒಂದೇ ಆಗಿದೆ. ದಾಂಪತ್ಯದಂತೆ ಭಾಷೆಯೂ ತನ್ನ ಸಂಬಂಧಗಳನ್ನು ಸ್ವಾಯತ್ತವಾಗಿ ಬೆಳೆಸಿಕೊಳ್ಳಬಲ್ಲದು. ಇಷ್ಟೇ, ಪತಿ-ಪತ್ನಿಯರ ಪ್ರೀತಿಯಂತೆ ಶಬ್ದಾರ್ಥಗಳ ಸಾಂಗತ್ಯವೂ ಇಲ್ಲಿ ಅಗತ್ಯವಾಗಿದೆ. ಕಂಬಾರರ ಕವಿತೆ ಇಂಥ ಒಂದು ಸನ್ನಿವೇಶದಿಂದ ಪ್ರಾರಂಭವಾಗುತ್ತದೆ. ಆದರೆ ಇಂಥ ವ್ಯವಸ್ಥೆ ಇದ್ದರೂ ಮಳೆಯಾಗುವದಿಲ್ಲ. ಮಳೆಯಾಗುವದೆಂದರೆ ಅಲೌಕಿಕದ ಕರುಣೆಯ ಫಲ. ಮಳೆಯಾಗಲಿ ಎಂದು ಮಹಾದೇವಿ ಒದ್ದೆಯಲ್ಲಿ ಸಾವಳಗಿ ಮಠಕ್ಕೆ ಹೋಗಿ ಬರುವೆನೆಂದು ಹರಕೆ ಹೊತ್ತಿದ್ದಾಳೆ. ಹರಕೆಯೂ ಒಂದು ಭಾಷೆ. ಆದರೆ ಮಳೆಯಾಗುವದು ಮಾತ್ರ ನವಿಲಿನ ಮೂಲಕ. ನವಿಲಿಗೆ ಕುಣಿದು ಕೇಕೆ ಹಾಕುವದು ಗೊತ್ತೇ ಹೊರತು ಭಾಷೆ ಗೊತ್ತಿಲ್ಲ. ಮಹಾದೇವಿ ನವಿಲಿನ ಕುಣಿತದಿಂದ ಮುಗ್ಧಳಾಗಿದ್ದಾಳೆ. ಆದರ ಕುಣಿತಕ್ಕೆ ತನ್ನನ್ನು ಒಪ್ಪಿಸಿಕೊಂಡಿದ್ದಾಳೆ. ಒಂದು ದೃಷ್ಟಿಯಿಂದ ಅವಳ ಈ 'ಹಾವರ' ಅಲೌಕಿಕವಾದದ್ದು. 'ಭಾಷೆಯ ಸೂತಕ'ವನ್ನು ಅನುಭವಿಸಿ ಅದರಿಂದ ಪಾರಾಗಬೇಕೆನ್ನುವ ಅಲ್ಲಮನ ಹಂಬಲ ವನ್ನು ನೆನಪಿಗೆ ತರುವಂಥದ್ದು. ನಾದಗಳು ನುಡಿಯಾದರೆ, ನುಡಿಗಳು ಹಾಡಾದರೆ ಅದೂ ಕೂಡ ಇಂಥ ಅಲೌಕಿಕದ ಬೆಳಕು ಝಗ್ಗನೆ ಪ್ರಕಟವಾಗಬೇಕು. ಪ್ರಕಟವಾಗುತ್ತದೆಂಬ ನಂಬಿಕೆ ಗಟ್ಟಿಯಾಗಿದ್ದರೆ ಶಬ್ದದ ಮಣ್ಣಿನಲ್ಲಿ ಅಲೌಕಿಕದ ಮಿಂಚು ಹೊಳೆಯಬಹುದು. ಕಂಬಾರರು ತಮ್ಮ 'ಪ್ರಭು' ಕವಿತೆಯ ಕೊನೆಗೆ ಹೇಳುವಂತೆ 'ಮಣ್ಣ ಬಿಟ್ಟೆನ್ನೆಲ್ಲಿ ಹೊನ್ನು ಅಡಗಿದ್ದೀತು? ಮೀರಿ। ಹತ್ತಂಗುಲದ ಅಬ್ಬು ಅನಂತರ।' ಈ ಕವಿತೆಯ ಭಾಷೆ ಕೂಡ ಲೌಕಿಕವಾದದ್ದು. ಅಲೌಕಿಕದ ಹಂಬಲವನ್ನು ಹೊತ್ತು ಅಲೌಕಿಕಗಳ ಅಕ್ರಮ ಸಂಬಂಧದ, ಉನ್ಮಾದದ ಹಾಡು. ಶಬ್ದಾರ್ಥಗಳ ದಾಂಪತ್ಯದ ಪರಿಮಿತ ಸಂಬಂಧ-ಪರಿಮಿತವಾಗಿರ ಬೇಕೆಂಬುದು ಒಂದು ಅಗತ್ಯ ನಿಯಮ-ಮೈಮನಸ್ಸುಗಳನ್ನು ಮುಟ್ಟಿ ತಣಿಸಬಹುದು. ಆದರೆ ಪ್ರಕೃತಿಯನ್ನೆಲ್ಲ ನೀರು ನೀರಾಗಿಸುವ ಅಲೌಕಿಕದ ಅದ್ಭುತ ಅದಕ್ಕಿಲ್ಲ.

ಕಂಬಾರರ ಎಲ್ಲ ಕವಿತೆಗಳೂ ಹಾಡಾಗಿಲ್ಲ, ಆಗುವದೂ ಇಲ್ಲ. ಶಬ್ದಾರ್ಥಗಳ ಸಾಂಗತ್ಯದಲ್ಲಿಯ ಪರಮಸಿದ್ಧಿಯೆಂದರೆ ಧ್ವನ್ಯರ್ಥ. ಅದು ಕೂಡ ಪ್ರತಿಭೆಗೆ ಮಾತ್ರ ಗೋಚರವಾಗುವದು. ಅದು ವಾಚ್ಯಾರ್ಥವನ್ನು ಕೊಂದು ಹುಟ್ಟುವ ಚಿಗುರು. ಆದರೆ ಬೀಜ ಮತ್ತು ಚಿಗುರಿನ ಸಂಬಂಧ ಸಾವಯವವಾದದ್ದು. ಆದರೆ ಅದು ಕೂಡ ಅಲೌಕಿಕದ ಸಿಡಿಲು ಹೊಡೆದರೂ ಅಥವಾ ಸಿಡಿಲು ಹೊಡೆದರೆ ಮಾತ್ರ, ಹತ್ತಂಗುಲ ಮೇಲೆದ್ದು ನಿಲ್ಲುವ ವೃಕ್ಷವಲ್ಲ. ಕಂಬಾರರ ಕಾವ್ಯಕ್ಕೆ ಇಂತಹ ವಾಸನೆಯಿದೆ. ಕೃಷ್ಣಪಾರಿಜಾತದೊಳಗಿನ ಹಾಡುಗಳ ಧಾಟಿಗಳು ಈ ಅಲೌಕಿಕವನ್ನರಸಿ ಹೋದವು. ಕಂಬಾರರ ಭಾಷೆ ಹಾಗೂ ಮನೋವೃತ್ತಿಗಳೆರಡೂ ಒಂದೇ ಎಂಬಂತಾಗಿರುವುದರಿಂದಲೇ ಹೀಗಾಗಿದೆಯೆನ್ನಬೇಕು. ಕವಿ ಆರಿಸಿ ಕೊಂಡ ಭಾಷೆ ಕವಿಯ ಮನೋವೃತ್ತಿಯನ್ನು ಸೂಚಿಸಬೇಕು. ಕಂಬಾರರು ತಮ್ಮ ಮನೋವೃತ್ತಿಗೆ ಹೊಂದುವ ಭಾಷೆಯೊಂದನ್ನು ಆರಿಸಿಕೊಳ್ಳುವಾಗ ಬೆಳಗಾವಿ ಕಡೆಯ ಗೋಕಾವಿ ಭಾಗದ ಮಧ್ಯಮವರ್ಗದ ವಿದ್ಯಾವಂತ ಸಮಾಜದ ಭಾಷೆಯನ್ನು ಸಮರ್ಥವಾಗಿ ಬಳಸಿದರು. ಅವರ ಭಾಷೆಯಲ್ಲಿ ಸ್ಪಷ್ಟತೆಯಿದೆ. ಛಂದಸ್ಸು ಕೇವಲ ಭಾವ ಪೋಷಕವಾಗಿ ತನ್ನ ನಿಯಮಗಳ ಭಾರವನ್ನು ಕಳಚಿಕೊಂಡು ಬಳಕೆಯಾಗುತ್ತಿದೆ. 'ಕಾಡು ಕುದುರೆ', 'ಬ್ಯಾಟಿ ಬ್ಯಾಟಿಯ ನಾಡಿದಾ' ಇಂತಹ ಕವಿತೆಗಳಲ್ಲಿ ಇವರ ಭಾಷೆಯ ಮಾಂತ್ರಿಕತೆ ಯಾವ ರೀತಿಯದೆಂದು ತಿಳಿಯುತ್ತದೆ.

ಆಡೇನೆಂದರ ನಾಲಿಗಿಲ್ಲ, ಓಡುದಕಿಲ್ಲ
ಮೈ ಮುಳ್ಳ ಎದ್ದಾವ ಕೊರಿ ಬೇಲಿ
ದಳದಳ ಸುರಿದಾವ ಬೆವರ ಹೊಳಿ; ನಿಂತಾನ
ಚಿತ್ರದ ಒಳಗಿನ ಗೊಂಬೀ ನಮನಿ

ನಿಜವಾಗಿಯೂ ಯಾವ ಕವಿಗೂ ಹೆಸರು ತರುವಂತಹ ಭಾಷೆಯಿದು. ಗದ್ಯಕ್ಕೆ ತೀರ ಸಮೀಪ ಎಂಬಂತೆ ಆಡುಮಾತಿಗೆ ಹತ್ತಿರವಾದ ನಿರಾಡಂಬರ ಭಾಷೆಯಿಂದ ಕೂಡಿದ ಒಳ್ಳೆಯ ಕವಿತೆಗಳಿವೆ.

೨

ಚಿತ್ರ, ರೂಪಕ, ಪ್ರತಿಮೆ ಹಾಗೂ ಶಿಲ್ಪ ಇವುಗಳ ದೃಷ್ಟಿಯಿಂದಲೂ ಇವರ ಕಾವ್ಯವನ್ನು ವಿಶ್ಲೇಷಿಸಬಹುದು. ಇವರ ಭಾಷೆಯು 'ಮುಗುಳು', 'ಹೇಳತೇನ ಕೇಳ' ಕಾಲದಿಂದಲೂ ರೂಪಕ, ಪ್ರತಿಮೆಗಳಿಂದ ಕೂಡಿಮದೇ ಆಗಿತ್ತು. ಈ ಕೆಲವು ಸಾಲುಗಳನ್ನು ನೋಡಿ:

೧ ಬಾಗೀಲ ಹಾಕ್ಯಾನು ಅಗಳೀಯ ಜಡಿದಾನು
ಕಳಕೊಂಡು ಹುಡಿಕ್ಯಾನು ಒಳಹೊರಗ

೨ ಉಗುರು ತಾಕಿದ ಹೇನಿನಂತೆ ಅಡಗುವ ಹೆಣ್ಣು
ಮರಾಮರಾ ಮರಗ್ಯಾವ ಮನದೊಳಗ

೩ ಹಸರ ಕುಪ್ಪಸ ತೊಟ್ಟು, ಬಿಸಲೀಗೆ ತಲಿಬಿಟ್ಟು,
ಹೊಳೆಸಾಲ ದನಧಾಂಗ ನಿಂತಾಳರಿ

೪ ಮೈಮ್ಯಾಗ ಬರಿಯಲೇನ ಗೆರಿ| ಯೋಳ ಪಟ್ಟಿಕರಿ
ಗೆರಿಗೊಂದು ಗಂಟ ಗಂಟಿಗೊಂದ ತೂತ|
ತೂತಿಗೊಂದ| ಕಣ್ಣಮಾಡಿ ನೋಡಲೇನ ಬಿಳಿ ಮೋಡಾ||

೫ ಬೆಳ್ಳಿ ತೊಡಿಯ ಬಿಳಿಯ ಕುದುರಿ ಬೆರಗ ಕಂಡಿನೆ
ಬೆನ್ನನೇರಿ ಚಿನ್ನದುರಿಯ ಕಾಂಡ ಕಂಡಿನೆ

೬ ತನ್ನ ಗಂಡನ್ನ ಹೆಣ್ಣು ಹುಲಿಯೊಂದು ಅರ್ಧನುಂಗಿದ ಹಾಗೆ
ಕನಸಾಗಿ ಕರುಬಿದಳಂತೆ

೭ ಮಣಮುಕ್ಕ ಹಾವಿಗೆ ಎರಡೂ ಕಡೆ ಎರಡು ತಲೆ
ಮೈತುಂಬ ಕಾಲು, ತಿನ್ನುವುದು ಮಣ್ಣ
ಸ್ವಂತಕ್ಕೆ ಹುತ್ತಿಲ್ಲ ಅದೂ ಸಾಲದ್ದಕ್ಕೆ
ಕಣ್ಣಿಲ್ಲ, ಗೊತ್ತಿಲ್ಲ ಸ್ವಂತ ಬಣ್ಣ

೮ ಮುಚ್ಚಿದ್ದ ಕದಗಳ ಮುರಿದಾ| ಒದ್ದಾ
ಜಡಿಮಳಿ ಜಡಿದಾನ
ಆಣೆಕಟ್ಟು, ಒಡೆದಾನ
ಹಾಳಾಗಿ ಹೋದಾವು ಸದರಾ

೯ ಭರ್‍ರಂತ ಹೊರಟರೆ ಸರ್‍ರಂತ ಸರಿಯಿತು
ವೈರಿಯ ಗರಿಗರಿ ಬಾಲ

೧೦ ಸೊಕ್ಕಿದ ಗೂಳಿ, ಹುಯ್ಯೆನುವ ಗಾಳಿ ಬೀಸಿ
ಧೂಳೆಬ್ಬಿಸಿ ದಿಕ್ಕುದೆಸೆ ಇಲ್ಲದೆ ನೆಗೆದಾಡಿತೆ?

೧೧ ಸಲಿಗೀಲೆ ಹೆಗಲೀಗಿ ಕೈಹಾಕಿ ಚಿಲಮೀಗಿ
ಗಾಂಜಿ ಐತೇನಲೆ ಅಂದಾ

ಇವುಗಳ ಪಟ್ಟಿ ಹೀಗೆಯೇ ಬೆಳೆಯುತ್ತಾ ಹೋಗುವಷ್ಟು ಸಮೃದ್ಧಿ ಇವರ ಕಾವ್ಯದ್ದು. ಯಾವ ಕವಿತೆಯನ್ನೇ ನೋಡಲಿ ಇಂತಹ ಸುಂದರವಾದ ನುಡಿಚಿತ್ತಾರಗಳೇ ತುಂಬಿಕೊಂಡಿವೆ. ಕಂಬಾರರ ಕವಿತೆ ರೀತಿಯೇ ಹೀಗೆ, ಚಿತ್ರಮಯವಾಗಿ ಯಾವುದನ್ನೂ ಕಣ್ಣಿಗೆ ಕಟ್ಟುವಂತೆ ಮಾಡಬಲ್ಲುದು. ಈ ಚಿತ್ರಗಳು ಕವಿತೆಯ ಅರ್ಥವತ್ತಾಗಿ ದುಡಿಯುವಲ್ಲಿ ಮಾತ್ರ

ಮೊದಮೊದಲಿನ ಕೆಲವು ಸಂಕಲನಗಳಲ್ಲಿ ಬರುವ ಚಿತ್ರ, ಉಪಮೆ, ರೂಪಕ ಹಾಗೂ ಪ್ರತಿಮೆಗಳು ಹೆಚ್ಚು ಅಲಂಕಾರಿಕವಾಗಿವೆ. ಅವುಗಳದ್ದೇ ಆದ ಸೌಂದರ್ಯದಿಂದ ಮಾತ್ರ ಅವು ಕಾವ್ಯದಲ್ಲಿ ಎಡೆಪಡೆದಿವೆ. ಮೇಲಿನ ಕೆಲವು ಚಿತ್ರಗಳನ್ನು ಈ ದೃಷ್ಟಿಯಿಂದಲೇ ಪರಿಶೀಲಿಸಬಹುದು. ೧, ೪, ೫, ೬, ೯, ೧೦ ಮತ್ತು ಹನ್ನೊಂದನೆಯ ಚಿತ್ರಗಳು ತಾವು ವಾತಾವರಣ ಸೃಷ್ಟಿಗೆ, ಸುಂದರ ಭಾವಕ್ಕೆ, ವರ್ಣನೆಗೆ, ನಿಸರ್ಗದ ಕೌಟುಂಬಿಕ ದರ್ಶನಗಳ ಚಿತ್ರಣಕ್ಕೆ ಸೀಮಿತವಾಗಿವೆ. ಹನ್ನೊಂದನೆಯದು 'ಸಲಿಗೀಲೆ ಹೆಗಲೀಗಿ ಕೈಹಾಕಿ ಚಿಲಮೀಗಿ ಗಾಜಿ ಐತೇನಲೆ ಅಂದಾ' ಎಂಬ ಚಿತ್ರವಂತೂ ಹಳ್ಳಿ ಬದುಕಿನಲ್ಲಿ ಸ್ನೇಹಿತರು, ಆತ್ಮೀಯ ಬಂಧುಗಳು ಪರಸ್ಪರ ಹೆಗಲೀಗಿ ಕೈಹಾಕಿಕೊಂಡು ಚಿಲಮೀಗಿ ಗಾಜಿ ಹಾಕಿ ಸೇದುವ ದೃಶ್ಯವನ್ನು ಕವಿ ಈ ರೂಪಕದ ಮೂಲಕ ಕಣ್ಮುಂದೆ ಕಟ್ಟುವಂತೆ ಚಿತ್ರಿಸಿದ್ದಾರೆ. ಅವರು ಬಳಸಿದ ರೂಪಕಗಳು ದೇಶೀಯ ನೆಲೆಯಿಂದ ಬಂದವುಗಳಾಗಿವೆ. ಅಂದರೆ ಕಂಬಾರರ ಕಾವ್ಯದ ಹೆಚ್ಚು ಚಿತ್ರಗಳು, ಪ್ರತಿಮೆಗಳು ಮತ್ತು ರೂಪಕಗಳು ಈಗಾಗಲೇ ಹೇಳಿದಂತೆ ದೇಸಿಯ ನೆಲೆಯಿಂದ ಬಂದವುಗಳಾಗಿವೆ. ಅವುಗಳದೇ ಸೌಂದರ್ಯಕ್ಕೆ ಹೆಸರಾಗಿದ್ದವು ಎನ್ನಬಹುದು.

ಆದರೆ ಎರಡು, ಮೂರು ಮತ್ತು ಎಂಟನೆಯ ಚಿತ್ರಗಳು ಕವಿ ಉದ್ದೇಶಿಸಿದ ಕೆಲವು ಅರ್ಥಗಳ ಬಲವನ್ನು ಕವಿತೆಗಳಿಗೆ ತಂದುಕೊಡುತ್ತಿವೆ. ಒಂದು ವಸ್ತುವನ್ನು ಕಳೆಕೊಂಡು ಅದನ್ನು ಬಾಗಿಲು ಹಾಕಿ ಅಗಳಿಯ ಜಡಿದು ಕತ್ತಲಲ್ಲಿ ಹುಡುಕಿದರೆ ಪ್ರಯೋಜನವೇನು? ಎಂಬುದನ್ನು ಕವಿ ಚಿತ್ರಿಸಿದ ಪ್ರತಿಮೆಯಿದು. ಹೆಂಗಸರಿಗೆ ಹೇನು ಹತ್ತಿದಾಗ ಅದನ್ನು ಉಗುರಿನಿಂದ ತೆಗೆಯುತ್ತಾರೆ. ಆಗ ಆ ಹೇನು ಜೀವ ಕಳೆದುಕೊಳ್ಳುವಾಗ ಮರಮರ ಮರುಗುತ್ತದೆ ಬಡವರ ಬಾಳನ್ನು ಚಿತ್ರಿಸುವಾಗ ಕವಿ ಬಳಸಿದ ಪ್ರತಿಮೆಯಿದು. ಬದುಕಿನಲ್ಲಿ ವಿರಸ ಉಂಟಾದಾಗ ಗಂಡಸರಿಗಾಗುವ ಕೋಪವನ್ನು 'ಮುಚ್ಚಿದ ಕದ ಮುರಿದು ಒದ್ದಾನ' ಎಂಬ ರೂಪಕ ಅದನ್ನು ಚೆನ್ನಾಗಿ ಧ್ವನಿಸುತ್ತದೆ. ಅಂದರೆ ಇವರ ಕಾವ್ಯದಲ್ಲಿ ಬರುವ ಚಿತ್ರಗಳನ್ನು ಪಟ್ಟಿಮಾಡಿದರೆ ಹೆಚ್ಚು ದೇಸಿ ಮೂಲದವುಗಳಾಗಿವೆ. ಹಲವಾರು ಧ್ವನಿಪೂರ್ಣ ವಾಗುತ್ತವೆ. ಮುಗಳು, ಹೇಳತೇನ ಕೇಳ, ತಕರಾರಿನವರು, ಸಾವಿರದ ನೆರಳು ಈ ಸಂಗ್ರಹದ ಕವನಗಳ ರೂಪಕ, ಪ್ರತಿಮೆಗಳು ಹೆಚ್ಚು ಅರ್ಥದ ಹಂಬಲದಿಂದ ಕೂಡಿವೆ. ಹೀಗಾಗಿರುವುದ ರಿಂದಲೇ 'ದೇವರ ಬಂಗಾರದ ಕುದುರೆ' ಕಾಲದ, ಬದುಕಿನ ವಿರಾಡನುಭವವನ್ನೂ ಜೀವನದ ನಿಗೂಢತೆಯನ್ನೂ ಧ್ವನಿಸುತ್ತಾ ಶ್ರೇಷ್ಠ ಕವಿತೆಯಾಗಿದೆ. 'ತಕರಾರಿನವರು', 'ಗಂಗಾಮಾಯಿ', 'ಕೂದಲಬಲೆ', 'ನವಿಲೇ ನವಿಲೇ', 'ಕರಿಹೈದ', 'ಕಾಂತನಿಲ್ಲದ ಮ್ಯಾಲೆ', 'ಕಂಗಾಲಾದೀವೋ' ಇಂತಹ ಕವಿತೆಗಳೂ ಅರ್ಥಕ್ಕಾಗಿ ದುಡಿಯುವ ಚಿತ್ರಗಳಿಂದ ಕೂಡಿದ್ದು ಸಂಜೀವಗೊಂಡಿವೆ. ಮೊದಲಿನಿಂದಲೂ ಚಿತ್ರ ಮತ್ತು ಪ್ರತಿಮೆಗಳಿಂದ ನಿಬಿಡವಾಗಿಯೇ ಇದ್ದ ಇವರ ಕಾವ್ಯ ಇಂದು ಆ ಚಿತ್ರ ಮತ್ತು ಪ್ರತಿಮೆಗಳಲ್ಲಿ ಕವಿ ಮೂಡಿಸುತ್ತಿರುವ ಅರ್ಥ ಹಂಬಲದಿಂದ ಹೆಚ್ಚು ಅರ್ಥಪೂರ್ಣವೂ, ಧ್ವನಿರಮ್ಯವೂ ಆಗುತ್ತ ಬರುತ್ತಿದೆ. ಕವಿಯ ಬೆಳವಣಿಗೆಯ ಗುರುತು ಇದು.

ಶಿಲ್ಪ ಮತ್ತು ತಂತ್ರಗಳ ವಿಚಾರದಲ್ಲಿ ಚಿತ್ರ, ಪ್ರತಿಮೆ ಮತ್ತು ಸಂಕೇತಗಳಿಗೆ ಹೇಳಿದ ಮಾತನ್ನೆ ಹೇಳಬಹುದೆಂದು ತೋರುತ್ತದೆ. 'ಮುಗಳು' ಕವನ ಸಂಕಲನದಲ್ಲಿಯ ಕವಿತೆಗಳು ಅಲ್ಲಿಯ ತಂತ್ರ-ಶಿಲ್ಪಕ್ಕಿಂತ 'ಹೇಳತೇನ ಕೇಳ'ದಲ್ಲಿ ಕಾವ್ಯಶಿಲ್ಪ ಗಟ್ಟಿಯಾಗಿದೆ. 'ಕಾಡು ಕುದುರಿ' ಎಂಬಂತಹ ಕವಿತೆಗಳಲ್ಲಿ ಚಿತ್ರಗಳಿಂದಲೇ ಅರ್ಥವನ್ನು ಬೆಳೆಸುವ ತಂತ್ರವಿದ್ದರೂ ಆ ಕವಿತೆಗಳಲ್ಲಿ ತಂತ್ರ ಮತ್ತು ಶಿಲ್ಪ ಶಕ್ತಿಯುತವಾಗಿವೆ. ಹಾಗೆ ನೋಡಿದರೆ ಇತ್ತೀಚಿನ ಕೆಲವು ಕವಿತೆಗಳಲ್ಲಿ ಶಿಲ್ಪ ಮತ್ತು ತಂತ್ರಗಳಲ್ಲಿ ಯಶಸ್ಸನ್ನು ಗುರುತಿಸಬಹುದು. 'ಉಕ್ರ-ಬಕ್ರ', 'ಕಾಡು ಕಾಡೆಂದರೆ', 'ಕುದುರೆ', 'ಚಂದ್ರ', 'ಬೆಂಕಿ' ಮುಂತಾದ ಕವಿತೆಗಳಲ್ಲಿ ತಂತ್ರ ಮಾತ್ರ ಇತ್ತೀಚಿನ ಕೆಲವು ಕವಿತೆಗಳಲ್ಲಿ ಅದರಲ್ಲಿಯೂ 'ಇಳಿದು ಬಂದಾಗ', 'ಶಿವಾಪುರರದ ಹಾಡು' ಮುಂತಾದ ಕವಿತೆಗಳಲ್ಲಿ ನೇರವಾದ ಕಥನ ರೀತಿ ಅಥವಾ ಆತ್ಮೀಯತೆಯ ಸಂಭಾಷಣೆಯ ರೀತಿ ಕಾಣಿಸಿಕೊಂಡರೂ ಕವಿತೆಗಳು ಪಡೆಯುವ ಜೀವನಾನುಭವದ ವಿಸ್ತಾರ ಮತ್ತು ಆಳಗಳು ಬೆರಗು ಹುಟ್ಟಿಸುವಂತಿದೆ.

ಸಾವಯವ ಸಮಗ್ರತೆಯಿಂದ ಕಂಬಾರರ ಕಾವ್ಯಶಿಲ್ಪ ಗಟ್ಟಿನೆಲೆಯಲ್ಲಿ ನಿಂತಿದೆ. ಅವರ ಕಾವ್ಯದಲ್ಲಿರುವುದು ಸ್ವಭಾವೋಕ್ತಿ, ವಕ್ರೋಕ್ತಿಯಲ್ಲ ಎಂದು ಹೇಳಿದರೂ ಅದು ಕಲೆಯಲ್ಲ ಎಂದು ಹೇಳಲಾಗುವುದಿಲ್ಲ ಮಾತಿನ, ವರ್ಣನೆಯ, ಅಲಂಕಾರಗಳ ಸುಂದರವಾದ ಬಳಕೆಯೇ ಇಲ್ಲಿ ಕಲೆಯಾಗುತ್ತದೆ. ಕಂಬಾರರ ಕಾವ್ಯಶಿಲ್ಪದಲ್ಲಿ ಮೂಲಪ್ರವೃತ್ತಿ ಮತ್ತು ನಾಗರಿಕತೆ ಮಾರ್ಗಗಳು ಒಂದಕ್ಕೊಂದು ವಿರುದ್ಧವಲ್ಲ. ಇವೆರಡೂ ಕೂಡಿ ಕೆಲಸ ಮಾಡುತ್ತಲೇ ಇರಬೇಕು. ಬಹುಶಃ ಆಧುನಿಕ ಕವಿಗಳಲ್ಲಿ ಇವು ಒಂದಕ್ಕೊಂದು ವಿರುದ್ಧವಾಗಬಹುದು. ಕಂಬಾರರ ಕಾವ್ಯದಲ್ಲಿ ಮಾತ್ರ ಸಂಘರ್ಷ ಕೂಡ ಸಂವಾದದ ಇನ್ನೊಂದು ರೂಪವಾಗುತ್ತದೆ. ಇವರ ಕಾವ್ಯಶಿಲ್ಪದಲ್ಲಿ ಪ್ರತಿಮೆಗಳು ಚೆದುರಿ ಹೋದ ಚಿತ್ರಗಳ ಮಾಲೆಯಂತೆ ಕಾಣಿಸಿದರೂ ಈಚಿನ ಚಿತ್ರಗಳಲ್ಲಿ ಅರ್ಥದ ಹಂಬಲವನ್ನು ಕಾಣುತ್ತದೆ. ಕವಿ ಚಿತ್ರಗಳನ್ನು ಅರ್ಥಪೂರ್ಣವಾಗಿರುವ, ಧ್ವನಿರಮ್ಯ ಮಾಡುವ ಕಾವ್ಯದಲ್ಲಿ ನಿರತವಾಗಿರುವುದು ಹೆಚ್ಚು ಯಶಸ್ವಿಯಾದ ಮತ್ತು ಸಮರ್ಥವಾದ ಕವಿತೆಗಳಿಗೆ ಕಾರಣವಾಗುತ್ತಿದೆ. ಇತ್ತೀಚಿಗಿನ ಕವಿತೆಗಳು ಹೆಚ್ಚು ಆಶಾದಾಯಕವಾಗಿ ಭರವಸೆಯನ್ನು ಹುಟ್ಟಿಸುತ್ತದೆ. ಅದು ಕವಿಯ ಬೆಳವಣಿಗೆಯನ್ನು ಸೂಚಿಸುತ್ತವೆ.

೩

ವಸ್ತುವಿನ ದೃಷ್ಟಿಯಿಂದಲೂ ಇವರ ಕಾವ್ಯವನ್ನು ಪರೀಕ್ಷಿಸಬಹುದು. ತರ್ಕದನುಕೂಲಕ್ಕೆ 'ಮುಗುಳು'ದಿಂದಲೇ ವಸ್ತುವಿನಲ್ಲಿ ವೈವಿಧ್ಯ ಆರಂಭವಾಗಿದೆಯೆಂದರೂ ವಾಸ್ತವವಾಗಿ ಕವಿ ಈ ಪರಿಮಿತ ಪ್ರಣಯ ಪ್ರಪಂಚದಿಂದ ಹೊರಬಂದಿದ್ದು ವಿಶೇಷವಾಗಿ 'ಹೇಳತೇನ ಕೇಳ'ದಲ್ಲಿಯೇ. ನಗರೀಕರಣ ಮತ್ತು ನಾಗಕತೆಗಳಿಂದ ಸೃಷ್ಟಿಯಾದ ಒಡೆದು ಕುಟುಂಬ ಚಿತ್ರ, ಗಂರ್ಭಿಣಿಯ ಬಯಕೆಗಳು ಹೆಣ್ಣನ್ನು ಕಂಡಾಗ ಉಂಟಾಗುವ ಚಾಂಚಲ್ಯ, ಚಾಪಲ್ಯಗಳು ಇಂತಹ ಅನೇಕ ವಸ್ತುಗಳತ್ತ ಕವಿಯ ದೃಷ್ಟಿ ಇಲ್ಲಿ ಹರಿದಿದೆ. ಕವಿಯ ಅನುಭವದ

ವಲಯವೂ ವಿಸ್ತಾರವಾಗಿ ಬದುಕಿನ ಹೆಚ್ಚು ಹೆಚ್ಚು ಮುಖಗಳ ದರ್ಶನ ಸಹೃದಯನಿಗಾಗುತ್ತದೆ. ಆದುದರಿಂದಲೇ 'ಪ್ರಭು', 'ಗಂಗಾಮಾಯಿ', 'ಕಲೆಗಾರಣ್ಣನ ಲಾವಣಿ', 'ಹಾರಿ ಬಂದದ್ದೇ', ಸದ್ದು, 'ಚಂದಿರನ ಬೇಟೆಗೆ ಹೋದಾ' ಇಂತಹ ಕವಿತೆಗಳಲ್ಲಿ ಸಮಕಾಲೀನ ಜೀವನದ ವಿಡಂಬನೆಯತ್ತ ಕೂಡ ಕವಿದೃಷ್ಟಿ ಹೊರಳಿದೆ.

'ಅಗಲುವಾಗ', 'ಶಬ್ದದ ಲಜ್ಜೆಯ ನೋಡಾ', 'ನೀರು ನೀರೇ ನೀರು', 'ನಾಡು-ಕಾಡು' ದಂತಹ ಕವಿತೆಗಳಲ್ಲಿ ಜೀವನವನ್ನು ಕುರಿತು ಕವಿದೃಷ್ಟಿ ಜಾಗ್ರತವಾಗಿದ್ದು ಕಾಲ ಹಾಗೂ ಜೀವನದ ಗಹನತೆ ಹಾಗೂ ಅನಂತತೆಗಳು ಧ್ವನಿತವಾಗುತ್ತಿದ್ದು ಕವಿದೃಷ್ಟಿ, ವಿರಸ, ಪಟ್ಟಣದ ಜೀವನ, ವಿರಸದಾಂಪತ್ಯ, ಬಡತನ ಹೀಗೆ ಜೀವನದ ವಿವಿಧ ಮುಖಗಳತ್ತ ತೆರೆದ ಕಣ್ಣಿನಿಂದ ಕೂಡಿದೆ. ಅಷ್ಟೇ ಅಲ್ಲ, ಉತ್ತಮವಾದ ಕವಿತೆಗಳಿಗೆ ಕಾರಣವಾಗಿದೆ.

ವಸ್ತುವಿನ ದೃಷ್ಟಿಯಿಂದ ಕವಿಯ ದೃಷ್ಟಿ ವಿಸ್ತಾರವಾಗುತ್ತಿದೆ ಎನ್ನುವಾಗ ಒಂದು ಮಾತನ್ನು ಎಚ್ಚರದಿಂದ ಗಮನಿಸಲೇ ಬೇಕಾಗುತ್ತದೆ. ಏಕೆಂದರೆ ಕವಿ ಮತ್ತೆ ಇತ್ತೀಚೆಗೆ ಹಳ್ಳಿ ಬದುಕಿನ ಕಟುವಾಸ್ತವಿಕ ಕುಟುಂಬದತ್ತಲೇ ದೃಷ್ಟಿ ಹರಿಸುತ್ತಿರುವುದನ್ನು ನೋಡುವವರಿಗೆ ಆ ವಿಸ್ತಾರ ಪ್ರಯತ್ನಪೂರ್ವಕವಾಗಿ ತಂದದ್ದು ಎಂದೆನಿಸಬಹುದು. ನಿಜವಾಗಿ 'ಉಮರ ಮೈಯಲ್ಲಿ ಬಂದಾಗ', 'ದೇವರ ಬಂಗಾರದ ಕುದುರೆ', 'ಕುಲದ ಸ್ವಾಮಿ ದೇವರು', 'ಒಂದು ಕನಸು' ಕವಿತೆಗಳು ಕನ್ನಡದಲ್ಲಿ ಬಹುಕಾಲ ಉಳಿಯುವಂತಹವು. ಅವುಗಳನ್ನು ಪ್ರಯತ್ನ ಪೂರ್ವಕ ಎಂದು ಹೇಳ ಹೋಗುವುದರಿಂದ ಅವುಗಳ ಯೋಗ್ಯತೆಯನ್ನು ಅಲಕ್ಷಿಸಲು ಕಾರಣವೊಂದನ್ನು ಹುಡುಕ ಹೋದಂತೆ ಮಾತ್ರ ಆಗುತ್ತದೆ.

ಕವಿ ಮೊದಲಿನಿಂದ ಕಾವ್ಯರಚನೆ ಮಾಡುತ್ತ ಹೋಗುವಾಗ ತನ್ನ ಭಾವ ವಲಯ ಸಂಸಾರದಿಂದ ಹೊರಗೆ ಹೊರಡಲಿಲ್ಲ ಎಂಬ ದೃಷ್ಟಿಯಿಂದ ಹೊರಟಿರಬಹುದು. ಹಾಗೆ ಹೊರಟಿದ್ದರಿಂದ ಕವಿದೃಷ್ಟಿ ಬಿದ್ದ ಆ ವಸ್ತುಗಳೂ ಕಾವ್ಯಲಯಕ್ಕೆ ಬಂದವು ಒಳ್ಳೆಯ ಕವಿತೆಗಳು ದಕ್ಕಿದವು.

ಇಂದು ಇವರ ಕವಿತೆಗಳನ್ನು ನೋಡುವವರಿಗೆ ಬೆರಗಾಗುವಂತಹ ವ್ಯತ್ಯಾಸವೊಂದು ಕಾಣಿಸತೊಡಗಿದೆ. ವಸ್ತು ತೀರ ಸಾಮಾನ್ಯವೆನಿಸುವ 'ನೀರು', 'ಕರಿಹೈದ', 'ಕನ್ನೆನಕ್ಕರೆ', 'ಕಿವಿಮಾತು' ಇಂತಹವೇ ಆಗಿವೆ. ಒಳಹೊಕ್ಕು ನೋಡಿದಾಗ ಮಾತ್ರ ಇಲ್ಲಿಯ ಭಾಷೆ, ಲಯ, ತಂತ್ರ, ಪ್ರತಿಮೆ, ವಸ್ತು ಎಲ್ಲವೂ ಕವಿ ಬದುಕಿನಲ್ಲಿ ಪಡೆಯುತ್ತಿರುವ ಆಳಕ್ಕೆ ನಿದರ್ಶನಗಳಾಗಿ ನಿಂತಿವೆ. ಇಲ್ಲಿಯ ಬರೆಹದಲ್ಲಿ ಆತ್ಮೀಯತೆಯ ದನಿಯಿದೆ, ವಿಡಂಬನೆಯ ಮೊನೆಯಿದೆ. ಅನುಭವದ ಪದರುಗಳನ್ನು ನವಿರಾಗಿ ಬಿಡಿಸುವ ಕವಿಯ ಸಾಧನೆಯಿದೆ. ಆ ಕವಿತೆಗಳಲ್ಲಿ ಕವಿ ಧ್ವನಿಸುತ್ತಿರುವ ಜೀವನದ ಗಹನತೆ, ನಿಗೂಢತೆ ಮತ್ತು ಅದಮ್ಯ ಸೌಂದರ್ಯಗಳು ವಿಶೇಷ ಸತ್ವದಿಂದ ಕೂಡಿವೆ; ಇವರ ಕವಿತೆಗಳು ಇಂದು ಪಡೆಯುತ್ತಿರುವ ನಿಜವಾದ ಬೆಳವಣಿಗೆಯ ದಿಕ್ಕನ್ನು ಸೂಚಿಸುತ್ತವೆ. ಈಚಿನ ಕವಿತೆಗಳನ್ನು ನೋಡುವಾಗ

ವಸ್ತುವಿನ ವಿಸ್ತಾರ ಕಡಿಮೆಯಾದಂತೆ ಮೇಲುನೋಟಕ್ಕೆ ಕಾಣಿಸಿದರೂ ಆಳ ಮಾತ್ರ ಹೆಚ್ಚುತ್ತಿದೆ. ಕಾವ್ಯ ಗಂಭೀರವಾಗುತ್ತಿದೆ.

ಹತ್ತಾರು ಕಥನಗೀತಗಳನ್ನು ಬರೆದರೂ ಸಂದಿಗ್ಧವಾಗದ ದೃಷ್ಟಿ ಇಂದು ಇತ್ತೀಚಿನ ಈ ಕವಿತೆಗಳ ಮೂಲಕ ಒಂದು ನಿಲುಗಡೆ ತಲುಪುತ್ತಿದೆ. ಗಟ್ಟಿಯಾದ ಜೀವನ ದರ್ಶನ ವೊಂದು ಕವಿತೆಗಳಿಂದ ತಾನಾಗಿ ಬೆಳೆಯದೆ ಕೇವಲ ಜೀವನ ಪ್ರೀತಿಗಾಗಿ ಕಾಣಿಸಿಕೊಳ್ಳುತ್ತಿದ್ದ ಕವಿದೃಷ್ಟಿ ಈಗ ಮಾಯವಾಗುತ್ತಿದೆ. 'ಕುದುರಿಸಿದ್ದ' ಕವಿತೆಯಂತೂ ತನ್ನ ಹೆಸರಿನ ವ್ಯಕ್ತಿಯೊಬ್ಬ ಸತ್ತು ತಾನೇ ಸತ್ತೆನೆಂದು ಕೊಂಡಿರುವ ವಿನೋದ-ವಿಷಾದಗಳ ಘಟನೆಯಿಂದ ಆರಂಭವಾಗಿ, ಸಾವು ಬದುಕುಗಳ ಆಕಸ್ಮಿಕತೆ ಹಾಗೂ ನಿಗೂಢತೆಗಳು ಹಾಗೂ ಬದುಕಿ ನಲ್ಲಿರುವ ವಿಸ್ಮಯಕಾರಿಯಾದ ಶಕ್ತಿಗಳ ದರ್ಶನವನ್ನೇ ಮಾಡಿಸುತ್ತಿದ್ದ ಕವಿಯ ಜೀವನ ಶ್ರದ್ಧೆ ಇಂದು ಆಳವಾದದ್ದಾಗಿದೆ ಎಂದು ಧ್ವನಿಸುತ್ತದೆ. ಇಷ್ಟೆಲ್ಲಾ ಗಂಭೀರವಾದ ಈ ವಸ್ತುವಿನಲ್ಲಿ ಹಾಸ್ಯದ ಬೆಳ್ಳಿ ಎಳೆಯೊಂದು ಸೇರಿಕೊಂಡು ಕವಿಯ ಬಗೆಗೆ ವಿಶೇಷವಾದ ಶ್ರದ್ಧೆಯನ್ನು ಮೂಡಿಸುತ್ತದೆ. ಮೊದಲ ಜೀವನದ ಪ್ರಸನ್ನ ಮುಖಗಳತ್ತ ಮಾತ್ರ ಹರಿದಿದ್ದ ಕವಿಯ ದೃಷ್ಟಿ ಇಂದು ಜೀವನದ ರಹಸ್ಯಮಯದತ್ತ ಹೊರಳಿದೆ. ಆದ್ದರಿಂದಲೇ ಅವರ ಇತ್ತೀಚಿನ ಕವಿತೆಗಳು ಮಂದ್ರಸ್ವರ ಸಂಗೀತದಂತೆ ಸದ್ದುಗದ್ದಲವಿಲ್ಲದೆ ನಿರಾಡಂಬರವಾಗಿ ಅನುಭವ ಸಾಂದ್ರತೆಯಿಂದ ಮಹತ್ತರವಾಗುತ್ತವೆ, ಕವಿಯ ತುಂಬು ಬೆಳವಣಿಗೆಯ ಬಗೆಗೆ ವಿಶೇಷವಾದ ಭರವಸೆಯನ್ನು ಹುಟ್ಟಿಸುತ್ತವೆ. ಹೀಗಾಗಿ ಅವರ ಕಾವ್ಯಶಿಲ್ಪದಲ್ಲಿ ಅವರು ಬಳಸುವ ಭಾಷೆ, ಶಬ್ದಚಿತ್ರ ರೂಪಗಳು ಹಾಗೂ ಅವು ಸ್ಫುರಿಸುವ ಅರ್ಥಗಳು ಸಹೃದಯ ವಾಚಕರನ್ನು ಮತ್ತೊಮ್ಮೆ ಜೀವನವನ್ನು ಪರೀಕ್ಷಿಸುವಂತೆ ಮಾಡುತ್ತವೆ.

ಆಕರಗ್ರಂಥ

೧. ಚಂದ್ರಶೇಖರ ಕಂಬಾರರ ಸಮಗ್ರ ಕಾವ್ಯ, ೨೦೧೧, ಸಪ್ನ ಬುಕ್‌ಹೌಸ್, ಬೆಂಗಳೂರು.

೩೧

ಕಂಬಾರರ ಕಾವ್ಯಭಾಷೆ

ಭಾಷೆಯ ಮುಖ್ಯ ಉದ್ದೇಶ ಸಾಮಾಜಿಕ ಸಂಪರ್ಕ. ಭಾಷೆಯಷ್ಟು ಪರಸ್ಪರ ವಿನಿಮಯ ಸಾಮರ್ಥ್ಯ ಬೇರಾವ ಸಂವಹನಕ್ಕೂ ಇಲ್ಲ. ಭಾಷೆ ಸಂಸ್ಕೃತಿಯ ಮುಖ್ಯ ಅಂಗವಾಗಿರುವುದರಿಂದ ಭಾಷಾಸಮುದಾಯದಲ್ಲಿ ಭಾಷಿಕರು ಪರಸ್ಪರ ಆಂತರಿಕ ಸಂಬಂಧವನ್ನು ಹೊಂದಿರುತ್ತಾರೆ. ಕಾವ್ಯಭಾಷೆಯನ್ನು ಸಾಮಾಜಿಕ ಚೌಕಟ್ಟಿಗೆ ಒಳಪಡಿಸಿ ಅದರ ಬಳಕೆಯ ಪರಿಸರದಲ್ಲಿ ಅಭ್ಯಸಿಸಿದರೆ ಸಮಾಜೋಭಾಷಿಕ ಅನನ್ಯತೆಯನ್ನು ಗುರುತಿಸಿದಂತಾಗುತ್ತದೆ. ಭಾಷಿಕರ ಸಾಮಾಜಿಕ ವರ್ಗ, ಲಿಂಗ, ವಯಸ್ಸು, ಅಂತಸ್ತು ಇಂತಹ ಜೈವಿಕ ಅಂಶಗಳು ಭಾಷಾಬಳಕೆಯಲ್ಲಿ ಪರಿಣಾಮ ಬೀರುತ್ತವೆ. ತತ್ಪರಿಣಾಮವಾಗಿ ಭಾಷಾಬಳಕೆಯಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಈ ಏಣಿ-ಶ್ರೇಣಿ ಕ್ರಿಯೆಗೆ ಭಾಷಿಕ ಸ್ತರ ವಿನ್ಯಾಸವೆಂದು ಕರೆಯುತ್ತಾರೆ. ಬಳಕೆಯ ವಿಭಿನ್ನತೆಯ ಸ್ತರಕ್ಕೆ ಅನುಗುಣವಾಗಿ ಭಾಷಿಕರು ಸಂಬಂಧಿತರಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ ಕಂಬಾರರ ಕಾವ್ಯ ಭಾಷೆಯ ಬಳಕೆಯ ಪ್ರಕ್ರಿಯೆಯನ್ನು ಅಭ್ಯಸಿಸಬೇಕಾಗುತ್ತದೆ.

ಕಂಬಾರರ ಕಾವ್ಯಭಾಷೆಯನ್ನು ಕುರಿತು ಚರ್ಚಿಸುವಾಗ ಕೆಲವೊಂದು ಅಂಶಗಳನ್ನು ಗಮನಿಸಬೇಕಾಗುತ್ತದೆ. ಕಂಬಾರರ ಕಾವ್ಯಭಾಷೆ ಆಡುಮಾತಿಗೆ ಹತ್ತಿರವಾದ ಗ್ರಾಂಥಿಕ ಭಾಷೆ. ಹಾಗೆಂದು ಇದನ್ನು ಗ್ರಾಂಥಿಕ ಭಾಷೆ ಎಂದಾಗಲಿ, ಆಡುಭಾಷೆ ಎಂದಾಗಲಿ ಕರೆಯಲಾಗುವುದಿಲ್ಲ. ಬದಲಾಗಿ ಸಾಮಾನ್ಯ ಜನರ ಮಾತಿನ ಶಬ್ದದ ವೈಖರಿಯನ್ನು ತೆಗೆದುಕೊಂಡು ಒಂದಕ್ಕೊಂದು ಜೋಡಿಸುವ ಮೂಲಕ ತಿಕ್ಕಿ ತೀಡಿ ಹೊಸೆದು ಕಟ್ಟುವ ಗುಣ ಕಂಬಾರರದ್ದು ಕಂಬಾರರ ಕಾವ್ಯದ ಭಾಷಾಸಂಯೋಜನೆ ಅದ್ಭುತವಾದದ್ದು ಬಯಲಾಟ, ಡೊಳ್ಳು, ಕೋಲುಪದ, ಲಾವಣಿ ಮುಂತಾದ ಜಾನಪದ ಮಟ್ಟುಗಳ ಮೂಲಕ ಹೊಸಭಾಷೆಯೊಂದನ್ನು ಸೃಷ್ಟಿಸುವ ಕೆಲಸ ಕಂಬಾರರು ತಮ್ಮ ಕಾವ್ಯದಲ್ಲಿ ಮಾಡಿದ್ದಾರೆ. ಬಯಲಾಟದ ಘೋಷ ಲಯದ ಅಂಶಗಳನ್ನು ಅಲ್ಲಲ್ಲಿ ಬಳಸಿಕೊಳ್ಳುವುದರ ಮೂಲಕ ಆಡುಭಾಷೆಗೆ ಹೊಸರೂಪ

ಕೊಡುವ ಪ್ರಯತ್ನ ಮಾಡಿದರು. ಬೇಂದ್ರೆ, ಬೆಟಗೇರಿ ಅವರ ಪ್ರಭಾವ ಕಂಬಾರರ ಮೇಲಾಗಿದೆ. ಹಾಗಾಗಿ ಕಂಬಾರರು ಕೂಡ ಜನಪದ ಮಟ್ಟುಗಳಲ್ಲಿ ಅಡಗಿರುವ ದೇಸಿ ಸಂಗೀತದ ಶೈಲಿಯನ್ನು ತಮ್ಮ ಕನ್ನಡಕ್ಕೆ ಕಸಿ ಮಾಡುವ ಪ್ರಯತ್ನ ಮಾಡಿದರು.

೧ ಹೊತ್ತಾಯಿತು ಮಲಗು ಮರಿ
ಬಿಸಾಕು ನಿನ್ನ ಪ್ರಶ್ನೆಯ ಕೊಕ್ಕೆ, ವ್ಯವಹಾರಕ್ಕೆ ಸಲ್ಲದ
ಅಜ್ಜೀ ಕಥೆ, ಸತ್ಯ ಸುಳ್ಳಿನ ವ್ಯಥೆ

೨ ಹೇಳದೆ ಕೇಳದೆ ಮೈಲಾರ ಲಿಂಗನ
ಗುಡ್ಡರ ಹಿಂಡೊಂದು ನುಗ್ಗಿ
ಹುಡು ಹುಡು ಹುಡು ಅಂತ ಹುಡದಿಯ ಹಾಕಿದರು
ಮನೆ ಮಠ ಎರಡೊಂದು ಮಾಡಿ

ಕಂಬಾರರ ಕಾವ್ಯ ಭಾಷೆ ಆಡುನುಡಿಯೆಂಬ ಭ್ರಮೆಯನ್ನು ಹುಟ್ಟಿಸಿದರೂ ಅದು ಆಡುನುಡಿಯಲ್ಲ. ಬದಲಿಗೆ ಆಡು ನುಡಿಯು, ವಿಶಿಷ್ಟ ಭಾಷಾಸಂಯೋಜನೆಯ ಮೂಲಕ ಕಾಣುವ ಅರ್ಥ ಮತ್ತು ಹೊಳೆಯುವ ಅರ್ಥದ ಕಸಿ ಮಾಡುವಿಕೆಯಲ್ಲಿ ಸಫಲಗೊಂಡಿದೆ. ಕೆಲವು ಕವಿಗಳು ಅರ್ಥವನ್ನು ಕಾಣುತ್ತಾರೆ. ಕೆಲವು ಕವಿಗಳು ಅರ್ಥವನ್ನು ಹೊಳೆಯಿಸುತ್ತಾರೆ. ಆದರೆ ಕಂಬಾರರು ಕಾಣಿಸುವುದು ಮತ್ತು ಹೊಳೆಯಿಸುವುದು ಎರಡನ್ನೂ ಮಾಡುತ್ತಾರೆ.

೧ ವಾಹನಗಳ ತುಟಿ ತುಟಿಯಲಿ ತುಳುಕಿದೆ ನವಗೀತ
ತಂಬೆಲರಿನ ತುಂಬಾ ಇದೆ ಪೆಟ್ರೋಲಿನ ನಾತ
ಲಾಲ್‌ಬಾಗಿನ ತರುಲತೆಗಳ ಮೈಮುಖಗಳ ನೋವು
ಕಪ್ಪಾಗಿವೆ ಕುಂಡದ ಗಿಡ ಬಳ್ಳಿಯ ಎಳೆ ಹೂವು

೨ ಅವಳ ಮೈ ತೀಡಿದ ಗಾಳಿ
ನನ್ನ ಕಡೆ ಸುಳಿಯಲಿಲ್ಲ
ಎದೆ ಮಿಡಿತ ತಿಳಿಯಲಿಲ್ಲ
"ನಿಜ ಗೆಳೆಯಾ ನಮಗೆ ಸ್ವಾತಂತ್ರ್ಯವೇ ಇಲ್ಲ".

ಸಮಕಾಲೀನ ವಾತಾವರಣ ಮತ್ತು ರಾಜಕೀಯಕ್ಕೆ ತಕ್ಕಂತೆ ಕಂಬಾರರು ಕಾವ್ಯಕ್ಕೆ ತಕ್ಕ ಹೊಸ ಪರಿಭಾಷೆಯನ್ನು ರೂಪಿಸುತ್ತಾರೆ. ಪ್ರಕೃತಿ ಮತ್ತು ಮನುಷ್ಯ ಪ್ರಕೃತಿಗಳ ನಿಗೂಢತೆ ಕವಿಯನ್ನು ತೀವ್ರವಾಗಿ ಕಾಡಿದೆ. ಹಾಗಾಗಿ ಒಂದು ಬಗೆಯ ವಿಸ್ಮಯ, ಬೆರಗು ಅವರ ಕೆಲವು ಕವನಗಳ ಸ್ಥಾಯೀ ಭಾವಗಳೆನ್ನಬಹುದು. 'ಕಾಡು ಕಾಡೆಂದರೆ', 'ಸದ್ದು', 'ಸೂರ್ಯನೆಂಬ ಮರ', 'ಗಿಣಿರಾಮ ಹೇಳಿತು' ಮೊದಲಾದ ಕಿರುರಚನೆಗಳಲ್ಲಿಯೇ ಭಾಷಾಭಿವ್ಯಕ್ತಿಯು ವ್ಯಕ್ತ ವಾಗುತ್ತದೆ. ಆಚೆಯ ಸೀಮೆಯನ್ನು ಕಾಮುವ ತನಕ, ಅಪರಿಚಿತ ಲೋಕಗಳಲ್ಲಿ ಸಂಚರಿಸುವ

ಬಯಕೆ, ವ್ಯಕ್ತವನ್ನು ಕೊಂಚ ಸರಿಸಿ ಅವ್ಯಕ್ತವನ್ನು ಮುಟ್ಟುವ ತುಡಿತ ಕಾಡುತ್ತದೆ. ಇಲ್ಲಿಯ ಒಂದು ಕವನದ ನಾಯಕ ಚಂದಿರನ ಬೇಟೆಗೆ ಹೋಗುತ್ತಾನೆ! ಅವನ ಆಸೆಯಾದರೂ ಎಂತಹುದು? ಅದನ್ನು ಕವಿ ಹೀಗೆ ರೇಖಿಸುತ್ತಾನೆ:

ಬಿಸಿಲ ಗುದುರೆಯನೇರಿ ಹೋದಾ
ಕೈಮೀರಿದ ಚಂದಿರನ ಬೇಟೆಗೆ ಹೋದಾ

ಹಾರುವ ಧ್ವಜದಂಥ ಪೊಗರಿನ ಬಾಲಕ
ಮುಗಿಲಿಗೆ ಎಗರುವೆನೆಂದಾ।
ಆಕಾಶದಂಗಳಕ್ಕ ನುಗ್ಗಿ ಲಗ್ಗೆಯ ಹಾಕಿ
ಸೂರೆ ಮಾಡುವೆ ಸಿರಿಯ ನೆಂದಾ।
ಕಣ್ಣಿಗೆ ಬಣ್ಣಗಳ ಮೆತ್ತುವ ಕನಸಿನಲಿ
ನಿಮ್ಮ ಮುಳುಗಿಸುತೇನೆ ಅಂದಾ॥

. . . .

. . . .

ಚಕ್ಕಂದವಾಡುವ ಚಿಕ್ಕೆ ತಾರೆಗಳನ್ನ
ಉಡಿತುಂಬಿ ತರುತೇನೆ ಅಂದ
ಸೊಕ್ಕಿ ಚಂದ್ರನ ಸಭ್ಯನ ಮಾಡುವೆ
ಪಳಗಿಸುವೆ ದೇವರನೆಂದಾ

ಅವನಿಗಾಗಿ ಕಾತರದಿಂದ ಕಾಯುತ್ತಿರುವ ನಿರೂಪಕಿಯ ಕಾತುರತೆ, ಅನುಮಾನ ಎಲ್ಲ ನಿಜ. ಆದರೆ ಬಾಲಕನ ಬಯಕೆಯ ತೀವ್ರತೆಯನ್ನು ಅಷ್ಟೇ ನಿಜವಾಗಿಸುವಲ್ಲಿ ಕವನ ಸಾರ್ಥಕವಾಗುತ್ತದೆ. ಕಂಬಾರರು ಭಾಷೆಯ ಜತೆಗೆ ಹೋರಾಟ ಮಾಡುವ ಮೂಲಕ ಭಾಷೆಯಲ್ಲಿಯೇ ಅನುಭವದ ಅರ್ಥದ ನೆಲೆಗಳನ್ನು ಶೋಧಿಸಿದರು. ಬೇಂದ್ರೆ, ಬೆಟಗೇರಿ ಮೊದಲಾದವರು ಜನಪದ ಬದುಕನ್ನು ಆಡುಮಾತಿನ ಮೂಲಕ ಕಾವ್ಯ ಕಟ್ಟಿ ಹೊರಟರೆ ಕಂಬಾರರು ಇನ್ನೂ ಮುಂದೆ ಹೋಗಿದ್ದಾರೆ. ಪರಂಪರೆಯ ತಳಹದಿಯಲ್ಲಿ ಆಧುನಿಕ ಸಂವೇದನೆಯೊಂದನ್ನು ತರುವ ಪ್ರಯತ್ನ ಕಂಬಾರರ ಕವನಗಳಲ್ಲಿ ಕಾಣಿಸುತ್ತದೆ. ವಸ್ತು ಹೇಗೊ ಅದಕ್ಕೆ ತಕ್ಕಂತಹ ಭಾಷೆಯನ್ನು ಕಂಬಾರರು ಸೃಷ್ಟಿಸಿದರು. `ಕುದುರೆ` ಕಂಬಾರರ ಕಾವ್ಯ ಪ್ರಪಂಚದಲ್ಲಿ ಪುನರಾವರ್ತನೆಯಾಗಿ ವಿಶೇಷ ದರ್ಶನವನ್ನುಂಟು ಮಾಡುತ್ತದೆ.

೧ ಕಣ್ಣಿನಾಗ ಕಣ್ಣ ಖಡ್ಗ
ಆಸುಪಾಸು ಝಳಪಿಸಿತ್ತ
ಬೆನ್ನಹುರಿ ಬಿಗಿದಿತ್ತಣ್ಣ

ಸೊಂಟದ ಬುಗುರಿ ತಿರುಗುತ್ತಿತ್ತ
ಬಿಗಿದ ಕಾಂಡ
ಬಿಲ್ಲಿನಿಂದ
ಬಿಟ್ಟಬಾಣಧಾಂಗ ಚಿಮ್ಮಿ
ಹದ್ದಮೀರಿ ಹಾರಿ ಬಂದಿತ್ತಾ. . . . .

೨ ಧೂಳಿನಿಂದಾಕಾಶ ಅಳೆಯಬಹುದೇ ಶಿವನೆ!
ಇದೇ ಬೇರೆ ಕುದುರೆ
ಎಂಬುದನ್ನು ಕಂಡುಕೊಳ್ಳುತ್ತಾನೆ
ಏನದು ಅಂಥ ಬದಲಾವಣೆ?
ಬೆನ್ನಹುರಿ ಬಿಗಿದು ಸವಾರನ ಆಜ್ಞೆಗೆ
ಕಾಯುವ ಕಾತರವಿಲ್ಲ
ಬಾಲಲ್ಲಿ ಚಂಚಲ ಧೂಮಕೇತುವಿಲ್ಲ
ಕಣ್ಣುಗಳಲ್ಲಿ ಉರಿದುರಿದು ಇರಿವ ಸೂರ್ಯರಿಲ್ಲ

೩ ಗದ್ದಲು ಹಾದಿಯಲ್ಲಿ ಕೇಳದ ಸಂಗೀತಕ್ಕೆ
ಹೆಜ್ಜೆ ಹಾಕುತ್ತ
ಅಪಚಿತ ಸೀಮೆಯ ಅವ್ಯಕ್ತಗಳ
ಕೆರೆಯುವ ಕುದುರೆ

ಕುದುರೆ ಓಟವನ್ನು ಅದ್ಭುತವಾಗಿ ವರ್ಣಿಸಿದ್ದಾರೆ. ಅದರ ಸಂಭ್ರಮ, ಉತ್ಸಾಹ ಆತುರ ಈಗ ಹೊಸ ವಿವೇಕವಾಗಿ ತಿಳಿವಾಗಿ ರೂಪಾಂತರ ಹೊಂದುತ್ತಿದೆ. ಅವ್ಯಕ್ತ ಆಸೆ ಹಾಗೆಯೇ ಉಳಿದುಕೊಂಡಿದ್ದರೂ ಅದನ್ನು ಮುಟ್ಟುವ ವಿಧಾನ ಬದಲಾಗಿದೆ. ಅಷ್ಟೇ ಅಲ್ಲ. ಕವನದ ಕೊನೆಯ ಸಾಲುಗಳಲ್ಲಿ ಭಾಷಾರಚನೆಗೆ ಹೊಸತಿರುವನ್ನೇ ಕೊಟ್ಟು, ಅವ್ಯಕ್ತ ಸ್ವರೂಪವನ್ನೇ ಬೇರೆಯಾಗಿ ಕಂಡುಕೊಳ್ಳುತ್ತದೆ. ಕಂಬಾರರ ಕಾವ್ಯದ ಯಾವುದೇ ಭಾಗವನ್ನು ತೆರೆದರೂ ಇದೇ ಸಂಭ್ರಮದ ಸ್ಥಿತಿ. ಉದಾಹರಣೆಗೆ 'ಹೇಳತೇನ ಕೇಳ'ದಲ್ಲಿ ರಾಮಗೊಂಡನ ವರ್ಣನೆ:

ಅವನ ಕೆನ್ನಿನ ಒಳಗ ಸೂರ್ಯದೇವ ಹೊಳೆದಾನು
ಕಣ್ಣಾಗ ಹುಣ್ಣಿಮೆ ಚಂದ್ರಮರಾ
ಒಗರೇನು ಹೊಗರೇನು ಹರೆಯ ಗರುವಿಕೆಯೇನು
ಬಾಯಿ ಬಾಯಿ ಬಿಡತಾವ ಹುಡುಗೇರಾ

ರಾಮಗೊಂಡನ ಉತ್ಸಾಹ ಮತ್ತು ಸಂಭ್ರಮ ಎಷ್ಟು ತೀವ್ರತರವಾದುದೆಂದರೆ ಅದು ಜಡತ್ವ ಮತ್ತು ವಿಷಾದವನ್ನು ಮರೆಸುವಷ್ಟು ಪ್ರಬಲವಾಗಿರುತ್ತದೆ. ಕಂಬಾರರ ಯಾವುದೇ ಕವನವನ್ನು ತೆಗೆದುಕೊಂಡರೂ ಈ ಮಾತು ನಿಜವೆಂದು ಸಾಬೀತಾಗುತ್ತದೆ. ಕಂಬಾರರು ಜನಪದ ಮಿಥ್,

ಸ್ಥಳಪುರಾಣ, ಸಂಕೇತಗಳನ್ನು ತಮ್ಮ ಕಾವ್ಯದ ವಸ್ತುವನ್ನಾಗಿ ಆರಿಸಿಕೊಂಡು ಅದಕ್ಕೆ ಸಮಕಾಲೀನ ಭಾಷಿಕ ಲೇಪನಕೊಟ್ಟು ಉತ್ಸಾಹ ಮತ್ತು ಸಮೃದ್ಧತೆಯಲ್ಲಿ ಗ್ರಹಿಸಲು ಸಮರ್ಥರಾಗುತ್ತಾರೆ. ಇಂತಹ ಸಂದರ್ಭದಲ್ಲಿ ಕಂಬಾರರು ಆಡುಭಾಷೆಗೆ ಹತ್ತಿರವಾಗಿ ಭಾಷೆ ಸೃಷ್ಟಿಸಿದರೂ ಅದೇ ಆಡುಭಾಷೆಯಲ್ಲ. ಹಾಗಾಗಿದ್ದರೆ ಮಾತಿಗೂ ಕಾವ್ಯಕ್ಕೂ ವ್ಯತ್ಯಾಸವೇ ಉಳಿಯುವುದಿಲ್ಲ. ಅವರ ಕಾವ್ಯದಲ್ಲಿ ಭಾಷೆ ಹೆಚ್ಚು ಸಂಘಟಿತವಾಗಿ, ಜಾಗರೂಕವಾಗಿ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದೆ. ಹಾಗಾಗಿ ಹೊಸ ಸಂಪ್ರದಾಯವನ್ನು ಸೃಷ್ಟಿಸುವ ಸಂದರ್ಭದಲ್ಲಿ ಕಂಬಾರರು ತಮ್ಮ ಪ್ರಾದೇಶಿಕ ಸತ್ವವನ್ನು ಕಾವ್ಯ ಭಾಷೆಯಲ್ಲಿ ತರುವ ಪ್ರಯತ್ನ ಮಾಡಿದ್ದಾರೆ. ಈ ಮೂಲಕ ಹಳೆಯ ಕಾವ್ಯ ಸಂಪ್ರದಾಯಕ್ಕೆ ಮುಖಾಮುಖಿ ಯಾಗುವ ಸ್ವಂತಿಕೆ ತೋರಿದ್ದಾರೆ. ಕಂಬಾರರು ಕಾವ್ಯಸೃಷ್ಟಿಗೆ ಬೆಳಗಾವಿ ಪರಿಸರದ ಭಾಷೆಯನ್ನು ಬಳಸಿದರೂ ಅದು ಕಾವ್ಯ ಕ್ರಿಯೆಯಲ್ಲಿ ಪುನರ್ ಸಂದರ್ಭೀಕರಣಕ್ಕೆ ಒಳಗಾದಾಗ ಕೇವಲ ಬೆಳಗಾವಿ ಭಾಷೆಯಾಗಿ ಉಳಿಯುವುದಿಲ್ಲ ಕಂಬಾರರ ಭಾಷೆಯಾಗಿ ನಿರ್ಮಾಣವಾಗುತ್ತದೆ. ಈ ಮೂಲಕ ಕಂಬಾರರು ಹಳೆಯ ಕಾವ್ಯ ಸಂಪ್ರದಾಯಕ್ಕೆ ಭಿನ್ನವಾದ ದಾರಿಯೊಂದನ್ನು ರೂಪಿಸಿಕೊಂಡರು.

> ನಮ್ಮ ಕನಸಿನಲಿ ಅರಳಿದ ಹೂವ
> ಯಾರೂ ಹರಿದರಲ್ಲ.
> ಹಸಿರು ಗುಂಗಿನಲಿ ನಮ್ಮ ಮುಳುಗಿಸಿದ
> ಹಾಡು ಎಲ್ಲಿ ಈಗ?.
>
> ತಾರೆಗಳುದುರಿ ಉಲ್ಕೆ ಇದ್ದಿಲು
> ಬೀಳಿತಾವ ಮ್ಯಾಲ
> ಬೆಳುದಿಂಗಳಿನ ಬೂದಿ ಸುರಿಯುತಾವ
> ನಮ್ಮ ನೆತ್ತಿಮ್ಯಾಲ

ಕಾವ್ಯ ಸೃಷ್ಟಿಯಲ್ಲಿ ಕವಿ ಬದುಕುತ್ತಿರುವ ಪ್ರದೇಶ, ಆತನ ಮನೋಧರ್ಮ, ಆಚಾರ ವಿಚಾರಗಳು ಮುಖ್ಯ ಪಾತ್ರವಹಿಸುತ್ತವೆ. ಕವಿ ವಸ್ತುವಿಗೆ ತಕ್ಕಂತೆ ತನ್ನ ಪ್ರದೇಶದ ಭಾಷಾ ವೈಶಿಷ್ಟ್ಯಗಳನ್ನು (ನುಡಿಗಟ್ಟು, ಪ್ರತಿಮೆ ಮುಂತಾದುಗಳನ್ನು) ಬಳಸಿಕೊಂಡು ಕಾವ್ಯ ಸೃಷ್ಟಿಸುತ್ತಾನೆ. ಕಂಬಾರರು ತಮ್ಮ ಕಾವ್ಯರಚನೆಗೆ ತಮ್ಮ ಪರಿಸರದ ಭಾಷೆಯನ್ನು ಸಮರ್ಥ ವಾಗಿ ಬಳಸಿಕೊಂಡಿದ್ದಾರೆ. ಅವರ ಪ್ರತಿಭೆಯ ಮೂಲಕವೇ ವಿವಿಧ ಸ್ತರಗಳಲ್ಲಿ ಕೆಲಸ ಮಾಡಿ ಕಾವ್ಯದ ವಸ್ತು ಅನಾವರಣಗೊಳ್ಳುತ್ತದೆ. ಕಂಬಾರರು ತಮ್ಮ ಪರಿಸರದಲ್ಲಿ ಬಳಕೆ ಯಾಗುವ ಧ್ವನಿರಚನೆ, ಪದರಚನೆ, ವಾಕ್ಯರಚನೆಗಳನ್ನು ವಿಶಿಷ್ಟ ರೀತಿಯಲ್ಲಿ ಬಳಸುವ ಮೂಲಕ ಹೊಸಭಾಷೆಯನ್ನು ಸೃಷ್ಟಿಸುವ ಕೆಲಸವನ್ನು ಮಾಡಿದ್ದಾರೆ. ಕಾವ್ಯಭಾಷೆ ಬೇರೆಯಾಗುವುದೇ ಹೀಗೆ. ಕಂಬಾರರು ವಿಶಿಷ್ಟ ಭಾಷಾಸಂಯೋಜನೆಯ ಮೂಲಕ ಕಾವ್ಯಾನು

ಭವವನ್ನು ಸಾಫಲ್ಯಗೊಳಿಸಲು ಪ್ರಯತ್ನಿಸುತ್ತಾರೆ. ಆ ಮೂಲಕ ಹೊಸದರ್ಶನವೊಂದನ್ನು ಪ್ರಕಟಿಸುತ್ತಾರೆ.

ಕಾಂತನಿಲ್ಲದ ಮ್ಯಾಲೆ ಏಕಾಂತ ವ್ಯಾತಕೆ
ಗಂಧ ಲೇಪನ ವ್ಯಾತಕೆ। ಈ ದೇಹಕೆ॥

ಮಂದ ಮಾರುತ ಮೈಗೆ ಬಿಸಿಯಾದವೇ ತಾಯಿ
ಬೆಳದಿಂಗಳೂ ಉರಿವ ಬಿಸಿಲಾಯಿತೇ। ನನಗೆ
ಹೂಜಾಜಿ ಸೂಜಿಯ ಹಾಗೆ। ಚುಚ್ಚತಲಿವೆ॥

ಉರಿಗಳು ಮೂಡ್ಯಾವು ನಿಡುಸುಯ್ಲಿನೊಳಗೆ
ಉಸಿರಿನ ಬಿಸಿ ಅವಗೆ ತಾಗದೆ। ಹುಸಿ ಹೋಯ್ತೆ
ಚೆಲುವ ಬಾರದಿರೇನು ಫಲವೆ। ಈ ಚೆಲುವಿಗೆ॥

ಕಂಬಾರರ ಭಾಷಾ ಸಂಯೋಜನೆ ಎಷ್ಟೊಂದು ಸುಸಂಘಟಿತವಾಗಿ ಕೆಲಸ ಮಾಡುತ್ತದೆಂದರೆ ತರ್ಕಬದ್ಧವಾಗಿ ಬೇರೆ ಬೇರೆ ಅರ್ಥಗಳನ್ನು ಹೊರಡಿಸುತ್ತಾ ಅದರ ಉತ್ಕರ್ಷ ಸ್ಥಿತಿಯನ್ನು ಮುಟ್ಟುತ್ತದೆ. ಭಾಷೆಯನ್ನು ಪ್ರಜ್ಞಾಪೂರ್ವಕವಾಗಿ ಬಳಸುವ ಮೂಲಕ ಅದರಿಂದ ಅನುಭವದ ಅನ್ವೇಷಣೆಯನ್ನು ಮಾಡುತ್ತಾ ಅದರ ಔನ್ನತ್ಯವನ್ನು ಹೊಳೆಯಿಸಲು ಕಂಬಾರರು ಪ್ರಯತ್ನಿಸುತ್ತಾರೆ. ಕವನದುದ್ದಕ್ಕೂ ಇರುವ ಶೈಲಿ, ಗಾಂಭೀರ್ಯ, ಬಯಲಾಟದಿಂದ ಬರುವ ನಾಯಕೀಯತೆ, ಘೋಷಲಯ ಎಲ್ಲವೂ ವಸ್ತುವಿನೊಡನೆ ಅರ್ಥಪೂರ್ಣವಾಗಿ ಹೊಂದಿ ಕೊಳ್ಳುತ್ತಾ ಕೊನೆಯಲ್ಲಿ ಒಂದು ದರ್ಶನವಾಗಿ ಪ್ರಕಟಗೊಳ್ಳುತ್ತದೆ. ಗ್ರಾಂಥಿಕವೂ ಅಲ್ಲದ, ಆಡುನುಡಿಯೂ ಅಲ್ಲದ, ಹೊಸ ಭಾಷೆಯ ಆವರಣ ತಾನಾಗಿ ನಿರ್ಮಾಣವಾಗುತ್ತಾ ಹೋಗಿ ವಸ್ತುವಿನ ಜತೆಗೆ ತಾದಾತ್ಮ್ಯವನ್ನು ಹೊಂದಿ ಸಾಫಲ್ಯವನ್ನು ಪಡೆಯುತ್ತದೆ. ಇದಕ್ಕೆ ಕಂಬಾರರ ಕ್ರಿಯಾಶೀಲತೆ, ಅನುಭವದ ಬಗೆಗಿನ ಶ್ರದ್ಧೆ, ಪ್ರಯೋಗಶೀಲ ಗುಣ, ಅನ್ವೇಷಣಾ ಬುದ್ಧಿ, ತಾನು ಬದುಕಿನ ಪರಿಸರದಿಂದ ಪಡೆದುಕೊಂಡ ಅನುಭವ ಎಲ್ಲವೂ ಕಾರಣವಾಗಿದೆ. ಎಲ್ಲವೂ ಅವರ ನರನಾಡಿಗಳಲ್ಲಿ ಬೆರೆತುಹೋಗಿ ಒಂದಾಗಿ ಪ್ರಕಟಗೊಳ್ಳುತ್ತದೆ. ಕಂಬಾರರಲ್ಲಿ ಭಾಷಾ ಸಂಯೋಜನೆ ಎಂಬ ಪ್ರಜ್ಞಾಪೂರ್ವಕವಾಗಿ ಕೆಲಸ ಮಾಡಿದೆ. ಉದಾಹರಣೆಗೆ ಒಂದು ಪ್ರತಿಮೆ ಮತ್ತೆ ಪುನರಾವರ್ತನೆಗೊಳ್ಳುತ್ತ, ಗಟ್ಟಿಯಾಗುತ್ತಾ ಬರುತ್ತದೆ. ಅದಕ್ಕೆ ಸಂಬಂಧಪಟ್ಟಂತೆ ಪೂರಕ ಪ್ರತಿಮೆಗಳು ಜತೆಯಾಗಿ ಬರುತ್ತವೆ. 'ಹೋರಿ', 'ಕಾಂತನಿಲ್ಲದ ಮ್ಯಾಲೆ' ಇಂತಹ ಕವನಗಳಲ್ಲಿ ಲೈಂಗಿಕ ಪ್ರತಿಮೆಗಳು ಬಂದಿವೆ:

೧ ಕಾಮನ ಬಾಣಾ ಹತ್ತ್ಯಾವ ಬೆನ್ನಾ
ಆತುರ ತೀವ್ರ ಕಾಮಾತುರ ತಾಳೆನಾ
ಆರ್ತಳಿಗೆ ಆಶ್ರಯವಿರದೆ। ಒದ್ದಾಡುವೆ॥

ಅನ್ಯ ಪುರುಷರು ಮಾರ ಅಂಗನೆಯ ನೆಳೆದಾರೆ
ಕೈಹಿಡಿದ ಸರಿ ಪುರುಷ ನಮ್ಮ। ನಿರತಾರೇನೆ

೨ ಮುಸಮುಸನೆ ಮುಸಮುಸನೆ ತೇಗುವುದು
ತುಟಿ ಕೆನ್ನೆಯಲಿ ಬೆಳೆದ ಚೆಂಗುಲಾಬಿಗಳನ್ನು
ಜತನವಾಗಿಟ್ಟು ಕೋ ಜ್ವಾಕಿ।

ಈ ಪದ ಪ್ರಯೋಗಗಳ ಮೂಲಕ ಕವನಗಳು ಪುಷ್ಟಿಗೊಳ್ಳುತ್ತ ಹೋಗುತ್ತವೆ. ಅದೇ ರೀತಿಯಲ್ಲಿ ಭಾಷೆಗೆ ಸಂಗೀತದ ನಾದಮಯತೆ ತಂದವರಲ್ಲಿ ಕಂಬಾರರು ಅಗ್ರಗಣ್ಯರು. ನಾದಮಯವಾದ ಭಾಷೆಯಲ್ಲಿ ರಚಿತವಾದ ಅವರ ಕೆಲವು ಕವನಗಳು ಭಾವದ ಗುಂಗಿನಲ್ಲಿ ಮೈಮರೆಸುತ್ತವೆ ಎಂಬುದನ್ನು ತಿಳಿದಾಗ ಭಾಷೆಯನ್ನು ನಾದದ ನೆಲೆಗೆ ಕೊಂಡೊಯ್ಯುವ ಮೂಲಕ ಭಾವದ ಗುಂಗಿನಲ್ಲಿ ಮೈಮರೆಯುವಂತೆ ಮಾಡದೆ ಆ ಕಾವ್ಯಾನುಭವ ನೀಡುವ ವಿಚಾರವನ್ನು ಚಿಂತನೆಯ ನೆಲೆಗಳನ್ನು ಸಹೃದಯ ವಾಚಕರು (ಕೇಳುಗರು) ಗ್ರಹಿಸುವ ನೆಲೆಗೆ ಕೊಂಡೊಯ್ದುದು ಕಂಬಾರರ ಕಾವ್ಯದ ಮುಖ್ಯ ವಿಶೇಷತೆಯಾಗಿದೆ.

ಮರತೆನಂದರ ಮರೆಯಲಿ ಹೆಂಗಾ।
ಮಾವುತ್ಸೆ ತುಂಗಾ॥

ಪಂಚಭೂತದಾಗ ವಂಚನೆ ಕಂಡಿ
ಕಣ್ಣಿನಂಚಿದಾಗ ಹೊಸಜಗ ಕಂಡಿ
ಸೊನ್ನಿಗಿ ಆಕಾರ ಬರದೇ ನಂದಿ
ಬಯಲಿಗೆ ಗೊಂಡೆ ಕಟ್ಟೆ ನಂದಿ
ಸಚರಾಚರಗಳ ರಚನೆ ಮಾಡುದಕ
ಬೇರೊಬ್ಬ ಸೂರ್ಯನ ತರತೇನಂದೀ।

ಕವಿತೆಯ ಶಿಲ್ಪ ಎಲ್ಲೂ ಸಡಿಲವಾಗಿಲ್ಲ. ಭಾಷೆಯಲ್ಲಿಯೇ ಅರ್ಥದ ಬೇರೆ ಬೇರೆ ಮುಖಗಳನ್ನು ಕಾಣಿಸುವ ಹಾಗೆ ಮತ್ತು ಅದರ ಆಳಕ್ಕಿಳಿದು ಹೊಸ ಅರ್ಥ ಕಂಡುಕೊಳ್ಳುವ ಹಾಗೆ ಕಾವ್ಯದ ಬಂಧ ಎಲ್ಲೂ ಸಡಿಲವಾಗದೆ ಹಾಗೆ ತಕ್ಕ ಎಚ್ಚರದಲ್ಲಿ ಭಾಷಾಸಂಯೋಜನೆ ಮಾಡಿರುವುದು ಇಲ್ಲಿ ಕಂಡುಬರುತ್ತದೆ. ಈ ಕವನವನ್ನು ಕಂಬಾರರ ಬಾಯಿಂದಲೇ ಕೇಳಬೇಕು. ಅದರ ನಾದ, ಲಯ ಕಿವಿಗೆ ಅಪ್ಪಳಿಸುತ್ತದೆ; ಹೃದಯ ತಟ್ಟುತ್ತದೆ.

- ಕಣ್ಣೀರಿನ ಹೊಳಿಗಡ್ಡ ಕಟ್ಟಿದಿ
  ಹರಿವ ನೆತ್ತರಕ ಒಡಕಟ್ಟಿದಿ

- ಬೆಂಕಿ ಹಚ್ಚಿದಿ ಬೇಲ್ಯಾಗ ನಿಂತಿ
  ಸಿದ್ದ ಪ್ರಸಿದ್ದರ ಗುದ್ದ ಹೊಗಿಸಿದಿ

- ಮುಳ್ಳ, ಬೇಲಿಗೂ ಹೂವಿನ ಹಳದಿ
  ಬಣ್ಣದ ಹೆಸರು ಬದಲು ಮಾಡಿದಿ

- ಹರಕ ಹುಬ್ಬಿನ ತಿರುಕರ ಅರಸಾ
  ಡೊಳ್ಳು ಹೊಟ್ಟಿಯ ಹಸಿದವರರಸಾ

ಕಂಬಾರರು ದೈನಂದಿನ ಬದುಕಿನ ಶಬ್ದ ಚಿತ್ರಗಳನ್ನು, ರೂಪಕಗಳನ್ನು ಅರ್ಥಪೂರ್ಣವಾಗಿ ಬಳಸಿದ್ದಾರೆ. ಇಲ್ಲಿ ಬರುವ ಒಂದೊಂದು ಮಾತು, ರೂಪ, ಗುಣ, ದ್ರವ್ಯ, ಮನೋಧರ್ಮ-ಇವೆಲ್ಲಕ್ಕೂ ವಿಶಿಷ್ಟವಾದ ಸಂವೇದನೆ ಉಂಟು ಎನ್ನುವುದನ್ನು ನಾವು ಲಕ್ಷ್ಯದಲ್ಲಿಡಬೇಕು. ಕಂಬಾರರು ಒಂದೂ ಪದಗಳನ್ನು ಪೋಲು ಮಾಡದೆ ಹಿತ ಹಿತವಾಗಿ ಉಪಯೋಗಿಸಿ ಭಾವ ಹೆಚ್ಚಾಗಿ ಹೊಳೆಯುವಂತಾಗಿದೆ. ಪದದಿಂದ ಪದಕ್ಕೆ ಭಾವ ಹದಗೊಂಡು ಅರ್ಥಘಟ್ಟಿಸಿ ನಿಲ್ಲುತ್ತದೆ; ಕಾವ್ಯಬಂಧಕ್ಕೂ ಬಿಗಿಯೊದಗಿಸುತ್ತದೆ.

ಕಟ್ಟಿದ ಗೊಂಡೆಗೆ ಕಳಸ ವೇರಿತೊ
ಬದುಕಿದ ಜೀವ ಕಥೆಯಾಗಿತೊ
ಬಟಾಬಯಲಿನಾಗ ಮಟಾಮಾಯಾಗಿ
ಬೆಂಕಿ ಆರಿ ಬಿರಿ ಬೆಳಕುಳಿದಿತ್ತೊ

ಮಂದಾನಿಲಯದ ಓಟ ಕವನದ ಉದ್ದಕ್ಕೂ ಇದೆ. ನವುರಾದ ಭಾವಗಳನ್ನು ಅಷ್ಟೇ ನವುರಾದ ರೀತಿಯಲ್ಲಿ ಮಾತಿನ ಕುಸುರಿನಿಂದ ಕೆತ್ತಿ ನಿಲ್ಲಿಸಿದ ಪ್ರತಿಮಾ ಶಿಲ್ಪ ಮುಟ್ಟಿದರೆ ಮಾಸು ವಂತಹದು. 'ಕಂಡಿ', 'ಕಟ್ಟಿದಿ', 'ಕೊಂಡಿ', 'ಹೆಂಗ', 'ಹಳದಿ', 'ಮಾಡಿದಿ' ಪದ್ಯದ ಸಾಲುಗಳ ಕೊನೆಗೆ ದ್ವಿರುಕ್ತಿಗಳಾಗಿ ಬರುವ ಈ ಪದಗಳು ಅಭಿನಯದೊಂದಿಗೆ ಮಾತಿನಲ್ಲಿ ಹಿಡಿದಿಡ ಲಾಗಿದೆ. ಅಂತಹ ಆಡುಮಾತಿನ ಪದಗಳ ಕಸುವನ್ನೂ ಔಚಿತ್ಯವನ್ನೂ ಈ ಸಂದರ್ಭದಲ್ಲಿ ಗಮನಿಸಬೇಕು. ಕವನ, ನಾದಗುಣ, ಲಯ ಇವು ಈ ಕವನದ ಪ್ರಧಾನ ಗುಣಗಳಾಗಿವೆ. ಪ್ರಾಸದ ಎಳೆದ 'ಡ' ಕಾರದ ಮೇಲೆ ಕೊಡುವ ಒತ್ತು ಇರುವುದರಿಂದ ಕವನದ ಭಾವ ಪ್ರತೀತಿ ಕಿವಿಗೆ ಅಪ್ಪಳಿಸುತ್ತದೆ. ಭಾಷೆ ಹೀಗೆ ತನ್ನ ಪರಿಚಿತತೆಯನ್ನು ಕಳೆದು ಕೊಂಡು ಕವಿ ನೀಡುವ ಅಪರಿಚಿತ ಭಾವದ ಸಂವೇದನೆಗಿಡಾದಾಗ ಅದು ಕಾವ್ಯಭಾಷೆ ಯಾಗುತ್ತದೆ.

ಒಂದು ಹೋಗಿ ಮತ್ತೊಂದು ಆದಾವೋ
ಗುರುತಿನ ಹೆಸರು ಬದಲಿಯಾದಾವೋ
ಕಾರಮೋಡಗಳ ಕಿಡಿಸುರದಾವೋ
ಹಸನು ಮಾಡಿ ಹರಗಿದ ಹೊಲದಾಗ
ಬಗಸಿನಲೆ ಬಿತ್ತಿ ದನಿಕಿಲೆ ಎಳದಾರ

ಲಾವಣಿ ಶಿಲ್ಪದಲ್ಲಿ ಸಾಗುವ ಈ ಕವನ ಹಳ್ಳಿಯ ಬದುಕನ್ನು ಚಿತ್ರಿಸುತ್ತದೆ. ಕಂಬಾರರು ತಮ್ಮ ಪರಿಸರದ ಜನಪದ ಲೋಕವನ್ನು ಕಂಡವರು. ತಮ್ಮ ಕಿವಿಗಳಿಂದಲೇ ಜೀವನ ಸಂಗೀತ

ವನ್ನು ಕೇಳಿದವರು. ಆದ್ದರಿಂದ ಅವರ ಕವನಗಳು ಜೀವನದ ಅಂಗವಾಗಿಯೇ ಮೂಡಿ ಬಂದಿವೆ. ಬದುಕಿನಿಂದಲೇ ನೇರವಾಗಿ ಎತ್ತಿಕೊಂಡ ಉಪಮೆ, ರೂಪಕಗಳು ಕಂಬಾರರ ಕಾವ್ಯದ ಗಣಿಗಳಾಗಿವೆ. ಭಾಷೆಯ ಸಮರ್ಪಕ ಸಂಯೋಜನೆಯನ್ನು ಅವರ ಹೆಚ್ಚಿನ ಕವನಗಳಲ್ಲಿ ಕಾಣಬಹುದಾಗಿದೆ. ನಾಟಕೀಯವಾದ ಶೈಲಿ, ಪದಗಳನ್ನು ಹೊಸೆಯುವ ರೀತಿ, ಅಲ್ಲಲ್ಲಿ ಬರುವ ಪುರಾಣ ಪ್ರತಿಮೆಗಳು, ಘೋಷಲಯ, ಕೆಲವೊಂದು ಕಡೆ ಬಳಸುವ ವಿಶಿಷ್ಟವಾದ ನುಡಿಗಟ್ಟುಗಳು ಇವೆಲ್ಲವೂ ಕಂಬಾರರ ಕಾವ್ಯಭಾಷೆಯಲ್ಲಿ ಕಾಣಿಸುವ ವಿಶೇಷವಾದ ಅಂಶಗಳಾಗಿವೆ. ಕಂಬಾರರು ಅರ್ಥಾನುಸಾರಿಯಾದ ನಾಟಕೀಯ ಭಾಷೆಯ ಮೂಲಕ ಕಾವ್ಯಾನು ಭವದ ಶಿಖರವನ್ನು ಕಂಡವರು. ಕಾವ್ಯದಲ್ಲಿ ನಾದಮಯತೆಯನ್ನು ತರುವುದಕ್ಕಾಗಿಯೇ ಕಂಬಾರರು ಈ ನಾಟಕೀಯ ಶೈಲಿಯನ್ನು ಕಾವ್ಯದಲ್ಲಿ ಅಳವಡಿಸಿದರು. ಜತೆಗೆ ಪದಗಳ ಜೊತೆಗೆ ಆಟವಾಡುತ್ತ, ಗುದ್ದಾಡುತ್ತ ಪದ ಪದಗಳ ಚಕಮಕಿಯಲ್ಲಿ ಹೊಸ ಅರ್ಥವನ್ನು ಹೊಳೆಯಿಸುತ್ತ ಅನುಭವವನ್ನು ಅದರ ಉತ್ಕಟ ಸ್ಥಿತಿಗೆ ಕೊಂಡೊಯ್ಯುವುದು ಕಂಬಾರರ ಕಾವ್ಯ ಭಾಷೆಯ ವಿಶಿಷ್ಟತೆಯಾಗಿದೆ.

ಕಂಬಾರರ ಕಾವ್ಯಭಾಷೆಯು ಕನ್ನಡದ್ದೇ ಆದ ಪದಗಳನ್ನು ಬಳಸುವ ಮೂಲಕವೇ, ನಮ್ಮ ಸಂಸ್ಕೃತಿಯ ಬೇರುಗಳನ್ನು ಉಳಿಸಿಕೊಳ್ಳಬೇಕು ಎನ್ನುವ ಹಂಬಲಕ್ಕೆ ಪೂರಕವಾಗಿ, ಬೆಳಗಾವಿ ಪರಿಸರದಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಮತ್ತು ದೈನಂದಿನ ಬದುಕಿನಲ್ಲಿ ವ್ಯವಹಾರಕ್ಕಾಗಿ ಬಳಸುವ ನುಡಿಗಟ್ಟುಗಳು ಅವರ ಕಾವ್ಯದಲ್ಲಿ ಸಹಜವಾಗಿ ಬಳಕೆಯಾಗಿ ಕಾವ್ಯದ ಶಕ್ತಿ ಹೆಚ್ಚಿಸಿವೆ.

ಅಖಾಡಕ್ಕಿಳಿಸು	-	ವಾದಕ್ಕಿಳಿಸು, ಹೊಡೆದಾಟಕ್ಕಿಳಿಸು
ಇಕ್ಕಟ್ಟಾಗು	-	ತೊಂದರೆಯಾಗು
ಕಾಲಹಾಕು	-	ಜೀವ ಸಾಗಿಸು
ಕಾಲುಕೀಳು	-	ಹೊರಡು, ಸ್ಥಳಬಿಡು
ಕೈಮೇಲೆ ಕೈಹಾಕು	-	ಆಣೆಮಾಡು, ಭಾಷೆ ಹಾಕು
ಗುದುಮುರಿಗಿ	-	ತೆಕ್ಕೆ ಮುರಿಬೀಳು
ಬಣ್ಣಕಳೆ	-	ಮಾನಕಳೆ
ಮಸ್ತಾಗಿರು	-	ಹೆಚ್ಚಾಗಿಯಾಗಿರು, ಅಧಿಕವಾಗಿರು

ಇಂತಹ ನೂರಾರು ನುಡಿಗಟ್ಟುಗಳನ್ನು ಕಂಬಾರರು ತಮ್ಮ ಕಾವ್ಯಕಟ್ಟುವಿಕೆಯಲ್ಲಿ ಬಳಸುತ್ತಾರೆ. ಸಂಸ್ಕೃತಿಯ ಒಳಹೊಗುವಿಕೆಯ ಮೂಲಕ ರೂಪಿತವಾದ ನುಡಿಗಟ್ಟುಗಳು ಕನ್ನಡ ಭಾಷೆಯ ಸೊಗಡನ್ನು ತನ್ನ ಒಡಲಲ್ಲಿ ಹೊತ್ತುಕೊಂಡಿರುತ್ತವೆ. ಕನ್ನಡ ಭಾಷೆಯ ಅರ್ಥದ ಬಹುನೆಲೆಗಳನ್ನು, ಧ್ವನಿ ಪರಂಪರೆಯ ಅನಂತ ಸಾಧ್ಯತೆಗಳನ್ನು ನುಡಿಗಟ್ಟುಗಳಲ್ಲಿ ಕಾಣಬಹುದು. ಇಲ್ಲಿ ಶೀಲ, ಅಶ್ಲೀಲ ಭೇದವಿಲ್ಲ, ಜಾತಿ-ಪಂಥಗಳ ವ್ಯತ್ಯಾಸವಿಲ್ಲ. ಕೆಲವೇ ಪದಗಳಲ್ಲಿ ಅನೇಕ ಅರ್ಥಗಳನ್ನು ತುಂಬುವ ಮತ್ತು ಭಾಷೆಗೆ ಮಾಂತ್ರಿಕ ಶಕ್ತಿಯನ್ನು ಕೊಡುವ

ನುಡಿಗಟ್ಟುಗಳು ಆಧುನಿಕ ಕನ್ನಡಕ್ಕೆ ಶಕ್ತಿ ತುಂಬುತ್ತವೆ. ನಮ್ಮ ಸಂಸ್ಕೃತಿಯ ಬೇರುಗಳನ್ನು ಉಳಿಸಿಕೊಳ್ಳಬೇಕು ಎನ್ನುವ ಹಂಬಲಕ್ಕೆ ಪೂರಕವಾಗಿ ಕಂಬಾರರು ಬಳಸಿದ ನುಡಿಗಟ್ಟುಗಳನ್ನು ಮತ್ತೆ ಮತ್ತೆ ಬಳಸುವ ಅಗತ್ಯವಿದೆ. ಅತ್ಯಧಿಕ ಪ್ರಮಾಣದಲ್ಲಿ ಅರ್ಥದ ಸಾಧ್ಯತೆಗಳನ್ನು ಉಳ್ಳಂತಹ ಭಾಷೆಯೇ ಕಾವ್ಯ ಎನ್ನುವ ಮಾತಿಗೆ ಜೀವಂತ ಉದಾಹರಣೆಗಳು ಕಂಬಾರರ ಕಾವ್ಯದಲ್ಲಿ ದೊರೆಯುತ್ತವೆ.

ಕನ್ನಡ ಭಾಷೆಯು ಬೇರೆ ಬೇರೆ ವಲಯಗಳಲ್ಲಿ ಬೇರೆ ಬೇರೆ ರೀತಿಯಾಗಿ ಬಳಕೆಯಾಗಿ ಬೆಳವಣಿಗೆ ಹೊಂದುತ್ತಿದೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳಲ್ಲಿ ಭಾಷೆ ಬಳಕೆಯಾಗುವಾಗ ಧ್ವನ್ಯುಚ್ಚಾರಣೆಯಿಂದ, ಪದರಚನೆಯಿಂದ ಹಿಡಿದು ವಾಕ್ಯರಚನೆಯವರೆಗೆ ಬದಲಾವಣೆ ಕಂಡುಬರುತ್ತದೆ. ಆ ವೇಳೆಯಲ್ಲಿ ಹೊಸಪದಗಳು ಭಾಷೆಗೆ ಬಂದು ಸೇರುತ್ತವೆ. ಹಳೆಯ ಪದಗಳು ಬಿದ್ದು ಹೋಗಿ ಹೊಸ ಅರ್ಥದಲ್ಲಿ ಬಳಕೆಯಾಗುತ್ತವೆ. ಅಭಿವ್ಯಕ್ತಿಗೆ ಮತ್ತು ಗ್ರಹಿಕೆಗೆ ತೊಂದರೆ ಉಂಟಾಗದಂತೆ ಭಾಷಾ ಸಮುದಾಯಕ್ಕೆ ಸ್ಪಂದಿಸುವಂತೆ ಭಾಷಿಕರ ಸಂವಹನಕ್ಕೆ ಸಹಾಯಕವಾಗಲು ಭಾಷಿಕರ ಭಾಷಾಮನೋವೃತ್ತಿಗಳಲ್ಲಿ ಬದಲಾವಣೆಯನ್ನು ತರುವುದು ಭಾಷಾ ಆಧುನೀಕರಣದ ಮುಖ್ಯ ಉದ್ದೇಶವಾಗಿದೆ. ಶ್ರೇಷ್ಠ ಸೃಜನಶೀಲ ಬರೆಹಗಾರರು ತಮ್ಮ ಅನುಭವದ ಮೂಲಕ ಹಲವಾರು ಹೊಸ ಪದಗಳನ್ನು ಸೃಷ್ಟಿಸಿ ತಮ್ಮ ಬರೆಹಗಳಲ್ಲಿ ಬಳಸುತ್ತಾರೆ. ಅಂತಹವರಲ್ಲಿ ಕಂಬಾರರು ಒಬ್ಬರು. ಕಂಬಾರರು ತಮ್ಮ ಕಾವ್ಯದಲ್ಲಿ ಹಲವಾರು ಹೊಸಪದಗಳನ್ನು ಸೃಷ್ಟಿಸಿ ಕನ್ನಡ ಶಬ್ದಕೋಶ ವಿಸ್ತರಣೆಗೆ ಹಾಗೂ ಕನ್ನಡ ಭಾಷೆಯ ಆಧುನೀಕರಣಕ್ಕೂ ಕಾರಣರಾಗಿರುವುದು ಗಮನಾರ್ಹ. ಕಂಬಾರರು ಕನ್ನಡ ಭಾಷಾ ಭಂಡಾರದಲ್ಲಿರುವ ಮೂಲರೂಪಗಳ ಸಹಾಯದಿಂದ ಹೊಸ ಪದಗಳನ್ನು ನಿರ್ಮಿಸಿ ತಮ್ಮ ಕಾವ್ಯದಲ್ಲಿ ಬಳಸಿದ್ದಾರೆ:

ಚಟ್ಟಾಗು - ನಾಶವಾಗು. ಚಟ್ ಎಂದು ಮುರಿದು ಬೀಳುವ ಅನುಕರಣ ಶಬ್ದವೇ ಇಲ್ಲಿ ಚಟ್ಟು ಆಗಿದೆ. ಮುರಿದು ಬೀಳುವ ಕ್ರಿಯೆ ನಾಶವನ್ನು ಸೂಚಿಸುತ್ತದೆ.

ತಾಳತಪ್ಪು - ಹೊಂದಾಣಿಕೆ ತಪ್ಪು, ವಿರಸವಾಗು

ದನಿದಟ್ಟ - ಶಕ್ತಿಯುತ, ಸತ್ವಯುತ

ಬೆನ್ನುಗಾಳಿ - ಹಿಂದಿನಿಂದ ಬೀಸುವ ಗಾಳಿ

ಬರವೇಗ - ಬಹಳ ವೇಗ

ಬಾಳುಗೆಡು - ಹಾಳಾಗು, ಕೆಟ್ಟು ಹೋಗು

ಬಾವುಣಿಸು - ಆದರಿಸು, ಪ್ರೀತಿಯಿಂದ ಉಪಚರಿಸು

ವಾಲಾಡು - ಬಳುಕಾಡು

ಇಂತಹ ಹಲವಾರು ಪದಗಳು ಕಂಬಾರರ ಕಾವ್ಯದಲ್ಲಿ ಕಂಡುಬರುತ್ತವೆ. 'ಇಸು' ಪ್ರತ್ಯಯ ಮೊದಲು ಕ್ರಿಯಾಧಾತುಗಳಿಗೆ ಮಾತ್ರ ಹತ್ತಿ ಪ್ರೇರಣಾರ್ಥಕವನ್ನು ಕೊಡುತ್ತಿತ್ತು. ಉದಾ. ಮಾಡಿಸು, ಓಡಿಸು, ಕಾಡಿಸು ಮುಂತಾದುವು. ಕಂಬಾರರ ಕವನಗಳಲ್ಲಿ ನಾಮರೂಪಗಳಿಗೂ 'ಇಸು' ಪ್ರತ್ಯಯ ಹತ್ತಿ ಕ್ರಿಯಾರೂಪಗಳನ್ನು ಸಾಧಿಸುವ ಪ್ರವೃತ್ತಿ ಕಂಡುಬಂದಿದೆ. 'ನೀವಾಳಿಸು' (ದೃಷ್ಟಿತೆಗೆ), 'ಹರ್ಷಿಸು' (ಸಂತೋಷ ಪಡಿಸು). ಕನ್ನಡದ ಕೆಲವು ರೂಪಗಳಿಗೆ- 'ಇಕೆ' ಪ್ರತ್ಯಯ ನೇರವಾಗಿ ಹಚ್ಚಬಹುದು. ಹೇಳಿಕೆ (ದೇವರ ವಾಕ್ಯ), ಕೇಳಿಕೆ ಮುಂತಾದವು. ಕಂಬಾರರ ಸೃಜನಶೀಲ, ಅನುಭವಶೀಲ ಮನಸ್ಸು ಮತ್ತು ಪ್ರಯೋಗಶೀಲ ಗುಣಗಳಿಂದಾಗಿ ಅಚಾನಕವಾಗಿ, ಅನಿರೀಕ್ಷಿತವಾಗಿ ಹೊಸ ಪದಗಳನ್ನು ಸೃಷ್ಟಿಸಿದ್ದಾರೆ. ಆ ಮೂಲಕ ಕನ್ನಡ ಭಾಷೆಯ ಬೆಳವಣಿಗೆಗೆ ಕಾರಣರಾಗಿದ್ದಾರೆ.

ಕಂಬಾರರು ಕಾವ್ಯ ಕಟ್ಟುವ ಸಂದರ್ಭದಲ್ಲಿ ಒಂದು ಕಡೆ ಸಂಸ್ಕೃತದ ಆಕ್ರಮಣ ಇನ್ನೊಂದು ಕಡೆ ಇಂಗ್ಲಿಶ್ ಪ್ರಭಾವದಲ್ಲಿ ನರಳುತ್ತಿದ್ದ ಕನ್ನಡ ಭಾಷೆಗೆ ಜೀವ ತುಂಬುವ ಹಾಗೆ ಬರೆಯುವುದು ಅನಿವಾರ್ಯವೂ ಸವಾಲೂ ಆಗಿತ್ತು. ಪ್ರಯೋಗಶೀಲ ಮನೋಭಾವದ ಕವಿ ಇದನ್ನೆಲ್ಲ ಎದುರಿಸಿ ನಿಲ್ಲುತ್ತಾನೆ. ಕಂಬಾರರ ಸಾಧನೆ ಇರುವುದೆ ಇಲ್ಲಿ. ವ್ಯಾವಹಾರಿಕ ಭಾಷೆಗೆ ಹೊಸರೂಪವನ್ನು ಕೊಡುವ ಮೂಲಕ ಭಾಷೆಗೆ ಹೊಸಶಕ್ತಿ ತುಂಬಿದರು. ನಾದಮಯತೆಯೇ ಇಲ್ಲದಿದ್ದ ಗ್ರಾಂಥಿಕ ಭಾಷೆಗೆ ಕಂಬಾರರು ದೇಸಿಯ ಲಯವನ್ನು ಕಸಿ ಮಾಡುವ ಮೂಲಕ ಹೊಸಭಾಷೆಯನ್ನು ಸೃಷ್ಟಿಸಿದರು. ಈ ಪ್ರಕ್ರಿಯೆ ಕಂಬಾರರ ಒಟ್ಟು ವಿಶಿಷ್ಟತೆಯನ್ನು ಸೂಚಿಸುತ್ತದೆ. ಕಂಬಾರರು ಕಾವ್ಯವನ್ನು ಮಾತಿನ ಲಯಕ್ಕೆ ಹತ್ತಿರ ತಂದಿದ್ದಾರೆ. ಅದಕ್ಕೆ ಪ್ರಾದೇಶಿಕ ವೈವಿಧ್ಯತೆಯ ಶಬ್ದಗಳು ಅವರ ಕಾವ್ಯದ ಉದ್ದಕ್ಕೂ ದೊರೆಯುತ್ತವೆ ಎಂಬುದರ ಬಗ್ಗೆ ಬೇರೆ ಹೇಳಬೇಕಾಗಿಲ್ಲ. ಕೆಲವೊಂದನ್ನು ಇಲ್ಲಿ ಕೊಡಲಾಗಿದೆ.

ಅಟಕ	- ಇಕ್ಕಟ್ಟು	ಖಾತ್ರಿ	- ವಿಶ್ವಾಸ
ಅನ್ನೆ	- ದೋಷ	ಗಪ್ಪ	- ಸುಮ್ಮನೆ
ಅಬ್ರು	- ಮರ್ಯಾದೆ, ಗೌರವ	ಗುಡಿ	- ದೇವಸ್ಥಾನ
ಅರಿಬಿ	- ಬಟ್ಟೆ	ಗುಲ್ಲ	- ಗಲಾಟೆ, ಸಪ್ಪಳ
ಒಲ್ಲಿ	- ದೋತರ	ಚಲೊ	- ಒಳ್ಳೆಯ, ಚೆನ್ನಾಗಿ
ಐತಿ	- ಇದೆ	ಗಿಂಡಿ	- ಲೋಹದ ಚಿಕ್ಕಪಾತ್ರೆ
ಕಸರ	- ದೋಷ	ತಾಕೀತ	- ಸೂಚನೆ
ಕುವ್ವತ್ತ	- ಶಕ್ತಿ, ಸಾಮರ್ಥ್ಯ	ನೀ	- ನೀನು
ಭಾಳ	- ಬಹಳ	ಮಾಡ	- ಮೋಡ

ಮುಂತಾದ ಅನೇಕ ಶಬ್ದಗಳು ಕಂಬಾರರ ಕಾವ್ಯದಲ್ಲಿ ಸಹಜವಾಗಿ ಬಳಕೆಯಾಗಿವೆ. ಕವಿ ಇಂತಹ ಆಡುರೂಪಗಳನ್ನು ಬಳಸುವುದರಿಂದ ಸಹೃದಯರಿಗೆ ಹೆಚ್ಚು ಹತ್ತಿರವಾಗುತ್ತಾರೆ.

ಆ ಮೂಲಕ ಭಾಷಾ ಸಂಕೀರ್ಣತೆಯನ್ನು ದೂರಮಾಡಿ ಹೆಚ್ಚು ಘನವಾಗುವ ವಿಚಾರಗಳನ್ನು ದ್ರವರೂಪಗೊಳಿಸಿ ನಿಚ್ಚಳವಾಗಿ ಕವಿತೆಯ ಆಶಯ ಜನರಿಗೆ ಅರ್ಥವಾಗುವಂತೆ ಮಾಡುತ್ತಾನೆ ಎನ್ನುವುದು ಕಾವ್ಯದಲ್ಲಿ ಪ್ರಾದೇಶಿಕ ಶಬ್ದಗಳ ಬಳಕೆಯ ಮಹತ್ವವನ್ನು ತಿಳಿಸುತ್ತದೆ. ಭಾಷೆಯ ಕ್ರಿಯಾಶೀಲತೆಗೆ ಆಡುರೂಪಗಳ ಬಳಕೆ ಅಗತ್ಯವಾಗಿವೆ. ಆಡುರೂಪಗಳು ಬರವಣಿಗೆಯ ರೂಪವನ್ನು ಪಡೆದುಕೊಂಡಿರುವುದು ಭಾಷೆಯ ಬೆಳವಣಿಗೆಯ ಹಾಗೂ ಭಾಷೆಯ ಆಧುನೀಕರಣದ ಲಕ್ಷಣವಾಗಿದೆ. ಆಡುಮಾತಿನ ಲಯದಿದ ಕೂಡಿದ ಸಂಭಾಷಣೆಯು ಕಂಬಾರರ ಭಾಷೆಯ ಇನ್ನೊಂದು ವೈಶಿಷ್ಟ್ಯವಾಗಿದೆ. 'ಕುದುರೀ ಸಿದ್ದ' ಕವನದ ಭಾಷೆ ಗಮನಿಸಿ.

ಕೇಳೀರೇ ನರಿ ಕತಿಯ ಕೇಳೀರೇನು|
ಕುದುರೀ ಸಿದ್ಧನ ಕತಿಯ ಕೇಳೀರೇನು||

ಒಂದಾನೊಂದೂರಾಗ ಸರದಾಗ ಇದ್ದಾ
ಅವನ ನಾಮಾಂಕಿತ ಕುದುರೀ ಸಿದ್ಧ
ಕಣ್ಣಾಗ ಮಿಂಚೀನ ಚೂರಿ ಇಟಗೊಂಡಿದ್ದ
ಎದೆಯಾಗಿನ ದಯಮಾಯ ಒಣಗಿಸಿದ್ದ
. . . .
. . . .
ಹಿಂಗs ಸಾಗಿರವಾಗಿ ಮುಂದೀನ ಕತಿ ಕೇಳ್ರಿ
ತಿಳಿಯsದು ದೈವದ ಗೂಢ
ಸೊಕ್ಕ್ಯಾವ ಕುದುರಿ ಸೊರಗ್ಯಾನ ಹುಡುಗಾ
ಕರಗ್ಯಾನ ಚಿಂತೀಯ ಒಳಗ

ಇಂತಹ ಸಂಭಾಷಣೆ ಮೂಲಕ ಸಾಗುವ ಸನ್ನಿವೇಶಗಳಲ್ಲಿ ಕ್ಲಿಷ್ಟ ಪದಗಳಿಲ್ಲ ಅರ್ಥಮಾಡಿ ಕೊಳ್ಳಲಿಕ್ಕೆ ಯಾವ ತೊಡಕು ಇಲ್ಲ. ಆಯಾ ಸನ್ನಿವೇಶದ ವಸ್ತು, ಘಟನೆ, ದೃಶ್ಯ ಸಹೃದಯರ ಮುಂದೆ ನಿಲ್ಲುವಂತೆ ಮಾಡಬಲ್ಲ ವಾಸ್ತವ ನಿರೂಪಣೆಗಳಿವು. ಸಂಭಾಷಣೆಯೂ ಭಾವಪೂರ್ವವಾಗಿ, ನಿರರ್ಗಳವಾಗಿ ಸಾಗುತ್ತದೆ. ವಾಸ್ತವಿಕ ಜೀವನವನ್ನು ಪ್ರತಿಬಿಂಬಿಸು ವಂತಹ ಈ ಕವನಗಳ ಆಡುಮಾತಿನ ಶೈಲಿಯಿಂದ ಕೂಡಿವೆ. ನಮ್ಮ ಪರಿಸರದಲ್ಲಿ ನಡೆಯುತ್ತಿ ರುವ ಸಂಗತಿಯಾಗಿ ನಮ್ಮ ಕಣ್ಮುಂದೆ ನಿಲ್ಲುತ್ತದೆ. ದೇಸಿ ಛಂದಸ್ಸಿನ ಕಕ್ಷೆಯಲ್ಲಿ ಇಂತಹ ಗೀತೆಗಳು ಅಭಿವ್ಯಕ್ತಗೊಂಡಿವೆ. 'ಹೇಳತೇನ ಕೇಳ'ದಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ

ಹೇಳತೇನ ಕೆಳ ಗೆಳೆಯಾ ನಿನ್ನ ಮುಂದ ಕತಿಯೊಂದ
ನನ್ನ ಮುಂದ ಕುಂದ್ರ ಹೀಂಗ ತೆರದ ಮನಾ

ಇಂತಹ ಪದಗಳು ಸಹೃದಯರ ಗಮನವನ್ನು ಸೆಳೆಯುತ್ತವೆ. ಮುಂದಿನದನ್ನು ಕೇಳಬೇಕು ಎನ್ನುವುದರತ್ತ ಕೇಳುಗರ ಕುತೂಹಲವನ್ನು ಸೆಳೆಯುತ್ತವೆ. ಇಂತಹ ವಾಕ್ಯರಚನೆಯಲ್ಲಿ

ಗೀಗೀ, ಲಾವಣಿ, ಬಯಲಾಟದ ಮಟ್ಟುಗಳ ಪ್ರಭಾವ ಕಂಬಾರರ ಮೇಲೆ ಆಗಿದೆ. ಕಂಬಾರರು ದೇಶಿಯ ಸತ್ವವನ್ನು ಮೈಗೂಡಿಸಿಕೊಂಡ ಕವಿ ಗ್ರಾಮೀಣದ ಭಾಷೆ ಮತ್ತು ಬದುಕು ಅವರ ಕಾವ್ಯದಲ್ಲಿ ಜೀವಂತವಾಗಿದೆ. ಹೀಗಾಗಿ ಅವರ ಕಾವ್ಯದಲ್ಲಿ ಹಲವಾರು ಅನುಭವೋಕ್ತಿಗಳು ಪಾತ್ರಗಳ ಮಾತಿನ ಮೂಲಕ ಅಭಿವ್ಯಕ್ತಗೊಂಡಿವೆ.

- ಬೆಳದಿಂಗಳೊಳಗಿನ ತಿಳಿನೀರ ಝುರಿ ಹಂಗ
  ಭರಭರ ಹರಿದಾವ ಮುಂದ ಮುಂದಕ
  ಗುಡ್ಡದs ಮ್ಯಾಗೀನ ಫಡಿ ಉರುಳಿ ಬಿದ್ದಾಂಗ
  ಕೂಗ ಹೊಡದ ಓಡ್ಯಾನ ಹಿಂದ ಹಿಂದಕ
- ಆಡೇನೆಂದರ ನಾಲಿಗಿಲ್ಲ, ಓಡುದಕಿಲ್ಲ
  ಮೈಮುಳ್ಳ ಎದ್ದಾವ ಕೊರಿ ಬೇಲಿ
  ದಳದಳ ಸುರಿದಾವ ಬೆವರ ಹೊಳಿ; ನಿಂತಾನ
  ಚಿತ್ರದ ಒಳಗಿನ ಗೊಂಬೀ ನಮುನಿ

ಗ್ರಾಮೀಣ ಪರಿಸರದ ಜನರ ರೀತಿ-ನೀತಿಗಳನ್ನು ಅವರು ಬದುಕಿನಲ್ಲಿ ಅನುಭವಿಸಿದ ಭಾವನೆಗಳನ್ನು ಅನುಭವೋಕ್ತಿಗಳು ಚೆನ್ನಾಗಿ ಚಿತ್ರಿಸುತ್ತವೆ. ಆ ಉಕ್ತಿಗಳ ಹಿಂದೆ ಜೀವನವನ್ನು ಕಂಡುಂಡ ಜನಪದರ ಮನಸ್ಸಿನ ತಾತ್ವಿಕ ಚಿಂತನೆಯ ಸ್ವರೂಪವನ್ನು ಗುರುತಿಸಬಹುದಾಗಿದೆ. ಇಂತಹ ವಿಶಿಷ್ಟ ಪ್ರಯೋಗಗಳಲ್ಲಿ ಜಾನಪದ ಭಾಷೆಯ ಸತ್ವ, ಸೊಗಡು ಎದ್ದುಕಾಣುತ್ತದೆ. ಕಂಬಾರರು ಇತಿಹಾಸ, ಐತಿಹ್ಯ, ಸ್ಥಳಪುರಾಣ ಮುಂತಾದ ಘಟನಾವಿಶೇಷಗಳನ್ನು ಚೆನ್ನಾಗಿ ಬಳಸಿಕೊಳ್ಳುವುದರ ಮೂಲಕ ಅನುಭವೋಕ್ತಿಗಳನ್ನು ಬಳಸಿದ್ದಾರೆ. ಸಾಮಾನ್ಯವಾಗಿ ಇವು ಕವಿಯ ಅಭಿವ್ಯಕ್ತಿಯಲ್ಲಿ ಸಾಲಿನಿಂದ ಸಾಲಿಗೆ ಸಂಭಾಷಣೆಯಂತೆ ಸಾಗುತ್ತವೆ. ತನ್ಮೂಲಕ ಕಾವ್ಯ ಸೌಂದರ್ಯಕ್ಕೆ ಕಾರಣವಾಗುತ್ತವೆ. ಕಂಬಾರರು ಸಂದರ್ಭಕ್ಕೆ ತಕ್ಕಂತೆ ಆಯಾ ಸನ್ನಿವೇಶ ಗಳನ್ನು ಸ್ವಭಾವೋಕ್ತಿ ಹಾಗೆ ಚಿತ್ರಿಸುವಾಗಿ ಅನುಕರಣವಾಚಕಗಳನ್ನು, ದ್ವಿರುಕ್ತಿಗಳನ್ನು ಬಳಸುತ್ತಾರೆ. ಇವು ಅವರ ಕಾವ್ಯಕ್ಕೆ ಕಳೆತಂದಿವೆ.

ಪಿರಿಪಿರಿ ಓಡಿಬಂದಿ
ಖಳಾಖಳಾ ಹೊಳಿತಿ
ಮಿರಿಮಿರಿ ಮಿಂಚತಿ
ಮರಾಮರಾ ಮರಗತಾನ
ದೊಡ್ಡಮರಾಮರಾ ಐತಿ
ಹಿಂದಕ ಹಿಂದಕ ಬಂದ
ಮುಂದಕ ಮುಂದಕ ಹೋದ
ಬಿರಬಿರನೆ ಹೊರಗಡೆ ಹೋದ
ನೀರು ನೀರೇ ನೀನು

ಎಲ್ಲೀದ್ದೀಯ ಮುದುಕಿ? ಎಲ್ಲಿದ್ದೀಯೆ?
ಬಗೆ ಬಗೆಯ ಧಗೆ
ಹಸಿಒದ್ದೆ ಮಾಡಿಕೊಂಡು ಸಾವಳಗಿ ಮಠದ ತನಕಾ
ಜಗಲಿಕಟ್ಟೆ ಮಟಾ

ಮುಂತಾದ ಉದಾಹರಣೆಗಳನ್ನು ನೋಡಿದಾಗ ಅನುಕರಣ ವಾಚಕಗಳು, ದ್ವಿರುಕ್ತಿಗಳು ಕ್ರಿಯೆಯನ್ನು ಅಭಿನಯಿಸುವಂತೆ ಭಾಸವಾಗಿ ಕಾವ್ಯದ ಸೌಂದರ್ಯವನ್ನು ಹೆಚ್ಚಿಸಿವೆ. ಇವು ಕಲಾತ್ಮಕವಾಗಿ ಸಹಜವಾಗಿ ಮೂಡಿಬಂದಿವೆಯೇ ಹೊರತು ಹೊರೆಯಾಗಿ ಬಂದಿಲ್ಲ. ಇದು ಕಂಬಾರರ ಕಾವ್ಯದ ವೈಶಿಷ್ಟ್ಯಗಳಲ್ಲಿ ಒಂದಾಗಿದೆ. ಕಂಬಾರರು ಸಂಭಾಷಣೆಯ ಸಂದರ್ಭದಲ್ಲಿ ಕೆಲವು ಸಂಬೋಧನೆಗಳನ್ನು ತರುತ್ತಾರೆ. ಇವುಗಳ ರಚನೆ ಸರಳವಾಗಿದ್ದರೂ ಕಾವ್ಯದಲ್ಲಿ ಬಳಕೆಯಾದಾಗ ಅರ್ಥಪೂರ್ಣವಾಗಿರುತ್ತದೆ.

- ಅಕ್ಕಾ ಅಕ್ಕಾ ಅಂದು ಗಪಗಪಾತಿಂದ
- ಗೆಳೆಯಾ ಕೇಳು!
- ಅಂಬಿಗಾರಣ್ಣಾ
- ಯಾರೋ ನೀನು
- ಗೆಳೆಯಾ ಮುಂದೆ

ಇಂತಹ ಮಾತುಗಳು ಹಾಡು ಹೇಳಿ ಹಾಡಿನಲ್ಲಿರುವ ಅರ್ಥವನ್ನು ಹೆಚ್ಚು ಸ್ಪಷ್ಟಗೊಳಿಸಲು ಮಾತು ಬೆಳೆಸುತ್ತವೆ. ತರ್ಕಬದ್ಧವಾಗಿ, ಗಟ್ಟಿಯಾಗಿ ಹೇಳಬೇಕಾದದ್ದನ್ನು ಹೇಳುತ್ತಾರೆ. ಇಂತಹ ಬಂಧುಸೂಚಕಗಳು, ಸಂಬೋಧನೆಗಳು ತುಂಬ ನೈಜವಾಗಿರುತ್ತವೆ. ಆಡುಮಾತಿನ ಲಯವನ್ನು ಕಂಬಾರರು ತಮ್ಮ ಕಾವ್ಯರಚನೆಗೆ ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಕಂಬಾರರು ಇಂತಹ ಹೊಸಭಾಷಾ ಪ್ರಯೋಗಗಳನ್ನು ಮಾಡುವುದರ ಮೂಲಕ ಸ್ವಂತಿಕೆಯನ್ನು ಕಂಡುಕೊಳ್ಳಲು, ಕಾವ್ಯಸೀಮೆಯ ಹರಹನ್ನು ವಿಸ್ತರಿಸಿದ್ದಾರೆ. ತನ್ಮೂಲಕ ಕಂಬಾರರು ಕಾಲದ ಸವಾಲುಗಳನ್ನು ನಿರಂತರವಾಗಿ ಎದುರಿಸುವ ಮೂಲಕ ಹೊಸಪ್ರಯೋಗಗಳನ್ನು ಮಾಡಿದ್ದಾರೆ.

ಕಾವ್ಯದ ಸೃಷ್ಟಿಕ್ರಿಯೆಯಲ್ಲಿ ಭಾಷೆಯ ಸ್ಥಾನ ಪ್ರಮುಖವಾದುದು. ಅದು ಕಾವ್ಯದ ಸೃಷ್ಟಿಕ್ರಿಯೆಯಲ್ಲಿ ಹೇಗೆ ದುಡಿಯುತ್ತದೆಂಬುದನ್ನು ಈಗಾಗಲೇ ಗಮನಿಸಲಾಗಿದೆ. ವ್ಯಾವಹಾರಿಕ ಭಾಷೆಯೇ ಕವಿಯ ಕೈಯಲ್ಲಿ ಹಿಂದಿನ ವೇಷವನ್ನು ಕಳಚಿ ಹೊಸರೂಪವನ್ನು ಪಡೆದುಕೊಳ್ಳುತ್ತದೆ. ಪ್ರತಿಭಾವಂತ ಕವಿ ಸೊಗಡನ್ನು ಕಾವ್ಯದ ಮೂಲಕ ಬಿಂಬಿಸುತ್ತಾನೆ. ಮಹತ್ವಾಕಾಂಕ್ಷೆಯುಳ್ಳ ಕವಿಯಾಗಿದ್ದರೆ ಭಾಷೆಯಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಾ ಹೋಗುತ್ತಾನೆ. ಭಾಷೆ ರೂಢಿಯಲ್ಲಿ ಎಷ್ಟೇ ಸವಕಲಾಗಿದ್ದರೂ ಸರಿ ಅದನ್ನೇ ಎತ್ತಿಕೊಂಡು ಅದಕ್ಕೆ ತಕ್ಕಂತಹ ಭಾಷೆಯನ್ನು ಹುಡುಕಿ ಪ್ರಯೋಗಿಸುವ ಮೂಲಕ ಕಾವ್ಯದ ಗಡಿಗಳನ್ನು ವಿಸ್ತರಿಸುತ್ತಾ ಹೋಗುತ್ತಾನೆ. ಕಾಲದ ಒತ್ತಡಕ್ಕೆ ಮಣಿಯದೇ ಹೊಸ ದಾರಿಗಳನ್ನು

ಹುಡುಕುತ್ತಾ ಹೋಗುತ್ತಾನೆ. ಕವಿಯ ಪ್ರಯೋಗಶೀಲತೆಗೆ ತಕ್ಕಂತೆ ಭಾಷೆ ಬದಲಾಗುತ್ತಾ ಹೋಗುವುದು ಸಾಮಾನ್ಯ ಕ್ರಿಯೆಯಾಗಿದೆ.

ತಮ್ಮ ಕಾವ್ಯಾನುಭವಕ್ಕೆ ಸಮರ್ಥ ರೀತಿಯಲ್ಲಿ ಅಭಿವ್ಯಕ್ತಿ ನೀಡಲು ತಕ್ಕ ಲಯವೊಂದನ್ನು ಕಂಬಾರರು ಕಂಡುಕೊಂಡಿದ್ದಾರೆ. ಅವರ ಕಾವ್ಯ ಸ್ವಚ್ಛಂದ ಛಂದಸ್ಸಿನಲ್ಲಿ ಇರುವಂತೆ ಕಂಡರೂ ಅಲ್ಲಿ ನಿರ್ದಿಷ್ಟವಾದ ಲಯ ಅರ್ಥಾನುಸಾರಿಯಾಗಿ ಇರುವುದು ಕಾಣಸುತ್ತದೆ. 'ಘೋಷ ಲಯ' ಕಂಬಾರರ ಕಾವ್ಯದಲ್ಲಿ ಮುಖ್ಯವಾಗಿ ಕಾಣಸುವ ಲಯವಾಗಿದೆ. ಏಕಪ್ರಕಾರವಾಗಿ ತರಂಗದ ರೀತಿಯಲ್ಲಿ ಕಿವಿಗೆ ಬಡಿಯುತ್ತಿರುವ ಮೂಲಕ ವಸ್ತುವಿನ ಘನತೆಯನ್ನೂ ಗಾಂಭೀರ್ಯವನ್ನೂ ಸೂಚಿಸುತ್ತದೆ. ಅದುವರೆಗೆ ಇದ್ದ ಲಯದಿಂದ ಕನ್ನಡ ಕಾವ್ಯವನ್ನು ಪಾರು ಮಾಡುವ ಕಂಬಾರರು ಇನ್ನೊಂದು ದಿಕ್ಕಿಗೆ ಕಾವ್ಯವನ್ನು ಒಯ್ದಿದ್ದಾರೆ. ಲಯ ಶಬ್ದದಲ್ಲಿ ಅರ್ಥದ ಕ್ರಿಯೆಯನ್ನು, ಶಬ್ದದ ಅರ್ಥ ಬದುಕಿನ ಒಂದು ಬೆಲೆಯನ್ನು ಧ್ವನಿಸುವಂತೆ ಆದಾಗ ಕಾವ್ಯದಲ್ಲಿ ಲಯಗಳು ಹಾಲು-ಸಕ್ಕರೆಯಂತೆ ಬೆರೆತಿರುವುದು ಗೊತ್ತಾಗುತ್ತದೆ. ಅಂದರೆ ಛಂದಸ್ಸಿನ ದೃಷ್ಟಿಯಿಂದಲೂ ಕಂಬಾರರ ಸಾಧನೆ ಅಪೂರ್ವವಾಗಿದೆ.

ಅಂತಹ ಛಂದಸ್ಸನ್ನು ಬಳಸಬೇಕು; ಇಂತಹ ಛಂದಸ್ಸನ್ನು ಬಳಸಬೇಕು ಎನ್ನುವುದಕ್ಕಿಂತ ಹೆಚ್ಚಾಗಿ ಕವಿದೃಷ್ಟಿ ಭಾವಕ್ಕೆ ಉಚಿತವಾದ ಲಯಗಳನಷ್ಟೆ ಬಳಸಬೇಕೆನ್ನುವ ಮನೋವೃತ್ತಿ ಕಂಬಾರರದು. ಈ ದೃಷ್ಟಿ ಮೂಡುತ್ತಿದ್ದಂತೆ ಕಂಬಾರರ ಕಾವ್ಯಛಂದಸ್ಸು ಮುಕ್ತ ಛಂದಸ್ಸಾಯಿತು. ಜನಪದ ಮಟ್ಟುಗಳ ಪ್ರಭಾವ ಅವರ ಬರವಣಿಗೆಯ ಹಿನ್ನೆಲೆಗಿದ್ದೇ ಇದೆ. ಕಂಬಾರರು ಶಕ್ತಿಯುತವಾದ ರೀತಿಯಲ್ಲಿ ಜನರ ಹೃದಯಕ್ಕೆ ಮುಟ್ಟುವಂತೆ ಕಾವ್ಯ ಬರೆದರು. ಕಂಬಾರರು ಗದ್ಯಲಯದಿಂದ ಪದ್ಯಲಯವನ್ನು ಕಸಿ ಮಾಡಿ ಪದ್ಯವನ್ನು ಜೊತೆಗೆ ಭಾಷೆಯನ್ನು ಜೀವಂತವಾಗಿಡುವ ಯತ್ನಕ್ಕೆ ಕೈಹಾಕಿದರು. ಹೀಗಾಗಿ ಅವರ ಛಂದಸ್ಸು ಆಡುಮಾತಿನ ಲಯಗಳಿಂದ ಶಕ್ತವೂ ಅರ್ಥಪೋಷಕವೂ ಆಗುತ್ತಬಂದಿತು.

ತಕರಾರಿನವರು ಸ್ವಾಮೀ
ನಾವು ತಕರಾರಿನವರು
ತಕರಾರನುಟ್ಟು ತಕರಾರು ತೊಟ್ಟು
ಮಸಡಿಗೆ ತೆರೆಗಣ್ಣು ಕಿಸಬಾಯಿ
. . . .

ಕಂಬಾರರು ಐದು ಮಾತ್ರೆಯ ಲಯವನ್ನು ಚೆನ್ನಾಗಿ ಬಳಸಿದರು. ಅದು ಹೆಚ್ಚಾಗಿ ಆಡುಮಾತಿನ ಲಯಕ್ಕೆ ಹೆಚ್ಚು ಹತ್ತಿರವಿರಬಹುದೆಂದು ತೋರುತ್ತದೆ. ಇನ್ನೊಂದು ಮುಖ್ಯ ಅಂಶವೆಂದರೆ ಐದು ಮಾತ್ರೆಯ ಗಣದ ವಿಸ್ತಾರ ಎರಡು, ಮೂರು ಮತ್ತು ನಾಲ್ಕು ಮಾತ್ರೆಯ ಗಣಗಳನ್ನು ವಿಭಿನ್ನ ಗಣ ಸಂಯೋಜನೆಗಳಿಂದ ತನ್ನೊಳಗೆ ಸೇರಿಸಿಕೊಂಡು ಬಿಡಬಹುದಾದ ವಿಸ್ತಾರ ಈ ಗಣಗಳಿರುವುದೂ ಇದಕ್ಕೆ ಕಾರಣವಿರಬೇಕು.

ಒಂದು ಗಳಿಗೆಯಾಯಿತು
ಎರಡು ಗಳಿಗೆಯಾಯಿತು
ಎರಡು ಹೋಗಿ ಮೂರು ಗಳಿಗೆಯಾಯಿತು
ಹೊತ್ತು ಮುಳುಗಿ ಕತ್ತಲಾಯಿತು
ನೀನು ಬರಲಿಲ್ಲ ಜಂಗಮ
ಅಂದಗೆಟ್ಟವು ನಮ್ಮ ಅಂದಗಳೆಲ್ಲವೂ
ತಂಗಳಾಯಿತು ನಮ್ಮ ಚೆಲವು
ಉರಿದುರಿದು ಎಣ್ಣೆಯಲೇ ಮುಳುಗಿ
ಆರಿಹೋದ ಬತ್ತಿಯಂತಾಯಿತ್ತು
ಪ್ರೀತಿಯಲ್ಲಿ ಮುಳುಗಿದ ನನ್ನ ಬಾಳು
ಬರಲಾರೆಯೇನೋ ಅಲೆಮಾರಿ ಜಂಗಮಾ?

ಇಲ್ಲಿಯ ಲಯ ಹೊಸಗನ್ನಡ ಕಾವ್ಯದಲ್ಲಿ ನಡೆದ ಒಂದು ಅಪೂರ್ವಯತ್ನದ ಫಲ. ಪದ್ಯವಾಗಿದ್ದು ಗದ್ಯದಿಂದ ಕೈಕೊಸರಿಸಿಕೊಳ್ಳದ ಇಲ್ಲಿಯ ಲಯ ಹೇಳತೇನ ಕೇಳದಿಂದ ಆರಂಭವಾಗಿ ಕುದರೀ ಸಿದ್ಧ, ಕಾಡುಕುದುರಿಯಂತಹ ಕವಿತೆಗಳಲ್ಲಿ ಅಪೂರ್ವ ಸಿದ್ಧಿಯನ್ನು ಪಡೆದು ನಿಂತಿತು. ಅನಾವಶ್ಯಕ ಪ್ರತ್ಯಯಗಳನ್ನು ಕಳಚಿ ಎಸೆದು ಅರ್ಥಾಭಿವ್ಯಕ್ತಿಗೆ ಎಷ್ಟು ಬೇಕೊ ಅಷ್ಟೆ ಪದ, ಪ್ರತಿಮೆ, ಲಯಗಳನ್ನು ಬಳಸಿದ್ದರಿಂದ ಇವರ ಕವಿತೆಗೆ ಪ್ರಾಪ್ತವಾದ ಅರ್ಥ ಮತ್ತು ಲಯಗಳ ಅಪೂರ್ವಸಿದ್ಧಿ ಕನ್ನಡದ ಹೆಮ್ಮೆಯ ವಿಷಯ. ಕವಿ ಬಳಸುವ ಪದ, ಪದಪುಂಜಗಳು ಮತ್ತು ಲಯ ಹೇಗೆ ಕವಿಯ ಅನುಭವವನ್ನು ಅಭಿನಯಿಸಿ ತೋರಿಸುತ್ತಿವೆ. ಉದಾಹರಣೆಗೆ ನೋಡಿ :

ಕಟ್ಟಿರುವ ಕಣ್ಣಿ ಹರಕೊಂಡು, ಘುರಕೀ ಹೊಡೆದು
ಹಿಡಿಯ ಬಂದಣ್ಣಾಗಳ ಕೊಸರಿ, ಕೈಮೀರಿ
ಉದ್ಗಾರ ಕೊರೆ ಬೇಲಿ ಹಾರಿ ಹೋ ಹೋ
ಬಂತು ಹಂಡ ಹೋರಿ
ಮುಸಮುಸನೆ ಮುಸಮುಸನೆ ತೇಗುವುದು;
ಕಿಸಮೂಗಿನಿಂದ ಬಸಿಯುವುದು ಸೊಕ್ಕು ಹುಣ್ಣಿಮೆಯ
ಜೇನು ಹುಟ್ಟಿನ ತೊಟಕು ತೊಟಕು

ಇಲ್ಲಿ 'ಕಟ್ಟಿರುವ ಕಣ್ಣಿ' ಎಂಬ ಮಾತಿನ ಅನಂತರ ಬರುವ 'ಘುರಕೀ ಹೊಡೆದು' ಎನ್ನುವ ಮಾತುಗಳಲ್ಲಿ 'ಕೊಸರಿ ಕೈಮೀರಿ' ಹೋರಿ ಓಡುವುದನ್ನು ಚಿತ್ರಿಸುತ್ತದೆ. 'ಮುಸಮುಸನೆ ಮುಸಮುಸನೆ' ಎಂಬ ಅನುಕರಣ ಶಬ್ದ 'ತೇಗು' ಎನ್ನುವ ಕ್ರಿಯಾಪದ ಇವುಗಳ ಸಂಯೋಜನೆ ಸಹೃದಯರ ಗಮನ ಸೆಳೆಯುತ್ತವೆ. ಕಂಬಾರರು ಛಂದಸ್ಸಿನ ಜೊತೆ ಜೊತೆಗೇ ಭಾಷೆಯ ಸಮಕಾಲೀನ ಗೊಳಿಸುತ್ತ ಬಂದವರು. ಆಡುಮಾತುಗಳನ್ನು ಇವರಷ್ಟು ಅರ್ಥಪೂರ್ಣವಾಗಿ

ಬಳಸಿಕೊಂಡವರ ಕಡಿಮೆ. ಪ್ರಾದೇಶಿಕ ಶಬ್ದಗಳನ್ನು ಬಳಸಿಕೊಂಡು ಕನ್ನಡ ಅಭಿವ್ಯಕ್ತಿ ಶಕ್ತಿಯನ್ನೇ ಹೆಚ್ಚಿಸುತ್ತಿರುವ ಇವರ ಸಾಧನೆ ಕನ್ನಡ ಭಾಷೆಯನ್ನು ಬೆಳೆಸುವ ಪ್ರಯತ್ನವೂ ಆಗಿದೆ. ಭಾಷೆಯನ್ನು ಬೆಳೆಸುವುದು ಎಂದರೆ ಅದರ ಅಭಿವ್ಯಕ್ತಿ ಶಕ್ತಿಯನ್ನು ಹೆಚ್ಚಿಸುವುದು ತಾನೆ? ಕಂಬಾರರು ಮುಕ್ತಛಂದಸ್ಸಿನ ಫಲವಾಗಿ ಉಂಟಾಗಬಹುದಾದ ಲಯದ ಏಕತಾನತೆಯನ್ನು ನಿವಾರಿಸಕೊಳ್ಳುತ್ತಾರೆ. ಆಡುಮಾತಿನ ಜೀವಸ್ವರಗಳಿಗೆ ಸದಾ ಕಿವಿ ತೆರೆದಿರುವ ಕವಿ ಇವರು. ಅವರ ಕವಿತೆಗಳನ್ನು ಹಾಡಬಹುದು; ಹಾಡಿದಾಗ ಕವಿತೆಯ ಸ್ವಾರಸ್ಯಕ್ಕೆ ಕುಂದಾಗುವುದಿಲ್ಲ. ಇಂತಹ ಕವಿತೆಗಳಲ್ಲಿ ಗೇಯತೆಗೆ ಯಾವುದೇ ತೊಂದರೆಯಾಗುವುದಿಲ್ಲ. 'ಸಾವಿರದ ನೆರಳು' ಕವನ ಸಂಕಲನದಲ್ಲಿಯೂ ಇಂತಹ ಒಂದೆರಡು ಕವಿತೆಗಳಿವೆ 'ಕುದುರೀ ಸಿದ್ದ' ಇದಕ್ಕೆ ಒಳ್ಳೆಯ ನಿದರ್ಶನವಾಗಿದೆ. ಆಡುಮಾತಿನ ಪದಪುಂಜಗಳನ್ನು ಮತ್ತು ಲಯವನ್ನು ಪಡೆದಿರುವ ಈ ಕವಿತೆಗಳು ತಮ್ಮ ಪರಿಮಿತಿಯಲ್ಲಿ ಉದ್ದೇಶಿಸಿದುದನ್ನು ಸಾಧಿಸಿ ಸಾರ್ಥಕವಾಗಿವೆ. ಕಂಬಾರರು ತಮ್ಮ ಕಾವ್ಯದಲ್ಲಿ ಭಾಷೆ ಮತ್ತು ಛಂದಸ್ಸುಗಳ ಶಕ್ತಸಂಸ್ಕಾರ ಹಾಗೂ ಸಾಧನೆಗಳನ್ನು ತೋರಿದ್ದಾರೆ. ಗದ್ಯದಿಂದ ದೂರ ಹೋಗದೆ ಗದ್ಯದ ಸಂಭಾಷಣಾ ರೀತಿ, ಕನ್ನಡ ಜಾಯಮಾನದ ಮುರಿಮುರಿಯಾದ ವಾಕ್ಯರಚನಾ ಶೈಲಿ, ಗದ್ಯದ ಮಂದಗತಿ ಮತ್ತು ವೈವಿಧ್ಯ ಇವುಗಳನ್ನು ಬಳಸಿಕೊಂಡೇ ಇವರ ಕವಿತೆಗಳು ಹುಟ್ಟುತ್ತಿವೆ.

ಮರದ ಬೇರಿಗೆ
ಮೌನದಲ್ಲೇ ಮಜಾ

ಎಲೆಗೆ ಸದ್ದೇ ಬೇಕು
ಗಾಳಿಯಿಲ್ಲದಿದ್ದರೆ
ಕೊತ ಹಕ್ಕಿಯ ಕತ್ತು ಹಿಸುಕಿಯಾದರೂ
ಸದ್ದು ಮಾಡುತ್ತದೆ

ಇನ್ನು ಹೂವಿನ ಮಾತುಕತೆ ಬಿಡು
ಬೆರಗದ ಧರೆಗೇ ಗೊತ್ತು

ಮರದ ಸದ್ದಿನ ಚಲನೆ ಲಯದಲ್ಲಿ ಅಭಿನಯವಾಗುತ್ತಿರುವುದನ್ನು ನೋಡಿದರೆ ಕಂಬಾರ ಛಂದಸ್ಸಿನ ಸಾಧನೆ ಮನವರಿಕೆಯಾಗುತ್ತದೆ. ಶಬ್ದ ಅಥವಾ ಲಯಗಳು ಯಾವುವೂ ಭಾರವಾಗದೆ ಭಾಷೆ ಓದುಗನೊಡನೆ ನೇರ ಸಂಪರ್ಕ ಸಾಧಿಸಲು ಸಿದ್ಧವಾಗಿದೆ. ಕಂಬಾರರು ಕನ್ನಡ ಭಾಷೆಯ ಮಿಡಿತಗಳನ್ನು ಚೆನ್ನಾಗಿ ಗುರುತಿಸಬಲ್ಲವರು. ಜನಪದ ಮಟ್ಟುಗಳ ಪರಂಪರೆಯನ್ನು ಚೆನ್ನಾಗಿ ಅರಿತವರು. ಅದರಿಂದಲೇ ಇವರು ಕನ್ನಡದ ಲಯವನ್ನು ಹಿಡಿಯುವಲ್ಲಿ ವಿಸ್ಮಯಕರವಾದ ಸೂಕ್ಷ್ಮಪ್ರಜ್ಞೆಯನ್ನು ಮೆರೆಯುತ್ತಾರೆ. 'ಹೇಳತೇನ ಕೇಳ' ಸಂಕಲನದಲ್ಲಿ ಕಂಬಾರರು ಶುದ್ಧಗೇಯ ರೂಪವಾದ ಲಾವಣಿಯ ಪ್ರಕಾರವೊಂದನ್ನು ಕಥನ ಕವನಕ್ಕೆ ಸಮರ್ಥಮಾಧ್ಯಮವಾಗಿ ಬಳಸಿಕೊಂಡಿರುವುದು ಮುಖ್ಯವಾದುದಾಗಿದೆ. ಅವರು

ತರುವ ಪ್ರಾಸ, ಒಳಪ್ರಾಸಗಳು ಅರ್ಥಪೂರ್ಣವಾಗಿವೆ; ನಾದಮಯವಾಗಿವೆ. ಕಾವ್ಯವನ್ನು ಅರ್ಥಮಾಡಿಕೊಳ್ಳುವಲ್ಲಿ ಅವು ತುಂಬ ಸಹಕಾರಿಯಾಗಿವೆ.

ಕಂಬಾರರ 'ಗಂಗಾಮಾಯಿ' ಕವಿತೆ ಮಾತ್ರ ಛಂದಸ್ಸಿನ ದೃಷ್ಟಿಯಿಂದ ಗಮನಾರ್ಹವಾಗಿದೆ. ಈ ಸಾಲುಗಳನ್ನು ನೋಡಿ:

> ಕೆಂಪಾನ ಕೆಂಪು ಗುಡ್ಡ, ಬೆಳ್ಳಾನ ಬಿಳಿಗುಡ್ಡ ಒಡಮುರಿದು ಕೂಡಿದ
> ಒಡ್ಡಿನಲ್ಲೇ ನಮ್ಮೂರ ಕೆರೆ: ಹೆಸರು ಗಂಗಾಮಾಯಿ
> . . . .
> ಘನಮಹಿಮಳು ತಾಯಿ, ತಾಮ್ರದ ದುಡ್ಡನದಿದ್ದ ತಕ್ಷಣವೆ
> ಕಿಲುಬಿಸುವಾಕೆ; ಬೆಳಗಿದರೆ ಬಂಗಾರ ಇಲ್ಲವೆ ಅಂಥ ಭ್ರಮೆಯ
> ಹುಟ್ಟಿಸುವಾಕೆ; ಬಂಗಾಲದ ಜಾದೂಗಾರರಿಗೆ ಬಾಣಂತಿ ಕೈ
> ಒದಗಿಸಿದಾಕೆ; ಮೂರೇ ಗುಟುಕಿಗೆ ಬಂಜೆಯರ ಗರ್ಭಗಟ್ಟಿಗೊಳಿಸಿದಾಕೆ
> . . . .

ಗೇಯತೆಯನ್ನು ಕಳೆದುಕೊಳ್ಳದೆಯೇ ಆಡುಮಾತಿಗೆ ಸಮೀಪವಾಗಿರುವುದು ಇದರ ವೈಶಿಷ್ಟ್ಯ. ಜಾನಪದಲಯಗಳನ್ನು ಹಾಗೂ ಆಡುಮಾತಿನ ಲಯಗಳನ್ನೇ ಒಂದಕ್ಕೊಂದು ಹೊಸೆದು ಕಾವ್ಯಕ್ಕೆ ಬಳಸಿಕೊಳ್ಳಲು ಯತ್ನಿಸುತ್ತಿರುವುದು ಕಂಬಾರರ ಕಾವ್ಯ ಛಂದಸ್ಸಿನ ದೃಷ್ಟಿಯಿಂದ ಗಮನಾರ್ಹವಾಗಿದೆ ಎನ್ನಬಹುದು. ಭಾಷೆ ಮತ್ತು ಛಂದಸ್ಸಿನ ನೆಲೆಯಲ್ಲಿ ಕಂಬಾರರ ಸಾಧನೆಯನ್ನು ಒಟ್ಟಾಗಿ ಹೀಗೆ ಗುರುಸಬಹುದು.

೧ ಆಧುನಿಕ ಸಂವೇದನೆಗೆ ತಕ್ಕುದಾದ ಹೊಸಭಾಷೆಯನ್ನು ಸೃಷ್ಟಿಸಿದುದು.
೨ ಬಯಲಾಟ, ಲಾವಣಿ ಮುಂತಾದ ಜನಪದ ಮಟ್ಟುಗಳ ಪ್ರಭಾವದ ಮೂಲಕ ಗ್ರಾಂಥಿಕ ಭಾಷೆಗೆ ಹೊಸರೂಪವನ್ನು ಕೊಟ್ಟಿದ್ದು.
೩ ಶ್ಲೇಷೆ, ಘೋಷಲಯ, ನಾಟಕೀಯತೆ ಮುಂತಾದವುಗಳನ್ನು ಕಾವ್ಯದಲ್ಲಿ ಸಮರ್ಥವಾಗಿ ದುಡಿಸಿಕೊಳ್ಳುವುದರ ಮೂಲಕ ಭಾಷೆ ನವೀನಗೊಳಿಸಿದ್ದು.
೪ ಭಾಷೆಯ ಮೂಲಕವೇ ಕಾವ್ಯವನ್ನು ಅರ್ಥಮಯತೆಯಿಂದ ನಾದದ ನೆಲೆಗೆ ಕೊಂಡೊಯ್ದದ್ದು.
೫ ಭಾಷೆ-ಭಾವಗಳನ್ನು ಹದವರಿತು ಬೆರೆಸುವ ಮೂಲಕ ಭಾಷೆಯ ಮೂಲಕ ಹೋರಾಟ ಮಾಡುವ ಮೂಲಕ ಅನುಭವವನ್ನು ಸಾಫಲ್ಯಗೊಳಿಸುವ ಕ್ರಿಯೆಯಲ್ಲಿ ಯಶಸ್ವಿಯಾದದ್ದು.
೬ ಆಡುಭಾಷೆಯ ಸಾಧ್ಯತೆಗಳನ್ನು ದುಡಿಸಿಕೊಂಡಿದ್ದಾರೆ. ಆ ಮೂಲಕ ನಾದ ಮಯತೆಯೇ ಇಲ್ಲದಿಂದ ಗ್ರಾಂಥಿಕ ಭಾಷೆಗೆ ಪ್ರಾದೇಶಿಕ ಸಂಸ್ಕೃತಿಯ ಲಯಗಳನ್ನು ಕಸಿ ಮಾಡುವ ಮೂಲಕ ಭಾಷೆಯ ಮಹತ್ವದ ನೆಲೆಯನ್ನು ಹುಡುಕಿದುದು.
೭ ಕಂಬಾರರು ಭಾವಗೀತೆಗಳಿಂದ ಭಾಷೆಯಲ್ಲಿ ಕಥನದ ನೆಲೆಗೆ ಒತ್ತುಕೊಟ್ಟಿದ್ದಾರೆ.

೮ ಛಂದಸ್ಸಿನ ನಿಯಮಗಳ ತೊಡಕುಗಳನ್ನೆಲ್ಲ ನಿವಾರಿಸಿಕೊಂಡ ಕಂಬಾರರ ಕವನಗಳು ಮುಕ್ತಛಂದಸ್ಸಿನ ಕಕ್ಷೆ ಬರುತ್ತವೆ. ಗೇಯತೆ, ಛಂದೋಗತಿ, ಆಡುಮಾತಿನ ಲಯವನ್ನು ಕಂಬಾರರು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಕಂಬಾರರು ಹಿಂದಿನ ಕವಿಗಳ ಭಾಷಾಪ್ರಯೋಗವನ್ನು ದೃಷ್ಟಿಯಲ್ಲಿಟ್ಟುಕೊಂಡು ಅದನ್ನು ವಿಸ್ತರಿಸುವ ಕೆಲವು ಸಂದರ್ಭದಲ್ಲಿ ಅದನ್ನು ಮೀರುವ ದಿಟ್ಟ ಹೆಜ್ಜೆಗಳನ್ನು ಇಟ್ಟಿದ್ದಾರೆ. ಹೀಗೆ, ಕಂಬಾರರು ಭಾಷಾಪ್ರಯೋಗದಲ್ಲಿ ಬೆಳವಣಿಗೆಯನ್ನು, ಛಂದೋಲಯದಲ್ಲಿ ವೈವಿಧ್ಯತೆಯನ್ನು ಸಾಧಿಸಿದ್ದಾರೆ.

ಕಂಬಾರರು ಬೇಂದ್ರೆ, ಬೆಟಗೇರಿ ಅವರ ಕಾವ್ಯದ ಪ್ರಭಾವಗಳನ್ನು ಪಡೆದುಕೊಳ್ಳುತ್ತಲೇ ಅದನ್ನು ಮೀರಿ ಬೆಳೆದವರು. ಭಾಷೆ, ಛಂದಸ್ಸು, ವಸ್ತು, ಧ್ವನಿ, ಪ್ರತಿಮೆ ಎಲ್ಲವೂ ಕಂಬಾರರ ಕಾವ್ಯದಲ್ಲಿ ಭಿನ್ನವಾಯಿತು. ಸಮಕಾಲೀನ ಸಂದರ್ಭಕ್ಕೆ ಅನುಗುಣವಾಗಿ ಕಾವ್ಯ ಇರಬೇಕಾದುದು ಅನಿವಾರ್ಯ ಎಂಬ ಅರಿವಿನಲ್ಲಿ ಬರೆದ ಕಂಬಾರರಲ್ಲಿ 'ವರ್ತಮಾನ' ಕಾವ್ಯದ ಕೇಂದ್ರ ನೆಲೆಯಿತ್ತು. 'ಆಧುನಿಕ ಮನುಷ್ಯ' ಕವನದ ನಾಯಕನಾದ. 'ಆಧುನಿಕ ವ್ಯವಸ್ಥೆ' ಕಾವ್ಯದ ನೆಲೆಯಾಯಿತು. ವಸ್ತುವಿಗೆ ತಕ್ಕಂತೆ ಭಾಷೆ ಕೂಡಾ ಬದಲಾಗಬೇಕಾದದ್ದು ಅನಿವಾರ್ಯ ಎಂಬ ಧೋರಣೆ ಇಟ್ಟುಕೊಂಡಿದ್ದ ಕಂಬಾರರು ಅದುವರೆಗೂ ಕಾವ್ಯದ ಬಗ್ಗೆ ಇದ್ದ ಎಲ್ಲ ಛಂದೋನಿಯಮಗಳನ್ನು ಮುರಿದು ವಸ್ತುವಿಗೆ ತಕ್ಕಂತಹ ಲಯವನ್ನು ಕಂಡುಕೊಂಡರು. ಬಯಲಾಟದ ಪ್ರಮುಖ ಅಂಶಗಳಾದ ಶ್ಲೇಷೆ, ಸಂಭಾಷಣೆ, ನಾಟಕೀಯತೆಯ ಅಂಶಗಳನ್ನು ಗ್ರಾಂಥಿಕ ಭಾಷೆಯ ಜತೆ ಕಸಿ ಮಾಡುವ ಮೂಲಕ ಹೊಸಭಾಷೆಯನ್ನು ಸೃಷ್ಟಿಸಿದರು. ಘೋಷಲಯಗಳನ್ನು ಕಾವ್ಯದಲ್ಲಿ ಬಳಸಿಕೊಂಡರು. ಆದರೂ ಕೂಡಾ ಈ ಹೊಸಭಾಷೆಗೆ ಸಂಪೂರ್ಣವಾದ ನಾದಮಯತೆ ಇಲ್ಲವಾದ ಕಾರಣ ಈ ಕೊರತೆಯನ್ನು ತುಂಬಿಕೊಳ್ಳುವುದಕ್ಕೆ ಬೇಕಾಗಿ ಕಾವ್ಯವನ್ನು ಅರ್ಥದ ನೆಲೆಯಿಂದ ನಾದದ ನೆಲೆಗೆ ಕೊಂಡೊಯ್ದರು. ಇದು ಕಂಬಾರರ ಮಹತ್ವದ ಸಾಧನೆಯಾಗಿದೆ. ಕಂಬಾರರ ಕಾವ್ಯದಲ್ಲಿ ಯಾವುದೂ ಬೇರೆ ಬೇರೆಯಲ್ಲ. ಎಲ್ಲ ಅಂಶಗಳೂ ಒಟ್ಟಾಗಿ ದುಡಿಯುವ ಮೂಲಕ ಭಾಷೆಯ ಮೂಲಕವೇ ಅನುಭವದ ಆಳಕ್ಕಿಳಿಯುವುದರಲ್ಲಿ ಕಂಬಾರರು ಸಫಲರಾಗಿದ್ದಾರೆ. ಕಂಬಾರರ ಕಾವ್ಯದ್ದು ನಾದಮಯವಾದ ಮುಕ್ತಛಂದಸ್ಸು. ನಾದಕ್ಕೆ ತಕ್ಕಂತೆ ಭಾಷೆಯ ಲಯ ಹೊಂದಿಕೊಳ್ಳುತ್ತ ಕಾವ್ಯಾನುಭವ ಬೆಳೆಯಲು ಅನುವು ಮಾಡಿಕೊಡುತ್ತದೆ. ಹೀಗೆ ಹೊಸಭಾಷೆಯ ಮೂಲಕ ಕಂಬಾರರು ಸಹೃದಯರ ಸಂವೇದನೆಯನ್ನು ಚುರುಕುಗೊಳಿಸಿದರು. ಆ ಮೂಲಕ ಭಾಷೆಯ ಸಾಧ್ಯತೆಗಳನ್ನು ಹಿಗ್ಗಿಸಿದರು. ಕನ್ನಡ ಕಾವ್ಯ ಹೊಸದಿಕ್ಕಿನ ಕಡೆಗೆ ನೋಡುವಂತೆ ಮಾಡಿದರು. ವೈವಿಧ್ಯಮಯವಾದ ಭಾಷಾಪ್ರಯೋಗಗಳ ಮೂಲಕ ಸಹೃದಯರ ಗಮನಸೆಳೆದರು.

ಹೀಗೆ, ಕಂಬಾರರು ನಿರಂತರವಾದ ಪ್ರಯೋಗಶೀಲತೆಯ ಮೂಲಕ ಮತ್ತು ಕಾಲ ಕಾಲಕ್ಕೆ ಭಾಷೆಯಲ್ಲಿ ಹೊಸತನವನ್ನು ತರುವ ಮೂಲಕ ತಮ್ಮದೇ ಆದ ವಿಶಿಷ್ಟತೆಯನ್ನು

ಕಾಯ್ದುಕೊಂಡಿದ್ದಾರೆ. ಕಾಲದ ಸವಾಲುಗಳನ್ನು ಎದುರಿಸುವ ಮೂಲಕ ಹೊಸಕವಿಗಳಿಗೆ ಪ್ರೇರಣೆಕೊಟ್ಟಿದ್ದಾರೆ. ಬೆಳಗಾವಿ ಪರಿಸರದ ಜನಪದ ಮಟ್ಟುಗಳನ್ನೇ ಗ್ರಾಂಥಿಕ ಭಾಷೆಗೆ ಬೆರೆಸುವ ಹೊಸಭಾಷೆಯನ್ನು ಸೃಷ್ಟಿಸುವ ಮೂಲಕ ಇದು 'ಕಂಬಾರರ ಭಾಷೆ'; ಇದು 'ಕಂಬಾರರ ಕಾವ್ಯ' ಎನಿಸುವಷ್ಟರ ಮಟ್ಟಿಗೆ ಭಾಷಾಪ್ರಯೋಗದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ. ಈ ನಿರಂತರ ಪ್ರಯೋಗಗಳು ಕನ್ನಡ ಕಾವ್ಯದಲ್ಲಿ ಮೈಲುಗಲ್ಲು ಇದ್ದ ಹಾಗೆ. ಅವರ 'ಹೇಳತೇನ ಕೇಳ', 'ಕುದುರೀ ಸಿದ್ಧ', 'ಕಾಡುಕುದರಿ' ಮೊದಲಾದ ಕವಿತೆಗಳು ಕನ್ನಡಿಗರ ಮನಸ್ಸಿನಲ್ಲಿ ಸದಾಕಾಲ ಉಳಿಯುತ್ತವೆ. ಈ ಕವನಗಳಲ್ಲಿರುವ ಸಫಲವಾದ ಭಾಷಾಪ್ರಯೋಗದಿಂದಲೇ ಇವು ಕನ್ನಡ ಕಾವ್ಯದ ಮಹತ್ವದ ಕವನಗಳಾಗಿವೆ. ಒಂದು ಕಾವ್ಯ ಪರಂಪರೆಯ ಸಾರವನ್ನು ಹೀರಿಕೊಂಡು ಕಂಬಾರರು ಬರೆದರು. ಆ ಪರಂಪರೆ ಜಿಡ್ಡು ಗಟ್ಟಿದಾಗ ಹೊಸಮಾರ್ಗವನ್ನು ಕಂಡುಕೊಂಡರು. ಭಾಷೆಯ ನೆಲೆಯಲ್ಲಿ ಅವರು ಮಾಡಿದ ಪ್ರಯೋಗಗಳು, ವೈವಿಧ್ಯಮಯವಾದ ಲಯಗಳ ಬಳಕೆ ಮೊದಲಾದ ಅಂಶಗಳು ಕನ್ನಡ ಕಾವ್ಯಕ್ಕೆ ಮಹತ್ವದ ಕೊಡುಗೆಯಾಗಿವೆ. ತತ್ಪರಿಣಾಮವಾಗಿ ಭಾಷಾಬಳಕೆಯಕಲ್ಲಿ ಕಂಬಾರರ ಕಾವ್ಯಮಾರ್ಗ ಕಾಲೂರಿನಿಂತಿತು.

ಆಕರಗ್ರಂಥ

೧. ಚಂದ್ರಶೇಖರ ಕಂಬಾರರ ಸಮಗ್ರ ಕಾವ್ಯ, ೨೦೧೧, ಸಪ್ನ ಬುಕ್‌ಹೌಸ್, ಬೆಂಗಳೂರು.

೩೨

ಪಠ್ಯದ ಪುನರ್ ಸಂದರ್ಭೀಕರಣ ಮತ್ತು ಕಂಬಾರರ ಭಾಷೆ

ಸಾಹಿತ್ಯವೆಂಬುದು ಮಾನವ ಸಂಸ್ಕೃತಿಯ ಪ್ರತೀಕವಾಗಿರುವ ಕಲಾಭಿವ್ಯಕ್ತಿಯಲ್ಲೊಂದು. ಕಲಾಭಿವ್ಯಕ್ತಿಗೆ ನಾನಾ ಮಾಧ್ಯಮಗಳಿವೆ. ಕಲಾಭಿವ್ಯಕ್ತಿ ನಾದದ ಮೂಲಕ ಬಂದರೆ ಸಂಗೀತ, ರೇಖೆ ಮತ್ತು ಅಥವಾ ಬಣ್ಣದ ಮೂಲಕ ಬಂದರೆ ಚಿತ್ರ; ಶಬ್ದದ ಮೂಲಕ ಬಂದರೆ ಸಾಹಿತ್ಯ. ಕಲಾಭಿವ್ಯಕ್ತಿಗೆ ಮಾನವನ ಬದುಕು ಹಿನ್ನೆಲೆಯಾದರೆ ಆತನ ಸ್ವಭಾವವೇ ಅದರ ಹುಟ್ಟಿಗೆ ಕಾರಣ. ಒಂದು ಸಾಹಿತ್ಯ ಪಠ್ಯಕ್ಕೆ ಧ್ವನ್ಯಾತ್ಮಕವಾದ ಭಾಷೆಯೇ ಮಾಧ್ಯಮವೆಂಬ ಸತ್ಯ ಮೇಲಿನ ಭಾರತೀಯ ಅಲಂಕಾರಶಾಸ್ತ್ರೀಯ ವಿವೇಚನೆಯಿಂದ ಖಚಿತವಾಗುತ್ತದೆ. ಭಾಷಾಶಕ್ತಿ ಮಾನವನಿಗೆ ಸ್ವಾಭಾವಿಕ. ಇದರ ಉಕ್ತಿರೂಪವೇ ಭಾಷೆ. ಇದು ಸ್ವಭಾವತಹ ರಚನಾತ್ಮಕವಾಗಿದೆಯಲ್ಲದೆ ಸಂದರ್ಭಕ್ಕನುಗುಣವಾಗಿ ರೂಪಾಂತರಗೊಳ್ಳುತ್ತದೆ. ವಿಶಿಷ್ಟವಾದ ರೀತಿಯಲ್ಲಿ ರಚನಾತ್ಮಕವಾಗಿ ರೂಪಾಂತರಗೊಂಡ ಭಾಷೆಯೇ ಸಾಹಿತ್ಯವೆಂಬುದಾಗಿ ಭಾಷಾವೈಜ್ಞಾನಿಕವಾಗಿ ನಾವು ಹೇಳಬೇಕಾಗುತ್ತದೆಂದು ನನ್ನ ಅನಿಸಿಕೆ. ಈ ಸಾಹಿತ್ಯದ ಮಾಧ್ಯಮ ಧ್ವನ್ಯಾತ್ಮಕವಾದರೆ ಅದು ವಾಚಿಕ ಸಾಹಿತ್ಯ; ಚಾಕ್ಷುಷವಾದರೆ ಬರಹ ಸಾಹಿತ್ಯ ಆದರೆ, ಅದು ಒಂದು ಸಮಗ್ರ ಜನಪದದ ಸಮಷ್ಟ್ಯಾಭಿವ್ಯಕ್ತಿಯಾದಾಗ ಅದನ್ನು ಜನಪದ ಸಾಹಿತ್ಯವೆಂದು ಕರೆಯುತ್ತಾರೆ.

ಸಾಹಿತ್ಯದ ಮೂಲಸಾಮಾಗ್ರಿಗಳಲ್ಲೊಂದಾದ ಭಾಷೆಯನ್ನು ಕುರಿತ ಶಾಸ್ತ್ರವೇ ಭಾಷಾಶಾಸ್ತ್ರವಾಗಿರುವುದರಿಂದ ಸಾಹಿತ್ಯ ಮತ್ತು ಭಾಷಾವಿಜ್ಞಾನಗಳೊಳಗಣ ಪರಸ್ಪರ ಸಂಬಂಧ ಸರ್ವವಿದಿತ. ಸಾಹಿತ್ಯದ ಮೂಲ ಔಪಚಾರಿಕ ಘಟಕಗಳೆಲ್ಲವೂ ಭಾಷಿಕ. ಈ ಭಾಷಿಕ ಘಟಕಗಳ ರಚನೆ ಮತ್ತು ಕ್ರಿಯೆಗಳನ್ನು ಕಂಡುಹಿಡಿದು ಅವನ್ನು ವಿವರಿಸುವುದೇ ಭಾಷಾಶಾಸ್ತ್ರದ ಹೆಗ್ಗುರಿ. ಭಾಷಿಕ ಘಟಕಗಳು ನಿರ್ದಿಷ್ಟ ರೀತಿಯಲ್ಲಿ ಕೂಡಿಕೊಂಡಾಗ

ಭಾಷೆಯ ಮೂಲ ಸಮಗ್ರ ಘಟಕವಾದ ವಾಕ್ಯವುಂಟಾಗುತ್ತದೆ. ಪರಸ್ಪರ ಸಂಬಂಧವುಳ್ಳ ವಾಕ್ಯಗಳು ವಿಶಿಷ್ಟ ವಿನ್ಯಾಸಕ್ರಮದಲ್ಲಿ ಕೂಡಿಕೊಂಡಾಗ ಉಂಟಾಗುವ ಬೃಹದ್ಘಟಕವನ್ನು ವಾಕ್ಸರಣಿಯೆನ್ನುತ್ತಾರೆ.

ಭಾಷಾಶಾಸ್ತ್ರದ ದೃಷ್ಟಿಗೆ ವಾಕ್ಸರಣಿಯೆಂಬುದು ರಚನೆಗಳ ರಚನೆ. ಈ ರಚನೆಗಳ ಮೂಲ ಘಟಕಗಳಾದ ಧ್ವನಿಮ ಮತ್ತು ಆಕೃತಿಮಗಳು. ಇವು ಬೇರೆ ಬೇರೆ ಭಾಷಿಕ ಹಂತಗಳಲ್ಲಿ ನಿಯಮಬದ್ಧವಾಗಿ ಸಂಘಟಿತಗೊಳ್ಳುತ್ತವೆ. ಈ ಸಂಘಟನೆಗಳ ವಿವರಣೆಯನ್ನು ಅರ್ಥಾತ್ ವ್ಯಾಕರಣವನ್ನು ಭಾಷಾವಿಜ್ಞಾನ ಕೊಡುತ್ತದೆಯಲ್ಲದೆ ಬೇರೆ ಬೇರೆ ಸಂದರ್ಭ ಈ ಭಾಷಾರಚನೆ ಹೇಗೆ ಬದಲಾಗುತ್ತದೆಂಬುದನ್ನೂ ಅದು ಗಮನಿಸುತ್ತದೆಯಾದುದರಿಂದ ಸಾಹಿತ್ಯದಲ್ಲಿಯೇ ವ್ಯಾಕರಣದ ಜೊತೆಗೆ ಅದರ ರೀತಿಯನ್ನು ಕುರಿತೂ ವಿವೇಚನೆ ಭಾಷಾವಿಜ್ಞಾನದ ಪರಿಮಿತಿ ಯಲ್ಲಿಯೇ ನಡೆಯುತ್ತದೆ. ಇದರಿಂದಾಗಿ ಸಾಹಿತ್ಯದ ವ್ಯಾಕರಣಾತ್ಮಕ ವಿಶ್ಲೇಷಣೆಯೊಂದಿಗೆ ಅದರ ರೀತ್ಯಾತ್ಮಕ ವಿಶ್ಲೇಷಣೆಯೂ ಭಾಷಾಶಾಸ್ತ್ರದ ಅವಿಭಾಜ್ಯಾಂಗವೆಂದು ಪರಿಗಣಿತ ಗೊಂಡು ಇದನ್ನು ಪಠ್ಯ-ಭಾಷಾವಿಜ್ಞಾನ ಶೈಲಿಯಾತ್ಮಕ ಭಾಷಾವಿಜ್ಞಾನವೆಂದು ಕರೆಯುವು ದುಂಟು. ಈ ವಿಶ್ಲೇಷಣಾಕ್ರಮದ ಮಾದರಿಗಳನ್ನು ಕುರಿತು ಪ್ರಸ್ತುತದಲ್ಲಿ ವಿವೇಚನೆ ಮಾಡಲಾಗಿಲ್ಲ; ಸ್ವಲ್ಪದರಲ್ಲಿ ಅದು ಸಾಧ್ಯವೂ ಇಲ್ಲ.

ಸಾಹಿತ್ಯ ಪಠ್ಯವೆಂದರೇನು? ಎಂಬೀ ಪ್ರಶ್ನೆಗೆ ಸರ್ವಸಮ್ಮತವಾದಂತಹ ಉತ್ತರ ವನ್ನೀಯುವುದು ದುಸ್ಸಾಧ್ಯ. 'ಲೋಕೋ ಭಿನ್ನರುಚಿ' ಎಂಬ ಉಕ್ತಿ ಸಾಹಿತ್ಯದ ವ್ಯಾಖ್ಯೆಯ ಸಂದರ್ಭದಲ್ಲಿ ಅತ್ಯಂತ ಸತ್ಯದ ಮಾತಾಗಿದೆ. ಆದ್ದರಿಂದ ಯಾವ ವಾಕ್ಸರಣಿಯನ್ನು ಒಂದು ಸಮಾಜ ಜನಪದ ಸಾಹಿತ್ಯವೆಂದು ಪರಿಗಣಿಸುತ್ತದೆಯೋ ಅದನ್ನೇ ಸಾಹಿತ್ಯವೆಂದು ಭಾಷಾಶಾಸ್ತ್ರರು ಪ್ರಾಯೋಗಿಕವಾಗಿ ಮನ್ನಿಸುತ್ತಾರೆ.

ಸಹೃದಯನಿಗೆ ವಾಚಿಕ ಕಲಾಂಶವಾಗಲಿ ಬರಹವಾಗಲಿ ಕಲಾಕೃತಿಯೆನಿಸಿದರೆ ಮಾತ್ರ ಅದು ಸಾಹಿತ್ಯವಾಗುವುದೇ ಹೊರತು ಆಡಿದುದೆಲ್ಲವೂ ಗೀಚಿದುದೆಲ್ಲವೂ ಸಾಹಿತ್ಯವೆನಿಸ ಲಾರದು. ಯಾವುದೇ ಆಕೃತಿಯನ್ನು ಸಹೃದಯನು ಕಲಾಕೃತಿಯೆಂದು ನಿರ್ಣಯಿಸುವಲ್ಲಿ ಆತನ ಹಾಗೂ ಬರಹಗಾರನ ವ್ಯಕ್ತಿನಿಷ್ಠಾಂಶಗಳೊಂದಿಗೆ ಕೃತಿಯಲ್ಲಿಯ ವಸ್ತುನಿಷ್ಠಾಂಶಗಳೂ ಕಾರಣವಾಗುತ್ತವೆ. ಈ ವಸ್ತುನಿಷ್ಠಾಂಶಗಳು ಭಾಷಿಕ ಮಾಧ್ಯಮದಲ್ಲಿ ಕೃತಿಯಲ್ಲಿ ಮೂರ್ತ ಗೊಂಡಿರುವುದರಿಂದ ವಿಮರ್ಶಕನಿಗೆ ಆ ಕೃತಿಯ ಭಾಷಾರಚನೆ ಪದವಿನ್ಯಾಸ ವ್ಯಾಕರಣ ಹಾಗೂ ಪದವಿನ್ಯಾಸಕ್ರಮ ರೀತಿ ಅರ್ಥವಾಗಬೇಕು. ಅವು ಆತನಿಗೆ ಸ-ಹಿತವಾದಲ್ಲಿ ಆನಂದವುಂಟಾಗಿ ಆ ಕೃತಿ ಆತನಿಗೆ ಸಾಹಿತ್ಯವೆನಿಸುವುದು. ಭಾಷಾವಿಜ್ಞಾನಿಯಾದವನು ಇಂತಹ ಕೃತಿಯಲ್ಲಿ ಯಾವ ರೀತಿಯ ಪದವಿನ್ಯಾಸಕ್ರಮ ಬದಲಾವಣೆಗಳಿಂದಾಗಿ ಸಾಮಾನ್ಯ ಭಾಷೆ ಸಾಹಿತ್ಯಿಕ ಭಾಷೆಯಾಯಿತೆಂದು ವಿವರಿಸಬಲ್ಲನಾದುದರಿಂದ ಸಾಹಿತ್ಯದ ಅಧ್ಯಯನ ಅಧ್ಯಾಪನ ಹಾಗೂ ವಿಮರ್ಶೆಗಳಲ್ಲಿ ಭಾಷಾಶಾಸ್ತ್ರದ ನೆರವು ಅಗತ್ಯವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಸಾಹಿತಿಯಾದವನು ರವಿ ಕಾಣದುದನ್ನು ಕಾಣಬಹುದಾದರೂ ಅದನ್ನು ಇತರರಿಗೆ ಕಾಣಿಸಬೇಕಾದರೆ ಆತನಿಗೆ ತನ್ನ ಭಾಷಾಮಾಧ್ಯಮದ ಅರಿವು ಚೆನ್ನಾಗಿ ಇರಬೇಕು. ಯಾವುದೋ ಒಂದು ಸಾಂಸ್ಕೃತಿಕ ಅಂಗವಾಗಿ ಹುಟ್ಟಿ ಬೆಳೆದ ಸಾಹಿತಿ ತನ್ನ ಭಾಷಾಮಾಧ್ಯಮವನ್ನು ಬಳಸುವಾಗ ತಾನು ಯಾವ ಶ್ರೋತೃವಾಚಕ ವೃಂದವನ್ನು ಗಮನಿಸಬೇಕು? ಅದರ ಭಾಷಾ ಪ್ರಬೇಧಕ್ಕೂ ತನ್ನ ಭಾಷೆಗೂ ಇರುವ ವ್ಯತ್ಯಾಸಗಳಾವುವು? ತನ್ನ ಗುರಿ ಹಾಗೂ ಭಾಷಾ ಸಾಧನಗಳೊಳಗಿನ ಇತಿಮಿತಿಗಳಾವುವು? ಎಂಬೇ ಕಲ್ಪನೆಗಳಿಲ್ಲದೆ 'ಸಾಹಿತ್ಯ'ವನ್ನು ರಚಿಸಿದರೆ ಅದು ಬರಹದ ರಾಶಿಯಾಗಬಲ್ಲುದೇ ಹೊರತು ಸಾಹಿತ್ಯವಾಗಿ ಉಳಿಯಬೇಕಾಗಿಲ್ಲವೆಂಬ ಎಚ್ಚರಿಕೆ ಸಾಹಿತಿಗೆ ಅತ್ಯಗತ್ಯ.

ಕೆಲವು ಕೃತಿಗಳು ಹುಟ್ಟಿ ಎಷ್ಟೋ ಕಾಲ ಕಳೆದ ಬಳಿಕ ಸಾಹಿತಿಕ ಪಠ್ಯಗಳು ಮನ್ನಣೆಯನ್ನು ಪಡೆದುಕೊಳ್ಳುತ್ತವೆ. ಕೆಲವೊಂದು ಪ್ರಕಟಗೊಂಡು ಬಿಸಿಬಿಸಿ ಇರುವಾಗಲೇ ಸಾಹಿತ್ಯಿಕವೆಂದು ಪರಿಗಣಿತಗೊಳ್ಳುತ್ತವೆ. ಇನ್ನು ಕೆಲವು ತಾತ್ಕಾಲಿಕವಾಗಿ ಮಾತ್ರ ಆ ಪ್ರಸಿದ್ಧಿಯನ್ನು ಪಡೆದುಕೊಂಡರೆ ಇನ್ನು ಕೆಲವು ಪಂಪನ ಕೃತಿಗಳಂತೆ ಶತಶತಮಾನಗಳವರೆಗೂ ತಮ್ಮ ಕೀರ್ತಿಯನ್ನು ಕಳೆದುಕೊಳ್ಳುವುದಿಲ್ಲ. ಕೆಲವೊಂದು ಪ್ರಾದೇಶಿಕವಾಗಿ ಮಾತ್ರ ಮನ್ನಣೆಯನ್ನು ಪಡೆದರೆ ಇನ್ನು ಕೆಲವು ಪಂಡಿತ ಮಂಡಳಿಯಲ್ಲಿ ಅಥವಾ ಶ್ರೀ ಸಾಮಾನ್ಯರ ಗುಂಪಿನಲ್ಲಿ ಮಾತ್ರ ಹೆಸರನ್ನು ಗಳಿಸಿ ವರ್ಗಸೀಮಿತವಾಗಿ ಬಾಳುತ್ತವೆ. ಇವಕ್ಕೆಲ್ಲ ಇತರ ಕಾರಣಗಳೊಂದಿಗೆ ಭಾಷಿಕ ಕಾರಣಗಳೂ ಇರಬಹುದು. ಅವುಗಳ ಭಾಷಿಕ ರಚನೆಗಳಲ್ಲಿ, ಕಾಲ, ಪ್ರದೇಶ, ವಯೋಮಿತಿಗಳಿಗನು ಗುಣವಾಗಿ ಸೂಕ್ತ ಬದಲಾವಣೆಗಳನ್ನು ತಂದರೆ ಈ ಸಾಹಿತ್ಯ ಕೃತಿಗಳು ಬೈಬಲಿನಂತೆ ಕಾಲ ದೇಶ ವರ್ಣ ವರ್ಗಾದಿ ಪರಿಮಿತಿಗಳನ್ನು ಮಿಕ್ಕಿ "ಕ್ಷಯಮಣಮಿಲ್ಲ ಕೇಳ್ದು ಕಡೆಯ ಗಂಡವನಾವನು ಮಿಲ್ಲೆನಲ್ ತದಕ್ಷಯನಿಧಿ ತಾನೆ ಎವಿಪ ವಾಙ್ಮಯಂ" ಅಗಿ, ಅ-ಕ್ಷರವಾಗಿ, ಉಳಿದುಕೊಳ್ಳಬಹುದು.

ಸಾಹಿತ್ಯದ ಸಂವಹನ ಹಾಗೂ ಮೂಲಸಾಮಗ್ರಿಯಾಗಿರುವ ಭಾಷೆಯ ರಚನಾ ಸ್ವರೂಪ ವನ್ನವಲಂಬಿಸಿ ಸಾಹಿತ್ಯದ ಅಭಿವ್ಯಕ್ತಿಯಾಗುತ್ತದೆಯೇ ಹೊರತು ಅದನ್ನು ಮಿಕ್ಕಿಯಲ್ಲ. ಒಬ್ಬ ಬರೆಹಗಾರ ಏನೆಲ್ಲ ಅನುಭವಿಸಬಲ್ಲ ಅದನ್ನೆಲ್ಲ ಅಭಿವ್ಯಕ್ತಗೊಳಿಸುವಲ್ಲಿ ಭಾಷಾರಚನೆ ಆತನಿಗೆ ಕೆಲವೊಮ್ಮೆ ತೊಡಕು ಉಂಟಾಗಬಹುದು. ಆದುದರಿಂದ ಭಾಷೆಯ ಆಂತರಿಕ ಇತಿಮಿತಿಗಳ ಕಲ್ಪನೆ ಶಬ್ದಕಲಾಕಾರನಿಗೆ ಇರಬೇಕಾಗುತ್ತದೆ; ಇದರೊಂದಿಗೆ ತನ್ನ ಭಾಷೆಯನ್ನು ಸಾಹಿತಿಕ ಪರಿಣಾಮವನ್ನು ಸಹೃದಯನಲ್ಲುಂಟು ಮಾಡುವುದಕ್ಕೋಸ್ಕರ ಹೇಗೆ ದುಡಿಯಿಸ ಬಹುದೆಂಬ ಕಲ್ಪನೆಯೂ ಆತನಿಗೆ ಇರಲೇಬೇಕಾಗುತ್ತದೆ.

ಪಠ್ಯ ಚಲನಶೀಲವಾದುದು. ಒಂದು ಪಠ್ಯದಲ್ಲಿ ಹಲವು ಸಾಮಾಜಿಕ ಮತ್ತು ಪ್ರಾದೇಶಿಕ ಪ್ರಭೇದಗಳಿರುತ್ತವೆ. ಉದಾಹರಣೆಗೆ ಒಂದು ಪಠ್ಯದಲ್ಲಿ ಒಬ್ಬ ದಲಿತ ಭಾಷೆ ಇರಬಹುದು, ಒಬ್ಬ ಸ್ವಾಮಿಯ ಭಾಷೆ ಇರಬಹುದು, ಒಬ್ಬ ಬ್ರಾಹ್ಮಣರ ಭಾಷೆ ಇರಬಹುದು ಈ ಎಲ್ಲ

ಪ್ರಭೇದಗಳು ಸಂಮಿಳಿತವಾಗಿ ಒಂದು ಪಠ್ಯವಾಗಿರುತ್ತದೆ. ಪಠ್ಯ, ಭಾಷೆಯನ್ನು ಪುನರ್ ವಿಂಗಡಿಸುತ್ತದೆ. ಪ್ರತಿ ಪಠ್ಯವು ಒಂದು ಅರ್ಥದಲ್ಲಿ ಬೇರೆ ಬೇರೆ ಭಾಷಿಕ ಕ್ರಿಯೆಗಳಲ್ಲಿ ಹಾಗೂ ಭಾಷಿಕ ಘಟಕಗಳಲ್ಲಿ ಅಂತರಪಠ್ಯವಾಗಿ ರೂಪುಗೊಳ್ಳುತ್ತದೆ. ಆಗ ಭಾಷಾಸಂವಹನಕ್ಕೆ ಅನುಗುಣವಾಗಿ ಪಠ್ಯ ಬದಲಾಗುತ್ತದೆ. ಅದುವೇ ಭಾಷೆಯ ಪುನರ್ ಸಂದರ್ಭೀಕರಣ ಕ್ರಿಯೆ. ಕಂಬಾರರು ಪಠ್ಯ(ಕಾವ್ಯ) ನಿರ್ಮಾಣಕ್ಕಾಗಿ ಬೆಳಗಾವಿ ಪರಿಸರದ ಭಾಷೆಯನ್ನು ಬಳಸಿದರೂ ಅದು ಪುನರ್ ಸಂದರ್ಭೀಕರಣಕ್ಕೆ ಒಳಗಾದಾಗ ಅದು ಕಂಬಾರರ ಪಠ್ಯವಾಗಿ; ಕಂಬಾರರ ಭಾಷೆಯಾಗಿ ಮಾರ್ಪಡುತ್ತದೆ. ಕಂಬಾರರ ಕಾವ್ಯಭಾಷೆಯ ಅನನ್ಯತೆ ಇರುವುದು ಇಲ್ಲಿಯೇ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ. ಈಗ ಉದಾಹರಣೆಗೆ ಕಂಬಾರರು ಜಾನಪದದ ಎರವಲು ಪಡೆಯುತ್ತಾರೆ ಎನ್ನುತ್ತೇವೆ. ಇದು ನಿಜವಲ್ಲ. ಇಲ್ಲಿ ಅದು ಪುನರ್ ಸಂದರ್ಭೀಕರಣಕ್ಕೊಳಗಾಗುತ್ತಾ ಇರುತ್ತದೆ. ಒಂದು ರೀತಿ ಚರಿತ್ರೆಯನ್ನು ಬದಲಾಯಿಸಿ ರುತ್ತದೆ. ಈ ಹಿನ್ನೆಲೆಯಲ್ಲಿ ಕಂಬಾರರ 'ನಾಯಕ ಅಥವಾ ಡೊಳ್ಳಿನ ಹಾಡು' ಪದ್ಯವನ್ನು ಗಮನಿಸೋಣ.

ದಡ್ಯಾಗ ನಮದೇವ ದೊಡ್ಡವನಯ್ಯ
ಕುರ‍್ಯಾಗ ಹಿರಿಯಾಂವ ನಮ್ಮಯನೋ |
ಬೆಳಿಗೊಳ ಕೀಲ ಬಲ್ಲವನಯ್ಯಾ
ಮಳೆಯ ಸೂತರಾ ತಿಳಿದವನೋ ||

ಹುಲಿಮೀಸಿ, ಮೈತುಂಬಿ ಬಂಡಾರ ಬಡಕೊಂಡ
ಹಸುವಿನ ಹೆಜ್ಜ್ಯಾಗ ನಡೆದವನೋ |
ಬೀಸಿದ ಹೊಸಗಾಳಿಗೊಂದೊಂದ ಪರಿಯಾಗಿ
ಸೂಸುವ ನಗಿಗಳ ತುದಿಯವನೋ ||

ಇಲ್ಲಿ ಒಬ್ಬ ಕುರುಬನ ಭಾಷೆಯಿದೆ. ಬೆಳಗಾವಿಯ ಪರಿಸರದ ವ್ಯಾವಹಾರಿಕ ಭಾಷೆಯಿದೆ. ಈ ಎರಡು ಭಾಷೆಗಳು ಒಂದು ರೀತಿಯಲ್ಲಿ ಒಂದು ಪಠ್ಯದಲ್ಲಿ ಕೆಲಸ ಮಾಡುತ್ತಿರುತ್ತವೆ. ಪೂರ್ತಿ ಆ ಪಠ್ಯ ಮುಗಿದಾಗ ಕುರಿ ಕಾಯುವ ಕುರುಬನ ವೃತ್ತಿ ಕೌಶಲ್ಯ ಸಹೃದಯ ವಾಚಕರಿಗೆ ಅರ್ಥವಾಗುತ್ತದೆ. ಈ ರೀತಿ ಕಂಬಾರರು ತಮ್ಮ ಪರಿಸರದ ಭಾಷೆಯನ್ನು ಬಳಸಿಕೊಂಡು ಅದನ್ನೊಂದು ಕ್ರಮಕ್ಕೆ ಅಳವಡಿಸಿಕೊಳ್ಳಲು ನೋಡುತ್ತಾರೆ.

ಯಾರೋ ಬೇನಾಮಿ ಮುದುಕ
ತೀರಾ ಪರಿಚಿತನಂತೆ ಒಳಗೆ ಬಂದ
ತನಗೆ ಬೇಕಾದ ಒಬ್ಬರನ್ನ
ಹುಡುಕುವಂತೆ ನಮ್ಮನ್ನೆಲ್ಲ ಸೋಸಿ ನೋಡಿದ

(-ಆ ಮುದುಕ)

ಹೇಳದೇ ಕೇಳದೇ ಒಳನುಗ್ಗಿ
ಸಣ್ಣಬಾಗಿಲ ತುಂಬ ಇಂಬಾಗಿ ನಿಂತ
ಫಳ್ಳನೆ ಬೆಳ್ದಿಂಗಳ ತುಳುಕಿ ನಕ್ಕ
ಪುಟ್ಟ ಪುಟ್ಟ ಹೆಜ್ಜೆಯಿಟ್ಟು ಗಿಲ್ ಗಿಲ್ ಗಿಲ್ ಗೆಜ್ಜೆ ನುಡಿಸಿ
ಥೈ ಥೈ ಥೈ ಕುಣಿದು
ಮನೆಯಗಲ ಮನದಗಲ ತುಂಬಿದ

(-ಅತಿಥಿ)

ಮೌನವನ್ನು ಮುರಿದು ಮಾತನಾಡಿಸುವ ಕ್ರಿಯೆಯನ್ನು ಕಂಬಾರರು ಇಲ್ಲಿ ಮಾಡುತ್ತಾರೆ. ಹೀಗೆ ಮೌನವನ್ನು ಮಾತನಾಡಿಸುವ ಕ್ರಿಯೆಯನ್ನು ಪದ್ಯವನ್ನು ಸೃಷ್ಟಿಸುವ ಕ್ರಿಯೆಯನ್ನಾಗಿ ಕಂಬಾರರು ಕಂಡುಕೊಂಡಿದ್ದಾರೆ. ಅವರ ಪದ್ಯಗಳಲ್ಲಿ ಮುಖ್ಯವಾಗಿ ಈ ವಿವಿಧತೆಗಳು ಒಂದರ ಮೇಲೊಂದು ಆಗುವುದನ್ನು ಕಾಣುತ್ತೇವೆ. ಈ ಮೂಲಕ ಕಂಬಾರರು ಭಾಷೆಯ ಶಕ್ತಿಯನ್ನು ತೋರಿಸುತ್ತಾರೆ. ಪದ್ಯವೆಲ್ಲ ಭಾಷೆಯೇ ಆಗಿರುತ್ತದೆ.

ಆದರೆ ಅದು ಸೃಜಿಸುವ ಅರ್ಥಗಳು ಅನಂತವಾಗಿರುತ್ತವೆ. ಸಹೃದಯರು ಈ ಅನಂತವಾದ ಅರ್ಥಗಳನ್ನು ಒಂದು ಸಂದರ್ಭಕ್ಕೊಳಪಡಿಸಿ ಅರ್ಥಮಾಡಿಕೊಳ್ಳಲು ಪ್ರಯತ್ನ ಪಡುತ್ತಿರುತ್ತಾರೆ. ಕಂಬಾರರು ತಮ್ಮ ಕಾವ್ಯದಲ್ಲಿ ಪ್ರಮುಖವಾಗಿ ಬಳಸುವ ತಂತ್ರ ಭಾಷೆಯ ತಂತ್ರವಾಗಿರುತ್ತದೆ. ಆದ್ದರಿಂದ ವಾಚಕರು ಕಂಬಾರರ ಭಾಷೆಯನ್ನು ಭಾಷೆ ಎಂದಾಗ ಕೇವಲ ಅದರ ಪದಗಳನ್ನೆಲ್ಲ ಆ ಪದಗಳೆಲ್ಲ ಹೇಗೆ ಪುನರ್ ಸಂದರ್ಭೀಕರಣಕ್ಕೊಳಗಾಗಿ ಹೊಸ ಅರ್ಥವನ್ನು ವಿವಿಧ ರೀತಿಯಲ್ಲಿ, ವಿವಿಧ ನೆಲೆಗಳಲ್ಲಿ ನಿಂತು ನೋಡಿದಾಗ ಹೇಗೆ ಕೊಡುತ್ತದೆ ಎನ್ನುವುದನ್ನು ನೋಡಬಹುದು ಕಂಬಾರರು ಭಾಷೆಯನ್ನು ಪುನರ್ ಸಂದರ್ಭೀಕರಣಕ್ಕೆ ಒಳಪಡಿಸುವುದರ ಮೂಲಕ ತಮ್ಮದೇ ಆದ ಭಾಷೆಯನ್ನು ನಿರ್ಮಿಸಿಕೊಳ್ಳುತ್ತಾರೆ. ಕಂಬಾರ ರಂತಹ ಪ್ರತಿಭಾವಂತ ಕವಿಗಳಿಗೆ ಮಾತ್ರ ಇದು ಸಾಧ್ಯವಾಗುತ್ತದೆ.

ಆಕರಗ್ರಂಥ

೧. ಚಂದ್ರಶೇಖರ ಕಂಬಾರರ ಸಮಗ್ರ ಕಾವ್ಯ, ೨೦೧೧, ಸಪ್ನ ಬುಕ್‌ಹೌಸ್, ಬೆಂಗಳೂರು.

೩೩

ಚಕೋರಿ ಶಬ್ದಶಿಲ್ಪ

ಚಕೋರಿ ಮಹಾಕಾವ್ಯದ ಭಾಷಿಕ ಸ್ವರೂಪವನ್ನು ಚರ್ಚಿಸುವುದಕ್ಕಿಂತ ಮುನ್ನ ಕೆಲವು ಹಿನ್ನೆಲೆಯ ವಿವರಗಳನ್ನು ಗಮನಿಸುವುದು ಅವಶ್ಯಕ. ಚಕೋರಿ ಕಾವ್ಯದ ವಸ್ತು ಜಾನಪದ ಮಿಥ್‌ಯೊಂದರಿಂದ ರೂಪಿತವಾಗಿದೆ. ಜಾನಪದ ಮಿಥ್‌ನ್ನು ಆಧುನಿಕ ಪ್ರಜ್ಞೆಯ ಅಭಿವ್ಯಕ್ತಿಗಾಗಿ ಬಳಸಿಕೊಂಡು ಯಶಸ್ವಿಯಾದ ಕವಿಗಳಲ್ಲಿ ಕಂಬಾರರು ಮುಖ್ಯರು. ಅಂತಹ ಪ್ರಯತ್ನದ ಮೂಲಕ ಕನ್ನಡ ಕಾವ್ಯದಲ್ಲಿ ಹೊಸ ಸಾಧ್ಯತೆಯನ್ನು ಅವರು ತೋರಿಸಿದರು. ಚಕೋರಿಯು ಶಿಷ್ಟ ಹಾಗೂ ಜಾನಪದ ಎರಡರ ಲಕ್ಷಣಗಳನ್ನು ಹೊಂದಿರುವುದು ಸ್ಪಷ್ಟವಾಗಿದೆ. ಪ್ರಜ್ಞಾಪೂರ್ವಕವಾಗಿ ವಿಪುಲದೇಶಿ, ತಕ್ಕಮಟ್ಟಿಗೆ ಸಂಸ್ಕೃತ, ಆಗಾಗ್ಗೆ ಬರುವ ಮರಾಠಿ ರೂಪಗಳು ಇವೆಲ್ಲವುಗಳನ್ನು ಸಂದರ್ಭೋಚಿತವಾಗಿ ಬಳಸಿ ಕಿತ್ತೂರು ಕರ್ನಾಟಕದ ವ್ಯವಹಾರಿಕ ಶಿಷ್ಟಕನ್ನಡದ ಚೌಕಟ್ಟಿನಲ್ಲಿ ಚಕೋರಿ ರಚಿತವಾಗಿರುವುದರಿಂದ ಅದು ಭಾಷಾದೃಷ್ಟಿಯಿಂದ ಗಮನಾರ್ಹ ಕೃತಿಯಾಗಿದೆ.

ಚಕೋರಿ ಕಾವ್ಯವನ್ನು ವರ್ಣನಾತ್ಮಕವಾಗಿ ವಿಶ್ಲೇಷಿಸಿದಾಗ ಬೆಳಗಾವಿ ಉಪಭಾಷೆಯಲ್ಲಿ ಕಂಡು ಬರುವ ಕೆಲವು ಧ್ವನಿರಚನಾ ಪ್ರಕ್ರಿಯೆಗಳು, ಅನುನಾಸಿಕೀಕರಣ, ಜಾರುಧ್ವನಿಗಳ ಬಳಕೆ ಹಾಗೂ ಅಕೃತಿಮಾ ಪ್ರಕ್ರಿಯೆಗಳು ಕಾಣಸುತ್ತವೆ. ಅವು ಕಾವ್ಯಕ್ಕೆ ಪ್ರಾದೇಶಿಕ ಸೊಗಡನ್ನು ತಂದು ಕೊಟ್ಟಿವೆ. ಕಾವ್ಯದ ವರ್ಣನಾತ್ಮಕ ವಿಶ್ಲೇಷಣೆಗಿಂತ ಕಾವ್ಯದಲ್ಲಿ ಭಾಷಾ ಬಳಕೆಯ ಸಂದರ್ಭ ಮುಖ್ಯ. ಭಾಷೆಯ ಅನಂತ ಮುಖಗಳನ್ನು ಕಾವ್ಯಾಭಿವ್ಯಕ್ತಿಗೆ ದುಡಿಸಿಕೊಳ್ಳುವಾಗ ಕವಿಯಮೇಲೆ ಅವನು ಬಳಸುವ ವ್ಯಕ್ತಿ ಭಾಷೆ, ಭಾಷಾಪ್ರಭೇದಗಳು ಹೇಗೆ ಪರಿಣಾಮವನ್ನುಂಟುಮಾಡಿವೆ ಎಂಬುದನ್ನು ಅವನು ಬಳಸಿದ ಭಾಷಾ ಪ್ರಯೋಗದಿಂದ ಪರಿಶೀಲಿಸಬಹುದು.

ಚಕೋರಿ ಕಾವ್ಯದ ಭಾಷೆಯೆಂದರೆ ಕೇವಲ ಅದರ ಪದಗಳಲ್ಲ. ಅಲ್ಲಿ ಬರುವ ಭಾಷಾ ಬಳಕೆಯ ಬೇರೆ ಬೇರೆ ಸಾಮಾಜಿಕ ಸಂದರ್ಭದಲ್ಲಿ ಪದ್ಯ ಹೇಗೆ ಪುನರ್ ಸಂದರ್ಭೀಕರಣ

ಕ್ಕೂಳಗಾಗಿ ಹೊಸ ಅರ್ಥವನ್ನು ವಿವಿಧ ರೀತಿಯಲ್ಲಿ ಕೊಡುತ್ತವೆ ಎಂಬುದು ಬಹಳ ಆಸಕ್ತಿದಾಯಕವಾಗಿದೆ. ಎಚ್.ಎಸ್. ಶಿವಪ್ರಕಾಶರು ಅಭಿಪ್ರಾಯಪಡುವಂತೆ "ಭಾಷೆ ಎಲ್ಲಿ ಹೇಗೆ ಬೇಕೂ ಹಾಗೆ ಹರಿಯುವ, ಹೆಪ್ಪುಗಟ್ಟುವ, ತಿರುಗುವ, ಏರುವ, ಇಳಿಯುವ ಹುದುಗುವ, ಚಿಮ್ಮುವ ಶಕ್ತಿಯನ್ನು ಪಡೆದುಕೊಂಡಿದೆ. ಭಾಷೆಯ ಸಹಜತೆಯನ್ನು ದೀರ್ಘಕಾವ್ಯದಲ್ಲಿ ಒಂದು ಕಡೆಯೂ ಎಡವಲು ಬಿಟ್ಟಿಲ್ಲವೆನ್ನುವುದು ಚಕೋರಿಯ ಸಾಧನೆಗಳಲ್ಲೊಂದು... ಚಕೋರಿಯ ಪ್ರತಿಯೊಂದು ಪುಟದಲ್ಲೂ ಬಹುಮುಖಿಯಾದ ಕನ್ನಡ ನುಡಿಗಣದ ಸೊಬಗುಗಳು ಹರಡಿಗೊಂಡಿವೆ" (ಮೊದಲು ಮಾತು vi ಚಕೋರಿ).

ಕವಿ ತನ್ನ ಹುಟ್ಟುನೆಲವನ್ನು ಎಷ್ಟು ಆಳವಾಗಿ ಹೀರಿದ್ದಾರೆ ಎನ್ನುವುದು ಕಾವ್ಯದಲ್ಲಿ ವ್ಯಕ್ತವಾಗುತ್ತದೆ. ಸಕಾಲಕ್ಕೆ ಮಳೆ ಬರದೆ ಇದ್ದಾಗ ಬರಗಾಲಬಿದ್ದು ಜನಜೀವನ ಅಸ್ತವ್ಯಕ್ತವಾಗಿದೆ. ಜನರು ವಲಸೆ ಹೋಗುತ್ತಿದ್ದಾರೆ. ಮಳೆ ಬರದಿದ್ದಾಗ ಪ್ರಕೃತಿಯಲ್ಲಾದ ಸ್ಥಿತಿಯನ್ನು ಕಂಬಾರರು ಕಣ್ಮುಂದೆ ಕಟ್ಟುವಂತೆ ಚಿತ್ರಿಸಿದ್ದಾರೆ. 'ನೀಲಿಯ ಆಕಾಶದಲ್ಲಿ ಉರಿಯುವ ಮೋಡ ಹಾರ‍್ಯಾಡುತಾವೆ ನೀರು ನೆರಳಿಲ್ಲದೆ ಕಾಡು ಉರಿವುಸರ ಹಾಕುತ್ತಿದೆ ಹಕ್ಕಿಪಿಕ್ಕಿ ಬೆವೆತು ಬೆಂಡಾಗಿ ಸೀಮೆದಪ್ಪಿವೆ' (ಚಕೋರಿ, ಪು.೮೬) ಅದನ್ನು ನೋಡಲಾರದೆ ಮಳೆ ಕಸೆಂದು ಕರುಳು ಬಾಯಿಗೆ ಬರುವಂತೆ ಶಿವಲಿಂಗನಿಗೆ ಜನರು ಮೊರೆಯಿಟ್ಟಿದ್ದಾರೆ. ಚಂದಮುತ್ತ ಯಕ್ಷಿಯಗುಡಿಗೆ ಬಂದಾಗ ಅಲ್ಲಿ ಯಾರೂ ಇರುವುದಿಲ್ಲ. ಘೋರ ಬಿಸಿಲು ಅಲ್ಲಿಯ ಸ್ಥಿತಿಯನ್ನು ಕವಿ ಹೇಳುವ ರೀತಿ 'ಭಿಕೋ ಅಂತಿದೆ ಕಾಡು, ನಾಡು ಒಣಗಿ ಯಾರೋ ಬೆಂಕಿಹಚ್ಚಿ ಈಗಷ್ಟೆನಂದಿದ ಹಾಗಿದೆ ಬಯಲು ಕೋತ ಕೋತ ಕುದಿಯುತಿದೆ ಅಕಾಲದ ಬೇಸಿಗೆ' ಬೇಸಿಗೆಯ ವರ್ಣನೆಯನ್ನು ಸುಂದರವಾದ ಸಾದೃಶ್ಯದ ಮೂಲಕ ಸೆರೆಹಿಡಿದಿದ್ದಾರೆ. ಚಂದ್ರಮುತ್ತ ಯಕ್ಷಿಯಗುಡಿಯ ಮುಂದೆ ಕೋಳಲು ಹಿಡಿದು ಹಾಡಲು ಪ್ರಾರಂಭಿಸಿದಾಗ ಮಳೆ ಶುರುವಾಯಿತು. ಮಳೆ ಬೀಳುವ ದೃಶ್ಯವನ್ನು ಕವಿ ಅರ್ಥಪೂರ್ಣವಾಗಿ ವರ್ಣಿಸಿದ್ದಾರೆ:

ಗುಡುಗುಡುಗುಡುಗಿತ್ತು
ಮಿಂಚು ಮಿಡುಕಾಡಿತ್ತು
ಸುರಿಮಳೆ ಸುರಿದಿತ್ತು ಸುತ್ತೂಕಡೆ
ಗಿಂಡಿಗಾತ್ರದ ಹನಿಯ ಭಾರಿಮಳೆ

ಮಳೆ ಬಂದು ಕ್ಷಾಮಹೋಗಿ ನಂತರ ಸುಖ, ಸಂತಸ ಬಂದಿತು. ಜಡಿಮಳೆಯಾಗಿ ಪ್ರಕೃತಿಯಲ್ಲಿ ಬದಲಾವಣೆ ತಂದಿತು. ಕವಿ ಬಳಸುವ ವಿಶೇಷಣಗಳಾದ ಗಿಂಡಿಗಾತ್ರದ ಹನಿ, ಸುರಿಮಳೆ ಸುರಿದಿತ್ತು ಸುತ್ತೂಕಡೆ ಮುಂತಾದ ಅನುಪ್ರಾಸಗಳು ಕಾವ್ಯಕ್ಕೆ ಸೊಗಸನ್ನು ತಂದಿವೆ. ಅಪೂರ್ವ ಚಿತ್ರಕಶಕ್ತಿಯ ಇಂತಹ ವರ್ಣನೆಗಳು ಸತ್ವಯುತವಾಗಿವೆ. ಪ್ರಾದೇಶಿಕ ಸಂಸ್ಕೃತಿಯ ಸಮಗ್ರ ಚಿತ್ರಣ ಕಣ್ಣಿಗೆ ಕಟ್ಟುತ್ತದೆ.

ಕಾವ್ಯದಲ್ಲಿ ಸಹಜವಾಗಿ ಬರುವ ಅಲಂಕಾರಗಳು ಕಾವ್ಯಕ್ಕೆ ಸೌಂದರ್ಯವನ್ನು ಹೆಚ್ಚಿಸಿವೆ.

'ಮಗನ ನುಡಿಕೇಳಿ ಸಕ್ಕರೆ ಮುಕ್ಕಿದಂಗ
ಅಬ್ಬೆಯ ಹೃದಯ ಅಕ್ಕರೆಯಿಂದ ಅರಳಿತು'

'ಕತ್ತಲೆಗೆ ಕಣ್ಣು ಮುಡುವಂತೆ
ಎದುರಿಗೆರಡು ಹಸಿರು ಜ್ಯೋತಿ ನಡೆದು ಬರುವಂತೆ ಕಂಡವು'

'ಹಾಲುಂಡು ನೆನೆಪು ಮರಕಳಿಸುವಂತೆ ಕೊಳಲು ನುಡಿಸಿದ'

ಇಂತಹ ಉಪಮೆಗಳು ತುಂಬ ಪರಿಣಾಮಕಾರಿಯಾಗಿ ಬಂದಿವೆ. ಶಿವನ ಸ್ವರೂಪವನ್ನು ಹೇಳುವಾಗ ಬರುವ ಸ್ವಭಾವೋಕ್ತಿತುಂಬ ಮನೋಜ್ಞವಾಗಿದೆ.

ಮೂರುಕಣ್ಣು ಮುಕ್ಕಣ್ಣು ಮುಚ್ಚಿಕೊಂಡು
ಮುಖದ ಮ್ಯಾಲೆ ಜುಟ್ಟು ಜಡೆ ಚೆಲ್ಲಿಕೊಂಡು
ಜಪತಪವ ಮಾಡುವ ಶಿವನೆ ಒಂದಾದರು ಕಣ್ಣು ತೆರೆದು ನೋಡು (ಪು.೬೯)

ಅಲಂಕಾರಗಳಂತೆ ಶಬ್ದ ಚಿತ್ರಗಳು ಕಾವ್ಯಕ್ಕೆ ಸೌಂದರ್ಯವನ್ನು ಹೆಚ್ಚಿಸಿವೆ. ಮಳೆ ಬರುವ ದೃಶ್ಯವನ್ನು ಹೇಳುವಾಗ ಬರುವ ಪ್ರತಿಮೆಗಳು ತುಂಬ ಸಹಜವಾಗಿವೆಯಲ್ಲದೆ ದೇಶಿಯ ಮೂಲದಿಂದ ಬಂದಿವೆ.

ಆಕಾಶದಣೆಕಟ್ಟು
ಒಡೆಧಾಂಗ ಜಡಿದಾವು
ನೆಲಮುಗಿಲ ಬೆಸೆದಾವು ಸುರಿಮಳೆಗೆ

ಮಗ ಚಂದಮುತ್ತ ಯಕ್ಷಿಗೆ ಹಾರವಾದಾಗ ವಂಶದ ಕುಡಿಬೆಂದ ಹೋದನೆಂದು ತಾಯಿ ಅಬ್ಬೆ ಪರಿತಪಿಸಿದಳು.

ಆಮ್ಯಾಲೆ ಆಳಾಗಲೇ ಇಲ್ಲ ಅಬ್ಬೆ
ಆರಿ ಹೋಯ್ತು ಕಣ್ಣಲ್ಲಿಯ ಬೆಳಕು
ಬೆನ್ನು ಹಚ್ಚಲೆ ಇಲ್ಲ ಹಾಸಿಗೆಗೆ

ಇಂತಹ ಶಬ್ದ ಚಿತ್ರಗಳಿಂದ ಹೊಸ ಅರ್ಥವಂತಿಕೆ ಹೊಳೆಯುತ್ತದ. ಕಾವ್ಯವನ್ನು ಪ್ರಾರಂಭದಿಂದ ಕೊನೆಯತನಕ ಓದಿದಾಗ ಅಲಂಕಾರ ಮತ್ತು ಪ್ರತಿಮೆಗಳ ಮೂಲಕ ಮಾತನಾಡಿದಂತೆ ಭಾಸವಾಗುತ್ತದೆ. ಕೆಲವು ಹದವರಿತು ಬಳಕೆಯಾಗಿ ಕಾವ್ಯಕ್ಕ ಸಿದ್ಧಿಯನ್ನು ಮೆರಗನ್ನು ತಂದುಕೊಟ್ಟಿವೆ. ಚಕೋರಿ ಚಂದ್ರಮುತ್ತನನ್ನು ಪಳಗಿಸಿ ಮುದ್ದಾಡಿದಳು. ಪ್ರಥಮನೋಟದಲ್ಲಿ ಇಬ್ಬರಲ್ಲೂ ಪ್ರೇಮ ಅಂಕುರಿಸಿತು. ಅವಳಲ್ಲಿ ಉಂಟಾದ ಭಾವನೆಯನ್ನು ಕವಿ ಮನೋಜ್ಞವಾಗಿ ಸೆರೆ ಹಿಡಿದಿದ್ದಾನೆ:

ಸ್ಮರಗಾಳಿ ಬೀಸ್ಯಾವು ಕರಣ ಕಳವಳಿಸ್ಯಾವು
ಪರಿಮಳದ ಪವನ ಸುಳಿದಾವು

ಸ್ತನವದನ ಯೌವನಕೆ ಬಾಯ್ಬಿಡುವ ಹುಡುಗನಿಗೆ
ಅತಿಕಾಮನಂತೆ ಒಲಿದಾಳು
ಮೊದಲಿಗೆ ಕಲಿಸುವೆನು ಮದನ ವಿದ್ಯೆಯನೆಂದು
ಹಾಕಿದಳು ಲೆಕ್ಕ ಒಳಗೊಳಗೆ
ಹುಲ್ಲೆಗಂಗಳ ನೋಟ ಹೃದಯದಲ್ಲಿ ನೆಟ್ಟಾಳು
ಕಣ್ಣಹಾಕಿದಳವನ ಎದೆಗೆ (ಚಕೋರಿ, ಪು.೭೯)

ಇಲ್ಲಿ ಬಳಕೆಯಾದ 'ಸ್ತನವದನ ಯೌವನಕೆ ಬಾಯ್ಬಿಡುವ ಹುಡುಗನಿಗೆ' 'ಹುಲ್ಲೆಗಂಗಳ ನೋಟ'. 'ಕಣ್ಣಹಾಕಿದಳವನ ಎದೆಗೆ' ಇಂತಹ ಪ್ರಯೋಗಗಳು ಕೊಡುವ ಅರ್ಥಶಕ್ತಿ ಅದ್ಭುತವಾದುದು. ಕಂಬಾರರ ಕಾವ್ಯದಲ್ಲಿ ಕಾಮವೇ ಕೇಂದ್ರ ಎಂಬುದಕ್ಕೆ ಇಂತಹ ನಿದರ್ಶನಗಳು ಆಧಾರಗಳಾಗಿ ನಿಲ್ಲುತ್ತವೆ. ಯಕ್ಷಿ ಒಮ್ಮಿಂದೊಮ್ಮೆಲೆ ಅದೃಶ್ಯವಾದಾಗ ಚಂದ್ರಮುತ್ತನಿಗೆ ವಿರಹದನೋವು ಆರಂಭವಾಯಿತು. 'ಕಾಡುನೆನೆಪಿನ ಸ್ಮಶಾನವಾಗಿ ಬೆಳ್ದಿಂಗಳು ಬೂದಿಯಾಗಿ ನಿದ್ದೆನೀರಡಿಕೆ ಇಲ್ಲದೆ ಹಟ್ಟಿ ಬಿಟ್ಟು ಏಕಾಂಗಿಯಾಗಿ ಹೊರಟ' ಕವಿ ಕೊಡುವ ಸಾದೃಶ್ಯಗಳು ಘಟನೆಯನ್ನು ಯಥಾವತ್ತಾಗಿ ಚಿತ್ರಿಸುವಂತೆ ಮಾಡುತ್ತವೆ.

ಈ ಕಾವ್ಯದಲ್ಲಿ ಸಂಭಾಷಣೆಗೆ ಹೆಚ್ಚಿನ ಮಹತ್ವವಿದೆ. ಇಡೀ ಕಾವ್ಯ ಸಂವಾದದ ಧಾಟಿಯನ್ನು ಪಡೆದುಕೊಳ್ಳುತ್ತದೆ. ಸಂವಾದ ಧಾಟಿಯೇ ಚಕೋರಿ ಕಾವ್ಯದ ಮುಖ್ಯನೆಲೆ. ಸಂಭಾಷಣೆ ಹೆಚ್ಚುನೈಜವಾಗಿ ಇರುತ್ತದೆಯಲ್ಲದೆ ಅಲ್ಲಿಯ ವಾಕ್ಯಗಳು ಚಿಕ್ಕಚಿಕ್ಕವಾಗಿದ್ದು ತುಂಬ ಸರಳವಾಗಿರುತ್ತವೆ. ಚಕೋರಿ ಚಂದ್ರಮುತ್ತನ ಮೇಲೆ ಪ್ರೇಮಯಾಚಿಸಿದಾಗ ಅವರಲ್ಲಿ ನಡೆಯುವ ಸಂವಾದ

ಚಂದ್ರಮುತ್ತ-ನೀನ್ಯಾಕೆ ಮಡಿಸಿ ತೋರಿಸುವುದಿಲ್ಲವೇವಿ?
ಚಕೋರಿ-ಗುರುವಲ್ಲ, ನಿನ್ನ ಇಚ್ಛಾಧೀನ
ಚಂದ್ರಮುತ್ತ-ಬಹಿರೂಪದಲ್ಲಿ ನನ್ನೆದುರು ಕುಂತಿರುವಿಯಲ್ಲದೇವಿ?
ಚಕೋರಿ-ನಿನ್ನ ಕಾಮನೆಯಿಂದಾಗಿ
ಸ್ಥೂಲರೂಪದಲ್ಲಿ ಚಕೋರಿ ಎಂಬಯಕ್ಷಿ

ಆತ್ಮೀಯವಾದ ಲವಲವಕೆಯಿಂದ ಕೂಡಿದ ಇಂತಹ ಸಂಭಾಷಣೆಗಳು ಕಾವ್ಯದ ಉದ್ದಕ್ಕೂ ಕಂಡುಬರುತ್ತವೆ. ಸಂಭಾಷಣೆಯಲ್ಲಿ ಪಾತ್ರಧಾರಿಗಳ ಮನೋವೃತ್ತಿಗಳು ವ್ಯಕ್ತವಾಗುತ್ತವೆ. ಅಲ್ಲಿ ಕ್ಲಿಷ್ಟಪದಗಳಿಲ್ಲ. ಅರ್ಥಮಾಡಿಕೊಳ್ಳಲಿಕ್ಕೆ ಯಾವ ತೊಡಕೂ ಇಲ್ಲ ಕಿತ್ತೂರು ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತವಿರುವ ಮತ್ತು ದೈನಂದಿನ ಬದುಕಿನಲ್ಲಿ ಬಳಕೆಯಾಗುವ ನುಡಿಗಟ್ಟುಗಳು ಕಾವ್ಯದಲ್ಲಿ ಸಹಜವಾಗಿ ಬಳಕೆಯಾಗಿವೆ. ವಾರಿನೋಟ. ಸತ್ಯುಳ್ಳ, ಕೆಟ್ಟಗಣ್ಣು, ಉರಿಮಾತು, ಸದ್ದುಳ್ಳ, ಬೆಳಂಬೆಳಗಾಗಿ. ಉರಿವುಸಿರು, ಕಿಡಿಗಣ್ಣು ಮುಂತಾದ ನುಡಿಗಟ್ಟುಗಳು ಲೀಲಾಜಾಲವಾಗಿ ಬಳಕೆಯಾಗಿ ವಿಶೇಷಾರ್ಥಗಳನ್ನು ಕೊಡುತ್ತವೆ. ಗ್ರಾಮೀಣ

ಪರಿಸರದ ಜನರ ರೀತಿ-ನೀತಿಗಳನ್ನು ಬದುಕಿನಲ್ಲಿ ಅನುಭವಿಸುವ ಭಾವನೆಗಳನ್ನು ನುಡಿಗಟ್ಟು ಗಳು ಚೆನ್ನಾಗಿ ಚಿತ್ರಿಸುತ್ತವೆ. ಕಾವ್ಯಕ್ಕೆ ಮೊನಚನ್ನು ತಂದುಕೊಟ್ಟಿವೆ. ಒಂದು ಪ್ರದೇಶದ ಸಾಂಸ್ಕೃತಿಕ ಅಂತರ್‌ಪ್ರಕ್ರಿಯೆಯನ್ನು ನುಡಿಗಟ್ಟುಗಳಲ್ಲಿ ಕಾಣಬಹುದಾಗಿದೆ (ಒಂದೊಂದು ನುಡಿಗಟ್ಟನ್ನು ವಿಶ್ಲೇಷಿಸುತ್ತ ಹೋದರೆ ಅವು ಪುಟ್ಟ ಸಂಚಿಪ್ಪಣಿಗಳಾಗುತ್ತವೆ). ನುಡಿಗಟ್ಟುಗಳ ಹಿಂದೆ ಜೀವನವನ್ನು ಕಂಡುಂಡ ಜನಪದ ಮನಸ್ಸಿನ ತಾತ್ವಿಕ ಚಿಂತನೆಯ ಸ್ವರೂಪವನ್ನು ಗುರುತಿಸಬಹುದಾಗಿದೆ. ಅಂತಹ ವಿಶಿಷ್ಟ ಪದ ಪ್ರಯೋಗಗಳಲ್ಲಿ ಜಾನಪದ ಭಾಷೆಯ ಸತ್ವ, ಸೊಗಡು ಎದ್ದುಕಾಣುತ್ತದೆ. ಕಾವ್ಯದಲ್ಲಿ ಆಯಾ ಸನ್ನಿವೇಶಗಳನ್ನು ನಿರೂಪಿಸುವಾಗ ಅನುಕರಣವಾಚಕಗಳ ಜೀವನಾಡಿಯಂತೆ ಪ್ರವೇಶಿಸಿ ಕಾವ್ಯಕ್ಕೆ ಕಳೆತರಲು ಸಹಾಯಕವಾಗಿವೆ.

'ಯಕ್ಷಿಯ ಕೈಯಲ್ಲಿ ವಜ್ರಾಯುಧ ಫಳಫಳನೆ ಹೊಳೆಯುತ್ತಿತ್ತು'

'ಚಂದ್ರಮುತ್ತ ಬೆದಬೆದ ಬೆಂದು ಹೋಗಿದ್ದ'

'ಮಳೆಯಿಲ್ಲದೆ ಕೊತಕೊತ ಕುದಿಯುತ್ತಿದೆ ಧರೆ'

ಮುಂತಾದ ಉದಾಹರಣೆಗಳನ್ನು ನೋಡಿದಾಗ ಅನುಕರಣ ವಾಚಕ ಪದಗಳು ಕ್ರಿಯೆಯನ್ನು ಅಭಿನಯಿಸುವಂತೆ ಭಾಸವಾಗಿ ಕಾವ್ಯ ಸೌಂದರ್ಯವನ್ನು ಹೆಚ್ಚಿಸಿವೆ. ಅವು ಸಹಜವಾಗಿ ಮೂಡಿಬಂದಿವೆಯೇ ಹೊರತು ಹೊರೆಯಾಗಿ ಬಂದಿಲ್ಲ. ಅವು ಅನುಕರಣೆಗಷ್ಟೆ ಅಲ್ಲದೆ ಕಾವ್ಯದಲ್ಲಿ ವಿಶೇಷಾರ್ಥ ಹೊರಡಿಸುವುದಕ್ಕೂ ಉದ್ದೇಶಿತಾರ್ಥವನ್ನು ಇನ್ನಷ್ಟು ಸ್ಫುಟ ಗೊಳಿಸುವುದಕ್ಕೂ ಸಹಾಯಕವಾಗುತ್ತವೆ. ಇದು ಚಕೋರಿ ಕಾವ್ಯದ ವೈಶಿಷ್ಟ್ಯಗಳಲ್ಲಿ ಒಂದಾಗಿದೆ. ಕಾವ್ಯದಲ್ಲಿ ಸಂಭಾಷಣೆಯ ಮಧ್ಯದಲ್ಲಿ ಬರುವ ಸಂಬೋಧನೆಗಳಲ್ಲೂ ಸಹಜತೆಯಿದೆ.

'ಎವ್ವಾಬೇ ಚಿಕ್ಕಂದು ನೀ ಹೇಳುತಿದ್ದ ಜೋಗುಳ ಹಾಡಬೇ'

'ಎವ್ವಾನಾನು ಇನ್ನೂ ಮೊಲೆ ಕುಡಿಯುವ ಹುಡುಗ ಬೇ'

'ಯಪ್ಪಾ ಚಂದಮುತ್ತ ದೂರ ಹೊಗಬ್ಯಾಡಪಾ'

ಕಿತ್ತೂರು ಕರ್ನಾಟಕದ ವ್ಯವಹಾರಿಕ ಕನ್ನಡದಲ್ಲಿ ಇಂತಹ ಸಂಬೋಧನೆಗಳನ್ನು ಬಳಸಲಾಗುತ್ತದೆ. ಕಂಬಾರರಿಗೆ ಗ್ರಾಮೀಣ ಬದುಕಿನ ಹತ್ತು ಹಲವಾರು ನೋವು ನಲಿವುಗಳು ಚಿತಪರಿಚಿತವಾಗಿವೆ. ಅನುಭವದ ಆಧಾರದಿಂದ ಹುಟ್ಟಿಬಂದ ಕಾವ್ಯಗಳಲ್ಲಿ ಗ್ರಾಮೀಣ ಬದುಕಿನ ತಾಜಾತನ ಮನಸೆಳೆಯುತ್ತದೆ. ಗ್ರಾಮೀಣ ಸಂಸ್ಕೃತಿಯನ್ನು ಯಥಾವತ್ತಾಗಿ ಚಿತ್ರಿಸುತ್ತಾರೆ. ಚಂದ್ರಮುತ್ತ ಹೇಳದೆ ಕೇಳದೆ ದೇಶಾಂತರಕ್ಕೆ ಹೋದಾಗ ತಾಯಿ ಅಬ್ಬೆ ಕಂಗಾಲಾದಳು ವಂಶದ ಜ್ಯೋತಿ ಎಲ್ಲಿ ಹೋಯಿತೆಂದು ಪರಿತಪಿಸಿದಳು. ಅವರ ಬಾಲಲೀಲೆ ಯನ್ನು ನೆನೆಪಿಸಿಕೊಂಡು ದುಃಖಿಸಿದಳು. ಮಗ ಬೇಗನೆ ಮನೆ ಸೇರಲೆಂದು ಸುತ್ತು ದೇವರಿಗೆ, ಯಕ್ಷಿಗೆ ಹರಕೆ ಹೊರುತ್ತಾಳೆ. ಆ ವೇಳೆಯಲ್ಲಿ ಉರುಳುಸೇವೆ, ದೂಪ ಉರಿಸುವುದು,

ಪಂಜಿನ ಸೇವ, ಸುತ್ತುದೀಪಗೆ ನಡೆದುಕೊಳ್ಳುವುದು ಮುಂತಾದ ವಿಧಿವತ್ತಾದ ಕಾರ್ಯಗಳನ್ನು ಮಾಡುತ್ತಾಳೆ. ಅಂತಹ ಸಾಂಸ್ಕೃತಿಕ ಪದಗಳ ಹಿಂದಿರುವ ಆಚರಣೆಗಳನ್ನು ಬೇರೆಬೇರೆ ಸಾಮಾಜಿಕ ಸಂದರ್ಭದಲ್ಲಿ ಜನರು ತಮ್ಮ ದೈನ್ಯತೆಯನ್ನು ಇಷ್ಟದೇವರಿಗೆ ಪ್ರಾರ್ಥಿಸುತ್ತಾರೆ. ಲಕ್ಕಬ್ಬೆ ಯಕ್ಷಿಯ ಶಿಲಾಮೂರ್ತಿಗೆ ಎಣ್ಣೆಮಜಲು ಸ್ನಾನ ಮಾಡಲಿಕ್ಕೆ ಬಂದಾಗ ಆಗ ಬಳಕೆಯಾಗುವ ಪದ ಪ್ರಯೋಗಗಳು ವೈವಿಧ್ಯಮಯವಾಗಿವೆ. ತಿಳಿದುಪ್ಪ, ಬೆನ್ನುಜ್ಜು, ಸೀಗೆ ನೀರು, ಮೈಯಜ್ಜು ಮುಂತಾದವು ಒಂದು ಪ್ರದೇಶದ ಸಾಂಸ್ಕೃತಿಕ ವೈಶಿಷ್ಟತೆಯನ್ನು ತೋರಿಸಿ ಕೊಡುತ್ತವೆ. ಯಕ್ಷಿಗೆ ಎಣ್ಣೆಮಜಲು ಮಾಡಿಸಿದ ನಂತರ ಅವಳಿಗೆ ಹಾಕುವ ಆಭರಣಗಳು ಮೂಗುತಿ, ಡಾಬು, ಒಡ್ಯಾಣ, ಗುಳೆದಗುಡ್ಡ ಕುಪ್ಪಸ, ವಾಲೆ, ಕಡಗು, ಮುಂಗೈಬಳೆ, ಬೆಳ್ಳಿಮೀಸೆ, ಕೊರಳಪದ ಥಿಕ್ಕೆ, ಇಳಕಲ್ಲಸೀರೆ ಇವುಗಳನ್ನು ಗಮನಿಸಿದಾಗ ಒಂದು ಪ್ರದೇಶದ (ಬೆಳವಲನಾಡಿನ ಬೆಳಗಾವಿ ಕಡೆಯ) ಪ್ರಾದೇಶಿಕ ಸಾಂಸ್ಕೃತಿಕ ವೈಶಿಷ್ಟತೆಗಳು ಚಕೋರಿಯಲ್ಲಿ ಸಮರ್ಥವಾಗಿ ಅಭಿವ್ಯಕ್ತವಾಗಿವೆ. ಒಂದು ಪ್ರದೇಶದ ಗ್ರಾಮೀಣ ಜೀವನವನ್ನು ಇಷ್ಟೊಂದು ಸಮಗ್ರವಾಗಿ ಹಿಡಿದಿಟ್ಟಿರುವ ಕಾವ್ಯಗಳು ವಿರಳವೆಂದೇ ಹೇಳಬೇಕು. ಆಯಾಸಂದರ್ಭಗಳಿಗೆ ತಕ್ಕಂತೆ ಕವಿ ಶಬ್ದಗಳನ್ನು ಆಟವಾಡಿಸಿದ್ದಾರೆ. ಪದಗಳು ಒಂದು ಇನ್ನೊಂದರಲ್ಲಿ ಅರ್ಥ ವತ್ತಾಗಿ ಸಂಯೋಜಿತವಾಗುತ್ತವೆ.

ಎಷ್ಟೊಂದು ಬಣ್ಣಗಳು
ಅಷ್ಟೊಂದು ಹೂವುಗಳು
ಎಷ್ಟೊಂದು ಹೂಬಣ್ಣ ಬೆಳಕುಗಳು (ಪು.೭೫)

ಎನ್ನುವಲ್ಲಿ ಎಷ್ಟು ಅಷ್ಟು ಎಂಬ ಪ್ರಮಾಣ ವಾಚಕಗಳು, ಬಣ್ಣಗಳು, ಹೂಗಳು, ಹೂಬಣ್ಣ ಗಳು ಎನ್ನುವಲ್ಲಿ ಪದರಚನೆಗಳು ಸಂಯೋಜಿತವಾಗಿವೆ. ಕಾವ್ಯದಲ್ಲಿ ಬರುವ

ಶಿವದುಃಖ, ಶಿವಲೋಕ
ಶಿವಕೇಂದ್ರ, ಶಿವಪಾದ
ಶಿವಶಿವಾ, ಶಿವಧೋ
ಶಿವಾಗಮ, ಶಿವಗಣ

ಮುಂತಾದ ಪದಪುಂಜಗಳು ಬೇರೆಬೇರೆ ಅರ್ಥ ಛಾಯೆಯಲ್ಲಿ ಕಾವ್ಯದಲ್ಲಿ ಬಳಕೆಯಾಗಿವೆ.

ಎವ್ವಾ ಬೇ ಚಿಕ್ಕಂದುನೀ ಹೇಳುತ್ತಿದ್ದ ಜೋಗುಳ ಹಾಡವೇ
ರಾತ್ರಿಗೆ ಚಂದ್ರನ ಪರಿಚಯವಿರುವಂತೆ ನೀನು ನನಗೆ ಪರಿಚಿತಳು

ಎನ್ನುವಲ್ಲಿ ಪರಿಚಿತ ಸರಳ ವಾಕ್ಯ ರಚನೆಗಳು ಬಂದಿವೆ. ಚಂದ್ರಮುತ್ತ ಮುದಿಜೋಗ್ತಿಯನ್ನು ಅಪ್ಪಗಟ್ಟಿದಾಗ ಮುದಿಜೋಗ್ತಿ 'ಎಲ ಎಲಾ ಅಮವ್ವಾಸೆಯಲ್ಲಿ ಹುಟ್ಟಿದವನೇ ಕಣ್ಣು ಕಾಣಸೋದಿಲ್ಲವೇ? ಮೈಗೇ ಅಡರ್‍ತೀಯಲ್ಲೋ ಬಡ್ಡಿಮಗನೇ' ಎನ್ನುವಲ್ಲಿ ಕಿತ್ತೂರು

ಕರ್ನಾಟಕದ ಗ್ರಾಮ್ಯೋಕ್ತಿಗಳ ಸೊಗಡು ಜೀವಂತವಾಗಿದೆ. 'ನನ್ನ ದುನೀಯಾ ದೂಳಿಪಟ ವಾಯಿತು' ಇಂತಹ ಪ್ರಯೋಗಗಳಲ್ಲಿ ಕನ್ನಡ-ಮರಾಠಿ ಮಿಶ್ರಣದ ನುಡಿಬೆರಕೆಯ ಪ್ರಕ್ರಿಯೆ ನಡೆದಿದೆ. ಕಂಬಾರರು ತಮ್ಮ ಕಾವ್ಯದ ವಿಶಿಷ್ಟ ಉದ್ದೇಶಕ್ಕೆ ಅನುಕೂಲವಾಗುವಂತೆ ಅವಿಭಾಜಕ ಧ್ವನಿಮಾಗಳನ್ನು (ವಿಶೇಷವಾಗಿ ಶೃತಿ ಹಂತದಲ್ಲಿ) ಚೆನ್ನಾಗಿ ದುಡಿಸಿಕೊಳಬಲ್ಲರು.

ಹರಕೆ ಹೊತ್ತವಳು ನೀನಲ್ಲವೆ?
ತೀರಿಸಬೇಕಾದವಳೂ ನೀನೇ ಅಲ್ಲವೆ?

ಉಚ್ಚಾರದಲ್ಲಿ ಧ್ವನಿಯ ಏರಿಳಿತವನ್ನುಂಟುಮಾಡಿ ವಾಕ್ಯದ ಕೊನೆಗೆ ಅವರು ಪ್ರಶ್ನಾರ್ಥಕ ಚಿಹ್ನೆಯನ್ನು ಬಳಸಿಕೊಳ್ಳುವ ಸಂದರ್ಭವನ್ನು ಗಮನಿಸಬೇಕು. ವಾಕ್ಯದ ಕೊನೆಗೆ ಪೂರ್ಣ ವಿರಾಮ ಕಲ್ಪಿಸಿಕೊಂಡರೆ ಒಂದು ಅರ್ಥ, ಪ್ರಶ್ನಾ ಚಿಹ್ನೆಯನ್ನು ಬಳಸಿದರೆ ಮತ್ತೊಂದು ಅರ್ಥ, ಉದ್ಗಾರ ಚಿಹ್ನೆಯನ್ನು ಬಳಸಿದರೆ ಇನ್ನೊಂದು ಅರ್ಥ ಕೊಡುತ್ತದೆ. ಅದು ಕಂಬಾರರ ಭಾಷಾಬಳಕೆಯ ತಂತ್ರವಾಗಿದೆ. ಚಕೋರಿಯಲ್ಲಿ ಪ್ರಾದೇಶಿಕ ವೈವಿಧ್ಯತೆಯ ಶಬ್ದಗಳು ಉದ್ದಕ್ಕೂ ದೊರೆಯುತ್ತವೆ. ಗುಳೆ, ಗುದಮುರಿಗೆ, ಹ್ಯಾರೆ, ಕೊಂಡಾಟ, ಮುದ್ದತ್ತು, ಜಲ್ಮ ಹಳವಂಡ ಮುಂತಾದ ಅನೇಕ ಶಬ್ದಗಳು ಸಹಜವಾಗಿ ಬಳಕೆಯಾಗುತ್ತವೆ. ಸೃಜನಶೀಲ ಬರಹಗಾರ ಸಂದರ್ಭಕ್ಕೆ ತಕ್ಕಂತೆ ಪ್ರಾದೇಶಿಕ ರೂಪಗಳನ್ನು ಬಳಸುವುದರ ಮೂಲಕ ಭಾಷಾ ಸಂಕೀರ್ಣತೆಯನ್ನು ದೂರಮಾಡಿ ಹೆಚ್ಚು ಘನವಾದ ವಿಚಾರಗಳನ್ನು ದ್ರವರೂಪಗೊಳಿಸಿ ನಿಚ್ಚಳವಾಗಿ ಕಥೆಯ ಆಶಯ ಜನರಿಗೆ ಅರ್ಥವಾಗುವಂತೆ ಮಾಡುತ್ತಾನೆ ಎನ್ನುವುದು ಕಾವ್ಯಗಳಲ್ಲಿ ಪ್ರಾದೇಶಿಕ ರೂಪಗಳ ಬಳಕೆಯ ಮಹತ್ವವನ್ನು ತಿಳಿಸುವುದು. ಚಕೋರಿಯಲ್ಲಿ ಐದು ಪ್ರಮುಖ ಪಾತ್ರಗಳಿವೆ. ಚಂದಮುತ್ತ, ಸೂರ್ಯಮುತ್ತ ಎಂಬ ಎರಡು ಪುರುಷಪಾತ್ರಗಳು ಯಕ್ಷಿ, ಅಬ್ಬೆ(ಲಕ್ಕಬ್ಬೆ), ಚಕೋರಿ ಎಂಬ ಮೂರು ಸ್ತ್ರೀ ಪಾತ್ರಗಳಿವೆ (ಅಬ್ಬೆಯ ಇನ್ನೊಂದು ರೂಪವೇ ಪುಣ್ಯಕೋಟಿ) ಪಾತ್ರಗಳು ಆಯಾ ಸಂದರ್ಭಕ್ಕೆ ತಕ್ಕಂತೆ ಸಂಬೋಧಿಸುವ ವಿಧಾನದಲ್ಲಿಯೂ ಸಹಜತೆಯಿದೆ. ಉದಾ. ಯವ್ವಾಬೇ, ಯಪ್ಪಾ ಈ ರೀತಿಯ ಉಚ್ಚಾರಣೆ ನಾಟಕೀಯವಾಗಿರದೆ ಸಹಜವಾಗಿರುತ್ತದೆ. ಕಂಬಾರರು ಜಾನಪದ ಛಂದಕ್ಕೆ ಹತ್ತಿರವಾದ ಅಂಶಲಯವನ್ನು ಬಳಸುತ್ತಾರೆ. ಲಾವಣಿ ಶಿಲ್ಪದಲ್ಲಿ ರೂಪಿತವಾದ ಕಾವ್ಯ ಇದಾಗಿದೆ. ಆಗಾಗ್ಗೆ ಶಿವಶಿವಾ ಎಂಬ ಪದಪ್ರಯೋಗವು ಪುನರಾವರ್ತನೆಯಾಗುವುದು. ಅಂತಹ ತಂತ್ರಗಳಲ್ಲಿ ಲಾವಣಿಯ ಧಾಟಿಯನ್ನು ಉಳಿಸಿಕೊಳ್ಳಲಾಗಿದೆ.

ಭಾಷೆಯ ಆಧುನೀಕರಣ ಸಾಹಿತಿ ಕಲಾವಿದರಿಂದ, ಮಾಧ್ಯಮಗಳಿಂದ ಪ್ರಜ್ಞಾಪೂರ್ವಕ ವಾಗಿ ಇನ್ನು ಕೆಲವೊಮ್ಮೆ ಅಪ್ರಜ್ಞಾಪೂರ್ವಕವಾಗಿ ನಡೆಯುವುದುಂಟು. ಶಬ್ದಕೋಶದ ವಿಸ್ತರಣೆ ಭಾಷೆಯ ಆಧುನೀಕರಣಕ್ಕೆ ಒಂದುದಾರಿ. ತನ್ನ ಸಾಮಗ್ರಿಗಳ ಮೂಲಕವೇ ಹೊಸ ಪದಗಳನ್ನು ಸೃಷ್ಟಿಸಿಕೊಳ್ಳುತ್ತಾರೆ. ಕಂಬಾರರು ಕೆಲವು ಹೊಸ ಪದಗಳನ್ನು ಪ್ರಯೋಗಿಸಿದ್ದಾರೆ. ತತ್‌ಪೂರ್ವದ ಕಾವ್ಯಗಳಲ್ಲಾಗಲೀ ಕೋಶಗಳಲ್ಲಾಗಲೀ ಬಳಕೆಯಾಗದಿರುವ ಈ ಪದಗಳು ಕಂಬಾರರ ನೂತನ ಸೃಷ್ಟಿಯಾಗಿರುವುದರಿಂದ ಅವುಗಳನ್ನು ವಿಶೇಷವಾಗಿ ಗಮನಿಸಬೇಕಾಗಿದೆ.

ಅಂಗಜಲ-ಬೆವರು

ಆಕಾಶದಂಗಳ-ಮುಗಿಲು

ಉರಿಮಾತು-ಕೋಪದ ನುಡಿ(ಮಾತು) ಬಿರುಸುಧ್ವನಿ

ಒಳಮನೆ-ಮನೆಯ ಒಳಗಡೆಯ ಕೋಣೆ

ಕಾಲುಪ್ಪಳತೆ-ಕಾಲಿನ ಒಳೆತ

ಕೀಳರ್ಧ-ಕಳಪೆಯ ಅರ್ಧಭಾಗ

ಘನಾನಂದ-ಅತ್ಯಾನಂದ

ಚಿತ್ತಸಂಶಯ-ಮನಸ್ಸಿನಲ್ಲಾದ ಅನುಮಾನ

ಪತ್ರಕರಾರು-ಕರಾರುಪತ್ರ

ಬೆವರು ಜಲ-ಬೆವರಿನ ಕರಿನೀರು

ಬಾಯಾಸರ-ದಾಹವನ್ನು ಅಡಗಿಸು(ಹಸಿವನ್ನು ನೀಗಿಸು)

ಮಣ್ಣೊಡ್ಡ-ಮಣ್ಣಿನ ಕೆಲಸ ಮಾಡುವವ

ಮೈಹಾಸು-ಮಲಗು

ವಾಮಂಗ-ಶರೀರದ ಎಡಭಾಗದ ಅಂಗ

ಸೇಡುಮಾರಿ-ಕ್ಷುದ್ರದೇವತೆ

ಹಸಿರೇರು-ಸಂತೋಷ, ಹಿಗ್ಗು (ಹೃದಯ ಅರಳಿತು)

ಹಿಡಿಸೂಡಿ-ಪೊರಕೆ, ಕಸಬರಿಗೆ

ಹಿಮ್ಮಣ್ಣೆ-ಹಣ ಇಟ್ಟುಕೊಳ್ಳುವ ಚಿಕ್ಕಚೀಲ

ಹೀಂಕಾರ-ಹೀನಾಮಾನವಾದ ಧ್ವನಿ

ಹೂಗಾಳಿ-ತಂಗಾಳಿ

ಹೊಸನಾತ-ನವೀನ ವಾಸನೆ

ಸಾದೃಶ್ಯ ಸೃಷ್ಟಿಯ ಮೂಲಕ ಕಂಬಾರರು ಈ ಪದಗಳನ್ನು ಸೃಷ್ಟಿಸಿ ಚಲಾವಣೆಗೆ ತಂದಿದ್ದಾರೆ. ಭಾಷೆಯ ಅಭಿವ್ಯಕ್ತಿ ಶಕ್ತಿಯನ್ನು ಹೆಚ್ಚಿಸಿ ಭಾಷೆ ಶ್ರೀಮಂತವಾಗಬೇಕಿದ್ದಲ್ಲಿ ಈ ಬಗೆಯ ಪ್ರಯೋಗಗಳು ಅವಶ್ಯಕವಾಗಿವೆ.

ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಚಕೋರಿ ಭಾಷಾ ಪ್ರಯೋಗದ ದೃಷ್ಟಿಯಿಂದಲೂ ಮಹತ್ವದ ಕಾವ್ಯವಾಗಿದೆ. ಆ ಕಾವ್ಯದ ಭಾಷಾಸ್ವರೂಪವನ್ನು, ಭಾಷಾ ಬಳಕೆಯ ರೀತಿಯನ್ನು

ಸ್ಥೂಲವಾಗಿ ಪರಿಚಯ ಮಾಡಿಕೊಡಲು ಯತ್ನಿಸಿದ್ದೇನೆ. ಇನ್ನು ಬೇರೆಬೇರೆ ವಿಧಾನಗಳಿಂದ ವಿವೇಚಿಸುವುದು ಸಾಧ್ಯ. ಅರ್ಥರಚನೆಯ ದೃಷ್ಟಿಯಿಂದ ಕಂಬಾರರ ಕಾವ್ಯಭಾಷೆ ಭಾಷಾಭ್ಯಾಸಿಗಳ ಕುತೂಹಲವನ್ನು ಕೆರಳಿಸುತ್ತದೆ.

ಆಕರಗ್ರಂಥ

೧. ಚಂದ್ರಶೇಖರ ಕಂಬಾರರ ಸಮಗ್ರ ಕಾವ್ಯ, ೨೦೧೧, ಸಪ್ನ ಬುಕ್‌ಹೌಸ್, ಬೆಂಗಳೂರು.

೩೪

ಪ್ರಾದೇಶಿಕ ಭಾಷಾಪ್ರಯೋಗ ಮತ್ತು ಚಂಪಾ ನಾಟಕ

೧

ಒಂದು ಭಾಷಾ ಸಮುದಾಯಕ್ಕೆ ಸೇರಿದ ಜನರು ಆಡುವ ನಾನಾ ವೈವಿಧ್ಯಗಳಿಂದ ಕೂಡಿರುವ ಭಾಷಾ ಪ್ರಬೇಧವನ್ನೇ ಉಪಭಾಷೆಯೆಂದು ಕರೆಯಲಾಗುತ್ತದೆ. ಒಂದು ಭಾಷಿಕ ಕ್ಷೇತ್ರದಲ್ಲಿ ಬಳಕೆಯಲ್ಲಿರುವ ಆಡು ರೂಪಗಳ ಧ್ವನಿ ಉಚ್ಚಾರ, ಪದ, ಅರ್ಥ ಹಾಗೂ ಅವುಗಳ ವಾಕ್ಯ ಮುಂತಾದವುಗಳನ್ನು ಅನುಲಕ್ಷಿಸಿ ಸಂಕಲಿಸಿದ ನಿಘಂಟುಗಳಿಗೆ ಸಾಮಾನ್ಯವಾಗಿ ಉಪಭಾಷಾ ನಿಘಂಟು ಎಂದು ಕರೆಯಲಾಗುತ್ತದೆ.

ಏಕಭಾಷಿಕ, ದ್ವಿಭಾಷಿಕ ಮತ್ತು ಬಹುಭಾಷೆಗಳ ಅಧ್ಯಯನದ ವೈಧಾನಿಕತೆಯು ಮೊದಲು ನೋಟಕ್ಕೆ ಭಿನ್ನವಾಗಿ ಕಂಡುಬಂದರೂ ಅವುಗಳ ರಚನೆಯ ಶಿಲ್ಪ ಹೆಚ್ಚು, ಕಡಿಮೆ ಒಂದೇ ರೀತಿಯದಾಗಿರುತ್ತದೆ. ಇದಕ್ಕೆ ಆಡುಭಾಷೆಯು ಹೊರತಲ್ಲ. ಭಾಷೆ, ಪರಿವರ್ತನ ಶೀಲ ವುಳ್ಳದ್ದು ಅದು ಪ್ರದೇಶದಿಂದ ಪ್ರದೇಶಕ್ಕೆ, ಕಾಲದಿಂದ ಕಾಲಕ್ಕೆ ಪರಿವರ್ತನೆ ಹೊಂದುತ್ತದೆ. ಭೌಗೋಳಿಕ ಪರಿಸರದಿಂದ ಭಾಷೆಯಲ್ಲಿ ಬದಲಾವಣೆಯಾದರೆ ಪ್ರಾದೇಶಿಕ ಉಪಭಾಷೆ ಗಳುಂಟಾಗುತ್ತವೆ. ಮತ, ವರ್ಗ, ವೃತ್ತಿ ಈ ಅಂಶಗಳಿಂದ ಭಾಷೆ ಯಲ್ಲಿ ಬದಲಾವಣೆಯಾದರೆ ಸಾಮಾಜಿಕ ಉಪಭಾಷೆಗಳು ಉಂಟಾಗುತ್ತವೆ.

ಒಂದು ಭಾಷಿಕ ರೂಪ ಭೌಗೋಳಿಕ ಅಂಶಗಳ ಪ್ರಭಾವದಿಂದ ವಿಭಿನ್ನರೂಪದಲ್ಲಿ ಬಳಕೆಯಾಗುವುದುಂಟು. ಉದಾ: ಕರ್ನಾಟಕದಾದ್ಯಂತ 'ನೆಲಕಡಲೆ ಕಾಯಿ' ಎಂಬ ಶಬ್ದಕ್ಕೆ ಉತ್ತರ ಕರ್ನಾಟಕ ಪ್ರದೇಶದಲ್ಲಿ ಶೇಂಗಾ, ಸೇಂಗಾ, ಬ್ಯೆಮುಂಗ್ ಎಂದೂ ದಕ್ಷಿಣ ಕರ್ನಾಟಕದಲ್ಲಿ ನೆಲಕಡಲೆ, ಕಡ್ಲೆಕಾಯಿ, ನೆಲಕಡಲೆಕಾಯಿ ಮುಂತಾದ ರೂಪಭೇದಗಳಿವೆ. 'ತಾಯಿ' ಎಂಬರ್ಥ ಕೊಡುವ ಬಂಧುಸೂಚಕಕ್ಕೆ ದಕ್ಷಿಣ ಕರ್ನಾಟಕದಲ್ಲಿ 'ಅಮ್ಮ' ಎಂದು

ಕರೆದರೆ, ಉತ್ತರ ಭಾಗದಲ್ಲಿ 'ಅವ್ವ' ಎಂದು ಕರೆಯಲಾಗುತ್ತದೆ. ಬಳ್ಳಾರಿ ಪ್ರದೇಶ ದಲ್ಲಿ 'ಅವ್ವ' ಎಂದರೆ 'ಅಜ್ಜಿ' ಎಂದರ್ಥ. ಪದ ಬಳಕೆಯಲ್ಲಿ ಈ ರೀತಿ ಅರ್ಥ ವ್ಯತ್ಯಾಸಗಳಿರುತ್ತವೆ. ಪ್ರತಿಯೊಂದು ಭಾಷೆಯು ತನ್ನದೇ ಆದ ಭಾಷಾ ವೈಶಿಷ್ಟ್ಯತೆಯನ್ನು ಸಂಪಾದಿಸಿಕೊಂಡಿರುತ್ತವೆ. ಉದಾ: ಬೆಳಗಾವಿ ಕನ್ನಡದಲ್ಲಿ ಸ್ವರಗಳ ಉಚ್ಚಾರದಲ್ಲಿ ಅನುನಾಸಿಕತೆ ಸ್ಪಷ್ಟವಾಗಿ ಗೋಚರಿಸುತ್ತದೆ. ಅವನು-ಅವ~, ಇವನು-ಇವ~ ಹಾಗೂ ಮಹಾಪ್ರಾಣಗಳ ಉಚ್ಚಾರಣೆಯಿದೆ. ಖಣ (ಕಣ), ಧನಿ (ದನಿ) ಎ>ಇ ಧ್ವನಿ ಬದಲಾವಣೆಯಾಗಿದೆ. ಮನೆ> ಮನಿ, ಶಾಲೆ>ಸಾಲಿ ಮುಂತಾದುವು. ಆಧುನಿಕ ಭಾಷಾಶಾಸ್ತ್ರಜ್ಞರು ಬರಹದ ಭಾಷೆಯ ಅಧ್ಯಯನಕ್ಕಿಂತ ಆಡುಭಾಷೆಗಳ ಅಧ್ಯಯನ ಹೆಚ್ಚು ಉಪಯುಕ್ತವಾದುದು ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಇದರಿಂದ ಉಪಭಾಷೆಗಳ ಅಧ್ಯಯನಕ್ಕೆ ಹೆಚ್ಚಿನ ಮಾನ್ಯತೆ ದೊರೆಯಿತು.

ಆಡುಭಾಷೆಯ ಉಪಯುಕ್ತತೆ

೧. ಉಪಭಾಷೆಗಳ ಮೂಲಕ ಮೂಲರೂಪ ಮತ್ತು ಸಮಸ್ತರೂಪಗಳ ಸಹಾಯದಿಂದ ಅವುಗಳ ಮೂಲಭಾಷೆಯನ್ನು ಪುನರ್ರಚಿಸಬಹುದು. ಹಾಗೆಯೇ ಬೇರೆ ಬೇರೆ ಜ್ಞಾತಿ ಭಾಷೆಗಳ ಮೂಲರೂಪಗಳನ್ನು ಪುನರ್ರಚಿಸಬಹುದು. ಅದರಂತೆ ಬೇರೆ ಬೇರೆ ಭಾಷೆಗಳು ಬೆಳೆದು ಬಂದ ವಿಧಾನವನ್ನು ಚಾರಿತ್ರಿಕವಾಗಿ ವಿವರಿಸಿ ತೋರಿಸಬಹುದು. ಪದಗಳು ಕಾಲದಿಂದ ಕಾಲಕ್ಕೆ ಪಲ್ಲಟವಾಗುವ ಕ್ರಿಯೆಯನ್ನು ಅರಿಯಬಹುದು.

೨. ಒಂದು ಭಾಷೆಯನ್ನಾಡುವ ಭಾಷಿಕರ ಸಮಾಜ-ಸಂಸ್ಕೃತಿ ಮುಂತಾದವುಗಳನ್ನು ಅರಿಯಬೇಕಾದರೆ ಆ ಭಾಷಾ ಸಮುದಾಯದ ಆಡುರೂಪಗಳು ತುಂಬ ನೆರವಾಗುತ್ತವೆ. ಉದಾ:- ಬೆಳಗಾವಿ ಪ್ರದೇಶದ ವ್ಯಾವಹಾರಿಕ ಕನ್ನಡದಿಂದ ಸಂಗ್ಯಾಬಾಳ್ಯಾ, ಬಲವಂತ-ಬಸವಂತ - ಇಂತಹ ಜಾನಪದ ಗೀತ ರೂಪಕಗಳ ಸ್ವರೂಪ ಗೊತ್ತಾಗುತ್ತದೆ. ಇದರಿಂದ ಭಾಷಾ ಸಂಕೀರ್ಣತೆ ದೂರವಾಗಿ ನಾಟಕದ (ಕೃತಿಯ) ಆಶಯ ಸುಲಭವಾಗಿ ಜನರಿಗೆ ಅರ್ಥವಾಗುತ್ತದೆ.

೩. ಒಂದು ಭಾಷೆಯ ಪ್ರಾಚೀನ ಮತ್ತು ಅರ್ವಾಚೀನ ಸಾಹಿತ್ಯ ಗ್ರಂಥಗಳಲ್ಲಿ ಆ ಕೃತಿ ರಚನೆಯಾದ ಪರಿಸರದ ಪ್ರಾದೇಶಿಕವಾದ ರೂಪಗಳು ಉಳಿದುಕೊಂಡು ಬಂದಿರುತ್ತವೆ. ಅಂತಹ ಗ್ರಂಥಗಳನ್ನು ಅಧ್ಯಯನ ಮಾಡುವಾಗ ಆ ಸಾಹಿತ್ಯ ಕೃತಿಯ ರಚನೆ, ಕಾಲ, ದೇಶ ಮುಂತಾದ ಅಂಶಗಳು ಸರಿಯಾಗಿ ಗೊತ್ತಿಲ್ಲದಿರುವಾಗ ಉಪಭಾಷಾ ನಿಘಂಟುಗಳು ನೆರವಾಗುತ್ತವೆ.

೪. ಭಾಷಾ ಬೋಧಕರಿಗೆ ಉಪ ಭಾಷಾಕೋಶಗಳಿಂದ ಹೆಚ್ಚು ಪ್ರಯೋಜನವಿದೆ. ಮೈಸೂರು ಕಡೆಯ ಶಬ್ದಗಳು ಬೆಳಗಾವಿ ಕಡೆಯವರಿಗೆ, ಬೆಳಗಾವಿ ಕಡೆಯ ರೂಪಗಳು ಮೈಸೂರಿನ ಕಡೆಯವರಿಗೆ ಬೇಗನೆ ಅರ್ಥವಾಗುವುದಿಲ್ಲ. ಪ್ರಾದೇಶಿಕ ನಿಘಂಟುಗಳಿದ್ದರೆ

ಪಾಠ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಸಮಸ್ಯೆಗಳು ಉಂಟಾಗುವುದು ತುಂಬ ಕಡಿಮೆಯಾಗುತ್ತವೆ. ಮಕ್ಕಳಲ್ಲಿ ಶಬ್ದ ಶಕ್ತಿಯ ವಿಕಾಸಕ್ಕೂ ನೆರವಾಗುತ್ತದೆಯಲ್ಲದೆ, ಪರಸ್ಪರ ಅರಿವು ಉಂಟಾಗಲಿಕ್ಕೆ ನೆರವಾಗುತ್ತದೆ. ತತ್ಪರಿಣಾಮವಾಗಿ ಶಿಕ್ಷಕರು ಕಲಿಕೆ ಮತ್ತು ಬೋಧನೆಯ ಪ್ರಕ್ರಿಯೆಯಲ್ಲಿ ಯಶಸ್ವಿಯಾಗುತ್ತಾರೆ. ಮಕ್ಕಳ ಕಲಿಕೆಯು ಪರಿಣಾಮಕಾರಿಯಾಗುತ್ತದೆ.

೫. ಭಾಷಾವಿಜ್ಞಾನಿಗಳಿಗೆ ಉಪಭಾಷೆಗಳಿಂದ ಆಗುವ ಪ್ರಯೋಜನ ಅಪಾರ. ಉಪಭಾಷಾ ಅಧ್ಯಯನಕ್ಕೆ, ಉಪಭಾಷೆಗಳ ವಿವಿಧ ಬಗೆಯ ನಕ್ಷೆಗಳನ್ನು ತಯಾರಿಸಲಿಕ್ಕೆ, ಒಂದು ಭಾಷಾ ಸಮುದಾಯದ ಸಮಾಜ-ಸಂಸ್ಕೃತಿಯ ಹಿನ್ನೆಲೆಯನ್ನು ಅರಿಯಲು ಇಂತಹ ಹಲವಾರು ಸಂದರ್ಭಗಳಲ್ಲಿ ಉಪಭಾಷಾ ನಿಘಂಟುಗಳು ಭಾಷಾ ಅಧ್ಯಯನಕಾರರಿಗೆ ನೆರವಾಗುತ್ತವೆ. ಭಾಷಾಶಾಸ್ತ್ರಜ್ಞರು ಆಡು ಭಾಷೆಯನ್ನು ಜೀವಂತ ಭಾಷೆ ಎಂದು ಕರೆಯುತ್ತಾರೆ.

ಭಾಷೆ-ಸಮಾಜ-ಸಂಸ್ಕೃತಿ ಇವುಗಳಿಗಿರುವ ಪರಸ್ಪರ ಸಂಬಂಧವನ್ನು ವಿವರಿಸಿ ತೋರಿಸಲು ಭಾಷಾ ಪ್ರಭೇದಗಳ ಅಧ್ಯಯನ ಅತ್ಯಗತ್ಯವಾಗಿ ನಡೆಯಬೇಕಾಗಿದೆ. ಈ ಎಲ್ಲ ಕಾರಣಗಳಿಂದಾಗಿ ಆಡುಭಾಷೆಗಳಿಂದಾಗುವ ಪ್ರಯೋಜ ಅಪಾರವಾದದ್ದು ಹಾಗೂ ಹೆಚ್ಚು ಉಪಯುಕ್ತವಾದದ್ದು.

೨

ಉತ್ತರ ಕರ್ನಾಟಕದ ಕನ್ನಡವನ್ನು ನಾಟಕದ ಮಾಧ್ಯಮವನ್ನಾಗಿ ಹೆಚ್ಚು ಜನಪ್ರಿಯಗೊಳಿಸಿದವರಲ್ಲಿ ಚಂಪಾ ಅವರು ಪ್ರಮುಖರಾಗಿದ್ದಾರೆ. ಈ ಅಧ್ಯಾಯದಲ್ಲಿ ಚಂಪಾ ಅವರ ನಾಟಕದ ಭಾಷೆಯ ಸ್ವರೂಪವನ್ನು ಕುರಿತು ಚರ್ಚೆ ಬೆಳೆಸಲಾಗಿದೆ. ಚಂಪಾ ಅವರ ರಚನೆಯ ಮೇಲೆ ಹಾವೇರಿ ಉಪಭಾಷೆಯಲ್ಲಿ ಕಂಡು ಬರುವ ಕೆಲವು ಧ್ವನಿ ರಚನಾ ಪ್ರಕ್ರಿಯೆಗಳು, ಅನುನಾಸಿಕೀಕರಣ, ಜಾರುಧ್ವನಿಗಳ ಬಳಕೆ ಹಾಗೂ ಕೆಲವು ಆಕೃತಿಮಾ ಪ್ರಕ್ರಿಯೆಗಳು ಕಾಣಿಸುತ್ತವೆ. ಅವು ನಾಟಕಕ್ಕೆ ಪ್ರಾದೇಶಿಕ ಸೊಗಡನ್ನು ತಂದುಕೊಟ್ಟಿವೆ. ಕೆಲವು ಧ್ವನಿರಚನೆಯ ಪ್ರಕ್ರಿಯೆಗಳು ಹೀಗಿವೆ.

ಪ್ರಮಾಣ ಕನ್ನಡದ ನಾಮಪದದಂತ್ಯದ ಎ>ಇ ಆಗಿ ಬದಲಾಗುತ್ತದೆ.

ತಲೆ>ತಲಿ

ಶಾಲೆ>ಶಾಲಿ (ಸಾಲಿ)

ಮಳೆ>ಮಳಿ

ಮನೆ>ಮನಿ

ಪ್ರಮಾಣ ಕನ್ನಡದ ನಾಮಪದದಂತ್ಯದ ಉ>ಅ ಆಗಿ ಬದಲಾಗುತ್ತದೆ.

ಬಾಗಿಲು>ಬಾಗ್ಲ

ಕತ್ತಲು>ಕತ್ಲ

ಪ್ರಮಾಣ ಕನ್ನಡದ ಪದ ಮಧ್ಯದ ಏ>ಯಾ ಆಗಿಯೂ ಓ>ವಾ ಆಗಿಯೂ ಪರಿವರ್ತನ ಹೊಂದುತ್ತದೆ.

ಪೇಟೆ >ಪ್ಯಾಟಿ ಬೇನೆ >ಬ್ಯಾನಿ

ಮೇಲೆ >ಮ್ಯಾಲ ತೋಟ >ತ್ವಾಟ

ಬೇಸರ >ಬ್ಯಾಸರ ಗೋಡೆ >ಗ್ವಾಡಿ

ಬೇಳೆ >ಬ್ಯಾಳಿ

ಬರೆಹ ಕನ್ನಡದ ಪದಾಂತ 'ಉ' ಕಾರದ ಬದಲು ಚಂಪಾ ಅವರ ನಾಟಕದಲ್ಲಿ 'ಅ' ಸ್ವರವಿರುವುದು ಸಾಮಾನ್ಯ.

ಅವರು - ಅವರ ಅಥವಾ ಅವ್ರ

ಅದು - ಅದ ಅಥವಾ ಅದಾ

ಹುಳು - ಹುಳ ಅಥವಾ ಹುಳಾ

ಬರೆಹ ಕನ್ನಡದ ದ್ವಿತೀಯಾಕ್ಷರದಲ್ಲಿ 'ರ' ಕಾರವಿದ್ದು ತೃತೀಯಾಕ್ಷರದಲ್ಲಿ ಪರಿವೇಷ್ಟಿತ ಧ್ವನಿಗಳಾದ ಟ, ಡ, ಣ, ಳ ಗಳಿದ್ದರೆ 'ರ'ಕಾರದ ಮುಂದಿನ ಸ್ವರವು ಲೋಪ ಹೊಂದಿ, ಮುಂದಿನ ವ್ಯಂಜನದೊಡನೆ 'ರ'ಕಾರವು ಸಮರೂಪ ಧರಿಸುತ್ತದೆ.

ಕುರುಡ>ಕುಡ್ಡ ಹರಡು>ಹಡ್ಡ

ಹೊರಳು>ಹೊಳ್ಳ ಉರುಳು>ಉಳ್ಳ

ಒರಳು>ವಳ್ಳ

ಸಂಬೋಧನೆಯಲ್ಲಿ ತಮ್ಮ ಸಮಾನರನ್ನು ಅಥವಾ ಕೆಳಸ್ತರದವರನ್ನು ಕರೆಯುವಾಗ ಪದಾಂತ್ಯ 'ಯಾ' ಪ್ರತ್ಯಯ ಸೇರಿಸುವುದು ಇಲ್ಲಿ ಬಹುಸಾಮಾನ್ಯ.

ಕಲ್ಲಪ್ಪ - ಕಲ್ಯಾ

ಬಸಪ್ಪ - ಬಸ್ಯಾ

ಸ್ತ್ರೀಲಿಂಗದಲ್ಲಿ - 'ಇ' ಸೇರಿಸಿ ಸಂಬೋಧಿಸಲಾಗುತ್ತದೆ.

ಕಲ್ಲವ್ವ - ಕಲ್ಲಿ

ಮಲ್ಲವ್ವ - ಮಲ್ಲಿ

ಶಿವಕ್ಕ - ಶಿವಿ

'ಅ' ಕಾರಾಂತ ಬಂಧುಸೂಚಕಗಳನ್ನು ಕರೆಯುವಾಗ 'ಯ' ಕಾರಾಂತವಾಗಿ ಉಚ್ಚರಿಸಲಾಗುತ್ತದೆ.

ಅವ್ವ - ಯವ್ವ

ಅಜ್ಜ - ಯಜ್ಜ

ಅಮ್ಮ - ಯಮ್ಮ

ಅಪ್ಪ - ಯಪ್ಪ

ಚಂಪಾ ಅವರ ನಾಟಕಗಳಲ್ಲಿ ಹಾವೇರಿ ಪ್ರದೇಶದ ಧ್ವನಿ ರಚನೆಯ ಪ್ರಕ್ರಿಯೆಗಳನ್ನು ಗುರುತಿಸಬಹುದು.

ಉತ್ತರ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಮತ್ತು ದೈನಂದಿನ ಬದುಕಿನಲ್ಲಿ ವ್ಯವಹಾರಕ್ಕಾಗಿ ಬಳಸುವ ನುಡಿಗಟ್ಟುಗಳು ನಾಟಕದಲ್ಲಿ ಸಹಜವಾಗಿ ಬಳಕೆಯಾಗಿವೆ.

ಮೂಗಕೋದ ಕನ್ನಡಿ

ಹಲ್ಲ ತಿನ್ನು

ಚಂಡಿ ಚಿವುಟು

ನಿರವಂಶ ಆಗಲಿ

ಲಟಕ ಮುರಿ

ಕಡಬೇರಿಕೆ

ಮುಂತಾದ ನುಡಿಗಟ್ಟುಗಳು ನಾಟಕದ ಭಾಷಿಕ ಶಕ್ತಿ ಹೆಚ್ಚಿಸಿವೆ. ಚಂಪಾ ಅವರು ನಾಟಕಗಳಲ್ಲಿ ನುಡಿಗಟ್ಟುಗಳಂತೆ ಹಲವಾರು ವಿಶಿಷ್ಟ ಪದಪುಂಜಗಳನ್ನು ಬಳಸಿದ್ದಾರೆ.

ಹೆಜ್ಜೆಕುತ್ತತಿ	-	ಅವತಾರ ಮುಗಿದಿದೆ
ಚಟ್‌ಬೆಳಗಿತ್	-	ತೊಂದರೆಯಾಯಿತು
ಮೂರಾಬಟ್ಟೆ ಆತ್	-	ಹಾಳಾಯಿತು
ಹುಳಿ ಹಿಂಡಿದರ್	-	ಅಡ್ಡ ಹಾಕು
ನುಂಗಿ ನೀರ್ ಕುಡದ್ರ್	-	ಮುಗಿಸಿದರು

ಇಂತಹ ವಿಶಿಷ್ಟ ಪದಪುಂಜಗಳು ನಾಟಕದಲ್ಲಿ ಬಂದಾಗ ಲಕ್ಷಣಾರ್ಥವನ್ನು ಕೊಡುತ್ತವೆ. ವಿಶಿಷ್ಟ ಅವ್ಯಯಗಳನ್ನು ಚಂಪಾ ಅವರು ಬಳಸಿದ್ದಾರೆ.

ನಿಂದರಕಿಲೆ - ಒಮ್ಮೆಲೆ	ಗಸಕ್ನ - ಕೂಡಲೆ
ಹಿಂದಾಗಡೆ - ಆಮೇಲೆ	ಬುದಂಗ್ನ್ - ಕೂಡಲೆ
ಅಂತರ್ಕಿಲೆ - ಒಮ್ಮೆಲೆ	

ಆಹಾ

ಓಹೋ ಭಾವ ಸೂಚಕ ಅವ್ಯಯಗಳು

ಚೀ

ಥು

ಇಂತಹ ಅವ್ಯಯಗಳು ಭಾಷಿಕ ಕ್ರಿಯೆಯ ನಡೆಯುವ ರೀತಿಯನ್ನು ಹೇಳುತ್ತವೆ. ಚಂಪಾ ಅವರ ನಾಟಕಗಳು ಆಡುನುಡಿಯ ಮೂಲಕ ಸಾಗುವುದರಿಂದ ಹಾವೇರಿ, ಧಾರವಾಡ

ಪ್ರದೇಶದ ಪ್ರಾದೇಶಿಕ ಶಬ್ದಗಳು ನಾಟಕದ ಉದ್ದಕ್ಕೂ ದೊರೆಯುತ್ತವೆ ಎಂಬುದರ ಬಗ್ಗೆ ಬೇರೆ ಹೇಳಬೇಕಾಗಿಲ್ಲ. ಕಲವೊಂದನ್ನು ಇಲ್ಲಿ ಕೊಡಲಾಗಿದೆ.

ಅಡಗು	- ಮರೆಯಾಗು	ಅಡರು	- ಹತ್ತು, ಮೇಲೆರು
ಇದರ	- ಎದುರು	ಈಟ್	- ಸ್ವಲ್ಪ
ಒತ್ತರ	- ಬೇಗ, ಅವಸರ	ಒಲ್ಲಿ	- ನಿರಾಕರಣೆ
ಐತಿ	- ಇದೆ	ಕಾರ ಭಾರ	- ಕೆಲಸ ಮಾಡುವಾಗ ಮಧ್ಯ ಪ್ರವೇಶಿಸಿ ಕೇಡನ್ನುಂಟು ಮಾಡುವುದು
ಕುಂದ	- ಕಳಂಕ		
ಕುಸಿ	- ಕುಗ್ಗು, ಜಾರು		
ಖಿದ್ದ	- ಸಮಕ್ಷಮ	ಕುವ್ವತ್ತ	- ಶಕ್ತಿ, ಸಾಮರ್ಥ್ಯ
ಗಪ್ಪ	- ಸುಮ್ಮನೆ	ಖಾತ್ರಿ	- ವಿಶ್ವಾಸ
ಗುಲ್ಲ	- ಗಲಾಟೆ, ಸಪ್ಪಳ	ಗಡಗಿ	- ಮಣ್ಣಿನಪಾತ್ರ
ಗೋಣ	- ಕತ್ತು, ಕುತ್ತಿಗೆ	ಗುದಮರಗಿ	- ಗಲಾಟೆ
ಡೌಲ್	- ಒಯ್ಯಾರ್	ಚಲೋ	- ಒಳ್ಳೆಯ, ಚೆನ್ನಾಗಿ
ತಾಬಡತೋಬಡ	- ಆಗಿಂದಾಗೆ, ಬೇಗ	ಜಗ್ಗ	- ಎಳೆ
ತಿವಿ	- ಚಿವುಟು	ತಾಕೀತು	- ಸೂಚನೆ
ತುರ್ತ	- ಈಗಿಂದೀಗ, ಸಧ್ಯ	ತಿವಿ	- ಚಿವುಟು
ದರಕಾರ	- ಗಮನ, ಲಕ್ಷ್ಯ	ಥೇಟ	- ಅದೇ ರೀತಿ, ಹಾಗೆ
ಧಿಮಾಕು	- ಸೊಕ್ಕು	ದಿಗರ	- ಭಯ, ಅಂಜಿಕೆ
ನಾಜೂಕು	- ಮೃದು, ಮೆತ್ತಗೆ	ನದರ್	- ದೃಷ್ಟಿ, ದೈವ
ಪಸಂದ	- ಮನಸ್ಸಿಗೆ ಬರುವ	ನಿವಳ	- ಚೆನ್ನಾಗಿ
ಬಡಿವಾರ	- ದೊಡ್ಡಿಸ್ತನ, ಒಣಹೆಮ್ಮೆ	ಪುರಮಾಸೆ	- ಹೆಚ್ಚು ಬಹಳ
ಬೆರಿಕಿ	- ಜಾಣ, ಚಾಣಾಕ್ಷ	ಬುಡ	- ಕೆಳಭಾಗ, ತಳ
ಭಾಳ	- ಬಹಳ	ಭರೋಸ್	- ವಿಶ್ವಾಸ
ಮಸಲತ್ತ	-ಹಂಚಿಕೆ, ಉಪಾಯ	ಮಜಕೂರ	- ಮಾಹಿತಿ, ಹಂಚಿಕೆ, ವಿಚಿತ್ರ
ಮಾರಿ	- ಮುಖ	ಮಸ್ತ	- ಹೇರಳ, ಬೇಕಾದಷ್ಟು,
ಮೂರು ಸಂಜೆ	- ಇಳಿಹೊತ್ತು		ಮ್ಯಾಲ್ ಮೇಲೆ
ಲಗು	- ಬೇಗ	ಯಬಡ್	- ಒಂದು ರೀತಿಯ ಬೈಗಳು
ಸ್ವಾಟಿ	- ತುಟಿ	ಸವಡು	- ಬಿಡುವು
ಸುಸ್ತ	- ಆಯಾಸ, ಬಳಲಿಕೆ	ಸುಮ್ನ	- ಸುಮ್ಮನೆ

ಹರ್‍ಯಾಗ	- ಮುಂಜಾನೆ	ಹನಗಲ	- ಗಲಾಟೆ, ಗದ್ದಲ
ಹೆಣ್ತಿ	- ಹೆಂಡತಿ	ಹಿಂಥಾ	- ಇಂತಹ

ಮುಂತಾದ ಅನೇಕ ಶಬ್ದಗಳು ಸಹಜವಾಗಿ ಬಳಕೆಯಾಗಿವೆ.* ಪಾತ್ರಗಳು ಇಂತಹ ಪದಗಳನ್ನು ಬಳಸುವುದರಿಂದ ಪ್ರೇಕ್ಷಕರಿಗೆ ಹೆಚ್ಚು ಹತ್ತಿರವಾಗುತ್ತವೆ. ನಾಟಕಕಾರ ಪ್ರಾದೇಶಿಕ ಪ್ರಭೇದವನ್ನು ಬಳಸುವುದರ ಮೂಲಕ ಭಾಷಾ ಸಂಕೀರ್ಣತೆಯನ್ನು ದೂರ ಮಾಡಿ ಹೆಚ್ಚು ಘನವಾದ ವಿಚಾರಗಳನ್ನು ದ್ರವ ರೂಪಗೊಳಿಸಿ ನಿಚ್ಚಳವಾಗಿ ಕಥೆಯ ಆಶಯ ಜನರಿಗೆ ತಲುಪುವಂತೆ ಮಾಡುತ್ತಾನೆ. ಭಾಷಾ ಸಂವಹನದ ದೃಷ್ಟಿಯಿಂದ ಪ್ರಾದೇಶಿಕ ಶಬ್ದಗಳ ಬಳಕೆಯು ತುಂಬ ಮಹತ್ವದ ಪಾತ್ರವಹಿಸುತ್ತವೆ. ಪ್ರಾದೇಶಿಕ ಪದಗಳಿಗಿರುವ ಚುರುಕುತನ ಪ್ರೇಕ್ಷಕರ ಮನತಟ್ಟುತ್ತವೆ. ಎಷ್ಟೋ ಬಾರಿ ಬೆಂಗಳೂರು, ಮೈಸೂರು ಕಡೆಯ ಅಸಂಗತ ನಾಟಕಗಳನ್ನು ಪ್ರದರ್ಶಿಸುವಾಗ ಉತ್ತರ ಕರ್ನಾಟಕದ ಭಾಷೆಯ ಉಚ್ಚಾರಣೆ ಅನಾಯಾಸ ವಾಗಿ ನಟರಿಗೆ ಬರುವಷ್ಟು ಚಂಪಾ ಅವರ ನಾಟಕದ ಭಾಷೆಯ ಪ್ರಭಾವ ಬೆಳೆದಿದೆ.

ಚಂಪಾ ಅವರ ನಾಟಕಗಳಲ್ಲಿ ಪ್ರಾದೇಶಿಕ ಶಬ್ದಗಳಂತೆ ಅನುಕರಣವಾಚಕಗಳು ಬಳಕೆ ಯಾಗಿವೆ. ಆಯಾ ಸನ್ನಿವೇಶಗಳನ್ನು ವರ್ಣಿಸುವಾಗ ಸಂಭಾಷಣೆಯಲ್ಲಿ ಅನುಕರಣ ವಾಚಕ ಗಳು ಜೀವನಾಡಿಯಂತೆ ಪ್ರವೇಶಿಸಿ ನಾಟಕಕ್ಕೆ ಕಳೆತರಲು ಸಹಾಯಕವಾಗಿವೆ.

- ಪಿರಿಪಿರಿ ಓಡಿ ಬಂದಿ
- ಖಳಾ ಖಳಾ ಹೊಳಿತಿ
- ಮಿರಿಮಿರಿ ಮಿಂಚತಿ
- ಟಕ್‌ಟಕ್ ಸಪ್ಪಳಾಯಿತು
- ಬುಸ್‌ಬುಸ್ ಅಂತರ ಸಪ್ಪಳಾಯಿತು
- ಗುಳುಗುಳು ನುಂಗಿದ
- ಘುಮಘುಮ ವಾಸನೆ ಬಂತು
- ಸುಯ್ಯುನೆ ಗಾಳಿ ಬೀಸಿತು

ಮುಂತಾದ ಉದಾಹರಣೆಗಳನ್ನು ನೋಡಿದಾಗ ಅನುಕರಣವಾಚಕ ಶಬ್ದಗಳು ಕ್ರಿಯೆ ಯನ್ನು ಅಭಿನಯಿಸುವಂತೆ ಭಾಸವಾಗಿ ನಾಟಕದ ಸೌಂದರ್ಯವನ್ನು ಹೆಚ್ಚಿಸಿವೆ. ಅವು ಕಲಾತ್ಮಕ ವಾಗಿ ಮತ್ತು ಸಹಜವಾಗಿ ಮೂಡಿ ಬಂದಿವೆಯೇ ಹೊರತು ಹೊರೆಯಾಗಿ ಬಂದಿಲ್ಲ. ಇದು ಚಂಪಾ ಅವರ ನಾಟಕಗಳ ವೈಶಿಷ್ಟ್ಯಗಳಲ್ಲಿ ಒಂದಾಗಿದೆ. ಚಂಪಾ ಅವರು ಸಂದರ್ಭಕ್ಕೆ ತಕ್ಕಂತೆ ದ್ವಿರುಕ್ತಿಗಳನ್ನು ಬಳಸುತ್ತಾರೆ. ಒಂದು ವಿಶೇಷಾರ್ಥವನ್ನು ವ್ಯಕ್ತಪಡಿಸುವುದಕ್ಕಾಗಿ ಒಂದು ಪದವನ್ನು ಅಥವಾ ಒಂದು ವಾಕ್ಯವನ್ನು ಅವಕಾಶ ಅಥವಾ ಬಿಡುವು ಇಲ್ಲದೇ ಎರಡು ಸಲ ಪ್ರಯೋಗಿಸುವುದನ್ನು ದ್ವಿರುಕ್ತಿ ಎನ್ನುವರು.

* ಚಂಪಾ ಅವರ ನಾಟಕದಲ್ಲಿ ಬಳಕೆಯಾಗುವ ಪ್ರಾದೇಶಿಕ ಪದಗಳನ್ನು ಪಟ್ಟಿ ಮಾಡುತ್ತ ಹೋದರೆ ಹಾವೇರಿ ಪ್ರದೇಶದ ಉಪ ಭಾಷಾ ಕೋಶವೇ ಸಿದ್ಧವಾಗಬಹುದು (ಅವುಗಳನ್ನು ಒಂದೆಡೆ ಕಲೆ ಹಾಕಿದ್ದೇನೆ).

- ಬ್ಯಾಡ ಬ್ಯಾಡ ಮಲ್ಲಿ
- ಶಿವಕ್ಕ ಶಿವಕ್ಕ ಬರ್ತಾಳ
- ತಾತಾತಾ ನನಗ ತಾ
- ಕುಂಟಾ ಕುಂಟಾ ನೀ ಹೇಳಲೇ
- ಬಯಲು ಬಯಲು ಬಟಾ ಬಯಲು
- ಜಿಂದಾಬಾದ್ ಜಿಂದಾಬಾದ್ ನಳಕವಿಗೆ ಜಿಂದಾಬಾದ್
- ಕತ್ತಲದಾಗ ನಾನಾ ಅಲ್ಲ..... ನೀನೀ ಅಲ್ಲ..... ನಾಕಾಮ

ಭಾವನೆಗಳ ತೀವ್ರತೆಗೆ ದ್ವಿರುಕ್ತಿಗಳು ತುಂಬ ನೆರವಾಗುತ್ತವೆ. ಭಾಷಿಕ ಸನ್ನಿವೇಶವನ್ನು ಕಣ್ಮುಂದೆ ಕಟ್ಟುವಂತೆ ಮಾಡುವ ಚಿತ್ರಕ ಶಕ್ತಿ ದ್ವಿರುಕ್ತಿಗಳಿಗಿದೆ.

ಭಾಷಾ ಸಮುದಾಯದಲ್ಲಿ ಭಾಷಿಕರ ಜೀವನ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳುವಲ್ಲಿ ಸಂಬೋಧನಾ ರೂಪಗಳು ಮಹತ್ವದ ಪಾತ್ರವಹಿಸುತ್ತವೆ. ಕರೆಯುವಾಗ ಇಲ್ಲವೆ ಕೂಗುವಾಗ ಉಪಯೋಗಿಸುವ ಪದಗಳು ಸಂಬೋಧನೆಗಳಾಗಿವೆ. ವ್ಯಾಕರಣ ವರ್ಗಗಳಲ್ಲಿ ಸಂಬೋಧನೆಗಳು ಅನ್ಯಯಗಳ ಕಕ್ಷೆಯಲ್ಲಿ ಬರುತ್ತವೆ. ಚಂಪಾ ಅವರ ನಾಟಕಗಳಲ್ಲಿ ಹಲವಾರು ಸಂಬೋಧನಾ ರೂಪಗಳು ಬಳಕೆಯಾಗಿವೆ.

- ಎಪ್ಪಾ ಗೌಡ
- ಲೇ ಬಸ್ಯಾ
- ಲೇ ಹುಡುಗಾ, ಲೇ ಸೊಂಡಿ ಹುಡುಗಾ
- ಮಗಾ ಬಾಬಾ ಇತ್ತ ಬಾ
- ರೀ ರೀ ಬರ್ರಿ
- ನಾನ್ರಿ ....ನಿಮ್ಮ ಹೇಣ್ತಿ
- ಸಾಕ್ರಿ ಸಾಹೇಬ್ರ .....ಭಾಳ ಆತ್ರಿ
- ಲೋ ನಾಲಾಯಕ
- ಲೋ ಮಗನೇ ಕುಡ್ಡಾ
- ಎಲಾ ಮುದುಕಿ
- ಎಲೇ ಆಗಂತುಕ ಬಾ ಇಲ್ಲಿ
- ಓ ಹೀಗಾಯಿತು

ಇಂತಹ ಸಂಬೋಧನೆಗಳು ವಿಭಿನ್ನ ಸಂದರ್ಭ, ಸನ್ನಿವೇಶಕ್ಕೆ ತಕ್ಕಂತೆ ಬಳಕೆಯಾಗುತ್ತವೆ. ಸಂಬೋಧನೆಗಳಿಂದಲೇ ಭಾಷಿಕರ ಮನೋವೃತ್ತಿಗಳನ್ನು ಹಾಗೂ ಬೇರೆ ಭಾಷಿಕರೊಡನೆ ಅವರು ಹೊಂದಿರುವ ಸಾಮಾಜಿಕ ಸಂಬಂಧವನ್ನು ಗುರುತಿಸಬಹುದು. ಸಂದರ್ಭಕ್ಕೆ ತಕ್ಕಂತೆ ಆಹಾ, ಆಹಾಹಾ, ಭಲೆ, ಭಲಾ, ಛೆ, ಥೂ, ಓಹೋ, ಹೋ, ಹೋಹೋ, ಏ, ಏಏ,

ಚೀ, ಥು ಮುಂತಾದ ಭಾವಸೂಚಕ ಪದಗಳು ನಾಟಕದ ಸಂಭಾಷಣೆಯಲ್ಲಿ ಅರ್ಥಪೂರ್ಣವಾಗಿ ಬಳಕೆಯಾಗಿವೆ. ಇದರಿಂದ ಒಂದು ಸನ್ನಿವೇಶದ ಸಾಂಸ್ಕೃತಿಕ ವಿವರಗಳು ಹಾಗೂ ಭಾಷಾ ವ್ಯವಹಾರದ ಸೂಕ್ಷ್ಮತೆಗಳು ಕಂಡುಬರುತ್ತವೆ.

ಹೆಣ್ಣಿನ ಆಕರ್ಷಣೆ ಅತಿ ಮುಖ್ಯವಾದುದು. ದೇಹ ಮಾಟಕ್ಕಿಂತಲೂ ಅದನ್ನೂ ಮೀರಿದ ಲಾವಣ್ಯ ಎನ್ನುವುದು ತುಂಬ ಮುಖ್ಯವಾಗಿದೆ. 'ಗೋಕರ್ಣದ ಗೌಡ ಶಾನಿ'ಯಲ್ಲಿ ಗೌಡನಿಗೆ ಬಸ್ಯಾ, ಶಿವಕ್ಕನ ರೂಪವನ್ನು ವರ್ಣಿಸುವ ಮಾತುಗಳು ತುಂಬ ಸೊಗಸಾಗಿವೆ.

ಚಂದ್ರಾಣಿ ಚಂದನದ ಗೊಂಬಿ
ರತ್ನದ ಕಂಬಿ ಆದಿ ಜಗದಂಬಿ
ಯಂಗ ಡೌಲಾ |
ನಿನ್ನ ಸರಿ ಈಗ ದೇವತೆಯರು ಯಾರು ಇಲ್ಲಾ |
ಏನು ಬೇಡಿ ಬಂದೆ ಶಿವನಲ್ಲಿ ಎಷ್ಟು ಅಮಲಾ
ಮದವೇರಿ ಹೊಂಟಾಂಗ ಆನಿ
ಜಾತ ಪದ್ಮೀಣಿ | ಪಟ್ಟದಾರಾಣಿ
ಗಾದಿ ಮ್ಯಾಲ ||

ಇಲ್ಲಿ ಭಾವ-ಭಾಷೆಗಳ ಮೇಳ ರೋಮಾಂಚನಕಾರಿಯಾಗಿದ್ದು ಜಾನಪದ ಭಾಷಾ ಪ್ರಯೋಗದ ದೃಷ್ಟಿಯಿಂದಲೂ ಮಹತ್ವಾದ್ದಾಗಿರುತ್ತದೆ. ಆಡುನುಡಿಯ ಬಳಕೆ ಇಲ್ಲಿದೆ. ಗ್ರಾಮ್ಯದ ಸಹಜತೆ, ಸೊಗಡು ಚೆನ್ನಾಗಿ ವ್ಯಕ್ತವಾಗಿದೆ. ಚಂಪಾ ಅವರ ನಾಟಕಗಳಲ್ಲಿ ಅಲಂಕಾರಗಳಂತೆ ಪ್ರತಿಮೆಗಳು ಹೇರಳವಾಗಿ ಬಳಕೆಯಾಗಿ ನಾಟಕದ ಸೌಂದರ್ಯವನ್ನು ಹೆಚ್ಚಿಸಿವೆ. ಅಲ್ಲಿ ಬಳಕೆಯಾದ ಪ್ರತಿಮೆಗಳು ದೇಸಿ ಮೂಲವಾಗಿವೆ. ಕೆಲವೊಂದನ್ನು ಇಲ್ಲಿ ಕಲೆ ಹಾಕಲಾಗಿದೆ.

- ಖಬರಗೇಡಿ ಕೈಯಾಗ ಕೊಬರಿ ಕೊಟ್ಟಂಗ
- ಹಿರೆಕ್ಕನ ಚಾಳಿ ಮನಿ ಮಂದಿಗಿ
- ಹಾಲೀಗಿ ಹಾಕಿಧಾಂಗ ಹೆಪ್ಪ
- ಕಣ್ಣೀಗಿ ಹತ್ತಿಧಾಂಗ ಜಂಪಾ
- ದೆವ್ವನ ಕೂಡಿ ಕುತ್ತಿ ಹಿಡದಂಗ
- ಅಮ್ರಾವ್ರ ಗಂಡ
- ಮೂಗಿನ ಕೆಳಗ ಮುತ್ತಿನ ಮೂಗುತಿ
- ಹಳೆಯದನ್ನು ನೆನೆಸಿ ಹಿತ್ತಲಲ್ಲಿ ಅತ್ತಿದ್ದರಂತೆ
- ಎಳಿಸಿಕ್ಕರ ಹಚಡಾ ನುಂಗು ಮಗಾ ನಾನು
- ಹುಳಾ ಮನದಾಗ ಹೊಕ್ಕಡಂಗ

ಇಂತಹ ಪ್ರತಿಮೆಗಳು, ರೂಪಕಗಳು ನಾಟಕದ ಶಕ್ತಿಯನ್ನು ಹೆಚ್ಚಿಸಿವೆ. ಅವುಗಳಿಂದ ನಾಟಕಗಳಿಗೆ ಹೊಸ ಅರ್ಥವಂತಿಕೆ ಹೊಳೆಯುತ್ತದೆ. ಚಂಪಾ ಅವರು ನಾಟಕಗಳು ಅಲಂಕಾರ ಮತ್ತು ಪ್ರತಿಮೆಗಳ ಮೂಲಕ ಮಾತನಾಡಿದಂತೆ ಭಾಸವಾಗುತ್ತವೆ. ಅಂತಹ ರೂಪಗಳಲ್ಲಿ ಹಾಸ್ಯ, ಶೃಂಗಾರವಿರುವಂತೆ ದುರಂತರ ಛಾಯೆಯೂ ಇರುತ್ತದೆ. ಚಂಪಾ ಅವರು ಅರ್ಥ ಪೂರ್ಣವಾದ ಪದಪುಂಜಗಳನ್ನೂ ಬಳಸುತ್ತಾರೆ. 'ಕುಂಟಾ ಕುಂಟಾ ಕುರವತ್ತಿ' ನಾಟಕದಲ್ಲಿ ಕುಂಟನು, ಕುರುಡನ ಕೈಯಿಂದ ವಾಚ ತೆಗೆದುಕೊಳ್ಳುತ್ತಾನೆ. ಗಡಿಯಾರದ ಮುಳ್ಳುಗಳ ಚಲನವಲನಗಳನ್ನು ನೋಡಿ, ಕುಂಟ ಹೇಳುವ ಮಾತುಗಳು ತುಂಬ ಅರ್ಥಪೂರ್ಣವಾಗಿವೆ.

ಅಹಾ..... ಸಣ್ಣ ಮುಳ್ಳು ನೋಡ್ರಿ
ಹ್ಯಾಂಗ ಕುಂಟಲಿಪಿ ಆಡತತಿ
ಉದ್ದನ್ನ ಮುಳ್ಳ ನೋಡ್ರಿ
ಸರ್ಕಸಿನಾಗಿನ ಕುದರೀ ಹಾಂಗ ಹ್ಯಾಂಗ ಸುತ್ತ
ಹೊಡೀತೇತಿ
ಈಗಿಡ್ಡ ಮುಳ್ಳು ನೋಡ್ರಿ
ಹೊಟ್ಟೇಲಿದ್ದ ಹೆಣ್ಣಾ ಮಗಳಂಗ ಹೆಂಗ ಹೆಜ್ಜೀ ಹಾಕತತಿ
ಅಬಾಬಾಬಾ...........

ಕುಂಟ - ಕುರುಡರ ಸಂಭಾಷಣೆಯಲ್ಲಿ ಹಾಸ್ಯ - ವಿಡಂಬನೆ ಹೆಪ್ಪುಗಟ್ಟಿದೆ. ಅಂತಹ ಭಾಷಿಕ ಸಂದರ್ಭಗಳಲ್ಲಿ ಆಡುಭಾಷೆ ಸಮರ್ಥವಾಗಿ ಬಳಕೆಯಾಗಿದೆ.

ಚಂಪಾ ಅವರ ನಾಟಕಗಳಲ್ಲಿ ಸಂಭಾಷಣೆಗೆ ಹೆಚ್ಚಿನ ಮಹತ್ವವಿದೆ. ಪಾತ್ರಗಳು ಅರ್ಥ ವನ್ನು ಹೆಚ್ಚು ಸ್ಪಷ್ಟಗೊಳಿಸಲು ಮಾತು ಬೆಳೆಸುತ್ತವೆ. ತರ್ಕಬದ್ಧವಾಗಿ, ಗಟ್ಟಿಯಾಗಿ ಹೇಳ ಬೇಕಾದದ್ದನ್ನು ಹೇಳುತ್ತಾರೆ. ಮಾತುಗಳು ಪಾತ್ರದಾರಿಗಳ ಬಾಯಲ್ಲಿ ಬಂದಾಗ ಗ್ರಾಮ್ಯವಾಗಿ ನಿಲ್ಲುತ್ತವೆ. ಸಂಭಾಷಣೆ ಹೆಚ್ಚು ನೈಜವಾಗಿ ಇರುತ್ತದೆ. ಅಲ್ಲದೆ ಅಲ್ಲಿಯ ವಾಕ್ಯಗಳು ಚಿಕ್ಕ ಚಿಕ್ಕವಾಗಿದ್ದು ತುಂಬ ಸರಳವಾಗಿರುತ್ತವೆ. ಗೋಕರ್ಣದ ಗೌಡಶಾನಿಯಲ್ಲಿ ಮಲ್ಲವ್ವ - ಕಲ್ಲವ್ವ ಎಂಬ ಮುದುಕಿಯರು ಗೌಡ, ಶಿವಕ್ಕ ಮತ್ತು ಬಸ್ಯಾನ ಸುದ್ದಿಯನ್ನು ಮಾತಾಡುತ್ತ ಕಟ್ಟಿ, ಮೇಲೆ ಕುಳಿತಿರುತ್ತಾರೆ. ಅವರ ಸಂಭಾಷಣೆ ತುಂಬ ಮನೋಜ್ಞವಾಗಿರುತ್ತದೆ. ಉಪ ಭಾಷೆಯ ಜೀವಂತಿಕೆ ಹೆಪ್ಪುಗಟ್ಟಿದೆ.

ಕಲ್ಲವ್ವ (ಚಂಚಿಯಲ್ಲಿ ಕೈಯಾಡಿಸುತ್ತ)
ಲೇ ಮಲ್ಲಿ, ಒಂದು ಹೋಳು ಅಡಕೀ ಒಗೀ ಇಲ್ಲೆ. ನನ್ನ ಚೀಲದಾಗ ಬರೇ ಬೆಟ್ಟೀನs ತುಂ ಬ್ಯಾವು.
(ಮಲ್ಲವ್ವ ಕಿಸಕ್ಕನೆ ನಕ್ಕು ಅಡಿಕೆ ಹೋಳು ಒಗೆಯುವಳು.)
ಯಾಕಲೆ ಹೊಯ್ಯಾಲಿ? ಬೋಡಬಾಯಿ ಕಿಸಕ್‌ನ ಕಿಸೀತೀಯಲ್ಲ.

ಮಲ್ಲವ್ವ ಅಲ್ಲsಕೆ. ನಿನ್ನ ಚೀಲದಾಗ ಎಷ್ಟು ಅಡಕೀಬೆಟ್ಟ ಅದಾವು ಲೆಕ್ಕಾ ಇಟ್ಟಿಯೇನು?

ಕಲ್ಲವ್ವ ಬಿಡ ರಮಣೀ ಹಳೇ ರಮಣೀ. ನಿನ್ನ ಪುರಾಣ ನನಗೇನು ಅರಿದ್ದೇನು? ಚ್ಯಾಷ್ಟಿ ಮಾಡಾಕಬಂದಾಳ ಚ್ಯಾಷ್ಟಿ. ಅಡಕೀ ಬೆಟ್ಟದ ಲೆಕ್ಕ ನಾ ಯಾಕ ಇಡಲೆಲೇ? ನಮ್ಮ ಕಸಬಿನಾಗ ಅಂತಾ ಕಾತಿಕಿರ್ದೀ ಇಲ್ಲ ಬಿಡು... ತಂಬಾಕ ಬೇಕೇನು?

ಮಲ್ಲವ್ವ ಬ್ಯಾಡ. ಐತಿ. ಎಲಿ ತಾ.

ಕಲ್ಲವ್ವ ಹಿಡಿ.

(ಎಲೆ ಕೊಡುತ್ತ)

ನಿಂದs ಬೇಸಿ ನೋಡಲೇ. ಹೆಸರಿಗರ ಒಂದು ಗಂಡ ಅನ್ನsದು ಐತಿ. ಎಲ್ಲಾ ಮುಚಿಗೆಂಡ ಹೊಕ್ಕsತಿ. ಅಂದಂಗ ಆ ಸೊಟ್ಟ ಪಕ್ಕೀರಸಾಬ ಇನ್ನೂ ಬರತಿರ ತಾನೇನು ಬಣವೀಸಂದ್ಯಾಗ?

ಮಲ್ಲವ್ವ ಬಿಡ ಬುಗಣಿ, ಏನರ ಹೇಳಿಕೆಂತ, ಬಣವಿ ಸಂದೆಂತ ಬಣವೀ ಸಂದಿ. ತೊಡೆನ ಗುಟ್ಟು ತೊಡ್ಯಾಗಿರಬೇಕ ಕಲ್ಲಿ. ನನ್ನ ಮನ್ಯಾಗೇನು ಕತ್ತಲ ಕ್ಯಾಣಿ ಇಲ್ಲ?

ಕಲ್ಲವ್ವ ಕ್ಯಾಣಿ!

(ನಗುತ್ತ)

ಅಂವ ಹ್ಯಾಟಗಾಲ ಕ್ಯಾಣ, ನೀ ಕಿಸಗಾಲ ಕ್ಯಾಣಿ!.... ಆದ್ರೂ ಮಲ್ಲಿ, ನಮ್ಮದೆಲ್ಲಾ ಮುಗದಂಗ ನೋಡಲೆ. ಹೋಳೀ ದಂಡ್ಯಾಗ ಕುಂಟೀ ಹೂಡಿದಂಗ. ಬರೇ ಆಣೇಕಲ್ಲು, ಕಪ್ಪಿಚಿಪ್ಪ.

(ಹೊರಸಿನ ಕಡೆ ಲಕ್ಷ್ಯ ಹೋಗಿ)

ಅಯ್ಯ ಶಿವನs! ಅಲ್ಲಿ ಯಾರs ಮಕ್ಕಂಡಗ್ಯೆತೆಲ್ಲಲೇ?

ಮಲ್ಲವ್ವ (ದಿಟ್ಟಿಸಿ ನೋಡಿ)

ಆದs ಆ ತಿಗಾ ಆ ಮಲೀ ನೋಡಿದರ ಯಾದ ಹೆಣ್ಣಬಾಲಿ ಅಂತs ಅನಸ್ತsತಿ.

ಕಲ್ಲವ್ವ ಅಯ್ಯ ಗೊತ್ತಾತು ಬಿಡು. ಆ ಗಂಡರಗೂಳಿ ಈ ಹೆಣ್ಯಾ ಭಾಡ್ಯಾನ ಮನಿಗೆ ಹೆಂಗ ಬಂತೂ ಅಂತsನಿ.

ಮಲ್ಲವ್ವ ಯಾ ಗಂಡರಗೂಳಿ?

ಕಲ್ಲವ್ವ ಅದsಲೇ, ಮುಂಜೇನಿಂದ ಚೆಂಜೀತನಕ ಹೊಳ್ಯಾಗs ಇರ್ತsತೆಲ್ಲ ಏನೇನರ ನೆವಾ ತಕ್ಕಂಡು. ಬರೇ ಹೋರಿ ಮೈ ತಿಕ್ಕsದs ನೋಡತಿರತsತಿ ಇಷ್ಟಗಲಾ ಬಟ್ಟಲಗಣ್ಣ ಮಾಡಿಕೆಂಡು.

ಮಲ್ಲವ್ವ ಯಾ ಆಕಳಕರಾನಲೇ ಅದೂ, ಬಿಚ್ಚ ಹೇಳಲ್ಲ.

(ಹೊರಸಿನ ಮೇಲಿನ ವ್ಯಕ್ತಿ ಮಗ್ಗುಲ ಬದಲಿಸುವುದು.)

ಕಲ್ಲವ್ವ ತಡೀಲೇ ತಡೀ. ಅದsಲೇ... ಶಿವಿ.

ಮಲ್ಲವ್ವ ಹೂಂ... ಹೂಂ... ಹಂಗs ಅನಸಿತ್ತು ನನಗೂ... ಅಂದಮ್ಯಾಲ ಇದು ಆ ಬಸ್ಯಾಂದ ಕೆಲಸ ಹಂಗಾರ.

ಕಲ್ಲವ್ವ ಯಾ ಬಸ್ಯಾ?

ಮಲ್ಲವ್ವ ಗೌಡರ ಹೋರಿ

(ನಗುತ್ತ)

ನಿನಗ ಗೊತ್ತಿಲ್ಲೇನಲೇ?....ಗೌಡನ ಹೆಸರs...

ಕಲ್ಲವ್ವ ಬಸ್ಯಾನ ಪಿಸರ.

(ಬಿದ್ದು ಬಿದ್ದು ನಗುವರು.)

ನೋಡಲೇ ಹೆಂಗ ಹೊಳ್ಯಾಡತಾಳ, ಹೆಂಗ ತಿಣಕ್ಯಾಡತಾಳ... ಇನ್ನೂ ಕನಸಿನಾಗ ಏನs ನಡೆಸಿರಬೇಕು.... ಆಕೀ ಹುಕಿ ನೋಡಿದರ ನನ್ನ ಮೈ ತುಂಬ ಖಾಲೀ ಚೇಲ ಗಲಿಸಿದಂಗ ಆಗತsತಿ.

ಮಲ್ಲವ್ವ ನನಗೂ ತೊಡೆನ ಎಲಬು ಲಟಲಟ ಅಂತಾವು.. ತಡಿ ತಡಿ... ಕೂಸ ಬಾಳ ಗಾಸಿ ಆದಂಗಾಗೇತಿ... ಬಸ್ಯಾ ಅಂದರ ಬಸ್ಯಾ ನೋಡಲೇ ಕಲ್ಲಿ... ಕಣ್ಣಾಗ ಎಣ್ಣೀ ತುಂಬಿಕೊಂಡು ಚಿಗರಮೀಸಿ ತೀಡಿಕೆಂತ ಒಮ್ಮೆ ಹೀಂಗ ನೋಡಿದರ ಮೈಯೆಲ್ಲಾ ಎಣ್ಣೆ ಎಣ್ಣೆ ಆಗತತಿ.... ಕೊಟ್ಟರೂ ಸುಕಪಡಬೇಕು ಹದಲ?

ಕಲ್ಲವ್ವ ನನಗ ಹೇಳ್ತಿಯಲ್ಲsಕೆ ಈ ಮಾತು. ಹಂಗಾಮಿನಾಗ ಇಂತಾ ಎಷ್ಟು ಬಸ್ಯಾ ಗೂಳಿಗೆ ಸೆರಗ ಹಾಸೇನs ಏನ ನನಗs ನೆಪ್ಪಿಲ್ಲ.... ಅಂದಾಂಗ ಆ ಶಿವಿ ಮನಸಿನಾಗ ಏನ ಮಾಡತಿದ್ದಾಳು?

ಮಲ್ಲವ್ವ ಮತ್ತೇನೈತಿ ಬಿಡ? ಆ ಬಸ್ಯಾನ ಕಟಿಗೆಂಡು ಮಲ್ನಾಡಕಡೆ ಓಡಿ ಹೋಗ ಬೇಕೂ ಅಂತ.

ಕಲ್ಲವ್ವ ಬಿಡ ಬುಗಣಿ. ಅದೇನ ಒಬ್ಬಗs ಬಾಳೇ ಮಾಡs ಹೆಣ್ಣ ಅಂತ ತಿಳಿದೀಯೇನು? ಇವತ್ತ ಬಸ್ಯಾ ನಾಳೆ....

ಮಲ್ಲವ್ವ ನಾಳೆ ಮುಸ್ಯಾ.

ಚಂಪಾ ಅವರ ನಾಟಕಗಳಲ್ಲಿ ಇಂತಹ ಹಲವಾರು ಸಂಭಾಷಣೆಗಳು ಅರ್ಥಪೂರ್ಣವಾಗಿ ಬಂದಿವೆ. ಅವುಗಳ ವಾಕ್ಯಗಳು ಚಿಕ್ಕ ಚಿಕ್ಕವಾಗಿದ್ದು ಆಡುಮಾತಿಗೆ ಹತ್ತಿರವಾಗಿವೆ. ವಾಕ್ಯಗಳ ಕರ್ತೃ, ಕರ್ಮ, ಕ್ರಿಯಾಪದಗಳಿರುವ ಕ್ರಮ ಬದಲಾವಣೆಯಾಗುವುದರ ಮೂಲಕ ಪಾತ್ರಧಾರಿಗಳು ಪ್ರೇಕ್ಷಕರ ಮೇಲೆ ಹೆಚ್ಚು ಪ್ರಭಾವ ಬೀರುತ್ತಾರೆ. ವಾಕ್ಯಗಳಲ್ಲಿ ಅರ್ಥಕ್ಕೆ ಹೆಚ್ಚಿನ ಪ್ರಾಧಾನ್ಯತೆಯಿದೆ. ಸನ್ನಿವೇಶದ ಜೀವಂತಿಕೆಯ ದೃಷ್ಟಿಯಿಂದಲೂ ಅವು ಮುಖ್ಯವಾಗುತ್ತವೆ. ಮೇಲಿನ ಸಂಭಾಷಣೆಯನ್ನು ಗಮನಿಸಿದಾಗ ಹಾವೇರಿ ಪ್ರದೇಶದ ವಿಶಿಷ್ಟ ಲಯವನ್ನು,

ನಾದವನ್ನು ಅವರು ಹಿಡಿದಿದ್ದಾರೆ. ಹಾವೇರಿ ಕನ್ನಡವನ್ನು ಅತ್ಯಂತ ಸಮರ್ಥವಾಗಿ ಬಳಸಿದ್ದಾರೆ. ಆದರೆ ಆ ಬಳಕೆಯ ಆಯ್ಕೆ ಮಾತ್ರ ಪೂರ್ಣವಾಗಿ ಚಂಪಾ ಅವರದೇ ಆಗಿರುತ್ತದೆ.

ಮೇಲಿನ ಅಂಶಗಳನ್ನು ಗಮನಿಸಿದಾಗ ಚಂಪಾ ಅವರ ನಾಟಕಗಳು, ಕನ್ನಡ ನಾಟಕಗಳ ಪಂಕ್ತಿಯಲ್ಲಿ ಮಹತ್ವದ ಸ್ಥಾನವನ್ನು ಪಡೆದಿವೆ ಎನ್ನುವುದರ ಬಗ್ಗೆ ಸಂದೇಹವಿಲ್ಲ. ಇಲ್ಲಿಯವರೆಗೆ ಅವರ ನಾಟಕಗಳ ಭಾಷಾ ಸ್ವರೂಪವನ್ನು, ಭಾಷಾ ಬಳಕೆಯ ರೀತಿಯನ್ನು ಸ್ಥೂಲವಾಗಿ ಪರಿಚಯ ಮಾಡಿಕೊಡಲು ಪ್ರಯತ್ನಿಸಲಾಗಿದೆ. ಅವರ ನಾಟಕಗಳನ್ನು ರಂಗ ಪ್ರಯೋಗದಲ್ಲಿ ನೋಡಿ ಅದರ ಅಭ್ಯಾಸದ ಮೂಲಕ ಭಾಷಾ ವೈಶಿಷ್ಟ್ಯಗಳ ಜೊತೆಗೆ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಅರಿಯಬಹುದಾಗಿದೆ.

ಆಕರಗ್ರಂಥ

೧. ಚಂಪಾ ನಾಟಕಗಳು, ೨೦೦೬, ಚಂದ್ರಶೇಖರ ಪಾಟೀಲ, ಸಪ್ನ ಬುಕ್‌ಹೌಸ್, ಬೆಂಗಳೂರು.

೩೫

ಕೊಡೆಗಳು : ಶಿಲ್ಪರಚನೆ

ಪ್ರಸಿದ್ಧ ಕವಿಗಳೂ ನಾಟಕಕಾರರೂ ಆದ ಚಂಪಾ ಅವರು ಸಾಮಾಜಿಕ ವಸ್ತುವಾಗಿರುವ ನಾಟಕಗಳನ್ನು ಕೊಡುವುದರಲ್ಲಿ ಸಿದ್ಧಹಸ್ತರು. ಅವರ ಇನ್ನೊಂದು ಗಮನಾರ್ಹ ನಾಟಕ, 'ಕೊಡೆಗಳು'. ನಾಟಕದಲ್ಲಿ 'ಕ್ಷ' ಮತ್ತು 'ಯ' ಎಂಬ ಎರಡೇ ಎರಡು ಪಾತ್ರಗಳು. 'ಕ್ಷ' ಮತ್ತು 'ಯ' ತೋರಿಕೆಗೆ ಒಬ್ಬರಿಂದೊಬ್ಬರು ವಿರುದ್ಧವಾಗಿ ಕಾಣುತ್ತಾರೆ. ಒಬ್ಬನಲ್ಲಿ ಬೆಪ್ಪನ ಕಳೆಯಿದ್ದರೆ ಇನ್ನೊಬ್ಬನಲ್ಲಿ ಜಾಣನ ಕಳೆಯಿದೆ. ಒಬ್ಬನ ಕೈಯಲ್ಲಿ ಬಿಗಿಯಾಗಿ ಸುತ್ತಿದ ಕೊಡೆಯಿದ್ದರೆ ಇನ್ನೊಬ್ಬನಲ್ಲಿ ಏರಿಸಿದ ಕೊಡೆ, ಅವನ ತಲೆಯ ಮೇಲಿದೆ. ಇಬ್ಬರೂ ರಂಗದ ಒಂದೊಂದು ಬದಿಯಿಂದ ಬಂದು ಮಾತುಕತೆಗೆ ತೊಡಗುತ್ತಾರೆ. ಇಬ್ಬರ ಸಮಸ್ಯೆ ಸಮಯ ಎಷ್ಟಾಗಿದೆ ಎಂಬುದನ್ನು ನಿರ್ಧರಿಸುವುದು. ಅಲ್ಲಿಂದ ಬದುಕಿನ ವಾಸ್ತವದ ಕಡೆ ಮಾತುಕತೆ ಶುರುವಾಗುತ್ತದೆ.

ಕ್ಷ : ಅಲ್ರಿ........ಅಂಥಾಂಗ......ಟೈಮೆಷ್ಟಾಗೇತಿ ಹೇಳ್ತಿರೇನು?

ಯ : ಟೈಮು ನೋಡ್ರೀ.......
ಒಂಬತ್ತು-ಒಂಬತ್ತೂವರಿ, ಹತ್ತು-ಹತ್ತೂವರಿ ಆಗಿರಬಹುದು.

ಮಳೆ, ಬಿಸಿಲು ಏನೂ ಇಲ್ಲದಿದ್ದಾಗ ಕೊಡೆ ಏರಿಸಿದ್ದಾನೆ, 'ಯ'. ಇನ್ನೊಬ್ಬ 'ಕ್ಷ' ಸುಮ್ಮನೆ ಕೈಯಲ್ಲಿ, ಕೊಡೆ ಹಿಡಿದಿದ್ದಾನೆ. 'ಯ'ನ ಪಾಲಿಗೆ "ಹುಡುಗಾಟಾ..... ಜಗಳಾಟ.... ಗುಡುಗಾಟ.....ಮುಳುಗಾಟ". ಒಬ್ಬ ಮಾತನಾಡಿದನ್ನೇ ಇನ್ನೊಬ್ಬ ಪುನರುಕ್ತಿ ಮಾಡುತ್ತ ಸಂವಾದಕ್ಕೆ ತೊಡಗುತ್ತಾರೆ. ಕೊಡೆ ಬಿಚ್ಚುವಂತೆ, ಕೊಡೆ ಇಳಿಸುವಂತೆ ಪರಸ್ಪರ ಹೇಳುತ್ತಾರೆ. ಇಬ್ಬರೂ ಅದಕ್ಕೆ ಒಪ್ಪುವುದಿಲ್ಲ.

ಕ್ಷ : ಮಳೀ ಬಂದ್ರ ಬರ್ಲಿ......ಬಿಸಲು ಬಿದ್ರ ಬೀಳ್ಲಿ
ನಾ ಕೊಡೀ ಬಿಚ್ಚೋದಿಲ್ಲ
ಇದನ್ನ ನಮ್ಮ ಅಪ್ಪ ಬಿಚ್ಚಿಲ್ಲ. ಅವರಪ್ಪ ಬಿಚ್ಚಿಲ್ಲ. ಅವರಪ್ಪ ಬಿಚ್ಚಿಲ್ಲ

ಯ : ಮಳೀ ಬರ್ಲಿ ಬಿಸಿಲು ಬೀಳ್ಲೀ ನಾನು ಏನು ದಾದ ಮಾಡೋದಿಲ್ಲ
...... ನನ್ನ ತಲಿಮ್ಯಾಲ ಕೊಡೀ ಇರಾಕs ಬೇಕು.... ಕೊಡೀ
ಇಳಸಾಕ ಬರಧಂಗ ಮಳೀ ಜಡದ ಬಿಟ್ಟಿನಿ-ತಿಳೀತ?

ಹೀಗೆ ಮಾತನಾಡುತ್ತ ಅವರಿಬ್ಬರು ಆತ್ಮೀಯರಾಗುತ್ತಾರೆ. ಒಬ್ಬನಿಗೆ ಮುಚ್ಚಿದರೆ ಎಲ್ಲಿ ಬೆತ್ತಲಾಗುತ್ತೇನೋ ಎಂಬ ಭಯ. ಮತ್ತೊಬ್ಬನಿಗೆ ಬಿಚ್ಚಿದರೆ ಎಲ್ಲೆಡೆ ಗಾಳಿ ನುಗ್ಗಿ, ತುಂಬಿ ನಗ್ನವಾಗಿ ಬಿಡುತ್ತೇನೋ ಎಂಬ ಹೆದರಿಕೆ. ಒಂದರ್ಥದಲ್ಲಿ ಅವರು ಅಭಿನ್ನರು: ಮತ್ತೊಂದರ್ಥದಲ್ಲಿ ಅವರ ನಡುವೆ ಅಸಾಂಗತ್ಯವೂಯಿದೆ. ಅವರಿಬ್ಬರೂ ಲೈಫ್ ಬಗ್ಗೆ ಯೋಚಿಸುತ್ತಾರೆ. ಲೈಫ್ ಅಂದರೆ ಜೀವನ, ಅದರ ಅರ್ಥವೇನು? ಎನ್ನುವುದರ ಬಗ್ಗೆ ಗಂಭೀರ ವಿವೇಚನೆಗೆ ತೊಡಗುತ್ತಾರೆ. ಅಂದರೆ 'ನಮ್ಮ ಜೀವನ ನಿಂತ ನೀರೂ ಹೌದು ಹರಿಯೋ ಹೊಳೀನು ಹೌದು, ಅದು ಮೋಡವೂ ಹೌದು, ಮಳೆಯೂ ಹೌದು'. ಜೀವನದ ಬಗ್ಗೆ ಹೀಗೆ ಮಾತನಾಡುತ್ತಲೇ ಮತ್ತೆ ಕೊಡೆಗಳ ಕಡೆಗೆ, ಕೊಡೆ ಹಿಡಿದಿರುವ ತಮ್ಮ ಕಡೆಗೆ ಬರುತ್ತಾರೆ.

ಕ್ಷ : ನಿಂತ ನೀರೂ ಹರಿಯೋ ಹೊಳೀ, ಒಂದs ಹೆಂಗ ಆಗ್ತತ್ರೀ?

ಯ : ಹಂಗಾರ ಮಳೀ ಬಂದ್ರೂ ಕೊಡೀ ಬಿಚ್ಚೋದಿಲ್ಲಲ್ಲ ನೀವು

ಕ್ಷ : ಹಂಗಾರ ಮಳೀ ಇಲ್ಲಕ್ರೂ ಕೊಡೀ ಮುಚ್ಚೋದಿಲ್ಲಲ್ಲ ನೀವು

ಯ : ಹಂಗಾರ ನಾನೂ ನೀನೂ ಅಲ್ಲ, ನಾವು ನೀವೂ-ಒಂದs ಅಂಥಂಗಾತು!

ಅವರಿಬ್ಬರೂ ವಿಭಿನ್ನ ಗುಣಸ್ವಭಾವಗಳನ್ನು ಹೊಂದಿದ್ದರೂ **ನಾವು ನೀವು-ಒಂದs ಅಂಥಂಗಾತು!** ಎಂದು ಮತ್ತೆ ಮೊದಲಿನಂತೆ ಮೊದಲಿನಿಂದ ಮಾತಾಡಲು ಶುರು ಮಾಡುತ್ತಾರೆ. ಆಗ ಇಬ್ಬರೂ ತಮ್ಮ ತಮ್ಮ ಹೆಸರುಗಳ ಬಗ್ಗೆ ಕುತೂಹಲ ತೋರುತ್ತಾರೆ. ಪರಸ್ಪರರು ತಮ್ಮನ್ನು ತಾವು ಹೆಸರುಕಾಯಿ, ಅಲಸಂದಿಕಾಯಿ, ಮೆಣಸಿನಕಾಯಿ ಎಂದು ಕರೆದುಕೊಳ್ಳುತ್ತಾರೆ. ಅಲ್ಲೆಲ್ಲ ಹಾಸ್ಯ ಮಿಂಚಿದೆ. ಯಾವುದಾದರೂ ಒಂದು ಹೆಸರು ಒಬ್ಬನಿಗೆ. ಹೆಸರು ಮುಖ್ಯವಲ್ಲ. ಲೋಕದಲ್ಲಿ ನೂರಾರು ವ್ಯಕ್ತಿಗಳನ್ನು ಹೆಸರಿನಿಂದ ಕರೆದರು ಅವರೆಲ್ಲ ಒಂದೆ ಕುಲದವರು.

ಯ : ಹಂಗಾರ ನಮ್ಮದೆಲ್ಲಾ ಒಂದs ಕುಲಾ ಅಂಥಂಗಾತು

ಎನ್ನುವಲ್ಲಿ ಸಾಮಾಜಿಕ ವಿಡಂಬನೆ ಮತ್ತು ದುರಂತದ ವಿಷಾಧವಿದೆ. ಮನುಷ್ಯರೆಲ್ಲ ಒಂದು ಎಂದಾದರೆ ಎಷ್ಟು ವೈಮನಸ್ಸು, ಹೋರಾಟ ಬದುಕಿಗೆ ಎಷ್ಟೆಲ್ಲ ಅವಾಂತರಗಳು ನಡೆಯುತ್ತವೆ. ಮತ್ತೆ ಕೊಡೆಯ ಕಡೆಗೆ ಬರುತ್ತಾರೆ. ಆ ಮೂಲಕ ಬದುಕಿನ ರಹಸ್ಯವನ್ನು ಕುರಿತು ಚಿಂತಿಸುತ್ತಾರೆ.

ಕ್ಷ : ನೀವು ಕೊಡೀ ಯಾಕ ಇಳಿಸೋದಿಲ್ಲ ?

ಯ : .... ಬರೇ ಬತ್ತಲ ಎಮ್ಮಿ ಅಡ್ಯಾಡತಾವಲ್ಲ.....

ಕೃ : ಎಮ್ಮೀ ಎಮ್ಮಿ ಬರೇ ಬತ್ತಲ ಇರ್ತಾವೇನು ?

ಯ : ಎಮ್ಮಿ, ಆಕಳ, ಗುಬ್ಬಿ, ಕಾಗಿ, ಗಿಡ, ಹೂ, ಎಲಿ, ಮನಿ
.... ಎಲ್ಲಾ ಬರೇ ಬತ್ತಲು ಆದಾವು. ಅಲ್ಲೇನು?

ಕೃ : ಹೌದ್ರೆಪಾ ಖರೆ ಖರೆ

ಯ : ಕೊಡೀ ಇಳಿಸಿದ್ರ ನನಗ ಹಂಗ-ಎಮ್ಮೀ ಹಂಗ, ಗುಬ್ಬೀ ಹಂಗ,
.... ಬರೇ ಬತ್ತಲ ಆಧಂಗ ಅನಸ್ತsತಿ ಏನ್ರೆಪ!

ಎಮ್ಮೆ, ಆಕಳು, ಗುಬ್ಬಿ, ಕಾಗೆ, ಗಿಡ-ಗಂಟಿ ಇವೆಲ್ಲ ಬತ್ತಲೆ ಇವೆ. ಆದರೆ ಮನುಷ್ಯನಿಗೆ ಬತ್ತಲೆಯಾಗಲುಬಾರದು. ಬತ್ತಲೆಯಾಗಲು ಧೈರ್ಯಬೇಕು. ಆ ಧೈರ್ಯ ಮನುಷ್ಯನಿಗಿಲ್ಲ ಅದಕ್ಕಾಗಿ ಅವನಿಗೆ ಬೆತ್ತಲಾಗಲು ಬರುವುದಿಲ್ಲ. ಬೆತ್ತಲಾಗದೆ ಮನುಷ್ಯನಿಗೆ ಬದುಕಿನ ಸತ್ಯ ಗೊತ್ತಾಗುವುದಿಲ್ಲ.

ಕೃ : ಕೊಡೀ ಬಿಚ್ಚಿದ್ರ...... ಕೊಡೀ ಬಿಚ್ಚಿದ್ರ
ನನಗೂ ಹಂಗ ಅನಸ್ತತಿ

ಯ : **ಹಂಗಾರ ನಾವಿಬ್ರೂ ಒಂದs ಅಂಥಾಂಗಾತು**
........ನೀ ಕೊಡೀ ಬಿಚ್ಚೋದಿಲ್ಲ......... ನಾ ಕೊಡೀ ಮುಚ್ಚೋದಿಲ್ಲ

ಪರಸ್ಪರ ಮಾತು ಮುಂದುವರೆಯುತ್ತದೆ. ನಾವು ಪ್ರಾಣಿ-ಪಕ್ಷಿಗಳಲ್ಲ; ನಾವಿಬ್ಬರೂ ಮನುಷ್ಯರು ಎನ್ನುತ್ತ ಪರಸ್ಪರರ ಮಧ್ಯೆ ಇರುವ ವಸ್ತು ಏನು? "ಖಾಲೀ ಹವಾ"..... ಹವಾ ಅಂದರೆ ಒಂದು ಕನ್ನಡಿ. ಅದು ಉಸಿರಿಗೆ ಆಧಾರ. ಮಾತು, ಮುಂದುವರಿಸುತ್ತ ತಮ್ಮ ತಮ್ಮ ಕೊಡೆ ಅದಲು ಬದಲು ಮಾಡುತ್ತಾರೆ; ಸ್ಥಳ ಬದಲಾಯಿಸುತ್ತಾರೆ. ಈಗ ಒಬ್ಬನಿಗೆ 'ಕೊಡೆ' ಹೂವಿನ ಕೋಲು, ಇನ್ನೊಬ್ಬನಿಗೆ 'ಮುತ್ತಿನ ಕುಂಚಿಗಿ' ಇಬ್ಬರಿಗೂ ಬತ್ತಲಾದ ಅನುಭವ ಸಾಧ್ಯವಿಲ್ಲ.

ಯ : ನಿನ್ನ ಕನಡ್ಯಾಗ ನಾನು, ನೀನು
ನನ್ನ ಕನಡ್ಯಾಗ ನೀನು, ನಾನು

ಹೆಸರು ಕೂಡ ಅದಲು ಬದಲು ಮಾಡಿಕೊಳ್ಳುತ್ತಾರೆ. ಜಾಗ ಅದಲು ಬದಲು ಮಾಡಿ ಕೊಳ್ಳುತ್ತಾರೆ. ಮತ್ತೆ ಗುಬ್ಬಿ, ಕಾಗೆಯ ಬಗ್ಗೆ ಮಾತನಾಡುತ್ತ ಜೀವನ, ಬದುಕು, ಕಾಲ, ಇವುಗಳ ಬಗ್ಗೆ ಯೋಚಿಸುತ್ತಾರೆ. ಎಷ್ಟೇ ಪ್ರಯತ್ನ ಮಾಡಿದರೂ ಒಬ್ಬರು, ಇನ್ನೊಬ್ಬರ ವ್ಯಕ್ತಿತ್ವವನ್ನು ಬದಲಾಯಿಸಲು ಸಾಧ್ಯವಾಗುವುದಿಲ್ಲ. ಅವರು ಒಬ್ಬೊಬ್ಬರಲ್ಲಿ ಕಾಣುವುದು ತಮ್ಮನ್ನೇ. ಕೊನೆಗೆ ಅವರು ಅವನೇ, ಇವನು ಇವನೇ ಆಗಿ ಉಳಿಯುವ ದುರಂತದ ವಿಷಾಧ ಇಲ್ಲಿದೆ.

ನಾವೂ ನೀವೂ ಒಂದs ಎಂಬ ವಾಕ್ಯವಿನ್ಯಾಸದ ಆವೃತ್ತಿಯೇ ನಾಟಕಕ್ಕೆ ಒಂದು ಆಕಾರ ಕೊಡುತ್ತದೆ. ಅವರಿಬ್ಬರು ಕೊಡೆ, ಜಾಗ, ಹೆಸರುಗಳನ್ನು ಅದಲು ಬದಲು ಮಾಡಿದರೂ

ವ್ಯಕ್ತಿತ್ವ ಬದಲಾಗದ ಸಾಧ್ಯತೆಯನ್ನು ನಾಟಕ ಸೂಚಿಸುತ್ತದೆ. 'ಕ್ಷ' ಮತ್ತು 'ಯ'ರ ಸಂಭಾಷಣೆ 'ಕಾಲ'ದಿಂದ ಕೊಡೆಗೆ ಆರಂಭವಾಗಿ ಭಾಷೆಯ ಶ್ರೀಮಂತಿಕೆಗೆ ಹಾರುತ್ತದೆ; ಭಾಷೆಯ ಅರ್ಥ ವಲಯ ವಿಸ್ತಾರವಾಗುತ್ತ ಹೋಗುತ್ತದೆ. ಆ ಮೂಲಕ ನಾಟಕದ ಅರ್ಥ ರಚನೆಯೂ ಹಿಗ್ಗುತ್ತ ಹೋಗುತ್ತದೆ. ತನ್ಮೂಲಕ ಪ್ರೇಕ್ಷಕರನ್ನು (ವಾಚಕರನ್ನು) ಅನ್ವೇಷಣೆ ಗೆಳೆಯುವ ಹೊಸ ಆಕೃತಿ ಸಿದ್ಧವಾಗುತ್ತದೆ. ನಾಟಕದಲ್ಲಿ ಬಳಕೆಯಾದ ವಸ್ತುವಾಚಕಗಳು, ಪ್ರಾಣಿ ವಾಚಕಗಳು ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡುಬರುವ ಬಿಕ್ಕಟ್ಟುಗಳ ಶೋಧಕ್ಕೆ, ರೂಪಕ ಗಳಾಗಿ ಬಳಕೆಯಾಗಿವೆ ಎಂಬುದನ್ನು ಗಮನಿಸಬೇಕು. ಭಾಷೆಯ ಉದ್ದೇಶ ವಾಚಕರದಲ್ಲಿ (ಪ್ರೇಕ್ಷಕರಲ್ಲಿ) ಭಾವಾವೇಶ, ತನ್ಮಯತೆಯನ್ನು ಮಾತ್ರ ಹುಟ್ಟಿಸುವುದಾಗಿರದೆ ಅವರಲ್ಲಿ ಬದುಕಿನ ಕಟುವಾಸ್ತವ ಕುರಿತು ಸಾಮಾಜಿಕ ಬಿಕ್ಕಟ್ಟಿನ ಸ್ವರೂಪವನ್ನು ಕುರಿತು ಚಿಂತನೆಯನ್ನು ಪ್ರಚೋದಿಸುವುದಾಗಿರುತ್ತದೆ. ಇದು ಈ ನಾಟಕದ ಪ್ರಮುಖ ಸಾಧನೆ.

ಒಂದು ಸಣ್ಣ ಮತ್ತು ಸ್ವಾರಸ್ಯಕರ ಘಟನೆಯಿಂದ ಶುರುವಾಗುವ ಈ ನಾಟಕ ಬದುಕಿನ ಗಮನ ಸೆಳೆಯುತ್ತಲೇ ಮುಕ್ತಾಯವಾಗುತ್ತದೆ. ನಾಟಕಕಾರರೂ ಎಲ್ಲಿಯೂ ದೊಡ್ಡ ಮಾತು ಗಳನ್ನು ಬಳಸದೆ ಅಪೂರ್ವ ಸಂಗತಿಯನ್ನು ಸರಳವಾಗಿ ಹೇಳಿದ್ದಾರೆ. ನಾಟಕದ ಭಾಷೆ ಸತ್ವ ಶಾಲಿಯಾಗಿದ್ದು ಚುರುಕಾದ ಒಂದರ್ಥದಲ್ಲಿ ಮೋಜಿನ ಸಂಭಾಷಣೆಯಲ್ಲಿ ಅದು ಸಾಗುತ್ತದೆ. ಭಾಷಾಬಳಕೆಯಲ್ಲಿ ನೈಜತೆಯಿದೆ. ಸಂದರ್ಭಕ್ಕೆ ತಕ್ಕಂತೆ ಬರುವ ಧ್ವನಿಯ ಏರಿಳಿತ, ಮೌನಗಳು ಸಹೃದಯ ವಾಚಕರ ಹೃದಯ ತಟ್ಟುತ್ತವೆ; ಚಿಂತನೆಗೆ ಹಚ್ಚುತ್ತವೆ. ಹೀಗೆ, ಒಂದು ಸಾಮಾಜಿಕ ಬಿಕ್ಕಟ್ಟನ್ನು ಹೊಸದೃಷ್ಟಿಕೋನದಿಂದ ಅರ್ಥೈಸುವ ಇಲ್ಲಿಯ ಪ್ರಯತ್ನ ಶ್ಲಾಘನೀಯವಾಗಿದೆ.

ಆಕರಗ್ರಂಥ

೧. ಚಂಪಾ ನಾಟಕಗಳು, ೨೦೦೬, ಚಂದ್ರಶೇಖರ ಪಾಟೀಲ, ಸಪ್ನ ಬುಕ್‌ಹೌಸ್, ಬೆಂಗಳೂರು.

೩೬

ಅಪ್ಪ : ಭಾಷೆಯ ಸಾಮಾಜಿಕ ನೆಲೆ

ಕರ್ನಾಟಕದ ಬರಹಗಾರರಲ್ಲಿ: ಕನ್ನಡ ಪರ ಚಿಂತಕರಲ್ಲಿ ಚಂಪಾ ಅವರು ತುಂಬ ಮುಖ್ಯರಾಗಿದ್ದಾರೆ. ಅವರ ಸಾಹಿತ್ಯ ಕೃಷಿಗೆ ನಾಲ್ಕು ದಶಕಗಳು ಕಳೆದಿವೆ. ನವೋದಯ, ನವ್ಯದ ಕಾಲದಲ್ಲಿ ರೂಪುಗೊಂಡು, ನವೋತ್ತರ ಓಘಕ್ಕೆ ಹೊರಳಿ, ಬಂಡಾಯ, ಪ್ರಗತಿಪರ ಸಂದರ್ಭದಲ್ಲಿ ಮುಂಚೂಣಿಯಾಗಿ ನಿಂತು ತಮ್ಮದೇ ಹೆಜ್ಜೆ ಗುರುತುಗಳನ್ನು ಮೂಡಿಸಿ, ನಿರಂತರವಾಗಿ ಸಾಹಿತ್ಯ ರಚನೆ ಮಾಡುತ್ತಿರುವ ಚಂಪಾ ಅವರು ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಯ ಉಪಾಸಕರಲ್ಲೊಬ್ಬರಾಗಿದ್ದಾರೆ.

ಚಂಪಾ ಅವರು ಪ್ರಯೋಗಶೀಲರು. ಅದಕ್ಕಾಗಿ ಅವರು ತಮ್ಮ ಕಾವ್ಯ, ವಿಮರ್ಶೆ, ನಾಟಕ, ಚುಟುಕು, ಅಂಕಣಗಳಲ್ಲಿ ಹೊಸದನ್ನು ಹೇಳಲು ಹೊರಡುತ್ತಾರೆ. ಅವರ ಬರೆಹಗಳಲ್ಲಿ ಒಂದು ಬಗೆಯ ಹುಡುಕಾಟವನ್ನು ಸಹೃದಯ ವಾಚಕರು ಕಾಣಬಹುದಾಗಿದೆ. ಇಂತಹ ಹುಡುಕಾಟ ಮತ್ತು ಅತೃಪ್ತಿ ಅವರ ಸೃಜನಶೀಲತೆಯನ್ನು ಜೀವಂತವಾಗಿರಿಸಿದೆ. ಅಸಂಗತ ನಾಟಕ ರಚನೆ ಮತ್ತು ಪ್ರಯೋಗದ ಮೂಲಕ ಕನ್ನಡ ರಂಗಭೂಮಿಗೆ ಹೊಸ ಆಯಾಮವನ್ನು ರೂಪಿಸಿದವರಲ್ಲಿ ಚಂಪಾ ಅವರೂ ಒಬ್ಬರಾಗಿದ್ದಾರೆ. ಅಸಂಗತ ನಾಟಕವನ್ನು ರಚಿಸುವಾಗ ಚಂಪಾ ಅವರು ವಹಿಸುವ ಎಚ್ಚರ ಮತ್ತು ಸಾಮಾಜಿಕ ಕಾಳಜಿ ಗಮನಾರ್ಹ. ನಾಟಕ ಕಲೆಯ ಸೂಕ್ಷ್ಮತೆಯನ್ನು ಉಳಿಸಿಕೊಂಡು ಸಹೃದಯ ವಾಚಕರ ಮನಕ್ಕೆ ತಟ್ಟುವ ಅವರ ಆಸಕ್ತಿ, ಅಭಿರುಚಿ ಪ್ರೇರೇಪಿಸುವ ಬಗೆ ಮನೋಜ್ಞವಾಗಿದೆ. ಅವರ 'ಅಪ್ಪ' ನಾಟಕದ ರಚನೆಯ ವಿನ್ಯಾಸವನ್ನು ಕುರಿತು ಚರ್ಚೆ ಬೆಳೆಸಲಾಗಿದೆ.

'ಅಪ್ಪ' ಚಂಪಾ ಅವರ ಯಶಸ್ವೀ ನಾಟಕವಾಗಿದೆ. ಇಲ್ಲಿ ಬದುಕಿನ ದುರಂತ ಸುಸಂಗತವಾಗಿ ರೂಪುಗೊಂಡಿದೆ. ಬಸವಣ್ಣನವರ ವಚನದ 'ನಾನು ನಿನ್ನನ್ನು ಅರಸುವುದೆಂದರೆ ಸೂಳೆಯ ಮಗ ತನ್ನ ತಂದೆಗಾಗಿ ಅರಸಿದಂತೆ' ಎಂಬ ಈ ಸಾಲು, ಅಲ್ಲಿ ಬಳಕೆಯಾದ 'ಸೂಳೆಯ ಮಗ ತನ್ನ ತಂದೆಗಾಗಿ ಅರಸುವಂತೆ' ಎಂಬ ಶಬ್ದಚಿತ್ರ ಈ ನಾಟಕ ರಚನೆಗೆ ಪ್ರೇರಕವಾಗಿದೆ. ಕಾಣದ, ಬಹುಶಃ ಇರದ ವಸ್ತುವಿನ ಹುಡುಕಾಟ ಮತ್ತು ಅತೃಪ್ತಿಯ

ನೆಲೆಯಲ್ಲಿ ಈ ನಾಟಕದ ಶಿಲ್ಪ ರೂಪುತಾಳಿದೆ. ಸೂಳೆಯ ಮಗ ಬಸವ, ಅವನಿಗೆ ತನ್ನ ಹುಟ್ಟಿನ ಮೂಲ ಗೊತ್ತಿಲ್ಲ. ತನ್ನ ತಂದೆ ಯಾರೂ ಎಂಬುದೂ ಅವನಿಗೆ ತಿಳಿದಿಲ್ಲ. ಇವು ಅವನನ್ನು ಕಾಡುವ ಪ್ರಶ್ನೆಗಳು. ಬದುಕಿನಲ್ಲಿ ತನ್ನ ತನವನ್ನು ಅಥವಾ ತನ್ನ ಮೂಲವನ್ನು ಗುರುತಿಸಿಕೊಳ್ಳುವುದರ ಮೂಲಕ ಸಮಾಜಕ್ಕೂ ತನಗೂ ಇರುವ ಸಾವಯವ ಸಂಬಂಧವನ್ನು ಅರಿಯುವುದು ಇಲ್ಲಿ ಮುಖ್ಯವಾಗಿದೆ.

ಬಸವನ ಶಾಲೆಯಲ್ಲಿ ನಾಟಕ ಇರುತ್ತದೆ. ಊರ ಗೌಡನು ಬಸವನನ್ನು ಚಹದ ಅಂಗಡಿಗೆ ಕರೆದುಕೊಂಡು ಹೋಗುತ್ತಾನೆ. ಆಗ ನಡೆಯುವ ಮಾತಿನ ಕ್ರಿಯೆಯಲ್ಲಿ ಸಹಜತೆಯೂಯಿದೆ; ವೈಚಾರಿಕತೆಯೂಯಿದೆ. ಗೌಡರು 'ಉಂಡೀ ಚುರುಮರಿ ಕೊಡಿಸಿದರು... ಚಾ ಕುಡೀ ಅಂದರು, ಒಲ್ಲಾ ಅಂದೆ, ಬಿಡಲಿಲ್ಲ'. ಯಾರಾದರೂ ಕೇಳಿದರೆ ನಮ್ಮ ಹುಡುಗ ಅಂಽಳ್ರಿ ಅಂದರು ಗೌಡರು... ಎಷ್ಟು ಚೊಲೋ ಅದಾರ ಬೇ ಅವರು... ನೀ ನೋಡೀ ಏನಬೇ ಅವರ್ನ?' ಮಾತು ಮೌನವಾಗುತ್ತದೆ. ನಮ್ಮ ಅವ್ವನಿಗೂ ಇವನಿಗೂ ಏನು ಸಂಬಂಧ? ಬಸವನನ್ನು ಕಾಡುವ ಪ್ರಶ್ನೆ! 'ಇಂಥಾವ ನಿಮ್ಮಪ್ಪ ಅನ್ನೂ, ಹೋಗಿ ಅವನ ಕಾಲ ಹಿಡೀತೇನಿ, ಅಂವಗ ತೆಕ್ಕಿ ಬೀಳತೇನಿ' ಎಂದು ಮುಂತಾಗಿ ಹೇಳುವಾಗ ಅವನನ್ನು ಕಾಡುವ ಅನಾಥ ಪ್ರಶ್ನೆ ಭೂತಾ ಕಾರವಾಗಿ ನಿಲ್ಲುತ್ತದೆ. ತಾಯಿ ಮಗನ ಸಂಭಾಷಣೆ ಮಗ್ಗದ ಲಾಳಿಗೆಯಂತೆ ಚಕಚಕನೆ ಚಿಮ್ಮುವ ನೂಲಿನ ನೇಯ್ಗೆಯಂತೆ ಮುಂದುವರೆಯುತ್ತದೆ.

ಹರಿತವಾದ, ನೇರವಾದ ಆಲೋಚನೆಯ ಸರಣಿಯಿಂದಾಗಿ ಪಾತ್ರಗಳು ಮುಖಾಮುಖಿ ಯಾಗುತ್ತವೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ವಾಸ್ತವ ಬದುಕಿನ ಆಳವಾದ ಶೋಧದ ಜೊತೆಗೆ ಸಂಭಾಷಣೆಯಲ್ಲಿ ಬಾಲಭಾಷೆ ಅರ್ಥಪೂರ್ಣವಾಗಿ ಅಭಿವ್ಯಕ್ತವಾಗಿದೆ. ಮಕ್ಕಳಿಗೆ ಸುಲಭವಾಗಿ ಅರ್ಥವಾಗುವ ಶಬ್ದಗಳ ಬಳಕೆ, ಪ್ರಾಸ ಅನುಪ್ರಾಸಗಳ ಜೋಡಣೆ, ಚಿಕ್ಕಚಿಕ್ಕ ವಾಕ್ಯಗಳು ಸಹಜವಾಗಿ ಅಭಿವ್ಯಕ್ತವಾಗಿವೆ. ಮಗುವಿನ ಮುಗ್ಧವಾದ ಮನೋಭಾವವನ್ನು ಆಧರಿಸಿ ಅತ್ಯಂತ ಚಿತ್ತಾಕರ್ಷಕವಾದ ನಾದ, ಲಹರಿಯಲ್ಲಿ ಹರಿದು ಬರುವ ಈ ನಾಟಕದಲ್ಲಿ ಮಕ್ಕಳ ಚಿಂತನಶೀಲತೆಯನ್ನು ಬಿಂಬಿಸುವ ಗಾರುಡಿಯಿದೆ. ಸಹೃದಯರನ್ನು ನೇರವಾಗಿ ಭಾಷಿಕ ಕ್ರಿಯೆಯಲ್ಲಿ ತೊಡಗಿಸಿಕೊಳ್ಳಲು ಯತ್ನಿಸುತ್ತದೆ. ಉದಾ. ತಾಯಿ ಮಗುವನ್ನು ಆಟವಾಡಿಸುವ ಒಂದು ದೃಶ್ಯ, ಚಿತ್ರಕ ಶೈಲಿಯಲ್ಲಿ ಮೂಡಿಬಂದಿದೆ. ಅಲ್ಲಿ ಬಳಕೆಯಾದ ಬಾಲಭಾಷೆ ಅಪ್ಯಾಯ ಮಾನವಾಗಿದೆ ಮಗುವಿನಂತೆ ಮುದ್ದಾಗಿದೆ.

ಅವ್ವ : [ಗಬಕ್ಕನೆ ಬಗಲಲ್ಲಿ ಎತ್ತಿಕೊಂಡು]
ಆಯ್ ನನ್ನ ರಾಜಾऽ
ಅಲ್ನೋಡು ಅಲ್ನೋಡು ಅದೇನೂऽ?

ಬಸವ : [ಮಗುವಿನ ದನಿಯಲ್ಲಿ]
ಅದೂऽ... ಅದೂऽ... ಚೆಂಡೂऽ...

ಅವ್ವ : ಅಲ್ಲs...

ಬಸವ : ಅವ್ವ...ಅವ್ವ...ಅದೇನೂs?

ಅವ್ವ : ಅದೂs... ಅದೂs... ಚಂದಪ್ಪ.

ಬಸವ : ಅಂದಪ್ಪ.

ಅವ್ವ : ಅಂದಪ್ಪಲ್ಲ ಕಟ್ಟ್ಯಾಣಿ... ಚಂದಪ್ಪ

ಬಸವ : ಅಂದಪ್ಪ.

ಅವ್ವ : ಶ್ಯಾಣ್ಯಾ ಅಲ್ಲಪ ನೀನು... ಚ ಅನ್ನು.

ಬಸವ : ಚ

ಅವ್ವ : ಂದ

ಬಸವ : ಂದ

ಅವ್ವ : ಪ್ಪ

ಬಸವ : ಪ್ಪ

ಅವ್ವ : ಚಂದಪ್ಪ

ಬಸವ : ಅಂದಪ್ಪ

ಅವ್ವ : ಹೋಗಪ... ನೀ ಶ್ಯಾಣ್ಯಾ ಅಲ್ಲ.

ಬಸವ : ನಾ ಚ್ಯಾಣ್ಯಾ... ನಾ ಚ್ಯಾಣ್ಯಾ... ನೀನ ಚ್ಯಾಣ್ಯಾ... ಅ

ಅವ್ವ : ಹೂ ಹಂಗಾರ... ಚಂದಪ್ಪ ಚಂದಪ್ಪ ಚೆಲುವಾ ಅನ್ನು.

ಬಸವ : ಚಂದಪ್ಪ ಚಂದಪ್ಪ ಚೆಲುವಾ...

ಅವ್ವ : ಚುಂಗ ಹಿಡಕೊಂಡು ಬರುವ...

ಬಸವ : ಚುಂಗ ಹಿಡಕೊಂಡು... ಅವ್ವ ಅವ್ವ... ಅದನ್ನ ಕೊಡು.

ಪುತ್ರ ವಾತ್ಸಲ್ಯದ ಇಂತಹ ಭಾವನಿಷ್ಠ ಸನ್ನಿವೇಶಗಳನ್ನು ಮತ್ತೆ ಮತ್ತೆ ಓದಬೇಕೆನ್ನಿಸುತ್ತದೆ. ಚಂಪಾ ಅವರು ಮಕ್ಕಳ ಮನೋರಥವನ್ನು ಚೆನ್ನಾಗಿ ಬಲ್ಲವರು. ಬಾಲಭಾಷೆಯಲ್ಲಿ ವ್ಯಕ್ತವಾದ ಸಹಜತೆ, ಆಡುಮಾತಿನ ಲಯ, ಕುತೂಹಲ, ಹಾಸ್ಯ, ವಿಡಂಬನೆ, ಅನುಕರಣ ವಾಚಕಗಳು, ಶಬ್ದಗಳ ಪುನರಾವರ್ತನೆ ಮೊದಲಾದ ರಂಜನೀಯ ಅಂಶಗಳನ್ನು ಹೊಂದಿ ತನ್ನ ಚೆಲುವಿಕೆಯನ್ನು ಮೆರೆದಿವೆ. ಮಕ್ಕಳು, ಭಾಷಾ ಕಲಿಕೆಯಲ್ಲಿ ಸ್ವರಗಳನ್ನು ಮೊದಲು ಕಲಿಯುತ್ತಾರೆ. ನಂತರ ವ್ಯಂಜನಗಳನ್ನು, ದ್ವಿತ್ವಗಳನ್ನು ಕಲಿಯಲು ರೂಢಿಸಿಕೊಳ್ಳುತ್ತಾರೆ. ಆ ಕಲಿಕೆಯ ಪ್ರಕ್ರಿಯೆಯೂ ತಾಯಿ ಮಗುವಿನ ಈ ಸಂಭಾಷಣೆಯಲ್ಲಿ ಸೂಚ್ಯವಾಗಿ ವ್ಯಕ್ತವಾಗಿದೆ. ಇಲ್ಲಿ 'ಅವ್ವ' ಮತ್ತು 'ಬಸವ' ಪಾತ್ರಗಳು ತುಂಬ ರಮ್ಯವಾಗಿ ಕಾಣಿಸಿಕೊಳ್ಳುತ್ತವೆ. ಚಂಪಾ ಅವರು ಈ ಪಾತ್ರಗಳಿಗೆ ಜೀವಕಳೆ ತಂದುಕೊಟ್ಟಿದ್ದಾರೆ. ಃ, ೞ ಮಾತ್ರಾಲಯದ ತಾಜಾತನ ಸಹೃದಯರಿಗೆ ಮಾರ್ದನಿ ಗೊಡುತ್ತದೆ. ಬಾಲಭಾಷೆ ನಾಟಕದ ವಸ್ತು, ವಿನ್ಯಾಸಕ್ಕೆ

ಮೆರಗು ತಂದಿದೆ. ಅವರ ಭಾಷಾ ಬಳಕೆಯಲ್ಲಿ ದುರಂತದ ಛಾಯೆಯೂ ಇದೆಯೆಂಬುದು ಗಮನಿಸಬೇಕಾದ ಅಂಶವಾಗಿದೆ. 'ಬಸವ' ಮಾತು ಮುಂದುವರಿಸುತ್ತಾನೆ.

ಬಸವ : ಹಂಗಾರ ಒಂದು ಕತೀ ಹೇಳು
ಅವ್ವ : ಯಾವ ಕತೆ ಹೇಳಲಿ?
ಬಸವ : ಚಂದನ ಕತೀ ಹೇಳು
ಅವ್ವ : ನೀ ನನ್ನ ಹೊಟ್ಯಾಗ ಇದ್ದಾಗ
ಬಸವ : ನಾ ನಿನ್ನ ಹೊಟ್ಯಾಗ ಇದ್ನ್ಯs?
ಅವ್ವ : ಹ್ಞೂ ನನ್ನ ಹೊಟ್ಯಾಗ ಇದ್ದಿ
ಬಸವ : ನಿನ್ನ ಹೊಟ್ಯಾಗ ನನ್ನ ಯಾರ ತಂದು ಹಾಕಿದ್ರು?
ಅವ್ವ : ನೀನs ನನ್ನ ರಾಜಕುಮಾರ. ನೀನs ನನ್ನ ಕಟ್ಯಾಣಿ ನೀನ ನಮ್ಮಪ್ಪ
ಬಸವ : ಅವ್ವ. ನಾ ನಿಮ್ಮಪ್ಪ ಇದ್ದೇನೆ
ಅದರ, ನಮ್ಮಪ್ಪ ಯಾರು?
ಅವ್ವ : ನಾ ಒಂದು ಪ್ರಶ್ನಾ ಕೇಳಲ್ಯಾ?
ಬಸವ : ಕೇಳು.
ಅವ್ವ : ಹೂವಿನ ಅಪ್ಪ ಯಾರು?
ಬಸವ : ಹೂವಿನ ಅಪ್ಪ ಬೀಜ
ಅವ್ವ : ಬೀಜದ ಅಪ್ಪ ಯಾರು?
ಬಸವ : ಬೀಜದ ಅಪ್ಪ ಹೂವು
ಅವ್ವ : ಹೂ ಅಂದರ ಏನು?
ಬಸವ : ಹೂ ಅಂದರ ಬೀಜ
ಅವ್ವ : ಬೀಜ ಅಂದರ ಏನು?
ಬಸವ : ಬೀಜ ಅಂದರ ಹೂ.
ಅವ್ವ : ಹಂಗಾರ ನಿಮ್ಮ ಅಪ್ಪ ಯಾರು?
ಬಸವ : ನಿಮ್ಮ ಅಪ್ಪ ನಾನು?
ಅವ್ವಾ...ಅವ್ವಾ... ಇದು ಬರೇ ಕತೀ ಏನು ಮತ್ತ?

ಮನೆಯಲ್ಲಿ ಮಾತನಾಡುವಂತೆ ಸಹಜವಾದ ವ್ಯಾವಹಾರಿಕ ಕನ್ನಡದ ಬಳಕೆ, ಆಡು ಮಾತಿನ ಲಯ ನಾಟಕಕ್ಕೆ ಕಳೆತಂದಿದೆ. 'ಹೂವಿನ ಅಪ್ಪ ಯಾರು?', 'ನಿಮ್ಮ ಅಪ್ಪ ಯಾರು', 'ನಿಮ್ಮ ಅಪ್ಪ ನಾನು?' 'ಅವ್ವಾ...ಅವ್ವಾ... ಇದು ಬರೇ ಕತೀ ಏನು ಮತ್ತ?' ಇಲ್ಲಿ 'ಹೂ' ಮತ್ತು 'ಬೀಜ' ರೂಪಕಗಳಾಗಿ ಬಳಕೆಯಾಗಿವೆ. ಆ ಪದಪುಂಜಗಳು ವೈಚಾರಿಕ ಚಿಂತನೆಗೆ ಹಚ್ಚುತ್ತವೆ. ಆ ಮೂಲಕ ಸಾಮಾಜಿಕ ಚಲನೆ ಅನಾವರಣಗೊಳ್ಳುತ್ತಾ

ಹೋಗುತ್ತದೆ. ಕುತೂಹಲ ಮತ್ತು ಹುಡುಕುವ ಅತೃಪ್ತಿಗೆ ಕೊನೆಯಿಲ್ಲದಾಗುತ್ತದೆ. ಅಪ್ಪನ ಶೋಧ ಬಸವರಾಜನಂತಹ ವ್ಯಕ್ತಿಗೆ ಪಾಪ ಪ್ರಜ್ಞೆಯಂತೆ ಕಾಡುತ್ತದೆ. ಅವ್ವ ಮಗನಿಗೆ ಪಾಠ ಹೇಳುತ್ತಾಳೆ. ಅಲ್ಲಿಯೂ ದುರಂತದ ಛಾಯೆ ಮತ್ತೆ ಕಾಡುತ್ತದೆ.

ಅವ್ವ : ನಾ ನೋಡಿ ಬರ್ತಿನಿ. ನೀ ಸುಮ್ಮನ ಕುಂದ್ರು
ತಗಾ ಪುಸ್ತಕ. ಓದಿಕಂತ ಕುಂದ್ರು.

ಬಸವ : ನಾ | ಕ | ನೇ | ಪಾಠ
ಇ ವ ನು ಬಸವ
ಅ ವ ಳು ಬ ಸ ವ ನ ತಾಯಿ
ಇದು ಚೊಲೋ ಇಲ್ಲ. ಮತ್ತೆ...
(ಪೇಜ ತಿರುವಿ ಆನಂದದಿಂದ, ರಾಗವಾಗಿ)
ಹ್ಹಾ... ಬಾರಲೆ ಹಕ್ಕಿ
ಬಾರಲೆ | ಹಕ್ಕಿ | ಬಣ್ಣದ | ಹಕ್ಕೀ
ಬಾರಲೆ | ಹಕ್ಕಿ | ಹಾರುವ | ಹಕ್ಕೀ
ಗೆಳೆಯರು | ಆಡಲು | ಯಾರೂ | ಇಲ್ಲಾ
ಕಳೆಯುವ | ದೆಂತೂ | ವೇಳೆಯು | ನೆಲ್ಲಾs
ಅವ್ವನು | ನೀರಿಗೆ | ಹೋಗಿಹ | ಳೂs
ಅಪ್ಪನು | ಪೇಟೆಗೆ | ಹೋಗಿ ಹ | ನೂs
ಅವ್ವನು | ಬರಲೀ | ಅಪ್ಪನು...

ಮಗನ ಪ್ರಶ್ನೆಗಳಿಗೆ ಅವ್ವ ಅಸಹಾಯಕಳಾಗಿದ್ದಾಳೆ. ಒಂದೆಡೆ ಮಗುವಿಗೆ ಯಾವ ರೀತಿಯಲ್ಲಿ ಸತ್ಯದ ಅರಿವು ಮಾಡಿಕೊಡಬೇಕು ಎನ್ನುವ ಭೀತಿ ಅವ್ವಳನ್ನು ಕಾಡಿದರೆ ಮತ್ತೊಂದೆಡೆ ತನ್ನ ವ್ಯಕ್ತಿತ್ವದ ಮೂಲಸತ್ಯವನ್ನು ಒಪ್ಪಿಕೊಂಡು ಹೇಗೆ ಸಮಾಜದಲ್ಲಿ ತಲೆಯತ್ತಿ ನಿಲ್ಲಬೇಕು, ಸಮಾಜೀಕರಣಕ್ಕೆ ಹೇಗೆ ಒಳಗಾಗಬೇಕು ಎನ್ನುವುದು ಬಸವರಾಜನನ್ನು ಕಾಡುತ್ತದೆ. ದುರಂತವೆಂದರೆ ಇಬ್ಬರು ಸಮಾಜದ ಸ್ಥಾಪಿತ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸುವ ಶಕ್ತಿ ಕಳೆದುಕೊಂಡು ಅಸಹಾಯಕರಾಗಿದ್ದಾರೆ. ಈ ನಾಟಕದ ವಿಶಿಷ್ಟ ಸಾಧನೆ ಯೆಂದರೆ ಯಾವ ಘಟನೆಯನ್ನು ವಾಚ್ಯವಾಗಿ ಹೇಳುವುದಿಲ್ಲ. ರೂಪಕವೇ ಅದರ ಭಾಷಾಭಿವ್ಯಕ್ತಿಯ ಶಕ್ತಿಯಾಗಿದೆ.

ಆಕರಗ್ರಂಥ

೧. ಚಂಪಾ ನಾಟಕಗಳು, ೨೦೦೬, ಚಂದ್ರಶೇಖರ ಪಾಟೀಲ, ಸಪ್ನ ಬುಕ್‌ಹೌಸ್, ಬೆಂಗಳೂರು.

೩೭

ಕುಂಟಾಕುಂಟಾ ಕುರವತ್ತಿ : ಭಾಷೆಯ ಶಕ್ತಿ

ಚಂಪಾ ಅವರು ಸಾಮಾಜಿಕ ಪ್ರಸಂಗವೊಂದನ್ನು ಬಳಸಿಕೊಂಡು 'ಕುಂಟಾಕುಂಟಾ ಕುರವತ್ತಿ' ಎಂಬ ಕುತೂಹಲಕರವಾದ ನಾಟಕವನ್ನು ರಚಿಸಿದ್ದಾರೆ. ಭಾಷೆಯ ಮೇಲೆ ಅವರಿಗಿರುವ ಹಿಡಿತ, ಪಾತ್ರ ನಿರ್ಮಾಣದಲ್ಲಿ ಕುಶಲತೆ ನಾಟಕದ ಉದ್ದಕ್ಕೂ ಕಂಡುಬರುತ್ತದೆ. ನಾಟಕದವಸ್ತು ಕುತೂಹಲ ಬೆಳೆಸುತ್ತ ಹೋಗುತ್ತದೆ. ಪಾತ್ರಗಳು, ಘಟನೆಗಳು ಸೊಗಸಾದ ನಾಟಕೀಯ ತಿರುವುಗಳನ್ನು ಪಡೆದುಕೊಳ್ಳುತ್ತ ನಾಟಕದ ಶಿಲ್ಪವನ್ನು ಗಟ್ಟಿಗೊಳಿಸಿವೆ. ಚಂಪಾ ಅವರ ಇತರ ನಾಟಕಗಳಂತೆ ಇಲ್ಲಿಯೂ ಒಂದು ಬಗೆಯ ವೈಚಾರಿಕತೆ ಕೆಲಸಮಾಡಿದೆ. ಅದರ ನೆಲೆ ಸಾಮಾಜಿಕ ಸಂದರ್ಭದ್ದು. ಅದಕ್ಕಾಗಿಯೇ ಅವರ ನಾಟಕಗಳಲ್ಲಿ ಸಂಘರ್ಷದ ಎಳೆಗಳನ್ನು ಗುರುತಿಸಲು ಸಾಧ್ಯವಾಗಿದೆ. ಓದುವಾಗ ಮೌಲಿಕವಾಗಿದ್ದು, ರಂಗದ ಮೇಲೂ ಉತ್ತಮ ಪ್ರಯೋಗದ ಭರವಸೆ ಹುಟ್ಟಿಸುವ 'ಕುಂಟಾಕುಂಟಾಕುರವತ್ತಿ' ಒಂದು ವಿಶಿಷ್ಟ ಕೃತಿಯಾಗಿದೆ.

ಚಂಪಾ ಅವರು ಈ ನಾಟಕದಲ್ಲಿ ಬದುಕಿನ ದುರಂತದ ವಸ್ತುವನ್ನು ತೀರ ಭಿನ್ನವಾಗಿ ನೋಡಿದ್ದಾರೆ; ಮನುಷ್ಯನ ಮೂಲಸ್ವಭಾವವಾದ ಛಿದ್ರಾನ್ವೇಷಣೆಯಲ್ಲೇ ಸಂತೋಷಿಸುವ ಪ್ರವೃತ್ತಿಯನ್ನು ವಿಡಂಬಿಸಿದ್ದಾರೆ. ಈ ನಾಟಕದ **ಕುಂಟ, ಕುರುಡ ಮತ್ತು ಕೆಪ್ಪ** ಅವರ ಹೆಸರುಗಳೇ ಸೂಚಿಸುವಂತೆ ಅವರು ಅಂಗವಿಕಲರು. ಆದರೆ ಆಶ್ಚರ್ಯವೆಂದರೆ ಈ ಊನತೆಗಳು ಅವರನ್ನು ಕಾಡುವುದಿಲ್ಲ. ಅವರೆಲ್ಲರೂ ಪರಸ್ಪರರನ್ನು ಹೀಯಾಳಿಸುತ್ತಲೇ ತಮ್ಮ ಕೊರತೆಗಳನ್ನು ಮುಚ್ಚಿಕೊಳ್ಳುವ ಮನುಷ್ಯ ಸ್ವಭಾವದ ಪ್ರತಿನಿಧಿಗಳು. ಬದುಕಿನಲ್ಲಿ ಅವರಿಗಿದ್ದ ಆಸೆ, ಲವಲವಿಕೆಗಳನ್ನು ಕಸಿದುಕೊಳ್ಳುವುದಿಲ್ಲ. ಕುಂಟನಲ್ಲಿ ಬೂಟುಗಳ ಮೇಲಿರುವ ಪ್ರೀತಿ, ಕುರುಡನ ಬಣ್ಣದ ಮೋಹ, ಕಿವಿಗೆ ಹೂ ಸಿಕ್ಕಿಸಿಕೊಂಡು ಬಗಲಲ್ಲಿ ಟ್ರಾನ್ಸಿಸ್ಟರ್ ತೂಗು ಬಿಟ್ಟುಕೊಂಡಿರುವ ಕೆಪ್ಪ. ಮೇಲುನೋಟಕ್ಕೆ ಅಸಂಗತವೆಂದು ತೋರಬಹುದು. ಆದರೆ ಇವು ಅವರ ಊನತೆಗಳ ಮೇಲೆ ಸಾಧಿಸಿದ ವಿಜಯದ ಸಂಕೇತಗಳಾಗಿವೆ. ಅವರೆಲ್ಲ ರಿಗೂ

ಬದುಕಿನ ಆಶಾಭಾವನೆ ಕಡಿಮೆಯೆನಿಸುವುದಿಲ್ಲ. ನನಸಾಗದ ತಮ್ಮ ಕನಸುಗಳಿಗೆ ಮಾತಿನ ರೂಪಕೊಟ್ಟು, ತೃಪ್ತಿ ಪಡೆಯಲೆತ್ನಿಸಿದಾಗ ಅವರ ಆಳದ ಆಸೆಗಳು ಅವರಿಗೆ ವ್ಯಂಗ್ಯವಾಗಿ ಕಾಣುತ್ತವೆ. ಅಪೂರ್ಣತೆಯನ್ನು ಸಂಕೇತವಾಗಿ ಬಳಸಿಕೊಂಡು ಆ ಸಂಕೇತಗಳಿಂದ ಮೂಡಿತವಾಗುವ ಸನ್ನಿವೇಶಗಳಿಂದಲೇ ಬದುಕಿನ ಅಸಂಗತತೆಯನ್ನು ಈ ನಾಟಕ ಪ್ರತಿಪಾದಿಸುತ್ತದೆ. ಬೂಟು ಪಾಲಿಶ್ ಮಾಡುವ ಕುಂಟ ತಾನು ಪಾಲಿಶ್ ಮಾಡುವ ಬೂಟಿನ ಥಳುಕಿನ ಬಗ್ಗೆ ಈ ರೀತಿ ಹೇಳುತ್ತಾನೆ.

ಬೂಟು ಅನಬೇಕು ಬಾಟಾ ಅವನೌನ
ಗಸಗಸ ತಿಕ್ಕಿ ಮಾರೀ ನೋಡಿಕೊಂಡರೆ
ಅಮಾಸಿ ಕಾವಳದಾಗ ಚಿಕ್ಕಿ ಥಕ್ ಅಂದಂಗ ಅನಬೇಕು.
ಬೂಟು ಏರಿಸಿಕೊಂಡು ಕುದರೀ ಹಂಗ ಟಕ್ ಟಕ್ ಅಂತ ಹೊಂಟರ
ಮಾರಿ ನೋಡsದ ಬಿಟ್ಟು ಅವನೌನ ಮುಂದಿ
ಬೂಟs ನೋಡಿರಬೇಕು

ಆ ಪಾತ್ರಗಳಿಗೆ ತಮ್ಮ ಬದುಕಿನ ಗುರಿ-ಉದ್ದೇಶಗಳಿಗೆ ಸ್ಪಷ್ಟತೆಯಿಲ್ಲದಾಗಿದೆ. ಅವರ ಮಾತುಕತೆ ವ್ಯಂಗ್ಯದಿಂದ ಕೂಡಿದೆ. ಪರಸ್ಪರರು ತಾವು ಹೋಗಬೇಕಾದ ಊರಿನ ಬಗ್ಗೆ ಮಾತು ಬೆಳೆಸುತ್ತಾರೆ.

ಕುರುಡ : ನಾ ಪೂನಾ ಕಡಿಂದ ಬರಾಕ ಹತ್ತೇನೋ ಎಪ್ಪಾ
ಕುಂಟ : ಮತ್ತ ಎತ್ತಾ ಕಡಿಗೆ ಬಿಟ್ಟೀ ಎಕ್ಕ್ಯಾಗಾಡೀ?
ಕುರುಡ : ಬೆಂಗಳೂರು ಕಡಿಗೆ ಬಿಟ್ಟಿನ್ಯೋ ಎಪ್ಪಾ

ಅವರಿಗೆ ತಮ್ಮ ಊನತೆಯ ಬಗ್ಗೆ ಅರಿವುಂಟಿದೆ. ಆದರೆ ಅದನ್ನು ಅವರು ಎಲ್ಲಿಯೂ ವ್ಯಕ್ತಪಡಿಸುವುದಿಲ್ಲ.

ಕುರುಡ : .... ದೇವರು ಕಣ್ಣು ಕೊಟ್ಟರೂ ಯಾಬಣ್ಣಾ ಏನ ಕತೀ
ಅಂತ ಪತ್ತೆ ಹಚ್ಚs ಬುದ್ಧೀ ಕೊಡಲಿಲ್ಲ ನೋಡು ತಮ್ಮ
ಇದು........
ಕುಂಟ : ನಾನರ ಏನಂತೀ?
ದೇವರು ಕೊಟ್ಟ ಕಾಲು ಅತ್ತಾಗಿತ್ತಾಗ ಓಡ್ಯಾಡಿಸಿ ಅವನೌನ
.........ಹಿಂಗs ಕಟ್ಟೀ ಹಿಡಿದು ಕುಂತನಿ
ಬಸ್ ಬಂದ್ರ ನೋಡಿದಾ, ಬರಲಿಲ್ಲಂದ್ರ ಬಿಟ್ಟಾ,
ನಾ ಮನಸಸ ಮಾಡಿದರ.....
ಕುರುಡ : ಮಾಡಿದರ?

ಕುಂಟ : ಹನುಮಂತನಾಂಗ ಸಮುದ್ರ ಹಾರೇನು
ಥೈ ಥೈ ಥೈ ಅಂತ ನವಿಲಿನಂಗ ಕುಣದೇನು
ಟುಣ್ ಟುಣ್ ಟುಣ್ ಅಂತ ಗುಬ್ಬೀ ಹಂಗ ಜಿಗದೇನು
ಇನ್ನೇನೂ.......
....
ಕಾಲ ಕೆಟ್ಟಾಗ ನಮ್ಮಂಥೋರು ಏನು ಮಾಡಬೇಕು?
ಕೈ ಕಟ್ಟಿಕೊಂಡು ಕಟ್ಟೀ ಹಿಡಿದು ಚಕ್ಕಳಿಮಕ್ಕಳಿ ಕುಂಡರಬೇಕು.......
ಇದು ಎಜ್ಜಾ, ಜೀವನದ ಕರ್ಮ.

ಇವರಿಗೆ ತಮ್ಮ ಊನತೆಯನ್ನು ಮೀರುವುದು ಅನಿವಾರ್ಯವಾಗಿದೆ; ಅದು ಕಷ್ಟ ಸಾಧ್ಯವೂ ಆಗಿದೆ. ಇವರು ಸಾತ್ವಿಕ ಮೊಂಡರು; ಅಷ್ಟೇ ಮುಗ್ಧರು. ಏಕೆಂದರೆ ಅವರು ತಮ್ಮ ಸೀಮಿತ ಚೌಕಟ್ಟಿನಲ್ಲಿ (ವಲಯ) ತಮ್ಮ ಸಾಮರ್ಥ್ಯದ ಬಗ್ಗೆ ಆಳವಾದ ಆಶೆಯಿಟ್ಟು ಕೊಂಡಿರುತ್ತಾರೆ. ಕುರುಡ ನಿರೀಕ್ಷಿಸುವ ನೀಲಿ ಬಸ್ ಬರುವುದಿಲ್ಲ. ಪುನಾ-ಬೆಂಗಳೂರು ಹೆಸರು ಹೊತ್ತ ಬೋರ್ಡ್ ಕೂಡ ಶಾಶ್ವತವಲ್ಲ. ಅವರು ಬಸ್ಸಿನ ದಾರಿ ಕಾಯುತ್ತಾರೆ.

ಕುಂಟ : ಏ ಕುಡ್ಡಾ ಏ ಕೆಪ್ಪಾ, ಬರ್ರಿ ಇಲ್ಲೆ
ನೀ ಪುಣಾದ ಕಡಿಗೆ ಹೋಗಾಂವ
ನೀ ಬೆಂಗಳೂರು ಕಡಿಗೆ ಹೋಗಾಂವ
ಹೌದಲ್ಲೋ ?
ಕೆಪ್ಪ : ಮತ್ತ ನೀನು?
ಕುಂಟ : ನಾ ಇಲ್ಲೇ ಕುಂತ ಕುಂತಲ್ಲೇ ಹೋಗಾಂವ

ಕುಂಟನ ಈ ವ್ಯಂಗ್ಯ ಮಾನವೀಯ ಅವಸ್ಥೆಯ ಸತ್ಯವನ್ನೇ ತೆರೆದು ತೋರುವ ಮೂಲಕ ಅರ್ಥಪೂರ್ಣವಾಗಿದೆ.

ಕುರುಡ : ಅಂದರೇನಲೇ ತಮ್ಮಾ ಮರ್ಮದ ಮಾತ ಆಡ್ತೀಯಲ್ಲ
ಕುಂಟ : ..... ಬಸ್ ಬಂದರ ನೋಡೋದು ಬರಲಿಲ್ಲಾಂದ್ರ
ಶಿವಾಯನಮಃ
ಇದು ಮರ್ಮದ ಮಾತ ಅಲ್ಲ. ಕುಡ್ಡಾ
ಕರ್ಮದ ಮಾತೂ ಕರ್ಮದ್ದು

ಜೀವನದ ಧರ್ಮ, ಕರ್ಮ, ಮರ್ಮಗಳ ರಹಸ್ಯಗಳೆಲ್ಲಾ ತಮಗೆ ತಿಳಿದಿರುವ, ಅನುಭಾವಿಗಳಂತೆ ಮಾತಾಡುತ್ತಾರೆ, ಆಟವಾಡುತ್ತಾರೆ, ಜಗಳಾಡುತ್ತಾರೆ, ವ್ಯವಹಾರ ನಡೆಸುತ್ತಾರೆ. ಇಂತಹ ಸಂದರ್ಭದಲ್ಲಿ ನಾಟಕ ಲಯಬದ್ಧ ಭಾಷೆಯಲ್ಲಿ ಸಾಗುತ್ತದೆ. ಪರಸ್ಪರರು ತಮ್ಮ ಹೆಸರುಗಳ ಬಗ್ಗೆ ಕುತೂಹಲ ತಾಳುತ್ತಾರೆ.

ಕುರುಡ : ನಿನ್ನ ಹೆಸರೇನು ಅಂಧಂಗ?

ಕುಂಟ : ಇಟ್ಟ ಹೆಸರ ಚಾಲ್ತೀ ಹೆಸರs

ಕುರುಡ : ಚಾಲ್ತೀ ಹೆಸರು

ಕುಂಟ : ಚಾಲ್ತೀ ಹೆಸರು ಕುಂಟಾ ಕುಂಟಾ
ನಿಂದು?

ಕುರುಡ : ಚಾಲ್ತೀ ಹೆಸರು ಕುಡ್ಡಾ ಕುಡ್ಡಾ.

ಹೆಸರುಗಳು ಸಹಿತ ಸಂಸ್ಕೃತಿಯ ಭಾಷಾ ಘಟಕಗಳು. ಇಟ್ಟಹೆಸರು ಎಂದರೆ ಜನ್ಮನಾಮ, ಚಾಲ್ತಿ ಹೆಸರು ಎಂದರೆ ಬಳಕೆಯ ಹೆಸರು; ಅಡ್ಡಹೆಸರು. ವ್ಯಕ್ತಿಯ ಯಾವುದಾದರೂ ಗುಣ ವಿಶೇಷದಿಂದ ಬಳಕೆ ಬಂದು ಅದು ಅಧಿಕೃತವಾಗಿ ಆ ವ್ಯಕ್ತಿಇರುವರೆಗೂ ಬಳಕೆಯಾಗುತ್ತದೆ.

ಕುರುಡ : ಹೌದೋ ಎಪ್ಪಾ
ಯಾ ಹೆಸರ ಚಾಲ್ತೀ ಆ ಹೆಸರು ಕರೀಬೇಕು. ಅದs ಮರ್ಮ

ಕುಂಟ : ಯಾ ಹೆಸರು ಚಾಲ್ತೀ, ಅದs ಹೆಸರಲೇ ಕರೆಸಿಕೋ ಬೇಕು, ಅದs......

ಕುರುಡ : ಕರ್ಮ...... ಹೌದಲ ತಮ್ಮ?

ಸ್ವವಿಮರ್ಶೆಯ ಅಭಾವದಿಂದ ನರಳುವ ಬದುಕಿನ ವಿರೋಧಾಭಾಸವನ್ನು ಒಂದು ಸನ್ನಿವೇಶದ ಮೂಲಕ ಚುರುಕಾಗಿ, ಹಾಸ್ಯಮಯವಾಗಿ ನಿರೂಪಿಸಲಾಗಿದೆ. ಈ ಸನ್ನಿವೇಶ ಹಾಸ್ಯಮಯವಾಗಿದೆ ಹಾಗೂ ತುಂಬ ಸ್ವಾರಸ್ಯಕರವಾಗಿದೆ.

ಚಂಪಾ ಅವರು ವ್ಯವಸ್ಥೆಯ ವಿರುದ್ಧ ದಟ್ಟವಾಗಿ ದನಿಯೆತ್ತಿದ್ದಾರೆ. ಸಮುದಾಯದ ಅಂಕು-ಡೊಂಕುಗಳ ಬಗ್ಗೆ ತಮಗೆ ಬೇಸರವಾದಾಗ ನೇರವಾಗಿ ಇಲ್ಲವೆ ಪರೋಕ್ಷವಾಗಿ ವಿವಿಧ ರೂಪಕಗಳ ಮೂಲಕ ವಿಡಂಬಿಸಿದ್ದಾರೆ. ಸಮಾಜದಲ್ಲಿಯ ಡಂಬಾಚಾರಗಳಿಗೆ ಕನ್ನಡಿ ಹಿಡಿಯುವ ಹಾಗೂ ಜೀವನ ಪರವಾದ, ಅವರ ನಾಟಕಗಳಲ್ಲಿ ನಯವಾದ ಉಪದೇಶ ವಿದೆ; ಗಂಭೀರ ಎಚ್ಚರಿಕೆಯಿದೆ. ಅವರು ಬಳಸುವ ಭಾಷೆಯಲ್ಲಿ ವಾಚ್ಯಾರ್ಥವಿದ್ದಂತೆ ಲಕ್ಷಣಾರ್ಥವೂಯಿದೆ. ಚಂಪಾ ಅವರು ಬಳಸಿದ ಉಕ್ತಿ ವೈಚಿತ್ರ್ಯಗಳು ಉದ್ದೇಶಪೂರ್ವಕ ವಾಗಿ ಮೂಡಿಬಂದಿಲ್ಲ. ಅವು ಕವಿ ಅನುಭವದ ಅಭಿವ್ಯಕ್ತಿಯ ಪರಿಣಾಮವಾಗಿವೆ. ಲೋಕ ವ್ಯವಹಾರದ ಸಂಗತಿಗಳು ನಾಟಕದಲ್ಲಿ ಸಹಜವಾಗಿ ಅಭಿವ್ಯಕ್ತವಾಗಿವೆ. ಕುಂಟನು ಕುರುಡನ ಕೈಯಿಂದ ವಾಚ ತೆಗೆದುಕೊಳ್ಳುತ್ತಾನೆ. ಗಡಿಯಾರದ ಮುಳ್ಳುಗಳ ಚಲನವಲನ ಗಳನ್ನು ನೋಡಿ, ಕುಂಟ ಹೇಳುವ ಮಾತುಗಳು ತುಂಬ ಅರ್ಥಪೂರ್ಣವಾಗಿದೆ.

ಅಹಾ.... ಸಣ್ಣ ಮುಳ್ಳು ನೋಡ್ರಿ
ಹ್ಯಾಂಗ ಕುಂಟಲಿಪಿ ಆಡತತಿ
ಉದ್ದನ್ನ ಮುಳ್ಳ ನೋಡ್ರಿ

ಪರ್ಕರಿನಾಗಿನ ಕುದುರೀ ಹಾಂಗ ಹ್ಯಾಂಗ ಸುತ್ತ ಹೊಡೀತೇತಿ
ಈ ಗಿಡ್ಡ ಮುಳ್ಳು ನೋಡಿರೋ
ಹೊಟ್ಟೀಲಿದ್ದ ಹೆಣ್ಣ ಮಗಳಂಗ ಹೆಂಗ ಹೆಜ್ಜೀ ಹಾಕತತಿ
ಅಬಾಬಾಬಾ......

ಕುಂಟನ ಕುಚೇಷ್ಟೆಗಳ ಬಗ್ಗೆ ಕುರುಡ, ಕೆಪ್ಪ ಪರಸ್ಪರ ಮಾತನಾಡಿಕೊಳ್ಳುತ್ತಾರೆ.

ಕೆಪ್ಪ : ತಂಬೂರೀ ತಂತೀ ಹರದಂಗ
ಇವನ ಕಿವೀ ಹರೀಬೇಕು
ಕುರುಡ : ಎರಡೂ ಕುಂಡಿಗೆ ಒಂದೊಂದು ಕಡೆ
ಸುಣ್ಣಾ, ಕೆಮ್ಮಣ್ಣು ಬರೀಬೇಕು
ಕೆಪ್ಪ : ಹರದು ಹಲಗೀ ಮಾಡಬೇಕು
ಕುರುಡ : ಬರದು ಹುಲೀ ಮಾಡಬೇಕು

ಇಲ್ಲೆಲ್ಲ ಉತ್ತರ ಕರ್ನಾಟಕದ ಭಾಷೆಯ ತಾಜಾತನವಿದೆ; ಭಾಷೆಯ ಜೀವಂತಿಕೆಯಿದೆ. ಲೇಖಕರು ತಮ್ಮ ಅಭಿವ್ಯಕ್ತಿಗೆ ಸುತ್ತಲ ವಸ್ತುಗಳನ್ನು ಬಳಸಿಕೊಳ್ಳುತ್ತಾರೆ. ಆಗ ಭಾಷೆ ಕೇವಲ ವ್ಯಾವಹಾರಿಕವಾಗಿ ಬಳಕೆಯಾಗದೆ, ಲಕ್ಷಣಾರ್ಥವಾಗಿ ಬಳಕೆಯಾಗುತ್ತದೆ. ಅಂತಹ ಭಾಷಿಕ ಸಂದರ್ಭದಲ್ಲಿ ರೂಪಕಗಳು ಲೇಖಕರ ನೆರವಿಗೆ ಬರುತ್ತವೆ. ಅವುಗಳ ಮುಖ್ಯ ಉದ್ದೇಶ ಭಾಷೆಯ ಅರ್ಥ ವಲಯಗಳನ್ನು ವಿಸ್ತರಿಸುವುದಾಗಿದೆ. ಅವು ವಾಚಕರ (ಸಹೃದಯರ) ಗ್ರಹಿಕೆಯ ಮೇಲೆ ತೀವ್ರ ಪರಿಣಾಮವನ್ನುಂಟು ಮಾಡುತ್ತವೆ.

ಮನುಷ್ಯ ಸಂಬಂಧಗಳಲ್ಲಿ ಉಂಟಾದ ಏರುಪೇರುಗಳು ಅದರ ಪರಿಣಾಮದಿಂದುಂಟಾದ ಸಾಮಾಜಿಕ ವಿಪರ್ಯಾಸಗಳು ಇವು ಈ ನಾಟಕ ವಸ್ತು. ಆ ಸಾಮಾಜಿಕ ಪ್ರಸಂಗದ ಮಿಡಿತವನ್ನು ಹಿಡಿದು ಚಂಪಾ ಅವರು ಆಡುನುಡಿಗೆ ಹತ್ತಿರವಾದ ಭಾಷೆಯನ್ನು ಅರ್ಥಪೂರ್ಣವಾಗಿ ಬಳಸಿಕೊಂಡಿದ್ದಾರೆ. ಈ ಗದ್ಯ ಗಂಧಿ ಭಾಷೆ ಓದಲು ಸುಲಭವಾಗಿದೆ. ಸರಳ ಗದ್ಯದ ಮೂಲಕವೇ ಅತ್ಯಂತ ತೀವ್ರ ಪರಿಣಾಮವನ್ನುಂಟು ಮಾಡುತ್ತದೆ. ಚಂಪಾ ಅವರಿಗೆ ಭಾಷೆಯ ಮೇಲೆ ಹಿಡಿತವಿರುವುದರಿಂದ ಪಾತ್ರಗಳಿಗೆ ಜೀವಂತಿಕೆಯನ್ನು, ವಸ್ತುವಿಗೆ ಪರಿಣಾಮದ ಶಕ್ತಿ ಸಂಚಾರವನ್ನು ನೀಡಿದ್ದಾರೆ. ಪಾತ್ರಗಳ ಭಾಷಾಬಳಕೆಯಲ್ಲಿ ಸಹಜ ಏರಿಳಿತ, ಭಾವ ಹಾಗೂ ಭಾಷೆಗಳಲ್ಲಿ ಸುಸಂಬದ್ಧ ಹೊಂದಾಣಿಕೆ ಇರುವುದರಿಂದ ಈ ನಾಟಕ ವಿಶಿಷ್ಟವಾಗಿದೆ.

ಆಕರಗ್ರಂಥ

೧. ಚಂಪಾ ನಾಟಕಗಳು, ೨೦೦೬, ಚಂದ್ರಶೇಖರ ಪಾಟೀಲ, ಸಪ್ನ ಬುಕ್‌ಹೌಸ್, ಬೆಂಗಳೂರು.

೩೮

ಗುರ್ತಿನವರು : ಒಂದು ವಿವೇಚನೆ

ಚಂಪಾ ಅವರ 'ಗುರ್ತಿನವರು' ನಾಟಕದಲ್ಲಿ ಬಳಕೆಯಾದ ಭಾಷೆಗೆ ಒತ್ತುಕೊಟ್ಟು ಕೆಲವು ವಿಚಾರಗಳನ್ನು ಮಂಡಿಸುತ್ತೇನೆ. ಯಾವುದೇ ನಾಟಕದಲ್ಲಾಗಲಿ, ರಂಗಭೂಮಿಯಲ್ಲಾಗಲಿ ಭಾಷೆ ಒಂದು ಪಾತ್ರದಿಂದ ಇನ್ನೊಂದು ಪಾತ್ರಕ್ಕೆ ಬರಿ ತನ್ನ ಅನಿಸಿಕೆಯನ್ನು ಮುಟ್ಟಿಸುವ ವಾಹಕವಲ್ಲ. ಅದು ನಾಟಕಕಾರನ ವಿಚಾರಗಳನ್ನು, ಪ್ರಚೋದನೆಗಳನ್ನು ಪಾತ್ರಗಳ ಮುಖಾಂತರ ಪ್ರೇಕ್ಷಕರ ಮನಮುಟ್ಟಿಸುವ ಸಂವಹನ ಶಕ್ತಿ. ಅಲ್ಲಿ ಭಾಷೆ ಬರೀ ಮಾತುಗಳ ಸರಪಳಿಯಾಗಲಾರದು. ಸಂಭಾಷಣೆ ಅರ್ಥಸಂಪನ್ನವಾಗಿರಬೇಕಾಗುತ್ತದೆ. ಸನ್ನಿವೇಶ, ಪರಿಸರ ಆಯಾ ಪಾತ್ರಗಳಿಗೆ ತಕ್ಕಂತೆ ರೂಪುಗೊಂಡು ಸುಸಂಬದ್ಧವಾಗಿ ಮೂಡಿಬರಬೇಕಾಗು ತ್ತದೆ. ಅದು ನಾಟಕಗಳ ನಿಜವಾದ ಭಾಷೆ. ಚಂಪಾ ಅವರು ಅಂತಹ ಭಾಷೆಯನ್ನು ಸಹೃದಯರ ಮನದಲ್ಲಿ ಅಚ್ಚಳಿಯದೆ ನಿಲ್ಲಿಸಿದ್ದಾರೆ; ಅತ್ಯಂತ ಸತ್ವಪೂರ್ಣವಾಗಿ ನಿವೇದಿಸಿದ್ದಾರೆ. ಚಂಪಾ ಅವರ ನಾಟಕಗಳು ಕಟೆದು ಕಟೆದು ಹದಗೊಳಿಸಿ ಕಟ್ಟಿದ ವಾಸ್ತುಶಿಲ್ಪದಂತಿವೆ. ಅವರು ಬಳಸಿದ ಪ್ರತಿಯೊಂದು ಪದಕ್ಕೂ ಅರ್ಥವಿದೆ; ಸಾಮಾಜಿಕ ಆಯಾಮವಿದೆ.

'ಗುರುತು' ಎಂಬ ಪದಕ್ಕೆ 'ಪರಿಚಯ' ಎಂಬ ಅರ್ಥವಿರುವಂತೆ 'ಸಂಕೇತ' ಎಂಬರ್ಥವೂ ಯಿದೆ. ಈ ನಾಟಕದಲ್ಲಿ ಚಂಪಾ ಅವರು ಈ ಎರಡೂ ಅರ್ಥಗಳನ್ನೂ ಸ್ಫುರಿಸಲು ಯತ್ನಿಸಿದ್ದಾರೆ. ಈ ನಾಟಕದ ಮುಖ್ಯಪಾತ್ರಗಳಾದ 'ಗಂಡ' ಮತ್ತು 'ಹೆಂಡತಿ' ಸಾಮಾನ್ಯ ಅರ್ಥದಲ್ಲಿ ಒಬ್ಬರಿಗೊಬ್ಬರು ಪರಿಚಿತರು. ಆದರೆ ನಿಜವಾದ ಅರ್ಥದಲ್ಲಿ ಅವರು ಅಪರಿಚಿತರೇ. ಚಾಳೀಸು ಧರಿಸಿದರೂ ಅವರ ದೃಷ್ಟಿಮಾಂದ್ಯ ಮುಂದುವರಿದೇ ಇದೆ. 'ಗಂಡ' ಮತ್ತು 'ಹೆಂಡತಿ' ಇಬ್ಬರೂ ವಾಸ್ತವದಿಂದ ಮುಖ ತಿರುವಿದವರಾಗಿದ್ದಾರೆ.

ಗಂಡ : ಅಂಥಾಂಗ

ಹೆಂಡತಿ : ಏನೂ ಅಂಥಾಂಗ?

ಗಂಡ : ಥೂ ಇದರಪ್ಪನ.....ಏನು ಹೇಳಬೇಕಂತ
ಮಾಡಿದ್ದೆ ಮರ್ತು ಹೋತ ನೋಡು
....
....
ಹ್ಞಾ ಸಿಕ್ಕಿತು?

ಹೆಂಡತಿ : ಏನು ಸಿಕ್ಕಿತು?

ಗಂಡ : ನನ್ನ ನಿನ್ನ ಲಗ್ನ ಆಗಿ ಎಷ್ಟು ವರ್ಷ ಆತು?

ಹೆಂಡತಿ : ಇದುನು ನಿಮ್ಮ ಪ್ರಶ್ನಾ?

ಮನುಷ್ಯ ಸಂಬಂಧಗಳಲ್ಲಿ ಉಂಟಾದ ಏರುಪೇರುಗಳು ಇದರ ಪರಿಣಾಮವಾದ ಆಘಾತ, ಸಂಕಟಗಳು ಈ ನಾಟಕದ ವಸ್ತು. ಬದುಕಿನ ದುರಂತವನ್ನು ಹೃದಯ ವಿದ್ರಾವಕವಾಗಿ ಚಿತ್ರಿಸುವ ಚಂಪಾ ಅವರ ಉದ್ದೇಶ ಸಫಲವಾಗಿದೆ. ಗಂಡ, ಹೆಂಡತಿ ಮಾತನಾಡುತ್ತ ಕುಳಿತಿರುವಾಗ ಆಗಂತುಕ ಎಂಬುವನು ಬಾಗಿಲು ತಟ್ಟುತ್ತಾನೆ. ಗಂಡ ಹಲವು ಸಾರಿ ಯೋಚಿಸಿ ಬಾಗಿಲು ತೆರೆಯುತ್ತಾನೆ.

ಗಂಡ : ನಮಸ್ಕಾರ

ಆಗುಂತಕ : ಸಿಕ್ಕಿತ್ರ್ಯು?

ಗಂಡ : ಸಿಗವಲ್ದು ನೋಡ್ರೀ?

ಆಗುಂತಕ : ಏನ ಸಿಗವಲ್ದರೀ

ಗಂಡ : ಚಾಳೀಸು
ಹ್ಞಾ......ಸಿಕ್ಕಿತು ನೋಡ್ರಿ

ಆಗುಂತಕ : ಚಾಳೀಸಲ್ರೀ ಸಾಹೇಬ್ರ, ನಾ ಕೇಳಿದ್ದು. ನಾ ಕೇಳಿದ್ದು.....ಗುರ್ತು

ಗಂಡ : ಗುರ್ತು? ಯಾರದು?

ಆಗುಂತಕ : ನಂದು

ಗಂಡ : ನಿಮ್ಮ ಗುರ್ತು? ತಡೀರಿ

ಪರಸ್ಪರ 'ಅಪರಿಚಿತತೆ' ಅದು ಪರ್ಯಾಯವಾಗಿ ತಂದೊಡ್ಡುವ 'ಸ್ವಮಗ್ನತೆ'ಯನ್ನು ಗಮನಿಸಿ 'ಸಿಕ್ಕಿತೇನ್ರಿ' ಎಂದು ಆಗಂತುಕ ತನ್ನ ಗುರ್ತಿನ ಬಗ್ಗೆ ತೀರ ಆತಂಕದಿಂದ ಕೇಳಿದಾಗ 'ಸಿಕ್ಕಿತಲ್ರೀ' ಎಂದು ಗಂಡ ಹೇಳುವುದು ತನ್ನ ಚಾಳೀಸನ್ನು ಕುರಿತಾಗಿರುತ್ತದೆ. ಹಾಗಿದರೂ ಆಗಂತುಕ ತನ್ನ ಗುರ್ತಿಯಾಗಿ ಮತ್ತೆ ಮತ್ತೆ ಪೀಡಿಸಲು ಗಂಡ, ಗುರ್ತಿಸುವ ಒಂದೊಂದೇ ವಸ್ತುಗಳ ಪಟ್ಟಿ, ಪರಸ್ಪರರ ಅಪರಿಚಿತತೆಯನ್ನು ಇನ್ನಷ್ಟು ಹಿಗ್ಗಲಿಸಿ ಒಟ್ಟು ಸನ್ನಿವೇಶ ತಳಮುಳವಾಗುತ್ತದೆ. ಆ ಸಂದರ್ಭದಲ್ಲಿ ಭಾಷೆ, ಮೌನವಾಗುತ್ತದೆ. ಈ ನಾಟಕ ಆಧುನಿಕ ಬದುಕಿನ ದುರಂತವೊಂದನ್ನು ಚಿತ್ರಿಸುತ್ತದೆ. ಸಮೂಹಜೀವನದಲ್ಲಿ ವೈಯಕ್ತಿಕತೆಯನ್ನು

ಕಳೆದುಕೊಂಡು ವ್ಯಕ್ತಿಯ ಪರದಾಟಕ್ಕೆ ಅಲ್ಲಿನ ಪಾತ್ರಗಳು ಪ್ರತಿನಿಧಿಗಳಾಗಿದ್ದಾರೆ. ಗಂಡ 'ಜೀವನ ಮತ್ತು ಸಾಹಿತ್ಯ'ದ ಬಗ್ಗೆ ಭಾಷಣ ಮಾಡಲು ತೊಡಗುತ್ತಾನೆ.

ಗಂಡ : ಸಾಹಿತ್ಯ ಅಂದರ ಜೀವನದ ಪ್ರತಿಬಿಂಬ ಅಂದರೇನು? ಸಾಹಿತ್ಯ ಅಂದರೇನು? ಜೀವನ ಅಂದರೇನು? ಪ್ರತಿಬಿಂಬ ಅಂದರೇನು? 'ಅಂದರ' ಅಂದರ ಏನು? ಪ್ರತಿಬಿಂಬ ಅಂದರ ಬಿಂಬದ ಪ್ರತಿ. ಅರ್ಥಾತ್ ಸಾಹಿತ್ಯದೊಳಗ ನಾವು ಕಾಣೋದು ಅಥವಾ ನಮಗ ಕಾಣಸೋದು ಜೀವನದ ಬಿಂಬದ ಪ್ರತಿ! ಚಪ್ಪಾಳೆ ಹೊಡೀರಿ ಪ್ರತಿಬಿಂಬ ಅಂದರ ತಿರುವು ಮುರುವು. ಸಾಹಿತ್ಯದೊಳಗ ಜೀವನ ತಿರುವು ಮುರುವು ಆಗತತಿ. ಅರ್ಥಾತ್ ಜೀವನ ಅನ್ನೋದು ಸಾಹಿತ್ಯದೊಳಗ ನವಜೀ ಆಗತತಿ. ಇದು ನನ್ನ ಸಿದ್ಧಾಂತ. ಈಗ ನೋಡ್ರಿ. ಒಂದ ಉದಾಹರಣೆ ಕೊಡತೀನಿ ಇಂವ ಹಾಕ್ಕೊಂಡಿರೋದು ಗಾಂಧೀ ಟೊಪ್ಪಿಗಿ ಜೀವನದಾಗ. ಇಂವ ಗೋಡಸೆ ಟೊಪ್ಪಿಗಿ ಹಾಕಬೇಕಾರ ಏನ ಮಾಡಬೇಕು? ಸಾಹಿತ್ಯದೊಳಗ ನುಗ್ಗಬೇಕು. ಯಾಕಂದ್ರ ಸಾಹಿತ್ಯ........

ಆಗುಂತಕ : ಜೀವನದ ಪ್ರತಿಬಿಂಬ.

ಆದರೆ ಸಮಕಾಲೀನ ಜೀವನ ಎನ್ನುವುದು ಜೀವವಿಲ್ಲದ ಬಿಂಬ ಎಂಬುದರ ಅರಿವೂ ಅವನಿಗಿದೆ. ಖಾಸಗಿ ಬದುಕಿನಲ್ಲಾಗಲೀ, ಸಾಮಾಜಿಕ ಬದುಕಿನಲ್ಲಾಗಲೀ ಯಾರು ಯಾರನ್ನು ಗುರುತು ಹಿಡಿಯದಿರುವ, ಸಂವಾದ ಸಾಧ್ಯವಾಗದಿರುವ ಭಯಾನಕ ಪರಿಸ್ಥಿತಿಯನ್ನು ಮುಂದಿಡುವ ಈ ನಾಟಕ ಸಾಮಾಜಿಕ ವಿಡಂಬನೆಯಂತೆ ಸಾಹಿತ್ಯಿಕ ವಿಡಂಬನೆಯೂ ಆಗಿದೆ. 'ಗೋಡಸೆ ಟೊಪ್ಪಿಗಿ ಹಾಕಬೇಕಾದರ ಸಾಹಿತ್ಯದೊಳಗ ನುಗ್ಗಬೇಕು' ಈ ಮಾತುಗಳನ್ನು ಹೇಳುವ ನಾಟಕ, ಸಾಹಿತಿಯ ನೋವು ಮತ್ತು ಹತಾಶ ಸ್ಥಿತಿಯನ್ನು ಪರೋಕ್ಷವಾಗಿ ಹೇಳುತ್ತದೆ. ಈ ಬಗೆಯ ಗಂಭೀರ ವಿಚಾರವನ್ನು ಪ್ರಹಸನದ ಧಾಟಿಯಲ್ಲಿ ಹೇಳುವ ಭಾಷೆಯ ಕಲೆ ಚಂಪಾ ಅವರಿಗೆ ಕರಗತವಾಗಿದೆ. ಗಂಡನ ಮಾತುಗಳಲ್ಲಿ ಬುದ್ಧಿವಂತಿಕೆಯ ಚಮತ್ಕಾರ ಇದೆ. ಆದರೆ ಅವನು ಭಾಷೆಯನ್ನು ಸಂವಹನಕ್ಕಾಗಿ ಉಪಯೋಗಿಸುವುದಿಲ್ಲ ಎನ್ನುವುದನ್ನು ಗಮನಿಸಬೇಕು. ತದ್ವಿರುದ್ಧವಾಗಿ ವಾಸ್ತವದ ಗ್ರಹಿಕೆಯಲ್ಲಿ ಅನಿಶ್ಚಿತತೆ ಹಾಗೂ ಸಂದಿಗ್ಧತೆಗಳನ್ನು ಅಭಿವ್ಯಕ್ತಿಸಲು ಮಾತು ಪ್ರಯೋಗಿಸುತ್ತಾನೆ.

ಗಂಡ : ಎಲ್ಲಿಗೆ?

ಆಗುಂತಕ : ಊರಿಗೆ

ಗಂಡ : ಯಾ ಊರಿಗೆ?

ಆಗುಂತಕ : ನಮ್ಮ ಊರಿಗೆ

ಗಂಡ : ನಿಮ್ಮ ಊರಿಗೆ ಅಂದರ?

ಆಗುಂತಕ : ನಾ ಇರೋ ಊರಿಗೆ

ಗಂಡ : ನೀವಿರೋ ಊರು ನಿಮ್ಮೂರು ಆತೇನು?

ಆಗುಂತಕ : ಮತ್ತ?

ಗಂಡ : ಈಗ ಈ ಊರಾಗ ಅದೀರಿ. ಇದು ನಿಮ್ಮೂರೇನು? ಈಗ ಈ ಮನ್ಯಾಗ ಅದೀರಿ ಇದು ನಿಮ್ಮ ಮನೀ ಏನು? ಮಜಾ ಅದೀರಪ ನೀವೂ!

ಪುಟ್ಟ ಪುಟ್ಟ ವಾಕ್ಯಗಳಲ್ಲಿ ಅವರಿಬ್ಬರ ಸಂಭಾಷಣೆ ನಡೆಯುತ್ತದೆ; ವಾಚಕರಿಗೆ ನಾಟಕ ಓದಿಸಿಕೊಂಡು ಹೋಗುತ್ತದೆ. ಇಂತಹ ಸಂದರ್ಭದಲ್ಲಿ 'ಗಂಡ' ಭಾಷೆಯನ್ನು ರಕ್ಷಣೆ ಹಾಗೂ ಆಕ್ರಮಣ ಈ ಎರಡು ಉದ್ದೇಶಗಳಿಗಾಗಿ ಬಳಸುತ್ತಾನೆ. 'ಆಗುಂತಕ' ವಾಸ್ತವದ ಸಂಕೇತವಾಗಿರುವುದರಿಂದ ಈ ತಂತ್ರ ಅವನಿಗೆ ಅವಶ್ಯವೆನಿಸುತ್ತದೆ. ಆದರೆ ನಾಟಕದಲ್ಲಿ ಎರಡು ಸಲ ಈ ತಂತ್ರ ಮುರಿದುಬೀಳುತ್ತದೆ. ಮೊದಲನೆಯದು. 'ಆಗುಂತಕ' ಅವನು ತರುವ ನಿಷ್ಕಾರಣ ಭಯದ ನೆನೆಪು.

ಆಗುಂತಕ : ಸಿಕ್ಕಿತ್ರ್ಯಽ?

ಗಂಡ : ನನ್ನ ಕುರ್ಚೇದ ಬಲಗಡೆ ತೋಳಿನ ಮ್ಯಾಲ ಒಂದು ಕರೇದು ಏನಽ ಕುಂತಂಗಾಗಿತ್ತ... ಹಾವಿನಂತಾದು....... ಕರೇ ಹಾವಿನ ತುಂಡಿನಂತಾದು...... ಮೈಮ್ಯಾ ಲೆಲ್ಲಾ ಕೂದಲ....... ತುದಿಗೆ ಹೆಡಿಹಂಗ ಏನಽ ಜೋತ ಬಿದ್ದಿತ್ತು........ ಇವತ್ತ ಸಿಕ್ಕಿತು ನೋಡ್ರೀ.

ಆಗುಂತಕ : ಏನು ಸಿಕ್ಕಿತು?

ಗಂಡ : ಗುರ್ತು

ಆಗುಂತಕ : ಯಾರದು?

ಗಂಡ : ಆ ಕರೇದರದು......

ಎರಡನೆಯದು, ನಾಟಕದ ಕೊನೆಯಲ್ಲಿ ಬರುವ 'ಹೆಂಡತಿ'ಯ ಕಣ್ಣಲ್ಲಿ ಅವನು ಕಾಣುವ ನೋಟ.

ಗಂಡ : ಅಂಥಾಂಗ..... ಇವರ ಗುರ್ತು ಮಾಡಿಸಲೇ ಇಲ್ಲೇನು ನಾನು? ಇವರು.... ಇವರು....ಅಯ್ಯಯೋ.....ಇವರ ಕಣ್ಣ ಎಲ್ಲಿ ಅದಾವು?...... ಇವರ ಕಣ್ಣ ಸತ್ತಾವು!...... ಸತ್ತು ದೆವ್ವ ಆಗ್ಯಾವು! ದೆವ್ವದ ಕಣ್ಣ ಆಗ್ಯಾವು!..... ನಿನ್ನ ತಿಂತಽನಿ ಅಂತಾವು!.....

ಇಂತಹ ಕ್ಷಣಗಳಲ್ಲಿ ಗುರುತು ಕುರುಹುವಾಗಿ ಒಳಹೊರ ವಾಸ್ತವಗಳ ಅರಿವನ್ನು ತಂದುಕೊಡುತ್ತದೆ. ಉತ್ತರ ಕರ್ನಾಟಕದ ಭಾಷೆಯ ಜೀವಂತಿಕೆ ಹಸಿ ಹಸಿಯಾಗಿ ನಾಟಕದಲ್ಲಿ ನಿರೂಪಿತವಾಗಿದೆ. 'ಉಗುಳು ನುಂಗಿದರ ಉಂಡಂಗಲ್ಲ..... ಹೂಸು ಬಿಟ್ಟರ ಹೇತಂಗಲ್ಲ'. 'ಗಂಡ' ಭಾಷಣಕ್ಕೆ ಸಿದ್ಧನಾದಾಗ

ಸಭ್ಯ ಗೃಹಸ್ಥರೇ ಮತ್ತು ಮಹಿಳೆಯರೇ
ನಿಂತ ನಿದ್ದೆ ಬಡಕರೇ ಕುಂತ ಕೂಳು ಬಡಕರೇ!
ಗೋಣು ಎತ್ತಿದ ಒಂಟೆಗಳೇ!
ಗೋಣು ಎತ್ತದ ಆಮೆಗಳೇ ಕೇಳಿರಿ! ಕೇಳಿರಿ!

ಇಂತಹ ಸಂದರ್ಭದಲ್ಲಿ ಹಾಸ್ಯ ತುಂಬ ಸೊಗಸಾಗಿ ಬಂದಿದೆ. ಅದು ನಾಟಕದ ಭಾಷೆ ಮತ್ತು ಸಾಹಿತ್ಯ ಸೌಂದರ್ಯ ಹೆಚ್ಚಿಸಿದೆ. ಚಂಪಾ ಅವರು ಆಡು ನುಡಿಗೆ ಹತ್ತಿರವಾದ ಭಾಷೆಯನ್ನು ಬಳಸಿದ್ದಾರೆ. ಸಾಮಾಜಿಕ ವಸ್ತುವೊಂದನ್ನು ಸಮಕಾಲೀನ ದೃಷ್ಟಿಯಿಂದ ನೋಡುವ ಪ್ರಯತ್ನ ಇಲ್ಲಿದೆ. ನಾಟಕದ ಕತೆ ಕುತೂಹಲವನ್ನು ಬೆಳೆಸುತ್ತ ಹೋಗುತ್ತದೆ. ಪಾತ್ರಗಳು, ಘಟನೆಗಳು ಸೊಗಸಾದ ನಾಟಕೀಯ ತಿರುವುಗಳನ್ನು ಪಡೆದುಕೊಳ್ಳುತ್ತ ನಾಟಕದ ಶಿಲ್ಪವನ್ನು ಗಟ್ಟಿಯಾಗಿಸಿವೆ. ಕಥಾವಸ್ತು ಮತ್ತು ಪಾತ್ರಗಳ ಮೂಲಕ ಸಮುದಾಯದಲ್ಲಿಯ ಸಾಮಾಜಿಕ ಬಿಕ್ಕಟ್ಟನ್ನು ಪರಿಭಾವಿಸುತ್ತ ಕತೆ ಮುಂದುವರೆದಿದೆ. ಸಾಮಾಜಿಕ ಸಂದರ್ಭದ ನೆಲೆಯಲ್ಲಿ ಒಂದು ಬಗೆಯ ವೈಚಾರಿಕತೆ ಇಲ್ಲಿ ಕೆಲಸ ಮಾಡಿದೆ.

ಆಕರಗ್ರಂಥ

೧. ಚಂಪಾ ನಾಟಕಗಳು, ೨೦೦೬, ಚಂದ್ರಶೇಖರ ಪಾಟೀಲ, ಸಪ್ನ ಬುಕ್‌ಹೌಸ್, ಬೆಂಗಳೂರು.

೩೯

ಟಿಂಗರ ಬುಡ್ಡಣ್ಣ : ಭಾಷೆಯ ರಚನೆ

ಚಂಪಾ ಅವರ 'ಟಿಂಗರ ಬುಡ್ಡಣ್ಣ' ಶಕ್ತಿಯುತ ನಾಟಕ. ಟಿಂಗರ ಬುಡ್ಡಣ್ಣ ಎಂಬ ಹೆಸರು ತುಂಬ ಮೋಜಿನದಾಗಿದ್ದು ಅದು ಒಂದು ಜನಪದ ಕಥೆಯೊಂದರ ಆಧಾರದ ಮೇಲೆ ರಚಿತವಾದ ನಾಟಕ. ಜನಪದ ಕಥಾನಕದ ಆಶಯ, ಭಾವುಕತೆ ಮುಂತಾದ ಅಂಶಗಳನ್ನು ಸೃಜನಶೀಲ ಪಾತಳಿಗೆ ಹೊಂದಿಸಿ ಸಮಕಾಲೀನ ಪರಿಸರ ಮತ್ತು ಸಮಸ್ಯೆಗಳಿಗೆ ಅನುಗುಣವಾಗಿ ಬಳಸಿಕೊಂಡ ತಂತ್ರಗಾರಿಕೆಯಿಲ್ಲಿದೆ. ಮೂರು ದೃಶ್ಯಗಳಲ್ಲಿ ನಾಟಕದ ಶಿಲ್ಪವಿದೆ. ಮೊದಲನೆಯ ದೃಶ್ಯದಲ್ಲಿ 'ಮುದುಕ', 'ಮುದುಕಿ'ಯರ ಸಂಭಾಷಣೆ ತುಂಬ ಅರ್ಥವತ್ತಾಗಿದ್ದು ತುಂಬ ರಸಿಕತೆಯಿಂದ ಕೂಡಿದೆ. ಮೇಲುನೋಟಕ್ಕೆ ಅದು ಮುದ್ದಣ ಮನೋರಮೆಯರ ಸಂಭಾಷಣೆಯನ್ನು ನೆನೆಪಿಗೆ ತರುತ್ತದೆ. ಪರಸ್ಪರರನ್ನು ಯಾವ ರೀತಿ ಸಂಬೋಧನೆ ಮಾಡಬೇಕು ಎಂಬುದರ ಬಗ್ಗೆ ಮಾತುಕತೆ ಶುರುವಾಗುತ್ತದೆ.

ಮುದುಕಿ : ನಾ, ನಿನ್ನ ಏ ಕರಿಲೀ ಹೇಳ

ಮುದುಕ : ನೀ ಹೇಳ

ಮುದುಕಿ : ಮುದುಕಾ ಅಂತsನಿ

ಅದಕ್ಕೆ ಪರಸ್ಪರರು ಸಮ್ಮತಿ ಸೂಚಿಸುವುದಿಲ್ಲ. ತಮ್ಮ ಬಾಲ್ಯ ಜೀವನವನ್ನು, ಕೂಡಿ ಆಟವಾಡಿದುದನ್ನು ನೆನೆಪಿಸಿಕೊಳ್ಳುತ್ತಾರೆ. ನಾನು-ನೀವು ಹೆಂಗವಿದ್ವಿ ನೆನಪೈತೇನು ಮುದುಕಿ? ಎಂದು ಮುದುಕ ಪ್ರಶ್ನೆ ಮಾಡುತ್ತಾನೆ? (ಕನಸಿನ ಮೂಡಿನಲ್ಲಿ).

ಮುದುಕಿ : ಬಣ್ಣದ ಪಾಟೀ ಚೀಲಾ ಹೊತ್ತು
ಸಾಲಿ ಬಿಡsದಕ್ಕಿಂತ ಮುಂಚೇ
ಚೊಣ್ಣಾ ಮ್ಯಾಲ್ ಏರಿಸಿಕೆಂತ
ನೀ ಬರತಿದ್ದೀ

ಮುದುಕ : ಬಣ್ಣದ ಪರಕಾರ ಏರಿಸಿಕೊಂಡು
ಬಣಿವಿ ಸಂದ್ಯಾಗ ನೀನು
ಬಟ್ಟಲಗಣ್ಣು ಬಿಟಗಂಡು
ನಿಂತಿರ ತಿದ್ದೀ

ಮುದುಕಿ : ಶಿಸ್ತ ಕರಾಪ್ ಮಾಡಿಸಿಗೆಂಡ್
ಚಿಗರ ಮೀಸಿ ಸವರಿ ಕೆಂತ
ಹಾವಿನ ಬುಟ್ಯೆನ ಹಾವಿನಂಗ
ನೀ ಬರತಿದ್ದೀ.

'ಮುದುಕಾ', 'ಮುದುಕಾ' ಅನಬ್ಯಾಡ 'ಮಾವ' ಅನ್ನು ಎಂದು ಮುದುಕ, ಮುದುಕಿಗೆ ತಾಕೀತು ಮಾಡುತ್ತಾನೆ. ಮುದುಕಿ ಉದ್ದಕ್ಕೂ ಅವನಿಗೆ 'ಮಾವ' ಎಂದೇ ಸಂಬೋಧಿಸುತ್ತಾಳೆ. ಅಂತಹ ಭಾಷಿಕ ಸಂದರ್ಭದಲ್ಲಿ ಅವರ ಸಂಭಾಷಣೆಯಲ್ಲಿ ದಾಂಪತ್ಯದ ರಸಿಕತೆ ಎದ್ದುಕಾಣುತ್ತದೆ.

ಮುದುಕಿ : ಬಯಕಿ ಹತ್ಯಾವ? ನಿನಗ ಬಯಕಿ ಹತ್ಯಾವ?

ಮುದುಕ : ನನಗ ಅದರ ಬಯಕಿ ಹತ್ತಿಲ್ಲಾ ಇದರ ಬಯಕಿ ಹತ್ತೇತಿ

ಆಗ ಅವರು ಬಯಸುವುದು ಹುಣಸೀ ಹಣ್ಣಿನ ಚಿಗಳಿ, ಎರೆ ಮಣ್ಣಿನ ಹಳ್ಳು, ಕಟಗು ಬೆಂಡು, ಇಬತ್ತಿ ತುಂಡು, ಅಂಗಾರ ಇತ್ಯಾದಿ ಬಯಕಿ ಹತ್ತಿದಾಗ ಹೆಂಗಸರು ತಿನ್ನುವ ವಸ್ತುಗಳು. ಅವರ ದಾಂಪತ್ಯದಲ್ಲಿ ರಸಿಕತೆಯಿದ್ದರೂ ಅದು ಅಷ್ಟೊಂದು ಸರಳವಾಗಿಲ್ಲ. ಅವರ ಮಾತುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅದರಲ್ಲಿ ವಿಷಾಧದ ದನಿಗಳು ಕೇಳಿಬರುತ್ತವೆ. ಮುದುಕ, ಮುದುಕಿಯರು ಅಮರ ಪ್ರೇಮದ ನಾಟಕ ಮಾಡಿದರೂ ಅವರ ದಾಂಪತ್ಯ ಫಲಪ್ರದವಾಗಿಲ್ಲ. ಮುದುಕನ ಸರಸದ ಮಾತಿನ ನಡುವೆಯೇ **'ಹುಳಾವಿನಃ ಹೊಕ್ಕಂಡಾವ ಮನದಾಗ'** ಇಂತಹ ವಿರಸದ ಮಾತುಗಳು ಬರುತ್ತವೆ. ಹಾಗೆಯೇ ಮುದುಕಿ **'ನನಗೆ ಬಯಕೆ ಹತ್ತಿಲ್ಲ ನಿನಗೆ ಹತ್ತಿವೆ'** ಎಂಬ ಮದುಕಿನ ವಿನೋದದಲ್ಲಿ ಮಕ್ಕಳಿಲ್ಲದ ಅವರ ಬಂಜೆತನದ ವ್ಯಂಗ್ಯವನ್ನು ಭಾಷೆಯ ಬಳಕೆಯಲ್ಲಿ ಗುರುತಿಸಬಹುದು. ಅದು ಧ್ವನಿಪೂರ್ಣವಾಗಿ ಬಳಕೆಯಾಗಿದೆ. ಹಳ್ಳಿಯ ಸಂಸ್ಕೃತಿ ನಾಟಕದಲ್ಲಿ ಜೀವಂತವಾಗಿದೆ. ಮುದುಕಿ, ಮುದುಕನಿಗೆ ಉಪ್ಪಿಟ್ಟು ಮಾಡಿಕೊಡಬೇಕೆಂದಾಗ ಗ್ರಾಮೀಣ ಪ್ರದೇಶದ ಅಡುಗೆ ಮನೆಯ ದೃಶ್ಯ ಕಣ್ಮುಂದೆ ಕಟ್ಟುವಂತೆ ಲೇಖಕರು ಚಿತ್ರಿಸಿದ್ದಾರೆ.

ಮುದುಕಿ : ಏಳ ಏಳ ಮಾವ
ಎಲ್ಲಾ ಸಜ್ಜ ಐತಿ
ನಾಗಂದಗೀ ಮ್ಯಾಲ ಡಬ್ಬಾಗ
ಸಜ್ಜಕ ಐತಿ

ಹಂಡೇದ ಹಿಂದ ತೊಂಗಲ ಬ್ಯಾಗ
ಕೋತಂಬ್ರಿ ಸಿವುಡೈತಿ
ಅಡಕಲ ಗಡಿಗ್ಯಾಗ ಉಪ್ಪೈತಿ, ಕಾರೈತಿ
ಒಲೀ ಸಂದ್ಯಾಗ ಒಡಕಲ ಐತಿ
ಒಲೀ ತೋಳ ಮ್ಯಾಗ ಕಡ್ಡೀಪೆಟಗಿ
ಉದಗೊಳವಿ ಎಲ್ಲಾ ಐತಿ
ಈಳಿಗಿ ಐತಿ..........

ಅಡುಗೆ ಮನೆಯಲ್ಲಿಯಿರುವ ಎಲ್ಲ ಉಪಕರಣಗಳನ್ನು ಚಂಪಾ ಅವರು ಲಯಬದ್ಧ ಭಾಷೆಯಲ್ಲಿ ಹೆಣೆದಿದ್ದಾರೆ. ಮುದುಕ-ಮುದುಕಿಯರ ಹತ್ತಿರ ಉಳ್ಳಾಗಡ್ಡೆಯಿರಲಿಲ್ಲ ಮುದುಕ ಹಿತ್ತಲಿಗೆ ಹೋಗಿ ಉಳ್ಳಾಗಡ್ಡಿ, ಹೊತ್ತುಕೊಂಡು ಬರುವನು. ಅದು 'ದೆವ್ವ ಬೆಳದಂಗ ಬೆಳದsತಿ' ಎಂದು ಮುದುಕಿಗೆ ಹೇಳುತ್ತಾನೆ. ಮುದುಕಿ-ಮುದುಕ ಈಳಿಗೆ ತೆಗೆದುಕೊಂಡು ಹೆಂಚ್ಚತೊಡಗುತ್ತಾರೆ. ಅಂತಹ ಸಂದರ್ಭದಲ್ಲಿ 'ಎಮ್ಮಾ', 'ಎಜ್ಜಾ' ಎಂಬ ಧ್ವನಿ ಕೇಳಿ ಬರುತ್ತದೆ. ಸುತ್ತಲೂ ನೋಡುತ್ತಾರೆ. ಯಾರೂ ಇರುವುದಿಲ್ಲ. ಅಂತಹ ಸಂದರ್ಭದಲ್ಲಿ ನಾಟಕಕಾರರ ಕೆಲವು ಮಾತು ಈ ದಿಸೆಯಲ್ಲಿ ಮನನೀಯ. "ಎಲ್ಲಾ ಕ್ರಿಯೆಗಳೂ ಸಹಜವಾಗಿ, ನಿಸರ್ಗ ನಿಯಮಕ್ಕೆ ಅನುಗುಣವಾಗಿ ನಡೆದರೆ ಎಲ್ಲ ಸುರಳೀತ ಆದರೆ ನೈಸರ್ಗಿಕವಾಗಿ ಉಗಮಗೊಂಡದ್ದು ಹಾಗೆಯೆ ಬೆಳೆದು, ಅದು ಮುಟ್ಟಬೇಕಾದ ತಾರ್ಕಿಕ ಕೊನೆಯೂ ಅಷ್ಟೆ, ಅಸಂಗತವಾಗುತ್ತದೆ". ಬುಡ್ಡಣ್ಣನ ಪಾತ್ರ ಕಲ್ಪನೆಯಲ್ಲಿಯೇ ಅಸಾಂಗತ್ಯವಿದೆ. ಅವನ ಜನ್ಮವಾಗುವುದು ದೆವ್ವದಂತೆ ಬೆಳೆದ ಉಳ್ಳಾಗಡ್ಡಿ ಪದರುಗಳಲ್ಲಿ ಅವನು ತುಂಬ ಕುಬ್ಜನಂತೆ ಕಾಣುತ್ತಾನೆ. 'ಎಮ್ಮಾ', 'ಎಜ್ಜಾ' ಎಂಬ ದನಿ 'ರಮ್ಯತೆ'ಯ ಜೊತೆಗೆ ಕೂಸು ಕಣ್ಣೇದುರೇ ಬಂದು ಬೆಳೆಯುವುದು, ಚಂದವಾಗಿ ಬೆಳೆಯುತ್ತಲೇ ಕುಬ್ಜನಾಗಿ, ಬುಡ್ಡನಾಗಿ ಉಳಿಯುವುದು. ಈ ರಹಸ್ಯದ ಕುತೂಹಲಕಾರಿ ಬೆಳವಣಿಗೆ, ಈ ಬೆಳವಣಿಗೆಯನ್ನು ಕೊಂಡೊಯ್ಯುವ ಹಂತ ಹಂತದ ನಾಟಕ ಕ್ರಿಯೆಗಳು ಕ್ರಿಯೆಯನ್ನು ಅಪ್ಪಟವಾಗಿ ಭಾಷೆಗೆ ಭಾಷಾಂತರಿಸುವ ಲಯಬದ್ಧ ಮಾತುಗಳು, ಆ ಮಾತು ಕೊಡುವ ಗುಂಗು ಹೀಗೆ ಇಡೀ ನಾಟಕ ತನ್ನ ಹೆಜ್ಜೆಗಳಲ್ಲಿ ಕೊಡುವ ದಟ್ಟವಾದ ಪ್ರಭಾವ ಒಂದು ಅನುಭವವಾಗಿ ಆವರಿಸು ತ್ತದೆ. ಮುದುಕ, ಮುದುಕಿಯರು ಆ ಕೂಸಿಗೆ ಮಗಾ, ಕೂಸು, ಮೊಮ್ಮಗಾ, ಎಪ್ಪಾ ಎಂದು ಮುದ್ದಿನಿಂದ ಕರೆಯುತ್ತಾರೆ. 'ಏನ ಮಜಾ ಬೆಳದಾನಂದಿ ನಮ್ಮ ಹುಡುಗಾ' ಎಂದು ಸಂತೋಷ ಪಡುತ್ತಾರೆ. 'ನಮ್ಮ ಹುಡುಗ! ಪೆಪರಮೆಂಟು ಕಡಿ ಅಂದರ ಕರಗಿಸಿ ಕೊಂಡು ನೀರಾಗದನ ಅಂತಾನ' ಎಂಬಲ್ಲಿ ಹಾಸ್ಯ ಮಿಂಚಿದೆ. ಆ ಹುಡುಗ ಎಜ್ಜಾ, ಎಮ್ಮಾ ಎಂದು ಗಟ್ಟಿಯಾಗಿ ಅಳುತ್ತ ಬರುತ್ತಾನೆ. ಆಗ ಕಂಡು ಬರುವ ಶಿಶುಪ್ರಾಸಗಳ ಲಯ ಕಿವಿಗೆ ಅಪ್ಪಳಿಸುತ್ತದೆ.

ಮುದುಕಿ : ಯಾಕ ನಮ್ಮಪ್ಪಾ
ಯಾರ ನನ ಸರದಾರಾ
ಏನಾತ ಹೇಳಽ ನನ ಮಗನಽ
....
....
ಯಾರೇನ ಅಂದ್ರೂ
ಯಾರೇನ ಮಾಡಿದ್ರೂ
ಹೇಳ ನನ ಪುಟ್ಟಾ

ಹುಡುಗ : ಎಮ್ಮಾ ಎಮ್ಮಾ ನಾ ನಾಳಿಂದ
ಸಾಲಿಗೆ ಹೋಗಾಕ ಒಲ್ಯಾ

ಮುದುಕಿ : ಏನಾತ ಹೇಳಽ ಕಟ್ಟಾಣೀ

ಹುಡುಗ : ಸಾಲಿಗೆ ಹೋಗಽ ದಾರ್‍ಯಾಗ
ಬುಡ್ಡಾ ಬುಡ್ಡಾ ಬಂದಾ
ಅಂತಾರ ಬೇ

ಮುದುಕಿ : ....ನಿನಗ ಬುಡ್ಡಾ ಅಂತಾರ
ಅವರ ತಲೀ ತಿರಗಬೇಕು
ಅಂತಾ ಮಂತ್ರಾ ಹೇಳ್ತನಿ
ಹೋಗ ಹೊರಗ

ಹಳ್ಳಿಗಳಲ್ಲಿ ಹಿರಿಯರು ತಮ್ಮ ಮುದ್ದಿನ ಮಕ್ಕಳು, ಮೊಮ್ಮಕ್ಕಳನ್ನು ಪ್ರೀತಿಯಿಂದ ಆಡಿಸುತ್ತಾರೆ. ಅಂತಹ ಸಂದರ್ಭದಲ್ಲಿ ಶಿಶುಪ್ರಾಸಗಳನ್ನು ಹೇಳಿ ರಮಿಸುತ್ತಾರೆ. ಅವರ ವಾತ್ಸಲ್ಯ ಅಪರಿಮಿತ. ಮುದುಕ, ಮುದುಕಿಯರು ಬುಡ್ಡನನ್ನು ಸಮಾಧಾನ ಪಡಿಸುವ ರೀತಿ ಆ ಬಗೆಯದಾಗಿದೆ. ಮುದುಕಿ, ಮೊಮ್ಮಗನನ್ನು ಪ್ರೀತಿಯಿಂದ ಪಲ್ಲಂಗದ ಮೇಲೆ ಕೂಡ್ರಿಸಿಕೊಂಡು **'ಹ್ರಾಂ... ಹ್ರೀಂ... ಹ್ರೂಂ... ಹ್ರೋಂ ಹಿಂಗಽ ಅನಬೇಕು ನಂತರ ಟಿಂಗರ ಬುಡ್ಡೀ'** ಅನಬೇಕೆಂದು ಹೇಳುತ್ತಾಳೆ. ಮುದುಕಿನ ಮಂತ್ರ ಶಕ್ತಿಯ ಸೂಚನೆ ನಾಟಕದ ಭಾಷಿಕ ಚಲನೆಗೆ ಕಾರಣವಾಗುತ್ತದೆ. ಮುದುಕಿಯಿಂದ ಮಂತ್ರ ಕಲಿಯುತ್ತಲೇ ಗುಂಗಾಡಿನ ಮೇಲೆ ಅದರ ಪ್ರಯೋಗ ನಡೆಸುವುದು. ಹುಡುಗ ಮತ್ತೆ ಗಾಳಿಯಲ್ಲಿ ಕುಣಿ ದಾಡುತ್ತ ಹ್ರಾಂ ಹ್ರೀಂ ಅನ್ನುತ್ತ 'ಟಿಂಗರ ಬುಡ್ಡೀ' ಅನ್ನುತ್ತ ಗುಂಗಾಡು ಬೆನ್ನತ್ತಿದವನಂತೆ ಓಡಾಡುವನು. ಇಂತಹ ಸಂದರ್ಭದಲ್ಲಿ ಭಾಷಿಕ ಅಭಿವ್ಯಕ್ತಿ ಸಮರ್ಥವಾಗಿದೆ. ಮುದುಕಿ ಯಿಂದ ಕಲಿತ ಮಂತ್ರಶಕ್ತಿಯನ್ನು ಪಶು ಪಕ್ಷಿಗಳಾದ ಇಣಚಿ, ಪಾತರಗಿತ್ತಿಯ ಮೇಲೆ ಪ್ರಯೋಗಿಸು

ತ್ತಾನೆ. ಹುಡುಗ ಮಂತ್ರ ಹೇಳಿದ ಕೂಡಲೇ ಅವು ಖಲಾಸ್ ಆಗುತ್ತವೆ. ಶಾಲೆಗೆ ಹೋದಾಗ ಅವನ ಸಹಪಾಠಿಗಳಾದ

ಹ್ಯಾಟಗಾಲ ಹನಮ್ಯಾ, ಒಡ್ಡರ ಭರಮ್ಯಾ
ಸುಂಬಳ ಶೀನ್ಯಾ, ಗೌಡರ ಪರಮ್ಯಾ
ಬೆಟರದೆಲಿ ಚೆನ್ನೀ, ಗಾಲಾಗಂಗೀ
ಕುರುಬರ ಕಲ್ಲೀ ಸಂದಿಮನೀ ನಿಂಗಿ
ಮಸೂತಿ ಮುಲ್ಲಾ, ತಳವಾರ ಎಲ್ಲಾ
ಕಳ್ಳೀಮನಿ ಕುಡ್ಡಿ ಜಾಲೀ ಬಡ್ಡಿ

ಹೆಸರುಗಳು ಸಂಸ್ಕೃತಿಯ ಘಟಕಗಳು. ಅವು ಒಂದು ಪ್ರದೇಶದ ಸಮಾಜ, ಸಂಸ್ಕೃತಿಯನ್ನು ತಿಳಿಸುತ್ತವೆ. ಅವು ವ್ಯಕ್ತಿಯ ಕುಲ, ಗೋತ್ರ, ಸ್ವಭಾವ, ಜಾತಿ ಇತ್ಯಾದಿ ಅಂಶವನ್ನೂ ತಿಳಿಸುತ್ತವೆ. ಶಾಲೆಯಲ್ಲಿ ಸಹಪಾಠಿಗಳು ಪರಸ್ಪರ ಸಂಬೋಧನೆಯಲ್ಲಿ ಕಂಡುಬರುವ ಸಲಿಗೆಯೂ ಕಂಡುಬರುತ್ತದೆ. ಬುಡ್ಡನ ಸಹಪಾಠಿಗಳು 'ಬುಡ್ಡಾ', 'ಬುಡ್ಡಾ' ಎನ್ನುತ್ತಾರೆ. ಅವರು ಆ ರೀತಿ ಕರೆದ ಕೂಡಲೆ ಬುಡ್ಡನು ಮುದುಕಿನ ಮಂತ್ರವನ್ನು ಹೇಳುತ್ತಾನೆ. ಆಗ ಅವರೆಲ್ಲರು ಖಲಾಸ ಆಗುತ್ತಾರೆ. ಲಯಬದ್ಧ ನುಡಿಗಟ್ಟಿನಂತೆ ಆ ನಾದ ಕೇಳಿಬರುತ್ತದೆ. ಇಂತಹ ಹಂದರದಲ್ಲಿಯೂ ಒಮ್ಮೊಮ್ಮೆ ಬದುಕಿನ ಅಸಂಬದ್ಧತೆ ಮಾತಿಗೆ ಕಸಿಮಾಡಿಸಿಕೊಂಡು ಪಕ್ಕನೇ ವಿಶೇಷಾರ್ಥದಲ್ಲಿ ಕೋರೈಸಿ ಬಿಡುತ್ತದೆ.

ಸಾಯು ತನಕ ತಿನ್ನವಂತ
ತಿಂದ ತಿಂದ ಸಾಯುವಂತ

ಇಲ್ಲಿ ತಿನ್ನುವ ಕ್ರಿಯೆಯ ಮುಗಿತ ಮೊದಲೋ ಸಾಯುವ ಕ್ರಿಯೆಯು ಮುಗಿತ ಮೊದಲೋ ಇಲ್ಲಿ ಒತ್ತು ಬೀಳುವುದು ಸಾಯುವುದಕ್ಕೋ ತಿನ್ನುವುದಕ್ಕೋ ಇತ್ಯಾದಿ ಎಲ್ಲವೂ ಅಸ್ಪಷ್ಟವಾಗುತ್ತ, ಅಸ್ಪಷ್ಟವಾಗುತ್ತಲೇ ಬದುಕಿನ ಅಸಂಗತತೆಯನ್ನು ಸ್ಪಷ್ಟ ಗೊಳಿಸುತ್ತ ಹೋಗುವ ಧ್ವನಿ ನಾಟಕ ಕ್ರಿಯೆಗೆ ಹೊಸ ಕುಮ್ಮುಕ್ಕು ಕೊಡುತ್ತದೆ. ಒಂದರ್ಥದಲ್ಲಿ ಇಲ್ಲಿ ನಾಟಕ ಕ್ರಿಯೆಯ ಅವಿಭಾಜ್ಯ ಅಂಗವಾಗಿ ಬಿಡುತ್ತದೆ. ಶಕ್ತಿ ಸಂಚಯನದ ಕಾಲದಲ್ಲಿ ಮಾನವನ ಬದುಕು ಎದುರಿಸಲೇಬೇಕಾದ ಭಯಕರ ಸಾಧ್ಯತೆಯನ್ನು ಈ ನಾಟಕ ಸಂಕೇತಿಸುತ್ತದೆ.

ಹುಡುಗ : ಎಮ್ಮಾ ನೋಡು ಅಷ್ಟರಾಗ
ದಾರ್‍ಯಾಗ ಬಾಳೀ ಹಣ್ಣಿಂದೊಂದು
ಅಂಗಡಿ ಹತ್ಯಬೇ
ನಾ ಏನ ಮಾಡಿದೆ
....

ಒಂದು ಗೊನೀ ಬಾಳಿಹಣ್ಣು
ತಿನ್ನಾಕ ಕೊಡು ಅಂದ
ಮುಂದೆ ಹೋಗಲೇ ಬಿಟ್ಟೀ ಬುಡ್ನಾ
ಅಂದs ಬಿಟ್ನಬೇ

ಆಗ ಬುಡ್ನ ಮುದುಕಿನ ಮಂತ್ರಶಕ್ತಿ ಪ್ರಯೋಗಿಸಿದ ಬಾಳಿಹಣ್ಣಿನ ಮಾಲೀಕ ಸತ್ತುಹೋದನು. ಪುರಾಣದಲ್ಲಿ ಬರುವ ಭಸ್ಮಾಸುರದ ಕತೆಯಂತೆ ಈ ನಾಟಕ ಒಂದು ನಾಟಕೀಯ ಪ್ರತಿಮೆಯಾಗಿದೆ. ಶಕ್ತಿಯ ಬಲ ಯಾವಾಗಲೂ ಒಳ್ಳೆಯ ಪರಿಣಾಮವನ್ನು ಉಂಟುಮಾಡುವುದಿಲ್ಲ. ಅದು ತನ್ನ ವಿನಾಶವನ್ನು ತನ್ನಲ್ಲಿಯೇ ಹುದುಗಿಸಿಟ್ಟುಕೊಂಡಿರುತ್ತದೆ. ವರ ಕೊಟ್ಟು ಹರಸಿದ ಶಿವನ ತಲೆಯ ಮೇಲೆ ಕೈಯಾಡ ಬಯಸಿ ನಾಶವಾದ ಭಸ್ಮಾಸುರನಂತೆ ಸಾಕಿ ಸಲುಹಿದ ಅಜ್ಜ ಅಮ್ಮಂದಿರನ್ನೆ ಹುಡುಗ ನಾಶಮಾಡುತ್ತಾನೆ.

ಹುಡುಗ : ಎಮ್ಮಾ ಎಮ್ಮಾ ಹೊಟ್ಯಾಗ ಏನs
ಗುರ್ ಅಂತsತಿ ಬೇ

ಮುದುಕಿ : ತಡೀ ಕೂಸ

ಮುದುಕಿ ಮೈ ಮರೆತು 'ತಡೀಲಾ ಬುಡ್ನಾ' ಎನ್ನುತ್ತಾಳೆ. ಆಗ ಒಮ್ಮೆಲೆ ವಾತಾವರಣ ಬದಲಾವಣೆ ಮುದುಕಿಯ ಮುಖದ ಮೇಲೆ ಸಾವಕಾಶವಾಗಿ ಭಯ ಮೂಡುತ್ತದೆ. ಅಷ್ಟರಲ್ಲಿಯೇ ಹುಡುಗ ಹ್ರಾಂ ಹ್ರೀಂ ಎನ್ನುತ್ತ 'ಟಿಂಗರ ಬುಡ್ಡೀ' ಎನ್ನುವನು. ಮುದುಕಿ ತಲೆ ತಿರುಗಿ ವಿಲಿ ವಿಲಿ ಒದ್ದಾಡಿ ಹೆಣವಾಗಿ ಬೀಳುವಳು. ಮುದುಕ ಬಂದು ಮುದುಕಿಯನ್ನು ಕರೆಯುವನು 'ಲೇ ತಮ್ಮ, ಎಲ್ಲಿ ಹೋಗೇತಿ ಹೇಳಲೇ ನಿಮ್ಮ ಅವ್ವಾ?' 'ಏನ ಮಾಡಿ ಬಿಟ್ಟೇಲೆ ಬುಡ್ನಾ' ಕೂಡಲೇ ಹುಡುಗ ಮುದುಕಿಗೆ ಮಾಡಿದಂತೆಯೇ ಇವನಿಗೂ 'ಹ್ರಾಂ ಹ್ರೀಂ ಟಿಂಗರ ಬುಡ್ನಾ' ಎಂದು ಮಂತ್ರ ಹಾಕುತ್ತಾನೆ. ಅವರ ಹೆಣವು ಪಲ್ಲಂಗದ ಬುಡ ಸೇರುತ್ತದೆ. ಎಲ್ಲರನ್ನು ಖಲಾಸ್ ಮಾಡಿದೆನೆಂದು ಹುಡುಗ ಕುಣೆಯುತ್ತಾನೆ. ಕುಣಿತದ ಭರದಲ್ಲಿ ಬಾಳೆಹಣ್ಣಿನ ಸಿಪ್ಪೆಯ ಮೇಲೆ ಕಾಲಿಟ್ಟು ಜಾರಿ ದೊಪ್ಪನೆ ಬೀಳುವನು. ಮೇಲೆ ಎದ್ದು ಝಾಡಿಸಿಕೊಂಡು ಸಿಪ್ಪೆಯನ್ನು ಕೆಕ್ಕರಗಣ್ಣಿಂದ ನೋಡುವನು.

ಯಾಂವಾ ಒಗದಾನ ಅವನಮ್ಮನ
ಹೀ ಸಿಪ್ಪೀನ?

ಎನ್ನುತ್ತ ಸ್ವಲ್ಪ ವಿಚಾರ ಮಾಡಿ ಕೈಯಲ್ಲಿ ಪೂಟುಪಟ್ಟಿ ಹಿಡಿಯುವನು. ಮಂತ್ರಕ್ಕೆ ಅಣಿಯಾಗುವನು.

ಹ್ರಾಂ ಹ್ರೀಂ ಹ್ರೂಂ ಹ್ರೋಂ
ಯಾಂವಾ ಸಿಪ್ಪೀ ಒಗದಾನಂವ

ಟಂಗರ ಬುಡ್ಡಣ್ಣಾ..........

ಟಂಗರ ಬುಡ್ಡಣ್ಣಾ..........

ಎನ್ನುವನು ಆಗ ಹುಡುಗ ಗಕ್ಕನೆ ನಿಲ್ಲುವನು. ಕೈಯಲ್ಲಿಯ ಪೂಟುಪಟ್ಟಿ ಕೆಳಗೆ ಬೀಳುವುದು. ಮುಖ ಭಯದಿಂದ ತತ್ತರಿಸಿ, ನಿಂತಲ್ಲಿಯೆ ಕುಸಿದು, ಏಲಿಏಲಿ ಒದ್ದಾಡಿ ಅಂಗಾತ ಬಿದ್ದು ಸಾಯುವನು. ಲಯಬದ್ಧವಾದ ಪದ್ಯ, ಗದ್ಯ ಮಿಶ್ರಿತವಾದ ಇಲ್ಲಿಯ ಭಾಷೆ ಕೂಡ ಅಸಂಗತ ಪರಿಣಾಮಗೋಸ್ಕರವಾಗಿಯೇ ದುಡಿಯುತ್ತದೆ. ಹುಡುಗ ಎಲ್ಲರನ್ನು ಕೊಂದು ಕೊನೆಗೆ ತಾನೂ ಖಲಾಸ್ ಆಗುವ ಈ ನಾಟಕದಲ್ಲಿ ಆಧುನಿಕ ವಿಜ್ಞಾನ ಮತ್ತು ರಾಜಕೀಯಶಕ್ತಿಗಳ ವಿಡಂಬನೆಯಿದೆ. ದೇಶ ಕಾಲಾತೀತವಾದ ಭಯಾನಕ ವಾಸ್ತವ ಸಂಗತಿಯನ್ನು ಮುಂದಿಡುತ್ತದೆ. ಜಾನಪದ ಕತೆಯನ್ನು ಆಯ್ಕೆ ಮಾಡಿಕೊಂಡರೂ ಭಾಷೆ, ವಸ್ತು ಮತ್ತು ಪಾತ್ರಗಳಲ್ಲಿ ಆಧುನಿಕ ಸಂವೇದನೆಯಿದೆ. ಹುಡುಗ ಅಪಹಾಸ್ಯಕ್ಕೆ ಪ್ರತಿಯಾಗಿ ತನ್ನಲ್ಲಿ ಸಂಕುಚಿತಗೊಂಡ ಶಕ್ತಿಯನ್ನು ಮಂತ್ರದ ಮೂಲಕ ಪ್ರಯೋಗಿಸುವುದು, ಹೀಗೆ ಒಮ್ಮೆ ಶಕ್ತಿ ಪ್ರಭಾವದ ಅರಿವು ಇಲ್ಲದ ಹುಡುಗ ಕೊನೆಕೊನೆಗೆ ಮಾಂತ್ರಿಕ ಶಕ್ತಿಯನ್ನು ತನಗೆ ಧಾರೆಯೆರೆದವರ ಮೇಲೆ, ಮತ್ತೆ ತನ್ನ ಮೇಲೆಯೇ ಪ್ರಯೋಗಿಸಿ ಆತ್ಮನಾಶ ಹೊಂದುವುದು, ತನಗೆ ದೊರೆತ ಶಕ್ತಿಯ ಪ್ರಜ್ಞೆ ಇಲ್ಲದೆ ವ್ಯಕ್ತಿ, ಬದುಕಿನ ಹಂತದಿಂದ ಹಂತಕ್ಕೆ ಅಶಕ್ತಿಯ ಕೈವಶವಾಗುತ್ತಾನೆ. ನಾಟಕದ ಮಾತುಗಳಲ್ಲಿ ಹುದುಗಿದ "ವ್ಯಂಗ್ಯ" ಮತ್ತು "ಲಕ್ಷ್ಯಗಳನ್ನು ಧ್ವನಿ ಮತ್ತು ಸಂವೇದನೆಗಳನ್ನು ಒಡನೊಡನೆ ಗ್ರಹಿಸುವಾಗ ನಾಟಕ ಕ್ರಿಯೆ ವಿಭಿನ್ನ ಹಂತಗಳಲ್ಲಿ ಪ್ರವಹಿಸುತ್ತದೆ. ಮೇಲುನೋಟಕ್ಕೆ ಅತಾರ್ಕಿಕವಾಗಿ ಕಾಣುವ ಸಂಗತಿಗಳು ಒಳಪದರುಗಳಲ್ಲಿ ಹುದುಗಿರುವ ಇನ್ನೊಂದು ಬದುಕಿನ ವಾಸ್ತವದ ಆಳಕ್ಕೆ ನಮ್ಮನ್ನು ಒಯುತ್ತದೆ. ಈ ನಾಟಕದ ಭಾಷೆ ಕನ್ನಡ ನಾಟ್ಯ ಭಾಷೆಗೆ ಒಂದು ಹೊಸ ಆಯಾಮ ಕಲ್ಪಿಸಿದೆ. ಅದು ಚಂಪಾ ಅವರ ಸಾಧನೆಯಾಗಿದೆ.

ಆಕರಗ್ರಂಥ

೧. ಚಂಪಾ ನಾಟಕಗಳು, ೨೦೦೬, ಚಂದ್ರಶೇಖರ ಪಾಟೀಲ. ಸಪ್ನ ಬುಕ್‌ಹೌಸ್, ಬೆಂಗಳೂರು.

೪೦

ಕತ್ತಲರಾತ್ರಿ : ಆಶಯ ವಿನ್ಯಾಸ

ಚಂಪಾ ಅವರು ಸಾಮಾಜಿಕ ವಸ್ತುವನ್ನೊಳಗೊಂಡ ದುರಂತ ಮಾದರಿಯಲ್ಲಿ ಈ ನಾಟಕವನ್ನು ರಚಿಸಿದ್ದಾರೆ. ಸಾಮಾಜಿಕ ಪರಿಸರದಲ್ಲಿ ಜರಗುವ ಪ್ರೀತಿ, ಅನೈತಿಕತೆ, ಅಸಹಾಯಕತೆ ಇತ್ಯಾದಿ ಭಾವನೆಗಳು ಈ ನಾಟಕದಲ್ಲಿ ಅನಾವರಣಗೊಂಡಿವೆ. ಅದಕ್ಕೆ ಹೊಂದಿಕೊಂಡ ಕಥಾವಸ್ತುವಿರುವುದರಿಂದ ಪ್ರಾದೇಶಿಕ ಆಡುಭಾಷೆಯನ್ನು ತೀಕ್ಷ್ಣವಾಗಿ ಬಳಸಲಾಗಿದೆ. ಈ ನಾಟಕದಲ್ಲಿ ಚಂಪಾ ಅವರು ಗಂಡು-ಹೆಣ್ಣಿನ ಅಕ್ರಮ ಸಂಬಂಧದ ಸಮಸ್ಯೆಯನ್ನು ಎತ್ತಿಕೊಳ್ಳುತ್ತಾರೆ. ಅಲ್ಲಿಯ 'ಅವನು' ಮತ್ತು 'ಅವಳು' ಇಬ್ಬರು ಪ್ರೇಮಿಗಳು ಆಶ್ಚರ್ಯವೆಂದರೆ ಇಬ್ಬರೂ ಮದುವೆಯಾದವರೇ ಪ್ರಥಮ ನೋಟದಲ್ಲಿಯೇ ಪರಸ್ಪರರು ಪ್ರೀತಿಸತೊಡಗುತ್ತಾರೆ.

ಅವನು : ನನ್ನ ಪತ್ರ ಮುಟ್ಟಿತೇನು? ನಾ ನಿನ್ನೆ ಮುಂಜಾನೆ ಪೋಸ್ಟ್ ಮಾಡಿದ್ದೆ. ಅದೂ ಒಂದು ದೊಡ್ಡ ಕತೀನs ಪೋಸ್ಟಾಫೀಸಿನಾಗ ಎಲ್ಲಾ ಗೊತ್ತಿನ ಮಂದಿ. ಅವರ ಕಣ್ಣ ತಪ್ಪಿಸಿ ಕಳ್ಳರಂಗ ಪತ್ರಾ ಡಬ್ಯಾಗ ಹಾಕsದರಾಗ ಬೆವರು ಬಂತು.

ಅವರ ಪ್ರೀತಿ ಇತರರಿಗೆ ಗೊತ್ತಾದರೆ ಮಾನ ಹೋಗುತ್ತದೆಂಬ ಭಯ, ಆತಂಕ ಇಬ್ಬರಿಗೂ ಇದೆ. 'ಅವನು' ಎಂಬುವನ ಮಾತಿನ ಧಾಟಿಯಲ್ಲಿಯೇ ಆ ಸೂಚನೆಯಿದೆ. ಪತ್ರ ಓದಿಕೆಂತ ಓದಿಕೆಂತ ಮೈಯಾಗ ಬೆಂಕಿ ಹೊಳಿ ಹರದಂಗಾತು. ಆ ಹೊಳ್ಯಾಗ ಸೆಳವಿನಗುಂಟ ದೋಣಿ ಮ್ಯಾಲ ತೇಲಿಕೆಂತ ಹೋದಂಗಾತು. ನೀ ದಂಡಿ ಮ್ಯಾಲ ನಿಂತು ಬಾಬಾ ಅಂತ ಕರದಂಗಾತು.... ನನಗೆ ಸ್ಫೂರ್ತಿ ತುಂಬಿ ಬಂದು' ಇಲ್ಲಿ ಬಳಕೆಯಾದ ಉಪಮೆಗಳು, ಅರ್ಥಪೂರ್ಣವಾದ ಪದಪುಂಜಗಳು 'ಅವನು', 'ಅವಳ' ಇವರ ಪ್ರೀತಿಯನ್ನು ಸ್ಪಷ್ಟಪಡಿಸುತ್ತದೆ. ಅದು ಜನರಿಗೆ ಗೊತ್ತಾದರೆ ಆಗುವ ಅನಾಹುತವನ್ನು ಆ ಪದಪುಂಜಗಳು ತಿಳಿಸುತ್ತವೆ. ಈ ಘಟನೆಯನ್ನು

ಲೇಖಕರು ನಾಟಕದ ಮೂಲಕ ತರಲು ಯತ್ನಿಸಿದ್ದಾರೆ. ನಿತ್ಯಜೀವನದ ಕಥಾವಸ್ತುವಿನಿಂದ ಕೂಡಿದ ಆಡುಮಾತಿಗೆ ಹತ್ತಿರವಾದ ಸುಲಭ ಭಾಷೆಯಲ್ಲಿ ಅದು ರಚಿತವಾಗಿದೆ. ಇದರಿಂದ ಆ ನಾಟಕ ಜನತೆಗೆ ತುಂಬ ಹತ್ತಿರವಾಗಿದೆ. ಆ ಇಬ್ಬರೂ ವ್ಯಕ್ತಿಗಳು ತಿರಸ್ಕರಿಸುತ್ತಲೆ ಸಂಬಂಧವನ್ನು ಬಳೆಸಿಕೊಳ್ಳುತ್ತಾರೆ.

ಅವನು : ನಾ ನೋಡಿದಾಗೊವ ನೀ ನನ್ನ ಕಡಿಗೇ ನೋಡತಿದ್ದಿ. ನನಗ ಒಂದು ಸಮೂನಿ ಆಗುತಿತ್ತು ಮತ್ತ ಅತ್ತಾಗಿತ್ತಾಗ ನೋಡಿ...... ಗಿಡಾ ನೋಡಿ ಎಲಿ ನೋಡಿ ರೋಡು ನೋಡಿ ನಿನ್ನ ನೋಡುತ್ತಿದ್ದೆ. ನೀನೂ ನನ್ನs ನೋಡತಿದ್ದಿ. ನೋಡ ನೋಡ್ತ ನೋಡ ನೋಡ್ತ ನಾ ನಿನ್ನ 'ಕಣ್ಣಿನ ಕಳ್ಳ ಹುದಲಾಗ ಸಿಕ್ಕೊಂಡಂಗ ಅನಸ್ತಿತ್ತು.... ನಿನ್ನಿಂದ ನನ್ನ ಜೇವನಕ್ಕೆ ಒಂದು ಅರ್ಥ ಬಂದsತಿ.

ಎಂದು 'ಅವನು' ಹೇಳಿಕೊಳ್ಳುತ್ತಾನೆ. ಅವನು, ಅವಳನ್ನು ಬಹಳ ಹಚ್ಚಿಕೊಂಡಿದ್ದಾನೆ. ಅವಳೇ ಇವನಿಗೆ ಸ್ಫೂರ್ತಿಯಾಗಿದ್ದಾಳೆ. ಕಳ್ಳ ಹುದಲಾಗ ಸಿಕ್ಕಿಕೊಂಡಂತೆ ಎಂಬ ಉಪಮೆ ತುಂಬ ಅರ್ಥಪೂರ್ಣವಾಗಿದೆ. ಅವಳ ಮೂಲಕ ದೊರಕಿದ ಸೃಜನಶೀಲತೆಯ ಬಗ್ಗೆ ಅಭಿಮಾನ ಪಡುತ್ತಾನೆ. ಅವನಿಗೆ ಎತ್ತಾಗ ಹೊಳ್ಳದರೂ ಅವಳದೇ ಭ್ರಮೆ, ಇವಳಿಗೂ ಅಷ್ಟೇ ಅವನದೇ ಧ್ಯಾನ.

ಅವನು : ..... ಬಸ್ ಸ್ಟಾಪಿನಾಗ ನಾ ನಿನ್ನ ನೋಡೇ ನೋಡಿದೆ.

ಅವಳು : ನಾನೂ ನಿನ್ನs ನೋಡುತಿದ್ದೆ.

ಅವರಿಬ್ಬರೂ ಪರಸ್ಪರ ಕನಸು ಕಾಣುತ್ತಾರೆ. ಏನೇನೂ ಭ್ರಮಿಸುತ್ತಾರೆ. ಜೇಲು, ಬಾಗಿಲು, ಕಿಡಕಿ, ಮುಗಲು, ಸೂರ್ಯ, ಕಾಮನ ಬಿಲ್ಲು, ಇತ್ಯಾದಿ ನಿಸರ್ಗದ ವಸ್ತುಗಳು ಇಲ್ಲಿ ಸಂಕೇತಗಳಾಗಿ ಬರುತ್ತವೆ. ಕನಸಿನಲ್ಲಿಯೇ ಮಾತಾಡುತ್ತಾರೆ. ಕತ್ತಲೆಯ ಅನುಭವದಿಂದ ಭೂತವನ್ನು ನೆನೆಪಿಸಿಕೊಳ್ಳುತ್ತಾರೆ. ಹಾಗೆಯೇ ಅವರಿಬ್ಬರೂ ಭೂತಕಾಲದ ವಾಸ್ತವದಿಂದ ಬಿಡಿಸಿಕೊಳ್ಳಲಾರರು.

ಅವಳು : ಆಮ್ಯಾಲೆ ನೀ ಚೀಟಿ ಬರಿದಿ. ನಾನು ಬರಿದಿ.

ಅವನು : ಜೇಲರ ಹೋಗಿ ಮಾಸ್ತರ ಆದ.... ಮಾಸ್ತರ ಹೋಗಿ ನಮ್ಮವ್ವ. ನಿನ್ನ ಕಣ್ಣಾಗ ನಮ್ಮ ಅವ್ವ ಕಂಡಳು.

ಅವಳು ತನ್ನ ಗಂಡ, ಮಕ್ಕಳನ್ನು ಸಂಪೂರ್ಣ ಮರೆತು ಅವನ ಭ್ರಮೆ. ಅವನನ್ನು ಜ್ಞಾಪಿಸಿಕೊಂಡು ಮಾತು ಮುಂದುವರಿಸುತ್ತಾಳೆ.

ಅವಳು : ಹ್ಞೂ, ಬಸ್ ಸ್ಟಾಪಿನಾಗ ನೋಡಿದಂಗ.... ಅಮ್ಯಾಗ ಚೆಂದಾಗಿ ಮೆಲ್ಲಗ ನಗತಿದ್ದಿ.

ಎನ್ನುತ್ತಾಳೆ. ಇಲ್ಲಿ ಬಳಕೆಯಾಗುವ ಕಣ್ಣಾಗ ನಗತಿದ್ವಿ. ತುಟ್ಯಾಗ ನಗತಿದ್ವಿ, ಬೇಲಿ ಮ್ಯಾಗ ಹೂ ಅರಳಿದಂಗ ಆಗತಿತ್ತು, ಮುಗಲಾಗ ಮೋಡ ಮೂಡಿದಂಗ ಆಗುತ್ತಿತ್ತು. ಇತ್ಯಾದಿ ರೂಪಕಗಳು, ಪ್ರೇಮದ ಘಟನೆಯನ್ನು ಅವನು ಮನೋಭಾವನೆಯನ್ನು ಸೊಗಸಾಗಿ ಚಿತ್ರಿಸುತ್ತವೆ. ಈಗಲಾರದೂ ಗ್ರಾಮೀಣ ಪ್ರದೇಶದಲ್ಲಿ ಅಂತಹ ಪದಪುಂಜಗಳು ಬಳಕೆ ಯಾಗುತ್ತವೆ.

ಅವಳು : ......ನಿನ್ನ ಮೈ ನಡಗತಿತ್ತ......ದನಿ ನಡಗತಿತ್ತು ......ಜೇಲಿನಾಗಿ ನಿಂದ ತಪ್ಪಿಸಿಕೊಂಡು ಬಂದsರಂಗ ಮಾಡತಿದ್ದಿ.

ಅವನು : ಹೌದು..... ಮೈತುಂಬ ನಡುಗು.... ಮತ್ತ ಹಿಡಕೊಂಡು ಹೊಕ್ಕಾರ ಅಂತ ಹೆದರಿಕಿ..... ನಿನ್ನ ಗಟ್ಟಿಯಾಗಿ ಹಿಡಕಂತಿದ್ದೆ.

ಪರಸ್ಪರ ಇಬ್ಬರೂ ಮಾನಸಿಕವಾಗಿ ಒಂದಾಗಿದ್ದಾರೆ. ಅವಳ ನಿರ್ಜೀವ ಗಂಡ ಹಾಗೂ ಸತ್ತು ಹೋದ ಮಗುವಿನ ನೆನೆಪು ಅವಳು ತರುಣನೊಡನೆ ಬೆಳೆಸಿಕೊಳ್ಳುವ ಹೊಸ ಸಂಬಂಧ ದಲ್ಲಿ ಲಕ್ಷ್ಮಣರೇಖೆಯನ್ನು ನಿರ್ಮಿಸುತ್ತವೆ. ಅದನ್ನು ದಾಟುವ ಅವರ ಪ್ರಯತ್ನಗಳು ವಿಫಲವಾಗುತ್ತವೆ.

ಅವನು : ನಾ ಗಂಡು ನೀ ಹೆಣ್ಣು. ಕಟ್ಟಿ ಕಡಿಗೆ ಅದs ಖರೇ ಅಲ್ಲ?

ಅವಳು : ಹ್ಞೂ ಇಬ್ಬರೂ ಸಾಯತೀವಿ. ಕತ್ತಲದಾಗ ಮಣ್ಣಾಗತೇವಿ ..... ಮತ್ತ ದೆವ್ವಾಗಿ ಏಳತವಿ ಒಬ್ಬರ ಗವ್ಯಾಗ ಇನ್ನೊಬ್ಬರು ಹೊಕ್ಕು ಬೆಳಕಿನ ಬಾಗಲಾ ತಗೀತೇವಿ.... ಮೈತುಂಬ ಹೂವಿನ ಕೊಳ್ಳೀ ಆಡಿಸಿ ಬೆಂಕೀ ತಾಟ ಬೆಳಸ್ತsವಿ.... ನಾ ಡೋಣ್ಯಾಗಿಂದ ಹೊಳ್ಯಾಗ ಜಿಗೀತೇನಿ.

ಅವನು : ಹೌದು. Let us force the moment.

ಎಂಬ ಅವರ ಹುಮ್ಮಸ್ಸು ಕಾರ್ಯಾಚರಣೆಗೆ ಬರುವುದಿಲ್ಲ ಆ ಅಂತಕ ಆ ಪ್ರೇಮಿಗಳಿಗಿದೆ. ತರುಣ ಯುವತಿಯಲ್ಲಿ ತನ್ನ ಅವ್ವನ ಪ್ರತಿಬಿಂಬವನ್ನು ಕಂಡರೆ ಯುವತಿ ಅವನ ದನಿಯಲ್ಲಿ ತನ್ನ ಗಂಡನ ನರಳುವಿಕೆಯನ್ನು ಗುರುತಿಸುತ್ತಾನೆ.

ಅವಳು : ನಿನ್ನ ಕಣ್ಣಾಗ ನನ್ನ ಕಣ್ಣು, ನನ್ನ ಕಣ್ಣಾಗ ನಿನ್ನ ಕಣ್ಣು ನಮ್ಮಿಬ್ಬರ ಕಣ್ಣೂ ಒಂದs ಅಂದೆ.

ಪರಸ್ಪರರು ನಾ ಹೆಂಗ ಕಾಣಸ್ತsನಿ ಎನ್ನುತ್ತಾರೆ. ಉತ್ತರ ಅಷ್ಟೇ ಸ್ಪಷ್ಟ ಭಾಳ Smart ಕಾಣಸ್ತೀರಿ. ಪಾಪದ ಛಾಯೆಯಿಂದ ಇಬ್ಬರೂ ಮುಕ್ತರಾಗಿದ್ದಾರೆ. ಸ್ವೇಚ್ಛೆಯಾಗಿ ಮಾತನಾಡು ತ್ತಾರೆ.

ಅವಳು : ನಿನ್ನ ಹೆಸರು ಬಡಬಡಿಸಿ ಕೆಂತ ಮಲಕಂತsನಿ.... ಕತ್ತಲ......ಕತ್ತಲ..... ಕತ್ತಲದಾಗ ಯಾರು ಮೈಮಾಲ ಬಿದ್ದರೂ ಅಷ್ಟು. ಯಾರ ಮೈ ಬಿದ್ದರೂ

ನಿಂದs ಅಂತ ತಿಳಕಂತsನಿ...... ನಿನ್ನ ಹೆಸರು...... ನಿನ್ನ ಕವಿತಾ ನಿನಗ ಮಗಳು ಹುಟ್ಟಿದಕ ಆಕಿನ ನನ್ನ ಹೆಸರು ಇಡು...... ಆ ಹೆಸರು ಕರದಾಗ ನನ್ನ ಕರದಿ ಅಂತ ತಿಳಕಂತೀ.

ಮನಿಗೆ ಹಗಲೆಲ್ಲಾ ಬರಕಂತ ಇರು.

ಅವನು : ಇರತsನಿ.....ಇರಬೇಕಲ್ಲ.

ಅವರ ಯಾತನೆಗೆ ಕಾರಣಗಶು ಮಾನಸಿಕ ವಾದವುಗಳು. ನೈತಿಕ ವಾದವುಗಳಲ್ಲ. ಪ್ರೀತಿ ತನ್ನ ಅರ್ಥವನ್ನು ಕಳೆದುಕೊಂಡು ದುರಂತದಲ್ಲಿ ಮುಕ್ತವಾಗುತ್ತದೆ. ಭಯ, ಸಂದಿಗ್ಧತೆ ಅವರನ್ನು ಬಂಧಿಸುತ್ತದೆ. ನಾಟಕದ ಭಾಷೆಯ ಬಗ್ಗೆ ಹೇಳುವುದಾದರೆ ನಾಟಕಕಾರರು ತೀರ Releveant ಆದ ಸಮಸ್ಯೆಯೊಂದನ್ನು ಅಷ್ಟೇ Releveant ಆದ ಭಾಷೆಯ ಮೂಲಕ ಸಮರ್ಥವಾಗಿ ಅಭಿವ್ಯಕ್ತಿಸಿದ್ದಾರೆ. ನಾಟಕ ಕುತೂಹಲದಿಂದ ಮುನ್ನಡೆಯುತ್ತದೆ. ನಾಟಕ ದಲ್ಲಿಯ ಪಾತ್ರಗಳಾದ 'ಅವನು', 'ಅವಳು' ಇವರು ತಿರಸ್ಕರಿಸ್ಪಟ್ಟಿರುವ ಪ್ರೇಮಿಗಳ ಪ್ರತಿನಿಧಿ ಗಳಾಗಿ ತಮ್ಮವರ ಬದುಕಿನ ದುಸ್ಥಿತಿಯ ಮೇಲೆ ಬೆಳಕು ಚೆಲ್ಲಲು ಯತ್ನಿಸಿದ್ದಾರೆ. ಈ ನಾಟಕದ ಮೂಲಕ ನಾಟಕಕಾರರು ಸಾಮಾಜಿಕ ಬದುಕಿನ ವಾಸ್ತವದ ಆಯಾಮವನ್ನು ಅನಾವರಣಗೊಳಿಸಿದ್ದಾರೆ.

ಆಕರಗ್ರಂಥ

೧. ಚಂಪಾ ನಾಟಕಗಳು, ೨೦೦೬, ಚಂದ್ರಶೇಖರ ಪಾಟೀಲ, ಸಪ್ನ ಬುಕ್‌ಹೌಸ್, ಬೆಂಗಳೂರು.

೪೧

ಗೋಕರ್ಣದ ಗೌಡಶಾನಿ : ಭಾಷಿಕ ಅವಲೋಕನ

ಚಂಪಾ ಅವರ ನಾಟಕಗಳಲ್ಲಿಯೇ ಅತ್ಯುತ್ತಮವಾದುದು ರಂಗಭೂಮಿಯಲ್ಲಿ ಸಾಕಷ್ಟು ಯಶಸ್ಸುಗಳಿಸಿದ ನಾಟಕವೆಂದರೆ ಗೋಕರ್ಣದ ಗೌಡಶಾನಿ. ರಂಗಭೂಮಿಯೇ ಈ ನಾಟಕದ ವಸ್ತುವಾಗಿರುವುದು ಅದರ ವೈಶಿಷ್ಟ್ಯವಾಗಿದೆ. ಬಯಲಾಟಗಳಿಂದ ಹಿಡಿದು ಹೊಸ ಅಲೆಯ ನಾಟಕಗಳವರೆಗಿನ ಅನೇಕ ಪ್ರಯೋಗಗಳು ಅದರ ಒಳಗೆ ಪ್ರಸ್ತಾಪಿಸಲ್ಪಟ್ಟಿವೆ. ಚಂಪಾ ಅವರು ತುಂಬ ವ್ಯವಸ್ಥೆಯಿಂದ, ನಾಟಕೀಯ ಅಚ್ಚುಕಟ್ಟುತನದಿಂದ ಹಾಗೂ ಶಿಸ್ತಿನ ಮಂಡನೆಯಿಂದ ರಚಿಸಿದ ಈ ನಾಟಕ ತುಂಬ ಗಮನ ಸೆಳೆಯುತ್ತದೆ. ತನ್ನ ಆಶಯ ಮಂಡನೆಗೆ ಒಂದು ಪೌರಾಣಿಕ ಕಥೆಯನ್ನಾಧರಿಸಿದ ಚಂಪಾ ಅವರು ಚುರುಕಾದ ಭಾಷಿಕ ಕ್ರಿಯೆಗಳಿಂದ ಎಷ್ಟೋ ಸಲ ಕ್ರಿಯೆ ಮಿಕ್ಕುವ ಆಡು ಮಾತುಗಳಿಂದ ರಂಜನೀಯವಾಗಿ ಅನೇಕ ಸಂಗತಿಗಳನ್ನು ಹೇಳಿದ್ದಾರೆ. ಭಾಗವತ ಈ ನಾಟಕದ ಮುಖ್ಯ ಆಕರ್ಷಣೆಯಾಗಿದ್ದಾನೆ. ಇವನ್ನೊಂದು ಸಂಕೀರ್ಣ ಸೃಷ್ಟಿ. ಪರಂಪರಾಗತ ಬಯಲಾಟದ ಸೂತ್ರದಾರನ ಪಾತ್ರದೊಡನೆ ಆಧುನಿಕ ನಿರ್ದೇಶಕನ ಪಾತ್ರವನ್ನೂ ವಹಿಸುತ್ತಾನೆ. ನಾಟಕ ಪ್ರಾರಂಭವಾಗುವುದಕ್ಕಿಂತಲೂ ಮುಂಚೆಯೇ ಗಣಪತಿಯ ಸ್ತೋತ್ರ ನಡೆಯುತ್ತದೆ. ಆಗ ಬಳಕೆಯಾದ ಶಿಶುಪ್ರಾಸದ ಲಯ ಕಿವಿಗೆ ಅಪ್ಪಳಿಸುತ್ತದೆ.

ಬಾರೋ ಬಾರೋ ಗಣಪ್ಪ
ಬಾಳ ಚಂದ ನೀನಪ್ಪ |
ಈಟ ಕಣ್ಣು ನಿನಗಪ್ಪ
ಆನಿಸೊಂಡಿ ಯಾಕಪ್ಪ
ದೊಡ್ಡ ಹೊಟ್ಟೆ ಹೊಟ್ಟೆಪ್ಪ
ಇಲಿಯ ಮೇಲೆ ಕುಂತೆಪ್ಪ

ಜೋಲಿ ಹೋಗಿ ಬಿದ್ದಪ್ಪ
ನಿನ್ನ ಹೊಟ್ಟೆ ಒಡಿತಪ್ಪ
ಕಡಬು ಹೊರಗ ಬಂತಪ್ಪ
ನೋಡಿ ನಕ್ಕ ಚಂದಪ್ಪ
ಬಾರೋ ಬಾರೋ ಗಣಪ್ಪ

ಇದರಂತೆ ಬಯಲಾಟದ ಲಯದಲ್ಲಿಯೂ ಪ್ರಾರ್ಥನೆ ನಡೆಯುತ್ತದೆ. ಒಂದೆಡೆ ಶಿಶುಪ್ರಾಸ, ಇನ್ನೊಂದೆಡೆ ಬಯಲಾಟದ ಹಾಡು ಹೀಗೆ ಮಿಳಭಾಜೀ ಕ್ರಿಯೆ ನಾಟಕದ ಉದ್ದಕ್ಕೂ ನಡೆಯುತ್ತದೆ. ಪೌರಾಣಿಕ ಹಾಗೂ ಜಾನಪದ ತಂತ್ರಗಳ ಬೆಸುಗೆಯಲ್ಲಿ ಹೊಸ ನಾಟ್ಯ ಪ್ರಕಾರವನ್ನು ಸೃಷ್ಟಿಸಿ ಹೊರಡುವ ಆಧುನಿಕ ನಾಟಕಕಾರರ ಪ್ರಯೋಗ ಈ ನಾಟಕದ ಪ್ರಮುಖ ಲಕ್ಷ್ಯ. ಇಲ್ಲಿ ಎರಡು ಕತೆಗಳಿವೆ. ದೈವೀ ಶಕ್ತಿಗಳ ಒಳ ಸಂಚಿನಿಂದ ರಾವಣನ ಅಧಿಕಾರ ಮದ ವಿಫಲಗೊಂಡು ಗಣಪತಿಯಿಂದ ಜ್ಯೋತಿರ್ಲಿಂಗ ಪ್ರತಿಷ್ಠಾಪನೆಯಾಯಿತು. ಇನ್ನೊಂದು ಕತೆಯಲ್ಲಿ ಷಂಡ ಗೌಡನ ವಿಕೃತ ದಾಹ ವಿಫಲಗೊಂಡು ನೈಸರ್ಗಿಕ ಶಕ್ತಿಯಾದ ಕಾಮದ ವಿಜಯವಾಯಿತು. ರಂಗಭೂಮಿಯಲ್ಲಿ ಎರಡೂ ಕಡೆಗೂ ಲಿಂಗ ಪ್ರತಿಷ್ಠಾಪನೆಯಾಗುವುದೇ ಸಮಾನಾಂಶ. ನಗೆಚೇಷ್ಟೆಯ ಮಾತುಗಳಲ್ಲಿ ಆಳವಾದ ಪ್ರಯತ್ನಗಳನ್ನೂ ಬೆರಕೆ ಮಾಡುತ್ತ ಲೇಖಕರು ನಾಟಕತ್ವದ ಅನ್ವೇಷಣೆ ಮಾಡುತ್ತಾರೆ. ಈ ನೆಲೆಯಲ್ಲಿ ಗೌಡಶಾನಿ ಅನೇಕ ಅರ್ಥಗಳನ್ನು ಹೊರಡಿಸುತ್ತಿದೆ. ಚಂಪಾ ಅವರು ಪೌರಾಣಿಕ ಮತ್ತು ಜಾನಪದ ಕತೆಯನ್ನು ಸಮಕಾಲೀನ ಸಂದರ್ಭದ ಸಾಮಾಜಿಕ ಬಿಕ್ಕಟ್ಟುಗಳ ಶೋಧಕ್ಕೆ ಅರ್ಥಪೂರ್ಣವಾಗಿ ಅನ್ವಯಿಸಿದ್ದಾರೆ.

ರಾವಣ : ನಾನೀಗ ಕೈಲಾಸಕ್ಕೆ ಹೋಗಿ ಪರಮೇಶ್ವರನಿಂದ ಶಿವಲಿಂಗವನ್ನು ಪಡೆಯಬೇಕು. ಅದನ್ನು ನನ್ನ ಸಾಮ್ರಾಜ್ಯದಲ್ಲಿ ಪ್ರತಿಷ್ಠಾಪಿಸಬೇಕು.....

ಭಾಗವತ : ಅಲ್ಲಪಾ, ಕೈಲಾಸ ಅಂದರೇನು? ಮುಂದಿನ ಬಸ್‌ಸ್ಟಾಪ್ ಮಾಡೀಯೇನು... ಹುಚ್ಚಪ್ಪ ಕೈಲಾಸಕ್ಕೆ ಹೋಗು ಹುಚ್ಚಬಿಡು, ನೀ ಹೋದರ ನಿನ್ನ ಹೇಣ್ತಿ ರಂಡಿ ಮುಂಡಿ ಆಗsದಿಲ್ಲೇನು?

ರಾವಣ : ನಾನೇನು ಮಾಡಲಿ ಭಾಗವತಾ? ನನ್ನ ಬುದ್ಧಿಯೆಲ್ಲಾ ಹತ್ತೂ ತಲೆಗಳಲ್ಲಿ ಹಂಚಿ ಹೋಗಿ ನಾನು ಬಹಳ ಡಲ್ಲಾಗಿದ್ದೇನೆ. ಅಲ್ಲದೆ ಉಳಿದ ಒಂಬತ್ತು ತಲೆಗಳನ್ನು ಮಂಡೋದರಿ ತನ್ನ ಹತ್ತಿರವೇ ಇಟ್ಟುಕೊಂಡಿದ್ದಾಳೆ.

ಎನ್ನುವಲ್ಲಿ ಹಾಸ್ಯ ಮಿಂಚಿದೆ. ರಾವಣನು ತಪಸ್ಸು ಮಾಡಿ ಪರಮೇಶ್ವರನನ್ನು ಭೇಟಿಯಾಗಿ ತನ್ನ ಮನೋಅಭಿಲಾಷೆಯನ್ನು ವ್ಯಕ್ತಪಡಿಸುತ್ತಾನೆ. ಪರಮೇಶ್ವರ ಅವನಿಗೆ ಯಾವ ವರ ಬೇಕು ಹೇಳು ಕೊಡುತ್ತೇನೆ ಎನ್ನುತ್ತಾನೆ. ರಾವಣ 'ನನಗೆ ಬೇಕಾದ ವರ ಇದು - ನಿನ್ನ ಶಿವಲಿಂಗಾ..... ಆಗ ಪರಮೇಶ್ವರ ತನ್ನ ಶಿವಲಿಂಗವನ್ನು ರಾವಣನಿಗೆ ಕೊಡುತ್ತಾನೆ. ರಾವಣನು,

ಪರಮೇಶ್ವರನ ಶಿವಲಿಂಗವನ್ನು ತೆಗೆದುಕೊಂಡು ಬರುತ್ತಿರುವಾಗ ದಾರಿಯಲ್ಲಿ ಅವನಿಗೆ ಮೂತ್ರ ಬರುತ್ತವೆ. ಅದೇ ವೇಳೆಯಲ್ಲಿ ಗಣಪತಿ ದನಕರುಗಳನ್ನು ಮೇಯಿಸುತಿರುತ್ತಾನೆ. ರಾವಣ ಅವನನ್ನು ನೋಡಿ ತನ್ನ ಹತ್ತಿರ ಬರಬೇಕೆಂದು ಕೂಗುತ್ತಾನೆ.

ರಾವಣ : ಲೇ ಹುಡುಗಾ, ಲೆ ಸೊಂಡೀ ಹುಡುಗಾ, ಬಾ ಇಲ್ಲೆ, ಇದನ್ನು ಸ್ವಲ್ಪ ಹೊತಗಂಡು ನಿಲ್ತೀಯೇನು?

ಗಣಪತಿ : ಏನದು ಮತ್ತ?

ರಾವಣ : ಅದೂ ಅದೂ...... ಶಿವಲಿಂಗಪ್ಪ, ಪರಮೇಶ್ವರ ಕೊಟ್ಟಿದ್ದೂ

ಗಣಪತಿ : ಅಬಾಬಾಬಾ ಪರಮೇಶ್ವರ ನಿನಗ ಶಿವಲಿಂಗಾ ಕೊಟ್ಯಾನಾ? ತೋರಿಸಿಲ್ಲೆ ನೋಡನು.... ತಾತಾ ಶಿವಲಿಂಗಾ

ರಾವಣನು ಗಣಪತಿಗೆ ಶಿವಲಿಂಗ ಕೊಡುತ್ತಾನೆ. ಅವರಿಬ್ಬರಲ್ಲಿ ನಡೆಯುವ ಮಾತುಕತೆ ಹಾಸ್ಯರಸವನ್ನು ಉಕ್ಕಿಸುತ್ತದೆ. ಅದರ ಆಳದಲ್ಲಿ ಅಹಂಕಾರವನ್ನು ಅಡಗಿಸುವ ಶಕ್ತಿಯಿದೆ.

ಗಣಪತಿ : ನಾ ನಿನ್ನ ಮೂರು ಸರ್ತೆ ಕರೀತೇನಿ ಮೂರನೇ ಸರ್ತೇನೂ ನೀ ಬರಲಿಲ್ಲಾ ಅಂದ್ರಾ ನಿನ್ನ ಶಿವಲಿಂಗಪ್ಪ ನೆಲಾ ಹಿಡದಾ ಅಂತ ತಿಳಕಾ.

ಅದಕ್ಕೆ ರಾವಣ ಒಪ್ಪಿಗೆ ಕೊಡುತ್ತಾನೆ. ರಾವಣನಿಗೆ ಮೂತ್ರ ಜೋರಾಗಿ ಬಂದಿವೆ. ಗಣಪತಿ, ರಾವಣಾಃ ರಾವಣಾಃ ಎಂದು ಮೂರುಸರ್ತೆ ಕೂಗುತ್ತಾನೆ. ರಾವಣನು ತಡಿಯೋ ಮುಗ್ಯಾಕ ಬಂದಾವು ಎನ್ನುತ್ತಾನೆ. ಆದರೆ ಗಣಪತಿ ಕೇಳುವುದಿಲ್ಲ ಶಿವಲಿಂಗವನ್ನು ನೆಲಕ್ಕೆ ಇಡುತ್ತಾನೆ. ಆಗ ಗಣಪತಿ ಹೀಗೆ ಹೇಳುತ್ತಾನೆ

ರಾವಣನೆ ನಿನ್ನಯ | ಕೊರಳ ಕೊಯ್ಯುವೆ ನಾನು |
ಶಿವಲಿಂಗ ನೆಡುವೆನು | ಉಸುಕಿನಲೀ
ನಮ್ಮಪ್ಪನಿಗೆ ನೀನು | ಮೋಸವ ಮಾಡಿದಿ |
ಮಾಡಿದ್ದು ಅನುಭವಿ | ಸೋ ಮಗನೇ.....

ಈ ಪ್ರಹಸನದಲ್ಲಿ ದೈವೀ ಶಕ್ತಿಗಳ ಒಳಸಂಚಿನಿಂದ ರಾವಣನ ಅಧಿಕಾರಮದ ವಿಫಲ ಗೊಂಡು ಗಣಪತಿಯಿಂದ ಜ್ಯೋತಿರ್ಲಿಂಗ ಪ್ರತಿಷ್ಠಾಪನೆಯಾಯಿತು. ಈ ನಾಟಕದ ಉದರ ದಲ್ಲಿ ಜನಪದ ತಂತ್ರದ ಕತೆಯೊಂದಿದೆ. ಊರ ಗೌಡ ಮತ್ತು ಆತನ ಸೇವಕ ಬಸ್ಯಾ ಇವರಿಬ್ಬರದು ಒಂದು ಜೋಡಿ. ಗೌಡನಿಗೆ ಶಿವಕ್ಕ ಎಂಬ ಸುಂದರ ಹೆಣ್ಣಿನ ಮೇಲೆ ಮನಸ್ಸಾಗಿರುತ್ತದೆ. ಅದನ್ನು ಸಾಧಿಸಲು ಸೇವಕ ಬಸ್ಯಾನಿಗೆ ಹೇಳುತ್ತಾನೆ.

ಗೌಡ : ಲೇ ಬಸ್ಯಾ, ಏನಲೇ ಆಕೀ ಹೆಸರು?

ಬಸ್ಯಾ : ಶಿವಕ್ಕರೀ ಎಪ್ಪಾ

ಗೌಡ : ಆಕೀ ವರ್ಣನಾ ಮಾಡಲೇ.....

ಬಸ್ಯಾ : ಚಂದ್ರುಣಿ ಚಂದನದ ಗೊಂಬಿ
ರತ್ನದ ಕಂಬಿ ಆದಿಜಗದಂಬಿ
ಯಂಗ ಡೌಲಾ.....

ಗೌಡ : ವಾಹ್ ವಾ Wonderful ಇವತ್ತ ಚೆಂಜಿ ಅನ್ನೊದರಾಗ ಆ ಶಿವಕ್ಕ ನನ್ನ ಮನೀ ಬಾಗಿಲಿಗೆ ಬರಬೇಕು

ಎಂದು ಗೌಡನು ಬಸ್ಯಾನಿಗೆ ಸೂಚಿಸುತ್ತಾನೆ. ಬಸ್ಯಾನು ಸಹಿತ ಬಹಳ ಬೇರಕಿ ಹುಡುಗ. ನೇರವಾಗಿ ಶಿವಕ್ಕನ ಹತ್ತಿರ ಬರುತ್ತಾನೆ. ಅವಳ ಮುಂದೆ ಗೌಡನ ಮನಸ್ಸಿನ ಇಂಗಿತವನ್ನು ಹೇಳುತ್ತಾನೆ. ಮೊದ ಮೊದಲು ಶಿವಕ್ಕ ನಿರಾಕರಿಸಿ ಬಸ್ಯಾನನ್ನು ಬೈಯುತ್ತಾಳೆ. ಆದರೆ ಬಸ್ಯಾ ಕೇಳುವುದೇ ಇಲ್ಲ.

ಬಸ್ಯಾ : ಶಿವಕ್ಕಾ ಇನ್ನ ನಿನ್ನ ದೆಸೀ ತಿರಗಿತು ಅಂತ ತಿಳಕಾ

ಶಿವಕ್ಕ : ಅವ್ವಯ್ಯ |

ಬಸ್ಯಾ : ನೀ ಇನ್ನ ಮ್ಯಾಲೆ ನಮ್ಮೂರ ಗೌಡಶಾನಿ..... ನಮ್ಮ ಗೌಡರ ನೆದರು ನಿನ್ನ ಮ್ಯಾಲ ಬಿದ್ದsತಿ.

ಬಸ್ಯಾ, ಶಿವಕ್ಕನ ಮುಂದೆ ಗೌಡನ ಶ್ರೀಮಂತಿಕೆ ಹೇಳುತ್ತಾನೆ. ನೀನು ಗೌಡನಿಗೆ ಒಲಿದರೆ ನಿನಗೆ ಎಲ್ಲ ಅನುಕೂಲಗಳಾಗುತ್ತವೆಂದು ಆಶ್ವಾಸನೆ ಕೊಡುತ್ತಾನೆ. ಬಸ್ಯಾನ ಮಾತಿಗೆ ಶಿವಕ್ಕ ಮರುಳಾಗುತ್ತಾಳೆ. ಬಸ್ಯಾನ ಜೊತೆಗೆ ಗೌಡನ ಮನೆಗೆ ಹೋಗುತ್ತಾಳೆ. ಆಕೆ ಇನ್ನೂ ಮೇಲೆ ಹೊಳೆದಂಡಿ ಶಿವಕ್ಕವಲ್ಲ ಗೌಡಶಾನಿ ಶಿವಕ್ಕ. ಅವಳ ಕಣ್ಣಲ್ಲಿ ಈಗ ಬರಿ ಬೆಳ್ಳಿ ಬಂಗಾರ ಇತ್ಯಾದಿ. ಅವರಲ್ಲಿ ಉಮೇದು ತುಂಬಿದೆ. 'ಗಾಳಿ ಹೊಕ್ಕ ಆಕಳ ಕರಧಂಗ' ಜಿಗ ದಾಡಾಕ ಹತ್ಯಾಳ, ಲೇಖಕ ಕೊಡುವ ಈ ರೂಪಕ ಅವರ ಉಮೇದನ್ನು ಸ್ಪಷ್ಟಪಡಿಸುತ್ತದೆ.

ಗೌಡ : ಲೇ ಬಸ್ಯಾ... ಬಂದsತೇನಲೇ ಆಕಳಾ? ಏನ ಮಾಲಲೇ ಇದೂ!
ಇಕೀ ವರ್ಣನಾ ಮಾಡಲೇ ಒಂದಿಷ್ಟು

ಬಸ್ಯಾ : ಗರಗರಾ ತಿರವತೀ ಕಣ್ಣಾ
ಕೆಂಪ ಮೈ ಬಣ್ಣಾ
ಬೈತಲ ಸಣ್ಣಾ | ಕತ್ತಿಧಾರಿ
....
....
ಮೂಗ ಸಂಪಿಗಿ ತೆನಿ
ಮುತ್ತಿನ ಗೊನಿ | ಕೋಗಿಲಾಂಗದನಿ

ಇದನ್ನು ಗಮನಿಸಿದಾಗ ಸಂಗ್ಯಾ-ಬಾಳ್ಯಾ ನಾಟಕದ ಪ್ರಸಂಗ ನೆನಪಾಗುತ್ತದೆ. ಸಂಗ್ಯಾ, ಗಂಗಿಯನ್ನು ಮೊದಲ ಸಾರಿ ಕಂಡಾಗ 'ದುಂಡಮೋತಿ ಹೆಣ್ಣಾ, ನಡಸಣ್ಣಾ ಕಾಡಿಗಿ ಗಣ್ಣಾ'

ಎಂಬ ಹಾಡು ಗಂಗಿಯ ರೂಪ ಲಾವಣ್ಯವನ್ನು ಚಿತ್ರಿಸುತ್ತದೆ. ಅದೇ ರೀತಿ ಬಸ್ಯಾ, ಶಿವಕ್ಕಳನ್ನು ಶಿವಕ್ಕ ಗೌಡನನ್ನು ನೋಡಿ ಬಸ್ಯಾನಿಗೆ ಹೇಳುತ್ತಾಳೆ. 'ಬಸ್ಯಾ ನಿಮ್ಮ ಗೌಡ ಲೊಳಗಾ ಬಳಗಾ ನಡೇದು ನೋಡಿದರ ಲಾಟನದನ ಎಣ್ಣಿ ಮುಗದಂಗ ಕಾಣಸ್ತsತಿ.' ಷಂಡಗೌಡನ ವಿಕೃತದಾಹ ವಿಫಲಗೊಂಡು ನೈಸರ್ಗಿಕ ಶಕ್ತಿಯಾಗಿ ಕಾಮದ ವಿಜಯವಾಯಿತು. ಈ ಭಾಷಿಕ ಘಟನೆ ನಾಟಕವನ್ನು ಬೇರೆ ಕಡೆ ತಿರುವುತ್ತದೆ. ಶಿವಕ್ಕನ ಮನಸ್ಸು ಬಸ್ಯಾನ ಮೇಲಾಗುತ್ತದೆ. ನಾಟಕದ ಮಧ್ಯದಲ್ಲಿ ಕಲ್ಲವ್ವ-ಮಲ್ಲವ್ವ ಎಂಬ ಮುದುಕಿಯರು ಬಸ್ಯಾ-ಗೌಡ-ಶಿವಕ್ಕನ ಸುದ್ದಿ ಮಾತಾಡುತ್ತ ಕಟ್ಟಿಯ ಮೇಲೆ ಕುಳಿತಿರುತ್ತಾರೆ.

ಕಲ್ಲವ್ವ : ಲೇ ಮಲ್ಲಿ, ಒಂದು ಹೋಳು ಅಡಕೀ ಒಗಿ ಇಲ್ಲೆ. ನನ್ನ ಚೀಲದಾಗ ಬರೆ ಬೆಟ್ಟೇನs ತುಂಬ್ಯಾವು

ಮಲ್ಲವ್ವ : ಹಿಡಿ, ಬಿಡ ಬಿಗಣೆ, ಏನರ ಹೇಳಿಕೆಂತ

ಕಲ್ಲವ್ವ : ಅಯ್ಯ ಗೊತ್ತಾತು ಬಿಡು. ಆ ಗಂಡರ ಗೂಳಿ ಈ ಹೆಣ್ಯಾ ಭಾಡ್ಯಾನ ಮನಿಗಿ ಹೆಂಗ ಬಂತೂ ಅಂತsನಿ

ಮಲ್ಲವ್ವ : ..... ಇದು ಆ ಬಸ್ಯಾನ ಕೆಲಸ ಹಂಗಾರ

ಕಲ್ಲವ್ವ : ಬಿಡ ಬುಗಣಿ ಅದೇನ ಒಬ್ಬಗs ಬಾಳೇ ಮಾಡ ಹೆಣ್ಣs ಅಂತ ತಿಳಿದೀಯೇನು ಇವತ್ತ ಬಸ್ಯಾ ನಾಳೆ ಮುಸ್ಯಾ

ಹಳ್ಳಿಗಳಲ್ಲಿ ಇಂದಿಗೂ ಇಂತಹ ವ್ಯಾವಹಾರಿಕ ಮಾತುಗಳು ಕಂಡುಬರುತ್ತವೆ. ಚಂಪಾ ಅವರು ಅದನ್ನು ಯಥಾವತ್ತಾಗಿ ಚಿತ್ರಿಸಿದ್ದಾರೆ. ಕಲ್ಲವ್ವ-ಮಲ್ಲವ್ವರ ಸಂಭಾಷಣೆಯಲ್ಲಿ ಹಾಸ್ಯರಸ ಮಿಂಚುತ್ತದೆ. ನಾಟಕದ ಭಾಷಿಕ ಶಿಲ್ಪದ ಆಂತರಿಕ ಸಂಗತಿಗಳು ಅವರ ಸಂಭಾಷಣೆ ಯಲ್ಲಿ ಮಿಡುಕಿವೆ. ಆ ಇಬ್ಬರು ಆಡಿಕೊಳ್ಳುವಂತೆಯೇ ಶಿವಕ್ಕನನ್ನು ಬಸ್ಯಾ ಭೋಗಿಸುತ್ತಾನೆ. ಇದು ಗೌಡನಿಗೆ ಗೊತ್ತಾದ ಮೇಲೆ ಅವಳನ್ನು ಹೊರಗೆ ಹಾಕುತ್ತಾನೆ. ಬಸ್ಯಾನು ಸಹಿತ ಹಚ್ಚಿಕೊಳ್ಳುವುದಿಲ್ಲ ಅತ್ತಾಗ ಗಂಡನೂ ಇಲ್ಲ ಇತ್ತಾಗ ಮಿಂಡನೂ ಇಲ್ಲ. ಹೀಗಾಗಿ ಶಿವಕ್ಕ ಬೀದಿಪಾಲಾಗಿ ಹೊಳಿದಂಡಿಗೆ ಹೋಗುತ್ತಾಳೆ. ಜೀವನ ದುರಂತಮಯ ದೇಹವು ಹಸಿವು, ಹಸಿವು ಅನ್ನುವಾಗ ಕಣ್ಣು ಮುಚ್ಚಿರುತ್ತದೆ. ದೇಹದ ಹಸಿವು ಹಿಂಗಿದಾಗ ಕಣ್ಣು ತೆರೆಯುತ್ತದೆ. ಆದರೆ ಆಗ ಹೃದಯ ಒಡೆದಿರುತ್ತದೆ. ದೇಹ ಹಾಗೂ ಹೃದಯ ಹೀಗೆ ಬೇರೆ ಬೇರೆಯಾಗುತ್ತದೆ. ಇದೇ ದುರಂತ ನಾಟಕದ ನಿರ್ದೇಶಕನಾದ ಭಾಗವತನಿಗೆ ಜೀವನ ಯಾವುದು, ನಾಟಕ ಯಾವುದು ಎಂಬುದೇ ಗೊತ್ತಾಗದಂತಾಗಿ ಕೊನೆಗೆ ಸಮಸ್ಯೆಗಳೆಲ್ಲ ಹೇಗೋ ಪರಿಹಾರವಾಗಿ ಕತೆ ಮಂಗಳವಾಗುತ್ತದೆ. ಇದು ನಾಟಕದ ಸ್ಥೂಲ ರಚನಾಕ್ರಮ. ಸ್ಥೂಲವಾದ ಈ ರಚನಾ ಕ್ರಮದ ಮಂಡನೆಗೆ ಮಾತ್ರ ಅತ್ಯುತ್ತಮ ನಾಟಕೀಯ ಮೌಲ್ಯಗಳಿಂದ ಒಡಗೂಡಿದೆ. ನಾಟಕವನ್ನು ಮತ್ತೆ ಮತ್ತೆ ಓದಿದಂತೆ ಅರ್ಥದ ಪದರುಗಳು ತಂತಾನೇ ಬಿಚ್ಚುತ್ತ ಹೋಗುತ್ತವೆ.

ಈ ನಾಟಕದ ಮೂಲಕ ಚಂಪಾ ಅವರು ಸಮಕಾಲೀನ ಬದುಕಿನ ಸಾಮಾಜಿಕ ಬಿಕ್ಕಟ್ಟನ್ನು ಅನಾವರಣಗೊಳಿಸುತ್ತಾರೆ. ನಾಟಕದ ಒಬ್ಬೊಬ್ಬರ ಪಾತ್ರದಲ್ಲಿಯೂ ಅವರ ಒಂದು ಮುಖ

ಪ್ರಕಟಗೊಳ್ಳುತ್ತ ಒಂದೇ ಪ್ರಶ್ನೆಗೆ ಹಲವು ರೀತಿಯ ಉತ್ತರಗಳು ಕಾಣುತ್ತ ನಾಟಕದ ಕ್ರಿಯೆ ವಿಕಾಸಗೊಳ್ಳುತ್ತದೆ. ನಾಟಕದ ಉದ್ದಕ್ಕೂ ಹಾಸ್ಯ, ಎಚ್ಚರ, ದುರಂತ ಇಂತಹ ಅಂಶಗಳು ನಾಟಕೀಯ ಆವರಣವನ್ನು ಸೃಷ್ಟಿಸುತ್ತವೆ. ಮನುಷ್ಯ ಪ್ರಜ್ಞೆ ಆಳ, ವಿಸ್ತಾರವನ್ನು ಬಿಗಿದಪ್ಪಿ ಶೋಧಿಸುವ ದಾರಿಯಲ್ಲಿ ಹೊಸ ಬೆಳಕನ್ನು ಬೀರುತ್ತವೆ. ಇಲ್ಲಿ ಬಳಕೆಯಾದ ಹಾಡುಗಳು ನಾಟಕದ ಭಾಷಿಕ ಶಿಲ್ಪಕ್ಕೆ ಗಾಂಭೀರ್ಯವನ್ನು ತಂದಿವೆ. ತನ್ಮೂಲಕ ನಾಟಕೀಯ ಕ್ರಿಯೆಗಳನ್ನು ಪರಸ್ಪರ ಒಗ್ಗೂಡಿಸಿ ಚಲನಶೀಲತೆಗೆ ಕಾರಣವಾಗಿದೆ. ಸಂಸ್ಕೃತಿಯ ಅತ್ಯಂತ ಮೂಲಭೂತ ಪ್ರಶ್ನೆಯನ್ನು ಚಂಪಾ ಅವರು ಕಲೆಯ ಅನುಭವವಾಗಿಸುತ್ತಾರೆ. ಜಾನಪದ ಸತ್ವವನ್ನು ಸಹಜವಾಗಿ ತಂದಿದ್ದಾರೆ.

ನಾಟಕದಲ್ಲಿ `ಭಾಗವತ' ಕತೆಯನ್ನು ನಡೆಸಿಕೊಂಡು ಹೋಗುತ್ತಾನೆ. ಅದು ತುಂಬ ಚಾಣಾಕ್ಷ ಪಾತ್ರವಾಗಿದೆ. 'ಎಳಿ ಸಿಕ್ಕರ ಹಚಡಾ ನುಂಗs ಮಗ ನಾನು' ಎಂಬ ಅವನ ಮಾತಿನಲ್ಲಿಯೇ ಆ ಅಭಿವ್ಯಕ್ತಿಯಿದೆ. ದೇಹವೊಂದಕ್ಕೆ ಕೊಟ್ಟ ತೀವ್ರವಾದ ಪ್ರಾಧಾನ್ಯ ದೇಹ ಮೋಹವನ್ನೇ ಕಳೆದು ನಿರರ್ಥಕ ಚೈತನ್ಯದ ಹುಡುಕಾಟ ಇವೆರಡರ ಅಸಂಪೂರ್ಣತೆ, ಸಂಸ್ಕೃತಿಯ ಚೈತನ್ಯವನ್ನೇ ಉಡುಗಿಸಬಲ್ಲ ಸ್ಥಿತಿ, ನಾಟಕದ ಕ್ರಿಯಾಬಿಂದುವಾಗಿದೆ. ದೇಹ-ಮನಸ್ಸು-ಆತ್ಮಗಳ ಜಿಜ್ಞಾಸೆ ಎಂದಿನಿಂದಲೂ ಸಾಹಿತ್ಯದ ಮುಖ್ಯ ಪ್ರಶ್ನೆಯಾಗಿದೆ. ಗೋಕರ್ಣದ ಗೌಡಶಾನಿ ನಾಟಕದ ವಿಶೇಷವೆಂದರೆ ಈ ಸಮಸ್ಯೆಯನ್ನು ಬೌದ್ಧಿಕ ಗ್ರಹಿಕೆಯ ಭಾಗವಾಗಿ ಮಾತ್ರ ನೋಡದೆ ನಾಟಕ ಸಾಮಾಜಿಕ ಸಂಘರ್ಷದ ಮೂಲಕ ವಿಕಾಸಶೀಲವಾಗುವಂತೆ ಮೂಡಿರುವುದು ಗಮನಿಸಬೇಕಾದ ಅಂಶ. ಬೌದ್ಧಿಕ ಚರ್ಚೆಯಲ್ಲಿಯೇ ಅಂತ್ಯವಾಗಬೇಕಾಗಿದ್ದ ಮೂಲ ಪ್ರಶ್ನೆಯೊಂದನ್ನು ವ್ಯಕ್ತಿಯ ಅಂತರ್ಯದ ವಿವಿಧ ಸ್ತರಗಳಿಗೆ ಬದ್ಧವಾಗಿಸಿ ಮನುಷ್ಯ ಲೋಕದಲ್ಲಿ ನಿರಂತರವಾಗಿ ಕಾಡುವ ಸಮಸ್ಯೆಯಾಗಿ ಗ್ರಹಿಸುವುದರಿಂದ ಕನ್ನಡ ನಾಟಕಗಳ ಸಂದರ್ಭದಲ್ಲಿ ಗೋಕರ್ಣದ ಗೌಡಶಾನಿ ಅನನ್ಯ ಕೃತಿಯಾಗಿದೆ. ಚಂಪಾ ಅವರು ಉದ್ದಕ್ಕೂ ಸಂಭಾಷಣೆಯಲ್ಲಿ ವಾಗ್ರೂಢಿಗಳನ್ನು ಅರ್ಥಪೂರ್ಣವಾಗಿ ಬಳಸಿದ್ದಾರೆ. ಅವು ನಾಟಕದ ಸೌಂದರ್ಯವನ್ನು ಹೆಚ್ಚಿಸಿವೆ.

- ಖಬರಗೇಡಿ ಕೈಯಾಗ ಕೊಬರಿ ಕೊಟ್ಟಂಗ
- ದೆವ್ವ ಕೂಡ ಕುಸ್ತಿ ಹಿಡದಂಗ
- ಹಿರೆಕ್ಕನ ಚಾಳಿ ಮನಿ ಮಂದಿಗಿ
- ಅಮ್ಮಾವ್ರಗಂಡ
- ಮೂಗಿನಕೆಳಗ ಮುತ್ತಿನ ಮೂಗುತಿ
- ಹಳೆಯದನ್ನು ನೆನೆಸಿ ಹಿತ್ತಲಲ್ಲಿ ಅತ್ತಿದ್ದರಂತೆ
- ಎಳಿ ಸಿಕ್ಕರ ಹಚಡಾ ನುಂಗ ಮಗನಾನು

ಇಂತಹ ಉಪಮೆಗಳು, ರೂಪಕಗಳು, ಆಡುರೂಪಗಳ ಬಳಕೆ ಇವು ನಾಟಕದ ಭಾಷೆಯ ಶಕ್ತಿಯನ್ನು ಹೆಚ್ಚಿಸಿವೆ. ಹೇಳಬೇಕಾದುದನ್ನು ಸರಳವಾಗಿ, ಪರಿಣಾಮಕಾರಿಯಾಗಿ ಹೇಳುತ್ತಾರೆ.

ಘಟನೆಯ ಭಾಷಿಕ ವಿವರಗಳು, ಘಟನೆಗಳು, ಸಂಭಾಷಣೆಯ ಅಂಗವಾಗಿಯೇ ಹೆಣೆದು ಬರುತ್ತವೆ. ಲವಲವಿಕೆಯಿಂದ ಕೂಡಿದ ಚಿಕ್ಕ ಚಿಕ್ಕ ವಾಕ್ಯಗಳಲ್ಲಿ ಸಹಜವಾಗಿ ಹೊರಡುವ ಉದ್ಗಾರಗಳಲ್ಲಿ ಬಾಯಿಂದ ಹೇಳುವುದಕ್ಕಿಂತ ಹೆಚ್ಚಿನ ಅರ್ಥವನ್ನು ಸಂಭಾಷಣೆ ಹೊಮ್ಮಿಸುತ್ತದೆ. ಒಟ್ಟಾರೆ ನಾಟಕದ ಕಥಾಶಿಲ್ಪ, ಭಾಷಾ ಪ್ರಯೋಗ, ಸಮುದಾಯದ ಬಿಕ್ಕಟ್ಟು ಶೋಧ ಈ ಎಲ್ಲ ದೃಷ್ಟಿಯಿಂದಲೂ ಗೋಕರ್ಣದ ಗೌಡಶಾನಿ ಕನ್ನಡದ ಸತ್ವಪೂರ್ಣ ನಾಟಕವಾಗಿದೆ.

ಆಕರಗ್ರಂಥ

೧. ಚಂಪಾ ನಾಟಕಗಳು, ೨೦೦೬, ಚಂದ್ರಶೇಖರ ಪಾಟೀಲ, ಸಪ್ನ ಬುಕ್‌ಹೌಸ್, ಬೆಂಗಳೂರು.

೪೨

ಜಗದಂಬೆಯ ಬೀದಿನಾಟಕ : ಭಾಷೆ - ಸಾಮಾಜಿಕ ಪ್ರತಿಭಟನೆ

ಸಾಮಾಜಿಕ ಜೀವನದಲ್ಲಿ ಅತೃಪ್ತಿ ಕಾಣಿಸಿಕೊಂಡಾಗ ಸಹಜವಾಗಿ ಪ್ರತಿಭಟನೆ ಕಾಣಿಸಿಕೊಳ್ಳುತ್ತದೆ. ಅಂತೆಯೇ ಸಮಾಜದಿಂದ ಸೃಷ್ಟಿಗೊಂಡ ಸಾಹಿತ್ಯದಲ್ಲಿಯೂ ಸಹ ಅತೃಪ್ತಿ ಕಾಣಿಸಿಕೊಂಡಾಗ ಪ್ರತಿಭಟನೆ ಕಾಣಿಸಿಕೊಳ್ಳುವುದು ಅನಿವಾರ್ಯ. ಸಾಹಿತ್ಯ ಒಂದು ಕಾಲ ಘಟ್ಟದ, ಒಂದು ಭಾಷಿಕ ಸಮುದಾಯದ ಸಂಪ್ರದಾಯವನ್ನು ಮತ್ತು ಪ್ರತಿಭಟನೆಯನ್ನು ಕಾಲಕಾಲಕ್ಕೆ ಬಿಂಬಿಸುತ್ತಿರುತ್ತದೆ. ಇದನ್ನು ಜಗತ್ತಿನ ಎಲ್ಲ ಭಾಷೆ ಸಾಹಿತ್ಯಗಳ ಇತಿಹಾಸ ಗಳಲ್ಲಿಯೂ ಸ್ಪಷ್ಟವಾಗಿ ಕಾಣಬಹುದು. ಸಂಪ್ರದಾಯ ಮತ್ತು ಪ್ರತಿಭಟನೆಗಳ ನಿರಂತರ ಮತ್ತು ಅನಿವಾರ್ಯ ಪ್ರಯೋಗದಿಂದಲೇ ಸಾಹಿತ್ಯ ತನ್ನ ಜೀವನವನ್ನು, ಜೀವಂತಿಕೆಯನ್ನು ಪುನಃ ಪುನಃ ಪಡೆದುಕೊಳ್ಳುತ್ತದೆ ಎಂಬುದು ಬದುಕು ಮತ್ತು ಸಾಹಿತ್ಯಗಳ ಸಂದರ್ಭದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ.

ಕನ್ನಡ ಸಾಹಿತ್ಯ ಸಂದರ್ಭವನ್ನು ಅನುಲಕ್ಷಿಸಿ ಹೇಳುವುದಾದರೆ ನವೋದಯ ಸಾಹಿತ್ಯಕ್ಕೆ ಪ್ರತಿಭಟನೆಗಾಗಿ ಪ್ರಗತಿಶೀಲ ಸಾಹಿತ್ಯ ತಲೆ ಎತ್ತಿತು. ಪ್ರಗತಿಶೀಲರು ಮಾರ್ಕ್ಸ್‌ವಾದದಿಂದ ಮ್ಯಾಕ್ಸಿಂ, ಗಾರ್ಕಿ ಮುಂತಾದ ರಶಿಯನ್ ಬರೆಹಗಾರರಿಂದ ಪ್ರಭಾವಿತರಾಗಿ ನವೋದಯದ ವಿರುದ್ಧ ಬಂಡೆದ್ದರು. ನವೋದಯವರು ರಾಜಕೀಯದಿಂದ ದೂರವಿರಲು ಪ್ರಯತ್ನಿಸಿದರು. ಪ್ರಗತಿಶೀಲರು, ರಾಜಕಾರಣವು ಸಾಹಿತ್ಯದಲ್ಲಿಯೂ ನಿವೇದಿತವಾಗಬೇಕು ಎನ್ನುವರು. ಕೂಲಿಕರ ಸಮಸ್ಯೆ, ದಬ್ಬಾಳಿಕೆ, ದಲಿತರ ಶೋಷಣೆಯನ್ನು ಸಾಹಿತ್ಯದ ಮೂಲಕ ಎದುರಿಸ ಬೇಕು ಎಂಬುದು ಅವರ ನಿಲುವಾಗಿತ್ತು. ಇದರಿಂದ ಆಧುನಿಕ ಕನ್ನಡಸಾಹಿತ್ಯಕ್ಕೆ ಇನ್ನೊಂದು ಆಯಾಮ ಬಂದಂತಾಯಿತು. ವಾಸ್ತವಿಕತೆಗೆ ಸಾಹಿತ್ಯದಲ್ಲಿ ಹೆಚ್ಚು ಪ್ರಾಶಸ್ತ್ಯ ದೊರಕಿದಂತಾ ಯಿತು. ಮಡಿವಂತಿಕೆಗೆ ಸೊಪ್ಪು ಹಾಕದೆ ಅನ್ಯಾಯ, ಅಸಮತೆಗಳ ವಿರುದ್ಧ ಅವರು ದನಿ ಯೆತ್ತಿದ್ದರು. ಅಂತಹ ಬರೆಹಗಾರರಲ್ಲಿ ಚಂಪಾ ಅವರು ಬಹುಮುಖ್ಯವಾಗಿ ಕಾಣಿಸುತ್ತಾರೆ.

ಚಂಪಾ ಅವರು ಸಮಕಾಲೀನ ಸಮಾಜದ ಅನಿಷ್ಟಗಳನ್ನು ತಮ್ಮ ನಾಟಕಗಳ ಮೂಲಕ ಅನಾವಾರಣಗೊಳಿಸಿದ್ದಾರೆ. ಪ್ರಸ್ತುತ 'ಜಗದಂಬೆಯ ಬೀದಿ ನಾಟಕ' ರಾಜಕೀಯ ಪ್ರಹಸನ ವಾಗಿದೆ. ರಾಜಕೀಯ ಹಾಗೂ ಸಾಂಸ್ಕೃತಿಕ ಚಳುವಳಿಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ಕೆಲಕಾಲ ಜೈಲುವಾಸಿಯಾದ ಚಂಪಾ ಅವರಿಗೆ ರಾಜಕೀಯ ಘಟನೆಗಳು ಅಕಾಡೆಮಿಕ್ ಚರ್ಚೆಯಿಂದ ಹೊರತಾಗಿಲ್ಲ. ಈ ನಾಟಕದ ರಚನೆಯ ವರ್ಷ ೧೯೭೪ ಎಂದರೆ ಇಂದಿರಾ ಗಾಂಧಿಯವರ ಸರ್ವಾಧಿಕಾರಿ ಪ್ರವೃತ್ತಿಗಳು ಯಾವ ಮುಚ್ಚುಮರೆಯಿಲ್ಲದೆ ನಾಡಿನ ರಾಜಕೀಯವನ್ನು ನಿಯಂತ್ರಿಸುತ್ತಿದ್ದ ಸಂದರ್ಭದಲ್ಲಿ ಈ ನಾಟಕ ಹುಟ್ಟಿಕೊಂಡಿದೆ. ಈ ನಾಟಕದಲ್ಲಿ ಭಾಷೆ ಪ್ರತಿರೋಧದ ಶಕ್ತಿಯಾಗಿ ಬಳಕೆಯಾಗಿದೆ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ.

ಕನಟ : ಈ ನಾಟಕಕ್ಕೆ ಹೀರೋ ಯಾರ್ರೀ ಮತ್ತ?

ಅನಟ : ...ಈ ನಾಟಕದಾಗ ಹೀರೋದ ಇಲ್ಲಾ. ಆದ್ರ ಹೀರೋಯಿನ್ ಮಾತ್ರ ಅದಾಳ. ಅಕೀ ಸುತ್ತಲೂ ಗಂಡಪಾರ್ರ್ಶ ಅದಾವು. ಅದಗರ ಗಂಡಸರಿಲ್ಲ. ಖರೇ ಅಂದ್ರ ಮೈ ತುಂಬ ಸೀರಿ ಸುಟಗೆಂಡಿದ್ರೂ ಖರೇಗಂಡಸ ಅಂದ್ರ ಅಕೀನ.... ಕೇಳ್ರೀ ಇಕೀ ಮಹಿಮಾ. ಲಂಡನ್ ನಗರದಾಗ ಇಕಿ ನಾಸ್ತಿಕಳು, ಕಂಚೀ ನಗರದಾಗ ಮಹಾ ಆಸ್ತಿಕಳು, ನ್ಯೂಯಾರ್ಕಿನಾಗ ಬಾಲ್‌ಡಾನ್ಸ್ ಮಾಡತಾಳ, ಮೀನಾಕ್ಷಿ ಮಂದಿರದಾಗ ಭರತನಾಟ್ಯ ಮಾಡತಾಳ, ಮಸೀದಿಯೊಳಗ ಯಾ ಅಲ್ಲಾ ಅಂತಾಳ, ಬಸವಣ್ಣ ದೇವರ ಗುಡ್ಯಾಗ ಶಿವಶಿವಾ ಅಂತಾಳ....

ಆ ಕಾಲದ ರಾಜ್ಯದ ಮತ್ತು ರಾಷ್ಟ್ರದ ರಾಜಕಾರಣಿಗಳು ಆ ಹೀರೋಯಿನಿಯ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದರು. ಕಾಲಕಾಲದಲ್ಲಿ ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಪರಸ್ಪರ ತಿಕ್ಕಾಟದಿಂದ ಅರಗಿಸಿಕೊಳ್ಳುವ, ಪ್ರಭಾವ ಬೀರುವ ಮತ್ತು ಹೊಂದಾಣಿಕೆ ಸಾಧಿಸುವ ವಿವಿಧ ಸಂಪ್ರದಾಯಗಳು ಸ್ಥಿತಿ ಸ್ಥಾಪಕತ್ವ ಪಡೆದಿವೆ. ಆ ನಟಿ ಎಲ್ಲರ ಮೇಲೂ ಸರ್ವಾಧಿಕಾರ ಸ್ಥಾಪಿಸಲು ಯತ್ನಿಸುತ್ತಾಳೆ. ಭಾರತೀಯರ ಮುಗ್ಧತೆಯನ್ನು ದೌರ್ಬಲ್ಯವೆಂದು ತಿಳಿದುಕೊಳ್ಳು ತ್ತಾಳೆ. ಮೈಯಲ್ಲಿ ಕಸುವಿಲ್ಲದ, ಕೈಯಲ್ಲಿ ಕಾಸಿಲ್ಲದ, ಬಾಯಲ್ಲಿ ಮಾತಿಲ್ಲದ ಭಾರತೀಯರ ಮುಗ್ಧತೆಯ ಅರಿವು ಅವಳಿಗಿದೆ. ಆ ಕಾಲದ ಮುಖಂಡರು ಅವಳು ಹೇಳಿದಂತೆ ಕೇಳುತ್ತಾರೆ.

ನಟಿ : ... ಈ ಅರಿಷ್ಟವನ್ನು ಅರೆಸ್ಟು ಮಾಡಲು ಒಂದು ಕಾನೂನೂ ಮಾಡಿದ್ದೇನೆ.

ಬನಟ : ಅದಕ್ಕ ನನ್ನ ಯಾಕ ಕೇಳಬೇಕು ಹುಜೂರ್? (ಎಡಗೈ ಹೆಬ್ಬಟ್ಟುತೋರಿಸಿ) ನೋಡ್ರಿಲ್ಲೆ, ಇದ್ಕ ನಾ ಯಾವಾಗ್ಲೂ ಮಸಿ ಹಚಿಗೊಂಡ ಕುಂತಿರ್‍ತ್ಯನಿ. ನೀವು ನಡರಾತ್ರ್ಯಾಗ ನನಗ ಹೇಳಿ ಕಳಿಸಿದ್ರೂ ಸಾಕು. ಎಲ್ಲಿ ಒತ್ತಕಬೇಕು ಅಂತೀರಿ ಅಲ್ಲಿ ಒತ್ತತನಿ.

ನಟಿ ಜನತೆಯ ಮುಗ್ಧತನವನ್ನು ಹತೋಟಿಯಲ್ಲಿಟ್ಟುಕೊಂಡಿದ್ದಾಳೆ. ರಾಜಕಾರಣಿಗಳು ಅಷ್ಟೆ. ಅವಳ ಗುಲಾಮರಾಗಿ ತಮ್ಮ ಸ್ಥಾನ ಗಟ್ಟಿಗೊಳಿಸಲು ಹವಣಿಸುತ್ತಾರೆ. ಆ ಸಂದರ್ಭದಲ್ಲಿ 'ಕಾರು' ರೂಪಕವಾಗಿ ಬಳಕೆಯಾಗಿದೆ.

ನಟಿ : ಮಗೂ ಬಾ ಇಲ್ಲಿ. ಯಾಕೆ? ಕಾರು ಸುರುವಾಗಲೊಲ್ಲದೆ?

ಕನಟ : ಹಾ, ಪೆಟ್ರೋಲು ಹಾಕಿಸೇ ಇಲ್ಲ ನೋಡಬೇ.

ನಟಿ : ಅಯ್ಯೋ ಮುಗ್ಧಾ. ಎತ್ತರವಾದ ಗುಡ್ಡದ ಮೇಲೆ ಒಯ್ದು ಕಾರಿನಲ್ಲಿ ಭಾರತೀಯ ರನ್ನು ತುಂಬಿಬಿಟ್ಟರೆ ಸಾಕು. ಅದು ತಾನೇ ಚಲಿಸುತ್ತದೆ. ಇಷ್ಟೂ ಬುದ್ಧಿ ಇಲ್ಲವೇ ನಿನಗೆ?....

ಅನಟ : ಹೇಳು ಮಹಾರಾಣಿ. ಯಾವ ಕುಸ್ತೀ ಕಣಕ್ಕೆ ಈಗಿಂದೀಗ ಹೊರಡಲಿ? ಹುಬ್ಬಳ್ಳಿ ಅಖಾಡವೊಂದನ್ನು ಬಿಟ್ಟು, ನಾನು ಎಲ್ಲಿಗೆ ಹೋಗಲಿಕ್ಕೂ ತಯಾರಿಸಿದ್ದೇನೆ. ಬಂಗಾರ ಖಡೆ, ಬೆಳ್ಳಿ ಖಡೆ ಸಿಗದಿದ್ದರೂ ಕನಿಷ್ಠ ಪಕ್ಷ ಎರಡು ಬಾಳೆಹಣ್ಣಾನ್ನಾ ದರೂ ತಂದು ತಮ್ಮ ಪಾದಾರವಿಂದಕ್ಕೆ ಅರ್ಪಿಸುವೆ.

ನಟಿ : ತಡೆ, ...ಈಗ ದೇಶದಲ್ಲಿ ಅಲ್ಲಲ್ಲಿ ದಂಗೆ ಏಳುತ್ತಿರುವ ಜನರನ್ನು ಕಚ್ಚಿಸಾಯಿ ಸಲು ತಯಾರಾಗುತ್ತಿರುವ ಬಿಡಾಡಿ ನಾಯಿಗಳ ಮುಖಂಡನಾಗು. ಅಂದರೆ ನಾನು ತಲೆ ಮೇಲೆ ಹೊತ್ತಿರುವ ಪರ್ವತದ ಭಾರ ಸ್ವಲ್ಪವಾದರೂ ಕಡಿಮೆಯಾದೀತು.

ಅನಟ : ಹಾಗೆ ಆಗಲಿ, ಜಗದಂಬೆ

ಚಂಪಾ ಅವರ ಈ ನಾಟಕ ಹಲವು ಕಾರಣಗಳಿಂದ ಗಮನಾರ್ಹವಾಗಿದೆ. ಪ್ರಜಾಪ್ರಭುತ್ವ ಮತ್ತು ಶ್ರೀಮಂತ ಪ್ರಭುತ್ವ ಇವೆರಡರ ಸಾಮಾಜಿಕ ಸಂಘರ್ಷವನ್ನು ಹೇಳುತ್ತದೆ. ಇಲ್ಲಿಯ 'ಜಗದಂಬೆ' ಶ್ರೀಮಂತ ಪ್ರಭುತ್ವದ ಅತ್ಯುತ್ತಮ ಪ್ರತಿನಿಧಿಯಾಗಿದ್ದಾಳೆ. ಮನುಷ್ಯನ ವರ್ತಮಾನದ ತಾತ್ವಿಕ ಮತ್ತು ಸಾಮಾಜಿಕ ಇರುವಿಕೆಯನ್ನು ಒಟ್ಟಾರೆ ನಿರಾಕರಿಸಿ ತನ್ನ ಸರ್ವಾಧಿಕಾರತ್ವವನ್ನು ಸ್ಥಾಪಿಸುವುದು ಈ ನಾಟಕದಲ್ಲಿ ಬಿಂಬಿತವಾದ ಆಶಯವಾಗಿದೆ. ನಾಟಕದಲ್ಲಿ ಒಬ್ಬ ನಟ ಹೇಳುವಂತೆ 'ಎಲ್ಲಾ ಏಕದಮ್ ಖುಲ್ಲಾ ಐತಿ ನಮ್ಮ ವ್ಯವಹಾರ.' ಆ ಕಾಲದ ರಾಜ್ಯ ಮತ್ತು ರಾಷ್ಟ್ರನಾಯಕರು ಇಲ್ಲಿ ಪರೋಕ್ಷವಾಗಿ ಅಪಹಾಸ್ಯಕ್ಕೆ ಒಳಗಾಗಿದ್ದಾರೆ. ಜಗದಂಬೆಯ ಸರ್ವಾಧಿಕಾರಿ ಪ್ರವೃತ್ತಿ ಅನಾವಾರಣವಾಗಿದೆ. ಕೊನೆಗೆ ಅವಳು ಸೋಲನ್ನನುಭವಿಸಿರುವುದು ಸೂಚ್ಯವಾಗಿ ಮೂಡಿಬಂದಿದೆ. ಈ ನಾಟಕದ ವಸ್ತು ಸಮಕಾಲೀನವಾದರೂ ಕೂಡ ಅದರ ಸಾಂಕೇತಿಕತೆ ದೇಶ ಕಾಲಗಳ ಮಿತಿಯನ್ನು ಮೀರುತ್ತದೆ. ಹೇಳಬೇಕಾದುದನ್ನು ಲೇಖಕರು ಲಕ್ಷಣಾರ್ಥವಾಗಿ ಹೇಳುತ್ತಾರೆ. ಪ್ರಭುತ್ವದ ಶಕ್ತಿ ಮತ್ತು ಸಾಧ್ಯತೆಯನ್ನು ಕುರಿತು ಇಲ್ಲಿ ಭಾಷಿಕ ಕ್ರಿಯೆಗಳು ರೂಪುಗೊಂಡಿವೆ. ಇಲ್ಲಿ ಭಾಷಿಕ ಕೇಂದ್ರ ಪ್ರಭುತ್ವ. ಪ್ರಭುತ್ವ

ಮತ್ತು ಜ್ಞಾನದ ನಡುವೆ ಗುಲಾಮರು ಅಧೀನರು ಶೋಷಣೆಗೆ ಒಳಗಾಗುತ್ತಾರೆ. ಅಂದರೆ ಪ್ರಭುತ್ವ ಮತ್ತು ಜ್ಞಾನದ ನಡುವೆ ಮೌನ ಆವರಿಸುತ್ತದೆ. ಮೌನವೆಂದರೆ ದಬ್ಬಾಳಿಕೆಯನ್ನು ಸಹಿಸಿಕೊಳ್ಳುವಿಕೆ. ಇದನ್ನು ಚಂಪಾ ಅವರು ಈ ನಾಟಕದಲ್ಲಿ ಸೊಗಸಾಗಿ ರೂಪಿಸಿದ್ದಾರೆ. ಪ್ರತಿಭಟನೆಯ ಶಕ್ತಿಯಾಗಿ ಭಾಷೆ ಇಲ್ಲಿ ಬಳಕೆಯಾಗಿದೆ.

ಚಂಪಾ ಅವರು ಜನಜಾಗೃತಿಯನ್ನುಂಟುಮಾಡಲು ಬೀದಿಯ ಮೇಲೆ ಈ ನಾಟಕವನ್ನು ಪ್ರದರ್ಶನ ಮಾಡಿ ಯಶಸ್ವಿಯಾದರು. ಬೀದಿ ನಾಟಕವನ್ನು ಅವಿದ್ಯಾವಂತರು ನೋಡುವುದರಿಂದ ನಾಟಕದ ಭಾಷೆ ಸರಳವಾಗಿದೆ. ಬಳಕೆಯ ಮಾತುಗಳಿಂದ ಕಥೆ ಸಾಗುತ್ತದೆ; ಭಾಷಾ ಸಂಕೀರ್ಣತೆ ದೂರವಾಗಿದೆ. ಇದರಿಂದ ಕಥೆಯ ಆಶಯ, ವಿನ್ಯಾಸ, ಸಮಸ್ಯೆ ಸ್ವರೂಪ ಇತ್ಯಾದಿ ವಿವರಗಳನ್ನು ಸಾಮಾನ್ಯರು ಸುಲಭವಾಗಿ ಅರ್ಥ ಮಾಡಿಕೊಳ್ಳುತ್ತಾರೆ. ನಾಟಕದಲ್ಲಿ ಹಾಸ್ಯ, ವ್ಯಂಗ್ಯ ಅಷ್ಟೆ ಪರಿಣಾಮಕಾರಿಯಾಗಿ ಅಭಿವ್ಯಕ್ತವಾಗಿವೆ. ಪರಸ್ಪರ ವೈರುಧ್ಯಗಳನ್ನು ಮೈಗೂಡಿಸಿಕೊಂಡು, ಶ್ರೀಸಾಮಾನ್ಯರ ಸಾಮಾಜಿಕ ಜೀವನವನ್ನು ಪ್ರಭುತ್ವ ಮತ್ತು ಅಧಿಕಾರದ ಹೆಸರಿನಲ್ಲಿ ಶೋಷಣೆಗೆ ಗುರಿಮಾಡುವ ಸಂಗತಿಯನ್ನು ಚಂಪಾ ಅವರು ಸಮರ್ಥವಾಗಿ ಅಭಿವ್ಯಕ್ತಿಸಿದ್ದಾರೆ. ನಾಟಕದ ಅಭಿವ್ಯಕ್ತಿಯಲ್ಲಿ ಬಳಕೆಯಾದ ಗದ್ಯಗಂಧೀ ಭಾಷೆ ಓದಲೂ ಸುಲಭವಾಗಿದೆ. ಸರಳ ಗದ್ಯದ ಮೂಲಕವೇ ಅತ್ಯಂತ ತೀವ್ರ ಪರಿಣಾಮವನ್ನು ಲೇಖಕರು ಉಂಟು ಮಾಡುತ್ತಾರೆ. ಎಪ್ಪತ್ತರ ದಶಕದ ರಾಜಕೀಯ ವಿದ್ಯಮಾನವನ್ನು ಅರ್ಥಮಾಡಿಕೊಳ್ಳುವಲ್ಲಿ ಈ ನಾಟಕ ತುಂಬ ನೆರವಾಗುತ್ತದೆ.

ಆಕರಗ್ರಂಥ

೧. ಚಂಪಾ ನಾಟಕಗಳು, ೨೦೦೬, ಚಂದ್ರಶೇಖರ ಪಾಟೀಲ, ಸಪ್ನ ಬುಕ್‌ಹೌಸ್, ಬೆಂಗಳೂರು.

೪೩

ಬುರಡಿ ಬಾಬಾನ ಲಕ್ಷಾಪಹರಣ ಪವಾಡ : ಭಾಷೆ-ಸಾಮಾಜಿಕ ವಿಡಂಬನೆ

ಚಂಪಾ ಅವರ ನಾಟಕಗಳು ಜಡಗಟ್ಟಿದ ಸಮಾಜವನ್ನು ವೈಚಾರಿಕತೆಗೆ ಹೊರಳಿಸಲು ಯತ್ನಿಸುತ್ತವೆ. ಸಾಮಾಜಿಕ ಅಸಮಾನತೆಯ ವಿರುದ್ಧ ಪ್ರತಿಭಟನೆ, ವರ್ಣವ್ಯವಸ್ಥೆಯ ವಿರುದ್ಧ ಆಕ್ರೋಶ, ಸಮಾಜವಾದೀ ಚಿಂತನೆ, ವೈಚಾರಿಕ ದೃಷ್ಟಿಕೋನದ ಅಗತ್ಯದ ಪ್ರತಿಪಾದನೆ. ಕಂದಾಚಾರ ಮತ್ತು ಮೌಲ್ಯಗಳ ಖಂಡನೆ ಇವೆಲ್ಲ ಅವರ ನಾಟಕಗಳಲ್ಲಿ ಅತ್ಯಂತ ಕಲಾತ್ಮಕ ವಾಗಿ ವ್ಯಕ್ತವಾಗಿವೆ. ಅವರು ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ವಿಕಾಸದ ಸಾಧ್ಯತೆಗಳನ್ನು ಅರಸುತ್ತಾರೆ. ಬದುಕಿನ ವಕ್ರ-ಸ್ವಚ್ಛಂದ ಲಯಗತಿಯನ್ನು ಭಾಷೆಯಲ್ಲಿ ಮೂರ್ತ ಅನುಭವ ವಾಗಿಸಿ ಹಿಡಿದಿಡುತ್ತಾರೆ. ಬದುಕಿನ ಸಂಕೀರ್ಣತೆ ಅವರ ನಾಟಕಗಳಲ್ಲಿದೆ. ಅವರ ನಾಟಕ ಗಳನ್ನು ಮತ್ತೆ ಮತ್ತೆ ಓದಿದಾಗಲೂ ಹೊಸ ಅರ್ಥ ಸಾಧ್ಯತೆಗಳನ್ನು ಸಹೃದಯ ವಾಚಕರು ಗುರುತಿಸಬಹುದಾಗಿದೆ. ಸಮುದಾಯದ ರೀತಿ-ನೀತಿಗಳ ಬಗ್ಗೆ ತೀರ ವಾಚ್ಯವಾದ ಪ್ರತಿಭಟನೆ ಯಿಂದ ಹಿಡಿದು ಸೂಕ್ಷ್ಮವಾದ ಧ್ವನಿ ಪೂರ್ಣ ಪ್ರತಿಭಟನೆವರೆಗೆ ಹಲವು ಬಗೆಗಳನ್ನು ಅವರ ನಾಟಕಗಳಲ್ಲಿ ಗುರುತಿಸಬಹುದಾಗಿದೆ.

ಈ ನಾಟಕದಲ್ಲಿ ಸಮಾಜದಲ್ಲಿ ವಿದ್ಯಾವಂತರು, ಪ್ರಜ್ಞಾವಂತರೆಂದು ಕರೆಸಿಕೊಳ್ಳುವವರ ಸ್ವಾರ್ಥ ಮತ್ತು ಮೂಢತನಗಳನ್ನು ಹಾಗೂ ಕಪಟತನದ ಮೋಸದ ವಾತಾವರಣವನ್ನು ಬೈಲಿಗಳೆಯುವ ಉದ್ದೇಶ ಹೊಂದಿದೆ. ನೇರವಾದ ಹಾಗೂ ಕ್ಷಿಪ್ರ ಪರಿಣಾಮಗಳನ್ನೇ ಈ ನಾಟಕ ಗುರಿಯಾಗಿಟ್ಟುಕೊಂಡಿದ್ದರೂ ಅವುಗಳಲ್ಲಿಯೂ ಕೂಡ ದೇಶ, ಕಾಲಗಳನ್ನು ಮೀರುವ ಪ್ರವೃತ್ತಿಯಿದೆ. ಉಳ್ಳವರ ಸುತ್ತ ಇರುವ ಹೊಗಳು ಭಟ್ಟರನ್ನು ಲೇಖಕರು ಗೇಲಿ ಮಾಡಿ ಅಣಕಿಸಿದ್ದಾರೆ. ಅದರ ಹಿಂದೆ ಸಮುದಾಯ ಪರ ಕಳಕಳಿಯಿದೆ. ಮುಗ್ಧ ಜನರ ಮೇಲೆ ಹೇರಲ್ಪಟ್ಟ ಹಲವು ವ್ಯವಸ್ಥೆಗಳ ಕೆಲವು ಮುಖಗಳು ಈ ನಾಟಕದಲ್ಲಿ ಚಿತ್ರಿತವಾಗಿವೆ.

ಕೋವೂರ್ ಪ್ರತಿನಿಧಿ (ಕೋಪ್ರ) ಪವಾಡ ಮಾಡಿದವರಿಗೆ ಒಂದು ಲಕ್ಷ ರೂಪಾಯಿ ಬಹುಮಾನವಾಗಿ ಕೊಡುತ್ತೇನೆಂದು ಘೋಷಣೆ ಮಾಡುತ್ತಾನೆ. ಆಗ ಬಾಬಾ ಪವಾಡ ಮಾಡಲಿಕ್ಕೆ ಮುಂದೆ ಬರುತ್ತಾನೆ.

ಬಾಬಾ : ಬಾಯ್ಮುಚ್ಚು ದುರುಳಾ! ನಿನ್ನ ಬಡಬಡಿಕೆಯನ್ನು ನಾನಿನ್ನು ಸಹಿಸಲಾರೆನು. ಎಲ್ಲಿದ್ದಾನೆ ನಿನ್ನ ಅಬ್ರಹಾಂ. ಅವನಿಗೆ ಒಂದೇಕೆ ಒಂದು ಸಾವಿರ ಪವಾಡ ಮಾಡಿ ತೋರಿಸುತ್ತೇನೆ. ಸಿದ್ಧವಾಗು.

ಬಾಬಾನ ಸುತ್ತಮುತ್ತ ಮಳ್ಳಕಾಶೀನು (ಮಕಾ), ಸಾಯೀನಾಯಕ (ಸಾನಾ), ಅಂಬಾಪುತ್ರ (ಅಂಪು), ಭ್ರಮರತ್ನ (ಭ್ರತ್ನ) ಇಂತಹ ಹೊಗಳುಭಟ್ಟ ಶಿಷ್ಯರಿರುತ್ತಾರೆ. ಅವರೆಲ್ಲರು ಬಾಬಾನ ತಾಳಕ್ಕೆ ತಕ್ಕಂತೆ ಕುಣಿಯುತ್ತಾರೆ. ಅವರ ಮೂಲಕ ಬಾಬಾ ಪವಾಡ ಮಾಡುತ್ತಾನೆ. ಅಲ್ಲೆಲ್ಲ ಡೊಂಗಿತನವಿದೆ. ಅಂಬಾಪುತ್ರನನ್ನು ಕರೆದು ಪವಾಡ ಮಾಡಲು ಹೇಳುತ್ತಾನೆ.

ಬಾಬಾ : ......ಈ ನಮ್ಮ ಅಂಬಾಪುತ್ರ ತಾಯಿಯ ಹೊಟ್ಟೆಯಲ್ಲಿದ್ದಾಗಲೇ ಚಂಪೂ ಕಾವ್ಯವನ್ನು ಕಿರುಚುತ್ತಿದ್ದನು. ಅವನಿಗೆ ನಾವು ಈ ಚಿತ್ರಮಯ ಛತ್ರಿಯನ್ನು ಕರುಣಿಸಿದ ಮೇಲಂತೂ ಅವನ ವಾಣಿ ನಿರ್ವಾಣಿಯಾಗಿದೆ. ಇವನ ದನಿಯ ಹಾಗೆ ಇವನ ಭಾಷೆಯೂ ಪೈಶಾಚಿಕವಾಗಿದೆ.

ಅಂಪು : ನಾ ನಾ ನಾ ನಾ
ಆನಾ ಜಾನಾ ಕಾನಾ ದೇನಾ ....
ಕೂ ಕೂ ಕೂ
ಹೈಕೂ ಮೈಕೂ ಬೈಕೂ ಥೈಕೂ...
ತಂ ತಂ ತಂ ತಂ....

ಮಕಾ : ಆಹಾ, ಎಂಥಾ ಕಾವ್ಯವಿದು! ಓ ಎಂಥಾ ನಾದವಿದು! ಈ ಪಿಶಾಚೀ ಕವನದಲ್ಲಿ ಒಟ್ಟು ಹದಿನಾಲ್ಕು ಅರ್ಥದ ಪದರುಗಳಿವೆ.

ಅಂಬಾ ಪುತ್ರನು ಕಣ್ ಕಿಸಿದು ಹಾಗೇ ನಂದೀ ಕೋಲಿನಂತೆ ನಿಂತಿದ್ದಾನೆ. ಅವನ ಹೃದಯ ಕ್ರಿಯೆ ನಿಂತು ಹೋಗಿದೆ! ಮೌನವಾಗಿ ನಿಂತಿದ್ದಾನೆ. ಅದನ್ನು ನೋಡಿ ಜನ ಮರುಳಾಗಿದ್ದಾರೆ. ಅದನ್ನು ಗಮನಿಸಿ ಬಾಬಾ ಹೇಳುತ್ತಾನೆ.

ಬಾಬಾ : ನೋಡಿದಿರಾ, ಮೂರ್ಖ ಶಿಖಾಮಣಿಗಳೆ, ನನ್ನ ನಾಮಸ್ಮರಣೆಯಿಂದ ಈ ಮಹಾಕವಿಯ ಹೃದಯವೇ ಸ್ತಬ್ಧವಾಗಿದೆ. ...ನಿಂತನಿಂತಲ್ಲಿಯೇ ಅಂಬಾಪುತ್ರನಿಗೆ ಮೋಕ್ಷ ದೊರಕಿದೆ. ಹೀಗೆ ಭಕ್ತನೊಬ್ಬನನ್ನು ನಿಂತ ನಿಂತಲ್ಲಿಯೇ ಸ್ವರ್ಗಕ್ಕೆ ಏರಿಸುವುದು ಪವಾಡವಲ್ಲವೆ?

ಬಾಬಾನ ಮಾತುಗಳಿಗೆ ಜನ ಮರುಳಾಗುತ್ತಾರೆ. ಇನ್ನೂ ಕೆಲವು ಪವಾಡ ಮಾಡಲು ಹೇಳುತ್ತಾರೆ. ಭ್ರತ್ನ ಎಂಬುವನು ಗಂಗಾ ಜಲವನ್ನು ಗೋವಾದ ಫೇಣಿ ಮಾಡಿಕೊಡಿರಿ,

ಅನುಗ್ರಹಿಸಿರಿ ಎನ್ನುತ್ತಾನೆ. ಆಗ ಬಾಬಾ ನೀರು ಕುಡಿಯಲು ಹೇಳುತ್ತಾನೆ. ಆ ನೀರನ್ನು ಕುಡಿದು, ಭೃತ್ನ ಜೋಲಿ ಹೊಡೆಯುತ್ತಾನೆ.

ಬಾಬಾ : ಹಾ ನೋಡಿರಿ. ಭಕ್ತ ಭ್ರಮರತ್ನ ಸೇವಿಸಿದ ಸಾದಾ ನೀರು ಮೊದಲು ಫೇಣಿ ಆಯಿತು. ಈಗ ಅದೇ ಫೇಣಿ ರಕ್ತವಾಗಿದೆ. ....ಬಿದ್ದವರ ಉದ್ಧಾರ ಕ್ಕಾಗಿ ಅವತಾರ ತಾಳಿ ಬಂದ ಕೃಷ್ಣ ನಾನು.

ಬಾಬಾ ತನ್ನಷ್ಟಕ್ಕೆ ತಾನೆ ಪ್ರಶಂಸೆ ಮಾಡಿಕೊಳ್ಳುತ್ತಾನೆ. ತನ್ನ ಮಹಿಮೆಯನ್ನು ತಾನೆ ಹೇಳಿಕೊಳ್ಳುತ್ತಾನೆ.

ಬಾಬಾ : ....ನಿಮ್ಮ ಪಾಪ ಕೂಪದಿಂದ ನಿಮ್ಮನ್ನು ಉದ್ಧರಿಸಲು ಭಗವಂತನು ಕಾಲಕಾಲಕ್ಕೆ ಇಲ್ಲಿ ಅವತರಿಸಿದ್ದಾನೆ. ಸಿಂಹವಾಗಿ, ಆಮೆಯಾಗಿ, ನಾಯಿ ಯಾಗಿ, ಮಂಗವಾಗಿ, ಹಂದಿಯಾಗಿ. ಈಗ ನನ್ನ ಈ ರೂಪದಲ್ಲಿ ಭಗವಂತ ಧರೆಗಿಳಿದಿದ್ದಾನೆ. ....ನನ್ನ ದೈವೀ ಶಕ್ತಿಯನ್ನು ಒಪ್ಪಿಕೊಂಡು ನಿನ್ನ ಬಹುಮಾನ ಕೊಡುವಿಯಾ?

ಅಗ ಕೋಪ್ರ ಮತ್ತು ಸಹಕಾರಿ ಪ್ರತಿನಿಧಿ ಅವರು, ಬಾಬಾ ಅವರೇ ತಯಾರಿಸಿದ ಖೋಟಾ ನೋಟುಗಳನ್ನು ಕೊಡುವರು. ಆಗ ಬಾಬಾ ಮತ್ತು ಅವರ ಶಿಷ್ಯರು ಮೋಸ ವಾಯಿತು ಎಂದು ಹಾಹಾಕಾರ ಮಾಡುತ್ತಾರೆ. ನಾಟಕ ಹೆಸರಿಗೆ ತಕ್ಕಂತೆ ಔಚಿತ್ಯಪೂರ್ಣ ವಾಗಿದೆ. ಭಾಷೆಯ ಮೊನಚು, ವ್ಯಂಗ್ಯ ಅರ್ಥಪೂರ್ಣವಾಗಿ ಮೂಡಿಬಂದಿದೆ. ಚಂಪಾ ಅವರು ಸ್ವಾರ್ಥ ಸಾಧಕ ಬುರಡೀ ಬಾಬನ ಪಾತ್ರ ಚಿತ್ರಣ ಬಹು ಸಮರ್ಥವಾಗಿ ನಿರೂಪಿಸಿ ದ್ದಾರೆ.ಅದು ಓಡುವ ಕ್ರಿಯೆ ನಾಟಕದುದ್ದಕ್ಕೂ ಒಂದು ಸಂಕೇತವಾಗಿ ಬೆಳೆಯುತ್ತದೆ. ನಾಟಕಕ್ಕೆ ಒಂದು ಅರ್ಥಪೂರ್ಣತೆ ದೊರಕಿರುವುದು ಆ ಪಾತ್ರದ ನೆಲೆಯಲ್ಲಿ ಎಂಬುದು ಗಮನಿಸಬೇಕಾದ ಅಂಶವಾಗಿದೆ.

ಕನ್ನಡಕ್ಕೆ ಚಂಪಾಭಾಷೆ ತಂದುಕೊಟ್ಟ ವಿಭಿನ್ನ ಸಾಮಾಜಿಕ ಆಯಾಮವು ಗಮನಾರ್ಹ ವಾದದ್ದೇ ಅಗಿದೆ. ವಾಸ್ತವದ ಕ್ಷಣಗಳನ್ನು ಬಹಳ ಪರಿಣಾಮಕಾರಿಯಾಗಿ ಅವರು ಹಿಡಿದಿಡುತ್ತಾರೆ. ಅದು ಭಾಷೆಗೆ ಒಂದು ದೊಡ್ಡ ಚೈತನ್ಯವನ್ನು ಒದಗಿಸಿತು. ಚಂಪಾ ಅವರು ಕಾಲದ ಪರಿಕಲ್ಪನೆಯನ್ನು ಅದು ಶತಶತಮಾನಗಳ ವಾಸ್ತವದ ಅಂಧಕಾರವನ್ನು ಭಾಷೆಯ ಮೂಲಕ ಬಯಲಗಳೆದರು. ಹೀಗಾಗಿ ಕನ್ನಡ ಸಾಹಿತ್ಯಕ್ಕೆ ಒಂದು ಪ್ರಜ್ವಲವಾದ ಭಾಷೆಯನ್ನು ಚಂಪಾ ಭಾಷೆ ಸೃಜನಶೀಲವಾಗಿ ಕೊಟ್ಟಿತು. ಕನ್ನಡ ತಿಳಿವಳಿಕೆಗೆ ಅದರಿಂದ ಒಂದು ಮಿಂಚು ಬಂದಿದೆ. ಬಾಬಾನ ಮಾತುಗಾರಿಕೆಯಲ್ಲಿ ಒಂದು ವಿಚಿತ್ರವಾದ ಸೊಗಸುವಿದೆ, ಆಕರ್ಷಕ ವಾಗಿದೆ. ಸಮುದಾಯದಲ್ಲಿರುವ ಸಾಮಾಜಿಕ ಕಂದರಗಳನ್ನು ಚಂಪಾ ಅವರು ಭಾಷೆಯ ಮೂಲಕ ವ್ಯಕ್ತಪಡಿಸಿದ್ದಾರೆ.

ಈ ನಾಟಕ ವ್ಯವಸ್ಥೆಯ ಬಗೆಗಣ ಅಸಮಾಧಾನದಿಂದ ಹುಟ್ಟಿಕೊಂಡಿದೆ. ಸಾಮಾಜಿಕ ವಿಡಂಬನೆ ಮೂಲಕ ಸಾಮಾಜಿಕ ಬದಲಾವಣೆ ಬಯಸಿದೆ. ಆ ಮೂಲಕ ಸಾಮಾಜಿಕ ಎಚ್ಚರವನ್ನು ಮೂಡಿಸುವುದು ನಾಟಕದ ಬಹುಮುಖ್ಯ ಆಶಯವಾಗಿದೆ. ಸಮಾಜೀಕರಣದ ಅಂಗವಾದ ಭಾಷೆಯ ಮೂಲಕ ವಿಚಾರ ವಾದವನ್ನು ಚಂಪಾ ಅವರು ಎತ್ತಿಹಿಡಿಯುತ್ತಾರೆ. ಅದುವೇ ಅವರ ನಾಟಕದ ಭಾಷೆಯ ಶಕ್ತಿ.

ಆಕರಗ್ರಂಥ

೧. ಚಂಪಾ ನಾಟಕಗಳು, ೨೦೦೬, ಚಂದ್ರಶೇಖರ ಪಾಟೀಲ, ಸಪ್ನ ಬುಕ್‌ಹೌಸ್, ಬೆಂಗಳೂರು.

೪೪

ನಳಕವಿಯ ಮಸ್ತಕಾಭಿಷೇಕ : ಭಾಷೆ-ಸಾಮಾಜಿಕ ವಿಡಂಬನೆ

ಸಾಮಾಜಿಕ ವಿಡಂಬನೆಯನ್ನು ಒಂದು ವಿಮರ್ಶಕ ಮೌಲ್ಯವೆಂದು ಪರಿಗಣನೆಗೆ ತೆಗೆದುಕೊಳ್ಳಲು ಶುರುಮಾಡಿದವರು ಪ್ರಗತಿಪರ ಲೇಖಕರು. ಅವರು ಅದನ್ನು ಸಾಮಾಜಿಕ ಅಸಮಾನತೆಯ ವಿರುದ್ಧದ ಪ್ರತಿಭಟನೆ ಎಂಬರ್ಥದಲ್ಲಿ ಬಳಸುವರು. ಮನುಷ್ಯನ ವರ್ತಮಾನದ ಸಾಮಾಜಿಕ ಮತ್ತು ತಾತ್ವಿಕ ಅಸ್ತಿತ್ವವನ್ನು ಒಪ್ಪದಿರುವಿಕೆ ಮತ್ತು ಇನ್ನೊಂದು ಸ್ಥಿತಿಯ ಬಗೆಗಿನ ತುಡಿಯುವಿಕೆ ಎಂಬರ್ಥದಲ್ಲಿ ಬಳಸಲಾಗಿದೆ. ಪ್ರಗತಿಶೀಲ ಸಾಹಿತ್ಯವು ಜನಪರವಾಗಿ ಹುಟ್ಟಿಬೆಳೆದಿದೆ; ವ್ಯವಸ್ಥೆಯ ಬಗೆಗಣ ಅಸಮಾಧಾನದಿಂದ ಅದು ಮೂಡಿದೆ. ವಿಡಂಬನೆಗೂ ಸಾಮಾಜಿಕ ಅಸಮಾಧಾನಗಳಿಗೂ ಸಮಕಾಲೀನ ಸಾಹಿತ್ಯಕ ರಾಜಕೀಯ ಘಟನೆಗಳಿಗೂ ಆಂತರಿಕ ಸಂಬಂಧ ಇರುತ್ತದೆ. ಸಿದ್ಧಮಾದರಿಯ ವ್ಯವಸ್ಥೆಯ ಸರ್ವಸೂತ್ರಗಳ ವಿರುದ್ಧ ಬಂಡೆದ್ದ ಮನೋಧರ್ಮ ಅಮಾನುಷತೆಯನ್ನು ಪ್ರತಿಭಟಿಸುತ್ತ ಮಾನವೀಯ ಪರ್ಯಾಯಗಳಿಗೆ ಹಂಬಲಿಸುವುದು ಅಲ್ಲಿಯ ಸೃಜನಶೀಲತೆಯ ಮುಖ್ಯ ಕಾಳಜಿ. ಹೀಗಾಗಿ ಸಿಟ್ಟು, ಅಸಮಾಧಾನ, ಕನಸುಗಳೇ ಇಲ್ಲಿ ಆಕೃತಿಯಾಗುತ್ತವೆ. ಅವುಗಳ ಹಿಂದೆ ಮಾನವೀಯ ತುಡಿತವಿದೆ. ಇದು ಪ್ರಗತಿಪರ ಸಾಹಿತ್ಯ ಚಳುವಳಿಯ ಆಶಯ ಮತ್ತು ಜವಾಬ್ದಾರಿಯಾಗಿದೆ.

ಈ ಹಿನ್ನೆಲೆಯಲ್ಲಿ 'ನಳಕವಿಯ ಮಸ್ತಕಾಭಿಷೇಕ' ನಾಟಕ ರಚನೆಯಾಗಿದೆ. ಈ ನಾಟಕದ ಸಂದರ್ಭ, ಸಾಹಿತ್ಯಕ್ಕಿಂತ ಹೆಚ್ಚಾಗಿ ಸಾಹಿತ್ಯಕ ರಾಜಕೀಯಕ್ಕೆ ಸಂಬಂಧಿಸಿದ್ದು. ಇಲ್ಲಿ ವಿಡಂಬನೆಗೆ ಒಳಗಾಗುವ ವ್ಯಕ್ತಿ ಹಾಗೂ ಸಂಸ್ಥೆಗಳನ್ನು ನೇರವಾಗಿ ಹೆಸರಿಸದಿದ್ದರೂ ಅವುಗಳನ್ನು ಗುರುತಿಸಲು ಕಷ್ಟವಾಗುವುದಿಲ್ಲ. ಇದಕ್ಕೆ ಸ್ಪಷ್ಟ ಸೂಚನೆಗಳು ನಾಟಕದಲ್ಲಿಯೇ ಸಿಗುತ್ತವೆ. ಉದಾಹರಣೆಗೆ ಇಲ್ಲಿ ನಳಕವಿ ಯಾರು? ಜಹಂಪನಾ ಯಾರು? ಕರ್ನಾಟಕ ಕಸಾಪ ಬೃಹತ್ ಮಠ ಯಾವುದು? ಎನ್ನುವುದರ ಬಗ್ಗೆ ಸಂದೇಹಕ್ಕೆ ಆಸ್ಪದವಿಲ್ಲ. ಚಂಪಾ ಅವರು ಕ.ಸಾ.ಪ.ದಲ್ಲಿಯ ಒಳ ಹೊರಗಿನ ರಾಜಕೀಯವನ್ನು ಬಯಲಿಗೆಳೆದು ಅಣಕಿಸಿ

ದ್ದಾರೆ. ಅಲ್ಲಿ ನಡೆಯುವ ಬುಟಾಟಿಕೆ, ಬಾಲಬಡುಕುತನ ಇಲ್ಲಿ ವಿಡಂಬನೆಗೆ ಗುರಿಯಾಗಿವೆ. ಆ ಸಂದರ್ಭದಲ್ಲಿ ಅವರು ಬಳಸುವ ಭಾಷೆಯಲ್ಲಿ ಕೊಂಕುಯಿದೆ; ಗಂಭೀರತೆಯಿದೆ. ಚಂಪಾ ಅವರು ವ್ಯವಸ್ಥೆಯ ವಿರುದ್ಧ ದಟ್ಟವಾಗಿ ದನಿಯೆತ್ತಿದ್ದಾರೆ. ಸಾಹಿತಿಗಳ ಸುತ್ತ ಅವರ ಹೊಗಳು ಭಟ್ಟರ ತಂಡವೇ ಇರುತ್ತದೆ.

ಮಾಕು	:	ನಮ್ಮ ನಳಕವಿಗೆ
ಉಳಿದವರು	:	ಜಯವಾಗಲಿ
ದೇಕು	:	ನಮ್ಮ ನಳಕವಿಗೆ
ಉಳಿದವರು	:	ಜಿಂದಾಬಾದ್
ನಕ	:	..... ಏನ್ರೀ ಮಿಸ್ಟರ್, ನಾವು ಯಾರು ಗೊತ್ತಿದೆಯೇ?
ಜ.ಹಂಪನಾ	:	ತಾವು, ನಮ್ಮ ಪೀಳಿಗೆಯ ಮಹಾಕವಿಗಳಲ್ಲವೇ? .....ತಾವು ನಮಗೆಲ್ಲ ಹೊಸವಿಚಾರ ವಿತ್ತ ದೃಷ್ಟಾರರಲ್ಲವೇ?
ನಕ	:	ಜ. ಹಂಪನಾ, ನೀನು ಈ ಮಠದ ಜಗದ್ಗುರುವಾಗಿದ್ದರೆ ನಿನ್ನನ್ನು ಈಗಿಂದೀ ಗಲೇ ಅಮರನನ್ನಾಗಿ ಮಾಡುತ್ತೇವೆ.
ಜ. ಹಂಪನಾ	:	ಕವಿಗಳೇ, ನಾನು ಇಲ್ಲಿ ಜಗದ್ಗುರುವಲ್ಲ.ನಾನು ಬರಿ ಕಾರಭಾರಿ.
ನಕ	:	ಕಾರಭಾರಿ ಅಂದರೆ?
ಜ. ಹಂಪನಾ	:	ಅಂದರೆ, ಇಲ್ಲಿಯ ಎಲ್ಲ ಕಾರಭಾರ ನನ್ನದೇ. ಕಸಾಪ ಬೃಹತ್ ಮಠದಲ್ಲಿ ಒಂದು ಇಲಿ ಓಡಾಡಿದರೂ ಅದಕ್ಕೆ ನನ್ನ ಅಪ್ಪಣೆ ಬೇಕು.

ಸದಾ ರಾಜಕೀಯ ನಗುವಿನ ಜ.ಹಂಪನಾನ ನಿರಂಕುಶಮತಿತ್ವ ಹಾಗೂ ಅವನು ನಳಕವಿಯನ್ನು ಓಲೈಸುವಿಕೆಯನ್ನು ಚಂಪಾ ಅವರು ವಿಡಂಬಿಸಿದ್ದಾರೆ. ನವ್ಯದ ವ್ಯಕ್ತಿ ಕೇಂದ್ರಿತ ನೆಲೆಯನ್ನು ಪಕ್ಕಕ್ಕೆ ಸರಿಸಿ ಸಾಮುದಾಯಿಕ ನೆಲೆಯಿಂದ ನಾಟಕ ಬರೆಯ ಹೊರಟ ಅವರು ಸಾಹಿತ್ಯರಚನೆಗೆ ಬಳಿಸಿಕೊಂಡ ಭಾಷೆಯೆ ಬಂಡಾಯದ್ದು. ಕನ್ನಡ ನವೋದಯ ಹಾಗೂ ನವ್ಯದ ರಚನೆಗಳಿಂದ ಭಿನ್ನವಾದ ರಚನೆಗಳಿಗೆ ಇಳಿದದ್ದೇ ಚಂಪಾ ಅವರ ಮಹತ್ವದ ಸಾಧನೆ. ಅವರಲ್ಲಿ ಪ್ರಕಟವಾದ ಪ್ರತಿಭಟನೆಗೆ ಚಾರಿತ್ರಿಕ ಮಹತ್ವವಿದೆ. ಜ.ಹಂಪನಾ ಮತ್ತು ನಳಕವಿ ಅವರ ಮಾತುಕತೆ ಮುಂದುವರೆಯುತ್ತದೆ.

ಜ. ಹಂಪನಾ	:	ತಿಳಿದಿದೆ. ಕವಿಗಳೇ ನನಗೆ ಎಂದೋ ತಿಳಿದಿದೆ. ಪ್ರತಿವರ್ಷ ಅಡ್ಡಪಲ್ಲಕ್ಕಿ ಉತ್ಸವಕ್ಕೆ ಸರಿಯಾಗಿ ತಾವು ತಮ್ಮ ಶಿಷ್ಯ ಮಂಡಳಿಯೊಂದಿಗೆ ಬಂದು ಧಾಂದಲೇ ಹಾಕುವುದನ್ನು ನಾನು ನೋಡುತ್ತಲೇ ಬಂದಿರುವೆ. ...ನಿಮ್ಮ ಅಭೀಪ್ಸೆ ಈಡೇರಲು ನಮ್ಮ ನಿಮ್ಮ ನಡುವೆ ಮೊದಲು ಸಾವಯವ

ಸಂಬಂಧದ ಸಮಗ್ರೀಕರಣ ಬಲಬೇಕು. ಅಂದರೆ ನಾವೆಲ್ಲರೂ ಪರಸ್ಪರರನ್ನೂ ಗಟ್ಟಿಯಾಗಿ ಅಪ್ಪಿಕೊಳ್ಳಬೇಕು.

ನಳಕವಿಯ ಸುತ್ತಲಿರುವ ಆತನ ಹೊಗಳು ಭಟ್ಟರು ಜ.ಹಂಪನಾನನ್ನು ಬಾಯಿ ತುಂಬ ಹೊಗಳುತ್ತಾರೆ.

ಪಂಪಭಟ್ಟ : ಶ್ರೀಮದ್ ಕರ್ನಾಟಕ ಕಸಾಪ ಬೃಹತ್ ಮಠದ
ಕಾರಭಾರೀ ಭಯಂಕರಾ..... |
ಕುಂತ ಕುಂತಲ್ಲೇ ಮೆಂಬರ್ ಲಿಸ್ಟು ಮಾಡುವ
ಬಹು ಭಾರೀ ದಿಗಂಬರಾ ...... ||
ಇಲಿಗಳನ್ನೆಲ್ಲಾ ಬಲೆಗೆ ಹಾಕಿ
ಹುಲಿ ಸವಾರಿ ಮಾಡುವ ಸರದಾರಾ..... |
ಹುಲಿಗೆ ಮೋಕ್ಷ ಕೊಡಿಸಿ ತಾನೇ ಹುಲಿಯಾಗುವ
ಕಸಾಪ ಕಾಕಸ್ಸಿನ ಸೂತ್ರದಾರಾ..... ||

ಎಂಬಂಥ ಮಾತುಗಳಲ್ಲಿ ನೈಜ ಪ್ರತಿಭಟನೆ ತೋರಿದ್ದಾರೆ. ಸ್ವಾರ್ಥ ಸಾಧಕ ಜ.ಹಂಪನಾ ವ್ಯಕ್ತಿತ್ವವನ್ನು ಬಯಲಿಗೆಳೆದಿದ್ದಾರೆ. ಆ ಮಾತುಗಳು ಜ.ಹಂಪನಾನಿಗೆ ಏನು ಅನಿಸುವುದೇ ಇಲ್ಲ.

ಜ. ಹಂಪನಾ : ಶಾಭಾಶ್, ವಾಹ್‌ವಾ, ಭೇಷ್ | ನಳಕವಿಗಳೇ...... ಈ ಶತಮಾನದ ಮಹಾವಿಮರ್ಶಕನಾಗಿರಬಹುದೇ ಇವನು?

ನಕ : ನನ್ನನ್ನು ಮಹಾಕವಿಯಾಗಿ ಮಾಡಿದವನೂ ಇವನೇ, ಜ.ಹಂಪನಾ. ನನ್ನ ಒಂದು ಕವನದಲ್ಲಿ ಈ ಭಟ್ಟನನ್ನು ಅಮರನನ್ನಾ ಮಾಡಿದ್ದೇನೆ.

ಜ. ಹಂಪನಾ : ಇಂಥ ಪರಸ್ಪರ ಸಹಜೀವನವಿಲ್ಲದೆ ಕಲಿಯುವ ದ್ವಾಪರವಾಗುವುದು ಹೇಗೆ ಕವಿಗಳೇ.?

ಪರಸ್ಪರರು ತಮ್ಮ ಬೆನ್ನು ತಾವೇ ಚಪ್ಪರಿಸಿಕೊಳ್ಳುತ್ತಾರೆ. ಸಾಹಿತ್ಯ ಲೋಕದ ಬಾಲಬಡುಕತನವನ್ನು ಬಯಲಿಗೆಳೆಯುವ ಇಲ್ಲಿಯ ಸಾಲುಗಳಿಗೆ ಲೋಕದ ಸ್ವಾಸ್ಥ್ಯವನ್ನು ಕಾಪಾಡುವ ಹೊಣೆಗಾರಿಕೆಯಿದೆ. ಸಮಕಾಲೀನ ಸಾಹಿತ್ಯದ ಬೂಟಾಟಿಕೆಗಳ ದಾಖಲಾತಿಯಷ್ಟೇ ಇಲ್ಲಿ ನಡೆದಿಲ್ಲ. ಬದಲಾಗಿ ಪರ್ಯಾಯಗಳ ಸೃಷ್ಟಿಯಿದೆ.

ನಕ : ......ನಾನು ಇಲ್ಲಿ ದಂಡಯಾತ್ರೆ ಕೈಗೊಂಡರೂ ಹಿಂದೆ ಮುಂದೆ ಇವರು ಇದ್ದವರೇ. ನಮ್ಮ ಭರತ ಖಂಡದ ಸನಾತನ ಮೌಲ್ಯಗಳ ಸಂಪತ್ತು ಇವರ ಖಾಕಿ ಚೊಣ್ಣದಲ್ಲಿ ಅಡಗಿದೆ. ನಮ್ಮ ರಾಷ್ಟ್ರ ಪುರುಷನ ಭವಿಷ್ಯ ಇವರ ಕರಿಟೊಪ್ಪಿಗೆಯ ಬುಡದಲ್ಲಿದೆ. ಇವರ ಲಾಠಿಗಳೋ, ಆಹಾ, ಮಾಯಾವಿಯ ಮಂತ್ರ ದಂಡಗಳು.

ಎಂದು ಚಂಪಾ ಅವರು ಜಾತಿವಾದಿಗಳನ್ನು ಟೀಕಿಸುತ್ತಾರೆ. ಆಗ ಅವರು ಬಳಸುವ ಭಾಷೆ ಬಡಗಿಯಾಗುತ್ತದೆ.

ಜ.ಹಂಪನಾ : ನಿಮ್ಮೆಲ್ಲರ ಇಂಗಿತ ಅರ್ಥವಾಯಿತು. ಈ ಸಲದ ನಮ್ಮ ಬೃಹತ್ ಮಠದ ಅಡ್ಡಪಲ್ಲಕ್ಕಿಯಲ್ಲಿ ನೀವು ಉತ್ಸವ ಮೂರ್ತಿಯಾಗಿ ಕುಳಿತು ಅಮರರಾಗ ಬೇಕೆಂಬುದೇ ನಿಮ್ಮ ಕ್ಷಿಪ್ರಕ್ರಾಂತಿಯ ಉದ್ದೇಶವಲ್ಲವೆ

ಎಲ್ಲ : ಹೌದು, ಹೌದು.

ಜ.ಹಂಪನಾ : ಇದನ್ನು ನಿಷ್ಕರ್ಷೆ ಮಾಡುವರು ಯಾರು? .... ಅಂದರೆ ಇಲ್ಲಿಯ ಜಗದ್ಗುರು

ನಕ : ಹಾಗಾದರೆ ಅವನೇ ನಮ್ಮನ್ನು ಅಡ್ಡಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಲಿ. ಬೇಡ ವೆಂದವರಾರು.

ಜ.ಹಂಪನಾ : ಅಯ್ಯೋ, ಮುಗ್ಧ ಕವಿಗಳೆ, ಈ ಜಗದ್ಗುರು ಒಂದು ಹಳೆ ಹುಲಿ, ಪಕ್ಕಾ ರಾಜಕಾರಣಿ. ಅಡ್ಡಪಲ್ಲಕ್ಕಿಯನ್ನೇರಲು ಕ್ಯೂ ಹಚ್ಚಿ ತೂಕಡಿಸುತ್ತ ಕುಂತ ಮುದಿ ಇಲಿಗಳು ನೂರಾರು. ಜಗದ್ಗುರು ಸುಳಿದಾಗೊಮ್ಮೆ ಚೀಂವ್ ಚೀಂವ್ ಅನ್ನುತ್ತವೆ.

ಮಾಕು : ನಮ್ಮ ನಳಕವಿಗಳ ಚಾನ್ಸ್ ಯಾವಾಗ ಹತ್ತ ಬಹುದ್ರೀ?

ಚಂಪಾ ಅವರು ತಮ್ಮ ಪ್ರತಿಭಟನೆಯ ಅಭಿವ್ಯಕ್ತಿಗೆ ವೈಚಾರಿಕ ಲಯ ವಿನ್ಯಾಸವನ್ನು ಜೋಡಿಸಿದ್ದಾರೆ. ಆ ಮೂಲಕ ಪರ್ಯಾಯ ಸಂಸ್ಕೃತಿಯ ಕನಸು ಹೊತ್ತಿದ್ದಾರೆ. ಸಾಹಿತ್ಯ ಪರಿಷತ್ತಿನ ಒಳಹೊರಗಿನ ಸಂಗತಿಗಳನ್ನು ಅನಾವರಣ ಮಾಡಿದ್ದಾರೆ. ಅಂತಹ ಭಾಷಿಕ ಸಂದರ್ಭದಲ್ಲಿ ಚಂಪಾ ಅವರು ಹೊಸ ರೂಪಕ ಭಾಷೆಯನ್ನು ಸೃಷ್ಟಿಸುವುದರ ಮೂಲಕ ತಮ್ಮ ಅಸಹನೆ ವ್ಯಕ್ತಪಡಿಸಿದ್ದಾರೆ. ನಳಕವಿ ಮತ್ತು ಆತನ ಶಿಷ್ಯರಿಗೆ ಜ.ಹಂಪನಾ ಸಾಂತ್ವನ ಹೇಳುತ್ತಾನೆ.

ಜ.ಹಂಪನಾ : ಸರಿ, ನೀವಾರು ಚಿಂತೆ ಮಾಡಬೇಕಾಗಿಲ್ಲ. ನಾನು ನಿಮ್ಮ ಈ ಚಳುವಳಿ ಸುರುವಾದಾಗಿನಿಂದಲೇ ಪೂರ್ವತಯಾರಿ ಮಾಡಿದ್ದೇನೆ. ಈ ಹಾಳೆಗಳಲ್ಲಿ ಸಾವಿರಾರು ಹೆಸರುಗಳಿವೆ. ಈ ಹೆಸರುಗಳಿಗೆ ತಕ್ಕ ಹಾಗೆ ನೀವು ಸಹಿ ಹಾಕಬೇಕು.

ಆಗ, ನಳಕವಿ ಮತ್ತು ಆತನ ಶಿಷ್ಯರು ಜಗದ್ಗುರು ಜ.ಹಂಪನಾಗೆ ಜಯವಾಗಲಿ ಎಂಬ ಘೋಷಣೆ ಮಾಡುತ್ತಾರೆ. ಜ.ಹಂಪನಾ ಸಹಿ ಮಾಡಿದ ಹಾಳೆಗಳನ್ನು ತೆಗೆದುಕೊಂಡ ಕಸಾಪ ಬೃಹತ್ ಮಠಕ್ಕೆ ಹೋಗುತ್ತಾನೆ.

ಜ.ಹಂಪನಾ : .....ನಾನು ಮಠದ ಒಳಗೆ ಹೊಕ್ಕೊಡನೆ ಏನಾಯಿತು ಗೊತ್ತೆ? ಆ ಮುದಿ ಹುಲಿಯ ಸುತ್ತು ಎಲ್ಲಾ ಮುದಿ ಇಲಿಗಳು ಸೇರಿ ಗಾಬರಿಯಾಗಿ

ನಿಂತಿದ್ದವು ನಾನು ಕಾಗದ ಪೆಂಡಿ ತೋರಿಸಿದೊಡನೆ ಆ ಮುದಿಯ ರಾಜೀನಾಮೆ ಕೊಟ್ಟು ಹಿತ್ತಲ ಬಾಗಲಿನಿಂದ ಓಡಿ ಹೋದ. ಎಲ್ಲಾ ಇಲಿಗಳು ಗುದ್ದುಗಳು ಈಗ ತೆರವಾಗಿವೆ. ....ತಾವೇ ಈ ಸಲದ ನಮ್ಮ ಉತ್ಸವಮೂರ್ತಿ.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಆಗಾಗ ನಡೆಯುವ ರಾಜಕೀಯವಾಗಲಿ, ಸಾಹಿತಿಗಳು ಸಮ್ಮೇಳನಾಧ್ಯಕ್ಷ ರಾಗುವುದಕ್ಕೆ ಖಟಿಪಿಟಿ ಮಾಡುವುದಾಗಲಿ ಕಲ್ಪನೆಗೆ ಬಿಟ್ಟ ವಿಷಯಗಳಲ್ಲ. ಪರಿಷತ್ತಿನ ರಾಜಕೀಯವನ್ನು ಸಾಕಷ್ಟು ಕಟುವಾಗಿಯೇ ಟೀಕಿಸಿದ ಅಡಿಗರು ಧರ್ಮಸ್ಥಳದಲ್ಲಿ ನಡೆದ ಸಮ್ಮೇಳನದ ಅಧ್ಯಕ್ಷರೆಂದು ಆಯ್ಕೆಯಾದುದು ಹಾಗೂ ಅವರು ಜನಸಂಘದ ತತ್ವಸಿದ್ಧಾಂತಗಳನ್ನು ಪುರಸ್ಕರಿಸಿದ್ದು ಚಂಪಾ ಅವರಂತೆ ಅನೇಕರಿಗೆ ಅತೃಪ್ತಿಗೆ ಕಾರಣವಾಗಿದ್ದವು. ಈ ನಾಟಕದಲ್ಲಿ ಆ ಅತೃಪ್ತಿ, ಅಸಮಾಧಾನಗಳೆ ವಸ್ತುವಾಗಿವೆ. ಇದರ ಜೊತೆಯಲ್ಲಿಯೇ ಸಾಹಿತಿಗಳ ಸುತ್ತ ಬೆಳೆಯುವ ಸ್ವಾರ್ಥ ಸಾಧಕ ಹೊಗಳು ಭಟ್ಟರ ವಿಡಂಬನೆಯೂ ಅನುಷಂಗಿಕವಾಗಿ ಸೇರಿದೆ. ಉದ್ದೇಶದ ನೆಲೆಯಲ್ಲಿ ಇದೊಂದು ಆರೋಗ್ಯಕರವಾದ ಪ್ರತಿಕ್ರಿಯೆಯಾಗಿದೆ. ಸಮಕಾಲೀನ ಸಮಾಜದ ಅನಿಷ್ಟಗಳ ಅನಾವರಣದ ಉದ್ದೇಶದಿಂದ ಈ ನಾಟಕ ರಚನೆಯಾಗಿದೆ.

ನಕ : ಕಾಳಜಿ ಬೇಡ. ಜ.ಹಂಪನಾ, ನಾನು ನಳಕವಿ. ನಾನು ನಿಮ್ಮ ಮಸ್ತಕಕ್ಕೆ ಅಭಿಷೇಕ ಮಾಡುತ್ತೇನೆ. ನಿಮ್ಮ ತಲೆಯ ಮಣ್ಣೆಲ್ಲಾ ತೊಳೆದು ಹೋಗಿ ಅಲ್ಲಿ ಬರೀ ಮಣ್ಣಿನ ವಾಸನೆ ಉಳಿಯುವಂತೆ ಮಾಡುತ್ತೇನೆ.

ಚಂಪಾ ಅವರ ವಿಡಂಬನೆಯ, ಪ್ರತಿಭಟನೆಯ ನೆಲೆಗಳು ಹೆಚ್ಚು ಪ್ರೌಢವೂ, ಲಕ್ಷಣಾರ್ಥಕವೂ ಆಗಿರುತ್ತವೆ. ಇಲ್ಲಿ ಬರೆಹಗಾರನಿಗೆ ಬೇರೆಯವರಗೆ ಹೇಳುವ ತವಕವಿಲ್ಲ ಅದರ ಬದಲು ತನ್ನ ಸಮಕಾಲೀನ ಸಮಸ್ಯೆಗಳಿಗೆ, ಸಮಕಾಲೀನ ವಿದ್ಯಮಾನಗಳ ಬಗ್ಗೆ ತಮಗೆ ಬೇಸರವಾದಾಗ ಪರಿಹಾರ ಕಂಡುಕೊಳ್ಳಲು ಯತ್ನಿಸುತ್ತಾರೆ. ಬೂಟಾಟಿಕೆ ಹಾಗೂ ಯಜಮಾನ ಸಂಸ್ಕೃತಿಯನ್ನು ಪ್ರಶ್ನಿಸುತ್ತಾರೆ. ಅವರ ನಿಲುವು ಪ್ರಗತಿ ಪರವಾಗಿದೆ.

ಚಂಪಾ ಅವರು ಸಮಕಾಲೀನ ಸಾಮಾಜಿಕ ಅನಿಷ್ಟಗಳ ಮೇಲೆ ತಮ್ಮ ನಾಟಕಗಳ ಮೂಲಕ ಛೂಬಾಣ ಎಸೆದರು. ಅವರ ತೆರೆದ ದೃಷ್ಟಿ ಸಮಾಜದ ಕಣ್ಣನ್ನು ತೆರೆಯಲು ಯತ್ನಿಸಿತು; ಅವರ ನಾಟಕಗಳಲ್ಲಿ ಸಮುದಾಯದಲ್ಲಿರುವ ಡಂಬಾಚಾರಿಗಳಿಗೆ ಕನ್ನಡಿ ಹಿಡಿಯುವ ಹಾಗೂ ಜೀವನ ಪರವಾದ ಗಂಭೀರ ಎಚ್ಚರಿಕೆಯಿದೆ.ಇಲ್ಲಿಯ ಪಾತ್ರಗಳು ಒಂದು ಕೇಂದ್ರ ವಲಯದಲ್ಲಿ ನಿಯಂತ್ರಿತವಾಗಿವೆ. ವಿಡಂಬನೆಯ ಉದ್ದೇಶ ಸ್ಪಷ್ಟವಾಗಿದೆ. ನವಿರಾದ ಹಾಸ್ಯ ಅಲ್ಲಲ್ಲಿ ಮಿಂಚಿದೆ. ಅವರ ಈ ರಚನೆಯಲ್ಲಿ ದೇಸಿ ಮೂಲದ ಭಾಷಿಕ ಆಕೃತಿಗಳು ಕೆಲವು ವ್ಯಕ್ತಿಯ ಗುಣವನ್ನು ಸೂಚಿಸಿದರೆ ಕೆಲವು ಕ್ರಿಯೆಯನ್ನು ವಿಶ್ಲೇಷಿಸುತ್ತವೆ. ಈ ರಚನೆಯಲ್ಲಿ

ಉದ್ದಕ್ಕೂ ಶ್ಲೇಷ, ವ್ಯಂಗ್ಯ, ರೂಪಕ ಇತ್ಯಾದಿ ಶಾಬ್ದಿಕ ಅಭಿವ್ಯಕ್ತಿಗಳು ಅರ್ಥಪೂರ್ಣವಾಗಿ ಬಂದಿವೆ. ಕನ್ನಡ ಭಾಷೆ ಶಕ್ತಿಯುತವಾಗಿ ಬಳಕೆಯಾಗಿದೆ.

ಆಕರಗ್ರಂಥ

೧. ಚಂಪಾ ನಾಟಕಗಳು, ೨೦೦೬, ಚಂದ್ರಶೇಖರ ಪಾಟೀಲ, ಸಪ್ನ ಬುಕ್‌ಹೌಸ್, ಬೆಂಗಳೂರು.

೪೫

ವಂದಿಮಾಗಧ : ಭಾಷೆ-ಸಾಮಾಜಿಕ ವಿಡಂಬನೆ

ಆಧುನಿಕ ಜಗತ್ತಿನಲ್ಲಿ ಸಾಹಿತ್ಯ ಸೃಷ್ಟಿಯೇ ಒಂದು ಪ್ರತಿಭಟನೆಯಾಗಿದೆ. ಇದರ ಅರ್ಥ ಸಾಹಿತ್ಯ ಕೃತಿಗಳಲ್ಲಿ ಪ್ರತಿಭಟನೆಯ ವಸ್ತುಗಳ ಮತ್ತು ವಿಚಾರಗಳ ಹೆಚ್ಚಳವಿದೆ ಎಂಬುದು ಮಾತ್ರವಲ್ಲ. ಅಥವಾ ಪ್ರತಿಭಟನೆಯ ವಸ್ತುಗಳು, ವಿಚಾರಗಳು ನಮ್ಮ ಯುಗದ ಅನ್ಯಾಯಗಳ ವಿರುದ್ಧ ದನಿಯೆತ್ತಿರುವುದನ್ನು ನಿರಾಕರಿಸುವುದೂ ಈ ಮಾತಿನ ಉದ್ದೇಶವಲ್ಲ. ಆದರೆ ಇದಕ್ಕಿಂತ ಮುಖ್ಯವಾದುದು ನಮ್ಮ ಯುಗದಲ್ಲಿ ಸಾಹಿತ್ಯ ನಿರ್ಮಾಣವೇ ಸಿದ್ಧಾಂತ ಮತ್ತು ಪ್ರಯೋಗಗಳಲ್ಲಿ ಯಜಮಾನ ಮೌಲ್ಯಗಳ ವಿರುದ್ಧ ಒಂದು ಪ್ರಬಲವಾದ ಪ್ರತಿಭಟನೆಯಾಗಿದೆ. ಈ ಪ್ರತಿಭಟನೆ ಸಾಹಿತ್ಯ ಕೃತಿಗಳ ಭಾಷೆ ಮತ್ತು ಬಂಧದಲ್ಲಿ ಮಾತ್ರವಲ್ಲ ಅವುಗಳ ಉತ್ಪಾದನೆ ಮತ್ತು ವಿತರಣೆಯ (ಸಾಹಿತ್ಯಕ ಚಳವಳಿಗಳು, ವಿಮರ್ಶಾ ಪಂಥಗಳು ಇತ್ಯಾದಿ) ಮೇಲೂ ಪ್ರಭಾವ ಬೀರುತ್ತದೆ. ಆಧುನಿಕ ಬರೆಹಗಾರರ ಈ ರೀತಿಯ ಪ್ರಯೋಗಗಳ ಹಿನ್ನೆಲೆಯಲ್ಲಿಯೇ ಸಾಹಿತ್ಯವನ್ನು ಭಾಷಿಕ, ಸಾಮಾಜಿಕ, ಸಾಂಸ್ಕೃತಿಕ ಪ್ರತಿಭಟನೆಯನ್ನಾಗಿ ಪರಿಗಣಿ ಸುವ ಸಿದ್ಧಾಂತಗಳು ನಿರ್ಮಾಣವಾಗಿವೆ.

ಸಾಮಾಜಿಕ ಅನ್ಯಾಯದ ವಿರುದ್ಧ ದೌರ್ಜನ್ಯವನ್ನು ಅನುಭವಿಸಿದ ಅಥವಾ ದೌರ್ಜನ್ಯವನ್ನು ಗಮನಿಸಿದ ವ್ಯಕ್ತಿ ಇಲ್ಲವೆ ವ್ಯಕ್ತಿ ಸಮೂಹ ವ್ಯಕ್ತಪಡಿಸಿದ ನಿರಪೇಕ್ಷ ಪ್ರತಿಕ್ರಿಯೆಯೇ ಪ್ರತಿಭಟನೆ. ಸಮುದಾಯ ಜೀವನದಲ್ಲಿ ಭಾಷಿಕರು ಸರಳ ರೇಖೆಯ ಪಯಣ ಮಾಡುವುದಿಲ್ಲ. ಹಲವು ಬಾರಿ ಅವರು ತಮ್ಮ ಸುತ್ತಮುತ್ತಲ ಅನ್ಯಾಯ, ವಿಪರ್ಯಾಸಗಳ ವಿರುದ್ಧ ಹೋರಾಡಬೇಕಾಗಿ ಬಂದಿದೆ. ಪ್ರತಿಭಟನೆ ಮನುಷ್ಯನ ಮೂಲಸ್ವಭಾವಗಳಲ್ಲಿ ಒಂದು. ಹಾಗೆಯೇ ಎಲ್ಲ ಕಾಲದ ಎಲ್ಲ ಭಾಷೆಯ ಸಾಹಿತ್ಯದಲ್ಲೂ ಇದು ಒಂದಲ್ಲ ಒಂದು ರೀತಿಯಲ್ಲಿ ವ್ಯಕ್ತವಾಗುತ್ತದೆ. ಬರೆಹಗಾರ ನಿರಾಕರಿಸಲೆಳಸುವ ವಿಷಯಗಳ ವಿರುದ್ಧ ಆ ಮೂಲಕ ಸಮಾಜದ ಪರಿವರ್ತನೆಗೆ ಯತ್ನಿಸುತ್ತಾನೆ. ಸಾಹಿತ್ಯವನ್ನು ಅಸ್ತ್ರವನ್ನಾಗಿ ಬಳಸಲು ಆಶಿಸಿದ್ದಾನೆ. ಆದ್ದರಿಂದ ಎಲ್ಲ ಕಾಲದ ಸಾಹಿತ್ಯದಲ್ಲಿಯೂ ಪ್ರತಿಭಟನೆಯ ಅಂಶಗಳು ನಮಗೆ ಕಾಣಸಬಹುದಾಗಿದೆ.

ಆದರೆ ಪ್ರತಿಭಟನೆಯ ನೆಲೆ ಮತ್ತು ಸ್ವರೂಪಗಳಲ್ಲಿ ಇರಬಹುದಾದ ಭಿನ್ನತೆಗಳನ್ನು ನಾವು ಗುರುತಿಸಬೇಕಾಗುತ್ತದೆ.

ಚಂಪಾ ಅವರು ಆಧುನಿಕ ಕಾಲದ ನಾಟಕಕಾರರಲ್ಲಿಯೇ ಅತ್ಯಂತ ಸೂಕ್ಷ್ಮ ಮತ್ತು ತೀಕ್ಷ್ಣ ಪ್ರತಿಭಟನೆಯ ಮನೋಧರ್ಮವನ್ನು ತಮ್ಮ ನಾಟಕಗಳಲ್ಲಿ ವ್ಯಕ್ತಪಡಿಸುತ್ತಾರೆ. ಮಾನವೀಯವಾದ ಬದುಕಿನ ಅನುಭವಗಳಿಂದಲೇ ಪ್ರೇರಿತವಾಗುವ ಪ್ರತಿಭಟನೆ ಅವರದಾಗಿದೆ. ಅವರ ನಾಟಕದಲ್ಲಿ ಧಾರ್ಮಿಕ ವಿಚಾರಗಳಿಗಿಂತ ಯಜಮಾನತ್ವದ ವಿರುದ್ಧ ಪ್ರತಿಭಟನೆ ಇರುತ್ತದೆ. ಸಾಮಾಜಿಕ ಬದುಕಿನ ಬಿಕ್ಕಟ್ಟುವಿನ ಸಂಘರ್ಷ ಇರುತ್ತದೆ. "ಜಗದಂಬೆಯ ಬೀದಿನಾಟಕ"ದಲ್ಲಿ ಸರ್ವಾಧಿಕಾರೀ ಪ್ರವೃತ್ತಿಗಳ ಅನಾವಾರಣವಿದ್ದರೆ 'ವಂದಿ ಮಾಗಧ'ದಲ್ಲಿ ರಾಜಕೀಯ ಜೀವನದ ಒಂದು ಅವಿಭಾಜ್ಯ ಅಂಗವೇ ಆಗಿರುವ ಸ್ವಾರ್ಥಸಾಧಕ ಹೊಗಳುಭಟ್ಟರ ವಿಡಂಬನೆಯಿದೆ. ಇದರ ಸಂದರ್ಭ ಕರ್ನಾಟಕದಲ್ಲಿ ನಡೆದ ರಾಜಕೀಯ ಘಟನೆಗಳೇ ಆದುದರಿಂದ ಇಲ್ಲಿ ವಿಡಂಬನೆಗೆ ಹೆಚ್ಚಿನ ತೀವ್ರತೆ ಬಂದಿದೆ. ಭಾಷಿಕ ಕ್ರಿಯೆಗಳು ಅಷ್ಟೇ ಅರ್ಥಪೂರ್ಣವಾಗಿ ರೂಪುಗೊಳ್ಳುತ್ತವೆ. ಮೊಗಲಕ್ ಮಾರಾಜ (ಮುಖ್ಯಮಂತ್ರಿ) ತನ್ನ ಬಗ್ಗೆ ತಾನೆ ಹೇಳುತ್ತಾನೆ.

ಮೊಗಲಕ್ ಮಾರಾಜ : ....ಬಂಧುಗಳೇ ನನ್ನ ರಾಜ್ಯದ ಅಜ್ಞರಾದ ಪ್ರಜೆಗಳೇ! ನೀವು ಅಸಂಖ್ಯ ಸಂಖ್ಯೆಯಲ್ಲಿ ಜಗತ್ತಿನ ಮೂಲೆ ಮೂಲೆಗಳಿಂದ ಆಗಮಿಸಿ ನನ್ನ ದರ್ಶನ ಭಾಗ್ಯ ಪಡೆಯುತ್ತಿರುವುದನ್ನು ನೋಡಿ ನನ್ನ ಬಾಯಿಯೇ ಬಂದಾಗಿದೆ. ಆದರೆ ನಾನೀಗ ಈ ಕ್ಷುಲ್ಲಕ ರಾಜ್ಯದ ಕ್ಷುದ್ರ ಮುಖ್ಯಮಂತ್ರಿಯಾಗಿ ಉಳಿದಿಲ್ಲ. ನಾನೀಗ ಏ ಮುಮಂಕಾ, ನನ್ನ ಈ ಅಪೂರ್ಣ ವಾಕ್ಯವನ್ನು.....

ಮುಖ್ಯಮಂತ್ರಿ : ....ನಾನೇ ಸಂಪೂರ್ಣಗೊಳಿಸುತ್ತೇನೆ, ಮಾರಾಜರೇ. ಬಂಧುಗಳೇ.... ನಿಮ್ಮ ಕರ್ಣ ಪಟಲದ ಸುತ್ತಲೂ ಗುಂಗುಂ ಗುಂಗಾಡಿನಂತೆ ಸುತ್ತಾಡಿ ನಿಮಗೆ ಗುಂಗು ಹಿಡಿಸುತ್ತಿದ್ದ ನಮ್ಮ ಈದಾದಾ ಅವರ ಕೀರ್ತಿ ಎಂಬ ಪಾರ್ಥೇನಿಯಮ್ಮ ನಮ್ಮ ಈ ಚಂಡ ಪ್ರಚಂಡ ಗೂಂಡಾ ರಾಜ್ಯದ ಕರ್ನಾಟಕದ ಮೇರೆ ಮೀರಿ ದಿಗ್ ದಿಗಂತದಲ್ಲಿ ಹಬ್ಬತೊಡಗಿದೆ. ಅವರೀಗ ನಮ್ಮ ಮೊಗಲಕ್ ಮಾರಾಜರು!

ಮೊಗಲಕ್ ಮಾರಾಜನ ಸುತ್ತಲೂ ಹೊಗಳುಭಟ್ಟರೆ ಇರುತ್ತಾರೆ. ಅವರೆಲ್ಲರು ತಮ್ಮ ಹಿತಾಸಕ್ತಿಗೆ ಅನುಗುಣವಾಗಿ ಅವನನ್ನು ಇಂದ್ರಚಂದ್ರವೆಂದು ಹೊಗಳಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಾರೆ. ಅರಸರಿಗೆ ಅಷ್ಟೆ ಬೇಕು. ಪ್ರತಿಯೊಂದಕ್ಕೂ ಅರಸ ದರ್ಪದಿಂದ ಉತ್ತರಿಸುತ್ತಾನೆ.

ಮುಮಂಕಾ : .....ಪಶ್ಚಿಮ ಕಾರವಾಳಿಯ ದುಷ್ಟಮಠದ ಸ್ವಾಮಿಗಳೆಲ್ಲಾ ತಮ್ಮ ಹೊಸ ಪದವಿಯ ಬೆಂಬಲಾರ್ಥ ಆಶೀರ್ವಾದ ಕಳಿಸಿದ್ದಾರೆ. ವಿಶೇಷ ಪೂಜೆಗೆಂದು...

ಮೊಮಾ : ಈಗಿಂದೀಗಲೇ ರಾಜ್ಯದ ಬೊಕ್ಕಸದಿಂದ ಒಂದು ಲಕ್ಷ ರೂಪಾಯಿ ಕಳಿಸೋಣ.

ನಾಗರಸ ಎಂಬ ವ್ಯಕ್ತಿ ವೀರಾವೇಶದಿಂದ ಬಂದು ಮೊಗಲಮಾರಾಜನಿಗೆ ನಮಸ್ಕರಿಸಿ ಅವನನ್ನು ನಾನಾವಿಧದಿಂದ ಸ್ತುತಿಸುತ್ತಾನೆ. ಅಧಿಕಾರ ಮತ್ತು ಪ್ರಭುತ್ವವಿದ್ದರೆ ಅವರ ಸುತ್ತಲೂ ಜನ ಸೇರಿ ಹಾಡಿ ಹೊಗಳುತ್ತಾರೆ.

ನಾಗರಸ : ಮೊಗಲಕ್ ಮಾರಾಜ ಮಹಾಭಾರೀ
ಕನ್ನಡಮ್ಮನ ಪುಂಡಗಂಡ ಗದಾಧಾರೀ
ಪುರಾತನ ಫೈಲಾಸುರ ಸಂಹಾರೀ
ಸತ್ತ ಸಂಸ್ಕೃತದ ಜೀವನಾಧಾರೀ
ದುಷ್ಟದೇವರಾಜನ ಆಜನ್ಮ ವೈರೀ
ಹಸ್ತಿನಾಪುರ ಸಾಮ್ರಾಣಿಯ ಮಹಾಪುಥಾರೀ
ವಾಚಾಳ ನಾಗರಸ ನಾನು ಆಭಾರೀ

ಎಂದು ಅರಸನನ್ನು ಬಾಯಿ ತುಂಬ ಹೊಗಳಿ, ಡೊಗ್ಗಿ ನಮಸ್ಕರಿಸಿ, ಮಾರಾಜನಿಗೆ ಗದೆಯನ್ನು ಅರ್ಪಿಸಿ ಹೋಗುತ್ತಾನೆ. ಅಲ್ಲಿ ಬಳಕೆಯಾಗುವ ಅರಸನನ್ನು ಕುರಿತಾದ ವಿಶೇಷಣಗಳು ಭಾಷಿಕ ಕ್ರಿಯೆಯನ್ನು ತೀವ್ರಗೊಳಿಸುತ್ತವೆ. ಸ್ವಾರ್ಥ ಸಾಧನೆಗಾಗಿ ತೋರುವ ವಿಧೇಯಕತೆಯನ್ನು ಭಾಷೆ ಬಿಂಬಿಸುತ್ತದೆ. ಕೆಲವು ಬಾಲಕರು ಬಂದು ಅರಸನಿಗೆ ನಮಸ್ಕರಿಸಿ ಜೀವನೋಪಾಯೋಗಿ ವಸ್ತುಗಳ ಬೆಲೆ ಇಳಿಸಬೇಕು ಎಂದು ಅಂಗಲಾಚುತ್ತಾರೆ. ರಾಜ ಅವರಿಗೆ 'ಚೆಡ್ಡಿ' ಮತ್ತು 'ದೊಣ್ಣೆ' ಕೊಟ್ಟು ಅವು ನಮ್ಮ ಪುರಾತನ ಸಂಸ್ಕೃತಿಯ ಸ್ಮಾರಕಗಳು ಎಂದು ಹೇಳಿ ಅವುಗಳ ಬೆಲೆ ಇಳಿಸಲು ಕಾರ್ಯದರ್ಶಿಗೆ ಸೂಚನೆ ಕೊಡುತ್ತಾನೆ. ಇಲ್ಲೆಲ್ಲ ಭಾಷೆಯ ವ್ಯಂಗ್ಯ, ವಿಡಂಬನೆ ಅರ್ಥಪೂರ್ಣವಾಗಿ ಅಭಿವ್ಯಕ್ತವಾಗಿದೆ. ಅರಸನಿಗೆ ತೊಗಲಕ್‌ನಂತೆ ರಾಜಧಾನಿಯನ್ನು ಬದಲಾಯಿಸಬೇಕೆಂದು ತೀರ್ಮಾನಕ್ಕೆ ಬರುತ್ತಾನೆ.

ಮುಮಂಕಾ : ....ನಾವು ಈ ಗುಂಗುಂ ನಗರಿಯಿಂದ ಎಲ್ಲಿಗೆ ಬದಲಾಯಿಸಬೇಕು ನಮ್ಮ ರಾಜಧಾನಿಯನ್ನು?

ಮೊಮಾ : ನಾವು ಆ ತೊಗಲಕನಂತೆ ಹರ್ಣ ಖರ್ಚು ಮಾಡಿ ಹಾಳಾಗಿ ಹೋಗುವುದು ಬೇಡ. ಒಂದು ಪ್ಲಾನು ಮಾಡೋಣ. ಗುಂಗು ನಗರಿಗೇ ಒಂದು ತಿಂಗಳು ಕಾಲ ದಾದಾಗಿರಿ ಎಂದು ಕರೆದುಬಿಡೋಣ. ಅದಕ್ಕೆ ಇಪ್ಪತ್ತು ಕೋಟಿ ಖರ್ಚು ಹಾಕೋಣ.

ಮುಮಂಕಾ : ಆ ತೊಗಲಕ್ ತಮ್ಮ ಮುಂದೆ ಗಜಮು ನಿಂತ ಮಾರಾಜ. ಒಂದು ತಿಂಗಳ ನಂತರ ದಾದಾಗಿರಿ ಮತ್ತೆ ಗುಂಗುಂ ನಗರಿಯಾಗುತ್ತದೆ! ಆಗ ಮತ್ತೆ ಇಪ್ಪತ್ತು ಕೋಟಿ ಖರ್ಚು ಹಾಕಬಹುದು!

ಅಧಿಕಾರದ ನಿರಂಕುಶ ಪ್ರಭುತ್ವವನ್ನು ಚಿತ್ರಿಸುವಾಗ ಭಾಷೆ ವಿಡಂಬನೆಯಾಗಿ ಬಳಕೆಯಾಗಿದೆ. ಅಲ್ಲಿ ಲಕ್ಷಣಾರ್ಥ ಅಧ್ಯಾಹಾರವಾಗಿದೆ. ಕರ್ನಾಟಕದಲ್ಲಿ ಆಗಿ ಹೋದ ರಾಜಕೀಯ ಘಟನೆಯನ್ನು ತುಂಬ ಅರ್ಥಪೂರ್ಣವಾಗಿ ಲೇಖಕರು ಅಭಿವ್ಯಕ್ತಿಸಿದ್ದಾರೆ. ಪ್ರಭುತ್ವದ ಸುತ್ತಲೂ ಸ್ವಪ್ರತಿಷ್ಠೆ, ಹಣ ಮತ್ತು ಅಧಿಕಾರದಾಹ ಹೆಪ್ಪುಗಟ್ಟಿರುತ್ತದೆ. ಚಂಪಾ ಅವರು ಇಂತಹ ಘಟನೆಗಳನ್ನು ನೋಡಿ, ತಿಳಿದು, ಅರ್ಥೈಸಿಕೊಂಡು ಮೆಚ್ಚಿ ಬರೆಯುವುದರಿಂದ ಅಲ್ಲೆಲ್ಲ ಉತ್ತಮ ಸಾಹಿತ್ಯ ಗುಣ ಕಾಣುತ್ತದೆ. ಭಾಷಾ ಬಳಕೆಯಲ್ಲಿ ವಿಡಂಬನೆಯಿದೆ; ವ್ಯಂಗ್ಯವಿದೆ. ತನ್ಮೂಲಕ ಪಟ್ಟಭದ್ರ ಹಿತಾಸಕ್ತಿಯ ರಾಜ್ಯಪ್ರಭುತ್ವದ ಓರೆಕೋರೆಗಳ ಬಗ್ಗೆ ಉತ್ಕಟವಾಗಿ ಅಬ್ಬರದ ದನಿಯಲ್ಲಿ ಪ್ರತಿಭಟನೆಯನ್ನು ಮಂಡಿಸುತ್ತಾರೆ. ಸಮುದಾಯ ಪರವಾದ ಮಾನವೀಯತೆಯ ಹಿನ್ನೆಲೆ ಅವರ ಇಂತಹ ನಾಟಕಗಳು ಸಹೃದಯ ವಾಚಕರನ್ನು ಸಮಕಾಲೀನ ಸ್ಥಿತಿಗತಿ ಕುರಿತು ಚಿಂತನೆಗೆ ಹಚ್ಚುತ್ತವೆ.

ಆಕರಗ್ರಂಥ

೧. ಚಂಪಾ ನಾಟಕಗಳು, ೨೦೦೬, ಚಂದ್ರಶೇಖರ ಪಾಟೀಲ, ಸಪ್ನ ಬುಕ್‌ಹೌಸ್, ಬೆಂಗಳೂರು.

೪೬

'ಹವನ' ಕಾದಂಬರಿ : ಭಾಷಿಕ ವಿವೇಚನೆ

ಮಲ್ಲಿಕಾರ್ಜುನ ಹಿರೇಮಠರ 'ಹವನ' ಕಾದಂಬರಿ ಲಂಬಾಣಿ ಸಂಸ್ಕೃತಿಯನ್ನು ಕೇಂದ್ರವಾಗಿಟ್ಟುಕೊಂಡು ರಚಿತವಾದ ವಿಶಿಷ್ಟ ಕಾದಂಬರಿ. ಅದರ ವರ್ಣನಾತ್ಮಕ ವ್ಯಾಕರಣ ಸಿದ್ಧಪಡಿಸಿದರೆ ಕೊಪ್ಪಳ ಪ್ರದೇಶದ ಈಗ ಪ್ರಚಲಿತವಿರುವ ರಚನೆಗಿಂತ ಭಿನ್ನವಾಗಿರುವುದಿಲ್ಲ. ಆ ಪ್ರದೇಶದ ನಿರಂತರತೆಯನ್ನು ಪುಷ್ಟೀಕರಿಸುವ ಭಾಷಿಕ ಆಧಾರಗಳು ಕಾದಂಬರಿ ಉದ್ದಕ್ಕೂ ಸಿಗುತ್ತವೆ. ಆದರೆ ಪ್ರಸ್ತುತ ಪ್ರಬಂಧದ ಆಶಯ ಆ ಕಾದಂಬರಿಯ ಭಾಷೆಯ ಸಾಮಾಜಿಕ ಆಯಾಮವನ್ನು ಅರಿಯುವುದಾಗಿದೆ. ಒಂದು ಪಠ್ಯದಲ್ಲಿ ಅರ್ಥದ ವಿವಿಧ ಛಾಯೆಗಳು ಇರುತ್ತವೆ. ಲಕ್ಷಣಾರ್ಥ ಪ್ರಧಾನವಾದಾಗ ಪಠ್ಯ ಹೆಚ್ಚು ನಿಗೂಢವಾಗುತ್ತ ಸಾಂಕೇತಿಕತೆಯ ಕಡೆಗೆ ವಾಲುತ್ತದೆ. ವಾಚ್ಯಾರ್ಥ ಪ್ರಧಾನವಾದಾಗ ಪಠ್ಯ ಹೆಚ್ಚು ನೇರವಾಗುತ್ತ ಹೋಗುತ್ತದೆ. ಇಂತಹ ಅರ್ಥ ಛಾಯೆಗಳಲ್ಲಿ 'ಹವನ' ವಾಚಾರ್ಥ ಪ್ರಧಾನವಾದ ಕಾದಂಬರಿ. ಲೇಖಕರು ಭಾವಕ್ಕೆ ರೂಪುರೇಷೆಗಳ ಅರ್ಥವಂತಿಕೆಯನ್ನು, ಗಟ್ಟಿತನವನ್ನು ನೀಡುವುದರಲ್ಲಿ ಸಫಲರಾಗಿದ್ದಾರೆ. ವೈಚಾರಿಕತೆ ಈ ಕಾದಂಬರಿಯ ಮುಖ್ಯ ಲಕ್ಷಣವಾಗಿದೆ.

ಹಿರೇಮಠರು ಈ ಕಾದಂಬರಿಯಲ್ಲಿ ಕನ್ನಡ ಭಾಷೆಯ ಸಾಧ್ಯತೆಗಳನ್ನು ಅರ್ಥ ಪೂರ್ಣವಾಗಿ ದುಡಿಸಿಕೊಂಡಿದ್ದಾರೆ. ಲೇಖಕರ ಸಿದ್ಧತೆ, ಲೋಕಾನುಭವ, ವ್ಯಾಸಂಗ, ಭಾಷಾ ಸಂಪತ್ತು ಮೊದಲಾದ ಅಂಶಗಳ ಪರಿಚಯಕ್ಕೆ ಅವರ ಈ ಬರಹವನ್ನೇ ಆಶ್ರಯಿಸಬೇಕು. ಯಾವುದೇ ಲೇಖಕನ ಎಲ್ಲ ಚಿಂತನೆಗಳು ಭಾಷೆಯ ಚೌಕಟ್ಟಿನಲ್ಲಿ ಸಂಭವಿಸುತ್ತವೆ. ಕಾದಂಬರಿ ಲಂಬಾಣಿ ಜನರ ಮನೋಧರ್ಮಕ್ಕೆ ತುಂಬ ಹತ್ತಿರವಾಗಿದೆ. ಅವರ ಕಷ್ಟಕಾರ್ಪಣ್ಯ, ಬಡತನ, ಮುಗ್ಧತೆ ಇವುಗಳನ್ನು ಅನಾವರಣಗೊಳಿಸುವ ನೆಲೆಯಲ್ಲಿ ಕಾದಂಬರಿ ಆಕರ ಪಡೆಯುತ್ತ ಹೋಗುತ್ತದೆ. ಸೋಮಲ್ಯಾ ನಾಯಕ ಈ ಕಾದಂಬರಿಯ ಬಹುಮುಖ್ಯ ಪಾತ್ರ; ನನ್ನ ಸುತ್ತಲಿನ ಸಮಾಜಕ್ಕೆ ಒಳ್ಳೆಯ ಬದುಕಿನ

ಕನಸನ್ನು ಕೊಡುವವನು ಅವನೇ. ಲೇಖಕರು ವ್ಯಕ್ತಿಗಳನ್ನು ಮುಖಾಮುಖಿಯಾಗಿ ನಿಲ್ಲಿಸದೆ ಅವರ ಕರ್ತೃಗಳನ್ನು ಬೇರೆ ಬೇರೆ ಪಾತ್ರಗಳ ಮೂಲಕ ಅನಾವರಣ ಗೊಳಿಸುತ್ತಾರೆ. ಇದನ್ನು ಎರಡು ದೃಷ್ಟಾಂತಗಳಿಂದ ಸ್ಪಷ್ಟಪಡಿಸಬಹುದು.

ಅ. ಸೋಮಲ್ಯಾನಾಯಕ ಮತ್ತು ಬಸಪ್ಪ ಮಾಸ್ತರರ ಪರಸ್ಪರ ಪರಿಚಯವಾಗಿ ಆಗ ನಡೆಯುವ ಸಂಭಾಷಣೆ ಅರ್ಥಪೂರ್ಣವಾಗಿದೆ. "ನೀವು ಮಾಸ್ತರರೇನ್ರಿ?" ಅಂತ ಕೇಳಿದ "ಹೌದು, ನೀವು?", "ನಾ ಸೋಮಲ್ಯಾ ನಾಯಕ"... ನಮ್ಮೂರ ಮಾಸ್ತರರ ಪರಿಚಯ ಹೇಳಿಕೊಂಡೆ... "ಇಲ್ಲೇ ಸನೇಕ ಸಾಲಿಗಂತ ಒಂದು ಕ್ವಾಣಿ ಕಟ್ಟಿಸೀವಿ. ನಿಮಗೇನೂ ತ್ರಾಸು ಆಗದಂಗ ನೋಡಿಕೋತೀವ್ರಿ ಮಾಸ್ತರೀ. ನೀವೇನೂ ಕಾಳಜಿ ಮಾಡಬ್ಯಾಡ್ರಿ..." ನಂತರ ಸೋಮಲ್ಯಾನಾಯಕ ತಮ್ಮ ಊರಿನ ಸ್ಥಿತಿಗತಿಯನ್ನು ಮಾಸ್ತರರಿಗೆ ಹೇಳಿದನು. ಮಾಸ್ತರರಿಗೆ ಆ ಊರಲ್ಲಿ ಕೆಲಸ ಮಾಡಲು ಆತ್ಮವಿಶ್ವಾಸ ಬಂದಿತು.

ಆ. ತಾಂಡಾದ ಪಂಚಾಯತಿಯನ್ನು ಕುರಿತು ಅರ್ಥಪೂರ್ಣವಾಗಿ ರೇಖಿಸಿದ್ದಾರೆ. "ಎಂದಿನಂಗ ತಾಂಡಾ ಮಂದಿ ಬೇವಿನ ಗಿಡದ ಕಟ್ಟೆಗೆ ಕೂಡ ತೊಡಗಿದ್ದರು... ಢಾಲಿಯಾ ಹೋಗಿ ಡುಗ್ಗಿಬಾಯಿ ಹಾಗೂ ಮಗಳು ರುಕ್ಕಿಯನ್ನು ಗೋರ್ ಪಂಚಾಯತಕ್ಕೆ ಹಾಜರಾಗಬೇಕಂತ ಹೇಳಿ ಬಂದಿದ್ದ. ಜತಿಗೆ ಲಚಮನ್ನೂ ತಪ್ಪದ ಕರತರಬೆಕು ಅಂತ ತಿಳಿಸಿ ಬಂದಿದ್ದ. ಅವರೆಲ್ಲ ಬಂದು ಕೂಡತಿದ್ದಂಗ ಎಲ್ಲರ ಕಣ್ಣು ಆ ಕಡೆ ಹೊರಳಿದವು. ಲಿಂಬ್ಯಾ ಹಾಗೂ ಅವನ ಸರೀಕರು ಹೆಚ್ಚು ರೌಸಿನಿಂದ ಕೂತಿದ್ದರು."

ಈ ಎರಡು ಭಾಷಿಕ ಸಂದರ್ಭಗಳನ್ನು ಭಾಷಾ ಸ್ವರೂಪದ ದೃಷ್ಟಿಯಿಂದ ಸ್ವಲ್ಪ ನೋಡೋಣ. ಇಲ್ಲಿಯ ಭಾಷೆಯ ಶೈಲಿಯಲ್ಲಿ ಆತ್ಮೀಯತೆಯ ಧಾಟಿ ಥಟ್ಟನೆ ಸೆಳೆಯುತ್ತದೆ. ಸಂಭಾಷಣೆಯ ಲಯ ಎದ್ದುಕಾಣುತ್ತದೆ. "ನಿರೂಪಣಾ ತಂತ್ರದ ಬಳಕೆಯಲ್ಲಿ ಹಿರೇಮಠರು ಸಾಧಿಸಿದ ಕೌಶಲ್ಯ ಅಪರೂಪದ್ದು; ಒಂದರ್ಥದಲ್ಲಿ ತನ್ನದಲ್ಲದ ಅನುಭವ ಲೋಕವನ್ನು ಲೇಖಕ ಕಥನ ಕ್ರಮದಲ್ಲಿ ವಿವರಿಸುತ್ತಿದ್ದಾರೆ. ಆದರೆ ಅದು ಬರಿ ವಿವರಣೆಯಾಗಿರದೆ ಚಿತ್ರಕ ಶೈಲಿಯ ನೆಲೆಗೆ ಅವರ ಭಾಷೆ ತಲುಪಿದೆ. ಇದು ಅವರ ಪ್ರತಿಭೆಯ ಗಾಢತೆ ಮತ್ತು ಸಹಜತೆಗಳೆರಡಕ್ಕೂ ಹಿಡಿದ ಕನ್ನಡಿಯಾಗಿದೆ." ಲಂಬಾಣಿ ಜೀವನದ ನಿತ್ಯಾನುಭವಗಳನ್ನು ಹವನ ತಾಂಡಾದ ಸಂದಿಗೊಂದಿಗಳಿಂದಲೂ ತರುತ್ತಾರೆ. ಅವರ ಬದುಕಿನ ವಿವಿಧ ಮಗ್ಗುಲುಗಳನ್ನು ಅಭಿವ್ಯಕ್ತಿಸುತ್ತಾರೆ. ಶಾಲೆಗೆ ವಿದ್ಯಾರ್ಥಿಗಳು ಬರದೇ ಇರುವುದಕ್ಕೆ ಲಂಬಾಣಿಗಳ ಬಡತನವೂ ಒಂದು ಕಾರಣ. ಬಸಪ್ಪ ಮಾಸ್ತರರು ತಾಂಡಾದ ಗುಡಿಸಲುಗಳಿಗೆ ಹೋಗಿ ಮಕ್ಕಳನ್ನು ಶಾಲೆಗೆ ಕಳುಹಿಸಬೇಕೆಂದು ಪಾಲಕರನ್ನು ಕೇಳುತ್ತಾರೆ. "ರುಕ್ಕಿಗೆ ಸಾಲಿ ಬಿಡಿಸಬ್ಯಾಡ್ರಿ ಅಂತ ಹೇಳಲಿಕ್ಕೆ ಬಂದಿದ್ದೆ", "ಯಾನ್ ಮಾಡೂದ್ರಿ? ದಂಥೆ ಐತೆಲ್ಲಾ (ಭಟ್ಟಿ ಸೆರೆ ಮಾಡುವುದು).... ದಗದ ಹೆಚ್ಚಾದಾಗ ಬಿಡಸಬೇಕಾಗತೈತ್ರಿ. ಮೊದಲಿನಿಂದ ಬಂದ

ದಂಧೇರಿ ಇದು... ಕಲ್ಲೂರ ಗಿರಾಕಿ ಬರ್ತಿದ್ರ ಚಲೋ ಐತಿ ದುಡಿಮಿ.. ಹಿರ್ಯಾ ಇದ್ದಾಗಿಂದ ಸುರು ಐತ್ರಿ ಈ ದಂಧೆ." ಸುಲಭಗೊಳಿಸಿ ಹಾಗೆಯೇ ಮೂರ್ತಗೊಳಿಸಿ ನಿರಾಯಾಸ ವಾಗಿ ಭಾಷೆಯಲ್ಲಿ ಅಭಿವ್ಯಕ್ತಿಸುವುದು ಹಿರೇಮಠರಿಗೆ ಸುಲಭ ಸಾಧ್ಯವಾಗಿದೆ.

ಸ್ವಭಾವೋಕ್ತಿ, ಹಿರೇಮಠರ ಲೇಖನಿಗೆ ಬರುವ ಹರಿತ, ಮೊನಚು ವಿಶೇಷ ಗಮನಿಸತಕ್ಕ ಅಂಶವಾಗಿದೆ. ಈ ದೃಷ್ಟಿಯಿಂದಲೂ ಕೃತಿ ಅಭ್ಯಾಸ ಯೋಗ್ಯವಾಗಿದೆ. ಇದನ್ನು ಕೇವಲ ಭಾಷೆಯ ನಿಟ್ಟಿನಿಂದ ಅಲ್ಲದೆ ಶೈಲಿಶಾಸ್ತ್ರದ ಆಸಕ್ತಿಯಿಂದಲೂ ನೋಡಬೇಕು. ಏಕೆಂದರೆ ಇಂತಹ ಸಂದರ್ಭಗಳಲ್ಲಿ ಲೇಖಕರ ಆಲೋಚನೆಗಳು ಹರಳುಗೊಳ್ಳುತ್ತವೆ. ಲೇಖಕರು ಶಿಷ್ಟಕಾವ್ಯಗಳ ಭಾಷೆಯ ಕಟ್ಟುಪಾಡುಗಳನ್ನು ಮೀರಿ ಬಳಕೆ ಕನ್ನಡದ ಪದಪುಂಜಗಳನ್ನು ತಮ್ಮ ವಾಕ್ಯರಚನೆಯಲ್ಲಿ ಅರ್ಥಪೂರ್ಣವಾಗಿ ಬಳಸಿ ಒಟ್ಟು ಭಾಷಿಕ ಸಂದರ್ಭ ಗ್ರಾಹ್ಯವಾಗುವಂತೆ ಮಾಡಿದ್ದಾರೆ.

-ಒಮ್ಮೆ ಕೆಲಸ ಮುಗಿಸಿಕೊಂಡು ಬಸ್‌ಸ್ಟ್ಯಾಂಡಿನ ಬಾಜು ಹೊಂಟಾಗ ನನ್ನನ್ನು ಒಬ್ಬ ಮನಸ್ಯಾ ಪಿಕಿಪಿಕಿ ನೋಡ್ತಾ ನಿಂತಿದ್ದ.

-ನಿಂಗಪ್ಪ ಮತ್ತು ದೇಸಾಯರು ಹೋದ ಮ್ಯಾಲೆ ನನ್ನಷ್ಟಕ್ಕ ವಿಚಾರ ಮಾಡಿದೆ. ಅವರು ಹೇಳಿದ್ದು ಖರೇ ಅನಿಸ್ತು.

-ಹಿಂದಿನ ಸುಗ್ಗಿ ದಿನ ನೆಪ್ಪು ಆಗ್ತಾವು... ಬಾಳ ಹಿಂದಿನ ಸುದ್ದಿ.... ಕಲ್ಲೂರಿಗೆ ಬರ ಬಿದ್ದಿತ್ತು.

ಇಲ್ಲಿ ಗಮನಿಸತಕ್ಕ ಅಂಶವೆಂದರೆ ನಾಮಪದಗಳಿಗೂ ಮತ್ತು ಗುಣವಾಚಕಗಳಿಗೂ ಕಾಣುವ ವ್ಯತ್ಯಾಸ. ನಾಮಪದಗಳಿಗೆ ವಾಕ್ಯದಲ್ಲಿ ಹೆಚ್ಚಿನ ಸ್ವಾತಂತ್ರ್ಯವಿದೆ. ಆದರೆ ಗುಣವಾಚಕಗಳಿಗಿಲ್ಲ. ಅವು ಯಾವಾಗಲೂ ನಾಮಪದ ಮತ್ತು ನಾಮಪದ ಪುಂಜದ ಅಂಗವಾಗಿ ಬರಬೇಕಾಗುತ್ತವೆ. ಇಂತಹ ಬಳಕೆಯ ಸ್ವಾತಂತ್ರ್ಯ ಕಾದಂಬರಿ ಉದ್ದಕ್ಕೂ ಕಂಡುಬರುತ್ತದೆ. ಆದಕಾರಣ ಭಾಷೆ ಕ್ರಿಯಾಶೀಲವಾಗಿ ಚಲಿಸುತ್ತದೆ. ಅಂತಹ ವಾಕ್ಯಗಳ ಮಾದರಿಗಳು ಓದುಗರ ಮೇಲೆ ಅತ್ಯಂತ ಗಾಢ ಪರಿಣಾಮ ಬೀರುತ್ತವೆ. ಸಾಲುಗಳ ಅಳತೆಯಲ್ಲಿ ಹೆಚ್ಚು ಕಡಿಮೆ ಮಾಡುವುದರ ಮೂಲಕ ಸಮಾನ ಶಬ್ದಗಳ ಬಳಕೆ ಲುಪ್ತವಾಗಿ ಶೈಲಿ ಮತ್ತು ಬಾಗು ಬಳುಕುಗಳನ್ನು ಪಡೆದುಕೊಂಡಿರುವುದನ್ನು ನೋಡಬಹುದು.

ಕಾದಂಬರಿ ಉದ್ದಕ್ಕೂ ಲೇಖಕರ ಛಾಪು ಬಿದ್ದಿರುವುದು ಆಡುಮಾತಿನ ವರಸೆಯಿಂದ; ಒಂದು ಬಗೆಯ ಚಿತ್ರಕ ಶಕ್ತಿಯಿಂದ. ಭಾಷೆಯ ಲಯ ಗಮನ ಸೆಳೆಯುತ್ತದೆ. ತಾಳಗತಿಗೆ ಹಾಕುವ ಹೆಜ್ಜೆ ಕುಣಿತದ ನೂಪುರಗತಿಯೂ, ಗಲುಗಲು ಎನ್ನುವ ಗೆಜ್ಜೆಯ ಸದ್ದು ಕೇಳುತ್ತಿರುವ ಅನುಭವ ಓದುಗರಿಗೆ ಆಗುತ್ತದೆ.

ಜೈಜೈ ಕರ್ತರ ಬಾಬಾ ಸೇವಾಲಾಲ
ಭೀಮಾ ಧರ್ಮಣೀರೊ ಪೇಟ, ಜಲ್ಮೇರಿ ಅವತಾರಿ
ಸೇವಾಲಾಲ ಬ್ರಹ್ಮಚಾರಿ, ಕಾಳಾವಾರಿ
ರಾಮ ಅವತಾರಿ, ಚಡೆ ಘೋಡೆ ಪರ ಸವಾರಿ
....
....

ಕಾದಂಬರಿಯ ಮಧ್ಯ ಮಧ್ಯ ಬರುವ ಇಂತಹ ಲಂಬಾಣಿ ಹಾಡುಗಳ ವಿಶಿಷ್ಟ ಲಯ ಕಿವಿಗಳನ್ನು ಅಪ್ಪಳಿಸುತ್ತದೆ. ಕಾದಂಬರಿಯೊಳಗೆ ಪ್ರಾಸ-ಛಂದಸ್ಸು-ಅಲಂಕಾರಗಳ ಬಳಕೆಯ ಮೂಲಕ ಭಾಷೆಯ ಅಭಿವ್ಯಕ್ತಿ ಶಕ್ತಿ ಹೆಚ್ಚಿದೆ. ಭಾಷೆಗೆ ಒಂದು ಬಗೆಯ ಅಡಕತನದ ಸಿದ್ಧಿ ಪ್ರಾಪ್ತವಾಗುತ್ತದೆ. ಅಂದರೆ ಶೈಲಿಯ ಮುಖ್ಯ ತುಡಿತವೆಂದರೆ ಅನುಭವವನ್ನು ಹರಳು ಗಟ್ಟಿಸುವ ಪ್ರಯತ್ನ. ಅಲ್ಲಿ ಕಾದಂಬರಿಕಾರರ ಪ್ರತಿಭಾಶಕ್ತಿ ಮತ್ತು ವಸ್ತು ಪ್ರತಿರೂಪ ಭಾಷೆಯನ್ನು ಪಾಕಗೊಂಡಿರುತ್ತದೆ.

'ಹೆಸರು'ಗಳು ಸಂಸ್ಕೃತಿಯ ಘಟಕಗಳು ಒಂದು ಭಾಷಾಸಮುದಾಯವನ್ನು ಪುನಾರಚಿಸುವಾಗ ಹೆಸರುಗಳು ಪ್ರಮುಖ ಪಾತ್ರವಹಿಸುತ್ತವೆ. ಹಿರೇಮಠರು ಲಂಬಾಣಿ ಸಮುದಾಯದ ಹಲವಾರು ವ್ಯಕ್ತಿನಾಮಗಳನ್ನು ಸಂದರ್ಭಕ್ಕೆ ತಕ್ಕಂತೆ ಕೊಡುತ್ತಾರೆ. ಸೋಮಲ್ಯಾನಾಯಕ, ಮಾನ್ಯಾನಾಯಕ, ಧೂಳ್ಯಾ, ಖುಬ್ಯಾ ಇಂತಹ ಪುರುಷ ವ್ಯಕ್ತಿನಾಮಗಳು; ಝುಮ್ರಿ, ಖೇಮ್ಲಿ, ಲಚ್ಚಿ, ಡುಗ್ಲಿಬಾಯಿ, ರುಕ್ಕಿ, ಗೋಮ್ಲಿ, ಹಾಂಕಿಬಾಯಿ ಇಂತಹ ಸ್ತ್ರೀ ವ್ಯಕ್ತಿನಾಮಗಳು ಕಾದಂಬರಿಯಲ್ಲಿ ಬಳಕೆಯಾಗಿವೆ. ಕಾದಂಬರಿಯಲ್ಲಿ ಪಾತ್ರಧಾರಿಗಳು ಆಯಾ ಪಾತ್ರವನ್ನುದ್ದೇಶಿಸಿ ಮಾತನಾಡುವಾಗ ಆಯಾ ವ್ಯಕ್ತಿಗಳನ್ನು ಕರೆಯುವಾಗ ಅವರ ಬಗ್ಗೆ ಪ್ರೇಕ್ಷಕರ ಓದುಗರ ಮನೋಧೋರಣೆಯೂ ಬದಲಾಗುತ್ತದೆ. ಆಯಾವ್ಯಕ್ತಿಗಳನ್ನು ಸಂಬೋಧಿಸುವಾಗ ಹೆಚ್ಚು ಒತ್ತುಕೊಟ್ಟು ದೀರ್ಘವಾಗಿ ಉಚ್ಚರಿಸುತ್ತಾರೆ. ಆ ರೀತಿಯ ಉಚ್ಚಾರಣೆ ನಾಟಕೀಯವಾಗಿರದೆ ತುಂಬ ಸಹಜವಾಗಿ ರುತ್ತದೆ. ಅದರಂತೆ ಹವನ ತಾಂಡಾದ ಕೇರಿ, ಓಣಿ ದೈವಗಳು ಇವೆಲ್ಲ ಲಂಬಾಣಿ ಸಂಸ್ಕೃತಿಯನ್ನು ಪರಿಕರವನ್ನು ಅರ್ಥಮಾಡಿಕೊಳ್ಳಲು ತುಂಬ ನೆರವಾಗುತ್ತವೆ.

ಕಾದಂಬರಿ ಆಡುನುಡಿಯ ಮೂಲಕವೇ ಸಾಗುವುದರಿಂದ ಪ್ರಾದೇಶಿಕ ವೈವಿಧ್ಯತೆಯ ಶಬ್ದಗಳು ಕಾದಂಬರಿಯ ಉದ್ದಕ್ಕೂ ದೊರೆಯುತ್ತವೆ ಎಂಬುದರ ಬಗ್ಗೆ ಬೇರೆ ಹೇಳ ಬೇಕಾಗಿಲ್ಲ. ಕೆಲವೊಂದನ್ನು ಇಲ್ಲಿ ಕೊಡಲಾಗಿದೆ. ಜರಾ-ಜ್ವಲ್ಪ, ತಾಸು-ಗಂಟೆ, ದೌಡ್-ಬೇಗ, ತ್ರಾಸ್-ತೊಂದರೆ, ಸನೇಕ-ಹತ್ತಿರ, ಪಾರ-ಹುಡುಗ, ಪಾರಿವಾಳ-ಚಿಕ್ಕಮಕ್ಕಳು, ದಗದ-ಕೆಲಸ. ಕೊಪ್ಪಳ ಪರಿಸರದ ಇಂತಹ ನೂರಾರು ಉಪಭಾಷಿಕ ರೂಪಗಳು ಕಾದಂಬರಿಯಲ್ಲಿ ಸಹಜವಾಗಿ ಬಳಕೆಯಾಗಿವೆ. ಅದರಂತೆ ಕಳಸಾತ್-ಕ್ಷೇಮ ಸಮಾಚಾರ,

ಕಾಂಚಳಿ-ಕುಪ್ಪುಸ, ಗೇರಿಯಾ-ಮುಂದಾಳು, ಮುಖಂಡ, ಚೂಲಿ-ಒಲೆ, ಲಂಬಾಣಿ ಭಾಷೆಯ ಇಂತಹ ಪದಗಳೂ ಸಹಿತ ವಾಕ್ಯಗಳ ಮಧ್ಯ ಬಂದು ಕಾದಂಬರಿಗೆ ಕಳೆತಂದಿವೆ. ಪಾತ್ರಗಳು ಇಂತಹ ಪದಗಳನ್ನು ಬಳಸುವುದರಿಂದ ಓದುಗರಿಗೆ ಹೆಚ್ಚು ಹತ್ತಿರವಾಗಿವೆ. ಇದರಿಂತ ಭಾಷಾ ಸಂಕೀರ್ಣತೆ ದೂರಮಾಡಿ ಹೆಚ್ಚು ಘನವಾಗುವ ವಿಚಾರಗಳನ್ನು ತಿಳಿಗೊಳಿಸಿ ನಿಚ್ಚಳವಾಗಿ ಕಥೆಯ ಆಶಯ ಜನರಿಗೆ ಅರ್ಥವಾಗುವಂತೆ ಮಾಡುತ್ತಾರೆ.

ಕಾದಂಬರಿಕಾರರು ಆ ಮೂಲಕ ಕನ್ನಡ ಶಬ್ದ ಸಂಪತ್ತನ್ನು ವಿಸ್ತಾರಗೊಳಿಸುವ ಪ್ರಯತ್ನ ಮಾಡಿದ್ದಾರೆ. ಹೀಗೆ, ಭಾಷೆಯ ಜೊತೆಗೆ ಚೆಲ್ಲಾಟವಾಡುವುದಕ್ಕೆ ಪದಗಳ ಮತ್ತು ಪದಪುಂಜಗಳ ಸಾಂಪ್ರದಾಯಿಕ ಅರ್ಥವನ್ನು ಅರಗಿಸಿಕೊಂಡಿದ್ದರೆ ಮಾತ್ರ ಸಹೃದಯರಿಗೆ ಲೇಖಕರ ಆಶಯ ಅರ್ಥವಾಗುತ್ತದೆ. ಒಂದು ಭಾಷೆಗೆ ಇಂತಹ ರಚನೆಗಳನ್ನು ಬಳಸುತ್ತ ಹೊರಟಾಗಲೇ ಅದರ ಕಸುವು ಹೊರಬೀಳುವುದು. ಲೇಖಕರು ಅಂತಹ ಪ್ರಯತ್ನ ಮಾಡುವುದರ ಮೂಲಕ ಕನ್ನಡ ಶಬ್ದ ಸಾಮರ್ಥ್ಯದ ಸಾಧ್ಯತೆಗಳನ್ನು ವಿಸ್ತರಿಸಿದ್ದಾರೆ. ಅಂತಹ ಸಂದರ್ಭದಲ್ಲಿ ಪಠ್ಯಪುನರ್ ಸಂದರ್ಭಕ್ಕೆ ಒಳಗಾಗಿ ಭಾಷೆ, ಹಿರೇಮಠರ ಕಾದಂಬರಿ ಭಾಷೆಯಾಗಿ ರೂಪುತಾಳುತ್ತದೆ. ಆಗ ಪಠ್ಯದ ಕೇಂದ್ರವು ಓದುಗರ ದೃಷ್ಟಿಕೋನಕ್ಕೆ ಅನುಗುಣವಾಗಿ ತನ್ನ ಕೇಂದ್ರವನ್ನು ಬದಲಾಯಿಸುತ್ತಲೇ ಇರುತ್ತದೆ.

ಒಟ್ಟಾರೆ, 'ಹವನ' ಕಾದಂಬರಿಯ ಭಾಷಾ ಬಳಕೆ ಮತ್ತು ಅನನ್ಯತೆ ದೃಷ್ಟಿಯಿಂದ ಕನ್ನಡ ಸಾಹಿತ್ಯದಲ್ಲಿಯೇ ಒಂದು ಅಪರೂಪದ ಕಾದಂಬರಿಯಾಗಿದೆ. ಒಂದು ಸಮುದಾಯದ ಬದುಕನ್ನು ಆ ಪ್ರದೇಶದ ಭಾಷೆಯಲ್ಲಿಯೇ ಒಂದು ಅಪರೂಪದ ಕಾದಂಬರಿಯಾಗಿದೆ. ಒಂದು ಸಮುದಾಯದ ಬದುಕನ್ನು ಆ ಪ್ರದೇಶದ ಭಾಷೆ ಯಲ್ಲಿಯೇ ಅಭಿವ್ಯಕ್ತಿಸುವುದರಿಂದ ಕನ್ನಡ ಭಾಷೆಯ ರಚನೆಯಲ್ಲಿ ಅದರದೇ ಆದ ಹಲವಾರು ವೈಶಿಷ್ಟ್ಯಗಳಿದ್ದು ಅವುಗಳನ್ನು ಕಂಡುಕೊಳ್ಳುವ ಹಾಗೂ ಅವರದೇ ಆದ ಪರಂಪರೆಯನ್ನು ಬೆಳೆಸಿಕೊಳ್ಳುವ ಅವಶ್ಯಕತೆಯಿದೆ. ಅದಕ್ಕಾಗಿ ಇಂತಹ ಪ್ರಾದೇಶಿಕ ಕಾದಂಬರಿಗಳ ಭಾಷಿಕ ಸ್ವರೂಪದ ಅಧ್ಯಯನ ನಡೆಯಬೇಕಾಗಿದೆ.

ಆಕರಗ್ರಂಥ

೧. ಮಲ್ಲಿಕಾರ್ಜುನ ಹಿರೇಮಠ, ೨೦೦೧, 'ಹವನ', ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ.

೪೭

ರಾಘವೇಂದ್ರ ಪಾಟೀಲ ಅವರ ಕಥನಭಾಷೆ

ರಾಘವೇಂದ್ರ ಪಾಟೀಲರ ಕಥನಕ್ರಮ ಒಂದು ರೀತಿಯಲ್ಲಿ ನಮ್ಮ ಸಂಸ್ಕೃತಿಯ ಸ್ಮೃತಿಸಂಚಯವೆಂಬಂತೆ ರೂಪುಗೊಂಡಿದೆ. ನಮ್ಮಲ್ಲೇ ಇರುವ 'ದೇಸಿ ತಿಳಿವಳಿಕೆ' ಹಾಗೂ ಪಶ್ಚಿಮದಿಂದ ಹರಿದು ಬರುತ್ತಿರುವ 'ಜ್ಞಾನಪ್ರವಾಹ' ಇವೆರಡರ ಸಂಘರ್ಷದ ಒಡಲಿನಲ್ಲಿ ಹುಟ್ಟಿಬರುವ ಅರಿವು ನಮ್ಮನ್ನು ಮುನ್ನಡೆಸಬೇಕಾಗಿದೆ ಎಂಬುದು ಪಾಟೀಲರು ಎಚ್ಚರದಿಂದ ರೂಢಿಸಿಕೊಂಡು ಬರುವ ನಿಲುವಾದರೂ ಅವರ ಭಾಷೆಯ ಒಲವು ಸಂಪೂರ್ಣವಾಗಿ ಈ ನೆಲದ ವೈವಿಧ್ಯತೆಯನ್ನು ಸ್ವೀಕರಿಸಿ ಅದರ ಅನನ್ಯತೆಯನ್ನು ಗುರುತಿಸುವುದಾಗಿದೆ. ಪಾಟೀಲರ ಕಥಾಸಂಕಲನಗಳು(ಒಡಪುಗಳು, ಪ್ರತಿಮೆಗಳು, ದೇಸಗತಿ, ಮಾಯಿಯ ಮುಖಗಳು) ಮತ್ತು ಕಾದಂಬರಿಗಳನ್ನು(ಬಾಳವ್ವನ ಕನಸುಗಳು ಮತ್ತು ತೇರು) ಅನುಲಕ್ಷಿಸಿ ಅವರ ಕಥನ ಭಾಷೆಯ ಸ್ವರೂಪವನ್ನು ಸ್ಥೂಲವಾಗಿ ವಿವೇಚಿಸುವುದು ಈ ಪ್ರಬಂಧದ ಮುಖ್ಯ ಉದ್ದೇಶವಾಗಿದೆ.

ಒಂದು ಸಮುದಾಯದ ಸಂಸ್ಕೃತಿಯನ್ನು ಹಾಗೂ ಒಬ್ಬ ಬರಹಗಾರನ ಆಶಯವನ್ನು ಅರಿಯಲು ಭಾಷೆ ಪ್ರಮುಖ ಪಾತ್ರವಹಿಸುತ್ತದೆ. ಅದರಂತೆ ಆ ಬರಹಗಾರನ ಪ್ರಾದೇಶಿಕ ವಿದ್ಯಮಾನಗಳು ಮತ್ತು ಪರಂಪರೆಯ ಪ್ರಭಾವವು ಭಾಷೆಯ ಮೇಲೆ ಆಗಿರುತ್ತದೆ. ಈ ರೀತಿಯಲ್ಲಿ ಪ್ರದೇಶ, ಸಮುದಾಯ ಮತ್ತು ಭಾಷೆ ಇವು ಪರಸ್ಪರ ನೆರವು ಪಡೆದು, ನೆರವು ನೀಡುತ್ತವೆ. ಆ ಭಾಷಿಕ ಪ್ರಕ್ರಿಯೆ ಕೃತಿಯಲ್ಲಿ ಅಭಿವ್ಯಕ್ತವಾಗುತ್ತದೆ. ಒಂದು ಕೃತಿಯ ಆಶಯ ವಿನ್ಯಾಸವನ್ನು ಭಾಷೆಯ ರಚನೆ ಮತ್ತು ಬಳಕೆಯ ಮೂಲಕ ತಿಳಿಯಬಹುದು.

೧

ಕಥನ ಭಾಷೆಯಲ್ಲಿ ಸಾಮಾನ್ಯವಾಗಿ ಎರಡು ನೆಲೆಗಳು/ನಿಯೋಗಗಳು ಇರುತ್ತವೆ. ಅ. ನಿರೂಪಕನ/ಕತೆಗಾರನ ಭಾಷೆ ಆ. ಪಾತ್ರಗಳ ಭಾಷೆ. ಭಾಷೆ ಈ ಎರಡು

ನಿಯೋಗಗಳನ್ನು ಹೊರಲು ಸನ್ನದ್ಧವಾಗುತ್ತದೆ. ಈ ಎರಡು ವಲಯಗಳಲ್ಲಿಯ ಭಾಷಾ ಬಳಕೆ ಪಾಟೀಲರ ಕಥನಗಳಲ್ಲಿ ಮುಂದುವರೆದಿದೆ. ಈ ಎರಡು ಕಲಾತ್ಮಕ ನೆನಪುಗಳನ್ನು ನಿರೂಪಕರು ಅರ್ಥಪೂರ್ಣವಾಗಿ ರೇಖಿಸಿದ್ದಾರೆ. ಉದಾಹರಣೆಗೆ 'ಒಡಪುಗಳು' ಎಂಬ ಕತೆಯು, ಆಪ್ತ ಮಾತಿನ ರೀತಿಯಲ್ಲಿಯೆ ಶುರುವಾಗುತ್ತದೆ.

> ಅ. "ನಾನು ಇಲ್ಲಿಯೇ ಹೇಳಿ ಬಿಡುತ್ತೇನೆ, ಈ ಹನುಮಿ ಯಾರೆಂದು ....ಹನುಮೀ ನಾನೂ ಸಾಲಿನಲ್ಲಿ ಪಕ್ಕ ಪಕ್ಕದಲ್ಲೇ ಕುಡುತ್ತಿದ್ದೆವು. ಒಂದಕ್ ಬಿಟ್ಟಾಗ ಅವಳು ನನ್ನ ಪಾಟೀ ಚೀಲ ದಲ್ಲಿಯ ಹುಣಿಸೆ, ಬೋರೆ ಕಾಯಿಗಳನ್ನು ಕೊಡುತ್ತಿದ್ದಳು. ನಾನು ನನ್ನ ಕಿಸೆಯಿಂದ ಪುಟಾಣಿ ಬೆಲ್ಲವನ್ನು ಕೊಡುತ್ತಿದೆ..... ಅವಳಿಗೆ ನಾನು, ರ, ಠ, ಈ, ಕ. ಬರೆದು ಕೊಡುತ್ತಿದ್ದೆ. ಶಾಲೆಯ ಆ ವರ್ಷ ಮುಗಿಯಿತು."

ಸುಮಾರು ದಿವಸಗಳ ನಂತರ ಹನುಮಿ ನಿರೂಪಕನಿಗೆ ಭೇಟಿಯಾದಾಗ ಅವಳ ಮನಸ್ಸಿನಲ್ಲಿದ್ದ ಇಂಗಿತ ಅವಳ ಭಾಷೆಯಲ್ಲಿ ಅಭಿವ್ಯಕ್ತವಾಗುತ್ತದೆ.

> ಆ. "ಗೌಡಾ, ನೀ ನನ್ನ ವಂದನೇಯತ್ತಾ ಪಾಸ ಮಾಡಸಾಕ ಯಾಕ ಹಟಾ ಮಾಡಿದಿ? ಸೂಟ್ಯಾಗೆಲ್ಲ ಬಂದಾಗ ನಮ್ಮ ಗುಡ ಸಲಕ್ಯಾಕ ಬರ್ತಿದ್ದಿ? .... ಯಾಕ ನನ್ನ ಮಿಕಿಮಿಕಿ ನೋಡುತ್ತಿದ್ದಿ?"

ಇಂತಹ ಪ್ರಶ್ನೆಗಳು ಅಸಂಬದ್ಧ ಅನ್ನಿಸಿದರೂ ಆಯಾ ಅನೌಪಚಾರಿಕ ಭಾಷಿಕ ಸಂದರ್ಭದಲ್ಲಿ ಇಟ್ಟು ನೋಡಿದಾಗ ಸುಸಂಬದ್ಧವಾಗಿಯೇ ಕಾಣಿಸುತ್ತವೆ. ಅಂತಹ ಸಂದರ್ಭದಲ್ಲಿ ಭಾಷೆಯ ಸಾಮಾಜಿಕ ಚಹರೆಯನ್ನು ಗುರುತಿಸಬಹುದು. ಎರಡು ಸಾಮಾಜಿಕ ವಲಯಗಳಲ್ಲಿ ಭಾಷೆ, ಬಳಕೆಯಾದಾಗ ಮೊದಲನೆಯ ನಿಯೋಗದಲ್ಲಿ ಕತೆಯ ವಿವರಣೆಯನ್ನು ಸಾಗಿಸುವ ಶೈಲಿ ಇದ್ದರೆ, ಸಹೃದಯ ವಾಚಕರಿಗೆ ಸಾಮಾಜಿಕ ಚಿಂತನೆ ಹೆಚ್ಚುವ ಶೈಲಿ ಎರಡನೆಯದಲ್ಲಿದೆ. "ಯಾಕ ನನ್ನ ಮಿಕಿ ಮಿಕಿ ನೋಡತ್ತಿದ್ದಿ?" ಎಂಬ ಪ್ರಶ್ನಾರ್ಥಕ ವಾಕ್ಯ ಒಟ್ಟು ಭಾಷಿಕ ಸಂದರ್ಭವನ್ನು ಧ್ವನಿಸುತ್ತದೆ. ಅಂದರೆ ಅದನ್ನು ಹೀಗೂ ಹೇಳಬಹುದು. "ನಿರೂಪಣೆ" ಮತ್ತು "ವರ್ಣನೆ/ಧ್ವನಿ" ಇವುಗಳನ್ನು ಬೇರೆ ಮಾಡಿ ನೋಡಬೇಕು. ಇದನ್ನೇ ಸರಳವಾಗಿ ಸೂತ್ರೀಕರಿಸಿ ಹೇಳುವುದಾದರೆ "ಏನು" ಎಂಬುದರ ಕಡೆಗೆ ನಿರೂಪಣೆ ಮುಖ ಮಾಡಿದರೆ, "ಏಕೆ/ಹೇಗೆ" ಎಂಬುದರ ಕಡೆಗೆ ವರ್ಣನೆ ಮುಖ ಮಾಡುತ್ತದೆ. 'ಒಂದು ಸೋಲಿಗೆ ಗೋಧಿ', 'ಉರುಳುವ ಗಾಲಿ...., ಗುಡುಗುಡು ಮುಗಿಲು' ಇಂತಹ ಕತೆಗಳು ಮನುಷ್ಯನ ಅಸಹಾಯಕತೆ, ಮೃದುವಾದ ಕೋಪ-ಕೌರ್ಯವನ್ನು ಚಿತ್ರಿಸುತ್ತವೆ. ಇಕ್ಕಟ್ಟಿನ ಕ್ಷಣಗಳಲ್ಲಿ ಮನುಷ್ಯನ ಭಾವನೆಗಳು ಭಾಷೆಯ ಮೂಲಕ ಸಹಜವಾಗಿ ಅಭಿವ್ಯಕ್ತವಾಗುತ್ತವೆ ಎಂಬುದು

ಗಮನಾರ್ಹ. ಪಾಟೀಲರ ಇತರ ಕತೆಗಳಲ್ಲಿಯೂ ಇಂತಹ ಭಾಷಿಕ ತಂತ್ರ ತುಂಬ ಸ್ವಾರಸ್ಯಕರವಾಗಿ ಬಳಕೆಯಾಗಿದೆ. ಇದು ಅವರದ್ದೇ ಆದ ಕಥನ ಕ್ರಮದ ವೈಶಿಷ್ಟವೂ ಆಗಿದೆ, ಕೂಡ.

೨

ಯಾವುದೇ ಒಂದು ಸಾಹಿತ್ಯ ಪ್ರಕಾರದಲ್ಲಿ 'ಭಾಷೆ' ಮತ್ತು 'ಶೈಲಿ' ಇವು ಪ್ರತ್ಯೇಕ ಪರಿಶೀಲನಾವಲಯಗಳಲ್ಲ. ಶೈಲಿಕೂಡ ಭಾಷೆಯ ಒಂದು ಅಂಗ. ಹಾಗೂ ಶೈಲಿಯನ್ನು ಕುರಿತ ಚರ್ಚೆಯಲ್ಲಿ ಭಾಷೆಯನ್ನು ಕುರಿತ ವಿವೇಚನೆ ಕೂಡ ಅನಿವಾರ್ಯವಾಗುತ್ತದೆ. ಹಾಗೆ ನೋಡಿದರೆ ಶೈಲಿ ಎಂಬುದು ಅಭಿವ್ಯಕ್ತಿಯ ವಿಧಾನ. ಅದರ ಪ್ರಕಟಿತ ರೂಪವೇ ಭಾಷೆ. ತಾತ್ವರ್ಯವಿಷ್ಟೆ, ಶೈಲಿ ಶಾಸ್ತ್ರವು ಅನ್ವಯಿಕ ಭಾಷಾಶಾಸ್ತ್ರದ ಒಂದು ಶಾಖೆಯಾಗಿದೆ. ಒಬ್ಬ ಬರೆಹಗಾರನ ನಿರೂಪಣ ಕ್ರಮವನ್ನು ವಿವೇಚಿಸುವಾಗ ಈ ಸಂಗತಿಯನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಕಥನ ಕ್ರಿಯೆಯು ಯಾವಾಗಲೂ 'ಭಾಷಾ ಕ್ರಿಯೆ'ಗಳ ಹಾಗೂ ಭಾಷಾ ಘಟನೆಗಳ ಮೂಲಕ ಸಾಮಾಜಿಕ ವಿನ್ಯಾಸದ ಒಳಗೆ ತನ್ನ ಆಕಾರವನ್ನು ರೂಪಿಸಿಕೊಂಡಿರುತ್ತದೆ. ಅದನ್ನು ಹೀಗೂ ಹೇಳಬಹುದು. ಕಥನದ 'ಭಾಷಾಶಿಲ್ಪ'ಕ್ಕೂ ಹಾಗೂ ಅದರ ಶೈಲಿಗೂ ನಿಕಟವಾದ ಸಂಬಂಧವಿದೆ. ಜನಜೀವನದ ಚಿತ್ರಣ, ಸಾಮಾಜಿಕ ಜಾಗೃತಿ, ನಿರೂಪಕನ ಅನುಭವಗಳು ಈ ಭಿನ್ನ ಆಯಾಮಗಳು ಕಥಾಶಿಲ್ಪಕ್ಕೆ ವಸ್ತು ಜಗತ್ತನ್ನು ಒದಗಿಸುತ್ತವೆ ಯಲ್ಲದೆ ಕತೆಯ ಶೈಲಿಯನ್ನೂ ನಿರೂಪಿಸುತ್ತವೆ ಎಂಬುದು ಗಮನಾರ್ಹ.

ಉದಾಹರಣೆ: 'ಬಾಳವ್ವನ ಕನಸುಗಳು' ಕಾದಂಬರಿಯಲ್ಲಿ ಪಾಟೀಲರು ತಮ್ಮದೇ ಆದ ಶೈಲಿಯ ಬಹುತ್ವದ ನೆಲೆಯನ್ನು ಪ್ರಕಟಿಸಿದ್ದಾರೆ. ಭಾಷಿಕ ಸಂವಹನಕ್ಕೆ ತಕ್ಕಂತೆ ಸರಳವಾದ ಮತ್ತು ನೇರವಾದ ವಿಧಾನವನ್ನು ಬಳಸಿದ್ದಾರೆ. ಅದೆಂದರೆ ನೇರವಾಗಿ ತಾವೇ ನಿರೂಪಿಸುವುದು. ಆ ಮೂಲಕ ಎರಡು ಸಾಮಾಜಿಕ ಸ್ತರಗಳು (social Statification) ನಿರ್ಮಾಣಗೊಳ್ಳುತ್ತವೆ. ಅವೆಂದರೆ ೧. ರೂಪುಗೊಂಡ ಸ್ತರ (Paradigm Statification), ೨. ಘಟನಾವಳಿ ಸ್ತರ (event Statification) ಇವೆರಡರ ಮುಖಾಮುಖಿ ಮತ್ತು ಅಂತರ್‌ಕ್ರಿಯೆ ಕಥನಕ್ಕೆ ಬಲವಾದ ಆಯಾಮವಾಗಿದೆ. ಆ ಕಥನವು ಒಂದು ಮನೆಯ ಕಥೆಯನ್ನು ಹೊತ್ತುಕೊಂಡು ಸಾಗುತ್ತದೆ. ಬಾಳವ್ವ ತನ್ನ ಕುಟುಂಬದ ಬಗ್ಗೆ ಇಟ್ಟುಕೊಂಡ ಆಸೆ ಮತ್ತು ಕನಸುಗಳು ಅವುಗಳಿಗಾಗಿ ಪಡುವ ಶ್ರಮ, ಕನಸನ್ನು ನನಸಾಗಿಸಲು ಹಗಲಿರುಳು ದುಡಿಯುವ ಮಹಿಳೆ ಕೊನೆಗೆ ತಾನು ಕಂಡ ಕನಸು ನನಸಾಗದೆ ಹಾಗೆಯೇ ಕನಸಾಗಿ ಉಳಿದು ಬಿಡುವ ಕತೆಯನ್ನು ಆ ಕಥನ ತುಂಬ ಸ್ವರಸ್ಯಕವಾಗಿ ರೂಪುಗೊಂಡಿದೆ.

ನಿರೂಪಕರು ಅವಳ ಮನೋಗತವನ್ನು ಅರ್ಥಪೂಣವಾಗಿ ಹೇಳಿದ್ದಾರೆ. ಆ ಭಾಷಿಕ ಕ್ರಿಯೆ ಹೀಗಿದೆ: "ಬಾಳವ್ವ ಈ ಊರಿಗೆ ಬಂದಾಗಿಂದ ಊರೊಳಗಿನ ಎಲ್ಲಾ

ಹಾರೂರ ಮನಿಗಳೊಳಗೆ ಮಾತ್ರ ಕಸ ಮುಸರೀ ಕೆಲಸ ಮಾಡುತ್ತಾಳೆ. ತಿಂಗಳಿಗೆ ಎರಡು-ಮೂರು ರೂಪಾಯಿಯನ್ನು ಕೊಟ್ಟೆ ಕೊಡುತ್ತಿದ್ದರು". ಪರಿಸರ-ಮನುಷ್ಯ ಸಂಬಂಧವೂ ಸಹಿತ ಕಥನದ ಭಾಷಾಲಯ/ಗತಿಯಲ್ಲಿ ಸೇರಿಕೊಳ್ಳುತ್ತದೆ. ಹೀಗೆ, ಅನೇಕ ಅರ್ಥ ಪರಂಪರೆಗಳನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಭಾಷೆಯ ಲಯ, ಕಥನದ ಅರ್ಥವನ್ನು ಎದೆಯದನಿಯಾಗಿ ಆ ದನಿಯನ್ನು ಪ್ರಗತಿಪರ ಸೃಜನಶೀಲ ಶಕ್ತಿಯಾಗಿ ಮಾರ್ಪಡಿಸಲು ಪಾಟೀಲರು ಯತ್ನಿಸಿದ್ದಾರೆ. ಬಾಳವ್ವನ ಮಾತುಗಳನ್ನು ಕೇಳಿದಾಗ ವಾಸ್ತವದ, ವ್ಯವಹಾರಿಕ ಜಗತ್ತು ಸ್ಫುಟವಾಗಿ ವ್ಯಕ್ತವಾಗುತ್ತದೆ.

- ಸಂಜಿ ಗಾಡಿಗಳೆಲ್ಲಾ ಹೋದ ಮ್ಯಾಲೆ ಒಬ್ಬಾಕಿ ಆದಿ
- ಕಾಯ್ದೇ-ಗೀಯ್ದೇ ಅಂತ ಅಂಜಿಕಿ ಬರತ್ತದೀಯವ್ವಾ

ಹೆಣ್ಣಿನ ಇಂತಹ ಅಸಹಾಯಕ ಮಾತುಗಳನ್ನು ಇಂದಿನ ನೆಲೆಯಲ್ಲಿ ವಿಶ್ಲೇಷಿಸಿದಾಗ ಭಾಷಾ ಬಳಕೆಯ ಹೊಸ ಬಗೆಯ ಸಾಮಾಜಿಕ ಆಯಾಮಗಳು ಅನಾವರಣಗೊಳ್ಳುತ್ತವೆ. ಪಾಟೀಲರು ಒಂದು ಭಾಷಾ ಸಮುದಾಯದಲ್ಲಿ ಕಂಡುಬರುವ ಭಾಷಿಕ ಸಂಕಥನಗಳನ್ನು ತಮ್ಮ ಕಥನದ ವಸ್ತುವಾಗಿಸಿಕೊಂಡು ಅಭಿವ್ಯಕ್ತಿಸಿದ್ದಾರೆ. ರಾಜೇಂದ್ರ ಚೆನ್ನಿ ಅವರು ಒಂದು ಸಂದರ್ಭದಲ್ಲಿ ಹೇಳಿದ ಮಾತನ್ನು ಬಳಸಿ ಹೇಳುವುದಾದರೆ 'ಪಾಟೀಲರು ವಾಸ್ತವವಾದಿ ಶೈಲಿಯಲ್ಲಿ ಬರೆಯುತ್ತಾ ಕೆಲವೊಮ್ಮೆ ಫ್ಯಾಂಟಸಿಯನ್ನು ತಂತ್ರವಾಗಿ ಬಳಸಿಕೊಳ್ಳುವ ಪಾಟೀಲರ ಬರಹವು ಅನುಭವ ತೀವ್ರತೆಯ ಸಂದರ್ಭಗಳಲ್ಲಿ ಸಹಜವಾಗಿ ರೂಪಕ ಶಕ್ತಿಯನ್ನು ಪಡೆದುಕೊಳ್ಳುತ್ತ ಬಂದಿದೆ. ಕನ್ನಡದ ಪ್ರಾದೇಶಿಕ ಭಾಷಾ ಪ್ರಕಾರವೊಂದನ್ನು ಅವರು ಸಶರೀರವಾಗಿ, ಧ್ವನಿಪೂರ್ಣವಾಗಿ ಬಳಸಿಕೊಳ್ಳುತ್ತಾರೆ. ಮುಖ್ಯವಾಗಿ ಅದನ್ನು ಪ್ರಾದೇಶಿಕ ವೈವಿಧ್ಯತೆಗಾಗಿ ಬಳಸಿಕೊಳ್ಳುವುದಿಲ್ಲ. ಒಂದು ಸಮುದಾಯದ ಸಂವೇದನೆಯ ಸಹಜ ಅಭಿವ್ಯಕ್ತಿಯಾಗಿ, ಅಂದರೆ ಆ ಸಮುದಾಯವು ಪರಿಭಾವಿಸುವ ಅನನ್ಯ ರೀತಿಯ ಮೂರ್ತಶರೀರವಾಗಿ ಬಳಸಿಕೊಳ್ಳುತ್ತಾರೆ. ಪಾಟೀಲರ ಹಲವಾರು ಪಾತ್ರಗಳು ಪೂರ್ಣ ಶರೀರಿಯಾಗಿ ಕತೆಗಳಲ್ಲಿ ಮೂಡಿಬರುವುದಕ್ಕೆ ಇಂತಹ ಸೂಕ್ಷ್ಮವಾದ ಭಾಷಾ ಬಳಕೆಯೂ ಕಾರಣವಾಗಿದೆ.' ಚೆನ್ನಿ ಅವರ ಮಾತು ಅರ್ಥಪೂರ್ಣವಾಗಿದೆ. ಈ ಅರ್ಥದಲ್ಲಿ ಪಾಟೀಲರು ಸಾಂಪ್ರದಾಯಕ ಗದ್ಯದ ಶೈಲಿಯನ್ನು ಮೀರಿದ್ದಾರೆ. ಆ ಮೂಲಕ ಆಧುನಿಕ ಕಥನಗಳ ಶೈಲಿಯ ಬೆಳವಣಿಗೆಗೆ ತಕ್ಕ ಭೂಮಿಕೆ ಯನ್ನು ರಚಿಸಿದ್ದಾರೆ ಎಂಬುದು ದಾಖಲಾರ್ಹ ಸಂಗತಿಯಾಗಿದೆ.

೩

ಭಾಷೆ, ಯಾದೃಚ್ಛಿಕವಾಗಿರುವುದರಿಂದ ಭಾಷೆಯಲ್ಲಿ ಬಳಕೆಯಾಗುವ ಶಬ್ದಗಳಲ್ಲಿ ಅರ್ಥ ಅಡಗಿರುವುದಿಲ್ಲ. ಶಬ್ದಗಳು ಕಾಲ, ದೇಶ, ಪರಿಸರ, ಸಂಸ್ಕೃತಿಗಳಿಂದ ಅರ್ಥವನ್ನು

ಪಡೆದುಕೊಳ್ಳುತ್ತವೆ. ಇದನ್ನು ಅನುಲಕ್ಷಿಸಿದರೆ ಪಠ್ಯಕ್ಕೆ ಒಂದು ಅರ್ಥವಿರುವುದಿಲ್ಲ. ಅದು ಓದುಗರ ಸೃಷ್ಟಿಗೆ ಅನುಗುಣವಾಗಿ ಹುಟ್ಟಿಕೊಳ್ಳುತ್ತದೆ. ಒಂದು ವಿಷಯಕ್ಕೆ ಒಂದು ರಚನೆಯಿದೆ ಎಂದು ಕೊಂಡಾಕ್ಷಣವೇ ಈ ರಚನೆಯೇ ಪಠ್ಯದ ವಸ್ತು ಎಂದು ಹೇಳಿಬಿಡಬಹುದು. ಇದು ಒಂದು ಕೇಂದ್ರವನ್ನು ಹುಡುಕಿದಂತೆ. ಆದರೆ ಪಠ್ಯದ ಕೇಂದ್ರವು ಯಾವಾಗಲೂ ವಾಚಕರ ಭಾಷಾ ದೃಷ್ಟಿಕೋನಕ್ಕೆ ಅನುಗುಣವಾಗಿ ತನ್ನ ಕೇಂದ್ರವನ್ನು ಬದಲಾಯಿಸುತ್ತಲೇ ಇರುತ್ತದೆ. ಏಕೆಂದರೆ ಭಾಷೆ, ಪುನರ್ ಸಂದರ್ಭೀಕರಣಕ್ಕೆ ಒಳಗಾಗುತ್ತದೆ. ಆ ಸಂದರ್ಭದಲ್ಲಿ ಪಠ್ಯದಲ್ಲಿ ಹೊಸ ರೀತಿಯ ಸಾಂಸ್ಕೃತಿಕ ಪರಿಸರ ನಿರ್ಮಾಣವಾಗುತ್ತದೆ.

ಪಠ್ಯ, ಬಹುರೂಪಿ. ಆದರೆ ಅರ್ಥವು ಸಂದರ್ಭಕ್ಕೆ ತಕ್ಕಂತೆ ಸಂಕುಚಿತಗೊಳ್ಳುತ್ತಲೇ ವೈಶಾಲ್ಯತೆಯನ್ನು ಪಡೆಯುತ್ತದೆ. ಸಂಕುಚಿತತೆ ಮತ್ತು ವೈಶಾಲ್ಯತೆ ಎರಡೂ ಒಟ್ಟೊಟ್ಟಿಗೇ ನಡೆಯುತ್ತಿರುತ್ತದೆ. ಪಠ್ಯ ಮತ್ತು ಸಂದರ್ಭ ಬಹಳ ಮುಖ್ಯ. ಇದು ಅರ್ಥ ಪ್ರಸರಣ ಕ್ರಿಯೆ ನಡೆಯುವ ವಿಧಾನ. ಪಠ್ಯದ ಅರ್ಥವನ್ನು ಆಯಾಭಾಷಿಕ ಸಂದರ್ಭ ನಿರ್ಧರಿಸುತ್ತದೆ. ಆಗ ಪಾಟೀಲರ ಸಾಹಿತ್ಯದಲ್ಲಿ ಭಾಷೆ ಎಂದ ತಕ್ಷಣ ಅದರಲ್ಲಿ ಜಾನಪದದ ಸೊಗಡಿದೆ ಅಥವಾ ಬೆಳಗಾವಿ ಪ್ರದೇಶದ ಗೋಕಾಕ ಭಾಗದ ಭಾಷೆಯನ್ನು ಬಳಸುತ್ತಾರೆ ಎಂದು ನಾವು ತಿಳಿದುಕೊಂಡಿರುತ್ತೇವೆ. ಆದರೆ ಇದು ಹಾಗೆ ಆಗುವುದಿಲ್ಲ. ಅಲ್ಲಿ ನಾನಾ ರೀತಿಯ ಭಾಷೆಗಳು ಬೆರೆತಿರುತ್ತವೆ ಮತ್ತು ಅವು ಪುನರ್ ಸಂದರ್ಭೀಕರಣಕ್ಕೊಳಗಾಗಿರುತ್ತವೆ. ಹೀಗಿರುವುದರಿಂದ ಆಗ ಅದು ಪಾಟೀಲರ ಪಠ್ಯವಾಗುತ್ತದೆ. ಇದನ್ನು ನಾವು ಪಠ್ಯವೆಂದು ತಿಳಿದು ಓದಬೇಕಾಗುತ್ತದೆ ವಿನಃ ಒಂದು ಪರಿಸರದ ಭಾಷೆ ಎಂದು ಓದಲಿಕ್ಕಾಗುವುದಿಲ್ಲ. ಭಾಷಾ ಬಳಕೆ ದೃಷ್ಟಿಯಲ್ಲಿ ನೋಡಿದಾಗ ಯಾವುದೇ ಪಠ್ಯವನ್ನು ನಾವು ಬೇರೆ ಬೇರೆ ರೀತಿಯಲ್ಲಿ ನೋಡಬೇಕಾಗುತ್ತದೆ. ಅಲ್ಲಿ ಅನೇಕ ಭಾಷೆಗಳು ಕೂಡಿಕೊಂಡಿರುವುದನ್ನು ವಾಚಕರು ಗಮನಿಸಬೇಕಾಗುತ್ತದೆ.

ಒಂದು ಪ್ರದೇಶ ಮತ್ತು ಕಾಲಘಟ್ಟದ ಸಾಮಾಜಿಕ ಸ್ಥಿತ್ಯಂತರವನ್ನು ಸಮರ್ಥವಾಗಿ ಬಿಂಬಿಸಿದ 'ತೇರು' ಕಾದಂಬರಿಯ ಒಂದು ಘಟನೆ ಹೀಗಿದೆ: ಊರ ವಿದ್ಯಮಾನವನ್ನು ಚಾವಡಿ ಕಟ್ಟೆಯಲ್ಲಿ ಕುಳಿತು ಮಾತಾಡುವಾಗ ಒಂದು ಭಾಷಿಕ ಘಟನೆ ಹೀಗಿದೆ: "ದೇವಸ್ಥಾನದವರು ರೊಕ್ಕಾ ಯಾಕ ಕೊಡತಾರ...? ಮದಲೇನು ಕೊಡುತಿದ್ದಿಲ್ಲ ಅಲ್ಲಾ?..... ಈ ರೊಕ್ಕಾ ಕೊಡೂ ಪದ್ಧತಿ ದೇವಸ್ಥಾನ ಕಮೀಟಿಯ ಹುಡುಗೋರು ಈಚೆಗೆ ಮಾಡಿದೂ... ಮದಲೇನ ಈ ಯವಸ್ಥೆ ಇರಲಿಲ್ಲ... ದೇಸಾಯರು ಹೊಲನ ಕೊಟ್ಟಿದ್ದರು... ಈಗ ಹೊಲಾ ಕಳ್ಳೀಗುದ್ದಿ ಗೌಡನ ತಾಬೇಕ್ಕ ಹೋಗೇತಿ", ಇದನ್ನು ಗಮನಿಸಿದಾಗ ಇಲ್ಲಿ ಲಿಂಗಾಯತರ ಭಾಷೆಯಿದೆ, ಬ್ರಾಹ್ಮಣರ ಭಾಷೆಯಿದೆ, ದೇಸಾಯರ ಭಾಷೆಯಿದೆ, ಕೂಲಿಕಾರರ ಭಾಷೆಯಿದೆ, ಪ್ರಗತಿಪರರ ಭಾಷೆಯಿದೆ, ವಾಚಕರ ದೃಷ್ಟಿಕೋನದ

ಭಾಷೆಯೂಯಿದೆ ಇವೆಲ್ಲವೂ ಕೂಡಿಕೊಂಡು ಅದೊಂದು ಪಠ್ಯವಾಗಿದೆ. ಆದರೆ ಅಧ್ಯಯನಕಾರರಾದ ನಾವು ಇದು 'ಬೆಳಗಾವಿ ಭಾಷೆ' ಎಂದು ಹೇಳುತ್ತೇವೆ. ವಾಸ್ತವವಾಗಿ ಅದು ಅಲ್ಲ. ಅದು 'ಭಾಷೆ'ಯಾಗಿ ಪುನರ್ ಸಂದರ್ಭೀಕರಣಕೊಳ್ಳಗಾಗಿ ಪಠ್ಯದ ಭಾಷೆಯಾಗಿ ರೂಪೀಕರಣವಾಗುತ್ತದೆ ಎಂಬುದು ಮುಖ್ಯವಾದ ಸಂಗತಿ. ಅಧ್ಯಯನಕಾರರು ಕೆಲವು ಪದಗಳನ್ನು ವಾಕ್ಯಗಳನ್ನು ತೆಗೆದುಕೊಂಡು 'ಬೆಳಗಾವಿ ಭಾಷೆ', 'ಗೋಕಾಕ ಭಾಷೆ' ಎಂದು ಹೇಳಲಿಕ್ಕಾಗುವುದಿಲ್ಲ. ಪಠ್ಯ ಪುನರ್ ಸಂದರ್ಭೀಕರಣಕ್ಕೊಳಗಾದಾಗ ಅದು ಕೇವಲ ಬೆಳಗಾವಿ ಭಾಷೆಯಾಗಿ ಉಳಿದುಕೊಳ್ಳುವುದಿಲ್ಲ. ಪ್ರತಿ ಪಠ್ಯವು ಒಂದು ಅರ್ಥದಲ್ಲಿ ಅಂತರ್‌ಪಠ್ಯಗಳಿಂದ ಕೂಡಿರುತ್ತದೆ. ಇದು ಬಹಳ ಮುಖ್ಯವಾದುದು. ಇದುವೇ ಕಥನ ನಿರೂಪಣೆಯಲ್ಲಿ ಪಾಟೀಲರ. ಭಾಷಿಕ ಶಕ್ತಿಯಾಗಿದೆ.

ಪಾಟೀಲರು ಪಾತ್ರಗಳ ಮೌನವನ್ನು ಮುರಿದು ಮಾತನಾಡಿರುವ ಕ್ರಿಯೆಯನ್ನು ತಮ್ಮ ಸೃಜನಶೀಲ ಬರೆಹಗಳಲ್ಲಿ ಮಾಡುತ್ತಾರೆ. ಹೀಗೆ, ಮೌನವನ್ನು ಮಾತನಾಡಿಸುವ ಕ್ರಿಯೆಯ ಮೂಲಕ ಹೊಸ ಪಠ್ಯ ರಚನೆಯನ್ನು ಪಾಟೀಲರು ಹುಡುಕುತ್ತಾರೆ. ಅವರ ಪಠ್ಯಗಳಲ್ಲಿ ಮುಖ್ಯವಾಗಿ ಈ ವೈರುಧ್ಯಗಳು ಒಂದರ ಮೇಲೊಂದು ಆಗುವುದನ್ನು ಕಾಣುತ್ತೇವೆ. ಅದರಂತೆ ಸಂದರ್ಭಕ್ಕೆ ತಕ್ಕಂತೆ ವಿಶಿಷ್ಟ ಪದ ಪುಂಜಗಳಿಂದ, ಉಪಮೆ-ರೂಪಕಗಳಿಂದ ಅವರ ನಿರೂಪಣೆಯು ಲಲಿತವಾಗಿದೆ. ಒಬ್ಬ ಬರಹಗಾರ ತನ್ನ ಪರಿಸರದ ಆಡುಭಾಷೆಯನ್ನು ತನ್ನ ಅಭಿವ್ಯಕ್ತಿಗೆ ತಕ್ಕಂತೆ ಬರಹಕ್ಕಿಳಿಸುವುದು ಕಷ್ಟದ ಕೆಲಸ; ಅದರಲ್ಲೂ ವಿಶೇಷವಾಗಿ ಆಡುಭಾಷೆಯನ್ನು ಸಂಭಾಷಣೆಯಲ್ಲಿ ಬಳಸಬಹುದು, ಆದರೆ ನಿರೂಪಣೆಯಲ್ಲಿ ಬಳಸುವುದು ತುಂಬ ಕಷ್ಟ. ಪಾಟೀಲರು ಅದನ್ನು ಸಮರ್ಥವಾಗಿ ಅಭಿವ್ಯಕ್ತಿಸಿದ್ದಾರೆ. ಬರಹಗಳ ಆಶಯ ವಿನ್ಯಾಸಕ್ಕೆ ತಕ್ಕಂತೆ ಪಾತ್ರಗಳ ತಳಮಳ, ಸ್ವರಕ್ಷಣೆ, ಸಮತೋಲನ ಕಾಪಾಡಲು ಪಾಟೀಲರು ಸಂದರ್ಭಕ್ಕೆ ತಕ್ಕಂತೆ ಬೈಗುಳುಗಳನ್ನು, ಬಂಧುಮಾಚಕ ಪದಗಳನ್ನು, ರೂಪಕಗಳನ್ನು ಬಳಸುತ್ತಾರೆ. ತಾವು ಓಡಾಡಿದ ಊರು-ಕೇರಿ, ಕಾಡು-ಬೆಟ್ಟ, ನದಿ-ಹಳ್ಳ ಮುಂತಾದುವು ಸಂದರ್ಭಕ್ಕೆ ಅರ್ಥಪೂರ್ಣವಾಗಿ ಬಳಕೆಯಾಗಿವೆ. ಒಂದು ಪರಿಸರದ ಭಾಷೆ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲಿಕ್ಕೆ ಆ ನಾಮವಾಚಕಗಳು ಬಹುಮುಖ್ಯ ಪಾತ್ರವಹಿಸುತ್ತವೆ. ಅವು ಪಠ್ಯದಲ್ಲಿ ಪುನರ್ ಸಂದರ್ಭೀಕರಣಕ್ಕೆ ಒಳಗಾದಾಗ ಸಾಧಾರಣೀಕರಣಗೊಂಡು ಪಠ್ಯದ ಭಾಷೆಯಾಗಿ ರೂಪಿತವಾಗುತ್ತವೆ ಎಂಬುದನ್ನು ಮತ್ತೆ ಮತ್ತೆ ಸ್ಪಷ್ಟಪಡಿಸುತ್ತೇನೆ. ಅದುವೇ ಪಾಟೀಲರ ಭಾಷಾ ಸಂಪತ್ತು/ಭಾಷಾ ಭಂಡಾರ. ಅದರಂತೆ ಸಹೃದಯವಾಚಕರಿಗೆ ಅರ್ಥವಾಗುವಂತೆ ಅವರ ಭಾಷಾಭಿವ್ಯಕ್ತಿಗೆ ಸಂವಹನ ಶೀಲತೆಯಿದೆ; ತಕ್ಕಬದ್ಧತೆಯಿದೆ; ಅವರದ್ದೆ ಲಯ-ಗತ್ತು-ಗತಿ ಇದೆ. ಪಾಟೀಲರ ಕಥನ ಭಾಷೆಯಲ್ಲಿ ಮೈದಾಳಿರುವ ದೇಸೀಯ ಸೊಗಡು, ಧ್ವನಿಗಳ ರಚನಾತ್ಮಕ ವಿನ್ಯಾಸ, ಅವರು ಧ್ವನಿಗಳ ಮೇಲೆ

ನೀಡುವ ಒತ್ತು, ತೀವ್ರತೆ, ತಾನ, ಅಕ್ಷರ ವಿನ್ಯಾಸ, ವ್ಯಾಕರಣದ ವಿಶ್ಲೇಷಣೆ ಮುಂತಾದುವುಗಳನ್ನು ಕುರಿತು ಪ್ರತ್ಯೇಕವಾಗಿ ಅಭ್ಯಸಿಸುವ ಅವಶ್ಯಕತೆಯಿದೆ. ಅಂತಹ ಅಭ್ಯಾಸಕ್ಕೆ ಈ ಪ್ರಬಂಧ ಪ್ರೇರಣೆ ಕೊಡುತ್ತದೆಂದು ಭಾವಿಸಿದ್ದೇನೆ.

ಒಟ್ಟಾರೆ, ಪಾಟೀಲರ ಕಥನ ಭಾಷೆಯಲ್ಲಿ ಜಾಗರೂಕತೆ ಇರುತ್ತದೆ. ನಿರಂತರವಾದ ಎಚ್ಚರವಿದೆ; ಶ್ರದ್ಧೆಯಿದೆ. ಅದರಲ್ಲಿ ಅವರ ಭಾಷಾಪ್ರಜ್ಞೆ ಹೆಚ್ಚು ಏಕಾಗ್ರತೆಯಿಂದ ಅರ್ಥಪೂರ್ಣವಾಗಿ ಕೆಲಸ ಮಾಡುತ್ತದೆ. ಅವರ ಕಥನಗಳ ಭಾಷಾಪ್ರಯೋಗ ಹಾಗೂ ಆ ಮೂಲಕ ನಿರ್ಧರಿತವಾದ ಶೈಲಿಯ ಲಕ್ಷಣಗಳನ್ನು ಕೆಲವು ಕಥನಗಳ ಮೂಲಕ ತಕ್ಕಮಟ್ಟಿಗೆ ಪರಿಶೀಲನೆ ಮಾಡಲಾಯಿತು(ಅವರ ಕಥನಭಾಷೆಯ ಜೀವಂತ ಸೆಲೆಗಳನ್ನು ಗಮನಿಸಲಾಯಿತು). ಪಾಟೀಲರು ತಮ್ಮ ಹಿಂದಿನ ಕಥನ ಪರಂಪರೆಯಿಂದ ಬೆಳೆದು, ತಮ್ಮದೇ ಆದ ವೈಶಿಷ್ಟ್ಯ ರೂಪಿಸಿಕೊಂಡು ಮುಂದಿನ ಕಥನ ಪರಂಪರೆಗೆ ತಕ್ಕ ಭೂಮಿಕೆಯನ್ನು ರಚಿಸಿದ್ದಾರೆ ಎಂಬುದನ್ನು ಭಾಷಾಭಿವ್ಯಕ್ತಿಯ ದೃಷ್ಟಿಯಿಂದ ಗಮನಿಸುವುದಷ್ಟೇ ಈ ಪ್ರಬಂಧದ ಗುರಿಯಾಗಿದೆ.

ಆಕರಗ್ರಂಥ

೧. ತುದಿಯೆಂಬೋ ತುದಿಯಿಲ್ಲ, ೨೦೦೯, ರಾಘವೇಂದ್ರ ಪಾಟೀಲ, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ.

ಭಾಗ - ೪

ಭಾಷೆ : ಹೆಸರುಗಳು ಮತ್ತು ಸಂಸ್ಕೃತಿ

೪೮

ಶರಣರ ಹೆಸರುಗಳು ಮತ್ತು ಸಂಸ್ಕೃತಿ

ಭಾಷಾ ಸಮುದಾಯ ಅಸ್ತಿತ್ವವಿರುವ ಕಡೆಗಳಲ್ಲೆಲ್ಲ ವ್ಯಕ್ತಿ, ವಸ್ತು ನಾಮಕರಣವು ಒಂದು ಭಾಷಿಕ ಕ್ರಿಯೆ ಆಗಿರುವಂತೆ, ಅಲ್ಲಿನವರ ಸಂಸ್ಕೃತಿಯಲ್ಲಿ ಅನುಸರಿಸಲಾದ ಒಂದು ಕ್ರಿಯಾಚರಣೆ ಕೂಡ ಎನಿಸಿದೆ. ಭಾರತೀಯ ಧರ್ಮಶಾಸ್ತ್ರಾನ್ವ ಹೇಳಲಾಗಿರುವ ಷೋಡಶ ಸಂಸ್ಕಾರಗಳಲ್ಲಿ ನಾಮಕರಣವೂ ಒಂದು ಸಂಸ್ಕಾರ. ನಾಮಕರಣ ಕೇವಲ ವ್ಯಕ್ತಿಗಳಿಗಷ್ಟೇ ಅಲ್ಲದೆ ಮನುಷ್ಯ ತನ್ನ ಪರಿಸರಕ್ಕೆ ಹತ್ತಿರವಾಗುವ ಅದೆಷ್ಟೋ ವಸ್ತುಗಳಿಗೆ, ಪ್ರಾಣಿ-ಪಶು-ಪಕ್ಷಿ, ಗಿಡ-ಮರ, ಹಳ್ಳ-ಕೊಳ್ಳ, ಗುಡ್ಡ-ಬೆಟ್ಟ, ಊರು-ಕೇರಿಗಳಿಗೂ ಸಹ ನಾಮಕರಣ ಮಾಡುವ ಅಭಿಲಾಷೆಯುಳ್ಳವನಾಗಿದ್ದಾನೆ. ಅವುಗಳ ಉಗಮ, ವಿಕಾಸಗಳನ್ನು ತಿಳಿಸಲು 'ನಾಮಶಾಸ್ತ್ರ' ಎಂಬ ಪ್ರತ್ಯೇಕ ಅಧ್ಯಯನ ಶಾಖೆ ಅಸ್ತಿತ್ವಕ್ಕೆ ಬಂದಿದೆ. ನಾಮಕರಣವು ಸಾಮಾಜಿಕ ಭಾಷಾವಿಜ್ಞಾನ ಮತ್ತು ನಂಬಿಕೆ-ಆಚರಣೆ ಇವೆರಡಕ್ಕೂ ಸಂಬಂಧಿಸಿರುವ ಸಂಗತಿಯಾಗಿದೆ. ಒಟ್ಟಾರೆ ಹೆಸರುಗಳ ಮುಖ್ಯ ಉದ್ದೇಶ ಸಂಸ್ಕೃತಿ ಅಧ್ಯಯನವೇ ಆಗಿದೆ.

೧

ಹೆಸರುಗಳು ಕಾವ್ಯ ಶಾಸನಗಳಂತೆ ಒಂದು ಪ್ರದೇಶದ/ಜನಾಂಗದ ಅಧ್ಯಯನಕ್ಕೆ ಅನುಷಂಗಿಕ ಆಕರ ಸಾಮಗ್ರಿಗಳಾಗುತ್ತವೆಂದು ವಿದ್ವಾಂಸರು ಕಂಡುಕೊಂಡಿದ್ದಾರೆ. ಅವುಗಳ ಮೂಲಕ ಭಾಷಿಕ ಹಾಗೂ ಸಾಮಾಜಿಕ ಸ್ತರಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಇತ್ತೀಚೆಗೆ ಒಂದು ಶೈಕ್ಷಣಿಕ ಶಿಸ್ತಾಗಿ ಬೆಳೆಯುತ್ತಲಿದೆ.

ಕೇಶಿರಾಜ ಹೆಸರುಗಳನ್ನು ರೂಢ, ಅಂಕಿತ, ಅನ್ವರ್ಥಕ ನಾಮಗಳೆಂದು ವರ್ಗೀಕರಿಸಿ ಅವುಗಳ ಸ್ವರೂಪವನ್ನು ಹೇಳಿದ್ದಾನೆ. "ರೂಢನಾಮಂ ಪ್ರಸಿದ್ಧ ತರಮಾಗಿರ್ಪುದು ಅನ್ವರ್ಥಕ ನಾಮಂ ಗುಣಕ್ಕಮರ್ಥಕ್ಕ ಮನುರೂಪವಾಗಿರ್ಪುದು, ಅಂಕಿತನಾಮಂ ಪೆಸರ ನಿಡುವನಿಷ್ಟ ದಿಂದೆಂತಾ ದೊಡಮಿರ್ಪುದು" ಎಂದು ಹೇಳುತ್ತಾನೆ. ಕೇಶಿರಾಜ ಹೇಳಿದ ಅಂಕಿತನಾಮ

ಇಂದು ವ್ಯಾಕರಣದ ವ್ಯಾಪ್ತಿಯನ್ನು ಮೀರಿ ಸಾಮಾಜಿಕ ಆಯಾಮವನ್ನು ಪಡೆದುಕೊಂಡಿದೆ. ಹೆಸರುಗಳು ಭಾಷಿಕ ಸಮುದಾಯದಲ್ಲಿ ವ್ಯಕ್ತಿಗೆ/ಊರಿಗೆ ವಿಶಿಷ್ಟತೆಯನ್ನು ಕೊಡುವ ಅರ್ಥವತ್ತಾದ ಘಟಕಗಳಾಗಿವೆ. ಅವುಗಳ ಶಾಸ್ತ್ರೀಯ ಅಧ್ಯಯನವೇ ನಾಮಶಾಸ್ತ್ರ. ಅದರಲ್ಲಿ ಎರಡು ವಿಧ. ಸ್ಥಳನಾಮಗಳ ಅಧ್ಯಯನ 'ಸ್ಥಳ ನಾಮಶಾಸ್ತ್ರ'; ವ್ಯಕ್ತಿನಾಮಗಳ ಅಧ್ಯಯನ 'ವ್ಯಕ್ತಿನಾಮಶಾಸ್ತ್ರ'ವಾಗಿದೆ.

ಸ್ಥಳನಾಮಗಳಿಗೂ ವ್ಯಕ್ತಿನಾಮಗಳಿಗೂ ಇರುವ ವ್ಯತ್ಯಾಸವನ್ನು ಗಮನಿಸಬೇಕು. 'ಸ್ಥಳನಾಮಗಳು ಸಾರ್ವಜನಿಕ ಆಸಕ್ತಿಯವು, ವ್ಯಕ್ತಿನಾಮಗಳು ವೈಯಕ್ತಿಕವಾದುವು. ಅರ್ಥಾತ್ ಒಂದು ಮಗುವಿಗೆ ಹೆಸರಿಡುವುದು ಹೆಚ್ಚೆಂದರೆ ಒಂದು ಸಂಸಾರದ ಆಸಕ್ತಿಯ ವಿಷಯವಾಗಿದೆ. ಸ್ಥಳಗಳಿಗೆ ಹೆಸರುಗಳು ರೂಢಿಯ ಮೇಲೆ ಕ್ರಮವಾಗಿ ನೆಲೆಗೊಳ್ಳುತ್ತವೆ. ಆದರೆ ವ್ಯಕ್ತಿನಾಮಗಳನ್ನು ವಿಧಿವತ್ತಾಗಿ ಇಡುತ್ತಾರೆ.'[೮] ಸ್ಥಳನಾಮಗಳ ಔಚಿತ್ಯದ ಬಗ್ಗೆ ಚರ್ಚಿಸುವಂತೆ ವ್ಯಕ್ತಿನಾಮಗಳ ಬಗ್ಗೆ ಚರ್ಚಿಸಲು ಸಾಧ್ಯವಾಗುವುದಿಲ್ಲ. ಆದರೆ ಸ್ಥಳನಾಮಗಳಿಗಿಂತ ವ್ಯಕ್ತಿನಾಮಗಳ ಅಧ್ಯಯನ ಕ್ಷೇತ್ರ ವಿಶಾಲವಾಗಿದೆ. ವ್ಯಕ್ತಿನಾಮಗಳು, ಕುಲನಾಮಗಳು ಹಾಗೂ ಸಂಬಂಧ ವಾಚಕಗಳು ಇವು ವ್ಯಕ್ತಿನಾಮ ಅಧ್ಯಯನ ಕಕ್ಷೆಯಲ್ಲಿ ಬರುತ್ತವೆ.

ಕರ್ನಾಟಕದ ವ್ಯಕ್ತಿನಾಮಗಳಲ್ಲಿ ಎರಡು ಆಕೃತಿಮಾಗಳಿರುತ್ತವೆ. ಪೂರ್ವ ಭಾಗವನ್ನು 'ನಿರ್ದಿಷ್ಟ'ವೆಂದು, ಉತ್ತರ ಭಾಗವನ್ನು 'ವಾರ್ಗಿಕ'ವೆಂದು ಕರೆಯಬಹುದು. ಉದಾ. "ಮಲ್ಲಪ್ಪ" ಇದರಲ್ಲಿ "ಮಲ್(ಲ್ಲು)" ಎಂಬುದು ನಿರ್ದಿಷ್ಟ ಆಕೃತಿಮಾ. ಏಕೆಂದರೆ ಅದು ಆ ಹೆಸರಿನ ವೈಶಿಷ್ಟ್ಯವನ್ನು ಹೇಳತಕ್ಕದ್ದು. "ಅಪ್ಪ" ಎಂಬುದು ವಾರ್ಗಿಕ ಆಕೃತಿಮಾ. ಏಕೆಂದರೆ ಅದು ಸಾಮಾನ್ಯವಾಚಕ. ಮೂರು, ನಾಲ್ಕು(ಮುಕ್ತ ಮತ್ತು ಬದ್ಧ) ಆಕೃತಿಮಾಗಳಿರುವ ಹೆಸರುಗಳೂ ಉಂಟು. ಈ ಹಿನ್ನೆಲೆಯಲ್ಲಿ ಶರಣರ ಹೆಸರುಗಳನ್ನು ರಾಚನಿಕವಾಗಿ ಹೀಗೆ ರೇಖಿಸಬಹುದು.

ನಿರ್ದಿಷ್ಟ+ವಾರ್ಗಿಕ	ಬಸವ+ಈಶ್ವರ-ಬಸವೇಶ್ವರ
	ಚೌಡ+ಅಯ್ಯ-ಚೌಡಯ್ಯ
	ಮಾರ+ಅಯ್ಯ-ಮಾರಯ್ಯ
	ಅಪ್ಪ+ಅಣ್ಣ-ಅಪ್ಪಣ್ಣ
	ಮಂಚ+ಅಣ್ಣ-ಮಂಚಣ್ಣ
	ಮಾರಿ+ತಂದೆ-ಮಾರಿತಂದೆ
	ಮಹಾದೇವಿ+ಅಕ್ಕ-ಮಹಾದೇವಿಯಕ್ಕ
	ಮುಕ್ತ+ಆಯಿ-ಮುಕ್ತಾಯಿ
	ಅಲ್ಲಮ+ಪ್ರಭು-ಅಲ್ಲಮಪ್ರಭು
	ರೇಕ+ಅಮ್ಮ-ರೇಕಮ್ಮ
	ಮಾದ+ಅರಸ-ಮಾದರಸ

ವಿಶೇಣ+ನಿರ್ದಿಷ್ಟ+ವಾರ್ಗಿಕ	ಚೆನ್ನ+ಬಸವ+ಅಣ್ಣ=ಚೆನ್ನಬಸವಣ್ಣ
	ಮೆಱೆ+ಮಿಂಡ+ದೇವ=ಮೆಱೆಮಿಂಡದೇವ
	ಉರಿ+ಲಿಂಗ+ಪೆದ್ದಿ=ಉರಿಲಿಂಗಪೆದ್ದಿ
	ಶಂಕರ+ದಾಸಿಮ+ಅಯ್ಯ=ಶಂಕರದಾಸಿಮಯ್ಯ
ವಿಶೇಷಣ+ವಾರ್ಗಿಕ	ನೀಲ+ಅಂಬಿಕೆ=ನೀಲಾಂಬಿಕೆ
	ಗುಡ್ಡ+ಅವ್ವೆ=ಗುಡ್ಡವ್ವೆ
	ಬೊಂತ+ದೇವಿ=ಬೊಂತಾದೇವಿ
	ಚೆನ್ನ+ಅಯ್ಯ=ಚೆನ್ನಯ್ಯ
ನಿರ್ದಿಷ್ಟ+ನಿರ್ದಿಷ್ಟ+ವಾರ್ಗಿಕ	ಸಕಳೇಶ+ಮಾದ+ಅರಸ=ಸಕಳೇಶ ಮಾದರಸ
ನಿರ್ದಿಷ್ಟ+ವಿಶೇಷಣ	ನುಲಿ+ಒಡೆಯ=ನುಲಿಯೊಡೆಯ
ಷಷ್ಠಿ ಸಂಬಂಧ ನಾಮಗಳು	
ಅ. ಷಷ್ಠೀ ಸಂಬಂಧ ರಹಿತ	ಕೋಲ+ಶಾಂತಯ್ಯ=ಕೋಲಶಾಂತಯ್ಯ
	ಮೋಳಿಗೆ+ಅಯ್ಯ=ಮೋಳಿಗಯ್ಯ
	ಹಾವಿನಹಾಳು+ಕಲ್ಲಯ್ಯ=ಹಾವಿನಹಾಳುಕಲ್ಲಯ್ಯ
	ಬಹುರೂಪಿ+ಚೌಡಯ್ಯ=ಬಹುರೂಪಿಚೌಡಯ್ಯ
	ಕದಿರೆ+ರೆಮ್ಮವ್ವೆ=ಕದಿರೆ ರೆಮ್ಮವ್ವೆ
	ಸೂಳೆ+ಸಂಕವ್ವೆ=ಸೂಳೆ ಸಂಕವ್ವೆ
	ವೈದ್ಯ+ಸಂಗಣ್ಣ=ವೈದ್ಯಸಂಗಣ್ಣ
ಬ. ಷಷ್ಠಿ ಸಂಬಂಧ ಸಹಿತ	ಸುಂಕದ+ಬಂಕಣ್ಣ=ಸುಂಕದಬಂಕಣ್ಣ
	ಮೋಳಿಗೆಯ+ಮಾರಯ್ಯ=ಮೋಳಿಗೆಯಮಾರಯ್ಯ
	ಗಾಳದ+ಕನ್ನಪ್ಪ=ಗಾಳದಕನ್ನಪ್ಪ
	ಹಡಪದ+ಅಪ್ಪಣ್ಣ=ಹಡಪದಪ್ಪಣ್ಣ
	ಸಗರದ+ಬೊಮ್ಮಣ್ಣ=ಸಗರದ ಬೊಮ್ಮಣ್ಣ
	ಕೆಂಬಾವಿಯ+ಭೋಗಣ್ಣ=ಕೆಂಬಾವಿ ಭೋಗಣ್ಣ
	ಅಗ್ಗವಣಿಯ+ಹೊನ್ನಯ್ಯ=ಅಗ್ಗವಣಿ ಹೊನ್ನಯ್ಯ
	ನುಲಿಯ+ಚೆಂದಯ್ಯ=ನುಲಿಯ ಚಂದಯ್ಯ
	ಉಗ್ಗಡಿಸುವ+ಗಬ್ಬಿದೇವ=ಉಗ್ಗಡಿಸುವ ಗಬ್ಬಿದೇವ
	ಕೂಗಿನ+ಮಾರಿತಂದೆ=ಕೂಗಿನ ಮಾರಿತಂದೆ
	ಆಯ್ದಕ್ಕಿಯ+ಮಾರಯ್ಯ=ಆಯ್ದಕ್ಕಿ ಮಾರಯ್ಯ

ತೋಂಟದ+ಸಿದ್ಧೇಶ್ವರ=ತೋಂಟದ ಸಿದ್ಧೇಶ್ವರ
ಒಕ್ಕಲಿಗರ+ಮುದ್ದಣ್ಣ=ಒಕ್ಕಲು ಮುದ್ದಣ್ಣ

ವಾರ್ಗಿಕ+ವಾರ್ಗಿಕ ಅಪ್ಪ+ಅಣ್ಣ=ಅಪ್ಪಣ್ಣ

೨

ಶರಣರ ವ್ಯಕ್ತಿನಾಮಗಳು ಕರ್ನಾಟಕದಲ್ಲಿ ಅಂದಿನ ಸಾಂಸ್ಕೃತಿಕ ನಾಮಕರಣದ ರೂಢಿಯ ಮೇಲೂ ಸಹ ಬೆಳಕು ಚೆಲ್ಲುತ್ತವೆ. ಶರಣರ ಜಾತಿ, ಉದ್ಯೋಗ ಭಾಷಿಕ ಸಮುದಾಯದಲ್ಲಿ ಅವರನ್ನು ಸಂಭೋಧಿಸುವ ರೀತಿ ಈ ಎಲ್ಲ ಉಪಕ್ರಮಗಳ ಹಿನ್ನೆಲೆಯಲ್ಲಿಯೂ ಶರಣರ ಹೆಸರುಗಳ ಅಧ್ಯಯನ ಆಗಬೇಕಾಗಿದೆ.

ವಚನಕಾರರಲ್ಲಿ ಅನೇಕ ಹೆಸರುಗಳಲ್ಲಿ 'ಪುನರುಕ್ತಿ'ಯನ್ನು ಕಾಣುತ್ತೇವೆ 'ಭೋಗಯ್ಯ' ಒಂದೇ ವ್ಯಕ್ತಿನಾಮ. ಆದರೆ ಪ್ರಸಾದಿ ಭೋಗಯ್ಯ, ಕೆಂಬಾವಿ ಭೋಗಯ್ಯ ಇಲ್ಲವೆ ಭೋಗಣ್ಣ ಎಂದಾಗ ಇವರು ಭಿನ್ನ ವ್ಯಕ್ತಿಗಳಾಗಿ ನಿಲ್ಲುತ್ತಾರೆ. 'ಮಾರಯ್ಯ' ವ್ಯಕ್ತಿನಾಮ ಒಂದೇ. ಇವರಲ್ಲಿ ಹೆಂಡದ ಮಾರಯ್ಯ, ಆಯ್ದಕ್ಕಿ ಮಾರಯ್ಯ, ನಗೆಯ ಮಾರಿತಂದೆಗಳು ಭಿನ್ನರು. 'ದಾಸಿಮಾರ್ಯ' ಹೆಸರೊಂದೇ. ಜೇಡರದಾಸಿಮಾರ್ಯ, ಶಂಕರ ದಾಸಿಮಾರ್ಯರು ಭಿನ್ನ ವ್ಯಕ್ತಿಗಳೆಂಬುದನ್ನು ಅವರ ಅಡ್ಡ ಹೆಸರುಗಳನ್ನೂ ಕರೆಯುವ ಹೆಸರಿಗೆ ಮೊದಲು ಸೇರಿಸಿ ಒಬ್ಬರನ್ನು ಇನ್ನೊಬ್ಬರೊಂದಿಗೆ ಬೇರ್ಪಡಿಸಿಕೊಳ್ಳುತ್ತೇವೆ. ಹೀಗೆ ಮಾಡುವುದು 'ವ್ಯಕ್ತಿನಾಮ'ದ ಮಹತ್ವ ಕಾರಣದಿಂದಲ್ಲ. ಅವರನ್ನು ಸಮಾಜದಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಪರಿಚಯಿಸಿಕೊಳ್ಳಬೇಕಾದುದು ಇಲ್ಲಿನ ಮುಖ್ಯ ಉದ್ದೇಶ. ಈ ವ್ಯಕ್ತಿ ಹೆಸರುಗಳು ಒಂದೇ ಆಗಿ ಪುನರುಕ್ತಿಗೊಳ್ಳುವುದಕ್ಕೆ ಬಹುಶಃ ಆ ವ್ಯಕ್ತಿಗಳಿಗೆ ಹೆಸರಿಟ್ಟ ಹಿರಿಯರು ಒಂದೇ ಸಂಸ್ಕೃತಿ, ನಂಬುಗೆ, ಆಚರಣೆ, ದೇವತಾರ್ಚನೆಗಳನ್ನು ಅನುಸರಿಸಿಕೊಂಡು ಬಂದವರಾಗಿರುತ್ತಾರೆ. ಈ ಬಗೆಯ ಸಾಂಸ್ಕೃತಿಕ ಏಕತೆ ವ್ಯಕ್ತಿನಾಮಗಳ ಏಕರೂಪಧಾರಣಕ್ಕೆ ಕಾರಣವಾಗುತ್ತದೆ. ಆದರೂ ವ್ಯಕ್ತಿನಾಮದ ಅಂಗಗಳಾದ ಅಂಕಿತನಾಮಗಳು ಅಪಾರವಾಗಿ ಬೆಳೆಯುತ್ತವೆ. ಒಂದೊಂದು ವ್ಯಕ್ತಿನಾಮಕ್ಕೂ ತನ್ನದೇ ಆದ ಸಾಂಸ್ಕೃತಿಕ ಸ್ರೋತವಿರುತ್ತದೆ. ಸಂಸ್ಕೃತಿವೆಂದೂ, ಆ ಆಕರಗಳಿಂದ ನಿಷ್ಪನ್ನಗೊಳಿಸಲಾದ ಮತ್ತು ಸಂಬೋಧಿಸಲಾಗುವ ಹೆಸರನ್ನು 'ವ್ಯಕ್ತಿನಾಮ'ವೆಂದೂ ನಿರ್ಣಯಿಸುತ್ತೇವೆ.

ವ್ಯಕ್ತಿಗಳು ಹೊಂದಿರುವ ಸ್ಥಾನಮಾನ, ಪಡೆದುಕೊಂಡಿರುವ ವಿದ್ಯೆ, ವಿದ್ವತ್ತು ಇಲ್ಲವೆ ನಿಯುಕ್ತ, ಅಧಿಕಾರ ಇವೇ ಮುಂತಾದುವನ್ನಾಧರಿಸಿ ಅವರನ್ನು ನಾವು ಕೆಲವು ಶಿಷ್ಟ ಬಿರುದುಗಳೊಡನೆ ಸಂಬೋಧಿಸುತ್ತೇವೆ. ಹೀಗೆ ವ್ಯಕ್ತಿನಾಮಕ್ಕೆ ಮುಂದೆ ಸೇರಿಕೊಳ್ಳುವ ಘಟಕಗಳೇ ಉಪಾಧಿನಾಮಗಳು. ವಚನಕಾರರಲ್ಲಿ ಈ ಕೆಳಗಿನ ಉಪಾಧಿನಾಮಗಳು ಪ್ರಯೋಗವಾಗಿರುವುದನ್ನು ತಿಳಿಯಬಹುದು. ಇವು ಪದವಿ, ಮನ್ನಣೆಗಳೇ ಹೊರತು ವೃತ್ತಿಪರ ನಾಮಗಳಲ್ಲವೆಂಬುದನ್ನೂ ಗಮನಿಸಬೇಕು.

ಬಸವಣ್ಣ - 'ಭಕ್ತಿಭಂಡಾರಿ', 'ಸಮಯಾಚಾರಿ', 'ಪೂರ್ವಾಚಾರಿ', 'ಸಂಗನಬಸವಣ್ಣ'

ಚೆನ್ನಬಸವ - 'ಚಿಕ್ಕದಣ್ಣಾಯಕ', 'ಮಹಾಜ್ಞಾನಿ'

ಅಲ್ಲಮ - 'ಪ್ರಭು', 'ಪ್ರಭುದೇವ', 'ಮಾಯಾಕೋಲಾಹಳ'

ಸಿದ್ಧರಾಮ - 'ಶಿವಯೋಗಿ', 'ಸಮತೆಯ ಗಾರುಡಿಗ'

ಉರಿಲಿಂಗಪೆದ್ದಿ - 'ಪೆದ್ದಿ' (ಪಂಡಿತ)

ಷಣ್ಮುಖ ಶಿವಯೋಗಿ - 'ನಿರಾಲಂಬ ಶರಣ'

ಅಜಗಣ್ಣ - 'ಆರೂಢ'

ಮಂಚಣ್ಣ - 'ಶಿವಲೆಂಕ'

ಶಿವಾಗಮಗಳಲ್ಲಿ ಹೇಳಲಾಗಿರುವ "ಶಿವಗಣ"ಗಳಲ್ಲೇ ಒಬ್ಬೊಬ್ಬರು ಒಂದೊಂದು 'ಗಣೇಶ್ವರ' ಪದವಿಯನ್ನು ಹೊತ್ತು ಮರ್ತ್ಯದಲ್ಲಿ ಅವತರಿಸಿದರೆಂದು ಹೇಳಲಾಗುತ್ತದೆ. ಇಂತಹ ವ್ಯಕ್ತಿಗಳು 'ಸಾಮಾನ್ಯ'ರಂತೆ ಹುಟ್ಟದೆ 'ಅವತಾರ' ಪುರುಷರಾಗಿ, ಕಾರಣಿಕರಾಗಿ ಜನಿಸಿದವರು ಎಂದು ಹೇಳಿದಲ್ಲಿ ಜನತೆಯಲ್ಲಿ ಅಂತಹರ ಬಗೆಗೆ ಅಪಾರ ಶ್ರದ್ಧೆ ಹೆಚ್ಚುವುದೆಂದು ಬಹುಶಃ ಗಣೇಶ್ವರರ ಕಲ್ಪನೆಯನ್ನು ಶಿವಶರಣರಿಗೆ ಆರೋಪಿಸಿದಂತೆ ಇವನ್ನೂ ಸಹ 'ಪದವಿ'ಗಳೆಂದು ಕರೆಯಬಹುದಾದರೂ ಇವುಗಳ ಹಿಂದೆ ಚಾರಿತ್ರಿಕಕ್ಕಿಂತ ಪೌರಾಣಿಕ ಅಂಶವೇ ಪ್ರಬಲವಾಗಿರುತ್ತದೆ. ಕೆಲವೊಂದನ್ನಿಲ್ಲಿ ಉದಾಹರಿಸಿದೆ.

ಅಲ್ಲಮ - 'ನಿರ್ಮಾಯ ಗಣೇಶ್ವರ'

ಬಸವಣ್ಣ - 'ವೃಷಭಗಣೇಶ್ವರ' (ಬಸವಣ್ಣ ಸ್ವಂತಃ ತಮ್ಮದೊಂದು ವಚನದಲ್ಲಿ 'ಏಳುಭವ'ಗಳ ಗಣ ಪದವಿಯ ಉಲ್ಲೇಖ ಮಾಡಿದ್ದಾರೆ : ಶಿಲಾದ, ಸ್ಕಂದ, ನೀಲಲೋಹಿತ, ಮನೋಹರ, ಕಾಲಲೋಚನ, ವೃಷಭ,- ಬಸವ) (?)

ಜೇಡರ ದಾಸಿಮಯ್ಯ - 'ದೇವಾಂಗ ಗಣೇಶ್ವರ'

ತೋಂಟದ ಸಿದ್ಧೇಶ್ವರ - 'ನಿರಂಜನ ಗಣೇಶ್ವರ'

ಷಣ್ಮುಖ ಶಿವಯೋಗಿ - 'ಷಣ್ಮುಖ' - ಸರ್ವಶೂನ್ಯ ನಿರಾಲಂಬ

ಈ ಹಿನ್ನೆಲೆಯಲ್ಲಿ ಲಭ್ಯವಿರುವ ಶರಣರ ಹೆಸರುಗಳನ್ನು ಸಮಾಜೋ ಭಾಷಿಕ ಸಂದರ್ಭಕ್ಕೆ ತಕ್ಕಂತೆ ಕೆಳಗಿನಂತೆ ವಿಂಗಡಿಸಬಹುದು.

೧. ವೃತ್ತಿವಾಚಿ ಹೆಸರುಗಳು

೨. ಸ್ಥಳವಾಚಿ ಹೆಸರುಗಳು

೩. ಜಾತಿವಾಚಿ ಹೆಸರುಗಳು

೪. ಸ್ತ್ರೀಯರ ಹೆಸರುಗಳು

ವೃತ್ತಿವಾಚಿ ಹೆಸರುಗಳು

'ಸಮಾನತೆ' ಮತ್ತು 'ಕಾಯಕ' ವಚನ ಸಂಸ್ಕೃತಿಯ ಮೂಲಭೂತ ಅಂಶಗಳು. ಕಾರಣ, ಅಲ್ಲಿ ವ್ಯಕ್ತಿ ಯಾವುದೇ ಕಾಯಕದಲ್ಲಿ ನಿರತವಾಗಿರಲಿ ಅವನನ್ನು ಮೇಲು ಕೀಳೆನ್ನದೆ ಸಮಾನವಾಗಿ ಕಾಣಲಾಗುತ್ತಿತ್ತು. ವೃತ್ತಿಯಿಂದ ಕಾಯಕಗಳು ಬರುತ್ತಿದ್ದವು. "ಕಾಸಿ ಕಮ್ಮಾರ ವಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ ಕರ್ಣದೊಳು ಜನಿಸಿದವರುಂಟೆ". ವಚನಕಾರರ ಈ ಮಾತು ಅದನ್ನೇ ಧ್ವನಿಸುತ್ತದೆ. ಹಲವಾರು ಜಾತಿಯ ವಚನಕಾರರು ವಚನ ಸಂಸ್ಕೃತಿಯಲ್ಲಿ ಭಾಗಿಯಾಗಿದ್ದರು. ಶರಣರು ಕೈಕೊಂಡ ಕಾಯಕಗಳ ವೈವಿಧ್ಯ ಅಪಾರ.

ಒಕ್ಕಲುತನ - ಒಕ್ಕಲಿಗ ಮುದ್ದಣ್ಣ
ಅಗಸ - ಮಡಿವಾಳ ಮಾಚಯ್ಯ
ಡೋಹರ - ಡೋಹರ ಕಕ್ಕಯ್ಯ
ಬಡಿಗ - ಬಾಚಿಕಾಯಕದ ಬಸವಣ್ಣ
ಬುಟ್ಟಿ ಹೆಣೆಯುವುದು - ಮೇದಾರ ಕೇತಯ್ಯ
ನೇಕಾರ - ಕದಿರ ಕಾಯಕದ ಕಾಳವ್ವೆ
ಕ್ಷೌರಿಕ - ಕನ್ನಡಿ ಕಾಯಕದ ಅಮ್ಮಿದೇವ
ಅಂಬಿ - ಅಂಬಿಗರ ಚೌಡಯ್ಯ ಮತ್ತು ಗಾಳದ ಕಣ್ಣಪ್ಪ
ಭಂಗಿ - ಮಲಹರ ಕಾಯಕದ ಚಿಕ್ಕದೇವ
ಪೂಜೆಗೆ ನೀರು, ಹೂ ತರುವ ಕಾಯಕ - ಅಗ್ಗವಣ್ಣಿಯ ಹೊನ್ನಯ್ಯ
ಹಗ್ಗ ತಯಾರಿಸುವ ಕಾಯಕ - ನುಲಿಯ ಚಂದಯ್ಯ

ಇವೆಲ್ಲ ಕಾಯಕದ ವೈವಿಧ್ಯತೆಯೊಡನೆ, ವೈಶಿಷ್ಟ್ಯವನ್ನು ಸಾರುತ್ತವೆ. ಶರಣರು ತಮ್ಮ ಹೆಸರಿನ ಮುಂದೆ ಪ್ರಜ್ಞಾಪೂರ್ವಕವಾಗಿ ತಮ್ಮ ವೃತ್ತಿಯ ಭಾಗಗಳನ್ನು ಹೇಳಿದ್ದಾರೆ. ವಚನ ಸಂಸ್ಕೃತಿಯು ಕೇವಲ ತತ್ವ ಬೋಧನೆಗಾಗಿ ಇರದೆ, ಅದು ನಿತ್ಯ ಆಚರಣೆಯಲ್ಲಿ ಬಳಕೆ ಯಾಗುತ್ತಿತ್ತು ಎಂಬುದನ್ನು ಬಿಂಬಿಸುವುದಾಗಿತ್ತು. ಆಯಾ ವೃತ್ತಿಯ ಶರಣರು ಮುಂದೆ ಆಯಾವೃತ್ತಿ ಸಮುದಾಯಕ್ಕೆ ಆರಾಧ್ಯ ಗುರುವಾದರು. ಅಲ್ಲಿ ಸರ್ವರಿಗೂ ಸಮಾನಸ್ಥಾನ ಅಷ್ಟೇ ಅಲ್ಲ, ಅವರಿಗೆ ಗೌರವವೂ ಸಲ್ಲುತ್ತಿದ್ದಿತು ಎನ್ನುವುದಕ್ಕೆ ಬೇಕಾದ ಅಂಶಗಳೂ ದೊರಕುತ್ತವೆ. ಬಸವಣ್ಣನವರ ಒಂದು ವಚನ ನೆನಪಿಗೆ ಬರುತ್ತದೆ.

ಅಪ್ಪನು ಡೋಹರ ಕಕ್ಕಯ್ಯನಾಗಿ
ಮುತ್ತಯ್ಯ ಚೆನ್ನಯ್ಯನಾದರೆ ಅನು ಬದುಕೆನೆ?
ಮತ್ತಾ ಶ್ವಪಚಯ್ಯನ ಸನ್ನಿಧಿಯಿಂದ
ಭಕ್ತಿಯ ಸದ್ಗುಣನ ನಾನರಿಯೆನೆ

ಬಸವಣ್ಣ ಮೊದಲಾದವರು ಡೋಹರ ಕಕ್ಕಯ್ಯ, ಮಡಿವಾಳ ಮಾಚಯ್ಯ, ಮಾದಾರ ಚೆನ್ನಯ್ಯ ಮೊದಲಾದವರಿಗೆ ಸಲ್ಲಿಸುವ ಗೌರವ ನಿಜವಾಗಿಯೂ ಉಜ್ವಲವಾದುದು. ಆದುದರಿಂದಲೇ ವಚನ ಚಳುವಳಿ ಪ್ರೀತಿ ಮೂಲವಾದುದು.

ಸ್ಥಳವಾಚಿ ಹೆಸರುಗಳು

ಕೆಲವು ಶರಣರ ಹೆಸರುಗಳ ಮುಂದೆ ಒಂದು ಗ್ರಾಮ ಅಥವಾ ಅವರು ಬಂದ ನಾಡಿನ ಉಲ್ಲೇಖ ಕಂಡುಬರುತ್ತದೆ. ಉದಾ. ಕದಿರೆ ರೆಬ್ಬವ್ವೆ ಇಲ್ಲಿರುವ 'ಕದಿರೆ' ಎಂಬುದು ಬಿದಿರಿನ ಕಾಯಕವನ್ನು ಸೂಚಿಸದೆ ಆಂಧ್ರಪ್ರದೇಶದ ಕಡಪಾ ಜಿಲ್ಲೆಯ ಒಂದು ಗ್ರಾಮವನ್ನು ಸೂಚಿಸುತ್ತದೆ. ಅಮುಗಿದೇವಯ್ಯ ಇಲ್ಲಿರುವ 'ಅಮುಗಿ' ಸೊಲ್ಲಾಪುರ ಜಿಲ್ಲೆಯ ಒಂದು ಹಳ್ಳಿ. ಉರಿಲಿಂಗ ಪೆದ್ದಿ ಇಲ್ಲಿರುವ 'ಉರಿಲಿಂಗ'ಪುರ ನಾಂದೇಡ ಪ್ರದೇಶದ ಒಂದು ಹಳ್ಳಿ. ಲದ್ದಿ ಸೋಮಣ್ಣ ಇಲ್ಲಿರುವ ಲದ್ದಿ ಬೀದರ ಜಿಲ್ಲೆಯ ಒಂದು ಹಳ್ಳಿ. ಬಾಹೂರು ಬ್ರಹ್ಮಯ್ಯ ಇಲ್ಲಿರುವ 'ಬಾಹೂರು' ವಿಜಯಪುರ ಜಿಲ್ಲೆಯ ಒಂದು ಹಳ್ಳಿಯನ್ನು ಸೂಚಿಸುತ್ತದೆ. ಇದರಂತೆ ಕೆಂಭಾವಿ ಭೋಗಣ್ಣ, ಕೋವೂರ ಬೊಮ್ಮಯ್ಯ, ಕಿನ್ನರಿ ಬ್ರಹ್ಮಯ್ಯ, ಹಾವಿನಹಾಳ ಕಲ್ಲಯ್ಯ, ಸಗರದ ಬೊಮ್ಮಣ್ಣ, ಏಲೇಶ್ವರ ಕೇತಯ್ಯ ಮುಂತಾದ ಶರಣರ ಮುಂದಿರುವ ಊರುಗಳು ನಮ್ಮ ನಾಡಿನಲ್ಲಿ ಇವೆ. ಅವುಗಳನ್ನು ಶೋಧಿಸುವ ಕೆಲಸ ಆಗಬೇಕಾಗಿದೆ. ಆದುದರಿಂದ ವಚನ ಸಂಸ್ಕೃತಿಯ ಚಲನೆಯನ್ನು ಅರ್ಥೈಸಿಕೊಳ್ಳಬಹುದು. ತಾತ್ಪರ್ಯವಿಷ್ಟೇ, ವಚನ ಸಂಸ್ಕೃತಿಯ ಕ್ರಾಂತಿಯಲ್ಲಿ ನಾಡಿನ ಹಲವು ಭಾಗದ ಶರಣರು ಭಾಗಿಯಾಗಿ ಸಂಸ್ಕೃತಿ ಸಂವರ್ಧನೆಗೆ ಕಾರಣರಾಗಿದ್ದಾರೆ.

ಜಾತಿವಾಚಿ ಹೆಸರು

ಕೆಲವು ಶರಣರು ತಮ್ಮ ಹೆಸರುಗಳ ಮುಂದೆ ತಮ್ಮ ಕುಲಗಳ ಹೆಸರನ್ನು ಉಲ್ಲೇಖಿಸಿದ್ದಾರೆ. ಮಾದಾರ ಚೆನ್ನಯ್ಯ, ಸಮಗಾರ ಹರಳಯ್ಯ ಮುಂತಾದವರು.

ಸ್ತ್ರೀಯರ ಹೆಸರುಗಳು

ಪುರುಷರಂತೆ ಸ್ತ್ರೀಯರ ವಿಷಯದಲ್ಲಿಯೂ ವೃತ್ತಿ ನಿರ್ದೇಶನವನ್ನೊಳಗೊಂಡ ಹೆಸರುಗಳೂ ಸ್ಥಳ ನಿರ್ದೇಶನದ ಹೆಸರುಗಳೂ ದೊರೆಯುತ್ತವೆ. ಸ್ತ್ರೀಯರ ಹೆಸರುಗಳಲ್ಲಿ ಇನ್ನೊಂದು ವೈಶಿಷ್ಟ್ಯವಿದೆ. ಶರಣೆಯರು ತಮ್ಮ ನಿಜವಾದ ಹೆಸರನ್ನು ಬಹಿರಂಗ ಪಡಿಸದೆ ತಾವು ಇಂತಹವರ ಮಡದಿಯೆಂಬಲ್ಲಿ ತಮ್ಮ ಪತಿಯ ಹೆಸರಿನ್ನೊಂದಿಗೆ 'ಪ್ರಿಯ' ಎಂಬ ವಿಶೇಷಣತೆಯನ್ನು ಸೇರಿಸಿ ಅದರ ಮುಂದೆ ತಮ್ಮ ಇಷ್ಟ ಮುದ್ರಿಕೆಯನ್ನು ಉಲ್ಲೇಖಿಸುತ್ತಾರೆ. ಕೆಲವು ಸ್ತ್ರೀಯರು 'ಪ್ರಿಯ'ಕ್ಕೆ ಬದಲಾಗಿ 'ಅರಸ', 'ಒಡೆಯ' ಎಂಬ ಪದವನ್ನು ಉಪಯೋಗಿಸಿದ್ದಾರೆ. ಇದೂ ಸಹ ಸ್ತ್ರೀವರ್ಗದ ಒಂದು ಸಾಂಸ್ಕೃತಿಕ ಕುರುಹುವಾಗಿ ವಚನ ಭಾಷೆಯಲ್ಲಿ ಅಭಿವ್ಯಕ್ತವಾಗಿದೆ. ಉದಾಹರಣೆಗೆ.

- ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ - ಮೋಳಿಗೆ ಮಹಾದೇವಿಯಮ್ಮ

- ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣ - ಲಿಂಗಮ್ಮ

- ಎನ್ನೊಡೆಯ ಚೆನ್ನಮಲ್ಲಿಕಾರ್ಜುನ - ಅಕ್ಕಮಹಾದೇವಿ

ಕೆಲವು ಶರಣೆಯರು ತಮ್ಮ ಪತಿಯ ಹೆಸರನ್ನು ಸೂಚಿಸಿ ಅದರ ಮುಂದೆ ಅವನ 'ಪುಣ್ಯಸ್ತ್ರೀ' ಎಂದು ಅಭಿವ್ಯಕ್ತಿಸಿದ್ದಾರೆ. ಇಂತಹವರಲ್ಲಿ ರೇವಣ ಸಿದ್ದಯ್ಯಗಳ ಪುಣ್ಯಸ್ತ್ರೀ ರೇಕಮ್ಮ, ಆಯ್ದಕ್ಕಿ ಮಾರಯ್ಯಗಳ ಪುಣ್ಯಸ್ತ್ರೀ ಲಕ್ಕಮ್ಮ ಇನ್ನು ಕೆಲವು ತಮ್ಮ ಹೆಸರು ಬರೆಯದೆ ಕೇವಲ ಇಂತಹವರ ಪುಣ್ಯಸ್ತ್ರೀ ಎಂದು ಹೇಳಿಕೊಂಡಿದ್ದಾರೆ. ಉದಾ. ಬಾಚಿಕಾಯಕದ ಬಸವಣ್ಣನ ಪುಣ್ಯಸ್ತ್ರೀ, ರಾಯಸದ ಮಂಚಣ್ಣನಗಳ ಪುಣ್ಯಸ್ತ್ರೀ , ಗಣೇಶ ಮಸಣಯ್ಯಗಳ ಪುಣ್ಯಸ್ತ್ರೀ ಇತ್ಯಾದಿ.

ಶರಣರ ಹೆಸರುಗಳು ವಚನ ಸಂಸ್ಕೃತಿಯನ್ನು ಅರಿಯಲು ಸಮಾಜ ಶಾಸ್ತ್ರಜ್ಞರಿಗೆ ಹಾಗೂ ಮಾನವ ಶಾಸ್ತ್ರಜ್ಞರಿಗೆ ನೆರವಾದಂತೆ ಭಾಷಿಕ ಸಾಮಗ್ರಿಗಳ್ನು ಅನುಲಕ್ಷಿಸಿ ಸಂಸ್ಕೃತಿ ಶೋಧನೆಗೆ ಹಾಗೂ ಪುನಾರಚನೆಗೆ ಭಾಷಾಶಾಸ್ತ್ರಜ್ಞರಿಗೂ ನೆರವಾಗುತ್ತವೆ. ಶರಣರ ಹೆಸರುಗಳನ್ನು ಹಾಗೂ ಅವರ ವಚನಗಳಲ್ಲಿ ಉಲ್ಲೇಖಿತವಾಗಿ ನಾಮಘಟಕಗಳನ್ನು ಕಲೆಹಾಕಿ ಅವುಗಳ ಬಳಕೆಯ ಸ್ವರೂಪ, ಭಾಷೆ, ಸಂಸ್ಕೃತಿ ದೃಷ್ಟಿಯಿಂದ ವರ್ಗೀಕರಿಸಿ ವಿವೇಚಿಸಿದರೆ ಅದು ಶರಣರ ನೆಲೆ, ವೃತ್ತಿ, ವಂಶ, ಮನೋಧರ್ಮ ಇತ್ಯಾದಿಗಳ ಅಧ್ಯಯನವಾಗುತ್ತದೆ. ಅವೆಲ್ಲವುಗಳನ್ನು ಗಮನಿಸಿದರೆ ಶರಣ ಹೆಸರುಗಳು ವಚನ ಸಂಸ್ಕೃತಿಯ ಹಲವು ಮಜಲುಗಳನ್ನು ಅರ್ಥಮಾಡಿಕೊಳ್ಳುವಲ್ಲಿ ನೆರವಾಗುತ್ತವೆ.

ಅನುಬಂಧ : ೧ : ವಚನಕಾರರ ಹೆಸರುಗಳು

೧. ಅಕ್ಕಮ್ಮ
೨. ಅಗ್ಗವಣಿಯ ಹಂಪಯ್ಯ
೩. ಅಗ್ಗವಣ್ಣಿಯ ಹೊನ್ನಯ್ಯ
೪. ಅಂಗಸೋಂಕಿನ ಲಿಂಗತಂದೆ
೫. ಅನಾಮಿಕ ನಾಚಯ್ಯ
೬. ಅಪ್ಪಿದೇವಯ್ಯ
೭. ಅಮರಗುಂಡ ಮಲ್ಲಿಕಾರ್ಜುನ
೮. ಅಮುಗಿದೇವಯ್ಯ
೯. ಅಮುಗಿದೇವಯ್ಯಗಳ ಪುಣ್ಯಸ್ತ್ರೀ
೧೦. ಅಂಬಿಗರ ಚೌಡಯ್ಯ
೧೧. ಅರಿವಿನ ಮಾರಿತಂದೆ
೧೨. ಅವಸರದ ರೇಕಣ್ಣ
೧೩. ಆದಯ್ಯ
೧೪. ಆನಂದಯ್ಯ
೧೫. ಆಯ್ದಕ್ಕಿ ಮಾರಯ್ಯನ ಪುಣ್ಯಸ್ತ್ರೀ ಲಕ್ಕಮ್ಮ
೧೬. ಆಯ್ದಕ್ಕಿ ಮಾರಯ್ಯ
೧೭. ಉಗ್ಗಡಿಸುವ ಗುಬ್ಬಿದೇವಯ್ಯ
೧೮. ಉಪ್ಪರಗುಡಿಯ ಸೋಮೀದೇವಯ್ಯ
೧೯. ಉರಿಲಿಂಗದೇವ
೨೦. ಉರಿಲಿಂಗಪೆದ್ದಿ
೨೧. ಉರಿಲಿಂಗಪೆದ್ದಯ್ಯಗಳ ಪುಣ್ಯಸ್ತ್ರೀ

೨೨. ಉಳಿಯುಮೇಶ್ವರ ಚಿಕ್ಕಣ್ಣ
೨೩. ಎಚ್ಚರಿಕೆ ಕಾಯಕದ ಮುಕ್ತನಾಥ
೨೪. ಎಡೆಮಠದ ನಾಗಿದೇವನ ಪುಣ್ಯಸ್ತ್ರೀ ಮಸಣಮ್ಮ
೨೫. ಎಲೆಗಾರ ಕಾಮಣ್ಣ
೨೬. ಏಕಾಂತ ರಾಮಿತಂದೆ
೨೭. ಏಲೇಶ್ವರ ಕೇತಯ್ಯ
೨೮. ಒಕ್ಕಲಿಗ ಮುದ್ದಣ್ಣ
೨೯. ಕದಿರ ರೆಬ್ಬವ್ವೆ
೩೦. ಕದಿರಕಾಯಕದ ಕಾಳವ್ವೆ
೩೧. ಕನ್ನಡದ ಮಾರಿತಂದೆ
೩೨. ಕನ್ನಡಿಕಾಯಕದ ಅಮ್ಮಿದೇವ
೩೩. ಕನ್ನಡಿಕಾಯಕದ ಅಮುಗಿದೇವ
೩೪. ಕನ್ನಡಿಕಾಯಕದ ರೇವಮ್ಮ
೩೫. ಕರಬದ ಮಾರಿತಂದೆ
೩೬. ಕರುಳಕೇತಯ್ಯ
೩೭. ಕಲಕೇತಯ್ಯ
೩೮. ಕಾಟಕೋಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ
೩೯. ಕಾಮಾಟಾದ ಭೀಮಣ್ಣ
೪೦. ಕಾಲಕಣ್ಣಿಯ ಕಾಲಮ್ಮ
೪೧. ಕಿನ್ನರಯ್ಯ
೪೨. ಕೀಲಾರದ ಭೀಮಣ್ಣ
೪೩. ಕೂಗಿನ ಮಾರಯ್ಯ
೪೪. ಕೊಂಡೆಯ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಕಮ್ಮ
೪೫. ಕೋಲಶಾಂತಯ್ಯ
೪೬. ಕೋಠಾರದ ಸೋಮಣ್ಣ
೪೭. ಕೊಟ್ಟಣದ ಸೋಮಮ್ಮ
೪೮. ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ
೪೯. ಗಜೇಶ ಮಸಣಯ್ಯ
೫೦. ಗಾಳದ ಕಣ್ಣಪ್ಪ
೫೧. ಗಾವುದಿ ಮಾಚಯ್ಯ
೫೨. ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲೆ
೫೩. ಗುಪ್ತ ಮಂಚಣ್ಣ
೫೪. ಗುರುಬಸವೇಶ್ವರ
೫೫. ಗುರುಭಕ್ತಯ್ಯ
೫೬. ಗೊಗ್ಗವ್ವೆ
೫೭. ಗೋರಕ್ಷ
೫೮. ಘಟ್ಟಿವಾಳಯ್ಯ
೫೯. ಚಂದಿಮರಸ
೬೦. ಚೆನ್ನಬಸವಣ್ಣ
೬೧. ಜಗಳಗಂಟಿ ಕಾಳವ್ವೆ
೬೨. ಜೇಡರ ದಾಸಿಮಯ್ಯ
೬೩. ಜೋದರ ಮಾಯಣ್ಣ
೬೪. ಡಕ್ಕಿಯ ಬೊಮ್ಮಣ್ಣ
೬೫. ತಳವಾರ ಕಾಮಿದೇವ
೬೬. ತುರುಗಾಹಿ ರಾಮಣ್ಣ
೬೭. ತೆಲುಗೇಶ್ವರ ಮಸಣಯ್ಯ
೬೮. ದಶಗಣ ಸಿಂಗಿದೇವ
೬೯. ದಸರಯ್ಯ
೭೦. ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ
೭೧. ದಾಸೋಹದ ಸಂಗಣ್ಣ
೭೨. ನಗೆಯ ಮಾರಿತಂದೆ
೭೩. ನಾಚಯ್ಯ
೭೪. ನಿಜಗುಣಯೋಗಿ
೭೫. ನಿವೃತ್ತಿ ಸಂಗಯ್ಯ
೭೬. ನೀಲಮ್ಮ
೭೭. ನುಲಿಯ ಚಂದಯ್ಯ
೭೮. ಪಂಡಿತಾರಾಧ್ಯ
೭೯. ಪುರದ ನಾಗಣ್ಣ
೮೦. ಪುರದ ಮಲ್ಲಯ್ಯ

೮೧. ಪ್ರಭುದೇವರು
೮೨. ಪ್ರಸಾದಿ ಭೋಗಣ್ಣ
೮೩. ಪ್ರಸಾದಿಲೆಂಕ ಬಂಕಣ್ಣ
೮೪. ಬತ್ತಲೇಶ್ವರದೇವರ ಪುಣ್ಯಸ್ತ್ರೀ ಗುಡ್ಡವ್ವೆ
೮೫. ಬಸವಣ್ಣ
೮೬. ಬಹುರೂಪಿ ಚೌಡಯ್ಯ
೮೭. ಬಳ್ಳೇಶ ಮಲ್ಲಯ್ಯ
೮೮. ಬಳ್ಳೇಶ ರಾಮಯ್ಯ
೮೯. ಬಾಚಿಕಾಯಕದ ಬಸವಣ್ಣ
೯೦. ಬಾಚಿಕಾಯಕದ ಬಸವಣ್ಣ ಪುಣ್ಯಸ್ತ್ರೀ ರೇವಮ್ಮ
೯೧. ಬಾಲಬೊಮ್ಮಣ್ಣ
೯೨. ಬಾಲಸಂಗಣ್ಣ
೯೩. ಬಾಹೂರ ಬೊಮ್ಮಣ್ಣ
೯೪. ಬಿಬ್ಬಿ ಬಾಚಯ್ಯ
೯೫. ಬೊಕ್ಕಸದ ಚಿಕ್ಕಣ್ಣ
೯೬. ಬೊಂತಾದೇವಿ
೯೭. ಭರಿತಾರ್ಪಣದ ಚನ್ನಸಂಗ
೯೮. ಭಿಕಾರಿ ಭೀಮಯ್ಯ
೯೯. ಭೋಗಣ್ಣ
೧೦೦.ಮಡಿವಾಳ ಮಾಚಯ್ಯ
೧೦೧.ಮಡಿವಾಳ ಮಾಚಯ್ಯಗಳ ಸಮಾಚಾರದ ಮಲ್ಲಿಕಾರ್ಜುನ
೧೦೨.ಮಧುವಯ್ಯ
೧೦೩.ಮನಸಂದ ಮಾರಿತಂದೆ
೧೦೪.ಮನುಮುನಿ ಗುಮ್ಮಟದೇವ
೧೦೫.ಮರುಭಾವಿಯ ಸೋಮಣ್ಣ
೧೦೬.ಮರುಳಶಂಕರದೇವ
೧೦೭.ಮರುಳಸಿದ್ಧೇಶ್ವರ
೧೦೮.ಮಲ್ಲಿಕಾರ್ಜುನ ಪಂಡಿತಾರಾಧ್ಯ
೧೦೯.ಮಲಹರಕಾಯಕದ ಚಿಕ್ಕದೇವ
೧೧೦.ಮಹಾದೇವಿಯಕ್ಕ
೧೧೧.ಮಾದಾರ ಚೆನ್ನಯ್ಯ
೧೧೨.ಮಾದಾರ ಧೂಳಯ್ಯ
೧೧೩.ಮಾರೇಶ್ವರೊಡೆಯ
೧೧೪.ಮುಕ್ತಾಯಕ್ಕ
೧೧೫.ಮೆರೆಮಿಂಡಯ್ಯ
೧೧೬.ಮೇದಾರ ಕೇತಯ್ಯ
೧೧೭.ಮೈದುನ ರಾಮಯ್ಯ
೧೧೮.ಮೋಳಿಗೆಯ್ಯ
೧೧೯.ಮೋಳಿಗೆಯ್ಯನ ರಾಣಿ ಮಹಾದೇವಿ
೧೨೦.ರಕ್ಕಸ ಬೊಮ್ಮಣ್ಣ
೧೨೧.ರೇವಣಸಿದ್ಧಯ್ಯಗಳ ಪುಣ್ಯಸ್ತ್ರೀ ರೇಕಮ್ಮ
೧೨೨.ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ
೧೨೩.ರಾಯಸದ ಮಂಚಣ್ಣ
೧೨೪.ಲದ್ದೆಯ ಸೋಮಣ್ಣ
೧೨೫.ವಚನಭಾಂಡಾರಿ ಶಾಂತರಸ
೧೨೬.ವರದ ಸಂಕಣ್ಣ
೧೨೭.ವೀರಗೊಲ್ಲಾಳ
೧೨೮.ವೀರಶಂಕರದಾಸಯ್ಯ
೧೨೯.ವೇದಮೂರ್ತಿಸಂಗಣ್ಣ
೧೩೦.ವೈದ್ಯಸಂಗಣ್ಣ
೧೩೧.ಶಿವನಾಗಯ್ಯ
೧೩೨.ಶಿವಲೆಂಕ ಮಂಚಣ್ಣ
೧೩೩.ಸಕಲೇಶ ಮಾದರಸ
೧೩೪.ಸಗರದ ಬೊಮ್ಮಣ್ಣ
೧೩೫.ಸಂಗಮೇಶ್ವರ ಅಪ್ಪಣ್ಣ
೧೩೬.ಸತ್ತಿಗೆ ಕಾಯಕದ ಮಾರಯ್ಯ
೧೩೭.ಸತ್ತಿಗೆ ಕಾಯಕದ ವಿಶ್ವಪ್ಪಯ್ಯ
೧೩೮.ಸತ್ಯಕ್ಕ

೧೩೯.ಸಿದ್ಧರಾಮ

೧೪೦.ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ

೧೪೧.ಸಿದ್ಧಾಂತಿ ವೀರಸಂಗಯ್ಯ

೧೪೨.ಸುಂಕದ ಬಂಕಣ್ಣ

೧೪೩.ಸೂಜಿಕಾಯಕದ ರಾಮಿತಂದೆ

೧೪೪.ಸೂಳೆ ಸಂಕವ್ವೆ

೧೪೫.ಸೊಡ್ಡಳೆ ಬಾಚರಸ

೧೪೬.ಹಡಪದಪ್ಪಣ್ಣ

೧೪೭.ಹಡಪದ ರೇಚಣ್ಣ

೧೪೮.ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ

೧೪೯.ಹಾವಿನಾಳ ಕಲ್ಲಯ್ಯ

೧೫೦.ಹುಂಜಿನ ಕಾಳಗದ ದಾಸಯ್ಯ

೧೫೧.ಹೆಂಡದ ಮಾರಯ್ಯ

೧೫೨.ಹೊಡೆಹುಲ್ಲ ಬಂಕಣ್ಣ

ಅಡಿಟಿಪ್ಪಣಿ

೧. ಕಲಬುರ್ಗಿ ಎಂ.ಎಂ., ೧೯೮೯, ಕನ್ನಡ ನಾಮವಿಜ್ಞಾನ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨. ಚಿದಾನಂದಮೂರ್ತಿ ಎಂ., 'ಕರ್ನಾಟಕ ವ್ಯಕ್ತಿನಾಮಗಳು' ವಾಗರ್ಥ (೧೯೮೧, ಪು. ೪೫)

೩. ಬಸವರಾಜು ಎಲ್. (ಸಂ.), ಬಸವ, ಅಕ್ಕ, ಅಲ್ಲಮ, ದಾಸಿಮಯ್ಯರ ವಚನಗಳು, ಗೀತಾ ಬುಕ್‌ಹೌಸ್, ಮೈಸೂರು.

೪. ಶಿವಾನಂದ ವಿ., ೨೦೦೪, ವಚನ ಸಾಹಿತ್ಯ ಸಮಾಜೋಭಾಷಿಕ ಅಂಶಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪೯

ಶಿವತತ್ತ್ವ ಚಿಂತಾಮಣಿ : ಹೆಸರುಗಳು ಮತ್ತು ಸಂಸ್ಕೃತಿ

ಮಧ್ಯಕಾಲದ ಕೃತಿಗಳ ಭಾಷೆಯ ಬಗ್ಗೆ ಸಾಮಾನ್ಯವಾದ ಒಂದು ಅಭಿಪ್ರಾಯವೆಂದರೆ ಅವುಗಳ ಭಾಷೆ ಬಹಳ ಸರಳವಾಗಿದೆಯೆಂಬುದು. ಚಂಪೂ ಕಾವ್ಯಗಳೊಂದಿಗೆ ಮಧ್ಯಕಾಲದ ಕೃತಿಗಳನ್ನು ಹೋಲಿಸಿ ನೋಡಿದಾಗ ಮಧ್ಯಕಾಲೀನ ಭಾಷೆ ಸರಳವಾಗಿದೆಯೆಂದು ತೋರುತ್ತದೆ. ವಾಸ್ತವವಾಗಿ ಹೇಳಬೇಕೆಂದರೆ ಚಂಪೂ ಕಾವ್ಯಗಳು ಸಂಸ್ಕೃತ ಪ್ರಚುರವಾದವು. ಮಧ್ಯಕಾಲದ ರಚನೆ ಹೆಚ್ಚಾಗಿ ಕನ್ನಡ. ಮಧ್ಯಕಾಲದ ಪ್ರಮುಖ ಕೃತಿಗಳಲ್ಲೊಂದಾದ 'ಶಿವತತ್ತ್ವ ಚಿಂತಾಮಣಿ'ಯ ಹೆಸರುಗಳು ಮತ್ತು ಸಂಸ್ಕೃತಿಯನ್ನು ಹಿನ್ನೆಲೆಯಾಗಿಟ್ಟುಕೊಂಡು ಅದರ ಭಾಷಿಕ ಸ್ವರೂಪವನ್ನು ವಿವೇಚಿಸುವುದು ಈ ಸಂಪ್ರಬಂಧದ ಉದ್ದೇಶವಾಗಿದೆ.

ಶಿವತತ್ತ್ವ ಚಿಂತಾಮಣಿಯನ್ನು ಕುರಿತು ವಿಚಾರ ಮಾಡವಾಗಲೆಲ್ಲ ಹರಿಹರನ ರಗಳೆಗಳನ್ನು, ಕೆರೆಯ ಪದ್ಮರಸನ ದೀಕ್ಷಾಬೋಧನೆಯನ್ನು ಒಂದಲ್ಲ ಒಂದು ರೀತಿಯಲ್ಲಿ ನೆನಪಿಸಿಕೊಳ್ಳಬೇಕಾಗುತ್ತದೆ. ಅವರ ಕಥಾವಸ್ತುವಿನ ಆಯ್ಕೆಯಲ್ಲಿ, ದೃಷ್ಟಿಧೋರಣೆಯಲ್ಲಿ, ಭಾಷೆಯ ಬಳಕೆಯಲ್ಲಿ ಹರಿಹರ ಮತ್ತು ಪದ್ಮರಸರದು ಪ್ರಧಾನ ಪಾತ್ರವಿದೆ. ಕೆಲವು ದೃಷ್ಟಿಗಳಲ್ಲಿ ಶಿವತತ್ತ್ವಚಿಂತಾಮಣಿಯು ಹರಿಹರನ ರಗಳೆಗಳಿಗಿಂತ ಮತ್ತು ಕೆರೆಯ ಪದ್ಮರಸನ ದೀಕ್ಷಾಬೋಧೆಗಿಂತ ಭಿನ್ನವಾಗಿದೆ. ಆ ಇಬ್ಬರು ಕವಿಗಳು ಕ್ರಮವಾಗಿ ಶಿವ ಶರಣರ ಚರಿತ್ರೆಗಳನ್ನು ಮತ್ತು ದೀಕ್ಷೆ ಕೊಡುವ ವಿಧಾನಗಳನ್ನು ರಗಳೆಗಳಲ್ಲಿ ಹೇಳಿದರೆ ಲಕ್ಕಣ್ಣ ದಂಡೇಶ ವೀರಶೈವ ಧರ್ಮದ ತತ್ತ್ವಗಳನ್ನು ಹೇಳುವುದರೊಂದಿಗೆ ಶರಣರ ಚರಿತ್ರೆಯನ್ನು ಷಟ್ಪದಿಯಲ್ಲಿ ಕಟ್ಟಿಕೊಟ್ಟಿದ್ದಾನೆ. 'ಶಿವತತ್ತ್ವಚಿಂತಾಮಣಿ' ಶೀರ್ಷಿಕೆಯೆ ತುಂಬ ಅರ್ಥಗರ್ಭಿತವಾಗಿದೆ. 'ಚಿಂತಾಮಣಿ' ಎಂದರೆ ನೆನೆದಾಕ್ಷಣ ಇಷ್ಟಾರ್ಥಗಳನ್ನು ಸಲ್ಲಿಸುವುದು. ಅಂದರೆ ವೀರಶೈವ ತತ್ತ್ವಸಿದ್ಧಾಂತಗಳನ್ನು ಬಯಸಿ ದೊಡನೆಯೇ

ನೀಡುವುದು ಈ ಕೃತಿಯ ಮುಖ್ಯ ಉದ್ದೇಶವಾಗಿದೆ. ಈ ಕೃತಿಯನ್ನು ಇಡೀಯಾಗಿ ಓದಿದರೆ ಆ ಧರ್ಮದ ಒಂದು ಸಮಗ್ರ ಪರಂಪರೆಯ ಪರಿಚಯವಾಗುತ್ತದೆ.

ಈ ಕೃತಿಯ ಉದ್ದೇಶ ಪೂರ್ತಿ ಧಾರ್ಮಿಕವಾದುದು ಎಂಬುದನ್ನು ಮತ್ತೆ ಮತ್ತೆ ಹೇಳಬೇಕಾಗಿದೆ. ಆದರೆ ಒಂದು ಮಾತು ಮಧ್ಯಕಾಲದಲ್ಲಿ ಇಂತಹ ಕೃತಿ ರಚನೆಗೆ ಕಾರಣ ಏನಿರಬಹುದು? ಸಾಂಸ್ಕೃತಿಕ ಒತ್ತಡ ಏನಿರಬಹುದು? ಉತ್ತರವೂ ಅಷ್ಟೇ ಸ್ಪಷ್ಟವಿದೆ. ಈ ಕೃತಿ ರಚನೆಯ ಕಾಲ ಸು. ೧೪೫೦. ಅದು ಕರ್ನಾಟಕದ ಇತಿಹಾಸದಲ್ಲಿ ಬಹುಪ್ರಮುಖವಾದದ್ದು. ವಿಜಯನಗರದ ಶ್ರೇಷ್ಠ ದೊರೆ ಪ್ರೌಢದೇವರಾಯನ ಕಾಲವದು. ಅದಕ್ಕಿಂತ ಹಿಂದೆ(ಸು. ೧೩ನೇ ಶತಮಾನ) ಪರಸಂಸ್ಕೃತಿಯಿಂದ ವೀರಶೈವ ಒಳಗೊಂಡಂತೆ ಕರ್ನಾಟಕ ಸಂಸ್ಕೃತಿ ತತ್ತರಿಸುತ್ತಿತತ್ತು ಪ್ರೌಢದೇವರಾಯನ ಕಾಲದಲ್ಲಿ ಕರ್ನಾಟಕ ಸಂಸ್ಕೃತಿ ಚೈತನ್ಯವನ್ನು ಪಡೆದು ಗಟ್ಟಿ ತಳಹದಿಯ ಮೇಲೆ ನಿಂತಿತ್ತು. ಸಂಸ್ಕೃತಿ ಸಂಗೋಪನೆಯನ್ನು ಉತ್ಸಾಹದಿಂದ ಕೈಕೊಳ್ಳಲು ಆರಂಭಿಸಿದ್ದು ಈ ಕಾಲದಲ್ಲಿ ವೀರಶೈವ ಕವಿಗಳು ಹನ್ನೆರಡನೆಯ ಶತಮಾನದ ವಚನಗಳಿಂದ ಪ್ರೇರಣೆಗೊಂಡು ಪುರಾತನ ಮತ್ತು ನೂತನ ಶರಣರನ್ನು, ಶರಣರ ಪವಾಡಗಳನ್ನು ಕುರಿತು ಪುರಾಣ ರೂಪದಲ್ಲಿ ಕೃತಿಗಳನ್ನು ರಚಿಸಿದರು. ವೀರಶೈವ ಕವಿಗಳು ಈ ಮೂಲಕ ತಮ್ಮ ಧರ್ಮ, ಸಾಹಿತ್ಯವನ್ನು ಸುವ್ಯವಸ್ಥೆಗೊಳಿಸಿ ಅದಕ್ಕೆ ಒಂದು ರೂಪುಕೊಡಲು ಯತ್ನಿಸಿದರು. ಜನಸಾಮಾನ್ಯರಿಗೆ ತಮ್ಮ ಧರ್ಮದ ತತ್ತ್ವಸಿದ್ಧಾಂತಗಳು ಸುಲಭವಾಗಿ ತಿಳಿಯುವಂತಹ ಶೈಲಿಯಲ್ಲಿ ಗ್ರಂಥಗಳು ಬೇಕಾಗಿದ್ದವು. ವೀರಶೈವರಿಗೆ ತಮ್ಮ ಒಳತಿಳುವಿನ ಬೆಳಕನ್ನು ತೆರೆದು ತೋರಿಸುವುದು ಅಗತ್ಯತೆ ಇತ್ತು. ಅದನ್ನು ಪೂರೈಸುವುದಕ್ಕಾಗಿ ಆ ಕಾಲದಲ್ಲಿ ಅನೇಕ ವೀರಶೈವ ತತ್ತ್ವ ಬೋಧನೆಯ ಕೃತಿಗಳು ರಚಿಸಲ್ಪಟ್ಟವು. ಅಂತಹುಗಳಲ್ಲಿ 'ಶಿವತತ್ತ್ವಚಿಂತಾಮಣಿ' ಬಹಳ ಮುಖ್ಯವಾದುದು.

ಚಂಪೂ ಕಾವ್ಯಗಳ ಮಧ್ಯದಲ್ಲಿ ವರ್ಣನೆಗಾಗಿ ಮೀಸಲಾಗಿದ್ದ ಷಟ್ಪದಿಯನ್ನು ರಾಘವಾಂಕ(ಸು. ೧೨ನೇ ಶತಮಾನ) ಕಥನ ಶೈಲಿಗೆ ಬಳಸಿಕೊಂಡು ಹೊಸಮಾರ್ಗ ವೊಂದರ ಪ್ರವರ್ತಕನಾದನು. ಭಾಷೆ ಮತ್ತು ಛಂದಃ ಶಿಲ್ಪದಲ್ಲಿ ಬದಲಾವಣೆಯಾದರೆ ಹೊರ ಚಿಂತನಾ ಕ್ರಮ ಶುರುವಾಗುತ್ತದೆ. ಅಂಶಗಣಾನ್ವಯವಾದ ಮೂಲಷಟ್ಪದಿ(ಷಟ್ಪದ) ಈ ಕಾಲದಲ್ಲಿಯೇ ಮಾತ್ರಾಗಣಕ್ಕೆ ಪರಿವರ್ತಿತವಾದ ಆರು ಷಟ್ಪದಿಗಳಾದವು(ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ ಮತ್ತು ವಾರ್ಧಕ) ಅವುಗಳಲ್ಲಿ ವಾರ್ಧಕ ಮತ್ತು ಭಾಮಿನಿಗಳು ಕನ್ನಡಕ್ಕೆ ಒಗ್ಗಿದ ಛಂದೋ ರಚನೆಗಳಾಗಿವೆ. ಅದಕ್ಕೆ ಭಾಷೆ ಮತ್ತು ಭಾವಾಭಿವ್ಯಕ್ತಿಗೆ ಅವುಗಳ ಲಯದ ಸುಗಮತೆ ಕಾರಣವಾಗಿದೆ. ಶಿವತತ್ತ್ವ ಚಿಂತಾಮಣಿಯ ಶಿಲ್ಪ ವಾರ್ಧಕದಲ್ಲಿದೆ. ಕಥಾ ನಿರೂಪನೆಯ ಭಾವ, ಅರ್ಥ, ನಾದ ವಾರ್ಧಕದಲ್ಲಿ ತುಂಬಿ ಹರಿಯಲು ಆಸ್ಪದವಿರುವುದರಿಂದಲೇ ಆ ಬಂಧದಲ್ಲಿ ನಡುಗನ್ನಡದ ಅತ್ಯುತ್ತಮ ಪುರಾಣ ಕಾವ್ಯಗಳು ರಚಿತವಾದವು(ಸಿದ್ಧರಾಮಚಾರಿತ್ರ,

ಚನ್ನಬಸವ ಪುರಾಣ, ಗುರುರಾಜ ಚಾರಿತ್ರ್ಯ, ವೀರಶೈವಾಮೃತ ಪುರಾಣ ಮುಂತಾದುವು), ದೀರ್ಘಕಾವ್ಯಗಳಿಗೆ ವಾರ್ಧಕ ಸರಿಹೋಗತಕ್ಕ ಬಂಧವಾಗಿದೆ. ಕಥೆಯನ್ನು ಹರಡಲಿಕ್ಕೆ ಮುಖ್ಯ ಗುಣವೆಂದರೆ ಅದರ ಹರಹು ಮತ್ತು ನಿಧಾನ ಗತಿ ಭಾವಾಭಿವ್ಯಕ್ತಿಗೆ ಅನುಕೂಲ. ಕತೆಯ ಹರವಿನ ದೃಷ್ಟಿಯಿಂದ ವಾರ್ಧಕವು ಷಟ್ಪದಿಗಳಲ್ಲೆಲ್ಲ ಹಿರಿದು ಅದರ ಲಯದಲ್ಲಿ ಕನ್ನಡ ಶಬ್ದರಚನೆ ಹೊಂದಿಕೆಯಾಗುತ್ತದೆ. ವಾರ್ಧಕದ ಭಾವಾಭಿವ್ಯಕ್ತಿಯ ಬೆಡಗನ್ನು ಅರಿಯಲು ಶಿವತತ್ತ್ವಚಿಂತಾಮಣಿಯ ಯಾವುದೇ ಸಂಧಿಯ ಯಾವುದೆ ಪದ್ಯವನ್ನು ತೆಗೆದುಕೊಳ್ಳಬಹುದು. ಲಿಂಗದ ಸ್ವರೂಪ ಮತ್ತು ಮಹತ್ವವನ್ನು ಹೇಳುವಾಗ ಬರುವ ಪದ ಹೀಗಿದೆ.

೫ ೫ ೫ ೫
ಲಿಂಗಮನೆ। ಸಚ್ಚಿದಾ। ನಂದಂಸ್ವ ತಂತ್ರಕಂ।
೫ ೫ ೫ ೫
ಲಿಂಗಮನೆ। ಪರಿಪೂರ್ಣ। ಮಂ ಪರಮ। ಪುರುಷಮಂ।
೫ ೫ ೫ ೫ ೫ ೫
ಲಿಂಗಮನೆ। ನಿತ್ಯಮ। ಕ್ತಂನಿಷಪ್ರ ಪಂಚಕಂ। ಲಿಂಗಮನೆ। ಸಾಕ್ಷಿರೂ ।ಪಂ
೫ ೫ ೫ ೫
ಲಿಂಗಮನೆ। ಕೇವಲಯ। ಕೃರ್ತಕಮ। ಭೋಕ್ತಲಕಂ।
೫ ೫ ೫ ೫
ಲಿಂಗಮೆನೆ। ವಾಸನಾ। ವಿರಹಿತಂ। ನಿರ್ಗುಣಂ।
೫ ೫ ೫ ೫ ೫ ೫
ಲಿಂಗಮೆನೆ। ವಾಙ್ಮನಾ। ತೀತವೆಂ। ದಱುವವರ। ಚರಣಾಂಬು। ಜಕ್ಕೆಶರ। ೞ
(೧-೧೮)

ಕಾವ್ಯದ ಹರವಿಗೆ ವಾರ್ಧಕದ ಐದೈದು ಮಾತ್ರೆಗಳ ತಾಳ ಅಥವಾ ಲಲಿತ ಲಯ(೫+೫+೫+೫) ಕಿವಿಗೆ ಹಿತವಾಗಿದೆ. ಶಿವತತ್ತ್ವಚಿಂತಾಮಣಿ ವರ್ಣಕ ಕಾವ್ಯಗಳ ಕಕ್ಷೆಯಲ್ಲಿ ಬರುವುದರಿಂದ ಗೇಯ ಪ್ರಧಾನವಾಗಿದೆ. ಅದರ ಲಕ್ಷಣ, ತಾಳ, ಲಯದಲ್ಲಿ ರುವುದರಿಂದ ಸುಶ್ರಾವ್ಯವಾಗಿ ಹಾಡಲಿಕ್ಕೆ, ಓದಲಿಕ್ಕೆ ಹಾಗೂ ಗಮಕದಂತೆ ಪಠಣ ಮಾಡಲಿಕ್ಕೆ ಅನುಕೂಲವಾಗುತ್ತದೆ. ಇದರಿಂದ ಸಹೃದಯ ಓದುಗರಿಗೆ ಅಥವಾ ಕೇಳುವವರಿಗೆ ಗ್ರಂಥದ ಬಸವೇಶ್ವರ ಪವಾಡ, ಗಿರಿಜಾ ಕಲ್ಯಾಣ, ಚಂದ್ರಕಲಾಧರ ಲೀಲೆ ಇಂತಹ ಭಾಗಗಳು ಸುಲಭವಾಗಿ ಅರ್ಥವಾಗುತ್ತವೆ. ನಮ್ಮ ನಾಡಿನಲ್ಲಿ ಬರವಣಿಗೆಯ ಸಂಪ್ರದಾಯಕ್ಕಿಂತ ಮೌಖಿಕ ಸಂಪ್ರದಾಯ ಹೆಚ್ಚು ಗಟ್ಟಿಮುಟ್ಟಾಗಿರುವು ದರಿಂದ ಈಗಲೂ ಇಂತಹ ಕೃತಿಗಳ ವಾಚನ ಮತ್ತು ಶ್ರವಣ ಪ್ರಕ್ರಿಯೆ ಮಠಮಾನ್ಯಗಳಲ್ಲಿ ಉಳಿದುಕೊಂಡು ಬಂದಿರುವುದು ವೇದ್ಯವಾಗುತ್ತದೆ.

ಲಕ್ಕಣ ದಂಡೇಶನ ವಿಶಿಷ್ಟ ಸಾಧನೆಯನ್ನು ಆತನ ಕಥನ ಕ್ರಮ ಮತ್ತು ಭಾಷಾ ಬಳಕೆಯಲ್ಲಿ ಗುರುತಿಸಬಹುದಾಗಿದೆ. ಭಾಷೆ ಸಂಸ್ಕೃತಿಯ ವಾಹಕವಾಗಿರುವುದರಿಂದ ಅದರ ಮೂಲಕವೇ ವ್ಯಕ್ತಿಗಳು ತಮ್ಮ ವಿಚಾರಗಳನ್ನು, ಅನಿಸಿಕೆಗಳನ್ನು ವಿನಿಮಯ ಮಾಡಿ ಕೊಳ್ಳುತ್ತಾರೆ. ಲಕ್ಕಣ ದಂಡೇಶ ತನ್ನ ಕಾಲದ ಕನ್ನಡವನ್ನು(ನಡುಗನ್ನಡ) ಕಾವ್ಯದಲ್ಲಿ ಸಮರ್ಥವಾಗಿ ಬಳಸಿಕೊಂಡಿದ್ದಾನೆ. ಕೃತಿ ಉದ್ದಕ್ಕೂ ದೀರ್ಘ ಸಮಸ್ತ ಪದಗಳಾಗಲಿ, ಕ್ಲಿಷ್ಟ ಪಾರಿಭಾಷಿಕಗಳಾಗಲಿ ಇಲ್ಲ. ಪರಿಚಿತ ನುಡಿಗಳಿಂದ ಕಾವ್ಯ ಜನರಿಗೆ ಹತ್ತಿರವಾಗಿದೆ.

ಅಳ್ಕು - ಹೆದರು
ಆತುಕೊ - ಆದರಿಸು
ಇದಿರಾನ್ - ಮೇಲೆ ಬೀಳು
ಕರಿಕುವರಿ - ಸುಟ್ಟು ಬೂದಿಯಾಗು
ಒಚ್ಚತ್ ಗೊಳ್ - ಸೂರೆಗೊಳ್, ಧಾರೆಯೆರೆ
ಗಡಬಡ - ಅವಸರ

ಇದರಂತೆ ಕರಕೊಂಡ, ತೆಕ್ಕೊಂಡ ಮುಂತಾದ ಆ ಕಾಲದ ಗ್ರಾಮ್ಯರೂಪಗಳು ಬಂದಿವೆ. ಇದರಿಂದ ಭಾಷಾ ಸಂಕೀರ್ಣತೆ ದೂರವಾಗಿ ಕೃತಿಯ ಆಶಯ ಜನರಿಗೆ ಸುಲಭವಾಗಿ ಅರ್ಥವಾಗುತ್ತದೆ. ನಾಮರೂಪಗಳಿಗೆ 'ಇಸು' ಪ್ರತ್ಯಯ ಸೇರಿಸಿ ಕ್ರಿಯಾಪದ ಗಳಾಗಿಸುವ ಕ್ರಿಯೆ ನಡೆದಿದೆ ಇದು ಮಧ್ಯಕಾಲದ ಕನ್ನಡದ ವೈಶಿಷ್ಟ್ಯವೂ ಆಗಿದೆ.

ವಣಿಸು - ಒಂದಕ್ಕೊಂದು ಸೇರಿಕೊಳ್ಳು
ಪೂರವಿಸು - ತುಂಬಿಸು
ನಿಸ್ತರಿಸು - ತಾಳು

ನಾಮಪದಗಳಿಗೆ ನಾಮಪದಗಳು ಸೇರಿ ಸಮಸ್ತ ಪದಗಳಾಗಿವೆ.

ಕಡೆನುಡಿ - ತಿರಸ್ಕಾರದ ಮಾತು
ಗಜಘಟೆ - ಆನೆಗಳ ಸಮೂಹ
ಕೈಗೆಡು - ಅಪಜಯ ಹೊಂದು

ಅದರಂತೆ ನಾಮಪದಗಳಿಗೆ ಕ್ರಿಯಾಪದಗಳು ಸೇರಿ ಸಮಸ್ತ ಪದಗಳಾಗಿವೆ.

ಕಡೆಯಾದೆ - ಬೀಳುವಂತೆ ಒದೆ
ಪೊಱಬೀಸು - ಹಾಳುಮಾಡು
ಮೇಲುವಾಯ್ - ಮೇಲೆಬೀಳು

ಲಾಂತ ಪದಗಳು ಳಾಂತಗಳಾಗಿವೆ. ಪರಲ್-ಹರಳು, ಕೊರಲ್-ಕೊರಳು, ಮಧ್ಯ ಮಧ್ಯದಲ್ಲಿ ಸ್ವರಗಳನ್ನು ಸೇರಿಸಿ ಸಂಯುಕ್ತಾಕ್ಷರಗಳನ್ನು ಸರಳೀಕರಿಸುವ ಕ್ರಿಯೆ ನಡೆದಿದೆ. ಭಕ್ತಿ-ಭಕುತಿ, ರಕ್ತ-ರಕುತ.

ಚತುರ್ಥಿ ವಿಭಕ್ತಿಯಲ್ಲಿ 'ಇಂಕೆ' ಎಂಬ ಪ್ರತ್ಯಯ ಪ್ರಯೋಗವಾಗಿದೆ. ಭಕ್ತರಿಂಕೆ. ಷಷ್ಠೀ ವಿಭಕ್ತಿಯಲ್ಲಿ 'ಅ' ಪ್ರತ್ಯಯವೇ ಇದೆ. ಶರಣರ, ಭಕ್ತರ. ಸಪ್ತಮಿಯಲ್ಲಿ 'ಅಲಿ', 'ಒಳು', 'ಎ' ಪ್ರತ್ಯಯಗಳು ಪ್ರಯೋಗವಾಗಿವೆ. ಶರಣರಲಿ, ಬೆಡಗಿದೊಳು, ಭಾಗ್ಯವಿದೆ. ಕವಿ ತನ್ನ ಪರಿಸರದಲ್ಲಿ ರೂಢಿಯಲ್ಲಿರುವ ಸಲಾಮು, ಬತ್ತೀಸ, ಛಪ್ಪನ್ನ, ದಿವಾಣ ಮುಂತಾದ ಅನ್ಯಭಾಷಾ ಶಬ್ದಗಳನ್ನು ತನ್ನ ಕೃತಿಯಲ್ಲಿ ಅಡಕಗೊಳಿಸಿದ್ದಾನೆ. ಆ ಕಾಲಕ್ಕೆ ಪರ್ಸೋ ಅರ್ಯಾಬಿಕ್ ಶಬ್ದಗಳು ಕನ್ನಡದ ಮನೆಯನ್ನು ಪ್ರವೇಶಿಸಿದ್ದವು ಎಂಬುದು ಇದರಿಂದ ಗೊತ್ತಾಗುತ್ತದೆ. ಭಾಷೆಗೆ ಒತ್ತುಕೊಟ್ಟು ಅದರ ಅರ್ಥವನ್ನು ಗಟ್ಟಿಗೊಳಿಸುವುದಕ್ಕಾಗಿ ಪೇಳುಪೇಳ್, ಭುಗಿಲ್ ಭುಗಿಲ್, ನಡುನಡುಗಿ ಮುಂತಾದ ದ್ವಿರುಕ್ತಿಗಳು ಬಳಕೆಯಾಗಿವೆ. ಈ ಕೃತಿ ನಡುಗನ್ನಡ ಕಾಲಘಟ್ಟದಲ್ಲಿ ರಚಿತವಾದರೂ ಪೇಳಲ್, ಕರ್ಬೊನ್, ಇಱುಂಪೆ ಮುಂತಾದ ಹಳಗನ್ನಡದ ಪದ ರೂಪಗಳು ಕ್ವಚಿತ್ತಾಗಿ ಕಾಣಿಸುತ್ತವೆ. ಅವುಗಳನ್ನು ಹದವರಿತು ಬಳಸಿರುವುದರಿಂದ ಕಾವ್ಯಕ್ಕೆ ಬರುವಂತಾಗಿದೆ. ಕವಿಯ ಶ್ರೋತೃವರ್ಗ ಕಲಿತ ಜನವಲ್ಲ; ಕಲಿಯದ ಜನ(ಸಾಮಾನ್ಯ ಜನ) ಅದಕ್ಕಾಗಿ ತನ್ನ ಅಭಿವ್ಯಕ್ತಿಗೆ, ಆಲೋಚನೆಗೆ ಆ ಕಾಲದ ಆಡುನುಡಿಯನ್ನು ಮಾಧ್ಯಮವನ್ನಾಗಿ ಮಾಡಿಕೊಂಡನು. ಕಥನ ರೂಪದಲ್ಲಿ ಶಿವಶರಣರ ಚಿಂತನೆಗಳನ್ನು ನಿರೂಪಿಸುವಾಗ ಕತೆ, ಉಪಕತೆ, ನೂರಾರು ಪಾತ್ರ ಸನ್ನಿವೇಶಗಳು ಹಾಗು ಕಾವ್ಯ ಸೌಂದರ್ಯಕ್ಕೆ ಕಾರಣವಾಗುವ ಅನೇಕ ಅಲಂಕಾರಗಳನ್ನು, ಶಬ್ದಚಿತ್ರಗಳನ್ನು ಕವಿ ಅರ್ಥಪೂರ್ಣವಾಗಿ ಬಳಸಿದ್ದಾನೆ.

ಪ್ರತಿಯೊಂದು ಕಾವ್ಯವು ಆ ಕಾಲಘಟ್ಟದ ಜನರ ಅಂತರಂಗದ ಅಭಿವ್ಯಕ್ತಿಯ ಮಾಧ್ಯಮ. ಆ ಭಾಷೆಯ ವಾಗ್ರೂಢಿಗಳಲ್ಲಿ ಅದು ಬಿಂಬಿಸುತ್ತದೆ. ಆ ಕಾಲದಲ್ಲಿ ಬಳಕೆಯಲ್ಲಿದ್ದ 'ಬಡವಂಗೆ ಹಣದೊರಕಿದಂತೆ', 'ನಿದ್ರೆ ತಿಳಿದೆದ್ದ ನರನಂತೆ', 'ಸುತನಿಗೆ ಪಿತ ಬುದ್ಧಿ ಪೇಳ್ವಂತೆ' ಮುಂತಾದ ನಾಣ್ಣುಡಿಗಳನ್ನು ಕೇಳಿದೊಡನೆಯೇ ಅಥವಾ ಓದಿದೊಡನೆಯೇ ಅರ್ಥ ಸ್ಫುರಿಸುತ್ತದೆ. ಕವಿತಾ ಬಂಧವು ಭಾವಗರ್ಭಿತವಾಗಿಯೂ ಹೃದಯಂಗಮವಾಗಿಯೂ ಇದೆ. ಪ್ರಾಸ ಚಮತ್ಕಾರವೂ ಅಷ್ಟೇ ಸೊಗಸಾಗಿದೆ. ಬಸವೇಶ್ವರನ ಜನನವಾದಾಗ ಅವನನ್ನು ಆಡಿಸುವಾಗ ಬರುವ ಚಮತ್ಕಾರ ಮನೋಜ್ಞ ವಾಗಿದೆ.

ಸರ್ವಜ್ಞ ಜೋ ಸದಾಚಾರ ಸಂಪನ್ನ ಜೋ
ನಿರ್ವಿಕಾರನೆ ಜೋ ನಿರಾಧಾರಮೂರ್ತಿ ಜೋ
ದುರ್ವಿಷಯ ದೂರ ಜೋ ದುರ್ಮದ ವಿಧಾನ ಜೋ
ದುಸ್ಸಂಗ ರಹಿತ ಜೋ ಜೋ ॥ (೩೦-೩೭)

ಇದೆ ರೀತಿ ಉತ್ತರಾರ್ಧ. ಈ ಪದ್ಯದಲ್ಲಿ ಆವೃತ್ತಿಯಾಗುವ ಜೋ ಜೋ ಎನ್ನುವ ಪದ ಕಿವಿಯನ್ನು ಅಪ್ಪಳಿಸುತ್ತದೆ(ಅನುಪ್ರಾಸಲಂಕಾರ). ಜೋಜೋ ಪದ ನಾಲ್ಕು

ಪದ್ಯಗಳಲ್ಲಿ ಮಧ್ಯ, ಅಂತ್ಯ ಸ್ಥಾನದಲ್ಲಿ ನಿಯಮಿತವಾಗಿ ಆವೃತ್ತಿಯಾಗುತ್ತಿದೆ(೩೦-೩೬, ೭, ೮, ೯). ಕೆಲವು ಪದ್ಯಗಳಲ್ಲಿ ಪದಪುಂಜವೇ ಆವರ್ತವಾಗಿದೆ. 'ಆನೆಯಂದಾಡು ಜಗದಾನಂದ ಕರನೆಂದು', 'ಆನೆ ಮಂದಾಡು ಲಿಂಗಾರ್ಚಕರಭಾವಕ್ಕೆ' (೩೦-೪೩), ಅಕ್ಕನಾಗಮ್ಮ ತಮ್ಮನನ್ನು ಮುದ್ದಾಡಿ ಲಲ್ಲೆಗರೆಯುವಾಗ 'ಕುಣಿಬಸವ ಸಂಗನುನ್ನಡಿ ಮಹಾಪೂಜೆಗಂ', 'ಕುಣಿಬಸವ ಶಿವಧರ್ಮ ಶೀಲವಂತರ ಗತಿಗೆ', (೩೦-೪೨) ಕುಣಿಬಸವ ಎಂಬುದು ವಾತ್ಸಲ್ಯದ ಸೂಚಕವಾಗಿ ಬಂದಿದೆ. ಅನೇಕ ಪದ್ಯಗಳಲ್ಲಿ ಇಂತಹ ಪದಗಳು, ಪದಪುಂಜಗಳು ಆವರ್ತವಾಗಿವೆ. ಅವು ಕವಿಯ ಪ್ರಾಸ ಪ್ರಿಯತೆಗೆ ಕಾರಣವಾಗಿವೆ. ಶಬ್ದಗಳ ಆವರ್ತನೆ ಸಹೃದಯರಿಗೆ ಬೇಸರವಾಗದೆ ಕಾವ್ಯಾಧ್ಯಾಯನಕ್ಕೆ ಪೂರಕವಾಗಿವೆ ಎಂಬುದನ್ನು ಗಮನಿಸಬೇಕು. ಪ್ರತಿಭಾನ್ವಿತ ಕವಿಗಳಿಗೆ ಮಾತ್ರ ಇದು ಸಾಧ್ಯ. ಇದು ಧಾರ್ಮಿಕ ಕೃತಿಯಾಗಿರುವುದರಿಂದ ಸಹಜವಾಗಿ ವೀರಶೈವ ಧರ್ಮದ ಪರಿಭಾಷೆಗಳು ಬಳಕೆಯಾಗಿದೆ.

ಪಂಚಮಹಾವಾದ್ಯ - ಕೊಂಬು, ತಮಟೆ, ಶಂಖ, ಭೇರಿ, ಜಾಗಟೆ
ಪಂಚ ಪುರುಷಾರ್ಥ - ಧರ್ಮ, ಮೋಕ್ಷ, ಅರ್ಥ, ಕಾಮ, ಭಕ್ತಿ

ಇದರಂತೆ 'ಪಂಚಭಕ್ಷ್ಯ', 'ಪಂಚವಿಶಂತಿ' ಮುಂತಾದವು. ವೀರಶೈವ ತತ್ತ್ವಗಳನ್ನು ಖಚಿತವಾಗಿ ನಿರೂಪಿಸುವಲ್ಲಿ ಅವು ತುಂಬ ನೆರವಾಗುತ್ತವೆ.

ಗಿರಿಜೆಯು ಪರಶಿವನೇ ತನಗೆ ಗಂಡನಾಗಬೇಕೆಂದು ಬಹುಕಾಲ ಘೋರ ತಪವ ನೆಸಗಲು ಶಿವನು ಅವಳ ಮನೋದಾಢ್ಯವನ್ನು ಪರೀಕ್ಷಿಸಲು ವಟುವೇಷ ಧಾರೆಯಾಗಿ ಅಲ್ಲಿಗೆ ಬಂದು ಹಲವು ವಿಧವಾಗಿ ಶಿವನನ್ನು ದೂಷಿಸಿದರೂ ಪಾರ್ವತಿಯು ಒಪ್ಪದೇ ಆ ಮಾತುಗಳನ್ನೇ ಭೂಷಣಗಳನ್ನಾಗಿ ಮಾಡಿಕೊಂಡು ಪ್ರತ್ಯುತ್ತಮ ಕೊಟ್ಟಳು. ಆಗ ಶಿವನು ಮೆಚ್ಚಿ ಅವಳನ್ನೇ ಮದುವೆಯಾದನು. ಶಿವನು ನಿಜರೂಪ ತೋರಿಸಿದಾಗ ಆ ಪದ್ಯ ಹೀಗಿದೆ.

ಗಿರಿಜೆ ಶಪಿಸಿದ ಮುನ್ನ ಸರಿದುದಾ ಹೊಱರೂಪು
ಕಱಗೊರಲ ಖಟ್ವಾಂಗ ಉರಗಭೂಷಣ ಚರ್ಮ
ಉರುದೇಹ ಕಾಂತಿ ದಶಭುಜ ಪಂಚವಸ್ತ್ರ ತ್ರಿಯಕ್ಷ ನಿಜರೂಪು ದೋಱು
ಹರುಷದಿಂ ಕೈಲಾಸಗಿರಿಗೆ ಕರೆಯಲಿಕೆ ತ
ದ್ದರದೆ ಗಿರಿರಾಜ ಮೆನಕಿಯರುಗಳಂ ಕೆಳಿ
ಪಿರಿದೆಸೆವೆ ಕಲ್ಯಾಣವಾಗೆ ಬಹೆನೆಂಬುವೆಯಱುವವರ ಚರಣಾಂಬುಜಕ್ಕೆ ಶರಣು॥
(೧೫-೧೨)

ಇಲ್ಲಿ ಶಿವನ ನಿಜರೂಪದ ವರ್ಣನೆಯೇ ಸ್ವಭಾವೋಕ್ತಿ ಅಲಂಕಾರವಾಗಿದೆ. ಇಂತಹ ಶಬ್ದ ಪ್ರಯೋಗಗಳು ಸಹೃದಯರ ಮೆಚ್ಚುಗೆಯನ್ನು ಗಳಿಸುತ್ತವೆ. ಹೇಳಬೇಕಾದ ವಿಷಯ ಸಹೃದಯರಿಗೆ ಮುಟ್ಟುತ್ತವೆ. ಕವಿಯ ಭಾಷಾಶೈಲಿಯ ಸಹಜತೆಗೂ ಅವು

ನೇರ ನಿದರ್ಶನಗಳಾಗಿವೆ. ಇದರಂತೆ ಬಸವೇಶ್ವರ ಮದುವೆ, ಗಿರಿಜಾಕಲ್ಯಾಣ, ಪಂಪಾ ಕ್ಷೇತ್ರದ ಮಹಿಮೆ, ಪಂಚಾಕ್ಷರಿ ಮಹಿಮೆ ಇಂತಹ ಸಂಧಿಗಳನ್ನು ಎಷ್ಟು ಸಾರಿ ಓದಿದರೂ ಮತ್ತೆ ಮತ್ತೆ ಓದಬೇಕೆನಿಸುತ್ತದೆ. ಲಕ್ಕಣ ದಂಡೇಶ ತನಗಿಂತ ಹಿಂದಿನ ವೀರಶೈವ ಸಾಹಿತ್ಯದಲ್ಲಿ ಆಮೂಲಾಗ್ರವಾಗಿ ಅಧ್ಯಯನ ಮಾಡಿದ್ದಾನೆ. ಚನ್ನಬಸವಣ್ಣನ 'ದೀಕ್ಷಾವಿಧಿ', ಕೆರೆಯ ಪದ್ಮರಸನ 'ದೀಕ್ಷಾಬೋಧೆ'ಗಳನ್ನು ಸಂದರ್ಭಕ್ಕೆ ತಕ್ಕಂತೆ ತನ್ನ 'ದೀಕ್ಷಾ ವಿಧಾನ ಸಂಧಿ'(೪೦)ಯಲ್ಲಿ ವಾರ್ಧಕದ ಚೌಕಟ್ಟಿನಲ್ಲಿ ಹೇಳಿದ್ದಾನೆ.

ವೀರಶೈವತತ್ತ್ವಗಳನ್ನು ಜನರಿಗೆ ಸುಲಭವಾಗಿ ಮುಟ್ಟಿಸುವ ಸಂಭಾಷಣೆಯ ತುಣುಕುಗಳು ಬಂದಿವೆ. 'ಕೇಳ್ ಕೇಳ್ ಬಸವಾ ಎನ್ನಯ್ಯ ಸುತಾ', 'ಹಾ ಹಾ ಶರಣ ಹಾ ಪೇಳ್ ಪೇಳ್, ಆ ಭಕ್ತ ಆರ್ ಎನುತ, ಅಕಟಕಟಾ' ಎಂತಹದಾಯಿತು. 'ಛೀ ಛೀ ಆಗದು' ಉದ್ಗಾರ ವಾಚಕಗಳಿಂದ ಕೂಡಿದ ಇಂತಹ ಮಾತುಗಳು ನಿರೂಪಣೆಯಲ್ಲಿ ಆತ್ಮೀಯ ವಾತಾವರಣ ಸೃಷ್ಟಿಸಿವೆ. ಹೀಗೆ ಅಲ್ಲಲ್ಲಿ ಕವಿಯ ಪ್ರತಿಭೆ ಮಿಂಚಿದರೂ ಒಟ್ಟಾರೆ ಅವನದು ಒಂದೇ ಬಗೆಯಾದ ಏಕತಾನದ ಶೈಲಿ. ಅವನ ಕೃತಿಯಲ್ಲಿ ಹರಿಹರನ ಆವೇಶವಾಗಲಿ ರಾಘವಾಂಕನ ಚಮತ್ಕಾರವಾಗಲಿ ಕಾಣಿಸದು. ಆದರೂ ವೀರಶೈವ ಧರ್ಮದ ಮೂಲತತ್ತ್ವವನ್ನರಿಯಲು ಲಕ್ಷಿಸಬೇಕಾದ ಕೃತಿಯಿದು.

ಲಕ್ಕಣ್ಣ ದಂಡೇಶ ಸಂಸ್ಕೃತದ ದೊಡ್ಡ ವಿದ್ವಾಂಸವಾಗಿದ್ದನು. ಗ್ರಂಥದ ಮಧ್ಯ ಮಧ್ಯ ಮೂವತ್ತೆರಡು ಸಂಸ್ಕೃತ ಶ್ಲೋಕಗಳು ವಾರ್ಧಕದ ಚೌಕಟ್ಟಿನಲ್ಲಿ ಬೆರೆತಿವೆ. ಸಂಸ್ಕೃತದ ಲಿಂಗ ಪುರಾಣದಿಂದ ವೃಷಭ ವಾಹನಲೀಲೆ, ಅರ್ಧನಾರೀಶ್ವರರ ಲೀಲೆಗಳಲ್ಲಿ ಅದರಂತೆ ಸಂಸ್ಕೃತದ ಆದಿತ್ಯ ಪುರಾಣದಿಂದ ಕಾಮದಹನ ಲೀಲೆ, ಗಿರಿಜಾಕಲ್ಯಾಣದ ವಿಷಯಗಳು ಬಂದಿವೆ. ಕವಿಯ ವಿಸ್ತಾರವಾದ ಓದು, ಗ್ರಹಣ ಶಕ್ತಿ, ಮೇಧಾಶಕ್ತಿಗಳಿಗೆ ಇದು ಸ್ಪಷ್ಟ ನಿದರ್ಶನ. ಇದರಂತೆ ಸಂಸ್ಕೃತದ ವಾತುಲಾಗಮ, ಶಿವಪುರಾಣ ಧರ್ಮಸಂಹಿತೆ, ಶಿವಪುರಾಣ ವಾಯವ್ಯ ಸಂಹಿತೆ, ಶಿವರಹಸ್ಯ, ಸ್ಕಂದಪುರಾಣ, ಬ್ರಹ್ಮಾಂಡ ಪುರಾಣ, ಕ್ರಿಯಾಸಾರು ಮುಂತಾದ ಹದಿನೆಂಟು ಸಂಸ್ಕೃತ ಪ್ರಮಾಣ ಗ್ರಂಥಗಳನ್ನು ತನ್ನ ಉದ್ದೇಶ ಸಿದ್ಧಿಗಾಗಿ ಬಳಸಿಕೊಂಡಿದ್ದಾನೆ. ಈ ಕೃತಿಗಳಲ್ಲಿ ಎಷ್ಟೋ ಈಗ ಲಭ್ಯವಿರುವ ಸಾಧ್ಯತೆಗಳಿಲ್ಲ. ಈ ಕೃತಿಯ ಅಧ್ಯಯನದಿಂದ ಸಂಸ್ಕೃತ ಸಾಹಿತ್ಯ ಚರಿತ್ರೆಗೆ ಹೊಸ ಕೃತಿಗಳ ಹೆಸರುಗಳನ್ನು ಸೇರಿಸುವ ಸಾಧ್ಯತೆಗಳಿವೆ.

ಈ ಕೃತಿಯಲ್ಲಿಯ ಸ್ಥಳನಾಮಗಳು, ವ್ಯಕ್ತಿನಾಮಗಳು ಮತ್ತು ವೃತ್ತಿನಾಮಗಳ ರಚನೆಯನ್ನು ಕುರಿತೇ ಪ್ರತ್ಯೇಕವಾದ ಸಂಪ್ರಬಂಧವನ್ನು ಬರೆಯಬೇಕಾಗುತ್ತದೆ. ಅದರ ಒಂದು ಸ್ಥೂಲವಾದ ವಿವೇಚನೆಗೆ ಮಾತ್ರ ಇಲ್ಲಿ ಅವಕಾಶವಿದೆ. ಹೆಸರುಗಳು ಬಹುಸಹಜ ರೀತಿಯಲ್ಲಿ ಕೃತಿಗೆ ಭಾರವಾಗದಂತೆ ಕಾಣಿಸಿಕೊಂಡಿವೆ. ಅವು ಕೃತಿಯ ಚಾರಿತ್ರಿಕ ಮಹತ್ತ್ವವನ್ನು ಬಿಂಬಿಸುತ್ತವೆ. ಇಲ್ಲಿಯ ವ್ಯಕ್ತಿನಾಮಗಳಲ್ಲಿ ಶರಣರ, ಯತಿಗಳ, ಹೆಸರು ಗಳು ಇವೆ. ಅವರಲ್ಲಿ ಹಲವರ ಹೆಸರು ಮತ್ತು ಅವರ ವಾಸಸ್ಥಳಗಳ ಹೆಸರು

ಶಾಸನಗಳಲ್ಲಿ ಮತ್ತು ಇತರ ಕಾವ್ಯಗಳಲ್ಲಿ ದೊರೆಯುತ್ತವೆ. ಅವುಗಳಿಂದ ಅನೇಕ ಕವಿಗಳ ಕಾಲವನ್ನು ಕಂಡುಹಿಡಿಯುವುದಕ್ಕೂ ಈ ಕೃತಿ ನೆರವಾಗುತ್ತದೆ. ಗುಮ್ಮಳಾಪುರದ ಚೊಕ್ಕದೇವಪ್ಪಯ್ಯನಿಂದ ಸೌಂದರ್ಯ ಪುರಾಣವನ್ನು ಬರೆದ ಬೊಮ್ಮರಸನ ಕಾಲವನ್ನು ಕಂಡುಹಿಡಿಯುವುದಕ್ಕೂ, ಗುಬ್ಬಿ ಮಲ್ಲಣ್ಣನ ಉಲ್ಲೇಖದಿಂದ ಲಕ್ಕಣ್ಣ ದಂಡೇಶನ ಕಾಲದ ಗಡಿಯನ್ನು ಊಹಿಸುವುದಕ್ಕೂ ಇಲ್ಲವೆ ಲಕ್ಕಣ್ಣ ದಂಡೇಶನು ಇವನ ಹೆಸರನ್ನು ಈ ಗಣಂಗಳ ಚರಿತ್ರೆಯಲ್ಲಿ ಸೇರಿಸಿರುವುದರಿಂದ ಗುಬ್ಬಿ ಮಲ್ಲಣ್ಣನ ಕಾಲವನ್ನು ಕಂಡುಹಿಡಿಯುವುದಕ್ಕೂ ನೆರವಾಗುತ್ತದೆ. ಕೃತಿಯಲ್ಲಿ ಉಲ್ಲೇಖಿತವಾದ ಕೆಲವು ಶರಣರ ಊರು ಮತ್ತು ಕಾಯಕದ ಹೆಸರುಗಳು ಇಂತಿವೆ.

ರಾಜಕೊಂಡ ಅಣಾಭಕ್ತ(ಉಪ್ಪಲಿ ಕಾಯಕ), ಕೋರಮಜಿಗಲ್ಲ ಕೇಸೂರು ಅಮ್ಮಾಯಿ (ಆರಂಭ ಕಾಯಕ), ಪೆನುಗೊಂಡೆ ಎಜ್ರಿಮ್ಮ(ಮುತ್ತಿಲಕಾಯಕ) ಕೋಟೆಕೆರೆ ಕಾಮಣ್ಣ ತಂದೆ(ಎಲೆಯ ಕಾಯಕ), ಕೋಡುಗಲ್ಲು ಕುಂಬಾರ ಭಕ್ತರಾಮಣ್ಣ(ಕುಂಬಾರ), ಪಿಂಡಿಕೂರು ಚನ್ನಾಭಕ್ತ ತಂದೆ(ಬಡಗಿ ಕಾಯಕ) ಮಾವಿನಹಳ್ಳಿ ಚಾಕಪ್ಪ(ಓದಿಸುವ ಕಾಯಕ), ವೆಲ್ಲಂದೂರು ಚಿಟ್ಟಾಭಕ್ತ(ಕಬ್ಬಿನದ ಕೆಲಸಿ), ಏಳಿಗೆ ಚಿಟ್ಟಾಭಕ್ತ(ನೂಲಕಾಯಕ), ನಾವಿ ತಿಮ್ಮಣ(ಕನ್ನಡಿ ಕಾಯಕ), ಚಿಮ್ಲಿಗೆ ನೀಲಕಂಠಯ್ಯ(ತೋಟದ ಕಾಯಕ) ಹರಹ ತೊಳಲು ಮಲ್ಲಯ್ಯ(ಗಾಣಿಗ ಕಾಯಕ) ಅದರಂತೆ ಅಂಕಿಸೆಟ್ಟಿ, ಕೇತಿಸೆಟ್ಟಿ, ಗೋವಿಂದಸೆಟ್ಟಿ, ನಾಗಿಸೆಟ್ಟಿ, ಮಾಯಿಸೆಟ್ಟಿ, ಲಿಂಗಿಸೆಟ್ಟಿ, ಸೋಯಿಸೆಟ್ಟಿ, ದೇವಿಸೆಟ್ಟಿ, ಧರಣಿಸೆಟ್ಟಿ ಮುಂತಾದ ಆ ಕಾಲದ ವೀರಶೈವ ವರ್ತಕ ವರ್ಗದ ಹೆಸರುಗಳು ದೊರೆಯುತ್ತವೆ. ಹದಿನೈದನೆಯ ಶತಮಾನದ ಸುಮಾರು ಏಳುನೂರು ವೀರಶೈವ ಶಿವಭಕ್ತರ, ಮುಖಂಡರ ಅವರ ಊರು, ವೃತ್ತಿ ಸಮೇತವಾಗಿ ಈ ಕೃತಿಯಲ್ಲಿ ದೊರಕುತ್ತವೆ. ತನ್ಮೂಲಕ ವೀರಶೈವ ಧರ್ಮಕ್ಕೆ ಗಟ್ಟಿ ತಳಹದಿಯನ್ನು ಕೊಡುವುದೇ ಕವಿ ಉದ್ದೇಶವಾಗಿತ್ತು ಎಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಕಾವ್ಯದಲ್ಲಿ ಸಂದರ್ಭಕ್ಕೆ ತಕ್ಕಂತೆ ಬರುವ ನಾಗಪ್ಪ, ನಾಗಯ್ಯ, ನಾಗರಸ, ನಾಗಿಸೆಟ್ಟಿ, ನಾಗಪ್ಪಯ್ಯ, ನಾಗಣ್ಣಯ್ಯ, ನಾಗಪ್ಪಶರಣ, ನಾಗಪ್ಪಯ್ಯಶರಣ, ನಾಗಿಯಣ್ಣ, ನಾಗಿ ದೇವಯ್ಯ, ನಾಗಣಯ್ಯ ಮುಂತಾದವು ಸಭ್ಯ, ಸಭ್ಯೇತರ, ಅತಿಸಭ್ಯ ಇಂತಹ ಸಾಮಾಜಿಕ ಸನ್ನಿವೇಶಗಳಲ್ಲಿ ಬಳಕೆಯಾಗುತ್ತವೆ. ಬಳಕೆಯ ಸಂದರ್ಭದಲ್ಲಿ ಅವಲೋಕಿಸಿ ಅವು ಸಾಮಾಜಿಕ ಪ್ರತಿಷ್ಠತೆಯ ಸೂಚಕವೂ ಆಗುತ್ತದೆ. ಅದರಂತೆ ಬಸವ, ಬಸವಣ್ಣ, ಬಸವಣ್ಣಯ್ಯ, ಬಸವಪ್ಪ, ಬಸವಣ್ಣ ತಂದೆ ಮುಂತಾದವು. ಇಲ್ಲಿ ಸಂಗ್ರಹಿತವಾದ ವ್ಯಕ್ತಿನಾಮಗಳು ತುಂಬ ಸ್ವಾರಸ್ಯಕರವಾಗಿವೆ. ಆರಂಭ ಕಾಯಕ, ಕನ್ನಡಿ ಕಾಯಕ, ಓದಿಸುವ ಕಾಯಕ ಮುಂತಾದುವು ಆ ಕಾಲದ ಜನಾಂಗಿಕ ಅಧ್ಯಯನಕ್ಕೂ ಸಾಂಸ್ಕೃತಿಕ ಪುನಾರಚನೆಗೂ ನೆರವಾಗುತ್ತವೆ. ಈ ಎಲ್ಲ ಅಂಶಗಳು ಸಾಮಾಜಿಕ ಭಾಷಾಧ್ಯಯನ ಮಾಡುವವರಿಗೆ ಉಪಯುಕ್ತ ಸಾಮಗ್ರಿಯಾಗುತ್ತವೆ.

ಒಟ್ಟಿನಲ್ಲಿ ಮಧ್ಯಕಾಲದ ಸಮಾಜೋಧಾರ್ಮಿಕ ಹಿನ್ನೆಲೆಯಲ್ಲಿ ರಚಿತವಾದ ಈ ಕೃತಿಯಿಂದ ಆ ಕಾಲದ ಸಾಮಾಜಿಕ ಪರಿಸ್ಥಿತಿಯನ್ನು ತಿಳಿಯಲು ಸಾಕಷ್ಟು ಭಾಷಿಕ ಸಾಮಗ್ರಿಗಳು ದೊರಕುತ್ತವೆ. ವೀರಶೈವ ಸಂಸ್ಕೃತಿಯ ಸಮಗ್ರ ಪರಂಪರೆಯನ್ನು ತಿಳಿಯಲು ಹಾಗೂ ವೀರಶೈವ ಧರ್ಮದ ಸಮಗ್ರ ಇತಿಹಾಸವನ್ನು ರಚಿಸಲು ಈ ಕೃತಿ ಪುಟ್ಟ ವಿಶ್ವಕೋಶದಂತಿದೆ. ಅದರ ಸಾಂಸ್ಕೃತಿಕ ಅಂಶಗಳನ್ನು ವಿವರಿಸಲು ಇಲ್ಲಿ ಅವಕಾಶವಿಲ್ಲ. ಆ ಕೃತಿಯ ಕಥನ ಕ್ರಮ ಹಾಗೂ ಆ ಕಾಲದ ಭಾಷಿಕ ಸ್ಥಿತಿಯನ್ನೇ ಸ್ಥೂಲವಾಗಿ ಈ ಪ್ರಬಂಧದಲ್ಲಿ ಲಕ್ಷಿಸಲಾಗಿದೆ.

ಆಕರಗ್ರಂಥ

೧. ಪಂಡಿತ ಎಸ್. ಬಸಪ್ಪ (ಸಂ.), ೧೯೬೦, ಶಿವತತ್ವ ಚಿಂತಾಮಣಿ.

೨. ರವೀಂದ್ರನಾಥ ಕೆ., ಶಿವತತ್ವ ಚಿಂತಾಮಣಿ ವಿವೇಚನೆ, ಶ್ರೀ ವಿರಕ್ತಮಠ, ಸಂಡೂರು.

೫೦

ಕರ್ನಾಟಕ ಸ್ಥಳನಾಮಗಳ ಮೇಲೆ ಕನ್ನಡೇತರ ದ್ರಾವಿಡ ಭಾಷೆಯ ಪ್ರಭಾವಗಳು

ಭಾಷೆ ನಿರಂತರವಾಗಿ ಪರಿವರ್ತನೆ ಹೊಂದುತ್ತಿರುತ್ತದೆ. ಈ ಪರಿವರ್ತನೆಯ ಸೋಂಕು ಹೆಸರುಗಳಿಗೂ ತಟ್ಟದಿರುವುದಿಲ್ಲ. ಭಾಷೆಗಳಲ್ಲಾಗುವ ಎಲ್ಲಾ ವ್ಯತ್ಯಾಸಗಳನ್ನು ಹೆಸರುಗಳಲ್ಲಿಯೂ ಗುರುತಿಸಬಹುದು. ನಾಮಾಂತರಕ್ಕೆ(ಅನ್ಯ) ಭಾಷಾ ಸಂಪರ್ಕ ಮತ್ತು ವಲಸೆ ಮುಖ್ಯಕಾರಣ. ಕನ್ನಡ ಭಾಷೆ ಮತ್ತು ಸಾಹಿತ್ಯದ ಮೇಲೆ ದಟ್ಟ ಪ್ರಭಾವ ಬೀರಿದ ಸಂಸ್ಕೃತದ ಪ್ರಭಾವ ನಾಮಗಳ ಮೇಲೆಯೂ ಹೇರಳವಾಗಿದೆ. ಈ ಬಗೆಗೆ ಪ್ರತ್ಯೇಕ ಸಂಪ್ರಬಂಧ ಇರುವುದರಿಂದ ಇಲ್ಲಿ ಅದರ ಚರ್ಚೆ ಅನಗತ್ಯ. ವೃತ್ತಿ, ಶಿಕ್ಷಣ ಹಾಗೂ ಉದರಪೋಷಣೆಗಾಗಿ ಜನ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಹೋಗುವುದರಿಂದ ತಮ್ಮ ಮೂಲ ಊರಿನ ಹೆಸರನ್ನೂ ಅಥವಾ ತಮ್ಮ ಜನಾಂಗದ ಹೆಸರನ್ನೂ ತಾವು ವಲಸೆ ಬಂದ ಪ್ರದೇಶಕ್ಕೆ ಇಡುವುದುಂಟು (ಉದಾಹರಣೆಗಳನ್ನು ಮುಂದೆ ನೋಡಿ).

ನಾಮಾಂತರಕ್ಕೆ ಐತಿಹಾಸಿಕ ಮತ್ತು ಸಾಮಾಜಿಕ ಸಂಗತಿಗಳು ಕಾರಣವಾಗುತ್ತವೆ. ರಾಜಮಹಾರಾಜರು, ದಂಡನಾಯಕರು ತಮ್ಮ ಹೆಸರನ್ನು ಸ್ಥಿರಸ್ಥಾಯಿಗೊಳಿಸುವ ಸಲುವಾಗಿ ಹಳೆಯ ಹೆಸರನ್ನು ಅಳಿಸಿ ತಮ್ಮ ಹೆಸರನ್ನು ರೂಢಿಗೆ ತರುವುದುಂಟು. ಹಳೇ ಮೈಸೂರಿನ ಕಡೆಗೆ ಇಂತಹ ನಿದರ್ಶನಗಳಿವೆ. ಅರಿಕೊಠಾರ-ಚಾಮರಾಜನಗರ ವಾಗುತ್ತದೆ. ಅತ್ತಿಗುಪ್ಪೆ-ಕೃಷ್ಣರಾಜಪೇಟೆಯಾಗುತ್ತದೆ(ಕೆಲವು ಸಾರಿ). ಸಾಮಾಜಿಕ ಕಾರಣಗಳಿಂದಾಗಿ ಹೆಸರಿನಿಂದ ಹೀನಾರ್ಥ ಹೊರಹೊಮ್ಮುತ್ತದೆಂಬ ನಿಮಿತ್ತದಿಂದ ಹಳೆಯ ಹೆಸರಿಗೆ ಬದಲಾಗಿ ಹೊಸ ಹೆಸರಿಗಾಗಿ ಹಳ್ಳಿಗರು ಹಾತೊರೆಯುತ್ತಾರೆ. ಉದಾ. ಬೆಳಗಾವಿ ಜಿಲ್ಲೆಯ 'ಕೊರವಳ್ಳಿ' ಎಂಬ ಊರಿದೆ ಎಂದಿಟ್ಟುಕೊಳ್ಳೋಣ. ಹಿಂದೆ ಅದು ಕೊರವರ ಬೀಡಾಗಿದ್ದಿರಬೇಕು ಕ್ರಮೇಣ ಅವರು ಅಲ್ಲಿಂದ ಬೇರೆ

ಕಡೆಗೆ ವಲಸೆ ಹೋದನಂತರ ಲಿಂಗಾಯತರು ಅಧಿಕವಾಗಿದ್ದ ಪಕ್ಷದಲ್ಲಿ 'ಸೋಮಾಪುರ'ವೆಂದು, ಬೇಡರು ಅಧಿಕವಾಗಿದ್ದರೆ 'ವಾಲ್ಮೀಕಿಪುರ'ವೆಂದು ಹರಿಜನರು ಅಧಿಕವಾಗಿದ್ದರೆ 'ಸಿದ್ಧಾರ್ಥಪುರ'ವೆಂದು ಬದಲಾಯಿಸಲು ಪ್ರಯತ್ನಿಸುತ್ತಾರೆ. ಪರಿಸ್ಥಿತಿ ಪರಿವರ್ತನೆ ಹೊಂದಿರುವ ಈ ಕಾಲದಲ್ಲಿ ಜನ ಬದಲಾವಣೆಯನ್ನು ಅಪೇಕ್ಷಿಸುವುದು ಸಹಜವೇ![೧] ಈ ಬಗೆಗಿನ ಚರ್ಚೆ ಪ್ರತ್ಯೇಕ ಬರೆಹದ ವಸ್ತುವಾಗುತ್ತದೆ.

ಕರ್ನಾಟಕದ ಸ್ಥಳನಾಮಗಳ ಮೇಲೆ ದ್ರಾವಿಡ ಭಾಷೆಗಳ ಪ್ರಭಾವವನ್ನು ಗಡಿ ಪ್ರದೇಶದಲ್ಲಿ ದೊರೆಯುವ ನಾಮಘಟಕಗಳನ್ನಾಧರಿಸಿ ಸೋದಾಹರಣವಾಗಿ ವಿವರಿಸಲು ಇಲ್ಲಿ ಯತ್ನಿಸಲಾಗಿದೆ. ಆ ಪ್ರಭಾವವನ್ನು ಸ್ಥೂಲವಾಗಿ ಹೀಗೆ ವಿಶ್ಲೇಷಿಸಬಹುದು.

೧. (ಕನ್ನಡೇತರ) ದ್ರಾವಿಡ ಭಾಷಾ ನಾಮರೂಪಗಳನ್ನು ಯಥಾವತ್ತಾಗಿ ಬಳಸಿ ಕೊಂಡಿರುವುದು.

೨. ದ್ರಾವಿಡ ಭಾಷಾ ನಾಮರೂಪಗಳಲ್ಲಿ ನಿರ್ದಿಷ್ಟ ಅಥವಾ ವಾರ್ಗಿಕಗಳನ್ನು ಕನ್ನಡ ಭಾಷೆಯ ಜಾಯಮಾನಕ್ಕೆ ತಕ್ಕಂತೆ ಮಾರ್ಪಡಿಸಿಕೊಳ್ಳುವುದು.

ಕರ್ನಾಟಕದ ಸ್ಥಳನಾಮಗಳನ್ನು (ಕನ್ನಡೇತರ) ದ್ರಾವಿಡ ಭಾಷಾ ಪ್ರಭಾವದಿಂದ ಬಂದಿರುವ ಸ್ಥಳನಾಮಗಳೊಂದಿಗೆ ತುಲನೆ ಮಾಡಿದಾಗ ಅವು ಪರಸ್ಪರ ಯಾವ ರೀತಿ ಪ್ರಭಾವಗೊಂಡಿವೆ ಎಂಬುದನ್ನು ಮನಗಾಣಬಹುದು.

ಸ್ಥಳನಾಮ ಘಟಕಗಳಲ್ಲಿನ ಜಲ, ಭೂಸ್ಥಿತಿ, ವೃತ್ತಿ, ಜನಾಂಗ ಇತ್ಯಾದಿ ಅಂಶಗಳನ್ನು ಅನುಲಕ್ಷಿಸಿ ನೈಸರ್ಗಿಕ ಮತ್ತು ಸಾಮಾಜಿಕ ಅಂಶಗಳನ್ನೊಳಗೊಂಡ ಸ್ಥಳನಾಮಗಳೆಂದು ವರ್ಗೀಕರಿಸಬಹುದು ಕಾಲ ಕಾಲಕ್ಕೆ ಭಾಷೆಯ ಪ್ರಭಾವ ಆಯಾಪ್ರದೇಶಗಳಲ್ಲಿ ಹೇಗಾಗಿದೆ ಅದು ಸ್ಥಳನಾಮಗಳ ಮೇಲೆ ಹೇಗೆ ಪ್ರಭಾವ ಬೀರಿದೆ ಎಂಬ ಅಂಶ ಇದರಿಂದ ಸ್ಪಷ್ಟವಾಗುತ್ತದೆ. ದಕ್ಷಿಣ ಕನ್ನಡದ ಕಡೆಗೆ ತುಳು, ಮಲಯಾಳಂ ಭಾಷೆಗಳ ಮತ್ತು ಕೋಲಾರ, ಪಾವಗಡ ಪ್ರದೇಶದ ಕಡೆಗೆ ತೆಲುಗು ಭಾಷೆಯ ಪ್ರಭಾವ ಹೇರಳವಾಗಿದೆ. ಈ ಅಂಶಗಳು ಆ ದ್ವಿಭಾಷಿಕ ಪ್ರದೇಶಗಳ ಭಾಷೆ ಹಾಗೂ ಸಾಮಾಜಿಕ ಸ್ಥಿತಿಗತಿಗಳನ್ನು ತಿಳಿಯಲು ಸಹಾಯಕವಾಗುತ್ತವೆ.

ಕರ್ನಾಟಕದ ಸ್ಥಳನಾಮಗಳ ಮೇಲೆ ದ್ರಾವಿಡ ಭಾಷೆಗಳ ಪ್ರಭಾವ ಯಾವ ರೀತಿಯಾಗಿದೆ ಎಂಬುದನ್ನು ಈ ಕೆಳಗಿನ ನಿದರ್ಶನಗಳಿಂದ ತಿಳಿಯಬಹುದಾಗಿದೆ.

ಜಲವಾಚಕ ಅಂಶವುಳ್ಳ ನಿರ್ದಿಷ್ಟ ಮತ್ತು ವಾರ್ಗಿಕಗಳು ಕರ್ನಾಟಕದ ಸ್ಥಳನಾಮಗಳ ಮೇಲೆ ಕಾಣಿಸಿಕೊಂಡಿವೆ. ತೆಲುಗು ಪ್ರಭಾವಿತ ರೂಪಗಳು ಕೋಲಾರ ಪ್ರದೇಶದಲ್ಲಿವೆ.

ಒಡ/ಓಡ ಸಣ್ಣತೊರೆ, ಹಳ್ಳ, ಓಡ್ಯೆ (ತೆಲುಗು)
ಒಡಗರೆ, ಎಲ್ಲೋಡು, ವಡ್ಡುಕೆರೆ (ಕೋಲಾರ
ಕುಲು/ಕೋಲು ನೀರು ನಿಂತಿರುವ ಒಡ್ಡು, ಕುಳು (ತಮಿಳು, ತೆಲುಗು, ತುಳು)
ಹುದುಕುಳ (ಕೋಲಾರ) ಕುಳತ್ತೂರು (ಕೊಡಗು), ಕುಳಗಾರು (ದ.ಕ.)

ಚೆರುವು/ಚೆರ್ಲ ಕೆರೆ ಚೆರುವು (ತೆಲುಗು)
ಚೆರ್ಲೋಪಲ್ಲಿ < ಚೆರುವು ಲೋಪಲ್ಲಿ (ಕೋಲಾರ)
ಚರ್ಲಲೂರು (ತುಮಕೂರು)
ಜವುಗು / ಜಾಗು–ತೇವದಿದಿಂದ ಕೂಡಿದ ಪ್ರದೇಶ, ಜಾಕು(ತೆಲುಗು)
ಜಾಗುಪಲ್ಲಿ (ಕೋಲಾರ) (ಕ>ಗ)

ಮಲಯಾಳಂ ಮತ್ತು ತುಳುನಾಡಿನ ಜಲವಾಚಕಗಳಾದ ಆಲ್, ಆರ್, ಬೆಳ್ (ಬೋಳ್) ಇವೆಲ್ಲ ನೀರಿನ ಆಧಿಕ್ಯವನ್ನು ಸೂಚಿಸುತ್ತವೆ.

ಆಲ್ ನದಿ ತೀರದ ಪ್ರದೇಶ. ಆಲೂರು, ಹಾಲಾಡಿ >ಆಲಾಡಿ (ದ.ಕ.)
ಪೆರಿಯಾಲ <ಪೆರಿ (>ಪಿರಿ) + ಆಲ (ದ.ಕ.)

ಆರ್ ನೀರು ಹರಿದು ಇಲ್ಲವಾಗುವುದನ್ನು ಸೂಚಿಸುತ್ತದೆ.

ಅರಿ ಬೈಲ್ (ದ.ಕ.) ಸಾಕಷ್ಟು ನೀರಿನ ಪೂರೈಕೆಯುಳ್ಳ
ಫಲವತ್ತಾದ ಭೂಮಿ ಪಿರಿಯಾರ್ (ದ.ಕ.) ನೀರಿನ ಹೊಂಡ
ಬೊಳ್ ಜೌಗು ಪ್ರದೇಶ, ಬೊಳಂಜೆ (<ಬೊಳ್+ಅಂಚೆ)
ಬೊಳೂರು/ಬೆಳೂರು < (ಬೊಳ್+ಇ+ಊರು)

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ತುಳು ಮೂಲದ ಕುದರು, ಕುದ್ರು ಎಂಬ ರೂಪಗಳು ನೀರಿನಿಂದ ಆವೃತವಾದ ಪ್ರದೇಶವನ್ನು ಸೂಚಿಸುತ್ತದೆ. ಉತ್ತರ ಕನ್ನಡ ಜಿಲ್ಲೆಯ ನದಿ ತೀರ ಪ್ರದೇಶದಲ್ಲಿ ಕಾಣಿಸಿಕೊಳ್ಳುವ ಕುರ್ವೆ, ಕೂರ್ವೆಗಳು ಪ್ರಾಯಶಃ ಕುದರು, ಕುದ್ರು ಎಂಬುದಕ್ಕೆ ಸಂವಾದಿಯಾಗಿರಬಹುದು. ಆಲಕುದ್ರು, ಉಪ್ಪಿನ ಕುದುರು (ದ.ಕ.) ಕಪ್ಪೆಕುರ್ವೆ, ಮಾವಿನ ಕುರ್ವೆ(ಉ.ಕ.). ಕೊಡುಗು ಜಿಲ್ಲೆಯಲ್ಲಿಯ ಕೊಡವ ಮೂಲದ 'ಇಬ್ನಿ' ಎಂಬ ರೂಪ ಜಲಪಾತದ ಸಮೀಪ ಇರುವ ಪ್ರದೇಶವನ್ನು ಸೂಚಿಸುತ್ತದೆ. ಇಬ್ನಿವಳವಾಗಿ, ಇಬ್ನಿಗೆರೆ (ಕೊಡಗು). ಕೆಲವು ಸ್ಥಳನಾಮಗಳು ಸುತ್ತಮುತ್ತಲಿನ ಪ್ರಕೃತಿ ವೈಚಿತ್ರ್ಯವನ್ನು (ಎತ್ತರ, ತಗ್ಗು, ಮೈದಾನ, ಶಿಲೆ, ವೃಕ್ಷ ಮುಂತಾದ) ನಿರೂಪಿಸುತ್ತವೆ.

ಅಂಬಾಗಿಲು	(ಅಮ್ಮೆ+ಬಾಗಿಲು) (ತುಳು ಮೂಲ) ಊರಿನ ಆರಂಭದ ಭಾಗ
ತೆಕ್ಕುಂಜ ತೆಕ್ಕ	(ತುಳು ಮೂಲ) (ತೇಗಿನ ಮರ) + ಕುಂಜ (ಗುಂಪು)
ಗಾದಿವಾಂಡ್ಲು	ಗಾದಿ (ತೆಲುಗು) ಹುಲ್ಲಿನಿಂದ ಮಾಡಿದ ದೊಡ್ಡವಾಡೆ ಗಾದಿವಾಂಡ್ಲಪಳ್ಳಿ (ಕೋಲಾರ)
ಗನ್ನೇರು	ಗನ್ನೇರ್ಲ (ತೆಲುಗು) ಕಣಿಗಿಲಗಿಡದ ಹೂ ಗನ್ನೇರಪಲ್ಲಿ (ಕೋಲಾರ)

ಚಿಂತಲ	ಚಿಂತಲ (ತೆಲುಗು) ಹುಣಸೆಮರ, ಚಿಂತಲಪಲ್ಲಿ (ಕೋಲಾರ)
	ನಾಲ್ಮರ್ ನಾಲುಂಬು (ಮಲ) ಆಲದ ಮರ, ನಾಲ್ಮರ ಪಳ್ಳಿ (ಕೊಡಗು)

ತುಳು ಮತ್ತು ಮಲಯಾಳಂ ಮೂಲದ ಕಾರ್/ಗಾರ್, ಮಾಣಿ, ಕುಂದ ಇಂತಹ ರೂಪಗಳು ಭೂಸ್ಥಿತಿಯನ್ನು ಸೂಚಿಸುತ್ತಿವೆ. ಕಾರ್/ಗಾರ್ ಎಂಬುದು ಶಿಖರವಾಚಕ ವಿಶೇಷಣ. ಕಾರ್+ಕಳ>ಕಾರ್ಕಳ್, ಕಾರ್+ಆಲ್>ಕಾರ್ವಾಲ್, ಕಾರ್+ಊರು> ಕಾರೂರು, ಕಾರವಾರವು 'ಕಾರ್'ದಿದ ಮತ್ತು ಮಾಣಿ, ಕುಂದ ಎಂಬ ರೂಪಗಳಿಂದ ಮಣಿಪಾಲ, ಕುಂದಾಪುರ ಸ್ಥಳನಾಮ ಘಟಕಗಳು ರೂಪುಗೊಂಡಿರಬೇಕೆಂದು ಊಹಿಸ ಬಹುದಾಗಿದೆ.

ಕೊಡಗು ಮೂಲದ ರೂಪಗಳು ಭೂಸ್ಥಿತಿಯನ್ನು ಸೂಚಿಸುತ್ತವೆ.

ಚೆಂಬೆ	ಕಾಡು, ಚೆಂಬೆಬೆಳ್ಳೂರು (ಕಾಡಿನ ಸಮೀಪ ಇರುವ ಊರು)	
ಕಡಂಗ	ತಗ್ಗಾದ ಪ್ರದೇಶ	ಕಡಂಗೂರು
ಮಣ	ಮರಳು ಪ್ರದೇಶ	ಮಣಜೂರು

ಸ್ಥಳನಾಮಗಳ ಮೇಲೆ ದ್ರಾವಿಡ ಭಾಷೆಗಳ ಜಾತಿ, ಮತ, ವೃತ್ತಿ, ಬುಡಕಟ್ಟು ಹಾಗೂ ಕುಲನಾಮಗಳು ಇಂತಹ ಸಾಮಾಜಿಕ ಅಂಶಗಳು ಪ್ರಭಾವ ಬೀರಿವೆ.

ಎನುಮಲ	ಎನುಮು (ತೆಲುಗು) ಒಡ್ಡ ಮಾದಿಗ ಇವರಲ್ಲಿಯ ಕುಲನಾಮ ಎನುಮಲಪಾಡಿ(ಕೋಲಾರ)
ಗಾಜಲು	ಗಾಜಲು(ತೆಲುಗು) (ಬಳಗಾರ) ವೃತ್ತಿವಾಚಕ ಗಾಜಲುಪಲ್ಲಿ (ಕೋಲಾರ)
ಚಾಕ	ಚಾಕಲ < ಸಾಕಲು (ತೆಲುಗು) ಅಗಸರು ಚಾಕಿವೇಲ (ಕೋಲಾರ)
ಕದರಿ	ಆಂಧ್ರದ ಅನಂತಪುರ ಜಿಲ್ಲೆಯ ಒಂದು ಸ್ಥಳನಾಮ. ಅಲ್ಲಿಂದ ವಲಸೆ ಬಂದವರು. 'ಕದಿರೋಳ್ಳಗಡ್ಡ' (ಕೋಲಾರ)
ಕುಪ್ಪಂವಾರು	ಕುಪ್ಪಂ -ಆಂಧ್ರದ ಚಿತ್ತೂರು ಜಿಲ್ಲೆಯಲ್ಲಿ ಒಂದು ಸ್ಥಳನಾಮ. ಅಲ್ಲಿಂದ ವಲಸೆ ಬಂದವರು 'ಕುಪ್ಪಂವಾರಿ ಪಲ್ಲಿ' (ಕೋಲಾರ)
ಅಂಬಲಪಾಡಿ	ಅಂಬಲ (ತುಳು) ಮೋಗವೀರರಲ್ಲಿಯ ಒಂದು ಉಪಜಾತಿ. ಅಂಬಲಪಾಡಿ (ದ.ಕ.)
ಚೇರಂಗಾಲ	ಚೇರಂಡ ಕೊಡವ ಕುಟುಂಬನಾಮ (ಕೊಡಗು)

ಅರವತ್ತೊಕ್ಲು	ಒಕ್ಲು (ಕುಟುಂಬ-ಕೊಡವ) ಅರುವತ್ತು ಕುಟುಂಬಗಳಿರುವ ಊರು (ಕೊಡಗು)
ನಲವತ್ತೊಕ್ಲು	ನಲವತ್ತು ಕುಟುಂಬಗಳಿರುವ ಊರು (ಕೊಡಗು)
ತಣ್ಣಿ ಮಾಡಿ	ತಣ್ಣಿ (ಒಂದು ಭೂತದ ಹೆಸರು ಕೊಡಗು)
ಬಲ್ಯಮಂಡೂರು	ಬಲ್ಯ (ಕೊಕಡವನಾಡಿನ ಒಬ್ಬ ಪ್ರಾಚೀನ ನಾಯಕನ ಹೆಸರು) ಅವನ ಹೆಸರು ಒಂದು ಸ್ಥಳನಾಮವಾಗಿದೆ.

(ಕನ್ನಡೇತರ)ದ್ರಾವಿಡ ಭಾಷೆಯ ಸ್ಥಳನಾಮಗಳನ್ನು ಅವಲೋಕಿಸಿದಾಗ (ಕೆಲವು) ಪಳಗನ್ನಡದ ರೂಪಗಳು ಕಂಡುಬರುವುದು ವೈಶಿಷ್ಟ್ಯಪೂರ್ಣವಾಗಿದೆ. ಉದಾ. ಪೆರ್ಯ್ಯಾಟ್ಟು < ಪಿರಿದು + ಬೆಟ್ಟು (ಇ>ಎ), ಪೆರಿಯಡ್ಕ < ಷ ಪಿರಿದು + ಅಡಕ > ಹಿರಿಯಡಕ (ಪ>ಹ) ಅದರಂತೆ ಪೊಸೋಡಿ, ಪೆರ್ಗಡೆ ಬೆಟ್ಟೆ ಇಂತಹ ಹೆಸರುಗಳಲ್ಲಿ ಪಳಗನ್ನಡದ ರೂಪಗಳಿರುವುದು ಗಮನಾರ್ಹ. 'ಹಳ್ಳಿ' ಎಂಬುದಕ್ಕೆ ಸಮಾನಾರ್ಥಕವಾಗಿ ಬರುವ 'ಪಲ್ಲಿ', 'ಪಳ್ಳಿ' ಎಂಬ ರೂಪಗಳು ಹಳಗನ್ನಡದಲ್ಲಿವೆ. ಪಲ್ಲಿ, ಪಳ್ಳಿಯಿಂದ ಕೊನೆಯಾಗುವ ಊರುಗಳು ದ್ರಾವಿಡ ಭಾಷಾ ವಲಯದ ಗಡಿ ಪ್ರದೇಶದಲ್ಲಿ ಹೇರಳವಾಗಿವೆ(ಪಾರಂಪಲ್ಲಿ, ಬೆಳ್ಳಂ, ಪಳ್ಳಿ ಮುಂತಾದವು). ಕನ್ನಡದ 'ಬೆಳ್ಳು' ತುಳುವಿನಲ್ಲಿ 'ಬೊಳ್' ಆಗಿದೆ. ಭಾಷಾಶಾಸ್ತ್ರೀಯವಾಗಿ ಪರಿಶೀಲಿಸಿದಾಗ ವ>ಬ ಆಗಬಹುದು. ಹಾಗೆಯೇ ಪದಾದಿಯ ಎ>ಒ ಆಗಬಹುದು. ತುಳುವಿನಂತಹ ವ್ಯಾವಹಾರಿಕ ಭಾಷ ಯಲ್ಲಿ ಇದು ತೀರ ಸ್ವಾಭಾವಿಕ. ಉದಾ. ಬೆಳೆ (ಕ) > ಬೊಳೆ (ತುಳು), ಬೆಳ್ಳಿ > ಬೊಳ್ಳಿ, ಅದರಂತೆ ಬೆಳ್ > ಬೊಳ್ ಆಗಿರಬಹುದು. ಬೊಳೂರು, ಬೊಳ್ತಗಂಡಿ (ಬೆಳ್ತಂಗಡಿ) ಮುಂತಾದವು. ಕೆಲವು ಸ್ಥಳನಾಮ ಘಟಕಗಳಲ್ಲಿ ಕನ್ನಡಕ್ಕೆ ಬರುವಾಗ ರೂಪ ಬದಲಾವಣೆ ಹೊಂದಿಲ್ಲ. ತೆಲುಗು ಮೂಲದ ಪಸಪು. ಪಸುಲು, ಪಿಂಡಿ, ಗಾಜಲು ಮುಂತಾದವು. ತುಳು ಮತ್ತು ಮಲಯಾಳಂ ಮೂಲದ ಕುಂದ, ಉಂಜ, ಉಂಜೆ, ಉಂಬೆ ಮುಂತಾದವು. ಕೆಲವು ರೂಪಗಳು ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ಕನ್ನಡಕ್ಕೆ ಬಂದಿವೆ. ತೆಲುಗು ಮೂಲದ ಕೊರ್ಲ-ಕೊರಲು, ಕೊರ್ಲೆ, ಗುಂತವಾಲು-ಗುಂತವರು, ಕುಕ್ಕಲು-ಕುಕ್ಕಲಿ ಮುಂತಾದವು. ಕೊಡಗು, ತುಳು ರೂಪಗಳಾದ ಕುಣಿ-ಕುಳಿ, ಶೆಡ್ಡೆ-ಶೇಡಿ ಮುಂತಾದವು.

ದ್ರಾವಿಡ ಭಾಷಾ ಪ್ರಭಾವವುಳ್ಳ ಪ್ರದೇಶಗಳಲ್ಲಿಯ ಜನರ ಮಾತೃಭಾಷೆ (ಹೆಚ್ಚಾಗಿ) ತೆಲುಗು, ತುಳು, ತಮಿಳು ಮತ್ತು ಮಲಯಾಳಂ ಆಗಿರುತ್ತದೆ ಎಂಬುದರ ಬಗ್ಗೆ ಸಂದೇಹವಿಲ್ಲ. ಸ್ಥಳೀಯರ ಕನ್ನಡ ಮಾತೃಭಾಷೆಯುಳ್ಳ ಜನರ ಮೇಲೆ ದ್ರಾವಿಡ ಭಾಷೆಗಳ ಪ್ರಭಾವ ಹೇರಳವಾಗಿದೆ. ದ್ರಾವಿಡೀಕರಣ ಹೊಂದಿದ ಸ್ಥಳನಾಮಗಳನ್ನು ಕುರಿತು ವಿಶ್ಲೇಷಿಸಬಹುದು. ಈ ಬಗೆಗೆ ಡಾ. ಕೆ. ಅನ್ವನ್ ಅವರು ಒಂದು ಸಂದರ್ಭದಲ್ಲಿ

ಹೇಳಿದ ಮಾತುಗಳನ್ನೇ ಬಳಸಿ ಹೇಳುವುದಾದರೆ 'ಕನ್ನಡೇತರ ದ್ರಾವಿಡ ಭಾಷೆಗಳಿಗೆ ಅನನ್ಯವಾಗಿರುವ ಅಂಶಗಳು ಕರ್ನಾಟಕದಲ್ಲಿಯ ಸ್ಥಳನಾಮಗಳಲ್ಲಿ ಕಂಡುಬಂದರೆ ಅವುಗಳನ್ನು ಸುಲಭವಾಗಿ ಗುರುತಿಸಬಹುದು. ಎರಡು ಭಾಷೆಗಳಿಗೆ ಸಾಮಾನ್ಯ ರೂಪಗಳಾದ್ದಲ್ಲಿ ಗುರುತಿಸಲಿಕ್ಕಾಗದು. ಐತಿಹಾಸಿಕವಾಗಿ ಹಳೆಯ ಹೆಸರುಗಳೇನಿದ್ದವು ಎಂಬುದರ ದಾಖಲೆ ಇದ್ದರೆ ಮಾತ್ರ ಖಚಿತವಾಗಿ ಹೇಳಬಹುದು. ಗಡಿ ಪ್ರದೇಶದ ಊರುಗಳು ಬೇರೆ ಭಾಷಾ ಪ್ರದೇಶಗಳಾಗಿದ್ದು ಆಕ್ರಮಣದಿಂದ ಸೇರಿರಲೂ ಸಾಧ್ಯವಿದೆ. ಸಮಗ್ರ ಸಾಹಿತ್ಯ ಚರಿತ್ರೆ, ಶಾಸನಗಳ ಹಿನ್ನೆಲೆ ಇದ್ದರೆ ಮಾತ್ರ ತಕ್ಕಮಟ್ಟಿಗೆ ಸರಿಯಾದ ತೀರ್ಮಾನಕ್ಕೆ ಬರಲು ಸಾಧ್ಯ. ತಮಿಳು, ತೆಲುಗು, ಮಲಯಾಳಂ ಭಾಷೆಗಳ ಪ್ರಭಾವವನ್ನು ಗುರುತಿಸುವುದಕ್ಕಿಂತ ಕೊಡಗು, ತುಳು ಭಾಷೆಗಳ ಪ್ರಭಾವವನ್ನು ಗುರುತಿಸುವುದು ಕಷ್ಟದ ಕೆಲಸ. ಪ್ರಾಚೀನ ಗಡಿಯನ್ನರಿಯದೇ ಏನನ್ನೂ ಹೇಳಲಿಕ್ಕಾಗದು. ಅಂತರ್ ಶಿಸ್ತೀಯ ಅಧ್ಯಯನಕ್ಕೆ ಅವಕಾಶ ಇದೆ'. ಅಂತಹ ಅಧ್ಯಯನಕ್ಕೆ ಈ ಬರೆಹ ಪ್ರವೇಶಿಕೆ ಯಾಗುತ್ತದೆ.

ಅಡಿಟಿಪ್ಪಣಿ

೧. (ಆದರೆ) ಬಹುತೇಕ ಎಲ್ಲ ಊರ ಹೆಸರುಗಳು ಸಾಂಸ್ಕೃತಿಕ, ಚಾರಿತ್ರಿಕ ಹಾಗೂ ಭಾಷಿಕ ವೈಶಿಷ್ಟ್ಯತೆಗಳನ್ನು ತಮ್ಮ ಉದರದೊಳಗೆ ಹುದುಗಿಟ್ಟುಕೊಂಡಿರುವುದರಿಂದ ಅವುಗಳ ನಾಮಾಂತರ ಸಾಧುವಲ್ಲ. 'ವಡ್ಡರಹಳ್ಳಿ', 'ಕೆಂಚನಾಯಕನ ಕೊಪ್ಪ', 'ಅಗಸಿಹಾಳ'ಮುಂತಾದ ಹೆಸರು ಹಿಂದಿನ ನಿವಾಸಿಗಳ ಮನೋಧರ್ಮ, ರೀತಿ-ನೀತಿಗಳಿಗೆ ಕನ್ನಡಿ ಹಿಡಿದಿರುವುದರಿಂದ ಹಾಗೂ ಜನಾಂಗಿಕ ಸಂಶೋಧನೆಗೆ ನೆರವಾಗುವುದರಿಂದ ಅವುಗಳ ಬದಲಾವಣೆ ಖಂಡನೀಯವಾಗುತ್ತದೆ.

* ಈ ಲೇಖನದ ಸಿದ್ಧತೆಗಾಗಿ ತೆಲುಗು ಸ್ಥಳನಾಮಗಳಿಗೆ ವಿ. ಗೋಪಾಲಕೃಷ್ಣ ಅವರ 'ಕೋಲಾರ ಜಿಲ್ಲೆಯ ಸ್ಥಳನಾಮಗಳಲ್ಲಿ ಜನಾಂಗಿಕ ಅಂಶಗಳು' ಎಂಬ ಲೇಖನಕ್ಕೆ ಕೃತಜ್ಞನಾಗಿದ್ದೇನೆ. ಮಲಯಾಳಂ, ತುಳು, ಕೊಡಗು, ಭಾಷೆಯ ಸ್ಥಳನಾಮಗಳ ಬಗೆಗೆ ಸಹೋದ್ಯೋಗಿಗಳಾದ ಡಾ. ಮೋಹನ ಕುಂಟಾರ, ಡಾ. ಮಾಧವ ಪೆರಾಜೆ, ಡಾ. ಎಚ್.ಕೆ. ನಾಗೇಶ್ ಅವರ ಜೊತೆಗೆ ಸಮಾಲೋಚಿಸಿದ್ದೇನೆ. ಅವರಿಂದ ಒದಗಿರುವ ಸಹಾಯವನ್ನು ಇಲ್ಲಿ ಸಂತೋಷದಿಂದ ಸ್ಮರಿಸುತ್ತೇನೆ.

ಆಕರಗ್ರಂಥಗಳು

೧. ಕಲಬುರ್ಗಿ ಎಂ.ಎಂ., ೧೯೮೯, ಕನ್ನಡನಾಮವಿಜ್ಞಾನ, ಬೆಂಗಳೂರು ವಿಶ್ವ ವಿದ್ಯಾಲಯ, ಬೆಂಗಳೂರು.

೨. ಗೋಪಾಲಕೃಷ್ಣ ವಿ., ೧೯೮೭, ಸ್ಥಳನಾಮ ಅಧ್ಯಯನಗಳು, ವಿದ್ಯಾಗಿರಿ ಪ್ರಕಾಶನ, ದಾರಿನಾಯಕ ಪಾಳ್ಯ(ಕೋಲಾರ ಜಿಲ್ಲೆ).

೫೧

ಸಿಂದಗಿ ಪರಿಸರದ ಸ್ಥಳನಾಮಗಳು

ಹೆಸರುಗಳಲ್ಲಿ ಒಂದು ಭಾಷಿಕ ಸಮುದಾಯದ ಸಾಂಸ್ಕೃತಿಕ ಚರಿತ್ರೆ ಇರುತ್ತದೆ. ಇದರ ಅಧ್ಯಯನವೇ 'ನಾಮ ವಿಜ್ಞಾನ'. ನಾಮ ಅಧ್ಯಯನದ ಮುಖ್ಯ ಅಂಗಗಳು ಎರಡು. ವ್ಯಕ್ತಿಗಳಿಗೆ ಇಟ್ಟ ಹೆಸರುಗಳ ಅಧ್ಯಯನ ವ್ಯಕ್ತಿನಾಮ ಅಧ್ಯಯನ. ಸ್ಥಳಗಳಿಗೆ ಇಟ್ಟ ಹೆಸರುಗಳ ಅಧ್ಯಯನ ಸ್ಥಳನಾಮ ಅಧ್ಯಯನ. ನಾಮವಿಜ್ಞಾನವು ಇತ್ತೀಚೆಗೆ ಭಾಷಾಶಾಸ್ತ್ರದ ಅನ್ವಯಿಕ ಶಾಖೆಯಾಗಿ ಬೆಳೆಯುತ್ತಿದೆ. ಭಾರತದಲ್ಲಿ ಸ್ಥಳನಾಮಗಳ ಅಧ್ಯಯನಕ್ಕೆ ಪೂರ್ಣಸ್ವರೂಪ ನೀಡಿದವರು ಪುರಾತತ್ವಶಾಸ್ತ್ರಜ್ಞ ಎಚ್.ಡಿ. ಸಂಕಾಲಿಯಾರವರು. ಸ್ಥಳನಾಮಗಳು ಆಯಾಕಾಲದ ಭಾಷೆಯ ಸ್ಥಿತಿ-ಗತಿಗಳನ್ನು ನಿರ್ಣಯಿಸುವಲ್ಲಿ ಸಾಂಸ್ಕೃತಿಕ ವೈಶಿಷ್ಟತೆಗಳನ್ನು ಗ್ರಹಿಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ.

ಸ್ಥಳನಾಮಗಳು ಮೇಲ್ನೋಟಕ್ಕೆ ಸಾಮಾನ್ಯ ಗುರುತಿನ ಚಿಹ್ನೆಯಾಗಿ ಕಂಡರೂ ಭಾಷಾಶಾಸ್ತ್ರಜ್ಞನೋ, ಇತಿಹಾಸಕಾರನೋ, ಪುರಾತತ್ವಶಾಸ್ತ್ರಜ್ಞನೋ ಅವುಗಳನ್ನು ತನ್ನ ಅಧ್ಯಯನ ಶಿಸ್ತಿಗೆ ಅನುಗುಣವಾಗಿ ಒರೆಹಚ್ಚಿ ನೋಡಿದಾಗ ಅವುಗಳಿಂದ ಅತ್ಯಂತ ಕುತೂಹಲಕಾರಿ ಅಂಶಗಳು ಹೊರಬರುತ್ತವೆ. ನಮ್ಮ ಹಿಂದಿನ ತಲೆಮಾರಿನವರ ಭಾಷೆ, ಜೀವನವಿಧಾನ, ದೃಷ್ಟಿವೈಶಾಲ್ಯ, ಭೌಗೋಳಿಕ ಹಾಗೂ ಚಾರಿತ್ರಿಕ ಅಂಶಗಳ ಮೇಲೆ ಸ್ಥಳನಾಮ ಅಧ್ಯಯನವು ಹೊಸಬೆಳಕನ್ನು ಚೆಲ್ಲುತ್ತದೆ. ಸ್ಥಳನಾಮಗಳಲ್ಲಿ ಪರಸ್ಪರ ಹೋಲಿಕೆ ಇಲ್ಲವೆ ಸಾಮ್ಯವು ಕಂಡುಬಂದರೆ ಅಂತಹ ಸ್ಥಳನಾಮಗಳು ಪ್ರಪಂಚದ ಯಾವ ಭಾಗದಲ್ಲೇ ಇರಲಿ ಅಲ್ಲಿ ಒಂದೇ ರೀತಿಯ ಅಥವಾ ಹೋಲಿಕೆಯುಳ್ಳ ನಾಗರಿಕತೆಯ ಕುರುಹುಗಳನ್ನು ಕಾಣಲು ಸಾಧ್ಯವಿದೆಯೆಂದು ಸ್ಥಳನಾಮಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ.

ಮಾನವನ ನಾಗರಿಕತೆಯಲ್ಲಿ ಭಾಷೆಗೆ ವಿಶಿಷ್ಟವಾದ ಸ್ಥಾನವಿದೆ. ಮಾನವ ನಿರ್ಮಿತ ಕೋಟೆ-ಕೊತ್ತಲಗಳು, ದೇವಾಲಯಗಳು, ಕಲಾಶಿಲ್ಪಗಳು, ದಾಖಲೆಗಳು ಪ್ರಕೃತಿಯ

ವಿಕೋಪಕ್ಕೆ ತುತ್ತಾಗಿ ನಾಶವಾಗಿ ಹೋಗಬಹುದು. ಆದರೆ ನಾವು ಆಡುವ ಭಾಷೆ ನಮ್ಮ ಜೊತೆಯಲ್ಲಿಯೇ ಜೀವಂತವಾಗಿ ಉಳಿದುಕೊಂಡು ಬರುತ್ತದೆ. ಹೆಚ್ಚೆಂದರೆ, ಪರಿಸರಕ್ಕೆ ಹೊಂದಿಕೊಂಡು ಅದರಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳು ಉಂಟಾಗುವುದಲ್ಲದೆ ಆಮೂಲಾಗ್ರವಾಗಿ ನಶಿಸಿ ಹೋಗುವ ಸಾಧ್ಯತೆಗಳಂತೂ ತೀರ ಕಡಿಮೆ. ಇಂತಹ ಭಾಷೆಯನ್ನು ಜೀವಂತವಾಗಿ ನಾವು ಸ್ಥಳನಾಮಗಳಲ್ಲಿ ಕಾಣಲು ದೊರೆಯುತ್ತದೆ. ಅಲ್ಲದೆ ಶಿಲಾಶಾಸನ, ಲಿಖಿತ ದಾಖಲೆ ಹಾಗೂ ವಾಸ್ತುಶಿಲ್ಪಗಳಲ್ಲಿ ದೊರೆಯದಿರುವ ಹಲವಾರು ಕುತೂಹಲಕಾರಿ ಅಂಶಗಳು ಸ್ಥಳನಾಮಗಳಲ್ಲಿ ದೊರೆಯುತ್ತವೆ. ಆದುದರಿಂದಲೇ ಸ್ಥಳನಾಮಗಳು ಚರಿತ್ರೆಕಾರರಿಗೆ ಬಹುಮುಖ್ಯ ಆಕರಗಳಾಗುತ್ತವೆ.

ಸ್ಥಳನಾಮಗಳನ್ನು ವಿಭಜಿಸಿದಾಗ ಅವುಗಳಲ್ಲಿ ಸಾಮಾನ್ಯವಾಗಿ ಎರಡು ಘಟಕಗಳಿರುತ್ತವೆ. ಉತ್ತರ ಘಟಕವನ್ನು 'ವಾರ್ಗಿಕ'ವೆಂದು(Generic) ಪೂರ್ವಘಟಕವನ್ನು 'ನಿರ್ದಿಷ್ಟ'ವೆಂದೂ(Specific) ಕರೆಯಲಾಗುತ್ತದೆ. ಇವುಗಳಲ್ಲಿ ಉದಾ. ಕಲ್ಲೂರು=ಕಲ್ಲು+ ಊರು, ಬೆಟ್ಟದೂರು=ಬೆಟ್ಟ+ಊರು. 'ಊರು' ಎಂಬುದು ಸಾಮಾನ್ಯ ಅಂಶ ಆದರೆ ಕಲ್ಲು, ಬೆಟ್ಟ ಎಂಬುದು ಆ ಊರಿನ ವಿಶೇಷ ಅಂಶ.

ಸಿಂದಗಿ ಪರಿಸರಕ್ಕೆ ಸಂಬಂಧಪಟ್ಟಂತೆ ಸ್ಥಳನಾಮಗಳ ಸಮೀಕ್ಷೆ ನಡೆಸಿದಾಗ ಕಂಡುಬಂದ ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

೧. ಅರ್ಥವತ್ತಾದ ಒಂದು ಪದ ಮಾತ್ರ ಇರುವ ಸ್ಥಳನಾಮಗಳು
   ಉದಾ. ಅಸ್ಕಿ, ಕಡ್ನಿ, ರೂಗಿ
೨. ಅರ್ಥವತ್ತಾದ ಎರಡು ಪದಗಳು(ನಿರ್ದಿಷ್ಟ+ವಾರ್ಗಿಕ).
   ಉದಾ. ಹೊನ್ನಳ್ಳಿ, ಸುರಗಿಹಳ್ಳಿ, ರಾಮನಹಳ್ಳಿ
೩. ಎರಡಕ್ಕಿಂತ ಹೆಚ್ಚಿನ ಪದಗಳು.
   ಉದಾ. ಬೊಮ್ಮದೇವನಮಡು, ಹಳಗುಂಡಕನಾಳ

ಚಾರಿತ್ರಿಕ ದಾಖಲೆಗಳ ಆಧಾರದಿಂದ ಈ ಪರಿಸರದ ಸ್ಥಳನಾಮಗಳನ್ನು ವಿಶ್ಲೇಷಣೆ ಮಾಡಿದಾಗ ಚರಿತ್ರೆಗೆ ಪೂರಕವಾದ ಅನೇಕ ಅಂಶಗಳು ಹೊರಬರುತ್ತವೆ. ಸ್ಥಳನಾಮಗಳಲ್ಲಿ ರಾಜರು, ದಂಡನಾಯಕರು ಮುಂತಾದ ಅನೇಕ ಹೆಸರುಗಳು ಸೇರಿಕೊಂಡಿವೆ. ಪ್ರಮುಖ ವ್ಯಕ್ತಿಗಳ ಹೆಸರುಗಳನ್ನು ಊರುಗಳಿಗೆ, ಕೆರೆಗಳಿಗೆ, ದೇವಾಲಯಗಳಿಗೆ ಜ್ಞಾಪಕಾರ್ಥವಾಗಿ ಇಡಲಾಗಿದೆ. ಕಾಲಕಾಲಕ್ಕೆ ಅನ್ಯಭಾಷೆಯ ಪ್ರಭಾವ ಆಯಾ ಪ್ರದೇಶದಲ್ಲಿ ಹೇಗಾಗಿದೆ ಅದು ಸ್ಥಳನಾಮಗಳ ಮೇಲೆ ಹೇಗೆ ಪ್ರಭಾವ ಬೀರಿದೆ ಎಂಬ ಅಂಶ ಸ್ಪಷ್ಟವಾಗುತ್ತದೆ. ಈ ಪರಿಸರದ ಸ್ಥಳನಾಮಗಳ ಮೇಲೆ ನೆರೆಯ ವಿಜಯಪುರ ಮತ್ತು ಕಲಬುರಗಿ ಭಾಗದ ಉರ್ದು ಭಾಷೆ ಮತ್ತು ಆದಿಲಶಾಹಿ ಅರಸರ ಪ್ರಭಾವ ಹೇರಳವಾಗಿದೆ. ಉದಾ: ಇಬ್ರಾಹಿಂಪುರ, ಇಲಾರಹಳ್ಳಿ, ಅಲ್ಲಾಪುರ ಮುಂತಾದುವು. ಉದಾ: ಉರ್ದು ಮೂಲದ ಹಳ್ಳಿ, ವಾಸಸ್ಥಾನ ಎಂಬರ್ಥ ಕೊಡುವ

‘ಖುರ್ದು’, ‘ಬುಜ್ರುಕ’ ಪದಗಳು. ಈ ಭಾಗದ ಊರು ಹೆಸರುಗಳ ಕೊನೆಗೆ ಬರುತ್ತದೆ. ಉದಾ. ನಾಗಾವಿ(ಖುರ್ದು), ನಾಗಾವಿ(ಬುಜ್ರುಕ), ಯರಗಲ್ಲು(ಖುರ್ದು), ಯರಗಲ್ಲು (ಬುಜ್ರುಕ) ಮುಂತಾದುವು.

ಅದರಂತೆ ಆಂಗ್ಲ ಭಾಷೆಯ ಪ್ರಭಾವದಿಂದ ಅಕ್ಷರಗಳನ್ನು ಸಂಕ್ಷೇಪಿಸುವ ವಿಧಾನವು ಈ ಪರಿಸರದ ಸ್ಥಳನಾಮಗಳಲ್ಲಿ ಕಂಡುಬರುತ್ತದೆ. ಊರಿನ ಹೆಸರುಗಳು ಒಂದೇ ಆಗಿದ್ದರೆ ಅವುಗಳ ವ್ಯತ್ಯಾಸ ತಿಳಿಸಲು ಅಥವಾ ಒಂದರಿಂದ ಒಂದನ್ನು ಬೇರ್ಪಡಿಸಿ ಹೇಳಲು ಆಂಗ್ಲ ಅಕ್ಷರಗಳನ್ನು ಬಳಸುವ ವಾಡಿಕೆ ಇದೆ. ಉದಾ. ರಾಮಪುರ ಪಿ.ಎ., ರಾಮಪುರ ಪಿ.ಟಿ., ಬೂದಿಹಾಳ ಪಿ.ಟಿ., ಬೂದಿಹಾಳ ಪಿ.ಎ., ಮುಂತಾದವುಗಳು. ಹೆಸರುಗಳ ಸಂಕ್ಷೇಪಿಕರಣವು ಸಹಿತ ಭಾಷೆಯ ಆಧುನೀಕರಣದ ಲಕ್ಷಣವಾಗಿದೆ. ಈ ಭಾಗದ ಸ್ಥಳನಾಮಗಳಲ್ಲಿ ಮರಾಠಿ ಭಾಷೆಯ ಪ್ರಭಾವವಿದೆ. ವಾಡ/ವಾಡಿ ಕೊನೆಯಾಗುವ ವಾರ್ಗಿಕಗಳಿವೆ.

ಕಡ್ಲೆವಾಡ	ಶಂಬೇವಾಡ
ಗುಬ್ಬೇವಾಡ	ಜಾಲವಾಡ

ವಾಡಿ/ವಾಡ ಎಂದರೆ ಪ್ರದೇಶ ಎಂದರ್ಥ. ಪೂರ್ವಪದ ಕಡ್ಲೆ, ಗುಬ್ಬೆ, ಜಾಲ, ಶಂಬೆ ಇವು ಆ ಊರಿನ ವಿಶೇಷತೆಯನ್ನು ತಿಳಿಸುತ್ತವೆ. ಉದಾ. ‘ಗುಬ್ಬೆ’, ಎಂದರೆ ‘ಕುಪ್ಪೆ’. ಅದರರ್ಥ ಮಣ್ಣಿನಗುಪ್ಪೆ(ಗ>ಕ). ಅವೆಲ್ಲ ಕೃಷಿ ಸಂಸ್ಕೃತಿಯನ್ನು ಸೂಚಿಸುತ್ತವೆ. ಅದರಂತೆ ‘ಗಾಂವ’ ಕೊನೆಯಾಗುವ ಹೆಸರುಗಳಿವೆ.

ದೇವಣಗಾಂವ	ತೆಲಗಾಂವ
ಮಾಳಗಾಂವ	ಸುಂಗಠಾಣ

‘ಗಾಂವ’ ಎಂದರೆ ಊರು, ಹಳ್ಳಿ ಎಂದರ್ಥ. ಸ್ಥಳನಾಮಗಳ ಪರಿವರ್ತನೆ ಮತ್ತು ಪ್ರಭಾವದ ದೃಷ್ಟಿಯಿಂದ ಇವುಗಳನ್ನು ಅಭ್ಯಸಿಸಬೇಕಾಗಿದೆ. ಈ ಭಾಗದ ಕೆಲವು ಗ್ರಾಮಗಳು ಪಶುಪಾಲಕ ಸಂಸ್ಕೃತಿಯನ್ನು ನೆನಪಿಗೆ ತರುತ್ತವೆ. ಗೋಲಗೇರಿ (ಗೊಲ್ಲಾಳೇಶ್ವರ ಇದೇ ಊರಿನವನಾಗಿರಬೇಕು), ಗುಡ್ಡಹಳ್ಳಿ(ಪಶುಪಾಲಕರು), ಕೆಸರಟ್ಟಿ, ಬನ್ನಿಹಟ್ಟಿ, ಮುರಡಿ(>ಮಡ್ಡಿ) ಅಂದರೆ ಹಟ್ಟಿ ಕೊನೆಯಾಗುವ ಊರ ಹೆಸರುಗಳು ಸಹಜವಾಗಿ ಪಶುಪಾಲನೆಯ ಸಂಸ್ಕೃತಿಯ ನೆನಪಿಸುತ್ತವೆ. ನಂದಗೇರಿ(ನಂದ+ಕೇರಿ), ವಿಭೂತಿಹಳ್ಳಿ, ಸೋಮಜಾಳ, ಸೋಮಾಪುರ ಇಂತಹ ಊರುಗಳು ವೀರಶೈವ ಸಂಸ್ಕೃತಿಯನ್ನು ‘ಬಸ್ತಿಹಾಳ’ ಎಂಬುದು(ಬಸದಿ+ಹಾಳ) ಜೈನ ಸಂಸ್ಕೃತಿಯನ್ನು ಜ್ಞಾಪಕಕ್ಕೆ ತರುತ್ತವೆ. ಇಂತಹ ಊರು/ಹೆಸರುಗಳು ಸಂಸ್ಕೃತಿ ಚಿಂತಕರಿಗೆ ಹೊಸಬಗೆಯ ವ್ಯಾಖ್ಯಾನ ಮಾಡಲು ಆಕರಗಳಾಗುತ್ತವೆ. ಕೆಲವು ಸಂದರ್ಭದಲ್ಲಿ ವ್ಯಕ್ತಿನಾಮಗಳು ಕ್ರಮೇಣವಾಗಿ ಸ್ಥಳನಾಮಗಳಾಗುತ್ತವೆ.

ಮಾದನಹಳ್ಳಿ ವರಕನಹಳ್ಳಿ
ಬೊಮ್ಮನಹಳ್ಳಿ ರಾಮನಹಳ್ಳಿ

ಇಲ್ಲಿ 'ನ' ಎಂಬ ಷಷ್ಠಿ ವಿಭಕ್ತಿ ಪ್ರತ್ಯಯವು ನಿರ್ದಿಷ್ಟ ಮತ್ತು ವಾರ್ಗಿಕದ ನಡುವೆ ಸಂಯೋಜಕ ಪ್ರತ್ಯಯವಾಗಿ(Link Marker) ಆಗಿ ಕೆಲಸ ಮಾಡುತ್ತದೆ. ಕೆಲವು ಹಳ್ಳಿಗಳು ಭೂಸ್ಥಿತಿಯನ್ನು ವೃಕ್ಷ, ಲತಾದಿ, ಪ್ರಾಣಿ-ಪಕ್ಷಿಗಳನ್ನು ಸೂಚಿಸುತ್ತವೆ. ಯರಗಲ್ಲು (ಯರ+ಕಲ್ಲು), ಜಲಪುರ, ಮಣ್ಣೂರು, ಗುಬ್ಬೇವಾಡ, ಬನ್ನಿಹಟ್ಟಿ, ಹಂದಿಗನೂರು. ಹುಣಶ್ಯಾಳ, ನೀರಲಗಿ, ನಾಗರಹಳ್ಳಿ, ನಾಗರಾಳ, ಹೂವಿನಹಳ್ಳಿ ಮುಂತಾದವು. 'ಹೂವಿನಹಳ್ಳಿ' ಎಂದಾಗ ಸಹಜವಾಗಿ ಹುಕ್ಕೇರಿ(ಹೂವಿನಕೇರಿ), ಹೂವಿನ ಹಡಗಲಿ, ಹುಬ್ಬಳ್ಳಿ(ಹೂವಿನಬಳ್ಳಿ) ಇಂತಹ ಊರ ಹೆಸರುಗಳು ನೆನೆಪಿಗೆ ಬರುತ್ತವೆ.

ಈ ಭಾಗದ ಸ್ಥಳನಾಮಗಳಲ್ಲಿ ಇನ್ನೂ ಕೆಲವು ಭಾಷಿಕ ವೈಶಿಷ್ಟ್ಯಗಳಿವೆ. ಸಿಂದಗಿ, ಚಿಕ್ಕ ಸಿಂದಗಿ, ಹಿಪ್ಪರಗಿ, ಗುತ್ತರಗಿ, ಗುಂಡಗಿ, ಇಂಗಳಗಿ, ನೀರಲಗಿ ಇಲ್ಲೆಲ್ಲ ಊರಿನ ಹೆಸರಿನ ಕೊನೆಗೆ 'ಗ್ರಾಮ' ಎಂಬ ಶಬ್ದವಿದ್ದಿತು. ಈ 'ಗ್ರಾಮ' ಆಡುಭಾಷೆಯಲ್ಲಿ 'ಗಾವ್' ಆಗುತ್ತದೆ. ಇಲ್ಲಿ ಕೊನೆ ಅರ್ಧಸ್ವರ 'ವ್' ಆಡುಮಾತಿನಲ್ಲಿ ಲೋಪವಾಗುತ್ತದೆ. ಆಗ ಉಳಿಯುವ ಗಾ>ಗೆ ಆಗುವುದು ಗೆ>ಗಿ ಆಗುವುದು ಭಾಷೆಯಲ್ಲಿ ಜರುಗುವ ಸಹಜ ಕ್ರಿಯೆಯಾಗಿದೆ. ಅದರಂತೆ ಚಟ್ಟರಕಿ, ಟಕ್ಕಳಕಿ ಇಂತಹ ಊರ ಹೆಸರುಗಳಲ್ಲಿ ಕೊನೆಯ 'ಕೆಯ್' ಎಂಬುದು ಪ್ರದೇಶ, ಕೃಷಿ ಪ್ರದೇಶವನ್ನು ಸೂಚಿಸುತ್ತದೆ. ಕೆಯ್>ಕೆ>ಕಿ ಆಗಿ ಧ್ವನಿ ವ್ಯತ್ಯಾಸವಾಗಿದೆ. ಆದುದರಿಂದ ಇವು ಕೆಯ್‌ದಿಂದ ಹುಟ್ಟಿರುವ ಕೃಷಿ ವಿಶಿಷ್ಟ ಗ್ರಾಮಗಳೆಂದು ಹೇಳಬಹುದು. ಇಂತಹ ಅನ್ವರ್ಥಸೂಚಿ ಹೆಸರಿನ ಊರುಗಳು ಕಾಲದ ದೃಷ್ಟಿಯಿಂದ ಪ್ರಾಚೀನವಾಗಿರುತ್ತವೆ.

ಗಣಿಹಾರ=ಗಣಿ+ಆಹಾರ
ಕೋರವಾರ=ಕೊರ+ವಾರ

ಈ ಪ್ರಯೋಗಗಳ ಬಲದಿಂದ ಕೆಲವು ಭಾಷಿಕ ವಿಚಾರಗಳಿವೆ. ವಿಗ್ರಹ ವಾಕ್ಯ ಮಾಡಿದಾಗ ಹಿಂದಿನ ಸ್ವರವು ದೀರ್ಘವಾಗಿದ್ದರೆ ಅದರ ಮುಂದಿನ ಹ್ರಸ್ವಾದಿಯ 'ವರ'ವೂ ಹ್ರಸ್ವ ವಾಗಿದ್ದರೆ ಅದರ ಮುಂದೆ ದೀರ್ಘಾದಿಯ 'ವಾರ'ವೂ ಕಾಣಿಸಿಕೊಳ್ಳುತ್ತದೆ. ಆದ್ದರಿಂದ ವರ-ವಾರಗಳು ಒಂದೇ ಆಕೃತಿಮಾದ ಎರಡು ಉಪ ಆಕೃತಿಮಾಗಳು. ಇನ್ನೊಂದು ಅಂಶ 'ವರ' ಎಂಬುದು 'ಪುರ'ದಿಂದ ಬಂದಿದೆ. ಆಡುನುಡಿಯಲ್ಲಿ ಪ>ಹ ಧ್ವನಿ ವ್ಯತ್ಯಾಸವಾಗುತ್ತದೆ. ಆಹಾರ>ಆಹಾರ> ಹಾರವಾಗಿರುವ ಸಾಧ್ಯತೆಯೂ ಇದೆ. 'ಗಣಿಹಾರ' ಎಂಬ ಊರ ಹೆಸರಿನಲ್ಲಿ ಇದರ ಸೂಚನೆ ಇದೆ. ಬಾಣ+ಆಹಾರ= ಬಾಣಾಹಾರ+ ಬಾಣಾವಾರ ಸಂಧಿಕ್ರಿಯೆಯಲ್ಲಿ 'ಹ'ಕಾರವು 'ವ'ಕಾರವಾಗುತ್ತದೆ. ಇದರಂತೆ 'ಆಹೇರಿ' ಎಂಬ ಗ್ರಾಮನಾಮದ ಮೂಲರೂಪ 'ಆಹಾರ'. ಆಹಾರ ಎಂದರೆ ಪ್ರದೇಶ, ಸ್ಥಳವೆಂದು

ಅರ್ಥ. ಶಾಸನಗಳಲ್ಲಿ ಇದರಿಂದ ನಿಷ್ಪತ್ತಿಯಾದ 'ತರಕಾಹಾರ', 'ಕೋಟಾಹಾರ' ಎಂಬ ಗ್ರಾಮನಾಮಗಳು ಕಂಡುಬರುತ್ತವೆ. ಈ ಪದ ಅಗ್ರ+ಹಾರ=ಅಗ್ರಾಹಾರ>ಅಗ್ರಹಾರ ಎಂಬಲ್ಲಿ ಇನ್ನೂ ನಿಚ್ಚಳವಾಗಿ ಉಳಿದು ಕೊಂಡದ್ದನ್ನು ಲಕ್ಷಿಸಬೇಕು. ಈ ಪರಿಸರದ ಬಹುಪಾಲು ಊರುಗಳ ವಾರ್ಗಿಕಗಳು -ಊರು(ಪಡಗಾನೂರು, ಮಣ್ಣೂರು, ಭಂಟನೂರು ಮುಂತಾದುವು) - ಹಳ್ಳಿ (ಮಾದನಹಳ್ಳಿ, ಹಿಟ್ಟನಹಳ್ಳಿ, ಹೊನ್ನಳ್ಳಿ, ನಾಯಕನಹಳ್ಳಿ, ಸುರಗಿಹಳ್ಳಿ) - ಹಾಳ (ಬ್ಯಾಡಗಿಹಾಳ, ಬ್ಯಾಲಿಹಾಳ ಮುಂತಾದುವು) - ಪುರ(ದವಲಾಪುರ, ಕೂಡ್ಲಾಪುರ ಮುಂತಾದುವು) - ಹಟ್ಟಿ(ಕೆಸರಟ್ಟಿ, ಬನ್ನಿಹಟ್ಟಿ ಮುಂತಾದುವು) ಇವುಗಳಿಂದ ಕೊನೆಯಾಗುತ್ತವೆ. ಈ ಎಲ್ಲ ಊರುಗಳು ಕನ್ನಡದ ರಚನೆಯನ್ನು ಒಳಗೊಂಡಿವೆ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ.

ಪ್ರಾಚೀನ ಮಾನವನ ವಾಸಸ್ಥಾನದ ಕುರುಹುಗಳು ಈ ಪರಿಸರದ ಗ್ರಾಮನಾಮಗಳಲ್ಲಿ ಇದೆ. ಬೂದಿಹಾಳ(ಪಿ.ಟಿ.), ಬೂದಿಹಾಳ(ಪಿ.ಎಚ್.), ಬೂದಿಹಾಳ ಡೋಣಿ ಇಂತಹ ಊರುಗಳಲ್ಲಿ ಪೂರ್ವಪದ 'ಬೂದಿ' ಎಂಬ ಪದವು ಪ್ರಾಚೀನ ಮಾನವನ ವಾಸಸ್ಥಾನ ವನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಇಂತಹ ಊರುಗಳು ಕಾಲದ ದೃಷ್ಟಿಯಿಂದ ಪ್ರಾಚೀನ ವಾಗಿವೆ. ಪುರಾತತ್ತ್ವ ಅಧ್ಯಯನಕಾರರಿಗೆ ಶಾಸನಗಳು ಮೌನವಾದಾಗ ಇಂತಹ ಸ್ಥಳನಾಮ ಗಳು ಮಹತ್ವದ ಸೂಚನೆಗಳನ್ನು ಕೊಡುತ್ತವೆ. ಉತ್ತರ ಪದ ಪಾಳ್>ಹಾಳ್ ಎಂಬುದು ಪ್ರದೇಶವನ್ನು ಸೂಚಿಸುತ್ತದೆ. ಅದರಂತೆ ಬೂದಿಗೊಪ್ಪ, ಬೂದನೂರು ಈ ಎಲ್ಲ ಗ್ರಾಮಗಳು ಆದಿಮಾನವನ ನೆಲೆಯನ್ನು ಅಥವಾ ವಾಸಸ್ಥಾವನ್ನು ಸೂಚಿಸುತ್ತವೆ ಎಂಬುದು ಗಮನಾರ್ಹ ಅಂಶವಾಗಿದೆ.

ಸ್ಥಳನಾಮ ಅಧ್ಯಯನವು ಸ್ಥಳ ಸಂದರ್ಶನ ಮಾಡಿ ವಿವರವಾಗಿ ವಿಶ್ಲೇಷಣೆ ನಡೆಸಿದ ಹೊರತು ಪೂರ್ಣವಾಗುವುದಿಲ್ಲ. ಪ್ರಸ್ತುತ ಪ್ರಬಂಧವು ಒಂದು ಪಕ್ಷಿನೋಟ ಮಾತ್ರ. ಅಧ್ಯಯನಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳನ್ನು ಹಾಗೂ ಅಲ್ಲಿ ತಲೆದೋರುವ ಸಮಸ್ಯೆಗಳನ್ನು ಇಲ್ಲಿ ಕೊಡಲು ಸಾಧ್ಯವಾಗಿಲ್ಲ. ಸಿಂದಗಿ ಪರಿಸರದಲ್ಲಿ ಕಂಡುಬರುವ ಸ್ಥಳನಾಮಗಳ ಕೆಲವು ಭಾಷಿಕ ವೈವಿಧ್ಯಗಳನ್ನು ತಕ್ಕಮಟ್ಟಿಗೆ ವಿವರಿಸಲು ಯತ್ನಿಸಲಾಗಿದೆ. ಒಟ್ಟಿನಲ್ಲಿ ಈ ಭಾಗದ ಸಾಮಾಜಿಕ ಜನಜೀವನ, ಭಾಷಾ ಪ್ರಭಾವ, ಭೌಗೋಳಿಕ ಪರಿಸರ ಮುಂತಾದ ಅಂಶಗಳನ್ನು ತಿಳಿದುಕೊಳ್ಳುವಲ್ಲಿ ಸ್ಥಳನಾಮಗಳು ಮಹತ್ವದ ಆಕರಗಳಾಗುತ್ತವೆ ಎಂಬುದು ಗಮನಾರ್ಹ ಅಂಶವಾಗಿದೆ.

ಆಕರ ಗ್ರಂಥಗಳು

೧. ಗೋಪಾಲಕೃಷ್ಣ ವಿ., ೧೯೮೭, ಸ್ಥಳನಾಮ ಅಧ್ಯಯನಗಳು, ವಿದ್ಯಾಗಿರಿ ಪ್ರಕಾಶನ, ವಾರಿನಾಯಕನಪಾಳ್ಯ, ಕೋಲಾರ ಜಿಲ್ಲೆ.
೨. ಚಿದಾನಂದಮೂರ್ತಿ ಎಂ., ೧೯೮೧, ವಾಗರ್ಥ, ಬಾಪ್ಕೊ ಪ್ರಕಾಶನ, ಬೆಂಗಳೂರು.

೩. ಶಶಿಕಲಾ ಎಚ್.(ಸಂ.), ೨೦೧೨, ನಾಮವ್ಯಾಸಂಗ(ಎಂ.ಎಂ. ಕಲಬುರ್ಗಿ ಅವರ ಲೇಖನಗಳ ಸಂಕಲನ), ಸಪ್ನ ಬುಕ್‌ಹೌಸ್, ಬೆಂಗಳೂರು.
೪. ಕರ್ನಾಟಕ ಗ್ರಾಮಸೂಚಿ, ೧೯೮೫, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೫೨

ಹಸ್ತಪ್ರತಿ ಪ್ರಶಸ್ತಿಗಳಲ್ಲಿ ಸ್ಥಳನಾಮಗಳು

ಸ್ಥಳನಾಮಗಳು ಮೇಲ್ನೋಟಕ್ಕೆ ಸಾಮಾನ್ಯ ಗುರುತಿನ ಚಿಹ್ನೆಗಳಾಗಿ ಕಂಡರೂ ಭಾಷಾಶಾಸ್ತ್ರಜ್ಞನೋ ಇತಿಹಾಸಕಾರನೋ ಪುರಾತತ್ವವೇತ್ತನೋ ಅವುಗಳ್ನು ತನ್ನ ಶಾಸ್ತ್ರಕ್ಕನುಗುಣವಾಗಿ ಒರೆಯಿಕ್ಕಿ ನೋಡಿದಾಗ ಅವುಗಳಿಂದ ಅತ್ಯಂತ ಕುತೂಹಲಕಾರಿ ಅಂಶಗಳು ಹೊರಬರುತ್ತವೆ. ನಮ್ಮ ಹಿಂದಿನ ತಲೆಮಾರಿನವರ ಭಾಷೆ, ಜೀವನವಿಧಾನ, ದೃಷ್ಟಿವೈಶಾಲ್ಯ, ಭೌಗೋಳಿಕ ಹಾಗೂ ಚಾರಿತ್ರಿಕ ಅಂಶಗಳ ಮೇಲೆ ಸ್ಥಳನಾಮ ಅಧ್ಯಯನವು ಹೊಸ ಬೆಳಕನ್ನು ಚೆಲ್ಲುತ್ತದೆ. ಸ್ಥಳನಾಮಗಳಲ್ಲಿ ಪರಸ್ಪರ ಹೋಲಿಕೆ ಇಲ್ಲವೆ ಸಾಮ್ಯವು ಕಂಡುಬಂದರೆ ಅಂತಹ ಸ್ಥಳನಾಮಗಳು ಪ್ರಪಂಚದ ಯಾವ ಭಾಗದಲ್ಲೆ ಇರಲಿ ಅಲ್ಲಿ ಒಂದೇ ರೀತಿಯ ಅಥವಾ ಹೋಲಿಕೆಯುಳ್ಳ ನಾಗರಿಕತೆಯ ಕುರುಹುಗಳನ್ನು ಕಾಣಲು ಸಾಧ್ಯವಿದೆಯೆಂದು ಸ್ಥಳನಾಮ ಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ.

ಮಾನವನ ನಾಗರಿಕತೆಯಲ್ಲಿ ಭಾಷೆಗೆ ವಿಶಿಷ್ಟವಾದ ಸ್ಥಾನವಿದೆ. ಮಾನವ ನಿರ್ಮಿತ ಕೋಟೆಕೊತ್ತಲಗಳು, ದೇವಾಲಯಗಳು, ಕಲಾಶಿಲ್ಪಗಳು, ಅಮೂಲ್ಯ ಆಭರಣಗಳು, ದಾಖಲೆಗಳು ಪ್ರಕೃತಿಯ ವಿಕೋಪಕ್ಕೆ ತುತ್ತಾಗಿ ಹೇಳಹೆಸರಿಲ್ಲದೆ ಹೋಗಬಹುದು. ಆದರೆ ನಾವು ಆಡುವ ಭಾಷೆ ನಮ್ಮ ಜೊತೆಯಲ್ಲಿಯೇ ಜೀವಂತವಾಗಿ ಉಳಿದುಕೊಂಡು ಬರುತ್ತದೆ. ಹೆಚ್ಚೆಂದರೆ, ಪರಿಸರಕ್ಕೆ ಹೊಂದಿಕೊಂಡು ಅದರಲ್ಲಿ ಅಲ್ಪಸ್ವಲ್ಪ ಬದಲಾವಣೆಗಳು ಉಂಟಾಗುವುದಲ್ಲದೆ ಆಮೂಲಾಗ್ರವಾಗಿ ನಶಿಸಿ ಹೋಗುವ ಸಾಧ್ಯತೆಗಳಂತೂ ತೀರ ಕಡಿಮೆ. ಇಂತಹ ಭಾಷೆಯನ್ನು ಜೀವಂತವಾಗಿ ನಾವು ಸ್ಥಳನಾಮಗಳಲ್ಲಿ ಕಾಣಲು ದೊರೆಯುತ್ತದೆ. ಅಲ್ಲದೆ ಶಿಲಾಶಾಸನ, ಲಿಖಿತ ದಾಖಲೆ ಹಾಗೂ ವಾಸ್ತುಶಿಲ್ಪಗಳಲ್ಲಿ ದೊರೆಯದಿರುವ ಹಲವಾರು ಕುತೂಹಲಕಾರಿ ಅಂಶಗಳು ಸ್ಥಳನಾಮಗಳಲ್ಲಿ ದೊರೆಯುತ್ತವೆ. ಆದುದರಿಂದಲೇ ಸ್ಥಳನಾಮಗಳು ಇತಿಹಾಸಕಾರನಿಗೆ ಜೀವಂತವಾದ ಪಳಯುಳಿಕೆಗಳಾಗಿವೆಯೆಂದು ಹೇಳುವ ಸ್ಥಳನಾಮಶಾಸ್ತ್ರಜ್ಞರ ಹೇಳಿಕೆಯಲ್ಲಿ ಸತ್ಯಾಂಶವಿದೆ.

ಹಿಂದೆ ಪ್ರಖ್ಯಾತಿ ಪಡೆದಿದ್ದ ಎಷ್ಟೋ ಊರುಗಳು ಇಂದು ನೆಲಸಮವಾಗಿವೆ; ಕುಗ್ರಾಮಗಳು ದೊಡ್ಡ ನಗರಗಳಾಗಿ ಬೆಳೆದು ನಿಂತಿವೆ. ಕಾಲಾನುಕ್ರಮದಲ್ಲಿ ಬದಲಾವಣೆಯಾದ ಇಂತಹ ಅನೇಕ ಊರುಗಳು ಹೆಸರುಗಳು ಒಂದಲ್ಲ ಒಂದು ರೂಪದಲ್ಲಿ ಉಳಿದು ಕೊಂಡು ಬಂದಿವೆ. ಅವುಗಳನ್ನು ಶೇಖರಿಸುವ ಪ್ರಯತ್ನ ನಿಷ್ಠಾವಂತವಾಗಿ ನಡೆಯಬೇಕು. ಅದರಿಂದ ವಿಪುಲವಾದ ಮಾಹಿತಿ ದೊರೆಯುತ್ತದೆ. ಹಸ್ತಪ್ರತಿ, ಶಾಸನ, ಕಾವ್ಯ, ಜನಪದ ಸಾಹಿತ್ಯ, ತಾಮ್ರಶಾಸನ ಮುಂತಾದವುಗಳಲ್ಲಿ ಅವು ಕಂಡೂ ಕಾಣದಂತೆ ಅಡಗಿರುತ್ತವೆ. ಅವುಗಳನ್ನು ಗುರುತಿಸಿ ಹೊರ ತೆಗೆಯಬೇಕು. ಇಂತಹ ಕೆಲಸಕ್ಕೆ ಸ್ಥಳನಾಮ ಸಂಶೋಧಕನು ಆಯಾ ಪ್ರದೇಶದ ಭಾಷೆಗಳು, ಸಾಮಾಜಿಕ ಹಾಗೂ ರಾಜಕೀಯ ಪರಿಛಿತ, ಭೌಗೋಳಿಕ ಜ್ಞಾನ ಮೊದಲಾದ ವಿಷಯಗಳಲ್ಲಿ ಎಷ್ಟು ಆಳವಾದ ಪರಿಣತಿಯನ್ನು ಹೊಂದಿದ್ದರೆ ಅಧ್ಯಯನವು ಅಷ್ಟು ಸುಲಭವಾಗಿಯೂ ಶಾಸ್ತ್ರೀಯವಾಗಿಯೂ ನಡೆಯುತ್ತದೆ.

ಸ್ಥಳನಾಮಗಳಲ್ಲಿ ಅರ್ಥವತ್ತಾದ ಒಂದು ಪದವಿರಬಹುದು ಅಥವಾ ಒಂದಕ್ಕಿಂತ ಹೆಚ್ಚಿನ ಘಟಕಗಳಿರಬಹುದು. ಸಾಮಾನ್ಯವಾಗಿ ಸ್ಥಳಾಮಗಳನ್ನು ವಿಭಜಿಸಿದಾಗ ಕೊನೆಯ ಘಟಕವನ್ನು 'ವಾರ್ಗಿಕ'ವೆಂದು, ಹಸ್ತಪ್ರತಿ ಪ್ರಶಸ್ತಿಗಳೂ ವಿಶೇಷಣವಾಗಿ ಬರುವ ಮೊದಲಿನ ಘಟಕಗಳನ್ನು 'ನಿರ್ದಿಷ್ಟ'ವೆಂದು ನಾಮಶಾಸ್ತ್ರದಲ್ಲಿ ಹೆಸರಿಸಲಾಗುತ್ತಿದೆ. ವಾರ್ಗಿಕಗಳು ಕೆಲವೆಡೆಗಳಲ್ಲಿ ನಿರ್ದಿಷ್ಟಗಳಾಗಿಯೂ ಬರಬಹುದು. ಉದಾಹರಣೆಗಳ ಮೂಲಕ ಇದನ್ನು ಸ್ಪಷ್ಟಪಡಿಸಹುದು.

I. ೧. ಅರ್ಥವತ್ತಾದ ಒಂದು ಪದಮಾತ್ರ ಇರುವ ಸ್ಥಳನಾಮಗಳು
ಉದಾ: ಕುರ್ಕಿ, ಅಗ್ರಹಾರ

೨. ಅರ್ಥವತ್ತಾದ ಎರಡು ಪದಗಳು
ಉದಾ: ಹೊಸಹಳ್ಳಿ, ಬೆಟ್ಟದೂರು

೩. ಎರಡಕ್ಕಿಂತ ಹೆಚ್ಚಿನ ಪದಗಳು
ಉದಾ: ಕಡಬಿ ಶಿವಾಪುರು, ಹಗರಿಬೊಮ್ಮನಹಳ್ಳಿ

II. ೧. ನಿರ್ದಿಷ್ಟ+ವಾರ್ಗಿಕ
ಉದಾ: ಉಪಾರಟ್ಟಿ, ನುಗ್ಗಿಹಳ್ಳಿ

೨. ವಾರ್ಗಿಕ ನಿರ್ದಿಷ್ಟವಾಗಿಯೂ ಬರಬಹುದು
ಉದಾ: ಕಲ್ಲಳ್ಳಿ, ಕುಂಟೆಹಳ್ಳಿ ಬೆಟ್ಟದಳ್ಳಿ

ಪ್ರಸ್ತುತ ಅಧ್ಯಾಯದಲ್ಲಿ ಹಸ್ತಪ್ರತಿ ಪ್ರಶಸ್ತಿಗಳಲ್ಲಿ ಉಲ್ಲೇಖವಾದ ಸ್ಥಳನಾಮಗಳನ್ನು ಕುರಿತು ಸ್ಥೂಲವಾಗಿ ವಿವೇಚಿಸಲಾಗಿದೆ. ಪ್ರಶಸ್ತಿಗಳಲ್ಲಿ ನಿಸರ್ಗ ಜಲಸೂಚಿ ಅಂಶಗಳು ಕಂಡುಬರುತ್ತದೆ. ಅಬ್ಬಿನಹೊಳೆ, ಕಲ್ಲೋಡು, ಚದರಗೊಲ್ಲು, ದೊಣ್ಣೆಹಳ್ಳಿ, ಹೂವಿನಹೊಳೆ ಮುಂತಾದ ಕೆಲವೇ ಸ್ಥಳನಾಮಗಳಲ್ಲಿ ಇಂತಹ ಅಂಶಗಳನ್ನು ಕಾಣಬಹುದು. ಸಹಜವಾಗಿಯೆ

ಕೃತಕ ನಿರ್ಮಾಣಗಳಾದ -ಕಟ್ಟೆ, -ಕೆರೆ: -ಅಂಬುಧಿ,- ಸಮುದ್ರ/-ಸಂದ್ರ-ಸಾಗರ ಮುಂತಾದ ಕೃತಕ ಜಲಾಶಯಗಳನ್ನು ಸೂಚಿಸುವ ಸಾಕಷ್ಟು ಸ್ಥಳನಾಮಗಳು ಹಸ್ತಪ್ರತಿ ಪ್ರಶಸ್ತಿಗಳಲ್ಲಿ ಕಂಡುಬರುತ್ತವೆ. ಪ್ರಶಸ್ತಿಗಳಲ್ಲಿರುವ ಕೆರೆ-ಕಟ್ಟೆಗಳ ಸಂಖ್ಯೆಯನ್ನು ಗಮನಿಸಿದಾಗ ಈ ಅಂಶ ಮನವರಿಕೆಯಾಗುತ್ತದೆ. ಇದು ಜಲಾಭಾವಕ್ಕೆ ಸ್ಪಷ್ಟವಾದ ಉದಾಹರಣೆ.

ಆನೆಕೊಂಡ, ಗುಜ್ಜಿಕೊಂಡ, ಚಿತ್ರಕಲ್‍ದುರ್ಗ, ಜಡಕಲ್ಲುದುರ್ಗ, ಮಾಯಕೊಂಡ, ರಾಮಗಿರಿ ಮುಂತಾದ ಸ್ಥಳನಾಮಗಳು ಸಣ್ಣ ಹಾಗೂ ದೊಡ್ಡ ಪ್ರಮಾಣದ ಗಿರಿಕಂದರಗಳನ್ನು ಸೂಚಿಸುವ ಹೆಸರುಗಳು. ಬಯಲುನಾಡಿನ ಹಸ್ತಪ್ರತಿ ಪ್ರಶಸ್ತಿಗಳಲ್ಲಿ ಎದ್ದು ನಿಂತಿರುವ ಇವು ಭೌಗೋಳಿಕ ವಿಶೇಷ.

ವೃಕ್ಷಲತಾದಿಗಳು, ಪಶುಪಕ್ಷಿಗಳ ಸಂಬಂಧ ನಮಗೆ ಆದಿಮಾನವನಿಂದಲೂ ನಡೆದು ಬಂದಿದೆ. ಬಹುಮಟ್ಟಿನ ಎಲ್ಲಾ ಪ್ರದೇಶಗಳಲ್ಲಿಯೂ ಎಲ್ಲ ಆಕರಗಳಲ್ಲಿಯೂ ಇಂತಹ ಅಂಶಗಳನ್ನು ಗಮನಿಸಬಹುದು. ಅದಕ್ಕೆ ಹೊರತಾಗಿಲ್ಲ. ಆಲದಹಳ್ಳಿ, ಈಚಲ ನಾಗೇನ ಹಳ್ಳಿ, ಎಕ್ಕೆಗೊಂದಿ, ಹೊಲಿಕುಂಟೆ, ಗೊರ್ಲಕಟ್ಟೆ, ಕರಡೀಕಟ್ಟೆ, ಕರಡಿಗುದ್ದಿ, ಕಿರುಬನಕಲ್ಲು ಇವು ಇಂತಹ ಕೆಲವು ಉದಾಹರಣೆಗಳು.

ಧರ್ಮ, ಮತ, ಜಾತಿ ಇಲ್ಲವೆ ದೇವತೆಗಳ ಹೆಸರನ್ನು ಸೂಚಿಸುವ ಕೆಲವು ಸ್ಥಳನಾಮಗಳು ಪ್ರಶಸ್ತಿಗಳ ಧಾರ್ಮಿಕ ನಂಬಿಕೆಗಳ ಬಗೆಗೆ ತಿಳಿಸುತ್ತವೆ. ಉದಾ: ಬಸ್ತಿಹಳ್ಳಿ, ಶ್ರವಣಗೆರೆ, ಹರಿಹರ, ನಂದಿಗುಡಿ, ನಾಗರಕಟ್ಟೆ, ಶಿವಗಂಗೆ, ಖುದಾಪುರ, ಶಿವಾಪುರ, ಮಾಸ್ತಿಕಟ್ಟೆ, ಹನಮನಹಟ್ಟಿ.

ಭಟ್ರಹಳ್ಳಿ, ಬಹದ್ದೂರ್‍ಕಟ್ಟೆ, ಹೆಗ್ಗಡೆಹಳ್ಳಿ, ತಳವಾರಹಳ್ಳಿ, ದಳವಾಯಹಳ್ಳಿ, ಜೋಯಿಸರಹಳ್ಳಿ, ಶಾನುಭೋಗನಹಳ್ಳಿ, ವಡೇರಹಳ್ಳಿ ಇವುಗಳು ಪ್ರಚಲಿತವಿದ್ದ ಲಿಪಿಕಾರರ ಕುಟುಂಬನಾಮ, ಬಿರುದು, ವೃತ್ತಿ ಅಥವಾ ಜಾತಿಸೂಚಕಗಳೆಂಬುದು ಸ್ಪಷ್ಟವಾಗಿದೆ. ಇಂತಹ ಜಾತಿ, ಸಾಮಾಜಿಕ ವರ್ಗ ಇಲ್ಲವೆ ಕುಟುಂಬನಾಮಗಳನ್ನು ತಿಳಿಸುವ ಸಾಕಷ್ಟು ಉದಾಹರಣೆ ಗಳನ್ನು ಇಲ್ಲಿ ಕೊಡಬಹುದು: ಅಗಸನಕಲ್ಲು, ಕುಂಬಾರಹಳ್ಳಿ, ಬುಡರಕಟ್ಟೆ, ಬ್ಯಾಡರಹಟ್ಟಿ, ಉಪ್ಪಾರಟ್ಟಿ, ಕುರುಬರಹಳ್ಳಿ, ಗೊಲ್ಲರಹಳ್ಳಿ, ಜೋಗಹಟ್ಟಿ, ಸಾದರಹಳ್ಳಿ, ಎಲಕನೋರ ಹಳ್ಳಿ, ಪಟ್ರೇನಹಳ್ಳಿ, ಮ್ಯಾಕನೋರಹಳ್ಳಿ ಇತ್ಯಾದಿ.

ನಾಗರಕಟ್ಟೆ, ಬುರುಜನರೊಪ್ಪ, ಕೋಟೆಹಳ್ಳಿ, ಕಂಬದಹಳ್ಳಿ, ಬಸವನಕೋಟೆ ಮುಂತಾದವು ವಾಸ್ತುಸೂಚಿಗಳಾದರೆ, ಸಂತೆಮುದ್ದಾಪುರ, ಸಂತೆಗುಡ್ಡ, ಸತ್ತಿಗೇರಿ ಇಂತಹವು ವ್ಯಾಪಾರ ಕೇಂದ್ರಗಳನ್ನು ತಿಳಿಸುತ್ತವೆ.

'-ಕಟ್ಟೆ' ಎಂಬ ಅಂತ್ಯ ಪ್ರತ್ಯಯವುಳ್ಳ ಸ್ಥಳನಾಮಗಳು ಇಲ್ಲಿ ಹೇರಳವಾಗಿ ಕಂಡು ಬರುತ್ತವೆ. ಇವುಗಳೊಡೆ ಸೇರಿರುವ ವಿಶೇಷ ಆದಿಪ್ರತ್ಯಯಗಳನ್ನು ಗಮನಿಸಿದಾಗ ಅವುಗಳು 'ಕೆರೆ' ಅಥವಾ 'ಜಲಾಶಯ' ಎಂಬ ಅರ್ಥದಲ್ಲಿ ಮಾತ್ರವಲ್ಲದೆ 'ಜಗಲಿ'/'ಚಾವಡಿ ಎಂಬ ಅರ್ಥದಲ್ಲಿಯೂ ಸಾಕಷ್ಟು ಬಳಸಿಕೊಂಡಿರುವ ವಿಚಾರ ತಿಳಿಯುತ್ತದೆ. ಕುಡಿನೀರ್‍ಕಟ್ಟೆ,

ಗಂಜಿಕಟ್ಟೆ, ಜರಿಕಟ್ಟೆ, ತೋರಣಗಟ್ಟೆ, ಕುರುಬಕಟ್ಟೆ, ನಾಗರಕಟ್ಟೆ, ಹುಣಿಸೆಕಟ್ಟೆ, ಚಲ್ಲಗಟ್ಟೆ, ನೆಲ್ಲಿಕಟ್ಟೆ, ಹರಳಕಟ್ಟೆ-ಹೀಗೆ ಸಾಕಷ್ಟು ಉದಾಹರಣೆಗಳು ದೊರೆಯುತ್ತವೆ.

ಭೂಸ್ಥಿತಿಯನ್ನು ವಿವರಿಸುವ ಕೆಂಗುಂಟೆ, ಘಟವರ್ತಿ, ಮೇಟಿಕುರಿಕೆ, ಮರಡಿಹಳ್ಳಿ, ಬೆಟ್ಟದೂರು, ಯರಗಟ್ಟಿ, ದಿಬ್ಬದಹಳ್ಳಿ; ಪರಿಮಾಣ ಸೂಚಕಗಳಾದ ಹಿರೇಅರಕೆರೆ, ಚಿಕ್ಕ ಅರಕೆರೆ; ಸ್ಥಳ. ಸೂಚಕಗಳಾದ ಕೆಳಗಿನಕಣಿವೆ, ಮೂಡಲಗಿ, ಕಣಿವೆಕೊಳ್ಳ, ಮೇಲಿನಕಣಿವೆ; ಹಿರೇಕೊಪ್ಪ ಚಿಕ್ಕೊಪ್ಪ ಅಲ್ಲದೆ ಮೂಡ್ಲಮಾಚಿಕೆರೆ, ಮೂಡ್ಲಬಸಾಪುರ ಮುಂತಾದ ದಿಕ್ಸೂಚಿ ಸ್ಥಳನಾಮಗಳನ್ನೂ ಕಾಣಬಹುದು.

ಸ್ಥಳನಾಮಗಳ ಅಧ್ಯಯನವು ಸ್ಥಳ ಸಂದರ್ಶನ ಮಾಡಿ ವಿವರವಾಗಿ ವಿಶ್ಲೇಷಣೆ ನಡೆಸಿದ ಹೊರತು ಪೂರ್ಣವಾಗುವುದಿಲ್ಲ. ಹಸ್ತಪ್ರತಿ ಪ್ರಶಸ್ತಿಗಳಲ್ಲಿ ಉಕ್ತವಾಗಿರುವ ಸ್ಥಳನಾಮಗಳ್ನು ಪ್ರಸ್ತುತ ಅಧ್ಯಾಯದಲ್ಲಿ ಒಂದು ಪಕ್ಷಿನೋಟ ಕೊಟ್ಟಿದ್ದೇನೆ. ಅಧ್ಯಯನಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳನ್ನು ಸಂಗ್ರಹಿಸುವ ವಿವಿಧ ವಿಧಾನಗಳನ್ನಾಗಲಿ ಅಲ್ಲಿ ತಲೆದೋರುವ ಸಮಸ್ಯೆಗಳ್ನಾಗಲಿ ಇಲ್ಲಿ ಕೊಡಲು ಸಾಧ್ಯವಾಗಿಲ್ಲ. ಹಸ್ತಪ್ರತಿ ಪ್ರಶಸ್ತಿಗಳಲ್ಲಿ ಕಂಡುಬರುವ ಸ್ಥಳನಾಮಗಳ ಕೆಲವು ವೈವಿಧ್ಯಗಳನ್ನು ಸೋದಾಹರಣವಾಗಿ ವಿವರಿಸಲು ಪ್ರಯತ್ನಿಸಲಾಗಿದೆ. ಆ ಸ್ಥಳನಾಮಗಳಿಂದ ಲಿಪಿಕಾರರ ಸಾಂಸ್ಕೃತಿಕ ಪ್ರಜ್ಞೆ ಜನಜೀವನ, ಭೌಗೋಳಿಕ ಪರಿಸರ ಮೊದಲಾದ ವಿಷಯಗಳು ತಿಳಿದುಬರುತ್ತವೆ.

ಆಕರಗ್ರಂಥ

೧. ಹಸ್ತಪ್ರತಿ ಸೂಚಿ ಸಂಪುಟಗಳು, ಹಂಪಿ, ಮೈಸೂರು, ಧಾರವಾಡ ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳು.

೫೩

ಹಸ್ತಪ್ರತಿ ಪ್ರಶಸ್ತಿಗಳಲ್ಲಿ ವ್ಯಕ್ತಿನಾಮಗಳು

ಭಾಷಾ ಸಮುದಾಯ, ಅಸ್ತಿತ್ವವಿರುವ ಕಡೆಗಳಲ್ಲೆಲ್ಲ ವ್ಯಕ್ತಿ, ವಸ್ತು ನಾಮಕರಣವು ಒಂದು ಭಾಷಿಕ ಕ್ರಿಯೆ ಆಗಿರುವಂತೆ, ಅಲ್ಲಿನವರ ಸಂಸ್ಕೃತಿಯಲ್ಲಿ ಅನುಸರಿಸಲಾದ ಒಂದು ಕ್ರಿಯಾಚರಣೆ ಕೂಡ ಎನಿಸಿದೆ. ಭಾರತೀಯ ಧರ್ಮಶಾಸ್ತ್ರಾದನ್ವಯ ಹೇಳಲಾಗಿರುವ ಷೋಡಶ ಸಂಸ್ಕಾರಗಳಲ್ಲಿ ನಾಮಕರಣವೂ ಒಂದು ಸಂಸ್ಕಾರ. ನಾಮಕರಣ ಕೇವಲ ವ್ಯಕ್ತಿಗಳಿಗಷ್ಟೇ ಅಲ್ಲದೆ ಮನುಷ್ಯ ತನ್ನ ಪರಿಸರಕ್ಕೆ ಹತ್ತಿರವಾಗುವ ಅದೆಷ್ಟೋ ವಸ್ತುಗಳಿಗೆ, ಪ್ರಾಣಿ-ಪಶು- ಪಕ್ಷಿ, ಗಿಡ-ಮರ, ಹಳ್ಳ-ಕೊಳ್ಳ, ಗುಡ್ಡ-ಬೆಟ್ಟ, ಊರು-ಕೇರಿಗಳಿಗೂ ಸಹ ನಾಮಕರಣ ಮಾಡುವ ಅಭಿಲಾಷೆಯುಳ್ಳವನಾಗಿದ್ದಾನೆ. ಅವುಗಳ ಉಗಮ, ವಿಕಾಸಗಳನ್ನು ತಿಳಿಸಲು 'ನಾಮಶಾಸ್ತ್ರ' ಎಂಬ ಪ್ರತ್ಯೇಕ ಅಧ್ಯಯನ ಶಾಖೆ ಅಸ್ತಿತ್ವಕ್ಕೆ ಬಂದಿದೆ. ನಾಮಕರಣವು ಸಾಮಾಜಿಕ ಭಾಷಾವಿಜ್ಞಾನ ಮತ್ತು ನಂಬಿಕೆ-ಆಚರಣೆ ಇವೆರಡಕ್ಕೂ ಸಂಬಂಧಿಸಿರುವ ಸಂಗತಿಯಾಗಿದೆ. ಒಟ್ಟಾರೆ ಹೆಸರುಗಳ ಮುಖ್ಯ ಉದ್ದೇಶ ಸಂಸ್ಕೃತಿ ಅಧ್ಯಯನವೇ ಆಗಿದೆ.

೧

ಹೆಸರುಗಳ ಕಾವ್ಯ, ಶಾಸನಗಳಂತೆ ಒಂದು ಪ್ರದೇಶದ/ಜನಾಂಗದ ಅಧ್ಯಯನಕ್ಕೆ ಅನುಷಂಗಿಕ ಆಕರ ಸಾಮಗ್ರಿಗಳಾಗುತ್ತವೆಂದು ವಿದ್ವಾಂಸರು ಕಂಡುಕೊಂಡಿದ್ದಾರೆ. ಅವುಗಳ ಮೂಲಕ ಭಾಷಿಕ ಹಾಗೂ ಸಾಮಾಜಿಕ ಸ್ತರಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಇತ್ತೀಚೆಗೆ ಒಂದು ಶೈಕ್ಷಣಿಕ ಶಿಸ್ತಾಗಿ ಬೆಳೆಯುತ್ತಲಿದೆ.

ಕೇಶಿರಾಜ ಹೆಸರುಗಳನ್ನು ರೂಢ, ಅಂಕಿತ, ಅನ್ವರ್ಥಕ ನಾಮಗಳೆಂದು ವರ್ಗೀಕರಿಸಿ ಅವುಗಳ ಸ್ವರೂಪವನ್ನು ಹೇಳಿದ್ದಾನೆ. "ರೂಢನಾಮಂ ಪ್ರಸಿದ್ಧ ತರುಮಾಗಿರ್ಪುದು ಅನ್ವರ್ಥಕ ನಾಮಂ ಗುಣಕ್ರಮರ್ಥಕ್ಕಮನುರೂಪವಾಗಿರ್ಪುದು, ಅಂಕಿತನಾಮಂ ಪೆಸರ ನಿಡುವನಿಷ್ಟ ದಿಂದೆಂತಾ ದೊಡಮಿರ್ಪುದು" ಎಂದು ಹೇಳುತ್ತಾನೆ. ಕೇಶಿರಾಜ ಹೇಳಿದ ಅಂಕಿತನಾಮ

ಇಂದು ವ್ಯಾಕರಣ ವ್ಯಾಪ್ತಿಯನ್ನು ಮೀರಿ ಸಾಮಾಜಿಕ ಆಯಾಮವನ್ನು ಪಡೆದುಕೊಂಡಿದೆ. ಹೆಸರುಗಳು ಭಾಷಿಕ ಸಮುದಾಯದಲ್ಲಿ ವ್ಯಕ್ತಿಗೆ/ಊರಿಗೆ ವಿಶಿಷ್ಟತೆಯನ್ನು ಕೊಡುವ ಅರ್ಥವತ್ತಾದ ಘಟಕಗಳಾಗಿವೆ. ಅವುಗಳ ಶಾಸ್ತ್ರೀಯ ಅಧ್ಯಯನವೇ ನಾಮಶಾಸ್ತ್ರ. ಅದರಲ್ಲಿ ಎರಡು ವಿಧ. ಸ್ಥಳನಾಮಗಳ ಅಧ್ಯಯನ ‘ಸ್ಥಳನಾಮಶಾಸ್ತ್ರ’; ವ್ಯಕ್ತಿನಾಮಗಳ ಅಧ್ಯಯನ ‘ವ್ಯಕ್ತಿನಾಮಶಾಸ್ತ್ರ’ವಾಗಿದೆ.

ಸ್ಥಳನಾಮಗಳಿಗೂ ವ್ಯಕ್ತಿನಾಮಗಳಿಗೂ ಇರುವ ವ್ಯತ್ಯಾಸವನ್ನು ಗಮನಿಸಬೇಕು. ‘ಸ್ಥಳನಾಮಗಳು ಸಾರ್ವಜನಿಕ ಆಸಕ್ತಿಯವು, ವ್ಯಕ್ತಿನಾಮಗಳು ವೈಯಕ್ತಿಕವಾದುವು. ಅರ್ಥಾತ್ ಒಂದು ಮಗುವಿಗೆ ಹೆಸರಿಡುವುದು ಹೆಚ್ಚೆಂದರೆ ಒಂದು ಸಂಸಾರದ ಆಸಕ್ತಿಯ ವಿಷಯವಾಗಿದೆ. ಸ್ಥಳಗಳಿಗೆ ಹೆಸರುಗಳು ರೂಢಿಯ ಮೇಲೆ ಕ್ರಮವಾಗಿ ನೆಲೆಗೊಳ್ಳುತ್ತವೆ. ಆದರೆ ವ್ಯಕ್ತಿನಾಮಗಳನ್ನು ವಿಧಿವತ್ತಾಗಿ ಇಡುತ್ತಾರೆ’.[೯] ಸ್ಥಳನಾಮಗಳ ಔಚಿತ್ಯದ ಬಗ್ಗೆ ಚರ್ಚಿಸುವಂತೆ ವ್ಯಕ್ತಿನಾಮಗಳ ಬಗ್ಗೆ ಚರ್ಚಿಸಲು ಸಾಧ್ಯವಾಗುವುದಿಲ್ಲ. ಆದರೆ ಸ್ಥಳನಾಮ ಗಳಿಗಿಂತ ವ್ಯಕ್ತಿನಾಮಗಳ ಅಧ್ಯಯನ ಕ್ಷೇತ್ರ ವಿಶಾಲವಾಗಿದೆ. ವ್ಯಕ್ತಿನಾಮಗಳು, ಕುಲನಾಮ ಗಳು ಹಾಗೂ ಸಂಬಂಧ ವಾಚಕಗಳು ಇವು ವ್ಯಕ್ತಿನಾಮ ಅಧ್ಯಯನದ ಕಕ್ಷೆಯಲ್ಲಿ ಬರುತ್ತವೆ.

ಕರ್ನಾಟಕದ ವ್ಯಕ್ತಿನಾಮಗಳಲ್ಲಿ ಎರಡು ಆಕೃತಿಮಾಗಳಿರುತ್ತವೆ. ಪೂರ್ವಭಾಗವನ್ನು ‘ನಿರ್ದಿಷ್ಟ’ವೆಂದು, ಉತ್ತರ ಭಾಗವನ್ನು ‘ವಾರ್ಗಿಕ’ವೆಂದು ಕರೆಯಬಹುದು. ಉದಾ. “ಮಲ್ಲಪ್ಪ” ಇದರಲ್ಲಿ “ಮಲ್(ಲ್ಲ)” ಎಂಬುದು ನಿರ್ದಿಷ್ಟ ಆಕೃತಿಮಾ. ಏಕೆಂದರೆ ಅದು ಆ ಹೆಸರಿನ ವೈಶಿಷ್ಟ್ಯವನ್ನು ಹೇಳತಕ್ಕದ್ದು. “ಅಪ್ಪ” ಎಂಬುದು ವಾರ್ಗಿಕ ಆಕೃತಿಮಾ. ಏಕೆಂದರೆ ಅದು ಸಾಮಾನ್ಯವಾಚಕ. ಮೂರು, ನಾಲ್ಕು (ಮುಕ್ತ ಮತ್ತು ಬದ್ಧ) ಆಕೃತಿಮಾಗಳಿರುವ ಹೆಸರುಗಳೂ ಉಂಟು. ಈ ಹಿನ್ನೆಲೆಯಲ್ಲಿ ಲಿಪಿಕಾರರ ಹೆಸರುಗಳನ್ನು ರಾಚನಿಕವಾಗಿ ಹೀಗೆ ರೇಖಿಸಬಹುದು.

ನಿರ್ದಿಷ್ಟ+ವಾರ್ಗಿಕ	ಮಲ್ಲ+ಅಪ್ಪ=ಮಲ್ಲಪ್ಪ
	ಬಸವ+ಅಯ್ಯ=ಬಸವಯ್ಯ
	ಚೌಡ+ಅಯ್ಯ=ಚೌಡಯ್ಯ
	ಮಾರ+ಅಯ್ಯ=ಮಾರಯ್ಯ
	ಅಪ್ಪ+ಅಣ್ಣಯ್ಯ=ಅಪ್ಪಣ್ಣ
	ಶಾಂತ+ದೇವ ತಂದೆ=ಶಾಂತದೇವ ತಂದೆ
	ರೇಕ+ಅಮ್ಮ=ರೇಕಮ್ಮ
	ವೀರ+ಅಮ್ಮ=ವೀರಮ್ಮ
ವಿಶೇಷ+ನಿರ್ದಿಷ್ಟ+ವಾರ್ಗಿಕ	ವೀರ+ಭದ್ರ+ಅಣ್ಣ=ವೀರಭದ್ರಣ್ಣ
	ವೀರ+ಕಂಠ+ಶೆಟ್ಟಿ=ವೀರಕಂಠ ಶೆಟ್ಟಿ

ವಿಶೇಷಣ+ವಾರ್ಗಿಕ	ಗುಡ್ಡೆ+ಅವ್ವೆ=ಗುಡ್ಡವ್ವೆ
	ಬೊಂತ+ದೇವಿ=ಬೊಂತಾದೇವಿ
	ಚೆನ್ನ+ಅಯ್ಯ=ಚೆನ್ನಯ್ಯ
ನಿರ್ದಿಷ್ಟ+ನಿರ್ದಿಷ್ಟ+ವಾರ್ಗಿಕ	ವೆಂಕಟ+ಪತಿ+ಅಯ್ಯ=ವೆಂಕಟಪತಿಯಯ್ಯ
ನಿರ್ದಿಷ್ಟ+ವಿಶೇಷಣ	ವೀರ+ಒಡೆಯ=ವೀರಯೊಡೆಯ

ಷಷ್ಠೀ ಸಂಬಂಧ ನಾಮಗಳು

ಅ. ಷಷ್ಠೀ ಸಂಬಂಧ ರಹಿತ	ಮೋಳಿಗೆ+ಅಯ್ಯ=ಮೋಳಿಗಯ್ಯ
	ವೆಂಕಟ+ರಮಣ=ವೆಂಕಟರಮಣ
	ಬೋಳ+ಶಂಕರ=ಬೋಳಶಂಕರ
ಆ. ಷಷ್ಠಿ ಸಂಬಂಧ ಸಹಿತ	ವೀರಣ್ಣ+ಒಡೆಯ+ದೇವ= ವೀರಣ್ಣೊಡೆಯದೇವ
	ಲೋಚನ+ಗುರು+ಸಿದ್ದಸ್ವಾಮಿ=ಲೋಚನಗುರು ಸಿದ್ದಸ್ವಾಮಿ
	ಲಿಂಗ+ಅರಸ+ಅಯ್ಯ=ಲಿಂಗರಸಯ್ಯ
	ರಾಗದ+ಬಸಲಿಂಗ=ರಾಗದ ಬಸವಲಿಂಗ
	ಮುಕ್ಕಣ್ಣ+ಅಯ್ಯ=ಮುಕ್ಕಣ್ಣಯ್ಯ
	ತೋಂಟದ+ಸಿದ್ದೇಶ್ವರ=ತೋಂಟದ ಸಿದ್ದೇಶ್ವರ
	ಕಂಬಾಳ+ಶಾಂತಮಲ್ಲೇಶ=ಕಂಬಾಳ ಶಾಂತಮಲ್ಲೇಶ
ಇ. ವಾರ್ಗಿಕ + ವಾರ್ಗಿಕ	ಅಪ್ಪ+ಅಣ್ಣ=ಅಪ್ಪಣ್ಣ

೨

ಲಿಪಿಕಾರರ ವ್ಯಕ್ತಿನಾಮಗಳು ಕರ್ನಾಟಕದಲ್ಲಿ ಅಂದಿನ ಸಾಂಸ್ಕೃತಿಕ ನಾಮಕರಣದ ರೂಢಿಯ ಮೇಲೂ ಸಹ ಬೆಳಕು ಚೆಲ್ಲುತ್ತವೆ. ಲಿಪಿಕಾರರ ಜಾತಿ, ಉದ್ಯೋಗ, ಭಾಷಿಕ, ಸಮುದಾಯದಲ್ಲಿ ಅವರನ್ನು ಸಂಬೋಧಿಸುವ ರೀತಿ ಈ ಎಲ್ಲ ಉಪಕ್ರಮಗಳ ಹಿನ್ನೆಲೆಯಲ್ಲಿಯೂ ಲಿಪಿಕಾರರ ಹೆಸರುಗಳ ಅಧ್ಯಯನ ಆಗಬೇಕಾಗಿದೆ.

ಲಿಪಿಕಾರರಲ್ಲಿ ಅನೇಕ ಹೆಸರುಗಳಲ್ಲಿ 'ಪುನರುಕ್ತಿ'ಯನ್ನು ಕಾಣುತ್ತೇವೆ. ಮಲ್ಲಯ್ಯ ಒಂದೇ ವ್ಯಕ್ತಿನಾಮ. ಆದರೆ 'ಓದಿಸುವ ಮಲ್ಲಯ್ಯ', 'ಪ್ರಸಾದಿ ಮಲ್ಲಯ್ಯ' ಇವೆಲ್ಲ ಮಲ್ಲಯ್ಯ ಎಂದಾಗ ಇವರು ಭಿನ್ನ ವ್ಯಕ್ತಿಗಳಾಗಿ ನಿಲ್ಲುತ್ತಾರೆ. 'ಯಂಕ' ವ್ಯಕ್ತಿನಾಮ ಒಂದೇ ಇವರಲ್ಲಿ 'ಉಳಿಗದ ಯಂಕ', 'ಗುರಿಕಾರ ಯಂಕ', 'ಕೋಮಟಿಗ ಯಂಕ' ಭಿನ್ನರು. ಹೀಗೆ ಇವರ ವೃತ್ತಿ ಅಥವಾ ವರ್ಗವನ್ನು ಕರೆಯುವ ಹೆಸರಿಗೆ ಮೊದಲು ಸೇರಿಸಿ ಒಬ್ಬರನ್ನು ಇನ್ನೊಬ್ಬರೊಂದಿಗೆ ಬೇರ್ಪಡಿಸಿಕೊಳ್ಳುತ್ತೇವೆ. ಹೀಗೆ ಮಾಡುವುದು 'ವ್ಯಕ್ತಿನಾಮ'ದ

ಮಹತ್ವದ ಕಾರಣದಿಂದಲ್ಲ. ಅವರನ್ನು ಸಮಾಜದಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಪರಿಚಯಿಸಿಕೊಳ್ಳಬೇಕಾದುದು ಇಲ್ಲಿನ ಮುಖ್ಯ ಉದ್ದೇಶ. ಈ ವ್ಯಕ್ತಿ ಹೆಸರುಗಳು ಒಂದೇ ಆಗಿ ಪುನರುಕ್ತಿಗೊಳ್ಳುವುದಕ್ಕೆ ಬಹುಶಃ ಆ ವ್ಯಕ್ತಿಗಳಿಗೆ ಹೆಸರಿಟ್ಟ ಹಿರಿಯರು ಒಂದೇ ಸಂಸ್ಕೃತಿ, ನಂಬುಗೆ, ಆಚರಣೆ, ದೇವತಾರ್ಚನೆ ಗಳನ್ನು ಅನುಸರಿಸಿಕೊಂಡು ಬಂದವರಾಗಿರುತ್ತಾರೆ. ಈ ಬಗೆಯ ಸಾಂಸ್ಕೃತಿಕ ಏಕತೆ ವ್ಯಕ್ತಿನಾಮಗಳ ಏಕರೂಪಧಾರಣಕ್ಕೆ ಕಾರಣವಾಗುತ್ತದೆ. ಆದರೂ ವ್ಯಕ್ತಿನಾಮದ ಅಂಗಗಳಾದ ಅಂಕಿತನಾಮಗಳು ಅಪಾರವಾಗಿ ಬೆಳೆಯುತ್ತವೆ. ಒಂದೊಂದು ವ್ಯಕ್ತಿನಾಮಕ್ಕೂ ತನ್ನದೇ ಆದ ಸಾಂಸ್ಕೃತಿಕ ಸ್ರೋತವಿರುತ್ತದೆ. ಸಂಸ್ಕೃತಿವೆಂದೂ, ಆ ಆಕರಗಳಿಂದ ನಿಷ್ಪನ್ನಗೊಳಿಸಲಾದ ಮತ್ತು ಸಂಬೋಧಿಸಲಾಗುವ ಹೆಸರನ್ನು 'ವ್ಯಕ್ತಿನಾಮ' ವೆಂದೂ ನಿರ್ಣಯಿಸುತ್ತೇವೆ.

ವ್ಯಕ್ತಿಗಳು ಹೊಂದಿರುವ ಸ್ಥಾನಮಾನ, ಪಡೆದುಕೊಂಡಿರುವ ವಿದ್ಯೆ, ವಿದ್ವತ್ತು ಇಲ್ಲವೆ ನಿಯುಕ್ತ, ಅಧಿಕಾರ ಇವೇ ಮುಂತಾದುವನ್ನಾಧರಿಸಿ ಅವರನ್ನು ನಾವು ಕೆಲವು ಶಿಷ್ಟ, ಬಿರುದುಗಳೊಡನೆ ಸಂಬೋಧಿಸುತ್ತೇವೆ. ಹೀಗೆ ವ್ಯಕ್ತಿನಾಮಕ್ಕೆ ಮುಂದೆ ಸೇರಿಕೊಳ್ಳುವ ಘಟಕಗಳೇ ಉಪಾಧಿನಾಮಗಳು. ವಚನಕಾರರಲ್ಲಿ ಈ ಕೆಳಗಿನ ಉಪಾಧಿನಾಮಗಳು ಪ್ರಯೋಗವಾಗಿರುವುದನ್ನು ತಿಳಿಯಬಹುದು. ಇವು ಪದವಿ, ಮನ್ನಣೆಗಳೇ ಹೊರತು ವೃತ್ತಿಪರ ನಾಮಗಳಲ್ಲವೆಂಬುದನ್ನೂ ಗಮನಿಸಬೇಕು.

ಈ ಹಿನ್ನೆಲೆಯಲ್ಲಿ ಲಭ್ಯವಿರುವ ಲಿಪಿಕಾರರ ಹೆಸರುಗಳನ್ನು ಸಾಮಾಜಿಕ ಭಾಷಾಧ್ಯಯನಕ್ಕೆ ಅನುಗುಣವಾಗಿ ಕೆಳಗಿನಂತೆ ವಿಂಗಡಿಸಬಹುದು.

೧. ವೃತ್ತಿವಾಚಿ ಹೆಸರುಗಳು

೨. ಸ್ಥಳವಾಚಿ ಹೆಸರುಗಳು

೩. ಸ್ತ್ರೀಯರ ಹೆಸರುಗಳು

ವೃತ್ತಿವಾಚಿ ಹೆಸರುಗಳು: 'ಸಮಾನತೆ' ಮತ್ತು 'ಕಾಯಕ' ಪ್ರತೀಕರಣ ಸಂಸ್ಕೃತಿಯ ಮೂಲಭೂತ ಅಂಶಗಳು. ಕಾರಣ, ಅಲ್ಲಿ ವ್ಯಕ್ತಿ ಯಾವುದೇ ಕಾಯಕದಲ್ಲಿ ನಿರತವಾಗಿರಲಿ ಅವನನ್ನು ಮೇಲುಕೀಳೆನ್ನದೆ ಸಮಾನವಾಗಿ ಕಾಣಲಾಗುತ್ತಿತ್ತು. ವೃತ್ತಿಯಿಂದ ಕಾಯಕಗಳು ಬರುತ್ತಿದ್ದವು. ಹಲವಾರು ಸಾಮಾಜಿಕ ವರ್ಗಗಳ ಲಿಪಿಕಾರರು ಲಿಪಿ ಪ್ರತೀಕರಣದಲ್ಲಿ ಭಾಗಿಯಾಗಿದ್ದರು.

ಓದಿಸುವ ಗಂಗಯ್ಯ
ಉಪಾಧ್ಯ ಮಲ್ಲ
ಬಿಳಿಮಗ್ಗದ ದೇವಯ್ಯ
ಜವಳಿ ಚಂನಪ್ಪ
ಗುರಿಕಾರ ರಾಮಣ್ಣ

ಊಳಿಗದ ಯಂಕಪ್ಪ
ಕೋಮಟಿಗ ಮುರುಗೇಶ
ಶ್ಯಾನುಭೋಗದ ರಾಮರಾಯ
ಚಿಪ್ಪಿಗದ ಬಸಣ್ಣ
ನೀಲಗಾರ ರುದ್ರಯ್ಯ

ಇವೆಲ್ಲ ಕಾಯಕದ ವೈವಿಧ್ಯತೆಯೊಡನೆ, ವೈಶಿಷ್ಟತೆಯನ್ನು ಸಾರುತ್ತವೆ. ಲಿಪಿಕಾರರು ತಮ್ಮ ಹೆಸರಿನ ಮುಂದೆ ಪ್ರಜ್ಞಾಪೂರ್ವಕವಾಗಿ ತಮ್ಮ ವೃತ್ತಿಯ ಭಾಗಗಳನ್ನು ಹೇಳಿದ್ದಾರೆ. ಪ್ರತೀಕರಣ ಕೇವಲ ಯಾಂತ್ರಿಕವಾಗಿ ಸಾಗದೆ ಬದುಕಿನ ಅವಿಭಾಜ್ಯ ಅಂಗವಾಗಿತ್ತು ಎಂಬುದು ಗಮನಾರ್ಹ ಸಂಗತಿಯಾಗಿದೆ. ಅಂತಹ ಲಿಪಿಕಾರರಿಗೆ ಆ ಸಮುದಾಯದಲ್ಲಿ ಸಮಾನ ಸ್ಥಾನ ಅಷ್ಟೇ ಅಲ್ಲ ಅವರಿಗೆ ಗೌರವವೂ ಸಲ್ಲುತ್ತಿತ್ತು.

ಸ್ಥಳವಾಚಿ ಹೆಸರುಗಳು: ಕೆಲವು ಲಿಪಿಕಾರರ ಹೆಸರುಗಳ ಮುಂದೆ ಒಂದು ಗ್ರಾಮ ಅಥವಾ ಅವರು ಬಂದ ನಾಡಿನ ಉಲ್ಲೇಖ ಕಂಡುಬರುತ್ತದೆ. ಉದಾಹರಣೆಗೆ: ಅಗ್ರಹಾರದ ಶ್ಯಾಮರಾಯರು, ಕಂದಗಲ್ಲ ಅಪ್ಪಯ್ಯ, ಕೊಡಗೆಹಳ್ಳಿ ಐಯ್ಯಪ್ಪ, ನಾಗಾವಿಯ ಬಸಯ್ಯ, ಬಸ್ತಿಹಳ್ಳಿಯ ಶಾಂತಿನಾಥ, ಗೋಲಗೇರಿಯ ಚನ್ನಾನಾಯಕ, ನಂಜನಗೂಡಿನ ಚಿಕ್ಕ ನಂಜುಂಡಪ್ಪ, ಮಾದೆಹಳ್ಳಿಯ ಗುಂಡಪ್ಪ, ಬಾಣಾಪುರದ ವೆಂಕ, ಹೆಬ್ಬಾಳದ ಸಿದ್ದವೀರಪ್ಪ, ವರಕೋಡದ ಸೋಲಬಯ್ಯ ಮುಂತಾದ ಲಿಪಿಕಾರರ ಮುಂದಿರುವ ಊರುಗಳು ನಮ್ಮ ನಾಡಿನಲ್ಲಿವೆ. ಅವುಗಳನ್ನು ಶೋಧಿಸುವ ಕೆಲಸ ಆಗಬೇಕಾಗಿದೆ. ಅದರಿಂದ ಹಸ್ತಪ್ರತಿಗಳ ಚಲನೆಯನ್ನು ಅರ್ಥೈಸಿಕೊಳ್ಳಬಹುದು. ತಾತ್ಪರ್ಯವಿಷ್ಟೇ, ಹಸ್ತಪ್ರತಿ ಲಿಪೀಕರಣದಲ್ಲಿ ನಾಡಿನ ಹಲವು ಭಾಗಗಳ ಲಿಪಿಕಾರರು ಭಾಗಿಯಾಗಿ ಸಂಸ್ಕೃತಿ ಸಂವರ್ಧನೆಗೆ ಕಾರಣರಾಗಿದ್ದಾರೆ.

ಸ್ತ್ರೀಯರ ಹೆಸರುಗಳು: ಪುರುಷರಂತೆ ಸ್ತ್ರೀಯರ ವಿಷಯದಲ್ಲಿಯೂ ವೃತ್ತಿನಿರ್ದೇಶನ ವನ್ನೊಳಗೊಂಡ ಹೆಸರುಗಳೂ ಸ್ಥಳದ ನಿರ್ದೇಶನದ ಹೆಸರುಗಳೂ ದೊರೆಯುತ್ತವೆ. ಉದಾಹರಣೆಗೆ: ಕಾಳವ್ವೆ, ಖಣಿವಂಣೆಮ್ಮ, ಚಂದ್ರಮತಿ, ಪಾರ್ಶ್ವಮತಿ, ಪುಟ್ಟನಂಜಮ್ಮ, ಭೈರಾಜಿ, ವರ್ಧಮಾನಕ್ಕ, ಅನಂತಮತಿ, ಪದುಮಾಯಿ, ಪ್ರಭಾಮಣಿ, ವೀರಮ್ಮ, ಶಾಂತಿಮತಿ, ಸರಸ್ವತಿ ಬಾಯಿ, ಸಿಂಗಮ್ಮ, ಸಿವಕ್ಕ ಮುಂತಾದವರು. ಹೀಗೆ ಧರ್ಮ, ಸಾಹಿತ್ಯ, ಸಂಸ್ಕೃತಿ ಪರಿಚಲನೆಯಲ್ಲಿ ಮಹಿಳಾ ಲಿಪಿಕಾರರ ಕೊಡುಗೆ ವಿಶೇಷವಾಗಿದೆ.

ಲಿಪಿಕಾರರ ಹೆಸರುಗಳು ಆಧುನಿಕ ಪೂರ್ವ ಸಂಸ್ಕೃತಿಯನ್ನು ಅರಿಯಲು ಸಮಾಜಶಾಸ್ತ್ರಜ್ಞ ರಿಗೆ ಹಾಗೂ ಮಾನವಶಾಸ್ತ್ರಜ್ಞರಿಗೆ ನೆರವಾದಂತೆ ಭಾಷಿಕ ಸಾಮಗ್ರಿಗಳನ್ನು ಅನುಲಕ್ಷಿಸಿ ಸಂಸ್ಕೃತಿ ಶೋಧನೆಗೆ ಹಾಗೂ ಪುನಾರಚನೆಗೆ ಭಾಷಾಶಾಸ್ತ್ರಜ್ಞರಿಗೂ ನೆರವಾಗುತ್ತವೆ. ಲಿಪಿಕಾರರ ಹೆಸರುಗಳನ್ನು ಹಾಗೂ ಅವರ ಪ್ರಶಸ್ತಿಗಳಲ್ಲಿ ಉಲ್ಲೇಖಿತವಾದ ನಾಮಘಟಕಗಳನ್ನು ಕಲೆಹಾಕಿ ಅವುಗಳ ಬಳಕೆಯ ಸ್ವರೂಪ, ಭಾಷೆ, ಸಂಸ್ಕೃತಿ ದೃಷ್ಟಿಯಿಂದ ವರ್ಗೀಕರಿಸಿ ವಿವೇಚಿಸಿದರೆ

ಅದು ಲಿಪಿಕಾರರ ನೆಲೆ, ವೃತ್ತಿ, ವಂಶ, ಮನೋಧರ್ಮ ಇತ್ಯಾದಿಗಳ ಅಧ್ಯಯನ ವಾಗುತ್ತದೆ. ಅವೆಲ್ಲವುಗಳನ್ನು ಗಮನಿಸಿದರೆ ಲಿಪಿಕಾರರ ಹೆಸರುಗಳು ಹಸ್ತಪ್ರತಿಗಳ ಚಲನಶೀಲತೆ ಹಾಗೂ ಅವುಗಳ ಸಂಸ್ಕೃತಿಯ ಹಲವು ಮಜಲುಗಳನ್ನು ಅರ್ಥಮಾಡಿಕೊಳ್ಳು ವಲ್ಲಿ ನೆರವಾಗುತ್ತವೆ.

ಅನುಬಂಧ

ಕೆಲವು ಲಿಪಿಕಾರರ ಹೆಸರುಗಳು

ಅನಂತಮತಿ	ಕರಿಬಸವರಾಜದೇವ	ಚನಮಲ್ಲಪ್ಪ
ಅಚ್ಚೇಗೌಡ	ಕರಿಬಸವಲಿಂಗ	ಚಿಕ್ಕನಂಜಂಡಪ್ಪ
ಅಡವಿಅಪ್ಪ	ಕರಿಬಸವಸ್ವಾಮಿ	ಚಿಕ್ಕಯ್ಯ
ಅಡವಿಸಿದ್ಧ	ಕರಿಬಸವೇಶ್ವರ	ಚಿಕ್ಕಹಂಪಯ್ಯ
ಅನ್ನದಾನದೇವ	ಕರಿಯಪ್ಪ	ಚೆನ್ನಯ್ಯ
ಅಪ್ಪಯ್ಯ	ಕರಿಸಿದ್ದೇಶ	ಜಕ್ಕಣ್ಣ
ಅಪ್ಪಾಜಯ್ಯ	ಕಲ್ಲಪ್ಪದೇವ	ಜವಳಿಯಿರ್ರೆಯ್ಯ
ಅಮರಪ್ಪದೇವ	ಕಾಳವ್ವೆ	ಜವಳಿಸಂಕಣ್ಣ
ಅಯ್ಯಣದೇವ	ಕೆಂಚಣ್ಣ	ಜೀರಿಗಿ ಚೆಂನಪ್ಪ
ಆದಪ್ಪಯ್ಯ	ಕೆಂಚಪ್ಪ	ಟೀಕಿನ ಕರಿಬಸವಸ್ವಾಮಿ
ಆರಾಧ್ಯಬಸವಯ್ಯ	ಕೆಂಚವೀರ	ತಮ್ಮಪ್ಪ
ಇಮ್ಮಡಿತೋಟಭೂಪಾಲ	ಕೆಂಪಚೌಡಯ್ಯ	ತಿಪ್ಪಣ್ಣ
ಇಮ್ಮಡಿಮುರಿಗಾಸ್ವಾಮಿ	ಕೊಮಾರಪ್ಪ	ದಾನ್ಯಾಪ್ಪ
ಈರಯ್ಯ	ಖಣಿವೆಂಣೆವ್ವ	ದಾಸಣ್ಣ
ಉಜ್ಜನಪ್ಪ	ಗಡ್ಡದವೀರಣ್ಣ	ದಾಸಪ್ಪ
ಉದ್ದಂಡಯ್ಯ	ಗಂಗಯ್ಯ	ದಾಸಿಯಪ್ಪ
ಎಲ್ಲಪ್ಪ	ಗಿರಿಯಪ್ಪ	ದೇವಯ್ಯ
ಏಕೋರಾಮಯ್ಯ	ಗುರಪ್ಪ	ನರಸಣ್ಣ
ಐಯ್ಯಪ್ಪ	ಗುರುಪಾದಪ್ಪ	ನರಸಯ್ಯ
ಒಪ್ಪತ್ತಿನ ಚೆಂನವೀರಪ್ಪ	ಗುರುಪುತ್ರಪ್ಪ	ನಂಜಪ್ಪ
ಓಬಳ	ಗುಂಡಪ್ಪ	ನಂಜಾರಾಧ್ಯ
ಕಟ್ಟಿಗೆಹಳ್ಳಿ ಸಿದ್ದೇಶ್ವರ	ಗುಂಡಬಸವ	ನಾಗಪ್ಪ
ಕಡಲೆ ಬಸವಪ್ಪ	ಚೆಂದ್ರಮತಿ	ನಾಗೋಜ
ಕರಡಿ ಸಿದ್ದಪ್ಪ	ಚನಬಸಪ್ಪ	ನರಸಯ್ಯ
ಕರಿಬಸಪ್ಪ	ಚೆಂನಪ	ನಿರವಾಣಪ್ಪ

ನಿಂಗಪ್ಪ
ಪಟ್ಟದಪ್ಪ
ಪದುಮಾಯಿ
ಪರನಗೌಡ
ಪರುಶೆಟ್ಟಯ್ಯ
ಪರ್ವತದೇವ
ಪಾರ್ಶ್ವಮತಿ
ಪುಟ್ಟನಂಜಮ್ಮ
ಪ್ರಭಾಮಣಿ
ಬಸಪ್ಪ
ಬಸಪ್ಪದೇವ
ಬಸವಪ್ಪ
ಬಸವರಸ
ಬೋಳಮಲ್ಲಿಕಾರ್ಜುನ ದೇವ
ಭದ್ರದೇವ
ಭಾಸ್ಕರಯ್ಯ
ಭೈರಣ್ಣ
ಭೈರಾಜಿ
ಮಡಿವಾಳಪ್ಪ
ಮರಿಗೌಡ
ಮರುಳಣ್ಣ
ಮರುಳಪ್ಪ
ಮಲ್ಲಿಗೆ ಸಕ್ಕರಯ್ಯ
ಮಲ್ಲೇದೇವ
ಮಾಗಾಯಿ ವಿರೂಪಾಕ್ಷಪ್ಪ
ಮುದ್ದಪ್ಪ
ಮುಪ್ಪಿನಪ್ಪ
ಮೂಡ್ಲಪ್ಪ
ಯಂಕ
ಯೀರಶೆಟ್ಟಿ
ರಂಗಪ್ಪ
ರಾಗದ ಬಸಲಿಂಗಯ್ಯ
ರಾಮಯ್ಯ
ರುಕ್ಮಿಣಿ
ರುದ್ರಪ್ಪ
ರೊಟ್ಟಿವೀರಪ್ಪ
ಲಕ್ಷ್ಮೀನಾರಣಪ್ಪ
ಲಿಂಗ
ಲಿಂಗಣ್ಣ
ವರದತಿಮ್ಮಣ್ಣ
ವರ್ಧಮಾನಕ್ಕ
ವಸ್ತ್ರದ ಹುತ್ತಿನಯ್ಯ
ವೀರಪ್ಪ
ವೀರಪ್ಪ ವಡೇಯರ
ವೀರಮ್ಮ
ವೆಂಕ
ವೆಂಕಪ್ಪ
ಶಂಕರೆಪ್ಪ
ಶಾಂತಚರಮೂರ್ತಿ
ಶಾಂತಿಮತಿ
ಶಿದ್ಧಲಿಂಗಸ್ವಾಮಿ
ಶಿಂಧುರ ನಿಂಗಪ್ಪ
ಸಂಕಣ
ಸಂಕೈಯ್ಯ
ಸಂಣ ಕೊಟ್ರಣ್ಣ
ಸರಸ್ವತಿ ಬಾಯಿ
ಸಾಲಿ ಕೊಟ್ರಯ್ಯ
ಸಾಂತಪ್ಪ
ಸಿಂಗಮ್ಮ
ಸಿದ್ದಪ್ಪ
ಸಿದ್ದರಾಮಪ್ಪ
ಸಿದ್ದಬಸವಪ್ಪ
ಸಿದ್ಧಯ್ಯ
ಸಿದ್ಧಲಿಂಗಪ್ಪ
ಸಿವಕ್ಕ
ಸೀತಾರಾಮು
ಸೂಗಯ್ಯ
ಸೊಲಬಯ್ಯ
ಹಳೆಯಪ್ಪ
ಹಂಪಯ್ಯ
ಹಾಲಯ್ಯ
ಹುರಕ್ಕಿ ಚಿಕ್ಕನಂಜಯ್ಯ

ಆಕರಗ್ರಂಥಗಳು

೧. ಕಲಬುರ್ಗಿ ಎಂ.ಎಂ., ೧೯೮೯, ಕನ್ನಡ ನಾಮವಿಜ್ಞಾನ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
೨. ಶಿವಾನಂದ ವಿ., ೨೦೦೪, ವಚನ ಸಾಹಿತ್ಯ ಸಮಾಜೋಭಾಷಿಕ ಅಂಶಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೩. ಮೈಸೂರು, ಧಾರವಾಡ ಮತ್ತು ಬೆಂಗಳೂರು, ಹಂಪಿ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ ಸಂಪುಟಗಳು.

೫೪

ಹಸ್ತಪ್ರತಿ ಪ್ರಶಸ್ತಿಗಳಲ್ಲಿ ವೃತ್ತಿನಾಮಗಳು

ವೃತ್ತಿಪದಗಳ ಸಂಗ್ರಹ ಮತ್ತು ವಿಶ್ಲೇಷಣೆಯ ಕಾರ್ಯ ಸಾಮಾಜಿಕ ಭಾಷಾಧ್ಯಯನದ ದೃಷ್ಟಿಯಿಂದ ತುಂಬ ಉಪಯುಕ್ತವಾದುದು. ಆಧುನಿಕ ವಿಜ್ಞಾನ, ತಂತ್ರಜ್ಞಾನದ ಪ್ರಭಾವದಿಂದ ವಂಶಪರಂಪರಾಗತವಾಗಿ ಬಂದಿರುವ ಕರಕುಶಲಕಲೆಗಳಾದ ಕಂಬಾರಿಕೆ, ಬಡಿಗತನ, ಕುಂಬಾರಿಕೆ, ಚಮ್ಮಾರಿಕೆ, ಕ್ಷೌರ, ಮೇದಾರಿಕೆ ಮುಂತಾದ ವೃತ್ತಿಗಳಿಗೆ ಸಂಬಂಧಿಸಿದ ಪದ ಸಂಪತ್ತನ್ನು ತಿಳಿದುಕೊಳ್ಳಲು ವೃತ್ತಿಪದಗಳು ಮಹತ್ವದ ಪಾತ್ರವಹಿಸುತ್ತವೆ. ವೃತ್ತಿಪದಕೋಶಗಳೆಂದರೆ ಒಂದೇ ವೃತ್ತಿಗೆ ಸಂಬಂಧಪಟ್ಟ ಪದಗಳನ್ನು ಸಮಗ್ರವಾಗಿ ಸಂಗ್ರಹಿಸಿ ಆ ಪದಗಳನ್ನು ಅವುಗಳ ವಿಶಿಷ್ಟತೆ ಮತ್ತು ಪ್ರರೂಪದ ಪ್ರಕಾರ ವರ್ಗೀಕರಿಸಿ ಅರ್ಥವಿವರಣೆಯನ್ನು ಕೊಡುವ ನಿಘಂಟುಗಳೇ ಆಗಿವೆ. ವೃತ್ತಿಪದಗಳು ಹೆಚ್ಚಾಗಿ ಅಚ್ಚಗನ್ನಡ ಪದಗಳಾಗಿರುವುದರಿಂದ ಅಂತಹುಗಳನ್ನು ಸಂಗ್ರಹಿಸಿ ಅವುಗಳಿಗೆ ಅರ್ಥ ಕೊಡುವುದು ಅಗತ್ಯವಾಗಿದೆ. ಅವು ಕನ್ನಡ ಶಬ್ದಕೋಶಕ್ಕೆ ಉತ್ತಮ ಕೊಡುಗೆಗಳಾಗುತ್ತವೆ ಎಂಬುದರ ಬಗ್ಗೆ ಅನುಮಾನಗಳಿಲ್ಲ. ಒಂದು ವೃತ್ತಿಯನ್ನು ಅವಲಂಬಿಸಿದ ಜನರು ತಮ್ಮದೇ ಆದ ಸಮಾಜ ಮತ್ತು ಸಾಂಸ್ಕೃತಿಕ ಚೌಕಟ್ಟನ್ನು ಹೊಂದಿರುತ್ತಾರೆ. ತಮ್ಮ ವೃತ್ತಿಯಲ್ಲಿ ವಿಶಿಷ್ಟ ಪದಪ್ರಯೋಗಗಳನ್ನು, ನುಡಿಗಟ್ಟುಗಳನ್ನು ಬಳಸುತ್ತಿರುತ್ತಾರೆ. ಅವುಗಳನ್ನು ಸಂಗ್ರಹಿಸಿ ಅಭ್ಯಸಿಸುವುದರಿಂದ ಆ ಸಮುದಾಯದ ಭಾಷಾಪ್ರಯೋಗ, ಸಾಂಸ್ಕೃತಿಕ ಅಂಶಗಳು ಹಾಗೂ ವೃತ್ತಿ ಸಮುದಾಯದ ಜನಾಂಗಿಕ ಅಧ್ಯಯನಕ್ಕೂ ತುಂಬ ಸಹಕಾರಿಯಾಗುತ್ತವೆ.

ವೃತ್ತಿಪದಕೋಶಗಳ ಅಧ್ಯಯನವು ಭಾಷಾವಿಜ್ಞಾನಿಗಳಿಗೆ ಮಾತ್ರ ಸೀಮಿತವಾಗಿರದೆ ಸಮಾಜಶಾಸ್ತ್ರಜ್ಞರಿಗೂ ಜಾನಪದ ಶಾಸ್ತ್ರಜ್ಞರಿಗೂ ಪ್ರಯೋಜನಕಾರಿಯಾಗಿದೆ. ಈ ತೆರನಾದ ಅಭ್ಯಾಸವು ಸಂಸ್ಕೃತಿ, ಭಾಷಾ ತಾಂತ್ರಿಕತೆ, ವಲಸೆ ಹೋಗುವ ವಿಷಯಗಳ ಸಂಬಂಧವನ್ನು ವಿಶ್ಲೇಷಿಸಲು ತುಂಬ ವಿಶಾಲವಾದ ಮತ್ತು ವೈವಿಧ್ಯಪೂರ್ಣವಾದ ದತ್ತವನ್ನು ಒದಗಿಸುತ್ತವೆ.

ಈ ಕಾರಣಗಳಿಂದ ವೃತ್ತಿಪದಕೋಶಗಳಿಂದಾಗುವ ಪ್ರಯೋಜನ ಅಪಾರವಾದುದಾಗಿದೆ. ಕರ್ನಾಟಕದಲ್ಲಿ ವಿವಿಧ ವೃತ್ತಿಪದಗಳ ಸಂಗ್ರಹ ಮತ್ತು ವಿಶ್ಲೇಷಣೆಯ ಕಾರ್ಯ ಇತ್ತೀಚೆಗೆ ನಡೆಯುತ್ತಿದೆ. ಹಸ್ತಪ್ರತಿಗಳಲ್ಲಿ ಲಿಪಿಕಾರರು ಹಸ್ತಪ್ರತಿಗಳನ್ನು ಪ್ರತಿ ಮಾಡುವಾಗ ಆದಿ ಮತ್ತು ಅಂತ್ಯ ಭಾಗಗಳಲ್ಲಿ ತಮ್ಮ ಭಾವನೆಗಳ ಅಭಿವ್ಯಕ್ತಿಗೆ ಸಂದರ್ಭಕ್ಕೆ ತಕ್ಕಂತೆ ಹಲವಾರು ವೃತ್ತಿರೂಪಗಳನ್ನು ಬಳಸಿದರು. ಅವುಗಳಿಗೆ ಸಾಂಸ್ಕೃತಿಕ ಪರಿವೇಷವಿದೆ.

ಲಿಪಿಕಾರರು 'ಶ್ರಮ ಗೌರವ' ಮತ್ತು 'ವೃತ್ತಿ ಗೌರವ'ಕ್ಕೆ ವಿಶೇಷ ಆದ್ಯತೆ ಕೊಟ್ಟರು. ಅವರ 'ಕಾಯಕ ಸಿದ್ಧಾಂತ'ವನ್ನು ಇಲ್ಲಿ ಸ್ಮರಿಸಬಹುದು. ಲಿಪಿಕಾರರು ತಮ್ಮ ದೈನಂದಿನ ಬದುಕಿನ ನಿರ್ವಹಣೆಗಾಗಿ ಕಾಯಕವನ್ನು ಕಡ್ಡಾಯವಾಗಿ ಅನುಸರಿಸಿಕೊಂಡು ಬಂದಿದ್ದಾರೆ. ತಮ್ಮ ವೃತ್ತಿ ಕಾಯಕದ ಸನ್ನಿವೇಶಗಳಲ್ಲಿ ತಾವು ಪಡೆದ ಅನುಭವಗಳನ್ನು ಹಸ್ತಪ್ರತಿ ಪ್ರಶಸ್ತಿಗಳಲ್ಲಿ(ಪುಷ್ಪಿಕೆಗಳಲ್ಲಿ) ಹೇಳಿಕೊಂಡಿದ್ದಾರೆ. ಅವರ ವೃತ್ತಿಗಳು ಸಮುದಾಯದ ಸರ್ವಾಂಗೀಣ ವಿಕಾಸಕ್ಕೆ ತಳಹದಿಯಾಗಿವೆ. ಆದುದರಿಂದ ಸಹಕಾರ, ಸಂಘಟನೆ, ಸ್ವಾವಲಂಬನೆ ಹಾಗೂ ಆರ್ಥಿಕ ಸಮೃದ್ಧಿ ಉಂಟಾಗುತ್ತದೆ. ಲಿಪಿಕಾರರು ತಮ್ಮ ವೃತ್ತಿಗಳನ್ನೇ ತಮ್ಮ ಶ್ರಮ ಸಂಸ್ಕೃತಿಯ ಪ್ರವೃತ್ತಿಯನ್ನಗಿ ಮಾರ್ಪಡಿಸಿಕೊಂಡಿದ್ದಾರೆ. ಹಸ್ತಪ್ರತಿ ಪ್ರಶಸ್ತಿಗಳಲ್ಲಿ ಸಿಗುವ ಲಿಪಿಕಾರರ ಕೆಲವು ವೃತ್ತಿ ಪದಗಳು ಹೀಗಿವೆ.:

ಉಪಾಧ್ಯ: ಉಪಾಧ್ಯ ತಂಮ್ಮೈಯ್ಯ: ಸಾಧಾರಣ ಸಂವತ್ಸರ ಕಾರ್ತಿಕ ಬ ೧೩ ಭಾನುವಾರ ದಲ್ಲೂ ಕೊರಟಗೆರೆ ಬಳೇಸಾಲೆ ಚಿಕ್ಕ ನಂಜುಂಡಪ್ಪನಿಗೆ ವುಪಾಧ್ಯ (ಉಪಾಧ್ಯ) ತಂಮ್ಮೈಯ್ಯನವರ ಕುಮಾರ ಭಾಸ್ಕರೈಯನು ಬರೆದುಕೊಟ್ಟ ಅಖಂಡೇಶ್ವರ ವಚನಕ್ಕೆ ಶುಭಮಸ್ತು.

ಉಪಾಧ್ಯ ಮಲ್ಲೈಯ್ಯ: ಯೀ ಪುಸ್ತಕವನ್ನು ಬರೆದಾತ ಪಡುಗೂರು ಉಪಾದ್ಯರು ಮಲ್ಲೈಯ್ಯನ ಕೈಬರೆಹ ಪ್ರತಿಯಿಂದ ಮೇರೆಗೆ ಬರದುಯಿದೇನೆ ಬುದ್ಧಿವಂತರು ವೋದಿ ನೋಡಿ ತಪ್ಪುಗಳಿದ್ದರೆ ಬೈಲಾಗದ್ದು ಮಂಗಳ ಮಹಾಶ್ರೀ ಬರದು ಹೆಚ್ಚಿತು.

ಇದರಂತೆ ಉಪಾಧ್ಯ ನಾರಣ್ಣೈಯ್ಯ, ಉಪಾಧ್ಯಮಲ್ಲು, ಉಪಾಧ್ಯ ವೀರಯ್ಯ ಮುಂತಾದ ಹೆಸರುಗಳಲ್ಲಿ 'ಉಪಾಧ್ಯ' (ವುಪಾಧ್ಯ) ಎಂಬುದು ಶಿಕ್ಷಕ ವೃತ್ತಿಯನ್ನು ಸೂಚಿಸುತ್ತದೆ. ಉಪಾಧ್ಯಾಯ > ಉಪಾಧ್ಯ ಆಡುನುಡಿಯಲ್ಲಿ ವುಪಾಧ್ಯ ಎಂದಾಗಿದೆ. ಈ ಶಬ್ದಕ್ಕೆ ಹಿಂದಿನ ಕಾಲದಲ್ಲಿ ಜೀವನೋಪಾಯಕ್ಕಾಗಿ ಹಸ್ತಪ್ರತಿಗಳನ್ನು ಪ್ರತಿ ಮಾಡಿಸುವುದು, ಕಲಿಸುವುದು ಒಂದು ಕಾಯಕವಾಗಿತ್ತು. ಉಪಾಧ್ಯ ಎಂದರೆ ಜೀವನೋಪಾಯಕ್ಕೆ ಹಸ್ತಪ್ರತಿಗಳನ್ನು ಪ್ರತಿ ಮಾಡುವವನು ಎಂಬ ಅರ್ಥದಲ್ಲಿ ಇಲ್ಲಿ ಬಳಸಲಾಗಿದೆ. ಈ ಅರ್ಥದಿಂದ ಮುಂದೆ ಎಲ್ಲ

ವಿಷಯಗಳನ್ನು ಕಲಿಸುವವನಿಗೂ ಈ ಶಬ್ದವೇ ಪ್ರಯೋಗಕ್ಕೆ ಬಂದಿತು, ಶಿಕ್ಷಕ ಎಂಬರ್ಥ ದಲ್ಲಿ.

ಊಳಿಗ: ಸೇವೆ; ಜೀತ. '...ಕಲ್ಲ ಹಳ್ಳಿಯ ಕೆಂಪಯ್ಯ ಅರಸಿನವರ ಕೊಮಾರ ಲಕ್ಷ್ಮೀ ಕಾಂತಯ್ಯ ಅರಸಿನವರ ಊಳಿಗದ ಜಂಣನಿಗೆ ಹಂಚಿತ ಶ್ಯಾನಭೋಗ ಬಸಯ್ಯನವರ ಮಗ ಮುದ್ದಯ್ಯ ಬರೆದ ಕರಿಬಂಟನ ಪುಸ್ತಕಕ್ಕೆ ಶುಭಮಸ್ತು.

ಹಿಂದಿನ ಕಾಲದಲ್ಲಿ ಹಸ್ತಪ್ರತಿಗಳು ಪ್ರತಿಗಳಾದ ನಂತರ ಅವುಗಳನ್ನು ಹಂಚುವ ವರ್ಗವೇ ಇತ್ತು. ಮತ್ತು ಪ್ರತಿ ಮಾಡುವಾಗ ಲಿಪಿಕಾರರಿಗೆ ಬೇಕಾದ ಸಲಕರಣೆಗಳನ್ನು ಕೊಡುವುದು, ಅರಸರ ಸೇವೆ ಸಲ್ಲಿಸುವುದು ಊಳಿಗರ ಕೆಲಸವಾಗಿತ್ತು.

ಓದುವ : ೧. ಶಾಲಿ ೧೭೭೭ ಪ್ರವರ್ತಮಾನ ರಾಕ್ಷಸ ನಾಮ ಸಂ. ಭಾದ್ರಪದ ಶುದ್ಧ ೩
ಓದಿಸುವ ಭಾರ್ಗವಾರ ಹುಲಗೂರ ಓದಿಸು ಮಠದ ಚೆನವೀರಂಣ ಗುರು ರಗಳೆ ವ್ಯಾಖ್ಯಾನ
೨. ದುಮ್ಮಿಯ ವೀರೇಶ್ವರನ ಗುಡಿಯೊಳಗೆ ಮೂಡ ಮುಖವಾಗಿ ಕುಳಿತು ಬರೆದ ಗುರುಬೋಧಾಮೃತವನು ಓದಿಸುವ ಗಂಗಯ್ಯನು...

ಹಿಂದಿನ ಕಾಲದಲ್ಲಿ ವೀರಶೈವ ಮಠಗಳಲ್ಲಿ ಹಸ್ತಪ್ರತಿಗಳನ್ನು ಕಲಿಸುವುದು, ಲಿಪಿ ಮಾಡುವುದು ಒಂದು ಕಾಯಕವಾಗಿತ್ತು. ಶಿಕ್ಷಕರಿಗೆ 'ಓದಿಸುವವ' ಎನ್ನುತ್ತಿದ್ದರು. ಅವರು ಕಲಿಸುವ ಕೇಂದ್ರಗಳಿಗೆ 'ಓದುಸು ಮಠ' ಎಂದೇ ಕರೆಯುತ್ತಿದ್ದರು. ಶಿಕ್ಷಕರಿಗೆ ಅವರ ಕಾಯಕವೇ ಅವರಿಗೆ ವಿಶೇಷಣವಾಗಿ ಬಳಕೆಯಾಗುತ್ತಿತ್ತು. ಉದಾಹರಣೆಗೆ ಓದಿಸುವ ಚನ್ನಯ್ಯ, ಓದಿಸುವ ಮುಕ್ಕಣಯ್ಯ, ಓದಿಸೊ ಸಿದ್ದಯ್ಯ, ಓದೋ ಮಾದ ಮುಂತಾದ ಪದಪುಂಜಗಳು ಹಸ್ತಪ್ರತಿ ಪ್ರಶಸ್ತಿಗಳಲ್ಲಿವೆ. ಓದು+ಇಸು=ಓದಿಸು/ಓದುವ+ಮಠ=ಓದು ಮಠ/ಓದಿಸೊಮಠ ಎಂಬ ಭಾಷೆಯ ದೃಷ್ಟಿಯಿಂದ ವಿಶ್ಲೇಷಿಸಬಹುದು.

ಕೋಮಟಿಗ: ವರ್ತಕ; ಶೆಟ್ಟಿ 'ಯಾದಲಕಟ್ಟೆ ರುದ್ರಪ್ಪನೂ ಕೋಮಟಿಗನ ಚಂನಪನ ಮಗ ಯಂಕನಿಗೆ ಧನಕನಕ...'

ಹಿಂದಿನ ಕಾಲದಲ್ಲಿ ಅರಸನಂತೆ ವರ್ತಕ ಸಮುದಾಯದವರು ಲಿಪಿಕಾರರಿಗೆ ಧನಕನಕ ಗಳನ್ನು ಕೊಟ್ಟು ಹಸ್ತಪ್ರತಿಗಳನ್ನು ಲಿಪೀಕರಣ ಮಾಡಿಸುತ್ತಿದ್ದರು. ಎಂಬುದರ ಉಲ್ಲೇಖವು ಹಸ್ತಪ್ರತಿ ಪ್ರಶಸ್ತಿಗಳಲ್ಲಿದೆ.

ಚಿನಿವಾರ: ಅಕ್ಕಸಾಲಿಗ; ಚಿನ್ನದ ವ್ಯಾಪಾರಿ 'ಮುದ್ದೇಬಿಹಾಳ ಚಿನಿವಾರ ಅಂದಾನಪ್ಪನವರ ಗರ್ಭ ಸಂಜಾತ' ಹಿಂದಿನ ಕಾಲದಲ್ಲಿ ಹಸ್ತಪ್ರತಿ ತಯಾರಿಸುವಾಗ ಚಿನಿವಾರರ ಸಹಾಯವೂ ಬೇಕಾಗುತ್ತಿತ್ತು. ಅವರ ಉಲ್ಲೇಖವೂ ಸಹಿತ ಹಸ್ತಪ್ರತಿಗಳಲ್ಲಿದೆ.

ಶಾನಭೋಗ: ೧. ಸ್ವಸ್ತಿಶ್ರೀ ೧೬೪೯ನೆಯ ಸಂದ ವರ್ತ್ತಮಾನಕ್ಕೆ ಸಲುವ ಕೀಲಕ ಸಂವತ್ಸರದಾ ಕಾರ್ತೀಕ ಶು ೧೩ ಮಂಗಳವಾರ ಸ್ವಾತಿ ನಕ್ಷತ್ರ ೧೫ ಘಳಿಗೆಗೆ ಗಣಭಾಷ್ಯ ರತ್ನಮಾಲೆ ಪೊಸ್ತಕ ಬರದು ಸಮಾಪ್ತಿಯಾಯಿತ್ತು ನಾರುವೆ ಶಾನಭಾಗ/ (ಶಾನುಭೋಗ) ಬಸವಂಣನವರ ಪಾದದ ಕೃಪೆಯಿಂದ ಲಂಗಪ್ಪನು ಆದಿತ್ಯವಾರ ಪೇಟೆಯಲ್ಲಿದ್ದ ಪರುವತಭದ್ರ ಸೆಟ್ಟಿಯ ಕೈಯ್ಯ ಬರೆಯಿಸಿದ ಪೊಸ್ತಕಕ್ಕೆ ಶುಭಮಸ್ತು ಶ್ರೀಶ್ರೀಶ್ರೀ

೨. ... ಅನುಭವ ಶಿಖಾಮಣಿ ಎಂಬ ಪೊಸ್ತಕವನ್ನು ತೆಲಿಗೆ ಶಾನಭೋಗ ಬಸಪ್ಪಯ್ಯನವರ ಕೊಮಾರ ದೇವಪ್ಪಯ್ಯನವರು ಬರೆದಂತ್ತ ಪುಸ್ತಕ ಸಮಾಪ್ತ...'

ಈ ಶಬ್ದದ ಮೂಲ ಸೇನಬೋವ. ನಿಘಂಟಿನಲ್ಲಿ 'ಅಕ್ಷರ ಜೀವಕಃ ಸೇನಭೋವಂ' ಎಂದಿದೆ. ಅದಕ್ಕೆ ಓದು ಬರೆಹ ಬಲ್ಲವನಾಗಿ ಆ ಸಾಮರ್ಥ್ಯವನ್ನೇ ಜೀವನೋಪಾಯಕ್ಕಾಗಿ ಮಾಡಿಕೊಂಡಿರುವವನು ಎಂದರ್ಥ. ಈತನಿಗೆ ಸಂಸ್ಕೃತದಲ್ಲಿ ಅಕ್ಷರಚಣ, ಅಕ್ಷರಚಂಚು, ಕಾಯಸ್ಥ, ಕರಣ ಎಂಬ ಹೆಸರುಗಳಿವೆ. ಕನ್ನಡದಲ್ಲಿ ಕ್ರಿ.ಶ. ೯೧೫ನೆಯ ಇಸವಿಯ ಒಂದು ಶಾಸನದಲ್ಲಿ 'ಸೇನಬೋವಂ ಗುಣವರ್ಮಂ ಬರೆದಂ' ಎಂದಿದೆ. ಇಲ್ಲಿಂದ ಮುಂದೆ 'ಸೇನಬೋವ' ಎಂಬ ಶಬ್ದ ವಿಧ ವಿಧವಾಗಿ ಬದಲಾವಣೆ ಹೊಂದಿ ಸುಮಾರು ೨೫ ಬೇರೆ ಬೇರೆ ರೂಪಗಳನ್ನು ಪಡೆದಿದೆ. ಹಸ್ತಪ್ರತಿ ಪ್ರಶಸ್ತಿಗಳಲ್ಲಿ 'ಶೇನಭಾವ', 'ಶೇನಭೋಗ', 'ಶೇನಭಾವ', 'ಶ್ಯಾನಭಾಗ', 'ಸೇನಭೂವ' ಇತ್ಯಾದಿಯಾಗಿ ಬಳಕೆಯಲ್ಲಿವೆ. ಸಾಮಾನ್ಯವಾಗಿ ಅವು ವೈದಿಕ ವರ್ಗದ ಕುಟುಂಬ ನಾಮಗಳಾಗಿವೆ. ಆ ಲಿಪಿಕಾರರು ಹೆಚ್ಚಾಗಿ ವೈದಿಕರೇ ಆಗಿದ್ದಾರೆ. ಇದರಂತೆ ಹಸ್ತಪ್ರತಿ ಪ್ರಶಸ್ತಿಗಳಲ್ಲಿ ಚಿಪ್ಪಿಗ, ಜವಳಿ, ಜೀರಿಗೆ, ನೀಲಗಾರ, ಬೇಡ, ಬಳೆಗಾರ, ಲೆಂಕ ಮುಂತಾದ ವೃತ್ತಿನಾಮಗಳು ಹೇರಳವಾಗಿ ಲಭಿಸುತ್ತವೆ. ಅವು ಹಸ್ತಪ್ರತಿ ಒಡೆಯರರ, ಲಿಪಿಕಾರರ ಸಮಾಜ-ಸಂಸ್ಕೃತಿಯನ್ನು ಅರಿಯುವಲ್ಲಿ ಮಹತ್ವದ ಪಾತ್ರವಹಿಸುತ್ತವೆ.

ಹಸ್ತಪ್ರತಿ ಪ್ರಶಸ್ತಿಗಳಲ್ಲಿ ಲಭ್ಯವಾಗುವ ವೃತ್ತಿಪದಗಳನ್ನು ಕುರಿತು ಸಮಗ್ರ ಅಧ್ಯಯನ ನಡೆಯಬೇಕಾಗಿದೆ. ಇದು ಒಂದು ಆಂಶಿಕ ಪ್ರಯತ್ನವಷ್ಟೇ. ಭಾಷಾಶಾಸ್ತ್ರ, ಸಮಾಜಶಾಸ್ತ್ರ, ಜಾನಪದ ಶಾಸ್ತ್ರ, ಮಾನವಶಾಸ್ತ್ರ ಮುಂತಾದ ಅಧ್ಯಯನ ಶಿಸ್ತುಗಳ ಸಹಾಯ ಪಡೆದು ಅಂತರ್‌ಶಿಸ್ತೀಯ ಅಧ್ಯಯನದ ನೆಲೆಯಲ್ಲಿ ಲಿಪಿಕಾರರ ವೃತ್ತಿಜೀವನ, ಪರಸ್ಪರ ವೃತ್ತಿ ಸಮುದಾಯದಲ್ಲಿಯ ಕೊಡುಕೊಳ್ಳುವಿಕೆ ಮತ್ತು ಭಾಷಾಬಳಕೆಯ ಸಾಮಾಜಿಕ ಸಂದರ್ಭದಲ್ಲಿ ಬಳಕೆಯಾದ ಆಯಾವೃತ್ತಿಯ ಪದಪುಂಜಗಳ ಬಳಕೆಯ ರೀತಿ ಇವೆಲ್ಲವನ್ನು ಕುರಿತು ಆಳವಾದ ಅಧ್ಯಯನ ಆಗಬೇಕಾಗಿದೆ ಎಂದು ಸೂಚಿಸಿ ಅಂತಹ ಅಧ್ಯಯನಕ್ಕೆ ಪ್ರಸ್ತುತ

ಅಧ್ಯಾಯ ಸೈದ್ಧಾಂತಿಕ ಚೌಕಟ್ಟನ್ನು ಒದಗಿಸುತ್ತದೆ. ಈ ಬಗೆಗೆ ಯಾರಾದರೂ ಕೆಲಸವನ್ನು ಮುಂದುವರಿಸಿದರೆ ತುಂಬ ಸಂತೋಷವಾಗುತ್ತದೆ.

ಆಕರಗ್ರಂಥ

೧. ಮೈಸೂರು, ಧಾರವಾಡ ಮತ್ತು ಬೆಂಗಳೂರು, ಹಂಪಿ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ ಸಂಪುಟಗಳು.

೫೫

ಭಾಷಿಕ ಬೃಹತ್ ಕರ್ನಾಟಕ : ಒಂದು ವಿವೇಚನೆ

ಚಿದಾನಂದಮೂರ್ತಿ ಅವರ 'ಭಾಷಿಕ ಬೃಹತ್ ಕರ್ನಾಟಕ' (೨೦೦೫) ಕೃತಿ ಹಲವು ದೃಷ್ಟಿಗಳಿಂದ ತುಂಬ ಮಹತ್ವದ ಕೃತಿಯಾಗಿದೆ. ಭಾಷಿಕ ಬೃಹತ್ ಕರ್ನಾಟಕದ ವ್ಯಾಪ್ತಿ, ಸ್ವರೂಪ, ಮಹತ್ವ ಕುರಿತು ತುಂಬ ಅಧಿಕೃತವಾಗಿ, ಅಭಿಮಾನ ಮತ್ತು ಕಳಕಳಿಪೂರ್ಣವಾಗಿ ಹೇಳಿದ್ದಾರೆ. ಈ ಕೃತಿಯ ಮುಖ್ಯ ವಿಷಯ ಕರ್ನಾಟಕದ ದೊರೆಗಳು ಎಲ್ಲೆಲ್ಲಿ ಆಳಿದರು ಎಂಬುದಕ್ಕಿಂತ ಹೆಚ್ಚು, ಭಾಷೆಯಾಗಿ ಕನ್ನಡವು ಹಿಂದೆ, ಸಾವಿರ ವರ್ಷಗಳಿಗೂ ಹಿಂದೆ ಎಲ್ಲಿಯವರೆಗೆ ವ್ಯಾಪಿಸಿತ್ತು ಎಂಬುದೇ ಆಗಿದೆ. ಭಾಷೆಯು ಸಂಸ್ಕೃತಿಯ ಒಂದು ಪ್ರಧಾನ ಅಂಗವೆಂಬುದನ್ನು ಹೇಳಬೇಕಾಗಿಲ್ಲ. ಒಂದು ಭಾಷೆ ಒಂದು ಪ್ರದೇಶದಲ್ಲಿ ಪ್ರಚಲಿತವಿದ್ದು ಅದರ ಆಧುನಿಕ ಕಾಲದಲ್ಲಿ ಮರೆಯಾಗಿ ಹೋಗಿದ್ದರೂ ಅದರ ಕುರುಹುಗಳು ಬಹುಮುಖ್ಯವಾಗಿ ಆ ಪ್ರದೇಶದ ಸ್ಥಳನಾಮಗಳಲ್ಲಿ ತಮ್ಮದೆ ಆದ ರೀತಿಯಲ್ಲಿ ಹುದುಗಿರುತ್ತವೆ ಎಂಬುದನ್ನು ಭಾಷಾವಿಜ್ಞಾನ, ಅದರ ಶಾಖೆಯಾದ ಸ್ಥಳನಾಮವಿಜ್ಞಾನ ಒಪ್ಪಿಕೊಳ್ಳುತ್ತದೆ. ಈ ಕೃತಿಯ ಒಟ್ಟು ತಿರುಳನ್ನು ಹೀಗೆ ಕಲೆ ಹಾಕಲಾಗಿದೆ.

೧. ೧೮೫೦-೬೦ರ ಸುಮಾರಿನಲ್ಲಿ ಮುಂಬೈ ಬ್ರಿಟಿಶ್ ಸರಕಾರವು ಶಾಲಾ ಪಠ್ಯಪುಸ್ತಕಗಳಿಗಾಗಿ ಸಿದ್ಧಪಡಿಸಿ ಪ್ರಕಟಿಸಿದ 'ಕರ್ನಾಟಕ ನಕಾಶ'ವು ನಾಡಿನ ವಿಸ್ತಾರತೆಯನ್ನು ಹೇಳುತ್ತದೆ. ಅದನ್ನು ಗ್ರಿಯರ್ಸನ್ ಕೂಡ ತನ್ನ Linguistic Survey of India-IV ದಲ್ಲಿ ದಾಖಲಿಸಿದ್ದಾನೆ. ಆ ನಕಾಶೆಯ ಪ್ರಕಾರ "ಕರ್ನಾಟಕ" ಎಂದರೆ ಕನ್ನಡ ಮಾತನಾಡುವ ಪ್ರದೇಶದ ಉತ್ತರ ಗಡಿಯಲ್ಲಿ ಕೊಲ್ಲಾಪುರ, ಮೀರಜ್, ಸೊಲ್ಲಾಪುರ, ಕಲ್ಯಾಣ, ಬೀದರಗಳು ಸೇರಿವೆ. ಪಶ್ಚಿಮ ಗಡಿಯಲ್ಲಿ ಇಡೀ ಗೋವೆ, ಮಂಗಳೂರು ಇನ್ನೂ ದಕ್ಷಿಣಕ್ಕೆ ಬಂದರೆ ಕಾಸರಗೋಡು, ಕಣ್ಣಾನೂರು, ತಲಚೇರಿ, ಕಲ್ಲಿಕೋಟೆ ಸೇರಿವೆ. ದಕ್ಷಿಣದ ಗಡಿ ಇಡೀ ನೀಲಗಿರಿ ಪರ್ವತ ಶ್ರೇಣಿ. ಪಶ್ಚಿಮದ ಗಡಿಯಲ್ಲಿ

ಕೋಲಾರ ಜಿಲ್ಲೆಯಂತೂ ಸರಿಯೇ, ಪೆನಗೊಂಡ, ತಾಡಪತ್ರಿ, ಆದವಾನಿ, ಕರ್ನೂಲು ಗಳು ಸೇರಿವೆ. ಬಳ್ಳಾರಿ, ಕಲಬುರ್ಗಿ, ರಾಯಚೂರು, ವಿಜಾಪುರ ವಿಷಯಗಳನ್ನು ಎತ್ತಿ ಹೇಳಬೇಕಾಗಿಲ್ಲ. ಒಂದು ಅಂಶ ಸ್ಪಷ್ಟ ಲಭ್ಯ ಭಾಷಿಕ ಸಾಮಗ್ರಿಗಳನ್ನು, ವರದಿಗಳನ್ನು ಪರಿಶೀಲಿಸಿ ತಯಾರಿಸಿದ ಭೂಪಟವದು. ತುಂಬ ನೋವಿನ ವಿಷಯವೆಂದರೆ ಅದರಲ್ಲಿ ಕನ್ನಡ ಮಾತಾಡುವ ಪ್ರದೇಶದ ಒಟ್ಟಾರೆ ಎಂಟು ಜಿಲ್ಲೆಗಳನ್ನು ಇಂದಿನ ಕರ್ನಾಟಕವು ಕಳೆದುಕೊಂಡಿದೆ.

೨. ಬೆಂಗಳೂರು, ಮೈಸೂರು, ಚಾಮರಾಜನಗರ ಜಿಲ್ಲೆಗಳಿಗೆ ಅಂಟಿಕೊಂಡಿರುವ ತಮಿಳುನಾಡಿನ ಧರ್ಮಪುರಿ, ಸೇಲಂ, ನೀಲಗಿರಿ ಜಿಲ್ಲೆಗಳಲ್ಲಿ ಈಗಲೂ ಕನ್ನಡ ಮಾತಾಡುವ ವೆಳ್ಳಾಲ ಗೌಡರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಸೇಲಂ, ಧರ್ಮಪುರಿ, ಈರೋಡ್ ಜಿಲ್ಲೆಗಳ ಪ್ರಾಚೀನ ಶಾಸನಗಳೆಲ್ಲ ಬಹುತೇಕ ಕನ್ನಡವೇ ಆಗಿವೆ. ಆ ಜಿಲ್ಲೆಗಳ ಪ್ರಾಚೀನ ಶಾಸನಗಳಲ್ಲಿ ಬರುವ ಅತ್ತಿಮಬ್ಬರಸಿ, ಪುಲ್ಲಬ್ಬರಸಿ, ಅಯ್ಯಪ್ಪದೇವ, ಜಾಯಬ್ಬರಸಿ ಇವೆ ಮೊದಲಾದ ವ್ಯಕ್ತಿನಾಮಗಳು ಅಪ್ಪಟ ಕನ್ನಡವೇ ಆಗಿವೆ. ಆ ಜಿಲ್ಲೆಯ ಕೃಷ್ಣಗಿರಿ ತಾಲ್ಲೂಕಿನಲ್ಲಿ ಈಗಲೂ ಒಂದು ಹಳ್ಳಿಗೆ ಇರುವ ಹೆಸರು "ಕನ್ನಡ ಹಳ್ಳಿ" ಇದರ ಹಳೆಯ ರೂಪ 'ಕನ್ನಡಂ ಬಳ್ಳಿ', 'ಸೇಲಂ'ದ ಮೂಲಹೆಸರು "ಶಾಳ್ಯ". ಅಲ್ಲಿಂದ ಕೃಷ್ಣರಾಯ ಎಂಬಾತ ಕನ್ನಡದಲ್ಲಿ ಕೃತಿರಚನೆ ಮಾಡಿದ್ದಾನೆ. ಇದು ಸ್ಪಷ್ಟ. ಕಾವೇರಿ ಹಿಂದಿನ ಕರ್ನಾಟಕದ ಸ್ಥೂಲಗಡಿ. ಅದು ಮೈಸೂರು, ಧರ್ಮಪುರಿ, ಸೇಲಂ ಜಿಲ್ಲೆಗಳಲ್ಲಿ ಹರಿಯುವ ಕಾವೇರಿ ಯೆಂಬಲ್ಲಿ ಉತ್ಪ್ರೇಕ್ಷೆಯೇನೂ ಇಲ್ಲ. ನೀಲಗಿರಿ ಹಿಂದೊಮ್ಮೆ ಕನ್ನಡ ಪ್ರದೇಶವೇ ಆಗಿತ್ತು. ಅಲ್ಲಿ ಬಹುಸಂಖ್ಯಾತರಾದ ಬಡಗರ ಭಾಷೆ ಸ್ಪಷ್ಟವಾಗಿ ಕನ್ನಡ ಉಪಭಾಷೆಯಾಗಿದೆ.

ಕರ್ನಾಟಕಕ್ಕೆ ಅಂಟಿಕೊಂಡಿರುವ ಆಂಧ್ರ ಪ್ರದೇಶದ ಕನ್ನಡ ಶಾಸನಗಳು ಪ್ರಕಟ ವಾಗಿವೆ. ಮುಖ್ಯವಾಗಿ ಅನಂತಪುರ, ಕರ್ನೂಲು, ಮೆಹಬೂಬ್‌ನಗರ, ರಂಗಾರೆಡ್ಡಿ, ಮೇದಕ್, ಈ ಜಿಲ್ಲೆಗಳ ಕರ್ನಾಟಕಕ್ಕೆ ಹೊಂದಿಕೊಂಡಿರುವ ಗಡಿಭಾಗದಲ್ಲಿ ಹೆಚ್ಚು ಸಂಖ್ಯೆಯ ಕನ್ನಡ ಶಾಸನಗಳು ದೊರೆತಿವೆ. ಈಗಿನ ಆಂಧ್ರಪ್ರದೇಶದ ಹಿಂದಿನ ಹಲವಾರು ಕನ್ನಡ ಸ್ಥಳನಾಮಗಳು ತೆಲುಗು ರೂಪಾಂತರ ಪಡೆದಿವೆ. ಪೊಟ್ಟಳಕೆರೆ → ಪಟ್ಟಣ ಚೆರುವು, ಪಟಾಣ್‌ಚೆರು, ಕೆರೆಯಬೆಳಗಲ್ಲು → ಚರುವು ಬೆಳಗಲ್ಲು, ಗೊರವನಹಳ್ಳಿ → ಗೊರ್ರವಲ್ಲಿ, ಅನಂತಪುರ ಜಿಲ್ಲೆಯ ಶಾಸನಗಳಲ್ಲಿ ಕಾಣುವ ಹಲವಾರು ಸ್ಥಳನಾಮಗಳು. ವ್ಯಕ್ತಿನಾಮಗಳು ಅಪ್ಪಟ ಕನ್ನಡವೇ ಆಗಿವೆ. 'ಮಂಚಾಲೆ' ಹೆಸರನ್ನು 'ಮಂತ್ರಾಲಯ' ಎಂಬ ಸಂಸ್ಕೃತೀಕರಿಸಿದರೂ ಆ ಊರಲ್ಲಿ ಈಗಲೂ 'ಮಂಚಾಲಮ್ಮ' ಎಂಬ ಗ್ರಾಮ ದೇವತೆ ಇರುವುದು ಗಮನಾರ್ಹ. ಇಂತಹ ಸಾಕ್ಷಾಧಾರಗಳ ಮೂಲಕ ಚಿದಾನಂದಮೂರ್ತಿ ಅವರು ತಮಿಳುನಾಡು, ಆಂಧ್ರಗಳಲ್ಲಿ ಕನ್ನಡದ ಚಹರೆಗಳನ್ನು ಗುರುತಿಸಿದ್ದಾರೆ.

೩. ಇಡೀ ಗೋವಾ ಕನ್ನಡ ನಾಡಿನ ಭಾಗವೇ ಆಗಿತ್ತು. ಅಲ್ಲಿಯ ಸ್ಥಳನಾಮಗಳ ಅಧ್ಯಯನ ಕುತೂಹಲಕಾರಿ-ಹಳ್ಳಿ ಕೊನೆಯಳ್ಳಿಯ ಊರುಗಳವೆ. ಕುಂಕುಹಳ್ಳಿ, ಕೋಳಿ ವಲ್ಲಿ, ಸುರವ್ಲಿ (< ಶ್ರೀವಳ್ಳಿ) ಬೆಟ್ಟ, ಮೊರಡಿ, ಗುಡ್ಡ, ಕಲ್ ಹೊಂದಿರುವ ಗ್ರಾಮದ ಹೆಸರುಗಳಿವೆ. ಗಡೆಗರ್, ಮೊರಡಿ, ಧರ್ಗಲ್-ಊರ್ ಹೊಂದಿರುವ ಹೆಸರುಗಳು ಮಂದೂರ್, ಕಲಪೂರ್ ಮೇಲ್ಕಂಡ ಸ್ಥಳನಾಮಗಳು ಗೋವೆ ಹಲವು ವೀರಗಲ್ಲುಗಳು, ಜನವರ್ಗಗಳು (-ಕೆಳವರ್ಗದ ಮಾದರ್, ಅವರ ಮನೆಮಾತು ಕನ್ನಡ) ಇಂತಹ ಸಾಕ್ಷಾಧಾರಗಳು ಒಂದು ಕಾಲಕ್ಕೆ ಗೋವೆಯ ಸ್ಥಳೀಯ ಭಾಷೆ ಕನ್ನಡವೇ ಆಗಿದ್ದಿತು ಎಂಬುದಕ್ಕೆ ಪ್ರಬಲ ಸಾಕ್ಷಾಧಾರಗಳಾಗಿವೆ. ಕ್ರಿ.ಶ. ೧೦-೧೩ರವರೆಗೆ ಗೋವೆ, ಬೆಳಗಾವಿ, ಕಾರವಾರ ಪ್ರದೇಶ ಆಳಿದ ಗೋವೆ ಕದಂಬರು ಬನವಾಸಿ ಕದಂಬರ ಒಂದು ಶಾಖೆ ಯವರೇ. ಗೋವೆ ಕದಂಬರ ಮನೆಮಾತು ಕನ್ನಡ ವಾಗಿತ್ತೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

೪. ಮಹಾರಾಷ್ಟ್ರಕ್ಕೆ ಸಂಬಂಧಿಸಿದ ಅಧ್ಯಾಯ ಈ ಕೃತಿಯ ಬಹುಮುಖ್ಯ ಭಾಗ. ಮರಾಠಿ ಭಾಷೆ, ಸಾಹಿತ್ಯಗಳಿಗೆ ಪ್ರೋತ್ಸಾಹ ನೀಡಿದ ದೇವಗಿರಿ (ಔರಂಗಬಾದ್) ಯಾದವರು ಹುಟ್ಟಿನಿಂದ ಕನ್ನಡಿಗರೇ. ಅವರ ಹೆಸರುಗಳೆಲ್ಲ (ಧರೆಯಪ್ಪ, ಲಚ್ಚಿಯಮ್ಮ, ಸಿಂಘಣ ಇತ್ಯಾದಿ) ಇಂದಿನ ಮಹಾರಾಷ್ಟ್ರದ ತುಂಬ ದೊರಕುವ ಮಾಹಿತಿಯನ್ನು ಚಿದಾನಂದಮೂರ್ತಿ ಅವರು ಉಂಡೆ ಉಂಡೆಯಾಗಿ ನೀಡಿದ್ದಾರೆ. ಲೇಖಕರ ಶ್ರಮ ಈ ಭಾಗದಲ್ಲಿ ನಿಚ್ಚಳವಾಗಿ ಪ್ರಕಟವಾಗಿದೆ.

ಯಾವುದೇ ಸಮಾಜದ ಸುಶಿಕ್ಷಿತ ಸಮಾಜದಂತೆ ಅಶಿಕ್ಷಿತ ಅಥವಾ ಕೆಳವರ್ಗದ ಜನತೆ ಚಲನಶೀಲವಾಗಿರುವುದಿಲ್ಲ. ವ್ಯವಸಾಯ, ಪಶುಪಾಲನೆ, ಉಪಕರಣಗಳ ತಯಾರಿಕೆ, ಚರ್ಮಕ್ಕೆ ಸಂಬಂಧಿಸಿದ ಉದ್ಯೋಗಗಳು ಇತರೇ ದೈಹಿಕ ಶ್ರಮ ಕೆಲಸಗಳಲ್ಲಿ ತೊಡಗಿರುವ ಅವರು ಒಂದು ಪ್ರದೇಶದಲ್ಲಿ ಅಂಟಿಕೊಂಡವರಾಗಿರುತ್ತಾರೆ. ಈ ಮಾತು ಈ ಕಾಲಕ್ಕೂ ನಿಜವಾದರೂ ಹಿಂದಿನ ಕಾಲಕ್ಕೆ ಅದು ಇನ್ನೂ ಹೆಚ್ಚು ಸತ್ಯ.

"ಕೋಳಿ" ಎಂಬುದು ಮಹಾರಾಷ್ಟ್ರದ ಪ್ರಾಚೀನ, ಸ್ಥಳೀಯ ಜನಾಂಗ ಎಂಬ ಬಹುತೇ ಕರು ಪ್ರತಿಪಾದಿಸಿದ್ದಾರೆ. ಅವರು ಮಲ್ಹಾರ್ (ಮೈಲಾರ್) ದೇವರ ಭಕ್ತರು ಇದನ್ನು ಗಮನಿಸಿದ್ದರೆ ಅವರು ಹಿಂದೆ ಕನ್ನಡಿಗರಾಗಿದ್ದರೆಂಬುದಕ್ಕೆ ಸ್ಪಷ್ಟ ಸೂಚನೆಗಳಿವೆ. ಥಾಣಾ ಜಿಲ್ಲೆಯ ಅಲೆಮಾರಿ ಜನ 'ಪುಡಗೀ' ಉಪಭಾಷೆ, 'ಹಳ್‌ಬೀ' ಉಪಭಾಷೆ ಮಹಾರ್ (ಮಹಾರ್, ಮಹರ್ ಮ್ಹಾರ್) ಎಂಬುದು ಕನ್ನಡದ ಮಾದರ ಪದದ ರೂಪಾಂತರವೆಂಬಲ್ಲಿ ಅನುಮಾವಿಲ್ಲ. ಇವರು ಆಡುತ್ತಿರುವ ಭಾಷೆ ಮೂಲತಃ ಕನ್ನಡವೇ ಆಗಿತ್ತು. ಮಹಾರಾಷ್ಟ್ರದ ಈಶಾನ್ಯಭಾಗದ ನಾಗಪುರ, ಚಂದ, ಭಂಡಾರ ಪ್ರದೇಶದ ಗೋಲಾರಿ(ಗೋಲ್ಕರ್) ಅಥವಾ ಹೋಲಿಯಾರ್ ಜನರಾಡುವ ಭಾಷೆ ಕನ್ನಡ ಸ್ವರೂಪವಾಗಿದೆ.

ಮಾನಿ (ಮನಿ) = ಮನೆ

ನಾ (ನನ್ನ) = ನನ್ನ

ವಾಬ (ಒಬ್ಬ)

ಹಾತೀನ್ (ಹತ್ತಿರೇನು) ಇತ್ಯಾದಿ

ಇವರ ಕನ್ನಡವು ಬಿಜಾಪುರ ಪ್ರದೇಶದ ಕನ್ನಡವನ್ನು ಹೋಲುತ್ತದೆಂದು ಗ್ರಿಯರ್ಸನ್ ಹೇಳುತ್ತಾನೆ. ಮಹಾರಾಷ್ಟ್ರದ "ಕಾನಡಿ"ಗಳು ಮಹಾರಾಷ್ಟ್ರಕ್ಕೆ ಕರ್ನಾಟಕದಿಂದ ವಲಸೆ ಬಂದವರು. ಮರಾಠಿ ಗೌಳಿ ಮತ್ತು ಕಾನಡಿ ಗೌಳಿ ಎಂದು ಎರಡು ಸ್ಥೂಲ ವಿಭಾಗಗಳಿಟ್ಟು ಅವರು ನಾಸಿಕ್ ಪರಿಸರದಲ್ಲಿ ವಾಸವಾಗಿದ್ದಾರೆ. ಅವರ ಮುಖ್ಯ ವೃತ್ತಿ ಪಶುಪಾಲನೆ ಮತ್ತು ವ್ಯವಸಾಯ. ಅವರ ಮನೆ ಮಾತು ಕನ್ನಡ.

ಹಲ್ = ಹಲ್ಲು

ಕೊಂದಲ್ = ಕೂದಲು

ಕಾಲ್ = ಕಾಲು

ಇನ್ನು ಕೆಲವು ವಾಕ್ಯಗಳು.

ನಿನ್ನೆಸರ್ ಏನ್ = ನಿನ್ನ ಹೆಸರು ಏನು

ನನ್ನೆಸರ ಶಿವ್ ಆಯ್ತ್ = ನನ್ನ ಹೆಸರು ಶಿವ

ನಾಸಿಕ್ ಪ್ರದೇಶವು ಒಂದು ಕಾಲಕ್ಕೆ ಅಚ್ಚಗನ್ನಡ ಪ್ರದೇಶವೇ ಆಗಿತ್ತು. ಸಾವಿರ ವರ್ಷಗಳ ಹಿಂದೆ ಉತ್ತರ ಮಹಾರಾಷ್ಟ್ರವು ಕನ್ನಡ ಪ್ರದೇಶವಾಗಿದ್ದಿತ್ತ ಎಂಬುದಕ್ಕೆ ಮೇಲಿನದು ಪ್ರಬಲ ಆಧಾರ ಎಂದು ಹೇಳಲಿಕ್ಕಾಗದಿದ್ದರೂ ಗಮನಾರ್ಹ ಆಧಾರ.

ಅದರಂತೆ ಚಿದಾನಂದಮೂರ್ತಿ ಅವರು ಮಹಾರಾಷ್ಟ್ರದ ಬೇರೆ ಬೇರೆ ಜಿಲ್ಲೆಗಳಲ್ಲಿ ಕನ್ನಡದ ಚಹರೆಗಳನ್ನು ಹುಡುಕಲು ಯತ್ನಿಸುತ್ತಾರೆ. **ಚಂದ್ರಾಪುರ ಜಿಲ್ಲೆ** : ಆಂ ಡಿಯ ಬಲ್ಲಾಳ್‌ಸಿಂಗ, ಸುರ್ಜಾಲಬಲ್ಲಾಳ್ ಸಿಂಗ್ ಎಂಬಲ್ಲಿಯ "ಬಲ್ಲಾಳ್" ಎಂಬಲ್ಲಿಯ ಉತ್ತರಾರ್ಧ. "ಆಳ್" ಎಂಬುದು ಅಚ್ಚಗನ್ನಡ ಪದ(ವ್ಯಕ್ತಿನಾಮ). ಅದರಂತೆ 'ಗೋಂಡಿ' ಬುಡಕಟ್ಟಿನ ಜನಾಂಗದವರಲ್ಲಿ ಒಂದು ಬಗೆಯ ಕನ್ನಡ ಮಾತನಾಡುವ ಜನ ಈಗಲೂ ಇದ್ದಾರೆ. ಚಿಮೂರ್, ವಿತೂರ್ 'ಊರ್' ವಾರ್ಗಿಕ ಕನ್ನಡದ್ದು. **ಒಸ್ಮಾನಾಬಾದ್ ಜಿಲ್ಲೆ** : ಸುಪ್ರಸಿದ್ಧ 'ತುಳಜಾ ಭವಾನಿ' ಈ ಜಿಲ್ಲೆಯಲ್ಲಿದೆ. ಇಲ್ಲಿಯ ತುರೆ ಅಥವಾ ತೊರೆ 'ತೊರೆ' ಅಚ್ಚಗನ್ನಡ ಪದ. ತುಳಜಾಭವಾನಿ ಮೂಲತಃ ಕನ್ನಡ ದೇವತೆ. ಆ ಜಿಲ್ಲೆಯ ಲಾತೂರ್, ಬಡೂರ್, ಬೇಳವಾಡಿ, ಹಗಲೂರ್, ಒಸ್ಮಾನಾಬಾದ್ ಹಿಂದೆ ಅಪ್ಪಟ ಕನ್ನಡ ನಾಡಾಗಿತ್ತು. **ನಾಗಪುರ ಜಿಲ್ಲೆ** : ಈ ಜಿಲ್ಲೆಯಲ್ಲಿ 'ಧೀಮಾರ್' (ಕನ್ನಡ-

ದೀವರ್) ಎಂಬ ಜನಾಂಗವಿದೆ. ಅವರ ಕುಲದೇವತಾ ಚಿಹ್ನೆ 'ಗಿಡ್ಡೇ' (=ಗಿಡುಗ ಅಚ್ಚಗನ್ನಡದ ಪ್ರಾಚೀನ ರೂಪ ಗಿಡಗ). **ಪುಣೆ ಜಿಲ್ಲೆ** : ಈ ಜಿಲ್ಲೆಯ ಧನಗರರು "ಬೀರೋಬ"ನ ಪೂಜೆ ಮಾಡುತ್ತಾರೆ. ಈ ಜಿಲ್ಲೆಯ ಮಕ್ಕಳಾಟಗಳು ಚೆಂಡಸಳಿ (ಅರಿವೆ ಚಂಡಾಟ), ಗಜಗೆ (ಗಜ್ಜುಗ ದಾಟ), ಏಟಿ-ದಾಂಡೂ (ಚಿನ್ನಿ ದಾಂಡೂ) ಅದರಂತೆ ಸ್ಥಳನಾಮಗಳು ಸಿರೂರ್, ಕಸೂರ್, ಚಿಂಚವಾಡ್, ರಾಜೂರ್, ಮಳಾವಳಿ. **ವಾರ್ಧಾ ಜಿಲ್ಲೆ** : ಈ ಜಿಲ್ಲೆಯಲ್ಲಿ ದಲಿತ ವರ್ಗದ ಅಸ್ಪೃಶ್ಯರಲ್ಲಿ 'ಮಾದಗಿ' ಎಂಬ ಹೆಸರಿನ ಜನ ಹಲವರಿದ್ದಾರೆ (ಇದು ಕನ್ನಡದ 'ಮಾದಿಗ' ಎಂಬುದೇ ಆಗಿದೆ) 'ಮಹರ್' ವರ್ಗದವರ್ ಹೆಚ್ಚು. ಕುರುಬ ಜಾತಿಯ ಧನಗರರಲ್ಲಿ 'ಕನೋರ್' ಎಂಬ ಉಪಜಾತಿಯಿದ್ದು ಅವರು ತಾವು ಮೂಲತಃ ಕರ್ನಾಟಕದವರೆಂದು ಹೇಳಿ ಕೊಳ್ಳುವುದು ಬಹುಗಮನಾರ್ಹ. ಆ ಜಿಲ್ಲೆಯ ಗ್ರಾಮನಾಮಗಳು-ಚಿಂಚೋಲಿ, ಕಾಚನೂರ್, ಮರಗಸೂರ್ ಈ ಹೆಸರಿನ ಊರುಗಳು ಕರ್ನಾಟಕದಲ್ಲಿ ಇವೆ. ಕೊಲ್ಲಾಪುರ, ಸೊಲ್ಲಾಪುರ ಇವು ಅಪ್ಪಟ ಕನ್ನಡ ಪ್ರದೇಶಗಳಾಗಿದ್ದವು ಎಂಬುದರ ಬಗ್ಗೆ ಯಾರಿಗೂ ಅನುಮಾನಗಳಿಲ್ಲ. ಇಲ್ಲಿಯ ಶಾಸನಗಳು, ಸ್ಥಳನಾಮಗಳು ಬಹುತೇಕ ಕನ್ನಡದವು. **ಯೋಟ್‌ಮಲ್ ಜಿಲ್ಲೆ** : ಈ ನಗರ ಎತ್ತರ ಗುಡ್ಡದ ಮೇಲೆ ಪುಟ್ಟ ಪ್ರದೇಶದ ಮೇಲ್ಭಾಗದಲ್ಲಿದೆ (ಆದ್ದರಿಂದಲೇ ಮಟ, ಮಲೆ). ಸಾಕೂರ್, ಕೋಳಂಬಿ, ಇವು ಕೆಲವು ಗಮನಾರ್ಹ ಊರ ಹೆಸರುಗಳು.

ಇದರಂತೆ ರಾಯಗಡ ಜಿಲ್ಲೆ, ಜಳಗಾವ್ ಜಿಲ್ಲೆ, ಸಾತಾರಾ ಜಿಲ್ಲೆ, ಕೋಲಾರ, ರತ್ನಗಿರಿ, ಸಾವಂತವಾಡಿ, ಅಹಮ್ಮದ್‌ನಗರ, ಠಾಣಾ, ಔರಾಂಗಾಬಾದ್ ಜಿಲ್ಲೆಗಳು, ಧೂಲಿ ಜಿಲ್ಲೆಗಳ ಸ್ಥಳನಾಮಗಳು, ವ್ಯಕ್ತಿನಾಮಗಳಲ್ಲಿ ಕನ್ನಡದ ಚಹರೆಗಳಿವೆ. ಔರಂಗಾಬಾದ್ ಜಿಲ್ಲೆಯಲ್ಲಿ 'ಕನ್ನಡ' ಎಂಬ ಹೆಸರಿನ ತಾಲೂಕಿದ್ದರೂ ಅದು 'ಕನ್ನಡ ವಾಡ' ಎಂಬುದರ ರೂಪಾಂತರ. **ಫರಭಣಿ** ಜಿಲ್ಲೆಯಲ್ಲಿ ಅಂಕೋಲ ಎಂಬ ಸ್ಥಳನಾಮ ಉತ್ತರಕನ್ನಡ ಜಿಲ್ಲೆಯ ಅಂಕೋಲನ್ನು ನೆನೆಪಿಸುತ್ತದೆ. ಆ ತಾಲೂಕಿನಲ್ಲಿರುವ 'ಬೇಡರ್ ಜನ' ಕರ್ನಾಟಕದ ಬೇಡರನ್ನು ನೆನಪಿಗೆ ತರುತ್ತದೆ. ಇವರು ಮಾತನಾಡುವ ಮರಾಠಿ ಯಲ್ಲಿ 'ಅ' ಕಾರಾಂತ ನಪುಂಸಕ ಲಿಂಗದ ಪದಗಳು 'ಎ' ಕಾರಾಂತವಾಗುತ್ತವೆ (ನೋಡಿ. ಕನ್ನಡದ ಅಡಕೆ, ಮೊಟಕೆ, ಮಲೆ, ಹರಕೆ ಇತ್ಯಾದಿ). **ಖಾಂದೇಶ್ ಜಿಲ್ಲೆ** : ಲಾಸೂರ್, ರಾವೇಜ್, ಭೂಸಾವಳ್ (ಆಂಧ್ರದಲ್ಲಿ ಪಾಳ್-ವಾಳ್ ನೋಡಿ) ಗಿರಿಜನರಲ್ಲಿ 'ಭಿಲ್ಲರ' ಅಲೆಮಾರಿಗಳು. ಇವರ ಹೆಸರಿನಲ್ಲಿ 'ಬಿಲ್' ಎಂಬ ಕನ್ನಡ ಪದವಿದೆಯೆಂದು ವಿದ್ವಾಂಸರು ಊಹಿಸಿದ್ದಾರೆ. **ನಾಸಿಕ್ ಜಿಲ್ಲೆ** : ನಾಸಿಕ್ ಜಿಲ್ಲೆಯಲ್ಲಿ ನಾಯಿಗಳಿಗೆ 'ಕರಿಯ' ಎಂಬ ಹೆಸರಿನ್ನಿಡುವುದನ್ನು ಅಣ್ಣ, ಅಮ್ಮ, ಅಪ್ಪ ಇತ್ಯಾದಿ ಬಂಧುಸೂಚಕ ಪದಗಳು, ವ್ಯಕ್ತಿನಾಮಗಳಲ್ಲಿರುವುದನ್ನಾಗಲಿ ಆ ಜಿಲ್ಲೆಗೆ ಹೋಗಿ ಅಲ್ಲಿನ ಕೊಲ್ಹಾಟಿ,

ಕಳಾಲ, ಬುರುಡ, ಹಳೆಮರ್ ಇಂತಹ ಬುಡಕಟ್ಟಿನ ಭಾಷೆಯಲ್ಲಿ ಕನ್ನಡದ ಕುರುಹು ಗಳಿವೆ. ಅವರು ಈಗ ಕನ್ನಡ ಮಾತನಾಡದಿದ್ದರೂ ಅವರ ಇಂದಿನ ಮನೆ ಮಾತಿನಲ್ಲಿ (ಖುರ್ಪೆ-ಕುರ್ಫಿ), ಕುಡಲ್ (ಕೈನೇ ಗಿಲು) ಖಟೆ (ಕಣ) ಕನ್ನಡದ ನಿತ್ಯೋಪಯೋಗಿ ಪದಗಳಿರುವ ಸಾಧ್ಯತೆಗಳಿವೆ. **ಮುಂಬೈ:** ಮುಂಬೈ ನಗರದ ಮೂಲನಿವಾಸಿಗಳು ಆ ಪ್ರದೇಶದಲ್ಲಿ ಮುಖ್ಯವಾಗಿ ಮೀನುಗಾರರಾದ, 'ಕೋಳಿ' ಜನವರ್ಗ. ಅವರ ಆರಾಧ್ಯ ದೇವತೆಯ ಹೆಸರಾದ 'ಮುಂಬಾದೇವಿ'. 'ಕೋಳಿ' ಪದ ದ್ರಾವಿಡ ಮೂಲದ್ದು. ಅವರು ಕರ್ನಾಟಕದ ಮೀನುಗಾರ ಜಾತಿಯ ಕಬ್ಬಿಲರು (ಕಬ್ಬಲಿಗ) ಒಂದೇ. ಬಹುಶಃ ಕಬ್ಬಿಲ>ಕವ್ವಿಲ>ಕೌಳಿ ಆಗಿರಲು ಸಾಧ್ಯ. ಮುಂಬಾ ದೇವಿ ಪರಿಸರದ ಸ್ಥಳನಾಮಗಳು ಬೋರಿನಲ್ಲಿ, ಕಾಡಿನಲ್ಲಿ, ಮರೋಳ್, ಚೆಂಬೂರ್ ಇವೆ. ಅವು ಕನ್ನಡದ ಪಳ್ಳಿ, ಊರ್, ಏರಿಗಳನ್ನು ನೆನಪಿಸುತ್ತವೆ. ಮುಂಬಯಿ ಬಹುಹಿಂದೆ ಒಂದು ಕಾಲಕ್ಕೆ ಕನ್ನಡ ಮಾತಾಡುವ ಪ್ರದೇಶವಾಗಿತ್ತು ಎಂಬುದರಲ್ಲಿ ಸಂದೇಹವಿಲ್ಲ.

ಬೀದರ್ ಜಿಲ್ಲೆಗೆ ಅಂಟಿಕೊಂಡಿರುವ ಇಂದಿನ ಮಹಾರಾಷ್ಟ್ರದ **ನಾಂದೇಡ್ ಜಿಲ್ಲೆ** ಯನ್ನು ಕರ್ನಾಟಕದ ಗಡಿಗೆ ಉತ್ತರಕ್ಕೆ ಐವತ್ತು ಮೈಲಿ ಆಚೆ ಹರಿಯುವ ಗೋದಾವರಿ ನದಿ ಇಬ್ಭಾಗ ಮಾಡಿ ಹರಿದಿದೆ. ಆ ಜಿಲ್ಲೆಯ ಐವತ್ತು ಶಾಸನಗಳಲ್ಲಿ ಮೂವತ್ತಾರು ಕನ್ನಡದಲ್ಲಿದ್ದರೆ ಒಂಬತ್ತು ಮರಾಠಿಯಲ್ಲಿವೆ. ಒಂಬತ್ತು ಸಂಸ್ಕೃತದಲ್ಲಿವೆ. ಮರಾಠಿ ಶಾಸನಗಳೆಲ್ಲ ಹದಿಮೂರನೇ ಶತಮಾನಕ್ಕೆ ಈಚಿನವು ಮತ್ತು ಒಂದು ಬಿಟ್ಟರೆ ಎಲ್ಲವೂ ಗೋದಾವರಿಯ ಉತ್ತರಕ್ಕಿವೆ.

ನಾಂದೇಡ್ ಜಿಲ್ಲೆಯ ಶಾಸನಗಳಲ್ಲಿ ಬರುವ ವ್ಯಕ್ತಿನಾಮಗಳು : ನಾಕರಸ, ಬಲ್ಲವರಸ, ಮಾಲಗೌಂಡ, ಎರೆಯಮರಹಸ, ರೇವಣಯ್ಯ ಇತ್ಯಾದಿ. ಕನ್ನೋಜ ಎಂಬ ಶಿಲ್ಪಿಯ ಹೆಸರು ಅಲ್ಲಿದೆ. ಇವು ಕೆಲವು ಸ್ಥಳನಾಮಗಳು : ಸವರಹಳ್ಳಿ, ಕರಡಿಕಲ್ಲು, ನೇರಿಲಿಗೆ, ಕೊಳನೂರು ಇತ್ಯಾದಿ. 'ಸವರವಳ್ಳಿ' ಇಂದು ಸಗ್ರೋಳಿ, ನಾಗರಹಾಳು ಎಂಬುದು ನಗ್ರಾಳ್, ಮರಿಕಲ್ ಎಂಬುದು ಮರ್ಖಲ್, ನೇರಿಲಗೆಯು ನೇರ್ಲಿ ಎಂದಾಗಿದೆ. ನಾಂದೇಡ್ ಹೆಸರಿನ ಹಿಂದಿನ ರೂಪ ನಾಂದೀ ಕಡ ಗೋದಾವರಿ ನದಿಯನ್ನು ಹಸುಗಳು ದಾಟುವ ಸ್ಥಳದಲ್ಲಿ ಅದು ಇದ್ದುದನ್ನು ಸೂಚಿಸುತ್ತದೆ. ನಾಂದೇಡ್ ನಗರ ಗೋದಾವರಿ ದಡದಲ್ಲಿದೆ. ಹಿಂದೆ ಆ ಪ್ರದೇಶವನ್ನು ಹಳ್ಳಿಗಳ ಸಂಖ್ಯೆ ಮೇಲೆ ವಿಭಾಗ ಗಳಾಗಿ ವಿಂಗಡಿಸಿದ್ದರು. ಉದಾ. ಎರಡಿರ್ಛಾಸಿರ ಬಾಡ. ಹೆಜ್ಜುಂಕ, ಅರುವಣ,ಅಂಕದೆರೆ ಇವು ಕೆಲವು ತೆರಿಗೆಗಳ ಹೆಸರುಗಳು. ಬಳ್ಳ, ಮತ್ತರ, ಸೊಲ್ಲಗೆ ಇವು ಕೆಲವು ಅಳತೆಯ ಹೆಸರುಗಳು. ಪೆರ್ಗಡೆ ಎಂಬ ಅಧಿಕಾರದ ಸ್ಥಾನದ ಹೆಸರಿದೆ. ಕಟ್ಟಡಕ್ಕೆ ಅಸ್ತಿಭಾರ ಹಾಕು ಎಂಬರ್ಥದಲ್ಲಿ 'ಕೆಸರು ಕಲ್ಲಿಕ್ಕು' ಎಂಬ ಪದ ಪ್ರಯೋಗವಿದೆ. ನೇಕಾರರ ವರ್ಗವನ್ನು 'ದೇಡ'ರು ಎಂದು ಕರೆದಿದೆ(ದೇಡ=ಜೇಡ. ನೋಡಿ: ಜೇಡರ ದಾಸಿಮಯ್ಯ).

ದೇಗ್ಲೂರ್, ಬಿಳೋಳಿ ಇವು ಆ ಜಿಲ್ಲೆಯ ಎರಡು ತಾಲೂಕುಗಳು ಹೆಸರುಗಳು. ಹದಿಮೂರನೇ ಶತಮಾನಕ್ಕಿಂತತ ಹಿಂದೆ ನಾಂದೇಡ್ ಜಿಲ್ಲೆ ಅಪ್ಪಟ ಕನ್ನಡ ಪ್ರದೇಶ ವಾಗಿದ್ದಿತು. ಮರಾಠಿಯು ಹದಿಮೂರನೇ ಶತಮಾನದ ಬಳಿಕ ಆ ಪ್ರದೇಶವನ್ನು ಪ್ರವೇಶಿಸಿತು ಎಂಬುದಂತೂ ವಿವಾದಾತೀತ ಸಂಗತಿ.

'ಸಾಯಿರಬಾಡ'ದ ಇನ್ನೊಂದು ಹೆಸರು ಸವರವಾಡಿ. 'ಏರಿಗೆ' ಇಂದಿನ ಯೇರಿಗಿ. ತಡಕಲ್ ಇಂದಿನ 'ತಡ್ವೇಲ್'. ಜಿಲ್ಲೆಯ ಹಿಂದಿನ ಅಚ್ಚಗನ್ನಡ ಸ್ಥಳನಾಮಗಳು ಈಗ ಹಲವು ಮಾರ್ಪಾಡುಗಳನ್ನು ಪಡೆದಿವೆಯೆಂಬುದಕ್ಕೆ ಹೆಚ್ಚಿನ ಉದಾಹರಣೆಗಳು. ಒಕ್ಕುಲ ಗಾವೆ ಎಕ್ಲಾರ; ಕರಡಿಕಲ್→ಕರಡಖೇಡ; ಅವರವಾಡಿ→ಅವರಾಲಾ; ಜುನ್ನವಳಿಗೆ ಜುನ್ನಿ→ಜುನ್ನಿವಣಿ; ಚಿಂಚವಲಿ ಚಿಂಚಖೆಡ್; ಕೊಳನೂರ್→ಕೋಳ್ಳೂರ್; ಮದನೂರು→ ಮನೂರು ಮನೂರ್; ಮರಿಕಲ್ಲು→ಮರ್‌ಖಲ್ ಇತ್ಯಾದಿ.

೫. ಮಹಾರಾಷ್ಟ್ರದಲ್ಲಿ ಕನ್ನಡ ಶಾಸನಗಳು ಹೆಚ್ಚಾಗಿ ದೊರಕಿರುವ ಜಿಲ್ಲೆಗಳೆಂದರೆ ಕೊಲ್ಲಾಪುರ, ಸಾಂಗ್ಲಿ, ಸೊಲ್ಲಾಪುರ, ಒಸ್ಮಾನಾಬಾದ್ ಮತ್ತು ನಾಂದೇಡ್. ಸೋಲ್ಲಾಪುರ 'ತರಿಕಾಡು ೩೦೦' ನಾಡಿನ ರಾಜಧಾನಿ ಬಿಜ್ಜಳನ ಆಳುತ್ತಿದ್ದ ಮಂಡಳವೇಡೆ ಆಗಿತ್ತು. ಭೀಡ ಜಿಲ್ಲೆಯ ಲೊಕ್ಕಿಗುಂಡಿ ಕರ್ನಾಟಕದ ಲಕ್ಕುಂಡಿ (ಲೊಕ್ಕಿಗುಂಡಿ) ಎರಡು ಒಂದೇ ಹೆಸರಿನವು. ದೇವಗರಿಯ (ಈಗಿನ ಔರಂಗಾಬಾದ್ ಜಿಲ್ಲೆಯ ದೌಲತಾಬಾದ್) ಆಳಿದ ಯಾದವರು ಕನ್ನಡಿಗರು. ಅವರಲ್ಲಿ ಭಿಲ್ಲಮ, ಜೈತುಗಿ, ಸಿಂಘಣ. ಅಮ್ಮಣ (ಅಣ್ಣ), ಬಲ್ಲಾಳ ಇವು ಕೆಲವು ಹೆಸರುಗಳು ಕೊಲ್ಲಾಪುರದ ಶಿಲಾಹಾರದ ಕೆಲವು ಹೆಸರುಗಳು ಇವು. ಜಟಿಗ, ಬಲ್ಲಾಳ, ಗಂಡರಾದಿತ್ಯ (ಬಿರುದು) ಅಕ್ಕಲಕೋಟೆಯ ಮೂಲ ಹೆಸರು ಅಂಕುಲಗೆ, ಭೀಡ್ ಜಿಲ್ಲೆಯ ಶಾಸನಗಳಲ್ಲಿ ಬರುವ ಕೆಲವು ವ್ಯಕ್ತಿನಾಮ ಗಳು. ಕಾಳಿಮರಸ, ರೇಕಲಾ, ಎರಗದೇವ, ತೈಲಪ, ಮಲ್ಲಗಾವುಂಡ, ಆ ಜಿಲ್ಲೆಯ ಒಂದು ಮಠದ ಹೆಸರು 'ಎಳೆಯಮಠ' ಅಲ್ಲಿಯ ಒಂದು ಗುಡಿ 'ಬೆಳ್ಳೇಶ್ವರ', 'ಅಣಂದೂರು', 'ಲತ್ತಲೂರು' ಇವು ಆ ಜಿಲ್ಲೆಯ ಕೆಲವು ಸ್ಥಳನಾಮಗಳು. ಅಂದರೆ ದಕ್ಷಿಣ ಮಹಾರಾಷ್ಟ್ರ ನಿಶ್ಚಿತವಾಗಿಯೂ ಆರು ನೂರು ಎಂಟು ನೂರು ವರ್ಷಗಳ ಹಿಂದೆ ಅಪ್ಪಟ ಕನ್ನಡ ಪ್ರದೇಶವಾಗಿತ್ತು. ಶಾಸನ ಗಳಲ್ಲಿ ದೊರೆಯುವ ಸ್ಥಳನಾಮಗಳ ಇನ್ನಷ್ಟು ಮಾಹಿತಿ ಹೀಗಿದೆ: ಊರು, ಪಲ್ಲಿ, ಪಳ್ಳಿ, ವಳ್ಳಿ, ಮಾಲ, ಮಲ, ಕಲ್ ಇಂತಹ ಕನ್ನಡ ವಾರ್ಗಿಕಗಳು ಮಹಾರಾಷ್ಟ್ರದಲ್ಲಿವೆ.

ಹಳೆಯ ಹೆಸರು	**ಹೊಸ ಹೆಸರು**	**ಜಿಲ್ಲೆ**
ಲತ್ತಲೂರ್	ಲಾತೂರ್	(ಒಸ್ಮಾನಾಬಾದ್)
ಚಿಂಚಪಲ್ಲಿ	ಚಿಂಚೋಲಿ	(ಔರಂಗಾಬಾದ್)
ಕಲ್ಲಗ್ರಾಮ	ಕಲೆಗಾವ್	(ಥಾಣೆ)
ಕೆರೆಯಲಿ	ಕೇರಲ್ಲಿ	(ಕೊಲ್ಲಾಪುರ)

ಮಧ್ಯ ಷಷ್ಠಿ ಪ್ರತ್ಯಯ ಇರುವ ಹೆಸರುಗಳು ಪಟ್ಟಿಯ ಗ್ರಾಮ (ಕೊಲ್ಲಾಪುರ) ಕೋಣೆಯ ಗ್ರಾಮ (ರತ್ನಗಿರಿ)ಗೆ ಕೊನೆಯಲ್ಲಿರುವ ಹೆಸರುಗಳು ಕುರುವಲಗೆ, ಇಂಡಿಗೆ (ರತ್ನಗಿರಿ) ಇವೆಲ್ಲವುಗಳನ್ನು ಗಮನಿಸಿದಾಗ ಇಡೀ ಮಹಾರಾಷ್ಟ್ರ ಒಂದು ಕಾಲಕ್ಕೆ ಕನ್ನಡ ಪ್ರದೇಶವಾಗಿತ್ತು.

೬. ಪ್ರಾಚೀನ ಕಾಲದಲ್ಲಿ ಮಹಾರಾಷ್ಟ್ರದ ಉತ್ತರ ಭಾಗವು ಕೊಲಾಚಾ, ಥಾಣ, ಕಲ್ಯಾಣ ಜಿಲ್ಲೆಗಳಲ್ಲಿ ಕನ್ನಡವು ಆಡುಭಾಷೆಯಾಗಿ ಮರಾಠಿ ಜೊತೆಗೆ ಬಳಕೆಯಲ್ಲಿತ್ತು. ಹಳೆಯ ಮರಾಠಿ ಮೇಲೆ ಅದರಲ್ಲೂ ಸಂತ ಜ್ಞಾನೇಶ್ವರನ ಜನಪ್ರಿಯ ಗೀತವ್ಯಾಖ್ಯಾನ ಗ್ರಂಥ ಜ್ಞಾನೇಶ್ವರಿಯವೇಲೆ ಕನ್ನಡ ಭಾಷೆಯ ಪ್ರಭಾವ ಆಗಿದೆ. ಪಂಡರಪುರದ ವಿಠೋಬವನ್ನು ಜ್ಞಾನೇಶ್ವರನು ಕನ್ನಡ ದೈವವೆಂದು ಕರೆದಿರುವುದು ಸತ್ಯವಾಗಿದೆ. ಉತ್ತರ ಮಹಾರಾಷ್ಟ್ರ ಜಿಲ್ಲೆಗಳಲ್ಲಿ ಕನ್ನಡ, ಮರಾಠಿಗಳು ಹಿಂದೆ ಒಟ್ಟಿಗೆ ಇದ್ದವು. ಕನ್ನಡ ಪ್ರದೇಶವನ್ನು ಪ್ರವೇಶಿಸಿದ ಮರಾಠಿಯು ಕೆಲಕಾಲ ಅದರ ಜೊತೆಗೆ ಇದ್ದು, ಬದುಕಿ ಕ್ರಮೇಣ ಕನ್ನಡವನ್ನು ದಕ್ಷಿಣಕ್ಕೆ ತಳ್ಳುತ್ತ ಬಂದಿತು. ಕನ್ನಡವು ಮರಾಠಿ ಶಬ್ದಕೋಶದ ಮೇಲೆ ಮಾತ್ರವಲ್ಲ ಧ್ವನಿ ರಚನೆ ಮತ್ತು ವ್ಯಾಕರಣ ಮೇಲೆ ದಟ್ಟ ಪ್ರಭಾವ ಬೀರಿದೆ. ಮರಾಠಿ ಮೇಲೆ ಹಳಗನ್ನಡ ತುಂಬ ಪ್ರಭಾವ ಬೀರಿದೆ. ಉದಾ. ಪದ ಭಂಡಾರ :

ಕನ್ನಡ	ಮರಾಠಿ
ಒಳಗೆ	ಓಳಗೇ, ಔಳೇ
ಕೋಲು	ಕೋಲು
ತುಪ್ಪ	ತೂಪ
ಮಡು(ಕೆರೆ)	ಮಥು
ಕೋಂಟೆ	ಕೋಂಥ
ತೊರೆ	ತೋರೇ
ಅಕ್ಕಾ (ಹಿರಿಯ ಸೋದರಿ)	ಅಕ್ಕ
ಅಡಚಣೆ (ತಡೆ, ಬಿಕ್ಕಟ್ಟು)	ಅಡಚಣೆ
ಅಣ್ಣಾ (ಸ್ವಾಮಿ, ತಂದೆ, ಅಣ್ಣ)	ಅಣ್ಣ

೭. ಮಹಾರಾಷ್ಟ್ರದ ಧನಗರರು ಕುರುಬ ಜನಾಂಗದವರು. ಇವರು ಕಂದಮಿಳ್ (ದ್ರಾವಿಡ) ಪ್ರಾಂತಕ್ಕೆ ಸೇರಿದವರೆಂದು ಶಂಬಾ ಅವರು ಗುರುತಿಸಿದ್ದಾರೆ. ಮಧ್ಯಪ್ರದೇಶದ ಇಂದೋರಿನ ಹೋಳ್ಕರ್ ರಾಜಮನೆತನದವರು ಧನಗರ ವರ್ಗಕ್ಕೆ ಸೇರಿದವರು. ಮೈಲಾರನ ಭಕ್ತರು ಅಲ್ಲಿದ್ದಾರೆ. ಮಹಾರಾಷ್ಟ್ರದ ಪ್ರಾಚೀನ ಗ್ರಾಮ ಸೇವಕ ಆಯಗಾರರನ್ನು

"ಕೊರಬು" (=ಕುರುಬು) ಎನ್ನುತ್ತಾರೆ. ಮಹಾರಾಷ್ಟ್ರದ ಚಂದಾ, ಭಂಡಾರ ಭಾಗದ "ಕುರುಬರ್" ಜನ (=ಕುರುಬರು) ಒಂದು ಬಗೆಯ ಕನ್ನಡವನ್ನು ಮಾತಾಡುತ್ತಿದ್ದರು ಎಂದು ಗ್ರಿಯರ್ಸನ್ ತನ್ನ Linguistic Survey of India IV 1906, P. 396 ದಲ್ಲಿ ದಾಖಲಿಸಿದ್ದಾನೆ. ಶಂಬಾ ಅವರು ಖಾನ್‌ದೇಶ, ನಾಸಿಕ್ ಜಿಲ್ಲೆಗಳ ಹಲವು ಸ್ಥಳನಾಮಗಳು ಕನ್ನಡವೇ ಆಗಿರುವುದನ್ನು ಅಲ್ಲಿ ಧನಗರ್ ಸಮುದಾಯದ ಚಹರೆಗಳಿರುವುದನ್ನು ಗುರುತಿಸಿದ್ದಾರೆ. ಮಧ್ಯಭಾರತದ 'ಮಾಳವ' ಪ್ರಾಂತದ ಹೆಸರು 'ಮಲೆ'ಯಿಂದ ಬಂದುದೆಂಬ ಅವರ ಊಹೆ ನಿಷ್ಫಲವಾದದಲ್ಲ.

'ವಾಟಿ', 'ವಾಟಿಕಾ' ಇವು ಸಂಸ್ಕೃತ ಪದಗಳಂತೆ 'ವಾಡಿ', 'ವಾಡೆ' ಇವು ಅವುಗಳ ತದ್ಭವಗಳಂತೆ ಕಂಡರೂ ಅವೆಲ್ಲವೂ ಮೂಲತಃ 'ಪಡು'(to lie down stay) ಎಂಬ ದ್ರಾವಿಡ ಧಾತುವಿನಿಂದ ಬಂದಿರುವ 'ಪಾಡಿ', 'ಬಾಡ'ಗಳ ರೂಪಾಂತರಗಳೇ ಆಗಿವೆ ಎಂಬ ಶಂಬಾ ಅವರ ಸೂಚನೆ ಗಟ್ಟಿ ಆಧಾರದ ಮೇಲೆ ನಿಂತಿವೆ. ವಾಡ, ವಾಡಿಯಿಂದ ಕೊನೆಯಾಗುವ ಸ್ಥಳನಾಮಗಳು ಕರ್ನಾಟಕದ ಉದ್ದಗಲಕ್ಕೂ ಮಾತ್ರವಲ್ಲ ಮಹಾರಾಷ್ಟ್ರದಲ್ಲೂ ಕಾಣಿಸಿಕೊಂಡಿವೆ. ಆಂಧ್ರ, ತಮಿಳುನಾಡುಗಳಲ್ಲಿ ವಾಡ ಕೊನೆಯಲ್ಲಿನ ಸ್ಥಳನಾಮಗಳಿವೆ. ಇಲ್ಲೆಲ್ಲ ಕನ್ನಡದ ಚಹರೆ ಅಡಗಿದೆ ಎಂಬುದರ ಬಗ್ಗೆ ಅನುಮಾನವಿಲ್ಲ.

೮. ನಾ. ಶ್ರೀ ರಾಜಪುರೋಹಿತರು ೧೯೧೨ ರಿಂದ ೧೯೧೪ರ ವರೆಗೆ "ಕೇಸರಿ" ಮರಾಠಿ ಪತ್ರಿಕೆಯಲ್ಲಿ ಬರೆದ ಐದು ಲೇಖನಗಳ ಒಟ್ಟು ತಿರುಳನ್ನು ಚಿದಾನಂದಮೂರ್ತಿ ಅವರು ಕೊಟ್ಟಿದ್ದಾರೆ. ರಾಜಪುರೋಹಿತರ ಅಭಿಪ್ರಾಯಗಳು ಒಟ್ಟಾರೆ ಸಾಧಾರವೂ ವಿದ್ವಜ್ಜನ ಮಾನ್ಯವೂ ಆಗಿವೆ. ಮರಾಠಿ ವಿದ್ವಾಂಸರ ಅಭಿಪ್ರಾಯಗಳನ್ನು ವಿರೋಧಿಸಿ ೧೯೧೨ರ ಹೊತ್ತಿನಲ್ಲಿಯೇ ಕರ್ನಾಟಕದ ಉತ್ತರ ಗಡಿಗಳು ಇಂದಿನ ಇಡೀ ಮಹಾರಾಷ್ಟ್ರವನ್ನು ಒಳಗೊಂಡಿದ್ದವು ಎಂಬ ವಾದವನ್ನು ಮರಾಠಿಯಲ್ಲಿ ಯಶಸ್ವಿಯಾಗಿ ಮಂಡಿಸಿರುವ ರಾಜ ಪುರೋಹಿತರು ಆ ದಿಸೆಯಲ್ಲಿ ಮೊದಲಿಗರೆಂದೇ ಹೇಳಬೇಕು.

೯. ಪ್ರಾಚೀನ ಮತ್ತು ಆಧುನಿಕ ಮರಾಠಿಯ ಮೇಲೆ ಆಗಿರುವ ಕನ್ನಡದ ಪ್ರಭಾವವನ್ನು ಕುರಿತು ಚಿದಾನಂದಮೂರ್ತಿ ಅವರು ಇನ್ನಷ್ಟು ಮಾಹಿತಿ ಕೊಟ್ಟಿದ್ದಾರೆ. ಸಂಬಂಧ ಸೂಚಕಗಳಾದ ಅವ್ವ, ಅಪ್ಪ, ಅಕ್ಕ, ತಂಗಿ, ಅಣ್ಣ, ತಮ್ಮ, ತಂದೆ, ತಾಯಿ, ಅತ್ತೆ, ಕಕ್ಕ, ಮಾವ, ಅಜ್ಜ, ಅಜ್ಜಿ ಇತ್ಯಾದಿ ಕನ್ನಡ ಬಾಂಧವ್ಯ ಸೂಚಕ ಪದಗಳು ಮರಾಠಿಯಲ್ಲಿ ಸ್ವೀಕೃತವಾಗಿ, ಆ ಭಾಷೆಯ ಭಾಗವೇ ಆಗಿರುವುದು ಗಮನಾರ್ಹ. ಬಹು ಅರ್ಥಪೂರ್ಣ. ಅದರಂತೆ ಮನುಷ್ಯ ದೇಹಕ್ಕೆ ಸಂಬಂಧಿಸಿದ ಹಲವು ಪದಗಳು ಮರಾಠಿಗೆ ಕನ್ನಡದಿಂದ ಸ್ವೀಕೃತವಾಗಿವೆ. ಬೊಟ್ಟು, ಹೊಟ್ಟೆ, ಗಲ್ಲ, ಮಂಡೆ, ಕೊರಳು, ತಲೆ, ಬಗಲು, ಎದೆ ಇತ್ಯಾದಿ. ಎತ್ತಕಡೆ, ಅತ್ತಕಡೆ, ಇಷ್ಟು, ಬೇಗನೇ ಇತ್ಯಾದಿ ದಿಕ್ಸೂಚಕಗಳು, ಅವ್ಯಯಗಳು ಕನ್ನಡದಿಂದ ಸ್ವೀಕೃತಿಗಳು.

ವ್ಯಾಕರಣದ ದೃಷ್ಟಿಯಿಂದ ನೋಡುವುದಾದರೆ ಕನ್ನಡ ಚತುರ್ಥಿ ವಿಭಕ್ತಿ ಪ್ರತ್ಯಯ 'ಕೆ' ಎಂಬುದು 'ಕ' ಎಂದಾಗಿ ಮರಾಠಿ ನಾಮಪದಗಳಿಗೆ ಸೇರಿದೆ. ಉದಾ. ಘೋಡೆ ಯೇಕ(ಘೋಡ್ಯಾಂಕು) ಎಂದರೆ 'ಕುದುರೆಗೆ' ಎಂದರ್ಥ. ಕನ್ನಡದ ದಿಕ್ಸೂಚಿ 'ಕಡೆ'ಯ ಮರಾಠಿಯಲ್ಲಿ ದಿನನಿತ್ಯ ಬಳಕೆಯ ಪದ 'ವರಲೀ ಕಡೆ'(=ಪಶ್ಚಿಮದ ಕಡೆಗೆ) 'ಖಾಲವೇ ಕಡೆ'(=ಪೂರ್ವದ ಕಡೆಗೆ) ಪ್ರಥಮಾ ವಿಭಕ್ತಿ 'ಉ' ಎಂಬುದನ್ನು ಕನ್ನಡ ದಿಂದ ಮರಾಠಿ ಸ್ವೀಕರಿಸಿದೆ. ಉದಾ. 'ಬ್ರಾಹ್ಮಣು'(=ಬ್ರಾಹ್ಮಣನು).

ಸಾಮಾನ್ಯವಾಗಿ ಭಾಷೆಗಳ ಮಧ್ಯೆ ನಾಮಪದ, ವಿಶ್ಲೇಷಣ, ಪದಗಳ ಸ್ವೀಕಾರ ಕಾರ್ಯ ನಡೆಯಬಹುದೇ ಹೊರತು ಕ್ರಿಯಾಪದಗಳ ಸ್ವೀಕಾರವಿರುವುದಿಲ್ಲ. ಆದರೆ ಕನ್ನಡದ ಸಾಕಷ್ಟು ಕ್ರಿಯಾಪದಗಳು ಸದ್ಯ ಮರಾಠಿಯಲ್ಲಿ ಬಳಕೆಯಾಗಿವೆ. ಕುಟ್ಟು, ರುಬ್ಬು, ಸರಿ, ತಬ್ಬು, ಬಡಿಸು, ಬೋಗ್ಗು, ತುಳಿ, ತುಂಬು, ಕಲಸು, ಉಗುಳು, ಜಜ್ಜು, ಅಪ್ಪಳಿಸು, ಕೆದರು, ಒದರು, ಕೊರೆ, ತಿಳಿಸು, ಕಿಲಬು, ಹೆದರು, ಹುಡುಕು ಇತ್ಯಾದಿ. ಮೇಲಿನ ಕನ್ನಡ ಪದಗಳು ಮರಾಠಿ ಭಾಷೆಯಲ್ಲಿ ಉಳಿದುಕೊಂಡಿರುವ ಪಳೆಯುಳಿಕೆ ಗಳಾಗಿವೆ.

ಮಹಾರಾಷ್ಟ್ರ ಶಾಸನಗಳಿಂದ ಸಂಗ್ರಹಿಸಿ ಹೇಳುವುದಾದರೆ ಹಲವಾರು ಕನ್ನಡ ಸ್ಥಳನಾಮಗಳು ಕುರುಹುಗಳು ಮರಾಠಿಯಲ್ಲಿವೆ. 'ಗೆ'ಯಿಂದ ಕೊನೆಯಾಗುವ ಊರ ಹೆಸರುಗಳು ಮೂಲತಃ ಕನ್ನಡವೇ ಉದಾಹರಣೆಗೆ ಅಲತಗೆ (ಈಗ ಅಲ್ತ, ಕೊಲ್ಲಾಪುರ ಜಿಲ್ಲೆ) ಚಂಡಿಗೆ (ಈಗ ಭಂಜಥಾಣಾ ಜಿಲ್ಲೆ) 'ಖೋಪ' ಕೊನೆಯಲ್ಲಿರುವ ಹೆಸರುಗಳೂ ಕನ್ನಡದವೇ ಉದಾ. ಅಕ್ಕಲಖೋಪ್ (ಸಾತಾರ ಜಿಲ್ಲೆ) ಎಂಬುದರ ಉತ್ತರಾರ್ಧ "ಕೊಪ್ಪ", "ಅಕ್ಕಲಕೋಟೆ" ಹೆಸರು ಇಲ್ಲಿ ನೆನಪಿಗೆ ಬರುತ್ತದೆ. ಮಹಾರಾಷ್ಟ್ರದ ಇಂತಹ ಗ್ರಾಮನಾಮಗಳು ಕನ್ನಡ ನಾಡನ್ನು ನೆನೆಪಿಸುತ್ತವೆ.

ಮರಾಠಿಯಂತೆ ಕೊಂಕಣವೂ (ಗೋವೆ) ಒಂದು ನಾಡಾಗಿ ಮೂಲತಃ ಕನ್ನಡ ಭಾಷೆ ಯನ್ನಾಡುವ ಪ್ರದೇಶವಾಗಿತ್ತು. ಕೊಂಕಣಿ ಭಾಷೆಯು ಇಂಡೋ ಆರ್ಯನ್ ವರ್ಗಕ್ಕೆ ಸೇರಿದ ಸ್ವತಂತ್ರ ಭಾಷೆ. ಅದರಲ್ಲಿ ಸಾವಿರಾರು ಪದಗಳು, ನಿತ್ಯೋಪಯೋಗಿ ಪದಗಳು ಮರಾಠಿ ಯಂತೆ ಕನ್ನಡವೇ ಆಗಿವೆ. ಉದಾ. ಅಜಿ (=ಅಜ್ಜಿ), ಮಾಮ (=ಮಾಮ), ಕಡೇಕ (=ಕಡೆಗೆ), ತೂಕ್ (=ತೂಗು), ತೋಟಾಗಾರ್ (=ತೋಟಗಾರ), ಪಾಲ್ಕಿ (=ಪಲ್ಲಕ್ಕಿ), ಬೆಂಡೊ. ಭೆಂಡ (=ಬೆಂಡೆ), ಸಾಸಮ (=ಸಾಸಿಮೆ), ಪಣಸು (=ಹಲಸು) ಎಂದರೆ ಕೊಂಕಣಕ್ಕೆ ಗೋವೆ ಮತ್ತು ಪರಿಸರದ ನಾಡಿಗೆ ಕೊಂಕಣಿ ಭಾಷೆಯ ಜನರು ಬಂದು ಅಲ್ಲಿದ್ದ ಕನ್ನಡ ಪದಗಳನ್ನು ಸ್ವೀಕರಿಸಿದರು ಎಂಬುದಕ್ಕೆ ಮೇಲಿನ ಉದಾಹರಣೆಗಳು ಕೆಲವು ಮಾತ್ರ. ಕನ್ನಡದಲ್ಲಿ 'ಪ್' ಇನ್ನೂ 'ಹ್' ಆಗಿರದಿದ್ದ ಕಾಲದಲ್ಲಿ ಹತ್ತು, ಹನ್ನೊಂದನೇ ಶತಮಾನಕ್ಕೆ ಮುನ್ನವೇ ಕೊಂಕಣಿಯು ಕನ್ನಡ ಪ್ರದೇಶಕ್ಕೆ ಆಗಮಿಸಿತು ಎಂದು ಹೇಳಲು ಸಾಧ್ಯವಾಗುತ್ತದೆ.

೧೦. ಮಹಾರಾಷ್ಟ್ರದಲ್ಲಿ ಕನ್ನಡ ಉಪಭಾಷೆಗಳ ಚಹರೆಗಳನ್ನು ಚಿದಾನಂದಮೂರ್ತಿ ಅವರು ಗುರುತಿಸಿದ್ದಾರೆ. ಉತ್ತರ ಮಹಾರಾಷ್ಟ್ರವು ಬಹುಹಿಂದೆ ದ್ರಾವಿಡ ಭಾಷಾ (ಕನ್ನಡ) ಪ್ರದೇಶವಾಗಿದ್ದಿತೆಂಬುದಕ್ಕೆ ಕೈಕಾಡಿ ಉಪಭಾಷೆಯ ಒಂದು ಪೋಷಕ ನಿದರ್ಶನ. ಆ ಭಾಷೆ 'ನಾನ್ನ ಬಂಗಾ ನಾನ್‌ಕುತಾ (=ನನ್ನ ಭಾಗ ನನಗೆ ತಾ) ಇದು ಆ ಭಾಷೆಯ ಮಾದರಿ. ಗೋಲರಿ ಅಥವಾ ಹೋಲಿ, ಕುರುಂಚಿ ಎಂಬುದು ಕನ್ನಡ ಉಪಭಾಷೆಯಾಗಿದ್ದು ಅದು ಚಂದಾ, ಕಡಪಾ, ನೀಲಗಿರಿ, ತಂಜಾವೂರು, ಮಲಬಾರ್ ಜಿಲ್ಲೆಗಳಲ್ಲಿದೆ. "ಒಬ್ಬ ಮನ್ಸೇನ್ ಇಬ್ಬರು ಮಕಾಳು ಇದ್ದರು" ಇದು ಆ ಭಾಷೆಯ ಒಂದು ಮಾದರಿ. ಇಂದಿನ ಕರ್ನಾಟಕದ ಪೂರ್ವ, ದಕ್ಷಿಣ ಗಡಿಗಳ ಅಂಚಿನಲ್ಲಿರುವ ಆಂಧ್ರ, ತಮಿಳುನಾಡುಗಳ ಎಷ್ಟೋ ಭಾಗಗಳು ಕನ್ನಡ ಪ್ರದೇಶವೇ ಆಗಿತ್ತೆಂಬುದಕ್ಕೆ ಇದು ಒಂದು ಚಿಕ್ಕ ಪೋಷಕ ಸಾಮಗ್ರಿ, ನೀಲಗಿರಿಯ ಪ್ರಧಾನ ಜನಾಂಗವಾದ ಬಡಗರ ಭಾಷೆ, ಕನ್ನಡದ ಒಂದು ಉಪ ಭಾಷೆಯೇ ಆಗಿದೆ. ಕೊಲಾಬಾ ಜಿಲ್ಲೆ, ನಾಸಿಕ ಜಿಲ್ಲೆಯ ಠಾಕರೀ ಉಪಭಾಷೆಯಲ್ಲಿ, ಕನ್ನಡ ಪದರೂಪಗಳಿವೆ. ನಾಸಿಕ್ ಪ್ರದೇಶವು ಕನ್ನಡ ನಾಡಾಗಿದ್ದಿತು ಎಂಬುದಕ್ಕೆ ಇದು ಒಂದು ಆಧಾರ. ಅದರಂತೆ ಥಾಣೆ ಜಿಲ್ಲೆಯ ಮಾಂಗೇಲಾ ಉಪಭಾಷೆ, ಬಸ್ತಾರ್ ಪ್ರದೇಶದ ಹಳಬೀ ಜನಾಂಗದ ಉಪಭಾಷೆಯಲ್ಲಿ ಕನ್ನಡ ಭಾಷಾರೂಪಗಳಿರುವುದನ್ನು ಚಿದಾನಂದ ಮೂರ್ತಿ ಅವರು ಗುರುತಿಸಿದ್ದಾರೆ.

'ಧನಗರ್' ಅಥವಾ 'ಹಟ್ಟಿಕರ್', 'ಧನಗರ್' ಜಾತಿಯ ಜನರು ಕರ್ನಾಟಕ, ಮಹಾರಾಷ್ಟ್ರಗಳ ಉದ್ದಗಲಕ್ಕೆ ಕುರಿ ಸಾಗುವ ವೃತ್ತಿಯವರು. 'ದನ' ಪದ ಮರಾಠಿಗೆ ಹೋಗಿ 'ಧನ' ಆಗಿದೆ. ಉತ್ತರಾರ್ಧ 'ಗರ್' ಪ್ರತ್ಯಯವು ಕನ್ನಡ ಕರು ಆಗಿರುವ ಸಾಧ್ಯತೆಯಿದೆ. 'ಧನಗರ್' ಜನರು ಮೂಲತಃ ಕನ್ನಡ ಭಾಷಿಕರು ಎಂಬುದಕ್ಕೆ ಹಲವಾರು ಸಾಕ್ಷಾಧಾರಗಳಿವೆ. ಮರಾಠಿ 'ಧನಗರ್'ರ ಖೋಪ, ಗುಡಿ ರೂಪಗಳು ಕನ್ನಡದ ಕೊಪ್ಪ, ಗುಡಿಗಳೇ ಆಗಿವೆ. ಖಂಡೋಬಾ (ಮೈಲಾರ) ಇವರ ಪ್ರಧಾನ ದೈವ. ಸೊಲ್ಲಾಪುರ ಪ್ರದೇಶದ ಧನಗರರಿಗೆ ಯೇವನಾಯಿ (ಎಲ್ಲಮ್ಮ) ಅವರ ಆರಾಧ್ಯ ದೈವಗಳಲ್ಲಿ ಒಂದು. ಗವಳಿಗಳಲ್ಲಿ ಬಿಜಾಪುರಿ, ಧನಗರ್, ಗೊಲ್ಲ, ಕುಣಬಿ, ಕೊಕ್ಕಿ, ಕುರುಬ ಇವು ಕೆಲವು ಉಪವರ್ಗಗಳು. ಇವರು ಕನ್ನಡವನ್ನು ಮಾತಾಡುತ್ತಾರೆ. 'ಹಳಬಿ' ಎಂಬ ವರ್ಗ ಜನರು ರೈತರು ಮನೆಗೆಲಸ ಮಾಡುವಾಗ ಕನ್ನಡವನ್ನೇ ಮಾತಾಡುತ್ತಾರೆ. 'ಕೋಳಿ' (ಕೋಹಳಿ) ಎಂಬ ಜನವರ್ಗ ದ್ರಾವಿಡ ವರ್ಗದವರು ಅವರ ಭಾಷೆ ಕನ್ನಡ, ತೆಲುಗು, ತಮಿಳನ್ನು ಹೋಲುತ್ತದೆ. ಕೋಳಿಗಳಲ್ಲಿ 'ಕಬ್ಬೇರ್' ಎಂಬ ಪಂಗಡವಿರುವುದು ಸ್ವಾರಸ್ಯವಾಗಿದೆ. ಮಧ್ಯಕರ್ನಾಟಕದ ಮೀನುಗಾರ ಜಾತಿಗೆ ಸೇರಿದ ಕಬ್ಬೇರರು ಇಲ್ಲಿ ನೆನಪಾಗುತ್ತಾರೆ. ಕೋಳಿ, ಧೋರ ಜನ ಸತ್ತ ಪ್ರಾಣಿಗಳ ಚರ್ಮವನ್ನು ಹದಮಾಡುತ್ತಾರೆ. ಅವರು "ಮಲ್ಹಾರ್" ದೈವವನ್ನು ಪೂಜಿಸುತ್ತಾರೆ. ಮಲ್ಹಾರ್ ಇನ್ನಾರೂ ಅಲ್ಲ, ಕರ್ನಾಟಕದ ಮೈಲಾರನೇ. ಇವರ ಆಡುರೂಪಗಳು

ಕನ್ನಡ ಪದಗಳಿವೆ. ಕುಡ್ಲಿ (=ಕೊಡಲಿ), ಖುರ್ಪೆ (=ಕುರ್ಪಿ), ಜ್ವಾರಿ (=ಜೋಳ), ಅಲ್ಸಿ (=ಹಲಸಂದಿ), ತೂರ್ (=ತೊಗರಿ) ಎಲ್ಲವೂ ದ್ರಾವಿಡ (ಕನ್ನಡ) ಪದಗಳು. ಹೀಗೆ ಚಿದಾನಂದಮೂರ್ತಿ ಅವರು ಮಹಾರಾಷ್ಟ್ರದ ಹಲವು ಉಪಭಾಷೆ ಮತ್ತು ಬುಡಕಟ್ಟು ಜನಾಂಗಗಳಲ್ಲಿ ಕನ್ನಡದ ಚಹರೆಗಳನ್ನು ಗುರುತಿಸಿದ್ದಾರೆ.

೧೧. ಮಹಾರಾಷ್ಟ್ರದ ರಾಷ್ಟ್ರೀಯ ದೈವಗಳೆಂದೇ ಮರಾಠಿ ಜನರು ಗೌರವಿಸುವ ಕೊಲ್ಲಾಪುರದ ಮಹಾಲಕ್ಷ್ಮಿ, ಪಂಡರಪುರಂದ ವಿಠೋಬ, ಜೆಜೂರಿಯ ಖಂಡೋಬ. ತುಳಜಾಪುರದ ತುಳಜಾ ಭವಾನಿ ಈ ನಾಲ್ಕು ಸ್ವಾರಸ್ಯದ ವಿಷಯವೆಂದರೆ ಕರ್ನಾಟಕದ ದೇವತೆಗಳು. ಕೊಲ್ಲಾಪುರದ ಮಹಾಲಕ್ಷ್ಮಿ ದೇವಾಲಯದ ಶಾಸನಗಳೆಲ್ಲವೂ ಕನ್ನಡದಲ್ಲಿವೆ. ಮತ್ತು ಆ ಜಿಲ್ಲೆ ಹಿಂದೆ ಅಪ್ಪಟ ಕನ್ನಡ ಪ್ರದೇಶವಾಗಿತ್ತು. ಶಿವಾಜಿಯು ಅದನ್ನು "ಕರ್ನಾಟ" ವೆಂದೇ ಭಾವಿಸಿದ್ದನು. ಪಂಡರಾಪುರದ ಹಳೆಯ ಹೆಸರು "ಪಂಡರಗೆ" (ನೋಡಿ: ಜೇವರ್ಗಿ, ಮುಂಡರಗಿ) ವಿಠೋಬನನ್ನು ಸಂತ ಜ್ಞಾನೇಶ್ವರನು ಕಾನಡಾ (ಕನ್ನಡ ದೇವತೆ) ಎಂದೇ ಕರೆದಿದ್ದಾನೆ. ಖಂಡೋಬಾ ಯಾರೂ ಅಲ್ಲ, ಕರ್ನಾಟಕದ ಮೈಲಾರ. ಅವನ ಹೆಂಡತಿ ಮ್ಹಾಲಸಾ ಕರ್ನಾಟಕದ ಮಾಳಚಿಯೇ. ತುಳಜಾಪುರದ ತುಳಜಾ ಭವಾನಿಯೂ ಮೂಲತಃ ಕರ್ನಾಟಕದ ದೇವತೆ. ತುಳಜಾಪುರ ಹಿಂದೆ ಅಪ್ಪಟ ಕನ್ನಡ ಪ್ರದೇಶವಾಗಿತ್ತೆಂದು ಚಿದಾನಂದಮೂರ್ತಿ ಅವರು ಶಾಸನಾಧಾರ ಗಳಿಂದ ಸ್ಪಷ್ಟಪಡಿಸಿದ್ದಾರೆ.

೧೨. ರತ್ನಗಿರಿ ಜಿಲ್ಲೆಯ ಚಿತ್ಪಾವನ ಬ್ರಾಹ್ಮಣರಲ್ಲಿ ಗೋಡ್ಸೆ, ಅಪ್ಪೆ, ಬಡ್ಗೆ, ಚಾಪೇಕರ್, ಅಪ್ಪಾಸಾಹೇಬ್, ಪಟವರ್ಧನ್, ಸಿಂಧುತಾಯ್, ಈ ವ್ಯಕ್ತಿನಾಮಗಳಲ್ಲಿ ಕೆಲವೆಡೆ ಕನ್ನಡ ಪದಗಳು ಸ್ಪಷ್ಟವಾಗಿವೆ. ಉಳಿದ ಪದಗಳಲ್ಲಿ ಕನ್ನಡ ಭಾಷೆಯ ಸೂಚನೆಯಿದೆ. ದಕ್ಷಿಣ, ಮಹಾರಾಷ್ಟ್ರದ ಹಣಬರ್ ಜನರು ದನ ಸಾಕುವರು. 'ತುರ್ಕಾರ್' ಎಂಬುದು ತುರು+ಕರು ಪದದಿಂದ ಬಂದಿರುವಂತೆ ಕಾಣುತ್ತದೆ (ತುರುಕರು=ದನಕರು>ಧನಗರ್?) ಹಿಂದೆ ಪೇಶ್ವೆಗಳ ಜೊತೆಗೆ ತಂಜಾವೂರಿಗೆ ಹೋಗಿ ನೆಲೆಸಿದ ಮಾಧ್ವ ದೇಶಸ್ಥ ಬ್ರಾಹ್ಮಣರು ಮನೆಯಲ್ಲಿ ಮರಾಠಿ, ಕನ್ನಡ ಮಾತನಾಡಿದರೂ ಶ್ರಾದ್ಧದ ದಿನ ಕನ್ನಡದಲ್ಲಿ ಮಾತ್ರ ಮಾತನಾಡುತ್ತಾರೆ. ಅವರಿಗೆ ಕನ್ನಡ ಮೊದಲ ಭಾಷೆ. ಆದ್ದರಿಂದ ಶ್ರದ್ಧೆಯ ಭಾಷೆ. ಹೋಳ್ಕರ್ ರಾಜಮನೆತನದವರು ಸೋಬಾನೆ ಹಾಡುಗಳಲ್ಲಿ ಕನ್ನಡ ಉಳಿದು ಕೊಂಡಿರುವುದು, ಪಂಡರಪುರದ ವಿಠ್ಠಲನ ರಾತ್ರಿಪೂಜೆಯಲ್ಲಿ ಕನ್ನಡ ಮಂಗಳಾರತಿ ಹೇಳುವುದು ಅರ್ಥಪೂರ್ಣ. ಮಹಾರಾಷ್ಟ್ರದ ಒಂದು ವಂಶನಾಮ 'ಹೆಡ್ಗೆವಾರ್' ಎಂಬುದು ಮೂಲತಃ 'ಹೆಗ್ಗಡೆಯವರ್' ಆಗಿರುವ ಸಾಧ್ಯತೆಯಿದೆ. ಹೀಗೆ, ಇಂದಿನ ಮಹಾರಾಷ್ಟ್ರದ ಬೇರೆ ಬೇರೆ ಜಿಲ್ಲೆಗಳಲ್ಲಿ ಬೇರೆ ಬೇರೆ ಜಾತಿ, ಬುಡಕಟ್ಟು ಜನರ ಮೇಲೆ ಬೆಳಕು ಬೀರುವ ಕೆಲವು ಸಂಗತಿಗಳನ್ನು ಮೇಲಿನ ಮಾಹಿತಿ ಸೂಚಿ ಒಳಗೊಂಡಿದೆ.

೧೩. ಅಭ್ಯಾಸಪೂರ್ಣ ೧೪ ಅನುಬಂಧಗಳಿವೆ. ಕೊಲ್ಲಾಪುರ ಪ್ರದೇಶವನ್ನು ಇಂಗ್ಲಿಶ್ ಪತ್ರಗಳಲ್ಲಿ ದಕ್ಷಿಣ ಮಹಾರಾಷ್ಟ್ರ ಎಂದು ಕರೆಯದೆ 'ಕರವೀರ ಇಲಾಖಾ ಕರ್ನಾಟಕ ಪ್ರಾಂತ' ಎಂದು ಕರೆದಿದೆ (ಫ್ಲೀಟ್, ಹಂಟರ್). ಮುಂಬೈ ಸ್ಥಳನಾಮ+ರಸ್ತೆಯ ಹೆಸರುಗಳಲ್ಲಿ ಕನ್ನಡ ಪದಗಳಿವೆ. ಹದಿನೈದನೇ ಶತಮಾನಕ್ಕಿಂತ ಹಿಂದಿನ ಮಹಾರಾಷ್ಟ್ರದ ರಾಜಕೀಯ ಚರಿತ್ರೆ ಎಂದರೆ ಅದು ಕರ್ನಾಟಕದ ಚರಿತ್ರೆಯೇ. ಕರ್ನಾಟಕವನ್ನು ಆಳಿದ ದೊರೆಗಳು ಮಹಾರಾಷ್ಟ್ರವನ್ನು ಆಳಿದರು. ಬಾದಾಮಿ ಚಾಲುಕ್ಯರು (೬ನೇ ಶತಮಾನದಿಂದ ೮ನೇ ಶತಮಾನದವರೆಗೆ), ರಾಷ್ಟ್ರಕೂಟರು (೮ನೇ ಶತಮಾನದಿಂದ ೧೦ನೇ ಶತಮಾನದವರೆಗೆ), ಕಲ್ಯಾಣ ಚಾಲುಕ್ಯರು ಮತ್ತು ಕಳಚೂರ್ಯರು (೧೦ನೇ ಶತಮಾನದಿಂದ ೧೨ನೇ ಶತಮಾನದ ವರೆಗೆ), ಶಿಲಾಹಾರರು (೯ನೇ ಶತಮಾನದಿಂದ ೧೩ನೇ ಶತಮಾನದವರೆಗೆ), ದೇವಗಿರಿ ಸೇವುಣರರು ಅಥವಾ ಯಾದವರು (೯ನೇ ಶತಮಾನದಿಂದ ೧೪ನೇ ಶತಮಾನದವರೆಗೆ), ವಿಜಯನಗರ ಸಾಮ್ರಾಜ್ಯದವರೆಗೆ (ಕ್ರಿ.ಶ. ೧೪ನೇ ಶತಮಾನ) ಅಂದಿನ ಮಹಾರಾಷ್ಟ್ರದ ಚರಿತ್ರೆ ಎಂದರೆ ಒಂದು ರೀತಿಯಲ್ಲಿ ಕರ್ನಾಟಕ ಚರಿತ್ರೆಯೇ ಆಗಿದೆ. ಬೆಳಗಾವಿ ಅಪ್ಪಟ ಕನ್ನಡ ಪ್ರದೇಶವಾಗಿತ್ತು ಎಂಬುದನ್ನು ಹಲವಾರು ದಾಖಲೆಗಳು, ಗೆಜೆಟಿಯರ್‌ಗಳಿಂದ, ಮಾಹಿತಿಗಳನ್ನು ಕೊಟ್ಟಿದ್ದಾರೆ. ಮಹಾಜನ ವರದಿಯ ಶಿಫಾರಸ್ಸುಗಳನ್ನು ಚರ್ಚಿಸಿದ್ದಾರೆ. ಅದರಂತೆ ಉತ್ತರ ಕನ್ನಡ, ಗುಲಬರ್ಗಾ, ಬೀದರ್, ಸೊಲ್ಲಾಪುರ, ಕಾಸರಗೋಡ ಕನ್ನಡಪರ ಚಿಂತನೆಯ ನೆಲೆಯಲ್ಲಿ ಚರ್ಚಿಸಿದ್ದಾರೆ.

೧೯೧೫ರ ಒಂದು ಅಂದಾಜಿನ ಪ್ರಕಾರ ಅಂದಿನ ಕನ್ನಡ ಭಾಷಿಕರ ಬಾಹುಳ್ಯದ ಪ್ರದೇಶ ಉತ್ತರದಲ್ಲಿ ಕೊಲ್ಲಾಪುರದಿಂದ ಹಿಡಿದು ಗೋವೆ ಸೇರಿದಂತೆ ದಕ್ಷಿಣದಲ್ಲಿ ಕಲ್ಲಿಕೋಟೆ, ಕೊಯಮತ್ತೂರು, ಸೇಲಂದರೆಗೆ ಪೂರ್ವದಲ್ಲಿ ನಲ್ಗೊಂಡ, ಅನಂತಪುರ ದವರಗೆ ಪಶ್ಚಿಮಕ್ಕೆ ರತ್ನಗಿರಿಯಿಂದ ಕಲ್ಲಿಕೋಟೆಯವರೆಗೆ ವ್ಯಾಪಿಸಿತ್ತು

೧೪. ಇಂದಿನ ಬಹುತೇಕ ಮಹಾರಾಷ್ಟ್ರ ಹಿಂದೊಮ್ಮೆ ಕನ್ನಡ ನಾಡಾಗಿದ್ದಿತು ಎಂಬುದು ಕೇವಲ ಪ್ರಮೇಯವಾಗಿ ಉಳಿಯದೇ ಒಂದು ಸಾಧಾರ ತೀರ್ಮಾನವಾಗು ತ್ತದೆಯೆನ್ನುವಷ್ಟರ ಮಟ್ಟಿಗೆ ಪ್ರಮುಖ ಪ್ರಮಾಣಗಳು ದೊರಕಿವೆ. ಮಹಾರಾಷ್ಟ್ರ ಉದ್ದ ಗಲಕ್ಕೂ ಕಾಣುವ ಸ್ಥಳನಾಮಗಳು, ಬಂಧುಸೂಚಕಗಳ ಪದಗಳು, ಮರಾಠಿ ಭಾಷೆ ಇಂದಿಗೂ ಉಳಿಸಿಕೊಂಡು ಬಂದಿರುವ ಹಳಗನ್ನಡ ಪದ, ವಾಕ್ಯರಚನೆಗಳು, ನಾಸಿಕ್ ದಂತಹ ಉತ್ತರದ ಜಿಲ್ಲೆಗಳಲ್ಲಿ ಕನ್ನಡ ಭಾಷಿಕ ಗುಂಪುಗಳು, ಅವರ ಭಾಷೆಯಲ್ಲಿನ ಹಳಗನ್ನಡ ಪದಗಳು, ಎಲ್ಲೆಡೆ ಇರುವ ಮಹಾರ್, ಧನಗರ್ ಇವೇ ಮೊದಲಾದ ಕನ್ನಡ ಮೂಲದ ಜಾತಿಗಳು ಇವು ಮೊದಲಾದ ಬಹುಮುಖ್ಯ ಸಾಕ್ಷ್ಯಾಧಾರಗಳು ಬೆರಳು ತೋರುವುದು. ಒಂದೇ ಕಡೆಗೆ ಉತ್ತರ ಮಹಾರಾಷ್ಟ್ರ ಮೊದಲು ಕನ್ನಡ ನಾಡೇ ಆಗಿದ್ದಿತು. ಕೋಳಿಗಳಲ್ಲಿ ಕಬ್ಬೇರ್ ಎಂಬ ವರ್ಗದವರಿರುವುದು ಕೋಳಿಗಳೂ

ಕರ್ನಾಟಕದ ಕಬ್ಬಿಲರೂ ಇಬ್ಬರೂ ಮೀನುಗಾರರು ಎಂಬ ಅಂಶ ತುಂಬ ಸ್ವಾರಸ್ಯವಾಗಿದೆ. ಕಬ್ಬಿಲ-ಕಪ್ಪಿಲ; ಕವ್ವಿಲ-ಕೋಳಿ ಕಬ್ಬಿಲ ಪದವು ಬಹುಶಃ ದ್ರಾವಿಡ ಮೂಲದ ಪದ ಮುಂಬೈ ಮೂಲನಿವಾಸಿಗಳಾದ ಕೋಳಿಗಳು ಮೂಲತಃ ಕನ್ನಡಿಗರೇ ಎಂಬ ಊಹೆ ನಿರಾಧಾರವಾದುದಲ್ಲ.

ತಮಿಳುನಾಡಿನ ಸೇಲಂ, ಧರ್ಮಪುರಿ ಜಿಲ್ಲೆಗಳ ಕನ್ನಡ ಶಾಸನಗಳಲ್ಲಿ ಬಂದಿರುವ ಸ್ಥಳನಾಮಗಳು, ವ್ಯಕ್ತಿನಾಮಗಳು, ದೇವರ ಹೆಸರುಗಳು, ತೆರಿಗೆ ಹೆಸರುಗಳು ಕನ್ನಡವೇ ಎಂಬುದನ್ನು ಗಮನಿಸಬೇಕು. ಇದೇ ಮಾತನ್ನು ಆಂಧ್ರ ಪ್ರದೇಶಕ್ಕೂ ಅನ್ವಯಿಸಿ ಹೇಳಬಹುದು. ಚಿತ್ತೂರು, ಅನಂತಪುರ, ಮೇದಕ್, ಕರ್ನೂಲು ಇವೇ ಮೊದಲಾದ ಜಿಲ್ಲೆಗಳ ಬಹುಭಾಗಗಳು ಹಿಂದೊಮ್ಮೆ ಕನ್ನಡ ನಾಡೇ ಆಗಿದ್ದವು.

ಮೂಲ ಕರ್ನಾಟಕದ ದಕ್ಷಿಣದ ಸ್ಥೂಲ ಗಡಿಯಾಗಿ ನೀಲಗಿರಿ ಪರ್ವತ ಶ್ರೇಣಿಯೆಂದು ಭಾವಿಸಬೇಕು. ಕವಿರಾಜಮಾರ್ಗಕಾರನು ಹೇಳಿದ ಕಾವೇರಿ, ಗೋದಾವರಿ ನದಿಗಳು ಸ್ಥೂಲ ಗಡಿಗಳೆಂದೇ ಭಾವಿಸಬೇಕು. ನೀಲಗಿರಿಯ ದಕ್ಷಿಣದ ಕೊಯಮತ್ತೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಈಗಲೂ ಕನ್ನಡ ಮಾತಾಡುವ ಜನರಿದ್ದಾರೆ. ಗೋದಾವರಿ ನದಿಯ ಪ್ರದೇಶದಲ್ಲಿಯೂ ಕನ್ನಡ ಮಾತಾಡುವ ಜನರಿದ್ದಾರೆ. ನೀಲಗಿರಿ ಬೆಟ್ಟದ ಪ್ರಮುಖ ಭಾಷೆ ಬಡಗವು ಕನ್ನಡದ ಸ್ಪಷ್ಟ ಉಪಭಾಷೆ. ಸೋಲಿಗ ಉಪಭಾಷೆಯಂತೆ ಅದು ತಮಿಳು ನಾಡಿಗೆ ಸೇರಿದ್ದರೂ ಇಂದಿಗೂ ಅದು ದ್ವಿಭಾಷಿಕ ಪ್ರದೇಶವೇ ಆಗಿದೆ.

ಒಂದು ಕಾಲದಲ್ಲಿ ಮಹಾರಾಷ್ಟ್ರದ ಬಹುಭಾಗವೆಲ್ಲ ಸಾಂಸ್ಕೃತಿಕ ಕರ್ನಾಟಕ ಅಂಗವೇ ಆಗಿತ್ತು. ಸಾಂಸ್ಕೃತಿಕ ಕರ್ನಾಟಕ ಭಾಗವಲ್ಲ ಇಡೀ ಮಹಾರಾಷ್ಟ್ರವು 'ಭಾಷಿಕ ಕರ್ನಾಟಕ'ದ ಭಾಗವಾಗಿತ್ತು ಎಂಬುದು ಸ್ಪಷ್ಟ. ಅಕ್ಷರಮಟ್ಟಿಗೆ ಈ ಕೃತಿ ಸ್ಪಷ್ಟಪಡಿಸುತ್ತದೆ. ಇಂದಿಗೂ ಈ ಭಾಗದಲ್ಲಿ ನೆಲೆನಿಂತ ಜನರು ದ್ವಿಭಾಷಿಕರು. ಬಹುತೇಕ ಕಡೆಗಳಲ್ಲಿ ಮನೆಮಾತು ಕನ್ನಡ. ಹೊರಗಿನ ವ್ಯವಹಾರವೆಲ್ಲ ಮರಾಠಿಯಲ್ಲಿ ಉತ್ತರ ಮಹಾರಾಷ್ಟ್ರದಲ್ಲಿ ಅದರಲ್ಲೂ ಕೆಳವರ್ಗದ ಜನರ ಸಮೀಕ್ಷೆ ನಡೆದರೆ ಅಲ್ಲಿ ಕನ್ನಡ ಭಾಷಿಕರು ದೊರಕ ಬಹುದು ಅಥವಾ ದೊರಕುತ್ತಾರೆ. ಹಟ್ಕರ್ ಕಾನಡಿ ಇತ್ಯಾದಿ ಕೆಲವು ವರ್ಗಗಳ ಉಲ್ಲೇಖ ಈ ಕೃತಿಯಲ್ಲಿ ಬಂದಿದೆ.

ಒಟ್ಟಾರೆ, ಸಾವಿರ ವರ್ಷಗಳಿಗೂ ಹಿಂದೆ ಕನ್ನಡ ಭಾಷೆಯನ್ನಾಡುತ್ತಿದ್ದ ಮೂಲ ಕನ್ನಡ ನಾಡು ಉತ್ತರದಲ್ಲಿ ಮಹಾರಾಷ್ಟ್ರದ ನಾಂದೇಡ್ ಜಿಲ್ಲೆಗೆ ಅಂಟಿಕೊಂಡು ಹರಿಯುವ ಗೋದಾವರಿಯವರೆಗೆ ಮಾತ್ರವಲ್ಲ, ಮುಂಬೈನಿಂದ ಇನ್ನೂ ಮೇಲಕ್ಕೆ ಮಹಾರಾಷ್ಟ್ರದ ಕೊನೆಯ ಜಿಲ್ಲೆ ನಾಸಿಕ್ ನಗರದ ಪಕ್ಕದಲ್ಲಿ ಹರಿಯುವ ಗೋದಾವರಿಯವರಗೆ ಹಬ್ಬಿದ್ದಿತೆಂಬುದನ್ನು ಮುಂಬೈ ಪ್ರದೇಶ ಸೇರಿದಂತೆ ಇಂದಿನ ಮಹಾರಾಷ್ಟ್ರ, ಪಶ್ಚಿಮದಲ್ಲಿ ಗೋವೆ, ದಕ್ಷಿಣದಲ್ಲಿ ಕಾಸರಗೋಡು ಕೆಳಗಿರುವ ಕಣ್ಣಾನೂರು, ಕಲ್ಲಿಕೋಟೆ, ನೀಲಗಿರಿ ಘಟ್ಟಗಳವರೆಗೆ ಪೂರ್ವದಲ್ಲಿ ಸೇಲಂ, ಧರ್ಮಪುರಿ, ಕರ್ನೂಲುವರೆಗೆ

ವ್ಯಾಪಿಸಿದ್ದಿತೆಂಬುದನ್ನು ಈ ಕೃತಿ ಹಲವು ಹೊಸ ನಿರ್ಣಾಯಕ ಆಧಾರಗಳಿಂದ ಸ್ಥಾಪಿಸಿದೆ ಅಥವಾ ದೃಢಗೊಳಿಸಿದೆ. ಶಾಸನಾಧಾರಗಳು ಮಾತ್ರವಲ್ಲ, ಸಮಕಾಲೀನ ಸ್ಥಳನಾಮಗಳು, ಜಾತಿ-ಬುಡಕಟ್ಟುಗಳು, ಜಾನಪದ, ಪ್ರವಾಸಿಗರ ಬರಹಗಳು, ಮರಾಠಿ ಕೊಂಕಣಿಗಳು ಸ್ವೀಕರಿಸಿರುವ ಹಳಗನ್ನಡ, ನಡುಗನ್ನಡ ಪದಗಳು, ಭೂಪಟಗಳು ಇವೇ ಮೊದಲಾದುವನ್ನೂ ಇಲ್ಲಿ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ.

ಈ ಕೃತಿ ಬರೀ ಕನ್ನಡದ ಅಭಿಮಾನದಿಂದ ಮೂಡಿಬಂದುದಲ್ಲ, ಇದರ ಹಿಂದೆ ವಸ್ತು ನಿಷ್ಠ ದೃಷ್ಟಿಕೋನವಿದೆ. ಎರಡು ವರ್ಷಗಳ ನಿರಂತರ ಶ್ರಮ ಇದೆ. ಒಟ್ಟಾರೆ, ಕನ್ನಡಿಗರು ಸ್ವಾಭಿಮಾನಿಗಳಾಗಬೇಕು. ಅದಕ್ಕೆ ಅವರು ಸ್ವಾಭಿಮಾನವನ್ನು ತಮ್ಮ ಗತ ಇತಿಹಾಸದ ಅರಿವಿನಿಂದ ಮೂಡಿಸಿಕೊಳ್ಳುವ, ಬಳಸಿಕೊಳ್ಳುವ ಸ್ಫೂರ್ತಿ ಪಡೆಯುವ ಮನೋಧರ್ಮ ಇನ್ನೂ ಮೇಲಾದರೂ ರೂಢಿಸಿಕೊಳ್ಳಬೇಕಾಗಿದೆ. ಮೂಲಕನ್ನಡ ನಾಡು ಇಂದಿನ ನಾಡಿನಗಿಂತ ಕನಿಷ್ಠ ಮೂರರಷ್ಟು ದೊಡ್ಡದಿತ್ತು ಎಂಬ ಸಂಗತಿ ಕನ್ನಡಿಗರಿಗೆ ಹೆಮ್ಮೆಯ ವಿಷಯ, ಕನಿಷ್ಠ ಮೂರನೇ ಎರಡರಷ್ಟು ಭಾಗವನ್ನು ಇಂದಿನ ಕರ್ನಾಟಕ ಕಳೆದುಕೊಂಡಿದೆಯೆಂಬ ಸಂಗತಿ ಯಾತನೆಯ ವಿಷಯ, ಆ ಯಾತನೆ ಈಗ ಉಳಿದಿರು ವಷ್ಟನ್ನಾದರೂ ಉಳಿಸಿಕೊಳ್ಳಬೇಕೆಂಬ ಸಾತ್ವಿಕ ಚಲವನ್ನು ಮೂಡಿಸ ಬೇಕೆಂಬ ಪರೋಕ್ಷ ಆಶಯ, ಅಪಾರ ಕಳಕಳಿ ಈ ಕೃತಿಯ ಹಿನ್ನೆಲೆಯಲ್ಲಿದೆ. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನದ ಹಕ್ಕೊತ್ತಾಯಕ್ಕೆ ಮತ್ತು ಆ ಕುರಿತು ಮುಂದಿನ ಯೋಜನೆಗಳಿಗೆ ಈ ಕೃತಿ ಬಹುಮುಖ್ಯ ಆಕರವಾಗುತ್ತದೆ; ಪರಾಮರ್ಶನ ಬಿಂದುವಾಗುತ್ತದೆ.

೩೬

ಕುರುಬರ ಹೆಸರುಗಳು : ಸಾಮಾಜಿಕ ಭಾಷಾಧ್ಯಯನ

ಹೆಸರುಗಳು ಒಂದು ಜನಾಂಗದ ಸಂಸ್ಕೃತಿಯ ಬೇರುಗಳು. ಅವುಗಳ ಕ್ರಮಬದ್ಧವಾದ ಅಧ್ಯಯನವನ್ನು 'ನಾಮವಿಜ್ಞಾನ' ಎಂದು ಕರೆಯುತ್ತಾರೆ. ಅದರ ಮುಖ್ಯ ಅಂಗಗಳು ಎರಡು. ವ್ಯಕ್ತಿಗಳಿಗೆ ಇಟ್ಟ ಹೆಸರುಗಳೇ ವ್ಯಕ್ತಿನಾಮಗಳು. ಅವುಗಳ ಅಧ್ಯಯನವೇ ವ್ಯಕ್ತಿನಾಮ ವಿಜ್ಞಾನ. ಸ್ಥಳಗಳಿಗೆ ಇಟ್ಟ ಹೆಸರುಗಳೇ ಸ್ಥಳನಾಮಗಳು. ಅವುಗಳ ಅಧ್ಯಯನವೇ ಸ್ಥಳನಾಮ ವಿಜ್ಞಾನ. ಇತ್ತೀಚೆಗೆ ನಾಮಗಳ ಅಧ್ಯಯನ ಪ್ರತ್ಯೇಕ ಜ್ಞಾನಶಾಖೆಯಾಗಿ, ಅಧ್ಯಯನ ಯೋಗ್ಯ ವಿಷಯವಾಗಿದೆ.

ವಿಶಾಲಾರ್ಥದಲ್ಲಿ ಹೆಸರುಗಳೆಲ್ಲ ಅಂಕಿತ ನಾಮಗಳ ವರ್ಗಕ್ಕೆ ಸೇರುತ್ತವೆ. ಒಂದು ಪ್ರಾಣಿಯನ್ನೋ ವಸ್ತುವನ್ನೋ ಕಂಡಾಗ ಮನುಷ್ಯ ಸಮಯ ಸ್ಫೂರ್ತಿಯಿಂದ ಯಾವುದೋ ಹೆಸರಿಡುತ್ತಾನೆ. ಆ ಹೆಸರಿಗೆ ನಾಲ್ಕು ಜನರ ಅಂಗೀಕಾರ ಮುದ್ರೆ ಬಿದ್ದಾಗ ಮಾನ್ಯತೆ ಪ್ರಾಪ್ತವಾಗುತ್ತದೆ. ಅದು ಕಾಲಕ್ರಮೇಣ ಜನರಿಂದ ಜನಕ್ಕೆ ಕರ್ಣಾಕರ್ಣಿಕೆಯಾಗಿ ಹರಡಿ ಸಮಾಜದ ಆಸ್ತಿಯಾಗಿ, ಭಾಷೆಯ ಭಾಗವಾಗಿ ಪ್ರವರ್ತಿಸುತ್ತದೆ. ಕೆಲವು ಜನ ಒಟ್ಟಿಗೆ ಸೇರಿ, ಚರ್ಚಿಸಿ, ಸಾಧಕ ಬಾಧಕಗಳನ್ನು ಹಾಗೂ ಇತಿಮಿತಿಗಳನ್ನು ಪರಿಶೀಲಿಸಿ, ಯಾವುದಾದರೂ ವಸ್ತುವಿನ ನಾಮಕರಣದ ಬಗ್ಗೆ ಒಂದು ಇತ್ಯರ್ಥಕ್ಕೆ ಬರಬಹುದು. ಈ ವಿಧಾನದಿಂದ ಸಿದ್ಧವಾಗುವ ಹೆಸರುಗಳು ಸಂಖ್ಯಾದೃಷ್ಟಿಯಿಂದ ಕಡಮೆಯೆಂದೇ ಹೇಳಬಹುದು. ಒಂದೇ ತೆರದ ಅಥವಾ ಜಾತಿಯ ವಸ್ತು ಅಥವಾ ಪ್ರಾಣಿಗಳಿಗೆ ಮೊದಲಿನ ಅಂಕಿತ ನಾಮಗಳನ್ನು ಆರೋಪಿಸಿದಾಗ ಅವು ರೂಢನಾಮಗಳೆಂಬ ಅಭಿದಾನಕ್ಕೆ ಪಾತ್ರ ವಾಗುತ್ತವೆ. ಅವುಗಳ ಮೂಲಕ ಪ್ರಾಣಿಗಳು ಅಥವಾ ವಸ್ತುಗಳು ಸಹಜವಾಗಿಯೇ ವರ್ಗೀಕರಣಗೊಳ್ಳುತ್ತವೆ. ರೂಢನಾಮಗಳು ಒಂದು ವರ್ಗಕ್ಕೆ ಅನ್ವಯವಾಗುವುದಾದರೆ, ಅಂಕಿತನಾಮಗಳು ನಿರ್ದಿಷ್ಟ ವ್ಯಕ್ತಿಗಳಿಗೋ ವಸ್ತುಗಳಿಗೋ ಅನ್ವಯವಾಗುತ್ತವೆ.

ಒಬ್ಬಾನೊಬ್ಬ ವ್ಯಕ್ತಿಗೋ, ಒಂದಾನೊಂದು ವಸ್ತುವಿಗೋ ಸಲ್ಲುವ ಹೆಸರನ್ನು ಅಂಕಿತ ನಾಮವೆಂದು ಕರೆಯುವುದುಂಟಷ್ಟೆ. ಇಂಥ ನಾಮಗಳನ್ನು ಸಂಜ್ಞಾವಾಚಕಗಳೆಂದೂ ಹೆಸರಿಸುವುದುಂಟು. ಅಂಕಿತೇತರ ನಾಮಗಳಷ್ಟೇ ಅಂಕಿತನಾಮಗಳೂ ವ್ಯಾಪ್ತಿ ಹಾಗೂ ಸಂಖ್ಯೆಯ ದೃಷ್ಟಿಯಿಂದ ಮಿಗಿಲಾಗಿವೆ. ವೈಜ್ಞಾನಿಕ ಹಾಗೂ ತಾಂತ್ರಿಕ ಸಂಶೋಧನೆ ಭರಾಟೆಯಿಂದ ಸಾಗುತ್ತಿರುವ ಅದ್ಯತನ ಸಮಯದಲ್ಲಿ ವರ್ಷಂಪ್ರತಿ ನೂರಾರು, ಸಾವಿರಾರು ಹೆಸರುಗಳು ಸೃಷ್ಟಿಗೊಳ್ಳುತ್ತಿವೆ. ಅದರಿಂದಾಗಿ ಅವುಗಳ ವರ್ಗೀಕರಣ ದುಷ್ಕರವಾಗುತ್ತದೆ. ಆದರೂ ಅಧ್ಯಯನ ಸೌಲಭ್ಯಕ್ಕಾಗಿ ಅವುಗಳನ್ನು ವರ್ಗೀಕರಣ ಮಾಡಿಕೊಳ್ಳುವುದುಂಟು.

ವ್ಯಕ್ತಿನಾಮಗಳು : ಇವುಗಳಷ್ಟು ವ್ಯಾಪಕವಾದ ನಾಮಗಳು ಕಡಮೆ. ಮಾನವನ ಪ್ರತಿನಿತ್ಯದ ವ್ಯವಹಾರಗಳಲ್ಲಿ, ಮನೆಯೊಳಗೆ, ಮನೆ ಹೊರಗೆ ಎಲ್ಲ ಕಡೆಗಳಲ್ಲಿಯೂ ಅವುಗಳದೇ ದರ್ಬಾರು. ಅವುಗಳಿಲ್ಲದ ಜೀವನ ಕಲ್ಪನಾತೀತವಾಗುತ್ತದೆ ಮಾತ್ರವಲ್ಲ, ಅದು ಸ್ಥಗಿತಗೊಳ್ಳುವ ಸಂದರ್ಭವೂ ಉಂಟು. ಸಾಮಾನ್ಯವಾಗಿ ವ್ಯಕ್ತಿನಾಮಗಳು ಹಿರಿಯರೋ ಹತ್ತಿರದವರೋ ಇಟ್ಟವುಗಳಾಗಿ ಸಮಾಜದಲ್ಲಿ ಗಣ್ಯತೆ ಪಡೆಯುತ್ತವೆ. ಹಿರಿಯರೋ, ಇತರರೋ ಇಟ್ಟ ಹೆಸರುಗಳನ್ನು ತೊರೆದು ವ್ಯಕ್ತಿಗಳು ತಾವೇ ಇಟ್ಟುಕೊಂಡವುಗಳು ಸಹ ಸಮಾಜದಲ್ಲಿ ಮಾನ್ಯತೆ ಪಡೆಯುತ್ತವೆ. ಪರದೇಶಿಗೌಡ, ಪರಮಶಿವಯ್ಯ ಆಗಬಹುದು, ಚನ್ನಮ್ಮ, ಸುಂದರಬಾಯಿ ಆಗಬಹುದು, ನಾಗಚಂದ್ರ, ಅಭಿನವಪಂಪ ಆಗಬಹುದು. ವ್ಯಕ್ತಿಗಳು ಮತಾಂತರ ಗೊಂಡಾಗ ಹಳೆಯ ಹೆಸರುಗಳು ಉದುರಿ ಹೋಗಿ, ಹೊಸ ಹೆಸರುಗಳಿಗೆ ಸದುವು ಮಾಡಿಕೊಡುತ್ತವೆ. ಜವರಯ್ಯ, ಜಬ್ಬಾರ್ ಆಗಿ, ಮಾದಯ್ಯ, ಮ್ಯಾಥನ್ ಆಗಿ, ಮಾರಮ್ಮ, ಮೇರಿಯಾಗಿ ನೂತನ ಜೀವನವನ್ನು ಪ್ರಾರಂಭಿಸಬಹುದು. ಅಂತೆಯೇ ಒಬ್ಬ ವ್ಯಕ್ತಿ ವೈರಾಗ್ಯಕ್ಕೆ ಮನತೆತ್ತು, ಕಾವಿಧರಿಸಿದಾಗ, ಪೂರ್ವಾಶ್ರಮದ ದೈಹಿಕ, ಮಾನಸಿಕ ಸಂಬಂಧಗಳನ್ನು ಮರೆಯುವ ಸಲುವಾಗಿ ಹೆಸರನ್ನು ಮಾರ್ಪಡಿಸಿಕೊಂಡಾಗ, ಶ್ರೀನಿವಾಸ ಅಯ್ಯಂಗಾರ್, ಶ್ರೀನಿವಾಸಾನಂದ ಆಗಬಹುದು. ಬಹುತೇಕವಾಗಿ ಮಠದ ಮೇಟಿ ಗುರುಗಳೇ ಶಿಷ್ಯರಿಗೆ ಪುನರ್ ನಾಮಕರಣ ಮಾಡಬಹುದು. ಅಂದ ಮೇಲೆ ವಿರಕ್ತರಿಗೂ ಹೊಸ ಹೆಸರು ಅನಿವಾರ್ಯವೆಂದೇ ಹೇಳಬೇಕಾಗುತ್ತದೆ. ತನಗೆ ಹೆಸರೇ ಬೇಡ. ಅ. ಉ. ದ ಎಂಬ ಯಾವುದಾದರೂ ಅಕ್ಷರದಿಂದ ತಾನು ಕರೆಸಿಕೊಳ್ಳುತ್ತೇನೆಂದು ಯಾವನಾದರೂ ಒಬ್ಬ ವ್ಯಕ್ತಿ ಹಠ ಮಾಡುತ್ತಾನೆಂದಿಟ್ಟುಕೊಳ್ಳೋಣ. ಆಗ ಅಕ್ಷರಗಳೇ ಅಂಕಿತನಾಮಗಳಾಗುತ್ತವೆ.

ವ್ಯಕ್ತಿನಾಮಗಳೆಲ್ಲ ಸಾರಾಸಗಟಾಗಿ ಆಯಾಯ ವ್ಯಕ್ತಿಗಳ ಸ್ವರೂಪ, ಸ್ವಭಾವಗಳನ್ನು ಸಂಕೇತಿಸುತ್ತವೆಂದು ಹೇಳುವಂತಿಲ್ಲ. ಯಾವುದೋ ಸಂಪ್ರದಾಯಕ್ಕೆ ಕಟ್ಟುಬಿದ್ದು, ಯಾವುದೋ ಕಲ್ಪನೆಗೆ ಮನಸೋತು ಹಿರಿಯರು ತಮ್ಮ ಮಕ್ಕಳಿಗೆ ಹೆಸರು ಕಟ್ಟುತ್ತಾರೆ. ದೇವರ, ಸಾಧುಸಂತರ, ಪುರಾಣ ಪುರುಷರ ಅಥವಾ ಐತಿಹಾಸಿಕ ವ್ಯಕ್ತಿಗಳ ಹೆಸರಿಡುವಲ್ಲಿ ತಮ್ಮ ಮಕ್ಕಳು ಅವರಂತಾಗಬೇಕೆಂದು ಹಾರೈಸುತ್ತಾರೆ. ತಮ್ಮ ಸಂಸಾರ ಹಾಲಿನಂತಿರಲೆಂದು, ತಮ್ಮ ಮನೆಯಲ್ಲಿ ಸದಾ ಹಾಲುಕ್ಕುವಂತಾಗಬೇಕೆಂದು ಕೆಲವರು ತಮ್ಮ ಮಕ್ಕಳಿಗೆ ಹಾಲಪ್ಪ

ಎಂದು ಹೆಸರಿಡುವುದುಂಟು. ಅದು ಹಾಲೇಶ್ವರನೆಂಬ ದೇವರ ಹೆಸರಿದ್ದರೂ ಇರಬಹುದು. ಆ ಮಗುವಿನ ಭವಿಷ್ಯ ಏನಾಗುತ್ತದೋ ಬೇರೆ ಮಾತು, ಆದರೆ ಶೈಶವದಲ್ಲಿ ಕುಡಿಯಲು ಒಂದು ತೊಟ್ಟು ಸಹ ಹಾಲು ಅವನಿಗೆ ಸಿಗದಿರಬಹುದು! ಕ್ಷೀರಸಾಗರ, ಸಂಪತ್ತು, ಚೆಲುವಯ್ಯ, ಸುಂದರಮ್ಮ, ಲಕ್ಷ್ಮೀಪತಿ ಇಂಥ ಹೆಸರುಗಳನ್ನು ರಾಶಿರಾಶಿಯಾಗಿ ಉದಾಹರಿಸ ಬಹುದು.

ಅಂಕಿತನಾಮಗಳಲ್ಲಿ ಸಾಮಾಜಿಕ, ಜನಾಂಗಿಕ ಹಾಗೂ ಕೌಟುಂಬಿಕ ಸಂಸ್ಕೃತಿಯ ರೇಖೆಗಳನ್ನು ಗುರುತಿಸಬಹುದು. ಅಷ್ಟೇ ಅಲ್ಲ. ಹೆಸರುಗಳ ಮೇಲಿಂದ ನಾಮಕರಣ ಕರ್ತೃಗಳ, ಜನಾಂಗದ ಅಥವಾ ಸಮಾಜದ ಅಭೀಷ್ಟ ಆಕಾಂಕ್ಷೆಗಳನ್ನು ಗಮನಿಸಬಹುದಾಗಿದೆ. ಗ್ರಾಮೀಣ ಹಾಗೂ ನಾಗರಿಕ ನಾಮಗಳಲ್ಲಿ ಅಗಾಧ ಕಂದಕಗಳನ್ನು ಕಾಣಬಹುದು. ಒಂದು ಕಡೆ ಜನಪದ ಸಂಸ್ಕೃತಿ ಪ್ರಭಾವ ಬೀರಿದರೆ, ಮತ್ತೊಂದು ಕಡೆ ಶಿಷ್ಟ ಸಂಸ್ಕೃತಿ ಸ್ಫೂರ್ತಿ ನೀಡುತ್ತದೆ. ಎಲ್ಲ ತಂದೆ-ತಾಯಿಯರು ತಮಗೆ ಉತ್ತಮವೆಂದು ತೋರುವ, ಶ್ರವಣ ಸುಭಗವೆಂದು ಹೊಳೆಯುವ ಹೆಸರುಗಳನ್ನು ತಮ್ಮ ಮಕ್ಕಳಿಗೆ ಕಟ್ಟುತ್ತಾರೆ. ಎರಡಕ್ಷರದಿಂದ ಹಿಡಿದು ಹಲವಾರು ಅಕ್ಷರಗಳ ಉದ್ದದವರೆಗೆ ಹೆಸರುಗಳು ಹಬ್ಬಿರುತ್ತವೆ. ಕೆಲವು ಹೆಸರುಗಳಲ್ಲಂತು ತಂದೆ, ತಾತ, ಮುತ್ತಾತಂದಿರ ನಾಮಧೇಯಗಳು ಹಾಗೂ ಅನುವಂಶಿಕ ಬಿರುದಾವಳಿಗಳು ಸೇರ್ಪಡೆಗೊಂಡಿರುತ್ತವೆ.

ಒಬ್ಬ ವ್ಯಕ್ತಿಗೆ ಒಂದು ಹೆಸರಿರಬೇಕಾಗಿಲ್ಲ, ಎರಡಿರಬಹುದು, ಮೂರಿರಬಹುದು. ತಂದೆತಾಯಿಯರೇ ಮಗನಿಗೆ ಮುದ್ದಿಗೊಂದು, ವ್ಯವಹಾರಕ್ಕೆ ಮತ್ತೊಂದು ಹೆಸರಿಡಬಹುದು, ಮೀಸೆ ಮೊಳೆತ ನಂತರ ಮಗನೇ ಹೆಸರು ಬದಲಾಯಿಸಿಕೊಳ್ಳಬಹುದು, ಸುತ್ತಮುತ್ತಣದವರು ಪ್ರೀತಿಗೋ ಹಾಸ್ಯಕ್ಕೋ ಕೊಟ್ಟ ಹೆಸರೇ ಇಟ್ಟ ಹೆಸರನ್ನು ಮಸುಳಿಸಬಹುದು. ಹೀಗಾಗಿ ನಾಮಗಳ ಕೋಶ ಸಾಗರ ವಿಶಾಲವಾಗಿ ದಿನದಿನವೂ ಹಿಗ್ಗುತ್ತಿರುತ್ತದೆ. ವಿವಿಧ ಬಗೆಯ ವ್ಯಕ್ತಿನಾಮಗಳಲ್ಲೆಲ್ಲ ತಂದೆ ತಾಯಿಯರೊ, ಗುರುಹಿರಿಯರೊ ರೂಢಿ ಸಂಪ್ರದಾಯಗಳಿ ಗನುಗುಣವಾಗಿ ಇಟ್ಟ ಹೆಸರುಗಳ ದಟ್ಟವಾಗಿದ್ದು ಪಟ್ಟವಣೆ ಏರುತ್ತವೆ. ಜನ್ಮತಾರೆ, ದೇವರು ದಿಂಡರು, ಗುರುಹಿರಿಯರು, ಕುಲಕಸುಬುಗಳು, ಉದಾತ್ತ ಧ್ಯೇಯಭಾವನೆಗಳು, ನೈಸರ್ಗಿಕ ವಸ್ತುಗಳು ಇವೇ ಮೊದಲಾದುವು ನಾಮಕರಣದಲ್ಲಿ ಅಪಾರ ಪ್ರಭಾವ ಬೀರುತ್ತವೆ. ಒಮ್ಮೊಮ್ಮೆ ತಂದೆತಾಯಿಯರು ಕರೆಯುವ ಮುದ್ದುಹೆಸರುಗಳೇ ನಿಜನಾಮಗಳನ್ನು ಮರೆಯಿಸಿಬಿಡುವ ಸಂಭವವುಂಟು. ಅಪ್ಪಾಜಿಗೌಡ ಆಗಿ ಸಿದ್ದೇಗೌಡ ಹೆಸರಿಗೆ ಕೊಕ್ಕೋ ಕೊಡುತ್ತದೆ. ತಮ್ಮಯ್ಯ, ಅಣ್ಣಯ್ಯ, ತಾಯಿ, ಚಿಕ್ಕಿ ಇಂಥವು ಈ ವರ್ಗಕ್ಕೆ ಸೇರಿದುವು. ಗುಣಶೀಲ ಸಂದರ್ಭಗಳಿಗನುಗುಣವಾಗಿ ಅಥವಾ ಕುಚೋದ್ಯಕ್ಕಾಗಿ ನೆರೆಹೊರೆಯವರು ಕೊಟ್ಟ ಅಡ್ಡ ಹೆಸರುಗಳು ಖಾಯಮ್ಮಾಗಿ ನಿಂತಾಗ, ಅವುಗಳ ಜತೆಯಲ್ಲಿ ಉರುಫ್ ಸಮೇತ ಮೂಲನಾಮಗಳನ್ನು ಬಳಸುವುದುಂಟು.

'ಹೆಸರುವಿಕೆಯ ಹಿನ್ನೆಲೆಯಲ್ಲಿ ಪ್ರತಿಯೊಂದು ಸಮಾಜವು ತನ್ನ ಭಾಷೆ, ಸಂಸ್ಕೃತಿ, ಧರ್ಮ, ಜಾತಿ, ನಂಬಿಕೆಗಳನ್ನು ಅವಲಂಬಿಸಿರುತ್ತದೆ. ಈ ಕಾರಣದಿಂದ ಹೆಸರು ಅನಿಯಂತ್ರಿತ ವಿಷಯವಾಗಿರದೆ ಸಾಮಾಜಿಕ, ಧಾರ್ಮಿಕ ನಿಯಂತ್ರಣಗಳನ್ನು ಹೊಂದಿರುವುದನ್ನು ಕಾಣಬಹುದು. ಉದಾ. ಭಾರತದ ಕೆಲವು ಧರ್ಮಗ್ರಂಥಗಳಲ್ಲಿ ಸ್ಮೃತಿಕಾರರು ಸೂಚಿಸಿರುವ ಹದಿನಾರು ಸಂಸ್ಕಾರಗಳಲ್ಲಿ ನಾಮಕರಣವೂ ಒಂದು. ಹುಟ್ಟಿದ ಮಗು ಹೆಣ್ಣಾದರೆ ಅಥವಾ ಗಂಡಾದರೆ ಯಾವ ಹೆಸರುಗಳನ್ನಿಡಬೇಕು ಎಂಬ ವಿಷಯದಿಂದ ಹಿಡಿದು ಹೆಸರಿನಲ್ಲಿ ಎಷ್ಟು ಅಕ್ಷರಗಳಿರಬೇಕೆಂಬುದನ್ನು ನಿರ್ದೇಶಿಸಲಾಗಿದೆ. ಹುಟ್ಟಿದ ಮಗು ಗಂಡಾದರೆ ಸಮಸಂಖ್ಯೆಯ ಅಕ್ಷರಗಳನ್ನು, ಮಗು ಹೆಣ್ಣಾದರೆ ಬೆಸ ಸಂಖ್ಯೆಯ ಅಕ್ಷರಗಳನ್ನು ಉಳ್ಳಂತಹ ಹೆಸರಿಡಬೇಕು ಎಂದು ಸೂಚಿಸಲಾಗಿದೆ. ಹಾಗೆಯೇ ಯಾವ ವರ್ಣ, ವರ್ಗಗಳು ಯಾವ ಯಾವ ಬಗೆಯ ಹೆಸರುಗಳನ್ನು ಹೊಂದಬೇಕು ಎಂಬುದನ್ನು ಸೂಚಿಸುತ್ತವೆ. ಉದಾ. ಬ್ರಾಹ್ಮಣರ ಹೆಸರುಗಳು ಮಂಗಳಕರವಾಗಿರಬೇಕೆಂದೂ ವೈಶ್ಯರ ಹೆಸರುಗಳು ಐಶ್ವರ್ಯ ಸೂಚಕವಾಗಿರಬೇಕೆಂದೂ ಕ್ಷತ್ರಿಯರ ಹೆಸರುಗಳು ಶಕ್ತಿಸೂಚಕವಾಗಿಯೂ ಶೂದ್ರರ ಹೆಸರುಗಳು ಸೇವಾವೃತ್ತಿ ಸೂಚಕವೂ ಆಗಿರಬೇಕೆಂದೂ ನಿರ್ದೇಶಿಸುತ್ತವೆ'.[೯] ತಾತ್ಪರ್ಯವಿಷ್ಟೇ, ಹೆಸರುಗಳು ಒಂದು ಸಮುದಾಯದ ಸಂಸ್ಕೃತಿಯ ವಿನ್ಯಾಸವನ್ನು ಚಿತ್ರಿಸುತ್ತವೆ.

ಸ್ಥಳನಾಮಗಳಂತೆಯೇ ವ್ಯಕ್ತಿನಾಮಗಳಲ್ಲಿಯೂ ಎರಡು ಭಾಗಗಳನ್ನು ಗುರುತಿಸಬಹುದು. ಬೀರಪ್ಪ, ಮಾಯಮ್ಮ ಎಂಬ ಎರಡು ಸರಳ ಹೆಸರುಗಳನ್ನು ಬಿಡಿಸಿದರೆ. ಬೀರ+ಅಪ್ಪ, ಮಾಯ+ಅಮ್ಮ ಎಂಬ ಎರಡು ಭಾಗಗಳು ದೊರಕುತ್ತವೆ. ಎರಡನೆಯ ಅಪ್ಪ, ಅಮ್ಮಗಳು ಬೇರೆ ಅಂತಹ ಅನೇಕ ಹೆಸರುಗಳಲ್ಲಿ ಪುನರಾವರ್ತನೆಗೊಳ್ಳುವುದರಿಂದ ಅವುಗಳನ್ನು ವ್ಯಕ್ತಿನಾಮ ವಾರ್ಗಿಕಗಳೆಂದು ಅಥವಾ ಬರಿಯ 'ವಾರ್ಗಿಕ'ಗಳೆಂದು ಕರೆಯಬಹುದು. ಪೂರ್ವಭಾಗಗಳಾದ ಬೀರ, ಮಾಯಗಳನ್ನು ವ್ಯಕ್ತಿನಾಮ ನಿರ್ದಿಷ್ಟಗಳೆಂದು ಅಥವಾ ಬರಿಯ 'ನಿರ್ದಿಷ್ಟ'ಗಳೆಂದು ಕರೆಯಬಹುದು. ನಿರ್ದಿಷ್ಟ, ವಾರ್ಗಿಕಗಳೆರಡೂ ಸೇರಿ ಒಂದು ಹೆಸರು ಎನ್ನಿಸಿಕೊಂಡರೂ ಅವೆರಡರಲ್ಲಿ ಮೊದಲನೆಯದೇ ವ್ಯಕ್ತಿಯ ನಿಜವಾದ ಹೆಸರು. ಏಕೆಂದರೆ ಅವನನ್ನು ಉಳಿದ ವ್ಯಕ್ತಿಗಳಿಂದ ಪ್ರತ್ಯೇಕಿಸುವ ಭಾಗವೆಂದರೆ ಅದೇ. ವಾರ್ಗಿಕವು ಆ ಹೆಸರಿನ ವ್ಯಕ್ತಿ ಗಂಡೋ, ಹೆಣ್ಣೋ (ಅಥವಾ ವಿರಳವಾಗಿ ಆ ವ್ಯಕ್ತಿಯ ಜಾತಿ ಯಾವುದು) ಎಂಬುದನ್ನು ಸೂಚಿಸಲು ಬರುತ್ತದೆ. ವ್ಯವಹಾರದಲ್ಲಿ ವಾರ್ಗಿಕಗಳನ್ನು ಬಿಟ್ಟರೂ ನಡೆಯುತ್ತದೆ. ಉದಾಹರಣೆಗೆ : ವಾರ್ಗಿಕಗಳೇ ನಿರ್ದಿಷ್ಟಗಳಾಗಿಯೂ ಬಳಕೆಯಾಗುವುದು ಸಾಧ್ಯ. ಉದಾ.

ಅಪ್ಪಯ್ಯ
ಅಣ್ಣಪ್ಪ
ಅಕ್ಕಮ್ಮ

ವಾರ್ಗಿಕಗಳಾಗಿ ಬಳಕೆಯಾಗುವ ವೃತ್ತಿ ಅಥವಾ ಜಾತಿ ಸೂಚಕ ಆಕೃತಿಮಾಗಳು ನಿರ್ದಿಷ್ಟವಾಗಿ ಬಳಕೆಯಾಗುತ್ತವೆ. ಉದಾ.

ಬೆಟ್ಟಪ್ಪ
ಗುಡ್ಡಯ್ಯ

ಜಾತಿವಾಚಕ ಮತ್ತು ಸಂಬಂಧವಾಚಕ ಸೇರಿ ವ್ಯಕ್ತಿನಾಮವಾಗುವುದು.

ಗೌಡಪ್ಪ
ಅಯ್ಯಪ್ಪ

ಸಂಬಂಧವಾಚಕ+ಸಂಬಂಧವಾಚಕ ಮತ್ತು ಜಾತಿವಾಚಕ ಸೇರಿ ವ್ಯಕ್ತಿನಾಮವಾಗುವುದು.

ಅಣ್ಣಪ್ಪಗೌಡ
ತಂಗೆಮ್ಮ ಒಡೆಯರ

ನಿರ್ದಿಷ್ಟ+ಸಂಬಂಧವಾಚಕ+ಜಾತಿವಾಚಕಗಳು ಸೇರಿ ವ್ಯಕ್ತಿನಾಮಗಳಾಗುತ್ತವೆ.

ಬೀರಪ್ಪ ಕುರಿಕಾರ
ಮಾಯಮ್ಮ ಕಂಬಳಿ

ಹೆಸರುಗಳ ರಚನೆಯಲ್ಲಿ ಅದರಲ್ಲಿಯೂ ಅವುಗಳ ಅಂತ್ಯ ಪ್ರತ್ಯಯ ಅಥವಾ ವಾರ್ಗಿಕಗಳಲ್ಲಿ ಸೂಕ್ಷ್ಮನಿಯಮಗಳು ಕಂಡುಬರುತ್ತವೆ. ವ್ಯಕ್ತಿನಾಮಗಳನ್ನು ಸಂಬೋಧಿಸುವಾಗ (ಆತ್ಮೀಯತೆ /ಸಲಿಗೆಯ) ಸಂದರ್ಭದಲ್ಲಿ ಪುರುಷರಿಗೆ ನಿರ್ದಿಷ್ಟ ಅಂತ್ಯದಲ್ಲಿ 'ಅ' ಕಾರ ಮತ್ತು 'ಆ' ಕಾರಗಳು ಬಳಕೆಯಾಗುತ್ತವೆ.

ಭರಮಪ್ಪ	>	ಭರಮ	>	ಭರಮ್ಯಾ
ಬೀರಪ್ಪ	>	ಬೀರ	>	ಬೀರ್‍ಯಾ
ರೇವಣಸಿದ್ಧ	>	ರೇವಣ್ಣ	>	ರೇವ್ಯಾ
ಮಾಳಿಂಗರಾಯ	>	ಮಾಳಪ್ಪ/ಮಾಳ	>	ಮಾಳ್ಯಾ

ಸ್ತ್ರೀ ವ್ಯಕ್ತಿನಾಮಗಳಿಗೆ 'ಇ' ಕಾರ ಅಂತ್ಯವಾಗುತ್ತದೆ.

ಮಾಯಮ್ಮ	>	ಮಾಯಿ
ಮಂಕಮ್ಮ	>	ಮಂಕಿ
ಉದ್ದವ್ವ	>	ಉದ್ದಿ
ಖನ್ನಮ್ಮ	>	ಖನ್ನಿ

ಇದೇ ರೀತಿಯಲ್ಲಿ ಒಂದೇ ಮೂಲದ ಹೆಸರುಗಳು ವಾರ್ಗೀಕಗಳ ಸಹಾಯದಿಂದ ವಯಸ್ಸು, ಲಿಂಗ, ಜಾತಿಗಳಲ್ಲಿ ಭಿನ್ನತೆಯನ್ನು ಸೂಚಿಸುತ್ತವೆ.

ಸಿದ್ದ+ಅಣ್ಣ+ಗೌಡ = ಸಿದ್ದನಗೌಡ

ಸಿದ್ದ+ರಾಮ+ಅಯ್ಯ = ಸಿದ್ದರಾಮಯ್ಯ

ಮಾಯ+ಅಮ್ಮ+ಬಾಯಿ = ಮಾಯಮ್ಮಬಾಯಿ

ಒಂದು ಹಟ್ಟಿಯಲ್ಲಿ ಒಂದೇ ಹೆಸರಿನವರಿಂದಲೇ ಅವರನ್ನು ಗುರುತಿಸಲು ಚಿಕ್ಕ, ದೊಡ್ಡ ವಿಶೇಷಣಗಳನ್ನು ಬಳಸುತ್ತಾರೆ. ವಾರ್ಗಿಕಗಳು ಕನ್ನಡ ಹೆಸರಿನ ರಚನೆಗೆ ಅಗತ್ಯವಾದರೂ ಅನಿವಾರ್ಯವೇನೂ ಅಲ್ಲ. ಆದರೆ ಅವು ಸಾಮಾಜಿಕ ಸ್ಥಾನಮಾನ ಸೂಚಕವಾಗುತ್ತವೆ. ಸಾಮಾಜಿಕ ಸ್ತರವಿನ್ಯಾಸ, ವಯಸ್ಸು, ಲಿಂಗ, ಸಾಮಾಜಿಕ ವರ್ಗ ಇತ್ಯಾದಿಗಳನ್ನು ಹೆಸರಿನ ಕೊನೆಗಿರುವ ವಾರ್ಗಿಕದ ಮೇಲಿಂದ ಗುರುತಿಸಬಹುದು.

ಬೀರಲಿಂಗೇಗೌಡರು	ಮಾಯವ್ವ ಬಾಯಿಯವರು	(ತುಂಬ ಗೌರವದ ಸ್ಥಾನ)
↑	↑	
ಬೀರಪ್ಪನವರು	ಮಾಯವ್ವನವರು	(ಗೌರವದ ಸ್ಥಾನ)
↑	↑	
ಬೀರಪ್ಪ	ಮಾಯಕ್ಕ	(ಸಭ್ಯೇತರ)
↑	↑	
ಬೀರ್ಯಾ	ಮಾಯಿ	(ಕೀಳು)

ಕೆಳಗಿನಿಂದ ಮೇಲೆ ಹೋದಂತೆ ಆ ವ್ಯಕ್ತಿಯ ವಯಸ್ಸು, ಲಿಂಗ, ಆರ್ಥಿಕ ಸ್ಥಿತಿ (ಶ್ರೀಮಂತಿಕೆ. ಬಡತನ), ಅವರ ಮನೆತನದ ಸಾಮಾಜಿಕ ಸನ್ನಿವೇಶ ಇತ್ಯಾದಿ ಅಂಶಗಳನ್ನು ತಿಳಿದುಕೊಳ್ಳಬಹುದು. ಹೆಸರುಗಳ ಮುಂದೆ ಬೇರೆ ಬೇರೆ ವಾರ್ಗಿಕಗಳು ಹತ್ತಿ ಸಾಧಿತ ಪದಗಳಾಗುತ್ತವೆ.

ಬೀರ	ಲಿಂಗಬೀರಣ್ಣ
ಬೀರಣ್ಣ	ಬೀರಪ್ಪಗೌಡ
ಬೀರಪ್ಪ	ಬೀರೇಶ್ವರ
ಬೀರಲಿಂಗ	ಬೀರಸಿದ್ದೇಶ
ಬೀರಲಿಂಗೇಗೌಡ	ಬೀರಪ್ಪನವರ
ಬೀರದೇವ	ಶಿವಸಿದ್ದಬೀರ
ಬಾಲಬೀರ	

ಇಂತಹ ಸಾಧಿತ ರೂಪಗಳು ಸಹಿತ ಆಯಾ ವ್ಯಕ್ತಿಗಳ ಸಾಮಾಜಿಕ ಸ್ಥಾನಮಾನ ಸೂಚಕಗಳಾಗಿವೆಯಲ್ಲದೆ ಆ ಸಮುದಾಯದ ಸಾಂಸ್ಕೃತಿಕ ಪರಂಪರೆಯನ್ನು ಸೂಚಿಸುತ್ತವೆ.

- ಕುರುಬೆಟ್ಟ, ಬೀರಪ್ಪ
- ಗೊರಗುದ್ದಿ, ಇಟ್ಟಪ್ಪ

- ಹಡಗಿನಹಾಳ ಮಾಳಪ್ಪ
- ಚಿಂಚಲಿ ಮಾಯವ್ವ
- ಉದಗಟ್ಟಿ ಉದ್ದವ್ವ
- ಹುಲಜಂತಿ ಮಾಳಿಂಗರಾಯ
- ಗೋಲಗೇರಿ ಗೋಲ್ಲಾಳ
- ಅಲಕನೂರಿನ ಕರಿಸಿದ್ದೇಶ
- ಮುಮ್ಮಟಗಿರಿ ಅಮೋಘಸಿದ್ಧ
- ಗುಡೂರು ಹುಲ್ಲಪ್ಪ
- ಚಂದ್ರಗಿರಿ ಚಂದ್ರಪ್ಪ

ಮುಂತಾದ ಹೆಸರುಗಳಲ್ಲಿ ಊರು ಮತ್ತು ದೇವರ ಹೆಸರುಗಳು ಒಂದು ಇನ್ನೊಂದಕ್ಕೆ ಪೂರಕವಾಗಿವೆಯಲ್ಲದೆ ಅವಿನಾಭಾವ ಸಂಬಂಧ ಪಡೆದಿವೆ. ಅವು ಕುರುಬರ ನೆಲೆಗಳನ್ನು ಸ್ಪಷ್ಟವಾಗಿ ಗುರುತಿಸುತ್ತವೆ.

ಉದಾ. ಚಿಕ್ಕಬೀರಪ್ಪ
ದೊಡ್ಡ ಬೀರಪ್ಪ
ಬಾಲ ಬೀರಪ್ಪ
ಲಿಂಗ ಬೀರಪ್ಪ
ದೇವರಸಿ ಬೀರಪ್ಪ
ಗುಡ್ಡದ ಬೀರಪ್ಪ

ವ್ಯಕ್ತಿನಾಮಗಳಿಗೆ ಅಂಟಿಕೊಂಡ ವಿಶೇಷಣಗಳು ಆ ವ್ಯಕ್ತಿಗಳ ವೃತ್ತಿ ಮತ್ತು ಸ್ವರ ವಿನ್ಯಾಸವನ್ನು ಸೂಚಿಸುತ್ತವೆ. ಕುರುಬ ಸಮುದಾಯದಲ್ಲಿ ಹೆಸರುಗಳ ಸ್ವರೂಪವನ್ನು ಐದು ಬಗೆಯಲ್ಲಿ ಗುರುತಿಸಬಹುದು. ಬೀರಪ್ಪ, ಇಟ್ಟಪ್ಪ, ಕರಿಸಿದ್ಧ, ಭರಮಪ್ಪ, ಮಾಳಪ್ಪ, ಮಾಯವ್ವ, ರೇವಣಸಿದ್ದ, ಉದ್ದವ್ವ ಎಂಬ **ದೈವ ಮೂಲದ ಹೆಸರುಗಳನ್ನು** ಇಟ್ಟಿರುತ್ತಾರೆ. ಮನೆಯ ಹಿರಿಯರ ನೆನಪಿಗಾಗಿ ಅಜ್ಜ-ಅಜ್ಜಿಯರ, ತಂದೆ ತಾಯಿಯರ ಹೆಸರಿಡುತ್ತಾರೆ. ಅಜ್ಜನ ಹೆಸರು 'ಭರಮಪ್ಪ' ಎಂದಿದ್ದರೆ ಅವನು ತೀರಿಹೋಗಿದ್ದರೆ ಅವನ ನೆನಪಿಗೆ ಮೊಮ್ಮಗನಿಗೆ ಆ ಹೆಸರು ಇಡುತ್ತಾರೆ. ಅವು **ಪೂರ್ವಜಮೂಲಹೆಸರುಗಳು**. ಅಜ್ಜನ ಹೆಸರನ್ನು ಮೊಮ್ಮಗನಿಗೆ ಇಟ್ಟರೆ ಪ್ರೀತಿಯಿಂದ ಮುತ್ತಪ್ಪ, ಮುತ್ತ್ಯಾ, ಅಜ್ಜಪ್ಪ ಎಂದೇ ಕರೆಯುತ್ತಾರೆ. ಹುಟ್ಟಿದ ಮಕ್ಕಳು ಮತ್ತೆ ಮತ್ತೆ ಸತ್ತು ಹೋಗಿ ಮುಂದೆ ಮಗು ಹುಟ್ಟಿದಾಗ ಅಥವಾ ಬಾಲ್ಯದಲ್ಲಿ ಅವು ರೋಗ ಪೀಡಿತವಾಗಿದ್ದರೆ ಆಗ ದುಷ್ಟಶಕ್ತಿಗಳ ಕಣ್ಣು ಮಕ್ಕಳ ಮೇಲೆ ಬೀಳದಿರಲಿ, ಬಿದ್ದರೂ ಪರಿಹಾರವಾಗಲಿ ಎಂದು ಅಮಂಗಳ ನಾಮಗಳನ್ನು ಇಡುವ ಪದ್ಧತಿ ಎಲ್ಲ ಸಮುದಾಯಗಳಲ್ಲಿರುವಂತೆ ಕುರುಬ ಸಮುದಾಯದಲ್ಲಿಯೂ ಇದೆ. ಮೂಗಪ್ಪ, ಹುಚ್ಚಪ್ಪ,

ಗುಂಡಪ್ಪ, ತಿಪ್ಪಣ್ಣ ಮುಂತಾದುವು. ಅವುಗಳಿಗೆ ಅನಿಷ್ಟ ಹೆಸರುಗಳೆಂದು ಕರೆಯುವರು. ಐತಿಹಾಸಿಕ ಪುರುಷರ ಮತ್ತು ಸಮಕಾಲೀನ ಪ್ರಸಿದ್ಧ ವ್ಯಕ್ತಿಗಳ ಹೆಸರನ್ನು ಇಡುವುದುಂಟು. ಉದಾ. ರಾಯಣ್ಣ, ಸಿದ್ದರಾಮಯ್ಯ, ಚಾಮಯ್ಯ, ಬಾಳಪ್ಪ ಮುಂತಾದ ಜನಪ್ರಿಯ ಹೆಸರುಗಳನ್ನು ಇಡುವುದುಂಟು. ಆಧುನಿಕತೆ, ಸೌಂದರ್ಯಾಕಾಂಕ್ಷೆ ಮತ್ತು ಸೌಲಭ್ಯಾಕಾಂಕ್ಷೆಯ ಪ್ರಭಾವದಿಂದ ತುಂಬ ಉದ್ದನೆಯ ಹೆಸರನ್ನು ಮೊಟಕುಗೊಳಿಸು ವುದುಂಟು. ಉದಾ. ಬೀರಲಿಂಗೇಗೌಡ>ಬೀರಲಿಂಗ>ಬೀರರಾಜು>ರಾಜು. ಕೊನೆ 'ರಾಜು' ಎಂಬುದೇ ವ್ಯವಹಾರದಲ್ಲಿ ಉಳಿಯುತ್ತದೆ. ಅಂತಹ ಮುದ್ದು ಹೆಸರುಗಳನ್ನು ಬಳಸುತ್ತಾರೆ.

ಕರ್ನಾಟಕದ ಉತ್ತರ ಭಾಗವು ಬ್ರಿಟಿಶ್ ಸರಕಾರದ ನೇರ ಆಡಳಿತಕ್ಕೆ ಒಳಪಟ್ಟಿತ್ತು. ಇದರಿಂದಾಗಿ ವ್ಯಕ್ತಿಯ ಹೆಸರಿನ ಜೊತೆಗೆ ಕುಟುಂಬನಾಮದ ಬಳಕೆಯೂ ಅಲ್ಲಿ ರೂಢಿಗೆ ಬಂದಿತು. ಆ ಭಾಗದ ವ್ಯಕ್ತಿನಾಮದ ರಚನೆಯ ವಿನ್ಯಾಸ ಹೀಗಿದೆ.

ಜನ್ಮನಾಮ	ಪಿತೃನಾಮ	ಕುಟುಂಬನಾಮ
ಭರಮಪ್ಪ	ಬೀರಪ್ಪ	ಕುರಿ
ಫಕೀರಪ್ಪ	ಮುತ್ತೆಪ್ಪ	ಕಂಬಳಿ
ಮಾಯವ್ವ	ಹುಲ್ಲಪ್ಪ	ಹಟ್ಟಿ
ಗುಡ್ಡಯ್ಯ	ಗೊರವಪ್ಪ	ಭಂಡಾರದವರ

ಕೆಲವೊಮ್ಮೆ ಜನ್ಮನಾಮ, ಕುಟುಂಬನಾಮ ಇಷ್ಟೇ ಇರಬಹುದು.

ಬೀರಸಿದ್ಧನಗೌಡ	ಆಡಿನ
ಡಿಳ್ಳಿಯಪ್ಪ	ಎಮ್ಮಿ

ಕೆಲವೊಮ್ಮೆ ಇವೆರಡೂ ಹೆಸರುಗಳೂ ಸ್ಥಳಾಂತರವಾಗಬಹುದು.

ಹಟ್ಟಿಗಾರ ಬಾಲಭರಮ
ಉಣ್ಣಿ ಮಾಳವ್ವ

ಈ ಹೆಸರುಗಳನ್ನು ಬರೆಯುವಾಗ ಕುಟುಂಬನಾಮ ಪ್ರಧಾನವಾಗಿ ಉಳಿದುವು ಆದ್ಯಕ್ಷರ ಗಳಿಂದ ಸೂಚಿತವಾಗುತ್ತವೆ. ಬಿ.ಟಿ. ಧನಗಾರ, ಹಿಂ.ಬಿ. ಹೊನ್ನಭಂಡಾರದವರ ಎಂದರೆ ಊರಿನಲ್ಲಿ ಜನ ವ್ಯಕ್ತಿಯನ್ನು ಕರೆಯಲು ಜನ್ಮನಾಮವನ್ನೂ ಬರೆಹ ಅಥವಾ ಅಧಿಕೃತ ದಾಖಲೆಗಳಲ್ಲಿ ವ್ಯಕ್ತಿಸೂಚಕವಾಗಿ ಕುಟುಂಬ ನಾಮವನ್ನೂ ಬಳಸುತ್ತಾರೆ. ತಂದೆಯ ಹೆಸರು ಮಧ್ಯೆ ಬರುವುದು. ವ್ಯಕ್ತಿಯನ್ನು ಇನ್ನೂ ಖಚಿತವಾಗಿ ಗುರುತಿಸಲಿಕ್ಕೆ ಎಂಬುದು ಗಮನಾರ್ಹ.

ದಕ್ಷಿಣ ಕರ್ನಾಟಕದಲ್ಲಿ ಅರ್ಥಾತ್ ಹಳೆಯ ಮೈಸೂರಿನಲ್ಲಿ ಸಂಬೋಧನೆಯಲ್ಲಿಯೂ ಬರೆಹದಲ್ಲಿಯೂ ಜನ್ಮನಾಮವೇ ಮುಖ್ಯವಾದುದು. ಜನ್ಮನಾಮದ ಹಿಂದೆ, ಮುಂದೆ ಏನೂ ಇಲ್ಲದೆ ಅಷ್ಟೇ ಬಳಕೆಯಾಗುವ ಉದಾಹರಣೆಗಳು ಸಾಕಷ್ಟಿವೆ. ಉದಾ. ಸಿದ್ದರಾಮಯ್ಯ,

ಪಮುಮಗೊಂಡ, ಕರಿಬೀರಸಿದ್ಧ. ಜನ್ಮನಾಮದ ಹಿಂದೆ ಊರಿನ ಹೆಸರು ಅಥವಾ ಕುಟುಂಬ ನಾಮವು ಆದ್ಯಕ್ಷರದಿಂದ ಸೂಚಿತವಾಗುತ್ತದೆ. ಕೆಲವು ಸಾರಿ ಊರಿನ ಹೆಸರಿಗೂ ಜನ್ಮ ನಾಮಕ್ಕೂ ಮಧ್ಯೆ ತಂದೆಯ ಹೆಸರು ಆದ್ಯಕ್ಷರದಿಂದ ಸೂಚಿತವಾಗುತ್ತದೆ. ಎಂದರೆ ಅದರ ರಚನೆ ಹೀಗಿರುತ್ತದೆ.

	ಊರಿನ ಹೆಸರು +	ತಂದೆಯ ಹೆಸರು +	ಜನ್ಮನಾಮ
ಜಿ.ಡಿ. ಸೂರಮ್ಮ	ಗೋಲಗೇರಿ	ದೊಡ್ಡಯ್ಯ	ಸೂರಮ್ಮ
ಎಚ್.ಎಸ್. ಲಿಂಗಬೀರಣ್ಣ	ಹುಲಜಂತಿ	ಶಾಂತಮುತ್ತಯ್ಯ	ಲಿಂಗಬೀರಣ್ಣ
ಕೆ.ಎಂ. ಮೈಲಾರಪ್ಪ	ಕುರುಬೇಟ	ಮುದ್ದುಗೊಂಡ	ಮೈಲಾರಪ್ಪ
ಜಿ.ಕೆ. ಸಿದ್ಧಮಲ್ಲಯ್ಯ	ಗೊರಗುದ್ದಿ	ಕರಿಸಿದ್ದಪ್ಪ	ಸಿದ್ಧಮಲ್ಲಯ್ಯ

ಹೆಸರುಗಳ ಸ್ವರೂಪವನ್ನು ಮತ್ತು ಬಳಕೆಯ ಬಗೆಗಳನ್ನು ಅಭ್ಯಾಸ ಮಾಡಿದರೆ ಸಂಸ್ಕೃತಿಯ ಹಲವು ನೆಲೆಗಳ ಅರಿವು ಹೆಚ್ಚಾಗುತ್ತದೆ. ಮತ್ತೆ ಕೆಲವು ಸಂದರ್ಭದಲ್ಲಿ ನಮ್ಮ ತಿಳಿವಳಿಕೆಯ ಸಮರ್ಥನೆಗೆ ಬೇಕಾದ ಮಾಹಿತಿಗಳು ದೊರಕುವುದು ಸಾಧ್ಯ. ಮುಖ್ಯವಾಗಿ ಭಾಷಾಶಾಸ್ತ್ರ, ಸಮಾಜಶಾಸ್ತ್ರ ಮತ್ತು ಇತಿಹಾಸಕಾರರಿಗೆ ಇವು ಬೇರೆ ಬೇರೆ ರೀತಿಯಲ್ಲಿ ಆಕರಗಳಾಗ ಬಲ್ಲುವು.

ಹೆಸರುಗಳು ವಾಸ್ತವವಾಗಿ ಭಾಷಿಕ ರಚನೆಗಳು. ವ್ಯಕ್ತಿಯ ಚಹರೆಗಳನ್ನು ವ್ಯಾಖ್ಯಾನಿಸುವ ಪ್ರಕ್ರಿಯೆ ಹೊಸದೇನಲ್ಲ. ವ್ಯಕ್ತಿಯನ್ನು ಸಂಬೋಧಿಸಲು, ಗುರುತಿಸುವ ಉದ್ದೇಶಕ್ಕಾಗಿ ಹೆಸರುಗಳನ್ನು ಬಳಸುತ್ತೇವೆ. ಸಾಮಾಜಿಕ ವ್ಯವಹಾರ ನಡೆಸಲು, ಸಾಮಾಜಿಕ ಸಂಬಂಧಗಳನ್ನು ಬೆಳೆಸಲು ಅವು ಅಗತ್ಯವಾಗಿವೆ. ಬದಲಾವಣೆ ಯಾವುದೇ ಭಾಷೆಯ ಆರೋಗ್ಯದ ಲಕ್ಷಣ. ಆ ಬದಲಾವಣೆಯ ಭಾಷೆಯ ಹಲವು ವಲಯಗಳಲ್ಲಿ ನಡೆದಂತೆ ಹೆಸರುಗಳಲ್ಲಿಯೂ ನಡೆದಿದೆ. ಕುರುಬರ ಹೆಸರುಗಳೂ ಸಹಿತ ಅದಕ್ಕೆ ಹೊರತಲ್ಲ. ಸಾಮಾಜಿಕ ಕಾರಣಗಳಿಂದಾಗಿ ಅಂದರೆ ಹೀನಾರ್ಥದಿಂದ ಮುಕ್ತವಾಗಲು, ಸೌಂದರ್ಯಾಕಾಂಕ್ಷೆ ಹೊಸ ಹೆಸರಿಗಾಗಿ ಜನ ಹಾತೊರೆಯುತ್ತಾರೆ.

ಕುರುಬರ ಹಳ್ಳಿ > ಅಮರನಗರ
ಕುರುಬೆಟ್ಟ > ಮಮದಾಪುರ
ಬೀರಲಿಂಗೇಗೌಡ > ಬೀರರಾಜು > ರಾಜು
ಕಂಬಳಿ > ಹುಲಕುಂದ
ಕುರಿ > ಕಡಬಿ

ತಿಮ್ಮಕ್ಕ > ಉಮಾ

ಮಾಯಕ್ಕ > ಕವಿತಾ

ಸಾಮಾಜಿಕ ಸಂಪ್ರದಾಯ ಹಾಗೂ ವಿಧಿ ನಿಷೇಧಗಳಿಂದಾಗಿ ನಾಮಾಂತರ ಅನಿವಾರ್ಯ ವಾಗುತ್ತದೆ.

ಕುಟುಂಬನಾಮಗಳು

ಪಾಶ್ಚಾತ್ಯರಲ್ಲಿ ಮೊದಲು ಇದ್ದುದು ಇಟ್ಟ ಹೆಸರುಗಳು ಮಾತ್ರ. ಎಂದರೆ ವ್ಯಕ್ತಿನಾಮ ಗಳು ಮಾತ್ರ. ಅಡ್ಡ ಹೆಸರುಗಳು ಮತ್ತು ಇಟ್ಟ ಹೆಸರುಗಳು ಸೇರಿ ವ್ಯಕ್ತಿಯನ್ನು ಗುರುತಿಸು ವುದಕ್ಕೆ ಸಹಾಯಮಾಡುತ್ತಿದ್ದುವು. ಆದರೆ ತಲೆಮಾರಿನಿಂದ ತಲೆಮಾರಿಗೆ ಹರಿದು ಬರುವ ಕುಟುಂಬನಾಮಗಳು ಇಂಗ್ಲಿಶ್‌ರಲ್ಲಿ ಇತ್ತೀಚೆಗೆ ಎಂದರೆ ಹನ್ನೆರಡು ಹದಿಮೂರನೇ ಶತಮಾನ ದಿಂದ ಬಳಕೆಗೆ ಬಂದಿರಬಹುದೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ತಮ್ಮ ವೃತ್ತಿ, ಅಧಿಕಾರ, ವಂಶಗಳ ಬಗ್ಗೆ ಹೆಮ್ಮೆಯಿರುವ ಶ್ರೀಮಂತವರ್ಗದವರಿಂದ ಕುಟುಂಬನಾಮಗಳ ಬಳಕೆ ಆರಂಭವಾಗಿ, ಮುಂದೆ ಅದನ್ನು ಬೂರ್ಜ್ವಾ ಜನರೂ ಬಳಸಿದರು. ವಂಶ ಪಾರಂಪರ್ಯ ವಾಗಿ ಬರುವ ಕುಟುಂಬನಾಮಗಳ ವಂಶದ ಮುಂದುವರಿಕೆಯನ್ನು ಸಮರ್ಥವಾಗಿ ಹಿಡಿದಿಡು ತ್ತವೆ. ಭಾರತದಲ್ಲಿ ಕುಟುಂಬನಾಮಗಳು ಬಹುಹಿಂದಿನಿಂದ ಇದ್ದವು. ಮೌರ್ಯ, ಗುಪ್ತ, ಚಾಲುಕ್ಯ, ಹೊಯ್ಸಳ ಮುಂತಾದ ಸುಪ್ರಸಿದ್ಧ ರಾಜಮನೆತನಗಳ ಹೆಸರುಗಳನ್ನು ಇಲ್ಲಿ ನೆನೆಯಬಹುದು.

ಉತ್ತರ ಕರ್ನಾಟಕಕ್ಕೂ ದಕ್ಷಿಣ ಕರ್ನಾಟಕಕ್ಕೂ ಹೆಸರುಗಳ ರಚನೆಯಲ್ಲಿ ಎದ್ದುಕಾಣುವ ವ್ಯತ್ಯಾಸ ಕುಟುಂಬನಾಮಗಳಿಗೆ ಸಂಬಂಧಿಸಿದ್ದು ಅವುಗಳ ಬಳಕೆ ಉತ್ತರ ಭಾಗದಲ್ಲಿ ವ್ಯಾಪಕವಾಗಿವೆ. ದಕ್ಷಿಣ ಭಾಗದಲ್ಲಿ ಕುಟುಂಬನಾಮದ ಬಳಕೆ ಇಲ್ಲವೆಂದು ಮೇಲುನೋಟಕ್ಕೆ ಕಂಡುಬಂದರೂ ಅಲ್ಲಿ ಕೆಲವು ಸಲ ವ್ಯಕ್ತರೂಪದಲ್ಲಿ (ಹಟ್ಟಿಕಾರ ಮಾಳಪ್ಪ) ಬಹಳಷ್ಟು ಸಲ ಸಂಕ್ಷಿಪ್ತರೂಪದಲ್ಲಿ (ಹಟ್ಟಿಬಾಲಭರಮ > ಹೆಚ್. ಬಾಲಭರಮ) ಬಳಕೆಯಲ್ಲಿವೆ ಎಂದೇ ಹೇಳಬೇಕು. ಆದರೆ ಕುಟುಂಬನಾಮಗಳು ಉತ್ತರಭಾಗದಲ್ಲಿ ತಲೆಮಾರಿನಿಂದ ತಲೆಮಾರಿಗೆ ಒಂದು ಪರಂಪರೆಯಾಗಿ ಸಾಗಿಬರುತ್ತಿದ್ದರೆ, ದಕ್ಷಿಣಭಾಗದಲ್ಲಿ ವ್ಯತ್ಯಾಸವಾಗುವ ಸಾಧ್ಯತೆ ಇದೆ. ಉದಾ. ಎಸ್. ಬೀರಪ್ಪ ಅವರ ಮಗ ಬಿ. ಮಾಳಪ್ಪ. ಕರ್ನಾಟಕದ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಕುಟುಂಬನಾಮದ ಬಳಕೆಯ ವಿಧಾನವನ್ನು

ಅ. ಕುಟುಂಬನಾಮ ಪ್ರಧಾನ - ಹೆಸರು ಅಪ್ರಧಾನ ವಿಧಾನ

ಆ. ಹೆಸರು ಪ್ರಧಾನ - ಕುಟುಂಬನಾಮ ಅಪ್ರಧಾನ ವಿಧಾನ

ಇ. ಕುಟುಂಬನಾಮ ಪ್ರಧಾನ - ಹೆಸರು ಪ್ರಧಾನ ವಿಧಾನ

ಈ ಮೂರು ರೀತಿಯಲ್ಲಿ ವಿಂಗಡಿಸಿ ಹೇಳಬಹುದು. ಉತ್ತರಭಾಗದಲ್ಲಿ ಕುಟುಂಬನಾಮ ಪ್ರಧಾನ ಹೆಸರು ಅಪ್ರಧಾನ. ಉದಾ. ಕೆ.ಪಿ. ಹಟ್ಟಿಕಾರ, ಬಿ.ಜಿ. ಭಂಡಾರದವರ, ಎಂ.

ಮಾಳಪ್ಪ, ಜಿ. ಭರಮಪ್ಪ ಎಂದು ಬಳಕೆಯಾಗುತ್ತವೆ. ಕುಟುಂಬನಾಮ ಮತ್ತು ಹೆಸರುಗಳೆರಡನ್ನು ಪ್ರಧಾನವಾಗಿ ಬಳಸುವುದು ಸಾಮಾನ್ಯವಾಗಿ ಹೆಂಗಸರಲ್ಲಿ ಹೆಚ್ಚು. ಉದಾ. ಶಾಂತದೇವಿ, ಅಡಿನ, ಮಾಯಕ್ಕ ಕುರಿ. ದಕ್ಷಿಣ ಭಾಗದಲ್ಲಿ ಜನ್ಮನಾಮ ಮತ್ತು ಪತಿಯ ಹೆಸರನ್ನು ಸೇರಿಸುವ ವಾಡಿಕೆ ಇದೆ. ಉದಾ. ಗಂಗಿ ಮಾಳವ್ವ, ಕರಿಸಿದ್ದವ್ವ. ಇದಕ್ಕೆ ಕಾರಣ ತಾವು ಸ್ತ್ರೀರೆಂಬುದನ್ನು ಸ್ಪಷ್ಟಪಡಿಸಿಕೊಳ್ಳುವುದು. ಇತ್ತೀಚೆಗೆ ಪುರುಷರಲ್ಲಿಯೂ ಈ ಪ್ರವೃತ್ತಿ ಕಂಡುಬರುತ್ತದೆ. ಉದಾ. ಬೀರಪ್ಪ ಒಡೆಯರ, ಹುಲ್ಲಪ್ಪ ಉಣ್ಣಿ ಮುಂತಾದುವು. ಉತ್ತರ ಭಾಗದಲ್ಲಿ ವ್ಯಾವಹಾರಿಕವಾಗಿ ಮಾತನಾಡುವಾಗ ವ್ಯಕ್ತಿನಾಮಗಳನ್ನು ಹಿಡಿದು ಕರೆಯುವುದು ರೂಢಿಯಲ್ಲಿದೆ.

ವರ್ಗೀಕರಣ

ಕುಟುಂಬನಾಮಗಳ ಸ್ವರೂಪವನ್ನು ಅನುಲಕ್ಷಿಸಿ ಅವುಗಳನ್ನು ೧. ಸ್ಥಳವಾಚಿ ೨. ವೃತ್ತಿವಾಚಿ ೩. ಜಾತಿವಾಚಿ ೪. ವ್ಯಕ್ತಿವಾಚಿ ೫. ವಸ್ತುವಾಚಿ ೬. ಸಂಕೀರ್ಣಗಳೆಂದು ಆರು ರೀತಿಯಾಗಿ ವರ್ಗೀಕರಿಸಬಹುದು.

ಸ್ಥಳವಾಚಿ : ಪೂರ್ವಜರ ಗ್ರಾಮಗಳನ್ನು ಕುಟುಂಬನಾಮಗಳನ್ನಾಗಿ ಬಳಸುವ ವಾಡಿಕೆ ಇದೆ. ಮಂಡಗೆಯ್ಯ ಮಾದಿರಾಜ, ಹಾವಿನಹಾಳ ಕಲ್ಲಯ್ಯ ಇಂತಹ ಪ್ರಾಚೀನ ನಾಮಗಳಲ್ಲಿ ಗ್ರಾಮನಾಮದ ಸೂಚನೆ ಇರುವುದರಿಂದ ಈ ಪದ್ಧತಿ ತಕ್ಕಮಟ್ಟಿಗೆ ಹಳೆಯದೆಂದೇ ಹೇಳಬೇಕು. ಈ ಕುಟುಂಬನಾಮಗಳಲ್ಲಿ ವ್ಯಕ್ತಿಗಳು ವಾಸಿಸುವ ವಾಸಿಸುತ್ತಿರುವ ಪ್ರದೇಶದ ಸೂಚನೆ ಇರ⁻⁻ವೆ. ಉದಾ. ಎಸ್.ಎಸ್. ದೊಡ್ಡ ಸಿದ್ದನಹಳ್ಳಿ, ಎಂ.ಐ. ಎಮ್ಮಿಗನೂರು, ಎಫ್.ಟಿ. ಕುರಿ ಮುಂತಾದುವು. ಅದರಂತೆ ಜಾಗವನ್ನು ನಿರ್ದೇಶಿಸುವ ಹೆಸರುಗಳು ಕುಟುಂಬನಾಮಗಳಾಗುವುದುಂಟು. ಮೇಲ್ಮನಿ, ಬೇವಿನಮರದ, ಇತ್ಯಾದಿ

ವೃತ್ತಿವಾಚಿ : ತಾವು ಕೈಕೊಳ್ಳುವ ವೃತ್ತಿಗಳಿಂದ ಗುರುತಿಸಿಕೊಳ್ಳುವುದು. ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ವ್ಯಾಪಕವಾಗಿ ಬೆಳೆದು ಬಂದಿತು(ವಿಶೇಷವಾಗಿ ವಚನಕಾರರಲ್ಲಿ) ಮಾದರ ಚೆನ್ನಯ್ಯ, ಆಯ್ದಕ್ಕಿ ಲಕ್ಕಮ್ಮ, ಮೇದಾರ ಕೇತಯ್ಯ, ಜೇಡರ ದಾಸಿಮಯ್ಯ ಮುಂತಾದುವು. ಶಾಸನಗಳಲ್ಲಿಯೂ ಉಲ್ಲೇಖಗಳಿವೆ. ಬೇಲಿಯ ಕೇತ, ಗೊರವರ ಜಿಣ್ಣ, ದೇವರಸಿ ಮಾಳಯ್ಯ ಇತ್ಯಾದಿ. ಗ್ರಾಮೀಣ ಪ್ರದೇಶದಲ್ಲಿ ಆಯಗಾರರನ್ನು ಅವರು ಕೈಕೊಳ್ಳುವ ವೃತ್ತಿಯಿಂದಲೇ ಸಂಬೋಧಿಸುತ್ತಾರೆ.

ಜಾತಿ ವಾಚಿ ಸಾಮಾಜಿಕ ವರ್ಗಗಳು ಕುಟುಂಬನಾಮಗಳಂತೆ ಬಳಕೆಯಾಗುತ್ತವೆ. ಒಡೆಯರ, ಹೇಳಿಕೆಯವರ, ಪೂಜಾರಿ ಮುಂತಾದುವು.

ವ್ಯಕ್ತಿವಾಚಿ : ಕೆಲವು ಮನೆತನಗಳಲ್ಲಿ ಆಗಿ ಹೋದ ಪ್ರಸಿದ್ಧ ಪುರುಷ ಇಲ್ಲವೆ ಸ್ತ್ರೀಯರು ಮನೆತನದ ಹೆಸರುಗಳಾಗಿ ಪರಿಣಮಿಸುತ್ತವೆ. ಉದಾ. ಬೀರಣ್ಣವರ, ಇಟ್ಟಣ್ಣವರ, ಸಂಬಣ್ಣನವರ, ಕಲ್ಲಪ್ಪನವರ ಇತ್ಯಾದಿ.

ವಸ್ತುವಾಚಿ : ಕೆಲವು ವಸ್ತುಗಳ ಸಂಬಂಧ ಮತ್ತು ಬಳಕೆಗಳಿಂದಾಗಿಯೂ ಅವು ವ್ಯಕ್ತಿಗೆ ಮನೆತನದ ಹೆಸರುಗಳಂತೆ ಅಂಟಿಕೊಂಡಿರುತ್ತವೆ. ಅಂದರೆ ಒಂದು ಮನೆತನಕ್ಕೆ ಸಂಬಂಧಿಸಿದ ವಸ್ತುಗಳಲ್ಲಿ ಯಾವುದು ಪ್ರಧಾನವಾಗಿ ಜನರ ಗಮನ ಸೆಳೆಯುವುದೋ ಅದು ಅವರ ಮನೆತನದ ಹೆಸರಾಗುತ್ತದೆ. ಇದರಲ್ಲಿ ಎರಡು ವಿಧ. ಅ. ವಸ್ತುವಾಚಿ (ವಸ್ತುವನ್ನು ಪ್ರಧಾನವಾಗಿ ಬಳಸುವುದು) ಕರಿಕಂಬಳಿ. ಆ. ಪ್ರಾಣಿವಾಚಿ (ಪ್ರಾಣಿಯನ್ನು ಪ್ರಧಾನವಾಗಿ ಬಳಸುವುದು) ಕತ್ತಿ, ಕುದುರಿ, ಎಮ್ಮೆ, ಕುರಿ, ಲಗಳಿ ಇತ್ಯಾದಿ.

ಸಂಕೀರ್ಣ : ಕೆಲವು ಹೆಸರುಗಳು ವ್ಯಕ್ತಿಗಳ ಆಕಾರ, ಸ್ವಭಾವಗಳನ್ನು ಅನುಲಕ್ಷಿಸಿ ಮನೆತನದ ಹೆಸರುಗಳಾಗುತ್ತವೆ. ಉದಾ. ಕುಳ್ಳಿ, ಮೂಗಿ, ಗಡ್ಡದ ಇವು ಮೂಲತಃ ಅಡ್ಡಹೆಸರು ಗಳಾಗಿರಬಹುದು. ಕೆಲವು ವಂಶನಾಮ/ಜನಾಂಗ ನಾಮಗಳು ಮನೆತನದ ಹೆಸರುಗಳಾಗುತ್ತವೆ. ಉದಾ. ರಾಠೋಡ, ರಜಪೂತ, ಅಳ್ವಾ ಇತ್ಯಾದಿ.

ಕುಟುಂಬನಾಮಗಳ ಬದಲಾವಣೆ

ಸಾಮಾನ್ಯವಾಗಿ ಹೆಸರು ಬದಲಾವಣೆಯಾಗುವುದಿಲ್ಲ. ಅವು ನಿರಂತರ ಬದಲಾವಣೆಗೆ ತಮ್ಮನ್ನು ತಾವು ಒಡ್ಡಿಕೊಂಡಿದ್ದರೆ ಗೊಂದಲ ಸೃಷ್ಟಿಯಾಗುತ್ತಿತ್ತು. ಆದರೂ ಕೆಲವು ಹೆಸರು ಗಳು ಬದಲಾವಣೆಗೊಳಗಾಗುತ್ತವೆಂಬುದು ಲೋಕವೇದ್ಯ ಸಂಗತಿ. ಈ ಮಾತು ಸ್ಥಳನಾಮ ಮತ್ತು ವ್ಯಕ್ತಿನಾಮಗಳಂತೆ ಕುಟುಂಬನಾಮಗಳಿಗೂ ಅನ್ವಯವಾಗುತ್ತವೆ. ಸೌಂದರ್ಯಾ ಕಾಂಕ್ಷೆಯಿಂದ ಹಿಡಿದು ಸಾಮಾಜಿಕೋದ್ದೇಶಗಳವರೆಗೆ ಇಂತಹ ಬದಲಾವಣೆಯ ಕಾರಣಗಳು ನಾನಾ ಬಗೆಯಾಗಿ ವ್ಯಾಪಿಸಿಕೊಂಡಿವೆ. ಕೆಲವನ್ನು ಇಲ್ಲಿ ಕಲೆಹಾಕಬಹುದು.

ಅ. ದತ್ತು ಪ್ರಸಂಗ : ಒಬ್ಬ ವ್ಯಕ್ತಿ ಒಂದು ಮನೆತನಕ್ಕೆ ದತ್ತು ಹೋದರೆ ತಮ್ಮ ಮೊದಲಿನ ಕುಟುಂಬನಾಮವನ್ನು ಕಡ್ಡಾಯವಾಗಿ ಬದಲಿಸಬೇಕಾಗುತ್ತದೆ. ಉದಾ. ಬೀರಪ್ಪ, ಭರಮಪ್ಪ ನಾಗೂರು, ದತ್ತುಹೋದರೆ ಬೀರಪ್ಪ, ಅಡಿವೆಪ್ಪ ಮೂಲಿಮನಿ ಎಂದಾಗುತ್ತದೆ.

ಆ. ಹೆಂಗಸರು ಗಂಡನ ಮನೆಗೆ ಬಂದರೆ ಮೊದಲಿನ ಕುಟುಂಬನಾಮವನ್ನು ಕಡ್ಡಾಯವಾಗಿ ಬದಲಿಸಬೇಕಾಗುತ್ತದೆ. ಉದಾ. ಗಂಗವ್ವ ಚಂದ್ರಪ್ಪ, ಭರಮಣ್ಣವರ, ಗಂಗವ್ವಳನ್ನು ಪಂಚಣ್ಣವರ ಮನೆಗೆ ಮದುವೆ ಮಾಡಿಕೊಟ್ಟರೆ ಶಿವಕ್ಕ ದಾನಪ್ಪ ಪಂಚಣ್ಣವರ ಎಂದಾಗುತ್ತದೆ. ಸಮಾಜಕ್ಕೆ ಇವು ಸಮ್ಮತವಾಗಿರುವುದರಿಂದ ಇಂತಹ ಪ್ರಸಂಗಗಳಲ್ಲಿ ಕುಟುಂಬನಾಮಗಳು ತೀವ್ರ ಬದಲಾಗುತ್ತವೆ.

ಇ. ಹೆಸರುಗಳು ಅಸುಂದರವಾಗಿದ್ದರೆ, ಬಳಕೆಯಲ್ಲಿ ಸಂಕೋಚವಾಗುತ್ತಿದ್ದರೆ ಕುಟುಂಬ ನಾಮಗಳನ್ನು ಇಡಿಯಾಗಿ ಇಲ್ಲವೆ ಅಲ್ಪಸ್ವಲ್ಪ ವ್ಯತ್ಯಾಸಗೊಳಿಸುವುದುಂಟು (ವಿದ್ಯಾವಂತರಲ್ಲಿ ಈ ಕ್ರಿಯೆ ಹೆಚ್ಚು).

ಹಳಗಳ್ಳಿ-ಜನ್ಮಟ್ಟಿ ಗುಂಡಪ್ಪನವರ-ಹಾದಿಮನಿ

ಒಣರೊಟ್ಟಿ-ಕುಲಗೋಡು ಕುರಿ-ಮಮದಾಪೂರ ಮುಂತಾದುವು

ಕುಟುಂಬನಾಮಗಳು ಅಸುಂದರವಾಗಿದ್ದರೆ ತಮ್ಮ ಸಾಮಾಜಿಕ ಸ್ಥಾನಮಾನಕ್ಕೆ ಧಕ್ಕೆ ಯಾಗುತ್ತದೆ ಎಂಬ ಅಳುಕು ಅವರನ್ನು ಕಾಡುತ್ತದೆ. ಅದರಿಂದ ಮುಕ್ತವಾಗಲು ನಾಮಾಂತರ ಅನಿವಾರ್ಯವಾಗುತ್ತದೆ. ಈ ಬದಲಾವಣೆಯನ್ನು ಕೆಲವರು ಕಾನೂನುಬದ್ಧವಾಗಿ ಮಾಡಿ ಕೊಂಡರೂ ಸಮಾಜದಲ್ಲಿ ಅದು ತೀವ್ರ ಬದಲಾವಣೆಯಾಗುವುದಿಲ್ಲ. ಉದಾ. ನನ್ನ ಹಳ್ಳಿಯ ಪಕ್ಕದಹಳ್ಳಿಯಲ್ಲಿ ಬಿ.ಬಿ. ನಾಗರಹಾಳ ಎಂಬುವರು ಆ ಹಳ್ಳಿಯಲ್ಲಿ ಮೊದಲ ವಿದ್ಯಾವಂತರು. ಅವರು ಕುಲನಾಮ 'ಕೆಂಗುರಿ' ನಂತರ ಅವರು ಅದನ್ನು ಬದಲಾಯಿಸಿ ಕೊಂಡು ತಮ್ಮ ಹಳ್ಳಿಯ ಹೆಸರನ್ನಿಟ್ಟುಕೊಂಡರು. ಆದರೆ ಆ ಹಳ್ಳಿಯಲ್ಲಿ ಅವರಿಗೆ ಹಾಗೂ ಅವರ ವಂಶಜರಿಗೆ 'ಕೆಂಗುರಿ' ಎಂದೇ ಕರೆಯುತ್ತಾರೆ. ಅಂದರೆ ಕುಟುಂಬನಾಮಗಳು ವ್ಯಕ್ತಿಗಳೊಂದಿಗೆ ಎಂತಹ ಅವಿನಾಭಾವ ಸಂಬಂಧ ಹೊಂದಿರುತ್ತವೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಈ ವ್ಯಕ್ತಿಗಳು (ಈಗಿನವರಾಗಲಿ, ಹಿಂದೆ ಅವರ ವಂಶಜರಾಗಲಿ) ಒಂದು ಊರನ್ನು ಬಿಟ್ಟು ಇನ್ನೊಂದು ಊರಿಗೆ ಹೋದಾಗ ಅಲ್ಲಿ ಅವರ ಕುಟುಂಬನಾಮದ ಹೆಸರು ಮೊದಲಿನ ಊರಿನದಾಗುತ್ತದೆ. ಉದಾ. ಬಸಪ್ಪ ವಾಲಿ ಎಂಬುವವರು ಮೂಲತಃ ಬೂದನೂರಿನವರು. ಅವರು ಉದರ ಪೋಷಣೆಗಾಗಿ ಯರಗಟ್ಟಿಗೆ ಬಂದರು. ಅವರ ಕುಟುಂಬನಾಮ 'ವಾಲಿ' ಹಿಂದೆ ಸರಿದು 'ಬೂದನೂರು' ಎಂಬುದೇ ಕುಟುಂಬನಾಮದಂತೆ ಕೆಲಸ ಮಾಡುತ್ತದೆ. ಬೂದನೂರಿನ ಬಸಪ್ಪ ಎಂದೇ ಅವರನ್ನು ಗುರುತಿಸುವುದುಂಟು.

ಭಾಷೆಯ ರೂಪವ್ಯತ್ಯಾಸ ಕ್ರಿಯೆ ಕುಟುಂಬನಾಮಗಳಲ್ಲಿಯೂ ಸಹಜವಾಗಿ ಕಾಣಿಸಿಕೊಳ್ಳುತ್ತದೆ. ಉಚ್ಚಾರದಲ್ಲಿ ಸಂಕ್ಷೇಪಿಕರಣ. ಅಕ್ಷರಪಲ್ಲಟ, ಸಮರೂಪಧಾರಣೆ ಮೊದಲಾದ ಭಾಷಾ ಪ್ರಕ್ರಿಯೆಗಳು ತಲೆದೋರುತ್ತದೆ.

೧. ಕುಟುಂಬನಾಮಗಳು (ಹೆಚ್ಚಾಗಿ) ಸ್ವರಾಂತಗಳಾಗಿವೆ. ಉಚ್ಚಾರಣೆಯಲ್ಲಿ ಅಕಾರಾಂತ ಕುಟುಂಬನಾಮಗಳು ವ್ಯಂಜನಾಂತಗಳಾಗುತ್ತವೆ.

ದನಗಾರ - ದನಗಾರ್

ಹಟ್ಟಿಗಾರ - ಹಟ್ಟಿಗಾರ್

ಒಡೆಯರು - ಒಡೆಯರ್

'ಇ' ಕಾರಾಂತಗಳು 'ಆ' ಕಾರಾಂತಗಳಾಗುತ್ತವೆ.

ಕಂಬಳಿ - ಕಂಬಳ್ಯಾ

ಕುರಿ - ಕುರ್ಯಾ

೨. ಕ್ರಿಯಾಪದವು ಲಿಂಗದ ಆಧಾರದ ಮೇಲೆ ಕುಟುಂಬನಾಮದ ಲಿಂಗವು ಗುರುತಿಸಲ್ಪಡುವುದನ್ನೂ ಗಮನಿಸಬಹುದಾಗಿದೆ. ಆದರೆ ಬಹುವಚನ ಕ್ರಿಯಾಪದದಿಂದ ಅದನ್ನು ನಿರ್ಧರಿಸುವುದು ಅಸಾಧ್ಯ.

೧. ಅ.	ಬಂದನು ಬಂದನು	ಪುಲ್ಲಿಂಗ ಏಕವಚನ
ಆ.	ಬಂದಳು ಬಂದಳು	ಸ್ತ್ರೀಲಿಂಗ ಏಕವಚನ
೨. ಅ.	ಬಂದರು ಬಂದರು	ಪುಲ್ಲಿಂಗ ಬಹುವಚನ
ಆ.	ಬಂದರು ಬಂದರು	ಪುಲ್ಲಿಂಗ ಬಹುವಚನ

೩. ಕನ್ನಡ ಹೆಸರುಗಳು ಮಹಾರಾಷ್ಟ್ರದಲ್ಲಿ 'ಎ' ಕಾರಾಂತ ಹೊಂದಿವೆ. ಕೋರೆ (ಕೋರಿ) ಸಾಕರೆ (ಸಕ್ಕರಿ) ಕೆಲವೊಮ್ಮೆ ಅನುವಾದವನ್ನೂ ಕಾಣುತ್ತೇವೆ. ಉದಾ. ಹತ್ತಿ-ಕಪಾಸ>ಕಾಪಸೆ ಮುಂತಾದುವು. ಅನ್ಯಭಾಷೆಯ ಪ್ರಭಾವದಿಂದ ಕುಟುಂಬನಾಮಗಳಲ್ಲಿ ಸ್ವೀಕರಣಕ್ರಿಯೆ ನಡೆದಿದೆ.

ಕುಟುಂಬನಾಮಗಳು ಮನೆತನಕ್ಕೆ ಅಂಟಿಕೊಂಡು ಮನೆತನಗಳ ಹಿನ್ನೆಲೆಯನ್ನು ತಿಳಿಸಿ ಕೊಡುತ್ತವೆ. ಸಿದ್ಧ ಒಡೆಯರ, ಅಮೋಘ ಸಿದ್ಧಮಠ ಇಂತಹ ಕುಟುಂಬನಾಮಗಳ ಹಿಂದೆ ಹಾಲುಮತ ಪರಂಪರೆಯ ಚಾರಿತ್ರಿಕ ಹಿನ್ನೆಲೆಯ ಒಂದು ಚರಿತ್ರೆಯನ್ನು ಕಾಣಬಹುದು. ಇವುಗಳಲ್ಲಿ ಇಂದಿಗೂ ಕೆಲವು ಹಾಲುಮತ ಧಾರ್ಮಿಕ ಪುಣ್ಯಕ್ಷೇತ್ರಗಳಾಗಿ ಉಳಿದು ಬಂದುದನ್ನು ಇಲ್ಲಿ ನೆನೆಪಿಸಿಕೊಳ್ಳಬಹುದು. ವಿಶ್ಲೇಷಿಸುತ್ತ ಹೋದರೆ ಮನೆತನಗಳ ಪೂರ್ವ ಇತಿಹಾಸವೇ ಕುಟುಂಬನಾಮಗಳಲ್ಲಿ ಅಡಗಿರುತ್ತವೆ.

ಕರ್ನಾಟಕದಲ್ಲಿ 'ಕುಟುಂಬನಾಮ' ಅಧ್ಯಯನ ವಿಷಯವಾಗಿ ವಿದ್ವಾಂಸರ ಗಮನವನ್ನು ಅಷ್ಟಾಗಿ ಸೆಳೆದಿಲ್ಲವೆಂದೇ ಹೇಳಬೇಕು. ಈಗ ನಮ್ಮ ನಾಡಿನಲ್ಲಿ ಪ್ರಚಲಿತವಿರುವ ಎಲ್ಲ ಕುಟುಂಬನಾಮಗಳನ್ನು ಕಲೆಹಾಕಿ ಅವುಗಳ ಬಳಸುವ ವಿಧಾನ, ಸ್ವರೂಪ ಇತ್ಯಾದಿಗಳ ದೃಷ್ಟಿಯಿಂದ ವರ್ಗೀಕರಿಸಿ ವಿವೇಚಿಸಿದಲ್ಲಿ ಅದು ನಮ್ಮ ಪೂರ್ವಜರ ನೆಲೆ, ವೃತ್ತಿ, ವಂಶ, ಭಾಷೆ, ಮನೋಧರ್ಮ ಇತ್ಯಾದಿಗಳ ಅಧ್ಯಯನವಾಗುತ್ತದೆ. ಒಂದರ್ಥದಲ್ಲಿ ನಮ್ಮ ಸಂಸ್ಕೃತಿಯ ಅಧ್ಯಯನವೇ ಆಗುತ್ತದೆ.

ಅಡ್ಡಹೆಸರು : ವ್ಯಕ್ತಿನಾಮ ಅಧ್ಯಯನದ ತುಂಬ ಸ್ವಾರಸ್ಯಕರವಾದ ಭಾಗವಿದು. ವ್ಯಕ್ತಿಗೆ ಸಂಬಂಧಿಸಿದ ಯಾವುದೋ ವೈಶಿಷ್ಟ್ಯವನ್ನು ಅನುಲಕ್ಷಿಸಿ ತಮಾಷೆ ಇಲ್ಲವೆ ಕುಚೋದ್ಯಕ್ಕೆ ಇಡುವ ಹೆಸರು. ಇಲ್ಲಿ ವ್ಯಕ್ತಿಯ ಗುಣ, ರೂಪ, ಕ್ರಿಯೆಗಳು ಮಹತ್ವದ ಪಾತ್ರವಹಿಸುತ್ತವೆ.

ಉದಾ. ದೊಡ್ಡ ಹೊಟ್ಟೆಯುಳ್ಳವ - ಡೊಳ್ಳ
ಉದ್ದವಾಗಿರುವವ - ಒಂಟೆ

ಕುಂಟುಕಾಲಿದ್ದವ - ಹ್ಯಾಟ

ತೊದಲು ಮಾತನಾಡುವವ - ಬಿಕ್ಕು, ಕುಗ್ಗು ಮುಂತಾದುವು ಇಂತಹುದು ಗಳನ್ನೇ ದೊಡ್ಡದು ಮಾಡಿ 'ಅಡ್ಡ ಹೆಸರು' ಇಡುತ್ತಾರೆ.

'ಅಡ್ಡಹೆಸರು' ಮತ್ತು 'ಕುಟುಂಬನಾಮ' ಇವುಗಳಲ್ಲಿಯ ಸಾಮ್ಯ ವೈಷಮ್ಯಗಳನ್ನು ತಿಳಿಯುವುದು ಅವಶ್ಯಕ. ಉತ್ತರ ಕರ್ನಾಟಕದಲ್ಲಿ 'Surname' ಎಂಬುದಕ್ಕೆ 'ಅಡ್ಡಹೆಸರು' ಎಂಬ ಪದ ಬಳಕೆಯಾದರೆ, ಅದೇ 'ಅಡ್ಡಹೆಸರು' ದಕ್ಷಿಣ ಭಾಗದಲ್ಲಿ 'Nick name' ಎಂಬರ್ಥದಲ್ಲಿ ಬಳಕೆಯಾಗುತ್ತದೆ. Surname ಎಂಬುದು ಒಂದು ಮನೆತನಕ್ಕೆ ಸಂಬಂಧಿಸಿದ್ದು ಮತ್ತು ಅದು ತಲೆಮಾರಿನಿಂದ ತಲೆಮಾರಿಗೆ ಮುಂದುವರೆಯುತ್ತದೆ. Nick name ವ್ಯಕ್ತಿಗೆ ಮಾತ್ರ ಸೀಮಿತ. ಅದನ್ನು ಇಡುವುದು ಬಹುತೇಕ ತಮಾಷೆ ಅಥವಾ ಕುಚೋದ್ಯಕ್ಕಾಗಿ. ಆ ಕಾರಣ ಅದನ್ನು 'ಅಡ್ಡಹೆಸರು' ಎಂದಿಟ್ಟುಕೊಂಡು Surname ಎಂಬುದನ್ನು 'ಕುಟುಂಬನಾಮ' ಎಂದು ಬಳಸಲಾಗಿದೆ.

ಅಡ್ಡಹೆಸರಿನಿಂದ ಕರೆದರೆ ವ್ಯಕ್ತಿಗೆ ಸಹನವಾಗುವುದಿಲ್ಲ. ಕುಟುಂಬನಾಮವು ಬರಿ ವ್ಯಕ್ತಿಗಲ್ಲ. ಅದು ಆ ಕುಟುಂಬಕ್ಕೆ ಅನ್ವಯವಾಗುತ್ತದೆ. ಅದು ತಲೆಮಾರಿನಿಂದ ತಲೆಮಾರಿಗೆ ಹರಿದು ಬರುವುದರಿಂದ ಅದರ ಬಗ್ಗೆ ವ್ಯಕ್ತಿಗಳಿಗೆ ಹೆಮ್ಮೆ ಇರುತ್ತದೆ.

ಅಡ್ಡಹೆಸರುಗಳು ಆ ವ್ಯಕ್ತಿಗೆ ಮಾತ್ರ ಅನ್ವಯಿಸುತ್ತವೆ ಮತ್ತು ರಂಜಕವಾಗಿರುತ್ತವೆ. ಒಮ್ಮೆ ಯಾರೋ ಆಕಸ್ಮಿಕವಾಗಿ ಬಳಸಿದ ವಿಶೇಷಣ ಜನರಲ್ಲಿ ಬಳಕೆಗೆ ಬಂದು, ಆ ವ್ಯಕ್ತಿಗೆ ಅನಧಿಕೃತ ಭಾಗವಾಗಿ ಮಾತ್ರವಲ್ಲದೆ ಅದು ಅವನ ಅಧಿಕೃತ ಹೆಸರಾಗಿಯೇ ಪರಿಣಮಿಸ ಬಹುದು. ಒಬ್ಬ ವ್ಯಕ್ತಿಗೆ ಅಡ್ಡಹೆಸರು ಸೇರಿತೆಂದರೆ ಅದರಿಂದ ಅವನಿಗೆ ಬಿಡುಗಡೆ ಇಲ್ಲ. ಅದು ಬಿಡಿಸಿದಂತೆ ಬೆಳೆಯುತ್ತದೆ. ಉದಾ. ಹ್ಯಾಟ ಮಾಳಪ್ಪ 'ಹ್ಯಾಟ' ಎಂಬುದು ಅವನ ಅಡ್ಡಹೆಸರು, ಅವನಿಗೆ ಯಾರಾದರೂ 'ಹ್ಯಾಟ' ಎಂದರೆ ಪ್ರತಿಭಟಿಸಬಹುದು. ಅವನಿಗೆ ಹೆದರಿ ಆ ಕ್ಷಣ ಜನಸುಮ್ಮನಾಗಬಹುದು. ಆದರೆ ಅವನ ಗೈರುಹಾಜರಿಯಲ್ಲಿ ಅವನು ಹ್ಯಾಟನೇ ಆಗುತ್ತಾನೆ. ಇದೇ ರೀತಿಯಾಗಿ ಕುಳ್ಳ, ಕುಡುಕ, ರೊಡ್ಡ ಮುಂತಾದುವು ಬಳಕೆ ಯಾಗುತ್ತವೆ. ಬೀರಪ್ಪ ಎಂಬಾತ ಪುನಃ ಪುನಃ ಉಗುಳುತ್ತಿದ್ದ ಅವನಿಗೆ 'ಉಗುಳು ಬೀರಪ್ಪ' ಎಂಬುದೇ ಹೆಸರಾಗಿ ಬಿಟ್ಟಿತ್ತು. ಹೀಗೆ ಅಡ್ಡಹೆಸರುಗಳು ನಿಜವಾದ ಹೆಸರಿಗಿಂತ ಪ್ರಚಾರ ವಾಗುತ್ತವೆ.

ಅಡ್ಡಹೆಸರುಗಳು ಆಡುನುಡಿಯಲ್ಲಿ ಮಾತ್ರ ಬಳಕೆಯಾಗದೆ ಹಿಂದಿನ ಕಾವ್ಯ, ಶಾಸನಗಳಲ್ಲಿಯೂ ಬಳಕೆಯಾಗಿವೆ. 'ಹೊಟ್ಟೆಯ ಬೀರ', 'ಹೊನ್ನೋಲೆಯ ಮಾಳಯ್ಯ', 'ಕೇರಿಯಕೇಶಿಮಯ್ಯ' ಮುಂತಾದುವು. ಅಡ್ಡಹೆಸರುಗಳು ಆ ವ್ಯಕ್ತಿಗೆ ಮಾತ್ರ ಅನ್ವಯಿಸು ತ್ತಿದ್ದರು ಸಹಿತ ಕೆಲವೊಮ್ಮೆ ಮನೆತನದ ಹೆಸರಿನಂತೆ ಮುಂದಿನವರಿಗೂ ಅನ್ವಯವಾಗು ವುದುಂಟು. ಉದಾ. ನನ್ನ ಹಳ್ಳಿಯಲ್ಲಿ 'ರುದ್ರಾಪುರ' ಎಂಬ ಹಾಲುಮತ ಸಮುದಾಯದ ಕೃಷಿ ಮನೆತನಗಳಿವೆ. ಅಲ್ಲಿ ದ್ಯಾಮಣ್ಣ ಎಂಬ ಹೆಸರಿನ ಇಬ್ಬರು ನಿಷ್ಠಾವಂತ ಕೃಷಿಕರಿದ್ದರು.

ಅವರ ಮನೆತನವನ್ನು ಗುರುತಿಸಲು ಒಬ್ಬರಿಗೆ 'ತ್ವಾಳದ್ಯಾಮಣ್ಣ' (ನಿರಂತರವಾಗಿ ಕೆಲಸ ಮಾಡುವವ) ಇನ್ನೊಬ್ಬರಿಗೆ 'ಕರಿಯಪ್ಪ' (ಅವನ ಬಣ್ಣವನ್ನು ಗಮನಿಸಿ) ಎಂಬ ಅಡ್ಡಹೆಸರು ಗಳನ್ನಿಟ್ಟರು. ಆ ಅಡ್ಡಹೆಸರುಗಳು ಅವರಿಗೆ ಮಾತ್ರ ಸೀಮಿತವಾಗದೇ ಆ ಮನೆತನಕ್ಕೆ ಅಂಗಿಕ ಎಂಬಂತೆ ಬಳಕೆಯಲ್ಲಿವೆ. ತ್ವಾಳದ್ಯಾಮಣ್ಣನ ಹೊಲ, ಕರಿಯಪ್ಪನ ಮೊಮ್ಮಗ ಇತ್ಯಾದಿ ಯಾಗಿ ಬಳಕೆಯಲ್ಲಿವೆ. ಆ ಮನೆತನದ ಮುಂದಿನವರಿಗೂ ಅವು ಅನ್ವರ್ಥಕ ವಾಗುತ್ತಿವೆ ಎಂಬುದು ಗಮನಾರ್ಹ ಸಂಗತಿಯಾಗಿದೆ.

ಅಡ್ಡಹೆಸರುಗಳ ಇನ್ನೊಂದು ಕಾರ್ಯಸ್ವರೂಪವನ್ನು ಗಮನಿಸಬೇಕಾಗುತ್ತದೆ. ಅವು ಕುಚ್ಚೋದ್ಯಕ್ಕಾಗಿ ಮಾತ್ರ ಬರುವುದಿಲ್ಲ. ವ್ಯಕ್ತಿಯನ್ನು ಇನ್ನೂ ಖಚಿತವಾಗಿ ಗುರುತಿಸುವ ಉದ್ದೇಶಕ್ಕಾಗಿಯೂ ಬರುತ್ತವೆ. ಊರಿನಲ್ಲಿ ಒಂದೇ ಹೆಸರಿನ ಹಲವರಿದ್ದರೆ ಅವರನ್ನು ಸರಿಯಾಗಿ ಗುರುತಿಸಲು ಅವು ನೆರವಾಗುತ್ತವೆ. 'ಬೀರಪ್ಪ' ಎಂಬ ಹೆಸರನ್ನು ಬೆಳಗಾವಿ ಪ್ರದೇಶದಲ್ಲಿ ವಿಶೇಷವಾಗಿ ಇಟ್ಟುಕೊಳ್ಳುತ್ತಾರೆ. ಅವರನ್ನು ಗುರುತಿಸಲು ದೊಡ್ಡಬೀರಪ್ಪ, ಸಣ್ಣಬೀರಪ್ಪ, ಚಿಕ್ಕುಬೀರಪ್ಪ ಎಂಬ ಹೆಸರಿಸುವುದುಂಟು. 'ದೊಡ್ಡ', 'ಚಿಕ್ಕ' ಇವು ಅಡ್ಡಹೆಸರುಗಳಲ್ಲ ವಿಶೇಷಣಗಳು. ಈ ವಿಶೇಷಣಗಳ ಕೆಲಸವನ್ನು ಅಡ್ಡಹೆಸರುಗಳು ರಂಜಕ ರೀತಿಯಲ್ಲಿ ಮಾಡುತ್ತವೆ. ಅಡ್ಡಹೆಸರು ಜನ್ಮನಾಮದ ಜೊತೆ ಸೇರಿ ಮುಂದೆ ಅವರೆಡೂ ಕೂಡಿಯೇ ಅಖಂಡ ಹೆಸರಾಗಿ ಬಳಕೆಗೆ ಬರುತ್ತವೆ. ಮೀಸೆಮೈಲಾರ, ಕೆಂಪಮೈಲಾರ, ಪೆಂಟೀಇಟ್ಟಪ್ಪ ಇಂತಹ ಹೆಸರುಗಳನ್ನು ಇಲ್ಲಿ ನೆನೆಯಬಹುದು. ಅಡ್ಡಹೆಸರುಗಳು ವ್ಯಕ್ತಿನಾಮ ಅಧ್ಯಯನದಲ್ಲಿ ಗಮನಾರ್ಹ ಪಾತ್ರವಹಿಸುತ್ತವೆ.

ಕಾಲಗಣನೆಯ ದೃಷ್ಟಿಯಿಂದ ವ್ಯಕ್ತಿನಾಮಗಳಿಗಿಂತ ಸ್ಥಳನಾಮಗಳು ಈಚಿನವೆಂದೇ ಹೇಳಬೇಕಾಗುತ್ತದೆ. ಆದಿಮಾನವ ವನ್ಯಜೀವಿಯಂತೆ ಉದರ ಪೋಷಣೆ ದೇಹ ರಕ್ಷಣೆಗಾಗಿ ನಿಸರ್ಗವನ್ನವಲಂಬಿಸಿದನು. ಅವನ ಜೀವನ ವ್ಯಾಪಾರಗಳು ಏಕಕ್ಷೇತ್ರಕ್ಕೆ ಸೀಮಿತ ವಾಗಿರಲಿಲ್ಲ. ಹಳ್ಳಕೊಳ್ಳಗಳು ಒಣಗಿದಂತೆಲ್ಲ, ಹಣ್ಣು ಹಂಪಲು, ಬೇರು ಬಳ್ಳಿಗಳು ಕ್ಷಯಿಸಿದಂತೆಲ್ಲ, ಬೇಟೆಯ ಮಿಕಗಳು ಮುಗಿದಂತೆಲ್ಲ ಅವರು ಬೇರೆ ಕಡೆಗಳಿಗೆ ಹೋಗು ತ್ತಿದ್ದರು. ಇದು ನಮ್ಮ ಕಾಡು, ಅದು ನಮ್ಮ ನಾಡೆಂಬುದಾಗಿ ಆ ಅಲೆಮಾರಿಗಳು ಎಲ್ಲೆ ಕಟ್ಟಿಕೊಂಡಿರಲಿಲ್ಲ. ಜಗತ್ತು ಭಗವಂತನದು, ಅದರ ಅನುಭೋಗ ಅವನ ಮಕ್ಕಳಿಗೆಲ್ಲ ಸಲ್ಲತಕ್ಕದ್ದೆಂಬ ಭಾವನೆ ಅವರ ರಕ್ತಗತವಾಗಿತ್ತು. ಆದ್ದರಿಂದ ಆ ಅನಿಕೇತನಗಳಿಗೆ ಮನೆ, ಮಠ, ಮಾರುಗಳಿರಲಿಲ್ಲ. ಕೃಷಿಸಂಸ್ಕೃತಿ ವಿಕಾಸವಾದಂತೆಲ್ಲ ಅವರ ಮೂಲಭೂತ ಭಾವನೆ ಗಳಲ್ಲಿ ವ್ಯತ್ಯಾಸ ತಲೆದೋರಿ, ಅವರ ಜೀವನ ವಿಧಾನವೂ ಪರಿವರ್ತನೆಗೊಳ್ಳುತ್ತಿತ್ತು. ಕಣಿವೆಗಳಲ್ಲಿಯೋ ನದೀತಟಗಳಲ್ಲಿಯೋ ಕೆರೆತಟಾಕಗಳ ಬಳಿಯಲ್ಲಿಯೋ ನೆಲೆನಿಲ್ಲಲು ಅವರು ಮಾಡುತ್ತಿದ್ದ ಹವಣೇ ಆ ಪ್ರಮುಖ ವ್ಯತ್ಯಾಸಗಳಲ್ಲೊಂದಾಗಿತ್ತು, ಆದರೂ ಕೃಷಿ ಸಂಸ್ಕೃತಿಯ ಪ್ರಾರಂಭ ಸಮಯದಲ್ಲಿ ಪೂರ್ವವಾಸನೆಯಿಂದಾಗಿ ಅವನು ಒಂದೇ ಕಡೆ ಸ್ತಿಮಿತವಾಗಿ ನಿಲ್ಲುತ್ತಿರಲಿಲ್ಲ. ಈಗಿನ ಹಕ್ಕಿಪಿಕ್ಕಿಯವರಂತೆಯೋ ಕುರಿಗಾಹಿಗಳಂತೆಯೋ

ನಾಲ್ಕಾರು ದಿನ ಒಂದೆಡೆಯಲ್ಲಿದ್ದು, ಮಡಕೆ ಕುಡಿಕೆ, ತಟ್ಟೆ ಪುಟ್ಟಿಗಳನ್ನು ಹೊತ್ತುಕೊಂಡು, ದನ, ಕುರಿ, ನಾಯಿಗಳನ್ನು ಹಿಡಿದುಕೊಂಡು ಮುಂದೆ ಸಾಗುತ್ತಿದ್ದರು. ಅನುಕೂಲಕರ ಪರಿಸರದಲ್ಲಿ ಕಾಲಿಟ್ಟೊಡನೆಯೇ ಬೀಡು ಬಿಡುತ್ತಿದ್ದರು. ಕಾಲಾನಂತರದಲ್ಲಿ ಅವರ ಬೀಡುಗಳೇ ಹಟ್ಟಿಗಳಾಗುತ್ತಿದ್ದುವು, ಕೊಪ್ಪಲುಗಳಾಗುತ್ತಿದ್ದುವು. ಹಟ್ಟಿಗಳೇ ಆರಂಭಕಾಲದ ವಸತಿಗಳೆಂಬುದು ಶಂ.ಬಾ. ಜೋಶಿಯವರ ಊಹೆ. ಪಾಡು, ಪಾಡಿ, ಪಟ್ಟಣ, ಪೇಟೆ, ಹಾರ, ಆರ, ಆಡಿ, ಬಾಡ, ಬಾಳು, ವಾಡೆ, ವಾಳ, ವಾಟಿ, ವಠಾರ, ಹಾಟ, ಹಾಳು, ಪಾಳ್ಯ, ಪಳ್ಳಿ ಇವೇ ಮೊದಲಾದ ಹತ್ತಾರು ರೂಪಗಳು ಪಟ್ಟಿಯಿಂದ ಸಿದ್ಧವಾಗುತ್ತವೆಂಬ, ಗೊಲ್ಲ, ಗೋವಳ, ಗೌಳಿಗ, ಗೌಡ ಪದಗಳು ಜ್ಞಾತಿ ಸಂಬಂಧಿಗಳೆಂಬ ಅವರ ನಿರ್ಣಯ ಸಾಧು ವಾದುದೆಂದೇ ಹೇಳಬೇಕಾಗುತ್ತದೆ.[9] ವಿದ್ವತ್ಸಮೃದ್ಧವಾದ ಚರ್ಚೆ, ದೀರ್ಘಾಧ್ಯಯನಲಬ್ಧ ಪರಿಣತಿ. ವಿಪುಲ ಸಾಕ್ಷ್ಯಾಧಾರ ಪುರಾವೆಗಳ ಹಿನ್ನೆಲೆಯಲ್ಲಿ ರೂಪುಗೊಂಡಿರುವ ಅವರ ನಿರ್ಣಯಗಳನ್ನು ಅಲ್ಲಗಳೆಯುವುದು ಕಷ್ಟವಾಗುತ್ತದೆ.

ಅದೇನೇ ಇರಲಿ, ಶಿಷ್ಟ ಸಂಪ್ರದಾಯದ ಸಾಹಿತ್ಯ ವಿಜ್ಞಾನಗಳು ರೂಮಿಕ್ಕುವ ಮುನ್ನವೇ ಜನಪದರು ಹಟ್ಟಿಗಳನ್ನು ಕಟ್ಟಿಕೊಂಡು, ಊರುಗಳಲ್ಲಿ ನೆಲಸಿ, ಅಲೆಮಾರಿತನಕ್ಕೆ ವಿರಾಮ ಹಾಕಿರಬೇಕು. ಅಂದಮೇಲೆ ಸಾಮಾಜಿಕ ಕಲ್ಪನೆಗೆ, ರಾಜಕೀಯ ಸಂಸ್ಥೆಗಳ ಉಗಮಕ್ಕೆ, ಇತಿಹಾಸದ ವಿಕಾಸಕ್ಕೆ, ಮೇಲಾಗಿ ಸಂಸ್ಕೃತಿ ನಾಗರಿಕತೆಗಳ ಪ್ರಾದುರ್ಭಾವಕ್ಕೆ ಹಟ್ಟಿ, ಪಾಡಿ ಊರುಗಳೇ ಮೂಲ. ಅವುಗಳಲ್ಲಿ ಕೆಲವಾದರೂ ಪ್ರಾಕ್ಕಾಲಕ್ಕೆ ಸೇರಿದುವೆಂದೇ ಹೇಳಬೇಕಾ ಗುತ್ತದೆ. ಊರುಗಳ ಬೆಳವಣಿಗೆಯೊಡನೆ ಭಾಷೆಯೂ ವಿಕಾಸಗೊಳ್ಳುತ್ತತ್ತೆಂಬುದರಲ್ಲಿ ಸಂದೇಹವಿಲ್ಲ. ಜ್ಞಾನ, ವಿಜ್ಞಾನ ವಿಚಾರಗಳ ಪ್ರಚಾರದೊಡನೆ, ಅಂತೆಯೇ ಭಿನ್ನ ಭಿನ್ನ ಜನಾಂಗಗಳ ಸಂಪರ್ಕದೊಡನೆ ಸಾಂಕರ್ಯ ವಿಕಾರಗಳಿಗೆ ಪಕ್ಕಾಗಿ, ಕಸಿಗೊಂಡು, ಸಮೃದ್ಧವಾಗಿ ಬೆಳೆಯುತ್ತದೆ. ಕಾಲವಾಹಿನಿಯೊಡನೆ ಊರುಗಳ ಹೆಸರು ಸಹ ರೂಪಾಂತರಗೊಳ್ಳುತ್ತವೆ. ಜನರ ಏಳುಬೀಳುಗಳು, ಇತಿಹಾಸದ ಸಂಸ್ಕೃತಿಗಳು, ವಿಚಾರ ಸಂಸರ್ಗ, ಭಾವನಾ ಸಂಘರ್ಷ ಗಳು ಅವುಗಳಲ್ಲಿ ಪ್ರತಿಫಲನಗೊಳ್ಳುತ್ತವೆ. ಹೀಗಾಗಿ ಸ್ಥಳನಾಮಗಳ ಇತಿಹಾಸವೇ ನಾಗರಿ ಕತೆಯ ಇತಿಹಾಸವಾಗುತ್ತದೆ, ಅವು ನಾಗರಿಕತೆಯ ಆಕರಗಳೆಂದರೂ ಸಲ್ಲುತ್ತದೆ. ಅನೇಕ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಘಟನೆಗಳಿಗೆ ಸಾಕ್ಷಿಯಾಗಿ, ಮಾನವನ ಅನಿತ್ಯತೆಯ ನಡುವೆ ನಿತ್ಯತೆಯ ಜೀವಂತ ನಿದರ್ಶನಗಳಾಗಿ ಧಾಳಿಯಲ್ಲಿ ವಿಜಯಧ್ವಜಗಳಾಗಿ, ಸಾಮಾಜಿಕ ಜೀವನದ ಅವಿಚ್ಛಿನ್ನಗತಿಯ ಉಸಿರಾಗಿ, ಏಕಕಾಲದಲ್ಲಿ ಪರಂಪರೆ ಪ್ರಗತಿಗಳ ಪ್ರತೀಕವಾಗಿ, ಭವಿಷ್ಯದ ಭರವಸೆಯಾಗಿ ಅವು ಜಗತ್ತಿನ ಉದ್ದಗಲಗಳಲ್ಲಿ ರಾರಾಜಿಸುತ್ತಿವೆ.

ಊರುಗಳ ನಾಮಕರಣದಲ್ಲಿ ಏಕವ್ಯಕ್ತಿಯ ಕೈವಾಡವಿರಬಹುದು ಇಲ್ಲವೇ ಸಮುದಾಯದ ಶಕ್ತಿಯ ಪವಾಡವಿರಬಹುದು. ಒಂದು ಊರಿನ ನಿರ್ಮಾಣದ ಮೊದಲ ಹಂತದಲ್ಲಿ ಒಂದೋ ಎರಡೋ ಸಾಹಸ ಮನೋಧರ್ಮದ ಕುಟುಂಬಗಳು ಭಾಗವಹಿಸ ಬಹುದು. ಆ ಎರಡು ಬರಬರುತ್ತ ನಾಲ್ಕಾಗಿ, ಎಂಟಾಗಿ ಬೆಳೆಯಬಹುದು ಅಥವಾ ಬೇರೆ ಕುಟುಂಬಗಳು ಒಂದು,

ಊರಿನ ಗಡಿ ನಾಲ್ಕು ದಿಕ್ಕುಗಳಿಗೂ ಚಾಚಿಕೊಳ್ಳಬಹುದು. ಮೊದಲು ತಳವೂರಿದ ಕುಟುಂಬಗಳು ತಮ್ಮ ಇಷ್ಟದೇವತೆಯ, ಪೂರ್ವಿಕರಲ್ಲೊಬ್ಬನ ಅಥವಾ ತಂತಮ್ಮಲ್ಲಿಯೇ ಪುರಸ್ಕೃತ ವ್ಯಕ್ತಿಯೊಬ್ಬನ ಹೆಸರನ್ನು ಆ ಊರಿಗೆ ಅಂಟಿಸಬಹುದು. ಅದೂ ಇಲ್ಲ, ನೆರೆಯೂರಿನವರು ಆ ಊರಿನ ಯಜಮಾನನ ಹೆಸರನ್ನೇ ಅದಕ್ಕೂ ಅಳವಡಿಸ ಬಹುದು. ಒಟ್ಟಿನಲ್ಲಿ ಒಂದಾನೊಂದು ಊರು ವ್ಯಷ್ಟಿ ಸೃಷ್ಟಿಯಾಗಿರಲಿ, ಸಮಷ್ಟಿ ಸೃಷ್ಟಿ ಯಾಗಿರಲಿ. ಹೆಸರು ಮಾತ್ರ ಜಾಣನೊಬ್ಬನಿಂದ ಕಟ್ಟುಗೊಂಡು, ಸಮಾಜದ ಅಂಗೀಕಾರ ಪಡೆಯುತ್ತದೆ. ಪುರೋಹಿತರೋ ಸಭೆಯೋ ಸಮಿತಿಯೋ ಹೆಸರು ಕಟ್ಟಿದ ಸಂದರ್ಭಗಳೂ ಇಲ್ಲದಿಲ್ಲ.

ಒಂದು ಊರಿನ ದೃಷ್ಟಿಯಿಂದ ವ್ಯಕ್ತಿನಾಮಗಳಿಗೆ ಪ್ರಾಶಸ್ತ್ಯವಿರುವಂತೆ, ಒಂದು ಜಿಲ್ಲೆಯ ಅಥವಾ ರಾಜ್ಯದ ದೃಷ್ಟಿಯಿಂದ ಊರ ಹೆಸರಿಗೆ ಪ್ರಾಮುಖ್ಯತೆಯುಂಟು. ವ್ಯಕ್ತಿ, ದೇಶಗಳಿಗಿರುವಂತೆ ಒಂದು ಊರಿಗೂ ಇತಿಹಾಸವುಂಟು. ವ್ಯಕ್ತಿಯ ಹಾಗೂ ನಾಡಿನ ಜೀವನದಲ್ಲಿ ಏರಿಳಿತಗಳಿರುವಂತೆಯೇ ಒಂದು ಗ್ರಾಮದ ಅಥವಾ ನಗರದ ಇತಿಹಾಸದಲ್ಲಿಯೂ ಹಿಗ್ಗು ಕುಗ್ಗುಗಳಿರುತ್ತವೆ. ಒಂದಾನೊಂದು ಕಾಲದಲ್ಲಿ ಪಾಟ್ನ, ಕನೋಜ್ ಮತ್ತು ಕಲ್ಯಾಣಗಳಿಗಿದ್ದ ಪ್ರಾಮುಖ್ಯತೆ ಈ ಹೊತ್ತು ಉಳಿದಿಲ್ಲ. ಅದಕ್ಕೆ ಹಲವಾರು ಸಾಂಸ್ಕೃತಿಕ ಕಾರಣಗಳಿರುತ್ತವೆ.

ಕನ್ನಡ ಸ್ಥಳನಾಮಗಳಲ್ಲಿ ಇತರ ದ್ರಾವಿಡ ಸ್ಥಳವಾಚಿಗಳಂತೆ, ಸಾಮಾನ್ಯವಾಗಿ ಎರಡು ಆಕೃತಿಮಾಗಳಿರುತ್ತವೆ. ಪೂರ್ವಭಾಗವನ್ನು "ನಿರ್ದಿಷ್ಟ"ವೆಂದು ಉತ್ತರ ಭಾಗವನ್ನು "ವಾರ್ಗಿಕ"ವೆಂದು ಕರೆಯಬಹುದು. "ಕಲ್ಲೂರು" ಎಂಬ ಒಂದು ಸರಳ ಉದಾಹರಣೆ ತೆಗೆದುಕೊಳ್ಳೋಣ. ಇದರಲ್ಲಿರುವ "ಕಲ್(ಲ್ಲು)" ಎಂಬುದು ನಿರ್ದಿಷ್ಟ ಆಕೃತಿಮಾ, ಏಕೆಂದರೆ ಅದು ಆ ಊರಿನ ವೈಶಿಷ್ಟ್ಯವನ್ನು ಹೇಳತಕ್ಕದ್ದು. "ಊರು" ಎಂಬುದು ವಾರ್ಗಿಕ ಆಕೃತಿಮಾ, ಏಕೆಂದರೆ ಅದು ಸಾಮಾನ್ಯವಾಚಕ. ಮೂರು, ನಾಲ್ಕು, ಐದು ಅಥವಾ ಆರು (ಬದ್ಧ ಮತ್ತು ಸ್ವತಂತ್ರ) ಆಕೃತಿಮಾಗಳಿರುವ ಹೆಸರುಗಳೂ ಉಂಟು. "ತಿರುಮುಕ್ಕೂಡಲ್ ನರಸೀಪುರ" ಎಂಬ ಹೆಸರಲ್ಲಿ ಕೊನೆಯ ಪಕ್ಷ ಆರು ಆಕೃತಿಮಗಳಿವೆ. ಕನ್ನಡ ಸ್ಥಳನಾಮ ಗಳಲ್ಲಿ ಬರುವ ನಿರ್ದಿಷ್ಟಗಳನ್ನು ಪಟ್ಟಿ ಮಾಡುವುದು ಕಷ್ಟ ಆದರೆ ಅವುಗಳನ್ನು ಕೆಲವು ಗುಂಪುಗಳಾಗಿ ವಿಂಗಡಿಸಬಹುದು (ಸಸ್ಯಗಳು, ಬೆಟ್ಟ-ಗುಡ್ಡ, ಮರಗಳು, ಮನುಷ್ಯರ ಹೆಸರು ಗಳು, ಹೂವುಗಳು ಇತ್ಯಾದಿ). ಆದರೆ ವಾರ್ಗಿಕ ಆಕೃತಿಮಾಗಳ ಸಂಖ್ಯೆ ಸೀಮಿತವಾಗಿರುತ್ತದೆ. ಸ್ಥಳನಾಮ ಘಟಕಗಳ ಅರ್ಥವನ್ನು ದೃಷ್ಟಿಯಲ್ಲಿರಿಸಿಕೊಂಡು ಕುರುಬರ ನೆಲೆಗಳನ್ನು ಗುರುತಿಸುವ ಸ್ಥಳನಾಮಗಳನ್ನು ವರ್ಗೀಕರಿಸಬಹುದು. ಸ್ಥಳನಾಮಗಳಲ್ಲಿ ಅರ್ಥವತ್ತಾದ ಒಂದು ಪದವಿರಬಹುದು ಅಥವಾ ಒಂದಕ್ಕಿಂತ ಹೆಚ್ಚಿನ ಘಟಕಗಳಿರಬಹುದು. ಅವುಗಳನ್ನು ಹೀಗೆ ಕಲೆಹಾಕಬಹುದು.

೧. ಅರ್ಥವತ್ತಾದ ಒಂದು ಪದ ಮಾತ್ರ ಇರುವ ಸ್ಥಳನಾಮಗಳು. ಉದಾ. ಹಟ್ಟಿ, ದೊಡ್ಡಿ

೨. ಅರ್ಥವತ್ತಾದ ಎರಡು ಪದಗಳಿರುವ ಸ್ಥಳನಾಮಗಳು. ಉದಾ. ಕುರುಬರಹಳ್ಳಿ, ಇಟ್ಟನಾಳ, ಮಾಯಾಪುರ.

೩. ಎರಡಕ್ಕಿಂತ ಹೆಚ್ಚಿನ ಪದಗಳಿರುವ ಸ್ಥಳನಾಮಗಳು. ಉದಾ. ಕರೇಕಲ್ಲಹಳ್ಳಿ, ದೊಡ್ಡ ಪರುಗೋಡು, ಬೀರಾಪುರ ಗಡ್ಡಿ.

ಕುರುಬರ ಹೆಸರುಗಳು ದೇಸಿ ಮೂಲವಾಗಿವೆ. ಸಂಸ್ಕೃತದ ಪ್ರಭಾವ ತುಂಬ ಕಡಮೆ. ಅವರ ಹೆಸರುಗಳಲ್ಲಿ ದ್ವಿತ್ವಗಳಿಲ್ಲ. ಏಕೆಂದರೆ ಕುರುಬರು ದ್ರಾವಿಡ ಮೂಲದವರು ತಾನೆ!.

ಜಲವಾಚಿ : ಏಟಿಗುಡ್ಡ, ದೊಣ್ಣೆಹಳ್ಳಿ, ಕುರಿಮಡಗು, ದೊಡ್ಡಿಹಳ್ಳಿ, ಆಲೂರು, ಆಲಕಟ್ಟಿ, ಕೊಳದೂರು ಮುಂತಾದುವು.

ಭೂಸ್ಥಿತಿ : ತಲಕಾಯಲ ಬೆಟ್ಟ, ರೇವಣಸಿದ್ದನ ಬೆಟ್ಟ, ಭರಮಗುಡ್ಡ, ಕುರುಬೆಟ್ಟ, ಕುರಿಮಲೆ, ಗಾಜಲದಿನ್ನೆ, ಸುದ್ದಿಕುಂಟೆ, ಮುಮ್ಮಟಗಿರಿ, ಮಾಲದಿನ್ನಿ, ಹುಲಜಂತಿ, ಹೂಲ್ಲೂರು ಮುಂತಾದುವು.

ಗಿಡಮರ : ತಾವಲಗೇರಿ, ಹುಣಸಿಕಟ್ಟಿ, ಬೆನಕಟ್ಟಿ, ಸರೂರು, ಜಾಲಿಕಟ್ಟಿ, ಹುಲ್ಲೂರು ಮುಂತಾದುವು.

ಪ್ರಾಣಿ ವಾಚಕಗಳು : ಕುರಿಹಟ್ಟಿ, ಕುರಿದೊಡ್ಡಿ, ಕಿರುಬುಕಲ್ಲು, ಎಮ್ಮಿಕೇರಿ, ಎಮ್ಮೆಗುಂಡ, ಎಮ್ಮಿಗನೂರು, ಎಮ್ಮಿದೊಡ್ಡಿ, ತುರುವೇಕೆರೆ ಮುಂತಾದುವು.

ವ್ಯಕ್ತಿನಾಮಗಳು : ಇಟ್ಟಾಪುರ, ಉದಗಟ್ಟಿ, ಗೊರಗುದ್ದಿ, ಮಾಳಿಂಗಪುರ, ಸಿದ್ದನಕೊಳ್ಳ, ಮಾಳಾಪುರ, ಮಾಯಾಪುರ, ಬೀರನಕೇರಿ, ಕರಿಸಿದ್ಧನಗಡ್ಡಿ, ಒಡೇರಹಳ್ಳಿ, ಬೀರಗಡ್ಡಿ, ವಡ್ಡರಹಟ್ಟಿ ಮುಂತಾದುವು.

ಇತರ : ಬಟ್ಲಹಳ್ಳಿ (ಬಟ್ಲ - ಕುರುಬಹಳ್ಳಿ, ಒಂದು ಪಂಗಡ), ಬುದ್ಧಿವಂತರ ಹಳ್ಳಿ (ಬುದ್ಧಿವಂತ - ಕುರುಬ ಹಟ್ಟಿಯ ಯಜಮಾನ) ಅಗಿನಿಹಟ್ಟಿ, (ಅಗಿನಿ - ಕುರುಬ ಜನಾಂಗದ ಒಂದು ಪಂಗಡ).

ಸ್ಥಳನಾಮಗಳು ಸಂಸ್ಕೃತಿಯ ವಿನ್ಯಾಸಗಳನ್ನು ಹಾಗೂ ಒಂದು ಸಂಸ್ಕೃತಿಯ ಚರಣ ಚಿಹ್ನೆಗಳನ್ನು ಗುರುತಿಸಲು ತುಂಬ ನೆರವಾಗುತ್ತವೆ. 'ಹಟ್ಟಿ' ಮತ್ತು 'ಪಟ್ಟಿ' ಇವು ಪ್ರಾಚೀನ ಮಾನವನ ನೆಲೆನಿಂತ ಮೂಲಸ್ಥಳಗಳು ಎಂಬುದಾಗಿ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಕುರುಬರು ಪಶುಪಾಲಕರಾಗಿರುವುದರಿಂದ ಅವು ಕುರುಬರಿಗೇ ಸಂಬಂಧಿಸಿದ ನೆಲೆಗಳಾಗಿವೆ ಎಂಬುದರ ಬಗ್ಗೆ ವಿದ್ವಾಂಸರಲ್ಲಿ ಸಹಮತವಿದೆ.

ಹಟ್ಟಿ : ಕುರುಬನಹಟ್ಟಿ
ಕುರಿಹಟ್ಟಿ
ಕುರುಬಗಟ್ಟಿ

ತುಪ್ಪದ ಕುರಿಹಟ್ಟಿ
ಬಾದನಹಟ್ಟಿ
ಮೈಲಾರಹಟ್ಟಿ
ವಡೇಯರ ಹಟ್ಟಿ
ಹನಬರ ಹಟ್ಟಿ

ಘಟ್ಟ : ಅಜ್ಜನ ಘಟ್ಟ
ಅಳಲ ಘಟ್ಟ
ಘಟ್ಟದ ಹಳ್ಳಿ
ಘಟ್ಟದೂರು
ದೊಡ್ಡ ಘಟ್ಟ
ಹುಣಸೆ ಘಟ್ಟ

ಮುಂತಾದ ನೂರಾರು ಊರ ಹೆಸರುಗಳು ಕರ್ನಾಟಕದ ತುಂಬೆಲ್ಲ ಇವೆ. ಅವೆಲ್ಲ ಕುರುಬರ ನೆಲೆಯ ಪರಧಿಯಲ್ಲಿ ಸಮಾವೇಶಗೊಳ್ಳುತ್ತವೆ. ಅವು ಚರಿತ್ರೆ ಮತ್ತು ಜನಾಂಗದ ಪುನಾರಚನೆಗೆ ಅಪೂರ್ವ ಸಾಮಗ್ರಿ ಒದಗಿಸುತ್ತವೆ.

ಸ್ಥಳನಾಮಗಳು ಅರ್ಥಗರ್ಭಿತವಾದುವು. ಒಂದು ಪ್ರದೇಶದ ನದಿ, ಬೆಟ್ಟ, ಕಲ್ಲು, ಮಣ್ಣು, ಮರ, ಗಿಡ, ಕೋಟೆ, ದೇವಾಲಯ ಮುಂತಾದುವು ಆ ಪ್ರದೇಶದ ಚರಿತ್ರೆಯನ್ನು ಒಂದು ಸಮುದಾಯದ ಸಂಸ್ಕೃತಿಯನ್ನು ತಿಳಿಯಲು ಸಹಾಯಕವಾಗುತ್ತವೆ ಅಥವಾ ಪೂರಕ ಮಾಹಿತಿ ಒದಗಿಸುತ್ತವೆ. ಆದುದರಿಂದ ಸ್ಥಳನಾಮಗಳಿಗೆ ಸಾಮಾನ್ಯ ನಾಮಗಳಿಗೆ ಕೊಡಬೇಕಾದ ಪ್ರಾಧಾನ್ಯಕ್ಕಿಂತ ಹೆಚ್ಚು ಪ್ರಾಧಾನ್ಯ ಕೊಡಬೇಕಾಗಿದೆ. ಒಂದು ಸಮುದಾಯದ ವಾಸ, ಮೂಢನಂಬಿಕೆ, ಸಾಮಾಜಿಕ ಮತ್ತು ಧಾರ್ಮಿಕ ದೃಷ್ಟಿ, ಇವುಗಳ ಬಗೆಗೆ ಮಹತ್ವದ ವಿಚಾರಗಳು, ಅಂದಿನ ಜನರವೃತ್ತಿ, ನೈಸರ್ಗಿಕ ಸಂಪತ್ತು, ಭಾಷಾ ಚರಿತ್ರೆ, ಮಾನವಶಾಸ್ತ್ರ ಮುಂತಾದ ಅನೇಕ ವಿಷಯಗಳನ್ನು ತನ್ನ ಉದರದಲ್ಲಿ ಅಡಗಿಸಿಕೊಂಡಿರುತ್ತವೆ. ಆದುದರಿಂದ ಸ್ಥಳನಾಮ ಅಧ್ಯಯನ ಭಾಷಾಶಾಸ್ತ್ರ ದೃಷ್ಟಿಯಿಂದ ಮಾತ್ರವಲ್ಲದೆ ಸಮಾಜಶಾಸ್ತ್ರ, ಮಾನವಶಾಸ್ತ್ರ ಅಧ್ಯಯನ ದೃಷ್ಟಿಯಿಂದಲೂ ಅಗತ್ಯವಿದೆ. ನಿಷ್ಪತ್ತಿಯನ್ನು ಕುರಿತು ಅರ್ಥ ವಿವರಣೆಯನ್ನು ನೀಡುವುದು ಸ್ಥಳನಾಮ ಅಧ್ಯಯನದಲ್ಲಿ ಪ್ರಮುಖ ಭಾಗವಾಗಿರುತ್ತದೆ.

ಉದಾ : ಕುರುಬೆಟ್ಟ > ಕುರುಬರಬೆಟ್ಟ
ಕುರಿಹಳ್ಳಿ > ಕುರುಬರಹಳ್ಳಿ
ಹೆಬ್ಬಟ್ಟಿ < ಹೆಬ್ಬೆಟ್ಟಿ < ಪೆರ್ಬಟ್ಟಿ

ಸ್ಥಳನಾಮ ಅಧ್ಯಯನದಲ್ಲಿ ಜನಪದರ ನಿರುಕ್ತಿಯು ತುಂಬ ಮಹತ್ವದ ಪಾತ್ರವಹಿಸುತ್ತದೆ. ಉದಾ. ಬೇಸಗೆ ಕಾಲದಲ್ಲಿ ರೈತರು, ಕುರುಬರ ಹಟ್ಟಿಗೆ ಹೋಗಿ ಕುರಿಗಳನ್ನು ತಮ್ಮ ಹೊಲ, ಗದ್ದೆಗಳಲ್ಲಿ ಮಲಗಿಸಬೇಕೆಂಬುದು ಕೇಳಿಕೊಳ್ಳುತ್ತಾರೆ. ಕುರಿಗಳ 'ಹಿಕ್ಕಿ' ಫಲವತ್ತತೆಯ

ಸಂಕೇತ. ಆ ಪ್ರಕಾರ ಕುರುಬರು ಸುಮಾರು ದಿವಸ ರೈತರ ಹೊಲಗಳಲ್ಲಿ ಕುರಿ ಮಲಗಿಸಿದಾಗ ಅಲ್ಲಿ ದೊಡ್ಡಿ ಕಟ್ಟಿಕೊಳ್ಳುತ್ತಾರೆ. ಆ ಪ್ರದೇಶ ಕ್ರಮೇಣ 'ಕುರಿದೊಡ್ಡಿ' ಎಂದು ಹೆಸರಾಯಿತು. ಅದು ಸಾಮಾನ್ಯ ಜನಪದ ನಿರುಕ್ತಿಗೆ ಒಂದು ಉದಾಹರಣೆಯಾಗಿದೆ. ಹೀಗೆ ಕುರುಬರ ಹೆಸರುಗಳ ಬಗ್ಗೆ ಅನೇಕ ಐತಿಹ್ಯ, ಸ್ಥಳಪುರಾಣಗಳಿವೆ. ಅವು ಸಹಿತ ಸಮುದಾಯದ ಮನೋವೃತ್ತಿಯನ್ನು ತಿಳಿದುಕೊಳ್ಳಲು ಸ್ವಾರಸ್ಯಕರವಾದ ಸಂಗತಿಗಳನ್ನು ತಿಳಿಸಿಕೊಡುತ್ತವೆ.

ಹೆಸರುಗಳನ್ನು ಭಾಷಾಶಾಸ್ತ್ರ, ಸಮಾಜಶಾಸ್ತ್ರ ದೃಷ್ಟಿಯಿಂದ ಅಭ್ಯಸಿಸಿದರೆ ಹಾಗೂ ಭಾಷೆ, ಸಮಾಜ, ಸಂಸ್ಕೃತಿಯ ಹಿನ್ನೆಲೆಯಲ್ಲಿ ಪರಿಭಾವಿಸಿದರೆ ಒಂದು ಸಮುದಾಯ ಅಥವಾ ಪ್ರದೇಶದ ಸಾಂಸ್ಕೃತಿಕ ಚಿತ್ರಣ ದೊರೆಯುತ್ತದೆ. ಆ ಪ್ರದೇಶ ಅಥವಾ ಸಮುದಾಯದ ಭಾಷೆ ಮತ್ತು ಸಂಸ್ಕೃತಿ ದೃಷ್ಟಿಯಿಂದ ಸ್ವಾರಸ್ಯಕರವಾದ ಅನೇಕ ಸಂಗತಿಗಳನ್ನು ತಿಳಿಸಿ ಕೊಡುತ್ತವೆ. ಈ ನಿಟ್ಟಿನಲ್ಲಿ ಕರ್ನಾಟಕದ ವಿವಿಧ ಸಮುದಾಯಗಳ ಹೆಸರುಗಳ ಅಧ್ಯಯನ ನಡೆಯಬೇಕಾಗಿದೆ.

ಕುರುಬರ ಹೆಸರುಗಳನ್ನು ಕೇಂದ್ರವಾಗಿಟ್ಟುಕೊಂಡು ಸಿದ್ಧಪಡಿಸದ ಈ ಅಧ್ಯಾಯ ಒಂದು ಪಕ್ಷಿ ನೋಟ ಮಾತ್ರ. ಅಧ್ಯಯನಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳನ್ನು ಸಂಗ್ರಹಿಸಲಿಕ್ಕೆ, ವಿಸ್ತಾರವಾಗಿ ವಿಶ್ಲೇಷಿಸಲಿಕ್ಕೆ ಇಲ್ಲಿ ಸಾಧ್ಯವಾಗಿಲ್ಲ. ಕುರುಬರ ಹೆಸರುಗಳಲ್ಲಿ ಕಂಡುಬರುವ ಕೆಲವು ವೈವಿಧ್ಯಗಳನ್ನು ಸೋದಾಹರಣವಾಗಿ ವಿವರಿಸಲು ಪ್ರಯತ್ನಿಸಲಾಗಿದೆ. ಆ ಮೂಲಕ ಕುರುಬರ ಜನಜೀವನ, ವಲಸೆ, ಭೌಗೋಳಿಕ ಪರಿಸರ ಮೊದಲಾದ ವಿಷಯಗಳ ಕಡೆಗೆ ತಜ್ಞರ ಗಮನ ಸೆಳೆಯಲಾಗಿದೆ.

ಅಡಿಟಿಪ್ಪಣಿಗಳು

೧. ಡಿ. ಪಾಂಡುರಂಗಬಾಬು, `ವ್ಯಕ್ತಿನಾಮಗಳು : ಸಾಮಾಜಿಕ ನೆಲೆ` `ವ್ಯಕ್ತಿನಾಮಗಳು : ಸ್ವರೂಪ ಮತ್ತು ವಿಶ್ಲೇಷಣೆ`, (೨೦೦೦), (ಸಂ.) ಕೆ.ವಿ. ನಾರಾಯಣ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ಪುಟ.೪೦ .

೨. ವಿವರಗಳಿಗಾಗಿ ನೋಡಿ : ಶಂಬಾ ಜೋಶಿ `ಎಡೆಗಳು ಹೇಳುವ ಕಂನಾಡ ಕತೆ`. (೧೯೪೭). ಮಾಧವ ಬಲ್ಲಾಳ ಬಂಧುಗಳು. ಸಾಧನಕೆರೆ. ಧಾರವಾಡ.

ಆಕರಗ್ರಂಥಗಳು

೧. ಕಲಬುರ್ಗಿ ಎಂ.ಎಂ., ೧೯೮೯, ಕನ್ನಡ ನಾಮವಿಜ್ಞಾನ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨. ಚಿದಾನಂದಮೂರ್ತಿ ಎಂ., ೧೯೮೧, ವಾಗರ್ಥ, ಬಾಪ್ಕೊ ಪ್ರಕಾಶನ, ಬೆಂಗಳೂರು.

ಅನುಬಂಧ

ಕುರುಬ ಸಮುದಾಯದಲ್ಲಿ ಕಂಡುಬರುವ ಕೆಲವು ವ್ಯಕ್ತಿನಾಮಗಳನ್ನು (ಕುಟುಂಬನಾಮ ಗಳು ಸೇರಿ) ಇಲ್ಲಿ ಕಲೆಹಾಕಲಾಗಿದೆ.

ಅಂಬಲಿ
ಅಕ್ಕಮ್ಮ
ಅನ್ನೆನ್ನವರ
ಆಡಿನ
ಆಡೆ
ಅಮೋಘ, ಅಮೋಘಸಿದ್ಧ
ಇಟ್ಟಣ್ಣವರ
ಉಣ್ಣೆ
ಉದ್ದವ್ವ
ಎಮ್ಮಿ
ಏಳುಕೋಟಿ
ಒಗ್ಗಪ್ಪ
ಒಗ್ಗಯ್ಯ
ಒಡೆಯರ
ಓತಿನ
ಓತಸ್
ಕಂಚಿನ
ಕಂಬಳಿ
ಕಾಂಬಳೆ
ಕೆಂಡದ
ಕೆಂದೂಳಿ
ಕಬ್ಬಳ್ಳಿ
ಕರಿಕಾರ
ಕರಿಸಿದ್ಧ
ಕರಿಸಿದ್ಧಪ್ಪ
ಕರಿಸಿದ್ದೇಶ
ಕರಿಯಪ್ಪ
ಕರಿದೇವರು
ಕರಿಯೋಗಿಸಿದ್ಧ
ಕರಿಮಾಯಿ
ಕರಿಮಾಯವ್ವ
ಕರಿಯಪ್ಪನವರ
ಕಾಡುಸಿದ್ಧ
ಕಿಲಾರಿ
ಕುರಿ
ಕುರುಬಣ್ಣವರ
ಕುರುಬತ್ತೆವ್ವ
ಕುರುಬಗೌಡ
ಕುನ್ನಿಕಾಮವ್ವ
ಕೊಪ್ಪರಿಗೆಯವರ
ಗಂಟಿ
ಗಂಗಮ್ಮ
ಗಡ್ಡಿ
ಗುಡ್ಡಪ್ಪ
ಗುಡ್ಡಯ್ಯ
ಗುಡ್ಡವ್ವ
ಗಂಗಿಮಾಳವ್ವ
ಗುಡ್ಡದಯ್ಯ
ಗೊರವಪ್ಪ
ಗೊರವಯ್ಯ
ಗೊಗ್ಗಯ್ಯ
ಗೊರಯ್ಯ

ಗೊರವರ
ಗೊಲ್ಲಾಳ
ಗೊಲ್ಲಾಳಪ್ಪ
ಚಂದಪ್ಪ ಜಂಡೆ
ಜಗ್ಗಲಿ
ಜಡಿ
ಜಡೆನ್ನವರ
ಜಟ್ಟೆಪ್ಪ
ಜಟ್ಟೆಮ್ಮ
ಜುಮ್ಮಪ್ಪ
ಟಗರಿನ
ಡಿಳ್ಳಿಯಪ್ಪ
ಡೊಳ್ಳಣ್ಣವರ
ಡೊಳ್ಳು
ತಗರಿನ
ತುರುಗಾರ ತಿಮ್ಮಪ್ಪ
ದನಗಾರ
ದಳವಾಯಿ
ದೇವರಸಿ
ದಿಬ್ಬರಾಯ
ದೊಡ್ಡಯ್ಯ
ಧನಗೊಂಡ
ನಗಾರಿ
ನೀಲಪ್ಪ
ಪದ್ಮಗೊಂಡ
ಪದುಮಗೊಂಡ
ಪಲ್ಲಕ್ಕಿಯವರ
ಪೂಜಾರಿ
ಬಾಲಭರಮ
ಬಿಳಿಕುರಿ
ಬೀರ
ಬೀರಪ್ಪ
ಬೀರಲಿಂಗ
ಬೀರೇಗೌಡ
ಬೀರಸಿದ್ಧ
ಬೀರಪ್ಪಗೌಡ
ಬೀರೇಶ್ವರ
ಬೀರಣ್ಣವರ
ಬೀರಹುಂದೆಣ್ಣವರ
ಭಂಡಾರಿ
ಭಂಡಾರದವರ
ಭಂಡಾರ
ಬೆಟ್ಟದವರ
ಭರಮ
ಭರಮಪ್ಪ
ಭರಮದೇವ
ಭರಮಲಿಂಗ
ಭರಮಗೌಡ
ಮಂಕಮ್ಮ
ಮಕಾಳಿ
ಮಾಕಾಳೆಮ್ಮ
ಮಾಯವ್ವ
ಮಾಯಕ್ಕ
ಮಾಳಪ್ಪ
ಮಾಳಿಂಗರಾಯ
ಮಾಳಮ್ಮ
ಮಾಲಸಂಬಾ
ಮಲ್ಲಯ್ಯ
ಮೈಲಾರ
ಮೈಲಾರಲಿಂಗ
ಮೈಲಾರದೇವ
ಮುದ್ದವ್ವ

ಮುತ್ತಯ್ಯ
ಮುತ್ತೆಪ್ಪ
ಮುತ್ತಪ್ಪ
ಮಳೆಮಲ್ಲೇಶ
ಮಲಕಾರಿ ಸಿದ್ಧ
ಮಲ್ಲೆನ್ನವರ
ಮಿಳ್ಳೆನವರ
ಮಾಳಗಿ
ರೇವಣಸಿದ್ಧ
ರೇವಣ ಸಿದ್ಧೇಶ್ವರ
ಲಿಂಗಬೀರಣ್ಣಾ
ವಗ್ಗಯ್ಯ
ವೀರ ಬೀರಣ್ಣಾ
ವೀರಲಿಂಗ
ಶಾಂತಮುತ್ತಯ್ಯ
ಶಿವಸಿದ್ದಬೀರ
ಸಣ್ಣಕಂಬಳಿ
ಸಿದ್ದಮಲ್ಲಯ್ಯ
ಸೂರಮ್ಮ
ಸುರಾವತಿ
ಹಂದೆನ್ನವರ
ಹಟ್ಟಿ
ಹಟ್ಟಿಕಾರ
ಹಣಬನ್ನವರ
ಹರಿವಾಣದವರ
ಹಾಲರು
ಹುಗ್ಗಿ
ಹುತ್ತಿನ
ಹುಲ್ಲಪ್ಪ
ಹೋತಿನ
ಹೊನ್ನಭಂಡಾರದವರ
ಹೊನ್ನಬಂಡೆನ್ನವರ

ಇಲ್ಲಿ ಉಕ್ತವಾದ ಹೆಸರುಗಳು 'ಬೆಳಗಾವಿ' ಪರಿಸರಕ್ಕೆ ಸೀಮಿತವಾಗಿರುತ್ತವೆ. ಮೇಲಿನ ಪಟ್ಟಿ ಖಂಡಿತ ಸಮಗ್ರವಲ್ಲ; ಆದರೆ ಅದು ಸ್ಥೂಲವಾಗಿ ಕುರುಬ ಸಮುದಾಯಕ್ಕೆ ಸಂಬಂಧಿಸಿದಂತೆ ಬಹುಮುಖ್ಯ ಹೆಸರುಗಳನ್ನು ಒಳಗೊಂಡಿದೆ.

೫೭

ಕುಟುಂಬನಾಮಗಳು : ಭಾಷೆಯ ಸಾಮಾಜಿಕ ನೆಲೆ

ಹೆಸರುಗಳು ಕಾವ್ಯ, ಶಾಸನಗಳಂತೆ ಒಂದು ಪ್ರದೇಶದ/ಅಧ್ಯಯನಕ್ಕೆ ಆನುಷಂಗಿಕ ಆಕರ ಸಾಮಗ್ರಿಗಳಾಗುತ್ತವೆಂದು ವಿದ್ವಾಂಸರು ಕಂಡುಕೊಂಡಿದ್ದಾರೆ. ಅವುಗಳ ಮೂಲಕ ಭಾಷಿಕ ಹಾಗೂ ಸಾಮಾಜಿಕ ಸ್ತರಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಇತ್ತೀಚೆಗೆ ಒಂದು ಶೈಕ್ಷಣಿಕ ಶಿಸ್ತಾಗಿ ಬೆಳೆಯುತ್ತಲಿದೆ.

ಕೇಶಿರಾಜ, ಹೆಸರುಗಳನ್ನು ರೂಢ, ಅಂಕಿತ, ಅನ್ವರ್ಥಕನಾಮಗಳೆಂದು ವರ್ಗೀಕರಿಸಿ ಅವುಗಳ ಸ್ವರೂಪವನ್ನು ಹೇಳಿದ್ದಾನೆ. "ರೂಢ ನಾಮಂ ಪ್ರಸಿದ್ಧ ತರವಾಗಿರ್ಪುದು ಅನ್ವರ್ಥಕ ನಾಮಂ ಗುಣಕ್ಕೆಮರ್ಥಕ್ಕ ಮಯರೂಪವಾಗಿರ್ಪುದು, ಅಂಕಿತನಾಮಂಪೆಸರ ವಿಡುದನಿಷ್ಟ ದಿಂದೆಂತಾ ನುಮಿರ್ಪುದು" ಎಂದು ಹೇಳುತ್ತಾನೆ. ಕೇಶಿರಾಜ ಹೇಳಿದ ಅಂಕಿತನಾಮ ಇಂದು ವ್ಯಾಕರಣದ ವ್ಯಾಪ್ತಿಯನ್ನು ಮೀರಿ ಸಾಮಾಜಿಕ ಆಯಾಮವನ್ನು ಪಡೆದುಕೊಂಡಿದೆ. ಹೆಸರುಗಳು ಭಾಷಿಕ ಸಮುದಾಯದಲ್ಲಿ ವ್ಯಕ್ತಿಗೆ/ಊರಿಗೆ ವಿಶಿಷ್ಟತೆಯನ್ನು ಕೊಡುವ ಅರ್ಥವತ್ತಾದ ಘಟಕಗಳಾಗಿವೆ. ಅವುಗಳ ಶಾಸ್ತ್ರೀಯ ಅಧ್ಯಯನವೇ ನಾಮಶಾಸ್ತ್ರ. ಇದರಲ್ಲಿ ಎರಡು ವಿಧ. ಸ್ಥಳನಾಮಗಳ ಅಧ್ಯಯನವೇ ಸ್ಥಳನಾಮಶಾಸ್ತ್ರ. ವ್ಯಕ್ತಿನಾಮಗಳ ಅಧ್ಯಯನವೇ ವ್ಯಕ್ತಿನಾಮಶಾಸ್ತ್ರ.

ಸ್ಥಳನಾಮಗಳಿಗೂ ವ್ಯಕ್ತಿನಾಮಗಳಿಗೂ ಇರುವ ವ್ಯತ್ಯಾಸವನ್ನು ಗಮನಿಸಬೇಕು. ಸ್ಥಳನಾಮಗಳು ಸಾರ್ವಜನಿಕ ಆಸಕ್ತಿಯವು, ವ್ಯಕ್ತಿನಾಮಗಳು ವೈಯಕ್ತಿಕವಾದುವು. ಅರ್ಥಾತ್ ಒಂದು ಮಗುವಿಗೆ ಹೆಸರಿಡುವುದ ಹೆಚ್ಚೆಂದರೆ ಒಂದು ಸಂಸಾರದ ಆಸಕ್ತಿಯ ವಿಷಯ ವಾಗುತ್ತದೆ. ಸ್ಥಳಗಳಿಗೆ ಹೆಸರುಗಳು ರೂಢಿಯ ಮೇಲೆ ಕ್ರಮವಾಗಿ ನೆಲೆಗೊಳ್ಳುತ್ತವೆ. ಆದರೆ ವ್ಯಕ್ತಿನಾಮಗಳನ್ನು ವಿಧಿವತ್ತಾಗಿ ಇಡುತ್ತಾರೆ.[1] ಸ್ಥಳನಾಮಗಳ ಔಚಿತ್ಯದ ಬಗ್ಗೆ ಚರ್ಚಿಸುವಂತೆ ವ್ಯಕ್ತಿನಾಮಗಳ ಬಗ್ಗೆ ಚರ್ಚಿಸಲು ಸಾಧ್ಯವಾಗುವುದಿಲ್ಲ. ಆದರೆ ಸ್ಥಳನಾಮಗಳಿಗಿಂತ ವ್ಯಕ್ತಿನಾಮಗಳ ಅಧ್ಯಯನ ಕ್ಷೇತ್ರ ವಿಶಾಲವಾಗಿದೆ. ವ್ಯಕ್ತಿನಾಮಗಳು, ಕುಲನಾಮಗಳು

(ಕುಟುಂಬನಾಮಗಳು) ಹಾಗೂ ಸಂಬಂಧವಾಚಕಗಳು ವ್ಯಕ್ತಿನಾಮ ಅಧ್ಯಯನ ಕಕ್ಷೆಯಲ್ಲಿ ಬರುತ್ತವೆ.

ಕನ್ನಡ ಸ್ಥಳನಾಮಗಳ ಬಗ್ಗೆ ಹತ್ತಾರು ಲೇಖನಗಳು, ಮೂರು-ನಾಲ್ಕು ಪುಸ್ತಕಗಳು, ಎರಡು-ಮೂರು ನಿಬಂಧಗಳು ಬಂದಿವೆ. ವ್ಯಕ್ತಿನಾಮಗಳ ಬಗ್ಗೆ ಅಷ್ಟೊ ಕೆಲಸ ನಡೆದಂತೆ ತೋರುವುದಿಲ್ಲ. ಕಾವ್ಯ, ಶಾಸನಗಳನ್ನು ಸಂಪಾದಿಸುತ್ತಾ ಫ್ಲೀಟ್, ರೈಸ್, ಕಿಟಲ್, ಆರ್. ನರಸಿಂಹಾಚಾರ್ ಮುಂತಾದ ವಿದ್ವಾಂಸರು ಕವಿಗಳ ಹೆಸರುಗಳ ಬಗ್ಗೆ ಕೋಶ, ವ್ಯಾಕರಣ ದೃಷ್ಟಿಯಿಂದ ಚರ್ಚಿಸಿದ್ದಾರೆ. ಅವು ಹೆಸರುಗಳ ಸಾಮಾಜಿಕ ಆಯಾಮದ ಬಗೆಗೆ ಮಾಹಿತಿ ಕೊಡುವುದಿಲ್ಲ. ಈ ಅಧ್ಯಯನಕ್ಕೆ ಭಾಷೆ, ಸಮಾಜ, ಸಂಸ್ಕೃತಿಯ ಹಿನ್ನೆಲೆಯಲ್ಲಿ ವಿವೇಚಿಸಿ ಹೊಸಮುಖವನ್ನು ನೀಡಿದ ಕೀರ್ತಿ ಎಂ. ಚಿದಾನಂದಮೂರ್ತಿ ಅವರ 'ಕರ್ನಾಟಕ ವ್ಯಕ್ತಿನಾಮಗಳು' ಎಂಬ ವಿಸ್ತಾರವಾದ ಲೇಖನಕ್ಕೆ ಸಲ್ಲುತ್ತದೆ. ಆ ಬರೆಹ ಈ ಶಾಸ್ತ್ರದ ಇತಿಹಾಸದಲ್ಲಿ ಒಂದು ಮೈಲುಗಲ್ಲು. ವ್ಯಕ್ತಿನಾಮಗಳ ಬಗ್ಗೆ ಅಧ್ಯಯನ ಮಾಡುವವರು ಈ ಲೇಖನದಿಂದಲೇ ಸ್ಫೂರ್ತಿ ಪ್ರೇರಣೆ ಪಡೆಯಬೇಕಾಗಿದೆ ಎಂಬುದು ಬಹುಮಟ್ಟಿಗೆ ನಿರ್ವಿವಾದವಾಗಿದೆ. ಇದರ ತರುವಾಯ ಕೆ.ಪಿ. ಭಟ್‌ರ 'Personal Names in the Naiks' (೧೯೭೩) ಎಸ್.ಡಿ. ಸವದತ್ತಿಮಠರ 'ಮನೆತನದ ಅಡ್ಡಹೆಸರುಗಳು' (೧೯೭೩), ಎ. ಮುರಿಗೆಪ್ಪನವರ 'Personal Names of Karnataka' (೧೯೮೪), ದೇ. ಜವರೇಗೌಡರ 'ವ್ಯಕ್ತಿನಾಮಗಳು' (೧೯೮೯), 'ಕೊಡವರ ಕುಟುಂಬ ನಾಮಗಳು' (೧೯೯೦) ಇವು ಆರಂಭ ದೆಸೆಯ ಗಮನಾರ್ಹ ಲೇಖನಗಳೆನಿಸಿವೆ. ಎಂ.ಎಂ. ಕಲಬುರ್ಗಿಯವರ ಕೆಲವು ಲೇಖನಗಳು ಈ ಅಧ್ಯಯನಕ್ಕೆ ಮೊನಚನ್ನು ಒದಗಿಸಿವೆ. ಅವರ 'ಕನ್ನಡ ನಾಮವಿಜ್ಞಾನ' ಪುಸ್ತಕದ 'ನಾಮ' ಮತ್ತು 'ಕುಟುಂಬ ನಾಮ' ಅಧ್ಯಾಯಗಳು ವ್ಯಕ್ತಿನಾಮ ಅಧ್ಯಯನಕ್ಕೆ ಸಂಬಂಧಿಸಿದ್ದು, ಒಳನೋಟವನ್ನು ಒದಗಿಸಿವೆ. ನಂತರ ಆರ್. ರಾಮಕೃಷ್ಣರ 'ಕೆಲವು ಬುಡಕಟ್ಟುಗಳಲ್ಲಿ ವ್ಯಕ್ತಿನಾಮಗಳು' (೧೯೯೫) ಕೆ.ಎಂ. ವೀರಭದ್ರಶರ್ಮರ 'ಹೆಸರುಗಳು' (೧೯೯೯) ಎಂಬ ಲೇಖನಗಳು ಮಾಹಿತಿ ಪ್ರಧಾನವಾಗಿವೆ. ವ್ಯಕ್ತಿನಾಮಗಳನ್ನು ಕುರಿತಾದ ಗ್ರಂಥರೂಪದ ಪ್ರಯತ್ನ ಇನ್ನೂ ಬಂದಿಲ್ಲ.

ವ್ಯಕ್ತಿನಾಮ ಅಧ್ಯಯನ ಕಕ್ಷೆಯಲ್ಲಿ ಬರುವ ಕುಟುಂಬನಾಮಗಳ ಸ್ವರೂಪ, ಬಳಕೆ ಹಾಗೂ ಭಾಷಾಶಾಸ್ತ್ರಜ್ಞರಿಗೆ ಅವುಗಳಿಂದಾಗುವ ಪ್ರಯೋಜನಗಳನ್ನು ಕುರಿತು ಸ್ಥೂಲವಾಗಿ ವಿವೇಚಿಸುವುದು ಈ ಪ್ರಬಂಧದ ಉದ್ದೇಶವಾಗಿದೆ.

ಅಡ್ಡಹೆಸರು

ಅಡ್ಡಹೆಸರು, ವ್ಯಕ್ತಿನಾಮ ಅಧ್ಯಯನದ ತುಂಬ ಸ್ವಾರಸ್ಯವಾದ ಭಾಗವಿದು. ವ್ಯಕ್ತಿಗೆ ಸಂಬಂಧಿಸಿದ ಯಾವುದೋ ವೈಶಿಷ್ಟ್ಯವನ್ನು ಅನುಲಕ್ಷಿಸಿ ತಮಾಷೆ ಇಲ್ಲವೇ ಕುಚೋದ್ಯಕ್ಕೆ ಇಡುವ ಹೆಸರು. ಇಲ್ಲಿ ವ್ಯಕ್ತಿಯ ಗುಣ, ರೂಪ, ಕ್ರಿಯೆಗಳು ಮಹತ್ವದ ಪಾತ್ರವಹಿಸುತ್ತವೆ.

ಉದಾ. ದೊಡ್ಡ ಹೊಟ್ಟೆಯುಳ್ಳವ - ಡೊಳ್ಳ
ಉದ್ದವಾಗಿರುವವ - ಒಂಟೆ

ಕುಂಟುಕಾಲಿದ್ದವ - ಹ್ಯಾಟ
ತೊದಲು ಮಾತನಾಡುವವ - ಚಿಕ್ಕು, ಕುಗ್ಗು ಮುಂತಾದುವು.

ಇಂತಹುದುಗಳನ್ನೇ ದೊಡ್ಡದು ಮಾಡಿ 'ಅಡ್ಡಹೆಸರು' ಇಡುತ್ತಾರೆ.

'ಅಡ್ಡಹೆಸರು' ಮತ್ತು 'ಕುಲನಾಮ' ಇವುಗಳಲ್ಲಿಯ ಸಾಮ್ಯ ವೈಷಮ್ಯಗಳನ್ನು ತಿಳಿಯುವುದು ಅವಶ್ಯಕ. ಉತ್ತರ ಕರ್ನಾಟಕದಲ್ಲಿ 'Surname' ಎಂಬುದಕ್ಕೆ 'ಅಡ್ಡಹೆಸರು' ಎಂಬ ಪದ ಬಳಕೆಯಾದರೆ, ಅದೇ 'ಅಡ್ಡಹೆಸರು' ದಕ್ಷಿಣ ಕರ್ನಾಟಕ ಭಾಗದಲ್ಲಿ 'Nick name' ಎಂಬರ್ಥದಲ್ಲಿ ಬಳಕೆಯಾಗುತ್ತದೆ. Surname ಎಂಬುದು ಒಂದು ಮನೆತನಕ್ಕೆ ಸಂಬಂಧಿಸಿದ್ದು ಮತ್ತು ಅದು ತಲೆಮಾರಿನಿಂದ ತಲೆಮಾರಿಗೆ ಮುಂದುವರೆಯುತ್ತದೆ. Nick name ವ್ಯಕ್ತಿಗೆ ಮಾತ್ರ ಸೀಮಿತ. ಅದನ್ನು ಇಡುವುದು ಬಹುತೇಕ ತಮಾಷೆ ಅಥವಾ ಕುಚೋದ್ಯಕ್ಕಾಗಿ. ಆ ಕಾರಣ ಅದನ್ನು 'ಅಡ್ಡಹೆಸರು' ಎಂದಿಟ್ಟುಕೊಂಡು 'Surname' ಎಂಬುದನ್ನು 'ಕುಲನಾಮ' ಎಂದು ಬಳಸಲಾಗಿದೆ.*

ಅಡ್ಡಹೆಸರಿನಿಂದ ಕರೆದರೆ ವ್ಯಕ್ತಿಗೆ ಸಹನವಾಗುವುದಿಲ್ಲ. ಕುಲನಾಮವು ಬರಿ ವ್ಯಕ್ತಿಗಲ್ಲ, ಅದು ಆ ಕುಲಕ್ಕೆ ಅನ್ವಯವಾಗುತ್ತದೆ. ಅದು ತಲೆಮಾರಿನಿಂದ ತಲೆಮಾರಿಗೆ ಹರಿದು ಬರುವುದರಿಂದ ಅದರ ಬಗ್ಗೆ ವ್ಯಕ್ತಿಗಳಿಗೆ ಹೆಮ್ಮೆ ಇರುತ್ತದೆ.

ಅಡ್ಡಹೆಸರುಗಳು ಆ ವ್ಯಕ್ತಿಗೆ ಮಾತ್ರ ಅನ್ವಯಿಸುತ್ತವೆ ಮತ್ತು ರಂಜಕವಾಗಿರುತ್ತವೆ. ಒಮ್ಮೆ ಯಾರೋ ಆಕಸ್ಮಿಕವಾಗಿ ಬಳಸಿದ ಒಂದು ವಿಶೇಷಣ ಜನರಲ್ಲಿ ಬಳಕೆಗೆ ಬಂದು, ಆ ವ್ಯಕ್ತಿಯ ಅನಧಿಕೃತ ಭಾಗವಾಗಿ ಮಾತ್ರವಲ್ಲದೆ ಅದು ಅವನ ಅಧಿಕೃತ ಹೆಸರಾಗಿಯೇ ಪರಿಣಮಿಸಬಹುದು. ಒಬ್ಬ ವ್ಯಕ್ತಿಗೆ ಅಡ್ಡಹೆಸರು ಸೇರಿತೆಂದರೆ ಅದರಿಂದ ಅವನಿಗೆ ಬಿಡುಗಡೆ ಇಲ್ಲ. ಅದು ಬಿಡಿಸಿದಂತೆ ಬೆಳೆಯುತ್ತದೆ. ಉದಾ. ಹ್ಯಾಟ ಈರಪ್ಪ, 'ಹ್ಯಾಟ' ಎಂಬುದು ಅವನ ಅಡ್ಡಹೆಸರು, ಅವನಿಗೆ ಯಾರಾದರೂ 'ಹ್ಯಾಟ' ಎಂದರೆ ಅವನು ಪ್ರತಿಭಟಿಸಬಹುದು. ಅವನಿಗೆ ಹೆದರಿ ಆ ಕ್ಷಣ ಜನ ಸುಮ್ಮನಾಗಬಹುದು. ಆದರೆ ಅವನ ಗೈರುಹಾಜರಿಯಲ್ಲಿ ಅವನು ಹ್ಯಾಟನೇ ಆಗುತ್ತಾನೆ. ಅದೇ ರೀತಿಯಾಗಿ ಕುಳ್ಳ, ಕುಡುಕ, ರೊಡ್ಡ, ಮುಂತಾದುವು ಬಳಕೆಯಾಗುತ್ತವೆ. ಬಸಪ್ಪ ಎಂಬಾತ ಪುನಃ ಪುನಃ ಉಗುಳುತ್ತಿದ್ದ ಅವನಿಗೆ 'ಉಗುಳು ಬಸಪ್ಪ' ಎಂಬುದೇ ಹೆಸರಾಗಿ ಬಿಟ್ಟಿತು. ಹೀಗೆ ಅಡ್ಡಹೆಸರುಗಳು ನಿಜವಾದ ಹೆಸರಿಗಿಂತ ಪ್ರಚಾರವಾಗುತ್ತವೆ.

ಅಡ್ಡಹೆಸರುಗಳು ಆಡುನುಡಿಯಲ್ಲಿ ಮಾತ್ರ ಬಳಕೆಯಾಗದೆ ಹಿಂದಿನ ಕಾವ್ಯ, ಶಾಸನಗಳಲ್ಲಿಯೂ ಬಳಕೆಯಾಗಿವೆ. 'ಹೊಟ್ಟೆಯ ಕಾಳಿಸೆಟ್ಟಿ', 'ಹೊನ್ನೋಲೆಯ ಮುದಿಸೆಟ್ಟಿ', 'ಕರಿಯಕೇಶಮಯ್ಯ'ಮುಂತಾದುವು. ಅಡ್ಡಹೆಸರುಗಳು ಆ ವ್ಯಕ್ತಿಗೆ ಮಾತ್ರ ಅನ್ವಯಿಸುತ್ತಿದ್ದರೂ ಕೆಲವೊಮ್ಮೆ ಅಡ್ಡಹೆಸರು ಮನೆತನದ ಹೆಸರಿನಂತೆ ಮುಂದಿನವರಿಗೂ ಅನ್ವಯವಾಗುವುದುಂಟು. ಉದಾ. ನನ್ನ ಹಳ್ಳಿಯಲ್ಲಿ 'ರುದ್ರಾಪುರ' ಎಂಬ ಕೃಷಿ ಮನೆತನಗಳಿವೆ. ಅಲ್ಲಿ ದ್ಯಾಮಣ್ಣ ಎಂಬ ಹೆಸರಿನ ಇಬ್ಬರು ನಿಷ್ಠಾವಂತ ಕೃಷಿಕರಿದ್ದರು. ಅವರ ಮನೆತನವನ್ನು

ಗುರುತಿಸಲು ಒಬ್ಬರಿಗೆ 'ತ್ಯಾಳದ್ಯಾಮಣ್ಣ' (ನಿರಂತರವಾಗಿ ಕೆಲಸ ಮಾಡುವವ) ಇನ್ನೊಬ್ಬರಿಗೆ 'ಕರಿಮಪ್ಪ' (ಅವನ ಬಣ್ಣವನ್ನು ಗಮನಿಸಿ) ಎಂಬ ಅಡ್ಡಹೆಸರುಗಳನ್ನಿಟ್ಟರು. ಈ ಅಡ್ಡ ಹೆಸರುಗಳು ಅವರಿಗೆ ಮಾತ್ರ ಸೀಮಿತವಾಗದೆ ಆ ಮನೆತನಕ್ಕೆ ಅಂಗಿಕ ಎಂಬಂತೆ ಬಳಕೆ ಯಲ್ಲಿವೆ. ತ್ಯಾಳದ್ಯಾಮಣ್ಣನ ಹೊಲ, ಕರಿಯಪ್ಪನ ಮೊಮ್ಮಗ ಇತ್ಯಾದಿಯಾಗಿ ಬಳಕೆ ಯಲ್ಲಿವೆ. ಆ ಮನೆತನದ ಮುಂದಿನವರಿಗೂ ಅವು ಅನ್ವರ್ಥಕವಾಗುತ್ತವೆ.

ಅಡ್ಡಹೆಸರುಗಳ ಇನ್ನೊಂದು ಕಾರ್ಯಸ್ವರೂಪವನ್ನು ಗಮನಿಸಬೇಕಾಗುತ್ತದೆ. ಅವು ಕುಚ್ಯೋದ್ಯಕ್ಕಾಗಿ ಮಾತ್ರ ಬರುವುದಿಲ್ಲ. ವ್ಯಕ್ತಿಯನ್ನು ಇನ್ನೂ ಖಚಿತವಾಗಿ ಗುರುತಿಸುವ ಉದ್ದೇಶಕ್ಕಾಗಿಯೂ ಬರುತ್ತವೆ. ಊರಿನಲ್ಲಿ ಒಂದೇ ಹೆಸರಿನ ಹಲವರಿದ್ದರೆ ಅವರನ್ನು ಸರಿಯಾಗಿ ಗುರುತಿಸಲು ಅವು ನೆರವಾಗುತ್ತವೆ. 'ದುಂಡಪ್ಪ' ಎಂಬ ಹೆಸರನ್ನು ಬೆಳಗಾವಿ ಪ್ರದೇಶದಲ್ಲಿ ವಿಶೇಷವಾಗಿ ಇಟ್ಟುಕೊಳ್ಳುತ್ತಾರೆ. ಅವರನ್ನು ಗುರುತಿಸಲು ದೊಡ್ಡದುಂಡಪ್ಪ, ಸಣ್ಣದುಂಡಪ್ಪ, ಚಿಕ್ಕುದುಂಡಪ್ಪ ಎಂಬ ಹೆಸರಿಸುವುದುಂಟು. 'ದೊಡ್ಡ', 'ಸಣ್ಣ', 'ಚಿಕ್ಕ' ಇವು ಅಡ್ಡಹೆಸರುಗಳಲ್ಲ ವಿಶೇಷಣಗಳು. ಈ ವಿಶೇಷಣಗಳ ಕೆಲಸವನ್ನು ಅಡ್ಡಹೆಸರುಗಳು ರಂಜಕ ರೀತಿಯಲ್ಲಿ ಮಾಡುತ್ತವೆ. ಅಡ್ಡಹೆಸರು ಜನ್ಮನಾಮದ ಜೊತೆ ಸೇರಿ ಮುಂದೆ ಅವೆರೆಡೂ ಕೂಡಿಯೇ ಅಖಂಡ ಹೆಸರಾಗಿ ಬಳಕೆಗೆ ಬರುತ್ತವೆ. ಮೀಸೆಮಲ್ಲಪ್ಪ, ಕೆಂಪ ಮಲ್ಲಪ್ಪ, ಪೆಂಟಿಶಿವಲಿಂಗಪ್ಪ ಇಂತಹ ಹೆಸರುಗಳನ್ನು ಇಲ್ಲಿ ನೆನೆಯಬಹುದು. ಅಡ್ಡಹೆಸರು ಗಳು ವ್ಯಕ್ತಿನಾಮ ಅಧ್ಯಯನದಲ್ಲಿ ಗಮನಾರ್ಹ ಪಾತ್ರವಹಿಸುತ್ತವೆ.

ಕುಲನಾಮಗಳು(ಕುಟುಂಬನಾಮಗಳು)

ಪಾಶ್ಚಾತ್ಯರಲ್ಲಿ ಮೊದಲು ಇದ್ದುದು ಇಟ್ಟ ಹೆಸರು ಮಾತ್ರ. ಎಂದರೆ ವ್ಯಕ್ತಿನಾಮಗಳು ಮಾತ್ರ. ಅಡ್ಡಹೆಸರುಗಳು ಮತ್ತು ಇಟ್ಟಹೆಸರುಗಳು ಸೇರಿ ವ್ಯಕ್ತಿಯನ್ನು ಗುರುತಿಸುವುದಕ್ಕೆ ಸಹಾಯ ಮಾಡುತ್ತಿದ್ದುವು. ಆದರೆ ತಲೆಮಾರಿನಿಂದ ತಲೆಮಾರಿಗೆ ಹರಿದ ಬರುವ ಕುಲನಾಮ ಗಳು ಇಂಗ್ಲಿಶ್‌ರಲ್ಲಿ ಇತ್ತೀಚೆಗೆ, ಎಂದರೆ ಹನ್ನೆರಡು ಹದಿಮೂರನೇ ಶತಮಾನದಿಂದ ಬಳಕೆಗೆ ಬಂದಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ತಮ್ಮ ವೃತ್ತಿ, ಅಧಿಕಾರ, ವಂಶಗಳ ಬಗ್ಗೆ ಹೆಮ್ಮೆಯಿರುವ ಶ್ರೀಮಂತ ವರ್ಗದವರಿಂದ ಕುಲನಾಮಗಳ ಬಳಕೆ ಆರಂಭವಾಗಿ, ಮುಂದೆ ಅದನ್ನು ಬೂರ್ಜ್ವಾ ಜನರೂ ಬಳಸಿದರು.[೨] ವಂಶ ಪಾರಂಪರ್ಯವಾಗಿ ಬರುವ ಕುಲನಾಮಗಳು ವಂಶದ ಮುಂದುವರಿಕೆಯನ್ನು ಸಮರ್ಥವಾಗಿ ಹಿಡಿದಿಡುತ್ತವೆ. ಭಾರತದಲ್ಲಿ ಕುಲನಾಮಗಳು ವಂಶದ ಮುಂದುವರಿಕೆಯನ್ನು ಸಮರ್ಥವಾಗಿ ಹಿಡಿದಿಡುತ್ತವೆ. ಭಾರತದಲ್ಲಿ ಕುಲನಾಮಗಳು ಬಹುಹಿಂದಿನಿಂದ ಇದ್ದವು. ಮೌರ್ಯ, ಗುಪ್ತ, ಚಾಲುಕ್ಯ, ಹೊಯ್ಸಳ ಮುಂತಾದ ಸುಪ್ರಸಿದ್ಧ ರಾಜಮನೆತನಗಳ ಹೆಸರುಗಳನ್ನು ಇಲ್ಲಿ ನೆನೆಯಬಹುದು.

ಉತ್ತರ ಕರ್ನಾಟಕಕ್ಕೂ ದಕ್ಷಿಣ ಕರ್ನಾಟಕಕ್ಕೂ ಹೆಸರುಗಳ ರಚನೆಯಲ್ಲಿ ಎದ್ದು ಕಾಣುವ ವ್ಯತ್ಯಾಸ ಕುಲನಾಮಗಳಿಗೆ ಸಂಬಂಧಿಸಿದ್ದು ಅವುಗಳ ಬಳಕೆ ಉತ್ತರ ಭಾಗದಲ್ಲಿ ವ್ಯಾಪಕ ವಾಗಿದೆ. ದಕ್ಷಿಣ ಭಾಗದಲ್ಲಿ ಕುಲನಾಮದ ಬಳಕೆ ಇಲ್ಲವೆಂದು ಮೇಲುನೋಟಕ್ಕೆ ಕಂಡು

ಬಂದರೂ ಅಲ್ಲಿ ಕೆಲವು ಸಲ ವ್ಯಕ್ತರೂಪದಲ್ಲಿ (ಮಠದ ಚಿದಾನಂದಮೂರ್ತಿ>ಎಂ. ಚಿದಾನಂದಮೂರ್ತಿ) ಬಳಕೆಯಲ್ಲಿವೆ ಎಂದೇ ಹೇಳಬೇಕು. ಆದರೆ ಕುಲನಾಮಗಳು ಉತ್ತರಭಾಗದಲ್ಲಿ ತಲೆಮಾರಿನಿಂದ ತಲೆಮಾರಿಗೆ ಒಂದು ಪರಂಪರೆಯಾಗಿ ಸಾಗಿ ಬರುತ್ತಿದ್ದರೆ ದಕ್ಷಿಣ ಭಾಗದಲ್ಲಿ ವ್ಯತ್ಯಾಸವಾಗುವ ಸಾಧ್ಯತೆ ಇದೆ. ಉದಾ. ಎಸ್. ನಿಜಲಿಂಗಪ್ಪ ಅವರ ಮಗ ಎನ್. ಉಮಾಕಾಂತ.

ಕುಲನಾಮಗಳು ಕರ್ನಾಟಕದ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಬೇರೆ ಬೇರೆ ರೀತಿಯಾಗಿ ಬಳಕೆಯಾಗುತ್ತಿವೆ. ಉದಾ. ಶಿ.ಶಿ. ಬಸವನಾಳರು ದಕ್ಷಿಣದಲ್ಲಿದ್ದರೆ ಬಿ.ಎಸ್. ಶಿವಲಿಂಗಪ್ಪ ಅಥವಾ ಬಿ. ಶಿವಲಿಂಗಪ್ಪ ಆಗುತ್ತಿದ್ದರು. ದಕ್ಷಿಣದ ಎಂ. ಚಿದಾನಂದಮೂರ್ತಿ ಅವರು ಉತ್ತರದಲ್ಲಿದ್ದರೆ ಸಿ.ಕೆ. ಮಠದ ಇಲ್ಲವೆ ಚಿದಾನಂದಮೂರ್ತಿ ಮಠದ ಆಗುತ್ತಿದ್ದರು. ಇದನ್ನು ಅನುಲಕ್ಷಿಸಿ ಕುಲನಾಮದ ಬಳಕೆಯ ವಿಧಾನವನ್ನು

ಅ. ಕುಲನಾಮ ಪ್ರಧಾನ - ಹೆಸರು ಅಪ್ರಧಾನ ವಿಧಾನ
ಆ. ಹೆಸರು ಪ್ರಧಾನ - ಕುಲನಾಮ ಅಪ್ರಧಾನ ವಿಧಾನ
ಇ. ಕುಲನಾಮ ಪ್ರಧಾನ - ಹೆಸರು ಪ್ರಧಾನ ವಿಧಾನ

ಈ ಮೂರು ರೀತಿಯಲ್ಲಿ ವಿಂಗಡಿಸಿ ಹೇಳಬಹುದು. ಉತ್ತರಭಾಗದಲ್ಲಿ ಕುಲನಾಮ ಪ್ರಧಾನ, ಹೆಸರು ಅಪ್ರಧಾನ. ಉದಾ. ಆ.ನೇ. ಉಪಾಧ್ಯೆ, ಶಿ.ಚ. ನಂದೀಮಠ ದಕ್ಷಿಣ ಭಾಗದಲ್ಲಿ ಹೆಸರು ಪ್ರಧಾನ, ಕುಲನಾಮ ಅಪ್ರಧಾನ. ಉದಾ. ದೊ.ಲ. ನರಸಿಂಹಾಚಾರ್, ಎಂ. ಚಿದಾನಂದಮೂರ್ತಿ ಇಂಗ್ಲಿಶಿನ ಪ್ರಭಾವದಿಂದ ಎ.ಎನ್. ಉಪಾಧ್ಯೆ, ಎಸ್.ಸಿ. ನಂದೀಮಠ, ಡಿ.ಎಲ್. ನರಸಿಂಹಾಚಾರ್, ಎಂ. ಚಿದಾನಂದಮೂರ್ತಿ ಎಂದು ಬಳಕೆಯಾಗುತ್ತವೆ. ಕುಲನಾಮ ಮತ್ತು ಹೆಸರುಗಳೆರಡನ್ನು ಪ್ರಧಾನವಾಗಿ ಬಳಸವುದು ಸಾಮಾನ್ಯವಾಗಿ ಹೆಂಗಸರಲ್ಲಿ ಹೆಚ್ಚು. ಉದಾ. ಶಾಂತಾದೇವಿ ಮಾಳವಾಡ, ಸರೋಜಿನಿ ಶಿಂತ್ರಿ, ದಕ್ಷಿಣ ಭಾಗದಲ್ಲಿ ಜನ್ಮನಾಮ ಮತ್ತು ಪತಿಯ ಹೆಸರನ್ನು ಸೇರಿಸುವ ವಾಡಿಕೆ ಇದೆ. ಉದಾ. ಪಾರ್ವತಮ್ಮ ರಾಜಕುಮಾರ, ಗೋದುಬಾಯಿ ರಾಘವೇಂದ್ರ. ಇದಕ್ಕೆ ಕಾರಣ ತಾವು ಸ್ತ್ರೀರೆಂಬುದನ್ನು ಸ್ಪಷ್ಟಪಡಿಸಿಕೊಳ್ಳುವುದು. ಇತ್ತೀಚೆಗೆ ಪುರುಷರಲ್ಲಿಯೂ ಈ ಪ್ರವೃತ್ತಿ ಕಂಡುಬರುತ್ತದೆ. ಚಂದ್ರಶೇಖರ ಕಂಬಾರ, ಚಂದ್ರಶೇಖರ ಪಾಟೀಲ ಮುಂತಾದುವು ಉತ್ತರ ಭಾಗದಲ್ಲಿ ವ್ಯಾವಹಾರಿಕವಾಗಿ ಮಾತನಾಡುವಾಗ ವ್ಯಕ್ತಿನಾಮಗಳನ್ನು ಹಿಡಿದು ಕರೆಯುವುದು ರೂಢಿಯಲ್ಲಿದೆ.

ವರ್ಗೀಕರಣ

ಕುಲನಾಮಗಳ ಸ್ವರೂಪವನ್ನು ಅನುಲಕ್ಷಿಸಿ ಅವುಗಳನ್ನು ೧. ಸ್ಥಳವಾಚಿ, ೨. ವೃತ್ತಿವಾಚಿ, ೩. ಜಾತಿವಾಚಿ, ೪. ವ್ಯಕ್ತಿವಾಚಿ, ೫. ವಸ್ತುವಾಚಿ, ೬. ಸಂಕೀರ್ಣಗಳೆಂದು ಆರು ರೀತಿಯಾಗಿ ವರ್ಗೀಕರಿಸಬಹುದು.

ಸ್ಥಳವಾಚಿ: ಪೂರ್ವಜರ ಗ್ರಾಮಗಳನ್ನು ಕುಲನಾಮಗಳನ್ನಾಗಿ ಬಳಸುವ ವಾಡಿಕೆ ಇದೆ. ಮುಂಡಗೆಯ ಮಾದಿರಾಜ, ಹಾವಿನಹಾಳ ಕಲ್ಲಯ್ಯ ಇಂತಹ ಪ್ರಾಚೀನ ನಾಮಗಳಲ್ಲಿ ಗ್ರಾಮನಾಮದ ಸೂಚನೆ ಇರುವುದರಿಂದ ಈ ಪದ್ಧತಿ ತಕ್ಕಮಟ್ಟಿಗೆ ಹಳೆಯದೆಂದೇ ಹೇಳಬೇಕು. ಈ ಕುಲನಾಮಗಳಲ್ಲಿ ವ್ಯಕ್ತಿಗಳು ವಾಸಿಸುವ/ವಾಸಿಸುತ್ತಿದ್ದ ಪ್ರದೇಶದ ಸೂಚನೆ ಇರುತ್ತದೆ. ಉದಾ. ಕುವೆಂಪು (ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ), ಎಸ್.ಎಸ್. ಮಾಳವಾಡ, ಎಂ.ಬಿ. ಸವದತ್ತಿ, ಎಂ.ಎಂ. ಕಲಬುರ್ಗಿ, ಎಸ್.ಸಿ. ನಂದೀಮಠ ಮುಂತಾದುವು. ಅದರಂತೆ ಜಾಗವನ್ನು ನಿರ್ದೇಶಿಸುವ ಹೆಸರುಗಳು ಕುಲನಾಮಗಳಾಗುವುದುಂಟು. ಹಾದಿಮನಿ, ಮೇಲ್ಮನಿ, ಬೇವಿನಮರದ, ಗವಿಮಠ, ತೆಗ್ಗಿನಮಠ ಇತ್ಯಾದಿ.

ವೃತ್ತಿವಾಚಿ : ತಾವು ಕೈಕೊಳ್ಳುವ ವೃತ್ತಿಗಳಿಂದ ಗುರುತಿಸಿಕೊಳ್ಳುವುದು ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ವ್ಯಾಪಕವಾಗಿ ಬೆಳೆದು ಬಂದಿತು(ವಿಶೇಷವಾಗಿ ವಚನಕಾರರಲ್ಲಿ). ಮಾದರ ಚೆನ್ನಯ್ಯ, ಅಮುಗಿ ಲಕ್ಕಮ್ಮ, ಮೇದಾರ ಕೇತಯ್ಯ, ಜೇಡಯ್ಯ ದಾಸಿಮಯ್ಯ ಮುಂತಾದುವು. ಶಾಸನಗಳಲ್ಲಿಯೂ ಇಂತಹ ಉಲ್ಲೇಖಗಳಿವೆ. ಬೇಲಿಯ ಕೇತ, ಗೊರವರ ಜಣ್ಣ ಇತ್ಯಾದಿ. ಗ್ರಾಮೀಣ ಪ್ರದೇಶದಲ್ಲಿ ಅಯಗಾರರನ್ನು ಅವರು ಕೈಕೊಳ್ಳುವ ವೃತ್ತಿ ಯಿಂದಲೇ ಸಂಬೋಧಿಸು ತ್ತಾರೆ. ಕಂಬಾರ ಶ್ಯಾಸಪ್ಪ, ನಾವಲಗಿ ಈರಪ್ಪ, ಹೂಗಾರ ನಿಂಗಪ್ಪ ಇತ್ಯಾದಿ. ಜಂಗಮ ಮನೆತನಗಳಲ್ಲಿ ವೃತ್ತಿವಾಚಕಗಳೇ ಕುಲನಾಮಗಳಾಗಿವೆ. ಶಾಸ್ತ್ರೀಮಠ, ಪಡದಯ್ಯನವರ, ಮಠಪತಿ ಇತ್ಯಾದಿ.

ಜಾತಿವಾಚಿ : ಸಾಮಾಜಿಕ ವರ್ಗಗಳು ಕುಲನಾಮಗಳಂತೆ ಬಳಕೆಯಾಗುತ್ತವೆ. ಸಮಗಾರ, ತಳವಾರ, ದೇಶಪಾಂಡೆ, ಒಡ್ಡರ, ಪುರೋಹಿತ ಮುಂತಾದುವು.

ವ್ಯಕ್ತಿವಾಚಿ : ಕೆಲವು ಮನೆತನಗಳಲ್ಲಿ ಆಗಿ ಹೋದ ಪ್ರಸಿದ್ಧ ಪುರುಷ ಇಲ್ಲವೆ ಸ್ತ್ರೀಯರು ಮನೆತನದ ಹೆಸರುಗಳಾಗಿ ಪರಿಣಮಿಸುತ್ತವೆ. ಉದಾ. ಪರಪ್ಪನವರ, ಮುಪ್ಪಯ್ಯನಮಠ, ಸಂಬಣ್ಣವರ, ಕಲ್ಲಪ್ಪನವರ ಇತ್ಯಾದಿ.

ವಸ್ತುವಾಚಿ : ಕೆಲವು ವಸ್ತುಗಳ ಸಂಬಂಧ ಮತ್ತು ಬಳಕೆಗಳಿಂದಾಗಿಯೂ ಅವು ವ್ಯಕ್ತಿಗೆ ಮನೆತನದ ಹೆಸರುಗಳಂತೆ ಅಂಟಿಕೊಂಡಿರುತ್ತವೆ. ಅಂದರೆ ಒಂದು ಮನೆತನಕ್ಕೆ ಸಂಬಂಧಿಸಿದ ವಸ್ತುಗಳಲ್ಲಿ ಯಾವುದು ಪ್ರಧಾನವಾಗಿ ಜನರ ಗಮನ ಸೆಳೆಯುವುದೊ ಅದು ಅವರ ಮನೆತನದ ಹೆಸರಾಗುತ್ತದೆ. ಇದರಲ್ಲಿ ಎರಡು ವಿಧ.

ಅ. ವಸ್ತುವಾಚಿ (ವಸ್ತುವನ್ನು ಪ್ರಧಾನವಾಗಿ ಬಳಸುವುದು) ಬೆಲ್ಲದ, ಚೀಲದ, ಅಕ್ಕಿ, ತುಪ್ಪದ, ಮೆಣಸಿನಕಾಯಿ, ವಿಭೂತಿಮಠ, ಕರ್ಪೂರ ಮಠ ಇತ್ಯಾದಿ.

ಆ. ಪ್ರಾಣಿವಾಚಿ (ಪ್ರಾಣಿಯನ್ನು ಪ್ರಧಾನವಾಗಿ ಬಳಸುವುದು) ಕತ್ತಿ, ಕುದುರಿ, ಎಮ್ಮಿ, ಕುರಿ, ಲಗಳಿ ಇತ್ಯಾದಿ.

ಸಂಕೀರ್ಣ : ಕೆಲವು ಹೆಸರುಗಳು ವ್ಯಕ್ತಿಗಳ ಆಕಾರ, ಸ್ವಭಾವಗಳನ್ನು ಅನುಲಕ್ಷಿಸಿ ಮನೆತನದ ಹೆಸರುಗಳಾಗುತ್ತವೆ. ಉದಾ. ಕುಳ್ಳಿ, ಮೂಗಿ, ಗಡ್ಡದ ಇವು ಮೂಲತಃ

ಅಡ್ಡಹೆಸರುಗಳಾಗಿರಬಹುದು. ಕೆಲವು ವಂಶನಾಮ/ಜನಾಂಗ ನಾಮಗಳು ಮನೆತನದ ಹೆಸರುಗಳಾಗುತ್ತವೆ. ಉದಾ. ರಾಠೋಡ, ರಜಪೂತ, ಅಳ್ವಾ ಇತ್ಯಾದಿ. ಭಾಷಿಕವಾಗಿ ಕುಲನಾಮಗಳನ್ನು ನಾಲ್ಕು ರೀತಿಯಾಗಿ ವರ್ಗೀಕರಿಸಬಹುದು.

೧. ಶುದ್ಧ ಕನ್ನಡ ಆಕೃತಿಮಾಗಳಿಂದ ಕೂಡಿದುವು : ಜವಳಿ, ಹಾದಿಮನಿ, ಕತ್ತಿ, ಪಾಟೀಲ ಇತ್ಯಾದಿ.

೨. ಕನ್ನಡ ಹಾಗೂ ಸಂಸ್ಕೃತ ಆಕೃತಿಮಾಗಳಿಂದ ಕೂಡಿದುವು : ಹಿರೇಮಠ, ಕೋರಿಶೆಟ್ಟಿ ಇತ್ಯಾದಿ.

೩. ಶುದ್ಧ ಸಂಸ್ಕೃತ ಆಕೃತಿಮಾಗಳಿಂದ ಕೂಡಿದುವು : ಶಾಸ್ತ್ರೀಮಠ ಪಂಚಾಕ್ಷರಿ ಇತ್ಯಾದಿ.

೪. ಅನ್ಯಭಾಷೆಯ ಆಕೃತಿಮಾಗಳು : ಪಾಠಕ್, ಮೊಖಾಶಿ, ಪೀರ್, ಮುಲ್ಲಾ ಇತ್ಯಾದಿ.

ಕುಲನಾಮಗಳ ಬದಲಾವಣೆ

ಸಾಮಾನ್ಯವಾಗಿ ಹೆಸರು ಬದಲಾವಣೆಯಾಗುವುದಿಲ್ಲ. ಅವು ನಿರಂತರವಾಗಿ ಬದಲಾವಣೆಗೆ ತಮ್ಮನ್ನು ತಾವು ಒಡ್ಡಿಕೊಂಡಿದ್ದರೆ ಗೊಂದಲ ಸೃಷ್ಟಿಯಾಗುತ್ತಿತ್ತು. ಆದರೂ ಕೆಲವು ಹೆಸರುಗಳು ಬದಲಾವಣೆಗೊಳಗಾಗುತ್ತವೆಂಬುದು ಲೋಕವೇದ್ಯ ಸಂಗತಿ. ಈ ಮಾತು ಸ್ಥಳನಾಮ ಮತ್ತು ವ್ಯಕ್ತಿನಾಮಗಳಂತೆ ಕುಲನಾಮಗಳಿಗೂ ಅನ್ವಯವಾಗುತ್ತವೆ. ಸೌಂದರ್ಯಾಕಾಂಕ್ಷೆಯಿಂದ ಹಿಡಿದು ಸಾಮಾಜಿಕ ಉದ್ದೇಶಗಳವರೆಗೆ ಇಂತಹ ಬದಲಾವಣೆಯ ಕಾರಣಗಳು ನಾನಾ ಬಗೆಯಾಗಿ ವ್ಯಾಪ್ತಿಸಿಕೊಂಡಿವೆ. ಕೆಲವನ್ನು ಇಲ್ಲಿ ಕಲೆಹಾಕಬಹುದು.

ಅ. ದತ್ತು ಪ್ರಸಂಗ : ಒಬ್ಬ ವ್ಯಕ್ತಿ ಒಂದು ಮನೆತನಕ್ಕೆ ದತ್ತು ಹೋದರೆ ತಮ್ಮ ಮೊದಲಿನ ಕುಲನಾಮವನ್ನು ಕಡ್ಡಾಯವಾಗಿ ಬದಲಿಸಬೇಕಾಗುತ್ತದೆ. ಉದಾ. ಬಸಪ್ಪ ದುಂಡಪ್ಪ ನಾಗೂರ ದತ್ತು ಹೋದರೆ ಬಸಪ್ಪ ಅಡಿವೆಪ್ಪ ಮೂಲಿಮನಿ ಎಂದಾಗುತ್ತದೆ.

ಆ. ಹೆಂಗಸರು ಗಂಡನ ಮನೆಗೆ ಬಂದರೆ ಮೊದಲಿನ ಕುಲನಾಮವನ್ನು ಕಡ್ಡಾಯವಾಗಿ ಬದಲಿಸಬೇಕಾಗುತ್ತದೆ. ಉದಾ. ಶಿವಕ್ಕ ಮಹಾದೇವಪ್ಪ ಚೀಲದ. ಶಿವಕ್ಕಳನ್ನು ಪಂಚಣ್ಣವರ ಮನೆಗೆ ಮದುವೆ ಮಾಡಿಕೊಟ್ಟರೆ ಶಿವಕ್ಕ ದಾನಪ್ಪ ಪಂಚಣ್ಣವರ ಎಂದಾಗುತ್ತದೆ. ಸಮಾಜಕ್ಕೆ ಇವು ಸಮ್ಮತವಾಗಿರುವುದರಿಂದ ಇಂತಹ ಪ್ರಸಂಗಗಳಲ್ಲಿ ಕುಲನಾಮಗಳು ತೀವ್ರ ಬದಲಾಗುತ್ತವೆ.

ಇ. ಹೆಸರುಗಳು ಅಸುಂದರವಾಗಿದ್ದರೆ, ಬಳಕೆಯಲ್ಲಿ ಸಂಕೋಚವಾಗುತ್ತಿದ್ದರೆ ಕುಲನಾಮಗಳನ್ನು ಇಡಿಯಾಗಿ ಇಲ್ಲವೆ ಅಲ್ಪಸ್ವಲ್ಪ ವ್ಯತ್ಯಾಸಗೊಳಿಸುವುದುಂಟು (ವಿದ್ಯಾವಂತರಲ್ಲಿ ಈ ಕ್ರಿಯೆ ಹೆಚ್ಚು).

ಹಳಗಳ್ಳಿ - ಜನ್ಮಟ್ಟಿ	ಗುಂಡಪ್ಪನವರ - ಹಾದಿಮನಿ
ಒಣರೊಟ್ಟಿ - ಕುಲಗೋಡು	ಹೂಗಾರ - ಮಮದಾಪೂರ ಮುಂತಾದುವು.

ಕುಲನಾಮಗಳು ಅಸುಂದರವಾಗಿದ್ದರೆ ತಮ್ಮ ಸಾಮಾಜಿಕ ಸ್ಥಾನಮಾನಕ್ಕೆ ಧಕ್ಕೆಯಾಗುತ್ತವೆ ಎಂಬ ಅಳುಕು ಭಾಷಿಕರನ್ನು ಕಾಡುತ್ತದೆ.[೬] ಅದರಿಂದ ಮುಕ್ತವಾಗಲು ನಾಮಾಂತರ ಅನಿವಾರ್ಯವಾಗುತ್ತದೆ. ಈ ಬದಲಾವಣೆಯನ್ನು ಕೆಲವು ಕಾನೂನುಬದ್ಧವಾಗಿ ಮಾಡಿಕೊಂಡರೂ ಸಮಾಜದಲ್ಲಿ ಅದು ತೀವ್ರ ಬದಲಾವಣೆಯಾಗುವುದಿಲ್ಲ. ಉದಾ. ನನ್ನ ಹಳ್ಳಿಯ ಪಕ್ಕದ ಹಳ್ಳಿಯಲ್ಲಿ ಬಿ.ಬಿ. ಮಮದಾಪುರ ಎಂಬುವರು ಆ ಹಳ್ಳಿಯಲ್ಲಿ ಮೊದಲ ವಿದ್ಯಾವಂತರು (ಬೆಳಗಾವಿಯ ಕೆ.ಎಲ್.ಇ. ಸಂಸ್ಥೆಯ ಸಂಸ್ಥಾಪಕರಲ್ಲಿ ಒಬ್ಬರು) ಅವರ ಕುಲನಾಮ 'ಹೂಗಾರ' ನಂತರ ಅವರು ಅದನ್ನು ಬದಲಾಯಿಸಿಕೊಂಡು ತವ್ಮ ಹಳ್ಳಿಯ ಹೆಸರನ್ನಿಟ್ಟು ಕರೆಯುತ್ತಾರೆ. ಆದರೆ ಆ ಹಳ್ಳಿಯಲ್ಲಿ ಅವರಿಗೆ ಹಾಗೂ ಅವರ ವಂಶಜರಿಗೆ ಹೂಗಾರ ಎಂದೇ ಕರೆಯುತ್ತಾರೆ. ಅಂದರೆ ಕುಲನಾಮಗಳು ವ್ಯಕ್ತಿಗಳೊಂದಿಗೆ ಎಂತಹ ಅವಿನಾಭಾವ ಸಂಬಂಧ ಹೊಂದಿರುತ್ತವೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಈ ವ್ಯಕ್ತಿಗಳು (ಈಗಿನವರಾಗಲಿ, ಹಿಂದೆ ಅವರ ವಂಶಜರಾಗಲಿ) ಒಂದು ಊರನ್ನು ಬಿಟ್ಟು ಇನ್ನೊಂದು ಊರಿಗೆ ಹೋದಾಗ ಅಲ್ಲಿ ಅವರ ಕುಲನಾಮದ ಹೆಸರು ಮೊದಲಿನ ಊರಿನದಾಗುತ್ತದೆ. ಉದಾ. ಬಸಪ್ಪ ವಾಲಿ ಎಂಬುವವರು ಮೂಲತಃ ಬೂದನೂರಿವವರು ಅವರು ಉದರಪೋಷಣೆಗಾಗಿ ಯರಗಟ್ಟಿಗೆ ಬಂದರು. ಅವರು ಕುಲನಾಮ 'ವಾಲಿ' ಎಂಬುದು ಹಿಂದೆ ಸರಿದು 'ಬೂದನೂರು' ಎಂಬುದೇ ಕುಲನಾಮದಂತೆ ಕೆಲಸ ಮಾಡುತ್ತದೆ. 'ಬೂದನೂರಿನ ಬಸಪ್ಪ' ಎಂದೇ ಅವರನ್ನು ಗುರುತಿಸುವುದುಂಟು.

ಭಾಷೆಯಲ್ಲಿ ರೂಪವ್ಯತ್ಯಾಸ ಕ್ರಿಯೆ ನಡೆದಂತೆ ಅದು ಕುಲನಾಮಗಳಲ್ಲಿಯೂ ಸಹಜವಾಗಿ ಕಾಣಿಸಿಕೊಳ್ಳುತ್ತದೆ. ಉಚ್ಚಾರದಲ್ಲಿ, ಸಂಕ್ಷೇಪಿಕರಣ, ಅಕ್ಷರಪಲ್ಲಟ, ಸಮರೂಪ ಧಾರಣೆ ಮೊದಲಾದ ವ್ಯತ್ಯಾಸಗಳು ತಲೆದೋರುತ್ತವೆ.

೧. ಕುಲನಾಮಗಳು (ಹೆಚ್ಚಾಗಿ) ಸ್ವರಾಂತಗಳಾಗಿವೆ. ಉಚ್ಚಾರಣೆಯಲ್ಲಿ ಅಕಾರಾಂತ ಕುಲನಾಮಗಳು ವ್ಯಂಜನಾಂತರಗಳಾಗುತ್ತವೆ.

ಹಿರೇಮಠ - ಹಿರೇಮಠ್
ಪಾಟೀಲ - ಪಾಟೀಲ್
ಒಡ್ಡರ - ಒಡ್ಡರ್

'ಇ' ಕಾರಾಂತಗಳು ಸಂಬೋಧನೆಯಲ್ಲಿ 'ಆ' ಕಾರಾಂತಗಳಾಗುತ್ತವೆ.

ವಾಲಿ - ವಾಲ್ಯಾ		ಗಾಣಗಿ - ಗಾಣಗ್ಯಾ
ಅಕ್ಕಿ - ಅಕ್ಕ್ಯಾ		ಬಡಗಿ - ಬಡಗ್ಯಾ

೨. ಕ್ರಿಯಾಪದದ ಲಿಂಗದ ಆಧಾರದ ಮೇಲೆಯೇ ಕುಲನಾಮದ ಲಿಂಗವು ಗುರುತಿಸಲ್ಪಡುವುದನ್ನೂ ಗಮನಿಸಬಹುದಾಗಿದೆ. ಆದರೆ ಬಹುವಚನ ಕ್ರಿಯಾಪದದಿಂದ ಇದನ್ನು ನಿರ್ಧರಿಸುವುದು ಅಸಾಧ್ಯ.

೧. ಅ. ತಳವಾರ ಬಂದನು ಹಡಪದ ಬಂದನು	ಪುಲ್ಲಿಂಗ ಏಕವಚನ
ಆ. ತಳವಾರ ಬಂದನು ಹಡಪದ ಬಂದನು	ಸ್ತ್ರೀಲಿಂಗ ಏಕವಚನ
೨. ಅ. ತಳವಾರ ಬಂದರು ಹಡಪದ ಬಂದರು	ಪುಲ್ಲಿಂಗ ಬಹುವಚನ
ಆ. ತಳವಾರ ಬಂದರು ಹಡಪದ ಬಂದರು	ಪುಲ್ಲಿಂಗ ಬಹುವಚನ

೩. ಕನ್ನಡ ಹೆಸರುಗಳು ಮಹಾರಾಷ್ಟ್ರದಲ್ಲಿ 'ಎ' ಕಾರಾಂತ ಹೊಂದಿವೆ. ಕೋರೆ (ಕೋರಿ), ಸಾಕರೆ (ಸಕ್ಕರಿ) ಕೆಲವೊಮ್ಮೆ ಅನುವಾದವನ್ನೂ ಕಾಣುತ್ತೇವೆ. ಉದಾ. ಕಪಾಸ > ಕಾಪಸೆ (ಬಟ್ಟೆ ವ್ಯಾಪಾರಸ್ಥರು) ಮುಂತಾದುವು. ಅನ್ಯಭಾಷೆಯ ಪ್ರಭಾವದಿಂದ ಕುಲನಾಮಗಳಲ್ಲಿ ಸ್ವೀಕರಣ ಕ್ರಿಯೆಯೂ ನಡೆದಿದೆ.**

ಕುಲನಾಮಗಳು ಮನೆತನಕ್ಕೆ ಅಂಟಿಕೊಂಡು ಮನೆತನಗಳ ಹಿನ್ನೆಲೆಯನ್ನು ತಿಳಿಸಿ ಕೊಡುತ್ತವೆ. ಕರ್ನಾಟಕದ ವ್ಯಾಪಾರಿವರ್ಗ 'ಪಟ್ಟಣಶೆಟ್ಟಿ' ಪ್ರಾಚೀನ ಕಾಲದಲ್ಲಿ ಒಂದು ಗ್ರಾಮವು ಸಂತೆ ನೆರೆಯುವಿಕೆಯಿಂದ ಪಟ್ಟಣವೆನಿಸಿಕೊಳ್ಳುತ್ತಿತ್ತು. ಹೀಗೆ ಸಂತೆ ನೆರೆಯುವ ಹೊಣೆಹೊತ್ತು ವ್ಯಾಪಾರಿಯೇ ಪಟ್ಟಣಸೆಟ್ಟಿ(ಸಂತೆಸೆಟ್ಟಿ). ಕಾಶಿಮಠ, ಉಜ್ಜನಿಮಠ ಇಂತಹ ಕುಲನಾಮಗಳ ಹಿಂದೆ ವೀರಶೈವ ಪರಂಪರೆಯ ಚಾರಿತ್ರಿಕ ಹಿನ್ನೆಲೆಯ ಒಂದು ಚರಿತ್ರೆಯನ್ನು ಕಾಣಬಹುದು. ಇವುಗಳಲ್ಲಿ ಇಂದಿಗೂ ಕೆಲವು ಶೈವ ಹಾಗೂ ವೀರಶೈವ ಧಾರ್ಮಿಕ ಪುಣ್ಯಕ್ಷೇತ್ರಗಳಾಗಿ ಉಳಿದು ಬಂದುದನ್ನು ಇಲ್ಲಿ ನೆನೆಪಿಸಿಕೊಳ್ಳಬಹುದು. ವಿಶ್ಲೇಷಿಸುತ್ತ ಹೋದರೆ ಮನೆತನಗಳ ಪೂರ್ವ ಇತಿಹಾಸವೇ ಕುಲನಾಮಗಳಲ್ಲಿ ಅಡಗಿರುತ್ತದೆ. ಕೆಲವು ಕುಲನಾಮಗಳು ರಾಜಮನೆತನಗಳ ಜೊತೆಗೆ ಸಂಬಂಧವನ್ನು ಕಲ್ಪಿಸುತ್ತವೆ. ಉದಾ. ಮಹಾರಾಷ್ಟ್ರದಲ್ಲಿಯ 'ಸಾಳುಂಕೆ' ಕುಲನಾಮವುಳ್ಳವರು ತಮ್ಮನ್ನು ಚಾಲುಕ್ಯರೊಂದಿಗೆ, ಕರಾವಳಿ ಪ್ರದೇಶದ ತುಳು ಜನಾಂಗದವರು ತಮ್ಮನ್ನು ವಿಜಯನಗರದ ತುಳುವಂಶದ ಯಾದವರೊಂದಿಗೆ (ಲಾಲೂ ಪ್ರಸಾದ್ ಯಾದವ್, ಶರದ ಯಾದವ್ ಇವರ ಪ್ರಭಾವದಿಂದ) ಸಂಬಂಧ ಕಲ್ಪಿಸುತ್ತಾರೆ. ಕರ್ನಾಟಕದ ಉತ್ತರ ಭಾಗದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ದೇಸಾಯಿ, ದೇಶಮುಖ, ಪಾಟೀಲ, ಬಿರಾದರ ಮುಂತಾದವು. ಕರಾವಳಿ ಪ್ರದೇಶದಲ್ಲಿರುವ ಭಟ್, ಹೆಗಡೆ, ಶ್ಯಾನಭೋಗ, ಶೆಟ್ಟಿ, ರೈ, ಆಳ್ವಾ ಇಂತಹ ಕುಲನಾಮಗಳು ಬಹುದೊಡ್ಡ ಸಾಮಾಜಿಕ ಗುಂಪನ್ನು ಪ್ರತಿನಿಧಿಸುತ್ತವೆ.

ಕರ್ನಾಟಕದಲ್ಲಿ 'ಕುಲನಾಮ' ಅಧ್ಯಯನವು ವಿಷಯವಾಗಿ ವಿದ್ವಾಂಸರ ಗಮನವನ್ನು ಅಷ್ಟಾಗಿ ಸೆಳೆದಿಲ್ಲವೆಂದೇ ಹೇಳಬೇಕು. ಈಗ ನಮ್ಮ ನಾಡಿನಲ್ಲಿ ಪ್ರಚಲಿತವಿರುವ ಎಲ್ಲ

ಕುಲನಾಮಗಳನ್ನು ಕಲೆಹಾಕಿ ಅವುಗಳ ಬಳಸುವ ವಿಧಾನ, ಸ್ವರೂಪ ಇತ್ಯಾದಿ ದೃಷ್ಟಿಯಿಂದ ವರ್ಗೀಕರಿಸಿ ವಿವೇಚಿಸಿದಲ್ಲಿ ಅದು ನಮ್ಮ ಪೂರ್ವಜರ ನೆಲೆ, ವೃತ್ತಿ, ವಂಶ, ಭಾಷೆ, ಮನೋಧರ್ಮ ಇತ್ಯಾದಿಗಳ ಅಧ್ಯಯನವಾಗುತ್ತದೆ. ಒಂದರ್ಥದಲ್ಲಿ ನಮ್ಮ ಸಂಸ್ಕೃತಿಯ ಅಧ್ಯಯನವೇ ಆಗುತ್ತದೆ.

ಅನುಬಂಧ

ವ್ಯಕ್ತಿನಾಮಗಳು, ಕುಲನಾಮಗಳು ಒಂದು ಜನಾಂಗದ ಸಂಸ್ಕೃತಿಯನ್ನು ಅರಿಯಲು ಸಮಾಜಶಾಸ್ತ್ರಜ್ಞರಿಗೆ ಹಾಗೂ ಮಾನವಶಾಸ್ತ್ರಜ್ಞರಿಗೆ ನೆರವಾದಂತೆ ಭಾಷಿಕ ಸಾಮಗ್ರಿಗಳನ್ನು ಅನುಲಕ್ಷಿಸಿ ಸಂಸ್ಕೃತಿ ಶೋಧನೆಗೆ ಹಾಗೂ ಭಾಷೆಯ ಪುನಾರಚನೆಗೆ ಭಾಷಾಶಾಸ್ತ್ರಜ್ಞರಿಗೂ ನೆರವಾಗುತ್ತವೆ.

೧. 'ಸಂಗ್ಯಾ ಬಾಳ್ಯಾ' ಗೀತರೂಪಕದಲ್ಲಿ ಕಂಡುಬರುವ ವ್ಯಕ್ತಿನಾಮಗಳನ್ನು, ಕುಲನಾಮಗಳನ್ನು ನೋಡಿದಾಗ ಈ ಘಟನೆ ವರ್ತಕ ವರ್ಗದ ಸಮುದಾಯದಲ್ಲಿ ಆಗಿರಬಹುದು ಎಂದು ನಾನು ಊಹಿಸಿದ್ದೇನೆ. ಆ ಗೀತರೂಪಕದಲ್ಲಿ ಕಂಡುಬರುವ 'ಲಗಳ್ಯಾರ ಈರ್‍ಯಾ' ಎನ್ನುವಲ್ಲಿ 'ಲಗಳಿ' ಎಂದರೆ ಎತ್ತುಗಳ ಮೇಲೆ ಸರಕು, ಸಾಮಗ್ರಿಗಳನ್ನು ಹೇರಿಕೊಂಡು ಊರಿಂದೂರಿಗೆ ವ್ಯಾಪಾರಕ್ಕೆ ಹೋಗುವುದು (ಇದರಂತೆ ಕುದರಿ, ಕತ್ತಿ ಎಂಬ ಪ್ರಾಣಿವಾಚಿ ಕುಲನಾಮಗಳಿವೆ). ಮೇಲ್ಮನಿ ಸಂಗ್ಯಾ, ಮೇಲ್ಮನಿ ಪರಮ್ಮ ಎನ್ನುವಲ್ಲಿ ಮೇಲ್ಮನಿಯಂತೆ ಹಾದಿಮನಿ, ಹಿತ್ತಲಮನಿ ಎಂಬ ಕುಲನಾಮಗಳಿವೆ. "ಹುರಕಡ್ಲಿ ಬಾಳ್ಯಾ" ಎನ್ನುವಲ್ಲಿ ಹುರಕಡ್ಲಿಯಂತೆ ಅಕ್ಕಿ, ಬೆಲ್ಲದ ಎಂಬ ಧವಸ ಧಾನ್ಯದ ಹೆಸರುಗಳುಳ್ಳ ಮನೆತನಗಳು ಕಿತ್ತೂರು ಕರ್ನಾಟಕದಲ್ಲಿವೆ. ಇನ್ನೊಂದು ಅಂಶ ಈ ಮೂರು ಮನೆತನಗಳ ಮನೆದೇವರು 'ಮರಡಿ ಬಸವಣ್ಣ' ಎಂಬುದನ್ನು ಗಮನಿಸಬೇಕು. ಈಗಲಾದರೂ ವರ್ತಕ ವರ್ಗಗಳ ಮನೆದೇವರ ಹೆಸರುಗಳು ಬೇರೆ ಬೇರೆ ಪ್ರದೇಶಗಳಲ್ಲಿರುವ ಬಸವಣ್ಣನೇ ಆಗಿದ್ದಾನೆ(ಬಾಗೇವಾಡಿ ಬಸವಣ್ಣ, ಖಿಳೇಗಾಂವ ಬಸವಣ್ಣ ಮುಂತಾದುವು). ಸಂಗ್ಯಾ ಬಾಳ್ಯಾ, ಈರ್‍ಯಾ, ಇರಪಕ್ಷಿ - ಬಸವಂತ, ಗಂಗಾ, ಪರಮ್ಮ ಇಂತಹ ವ್ಯಕ್ತಿನಾಮಗಳು ಹೆಚ್ಚಾಗಿ ವರ್ತಕ ವರ್ಗಗಳಲ್ಲಿ ಕಂಡುಬರುತ್ತವೆ. ಆದ್ದರಿಂದ ಈ ಗೀತರೂಪಕ ವೀರಶೈವ ವರ್ತಕ ವರ್ಗದ ಸಮುದಾಯಗಳಲ್ಲಿ ನಡೆದ ಘಟನೆಯಾಗಿದೆ ಎಂದು ಊಹಿಸಲು ಆಸ್ಪದವಿದೆ.

೨. ವ್ಯಕ್ತಿನಾಮಗಳು ಭಾಷಿಕ ಸಮುದಾಯದಲ್ಲಿ ಜನರ ಮನೋಧೋರಣೆಯ ಮೇಲೆಯೂ ಪ್ರಭಾವ ಬೀರುತ್ತವೆ. ಸಂಗ್ಯಾ ಬಾಳ್ಯಾದಲ್ಲಿ ಸಂಗ್ಯಾ ಗಂಗಾರ ಮಧ್ಯ ಅನೈತಿಕ ಸಂಪರ್ಕ ಉಂಟಾಗಿ ದುರಂತ ಉಂಟಾಗುತ್ತದೆ. ಅಲ್ಲದೆ ಗಂಗಾಳ ತವರೂರು ಬೈಲವಾಡದ ಜನತೆಯ ಮೇಲೆಯೂ ಪ್ರಭಾವ ಬೀರಿತು. ಬೈಲವಾಡದ ಯಾವುದೇ ಸಮುದಾಯದಲ್ಲಿ ಗಂಗಾ, ಗಂಗಿ, ಗಂಗಮ್ಮ ಎಂಬ ಸ್ತ್ರೀ ವ್ಯಕ್ತಿನಾಮಗಳಿಲ್ಲ. ಸಂಗ್ಯಾ ಬಾಳ್ಯಾದ ಗಂಗಿಗೂ 'ಬೈಲವಾಡದ ಗಂಗಿ' ಎಂದು ಕರೆಯುತ್ತಿದ್ದರು. ಇಂದಿನ ಹೆಣ್ಣುಮಕ್ಕಳಿಗೆ ಆ ಹೆಸರನ್ನಿಟ್ಟು

ಅವರನ್ನು ಬೇರೆ ಊರಿಗೆ ಕೊಟ್ಟರೆ ಅಲ್ಲಿಯೂ 'ಬೈಲವಾಡದ ಗಂಗಿ' ಎಂದು ಸಂಬೋಧನೆ ಮಾಡುತ್ತಾರೆ. ಇದರಿಂದ ನಮಗೂ ನಮ್ಮ ಊರಿಗೂ ಅವಮಾನ ಆದಂತೆ ಆಗುತ್ತದೆ ಎಂಬ ಭಾವನೆ ಇಂದಿಗೂ ಬೈಲವಾಡದ ಎಲ್ಲ ಸಮುದಾಯದ ಜನರಲ್ಲಿ ಬೇರು ಬಿಟ್ಟಿದೆ." ಇದನ್ನು ನೋಡಿದಾಗ ಈ ಸ್ತ್ರೀ ವ್ಯಕ್ತಿನಾಮ ಸಾಮಾಜಿಕ ಸ್ಥಾನಮಾನದ ದೃಷ್ಟಿಯಿಂದ ಸ್ಥಳೀಯ ಜನತೆಯ ಮೇಲೆ ಎಷ್ಟೊಂದು ಋಣಾತ್ಮಕ ಪ್ರಭಾವ ಬೀರಿದೆ ಎಂಬುದು ಗಮನಿಸಬೇಕಾದ ಸಂಗತಿ. ಸಂಗ್ಯಾಬಾಳ್ಯಾ ಈ ಎರಡು ಘಟನೆಗಳಿಂದ ವ್ಯಕ್ತಿನಾಮಗಳು, ಕುಲನಾಮಗಳು ಸಾಮಾಜಿಕವಾಗಿ ಮತ್ತು ಮನೋಭಾಷಾಶಾಸ್ತ್ರಜ್ಞರಿಗೆ ಬಹುಮುಖ್ಯ ಆಕರಗಳಾಗುತ್ತವೆ.

೩. ಮೇಲುವರ್ಗದ ಕುಲನಾಮಗಳಲ್ಲಿ ಬರುವ ಗೌಡ, ಮಠ, ಶೆಟ್ಟರ ಇತ್ಯಾದಿಗಳು ಆ ಸಮುದಾಯದಲ್ಲಿ ಸಾಮಾಜಿಕ ಏಣಿಶ್ರೇಣಿ ಏರ್ಪಡಿಸುತ್ತವೆ. ಉದಾ. 'ಗೌಡರ', ದೊಡ್ಡ ಗೌಡರ, ಚಿಕ್ಕಗೌಡರ, 'ಮಠ' ಹಿರೇಮಠ, ಚಿಕ್ಕಮಠ, 'ಶೆಟ್ಟರ್' ಪಟ್ಟಣಶೆಟ್ಟಿ, ಕತ್ತಿಶೆಟ್ಟಿ ಮುಂತಾದುವು. ತಳವರ್ಗದ ದಳವಾಯಿ, ವಾಲೀಕಾರ, ಸಮಗಾರ ಜನಾಂಗದ ಕುಲನಾಮಗಳಲ್ಲಿ ಅಂತಹ ಏಣಿಶ್ರೇಣಿ ಕಂಡುಬರುವುದಿಲ್ಲ.

೪. ವ್ಯಕ್ತಿನಾಮಗಳ ಬಳಕೆಯನ್ನು ಗಮನಿಸಿದಾಗ ಒಂದು ವ್ಯಕ್ತಿನಾಮ ಬೇರೆ ಬೇರೆ ವಾರ್ಗಿಕಗಳನ್ನು ಪಡೆದು ವಿಶಿಷ್ಟ ಪದಪುಂಜಗಳಾಗಿ ಬಳಕೆಯಾಗುತ್ತವೆ.

ಉದಾ. ಶಿವ

ಶಿವಬಸಪ್ಪ	ಶಿವಶರಣ
ಶಿವಶಂಕರ	ಶಿವರಾಜ
ಶಿವಶಂಕರಪ್ಪ	ಶಿವಲಿಂಗ/ಶಿವಲಿಂಗಪ್ಪ
ಶಿವಗಂಗಪ್ಪ	ಶಿವಗಣೇಶ
ಶಿವರಾಮ	ಶಿವಾನಂದ
ಶಿವರುದ್ರ	ಶಿವರುದ್ರಪ್ಪ
ಶಿವಕುಮಾರ	ಶಿವಪುತ್ರಪ್ಪ

ಇಂತಹ ಪದರಚನೆಯ ಹೆಸರುಗಳನ್ನು ಸಂಬೋಧಿಸುವಾಗ ಆಯಾ ವ್ಯಕ್ತಿಗಳ ಸ್ಥಾನವನ್ನು ಸೂಚಿಸುತ್ತವೆ. ಒಂದು ಭಾಷಾಸಮುದಾಯದ ಧಾರ್ವಿಕ ಹೆಸರುಗಳು ಒಟ್ಟಿಗೆ ಬರುತ್ತವೆ. ಶಿವಶಂಕರ, ಶಿವಲಿಂಗ, ಶಿವಶರಣರ, ಕೆಲವು ವೇಳೆ ಭಿನ್ನ ಭಾಷಾಸಮುದಾಯದ ಧಾರ್ಮಿಕ ಹೆಸರುಗಳು ಒಟ್ಟಿಗೆ ಸೇರುವುದುಂಟು. ಉದಾ. ಶಿವರಾಮ, ಶಿವಗಣೇಶ, ಹಬ್ಬ-ಹರಿದಿನಗಳು ಹಾಗೂ ಧಾರ್ಮಿಕ ಪರಿಸರ ಕೆಲವೊಮ್ಮೆ ಹೆಸರುಗಳ ಮೇಲೆ ಪ್ರಭಾವ ಬೀರುವುದುಂಟು. ಉದಾ. ನಾಗರಪಂಚಮಿಯ ಸುತ್ತಮುತ್ತ ಮಗುವಿನ ಜನ್ಮವಾದರೆ ಅಂತಹ ಮಗುವಿಗೆ ನಾಗಪ್ಪ, ನಾಗರಾಜ, ನಾಗಭೂಷಣ, ನಾಗವೇಣಿ, ನಾಗಮ್ಮ, ನಾಗರತ್ನ ಇಂತಹ ಹೆಸರುಗಳನ್ನು ಇಡುವುದುಂಟು.

೫. ವ್ಯಕ್ತಿನಾಮಗಳು ಅನೇಕ ಪ್ರದೇಶಗಳನ್ನಾಧರಿಸಿ ಬಳಕೆಯಾಗುತ್ತವೆ. ಉದಾ. ಕೊಟ್ರೂರೇಶ, ಕೊಟ್ರಯ್ಯ, ಹುಲಗಪ್ಪ, ಹುಲಿಗೆಮ್ಮ, ಶ್ರೀನಿವಾಸ, ಜಂಬಯ್ಯ, ಮೈಲಾರ, ಪಂಪಮ್ಮ ಇಂತಹ ಹೆಸರುಗಳು ಬಳ್ಳಾರಿ, ರಾಯಚೂರು ಸುತ್ತಮುತ್ತಣ ಪ್ರದೇಶಗಳಲ್ಲಿ ಕಂಡುಬರುತ್ತವೆ. ಈ ವ್ಯತ್ಯಾಸ ಒಂದೊಂದು ಪ್ರದೇಶಕ್ಕೆ ಮಾತ್ರ ಸೀಮಿತವಾಗಿರದೆ ಪ್ರದೇಶ ದಿಂದ ಪ್ರದೇಶಕ್ಕೆ ಭಿನ್ನತೆ ಕಂಡುಬರುತ್ತದೆ. ಇವೆಲ್ಲವು ಭಾಷಾ ಭೂಗೋಲ, ಉಪಭಾಷಾ ದೂರ, ಉಪಭಾಷೆ ಕ್ಷೇತ್ರ ಇವುಗಳ ಸ್ವರೂಪವನ್ನು ತಿಳಿದುಕೊಳ್ಳಲು ಭಾಷಾಶಾಸ್ತ್ರ ಜ್ಞರಿಗೆ ತುಂಬ ನೆರವಾಗುತ್ತವೆ.

೬. ವ್ಯಕ್ತಿನಾಮ ಹಾಗೂ ಕುಲನಾಮಗಳ ಮೇಲೆ ಅನ್ಯ ಭಾಷೆಯ ಪ್ರಭಾವ ಬೀರುವು ದುಂಟು. ಕನ್ನಡ-ಮರಾಠಿ ದ್ವಿಭಾಷಿಕ ಪ್ರದೇಶದಲ್ಲಿ ಕನ್ನಡಿಗರ ಹೆಸರುಗಳ ಮೇಲೆ ಮರಾಠಿ ಭಾಷೆಯ ಪ್ರಭಾವ ಹೇರಳವಾಗಿದೆ.[೪] ಮರಾಠಿಯಲ್ಲಿ ಬರುವ 'ರಾವ', ಕೊನೆಯಲ್ಲಿರುವ ಹೆಸರುಗಳು ಕನ್ನಡಿಗರಲ್ಲಿಯೂ ಇವೆ.

ಅಶೋಕರಾವ್	ವಿಠಲರಾವ್
ಗಣಪತಿರಾವ್	ಗೋವಿಂದರಾವ್
ಪ್ರಭಾಕರರಾವ್	

ಕುಲನಾಮಗಳ ಮೇಲೆಯೂ ಮರಾಠಿಯ ಛಾಯೆಯಿದೆ.

ಕೋತೆವಾಲ	ಶಿಂಧೆ	ಚೌದರಿ	ಧಾರವಾಡಕರ್
ಪಟೇವಾಲ	ಜಾಧವ	ಬೋಸಲೆ	ಹೆಬಳಿಕರ್
ಪೋರವಾಲ	ಚೌಗಲೆ	ಕಾಪಸೆ	ಪುಣೇಕರ್***

ಎರಡು ಭಾಷೆಗಳು ಒಂದರೊಡನೊಂದು ಸಂಪರ್ಕ ಹೊಂದಿದಾಗ ಸಾಂಸ್ಕೃತಿಕವಾಗಿ ಮುಖಾಮುಖಿಯಾಗುವುದು ಭಾಷಾ ಪ್ರಕ್ರಿಯೆಯಲ್ಲಿ ಸಹಜ. ಈ ಅಂಶಗಳು ದ್ವಿಭಾಷಿಕತೆ ಯನ್ನು ಅಧ್ಯಯನ ಮಾಡುವ ಭಾಷಾಶೋಧಕನಿಗೆ ತುಂಬ ನೆರವಾಗುತ್ತವೆ.

೭. ಹೆಸರುಗಳ ಪೂರ್ವ ಇತಿಹಾಸವನ್ನು ಅಥವಾ ಮೂಲವನ್ನು ತಿಳಿಯುವಲ್ಲಿ 'ಪುನಾರಚನಾ ವಿಧಾನ' ಅತಿಪ್ರಮುಖ ಸಾಧನ. ಈ ವಿಧಾನದಿಂದ ಕೆಲವು ಕುಲನಾಮಗಳ ಮೂಲವನ್ನು ಊಹಿಸಬಹುದು. ಉದಾ. ಲಿಂಗಾಯತ ಹೂಗಾರರಿಗೆ 'ಜೀರ್ಯ' ಎಂಬ ಅಡ್ಡ ಹೆಸರಿದೆ. ಇದರ ಹಳೆಯ ರೂಪ 'ಜೀಯರ್' ಶಾಸನಗಳಲ್ಲಿ ಕಾಳಾಮುಖ ವ್ಯಕ್ತಿಗಳಿಗೆ ಬಳಸಲಾಗುವ ಕಾಳಜೀಯರ್, ಅಮೃತಜೀಯರ್ ಹೆಸರುಗಳಿಗೂ ಇವರಿಗೂ ಸಂಬಂಧವಿರ ಬಹುದೆನಿಸುತ್ತದೆ. ಇಂದಿನ ಹೂಗಾರ ಪಂಗಡದ ಇನ್ನೊಂದು ಅಡ್ಡಹೆಸರು 'ಗುರವ' ಇದು ಪ್ರಾಚೀನಕಾವ್ಯ, ಶಾಸನಗಳಲ್ಲಿ ಕಂಡುಬರುವ ಗೊರವವನ್ನು ನೆನೆಪಿಸುತ್ತದೆಂದು ಎಂ.ಎಂ. ಕಲಬುರ್ಗಿಯವರು ಊಹಿಸುತ್ತಾರೆ.[೫]

ಕುಲನಾಮಗಳಾಗಿ ಕಾಣಿಸಿಕೊಳ್ಳುವ ಎಲ್ಲ ಬಗೆಯ ವೃತ್ತಿಗಳನ್ನು ಕಲೆಹಾಕಿ, ವಿಶ್ಲೇಷಿಸಿದರೆ ಕರ್ನಾಟಕದ ವೃತ್ತಿಗಳ ಮೇಲೆ ಬೆಳಕು ಬೀರುವುದರಲ್ಲಿ ಸಂದೇಹವಿಲ್ಲ. ಕುರುಬ ಗುರುವರ್ಗ

ದವರಾದ 'ಒಡೆಯರ್', ವೀರಶೈವ ಜಂಗಮರಾಗಿರುವ 'ಒಡೆಯರ್'ಗಿಂತ ಯಾವ ರೀತಿ ಭಿನ್ನರಾಗಿದ್ದಾರೆ ಎಂಬುದನ್ನು ಎಂ. ಚಿದಾನಂದಮೂರ್ತಿಯವರು ಗುರುತಿಸಿದ್ದಾರೆ.[೬] ಈ ಮಾದರಿಯಲ್ಲಿ ಅನೇಕ ಮತಗಳ ಹೆಸರುಗಳನ್ನು ವಿಶ್ಲೇಷಿಸಿ ಅಧ್ಯಯನ ನಡೆಸಿದಲ್ಲಿ ಅನೇಕ ರಹಸ್ಯಗಳು, ಪಂಥಗಳು ಪ್ರಕಟವಾಗುತ್ತವೆ. ವ್ಯಕ್ತಿನಾಮಗಳ ಪುನಾರಚನೆ ಯಲ್ಲಿ 'ಸವಕಳಿ' ಕ್ರಿಯೆ ಬಹುಮುಖ್ಯ ಪಾತ್ರವಹಿಸುತ್ತದೆ. 'ಅಜ್ಜೆ' ಎಂಬ ಪದಕ್ಕೆ ತಾಯಿ ಎಂಬರ್ಥವಿದ್ದಿತು. ಅತ್ತಿಮಬ್ಬೆ, ಚಲಬ್ಬೆ, 'ಅವ್ವೆ' ಎಂಬುದು 'ಅಜ್ಜೆ'ಯ ಇನ್ನೊಂದು ರೂಪ ಇರಬಹುದು. 'ಅಬ್ಬೆ'ಯ ಸವೆದ ರೂಪ ಈಗಿನ ಎಂಬುದು 'ಅಬ್ಬೆ'ಯ ಇನ್ನೊಂದು ರೂಪ ಇರಬಹುದು. 'ಅಬ್ಬೆ'ಯ ಸವೆದ ರೂಪ ಈಗಿನ ಹೆಂಗಸರ ಹೆಸರುಗಳಲ್ಲಿ ಉಳಿದು ಬಂದಿರುವಂತೆ ಕಾಣದು ಕಿತ್ತೂರು ಕರ್ನಾಟಕದಲ್ಲಿ ಹೆಸರನ್ನು ಸಂಬೋಧಿಸುವಾಗ ಬಳಕೆ ಯಾಗುವ ಬೇ ಎಂಬಲ್ಲಿ (ಉದಾ. ಯಮ್ಮಾಬೇ, ಯಾಕಬೇ!) ಹಿಂದಿನ ಅಜ್ಜೆಯ ಅವಶೇಷ ಇದೆ. ಗೋದಾವರಿ ತೀರದ ಪ್ರದೇಶದ (ಮಹಾರಾಷ್ಟ್ರದ ನಾಂದೇಡ ಜಿಲ್ಲೆ) ಶಾಸನಗಳಲ್ಲಿ ಕಂಡುಬರುವ ವ್ಯಕ್ತಿಗಳು, ಊರಿನ ಹೆಸರುಗಳು, ತೆರಿಗೆಯ ಹೆಸರುಗಳು ಇವುಗಳನ್ನೆಲ್ಲ ಗಮನಿಸಿದರೆ ಆ ಪ್ರಾಂತದಲ್ಲೆಲ್ಲ ಆ ಕಾಲಕ್ಕೆ ಬಳಕೆಯಾಗುತ್ತಿದ್ದ ಭಾಷೆ ಕನ್ನಡವೆಂಬುದು ಸ್ಪಷ್ಟವಾಗುತ್ತದೆ. ಈಗಿನ ಕರ್ನಾಟಕದ ಗಡಿಗಳ ಆಚೆ ಹಿಂದೆ ಕನ್ನಡವೇ ಪ್ರಚಾರದಲ್ಲಿತ್ತು ಎಂಬುದನ್ನು ವ್ಯಕ್ತಿನಾಮಗಳ ಹಿನ್ನೆಲೆಯಲ್ಲಿ ಎಂ. ಚಿದಾನಂದಮೂರ್ತಿ ಅವರು ಗುರುತಿಸಿದ್ದಾರೆ.[೭] 'ಗುರ್ಚಿ' ಸಂಪ್ರದಾಯದ 'ಗುಚ್ಚಿ' ಶಬ್ದದ ನಿಷ್ಪತ್ತಿಗೆ ತೊಡಗಿದಾಗ ಆ ಸಂಪ್ರದಾಯದ ಮೂಲಪುರುಷ 'ಕರೆಕಂಬಳಿ ಗುರುಸಿದ್ದ'. ಈ ಸಿದ್ಧಲಿಂಗ ವಿರಕ್ತಮಠದ ಗುರುವಾದ್ದರಿಂದ ಜನಪದರು ಕೇವಲ 'ಸಿದ್ಧಲಿಂಗ' ಎಂಬ ಒಂಟಿ ಹೆಸರನ್ನು ಕರೆಯದೆ 'ಗುರು' ಎಂಬ ಉಪಪದವನ್ನು ಹಚ್ಚಿ 'ಗುರುಸಿದ್ಧಲಿಂಗ' ಎಂದು ಕರೆದಿರಬೇಕು. ಮುಂದೆ ಕಾಲಾಂತರದಿಂದಾಗಿ ಈ ಹೆಸರು 'ಗುರುಸಿದ್ಧ'ವೆಂದಾಗಿ ಕಡೆಗೆ 'ಗುರ್ಚಿ' ಆಗಿರಬಹುದು ಎಂದು ನಾನು ಊಹಿಸಿದ್ದೇನೆ.[೮] ಹೀಗೆ ಧ್ವನಿಸಾಮ್ಯದ ಆಧಾರದ ಮೇಲೆ ಮೂಲರೂಪವನ್ನು ಪುನರ್‌ರಚಿಸಬಹುದಾಗಿದೆ. ಕನ್ನಡಿಗರ ಹೆಸರುಗಳಲ್ಲಿ ದೇಶ್ಯ ಶಬ್ದಗಳೂ ಉಂಟು, ಅನ್ಯ ದೇಶ್ಯ ಶಬ್ದಗಳೂ ಉಂಟು. ಅನ್ಯದೇಶ್ಯ (ಸಂಸ್ಕೃತ ಪ್ರಾಕೃತ ಮೂಲದ) ಹೆಸರುಗಳೇ ಹೆಚ್ಚು. ಇವುಗಳ ಬಗೆಗೆ ಖಚಿತವಾಗಿ ಹೇಳುವುದು ಕಷ್ಟ ಸಾಧ್ಯ. ಈ ಬಗ್ಗೆ ಅಧ್ಯಯನ ನಡೆಯ ಬೇಕಾಗಿದೆ.

ಇವೆಲ್ಲವನ್ನು ಗಮನಿಸಿದರೆ ವ್ಯಕ್ತಿನಾಮಗಳು ಹಾಗೂ ಕುಲನಾಮಗಳು ಭಾಷೆ, ಸಮಾಜ, ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಹಲವು ವಿಧದಲ್ಲಿ ನೆರವಾಗುತ್ತವೆ.

ಅಡಿಟಿಪ್ಪಣಿಗಳು

೧. ಎಂ. ಚಿದಾನಂದಮೂರ್ತಿ, 'ಕರ್ನಾಟಕ ವ್ಯಕ್ತಿನಾಮಗಳು', ವಾಗರ್ಥ, ೧೯೮೧, ಪು.೪೫.

* Surname ಎಂಬುದಕ್ಕೆ 'ಕುಲನಾಮ', Nickname ಎಂಬುದಕ್ಕೆ 'ಅಡ್ಡಹೆಸರು' ಈ ಪದಗಳನ್ನು ಮೊದಲ ಬಾರಿಗೆ ಬಳಸಿದವರು ಎಂ. ಚಿದಾನಂದಮೂರ್ತಿ ಅವರು, ೧೯೮೧, 'ಕರ್ನಾಟಕ ವ್ಯಕ್ತಿನಾಮಗಳು', ವಾಗರ್ಥ, ಪು.೬೩.

೨. ಎಂ. ಚಿದಾನಂದಮೂರ್ತಿ, 'ಪೂರ್ವೋಕ್ತ', ಪು.೬೯.

೩. ಈ ರೀತಿಯ ನಾಮಾಂತರ ಸೂಕ್ತವಲ್ಲ. ಏಕೆಂದರೆ ಆ ಕುಟುಂಬದ ಹಿನ್ನೆಲೆಯನ್ನು ಅಧ್ಯಯನ ಮಾಡುವಾಗ ಅಧ್ಯಯನಕಾರರಿಗೆ ನಿಜಾಂಶ ಗೊತ್ತಾಗುವುದಿಲ್ಲ. ಗೊತ್ತಾದರೂ ಅಸ್ಪಷ್ಟ!

** ಚಿಂದೋಡಿ ಲೀಲಾ ಅವರು 'ಸಂಗ್ಯಾಬಾಳ್ಯಾ' ನಾಟಕವನ್ನು 'ಬೈಲಹೊಂಗಲದ ಗಂಡು ಬೈಲವಾಡ ಹೆಣ್ಣು' ಎಂಬ ಹೆಸರಿನಲ್ಲಿ ಪ್ರದರ್ಶನ ಮಾಡಿದಾಗ ಬೈಲವಾಡದ ಜನ ಭಾವುಕರಾಗಿ ಪ್ರತಿಭಟಿಸಿದರಲ್ಲದೆ ರಂಗಮಂದಿರಕ್ಕೆ ಬೆಂಕಿಯಿಡಲು ಯತ್ನಿಸಿದರು! 'ಬೈಲವಾಡದ ಹೆಣ್ಣು' ಎಂದಾಗ ಬೈಲವಾಡ ಗ್ರಾಮದ ಎಲ್ಲ ಹೆಂಗಸರಿಗೂ ಧಕ್ಕೆ ಬರುತ್ತದೆ ಎಂಬ ಭಾವನೆ ಅವರನ್ನು ಕೆರಳಿಸಿತು.

೪. ಹೆಚ್ಚಿನ ಮಾಹಿತಿಗಾಗಿ ನೋಡಿ: ಎಸ್.ಎಸ್. ಅಂಗಡಿ, ೧೯೯೮, 'ಶೋಧನ', ಪು.೧೦-೧೧.

*** ಮರಾಠಿ ಭಾಷಿಕ ಪರಿಸರದ ಪ್ರಭಾವದಿಂದ ಊರುಗಳಿಗೆ 'ಕರ' ಎಂಬುದನ್ನು ಸೇರಿಸಿಕೊಂಡ ವಂಶನಾಮಗಳಿವೆ.

೫. ಎಂ.ಎಂ. ಕಲಬುರ್ಗಿ, ೧೯೮೧, 'ಕನ್ನಡ ನಾಮವಿಜ್ಞಾನ', ಪು.೪೪.

೬. ಎಂ. ಚಿದಾನಂದಮೂರ್ತಿ, ೧೯೮೪, 'ಪಗರಣ'.

೭. ಎಂ. ಚಿದಾನಂದಮೂರ್ತಿ (ವಾಗರ್ಥ ೧೯೮೧), "ಅಮ್ಮ", "ಅಬ್ಬೆ", "ಅಲ್ಲಮ", "ಬಾದುಬ್ಬೆ".

೮. ಎಂ. ಚಿದಾನಂದಮೂರ್ತಿ, 'ಗೋದಾವರಿ ತೀರದ ಕನ್ನಡ ' (ವಾಗರ್ಥ ೧೯೮೧), ಪು. ೨೪೧.

೯. ಎಸ್.ಎಸ್. ಅಂಗಡಿ, 'ಪೂರ್ವೋಕ್ತ', ಪು.೯೦.

೧೦. ಸಂಗಮೇಶ ಸವದತ್ತಿಮಠ, 'ಮನೆತನದ ಅಡ್ಡಹೆಸರುಗಳು', (ಭಾಷಾಲೇಖ ೧೯೯೯), ರೂಪರಶ್ಮಿ ಪ್ರಕಾಶನ, ಗುಲಬುರ್ಗಾ.

ಭಾಗ - ೫

ಭಾಷೆ : ಛಂದೋಲಯ

೫೮

ವಚನ ಭಾಷೆ ಮತ್ತು ಛಂದಸ್ಸು

ಭಾಷೆಯ ಮುಖ್ಯ ಉದ್ದೇಶ ಸಾಮಾಜಿಕ ಸಂಪರ್ಕ. ಭಾಷೆಯಷ್ಟು ಪರಸ್ಪರ ವಿನಿಮಯ ಸಾಮರ್ಥ್ಯ ಬೇರಾವ ಸಂವಹನಕ್ಕೂ ಇಲ್ಲ. ಭಾಷೆ, ಸಂಸ್ಕೃತಿಯ ಮುಖ್ಯ ಅಂಗವಾಗಿರುವುದರಿಂದ ಭಾಷಾಸಮುದಾಯದಲ್ಲಿ ಭಾಷಿಕರು ಪರಸ್ಪರ ಆಂತರಿಕ ಸಂಬಂಧವನ್ನು ಹೊಂದಿರುತ್ತಾರೆ. ಭಾಷೆಯನ್ನು ಸಾಮಾಜಿಕ ಚೌಕಟ್ಟಿಗೆ ಒಳಪಡಿಸಿ, ಅದರ ಬಳಕೆಯ ಪರಿಸರದಲ್ಲಿ ಅಭ್ಯಸಿಸಿದರೆ ಸಮಾಜೋಭಾಷಿಕ ಅನನ್ಯತೆಯನ್ನು ಗುರುತಿಸಿದಂತಾಗುತ್ತದೆ. ಭಾಷಿಕರ ಸಾಮಾಜಿಕ ವರ್ಗ, ಜಾತಿ, ಅಂತಸ್ತು, ಲಿಂಗ, ವಯಸ್ಸು ಇಂತಹ ಜೈವಿಕ ಅಂಶಗಳು ಭಾಷಾಬಳಕೆಯಲ್ಲಿ ಪರಿಣಾಮ ಬೀರುತ್ತವೆ. ತತ್ಪರಿಣಾಮವಾಗಿ ಭಾಷಾ ಬಳಕೆಯಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಈ ಏಣಿ-ಶ್ರೇಣಿ ಕ್ರಿಯೆಗೆ ಭಾಷಿಕ ಸ್ತರವಿನ್ಯಾಸ ಎಂದು ಕರೆಯುತ್ತಾರೆ. ಭಾಷಾ ಬಳಕೆಯ ವಿಭಿನ್ನತೆಯ ಸ್ತರಕ್ಕೆ ಅನುಗುಣವಾಗಿ ಭಾಷಿಕರು ಪರಸ್ಪರ ಸಂಬಂಧಿತರಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ ವಚನ ಸಾಹಿತ್ಯದ ಭಾಷೆಯ ಬಳಕೆಯ ಪ್ರಕ್ರಿಯೆಯನ್ನು ಅಭ್ಯಸಿಸಬೇಕಾಗುತ್ತದೆ.

ವಚನಕಾರರ ಭಾಷೆ ತನ್ನ ಕಾಲದ ಸಾಮಾಜಿಕ ಆಶಯಗಳ ಅಭಿವ್ಯಕ್ತಿಗೆ ತಕ್ಕಂತೆ ತನ್ನನ್ನು ಹೇಗೆ ರೂಪಿಸಿಕೊಂಡಿತು ಎಂಬುದನ್ನು ಗುರುತಿಸುವ ಪ್ರಯತ್ನ ನನ್ನದು. ಭಾಷೆಯ ಅತಿಮಿತಿಗಳನ್ನು ಚೆನ್ನಾಗಿ ತಿಳಿದಿದ್ದ ವಚನಕಾರರು ಇವೆರಡರ ನಡು ವಲಯದಲ್ಲಿ ಎಂತಹ ಅದ್ಭುತ ಕೃಷಿ ಮಾಡಿದ್ದಾರೆ ಎಂಬುದನ್ನು ಸೋದಾಹರಣವಾಗಿ ಪರಿಶೀಲಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ವಚನಸಾಹಿತ್ಯ ಪ್ರಧಾನವಾಗಿ ತನ್ನ ಕಾಲದಲ್ಲಿ ನಡೆದ ಒಂದು ದೊಡ್ಡ ಸಾಮಾಜಿಕ ಘರ್ಷಣೆಯ ಸೂಕ್ಷ್ಮ ನೆಲೆಗಳನ್ನು ಮನಗಾಣಿಸುತ್ತದೆ. ಲಿಂಗಾಯತಧರ್ಮ ಭಕ್ತಿಯ ಮಾರ್ಗವನ್ನು ಬಲವಾಗಿ ನೆಮ್ಮಿ ಹೊರಟಿತು. ಎಲ್ಲ ಜಾತಿಯವರಿಗೂ ತನ್ನ ಹೆಬ್ಬಾಗಿಲನ್ನು ತೆರೆಯಿತು. ವರ್ಗ, ಜಾತೀಯತೆಯ ತರತಮತೆಯನ್ನು ಪ್ರತಿಭಟಿಸಿ ನಿಂತಿತು. ಸರ್ವಜೀವಿಗಳ ಸಮಾನತೆ

ಯನ್ನು ಗೌರವಿಸಿತು. ಮಹಿಳೆಯರು ಸಾಹಿತ್ಯ ರಚನೆಯಲ್ಲಿ ತೊಡಗಿದ್ದು, ಹಿರಿಯರು ಕಿರಿಯರು ಪರಸ್ಪರ ವಿಚಾರ ವಿನಿಮಯ ನಡೆಸಿದ್ದು, ಮಿಶ್ರ ಅಂತಸ್ತುಗಳ, ಮಿಶ್ರಜಾತಿ ಉಪಜಾತಿಗಳ ಜನರು ಮುಖಾಮುಖಿಯಾದದ್ದು, ಇವೆಲ್ಲ ಈ ಘರ್ಷಣೆಯ ಉಪಹುಟ್ಟುವಳಿಗಳು ಎನ್ನಬಹುದು. ಆಗ ಮಾಧ್ಯಮವಾಗಿ ಭಾಷಿಕ ಕ್ರಾಂತಿ ಹುಟ್ಟಿತು.

ತನ್ನ ಕಾಲದ ಸಂಘರ್ಷದ ಆಶಯಗಳನ್ನು ನಿರೂಪಿಸುವ ವಕ್ತಾರನ ಸ್ಥಾನದಲ್ಲಿ ಭಾಷೆ ನಿಲ್ಲುತ್ತದೆ. ಕ್ಲಿಷ್ಟವಾದ, ಗ್ರಾಂಥಿಕವಾದ ಹಳಗನ್ನಡವನ್ನು ಸುಲಲಿತ ನಡುಗನ್ನಡಕ್ಕೆ ತಿರುಗಿಸಲು ಹನ್ನೆರಡನೆಯ ಶತಮಾನದ ಶಿವಶರಣರ ಕ್ರಾಂತಿಯು ಕಾರಣವಾಗಿದೆ. "ದೇಸೀ ಸಾಹಿತ್ಯ ಪ್ರಚಾರ" ಮತ್ತು ಜನಸಮ್ಮುಖಿ ದೃಷ್ಟಿ ಪ್ರಥಮತಃ ಮೂಡಿಬಂದದ್ದು, ಈ ಶತಮಾನದಲ್ಲಿ.

ತಮ್ಮ ಭಾವನೆಗಳನ್ನು ಜನರಿಗೆ ತಲುಪಿಸಿ ಕ್ರಿಯಾಮುಖಿಯಾಗುವ ಸಾಮಾಜಿಕ ಆಶಯವೂ ಅವರಿಗಿತ್ತು. ಆ ಕಾಲದಲ್ಲಿ ಸ್ಪಷ್ಟವಾಗಿ ರೂಪುಗೊಳ್ಳುತ್ತಿದ್ದ ಸಂಧಿಕಾಲದ ಸಾಮಾಜಿಕ ಕಾಳಜಿಗಳ ನಿರೂಪಣೆಗೆ ಸಹಾಯಕವಾಗುವಂತೆ ಭಾಷೆಯನ್ನು ಖಚಿತ, ವ್ಯಾವಹಾರಿಕ ರೂಪಧಾರಣೆಯಿಂದ ಸಜ್ಜುಗೊಳಿಸುವುದು ಅವರಿಗೆ ಅಗತ್ಯವಾಯಿತು. ಹೊಸ ವಿಚಾರಗಳನ್ನು ಜನರಿಗೆ ತಲುಪಿಸಲು ಅವರು ಕನ್ನಡದಲ್ಲಿ ಅದ್ಭುತವಾಗಿ ಕಾರ್ಯನಿರ್ವಹಿಸಿದ್ದ ಚಂಪು ಪ್ರಕಾರದ "ಸಿದ್ಧಮಾರ್ಗ"ದ ಪ್ರಕಾರವನ್ನು ಕೈಬಿಟ್ಟು, ಹೊಸ ಸಾಮಾಜಿಕ ಆಶಯಗಳ ಅಭಿವ್ಯಕ್ತಿಗೆ ತಕ್ಕುದಾದ ವಚನಮಾಧ್ಯಮವನ್ನು ಆರಿಸಿಕೊಂಡು, ಅದನ್ನು ಪಳಗಿಸಬೇಕಾಯಿತು. ಈ ಬಗೆಯ ನವಸೃಷ್ಟಿ, ಕಾಲದಲ್ಲಿ ಕಂಡುಬರುವ ಹತ, ಆಕ್ರೋಶ, ಹೊಸ ಅಭಿವ್ಯಕ್ತಿಯ ಹಂಬಲ, ನೋವು, ನಿರಾಸೆ ಮೊದಲಾದ ಎಲ್ಲ ಗುಣ-ಅವಗುಣಗಳೂ ಯಶಸ್ಸು-ವೈಫಲ್ಯಗಳೂ ಒಟ್ಟಾರೆಯಾಗಿ ವಚನಸಾಹಿತ್ಯವು ಕ್ರಿಯಾತ್ಮಕ ಸಾಹಿತ್ಯ ರಚನೆಗೆ ತನ್ನನ್ನು ತಾನು ಸಂಪೂರ್ಣವಾಗಿ ಒಡ್ಡಿಕೊಂಡಿತೆಂಬುದನ್ನು ಸ್ಪಷ್ಟಪಡಿಸುವ ಐತಿಹಾಸಿಕ ದಾಖಲೆಯಾಗಿ ಉಳಿಯುತ್ತದೆ.

ವಚನಸಾಹಿತ್ಯದ ಸಾಧನೆಗಳಲ್ಲಿ ಮುಖ್ಯವಾದುದೆಂದರೆ ಭಾಷೆಯ ಮತ್ತು ಚಿಂತನೆಯ ದಿಕ್ಕನ್ನು ಸಮಾಜದ ಕಡೆಗೆ ಹೊರಳಿಸುವ ಪ್ರಯತ್ನ. ಹಳೆಯ ಸಾಮಾಜಿಕ ವ್ಯವಸ್ಥೆಗೆ ಉಗ್ರವಾದ ಪ್ರತಿಕ್ರಿಯೆಯನ್ನು ತೋರಿ, ಹೊಸ ದಿಗಂತಗಳ ಕಡೆಗೆ ದೃಷ್ಟಿಹರಿಸುವುದು ಈ ನವಪಂಥದ ಗುರಿಯಾಯಿತು. ಅದು ಹೊಸ ಸಂವೇದನೆಗಳಿಗೆ ದಾರಿಯಾಯಿತು.

ವಚನದಲ್ಲಿ ಬಳಕೆಯಾಗುವ ಭಾಷೆಯ ಸ್ವರೂಪವನ್ನು ಅವರು ತೀವ್ರ ಶೋಧನೆಗೆ ಒಳಪಡಿಸಿದ್ದಾರೆ. ಚೆನ್ನಬಸವಣ್ಣನವರ "ಉಲಿಗರ ಮಾತು ಉಲಿಗರ ತೋಟಿ ಎತ್ತ?........ ವಾಗ್ಬ್ರಹ್ಮಿಗಳೆನಿಸುವ ವಾಚಾಳಕರಿಗೆಲ್ಲಿಯದೊ? ಅದೆಂತೊ?" ಈ ವಚನದಲ್ಲಿ ಶಬ್ದದ ಒಳಮೈಯನ್ನು ಕೆದಕಿ ನೋಡಬೇಕೆಂಬ ಆಶಯವನ್ನು ಲಕ್ಷ್ಯ ಸಮೇತವಾಗಿ ವಿವರಿಸಿದ್ದಾನೆ. ಶಬ್ದಕಲ್ಪ ಎಷ್ಟು ಕಠಿಣವಾದುದೆಂಬುದನ್ನು ಸಿದ್ಧರಾಮ. "ಶಬ್ದ ನೋಡುವಡೆ ನಪುಂಸಕ | ಅದರ ಕಾರ್ಯ ನೋಡುವಡೆ...... ತಾ ತಿಳಿದು ಹೋದಡೆ ತನ್ನ ಕಡೆ ಬರದು ನೋಡಾ"

ಶಬ್ದದ ಬಗೆಗೆ ತಿರಸ್ಕಾರ, ಭಯ, ಒಲಿಸಿಕೊಳ್ಳಲಾರದ ಸಂಕಟ ಮೊದಲಾದ ಮಿಶ್ರಭಾವನೆಗಳನ್ನು ಸಿದ್ಧರಾಮ ವ್ಯಕ್ತಪಡಿಸಿದ್ದಾನೆ. ಬಸವಣ್ಣನವರು ಭಾಷೆಯ ಸ್ವರೂಪದ ಬಗ್ಗೆ ಹೇಳುತ್ತ

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗಮೆಚ್ಚಿ ಅಹುದಹುದನಬೇಕು

ಮಾತಿನ ಅಥವಾ ವಚನಶಿಲ್ಪದ ಕುರಿತು ಜಿಜ್ಞಾಸೆ ಇಲ್ಲಿದೆ. ವಿಚಾರಗಳನ್ನು ಹರಳುಗಟ್ಟಿಸಿದ ಮಾತಿನ ಪೋಣಿಕೆ, ಶಬ್ದ ಜೋಡಣೆಯ ತಂತ್ರ, ಹೊಳಪು ಕೊಡುವಿಕೆ ಮೊದಲಾದ ಶಬ್ದಪರಿಕರಗಳನ್ನು ಇದು ಸೂಚಿಸುತ್ತದೆ. 'ಮಾಣಿಕ್ಯದ ದೀಪ್ತಿ' ಶಬ್ದಗಳು ಹೊರಚೆಲ್ಲುವ ಕಾಂತಿ, ಪಡೆಯಬೇಕಾದ ಅಂದದ ಮೈಕಟ್ಟು ಮೊದಲಾದವುಗಳನ್ನು ಧ್ವನಿಸುತ್ತದೆ. ಸ್ಫಟಿಕದ ಶಲಾಕೆಯು ರಚನೆಯ ಸೌಷ್ಠವ, ಗಡಸುತನ, ಸಾವಯುವ ಸಿದ್ಧಿ, ನಿರ್ಮಲತೆ ಮೊದಲಾದ ರಚನೆಯ ಶೈಲಿಯನ್ನು ನೆನೆಪಿಸುತ್ತದೆ.

ವಚನಕಾರರು ಶಬ್ದ ಮತ್ತು ವಚನದ ಸ್ವರೂಪವನ್ನು ತಮ್ಮದೇ ಆದ ಶೋಧನೆಯ ಪಥದಿಂದ ಕಂಡುಕೊಂಡಿದ್ದಾರೆ. ವಚನ ರಚನೆಯ ಹಿಂದೆ ಇಂಥದೊಂದು ಚಿಂತನವಿದೆ, ಬಹುಶಃ ಸಮಾಜದಲ್ಲಿ ಈ ಬಗೆಯ ಆಲೋಚನೆ ಸಮೂಹಪ್ರಜ್ಞೆಯಿಂದ ಮೂಡಿಬಂದಿರಬೇಕು. ಈ ಸಮೂಹಪ್ರಜ್ಞೆಯ ಭಾಷಾ ವಿಷಯಕವಾದ ಚಿಂತನೆಗೆ ವಚನಕಾರರು ಸರಿಯಾಗಿ ಸ್ಪಂದಿಸಿದ್ದಾರೆ.

ಪಾದದ ನಿಯತತೆ, ಪ್ರಾಸದ ಕಟ್ಟು, ವರ್ಣಗಳ ಮಾತ್ರಾ ನಿಷ್ಕತೆ, ಸಂಸ್ಕೃತ ಸಮಾಸಗಳ ಹೆಣಿಗೆಯ ಪೆಡಸು ಶೈಲಿ ಮೊದಲಾದ ಬಂಧನಗಳಿಂದ ಪಾರಾಗಲು ವಚನಕಾರರು ಕನ್ನಡದಲ್ಲಿ ಆಗಲೇ ಪ್ರಚುರವಾಗಿದ್ದ ವಚನರೂಪವನ್ನು ಬಳಸಿಕೊಂಡರು. ಪದಗಳ ಅಂತಃಸ್ವರೂಪವನ್ನು ಕಾಯ್ದುಕೊಂಡು ಗದ್ಯ ಗಂಧಿಯಾಗಿ ಮೆರೆಯುವ ವಚನ ಅವರ ಅಭಿವ್ಯಕ್ತಿಯ ಅಗತ್ಯಕ್ಕೆ ಸೂಕ್ತವಾದ ಮಾಧ್ಯಮವಾಯಿತು. ಗೇಯ ರಚನೆಯ ಕೆಲವು ಮಿತಿಗಳನ್ನೂ ಮೀರುವ ಅಗತ್ಯವೆನಿಸಿದಾಗ ಬಸವಣ್ಣನವರು ಧೈರ್ಯವಾಗಿ

ತಾಳಮಾನ ಸರಿಸವನರಿಯೆ
ಓಜೆ ಬಜಾವಣೆಯ ಲೆಕ್ಕವನರಿಯೆ
ಅಮೃತಗಣ ದೇವಗಣವನರಿಯೆ
ಕೂಡಲಸಂಗಮದೇವ
ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ

ಎಂದು ಘೋಷಿಸಲೂ ಹಿಂಜರಿಯಲಿಲ್ಲ. 'ಆನು ಒಲಿದಂತೆ ಹಾಡುವೆ' ಎಂಬ ಮಾತು ಕಂದ, ವೃತ್ತಗಳ ಪೆಡಸು ಶೈಲಿಯಿಂದ ಮುಕ್ತಗೊಂಡ ಮನಸ್ಸಿನ ಉದ್ಘೋಷವಾಗಿದೆ.

ಸ್ವತಂತ್ರ ಮನೋಧರ್ಮವನ್ನು ಪ್ರೇರೆಪಿಸಿದ ಆ ಕಾಲದ ಸಾಮಾಜಿಕ ಧೋರಣೆಗೆ ಅನುಸಾರವಾಗಿ ಭಾಷೆಯ ಮಟ್ಟದಲ್ಲೂ ಅದರ ಕಾವವನ್ನು ಉಳಿಸುವ ಧೀರ ನಿರ್ಧಾರವಾಗಿದೆ. ಸವೆದ ದಾರಿಯಾಗಿದ್ದ ಸಿದ್ಧಶೈಲಿಯನ್ನು ಬಿಟ್ಟು, ಶಾಸ್ತ್ರ ಸಂಕಲೆಯಿಂದ ಕಳಚಿಕೊಂಡ ಮುಕ್ತ ಗೇಯ ರಚನೆಗಳನ್ನು ಬಸವಣ್ಣನವರು ಸ್ವಾಗತಿಸಿದ್ದಾರೆ. ನಿಯಂತ್ರಣ ಸಡಿಲಿಸಿ, ಸಹೃದಯರಿಗೆ ಸರಾಗವಾಗಿ ತಲುಪುವ ಭಾಷಿಕ ಸಾಮಗ್ರಿಗಳನ್ನು ಅಣಿಗೊಳಿಸಿದರು. ಕನ್ನಡ ಕಾವ್ಯ ಪರಂಪರೆಯ ಸಿದ್ಧಮಾರ್ಗವನ್ನು ಕೈಬಿಟ್ಟರೂ ಶಬ್ದಗಳಿಗೆ ಮೆರಗುಕೊಡುವ ರೂಪಮಾಧ್ಯಮಗಳನ್ನು ಕೈಬಿಡದೆ ವಚನಗಳನ್ನು ಪೋಷಿಸಿಕೊಂಡು ಬಂದಿದ್ದಾರೆ.

ಶಬ್ದಗಳ ಸ್ವರಮೈತ್ರಿ, ಪಕ್ಕದಲ್ಲಿ ಬರುವ ಇನ್ನೊಂದು ಶಬ್ದ ನಾಟ್ಯಗತಿಗೆ ಹೊಂದಿಕೊಂಡಂತೆ ಹೆಜ್ಜೆಹಾಕುವ ಬಗೆ, ಆಶಯಗಳ ದಿಕ್ಕಿನಲ್ಲಿ ಶಬ್ದಗಳನ್ನು ನಿಧಾನಗತಿಯಿಂದ ನಿರ್ವಹಿಸುವ ಬಗೆ, ಪ್ರಾಸ ನಿರ್ವಹಣೆ, ಯಮಕಗಳ ಸಂಚಲನ, ವರ್ಣಾವೃತ್ತಿಗಳ ಬಳಕೆ ಮತ್ತು ಶಬ್ದಗಳನ್ನು ಇಡುವ ಕ್ರಮದಲ್ಲಿ ಅರ್ಥಪೂರ್ಣವಾಗಿ ಮಾಡುವ ವ್ಯವಸ್ಥಿತ ಜೋಡಣೆ ಇವೆಲ್ಲಾ ಸೇರುತ್ತದೆ. ಉದಾ.

- ಎತ್ತನೇರಿ ಎತ್ತನರಸುವರು ಎತ್ತ ಹೋದರೈ ಗುಹೇಶ್ವರ - ಅಲ್ಲಮ
- ನಡುಹೊಳೆಯಲ್ಲಿ ಹರಿಗೋಲ ಹರಿದಂತೆ - ಶಿವಲೆಂಕ ಮಂಚಣ್ಣ
- ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ - ಬಸವಣ್ಣ

ಇಲ್ಲೆಲ್ಲ ಸ್ಪಷ್ಟವಾಗಿ ವಚನಕಾರರು ಶಬ್ದಗಳೊಂದಿಗೆ ಲೀಲಾಜಾಲವಾಗಿ ಚೆಲ್ಲಾಟನಡೆಸಿರುವುದನ್ನು ಕಾಣಬಹುದಾಗಿದೆ. ಬಗೆ ಬಗೆಯ ಶಬ್ದಮೇಳಗಳಿಂದ ವಿವಿಧ ಶಬ್ದಪ್ರಾಸಗಳನ್ನು ಹೊರಹೊಮ್ಮಿಸುವುದು ವಚನಕಾರರ ಒಂದು ಸಂತಸದ ಹವ್ಯಾಸವಾಗಿದೆ.

- ಘನವ ಕಂಡೆ ಅನುವ ಕಂಡೆ
  ಆಯತವ ಕಂಡೆ ಸ್ವಾಯತವ ಕಂಡೆ
  ಸನ್ನಿಹಿತ ಸುಖವ ಕಂಡೆ - ಅಕ್ಕಮಹಾದೇವಿ

- ಬಂದುದನೆಲ್ಲವ ನುಂಗಿ
  ಬಾರದುದನೆಲ್ಲ ಹಿಂಗಿ
  ಅರಿಗಿಲ್ಲದವಸ್ಥೆ ಎನಗಾಯಿತ್ತು - ಅಲ್ಲಮ

ಶಬ್ದಗಳ ಅನುಕ್ರಮವನ್ನು ಪಲ್ಲಟಿಸಿ ತಿರುಗು ಮುರುಗಾಗಿ ಇಡುವುದರಿಂದ ಹೆಚ್ಚಿನ ಅರ್ಥ ಸಿದ್ಧಿಯನ್ನು ಸಾಧಿಸಬಹುದು ಎಂಬುದನ್ನು ವಚನಕಾರರು ತೋರಿಸಿಕೊಟ್ಟಿದ್ದಾರೆ.

- ಪಾಪವ ಮಾಡಿ ಮುಳುಗಿದಡೇನು?
  ಮುಳುಗಿ ಪಾಪವ ಮಾಡಿದಡೇನು?

ಅಲ್ಲಮನು ಶಿವನನ್ನು ಆತ್ಮೀಯವಾಗಿ ಮಾತನಾಡಿಸುವ ಧಾಟಿ ಹೀಗಿದೆ.

- ತಾಯಿ ತಂದೆ ಇಲ್ಲದ ಕಂದಾ
ನಿನಗೆ ನೀನೆ ಹುಟ್ಟಿದೆಯಲ್ಲಾ

ಕವಿ ಏನನ್ನೇ ಸಾಧಿಸಿದರೂ ಆತ ಅದನ್ನು ಭಾಷೆಯಲ್ಲಿಯೇ ಸಾಧಿಸಬೇಕು. ಅವನ ಅಭಿವ್ಯಕ್ತಿಯ ಮಾಧ್ಯಮ ಭಾಷೆಯೇ. ಆದ್ದರಿಂದ ಕವಿಯ ಸಾಧನೆಯೆಲ್ಲ ಭಾಷೆಯ ಸಾಧನೆಯಾಗುತ್ತದೆ. ಕವಿಯ ಸಿದ್ಧಿಯಲ್ಲ ಭಾಷೆಯ ಸಿದ್ಧಿಯಾಗುತ್ತದೆ. ಕವಿಯ ಸಾಧನೆಗಳನ್ನು ಗಮನಿಸುವಾಗ ಭಾಷಾಸಿದ್ಧಿ ಅತ್ಯಂತ ಗಮನಾರ್ಹವಾಗಿರುತ್ತದೆ. ಮಡಿವಂತಿಕೆ ಭಾಷೆಯ ಬೆಳವಣಿಗೆಗೆ ಮಾರಕ. ಬೆಳೆಯುವ ಭಾಷೆಯ ಸುತ್ತ ಇರುವ ಜನಗಳು ಆಡುವ ಭಾಷೆಯಿಂದ ಪ್ರಭಾವಿತವಾಗಲೇಬೇಕು. ವಚನಕಾರರ ಭಾಷಾ ಸಿದ್ಧಿಯನ್ನು ಗಮನಿಸುವಾಗ ಈ ಅಂಶ ನೆನೆಪಿರಬೇಕು. ವಚನಕಾರರ ಯುಗ ಅನೇಕ ಕಾರಣಗಳಿಂದ ಅನ್ವೇಷಣೆಯ ಯುಗವಾಗಿತ್ತು. ಏಕೆಂದರೆ ಅದು ಜೀವನ, ಧರ್ಮ, ಸಾಹಿತ್ಯ, ಭಾಷೆ ಈ ಎಲ್ಲ ದೃಷ್ಟಿಯಿಂದಲೂ ಕನ್ನಡ ನಾಡಿಗೆ ಸಂಕ್ರಮಣ ಕಾಲವಾಗಿತ್ತು. ಈ ಸಂಕ್ರಮಣ ಕಾಲದಲ್ಲಿ ಜೇಡರ ದಾಸಿಮಯ್ಯ, ಬಸವ, ಅಲ್ಲಮ ಮೊದಲಾದವರು ಬಂದಾಗ ಅವರೆದುರಿಗೆ ಇವೆಲ್ಲ ಸಮಸ್ಯೆಗಳಾಗಿದ್ದವು. ಹೊಸಪಥ ಅವರಿಗೆ ಬೇಕಾಗಿತ್ತು. ಧರ್ಮವನ್ನಾಗಲಿ, ಜೀವನ ವಿಚಾರವನ್ನಾಗಲಿ 'ಜನ ಬದುಕಬೇಕೆಂದು' ಹೇಳಬೇಕೆನಿಸಿದಾಗ ಜನರ ಭಾಷೆಗೆ ಹೋಗಬೇಕಾಗುತ್ತದೆ. ಸಾಮಾಜಿಕ ಬದಲಾವಣೆಗೆ ಹೊರಟ ವಚನಕಾರರು ಜನರಿಗೆ ಅರ್ಥವಾಗುವ ಹಾಗೂ ಪ್ರಿಯವಾದ ಭಾಷೆಯನ್ನು ಬಳಸಬೇಕಾಯಿತು. ಹೇಳುವ ವಿಷಯ, ವಿಧಾನಗಳಷ್ಟೇ ಹೇಳಬೇಕಾದ ಭಾಷೆಯು ಅವರಿಗೆ ಪ್ರಮುಖವಾಯಿತು.

ವಚನಕಾರರು ತಮ್ಮ ಕಾಲದ ಭಾಷೆಯನ್ನು ಪೂರ್ಣವಾಗಿ ಬಳಸಿಕೊಂಡರು. ಮುಂದಿನವರಿಗೆ ಪರಂಪರೆಯ ನಿರ್ಮಾಪಕರಾದರು. ವಚನಕಾರರಿಗೆ ಸಂಸ್ಕೃತ ಮತ್ತು ಕನ್ನಡ ನೋಟದ ದೃಷ್ಟಿಗಿಂತ ಮೂಲಭೂತವಾಗಿ ಕನ್ನಡವನ್ನು ಶಕ್ತಿಯುತವಾದ ಹಾಗೂ ಬಹುಮುಖವಾದ ಅನುಭವದ ಸ್ತರಗಳ ಅಭಿವ್ಯಕ್ತಿಗೆ ಸಜ್ಜುಗೊಳಿಸುವ ಅವಶ್ಯಕತೆ ಹೆಚ್ಚಾಗಿದಂತೆ ತೋರುತ್ತದೆ. ವಚನ ನಿರ್ಮಾಣದಲ್ಲಿ ಅವರ ದೃಷ್ಟಿ, ಅಭಿವ್ಯಕ್ತಿಯನ್ನು ಸಾಧಿಸುವುದರ ಕಡೆಗಿತ್ತು. ಇದರಿಂದ ಕನ್ನಡದ ಅಭಿವ್ಯಕ್ತಿಯ ಶಕ್ತಿ ಕೂಡ ವರ್ಧಿಸಿತು. ವಚನಕಾರರ ಸಾಧನೆ ಸಾಮೂಹಿಕವಾದುದು. ಅವರು ಕನ್ನಡ ಭಾಷೆಯ ಅಂತಃಸತ್ವವನ್ನು ಚೆನ್ನಾಗಿ ಅರಿತಿದ್ದರು. ಕನ್ನಡದ ಮುರಿಮುರಿಯಾದ ವಾಕ್ಯರಚನೆಯ ಸೊಗಸು ಅವರಿಗೆ ಚೆನ್ನಾಗಿಯೇ ಗೊತ್ತಿತ್ತು.

ಹೊನ್ನು ಮಾಯೆಯೆಂಬರು
ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬರು
ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬರು
ಮಣ್ಣು ಮಾಯೆಯಲ್ಲ
ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರ - ಅಲ್ಲಮ

ಕನ್ನಡದ ಸಹಜ ರಚನೆಯ ಸೊಗಸು ಇಂತಹ ಕಡೆ ಸೊಂಪಾಗಿರುವುದನ್ನು ನೋಡ ಬಹುದು. ವಾಕ್ಯರಚನಾ ವಿಧಾನಗಳಲ್ಲಿಯೂ ಕನ್ನಡದ ಎಲ್ಲ ವಿಶಿಷ್ಟತೆಗಳನ್ನು ಅವರು ಬಲ್ಲರು. ಹೀಗೆ ವಚನಕಾರರು ಭಾಷೆಯ ರಹಸ್ಯವನ್ನು ತಿಳಿದು ಅದರ ಶಕ್ತಿ-ಸಾಧ್ಯತೆಗಳನ್ನು ಬಳಸಿಕೊಳ್ಳುವಲ್ಲಿ ಕನ್ನಡ ಭಾಷೆಯ ಜೀವಂತಿಕೆಯನ್ನು ಉಳಿಸಿದ್ದಾರೆ. ಅವರಿಂದ ಹೊಸ ಭಾಷಾರೂಪವೊಂದು ಸಿದ್ಧವಾಯಿತು.

ಕುರುಡನ ಕೈಯಲ್ಲಿ ಕನ್ನಡಿ ಇದ್ದ ಹಾಗೆ
ಕರಡಿಗೆ ಕಣ್ಣು ಬೇನೆ ಬಂದ ಹಾಗೆ
ಕುರುಡಿಗೆ ಮಕ್ಕಳಾದ ಹಾಗೆ - ಹಡಪದ ಅಪ್ಪಣ್ಣ

ಅತಿದೀರ್ಘವಾದ ಸಮಾಸ ರಚನೆಗಳು ಕನ್ನಡ ರಚನೆಗೆ ಒಗ್ಗದಿರುವ ಗುಟ್ಟೂ ಅವರಿಗೆ ತಿಳಿದಂತಿದೆ; ಏಕೆಂದರೆ ಅವರಲ್ಲಿ ದೀರ್ಘಸಮಾಸ ರಚನೆಗಳು ಬಹಳ ಅಪರೂಪ. ಇಂತಹ ಪ್ರಯೋಗಗಳಲ್ಲಿ ಆಡುಮಾತಿನ ಬಳಕೆ ಕಾವ್ಯದ ಮಟ್ಟಕ್ಕೇರಿ ಹರಿತವೂ ಪ್ರಭಾವಶಾಲಿಯೂ ಆಗಿದೆ. ವಚನಕಾರರು ವಿವಿಧ ಛಂದಸ್ಸುಗಳನ್ನು ಬಳಸುವಲ್ಲಿ ಕೂಡ ಭಾಷೆಯ ಜೀವಸ್ವರ ಗಳನ್ನು ಹಾಗೂ ಜಾಯಮಾನವನ್ನು ಗುರುತಿಸಿಕೊಂಡೆ ಛಂದಸ್ಸಿನ ಲಯಶಕ್ತಿಗಳನ್ನು ಬಳಸಿ ಕೊಳ್ಳುತ್ತಾರೆ. ಈ ಅರ್ಥದಲ್ಲಿ ಕನ್ನಡ ಭಾಷೆಯ ರಚನೆಯ ಸೂಕ್ಷ್ಮತೆಗಳನ್ನು ಅವರು ಅರಿತಿದ್ದಾರೆ.

ಅಚ್ಚಗನ್ನಡದ ತ್ರಿಪದಿಯ ಲಯದಿಂದ ವಚನ ಘಟಿತವಾಗಿ ಬೆಳೆದಿರಬೇಕೆಂಬ ಎಂ. ಚಿದಾನಂದಮೂರ್ತಿ ಅವರ ಸಿದ್ಧಾಂತ ಹಲವು ಗಟ್ಟಿ ಆಧಾರಗಳ ಮೇಲೆ ನಿಂತಿದೆ. ವಚನ ಸಾಹಿತ್ಯದ ಪ್ರವರ್ತಕನಂತೆ ಕಾಣುವ ಜೇಡರ ದಾಸಿಮಯ್ಯನ ವಚನಗಳ ಪಟ್ಟಿಯನ್ನೇ ಅವರು ಕೊಟ್ಟು, ಆ ವಚನಗಳಲ್ಲಿ ತ್ರಿಪದಿಯ ಅಂಶಗಳು ಗೋಚರವಾಗಿರುವುದನ್ನು ಗುರುತಿಸಿದ್ದಾರೆ.[1] ದಾಸಿಮಯ್ಯನ ವಚನಗಳೇ ಮಿಕ್ಕ ವಚನಕಾರರಿಗೆ ಮಾದರಿಯಾಗಿರುವುದ ರಿಂದ ದೇಸಿ ಲಯದಿಂದಲೇ ವಚನ ಆರಂಭವಾಯಿತೆನ್ನಲು ಸಂದೇಹವಿಲ್ಲ. ಆದರೆ ಒಂದು ಮಾತು, ವಚನವು ದೇಸಿ ವೃತ್ತದಿಂದ ಆರಂಭವಾದರೂ ತ್ರಿಪದಿ ಲಯದ ಪರಿಮಿತಿಗೆ ಒಳಗಾಗಲಿಲ್ಲ ಎಂಬುದು ಗಮನಿಸಬೇಕಾದ ಅಂಶ.

೧

ಭಾವಾನುಸಾರಿಯಾದ ಅನಿಯಮಿತ ಲಯ ವಚನರಚನೆಯ ಪ್ರಧಾನ ಲಕ್ಷಣ. ಕೆಲವೊಮ್ಮೆ ಇದರಲ್ಲಿ ಪರಿಚಿತ ರೀತಿಯ ಗಣಸರಣಿ ತಲೆ ಹಾಕುವುದೂ ಉಂಟು. ವಚನ ಗಳಲ್ಲಿ ಸಾಮಾನ್ಯವಾಗಿ ಗೋಚರವಾಗುವ ಮಾತ್ರಾಲಯ, ಮಾತ್ರಾಗಣದ ವೈವಿಧ್ಯತೆವಿವೆ, ಮಾದರಿಗಾಗಿ ಕೆಲವು ಉದಾಹರಣೆಗಳನ್ನು ನೋಡಬಹುದು.

- "ದೇವನೊಬ್ಬ ನಾಮ ಹಲವು ೩೪೯
ಪತಿವ್ರತೆಗೆ ಗಂಡನೊಬ್ಬ" - ಬಸವಣ್ಣ

- "ಕಿಚ್ಚಿನ ದೇವನು ಕೆಂಡದ ದೇವನು ಮಾರಿಯ ೪x೮
  ದೇವನು ಮಸನದ ದೇವನು " - ಅಲ್ಲಮ
- "ಎನ್ನನಡೆಯೊಂದು ಪರಿ ಎನ್ನನುಡಿ ೫x೪
  ಯೊಂದು ಪರಿ" - ಬಸವಣ್ಣ
- "ಎರೆಯಂತೆ ಕರಕರಗಿ ಮಳಲಂತೆ ಜರಿಜರಿದು ೫x೬
  ಕನಸಿನಲಿ ಕಳವಳಿಸಿ" - ಅಕ್ಕಮಹಾದೇವಿ

ಈ ವಚನಗಳ ಉದಾಹರಣೆಗಳಲ್ಲಿ ಕ್ರಮೇಣ ೩, ೪, ೫ ಮಾತ್ರೆಯ ಲಯಗಳ ಸುಳಿವು ಸಿಕ್ಕುತ್ತದೆ. ಮೇಲಿನ ಆ ವಚನಗಳಲ್ಲಿ ಒಂದೇ ರೀತಿಯ ಗಣಗಳಿರುವ ಲಯ ಗೋಚರಿಸಿದೆ. ಬೇರೆ ಬೇರೆ ಗಣಗಳ ಬೆರಕೆಯಿಂದ ಉಂಟಾದ ಮಿಶ್ರಲಯವೂ ಹಲವೆಡೆ ಕಂಡುಬರುತ್ತದೆ.

- "ಕಲ್ಲು ಹೊಕ್ಕರೆ ಕಲ್ಲ ಬರಿಸಿದೆ ೩+೪+೩+೪+೩+೪
  ಗಿರಿಯ ಹೊಕ್ಕರೆ ಗಿರಿಯ ಬರಿಸಿದೆ" - ಅಕ್ಕಮಹಾದೇವಿ
- "ನುಗ್ಗು ಮಾಡುವ ನುಸಿಯ ಮಾಡುವ ೩+೪+೩+೪
  ಮಣ್ಣು ಮಾಡುವ ಮಸಿಯ ಮಾಡುವ" - ಬಸವಣ್ಣ
- "ಸುಳಿವಿನೊಳಗೆ ಸುಳಿಯುತ್ತಲಿದ್ದೇನೆ" ೩+೫+೩+೫
  - ಬಸವಣ್ಣ
- "ಇವನಾರವ ಇವನಾರವ ಇವನಾರವ ೬+೬+೬+೬+೪
  ನೆಂದೆನಿಸದಿರಯ್ಯಾ" - ಬಸವಣ್ಣ

ಇಂತಹ ಉದಾಹರಣೆಗಳಲ್ಲಿ ಭಾಮಿನಿ, ವಾರ್ಧಕದ ಲಯದ ಸುಳಿವು ಕಂಡುಬರುತ್ತದೆ. 'ಇವನಾರವ ಇವನಾರವ.......' ಎಂಬ ವಚನದಲ್ಲಿ ಒಂದೇ ಪಾದದಲ್ಲಿ ೬ ಮತ್ತು ೪ ಮಾತ್ರೆಯ ಗಣಗಳು ಕಂಡುಬರುವ ಸಂಗತಿ ಅಪೂರ್ವವಾಗಿವೆ. ಬಸವಣ್ಣನವರ ವಚನಗಳಲ್ಲಿ ಹಲವೆಡೆ 'ಮುಡಿ' ಮತ್ತು 'ಪದ್ಮಗಣ'ಗಳ ಬಳಕೆಯನ್ನು ವಿದ್ವಾಂಸರು ಗುರುತಿಸಿದ್ದಾರೆ.[೨]

೪	೪	೪	ಮು
- "ಎನ್ನವ	ನೆನ್ನವ	ನೆನ್ನ	ಯ್ಯಾ
೪	೪	೪	ಮು
ಕೂಡಲ	ಸಂಗಮ	ದೇವ	ಯ್ಯಾ"
೫	೫	೫	ಪ
- "ಜನಿತಕ್ಕೆ	ತಾಯಾಗಿ	ಹೆತ್ತಳು	ಮಾಯೆ
೫	೫	೫	ಪ
ಮೋಹಕ್ಕೆ	ಮಗಳಾಗಿ	ಹುಟ್ಟಿದಳು	ಮಾಯೆ"

(ಮು=ಮುಡಿ, ಪ=ಪದ್ಮಗಣ)

ವಚನಗಳಲ್ಲಿ ಗೇಯ ಗುಣವಿದೆ. ಅಗತ್ಯಕ್ಕೆ ತಕ್ಕಂತೆ ಹಿಗ್ಗುವ ಮತ್ತು ಕುಗ್ಗುವ ಸ್ವಾತಂತ್ರ್ಯ ವಿರುವುದರಿಂದ ಒಂದು ಇಲ್ಲವೆ ಎರಡು ವಾಕ್ಯಗಳ ಪುಟ್ಟ ವಚನದಿಂದ ಹಿಡಿದು ಅರುವತ್ತು, ಎಪ್ಪತ್ತಕ್ಕೂ ಮೀರಿದ ಪಾದಗಳಿಂದ ಕೂಡಿದ ದೊಡ್ಡ ವಚನಗಳವರೆಗೆ ಆದ ಪ್ರಮಾಣ ವೈವಿಧ್ಯ ಹರಡಿದೆ. ಈ ಕುರಿತು ಬಸವಣ್ಣನವರೇ ತಮ್ಮ ವಚನಗಳ ಸ್ವರೂಪವನ್ನು ಕುರಿತು ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ.

"ತಾಳಮಾನ ಸರಿಸವನರಿಯೆ
ಓಜೆ ಬಜಾವಣೆಯ ಲೆಕ್ಕವನರಿಯೆ
ಅಮೃತಗಣ ದೇವಗಣವನರಿಯೆ
ಕೂಡಲಸಂಗಮದೇವ
ನಿನಗೆ ಕೇಡಿಲ್ಲವಾಗಿ ಅನು ಒಲಿದಂತೆ ಹಾಡುವ"

ಎಂದು ಹೇಳಿ ತಮ್ಮ ವಚನಗಳಲ್ಲಿ ತಾಳಗಣಾದಿಗಳನ್ನು ಹುಡುಕಬೇಕಾಗಿಲ್ಲವೆಂದು ಸೂಚಿಸಿದ್ದಾರೆ. ಅದರ ಜೊತೆಗೆ ತಮ್ಮ ವಚನಗಳು ತಾವು 'ಒಲಿದಂತೆ ಹಾಡಿದ' ಫಲವಾಗಿ ಮೂಡಿಬಂದ ತಕ್ಕುವು ಎಂದು ತಾವೇ ಹೇಳಿಕೊಂಡಿದ್ದಾರೆ. ವಚನಗಳಿಗೆ ಗೇಯ ಗುಣವಿರುದರಿಂದಲೇ ಹಾಡಲು ಒದಗಿಬರುತ್ತವೆ. ವಚನಗಳಲ್ಲಿ ಅಂಶಲಯದ ಧಾಟಿಯನ್ನು ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಕೆಲವು ವಚನಗಳನ್ನು ಪರಿಶೀಲಿಸಬಹುದು.

ವಿ	ವಿ	ವಿ	ವಿ
- "ನಾನೊಂದು :	ನೆನೆದೊಡೆ :	ತಾನೊಂದು :	ನೆನೆವುದು
ವಿ	ವಿ	ವಿ	ವಿ
ನಾನಿತ್ತ :	ಲೆಳೆದೊಡೆ :	ತಾನತ್ತ :	ಲೆಳೆವುದು
ವಿ	ಬ್ರ	ವಿ	ವಿ
ತಾಬೇರೆ-:	ಯೆನ್ನ :	ನಳಲಿಸಿ :	ಕಾಡಿತ್ತು
ವಿ	ವಿ	ವಿ	ವಿ
ಕೂಡಲ :	ಸಂಗನ :	ಕೂಡಿಹೆ :	ನೆಂದೊಡೆ
ವಿ	ಬ್ರ	ವಿ	ಬ್ರ
ತಾನೆನ್ನ :	ಮುಂದು :	ಗೆಡಿಸಿತ್ತು :	ಮಾಯೆ"

· ಬಸವಣ್ಣ

ದಾಸಿಮಯ್ಯನ ಕೆಲವು ವಚನಗಳಲ್ಲಿ ತ್ರಿಪದಿಯ ಮೊದಲೆರಡು ಪಾದಗಳ ಲಯವಿದೆ.

ವಿ	ಬ್ರ	ವಿ	ವಿ
- "ನಾನೊಂದು :	ಸುರಿಗೆ :	ನೇನೆಂದು :	ಹಿಡಿವೆನು
ವಿ	ಬ್ರ	ವಿ	ವಿ
ಏನಕಿ :	ತ್ತೇನ :	ನಿರಿವೆನು :	ಜಗವೆಲ್ಲ

ರು ಬ್ರ ರು

ನೀನಾಗಿಪ್ಪೆ : ಕಾಣಾ : ರಾಮನಾಥಾ - ಜೇಡರ ದಾಸಿಮಯ್ಯ

ವಚನಗಳಲ್ಲಿ ನಿಯಮಿತವಾದ ನುಡಿರಚನೆಯೂ ಉಂಟು, ಅನಿಯತ ಸ್ವರೂಪದ ನುಡಿರಚನೆಯೂ ಉಂಟು ಎಂದು ಹೇಳಬಹುದು. ಕೆಲವು ವಚನಗಳಲ್ಲಿ ಸ್ವಚ್ಛಂದ ಛಂದದ ನಾಡಿ ಸ್ಪಂದಿಸಿದೆ. ಉದಾಹರಣೆಗೆ.

"ಚಕೋರಂಗೆ : ಚಂದ್ರಮನ : ಬೆಳಕಿನ : ಚಿಂತೆ
ಅಂಬುಜಕೆ : ಭಾನುವಿನ : ಉದಯದ : ಚಿಂತೆ
ಭ್ರಮರಂಗೆ : ಪರಿಮಳದ : ಬಂಡುಂಬ : ಚಿಂತೆ
ನಮಗೆ : ನಮ್ಮ : ಕೂಡಲ : ಸಂಗಮ : ದೇವರ : ನೆನೆವ: ಚಿಂತೆ" - ಬಸವಣ್ಣ

ಈ ವಚನಗಳಲ್ಲಿ ಅನಿರ್ಬಂಧ ಛಂದಸ್ಸಿನ ಪ್ರಯೋಗ ಕಾಣಬಹುದಾಗಿದೆ. ಅಕ್ಕನ ವಚನಗಳಲ್ಲಿಯೂ ಇಂತಹ ಪ್ರಯೋಗವಿದೆ.

"ಗಿರಿಯಲ್ಲಲ್ಲದೆ : ಹುಲ್ಲುಮೊರಡಿ : ಯಲ್ಲಾಡುವುದೇ : ನವಿಲು
ಕೊಳನಲ್ಲದೆ : ಕಿರುವಳ್ಳ : ಕ್ಕೆಳಸುವುದೇ : ಹಂಸೆ
ಮಾಮರ : ತಳಿತಲ್ಲದೆ : ಸ್ವರಗೈವುದೆ : ಕೋಗಿಲೆ
ಪರಿಮಳವಿ : ಲ್ಲದಪುಷ್ಪ : ಕ್ಕೆಳಸುವುದೇ : ಭ್ರಮರ" - ಮಹಾದೇವಿಯಕ್ಕ

ಈ ವಚನದಲ್ಲಿ ಮದನವತಿಗೆ ಸಮೀಪವಾದ ಸಹಜ ಸ್ವಚ್ಛಂದ ಸುಂದರ ಗತಿಯೊಂದು ತನ್ನ ಸುಳುಹುದೋರಿದೆ. ಅಂಶಗಣಗಳ ಹೆಣಿಕೆಯಲ್ಲಿ ಈ ಪದಗಳ ಸ್ವಾರಸ್ಯ ಅಡಕವಾಗಿದೆ. ಶೈಲಿ ಒಂದಿಷ್ಟು ಅನೌಪಚಾರಿಕವಾದರೂ ಚಿಂತೆಯಿಲ್ಲ, ಛಂದಕ್ಕೆ ಅನುಕೂಲವಾಗುವಂತೆ ಭಾಷೆಯನ್ನು ಅಳವಡಿಸಿಕೊಳ್ಳುವ ಪ್ರವೃತ್ತಿ ಇಂತಹ ವಚನಗಳಲ್ಲಿ ಎದ್ದುಕಾಣುತ್ತದೆ. ಅದಕ್ಕೆ ಕಾರಣ ಬಹುಶಃ ವಚನಕಾರರು ನಾಡಿನಲ್ಲಿ ಸುಪ್ತವಾಗಿದ್ದ ಜನಪದ ಗೇಯತೆಯನ್ನು ಸಂದರ್ಭಕ್ಕೆ ತಕ್ಕಂತೆ ವಚನಗಳಿಗೆ ಹೂಡಿಕೊಂಡಿರಬೇಕು. ಅವುಗಳ ಆಳದಲ್ಲಿ ಆಡುಮಾತಿನ ಲಯಗಳು ಮತ್ತು ಸೊಗಡು ಇರುವುದನ್ನು ಕಾಣಬಹುದು.

ವಚನ ಭಾಷೆ ನಿಜಕ್ಕೂ ಗದ್ಯಪದ್ಯಗಳ ಗಡಿಗಳನ್ನು ಕಿತ್ತೆಸೆದು ಪದ್ಯದ ಲಯದ ಬಿಗುವು, ಭಾವುಕತೆ, ಬಳುಕು ಗದ್ಯಲಯದ ವೈವಿಧ್ಯತೆ, ವೈಚಾರಿಕತೆಯನ್ನೊಳಗೊಂಡಿದೆ. ಈ ಬಗೆಯ ಪ್ರಯೋಗಗಳ ಹಿಂದೆ ವಚನಕಾರರ ಭಾಷಾ ಸಿದ್ಧಿಯಿದೆ. ವಚನಕ್ಕೆ ತಕ್ಕಂತೆ ಭಾಷೆಯನ್ನು ನಿರ್ಮಿಸಿಕೊಳ್ಳುವಲ್ಲಿ, ಭಾಷೆಗೆ ತಕ್ಕಂತೆ ಛಂದೋಲಯಗಳನ್ನು ರೂಪಿಸಿಕೊಳ್ಳುವಲ್ಲಿ, ಅಭಿವ್ಯಕ್ತಿ ರೀತಿಯ ವೈವಿಧ್ಯತೆಯಲ್ಲಿ ವಚನಕಾರರು ನಂತರದ ದೇಸಿ ಕವಿಗಳ ದೇಸಿ ಮಟ್ಟುಗಳಿಗೆ ದೊಡ್ಡ ಪರಂಪರೆಯನ್ನು ಹಾಕಿಕೊಟ್ಟರು.

ಅಡಿಟಿಪ್ಪಣಿಗಳು

೧. ವಿವರಣೆಗಾಗಿ ನೋಡಿ : ಎಂ. ಚಿದಾನಂದಮೂರ್ತಿ, 'ವಚನಸಾಹಿತ್ಯದ ಉಗಮ', ಛಂದೋತರಂಗ, (೧೯೯೩)

2. [illegible]

ಆಕರಗ್ರಂಥಗಳು

1. [illegible]

2. [illegible] ಮೈಸೂರು.

೧

ಭಾವಾನುಸಾರಿಯಾದ ಅನಿಯಮಿತ ಲಯ ವಚನ ರಚನೆಯ ಪ್ರಧಾನ ಲಕ್ಷಣ. ಕೆಲವೊಮ್ಮೆ ಇದರಲ್ಲಿ ಪರಿಚಿತ ರೀತಿಯ ಗಣಸರಣಿ ತಲೆ ಹಾಕುವುದೂ ಉಂಟು. ವಚನಗಳಲ್ಲಿ ಸಾಮಾನ್ಯವಾಗಿ ಗೋಚರವಾಗುವ ಮಾತ್ರಾಲಯ, ಮಾತ್ರಾಗಣದ ವೈವಿಧ್ಯವಿದೆ, ಮಾದರಿಗಾಗಿ ಕೆಲವು ಉದಾಹರಣೆಗಳನ್ನು ನೋಡಬಹುದು.

- "ದೇವನೊಬ್ಬ ನಾಮ ಹಲವು ೩x೯
  ಪತಿವ್ರತೆಗೆ ಗಂಡನೊಬ್ಬ"- ಬಸವಣ್ಣ
- "ಕಿಚ್ಚಿನ ದೇವನು ಕೆಂಡದ ದೇವನು ಮಾರಿಯ ೪x೮
  ದೇವನು ಮಸನದ ದೇವನು " - ಅಲ್ಲಮ
- "ಎನ್ನನಡೆಯೊಂದು ಪರಿ ಎನ್ನನುಡಿ ೫x೪
  ಯೊಂದು ಪರಿ" -ಬಸವಣ್ಣ
- "ಎರೆಯಂತೆ ಕರಕರಗಿ ಮಳಲಂತೆ ಜರಿಜರಿದು ೫x೬
  ಕನಸಿನಲಿ ಕಳವಳಿಸಿ" - ಅಕ್ಕಮಹಾದೇವಿ

ಈ ವಚನಗಳ ಉದಾಹರಣೆಗಳಲ್ಲಿ ಕ್ರಮೇಣ ೩, ೪, ೫ ಮಾತ್ರೆಯ ಲಯಗಳ ಸುಳಿವು ಸಿಕ್ಕುತ್ತದೆ. ಮೇಲಿನ ಆ ವಚನಗಳಲ್ಲಿ ಒಂದೇ ರೀತಿಯ ಗಣಗಳಿರುವ ಲಯ ಗೋಚರಿಸಿದೆ. ಬೇರೆ ಬೇರೆ ಗಣಗಳ ಬೆರಕೆಯಿಂದುಂಟುವ ಮಿಶ್ರಲಯವೂ ಹಲವೆಡೆ ಕಂಡುಬರುತ್ತದೆ.

- "ಕಲ್ಲು ಹೊಕ್ಕರೆ ಕಲ್ಲ ಬರಿಸಿದೆ ೩+೪+೩+೪+೩+೪
  ಗಿರಿಯ ಹೊಕ್ಕರೆ ಗಿರಿಯ ಬರಿಸಿದೆ" -ಅಕ್ಕಮಹಾದೇವಿ
- "ನುಗ್ಗು ಮಾಡುವ ನುಸಿಯ ಮಾಡುವ ೩+೪+೩+೪
  ಮಣ್ಣು ಮಾಡುವ ಮಸಿಯ ಮಾಡುವ" - ಬಸವಣ್ಣ
- "ಸುಳಿವಿನೊಳಗೆ ಸುಳಿಯುತ್ತಲಿದ್ದೇನೆ" ೩+೫+೩+೫
  - ಬಸವಣ್ಣ
- "ಇವನಾರವ ಇವನಾರವ ಇವನಾರವ ೬+೬+೬+೬+೪
  ನೆಂದೆನಿಸದಿರಯ್ಯಾ" - ಬಸವಣ್ಣ

ಇಂತಹ ಉದಾಹರಣೆಗಳಲ್ಲಿ ಭಾಮಿನಿ, ವಾರ್ಧಕದ ಲಯದ ಸುಳಿವು ಕಂಡುಬರುತ್ತದೆ. 'ಇವನಾವರ ಇವನಾರವ.......' ಎಂಬ ವಚನದಲ್ಲಿ ಒಂದೇ ಪಾದದಲ್ಲಿ ೬ ಮತ್ತು ೪ ಮಾತ್ರೆಯ ಗಣಗಳು ಕಂಡುಬರುವ ಸಂಗತಿ ಅಪೂರ್ವವಾಗಿದೆ. ಬಸವಣ್ಣನವರ ವಚನಗಳಲ್ಲಿ ಹಲವೆಡೆ 'ಮುಡಿ' ಮತ್ತು 'ಪದ್ಮಗಣ'ಗಳ ಬಳಕೆಯನ್ನು ವಿದ್ವಾಂಸರು ಗುರುತಿಸಿದ್ದಾರೆ.[೨]

ಳ ಳ ಳ ಮು

- "ಎನ್ನವ ನೆನ್ನವ ನೆನ್ನ ಯ್ಯಾ

ಳ ಳ ಳ ಮು

ಕೂಡಲ ಸಂಗಮ ದೇವ ಯ್ಯಾ"

೫ ೫ ೫ ಪ

- "ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ

೫ ೫ ೫ ಪ

ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ"

(ಮು=ಮುಡಿ, ಪ=ಪದ್ಮಗಣ)

೨

ವಚನಗಳಲ್ಲಿ ಗೇಯ ಗುಣವಿದೆ. ಅಗತ್ಯಕ್ಕೆ ತಕ್ಕಂತೆ ಹಿಗ್ಗುವ ಮತ್ತು ಕುಗ್ಗುವ ಸ್ವಾತಂತ್ರ್ಯ ವಿರುವುದರಿಂದ ಒಂದು ಇಲ್ಲವೆ ಎರಡು ವಾಕ್ಯಗಳ ಪುಟ್ಟ ವಚನದಿಂದ ಹಿಡಿದು ಅರವತ್ತು, ಎಪ್ಪತ್ತಕ್ಕೂ ಮೀರಿದ ಪಾದಗಳಿಂದ ಕೂಡಿದ ದೊಡ್ಡ ವಚನಗಳವರೆಗೆ ಆದ ಪ್ರಮಾಣ ವೈವಿಧ್ಯ ಹರಡಿದೆ. ಈ ಕುರಿತು ಬಸವಣ್ಣನವರೇ ತಮ್ಮ ವಚನಗಳ ಸ್ವರೂಪವನ್ನು ಕುರಿತು ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ.

"ತಾಳಮಾನ ಸರಿಸವನರಿಯೆ
ಓಜೆ ಬಜಾವಣೆಯ ಲೆಕ್ಕವನರಿಯೆ
ಅಮೃತಗಣ ದೇವಗಣವನರಿಯೆ
ಕೂಡಲಸಂಗಮದೇವ
ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ"

ಎಂದು ಹೇಳಿ ತಮ್ಮ ವಚನಗಳಲ್ಲಿ ತಾಳಗಣಾದಿಗಳನ್ನು ಹುಡುಕಬೇಕಾಗಿಲ್ಲವೆಂದು ಸೂಚಿಸಿದ್ದಾರೆ. ಅದರ ಜೊತೆಗೆ ತಮ್ಮ ವಚನಗಳು ತಾವು 'ಒಲಿದಂತೆ ಹಾಡಿದ' ಫಲವಾಗಿ ಮೂಡಿಬಂದ ತಕ್ಕುವು ಎಂದು ತಾವೇ ಹೇಳಿಕೊಂಡಿದ್ದಾರೆ. ವಚನಗಳಿಗೆ ಗೇಯ ಗುಣಗಳಿರು ವುದರಿಂದಲೇ ಹಾಡಲು ಒದಗಿಬರುತ್ತವೆ. ವಚನಗಳಲ್ಲಿ ಅಂಶಲಯದ ಧಾಟಿಯನ್ನು ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಕೆಲವು ವಚನಗಳನ್ನು ಪರಿಶೀಲಿಸಬಹುದು.

ವಿ ವಿ ವಿ ವಿ

- "ನಾನೊಂದು : ನೆನೆದೊಡೆ : ತಾನೊಂದು : ನೆನೆವುದು

ವಿ ವಿ ವಿ ವಿ

ನಾನಿತ್ತ : ಲೆಳೆದೊಡೆ : ತಾನತ್ತ : ಲೆಳೆವುದು

ವಿ ಬ್ರ ವಿ ವಿ
ತಾಬೇರೆ : ಯೆನ್ನ : ನಳಲಿಸಿ : ಕಾಡಿತ್ತು
ವಿ ವಿ ವಿ ವಿ
ಕೂಡಲ : ಸಂಗನ : ಕೂಡಿಹೆ : ನೆಂದೊಡೆ
ವಿ ಬ್ರ ವಿ ಬ್ರ
ತಾನೆನ್ನ : ಮುಂದು : ಗೆಡಿಸಿತ್ತು : ಮಾಯೆ"

- ಬಸವಣ್ಣ

ದಾಸಿಮಯ್ಯನ ಕೆಲವು ವಚನಗಳಲ್ಲಿ ತ್ರಿಪದಿಯ ಮೊದಲೆರಡು ಪಾದಗಳ ಲಯವಿದೆ.

ವಿ ಬ್ರ ವಿ ವಿ
- "ನಾನೊಂದು : ಸುರಿಗೆಯ : ನೇನೆಂದು :ಹಿಡಿವೆನು
ವಿ ಬ್ರ ವಿ ವಿ
ಏನಕಿ : ತ್ತೇನ : ನಿರಿವೆನು : ಜಗವೆಲ್ಲ
ರು ಬ್ರ ರು
ನೀನಾಗಿಪ್ಪೆ : ಕಾಣಾ : ರಾಮನಾಥಾ

- ಜೇಡರ ದಾಸಿಮಯ್ಯ

ವಚನಗಳಲ್ಲಿ ನಿಯಮಿತವಾದ ನುಡಿರಚನೆಯನೂ ಉಂಟು, ಅನಿಯತ ಸ್ವರೂಪದ ನುಡಿರಚನೆಯೂ ಉಂಟು ಎಂದು ಹೇಳಬಹುದು. ಕೆಲವು ವಚನಗಳಲ್ಲಿ ಸ್ವಚ್ಛಂದ ಛಂದದ ನಾಡಿ ಸ್ಪಂದಿಸಿದೆ. ಉದಾಹರಣೆಗೆ.

"ಚಕೋರಂಗೆ : ಚಂದ್ರಮನ : ಬೆಳಕಿನ : ಚಿಂತೆ
ಅಂಬುಜಕೆ : ಭಾನುವಿನ : ಉದಯದ : ಚಿಂತೆ
ಭ್ರಮರಂಗೆ : ಪರಿಮಳದ : ಬಂಡುಂಬ : ಚಿಂತೆ
ನಮಗೆ : ನಮ್ಮ : ಕೂಡಲ : ಸಂಗಮ : ದೇವರ
ನೆನೆವ: ಚಿಂತೆ" - ಬಸವಣ್ಣ

ಈ ವಚನಗಳಲ್ಲಿ ಅನಿರ್ಬಂಧ ಛಂದಸ್ಸಿನ ಪ್ರಯೋಗ ಕಾಣಬಹುದಾಗಿದೆ. ಅಕ್ಕನ ವಚನಗಳಲ್ಲಿಯೂ ಇಂತಹ ಪ್ರಯೋಗವಿದೆ.

"ಗಿರಿಯಲ್ಲಲ್ಲದೆ : ಹುಲ್ಲುಮೊರಡಿ : ಯಲ್ಲಾಡುವುದೇ : ನವಿಲು
ಕೊಳನಲ್ಲದೆ : ಕಿರುವಳ್ಳ : ಕ್ಕೆಳಸುವುದೇ : ಹಂಸೆ
ಮಾಮರ : ತಳಿತಲ್ಲದೆ : ಸ್ವರಗೈವುದೆ : ಕೋಗಿಲೆ
ಪರಿಮಳವಿ : ಲ್ಲದಪುಷ್ಪ : ಕ್ಕೆಳಸುವುದೇ : ಭ್ರಮರ"

- ಮಹಾದೇವಿಯಕ್ಕ

ಈ ವಚನದಲ್ಲಿ ಮದನವತಿಗೆ ಸಮೀಪವಾದ ಸಹಜ ಸ್ವಚ್ಛಂದ ಸುಂದರ ಗತಿಯೊಂದು ತನ್ನ ಸುಳುಹುದೋರಿದೆ. ಅಂಶಗಣಗಳ ಹೆಣಿಕೆಯಲ್ಲಿ ಈ ಪದಗಳ ಸ್ವಾರಸ್ಯ ಅಡಕವಾಗಿದೆ. ಶೈಲಿ ಒಂದಿಷ್ಟು ಅನೌಪಚಾರಿಕವಾದರೂ ಚಿಂತೆಯಿಲ್ಲ, ಛಂದಕ್ಕೆ ಅನುಕೂಲವಾಗುವಂತೆ ಭಾಷೆಯನ್ನು ಅಳವಡಿಸಿಕೊಳ್ಳುವ ಪ್ರವೃತ್ತಿ ಇಂತಹ ವಚನಗಳಲ್ಲಿ ಎದ್ದುಕಾಣುತ್ತದೆ. ಅದಕ್ಕೆ ಕಾರಣ ಬಹುಶಃ ವಚನಕಾರರು ನಾಡಿನಲ್ಲಿ ಸುಪ್ತವಾಗಿದ್ದ ಜನಪದ ಗೇಯತೆಯನ್ನು ಸಂದರ್ಭಕ್ಕೆ ತಕ್ಕಂತೆ ವಚನಗಳಿಗೆ ಹೂಡಿಕೊಂಡಿರಬೇಕು. ಅವುಗಳ ಆಳದಲ್ಲಿ ಆಡುಮಾತಿನ ಲಯಗಳು ಮತ್ತು ಸೊಗಡು ಇರುವುದನ್ನು ಕಾಣಬಹುದು.

೩

ವಚನಕಾರರು ಪ್ರಾಸಪ್ರಿಯರು. ವರ್ಣಾವೃತ್ತಿಯ ವಿವಿಧ ಪ್ರಕಾರಗಳನ್ನು ವಚನಗಳಲ್ಲಿ ಯಥೇಚ್ಛವಾಗಿ ಬಳಸಲಾಗಿದೆ. ಆದಿಪ್ರಾಸ, ಅಂತ್ಯ ಪ್ರಾಸ ಮತ್ತು ಪದಾವೃತ್ತಿಗಳು ಸಹಜವಾಗಿ ವಚನಗಳಿಗೆ ಭಾರವಾಗದಂತೆ ಬಳಕೆಯಾಗಿವೆ.

ಆದಿಪ್ರಾಸ : "ಕಡೆಗೀಲಿಲ್ಲದ ಬಂಡಿ ಹೊಡೆಗೆಡುವುದೇ ಮಾಬುದೆ
ಕಡೆಗೀಲು ಬಂಡಿಗಾಧಾರ
ಕಡುದರ್ಪವೇರಿದ ಒಡಲೆಂಬ ಬಂಡಿಗೆ
ಮೃಡ ಶರಣರ ನುಡಿಗಡಣವೇ ಕಡೆಗೀಲು ಕಾಣಾ ರಾಮನಾಥ"
- ಜೇಡರ ದಾಸಿಮಯ್ಯ

"ಗಂಡ ಶಿವಲಿಂಗದೇವರ ಭಕ್ತ
ಹೆಂಡತಿ ಮಾರಿಮಸಣಿಯ ಭಕ್ತೆ
ಗಂಡ ಕೊಂಬುದು ಪಾದೋದಕ ಪ್ರಸಾದ
ಹೆಂಡತಿ ಕೊಂಬುದು ಸುರೆಮಾಂಸ
ಭಾಂಡ ಭಾಜನ ಶುದ್ಧವಿಲ್ಲದವರ ಭಕ್ತಿ
ಹೆಂಡದ ಮಡಕೆಯ ಹೊರಗೆ ತೊಳೆದಂತೆ
ಕೂಡಲಸಂಗಮದೇವ" - ಬಸವಣ್ಣ

ಅಂತ್ಯಪ್ರಾಸ : "ಐತ ತಲೆವಾಗಿದರೇನು ಗುರುಭಕ್ತನಾಗಬಲ್ಲುದೆ?
ಇಕ್ಕುಳ ಕೈಮುಗಿದರೇನು ಭೃತ್ಯಾಚಾರಿಯಾಗಬಲ್ಲುದೆ?
ಗಿಳಿಯೋದಿದರೇನು ಲಿಂಗವೇದಿ ಯಾಗಬಲ್ಲುದೆ?
ಕೂಡಲಸಂಗನ ಶರಣರು ಬಂದ ಬರವ ನಿಂದ ನಿಲವ
ಅನಂಗಸಂಗಿಗಳೆತ್ತ ಬಲ್ಲರು"? - ಬಸವಣ್ಣ

ಹೀಗೆ ವಚನಕಾರರು ಬಳಸಿದ ಆದಿಪ್ರಾಸ, ಅಂತ್ಯಪ್ರಾಸ ಮನೋಹರವಾಗಿವೆ. ಅವು ವಚನಗಳ ಸಾಹಿತ್ಯ ಸೌಂದರ್ಯಕ್ಕೆ ನೆರವಾಗಿವೆ. ವಚನಕಾರರು ಅತ್ಯುತ್ತಮ ನೀತಿ ಬೋಧಕರೂ

ಹೌದು. ತಾವು ಹೇಳಬೇಕಾದ ವಿಷಯವನ್ನು ಜನತೆಗೆ ಮನದಟ್ಟು ಮಾಡಬೇಕಾದರೆ ಪದಗಳ ಆವೃತ್ತಿ ಅಗತ್ಯವಾಗಿದೆ.

- "ಅರಿದೆ ಅರಿದೆವೆಂಬಿರಿ
ಅರಿದ ಪರಿಯೆಂತು ಹೇಳಿರೆ?
ಅರಿದರರಿದೆ ವೆಂಬರೆ?
ಅರಿಯಬಾರದ ಘನ ವನರಿದವರು
ಅರಿಯದಂತಿಪ್ಪರು ಗುಹೇಶ್ವರ" - ಅಲ್ಲಮಪ್ರಭು

- "ನೀನೊಲಿದರೆ ಕೊರಡು ಕೊನರುವುದಯ್ಯ
ನೀನೊಲಿದರೆ ಬರಡು ಹಯನಹುದಯ್ಯ
ನೀನೊಲಿದರೆ ವಿಷವಮೃತವಹುದಯ್ಯ
ನೀನೊಲಿದರೆ ಸಕಲ ಪಡಿಪದಾರ್ಥ ಇದಿರಲಿಪ್ಪವು
ಕೂಡಲಸಂಗಮದೇವ" - ಬಸವಣ್ಣ

ಅಲ್ಲಮನ ವಚನಗಳಲ್ಲಿ 'ಅರಿ' ಎಂಬ ಶಬ್ದವು, ಬಸವಣ್ಣನ ವಚನದಲ್ಲಿ 'ನೀನೊಲಿದರೆ' ಎಂಬ ಶಬ್ದವು ಮೇಲಿಂದ ಮೇಲೆ ಬಂದಿವೆ. ಆ ವಚನಗಳು ಕ್ರಮವಾಗಿ 'ಅರಿವಿ'ನಲ್ಲಿ, 'ನೀನೊಲಿದರೆ' ಎಂಬಲ್ಲಿ ಕೇಂದ್ರೀಕೃತವಾಗಿದೆಯೆಂಬುದನ್ನು ಮನದಟ್ಟು ಮಾಡಿಕೊಡುವಲ್ಲಿ ಅಂತಹ ಪುನರಾವರ್ತನೆಗಳು ತುಂಬ ಸಹಕಾರಿಯಾಗಿವೆ.

ಪ್ರಾಚೀನ ಛಂದೋಬಂಧಗಳಲ್ಲಿ ಕಂಡುಬಂದಂತಹ ನಿರ್ದಿಷ್ಟ ರೀತಿಯ ಪಾದರಚನೆ ವಚನಗಳಿರುವುದಿಲ್ಲ. ಅಲ್ಲಿ ವಾಕ್ಯವೇ ಮೂಲ ಘಟಕ. ಹಲವು ವಾಕ್ಯಗಳು ಕೂಡುವುದರ ಮೂಲಕ ಒಂದು ವಚನ ರೂಪುಗೊಳ್ಳುತ್ತದೆ. ಕೆಲವು ವಾಕ್ಯಗಳಲ್ಲಿ ಪ್ರಮಾಣ ಸಾಮ್ಯವೂ ಗೋಚರಿಸುತ್ತದೆ.

ವೇದ ಪ್ರಮಾಣವಲ್ಲ | ಶಾಸ್ತ್ರ ಪ್ರಮಾಣವಲ್ಲ
ಶಬ್ದ ಪ್ರಮಾಣವಲ್ಲ | ಕಾಣೆಬೋಲಿಂಗಕ್ಕೆ - ಅಲ್ಲಮಪ್ರಭು

ಎಂಬಲ್ಲಿ ಮೊದಲ ನಾಲ್ಕು ಘಟಕಗಳೂ ಹತ್ತು ಮಾತ್ರಾ ಮೌಲ್ಯದವಾಗಿರುವುದನ್ನು ಗಮನಿಸಬೇಕು. ಇಲ್ಲಿಯ ಎಲ್ಲ ವಾಕ್ಯಗಳಲ್ಲಿಯೂ ಕರ್ತೃಪದವನ್ನು ಅಂತ್ಯದಲ್ಲಿ ತಂದಿದೆ. ವಚನಗಳ ವಾಕ್ಯಗಳು ಲಯಾನ್ವಿತ ಗದ್ಯ ಖಂಡಗಳಾಗಿವೆ.

- "ತಂದೆ ನೀನು, ತಾಯಿ ನೀನು;
ಬಂಧು ನೀನು ಬಳಗ ನೀನು;
ನೀನಲ್ಲದೆ ಮತ್ತಾರು ಇಲ್ಲವಯ್ಯ!
ಕೂಡಲಸಂಗಮದೇವ
ಹಾಲಲದ್ದುನೀರಲದ್ದು" - ಬಸವಣ್ಣ

- "ನಾಳೆ ಬರುವುದು, ನಮಗಿಂದೇ ಬರಲಿ
ಇಂದು ಬರುವುದು ನಮಗೀಗಲೇ ಬರಲಿ!
ಆಗೀಗಲೆನ್ನದಿರೊ ಚೆನ್ನಮಲ್ಲಿಕಾರ್ಜುನ"
- ಅಕ್ಕಮಹಾದೇವಿ

ಈ ಬಗೆಯ ವಚನಗಳನ್ನು ಗಮನಿಸಿದಾಗ ವಚನಗಳು ಕನ್ನಡ ಗದ್ಯಲಯಕ್ಕೆ ವೈವಿಧ್ಯ ಮತ್ತು ಬಿಗಿಯನ್ನು ತಂದಿವೆ. ಮುರಿಮುರಿಯಾದ ವಾಕ್ಯಗಳು, ಕರ್ಮಣಿ ಪ್ರಯೋಗರಹಿತ ವಾಕ್ಯಗಳು ಕನ್ನಡಕ್ಕೆ ಸಹಜವಾಗಿವೆ. ತಾತ್ಪರ್ಯವಿಷ್ಟೇ ವಚನಕಾರರು ಕನ್ನಡ ಭಾಷೆಯ ಜಾಯಮಾನವನ್ನು ಅರಿತವರಾಗಿದ್ದರು ಎಂಬ ಅಂಶ ಇದರಿಂದ ವೇದ್ಯವಾಗುತ್ತದೆ.

ಈವರೆಗಿನ ವಿವೇಚನೆಯನ್ನಾಧರಿಸಿ ವಚನಗಳ ಛಂದಸ್ಸಿನ ಲಕ್ಷಣಗಳನ್ನು ಹೀಗೆ ಸಂಗ್ರಹಿಸಬಹುದು. ೧. ಅಧ್ಯಯನಕಾರರಿಗೆ ಪರಿಚಿತವಾಗಿರುವ ಹೆಚ್ಚು ಕಡಿಮೆ ಎಲ್ಲ ಮಾತ್ರಾ ಮತ್ತು ಅಂಶಗಣಗಳು ವಚನಗಳಲ್ಲಿ ಕಂಡುಬರುತ್ತವೆ. ಅವುಗಳನ್ನು ವಚನಕಾರರು ಉದ್ದೇಶ ಪೂರ್ವಕವಾಗಿ ಬಳಸಿಲ್ಲ. ಅವು ಸಹಜವಾಗಿ ಕಾಣಿಸಿಕೊಂಡಿವೆ. ೨. ವಚನಗಳಲ್ಲಿ ನಿಯಮಿತ ಲಯವಿಲ್ಲ; ಲಯ ಅನಿಯಮಿತವಾಗಿರುತ್ತದೆ. ಕೆಲವು ಸಾರಿ ಹಲವು ಲಯಗಳ ಮಿಶ್ರಣ ಕಂಡುಬರುತ್ತದೆ. ೩. ವಚನಗಳು ನಾದಾತ್ಮಕವಾಗಿದ್ದು, ಗೇಯ ಗುಣಗಳಿಂದ ಕೂಡಿದವುಗಳಾಗಿವೆ. ಅಕ್ಷರ ಆವೃತ್ತಿ, ಪದ, ಪದಪುಂಜ ಕೆಲವು ಸಾರಿ ವಾಕ್ಯಗಳ ಪುನರಾವರ್ತನೆಯು ಕೂಡ ವಚನಗಳಲ್ಲಿ ಕಂಡುಬರುತ್ತದೆ. ಅವೆಲ್ಲ ಸಂದರ್ಭಕ್ಕೆ ತಕ್ಕಂತೆ ಬಳಕೆಯಾಗಿವೆ. ಹೀಗೆ ವಚನಗಳ ಛಂದೋಲಯಗಳು ವೈವಿಧ್ಯಮಯವಾಗಿವೆ.

ಅಡಿಟಿಪ್ಪಣಿಗಳು

೧. ವಿವರಣೆಗಾಗಿ ನೋಡಿ. ಎಂ. ಚಿದಾನಂದಮೂರ್ತಿ, ವಚನ ಸಾಹಿತ್ಯದ ಉಗಮ, ಛಂದೋತರಂಗ, (೧೯೯೩)

೨. ಎಂ. ಚಿದಾನಂಮೂರ್ತಿ: ಬಸವಣ್ಣನವರ ವಚನಗಳಲ್ಲಿ ಛಂದೋಲಯ, ಛಂದೋ ತರಂಗ,(೧೯೯೩), ಪು. ೧೮೭

ಆಕರಗ್ರಂಥಗಳು

೧. ಕರ್ಕಿ ಡಿ.ಎಸ್., ೧೯೯೨, ಕನ್ನಡ ಛಂದೋವಿಕಾಸ, ಭಾರತ ಬುಕ್ ಡಿಪೋ. ಧಾರವಾಡ.

೨. ಬಸವರಾಜು ಎಲ್. (ಸಂ.), ಅಲ್ಲಮ, ಅಕ್ಕ, ಬಸವಣ್ಣ, ದೇವರದಾಸಿಮಯ್ಯರ ವಚನಗಳು, ಗೀತಾ ಬುಕ್‌ಹೌಸ್, ಮೈಸೂರು.

೬೦

ಕನ್ನಡ ಛಂದೋವಿಕಾಸ : ಒಂದು ಆಚಾರ್ಯ ಕೃತಿಯಾಗಿ

ಡಿ.ಎಸ್. ಕರ್ಕಿ ಅವರ 'ಕನ್ನಡ ಛಂದೋವಿಕಾಸ' ಮುಂಬೈ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ ಪಿಎಚ್.ಡಿ ನಿಬಂಧ (೧೯೪೮). ಅದಕ್ಕೆ ಮಿಗಿಲಾಗಿ ಈ ಕೃತಿಗೆ ಕನ್ನಡ ಸಾಹಿತ್ಯಾಭಿಮಾನಿಗಳ, ಅಭ್ಯಾಸಿಗಳ ಮೆಚ್ಚುಗೆ, ಮನ್ನಣೆಗಳು ನಿರಂತರವಾಗಿ ದೊರೆತಿವೆ. ಈ ಗ್ರಂಥವನ್ನು ಕನ್ನಡ ಸಾಹಿತ್ಯವನ್ನು ಕಲಿಸುವ ಎಲ್ಲ ವಿದ್ಯಾ ಸಂಸ್ಥೆಗಳೂ ವಿಶ್ವವಿದ್ಯಾಲಯಗಳೂ ಪಠ್ಯಪುಸ್ತಕವನ್ನಾಗಿಯೋ ಆಕರಗ್ರಂಥವನ್ನಾಗಿಯೋ ಗೊತ್ತುಮಾಡಿ ಅನೇಕ ವರ್ಷಗಳಿಂದ ಮುಂದುವರಿಸಿಕೊಂಡು ಬರುತ್ತಿವೆ. ಈಗಾಗಲೇ ಈ ಪ್ರೋತ್ಸಾಹ ಕಾರಣವಾಗಿ ಈ ಗ್ರಂಥದ ಇಪ್ಪತ್ತುನಾಲ್ಕು ಆವೃತ್ತಿಗಳು ಹೊರಬಿದ್ದಿವೆ. ಇವು ಈ ಗ್ರಂಥದ ಜನಪ್ರಿಯತೆಗೆ, ಉಪಯುಕ್ತತೆಗೆ ಒಳ್ಳೆಯ ಸಾಕ್ಷ್ಯಗಳೆನ್ನಬಹುದು.

ಕರ್ಕಿ ಅವರ 'ಕನ್ನಡ ಛಂದೋವಿಕಾಸ' ಪ್ರಕಟಗೊಳ್ಳುವವರೆಗೆ ಈ ವಿಷಯದಲ್ಲಿ ಪ್ರಸಿದ್ಧವಾಗಿದ್ದುದು ಎಂದರೆ ಮೈಸೂರು ವಿಶ್ವವಿದ್ಯಾಲಯದ 'ಕನ್ನಡ ಕೈಪಿಡಿ'ಯೊಂದೇ (೧೯೨೭). ಈ ಸಂಪುಟದ 'ಛಂದಸ್ಸಿನ ಭಾಗ'ವು ನಮ್ಮ ಛಂದಸ್ಸಿನ ಸ್ವರೂಪ ಎಷ್ಟು ವಿಸ್ತಾರವಾದುದು ಅದರ ಸಾಮಗ್ರಿ ಎಷ್ಟು ವಿಪುಲವಾದುದು ಎನ್ನುವುದನ್ನು ಯಶಸ್ವಿಯಾಗಿ ತೋರಿಸಿಕೊಟ್ಟಿತು. ಈಗ ಇಲ್ಲಿಯ ಯೋಜನೆಯನ್ನೂ ಸಾಮಗ್ರಿಯನ್ನೂ ಬಳಸಿಕೊಂಡು ಕನ್ನಡ ಛಂದಸ್ಸಿನ ಸತ್ವ ಎಷ್ಟು, ಸೌಂದರ್ಯ ಯಾವ ತೆರನಾದುದು, ಗುಣದೋಷಗಳ ವಿಮರ್ಶೆಯಿಂದ ಅವನ್ನು ಗುರುತಿಸುವುದು ಹೇಗೆ ಎನ್ನುವ ಕೆಲಸವನ್ನು ಕೈಕೊಳ್ಳುವುದು ಮುಂದಿನ ಪೀಳಿಗೆಯ ಛಂದಶ್ಶಾಸ್ತ್ರಜ್ಞರ, ಕಾವ್ಯಾಭ್ಯಾಸಿಗಳ ಪಾಲಿಗೆ ಉಳಿಯಿತು. ಬಿ.ಎಂ.ಶ್ರೀ ಅವರು ಅಂಕುರಾರ್ಪಣೆ ಮಾಡಿ ತೋರಿಸಿದ ಈ ಬಗೆಯ ಕೆಲಸವನ್ನು ಛಂದೋಲಯದ ಹೊಸಸಾಧ್ಯತೆಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ವ್ಯಾಪಕವಾಗಿ ಮತ್ತು ಸಮರ್ಥವಾಗಿ ಮುನ್ನಡೆಸಿದ ಮೊದಲಿಗರಲ್ಲಿ ಕರ್ಕಿ ಅವರು ಮುಖ್ಯರು.

ಕರ್ಕಿ ಅವರು ತಮ್ಮ ಕೃತಿರಚನೆಯ ಉದ್ದೇಶವನ್ನು ತಾವೇ ತಮ್ಮ 'ಅರಿಕೆ'ಯಲ್ಲಿ 'ಭಾವಾಭಿವ್ಯಕ್ತಿಯ ದೃಷ್ಟಿಯಿಂದ ಛಂದೋಬಂಧಗಳ ಬೆಲೆಗಳನ್ನು ಕಟ್ಟುವ ವಿಷಯದಲ್ಲಿ ಇಲ್ಲಿ ಮಾಡಿದ ಕಾರ್ಯ ಸ್ವತಂತ್ರ ಕಾರ್ಯ' ಎಂದು ಮುಂತಾಗಿ ಬರೆದು ಸ್ಪಷ್ಟ ಪಡಿಸಿದ್ದಾರೆ. ಈ ಮಾತನ್ನು ವಿಸ್ತರಿಸಿ ಚರ್ಚೆ ಬೆಳೆಸುವುದು ಅಗತ್ಯವಾಗಿದೆ. ಭಾಷಿಕರು ತಮ್ಮ ಭಾವನೆಗಳನ್ನು ಭಾಷೆಯ ಮೂಲಕ ಅಭಿವ್ಯಕ್ತಿಸುವಾಗ ತನಗರಿಯದಂತೆಯೇ ಒಂದು ಬಗೆಯ ಲಯ ನಿರ್ಮಾಣವಾಗುತ್ತದೆ. ಭಾಷೆಯ ಲಯಬದ್ಧವಾದ ನಡಗೆಯೇ ಛಂದಸ್ಸು. ಲಯವೆಂದರೆ ಮಾತಿನ ಓಟ; ಗತಿ. ಅದುವೇ ಭಾಷೆಯ ಜೀವಾಳ. ಇದನ್ನು ಕಾವ್ಯದ ಸಂದರ್ಭದಲ್ಲಿ ಅನ್ವಯಿಸಿ ಹೇಳುವುದಾದರೆ ಕವಿಯ ಭಾವ, ಲಯದ ಚೌಕಟ್ಟಿನಲ್ಲಿ ಹರಳುಗೊಂಡಾಗ ಅರ್ಥ ಪುಷ್ಟಿ ಪಡೆಯುತ್ತದೆ. ಅದು ಸಹೃದಯನ ಮೇಲೆ ವಿಶೇಷ ಪರಿಣಾಮ ಬೀರುತ್ತದೆ. ಕವಿಯ ಭಾವನೆಗಳು ಘನೀಭವಿಸಿ ನಿಲ್ಲುವಲ್ಲಿ ಛಂದಸ್ಸು ಪ್ರಮುಖ ಪಾತ್ರವಹಿಸುತ್ತದೆ. ಭಾವ, ಭಾಷೆ, ಕಾವ್ಯಬಂಧ ಇವು ಅವಿನಾಭಾವ ವಾಗಿ ಒಂದು ಇನ್ನೊಂದಕ್ಕೆ ಪೂರಕವಾಗಿವೆ. ಭಾಷೆಯ ರಚನೆಗೂ ಮತ್ತು ಛಂದಸ್ಸಿಗೂ ತುಂಬ ನಿಕಟತ್ವವಿದೆ.

ಕಾವ್ಯದಲ್ಲಿ ಭಾಷೆ, ಶೈಲಿ, ಅಲಂಕಾರಗಳಂತೆ ಛಂದಸ್ಸು ಕಾವ್ಯದ ಒಳಗಿನ ಅಂಗ ಅದು ಕಾವ್ಯದ ಸಹಜ ಸ್ವರಾಂದೋಲನ. ಉಳಿದ ಭಾಷಾಂಗಗಳ ಜೊತೆಗೆ ಛಂದಸ್ಸು ಸಾವಯವ ಸಂಬಂಧವನ್ನು ಹೊಂದಿರುವುದರಿಂದ ಕಾವ್ಯವನ್ನು ಸಮಗ್ರವಾಗಿ ಅಧ್ಯಯನ ಮಾಡುವಾಗ ಅದರ ಮಹತ್ವದ ಅಂಗವಾದ ಛಂದಸ್ಸನ್ನು ಗಮನಿಸಬೇಕಾಗುತ್ತದೆ. ಕಾವ್ಯಬಂಧಗಳ ವರ್ಣನಾತ್ಮಕ ವಿಶ್ಲೇಷಣೆ ಕರ್ಕಿ ಅವರಿಗೆ ಮುಖ್ಯವಲ್ಲ. ಏಕೆಂದರೆ ಅಂತಹ ವಿಶ್ಲೇಷಣೆಯಿಂದ ಛಂದಸ್ಸು ಲೆಕ್ಕಾಚಾರದ ವಿಷಯವಾಗಿ ಅಧ್ಯಯನಕಾರರಿಂದ ದೂರವಾಗುವುದುಂಟು. ಸ್ಪಷ್ಟ ತಿಳಿವಳಿಕೆ ಕರ್ಕಿ ಅವರಿಗಿದೆ. ಛಂದಸ್ಸಿನ ಅಧ್ಯಯನ ಅರ್ಥಪೂರ್ಣವಾಗಿ ನಡೆಯಲು ಕಾವ್ಯಬಂಧ, ಕವಿಯ ಆಶಯ, ಕಾವ್ಯದ ಭಾವ, ನಾದ ಮತ್ತು ಭಾಷಿಕ ಸಂದರ್ಭ ಇವುಗಳನ್ನು ಅನುಲಕ್ಷಿಸಿ ಅಧ್ಯಯನ ನಡೆಯ ಬೇಕಾಗುತ್ತದೆ. ಈ ನಿಟ್ಟಿನಲ್ಲಿ ಕರ್ಕಿ ಅವರ ಅಧ್ಯಯನ ನಡೆದಿದೆ ಎಂಬುದನ್ನು ಗಮನಿಸಬೇಕು. ಕನ್ನಡ ಕಾವ್ಯ ಪರಂಪರೆಯನ್ನು ಅರ್ಥ ಮಾಡಿಕೊಳ್ಳಲಿಕ್ಕೆ ಛಂದಸ್ಸು ಹೇಗೆ ನೆರವಾಗುತ್ತದೆ ಎಂಬುದರ ಕಡೆಗೆ ಅವರ ಒಲವಿದೆ. ಆ ದಿಕ್ಕಿನಲ್ಲಿ ಕೆಲಸ ಮಾಡಿದ ಅವರ ಈ ಬರೆಹ ವಿದ್ವಾಂಸರ ಗಮನ ಸೆಳೆದಿದೆ. ಈ ಹಿನ್ನೆಲೆಯಲ್ಲಿ ಈ ಕೃತಿಯ ಹಿಂದಿರುವ ಆಶಯವನ್ನು ಗುರುತಿಸುವುದು ಈ ಸಂಪ್ರಬಂಧದ ಆಶಯವಾಗಿದೆ.

ಕರ್ಕಿ ಅವರು ನಿರೂಪಣೆಯಲ್ಲಿ ಅನುಸರಿಸುವ ಕ್ರಮ ವಿಶಿಷ್ಟವಾದುದು. ಅವರು ಕನ್ನಡ ಛಂದಸ್ಸಿನ ಸ್ವರೂಪವನ್ನು ಪರಿಶೀಲಿಸುವ ರೀತಿ ಕನ್ನಡ ಕಾವ್ಯ ಪರಂಪರೆಯಂತೆ ಸರ್ವಾಂಗೀಣವಾದದ್ದು. ನಾದ ಪ್ರಪಂಚದಲ್ಲಿ ಛಂದಸ್ಸು, ಭಾವ ಮತ್ತು ಛಂದಸ್ಸು, ಛಂದಃಪ್ರಬೇಧಗಳು, ಕನ್ನಡ ಛಂದದ ರಹಸ್ಯ, ತ್ರಿಪದಿ, ಚಂಪು, ಕರ್ಣಾಟಕ ವಿಷಯ

ಜಾತಿ, ರಗಳೆ, ಷಟ್ಪದಿ, ಸೀಸ, ಸಾಂಗತ್ಯ, ಜಾನಪದ ಛಂದ, ಆಧುನಿಕ ಬಂಧಗಳು ಹೀಗೆ ಛಂದಸ್ಸಿನ ಯುಗವ್ಯಾಪ್ತಿಯ ಎಲ್ಲ ಛಂದೋಬಂಧಗಳನ್ನು ಕುರಿತು ದೊಡ್ಡ ಪ್ರಮಾಣದ ಅಧ್ಯಾಯಗಳನ್ನು ವಿಂಗಡಿಸಿ ವಿಷಯ ವಿವೇಚನೆ ಮಾಡಿದ್ದಾರೆ. ಪ್ರತಿಯೊಂದು ಮಟ್ಟುವಿನ ಹೆಸರು, ಹಿನ್ನೆಲೆ, ಲಕ್ಷಣ, ಅವಸ್ಥಾಂತರಗಳು, ಭಾವಮೌಲ್ಯ, ಲೋಕಪ್ರಿಯತೆ ಮತ್ತು ವ್ಯಾಪ್ತಿಗಳ ವಿವೇಚನೆ ಇವನ್ನೆಲ್ಲ ಸ್ಥೂಲವಾಗಿ ವಿವರಿಸಿದ್ದಾರೆ. ಲಯ, ಯತಿ, ಪ್ರಾಸಗಳ ದೃಷ್ಟಿಯಿಂದ ಕನ್ನಡ ಶಬ್ದಗಳಿಗೂ ಅಂಶಗಣಕ್ಕೂ ಇರುವ ಸಹಜ ಸಂಬಂಧವನ್ನು ನೃತ್ಯಗತಿಯಲ್ಲಿ ಸಾಗುವ ಕನ್ನಡದ ದೇಸಿಯ ಸೊಬಗನ್ನು ಕಂಡ ಕರ್ಕಿ ಅವರ ಕಾವ್ಯಾಭ್ಯಾಸ ನಿಸ್ಸಂಶವಾಗಿಯೂ ಅಗಾಧವಾದದ್ದು. ಕನ್ನಡ ಛಂದಸ್ಸಿನ ಸೂಕ್ಷ್ಮಸಂವೇದನೆಗಳನ್ನು ಅವರು ಈ ಕೃತಿಯಲ್ಲಿ ಕಾಣಿಸಿದ್ದಾರೆ.

ಕನ್ನಡ ಛಂದಕ್ಕೆ ಸೇರಿದ ಮಟ್ಟುಗಳಲ್ಲಿ 'ತ್ರಿಪದಿ'ಯೇ ಅತ್ಯಂತ ಪ್ರಾಚೀನವಾದುದು. ಅದುವೇ ಕನ್ನಡದ ಮೂಲಮಟ್ಟು. ಅದರ ವಿಕಾಸ ಪಥವನ್ನು ಕ್ರಮಬದ್ಧವಾಗಿ ವಿಶ್ಲೇಷಿಸಿದ್ದಾರೆ. 'ಕರ್ಣಾಟಕ ವಿಷಯ ಜಾತಿ'ಗಳ ಬಗ್ಗೆ ಪ್ರತ್ಯೇಕ ಅಧ್ಯಾಯ ಮಾಡಿರುವುದು ಸೂಕ್ತವಾಗಿದೆ. ಅದರಲ್ಲಿ ದೇಶ್ಯಮಟ್ಟುಗಳಾದ ಮದನವತಿ, ಅಕ್ಕರ. ತ್ರಿಪದಿ. ಚೌಪದಿ, ಗೀತಿಕೆ, ಉತ್ಸಾಹ. ಷಟ್ಪದಿ. ಅಕ್ಕರಿಕೆ ಮತ್ತು ಛಂದೋವಸಂತ ಇವುಗಳ ಉಗಮ. ಸ್ವರೂಪ ಮತ್ತು ಲಕ್ಷಣಾದಿಗಳ ವಿಚಾರಗಳು ಉಕ್ತವಾಗಿವೆ. ಅಲ್ಲದೆ ದೇಶ್ಯ ಮಟ್ಟುಗಳ ಬೆಳವಣಿಗೆಯಲ್ಲಿ ಕಾಲಕಾಲಕ್ಕೆ ಕಂಡುಬರುವ ಮಾರ್ಪಾಟುಗಳು. ಕನ್ನಡ ಛಂದಸ್ಸಿಗೆ ಅವುಗಳ ಕೊಡುಗೆ ಕುರಿತು ದೀರ್ಘವಾಗಿಯೇ ವಿವೇಚಿಸಿದ್ದಾರೆ. ಕನ್ನಡ ಮಟ್ಟುಗಳ ಸ್ವರೂಪವನ್ನು ಹಾಗೂ ಅಂಶ ಛಂದಸ್ಸಿನ ಬೆಳವಣಿಗೆಯನ್ನು ಕುರಿತು ಅಧ್ಯಯನ ಮಆಡುವವರಿಗೆಲ್ಲ ಈ ಅಧ್ಯಾಯ ಆಧಾರವಾಗಿ ಪರಿಣಮಿಸುತ್ತದೆ.

ಕನ್ನಡ ಚಂಪೂ ಕಾವ್ಯಗಳ ಸ್ವರೂಪ, ಕಂದದ ಪ್ರಮಾಣ ಕುರಿತು ಭಾವ ಮತ್ತು ರಸ ನಿಷ್ಠ ನೆಲೆಯಲ್ಲಿ ವಿವೇಚಿಸಿರುವುದು ಸರಿಯಾಗಿಯೇ ಇದೆ. ಪಂಪಾದಿ ಚಂಪೂ ಕವಿಗಳಿಗೆ ಚಂಪಕಮಾಲೆ, ಉತ್ಪಲಮಾಲೆಗಳು ತುಂಬ ಪ್ರಿಯವಾಗಿವೆ. ಅದಕ್ಕೆ ಕಾರಣವನ್ನು ಕರ್ಕಿ ಅವರು ಗುರುತಿಸಿದ್ದಾರೆ. ಅವುಗಳ ಲಯ ಮತ್ತು ರಚನೆ ಕನ್ನಡದ ಗತಿಗೆ ಹೊಂದಿಕೊಂಡು ಸಮನಾಗಿ ಸಾಗುತ್ತದೆ. ಈ ಕಾರಮಕ್ಕಾಗಿಯೇ ನಮ್ಮ ಚಂಪೂ ಕವಿಗಳು ಸ್ನೇಹವನ್ನು, ಅಭಿಮಾನವನ್ನು, ಪುನರವರ್ಣನೆಯನ್ನು ಆವೃತ್ತ ಗಳಲ್ಲಿಯೇ ಪ್ರಕಟಿಸಿದ್ದಾರೆ. ಅದರಂತೆ ಯುದ್ಧ ವರ್ಣನೆಯ ಸಂದರ್ಭದಲ್ಲಿ ಮಹಾಸ್ರಗ್ಧರೆ ವೃತ್ತವನ್ನೇ ಬಳಸಿದ್ದಾರೆ. ಅದಕ್ಕೆ ಕಾರಣವೇನು? ಯುದ್ಧದ ಗಾಂಭೀರ್ಯ. ಕೌತುಕ, ವೀರ, ಬಿರುನಡೆ ಮುಂತಾದ ವಿವರಗಳನ್ನು ಒಂದು ಸೂತ್ರದಲ್ಲಿ ಮನಗಂಬುವಂತೆ ಹೆಣೆಯಲು ಈ ವೃತ್ತ ನೆರವಾಗುತ್ತದೆ. ಒಂದು ವೇಳೆ ಕೇವಲ ಚಂಪಕ. ಉತ್ಪಲ. ಮಹಾಸ್ರಗ್ಧರೆ ಇವುಗಳಿಗೆ ಪ್ರಸ್ತಾರ ಹಾಕಿ, ಗಣಗಳ ಲೆಕ್ಕಾಚಾರ ಮಾಡಿದರೆ ಛಂದಸ್ಸಿನ ಅಧ್ಯಯನವೇ ಶುಷ್ಕವಾಗುತ್ತದೆ. ಪದ್ಯ ಜಾತಿಗಳಲ್ಲಿ ಯತಿ. ಗತಿ. ತಾಳ ಮತ್ತು ಲಯ ಇವುಗಳ

ಸ್ಥಾನ ವಿವೇಚನೆಯ ಜೊತೆಗೆ ಭಾವಕ್ಕಿರುವ ಅವುಗಳ ಸಂಬಂಧ ವಿವೇಚನೆಯೂ ಅಷ್ಟೇ ಮುಖ್ಯ. ಕರ್ಕಿ ಅವರು ಉದ್ದಕ್ಕೂ ಭಾಷೆ ಮತ್ತು ಭಾವದ ಜೊತೆಗೆ ಚಂಪು ವೃತ್ತಗಳ ಲಯಗಳನ್ನು ಶೋಧಿಸಿದ್ದಾರೆ. ಆ ಕಾರಣಕ್ಕಾಗಿಯೇ ಅವರ ಅಧ್ಯಯನ ತುಂಬ ಸ್ವಾರಸ್ಯಕರವಾಗಿದೆ.

ಕನ್ನಡ ಛಂದಸ್ಸಿನಲ್ಲಿ 'ರಗಳೆ' ಮಾತ್ರಾಗಣದ ಮೇಲೆ ನಿಂತ ದೇಸಿ ಛಂದಸ್ಸಾಗಿದೆ. 'ರಗಳೆ' ವರ್ಣಕ ಕಾವ್ಯಗಳಿಗೆ ದಾರಿ ಮಾಡಿಕೊಟ್ಟಿತು. ೧೨ನೆಯ ಶತಮಾನವು ಕನ್ನಡ ನಾಡಿನಲ್ಲಿ ಕ್ರಾಂತಿ ಕಾಲವೆಂದು ಗಣ್ಯವಾಗಿದೆ. ಛಂದಸ್ಸಿನ ದೃಷ್ಟಿಯಿಂದಲೂ ಆಗ ಕ್ರಾಂತಿಯಾಯಿತು. ಕನ್ನಡ ಛಂದಸ್ಸು ಆಗ 'ಮಾರ್ಗ'ದಿಂದ 'ದೇಸಿ'ಯತ್ತ ಹೊರಳಿತು. ಅದನ್ನು ಹಾಗೆ ದೇಸಿಯ ಕಡೆಗೆ ನಿರ್ದಿಷ್ಟವಾಗಿ ತಿರುಗಿಸಿದ ಶ್ರೇಯಸ್ಸು ಹರಿಹರನದು. ಶರಣರ ಚರಿತೆಗಳನ್ನು ನಿರೂಪಿಸುವಾಗ ಅವನ ಭಾವಾಭಿವ್ಯಕ್ತಿಗೆ ರಗಳೆ ಒಗ್ಗಿತು. ದೇಸಿಯ ಶಬ್ದಗಳು ಸೇರಿದಷ್ಟು ರಗಳೆಯ ಲಾಲಿತ್ಯ ಹೆಚ್ಚುತ್ತದೆ. ಆದರೆ ಹರಿಹರನ ನಂತರ ರಗಳೆ ಅದೇಕೋ ಮುಂದೆ ಇಳಿಮುಖವಾಗುತ್ತ ಹೋಯಿತು. ಅದಕ್ಕೆ ಕಾರಣವನ್ನು ಕರ್ಕಿ ಅವರು ಗುರುತಿಸಿದ್ದಾರೆ. ನಂತರ ಆಧುನಿಕ ಕವಿಗಳ ದೃಷ್ಟಿ ಮತ್ತೆ ರಗಳೆಯ ಕಡೆಗೆ ಹರಿಯಿತು. ರಗಳೆ ಮೊದಲಿನ ತನ್ನ ಆದಿ, ಅಂತ್ಯ ಪ್ರಾಸವನ್ನು ಕಳೆದುಕೊಂಡು ಹೊಸಯುಗದ 'ಸರಳ ರಗಳೆ'ಯಾಗಿ ಪರಿಣಮಿಸಿತು. ಕಥನ ಕವನ, ಗೀತರೂಪಕಗಳಿಗೆ ಹೊಸ ಕವಿಗಳ ಸರಳ ರಗಳೆಯನ್ನು ಬಳಸುತ್ತಾರೆ. ಈ ಎಲ್ಲ ಸಂಗತಿಗಳನ್ನು ಕರ್ಕಿ ಅವರು ವಿಪುಲ ಉದಾಹರಣೆಗಳ ಮೂಲಕ ತುಂಬ ಸ್ವಾರಸ್ಯಕರವಾಗಿ ವಿವೇಚಿಸಿದ್ದಾರೆ.

ಷಟ್ಪದಿಯ ಉಗಮ, ವಿಕಾಸ ಮತ್ತು ಪ್ರಕಾರಗಳ ಕುರಿತು ಕರ್ಕಿ ಅವರು ವಿಸ್ತಾರವಾಗಿಯೇ ಚರ್ಚಿಸಿದ್ದಾರೆ. ಅವರು ತಲುಪುವ ನಿಲುವುಗಳು ಸೂಕ್ತವಾಗಿವೆ. ಷಟ್ಪದಿಗಳಲ್ಲಿ ಭಾಮಿನಿ ಮತ್ತು ವಾರ್ಧಕ ಇವು ನಮ್ಮ ಕವಿಗಳಿಗೆ ಪ್ರಿಯವಾಗಿವೆ. ಮೂರು-ನಾಲ್ಕು ಮತ್ತು ಐದು ಮಾತ್ರೆಗಳ ಓಟ ಮತ್ತು ಅವುಗಳ ಗತಿ ಕನ್ನಡ ಜಾಯಮಾನಕ್ಕೆ ಹೊಂದಿಕೆಯಾಗುತ್ತದೆ. ಅವುಗಳ ಗತಿ ನಿಧಾನವಾದಷ್ಟು ಅರ್ಥಾಭಿವ್ಯಕ್ತಿಗೆ ಅನುಕೂಲವಾಗುತ್ತದೆ. ಕರ್ಕಿ ಅವರು ಅದನ್ನು ಗುರುತಿಸಿದ್ದಾರೆ. ಷಟ್ಪದಿಗಳಿಗೆ ಸಂಬಂಧಿಸಿದಂತೆ ಮಹತ್ವದ ಸಂಗತಿ ಕಡೆಗೆ ಕರ್ಕಿ ಅವರು ವಿದ್ವಾಂಸರ ಗಮನಸೆಳೆದಿದ್ದಾರೆ. ಅಂಶ ಷಟ್ಪದಿಗಳು ಮಾತ್ರಾ ಷಟ್ಪದಿಗಳಾಗುವಾಗ ಆ ಕಾಲಘಟ್ಟದ ಭಾಷಾದೃಷ್ಟಿ ಹೇಗಿತ್ತು? ವಿಷ್ಣುಗಣಕ್ಕೂ ೪ರಿಂದ ೫ ಮಾತ್ರೆಗಳ ಮಾತ್ರಾಗಣಕ್ಕೂ ಹಾಗೂ ಮಧ್ಯಕಾಲದ ಕನ್ನಡದ ರಚನೆಗೂ ಇರುವ ಸಂಬಂಧ ಯಾವ ಬಗೆಯದು? ಆ ಸಂದರ್ಭದಲ್ಲಿ ಕಾವ್ಯದ ಅಭಿವ್ಯಕ್ತಿ ದೃಷ್ಟಿ ಹೇಗಿತ್ತು? ಹರಿಹರನಿಂದ ರಾಘವಾಂಕ ಬರುವವರೆಗೆ ಮಧ್ಯದಲ್ಲಿ ಕುಮುದೇಂದು ರಾಮಾಯಣದಲ್ಲಿ ಷಟ್ಪದಿ ಮಟ್ಟುಗಳು ಏಕೆ ಜೋಲಿ

ಹೊಡೆಯುತ್ತಿದ್ದವು? ಇತ್ಯಾದಿ ಐತಿಹಾಸಿಕ ಪ್ರಶ್ನೆಗಳನ್ನು ಕರ್ಕಿ ಅವರು ಹಾಕಿಕೊಂಡು ಬಿಡಿಸಿದ್ದಾರೆ. ಏಕೆಂದರೆ ಎಲ್ಲಿ ಭಾಷೆ ಬದಲಾಗುತ್ತದೆಯೋ ಅಲ್ಲಿ ಹೊಸ ಚಿಂತನಕ್ರಮ ಶುರುವಾಗುತ್ತದೆ. ಸಹಜವಾಗಿ ಕಾವ್ಯಾಭಿವ್ಯಕ್ತಿಯ ಲಯದ ಪ್ರಕ್ರಿಯೆಯಲ್ಲಿ ವ್ಯತ್ಯಾಸವಾಗುತ್ತದೆ. ಇದನ್ನೂ ಕರ್ಕಿ ಅವರು ಗುರುತಿಸಿದ್ದಾರೆ. ಅವರ ಹೆಚ್ಚುಗಾರಿಕೆ ಇರುವುದು ಅಲ್ಲಿಯೇ.

ಭಾವಬಂಧವನ್ನು ಬಿಟ್ಟು ಛಂದಸ್ಸು ಕಾವ್ಯದಾಚೆ ಇರುವುದಿಲ್ಲ. ಕಾವ್ಯವನ್ನು ಪಠಿಸುವಾಗ ಅಥವಾ ರಾಗಬದ್ಧವಾಗಿ ಹಾಡುವಾಗ ಅವುಗಳಲ್ಲಿಯ ಪದರಚನೆಯ ಶ್ರುತಿ, ಆವೃತ್ತಿ, ಕಂಪನ ವಿಸ್ತಾರ ಮತ್ತು ಸ್ವರ ವಿಸ್ತಾರ ಮುಂತಾದ ಅಂಶಗಳ ಹಿನ್ನೆಲೆಯಲ್ಲಿ ಕಾವ್ಯದ ಶಿಲ್ಪವನ್ನು ಕರ್ಕಿ ಅವರು ವಿಶ್ಲೇಷಿಸಿದ್ದಾರೆ. ಹತ್ತನೆಯ ಶತಮಾನದ ಪದರಚನೆ ಮತ್ತು ಹದಿನಾರನೆಯ ಶತಮಾನದ ಪದರಚನೆಯಲ್ಲಿ ಸಾಕಷ್ಟು ವ್ಯತ್ಯಾಸಗಳು ಕಂಡುಬರುವುದರಿಂದ ಸಹಜವಾಗಿ ಲಯದಲ್ಲಿಯೂ ಆ ಭಿನ್ನತೆ ಗೋಚರಿಸುತ್ತದೆ. ಆ ಭಿನ್ನತೆಯನ್ನು ಕರ್ಕಿ ಅವರು ಛಂದಸ್ಸಿನ ಪ್ರಯೋಗ ಯುಗಗಳಾದ ಶರಣರ ವಚನಗಳನ್ನು, ಹರಿದಾಸರ ಕೀರ್ತನೆಗಳನ್ನು ಉದಾಹರಿಸಿ ವಿಶ್ಲೇಷಿಸಿದ್ದಾರೆ. ಕನ್ನಡದ ರಚನೆಗೂ ವಿಷ್ಣುಗಣಕ್ಕೂ ಹೊಂದಿಕೆಯಾಗುತ್ತದೆ. ವಿಷ್ಣುಗಣದ ರಚನೆಯಲ್ಲಿ ಒಂದು ಸಂಗತಿಯನ್ನು ಸೂತ್ರದಲ್ಲಿ ಸರಾಗವಾಗಿ ಹೆಣೆಯಬಹುದು; ಒಂದು ಕಥೆಯನ್ನು ಅದರ ಹಂದರದ ಮೇಲೆ ಹಬ್ಬಿಸಬಹುದು. ಇದರಿಂದ ಸ್ವರ ಎಳೆದಂತೆ ಹೊರಡುತ್ತದೆ. ಇದನ್ನು ಕರ್ಕಿ ಅವರು ಗುರುತಿಸಿದ್ದಾರೆ. ಈ ನೆಲೆಯಲ್ಲಿ ಸಾಂಗತ್ಯ ಮಟ್ಟುವಿನ ಸ್ವರೂಪವನ್ನು ಭರತೇಶ ವೈಭವ ಮುಂತಾದ ಸಾಂಗತ್ಯ ಕೃತಿಗಳ ಆಯ್ದ ಪದ್ಯಗಳನ್ನು ನಿದರ್ಶನವಾಗಿಟ್ಟುಕೊಂಡು ಅವರು ವಿಶ್ಲೇಷಿಸುವ ರೀತಿ ಮನೋಜ್ಞವಾಗಿದೆ.

ದೇಸಿ ಮೂಲವಾದ ಜನಪದ ಗೀತಗಳಲ್ಲಿ 'ಗೇಯತೆ' ಮತ್ತು 'ಪಲ್ಲವಿ' ಇವು ಪ್ರಮುಖ ಪಾತ್ರವಹಿಸುತ್ತವೆ. ಇವು ಜನಪದ ಮಟ್ಟುಗಳ ಲಯವೂ ಹೌದು. ಜಾನಪದ ಮಟ್ಟುಗಳು ಕಂಠಸ್ಥವಾಗಿರುವುದರಿಂದ ಅವುಗಳಲ್ಲಿ ಅಕ್ಷರಗಳು, ಮಾತ್ರೆಗಳು ಬಿಗಿಯಾಗಿ ಸೇರದೆ ಲಯಕ್ಕೆ ಅನುಸಾರವಾಗಿ ಅವುಗಳನ್ನು ಹಿಗ್ಗಿಸಿಯೋ, ಕುಗ್ಗಿಸಿಯೋ, ತೇಲಿಸಿಯೋ ಹೇಳುವುದಕ್ಕೆ ಅನೂಕೂಲವಾಗುತ್ತದೆ. ಆಯಾ ಪ್ರಸಂಗಕ್ಕೆ ತಕ್ಕಂತೆ ಹಾಡುಗಳನ್ನು ಹಾಡುವಾಗ ಹಾಡುಗಳ ಧಾಟಿಗೆ ಅನುಸರಿಸಿ ತಾಳ-ಲಯಗಳು ಹೆಚ್ಚು ಕಡಿಮೆಯಾಗುತ್ತವೆ. ಲಲಿತ, ಮಂದಾನಿಲ, ಉತ್ಸಾಹ ಲಯಗಳು ಎಲ್ಲ ಕನ್ನಡ ಛಂದೋರಚನೆಗಳಿಗೆ ಸಾಮಾನ್ಯವಾದವುಗಳು. ಜನಪದ ಮಟ್ಟುಗಳು ಕೂಡ ಈ ಮುಖ್ಯ ಮೂರು ಲಯಗಳಲ್ಲಿ ಸಮಾವೇಶವಾಗುತ್ತವೆ ಎಂಬುದನ್ನು ಕರ್ಕಿ ಅವರು ಕುಟ್ಟುವ-ಬೀಸುವ-ಕೋಲು-ಲಾವಣಿ ಬಂಧಗಳನ್ನು ಉದಾಹರಿಸುವುದರ ಮೂಲಕ ಅವುಗಳ ಛಂದೋವೈವಿಧ್ಯತೆಯನ್ನು ಗುರುತಿಸಿದ್ದಾರೆ. ಆ ಬಂಧಗಲಲ್ಲಿ ತಾಳ-ಲಯಗಳ

ಶಿಥಿಲತೆಯಿಂದಾಗಿ ಸ್ವಚ್ಛಂದದ ಕಡೆಗೆ ಅವುಗಳ ಒಲವು ಇರುತ್ತದೆ ಎಂಬುದನ್ನು ತೋರಿಸಿದ್ದಾರೆ. ಜನಪದ ಹಾಡುಗಳಲ್ಲಿ ಕಾಣುವ ಛಂದಸ್ಸಿನ ವಿನ್ಯಾಸದಲ್ಲಿ ಒಂದು ಭಾಷಾ ಸಮುದಾಯದ ಭಾವಸಂಸ್ಕಾರ ಸ್ಪಷ್ಟವಾಗಿ ಗೋಚರಿಸುತ್ತದೆ ಎಂಬುದು ಮುಖ್ಯವಾದ ಸಂಗತಿಯಾಗಿದೆ.

ಇಪ್ಪತ್ತನೆಯ ಶತಮಾನದ ಪ್ರಾರಂಭದೊಡನೆ ಕನ್ನಡ ಸಾಹಿತ್ಯದಲ್ಲಿ ಅದರಲ್ಲೂ ಕಾವ್ಯ ಕ್ಷೇತ್ರದಲ್ಲಿ ಒಂದು ರೀತಿಯ ಹೊಸತನ ಮೆಲ್ಲನೆ ಮೂಡಿಬರುತ್ತಲಿದ್ದಿತು. ಛಂದೋಗತಿಯಲ್ಲಿ, ಪ್ರಾಸ ವಿನ್ಯಾಸದಲ್ಲಿ ನಮ್ಮ ಕಾವ್ಯಕ್ಷೇತ್ರದಲ್ಲಿ ಬದಲಾವಣೆಯಾಗ ಲಾರಂಭಿಸಿತು. ಇಂಗ್ಲಿಶ್ ಕವಿತೆಗಳ ಸಂಪರ್ಕದ ಪರಿಣಾಮವಾಗಿ ಒಂದು ನಿರ್ದಿಷ್ಟವೂ ಪ್ರತ್ಯೇಕವೂ ಆದ ಸ್ವರೂಪವನ್ನು ತಾಳಿತು. ಅಂದರೆ ಕನ್ನಡ ಛಂದಸ್ಸಿಗೆ ವಿನೂತವಾದ ಸುನೀತ, ಪ್ರಗಾಥ, ಸರಳ ರಗಳೆ, ಗೀತರೂಪಕ ಮುಂತಾದ ಅನೇಕ ಪದ್ಯಬಂಧಗಳನ್ನು ಹೊಸಕಾವ್ಯ ನೀಡಿದೆ. ಮಾತ್ರೆ ಮತ್ತು ಅಂಶ ಎಂಬ ಎರಡು ಛಂದಃಶಾಖೆಗಳಲ್ಲಿ ಹಾಗೂ ಅಂಶ ಮತ್ತು ಮಾತ್ರಾಗತಿ ಎರಡನ್ನೂ ಹೊಂದಿರುವ ಅಪೂರ್ವ ಛಂದೋ ಮಿಶ್ರಣದ ಜಾಡಿನಲ್ಲಿ ಹೊಸಗನ್ನಡದ ಲಯ ಹರಿದಿದೆ. ಗಣಪರಿವೃತ್ತಿ, ಮುಡಿ, ಪದ್ಮಗಣ, ಕಂಪಿತ, ಉಯ್ಯಾಲೆಗಣ, ಅನಾಗತ ಮುಂತಾದ ಛಂದಸ್ಸಿನ ಹೊಸ ಅಂಶಗಳು ಇಲ್ಲಿ ಸಮ್ಮಿಳನಗೊಂಡಿವೆ. ಅಲ್ಲದೆ ವಿವಿಧ ರಚನೆಯ ವಿನ್ಯಾಸಗಳು ರೂಪುಗೊಂಡಿವೆ. ಈ ನೆಲೆಯಲ್ಲಿ ಕರ್ಕಿ ಅವರು ಕುವೆಂಪು, ಬೇಂದ್ರೆ, ಗೋಕಾಕ ಮುಂತಾದ ನವೋದಯ, ನವ್ಯ ಮನೋಧರ್ಮದ ಕೆಲವು ಕಾವ್ಯಗಳನ್ನು ಅನುಲಕ್ಷಿಸಿ ಹೃದ್ಯವಾಗಿ ಮತ್ತು ಅರ್ಥಪೂರ್ಣವಾಗಿ ವಿಶ್ಲೇಷಿಸಿದ್ದಾರೆ. ಆ ಮೂಲಕ ಹೊಸಗನ್ನಡದ ನಾಡಿ ಮಿಡಿತವನ್ನು ಕರ್ಕಿ ಅವರು ಸರಿಯಾಗಿಯೇ ಗುರುತಿಸಿದ್ದಾರೆ. ಇದರಿಂದ ಹೊಸಕಾವ್ಯ ಹೊಸ ಆಯಾಮವನ್ನು ಪಡೆದುಕೊಂಡ ಬಗೆಯನ್ನು ಸೋದಾಹರಣವಾಗಿ ತೋರಿಸಿಕೊಟ್ಟಿದ್ದಾರೆ.

'ಕನ್ನಡ ಛಂದೋವಿಕಾಸ' ರಚನೆಯಾದಾಗಿನಿಂದ ಕನ್ನಡಿಗರ ಓದಿನ ಭಾಗವಾಗಿದೆ. ಅದು ಕನ್ನಡ ಛಂದಸ್ಸಿನ ವ್ಯಾಸಂಗಕ್ಕೆ ಒಂದು ನೆಲೆಯನ್ನು ಕಲ್ಪಿಸಿಕೊಟ್ಟಿತು. ಹೊಸ ಕವಿಗಳಿಗೆ ಛಂದೋವಿಕಾಸ ಕೊಟ್ಟಿರುವ ಹೊಸದೃಷ್ಟಿ ಮತ್ತು ಸ್ಫೂರ್ತಿಯನ್ನು ಇಲ್ಲಿ ಉಲ್ಲೇಖಿಸುವುದು ಅವಶ್ಯಕ. 'ಕನ್ನಡ ಛಂದೋವಿಕಾಸ' ಶ್ರೇಷ್ಠ ಛಂದಸ್ಸಿನ ಗ್ರಂಥವಾಗುವು ದರ ಜೊತೆಗೆ ಒಂದು ಸೃಜನಶೀಲ ಕೃತಿಯೂ ಹೌದು. ಅದಕ್ಕೆ ಕಾರಣವೆಂದರೆ ಕರ್ಕಿ ಅವರು ಪ್ರಾಚೀನ ಮತ್ತು ಆಧುನಿಕ ಕಾವ್ಯ ಸಂಸ್ಕಾರ ಪಡೆದವರು ಹಾಗೂ ಅವರು ಸ್ವತಃ ಕವಿಗಳಾಗಿರುವುದರಿಂದ ಕನ್ನಡ ಛಂದಸ್ಸಿನ ನಾಡಿಮಿಡಿತ ಬಲ್ಲವ ರಾಗಿದ್ದರು. ಹೀಗಾಗಿ ಅವರ ವಿವೇಚನೆಯಲ್ಲಿ ಸಹಜ ಸ್ಫೂರ್ತಿಯಾಗಿ ಹೊರಹೊಮ್ಮಿದೆ. ಛಂದಸ್ಸಿನ ಸಂಶೋಧನೆ ಅವರಿಗೆ ಒಂದು ವಿಶೇಷವಾದ ತಜ್ಞತೆಯಲ್ಲ. ಕನ್ನಡ ಛಂದಸ್ಸಿನ ಹಸ್ತ

ಪದ್ಯಗಳನ್ನು ಅರ್ಥ ಮಾಡಿಕೊಳ್ಳಲು ಸಂಶೋಧನೆ ಅಗತ್ಯವಿದ್ದುದರಿಂದ ಅವರು ಆ ದಿಕ್ಕಿನಲ್ಲಿ ಅಧ್ಯಯನ ನಡೆಸಿದರು. ಛಂದಸ್ಸು ಮತ್ತು ಭಾಷೆ ಪೂರಕವಾಗಿರುವುದರಿಂದ ಭಾಷಾಜ್ಞಾನದ ನೆರವಿನಿಂದ ಕನ್ನಡದ ಛಂದೋಲಯಗಳನ್ನು ಅವರು ಸರಿಯಾಗಿ ಗುರುತಿಸಿದ್ದಾರೆ. ಕನ್ನಡ ಛಂದಸ್ಸಿನ ವಿಕಾಸಕ್ರಮವನ್ನು ಸಮೀಚೀನವಾಗಿ ವಿಶ್ಲೇಷಿಸಿದ ಈ ಗ್ರಂಥದಲ್ಲಿ ಛಂದಸ್ಸಿನ ವ್ಯಾಸಂಗ ಪ್ರಿಯರಿಗೆ ಬೇಕಾದುದೆಲ್ಲ ಇದೆ ಎಂದರೆ ಬಹುಶಃ ಅತಿಶಯೋಕ್ತಿಯಲ್ಲ. ಕನ್ನಡ ಛಂದೋವಿಕಾಸದ ತದನಂತರ ಕನ್ನಡದಲ್ಲಿ ಛಂದಸ್ಸಿಗೆ ಸಂಬಂಧಪಟ್ಟಂತೆ ಹಲವು ಹೆಬ್ಬೊತ್ತಿಗೆಗಳು ಬಂದವು. ಆದರೆ ಕರ್ಕಿ ಅವರ ಕೃತಿಗೆ ಇರುವ ದೂರದರ್ಶಿತ್ವ ಆ ಹೆಬ್ಬೊತ್ತಿಗೆಗಳಿಗಿಲ್ಲ ಎಂದು ಹೇಳಬೇಕಾಗುತ್ತದೆ. ಈ ದೃಷ್ಟಿಯಿಂದ ಕರ್ಕಿ ಅವರ ಕೃತಿ ಧ್ವನಿಪೂರ್ಣವಾಗಿ ಸಾಗುತ್ತದೆ.

'ಕನ್ನಡ ಛಂದೋವಿಕಾಸ'ದ ಉದ್ದಕ್ಕೂ ಪ್ರತಿಯೊಂದು ಕನ್ನಡ ಛಂದಸ್ಸಿನ ಪ್ರಭೇದಗಳನ್ನು ವಿಶ್ಲೇಷಿಸುವ ಕ್ರಮ ನಿಜಕ್ಕೂ ಬೆರಗುಗೊಳಿಸುವಂತಹುದು. ನಮ್ಮ ಛಂದಸ್ಸಿನ ಸ್ವರೂಪವನ್ನು, ವೈವಿಧ್ಯತೆಯನ್ನು ಸವಿವರವಾಗಿ ಹೇಳುವಲ್ಲಿ ಅವರು ತೋರಿಸುವ ಒಂದು ಸಮತೂಕವಾದ ಹಾಗೂ ಸತ್ವನಿರೂಪಕನಾದ ನಿರೂಪಣೆಯ ವಿಮರ್ಶೆ ಇವು ಕೂಡ ಕನ್ನಡ ಛಂದಸ್ಸಿನ ಅಧ್ಯಯನದಲ್ಲಿ ಒಂದು ಒಳ್ಳೆಯ ಮಾದರಿಯನ್ನು ನಿರ್ಮಿಸಿದೆಯೆನ್ನಬೇಕು. ಅವರ ನಿರೂಪಣೆ ಬಹುವಾಗಿ ದಾಕ್ಷಿಣ್ಯ ಪರವಾದ್ದು ಎನ್ನುವಂತಿಲ್ಲ; ಗುಣಗ್ರಾಹಿಯಾದ್ದು, ಸಾರಗ್ರಾಹಿಯಾದ್ದು; ಸರ್ವಸಂಗ್ರಹಕ ವಾದ್ದು ಕೂಡ ಆಗಿದೆ. ಆಡುವ ಮಾತು ತಕ್ಕಡಿಯ ತ್ರಾಸಿನಲ್ಲಿಟ್ಟು ತೂಗಿದಂತೆ ಉಚಿತಕ್ಕೆ ಎಷ್ಟೋ ಅಷ್ಟು ಮಾತ್ರವೇ. ಕನ್ನಡ ಕಾವ್ಯ ಸಂವೇದನೆಗಳ ಸೂಕ್ಷ್ಮ ಪರಿಶೀಲನೆ; ದೃಢವಾದ ನಿಲುವುಗಳ ಪ್ರಕಟಣೆ; ಶೈಲಿ ಸುಕುಮಾರವಾದ್ದು. ಇದುವೇ ಈ ಗ್ರಂಥಕಾರರ ಗೆಲವು; ಕರ್ಕಿ ಅವರು ಸಾಧಿಸಿರುವ ಯಶಸ್ಸು.

'ಕನ್ನಡ ಛಂದೋವಿಕಾಸ'ದ ಉದ್ದಕ್ಕೂ ಒಳನೋಟಗಳಿವೆ. ಹೊಸಮಾತುಗಳಿವೆ. ಹೊಸ ಸೂಚನೆಗಳಿವೆ. ಅವುಗಳ ಹಿಂದೆ ಗಾಢ ಚಿಂತನೆ, ತರ್ಕಬದ್ಧತೆ, ಗ್ರಾಹ್ಯವಾಗಬಲ್ಲ ನಿರ್ಣಯಗಳಿವೆ. ಕನ್ನಡದ ಲಯ ವಿನ್ಯಾಸಕ್ರಮ ಅರಿವಿಗೆ ಎಟಕುವಂತೆ ಮಾಡಲು ಕರ್ಕಿ ಅವರು ಪ್ರಯತ್ನಿಸಿರುವುದು ಸ್ತುತ್ಯವಾದುದು. ಸಂಸ್ಕೃತ ಮತ್ತು ಪ್ರಾಕೃತ ಮಟ್ಟುಗಳಿಗಿಂತ ಭಿನ್ನವಾಗಿ ಕನ್ನಡದ್ದೇ ಆದ ಛಂದೋಲಯಗಳನ್ನು ಗುರುತಿಸುವುದು ಅವರ ಬರೆಹದ ಹಿಂದಿರುವ ಆಶಯವಾಗಿದೆ. ಅದಕ್ಕೆ ಅವರು ಉದ್ದಕ್ಕೂ ವಾಚನ ಪಾತಳಿಯ ಆಂತರಿಕ ರಚನೆಗಿಂತ ಶ್ರವಣ ಪಾತಳಿಯ ಲಯ ಮತ್ತು ಅರ್ಥಕ್ಕೆ ಹೆಚ್ಚು ಒತ್ತುಕೊಟ್ಟಿದ್ದಾರೆ. ನಿಜಕ್ಕೂ ಕನ್ನಡ ಛಂದಸ್ಸಿನ ಅಧ್ಯಯನದಲ್ಲಿ ಮಾಡಬೇಕಾದ ಕೆಲಸ ಇದೇ. ಅದರಲ್ಲಿ ಕರ್ಕಿ ಅವರು ಪೂರ್ಣಪ್ರಮಾಣದಲ್ಲಿ ಯಶಸ್ವಿಯಾಗಿದ್ದಾರೆ. ಆ ಮೂಲಕ ಛಂದಸ್ಸಿನ ಬಗೆಗೆ ಓದುಗರ ಅರಿವಿನ ಎಲ್ಲೆಯನ್ನು ವಿಸ್ತರಿಸಿದ್ದಾರೆ. ಹೀಗಾಗಿ ಕರ್ಕಿ ಅವರು ಕನ್ನಡ ಛಂದಸ್ಸಿನ ಗಣ್ಯ ಭಾಗವಾಗಿದ್ದಾರೆ.

ಅನುಬಂಧ

ಡಾ. ಕರ್ಕಿ ಅವರು ಮತ್ತು ನಾನು ಅಕ್ಕಪಕ್ಕದ ಹಳ್ಳಿಯವರು. ನಾನು ಮಾಧ್ಯಮಿಕ ಶಾಲೆಯಲ್ಲಿ ಓದುವಾಗ ಕರ್ಕಿ ಅವರನ್ನು ಎರಡು ಸಾರಿ ನೋಡಿದ್ದೇನೆ; ಅವರ ಮಾತು ಕೇಳಿದ್ದೇನೆ. ಕರ್ಕಿ ಅವರು ಸಜ್ಜನರು, ಸಾತ್ವಿಕರು, ಬಹಳ ಸಂಭಾವಿತರು ಅದಕ್ಕಿಂತ ಮಿಗಿಲಾಗಿ ಹೃದಯವಂತರು. ಅವರ ಮಾತು ನಿಧಾನ, ನಡುಗೆಯೂ ನಿಧಾನ, ಮೆಲ್ಲನೆ ಹೆಜ್ಜೆಯಿಡುತ್ತಿದ್ದರು. ಅಲ್ಲಿಯೂ ಛಂದಸ್ಸು ಇರುತ್ತಿತ್ತು.

೧ ಕರ್ಕಿ ಅವರು ಒಳ್ಳೆಯ ಕವಿಗಳು. 'ನಕ್ಷತ್ರಗಾನ', 'ಭಾವತೀರ್ಥ', 'ಗೀತ ಗೌರವ', 'ಕರಿಕಿ-ಕಣಗಿಲು', 'ನಮನ'-ಇವು ಅವರು ಕನ್ನಡ ಕಾವ್ಯಲೋಕಕ್ಕೆ ಸಲ್ಲಿಸಿದ ಕಾಣಿಕೆಗಳು. ಆ ಸಂಕಲನಗಳ ಹೆಸರುಗಳೇ ಅವುಗಳ ಅಂತರಂಗವನ್ನು ಸೂಚಿಸುತ್ತವೆ. 'ಕವಿತೆಗಳು ಲಯಾತ್ಮಕ ಸೌಂದರ್ಯದ ಸೃಷ್ಟಿ' - ಎಂಬ ಮಾತು ಕರ್ಕಿ ಅವರ ಕಾವ್ಯಕ್ಕೆ ಹೆಚ್ಚು ಅನ್ವಯವಾಗುತ್ತದೆ. ಪಂಪನನ್ನು ಹೊರತುಪಡಿಸಿದರೆ ಕರ್ಣಾಟಕ ವಿಷಯ ಜಾತಿಗಳ ಲಯಗಳನ್ನು ಹೊಸಗನ್ನಡದ ಜಾಯಮಾನಕ್ಕೆ ತಕ್ಕಂತೆ ಅನ್ವಯಿಸಿ ಸುಂದರ ವಾದ ಕವನಗಳನ್ನು ರಚಿಸಿದ ಏಕೈಕ ಕವಿ, ಡಾ. ಕರ್ಕಿ. ಆಂಡಯ್ಯನ ಹಾಗೆ ತದ್ಭವಗಳನ್ನು ಬಳಸಿಕೊಳ್ಳದೆ ಅಚ್ಚಗನ್ನಡದಲ್ಲಿಯೇ ಹಾಡುಗಳನ್ನು ರಚಿಸಿದ ಏಕೈಕ ಕವಿ ಡಾ. ಕರ್ಕಿ.

೨ ಕರ್ಕಿ ಅವರ 'ಹಚ್ಚೇವು ಕನ್ನಡದ ದೀಪ' ಕರ್ನಾಟಕದ ಸಂಸ್ಕೃತಿಯನ್ನು ಪ್ರತಿನಿಧಿಸುವ ಕವನಗಳಲ್ಲಿ ಪ್ರಮುಖವಾದುದು. ಆರಂಭದಲ್ಲಿ ಅವರು ಕ್ರಿಯಾಪದವನ್ನು ತರುವುದರಿಂದ ಕವಿತೆ ಹೆಚ್ಚು ಅರ್ಥಪೂರ್ಣವಾಗುತ್ತದೆ. ಮುಂದೆ ೪ ಮಾತ್ರೆ ಲಯಾನ್ವಿತ ಚರಣಗಳು, ಪರಿಚಿತ ಪದಗಳಿಂದ ಕವನ ಹೃದಯಸ್ಪರ್ಶಿಯವಾಗುತ್ತದೆ. ಸಭೆ-ಸಮಾರಂಭಗಳಲ್ಲಿ ಅವರ ಆ ಕವನವನ್ನು ಕೇಳಿದಾಗ ಅದರ ನಾದ ಮಾಧುರ್ಯ, ಭಾವೋತ್ಕಟತೆ, ವಿಚಾರ ವಿಲಾಸ, ಸುಕುಮಾರ ಶೈಲಿಗಳಿಂದ ಅತ್ಯಂತ ಹೃದಯ ಸ್ಪರ್ಶಿಯವಾಗಿ ಮೂಡಿಬರುತ್ತದೆ. ಅದಕ್ಕೆ ಕಾರಣ ಮೂಲತಃ ಕರ್ಕಿ ಅವರು ಕವಿಗಳು ಜೊತೆಗೆ ಕನ್ನಡ ಛಂದೋಲಯಗಳು ಅವರಿಗೆ ಸರಿಯಾಗಿ ಗೊತ್ತಿರುವುದರಿಂದ ಸುಂದರವಾದ ಕವನಗಳು ಅವರಿಂದ ರಚಿತವಾದವು.

೩ ಕವಿಯಾಗಿಯೇ ಹೆಸರಾದ ಕರ್ಕಿ ಅವರು ಗದ್ಯದಲ್ಲಿಯೂ ಹೃದ್ಯತೆಯನ್ನು ಮೆರೆದಿದ್ದಾರೆ. 'ನಾಲ್ದೆಸೆಯನೋಟ', 'ಸಾಹಿತ್ಯ ಸಂಸ್ಕೃತಿ ಶ್ರುತಿ', 'ನಾಡು-ನುಡಿ-ಸಂಸ್ಕೃತಿ' ಬಗೆಗಿನ ಅವರ ಚಿಂತನೆಯ ಅಧ್ಯಯನದ ಹರಳು ಹುರುಳನ್ನು ಒಳಗೊಂಡ ಪ್ರಬಂಧ ಸಂಕಲನಗಳಾಗಿವೆ. ಅವು ಕರ್ಕಿ ಅವರ ಸಾಮಾಜಿಕ ಪ್ರಜ್ಞೆಯ ಅರ್ಥ ವಿಸ್ತಾರವನ್ನು ಓದುಗರ ಗಮನಕ್ಕೆ ತಂದುಕೊಡುತ್ತವೆ.

೪ ಆದರೆ, ಕನ್ನಡ ವಿಮರ್ಶಾಲೋಕ 'ಕರ್ಕಿ ಅವರ ಸಾಹಿತ್ಯ'ಕ್ಕೆ ಸ್ಪಂದಿಸಲಿಲ್ಲ. ಕುರ್ತಕೋಟಿ ಅವರು ಮೊದಲುಗೊಂಡ ಯಾರೂ ರಿಸ್ಕ್ ತೆಗೆದುಕೊಳ್ಳಲಿಲ್ಲ. ಕರ್ಕಿ

ಅವರಿಗೆ ಹೇಳಿಕೊಳ್ಳುವಂತಹ ಪ್ರಶಸ್ತಿ-ಪುರಸ್ಕಾರಗಳೂ ಸಿಗಲಿಲ್ಲ. ಆದರೆ ಪ್ರತಿಭೆ ಎಲ್ಲಿದ್ದರೂ ಪ್ರಕಾಶಮಾನವಾಗಿ ಹೊಳೆಯುತ್ತದೆ. ಅವರ 'ಹಚ್ಚೇವು ಕನ್ನಡದ ದೀಪ' ಕನ್ನಡಿಗರ ಭಾವಲೋಕದ ಭಾಗವಾಗಿದೆ. ಅದುವೇ ಕರ್ಕಿ ಅವರಿಗೆ ತೋರಿಸುವ ನಿಜವಾದ 'ಕಾವ್ಯಗೌರವ'. ಕಾವ್ಯದ ಜೊತೆಗೆ ಪಂಡಿತ ವಲಯದಲ್ಲಿ ಕರ್ಕಿ ಅವರ ಹೆಸರು ನೆಲೆನಿಂತಿದ್ದು ಅವರ 'ಕನ್ನಡ ಛಂದೋವಿಕಾಸ'ದ ಮೂಲಕ. ಅದು ಕನ್ನಡಿಗರ ಓದಿನ ಭಾಗವಾಗಿದೆ. ಅದುವೇ ಕರ್ಕಿ ಅವರಿಗೆ ತೋರಿಸುವ ನಿಜವಾದ 'ವಿದ್ವತ್ ಗೌರವ'.

೬೧

ಭರತೇಶವೈಭವ : ಛಂದೋಲಯ

ಛಂದಸ್ಸು ಕಾವ್ಯದ ಸಹಜ ಸ್ವರಾಂದೋಲನ. ಅದರಿಂದಲೇ ಕಾವ್ಯಕ್ಕೆ ಚಲನ ಶೀಲತೆ ಉಂಟಾಗುತ್ತದೆ. ಅದನ್ನು ಕವಿ ಸ್ಫೂರ್ತಿಯಿಂದಲೋ, ಇಲ್ಲವೇ ಬುದ್ಧಿಪೂರ್ವಕ ವಾಗಿಯೋ ನಿಯತಲಯ, ವಿನ್ಯಾಸಗಳಿಂದ ಪದ್ಯ ಪಾದಗಳನ್ನು ಕವಿ ನಿರ್ಮಿಸುತ್ತಾನೆ. ಈ ಪದ್ಯಲಯಗಳನ್ನು ಅಳತೆ ಮಾಡುವ ಮಾನದಂಡವೇ ಛಂದಸ್ಸು. ಛಂದಸ್ಸಿನ ಅಧ್ಯಯನದಲ್ಲಿ ಲಯದ ಪಾತ್ರ ಮುಖ್ಯ. ಒಂದರ್ಥದಲ್ಲಿ ಲಯವೇ ಛಂದಸ್ಸಿನ ಜೀವಾಳ. ಮನುಷ್ಯನ ಮೂಲಭೂತ ಪ್ರವೃತ್ತಿಯಲ್ಲಿ ನಿಯಮ ಬದ್ಧವಾದ ಲಯದ ರಚನೆಯೂ ಒಂದೆನ್ನಬಹುದು. ನಿಸರ್ಗ ನಿಯಮದಲ್ಲಿ ಕೂಡ ಸಮುದ್ರದ ಅಲೆಗಳು ಒಂದು ವ್ಯವಸ್ಥಿತ ರೀತಿಯಲ್ಲಿ ಏಳುತ್ತವೆ, ಬೀಳುತ್ತವೆ. ಗಾಳಿ ಮತ್ತು ಶಬ್ದಗಳು ನಿಯತವಾದ ಗತಿಯಿಂದ ಚಲಿಸುತ್ತವೆ. ಮನುಷ್ಯನ ಹೃದಯ ಹಾಗೂ ನಾಡಿಗಳು ನಿಯತಕ್ರಮದಿಂದ ಮಿಡಿಯುತ್ತಿರುತ್ತವೆ. ಆಡುಮಾತಿನಲ್ಲಿಲ್ಲದ ಒಂದು ಹೆಚ್ಚಿನ ತೀವ್ರತೆ ಹಾಗೂ ಪರಿಣಾಮಕಾರತ್ವವೂ ಈ ಛಂದೋನಿಯಮಗಳಿಂದ ಕವಿ ವಾಣಿಯಲ್ಲಿ ಎದ್ದುಕಾಣುತ್ತದೆ.

ನಿಯತಾಕ್ಷರ ಸಂಖ್ಯೆಯ (ISO-syllabic) ಪದ್ಯದ ಸಾಲುಗಳ ಇಲ್ಲವೆ ನಿಯತ ಗುರು-ಲಘುಗಳ ವಿನ್ಯಾಸಗಳು ಇಲ್ಲವೆ ಸ್ವರಾಘಾತವಿರುವ ಶಬ್ದಾಂಶಗಳಿಂದಾದ (Ac-centual) ಸಾಲುಗಳ ಇಲ್ಲವೆ ನಿಯತ ಮಾತ್ರಕಾಲವಿರುವ ಗಣಗಳಿಂದಾದ ಸಾಲು ಗಳ ಸಂಯೋಜನೆಯಷ್ಟೇ ಛಂದಸ್ಸೆಂದು ತಿಳಿಯಬಾರದು. ಪ್ರತಿ ಪದ್ಯದ ಸಾಲಿನಲ್ಲಿಯೂ ನಿಯತ ಸ್ಥಾನದಲ್ಲಿ ಬರಬೇಕಾದ ಯತಿ, ಆದಿಪ್ರಾಸ ಹಾಗೂ ಅಂತ್ಯ ಪ್ರಾಸಗಳ ರಚನಾ ವ್ಯವಸ್ಥೆಯೂ ಛಂದಸ್ಸಿನ ಅವಿಭಾಜ್ಯ ಅಂಗವೆಂದು ತಿಳಿಯುವದು ಯುಕ್ತ. ಅಕ್ಷರ ಹಾಗೂ ಗುರು-ಲಘುಗಳ ಸ್ಥಾನಗಳ ನಿಯಮಗಳಲ್ಲದೆ ಯತಿಯೂ (ವಿರಾಮ) ಛಂದಸ್ಸಿನ ಮೂಲಭೂತ ಲಕ್ಷಣಾಂಶದಲ್ಲಿಯೇ ಅಂತರ್ಗತವಾಗುತ್ತದೆ. ಇದನ್ನು ಕಾವ್ಯದ

ಸಂದರ್ಭವಲ್ಲಿ ಅನ್ವಯಿಸಿ ಹೇಳುವುದಾದರೆ ಕವಿಯ ಭಾವ, ಲಯದ ಚೌಕಟ್ಟಿನಲ್ಲಿ ಹರಳುಗೊಂಡಾಗ ಅರ್ಥ ಪುಷ್ಟಿ ಪಡೆಯುತ್ತದೆ. ಕವಿಯ ಭಾವನೆಗಳನ್ನು ಘನೀಭವಿಸಿ ನಿಲ್ಲುವಲ್ಲಿ ಛಂದಸ್ಸು ಪ್ರಮುಖ ಪಾತ್ರವಹಿಸುತ್ತದೆ. ಭಾವ, ಭಾಷೆ, ಕಾವ್ಯಬಂಧ ಇವು ಅವಿನಾಭಾವವಾಗಿ ಒಂದು ಇನ್ನೊಂದಕ್ಕೆ ಪೂರಕವಾಗಿವೆ. ಕಾವ್ಯದಲ್ಲಿ ಭಾಷೆ, ಶೈಲಿ ಅಲಂಕಾರಗಳಂತೆ ಛಂದಸ್ಸು ಕಾವ್ಯದ ಒಳಗಿನ ಅಂಗ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ. ಈ ಹಿನ್ನೆಲೆಯಲ್ಲಿ ಭರತೇಶ ವೈಭವದ ಛಂದೋಲಯವನ್ನು ಗುರುತಿಸುವುದು ಈ ಪ್ರಬಂಧದ ಉದ್ದೇಶವಾಗಿದೆ.

ಸಾಂಗತ್ಯ ಛಂದಸ್ಸು, ಗ್ರಂಥಗಳ ವಿಚಾರಗಳನ್ನು ಕುರಿತಾಗಿ ಪ್ರಾಯಃ ಮೊದಲು ನೆನಪಿಗೆ ಬರುವ ಕೃತಿಯೆಂದರೆ ರತ್ನಾಕರವರ್ಣಿಯ 'ಭರತೇಶ ವೈಭವ'. ಸಾಂಗತ್ಯ ಗ್ರಂಥಗಳಲ್ಲಿ ಇದರ ಸ್ಥಾನ ಮೇಲಾದ್ದು ಎನ್ನುವುದನ್ನು ಇದರಿಂದಲೇ ತಿಳಿಯಬಹುದು. ಇದರ ಕವಿ ಅಪಾರ ಸಾಮರ್ಥ್ಯವುಳ್ಳ ಪ್ರತಿಭಾವಂತ. ಕನ್ನಡ ಸಾಹಿತ್ಯದ ಒಂದೊಂದು ಸಾಹಿತ್ಯ ಪ್ರಕಾರಕ್ಕೆ ಒಬ್ಬೊಬ್ಬ ಕವಿ ಮಾದರಿಯಾಗಿರುವಂತೆ ಈ ಕವಿ ಸಾಂಗತ್ಯ ಛಂದಸ್ಸಿನ ಸಾಹಿತ್ಯ ಪ್ರಕಾರಕ್ಕೆ ಮಾದರಿಯಾಗಿದ್ದಾನೆ.

'ಭರತೇಶ ವೈಭವ' ಕನ್ನಡ ಸಾಂಗತ್ಯ ಗ್ರಂಥಗಳಲ್ಲೆಲ್ಲ ಬಹುದೊಡ್ಡದು. ೮೦ ಸಂಧಿಗಳು, ೧೦,೦೦೦ ಪದ್ಯಗಳೂ ಇದರಲ್ಲಿ ಇವೆ. ಇಂತಹ ವಿಸ್ತಾರವಾದ ಗ್ರಂಥವನ್ನು ಬರೆಯುವುದಕ್ಕೆ ಕವಿಗೆ ಕೇವಲ ೯ ತಿಂಗಳು ಮಾತ್ರ ಹಿಡಿಯಿತು ಎನ್ನುವುದು ಆತನಿಗಿದ್ದ ಅಗಾಧ ರಚನಾ ಸಾಮರ್ಥ್ಯವನ್ನು ಹೇಳುತ್ತದೆ. ಅವನ ಸರ್ವಗ್ರಾಸಿಯಾದ ವಿಶಾಲ ಲೋಕಾನುಭವ, ನಾಟಕದ ದೃಶ್ಯಗಳಂತೆ ಸನ್ನಿವೇಶಗಳನ್ನು ಕಣ್ಣೆದುರಿನಲ್ಲಿ ಕಟ್ಟಿನಿಲ್ಲಿಸುವ ಚಾತುರ್ಯ, ಬಗೆಬಗೆಯ ವರ್ಣನೆಗಳಿಂದ ಲೋಕವ್ಯಾಪಾರಗಳನ್ನು, ವ್ಯಕ್ತಿಸ್ವಭಾವ ಗಳನ್ನೂ ನಿರೂಪಿಸುವ ಕೌಶಲ್ಯ, ಸರಸ ಸಂವಾದಗಳನ್ನು ಹೆಣೆದು ಕತೆಯ ಸಂದರ್ಭಗಳ ಆಕರ್ಷಣೆಯನ್ನು ಹೆಚ್ಚಿಸುವ ನಾಟಕೀಯ ಪ್ರತಿಭೆ, ಛಂದಸ್ಸಿನ ನಿರ್ವಹಣೆಯಲ್ಲಿ ಕಂಡುಬರುವ ಪ್ರವಾದಿಕ ಶಕ್ತಿ ಇವು ಅವನಲ್ಲಿ ತೋರುವ ಮಟ್ಟದಲ್ಲಿಯೇ ಇತರ ಸಾಂಗತ್ಯಕಾರರಲ್ಲಿ ಕಂಡುಬರುವುದಿಲ್ಲ. ಸಾಂಗತ್ಯ ಛಂದಸ್ಸಿನಲ್ಲಿ ರತ್ನಾಕರವರ್ಣಿ ಹಲವಾರು ವೈವಿಧ್ಯತೆಗಳನ್ನು ಮಾಡಿದ್ದಾನೆ.

ಅಚ್ಚಗನ್ನಡ ಛಂದವಾಹಿನಿಯಲ್ಲಿ ತ್ರಿಪದಿಯಿಂದ ಪಿರಿಯಕ್ಕರ, ಪಿರಿಯಕ್ಕರದಿಂದ ಮೂಲಷಟ್ಪದಿ, ಮೂಲಷಟ್ಪದಿಯಿಂದ ಮಾತ್ರಾಗಣ ಷಟ್ಪದಿ ಇವು ಅಚ್ಚಗನ್ನಡವ ಜಾಡು ಹಿಡಿದು ಮೂಡಿಬಂದವು. ಸಾಂಗತ್ಯವು ತ್ರಿಪದಿಯಿಂದ ಹೊರಟ ಮಟ್ಟೆಂದು ತ್ರಿಪದಿಯ ಎರಡನೆಯ ಚರಣವನ್ನು ಆವೃತ್ತಿ ಮಾಡಿ ಹಾಡುವ ರೂಢಿಯು ಸಾಂಗತ್ಯ ರೂಪ ನಿರ್ಮಾಣಕ್ಕೆ ಕಾರಣವಾಯಿತು. ಕಾಲಕ್ರಮೇಣ ತ್ರಿಪದಿ ಅಂಶ ಗಣದಿಂದ ಮಾತ್ರಾಗಣಕ್ಕೆ ತಿರುಗಿತು ಆದರೆ ಸಾಂಗತ್ಯ ತನ್ನ ಸ್ವಚ್ಛಂದವತೆ ಮತ್ತು ಸರಾಗತೆಯನ್ನು ಉಳಿಸಿಕೊಂಡು ಬಂದಿದೆ. ಸಾಂಗತ್ಯವು ಸಮಭಾರದಿಂದ ಕೂಡಿದ ಅರ್ಥಸಮವೃತ್ತ. ಅದಕ್ಕೆ ನಾಲ್ಕು ಚರಣ ಮತ್ತು ೧೪ ಗಣಗಳಿರುತ್ತವೆ.

ಮೇಲ ಪರಂಜಿ ಕಾಸದೆ ಜಾಣ ತೆಗೆದತ್ತ ವಿಷ್ಣುಗಣ-ವಿ.ವಿ.ವಿ
ನೂಲಂತೆ ಪವೊಲ್ಕಮರ್್ಾ॥ ವಿಷ್ಣುಗಣ-ವಿ-ಬ್ರಹ್ಮಗಣ
ಗಾಳಿಸಿದಮಲಾತ್ಮ ವಸ್ತು ವಾ ಪರಮಾತ್ಮ (ವಿಷ್ಣುಗಣ) ವಿ.ವಿ.ವಿ
ಹೇಳದಂತಾದುದೇನೆಂಬೆ॥ (ವಿಷ್ಣುಗಣ.ವಿ.ಬ್ರಹ್ಮಗಣ)

ಪರಮಾತ್ಮ ವಿಶ್ವದ ಅಡಿಯಿಂದ ಮುಡಿಯ ತನಕ ಉದ್ದುದ್ಧವಾಗಿ ದಂಡಾಕಾರದಲ್ಲಿ ವ್ಯಾಪಿಸುವ ಚಿತ್ರವಿದು. ಅಲ್ಲಿಯ ಮೊದಲಿನ ಎರಡು ಚರಣಗಳ ಒಟ್ಟು ಸ್ವರ ವಿಸ್ತಾರಕ್ಕೆ ಕೊನೆಯ ಎರಡು ಚರಣಗಳು ಒಟ್ಟು ಸ್ವರ ವ್ಯಾಪ್ತಿಗೆ ಸಮ. ಎರಡನೆಯ ಚರಣದ ಕೊನೆಗೆ ಬರುವ ಸ್ವರಾಲಾಪಕ್ಕೆ ಹೊಯ್ ಕೈಯಾಗಿ ನಾಲ್ಕನೇ ಚರಣದ ಕೊನೆಯಲ್ಲಿ ಸ್ವರಾಲಾಪ ಉಂಟಾಗುತ್ತದೆ. ಸಾಂಗತ್ಯ ಹಾಡುಹಬ್ಬಕ್ಕೆ ತಾಳ ಅಳವಡುವ ಮಟ್ಟು, ಅದರ ರಾಗರಂಜನೆ ಅಪ್ರತಿಮವಾದುದು. ಅದು ವಾದ್ಯ ವಿಶೇಷದೊಡನೆ ಸಾಗುವ ಹಾಡಾಗಿದೆ. ಭರತೇಶ ವೈಭವದಲ್ಲಿ ಅದಕ್ಕೆ ಆಧಾರಗಳು ದೊರೆಯುತ್ತವೆ.

ಜೋಲಿ ಮಾಡದೆ ಜೋಕೆ ವಿಡಿದಿರೆ ಪ್ರಾತಃ
ಕಾಲದ ರಾಗವನರಿದು
ಆಳಾಪಿಸಿದರು ಕೇಳುವ ಜನರೆದೆಗೆ ತ
ಂಗಾಳಿ ಬೀಸಿದ ತೆರನಾಗೆ
ದೋಟರಾಯನ ಮೇಲೆ ನೆನಹುರಾಗದ ಮೇಲೆ
ನೀಟ ತಂತಿಯ ಮೇಲೆ ಬೆರಳು
ಚಾಟುಕಾತಿಯರು ಛಾಂದಸಿಕೆಯ ನೂಂಕಿ ಸ
ಘಾಟಿಕೆಯಿಂದ ಹಾಡಿದರು.

ಉಪ್ಪರಿಗೆಯ ಸಂಧಿಯಲ್ಲಂತೂ ಸಂಗೀತದ ಗಂಗಾ ಪ್ರವಾಹವೇ ಮೈದೋರಿದೆ. ರಾಯ ಗಾಯಕಿಯರ ಮೊಗವ ನೋಡುವುದೇ ತಡ, ಅವರು ಆ ನೋಟವರಿದು 'ಠಾಯೆ ಬಜಾವಣೆ ಗಮಕ ವೆಸೆಯ ಪಾಡರಾಯತ'ವಾಗುತ್ತಾರೆ. ಅವರ ಗಾನದ ರೀತಿಯನ್ನು ಕವಿ ಚಿತ್ರಗಾರನಂತೆ ಕೆಲಸ ಮಾಡಿದ್ದಾನೆ. ಮೇಲಿನ ಪದ್ಯಗಳಲ್ಲಿ ರತ್ನಾಕರವರ್ಣಿ ಸಾಂಗತ್ಯದ ರಹಸ್ಯವನ್ನೇ ಸ್ವಾರಸ್ಯಮಯವಾಗಿ ಚಿತ್ರಿಸಿದ್ದಾನೆ. ಸಾಂಗತ್ಯವು ಹಾಡುಗಬ್ಬ ಮಾತ್ರವಲ್ಲ; ಬಾಜನೆಗಬ್ಬವೂ ಅಹುದು. ಅದು ವರ್ಣಕ ಕಾವ್ಯ. ಭರತೇಶ ವೈಭವವು ವರ್ಣಕ ಕಾವ್ಯವೆನ್ನಲು ಅದರಲ್ಲಿ ಅಡಕವಾದ ಸಭಾಗೃಹ, ಸಂಗೀತ ನಾಟ್ಯ, ಆರೋಗಣೆ ಇವೇ ಮೊದಲಾದವುಗಳ ವರ್ಣನೆಯೇ ಸಾಕ್ಷಿ. ಅದರಲ್ಲಿ ಒಂದೊಂದು ವರ್ಣನೆಗೆ ಮೀಸಲಾಗಿದೆ. ಭರತ ಸಂಗೀತ ಪ್ರಿಯ ಆತನ ಮುಂದೆ ಗಾಯಕರು ಹಾಡುವಾಗ ಕವಿ ಹೀಗೆ ವರ್ಣಿಸಿದ್ದಾನೆ.

ಭರತರಾಜ ಮುಖಚಂದ್ರನ ಕಂಡ ಬಾ
ಮರಿಗೆ ಮಹಾಳಾಪವುಕ್ಕಿ

ಬರುತ್ತಿದ್ದ ಏಿಂದುವ ಕಂಡ ಸಮುದ್ರದ
ಭರತದಂತೇನ ಬಣ್ಣಿಪೆನು

ಸಾಂಗತ್ಯದ ಲಯವು ತ್ರಿಪದಿಯ ಲಯಕ್ಕೆ ತೀರ ಸಮೀಪ. ತ್ರಿಪದಿಯ ಗತಿಯನ್ನೇ ಅನುಸರಿಸಿದ ಸಾಂಗತ್ಯವು ತನ್ನ ಲಕ್ಷಣದಲ್ಲಿ ಹೆಚ್ಚಿನ ಸರಳತೆಯನ್ನು ಸಾಧಿಸಿತು. ಅದರ ಚರಣಗಳಲ್ಲಿ ಗಣಗಳ ಸಂಯೋಜನೆ ತ್ರಿಪದಿಯಂತೆ ಏರ್ಪಟ್ಟಿರುತ್ತದೆ. ಸಾಂಗತ್ಯವು ವಿಷ್ಣುಗಣ ಪ್ರಧಾನ ಮಟ್ಟೆಂದು ಸ್ಪಷ್ಟ. ಬ್ರಹ್ಮಗಣವು ಸಮಚರಣಗಳ ಕೊನೆಯಲ್ಲಿ ಮಾತ್ರ ಬರುತ್ತದೆ. ಕನ್ನಡದ ಅಕ್ಷರ ರಚನೆಗೆ ವಿಷ್ಣುಗಣ ರಚನೆಗೂ ಅವಿನಾಭಾವ ಸಂಬಂಧವಿದೆ ಎಂಬುದು ಗಮನಾರ್ಹ. ಒಮ್ಮೊಮ್ಮೆ ಸಾಂಗತ್ಯದಲ್ಲಿ ಚರಣದ ಮಧ್ಯದ ಯಾವುದೊಂದು ವಿಷ್ಣುಗಣಕ್ಕೆ ಪ್ರತಿಯಾಗಿ ಬ್ರಹ್ಮಗಣ ಬರುತ್ತದೆ. ಇದರಿಂದ ಅಂಶಗಣದ ಸೊಗಸು ಹೆಚ್ಚುತ್ತದೆ.

- ಅಯ್ಯಯ್ಯ । ಚನ್ನಾದು । ದೆನೆಕ । ನ್ನಡಿಗರು
  ರಯ್ಯಮಂ । ಚಿದಿಯೆನೆ । ತೆಲುಗಾ
- ಏನೆನ್ನ । ಬಹುದೀ । ಪ್ರಭೆನೋಡೆ । ಬೇರೊಂದು
  ಭಾನುವಿ । ದಂತೆ । ತೋರುತಿದೆ
- ನಿತ್ಯದಾನ । ವದೀಯ । ನಾರೋ । ಗಿಪೆನೆಂಬ
  ಸತ್ಯಾಂಗ । ಮುಂತಾ । ವೃಪೆಗೆ

ಎಂಬಲ್ಲಿ ವಿಷ್ಣುವಿಗೆ ಪ್ರತಿಯಾಗಿ ಬಂದ ಬ್ರಹ್ಮಗಣವನ್ನು ನಿರ್ದೇಶಿಸುತ್ತದೆ. ಇದರಿಂದ ಸ್ವರ ಸ್ಪಂದನಕ್ಕೆ ಎಡೆಗೊಟ್ಟು ಹಿತವಾದ ಪರಿಣಾಮವನ್ನುಂಟು ಮಾಡುತ್ತದೆ. ಮತ್ತು ಬ್ರಹ್ಮಗಣ ಬರುವುದರಿಂದ ಪದ್ಯದ ಸಾರವನ್ನು ಒತ್ತಿಹೇಳುವುದಕ್ಕೂ ಅನುಕೂಲ ವಾಗುತ್ತದೆ. ಬ್ರಹ್ಮಗಣಗಳು ಸರಣಿಯಾಗಿ ಬರುವುದನ್ನು ಭರತೇಶ ವೈಭವದಲ್ಲಿ ಕಾಣುತ್ತೇವೆ.

- ಕಿವಿಹೊಕ್ಕುದೆದೆದಟ್ಟಿತಧ್ಯಾತ್ಮವೆಂಬಾಗ
  ಲವಲವಿ । ಸುವನಾ । ನೃಪತಿ
- ವಾಕುದೋರದೆ ಮುನ್ನ ನೆನೆದು ಮತ್ತೊಯ್ಯನೆ
  ವಾಕುತೋ । ರಿದನಾ । ಚಕ್ರಿ
- ಸುರವಾಕ್ಯ ಸುರಸಭೇರಿ ಹೂಮಳೆ ಹೂಂಮಳೆ
  ಸುರಭೀ । ರವವೆಂ । ದಿತು

ಇಂತಹ ಪದ್ಯಗಳಲ್ಲಿ ಬ್ರಹ್ಮಗಳು ಸರಣಿಯಾಗಿ ಬಂದು ಪದ್ಯದ ಸ್ವಾರಸ್ಯವನ್ನು ಹೆಚ್ಚಿಸುತ್ತವೆ. ರತ್ನಾಕರವರ್ಣಿಯ ಯುಗ ಧರ್ಮವನ್ನು ಗಮನಿಸಿ ಹೇಳುವುದಾದರೆ

ಆತ ದೇಸೀ ಹಾಡುಗಳ ಸ್ವರೂಪವನ್ನು ತಿಳಿದಿದ್ದನು. ಪುರಂದರದಾಸ, ಕನಕದಾಸ ಸಮಕಾಲೀನನಾಗಿದ್ದು ಕೀರ್ತನ ಪದ್ಧತಿಯಬಲ್ಲ ಸ್ವಯಂ ವಾಗ್ಗೇಯಕಾರ. ಭರತೇಶ ವೈಭವದ ಸಾಂಗತ್ಯಕ್ಕೆ ಉದ್ದೇಶ ಪೂರ್ವಕವಾಗಿಯೇ ಶಿಷ್ಟರೂಪವನ್ನು ಕೊಟ್ಟಂತೆ ತೋರುತ್ತದೆ. ಅಕ್ಷರವೃತ್ತಗಳ ಬಿರುದು ಅತ್ತ ಹಾಡುಗಳ ಅತಿ ಗೇಯತೆ ಎರಡನ್ನೂ ಸಮರಸಗೊಳಿಸಿದ ಪ್ರಯತ್ನವಾಗಿದೆ. ನಮ್ಮ ದೃಷ್ಟಿಯಲ್ಲಿ ಭರತೇಶ ವೈಭವ ಶಿಷ್ಟಗೊಂಡ ದೇಸೀಛಂದಸ್ಸಿನಲ್ಲಿ ರಚಿತವಾದ ಬರೆದ ಮಾರ್ಗಕಾವ್ಯ. ವರ್ಣಕವೆಂದರೂ ಹುರುಳು ವಸ್ತುಕದ್ದೇ. ಭರತೇಶ ವೈಭವದ ಭಾಷೆ ಕೂಡ ಅದಕ್ಕೆ ರೂಪಿಸಿಕೊಂಡ ಭಾಷೆ.

ಈ ಸಾಂಗತ್ಯ ಕೃತಿಗೆ ಪ್ರಾಸಗಳು ಹಾಗಿರಲಿ, ಅನುಪ್ರಾಸವೂ ಹಾಗಿರಲಿ ವರ್ಣಗಳ ಅನುಸರಣ ಅವುಗಳ ಹೊಂದಿಕೆ ಅದರದೇ ಆದ ಸೊಗಸು ಇದೆ. ರೇಫೆ ಸಾಮಾನ್ಯವಾಗಿ ಶ್ರುತಿ ಸುಭಗವೇನಲ್ಲ; ಆದರೆ ಇಲ್ಲಿ ಅನುನಾಸಿಕಗಳೊಡನೆ ಮೃದುರೇಫೆಗಳು ಪದೇ ಪದೇ ಬಂದು ಹಿತಕಾರಿಯಾಗಿವೆ. ಮುಖ್ಯವಾಗಿ ರತ್ನಾಕರವರ್ಣಿ ಕಿವಿಮೆಚ್ಚುವ ವರ್ಣಸಂಗೀತವನ್ನು ಬಲ್ಲವನು. ಮಾರ್ಗದಲ್ಲಿದ್ದು ದೇಸಿಯಲ್ಲಿ ಬರೆದನು ಆದುದ ರಿಂದಲೇ ಇಲ್ಲಿ ಅವನ ಭಾವಸಾಮರ್ಥ್ಯ ಅಭಿವ್ಯಕ್ತವಾಗಿದೆ. ಮಾರ್ಗಕವಿ ದೇಸಿಯಲ್ಲಿ ಬರೆದರೂ ಗಮನ ಅದರ ಅಚ್ಚುಕಟ್ಟಿನ ಕಡೆಗೆ ಹೆಚ್ಚು. ಅದು ದೇಸಿಗೂ ಕಾಣಿಕೆ. ರತ್ನಾಕರವರ್ಣಿ ಕರ್ಕಶವನ್ನು: ಪದಪುಂಜಗಳನ್ನು ಸಹಿಸದವನು. ಅವನಿಗೆ ಒತ್ತಕ್ಷರ ಕಂಡರೆ ಆಗದು.

> ರಾಯ ನೋಡಿದನು ಗಾಯಕಿಯರ ಮೊಗವನಾ
> ಗಾಯಕಿಯರು ನೋಟವರಿದು
> ಠಾಯೆ ಬಜಾವಣೆ ಗಮಕವೆನೆಯ ಪಾಡ
> ಲಾಯತ ವಾದರು ಕೊನೆ

ಇದಕ್ಕಿಂತ ಒಳ್ಳೆಯ ಉದಾಹರಣೆಗಳು ಸಿಕ್ಕಬಹುದು; ಸಿಗುತ್ತವೆ. ಇಲ್ಲಿ 'ಠಾಯೆ' ಎನ್ನುವಲ್ಲಿನ ಮಹಾಪ್ರಾಣವೊಂದೆ ಕರ್ಕಶ ಅದೂ 'ಯೆ' ಇಂದ ಮೃದುವಾಗಿದೆ. ಒಂದು ವೇಳೆ ದ್ವಿತ್ವ ವ್ಯಂಜನ, ಒತ್ತಕ್ಷರ ಬರುವುದಿದ್ದರೆ ಅದು ಸಜಾತಿಯವಾಗಿರಬೇಕು; ಅನುನಾಸಿಕಯುಕ್ತವಾಗಿರಬೇಕು. ಉದಾಹರಣೆಗೆ:

> ಜಾಣೆ ಜಾಣನು ಕೂಡಲದು ತಂತಿ ಗೂಡಿದ
> ವೀಣೆಯ ನುಡಿಸಿದಂತಿಹುದು
> ಜಾಣೆ ಹೆಡ್ಡನು ಕೂಡಲಿಹುದು ವೀಣೆ
> ವೇಣು ಬಿಗಿದು ನುಡಿದಂತೆ

ಒಂದು ವೇಳೆ ದ್ವಿತ್ವವರ್ಣಗಳು ಬರುವುದಾದರೆ ಅದು ಆದಷ್ಟು ಸಜಾತಿಯ ವಾಗಿದ್ದರೆ ಕಿವಿಗೆ ಇಂಪಾಗಿರುತ್ತದೆ.

ಅತ್ತಿತ್ತ ಮೈಯ ದೊರೆದಳಾಕೆ ಮಿಸುಕದಂ
ತೆತ್ತಿ ತಾನ ಮರ್ದಪ್ಪಿ ಕೊಂಡ
ಮುತ್ತಕೊಟ್ಟನು ಕೊರಳಿಗೆ ಕಂಠ ಮಾಲೆಯ
ಸುತ್ತಿ ಮೆಚ್ಚಿದೆನೆಂದು ಬಿಟ್ಟ

ಇಂತಹ ಹಲವಾರು ಉದಾಹರಣೆಗಳು ಭರತೇಶ ವೈಭವದಲ್ಲಿವೆ. ರತ್ನಾಕರನ ಸಾಂಗತ್ಯವು ರಮ್ಯರಾಗ, ಸೌಮ್ಯವಾಗಿ ಹಾದುಸಾಗುತ್ತದೆ. ಅದರ ಕಿರಿಯ ಚರಣಗಳ ಕೊನೆಯಲ್ಲಿ ಬ್ರಹ್ಮಗಣ ಬರುವುದರಿಂದ ರಾಗಾಲಾಪಕ್ಕೆ ಸರಿಯಾದ ಎಡೆದೊರೆತು ರಾಗರಮ್ಯತೆ ಉಂಟಾಗುತ್ತದೆ. ಅಂತೆಯೇ ಒಂದು ಸಂಗತಿಯನ್ನು ಸಾಂಗತ್ಯ ಸೂತ್ರದಲ್ಲಿ ಹೆಣೆಯಬಹುದು. ಒಂದು ಕತೆಯ ಶಿಲ್ಪವನ್ನು ರಚಿಸಬಹುದು. ಅಂತೆಯೇ ಸಾಂಗತ್ಯದ ಮುಖ್ಯ ಲಕ್ಷಣ ಕೋಮಲತೆ. ಮೃದುಭಾವದ ಅಭಿವ್ಯಕ್ತಿಗೆ ಅದು ತುಂಬ ಅನುಕೂಲ ಬಂಧ. ಶೃಂಗಾರ, ಹಾಸ್ಯ, ಕರುಣೆ, ಶಾಂತಿ ಇಂತಹ ರಸಾಭಿವ್ಯಕ್ತಿಗೆ ಸಾಂಗತ್ಯದಂತಹ ಬಂಧ ಇನ್ನೊಂದಿಲ್ಲ. ಭರತೇಶ ವೈಭವದ ಎಲ್ಲ ಸಂದಿಗಳೂ ಇದಕ್ಕೆ ಉತ್ತಮ ನಿದರ್ಶನಗಳಾಗಿವೆ.

ರತ್ನಾಕರವರ್ಣಿ ಸಮನ್ವಯ ಸಾಧಕ. ಅವನು ಭರತೇಶ ವೈಭವದಲ್ಲಿ ಭೋಗ-ಯೋಗ-ತ್ಯಾಗಗಳ ಸಮನ್ವಯವನ್ನು ಸಾಧಿಸಿದಂತೆ ಕನ್ನಡ-ಸಂಸ್ಕೃತಗಳ: ದೇಸಿ ಮಾರ್ಗಗಳ ಹದವಾದ ಸಮನ್ವಯವನ್ನು ಛಂದೋವಿಲಾಸದಲ್ಲಿ ಹಿತವಾಗಿ ನಮೀಕರಿಸಿದ್ದಾನೆ. ಅವನ ಹಸ್ತದಲ್ಲಿ ಸಾಂಗತ್ಯ ಛಂದ ಪ್ರಕಾರವು ಹದವರಿತು, ಅರ್ಥಪೂರ್ಣವಾಗಿ ಬಳಕೆಯಾಗಿದೆ.

ಆಕರಗ್ರಂಥಗಳು

೧. ಕರ್ಕಿ ಡಿ.ಎಸ್., ೧೯೯೨, ಕನ್ನಡ ಛಂದೋವಿಕಾಸ, ಭಾರತ ಬುಕ್ ಡಿಪೋ, ಧಾರವಾಡ.
೨. ಶಾಮರಾಯ ತ.ಸು., ೧೯೮೬, ಭರತೇಶ ವೈಭವ ಸಂಗ್ರಹ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೬೨

ಶಿಶುಪ್ರಾಸಗಳು : ಛಂದೋಲಯ

೧

ಶಿಶುಪ್ರಾಸಗಳು ಮಕ್ಕಳಿಗಾಗಿ ಹಿರಿಯರು ರಚಿಸಿದಂತಹವು. ಮಕ್ಕಳು ಓದಲು ಬಲ್ಲಂತಹ, ಗ್ರಹಿಸಲುಬಲ್ಲಂತಹ ಹಾಗೂ ಹಾಡಲು ಬರುವಂತಹ ಕವನಗಳಿಗೆ ಶಿಶುಪ್ರಾಸಗಳೆಂದು ಕರೆಯುವರು. ಶಿಶುಪ್ರಾಸಗಳಲ್ಲಿ ಪ್ರಾಮುಖ್ಯತೆ ಇರುವುದು ಪ್ರಾಸಕ್ಕೆ ವಿನಃ ಅರ್ಥಕ್ಕಲ್ಲ. ಮಕ್ಕಳು ಹಠಮಾಡಿ ಅಳುತ್ತಿರುವಾಗ ಅವರನ್ನು ರಮಿಸಿ ಸಂತೋಷ ಪಡಿಸುವಾಗಲೊ, ಆಟವಾಡಿಸುವಾಗಲೊ, ಇನ್ನೊಬ್ಬರನ್ನು ಅಣಕಿಸುವಾಗಲೊ ಸಾಂದರ್ಭಿಕ ಸಮಯ ಸ್ಫೂರ್ತಿಯೇ ಶಿಶುಪ್ರಾಸಗಳ ಜನನಕ್ಕೆ ಕಾರಣವಾಗುತ್ತದೆ. ಶಿಶುಗೀತೆಗಳನ್ನು ೧೪ನೆಯ ಶತಮಾನಗಳಿಗಿಂತ ಹಿಂದೆ ಇಂಗ್ಲಿಶಿನಲ್ಲಿ 'Lullynges' 'Cradle Songs' ಇತ್ಯಾದಿಯಾಗಿ ಕರೆಯುತ್ತಿದ್ದರು. ಅನಂತರ ಆಂಗ್ಲ ಭಾಷೆಯಲ್ಲಿ 'Songs or Dittics' ಎಂಬ ಹೆಸರು ಬಳಕೆಗೆ ಬಂದಿತು. ೧೮ನೆಯ ಶತಮಾನದ ನಂತರ ಇವುಗಳನ್ನು ಇಂಗ್ಲೆಂಡಿನಲ್ಲಿ 'Nursery Rhymes' ಎಂದು ಕರೆಯಲು ಮೊದಲು ಮಾಡಿದರು. 'Rhyme' ಎಂದರೆ ಪ್ರಾಸಯುಕ್ತ ಹಾಡು, ಗೀತೆ ಎಂದರ್ಥ. 'ಬೇರೆ ಬೇರೆ ಹಾಡುಗಳ ಶಿಲ್ಪವನ್ನು ಅವುಗಳ ಛಂದೋಕ್ರಮ, ಲಯಗಾರಿಕೆಯಲ್ಲಿ ಗುರುತಿಸಬಹುದಾದರೆ ಮಕ್ಕಳ ಹಾಡುಗಳನ್ನು ಪ್ರಾಸಗಳಲ್ಲಿಯೇ ಗುರುತಿಸಬೇಕು. ಪ್ರಾಸ ಪ್ರಧಾನವಾಗಿ ಅರ್ಥಗೌಣವಾಗುವ ಇವುಗಳ್ನು ಶಿಶುಪ್ರಾಸಗಳೆಂದು ಕರೆಯುವುದರಲ್ಲಿ ಔಚಿತ್ಯವಿದೆ'.[೧] ಶಿಶು ಪ್ರಾಸಗಳು ಸರಳವಾಗಿದ್ದು ನೆನಪಿಟ್ಟುಕೊಳ್ಳಲು ಸುಲಭವಾಗಿರುತ್ತವೆ.

ಕುಟುಂಬದ, ಸಮಾಜದ ಚಟುವಟಿಕೆಗಳ ಅನುಕರಣೆಯೇ ಪ್ರಾಸಕ್ಕೆ ಕಾರಣ. ಮಕ್ಕಳ ಅನುಕರಣ ಬುದ್ಧಿ ೫ ವರ್ಷದ ನಂತರ ಕಂಡುಬರುವುದು. ತಾಯಂದಿರರು ಬೀಸುವಾಗ, ಕೇರುವಾಗ, ಮಕ್ಕಳು ಅದನ್ನು ನೋಡಿ ಅನುಕರಣ ಮಾಡುವರು. ಶಿಸುಪ್ರಾಸಗಳು ಆಟಗಳೊಂದಿಗೆ ಬೆರೆತುಕೊಂಡಿರುತ್ತವೆ. ಆಟದ ಸಾಮಗ್ರಿಗಳಿಗೆ ದುಡ್ಡು ತೆರಬೇಕಾಗಿಲ್ಲ.

ಕಲ್ಲು, ಕಟ್ಟಿಗೆ, ಮಣ್ಣುಗಳೇ ಅವರ ಆಟಿಕೆಗಳು. ಮನೆಯ ಮುಂದಿನ ಅಂಗಳವೇ ಅವರ ರಂಗಭೂಮಿ. ಶಿಶುಪ್ರಾಸಗಳಲ್ಲಿ ಅಜ್ಜಿಯ ಪಾತ್ರ ಹಿರಿದಾದುದು ಮತ್ತು ಗೌರವಯುತ ವಾದುದು. ಅವುಗಳ ಹುಟ್ಟು, ಬೆಳವಣಿಗೆಯಲ್ಲಿ ಅಜ್ಜಿಯರು ಪ್ರಮುಖ ಪಾತ್ರವಹಿಸುತ್ತಾ ರೆಂಬುದನ್ನು ಮರೆಯುವಂತಿಲ್ಲ. ಕೆಲವು ಸಾರಿ ಅಜ್ಜಿ ಮಕ್ಕಳ ಹಾಡುಗಳಲ್ಲಿ ತಾನು ಒಂದು ಪಾತ್ರವಾಗುತ್ತಾಳೆ.

ಶಿಶುಪ್ರಾಸಗಳನ್ನು ವರ್ಗೀಕರಿಸುವುದು ತುಂಬ ತೊಡಕಿನ ಕೆಲಸ. ಯಾವ ಬಗೆಯಲ್ಲಿ ವರ್ಗೀಕರಿಸಿದರು ವರ್ಗೀಕರಣ ಪರಿಪೂರ್ಣವಾಗುತ್ತದೆಂದು ಹೇಳಲಾಗದು. ಬಾಲ್ಯಾವಸ್ಥೆ ಯಲ್ಲಿ ಮಕ್ಕಳು ಹೆಣ್ಣು-ಗಂಡೆಂಬ ಭೇದವಿಲ್ಲದೆ ಹಾಡುತ್ತಾರೆ. ಮಗುವಿನ ಬೆಳವಣಿಗೆಗನು ಗುಣವಾಗಿ ಗಂಡುಮಕ್ಕಳ, ಹೆಣ್ಣುಮಕ್ಕಳ ಪ್ರಾಸಗಳೆಂದು ಗುರುತಿಸಬಹುದು. ಡಾ. ಎಂ.ಎಂ. ಕಲಬುರ್ಗಿಯವರು ಮಕ್ಕಳ ಹಾಡುಗಳನ್ನು 'ಉತ್ಸವದ ಹಾಡು, ಉತ್ಸಾಹದ ಹಾಡುಗಳೆಂದು ವಿಭಜಿಸಿ ಶಿಶುಪ್ರಾಸಗಳನ್ನು ಉತ್ಸಾಹದ ಹಾಡುಗಳಲ್ಲಿ ಸೇರಿಸಿದ್ದಾರೆ. ಅದರಲ್ಲಿ ವಿನೋದ ಪ್ರಾಸ, ಕ್ರೀಡಾಪ್ರಾಸಗಳೆಂದು ಉಪವರ್ಗೀಕರಣ ಮಾಡಿದ್ದಾರೆ'.[೫] ಶ್ರೀಕಂಠ ಕೂಡಿಗೆಯವರು 'ವಯಸ್ಕರ ಪ್ರಾಸ, ಶಾಲಾ ಪ್ರಾಸಗಳೆಂದು ವರ್ಗೀಕರಿಸಿದ್ದಾರೆ'.[೬] ತಾಯಿ ಮತ್ತು ವಯಸ್ಕರ ರಿಂದ ಕಲಿಯುವಂತಹವು ವಯಸ್ಕರ ಪ್ರಾಸವಾದರೆ ಮಕ್ಕಳಿಂದ ಕಲಿಯುವಂತಹವು ಶಾಲಾ ಪ್ರಾಸ. ಶಿಶುಪ್ರಾಸಗಳಲ್ಲಿಯ ಸಾಮಾನ್ಯ ಗುಣ ಒಂದು ಮತ್ತೊಂದರಲ್ಲಿರುವುದರಿಂದ ಅವುಗಳನ್ನು ಖಚಿತವಾಗಿ ವರ್ಗೀಕರಿಸುವುದು ಕಷ್ಟವೆಂದೇ ಹೇಳಬೇಕು. ಗೆಳೆಯರು ಗೆಳತಿಯ ರನ್ನು ಗೇಲಿ ಮಾಡುವಾಗ ವಿನೋದ ಪ್ರಾಸಗಳು ಕಂಡುಬರುತ್ತವೆ.

ಒಬ್ಬೊಬ್ಬರ ತಲಿಮ್ಯಾಗ
ಗುಬ್ಬಿ ಕುಂತೈತಿ

ಎಂದಾಗ ಗೆಳೆಯನೊಬ್ಬ ತಲೆಯ ಮೇಲೆ ಕೈಯಾಡಿಸಿಕೊಳ್ಳುತ್ತಾನೆ ಏನು ಇರುವುದಿಲ್ಲ. ಆತ ಪ್ರಾಸ ಹೇಳಿದವರನ್ನು ಅಟ್ಟಿಸಿಕೊಂಡು ಹೋಗುತ್ತಾನೆ.

ನಿಂಗಪ್ಪ ನಿಂಗಪ್ಪ ನೀರಾಗ
ನಿಂಗಪ್ಪನ ಹೆಂಡತಿ ಊರಾಗ

ಆಡುವ ಸಂದರ್ಭಕ್ಕೆ ತಕ್ಕಂತೆ ಕೆಲವು ಪ್ರಾಸಗಳು ಬರುತ್ತವೆ. 'ಹಂತೊಂಬಳ್ಳಿ ನಾಟ'ವನ್ನು ಇದಕ್ಕೆ ಉದಾರಿಸಬಹುದು. ಮಕ್ಕಳು ಕೈಕೈ ಹಿಡಿದು ಸುತ್ತನಿಂತು 'ಹಂತೊಂಬಳ್ಳಿ ಹರಗಿಬಳ್ಳಿ' ಎಂದು ಹಾಡುತ್ತಾರೆ. ಮಕ್ಕಳು ಬಂಡಿಯ ನಗದ ಮೇಲೆ ಕುಳಿತು ಆಡುವಾಗ ನಗದ ಸಪ್ಪಳವೇ ಅವರ ಪ್ರಾಸಕ್ಕೆ ಪ್ರೇರಣೆಯಾಗುತ್ತದೆ.

ದಡಂ ದುಡಕಿ
ಪಾವರೇಶರ ಅಡಕಿ

ಇಂತಹ ಪ್ರಾಸಗಳು ಸಾಕಷ್ಟು ದೊರೆಯುತ್ತವೆ. ಶಿಶುಪ್ರಾಸಗಳು ಮಕ್ಕಳ ವಯೋಮಾನಕ್ಕೆ ತಕ್ಕಂತೆ ಬೇರೆ ಬೇರೆಯಾಗಿರುತ್ತವೆ. 'ಆನೆ ಬಂತಾನೆ' 'ಚಂದಪ್ಪ ಚಂದಪ್ಪ ಚಾರಿಕಾಯಿ' ಇವು ಹಸು ಮಕ್ಕಳಿಗೆ ಸಂಬಂಧಿಸಿದರೆ ಉಳಿದವು ೬ ರಿಂದ ೧೪ ವಯಸ್ಸಿನ ಮಕ್ಕಳಿಗೆ ಅನ್ವಯಿಸುತ್ತವೆ.

ಶಿಶುಪ್ರಾಸಗಳು ಹಾಸ್ಯ, ವಿಡಂಬನೆ, ವ್ಯಂಗ್ಯ, ಚಮತ್ಕಾರ, ಅಣಕ, ಅಸಂಬದ್ಧತೆ ಮೊದಲಾದ ರಂಜನೀಯ ಅಂಶಗಳನ್ನು ಹೊಂದಿ ತಮ್ಮ ಚಲುವಿಕೆಯನ್ನು ಮೆರೆದಿವೆ.

ಹೆಣ್ಣು ಮಗಳ ಮಗ ಕಾಗಿ ಬಾಬಾ
ನಮ್ಮ ಅಜ್ಜನ ತಲಿ ಕುಕ್ಕ ಬಾ
ಗಂಡು ಮಗನ ಮಗ ಕಾಗಿ ನಮ್ಮ ಅಜ್ಜನ ಸನೇಕ ಬಾ
ನಿನ್ನ ನೋಡ

ಎನ್ನುವಲ್ಲಿಯ ಹಾಸ್ಯ ಗಮನಾರ್ಹವಾಗಿದೆ. ಗಂಡು ಮಗನ ಮಗನಿಗೆ ತಮ್ಮ ಅಜ್ಜನ ಮೇಲೆ (ತಂದೆಯ ತಂದೆ) ಕಾಳಜಿ ಇದೆ. ಹೆಣ್ಣು ಮಗಳ ಮಗ (ತಾಯಿಯ ತಂದೆ) ಅಜ್ಜನ ಮೇಲೆ ಕಾಳಜಿಯ ಜೊತೆಗೆ ತಮಾಷೆಯನ್ನು ಮಾಡುತ್ತಾನೆ. ಅಜ್ಜ ಅಮ್ಮರಿಗೆ ಮಗಳ ಮಕ್ಕಳ ಮೇಲೆ ಕಾಳಜಿ ಹೆಚ್ಚು. ತಾಯಿಯನ್ನು ಕರೆಯಲಿಕ್ಕೆ ಮಾವಂದಿರರು ಮನೆಗೆ ಬಂದಾಗ ಮಕ್ಕಳು ಅವನನ್ನು ಗೇಲಿ ಮಾಡುತ್ತಾರೆ.

ಕಾಕಿ ಕಾಗಿ ಕೌ
ಯಾರೊ ಬಂದಾರೌ
ಮಾವ ಬಂದಾನೌ
ಏನು ತಂದಾನೌ
ಹಂಡೆದಂತಹ
ಕುಂಡಿ ಮಾಡಿಕೊಂಡ
ಹಂಗ ಬಂದಾನೌ

ಹಾಸ್ಯದ ಕೋಲ್ಮಿಂಚುಗಳ ಬೆಡಗು ಕಣ್ಮುಂದೆ ಕಟ್ಟುತ್ತದೆ. ಇಲ್ಲಿಯ ವ್ಯಂಗ್ಯ, ನಾಟಕೀಯ ಸನ್ನಿವೇಶ, ದೇಶಿಯ ಮಾತಿನ ದಾಟಿ ಗಮನಾರ್ಹವಾಗಿವೆ. ಶಿಶುಪ್ರಾಸಗಳಲ್ಲಿ ಹಾಸ್ಯ ವಿಡಂಬನೆಗೆ ಕೇಂದ್ರ ವ್ಯಕ್ತಿ ಮಾವನೇ.

ಅಡ್ನ ಗ್ಯಾಡಿಮ್ಯಾಲ
ಗಿಡ್ನ ಬಾಳಿಕಾಯಿ
ಯಾರನುಂಗ್ಯಾರವ್ವ
ಮಾವ ನುಂಗ್ಯಾನವ್ವ
ಮಾನವ ಹೊಟ್ಟಿಕಡಿಲಿ

'ಹಂಡೆದಂತಹ ಕುಂಡಿ ಮಾಡಿಕೊಂಡ ಹಂಗ ಬಂದಾನವ್ವ' 'ಮಾವನ ಹೊಟ್ಟಿ ಕಡಿಯಲಿ' ಎನ್ನುವ ಮಕ್ಕಳಿಗೆ ಮಾವನ ಮೇಲಿರುವ (ಬೀಗರ) ಪ್ರೀತಿ, ಅಭಿಮಾನವನ್ನು ತೋರಿಸುತ್ತದೆ. ಶಿಶುಪ್ರಾಸಗಳಲ್ಲಿ ಪದಗಳ ಪುನರುಕ್ತಿ ಪ್ರಾಸಗಳ ಸೌಂದರ್ಯವನ್ನು ಹೆಚ್ಚಿಸಿವೆ.

ಗುಂಡ ಗುಂಡ
ಗುಡು ಗುಡು ಗುಂಡ
ಬಹಳ ಮಂಡ

ಪದಗಳ ಅವೃತ್ತಿ ಗೆಜ್ಜೆನಾದದಂತೆ ಕಿವಿಗಿ ಅಪ್ಪಳಿಸುತ್ತವೆ. ಮಳೆ ಬರುವ ಪಟ ಪಟ ದನಿಗಳ ಅನುಕರಣೆಯಂತೆ ಪದಗಳು ಬರುತ್ತವೆ. ಮಳೆ ಬರುವ ಕ್ರಿಯೆಯನ್ನು

ಧೋ ಧೋ ಮಳೆಯೆ
ಪಟ ಪಟ ಮಳೆಯೆ
ಬಾ ಬಾ ಮಳೆಯೆ

ಪುನರಾವೃತ್ತಿಯ ಅನುಪ್ರಾಸ ಮಳೆಯಾಗುವ ಕ್ರಿಯೆಯನ್ನು ಹಾಗೂ ಆಗಿನ ವಾತಾವರಣ ವನ್ನು ಅಭಿನಯದೊಂದಿಗೆ ಹೇಳಿದಂತಾಗಿದೆ. ಆಟವಾಡುವಾಗ ಆಟದ ಕ್ರಿಯೆಯೇ ಪ್ರಾಸವಾಗುತ್ತದೆ. 'ಬಗರಿ ಬಗರಿ ಬಣ್ಣದ ಬಗರಿ ಗಿರಿ ಗಿರಿ ತಿರುಗುವ ಮಾಟದ ಬಗರಿ' ಎನ್ನುವಲ್ಲಿ ಶಬ್ದಸಂಯೋಜನೆಯು ಶಬ್ದಾಲಂಕಾರಗಳು ನುಗ್ಗಿಬಂದಿವೆ. ಮಕ್ಕಳಿಗೆ ಬುದ್ಧಿ ತಿಳಿಯುತ್ತ ಬಂದಂತೆಲ್ಲ ಪ್ರಾಸ ಪ್ರೀಯತೆಗಿಂತ ಲಯಗಾರಿಕೆಯ ಕಡೆಗೆ ಮನಸ್ಸು ಹರಿಯುತ್ತದೆ. ಆಗ ಪ್ರಾಸಗಳ ವಸ್ತು ಮತ್ತು ರಚನೆಯಲ್ಲಿಯೂ ಮಾರ್ಪಾಟು ಆಗುತ್ತದೆ. ಶಿಶು ಪ್ರಾಸಗಳಲ್ಲಿ ಪ್ರಾದೇಶಿಕ ವೈಶಿಷ್ಟ್ಯತೆಗಳು ಎದ್ದು ಕಾಣುತ್ತವೆ.

ದಾವಣಗೆರೆ ಸಂತೆಗೆ ಹೋದಾರ	ಶಿವಮೊಗ್ಗ
ಸೊಗಲ ಜಾತ್ರ್ಯಾಗ ನಿಂತಾರ	ಬೆಳಗಾವಿ
ಆನೆ ಬಂತಾನೆ	ಮೈಸೂರು
ಆನಿ ಬಂತಾನಿ	ಬೆಳಗಾವಿ

ಪದರೂಪದಲ್ಲಿ, ವಾಕ್ಯರಚನೆಯಲ್ಲಿ ಪ್ರಾದೇಶಿಕ ವ್ಯತ್ಯಾಸಗಳು ಕಂಡುಬರುತ್ತವೆ. ಪ್ರಾಸಗಳ ಭಾಷೆ ಸರಳ ಮತ್ತು ನೇರ. ಆಡುನುಡಿ ಹಾಸುಹೊಕ್ಕಾಗಿ ಬಳಕೆಯಾಗುತ್ತದೆ. ಶಿಶುಪ್ರಾಸಗಳಲ್ಲಿಯೇ ಪ್ರಾಸ, ಪದ್ಯದ ಕಟ್ಟನ್ನು ನಿರ್ಣಯಿಸುತ್ತದೆ. ಪ್ರಾಸಗಳಲ್ಲಿ ಯಾವುದೇ ರೀತಿಯ ಕಟ್ಟು ನಿಟ್ಟಿಲ್ಲ ಹುಡುಗರು ತಮ್ಮ ಲಹರಿಯ ಝುರಿಯಲ್ಲಿ ತನ್ಮಯರಾಗಿ ಹಾಡುತ್ತಾರೆ. ಆಯಾ ಪ್ರದೇಶದ ಆಡುನುಡಿಗಳು ಕೇಳಿಬರುವವು. ಇವು ಅಂಶಗಣಗಳನ್ನೊಳ ಗೊಂಡಿರುವುದರಿಂದ ಏರಿಳಿತಗಳ ಕೋಚನೆತ್ತಿದಾಗ ರಾಗ ಮಾಡಿ ಹಾಡಲು ಬರುತ್ತವೆ ಮಕ್ಕಳು ಕಂಬವನ್ನು ಹಿಡಿದು ಅದರ ಸುತ್ತಲು ತಿರುಗುತ್ತ 'ಕಂಬ ಕಂಬಾಟ; ನಿಂಬಿ ತ್ವಾಟ'

ಎಂದು ಹಾಡುತ್ತಾರೆ. ಪ್ರಾಸವನ್ನು ಬಿಟ್ಟರೆ ಕಂಬಕ್ಕೂ ನಿಂಬಿ ತ್ಯಾಟಕ್ಕೂ ಯಾವುದೇ ಸಂಬಂಧ ವಿಲ್ಲ. ಗೆಳತಿಯರೆಲ್ಲ ಒಂದೆಡೆ ಕೂಡಿ ಕೈ ಕೈ ಹಿಡಿದು ವರ್ತಿಸುವಾಗ

ಗಿರಿ ಗಿರಿ ಗಿಂಡಿ
ಇಬತ್ತಿ ಉಂಡಿ
ಆ ಕೈ ತಾ ಈ ಕೈ ತಾ ಬಲಗೈ ತಾ

ಇಲ್ಲಿ ಗಿಂಡಿಗೂ ಇಬತ್ತಿ ಉಂಡಿಗೂ ಸಂಬಂಧವಿಲ್ಲ ಕೈ ಕೈ ಹಿಡಿದು ಹಾಡುವಾಗ ಆಟದ ಕ್ರಿಯಾಸ್ವರೂಪ ಹಾಗು ಆಡುನುಡಿಯ ಸೊಗಸು ಇಲ್ಲಿ ಮುಖ್ಯವಾಗಿದೆ. ಮಂದಾನಿಲ ಲಯ ಗೆಳತಿಯರ ನರ್ತನಕ್ಕೆ ಸಹಾಯಕಾರಿಯಾಗಿದೆ. ಮಾತಿನ ಗತಿಯ ಲಯವು ಅಲೆ ಅಲೆಯಾಗಿ ಆಡುವ ಕ್ರಿಯೆ ಹಾಡಾಗಿ ತಿರುಗುತ್ತದೆ. 'ಹತ್ತಿ ಕಟಗಿ ಬತ್ತಿ ಕಟಗಿ ಬಾವನೂರ್ ಬಸವನೂರ್' ಸುಲಭವಾಗಿ ಅರ್ಥವಾಗುವ ನುಡಿ ಜೋಡಣೆ ಇಲ್ಲಿದೆ, ಅವುಗಳಿಗೆ ಅರ್ಥ ವಿರದಿದ್ದರು ಹಾಡಿಗಾಗಿ ಅವು ಸೇರಿವೆ. ಪ್ರಾಸದ ಲವಲವಿಕೆಯನ್ನು ಹೆಚ್ಚಿಸಿವೆ. ಪ್ರಾಸ ಪದ್ಯದ ಹೊರ ಚೆಲುವು ಮಾತ್ರ ಎಂದು ತಿಳಿಯಲಾಗದು ಅದು ನಮ್ಮ ಅಂತರ್ಯದ ಒಂದು ಬಯಕೆಯನ್ನು ತೃಪ್ತಿಗೊಳಿಸುತ್ತದೆ. ಶಿಶು ಪ್ರಾಸಗಳಲ್ಲಿ ಶಬ್ದಗಳಿಂದ ಹೊರಡುವ ವಾದಕ್ಕೆ ಬೆಲೆಯುಂಟು. ಮಕ್ಕಳು ಹಾಡುಗಳನ್ನು ನೆನಪಿಟ್ಟುಕೊಳ್ಳಲು ಲಯ, ನಾದ ಅನುಕೂಲವಾಗುತ್ತವೆ.

ಪಾರಮ್ಮ ಬಂದಾಳ
ಬತ್ತಿ ಹಾಕಾಕ ಬಂದಾಳ
ಇಳಕಲ್ಲ ಸೀರೆ ಉಟ್ಟಾಳ
ಗುಳೆದಗುಡ್ಡ ಕುಪ್ಪಸ ತೊಟ್ಟಾಳ

ಪ್ರತಿ ಚರಣಕ್ಕೂ 'ಪಾರಮ್ಮ' ಎಂಬ ಪದ ಆವೃತ್ತಿಯಾಗಿ ಆ ಸ್ತ್ರೀ ಬಾಳಿದ ರೀತಿಯನ್ನು ತಿಳಿಸುತ್ತಾ ಇಡೀ ಪ್ರಾಸಕ್ಕೆ ಒಂದು ರೂಪ ತರುತ್ತದೆ. ಪಕ್ಷಿಗಳ ಧ್ವನಿಯ ಉಲಿವು ಶಿಶು ಪ್ರಾಸಗಳಲ್ಲಿ ಕಾಣುತ್ತೇವೆ. 'ಕಾಕಾ ಕಾಗೆ; ಬೌ ಬೌ ನಾಯಿ; ಮಿವ್ ಮಿವ್ ಬೆಕ್ಕು' ಇಲ್ಲಿ ಲಯ ಮತ್ತು ನಾದವೇ ಮುಖ್ಯ, ಆಡು ಮಾತು ಜಾನಪದ ಸಾಹಿತ್ಯದ ರಚನೆಗೆ ಮೂಲ ಪ್ರೇರಣೆ. ಆಡುಮಾತುಗಳಲ್ಲಿ ತೇಲುವ ವಿವಿಧ ಲಯಗಳನ್ನು ಒಂದು ಕಾಲಮಾನಕ್ಕೆ ಜಾನಪದ ಹಾಡು ಎಳೆದುಕೊಂಡು ತನ್ನ ರೂಪ ನಿರ್ಮಿತಿಯನ್ನು ಮುಂದುವರೆಸುತ್ತದೆ. ಇದನ್ನು ನಾವು ಆಡುನುಡಿಯ ಲಯ ಎಂದು ಕರೆಯುತ್ತೇವೆ. ಮಳೆ ಬರುವಾಗ ಮಕ್ಕಳು ಅಂಗಳಕ್ಕೆ ಬಂದು

ಬಾರೋ ಬಾರೋ ಮಳೆರಾಯ
ಬಾಳಿ ತ್ಯಾಟಕ್ಕೆ ನೀರಿಲ್ಲ

ಇಲ್ಲಿ ಪ್ರಾಸ ಮತ್ತು ಅರ್ಥ ಎರಡಕ್ಕೂ ಪ್ರಾಮುಖ್ಯತೆ ಇದೆ. ಕೂಡಿ ಹಾಡುತ್ತಿರುವಾಗ ಪದ್ಯ ದ್ವಿಪದಿಯಾಗಿ ರೂಪುಗೊಳ್ಳುತ್ತದೆ. ಶಿಶುಪ್ರಾಸಗಳ ಛಂದಸ್ಸಿನಲ್ಲಿ ಲವಲವಿಕೆ, ಅಂಶ ಗಣ, ಮಂದಾನಿಲ, ಆದಿ ಅಂತ್ಯ ಪ್ರಾಸಗಳ ಅ(ಶಿಥಿಲತೆ)ನಿಯತತೆ, ಪರಿಚಿತ ಮಾತುಗಳು ಸಹಜವಾಗಿ ಹಾಡಾಗಿ ರೂಪುಗೊಳ್ಳುತ್ತವೆ. ಸಂವಾದದ ರೂಪದ ಪ್ರಾಸಗಳಲ್ಲಿ ಪಲ್ಲವಿಗಳು ಕಾಣಿಸಿಕೊಳ್ಳುತ್ತವೆ.

೨

ಮಕ್ಕಳ ಅನಿಸಿಕೆ, ಆಶೋತ್ತರಗಳನ್ನು ಈಡೇರಿಸಲು ಶಿಶುಪ್ರಾಸಗಳು ಮಕ್ಕಳಿಗೆ ಸುಲಭವಾಗಿ ಅರ್ಥವಾಗುತ್ತವೆ. ಅವು ಮಕ್ಕಳ ಸುತ್ತಮುತ್ತಲಿನ ಪ್ರಾಣಿ-ಪಕ್ಷಿ, ಶಾಲೆ, ಮನೆ ಇಂತಹ ದೈನಂದಿನ ರೀತಿ-ನೀತಿಗಳನ್ನು, ಮಕ್ಕಳ ಪರಿಸರವನ್ನು ಪ್ರತಿನಿಧಿಸುತ್ತವೆ. ಪ್ರತಿಯೊಂದು ಶಿಶುಪ್ರಾಸದ ಹಿಂದೆ ಮಕ್ಕಳ ವ್ಯಕ್ತಿತ್ವ ವಿಕಾಸ, ಉನ್ನತ ಆದರ್ಶ ಮತ್ತು ಭವಿಷ್ಯತ್ತಿನ ಕಡೆಗೆ ದೃಷ್ಟಿಹಾಯಿಸುವ ಚಿಂತನೆಗೆ ಚಾಲನೆ ತಂದು ಕೊಡುತ್ತದೆ. ಅವು ತಾಳ, ಲಯ, ನಾದ ಮಾಧುರ್ಯದಿಂದ ಮಕ್ಕಳ ಮನವನ್ನು ಸೂರೆಗೊಂಡಿವೆ. ಗುಬ್ಬಿಯ ಸಹಜ ಚಟುವಟಿಕೆಯನ್ನು ಕುರಿತು ಕರ್ಕಿ ಅವರು ಬಣ್ಣಿಸುವ ರೀತಿ.

ಗುಬ್ಬಿ ಗುಬ್ಬಿ ಚಿಂಚಿಂಚಿಂ
ನಿನ್ನ ಹಾಡು ಚಿಂ
ನಿನ್ನ ಹಾಗೆ ನಾನು ಉಲಿವೆ
ಹಾಡಿ ಚಿಂ ಚಿಂಚಿಂ

ಈ ಕವನದ ಗೇಯ ಗುಣವು ಮಕ್ಕಳ ಮನ ಸೂರೆಗೊಂಡಿದೆ. 'ಚಿಕ್ಕ ಚಿಕ್ಕ ಪಕ್ಕ ಬಿಚ್ಚಿ ಹಾರು ಹಾರು ಬುಕ್' ಇಂತಹ ಪದ ಪುಂಜಗಳು ಮಕ್ಕಳಿಗೆ ಸುಲಭವಾಗಿ ಅರ್ಥವಾಗುತ್ತವೆ. ಇಂತಹ ಪ್ರಾಸಗಳನ್ನು ಮಕ್ಕಳು ಅಭಿನಯದಿಂದ ಹಾಡಬಹುದಾಗಿದೆ. ಒಂದೇ ನಮೂನೆಯ ಗಣಸಂಯೋಜನೆ ಹೊಂದಿದ ಶಿಶುಗೀತೆಗಳನ್ನು ಮಕ್ಕಳು ಉತ್ಸಾಹದಿಂದ ಹಾಡುತ್ತಾರೆ. ಕರ್ಕಿಅವರ 'ನಮ್ಮ ಅಜ್ಜ' ಕವನ ಲೋಕ ಪ್ರಸಿದ್ಧವಾಗಿದೆ.

ನನಗೆ ಒಬ್ಬ ಅಜ್ಜ
ಇರುವನವನು ಸಜ್ಜ
ಕೋಲು ಊರಿ ಕಾಲು ಹಾಕಿ
ನಡೆವನವನು ಅಜ್ಜ

ಈ ಕವನದ ಪದಪುಂಜಗಳು ಅರ್ಥಪೂರ್ಣವಾಗಿವೆ. 'ಬಾಯಿಬಚ್ಚ', 'ಬಾಗಿದಬೆನ್ನ' ಈ ದಾಟಿಯಲ್ಲಿ ಮಕ್ಕಳಿಗೆ ಅಜ್ಜನ ವ್ಯಕ್ತಿತ್ವದ ಕಲ್ಪನೆಯನ್ನು ಶಿಶುಪ್ರಾಸಗಳ ಮೂಲಕ ಮಾಡಿಕೊಡಲಾಗಿದೆ. ನವಿರಾದ ಹಾಸ್ಯ, ನಾಟಕೀಯತೆ ಸೊಗಸಾಗಿ ಮೂಡಿಬಂದಿದೆ. ಅದು ಮಕ್ಕಳಿಗೆ ಮುದವನ್ನು ನೀಡುತ್ತದೆ. ಮಕ್ಕಳಿಗೆ ಗ್ರಾಮ ಪರಿಸರವನ್ನು ಪರಿಚಯ

ಮಾಡಿಕೊಡುವ 'ನಮ್ಮ ಊರ ಹಳ್ಳ', 'ಮೋಡಗಳೇ', 'ಕೋಳಿ ಕುಕೂ' ಇಂತಹ ಕವನಗಳಂತೂ ಅತ್ಯಂತ ಜನಪ್ರಿಯವಾಗಿವೆ. ಮಕ್ಕಳ ಭಾವನೆಗಳನ್ನು ಹಿಂಜಿದರಳೆಯಿಂದ ಸರಾಗವಾಗಿ ನೂಲು ತೆಗೆಯುವಂತೆ ರೇಖಿಸಿದ್ದಾರೆ. ಹೊಸ ಹೊಸ ವಸ್ತುಗಳನ್ನು ಕವನದಲ್ಲಿ ಸೆರೆಹಿಡಿಯುವ ಕಲೆಗಾರಿಕೆ, ಲಯಗಾರಿಕೆ, ಕರ್ಕಿ ಅವರಿಗೆ ಸಾಧಿಸಿದೆ. 'ಬಣ್ಣದ ಚೆಂಡು', 'ಬೀಜ-ಹಣ್ಣು', 'ಬುರುಬುರು ಬಸವಣ್ಣ' ಮುಂತಾದ ಕವನಗಳಲ್ಲಿ ಬಾಲಭಾವನೆಗಳು, ನಿಸರ್ಗ ಪ್ರೀತಿ ಸೊಗಸಾಗಿ ಮೂಡಿಬಂದಿದೆ. ಮೂರು, ನಾಲ್ಕು ಮಾತ್ರಾಲಯದಲ್ಲಿ ಮೂಡಿಬಂದ 'ಬಂತು ಮಳೆ' ಎಂಬ ಕವನ, ಮಳೆ ಬರುವ ರೀತಿಯನ್ನು ಮಗುವಿನ ಮನಸ್ಸಿನ ಮೇಲೆ ಗಾಢ ಪ್ರಭಾವ ಬೀರಿದೆ.

ಬಂತು ಮಳೆ
ಬಂತು ಮಳೆ
ತೊಳೆಯಿತೆಲ್ಲ ನೆಲದ ಕೊಳೆ
ಬೆಟ್ಟ ಇಳಿದು
ಬಯಲ ತುಳಿದು
ಬಂತು ಹರಿಸಿ ಹಳ್ಳಹೊಳೆ

ಇಂತಹ ಕವನಗಳಲ್ಲಿ ವಸ್ತುಗಳ ಆಯ್ಕೆ, ಶೈಲಿ, ತಂತ್ರ, ಶಬ್ದಮಾಧುರ್ಯ ಎಲ್ಲವುಗಳ ಸಮನ್ವಯವನ್ನೂ ಕಾಣಬಹುದು. ಅವರ 'ತನನ ತೋಂ' ಎಂಬ ಮಕ್ಕಳ ಕವನ ಸಂಗ್ರಹವಂತೂ ಬಹಳೇ ಪ್ರಸಿದ್ಧವಾಗಿದೆ. ಇಲ್ಲಿಯ ಭಾವ, ಶಬ್ದಗಳ ಲಯಗಾರಿಕೆಗಳು ಅನುಕರಣೀಯವಾಗಿವೆ. 'ಬರಲಿ ನೂರು ವರ್ಷ' ಎಂಬ ಕವನವನ್ನು ಇಲ್ಲಿ ಉದಾಹರಿಸಬಹುದು.

ನಮ್ಮ ಮುದ್ದು ತಂಗಿಗಿಂದು
ತುಂಬಿ ನಾಲ್ಕು ವರುಷ

ಈ ಪದ್ಯವನ್ನು ನಿಧಾನವಾಗಿ ಓದಬೇಕು, ಅರ್ಥಗ್ರಹಿಸಬೇಕು. ಕವಿಯ ಭಾವವನ್ನು ಅರಿಯಬೇಕು. ಅಂದಾಗ ಅದು ಎಂತಹ ಕವನವೆಂಬುದು ಮನವರಿಕೆಯಾಗುವುದು. ಇಂತಹ ಸುಂದರ ಭಾವನೆಗಳನ್ನು ಮಿಡಿಯುವ ಅವರ ಕವನಗಳ ಕೆಲಸಾಲುಗಳು ಹೀಗಿವೆ :

ಎಲ್ಲರ ಮಾತು ಕೇಳಿಹೆಮ್ಮ
ಎಲ್ಲ ಸಪ್ಪೆ ಮಾತು

'ಹಣ್ಣು ಬೇಕೇ ಹಣ್ಣು' ಎಂಬುದು ಈ ಸಂಕಲನದಲ್ಲಿಯ ಒಂದು ಹೊಸ ಲಯಗಾರಿಕೆಯ ಕವನವಾಗಿದೆ.

ಹಣ್ಣುಬೇಕೆ ಹಣ್ಣು
ಕಣ್ಣು ಕವಳಿಯ ಹಣ್ಣು

ಇತ್ಯಾದಿ, ೫ ನುಡಿಗಳ ಈ ಕವನ ಒಂದು ಉತ್ಕೃಷ್ಟವಾದ ಕವನವಾಗಿದೆ. ಅದರಂತೆ ಬಣ್ಣದ ಚೆಂಡು, ಬುರುಬುರು ಬಸವಣ್ಣ, ಪುಂಗಿನಾಗ, ಬೀಜಹಣ್ಣು, ನೋಟಗಳ ಹಾಡು ಮುಂತಾದುವು ಇಲ್ಲಿಯ ಉತ್ತಮ ಕವನಗಳಾಗಿವೆ. ಭಾವದ ಉನ್ನತಿಕೆ, ಉತ್ತಮವಾದ ಪದ ಸಂಯೋಜನೆ, ಗೇಯತೆ ಇತ್ಯಾದಿಗಳು ಅವಿನಾಭಾವ ಸಮನ್ವಯ ಹೊಂದಿರುವುದನ್ನು ನಾವಿಲ್ಲಿ ನೋಡಬಹುದು. 'ಪುಟ್ಟ ತಂಗಿ' ಅಂತಹ ಸಂದರ್ಭದಲ್ಲಿ ಕವಿಯೂ ಕೂಡ ತಾನು ಎಷ್ಟೇ ಎತ್ತರಕ್ಕೆ ಬೆಳೆದಿದ್ದರೂ ಮಕ್ಕಳ ಮಟ್ಟಕ್ಕೆ ತಕ್ಕಂತೆ ಅಭಿವ್ಯಕ್ತಿಸಿದ್ದಾರೆ. ಮಕ್ಕಳ ಆಟ-ಪಾಠ, ಚಟುವಟಿಕೆ, ಬಾಲಲೀಲೆ, ತುಂಟಾಟ ಕವಿಗೆ ಸ್ಫೂರ್ತಿಯ ನೆಲೆಯಾಗಿವೆ. ಮಕ್ಕಳ ಅನುಭವಗಳನ್ನು ಅಚ್ಚುಕಟ್ಟಾಗಿಯೂ, ಸಾರವತ್ತಾಗಿಯೂ ನಿರೂಪಿಸುವ ಜಾಣ್ಮೆ ಕರ್ಕಿ ಅವರಿಗಿದೆ.

ಶಿಶುಪ್ರಾಸಗಳಲ್ಲಿ ಭಾಷೆ ಒಂದು ಪ್ರಮುಖವಾದ ಅಂಶ. ಮಕ್ಕಳ ಮನಸ್ಸಿಗೆ ಹಿಡಿಸುವ ಅವರು ಆಗಾಗ ಹಾಡಿ ಮೆಲಕು ಹಾಕಬಹುದಾದಂತಹ, ಸರಳವಾದ ಭಾಷೆ ಅವರಿಗೆ ಅರ್ಥವಾಗಬೇಕು. ಪ್ರಾದೇಶಿಕ ಆಡುಮಾತು, ಜಾನಪದ ನುಡಿಗಟ್ಟುಗಳನ್ನೂ ಬಳಸಿದರೆ ಮಕ್ಕಳು ಬೇಗ ಹಿಡಿದುಕೊಳ್ಳಬಲ್ಲರು. ಮಕ್ಕಳ ಪರಿಸರದ ಪ್ರಾಣಿರೂಪಕಗಳನ್ನು ಕವಿ ಸಮರ್ಥವಾಗಿ ಬಳಸಬೇಕು. ಕನ್ನಡ ಶಿಶುಗೀತಕಾರರು ಇದನ್ನು ಸಾಧಿಸಿದ್ದಾರೆ.

೩

ಶಿಶುಪ್ರಾಸಗಳ ಛಂದಸ್ಸಿನಲ್ಲಿ ವೈವಿಧ್ಯತೆಯಿದ್ದರೂ ಶಾಸ್ತ್ರೀಯ ಕಟ್ಟುನಿಟ್ಟು ಇರುವುದಿಲ್ಲ: ಅದರ ಬದಲಾಗಿ ಶಿಥಿಲತೆ ಇರುವುದು ೩ ರಿಂದ ೫ ಮಾತ್ರೆವರೆಗಿನ ಗಣವಿನ್ಯಾಸವಿರುವುದು. ಈ ಮಾತ್ರಾಗಣಗಳ ಗುಚ್ಛಗಳನ್ನೇ ತಾಳ, ಲಯದ ಒಂದು ಕ್ರಮಬದ್ಧವಾದ ಸೂತ್ರದಲ್ಲಿ ಪೋಣಿಸಿ ಭಾವಕ್ಕೆ ತಕ್ಕಂತೆ ಸೀಮಿತವಾದ ಚರಣಗಳ ರೂಪದಲ್ಲಿ ವಿಭಜಿಸಿ ಕವನಗಳನ್ನು ಹೆಣೆಯುವುದು ಒಂದು ವಿಧವಾಗಿರುವುದು. ಈ ರೀತಿ ರಚಿತವಾದ ಒಂದೊಂದು ಕವನದಲ್ಲಿಯೂ ಒಂದೊಂದು ಭಾವ ಅಡಕವಾಗಿರುತ್ತದೆ.

ಪೆನ್ನು

ಸುಂದರ ಬಣ್ಣದ ಧರಿಸಿವ ಪೆನ್ನು
ನಿನ್ನಯ ಹಿರಿಮೆಯು ಎಂಥಹದು
ಕಾಗದ ತುಂಬಲು ಮುತ್ತಿನ ಸಾಲು
ನೋಡಲು ನಮಗೆ ಬಲು ಸೊಗಸು
ಹರಿಯುತ ನೀನು ಬರುತಿಹೆ ಎಲ್ಲಿ
ಏನನು ಹೇಳಿ ಹೊರಟಿರುವೆ

ಬೆಳ್ಳನೆ ಭೂಮಿಗೆ ನೀಲಿಯ ಸುರಿಸಿ
ಅಕ್ಷರ ಬಿತ್ತಿ ಬೆಳಸಿರುವೆ

ನಿನ್ನನು ಹಿಡಿದಿಹ ಸುಂದರ ಕೈಯದು
ಬಿತ್ತುವ ಮುತ್ತು ಎಲ್ಲಿಯವು
ತಲೆಯಿಂದಿಳಿದು ಬೆರಳಲಿ ಬಂದು
ಮೂಡುವ ಬಗೆಯು ಬಲುಹಿರಿದು

ಶಾಂತಾದೇವಿ ನೀಲಗಾರ

ಇದೊಂದು ಭಾವಗೀತೆ ಅಥವಾ ಮಕ್ಕಳ ಕವನ. ಇದರಲ್ಲಿ ಪೆನ್ನಿನ ಮಹತಿಯನ್ನು ಎತ್ತಿ ತೋರಿಸಲಾಗಿದೆ. ಇದರಲ್ಲಿಯ ಭಾವವನ್ನು ಮೂರು ನುಡಿಗಳಲ್ಲಿ ವಿಂಗಡಿಸಲಾಗಿದೆ. ಪ್ರತಿಯೊಂದು ನುಡಿಯಲ್ಲಿ ನಾಲ್ಕು ಚರಣ(ಸಾಲು)ಗಳಿವೆ. ಪ್ರತಿಯೊಂದು ಚರಣದಲ್ಲಿ ನಾಲ್ಕರಂತೆ ಮಾತ್ರಾ ಗಣಗಳಿವೆ. ಇದರಲ್ಲಿ ಮಕ್ಕಳಿಗೆ ತಿಳಿಯುವ ರೀತಿಯಲ್ಲಿ ಪೆನ್ನಿನ ಬಣ್ಣ, ಅದರ ಅಂದ ಚಂದ. ಅದು ಬಿಳಿಹಾಳೆಯ ಮೇಲೆ ಬರೆಯುವ ವಿಧಾನ, ಕಾಗದವೇ ಬೆಳ್ಳನೆಯ ಭೂಮಿಯಾಗಿ, ಅದರಲ್ಲಿ ಮೂಡುವ ಅಕ್ಷರಗಳೇ ಮುತ್ತಿನ ಬೆಳೆಯಾಗಿ, ಆ ಮುತ್ತುಗಳು ತಲೆಯಲ್ಲಿ ಮೂಡಿ ಬೆರಳಲ್ಲಿ ಬಂದು ಅಕ್ಷರಗಳ ರೂಪದಲ್ಲಿ ಇಳಿದು ಬರುವ ಒಂದು ಸುಂದರವಾದ ಕಲ್ಪನೆಯನ್ನು ಮಾಡಿರುವುದು ಹಾಗೂ ಪೆನ್ನಿನ ಬಗೆಗೆ ಒಂದು ಪುಟ್ಟದಾದ ಭಾವವನ್ನು ಕವನದ ರೂಪದಲ್ಲಿ ಇಳಿಸಿರುವುದು ಒಂದು ಕಲಾತ್ಮಕವಾದ ಸಮನ್ವಯವಿರುವುದನ್ನು ನಾವು ನೋಡಬಹುದು.

ಈ ರೀತಿಯಾಗಿ ಮನದಲ್ಲಿ ಹೊಳೆದ ಯಾವುದೇ ಒಂದು ಭಾವ ಅದರ ಸುತ್ತ ಇರಬಹುದಾದ ಅನೇಕ ವಿಚಾರಗಳು, ಆ ವಿಚಾರಗಳನ್ನು ಕ್ರಮಬದ್ಧವಾಗಿ ಹೆಣೆಯುವುದು, ಹೊಂದಿಸುವುದು, ಆ ಹೊಂದಾಣಿಕೆಗಳಲ್ಲಿ ಯಾವುದಕ್ಕೆ ಎಷ್ಟರ ಮಟ್ಟಿಗೆ ಪ್ರಾಧಾನ್ಯತೆ ಕೊಡಬೇಕು, ಯಾವುದನ್ನು ಬೆಳೆಸಬೇಕು, ಯಾವುದನ್ನು ಕಡಿಮೆ ಮಾಡಬೇಕು ಎಂಬ ತೂಕವನ್ನು ನಿರ್ಧರಿಸುವುದು ಅವರ ಕಲಾವಂತಿಕೆ ಹಾಗೂ ಪ್ರತಿಭೆಯನ್ನು ಅವಲಂಬಿಸಿದೆಯೆಂದು ಹೇಳಬೇಕು. ಈ ದಿಶೆಯಲ್ಲಿ ಮಕ್ಕಳ ಕವನಗಳ ವಿವಿಧ ಲಯಗಳನ್ನು ನಾವು ನೋಡಬಹುದು.[೪]

ಷಟ್ಪದಿಯ ಲಯಗಳು

ಕನ್ನಡದ ಭಾವಗೀತೆಗಳಿಗೆ ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕ ಮುಂತಾದ ಷಟ್ಪದಿಗಳ ಲಯಗಳೇ ತಾಯಿ ಬೇರು ಎಂದು ಹೇಳಬಹುದು. ವೃತ್ತ, ಕಂದ, ತ್ರಿಪದಿ, ಸೀಸ, ರಗಳೆ ಇತ್ಯಾದಿಗಳಲ್ಲಿಯೂ ಸಹಭಾವಗೀತೆಗಳಿದ್ದರೂ ಹೆಚ್ಚಾಗಿ ಷಟ್ಪದಿಗಳ ಮಾತ್ರಾ ಗಣ ಸಂಯೋಜನೆಯನ್ನೇ ಅನುಸರಿಸಿಕೊಂಡು ಬಂದಿರುವುದನ್ನು ನೋಡಬಹುದು. ಷಟ್ಪದಿಯ ಆರು ಸಾಲುಗಳಲ್ಲಿಯ ಒಂದು ಹಾಗೂ ಎರಡನೆಯ ಸಾಲುಗಳನ್ನು ಕೂಡಿಸಿ, ಮೊದಲನೆಯ ಸಾಲನ್ನು, ಮೂರನೆಯ ಸಾಲನ್ನು ಎರಡನೆಯ ಸಾಲನ್ನಾಗಿ ಮಾಡಿ, ನಾಲ್ಕು ಹಾಗೂ ಐದನೆಯ ಸಾಲುಗಳನ್ನು ಎರಡನೆಯ ಸಾಲನ್ನಾಗಿ ಮಾಡಿ, ನಾಲ್ಕು ಹಾಗೂ ಐದನೆಯ ಸಾಲುಗಳನ್ನು ಕೂಡಿಸಿ, ಮೂರನೆಯ ಸಾಲನ್ನಾಗಿ,

ಐದನೆಯ ಸಾಲನ್ನು ನಾಲ್ಕನೆಯ ಸಾಲನ್ನಾಗಿ ಮಾಡಿ ಷಟ್‌ಪದಿಯನ್ನೇ ಚೌಪದಿಯ ರೂಪಕ್ಕಿಳಿಸಿ ಭಾವಗೀತೆಯನ್ನಾಗಿ ರಚಿಸಿದ್ದು ಕಂಡುಬರುವದು. ಈಗ ಕೆಲ ಷಟ್‌ಪದಿಗಳ್ನು ಚೌಪದಿಗೆ ಇಳಿಸಿದ ವಿಧಾನವನ್ನು ನೋಡಬಹುದು.

ಶರ ಷಟ್‌ಪದಿ

ಶರಷಟ್‌ಪದಿಯ ೧-೨ ಹಾಗೂ ೪-೫ನೇ ಸಾಲುಗಳಲ್ಲಿ ೪ ಮಾತ್ರೆಯ ಎರಡು ಗಣಗಳೂ (೮ ಮಾತ್ರೆಗಳು) ೩ ಹಾಗು ೬ನೆಯ ಸಾಲುಗಳಲ್ಲಿ ನಾಲ್ಕು ಮಾತ್ರೆಗಳ ಮೂರು ಗಣಗಳೂ ಮೇಲೊಂದು ಗುರು (೧೩ ಮಾತ್ರೆಗಳು) ಇರುವವು.

ಷಟ್‌ಪದಿ	**ಈ ಷಟ್‌ಪದಿಯನ್ನೇ ಚೌಪದಿಯಾಗಿಸಿದ್ದು**
ಬಾಳೆ ತೋಟದ	ಬಾಳೆಯ ತೋಟದ ಪಕ್ಕದ ಕಾಡೊಳು
ಪಕ್ಕದ ಕಾಡೊಳು	ವಾಸಿಸುತ್ತಿದ್ದವು ಮಂಗಗಳು
ವಾಸಿಸುತ್ತಿದ್ದವು ಮಂಗಗಳು	ಮಂಗಗಳೆಲ್ಲವು ಒಟ್ಟಿಗೆ ಸೇರುತ
ಮಂಗಗಳೆಲ್ಲವು	ಒಂದು ಪವಾಸವ ಮಾಡಿದವು
ಒಟ್ಟಿಗೆ ಸೇರುತ	
ಒಂದು ಪವಾಸವ ಮಾಡಿದವು	

ಇದೇ ರೀತಿಯಾಗಿ ಷಟ್‌ಪದಿಯನ್ನು ಚೌಪದಿಯನ್ನಾಗಿ ಮಾಡಿಕೊಂಡ ಕವನಗಳನ್ನು ನೋಡಬಹುದು.

ಸಂಜೆಯ ರಂಜಿಪ ಸೂರ್ಯನ ತರುವೆನು	ಮಿರಿ ಮಿರಿ ಮಿಂಚುವ ಹಕ್ಕೀ ಪುಚ್ಚ
ಕೈಬಿಡು ಹೋಗುವೆ ನಾನಮ್ಮ	ಗಿರಿಗಿರಿ ತಿರುಗಿದೆ ನೋಡಣ್ಣಾ
ಚಿನ್ನದ ಚೆಂಡನು ಕೈವಶ ಮಾಡುವೆ	ಹಣ್ಣಿನ ತೋಟದ ಬೇಲಿಯ ಹೊರಗೆ
ಅಂಜದೆ ಅನುಮತಿಯೀಯಮ್ಮ	ಸಿಕ್ಕಿತು ನನಗೀ ಗರಿಯಣ್ಣಾ
(ಕುವೆಂಪು)	(ಚೆನ್ನವೀರ ಕಣವಿ)

ಈ ಲಯದಲ್ಲಿ ಅಸಂಖ್ಯಾತ ಮಕ್ಕಳ ಕವನಗಳು ರಚಿತವಾಗಿರುವುದನ್ನು ನಾವು ನೋಡಬಹುದು. "ಬೆಕ್ಕೇ ಬೆಕ್ಕೇ ಮುದ್ದಿನ ಸೊಕ್ಕೆ ಎಲ್ಲಿಗೆ ಹೋಗಿದ್ದೆ?" ಮುಂತಾದ ಕವನ ಇದರಂತಿವೆ. ಇದೇ ಲಯವನ್ನೇ ಮುಂದುವರಿಸಿಕೊಂಡು ಹೋಗಿ ಅಲ್ಲಲ್ಲಿ ಐದು ಮಾತ್ರಾ ಗಣವನ್ನು ತಂದು ಗತಿಯಲ್ಲಿ ಒಂದು ಸ್ವಾರಸ್ಯವನ್ನುಂಟು ಮಾಡಿದ ಒಂದು ಉತ್ತಮವಾದ ಬಂಧ ಕುವೆಂಪು ಅವರ "ಬೊಮ್ಮನಹಳ್ಳಿಯ ಕಿಂದರ ಜೋಗಿ"ಯ ಖಂಡ ಕಾವ್ಯದಲ್ಲಿರುವುದನ್ನು ನೋಡಬಹುದು.

"ತುಂಗಾ ತೀರದ ಬಲಗಡೆಯಲ್ಲಿ
ಹಿಂದಲ್ಲಿದ್ದುದು ಬೊಮ್ಮನಹಳ್ಳಿ
ಅಲ್ಲೇನಿಲಿಗಳ ಕಾಟವೆ ಕಾಟ

ಅಲ್ಲಿಯ ಜನಗಳಿಗತಿ ಗೋಳಾಟ;
ಇಲಿಗಳು ಬಡಿದವು ನಾಯಿಗಳ
ಇಲಿಗಳು ಕಡಿದವು ಬೆಕ್ಕುಗಳ"

ಎಂದು ಓಡುವ ಕಥೆಯು ಥಕ ಥಕ ಕುಣಿಸಿದಂತೆ ಮಾಡುತ್ತದೆ. ಕೊನೆಯ ಸಾಲುಗಳಲ್ಲಿಯ ಐದು ಮಾತ್ರಾಗಣಗಳು ಇಲ್ಲಿ ಹೊಸ ಲಯವನ್ನು ತಂದುಕೊಟ್ಟು ಚೈತನ್ಯವನ್ನುಂಟು ಮಾಡುವವು.

ಕುಸುಮ ಷಟ್ಪದಿ

ಈ ಷಟ್ಪದಿಯಲ್ಲಿ ೧-೨ ಮತ್ತು ೪-೫ನೆಯ ಚರಣಗಳಲ್ಲಿ ೫ ಮಾತ್ರೆಯ ಎರಡು ಗಣಗಳು (೧೦ ಮಾತ್ರೆಗಳು) ಹಾಗೂ ೩-೬ನೇ ಚರಣಗಳಲ್ಲಿ ೫ ಮಾತ್ರೆಯ ಮೂರು ಗಣಗಳೂ+೧ ಗುರುವೂ (೧೭ ಮಾತ್ರೆಗಳು) ಇದ್ದು, ಇದರ ನಡಿಗೆಯು ಶಾಂತ ಹಾಗೂ ಗಂಭೀರವಾಗಿರುವುದು. ಮೇಲೆ ಹೇಳಿದಂತೆ ಈ ಷಟ್ಪದಿಯ ಆರು ಚರಣಗಳನ್ನು ಮುರಿದು ನಾಲ್ಕುನಾಲ್ಕು ಚರಣಗಳಲ್ಲಿ ಅಳವಡಿಸಿ ಚೌಪದಿಯನ್ನಾಗಿ ರಚಿಸಿ ಕವನವನ್ನು ರೂಪಿಸಿ ರುವುದನ್ನು ನೋಡಬಹುದು.

"ರಾಲೆಯಂಗಳವೆನಗೆ! ತೂಗು ತೊಟ್ಟಿಲವಾಗಿ
ಆಡಿ ನಲಿದಾಡಿರುವೆ ಸತ್ಯವಾಗಿ
ನನ್ನ ಶಾಲೆಯ ನನಗೆ ದೇವ ಮಂದಿರವಾಗಿ
ಕಲಿವ ಸಾಧನೆಗೈವ ಭಕ್ತನಾಗಿ....."

(ಮಕ್ಕಳ ಲೋಕ)

ಐದು ಮಾತ್ರಾ ಲಯವನ್ನೇ ಷಟ್ಪದಿಯ ಬಂಧದಿಂದ ಬೇರೆಯಾಗಿಸಿಕೊಂಡು ಇದರಲ್ಲಿಯ ಹಲವಾರು ಮಟ್ಟುಗಳಲ್ಲಿ ಕವನಗಳನ್ನು ರಚಿಸುವುದನ್ನು ನಾವು ನೋಡ ಬಹುದು.

"ತಿಂಡಿಯನು ಕೊಡುತಾಯೆ ಹೇಳಿದುದ ಮಾಡುವೆನು
ಬೇಕಾದುದೆಲ್ಲವನು ನೀಡುವೆನು ನಿನಗೆ
ಮೂಡಿತಿಹ ಚಂದಿರನ ಸೆರೆಹಿಡಿದು ತಂದು
ಕೊಡುವೆನು ನಿನ್ನ ಮಾಂಗಲ್ಯದಲಿ ಇಂದು...."

ಕುವೆಂಪು

ಈ ಪದ್ಯದ ಕೆಲ ಚರಣಗಳ ಕೊನೆಗೆ ಬರುವ ಮೂರು ಮಾತ್ರಾ ಗಣಗಳು ಈ ಪರಿಸರ ದಲ್ಲಿ ಐದು ಮಾತ್ರೆಗಳ ಪರಿಮಿತಿಯನ್ನೇ ಒದಗಿಸುವುದನ್ನು ನಾವು ಗಮನಿಸಬಹುದು.

ಭೋಗ ಷಟ್‌ಪದಿ

ಇದರ ೧, ೨, ೩ ಹಾಗೂ ೫ನೇ ಚರಣಗಳಲ್ಲಿ ಮೂರು ಮಾತ್ರೆಗಳ ನಾಲ್ಕು ಗಣಗಳು. (೧೨ ಮಾತ್ರೆಗಳು) ಮೂರು ಹಾಗೂ ಆರನೆಯ ಚರಣಗಳಲ್ಲಿ ಇದೇ ಲಯದ ಆರು ಗಣಗಳೂ (೧೮ ಮಾತ್ರೆಗಳು) ಮೇಲೊಂದು ಗುರು ಇರುವುದನ್ನು ನೋಡಬಹುದು.

"ದಟ್ಟವಾದ ಕಾಡೊಳೊಂದು	ಕಾಗೆಯೊಂದು ಹಾರಿಬಂದು
ಮರದ ಕೆಳಗೆ ಕುಳಿತುಕೊಂಡು	ಮರದ ಮೇಲೆ ಕುಳಿತುಕೊಂಡು
ಕಣ್ಣುಮುಚ್ಚಿ ಋಷಿಯು ಧ್ಯಾನ	ಬಾಯೊಳಿದ್ದ ಮಾಂಸವನ್ನು
ಮಾಡುತ್ತಿದ್ದನು	ತಿನ್ನತೊಡಗಿತು"
ಪುಟ್ಟದೊಂದು ಇಲಿಯು ತಾನು	ಠಕ್ಕನರಿಯು ಇದನು ಕಂಡು
ಬಿಲದಲಿಂದ ಓಡಿಬಂದು	ಮಾಂಸವನ್ನು ತಿನ್ನ ಲೆಂದು
ಋಷಿಯ ಮುಂದೆ ಅಡ್ಡ ಬಿದ್ದು	ಮರದ ಕೆಳಗೆ ಓಡಿ ಬಂದು
ಬೇಡಿಕೊಂಡಿತು	ತಿನ್ನತೊಡಗಿತು
(ಶಂ.ಗು. ಬಿರಾದಾರ)	(ಸಿ.ಫ. ಕಟ್ಟೀಮನಿ)

ಮೇಲಿನ ಷಟ್‌ಪದಿಯನ್ನು ಚೌಪದಿಯನ್ನಾಗಿ ಮಾಡಿಕೊಳ್ಳಬಹುದು.

ಮೂರು ಮಾತ್ರೆಗಳ ಈ ನಡಿಗೆಯು ಶಿಸ್ತಿನ ಸಿಪಾಯಿಯಂತೆ ಟಪ್‌ಟಪ್ ಎಂದು ಓಡುತ್ತದೆ. ಷಟ್‌ಪದಿಯ ಛಂದದಿಂದ ಹೊರತಂದು ಇದರಲ್ಲಿಯೇ ಹಲವಾರು ಮಟ್ಟು ಗಳಲ್ಲಿ ಇರುವ ಕವನಗಳನ್ನು ಬೇಕಾದಷ್ಟು ನೋಡಬಹುದು.

"ಕೋಟುಗೀಟು ಹಾಕಿಕೊಂಡು
    ಹೇಟು ಬೂಟು ತೊಟ್ಟುಕೊಂಡು
ಬೂಟಿನಿಂದ ಹೋದ ತಿಮ್ಮ
    ಡಬ್ ಡಬ್ ಡಬ್........."   - ಕೆಮ್ತೂರು ದೊಡ್ಡಣ್ಣಶೆಟ್ಟಿ

ಬಣ್ಣವ್ಯಾಕೆ ಹಸಿರು ಅಯ್ತೊ
    ಹೇಳೊ ನಮ್ಮ ಕಂದಗೆ
ಹಾವು ಚೇಳು ಕಚ್ಚಿತೇನು
    ಪ್ರಿಯ ಬಾಲಕೃಷ್ಣಗೆ....."   (ಎಡತಾಕಪಟ್ಟಿ)

ಈ ಲಯವನ್ನು ಅಣಕ, ಹಾಸ್ಯ ಇತ್ಯಾದಿಗಳನ್ನು ಸಹ ಅಭಿವ್ಯಕ್ತಗೊಳಿಸಲು ಬಳಸಿಕೊಳ್ಳ ಬಹುದು.

ಭಾಮಿನಿ ಷಟ್‌ಪದಿ

ಇದು ಅತ್ಯಂತ ಜನಪ್ರಿಯವಾದ ಲಯವಾಗಿರುವುದು. ಇದರ ೧, ೨, ೪, ಹಾಗೂ ೫ನೆಯ ಚರಣಗಳಲ್ಲಿ ೩ ಮತ್ತು ೪ ಮಾತ್ರೆಗಳ ಎರಡು ಗಣಗಳ ಜೋಡಿಯು ಎರಡು

ಸಲ ಬರುವದು (೧೪ ಮಾತ್ರೆಗಳು), (೩x೪x೩x೪ ಈ ರೀತಿ) ಅದರಂತೆ ೩ ಹಾಗೂ ೬ನೆಯ ಚರಣಗಳಲ್ಲಿ ೩x೪x೩x೪x೩x೪+೧ (೨೨ ಮಾತ್ರೆಗಳು) ಈ ರೀತಿಯ ಗಣ ಸಂಯೋಜನೆಯು ಇರುವದು. ಇಲ್ಲಿ ತೋರಿಸಿದ ಅಂಕಿಗಳು ೩ ಅಂದರೆ ೩ ಮಾತ್ರೆಗಳ ಒಂದು ಗಣ, ೪ ಎಂದರೆ ೪ ಮಾತ್ರೆಗಳ ಒಂದು ಗಣ ಎಂದು ಪರಿಗಣಿಸಬಹುದು.

"ಒಂದು ಕಾಡಿನ ಮಧ್ಯದೊಳಗೆ
ಎರಡು ಮರಗಳ ನಡುವೆ ಮಲಗಿ
ಮೂರು ಕರಡಿಗಳಾಡುತ್ತಿದ್ದವು ನಾಲ್ಕು ಮರಿಗಳು ಸೇರಿಸಿ,
ಐದು ಜನರು ಬೇಟೆಗಾರರು
ಆರು ಬಲೆಗಳನೆಳೆದು ತಂದು
ಏಳು ಕರಡಿಗಳು ಹಿಡಿದು ನೋಡದೆ, ಎಂಟು ಹಿಡಿದೆವು"

ಎಂದರು. ಕಥನ ಕವನಗಳಿಗೆ ಹೇಳಿ ಮಾಡಿಸಿದ ಮಟ್ಟವು ಇದಾಗಿದೆ. "ಧರಣಿ ಮಂಡಲ ಮಧ್ಯದೊಳಗೆ..." ಎಂದು ಪ್ರಾರಂಭವಾಗುವ 'ಗೋವಿನ ಹಾಡು' ಎಂಬ ಕಾವ್ಯವು ಈ ಲಯದಲ್ಲಿರುವದನ್ನು ನೋಡಬಹುದು.

"ಅಮ್ಮಗಳಿರಾ ಅಕ್ಕಗಳಿರಾ
ನಮ್ಮ ತಾಯೊಡ ಹುಟ್ಟುಗಳಿರಾ
ನಿಮ್ಮ ಕಂದನೆಂದು ಕಾಣಿರಿ ತಬ್ಬಲಿಯ ನೀ ಕರುವನು......."

ಈ ಷಟ್‌ಪದಿಯ ಪೂರ್ವಾರ್ಧವನ್ನು ಚೌಪದಿಯಲ್ಲಿ ಹೀಗೆ ಬರೆಯಬಹುದು.

"ಅಮ್ಮಗಳಿರಾ ಅಕ್ಕಗಳಿರಾ
ನಮ್ಮ ತಾಯೊಡ ಹುಟ್ಟುಗಳಿರಾ
ನಿಮ್ಮ ಕಂದನೆಂದು ಕಾಣಿರಿ ತಬ್ಬಲಿಯ ನೀ ಕರುವನು......."

ಈ ಮಟ್ಟದಲ್ಲಿ ಒಂದರ ನಂತರ ಇನ್ನೊಂದರಂತೆ ಬರುವ ೩, ಮಾತ್ರೆಯ ೪, ಗಣ ಗಳು ಹಾಡುಗಬ್ಬಗಳಲ್ಲಿ ಒಂದು ರೀತಿಯ ಪುಟಿಕೆಯನ್ನು ಕೊಡುವದು.

ಮೇಲಿನ ನಾಲ್ಕು ಷಟ್‌ಪದಿಯ ಲಯಗಳನ್ನು ನೋಡಿದಾಗ ಷಟ್‌ಪದಿಯೇ ಭಾವಗೀತೆ ಗಳಿಗೆ ಚೌಕಟ್ಟನ್ನು ಒದಗಿಸಬಹುದಾದ, ಸಾಧನ ಸೌಕರ್ಯಗಳನ್ನು ನೀಡಬಹುದಾದ ಸಂಪನ್ ಮೂಲವಾಗಿದೆಯೆಂದು ಅನಿಸುವದು. ಆದರೆ ಭಾವಗೀತೆಯು ಈ ಕೆಲವೇ ಕೆಲವಾಹಿನಿಯಲ್ಲಿ ಹರಿದುಬರುವದಿಲ್ಲ. ಅದರ ಪ್ರವಾಹ ಇನ್ನೂ ವಿಶಾಲವಾಗಿದೆಯೆಂದು ಹೇಳಬಹುದು.

ಈಗ ಮಕ್ಕಳ ಕವನಗಳನ್ನು ಯಾವ ಯಾವ ಲಯಗಳಲ್ಲಿ ಹೊಂದಿಸಿಕೊಳ್ಳಬಹು ದೆಂಬುದನ್ನು ನೋಡಬಹುದು.

೧

ಗಿರಿಗಿರಿ ಗಿಂಡಿ	ಬಗಾಟ ಬಗರಿ
ಇಬತ್ತಿ ಉಂಡಿ	ತಿರುಗುವ ತಿಗರಿ

ಸಂಜೆಯ ಗಾಳಿ　　　　ಕಂಬಕಂಬಾಟ

ತಂಪೊಳು ತೇಲಿ　　　　ಲಿಂಬಿಯ ತೋಟಾ (ಚನ್ನವೀರ ಕಣವಿ)

೨, ೨, ೩, ಈ ಮಾತ್ರಾಗಣ ಸಂಯೋಜನೆಯಲ್ಲಿಯ ಈ ಲಯಕ್ಕೆ ಚರಣಗಳ ಇತಿಮಿತಿಯೇ ಇಲ್ಲದಂತೆ ಬೇಕಾದಷ್ಟು ದೂರ ದೂರವಾಗಿ ಈ ಗತಿಯಲ್ಲಿ ಕವನದ ಗಾಡಿಯನ್ನು ಓಡಿಸಿಕೊಂಡು ಹೋಗಬಹುದು. ಅದರಂತೆ ಕೆಳಗಿನ ಸಂಯೋಜನೆಯಲ್ಲಿ ಒಂದು ಕವನವನ್ನು ನೋಡಬಹುದು.

೨. ಗಣ ಸಂಯೋಜನೆ

೪. ೩.	"ಈಚೆಗೆ ಹಣಿಕಿ
೪. ೩.	ಆಚೆಗೆ ಇಣಿಕಿ
೪. ೪. ೪+೧	ಕುಣೆಯಲೆ ನಾಲ್ಕು ಕಡೆಯಲ್ಲಿ
೪. ೪. ೪+೧	ಕೆಳಗೂ ಮೇಲೂ ಬುಡದಲ್ಲಿ" (ದಿನಕರ ದೇಸಾಯಿ)

೩. ಗಣ ಸಂಯೋಜನೆ

೩. ೩. ೩. ೩.	"ಅವ್ವ ಹೆಚ್ಚೊ ಅಪ್ಪ ಹೆಚ್ಚೊ
೩. ೩. ೩+೧	ಎಂದು ಕೇಳುತಿರುವರು
೩. ೩. ೩. ೩.	ಎಂಥ ಹುಚ್ಚರಿವರು ಎಂದು
೩. ೩. ೩+೧	ನನಗೆ ನಗೆಯು ಬರುವದು" (ಮಕ್ಕಳ ಲೋಕ)

೪. ಗಣ ಸಂಯೋಜನೆ

೩. ೩. ೩. ೩.	"ಕೋಳಿ ಕೂಗಿತೇಳು ಕಂದ
೩. ೩. ೩. ೩.	ಪೂರ್ವದಿಂದ ಸೂರ್ಯಬಂದ
೩. ೩. ೩. ೩.	ಹೆಚ್ಚು ಮಲಗಲೇನು ಚಂದ
೩. ೩. ೩.	ಏಳು ಕಂದ ಏಳು...."

೫. ಗಣ ಸಂಯೋಜನೆ

೩. ೪. ೩.	"ಆಟ ಮುಗಿಯುವ ಮುನ್ನ
೩. ೪+೧	ಕರೆಯ ಬೇಡನ್ನ
೩. ೪. ೩.	ಆಟ ಮುಗಿಯಲು ನಾನೆ
೩. ೪. ೪.	ಬರುವೆನಮ್ಮ" (ಕುವೆಂಪು)

೬. ಗಣ ಸಂಯೋಜನೆ

೩. ೩. ೩. ೩.	"ನೋಡ ಬನ್ನಿ ನಮ್ಮ ಮನೆಗೆ
೩. ೩. ೪.	ನಮ್ಮ ತಮ್ಮನಿರುವನು

೩. ೩. ೩+೩	ತಾಯ ಬಗಲಿನಲ್ಲಿ ಕುಳಿತು
೩. ೩. ೪.	ನಮ್ಮನೆಲ್ಲ ಕರೆಯುವನು”

೭. ಗಣ ಸಂಯೋಜನೆ

೩. ೪. ೩. ೪.	“ಬಡವನೊಬ್ಬನು ಇರುತ ಸುಖದಲಿ
೩. ೪. ೩. ೪.	ಮಡದಿ ಮಕ್ಕಳ ಕೂಡೆ ನಡೆಯುತಲಿ
೩. ೪. ೩. ೪.	ನುಡಿದ ಭಾಷೆಗೆ ಎರಡು ಬಗೆಯದೆ
೩. ೪. ೪.	ಪಡೆದನುಚ್ಚುತ ಪದವಿಯ........” (ಕುವೆಂಪು)

೮. ಗಣ ಸಂಯೋಜನೆ

೩. ೪. ೩. ೪.	ಬಳ್ಳಿ ಹಂದರ ತುಂಬ ಅರಳಿವೆ
೩. ೪. ೪.	ನಮ್ಮ ತೋಟದ ಹೂಗಳು
೩. ೪. ೩. ೪.	ರೆಂಬೆ ರೆಂಬೆಗು ತೂಗುತಿರುವವು
೩. ೪. ೪.	ರಸವನೊಸರುವ ಕಾಯ್ಗಳು

೯. ಗಣ ಸಂಯೋಜನೆ

೩. ೩. ೩+೧	ಹಕ್ಕಿಯಾಗಿ ಹಾರುವಾ
೩. ೩. ೩+೧	ಹಾರಿ ಮೇಲೆ ಏರುವಾ
೩. ೩. ೪+೧	ಗಗನವನ್ನು ಸುತ್ತುವಾ
೩. ೩. ೪+೧	ಸುತ್ತಿ ನಲಿದು ಆಡುವಾ

೧೦. ಗಣ ಸಂಯೋಜನೆ

೪. ೩. ೪. ೩.	ಗೆಳೆಯರು ನಾವು ಇಂಜಿನ್ ಗಾಡಿ
೪. ೩. ೪. ೧.	ಆಟವನೀಗ ಆಡೋಣ
೪. ೩. ೪. ೩.	ಎಲ್ಲರು ಕೂಡಿ ಆಟವನಾಡಿ
೪. ೩. ೪+೧	ಮೋಜನು ಮಾಡಿ ಆಡೋಣ

೧೧. ಗಣ ಸಂಯೋಜನೆ

೪. ೪. ೪. ೪.	ಹಳದಿಯ ಹೆಡೆಯನು ಬಿಚ್ಚೋ ಬೇಗಾ
೪. ೪. ೪. ೪.	ಹೊಳಹಿನ ಹೊಂದಲೆ ತೂಗೋ ನಾಗಾ
೪. ೪. ೪. ೪.	ಕೊಳಲನನೂದುವೆ ಲಾಲಿಸು ರಾಗಾ
	ನೀ ನೀ ನೀ ನೀ ನೀ ನೀ ನೀ ನೀ

೧೨. ಗಣ ಸಂಯೋಜನೆ

೪. ೪. ೪. ೩.	ಸೀನಪ್ಪನು ಸೀನಿದನೆಂದರೆ
೪. ೪. ೫.	ಮನೆಯೇ ಗಡಗಡ ನಡುಗುವದು

೪. ೪. ೪. ೩. ಅಡಕಲು ಗಡಿಗೆಗಳೆಲ್ಲವು ಉರುಳಿ
೪. ೪. ೫. ಗಡಗಡ ಸದ್ದನು ಮಾಡುವವು (ಪರಶುರಾಮ ಚಿತ್ರಗಾರ)

೧೩ ಗಣ ಸಂಯೋಜನೆ

೪. ೪. ೪. ೩. ನಾಡಿನ ನರದಲಿ ನೆತ್ತರು ನಾವು
೪. ೫. ೪. ೩. ನಾಡಿನ ಬಳ್ಳಿಯಲಿ ನಾವೇ ಹೂವು
೪. ೪. ೪. ೩. ನಾಳೆನ ಕನಸಿನ ಅರ್ಥವು ನಾವು
೪. ೩. ನಾವು ಬಾಲಕರು (ಸಿದ್ಧಯ್ಯ ಪುರಾಣಿಕ)

೧೪. ಅ ಗಣ ಸಂಯೋಜನೆ

೪. ೩. ೪. ೩. ಕುಂಡಿsಯ ಮ್ಯಾಲ ಚಕಚಕನೆ ಹೊಡೆದು
೪. ೩. ೩. ಬಾಸುಂಡಿ ಎಬಿಸಲೇನ
೪. ೩. ೪. ೩. ತಿಳಿಗಲ್ಲ ಹರಿದು ಕಾಯ್‌ಪಲ್ಲೆ ಮಾಡಿ
೪. ೩. ೩. ತಿನಲೇನ ಹೇಳಣ್ಣವನ (ಎಡತಾಕ ಪಟ್ಟಿ)

೧೪. ಬ ಗಣ ಸಂಯೋಜನೆ

೫. ೩. ೫. ೩. ಕೊರಳಾಗ ಹಾವು ಭೋರ‍್ಯಾಡುತಿಹುದು
೫. ೩. ೩. ಭಯವಿಲ್ಲವೇನೋ ನಿನಗ
೫. ೩. ೫. ೩. ಏನಾರ ಆಗಿ ಕಚ್ಚಿದರೆ ಹೇಗೆ
೫. ೩. ೩. ಕಾಯುವರು ಯಾರು ನಮಗ (ಪರಮೇಶ್ವರನಿಗೆ
ಎಡತಾಕಪಟ್ಟಿ)

೧೫. ಗಣ ಸಂಯೋಜನೆ

೪. ೪. ೪. ೪. ಸುರಿಸಲು ಬೇಕಾಗಿರುವದು ಸ್ವಾಮಿ
೪. ೫. ಮೊಸಳೆಯ ಕಣ್ಣೀರು
೪. ೪. ೪. ೪. ನನಗೂ ಅತೆಯು ಅಂಕುರಿಸಿರುವದು
೪. ೫. ಕೊಡುವಿರಾ ಪಾವ್‌ಸೇರು (ಎಡತಾಕ ಪಟ್ಟಿ)

೧೬. ಗಣ ಸಂಯೋಜನೆ

೫. ೫. ೫. ೩. ಬಾನೊಳವೆ ಬಾನೊಳವೆ ಬಾ ನನ್ನ ಮನೆಗೆ
೫. ೫. ೫. ೩. ಬಾನೊಳಗೆ ಹಾರಿ ಬಲು ದಣಿವಾಯ್ತು ನಿನಗೆ
೫. ೫. ೫. ೩. ನೀನೊಮ್ಮೆ ಬಾ ನನ್ನ ಹೊಸ ಮನೆಯ ನೋಡು
೫. ೫. ೫. ೩. ಈ ನೂಲಿನ ಚಾಪೆಯಲಿ ಬಂದು ಕೂಡು

೧೭. ಗಣ ಸಂಯೋಜನೆ

೫. ೫. ೫. ೫.	ಹಾಯಹರಿಗೋಲಾದೆ ರಾಯ ಭೇರಿಗೆಯಾದೆ
೫. ೫. ೫+೧ ಗು	ರಾಯಾರಾ ಕಾಲಿಗೆ ಮುಳ್ಳುತ್ತುವಾದೆ
೫. ೫. ೫. ೫.	ಆಯವರಿತು ಹೊರೆಯೆ ಮಧುರಗಾನಕ್ಕಾದೆ
೫. ೫. ೫+೧ ಗು	ನೀನಾರಿಗಾದೆಯೊ ಎಲೆ ಮಾನವಾ

ಇದೊಂದು ಅತ್ಯಂತ ಜನಪ್ರಿಯ ಮಟ್ಟು. ಖಂಡ ಕಾವ್ಯಗಳಿಗೆ ಇದನ್ನು ಮಾಧ್ಯಮವನ್ನಾಗಿ ಮಾಡಿಕೊಳ್ಳಲಾಗುವದು. ದ.ರಾ. ಬೇಂದ್ರೆ, ಕುವೆಂಪು, ಡಿ.ಎಸ್. ಕರ್ಕಿ ಮುಂತಾದವರಿಗೆ ಇದು ಬಲು ಇಷ್ಟವಾದ ಲಯವು

"ತಿಳಿನೀಲದಲ್ಲಿ ತಾನೀಲವಾಗಿ ಅವಹೋದ ದೂರ ದೂರ" - ಕರ್ಕಿ

"ಕಾಶ್ಮೀರದಲ್ಲಿ ಕಾರ್ಗಾಲ ಬಂತು ಶ್ರೀಗಂಧ ಸ್ನಾನವಾಗಿ" - ಸಿದ್ದಯ್ಯ ಪುರಾಣಿಕ

೧೮. ಗಣ ಸಂಯೋಜನೆ

೫. ೫. ೫. ೩.	ಬಂದಾರ ಬಾಯಿಲ್ಲಿ ನೀ ನನ್ನ ಗುಬ್ಬಿ
೫. ೫. ೫. ೩.	ಕಿವಿಯಲ್ಲಿ ಹೇಳುವೆನು ನಿನಗೊಂದು ಸುದ್ದಿ...

(ಪೈಗಂಬರ ಸೂಕ್ತಿ)

೧೯. ಗಣ ಸಂಯೋಜನೆ

೬. ೬.	ಭಗವಂತನ ಸಿಂಹಾಸನ
೬. ೬.	ತಲದಲ್ಲಿದೆ ಮಹದೈಶ್ವರ್ಯ
೬. ೬.	ಚಿಪ್ಪೆಯ ನಿಕ್ಷೇಪಕೆ
೬. ೬.	ಬೀಗದ ಕೈ ಕಾಣಯ್ಯ (ಕುವೆಂಪು)

ಗಣ ಸಂಯೋಜನೆಯಲ್ಲಿ ೫ ಮಾತ್ರೆಗಳ ಬಗ್ಗೆ ೩ +೨ ಅಥವಾ ೨+೩, ಹೀಗೆ ಹೊಂದಾಣಿಕೆ ಮಾಡಿಕೊಳ್ಳಬಹುದಾಗಿದೆ. ೫ ಮಾತ್ರೆಯ ಎರಡು ಗಣಗಳು ಬಂದು ಚರಣಗಳ ಗಣ ಸಂಯೋಜನೆ ಇದ್ದರೆ ೫+೫ರ ಬದಲಾಗಿ ೩+೨, ೩+೨ ೩+೨ ೩+೨ ಈ ರೀತಿಯಾಗಿ ೨+೩. ೨+೩. ೨+೩. ೨+೩. ಹೀಗೆಯೂ ಮಾಡಿಕೊಳ್ಳಬಹುದು. ಒಟ್ಟಿನ ಮೇಲೆ ಒಂದು ಚರಣದಲ್ಲಿಯ ಒಟ್ಟು ಮಾತ್ರೆಗಳಿಗೆ ಹೊಂದಿಕೆಯಾಗುವಂತೆ ಹೊಂದಿಸಿಕೊಳ್ಳಬಹುದಾಗಿದೆ.

ಇಲ್ಲಿ ವಿವರಿಸಲಾದ ಮಾತ್ರಾಗಣದಲ್ಲಿಯ ಕೆಲವೊಂದು ಮಟ್ಟುಗಳನ್ನು ಮಾತ್ರ ವಿವೇಚಿಸಲಾಗಿದೆ. ಇಂತಹ ನೂರಾರು ಲಯಗಳನ್ನು ಕನ್ನಡ ಶಿಶುಪ್ರಾಸಗಳ ಬಂಧದಲ್ಲಿ ಗುರುತಿಸಬಹುದು. ಶಿಶುಪ್ರಾಸಗಳ ಲಯಗಳ ಬಗ್ಗೆ ಅಧ್ಯಯನ ಆಗಬೇಕಾಗಿದೆ.

ಅಡಿಟಿಪ್ಪಣಿಗಳು

೧. ಶ್ರೀಕಂಠ ಕೂಡಿಗೆ, ಜನಪದ ಶಿಶುಪ್ರಾಸಗಳು, ೧೯೮೧, ಪು. ೪-೫

೨. ಎಂ.ಎಂ. ಕಲಬುರ್ಗಿ, ಉತ್ತರ ಕರ್ನಾಟಕದ ಜನಪದ ಪದ್ಯ ಸಾಹಿತ್ಯ, ಪು. ೧೩
೩. ಶ್ರೀಕಂಠ ಕೂಡಿಗೆ, ಪೂರ್ವೋಕ್ತ, ಪು. ೬
೪. ವಿವರಣೆಗಾಗಿ ನೋಡಿ: ಈಶ್ವರ ಕಮ್ಮಾರ ಮಕ್ಕಳ ಕವನ ಸಾಹಿತ್ಯ, ಧಾರವಾಡ

ಆಕರ ಗ್ರಂಥಗಳು

೧. ಅಂಗಡಿ ಎಸ್.ಎಸ್., ೨೦೧೭, ಕನ್ನಡ ಜನಪದ ಸಾಹಿತ್ಯ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
೨. ಕರ್ಕಿ ಡಿ.ಎಸ್., ೧೯೯೨, ಕನ್ನಡ ಛಂದೋವಿಕಾಸ, ಭಾರತ ಬುಕ್ ಡಿಪೋ, ಧಾರವಾಡ.
೩. ಈಶ್ವರ ಕಮ್ಮಾರ, ೧೯೯೦, ಮಕ್ಕಳ ಕವನ ಸಾಹಿತ್ಯ, ಮಕ್ಕಳ ಮನೆ, ಧಾರವಾಡ
೪. ನಾರಾಯಣ ಪ್ರಸಾದ್ ಕೆ.ಜಿ., ೧೯೯೩, ಹೊಸಗನ್ನಡ ಕವಿತೆಯ ಛಂದಸ್ಸು, ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು.

೬೩

ಎಂ. ಚಿದಾನಂದಮೂರ್ತಿ : ಛಂದೋಶೋಧಗಳು

ಕನ್ನಡ ವಿದ್ವತ್ ಕ್ಷೇತ್ರದಲ್ಲಿ ಭಾಷೆ, ಕಾವ್ಯವಿಮರ್ಶೆ, ಶೈಲಿಶಾಸ್ತ್ರ, ನಾಮಶಾಸ್ತ್ರ ಇವುಗಳ ವಿವೇಚನೆ ಶಾಸ್ತ್ರೀಯವಾಗಿ ನಡೆಯುತ್ತಿರುವಂತೆ ಛಂದಸ್ಸಿನ ಅಧ್ಯಯನ ನಡೆದಿಲ್ಲ, ನಡೆಯುತ್ತಿಲ್ಲ. ಇದಕ್ಕೆ ಕಾರಣ ಛಂದಸ್ಸನ್ನು ಮಾತ್ರೆ, ಗಣ, ಚರಣ ಇವುಗಳ ಲೆಕ್ಕಾಚಾರದ ವಿಷಯ ಎಂದು ತಿಳಿದಿರುವುದು ಮತ್ತು ಕಾವ್ಯದ ಭಾಷೆ, ಶೈಲಿ, ಅರ್ಥಗಳೊಂದಿಗೆ ಛಂದಸ್ಸಿನ ಸಾವಯವ ಸಂಬಂಧದ ಬಗ್ಗೆ ಸ್ಪಷ್ಟತೆ ಇಲ್ಲದಿರುವುದು. ಇವುಗಳಿಂದ ಮುಕ್ತರಾದವರು ಮಾತ್ರ ಕಾವ್ಯಾಧ್ಯಯನಕ್ಕೆ ಛಂದಸ್ಸಿನ ಅಗತ್ಯತೆ ಹಾಗೂ ಆ ಕ್ಷೇತ್ರದ ಬೆಳವಣಿಗೆಗೆ ನ್ಯಾಯ ಒದಗಿಸಬಲ್ಲರು.

ಕನ್ನಡ ಛಂದಶಾಸ್ತ್ರದ ಶೋಧನೆ ಮತ್ತು ಬೆಳವಣಿಗೆಯಲ್ಲಿ ಬಹುವಾಗಿ ಆಸಕ್ತಿವಹಿಸಿ ಪರಿಶ್ರಮ ಪಡುತ್ತಿರುವವರಲ್ಲಿ ಎಂ. ಚಿದಾನಂದಮೂರ್ತಿ ಅವರು ಅಗ್ರಪಂಕ್ತಿಯಲ್ಲಿದ್ದಾರೆ. ಕಾವ್ಯದ ಅರ್ಥದ ಅಭಿವ್ಯಕ್ತಿಗೆ ಛಂದೋಲಯ ಹೇಗೆ ನೆರವಾಗುತ್ತದೆ ಎಂಬುದರ ಬಗ್ಗೆ ಅವರು ಒತ್ತುಕೊಟ್ಟರು. ಇದರಿಂದ ಕಾವ್ಯ ಮತ್ತು ಛಂದಸ್ಸುಗಳ ಸಂಬಂಧ ಹೆಚ್ಚು ನಿಕಟವಾದುದು ಎಂಬುದು ಸ್ಪಷ್ಟವಾಗುತ್ತದೆ. ಚಿದಾನಂದಮೂರ್ತಿ ಅವರು ಈ ದಿಕ್ಕಿನಲ್ಲಿ ಕೆಲಸ ಮಾಡಿ ಅವರು ಬರೆದಿರುವ ಸಂಪ್ರಬಂಧಗಳು ವಿದ್ವಾಂಸರ ಗಮನವನ್ನು ಸೆಳೆದಿವೆ. ಅವರ ಛಂದಸ್ಸಿನ ಲೇಖನಗಳು 'ಛಂದೋತರಂಗ'(೧೯೯೩)ದಲ್ಲಿ ಸಂಕಲಿತವಾಗಿವೆ. ಛಂದಸ್ಸಿನ ಕ್ಷೇತ್ರದಲ್ಲಿ ಅವರ ಸಾಧನೆಗಳನ್ನು ಗುರುತಿಸುವುದು ಈ ಅಧ್ಯಯನದ ಉದ್ದೇಶವಾಗಿದೆ. ಈ ಕ್ಷೇತ್ರದಲ್ಲಿ ಚಿದಾನಂದಮೂರ್ತಿ ಅವರ ಸಂಶೋಧನೆಯ ಕಾರ್ಯಗಳನ್ನು ಮೂರು ರೀತಿಯಾಗಿ ವರ್ಗೀಕರಿಸಲಾಗುವುದು.

೧. ಅಧ್ಯಯನಕ್ಕೆ ಅಗತ್ಯವಾದ ಮೂಲತತ್ವಗಳನ್ನು ವಿವರಿಸುವುದು ಮತ್ತು ಪರಿಭಾಷೆಗಳನ್ನು ರೂಪಿಸುವುದು ೨. ಛಂದೋಬಂಧಗಳ ಉಗಮ, ವಿಕಾಸ, ಲಕ್ಷಣಗಳನ್ನು ಗುರುತಿಸಿ ಅವುಗಳ ಚರಿತ್ರೆ ನಿರುಪಿಸುವುದು ೩. ಕವಿ ಕೃತಿಗಳ ಛಂದಃಪ್ರಯೋಗಗಳ

ವೈಚಿತ್ರ್ಯವನ್ನು ಗುರುತಿಸುವುದು. ಈ ಹಿನ್ನೆಲೆಯಲ್ಲಿ ಅವರ ಸಂಪ್ರಬಂಧಗಳ ಸ್ವರೂಪವನ್ನು ಪರಿಶೀಲಿಸಬಹುದು.

'ಕರ್ಣಾಟಕ ವಿಷಯ ಜಾತಿಗಳು : ಉಗಮ, ಸ್ವರೂಪ ಮತ್ತು ವೈಶಿಷ್ಟ್ಯ' ಎಂಬುದು ಮೊದಲ ಲೇಖನ. ಇದರಲ್ಲಿ ದೇಶ್ಯಮಟ್ಟುಗಳಾದ ಮದನವತಿ, ಅಕ್ಕರ, ತ್ರಿಪದಿ, ಚೌಪದಿ, ಗೀತಿಕೆ, ಉತ್ಸಾಹ, ಷಟ್ಪದಿ, ಅಕ್ಕರಿಕೆ ಮತ್ತು ಚಂದೋವಸಂತ ಇವುಗಳ ಉಗಮ, ಸ್ವರೂಪ ಮತ್ತು ಲಕ್ಷಣಾದಿಗಳ ವಿಚಾರಗಳು ಉಕ್ತವಾಗಿವೆ. ಅಲ್ಲದೆ ದೇಶ್ಯ ಮಟ್ಟುಗಳ ಬೆಳವಣಿಗೆಯಲ್ಲಿ ಕಾಲಕಾಲಕ್ಕೆ ಕಂಡುಬರುವ ಮಾರ್ಪಾಟು ಗಳು, ಕನ್ನಡ ಛಂದಸ್ಸಿಗೆ ಅವುಗಳ ಕೊಡುಗೆಯನ್ನು ಕುರಿತು ದೀರ್ಘವಾದ ವಿವೇಚನೆ ಇಲ್ಲಿದೆ. ಇದೊಂದು ವಿಚಾರ ಪ್ರಚೋದಕವಾದ ಲೇಖನವಾಗಿದೆ.

ದೇಶ್ಯ ಮಟ್ಟುಗಳಲ್ಲಿಯ ಅಕ್ಷರಗಳ ಲಯವನ್ನು ಹಿಗ್ಗಿಸಿಯೋ ತೇಲಿಸಿಯೋ ಹೇಳುವ ಕ್ರಮವಿರುವುದರಿಂದ ನಾಗವರ್ಮಾದಿಗಳು ಅವುಗಳನ್ನು ಅಂಶಗಣಾನ್ವಯವಾಗಿ ಹೇಳಿದ್ದಾರೆ. ತ್ರಿಪದಿ, ಪಿರಿಯಕ್ಕರ ಮತ್ತು ಷಟ್ಪದಿ ಈ ಮೂರು ಮಟ್ಟುಗಳು ಚಂಪೂ ಕಾವ್ಯಗಳಲ್ಲಿ ಪ್ರಯೋಗವಾಗಿವೆ. ಮಿಕ್ಕವುಗಳ ಬಳಕೆ ತುಂಬ ಕಡಮೆ, ಉತ್ಸಾಹವೊಂದನ್ನು ಹೊರತುಪಡಿಸಿ ಉಳಿದ ಮಟ್ಟುಗಳಲ್ಲಿ ವಿಷ್ಣುಗಣವೇ ಪ್ರಧಾನ. ಉತ್ಸಾಹದಲ್ಲಿ ಬ್ರಹ್ಮಗಣ ಪ್ರಧಾನ. ರುದ್ರಗಣ, ಪ್ರಧಾನವಾದ ಮಟ್ಟುಗಳಲ್ಲಿ ವಿಷ್ಣುಗಣವೇ ಪ್ರಧಾನ. ಉತ್ಸಾಹದಲ್ಲಿ ಬ್ರಹ್ಮಗಣ ಪ್ರಧಾನ. ರುದ್ರಗಣ, ಪ್ರಧಾನವಾದ ಮಟ್ಟುಗಳಿಲ್ಲ. ರುದ್ರಗಣವು, ಹೆಚ್ಚಾಗಿ ಚರಣದ ಕೊನೆಯ ಗಣವಾಗಿರುವುದೇ ಹೆಚ್ಚು. ಗಮನಿಸಬೇಕಾದ ಸಂಗತಿಯೆಂದರೆ ರುದ್ರಗಣಕ್ಕೆ ಹೊಂದಿಕೊಳ್ಳುವ ಶಬ್ದಗಳು (ಪದರಚನೆಗಳು) ಕನ್ನಡದಲ್ಲಿ ಕಡಿಮೆಯಾಗಿ ರುವುದೇ ಇದಕ್ಕೆ ಕಾರಣವಾಗಿದೆ.

ಚಿದಾನಂದಮೂರ್ತಿ ಅವರು ತಮಿಳ್, ತೆಲುಗು ಭಾಷೆಗಳ ಗಣರಚನೆಯ ಹಿನ್ನೆಲೆಯಲ್ಲಿ ಕರ್ಣಾಟಕ ವಿಷಯ ಜಾತಿಗಳ ಸ್ವರೂಪವನ್ನು ಚರ್ಚಿಸಿದ್ದಾರೆ. ದ್ರಾವಿಡ ಛಂದಸ್ಸಿನ ಸ್ವರೂಪವನ್ನು ಗುರುತಿಸುವಾಗ ಕೊನೆಯ ಪಕ್ಷ ಶಿಷ್ಟ ದ್ರಾವಿಡ ಭಾಷೆಗಳ ಮಟ್ಟುಗಳ ತೌಲನಿಕ ವಿವೇಚನೆ ಅಗತ್ಯವೆಂದು ಸಲಹೆ ಮಾಡಿದ್ದಾರೆ. ಕನ್ನಡದ ಒಂದೊಂದೇ ವೃತ್ತವನ್ನು ತೆಗೆದುಕೊಂಡು ತೌಲನಿಕವಾಗಿ ವಿವೇಚಿಸಿದ್ದಾರೆ. ಕನ್ನಡದ 'ಏಳೆ' ತೆಲುಗಿನ 'ಏಲಾ' (ಯಾಲ) ತಮಿಳಿನ 'ಕುಱುಳ್‌ವೆಣ್ಬಾ'ಳಿಗೂ ಇರುವ ಸಂಬಂಧ, ಏಳೆಯೆ ರೂಪಾಂತರಗೊಂಡು ತ್ರಿಪದಿಯಾಯಿತೆಂದು, ತ್ರಿಪದಿಯನ್ನು ಕಥನಶೈಲಿಗೆ ಹೊಂದಿಕೊಳ್ಳುವಂತೆ ಮಾರ್ಪಡಿಸಿದ ಫಲವೇ ಸಾಂಗತ್ಯವೆಂದು ಸಾಧಾರಣವಾಗಿ ಹೇಳಿದ್ದಾರೆ. ಇದರಂತೆ ಕನ್ನಡದ ಒಂದೊಂದು ವೃತ್ತವನ್ನು ತೆಗೆದು ಕೊಂಡು ತೌಲನಿಕವಾಗಿ ವಿವೇಚಿಸಿದ್ದಾರೆ. ಅಂಶಲಯವೇ ದ್ರಾವಿಡ ಛಂದಸ್ಸಿಗೆ ನಿರ್ಧಾರಕ ಸೂತ್ರವಾಗಿದೆ ಎಂಬುದು ಚಿದಾನಂದಮೂರ್ತಿಯವರ ಶ್ಲಾಘ್ಯವಾದ

ಸೂಚನೆಯಾಗಿದೆ. ಈ ಸೂಚನೆಯನ್ನೇ ಎತ್ತಿಕೊಂಡು ಕನ್ನಡ ಮತ್ತು ಇತರ ದ್ರಾವಿಡ ವಿದ್ವಾಂಸರು ವಿಚಾರ ವಿಮರ್ಶೆ ನಡೆಸುವುದರಿಂದ ದ್ರಾವಿಡ ಛಂದಸ್ಸಿನ ಅಧ್ಯಯನಕ್ಕೆ ತುಂಬ ಪ್ರಯೋಜನವಾಗುತ್ತದೆ.

ದೇಶ್ಯ ಮಟ್ಟುಗಳಲ್ಲಿ ಯಾವವೂ ಹನ್ನೆರಡನೆಯ ಶತಮಾನಕ್ಕೆ ಮುನ್ನ ಇಡೀ ಕಾವ್ಯಕ್ಕೆ ಬಳಕೆಯಾಗಲಿಲ್ಲ. ತ್ರಿಪದಿ, ಷಟ್ಪದಿಗಳನ್ನು ಬಿಟ್ಟರೆ ಉಳಿದೆಲ್ಲವು ಬಹುತೇಕ ಮರೆಯಾದವು. ಅಂಶಲಯವು ಮಾತ್ರಾಲಯವಾದುದರಲ್ಲಿ ಮೂರು ಬಗೆಗಳನ್ನು ಚಿದಾನಂದಮೂರ್ತಿ ಅವರು ಗುರುತಿಸಿದ್ದಾರೆ. ಅವುಗಳೆಂದರೆ ೧. ಎಲ್ಲ ಮಾತ್ರಾ ಷಟ್ಪದಿಗಳು ಅಂಶಗಣ ಘಟಿತವಾದ ಷಟ್ಪದಿ(ಷಟ್ಪದ)ಯಿಂದ ಬಂದವು (ಪೂರ್ಣ ಪರಿವರ್ತನೆ) ೨. ಅಂಶಲಯವಾದ ತ್ರಿಪದಿ ಸು. ೧೩-೧೪ನೆಯ ಶತಮಾನದಲ್ಲಿ ಮಾತ್ರಾಲಯದಿಂದ ಕೂಡಿದುದು ೬-೧೦ನೆಯ ಭಾಗದಲ್ಲಿ ಬ್ರಹ್ಮವು ಕೊನೆಯವರೆಗೂ ಉಳಿಯಿತು (ಭಾಗಶಃ ಪರಿವರ್ತನೆ) (ಬಹುಶಃ) ೩. ತ್ರಿಪದಿಯಿಂದ ರೂಪಗೊಂಡ ಸಾಂಗತ್ಯವು ಕೊನೆಯವರೆಗೂ ತನ್ನ ಅಂಶಲಯವನ್ನು ಉಳಿಸಿಕೊಂಡು ಬಂದಿತು. ಮಾತ್ರಾಲಯ, ಅಂಶಲಯಗಳೆರಡು ತಾಳಪ್ರಧಾನವಾದುದು ಆ ಕಾರಣದಿಂದ ಅಂಶಗಣ ಜಾಗದಲ್ಲಿ ಮಾತ್ರಾಗಣಗಳನ್ನು ತರುವುದು ಕವಿಗಳಿಗೆ ಸುಲಭವಾಗಿ ಹೊಳೆಯಿತು.[೧] ಈ ಪ್ರವೃತ್ತಿ ಒಂದು ನಿರ್ಣಾಯಕ ಘಟ್ಟಕ್ಕೆ ಬಂದುದು ಹನ್ನೆರಡನೆಯ ಶತಮಾನದಲ್ಲಿ. ಕನ್ನಡ ಮಟ್ಟುಗಳ ಸ್ವರೂಪವನ್ನು ಹಾಗೂ ಅಂಶ ಛಂದಸ್ಸಿನ ಬೆಳವಣಿಗೆಯನ್ನು ಕುರಿತು ಅಧ್ಯಯನ ಮಾಡುವವರಿಗೆಲ್ಲಾ ಈ ಲೇಖನ ಆಧಾರ ಭೂತವಾಗಿ ಪರಿಣಮಿಸಿದೆ.

'ಚಂದ್ರರಾಜನ ಮದನತಿಲಕದಲ್ಲಿ ಕೆಲವು ಕನ್ನಡ ವೃತ್ತಗಳು' ಎಂಬುದು ಎರಡನೆಯ ಲೇಖನ. ಮದನತಿಲಕ ಕಾಮಶಾಸ್ತ್ರ ಕೃತಿ. ಕನ್ನಡ ಛಂದಸ್ಸಿನ ಇತಿಹಾಸದಲ್ಲಿ ಈ ಕೃತಿಗೆ ಒಂದು ಪ್ರಮುಖ ಸ್ಥಾನವಿದೆ. ಚಿದಾನಂದಮೂರ್ತಿ ಅವರು ಈ ಕೃತಿಯಲ್ಲಿಯ ಕನ್ನಡ ವೃತ್ತಗಳ ಸ್ವರೂಪವನ್ನು ಈ ಲೇಖನದಲ್ಲಿ ವಿವೇಚಿಸಿದ್ದಾರೆ. ಕನ್ನಡ ಕಾವ್ಯ, ಶಾಸನಗಳಲ್ಲಿ ಪಿರಿಯಕ್ಕರಗಳು ದೊರೆಯುತ್ತವೆ. ಉಳಿದ ದೊರೆಯಕ್ಕರ, ನಡುವಕ್ಕರ, ಕಿರಿಯಕ್ಕರ, ಎಡೆಯಕ್ಕರಗಳು ಮದನತಿಲಕವನ್ನು ಬಿಟ್ಟರೆ ಬೇರೆಡೆಗೆ ಅಷ್ಟಾಗಿ ದೊರೆಯುವುದಿಲ್ಲ. ಷಟ್ಪದಿ ಮತ್ತು ತ್ರಿಪದಿಗಳು ಮದನತಿಲಕದಲ್ಲಿ ಕಂಡುಬಂದಿವೆ. ಈ ಎಲ್ಲ ವೃತ್ತಗಳು ನಾಗವರ್ಮನ ಲಕ್ಷಣಕ್ಕೆ ಅನುಗುಣವಾಗವೆ. ಕೆಲವು ಅದಕ್ಕಿಂತ ಭಿನ್ನವಾಗಿವೆ. ಅಲ್ಲಿ ಉಕ್ತವಾದ ತ್ರಿಪದಿಯಲ್ಲಿ 'ಜರಿಚುವರು' ಎಂಬ ಗಣ ಬಂದಿದ್ದು ಅದನ್ನು ರುದ್ರಗಣವೆಂದು ಕರೆಯಬೇಕೋ ಅಥವಾ ಐದು ಮಾತ್ರೆಯ ಗಣವೆಂದು ಕರೆಯಬೇಕೋ ಎಂಬುದರ ಬಗ್ಗೆ ಸಂದಿಗ್ಧತೆಯಿದೆ. "ಅಂಶಗಣಗಳು ಮಾತ್ರಾಗಣಗಳಾಗಿ ಪರಿವರ್ತನೆ ಹೊಂದಲು ಆರಂಭವಾದುದು ಬಹುಶಃ ತ್ರಿಪದಿಯಲ್ಲಿಯೇ ಎಂದು ಕಾಣುತ್ತದೆ. ಇದು ನಿಜವಾದರೆ ಹೆಚ್ಚು ಕಡಿಮೆ ಈ ಸಂಕ್ರಮಣ ಕಾಲದಲ್ಲಿದ್ದ ಚಂದ್ರರಾಜನ

ತ್ರಿಪದಿಯಲ್ಲಿ ಅಂಶಗಣ ಮಾತ್ರಾಗಣಗಳ ಮಿಶ್ರಣವನ್ನು ಕಾಣಬಹುದೆಂದು ತೋರುತ್ತದೆ."[೨]

'ಬೆದಂಡೆ'ಯ ಬಗ್ಗೆ ಈ ಹಿಂದೆ ವಿಚಾರ ಮಾಡಿದ್ದ ತೀ.ನಂ.ಶ್ರೀ. ಅವರ ಅಭಿಪ್ರಾಯಗಳನ್ನು ಸಕಾರವಾಗಿ ಒಪ್ಪಿ ಅವುಗಳಿಗೆ ಒಂದೆರಡು ಅಂಶಗಳನ್ನು ಸೇರಿಸುವ ಯತ್ನವನ್ನು "ಬೆದಂಡೆ" ಎಂಬ ಲೇಖನದಲ್ಲಿ ಮಾಡಿದ್ದಾರೆ. ಬೆದಂಡೆಯು ಹಾಡುಗಬ್ಬ. ಅದು ಅತಿದೀರ್ಘವೂ ಹ್ರಸ್ವವೂ ಅಲ್ಲದ ಅಡಕವಾದ ಕಾವ್ಯ ಎಂಬುದು ತೀ.ನಂ.ಶ್ರೀ ಅವರ ನಿಲುವು. ಅದಕ್ಕೆ ಪೂರಕವಾಗಿ ಚಿದಾನಂದಮೂರ್ತಿ ಅವರು ಅದು ಚಂಚಲ ಸ್ವಭಾವದ ಅಥವಾ ಲಘು ಸ್ವಭಾವದ ಜನರಿಗೆ ಪ್ರಿಯವಾಗಿದ್ದಿತು(ಅಶ್ಲೀಲ ಸಾಹಿತ್ಯ). ಇದನ್ನು ಹಾಡುವವರು ಕೇಳುವವರು ಗೌರವಸ್ಥರಲ್ಲವೆಂಬುದು ಚಿದಾನಂದಮೂರ್ತಿ ಅವರ ನಿಲುವು. ಈ ಇಬ್ಬರು ವಿದ್ವಾಂಸರಿಂದ 'ಬೆದಂಡೆ' ಕಾವ್ಯ ಪ್ರಕಾರದ ಸ್ವರೂಪ ಸ್ಪಷ್ಟವಾಯಿತು.

"ಲಯಗ್ರಾಹಿ" ಮತ್ತು "ಲಯೋತ್ತರ" ಎಂಬ ಎರಡು ವೃತ್ತಗಳ ಲಕ್ಷಣ, ಸ್ವರೂಪ ಮತ್ತು ಅವು ಎಲ್ಲೆಲ್ಲಿ ಪ್ರಯೋಗಗೊಂಡಿವೆ ಎಂಬುದರ ಬಗ್ಗೆ ಒಂದು ಲೇಖನದಲ್ಲಿ ವಿಸ್ತಾರವಾಗಿ ಚರ್ಚಿಸಿದ್ದಾರೆ. ಲಯಗ್ರಾಹಿಯ ಪ್ರತಿಪಾದದಲ್ಲಿ ಐದು ಮಾತ್ರೆಯ ಗಣಗಳು ಏಳು, ನಾಲ್ಕು ಮಾತ್ರೆಯ ಗಣ ಒಂದು ಇರುವ ನಾಲ್ಕು ಪಾದುಗಳುಳ್ಳ ವೃತ್ತ. ಅದಕ್ಕೆ ತಿರುಮಲಾರ್ಯನ ಚಿಕ್ಕದೇವರಾಜ ಭಿನ್ನಪದ ಉದಾಹರಣೆಯಿದೆ. 'ಒಂದು ದೆಸೆಯೊಳ್ ತಿರುಕರೊಂದು ಕಡೆಯೊಳ್ ಮೊರಸರೊಂದೆಸೆ ಯೊಳಾರೆಯ್ರ ಬೃಂದಮಳ ಮಿಂಬೇ' ಇಲ್ಲಿ ಬಂದಿರುವ ಒಂದೊಂದು ಗಣವೂ - UUU ಎಂಬ ಲಕ್ಷಣವುಳ್ಳದ್ದು. ಗಮನಿಸಬೇಕಾದ ಸಂಗತಿಯೆಂದರೆ "ಒಂದೊಂದು ಪಾದದಲ್ಲಿಯೂ ಲಘುಗುರುಗಳ ವಿನ್ಯಾಸವು ಏಕೆ ಪ್ರಕಾರವಾಗಿರುವುದು". ಆದ್ದರಿಂದ ಈ ವೃತ್ತವು ಅಕ್ಷರ ವೃತ್ತವಾಗಿರಬಹುದೇ ಎಂಬ ಸಂದೇಹವು ಸಹಜವಾಗಿಯೇ ಏಳುತ್ತದೆ. ಮೇಲಿನ ಉದಾಹರಣೆಯಲ್ಲಿ ಖಚಿತವಾದ ಮಾತ್ರಾಲಯವಿರುವುದರಿಂದ ಅದು ಮಾತ್ರಾ ವೃತ್ತ ಅಲ್ಲವೇ ಎಂಬ ದೇಹವನ್ನು ಸಹಜವಾಗಿ ಪ್ರತಿಯಾಗಿ ಎತ್ತಬಹುದು.[೩] ಆದ್ದರಿಂದ ಲಯಗ್ರಾಹಿಯೂ ಅಕ್ಷರ ವೃತ್ತವೇ ಮಾತ್ರಾ ವೃತ್ತವೇ ಎಂಬ ಸಂದೇಹ ಬರುತ್ತದೆ. ಛಂದೋಂಬುದಿಯ ತೃತೀಯಾಧಿಕಾರದಲ್ಲಿ "ಲಲಿತ" ಮತ್ತು "ಕುಸುಮ"ಗಳೆಂಬ ಎರಡು ಮಾಲಾವೃತ್ತಗಳ ಬಗ್ಗೆ ನಿರೂಪಣೆಯಿದೆ.[೪] ಅಲ್ಲಿರುವ ಲಲಿತವೇ ಲಯಗ್ರಾಹಿ. ಈ ವೃತ್ತವು ಗದಾಯುದ್ಧ, ಧರ್ಮಾಮೃತ ಮುಂತಾದ ಕಾವ್ಯಗಳಲ್ಲಿ ಪ್ರಯೋಗಗೊಂಡಿದೆ. ಇದರ ನಡೆ (ಲಯ) ನಿಧಾನ ಮತ್ತು ಗಂಭೀರವಾಗಿರುತ್ತದೆ.

ಪ್ರತಿಪಾದದಲ್ಲಿಯೂ ತ್ರಿಮಾತ್ರಾಗಣವು ಹದಿನಾಲ್ಕು ಪಂಚಮಾತ್ರಾಗಣವೊಂದು ಇರುವ ನಾಲ್ಕು ಪಾದಗಳ ವೃತ್ತ ಲಯೋತ್ರರ. ಈ ವೃತ್ತವನ್ನು ನಾಗವರ್ಮ ಹೇಳಿಲ್ಲ.

ಜಯಕೀರ್ತಿ ಹೇಳಿದ್ದಾನೆ. ಈ ವೃತ್ತಕ್ಕೆ ಕೈಪಿಡಿಕಾರರು ನೇಮಿಚಂದ್ರನ 'ಲೀಲಾವತಿ ಪ್ರಬಂಧ'ದಿಂದ ಉದಾಹರಣೆಕೊಟ್ಟಿದ್ದಾರೆ. "ತುಱುಗಿ ತುಂಬಿ ಗುರುಳ... ವಿಜಯ ಮಂಗದೊಳ್" ಜಯಕೀರ್ತಿ ಲಯೋತ್ತರಕ್ಕೆ ಪಂಪಭಾರತ 'ಅದಱಿಕೊಱಿ ಮೊಱಿಲ... ತರುಗಳಿಂ' ಎಂಬ ಪದ್ಯವನ್ನು ಉದಾಹರಿಸಿದ್ದಾನೆ. ಇದನ್ನು ಗಮನಿಸಿದರೆ ಪಂಪ ಮತ್ತು ನೇಮಿಚಂದ್ರರ ಲಯೋತ್ತರಕ್ಕೆ ವ್ಯತ್ಯಾಸಗಳಿವೆ. ಅವುಗಳ ಸ್ವರೂಪವನ್ನು ಗಮನಿಸಿದರೆ ನಿಜವಾದ ಲಯೋತ್ತರ ಪಂಪಭಾರತದ ಪದ್ಯ. ಲೀಲಾವತಿ ಪದ್ಯಕ್ಕೂ ಪಂಪ ಭಾರತದ ಪದ್ಯಕ್ಕೂ ಮಾತ್ರೆಗಳ ಸಂಖ್ಯೆಯಲ್ಲಿ ವ್ಯತ್ಯಾಸವಿದೆಯೇ ಹೊರತು ಲಯದಲ್ಲಿಲ್ಲ. ಲಯೋತ್ತರದಲ್ಲಿ ಕಂಡುಬರುವ ದ್ವಿತೀಯ ಪ್ರಾಸವನ್ನು ಗಮನಿಸಿದರೆ "ಆ ವೃತ್ತಕ್ಕೂ ಕನ್ನಡ ಕಾವ್ಯಕ್ಕೂ ಕಂಡುಬರುವ ದ್ವಿತೀಯ ಪ್ರಾಸವನ್ನು ಗಮನಿಸಿದರೆ ದೃಢವಾಗುತ್ತದೆ (ಏಕೆಂದರೆ ದ್ವಿತೀಯ ಪ್ರಾಸವು ಕನ್ನಡಕ್ಕೆ ವಿಶಿಷ್ಟವಾದುದು)."[೫] ಲಯೋತ್ತರವು ಸಂಸ್ಕೃತದ ಅಥವಾ ಪ್ರಾಕೃತದ ಇನ್ನಾವ ಛಂದೋಗ್ರಂಥಗಳಲ್ಲಿಯೂ ವರ್ಣಿತವಾಗಿಲ್ಲವಾದುದರಿಂದ ಅದು ಕನ್ನಡ ಛಂದದ ವೈಶಿಷ್ಟ್ಯವಾಗಿರಬಹುದೆಂದು ಚಿದಾನಂದಮೂರ್ತಿ ಅವರ ಪ್ರಬಲ ಊಹೆಯು ಬಹುಮಟ್ಟಿಗೆ ನಿಲ್ಲುತ್ತದೆ. ಲೇಖನದುದ್ದಕ್ಕೂ ವಿಚಾರ ಯೋಗ್ಯವಾಗಿ ತೋರಿದ ಸಂಗತಿಗಳ ಸೂಕ್ಷ್ಮವಾದ ವಿಮರ್ಶೆ ನಡೆಸಿರುವುದು ಮೆಚ್ಚತಕ್ಕುದಾಗಿದೆ.

'ತ್ರಿಪದಿ ಅದರ ಸ್ವರೂಪ ಮತ್ತು ಇತಿಹಾಸ' ಎಂಬ ಲೇಖನದಲ್ಲಿ ತ್ರಿಪದಿಯ ಉಗಮ, ವಿಕಾಸ ಹಾಗೂ ಅದರ ಇತಿಹಾಸದ ಬಗ್ಗೆ ಸುದೀರ್ಘವಾಗಿ ಪರಿಶೀಲಿಸಿದ್ದಾರೆ. ಕನ್ನಡ ಛಂದಕ್ಕೆ ಸೇರಿದ ಮಟ್ಟುಗಳಲ್ಲಿ ತ್ರಿಪದಿಯೇ ಅತ್ಯಂತ ಪ್ರಾಚೀನವಾದರೂ ಅದಕ್ಕೂ ಮೂಲವಾದ 'ಏಳೆ' ಎಂತಹ ಒಂದು ವೃತ್ತವಿದ್ದಿರಬೇಕು. ಏಳೆಯ ಮೊದಲ ಪಾದದಲ್ಲಿ ನಾಲ್ಕು ವಿಷ್ಣು ಗಣಗಳು ಒಂದು ಬ್ರಹ್ಮಗಣ ಬರುತ್ತದೆ. ತ್ರಿಪದಿಯ ಎರಡನೆಯ ಪಾದವನ್ನು ಬಿಟ್ಟರೆ ಏಳೆಯಾಗುತ್ತದೆ.[೬]

ತ್ರಿಪದಿಯ ವಿಕಾಸ ಪಥವನ್ನು ಕ್ರಮಬದ್ಧವಾಗಿ ವಿಶ್ಲೇಷಿಸುತ್ತಾರೆ. ಏಳನೆಯ ಶತಮಾನದ ಬಾದಾಮಿ ಶಾಸನವನ್ನು ಮೊದಲುಗೊಂಡು ಸು.೧೧೪೦ರ ಮಲ್ಲಿನಾಥ ಪುರಾಣದ ತ್ರಿಪದಿಗಳ ಸ್ವರೂಪವನ್ನು ನಿರೂಪಿಸಿದ್ದಾರೆ. ಅಲ್ಲಿಯ ಕೆಲವು ತ್ರಿಪದಿಗಳು ನಾಗವರ್ಮನ ನಿಯಮಕ್ಕೆ ಅನುಗುಣವಾಗಿದ್ದರೆ ಕೆಲವು ಅಲ್ಪಸ್ವಲ್ಪ ಬದಲಾವಣೆ ಗಳೊಂದಿಗೆ ಅಂದರೆ ವಿಷ್ಣುವಿನ ಸ್ಥಾನದಲ್ಲಿ ಬ್ರಹ್ಮ, ಬ್ರಹ್ಮದ ಸ್ಥಾದನಲ್ಲಿ ವಿಷ್ಣುಗಣಗಳು ಬಂದಿವೆ (ಇವೆಲ್ಲವೂ ಅಂಶಗಣ ಘಟಿತ ತ್ರಿಪದಿಗಳಾಗಿವೆ). ತ್ರಿಪದಿಯು ಹನ್ನೆರಡನೆಯ ಶತಮಾನದ ಪ್ರಯೋಗ ಯುಗದಲ್ಲಿ ಅನ್ಯದೇಶೀಯ ಬಂಧಗಳ ಪ್ರಭಾವದಿಂದ ಸ್ವಚ್ಛಂದವಾದ ಅಂಶಗಣವನ್ನು ಬಿಟ್ಟು ಮಾತ್ರಾಗಣ ಬಂಧವಾಗಿ ಪರಿವರ್ತನೆ ಹೊಂದಿತು. ಅಕ್ಕಮಹಾದೇವಿಯ 'ಯೋಗಾಂಗ ತ್ರಿವಿಧಿ'ಯ ಪದ್ಯಗಳು ಮಾತ್ರಾಲಯ ದಿಂದ ಕೂಡಿವೆ. ಹದಿಮೂರು, ಹದಿನಾಲ್ಕನೆಯ ಶತಮಾನದ ಪರಿಸರದ ಕೃತಿಗಳಲ್ಲಿ ಅಂಶಲಯ ಮತ್ತು ಮಾತ್ರಾಲಯ ಹಾಗೂ ಎರಡು ಮಿಶ್ರಿತ ತ್ರಿಪದಿಗಳು ಕಂಡುಬರುತ್ತವೆ.

ತ್ರಿಪದಿಯ ಇತಿಹಾಸದಲ್ಲಿ ಸರ್ವಜ್ಞನದು ದೊಡ್ಡ ಹೆಸರು. ಅವನ ಲೋಕಾನುಭವವನ್ನು ಜನತೆಗೆ ಮುಟ್ಟಿಸುವಲ್ಲಿ ತ್ರಿಪದಿಯು ಮಹತ್ವದ ಪಾತ್ರವಹಿಸಿತು. ಅವನ ತ್ರಿಪದಿಗಳಲ್ಲಿ ಕೆಲವು ಶುದ್ಧ ಮಾತ್ರಾಲಯದಲ್ಲಿದ್ದರೆ ಕೆಲವು ಶುದ್ಧ ಅಂಶಲಯದಲ್ಲಿವೆ.

೫ ೫ ೫ ೫

ಸಾಲವನು |ಕೊಂಬಾಗ |ಹಾಲೋಗ |ರುಂಡಂತೆ |- ಮಾತ್ರಾಲಯ

ವಿ ವಿ ವಿ ವಿ

ಕುಲವಿಲ್ಲ |ಯೋಗಿಗೆ |ಫಲವಿಲ್ಲ |ಜ್ಞಾನಿಗೆ |- ಅಂಶಲಯ

ಹದಿನಾರು, ಹದಿನೇಳನೆಯ ಶತಮಾನದ ಕಾವ್ಯಗಳಲ್ಲಿ ತ್ರಿಪದಿ ಕಡಿಮೆಯಾಗಿ ಕಾಣಿಸಿದರೂ ಅದರ ಬಳಕೆ ತಪ್ಪಲಿಲ್ಲ. ಷಡಕ್ಷರದೇವ, ತಿರುಮಲಾರ್ಯರ ಕೃತಿಗಳಲ್ಲಿಯ ತ್ರಿಪದಿಗಳು ಅಂಶಗಣ ಮತ್ತು ಮಾತ್ರಾಗಣಗಳಿಂದ ಮಿಶ್ರಣಗೊಂಡಿವೆ. ಹೊಸಗನ್ನಡದಲ್ಲಿಯೂ ತ್ರಿಪದಿಗಳು ಬಳಕೆಯಾಗಿವೆ. ಬೇಂದ್ರೆಯವರ 'ಮಳೆ' ಕವನದ ತ್ರಿಪದಿಗಳು ಮಾತ್ರಾಲಯದಲ್ಲಿದ್ದರೆ ತೀ.ನಂ.ಶ್ರೀ ಅವರ 'ಒಲುಮೆ' ಸಂಕಲನದ ತ್ರಿಪದಿಗಳು ಅಂಶಲಯದಲ್ಲಿವೆ. ಜನಪದ ಸಾಹಿತ್ಯದಲ್ಲಿ ತ್ರಿಪದಿಯದು ಸಿಂಹಪಾಲು. ತ್ರಿಪದಿಗೂ ಕನ್ನಡ ನುಡಿಗೂ ಸಹಜವಾದ ಸಂಬಂಧವಿದೆ. ಬಿಡಿ ಬಿಡಿ ವಿಚಾರಗಳನ್ನು ವ್ಯಕ್ತಪಡಿಸಲು ಮಾತ್ರ ತ್ರಿಪದಿ ಸಹಾಯಕಾರಿ. ಇದರಲ್ಲಿ ಕಥನ ಕಾವ್ಯಗಳು ಕಡಿಮೆ. ಕಥನ ಶೈಲಿಗೆ ಹೊಂದಿಕೊಳ್ಳುವಂತಹ ಸಾಂಗತ್ಯಕ್ಕೆ ಬಹುಶಃ ತ್ರಿಪದಿ ಮೂಲವಾಗಿರಬೇಕು. ಚಿದಾನಂದ ಮೂರ್ತಿ ಅವರು ಸಂಬಂಧಪಟ್ಟ ಸಾಹಿತ್ಯವನ್ನೆಲ್ಲ ಸ್ವತಂತ್ರವಾಗಿ ಅಭ್ಯಾಸ ಮಾಡಿ ತ್ರಿಪದಿಯ ರಚನೆಯ ರಹಸ್ಯವನ್ನು ಕಂಡುಕೊಂಡಿದ್ದಾರೆ.

ಅಧ್ಯಯನದ ನಿರಂತರತೆ, ಸಂಶೋಧನೆಯ ಪ್ರಗತಿ ಚಿದಾನಂದಮೂರ್ತಿ ಅವರ ಸಂಶೋಧನೆಯ ಲಕ್ಷಣ. ಹೊಸ ಹೊಸ ಮಾಹಿತಿಗಳು ದೊರೆತಾಗ ತಮ್ಮ ವಿಚಾರಗಳನ್ನು ಪರಿಷ್ಕರಿಸುತ್ತಾರೆ. ಇಲ್ಲವೇ ತಮ್ಮ ವಿಚಾರಗಳಿಗೆ ಪೂರಕ ಸಾಮಗ್ರಿಗಳನ್ನು ಸೇರಿಸುತ್ತಾರೆ. ೧೯೬೭ರ ಸುಮಾರಿಗೆ ತ್ರಿಪದಿಯ ಸ್ವರೂಪ ಮತ್ತು ಇತಿಹಾಸಕ್ಕೆ ಸಂಬಂಧಿಸಿದಂತೆ ಲೇಖನ ಬರೆದಾದ ಮೇಲೆ ನಾಗಮಂಗಲ ಒಂದು ಶಾಸನ (ಸು.೧೧೯೯) ಹಾಗೂ ಶಿವಮೊಗ್ಗ ಜಿಲ್ಲೆಯ ಕಲ್ಲೂರು ಶಾಸನ(ಸು.೧೧೩೮)ಗಳಲ್ಲಿ ಎರಡು ತ್ರಿಪದಿಗಳು ಇಮ್ಮಡಿ ನಾಗವರ್ಮನ ವೀರವರ್ಧಮಾನ ಪುರಾಣಗಳಲ್ಲಿ ಮೂರು ತ್ರಿಪದಿಗಳು ಅವರ ಗಮನಕ್ಕೆ ಬಂದವು. ಅವುಗಳ ಸ್ವರೂಪವನ್ನು 'ಎರಡು ಶಾಸನೋಕ್ತ ಸೇರಿ ಒಟ್ಟು ಐದು ತ್ರಿಪದಿಗಳು' ಎಂಬ ಲೇಖನದಲ್ಲಿ ಹೇಳಿದ್ದಾರೆ. ಈ ಐದೂ ತ್ರಿಪದಿಗಳು ಅಂಶಲಯಾನ್ವಿತ ತ್ರಿಪದಿಗಳು. ತ್ರಿಪದಿಯ ಇತಿಹಾಸವನ್ನು ಕುರಿತು ಚರ್ಚಿಸುವಾಗ ಈ ಲೇಖನ ತುಂಬ ನೆರವಾಗುತ್ತದೆ.

ಧಾನ್ಯವನ್ನು ಒರಳಿಗೆ ಹಾಕಿ ಒನಕೆಯಿಂದ ಕುಟ್ಟುವಾಗ ಒನಕೆ ಹಾಡು ಕರ್ನಾಟಕದಲ್ಲಿ ಹಿಂದಿನ ಕಾಲದಲ್ಲಿ ಪ್ರಚಲಿತವಾಗಿತ್ತು (ಈಗಲೂ ಕೆಲವು ಪ್ರದೇಶದಲ್ಲಿ ಇದೆ). ಶಾಸನಗಳಲ್ಲಿ

ದೊರೆಯುವ ಒನಕೆ ಹಾಡಿನ ಸ್ವರೂಪವನ್ನು 'ಒನಕೆ ಹಾಡು ಒಂದು ವಿವೇಚನೆ' ಎಂಬ ಲೇಖನದಲ್ಲಿ ಸ್ಪಷ್ಟಪಡಿಸಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಒನಕೆ ಹಾಡುಗಳು ಪ್ರಚಲಿತದಲ್ಲಿವೆ. ಇವು ಬಹುಪಾಲು ತ್ರಿಪದಿಯಲ್ಲಿವೆ.

ಚಂಪೂ ಕಾವ್ಯಗಳಲ್ಲಿ ವೃತ್ತ ಮತ್ತು ಕಂದಗಳೇ ವಿಶೇಷವಾಗಿ ಕಾಣಿಸಿಕೊಳ್ಳಲು ಕಾರಣವೇನಿರಬಹುದು? ಉಳಿದವು (ದೇಶ್ಯ ಮಟ್ಟುಗಳು) ಹೆಚ್ಚಾಗಿ ಕಾಣಿಸಿಕೊಳ್ಳದಿರಲು ಕಾರಣವೇನು? ಎಂಬ ಎರಡು ಪ್ರಶ್ನೆಗಳನ್ನು ಎತ್ತಿಕೊಂಡು 'ಚಂಪೂಕಾವ್ಯಗಳಲ್ಲಿ ವೃತ್ತ, ಕಂದಗಳು ಒಂದು ಕಿರುಟಿಪ್ಪಣಿ' ಎಂಬ ಲೇಖನದಲ್ಲಿ ಚರ್ಚಿಸಿದ್ದಾರೆ. ಸಂಸ್ಕೃತ ಮತ್ತು ಪ್ರಾಕೃತದ ವೃತ್ತ, ಕಂದಗಳ ಲಯದಲ್ಲಿ ಹೊಂದಾಣಿಕೆ ಇರುವುದೇ ಅದಕ್ಕೆ ಕಾರಣವಾಗದೆ ಎಂಬ ಚಿದಾನಂದಮೂರ್ತಿ ಅವರ ನಿಲುವು ಗ್ರಾಹ್ಯವಾಗಿದೆ.

ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿ ಚಂಪೂ, ವಚನಗಳ ಮಧ್ಯದ ಕೊಂಡಿಯನ್ನು ಕೊಂಡಗುಳಿ ಕೇಶಿರಾಜನಲ್ಲಿ ಕಾಣಬಹುದು. 'ಚಂಪೂ ಪ್ರಕಾರದಿಂದ ವಚನ ಪ್ರಕಾರಕ್ಕೆ ಸಂಕ್ರಮಣ:'ಕೇಶಿರಾಜ' ಎಂಬ ಲೇಖನದಲ್ಲಿ ಈ ಕುರಿತು ಚರ್ಚಿಸಿದ್ದಾರೆ. ಚಂಪೂ ಕವಿಗಳ ವಸ್ತುವಿನಲ್ಲಿ ಕತೆಯುಂಟು. ಕೇಶಿರಾಜ ಮತ್ತು ವಚನಕಾರರಲ್ಲಿ ಕತೆಯಿಲ್ಲ ಚಂಪೂ ಕವಿಗಳಲ್ಲಿ, ವೈಯಕ್ತಿಕ ಅನುಭವದ ನಿರೂಪಣೆಯಿಲ್ಲ; ಕೇಶಿರಾಜನ ಕೃತಿಗಳ ವಸ್ತು, ಪ್ರಕಾರ, ಭಾಷೆಗಳನ್ನು ಅನುಲಕ್ಷಿಸಿ ತೌಲನಿಕವಾಗಿ ವಿವೇಚನೆ ಮಾಡಿದ್ದಾರೆ. 'ಕೊಂಡಗುಳಿ ಕೇಶಿರಾಜನು ಚಂಪೂ ಪ್ರಕಾರದಲ್ಲಿ ಬೇರೂರಿ, ಮುಂದಿನ ವಚನ ಸಾಹಿತ್ಯ ಅರಳಲು ಸ್ಫೂರ್ತಿದಾಯಕನಾಗಿದ್ದಾನೆ. ಅವನೊಬ್ಬ ಚಂಪೂ ಮತ್ತು ವಚನ ಯುಗಗಳ ಮಧ್ಯದ ಸಂಕ್ರಮಣ ಕವಿ'[೭] ಎಂಬ ಚಿದಾನಂದಮೂರ್ತಿ ಅವರ ನಿಲುವು ಸ್ವಾಗತಾರ್ಹವಾಗಿದೆ.

'ವಚನ ಸಾಹಿತ್ಯದ ಉಗಮ' ಎಂಬ ಲೇಖನವು ವಚನ ಸಾಹಿತ್ಯದ ಉಗಮಕ್ಕೆ ಸಂಬಂಧಿಸಿದರೂ ಛಂದಸ್ಸಿನ ದೃಷ್ಟಿಯಿಂದ ಗಮನಿಸಬೇಕಾದ ಅಂಶಗಳಿಗೆ. ಅವುಗಳ ಧಾಟಿ ಪದ್ಯದಷ್ಟು ಬಿಗಿಯಿಲ್ಲ. ಗದ್ಯದಷ್ಟು ಸಡಿಲಿಲ್ಲ. ಒಂದು ವಿಧವಾದ ಲಯಬದ್ಧತೆ ಇವುಗಳನ್ನು ಹಾಡುಗಳಂತೆ ಕೇಳಲು ಅನುಕೂಲ ಕಲ್ಪಿಸಿವೆ. ದಾಸಿಮಯ್ಯನ ಕೆಲವು ವಚನಗಳಲ್ಲಿ ಅಂಶಲಯ ಮತ್ತು ಮಾತ್ರಾಲಯದ ಲಕ್ಷಣಗಳಿವೆ. "ಅವನ (ದಾಸಿಮಯ್ಯ) ಕಾಲಕ್ಕೆ(ಸು.೧೧೩೦) ತ್ರಿಪದಿಯು ಕೆಲವು ಲಕ್ಷಣಗಳನ್ನು ಮುಖ್ಯವಾಗಿ ಅದರ ಲಯವನ್ನು ಉಳಿಸಿಕೊಂಡು ವಚನಗಳೆನಿಸಿಕೊಂಡವು".[೮] ಅವನ ಕಾಲಕ್ಕಾಗಲೇ ತ್ರಿಪದಿಯು ವಚನವಾಗಿ ಮಾರ್ಪಟ್ಟಿತು. ಆಗ ತ್ರಿಪದಿಯ ಮೂಲಕ ಧರ್ಮ ಬೋಧನೆ ನಡೆಯುತ್ತಿತ್ತು. ಹನ್ನೆರಡನೆಯ ಶತಮಾನದ ಸುಮಾರಿಗೆ ತ್ರಿಪದಿಯು ಜನಪ್ರಿಯವಾದ ಛಂದೋರೂಪವಾಗಿತ್ತೆಂದು ಪ್ರತಿಪಾದಿಸಿ ಅದರಿಂದ ವಚನವೆಂಬ ಕಾವ್ಯರೂಪದ ನವೀನ ಸೃಷ್ಟಿ ಮೂಡಿರಬಹುದೆಂದು ಸೂಚಿಸಿದ್ದಾರೆ.

ಬಸವಣ್ಣನವರ ವಚನಗಳ ಛಂದೋಲಯದ ವೈವಿಧ್ಯತೆಯನ್ನು 'ಬಸವಣ್ಣನವರ ವಚನಗಳಲ್ಲಿ ಛಂದೋಲಯ' ಎಂಬ ಲೇಖನದಲ್ಲಿ ವಿಸ್ತಾರವಾಗಿ ಚರ್ಚಿಸಿದ್ದಾರೆ. ಬಸವಣ್ಣನವರ ವಚನಗಳಲ್ಲಿ ನಮಗೆ ಪರಿಚಿತವಾದ ಮಾತ್ರಾಲಯದ ವೈವಿಧ್ಯಗಳು ಬಳಕೆಯಾಗಿವೆ.

೩ ೩ ೩ ೩

ಹೊನ್ನ |ಹೆಣ್ಣ |ಮಣ್ಣ |ತೊಱೆ

೪ ೪ ೪ ೪

ಎಱೆದರೆ |ನೆನೆಯದು |ಮಱೆದರೆ |ಬಾಡದು

ಹೀಗೆ ಒಂದೇರೀತಿಯ ಗಣಗಳಿರುವ ಶುದ್ಧ ಲಯ ಅವರಲ್ಲಿದೆ. ೫, ೬ ಮಾತ್ರೆಯ ಗಣಗಳು ಕ್ವಚಿತ್ತಾಗಿ ಬಳಕೆಯಾಗಿವೆ.

೩ + ೪ + ೩ + ೪

ನುಗ್ಗು |ಮಾಡುವ |ನುಸಿಯ |ಮಾಡುವ

೩ + ೫ + ೩ + ೫

ಸುಳುವಿ |ನೊಳಗೆ |ಸುಳಿ |ಯುತ್ತ |ಲಿದ್ದೇನೆ

ಹೀಗೆ ಬೇರೆ ಬೇರೆ ಗಣಗಳ ಬೆರಕೆಯುಂಟಾದ ಮಿಶ್ರಲಯವೂ ಹಲವೆಡೆ ಕಂಡು ಬರುತ್ತದೆ. ಒಂದೇ ವಚನದಲ್ಲಿ ೫ + ೫ + ೫, ೪ + ೪ + ೪ ಇಂತಹ ಲಯಗಳು ಕಾಣಿಸಿಕೊಂಡಿವೆ. 'ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ' ಇಂತಹ ಕಡೆಗಳಲ್ಲಿ 'ವಡಿ'ಯನ್ನು ಹೋಲುವ ಪ್ರಾಸರಚನೆಯಿದೆ. 'ಬೆದಕದಿರು ಬೆದಕಿದೊಡೆ ಹುರುಳಿಲ್ಲ' ಇಂತಹ ಕಡೆಗಳಲ್ಲಿ ಒತ್ತಿಕೊಟ್ಟು ಹೇಳುವಾಗ ಪುನರಾವರ್ತನೆ ಕಂಡು ಬರುತ್ತದೆ. ಬಸವಣ್ಣನವರು ಬೋಧಕರಾಗಿರುವುದೇ ಇದಕ್ಕೆ ಕಾರಣ ಒಲೆಹತಿ| ಯುರಿದೊಡೆ |ನಿಲಬಹು | ದಲ್ಲದೆ... ಇಂತಹ ಕೆಲವು ವಚನಗಳಲ್ಲಿ ಅಂಶಲಯವು ಕಂಡುಬರುತ್ತದೆ. ಬಸವಣ್ಣನವರ ವಚನಗಳಲ್ಲಿ ಹೊಸಗನ್ನಡ ಛಂದಸ್ಸಿನ ಅನೇಕ ವೈಶಿಷ್ಟ್ಯಗಳು (ಅನಾಗತ, ಮುಡಿ, ಪದ್ಮಗಣ) ತಕ್ಕಮಟ್ಟಿಗೆ ದೊರೆಯುತ್ತವೆ. ಬಸವಣ್ಣ ನವರ ವಚನಗಳ ಛಂದೋಲಯದ ಲಕ್ಷಣಗಳನ್ನು ತಿಳಿಯಲು ತುಂಬ ಶ್ರಮವಹಿಸಿ ದ್ದಾರೆ. ಅವುಗಳಲ್ಲಿರುವ ಅಂಶಲಯ, ಮಾತ್ರಾಲಯಗಳ ಮಿಶ್ರಣವಿರುವುದನ್ನು ಗುರುತಿಸಿ ದ್ದಾರೆ. ಬಸವಣ್ಣನವರಲ್ಲಿ ಯಾವ ಲಯ ಅಧಿಕಾಂಶದಿಂದ ಕೂಡಿದೆ ಎಂಬುದನ್ನು ಈ ಸಂಪ್ರಬಂಧದಲ್ಲಿ ನಿರೂಪಿತವಾಗಿದೆ.

'ಹರಿಹರನ ಎರಡು ಪದ್ಯಗಳ ಬಗ್ಗೆ(ಕಲ್ಪನಾ ವಿಲಾಸದ) ಒಂದು ಟಿಪ್ಪಣಿ' ಎಂಬ ಲೇಖನ ತುಂಬ ಸ್ವಾರಸ್ಯಕರವಾಗಿದೆ. ಹರಿಹರನ ಮಾದಾರ ಚೆನ್ನಯ್ಯನ ರಗಳೆಯ ಆರಂಭದಲ್ಲಿ ಬರುವ ತ್ರಿಪದಿ ಹಾಗೂ ಉತ್ಪಲ ಮಾಲೆಗಳ ಸ್ವರೂಪವನ್ನು ಗಮನಿಸಿದಾಗ

ಅವು ಛಂದೋನಿಯಮಗಳನ್ನು ಉಲ್ಲಂಘಿಸಿವೆ. ಇದಕ್ಕೆ ಕಾರಣ ಹೊಲೆಯನಾದ ಚೆನ್ನಯ್ಯನ ಮನೆಯಲ್ಲಿ ಅವನ ಎಂಜಲನ್ನು ಶಿವ ಉಂಡದ್ದರಿಂದ ಆಗಮಗಳು ನಡುಗಿದವು. ಈ ಅದ್ಭುತ ಸಂಗತಿಯನ್ನು ಹೇಳುವ ಪದ್ಯಗಳಲ್ಲಿ ಕವಿಬೇಕೆಂದೇ ಛಂದಸ್ಸಿನ ನಿಯಮಗಳನ್ನು ಮೀರಿದ್ದಾನೆ.[೯] ಇದರಿಂದ ಶಿವಭಕ್ತಿಯ ಮುಂದೆ ಜಾತಿ ಎಷ್ಟು ಕ್ಷುದ್ರ ಎಂಬ ಸಂಗತಿ ತಿಳಿದುಬರುತ್ತದೆ. ಕವಿ ಧ್ವನಿಸಿರುವ ರೀತಿ ಅನನ್ಯವಾದುದು. ಅಲ್ಲದೆ ಛಂದಸ್ಸು ಹೇಗೆ ಸಾಮಾಜಿಕ ಆಯಾಮಕ್ಕೆ ಕಾರಣವಾಗಬಹುದು ಎಂಬುದು ಇದರಿಂದ ತಿಳಿಯುತ್ತದೆ.

ಸೊಲ್ಲಾಪುರ ಪ್ರದೇಶದಲ್ಲಿ ದೊರೆತ ವಿವಾಹ ಪುರಾಣವು ಕನ್ನಡದ ಮೊದಲ ಷಟ್ಪದ (ಅಂಶ ಷಟ್ಪದಿ) ಕಾವ್ಯವಾಗಿದೆ. ಶಾಸನಸ್ಥ ಕಾವ್ಯವಾದ ಇದು ಕುಂಬಾರರ ಕುಲೋತ್ಪತ್ತಿಗೆ ಸಂಬಂಧಿಸಿದೆ. ಚಿದಾನಂದಮೂರ್ತಿ ಅವರು "ಕನ್ನಡದ ಮೊತ್ತಮೊದಲ 'ಷಟ್ಪದ' (ಅಂಶ ಷಟ್ಪದಿ) ಕಾವ್ಯ" ಎಂಬ ಲೇಖನದಲ್ಲಿ ಆ ಕಾವ್ಯದ ಸ್ವರೂಪವನ್ನು ವಿಶ್ಲೇಷಿಸಿದ್ದಾರೆ. ಆ ಕಾವ್ಯದ ಮೂಲಪಾಠ ಮತ್ತು ಪರಿಷ್ಕೃತ ಪಾಠ ಎರಡನ್ನೂ ಕೊಟ್ಟಿದ್ದಾರೆ. (ಹೆಚ್ಚಾಗಿ) ಅವುಗಳಲ್ಲಿ ವಿ.ವಿ. / ವಿ.ವಿ. / ವಿ. ವಿ.ವಿ.ರು ಎಂಬ ಲಕ್ಷಣ ಬರುವಂತಿವೆ. ಕೆಲವು ಪದ್ಯಗಳಲ್ಲಿ ಈ ಲಕ್ಷಣ ಪಲ್ಲಟವಾಗಿದೆ. ಪದ್ಯ ೧೪ರಲ್ಲಿಯ 'ಕೊರಲನ' ಎಂಬ ಐದು ಮಾತ್ರೆಯ ಗಣದ ಜೊತೆಗೆ 'ಸಂಕಲೆ' ಎಂಬ ವಿಷ್ಣುಗಣ ಗಂದಿರುವುದನ್ನು ಗಮನಿಸಬೇಕು. ಹೀಗೆ "ವಿವಾಹ ಪುರಾಣವು ಛಂದಸ್ಸಿನ ದೃಷ್ಟಿಯಿಂದ ಷಟ್ಪದದ ವಿಷ್ಣುಗಣಗಳು ಮಾತ್ರಾಗಣಗಳಾಗುವ ಸಂಕ್ರಮಣ ಕಾಲದ ಸ್ಥಿತಿಗೆ ಸಂಕೇತ ವಾಗುತ್ತದೆ".[೧೦] ಈ ಕಾವ್ಯದ ಭಾಷೆ, ಶೈಲಿಯನ್ನು ಗಮನಿಸಿದರೆ "ಚಂಪೂ ಪ್ರಕಾರದಿಂದ ಷಟ್ಪದಿ ಪ್ರಕಾರಕ್ಕೆ ಕನ್ನಡ ಕಾವ್ಯವು ಹೊರಳಿದುದರ ಸಂಕ್ರಮಣದ ಸ್ಥಿತಿಯನ್ನು ವಿವಾಹ ಪುರಾಣವು ಒಳಗೊಂಡಿರುವಂತಿದೆ"[೧೧] ಎಂಬ ಹೊಸ ಸಂಗತಿಯನ್ನು ವಿದ್ವಾಂಸರ ಗಮನಕ್ಕೆ ತಂದಿದ್ದಾರೆ.

ರಾಘವಾಂಕನಿಗಿಂತ ಹಿಂದೆ (ಸು.೧೧೫೦) ಕನ್ನಡ ಕಾವ್ಯ, ಶಾಸನಗಳಲ್ಲಿ ಹನ್ನೊಂದು ಷಟ್ಪದಗಳು ದೊರಕುತ್ತವೆ.[೧೨] ಅವುಗಳ ಸ್ವರೂಪದ ಬಗ್ಗೆ ವಿದ್ವಾಂಸರು (ಬಿ.ಎಂ.ಶ್ರೀ., ತೀ.ನಂ.ಶ್ರೀ., ಡಿ.ಎಲ್.ಎನ್. ಮುಂತಾದವರು) ಚರ್ಚಿಸಿದ್ದಾರೆ. ಈ ಷಟ್ಪದಗಳ ಸಾಲಿಗೆ ಸೇರುವ ಇನ್ನೊಂದು ಷಟ್ಪದವನ್ನು ಚಿದಾನಂದಮೂರ್ತಿ ಅವರು ಗುರುತಿಸಿ ಅದರ ಸ್ವರೂಪವನ್ನು ಇನ್ನೊಂದು ಷಟ್ಪದ ಎಂಬ ಲೇಖನದಲ್ಲಿ ವಿವೇಚಿಸಿದ್ದಾರೆ (ಆಂಧ್ರದ ಮೆಹಬೂಬ್ ನಗರ ಜಿಲ್ಲೆಯ ಗಂಗಾಪುರದಲ್ಲಿ ದೊರಕಿದ ಶಾಸನ ಪದ್ಯವದು). ಆ ಶಾಸನದ ಪದ್ಯಪಾಠ ಹೀಗಿದೆ.

ಶ್ರೀನಾ(ರೀ) ನಿಳೆಯಂ ಶ್ರೀ
ಮೀನಾಂಬರ ದಿಬ್ಯ
ಸ್ಥಾ(ನಾ)(ಮೋ)ದಿ ಚೂಡಾಮಣಿ ಮುನಿಪಂ

(ಇದರಂತೆ ಉತ್ತರಾರ್ಧವಿದೆ) ಆ ಪದ್ಮ ಪಾಠವನ್ನು ಚಿದಾನಂದಮೂರ್ತಿ ಅವರು ಈ ರೀತಿ ಪರಿಷ್ಕರಿಸಿದ್ದಾರೆ.

ವಿ ವಿ
ಶ್ರೀನಾರೀ |ನಿಳಯಂ ಶ್ರೀ |
ಬ್ರ ವಿ
ಮೀನಾಂ |ಬರದಿಬ್ಯ
ವಿ ವಿ ರು
ಸ್ಥಾನಾಮೋ |ದೀಚೂಡಾ |ಮಣಿಮುನಿಪಂ

ಎರಡನೆಯ ಪಾದದಲ್ಲಿ ವಿಷ್ಣುವಿನ ಬದಲು ಬ್ರಹ್ಮ ಬಂದಿರುವುದು ಅಂಶ ವೃತ್ತಗಳಲ್ಲಿ ಸಾಮಾನ್ಯ. ಆದರೆ ಷಟ್ಪದಗಳಲ್ಲಿ ವಿಷ್ಣುವಿನ ಸ್ಥಾನದಲ್ಲಿ ಬ್ರಹ್ಮ ಬಂದಿರುವುದು ಇದೊಂದೆ ಕಡೆ ಎಂಬುದು ಗಮನಿಸಬೇಕಾದ ಸಂಗತಿ. ಚಿದಾನಂದಮೂರ್ತಿ ಅವರು ಆಯಾ ಪದ್ಯಗಳ ಛಂದಃಸ್ವರೂಪವನ್ನು ಪರಿಶೀಲಿಸುವಾಗ ಅವುಗಳಲ್ಲಿ ಪಾಠಕ್ಲೇಶವಿದ್ದರೆ ಅದನ್ನು ಪರಿಹರಿಸಿ, ಮೂಲಪಾಠವನ್ನು (ಒಪ್ಪಿತಪಾಠ) ಶೋಧಿಸುತ್ತಾರೆ. ಪಾಠ ಪರಿಷ್ಕರಣಕ್ಕೆ ಛಂದಸ್ಸಿನ ಜ್ಞಾನ ಎಷ್ಟು ಅವಶ್ಯಕವೆಂದು ಇದರಿಂದ ತಿಳಿಯುತ್ತದೆ.

ಮತಂಗನ ಬೃಹದ್ದೇಶಿ ಸಂಗೀತ ಶಾಸ್ತ್ರಕ್ಕೆ ಸಂಬಂಧಿಸಿದ ಪ್ರಾಚೀನ ಸಂಸ್ಕೃತ ಗ್ರಂಥ. ಅದರ ಕಾಲ ಕ್ರಿ.ಶ.ಪೂ. ೪ನೆಯ ಶತಮಾನದಿಂದ ಕ್ರಿ.ಶ.೯ನೆಯ ಶತಮಾನದವರೆಗೆ ಉಯ್ಯಾಲೆಯಾಡುತ್ತಿದೆ. ಚಿದಾನಂದಮೂರ್ತಿ ಅವರು ಈ ಬಗ್ಗೆ ಚರ್ಚಿಸಿದ ಹಿಂದಿನ ವಿದ್ವಾಂಸರ (ಎ. ವರದಾಚಾರಿ ಅವರನ್ನು ಮೊದಲುಗೊಂಡು ಜಿ. ಹನುಮಂತರಾಯ ವರೆಗೆ) ಅಭಿಪ್ರಾಯಗಳನ್ನು ಪರಿಶೀಲಿಸಿದ್ದಾರೆ. ಆ ಕೃತಿಯಲ್ಲಿ ಉಲ್ಲೇಖವಾಗಿರುವ 'ಶಾಂತರಸ', 'ವಂಗಾಲ' ದೇಶದ ಹೆಸರುಗಳು ಹಾಗೂ 'ಲಾಟೀಯ' ಎಂಬ ರೀತಿ ಇವುಗಳನ್ನು ಅನುಲಕ್ಷಿಸಿ ಬೃಹದ್ದೇಶಿಯ ಕಾಲ ಕ್ರಿ.ಶ. ಸು. ೮೫೦ ಎಂದು ಒಂದು ಲೇಖನದಲ್ಲಿ ಗುರುತಿಸಿದ್ದಾರೆ. ಇದು ನಿಲ್ಲತಕ್ಕುದಾಗಿದೆ. ಆ ಕೃತಿಯ ಒಡಲಲ್ಲಿ ಕನ್ನಡಕ್ಕೆ ಸಂಬಂಧಿಸಿದ ಏಲಾ(ಳೆ)ದಂತಹ ಪದ್ಯಜಾತಿಗಳ ಸ್ವರೂಪವನ್ನು ಸಂಕ್ಷಿಪ್ತವಾಗಿ ನಿರೂಪಿಸಿದ್ದಾರೆ. ಕೃತಿಯ ವಿಶ್ಲೇಷಣೆಯಿಂದ ಕವಿಯ ಕಾಲವನ್ನು ಗುರುತಿಸುವ ವಿಧಾನ ಈ ಬರೆಹದಲ್ಲಿದೆ.

'ಕಗ್ಗ' ಪದದ ವ್ಯುತ್ಪತ್ತಿ ಮತ್ತು ಅರ್ಥವ್ಯತ್ಯಾಸವನ್ನು ಒಂದು ಲೇಖನದಲ್ಲಿ ತೋರಿಸಿದ್ದಾರೆ. ಹೊಸಗನ್ನಡದಲ್ಲಿ 'ಕಗ್ಗ' ಪದವು 'ನಿರುಪಯುಕ್ತ' ಎಂಬ ಹೀನಾರ್ಥವನ್ನು ಪಡೆದುಕೊಂಡಿದೆ. ಈ ರೂಪವು ದಕ್ಷಿಣ ಕರ್ನಾಟಕದ ಜನಪದ ಹಾಡುಗಳಲ್ಲಿ ಕಥನಗೀತೆಯಂತೆ ಬಳಕೆಯಾಗಿದೆ. "ಕಗ್ಗದ ಹಾಡುಗಳಲ್ಲಿ ಅಶ್ಲೀಲ ಉಂಟು. ಆ ನಿಷ್ಪ್ರಯೋಜಕವಾಗಿ, ಕೆಲಸಕ್ಕೆ ಬಾರದ್ದಾಗಿ ಕಂಡಿದ್ದರ ಫಲವೇ ಕಗ್ಗ ಮಾತಿನ ಹೀನಾರ್ಥ

ಪ್ರಾಪ್ತಿಗೆ ಕಾರಣ".[೧೩] ಚಿದಾನಂದಮೂರ್ತಿ ಅವರ ಈ ಅಭಿಪ್ರಾಯ ಸಾಧುವಾಗಿದೆ. ಆ ಪದದ ಅರ್ಥವ್ಯತ್ಯಾಸದಲ್ಲಿ ಕ್ರಮಬದ್ಧತೆ ಇರುವುದನ್ನು ಗುರುತಿಸಿದ್ದಾರೆ. ಕಿತ್ತೂರು ಕರ್ನಾಟಕದ ಕಡೆಗೆ 'ಕಗ್ಗ' ಪದವು 'ಬಿರುಸು' ಎಂದು ಹೀನಾರ್ಥದಲ್ಲಿಯೇ ಬಳಕೆಯಾಗುತ್ತಿದೆ.

ಕಲ್ಯಾಣ ಕರ್ನಾಟಕದ ಪ್ರದೇಶದ 'ಹರದೇಶಿ' (ಗಂಡಿನ ಮೇಲ್ಮೆಯನ್ನು ಎತ್ತಿಹಿಡಿಯುವ ಹಾಡು) 'ನಾಗೇಶಿ' (ಹೆಣ್ಣಿನ ಮೇಲ್ಮೆಯನ್ನು ಎತ್ತಿಹಿಡಿಯುವ ಹಾಡು) ಎಂಬ ಲಾವಣಿಯ ಸ್ವರೂಪವನ್ನು 'ಹಸ್ತಪ್ರತಿಯೊಂದರಲ್ಲಿ ಹರದೇಶಿ-ನಾಗೇಶಿ ಹಾಡು' ಎಂಬ ಲೇಖನದಲ್ಲಿ ವಿವೇಚಿಸಿದ್ದಾರೆ. ಗೇಯತೆ, ಪಲ್ಲವಿ, ನಿರರ್ಗಳತೆ ಇವು ಲಾವಣಿಗಳಲ್ಲಿ ಹೆಚ್ಚು ಸ್ವಚ್ಛಂದ ಕಡೆಗೆ ಅಂಶಗಣವನ್ನು ಅಡಕ ಮಾಡಿಕೊಳಳುವ ಛಂದವಿದು. ಲಾವಣಿ ಸಾಹಿತ್ಯವನ್ನು ಅಧ್ಯಯನ ಮಾಡುವಾಗ ಈ ಬರೆಹ ತುಂಬ ನೆರವಾಗುತ್ತದೆ.

ಅಂಶಲಯಕ್ಕೆ ಸಂಬಂಧಿಸಿದಂತೆ 'ಉಯ್ಯಾಲೆ ಗಣ' ಎಂಬ ಪರಿಭಾಷೆಯನ್ನು ರೂಪಿಸಿ, ಅದರ ಸ್ವರೂಪವನ್ನು "ಉಯ್ಯಾಲೆ ಗಣ"ಗಳಿರುವ ಒಂದು ಅಪೂರ್ವ ಅಂಶಲಯದ ಧಾಟಿ, ಎಂಬ ಲೇಖನದಲ್ಲಿ ಗುರುತಿಸಿದ್ದಾರೆ. ಪುಲಿಗೆರೆ 'ಶಂಖಜಿನೋದ್ಭವ ಕಾವ್ಯ'ದ ಛಂದಸ್ಸು ವಿಲಕ್ಷಣವಾಗಿದೆ. ಅದರ ಪದ್ಯಗಳು ನೋಡಲು ಸಾಂಗತ್ಯದಂತಿದ್ದರೂ ಸಾಂಗತ್ಯವೂ ಅಲ್ಲ. ಅದರ ಧಾಟಿ ಸ್ಪಷ್ಟವಾಗಿ ಅಂಶಲಯದ್ದು ಮತ್ತು ಯಕ್ಷಗಾನ, ಬಯಲಾಟ, ಮಂಗಳಾರತಿ ಹಾಡಿದ ಮಟ್ಟು ಆ ಕಾವ್ಯದ ಒಂದು ಪದ್ಯ ಹೀಗಿದೆ.

ವಿ ವಿ ಮುಡಿ
ಕಂಡುತಾ | ನಾದೇವಿ |ಯಾ (ವಿಸ್ಮಿತವಾಗಿ)
ವಿ ವಿ ಮುಡಿ
ದಿಂಡುಗೆ |ಡದುನಮಿ |ಸಿ

(ಇದರಂತೆ ಉತ್ತರಾರ್ಧವಿರುತ್ತದೆ). ಒಂದು ಮತ್ತು ಮೂರನೆಯ ಪಾದದಲ್ಲಿ ತಲಾ ೨ ವಿ +೧ ಅಕ್ಷರ(ಅಥವಾ ಮುಡಿ) ಮತ್ತು ಕೊನೆಯಲ್ಲಿ ಅನಿರ್ದಿಷ್ಟ ಪ್ರಮಾಣದ ಗಣ (ಉಯ್ಯಾಲೆ ಗಣ) ಈ ಗಣದಲ್ಲಿ ೩ ರಿಂದ ೬ ಅಥವಾ ೭ ಅಕ್ಷರ ಗಳಿರಬಹುದು. ಅದನ್ನು ಅಖಂಡಗಳಾಗಿ ಭಾವಿಸಬೇಕು. "ಪಾದವನ್ನು ಓದಿದಾಗ ಅಥವಾ ಹಾಡಿದಾಗ ಆ ಅನಿರ್ದಿಷ್ಟ ಪ್ರಮಾಣದ ಉಯ್ಯಾಲೆ ಗಣದ ಜಾಗದಲ್ಲಿ ಲಯವು ಒಂದು ಪಾದದಿಂದ ಇನ್ನೊಂದಕ್ಕೆ ಜಾರುತ್ತದೆ ಅಥವಾ ಜೀಕುತ್ತದೆ".[೧೪] ಮುಂದಿನ ಸಾಲಿಗೆ ನಮ್ಮನ್ನು ಒಯ್ಯುತ್ತದೆ. ಮೇಲಿನ ಪದ್ಯದಲ್ಲಿ "ವಿಸ್ಮಿತವಾಗಿ" ಎಂಬುದು ಉಯ್ಯಾಲೆ ಗಣವಾಗಿದೆ. ಈ ಲೇಖನವು ಹಲವು ವಿದ್ವಾಂಸರ ವಿಚಾರ-ವಿಮರ್ಶೆಗೆ ಗುರಿಯಾಗಿದೆ. ಚಿದಾನಂದಮೂರ್ತಿ ಅವರು 'ಉಯ್ಯಾಲೆ ಗಣ ಇರುವುದು ನಿಜ. ಅಪೂರ್ವವೂ ಹೌದು' ಎಂಬ ಇನ್ನೊಂದು ಲೇಖನದಲ್ಲಿ ಆ ವಿದ್ವಾಂಸರ (ಎಸ್.ಎಸ್. ಲಕ್ಷ್ಮೀ ನಾರಾಯಣಭಟ್ಟ

ಹಾಗೂ ಕಲಬುರ್ಗಿ) ಅಭಿಪ್ರಾಯಗಳು ಪರಿಶೀಲಿಸಿ, ಸಕಾರಣವಾಗಿಯೇ ಅಲ್ಲಗಳೆದಿದ್ದಾರೆ. ಚಿದಾನಂದಮೂರ್ತಿ ಅವರ ಸಂಪಬಂಧಗಳ ವಿಮರ್ಶೆಯನ್ನು ಮಾಡುವವರು ಛಂದಸ್ಸಿನ ಸಾಮಾನ್ಯ ಜ್ಞಾನವನ್ನು ಹೊಂದಿದ್ದರೆ ಸಾಲದು. ಏಕೆಂದರೆ ಅವರು ಆಳವಾಗಿ ಒಳಹೊಕ್ಕು ವಿವೇಚಿಸಿರುವಾಗ ವಿಮರ್ಶೆ ಎಂಬುದು ಅಷ್ಟು ಸುಲಭವಾಗುವುದಿಲ್ಲ. ಚಿದಾನಂದಮೂರ್ತಿ ಅವರ ಒಟ್ಟು ಸಂಶೋಧನೆಗೂ ಇದು ಅನ್ವಯವಾಗುತ್ತದೆ. ವಾಸ್ತವತೆಯನ್ನು, ಸತ್ಯವನ್ನು ಅವರು ಮತ್ತೆ ಮತ್ತೆ ಸಾಧಿಸಿ ತೋರಿಸಿದ್ದಾರೆ.

ಪಾಠ ಪರಿಷ್ಕರಣದಲ್ಲಿ ಛಂದಸ್ಸಿನ ಸಹಾಯ ಅತ್ಯಗತ್ಯ ಶಂಖಜಿನೋದ್ಧ ಕಾವ್ಯದ ಸಂಪಾದಕರು(ಎಸ್.ಪಿ. ಪಾಟೀಲ ಮತ್ತು ಎಸ್.ವಿ. ಅಯ್ಯನಗೌಡರ) ಈ ಬಗ್ಗೆ ಗಮನಕೊಡದೆ ಪಾಠಗಳನ್ನು ಉತ್ತಮಪಡಿಸುವ ಸುಲಭ ಅವಕಾಶಗಳನ್ನು ಕಳೆದು ಕೊಂಡಿದ್ದಾರೆ. ಪದ್ಯವನ್ನು ಕೆಲವೆಡೆ ತಪ್ಪಾಗಿ ಅಚ್ಚು ಮಾಡಿದ್ದಾರೆ.

ಛಪ್ಪನ್ನಾರು ದೇಶದ |ದೊರೆಗಳು
ಕಪ್ಪು ಕಾಣಿಕೆ ಸಹಿತ

ಮೊದಲ ಪಾಠದಲ್ಲಿ 'ಛಪ್ಪನಾರು' ಸಾಧ್ಯವೇ ಇಲ್ಲ. ಅದು 'ಛಪ್ಪನ್ನೈವತ್ತಾರು' ಇರಬೇಕು. ಎರಡನೆಯ ಪಾಠದಲ್ಲಿ 'ಕಪ್ಪು' ಎಂಬುದನ್ನು 'ಕಪ್ಪ' ಎಂದು ಛಂದಸ್ಸಿನ ಸಹಾಯದಿಂದ ತಿದ್ದುವುದರಲ್ಲಿ ತಪ್ಪಿಲ್ಲ ಆಗ ಪಾಠವನ್ನು ಸುಲಭವಾಗಿ

ಛಪ್ಪನ್ನಾರು ದೇ | ಶದ ದೊರೆಗಳು
ಕಪ್ಪ ಕಾಣಿಕೆ ಸಹಿತ

ಎಂದು ತಿದ್ದಬಹುದಾಗಿದೆ. ಮೇಲಿನ ಒಂದು ಪದ್ಯಕ್ಕೆ ಚಿದಾನಂದಮೂರ್ತಿ ಅವರು ಪಟ್ಟಿರುವ ಶ್ರಮ, ಮಾಡಿರುವ ಆಲೋಚನೆ ಇಡೀ ಗ್ರಂಥಕ್ಕೆ ಲಭ್ಯವಾಗಿದ್ದರೆ!

'ಸರಳಾಂಶ ರಗಳೆ' : ತಾರಾವಳಿ ಛಂದಸ್ಸು' ಎಂಬ ಲೇಖನದಲ್ಲಿ ಚಿದಾನಂದ ಮೂರ್ತಿಯವರು ವೀರ ಮಡಿವಾಳ ಮಾಚಯ್ಯಗಳ ತಾರಾವಳಿ, ಮುರಿಗೆ ತಾರಾವಳಿಗಳ ಮೂಲಕ ತಾರಾವಳಿ[10] ಛಂದಸ್ಸಿನ ಸ್ವರೂಪವನ್ನು ಗುರುತಿಸಿದ್ದಾರೆ. ತಾರಾವಳಿಯಲ್ಲಿ ಸಾಮಾನ್ಯವಾಗಿ ಇಪ್ಪತ್ತೇಳು ಪಾದಗಳಿರುತ್ತವೆ. ಪ್ರತಿಪಾದದ ಚರಣಗಳ ಸಂಖ್ಯೆ ಅನಿರ್ದಿಷ್ಟ ವಾದರೂ ಅವುಗಳಲ್ಲಿ ದ್ವಿತೀಯ ಪ್ರಾಸ ನಿಯಮಿತವಾಗಿರುವುದರಿಂದ ಆ ಚರಣಗಳು ಒಂದು ಪದಗಳಾಗುತ್ತವೆ. ತಾರಾವಳಿ ಛಂದಸ್ಸು ರಗಳೆಯೂ ಅಲ್ಲ, ಸರಳ ರಗಳೆಯೂ ಅಲ್ಲ ಸರಳಾಂಶ ರಗಳೆಯದು. ಅಂದರೆ ಸರಳಗೊಂಡ ಅಂಶ ರಗಳೆ. 'ಹದಿನೈದು, ಹದಿನಾರನೆಯ ಶತಮಾನದ ಸುಮಾರಿಗೆ ಸಾಂಗತ್ಯವನ್ನು ಹೊರತುಪಡಿಸಿ ಅಂಶಲಯವು ಕನ್ನಡ ಕಾವ್ಯ ರಚನೆಯಿಂದ ಮರೆಯಾಗಿ ಹೋಗಿದ್ದಿ ತೆಂಬುದು ಎಲ್ಲರ ಗ್ರಹಿಕೆಯಾಗಿತ್ತು. ಆದರೆ ಅಂಶಲಯವು ತಾರಾವಳಿ ಪದಗಳಲ್ಲಿ ಸಾಂಗತ್ಯದಂತೆ ಜೀವಂತವಾಗಿದ್ದಿತು'[11] ಎಂಬ ಹೊಸ ಸಂಗತಿಯನ್ನು ಚಿದಾನಂದಮೂರ್ತಿಯವರು ಗುರುತಿಸಿದ್ದಾರೆ.

ಛಂದಸ್ಸಿನ ಅಧ್ಯಯನಕ್ಕೆ ತೀ.ನಂ.ಶ್ರೀ. ಅವರ ಕೊಡುಗೆಯನ್ನು ಕುರಿತು ಒಂದು ಲೇಖನದಲ್ಲಿ ಪರಿಶೀಲಿಸಿದ್ದಾರೆ. ಹೊಸ ಛಂದಸ್ಸಿನ ಅಧ್ಯಯನಕ್ಕೆ ತೀ.ನಂ.ಶ್ರೀ. ಅವರ ಕೊಡುಗೆ ಮೌಲಿಕವಾದುದು. ಈ ಕುರಿತು ತೀ.ನಂ.ಶ್ರೀ. ಅವರು ನಾಲ್ಕು ಲೇಖನಗಳನ್ನು ಬರೆದಿದ್ದಾರೆ. 'ಕನ್ನಡದಲ್ಲಿ ಹೊಸಮಟ್ಟುಗಳಿಗಿರುವ ಅವಶ್ಯಕತೆ' ಎಂಬ ಲೇಖನವು ಹೊಸ ಛಂದಸ್ಸಿನ ಅವಶ್ಯಕತೆಯನ್ನು ಸ್ಪಷ್ಟಪಡಿಸುತ್ತದೆ. 'ಹೊಸ ಛಂದಸ್ಸಿನ ಲಯಗಳು ಎಂಬುದು ಆ ಕಾಲದವರೆಗೆ ಬಂದಿದ್ದ ಹೊಸಗನ್ನಡ ಕವಿತೆಗಳ ಛಂದೋಲಕ್ಷಣಗಳನ್ನು ಗುರುತಿಸುವ ಯತ್ನ ನಡೆದಿದೆ. 'ಮಾತ್ರೆ', 'ಮುಡಿ', 'ಪದ್ಮಗಣ' ಲೇಖನವು ಹೊಸ ಛಂದಸ್ಸಿಗೆ ಅಗತ್ಯವಾಗುವ ಪರಿಭಾಷೆಗಳ ನಿರೂಪಣೆಗೆ ಮೀಸಲಾಗಿದೆ. 'ಇಂಗ್ಲಿಷ್ ಗೀತೆಗಳು' ಎಂಬ ನಾಲ್ಕನೆಯ ಲೇಖನವು ಇಂಗ್ಲಿಷ್ ಗೀತೆಗಳು ಅವರು ತೆರೆದ ಛಂದಸ್ಸಿನ ಹೊಸದಾರಿಯನ್ನು ಪರಿಚಯಿಸಲಾಗಿದೆ. ಅಮ್ಮಿನಬಾವಿ ಶಾಸನದಲ್ಲಿಯ ಷಟ್ಪದಿ ಅಂಶಗಣ ಘಟಿತವಾದುದೆಂದು "ಅಪೂರ್ವ ಷಟ್ಪದಿಯ ಲಕ್ಷಣ" ಎಂಬ ಲೇಖನದಲ್ಲಿ ಗುರುತಿಸಿದ್ದಾರೆ. ಹೊಸಛಂದಸ್ಸಿನ ಅಧ್ಯಯನಕ್ಕೆ ತೀ.ನಂ.ಶ್ರೀ. ಅವರ ಈ ಬರೆಹಗಳು ಮುಂದಿನವರಿಗೆ ಮಾರ್ಗದರ್ಶಕವಾದವು.

ಚಿದಾನಂದಮೂರ್ತಿ ಅವರು ಹೊಸ ಛಂದಸ್ಸಿಗೆ ಸಂಬಂಧಿಸಿದಂತೆ ನಾಲ್ಕು ಸಂಪ್ರಬಂಧಗಳನ್ನು ಬರೆದಿದ್ದಾರೆ. ಹೊಸಗನ್ನಡ ಛಂದಃಕ್ಷೇತ್ರದಲ್ಲಿ ಅವರು ನಡೆಸಿರುವ ವಿವೇಚನೆಗಳು ಗಾಢವೂ ತಲಸ್ಪರ್ಶಿಯವೂ ಆಗಿವೆ. ಸಮೃದ್ಧ ನಿದರ್ಶನಗಳಿಂದ ಬಲಗೊಂಡು ಶಾಸ್ತ್ರ ಶುದ್ಧವೂ ಸರ್ವಮಾನ್ಯವೂ ಆಗಿವೆ. ಆ ನಾಲ್ಕು ಸಂಪ್ರಬಂಧಗಳ ಸ್ಥೂಲ ಸ್ವರೂಪವನ್ನು ಈಗ ನೋಡೋಣ.

ಕನ್ನಡ ಛಂದಸ್ಸು ಅನ್ಯಭಾಷೆಯ ಬಂಧಗಳಿಂದ ಪ್ರಭಾವಿತವಾಗಿ ಬೆಳೆಯುತ್ತಲಿರುವುದು ಆ ಕ್ಷೇತ್ರದ ಬೆಳವಣಿಗೆಯ ಹಾಗೂ ಆರೋಗ್ಯದ ಲಕ್ಷಣ. ೨೦ನೆಯ ಶತಮಾನದ ಆದಿಭಾಗದಲ್ಲಿ ನಡೆದಷ್ಟು ಛಂದಃಪ್ರಯೋಗಗಳು ಇನ್ನಾವ ಯುಗದಲ್ಲಿಯೂ ನಡೆಯಲಿಲ್ಲ. ಈ ಕಾಲಘಟ್ಟದಲ್ಲಿ ಆಧುನಿಕ ಛಂದೋಯುಗವು ಪ್ರಾರಂಭವಾಯಿತೆನ್ನಬಹುದು. ಕನ್ನಡ ಕವಿಗಳಿಗೆ ಇಂಗ್ಲೀಷ್ ಕಾವ್ಯ ಪ್ರಾರಂಭವಾಯಿತೆನ್ನಬಹುದು ಕನ್ನಡ ಕವಿಗಳಿಗೆ ಇಂಗ್ಲಿಷ್ ಕಾವ್ಯ ಸಂಪರ್ಕದಿಂದಾಗಿ ಹೊಸ ಹೊಸ ಬಂಧಗಳು ರೂಪುಗೊಂಡವು. ಇಂಗ್ಲೀಷ್ ಬಂಧಗಳ ಪ್ರಭಾವ ಕನ್ನಡ ಬಂಧಗಳ ಮೇಲೆ ಎರಡು ರೀತಿಯಾಗಿದೆ. ಮೊದಲನೆಯದಾಗಿ ಈ ಪ್ರಭಾವವು ಚರಣಗಳ ಪರಿಮಾಣ ಮತ್ತು ಸಂಖ್ಯೆ ಇವುಗಳಲ್ಲಿ ವಿವಿಧ ಮಾರ್ಪಾಡುಗಳನ್ನು ಮಾಡಿ ವಿವಿಧ ಬಂಧಗಳ ರೂಪ ರಚನೆಗೆ ಕಾರಣವಾಗಿದೆ. ಅಂತ್ಯಪ್ರಾಸದ ಕಟ್ಟಿನಲ್ಲಿ ವೈವಿಧ್ಯವನ್ನುಂಟು ಮಾಡಿ ಪದ್ಯಗಳಿಗೆ ಹೊಸಕಳೆ ಕಟ್ಟಿದೆ. ನವೋದಯ ಕಾಲಘಟ್ಟದಲ್ಲಿ ಕನ್ನಡ ಛಂದಸ್ಸು ಹೊಸದಿಕ್ಕು ಹಿಡಿಯಿತು.

ಚಿದಾನಂದಮೂರ್ತಿ ಅವರಿಂದ ವಿಶೇಷ ಪರಿಶೀಲನೆಗೆ ಒಳಗಾಗಿರುವುದು ರಗಳೆ. ಸರಳರಗಳೆ ಮತ್ತು ಮಹಾಛಂದಸ್ಸಿನ ವಿಚಾರಗಳು. ಪ್ರಾಸಬದ್ಧವಾದ ಲಲಿತ ರಗಳೆ ಆಧುನಿಕ ಕವನಗಳಲ್ಲಿ ವಿರಳ. ಪ್ರಾಸರಹಿತವಾದ ರಗಳೆಯೇ ಸರಳ ರಗಳೆ. ಚಿದಾನಂದ ಮೂರ್ತಿ ಅವರು ಅದರ ಲಕ್ಷಣವನ್ನು ಹೀಗೆ ಹೇಳಿದ್ದಾರೆ: 'ಪ್ರಾಸ ನಿರಾಕರಣೆ (ಆದಿ. ಅಂತ್ಯ, ಪ್ರಾಸ ರಹಿತ) ಪಾದಾಂತ ಯತಿಯನ್ನು ತೆಗೆದುಹಾಕಿದ್ದು, ಗಣ ನಿಯಮೋಲ್ಲಂಘನೆ, ಇವುಗಳಿಂದ ರಗಳೆ ಸರಳಗೊಂಡು ಸರಳ ರಗಳೆಯಾಯಿತೆಂಬ ಮಾತು ಸರಳ ರಗಳೆಯು ರಗಳೆಗಿಂತ ಸರಳವೆಂಬ ಭಾವನೆಯನ್ನು ಉಂಟು ಮಾಡುತ್ತದೆ'.[೧೭] ಸರಳ ರಗಳೆಯು ಪಾದಗಳನ್ನು ಹರಿಬಿಡಲು ಅನುಕೂಲವಾಗುತ್ತದೆ ಯಲ್ಲದೆ ಮಾತಿನ ಶೈಲಿಗೆ ಹತ್ತಿರವಾಗಿರುವುದರಿಂದ ಆಧುನಿಕ ಕಥನ ಕವನಗಳಲ್ಲಿ ಸಾಕಷ್ಟು ಪ್ರಯೋಗಗೊಂಡಿದೆ. ಮಾಸ್ತಿ ಅವರ 'ಸ್ಥಳಗಳ ಹೆಸರು', ಪೈ ಅವರ ಗೊಲ್ಗೊಥಾ, ಪುಟ್ಟಪ್ಪನವರ 'ಚಿತ್ರಾಂಗದಾ' ಇವು ಸರಳ ರಗಳೆಯಲ್ಲಿ ರಚಿತವಾಗಿವೆ. ಸರಳ ರಗಳೆಯ ಭಾಷಾಭಿವ್ಯಕ್ತಿಗೆ ಅನುಕೂಲವಾದ ಬಂಧವಾಗಿದೆ.

ಸರಳ ರಗಳೆಯ ಅತ್ಯುತ್ಕೃಷ್ಟ ಪರಿಪೂರ್ಣ ರೂಪವೇ ಮಹಾಛಂದಸ್ಸು. ಚಿದಾನಂದ ಮೂರ್ತಿ ಅವರು ಒಂದು ಕಡೆ ಸರಳ ರಗಳೆಯ ಅಪೂರ್ವ ಪ್ರಯೋಗಕ್ಕಾಗಿ ಮಹಾಛಂದಸ್ಸು ಎಂದು ಹೆಸರು ಕೊಡುವುದು ಅನಗತ್ಯವೆಂದು ಅಭಿಪ್ರಾಯಿಸಿದ್ದಾರೆ. ಮಹಾ ಛಂದಸ್ಸು ಪದದ ಬಳಕೆಗೆ ಬಂದ ಕಾರಣ ಅವರು ಈ ಪದವನ್ನು ಮುಂದುವರಿಸಿರಬಹುದು. 'ಮಹಾಛಂದಸ್ಸಿನ ಮೂಲ ಲಯ ಸ್ಪಷ್ಟವಾಗಿ ಐದು ಮಾತ್ರೆಗಳದ್ದೇ. ಐದು ಮಾತ್ರೆಗಳ ಗಣದ ಆಸ್ತಿಭಾರದ (ಸಮಾಧಿಯನ್ನು?) ಮೇಲೆ ಮಹಾಛಂದಸ್ಸಿನ ಸೌಧ ನಿಂತಿರುವುದು. ಅಂದರೆ ಲಲಿತ ರಗಳೆಯ ಶಿಥಿಲತೆ ಇಲ್ಲಿ ಕಂಡುಬರುವುದುಂಟು. ಅನೇಕ ಕಡೆ ೨ ಮತ್ತು ೩ ಮಾತ್ರೆಯ ಗಣಗಳು ಕಾಣಿಸುತ್ತವೆ. ೫ ಮಾತ್ರೆಯ ಗಣಗಳನ್ನು ತುಂಡರಿಸಿದಾಗ ಸಹಜವಾಗಿ ಆ ಗಣಗಳು ನಿಷ್ಪನ್ನವಾಗುತ್ತವೆ. ಸರಳ ರಗಳೆಯಲ್ಲಿ ೨೦ ಮಾತ್ರೆಗಳು ಬರುವುದು ಸಾಮಾನ್ಯ ನಿಯಮ. ವಿರಳವಾಗಿ ೧೯, ೨೦ ಮಾತ್ರೆಗಳು ಕಾಣಿಸಿಕೊಳ್ಳುವುದುಂಟು'.

ಕುವೆಂಪು ಅವರ ರಾಮಾಯಣದರ್ಶನದ ಛಂದೋಲಯಗಳ ವೈವಿಧ್ಯಗಳನ್ನು ಒಂದು ಲೇಖನದಲ್ಲಿ ಗುರುತಿಸಿದ್ದಾರೆ. ಕುವೆಂಪು ಅವರು ೫ ಮಾತ್ರೆಯ ಗಣಗಳನ್ನು ಮುರಿದಿದ್ದಾರೆ. ಒಂದೇ ಬಗೆಯ ಗಣಗಳ ಸ್ಥಾನದಲ್ಲಿ ಅದೇ ಮಾತ್ರಾ ಸಂಖ್ಯೆಯ ಗಣಗಳನ್ನು ತರುತ್ತಾರೆ (ತೀ.ನಂ.ಶ್ರೀ. ಅವರು ಇದಕ್ಕೆ 'ಗಣಪರಿವೃತ್ತಿ' ಎಂದು ಕರೆದಿದ್ದಾರೆ). ೫+೫ ಎಂಬುದು ೩+೩+೪, ೪+೩+೪ ಲಯಗಳಾಗಿ ಕಾಣಿಸಿಕೊಂಡಿದೆ.

೩ ೩ ೪ ೪ ೩ ೪
ಗಂಡು | ಕೊಂಚೆ | ಒರಲ್ದು | ದೊಪ್ಪನೆ | ನೆಲ | ಕ್ಕುರುಳ್ದು

ಕೆಲವೊಮ್ಮೆ ೫ ಮಾತ್ರೆಯ ಗಣವೆ ಒಡೆದು ೨+೩ ಆಗಿ, ೩+೨ ಆಗಿ ಕಾಣಿಸಿದೆ.

೩ ೨ ೨ ೩ ೨ ೩ ೫
ಒರ್ಮೆ |ಆ | ಹೂ |ಹಗುರು |ಶೀಶು |ವಿದ್ದ | ಕಿದ್ದಂತೆ

ಕೆಲವೆಡೆ ಲಯಗಳು ೩ + ೪ + ೩, ೩ + ೭, ೪ + ೫ + ೨ ಆಗಿ ಕಾಣಿಸಿ ಕೊಂಡಿದೆ. ಕುವೆಂಪು ಅವರು ಒತ್ತನ್ನು ತರಲು ದೀರ್ಘಾಕ್ಷರಗಳನ್ನು ಬಳಸಿ ಕೊಂಡಿರುವ ರೀತಿಯನ್ನು ಗುರುತಿಸಿದ್ದಾರೆ.

ತೊಲಗಿತಾ ಓ ಲಕ್ಷಣಾ ದಿನಂ, ಕಳೆದುದಾ

ಕೆಲವೆಡೆ ದೀರ್ಘದೊಡನೆ ಯತಿಯು ಬಂದು ಅಲ್ಲಿಗೆ ಪದ್ಯ ಮುಗಿಯುತ್ತದೆ. ಕುವೆಂಪು ಅವರು ಅಲ್ಲಲ್ಲಿ ಔಚಿತ್ಯವನ್ನರಿತು ಅಕ್ಷರಗಳ ಪುನರಾವರ್ತನೆಯನ್ನು ತಂದಿದ್ದಾರೆ.

ಏನೆ? ಬರುತಿದೆ ಸೇವೆ; ಕಾಲಾಳ ಹೇರಾನೆ
ತೇರು ಕುದುರೆದ ಮಾರಿಬೇನೆ

ಅಂತರಿಕ ಲಯ ಸಂಯೋಜನೆಯಲ್ಲಿ, ಗಣ ಪರಿವೃತ್ತಿಯಲ್ಲಿ ಕುವೆಂಪು ಅವರು ತೋರಿಸಿದ ವೈಶಿಷ್ಟ್ಯತೆಯನ್ನು ಕನ್ನಡದ ಇನ್ನಾವ ಕವಿಯು ತೋರಿದಂತಿಲ್ಲ. ಮಹಾ ಛಂದಸ್ಸನ್ನು ಲೀಲಾಜಾಲವಾಗಿ ಬಳಸಿ ಕನ್ನಡದಲ್ಲಿ ಅದರ ಪ್ರಚಾರಕ್ಕೆ ಕಾರಣರಾದವರು ಕುವೆಂಪುವರು. ಅವರ ಛಂದೋವಿಲಾಸದ ವಿವಿಧ ಮುಖಗಳನ್ನು ಸ್ಥೂಲವಾಗಿ ಈ ಲೇಖನದಲ್ಲಿ ಪರಿಚಯಿಸಿದ್ದಾರೆ. ಸರಳ ರಗಳೆಗೆ ಮಹಾಛಂದಸ್ಸನ್ನು ಕುರಿತು ಕುವೆಂಪು ಅವರೊಡನೆ ನಡೆದ ಸಂದರ್ಶನದ ಕೆಲವು ಸಂಗತಿಗಳನ್ನು ಚಿದಾನಂದಮೂರ್ತಿ ಅವರು ದಾಖಲಿಸಿದ್ದಾರೆ. ಅವು ಅಪೂರ್ವ ಒಳನೋಟದಿಂದ ಕೂಡಿವೆ.

'ಸರಳ ರಗಳೆಯ ಇತಿಹಾಸದ ಬಗ್ಗೆ ಒಂದು ಸಣ್ಣ ತಪ್ಪು ಕಲ್ಪನೆ' ಎಬ ಲೇಖನದಲ್ಲಿ ಎಸ್. ಅನಂತನಾರಾಯಣರು ೧೮ನೆಯ ಶತಮಾನದ ಯಾದದ ಕವಿ 'ಕಲಾವತೀ ಪರಿಣಯ' ಕೃತಿಯನ್ನು ಸರಳ ರಗಳೆಯಲ್ಲಿ ರಚಿಸಿದನೆಂದೂ ಸರಳ ರಗಳೆಯೂ ೧೯ನೆಯ ಶತಮಾನಕ್ಕಿಂತ ಮುಂಚೆಯೇ ಕನ್ನಡ ಕಾವ್ಯ ಕ್ಷೇತ್ರದಲ್ಲಿ ಕಾಣಿಸಿಕೊಂಡಿತೆಂದೂ ಬರೆದಿರುವರು. ಚಿದಾನಂದಮೂರ್ತಿ ಅವರು 'ಕಲಾವತೀ ಪರಿಣಯ' ಕೃತಿಯನ್ನು ಪರಿಶೀಲಿಸಿ ಅದು ಸರಳ ರಗಳೆಯಲ್ಲ, ದಂಡಕವೆಂದು ತೋರಿಸಿಕೊಟ್ಟಿದ್ದಾರೆ. ಆದ್ದರಿಂದ 'ಸರಳ ರಗಳೆ' ಆಕಸ್ಮಿಕವಾಗಿಯೂ ಇಪ್ಪತ್ತನೆಯ ಶತಮಾನಕ್ಕೆ ಮುಂಚೆ ಕನ್ನಡದಲ್ಲಿ ಕಾಣಿಸಿಕೊಂಡಿಲ್ಲ ಅದನ್ನು ನವೋದಯ ಕವಿಗಳು ರೂಪಿಸಿಕೊಂಡರು ಎಂಬುದಾಗಿ ತಿಳಿಸಿ ಒಂದು ತಪ್ಪು ಗ್ರಹಿಕೆಯನ್ನು ಸರಿಪಡಿಸಿದ್ದಾರೆ.

'ಛಂದಸ್ಸಿನ ಪ್ರಯೋಗಗಳು : ನವೋದಯ ಕಾವ್ಯದಲ್ಲಿ' ಎಂಬ ಲೇಖನದಲ್ಲಿ ನವೋದಯ ಛಂದಃಸ್ವರೂಪದ ಎಲ್ಲ ಅಂಶಗಳ ಅಡಕವಾಗುವಂತೆ ನಿರೂಪಿಸಿದ್ದಾರೆ. ಹೊಸಮಟ್ಟುಗಳನ್ನು ನಿರ್ಮಿಸಿಕೊಳ್ಳುತ್ತಿದ್ದ ನವೋದಯದ ಕವಿಗಳು ಹಳಗನ್ನಡ ಸಾಹಿತ್ಯ ರೂಪಗಳನ್ನು ಬಲ್ಲವರಾಗಿದ್ದರಲ್ಲದೆ ಇಂಗ್ಲಿಷ್ ಸಾಹಿತ್ಯದ ಪ್ರಭಾವಕ್ಕೂ ಒಳಗಾಗಿದ್ದರು. ತಮ್ಮ ಅಭಿವ್ಯಕ್ತಿಗೂ, ಜಾಯಮಾನಕ್ಕೂ ಸರಿಬೀಳದ ಮಟ್ಟುಗಳನ್ನು ಕೈಬಿಟ್ಟು ತಮಗೆ

ಅನುಕೂಲವಾಗುವ ಮಟ್ಟುಗಳನ್ನು ನಿರ್ಮಿಸಿಕೊಂಡರು. ಎಸ್.ಜಿ. ನರಸಿಂಹಾಚಾರ್, ಹಟ್ಟಿಯಂಗಡಿ ನಾರಾಯಣರು ರಗಳೆ, ಚೌಪದಿ, ಸಾಂಗತ್ಯವನ್ನು ಹೊಸಭಾವ ಮತ್ತು ಭಾಷೆಗೆ ಹೊಂದಿಕೆಯಾಗುವಂತೆ ಬಳಸಿದ್ದಾರೆ. ಪಂಜೆಯವರ ಕೆಲವು ಕವನಗಳಲ್ಲಿ ಮಂದಾನಿಲದ ಧಾಟಿ ಕೆಲವೆಡೆ ೬+೨+೪+೪ ಎಂದೋ ೨+೪+೨+೪+೪ ಎಂದೋ ಒಡೆದು ವೈವಿಧ್ಯವನ್ನು ಸಾಧಿಸಿದ್ದಾರೆ. ಪೈ ಅವರು ಆದಿಪ್ರಾಸದ ನಿರಾಕರಣೆಯ ಪ್ರತಿಜ್ಞೆಮಾಡಿ ಯಶಸ್ವಿಯಾದರು (೧೯೧೧). ಅದು ಹಳೆಯ ಬಂಧ ಮತ್ತು ಲಕ್ಷಣಗಳನ್ನು ಶಿಥಿಲ ಮಾಡಿ ಅವುಗಳನ್ನು ನವೋದಯ ಕಾಲದ ಉದ್ದೇಶಕ್ಕೆ ತಕ್ಕಂತೆ ಬಳಸಿಕೊಂಡ ಸಂಗತಿಯು ತುಂಬ ಮುಖ್ಯವಾಗುತ್ತದೆ.

ಬೇಂದ್ರೆಯವರು ಭಾಮಿನಿ, ವಾರ್ಧಕಗಳಲ್ಲಿ ಅನೇಕ ಕವಿತೆಗಳನ್ನು ರಚಿಸಿದ್ದಾರೆ. ಅವುಗಳ ರಚನೆ ಮತ್ತು ಅಚ್ಚು ಮಾಡಿಸಿರುವ ರೀತಿಯಲ್ಲಿ ಹೊಸ ರೂಪಗಳಾಗಿ ಅವರು ಮಾಡಿದ ಹುಡುಕಾಟದ ಸುಳಿಯನ್ನು ಕಾಣಬಹುದು. 'ಚಂದ್ರ' ಕವಿತೆಯ ಪದ್ಯ ೩+೪+೩+೪ರ ಬದಲು ೫+೨+೫+೨ ಎಂಬ ಗಣಪ್ರವೃತ್ತಿ ಯನ್ನು ಕಾಣಬಹುದು. ಅಲ್ಲಲ್ಲಿ ಜಾನಪದ ಮಟ್ಟುಗಳನ್ನು ಬಳಸಿಕೊಂಡಿದ್ದಾರೆ. ಅವರು ಜಾನಪದ ಗತಿಯ ಮಾರ್ಗದಲ್ಲಿ ಕೆಲವು ನೂತನ ಪ್ರಯೋಗಗಳನ್ನು ಮಾಡಿದರು. ಗಣಗಳನ್ನು ಒಡೆದಿರು ವುದು ನವೋದಯ ಛಂದಸ್ಸಿನ ಪ್ರಮುಖ ಲಕ್ಷಣಗಳಲ್ಲೊಂದು. ಕುವೆಂಪು ಅವರ 'ನೇಗಿಲಯೋಗಿ'ಯಲ್ಲಿ ಶರಷಟ್ಪದಿಯ ನಂತರ ಮಂದಾನಿಲಯ ಎರಡು ಸಾಲುಗಳಿವೆ. ಪು.ತಿ.ನ. ಅವರ 'ಗೋಕುಲ ನಿರ್ಗಮನ'ದಲ್ಲಿ ಅನೇಕ ಅಕ್ಷರ ವೃತ್ತಗಳನ್ನು ಗುರುತಿಸ ಬಹುದು. ಕೆ.ಎಸ್.ಎನ್.ರ 'ದೀಪದ ಮಲ್ಲಿ' ಸಂಕಲನದ ಅನೇಕ ಕವನಗಳಲ್ಲಿ ಸಂಭಾಷಣೆಯ ಶೈಲಿ, ಆಡುಮಾತಿನ ಧಾಟಿ ಕಾಣಿಸಿಕೊಳ್ಳುತ್ತದೆ. ಅಡಿಗರ 'ಹಕ್ಕಿ' ಕವನ ವಾರ್ಧಕದಲ್ಲಿದೆ. ಹೊಸ ಛಂದಸ್ಸಿನ ಪ್ರಯೋಗಗಳು, ವೈವಿಧ್ಯತೆಗಳ ಅಧ್ಯಯನ ತುಂಬ ಕುತೂಹಲಕಾರಿಯಾಗಿದೆ.

ಒಟ್ಟಿನಲ್ಲಿ, ನವೋದಯ ಕವಿಗಳು ಹಳೆಯ ಛಂದಸ್ಸಿನ ರೂಢಿಯ ಲಯಗಳನ್ನು ಒಳಗೊಂಡಂತೆ ತೋರಿದರೂ ಗಣರಚನೆ. ಪಾದನಿಯಮ. ಪಾದಸಂಖ್ಯೆ, ಪ್ರಾಸ, ಯತಿ ಇವುಗಳಲ್ಲಿ ಗಮನಾರ್ಹವಾಗಿ ಸ್ವತಂತ್ರ ಹಾದಿಯನ್ನು ಹಿಡಿದು, ಹೊಸರೂಪ ಗಳನ್ನು ನಿರ್ಮಿಸಿಕೊಂಡರು.

ಹೊಸಗನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಕಣವಿಯವರ ಪ್ರಾತಿನಿಧಿಕ ಕವನಗಳನ್ನು ಅನುಲಕ್ಷಿಸಿ ಅವುಗಳ ಛಂದೋಲಯಗಳ ವೈಶಿಷ್ಟ್ಯತೆಗಳನ್ನು 'ಕಣವಿ ಯವರ ಕವಿತೆಗಳ ಛಂದಸ್ಸನ್ನು ಕುರಿತು' ಎಂಬ ಲೇಖನದಲ್ಲಿ ಗುರುತಿಸಿದ್ದಾರೆ. ಕಣವಿಯವರ ಆರಂಭದ ಕವಿತೆಗಳು ನವೋದಯ ಕಾವ್ಯ ಪರಂಪರೆಯ ಪರಿಚಿತವಾದ ೩, ೪, ೩, ೪ ಮಾತ್ರೆಗಳ ಲಯದಲ್ಲಿ ಸಾಗುತ್ತವೆ. 'ಬಸವನಾಳರಿಗೆ ಬಾಷ್ಪಾಂಜಲಿ', 'ಧಾರವಾಡದ ಮಳೆಗಾಲ' ಇಂತಹ ಕವನಗಳು. ೩, ೪, ೩, ೪ ಮಾತ್ರೆಗಳ ಲಯದಲ್ಲಿ

ಸಾಗಿ ಕಾವ್ಯದ ಆಶಯವನ್ನು ಈಡೇರಿಸುತ್ತದೆ. 'ಗಿರಿಗಿರಿಗಿಂಡಿ' ಎಂಬ ಶಿಶುಪ್ರಾಸದಲ್ಲಿ ಕವಿ ಸಹಜವಾಗಿ ತರುವ ಅಂತ್ಯಪ್ರಾಸ ಮತ್ತು ಒಳಪ್ರಾಸಗಳಲ್ಲಿ ಕವನದ ಸೌಂದರ್ಯ ಅಡಗಿರುತ್ತದೆ. ಪ್ರಾಸ, ಲಯ, ಭಾವಕ್ಕೆ ತಕ್ಕಂತೆ ಭಾಷೆ ಬಾಗುತ್ತದೆ, ಕವಿತೆಗೆ ಹಿತವಾದ ಅನುಭವವನ್ನು ತಂದುಕೊಡುತ್ತೆ. 'ಒಬ್ಬರ ಮೇಲೊಬ್ಬರು ಹತ್ತಿ ಹತ್ತಿಕ್ಕಿ ಹತಿಯಂಡಿಗೆ ಯಂತೆ ತುಳಿಯುತ್ತಿಹರು' ಎಂಬ ಚರಣಗಳಲ್ಲಿ ಕಿತ್ತೂರು ಕರ್ನಾಟಕದ ಪ್ರದೇಶದ ಗ್ರಾಮ್ಯ ಭಾಷೆಯ ಸೊಗಡು ಜೀವಂತವಾಗಿದೆ. 'ಅತ್ತಿದ್ದು ಮತ್ತೆ ಸಂತೋಷ ಉಕ್ಕಿದ್ದು ನೆನಪಾಗುತ್ತದೆ' ಎಂಬ ಚರಣಗಳಲ್ಲಿ ಅವರು ಬಳಸುವ ವಿರಾಮ ಸ್ಥಾನಗಳು ಅರ್ಥ ಗರ್ಭಿತವಾಗಿವೆ. ನೆನಪಾಗುತ್ತದೆ. ಅವು ಕವಿತೆಗೆ ಅಪೂರ್ವ ಹದವನ್ನು ತಂದುಕೊಡುತ್ತವೆ. ಹೊಸಗನ್ನಡ ಕವಿಗಳಲ್ಲಿ ಅತಿಹೆಚ್ಚು ಸಾನೆಟ್ಟುಗಳನ್ನು ಬಳಸಿದವರೆಂದರೆ ಕಣವಿಯವರು. ಅವರ ಸಾನೆಟ್ಟುಗಳ ಬಗ್ಗೆ ಪ್ರತ್ಯೇಕ ಅಭ್ಯಾಸ ಆಗಬೇಕಾಗಿದೆ ಎಂದು ಸೂಚನೆ ಕೊಟ್ಟದ್ದು ಸಹಜವಾಗಿದೆ.

ಒಟ್ಟಿನಲ್ಲಿ, ಚಿದಾನಂದಮೂರ್ತಿ ಅವರ ಸಂಪ್ರಬಂಧಗಳನ್ನು ಓದಿ ಮುಗಿಸಿದಾಗ ಅದೊಂದು ವಿದ್ವತ್ ಸಾಹಸವೆಂದು ಯಾರಿಗಾದರೂ ಅನಿಸುತ್ತದೆ. ಛಂದಸ್ಸಿನ ಅಧ್ಯಯನದ ಮೂಲಕ ಅವರು ಕನ್ನಡ ಛಂದಸ್ಸಿನ ವಿಕಾಸ ಕ್ರಮವನ್ನು ತೋರಿಸಿದ್ದಾರೆ ಎಂಬುದನ್ನು ಗಮನಿಸಬೇಕು. ಛಂದೋಮಟ್ಟುಗಳ ಲಕ್ಷಣಗಳಿಗೆ ಆಧುನಿಕ ಮತ್ತು ಅರ್ವಾಚೀನ ಕಾವ್ಯಗಳಿಂದ ನಿದರ್ಶನಗಳನ್ನು ಬಳಸಿ, ಸಮಕಾಲೀನತೆಯೊಂದಿಗೆ ಅವುಗಳನ್ನು ವಿಮರ್ಶಿಸುವ ರೀತಿ ಹೊಚ್ಚಹೊಸದಾಗಿದೆ. ಇದರಿಂದ ಛಂದಃ ಶೋಧನೆ ಯಲ್ಲಿ ಅಲೋಚನಾನಿಷ್ಠ ಬರವಣಿಗೆ ಬೆಳೆದು ಬಂದಿತು. ಸಾಹಿತ್ಯ ವಿದ್ವಾಂಸರಿಗೆ, ವಿಮರ್ಶಕರಿಗೆ ಛಂದಸ್ಸಿನ ಹಿನ್ನೆಲೆಯ ಅರಿವಿಲ್ಲದೆ ಹೋದರೆ ಆಗುವ ನಷ್ಟ ಎಷ್ಟೆಂಬು ದನ್ನು ಇಲ್ಲಿಯ ಸಂಪ್ರಬಂಧಗಳು ಪರೋಕ್ಷವಾಗಿ ಸೂಚಿಸುತ್ತವೆ. ಒಂದು ಅಂಶವನ್ನು ಇಲ್ಲಿ ಗಮನಿಸಬೇಕು. ಕವಿ ಕಾವ್ಯದ ಛಂದಸ್ಸು ಭಾಷೆ, ಶೈಲಿ ಮತ್ತು ಅರ್ಥ ಇವುಗಳ ಸಾವಯವ ಸಂಬಂಧವಿರುವುದರಿಂದ ಛಂದಸ್ಸಿನ ಅಧ್ಯಯನ ಶುಷ್ಕವಲ್ಲ. ಅದು ಆಧುನಿಕ ಕಾಲದ ಪ್ರಸ್ತುತತೆಗೆ ಸೀಮಿತವಾಗಿದೆ ಎಂಬ ನಿಲುವನ್ನು ಚಿದಾನಂದಮೂರ್ತಿ ಅವರ ಈ ಸಂಪ್ರಬಂಧಗಳು ಸೂಚಿಸುತ್ತವೆ. ಹೊಸ ಅಧ್ಯಯನ ಸಾಧ್ಯತೆಗಳತ್ತ ಅಧ್ಯಯನ ಕಾರರ ಗಮನಸೆಳೆಯುತ್ತವೆ.

ಅಡಿಟಿಪ್ಪಣಿಗಳು

೧. ಛಂದೋತರಂಗ (೧೯೯೩), ಪು.೪೦

೨. ಪೂರ್ವೋಕ್ತ, ಪು.೬೮

೩. ಪೂರ್ವೋಕ್ತ, ಪು.೭೪

೪. ಪ್ರತಿಪಾದದಲ್ಲಿಯೂ ಇಪ್ಪತ್ತಾರು ಅಕ್ಷರಗಳಿಗಿಂತ ಹೆಚ್ಚು ಅಕ್ಷರಗಳಿರುವ ಅಕ್ಷರ ವೃತ್ತಗಳನ್ನೇ ಮಾಲಾವೃತ್ತಗಳೆಂದು ಕರೆಯುತ್ತಾರೆ. ಪೂರ್ವೋಕ್ತ ಗ್ರಂಥ, ಪು.೭೫

೫. ಪೂರ್ವೋಕ್ತ, ಪು.೮೭

೬. ತ್ರಿಪದಿ : ವಿ.ವಿ.ವಿ.ವಿ. ವಿಬ್ರವಿವಿ ಏಳೆ : ವಿ.ವಿ.ವಿ.ವಿ. ವಿಬ್ರವಿ

೭. ಪೂರ್ವೋಕ್ತ, ಪು.೧೪೭

೮. ಪೂರ್ವೋಕ್ತ, ಪು.೧೫೮

೯. ವಿವರಣೆಗಾಗಿ ನೋಡಿ : ಎಂ. ಚಿದಾನಂದಮೂರ್ತಿ, 'ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ' (೧೯೮೫), ಪು.೧೧೫

೧೦. ಛಂದೋ ತರಂಗ (೧೯೯೩), ಪು.೨೦೬

೧೧. ಪೂರ್ವೋಕ್ತ, ಪು.೨೦೮

೧೨. ಮೂಲದಲ್ಲಿ ಷಟ್ಪದಿ ಒಂದೇ ಆಗಿತ್ತು. ಅದುವೇ ವಿಷ್ಣುಗಣ ಪ್ರಧಾನವಾದ (ಅಂಶಲಯ) ಮೂಲಷಟ್ಪದಿ. ಅದರಿಂದ ಶರ, ಕುಸುಮ ಮುಂತಾದ ಮಾತ್ರಾಗಣ ಷಟ್ಪದಿಗಳು ರೂಪುಗೊಂಡವು. ಅಂಶಷಟ್ಪದಿಗೆ 'ಷಟ್ಪದ'ವೆಂದು ಕರೆದು, ಮೊದಲ ಬಾರಿಗೆ ಅದರ ಸ್ವರೂಪವನ್ನು ತಿಳಿದವರು ಬಹುಶಃ ತೀ.ನಂ.ಶ್ರೀ. ಅವರು

೧೩. ಪೂರ್ವೋಕ್ತ, ಪು.೨೩೮

೧೪. ಪೂರ್ವೋಕ್ತ, ಪು.೨೪೮

೧೫. ಶಾರಾವಳಿಯು ವ್ಯಕ್ತಿಗಳ ಗುಣಗಾನವನ್ನು ಮಾಡುವ ಲಘುಕಾವ್ಯವಾಗಿದೆ.

೧೬. ಪೂರ್ವೋಕ್ತ, ಪು.೨೭೨

೧೭. ಪೂರ್ವೋಕ್ತ, ಪು.೨೮೮

೧೮. ಪೂರ್ವೋಕ್ತ, ಪು.೨೯೬

೬೪

ಕಂಬಾರರ ಕಾವ್ಯ : ಛಂದೋಲಯ

ಛಂದಸ್ಸು ಕಾವ್ಯದ ಸಹಜ ಸ್ವರಾಂದೋಲನ. ಅದರಿಂದಲೇ ಕಾವ್ಯಕ್ಕೆ ಚಲನಶೀಲತೆ ಉಂಟಾಗುತ್ತದೆ. ಅದನ್ನು ಕವಿ ಸ್ಫೂರ್ತಿಯಿಂದಲೋ, ಇಲ್ಲವೇ ಬುದ್ಧಿ ಪೂರ್ವಕವಾಗಿಯೋ ನಿಯತಲಯ, ವಿನ್ಯಾಸಗಳಿಂದ ಪದ್ಯ ಪಾದಗಳನ್ನು ಕವಿ ನಿರ್ಮಿಸುತ್ತಾನೆ. ಈ ಪದ್ಯಲಯ ಗಳನ್ನು ಅಳತೆ ಮಾಡುವ ಮಾನದಂಡವೇ ಛಂದಸ್ಸು. ಛಂದಸ್ಸಿನ ಅಧ್ಯಯನದಲ್ಲಿ ಲಯದ ಪಾತ್ರ ಮುಖ್ಯ. ಒಂದರ್ಥದಲ್ಲಿ ಲಯವೇ ಛಂದಸ್ಸಿನ ಜೀವಾಳ. ಮನುಷ್ಯನ ಮೂಲಭೂತ ಪ್ರವೃತ್ತಿಯಲ್ಲಿ ನಿಯಮ ಬದ್ಧವಾದ ಲಯದ ರಚನೆಯೂ ಒಂದೆನ್ನಬಹುದು. ನಿಸರ್ಗ ನಿಯಮದಲ್ಲಿ ಕೂಡ ಸಮುದ್ರದ ಅಲೆಗಳು ಒಂದು ವ್ಯವಸ್ಥಿತ ರೀತಿಯಲ್ಲಿ ಏಳುತ್ತವೆ, ಬೀಳುತ್ತವೆ. ಗಾಳಿ ಮತ್ತು ಶಬ್ದಗಳು ನಿಯತವಾದ ಗತಿಯಿಂದ ಚಲಿಸುತ್ತವೆ. ಮನುಷ್ಯನ ಹೃದಯ ಹಾಗೂ ನಾಡಿಗಳು ನಿಯತಕ್ರಮದಿಂದ ಮಿಡಿಯುತ್ತಿರುತ್ತವೆ. ಆಡುಮಾತಿನಲ್ಲಿಲ್ಲದ ಒಂದು ಹೆಚ್ಚಿನ ತೀವ್ರತೆ ಹಾಗೂ ಪರಿಣಾಮಕಾರತ್ವವೂ ಈ ಛಂದೋನಿಯಮಗಳಿಂದ ಕವಿವಾಣಿಯಲ್ಲಿ ಎದ್ದುಕಾಣುತ್ತದೆ.

ನಿಯತಾಕ್ಷರ ಸಂಖ್ಯೆಯ ಪದ್ಯದ ಸಾಲುಗಳ ಇಲ್ಲವೆ ನಿಯತ ಗುರು-ಲಘುಗಳ ವಿನ್ಯಾಸಗಳು ಇಲ್ಲವೆ ಸ್ವರಾಘಾತವಿರುವ ಶಬ್ದಾಂಶಗಳಿಂದಾದ ಸಾಲುಗಳ ಇಲ್ಲವೆ ನಿಯತ ಮಾತ್ರಾಕಾಲವಿರುವ ಗಣಗಳಿಂದಾದ ಸಾಲುಗಳ ಸಂಯೋಜನೆಯಷ್ಟೇ ಛಂದಸ್ಸೆಂದು ತಿಳಿಯಬಾರದು. ಪ್ರತಿ ಪದ್ಯದ ಸಾಲಿನಲ್ಲಿಯೂ ನಿಯತ ಸ್ಥಾನದಲ್ಲಿ ಬರಬೇಕಾದ ಯತಿ. ಆದಿಪ್ರಾಸ ಹಾಗೂ ಅಂತ್ಯ ಪ್ರಾಸಗಳ ರಚನಾ ವ್ಯವಸ್ಥೆಯೂ ಛಂದಸ್ಸಿನ ಅವಿಭಾಜ್ಯ ಅಂಗವೆಂದು ತಿಳಿಯುವದು ಯುಕ್ತ. ಅಕ್ಷರ ಹಾಗೂ ಗುರು-ಲಘುಗಳ ಸ್ಥಾನಗಳ ನಿಯಮ ಗಳಲ್ಲದೆ ಯತಿಯೂ (ವಿರಾಮ) ಛಂದಸ್ಸಿನ ಮೂಲಭೂತ ಲಕ್ಷಣಾಂಶದಲ್ಲಿಯೇ ಅಂತರ್ಗತ ವಾಗುತ್ತದೆ. ಇದನ್ನು ಕಾವ್ಯದ ಸಂದರ್ಭದಲ್ಲಿ ಅನ್ವಯಿಸಿ ಹೇಳುವುದಾದರೆ ಕವಿಯ ಭಾವ, ಲಯದ ಚೌಕಟ್ಟಿನಲ್ಲಿ ಹರಳುಗೊಂಡಾಗ ಅರ್ಥ ಪುಷ್ಟಿ ಪಡೆಯುತ್ತದೆ. ಕವಿಯ

ಭಾವನೆಗಳನ್ನು ಘನೀಭವಿಸಿ ನಿಲ್ಲುವಲ್ಲಿ ಛಂದಸ್ಸು ಪ್ರಮುಖ ಪಾತ್ರ ವಹಿಸುತ್ತದೆ. ಭಾವ, ಭಾಷೆ, ಕಾವ್ಯಬಂಧ ಇವು ಅವಿನಾಭಾವವಾಗಿ ಒಂದು ಇನ್ನೊಂದಕ್ಕೆ ಪೂರಕವಾಗಿವೆ. ಕಾವ್ಯದಲ್ಲಿ ಭಾಷೆ, ಶೈಲಿ ಅಲಂಕಾರಗಳಂತೆ ಛಂದಸ್ಸು ಕಾವ್ಯದ ಒಳಗಿನ ಅಂಗ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ. ಈ ಹಿನ್ನೆಲೆಯಲ್ಲಿ ಕಂಬಾರರ ಕಾವ್ಯದ ಛಂದೋಲಯ ವನ್ನು ಗುರುತಿಸುವುದು ಈ ಅಧ್ಯಾಯದ ಉದ್ದೇಶವಾಗಿದೆ.

ಛಂದಸ್ಸಿನ ದೃಷ್ಟಿಯಿಂದ ೨೦ನೆಯ ಶತಮಾನವು ಮಹತ್ವ ಪೂರ್ಣವಾದುದೆಂದು ಹೇಳಬೇಕು. ರಗಳೆ, ಷಟ್ಪದಿ, ತ್ರಿಪದಿ, ಚೌಪದಿ, ಸಾಂಗತ್ಯಗಳೆಲ್ಲ ಭಾವ ವಿಸ್ತಾರಕ್ಕೆ ತಕ್ಕಂತೆ ತುಂಡು ಮಾಡಿ, ಸಂಕ್ಷೇಪ ಮಾಡಿ ಅಥವಾ ವಿಸ್ತಾರ ಮಾಡಿ ಬಳಸಿಕೊಂಡಿರುವ ಸಾಧನೆ ನಡೆದದ್ದು ಈ ಕಾಲದಲ್ಲಿ. ಬಿ.ಎಂ.ಶ್ರೀ ಅವರು ಇಂಗ್ಲಿಶ್ ಭಾಷೆ-ಸಾಹಿತ್ಯದ ಪ್ರಭಾವ ಪ್ರೇರಣೆಯಿಂದ ಕನ್ನಡ ಛಂದಸ್ಸಿನ ಅತಿಯಾದ ನಿಯಮಗಳ ಹೊರೆಯನ್ನು ಕಳಚಿ ಹಾಕುವುದರಲ್ಲಿ ಯಶಸ್ವಿಯಾದರು. ಅರ್ಥದ ಪೋಷಣೆಗಾಗಿ ಒಂದು ಅಥವಾ ಎರಡು ಸಾಲುಗಳನ್ನು ನಾಲ್ಕು, ಐದು, ಆರು ಸಾಲುಗಳಾಗಿ ಮಾಡುವ ಪ್ರಯತ್ನಗಳು ನಡೆದವು. ಈ ಹಿನ್ನೆಲೆಯಲ್ಲಿ ಕವಿಗಳಿಗೆ ಶಬ್ದ, ಲಯ, ಭಾಷೆ ಮತ್ತು ಅಲಂಕಾರಗಳಲ್ಲಿ ಆಡಂಬರವನ್ನು ತೆಗೆದು ಹಾಕಿ ಆಡುಮಾತಿನ ಕಸುವು ಮತ್ತು ಲಯಗಳನ್ನು ಬಳಸಿಕೊಳ್ಳುವ ಕಡೆಗೆ ಕವಿಗಳ ಮನಸ್ಸುವಾಲಿತು.

ಇದರಿಂದ ಅಂತಹ ಛಂದಸ್ಸನ್ನು ಬಳಸಬೇಕು; ಇಂತಹ ಛಂದಸ್ಸನ್ನು ಬಳಸಬೇಕು ಎನ್ನುವುದಕ್ಕಿಂತ ಹೆಚ್ಚಾಗಿ ಕವಿದೃಷ್ಟಿ, ಭಾವಕ್ಕೆ ಉಚಿತವಾದ ಲಯಗಳನಷ್ಟೆ ಬಳಸಬೇಕೆನ್ನುವ ವೈಚಾರಿಕ ಕ್ರಾಂತಿಯ ಮನೋವೃತ್ತಿ ತಾಳಿತು. ಈ ದೃಷ್ಟಿ ಮೂಡುತ್ತಿದ್ದಂತೆ ನವ್ಯಕಾವ್ಯದ ಛಂದಸ್ಸು ಮುಕ್ತ ಛಂದಸ್ಸಾಯಿತು. ಅಂತಹ ಛಂದೋಬಂಧಗಳನ್ನು ವಿಶೇಷವಾಗಿ ಜಾನಪದ ಮಟ್ಟುಗಳನ್ನು ಸಮರ್ಥವಾಗಿ ಬಳಸಿದ ಕವಿಗಳಲ್ಲಿ ಕಂಬಾರರು ಮುಖ್ಯರು. ಕಂಬಾರರ ಮುಗಳು (೧೯೫೮), ತಕರಾರಿನವರು (೧೯೭೦), ಸಾವಿರದ ನೆರಳು (೧೯೭೯), ಬೆಳ್ಳಿಮೀನು (೧೯೮೯), ಅಕ್ಕಕ್ಕು ಹಾಡುಗಳೇ (೧೯೯೪) ಈ ಕವನ ಸಂಗ್ರಹಗಳನ್ನು ಮುಖ್ಯವಾಗಿ ಗಮನಿಸಿ ಕಂಬಾರರ ಕಾವ್ಯದ ಛಂದೋವಿನ್ಯಾಸವನ್ನು ವಿವೇಚಿಸೋಣ. ಕಾವ್ಯದ ಸೃಷ್ಟಿಯಲ್ಲಿ ಕಂಬಾರರ ಪ್ರಯೋಗ ಪ್ರವೃತ್ತಿ ಸ್ವಚ್ಛಂದದತ್ತ ಹರಿದಿದೆ.

ಕಂಬಾರರ ಸಹಜ ಮಾತಿನ ಎಳೆತ ಸೆಳೆತಗಳು ಅವರ ಗೀತೆಗಳಲ್ಲಿ ಗೇಯವಾಗಿ ಸುಳಿದು ಬಂದಿವೆ. ಜಾನಪದ ಲಯಗಳಿಗೆ ಅವರು ಕೊಟ್ಟ ಸೊಗಸಾದ ತಿರುವುಗಳು ಅವರ ಗೀತಗಳ ವೈಶಿಷ್ಟ್ಯಕ್ಕೆ ದಾರಿಗೆಯ್ದಿವೆ. ಕಂಬಾರರು ಮೊದಲಿನಿಂದಲೂ ಮಾತ್ರಾ ಛಂದೋಬಂಧಗಳ ಜೊತೆ ಜೊತೆಗೆ ಅಂದವಾದ ಜಾನಪದ ಗತಿ ಗತ್ತುಗಳನ್ನು ತಮ್ಮ ಹಾಡುಗಳಲ್ಲಿ ತಮ್ಮದೇ ಆದ ರೀತಿಯಲ್ಲಿ ಬಳಸುತ್ತ ಬಂದಿದ್ದಾರೆ. ಅವರ 'ಮುಗಳು', 'ಹೇಳತೇನ ಕೇಳ', 'ಸಾವಿರದ ನೆರಳು' ಸೇರಿದ ಈ ಬಗೆಯ ಹಲವಾರು ಹಾಡುಗಳು ಈ ಮಾತಿಗೆ ಸಾಕ್ಷಿಯಾಗಿವೆ. 'ಹೋರಿ', 'ಮೂವ್ವತ್ತೆ ತುಂಗನಿಗೆ', 'ಗುಡುಗುಡುಗುಮ್ಮ', 'ಕಾಡುಕುದುರೆ', 'ಕರಿಹೈದ', 'ಕಾಂತನಿಲ್ಲದ

ಮ್ಯಾಲೆ'- ಇವೆ ಮೊದಲಾದ ಗೀತೆಗಳು ಜಾನಪದ ವೈವಿಧ್ಯಕ್ಕೆ ಒಳ್ಳೆಯ ಉದಾಹರಣೆಗಳು. 'ಸಾವಿರದ ನೆರಳು' ಸಂಕಲನದ ಕವನಗಳಂತೂ ಜಾನಪದ ಛಂದಃಪ್ರಯೋಗಗಳು ಮುಂದುವರಿದು ಜಾನಪದ ಛಂದವೆಂದು ಕಂಬಾರರು, ಕಂಬಾರರೆಂದರೆ ಜಾನಪದ ಬಂಧ ಎನ್ನುವಷ್ಟರ ಮಟ್ಟಿಗೆ ಈ ನಂಟು ಬೆಳೆದು ಬಂದಿದೆ.

ಕಾಡು ಕುದುರಿ ಓಡಿ ಬಂದಿತ್ತ||
ಊರಿನಾಚೆ ದೂರ ದಾರಿ
ಸುರುವಾಗೊ ಜಾಗದಲ್ಲಿ|
ಮೂಡುಬೆಟ್ಟ ಸೂರ್ಯಹುಟ್ಟಿ
ಹಸರಿನ ಗುಟ್ಟ ಒಡೆವಲ್ಲಿ|
ಮುಗಿವೇ ಇಲ್ಲದ|
ಮುಗಿಲಿನಿಂದ
ಜಾರಿ ಬಿದ್ದ ಉಲ್ಕೀ ಹಾಂಗ
ಕಾಡಿನಿಂದ ಚಂಗನೆ ನೆಗೆದಿತ್ತ||

'ಕಾಡು ಕುದುರಿ ಓಡಿ ಬಂದಿತ್ತ' ಎಂದು ಪ್ರಾರಂಭವಾಗುವ ಚರಣಗಳಲ್ಲಿ ಕೌತುಕ ಭಾವಕ್ಕೆ ಸರಾಗವಾಗಿ ಸರಿ ಹೋಗುವ ಲಯಕ್ಕೆ ಸಹೃದಯ ವಾಚಕರನ್ನು ತಟ್ಟನೆ ಸೆರೆ ಹಿಡಿಯುತ್ತದೆ. ಕುದುರೆಯ ಓಟ ಮಂದಾನಿಲ ಲಯದಲ್ಲಿ ಆಡಿದೆ, ಈ ಹಾಡಿನಲ್ಲಿ 'ಜಾರಿಬಿದ್ದ ಉಲ್ಕೀ ಹಾಂಗ|', 'ಕಾಡಿನಿಂದ ಚಂಗನೆ ನೆಗೆದಿತ್ತ' ಅದರ ಓಟದ ಮನೋಹರ ನೋಟ ಕಣ್ಣಿಗೆ ಕಟ್ಟುವಂತೆ ಮಾಡಿವೆ ಆ ಪ್ರತಿಮೆಗಳು.

ಮೈಯ ಬೆಂಕಿ ಮಿರಗತಿತ್ತ
ಬ್ಯಾಸ್ಗಿ ಬಿಸಿಲ ಉಸಿರಾಡಿತ್ತ|
ಹೊತ್ತಿ ಉರಿಯೋ ಕೇಶರಾಶಿ
ಕತ್ತಿನಾಗ ಕುಣೇತಿತ್ತ|
ಧೂಮಕೇತು|
ಹಿಂಬಾಲಿತ್ತ|
ಹೌಹಾರಿತ್ತ ಹರಿದಾಡಿತ್ತ|
ಹೈ ಹೈ ಅಂತ ಹಾರಿ ಬಂದಿತ್ತ||

ಕುದುರೆಯ ಓಟ ಕೂಡ ಈ ಮಂದಾನಿಲ ಲಯದಲ್ಲಿಯೇ ಇನ್ನೊಂದು ಬಗೆಯ ಜಯವನ್ನು ಸಾಧಿಸಿದೆ. ಇದರ ಪ್ರಾಸ ವಿನ್ಯಾಸದಿಂದಾಗಿ ಈ ಹಾಡಿಗೆ ಹೆಚ್ಚಿನ ಗೇಯತೆ ಪ್ರಾಪ್ತವಾಗಿದೆ. ಅಂಶಗಣಗಳನ್ನು ಒಳಗೊಂಡ ಈ ಹಾಡಿನ ಒಡಲಲ್ಲಿ ಅಂದವಾದ ಪ್ರತಿಮೆಗಳನ್ನು ಬಿಡಿಸಿದ್ದಾರೆ ಕಂಬಾರರು. ಆಡುನುಡಿಗಳು, ಉದ್ಗಾರ ವಾಚಕಗಳು ಅರ್ಥಪೂರ್ಣವಾಗಿ

ಬಳಕೆಯಾಗಿವೆ. ಜೊತೆಗೆ ಕುದುರಿ ಓಡುವ ರೀತಿಯನ್ನು ಅದರ ಸುಳುಹು ಹೊಳಹುಗಳನ್ನು ರೂಪಕದಲ್ಲಿ ಕಣ್ಣಿಗೆತ್ತಿ ತೋರಿಸಿದ್ದಾರೆ ಹೀಗೆ:

ಕಣ್ಣಿನಾಗ ಸಣ್ಣ ಖಡ್ಗ
ಆಸುಪಾಸು ಝುಳಪಿಸಿತ್ತ।
ಬೆನ್ನ ಹುರಿ ಬಿಗಿದಿತ್ತಣ್ಣ
ಸೊಂಟದ ಬುಗರಿ ತಿರಗತಿತ್ತ।
ಬಿಗಿದ ಕಾಂಡ।
ಬಿಲ್ಲಿನಿಂದ।
ಬಿಟ್ಟ ಬಾಣಧಾಂಗ ಚಿಮ್ಮಿ।
ಹದ್ದಮೀರಿ ಹಾರಿ ಬಂದಿತ್ತ॥

ಸಾಲು ಸಾಲುಗಳಲ್ಲಿ ಹೃದ್ಯವಾದ ಭಾವ, ಲಯ ಚಲುವರಿಯುವ ಸೊಗಸು ಅನುಭವಕ್ಕೆ ಬರುತ್ತದೆ. 'ಬಿಟ್ಟ ಬಾಣಧಾಂಗ ಚಿಮ್ಮಿ' ಆರಂಭದಲ್ಲಿ ಕ್ರಿಯಾಪದ ಬರುವುದರಿಂದ ಕುದುರೆ ಓಟಕ್ಕೆ ತೀವ್ರತೆ ಬಂದಿದೆ. ಕಂಬಾರರು ಆಡುಮಾತಿನ ಲಯದ ನೈಜನಾಡಿಯ ಬೆಡಗನ್ನೇ ಹಿಡಿದಿದ್ದಾರೆ. ಕುದುರೆಯ ಓಟ, ಅಟ್ಟಹಾಸ ಮೇಲೆ ಕುಳಿತವರನ್ನು ಯಾವ ರೀತಿಯಾಗಿ ಕೆಡುವುತ್ತಿತ್ತು ಎಂಬುದನ್ನು ದೈನಂದಿನ ರೂಪಕಗಳನ್ನು ಬಳಸಿ ಹೇಳಿದ್ದಾರೆ.

ನೆಲ ಒದ್ದು ಗುದ್ದ ತೋಡಿ
ಗುದ್ದನ ಬದ್ದಿ ಒದ್ದಿಯಾಗಿ।
ಒರ್ತಿನೀರು ಭರ್ತಿಯಾಗಿ
ಹರಿಯೋ ಹಾಂಗ ಹೆಜ್ಜೀ ಹಾಕಿ
ಹತ್ತಿದವರು।
ಎತ್ತಿಕೊಂಡು।
ಏಳಕೊಳ್ಳ ತಿಳ್ಳೀ ಆಡಿ।
ಕಳ್ಳೆಮಳ್ಳೆ ಆಡಿಸಿ ಕೆಡವಿತ್ತ॥

ಮಂದಾನಿಲ ಲಯದ ಇಲ್ಲಿಯ ಚರಣಗಳು ಸರಳ ನುಡಿಗಳಲ್ಲಿ ಸುರಳಿಯಂತೆ ಸುತ್ತುತ್ತ ಮತ್ತು ಬಿಚ್ಚುತ್ತ ಬರುವ ಹಾಡು ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿದೆ. 'ಒರ್ತಿನೀರು', 'ಕಳ್ಳೆಮಳ್ಳೆ' ಇವು ಬೆಳಗಾವಿ ಪ್ರದೇಶದ ಪದಪುಂಜಗಳನ್ನು ಕಂಬಾರರು ಅರ್ಥಪೂರ್ಣವಾಗಿ ಬಳಸಿದ್ದಾರೆ. ಇಲ್ಲಿಯ ರೂಪಕದ ರೀತಿ ಮತ್ತು ನಾದ ವೈಖರಿಯನ್ನು ಎತ್ತಿ ತೋರುವಂತಹದು. ಮಂದಾನಿಲಯದ ಓಟ ಕಂಬಾರರಿಗೆ ತುಂಬ ಪ್ರಿಯವಾದುದು. ಅದರ ನೆಲೆಯ ಕಲೆಯನ್ನು ಈ ಪದ್ಯದಲ್ಲಿ ಮನೋಹರವಾಗಿ ಬಳಸಿದ್ದಾರೆ. 'ಒಂದಾನೊಂದು ಕಾಲದಲ್ಲಿ' ಕಂಬಾರರು ನಿಧಾನ ಗತಿಯಿಂದ ಆನಂದ ಲಹರಿಯ ಗತ್ತಿಗೆ ಅದ್ಭುತವಾಗಿ ಚಿತ್ರಿಸಿದ್ದಾರೆ. ಅದೊಂದು ರಸದ ಸೆಲೆಯಾಗಿ ಪರಿಣಮಿಸಿದೆ.

ಒಂದಾನೊಂದು ಕಾಲದಾಗ ಏಸೊಂದ ಮುದವಿತ್ತ
ಏಸೊಂದ ಮುದವಿತ್ತ
ಮುದಕೊಂದ ಹದವಿತ್ತ
ಹದಕ ಹಂಗಾಮಿತ್ತ| ಅದಕೊಂದ
ಶಿವನ ಲಗಾಮಿತ್ತ||

ಈ ಲಯದ ಲಾಸ್ಯಕ್ಕೆ ತಲೆದೂಗದಿರುವುದು ಹೇಗೆ? ಅದು ಉಂಟುಮಾಡುವ ಆನಂದವು ಪದ್ಯದಲ್ಲಿಯೇ ಅಭಿವ್ಯಕ್ತವಾಗಿದೆ.

ಏಳ ಹೇಳಲೆ ಕಾಲದ ಮಹಿಮಾ ತಪ್ಪಿದಾವ ತಾಳ
ಗಾಳಿಗಿ ಬೆದಿ ಬಂದ ಬೀಸ್ಯಾವ ಬಿರುಗಾಳಿ
ಉಸರ ಹಾಕತಾಳ| ಕೇಳವ
ರಿಲ್ಲ ನೆಲದ ಗೋಳಾ||

ಈ ಮೊದಲೇ ಹೇಳಿದ 'ಕಾಡುಕುದುರೆ' ಮೊದಲಾದ ಕವಿತೆಗಳಲ್ಲಿ ಸವಿದೋರಿದ ಲಯವನ್ನೇ ಮುಂದೆ ಈ ಕವಿ 'ಬೆಳ್ಳಿಮೀನು' ಹಿಂದಣ ಅಚ್ಚಕನ್ನಡ 'ಅಕ್ಕರ ಛಂದ'ದ ರೀತಿಯಲ್ಲಿ ಬಳಸಿದ್ದಾರೆ. ಅದು 'ಪಿರಿಯಕ್ಕರ'ದ ಹತ್ತಿರವಾದ ಮಟ್ಟು. ಅದರ ಅಂದವನ್ನು ಕೆಳಗಣ ಚರಣಗಳಿಗೆ ದನಿಗೂಡಿಸಿ ಅರಿಯಬಹುದು.

ಒಬ್ಬೊಂಟಿ : ಯಾದಾಗ : ಬೇಕೆಂದೆ ಬೆದೆನೆಗೆದು
ನೆರಳಿ : ನಜೋಡಿ : ತಿಳ್ಳಿಆಡಿ

ಈ ರೀತಿಯ ಚರಣಗಳ ನಾಲ್ಕು ಜೋಡಣೆಗಳನ್ನು ಒಳಗೊಂಡಿದೆ. 'ನೆರಳಿನ ಜೋಡಿ'ಯು ಒಂದೊಂದು ಪದ್ಯ. ಒಟ್ಟು, ಈ ಬಗೆಯ ಎಂಟು ಚರಣಗಳು ಪಿರಿಯಕ್ಕರದ ಒಂದು ಪದ್ಯಕ್ಕೆ ಸಮವಾಗಿರುತ್ತವೆ. 'ನವಿಲೇ ನವಿಲೇ' ಒಂದು ಜಾನಪದ ಪೌರಾಣಿಕ ಕತೆಯನ್ನು ಚಿತ್ರಿಸುವ ಕಥನಗೀತೆ. ದೀರ್ಘವಾಗಿ ಹೊಸಲಿಡುವ ಈ ಕಥನಗೀತಕ್ಕಾಗಿ ಕವಿ ಈ ಅಕ್ಕರ ಛಂದವನ್ನು ಹದುಳವಾಗಿ ಬಳಸಿದ್ದಾರೆ.

ನವಿಲೇ; ನವಿಲೇ; ಚೆಂದೊಳ್ಳಿ; ನವಿಲೇ
ನಾದಗಳು; ನುಡಿಯಾ; ಗಲೇ|
ಹಾಡಾದ; ನುಡಿಯೊ; ಳಗೆ ಬೆಳ; ಕಾಡಿ; ಹಾಡಿನ;
ಆಚೆ; ಸೀಮೆಯ; ತೋರ; ಲೇss

ಎಂಬ ಪಲ್ಲವಿ ಈ ಗೀತದ ಸುತ್ತು ಸುತ್ತಿ ನಲಿ ಸುಳಿದು ಬಂದು ಗೀತದ ರಮ್ಯತೆಯನ್ನು ಹೆಚ್ಚಿಸಿದೆ. ಕಾವ್ಯಕ್ಕೂ ಛಂದಸ್ಸಿಗೂ ಇರಬೇಕಾದ ಒಂದು ಸಹಜವೂ-ನಿಕಟವೂ ಆ ಸಂಬಂಧವನ್ನು ಇಂತಹ ಗೀತೆಗಳಲ್ಲಿ ಗುರುತಿಸಬಹುದಾಗಿದೆ.

ನಮ್ಮೂರೆಂದರೆ ಘಟಪ್ರಭೆಯೆಂಬ ನದಿ
ಓಂ ಪ್ರಥಮದಲ್ಲಿ ಈ ನದಿಯಲ್ಲಿ
ಕಾಲಿಳಿಬಿಟ್ಟು ಕೂತದ್ದೇ ನಮ್ಮ ಹಳ್ಳಿ

ಕಂಬಾರರು ಎಳೆವಯದಲ್ಲಿ ತಮ್ಮ ಹಳ್ಳಿಯ ವಾತಾವರಣದಲ್ಲಿ ತೇಲಿ ಬರುತ್ತಿದ್ದ ಜಾನಪದ ಹಾಡುಗಳು ಅವರ ಮೇಲೆ ತುಂಬ ಪರಿಣಾಮವನ್ನುಂಟು ಮಾಡಿರಲು ಸಾಕು: ಎಳೆವಯಸ್ಸಿನಲ್ಲಿದ್ದ ಕವಿ ಆ ಹಾಡುಗಳ ಸವಿಗೆ ಕಿವಿ ತೆರೆದು, ಚರಣ ಕರಣಗಳಲ್ಲಿ ಅವುಗಳನ್ನು ಬರಮಾಡಿಕೊಂಡಿರಬೇಕು. ಸರಿ; ಕವಿಯ ಮನದಲ್ಲಿ ನೆಲೆ ನಿಂತಿದ್ದ ರಾಗಪರಾಗ ಅವರು ರಚನೆಗೆ ತೊಡಗಿದಾಗ ಅವರ ಪದಗಳಲ್ಲಿ ಸರಾಗವಾಗಿ ಹೊರಬಂದಿದ್ದರೆ ಅದು ಸ್ವಾಭಾವಿಕ. ಹಳೆಯ ಗತ್ತುಗಳೊಡನೆ ಹೊಸಛಂದೋಗತಿಗಳು ಕವಿಯ ಜೀವನಾನುಭವಗಳನ್ನು ತೆರೆಗೊಳಿಸಿದವು ಅವರ ಗೀತಶ್ರುತಿ ಯನ್ನು ವಿಶಿಷ್ಟಗೊಳಿಸಿದುವು. ಹೇಳತೇನ ಕೇಳ ತರುವಾಯ ತಕರಾರಿನವರು, ಸಾವಿರದ ನೆರಳು, ಬೆಳ್ಳಿಮೀನು ಹೀಗೆ ಕಂಬಾರರ ಕವನ ಸಂಕಲನಗಳು ಹವಣು ಹವಣಾಗಿ ಇಳಿದು ಬಂದು ವಿವಿಧ ಗಮಕಗಳಿಂದ ಜನಮನಸವನ್ನು ತಣಿಸಿದವು.

ಕಂಬಾರರು ಕೆಲವು ಲಾವಣಿ ಬಂಧಗಳ ಲಾವಣ್ಯವನ್ನು ತಮ್ಮ ಕೆಲವು ಕವಿತೆಗಳಲ್ಲಿ ಎತ್ತಿ ತೋರಿದುದುಂಟು. ಅವರ 'ಹೇಳತೇನ ಕೇಳ'ದಲ್ಲಿ ಲಾವಣಿ ಶಿಲ್ಪವನ್ನು ಸಮರ್ಥವಾಗಿ ಕಾಣಬಹುದು' ಅದರಂತೆ ಅಂಬಿಗರಣ್ಣ ಲಾವಣಿಯು ಲಾವಣಿ ಮಟ್ಟಿನಲ್ಲಿ ರೂಪಿತವಾಗಿದೆ. ಲಾವಣಿಯ 'ಚೌಕ' ಬೆಡಗಿನೊಡನೆ ಚಲನೆಗೊಳ್ಳುವುದು ಹೀಗೆ:

ನದಿಯಾಚೆ ದಡದ ತಿಳಿನೀರಿನಲ್ಲಿ ಚಂದಿರನೆ
ಬೆಳ್ಳಿಮೀನಾಗಿ ಈಜುವನು ಎಂದು
ಬಲೆ ಹಾಕಿ ಅವನ ನೀಗಲೆ ಹಿಡಿಯಬೇಕೆಂದು
ಅಂಬಿಗರ ಹುಡುಗ ಹೊರಟಾನು

ಅಂಬಿಗರ ಹುಡುಗನ ಮೀನ ಹಿಡಿಯಲಿಕ್ಕೆ ಹೊರಡುವ ಭಾವ ಇಲ್ಲಿದೆ. ಮೀನ ಹಿಡಿಯುವ ಹವಣಿಕೆ ಈ ಲಾವಣಿಯ ಉಯ್ಯಾಲೆಯಲ್ಲಿ ಜೀಕಿ ಬಂದಿದೆ.

ಗಗನದ ತುಂಬೆಲ್ಲ ಘನಘನಘನವೆಂದು
ಗುಡುಗ್ಯಾಡತಾವಲ್ಲ ಮೋಡ
ಪ್ರಳಯದ ನೀರು ನೀರೇ ಎಲ್ಲ ಕಡೆಗೂನು
ಹೋಗಬ್ಯಾಡೆಲೊ ಎಳೆಯ ಹುಡುಗ

ಅನುಕರಣ ವಾಚಕಗಳು, ಪ್ರಾಸಗಳ ಅನುವಿನಿಂದ ಚರಣದಿಂದ ಚರಣಕ್ಕೆ ಉಕ್ಕಿ ಪ್ರವಹಿಸಿ ರಾಗ ರಸದ ಲಹರಿಯನ್ನು ನೃತ್ಯಗತಿಯಲ್ಲಿ ಉತ್ಸಾಹದಿಂದ ಮುಂದುವರಿಸಿಕೊಂಡು ಹೋಗುವ ಅಂದವು ಲಾವಣಿ ಛಂದದ ವೈಶಿಷ್ಟ್ಯ. ಹುಮ್ಮಸದೊಡನೆ ಸ್ವಾರಸ್ಯವನ್ನು ಸರಿಗೊಳಿಸುವ ಲಯವಿದು. ಇದರ ನೆಲೆ ಕಲೆಯನ್ನು ಕಂಬಾರರ ಈ ಬಗೆಯ ಹಾಡುಗಳಲ್ಲಿ

ಅನುಭವಿಸಿ ಆನಂದ ಪಡಬಹುದು. 'ನಾಯಕ' ಅಥವಾ 'ಗೊಳ್ಳಿನ ಹಾಡು' ಕವನದಲ್ಲಿ ಡೊಳ್ಳು ಹಾಡಿನ ಗತ್ತನ್ನು ಕಂಬಾರರು ಅರ್ಥಪೂರ್ಣವಾಗಿ ಬಳಸಿದ್ದಾರೆ.

ಸ್ವಾಮಿ ನಮ್ಮಯ್ ದೇವರ ಬಂದಾನ ಬನ್ನಿರೇ
ಸ್ವಾಮಿ ನಮ್ಮಯ್ ದೇವರ ಬಂದಾನ ಬನ್ನಿರೇ ||ಪ||

ದಡ್ಡ್ಯಾಗ ನಮದೇವ ದೊಡ್ಡವನಯ್ಯಾ
ಕುರ‍್ಯಾಗ ಹಿರಿಯಾಂವ ನಮ್ಮಯನೋ|
ಬೆಳಿಗೊಳ ಕೀಲ ಬಲ್ಲವನಯ್ಯಾ
ಮಳೆಯ ಸೂತರಾ ತಿಳಿದವನೋ||

ಕುರುಬರು, ಕುರಿಗಳು, ಕಂಬಳಿ, ಗೊಂಗಡಿ ಈ ಎಲ್ಲವನ್ನು ಒಳಗೊಂಡಂತೆಯ ಕುರುಬ ಸಂಸ್ಕೃತಿಯ ವೈಶಿಷ್ಟ್ಯವನ್ನು ಕಂಬಾರರು ಮನೋಜ್ಞವಾಗಿ ಬಿಂಬಿಸಿದ್ದಾರೆ. ಕವಿಯ ಭಾವವನ್ನು ಅರಳಿಸಲು ಇನ್ನೇನುಬೇಕು. ಡೊಳ್ಳು ಪದಗಳ ಮಾದರಿಯೂ ಕಂಬಾರರ ರಚನೆಯಲ್ಲಿ ರುಚಿದೋರಿದುದುಂಟು. ದಿನಗಳು ಅಳಿದು ಹೋದರೂ ನೆನೆಪಳಿಯದೆ ಬೆಂಬಳಿಸುವ ದನಿ ಈ ತೆರನಾದ ಹಾಡುಗಳ ಅಪ್ರತಿಹತವಾದ ಆಕರ್ಷಣೆ. ಡೊಳ್ಳು ಹಾಡುಗಳು ಏರುಧ್ವನಿ, ಉದ್ಗಾರಗಳು, ಪುನರುಕ್ತಿಗಳು, ದ್ವಿರುಕ್ತಿಗಳು ಬಳಕೆಯಾಗುವ ಬಗೆಯನ್ನು ಗಮನಿಸಿದ ಆ ಗೀತದ ಲಯ ಗಮನಕ್ಕೆ ಬರುತ್ತದೆ. ನಯವಾದ ರಸಭಾವಗಳನ್ನು ಜಾನಪದ ಗತಿಗಳಲ್ಲಿ ದನಿಗೊಳಿಸುವುದೆಂದರೆ ಕಂಬಾರರಿಗೆ ಬಲು ಪ್ರೀತಿ. ಬೇಡರ ಹುಡುಗ ಬೇಟೆಯಾಡುವ ಚಿತ್ರಣವನ್ನು ಅರ್ಥಪೂರ್ಣವಾಗಿ ರೇಖಿಸಿದ್ದಾರೆ. ಅದರಲ್ಲಿ ಹಿಂದಣ ಮಧುರ ಸ್ಮರಣ ಹೀಗೆ ನುಡಿ ತಳೆದಿದೆ ಕವಿ ಮೆಚ್ಚಿದ ಛಂದೋಗತಿಯಲ್ಲಿ:

ಬ್ಯಾಟಿ ಬ್ಯಾಟಿಯ ನಾಡಿದಾ|
ಬ್ಯಾಡರ ಹುಡುಗ|
ಕಾಡ ಬ್ಯಾಟಿಯ ನಾಡಿದಾ||

ಎಂಬ ಚರಣಗಳು ಪದ್ಯ ಪದ್ಯಕ್ಕೆ ಪಲ್ಲವಿಯಂತೆ ದನಿಗೂಡುತ್ತವೆ. ಇದೊಂದು ಹೆಚ್ಚಿನ ಸೊಗಸು.

ಕಾಡೀನ ಮೈಸವರಿ
ಸೂಸ್ಯಾವ ಬಿಸಿಗಾಳಿ
ತುಳುಕಾವ್ಯ ಖುಶಿ ಪುರಮಾಸಿ|
ಹವ್ವಲ್ಲೆ ಅಂದರ
ಅವ್ ನೋಡ ಹೂ ಚಿಗುರ
ಗಂಧ ಸೂಸ್ಯಾವ ಮಲ್ಲಿಗಿ| ಹಾ ಎವ್ವಾ|
ಬಾಯಿ ಬಂದಾವ ಸಂದಿಗೊಂದೀಗಿ ಹಾ ತಾಯಿ||

ಬೇಟೆಯಾಡುವ ಸನ್ನಿವೇಶದ ವಿವರಗಳನ್ನು ಒಳಗೊಂಡ ಈ ಹಾಡು ಹೀಗೆ ಸಾಗುತ್ತದೆ. ದೇಸಿ ಛಂದಸ್ಸಿನ ಜೀಕು-ಲಯ, ಜೋಕೆ-ತೂಕುಗಳನ್ನು, ಜೀಕು-ಜೋಲಿಗಳನ್ನು ಅರಿತವರು ಮೂಲಲಯದ ಪ್ರತೀತಿಯುಂಟಾಗುವಂತೆ ಇದನ್ನು ಸ್ವರಗೊಳಿಸಬಹುದು. ನಾದದ ಮೂಲಕ ಭಾವದ ಪ್ರತೀತಿ ಆಗ ಉಂಟಾದೀತು.

ಗದ್ಯದಲ್ಲೂ ಕಂಬಾರರು ಸಿದ್ಧಿಯನ್ನು ಸಾಧಿಸದೆ ಇಲ್ಲ. ಅವರ ಪ್ರಯೋಗ ಪ್ರವೃತ್ತಿ ಪದ್ಯ ಲಯದಿಂದ ಗದ್ಯ ಲಯದತ್ತ ಒಲಿದಿದೆ. ಅವರಲ್ಲಿ ಗದ್ಯದ ಸ್ವಚ್ಛಂದ ಸೌಂದರ್ಯವನ್ನು ಸಾಕಷ್ಟು ಕಾಣಬಹುದು. ಗದ್ಯ ಲಯದಿಂದ ಪದ್ಯ ಲಯವನ್ನು ಕಸಿ ಮಾಡಿ ಪದ್ಯವನ್ನು ಜೊತೆಗೆ ಭಾಷೆಯನ್ನು ಜೀವಂತವಾಗಿಡುವ ಯತ್ನಕ್ಕೆ ಕೈಹಾಕಿದರು. ಸ್ವಚ್ಛಂದ ಲಹರಿಯನ್ನು ಅವರು ಪ್ರಜ್ಞಾಪೂರ್ವಕವಾಗಿ ಪ್ರಯೋಗಿಸಿದರೂ ಅದರ ಸಹಜತೆಗೆ ಕುಂದು ಬಂದಿಲ್ಲ. ಇದು ಅವರ ಕಾವ್ಯದ ವೈಶಿಷ್ಟ್ಯವಾಗಿದೆ.

ಆಣೆಯಲಿ ಮಾತಾಡಿ ಭರವಸೆಯ ನುಸಿರಾಡಿ
ತೆಕ್ಕೆಗೆಟುಕದ ತೆರೆಯ ನೆರಳು ನೀನು;
ನಂಬಿರುವ ಬರಿ ತೋಳ ತುಂಬ ನಾನು

ಗೀಸಿ ಅಗಲಿಸಿದ ತುಟಿ, ಅದರೊಳಚ್ಚೇರು ಬೆಳ
ದಿಂಗಳನು ಸುರಿವ ಹುಸಿನಗೆಯ ನೀನು;
ಎರಡು ಕಣ್ಣುಳ್ಳ ಬಿಳಿನೇಸಿ ನಾನು

ಕಂಬಾರರು ಮೊದಮೊದಲಿಗೆ ಪದ್ಯವನ್ನು ಗದ್ಯಲಯಕ್ಕೆ ಹತ್ತಿರ ತಂದು ಆಡುಮಾತಿನ ಲಯವನ್ನು ಜೀವಂತವಾಗಿಡಲು ಪ್ರಯತ್ನಿಸಿದರು. ಕವಿ ಬಳಸುವ ಪದ, ಪದಪುಂಜಗಳು, ಆಡುರೂಪಗಳು ಮತ್ತು ಲಯ ಹೇಗೆ ಕವಿಯ ಅನುಭವವನ್ನು ಅಭಿನಯಿಸಿ ತೋರುತ್ತಿವೆ, ಮುಕ್ತಛಂದಸ್ಸಿನ ಸುಳುಹು ಇಲ್ಲಿ ಕಾಣುತ್ತದೆ.

ಅವನು ಇದ್ದಾನಲ್ಲಾ
ಅಂಥವನು ನಾನಲ್ಲಾ
ನಾನಲ್ಲ ಕ್ಷುದ್ರ
ನಂಬದಿರು ಅವನ
ಅವನೊಬ್ಬ ಹೆಗ್ಗಣ
ಹಾಳುಮಣ್ಣಾನು ಕೊಡದ ಜಿಪುಣ

ಕಾಮದೇವರ ಬಿಟ್ಟು
ಬೇರೆ ದೇವರ ಕಾಣೆ
ಪ್ರೇಮದಲಿ ನಾ ಸಿದ್ಧಿ ಸಾಧಿಸಿರುವೆ
ಯಾವುದಕ್ಕೂ ಸಿದ್ಧ

ಯಾವುದಕ್ಕೂ ಬದ್ಧ
ನೋಡು ಈಗಳೆ ಒರೆಗೆ ಹಚ್ಚಿ

ಇಲ್ಲಿ ಶಬ್ದಚಿತ್ರಣ ಮನಗಂಬುವಂತಿದೆ. ಲಯಕ್ಕೆ ಕಟ್ಟಿಲ್ಲವೆಂದರೆ ಇಲ್ಲ; ಇದೆ ಎಂದರೆ ಇದೆ. ಚರಣಗಳನ್ನು ಮುರಿದು ಕಟ್ಟಿರುವುದರಿಂದ ಗದ್ಯಲಯದ ಹೃದ್ಯತೆ ಇನ್ನೂ ಹೆಚ್ಚುತ್ತದೆ. ಛಂದಸ್ಸಿನ ದೃಷ್ಟಿಯಿಂದ ಕಂಬಾರರ ಇಂತಹ ಕವನಗಳನ್ನು ಗಮನಿಸಿದಾಗ ಸಾಲುಗಳನ್ನು ಮುರಿದು ಬೇರೆಯಾಗಿ ಮುದ್ರಿಸುವ ಪ್ರಯೋಗ ಹೆಚ್ಚು ಗಮನಾರ್ಹವಾಗುತ್ತದೆ. ಇಲ್ಲಿ ಸಾಲುಗಳನ್ನು ನೋಡಿದಾಗ ಸಾಲೇ ಒಂದು ಘಟಕವಾಗಿಲ್ಲ ಎಂಬುದು ಮನದಟ್ಟಾಗುತ್ತದೆ. ಒಟ್ಟಾರೆ, ಕಂಬಾರರ ದೇಸಿಲಯಗಳನ್ನು ಅರ್ಥಪೂರ್ಣವಾಗಿ ಬಳಸಿದ್ದಾರೆ. ಜೊತೆಗೆ ಲಾವಣಿ, ಡೊಳ್ಳು ಮಟ್ಟುಗಳ ಬಂಧಗಳಲ್ಲಿ ಅವರು ಕವಿತೆಗಳನ್ನು ರಚಿಸಿದ್ದಾರೆ. ಸ್ವಚ್ಛಂದ ಛಂದದಲ್ಲಿ ಸ್ವಾರಸ್ಯಪೂರ್ಣವಾದ ಪ್ರಯೋಗ ಮಾಡಿದ್ದಾರೆ. ಕಂಬಾರರ ಕಾವ್ಯಛಂದಸ್ಸು ಹೆಚ್ಚು ಆಶಾದಾಯಕ ಅಂಶಗಳಿಂದ ಕೂಡಿದೆ. ಅಚ್ಚಕನ್ನಡದ ಶಕ್ತಿ ಪೂರ್ಣಲಯಗಳ ಕೆಲವು ಮುಖಗಳನ್ನು ಅವರ ಕಾವ್ಯದಲ್ಲಿ ನೋಡಬಹುದಾಗಿದೆ.*

ಆಕರಗ್ರಂಥ

೧. ಚಂದ್ರಶೇಖರ ಕಂಬಾರ ಸಮಗ್ರ ಕಾವ್ಯ, ೨೦೧೧, ಸಪ್ನ ಬುಕ್‌ಹೌಸ್, ಬೆಂಗಳೂರು.

- 'ಹೇಳತೇನ ಕೇಳ' ಲಾವಣಿಯ ಗೇಯತೆಯನ್ನು ಕುರಿತು ಇದೇ ಕೃತಿಯ ಮುಂದಿನ ಅಧ್ಯಾಯದಲ್ಲಿ ವಿವೇಚಿಸಲಾಗಿದೆ.

* ಕಂಬಾರರ ಕಾವ್ಯದ ಛಂದೋಗತಿಯನ್ನು ಕುರಿತು ಇನ್ನೂ ಹೆಚ್ಚಿನ ವಿಷಯಗಳನ್ನು ಇದೇ ಕೃತಿಯ 'ಕಂಬಾರರ ಕಾವ್ಯಭಾಷೆ' ಎಂಬ ಅಧ್ಯಾಯವನ್ನು ಗಮನಿಸಬೇಕು.

೬೫

ಹೇಳತೇನ ಕೇಳ : ಗೇಯತೆ

ಕಂಬಾರರ 'ಹೇಳತೇನ ಕೇಳ' ಲಾವಣಿ ಶಿಲ್ಪದಲ್ಲಿ ರಚನೆಯಾದ ದೀರ್ಘಕಥನ ಕವನ ಮತ್ತು ಕಂಬಾರರ ತುಂಬ ಪ್ರಸಿದ್ಧ ಕವನವಿದು. ಕಂಬಾರರ ಮುಂದಿನ ಅನೇಕ ನಾಟಕಗಳಿಗೆ ವಸ್ತುವನ್ನು ಒದಗಿಸಿದ ಕತೆ. ಈ ಕವನದಲ್ಲಿ ಕಿತ್ತೂರು ಕರ್ನಾಟಕದ ಹಳ್ಳಿಗರ ಶ್ರದ್ಧೆ-ನಂಬಿಕೆಗಳನ್ನು, ರೀತಿ-ನೀತಿಗಳನ್ನು ವಿಪುಲವಾಗಿ ಬಳಸಿಕೊಳ್ಳಲಾಗಿದೆ. ತನ್ನ ಸುತ್ತಲೂ ಪರಂಪರಾಗತವಾಗಿ ಮೊಳಗುತ್ತ ಬಂದಿರುವ ಭಾಷೆಯನ್ನು ತನ್ನ ವಿಶಿಷ್ಟ ಉದ್ದೇಶಕ್ಕಾಗಿ ಕವಿ ಅರ್ಥಪೂರ್ಣವಾಗಿ ಬಳಸಿದ್ದಾರೆ. ದೇಸಿಯ ಸೊಬಗನ್ನು ಮೈಗೂಡಿರುವ ಈ ಕಾವ್ಯ ಸಹೃದಯರಿಗೆ ರಸದ ಸೆಲೆಯಾಗಿ ಪುಟಿಯುತ್ತದೆ. ಲಾವಣಿಯ ಗತ್ತು ಮತ್ತು ಅಪೂರ್ವ ಚಿತ್ರಕ ಶಕ್ತಿ ಈ ಕವನದ ಉದ್ದಕ್ಕೂ ಇದೆ. ಕವಿ ಮೊದಲು ದೇವತಾ ಸ್ತುತಿ ಹೇಳಿ ನಂತರ ಕಥಾಸಾರ ಆರಂಭಿಸುತ್ತಾರೆ.

ಮೊದಲೀಗೆ ಅಲ್ಲಮ ಪ್ರಭುವಿಗೆ ಶರಣಾರ್ಥಿ
ಕೂಡಿ ಕುಂತ ಜನಕೆಲ್ಲ ನಮ್ಮ ನಮನಾ
ಕಲಿಯುಗದೊಳಗಿನ ಕತೆಯ ವಿಸ್ತಾರವ
ತಿಳಿಸಿ ಹೇಳುವೆ ಕೇಳ ಬೇಕ್ರಿ ಜನಾ

ಆರಂಭದ ಹಾಡು 'ಸಖಿ' ಕೊನೆಯ ಹಾಡು 'ಖ್ಯಾಲಿ' ಎನಿಸಿಕೊಂಡರೆ ಮಧ್ಯದ ಹಾಡುಗಳೇ ಚೌಕುಗಳು. ಇದು ಸಾಮಾನ್ಯವಾಗಿ ಲಾವಣಿಯ ಶಿಲ್ಪ. ಈ ಕಥನ ಕವನದಲ್ಲಿ ಒಂದು ಪದ್ಯ ಖಂಡದಲ್ಲಿ ಏಳು ಚೌಕುಗಳಿವೆ. ಕವನದ ಕೊನೆಯ ಭಾಗದಲ್ಲಿ ಕವಿಯ ಊರು, ಆರಾಧ್ಯ ದೇವತೆಯ ಹೆಸರು ಇತ್ಯಾದಿಗಳು ಕಾಣಿಸುತ್ತವೆ. ಹಾಡುವಾಗ ಆರಂಭದಲ್ಲಿ ಪಲ್ಲವಿಯಿದ್ದು ಆಮೇಲೆ ಚೌಕುಗಳು (ನುಡಿಗಳು) ಬರುತ್ತವೆ. ಪ್ರತಿಯೊಂದು ಚೌಕದ ನಂತರ ಪಲ್ಲವಿ ಪುನರಾವರ್ತನೆಯಾಗುತ್ತದೆ. ಪಲ್ಲವಿ ಹಾಡಿನ ಆಶಯವನ್ನು ಒಳಗೊಂಡಿರುತ್ತದೆ. ಪ್ರತಿ ಪದ್ಯ ಖಂಡದ ಕೊನೆಗೆ 'ಗೀಗೀ' ಎಂದು ಎಳೆಯುತ್ತ ಕವನಕ್ಕೆ ಕಳೆಬರುತ್ತದೆ.

ಈ ಕವನ ಅಂಶಗಣಾನ್ವಯ ಬಂಧ, ಸರಳ ರಚನೆ ಹಾಗೂ ಆಡುನುಡಿಯ ಸೊಗಡು. ವೈವಿಧ್ಯಮಯವಾದ ಲಯ ವಿನ್ಯಾಸ ನಾದದ ಗಾಂಭಿರ್ಯದಿಂದ ಕೂಡಿದೆ. ಒಂದು ಪದ್ಯ ಖಂಡದ ಏಳು ಚೌಕುಗಳಲ್ಲಿ ಆರು ಚೌಕುಗಳು ಏರಿನಲ್ಲಿದ್ದು ಒಂದು ಇಳುವಿನಲ್ಲಿರುತ್ತದೆ. ಒಂದೊಂದು ನುಡಿಯೂ ಇಲ್ಲಿ ಅಂಶಗಣಗಳಿಂದ ಕೂಡಿದ್ದು ಏರಿನ ನುಡಿಗಳಲ್ಲಿ ಎರಡೆರಡು ಸಾಲುಗಳ ಛಂದೋಕ್ರಮ ಈ ಬಗೆಯದು: ಮೊದಲ ಸಾಲಿನಲ್ಲಿ ನಾಲ್ಕು ವಿಷ್ಣುಗಣಗಳಿದ್ದು ಎರಡನೆಯ ಸಾಲಿನಲ್ಲಿ ಎರಡು ವಿಷ್ಣುಗಣಗಳು ಒಂದು ರುದ್ರಗಣಗಳಿರುತ್ತವೆ. ಇಳುವಿನ ನುಡಿಯಲ್ಲಿ ನಾಲ್ಕು ಸಾಲುಗಳು ಒಂದೇ ಬಗೆಯವು ಒಂದು ಹುಸಿಪೆಟ್ಟು (ಮೂರು ಲಘು ಮಾತ್ರೆಗಳು) ಮತ್ತು ಮೂರು ಬ್ರಹ್ಮಗಣ ಈ ಸಾಲಿನಲ್ಲಿರುತ್ತವೆ. ಆದರೆ ಈ ಛಂದೋಕ್ರಮ ಯಾಂತ್ರಿಕವಾಗಿರುತ್ತದೆಂದು ತಿಳಿಯಲಾಗದು. ಅಂಶವೃತ್ತಗಳೇ ಗೇಯವಾಗಿದ್ದು ಹಾಡುವಾಗ ಭಾವಕ್ಕೆ ತಕ್ಕ ಲಯದ ಏರಿಳಿತದಲ್ಲಿ ವಿಷ್ಣುಗಣಗಳು ಬ್ರಹ್ಮಗಣಗಳಾಗಿ ಮಾರ್ಪಡಬಹುದು. ಹಾಡುವಾಗ ಲಯವು ಪ್ಲುತವನ್ನು ಅನುಕರಿಸಬಹುದು.

ಗೌಡ್ತಿ ಬ್ಯಾನೀ ತಿಂದ ಗಂಡ ಹಡದ, ಗಂಗಾಳ ಹೊಡದ
ಐದೇರಲ್ಲ ಜೋ ಅಂದ ಕತಿ ನಿವಳಾ
ಹೇಳತೇನ ಕೇಳ ಗೆಳೆಯಾ ನಿನ ಮುಂದ ಕತಿಯೊಂದ
ನನ ಮುಂದ ಕುಂದ್ರ ಹೀಂಗ ತೆರದ ಮನಾ ||ಗೀ||

ಸಹೃದಯರ ಲಕ್ಷ್ಯವನ್ನು ಕೇಂದ್ರಿಕರಿಸುವುದಕ್ಕಾಗಿ ದಪ್ಪಕ್ಷರದ ರಚನೆ 'ಗೀ ಗೀ' ಎಂದು ಪುನರುಕ್ತಿಯಾಗುತ್ತದೆ. ಕತೆಯ ಬೆಳವಣಿಗೆಗೆ ಶಬ್ದಗಳ ಮೂಲಕವಾಗಿಯಾದರೂ ಲಯದ ಕಾವಿಗೆ ಅರಳುತ್ತವೆ. ಇದರಿಂದ ಕತೆಯ ಅಂತರಾರ್ಥ ಸೂಕ್ಷ್ಮಾತಿಸೂಕ್ಷ್ಮವಾಗಿ ಚಿತ್ರಿತವಾಗಲು ಅವಕಾಶ ದೊರೆಯುತ್ತದೆ. ಕವನದ ಭಾಷಿಕ ರಚನೆಯು ಕತೆಯಷ್ಟೆ ಮುಖ್ಯವಾಗಿದೆ. ಭಾವಕ್ಕೆ ತಕ್ಕಂತೆ ವಿವಿಧ ಧಾಟಿಯಲ್ಲಿ ಕತೆ ಸಾಗುತ್ತದೆ; ಧ್ವನಿಯಲ್ಲಿ ಏರಿಳಿತ ಉಂಟಾಗುತ್ತದೆ. ಹಾಡಿನ ಮಧ್ಯ ಹಾ ಹಾ ಎಂಬ ಧ್ವನಿಗಳು ಮುಂದೆಸಾಯಿತು ಎಂಬುದರ ಬಗ್ಗೆ ಕೇಳುಗರಿಗೆ ಆಸಕ್ತಿ ಕುದುರಿಸುತ್ತವೆ. ಕ್ರಮೇಣ ಹಾಡುವಾಗ ಪಲ್ಲವಿಗೆ ಪುನರಾವರ್ತನೆ ತುಂಬಲು ಹಾಡುಗರ ಸ್ವರಾಲಾಪನೆ, ತೀವ್ರತೆ, ಹಾವಭಾವ, ಧ್ವನಿಯ ಏರಿಳಿತ ಮುಂತಾದ ಅವಿಭಾಜಕ ಧ್ವನಿಮಾ ಕ್ರಿಯೆಗಳು ಹಾಡಿನಲ್ಲಿ ಸಹಯೋಗ ಹೊಂದಿರುತ್ತವೆ.

ಊರಾಗೂರ ಅದರಾಗ ಇನ್ಯಾವೂರ
ಚಂದ? ಶಿವಾಪೂರ ರಾಜೇಕ
ಮಳೆಯಾದ ಎರಿಯೊಳಗ ಬೆಳೆದ ಕರಿಕೀ ಹಾಂಗ
ಊರು ಹಬ್ಬಿದ ಮೂಡಪಡುವಣಕ

ನೂರು ಬಂಡಿಗೆ ಇಂಬುಗೊಡುವಷ್ಟು ನೆರಳಿತ್ತು;
ಯಾರ್‍ಯಾರು ಸುಳಿದಿಲ್ಲ ಬಡ್ಡೀತನಕ

ಉದಯಾಸ್ತಗಳ ನಡಕ, ಹೊಳಿಗುಡ್ಡ ಎಡಬಲಕ
ಜಗದಾಗಿಂಥಾದ್ದಿಲ್ಲ ಬಹುತೇಕ

ಒಂದು ಗ್ರಾಮದ ಲಾವಣ್ಯವನ್ನು ಈ ಚೌಕುಗಳು ತುಂಬ ಸೊಗಸಾಗಿ ಚಿತ್ರಿಸುತ್ತವೆ. ಆಗ 'ಹಾ', 'ಗೀ' ಎಂದು ಶ್ರುತಿ ಹಿಡಿಯುವ ಸೊಬಗು ಆಡುನುಡಿಯ ಕಾಕು, ದೇಸಿಯ ನುಡಿಗಟ್ಟುಗಳು, ಗಾದೆ, ದ್ವಿರುಕ್ತಿ, ಅನುಕರಣ ವಾಚಕಗಳು ತುಂಬ ಮನೋಹರವಾಗಿ ಬಳಕೆಯಾಗಿವೆ. ಈ ಕಥನ ಕವನ ರಚನೆಯ ದೃಷ್ಟಿಯಿಂದ ತನ್ನದೇ ಆದ ವೈಶಿಷ್ಟ್ಯವನ್ನು ಪಡೆದುಕೊಂಡಿದೆ.

ಬೆಲ್ಲದ ಬೆಂಟೀಗಿ ಇರುವಿ ಮುತ್ತಿದ ಹಾಂಗ
ಜನಸೇರಿ ಹರಸ್ಯಾರು ತುಂಬಿಮನಸಾss

ಕಂಬಾರರು ಆಡುನುಡಿಯಲ್ಲಿ ಬಳಕೆಯಾಗುವ ಪದಪುಂಜಗಳನ್ನು ತುಂಬ ಸಮರ್ಥವಾಗಿ ಬಳಸುತ್ತಾರೆ. ಜನರು ಯಾವ ರೀತಿ ಸೇರಿದ್ದರು ಎಂಬುದನ್ನು ಹೇಳುವಾಗ 'ಬೆಲ್ಲದ ಪೆಂಟೀಗಿ ಇರುವಿ ಮುತ್ತಿದ ಹಾಂಗ' ಎಂತಹ ಸುಂದರವಾದ ಉಪಮೆಯಿದು. ಅದನ್ನೆ ಎಳೆದು (ಹಿಗ್ಗಿಸಿ) ಎಚ್ಚರಿಸಿದರೆ ಅದರ ಗೆಯತೆ ಕಿವಿಗೆ ಇಂಪು ತರುತ್ತದೆ.

ಹೊಳಿ | ಯಾಗ | ತೆರಿಗಳಿರಲಿಲ್ಲ
ಆ | ಲsದ | ಗಿಡಕ ತಂಪಿಲ್ಲ
ಓ | ಣ್ಯಾಗ | ಎಲ ಬಣ ಬಣಾ
ಸುಡ | ಗಾಡ | ಧಾಂಗ ರಣ ರಣಾ
ಗುಡ್ಡದ | ಕಡ್ಡಕ | ಬೆಂಕಿ ಹಚ್ಚಿದರ‍್ಯಾರೊ
ಹೊಗಿ | ತುಂಬಿ | ನೋಡ್ಯಾರು ಎಲ್ಲಾ ಜನಾ

ಆಡುನುಡಿಯ ಲಯ, ಹಾಡುವಿಕೆ ಓಟ ಅದನ್ನು ಕೇಳಿಯೇ ಆನಂದಿಸಬೇಕು. ಅಂತಹ ಪದ, ಪದಪುಂಜಗಳಲ್ಲಿ ಅಕ್ಷರಗಳು ಹಾಡುವಿಕೆಗೆ ತಕ್ಕಂತೆ ಹಿಗ್ಗುತ್ತವೆ ಮತ್ತು ಕುಗ್ಗುತ್ತವೆ. 'ಸುಡುಗಾಡ ಧಾಂಗ', 'ಗುಡ್ಡದ ಕಡ್ಡಕ' ಇಲ್ಲಿಯ 'ದ' ಕಾರದ ಪುನರಾವರ್ತನೆ ಮುಂದೆ ಬರುವ ರಣರಣಾ, ಬಣಬಣ ಇಲ್ಲಿಯ 'ಣ' ಕಾರದ ಪುನರಾವರ್ತನೆ ಲಾವಣಿಯ ಗೇಯಕ್ಕೆ ಹಾಗೂ ಅದು ಕೊಡುವ ಅರ್ಥವಂತಿಕೆ ಅದ್ಭುತವಾಗಿ ಚಿತ್ರಿತವಾಗಿದೆ. ಮಂದಾನಿಲ ಲಯವನ್ನು ಹೋಲುವ ಈ ಮಟ್ಟು ನಿರರ್ಗಳವಾಗಿ ಸಾಗುತ್ತದೆ. ಕವನದ ರಾಗ ಮತ್ತು ನಾದವು ಸ್ಪಷ್ಟವಾದ ರೀತಿಯಲ್ಲಿ ಬಳಕೆಯಾಗಿವೆ ಎಂಬುದಕ್ಕೆ ಮೇಲಿನ ನುಡಿಗಳು ಸಾಕ್ಷಿಯಾಗಿವೆ.

ಹೋರಿಯ ಕೊಂಬಿನ್ಹಾಂಗ ಮಕಮೀಸಿ ಮೂಡ್ಯಾವ
ಎಳಕ ಯೌವನ ಬಂದು ರಾಮಗೊಂಡಗ
ಹಿಂಡ ದನಗೋಳೊಳಗ ದ್ಯಾಮವ್ವ ಕ್ಯಾಣಧಾಂಗ

ಅವನಿದ್ದವಾರಿಗಿಯವರೊಳಗ

ಹಸನಾದ ಬಾಲೇರು ಹಂತೇಲಿ ಬಂದ ಬಂದ
ಒಡಪ ಹೇಳಿ ಓಡತಾರ ನಗನಗತ
ಸರಿಸರಿ ಸಖಿಯರು ಮಾರೀಗಿ ನೀರಗೊಜ್ಜಿ
ಕಾಡತಾರ ಪರಿಪರಿ ಅಡ್ಡನಿಂತಾ

ಇಲ್ಲಿ ಪ್ರಾಸದೊಡನೆ ಲಯವೂ ಒಂದಿಷ್ಟು ಬೇರೆಯಾಗಿ ಶೃಂಗಾರದ ಸುಖದ ಪರಿಣಾಮವನ್ನುಂಟು ಮಾಡಿದೆ. ಲಯದ ಜಾಡು ಹಿಡಿದು ತಿರುಗುವ ದ್ವಿರುಕ್ತಿಗಳು ಏಕತೆಯಲ್ಲಿ ವಿವಿಧತೆಯನ್ನು ಎತ್ತಿತೋರಿಸುತ್ತವೆ. ಈ ಕಾವ್ಯದಲ್ಲಿ ನಿರರ್ಗಳತೆ ಹೆಚ್ಚು; ಪ್ರಾಸ ವಿನ್ಯಾಸವು ಈ ಓಟಕ್ಕೆ ಒಪ್ಪು ಕೊಡುತ್ತದೆ. ಪದ್ಯದ ಚರಣಗಳು ಗಳಿಗೆಯಂತೆ ಹರಿದುಬರುತ್ತವೆ. ಪ್ರಾಸದ ಸೊಗಸು, ಗೇಯತೆ ಈ ಕವನ ವೈಶಿಷ್ಟ್ಯವಾಗಿದೆ. ಭಾವವನ್ನು ನೇರವಾಗಿ ಮನಸ್ಸಿಗೆ ಮುಟ್ಟಿಸಲು ಹಾಡಿನ ಗೇಯತೆ ಬಹಳ ಮಟ್ಟಿಗೆ ನೆರವಾಗಿದೆ. ಕವನದ ಪಾದಾಂತ್ಯದಲ್ಲಿ ಕೆಲವೆಡೆ ಪಾದ ಮಧ್ಯದಲ್ಲಿ ಉಸಿರ್ದಾಣಗಳನ್ನು ನಿರ್ಮಿತವಾಗಿವೆ. ಕವನವನ್ನು ಹಾಡುವಾಗ ರಾಗದ ಲಯಕ್ಕೆ ಹೊಂದಿಕೆಯಾಗಿ ಯತಿ(ವಿರಾಮ) ಸ್ಥಾನ ಪಡೆದುಕೊಳ್ಳುತ್ತದೆ. ಅಂಶಗಣದಲ್ಲಿ ಮಂದಾನಿಲ ಮತ್ತು ಲಲಿತ ಲಯದಲ್ಲಿ ಸಾಗುವ ಈ ಕಥನ ಕವನ ಕನ್ನಡ ಸಾಹಿತ್ಯದಲ್ಲಿ ಅಪೂರ್ವಕಥನ ಕವನವಾಗಿದೆ.

ಆಕರಗ್ರಂಥ

೧. ಚಂದ್ರಶೇಖರ ಕಂಬಾರ ಸಮಗ್ರ ಕಾವ್ಯ, ೨೦೧೧, ಸಪ್ನ ಬುಕ್‌ಹೌಸ್, ಬೆಂಗಳೂರು.

೬೬

ಚಂಪಾ ಅವರ ಕಾವ್ಯ ಛಂದಸ್ಸು

ಕನ್ನಡದಲ್ಲಿ ೧೯೫೦ರ ಸುಮಾರಿಗೆ ನವ್ಯಕಾವ್ಯ ಆರಂಭವಾಯಿತು. ನವ್ಯರು ಬಳಸಿದ ಮುಕ್ತಛಂದಸ್ಸು ಆಗ ಆಂಗ್ಲರ Free verseನಿಂದ ಬಹಳಷ್ಟು ಪ್ರೇರಣೆ ಪಡೆಯಿತು. ಇದರಿಂದ ಕಾವ್ಯ ನಿರ್ಮಾಣ ವಿಷಯದಲ್ಲಿ ಸ್ಫೂರ್ತಿವಾದ ಹಿನ್ನೆಲೆಗೆ ಸರಿದು ಪ್ರಜ್ಞಾಪೂರ್ಣ ಪ್ರಯತ್ನದತ್ತ ಒಲವು ಹೆಚ್ಚತೊಡಗಿತು. ನವ್ಯಕವಿಗಳಿಗೆ ಕಾವ್ಯ ಎನ್ನುವುದು ಬದುಕಿಗೆ ಹೊಣೆಯಾಗಿ ನಿಂತ ಪ್ರತಿಭೆಯ ಪ್ರಜ್ಞಾಪೂರ್ಣ ಪ್ರಯತ್ನ ಫಲರೂಪವಾದ ಶಬ್ದಗಳ ಸಾವಯವ ಶಿಲ್ಪವಾಯಿತು. ಶಬ್ದ, ಲಯ, ಭಾಷೆ ಮತ್ತು ಅಲಂಕಾರಗಳಲ್ಲಿ ಆಡಂಬರವನ್ನು ವರ್ಜಿಸಿ ಆಡುಮಾತಿನ ಕಸುವು ಮತ್ತು ಲಯಗಳನ್ನು ಬಳಸಿಕೊಳ್ಳುವ ಕಡೆಗೆ ಕವಿಗಳ ಮನಸ್ಸುವಾಲಿತು. ತನ್ನ ಅನುಭವಗಳನ್ನು ಅಭಿವ್ಯಕ್ತ ಗೊಳಿಸುವಾಗ ತಂತ್ರದ ದೃಷ್ಟಿಯಿಂದಲೂ ಕೂಡ ಪ್ರತಿಮಾ ನಿಷ್ಠತೆ ಹಾಗೂ ಸಂಕೇತ ನಿಷ್ಠತೆಗಳು ಹೆಚ್ಚತೊಡಗಿದವು. ಇದರಿಂದ ಛಂದಸ್ಸಿನಲ್ಲಿರುವ ಎಲ್ಲ ನಿಯಮಗಳನ್ನು, ತೊಡಕುಗಳನ್ನು ಕವಿ ಪ್ರತಿಭೆ ನಿವಾರಿಸಿಕೊಳ್ಳಲು ಯತ್ನಿಸಿತು. ಅಂತಹ ಛಂದಸ್ಸನ್ನು ಬಳಸಬೇಕು ಇಂತಹ ಛಂದಸ್ಸನ್ನು ಬಳಸಬೇಕು ಎನ್ನುವುದಕ್ಕಿಂತ ಹೆಚ್ಚಾಗಿ ಕವಿದೃಷ್ಟಿ ಭಾವಕ್ಕೆ ಉಚಿತವಾದ ಲಯಗಳನ್ನಷ್ಟೆ ಬಳಸಬೇಕೆನ್ನುವ ಕ್ರಾಂತಿಕಾರಕ ಮನೋವೃತ್ತಿ ಯನ್ನು ತಾಳಿತು. ಈ ದೃಷ್ಟಿ ಮೂಡುತ್ತಿದ್ದಂತೆ ನವ್ಯಕಾವ್ಯದ ಛಂದಸ್ಸು ಮುಕ್ತಛಂದಸ್ಸಾ ಯಿತು.

ನವ್ಯರು ಗದ್ಯ ಲಯದಿಂದ ಪದ್ಯ ಲಯವನ್ನು ಕಸಿಮಾಡಿ ಪದ್ಯವನ್ನು ಜೊತೆಗೆ ಭಾಷೆಯನ್ನು ಜೀವಂತವಾಗಿಡುವ ಯತ್ನಕ್ಕೆ ಕೈಹಾಕಿದರು. ಈ ನವ್ಯರಲ್ಲಿ ಲಯವನ್ನು ಕೂಡ ಕಾವ್ಯದ ಇತರ ಅಂಶಗಳಂತೆಯೇ ಹೆಚ್ಚು 'Functional' ಆಗಿ ಬಳಸುವ ಸಾಧನೆಗೆ ಕೈಯಿಟ್ಟರು. ಸಮರ್ಥ ಕವಿಗಳ ಕೈಯಲ್ಲಿ ನವ್ಯಕಾವ್ಯದ ಛಂದಸ್ಸು ಆಡುಮಾತಿನ ಲಯಗಳಿಂದ ಶಕ್ತವೂ ಅರ್ಥಪೋಷಕವೂ ಆಗುತ್ತ ಬಂದಿತು. ನವ್ಯಕಾವ್ಯದಲ್ಲಿ ವಿಪುಲ

ರಚನೆ ಮಾಡಿದವರಲ್ಲಿ ವಿ.ಕೃ. ಗೋಕಾಕರು, ಗೋಪಾಲಕೃಷ್ಣ ಅಡಿಗರು, ಕೆ.ಎಸ್. ನರಸಿಂಹ ಸ್ವಾಮಿಯವರು, ರಾಮಚಂದ್ರ ಶರ್ಮರು ಮತ್ತು ಚಂದ್ರಶೇಖರ ಪಾಟೀಲರು ಮುಖ್ಯರು. ಇವರೆಲ್ಲರೂ ಬರೆದಿರುವುದು ವಿಶೇಷತಃ ಮುಕ್ತ ಛಂದದಲ್ಲಿಯೇ.

ಈ ಹಿನ್ನೆಲೆಯಲ್ಲಿ ಚಂಪಾ ಅವರ ಕವಿತೆಗಳ ಛಂದಸ್ಸಿನ ಅಧ್ಯಯನವನ್ನು ಕೈಕೊಳ್ಳಬಹುದು. ಚಂಪಾ ಅವರ ಕವಿತೆಗಳು ನಮಗೆ ಪರಿಚಿತವಾದ ಲಯದಲ್ಲೇ ಸಾಗುತ್ತವೆ. ಆಡುಮಾತುಗಳನ್ನು ಛಂದಸ್ಸಿನ ದೃಷ್ಟಿಯಿಂದ ವಿಶ್ಲೇಷಿಸಿದರೆ ಬಹುಶಃ ಐದು ಮಾತ್ರೆಯ ಲಯ ಕನ್ನಡದ ಆಡುಮಾತಿನ ಲಯಕ್ಕೆ ಹೆಚ್ಚು ಹತ್ತಿರವಿರಬಹುದೆಂದು ತೋರುತ್ತದೆ. ಇನ್ನೊಂದು ಮುಖ್ಯ ಅಂಶವೆಂದರೆ ಐದು ಮಾತ್ರೆಯ ಗಣದ ವಿಸ್ತಾರ ಎರಡು, ಮೂರು ಮತ್ತು ನಾಲ್ಕು ಮಾತ್ರೆಯ ಗಣಗಳನ್ನು ವಿಭಿನ್ನ ಗಣ ಸಂಯೋಜನೆ ಗಳಿಂದ ತನ್ನೊಳಗೆ ಸೇರಿಸಿಕೊಂಡು ಬಿಡುತ್ತದೆ. ಈ ದೃಷ್ಟಿಯಿಂದ ಗಮನಿಸಿದಾಗ ಚಂಪಾ ಅವರ ಕವಿತೆಗಳ ಛಂದಸ್ಸು ಆಡುಮಾತಿನ ಧಾಟಿಯನ್ನು ಅನುಸರಿಸಿ ಬಂದದ್ದು. "ಗಾಳಿ ಗುಂಟ ನಾ ಕಳಿಸತೀನಿ" ಕವನ ಓದುಗರಿಗೆ ವರ್ಣಿಸಿದ್ದಲ್ಲ. ಅವರೊಡನೆ ಆಪ್ತ ಸಂಭಾಷಣೆ ಮಾಡುವಾಗ ನಿರೂಪಿಸಿದ್ದು, ಹೇಳಿದ್ದು ಎಂದು ಅನಿಸುವಷ್ಟು ಅವರ ಭಾಷೆ ಸ್ವಾಭಾವಿಕವಾಗಿದೆ. ಆಡುಮಾತನ್ನು ಕಲಾತ್ಮಕವಾಗಿ ಬಳಸಿಕೊಂಡಿರುವುದಕ್ಕೆ ಈ ಸಾಲುಗಳನ್ನು ನೋಡಬಹುದು:

ಗಾಳಿಗುಂಟ ನಾ ಕಳಿಸತೀನಿ ಇದೊ
 ಕಳಿಸತೀನಿ ಇದೊ
ನೆನೆಪ ಹೂವ ಕಂಪs ಸವಿನೆನೆಪ ಹೂವ ಕಂಪ
 ನಿನಗ ಮುಟ್ಟಲೆಂದು
ಮುಟ್ಯಾರ ಮುಟ್ಟಲೆಂದು
 ನಿನ್ನೆದೀ ತಟ್ಟಲೆಂದು

(ಗಾಳಿಗುಂಟ ನಾ ಕಳಿಸತೀನಿ, ೧೯೬೩)

'ಮುಟ್ಟು', 'ತಟ್ಟು' ಎಂಬ ಪ್ರಾಸ ಜೋಡಣೆ ಇಲ್ಲಿ ಎದ್ದು ಕಾಣುತ್ತದೆ. ಇರುವ ಸಾಮಗ್ರಿಯನ್ನೇ ಸೊಗಸಾದ ರೀತಿಯಲ್ಲಿ ಜೋಡಿಸಿದಾಗ ಕಲಾತ್ಮಕತೆ ತಂತಾನೆ ಒದಗಿ ಬಂದಿದೆ. 'ಒಣಕಾಡಿನ್ಹಾಂಗ', 'ಸುಡುಗಾಡಿನ್ಹಾಂಗ', 'ಮೋಡಧಾಂಗ'- ಎಂಬ ಮಾತುಗಳು ಇಡೀ ಚಿತ್ರವನ್ನು ಅದ್ಭುತ ರೀತಿಯಲ್ಲಿ ಸಹೃದಯರ ಮುಂದೆ ಇಡುತ್ತದೆ. ಕವನ ಆಡುಮಾತಿಗೆ ಹತ್ತಿರವಾಗಿರುವುದರಿಂದ ಕವಿತೆಗೆ ಆತ್ಮೀಯತೆಯನ್ನು ತಂದುಕೊಡುತ್ತದೆ. ಇದು ಭಾಷಾ ಪ್ರಯೋಗದ ಔಚಿತ್ಯದ ಬಗ್ಗೆ ಕವಿಗಿರುವ ಪ್ರಜ್ಞೆಯ ಕುರುಹು ಈ ಔಚಿತ್ಯವನ್ನು ಅವರ ಅನೇಕ ಕವಿತೆಗಳಲ್ಲಿ ಗುರುತಿಸಬಹುದು. 'ಗೃಹ ಬಂಧನ', 'ಹತ್ತರ ಗಂಟುಗಳು', 'ಮಾಮರದ ಬನದಲ್ಲಿ' ಇತ್ಯಾದಿ ಕವಿತೆಗಳನ್ನು ಇಲ್ಲಿ ಸ್ಮರಿಸಬಹುದು. ಸಂಭಾಷಣೆಯ ಧಾಟಿಯ ಕವಿತೆಗೆ 'ರಾಜ್-ನರ್ಗಿಸ್' ಕವಿತೆ ಇನ್ನೊಂದು ಉತ್ಕೃಷ್ಟ ಉದಾಹರಣೆ:

ಅವನು : ಕಲ್ಲಾಬಿಲ್ಲಿಯಾದ ಮೋಡಗಳಂತೆ
ಅವಳು : ಆಕಾಶದಂತೆ
ಅವನು : ಸಿಡಿಮಿಡಿಯುವ ಸಿಡಿಲಿನಂತೆ
ಅವಳು : ಪೃಥ್ವಿಯಂತೆ

ಹೀಗೆ, ಕವಿತೆ ಸಾಗುತ್ತದೆ. ಅಲ್ಲಿಯ ವಾಕ್ಯರಚನೆ ಓದುಗರ ಮನಸ್ಸಿನಲ್ಲಿ ಮುದ್ರೆಯೊತ್ತಿ ನಿಲ್ಲುವುದಲ್ಲದೆ ಅವು ಮತ್ತೆ ಮತ್ತೆ ನೆನೆಪಿಗೆ ಬಂದು ಕಾಡುತ್ತವೆ. ಕವಿ ಬಳಸುವ ದ್ವಿರುಕ್ತಿಗಳು, ಪ್ರಾಸಗಳು, ಪ್ರತಿಮೆಗಳು ತಾನೇ ತಾನಾಗಿ ಎದ್ದು ಕಾಣದಂತೆ ಮಾಡುವ ಸಂಯಮ. ಅದು ಒಟ್ಟು ಅನುಭವದ ಭಾಗವಾಗಿ ಬರುವಂತೆ ಮಾಡುವ ಕೌಶಲ ಎರಡೂ ಚಂಪಾರವರಿಗೆ ಸಮಾನವಾಗಿ ಸಿದ್ದಿಸಿವೆ. ವ್ಯಕ್ತಿ ಸಂಬಂಧಗಳನ್ನು ಅವರು ಒಂದು ಕವನದಲ್ಲಿ ರೇಖಿಸಿದ್ದಾರೆ.

ನಾವು ಪಕ್ಷಾಂತರಿಗಳು,
ನಾವು ಗಂಡಸರಲ್ಲ
ನಾವು ಹೆಂಗಸರಲ್ಲ
ನಾವು ಪೆಂಡಸರು! ಒಮ್ಮೊಮ್ಮೆ
ನಾವು ಪಂಗಸರು
ನಮಗೆ ಬೇಕಾದ್ ಮಾಡ್ರಿ
ಹಿಂದೆ ಬಂದರೆ ಹಾಯಿರಿ, ಮುಂದೆ ಬಂದರೆ ಒದೆಯಿರಿ
ಎಡಕೆ ಬಂದರೆ ಎಳೆಯಿರಿ, ಬಲಕೆ ಬಂದರೆ ಜಿಗಿಯಿರಿ

(ಪಕ್ಷಾಂತರಿಗಳ ಸಮೂಹಗಾನ, ೧೯೭೧)

ಮೊದಲ ಸಾಲಿನಲ್ಲಿ ಬರುವ ಅರ್ಧವಿರಾಮ ಚಿಹ್ನೆ ಜಾಗದಲ್ಲಿ ನಾವು ನಿಲ್ಲಿಸಿ ನಿಲ್ಲಿಸಿ ಓದಬೇಕು ಮತ್ತು ಆ ಯತಿ ಭಾಗಗಳ ಮಧ್ಯೆ ಬರುವ ಭಾಷಾಧ್ವನಿಗಳು ಗಣಗಳಾಗುತ್ತವೆ. ಆ ಗಣಗಳು ಗಾತ್ರದಲ್ಲಿ ದೊಡ್ಡದಾಗುತ್ತ ನಡೆದು ಪಕ್ಷಾಂತರಿಗಳ ನಡೆಯನ್ನು ಚೆನ್ನಾಗಿ ಸೂಚಿಸುತ್ತವೆ. ಚಂಪಾ ಅವರು ಅರ್ಥಾನುಗತವಾಗಿ ಪದಗಳನ್ನು ಬೇಕೆಂದೇ ಒಡೆಯುತ್ತಾರೆ. ಅದು ಕಾವ್ಯಾಭಿವ್ಯಕ್ತಿಯ ಗಾಢತೆ ಮತ್ತು ತೀವ್ರತೆಯನ್ನು ಸೂಚಿಸುತ್ತದೆ. ಪಕ್ಷಾಂತರಿಗಳು ಕಾಲಕ್ಕೆ ತಕ್ಕಂತೆ ಬದಲಾಗುತ್ತಾರೆ. 'ನಾವು' ಎಂಬ ಪದ ಪುನರುಕ್ತಿಯಾಗುವುದರಿಂದ ಆ ಪದದ ಮೇಲೆ 'ಒತ್ತು' ಬೀಳುತ್ತದೆ. ಅದು ಪಕ್ಷಾಂತರಿಗಳ ಸ್ವಭಾವವನ್ನು ಸೂಚಿಸುತ್ತದೆ.

ಇಂತಹ ಸಂದರ್ಭದಲ್ಲಿ ವಿಸ್ತಾರ ಈ ಗಣಗಳಿರುವುದು ಇದಕ್ಕೆ ಕಾರಣವಿರಬೇಕು. ಚಂಪಾ ಅವರು ಪದ್ಯವನ್ನು ಗದ್ಯಕ್ಕೆ ಹತ್ತಿರ ತಂದು ಆಡುಮಾತಿನ ಲಯವನ್ನು ಜೀವಂತವಾಗಿಡಲು ಪ್ರಯತ್ನಿಸಿದರು. ಈ ಸಾಲುಗಳನ್ನು ನೋಡಿ:

ಆದಿ ಎಲ್ಲಿಯೋ ಅಂತ್ಯ ಎಲ್ಲಿಯೋ
    ಒಂದೂ ಅರಿಯದೆಯೆ
ಅಂತೂ ಇಂತೂ ಮುರುಕು ಡೋಣಿಯಲಿ
    ಪಯಣಕೆ ಹೊರಟಿರುವೆ

(-ಏಕಾಕಿ, ೧೯೬೧)

ಇಲ್ಲಿಯ ಲಯ ಹೊಸಗನ್ನಡ ಕಾವ್ಯದಲ್ಲಿ ನಡೆದ ಒಂದು ಅಪೂರ್ವ ಯತ್ನದ ಫಲ. ಪದ್ಯವಾಗಿದ್ದೂ ಗಟ್ಟಿಮುಟ್ಟಾದ ಗದ್ಯದಿಂದ ಕೈಕೊಸರಿಸಿಕೊಳ್ಳದ ಇಲ್ಲಿಯ ಲಯ ಬಾನುಲಿ, ಮಧ್ಯಬಿಂದುವಿನಿಂದ ಆರಂಭವಾಗಿ ಹಾರುವ ಕುದುರಿ, ಗಾಂಧಿ ಸ್ಮರಣೆದಂತಹ ಕವಿತೆಗಳಲ್ಲಿ ಅಪೂರ್ವಸಿದ್ಧಿಯನ್ನು ಪಡೆದು ನಿಂತಿತು. ಅನಾವಶ್ಯಕ ಪ್ರಯತ್ನಗಳನ್ನು ಕಳಚಿ ಎಸೆದು ಅರ್ಥಾಭಿವ್ಯಕ್ತಿಗೆ ಎಷ್ಟುಬೇಕೋ ಅಷ್ಟೇ ಪದ, ಪ್ರತಿಮೆ, ಲಯಗಳನ್ನು ನಾಣ್ಯದಂತೆ ಬಳಸಿದರಿಂದ ಇವರ ಕವಿತೆಗೆ ಪ್ರಾಪ್ತವಾದ ಅರ್ಥ ಮತ್ತು ಲಯಗಳ ಅಪೂರ್ವಸಿದ್ಧಿ ಕನ್ನಡದ ಹೆಮ್ಮೆಯ ವಿಷಯ. ಕವಿ ಬಳಸುವ ಪದ, ಪದಪುಂಜಗಳು ಮತ್ತು ಲಯ ಹೇಗೆ ಕವಿಯ ಅನುಭವವನ್ನು ಅಭಿನಯಿಸಿ ತೋರುತ್ತಿವೆ ನೋಡಿ:

ಹೊರಟಿಹುದು ಮೆರವಣಿಗೆ
. . . .
. . . .
ಬರಿಯ 'ತಲೆಗಳ' ಗುಂಪು 'ಬರಿ' ತಲೆಗಳ ಗುಂಪು!
ಇಳಿಜಾರು ನೆಲದಲ್ಲಿ ಉರುಳಿಯೇ ಉರುಳಿತಿಹ
ಒರಳು ಗುಂಡುಗಳಂತೆ ಹೊರಳುತಿಹ ಗುಂಪು!

(-ಮೆರವಣಿಗೆ, ೧೯೫೮)

ಮೆರವಣಿಗೆ ಸಾಗುವ ಚಲನೆಯನ್ನು ಕವಿ ಅರ್ಥಪೂರ್ಣವಾಗಿ ರೇಖಿಸಿದ್ದಾರೆ. ಲಯ ಶಬ್ದದಲ್ಲಿ ಅರ್ಥಕ್ರಿಯೆಯನ್ನು ಶಬ್ದದ ಅರ್ಥ ಬದುಕಿನ ಒಂದು ಬೆಲೆಯನ್ನು ಧ್ವನಿಸುವಂತೆ ಆದಾಗ ಕಾವ್ಯದ ಲಯಗಳು ಹಾಲು ಸಕ್ಕರೆಯಂತೆ ಬೆರೆತಿರುವುದು ಗೊತ್ತಾಗುತ್ತದೆ. ಕವಿ ಮೂರು ನಾಲ್ಕು ಮಾತ್ರೆಯ ಗಣಗಳನ್ನೂ ಬಳಸಿಕೊಂಡಿದ್ದಾರೆ. ಮುಕ್ತಛಂದದಿಂದ ಆಗಬಹುದಾದ ಏಕತಾನತೆಯನ್ನು ನಿವಾರಿಸಿಕೊಳ್ಳುವುದರ ಕಡೆಗೂ ಗಮನಹರಿಸಿದ್ದಾರೆ. ಅದಕ್ಕೆ ಕವಿ ತಮ್ಮ ಕಾವ್ಯಾಭಿವ್ಯಕ್ತಿಗೆ ಭಾಮಿನಿ ಲಯವನ್ನು ಕವಿ ಸಮರ್ಥವಾಗಿ ಬಳಸಿದ್ದಾರೆ. ಚಂಪಾ ಅವರ ಭಾಷೆ ಭಾವಕ್ಕ ತಕ್ಕಂತೆ ಬಾಗುವ. ಬೀಗುವ, ಓಡುವ, ನಿಲ್ಲುವ ಶಕ್ತಿಯನ್ನು ಪಡೆದುಕೊಂಡಿದೆ. ಇದಕ್ಕೆ ಅವರ ಕವಿತೆಗಳಿಂದ ಅನೇಕ ಸಂಖ್ಯೆಯ ಉದಾಹರಣೆಗಳನ್ನು ಕೊಡಬಹುದು.

ತುತ್ತಾನು ತುದಿಯಲ್ಲಿ ಪುಟ್ಟ ಹಕ್ಕಿಗಳೆರಡು
ಕುಳಿತಾಗ, ನೆತ್ತರವೆ ಹಾಡಿದಂತೆ

ಹೊಸ ಜೋಡಿಯೊಂದು ಆ ಹಂಪಿಯಲ್ಲಿ ಸುಳಿದಾಗ
ತುಂಗಭದ್ರೆಯ ಸೆಳವು ಹೆಚ್ಚಿದಂತೆ
(-ಬೋಳುಮರ, ೧೯೬೨)

ಹೊಸ ಜೋಡಿಯೊಂದು ಹಂಪಿಯಲ್ಲಿ ಸುಳಿದಾಗ ತುಂಗಭದ್ರೆ ಸೆಳವು ಹೆಚ್ಚಿದಂತೆ ಈ ಪ್ರತಿಮೆ ಎಷ್ಟೊಂದು ಅರ್ಥಪೂರ್ಣ. ಆ ಒಂದು ಶಬ್ದಚಿತ್ರ ತಂದು ಕೊಡುವ ಅನುಭವ ಹಾಗೂ ಅಪೂರ್ವ ಆ ಸಾಲುಗಳ ಭಾಷೆ ತುಂಬ ಪರಿಣಾಮಕಾರಿಯಾಗಿದೆ. ಚಂಪಾ ಅವರು ಸಾಲುಗಳನ್ನು ಮುರಿದು ಬೇರೆ ಬೇರೆಯಾಗಿ ಬಳಸಿರುವುದು ಹೆಚ್ಚು ಗಮನಾರ್ಹವಾಗಿದೆ. ಇಂತಹ ಪ್ರಯೋಗ ಕನ್ನಡದಲ್ಲಿ ಹಿಂದೆ ನಡೆದಿರಲಿಲ್ಲವೆಂದಲ್ಲ ಪ್ರಜ್ಞಾಪೂರ್ಣವಾಗಿ ಲಯದಿಂದ ಹೆಚ್ಚು ದುಡಿಸಿಕೊಳ್ಳುವ ಪ್ರಯತ್ನ ಮಾತ್ರ ನವ್ಯರೆಂದೇ ಹೇಳಬೇಕು. ಕವಿ ಯಾರಿಗೆ ಕವಿತೆ ಬರೆಯುವೆ ಎಂದು ಕೇಳಿದಾಗ ಬರುವ ಸಾಲುಗಳಿವು:

ಕವಿ
ಯಾರಿಗಾಗಿ ನೀ ಬರೆ
ಯುವಿ?
"ನನ್ನ ಕವಿತೆ
ಟಿವಿಯಲ್ಲಿ ಸುದ್ದಿ ಹೇಳುವ
ಮೊದ್ದು ಮುಖದ
ಮುದ್ದು ನಗೆಯಂತೆ
ನೀ ಕಣ್ಣಾಗಿ
ಎದುರು ಕುಂತಿದ್ದರೆ
ಅದು
ನಿನಗಾಗಿ"
(-ಕವಿ, ಯಾರಿಗಾಗಿ, ೧೯೮೭)

ಹನ್ನೊಂದು ಸಾಲುಗಳಿರುವ ಈ ಕವಿತೆಯನ್ನು ಕವಿ ಆಕಸ್ಮಿತವಾಗಿ ಮೂರು ಅಥವಾ ನಾಲ್ಕು ಸಾಲುಗಳಲ್ಲಿ ಬರೆದಿದ್ದಾರೆ. ಅಗ ಈಗಿನಂತೆಯೇ ಲಯ ಪ್ರತೀತಿ ಯಾಗುತ್ತಿತ್ತೆಂದು ಹೇಳುವುದು ಸ್ವಲ್ಪ ಕಷ್ಟ. ಕವಿ ಬರೆ- - ಯುವಿ- ಇಲ್ಲಿ ಒಂದರ ನಂತರ ವಿರಾಮ ಬಯಸಿ ಶಬ್ದಗಳ ಸಂಯೋಜನೆಯಾಗಿರುವುದು ಕವಿಯ ಪ್ರಜ್ಞಾಪೂರ್ಣ ಪ್ರಯತ್ನದಿಂದ. ಸಹೃದಯರ ಗಮನ ಆಕರ್ಷಿಸಿದೆ.

ಚಂಪಾ ಅವರು ಛಂದಸ್ಸಿನ ಜೊತೆ ಜೊತೆಗೇ ಭಾಷೆಯನ್ನೂ ಸಮಕಾಲೀನಗೊಳಿಸಿ ಕೊಳ್ಳುತ್ತ ಬಂದರು. ಆಡುಮಾತುಗಳನ್ನು ಕಾವ್ಯದಲ್ಲಿ ಇವರಷ್ಟು ಅರ್ಥಪೂರ್ಣವಾಗಿ ಬಳಸಿಕೊಂಡವರು ಕಡಿಮೆ. ರೂಢಿಯಲ್ಲಿ ಅಲ್ಲಲ್ಲಿ ವಿಶೇಷ ಅರ್ಥ ಭಾವಸ್ಥಿತಿಗಳಲ್ಲಿ

ಬಳಕೆಯಾಗುವ ಇಂಗ್ಲಿಶ್ ಶಬ್ದಗಳನ್ನೇ ಅಲ್ಲದೆ ಹರಗ್ಯಾಡಿ, ಹರಕೊಂಡು, ಗುಗ್ಗರಿ ಇಂತಹ ಪ್ರಾದೇಶಿಕ ಶಬ್ದಗಳನ್ನೂ ಬಳಸಿಕೊಂಡು ಕನ್ನಡದ ಅಭಿವ್ಯಕ್ತಿ ಶಕ್ತಿಯನ್ನೆ ಹೆಚ್ಚಿಸುತ್ತಿರುವ ಇವರ ಸಾಧನೆ ಕನ್ನಡ ಭಾಷೆಯನ್ನು ಬೆಳೆಸುವ ಪ್ರಯತ್ನವೂ ಆಗಿದೆ. ಭಾಷೆಯನ್ನು ಬೆಳೆಯಿಸುವುದು ಎಂದರೆ ಅದರ ಅಭಿವ್ಯಕ್ತಿ ಶಕ್ತಿಯನ್ನು ಹೆಚ್ಚಿಸುವುದು ಎಂದರ್ಥವಾಗಿದೆ. ಆತ್ಮವಿಮರ್ಶೆಯಿಂದ ಸದಾ ಜಾಗೃತವಾಗಿರುವ ಕವಿ ಚಂಪಾ ಅವರು ಮುಕ್ತ ಛಂದದ ಫಲವಾಗಿ ಉಂಟಾಗಬಹುದಾದ ಲಯದ ಏಕತಾನತೆಯನ್ನು ನಿವಾರಿಸಿಕೊಳ್ಳುತ್ತಾರೆ. ಆಡುಮಾತಿನ ಜೀವಸ್ವರಗಳಿಗೆ ಸದಾ ಕಿವಿ ತೆರೆದಿರುವ ಕವಿ ಇವರು. ಅದು ಚಂಪಾ ಅವರ ಛಂದೋಲಯದ ವೈಶಿಷ್ಟ್ಯವಾಗಿದೆ.

- ನಿನ್ನ ಆಟದ ಕಾರು ಗ್ಯಾರೇಜಿನಲ್ಲಿ ಬಿಟ್ಟು
ನಮ್ಮ ಅಂಬೆಯ ಕರೆಗೆ ಬಂದಿ ಓಗೊಟ್ಟು
ಇದ್ದ ಇಪ್ಪತ್ತಕ್ಕೆ ಮುತ್ತೈದು ಮಣಕವ ಕಟ್ಟಿ
ಒಗ್ಗಾಲಿ ಚಕ್ಕಡಿಯ ಇಳುವಿನಲಿ ಬಿಟ್ಟಿ

(-ಸಂದ್ಯಾವಂದನೆ, ೧೯೭೬)

- ಪಾರೊತಮ್ಮನ ಮೈ ಹೊಲಸು
ಓಣೀ ತುಂಬ ಘಮ್ ಅಂತು
ಊರಮಂದಿ ಹೇಳಿದರು ಪಾರೋತಿ
ಇತ್ತಿತ್ಲಾಗ ನೀ ಭಾಳನಾರೂತಿ

(-ಪಾರೋತಿ ಮಾಡಿದ ಮೂರುತಿ, ೧೯೭೭)

ಇಂತಹ ಕವನಗಳಲ್ಲಿ ಯಾವುದೇ ದೊಡ್ಡ ಪದ ಇಲ್ಲ. ಇರವುವೆಲ್ಲ ಪರಿಚಿತ ಮಾತುಗಳೇ. ಆಡುಮಾತಿನ ಪದಪುಂಜಗಳನ್ನು ಮತ್ತು ಲಯವನ್ನು ಪಡೆದಿರುವ ಈ ಕವಿತೆಗಳು ಉದ್ದೇಶಿಸಿದುದನ್ನು ಸಾಧಿಸಿ ಸಾರ್ಥಕವಾಗಿವೆ. 'ಹೋಗಿ ಬರ್ತೇನಜ್ಜ', 'ಅರಳು', 'ಗಾಂಧೀ ಸ್ಮರಣೆ', 'ಓ ಎನ್ನ ದೇಶ ಬಾಂಧವರೇ' ಮೊದಲಾದ ಕವಿತೆಗಳ ಛಂದಸ್ಸು ಅಭ್ಯಾಸ ಯೋಗ್ಯವಾದದ್ದು. ಗದ್ಯದಿಂದ ದೂರ ತಪ್ಪಿಸಿಕೊಂಡು ಓಡದೆ ಗದ್ಯದ ಸಂಭಾಷಣಾ ರೀತಿ, ಕನ್ನಡ ಜಾಯಮಾನದ ಮುರಿಮುರಿಯಾದ ವಾಕ್ಯ ರಚನೆಯ ಲಯ, ಗದ್ಯದ ಮಂದಗತಿ ಮಂದಾನಿಲಯ ಲಯದ ಓಟ ಮತ್ತು ವೈವಿಧ್ಯ ಇವುಗಳನ್ನು ಬಳಸಿಕೊಂಡೇ ಇವರ ಕವಿತೆಗಳು ರಚನೆಯಾಗಿವೆ.

- ಇದು ಬ್ರಹ್ಮಗಂಟೇ ಇರಬೇಕು
ಎಷ್ಟು ತಿಣಕ್ಯಾಡಿದೆ ಎಷ್ಟು ಕೊಸರ್ಯಾಡಿದೆ
ಮತ್ತು ಸರಗಂಟು ಕಗ್ಗಂಟೆ
ಕುಣಿಕಿ ಬಿಗಿತ (-ನಾನು ಮತ್ತು 'ನಾನು', ೧೯೬೮)

- ಕುಳಿತಿದ್ದಾರೆ ಬುದ್ಧನ ಹಾಗೆ
ಉಣ್ಣೆಯ ಚೀಲದಲಿ
ಕುಸಿಗೋಣು ಮಾಡಿ ಬತ್ತಿಯ ಹಾಗೆ
ಎಣ್ಣೆಯಿಲ್ಲದ ಪಣತಿಯಲಿ

(-ಇಂಗ್ಲೆಂಡಿನ ಮುದಿಯರು, ೧೯೭೨)

ಶಬ್ದ ಅಥವಾ ಲಯಗಳು ಯಾವುವೂ ಭಾರವಾಗದೆ ಭಾಷೆ ಓದುಗನೊಡನೆ ನೇರಸಂಪರ್ಕ ಸಾಧಿಸಲು ಸಿದ್ಧವಾಗಿದೆ. ಚಂಪಾ ಅವರು ಕನ್ನಡ ಭಾಷೆಯ ಮಿಡಿತಗಳನ್ನು, ಆಡುಮಾತಿನ ಲಯಗಳನ್ನು ಚೆನ್ನಾಗಿ ಗುರುತಿಸಬಲ್ಲರು. ಆಂಗ್ಲ ಸಾಹಿತ್ಯದ ಸಂಸ್ಕಾರವು ಅವರಿಗಿದೆ. ಜನಪದ ಸಾಹಿತ್ಯದ ಪರಂಪರೆಯನ್ನು ಚೆನ್ನಾಗಿ ಅರಿತವರು. ಆದುದರಿಂದ ಅವರು ಕನ್ನಡದ ಲಯವನ್ನು ಹಿಡಿಯುವಲ್ಲಿ ಸೂಕ್ಷ್ಮಪ್ರಜ್ಞೆಯನ್ನು ಮೆರೆಯುತ್ತಾರೆ.

ಚಂಡೆ ಸಪ್ಪಳ ಕೇಳಿ
ಗೊಂದಲಾಪುರ ವಾಸಿನೀ ಈ ಸುವಾಸಿನಿ;
ನಿನ್ನೆ ಮೊನ್ನೆ
ಏಳು ಮಲ್ಲಿಗೆ ಮೊಗ್ಗೆ ತೂಗಿದ್ದ ನಮ್ಮ
ಕವಿತಾ ಕನ್ನೆ

(೫೦ರ ಅಡಿಗರು, ೧೯೬೮)

ಅಡಿಗರಿಗೆ ೫೦ ತುಂಬಿದಾಗ ಬರೆದ ಕವಿತೆಯಿದು. ಇವರ ಬರವಣಿಗೆ ಲಯದ ಹಾಗೂ ಭಾಷೆಯ ಅನೇಕ ಸಾಧ್ಯತೆಗಳನ್ನು ಗುರಿಯಾಗಿಟ್ಟುಕೊಂಡಂತೆ ತೋರುತ್ತದೆ. ಕವಿಯ ಅನುಭವಗಳು ಮಾತ್ರ ಇನ್ನೂ ವಿಡಂಬನೆಯ ನೆಲೆಗಟ್ಟಿನಲ್ಲಿಯೇ ಇವೆ. ಈ ಅಂಶವನ್ನು ಗಮನಿಸಿದರೆ ಇವರ ಛಂದಸ್ಸಿನ ಪ್ರಯೋಗಗಳು ಕುತೂಹಲಕರವಾಗಿ ಬೆಲೆಯುಳ್ಳವಾಗಿವೆ. ಚಂಪಾ ಅವರು ಪದಗಳನ್ನು ಮತ್ತು ಪ್ರತ್ಯಯಗಳನ್ನು ಒಡೆದು ಬರೆಯುವ ಪ್ರಯತ್ನಗಳನ್ನು ಮಾಡಿದ್ದಾರೆ. ಇಂತಹ ಪ್ರಯತ್ನಗಳು ಇಂಗ್ಲಿಶಿನಲ್ಲಿ ವಿಪುಲವಾಗಿದ್ದು E.E. Cummings ಈ ದೃಷ್ಟಿಯಿಂದ ಬಹುಗಣ್ಯನಾಗಿದ್ದಾನೆ. ಇವುಗಳ ಪ್ರಭಾವವಿರುವ ಈ ಉದಾಹರಣೆಗಳನ್ನು ನೋಡಬೇಕು.

ಈ
ಗೀಗೀನ ಕವಿ
ತೆಗಳು ಅಂದರೆ ಬೋಳಿ
ಸಿದಂತೆ ಹಳ್ಳಿ
ಹಜಾಮ :

ಅಲ್ಲಲ್ಲಿ ಬರೆ
ವಂತೆ ಚುಟುಚುಟು
ಕ ತಲೆ ತುಂಬ

(ಈ ಗೀಗಿನ ಕವಿತೆಗಳು, ೧೯೭೦)

ಇಲ್ಲಿಯ ಪದ, ಪ್ರತ್ಯಯಗಳು ಲಯ ಅಥವಾ ವಿರಾಮ ಚಿಹ್ನೆ ಕೂಡ Functional ಆಗಬಲ್ಲುದು ಕವಿ ಪದಗಳನ್ನು ಒಡೆಯುತ್ತಾನೆ.

ಪೀಲಂ
ಕೇಶ

ಇಂತಹ ಪದಗಳನ್ನು ನೋಡಿದಾಗ ಪದಗಳೇ ಒಂದು ಘಟಕವಾಗಿಲ್ಲ. ಪದ್ಯದಲ್ಲಿ ಯತಿ ಮೊದಲ ಮತ್ತು ಎರಡನೆಯ ಪದದ ಮೇಲೆ ಬರುತ್ತಿದೆ. ಇಲ್ಲಿ ವಿರಾಮ ಮುಖ್ಯವಾಗುತ್ತದೆ. ಈ ವಿರಾಮ ಶಕ್ತಿಯುತ್ತವಾಗಿ ಮೂಡಿಬಂದಿದೆ. ಚಂಪಾ ಅವರಲ್ಲಿ ಸಾಲಿನಿಂದ ಸಾಲಿಗೆ ಅರ್ಥದಂತೆ ಲಯವೂ ವ್ಯಾಪಿಸಿಕೊಳ್ಳುತ್ತ ಹೋಗುವುದರಿಂದ ಅವರು ಬಳಸುವ

ನಾಡಿಗ
ಅಡಿಗಾದಿ
ಅನಂಗ
ಮೂರ್ತಿಗಳೆಲ್ಲ

ಇಲ್ಲಿ ವಿಡಂಬನೆಯ ಪದತಂತ್ರ ಮಾತ್ರ ಯೋಚಿಸುವಂತೆ ಮಾಡುತ್ತದೆ. ಇವರ ಭಾಷೆಯಲ್ಲಿರುವ ಬನಿ, ಬಿಗಿ ಮತ್ತು ಗತ್ತುಗಳು ಆಡುಮಾತಿನ ಬಲದಿಂದ ವೃದ್ಧಿಯಾಗಿವೆ. ಒಂದೊಂದು ಬಿಡಿ ಪದ್ಯವನ್ನೋದುವಾಗಲು ಹೊಚ್ಚ ಹೊಸತನವೊಂದರಿಂದ ಕಳಕಳಿಸು ವಂತೆ ಕಾಣುವ ಲಯ ಇವರ ಪದ್ಯಗಳನ್ನೆಲ್ಲ ಒಟ್ಟಿಗೆ ಓದಿದಾಗ ಏಕತಾನತೆಯ ಅನುಭವವೊಂದು ಉಂಟಾಗುತ್ತದೆ.

ಚಂಪಾ ಅವರ ಛಂದಸ್ಸು ಹೆಚ್ಚು ಆಶಾದಾಯಕ ಅಂಶಗಳಿಂದ ಕೂಡಿದೆ. ಕನ್ನಡದ ಶಕ್ತಿಪೂರ್ಣ ಲಯಗಳ ಕೆಲವು ಮುಖಗಳನ್ನು ಅವರ ಕಾವ್ಯದಲ್ಲಿ ಈವರೆಗೆ ಗಮನಿಸ ಲಾಗಿದೆ. ಅವರನ್ನು ಅಭ್ಯಾಸ ಮಾಡುವವರಿಗೆ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಅವರ ಕವಿತೆಯ ಉದ್ದೇಶಕ್ಕೆ ಉಳಿದ ಎಲ್ಲ ಪರಿಕರಗಳನ್ನು (ರಸ, ಧ್ವನಿ) ಸಹಾಯಕವಾಗಿ ಸಾಧನವಾಗಿ ಮಾಡುತ್ತಾರೆ. ಅದರಲ್ಲಿ ಛಂದಸ್ಸು ಒಂದು 'ಅಲಂಕಾರ'ವಾಗಿ ಮಾತ್ರವಲ್ಲ; ಅದು ಕವಿತೆಯ ಅರ್ಥವನ್ನು ಹಿಡಿದಿಡಲು ಒಂದು ಸಾಧನವಾಗಿ ಬರುತ್ತದೆ. ಅದೇ ಎಲ್ಲವನ್ನು ಹಿಂದಿಕ್ಕಿ ತಂತಾನೆ ಮುಂದೆ ನಿಲ್ಲುವುದಿಲ್ಲ. ಚಂಪಾ ಅವರು ಕಾವ್ಯಕ್ಕೆ ಛಂದಸ್ಸನ್ನು ಸಾಮಗ್ರಿಯಾಗಿ ಬಳಸಿಕೊಳ್ಳುವುದರಲ್ಲಿ ತೋರಿಸುವ ಅಪಾರ ಸಂಯಮ

ಮತ್ತು ವಿವೇಕ ಮೆಚ್ಚತಕ್ಕದ್ದು. ಅವರ ಕಾವ್ಯದಲ್ಲಿ ಗಣಗಳಿಗಿಂತ ಮಧ್ಯೆ ಮಧ್ಯೆ ಅವರು ತರುವ ವಿರಾಮ ಸ್ಥಾನಗಳು, ಉದ್ಗಾರ ವಾಚಕಗಳು ಅಧ್ಯಯನ ಯೋಗ್ಯವಾಗಿವೆ.

ಉತ್ತರ ಕರ್ನಾಟಕದ ಆಡುಮಾತು ತನ್ನ ಸರಳರೂಪದಲ್ಲಿ ತೀವ್ರಭಾವಗಳನ್ನು ಪರಿಣಾಮಕಾರಿ ಮಾಧ್ಯಮವಾಗುವಂತೆ ಮಾಡಿದವರಲ್ಲಿ ಬೇಂದ್ರೆ, ಬೆಟಗೇರಿ ಅವರ ಸಾಲಿಗೆ ಚಂಪಾ ಅವರೂ ಸೇರುತ್ತಾರೆ. ಅಲ್ಲಿನ ಆಡುನುಡಿ ಮತ್ತು ಜಾನಪದ ಸಾಹಿತ್ಯದ ಹಾಡು ಧಾಟಿಗಳನ್ನು ಅರಗಿಸಿಕೊಂಡ ಚಂಪಾ ಅವರು ಅದನ್ನು ಸೂಕ್ಷ್ಮವಾಗಿ ಬಳಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಆಧುನಿಕ ಸಾಹಿತ್ಯದ ಶ್ರೇಷ್ಠ ಕವಿಗಳಲ್ಲಿ ಒಬ್ಬರೆಂದು ಸಾಹಿತ್ಯಲೋಕ ಅವರನ್ನು ಗುರುತಿಸಿದ್ದು, ಅವರ ಕಾವ್ಯದ ಶಿಲ್ಪವನ್ನು ಅರ್ಥೈಸಿಕೊಳ್ಳಲು ಅವರ ಛಂದೋಪ್ರಯೋಗಗಳ ಈ ವಿಶ್ಲೇಷಣೆ ಸಹಾಯಕವಾದೀತು ಎಂದು ಆಶಿಸುತ್ತೇನೆ.

ಆಕರಗ್ರಂಥ

೧. ಚಂದ್ರಶೇಖರ ಪಾಟೀಲ, ೨೦೦೬, ಚಂಪಾ ಕಾವ್ಯ, ಸಪ್ನ ಬುಕ್‌ಹೌಸ್, ಬೆಂಗಳೂರು.

೬೭

ಬರಗೂರು ಅವರ ಕಾವ್ಯ ಛಂದಸ್ಸು

ಆಧುನಿಕ ಕನ್ನಡ ಸಾಹಿತ್ಯ ವೈವಿಧ್ಯಮಯವೂ ಚಲನಶೀಲವೂ ಆಗಿ ಬೆಳೆಯುತ್ತಿದೆ. ಹೊಸ ಹೊಸ ಆಯಾಮಗಳೊಡನೆ ತನ್ನ ಅನನ್ಯತೆಯನ್ನು ಉಳಿಸಿ ಕೊಂಡಿದೆ. ಹೊಸಗನ್ನಡ ಸಾಹಿತ್ಯವನ್ನು ಅಧ್ಯಯನದ ಅನುಕೂಲಕ್ಕಾಗಿ ನವೋದಯ, ಪ್ರಗತಿಶೀಲ, ನವ್ಯ, ನವೋತ್ತರ, ದಲಿತ-ಬಂಡಾಯ ಎಂದು ವಿಂಗಡಿಸಲಾಗಿದೆ. ಬದಲಾಗುವ ಬದುಕಿನ ಧೋರಣೆಯು ಸಾಹಿತ್ಯಿಕ ಧೋರಣೆಯನ್ನು ಬದಲಾಯಿಸಲು ಯತ್ನಿಸಿತು. ಬಂಡಾಯ ಸಾಹಿತ್ಯ ಬರಗೂರು ಅವರ ಕಾವ್ಯದ ಜೀವಧ್ವನಿ ಅಡಗಿರುವುದು ಅಲ್ಲಿಯೇ. ಛಂದಸ್ಸಿನ ನೆಲೆಯಲ್ಲಿ ಅವರ ಕಾವ್ಯವನ್ನು ವಿಶ್ಲೇಷಿಸುವುದು ಈ ಸಂಪ್ರಬಂಧದ ಆಶಯವಾಗಿದೆ.*

ಛಂದಸ್ಸಿನ ಸಿದ್ಧಮಾದರಿಯ ನಿಯಮಗಳನ್ನು ಶಿಥಿಲಗೊಳಿಸಿ ಕವನಗಳನ್ನು ರಚಿಸಿದರು ಬರಗೂರರು. ನವೋದಯ ಸಂದರ್ಭದ ಕವನಗಳಲ್ಲಿಯ ಆದರ್ಶ ಮತ್ತು ವರ್ಣನಾತ್ಮಕ ಧಾಟಿಯನ್ನು ಕೈಬಿಟ್ಟು ಆಡುಮಾತಿನ ಕಸುವು ಮತ್ತು ಲಯಗಳನ್ನು ಬಳಸಿಕೊಳ್ಳುವುದರ ಕಡೆಗೆ ಕವಿಯ ಮನಸ್ಸು ಹರಿಯಿತು. ವೈಯಕ್ತಿಕ ಧಾಟಿಯಲ್ಲಿ ಸಮಕಾಲೀನ ವಾಸ್ತವದ ಅನುಭವಗಳನ್ನು ಹಲವು ಧ್ವನಿ ಹಂತದಲ್ಲಿ ನಿರೂಪಿಸುವ ಭಾಷೆಯನ್ನು ಅವರು ರೂಪಿಸಿದರು. ಭಾವಕ್ಕೆ ಉಚಿತವಾದ ಲಯಗಳನ್ನೇ ಬಳಸ ಬೇಕೆನ್ನುವ ಮನೋವೃತ್ತಿ ತಾಳಿದವರಲ್ಲಿ ಬರಗೂರರು ಒಬ್ಬರು. ಮುಕ್ತ ಛಂದಸ್ಸು ಅವರ ಕವನಗಳಲ್ಲಿ ಶಕ್ತಿಯುತವಾಗಿ ಮತ್ತು ಹೃದ್ಯವಾಗಿ ಹರಿದಿದೆ. ಬರಗೂರರ

---

* ಬರಗೂರು ರಾಮಚಂದ್ರಪ್ಪ(೨೦೦೧) 'ಕಾಂಟೆಸಾದಲ್ಲಿ ಕಾವ್ಯ' ಅಂಕಿತ ಪುಸ್ತಕ, ಬೆಂಗಳೂರು. ಈ ಸಂಪ್ರಬಂಧದಲ್ಲಿ ಬಂದಿರುವ ಕವನಗಳನ್ನು ಆ ಸಂಕಲನದಿಂದ ಆಯ್ಕೆ ಮಾಡಿ ಕೊಳ್ಳಲಾಗಿದೆ. ಆ ಕೃತಿಯ ಬಗ್ಗೆ ನನ್ನ ಗಮನ ಸೆಳೆದವರು ಗುರುಗಳಾದ ಕೆ.ಪಿ. ನಾರಾಯಣ ಅವರು.

ಕಾವ್ಯದಲ್ಲಿ ಬರುವ ರೋಷ ಮತ್ತು ಆಕ್ರೋಶಗಳ ಹಿಂದೆ ಸಾಮುದಾಯಿಕ ಹಿತಾಶಕ್ತಿಯಿದೆ. ಆ ಮೂಲಕ ಅವರು ಜನಾಂಗದ ಒಂದು ಸಾಂಸ್ಕೃತಿಕ ನೆಲೆಯನ್ನು ಕಟ್ಟಿಕೊಡುತ್ತಾರೆ. ಸಾತ್ವಿಕವಾದ ವ್ಯಂಗ್ಯ ಅವರ ಕಾವ್ಯದ ಸ್ಥಾಯಿಯಾಗಿದೆ. 'ಕುರ್ಚಿ' ಕವನದ ಕೊನೆಯ ಸಾಲುಗಳು ಹೀಗೆ ಮುಕ್ತಾಯವಾಗುತ್ತವೆ.

ಆಗಬಾರದು ಕುರ್ಚಿಯಲ್ಲಿ ಕೂತವರು
ಕುರ್ಚಿಗಿಂತ ಕುಬ್ಜರು
ಕೂತರೂ ಕೂರದಂತೆ
ಅತ್ತಿತ್ತ ಹಾರದಂತೆ
ತಳದ ತಳಮಳಕ್ಕೆ ತಣ್ಣೀರು ಎರಚದಂತೆ
ಕಣ್ಣೀರು ಒರೆಸುವ ಕರುಳಾದರೆ
ಕುರ್ಚಿಯಾಗುತ್ತದೆ ಹೃದಯ
ಪ್ರಜಾಪ್ರಭುತ್ವಕ್ಕೆ ಅಭಯ

(-ಕುರ್ಚಿ)

ಅಧಿಕಾರಿಗಳನ್ನು ಕುರಿತು ರಚಿಸಿದ ಈ ಕವನ ತುಂಬ ಅರ್ಥಪೂರ್ಣವಾಗಿದೆ. 'ಆಗಬಾರದು ಕುಚಿಯಲ್ಲಿ ಕೂತವರು ಕುರ್ಚಿಗಿಂತ ಕುಬ್ಜರು' ಇಲ್ಲಿಯ ವ್ಯಂಗ್ಯ ಎಷ್ಟು ಅರ್ಥಪೂರ್ಣ! ಅವರು ಕೊಡುವ ಒತ್ತು ತುಂಬ ಪರಿಣಾಮಕಾರಿಯಾಗಿದೆ. ಬರಗೂರರ ಛಂದೋಲಯವು ಬಹಳ ಗಮನಾರ್ಹವಾದುದು.

ದುಡಿಮೆಗಾರರಣ್ಣ ನಾವು ದುಡಿಮೆಗಾರರು
ಎದೆಯ ತಂತಿ ಮೀಟಿ ನುಡಿವ ಹಾಡುಗಾರರು ॥
ಕೆರೆ ಕುಂಟೆಗಳ ಕುಟ್ಟುತ ನಾವು
ಬೆವರು ನೀರನು ಹರಿಸಿದೆವು
ಕಳೆಯ ಕೀಳುತ ಬೆಳೆಯ ಬೆಳೆಯುತ
ಒಡೆಯನ ಒಡಲನು ತುಂಬಿದೆವು ॥

(-ದುಡಿಮೆಗಾರರು)

ಮೂರು-ಐದು ಮಾತ್ರೆಯ ಲಯಗಳು ಗೆಜ್ಜೆಯ ನಾದದಂತೆ ಕಿವಿಗೆ ಅಪ್ಪಳಿಸುತ್ತವೆ. 'ಹಗೆಯಾಯಿತೆ ಬಾಳು, ಬಾರದೆ ಪ್ರೀತಿ?' ಎನ್ನುವಲ್ಲಿ ಕಾವ್ಯ ನಿಂತು ಹಿಂಜಿದ ಭಾವವನ್ನು ಅಭಿನಯಿಸುತ್ತದೆ. ಕೊನೆಯ ಸಾಲು ಕೊಡುವ ಅರ್ಥ ಸಾಹಚರ್ಯ ವ್ಯಂಗ್ಯವನ್ನು ಮೊನಚುಗೊಳಿಸುತ್ತದೆ. ಸಾಮಾಜಿಕ ವಿಡಂಬನೆಯೇ ಪ್ರಧಾನವಾಗಿರುವ ಅವರ ಕವಿತೆಗಳಲ್ಲಿ ಕಂಡುಬರುವ ಪ್ರಾಸವು ಭಾಷೆಯನ್ನು ಹರಿತಗೊಳಿಸುತ್ತದೆ.

ಧರ್ಮದ ಹೆಸರು ದೇಶದ ತುಂಬ
ಸಾವಿರ ಸಾವಿರ ಸಾವುಗಳು
ಮೆರೆಯುವ ಮಠಗಳ ಪೀಠದ ಕೆಳಗೆ
ನರಳುವ ಅಸಂಖ್ಯ ನೋವುಗಳು

ಧರ್ಮದ ದಳ್ಳುರಿ ದವಡೆಗೆ ಸಿಕ್ಕಿ
ಜಜ್ಜಿ ಹೋಗಿದೆ ಮಾನವೀಯತೆ
'ಸರ್ವಜನರಿಗೆ ಸುಖ' ತುತ್ತೂರಿ
ಹೂತು ಹೋಗಿದೆ ಸಮಾನತೆ

(–ಆಕಾಶದ ಬೇರು)

ಇಲ್ಲೆಲ್ಲ ಪರಿಚಿತ ಪದಗಳೇ. ಮೂರು-ನಾಲ್ಕು ಮಾತ್ರೆಯ ಗಣಗಳು ಕನ್ನಡ ರಚನೆಗೆ ಒಗ್ಗುತ್ತವೆ. ಸಹಜವಾಗಿ ಕವಿಯ ಭಾವನೆಗಳ ಅಭಿವ್ಯಕ್ತಿಗೂ ಮೂರು-ನಾಲ್ಕು ಮಾತ್ರೆಯ ಗಣರಚನೆ ನೆರವಾಗಿದೆ. ಕವಿಯ ಆಶಯ ಕೊನೆಯ ಸಾಲುಗಳಲ್ಲಿ ಅಡಗಿದೆ. 'ಆಕಾಶದ ಬೇರು, ನೆಲ ತುಂಬಿದ ಟಿಸಿಲು । ನೆಲದಾಳಕ್ಕೆ ಬೇರಿಳಿಯುತ । ಮುಗಿಲೆತ್ತರ ಟಿಸಿಲೆತ್ತುವ । ಬಲವಾಗಲಿ ಮನುಜತೆ, ನಮ್ಮೆಲ್ಲರ ಕರುಳು ।' ಎಂಬ ಮಾತು ಮಾನವೀಯತೆಯ ಇಡೀ ಚಿತ್ರವನ್ನು ಅದ್ಭುತ ರೀತಿಯಲ್ಲಿ ನಮ್ಮ ಮುಂದೆ ಇಡುತ್ತದೆ. ಅಂತಹ ಸಾಲುಗಳು ಓದುಗರ ಮನಸ್ಸಿನಲ್ಲಿ ಮುದ್ರೆ ಒತ್ತಿ ನಿಲ್ಲುವುದಲ್ಲದೆ ಮತ್ತೆ ಮತ್ತೆ ನೆನಪಿಗೆ ಬರುತ್ತವೆ. ಆಯಾ ಕವನದ ಕೊನೆಯಲ್ಲಿ ಕವಿ ತಾನು ಹೇಳಬೇಕಾದ ಸಾರವನ್ನು ಹೇಳುತ್ತಾರೆ. ಆ ಒಂದು ಕೌಶಲ್ಯ ಬರಗೂರರವರಿಗೆ ಸಹಜವಾಗಿ ಸಾಧಿಸಿದೆ.

ಹಣೆ ಬರೆಹ ದಣಿ ಕಟ್ಟು
ಜಾತಿ ಮತಗಳ ಸುಟ್ಟು
ಬಂದೇವು ಬಡವರು
ಹೊಸ ಪಂಜು ಹಿಡಿದು
....
....
ಕೊಚ್ಚಿ ಹಾಕುವ ಕಿಚ್ಚು
ಹುಚ್ಚಾಗದಂತೆ
ಸುಟ್ಟ ಹಾದಿಯ ತುಂಬ
ಹೊಸ ಹಾಡು ಹರಿದೀತು
ಮನೆ ಮನಸು ಮೆರೆದೀತು

(–ಎಚ್ಚರಿಕೆ)

ಮೂರು ಮತ್ತು ಐದು ಮಾತ್ರೆಯ ಲಯದಲ್ಲಿ ಸಾಗುವ ಈ ಕವನದಲ್ಲಿ ಅತಿ ವಿಧೇಯತೆಯನ್ನು ತಿರಸ್ಕರಿಸುವ ರೋಷದ ಭಾಷೆ ಮಿಂಚಿದೆ. ಒಂದು ಭಾಷಾ ಸಮುದಾಯದವರು ತನ್ನ ಸಂಬಂಧವನ್ನು ವಿಶ್ಲೇಷಿಸಿಸುವ ಮತ್ತು ಪ್ರತಿಭಟಿಸುವ ಮನೋಭಾವ ಇಲ್ಲಿದೆ. ಕವಿಯು ಕವನಗಳ ನಾದ ಮತ್ತು ಪಂಕ್ತಿಗಳಲ್ಲಿ ಲಯಗಳನ್ನು ಎಷ್ಟು ಪರಿಣಾಮಕಾರಿಯಾಗಿ ಬಳಸಬಲ್ಲರು ಎಂಬುದಕ್ಕೆ ಸಾಕ್ಷಿಯಾಗಿವೆ, ಬರಗೂರರ ಕವನಗಳು. ನಾಡಿನ ಸ್ಥಿತಿಯನ್ನು 'ಜಾಲೀಮರದ ಹಾಡು' ಎಂಬ ಕವನದಲ್ಲಿ ಅರ್ಥ ಪೂರ್ಣವಾಗಿ ಚಿತ್ರಿಸಿದ್ದಾರೆ. ಜಾಲೀಮರವನ್ನು ಕನ್ನಡ ನಾಡಿಗೆ ಹೋಲಿಸಿದ್ದಾರೆ.

ಕೇಳೊ ಗೆಳೆಯ ಕೇಳೊ ಕತೆಯ
ಉರಿಹತ್ತಿದ ಕಟ್ಟಿಗೆ
ಇದ್ದಿಲಾದ ವ್ಯಥೆಯ
ಕನ್ನಡದ ಕಾಡಿನಲಿ ಏಸೊಂದು ಮರಗಳು
ಸಿರಿಗಂಧವೊಂದೇ ರಾಜವೇನು?
ತೆಂಗು ಕಂಗಿನ ಜೊತೆಗೆ ಕಂಗಾಲಾಗಿರುವ
ಕನ್ನಡದ ಜಾಲೀಮರ ಬಲ್ಲೆಯೇನು?

(-ಜಾಲೀಮರದ ಹಾಡು)

ಜಾಲಿಮರವು ಗಟ್ಟಿ ಕೆಲಸಗಳಿಗೆಲ್ಲ ಜಗಜಟ್ಟಿಯಾಗಿ, ಹೊಲದ ಕಾವಲಿಗಾಗಿ, ಬೇಲಿ ಭಟನಾಗಿ ಬಳಕೆಯಾಗುವ ಆ ಮರ ಕನ್ನಡದ ಕಲ್ಪತರು ಎಂದು ಕವಿ ಬಣ್ಣಿಸಿರುವುದು ಅರ್ಥಪೂರ್ಣವಾಗಿದೆ.'ಕೇಳೊ ಗೆಳೆಯಾ' ಎನ್ನುವಲ್ಲಿ ಆರಂಭದಲ್ಲಿ ಕ್ರಿಯಾಪದ ಇರುವುದರಿಂದ ಭಾಷಾ ಬಳಕೆಯಲ್ಲಿ ತೀವ್ರತೆ ಇರುತ್ತದೆ. ಅದರ ಪರಿಣಾಮ ಮುಂದಿನ ಚರಣಗಳ ಲಯದಲ್ಲಿ ಕಾಣಿಸುತ್ತದೆ. ಆ ರೂಪಕ ಶತಮಾನದ ಅನ್ಯಾಯವನ್ನು ಕಣ್ಣು ಮುಂದೆ ನಿಲ್ಲಿಸುವ ಸಾಮರ್ಥ್ಯ ಪಡೆದಿದೆ. ಅಲ್ಲದೆ ನೊಂದವರಿಗೆ ಆತ್ಮವಿಶ್ವಾಸ ತುಂಬುವ ತೇಜಸ್ಸನ್ನು ಹೊಂದಿದೆ.

ಸಿಕ್ಕೀತು ಹೇಗೆ ಕರ್ಣನಿಗೆ
ಈ ನಾಡ ಸಿಂಹಾಸನ!
ಹೆತ್ತ ತಾಯಿಯೆ ತೇಲಿ ಬಿಟ್ಟಳು
ನೀರ ಮೇಲಿನ ಪಯಣ!

(-ಕರ್ಣ)

ಕರ್ಣನ ಮನಃಸ್ಥಿತಿಯ ನೋವು ಜೋರಾದ ದನಿಯಲ್ಲಿ ಹಾಗೂ ಉಪಮೆ ಶಬ್ದಚಿತ್ರ ತುಂಬಿದ ಭಾಷೆಯಲ್ಲಿ ಅಭಿವ್ಯಕ್ತವಾಗಿದೆ. 'ಹೆತ್ತ ತಾಯಿಯೆ ತೇಲಿ ಬಿಟ್ಟಳು

ನೀರ ಮೇಲಿನ ಪಯಣ!' ಎನ್ನುವ ಚರಣದಲ್ಲಿ ಸಹೃದಯರ ಭಾವಗಳು ಸ್ತಬ್ಧವಾಗುತ್ತವೆ; ಮಾತು ಮೌನವಾಗುತ್ತದೆ.

ಮೌನದಲ್ಲಿ ಕೊಲ್ಲಬೇಡಿ ಕರುಣೆ ನಮಗೆ ಬೇಡ
ಲೆಕ್ಕ ಬುಕ್ಕು ಬೆಳ್ಳಿಕೋಳ ಅಂಕಗಣಿತ ಬೇಡ
ಬೇಡಜಾಲ ಕೊಡವಿನಿಲ್ಲಿ ಹೊಸತು ಮಾತು ಮಸಿಯಿರಿ
ಜೀವಗಾಳಿ ಗೆಳೆಯರಾಗಿ ಮೆದುಳು ಮನಸ್ಸು ಬೆಸೆಯಿರಿ

(-ಒಂಟಿ ದನಿ)

ಐದು ಮಾತ್ರೆಯ ಗಣಗಳಲ್ಲಿ ಸಾಗುವ ಇಂತಹ ಕವನಗಳು ಹೇಳಬೇಕಾದ ಭಾವಗಳನ್ನು ಲೀಲಾಜಾಲವಾಗಿ ನಿರೂಪಿಸುತ್ತವೆ. ಬರಗೂರರ ಇಂತಹ ಕ್ರಾಂತಿಗೀತೆಗಳು ಇಂದಿನ ಸಾಮಾಜಿಕ ವ್ಯವಸ್ಥೆಯ ಬಗ್ಗೆ ವ್ಯಂಗ್ಯ ವಿಡಂಬನೆಯ ಮೂಲಕ ರೋಷವನ್ನು ಪ್ರಕಟಿಸುತ್ತವೆ. ಬದುಕು ಸಂಪ್ರದಾಯದಿಂದ ಬಿಡುಗಡೆ ಹೊಂದಿ ಸ್ವಾತಂತ್ರ್ಯತೆಯನ್ನು ಬಯಸುತ್ತದೆ. ಆ ಕೃತಕ ಸೌಂದರ್ಯ ಬರಗೂರರ ಕಾವ್ಯದ ಲಕ್ಷಣವಾಗಿದೆ. ಆಡು ಮಾತಿನ ಲಯ ಮತ್ತು ಭಾಷೆಗಳಿಂದ ಬರಗೂರರು ಸ್ವಭಾವೋಕ್ತಿಯ ಮಾರ್ಗ ಹಿಡಿದಿದ್ದಾರೆ. 'ಹೊಸ ಹೊತ್ತು', 'ಬಂಡೆದ್ದು ಬದುಕೇವು', 'ಹೋರಾಟ', 'ಜೀವಗಾಳಿ', 'ಬಾಯಾರಿದೆ ಹೃದಯ' ಇಂತಹ ಕವಿತೆಗಳ ಛಂದೋಲಯ ಅಭ್ಯಾಸ ಯೋಗ್ಯವಾದುದಾಗಿದೆ. ಬರಗೂರರು ಪದ್ಯವನ್ನು ಗದ್ಯದ ಹತ್ತಿರಕ್ಕೆ ತಂದು ಆಡುಮಾತಿನ ಲಯವನ್ನು ಜೀವಂತವಾಗಿಡಲು ಯತ್ನಿಸಿದರು.

ಫಕ್ಕನೆ ಪುಕ್ಕ ಬಿಚ್ಚುತ್ತೆ; ಕೊಕ್ಕು ಕಚ್ಚುತ್ತೆ
ಕಚ್ಚಿದ ಜಾಗಲ್ಲಿ ಚಿಮ್ಮಿದ ಕೆಚ್ಚು

(-ಕನಸು)

ಕವಿ ಅರ್ಥಾಭಿವ್ಯಕ್ತಿಗಾಗಿ ಎಷ್ಟು ಬೇಕೋ ಅಷ್ಟೇ ಪದ, ಪ್ರತಿಮೆಗಳನ್ನು ಬಳಸುತ್ತಾರೆ. ಮೊದಲ ಸಾಲಿನಲ್ಲಿ ಬರುವ 'ಫಕ್ಕನೆ' ಎಂಬ ಅವ್ಯಯ ಅನಂತರ ಬರುವ 'ಬಿಚ್ಚು' ಎಂಬ ಕ್ರಿಯಾಪದ ಅವುಗಳ ಸಂಯೋಜಿತ ರೀತಿ ಉಚಿತವಾಗಿದೆ. ಹೊಸಗನ್ನಡ ಕಾವ್ಯದಲ್ಲಿ ನಡೆದ ಪಲ್ಲಟವಿದು. ಬರಗೂರವರಿಗೆ ಛಂದಸ್ಸು ಕೇವಲ ಅಭಿವ್ಯಕ್ತಿಯ ವಾಹಕವಾಗದೆ ತಮ್ಮ ಅನುಭವಗಳನ್ನು ಶೋಧಿಸುವ ತಮ್ಮನ್ನೇ ತಾವು ಕಾವ್ಯದಲ್ಲಿ ಕಂಡುಕೊಳ್ಳುವ ಆತ್ಮಾನ್ವೇಷದ ಒಂದು ಸಾಧನವಾಗಿ ಕಂಡಿತು. ನೊಂದ ಜನರ ಅನುಭವಗಳನ್ನು ತಮ್ಮ ಕವನಗಳಲ್ಲಿ ಅದ್ಭುತವಾಗಿ ಸೆರೆ ಹಿಡಿದಿದ್ದಾರೆ.

ಬಡತನ ಬಂದಾಗ
ಸಂಬಂಧ ಸುಟ್ಟಿತು
ನಮ್ಮ ಕರುಳೇ ನಮಗೆ

ಕೈ ಕೊಟ್ಟು ನಕ್ಕಿತು
....
....
ಹೆಂಡತಿ ಮಕ್ಕಳಿಗೆ
ಏನ ಹೇಳಲಿ ನಾನು?
ತಟ್ಟೆ ತಂಗಳು ತುಂಬಿ
ತೂನ್ನು ಹತ್ತಿದ ಬಾನು

(–ಸಂಬಂಧಗಳು)

ಕವನದ ರಾಗ ಪ್ರಚೋದಕ ಲಯ, ಪ್ರಾಸ, ಶಬ್ದಚಿತ್ರ ಕವಿಯ ವಾಸ್ತವಿಕ ದೃಷ್ಟಿಯಿಂದ ಭಾಷೆಗೆ ಒದಗುವ ರಂಗು ಕಾವ್ಯದಲ್ಲಿ ಸೊಗಸಾಗಿ ನಿರೂಪಿತವಾಗಿದೆ. ಬಡತನ ಬಂದಾಗಿನ ಸ್ಥಿತಿಯನ್ನು ಕವಿ ಭಾಷೆಯ ಎಲ್ಲ ಸಾಧ್ಯತೆಗಳನ್ನು ಬಳಸಿದ ರೀತಿ ಸ್ಪಷ್ಟ ವಾಗಿ ಗೋಚರವಾಗಿದೆ. ಕಾವ್ಯದ ಸೂಕ್ಷ್ಮಸಂವೇದನೆ ಅರ್ಥ, ಲಯಗಳಲ್ಲಿ ಹೂ ಅರಳಿದಂತೆ ಅರಳಿದೆ. ಪ್ರತಿಮೆಗಳ ಮೂಲಕ ಸಂವೇದನೆಗಳನ್ನು ಹಿಡಿಯುವ ವಿಧಾನ ಬರಗೂರವರಿಗೆ ಸಾಧಿಸಿದೆ.

ನಾವು ಮುಟ್ಟಿ ನಿಂತ ಮರದ
ಹೂವು ಉದುರಿತು
ನಾವು ನಡೆದ ಹಾದಿ ಹಸಿರು
ಉರಿದು ಹೋಯಿತು

(–ನಾವು ಬಡವರು)

ಭೂತ–ವರ್ತಮಾನಗಳ ಸಂಬಂಧದ ಗಾಢತೆಯನ್ನು ಸೂಚಿಸುವ ಶಕ್ತಿ ಕಾವ್ಯಕ್ಕೆ ಬರಗೂರರು ತಂದುಕೊಟ್ಟಿದ್ದಾರೆ. ಸಮುದಾಯದ ಸಂವೇದನೆಯ ಎಲ್ಲ ಎಳೆಗಳನ್ನು ಒಗ್ಗೂಡಿಸಿ ಹೇಳಬಲ್ಲ ಸಾಮರ್ಥ್ಯ ಅವರ ಕಾವ್ಯಭಾಷೆಗಿದೆ.

ಭೂಮಿ ಒಳಗಿಂದ
ಆಕಾಶ ಕಂಡವರು
ಆಕಾಶದೊಳಗಿಂದ
ಭೂಮಿ ಕಡೆದವರು
ಕೆಲಸ ಕೊಟ್ಟವರನ್ನು
ಮುಂದೆ ತಂದವರು
ಕೆಲಸ ಮಾಡುತ್ತಲೇ
ಹಿಂದೆ ಉಳಿದವರು

(–ಬೆವರಿನ ಹಾಡು)

ಸುಂದರ ರೂಪಕಗಳನ್ನು ರೂಪಿಸುವ ಭಾಷೆ ಅವರಿಗೆ ಹಸ್ತಗತವಾಗಿದೆ. ಈ ಮಾತಿಗೆ ಅವರ ಯಾವ ಕವನವೂ ಸಾಕ್ಷಿ ಕೊಡಬಲ್ಲದು. ಭಾಷೆ ಮತ್ತು ಅನುಭವಗಳ ಸಾಂಗತ್ಯವನ್ನು ಅವರು ಸಾಧಿಸಬಲ್ಲರೆಂಬುದಕ್ಕೆ 'ಕರಿಕಣಿವೆ', 'ಬವಣೆ', 'ಸಿದ್ಧತೆ', 'ಭ್ರಮೆ', 'ಜನಶಕ್ತಿ', 'ಅನಾಥ' ಇಂತಹ ಕವನಗಳನ್ನು ನೋಡಬಹುದು.

ಗಣಗಳ ಸಂಯೋಜನೆಯ ದೃಷ್ಟಿಯಿಂದ ಬರಗೂರರ ಛಂದದ ಇನ್ನೊಂದು ವೈಶಿಷ್ಟ್ಯವೆಂದರೆ ಯಾವುದೇ ಕವನದ ಬಂಧದಲ್ಲಿ ಸೇರಿದ ಗಣಗಳು ಲಯದ ಬೆಳಕಿನಲ್ಲಿ ಸಹಜವಾಗಿ, ಸುಲಭವಾಗಿ ಉಯ್ಯಾಲೆಯಾಡುತ್ತವೆ.

ಬೆರಳು ಕತ್ತರಿಸಿ
ಕರುಳ ಕದ್ದವರು
ಮರುಳು ಮಾಡಿದರು ಮಾತನ್ನು
ನಡೆದ ಕಡೆಯೆಲ್ಲ
ನೆರಳ ನೆಟ್ಟವರು
ಮಸುಕು ಮಾಡಿದರು ಮನಸ್ಸನ್ನು

(–ಪಾಠ ಕೇಳುವ ಪ್ರಾಣಗಳು)

ಇದಕ್ಕೆ ಕಾರಣವೆಂದರೆ ಚರಣದ ಅಂತ್ಯದಲ್ಲಿ ಲಯವನ್ನು ಎತ್ತಿ ತೋರಿಸುವ ಸಹಜವಾದ ವಿರಾಮ ಗಮನಕ್ಕೆ ಬರುತ್ತದೆ. ಅವರ ಕಾವ್ಯದ ಲಯದಲ್ಲಿ ತೋರುವ ಇನ್ನೊಂದು ವೈಶಿಷ್ಟ್ಯವೆಂದರೆ ಸಾಮಾನ್ಯವಾಗಿ ಗಣಕ್ಕೂ ಪದಕ್ಕೂ ಸರಿ ಹೋಗುವ ಕ್ರಮ ಎಂದರೆ ಸಾಮಾನ್ಯವಾಗಿ ಲಯದಲ್ಲಿ ಶಬ್ದಗಳು ಗಣಗಳಾಗಿ ಹೊಂದಿಕೊಂಡಿರುತ್ತವೆ.

ರಸ್ತೆ : ಮಧ್ಯದಲಿ
ರಾಶಿ : ಹೆಣಗಳು
ರಕ್ತ : ರಾಜ್ಯದಲಿ
ಸತ್ತ : ಜನಗಳು
ಅಳುತ : ಕೂತಿದೆ
ಮಗುವೊಂದು
ಸಂಕಟ : ಶಾಲೆಯ
ಸುಳಿಯೊಂದು

(–ಅಳುವ ಮಗು)

ಮೂರು–ಐದು ಮಾತ್ರೆಯ ಲಯದಲ್ಲಿ ಭಾವದ ಬಂಧ ಅಡಗಿದೆ. ಇವೆಲ್ಲವುಗಳ ಕಟ್ಟನ್ನು ಮೀರಿ ಪದ ಪದಕ್ಕೆ ಸಹಜ ಯತಿಯಂತೆ ನಿಂತು ನಿಂತು ಲಯ ಸಾಗುತ್ತದೆ.

ನಿಮ್ಮ ಹಣಬೇಡ : ನಿಮ್ಮ ನೆಣಬೇಡ
ಒಂದಿಷ್ಟು : ಅಳು ಕೊಡುತ್ತೀರ ನನಗೆ

(–ಒಂದಿಷ್ಟು ಅಳು ಕೊಡುತ್ತೀರಾ?)

ಜಮೀನ್ದಾರರ : ಜೇಬಿನಲ್ಲಿ
ಕೂಲಿಕಾರ : ರೈತರು
ಹೊರಬಂದು : ಊರಿನಲ್ಲಿ
ಕಾಲೂರಲು : ಕಾದರು

(–ಹೋರಾಟ)

ಬರಗೂರರ ಕಾವ್ಯದಲ್ಲಿ ಲಯವು ಗಣವಿನ್ಯಾಸ, ಪದ ವಿನ್ಯಾಸವನ್ನನುಸರಿಸಿ ಸಾಗುತ್ತದೆ. ಆದುದರಿಂದ ಅರ್ಥಾಭಿವ್ಯಕ್ತಿಗೂ ಭಾವದ ಅವಿರ್ಭಾವಕ್ಕೂ ಅನಾಗತದ ಅನುವು ದೊರೆಯುತ್ತದೆ. ಪದಪುಂಜಗಳು ಇಟ್ಟಿಗೆಗಳಂತೆ ಸಂಯೋಜನೆಯಾಗಿರುವುದರಿಂದ ಸ್ವರಗಳ ಆರೋಹಣ–ಅವರೋಹಣಗಳಲ್ಲಿ ಸರಾಗತೆಯನ್ನುಂಟು ಮಾಡುತ್ತದೆ.

ಹೊರಗೆ ಹತ್ತಿತು ಬೆಂಕಿ
ಒಳಗೆ ತುಂಬಿತು ಹೊಗೆ
ಒಳಗು ಹೊರಗು ಬೇರಾಯಿತು ಹೇಗೆ?

(–ಅಂತರಂಗ–ಬಹಿರಂಗ)

ಎರಡನೆಯ ಅಕ್ಷರದ ಮೇಲೆ ಸ್ವರಾಘಾತವಿದೆ. ಲಯದಲ್ಲಿ ಚರಣದ ಮೊದಲನೆಯ ಅಕ್ಷರಕ್ಕಿಂತ ಮೂರನೆಯ ಅಕ್ಷರದ ಮೇಲೆ ಆಘಾತ ಹೆಚ್ಚಿಗೆ ಬೀಳುತ್ತದೆ. ಅದು ಕನ್ನಡ ಲಯದ ಲಕ್ಷಣವೂ ಹೌದು. ಕವಿ ಬಳಸುವ ಪದಪುಂಜಗಳು ಕವಿ ಅನುಭವವನ್ನು ವ್ಯಕ್ತಪಡಿಸುತ್ತದೆ. ಬರಗೂರರು ಛಂದಸ್ಸಿನ ಜೊತೆ ಜೊತೆಗೇ ಭಾಷೆಯನ್ನು ಸಮಕಾಲೀನಗೊಳಿಸಿಕೊಳ್ಳುತ್ತ ಬಂದವರು. ಆಡುಮಾತನ್ನು ಸಮರ್ಥವಾಗಿ ಕಾವ್ಯದಲ್ಲಿ ಬಳಸಿದರು. 'ಹೋದವಳೆ', 'ಬಂದವಳೆ', 'ಪಾಯಕ', 'ಅಚ್ಚೊತ್ತು', 'ಹೊಯ್ಕಳ', 'ಹೊಂಟಾಳೊ', 'ಇಟ್ಟಾಳೊ' ಇಂತಹ ಪ್ರಾದೇಶಿಕ ರೂಪಗಳನ್ನು ಬಳಸಿಕೊಂಡು ಕನ್ನಡ ಅಭಿವ್ಯಕ್ತಿಯ ಶಕ್ತಿಯನ್ನು ಹೆಚ್ಚಿಸಿದ್ದಾರೆ. ಬರಗೂರರು ಹಳೇ ಮೈಸೂರು ಪ್ರಾಂತದ ವ್ಯಾವಹಾರಿಕ ಕನ್ನಡವನ್ನು ಸಮರ್ಥವಾಗಿ ಬಳಸಿದ್ದಾರೆ.

ಮರಗಳು ಮಾತಾಡುತ್ತವೆ
ಮನುಷ್ಯರಲ್ಲ
ಎಲೆಗಳು ಅಲೆದಾಡುತ್ತವೆ
ನೆಮ್ಮದಿಯಿಲ್ಲ

(–ಮರಗಳು ಮಾತಾಡುತ್ತವೆ)

ಪುಣ್ಣೀವು ತುಂಬ್ಯೆತೆ ಈ ಊರು ತುಂಬ
ಸಾರ್‍ಯೆತೆ ಈ ಊರ ಮನೆಮನೆಯ ಕಂಬ
ಬೆಚ್ಚಿದ ಮ್ಯಾಲೊಂದು ನೀರಿನ ದೋಣೆಯ್ಯೆತೆ
ಅದರ ಸುತ್ತಲಿಗೊಂದು ಸತ್ಯೇದ ಕತೆಯ್ಯೆತೆ
ಸತ್ಯೇವು ಒಡೆದಂಥ ಮಂದಿಯೇ ಇಲ್ಲವೊ
ಇಂಥ ಮೈಮೇನಂತೂ ಮತ್ತೆಲ್ಲು ಕಾಣೆವೊ
....
....
ಊರಿನ ಹೊರಗೊಂದು ಮಾದಿಗರ ಹಟ್ಟಿ
ಮಾದಿಗ ಹುಡುಗಿ ಹೆಸರು ಪುಟ್ಟಿ
ಹರಿಯಕ್ಕೆ ಬಂದವ್ಳೆ ಹರಿದ್ಯೆತೆ ಸೀರೆ
ಎಲ್ಡಕ್ಸರ ಕಲಿತ ಚೆನ್ನಚಲುವೆ

(–ಮಾದಿಗರ ಹುಡುಗಿ)

ಐದು ಖಂಡಗಳಲ್ಲಿ ಹಬ್ಬಿದ ಈ ಕಥನ ಗೀತೆ ಒಂದು ಜನಾಂಗದ ಸಂಸ್ಕೃತಿಯನ್ನು ಸೊಗಸಾಗಿ ಚಿತ್ರಿಸಿದೆ. ಉದ್ದಕ್ಕೂ ತುಮಕೂರು ಪ್ರದೇಶದ ವ್ಯಾವಹಾರಿಕ ಕನ್ನಡದಲ್ಲಿ ಈ ಕಥನಗೀತೆ ರಚನೆಯಾಗಿದೆ. ಪ್ರಾಸಗಳ ತೊಡಕ್ಕಿಲ್ಲದಿರುವುದರಿಂದ ಆ ಕವನ ಚರಣದಿಂದ ಚರಣಕ್ಕೆ ಸರಾಗವಾಗಿ ಸಾಗುತ್ತದೆ. ಪ್ರಾಸ ರಹಿತವಾದ ಸರಳ ರಗಳೆಯ ಧಾಟಿಯಿರುವುದರಿಂದ ಕಾವ್ಯ ಪ್ರವಾಹದ ನಿರರ್ಗಳತೆಗೆ ಹೆಚ್ಚು ಅನುಕೂಲವಾಗಿದೆ. ಆ ಮೂಲಕ ಬರಗೂರರು ಕನ್ನಡದ ಅಭಿವ್ಯಕ್ತಿಯ ಶಕ್ತಿಯನ್ನು ಹೆಚ್ಚಿಸಿ ಕನ್ನಡ ಭಾಷೆಯನ್ನು ಬೆಳೆಸುವ ಪ್ರಯತ್ನವನ್ನು ತಮ್ಮ ಕಾವ್ಯದಲ್ಲಿ ಮಾಡಿದ್ದಾರೆ. ಅವರ ಕವನಗಳು ಬಿಗಿಯಾದ ಸ್ವಾರಸ್ಯವನ್ನು ಕಳೆದುಕೊಂಡಿಲ್ಲ. ಓದಿದಾಗ ಕವಿತೆಯ ಅರ್ಥ ಕೆಡುವುದಿಲ್ಲ. ಬರಗೂರರ ವಾಕ್ಯ ಪ್ರಯೋಗವನ್ನು ಗಮನಿಸಿದಾಗ ಸಾಲುಗಳನ್ನು ಮುರಿದು ಬೇರೆಯಾಗಿ ಮುದ್ರಿಸುವ ಪ್ರಯೋಗ ಗಮನಾರ್ಹವಾದುದು. ಪ್ರಜ್ಞಾಪೂರ್ವಕವಾಗಿ ಲಯವನ್ನು ದುಡಿಸಿಕೊಳ್ಳುವ ಯತ್ನವೂ ಅವರಲ್ಲಿದೆ. ಗದ್ಯದ ಸಂಭಾಷಣೆಯ ರೀತಿ, ಮಂದಗತಿ ಮತ್ತು ವೈವಿಧ್ಯ ಇವುಗಳನ್ನು ಬಳಸಿಕೊಂಡೇ ಅವರ ಕವಿತೆಗಳು ಹುಟ್ಟುತ್ತವೆ.

ಇಲ್ಲಿ ಹರಿಯೋ ನೀರು
ನೀರಲ್ಲ ಸ್ವಾಮಿ, ತೀರ್ಥವೆನ್ನುವರು
ಇಲ್ಲಿ ನೆಟ್ಟಕಲ್ಲು
ಕಲ್ಲಲ್ಲ ಸ್ವಾಮಿ, ದೇವರೆನ್ನುವರು

ಇಲ್ಲಿ ಬಡಿಯೋ ಸಾವು
ಸಾವಲ್ಲ ಸ್ವಾಮಿ, ಮೋಕ್ಷವೆನ್ನುವರು

(-ಇತಿಹಾಸ)

ಛಂದೋಲಯಗಳು ಯಾವುವೂ ಭಾರವಾಗದೆ ಭಾಷೆ ಓದುಗನೊಡನೆ ನೇರ ಸಂಪರ್ಕ ಸಾಧಿಸಲು ಸಿದ್ಧವಾಗಿವೆ. ಕವನದಲ್ಲಿ ಛಂದಸ್ಸು, ಶಬ್ದಚಿತ್ರ, ಸಂಕೇತ ಇವು ಒಂದಕ್ಕೊಂದು ಬೇರ್ಪಡಿಸಲಾರದೆ ಕಾವ್ಯ ಬೆಳೆಯುತ್ತಿದೆ. ಕಾವ್ಯದಲ್ಲಿಯ ಸಾಲುಗಳನ್ನು ನೋಡಿದಾಗ ಸಾಲೇ ಒಂದು ಘಟಕ ಎಂಬುದು ಮನದಟ್ಟಾಗುತ್ತದೆ. ಮೂಲತಃ ಛಂದಸ್ಸು ಕವಿಯ ವಸ್ತು; ಲಯಕ್ಕೆ ಸಂಬಂಧಪಟ್ಟದ್ದು: ನಂತರ ಭಾವ-ಅರ್ಥಕ್ಕೆ ಸಂಬಂಧಿಸುತ್ತದೆ ಎಂಬುದು ಗಮನಿಸಬೇಕಾದ ಅಂಶವಾಗಿದೆ.

ಹೊಟ್ಟೆಗಂತೂ ಕುಳು ಇಲ್ಲ
ಬಟ್ಟೆಯಂತೂ ಸಿಕ್ಕಲಿಲ್ಲ
ಬಾಳಿಗಂತೂ ಬಾಯಿಯಿಲ್ಲ
ನಮ್ಮ ನೋವು ಮೀಟಲಿಲ್ಲ

(-ನಮ್ಮ ಜೀವನ ನಮಗೆ ಬಿಡಿ)

ಮುರಿಮುರಿಯಾದ ವಾಕ್ಯಖಂಡಗಳು ಬೆಳೆಯುತ್ತ ಹೋಗುವ ಕ್ರಮ ಅವರ ಪ್ರತಿಭೆಯ ದ್ಯೋತಕವಾಗಿದೆ. 'ಈಗ ಹೇಳು ಗೆಳೆಯಾ। ಸೋಸಿದರೆ ಸಿಕ್ಕುವುದು ಏನು? ಚರಿತ್ರೆ, ಪುರಾಣ ಅಥವಾ ನಾನು? ವಾಕ್ಯರಚನೆಯಲ್ಲಿ ಅವರು ತರುವ ವಿರಾಮ ಚಿಹ್ನೆಗಳು ಅವು ಹೊತ್ತುಕೊಳ್ಳುವ ಭಾವ ಅರ್ಥಪೂರ್ಣವಾಗಿವೆ. ಆಡುಮಾತಿನ ಲಯಗಳನ್ನೇ ಒಂದಕ್ಕೊಂದು ಹೊಸೆದು ಕಾವ್ಯಕ್ಕೆ ಬಳಸಿಕೊಳ್ಳುವ ಭಾಷಾತಂತ್ರ ಬರಗೂರವರಿಗೆ ಸಾಧಿಸಿದೆ'. ಅವರ ಪದರಚನೆಗಳು ನುಡಿಕಟ್ಟುಗಳಿಂದ ಮುಕ್ತವಾಗಿಲ್ಲ ಯೆಂದು ಬೇರೆ ಹೇಳಬೇಕಾಗಿಲ್ಲ. ಬರಗೂರರ ಭಾಷೆಯ ರಹಸ್ಯ ಅಡಗಿರುವುದು ಅಲ್ಲಿಯೇ ತಾನೆ! ಸಂವೇದನೆ ತುಂಬಿದ ಚಿತ್ರಕ ಶೈಲಿಯಲ್ಲಿ ಅವರ ಕಾವ್ಯ ಚಲನಶೀಲ ವಾಗಿದೆ.

ನಾವು ಕಟ್ಟಿದ ಗೆದ್ದಲಗೂಡು
ನಿಮಗಾಯಿತು ಹುತ್ತ
ನಾವು ಹೊತ್ತ ಮಣ್ಣಿನ ಕನಸು
ನಿಮಗಾಯಿತು ನನಸು
ನಾವು ನೀರೆರೆದ ಹೂವು ಹಣ್ಣು
ನಮಗಾದವು ಹುಣ್ಣು

(-ಶ್ರಮಜೀವಿಗಳ ಹಾಡು)

ಇಂತಹ ಕವನಗಳನ್ನು ಗಮನಿಸಿದರೆ ಬರಗೂರರು ಭಾಷೆಯನ್ನು ಧ್ವನಿಪೂರ್ಣವಾಗಿ ಬಳಸಬಲ್ಲರೆಂಬುದು ಮನದಟ್ಟಾಗುತ್ತದೆ. ಪಕ್ಕಕ್ಕೆ ನಿಂತು ಆಪ್ತಧಾಟಿಯಲ್ಲಿ ಹೇಳುವ ಹಾಗೆ ಅವರ ಕವನಗಳು ಅರಳಿವೆ. ನೋವಿನ ಅಥವಾ ಸಂತಸದ ಎಂತಹ ಸೂಕ್ಷ್ಮ ಅನುಭವವನ್ನು ವಿಶದವಾಗಿ ಹಿಡಿಯಬಲ್ಲ ಹಾಗೂ ತಿಳಿಯಾದ ಹಾಸ್ಯ, ವ್ಯಂಗ್ಯವನ್ನು ಉಳಿಸಿಕೊಂಡು ಹೋಗುವ ಅವರ ಛಂದೋಲಯ ಭಾವ ಯುಕ್ತವಾಗಿದೆ; ಮನೋಜ್ಞವಾಗಿದೆ. ಒಟ್ಟು ಕವಿತೆ ಹಿತವಾದ ಅನುಭವ ತಂದುಕೊಡುತ್ತದೆ. ಅಕ್ಷರಗಳ ಒಂದು ನಿಯತವಾದ ಕ್ರಮವೂ ಅವರ ಕವನಗಳಲ್ಲಿ ಕಂಡುಬರುತ್ತದೆ. ಈ ಕ್ರಮವೇ ಲಯ ಪ್ರತೀತಿಯನ್ನುಂಟು ಮಾಡುತ್ತದೆ ಎಂಬುದು ಗಮನಿಸಬೇಕಾದ ಅಂಶವಾಗಿದೆ.

ಬರಗೂರು ಅವರ ಕಾವ್ಯ ಛಂದಸ್ಸು ತುಂಬ ಆಶಾದಾಯಕವಾದ ಅಂಶಗಳಿಂದ ಕೂಡಿದೆ. ಅವರ ಕಾವ್ಯ ಭಾಷೆಯು ಬಿಗಿ, ಗತ್ತು ಮತ್ತು ಆಡುಮಾತಿನ ಲಯಗಳಿಂದ ವೃದ್ಧಿಯಾಗಿರುವುದರಿಂದ ಕನ್ನಡ ಛಂದಸ್ಸಿನ ಹೊಸಸಾಧ್ಯತೆಯ ಕೆಲವು ಆಯಾಮಗಳನ್ನು ಬರಗೂರವರ ಕಾವ್ಯದಲ್ಲಿ ನೋಡಬಹುದಾಗಿದೆ.

೬೮

ಎಂ.ಎಂ. ಕಲಬುರ್ಗಿ : ಛಂದೋಶೋಧಗಳು

ಛಂದೋಗತಿಗೆ ಕಾವ್ಯದ ಹೊರಗಿನ ಕಟ್ಟಳೆಗಳಿಗಿಂತ ಒಳಗೆ ಪ್ರವಹಿಸುವ ರಸ-ಲಯ-ನಾದಗಳೇ ಮುಖ್ಯ. ಕಾವ್ಯವನ್ನು ಸಶಬ್ದವಾಗಿ ಓದಿಕೊಂಡು ಅಥವಾ ಕೇಳಿಕೊಂಡು ಕಾವ್ಯದ ಲಯ ವಿನ್ಯಾಸವನ್ನು ಗುರುತಿಸಬೇಕಾಗುತ್ತದೆ. ಡಾ. ಕಲಬುರ್ಗಿ ಅವರು ರಸಭಾವ, ನಾದ ಮತ್ತು ಲಯದ ನೆಲೆಯಲ್ಲಿ ಛಂದೋಲಯವನ್ನು ವಿಶ್ಲೇಷಿಸುತ್ತಾರೆ. ಛಂದಸ್ಸು ಅವರಿಗೆ ಪ್ರಿಯ ವಿಷಯವಾಗಿರುವುದರಿಂದ ಕಾವ್ಯ, ಶಾಸನಗಳನ್ನು ಅರ್ಥಮಾಡಿಕೊಳ್ಳಲಿಕ್ಕೆ ಛಂದಸ್ಸು ಹೇಗೆ ನೆರವಾಗುತ್ತದೆ ಎಂಬುದರ ಕಡೆಗೆ ಅವರ ಒಲವುವಿದೆ. ಆ ದಿಕ್ಕಿನಲ್ಲಿ ಕೆಲಸ ಮಾಡಿ ಅವರು ಬರೆದಿರುವ ಬರೆಹಗಳು ವಿದ್ವಾಂಸರ ಗಮನ ಸೆಳೆದಿವೆ. ಕನ್ನಡ ಛಂದಸ್ಸಿನ ಕ್ಷೇತ್ರದಲ್ಲಿ ಅವರ ಸಾಧನೆಯನ್ನು ಗುರುತಿಸುವುದು ಈ ಲೇಖನದ ಉದ್ದೇಶವಾಗಿದೆ.

ಕಲಬುರ್ಗಿ ಅವರ ಛಂದೋವಿಷಯಕವಾದ ಮುಖ್ಯ ಲೇಖನಗಳು ಎಂದರೆ ೧. ಅಂಶಗಣದ ಇತಿಹಾಸ (ಕರ್ನಾಟಕ ಭಾರತಿ ೮-೨) ೨. ಷಟ್ಪದಿಯ ಉಗಮ ಮತ್ತು ವಿಕಾಸ (ಕನ್ನಡದಲ್ಲಿ ಷಟ್ಪದಿ ಸಾಹಿತ್ಯ) ೩. ಉಯ್ಯಾಲಗಣ ಯಾವುದು? ತರಂಗಗಣ ಸೂಕ್ತ ಹೆಸರು (ಅಂಕಣ, ಮೇ ೧೯೮೧) ೪. ಪ್ರಾಚೀನ ಕನ್ನಡಸಾಹಿತ್ಯ ಸಂವಹನ : ಪಾತಳಿ ಪಲ್ಲಟ (ಮಾರ್ಗ-೪) ೫. ಪ್ರಾಚೀನ ಕನ್ನಡದ ಒಂದು ಉಚ್ಚಾರ (ಸಾಧನೆ ೧೪-೧೩) ೬. ಮಾನಸೋಲ್ಲಾಸದಲ್ಲಿ ಕನ್ನಡ ಪದ್ಯಗಳು (ಕ.ಸಾ.ಪ. ಪತ್ರಿಕೆ, ೫೬-೧) ೭. ತೀ.ನಂ.ಶ್ರೀ ಛಂದೋವಿಚಾರ : ಪರಿಶೀಲನೆ (ಮಾನ, ಹಾಮಾನಾ ಅಭಿನಂದನ ಗ್ರಂಥ) ೮. ಕುವೆಂಪು ಛಂದಸ್ಸು (ಕರ್ನಾಟಕ ಭಾರತಿ ೧೩-೧,೨) ೯. ಎಪ್ಪತ್ತರ ಬೇಂದ್ರೆ (ಚೆಂಬೆಳಕು, ೧೯೮೦) ೧೦. ಅಮೃತಮಥನ ಪುರಾಣ : ಶಾಸನೋಕ್ತಷಟ್ಪದ ಕಾವ್ಯ (ಮಾರ್ಗ-೪) ೧೧. ಶಾಸನ ಛಂದಸ್ಸು (ಕರ್ನಾಟಕ ಭಾರತಿ ೩-೪), ೧೨. ಶಾಸನದಲ್ಲಿ ಭಾಮಿನಿ (ಕನ್ನಡ ನುಡಿ, ೩೦-೧೦) ೧೩. ಶಾಸನಗಳಲ್ಲಿ ಇನ್ನಷ್ಟು ಅಂಶವೃತ್ತ-ಮಾತ್ರಾವೃತ್ತಗಳು (ಮಾರ್ಗ-೪), ೧೪.

ಸೀತಾರಾಮ್ ಜಾಗೀರದಾರ್ ಅವರ 'ಛಂದೋರಚನಾ ಸಂಶೋಧನೆಗಳು' ಕೃತಿಗೆ ಮುನ್ನುಡಿ (೧೯೮೮).

ಈ ಪಟ್ಟಿ ಪ್ರಾಯಶಃ ಅಸಮಗ್ರವಾದ್ದು. ಮೇಲಿನ ಪಟ್ಟಿಯಂತೆ ನೋಡಿದರೆ ಅವರಿಂದ ವಿಶೇಷ ಪರಿಶೀಲನೆಗೆ ಒಳಗಾಗಿರುವುದು ಎಂದರೆ ದೇಸಿ ಛಂದಸ್ಸು ಮತ್ತು ಶಾಸನ ಛಂದಸ್ಸು. ಛಂದಸ್ಸಿನ ವಿವಿಧ ಮುಖಗಳ ವ್ಯಾಪಕವಾದ ಅಧ್ಯಯನ ಇಲ್ಲಿ ವಿಷಯವಾಗಿ ಇರದಿದ್ದರೂ ಕಾವ್ಯ, ಶಾಸನಗಳಲ್ಲಿ ಕಂಡುಬರುವ ಛಂದೋಪ್ರಯೋಗಗಳ ಸಮಸ್ಯೆಗಳನ್ನು ತೆಗೆದುಕೊಂಡು ಅದನ್ನು ವಿಶ್ಲೇಷಿಸುವ,ಬಿಡಿಸುವ ಪ್ರಯತ್ನ ಎಲ್ಲ ಲೇಖನಗಳಲ್ಲಿಯೂ ಇದೆ. ಆ ಪ್ರಯತ್ನದ ಸ್ವರೂಪ ಹಾಗೂ ಶಕ್ತಿ-ಮಿತಿಗಳನ್ನು ಮುಂದೆ ನೋಡೋಣ.

೧

ದೇಸಿಛಂದಸ್ಸು, ಅಕ್ಷರಗಳ ಉಚ್ಚಾರಣೆಯ ಕಾಲಪ್ರಮಾಣವನ್ನು ಮಾತ್ರ ಅವಲಂಬಿಸದೆ ಸ್ವರೋಚ್ಚಾರದ ತೀವ್ರತ್ವ (Accent) ಹಾಗೂ ಸ್ವರಭಾರ(Stress)ವನ್ನೂ ಅವಲಂಬಿಸಿರುತ್ತವೆ. ದೇಸಿಮಟ್ಟುಗಳಲ್ಲಿ ಗಣಕ್ಕೂ ಪದಕ್ಕೂ ಹೊಂದಿಕೆ ಇರುವುದರಿಂದ ಲಯದಲ್ಲಿ ಶಬ್ದಗಳು ಗಣಗಳಾಗಿ ಹೊಂದಿಕೊಂಡಿರುತ್ತವೆ. ಇದರಿಂದ ಅರ್ಥಾಭಿವ್ಯಕ್ತಿಗೂ ಭಾವದ ಆವಿರ್ಭಾವಕ್ಕೂ ಅನುವು ದೊರೆಯುತ್ತದೆ. ಯಾವುದೇ ಒಂದು ಭಾಷೆಗೂ ಲಯಕ್ಕೂ ನಿಕಟ ಸಂಬಂಧವಿದೆ. ಅದನ್ನು ಹೀಗೂ ಹೇಳಬಹುದು, ಕನ್ನಡ ಭಾಷೆ, ಕನ್ನಡ ಲಯವನ್ನು ನಿರ್ಧರಿಸುತ್ತದೆ. ದೇಸಿಮಟ್ಟುಗಳಲ್ಲಿ ಗಣಸಂಯೋಜನೆ, ಯತಿ, ಗತಿ (ಸಮಗತಿ, ವಿಷಮ ಗತಿ), ಪ್ರಾಸವಿನ್ಯಾಸ ಇವು ಶೈಥಿಲ್ಯದ ಕಡೆಗೆ ಒಲಿಯುತ್ತವೆ. ಅಲ್ಲಿ ಗೇಯತೆ ಮುಖ್ಯವಾಗಿರುತ್ತದೆ. ಕಲಬುರ್ಗಿ ಅವರು ಛಂದೋಲಯದ ಶ್ರವಣಗ್ರಾಹ್ಯ ಪಾತಳಿಯನ್ನು ಅನುಲಕ್ಷಿಸಿ ದೇಸಿಛಂದಸ್ಸಿನ ಮನೋಧರ್ಮವನ್ನು ವಿಶ್ಲೇಷಿಸಿದ್ದಾರೆ.

ಅಂಶಗಣದ ಇತಿಹಾಸ ಎಂಬ ಮೊದಲ ಲೇಖನದಲ್ಲಿ ಅಂಶ ಛಂದಸ್ಸಿನ ಮೂಲತತ್ತ್ವಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಇದೊಂದು ವಿಚಾರ ಪ್ರಚೋದಕವಾದ ಲೇಖನ. ಅಂಶಗಣಗಳ ಮಧ್ಯ ಮತ್ತು ಅಂತ್ಯ ಅಂಶಗಳ ಸ್ವರೂಪ ಕುರಿತು ಅವರು ಹೇಳಿರುವುದು ಹೊಸ ವಿಚಾರ. ಪದ್ಯವನ್ನು ಹಾಡುವಾಗ ತಾಳ, ಗಣದ ಪ್ರಾರಂಭದಲ್ಲಿ ಬೀಳುವುದರಿಂದ ಆ ತಾಳದ ಭಾರ ಹೊರಬೇಕಾದರೆ ಆ ಗಣದ ಪ್ರಥಮಾಂಶ ಒಂದು ಗುರು ಅಥವಾ ಎರಡು ಲಘುಗಳಿರಬೇಕು. ಹೀಗಾಗಿ ಆ ಗಣದಲ್ಲಿ ತರಂಗವಿರುವುದಿಲ್ಲ. ಆದರೆ ಬ್ರಹ್ಮಗಣದ ಕೊನೆ (– Us, UUUs), ವಿಷ್ಣುಗಣದ ಮಧ್ಯ ಹಾಗೂ ಕೊನೆಯ (–Us–, –– – Us) ಅಂಶಗಳಲ್ಲಿ ಧ್ವನಿ ತರಂಗಗಳಿಗೆ ಅವಕಾಶವಿದೆ. ಆಗ ಅಂಶಗಣಗಳು ವ್ಯವಹರಿಸುವ ರೀತಿಯನ್ನು ಡಾ. ಕಲಬುರ್ಗಿಯವರು ಸ್ಪಷ್ಟವಾಗಿ ತೋರಿಸಿದ್ದಾರೆ. ಕ್ರಮೇಣ ಅಂಶಗಣಗಳ ಮೇಲೆ ಮಾತ್ರಾಗಣ ಪ್ರಭಾವ ಬೀರಲಾಗಿ ಪ್ರಥಮೇತರ ಅಂಶಗಳ ಧ್ವನಿತರಂಗ ನಿಸ್ತರಂಗವಾಯಿತು. ಲಯದ ಮೇಲೆ ಬೀಳುವ ಒತ್ತು, ತಾಳದ ಮೇಲೆ ಬಿದ್ದಿತು. ಇದರಿಂದ ಮೂಲ

ಅಂಶಗಳು ಮಾತ್ರಾನಿಷ್ಠ ಅಂಶಗಳಾಗಿ ಬ್ರಹ್ಮ, ವಿಷ್ಣುವಿನ ಬಳಕೆಯ ಸಾಧ್ಯತೆಗಳು ಹೆಚ್ಚಾದುವು. ತತ್ಪರಿಣಾಮವಾಗಿ ಅಂಶಗಣದ ಶಿಲ್ಪದಲ್ಲಿ ಬದಲಾವಣೆ ಕಂಡುಬಂದಿತು, ಮುಂತಾದ ಸೂಚನೆಗಳು ಅಧ್ಯಯನಕಾರರನ್ನು ಯೋಚನೆಗೆ ಹಚ್ಚುತ್ತವೆ; ಆದರೆ ನಿಲ್ಲತಕ್ಕುವೇ ಎನ್ನುವ ವಿಷಯದಲ್ಲಿ ಇನ್ನೂ ಸಂದೇಹಕ್ಕೆ ಅವಕಾಶವಿದೆ.

ಪ್ರಥಮೇತರ ಅಂಶದ ಲಘುವಿನ (ಲಘು ಅಂಶದ) ಜಾಗದಲ್ಲೂ ಎರಡು ಲಘುಗಳನ್ನಿಡುವ ಪರಿಪಾಠ ಬೆಳೆದು ಬಂದಿರುವುದವನ್ನು ಪ್ರಸ್ತಾಪಿಸಿರುವುದು ಹಿಂದಿನ ವಿದ್ವಾಂಸರ ಅಭಿಪ್ರಾಯಕ್ಕೆ ಕಲಬುರ್ಗಿ ಅವರು ಸೇರಿಸಿದ ಹೊಸಮಾತು ಎಂಬುದು ನಿರ್ವಿವಾದ. ಅವರೇ ಮುಂದುವರಿದು ಪ್ರಥಮೇತರ ಸ್ಥಾನದಲ್ಲಿ ಎರಡು ಲಘುಗಳ ಬದಲು ಗುರು ಇಡಲು ಸಾಧ್ಯವೆಂದು ಸರಿಯಾಗಿಯೇ ಹೇಳಿದ್ದಾರೆ. ಮಾತ್ರಾಲಯ ಮತ್ತು ಅಂಶಲಯ ಗಳೆರಡೂ ತಾಳ ಪ್ರಧಾನವಾದುವು. ಆ ಕಾರಣದಿಂದ ಅಂಶಗಣಗಳ ಜಾಗದಲ್ಲಿ ಮಾತ್ರಾಗಣ ಗಳನ್ನು ತರುವುದು ಕವಿಗಳಿಗೆ ಸುಲಭವಾಗಿ ಹೋಯಿತು ಎಂಬುದು ಮುಖ್ಯ. ಶ್ರವಣ ಪಾತಳಿಯಿಂದ ವಾಚನ ಪಾತಳಿಗೆ ಬಂದಾಗ ಲಯಗಳ ವಿನ್ಯಾಸದಲ್ಲಿ ಪರಿವರ್ತನೆ ಕಂಡು ಬರುತ್ತದೆ.

ಕಲಬುರ್ಗಿ ಅವರು ಈ ಲೇಖನದಲ್ಲಿಯೇ ರುದ್ರಗಣ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅವರ ಪ್ರಕಾರ ರುದ್ರಗಣ ಚರಣದ ಮಧ್ಯದಲ್ಲಿ ಬಂದರೆ ಎರಡು ಬ್ರಹ್ಮ ವಾಗುವುದು. ಅಂತ್ಯದಲ್ಲಿ ವಿ+ – ಆಗುವುದು. ರುದ್ರಗಣದ ಬಳಕೆ ಕಡಿಮೆ, ನಿಜ. ಬಳಕೆ ಕಡಿಮೆ ಎಂದಾಕ್ಷಣ ಆ ಗಣವೇ ಇಲ್ಲ ಎಂದು ಹೇಳುವುದು ಸೂಕ್ತವೇ?. ಅಂಶಛಂದಸ್ಸಿನ ಸುದೀರ್ಘ ಇತಿಹಾಸದಲ್ಲಿಯೇ ಮೊದಲ ಸಲ ಎತ್ತಿರುವ ಈ ಪ್ರಶ್ನೆಗೆ ವಿದ್ವಾಂಸರು ಉದಾಹರಣೆಯೊಂದಿಗೆ ಉತ್ತರಿಸುವುದು ಇಲ್ಲವೆ ಒಪ್ಪಿಕೊಳ್ಳುವುದು ಅವಶ್ಯವಿದೆ. ಏನೇ ಇದ್ದರು ಕಲಬುರ್ಗಿ ಅವರ ಈ ಲೇಖನ ಅನೇಕ ಶೋಧ, ಸಂದೇಹಗಳಿಗೆ ಅವಕಾಶ ಮಾಡಿಕೊಡುತ್ತದೆ. ಅಂಶಛಂದಸ್ಸಿನ ಸಿದ್ಧಮಾದರಿಗಳನ್ನು ಪಲ್ಲಟಗೊಳಿಸುವ ಹಾಗೂ ಅಂಶಛಂದಸ್ಸಿನ ಹಸ್ತಹಜ್ಜೆಗಳನ್ನು ಗುರುತಿಸುವ ನವೀನ ದೃಷ್ಟಿಕೋನ ಈ ಲೇಖನದ ಉದ್ದಕ್ಕೂ ಇದೆ ಎಂಬುದು ಬಹಳ ಮುಖ್ಯವಾದ ಸಂಗತಿಯಾಗಿದೆ.

ಷಟ್ಪದಿಯ ಉಗಮ ಮತ್ತು ವಿಕಾಸ ಈ ಲೇಖನದಲ್ಲಿ ಷಟ್ಪದಿಯ ಉಗಮ, ವಿಕಾಸ ಅದರ ಬೆಳವಣಿಗೆಯ ಘಟ್ಟಗಳನ್ನು ಕುರಿತು ಸೋದಾಹರಣವಾಗಿ ವಿವೇಚಿಸಿದ್ದಾರೆ. ಆ ಕುರಿತು ಕಲಬುರ್ಗಿ ಅವರು ಡಿ.ಎಸ್. ಕರ್ಕಿ ಅವರ ಅಭಿಪ್ರಾಯವನ್ನೇ ಒಪ್ಪಿರುವುದರಿಂದ ಹಾಗೂ 'ಮೂಲಷಟ್ಪದಿ' ಕುರಿತು ಈವರೆಗೆ ನಡೆದಿರುವ ಚರ್ಚೆಗಳ ಸಾರಾಂಶವನ್ನು ಸ್ಥೂಲವಾಗಿ ಕೊಟ್ಟಿರುವುದರಿಂದ ಈ ಪ್ರಬಂಧ ಪೂರ್ವಪಂಡಿತರ ಅಧ್ಯಯನದ ವ್ಯಾಪ್ತಿಗೆ ಸೇರುತ್ತದೆ. ಅಂಶಷಟ್ಪದಿಗಳು ಮಾತ್ರಾಷಟ್ಪದಿಗಳಾಗುವಾಗ ಆ ಕಾಲಘಟ್ಟದ ಭಾಷಾಸ್ವರೂಪ ಹೇಗಿತ್ತು? ವಿಷ್ಣುಗಣಕ್ಕೂ ೪ ರಿಂದ ೫ ಮಾತ್ರೆಗಳ ಮಾತ್ರಾಗಣಕ್ಕೂ ಹಾಗೂ ಮಧ್ಯಕಾಲದ ಕನ್ನಡದ ರಚನೆಗೂ ಇರುವ ಸಂಬಂಧ ಯಾವ ಬಗೆಯದು? ಆ ಸಂದರ್ಭದಲ್ಲಿ ಕಾವ್ಯದ

ಅಭಿವ್ಯಕ್ತಿ ಸ್ವರೂಪ ಹೇಗಿತ್ತು? ಹರಿಹರನಿಂದ ರಾಘವಾಂಕ ಬರುವವರೆಗೆ ಮಧ್ಯದಲ್ಲಿ ಕುಮುದೇಂದು ರಾಮಾಯಣದಲ್ಲಿ ಷಟ್ಪದಿ ಮಟ್ಟುಗಳು ಜೋಲಿ ಹೊಡೆಯುತ್ತಿದ್ದುವು, ಏಕೆ? ಇತ್ಯಾದಿ ಐತಿಹಾಸಿಕ ಪ್ರಶ್ನೆಗಳನ್ನು ಹಾಕಿಕೊಳ್ಳಬೇಕಾಗಿತ್ತು. ಏಕೆಂದರೆ ಎಲ್ಲಿ ಭಾಷೆ ಬದಲಾಗುತ್ತದೆಯೋ ಅಲ್ಲಿ ಹೊಸಚಿಂತನ ಕ್ರಮ ಶುರುವಾಗುತ್ತದೆ. ಸಹಜವಾಗಿ ಕಾವ್ಯಾಭಿವ್ಯಕ್ತಿಯ ಲಯದ ಪ್ರಕ್ರಿಯೆಯಲ್ಲಿ ವ್ಯತ್ಯಾಸವಾಗುತ್ತದೆ. ಇದನ್ನು ಕಲಬುರ್ಗಿ ಅವರು ಗಮನಿಸಬಹುದಾಗಿತ್ತು.

ರಾಘವಾಂಕನಿಗಿಂತ ಮೊದಲು ಮೂಲಷಟ್ಪದಿ ಮತ್ತು ಕೆಲವಾದರೂ ಮಾತ್ರಾಷಟ್ಪದಿಯ ಪ್ರಕಾರಗಳು ರಚನೆಯ ರೂಢಿಯಲ್ಲಿ ಇದ್ದುವೆಂದು ತಿಳಿಯುವುದಕ್ಕೆ ಆಧಾರಗಳಿವೆ. ಇವುಗಳಲ್ಲಿ ಪೂರ್ಣಪ್ರಮಾಣದ ಕಾವ್ಯಗಳು ರಚನೆಯಾಗಿದ್ದುವೇ ಎನ್ನುವುದನ್ನು ತಿಳಿಯಲು ಗಟ್ಟಿ ಆಧಾರಗಳಿಲ್ಲ. ಈಗಿನ ಮಟ್ಟಿಗೆ ಪೋಲಾಳ್ವನ 'ಹರಿಚಾರಿತ್ರ'ದ ಸಾಕ್ಷ್ಯವೊಂದೇ ಗಟ್ಟಿಯಾದ್ದು. ಈತ ರಾಘವಾಂಕನಿಗೆ ಸಮಕಾಲೀನನೆಂದು ತೋರುತ್ತದೆ. 'ಹರಿಚಾರಿತ್ರ' ಪಾಠ ಸಿಕ್ಕುವವರೆಗೆ ರಾಘವಾಂಕನೇ ಆರಂಭದ ಗಣ್ಯ ಷಟ್ಪದಿಕವಿಯಾಗಿದ್ದಾನೆ ಎನ್ನುವುದರಲ್ಲಿ ಹಾಗೂ ಉದ್ದಂಡ ಷಟ್ಪದಿಯ ನಿರ್ಮಾಪಕನೆಂದು ಹೇಳುವಲ್ಲಿ ಅನುಮಾನವಿಲ್ಲ.

ಕಲಬುರ್ಗಿ ಅವರು ಇದೇ ಲೇಖನದಲ್ಲಿ ಕುತೂಹಲಕರ ಉದ್ದಂಡ ಷಟ್ಪದಿ ಕುರಿತು ಪ್ರಸ್ತಾಪಿಸಿರುವುದು ಅಧ್ಯಯನಕಾರರ ಗಮನ ಸೆಳೆಯುತ್ತದೆ. ಆ ಷಟ್ಪದಿಯ ಸಮಸ್ಯಾತ್ಮಕ ಗಣವ್ಯವಸ್ಥೆ, ಲಕ್ಷಣ ಹಲವಾರು ವಿದ್ವಾಂಸರ ವಿಚಾರ ವಿಮರ್ಶೆಗೆ ಗುರಿಯಾಗಿದೆ. ಉದ್ದಂಡ ಷಟ್ಪದಿಯ ಒಂದು, ಎರಡನೇ ಪಾದದಲ್ಲಿ ೪ ಮಾತ್ರೆ ೫ ಗಣರಚನೆ ಇರುತ್ತವೆಂದು ಡಿ.ಎಲ್.ಎನ್ ಅವರೂ, ೪+೬+೪+೬ ಗಣರಚನೆ ಇರುತ್ತದೆಂದು (ಹಿರಿಯ ಪಾದಕ್ಕೆ ಅದರ ಒಂದೂವರೆ ಪಟ್ಟು) ಎಸ್.ಎನ್. ಕೃಷ್ಣಜೋಯಿಸ ಅವರೂ ಹೇಳಿದ್ದಾರೆ. ಕಲಬುರ್ಗಿ ಅವರು ಆ ವಿದ್ವಾಂಸರ ಅಭಿಪ್ರಾಯಗಳನ್ನು ಮೊದಲು ಸಂಗ್ರಹಿಸಿ, ಆ ಬಳಿಕ ಜೋಯಿಸರ ಅಭಿಪ್ರಾಯವನ್ನು ಒಪ್ಪಿದ್ದಾರೆ. ಆದರೆ ಕನ್ನಡದ ಸಂದರ್ಭದಲ್ಲಿ ಚರಣದ ಮಧ್ಯೆ ಪದಗಳ ದೀರ್ಘೀಕರಣ ವಿರಳವಾಗಿರುವುದರಿಂದ ೬ ಮಾತ್ರೆಯ ಗಣವಿನ್ಯಾಸ ತುಂಬ ಕಡಿಮೆ. ಇದನ್ನು ಗಮನಿಸಿದರೆ ಜೋಯಿಸರ ಅಭಿಪ್ರಾಯ ಪ್ರಶ್ನಾರ್ಹವಾಗಿದೆ. ಅದಕ್ಕಿಂತ ಮುಖ್ಯವಾಗಿ ವಾರ್ಧಕ, ಉದ್ದಂಡಗಳೆಂಬ ಹೆಸರುಗಳು ೫ ಮಾತ್ರೆಯ ೪ ಗಣಗಳ ಒಂದೇ ಷಟ್ಪದಿ ಛಂದಸ್ಸಿಗೆ ಪರ್ಯಾಯವಾಗಿ ಬಳಕೆಯಾಗುತ್ತಿದ್ದುದು ನಿಜ; ಅದು ಏಕೆ? ಎಂಬುದು ಖಚಿತವಾಗಿ ಹೇಳುವುದು ಕಷ್ಟವೇ. ಆದರೂ ಕಾಲಾನುಕ್ರಮಣಿಕೆಯಿಂದ ೪ ಮಾತ್ರೆಯ ೫ ಗಣಗಳ ವಿವಕ್ಷೆಯುಳ್ಳ ಷಟ್ಪದಿಗೆ ಮಾತ್ರ ಉದ್ದಂಡನೆಂಬ ಹೆಸರು ಸ್ಥಿರವಾಗಿ ನಿಂತಿರಬೇಕು ಎಂದು ತಿಳಿಯುವುದು ಬಹುಶಃ ಸೂಕ್ತವಾದೀತು. ಈ ಲೇಖನದ ಉದ್ದಕ್ಕೂ ಅವರು ಬಳಸಿದ ಅಲಂಕಾರಿಕ ಮಾತುಗಳು ಸಂಶೋಧನ ಬರೆಹಗಳಿಗೆ ಸಾಧುವಲ್ಲ. ಏನೇ ಆದರೂ ಷಟ್ಪದಿಯ ಉಗಮ ಮತ್ತು ವಿಕಾಸ ಕುರಿತು ತಿಳಿದುಕೊಳ್ಳಬೇಕೆಂಬ ಆಸಕ್ತರಾಗಿರುವವರೆಲ್ಲ ಈ ಪ್ರಬಂಧದ ಉಪಯೋಗವನ್ನು ಪಡೆಯುತ್ತಾರೆ ಎಂಬುದರಲ್ಲಿ ಸಂದೇಹವಿಲ್ಲ.

ಡಾ. ಕಲಬುರ್ಗಿಯವರು ಶೋಧಿಸಿದ 'ಪುಲಿಗೆರೆಯ ಶಂಖಜಿನೋದ್ಭವದ ಕಾವ್ಯ'ದ ಛಂದಸ್ಸು ವಿಲಕ್ಷಣವಾಗಿದೆ. ಅದರ ಪದ್ಯಗಳು ನೋಡಲು ಸಾಂಗತ್ಯದಂತಿದ್ದರೂ ಸಾಂಗತ್ಯವೂ ಅಲ್ಲ, ಅದರ ಧಾಟಿ ಸ್ಪಷ್ಟವಾಗಿ ಅಂಶಲಯದ್ದು. ಆ ಕಾವ್ಯದ ಛಂದಸ್ಸನ್ನು ಕುರಿತು ಎಂ. ಚಿದಾನಂದಮೂರ್ತಿ (ಸಾಧನೆ ೯-೧) ಮತ್ತು ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ (ಅಂಕಣ ೨-೩) ಅವರು ಪರವಿರೋಧದ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಅವರ ವಾದಗಳನ್ನು ಪರಿಶೀಲಿಸಿ ಕಲಬುರ್ಗಿ ಅವರು ತಮ್ಮ ಕೆಲವು ವಿಚಾರಗಳನ್ನು **ಉಯ್ಯಾಲ ಗಣ ಯಾವುದು? ತರಂಗಗಣ ಸೂಕ್ತ ಹೆಸರು** ಎಂಬ ಲೇಖನದಲ್ಲಿ ಚರ್ಚಿಸಿದ್ದಾರೆ. ಆ ಕಾವ್ಯದ ಒಂದು ಪದ್ಯದ ಗಣ ವಿಂಗಡಣೆಯನ್ನು ಮೇಲಿನ ವಿದ್ವಾಂಸರು ಹೀಗೆ ವಿಭಜಿಸಿದ್ದಾರೆ.

ಚಿ.ಮೂ	:	ತಮ್ಮೊಳು | ತಾವೆಲ್ಲ | ರು [ಓಕುಳಿಗಳ] ಗಮ್ಮನೆ | ಆಡುತ | ಲಿ
ಎನ್.ಎಸ್.ಎಲ್	:	ತಮ್ಮೊಳು | ತಾವೆಲ್ಲ | ರು -ಓ [ಕುಳಿಗಳ] ಗಮ್ಮನೆ | ಆಡುತ | ಲಿ
		ವಿ ವಿ ವಿ ವಿ
ಕಲಬುರ್ಗಿ	:	ತ.ಮ್ಮೊ.ಳು | ತಾ.ವೆ.ಲ್ಲ | ರುs | ಓ.ಕುಳಿ.ಗಳ

ಅಲ್ಲಿಯ 'ಓಕುಳಿಗಳ' ಎಂಬ ಭಾಷಾಘಟಕ ಮೊದಲನೆಯ ಮತ್ತು ಎರಡನೆಯ ಪಾದಕ್ಕೆ ಸಂಬಂಧಿಸಿಲ್ಲ. ಅದು ಎರಡರ ಮಧ್ಯ ಉಯ್ಯಾಲೆ ರೂಪದ ಭಾಗವೆಂದು ಚಿ.ಮೂ ಅಭಿಪ್ರಾಯ. ಆ ರೂಪ ಮೊದಲ ಪಾದಕ್ಕೆ ಸೇರಿದ ಭಾಗವೆಂದು ಭಟ್ಟರ ನಿಲುವು. ಕಲಬುರ್ಗಿ ಅವರು 'ಓಕುಳಿಗಳು' ಎಂಬುದು ಮೊದಲ ಪಾದದ ಭಾಗವೆಂಬ ಭಟ್ಟರ ವಾದವನ್ನು ಒಪ್ಪುವದಾದರೂ 'ರು-ಓ' ಎಂಬ ಅವರ ಗಣ ಕಲ್ಪನೆಯನ್ನು ಒಪ್ಪುವುದಿಲ್ಲ. ಮುಂದುವರಿದು ಆ ಪದ್ಯದಲ್ಲಿ ವಿಷ್ಣುಗಣಗಳೇ ಪ್ರಧಾನವಾಗಿವೆ. ಚರಣದ ಪ್ರಾರಂಭದಲ್ಲಿ ಅಂಶ ಘಟಿತ ೨ ವಿಷ್ಣುಗಣ, ಆ ಮೇಲೆ ಮುಡಿ ರೂಪದ ೧ ವಿಷ್ಣುಗಣ, ಕೊನೆಗೆ ಮಾತ್ರಾ ಘಟಿತ ೧ ವಿಷ್ಣುಗಣಗಳಿಂದ ಕೂಡಿದ ಮಿಶ್ರಗಣ ಬಂದಿವೆ ಎಂದು ಹೇಳಿದ್ದಾರೆ. ಆದರೆ ಕೊರತೆಯ ಅಂಶಗಳಿಂದ ಕೂಡಿದ ರುs ಎಂಬುದನ್ನು ಮುಡಿಯೆನ್ನದೆ ಅವರೇ ತೀನಂಶ್ರೀ ಛಂದೋಚರ್ಚೆಯಲ್ಲಿ ಹೇಳಿದಂತೆ ಪದ್ಮಗಣವೆಂದು ಕರೆದಿದ್ದರೆ ಸರಿಯೆನಿಸುತ್ತಿತ್ತು.

ಉಯ್ಯಾಲೆಗಣ ಕನ್ನಡಕ್ಕೆ ಅಪೂರ್ವವಾಗಿದೆ. ಸಣ್ಣಾಟದ ಹಾಡುಗಳಲ್ಲಿ, ಯಕ್ಷಗಾನದ ಮಟ್ಟುಗಳಲ್ಲಿ, ಮಂಗಳಾರುತಿ ಪದಗಳಲ್ಲಿ ಅದು ಸ್ಪಷ್ಟವಾಗಿಯೇ ಗೋಚರಿಸುತ್ತದೆ. ಚರಣಗಳನ್ನು ಓದುವಾಗ ಅಥವಾ ಹಾಡುವಾಗ ಅನಿರ್ದಿಷ್ಟ ಪ್ರಮಾಣದ ಗಣ ಒಂದು ಪಾದದಿಂದ ಇನ್ನೊಂದು ಪಾದಕ್ಕೆ ಜಾರುತ್ತದೆ ಅಥವಾ ಜೀಕುತ್ತದೆ (ಜೋಕಾಲಿಯಂತೆ). ಅದನ್ನೇ ಚಿದಾನಂದಮೂರ್ತಿ ಅವರು 'ಉಯ್ಯಾಲೆಗಣ' ಎಂದು ಕರೆದಿದ್ದಾರೆ. ಮೇಲಿನ ಪದ್ಯದಲ್ಲಿ 'ಓಕುಳಿಗಳ' ಎಂಬುದು ಉಯ್ಯಾಲೆಗಣವಾಗಿದೆ. ಉಚ್ಚರಿಸುವಾಗ ಧ್ವನಿತರಂಗದ

ಘಾತ ಬೀಳುವುದು 'ಓ'ದ ಮೇಲೆ. ಆದ್ದರಿಂದ 'ಓಕುಳಿಗಳ' ಎಂಬ ಘಟಕವನ್ನು ಅಖಂಡಗಣವೆಂದು ಪರಿಗಣಿಸಿ ಅದು ಅನಿರ್ದಿಷ್ಟ ಪ್ರಮಾಣದ್ದು ಎಂದು ತೆಗೆದುಕೊಳ್ಳ ಬೇಕಾಗುತ್ತದೆ. ಕಲಬುರ್ಗಿಯವರು ಇದನ್ನು ಒಪ್ಪುವರಾದರೂ ಇದಕ್ಕೆ ವಿರುದ್ಧ ಗಣ ಸಂದರ್ಭದಲ್ಲಿ ಬೇರೊಂದು ಸೂಕ್ತ ಹೆಸರಿನ ಅವಶ್ಯಕತೆಯನ್ನು ಗಮನಿಸಿ, ಇದನ್ನು ತರಂಗ ಗಣವೆಂದೂ ಅದನ್ನು ನಿಸ್ತರಂಗಗಣವೆಂದೂ ಕರೆಯಬಹುದೆಂದು ಸೂಚಿಸುತ್ತಾರೆ.

ಪ್ರಾಚೀನ ಕನ್ನಡ ಸಾಹಿತ್ಯವನ್ನು ಸ್ಥೂಲವಾಗಿ ಓದುಗಬ್ಬ(ಚಂಪೂ), ಹಾಡುಗಬ್ಬ (ಷಟ್ಪದಿ, ಸಾಂಗತ್ಯ ಇತ್ಯಾದಿ)ಗಳೆಂದು ವರ್ಗೀಕರಿಸಲಾಗಿದೆ. ಆ ಸಾಹಿತ್ಯದ ಸಾರ್ಥಕತೆಯಿರು ವುದು, ಅದರ ಸರಿಯಾದ ಸಂವಹನದಲ್ಲಿ. ಪಠ್ಯ ಸರಿಯಾಗಿ ಸಂವಹನವಾದಾಗ ಮಾತ್ರ ಆ ಸಾಹಿತ್ಯ ಬಹುಕಾಲ ಉಳಿಯುತ್ತದೆ, ಬೆಳೆಯುತ್ತದೆ. ಕಲಬುರ್ಗಿ ಅವರು **ಪ್ರಾಚೀನ ಕನ್ನಡ ಸಾಹಿತ್ಯ ಸಂವಹನ : ಪಾತಳಿ ಪಲ್ಲಟ** ಲೇಖನದಲ್ಲಿ ಆಲಿಸುವಿಕೆ ಮತ್ತು ಮಾತುಗಾರಿಕೆಗೆ ಸಂಬಂಧ ಪಟ್ಟಂತೆ ಕೆಲವು ಮಹತ್ವದ ಸಂಗತಿಗಳನ್ನು ಚರ್ಚಿಸಿದ್ದಾರೆ. ಕನ್ನಡ ದೇಶೀ ಸಾಹಿತ್ಯ ನಾದ ಪ್ರಧಾನವಾದುದು, ಶ್ರವಣ ಪಾತಳಿ ಅಲ್ಲಿ ಮುಖ್ಯವಾಗಿರುವುದರಿಂದ ಆ ಸಾಹಿತ್ಯ ಪ್ರಭಾವಿಸು ತ್ತದೆ. ಪಂಪ ಬಳಸಿದ ಕಾವ್ಯ ಪ್ರಕಾರ ಸಂಸ್ಕೃತ ಮೂಲದ ಚಂಪೂವಲ್ಲ, ಕನ್ನಡ ಮೂಲದ ಪ್ರಬಂಧ. ಅವನೇ ಹೇಳುತ್ತಾನೆ : 'ಪೇಳಲೊಡರ್ಚಿದೆನೀ ಸುಭಗ ಪ್ರಬಂಧಮಂ' ಎಂದು ಹೇಳಿ 'ಪ್ರಬಂಧ' ಪದವನ್ನು ಬಳಸಿದ್ದಾನೆ. ಮುಂದೆ ಹರಿಹರನ ಗಿರಿಜಾಕಲ್ಯಾಣ ಮಹಾಪ್ರಬಂಧ. ನೇಮಿಚಂದ್ರನ ಲೀಲಾವತಿಮಹಾಪ್ರಬಂಧ ಇತ್ಯಾದಿ ಕೃತಿಗಳಲ್ಲಿ ಪ್ರಬಂಧ ಪದ ಬಳಕೆ ಯಾಗಿದೆ. ಯಕ್ಷಗಾನದ ತಾಳಮದ್ದಳೆಯ 'ಪ್ರಸಂಗ' (ಪ್ರದರ್ಶನ/ಮೌಖಿಕ ಪಾತಳಿ) ವಾಚನ ಪಾತಳಿಗೆ ಬಂದಾಗ ಪ್ರಬಂಧವಾಯಿತು. ಕನ್ನಡ ಚಂಪೂವಿನ ಮೂಲ ಶ್ರವಣ ಪಾತಳಿಯ 'ಪ್ರಸಂಗ'ವಾಗಿದೆ. ಕಲಬುರ್ಗಿ ಅವರ ಈ ವಾದ ಬಹುಮಟ್ಟಿಗೆ ನಿಲ್ಲುತ್ತದೆ. ಕನ್ನಡ ಚಂಪುವಿನ ಬೇರು ಕನ್ನಡದಲ್ಲಿಯೇ ಇದೆ ಎಂಬುದನ್ನು ಅವರು ಗುರುತಿಸಿದ್ದಾರೆ. ಸಂವಾದ, ಆಡುಮಾತಿನ ಲಯಕ್ಕೆ ತಕ್ಕಂತೆ ಕನ್ನಡ ಕವಿಗಳು ಗಣ ಸಂಯೋಜನೆ ಮಾಡಿದ್ದಾರೆ. ಈ ಪಠ್ಯಗಳು (ವಾಚನ ಪಾತಳಿ) 'ಸಂಗೀತ', 'ಗಮಕ' ಮಾಧ್ಯಮಗಳಿಂದ (ಶ್ರವಣ ಪಾತಳಿ/ ಕೇಳುವಿಕೆ) ಸಂವಹನಗೊಳ್ಳುತ್ತ ಪ್ರಸರಣವಾದವು. ಭಾಷೆಯ ಮುಖ್ಯ ಉದ್ದೇಶ ಭಾಷಿಕರಲ್ಲಿ ಸಂಪರ್ಕ ಕಲ್ಪಿಸುವುದು. ಶ್ರವಣ ಪಾತಳಿಯ ಮೂಲಕ ಭಾಷೆಯ ಅನಂತ ಸಾಧ್ಯತೆಗಳು ಚಲನಶೀಲವಾಗುತ್ತವೆ. ಈ ಹಿನ್ನೆಲೆಯಲ್ಲಿ ಕನ್ನಡ ಛಂದಸ್ಸಿನ ಚರ್ಚೆ ನಡೆಯಬೇಕಾಗಿದೆ. ಅದಕ್ಕೆ ಸಂಬಂಧಿಸಿದಂತೆ ಒಂದು ಅಧ್ಯಯನದ ಭೂಮಿಕೆಯನ್ನು ಕಲಬುರ್ಗಿ ಅವರು ಇಲ್ಲಿ ಕೊಟ್ಟಿರುವುದು ಸ್ವಾಗತಾರ್ಹವಾಗಿದೆ. ಅಲ್ಲಲ್ಲಿ ವಿಚಾರ ಯೋಗ್ಯ ಸಂಗತಿಗಳ ಸೂಕ್ಷ್ಮ ವಾಗಿ ವಿಮರ್ಶೆಯನ್ನು ನಡೆಸಿರುವುದು ಮೆಚ್ಚತಕ್ಕುದಾಗಿದೆ.

ಭಾಷೆ, ಬರೆಹ ಮತ್ತು ಉಚ್ಚಾರ ಎಂಬ ಎರಡು ವಿಧದಲ್ಲಿ ಬಳಕೆಯಾಗುತ್ತದೆ. ಹಳಗನ್ನಡದ 'ಲಿಖಿತರೂಪ'ಗಳು ಗೋಚರಿಸಿದಂತೆ ಅವುಗಳನ್ನು ಉಚ್ಚರಿಸುವ ರೀತಿ ತಿಳಿದುಬರುವುದಿಲ್ಲ. ಹಳಗನ್ನಡ ಪದಗಳ ರೂಪಬದಲಾವಣೆ ಹಾಗೂ ಅವುಗಳನ್ನು ಈಗಿನ

ಭಾಷಿಕರು ಉಚ್ಚರಿಸುವ ರೀತಿಯನ್ನು ಗಮನಿಸಿದಾಗ ಆಗಿನ ಉಚ್ಚಾರಣೆಯ ರೀತಿಯನ್ನು ಊಹಿಸಬಹುದು. ಅಷ್ಟೇ ಅಲ್ಲ, ಅದಕ್ಕೆ ನಿಯಮವನ್ನೂ ರೂಪಿಸಬಹುದು. ಕಲಬುರ್ಗಿಯವರು ಪ್ರಾಚೀನ ಕನ್ನಡದ ಒಂದು ಉಚ್ಚಾರ ಎಂಬ ಲೇಖನದಲ್ಲಿ ಅಂತಹ ಪ್ರಯತ್ನ ಮಾಡಿದ್ದಾರೆ. ಹಲ್ಮಿಡಿ ಶಾಸನದಲ್ಲಿ ವೀರಾಪುರುಷ (ವೀರs ಪುರುಷ > ವೀರಪುರುಷ), ವಚನ ಸಾಹಿತ್ಯದಲ್ಲಿ ಬರುವ ಮೇದರ ಕೇತಯ್ಯ > ಮೇದಾರ ಕೇತಯ್ಯ, ಕುಂಬರ ಗುಂಡಯ್ಯ > ಕುಂಬಾರ ಗುಂಡಯ್ಯ ಎಂಬ ಪ್ರಯೋಗಗಳಿವೆ. ಜನಪದ ಸಾಹಿತ್ಯದಲ್ಲಿ ಈ ಧ್ವನಿರಚನೆಯ ದೀರ್ಘೀಕರಣ ಪ್ರಕ್ರಿಯೆ ಧಾರಾಳವಾಗಿ ಕಂಡುಬರುತ್ತದೆ. ಅಲ್ಲಿ ಒಂದು ನಿಯಮವಿದ್ದಂತೆ ಕಾಣುತ್ತದೆ. ಅಚ್ಚಗನ್ನಡ ಪದಗಳು, ಅಂಶಗಣಬಂಧಗಳು. ಅವುಗಳ ಎರಡನೆಯ ಅಂಶ ಹ್ರಸ್ವವಿದ್ದರೂ ಉಚ್ಚರಿಸುವಾಗ ಧ್ವನಿತರಂಗ ಕಂಪನ ವಿಸ್ತಾರವಾಗಿ ದೀರ್ಘವಾಗುತ್ತದೆ ಎಂಬುದು ಮುಖ್ಯವಾದ ಸಂಗತಿ. ಅಂದರೆ ಮಧ್ಯದೀರ್ಘದ ಕನ್ನಡ ಪದಗಳು ಮೂಲತಃ ಹ್ರಸ್ವವಾಗಿರುತ್ತವೆ ಅವುಗಳನ್ನು ಉಚ್ಚರಿಸುವಾಗ ದೀರ್ಘವಾಗುತ್ತವೆ. ಅವರ ನಿಲುವು ಸಮರ್ಪಕವಾಗಿದೆ. ಉಚ್ಚಾರಣೆಗೆ ಸಂಬಂಧಿಸಿದಂತೆ ನಿಜವಾದ ಸಮಸ್ಯೆಯನ್ನು ಗುರುತಿಸಿ, ಆ ಗ್ರಹಿಕೆಯನ್ನು ಸರಿಪಡಿಸಲು ಯತ್ನಿಸಿರುವುದು ಮೆಚ್ಚಬೇಕಾದ ಸಂಗತಿಯಾಗಿದೆ. ಕನ್ನಡಪದ ರಚನೆಯನ್ನು ವಿವೇಚಿಸುವಾಗ ವಿದ್ವಾಂಸರು ಕಲಬುರ್ಗಿ ಅವರ ಈ ಸೂಚನೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು.

ಕಲ್ಯಾಣ ಚಾಲುಕ್ಯರ ಮೂರನೆಯ ಸೋಮೇಶ್ವರನ 'ಮಾನಸೋಲ್ಲಾಸ' ಎಂಬುದು ಒಂದು ವಿಶ್ವಕೋಶ. ಅದು ಕಾವ್ಯದ ದೃಷ್ಟಿಯಿಂದ ಹೇಗೋ ಛಂದಸ್ಸಿನ ದೃಷ್ಟಿಯಿಂದಲೂ ಮುಖ್ಯವಾಗಿದೆ. ಅದರಲ್ಲಿಯ ೧೬ನೇ ಅಧ್ಯಾಯದಲ್ಲಿ ಕನ್ನಡಕ್ಕೆ ಸಂಬಂಧಿಸಿದ ಕೆಲವು ಪದ್ಯಗಳಿವೆ. ಪಾಠಗಳು ವಿರೂಪಗೊಂಡಿವೆ. ಡಿ.ಎಲ್.ಎನ್. ಅವರು 'ಮಾನಸೋಲ್ಲಾಸದಲ್ಲಿ ಛಂದಸ್ಸು' ಎಂಬ ಲೇಖನದಲ್ಲಿ ಆ ಕೃತಿಯಲ್ಲಿ ನಿರೂಪಿತವಾದ ಕನ್ನಡ ಮಟ್ಟುಗಳಾದ ತ್ರಿಪದಿ, ಕಂದ, ಷಟ್ಪದಿ (ಒಟ್ಟು ಮೂರು ಪದ್ಯಗಳು)ಗಳನ್ನು ಗುರುತಿಸಿ, ಸಂಸ್ಕರಿಸಿದ್ದಾರೆ. ಕಲಬುರ್ಗಿ ಅವರು ಮಾನಸೋಲ್ಲಾಸದಲ್ಲಿ ಕನ್ನಡ ಪದ್ಯಗಳು ಎಂಬ ಲೇಖನದಲ್ಲಿ ಡಿ.ಎಲ್. ಎನ್ ಗಮನಕ್ಕೆ ಬಾರದ ಚತುಷ್ಪದಿ (ಚೌಪದಿ) ಮತ್ತು ವಿಚಿತ್ರಾವೃತ್ತ (ಒಟ್ಟು ಎರಡು ಪದ್ಯಗಳು)ಗಳನ್ನು ಗುರುತಿಸಿ, ಸಂಸ್ಕರಿಸಿದ್ದಾರೆ. ತ್ರಿಪದಿ, ಕಂದ, ಷಟ್ಪದಿಗಳ ಸ್ವರೂಪ ಕನ್ನಡಿಗರಿಗೆ ಪರಿಚಿತ; ಅವುಗಳ ಪರಿಷ್ಕರಣೆ ಸುಲಭ. ಕಲಬುರ್ಗಿ ಅವರು ಗುರುತಿಸಿದ ಚೌಪದಿ ಮತ್ತು ವಿಚಿತ್ರಾವೃತ್ತಗಳ ಸ್ವರೂಪ ಅಪರಿಚಿತ, ಅಸ್ಪಷ್ಟ. ಹೀಗಿದ್ದೂ ಕಲಬುರ್ಗಿ ಅವರು ತಮ್ಮ ಪಾಂಡಿತ್ಯದ ಬಲದಿಂದ ತುಂಬ ಕಷ್ಟಪಟ್ಟು, ಪ್ರಾಮಾಣಿಕವಾಗಿ ಪರಿಷ್ಕರಿಸಿದ್ದಾರೆ. 'ನಾನು ಮಾಡಿದ ಪರಿಷ್ಕರಣ ಕಾರ್ಯ ಅಷ್ಟೇನೂ ತೃಪ್ತಿಕರವಾಗಿಲ್ಲವೆಂದು ನನ್ನ ಸ್ಪಷ್ಟ ನಂಬಿಕೆ. ಅದಕ್ಕಾಗಿ ಛಂದೋಜ್ಞಾನಿಗಳು, ಪರಿಷ್ಕರಣ ಪರಿಣತರು, ಈ ಪದ್ಯಗಳತ್ತ ಗಮನ ಕೊಡಬೇಕಾಗಿದೆ' ಎಂದು ಸೂಚಿಸಿದ್ದಾರೆ. ಈ ಮಾತುಗಳ ಹಿಂದೆ ಇರುವ ಶುದ್ಧ ಸಂಶೋಧಕನ ದೃಷ್ಟಿಯ ಮಾತು ಹಾಗಿರಲಿ, ತಮ್ಮ ವಿಚಾರಗಳನ್ನು ಮುಂದಿನವರು

ಪರಿಷ್ಕರಿಸಲಿ, ಬೆಳೆಸಲಿ ಎಂಬ ಕಳಕಳಿಯನ್ನು ಗುರುತಿಸಬೇಕು.'ಮಾನಸೋಲ್ಲಾಸದಲ್ಲಿ ಇನ್ನೂ ಹಲವು ಕನ್ನಡ ಪದ್ಯಗಳಿರಬಹುದೆನಿಸುತ್ತದೆ. ವಿದ್ವಾಂಸರು ಈ ಗ್ರಂಥವನ್ನು ಆಮೂಲಾಗ್ರವಾಗಿ ಅಭ್ಯಾಸಕ್ಕೆ ಅಳವಡಿಸಿಕೊಳ್ಳಬೇಕು' ಎಂದು ಸೂಚಿಸಿ, ಆ ಕೃತಿಯ ಕಡೆಗೆ ತಜ್ಞರ ಗಮನ ಸೆಳೆದಿದ್ದಾರೆ. ಏಕೆಂದರೆ ಸೋಮೇಶ್ವರನಿಗೆ ಉಳಿದ ಅನೇಕ ಶಾಸ್ತ್ರ ವಿಷಯಗಳ ಮೇಲಿರುವಂತೆ ಛಂದಸ್ಸಿನ ಮೇಲೂ ಪ್ರಭುತ್ವವಿದ್ದಿತೆಂಬುದಕ್ಕೆ ಆತ ಬಳಸಿದ ವೃತ್ತ ವೈವಿಧ್ಯವೇ ಸಾಕ್ಷಿ. ಸಂಸ್ಕೃತದಿಂದ ಕನ್ನಡ ಕವಿಗಳು ತೆಗೆದುಕೊಂಡಿರುವ ಈ ವೃತ್ತಗಳ ಬಗ್ಗೆ ಅಭ್ಯಾಸ ಮಾಡುವವರು ಈ ಗ್ರಂಥದಿಂದ ಪ್ರಯೋಜನ ಪಡೆಯಬಹುದು. ಆದ್ದರಿಂದ ಕನ್ನಡ ಛಂದಸ್ಸಿನ ಚರಿತ್ರೆಯಲ್ಲಿ ಈ ಕೃತಿಗೆ ಒಂದು ಪ್ರಮುಖ ಸ್ಥಾನವಿದೆ.

ಛಂದಸ್ಸಿಗೆ ಸಂಬಂಧಪಟ್ಟಂತೆ ತೀನಂಶ್ರೀ ಅವರು ಆರು ಲೇಖನಗಳನ್ನು ಬರೆದಿದ್ದಾರೆ. ಅವು ಅವರ ಲೇಖನ ಸಂಕಲನ 'ಸಮಾಲೋಕನ'(೧೯೫೪)ದಲ್ಲಿ ಸಮಾವೇಶಗೊಂಡಿವೆ. ಕಲಬುರ್ಗಿ ಅವರು **'ತೀನಂಶ್ರೀ ಛಂದೋವಿಚಾರ : ಪರಿಶೀಲನೆ'** ಎಂಬ ಲೇಖನದಲ್ಲಿ ತೀನಂಶ್ರೀ ಅವರ ಛಂದೋವಿಚಾರಗಳನ್ನು ಸಾದ್ಯಂತವಾಗಿ ಮೊದಲ ಸಲ ಸಮಾಲೋಚನೆ ಮಾಡಿದ್ದಾರೆ. ತೀನಂಶ್ರೀ ಅವರ 'ಹೊಸಛಂದಸ್ಸಿನ ಲಯಗಳು' ಮತ್ತು 'ಮಾತ್ರೆ-ಮುಡಿ-ಪದ್ಮಗಣ' ಎಂಬ ಲೇಖನಗಳು ಪರಿಶೀಲನಾರ್ಹವಾಗಿವೆ. ಕಲಬುರ್ಗಿ ಅವರು ಆ ಎರಡು ಲೇಖನಗಳನ್ನು ಚರ್ಚೆಗೆ ಎತ್ತಿಕೊಂಡಿರುವುದು ಸ್ವಾಗತಾರ್ಹವಾಗಿದೆ. ತೀನಂಶ್ರೀ ಅವರ ಛಂದೋಸಾಧನೆಯ ಬಗ್ಗೆ ಬರೆಯುವಾಗ ಕಲಬುರ್ಗಿ ಅವರು ವಿದ್ವತ್ತಿನ ವಿನಯ ಮೆರೆದಿರುವುದು ಗಮನಿಸಬೇಕಾದ ಸಂಗತಿ. ಇಲ್ಲಿ ಈ ಇಬ್ಬರು ವಿದ್ವಾಂಸರ ನಿಲುವುಗಳನ್ನು ಈ ಕೆಳಗಿನಂತೆ ಕಲೆ ಹಾಕಬಹುದು.

೧. ಕನ್ನಡ ಕವಿಗಳು ಸಾಮಾನ್ಯವಾಗಿ ೩ ರಿಂದ ೬ ಮಾತ್ರೆಯ ಗಣರಚನೆ ರೂಪಿಸಿಕೊಂಡಿರುತ್ತಾರೆ. ತೀನಂಶ್ರೀ ಅವರು ಮುಂದುವರಿದು ೯ ಮಾತ್ರೆಗಳ ಗಣಗಳು ಸಾಧ್ಯವೆಂದು ಹೇಳುತ್ತಾರೆ. ಆದರೆ ೯ ಮಾತ್ರೆಗಳ ದೀರ್ಘಪದರಚನೆ, ಉಚ್ಚಾರಣೆಯ ಕ್ರಮ ಕನ್ನಡದಲ್ಲಿಲ್ಲ. ಈ ದೃಷ್ಟಿಯಿಂದ ತೀನಂಶ್ರೀ ಅವರು ಹೇಳಿರುವುದು ಸಂದೇಹಾಸ್ಪದವಾಗಿದೆ ಎಂಬ ಕಲಬುರ್ಗಿ ಅವರ ನಿಲುವು ಸರಿಯಾಗಿದೆ.

೨. 'ಲಯದಲ್ಲಿ ಒಂದು ಹೊಸಬಳುಕನ್ನು ತರುವುದಕ್ಕಾಗಿ ಒಂದು ಜಾತಿಯ ಗಣಸ್ಥಾನದಲ್ಲಿ ಅದೇ ಮಾತ್ರಾ ಪರಿಮಿತಿಯ ಇನ್ನೊಂದು ಜಾತಿಯ ಗಣಗಳನ್ನು ಇರಿಸುವುದು ಗಣಪರಿವೃತ್ತಿಯಾಗಿದೆ' (ಸಮಾಲೋಕನ, ಪು. ೨೧೧). ತೀನಂ.ಶ್ರೀ ಅವರ ಈ ವಾದ ಓದುಗಬ್ಬಗಳಿಗೆ ಮಾತ್ರ ಅನ್ವಯವಾಗಬಹುದು. ಹಾಡುಗಬ್ಬಗಳಲ್ಲಿ 'ಗೇಯತೆ' ಮುಖ್ಯವಾಗಿರುವುದರಿಂದ ಗಣಪರಿವೃತ್ತಿಯ ನಿಯಮ ಹಾಡುಗಬ್ಬಗಳಿಗೆ ಅನ್ವಯವಾಗುವುದಿಲ್ಲ. ಅಂದರೆ ಗಣಪರಿವೃತ್ತಿಯ ವಿನ್ಯಾಸ ಕ್ರಮ ಕನ್ನಡದ ಎಲ್ಲಮಟ್ಟುಗಳಿಗೂ ಅನ್ವಯವಾಗುವುದಿಲ್ಲ ಎಂಬ ಕಲಬುರ್ಗಿ ಅವರ ವಾದ ಒಪ್ಪತಕ್ಕುದಾಗಿದೆ.

೩. ಮಾತ್ರೆಗಳ ಉಚ್ಚಾರಣೆಯ ಕಾಲಾವಧಿಯನ್ನು ಅನುಲಕ್ಷಿಸಿ ತೀನಂಶ್ರೀ ಅವರು ಪ್ಲುತ, ಕಂಪಿತಗಳ ಬಗ್ಗೆ ಪ್ರಸ್ತಾಪ ಮಾಡುತ್ತಾರೆ. ಪ್ಲುತಕ್ಕೆ ಅವರು ಕೊಡುವ ಉದಾಹರಣೆ ಹೀಗಿದೆ : 'ಹಡೆದ | ಕೂಸು | ಬಾಳ್ಟು | ದೆಂತು | ಎನುತ | ತs | ಲ್ಲಣಿಸು | ತ'. ಎಂಬಲ್ಲಿ 'ತs'. ಇದು ಮೂರು ಮಾತ್ರೆಯ ಕಾಲಾವಧಿಯನ್ನು ವ್ಯಾಪಿಸಿರುವುದರಿಂದ ಪ್ಲುತ. ಕಲಬುರ್ಗಿ ಅವರು ಆ ಚರಣವನ್ನು ಹೀಗೆ ವಿಂಗಡಿಸುತ್ತಾರೆ : ಹಡೆದು | ಕೂಸು | ಬಾಳ್ಟು | ದೆಂತು | ಎನುತ | ತಲ್ಲ | ಣಿಸುತ |. ಇಲ್ಲಿ ಎಲ್ಲವೂ ಮೂರು ಮಾತ್ರೆಯ ಗಣಗಳೇ ಆಗಿವೆ. ಆದ್ದರಿಂದ ಪ್ಲುತ ಕುರಿತು ತೀನಂಶ್ರೀ ಅವರು ವಿಶೇಷ ಹೇಳಿಲ್ಲ ಎನಿಸುತ್ತದೆ. ಈ ಬಗೆಗೆ ಕಲಬುರ್ಗಿ ಅವರ ವಿಚಾರವೇ ಸರಿಯಾಗಿದೆ.

೪. ಕಂಪಿತಕ್ಕೆ ತೀನಂಶ್ರೀ ಅವರು ಕೊಡುವ ಉದಾಹರಣೆ ಹೀಗಿದೆ : ನಿನ್ನ | ಬೆಳ್ಳಿಯ | ಕೂದ | ಲಂದ | .... ನನ್ನ | ಮೇs | ರಿ. ಇಲ್ಲಿ 'ಮೇs' ಎಂಬ ಅಂಶಕ್ಕೆ ಮೂರು ಮಾತ್ರೆಗಿಂತ ಹೆಚ್ಚಿನ ಬೆಲೆಯಿರುವುದರಿಂದ ಅದು ಅವರ ಪ್ರಕಾರ ಕಂಪಿತ. ಆ ಪದ್ಯದಲ್ಲಿ ಎಲ್ಲವೂ ೩+೪ ಮಾತ್ರೆಯ ಗಣಗಳಿವೆ. 'ಮೇs'ಎನ್ನು ಉಚ್ಚರಿಸುವಾಗ ಅದು ತನ್ನ ಗಣಸ್ಥಾನವಾದ ೪ ಮಾತ್ರೆಗೆ ಹಿಗ್ಗುತ್ತದೆ. ಇದು ಅಂಶಲಯದ ಸಹಜ ಗುಣ. ಹೀಗಾಗಿ ಅದನ್ನು 'ಕಂಪಿತ'ವೆಂದು ಕರೆಯದೆ ಅದು ತನ್ನ ಗಣಸ್ಥಾನಕ್ಕೆ ಹಿಗ್ಗಿಕೊಂಡಿದೆಯೆಂದು ಹೇಳುವುದೇ ಸರಿಯಾದ ಕ್ರಮವೆನ್ನುವ ಕಲಬುರ್ಗಿಯವರ ವಾದ ಸರಿಯಾಗಿದೆ.

೫. ತೀನಂಶ್ರೀ ಅವರು ಮಂಡಿಸಿದ ಇನ್ನೆರಡು ಸಂಗತಿಗಳು ಮುಡಿ ಮತ್ತು ಪದ್ಮಗಣ. ಚರಣದ ಕೊನೆಯ ಗಣದ ಆಚೆಗೆ ನಿಲ್ಲುವ ಅಕ್ಷರವೇ 'ಮುಡಿ'. ಚರಣದ ಕೊನೆ ಗಣದ ಪ್ರಮಾಣ ದೀರ್ಘವಾಗಿ ಮುಕ್ತಾಯ ಸೂಚಿಸುವ ಘಟಕ 'ಪದ್ಮಗಣ'. ಅದಕ್ಕೆ ಅವರು ಕೊಡುವ ಉದಾಹರಣೆ :

> ಸಿರಿಗೌರಿ | ಯಂತೆ ಬಂ | ದರು ತಾಯಿ | ಹಸೆಮಣೆ | ಗೆ
> ಸೆರಗಿನಲಿ | ಕಣ್ಣೀರ | ನೊರಸಿ

ಇಲ್ಲಿ 'ಗೆ' ಎಂಬುದು ಮುಡಿ, 'ನೊರಸಿ' ಎಂಬುದು ಪದ್ಮಗಣ. ಆದರೆ ಅವುಗಳ ಸ್ವರೂಪದ ಬಗ್ಗೆ ತೀನಂಶ್ರೀ ಅವರಿಗೆ ಖಚಿತತೆ ಇದ್ದಂತೆ ಕಾಣುವುದಿಲ್ಲ. ಹಾಡುಗಬ್ಬಗಳಲ್ಲಿ ಪಾದದ ಅಂತ್ಯಗಣದ ಮೇಲೊಂದು ಅಕ್ಷರ ಬಂದರೆ ಅದು 'ಮುಡಿ'; ಅಕ್ಷರ ಕೊರತೆಯಿಂದ ಕೂಡಿದ ಗಣ 'ಪದ್ಮಗಣ' - ಎಂದು ಕಲಬುರ್ಗಿ ಅವರು ಮುಡಿ ಮತ್ತು ಪದ್ಮಗಣದ ಸ್ವರೂಪವನ್ನು ಖಚಿತಗೊಳಿಸಿದ್ದಾರೆ ಎಂಬುದು ಗಮನಾರ್ಹ. ಮುಡಿಗಿಂತ ಪದ್ಮಗಣ ದೊಡ್ಡದು ಎಂದು ತೀನಂಶ್ರೀ ಅವರ ತೀರ್ಮಾನ ಸರಿಯಲ್ಲ. ಏಕೆಂದರೆ ಮುಡಿ, ಪದ್ಮಗಣಗಳು ತಮ್ಮ ಗಣ ಸ್ಥಾನದಷ್ಟು ಹಿಗ್ಗುತ್ತವೆ. ಹೀಗಾಗಿ ಇಲ್ಲಿ ದೊಡ್ಡದು, ಚಿಕ್ಕದು ಎಂಬ ಪ್ರಶ್ನೆ ಬರುವುದೇ ಇಲ್ಲ.

೬. ಚರಣದ ಕೊನೆಗೆ ಬರಬೇಕಾದ ಮುಡಿ, ಪದ್ಮಗಣಗಳು ಚರಣದ ಮಧ್ಯದಲ್ಲಿಯೂ ಬರಬಹುದೆನ್ನುತ್ತಾರೆ, ತೀನಂಶ್ರೀ. ಅದಕ್ಕೆ ಅವರು ಕೊಡುವ ಉದಾಹರಣೆ ಹೀಗಿದೆ :

ನಮ್ಮೂರು ಚೆಂದವೋ ನಿಮ್ಮೂರು ಚೆಂದವೋ
ಎಂದೆನ್ನ ಕೇಳಲೇ | ಕೆ | ಎನ್ನರಸ
ಸುಮ್ಮನಿರಿ ಎಂದಳಾ | ಕೆ

ಇಲ್ಲಿ 'ಕೆ' ಮುಡಿ, ನಿಜ. ಆದರೆ ಕಲಬುರ್ಗಿಯವರು ಹೇಳುವಂತೆ ಅದು ಚರಣದ ಕೊನೆಯಲ್ಲಿಯೇ ಬರುತ್ತದೆ. ಅವರ ಪ್ರಕಾರ ಆ ಹಾಡನ್ನು ಹೀಗೆ ವಿಂಗಡಿಸಬಹುದು :

ನಮ್ಮೂರು ಚೆಂದವೋ ನಿಮ್ಮೂರು ಚೆಂದವೋ
ಎಂದೆನ್ನ ಕೇಳಲೇ | ಕೆ
ಎನ್ನರಸ ಸುಮ್ಮನಿರಿ
ಎಂದಳಾ | ಕೆ

ತಾತ್ಪರ್ಯವಿಷ್ಟೆ, ಮುಡಿ, ಪದ್ಮಗಣಗಳು ಯಾವಾಗಲೂ ಚರಣದ ಕೊನೆಗೆ ಬರುತ್ತವೆ ಎಂಬುದು ಸ್ಪಷ್ಟ. ಕನ್ನಡ ವೃತ್ತಗಳ ಸ್ವರೂಪವೇ ಹಾಗೆ (ಷಟ್ಪದಿಯ ೩, ೬ನೇ ಚರಣಗಳ ಕೊನೆಯ ಅಕ್ಷರ ಗುರು ಕಡ್ಡಾಯ).

ಛಂದಸ್ಸು ಕಿವಿಯ ವಸ್ತು. ಅದರ ವಿಶ್ಲೇಷಣೆಯೂ ಶ್ರವಣ ಪಾತಳಿಯ ಮೇಲೆ ನಡೆಯ ಬೇಕು. ಆಗ ಕನ್ನಡ ಛಂದಸ್ಸಿನ ರಹಸ್ಯ ಅರ್ಥವಾಗುತ್ತದೆ. ಈ ಹಿನ್ನೆಲೆಯಲ್ಲಿ ಕಲಬುರ್ಗಿ ಅವರು ಶ್ರವಣ ಪಾತಳಿಯನ್ನು ಅನುಲಕ್ಷಿಸಿ ತೀನಂಶ್ರೀ ಅವರ ಪ್ಲುತ-ಕಂಪಿತ, ಮುಡಿ-ಪದ್ಮಗಣ ಅವುಗಳ ಅರ್ಥ, ಮಾತ್ರಾಮೌಲ್ಯ ಹಾಗೂ ಚರಣಗಳಲ್ಲಿ ಅವುಗಳ ಸ್ಥಾನಗಳನ್ನು ಕುರಿತು ಖಚಿತವಾಗಿ ನಿರೂಪಿಸಿದ್ದಾರೆ. ಕಲಬುರ್ಗಿ ಅವರ ಛಂದೋ ವಿಶ್ಲೇಷಣೆಯ ಸೂಕ್ಷ್ಮತೆಗೆ ಈ ಲೇಖನ ಪರಮ ನಿದರ್ಶನವಾಗಿದೆ.

ಕಲಬುರ್ಗಿ ಅವರು ಕುವೆಂಪು ಪದ್ಯ ಸಾಹಿತ್ಯವನ್ನು ಕೇಂದ್ರವಾಗಿಟ್ಟುಕೊಂಡು ನವೋದಯ ಕಾವ್ಯದ ಛಂದಸ್ಸಿಗೆ ಸಂಬಂಧಿಸಿದಂತೆ ಕೆಲವು ತಾತ್ವಿಕ ವಿಚಾರಗಳನ್ನು ಕುವೆಂಪು ಛಂದಸ್ಸು ಎಂಬ ಲೇಖನದಲ್ಲಿ ವಿವೇಚಿಸಿದ್ದಾರೆ. ಇದು ಸಹಿತ ತುಂಬ ವಿಚಾರ ಪ್ರಚೋದಕ ಲೇಖನ. ಭಾಷೆಯಂತೆ ಛಂದೋಲಯಗಳು ಪರಿವರ್ತನಶೀಲವಾಗಿವೆ. ಪ್ರಾಚೀನ ಅಂಶ ಛಂದಸ್ಸಿನಲ್ಲಿ ಗಣದ ಪ್ರಥಮ ಸ್ಥಾನದಲ್ಲಿ ಒಂದು ಗುರು ಇಲ್ಲವೆ ಎರಡು ಲಘು, ಪ್ರಥಮೇತರ ಸ್ಥಾನ ದಲ್ಲಿ ಒಂದು ಗುರು ಇಲ್ಲವೆ ಒಂದು ಲಘು ಬರುತ್ತದೆ ಎಂಬ ನಿಯಮವಿದೆ. ಆಧುನಿಕ ಕವಿಗಳು ಆ ನಿಯಮವನ್ನು ಪಲ್ಲಟಗೊಳಿಸಿದರು. ಛಂದೋಲಯದಲ್ಲಿ ಉಚ್ಚಾರದ ಘಟಕ ಗಳು ಮುಖ್ಯ. ಕಲಬುರ್ಗಿಯವರು ಅಂಕಿ-ಅಂಶ ಸಮೇತವಾಗಿ ೯+೨೭=೩೬ 'ಘಟಕಗಣ' ಗಳನ್ನು ಕುವೆಂಪು (ನವೋದಯ ಕವಿಗಳು) ಬಳಸಿರುವ ಸಾಧ್ಯತೆಯಿದೆ ಎಂಬ ಸರಿಯಾದ ತೀರ್ಮಾಣಕ್ಕೆ ಬಂದಿದ್ದಾರೆ. ಗಣರಚನೆ, ಪದ, ಪದ್ಯ, ಚರಣ ಸಂಯೋಜನೆಯಲ್ಲಿ ಕುವೆಂಪು ಹೊಸತನ ತಂದರು. ಕುವೆಂಪು ಅವರು ಕೆಲವೊಮ್ಮೆ ಗಣವಿನ್ಯಾಸ ಭರದಲ್ಲಿ ಭಾಷೆಯ ಅರ್ಥವನ್ನು ಉಪೇಕ್ಷಿಸುತ್ತಾರೆ. ಉದಾ.

ನನ್ನಯ್ಯ | ಛಿರ್ದೂಷಿ | ಕಂಬಾರ | ವಿಂದರಿಗೆ

ಎಂಬಲ್ಲಿ 'ಕಂಬಾರ' ಎಂದು ಗಣ ವಿಂಗಡನೆಯಾಗುವುದು ಸೂಕ್ತವಲ್ಲ. ಅದು 'ಕಂಬ | ಅರವಿಂದ | ರಿಗೆ' ಎಂದಾಗಬೇಕಾಗಿತ್ತು. 'ಕುವೆಂಪು ಅವರ ಛಂದಸ್ಸು 'ಗೇಯತೆ'ಗಿಂತ 'ಗದ್ಯತೆ'ಗೆ ಹೆಚ್ಚು ವಾಲಿದೆ' ಎಂದು ಸರಿಯಾಗಿಯೇ ಗುರುತಿಸಿದ್ದಾರೆ. ಇಲ್ಲಿಯ ವರೆಗೆ ಇಂಗ್ಲಿಶಿನ ಬ್ಲಾಂಕ್ ವ್ಹರ್ಸ್ ಪ್ರಕಾರವು ಸರಳ ರಗಳೆ - ಮಹಾಛಂದಸ್ಸಿಗೆ ಮೂಲವಾಗಿದೆ ಎಂಬ ಅಭಿಪ್ರಾಯ ಸಾಮಾನ್ಯವಾಗಿ ರೂಢಿಯಾಗಿತ್ತು. ಕಲಬುರ್ಗಿ ಅವರು ಆ ಹೇಳಿಕೆಯನ್ನು ಪರಿಶೀಲಿಸಿ, ಪ್ರಾಚೀನ ದಂಡಕದ ಪ್ರಭಾವದಿಂದ ಲಲಿತರಗಳೆ ರೂಪಗೊಂಡಿತು. ಲಲಿತ ರಗಳೆಯು ಆದಿ ಮತ್ತು ಅಂತ್ಯ ಪ್ರಾಸ ಕಳಚಿಕೊಂಡು ಸರಳ ರಗಳೆಯಾಯಿತು ಎಂದು ಕಲಬುರ್ಗಿ ಅವರು ಮಹತ್ವದ ಸೂಚನೆಯನ್ನು ತಜ್ಞರ ಗಮನಕ್ಕೆ ತಂದಿರುವುದು ಮಹತ್ವರ ಶೋಧವೇ ಆಗಿದೆ. ಒಬ್ಬ ಕವಿ, ಛಂದೋನಿಯಮಗಳನ್ನು ಅರಿತು, ಅರಗಿಸಿಕೊಂಡು ಆ ನಿಯಮಗಳನ್ನು ಮೀರಿ ಬೆಳೆಯಬೇಕು. ಆಗ ಕವಿ ಮತ್ತು ಅವನ ಕಾವ್ಯ ಉಳಿಯುತ್ತದೆ, ಬೆಳೆಯುತ್ತದೆ. ಆಗ ಛಂದಸ್ಸು ಆ ಕಾವ್ಯದ ಯಶಸ್ಸಿಗೆ ಹಿಂದಿರುವ ಶಕ್ತಿಯಾಗುತ್ತದೆ. ಕುವೆಂಪು ಮೇರುಕವಿಯಾಗಲು ಛಂದೋಲಯಗಳನ್ನು ಅವರು ಅರಿತು ಮೀರಿದುದೇ ಆಗಿದೆ ಎಂದು ಹೇಳಿದುದು ಗಮನಿಸಬೇಕಾದ ಸಂಗತಿ.

ಬೇಂದ್ರೆ ಅವರ ವ್ಯಕ್ತಿತ್ವ ಮತ್ತು ಕವಿತ್ವ ಕುರಿತು ಕಣವಿಯವರು ರಚಿಸಿದ ಸಾನೆಟ್, ಎಪ್ಪತ್ತರ ಬೇಂದ್ರೆ. ಆ ಸಾನೆಟ್‌ದ ಅರ್ಥ ಮತ್ತು ಭಾವ ಸೌಂದರ್ಯವನ್ನು ಕುರಿತು ಕಲಬುರ್ಗಿ ಅವರು ಮಾರ್ಮಿಕವಾಗಿ ವಿವೇಚಿಸಿದ್ದಾರೆ. ಆದರೆ ಆ ಸಾನೆಟ್‌ದ ಛಂದಃಶಿಲ್ಪದ ಬಗ್ಗೆ ಇನ್ನಷ್ಟು ಚರ್ಚಿಸಬಹುದಾಗಿತ್ತು. ಸಾನೆಟ್ ರಚನೆಯಲ್ಲಿ ಇತರ ಕವಿಗಳಿಗಿಂತ ಕಣವಿಯವರ ಸಾಧನೆ ಒಂದು ಗುಂಜಿ ಹೆಚ್ಚು. ಆ ಸಾನೆಟ್‌ದಲ್ಲಿ ವಿನ್ಯಾಸದ ದೃಷ್ಟಿಯಿಂದ ಎರಡು ಖಂಡ ಗಳಿವೆ (೮+೬). ಮೊದಲ ಎಂಟು ಪಾದಗಳನ್ನು ಬೇಂದ್ರೆ ಅವರ ವ್ಯಕ್ತಿತ್ವಕ್ಕೆ ನಂತರದ ಆರು ಪಾದಗಳನ್ನು ಬೇಂದ್ರೆ ಅವರ ಕವಿತ್ವಕ್ಕೆ ಅನ್ವಯಿಸಿದ್ದಾರೆ. ಅವೆರಡು ಖಂಡಗಳ ನಡುವೆ ಸ್ಪಷ್ಟ ನಿಲುಗಡೆಯಿದೆ. ಕಣವಿಯವರ ಸಾನೆಟ್‌ಗಳಲ್ಲಿ ಗಣಗಳಿಗಿಂತ ಚರಣಗಳ ಮಧ್ಯ ಮಧ್ಯ ಬರುವ ವಿರಾಮ ಸ್ಥಾನಗಳು (ಅರ್ಧವಿರಾಮ, ಅಲ್ಪವಿರಾಮ, ಪ್ರಶ್ನೆಚಿಹ್ನೆ ಮುಂತಾದುವು) ಅಧ್ಯಯನ ಯೋಗ್ಯವಾಗಿವೆ. ಅಂತ್ಯಪ್ರಾಸ, ಯತಿ ಇವು ಸಹಜವಾಗಿ ಅರ್ಥಕ್ಕೆ ಸಮುಚಿತವಾಗಿ ಕಾಣಿಸುತ್ತವೆ. 'ನಡೆದದ್ದೆ ಸಾಧನಕೇರಿ, ನುಡಿದದ್ದೆ ಕವಿತೆ'. ಎಂಬ ಕೊನೆಯ ಚರಣದ ಲಯ ಕಿವಿಯನ್ನು ಅಪ್ಪಳಿಸುತ್ತದೆ. ಓದುಗರ ಮನಸ್ಸಿನಲ್ಲಿ ಅದು ಮುದ್ರೆಯೊತ್ತಿ ನಿಲ್ಲುವುದಲ್ಲದೆ ಕವನವನ್ನು ಮತ್ತೆ ಮತ್ತೆ ಓದುವಂತೆ ಪ್ರೇರೆಪಿಸುತ್ತದೆ. ಕಣವಿಯವರ ಸಾನೆಟ್‌ಗಳ ಭಾಷೆ ಮತ್ತು ಛಂದೋಲಯ ಕುರಿತು ಪ್ರತ್ಯೇಕ ಅಭ್ಯಾಸ ಆಗಬೇಕಾಗಿದೆ. ಅಂತಹ ಅಧ್ಯಯನಕ್ಕೆ ಈ ಲೇಖನ ಸ್ಫೂರ್ತಿ ಕೊಡುತ್ತದೆ.

೨

ಶಾಸನ ಛಂದಸ್ಸಿಗೆ ಕಲಬುರ್ಗಿ ಅವರು ನೀಡಿದ ಕಾಣಿಕೆ ಮೌಲಿಕವಾದುದು. ಆ ಬಗ್ಗೆ ಅವರು ಬರೆದಿರುವ ನಾಲ್ಕು ಲೇಖನಗಳು ಬಹುಶಃ ಆ ಕ್ಷೇತ್ರದ ಅಧ್ಯಯನಕಾರರಿಗೆ ಹೊಸದಾರಿ ತೋರಿಸಿದುವು. ಇಂದಿಗೂ ಶಾಸನ ಛಂದಸ್ಸಿನ ಬಗ್ಗೆ ವ್ಯಾಸಂಗ ಮಾಡುವವರು ಅವರ ಬರೆಹಗಳಿಂದಲೇ ಸ್ಫೂರ್ತಿಯನ್ನೂ ಸೂಚನೆಗಳನ್ನೂ ಪಡೆಯಬೇಕಾಗಿದೆಂಬ ಮಾತು ಬಹುಮಟ್ಟಿಗೆ ನಿರ್ವಿವಾದವಾಗಿದೆ. ಆ ಕ್ಷೇತ್ರದಲ್ಲಿ ಅವರ ಬರೆಹಗಳ ಸ್ವರೂಪ ಮತ್ತು ವಿಶ್ಲೇಷಣೆಯ ಕ್ರಮ ಹೀಗಿದೆ :

ಇಲ್ಲಿಯ ವರೆಗೆ ರಾಘವಾಂಕನಿಗಿಂತ ಹಿಂದೆ ಒಟ್ಟು ೨೩ ಷಟ್ಪದ[ಅಂಶಷಟ್ಪದಿ] ಪದ್ಯಗಳು ದೊರೆತು, ಪ್ರಕಟವಾಗಿವೆ. ಸೊಲ್ಲಾಪುರದ ಒಂದು ಶಾಸನವು "ವಿವಾಹಪುರಾಣ" ಎಂಬ ಹೆಸರಿನ ಶಿವ-ಪಾರ್ವತಿಯರ ವಿವಾಹದ ವರ್ಣನೆಯನ್ನೊಳಗೊಂಡ ಷಟ್ಪದ (ಅಂಶಷಟ್ಪದಿ) ಕಾವ್ಯವಾಗಿದೆ. ಅದರ ಸ್ವರೂಪವನ್ನು ಕುರಿತು ಎಂ. ಚಿದಾನಂದಮೂರ್ತಿ ಅವರು 'ಕನ್ನಡದ ಮೊತ್ತಮೊದಲ ಷಟ್ಪದ ಕಾವ್ಯ' ಎಂಬ ಲೇಖನದಲ್ಲಿ ತೋರಿಸಿದ್ದಾರೆ. ಷಟ್ಪದ ಇತಿಹಾಸದ ಚರ್ಚೆಯಲ್ಲಿ ಅದು ಒಂದು ಘಟ್ಟವೆಂದು ಹೇಳಬಹುದು. ಆನೆಗೊಂದಿಯ ತಾಮ್ರಶಾಸನ ವೊಂದರಲ್ಲಿ ಸೊಲ್ಲಾಪುರ ಶಿಲಾ ಶಾಸನೋಕ್ತ ವಿವಾಹ ಪುರಾಣವನ್ನು ಡಾ. ಚಿದಾನಂದ ಮೂರ್ತಿ ಅವರು ಗುರುತಿಸಿದ್ದಾರೆ. ಆದರೆ ಇಲ್ಲಿ ಹೆಚ್ಚಿನದಾಗಿ ಸಮಯ ಶಾಸನಪುರಾಣ ಮತ್ತು ಅಮೃತಮನಥನ ಪುರಾಣಗಳಿವೆಯೆಂದು ಡಾ. ಕಲಬುರ್ಗಿ ಗುರುತಿಸಿದ್ದಾರೆ. ಅದೇನೇ ಇರಲಿ ತಾಮ್ರಶಾಸನದಲ್ಲಿ ಗದ್ಯ ಮಾತ್ರವಿದೆಯೆಂದು ಡಾ. ಚಿದಾನಂದಮೂರ್ತಿ ಹೇಳುತ್ತಾರೆ. ಆದರೆ ಇಲ್ಲಿಯ ಅಮೃತಮಥನ ಪುರಾಣದಲ್ಲಿ ೨೩ ಷಟ್ಪದಗಳಿವೆಯೆಂದು ಡಾ. ಕಲಬುರ್ಗಿ ಸೂಚಿಸಿದುದು ಮಹತ್ವದ ಅಂಶವಾಗಿದೆ. ಕಲಬುರ್ಗಿ ಅವರು ಅಮೃತಮಥನ ಪುರಾಣ : ಶಾಸನೋಕ್ತ ಷಟ್ಪದ ಕಾವ್ಯ ಎಂಬ ಲೇಖನದಲ್ಲಿ ಆ ತಾಮ್ರಶಾಸನ ಪಾಠವನ್ನು ಸಂಸ್ಕರಿಸಿ ದ್ದಾರೆ. ಛಂದಸ್ಸಿನ ದೃಷ್ಟಿಯಿಂದ ಆ ಪಾಠ ತುಂಬ ಕುತೂಹಲ ಕೆರಳಿಸುತ್ತದೆ. ವಿವಾಹ ಪುರಾಣದಂತೆ ಈ ಷಟ್ಪದ ಕಾವ್ಯವು ಪ್ರಾಚೀನ ಶಾಸನಸ್ಥ ಜಾನಪದ ಕೃತಿಯಾಗಿದೆ. ಅತಿಹೆಚ್ಚಿನ ಷಟ್ಪದಗಳನ್ನು ಹೊಂದಿದ ಶಾಸನವಿದು. ಶಾಸನದ ಮೂಲಪಾಠದೊಂದಿಗೆ ಸಂಸ್ಕರಿಸಿದ ಪೂರ್ಣಪಾಠವನ್ನು ಕಲಬುರ್ಗಿ ಅವರು ಕೊಟ್ಟಿದ್ದಾರೆ. ಅದರ ಒಂದು ಪದ್ಯದ ಪಾಠ ವಿನ್ಯಾಸ ಕ್ರಮ ಹೀಗಿದೆ :

ಮೂಲಪಾಠ : ಶ್ರೀ ಪರಮೇಸ್ವ(ಶ್ವ)ರಂ ಪಾಪವಿ‌ನಾಸ(ಶ)ನಂ ಸಾಪಲ್ಯ ಸುರತರು ಭಕ್ತ ಜನಕ್ಕು ಗೋಪತಿವಾಹನನ ಪಾರ್ವ್ವತೀಶ ವಿರೂಪಾಕ್ಷನಕ್ಷಯಂ ಸಾ(ಶಾ)ಸ್ವತ್ತೆರಂ.

ಇದನ್ನು ಸ್ಥೂಲವಾಗಿ ಅರ್ಥಬರುವಂತೆ ಕೆಳಗಿನಂತೆ ಪದ್ಯವಾಗಿ ಸಂಸ್ಕರಿಸಿದ್ದಾರೆ.

ಶ್ರೀ ಪರ | ಮೇಶ್ವರಂ ವಿ.ವಿ.
ಪಾಪವಿ | ನಾಶನಂ ವಿ.ವಿ.

ಸಾಫಲ್ಯ | ಸುರತರು | ಭಕ್ತಜನಂ ವಿ.ವಿ.ರು
ಗೋಪತಿ | ವಾಹನ ವಿ.ವಿ
ನಾ ಪರ್ವ | ತೀಶವಿ ವಿ.ವಿ
ರೂಪಾಕ್ಷ | ನಕ್ಷಯ | ಶಾಶ್ವತರಂ ವಿ.ವಿ.ರು

ಇಲ್ಲಿಯ ಎಲ್ಲ ಪದ್ಯಗಳೂ ನಿಶ್ಚಿತವಾಗಿಯೂ ಷಟ್ಪದಗಳೇ ಆಗಿವೆ. ಅವುಗಳನ್ನು ಸಂಸ್ಕರಿಸುವಾಗ ಅಭಿಪ್ರಾಯ ಭೇದಗಳಿದ್ದರೂ ಶಾಸನದ ಮೂಲಪಾಠವನ್ನು ಅಲ್ಲಿಯೇ ಕೊಟ್ಟಿರುವುದರಿಂದ ಅಭ್ಯಾಸಿಗಳು ಎರಡನ್ನೂ ಹೋಲಿಸಿ ವಿಚಾರ ಮಾಡಲು ಅವಕಾಶವಿದೆ. ಇಲ್ಲಿಯ ಷಟ್ಪದಗಳು ವಿ+ವಿ | ವಿ+ವಿ | ವಿ+ವಿ+ರು || ಇದರಂತೆ ಉತ್ತರಾರ್ಧ - ಎಂಬ ಲಕ್ಷಣದ ಷಟ್ಪದಗಳಾಗಿವೆ. ಕೆಲವೆಡೆ ತೀರ ವಿರಳವಾಗಿ ವಿಷ್ಣುವಿಗೆ ಬದಲು ಬ್ರಹ್ಮ ಬಂದಿದೆ. ಉದಾಹರಣೆಗೆ ೧೬ನೇ ಪದ್ಯದ ೨ನೇ ಸಾಲು ನೋಡಿ 'ತುರುಗ(ಸು)' ಅದರಂತೆ ವಿಷ್ಣುಗಣದ ಜಾಗದಲ್ಲಿ ೫ ಮಾತ್ರೆಯ ಮಾತ್ರಾಗಣಗಳು ಬಂದಿರುವುದು ಇನ್ನೂ ಸ್ವಾರಸ್ಯದ ಸಂಗತಿಯಾಗಿದೆ. ಉದಾಹರಣೆಗೆ ಪದ್ಯ ೧೫ರ 'ಅಮೃತಮುಂ', ಪದ್ಯ ೧೯ರ 'ಕಂಚುಳಿಕೆ'ಗಳಲ್ಲಿ ೫ ಮಾತ್ರೆಯ ಗಣಗಳು ಬಂದಿರುವುದನ್ನೂ ಗಮನಿಸಬೇಕು. ಹೀಗೆ, ಅಮೃತಮಥನ ಪುರಾಣವು ಛಂದಸ್ಸಿನ ದೃಷ್ಟಿಯಿಂದ ಅಂಶಮಟ್ಟುಗಳು ಮಾತ್ರಾಮಟ್ಟುಗಳ ಕಡೆಗೆ ತಿರುಗುವ ಸಂಕ್ರಮಣ ಕಾಲದ ಸ್ಥಿತಿಗೆ ಕಾರಣವಾಗಿದೆ. ಈ ದೃಷ್ಟಿಯಿಂದ ಇದು ಮಹತ್ವದ ದಾಖಲೆ ಯಾಗಿದೆ.

ಕಲುಬುರ್ಗಿ ಅವರು ತುಂಬ ಶ್ರಮಪಟ್ಟು, ತಾಮ್ರಶಾಸನ ಪಾಠವನ್ನು ಸಂಸ್ಕರಿಸಿದ್ದಾರೆ, ನಿಜ. ಇನ್ನೂ ಸ್ವಲ್ಪ ಶ್ರಮಪಟ್ಟು ಪದ್ಯಗಳನ್ನು ಗಣ ವಿಂಗಡಿಸಿ ಅವುಗಳ ಸ್ವರೂಪ, ಮಹತ್ವ, ಅನನ್ಯತೆ ಹಾಗೂ ಆ ಕಾಲದಲ್ಲಿ ಅಂತಹ ಷಟ್ಪದ ಕಾವ್ಯಗಳನ್ನು ಕಥಕರು ಹಾಡುತ್ತಿದ್ದರೆ? ಈ ಅಂಶಗಳ ಬಗ್ಗೆ ಅವರು ಸ್ಪಷ್ಟನೆ ಕೊಟ್ಟು, ವಿಸ್ತಾರವಾಗಿ ವಿವೇಚಿಸ ಬೇಕಾಗಿತ್ತು. ಕನ್ನಡ ಸಾಹಿತ್ಯದ ಅಧ್ಯಯನದ ದೃಷ್ಟಿಯಿಂದ ಪಂಪನ ತಮ್ಮ ಜಿನವಲ್ಲಭನ ಕುರಿಕ್ಯಾಲ ಶಾಸನದ ಶೋಧ (೧೯೬೮), ಸೊಲ್ಲಾಪುರದ ವಿವಾಹ ಪುರಾಣ ಶಾಸನದ ಶೋಧ (೧೯೮೮) ಬಳಿಕ ಇಷ್ಟು ಮಹತ್ವದ ಶಾಸನ ಲಭ್ಯವಾಗಿರಲಿಲ್ಲ. ಕಲಬುರ್ಗಿ ಅವರು ತಾವು ಶೋಧಿಸಿದ ಷಟ್ಪದ ಪಾಠವನ್ನು ವಿಶ್ಲೇಷಿಸಿದ್ದರೆ ಆ ಲೇಖನಕ್ಕೆ ಇನ್ನಷ್ಟು ಪುಷ್ಟಿ ಬರುತ್ತಿತ್ತು. ಇರಲಿ, ಹೆಚ್ಚಿನ ಅಭ್ಯಾಸಕ್ಕೆ ಶುದ್ಧಪಾಠವನ್ನು ಒದಗಿಸಿಕೊಡುವುದು ಕಲಬುರ್ಗಿ ಅವರ ಉದ್ದೇಶವಾಗಿದೆ ಮತ್ತು ಆ ಉದ್ದೇಶದಲ್ಲಿ ಅವರು ಸಾರ್ಥಕತೆಯನ್ನು ಪಡೆದಿದ್ದಾರೆ. ಶಾಸನ, ಗ್ರಂಥಸಂಪಾದನೆ ಮತ್ತು ಛಂದಸ್ಸು ಇವುಗಳ ಬಗ್ಗೆ ಆಸಕ್ತಿ ಇರುವವರು ಅತ್ಯವಶ್ಯವಾಗಿ ಗಮನಿಸಬೇಕಾದ ಲೇಖನವಿದು.

ಶಾಸನ ಛಂದಸ್ಸು, ಶಾಸನಗಳಲ್ಲಿ ಭಾಮಿನಿ, ಶಾಸನಗಳಲ್ಲಿ ಇನ್ನಷ್ಟು ಅಂಶವೃತ್ತ-ಮಾತ್ರಾವೃತ್ತಗಳು ಎಂಬ ಲೇಖನಗಳ ಹೆಸರೇ ಹೇಳುವಂತೆ ಶಾಸನಗಳಲ್ಲಿ ಉಕ್ತವಾದ ಛಂದೋರೂಪಗಳನ್ನು ಗುರುತಿಸಿ ಅವುಗಳ ಸ್ವರೂಪ ವಿವೇಚಿಸುವುದಾಗಿದೆ. ಶಾಸನಗಳ ಛಂದಸ್ಸಿನ ಅಧ್ಯಯನದ ಜಟಿಲವಾದುದು. ಶಾಸನ ಪದ್ಯಗಳು ಗದ್ಯದಂತೆ ಸಾಲುಗಳಲ್ಲಿ

ಬರೆಯಲಾಗಿರುತ್ತದೆ. ಜೊತೆಗೆ ಭಾಷಾದೋಷ, ಪಾಠಗಳ ಸವಕಳಿ ಇತ್ಯಾದಿಗಳನ್ನು ಪರಿಷ್ಕರಿಸಿ ಅವುಗಳ ಛಂದಸ್ಸನ್ನು ಗುರುತಿಸುವುದು ತುಂಬ ಕಷ್ಟದ ಕೆಲಸ. ಕಲಬುರ್ಗಿ ಅವರು ಶಾಸನ ಪಾಠಗಳನ್ನು ಸಂಸ್ಕರಿಸುವಲ್ಲಿ ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ.

ಸುಮಾರು ೯-೧೧ನೇ ಶತಮಾನದ ಈಚೆಗೀನ ಶಾಸನಗಳಲ್ಲಿ ವರ್ಣವೃತ್ತಗಳ ಅದರಲ್ಲಿಯೂ ಖ್ಯಾತ ಕರ್ಣಾಟಕಗಳ ಬಳಕೆ ಹೆಚ್ಚು. ಅದಕ್ಕೆ ಕಾರಣವೂ ಸ್ಪಷ್ಟವಿದೆ. ಆ ಕಾಲದಲ್ಲಿ ಚಂಪೂಕಾವ್ಯಗಳು ಕನ್ನಡದಲ್ಲಿ ಸುದೃಢವಾಗಿ ನೆಲೆಗೊಂಡು ತನ್ನ ಪ್ರಭಾವವನ್ನು ಶಾಸನ ಸಾಹಿತ್ಯದ ಮೇಲೆ ಬೀರತೊಡಗಿದುದರ ಫಲವೆಂದು ತೋರುತ್ತದೆ.

ವರ್ಣಛಂದಸ್ಸಿಗೆ ಹೋಲಿಸಿದರೆ ಮಾತ್ರಾ ಛಂದಸ್ಸಿನ ಮಟ್ಟುಗಳು ಶಾಸನಗಳಲ್ಲಿ ಕಡಮೆಯೇ. ಶಾಸನ ಪದ್ಯರಾಶಿಯಲ್ಲಿ ಮಾತ್ರಾ ಛಂದಸ್ಸಿನ ಕಂದದ ಬಳಕೆ ಪ್ರಾಯಃ ಹೆಚ್ಚು. ಅದರ ಜಾಯಮಾನ ಕನ್ನಡದ ರಚನೆಗೆ ಹೊಂದುತ್ತದೆ. ಕಲಬುರ್ಗಿ ಅವರು ಶಿವಮೊಗ್ಗ ಜಿಲ್ಲೆಯ 'ಬಳ್ಳಿಗಾವಿ ಶಾಸನ'(೧೧೫೯)ವನ್ನು ವಿಶ್ಲೇಷಿಸಿದ್ದಾರೆ. ಅದರ ವಿನ್ಯಾಸ ಛಂದಸ್ಸಿನ ನಿಯಮ ಸಾಧಾರಣವಾಗಿ ಪಾಲಿಸಿದೆ. (೪x೩ ಮಾತ್ರೆಯ ಗಣವಿನ್ಯಾಸ). ಆದರೆ ವಿರಳವಾಗಿ ಗಣ ಮತ್ತು ಪ್ರಾಸ ನಿಯಮಗಳಲ್ಲಿ ಭಂಗ ತಲೆದೋರಿರುವಂತೆ ತೋರುತ್ತದೆ. ಶಾಸನಗಳಲ್ಲಿ ರಗಳೆ ಮಟ್ಟುವಿನ ಬಳಕೆ ಸಹಿತ ಕಡಮೆಯೇ. ಐದು ಶಾಸನಗಳಲ್ಲಿ ರಗಳೆಯ ಉಲ್ಲೇಖವಿದೆ. ಆ ಎಲ್ಲ ಶಾಸನಗಳೂ ಸಹಿತ ಬಳ್ಳಾರಿಯ ಆಂಧ್ರ ಗಡಿಪ್ರದೇಶಕ್ಕೆ ಅಂಟಿ ಕೊಂಡಿವೆ. ಆ ಪ್ರದೇಶದ ಮಹಾಕವಿ ಹರಿಹರನ ಪ್ರಭಾವ ಆ ಶಾಸನಗಳ ಮೇಲೆ ಆಗಿರ ಬಹುದು! ಕೊಪ್ಪಳ ಶಾಸನವೊಂದರಲ್ಲಿ (೧೧೦೦) ಲಲಿತ ರಗಳೆಯ ಪಾಠವನ್ನು ಗುರುತಿಸಿ ದ್ದಾರೆ. ಈ ಶಾಸನವು ಹರಿಹರನಿಗಿಂತ ಪ್ರಾಚೀನವಾದುದು ಎಂಬುದನ್ನು ಗಮನಿಸಬೇಕು.

ಕನ್ನಡ ಸಾಹಿತ್ಯದಲ್ಲಿ ಮಾತ್ರಾಷಟ್ಪದಿಯ ಸಾಹಿತ್ಯವು ಲೀಲಾಜಾಲವಾಗಿ ವಿಹರಿಸಿದೆ. ಆದರೆ ಶಾಸನಗಳಲ್ಲಿ ಅವುಗಳ ಬಳಕೆ ತುಂಬ ಕಡಮೆ. ಕಲಬುರ್ಗಿಯವರು ವಿಜಯಪುರ ಜಿಲ್ಲೆಯ ಯಾಳವಾರ ಶಾಸನ(೧೫೫೭)ದಲ್ಲಿ ಮಾತ್ರಾಘಟಿತ ಭಾಮಿನಿಲಯವನ್ನು ಹಾಗೂ ರಾಯಚೂರು ಜಿಲ್ಲೆಯ ದೇವದುರ್ಗ ಶಾಸನದಲ್ಲಿ (೧೬೯೦) ಮಾತ್ರಾಘಟಿತ ಮೂರು ವಾರ್ಧಕ ಷಟ್ಪದಿಗಳನ್ನೂ ಗುರುತಿಸಿದ್ದಾರೆ.

ಶಾಸನಗಳಲ್ಲಿ ಅಕ್ಷರ ಛಂದಸ್ಸನ್ನು ಹೊರತುಪಡಿಸಿದರೆ ಅತಿಹೆಚ್ಚು ಸಿಗುವ ಮಟ್ಟುಗಳು ಅಂಶವೃತ್ತಗಳು. ಭಾಷೆ, ಛಂದಸ್ಸಿನ ಬಳಕೆಯಲ್ಲಿ ಶಾಸನ ಕವಿ ದೇಸಿಗೆ ಒಲಿದಂತೆ ಕಾಣುತ್ತದೆ. ಕಲಬುರ್ಗಿ ಅವರು ಹಲವಾರು ಶಾಸನಗಳನ್ನು ಪರಿಶೀಲಿಸಿ ಏಳೆ, ತ್ರಿಪದಿ (ಒಟ್ಟು ೧೨ ಶಾಸನಗಳಲ್ಲಿ ೩೪ ತ್ರಿಪದಿಗಳು), ಪಿರಿಯಕ್ಕರ (ಒಟ್ಟು ೧೬ ಶಾಸನಗಳಲ್ಲಿ ೧೮ ಪಿರಿಯಕ್ಕರ ಗಳು), ಮೂಲಷಟ್ಪದಿ (ಒಟ್ಟು ೪೭ ೧/೨ ಷಟ್ಪದಗಳು), ಉತ್ಸಾಹ (ಒಟ್ಟು ೧) ಇವುಗಳ ಛಂದಸ್ಸಿನ ಸಾಮಾನ್ಯ ಸ್ವರೂಪ ಹೇಳಿದ್ದಾರೆ. ಪ್ರತಿಯೊಂದು ಮಟ್ಟುಗಳ ಬಳಕೆಯ ಶಾಸನಗಳ ಕಾಲಾನುಕ್ರಮಣಿಕೆಯನ್ನು, ಸಂಖ್ಯೆಗಳನ್ನು ಕೊಟ್ಟಿರುವುದು ಮೆಚ್ಚಬೇಕಾದ ಸಂಗತಿ. ಆಯಾ ಮಟ್ಟುಗಳ ಛಂದಸ್ಸಿನ ಗಣಗಳಿಗೆ ಪರ್ಯಾಯಗಣಗಳು ಬಂದಿವೆ. ಅದು ಸಹಜ. ಶಾಸನಗಳಲ್ಲಿ

ಉತ್ಸಾಹದ ಬಳಿಕೆ ವಿರಳ. ಉತ್ಸಾಹಕ್ಕೆ ಕಲಬುರ್ಗಿ ಅವರು ಕೊಟ್ಟ ಪಾಠ 'ಊರ ಕಡೆಯ ತೋಜೆಯ ತಡಿಯ ಕರಿಯ ಕಲ್ಲಮೋಜಿದಿಂ | ಪುತ್ತೂರ ಪೊಲೆಯರಿಪ್ಪ | ಎಂದು ಮೊದಲಾಗುತ್ತದೆ. ಆದರೆ ೨ ಪಾದದಲ್ಲಿ ಪ್ರಾಸವೈಚಿತ್ರ್ಯ ಮತ್ತು ಗಣವಿನ್ಯಾಸ ತಜ್ಞರ ಗಮನ ಸೆಳೆದಿದೆ. ಅವರ ಇನ್ನೊಂದು ಮಹತ್ವದ ಶೋಧವೆಂದರೆ ಶಾಸನಗಳಲ್ಲಿ ಉಕ್ತವಾದ ಸಾಂಗತ್ಯವನ್ನು ಗುರುತಿಸಿದ್ದು. ರಾಯಚೂರು ಜಿಲ್ಲೆಯ ದೇವದುರ್ಗ ಶಾಸನ (೧೪೯೦)ದಲ್ಲಿ ೫ ಸಾಂಗತ್ಯ ಪದ್ಯಗಳಿವೆ. ಆ ಕಾಲಘಟ್ಟದಲ್ಲಿ ಮಾತ್ರಾಲಯದಿಂದ ನಡೆಯುತ್ತಿದ್ದ ಕೆಲವು ಮಟ್ಟುಗಳು ಅಂಶಲಯಕ್ಕೆ ತಿರುಗಿದುವು. ಅಂಶಲಯದಲ್ಲಿ ಭಾಷೆ ಒಂದು ನೆಪ. ಅದನ್ನು ಉಚ್ಚರಿಸುವ ರೀತಿಯಲ್ಲಿ ಸ್ವಾತಂತ್ರ್ಯ ಸಾಕಷ್ಟು ಇರುತ್ತದೆ. ವಾಕ್ ಸಂಪ್ರದಾಯದಲ್ಲಿ ಉಳಿದು ಬರುವಂತಹದು ಅಂಶಛಂದಸ್ಸು. ಆ ಕಾಲಘಟ್ಟದ ಸಂದರ್ಭದಲ್ಲಿ ಷಟ್ಪದಿ ಸಾಹಿತ್ಯದ ಕಾವ್ಯರಚನೆ ಕಡಮೆಯಾಗುತ್ತ ದೇಸಿ ಛಂದಸ್ಸಿನ ಸಾಂಗತ್ಯ ಮಟ್ಟುವಿನ ಬಳಿಕೆ ಪ್ರೌಢವಾಗಿತ್ತು ಎಂಬುದರ ಸೂಚನೆಯೂ ಆ ಶಾಸನದ ಮೂಲಕ ತಿಳಿದುಬರುತ್ತದೆ ಎಂಬುದು ತುಂಬ ಮಹತ್ವದ ಸಂಗತಿಯಾಗಿದೆ.

ಶಾಸನಗಳಲ್ಲಿ ಉಕ್ತವಾದ ಛಂದೋಬಂಧಗಳ ವೈಲಕ್ಷಣಗಳನ್ನು ಕುರಿತು ಹೇಳುವುದಾದರೆ, ವರ್ಣವೃತ್ತಗಳ ಪಾದದ ಕೊನೆಗೆ ಹಾಗೂ ಕಂದದ ದೀರ್ಘಪಾದದ ಕೊನೆಗೆ ಗುರು ಅವಶ್ಯವಾಗಿ ಬರಬೇಕು. ಆದರೆ ಲಘು ಬಂದಿದೆ. ವ್ಯಂಜನಾಂತ ಪದಗಳು ಸ್ವರಾಂತಗಳಾಗಿವೆ. ಅಂತಹುಗಳನ್ನು ವ್ಯಂಜನಾಂತವೆಂದು ಭಾವಿಸದಿದ್ದರೆ ಅರ್ಥಕ್ಕೆ ಬಾಧೆ ಬರುತ್ತದೆ. ಕರ್ಣಾಟಕ ವಿಷಯ ಜಾತಿಗಳಲ್ಲಿ ಬ್ರಹ್ಮ, ವಿಷ್ಣು ಮತ್ತು ರುದ್ರಗಣಗಳು ಆಗಾಗ ಪಲ್ಲಟಗೊಳ್ಳುತ್ತವೆ. ಅದು ಸಹಜ. ಆದರೆ 'U –' ಈ ಗಣದ ಪ್ರಯೋಗ ಅಲ್ಲಲ್ಲಿ ಬಂದಿದೆ. ಅದು ಸಾಧುವಲ್ಲ. ಕೆಲವೆಡೆ ಛಂದಸ್ಸಿನ ಸೌಕರ್ಯಕ್ಕೆ ಶಬ್ದಗಳು ವಿರೂಪವಾಗಿವೆ. ಅಕ್ಷರ ವೃತ್ತಗಳಲ್ಲಿ ಇರಬೇಕಾದ ನಾಲ್ಕು ಪಾದಗಳು (ಸಮವೃತ್ತಗಳು) ಕೆಲವು ಶಾಸನಗಳಲ್ಲಿ ಪಂಚಪಾದಗಳಾಗಿ ಮಾರ್ಪಟ್ಟಿವೆ. ಪದ್ಯಜಾತಿಗಳಿಗೆ ಆಯಾ ಛಂದಸ್ಸಿನ ಹೆಸರೇ ಇಟ್ಟಿರುವುದು ಇನ್ನೊಂದು ವಿಶೇಷ. ಚಂಪಕ ಮಾಲೆಗೆ ಚಿತ್ರಲತೆ, ಉತ್ಪಲಮಾಲೆಗೆ ಕಾಮಲತಿಕಾವೃತ್ತ ಇತ್ಯಾದಿ. ಕನ್ನಡ ಕಾವ್ಯಗಳಲ್ಲಿ ಆದಿಪ್ರಾಸ ಕಡ್ಡಾಯ. ಶಾಸನಗಳಲ್ಲಿ ಆ ನಿಯಮ ಕೆಲವೆಡೆ ಪಲ್ಲಟವಾಗಿದೆ. ಇಂತಹ ಕೆಲವು ವೈಲಕ್ಷಣಗಳು ಶಾಸನಗಳಲ್ಲಿ ಕಂಡುಬರುತ್ತವೆ.

ಇಂತಹ ಲೇಖನಗಳಲ್ಲಿ ಕಲಬುರ್ಗಿ ಅವರು ಕೆಲವೆಡೆಗಳಲ್ಲಿ ಅಪೂರ್ಣ ಶಾಸನಪದ್ಯಗಳನ್ನು ಊಹೆಯಿಂದ ತುಂಬಿಕೊಳ್ಳುವ, ಹೀಗೆ ತುಂಬಿಕೊಂಡ ಪದ್ಯಗಳನ್ನು ಶ್ರಮದಿಂದ ಪರಿಷ್ಕರಿಸುವ ಮೂಲಕ ಛಂದಶ್ಶಾಸ್ತ್ರದ ಜೊತೆಗೆ ಗ್ರಂಥಸಂಪಾದನಶಾಸ್ತ್ರದ ಸೂಕ್ಷ್ಮಪ್ರಜ್ಞೆಯನ್ನು ಮೆರೆದಿದ್ದಾರೆ. ಇದರಿಂದ ಅವರ ಅಭ್ಯಾಸದ ಗಾಢತೆ ಇನ್ನೂ ಸ್ಪಷ್ಟವಾಗುತ್ತದೆ. ಅಲ್ಲಲ್ಲಿ ಪಾಠಗಳ ಅರ್ಥಛಾಯೆ ಕುರಿತು ತೋರಿದ ಸಂಗತಿಗಳ ಸೂಕ್ಷ್ಮವಾದ ವಿಮರ್ಶೆ ನಡೆದಿರುವುದು ಮೆಚ್ಚತಕ್ಕದಾಗಿದೆ. ಹಾಗೂ ಆ ಕುರಿತು ಅವರ ಹೊಸಬಗೆಯ ಸಲಹೆಗಳು

ಅರ್ಥಪೂರ್ಣವಾಗಿವೆ. ಶಾಸನಛಂದಸ್ಸು ಕುರಿತು ಉದ್ದಕ್ಕೂ ಅವರು ಕೊಡುವ ಸೂಚನೆಗಳ ಹಿಂದೆ ಗಾಢಚಿಂತನೆಯಿದೆ ಎಂಬುದನ್ನು ಗಮನಿಸಬೇಕು.

ಕಲಬುರ್ಗಿ ಅವರ ಈ ಲೇಖನಗಳು ವಿವರಣಾತ್ಮಕ ಮಾದರಿಯದಾಗಿದ್ದರೂ (Descriptive Approach) ಶಾಸನ ಛಂದಸ್ಸಿನ ಬಗ್ಗೆ ಗಂಭೀರವಾಗಿ ಅಭ್ಯಾಸ ಮಾಡುವವರಿಗೆ ಪ್ರವೇಶಿಕೆಯಾಗಿ ಮಾಹಿತಿ ಮತ್ತು ಸೈದ್ಧಾಂತಿಕ ಚೌಕಟ್ಟನ್ನು ಕೊಡುತ್ತವೆಂಬುದನ್ನು ಗಮನಿಸಬೇಕು.

ಈವರೆಗೆ ಅನೇಕ ವಿದ್ವಾಂಸರು ಶಾಸನಗಳಲ್ಲಿ ಅಕ್ಷರ, ಅಂಶಛಂದಸ್ಸಿನ ಮಟ್ಟುಗಳನ್ನು ಹುಡುಕಿ ಅವುಗಳ ಸ್ವರೂಪ ಕುರಿತು ವಿವೇಚಿಸಿದ್ದರು. ಆ ಪ್ರಯತ್ನವನ್ನು ಕಲಬುರ್ಗಿ ಅವರು ಹೊಸ ಆಲೋಚನೆಗಳ ನೆಲೆಯಲ್ಲಿ ಸಮರ್ಥವಾಗಿ ಮುಂದುವರಿಸಿ ಶಾಸನಗಳಲ್ಲಿ ಉಕ್ತವಾದ ಇನ್ನೂ ಹಲವು ಬಂಧಗಳನ್ನು ಗುರುತಿಸಿ, ವಿವೇಚಿಸಿದ್ದಾರೆ. ಆ ಮೂಲಕ ಶಾಸನ ಛಂದಸ್ಸಿನ ಪರಿಧಿಯನ್ನು ವಿಸ್ತರಿಸಿದ್ದಾರೆ. ಅಷ್ಟೇ ಅಲ್ಲ ಕಲಬುರ್ಗಿ ಅವರು ಈ ನಿಟ್ಟಿನಲ್ಲಿ ಪೂರ್ವ ಪಂಡಿತರಿಗಿಂತ ಹೊಸ ಅಂಶಗಳನ್ನು ಗುರುತಿಸಿದ್ದಾರೆ. ಶಾಸನಗಳಲ್ಲಿ ಉಕ್ತವಾದ ಮಾತ್ರಾಗಣ ಘಟಿತ ಭಾಮಿನಿ ಮತ್ತು ವಾರ್ಧಕ ಷಟ್ಪದಿಗಳನ್ನು ಮೊದಲು ಗುರುತಿಸಿದವರು ಕಲಬುರ್ಗಿ ಅವರು. ಅದರಂತೆ ಶಾಸನೋಕ್ತ ಸಾಂಗತ್ಯವನ್ನು ಗುರುತಿಸಿದ ಕೀರ್ತಿಯೂ ಕಲಬುರ್ಗಿ ಅವರಿಗೆ ಸಲ್ಲುತ್ತದೆ. ಭೀಮಸಮುದ್ರ ಶಾಸನದಲ್ಲಿ (೧೦೬೭) ದಾಖಲಾದ ಷಟ್ಪದವೇ ಶಾಸನದಲ್ಲಿ ಬಳಕೆಯಾದ ಮೊದಲ ಷಟ್ಪದ ಎಂದು ಹೇಳಲಾಗು ತ್ತಿತ್ತು. ಕಲಬುರ್ಗಿ ಅವರು ಹಾವೇರಿ ಜಿಲ್ಲೆಯ ಆಡೂರು ಶಾಸನ(೧೦೩೪)ದಲ್ಲಿ ಷಟ್ಪದ ವೊಂದನ್ನು ಗುರುತಿಸಿ, ಕಾಲ ಮತ್ತು ರಚನೆ ದೃಷ್ಟಿಯಿಂದ ವಿಶ್ಲೇಷಿಸಿ, ಶಾಸನದಲ್ಲಿ ಬಳಕೆಯಾದ ಮೊದಲ ಷಟ್ಪದ ಆಡೂರು ಶಾಸನದ್ದು ಎಂಬ ನಿರ್ಣಯಕ್ಕೆ ಬಂದಿರುವುದು ಸ್ವಾಗತಾರ್ಹವಾದುದು. ಅದನ್ನು ಗುರುತಿಸಿದ ಶ್ರೇಯಸ್ಸು ಕಲಬುರ್ಗಿ ಅವರಿಗೆ ಸಲ್ಲಬೇಕು. ಅವರ ಅಧ್ಯಯನದ ನಿರಂತರತೆ, ಸಂಶೋಧನೆಯ ಪ್ರಗತಿ ಇದರಿಂದ ವೇದ್ಯವಾಗುತ್ತದೆ.

ಸೀತಾರಾಮ್ ಜಾಗೀರದಾರ್ ಅವರ ಛಂದಸ್ಸಿನ ವಿಷಯಕ್ಕೆ ಸಂಬಂಧಿಸಿದ ಸಂಪ್ರಬಂಧ ಗಳ ಸಂಕಲನ **'ಛಂದೋರಚನಾ ಸಂಶೋಧನೆಗಳು'**(೧೯೮೪) ಎಂಬ ಕೃತಿಗೆ ಬರೆದ ಮುನ್ನುಡಿಯು ಅಭ್ಯಾಸಪೂರ್ಣವಾಗಿದೆ. ಜಾಗೀರದಾರ್ ಅವರ ಬರೆಹಗಳನ್ನು ಪರಿಚಯಿಸಿ ಛಂದಸ್ಸಿನ ಬಗ್ಗೆ ಗಂಭೀರ ಚಿಂತನೆಯಲ್ಲಿ ಆಸಕ್ತರಾಗಿರುವವರು ಸ್ವಾಗತಿಸಬೇಕಾದ ಕೃತಿ ಯಾಗಿದೆ. ಇದೊಂದು ಉಪಯುಕ್ತ ಲೇಖನ ಸಂಕಲನವೆಂದು ಅಭಿಪ್ರಾಯಿಸಿದ್ದಾರೆ. 'ರಗಳೆಗೆ ಸಂಸ್ಕೃತ ಅಕ್ಷರ ವೃತ್ತಗಳೇ ಮೂಲ'ವೆಂಬ ಜಾಗೀರದಾರ್ ಅವರ ನಿಲುವನ್ನು ಕಲಬುರ್ಗಿ ಅವರು ಸಮರ್ಥಿಸಿದ್ದಾರೆ. ಆದರೆ ಆ ನಿಲುವು ಹೆಚ್ಚಿನ ಆಧಾರಗಳನ್ನು ಬಯಸುತ್ತದೆ. ಜಾಗೀರದಾರ್ ಅವರ ಕಾಣಿಕೆ ಇರುವುದು ಶಾಸನಗಳಲ್ಲಿ ಉಕ್ತವಾದ ಛಂದೋಬಂಧಗಳನ್ನು ಗುರುತಿಸಿ ಅವುಗಳ ಸ್ವರೂಪ ಹೇಳುವಲ್ಲಿ. ಕಲಬುರ್ಗಿ ಅವರು ಅದನ್ನು ಸರಿಯಾಗಿಯೇ ಗುರುತಿಸಿ, ಲೇಖಕರನ್ನು ಅಭಿನಂದಿಸಿದ್ದಾರೆ.

ಕಲಬುರ್ಗಿ ಅವರಿಗೆ ಪ್ರಾಚೀನ ಕಾವ್ಯ, ಶಾಸನಗಳ ಹಾಗೂ ಅರ್ವಾಚೀನ ಕಾವ್ಯ ಜನಪದ ಮಟ್ಟುಗಳ ಸ್ಪಷ್ಟ ಅರಿವೂ ಆಲೋಚಿಸುವ ಶಕ್ತಿಯೂ ಇದೆ. ಇದು ಅವರ ಅಧ್ಯಯನದ ವೈಶಿಷ್ಟ್ಯ. ಅದಕ್ಕೆ ಅವರ ಛಂದಸ್ಸಿನ ವ್ಯಾಸಂಗವೂ ಹೊರತಲ್ಲ. ಕಿವಿಯ ಮೇಲೆ ಬೀಳುವ ಲಯದಿಂದ ಕನ್ನಡದ ಅಂಶಗಣಗಳನ್ನು ಪರಿಷ್ಕರಿಸಿದ್ದು, ಗಣರಚನೆ, ಪಾದಗಳ ಸಂಖ್ಯೆ, ಪ್ರಮಾಣ ಮುಂತಾದ ಸಿದ್ಧಮಾದರಿಯ ಛಂದೋವಿಶ್ಲೇಷಣೆಯ ನಿಯಮಗಳನ್ನು ಮರುಪರಿಶೀಲನೆಗೆ ಒಳಪಡಿಸಿದುದು, ಛಂದಸ್ಸಿನ ತಜ್ಞರಿಗೆ ಶ್ರವಣ ಪ್ರಜ್ಞೆಯ ಅವಶ್ಯಕತೆಯನ್ನು ಮನವರಿಕೆ ಮಾಡಿಕೊಟ್ಟದ್ದು. ಆ ಮೂಲಕ ಕನ್ನಡ ಛಂದಸ್ಸಿನ ರಹಸ್ಯ ಭೇದಿಸಿದ್ದು ಇವು ಕಲಬುರ್ಗಿ ಅವರ ಬಹುಮುಖ್ಯ ಕೊಡುಗೆಗಳಾಗಿವೆ. ಶಾಸನ ಛಂದಸ್ಸಿನ ಅಧ್ಯಯನಕ್ಕೆ ಕಲಬುರ್ಗಿ ಅವರು ಕೊಟ್ಟಚಾಲನೆ ಅನನ್ಯವಾದುದು.

ಕಲಬುರ್ಗಿ ಅವರ ಛಂದಸ್ಸಿನ ಎಲ್ಲ ಬರಹಗಳಲ್ಲಿ ಹೊಸಮಾತುಗಳಿವೆ: ಹೊಸಸೂಚನೆಗಳಿವೆ. ಅವುಗಳ ಹಿಂದೆ ಗಾಢಚಿಂತನೆ, ತರ್ಕಬದ್ಧತೆ, ಗ್ರಾಹ್ಯವಾಗಬಲ್ಲ ನಿರ್ಣಯಗಳಿವೆ. ಕನ್ನಡದ ಲಯವಿನ್ಯಾಸ ಕ್ರಮ ಅರಿವಿಗೆ ಎಟಕುವಂತೆ ಮಾಡಲು ಕಲಬುರ್ಗಿ ಅವರು ಪ್ರಯತ್ನಿಸಿರುವುದು ಸ್ತುತ್ಯವಾದುದು. ಸಂಸ್ಕೃತ ಮತ್ತು ಪ್ರಾಕೃತ ಮಟ್ಟುಗಳಿಗಿಂತ ಭಿನ್ನವಾಗಿ ಕನ್ನಡದ್ದೇ ಆದ ಛಂದೋಲಯಗಳನ್ನು ಗುರುತಿಸುವುದು ಅವರ ಬರೆಹಗಳ ಹಿಂದಿರುವ ಆಶಯವಾಗಿದೆ. ಅದಕ್ಕಾಗಿ ಅವರು ಉದ್ದಕ್ಕೂ ವಾಚನಪಾತಳಿಯ ಆಂತರಿಕ ರಚನೆಗಿಂತ ಶ್ರವಣಪಾತಳಿಯ ಲಯ ಮತ್ತು ಅರ್ಥಕ್ಕೆ ಹೆಚ್ಚು ಒತ್ತುಕೊಟ್ಟಿದ್ದಾರೆ. ನಿಜಕ್ಕೂ ಕನ್ನಡ ಛಂದಸ್ಸಿನ ಅಧ್ಯಯನದಲ್ಲಿ ಮಾಡಬೇಕಾಗಿರುವ ಕೆಲಸ ಇದೇ. ಅದರಲ್ಲಿ ಕಲಬುರ್ಗಿ ಅವರು ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ. ಆ ಮೂಲಕ ಛಂದಸ್ಸಿನ ಬಗೆಗೆ ಓದುಗರ ಅರಿವಿನ ಎಲ್ಲೆಯನ್ನು ವಿಸ್ತರಿಸಿದ್ದಾರೆ. ಹೀಗಾಗಿ ಕಲಬುರ್ಗಿ ಅವರು ಕನ್ನಡ ಛಂದಸ್ಸಿನ ಗಣ್ಯಭಾಗವಾಗಿದ್ದಾರೆ.

ಭಾಗ - ೬

ಭಾಷೆ : ಶೈಲಿ ನಿರ್ವಚನ

೬೯

ಕಾವ್ಯಶೈಲಿ ಮತ್ತು ಛಂದಸ್ಸು

ಶೈಲಿಯ ಅಧ್ಯಯನ ಭಾಷಾಧ್ಯಯನದ ಒಂದು ಅಂಗ. ಸಾಮಾನ್ಯವಾಗಿ ಶೈಲಿಯೆಂದರೆ ಕೃತಿಕಾರನೊಬ್ಬನ ಅಭಿವ್ಯಕ್ತಿಯ ವೈಲಕ್ಷಣ. ಅದು ಪದ ಪ್ರಯೋಗ ವೈಶಿಷ್ಟ್ಯವಾಗಿರಬಹುದು. ಭಾವನೆಗಳ ಕ್ರಮಾನುಗತ ಅಭಿವ್ಯಕ್ತಿಯಾಗಿರಬಹುದು. ಒಂದು ಕೃತಿಯ ಸ್ವರೂಪವನ್ನು ಅರ್ಥಮಾಡಿಕೊಳ್ಳವಲ್ಲಿ ಶೈಲಿ ಪ್ರಮುಖ ಪಾತ್ರವಹಿಸುತ್ತದೆ. ಭಾವ, ಭಾವನೆಗಳು ಭಾಷೆಯ ನೆರವಿನಿಂದ ಹರಳುಗೊಂಡಾಗ, ಕಲ್ಪನೆ ಭಾಷಾರೂಪವನ್ನು ಪಡೆದಾಗ ಶೈಲಿ ವಿಕಾಸವಾಗುತ್ತದೆ. ಲೇಖಕನ ಮನೋಧರ್ಮ ಹಾಗೂ ಅವನು ಆರಿಸಿಕೊಳ್ಳುವ ವಸ್ತುವಿಗನುಗುಣವಾಗಿ ಶೈಲಿಯೂ ಬದಲಾಗುತ್ತದೆ. ಭಾಷೆಯ ಬಳಕೆಯನ್ನು ಗಮನಿಸಿ 'ಶೈಲಿ'ಯನ್ನು ಗುರುತಿಸುವುದುಂಟು. ಭಾಷಿಕನೊಬ್ಬ 'ಸಾಮುದಾಯಕವಾದ' ಒತ್ತಡಗಳಿಲ್ಲದಿದ್ದರೂ ತನ್ನ ಭಾಷಾ ಬಳಕೆಯಲ್ಲಿ ಮಾಡಿಕೊಳ್ಳುವ ನಿರ್ದಿಷ್ಟವಾದ, ನಿಯಮಿತವಾದ ಪಲ್ಲಟಗಳನ್ನು ಶೈಲಿ ಎಂದು ಗುರುತಿಸಲಾಗುತ್ತದೆ.[೧] ಕವಿ ಶೈಲಿ, ಕವಿಯ ಕೃತಿಯ ಭಾಷಿಕ ಸ್ವರೂಪವನ್ನು ನಿರ್ಧರಿಸುತ್ತದೆ. 'ಅನುಭವಗಳನ್ನು ಅವುಗಳ ಪರಿಣಾಮವಾದ ಭಾವ ತೀವ್ರತೆಯನ್ನು ಕಾವ್ಯವಾಗಿ ಪರಿವರ್ತಿಸಲು ಕವಿ ಭಾಷೆಯೊಡನೆ ನಡೆಸುತ 'ಹೋರಾಟ' ದಿಂದ ಅವನ ಶೈಲಿ ರೂಪುಗೊಳ್ಳುತ್ತದೆ'.[೨] ಅಂದರೆ ಕವಿಯ ಅನುಭವ ಮತ್ತು ಅಭಿವ್ಯಕ್ತಿಗಳ ಸಂಬಂಧದ ನೆಲೆಗಟ್ಟು ಮಾತ್ರ ಶೈಲಿಶಾಸ್ತ್ರದ ವ್ಯಾಪ್ತಿಯಲ್ಲಿ ಬರುತ್ತದೆ. ಅದಕ್ಕೆ ಸಾಂಸ್ಕೃತಿಕ ಒತ್ತಾಸೆ ಇರುತ್ತದೆ.

ಕಾವ್ಯಶೈಲಿಗೂ ಛಂದಸ್ಸಿಗೂ ಅವಿನಾಭಾವ ಸಂಬಂಧವಿದೆ. ಲಯದಲ್ಲಿ ಕಂಡುಬರುವ ಗಣದ ಯೋಜನೆ, ಲಯಕ್ಕೂ ಪ್ರಾಸಕ್ಕೂ ಯತಿಗೂ ಇರುವ ಸಂಬಂಧವನ್ನು ಗುರುತಿಸಲು ಶೈಲಿ ಅಧ್ಯಯನ ನೆರವು ನೀಡುತ್ತದೆ. ಹೊಸಗನ್ನಡ ಛಂದಸ್ಸು ಶೈಥಿಲ್ಯದ ಕಡೆಗೆ ಒಲಿಯುತ್ತದೆ. ಸ್ವರಗಳನ್ನು ಎಳೆದು ಉಚ್ಚರಿಸಲಿಕ್ಕೆ ಆಸ್ಪದವಿರುವ ಅಂಶ ಮತ್ತು ಮಾತ್ರಾಲಯವನ್ನ ವಲಂಬಿಸಿದ ಛಂದೋಲಯ ಅಷ್ಟೊಂದು ಬಂಧುರವಾಗದಿದ್ದರೂ ಮಾತ್ರೆಗಳಿಗೆ ಕಟ್ಟು

ಬಿದ್ದ ಪ್ರಾಕೃತ ಬಂಧಗಳಿಗಿಂತ ಗೇಯವಾದುದು. ಗಣದ ಸಂಯೋಜನೆಯ ದೃಷ್ಟಿಯಿಂದ ಹೊಸಗನ್ನಡ ಛಂದದ ಇನ್ನೊಂದು ವೈಶಿಷ್ಟ್ಯವೆಂದರೆ ಯಾವುದೇ ಕನ್ನಡ ಬಂಧದಲ್ಲಿ ಸೇರಿದ ಗಣಗಳು ಲಯದ ಬೆಳಕಿನಲ್ಲಿ ಸಹಜವಾಗಿ ಗಮನಕ್ಕೆ ಬರುತ್ತವೆ. ಹೊಸಗನ್ನಡ ಕವಿಗಳ ಕೆಲವು ಕವನಗಳನ್ನು ಅನುಲಕ್ಷಿಸಿ ಇಲ್ಲಿ ಚರ್ಚೆ ಬೆಳೆಸಲಾಗಿದೆ.

ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಕಾವ್ಯದ ವಸ್ತು, ಭಾಷೆಗೆ ಅನುಗುಣವಾಗಿ ಛಂದೋ ರೂಪಗಳಲ್ಲಿ ಬದಲಾವಣೆಯಾಗುತ್ತದೆ. ಕಂದ ವೃತ್ತಾದಿ ಸಾಂಪ್ರದಾಯಿಕ ಬಂಧಗಳು ಹೊಸಕವಿಗಳ ಭಾವಾಭಿವ್ಯಕ್ತಿಗೆ ಸಾಲದೆನಿಸಿದವು. ಇಂತಹ ಪ್ರಯೋಗಗಳಲ್ಲಿ ಮೊದಲು ಗಮನಿಸಿಬೇಕಾದ ಅಂಶವೆಂದರೆ ಆದಿಪ್ರಾಸದ ನಿರ್ಬಂಧವನ್ನು ಮುರಿದುದು. ಛಂದಸ್ಸನ್ನು, ವ್ಯಾಕರಣವನ್ನು ಕೂಡ ತನಗೆ ಬೇಕಾದಂತೆ ಮಾರ್ಪಡಿಸಿಯೂ ಸೇರ್ಪಡಿಸಿಕೊಳ್ಳಲಿಕ್ಕೆ ಕವಿಗೆ ಅಧಿಕಾರವಿದೆ. ಇದರ ಫಲವಾಗಿ ಆದಿ ಪ್ರಾಸದ ಬಂಧನ ಕಳಚಿತು. ಗೋವಿಂದ ಪೈಯವರ ಈ ಪ್ರಯೋಗ ಮುಂದಿನವರೆಗೆ ಹೆದ್ದಾರಿಯಾಯಿತು. ಮುಂದೆ ಹಲವಾರು ನೂತನ ಬಂಧಗಳು ರಚಿತವಾಗುವುದಕ್ಕೆ ಸಹಾಯಕವಾಯಿತು.

> ಪ್ರತಿಮಾಯೋಗದೆ ನಿಂದೆಯೊಂದು ವರುಷಂ । ನೀನಂತೆ ಕೈಲಾಸದೊಳ್
> ವರುಷಂ ಸಂದುದೆನಿತ್ತೊ ಲೆಕ್ಕಮಿಹುದೇ । ನೀನಿಲ್ಲಿ ನಿಂದಂದಿನಿಂ?
> ಇನಿತುಂ ಸಾಲದೆ? ನಿಂದು ನಿಂದು ಬಳಲಂ । ನೀನೇತ ಕಿನ್ನಾಂತ ಪೈ?
> ಲವಕಾಲಂ ಕೊಳಲಾಗದೇನೊಡೆಯ ನೀ । ವಿಶ್ರಾಂತಿಯಂ? ಗೊಮ್ಮಟಾ

(ಗೋವಿಂದ ಪೈ-ಶ್ರೀ ಗೊಮ್ಮಟ ಜಿನಸ್ತುತಿ, ಪು. ೨೧)

ಹಾಡು । ವಿರೇ । ನೆಮ್ಮ । ಹಾಡ	೩ ೩ ೩ ೩
ಕಿರಿಚ । ಲಿಂತು । ಬರಿಯೆ?	೩ ೩ ೩
ಹಿರಿಯ । ಮರುಳು । ಕೊಲದೆ । ಸೇಡ	೩ ೩ ೩ ೩
ಕಿರಿಯ । ಗರಿಯ । ಬರಿಯೆ?	೩ ೩ ೩
ಜರೆದು । ದಿಂತು । ತೆರೆಯ । ದಳಂ	೩ ೩ ೩ ೩
ಪಲ್ಲ । ವಿಸುವ । ಝಿಲ್ಲಿಗಳಂ	೩ ೩ ೩ ೩
ಮೊದಲ । ಮುಗಿ । ಲ್ಗರೆಯ	೩ ೩ ೩

(ಗೋವಿಂದ ಪೈ-ಗಿಳಿವಿಂಡು)

ವೃತ್ತ ಮತ್ತು ಭಾವಗೀತೆ ರಚನೆಯಲ್ಲಿ ಪ್ರಾಸ, ಯತಿ ಎರಡರ ನಿಯಮವನ್ನೂ ಮೀರಿ, ಪೈಯವರು ಹಿಂದಿನವರಿಗಿಂತ ಒಂದು ಹೆಜ್ಜೆ ಮುಂದೆ ಹೋದರೆಂದು ಇದರಿಂದ ಹೇಳಬಹುದು. ಭಾವಕ್ಕೆ ತಕ್ಕಂತೆ ಬಂಧಗಳನ್ನು ಹಿಗ್ಗಿಸುವ ಪ್ರಯತ್ನವನ್ನೂ ಅದರಲ್ಲಿ ಕವಿ ಸಫಲವಾಗಿರುವುದನ್ನೂ ಇಲ್ಲಿ ಕಾಣುತ್ತೇವೆ. ಬಂಧದಲ್ಲಿ ಶೈಥಿಲ್ಯ ಮತ್ತಷ್ಟು ಹೆಚ್ಚಿದೆ.

ಸುನೀತ (ಸಾನೆಟ್) ಬಂಧವನ್ನು ರೂಪಿಸಿಕೊಂಡು, ಕನ್ನಡದಲ್ಲಿ ಮೊದಲ ಬಾರಿಗೆ ಬಳಕೆಗೆ ತಂದುದು ಮಾತ್ರ ಛಂದಸ್ಸಿನ ಕ್ಷೇತ್ರದಲ್ಲಿ ಪೈಯವರು ಮಾಡಿದ ವಿಶಿಷ್ಟ ಪ್ರಯೋಗ. ಪಾದಾಂತ ಯತಿಯನ್ನು ನಿವಾರಿಸಿ, ಭಾವಾನುಸಾರಿ ಯತಿಯನ್ನು ತರುವುದು, ಇಂತಹ ಪ್ರಯೋಗಗಳನ್ನೆಲ್ಲ ಅವರು ಮಾಡಿದರು.

ಪೈ ಅವರು ಪ್ರಾಸ ವಿನ್ಯಾಸದಲ್ಲಿ, ಯತಿ ಪಾಲನೆಯಲ್ಲಿ, ಲಯ ವಿನ್ಯಾಸದಲ್ಲಿ ಅವರ ವಿಶಿಷ್ಟ ಮುದ್ರೆ ಬಿದ್ದೇ ಇರುತ್ತದೆ. ಆದಿಪ್ರಾಸವನ್ನು ಬಿಡುವುದರ ಮೂಲಕವಂತೂ ಕನ್ನಡ ಛಂದಸ್ಸಿನ ಇತಿಹಾಸದಲ್ಲಿ ಅವರು ಒಂದು ಹೊಸ ಅಧ್ಯಾಯವನ್ನೇ ತೆರೆದಿದ್ದಾರೆ. ಹಾಗೆ ಆದಿಪ್ರಾಸವನ್ನು ಬಿಟ್ಟರೆಂದ ಮಾತ್ರಕ್ಕೆ ಅವರು ಪ್ರಾಸವನ್ನೇ ಸಂಪೂರ್ಣವಾಗಿ ಬಿಟ್ಟರೆಂದೇನೂ ಹೇಳುವಂತಿಲ್ಲ. ಆದಿಪ್ರಾಸಕ್ಕೆ ಬದಲಾಗಿ ಅಂತ್ಯ ಪ್ರಾಸವನ್ನು ವಿಶೇಷವಾಗಿ ಅಷ್ಟೇ ಏಕೆ ನಿಯಮಿತವಾಗಿ, ಆದರೆ ಅದು ಒಂದು ಬಂಧನವಾಗಿ ಪರಿಣಮಿಸಿದ ರೀತಿಯಲ್ಲಿ ಬಳಸಿದ್ದಾರೆ.

ಜಾನಪದ ಪ್ರಯೋಗಗಳಿಂದ ಪ್ರಭಾವಿತರಾದ ಬೇಂದ್ರೆ ಅವರು ತಮ್ಮ ಕಾವ್ಯದಲ್ಲಿ ಹೆಚ್ಚಾಗಿ ಅಂತ್ಯಪ್ರಾಸ, ಮಧ್ಯಪ್ರಾಸ ಮತ್ತು ಅನುಪ್ರಾಸಗಳನ್ನು ಉಪಯೋಗಿಸುತ್ತಾರೆ. ಇಲ್ಲಿ ಮುಖ್ಯವಾಗಿ ಪ್ರಾಸ ಕಾವ್ಯದ ಆಂತರಿಕ ಅಂಗವಾಗಿ ಬರುತ್ತದೆ.

ಕೂಡಿರೆ ಕೈ-ಮೈ ತಾಲಕೆ ತಾಲ
    ಅಲ್ಲಿದೆ ನೃತ್ಯದ ನಿತ್ಯದ ಸೊತ್ತು
ಹೊಂದಿರೆ ಒಂದೆನೆ ಪ್ರಾಸಕೆ ಪ್ರಾಸ
    ಅದುವೇ ಕಾವ್ಯ ವಿಲಾಸದ ಗೊತ್ತು
ಕೂಡಿರೆ ಹೊಂದಿರೆ ಚಿತ್ತಕೆ ಚಿತ್ತ
    ಪವಣಿಸಿದಂತದು ಮುತ್ತಿಗೆ ಮುತ್ತು

ಇಲ್ಲಿ ಹೊಂದು, ಹೂಡು ಎಂಬ ಪದಗಳ ಅರ್ಥವನ್ನು ವಿವರಿಸುವ ಅಗತ್ಯವಿಲ್ಲ. ಕವಿಗೆ ಕಾವ್ಯದ ಪ್ರಾಸವೆನ್ನುವುದು ಒಟ್ಟಾರೆ ಜೀವನ ಸಾಂಗತ್ಯ. ಲೋಕ ಸಾಂಗತ್ಯಗಳ ಒಂದು ಅಂಗವಾಗಿ ಕಾಣುತ್ತದೆ. ಪ್ರಾಸದ ಮೂಲಕ ಕವಿ ನಾವು (ಸಹೃದಯರು) ಕಾಣದ ಸಂಬಂಧಗಳನ್ನು ಕವಿ ತೋರಿಸಿಕೊಡುತ್ತಾನೆ. ಎಂದರೆ ಒಂದು ಪದ ಇನ್ನೊಂದರ ಮೇಲೆ ಬೆಳಕು ಚೆಲ್ಲುತ್ತದೆ. ಆಗ ಮರೆಯಾದ ಅರ್ಥವೊಂದನ್ನು ಹೊರಹೊಮ್ಮಿಸುತ್ತದೆ. 'ಪಾತರಗಿತ್ತಿ ಪಕ್ಕ'ದ ಈ ಸಾಲುಗಳನ್ನು ಗಮನಿಸಿ.

ರೇಶಿಮೆ ಪಕ್ಕನಯ
ಮುಟ್ಟಲಾರೆ ಭಯ

ಮೊದಲನೆ ಸಾಲು ಪಾತರಗಿತ್ತಿಯ ಪಕ್ಕ ರೇಶ್ಮಿಮೆಯಷ್ಟು ನಯ ಎನ್ನುತ್ತದೆ. ಆದರೆ ಈ 'ನಯ'ವೆನ್ನುವ ಪದದ ಪೂರ್ತಿ ಅರ್ಥ ಸ್ಫುರಿಸುವುದು ಎರಡನೆಯ ಸಾಲಿನ 'ಭಯ' ನಿಜಕ್ಕೂ ಭಯವನ್ನು ಸೂಚಿಸದೆ ಪಾತರಗಿತ್ತಿ ಪಕ್ಕದ ನಯವನ್ನೇ ಇನ್ನೊಂದು ರೀತಿ

ಹೇಳುತ್ತದೆ. ಪಾತರಗಿತ್ತಿಯ ಅಪೂರ್ವವಾದ ಚೆಲುವನ್ನು ಈ ಪ್ರಾಸ ಸಂಯೋಜನೆಯೇ ತೋರಿಸಿ ಕೊಡಲು ಹೊರಟಂತಿದೆ. ಅನಿರೀಕ್ಷಿತ ಪ್ರಾಸ ಸಂಯೋಜನೆ ಇಲ್ಲಿ ತುಂಬ ಸಹಕಾರಿಯಾಗಿದೆ. ಪ್ರಾಸ, ಅನುಪ್ರಾಸಗಳನ್ನು ಬೇಂದ್ರೆ ಅವರು ಕೇವಲ ಕಾವ್ಯ ಸೌಂದರ್ಯ ಕ್ಕೋಸ್ಕರ ಬಳಸದೆ, ಅರ್ಥ ಧ್ವನಿಗಳ ಸ್ಫುರಣೆಗೆ ಬಳಸಿದರು.

ಇನ್ನೂ ಯಾಕ ಬರಲಿಲ್ಲವ್ವಾ ಹುಬ್ಬಳ್ಳಿಯಂವಾ
ವಾರದಾಗ ಮೂರು ಸರತಿ ಬಂದು ಹೋದಾಂವಾ ||ಪಲ್ಲ||

ಭಾರಿಜರದ | ವಾರಿರುಮ್ಮಾಲಾ | ಸುತ್ತಿ ಕೊಂಡಾಂವಾ
ತುಂಬ ಮೀಸಿ | ತೀಡಿಕೋತ | ಹುಬ್ಬ ಹಾರಸಾಂವಾ

ಮಾತು ಮಾತಿಗೆ | ನಕ್ಕನಗಿಸಿ | ಆಡಿಸ್ಯಾಡಾಂವಾ
ಏನೋ ಅಂದರ | ಏನೋ ಕಟ್ಟಿ | ಹಾಡ ಹಾಡಾಂವಾ

('ಬೇಂದ್ರೆ-ಹುಬ್ಬಳ್ಳಿಯಾಂವ')

ಬೇಂದ್ರೆ ಅವರು ಜನಪದ ಲಯಗಳನ್ನು ಉಪಯೋಸಿಕೊಂಡುದರ ಪರಿಣಾಮವೆಂದರೆ ಅದು ಅವರಿಗೆ ಹೇರಳವಾದ ಪ್ರಾಸ ಸಾಧ್ಯತೆಗಳನ್ನು ಒದಗಿಸಿಕೊಟ್ಟಿತು. ಒಂದು ಭಾಷೆಯ ಶಬ್ದಸಂಪತ್ತು, ನುಡಿಗಟ್ಟು ಹೆಚ್ಚಾಗಿದ್ದಷ್ಟೂ ಇಂತಹ ಸಾಧ್ಯತೆಗಳೂ ಹೆಚ್ಚು. ಇಲ್ಲಿ ಭಾಷೆಯನ್ನು ಇಡಿಯಾಗಿ, ಅದರ ಎಲ್ಲ ಪ್ರಭೇದಗಳೂ ಸೇರಿದಂತೆ ತೆಗೆದುಕೊಂಡ ಕವಿಗೆ ಇರುವಷ್ಟು ಶ್ರೀಮಂತಿಕೆ, ತನ್ನನ್ನು ಯಾವುದೋ ಒಂದು ಸೀಮೆಗೆ ಸೀಮಿತಗೊಳಿಸಿಕೊಂಡ ಕವಿಗೆ ಇಲ್ಲ. ಎಂದರೆ ಮಡಿವಂತಿಕೆಯನ್ನು ಬಿಟ್ಟುಕೊಟ್ಟ ಲೇಖಕನ ವ್ಯಾಪ್ತಿ ಸಹಜವಾಗಿ ಹೆಚ್ಚು. ಬೇಂದ್ರೆ ಇದಕ್ಕೆ ಹೊರತಲ್ಲ. ಬೇಂದ್ರೆ ಶೈಲಿಯಲ್ಲಿ ಪ್ರಾಸವೆನ್ನುವುದು ಆಕಸ್ಮಿಕವಾಗಿದೆ; ಸಹಜವಾಗಿದೆ. ಬೇಂದ್ರೆಯವರು ಭಾಷೆ-ಭಾಷೆಗಳ ಕಂದರವನ್ನು ದಾಟಿದವರು. ಶಬ್ದದಿಂದ ಶಬ್ದಕ್ಕೆ ಬೇಂದ್ರೆ ಸರಿಯುವ ಕ್ರಮ ನಿಜಕ್ಕೂ ಅಚ್ಚರಿಯನ್ನುಂಟು ಮಾಡುವಂತಹದು. ಒಂದು ದೃಷ್ಟಿಯಲ್ಲಿ ಅವರ ವಿಚಾರ ಧಾರೆಯನ್ನು ನಿಯಂತ್ರಿಸುವುದು, ಶಬ್ದಗಳೇ ಎಂದು ತೋರುತ್ತದೆ.

ಹಳ್ಳ ಹೊಳೆಗೆ ನೂಗಿದಾಗ
ಹೂ ಹೂವಿಗೆ ತಾಗಿದಾಗ
ಹಕ್ಕಿ ಕೆರಳಿ ಕೂಗಿದಾಗ
ಮೂಡಿದವನೆ ಬಾ

('ಬೇಂದ್ರೆ-ಭಾಕೈತಾ'- ಸಖೀಗೀತ)

ಇಲ್ಲಿ ನೂಗಿದಾಗ, ತಾಗಿದಾಗ, ಕೂಗಿದಾಗ ಇವೆಲ್ಲ ಪ್ರಾಸ ಶಬ್ದಗಳೇ. ಈ ಪ್ರಾಸಯುಕ್ತ ಶಬ್ದಗಳು ನಮ್ಮ ಮನಸ್ಸನ್ನು ಆಕರ್ಷಿಸಿ ಬಿಡುತ್ತವೆ. 'ಬೇಂದ್ರೆ ಗೀತೆಗಳ' ಗತಿಯಲ್ಲಿ ಯಾವುದೋ ಒಂದು ಗಾರುಡಿ ಶ್ರುತಿ ಗೂಡಿ ನುಡಿಯುವಂತೆ ಭಾಸವಾಗುತ್ತದೆ :

"ಬಂದನು ಬಂದನು ತಿರುಳನು ತಂದನು
ಜನಪದ ಛಂದದಲಿ
ಹಾಡನು ನೆಯ್ದನು ಗಾರುಡಿ ಗೆಯ್ದನು
ಬಗೆ ಬಗೆ ಬಂಧದಲಿ....."

ಎಂದು ಅವರ ಹಾಡಿನ ಬಗೆಗೆ ಮೂಡಿದ ಮಾತು ಸಮುಚಿತವಾಗಿದೆ. ಬೇಂದ್ರೆ ಅವರ ಸಹಜ ಮಾತಿನ ಎಳೆತ, ಸೆಳೆತಗಳು ಅವರ ಗೀತಗಳಲ್ಲಿ ಗೇಯವಾಗಿ ಸುಳಿದು ಬಂದಿವೆ. ಜಾನಪದ ಲಯಗಳಿಗೆ ಅವರು ಕೊಟ್ಟ ಸೊಗಸಾದ ತಿರುವುಗಳು ಅವರ ಗೀತಗಳ ವೈಶಿಷ್ಟ್ಯಕ್ಕೆ ದಾರಿಯಾಗಿವೆ.

ಬೇಂದ್ರೆ ಅವರು ಮೊದಲಿನಿಂದಲೂ ಮಾತ್ರಾ ಛಂದೋಬಂಧಗಳ ಜೊತೆ ಜೊತೆಗೆ ಅಂದವಾದ ಜಾನಪದ ಗತಿಗತ್ತುಗಳನ್ನು ತಮ್ಮ ಹಾಡುಗಳಲ್ಲಿ ತಮ್ಮವೇ ಆದ ರೀತಿಯಲ್ಲಿ ಬಳಸುತ್ತ ಬಂದಿದ್ದಾರೆ. ಅವರ 'ಗರಿ'ಯಲ್ಲಿ ಸೇರಿದ ಈ ಬಗೆಯ ಹಲವಾರು ಹಾಡುಗಳು ಈ ಮಾತಿಗೆ ಸಾಕ್ಷಿ. 'ನಗಿs ನವಿಲು', 'ರಾಗರತಿ', 'ಚೆಲುವು', 'ಪಾತರಗಿತ್ತಿ ಪಕ್ಕಾ', 'ನನ್ನ ಕಿನ್ನರಿ', 'ಬಿಸಿಲುಗುದುರೆ', 'ನನ್ನ ಕೈ ಹಿಡಿದಾಕೆ', 'ಕುಣಿಯೋಣು ಬಾರ'- ಇವೇ ಮೊದಲಾದ ಗೀತಗಳು ಜಾನಪದ ವೈವಿಧ್ಯಕ್ಕೆ ಒಳ್ಳೆಯ ಉದಾಹರಣೆಗಳು.

'ಗರಿ'ಯ ತರುವಾಯ ಬಂದ ಸಂಕಲನಗಳಲ್ಲೂ ಬೇಂದ್ರೆ ಅವರು ಜಾನಪದ ಛಂದಃ ಪ್ರಯೋಗ ಮುಂದುವರಿದು ಜಾನಪದ ಛಂದವೆಂದರೆ ಬೇಂದ್ರೆ, ಬೇಂದ್ರೆ ಎಂದರೆ ಜಾನಪದ ಬಂಧ. ಎನ್ನುವಷ್ಟರ ಮಟ್ಟಿಗೆ ಈ ನಂಟು ಬೆಳೆದು ಬಂದಿದೆ. "ನನಗೂ ನಿನಗೂ ಅಂಟಿದ ನಂಟಿನ ಕೊನೆ ಬಲ್ಲವರಾರು ಕಾಮಾಕ್ಷಿಯೇ" ಎಂದು ಅವರು ತಮ್ಮ ಸಖೀಗೀತದಲ್ಲಿ ಹೇಳಿದ ಮಾತು ಈ ಸಂಬಂಧದಲ್ಲಿ ನೆನಪಿಗೆ ಬಾರದಿರದು. 'ಗರಿ'ಯನ್ನಷ್ಟೇ ಗಮನಕ್ಕೆ ತೆಗೆದುಕೊಂಡರೂ

"ಮೂಡಲ ಮನೆಯಾ ಮುತ್ತಿನ ನೀರಿನ
ಎರಕವ ಹೊಯ್ದಾ"

"ಮುಗಿಲ ಮಾರಿಗೆ ರಾಗರತಿಯ ನಂಜ ಏರಿತ್ತ
ಆಗ ಸಂಜೆಯಾಗಿತ್ತ....."

"ಹಳ್ಳದ ದಂಡ್ಯಾಗ ಮೊದಲಿಗೆ ಕಂಡಾಗ
ಏನೊಂದ ನಗಿ ಇತ್ತ......"

"ಕುಣಿಯೋಣ ಬಾರ, ಕುಣಿಯೋಣು ಬಾ"

"ಪಾತರಗಿತ್ತಿ ಪಕ್ಕಾ
ನೋಡೀದೇನ ಅಕ್ಕಾ"

ಇವೇ ಮೊದಲಾದ ಹಾಡುಗಳು ಗರಿ ಗರಿಯಾಗಿ ನಾಡಿನ ನಾಡಿಗಳಲ್ಲಿ ಆಡಿ ಹೊಸ ರಾಗ ರುಚಿಗಳನ್ನು ನೀಡಿದುವು ಎಂದು ಬೇರೆ ಹೇಳಬೇಕೇ? ಗರಿಯ ಮೊದಲನೆಯ ಗೀತವಾದ 'ಬೆಳಗಿ'ನಲ್ಲಿಯೇ,

ಮೂಡಲ ಮನೆಯಾ ಮುತ್ತಿನ ನೀರಿನ
ಎರಕವ ಹೊಯ್ದಾ
ನುಣ್ಣನ್ನೆರಕವ ಹೊಯ್ದಾ

ಎಂಬ ಪ್ರಾರಂಭದ ಚರಣಗಳಲ್ಲಿ ಕೌತುಕ ಭಾವಕ್ಕೆ ಸರಾಗವಾಗಿ ಸರಿ ಹೋಗುವ ಲಯಕ್ಕೆ ನಮ್ಮ ಭಾವದ ಬಾಗಿಲು ತೆರೆದಂತೆ ಭಾಸವಾಗುತ್ತದೆ. ಬಾಗಿಲು ತೆರೆದು ಬೆಳಕು ಹರಿದು ಜಗವೆಲ್ಲ ತೊಯ್ದು ಹೋಗುವಂತೆ ಅನಿಸಿಕೆಯಾಗುತ್ತದೆ. ಬೆಳಕಿನ ಮಂದ ಮಾರುತ ಮಂದಾನಿಲ ಲಯದಲ್ಲಿ ಆಡಿದೆ ಈ ಹಾಡಿನಲ್ಲಿ. "ಗಿಡಗಂಟಿಯ ಕೊರಳೊಳಗಿಂದ ಹಕ್ಕಿಗಳ ಹಾಡು" ಗೇಯವಾಗಿ ಹೊರಡದಿರುವುದೇ? ಅದರಂತೆ ಸಂಜೆಯ ಸುಮನೋಹರವಾದ ನೋಟಗಳನ್ನು ಕಣ್ಣಿಗೆ ಕಟ್ಟುವ ರೀತಿ ಹೀಗಿದೆ :

"ಮುಗಿಲ ಮಾರಿಗೆ ರಾಗರತಿಯ
ನಂಜ ಏರಿತ್ತ
ಆಗ ಸಂಜೆಯಾಗಿತ್ತ"

ಎಂಬ ಹಾಡು ಕೂಡ ಈ ಮಂದಾನಿಲ ಲಯದಲ್ಲಿಯೇ ಇನ್ನೊಂದು ಬಗೆಯ ಜಯವನ್ನು ಸಾಧಿಸಿದೆ. ಇದರ ಪ್ರಾಸವಿನ್ಯಾಸದಿಂದಾಗಿ ಈ ಹಾಡಿಗೆ ಹೆಚ್ಚಿನ ಗೇಯತೆ ಪ್ರಾಪ್ತವಾಗಿದೆ. ಅಂಶಗಣಗಳನ್ನು ಒಳಗೊಂಡ ಈ ಹಾಡಿನ ಒಡಲಲ್ಲಿ ಅಂದವಾದ ಪ್ರತಿಮೆಗಳನ್ನು ಬಿಡಿಸಿದ್ದಾರೆ, ಬೇಂದ್ರೆ. ಜೊತೆಗೆ ಪ್ರಕೃತಿಯ ಸುಳುಹು ಹೊಳಹುಗಳನ್ನೂ ರೂಪಕದಲ್ಲಿ ಕಣ್ಣಿಗೆತ್ತಿ ತೋರಿದ್ದಾರೆ. ಹೀಗೆ :

"ಮಳ್ಳಗಾಳಿ ಸುಳಿಕಳ್ಳಕೈಲೆ
ಸೆರಗ ಹಿಡಿತಿತ್ತ
ಮತ ಮತ ಮರವಿಲೆ ಬಿಡತಿತ್ತ"

ಈ ಸಂಜೆ, ಮುಂಜಾವುಗಳ ಎರಡೂ ಹಾಡುಗಳಲ್ಲಿ ಪದ್ಯ ಪದ್ಯದ ಹೃದ್ಯವಾದ ಪಲ್ಲವಿ ಚಲ್ಲವರಿಯುವ ಸೊಗಸು ಅನುಭವಕ್ಕೆ ಬರುತ್ತದೆ.

ಕುವೆಂಪು ಅವರದು ಉಪಮಾ ರೂಪಕಗಳಿಂದ ಕೂಡಿದ ಕಾವ್ಯಮಯ ಶೈಲಿ. ಅವರ ಕಾವ್ಯದಲ್ಲಿ ಭಾಷೆ- ಬಂಧ-ಲಯ ಒಂದಕ್ಕೊಂದು ಪೂರಕವಾಗಿ ಅಭಿವ್ಯಕ್ತವಾಗಿವೆ. (ಹೆಚ್ಚಾಗಿ) ಭಾಮಿನಿ ಲಯವುಳ್ಳ ಅವರ ಕವನಗಳು ಸರಳವಾಗಿವೆ. ಜ್ಞಾನಗೀತೆಯಲ್ಲಿ ದ್ವಿತೀಯಾಕ್ಷರ ಪ್ರಾಸ ತಿರಸ್ಕೃತವಾಗಿದೆ. ಅಂತ್ಯ ಪ್ರಾಸವೂ ಇಲ್ಲ. ಅಂದರೆ ಕವಿ ಸ್ವಾತಂತ್ರ್ಯ ವಹಿಸುವತ್ತ ಮುನ್ನಡೆಯುತ್ತಿರುವಂತೆ ತೋರುತ್ತದೆ.

ಕಡೆಯ ದಿನವ ಕಾಯೋ ಜೀವ
ಎಂಬ ನುಡಿಯ ನಂಬ ಬೇಡ
ಪರಮ ಪುರುಷನಾದ ನಿನಗೆ
ಮರಣ ಭಯವು ಬೇಡ, ಜೀವ
ನಾನೆ ಶಿವನು, ನಾನೆ ಶಿವನು
ಎಂದು ಭಯವ ನೀಗೊ ಜೀವ !

(ಕುವೆಂಪು-ಜ್ಞಾನಗೀತೆ)

'ವಸಂತ ಕುಸುಮ' ಎಂಬ ಕವನದಲ್ಲಿ ಅದ್ವೈತ ತತ್ತ್ವದರ್ಶನ ಅಭಿವ್ಯಕ್ತಗೊಂಡಿರುವುದಲ್ಲದೆ, ಛಂದೋವಿಲಾಸದ ವಿಶೇಷತೆಯೂ ಇದೆ. ಮೂರು ಮಾತ್ರೆಯ ಗಣದ ಸಕ್ರಮ ವಿನ್ಯಾಸವಿದ್ದರೂ ಪಂಕ್ತಿಗಳ ಹ್ರಸ್ವದೀರ್ಘತೆಗಳ ಅಸಮ ವಿನ್ಯಾಸವನ್ನು ಕಾಣಬಹುದು.

ಎಲೆ ವಸಂತ ಕುಸುಮವೆ
ಆವ ಪರಮ ಜನನಿಯುದರದಿಂದ ನೀನು ಬಂದಿಹೆ?

(ಕುವೆಂಪು-ವಸಂತ ಕುಸುಮ)

ಭಾಷೆಯ ಲಾಲಿತ್ಯ, ಛಂದಸ್ಸಿನ ವಿನ್ಯಾಸ, ಪಂಕ್ತಿ ಮಧ್ಯ ಪ್ರಾಸ ಮಾಧುರ್ಯ ಮತ್ತು ಯತಿಯ ಸ್ಥಾನ ಮನೋಹರತೆ ಇವೆಲ್ಲ ಕವಿ ಕಾವ್ಯದಲ್ಲಿ ಉಕ್ಕುತ್ತಿದ್ದ ಹರ್ಷದ ಬುಗ್ಗೆಗೆ ಪ್ರತೀಕಗಳಾಗಿವೆ. ಕುವೆಂಪು ಪ್ರತಿಭೆಯ ಮೋಹಕ ಶಿಶುನಾದ, ಮಕ್ಕಳ ಮನಸ್ಸನ್ನು ಏಕಪ್ರಕಾರವಾಗಿ ಸೆಳೆದಿದೆ. ಅವರ 'ಬೊಮ್ಮನಹಳ್ಳಿಯ ಕಿಂದರಿ ಜೋಗಿ' ಮಕ್ಕಳ ಮನಸ್ಸನ್ನು ಕುವೆಂಪು ಅವರ ಕಲ್ಪನಾ ಪ್ರತಿಭೆಯ ವೈಭವಕ್ಕೆ ಇದೊಂದು ಉಜ್ವಲ ನಿದರ್ಶನವಾಗಿದೆ. ೪+೪+೪+೩ ಮಾತ್ರೆಯ ಗಣಗಳ ಧಾಟಿಯಲ್ಲಿ ಹರಿಯುವ ಕಥನ ಕವನವಾದರೂ, ಶೈಲಿಯ ನಾಟಕೀಯತೆ ರಸಾರ್ದ್ರವಾಗುತ್ತದೆ.

ತುಂಗಾ ತೀರದ ಬಲಗಡೆಯಲ್ಲಿ
ಹಿಂದಲ್ಲಿದ್ದುದು ಬೊಮ್ಮನಹಳ್ಳಿ
ಅಲ್ಲೇ ನಿಲಿಗಳಕಾಟವೆ ಕಾಟ
ಅಲ್ಲಿಯ ಜನಗಳಿಗತಿ ಗೋಳಾಟ
ಇಲಿಗಳು !
    ಬಡಿದುವು ನಾಯಿಗಳ!
    ಇಲಿಗಳು
    ಕಡಿದುವು ಬೆಕ್ಕುಗಳ !

ಇಲ್ಲಿ 'ಇಲಿಗಳು' ಎನ್ನುವ ಒಂದೇ ಒಂದು ಪದ ೫ ಮತ್ತು ೭ನೆಯ ಪಾದಗಳನ್ನೆಲ್ಲ ತುಂಬಿಕೊಳ್ಳುತ್ತದೆ. ಇಲಿಗಳು ಸಾಮಾನ್ಯ ಪ್ರಾಣಿಗಳಲ್ಲ, ಅವುಗಳ ಬಗ್ಗೆ ಜಾಗರೂಕರಾಗಿರ

ಬೇಕಾಗುತ್ತದೆ ಎಂಬ ಅಚ್ಚರಿ ಆ ಪದದ ನಂತರ ಬರುವ ವಿರಾಮವನ್ನೆಲ್ಲ ತುಂಬಿಕೊಳ್ಳುತ್ತದೆ; ಆ ಪದದಲ್ಲಿಯೆ ಏನೋ ಅದ್ಭುತವಿರುವಂತೆ ಭಾಷಾಧ್ವನಿ ಕೆಲಸ ಮಾಡುತ್ತದೆ. ನಾಟಕೀಯ ಭಾಷೆಯ ಮೂಲಕವೇ ಕಥನ ಕ್ರಿಯೆ ಮುಂದೆ ಮುಂದೆ ಸಾಗುತ್ತದೆ. ಭೋಗ ಲಯದ "ಕವಿತೆಗೆ" ಎಂಬ ಹನ್ನೆರಡು ಪದ್ಯಗಳ ರಚನೆ ಸಹ ತಮ್ಮ ಬಾಳ ಬೆಳಕಾಗಿ ಕವಿತೆ ಹುಟ್ಟಿದ್ದನ್ನು ನೆನೆಯುತ್ತಾರೆ.

ಎದೆಯ ಮನೆಗೆ ನೀನು ಬರಲು
ಮುದವು ಉಕ್ಕಿ ಉಕ್ಕಿ ಹರಿದು
ಸುಗ್ಗಿ ಮಳೆಯ ಹನಿಗಳಂತೆ
ಗಾನ ಸುರಿವುವು !
ಪದಗಳೆಂಬ ಮಣಿಗಳೆಲ್ಲ
ಭಾವವೆಂಬ ದಾರದಲ್ಲಿ
ತಮಗೆ ತಾವೆ ಕೋದು ಕೊಂಡು
ಕಬ್ಬಮಾಲೆಯಾಗಿ ಮೆರೆಯೆ

(ಕುವೆಂಪು-ಕೊಳಲು)

ಸರಸ, ಸರಳ ಪದಗಳೇ ಮೂಲದ್ರವ್ಯವಾಗಿರುವ ಭೋಗದ ಧಾಟಿ ಕವಿತೆಯ ಹೆಜ್ಜೆ ಮೋಡಿಯನ್ನು ಸೊಗಸಾಗಿ ರೂಪಿಸುತ್ತದೆ. ಕುವೆಂಪು ಅವರ ಉಪಮಾ, ರೂಪಕಗಳ ವೈಭವವನ್ನು ಸಂಕೇತ ಪ್ರತಿಮೆಗಳ ಶ್ರೀಮಂತಿಕೆಯನ್ನು ಕಾಣಬಹುದು. ಕುವೆಂಪು ಕಾವ್ಯದಲ್ಲಿ ದೀರ್ಘಸಮಾಸ ರಚನೆಗಳಿಲ್ಲ; ಕರ್ಕಶ ಶಬ್ದಗಳಿಲ್ಲ. ಇದರಿಂದ ಕವಿತೆಗಳು ತಮ್ಮಲ್ಲಿ ಹುದುಗಿರುವ ಅರ್ಥ ಮತ್ತು ಕಾವ್ಯ ಧ್ವನಿಗಳನ್ನು ಸುಲಭವಾಗಿ ಬಿಟ್ಟುಕೊಡುತ್ತದೆ.

ಕಾವ್ಯದ ತಾಳ, ಲಯಗಳನ್ನು ಸಮನ್ವಯಿಸಿ ಸುಮಧುರ ಶೈಲಿಯಲ್ಲಿ ಕವನ ರಚಿಸಿದವರಲ್ಲಿ ಡಿ.ಎಸ್.ಕರ್ಕಿ ಅವರು ಅಗ್ರಗಣ್ಯರು. ಕರ್ಕಿರವರು ನಾದ ಪ್ರಿಯತೆಗೆ ಒತ್ತು ಕೊಟ್ಟಿದ್ದಾರೆ. ಅವರು ತಮ್ಮ ಕಾವ್ಯ ಭಾಷೆಯನ್ನು ಹದಗೊಳಿಸಿರುವ ರೀತಿ ಅಚ್ಚರಿಪಡುವಂತಹದು "ತನನ ತೋಂ"ದಲ್ಲಿ ಕಂಡುಬರುವ ನಾದ ಮಾಧುರ್ಯ ನಯಗಾರಿಕೆ ಎಲ್ಲವೂ ಕರ್ಕಿ ಅವರ ಕಾವ್ಯ ತತ್ತ್ವವನ್ನು ಎತ್ತಿ ತೋರಿಸುತ್ತವೆ. ಕರ್ಕಿ ಅವರ 'ಗಾಂಧೀಜಿ' ಕುರಿತ ಗೀತ ತುಂಬ ಜನಪ್ರಿಯವಾದುದು.

ತಿಳಿನೀಲದಲ್ಲಿ ತಾ ನೀಲವಾಗಿ ಅವ
ಹೋದ ದೂರ ದೂರ
ಬೆಳಗಿಹುದು ಇಲ್ಲಿ ಅವ ಬಿಟ್ಟ ಬೆಳಕು
ಇನ್ನೊಮ್ಮೆ ಏಕೆ ಬಾರ ?

(ಗೀತ ಗೌರವ)

ಈ ಸಾಲುಗಳು ಕನ್ನಡ ಕುವರರ ನಾಲಗೆಯಲ್ಲಿ ಚಿರವಾಗಿ ನೆಲಸಿವೆ. ಭಾಷೆ-ಶೈಲಿ, ವೈಭವ ಪೂರ್ಣ. ಉಪಮೆ, ಸಂಕೇತಗಳು ಹೇರಳ. ಪದಲಾಲಿತ್ಯ ಕರ್ಕಿ ಅವರ ವೈಶಿಷ್ಟ್ಯ. ಮೃದು ಮಧುರ ಶಬ್ದ ಪ್ರಯೋಗಗಳಿಂದ ಕವಿ ಓದುಗನ ಮನವನ್ನು ಸೂರೆಗೊಂಡಿದ್ದಾನೆ. ಕರ್ಕಿ ಅವರು ಮೊದಲಿನಿಂದಲೂ ಭಾವ ಮತ್ತು ಛಂದೋಬಂಧದಲ್ಲಿಯೇ ತಮ್ಮ ಶ್ರೇಯಸ್ಸನ್ನು ಕಂಡುಕೊಂಡರು. ಕಣ್ಣಿಗೆ ಕಟ್ಟುವಂತೆ ಶಬ್ದಗಳಲ್ಲಿ ಸೃಷ್ಟಿಯ ಚಿತ್ರವನ್ನು ಬಿಡಿಸುತ್ತ ಹೋಗುವುದು ವಿಶೇಷವಾಗಿ ಹಳ್ಳಿಯ ಸಹಜ ಸೌಂದರ್ಯವನ್ನು ಕಂಡರಿಸಲು ಮೀಸಲಾಗಿರುವ ಈ ಕವಿತೆಗಳು ಹೊಸರುಚಿಯನ್ನು ಕೊಡುತ್ತವೆ. ಉದಾಹರಣೆಗಾಗಿ 'ಜೋಳ'ವನ್ನು ಕುರಿತಾದ ಈ ಕೆಳಗಿನ ಪದ್ಯ ಭಾಗವನ್ನು ನೋಡಬಹುದು.

ಕಣ್ಣಿಗೆ ನುಣ್ಣಗೆ ಹೊಳೆಯುವ ಬೆಳೆಯಲಿ
ಸುಳಿದರೆನಿತು ಸೊಂಪು!
ಸೂಸಿ ನಾಸಿಕ ಕೋ ತೋಷ ನೀಡುವುದು
ತಾಯಿ ನೆಲದ ತಂಪು

ತೆನೆಗಳಲಿ ಮಿಗಿಲಿದು ಜೋಳದ ತೆನೆ
ಬಲ್ಲೆಯ ನೀ ಬೆಳಸಿ
ಬೆಂದ ಬಳಿಯ ತಿಂದು ನೋಡು
ಬೇಯಿಸಿದಡೆಯಲ್ಲಿ

ಮೂರು ಮಾತ್ರೆಯ ಗಣಗಳಲ್ಲಿ ಈ ಕವಿತೆ ಸಾಗುತ್ತದೆ. ಬಯಲು ನಾಡಿನ ಜೋಳದ ಬೆಳೆಯಲ್ಲಿ ಸುಳಿದಾಡಿ, ಅದರ ಬೆಳಸಿಯ ಸವಿಯನ್ನು ಉಂಡವರು ಮಾತ್ರ ಈ ಪದ್ಯದ ಅರ್ಥವನ್ನು ಗ್ರಹಿಸಬಲ್ಲರು; ಅದರ ಸೊಬಗಿಗೆ ತಲೆದೂಗಬಲ್ಲರು.

ನಯವಾದ, ಮೃದುವಾದ ಪದಗಳು ಕರ್ಕಿಯವರ ಸೊತ್ತಾಗಿದ್ದು, ಅವರು ಅವುಗಳನ್ನು ಲೀಲಾಜಾಲವಾಗಿ ಬಳಸಿಕೊಳ್ಳುತ್ತಾರೆ. ದ್ವಿತ್ವ ಪದಗಳನ್ನು ಅವರು ಸಾಧ್ಯವಾದಷ್ಟೂ ಬಿಟ್ಟು ಬಿಡುತ್ತಾರೆ. ಕಾವ್ಯದ ಬಂಧದಲ್ಲಿ ವೈವಿಧ್ಯವಿರುವುದರೊಂದಿಗೆ ರೇಶ್ಮಿಯಂತಹ ನಯಗಾರಿಕೆಯೂ ಇದೆ. ಒರಟು, ಕಟುತ್ವ, ರೊಚ್ಚು, ರೋಷ ಇವು ಅವರ ಸಮೀಪಕ್ಕೆ ಸುಳಿಯಲಾರವು.

ಸಾಂಸ್ಕೃತಿಕ ಕಾಳಜಿಯಿಂದ ತಮ್ಮನ್ನು ತಾವು ಕಾವ್ಯಕ್ಕೆ ಸಮರ್ಪಿಸಿಕೊಂಡು, ಅಂದಂದಿನ ಬದುಕಿನ ವಿದ್ಯಮಾನಗಳಿಗೆ ತೀವ್ರವಾಗಿ ಸ್ಪಂದಿಸುವ ಕಣವಿಯವರ ಕಾವ್ಯದ ಭಾಷೆ ಹಾಗೂ ಬಂಧಗಳಲ್ಲಿ, ಅನನ್ಯವಾದ ಸಿದ್ಧಿಯನ್ನು ಸಾಧಿಸಿದ, ಕಾವ್ಯ ಶಿಲ್ಪದಲ್ಲಿ ತಮ್ಮದೇ ಆದ ಕಲಾಭಿಜ್ಞತೆಯನ್ನು ಬಳಸಿಕೊಂಡ ಬೇಂದ್ರೆ ಅವರ ತರುವಾಯದ ಕವಿ. ಆಡುಮಾತಿನ ಸಾಧ್ಯತೆಗಳನ್ನೆಲ್ಲ ದುಡಿಸಿಕೊಳ್ಳ ತೊಡಗಿದ ಕವಿ ಸಾಮಾಜಿಕ ಪ್ರಜ್ಞೆಯನ್ನು ವ್ಯಕ್ತಪಡಿಸುತ್ತಲೇ ಶಬ್ದಗಳಿಗೆ ಹೊಸ ಅರ್ಥಗಳನ್ನು ತುಂಬುತ್ತ ವಿಶಿಷ್ಟ ಭಾಷಾಶೈಲಿಯನ್ನು ಕರಗತ ಮಾಡಿ ಕೊಂಡಿದ್ದಾರೆ.

ಕಣವಿ ಅವರ ಕಾವ್ಯ, ಪ್ರಾಸ ಹಾಗೂ ಲಯ ವಿನ್ಯಾಸಗಳಿಂದ ಕೂಡಿದ್ದು, ಭಾಷೆ ನಿರಾಭರಣ ಸುಂದರಿಯೆನ್ನಿಸಿದರೂ ಭಾವ ತನ್ಮಯತೆಯನ್ನು ಸಾಧಿಸಿಕೊಂಡಿದೆ. ನವೋದಯ ಸಂದರ್ಭದ ಭಾವಗೀತೆಗಳನ್ನು ಕುರಿತು ಈ ಮಾತನ್ನು ವಿಶೇಷವಾಗಿ ಹೇಳಬಹುದಾದರೂ 'ದೀಪಧಾರಿ'ಯ ನಂತರ ಬರೆದ ಕವನಗಳಲ್ಲಿ ಆದಿ-ಅಂತ್ಯ ಪ್ರಾಸಗಳಿಲ್ಲವೆಂದರೂ ಅನುಪ್ರಾಸಗಳ ಮೂಲಕ ಕಣವಿ ಅವರು ತನ್ಮಯತೆಯನ್ನು ಸಾಧಿಸುತ್ತಾರೆ. ಶಿಷ್ಟ ಶಬ್ದವೇ ಆಗಿರಲಿ, ಆಡುಮಾತೇ ಆಗಿರಲಿ ಅದರಲ್ಲಿರುವ ಶಕ್ತಿಯನ್ನು ಲಯ ಮತ್ತು ಅರ್ಥ ಸೌಂದರ್ಯ ವನ್ನು ಕಣವಿ ಪ್ರತಿಭೆ ತಟ್ಟನೆ ಗುರುತಿಸಿ, ಎತ್ತಿಕೊಂಡು ಬಿಡುತ್ತದೆ. ಅದು ಕ್ರಮೇಣ ತನ್ನ ಪ್ರತ್ಯೇಕ ಅಸ್ತಿತ್ವವನ್ನು ಕಳೆದುಕೊಂಡು ಕವನದ ಅವಿಭಾಜ್ಯ ಅಂಗವಾಗಿ ಬೆಳೆದುಬಿಡುತ್ತದೆ.

ಕಾಸಾರದ ಕೆಸರಿನಿಂದ
ಪಾಚಿಜೊಂಡು ನೀರಿನಿಂದ
ವಿಮಲ ಕಮಲ ಮೇಲಕ್ಕೆದ್ದು
ಕೊಳದ ಎದೆಯ ನಮರಿ ಗೆದ್ದು

ದಲದಲ ದಲವರಳುವಂತೆ
ಥಳ ಥಳ ಥಳ ತೊಳಗುವಂತೆ
ಎತ್ತು ಮೇಲಕೆನ್ನನು
ಜೀವ ಪಥದಿ ಪತಿತನು

(ಎತ್ತು ಮೇಲಕೆನ್ನನು-ಕಾವ್ಯಾಕ್ಷಿ)

ಎಂಬಲ್ಲಿ ಪ್ರಾಸ, ಅನುಪ್ರಾಸಗಳ ಲಯ ವಿನ್ಯಾಸವನ್ನು, ಪ್ರವಾಹದ ಹರವಿನೊಂದಿಗೆ ಗುರುತಿಸಬಹುದಾಗಿದೆ. ಇದರೊಂದಿಗೆ ಅರ್ಥದ ವ್ಯಾಪ್ತಿಯೂ ವಿಸ್ತಾರಗೊಳ್ಳುವುದು ಗಮನಾರ್ಹ.

ಮೂಡಗಾಳಿ ಎಡವುತಿರೆ
ಪಡುವ ಗಾಳಿ ತಡವುತಿರೆ
ಕುಳಿರು ಕುಳಿತು ನಡಗುತಿರೆ
ನೋಡಿದ ರವಿಯು

(ಕವಿ-ಸಂಕ್ರಮಣ, -ಎರಡು ದಡ)

ಎಂಬ ಕವನದಲ್ಲಿನ ಅನುಪ್ರಾಸದ ಭಾವಾಭಿನಯವನ್ನೂ ಓದುಗರು ಅನುಭವಿಸಬಹು ದಾಗಿದೆ. ಕಣವಿಯವರ ಕವನಗಳ ಸೊಗಸು ಅಂತ್ಯ ಪ್ರಾಸಗಳಲ್ಲಿ ಅಡಗಿದೆ. ಅವರ ಕೆಲವು ಕವನಗಳಲ್ಲಿ ಹಾಸ್ಯ ನವಿರಾಗಿ ಬಂದಿದೆ.

ಕೊಡೆ ಹಿಡಿಯುತ್ತೇವೆ
ಬಿಸಿಲಿಗೆ, ಮಳೆಗೆ, ದೊಡ್ಡವರ

ಸಿಡಿಸುವ ಕೊಳೆಗೆ, ಆಗದವರು
ಎದುರಿಗೆ ಬಂದಾಗ ಮರೆಗೆ
ಹೊತ್ತು ಬಂದಂತೆ

(- ಕೊಡೆ, -ನಗರದಲ್ಲಿ ನೆರಳು)

ಇಲ್ಲಿಯ 'ದೊಡ್ಡವರ ಕಾರು' ಎಂದಾಗ ವ್ಯಂಗ್ಯಾರ್ಥವಿದೆ. ದೊಡ್ಡವರ ಕಾರು ಎಂದರೆ ದೊಡ್ಡವರು ತೋರಿಸುವ ದೊಡ್ಡಸ್ತನ, ಆಡಂಬರ ಎಂಬುದಕ್ಕೆ 'ಕೊಳೆ' ಸಿಡಿಸುವುದು ಎಂಬುದು ತುಂಬ ಅರ್ಥಪೂರ್ಣವಾಗಿದೆ. ಆ ಕವನದ ಒಟ್ಟು ಒತ್ತು ದೊಡ್ಡವರ ಕಾರಿನ ಮೇಲಿದೆ. ಅವರು ಕೊಡುವ ಆ ಪ್ರತಿಮೆಯಲ್ಲಿ ಒಂದು ರೀತಿಯ ಪ್ರತಿಭಟನೆಯೂ ಇದೆ.

ಮಾತ್ರಾ ಗಣಗಳ ನಿಯಮವನ್ನು ಮೀರಿದ ಉದಾಹರಣೆಯೆಂದರೆ ಎ.ಕೆ. ರಾಮಾನುಜನ್ ಅವರ ಕಾವ್ಯ. ಛಂದೋನಿಯಮಗಳ ಪ್ರಕಾರ ಇವರ ಕವಿತೆಯ ಸಾಲುಗಳ್ನು ಪ್ರಸ್ತಾರ ಹಾಕಲು ಬರುವುದಿಲ್ಲ. ಹಾಕಿದರೂ ಕಾವ್ಯ ಬಂಧಕ್ಕೆ ಸರಿ ಹೋಗುವುದಿಲ್ಲ.

ಇಟಲಿಯಲ್ಲಿ ನೀಲಗಿರಿ
ನೀಲಿ ನೀರಿ
ನ ಕೊಲ್ಲಿ
ಎರಡರ ನಡುವೆ
ಬೆಟ್ಟದಿಳಿ ಜಾರಿನಲ್ಲಿ
ನಾಜೂಕಾಗಿ ಕೂರಿ
ಸಿದ ಅರಸ
ರಿಲ್ಲದ ಅರಮನೆ
ನೋಡಿದೆ

ಈ ಕವಿತೆಯ ಛಂದೋ ರಚನೆಯಲ್ಲಿ ಗಣ ನಿಯಮಗಳಿಲ್ಲ. ಪಾದಾಂತಯತಿ ಇಲ್ಲ. ಕವಿತೆ ತನ್ನ ಅರ್ಥಕ್ಕೆ ತಕ್ಕಂತೆ ವಿರಾಮದ ತಾಣಗಳನ್ನು ಮಾಡಿಕೊಂಡು ಮುಂದುವರಿಯುತ್ತದೆ. ಕವಿತೆಯ ವಸ್ತುವಿಗೆ ತಕ್ಕ ಹಾಗೆ, ಕವಿತೆಯ ವಾಸ್ತು ನಿರ್ಮಾಣಗೊಂಡಿದೆ. ವಿರೋಧಾಭಾಸ ದಂತೆ ಕಂಡರೂ ಎಮರ್ಸನ್ ಹೇಳಿರುವಂತೆ ಕವಿತೆಯ ಮೂಲಭಾವದ ಏರಿಳಿತಗಳು, ಹೃದಯದ ಮಿಡಿತ, ರಕ್ತದ ಚಲನೆ ತನಗೆ ಅನುರೂಪವಾದ ಅಭಿವ್ಯಕ್ತಿಯನ್ನು ಪಡೆದಿದೆ. ಕಾವ್ಯ ಮನುಷ್ಯನ ದೇಹದಂತೆ ಒಂದು ಪ್ರತ್ಯೇಕವಾದ, ಜೀವಂತವಾದ ಘಟಕ. ಶಬ್ದಗಳು ದೇಹದ ಪರಮಾಣುಗಳಂತೆ ಹೊಂದಿಕೊಂಡು ಒಂದು ಆಕಾರವಾಗಬೇಕು. ಆದರೆ ಈ ಹೊಂದಾಣಿಕೆ, ಈ ವಿರಚನೆ ಆಗಬೇಕಾದರೆ ಹಿಂದಿನ ರಚನೆಗಳು ಪೂರ್ಣವಾಗಿ ಲಯವಾಗ ಬೇಕು. ಈ ಛಂದೋರಚನೆಯ ಮೂಲಘಟಕಗಳು ಯಾವುವು? ಅಕ್ಷರಗಳಲ್ಲ, ಮಾತ್ರೆಗಳಲ್ಲ, ಅಂಶಗಳಲ್ಲ. ಆದರೆ ಶಬ್ದಗಳೇ ಇಲ್ಲಿಯ ಘಟಕಗಳು. ಶಬ್ದಗಳು ತಮ್ಮ

ಅಕ್ಷರಗಳನ್ನು ಅಗಲಿಸುತ್ತ ಒಮ್ಮೊಮ್ಮೆ ಬೇರೆ ಶಬ್ದಗಳ ಅಕ್ಷರಗಳನ್ನು ಕೂಡಿಕೊಳ್ಳುತ್ತ ಛಂದೋವ್ಯೂಹವನ್ನು ರಚಿಸಿಕೊಳ್ಳುತ್ತವೆ. ಅರ್ಥ ಈ ವ್ಯೂಹಕ್ಕೆ ತಕ್ಕ ಹಾಗೆ ವ್ಯತ್ಯಾಸಗೊಳ್ಳುತ್ತ ಬಣ್ಣ ಬದಲಾಯಿಸುತ್ತದೆ.

ದಲಿತರ ನೋವುಗಳಿಗೆ ಸ್ಪಂದಿಸಿದ ಸಿದ್ಧಲಿಂಗಯ್ಯನವರ 'ಹೊಲೆ ಮಾದಿಗರ ಹಾಡು' ಸಂಕಲವು ೧೯೭೫ರಲ್ಲಿ ಪ್ರಕಟವಾಯಿತು. ದಲಿತ ಸಾಹಿತ್ಯವು ಬಹುಮಂದಿ ಓದುಗರ ಗಮನವನ್ನು ಸೆಳೆದದ್ದು ಈ ಪ್ರಕಟಣೆಯಿಂದಲೇ.

ಇಕ್ರಲಾ ವದೀರ್ಲಾ
ಈ ನನ್ನ ಮಕ್ಕಳ ಚರ್ಮ ಎಬ್ರಲಾ
ದೇವ್ರು ಒಬ್ರೇ ಅಂತಾರೆ
ಓಣಿಗೊಂದೊಂದು ತರಾ ಗುಡಿ ಕಟ್ಟವ್ರೆ
ಎಲ್ಲಾರು ದೇವ್ರ ಮಕ್ಳು ಅಂತಾರೆ
ಹೊಲೇರ್ನ ಕಂಡ್ರೆ ಹಾವ್ ಕಂಡಂಗಾಡ್ತಾರೆ

(ಸಿದ್ಧಲಿಂಗಯ್ಯ-'ಒಂದು ಪದ')

ನೇರವಾದ, ನಯವನ್ನು ತಿರಸ್ಕರಿಸುವ ರೋಷದ ಭಾಷೆ ಇದು. ಜಡವಾಗಿ ಕುಳಿತ ಜನಾಂಗವೊಂದಕ್ಕೆ ಬಂಡೇಳಲು ಕೊಡುವ ಈ ಕರೆ ಭಾಷೆಯ ಹಸಿತನ, ದಲಿತರ ಮೈಯನ್ನು ಚುರುಕು ಗೊಳಿಸಿತು. ಓದಿದವರನ್ನು ಬೆಚ್ಚಿ ಬೀಳಿಸುವ ಬರಹ ಇದು. ಈ ಕವನದಲ್ಲಿ ಒಂದ ಇಡೀ ಸಮುದಾಯವು ಮಾತನಾಡಿತು. ತನ್ನ ಮತ್ತು ಸಮಾಜದ ಸಂಬಂಧವನ್ನು ವಿಶ್ಲೇಷಿಸಿತು, ಪ್ರತಿಭಟಿಸಿತು. ಸಿದ್ಧಲಿಂಗಯ್ಯನವರು ತಮ್ಮ ಕಾವ್ಯದಲ್ಲಿ ಹೊಚ್ಚ ಹೊಸ ಪ್ರತಿಮೆಗಳನ್ನು ರೂಪಿಸಿದರು; ಬಳಸಿದರು.

ನನ್‌ಮ್ಯಾಲೆ ನಿತ್ಕಂಡ್ ತುಳೀ ತೀರೋ ಈ ಬಂಗ್ಲೆ
ಕ್ಳಕ್ ಬೀಳಂಗೆ
ಸೌದೆ ಸಿಗದಂಗ್ ಸಿಗೀತೀನಿ, ಸಾವ್ಕಾರಿ ಮಯ್ಯ
ಕಳ್ಳು ಪಚ್ಚಿ ಬಗೀತೀನಿ, ಕುಟ್ತೀನಿ
ಗಂಟ್ಮೂಳಿ ಕೊಬ್ಬ
ಕುಡೀತೀನಿ ಗಟಗಟನೆ, ಹ್ಯಂಡ ಕುಡ್ದಂಗ್
ಸಾವ್ಕಾರಿ ರಕ್ತನ
ನಾ ಮೂಳೆ, ನಾ ಇಂಗೇ ಇರಲ್ಲ
ಕೂಗ್ತೀನಿ, ಸಿಡಿತೀನಿ, ಮನುಷ್ಯ ಆಯ್ತೀನಿ

(ಸಿದ್ಧಲಿಂಗಯ್ಯ-ಒಂದು ಮೂಳೆಯ ಹಾಡು)

ಯುಗ ಯುಗಗಳಿಂದ ಶೋಷಣೆಗೆ ಒಳಗಾಗಿ ರಕ್ತಮಾಂಸಗಳನ್ನು ಕಳೆದುಕೊಂಡು ಬರಿ ಮೂಳೆಯಾದ 'ಒಂದು ಮೂಳೆಯ ಹಾಡು' ಕವನದ ಈ ಪಂಕ್ತಿಗಳ ಕಡೆಯ ಪದವೃಂದ 'ಮನುಷ್ಯ ಆಯ್ತೀನಿ' ಅನಿರೀಕ್ಷಿತವಾದರೂ ಹಿಂದಿನ ಕ್ರಿಯೆಗಳ ಸಂದರ್ಭದಲ್ಲಿ ಅಚ್ಚರಿಗೊಳಿಸುವುದು, ಅನಂತರ ಅರ್ಥವನ್ನು ತುಂಬಿಕೊಳ್ಳುವುದು ಕವಿ ಲಯಗಳನ್ನು ಎಷ್ಟು ಪರಿಣಾಮಕಾರಿಯಾಗಿ ಬಳಸಬಲ್ಲರು ಎಂದು ತೋರಿಸಿಕೊಟ್ಟಿತು.

ಇದರಲ್ಲಿ ಧ್ವನಿ ಇಲ್ಲ, ನಿಜ. ಆದರೆ ಶಕ್ತಿಯಿದೆ. ಶತಮಾನಗಳ ಅನ್ಯಾಯವನ್ನು ಕಣ್ಣು ಮುಂದೆ ನಿಲ್ಲಿಸುವ ಸಾಮರ್ಥ್ಯವಿದೆ. ದಲಿತರಿಗೆ ಆತ್ಮವಿಶ್ವಾಸ ತುಂಬುವ ತೇಜಸ್ಸಿದೆ.

ಹಸಿವಿನಿಂದ ಸತ್ತೋರು, ಸೈಜುಗಲ್ಲು ಹೊತ್ತೋರು
ವದೆಸಿಕೊಂಡು ವರಗಿದೋರು, ನನ್ನ ಜನಗಳು
ಕಾಲು ಕಯ್ಯಿ ಹಿಡಿಯೋರು, ಕೈ ಮಡಗಿಸಿಕೊಳ್ಳೋರು
ಭಕ್ತರಪ್ಪ ಭಕ್ತರೋ ನನ್ನ ಜಗಳು

(ಸಿದ್ಧಲಿಂಗಯ್ಯ-ನನ್ನ ಜನಗಳು-ಹೊಲೆ ಮಾದಿಗರ ಹಾಡು)

'ಹೊಲೆ ಮಾದಿಗರ ಹಾಡು' ತನ್ನ ಹೆಸರೇ ಸೂಚಿಸುವಂತೆ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ನೊಂದುಕೊಂಡ ಜನಾಂಗವೊಂದರ ಬದುಕಿನ ಚಿತ್ರಣವಾಗಿದೆ. ಈ ಸಮಾಜದಲ್ಲಿ ಅವರಿಗಿರುವ ಸ್ಥಾನ, ಅವರ ದುಡಿತಕ್ಕಿರುವ ಪ್ರತಿಫಲ, ಎಲ್ಲರಂತೆ ತಾವೂ ಮನುಷ್ಯರಾಗಿ ಬಾಳಬೇಕೆನ್ನುವ ಹಂಬಲ ಇಲ್ಲಿಯ ಕವನಗಳ ಆಶಯ. ಈ ಕವನಗಳನ್ನು ಗಟ್ಟಿಯಾಗಿ, ಲಯಬದ್ಧವಾಗಿ ಹಾಡಿದಾಗ, ಓದಿಕೊಂಡಾಗ ಹಾಡುಗಳು ನಾದ, ಅಬ್ಬರದ ಲಯ, ಕಿವಿಗೆ ಅಪ್ಪಳಿಸುತ್ತದೆ. ಜನಪದ ಗತ್ತು ಮತ್ತು ಮಟ್ಟುಗಳು ಇವುಗಳ ಜೀವಾಳ. ಗಟ್ಟಿಯಾಗಿ ಹಾಡಿದಾಗ ಶಾಬ್ದಿಕ ರೂಪಕ್ಕೆ ಹಲವಾರು ಅರ್ಥಗಳು ಹುಟ್ಟಿಕೊಳ್ಳುತ್ತಾ ಹೋಗುತ್ತವೆ. ಆಗ ಸಿದ್ಧಲಿಂಗಯ್ಯನವರ ಭಾಷೆ ದೃಶ್ಯರೂಪವನ್ನು ತಾಳುತ್ತದೆ. ಇಲ್ಲಿಯ ಪದ್ಯಗಳ ಛಂದೋಗತಿಯನ್ನು, ಬಳಸಿದ ಭಾಷೆಯನ್ನು ನೋಡಿದಾಗ ಜನಪದ ಸಾಹಿತ್ಯದ ಪ್ರಭಾವ ಕಂಡುಬರುತ್ತದೆ. ಆರಿಸಿಕೊಂಡ ವಸ್ತುವಿಗೆ ತಕ್ಕಂತೆ ಭಾಷೆಯನ್ನು ಬಳಸುತ್ತ ಆಡುಮಾತಿನ ಶಬ್ದಗಳಿಗೆ, ಪದ್ಯದ ಪರಿಮಿತಿಯಲ್ಲಿ ವಿಶಿಷ್ಟಾರ್ಥಗಳನ್ನು ಕಲ್ಪಿಸುವುದು ಸಿದ್ಧಲಿಂಗಯ್ಯನವರ ಶೈಲಿಯ ವೈಶಿಷ್ಟ್ಯ. ಭಾರತೀಯ ಕಾವ್ಯಮೀಮಾಂಸೆ ಪ್ರತಿಪಾದಿಸುವ ಕುಸುರಿನ ಕೆಲಸ, ನಾಜಕುತನವನ್ನು ತಿರಸ್ಕರಿಸಿ, ಅಗಾಧ ಚೈತನ್ಯವುಳ್ಳ ಹೊಸ ಉಪಮೆ, ರೂಪಕ, ಪ್ರತಿಮೆಗಳನ್ನು ಸಿದ್ಧಲಿಂಗಯ್ಯನವರು ಸಮರ್ಥವಾಗಿ ಬಳಸಿದರು.

ಜನಪದ ಮಟ್ಟುಗಳಲ್ಲಿ ದೇಸಿ ಶೈಲಿ ಅಭಿವ್ಯಕ್ತಗೊಂಡಿದೆ. ಶಿಥಿಲತೆ, ವಿಸ್ತೃತತೆ ಅವುಗಳ ಲಕ್ಷಣವಾಗಿದೆ. 'ಮಾಳಿಂಗರಾಯ' ಕಾವ್ಯವನ್ನು ಕೇಂದ್ರವಾಗಿಟ್ಟುಕೊಂಡು ಜನಪದ ಮಟ್ಟುಗಳು ಶೈಲಿಯ ನೆಲೆಯನ್ನು ಗುರುತಿಸಬಹುದು. ನಮ್ಮ ನಾಡಿನಾದ್ಯಂತ ಹತ್ತಾರು ಜನಪದ ಮಹಾಕಾವ್ಯಗಳು ಲಭ್ಯವಿವೆ (ಮಲೆಮಾದೇಶ್ವರ, ಮಂಟೇಸ್ವಾಮಿ ಮುಂತಾದುವು).

ಅಂತಹವುಗಳಲ್ಲಿ ಮಾಳಿಂಗರಾಯನ ಕಾವ್ಯವು ಒಂದಾಗಿದೆ.* ಅದು ಹಾಲುಮತ ಸಮುದಾಯದ ಒಳಪದರುಗಳನ್ನು ನಿರೂಪಿಸಬಲ್ಲಂತಹ ಶಕ್ತಿಯನ್ನು ಪಡೆದಿದೆ. ಮಾಳಿಂಗ ರಾಯನನ್ನು ಕುರಿತು ಜಾತ್ರೆ, ಉತ್ಸವಗಳಲ್ಲಿ ಹಾಲುಮತ ಸಮುದಾಯದವರು ರಾಗಬದ್ಧವಾಗಿ ಹಾಡುತ್ತಾರೆ. ಈ ಕಾವ್ಯವನ್ನು ಓದುವುದಕ್ಕಿಂತ ಹಾಡಿನ ರೂಪದಲ್ಲಿ ಕೇಳಿದರೆ ಮನಸ್ಸಿಗೆ ಮುದನೀಡುತ್ತದೆ. ಈ ಅಧ್ಯಾಯದಲ್ಲಿ ಆ ಕಾವ್ಯದ ಧಾಟಿಯನ್ನು ಕುರಿತು ವಿವೇಚಿಸಲಾಗಿದೆ. ಈ ಕಾವ್ಯವನ್ನು ನಾಲ್ಕು ಜನ ಕಲಾವಿದರು ಸೇರಿ ಹಾಡುತ್ತಾರೆ. ಇಬ್ಬರು ಮುಮ್ಮೇಳದವರು; ಇಬ್ಬರು ಹಿಮ್ಮೇಳದವರು. ಮುಮ್ಮೇಳದವರು ಡೊಳ್ಳಿನ ಮೇಲೆ ಕೈಪೆಟ್ಟು ಹಾಕುತ್ತಾ

ಶಿವನೇ ನಮ್ಮಯ ದೇವರು ಬಂದಾನ ಬನ್ನಿರೆs
ಸ್ವಾಮಿ ನಮ್ಮಯ ದೇವರು ಬಂದಾನ ಬನ್ನಿರೆs

ಎಂದು ಹಾಡುತ್ತಾ ಕತೆ ಆರಂಭಿಸುತ್ತಾರೆ. ಹಿಮ್ಮೇಳದವರು, ಮುಮ್ಮೇಳದವರು ಹಾಡಿದ ಪದವನ್ನೇ ಹಾಡುತ್ತಾರೆ. ಕಲಾವಿದರು ಡೊಳ್ಳು, ತಾಳಗಳ ನೆರವಿನಿಂದ ಹಾಡಿನ ಮಧ್ಯ ಕೇಕೆ ಹಾಕುತ್ತ, ಆಲಾಪ ಮಾಡುತ್ತ ಅತ್ಯಂತ ಎತ್ತರದ ಧ್ವನಿಯಲ್ಲಿ ಹಾಡುವ ಈ ಕಾವ್ಯವನ್ನು ಕೇಳುವುದೇ ಒಂದು ಸೊಗಸು.

ಈ ಕಾವ್ಯದ ಕಥಾನಾಯಕರು ಮಾಳಿಂಗರಾಯ ಮತ್ತು ಜಕ್ಕಪ್ಪರಾಯ. ಪಶುಪಾಲನೆ ಇವರ ಕಾಯಕ. ಇವರ ತಂದೆ ತುಕ್ಕಪ್ಪರಾಯ, ತಾಯಿ ಅಮೃತ ತಾಯಿ. ಇವರಿಗೆ ಸುಮಾರು ವರ್ಷಗಳ ಕಾಲ ಮಕ್ಕಳಾಗದೆ ತುಂಬ ಕೊರಗುತ್ತಿದ್ದರು. ಸಂತಾನ ಪಡೆಯುವುದಕ್ಕಾಗಿ ತಪಸ್ಸು, ಪೂಜೆ ಮಾಡುತ್ತಾರೆ. ಸಹಜವಾಗಿ ಬಂಜೆತನದಿಂದ ಮುಕ್ತರಾಗಲು ಹವಣಿಸುತ್ತಾರೆ.

ಮಕ್ಕಳಿಲ್ಲದಕ ಮನಸ್ಸು ಮರಗುತ್ತಿತ್ತೋss
ದಿನಕೆರಡು ಹೊತ್ತೋss
ಇಪ್ಪತ್ತ ಮೂರು ದಿವಸಾs
ಮಳಿಯ ನಡೆದಿತ್ತೋs
ಸಿಡಿಲ ಕಡಲ ಬಿತ್ತೋs
ತಪದ ಬಲದಿಂದ ಸಿಡಿಲ ಬಿತ್ತೋs
ಹನ್ನೆರಡು ವರುಷಾ
ತಪಗೈದ ಮ್ಯಾಲ
ದೇವರಿಗೆ ಅರುವಾಯ್ತೋ

ಆ ದಂಪತಿಗಳ ತಪಸ್ಸು ಹಾಗೂ ಶ್ರದ್ಧೆಗೆ ದೇವರು ಮೆಚ್ಚಿ, ಪುತ್ರ ಸಂತಾನ ಕೊಡುತ್ತಾನೆ. ಆಗ ಮಾಳಪ್ಪ, ಜಕ್ಕಪ್ಪ ಹುಟ್ಟುತ್ತಾರೆ. ಈ ಹಾಡಿನ ಧಾಟಿಯನ್ನು ಗಮನಿಸಿದಾಗ ಪ್ರಾಸಬದ್ಧ ವಾದ ಮೂರು, ನಾಲ್ಕು ಮಾತ್ರೆ ಗಣಗಳ ಛಂದಸ್ಸು ಕಾವ್ಯದುದ್ದಕ್ಕೂ ಬಳಕೆಯಾಗಿದೆ. ಜಕ್ಕಪ್ಪ, ಮಾಳಪ್ಪ ಜೋಡಿ ಗೆಳೆಯರಂತೆ ಬೆಳೆಯುತ್ತಾರೆ.

ಜಂಭೂದ್ವೀಪ ಅನ್ನೊ ಸ್ಥಳಕ,
ಹುಣವಿ ಚಂದ್ರನಂಗ
ಜಕ್ಕಪ್ಪ ಮಾಳಪ್ಪ ಬೆಳದಾರೋ
ಜಕ್ಕಪ್ಪ ಮಾಳಪ್ಪ ಜ್ಯೋತಿರೂಪ

ಕಾವ್ಯದ ಅಭಿವ್ಯಕ್ತಿಯು ಲವಲವಿಕೆಯಿಂದ ಕೂಡಿದೆ. ಭಾವ ತೀವ್ರತೆಯನ್ನು ಕಾವ್ಯಮಯವಾಗಿ ಪರಿವರ್ತಿಸಲು ಕಲಾವಿದರು ತಮಗರಿಯದಂತೆಯೇ ಭಾಷೆಯೊಡನೆ ನಡೆಸುವ ಅನುಸಂಧಾನದೊಂದಿಗೆ ಅವರು ಹಾಡುವ ದಾಟಿ ರೂಪುಗೊಂಡಿದೆ. ಮಾಳಿಂಗರಾಯ ಮತ್ತು ಜಕ್ಕಪ್ಪರಾಯರಿಗೆ ಪಶುಗಳೇ ಪ್ರಧಾನ ಸಂಪತ್ತು. ಪಶುಪಾಲನೆಯೇ ಗುರುವಿನ ಸೇವೆಯೆಂದು ಅವರು ನಂಬಿರುತ್ತಾರೆ.

ಗುರುವಿನ ಕಿಲ್ಲಾರ ಈಗ
ನಮ್ಹಂತೇಕಽ
ಮರುಗುತಾನ ನೋಡತಮ್ಮಾ
ಹೊಟ್ಟಿಗಿ ಇಲ್ಲದಕ

ಇಂತಹ ಪುಟ್ಟ ಪುಟ್ಟ ವಾಕ್ಯಗಳು ಕಾವ್ಯದುದ್ದಕ್ಕೂ ಬಳಕೆಯಾಗಿವೆ. ಅಪ್ಪಟ ಕನ್ನಡ ಮಾತುಗಳೇ ಅಧಿಕ. ಕ್ರಿಯೆಯನ್ನು ನಿರ್ವಿಘ್ನವಾಗಿ ಮುಂದೆ ಹರಿಸುವ ಚಾಲನ ಶಕ್ತಿಯಾಗಿ ಭಾಷೆ ಮೂಡಿದೆ. ಸಂವಾದದಲ್ಲಿ ಬಳಕೆಯಾಗುವ ಪಂಕ್ತಿ ತುಂಡುಗಡಿದು ವಿರಾಮ ಸಂಭವಿಸಿದರೂ ಕಾವ್ಯದ ಅಭಿವ್ಯಕ್ತಿಗೆ ತೊಡಕಾಗುವುದಿಲ್ಲ. ಮಾಳಿಂಗರಾಯನು ಕುರಿ ಕಾಯುವ ಸನ್ನಿವೇಶದ ಸ್ವಭಾಯೋಕ್ತಿಯಿಂದ ಕೂಡಿದೆ. ಕೆಲವನ್ನು ಉದ್ಧರಿಸಬಹುದುದಾಗಿದೆ.

ಬೀಜ ಗುಂತಿ ಮ್ಯಾಲ ದಡ್ಡೀಽ
ತಾವೆ ಹಾಕಿದವರಾಽ
ಹೆಗಲ ಮ್ಯಾಗ ಹೋಮದ ಕಂಬಳಿ ಹೊತ್ಕೊಂಡುಽ
ಕೈಯಾಗ ನೇಮದ ಬೆತ್ತಾ ಹಿಡಕೊಂಡುಽ
ಮಾಳಪ್ಪ ಕುರಿ ಕಾಯ್ತಾನಽ
ಕುರಿಗೊಳ ಹಟ್ಯ್ಯಾಗ ಮರಿ ಹಾಕ್ಯಾವಽ
ಬಾಗಿದೊಡ್ಡಿಗೆ ಬಂದಾನೋಽ

ಪ್ರತಿಯೊಂದು ಪಂಕ್ತಿಯಲ್ಲಿ ೩+೪ ಮಾತ್ರೆಯ ಗಣಗಳಿವೆ. ಕೊನೆಯ ಗಣದ ಕೊನೆಯ ಅಕ್ಷರವು ವಿರಾಮದ ಕೊರತೆಯನ್ನು ತುಂಬಿ ಕೊಡುವುದರಿಂದ ಅದನ್ನು ಹ್ರಸ್ವವಿದ್ದರೂ ದೀರ್ಘವಾಗಿಯೇ ಉಚ್ಚರಿಸಬೇಕಾಗುತ್ತದೆ. ೪ ಮಾತ್ರೆಯ ಗಣವು ಇಲ್ಲಿಯ ಮೂಲ ಮಾನವಾದರೂ ಭಾವ ಲಯಕ್ಕೆ ಅನುಕೂಲವಾಗುವಂತೆ ಪದಗಳನ್ನು ಎಳೆದೋ ಮೊಟಕುಗೊಳಿಸಿಯೋ ಉಚ್ಚರಿಸಬೇಕಾಗುತ್ತದೆ. ಇದರಿಂದಾಗಿ ಛಂದೋಗತಿಯಲ್ಲಿ ಏಕತಾನತೆಯನ್ನು ತಪ್ಪಿಸಿ, ವೈವಿಧ್ಯ ಮಾಧುರ್ಯವನ್ನು ಸಾಧಿಸಲು ಸಾಧ್ಯವಾಗುತ್ತದೆ.

ಹೀಗೆ, ಕಾವ್ಯ ಶೈಲಿ ಮತ್ತು ಛಂದಸ್ಸುಗಳ ಸಂಬಂಧ ಸಜೀವವಾಗಿದೆ. ಕಾವ್ಯದಲ್ಲಿ ಅವುಗಳಲ್ಲಿ ಹೊಂದಿಕೆಯಿದ್ದಾಗ ಮಾತ್ರ ಕಾವ್ಯದ ಜೀವಾಳವಾದ ರಸದ ಬುಗ್ಗೆ ಉಕ್ಕುತ್ತದೆ. ಹೊಸಕವಿಗಳು ಪ್ರಾಸ, ಯತಿ, ಲಯ, ನುಡಿರಚನೆ ಇವುಗಳಲ್ಲಿ ವಿಶೇಷ ರೀತಿಯ ಪ್ರಯೋಗಗಳನ್ನು ಮಾಡುವುದರ ಮೂಲಕ ಕನ್ನಡ ಛಂದೋವಿಕಾಸಕ್ಕೆ ದಾರಿಯೊಂದನ್ನು ನಿರ್ಮಿಸಿ ಕೊಟ್ಟರು.

ಅಡಿಟಿಪ್ಪಣಿಗಳು

೧. ಕೆ.ವಿ. ನಾರಾಯಣ, ಶೈಲಿಶಾಸ್ತ್ರ (ದ್ವಿತೀಯ ಮುದ್ರಣ ೧೯೯೮), ಪು. ೨, ಕರ್ನಾಟಕ ಸಾಹಿತ್ಯ ಅಕಾಡೆಮಿ

೨. ಕೆ.ವಿ. ನಾರಾಯಣ, ಪೂರ್ವೋಕ್ತ, ಪು. ೯

* ಗಂಗಾಧರ ದೈವಜ್ಞ ಅವರು ಮಾಳಿಂಗರಾಯನ ಕಾವ್ಯವನ್ನು ಸಂಪಾದಿಸಿ ಪರಿಷ್ಕರಿಸಿದ್ದಾರೆ. (೧೯೯೯) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಆಕರಗ್ರಂಥ

೧. ಕರ್ಕಿ ಡಿ.ಎಸ್., ೧೯೯೨, ಕನ್ನಡ ಛಂದೋವಿಕಾಸ, ಭಾರತ ಬುಕ್ ಡಿಪೋ, ಧಾರವಾಡ.

೨. ನಾರಾಯಣ ಪ್ರಸಾದ ಕೆ.ಜಿ., ೧೯೯೭, ಹೊಸಗನ್ನಡ ಕವಿತೆಯ ಛಂದಸ್ಸು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೦

ಶಂಬಾ : ಗದ್ಯಶೈಲಿ

೧

'ಶೈಲಿ' ಎಂದರೆ ಬರಹಗಾರರ ಅಭಿವ್ಯಕ್ತಿಯ ವೈಲಕ್ಷಣವಾಗಿದೆ. ಬರೆಹಗಾರರ ಯಶಸ್ಸಿಗೆ ಅವರ ಅಭಿವ್ಯಕ್ತಿಯ ವಿಧಾನವು ಮಹತ್ವದ ಪಾತ್ರವಹಿಸುತ್ತದೆ. ಗದ್ಯಶೈಲಿಯು ಪದ್ಯವನ್ನು ಬಿಟ್ಟು ಉಳಿದ ಸಾಹಿತ್ಯ ಪ್ರಕಾರಗಳಾದ ಕತೆ, ಕಾದಂಬರಿ, ನಾಟಕ, ಲಲಿತ ಪ್ರಬಂಧ ಹಾಗೂ ಸೃಜನೇತರ ಸಾಹಿತ್ಯಗಳಲ್ಲಿಯ ನಿರೂಪಣೆಗೆ ಸಂಬಂಧಿಸಿರುತ್ತದೆ. ಶಂಬಾ ಅವರು ತಮ್ಮ ಅಭಿವ್ಯಕ್ತಿಗೆ ಸೃಜನೇತರ ಸಾಹಿತ್ಯ ಪ್ರಕಾರವನ್ನು ಆರಿಸಿಕೊಂಡಿರುವುದರಿಂದ ಅವರ ಶೈಲಿಯ ಸಾಧನೆಯು ಗದ್ಯದಲ್ಲಿಯೇ ಇದೆಯೆಂಬುದು ಸ್ಪಷ್ಟವಾಗುತ್ತದೆ. ಅವರ ಗದ್ಯಶೈಲಿಯ ಸ್ವರೂಪವನ್ನು ಈ ಅಧ್ಯಾಯದಲ್ಲಿ ವಿವೇಚಿಸಲಾಗಿದೆ.

ಗದ್ಯರಚನೆ ಲೇಖಕನ ಪ್ರತಿಭೆಯನ್ನು ಪರೀಕ್ಷಿಸಬಹುದಾದ ಒರೆಗಲ್ಲೆಂಬ ಮಾತು ಎಷ್ಟು ಪ್ರಾಚೀನವೋ ಅಷ್ಟೇ ನೂತನವೂ ಆಹುದು. ಚಮತ್ಕಾರಯುತವಾದ ಪದಪ್ರಯೋಗ, ಲವಲವಿಕೆಯಿಂದ ಕೂಡಿದ ವಾಕ್ಯ ರಚನೆ, ಆಡುಮಾತಿಗೆ ಹತ್ತಿರವಾದ ನಿರಾಧಾರಣವಾದ ಗದ್ಯ ಆಕರ್ಷಣೀಯವಾಗಬೇಕಾದರೆ ಲೇಖಕ ತನ್ನ ಶಕ್ತಿ ಸಾಮರ್ಥ್ಯಗಳನ್ನೆಲ್ಲ ಅದರ ಶ್ರೇಯಸ್ಸಿಗಾಗಿ ಸಮರ್ಪಿಸಬೇಕಾಗುತ್ತದೆ. ಪ್ರಾಚೀನ ಅಲಂಕಾರಿಕರು ಕಾವ್ಯವನ್ನು ಮೂರು ವಿಭಾಗಗಳನ್ನಾಗಿ ವಿಂಗಡಿಸಿ ಗದ್ಯವೂ ಕಾವ್ಯ ಪ್ರಕಾರಗಳಲ್ಲೊಂದೆಂದು ನಿಗದಿಸುತ್ತಾರೆ. ಅವರ ದೃಷ್ಟಿಯಲ್ಲಿ ಪದ್ಯ, ಗದ್ಯಗಳ ನಡುವಣ ಅಂತರ ಬಾಹ್ಯರೂಪಕ್ಕೆ ಸಂಬಂಧಿಸಿದ್ದೇ ಹೊರತು ಆಂತರಿಕ ಗುಣಕ್ಕೆ ಅನ್ವಯವಾಗುವಂತಹುದಲ್ಲ.

ಪದ್ಯದಲ್ಲಿ ನಿಯತಲಯವಿದ್ದರೆ, ಗದ್ಯದಲ್ಲಿ ಅನಿಯತಲಯವಿರುತ್ತದೆ. ಭಾವಾರ್ಥಾನು ಗುಣವಾದ ಅನಿಯತಲಯದಲ್ಲಿಯೂ ವಿಶೇಷ ಸ್ವಾರಸ್ಯವಿದೆಯೆಂಬುದನ್ನು ಅಲ್ಲಗಳೆಯು ವಂತಿಲ್ಲ. ಸ್ವಚ್ಛಂದ ಕಲ್ಪನಾ ವಿಲಾಸಕ್ಕೆ ಮತ್ತು ಸ್ಪಷ್ಟ ಅಭಿವ್ಯಕ್ತಿಗೆ ಗದ್ಯ ಅತ್ಯುತ್ತಮ

ಸಾಧನವಾದುದರಿಂದ ಸಂಸ್ಕೃತದ ಪ್ರಾಚೀನ ಕವಿಗಳು ಅದನ್ನು ಯಶಸ್ವಿಯಾಗಿ ಬಳಸಿಕೊಂಡು ಕಾವ್ಯದ ಮಟ್ಟಕ್ಕೇರಿಸಿದರು. 'ಪದ್ಯಂವಧ್ಯಂ ಗದ್ಯಹೃದ್ಯಂ' ಎನ್ನುವಷ್ಟರ ಮಟ್ಟಿಗೆ ಕೆಲವರು ಗದ್ಯವನ್ನು ಪ್ರಶಂಸಿಸಿದ್ದುಂಟು. ಗದ್ಯ ಕವಿಗಳಾದ ಸುಬಂಧು, ದಂಡಿ, ಬಾಣರಿಂದ ಕನ್ನಡ ಚಂಪೂ ಕವಿಗಳು ಪ್ರಭಾವಿತರಾದರೆಂಬುದು ಪ್ರಸ್ತುತದಲ್ಲಿ ಗಣನೀಯವಾದ ಸಂಗತಿ. ಛಂದಸ್ಸಿಗೆ ಆಧಾರಭೂತವಾದ ಧಾಟಿಯೆಂಬ ಒಂದು ಹ್ರಸ್ವದೀರ್ಘಾನುಕ್ರಮವು ಒಳ್ಳೆಯ ಗದ್ಯದಲ್ಲಿಯೂ ಕಾಣುತ್ತದೆ. ಜಾಗರೂಕತೆಯಿಂದ ಕಟ್ಟಿದ ವಾಕ್ಯಗಳು ಒಂದು ಪದ ಮೈತ್ರಿ, ಒಂದು ಲಯಭಂಗಿ ಇವುಗಳಿಂದಾಗಿ ಗದ್ಯ ಸುಂದರವಾಗಿರುತ್ತದೆ.

ಗದ್ಯದಲ್ಲಿ ಭಾವಕ್ಕಿಂತ ಭಾವನೆಗೆ, ಕಲ್ಪನೆಗಿಂತ ಆಲೋಚನೆಗೆ ಮಹತ್ವವಿರುತ್ತದೆ. ಭಾಷೆಯ ಗತಿ ಸಹಜವಾಗಿ, ಸಾಂದ್ರೀಕರಣಕ್ಕಿಂತ ವಿಕೀರ್ಣತೆಯ ಕಡೆಗೆ ಸಾಗುತ್ತದೆ. ಗದ್ಯಕಾರ ಹೇಳುವ ವಿಷಯ ವಿಲಂಬವಿಲ್ಲದೆ ಅಡಚಣೆಯಿಲ್ಲದೆ ನೇರವಾಗಿ, ಸ್ಪಷ್ಟವಾಗಿ ವಾಚಕನ ಮನವನ್ನು ಮುಟ್ಟುವಂತಿರಬೇಕು. ಆದ್ದರಿಂದ ನಿಗೂಢತೆಗಾಗಲಿ, ಸಾಂಕೇತಿಕತೆಗಾಗಲಿ ಗದ್ಯಭಾಷೆಯಲ್ಲಿ ಸ್ಥಾನವಿಲ್ಲ. ತಾರ್ಕಿಕತೆಗೆ, ವಾದ ವಿವಾದಗಳಿಗೆ ಗದ್ಯ ಸಮರ್ಥ ಮಾಧ್ಯಮ ವಾಗುತ್ತದೆ. ಗದ್ಯಕ್ರಿಯೆಯಲ್ಲಿ ಪದಗಳಿಗೆ ನವಚೈತನ್ಯ ಸ್ಫುರಿಸುತ್ತದೆ, ಹೊಸ ಕಸುವು ದೊರೆಕೊಳ್ಳುತ್ತದೆ. ಕವಿಗಳಿಗೆ ಮಾತ್ರವಲ್ಲ, ಗದ್ಯಕಾರನ ಪ್ರತಿಭೆಯಲ್ಲಿ ಪ್ರಾಚೀನ ಪದಗಳು ನವಜನ್ಮ ಪಡೆಯುತ್ತವೆ, ಗ್ರಾಮ್ಯಪದಗಳು ಆ ಸಂಸ್ಕಾರದಿಂದ ಅಭಿಜಾತ ಪದವಿಗೆ ಸೇರುತ್ತವೆ. ಆ ಮೂಲಕ ಗದ್ಯಕಾರನಲ್ಲಿ ಮಣ್ಣಿನ ವಾಸನೆ ಆಡುತ್ತಿರಬೇಕು.

೨

ಈ ಹಿನ್ನೆಲೆಯಲ್ಲಿ ಶಂಬಾ ಅವರ ಗದ್ಯಶೈಲಿಯ ವೈಲಕ್ಷಣವನ್ನು ಗಮನಿಸಬೇಕು. ಸಾಮಾನ್ಯವಾಗಿ ನಾವು ವ್ಯವಹಾರದಲ್ಲಿ ಬಳಸುವುದು ವಾಕ್ಯಗಳನ್ನೇ ಹೊರತು ಬರಿಯ ಬಿಡಿ ಪದಗಳನ್ನಲ್ಲ. ಈ ಪದಗಳು ವಾಕ್ಯದಲ್ಲಿ ಜೋಡಣೆಗೊಂಡಾಗ ಅವು ಪರಸ್ಪರ ಪ್ರಭಾವ ಕ್ಕೊಳಗಾಗುತ್ತವೆ, ಅವುಗಳ ನಡುವೆ ಸಂಬಂಧವೇರ್ಪಟ್ಟು, ಅದರ ಪರಿಣಾಮವಾಗಿ ಅಂದರೆ ಪರಸ್ಪರಾನ್ವಯದಿಂದ ಅರ್ಥಾಭಿವ್ಯಕ್ತಿವೊದಗುತ್ತದೆ. ಈ ಸಾಂಸರ್ಗಿಕ ವ್ಯಾಪಾರವನ್ನು ತಾತ್ಪರ್ಯವೃತ್ತಿಯೆಂದು ಹೆಸರಿಸುತ್ತಾರೆ. ವಾಕ್ಯಾರ್ಥ ಸಹ ಅಭಿಧಾವೃತ್ತಿಯಿಂದಲೇ ಹೊಮ್ಮುತ್ತ ದೆನ್ನುವವರು ಉಂಟು. ಶಂಬಾ ಅವರ ಗದ್ಯಭಾಷೆಯ ವ್ಯಾಸಂಗವನ್ನು ವಿಶೇಷ ಅವಧಾನ ದಿಂದ ನೋಡಬೇಕಾಗುತ್ತದೆ. ಅಗುಳು ಹಿಸುಕಿ ಅನ್ನದ ಪಕ್ವತೆಯನ್ನು ಪರೀಕ್ಷಿಸಬಹುದೆಂಬ ಗಾದೆ ಶಂಬಾ ಅವರ ಅಧ್ಯಯನಕ್ಕೆ ಅನ್ವಯವಾಗುವುದಿಲ್ಲ. ಅವರಲ್ಲಿ ವ್ಯಾಖ್ಯಾನ, ವಿಶ್ಲೇಷಣೆ ತುಂಬ ತರ್ಕಬದ್ಧವಾಗಿರುತ್ತದೆ.

> ೧. ಪ್ರಾಥಮಿಕ ಮಟ್ಟದಲ್ಲಿ ಬಂದ ಹೆಸರುಗಳಲ್ಲಿರುವ ಸಹಜತೆಯು ಮುಂದಿನ ಪಾಡಿನಲ್ಲಿ ಉಳಿಯುವುದು ಸಾಧ್ಯವಿಲ್ಲ. ಮಾನವನಲ್ಲಿ ಪುನರಾ ಲೋಚನೆ ವಿಮರ್ಶನಾಶಕ್ತಿಯು ತಲೆದೋರಿದಂತೆ, ವ್ಯಾಪಾರ ವ್ಯವಹಾರ, ರಾಜ್ಯತಂತ್ರ, ಧರ್ಮ ಮೊದಲಾದವುಗಳಿಗೆ ಜೀವನದಲ್ಲಿ ಮಹತ್ತ್ವವು

ಬಂದಂತೆ ಮಾನವನ ಮೊದಲಿನ ಸಹಜಪ್ರವೃತ್ತಿಯು ಬದುಕಿನಲ್ಲಿ ವಿಚಾರ, ಆಲೋಚನೆಗಳು ಹೆಚ್ಚಿನ ಸ್ಥಾನವನ್ನು ಆಕ್ರಮಿಸಿದುವು. ಎಡೆಗಳಿಗೆ ಬಂದ ಹೆಸರುಗಳಲ್ಲಿಯೂ ಇದರ ಪರಿಣಾಮವು ಕಾಣಿಸಿಕೊಳ್ಳದೆ ಇಲ್ಲ. ನೆಲದ ಗುಣ, ಬಣ್ಣ ಮೊದಲಾದವುಗಳ ನಿರೀಕ್ಷಣ, ವಿಮರ್ಶೆಯನ್ನು ಸೂಚಿಸುವ ಹೆಸರುಗಳು ಈ ಮುಂದಿನ ಮಟ್ಟದುವು ಆಗಿವೆ. ಸಹಜ ವೃತ್ತಿಯಿಂದ ವಿಚಾರಪರತೆಯ ಕಡೆಗೆ ಒಲಿದ ಹಾಗೆಲ್ಲ ಮುಂದಿನ ಕಾಲದಲ್ಲಿ ತಲೆ ಯೆತ್ತಿದ ಹೆಸರುಗಳಿವು. ಇತಿಹಾಸ, ಪುರಾಣಾದಿಗಳ ನೆನಹನ್ನು ಕೊಡು ವಂತಹವೂ ಇದೇ ಬಗೆಯಾಗಿವೆ. ಲೋಕದಲ್ಲಿ ಎಲ್ಲೆಡೆಗಳಲ್ಲಿ ಅವುಗಳಿಗೆ ಹೆಸರು ದೊರೆಕೊಂಡುದು ಇದೇ ತೆರನಾಗಿ.

೨. ಎಲ್ಲ ಭಾಗದವರೂ ಒಂದೆಡೆಗೆ ಕಲ್ತು ಇಟ್ಟ ಹೆಸರುಗಳಲ್ಲ ವಾದರೂ ಅವುಗಳಲ್ಲಿರುವ ಹೋಲಿಕೆಯು ಕೌತುಕಾಸ್ಪದವಾಗಿವೆ. ಕೆಲವೊಂದು ಸ್ವಲ್ಪ ವೈಶಿಷ್ಟ್ಯವು ಒಂದೊಂದು ಭಾಗದಲ್ಲಿದ್ದುದು ಬೇರೆ ಮಾತು. ಆದರೆ ಒಟ್ಟಿನಲ್ಲಿ ರೀತಿಯು ಒಂದೇ ಬಗೆಯದಾಗಿದ್ದುದು ಸೋಜಿಗದ ಸಂಗತಿ. ಇಲ್ಲಿಯ ವರ್ಗೀಕರಣದಲ್ಲಿ ಒಳಗೊಳ್ಳದೆ ಉಳಿದಿ ರುವ ಊರುಗಳ ಸಂಖ್ಯೆ ಅಸಂಖ್ಯವಾಗಿದೆ. ಇನ್ನೂ ಪರಿಶ್ರಮಪಟ್ಟು ಅವು ಗಳಲ್ಲಿರುವ ಒಂದು ಕಟ್ಟನ್ನು ಕಂಡುಕೊಳ್ಳಬಹುದಾಗಿದೆ. ಒಂದೊಂದು ಗುಂಪಿನಲ್ಲಿರುವ ಹೆಸರುಗಳೆಲ್ಲ ಒಂದೇ ಕಾಲಕ್ಕೆ ಮುಂದೆ ಬಂದುವೆಂದು ಭಾವಿಸಲಾಗದು. ಅವುಗಳಲ್ಲಿ ಎಷ್ಟೋ ಶತಮಾನಗಳ ಅಂತರವು ಇರಲಿಕ್ಕೆ ಸಾಕು. ಆದರೂ ಅವು ಆ ಒಂದು ಪರಂಪರೆಯು ಹೇಗೆ ಅವಿಚ್ಛಿನ್ನವಾಗಿ ನಡೆದು ಬಂದಿತೆಂಬುದನ್ನು ಸೂಚಿಸುತ್ತವೆ.

೩. ನಿಶ್ಚಿತ ಆಧಾರಗಳು ದೊರೆಯುವುದು ಸಾಧ್ಯವಿಲ್ಲದ್ದರಿಂದ ಈ ವರ್ಗೀಕರಣದಲ್ಲಿ ಕೆಲವೊಂದು ತಪ್ಪುಗಳು ಆಗಿದ್ದುದನ್ನು ಒಪ್ಪಲೇಬೇಕು. ಪ್ರಾಣಿಗಳಿಂದ ಬಂದ ಹೆಸರುಗಳಲ್ಲಿ 'ನಾಗ'ರಿಂದ ಬಂದವುಗಳನ್ನು ಹಾವಿನ ಹೆಸರಿನ ಗುಂಪಿನಲ್ಲಿ ಸೇರಿಸಿಲ್ಲ. ಏಕೆಂದರೆ 'ನಾಗರು' ಎಂಬ ಒಂದು ಜನವು ಈ ನಾಡಿನಲ್ಲಿ ಒಂದು ಕಾಲಕ್ಕೆ ನೆಲಸಿದ್ದಿತು. 'ನಾಗನೂರು' ಮೊದಲಾದುವು ಈ ಬಗೆಯವು, ಹಾವಿನಿಂದ ಬಂದುವಲ್ಲವೆಂದು ನನ್ನ ಗ್ರಹಿಕೆ. ಆದರೆ, ಕೆಲವೆಡೆಗೆ ಪ್ರೌಢ ಗಂಭೀರ ಹೆಸರೆಂದು ಭಾವಿಸಿದ್ದಲ್ಲಿ, ಹಾವಿಗೆ ನಾಗವೆಂದು ಹೇಳಿ ಒಂದು ಹಾವನೂರು>ನಾಗನೂರಾಗಿದ್ದರೂ ಇರಬಹುದು. ಅಥವಾ ಹಾವಿನ ವಿಶಿಷ್ಟ ಜಾತಿಯನ್ನು ನಾಗವನ್ನು ನೆನೆದು ಆ ಹೆಸರು ಕೆಲವೆಡೆಗೆ ಬಂದಿದ್ದರೂ ಬಂದಿರಬಹುದು.

(ಎಡೆಗಳು ಹೇಳುವ ಕಂನಾಡ ಕತೆ, ಪು. ೧೨೬-೧೨೭
ಶಂಬಾ ಕೃತಿ ಸಂಪುಟ ೨.)

ಮೊದಲ ಅವತರಣಿಕೆಯಲ್ಲಿ ತ್ವರಿತವಾಗಿ ಅರ್ಥಗ್ರಹಿಕೆಗೆ ಅನುಕೂಲವಾಗುವಂತೆ ಅಚ್ಚಗನ್ನಡದ ತುಂಡು ತುಂಡು ಮಾತುಗಳು ಬರುತ್ತವೆ. ಸಂಸ್ಕೃತ ಅಥವಾ ಅನ್ಯಭಾಷೆಯ ಪದಗಳು ಎರಡು-ಮೂರಿದ್ದರೆ ಹೆಚ್ಚು. ಎರಡು-ಮೂರನೆಯ ಉದಾಹರಣೆಯಲ್ಲಿ ದೀರ್ಘ ಸ್ವರ, ಅನುಸ್ವರಗಳ ವಿನ್ಯಾಸವೂ, ಲಯದ ಲಾವಣ್ಯವೂ, ಪದಗಳ ಪುನರಾ ವರ್ತನವೂ, ಸಂಸ್ಕೃತ ಪದಪ್ರಯೋಗವೂ ಸ್ಥಳನಾಮಗಳ ಸ್ವರೂಪದ ಕಲ್ಪನೆಯು ಸುಂದರ ವಾಗಿ ಪ್ರಕಟಿಸುತ್ತವೆ. ಅಂತೆಯೇ ಈ ಕೃತಿಯಲ್ಲಿ ಬರುವ ಸ್ಥಳನಾಮಗಳು, ಆಡುಮಾತು ಗಳು, ಪಡೆನುಡಿಗಳು ಭಾಷೆಯ ಬಿಗುವನ್ನೂ ಜೀವಂತಿಕೆಯನ್ನು ಪುಟಗೊಳಿಸಿ ಅದರ ವಾಸ್ತವತೆ ಯನ್ನು ಮೆರೆಸುತ್ತವೆ. ಯುಕ್ತ ಪದಗಳ ಆಯ್ಕೆಗೆ ಶಂಬಾ ಅವರ ಸ್ವೋಪಜ್ಞತೆ ಮತ್ತು ಸಂವೇದನೆಗಳು ಕಾರಣವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಆದರೆ ಈ ವಿವರಣೆ ಈ ಮೂರು ಉದ್ಧರಣೆಗಳಿಗೆ ಮಾತ್ರ ಸೀಮಿತಗೊಂಡಿದೆಯೆಂಬುದನ್ನು ಮರೆಯಲಾಗದು. ಅನ್ಯಭಾಷೆಯ ಪದಗಳನ್ನು ಬಳಸುವಾಗ ಶಂಬಾ ಅವರು ತುಂಬ ಎಚ್ಚರವಹಿಸುತ್ತಾರೆ. ಕನ್ನಡ ಭಾಷೆಯ ಜಾಯಮಾನಕ್ಕೆ ಭಂಗ ಬರದಂತೆ, ಕಿವಿಗೆ ಕರ್ಕಶವಾಗದಂತೆ ಅಕ್ಕಪಕ್ಕದ ಕನ್ನಡ ಪದಗಳ ಧ್ವನಿ ಸಮುದಾಯದೊಡನೆ ಮಿಳಿತಗೊಳ್ಳುವಂತೆ ಅನ್ಯಭಾಷೆಯ ಶಬ್ದಗಳನ್ನು ಪವಣಿಸಿದ್ದಾರೆ. ಕನ್ನಡ ನಾಡು ನುಡಿಯ ಬಗೆಗೆ ಬರೆಯುವಾಗ ಭಾವಾಲೋಚನೆಗೆ ತಕ್ಕಂತೆ ಪದಗಳ ಮಾಧುರ್ಯ ಗಾಂಭೀರ್ಯಗಳು ಧ್ವನಿಶಕ್ತಿಯಿಂದ ಫಲಿಸುತ್ತವೆ.

> ಕಂನಾಡತಾಯ ಮಕ್ಕಳು ಈವರೆಗೆ ತಮ್ಮ ತಾಯನ್ನು ಮರೆತರು. ಕಂನಾಡಿನಲ್ಲಿ ಹುಟ್ಟಿ, ಕಂನಾಡ ಅನ್ನದಿಂದ ಬೆಳೆದರೂ ಈ ಭಾಷೆಗೆ ಕೃತಜ್ಞ ರಾಗಲಿಲ್ಲ. ಪರಭಾಷೆಗೆ ಒಲಿದು ಅದನ್ನೇ ತಮ್ಮದನ್ನಾಗಿ ಮಾಡಿಕೊಂಡು ಅದಕ್ಕೆ ಪ್ರೋತ್ಸಾಹವನ್ನೀವ ಕೆಲಸವು ಈ ದೇಶದಲ್ಲಿ ಬಹುಕಾಲದಿಂದ ನಡೆಯುತ್ತ ಬಂದಿತು. ಕರ್ಣಾಟ ರಮಾರಮಣ, ಕರ್ಣಾಟ ಸಿಂಹಾಸನಾ ಧೀಶನಾದ ವಿಜಯನಗರದ ಕೃಷ್ಣರಾಜನು ತೆಲುಗಿನ ಭಕ್ತ! ಕಂನಾಡಿನ ಕೊನೆಯ ಸಾಮ್ರಾಜ್ಯದ ಕೊನೆಯ ಮಹಾರಾಜನವರೆಗೂ ಇದೇ ಹಾಡು!
>
> ಈ ಅವಸ್ಥೆಯಲ್ಲಿಯೂ ಕಂನುಡಿಯು ಬದುಕಿಕೊಂಡು ಬಾಳಿತು, ಇದೇ ಸೋಜಿಗ! ನಾಡಿನ ಕೀಳ್ಮೆ ಹಿರಿಮೆಗಳ ಪರಿಣಾಮವು ಈ ನುಡಿಯ ಮೇಲೂ ಆಗುತ್ತಿರುತ್ತದೆ. ಮೂಲತಃ ಹಿರಿದಾದ ಅರ್ಥಶಕ್ತಿಯಿರುವ ಕಂನುಡಿಯ ಆದೆಸೆಯ ಕಾಲದಲ್ಲಿ ಅದರ ಅರ್ಥಶಕ್ತಿಯೂ ಬಡವಾ ಯಿತು. ತೀರ ಕೆಳಗಿನ ಮಟ್ಟಕ್ಕೆ ಇಳಿಯಿತು. ಹಿರಿದಾದ ಅರ್ಥದಲ್ಲಿ ಪರಭಾಷೆಯ ಪದಗಳು ಮುಂದೆ ಬಂದುವು. ಸಂಕುಚಿತಾರ್ಥ, ಅಪಾರ್ಥ ದಲ್ಲಿ ಕಂನುಡಿಯ ಮಾತುಗಳು ವ್ಯವಹರಿಸಲಾರಂಭಿಸಿದುವು. ಪಟ್ಟಿ, ಪಾಡಿಗಳೆಂಬ ನಮ್ಮ ಊರ ಮತ್ತು ಜನಗಳ ಹೆಸರನು ಕೂಡ ಹೊಸಗನ್ನಡ ದಲ್ಲಿ ಹೇಳಬೇಕಾದರೆ ನಾಚಿಕೆ, ಕೀಳಭಾವವು ಬಂದಿತು!

ನಾಡಿನ ಜನಗಳಿಗೆ ತಮ್ಮ ನಾಡುನುಡಿಯಲ್ಲ ಹೆಮ್ಮೆಹಿಗ್ಗುಗಳು ಕಡಿಮೆಯಾಗುವುದು ಆ ನಾಡಿನ ಅಧೋಗತಿಯ ಪೂರ್ವಸಿದ್ಧತೆ. ಇದು ಕಂನಾಡ ಮೊದಲಿಗರಲ್ಲಿ ಎಂದಿನಿಂದಲೇ ನಡೆದುಹೋಗಿತ್ತು. ದೇವಭಾಷೆ, ಧರ್ಮಭಾಷೆ, ರಾಜಭಾಷೆ ಎಂದು ಮುಂತಾಗಿ ಕಂನುಡಿಯಲ್ಲದ ಮಾತಿಗೇ, ಕಾಲಕಾಲಕ್ಕೆ ಮಹತ್ವವು ಬಂದಿತು, ಬಂದಿದೆ. ಕಂನುಡಿಗೆ ಗೌಣಸ್ಥಾನದಲ್ಲಿಯೇ ಇರಬೇಕಾಯಿತು. ಅದರ ಫಲವೇ ನಮ್ಮ ಇಂದಿನ ಗೌಣಸ್ಥಿತಿ.

(ಎಡೆಗಳು ಹೇಳುವ ಕಂನಾಡ ಕತೆ, ಪು. ೨೪೪-೨೪೫
ಶಂಬಾ ಕೃತಿ ಸಂಪುಟ ೨.)

ಇದರಲ್ಲಿ ನಾಡು-ನುಡಿಯ ಚಿಂತನೆಯ ಬಗ್ಗೆ ಕಳಕಳಿ ಇದೆ, ಗಾಂಭೀರ್ಯವೂ ಇದೆ. ಆ ಅವತರಣಿಕೆಯಲ್ಲಿ ಜಡಸ್ವರೂಪದ ನಿದ್ರಾಮುದ್ರಿತ ಕನ್ನಡಿಗರನ್ನು ಜಾಗೃತಗೊಳಿಸಿ, ರೇಗಿಸಿ, ಕೆರಳಿಸಿ, ಚೈತನ್ಯಗೊಳಿಸಿ, ಕಾರ್ಯೋನ್ಮುಖರನ್ನಾಗಿ ಮಾಡುವ ವಾಕ್ಯ ಸಮೂಹಗಳಿವೆ. ಶಂಬಾ ಅವರು ಹೇಳಬೇಕಾದುದನ್ನು ನೇರವಾಗಿ, ಸರಳವಾಗಿ ಹೇಳುತ್ತಾರೆ. ಜೀವಂತ ಸಂಸ್ಕೃತಿಯ ಲಕ್ಷಣ ಪ್ರಗತಿಪರ ಆಲೋಚನೆಯಾದ್ದರಿಂದ ಶಂಬಾ ಯಾವಾಗಲೂ ಆ ಚಿಂತನೆ ಕಡೆಗೆ ಮುಖ ಮಾಡಿರುತ್ತಾರೆ. ಉತ್ತಮ ಲೇಖಕನ ಶಬ್ದಪ್ರಜ್ಞೆ ಮತ್ತು ಪದ ನಿರ್ಮಾಣ ಸಾಮರ್ಥ್ಯವೆಷ್ಟು ಪರಿಪಕ್ವವೋ ಅವನ ಪದಕೋಶವು ಅಷ್ಟೇ ಸಮೃದ್ಧವಾದುದಾಗಿರುತ್ತದೆ. ಇದಕ್ಕೆ ಶಂಬಾ ಹೊರತಲ್ಲ. ಅವರ ಕೃತಿಗಳನ್ನು ಕೈಗೆತ್ತಿಕೊಂಡರೆ ಅಲ್ಲಿಯ ಭಾಷೆಯ ವ್ಯವಹಾರದ ಭಾಷೆಗಿಂತ ಭಿನ್ನವಾಗಿರುತ್ತದೆ, ಭಾವತೀವ್ರತೆ, ಅನುಭವ ಸಾಂದ್ರತೆ, ಸಾಹಿತ್ಯ ರಚನೆಗೆ ಪ್ರೇರಣೆಯೊದಗುತ್ತದೆ. ಉದ್ದಿಷ್ಟ ಕಾರ್ಯದಲ್ಲಿ ಲೇಖಕ ಪ್ರವೃತ್ತನಾದಾಗ ಉಕ್ತಿ ಸಾಮಾನ್ಯ ಮಟ್ಟದಿಂದ ಮೇಲೇರುತ್ತದೆ, ವಿಶೇಷ ರೂಪ ಪಡೆಯುತ್ತದೆ. ಆಗ ಶಬ್ದಾರ್ಥಗಳಿಗೆ ವೈಚಿತ್ರ್ಯ ಸಂಪ್ರಾಪ್ತವಾಗುತ್ತದೆ. ಇದೇ ಸಾಹಿತ್ಯ ಸೌಂದರ್ಯದ ಲಕ್ಷಣ. ಪ್ರಾಸ, ಉಪಮೆ, ರೂಪಕಾದಿ ಈ ಶಬ್ದಾರ್ಥ ವೈಚಿತ್ರ್ಯಗಳನ್ನು ಅಲಂಕಾರವೆಂಬ ಹೆಸರಿನಿಂದ ಕರೆಯುತ್ತಾರೆ, ಸಾಹಿತ್ಯ ಸೌಂದರ್ಯಕ್ಕೂ ಈ ಪದವೇ ಅನ್ವಯವಾಗುತ್ತದೆ. ಶಂಬಾ ಅವರ ಭಾಷೆ ಕೆಲವು ಕಡೆ ಅಲಂಕಾರಿಕವಾಗಿ ಓದುಗರಗೆ ಅಪ್ಯಾಯಮಾನವಾಗುತ್ತದೆ.

ಮನೆಕಟ್ಟಬೇಕೆನ್ನುವವರು ಮೊದಲು ಅದನ್ನು ಕಟ್ಟತಕ್ಕ ನೆಲದಲ್ಲಿ ಪೊಳ್ಳು-ಗಟ್ಟಿಗಳು ಎಲ್ಲೆಲ್ಲಿವೆಯೆಂಬುದನ್ನು ಚೆನ್ನಾಗಿ ಅರಿತವರಾಗಿರಬೇಕು. ಡೊಗರಿದ್ದಲ್ಲಿ ಅದನ್ನು ಅಗಿದುನೋಡಿ ತುಂಬಿಕೊಳ್ಳದೆ ಕಟ್ಟಿದ ಗೋಡೆ ಗಳು ಕುಸಿದ, ಕಟ್ಟಡವು ನೆಲಕ್ಕುರುಳುವುದು ಖಂಡಿತ. ಮನೆಯಂತೆ ನಾಡು ಕಟ್ಟುವ ವಿಷಯದಲ್ಲಿಯೂ ಈ ಮಾತು ಅಕ್ಷರಶಃ ನಿಜವಾಗಿದೆ. ಆದುದರಿಂದಲೇ ಕನ್ನಡದ ನೆಲೆಯನ್ನು ಅರಿದವರಿಂದ ಈ ನಾಡನ್ನು ಕಟ್ಟಲಿಕ್ಕಾಗಲಾರದೆಂದು ಹೇಳಬಹುದಾಗಿದೆ. ಕನ್ನಡದ ಐತಿಹ್ಯವನ್ನು

ಅರಿತುಕೊಳ್ಳದೆ ನಡೆದ ಈ ನಾಡಿನ ಏಳಿಗೆಯ ಪ್ರಯತ್ನಗಳು ವಿಶೇಷ ಫಲಕಾರಿಯಾಗಲಾರವು. ನದಿಯ ಉಪಮೆಯಿಂದ ಈ ಮಾತು ಇನ್ನೂ ಸ್ಪಷ್ಟವಾಗಬಹುದು. ಕರ್ಣಾಟಕ ನದೀಪ್ರವಾಹವು ಯಾವ ಯಾವ ದಿಕ್ಕಿನಿಂದ ಹೇಗೆ ಹರಿದುಬಂದಿದೆ? ಇದರ ಗತಿಯ ರೀತಿ ಯಾವುದು? ಆಳವೆಷ್ಟು? ಪ್ರವಾಹದ ವೇಗವೇನು? ಇದಕ್ಕೆ ಬಂದು ಸೇರಿದ ನದಿ, ಉಪನದಿಗಳಾವುವು? ಎಂಬಿವೆ ಮೊದಲಾದ ಸಂಗತಿಗಳ ಸ್ಪಷ್ಟಜ್ಞಾನ ವಿಲ್ಲದೆ ಎಲ್ಲಿ ಅಣೆಕಟ್ಟು ಕಟ್ಟಿದರೆ ಜನಶಕ್ತಿಯ ನೀರನ್ನು ಸರಿಯಾಗಿ ತಿರುಗಿಸಿಕೊಂಡು ನಾಡಿನ ಬೆಳವಣಿಗೆಯ ಹೆಚ್ಚು ಹೆಚ್ಚಿನ ಕೆಲಸಗಳನ್ನು ಕೈಕೊಳ್ಳಲಿಕ್ಕಾದೀತು ಎಂಬುದು ಗೊತ್ತಾಗಲಾರದು. ನಾಡಿನ ನೆಲೆಯನ್ನರಿಯದೆ ಮಾಡಿದ ದೇಶೋದ್ಧಾರದ ಪರಿಶ್ರಮಗಳು ಅಷ್ಟು ಯಶಸ್ವಿಯಾಗಲಾರವೆಂಬುದು ನಿಶ್ಚಿತ. ಆದಕಾರಣ, ದೇಶದ ಪೂರ್ವ ಇತಿಹಾಸವನ್ನು ದುರ್ಲಕ್ಷಿಸುವುದು ಎಂದೂ ಜಾಣತನವೆನಿಸಲಾರದು.

ನಾಡಿನ ಏಳಿಗೆಗಾಗಿ ಹೆಣಗುವವರಿಗೆ ತಮ್ಮ ಇತಿಹಾಸ, ಸಂಸ್ಕೃತಿಗಳ ಸಾಮಾನ್ಯಜ್ಞಾನವಾದರೂ ಇರಲೇಬೇಕು. ರೋಗಿಗೆ ಔಷಧಕೊಟ್ಟು, ಅವನನ್ನು ನಿರೋಗಿಯಾದ ಬಲವಂತನನ್ನು ಮಾಡಬೇಕೆಂದು ಹಂಬಲಿಸುವ ವೈದ್ಯರು ಆತನಿಗೆ ಆದ ಬೇನೆಯ ಇತಿಹಾಸವನ್ನೇ ಕಿವಿಯ ಮೇಲೆ ಹಾಕಿಕೊಳ್ಳದೆ ಸುಮ್ಮನೆ ಆ ಸೊಪ್ಪು, ಈ ಬೇರು ತಂದು ಅರೆದರೆದು ಕುಡಿಸುವ ಗಡಬಿಡಿಯನ್ನು ನಡೆಸಿದರೆ ಆ ರೋಗಿಯ ಗತಿಯೇನಾಗಬೇಕು! ಸರಿ, ಬರಿ ಹಿಂದಿನ ಇತಿಹಾಸವನ್ನೆ ಕೆದರುತ್ತ ಕುಳ್ಳಿರುವುದು ಹೆಡ್ಡತನವೆನಿಸುವುದು. ಆದರೆ, ತನ್ನ ನಿಜಸ್ಥಿತಿಯ ಅರಿವನ್ನುಂಟು ಮಾಡಿಕೊಡುವ ಇತಿಹಾಸವನ್ನು ದುರ್ಲಕ್ಷಿಸುವುದೂ ಆತ್ಮಘಾತವಾಗದೆ ಇರಲಾರದು. ಈಗಳಿಗೆಯಲ್ಲಿ ಉಪಯುಕ್ತವಾದ ಕೆಲಸವೇ ಕೆಲಸ, ಉಳಿದುದೆಲ್ಲವೂ ಅಲ್ಲದ ಕೆಲಸ ಎಂಬ ಕಿರುಗಣ್ಣಿನವರ ಸಂಖ್ಯೆಯು ನಮ್ಮಲ್ಲಿ ಹೆಚ್ಚಾಗುತ್ತ ಲಿದ್ದುದು ಒಳ್ಳೆಯ ಲಕ್ಷಣವಲ್ಲ. 'ಇದರ ಉಪಯೋಗವೇನು ಈಗ?' ಎಂದು ಕೇಳಿ ತಟ್ಟನೆ ತಕ್ಕಂತೆ ತಮ್ಮನ್ನು ಮಾರ್ಪಡಿಸಿಕೊಳ್ಳುವುದರಲ್ಲಿಯೆ ಜಾಣ್ಮೆಯಿದೆ. ಮೊದಲು ನಾವು ಯಾರೆ ಇರಲಿ, ಎಲ್ಲಿಯವರೆ ಇರಲಿ, ನಾವು ಈಗ ನೆಲಸಿರುವ ನಾಡು ನಮ್ಮದು. ಅದರೊಡನೆ ಸಮರಸವಾಗಿ ಆ ನಾಡಿನ ಏಳ್ಗೆಗಾಗಿ, ಆ ನಾಡಿನ ಮುಖಾಂತರವಾಗಿ ಮಾನವಕೋಟಿಯ ಕಲ್ಯಾಣಕ್ಕಾಗಿ ದುಡಿಯುವುದರಲ್ಲಿಯೇ ನಮ್ಮ ಮೇಲ್ಮೆಯೂ ಇದೆ. ಇದುವೆ ಇಂದಿನ ಧರ್ಮ. ಇದಕ್ಕೆ ವಿಪರೀತವಾಗಿ ನಡೆವುದೆ ಅಧರ್ಮ.

(ಕನ್ನಡ ನೆಲೆ, ಮೊದಲ ಮಾತು)

ಶಂಬಾ ಅವರ ನಿರೂಪಣೆಯಲ್ಲಿ ನಡುನಡುವೆ ಬರುವ ಅಲಂಕಾರಗಳು ರೇಷ್ಮೆ ಸೀರೆಯೊಳಗಿನ ಜರತಾರಿ ಎಳೆಗಳಂತೆ, ಊಟದಲ್ಲಿ ಬಳಸುವ ಹಪ್ಪಳ ಸಂಡಿಗೆ, ಉಪ್ಪಿನಕಾಯಿಗಳಂತೆ ಸೌಂದರ್ಯವನ್ನೂ ಸ್ವಾದವನ್ನು ಮಿಗಿಲುಗೊಳಿಸುತ್ತವೆ. ಅವು ಭಾವಾಭಿವ್ಯಕ್ತಿಗೂ ಅರ್ಥವಿಶದತೆಗೂ ಸಹಕಾರಿಯಾಗುವುದುಂಟು. ವಾಚಕರ ಗಮನವನ್ನು ಸೆಳೆಯಬೇಕಾದಾಗ, ಅವರ ಅಂತರಂಗವನ್ನು ಮಿಡಿಯಬೇಕಾದಾಗ, ಅವರಿಗೆ ಸ್ಫೂರ್ತಿ ಪ್ರಚೋದನೆಗಳನ್ನು ನೀಡಬೇಕಾದಾಗ ಭಾಷೆ ಸಹಜವಾಗಿ ಅಲಂಕಾರಿಕವಾಗುತ್ತದೆ. ಅಲಂಕಾರಿಕ ಭಾಷೆ ವಾಗ್ಮಿತೆಯ ಗುಣಗಳಲ್ಲೊಂದು. ಗದ್ಯಲೇಖಕ ಭಾವೋದ್ರೇಕಕ್ಕೆ ವಶವಾದಾಗ, ಅವನ ಕಲ್ಪನೆ ಗಗನ ವಿಹಾರಿಯಾದಾಗ ಭಾಷೆ ಸ್ವಾಭಾವಿಕವಾಗಿಯೇ ಕಾವೇರುತ್ತದೆ, ಭಾವಣಾತ್ಮಕವಾಗುತ್ತದೆ. ಇಲ್ಲಿ ಶಂಬಾ ಅವರ ಗದ್ಯ ಅಲಂಕಾರವಾಗುತ್ತದೆ ಮಾತ್ರವಲ್ಲ, ಛಂದೋಬದ್ಧವಾಗುತ್ತದೆ. ಉತ್ಸಾಹ ಅವರ ಶೈಲಿಯ ಪ್ರಮುಖ ಲಕ್ಷಣವಾಗಿದೆ. ಸಾಮಾನ್ಯವಾಗಿ ನಾವು ಮಾತಾಡುವ ಭಾಷೆ ವಾಕ್ಯರೂಪದಲ್ಲಿರುತ್ತದೆ. ಅದು ಏಕಪದಿಯಾಗಿರಬಹುದು ಅಥವಾ ಬಹುಪದಿಯಾಗಿರಬಹುದು.

> 'ಕನ್ನಡ' ಎಂದರೇನು ಎಂದು ಕೇಳುವುದು ಅದಾವ ಜಾಣತನ? ಎಂದೆನ್ನಬಹುದು ಕೆಲವರು. ನಿಜ. ನಾಡಿನ ಹೆಸರು 'ಕ(ರ್ಣಾ)ರ್ನಾಟ' ಮತ್ತು ನುಡಿ 'ಕನ್ನಡ' ಎಂದು ಹೇಳುವ ವಾಡಿಕೆಯುಂಟು. ಕರ್ಣಾಟಕ್ಕೆ 'ಕನ್ನಡ-ನಾಡು' ಎಂತಲೂ ಕರೆವ ಪರಿಪಾಠವು ಈಗ ಕಂಡುಬರುತ್ತಲಿದೆ. 'ಕನ್ನಡ-ನಾಡು' ಎಂದರೇನು? ಕನ್ನಡವನ್ನು (ಭಾಷೆಯನ್ನು) ಆಡುವ ನಾಡು ಎಂದು ತಾನೆ ಇದರ ಅರ್ಥ? ಕವಿರಾಜಮಾರ್ಗ (ಕ್ರಿ.ಶ. ೮೫೦) ಮೊದಲಾದ ಪುರಾತನ ಗ್ರಂಥಗಳಲ್ಲಿ 'ಕನ್ನಡ'ವೆಂದೇ ಈ ನಾಡಿಗೆ ಹೆಸರಿಸಿ ದ್ದಾರೆ. ಅಂತೂ ನಮ್ಮ ಇಂದಿನ ರೂಢಾರ್ಥದ ಮೇಲಿಂದ ವಿಚಾರಿಸಿದರೆ ನೃಪತುಂಗನ ಕಾಲದಲ್ಲಿಯೂ ಈ ನಾಡಿಗೆ 'ಕನ್ನಡ'ವೆಂಬ ಹೆಸರು ಇಲ್ಲಿ ನಡೆಯುತ್ತಲಿದ್ದ 'ಕನ್ನಡ' ಭಾಷೆಯಿಂದಲೇ ಬಂದಿತೆಂದು ಹೇಳಬೇಕಾಗುತ್ತದೆ.
>
> (ಕನ್ನಡದ ನೆಲೆ, ಪು. ೩೨, ಶಂಬಾ ಕೃತಿ ಸಂಪುಟ ೨.)

ಹೀಗೆ ಮಿಶ್ರವಾಕ್ಯ ಚಿಕ್ಕ ಬಿಡಿಸಾಲಿನಿಂದ ಹಿಡಿದು ಪುಟದುದ್ದಕ್ಕೂ ಹರಿಯಬಹುದು. ಎರಡೋ ಹಲವೋ ಪ್ರಧಾನ ವಾಕ್ಯಗಳು ಸೇರಿ ಸಂಯೋಜಿತ ವಾಕ್ಯವಾಗುತ್ತವೆ. ಅಧೀನೋಪ ವಾಕ್ಯಗಳಿಗೂ ಇಲ್ಲಿ ಎಡೆಯಿರುವುದರಿಂದ ಇದು ಸರಳ ಸಮ್ಮಿಶ್ರ ವಾಕ್ಯಗಳನ್ನು ತನ್ನ ಕಕ್ಷಿಯೊಳಗೆ ಸೇರಿಸಿಕೊಂಡಂತಾಗುತ್ತದೆ. ನಿಕಟಸಂಬಂಧವುಳ್ಳ ಹಲವು ಆಲೋಚನೆಗಳನ್ನೋ ಭಾವನೆಗಳನ್ನೋ ಕೂಡಿಸಬೇಕಾದಾಗ, ಅವುಗಳ ನಡುವೆ ಸಮನ್ವಯ ಸಾಧಿಸಬೇಕಾದಾಗ ಇಂಥ ವಾಕ್ಯಗಳ ಅವಶ್ಯಕತೆ ಮೊಳೆದೋರಿರಬಹುದು. ಇವುಗಳನ್ನು ಜಾಗರೂಕತೆಯಿಂದ

ನಿರ್ವಹಿಸಿದ್ದಾದರೆ ಭಾಷೆಗೆ ಓಜಸ್ಸು ಗಾಂಭೀರ್ಯಗಳು ಪ್ರಾಪ್ತವಾಗುತ್ತವೆ; ಇಲ್ಲ, ಅಸ್ಪಷ್ಟತೆ, ಕ್ಲಿಷ್ಟತೆಗಳು ದೊರೆಕೊಳ್ಳುತ್ತವೆ.

ಮೊದಲನೆಯ ವಾಕ್ಯವೃಂದದಲ್ಲಿ ಕಾಣುವಂತವೆಲ್ಲ ಪ್ರಧಾನವಾಕ್ಯಗಳೇ ಆಗಿವೆ. ಒಂದೊಂದೂ ಪುಟ್ಟ ಸರಳ ವಾಕ್ಯ. ಎರಡನೆಯ ವಾಕ್ಯ ಅದೀರ್ಘವಾದರೂ ಅದರಲ್ಲಿ ಎರಡೂ ಪ್ರಧಾನ ವಾಕ್ಯಗಳೂ ಎರಡು ಅಧೀನ ವಾಕ್ಯಗಳೂ ಇವೆ. ಮೇಲ್ನೋಟಕ್ಕೆ ಅದು ಸರಳವಾಕ್ಯದಂತಿದೆ. ಮೂರನೆಯದು ಹದಿನೈದು ಪ್ರಧಾನ ವಾಕ್ಯಗಳನ್ನೂ ನಾಲ್ಕೈದು ಅಧೀನ ವಾಕ್ಯಗಳನ್ನೂ ಒಳಗೊಂಡಿರುವ ದೀರ್ಘವಾಕ್ಯ. ಇಷ್ಟು ದೀರ್ಘವಾದರೂ ಸುತ್ತುಬಳಸಿಲ್ಲ, ಮೂಲೆ ಮೊಡಕುಗಳಿಲ್ಲ, ತಗ್ಗುದಿಣ್ಣೆಗಳಿಲ್ಲ, ಅದರ ಅರ್ಥ ಗ್ರಹಣಕ್ಕಾಗಿ ಕುದಿಯ ಬೇಕಾಗಿಲ್ಲ. ಪ್ರತಿಯೊಂದು ಪ್ರಧಾನ ವಾಕ್ಯದ ವಿಷಯ ಭಿನ್ನವಾದರೂ ಅವುಗಳ ಗುರಿ ಮಾತ್ರ ಒಂದೇ. ಈ ಗುರಿಯ ವಾಕ್ಯದ ಸಮನ್ವಯವನ್ನು ಸಾಧಿಸಿ, ಸಮತೋಲನವನ್ನು ಕಾಪಾಡುವ ಸಾಧನವಾಗಿದೆ. ಏಕಮುಖತೆ ಸಂಯೋಜಿತ ವಾಕ್ಯದ ವಿಶಿಷ್ಟಲಕ್ಷಣವೆಂಬುದನ್ನು ಮರೆಯಲಾಗದು. ಒಟ್ಟಿನಲ್ಲಿ ವಾಕ್ಯರಚನೆಯ ಶ್ರೇಯಸ್ಸಿಗೆ ಆಲೋಚನೆಗಳ ಸ್ಪಷ್ಟತೆ ಹಾಗೂ ತಾರ್ಕಿಕ ಪ್ರಜ್ಞೆ ಬಹುಮಟ್ಟಿಗೆ ಕಾರಣವಾಗುತ್ತವೆ.

ಲಘುವಾಕ್ಯ ಪರಂಪರೆ ವೇಗದ ಭಾವವನ್ನು ಮನಸ್ಸಿಗೆ ಮುಟ್ಟಿಸುತ್ತವೆ, ದೀರ್ಘ ವಾಕ್ಯಗಳು ಭಾಷೆಗೆ ಬೀಸು ಚಾಚುಗಳನ್ನೂ, ಆಯತಿ-ನಿರಂತತೆಗಳನ್ನೂ, ಘನತೆ ಗುರುತ್ವ ಗಳನ್ನೂ ದಯಪಾಲಿಸುತ್ತವೆ. ಐತಿಹಾಸಿಕ ಘಟನೆಗಳ ಹಾಗೂ ಕಥನಕ್ರಿಯೆಯ ನಡಗೆಗೆ ಲಘುವಾಕ್ಯಗಳು ಅನುವಾದರೆ, ತಾತ್ತ್ವಿಕ ವಿಚಾರಲಹರಿಗೆ ದೀರ್ಘವಾಕ್ಯಗಳು ಸೂಕ್ತವಾಗು ತ್ತವೆ. ಮಾನವನ ಬೌದ್ಧಿಕ ಪ್ರಕಾರಗಳ ಭಾವವಿಲಾಸಗಳೂ ಅನಂತಾನಂತ. ಅವುಗಳಿಗೆ ಸೀಮಾರೇಖೆಗಳನ್ನೆಳೆಯುವುದಾಗಲೀ, ಅಭಿವ್ಯಕ್ತಿ ಮಾಧ್ಯಮಗಳ ರೂಪಸ್ವರೂಪಗಳನ್ನು ನಿಷ್ಕರ್ಷಿಸುವುದಾಗಲೀ ವಿವೇಕವಾಗಲಾರದು. ಬಹುಶ್ರುತ ಸಾಹಿತಿಯ ಕಲ್ಪನಾಪ್ರತಿಭೆಗಳೇ ಆಲೋಚನಾ ಭಾಷೆಗಳ ಪರಸ್ಪರ ಸಂಬಂಧವನ್ನು ನಿರ್ಣಯಿಸಬೇಕು. ಲಘುದೀರ್ಘ ವಾಕ್ಯಗಳ ಅನುಕ್ರಮಾನುಪೂರ್ವಿಯ ಯುಕ್ತ ನಿರ್ಧಾರ ಅವನ ವಿವೇಕಕ್ಕೆ ಬಿಟ್ಟದ್ದು. ಒಂದು ಪ್ಯಾರಾದಲ್ಲಿ ಕೇವಲ ಲಘುವಾಕ್ಯಗಳೇ ಇರಬಹುದು, ಮತ್ತೊಂದು ಪ್ಯಾರಾದಲ್ಲಿ ಬರಿಯ ದೀರ್ಘವಾಕ್ಯಗಳೇ ಇರಬಹುದು, ಮಗುದೊಂದರಲ್ಲಿ ಅವುಗಳ ಮಿಶ್ರಣವೇ ಅಂದವೆನಿಸ ಬಹುದು. ಲಕ್ಷಣ ಸೂತ್ರಗಳನ್ನು ಗಮನದಲ್ಲಿಟ್ಟುಕೊಂಡು ವಿಮರ್ಶಕನ ನಿರೀಕ್ಷೆಗನು ಗುಣವಾಗಿ ಗದ್ಯ ರಚಿಸಬೇಕೆನ್ನುವುದು ಧಾರ್ಷ್ಟ್ಯದ ಹಾಗೂ ಅಟ್ಟಹಾಸದ ಮಾತಾಗುತ್ತದೆ. ಕೆಳಗಿನ ಆಯ್ದ ಎರಡು ಪ್ರಬಂಧ ಭಾಗಗಳನ್ನು ಪರಿಶೀಲಿಸಿದಾಗ ಈ ಮಾತಿನ ಯಥಾರ್ಥತೆ ಮನದಟ್ಟಾಗುತ್ತದೆ.

> ಆದರೆ, ದುರ್ದೈವದ ಸಂಗತಿ. ಭಾಷೆಯ ಮೇಲಿಂದ ಹೆಸರುಗೊಂಡ ಒಂದು ದೇಶವೂ ಭೂಮಂಡಲದಲ್ಲಿ ದೊರೆಯುವುದಿಲ್ಲ! ಜನಾಂಗ ಅಥವಾ ದೇಶದಿಂದ ಭಾಷೆಗೆ ಹೆಸರುಂಟಾದುದನ್ನು ಕಾಣಬಹುದೇ ವಿನಾ

ಇದರ ವಿಪರೀತವಾದುದನ್ನು ಎಲ್ಲಿಯೂ ಕಾಣಲು ಸಿಕ್ಕುವುದಿಲ್ಲ. ಆದುದರಿಂದ, ಕನ್ನಡದ ಮಟ್ಟಿಗೇ ಇದು ತಿರುವುಮುರುವಾಗಿ ನುಡಿಯಿಂದ ನಾಡಿಗೆ ಹೆಸರು ಬಂದಿತೆಂದು ಬಗೆವ ಕಾರಣವೇನು? ಆದಕಾರಣ ಗತಾನುಗತಿಕತ್ವದಿಂದ, ರೂಢಿಯಿಂದ ಬಂದಿರುವ ಅರ್ಥವು ತಪ್ಪು ಎನ್ನಲಿಕ್ಕಾಗದಿದ್ದರೂ (ರೂಢಿಗೆ ಭಾಷೆಗೆ ಮೂಲ) ಅದು ಅಪರ ಅರ್ಥವಲ್ಲ. 'ಕನ್ನಡ' ಎಂಬುದಕ್ಕೆ ಮೊದಲಿನ ಅರ್ಥವು ಪರಮ ಅರ್ಥವು ಭಾಷೆಯೆಂದು ಇರಲಾರದು, ಜನಾಂಗ ಅಥವಾ ದೇಶವೆಂಬ ಎರಡರಲ್ಲಿ ಯಾವುದಾದರೂ ಒಂದು ಇರಬೇಕಾಯಿತು.

'ಕನ್ನಡರು' ಅಥವಾ 'ಕನ್ನಡಿಗ'ರು ಎಂಬಲ್ಲಿ 'ಕನ್ನಡ' ಇದು ಜನಾಂಗದ ಹೆಸರೆಂದು ಗ್ರಹಿಸಬೇಕೆ? ಇದಕ್ಕೆ ವಿದ್ವಾಂಸರ ಒಪ್ಪಿಗೆ ಇಲ್ಲ. ಒಂದು ಅರೆಗಳಿಗೆ ಇದು ಜನಾಂಗದ ಹೆಸರೆಂದು ಗ್ರಹಿಸಿದರೂ 'ಕನ್ನಡ'ಕ್ಕೇನು ಅರ್ಥ? ಈ ಹೆಸರೇಕೆ ಬಂದಿತು. ಈ ಜನಾಂಗಕ್ಕೆ? ಮಾತು ಕಟ್ಟಾಯಿತು. ಇದಕ್ಕೆ ಜನಾಂಗವಾಚಕ ಅರ್ಥವನ್ನು ಹೇಳುವ ಸಂಶೋಧಕರು ಯಾರೂ ಮುಂದೆ ಬಂದು ಮಾತು ಬೆಳೆಯಿಸಿಲ್ಲ. ಅಲ್ಲದೆ, ಹಿಂದಿನ ಗ್ರಂಥಗಳನ್ನು ಸ್ವಲ್ಪ ಪರಿಶೀಲಿಸಿದರೆ ಕನ್ನಡವು ಮುಖ್ಯವಾಗಿ ದೇಶವಾಚಕವಾಗಿರುವುದೇ ಕಂಡುಬರುತ್ತದೆ (ನಟ+ಕರ್ಣರೆಂಬ ಜನಾಂಗದಿಂದ ಕರ್ನಾಟ(ಕನ್ನಡ)ವೆಂಬ ಹೆಸರು ಬಂದಿತೆಂದು ಒಂದು ವಿಚಾರವಿದ್ದು ಅದರ ವಿವೇಚನವು ಮುಂದೆ ಬರತಕ್ಕದಿದೆ).

(ಕನ್ನಡದ ನೆಲೆ, ಪು. ೬೨, ಶಂಬಾ ಕೃತಿ ಸಂಪುಟ ೨.)

ಪ್ರಸಕ್ತ ವಿಷಯದ ಘನತೆ ಮಹಿಮೆಗಳನ್ನು ಶಿಖರಸ್ಥಾನಕ್ಕೊಯ್ಯುವ ಸಲುವಾಗಿ ಕರ್ತೃ ಕ್ರಿಯೆಗಳಿಂದ ಭರಿತವಾಗಿರುವ ಆವರ್ತಕಾಲೀನ ಪದ ಪರಂಪರೆಯ ಪರಿಸಂಖ್ಯೆಗಳನ್ನು ಜೋಡಿಸಿ ವಾಕ್ಯವನ್ನು ಬೆಳಸುವುದು ವಾಗ್ಮಿತೆಯ ಲಕ್ಷಣಗಳಲ್ಲೊಂದು. ಕುತೂಹಲವನ್ನು ಕೆರಳಿಸುತ್ತ, ನಿರೀಕ್ಷೆಯನ್ನು ಮುಂದೂಡುತ್ತ, ಉದ್ವೇಗವನ್ನುಕ್ಕಿಸುವ ಮೂಲಕ ಭಾವ ಪ್ರಚೋದನೆಯುಂಟುಮಾಡುವುದೇ ಈ ಉಪಾಯದ ಉದ್ದೇಶ. ಒಂದೊಂದು ಪದ ಪರಂಪರೆಯೂ ಸರಾಗವಾಗಿ ವಿಚಾರದಿಂದ ವಿಚಾರಕ್ಕೆ ಜಿಗಿಯುತ್ತ ಮುಖ್ಯ ವಾಕ್ಯದ ಬಳಿ ಬಂದಾಗ ನಿಂತು ಉಸಿರೆಳೆದುಕೊಳ್ಳುತ್ತವೆ.

ಪದಪರಂಪರೆಯ ನಡುವಣ ಆವರ್ತಕಾಲ ನಿರೀಕ್ಷೆಯ ನಿರಂತರತೆಗೆ ಅವಕಾಶ ಮಾಡಿ ಕೊಟ್ಟಿದೆ. ಪ್ರತಿಯೊಂದು ಪದಪರಂಪರೆಯ ಗುರಿ ಉತ್ತರಮುಖಿಯಂತೆ ಸದಾ ಚರಮ ವಾಕ್ಯದ ಕಡೆಗೆ ಮುಖವಾಗಿರಬೇಕು. ಅಂದಮೇಲೆ ಅವುಗಳಲ್ಲಿ ಅನುಚಿತ ವಿಷಯಗಳ ಸೇರ್ಪಡೆಗೆ ಅವಕಾಶವಿರಬಾರದು. ಏಕಮುಖಿತೆಗೆ ಭಂಗವಾದರೆ ಅವುಗಳ ಸಾಮರಸ್ಯಕ್ಕೆ

ವೈಕಲ್ಪವೊದಗಿ ಗೊಂದಲವುಂಟಾಗುವ ಸಂಭವವುಂಟು. ಆಗ ಅವುಗಳ ವಾಸ್ತುಶಿಲ್ಪ ಕುರೂಪ ಗೊಂಡು, ಅವು ಎಸೆದ ವಸ್ತುಗಳ ಬಣಬೆಯುಂತಾಗುತ್ತವೆ.

ಆಂಗ್ಲ ಗದ್ಯಲೇಖನದಲ್ಲಿ ವಿರಾಮ ಚಿಹ್ನೆಗಳ ಬಳಕೆ ಅತ್ಯಂತಾವಶ್ಯಕವೆಂದು ಶ್ರುತ ಪಟ್ಟಿದೆ. ವಾಕ್ಯರಚನೆಯಲ್ಲಿ ಜಟಿಲತೆ ಜಾಸ್ತಿಯಾದಂತೆಲ್ಲ ಅವುಗಳ ಬಳಕೆಯೂ ಬಲ ವಾಗುತ್ತಿದೆ. ರಚನೆ, ಶ್ವಾಸಕ್ರಿಯೆ ಮತ್ತು ಲಯಗಳ ಮೂಲಕ ವಿರಾಮ ಸಂಘಟಿಸುತ್ತದೆ ಆಲೋಚನೆಗನುಗುಣವಾಗಿ ವಾಕ್ಯ ರಚನೆಗೊಳ್ಳುವುದರಿಂದ ತರ್ಕಬದ್ಧವಾಗಿ ವಿರಾಮಸ್ಥಾನ ನಿರ್ಣಯವಾಗುತ್ತದೆ. ಆಲೋಚನೆಯ ಗತಿಯನೂ ವಾದದ ಸೋಪಾನಗಳನ್ನೂ ಅದು ಗುರುತಿಸುತ್ತದೆ. ಇಡೀ ವಾಕ್ಯವನ್ನು ಏಕಕಾಲದಲ್ಲಿ ಅವಿಚ್ಛಿನ್ನವಾಗಿ ಉಚ್ಚರಿಸಿದರೆ ಉಸಿರು ಕಟ್ಟುತ್ತದೆ. ಸ್ವಾಭಾವಿಕವಾಗಿ ಶ್ವಾಸವೇ ಭಾಷೆಯಾಗುತ್ತದೆ. ಆಡಿದ್ದೇ ಸಹಜವಾದ ಭಾಷೆ, ಬರೆದದ್ದು ಕೃತಕ. ಆಡುನುಡಿ ಶ್ವಾಸೋಚ್ಛ್ವಾಸದ ಭೌತಿಕ ಪರಿಮಿತಿಗೆ ಬದ್ಧವಾಗಿರುತ್ತದೆ. ಈ ಭೌತಿಕ ಪರಿಮಿತಿ ವಿರಾಮವನ್ನು ನಿಯಂತ್ರಿಸುತ್ತದೆ. ರಚನಾ ಮತ್ತು ಶ್ವಾಸ ವಿರಾಮ ಗಳೆರಡೂ ಲಯಕ್ಕಧೀನವಾಗಿರುತ್ತವೆ. ಹಿಂದಿನ ಕಾಲದ ಭಾರತೀಯ ಭಾಷೆಗಳಲ್ಲಿ ವಿರಾಮದ ಕಲ್ಪನೆ ಯತಿರೂಪದಲ್ಲಿ ಅಭಿವ್ಯಕ್ತಗೊಳ್ಳುತ್ತಿತ್ತೇ ಹೊರತು ಅದನ್ನು ಚಿಹ್ನೆಗಳ ಮೂಲಕ ಗುರುತಿಸುತ್ತಿರಲಿಲ್ಲ. ಅದೂ ಇರಲಿ, ಪ್ರಶ್ನಾರ್ಥಕ ಅಶ್ಚರ್ಯಾರ್ಥಕ ಚಿಹ್ನೆಗಳೂ ರೂಢಿ ಯಲ್ಲಿರಲಿಲ್ಲ. ಅವು ಅಗತ್ಯವಾಗಿರಲಿಲ್ಲವೆಂದು ಇ.ಪಿ. ರೈಸ್ ಅವರೇ ಒಪ್ಪಿಕೊಂಡಿದ್ದಾರೆ. ಕನ್ನಡದ ವಿರಾಮ ಚಿಹ್ನೆಗಳು ಹೊಸಗನ್ನಡ ಗದ್ಯದ ಅವಿಭಾಜ್ಯಾಂಗಗಳೇಂದೇ ಹೇ ಬೇಕಾಗಿದೆ. ಜಟಿಲ ರಚನೆಯ ಅಂಕುಡೊಂಕಿನ ದೀರ್ಘವಾಕ್ಯಗಳಂತು ವಿರಾಮ ಚಿಹ್ನೆಗ ಪ್ರಯೋಗ ಅನಿವಾರ್ಯ. ಇಲ್ಲವಾದರೆ ಅರ್ಥಸ್ಪಷ್ಟತೆಗೆ ಭಂಗವೊದಗುತ್ತದೆ. ಅಭ್ಯಾಸ ಬಲ ದಿಂದ ಆಲೋಚನಾತರಂಗಗಳು ವಿರಾಮ ಚಿಹ್ನೆಗಳ ಹತೋಟಿಗೊಳಗಾಗುವುದೂ ಉಂಟು. ಅಲ್ಪವಿರಾಮ, ಅರ್ಧವಿರಾಮ, ಪೂರ್ಣವಿರಾಮ, ವಿವರಣ ವಿರಾಮ ಇವೆಲ್ಲವೂ ಈಗ ಕನ್ನಡದಲ್ಲಿ ಬಳಕೆಯಾಗುತ್ತಿವೆ.

> 'ಪುನ್ನಾಡು' ಎಂಬ ಹೆಸರಿನ ಒಂದು ಪ್ರಾಚೀನ ದೇಶವಿತ್ತು. ಆ 'ಪುನ್ನಾಡು' ಎಂಬ ಹೆಸರು 'ಪುನ್ನಾಡ, ಪುಣ್ಣಾಡ, ಪುನ್ನಡ, ಪುನ್ನಾಟ' ಎಂದು ಮುಂತಾಗಿ ಬದಲಾವಣೆಗಳನ್ನು ಹೊಂದಿದುದನ್ನು ಶ್ರೀ ರಾಜರತ್ನಂ ಅವರು ಹಲವು ಆಧಾರಗಳಿಂದ ಸಿದ್ಧಪಡಿಸಿದ್ದಾರೆ. ಇದೇ ಮೇರೆಗೆ 'ಕನ್ನಾಡು' ಎಂಬ ಇಂದಿನ ರೂಪವನ್ನು ತಾಳಿತೆಂದು ಹೇಳಬಹುದಾಗಿದೆ. ನೃಪತುಂಗನ ಕಾಲದಲ್ಲಿ ಕನ್ನಡ ಶಬ್ದದ ಮೂಲಾರ್ಥವನ್ನು ಜನಗಳು ಇನ್ನೂ ಮರೆತಿದ್ದಿಲ್ಲ. ಕನ್ನಡವು ದೇಶವಾಚಕ ಶಬ್ದ, ನಾಡು ಅರ್ಥದ ಪದವನ್ನು ಅದು ಒಳಗೊಂಡಿದೆ ಎಂಬ ಅರಿವು ಆ ಕಾಲದಲ್ಲಿ ಇತ್ತು. ಈಗ ಈ ವಿಷಯಕ್ಕೆ ಕಗ್ಗತ್ತಲೆ! ಈಗಿನಂತಹ ಪರಿಸ್ಥಿತಿಯೆ ಆಗ ನೃಪ ತುಂಗನ ಕಾಲದಲ್ಲಿಯೂ ಇದ್ದರೆ "ಕನ್ನಡದ ತಿರುಳ್" ಎಂಬೀ ಬಗೆಯ ಮಾತಿನ

ಮಾತಿನ ಅರ್ಥವೆ ಆಗುವ ಸಂಭವವಿದ್ದಿಲ್ಲ. ಹಾಗಿದ್ದಲ್ಲಿ ನೃಪತುಂಗನಿಗೆ 'ಕನ್ನಡನಾಡು, ಕನ್ನಡನಾಡಿನ ತಿರುಳ್ ಅಥವಾ ಕರ್ಣಾಟಕ ದೇಶ, ಕರ್ಣಾಟಕದ ದೇಶದ ತಿರುಳ್' ಎಂಬರೀತಿಯಲ್ಲಿ ವರ್ಣಿಸಿ ಹೇಳಬೇಕಾಗುತ್ತಿತ್ತು!

ನೃಪತುಂಗನ ಕಾಲದಲ್ಲಿ 'ಕನ್ನಡ' ಪದವು ನಾಡು ಎಂಬ ಅರ್ಥವನ್ನೆ ನಿಶ್ಚಿತವಾಗಿ ವ್ಯಕ್ತಪಡಿಸುತ್ತಿದ್ದುದರಿಂದ ಆಗಿನವರಿಗೆ 'ಕನ್ನಡ'ದ ಮುಂದೆ ನಾಡು ಎಂಬ ಪದವನ್ನು ಮತ್ತೆ ಸೇರಿಸುವ ಅವಶ್ಯಕತೆಯು ತೋರಲಿಲ್ಲ. 'ಕನ್ನಡ-ನಾಡು' ಎಂದು ಹೇಳುವುದೂ 'ಚಾತುರ್ಮಾಸ್ಯ ನಾಲ್ಕು ತಿಂಗಳು' ಎನ್ನುವುದೂ ಒಂದೇ! ಒಂದು ಶಬ್ದದ ಮೂಲಾರ್ಥದ ಮರೆವು ಹೆಚ್ಚಾದಂತೆ ಈ ಬಗೆಯ ದ್ವಿರುಕ್ತಿದೋಷದ ಪದಗಳು ತಲೆದೋರುತ್ತವೆ. ನೃಪತುಂಗನ ಕಾಲದಲ್ಲಿ 'ಕನ್ನಡ'ವು ನಾಡು-ಕನ್ನಾಡು ಎಂಬ ಮಾತಿನ ಸಂಪೂರ್ಣ ಎಚ್ಚರವಿದ್ದುದರಿಂದಲೇ, ಅವನು ಈಗಿನವರಂತೆ ತನ್ನ ಗ್ರಂಥದಲ್ಲಿ 'ಕನ್ನಡ-ನಾಡು' ಎಂಬೀ ಬಗೆಯ ಪ್ರಯೋಗವನ್ನು ಮಾಡಲಿಲ್ಲ. 'ಕನ್ನಡ-ನಾಡು' ಎಂಬಲ್ಲಿ ಆಡಿದ್ದನ್ನೇ ಆಡುವ ಮರುಳುತನವು ಬಯಲಿಗೆ ಬರುತ್ತಲಿದೆ. ಆಕಳ ಗೋಮೂತ್ರ, ಛಪ್ಪನ್ನೈವತ್ತಾರು, ಸಹ್ಯಾದ್ರಿಪರ್ವತ ಎಂಬೀ ಬಗೆಯ ಮಾತುಗಳೆಲ್ಲವೂ ಇದೇ ತೆರನಾದ ಉಪಾದಹಣೆಗಳಾಗಿವೆ.

(ಕನ್ನಡದ ನೆಲೆ, ಪು. ೩೨, ಶಂಬಾ ಕೃತಿ ಸಂಪುಟ ೩೩-೩೪.)

ಈ ಭಾಗದಲ್ಲಿ ಹೆಚ್ಚು ಕಡಮೆ ಎಲ್ಲ ವಿರಾಮ ಚಿಹ್ನೆಗಳೂ ಬಂದಿವೆ. ವಿರಾಮಸ್ಥಾನ ವಾಕ್ಯದ ದೀರ್ಘತೆಯನ್ನವಲಂಬಿಸಿಲ್ಲ, ಆಲೋಚನೆಯ ಗತಿಯನ್ನವಲಂಬಿಸಿದೆಯೆಂಬುದು ಮೇಲಿನ ಉದ್ಧರಣೆಯಿಂದ ವ್ಯಕ್ತವಾಗುತ್ತದೆ. ಪ್ರಾಯಶಃ ಹಾದಿ ಕುಣಿದು ಬಂದಾಗ ಮೇಲೆ ಅಲ್ಪವಿರಾಮ ಚಿಹ್ನೆಯು ಅವಶ್ಯಕತೆಯಿದೆಯೆಂದು ತೋರುತ್ತದೆ. ಕೊನೆಯ ವಾಕ್ಯದ ಅರ್ಧವಿರಾಮ ಔಚಿತ್ಯಪೂರ್ಣವಾಗಿದೆ.

ಆಡುಗದ್ಯ, ಲಿಖಿತಗದ್ಯವೆಂದು ಗದ್ಯದಲ್ಲಿ ಎರಡು ಬಗೆ. ಅವು ಪರಸ್ಪರ ಪೂರಕ ಮತ್ತು ಪ್ರಭಾವಾತ್ಮಕವೆಂಬುದು ನಿಜ. ಭಾಷೆಯಲ್ಲಿ ಮೊದಲು ಆಡಿದ್ದು, ಆಮೇಲೆ ಬರೆದದ್ದು. ಆಡುಗದ್ಯದ ಭಾಷೆ ಸರಳ, ವಾಕ್ಯ ನಿಜಟಿಲ, ಲಿಖಿತಗದ್ಯದ ಭಾಷೆ ಪ್ರೌಢ. ವಾಕ್ಯ ಸುದೀರ್ಘ. ನಾಟಕದ ಗದ್ಯ ಲಿಖಿತರೂಪದ್ದಾದರೂ ಅದರ ಜಾಯಮಾನವೆಲ್ಲ ಆಡುಮಾತಿನದು. ಆಡುಮಾತಾದರೂ ಗ್ರಾಮ್ಯವಲ್ಲ. ವಾಗ್ಮಿತೆಯ ಭಾಷೆ ಆಡುಮಾತಾದರೂ ಅದರ ಸ್ವರೂಪ ಗತಿ ಗಾಂಭೀರ್ಯಗಳು ಲಿಖಿತಭಾಷೆಗೆ ಸಮೀಪವಾದುವು, ಅಷ್ಟೇ ಅಲ್ಲ, ಆ ಭಾಷೆ ಲಿಖಿತರೂಪ ತಾಳುವುದೂ ಉಂಟು. ಕಥೆ ಅಥವಾ ಕಾದಂಬರಿ ಪ್ರಮುಖವಾಗಿ ಲಿಖಿತ ಮಾಧ್ಯಮದ ಮೂಲಕ ಅವತಾರವೆತ್ತುವುದುಂಟು. ಆದರೆ ಆಕಾಶವಾಣಿಯ ಮೂಲಕ ಪ್ರಸಾರವಾಗುವಾಗ

ಅವು ಆಡುಮಾತಿನ ವೇಷ ತೊಡುವುದುಂಟು. ಅವುಗಳನ್ನು ಹೇಳಿ ಬರೆಯಿಸುವ ಕತೆಗಾರರ ಮತ್ತು ಕಾದಂಬರಿಕಾರರ ಸಂಖ್ಯೆಯಂತು ಈಚೀಚೆಗೆ ಬೆಳೆಯುತ್ತಿದೆ. ಆಡುಮಾತಿನ. ಅಂತೆಯೇ ತಕ್ಕಮಟ್ಟಿಗೆ ಲಿಖಿತಭಾಷೆಯ ಶಬ್ದಪ್ರಯೋಗ ಶ್ರೋತೃ ಅಥವಾ ವಾಚಕವೃಂದದ ಗ್ರಹಣ ಸಾಮರ್ಥ್ಯವನ್ನವಲಂಬಿಸುತ್ತದೆನ್ನುವುದು ನಿರ್ವಿವಾದದ ಸಂಗತಿ. ಆಡುಮಾತಿನ ಗದ್ಯ ವ್ಯಾಕರಣದೋಷಗಳನ್ನೊಳಗೊಂಡಿದ್ದರೂ ಕೆಲವೊಮ್ಮೆ ಕ್ಷಮ್ಯವಾಗು ತ್ತದೆ. Can't, Won't, It's me ಇವೇ ಮೊದಲಾದ ಆಂಗ್ಲಭಾಷೆಯ ಪ್ರಯೋಗಗಳೂ, ತ್ಯಾಟ, ಮಜ್ಜನ, ಹಿಂಗೆ, ಹೆಂಗೆ, ತಗೊಂಡು ಬಾ ಇವೇ ಮುಂತಾದ ಕನ್ನಡ ಪ್ರಯೋಗಗಳೂ ಆಡುಮಾತಿನಲ್ಲಿ ಮಾನ್ಯವಾಗುತ್ತವೆ.

ಪ್ಯಾರಾ ರಚನೆಯೂ ಒಂದು ವಿರಾಮ ಸಾಧನವೆಂದು ಹೇಳಬಹುದು. ಭಾವಾರ್ಥ ಯತಿಗಳ ಆಧಾರದ ಮೇಲೆ, ಲಯವಿನ್ಯಾಸವನ್ನು ದೃಷ್ಟಿಯಲ್ಲಿಟ್ಟುಕೊಂಡು ಭಾರತೀಯರು ವಿರಾಮ ಸ್ಥಾನವನ್ನು ಗುರುತಿಸುತ್ತಿದ್ದರೆಂದೂ ಅವರು ವಿರಾಮ ಚಿಹ್ನೆಗಳನ್ನು ಬಳಸುತ್ತಿರ ಲಿಲ್ಲವೆಂದೂ ಈ ಹಿಂದೆ ತಿಳಿಸಲಾಗಿದೆ. ಇವುಗಳಂತೆ ಪ್ಯಾರಾರಚನೆಯ ಕಡೆಗೂ ಅವರ ಗಮನಹರಿದಂತೆ ಕಾಣುವುದಿಲ್ಲ. ಆದ್ದರಿಂದ ಪ್ಯಾರಾ ಪದಕ್ಕೆ ತಕ್ಕ ಸಂವಾದಿ ಪದ ಭಾರತೀಯ ಭಾಷೆಗಳಲ್ಲಿದ್ದಂತೆ ತೋರುವುದಿಲ್ಲ. ಕನ್ನಡದಲ್ಲಂತು ಇಲ್ಲ. ಕೆಲವರು ಅದನ್ನು ಪ್ರಕರಣ ವೆಂದು ಕರೆದರೆ, ಇತರರು ವಾಕ್ಯವೃಂದವೆಂದು ಕರೆಯುತ್ತಾರೆ. ಈ ಮಾತೂ ಪ್ಯಾರಾದ ಸ್ವರೂಪವನ್ನು ಮನಕ್ಕೆ ಮುಟ್ಟಿಸುವುದಿಲ್ಲ. ಪ್ಯಾರಾ ಎನ್ನುವುದು ವಾಕ್ಯವೃಂದ ನಿಜ. ಇಡೀ ಪ್ರಬಂಧ ಅಥವಾ ಕತೆಯೂ ವಾಕ್ಯವೃಂದ ತಾನೆ? ಈಗ ಪ್ಯಾರಾ ಕತೆಗಳ ವ್ಯತ್ಯಾಸವನ್ನು ಸ್ಪಷ್ಟಪಡಿಸಿದಂತಾಗುವುದಿಲ್ಲ. ಒಂದು ಪ್ಯಾರಕ್ಕೂ ಮತ್ತೊಂದು ಪ್ಯಾರಾಕ್ಕೂ ಸಾವಯವ ಸಂಬಂಧವಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಲಕ್ಷಿಸಬಹುದು. ಈ ಮಾತಿಗೆ ಬದಲಾಗಿ ಮುಂದೆ ಕಂಡಿಕೆಯೆಂಬ ಪದವನ್ನು ಬಳಸಲಾಗಿದೆ. ಕಬ್ಬಿನ ಜಲ್ಲೆಯಲ್ಲಿ ಎರಡು ಗೆಣ್ಣುಗಳ ನಡುವಣ ಭಾಗಕ್ಕೆ ಕಂಡಿಕೆಯೆಂದು ಕರೆಯುವುದುಂಟು. ಕಂಡಿಕೆ ಗೆಣ್ಣಿನಲ್ಲಿ ಪರ್ಯವಸಾನವಾಗು ವುದಿಲ್ಲ, ಒಂದು ಮತ್ತೊಂದರಲ್ಲಿ ಚಾಚಿಕೊಳ್ಳುತ್ತದೆ, ಸೇರಿಕೊಳ್ಳುತ್ತದೆ. ಪ್ಯಾರಾ ಪದ ಕನ್ನಡ ಮಾತುಗಳೊಡನೆ ಒಗ್ಗಿಲ್ಲವಾದ್ದರಿಂದ ಈ ಮಾತು ಅಗತ್ಯವಾಯಿತು.

ಕಂಡಿಕೆ ಎಂದರೇನು? ಲಿಖಿತ ಭಾಷೆಯಲ್ಲಿ ವಾಕ್ಯದ ಒಳಚಾಚು ಕಂಡಿಕೆಯ ಪ್ರಾರಂಭ ವನ್ನು ಪ್ರಕಟಿಸುತ್ತದೆ. ಆಡುಮಾತಿನಲ್ಲಿ ಅಥವಾ ಉಪನ್ಯಾಸದಲ್ಲಿ ಪ್ರಾರಂಭವನ್ನರಿಯುವ ಬಗೆ ಹೇಗೆ? ಕಂಡಿಕೆಯ ಸ್ವರೂಪಲಕ್ಷಣಗಳನ್ನಂತು ಕರಾರುವಕ್ಕಾಗಿ ವಿವರಿಸಲಾಗದೋ ಅಂತೆಯೇ ಅದರ ಪ್ರಾರಂಭವನ್ನೂ ಸುಲಭವಾಗಿ ಗುರುತಿಸಲಾಗದು. ವಾಕ್ಯರಚನೆಗೆ ಆಲೋಚನೆ ಸ್ಫೂರ್ತಿ ಹಾಗೂ ಚೈತನ್ಯವಷ್ಟೇ. ಅಂತೆಯೇ ಆಲೋಚನಾ ಅಥವಾ ಅನುಭವ ಪರಂಪರೆ ಕಂಡಿಕೆಯ ಧಮನಿ ಧಮನಿಗಳಲ್ಲಿ ಪ್ರವಹಿಸುತ್ತದೆ. ಆದ್ದರಿಂದ ಆಲೋಚನೆಗಳ ಸಣ್ಣಗುಂಪನ್ನು ಕಂಡಿಕೆಯೆಂದು ಕರೆಯಬಹುದು. ಅದು ದೊಡ್ಡ ಪ್ರಬಂಧದ ಅಥವಾ ಕತೆಯ ಒಂದು ಭಾಗವಾದರೂ ಅದರಷ್ಟಕ್ಕೇ ಅದು ಸ್ವಯಂಪೂರ್ಣವೆನ್ನಬಹುದು, ಅಂದರೆ

ಅದು ಸಂಪೂರ್ಣಾರ್ಥವನ್ನು ನೀಡುವಂಥದಾಗಿರಬೇಕು. ದೇಹಕ್ಕೆ ಕೈಕಾಲುಗಳಿದ್ದ ಹಾಗೆ ಕಂಡಿಕೆ. ಕೈಕಾಲುಗಳೆಂತು ದೇಹವಲ್ಲವೋ ಕಂಡಿಕೆಯೂ ಪ್ರಬಂಧವಲ್ಲ, ಕತೆಯಲ್ಲ, ಕೈಕಾಲುಗಳಿಲ್ಲದ ದೇಹ ನಿರುಪಯೋಗಿ. ದೇಹ ದೇಹಾಂಗಗಳ ಸಂಬಂಧ ಕಂಡಿಕೆ ಮತ್ತು ಕಥೆ ಪ್ರಬಂಧಾದಿ ಗದ್ಯರಚನೆಗಳಿಗೆ ಅನ್ವಯಿಸುತ್ತದೆ.

ಸಾಮಾನ್ಯವಾಗಿ ಪ್ರತಿಯೊಂದು ಕಂಡಿಕೆಯಲ್ಲಿಯೂ ಒಂದೊಂದು ಭಾವನೆ ವಿಕಾಸಗೊಳ್ಳುತ್ತದೆ. ಪ್ರಧಾನ ಭಾವನೆಗೆ ಪೋಷಕನಾಗಿ ಅನೇಕ ಉಪಭಾವನೆಗಳು ಹೆಣೆಗೆಗೊಳ್ಳಬಹುದು. ಆದರೆ ಅವುಗಳ ಗತಿಯಲ್ಲಿ ಏಕಮುಖತೆ ಇರಬೇಕಾದ್ದು ಮುಖ್ಯ.

> ನರ್ಮದಾ-ಕಾವೇರಿ ನಡುವಣ ನಾಡಿನಲ್ಲಿ ನಡೆದ ಈ ಭಾಷಾ ಸಂಕ್ರಮಣದ ಬೆಗೆಯು ಇದಕ್ಕಿಂತ ಬೇರೆಯಾಗಿಲ್ಲ. ನರ್ಮದಾತೀರದ ಭಾಷಿಕ ಸಂಕ್ರಮಣದ ನಡೆದ ಸಂಘರ್ಷವು ಮುಖ್ಯವಾಗಿ ದೇಶಿ ಮತ್ತು ಪ್ರಾಕೃತ (ಮಹಾರಾಷ್ಟ್ರೀ ಮತ್ತು ಅರ್ಧಮಾಗಧಿ). ಸಂಸ್ಕೃತವು ತನ್ನ 'ಗತಿ'ಯನ್ನು ತಪ್ಪಿಕೊಳ್ಳಲು ಕ್ರಿ.ಶ. ೫-೬ ಶತಮಾನದ ಮುನ್ನವೇ, ಆಸನಬಂಧ ಧೀರ ಸ್ಥಿತಪ್ರಜ್ಞನ ನಿಲುಮೆಯನ್ನು ಸ್ವೀಕರಿಸಿತು. ಅಮೋಘವಾದ ವ್ಯಾಕರಣದ ಅಚರಪೀಠ (ಪೇಟಿಕೆ) ನಿರ್ಮಿಸಿ ಅಲ್ಲಿ ಗೀರ್ವಾಣವಾಣಿಯು ಅನಂತಕಾಲದವರೆಗೂ ವಿರಾಜಿಸುತ್ತಿರುವಂತೆ, ಪಾಣಿನಿ ಮಹಾಮುನಿಯು ಭದ್ರವಾದ ಯೋಜನೆಯನ್ನು ಮಾಡಿಟ್ಟಿದ್ದಾನೆ. ಆ ಉನ್ನತ ಯೋಗಾಸನಸ್ಥ ಸಂಸ್ಕೃತದ ಗೌರವಕ್ಕೆ ಚ್ಯುತಿಯನ್ನು ತರುವಲ್ಲಿ ಯಾವ ಕಾಲಪುರುಷನು ಯಶಸ್ವಿಯಾಗಿಲ್ಲ. ಆಗುವಂತೆ ತೋರುವುದಿಲ್ಲ ಆಧುನಿಕ ತುಲನಾತ್ಮಕ ಭಾಷಾಶಾಸ್ತ್ರ ದೃಷ್ಟಿಯಿಂದ ಆದ ವಿಶ್ಲೇಷಣದಲ್ಲಿ ಕೂಡ ಅದರ ಅಮೋಘ ಅಂತಃಸತ್ವವು ನಿದರ್ಶನಕ್ಕೆ ಬಂದಿವೆ. ಅದನ್ನು ಕಂಡು ಪಾಶ್ಚಾತ್ಯ ವಿದ್ವಾಂಸರೂ ಅಚ್ಚರಿಗೊಂಡಿದ್ದಾರೆ. ಅದು, ಸಂಸ್ಕೃತದ ಪಿರಾಮಿಡ್ಡು ಎಂದು ಕೆಲವರಿಗೆ ತೋರಿದೆ. ಅಲ್ಲ, ಚೈತನ್ಯದ ಉಗಮಸ್ಥಾನವನ್ನು ಕಂಡಂತೆ ಅನುಭೂತಿಯನ್ನೀವ ಪವಿತ್ರ ಸಮಾಧಿಸ್ಥಾನ ಅದು, ಎಂದು ಕೆಲವರು ಅನುಭವ ಹೇಳುತ್ತಾರೆ. ಅದೇನೆ ಇದ್ದರೂ ಸಂಸ್ಕೃತವು, ಅನುದಿನದ ಭೂಲೋಕದ ಲೌಕಿಕ ಜೀವನರಂಗದಿಂದ ಹಿಂಜರಿಯಿತು. ಅ-ಲೌಕಿಕವಾಯಿತು.
>
> (ಹಾಲುಮತ ದರ್ಶನ, ಪು. ೪೨.)

ತರ್ಕಬದ್ಧವಾದ, ಏಕಮುಖವಾದ ಉತ್ತಮ ಕಂಡಿಕೆಗೆ ಇದೊಂದು ಸೊಗಸಾದ ಉದಾಹರಣೆ. ಕಂಡಿಕೆಯ ಲಕ್ಷಣ ಇಷ್ಟೇ ಎಂದು ಹೇಳಲಾಗದಿದ್ದರೂ, ಇದೊಂದು ಶ್ರೇಷ್ಠ ಲಕ್ಷ್ಯವೆಂದು ಒಪ್ಪಿಕೊಳ್ಳಬಹುದು. ವನಪುಷ್ಪಗಳ ಸೌರಭ, ಹಲವು ಮೂಲಿಕೆಗಳ ಸಂಜೀವಿನಿ

ರಸ, ನಾನಾ ಕಲಾನುಭವಗಳ ಮತ್ತು ನಾನಾಶಾಸ್ತ್ರ ಶಿಕ್ಷಣಗಳ ಫಲಿತಾಂಶಗಳ ಸಾರ ಸಮ್ಮೇಳನ ಈ ಎಲ್ಲ ಹೋಲಿಕೆಗಳು ಸಂಸ್ಕೃತಿಯ ಸ್ವರೂಪವನ್ನು ವಿವರಿಸಿ ಮನಮುಟ್ಟಿಸು ವಂಥವಾಗಿವೆ. ಒಂದೊಂದು ಸಂದರ್ಭದಲ್ಲಿ ಮನಸ್ಸಿನಲ್ಲಿ ಮೂಡುವ ಸರ್ವಭಾವನೆಗಳನ್ನು ಲೇಖಕ ಅವನಷ್ಟೇ ಪ್ರತಿಭಾವಂತನಾಗಿರಲಿ ಸ್ಫುಟವಾಗಿ ತಿಳಿಸಬೇಕಾದರೆ ಎರಡು ಮಾತು ಅತವಾ ಹೋಲಿಕೆಗಳನ್ನು ಹೆಚ್ಚಾಗಿ ಬಳಸಬೇಕಾಗುತ್ತದೆ. ಹೆಚ್ಚು ಬಳಸುವುದು ತಪ್ಪಲ್ಲ, ಅವು ಪ್ರಕೃತ ವಿಷಯಕ್ಕೆ ಹೊರಗಾಗುವುದಾದರೆ ಮಾತ್ರ ದೋಷವಾಗುತ್ತವೆ.

ಮೇಲಣ ನಿದರ್ಶನದಿಂದ ಕಂಡಿಕೆಯ ಮತ್ತೊಂದು ಲಕ್ಷಣ ಸಂಸಿದ್ಧವಾಗುತ್ತದೆ. ಕಂಡಿಕೆಯ ಆದಿಯಲ್ಲಿಯೋ ಮಧ್ಯದಲ್ಲಿಯೋ ಅಥವಾ ಅಂತ್ಯದಲ್ಲಿಯೋ ಒಂದು ಬಿಂದು ಅಥವಾ ಬೀಜವಾಕ್ಯವಿರಲೇಬೇಕು. ಇತರ ವಾಕ್ಯಗಳು ಬೀಜವಾಕ್ಯದಿಂದ ಉದ್ಭವಿಸಿದಂತೆ ಅಥವಾ ಅದನ್ನು ಶ್ರೀಮಂತಗೊಳಿಸುವ ಜೀವವಾಹಿನಿಗಳಂತಿರಬೇಕು. ಇಂಥ ಬೀಜವಾಕ್ಯ ಕಂಡಿಕೆಯ ಪ್ರಾರಂಭದಲ್ಲಿಯೆ ಬರುತ್ತದೆ. 'ಸಂಸ್ಕೃತಿಯೆಂಬುದು ಆತ್ಮಶಿಕ್ಷಣ' ಎನ್ನುವ ವಾಕ್ಯದ ವ್ಯಾಖ್ಯಾನದಂತಿವೆ ಉಳಿದ ವಾಕ್ಯಗಳು.

ಕಂಡಿಕೆಯ ಎಲ್ಲ ವಾಕ್ಯಗಳ ನಡುವೆ ಸಾಮರಸ್ಯವಿರಬೇಕು, ಮೈತ್ರಿಯಿರಬೇಕು. ಒಂದು ವಾಕ್ಯದಿಂದ ಮತ್ತೊಂದು ಹೊರಹೊಮ್ಮಿದಂತಿರಬೇಕು. ಆಲೋಚನೆ ಸ್ಪಷ್ಟವಾಗಿರದೆ ಗೊಂದಲ ಗೊಂತಾಳೆಗಳಿಗೆ ಗುರಿಯಾದಾಗ ವಾಕ್ಯಗಳಲ್ಲಿ ವಿಷಮತೆ ತಲೆದೋರುತ್ತದೆ. ಇಲ್ಲಿ ಮೊದಲನೆಯದೇ ಬೀಜವಾಕ್ಯ. ಐತಿಹಾಸಿಕ ಸಂಗತಿಗಳನ್ನು ಪ್ರಶ್ನೆ ಪರಿಪ್ರಶ್ನೆಗಳ ಮೂಲಕ ಬಿಚ್ಚಿ ತೋರಿಸಿ, ಪ್ರಶ್ನೆಗಳಲ್ಲಿಯೇ ಉತ್ತರಗಳನ್ನು ಹುದುಗಿಸಲಾಗಿದೆ. ಸಾರ್ವಕಾಲಿಕ ಮತ್ತು ತಾತ್ಕಾಲಿಕಗಳ ಮುಂದಿನ ವಾಕ್ಯಗಳಲ್ಲಿ ವಿವರಿಸಲಾಗಿದೆ. ಈ ಕಂಡಿಕೆಯಲ್ಲಿ ಹೊಸಮಾರ್ಗ ಗಳ ಅವತಾರ ಮತ್ತು ದ್ವಂದ್ವಗಳ ಸಮನ್ವಯ ಎಂಬ ಎರಡು ವಿಷಯಗಳಿವೆ. ಇವೆರಡೂ ಪರಸ್ಪರಾವಲಂಬಿಗಳಾದ್ದರಿಂದ ಅವುಗಳಲ್ಲಿ ಸಾಮರಸ್ಯ ಘಟಿಸುವಂತಾಗಿ ಇದೊಂದು ಉತ್ತಮ ಗದ್ಯಭಾಗವೆನ್ನಿಸಿಕೊಳ್ಳಲು ಯೋಗ್ಯವಾಗಿದೆ.

ಹಿಂದೆ ತಿಳಿಸಿದಂತೆ ಕಂಡಿಕೆಗಳು ಪ್ರಬಂಧದ ಅವಯವಗಳು. ಅವಯವಗಳ ಕರ್ಮಗಳು ವಿಭಿನ್ನವಾದರೂ, ಅವುಗಳ ದೃಷ್ಟಿ ಧ್ಯೇಯಗಳಲ್ಲಿ ದೂರಾಂತರವಿಲ್ಲ, ಅಷ್ಟೇ ಅಲ್ಲ, ಅವುಗಳ ಸಂಬಂಧ ಅತ್ಯಂತ ಗಾಢವಾದುದೂ ಅಹುದು. ಕೇವಲ ವಿರಾಮಕ್ಕೋಸ್ಕರ ಕಂಡಿಕೆಗಳ ವಿಭಜನೆಯೇ ಹೊರತು, ವಾಸ್ತವವಾಗಿ ಅವೆಲ್ಲ ಅವಿಚ್ಛಿನ್ನವಾದ ಪೂರ್ಣ ರಚನೆಗಳು. ಅವುಗಳ ಬಿಡಿತನ ಕೃತಕ, ಇಡಿತನ ಮಾತ್ರ ಸಹಜ. ಹಿಂದಿನ ಕಂಡಿಕೆಯ ವಿಚಾರಸ್ರೋತ ಅಲ್ಲಿಯೇ ಬತ್ತಿಹೋಗದೆ ಮುಂದೆಯೂ ಪ್ರವಹಿಸುತ್ತದೆಯಾದ್ದರಿಂದ ಹಿಂದಿನ ಕಂಡಿಕೆ ಯಿಂದ ಮುಂದಿನ ಕಂಡಿಕೆ ಉದ್ಭವವಾದಂತಿರಬೇಕು. ಅಂದರೆ ಹಿಂದಿನದರ ಕೊನೆಯ ವಾಕ್ಯದ ಭಾವ ಭಾವನೆಗಳು ಮುಂದಿನದರ ಮೊದಲನೆಯ ವಾಕ್ಯದಲ್ಲಿ ಅನುರಣನಗೊಳ್ಳ ಬೇಕು. ಹಿಂದೆ ಉದ್ಧರಿಸಿರುವ ಕಂಡಿಕೆಯನಂತರ ಬರುವ ಮತ್ತೊಂದನ್ನು ಪರಿಶೀಲಿಸಿದರೆ ಈ ತತ್ತ್ವದ ಪ್ರಯೋಜನ ಸ್ವಾರಸ್ಯಗಳು ಮನದಟ್ಟಾಗುತ್ತವೆ.

'ಮಹಾರಾಷ್ಟ್ರೀ' ಭಾಷೆ ಇದೆ, ಈ ಭಾಷಿಕರೂ ಇದ್ದಾರೆ. ಇವರ ನಾಡಿನ ಹೆಸರೂ ಮಹಾರಾಷ್ಟ್ರ. ಏಳನೆಯ ಶತಮಾನದವರೆಗೆ ಎಲ್ಲಿ ಒಂದೆಡೆಯಲ್ಲಿಯೂ ಪ್ರಾದೇಶಿಕ ಉಲ್ಲೇಖವಿಲ್ಲ! ಮೂರೂ ಮಹಾ-ರಾಷ್ಟ್ರಕಗಳನ್ನು ೨ನೆಯ ಪುಲಕೇಶಿ ಗೆಲ್ಲುತ್ತಾನೆ, ಎಂದರೇನು ಅರ್ಥ? 'ಮಹಾರಾಷ್ಟ್ರ-ತ್ರಯ' ಎಂಬಲ್ಲಿಯ 'ತ್ರಯ'ದ ಮೂಲಕ 'ಕ' ಪ್ರತ್ಯಯ ಅಲ್ಪಾರ್ಥಕವೆಂದು ಗ್ರಹಿಸಬೇಕಾಗುತ್ತದೆ. ಮೊತ್ತಮೊದಲಲ್ಲಿ ಮಹಾ-ರಾಷ್ಟ್ರವಿದ್ದು, ಬಳಿಕ ಅದು ಮೂರು ತುಂಡಾಗಿ ಹರಿದು ಹಂಚಿಹೋಗಿರುವ ಶಕ್ಯತೆಯೂ ಉಂಟು. ಒಂದು ಮಹಾ-ರಾಷ್ಟ್ರವೂ ಒಡೆದುಹೋಗಲು ಸಂಭವಿಸಿರಬಹುದಾದ ಘಟನೆಯ ಉಲ್ಲೇಖವಿಲ್ಲ, ಒಂದು ದಂತಕಥೆ ಕೂಡ ಇಲ್ಲ!

ಆದರೆ, ಒಂದು ಶಕ್ಯತೆ ಹೀಗಿದೆ : 'ಮಹಾ-ರಾಷ್ಟ್ರ' ಎಂಬ ಸ್ಥಲ ನಾಮವು ರೂಢವಾಗುವ ಮೊದಲೇ 'ಮಹಾ-ರಾಷ್ಟ್ರಿಕ' ಎಂಬ ಹೆಸರಿನ ಜನದ ಒಂದು ಹೊಸ ಪಂಗಡವು, ಯಾವುದೊಂದು ದೇಶ ವಿಭಾಗದಲ್ಲಿ ಮೈದಾಳುತ್ತಿರಬೇಕು. ಮಹಾರಾಷ್ಟ್ರಿಕರ ಈ ಪಂಗಡವು ಸಾಕಷ್ಟು ಪ್ರಭಾವ ಶಾಲಿಯಾಗತೊಡಗಿದ ಹಾಗೆ, ಆ ಸುತ್ತಲಿನ ಭಾಗದ ಪ್ರದೇಶವು ಆ ಜನದ ಹೆಸರಿನಿಂದ ಸಂಬೋಧಿಸಲ್ಪಡುವುದಕ್ಕೆ ಪ್ರಾರಂಭವಾಗಿರಬೇಕು. ಈ ಜನವೆಲ್ಲ ಒಂದೆಡೆಯಲ್ಲಿಯೇ ಇರುವುದು ಶಕ್ಯವಿಲ್ಲ. ಯಾವು ದೊಂದು ನಾಡಿನಲ್ಲಿ ತಲೆದೋರುವ ನೂತನ ಪಕ್ಷ ಪಂಗಡಗಳು, ಬೆಳೆಯಲು ಅನುಕೂಲವಿದ್ದ ಭಾಗದಲ್ಲಿ, ಅಲ್ಲಲ್ಲಿ ಸುಪ್ರತಿಷ್ಠಿತರಾಗಿ ಬೆಳೆದಂತೆ, ಬೇರೆ ಬೇರೆ ಎಡೆಗಳಲ್ಲಿ ಹೀಗೆಯೇ ಬೇರುಬಿಟ್ಟು, ಬಲಿಯ ತೊಡಗಿದ ತಮ್ಮ ಪಕ್ಷ ಪಂಗಡಗಳೊಡನೆ ಕೂಡಿಕೊಳ್ಳುವುದುಂಟು. ಈ ಬಗೆಯಲ್ಲಿ ಹೊಸತಾಗಿ ಆಗತೊಡಗಿದ ಮಹಾರಾಷ್ಟ್ರಿಕರು ಒಂದೊಂದೆಡೆ ಯಲ್ಲಿ ಸು-ಸ್ಥಿರರಾಗಿ ಅವರ ಹೆಸರಿನ ದೇಶ ವಿಭಾಗವು ಅಲ್ಲಿ ಇಲ್ಲಿ ತಲೆ ಯೆತ್ತಿರುವ ಶಕ್ಯತೆಯಿದೆ. ೨ನೆಯ ಪುಲಕೇಶಿಯು, ಇಂತಹ ಮಹಾರಾಷ್ಟ್ರಿಕರ ಹೆಸರಿ ನಿಂದ ಸಂಬೋಧಿಸಲ್ಪಡುತ್ತಿದ್ದ ಮೂರು ವಿಭಾಗಗಳನ್ನು ಗೆದ್ದಿರಬೇಕು.

ಇಲ್ಲಿಯೂ ನೂತನ ಕಾವ್ಯಮಾರ್ಗದ ಪ್ರಸ್ತಾಪವಿದೆ. ಹಳೆಯದರ ಮುಂದುವರಿಕೆ ಯೆಂದರೆ ಪುನರಾವರ್ತನೆಯೆಂದು ತಿಳಿಯಬಾರದು. ಕಂಡಿಕೆಯ ಮೊದಲನೆಯ ವಾಕ್ಯ ಹಳತು ಹೊಸತರ ಸಂಗಮ ಸ್ಥಾನದಂತಿರಬೇಕು. ಮುಂದಿನ ವಾಕ್ಯಗಳಲ್ಲಿ ನೂತನ ವಿಷಯಗಳ ಆವಿಷ್ಕಾರವಿರಬೇಕು. ನೂತನ ಪ್ರಯೋಗವೂ ಕಾಲಕ್ರಮೇಣ ಹೇಗೆ ಜಡ ಸಂಪ್ರದಾಯ ವಾಗುತ್ತದೆನ್ನುವುದರ ವಿವರಣೆ ಅಲ್ಲಿ ವಿನ್ಯಾಸಗೊಂಡಿದೆ. ಮುಂದಿನ ಎರಡು ಕಂಡಿಕೆ ಗಳಲ್ಲಿಯೂ ಇಂಥದೇ ತಂತ್ರವಿಧಾನಗಳನ್ನು ಕಾಣಬಹುದು.

ಒಂದು ಕಂಡಿಕೆಯಲ್ಲಿ ಇಷ್ಟೇ ವಾಕ್ಯವಿರಬೇಕೆಂಬ ನಿಯಮ ಸಲ್ಲದು. ಆಲೋಚನೆಯ ವಿಸ್ತಾರ ವೈವಿಧ್ಯಗಳು ಅದನ್ನು ನಿರ್ಣಯಿಸುತ್ತವೆ. ಒಂದು ಮಾತು ಮಾತ್ರ ನಿಜ. ಕಂಡಿಕೆ ಸುದೀರ್ಘವಾದರೆ ಶೈಲಿಯನ್ನು ಉಬ್ಬುತಗ್ಗುಗಳೂ ಸಿಕ್ಕು ಗಂಟುಗಳೂ ಏಕತಾನತೆಯೂ ಪ್ರವೇಶಿಸುವ ಸಂಭವವುಂಟು. ಆಲೋಚನೆ ಸಾಂದ್ರವಾಗಿದ್ದಾಗ ದೀರ್ಘಸೂತ್ರತೆಗವಕಾಶ ವಿರುವುದಿಲ್ಲ. ಅದು ಅರಳೆಯಂತೆ ಹಿಂಜಿಕೊಂಡಾಗ ಮಂಜಿನಂತೆ ಆವಿಯಾದಾಗ ಅದು ಮುಷ್ಟಿಗ್ರಾಹ್ಯವಾಗುವುದಿಲ್ಲ. ಆಗ ಶಬ್ದಾಡಂಬರವೇ ಅಧಿಕವಾಗುತ್ತದೆ. ಈ ಭಾಗ ಇಂತೆಯೇ ನಿರರ್ಗಳವಾಗಿ ವಡೆತಡೆಯಿಲ್ಲದೆ ಮುಂದುವರಿಯುತ್ತದೆ. ಇಲ್ಲಿ ಪ್ಯಾರಾ ವಿಂಗಡಣೆಯಿರಲಿ, ವಾಕ್ಯ ವಿಭಜನೆಯೂ ನಡೆದಿಲ್ಲ. ಇಡೀ ಕಂಡಿಕೆಯೇ ಒಂದು ಸಂಯೋಜಿತ ವಾಕ್ಯವೆಂಬಂತೆ ಭಾಸವಾಗುತ್ತದೆ.

೩

ಮೇಲಿನ ಅಂಶಗಳನ್ನು ಅನುಲಕ್ಷಿಸಿ ಶಂಬಾ ಗದ್ಯಶೈಲಿಯ ವೈಲಕ್ಷಣಗಳನ್ನು ಹೀಗೆ ಕಲೆಹಾಕಬಹುದು.

೧. ಶಂಬಾ ಅವರ ಗದ್ಯರಚನೆ ಸರಳವಾಗಿರುತ್ತದೆ. ವಾಕ್ಯಗಳು ಚಿಕ್ಕ ಚಿಕ್ಕವಾಗಿದ್ದು ಹೇಳಬೇಕಾದ ವಿಚಾರ ಅತ್ಯಂತ ಸ್ಫೂಟವಾಗಿ ವ್ಯಕ್ತವಾಗುತ್ತದೆ.
೨. ತರ್ಕಬದ್ಧವಾದ ವಿಚಾರ ಸರಣಿಯ ಜೊತೆಗೆ ಒಂದು ರೀತಿಯ ಲಯವಿದೆ. ಈ ಹೃದ್ಯವಾದ ಗದ್ಯವು ಪದ್ಯಾತ್ಮಕ ಗದ್ಯವಾಗಿದೆ. ಗದ್ಯದಲ್ಲಿ ಕಾವ್ಯಶಕ್ತಿಯನ್ನು ತುಂಬಿದುದು ಶಂಬಾ ಅವರ ಗದ್ಯಶೈಲಿಯ ಲಕ್ಷಣಗಳಲ್ಲಿ ಒಂದಾಗಿದೆ.
೩. ಖಚಿತತೆ, ನಿಖರತೆ ಹಾಗೂ ಸಂವಹನಶೀಲತೆ ಗದ್ಯಶೈಲಿಯ ಮುಖಲಕ್ಷಣಗಳಾಗಿದ್ದು ಶಂಬಾ ಅವರ ಗದ್ಯದಲ್ಲಿ ಈ ಗುಣಗಳನ್ನು ನಿಚ್ಚಳವಾಗಿ ಗುರುತಿಸಬಹುದು. ಭಾಷೆ, ಸಂಸ್ಕೃತಿಗೆ ಸಂಬಂಧಿಸಿದಂತೆ ಅವರು ಯಾವುದೇ ವಿಷಯ ಕುರಿತು ಬರೆಯಲಿ ಅದರ ಮುಖ್ಯ ಲಕ್ಷಣಕ್ಕೆ ಕೈಹಾಕಿ ಸಕಾರಣವಾಗಿ ಸಿದ್ಧಾಂತ ಮಂಡಿಸುತ್ತಾರೆ.
೪. ಅವರ ಶೈಲಿಯು ಕೆಲವೆಡೆ ಮಿತವ್ಯಯ ಗುಣವನ್ನು ಸಾಧಿಸಿದಂತೆ ಕೆಲವು ಬರೆಹಗಳಲ್ಲಿ ವಿಸ್ತರಣೀಯ ಗುಣವನ್ನು ಸಾಧಿಸಿದೆ. ಆಯ್ಕೆ ಮಾಡಿಕೊಂಡ ಸಂಶೋಧನೆಯ ಸಮಸ್ಯೆಯ ಮೇಲೆ ಅದು ಅವಲಂಬಿಸಿರುತ್ತದೆ.
೫. ವಾಕ್ಯಗಳ ಓಟದಲ್ಲಿ ಲಾಲಿತ್ಯ, ಭಾವನೆಗಳನ್ನು ಶಕ್ತಿಯುತವಾಗಿ ವ್ಯಕ್ತಪಡಿಸುವ ಪದಜೋಡಣೆ ಇವೆಲ್ಲವುಗಳಿಂದ ಅವರ ಗದ್ಯಶೈಲಿ ಬಹು ಆಕರ್ಷಕವಾಗಿದೆ. ಇದರಿಂದ ಮೊದಲ ಓದಿಗೆ ಓದುಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತವೆ. ಶಂಬಾ ಅವರು ಬೆಳಗಾವಿ ಜಿಲ್ಲೆಯ ವ್ಯವಹಾರಿ ಶಿಷ್ಟಭಾಷೆಯನ್ನು ಬಳಸುವುದರಿಂದ ಪದ ಜೋಡಣೆ ಯಲ್ಲಿ, ವಾಕ್ಯ ವಿನ್ಯಾಸದಲ್ಲಿ ಒಂದು ಬಗೆಯ ಲಯ ಕಂಡುಬರುತ್ತದೆ.
೬. ಶಂಬಾ ಅವರ ಬರವಣಿಗೆಯಲ್ಲಿ ಲವಲವಿಕೆ ಹೆಚ್ಚು. ಯಾವುದೇ ಎಡರು ತೊಡರು ಗಳಿಲ್ಲದೆ ಓದಿಸಿಕೊಂಡು ಹೋಗುತ್ತದೆ. ಸಂದರ್ಭಕ್ಕೆ ತಕ್ಕಂತೆ ಗಾದೆ, ನುಡಿಗಟ್ಟು,

ಮುಂತಾದ ವಾಗ್ರೂಢಿಗಳು, ಶಬ್ದಚಿತ್ರಗಳು, ರೂಪಕಗಳು ಬಳಕೆಯಾಗಿ ಅವರ ಬರೆಹಗಳಿಗೆ ಶಕ್ತಿ ತಂದುಕೊಟ್ಟಿದೆ. ಅವರಿಗೆ ವಿಷಯದ ಮೇಲೆ ಹಿಡಿತವಿರುವುದರಿಂದ ಭಾಷೆ ಸತ್ವಯುತವಾಗಿ ಬಳಕೆಯಾಗಿದೆ, ಅಭಿವ್ಯಕ್ತವಾಗಿದೆ.

೭. ಶಂಬಾ ಅವರ ಸಂಶೋಧನೆಯಲ್ಲಿ ಭಾಷೆ ಕೇವಲ ಅಭಿವ್ಯಕ್ತಿಯ ಸಾಧನವಲ್ಲದೆ ಮೌಲ್ಯಗಳ ನಿಕಷವೂ ಸಾಂಸ್ಕೃತಿಕ ಮಹತ್ವವೂ ಆಗಿರುವುದನ್ನು ಗಮನಿಸಬೇಕು. ಅವರ ಕನ್ನಡದ ನೆಲೆ, ಕಣ್ಮರೆಯಾದ ಕನ್ನಡ ಮುಂತಾದ ಕೃತಿಗಳನ್ನು ವಿವೇಚಿಸಿದಾಗ ಕನ್ನಡ ಪರ ಕಾಳಜಿ, ಕನಿಕರ ಅವರ ಭಾಷೆಯಲ್ಲಿ ವ್ಯಕ್ತವಾಗಿದೆ.

೮. ವಾಚ್ಯಾರ್ಥ ಅವರ ಗದ್ಯದ ಜೀವಾಳ. ಭಾಷೆಯ ಬಗೆಗೆ ಬರೆಯಲಿ, ಸ್ಥಳನಾಮ ಕುರಿತು ವಿವೇಚಿಸಲಿ ಅವರ ವಿಸ್ತಾರವಾದ ವ್ಯಾಸಂಗ, ಸ್ಪಷ್ಟ ಆಲೋಚನೆ, ತಿಳಿಯಾದ ಬರವಣಿಗೆ ಹಾಗೂ ಬೆದಕಿ ವಸ್ತುಸ್ಥಿತಿಯನ್ನು ತಿಳಿಯುವ ಹಂಬಲ ಅವರ ಬರೆಹಗಳ ಉದ್ದಕ್ಕೂ ಗೋಚರಿಸುತ್ತದೆ.

ಒಂದು ನಿದಿಷ್ಟ ವಿಷಯಗಳನ್ನು ಕೇಂದ್ರೀಕರಣಗೊಳಿಸಿ ಕೃತಿಗಳನ್ನು ಬರೆದ ಮೇಲೆ ಅಚ್ಚಿನ ಮುನ್ನ ತಿದ್ದಿ ತೀಡಿ, ಪರಿಷ್ಕರಿಸಿ ವಸ್ತುವೂ ಅಭಿವ್ಯಕ್ತಿಯ ವಿಧಾನವೂ ಎರಡು ಉತ್ಕೃಷ್ಟವಾಗಿರುವಂತೆ ಪ್ರಯತ್ನಿಸುವುದು ಅವರ ಪದ್ಧತಿ. ಪ್ರಕಟವಾದ ಮೇಲೂ ಅವಶ್ಯ ಕಂಡಲ್ಲಿ ತಿದ್ದುಪಡಿ ಮಾಡಿಕೊಳ್ಳುವುದು ಅವರ ಕ್ರಮ. ಮುದ್ರಣದ ಅಚ್ಚುಕಟ್ಟುತನದ ಬಗ್ಗೆ ಅವರಿಗೆ ವಿಶೇಷ ಗಮನ. ತಪ್ಪಿಲ್ಲದಂತೆ ಮುದ್ರಿಸುವ ಕಡೆಗೆ ಅವರ ಕಾಳಜಿ ಅಪಾರ. ಅವರ ಬರೆಹಗಳಲ್ಲಿ, ಅಡಿಟಿಪ್ಪಣಿಗಳು, ವಿರಾಮಚಿಹ್ನೆಗಳು, ಉಲ್ಲೇಖಗಳು ಎಲ್ಲವೂ ಅಚ್ಚುಕಟ್ಟಾಗಿ ಬಳಕೆಯಾಗಿವೆ.

ಶಂಬಾ ಅವರ ನಿರೂಪಣೆಯಲ್ಲಿ ಒಂದು ಕ್ರಮವಿದೆ, ಶಿಸ್ತುವಿದೆ, ವ್ಯವಸ್ಥಿತ ಚಿಂತನೆಯಿದೆ. ಇವುಗಳಿಂದ ಅವರ ಸಂಪ್ರಬಂಧಗಳ ಅನಿರೀಕ್ಷಿತ ಸ್ಥಳಗಳಲ್ಲಿ ಅಮೂಲ್ಯವಾದ ಹೊಸ ವಿಷಯಗಳು ಸಿಗುತ್ತವೆ. ಶಂಬಾ ಅವರದು ಸುಸಂಸ್ಕೃತ ಹೃದಯ. ಅಂತೆಯೇ ಅವರ ಶೈಲಿಯಲ್ಲಿ ಉದ್ವೇಗ, ಆಡಂಬರ, ಆಕ್ರೋಶ, ವಿಡಂಬನೆ ಇವು ಯಾವವೂ ಕಂಡು ಬರುವುದಿಲ್ಲ. ಅವರು ನೇರವಾಗಿ ಇದ್ದುದನ್ನು ಇದ್ದಂತೆ ಹೇಳುವುದರಿಂದ ಅವರ ಬರಹಗಳ ಬಗ್ಗೆ ನಂಬಿಕೆ ಹುಟ್ಟುತ್ತದೆ. ಶಂಬಾ ಅವರ ಶೈಲಿಯನ್ನು ಸ್ಥೂಲವಾಗಿ ಸ್ವಭಾವೋಕ್ತಿ ಅಲಂಕಾರಕ್ಕೆ ಹೋಲಿಸಬಹುದು. ಹೀಗಾಗಿ ಶಂಬಾ ಅವರ ಸಂಶೋಧನೆ ಓದುಗರಿಗೆ ಬಹಳ ಸಂತೋಷ ಕೊಡುತ್ತದೆ.

ಹೀಗೆ, ಶಂಬಾ ಅವರ ಗದ್ಯಶೈಲಿ ಅಸ್ಖಲಿತವಾಗಿ ಹರಿದು ಬಂದಿದೆ. ಬೆಲ್ಲದ ಬೊಂಬೆಯನ್ನು ಯಾವ ಕಡೆಯಿಂದ ನೆಕ್ಕಿದರೂ ಸಿಹಿ ತಾನೆ. ಶಂಬಾ ಅವರ ಶೈಲಿ ಅಷ್ಟೇ ಸೊಗಸಾಗಿದೆ. ಶಂಬಾ ಅವರಷ್ಟು ಖಚಿತರಾಗಿ ವಿಷಯ ನಿರೂಪಿಸಿರುವವರು ಇಂದು ಬೇರೊಬ್ಬರಿರುವುದು ನನಗೆ ಸಂದೇಹ. ಅವರು ಬರವಣಿಗೆಯಲ್ಲಿ ಯಾರನ್ನೂ ಅನುಸರಿಸದೆ ಸ್ವಂತ ನಿರೂಪಣೆಯ

ವಿಧಾನವನ್ನು ರೂಢಿಸಿಕೊಂಡಿರುವುದರಿಂದ ಅವರ ಬರವಣಿಗೆ ಇತರರಿಗೆ ಮಾದರಿಯಾಗಿದೆ. ಅಂತೆಯೇ ಹಲವು ಭಿನ್ನ ಶೈಲಿಗಳ ನಡುವೆಯೂ ಶಂಬಾ ಶೈಲಿಯನ್ನು ಸುಲಭವಾಗಿ ಗುರುತಿಸಬಹುದು. ಕನ್ನಡ ಗದ್ಯದ ಬೆಳವಣಿಗೆಯಲ್ಲಿ ಶಂಬಾ ಅವರ ಮುದ್ರೆ ಇದ್ದೇ ಇದೆ.

ಆಕರಗ್ರಂಥ

೧. ಮಲ್ಲೇಪುರಂ ಜಿ. ವೆಂಕಟೇಶ್, ಶಂಬಾ ಕೃತಿ ಸಂಪುಟ (ಆರು ಸಂಪುಟಗಳು), ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೭೧

ಎಂ. ಚಿದಾನಂದಮೂರ್ತಿ : ಗದ್ಯಶೈಲಿ

'ಶೈಲಿ' ಎಂದರೆ ಬರೆಹಗಾರರ ಅಭಿವ್ಯಕ್ತಿಯ ವೈಲಕ್ಷಣವಾಗಿದೆ. ಬರೆಹಗಾರನ ಯಶಸ್ಸಿಗೆ ಅವರ ಅಭಿವ್ಯಕ್ತಿಯ ವಿಧಾನವು ಮಹತ್ವದ ಪಾತ್ರವಹಿಸುತ್ತದೆ. ಗದ್ಯಶೈಲಿಯು ಪದ್ಯವನ್ನು ಬಿಟ್ಟು ಉಳಿದ ಸಾಹಿತ್ಯ ಪ್ರಕಾರಗಳಾದ ಕತೆ, ಕಾದಂಬರಿ, ನಾಟಕ, ಲಲಿತ ಪ್ರಬಂಧ ಹಾಗೂ ಸೃಜನೇತರ ಸಾಹಿತ್ಯಗಳಲ್ಲಿಯ ನಿರೂಪಣೆಗೆ ಸಂಬಂಧಿಸುತ್ತದೆ. ಚಿದಾನಂದಮೂರ್ತಿ ಅವರು ತಮ್ಮ ಅಭಿವ್ಯಕ್ತಿಗೆ ಸೃಜನೇತರ ಸಾಹಿತ್ಯಗಳಲ್ಲಿಯ ನಿರೂಪಣೆಗೆ ಸಾಹಿತ್ಯ ಪ್ರಕಾರವನ್ನು ಆರಿಸಿಕೊಂಡಿರುವುದರಿಂದ ಅವರ ಶೈಲಿಯ ಸಾಧನೆಯು ಗದ್ಯದಲ್ಲಿಯೇ ಇದೆಯೆಂಬುದು ಸ್ಪಷ್ಟವಾಗುತ್ತದೆ. ಅವರ ಗದ್ಯಶೈಲಿಯ ಸ್ವರೂಪವನ್ನು ಈ ಅಧ್ಯಾಯದಲ್ಲಿ ವಿವೇಚಿಸಲಾಗಿದೆ.

ಚಿದಾನಂದಮೂರ್ತಿ ಅವರ ಗದ್ಯದ ರಚನೆ ಸರಳವಾಗಿರುತ್ತದೆ. ವಾಕ್ಯಗಳು ಚಿಕ್ಕ ಚಿಕ್ಕವಾಗಿದ್ದು ಹೇಳಬೇಕಾದ ವಿಚಾರ ಅತ್ಯಂತ ಸ್ಫುಟವಾಗಿ ವ್ಯಕ್ತವಾಗುತ್ತದೆ. ಶೂನ್ಯ ಸಂಪಾದನೆಯನ್ನು ಕುರಿತು ಎಂಬ ಗ್ರಂಥದಲ್ಲಿ ಅಲ್ಲಮನ ವ್ಯಕ್ತಿತ್ವವನ್ನು ಕುರಿತು ಹೇಳುತ್ತ 'ಹನ್ನೆರಡನೆಯ ಶತಮಾನದಲ್ಲಿ ಅಲ್ಲಮನೇ ಒಂದು ರೀತಿಯಲ್ಲಿ ಕೇಂದ್ರ ವ್ಯಕ್ತಿ. ಎಲ್ಲಿಯೋ ಹುಟ್ಟಿ, ಕಾಡಿನಲ್ಲಿ, ಕಣಿವೆಗಳಲ್ಲಿ ಮೊರೆದು, ಅನಂತರ ಬಯಲು ಪ್ರದೇಶಗಳಲ್ಲಿ ಶಾಂತವಾಗಿ ಹರಿದು ಅನೇಕ ತೀರ್ಥಗಳನ್ನು ಕಲ್ಪಿಸಿ, ಜೀವಜಂತುಗಳನ್ನು, ಗದ್ದೆಗಳನ್ನು ತಣಿಸಿ ಬಳಿಕ ಸಾಗರದಲ್ಲಿ ಲೀನಗೊಳ್ಳುವ ನದಿಯಂತೆ ಅಲ್ಲಮನ ಬಾಳು', ಇವು ಎಂತಹ ಸುಂದರವಾದ ಹೋಲಿಕೆಗಳು. ಅಲ್ಲಮನ ಜೀವನ ವೃತ್ತಾಂತ ವನ್ನು ಹೃದಯಸ್ಪರ್ಶಿಯಾಗಿ ಹೇಳಿದ್ದಾರೆ. ಇಂತಹ ನಿರೂಪಣೆಯಲ್ಲಿ ತರ್ಕಬದ್ಧ ವಿಚಾರ ಸರಣಿಯ ಜೊತೆಗೆ ಒಂದು ರೀತಿಯ ಲಯವಿದೆ. ಈ ಹೃದ್ಯವಾದ ಗದ್ಯವು ಪದ್ಯಾತ್ಮಕ ಗದ್ಯವಾಗಿದೆ. ಗದ್ಯದಲ್ಲಿಯೂ ಕಾವ್ಯ ಶಕ್ತಿಯನ್ನು ತುಂಬಿದುದು ಚಿದಾನಂದ ಮೂರ್ತಿ ಅವರ ಗದ್ಯಶೈಲಿಯ ಲಕ್ಷಣಗಳಲ್ಲಿ ಒಂದಾಗಿದೆ.

ಖಚಿತತೆ, ನಿಖರತೆ ಹಾಗೂ ಸಂವಹನಶೀಲತೆ ಗದ್ಯಶೈಲಿಯ ಮುಖ್ಯಲಕ್ಷಣಗಳಾಗಿದ್ದು, ಚಿದಾನಂದಮೂರ್ತಿ ಅವರ ಗದ್ಯದಲ್ಲಿ ಆ ಗುಣಗಳನ್ನು ನಿಚ್ಚಳವಾಗಿ ಗುರುತಿಸಬಹುದು. ಸಾಹಿತ್ಯ ಸಂಬಂಧಿಶಾಸ್ತ್ರ ವಿಷಯಗಳನ್ನು ಕುರಿತು ಯಾವುದೇ ಬರೆಹವಿರಲಿ ಅದರ ಮುಖ್ಯ ಲಕ್ಷಣಕ್ಕೆ ಕೈಹಾಕಿ ಸಕಾರಣವಾಗಿ ಸಿದ್ಧಾಂತ ಮಂಡಿಸುತ್ತಾರೆ. 'ಕನ್ನಡದಲ್ಲಿ ಪ್ರತಿಧ್ವನಿ ಪದಗಳು', 'ಕನ್ನಡ ವ್ಯಾಕರಣಕಾರರು ಮತ್ತು ಸ್ವೀಕರಣ ವಿಚಾರ', 'ಬಸವಣ್ಣನವರ ವಚನಗಳಲ್ಲಿ ಛಂದೋಲಯ', 'ಸರಳಾಂಶ ರಗಳೆ', 'ತಾರಾವಳಿಗಳ ಛಂದಸ್ಸು' ಇಂತಹ ಸಂಪ್ರಬಂಧಗಳಲ್ಲಿ ಚಿದಾನಂದಮೂರ್ತಿ ಅವರು ಸೂತ್ರರೂಪದ ಪ್ರಹೇಳಿಕೆಗಳನ್ನು ಕೊಟ್ಟಿದ್ದಾರೆ. ಅವರ ಶಾಸ್ತ್ರೀಯ ಬರೆಹಗಳು ಕನ್ನಡ ಭಾಷೆ, ಛಂದಸ್ಸಿನ ಸ್ವರೂಪವನ್ನು ಸ್ಪಷ್ಟವಾಗಿ ತಿಳಿಸುತ್ತವೆ. ಅವರ ಕೆಲವು ಶಾಸ್ತ್ರೀ ಬರೆಹಗಳು ಮಿತವ್ಯಯ ಗುಣವನ್ನು ಸಾಧಿಸಿದಂತೆ ಕೆಲವು ಬರೆಹಗಳು ವಿಸ್ತರಣೀಯ ಗುಣವನ್ನು ಸಾಧಿಸಿವೆ. ಆಯ್ಕೆ ಮಾಡಿಕೊಂಡ ಸಂಶೋಧನೆಯ ಸಮಸ್ಯೆಯ ಮೇಲೆ ಅದು ಅವಲಂಬಿಸಿರುತ್ತದೆ.

ಆಧುನಿಕ ಪೂರ್ವ ಸಾಹಿತ್ಯಕ್ಕೆ ಸಂಬಂಧಿಸಿದ ಸಂಪ್ರಬಂಧಗಳನ್ನು ಗಮನಿಸಿದಾಗ ಕವಿಯ ಮಾತುಗಳನ್ನು ಹೇಳಿ ಅವುಗಳಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ವ್ಯಾಖ್ಯಾನಿಸಿ ಸಮಕಾಲೀನ ವಿಮರ್ಶೆಯ ಬೆಳಕಿನಲ್ಲಿ ಚರ್ಚಿಸುತ್ತಾರೆ. 'ಪಂಪಕವಿ ಮತ್ತು ಯುಗಧರ್ಮ', 'ರನ್ನನ ಒಂದು ಪದ್ಯದ ಸರಿಯಾದ ಪಾಠ ಮತ್ತು ಅರ್ಥ', 'ವಿವಾಹ ಪುರಾಣ', 'ಕನ್ನಡದ ಅತ್ಯಂತ ಪ್ರಾಚೀನ ಶಾಸನಸ್ಥ ಜಾನಪದ ಕೃತಿ', 'ಚನ್ನಬಸವಣ್ಣನ ಅಂತರಜಾತೀಯ ವಿವಾಹದ ಬಗ್ಗೆ' ಇಂತಹ ಸಂಪ್ರಬಂಧಗಳನ್ನು ಗಮನಿಸಬಹುದು. ಅವುಗಳನ್ನು ಓದುವುದೇ ಒಂದು ಸೊಗಸು. ಮೂಲಕಾವ್ಯವನ್ನು ಓದುವುದಕ್ಕಿಂತ ಆ ಸಂಪ್ರಬಂಧಗಳ ಗದ್ಯವನ್ನೇ ಓದುತ್ತಾ ಹೋಗಬೇಕು ಎನ್ನುವಷ್ಟರ ಮಟ್ಟಿಗೆ ಸುಂದರವಾಗಿದೆ. ಭಾವನೆಗಳನ್ನು ಶಕ್ತಿಯುತವಾಗಿ ವ್ಯಕ್ತಪಡಿಸುವ ಪದಜೋಡಣೆ, ವಾಕ್ಯಗಳ ಓಟದಲ್ಲಿ ಲಾಲಿತ್ಯ ಇವೆಲ್ಲವುಗಳಿಂದ ಅವರ ಗದ್ಯಶೈಲಿ ಬಹುಆಕರ್ಷಕವಾಗಿದೆ. ಇದರಿಂದ ಮೊದಲ ಓದಿಗೆ ಓದುಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತದೆ.

ಚಿದಾನಂದಮೂರ್ತಿ ಅವರ ಬರವಣಿಗೆಯಲ್ಲಿ ಲವಲವಿಕೆ ಹೆಚ್ಚು. ಯಾವುದೇ ಎಡರು ತೊಡರುಗಳಿಲ್ಲದೆ ಓದಿಸಿಕೊಂಡು ಹೋಗುತ್ತದೆ. ಸಂದರ್ಭಕ್ಕೆ ತಕ್ಕಂತೆ ಗಾದೆ, ನುಡಿಗಟ್ಟು ಮುಂತಾದ ವಾಗ್ರೂಢಿಗಳು, ಶಬ್ದಚಿತ್ರ, ರೂಪಕಗಳು ಬಳಕೆಯಾಗಿ ಅವರ ಬರೆಹಗಳಿಗೆ ಶಕ್ತಿ ತಂದುಕೊಟ್ಟಿವೆ. ಮಾತ್ರಾಲಯ ಮತ್ತು ಅಂಶಲಯದ ಸ್ವರೂಪದ ಬಗೆಗೆ ಬರೆಯುತ್ತ 'ಇಲ್ಲಿಯ ನಡೆ (ಮಾತ್ರಾಲಯ) ಶಿಸ್ತಿನ ಸಿಪಾಯಿಯೊಬ್ಬ ಟಪ್‌ಟಪ್ ಎದು ಹೆಜ್ಜೆ ಹಾಕಿದಷ್ಟು ಕ್ರಮಬದ್ಧ. ಅಂಶಲಯದಲ್ಲಿ ಸಿಪಾಯಿ ತಲೆದೂಗುತ್ತ, ಒರೆಯುತ್ತ ಕೈಕಾಲು ಆಡಿಸುತ್ತ ನಿಧಾನವಾಗಿ ಆದರೂ ಸಮಗತಿಯಲ್ಲಿ ಹೆಜ್ಜೆ ಹಾಕುತ್ತ ನಡೆಯುತ್ತಾನೆ'.[೨] ಮಾತ್ರಾಲಯ ಮತ್ತು ಅಂಶಲಯದ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಈ ಹೋಲಿಕೆ ತುಂಬ ಸೊಗಸಾಗಿದೆ. 'ಲಯಗ್ರಾಹಿ ಮತ್ತು ಲಯೋತ್ತರ'

ಈ ವೃತ್ತಗಳ ಸ್ವರೂಪವನ್ನು ಅಷ್ಟೇ ಸೊಗಸಾಗಿ ಹೇಳಿದ್ದಾರೆ. ‘ಎರಡರ ಲಯವೂ ಮನೋಹರ, ಮೊದಲನೆಯದರ ನಡೆ ನಿಧಾನ, ಗಂಭೀರ, ಎರಡನೆಯದರ ನಡೆ ಚುರುಕು, ನಾಟ್ಯಶೀಲ’. ಕೊಂಡಗುಳಿ ಕೇಶಿರಾಜನ ಬಗ್ಗೆ ಬರೆಯುತ್ತ ಅವನು ‘ಚಂಪೂ ಪ್ರಕಾರದಲ್ಲಿ ಬೇರೂರಿ ಮುಂದಿನ ವಚನ ಸಾಹಿತ್ಯ ಅರಳಲು ಸ್ಫೂರ್ತಿದಾಯಕನಾಗಿದ್ದಾನೆ. ಅವನೊಬ್ಬ ಚಂಪೂ ವಚನಯುಗಗಳ ಮಧ್ಯದ ಸಂಕ್ರಮಣ ಕವಿ’[3] ಎಂದಿರುವುದು ತುಂಬ ಅರ್ಥವತ್ತಾಗಿದೆ. ಅವರಿಗೆ ವಿಷಯದ ಮೇಲೆ ಹಿಡಿತವಿರುವುದರಿಂದ ಭಾಷೆ ಸತ್ವಯುತವಾಗಿ ಬಳಕೆಯಾಗಿದೆ, ಅಭಿವ್ಯಕ್ತವಾಗಿದೆ.

ಚಿದಾನಂದಮೂರ್ತಿ ಅವರ ಸಂಶೋಧನೆಯಲ್ಲಿ ಭಾಷೆ ಕೇವಲ ಅಭಿವ್ಯಕ್ತಿಯ ಸಾಧನವಲ್ಲದೆ ಮೌಲ್ಯಗಳ ನಿಕಷವೂ ಸಾಂಸ್ಕೃತಿಕ ಮಹತ್ವವೂ ಆಗಿರುವುದನ್ನು ಗಮನಿಸ ಬೇಕೆ. ‘ಲಂಬಾಣಿ ಜನ ಮತ್ತು ಅವರ ಭಾಷೆ’, ‘ಬಸವಿಲಕ್ಕಜ್ಜಿ’, ‘ದೇವದಾಸಿ’ಯೊಬ್ಬ ಳೊಡನೆ ಸಂದರ್ಶನ, ಪಗರಣ, ಜೋಕುಮಾರಸ್ವಾಮಿ, ನಮ್ಮ ಹಳ್ಳಿಗಳು ಅಂದು-ಇಂದು, ಜಂಗಮಜಾತಿಯಲ್ಲಿ ಅನುಶ್ರೇಣಿ ಇಂತಹ ಸಂಪ್ರಬಂಧಗಳು ಸಮಾಜೋ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ರೂಪುಗೊಂಡಿವೆ. ಸಮಾಜೀಕರಣ ಹಾಗೂ ಸಾಮಾಜಿಕ ಚಲನಶೀಲತೆಯು ಚಿದಾನಂದಮೂರ್ತಿ ಅವರಿಗೆ ಮುಖ್ಯವಾಗಿರುತ್ತದೆ. ಸಂಶೋಧನೆ ಗಾಗಿ ಸಂಶೋಧನೆಯಾಗಬಾರದು. ಸಾಮಾಜಿಕ ಪರಿವರ್ತನೆಗಾಗಿ ಸಂಶೋಧನೆಯಾಗ ಬೇಕು ಎಂಬುದು ಅವರ ನಿಲುವಾಗಿದೆ. ಇದನ್ನು ಗಮನಿಸಿದಾಗ ಅವರ ಬರೆಹಗಳಲ್ಲಿ ಸಾಮಾಜಿಕ ಕಾಳಜಿಯಿದೆ.

ವಾಚಾರ್ಥ ಅವರ ಗದ್ಯದ ಜೀವಾಳ. ಶೂನ್ಯಸಂಪಾದನೆಯಂತಹ ತಾತ್ತ್ವಿಕ ವಿಷಯ ವನ್ನು ಕುರಿತು ಬರೆಹವಾಗಲಿ, ಆಧುನಿಕ ಪೂರ್ವ ಸಾಹಿತ್ಯದಲ್ಲಿ ಅಸ್ಪೃಶ್ಯರ ಸ್ಥಿತಿಯನ್ನು ಕುರಿತು ಬರೆದ ಗ್ರಂಥವಾಗಲಿ, ಪಾರಿಭಾಷಿಕ ಪದಗಳನ್ನು ಮಿತಗೊಳಿಸಿ ಸರಳವಾದ ಶೈಲಿಯಲ್ಲಿ ಭಾಷಾವಿಜ್ಞಾನದ ಮೂಲತತ್ವಗಳನ್ನು ನಿರೂಪಿಸುವುದಾಗಲಿ, ಪ್ರಾಚೀನ ಕಾವ್ಯ ಮತ್ತು ಶಾಸನಗಳಲ್ಲಿ ಕಂಡುಬರುವ ಕನ್ನಡ ಸಂಸ್ಕೃತಿಯ ವಿವರಗಳನ್ನು ವಿವರಿಸುವ ‘ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ’ವಾಗಲಿ, ಅಧಿಕೃತ ಆಸ್ತಿಭಾರದ ಮೇಲೆ ಬಸವಣ್ಣನವರ ಚರಿತ್ರೆಯನ್ನು ಕುರಿತು ಕೃತಿಯಾಗಲಿ, ಸೂರ್ಯಗ್ರಹಣದ ಸುತ್ತ ಹಬ್ಬಿದ ಜನಪದರ ನಂಬಿಕೆ-ಆಚರಣೆ, ರಿಚುವಲ್ಲುಗಳನ್ನು ಕಲೆಹಾಕಿ ವ್ಯಾಖ್ಯಾನಿಸಿದ ಬರೆಹ ದಲ್ಲಾಗಲಿ ಚಿದಾನಂದಮೂರ್ತಿ ಅವರ ವಿಸ್ತಾರವಾದ ವ್ಯಾಸಂಗ, ಸ್ಪಷ್ಟ ಆಲೋಚನೆ, ತಿಳಿಯಾದ ಬರವಣಿಗೆ ಹಾಗೂ ಬೆದಕಿ ವಸ್ತುಸ್ಥಿತಿಯನ್ನು ತಿಳಿಯುವ ಹಂಬಲ ಅವರ ಬರಹಗಳ ಉದ್ದಕ್ಕೂ ಗೋಚರಿಸುತ್ತದೆ.

ಚಿದಾನಂದಮೂರ್ತಿ ಅವರು ಹಲವೆಡೆ ಅಂದರೆ ಹಂಪೆಯಲ್ಲಿ ನಾಗನಾಥೇಶ್ವರ ದೇವಾಲಯವನ್ನು ಶೋಧಿಸಿದಾಗ ಅಕ್ಷರಶಃ ‘ಶಿವಣ್ಣ ಸಿಗ್ತು ಬನ್ನಿ ಬನ್ನಿ!’ ಎಂದು ಭಾವ ತೀವ್ರತೆಯಿಂದ ಕೂಗುತ್ತಾರೆ. ಕನ್ನಡಾಯಣದಲ್ಲಿ ತಮ್ಮಗಾದ ನೈಜ ಅನುಭವಗಳು,

ಮನಮುಟ್ಟುವ ಸನ್ನಿವೇಶಗಳು ಓದುಗರನ್ನು ತಳಮಳಗುಟ್ಟಿಸುತ್ತವೆ. ಜಲಪ್ರವೇಶ ಹಿನ್ನೆಲೆ, ಮುನ್ನೆಲೆ ಭಾಗವಂತು ಕರುಣರಸದ ಮಡುವಾಗಿದೆ. ಅಂತಹ ಸಂದರ್ಭದಲ್ಲಿ ಬಳಕೆಯಾಗುವ ಧ್ವರುಕ್ತಿಗಳು ಪರಿಣಾಮಕಾರಿಯಾಗಿ ಬಳಕೆಯಾಗಿವೆ. ಇಂತಹ ಸಂದರ್ಭ ದಲ್ಲಿ ಅವರು ಭಾವನಾ ಪರವಶರಾಗಿ ತಮ್ಮ ವಿಚಾರಗಳನ್ನು ಮಂಡಿಸುವಂತೆ ಕಂಡು ಬಂದರೂ ಅದರ ಅಡಿಯಲ್ಲಿ ವಸ್ತು ಸತ್ಯದ ಎಳೆ ತಪ್ಪದೇ ಇರುತ್ತದೆ.

ಬೇಸಿಗೆಯಲ್ಲಿ ಆಗಾಗ ಬರುವ ತಂಗಾಳಿಯಂತೆ ಚಿದಾನಂದಮೂರ್ತಿ ಅವರ ಹಾಸ್ಯ ಪ್ರವೃತ್ತಿ ಅವರ ಬರೆಹಗಳಲ್ಲಿ ಮಿಂಚಿದೆ. ಅವರ ಸಂಶೋಧನೆಯ ಅನುಭವಗಳನ್ನು ವಿವರಿಸುವ 'ಪಾಂಡಿತ್ಯರಸ'ದಲ್ಲಿ ಒಂದೆಡೆ ಹೀಗೆ ಬರೆಯುತ್ತಾರೆ. 'ಗೋಕರ್ಣದಿಂದ ಕಾರವಾರಕ್ಕೆ ಬಸ್ಸಿನ ಹಿಂದಿನ ಸೀಟಿನಲ್ಲಿ ಕುಳಿತು ಹೋಗುವಾಗ ಒಬ್ಬ ಚಿಕ್ಕವಯಸ್ಸಿನ ಚೆಲುವೆ ಹೆಣ್ಣಿನ (ಅವಳು ಬಹುಶಃ 'ಹಾಲಕ್ಕಿ' ಅಲ್ಲ, ಆದರೆ ಹಾ Lucky) ಪಕ್ಕದಲ್ಲಿ ಕುಳಿತು ವೇಗವಾಗಿ ಹೋಗುತ್ತಿದ್ದ ಬಸ್ ಎತ್ತಿ ಹಾಕಿದರೆ ಸಾಕು ಅಥವಾ ಸ್ವಲ್ಪ ತಿರುಗಿದರೆ ಸಾಕು ನಾನು ಪಕ್ಕಕ್ಕೆ ವಾಲಿ ಅವಳನ್ನು ಮೃದುವಾಗಿ ಮುಟ್ಟಿಸಿಕೊಂಡು ಯೌವ್ವನದ ರಸ ಅನುಭವಿಸಿದ್ದು ಏಕೋ ಈ ಎಪ್ಪತ್ತನೇ ವಯಸ್ಸಿನಲ್ಲಿ ಮರೆಯುವುದು ಕಷ್ಟವಾಗಿದೆ' (ಪು.೧೦-೧೧). ಚಿದಾನಂದಮೂರ್ತಿ ಅವರ ಬರವಣಿಗೆ ನೇರ, ಸರಳ, ಗಂಭೀರ ಸ್ವರೂಪದ್ದಾಗಿದ್ದರೂ ಇಂತಹ ವಿನೋದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಈ ಘಟನೆಯನ್ನು ತುಂಬ ಚೆನ್ನಾಗಿ ನಿರೂಪಿಸಿದ್ದಾರೆ.

ಗ್ರಂಥ ವಿಮರ್ಶೆಯ ಸಂದರ್ಭದಲ್ಲಿ ಭಾಷೆ ಬಡಿಗೆಯಂತೆ ಬಳಕೆಯಾಗುತ್ತದೆ. ನ್ಯಾಯ ನಿಷ್ಠುರವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಇತರರ ವಾದಗಳನ್ನು ತಳ್ಳಿ ಹಾಕುವಾಗ ತಮ್ಮ ಮಾತಿಗೆ ಆಧಾರಗಳನ್ನು ಕೊಡುತ್ತಾರೆ. ಅವರು ಯಾರ ವಿಷಯದಲ್ಲಿಯೂ ಅಗ್ಗದ ಪ್ರಶಂಸೆ ಮಾಡುವಂತಹವರಲ್ಲ. ಅವರ ಮೌಲ್ಯಮಾಪನ ಜೊಕೆ ತೂಕದ್ದಾಗಿರುತ್ತದೆ.

ಸಂಪ್ರಬಂಧಗಳನ್ನು ಬರೆದ ಮೇಲೆ ಅಚ್ಚಿಗೆ ಮುನ್ನ ತಿದ್ದಿ ತೀಡಿ, ಪರಿಷ್ಕರಿಸಿ ವಸ್ತುವೂ ಅಭಿವ್ಯಕ್ತಿಯ ವಿಧಾನವೂ ಎರಡು ಉತ್ಕೃಷ್ಟವಾಗಿರುವಂತೆ ಪ್ರಯತ್ನಿಸುವುದು ಅವರ ಪದ್ಧತಿ. ಪ್ರಕಟವಾದ ಮೇಲೂ ಅವಶ್ಯ ಕಂಡಲ್ಲಿ ತಿದ್ದುಪಡಿ ಮಾಡಿಕೊಳ್ಳುವುದು ಅವರ ಕ್ರಮ. ಮುದ್ರಣದ ಅಚ್ಚುಕಟ್ಟುತನದ ಬಗ್ಗೆ ಅವರಿಗೆ ವಿಶೇಷ ಗಮನ. ತಪ್ಪಿಲ್ಲದಂತೆ ಮುದ್ರಿಸುವ ಕಡೆಗೆ ಅವರ ಕಾಳಜಿ ಅಪಾರ. ಅವರ ಬರೆಹಗಳಲ್ಲಿ, ಅಡಿಟಿಪ್ಪಣಿಗಳು, ವಿರಾಮಚಿಹ್ನೆಗಳು, ಉಲ್ಲೇಖಗಳು ಎಲ್ಲವೂ ಅಚ್ಚುಕಟ್ಟಾಗಿ ಬಳಕೆಯಾಗಿವೆ.

ಚಿದಾನಂದಮೂರ್ತಿ ಅವರ ನಿರೂಪಣೆಯಲ್ಲಿ ಒಂದು ಕ್ರಮವಿದೆ, ಶಿಸ್ತುವಿದೆ. ವ್ಯವಸ್ಥಿತ ಚಿಂತನೆಯಿದೆ. ಇವುಗಳಿಂದ ಅವರ ಸಂಪ್ರಬಂಧಗಳ ಅನಿರೀಕ್ಷಿತ ಸ್ಥಳಗಳಲ್ಲಿ ಅಮೂಲ್ಯವಾದ ಹೊಸ ವಿಷಯಗಳು ಸಿಗುತ್ತವೆ. ಚಿದಾನಂದಮೂರ್ತಿ ಅವರದು ಸುಸಂಸ್ಕೃತ ಹೃದಯ. ಅಂತೆಯೇ ಅವರ ಶೈಲಿಯಲ್ಲಿ ಉದ್ವೇಗ, ಆಡಂಬರ, ಆಕ್ರೋಶ,

ವಿಡಂಬನೆ ಇವು ಯಾವವೂ ಕಂಡುಬರುವುದಿಲ್ಲ. ಅವರು ನೇರವಾಗಿ ಇದ್ದುದನ್ನು ಇದ್ದಂತೆ ಹೇಳುವುದರಿಂದ ಅವರ ಬರಹಗಳ ಬಗ್ಗೆ ನಂಬಿಕೆ ಹುಟ್ಟುತ್ತದೆ. ಚಿದಾನಂದ ಮೂರ್ತಿ ಅವರ ಶೈಲಿಯನ್ನು ಸ್ಥೂಲವಾಗಿ ಸ್ವಭಾವೋಕ್ತಿ ಅಲಂಕಾರಕ್ಕೆ ಹೋಲಿಸ ಬಹುದು. ಹೀಗಾಗಿ ಚಿದಾನಂದಮೂರ್ತಿ ಅವರ ಸಂಶೋಧನೆ ಓದುಗರಿಗೆ ಬಹಳ ಸಂತೋಷ ಕೊಡುತ್ತದೆ.

ಹೀಗೆ, ಚಿದಾನಂದಮೂರ್ತಿ ಅವರ ಗದ್ಯಶೈಲಿ ಅಸ್ಖಲಿತವಾಗಿ ಹರಿದು ಬಂದಿದೆ. ಬೆಲ್ಲದ ಬೊಂಬೆಯನ್ನು ಯಾವ ಕಡೆಯಿಂದ ನೆಕ್ಕಿದರೂ ಸಿಹಿ ತಾನೆ. ಚಿದಾನಂದ ಮೂರ್ತಿ ಅವರ ಶೈಲಿ ಅಷ್ಟೇ ಸೊಗಸಾಗಿದೆ. ಚಿದಾನಂದಮೂರ್ತಿ ಅವರಷ್ಟು ಖಚಿತರಾಗಿ ವಿಷಯ ನಿರೂಪಿಸಿರುವವರು ಇಂದು ಬೇರೊಬ್ಬರಿರುವುದು ನನಗೆ ಸಂದೇಹ. ಅವರು ಬರವಣಿಗೆಯಲ್ಲಿ ಯಾರನ್ನೂ ಅನುಸರಿಸದೆ ಸ್ವಂತ ನಿರೂಪಣೆಯ ವಿಧಾನವನ್ನು ರೂಢಿಸಿಕೊಂಡಿರುವುದರಿಂದ ಅವರ ಬರವಣಿಗೆ ಇತರರಿಗೆ ಮಾದರಿ ಯಾಗಿದೆ. ಅಂತೆಯೇ ಹಲವು ಭಿನ್ನ ಶೈಲಿಗಳ ನಡುವೆಯೂ ಚಿದಾನಂದಮೂರ್ತಿ ಅವರ ಶೈಲಿಯನ್ನು ಸುಲಭವಾಗಿ ಗುರುತಿಸಬಹುದು. ಕನ್ನಡ ಗದ್ಯದ ಬೆಳವಣಿಗೆಯಲ್ಲಿ ಚಿದಾನಂದಮೂರ್ತಿ ಅವರ ಮುದ್ರೆ ಇದ್ದೇ ಇದೆ.

ಅಡಿಟಿಪ್ಪಣಿಗಳು

೧. ಶೂನ್ಯಸಂಪಾದನೆಯನ್ನು ಕುರಿತು (೧೯೬೦), ಪು.೩೧

೨. ಛಂದೋತರಂಗ (೧೯೬೩), ಪು. ೪

೩. ಪೂರ್ವೋಕ್ತ, ಪು. ೧೪೭

೭.೨

ಕಂಬಾರರ ಕಾವ್ಯಶೈಲಿ

ಕಂಬಾರರ ಕಾವ್ಯದ ಶೈಲಿಯ ಅಧ್ಯಯನವೆಂದಾಗ, ಅವರ ಅಭಿವ್ಯಕ್ತಿಯ ಪ್ರಕ್ರಿಯೆ, ಭಾಷಾಗುಣ, ಬಳಸುವ ಅಲಂಕಾರ ಪ್ರತಿಮೆಗಳು, ಅವರ ಮನೋವೃತ್ತಿ, ಆ ಮೂಲಕ ಕಂಡುಬರುವ ಅವರ ವ್ಯಕ್ತಿವೈಶಿಷ್ಟ್ಯ ಈ ಮೊದಲಾದ ಅಂಶಗಳ ಅಧ್ಯಯನವೆಂದೇ ಅರ್ಥ. ಕಂಬಾರರ ಕಾವ್ಯ ಶೈಲಿ ಸರಳ ಮತ್ತು ನೇರ. ಸ್ಪಷ್ಟತೆಯೇ ಅವರ ಶೈಲಿಯ ಜೀವಾಳ. ದೀರ್ಘವಾದ ಸಂಧಿ-ಸಮಾಸಗಳು, ಪದಪುಂಜಗಳು ಕಂಡುಬರುವುದಿಲ್ಲ. ಹಿತವಾದ ಉಪಮೆ, ರೂಪಕಗಳಿಂದ ಸ್ವಭಾವೋಕ್ತಿಗಳಿಂದ ಅವರ ಭಾಷೆಗೆ ಮೆರಗು ಬಂದಿವೆ. ಭಾಷೆ ಸಂಸ್ಕೃತ ಭೂಯಿಷ್ಠವಾಗಿರದೆ ನಾಗರಿಕರು ಮತ್ತು ಸಾಮಾನ್ಯರು ಆಡುವ ವ್ಯವಹಾರಿಕ ಬಳಕೆಯ ಸರಳ ಭಾಷೆಯಾಗಿದೆ. ಭಾಷೆಯನ್ನು ಸರಳಗೊಳಿಸಿ ಸಾಮಾನ್ಯರ ಹತ್ತಿರಕ್ಕೂ ಒಯ್ದದ್ದು ಕಂಬಾರರ ಸಾಧನೆ ಎಂದು ಹೇಳಬೇಕು. ಅವರ ಶೈಲಿಯಲ್ಲಿ ಗದ್ಯತನವಿದೆ. ನಿಜ; ಆದರೆ ಲಯವಿದೆ, ಮೋಹಕತೆಯಿದೆ, ಗತ್ತೂ ಇದೆ. ಕೆಲವು ನಿದರ್ಶನಗಳೊಂದಿಗೆ ಕಂಬಾರರ ಕಾವ್ಯ ಶೈಲಿಯನ್ನು ಅಭ್ಯಾಸ ಮಾಡಬಹುದು.

ಮುಗಿಲ ಮುತ್ತುಗಳನ್ನು ಕರಿಮೋಡ ಚಾಣೆಸಿತು
ನೆಲದ ಚಿಪ್ಪೊಳು ಬಿತ್ತು, ಅಲ್ಲಿ ಇಲ್ಲಿ
ಧರೆಯೆದ್ದು ಹಸಿರ ಕಣ್ಣರಳಿಸಿತು ಬಯಲಿನಲಿ,
ಬೀಳು, ಆ ಈ ಕಂಟಿ, ಟೊಂಗೆಗಳಲಿ

ಗುಳವ್ವ ಉರುಳಾಡಿ ಊರೊಳಗೆ ಬಂದಳೋ;
ಹುಲುಸು ಕನವರಿಸಿಹುದು ಹೊಲವ ತೂಗಿ
ಒರಟು ಮೂಗನು ತಿರುವಿ ರಂಗೋಲಿ ಬಿಡಿಸಿತೋ
ಚದುರಂಗಿ ಅಲ್ಲಲ್ಲಿ ಕೆಂಪು ಹಳದಿ

(-ಶ್ರಾವಣದ ಒಂದು ದಿನ)

ಶ್ರಾವಣದ ದಿನವನ್ನು ಕವಿ ಚಿತ್ರಿಸಿದ ಬಗೆಯಿದು. ಸುಂದರವಾದ ರೂಪಕಗಳನ್ನು ಹೆಣೆದಿದ್ದಾರೆ. 'ಹಸಿರೆಲೆಯ ತುದಿಗೆ ಹೂಬಣ್ಣ', 'ಮನೆಯ ಕೈತೋಟದಲಿ ನಂದನವು ತೊದಲಿತೋ', 'ಧರೆಯೆದ್ದು ಹಸಿರ ಕಣ್ಣರಳಿಸಿತು' ಇಂತಹ ಪದಪುಂಜಗಳು ಶ್ರಾವಣದ ಸೊಬಗನ್ನು, ಸಂತಸವನ್ನು ಅರ್ಥಪೂರ್ಣವಾಗಿ ಚಿತ್ರಿಸಿವೆ. ಸರಳವಾದ ಪದ, ಪದಪುಂಜ ಗಳಿಂದ, ಸಾಮಾನ್ಯ ಭಾಷಾಬಳಕೆಯಿಂದ ಶ್ರಾವಣದ ದಿನದಂದು ಜನಪದರ ಸಂತೋಷ-ಸಂಭ್ರಮಗಳನ್ನು ಆ ದಿನದ ಸಾಂಸ್ಕೃತಿಕ ವಾತಾವರಣವನ್ನು ತುಂಬ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ ಕವಿ. ಇಲ್ಲಿ ನಾವು ಹೆಚ್ಚು ಆಡಂಬರದ ಅಲಂಕಾರಿಕ ಭಾಷೆಯನ್ನು ಕಾಣುವುದಿಲ್ಲ. ಇಲ್ಲಿ ಕಂಬಾರರ ಅಭಿವ್ಯಕ್ತಿ ಅಥವಾ ಶೈಲಿ ಸರಳತೆಯಲ್ಲಿಯೇ ತನ್ನ ಗುರಿಯನ್ನು ಸಮರ್ಥ ವಾಗಿ ಸಾಧಿಸಿದೆ.

ಅಪರೂಪಕ್ಕೆ ಹಳೆಗೆಳತಿ ಸಿಕ್ಕಾಗ
ಎದೆ ಭಗ್ಗೆನಲಿಲ್ಲ, ಕೆನ್ನೆ ಕಣ್ಣುಗಳಲ್ಲಿ
ಬೆಳಗಾಡಲಿಲ್ಲ, ಸುತ್ತ ಯಾರಿರಲಿಲ್ಲ
ವಾದರೂ ಮೈಸವರಲಿಲ್ಲ, ತೋಳು ಹೆಣೆಯಲಿಲ್ಲ
ಮುದ್ದಿನಲ್ಲಿ ಮಾತಾಡಲಿಲ್ಲ
ಕೋಶದಲ್ಲಿ ಶಬ್ದಾರ್ಥ ಹುಡುಕುವವರಂತೆ
ಕಣ್ಣಿತ್ತ ನೋಡುತ್ತ ಕೂತೆ,
ಅವಳು ಕೂಡ

(-ನಮಗೆ ಸ್ವಾತಂತ್ರವೇ ಇಲ್ಲ)

ಹಳೆಯ ಗೆಳತಿ ಅಪರೂಪಕ್ಕೆ ಸಿಕ್ಕಾಗ, ಪ್ರೇಮದ ಆ ನೆನಪನ್ನು ಕವಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾರೆ. ಹೆಣ್ಣಿನ ಪಕ್ವತೆಗೆ, ಮಾಧುರ್ಯಕ್ಕೆ, ಅವಳ ತುಂಬು ಶರೀರದ ಏರುಜವ್ವನವನ್ನು ಹೋಲಿಸಿರುವುದು ತುಂಬ ಔಚಿತ್ಯಪೂರ್ಣವಾಗಿದೆ. ಅವಳ ರೂಪವನ್ನು ಕಂಡು 'ಕಣ್ಣಿತ್ತ ನೋಡುತ್ತ ಕೂತೆ, ಅವಳು ಕೂಡ' ಎಂದು ಹೇಳಿರುವುದೂ ಧ್ವನಿಪೂರ್ಣವಾಗಿದೆ. ಈ ರೀತಿ ಸರಳಭಾಷೆ ಶೈಲಿಯಲ್ಲಿ ಹಳೆಯ ಗೆಳೆತಿಯನ್ನು ಕವಿಯ ಜಾಣ್ಮೆಗೆ ಸಾಕ್ಷಿಯಾಗಿದೆ. ಆದರೂ ಹಳೆಯ ಗೆಳೆತಿಯನ್ನು ಮೊದಲಿನ ಹಾಗೆ ಮಾತನಾಡಿಸಲಿಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಕವಿ 'ನಿಜ ಗೆಳೆಯಾ ನಮಗೆ ಸ್ವಾತಂತ್ರ್ಯವೇ ಇಲ್ಲ' ಎಂದು ಉದ್ಗಾರ ತೆಗೆಯುತ್ತಾರೆ. ಇಲ್ಲಿ ಉಪಮೆ ಇದ್ದರೂ ಇಲ್ಲದಂತೆ ಗದ್ದಲವಿಲ್ಲದೆ ತನ್ನ ಕಾರ್ಯವನ್ನು ನಿರ್ವಹಿಸಿದೆ. 'ಪ್ರಭು' ಎಂಬ ಕವನದಲ್ಲಿ ಮಳೆ ಬಂದು ಕೆರೆ, ಹಳ್ಳಗಳು ಹರಿಯುವುದನ್ನು ಪ್ರತಿಮೆ ಮೂಲಕ ಕವಿ ವರ್ಣಿಸುವ ರೀತಿ ನೋಡಿ:

೧ ಮಳೆ ಬೀಳುತ್ತಿದೆ
ನೆಲದೆದೆಯ ತೀಡಿ ತಾಡನೆ ಕೊಟ್ಟು ಉಜ್ಜಿ ಕೆಳಗಾಳ

ಆಳಕ್ಕೆ ನೀರಿಳಿಯುತ್ತಿದೆ
ನಿಟ್ಟುಸಿರು ಉಗಿಯಾಡಿ ಬೆದೆಯ ವಾಸನೆ ಮೂಗಿ ನಿಡಿ ತುಂಬಿ
ಅರೆಗಣ್ಣು ತುದಿಗೆ ಬೆರಗಿನ ಲೋಕ ತೆರಕೊಂಡು
ಕೈಮಾಡಿ ಕರೆಯುತ್ತಿದೆ
ಎಲ್ಲ ನೆನೆಪಾಗಾತ್ತಿದೆ

೨ ಹೀಗೆಯೇ ಮಳೆ ಜಡಿಯುತಿತ್ತು ಆಗಲು ಕೂಡ
ಹನಿಗೊಂದು ಕುಣಿತೋಡಿ, ಕುಣಿಗೊಂದು ಕೆರೆಕಟ್ಟಿ
ಬದಿಯ ಹಸಿರಿಗೆ ಹೂವಿನರಿಷಿಣ ಬಳಿದೆರೆದು
ತಲೆತೊಯ್ದು, ತುರುಬು ಸಡಿಲಾಗಿ ಬೆನ್ನಿಗೆ ಇಳಿದು
ಅಂಕೆ ಮೀರಿದ ಕುರುಳು ಹಣೆಗೆ ಕೆನ್ನೆಗೆ ಅಂಟಿ
ಕಣ್ಣ ಕಾಡಿಗೆ ಕೆನ್ನೆಗಿಳಿದು ಹೂವೆದೆ ಮುದುಡಿ
ಉಬ್ಬಹಾ! ತಗ್ಗಹಾ! ಮಿದುವಹಾ!
ಸಿಂಪುದುಟಿ ಬೆಸೆದಾಡಿ ಮುತ್ತುಗಳ ಸ್ವರವಾಗಿ
ಗರುಡನೆದೆ ತೊಡೆಗಳಲ್ಲಿ ತೊಡರಿ ರೇಗಿತು ಹಾವು
ಹೆಡೆಬಿಚ್ಚಿತು!

೩ ಕಾಲಿಟ್ಟ ಕಡೆಗೆ ಹಾವಸೆ ಬೆಳೆದ ಜವುಗು ನೆಲ
ನನ್ನ ನೆರಳುಗಳೆಲ್ಲ ಗೂಢ ಕತ್ತಲೆಯಾಗಿ ತಗ್ಗು
ಕಂದಕಗಳನ್ನು ನೀರು ಎಂತೋ ಅಂತೆ ತುಂಬಿರುವವಿಡಿ ಮನೆಯ
ಕಾರಣಕ್ಕೊಗ್ಗಲಾರದೆ ರೂಪದಿತಿ ಮಿತಿಯ ತೆಕ್ಕೆಯಲಿ
ಸಿಕ್ಕಲಾರದೆ ಸುತ್ತಮುತ್ತ ಅಡ್ಡಾಡುವವು, ಢಿಕ್ಕಿ ಹೊಡೆದಾಡುವವು
ಮುದ್ದೆ ಮುದ್ದೆ, ಕಟ್ಟುವವು ಮುಕ್ಕಟ್ಟು, ಕೊರೆ ಬೇಲಿಯಾಗಿ
ರೋಮ ರೋಮದ ಕಣ್ಣ ಬೇರು ಬಿಳಲುಗಳನ್ನು
ಜಗ್ಗಿ ಎಳೆದಾಡುವವು ಅತ್ತಿತ್ತ
ಎಳೆದೆಲ್ಲ ಸೆಳೆತಗಳು ತೆಕ್ಕೆಯೊಳಗಡೆ ಸಿಲುಕಿ
ಹರಳುಪ್ಪಿನಂತೆನ್ನ ಕ್ರಿಯೆ ವರ್ತನೆಗಳನು ನೀರಿಗರ್ಭಿಸಿ ನಿಂತೆ

ಹೀಗೆ, ಕವಿ ಶಬ್ದ ಚಿತ್ರಗಳ ಮೂಲಕ ಮಳೆಯಿಂದಾಗುವ ಪರಿಣಾಮಗಳನ್ನು ಸಂಕೇತ ಭಾಷೆಯಲ್ಲಿ ರೇಖಿಸಿದ್ದಾರೆ. ಅದನ್ನು ಮೂರು ಉಪಮೆಯಗಳ ಮೂಲಕ ಧ್ವನಿಪೂರ್ಣವಾಗಿ ಮತ್ತು ಸಾರ್ಥಕವಾಗಿ ಬಣ್ಣಿಸಿದ್ದಾರೆ. ಈ ಉಪಮಾ ಚಿತ್ರಗಳು ಅತಿರಂಜಿತವಾಗಿರದೆ ಸರಳ ವಾಗಿದ್ದು ಬದುಕಿನ ಬೇರೆಬೇರೆ ಹಂತಗಳಿಂದ, ಬೇರೆಬೇರೆ ಮಾದರಿಗಳಿಂದ ಆರಿಸಿ

ತಂದವಾಗಿವೆ. ಕಂಬಾರರು ಸರಳವಾದ ಮತ್ತು ಸಾಮಾನ್ಯವಾದ ಉಪಮೆಗಳ ಮೂಲಕ ಅರ್ಥವಂತಿಕೆಯನ್ನೂ ಧ್ವನಿರಮ್ಯತೆಯನ್ನೂ ಸಾಧಿಸಬಲ್ಲರೆಂಬುದನ್ನು ಇದನ್ನು ನೋಡಿ:

ಎಚ್ಚತ್ತಾಗ ಎದುರಿಗೊಂದು ಕುದುರೆಯ ಕಂಡೆ
ಬಣ್ಣಗೊತ್ತಿದ್ದದ್ದೆ, ಪರಿಚಿತ ಚಹರೆ
ಹದಮೀರಿ,
ಮುದದ ಮದದಲ್ಲಿ ಮೈಮರೆತು
ಕೆನೆದು ಧೂಳೆಬ್ಬಿಸಿ
ಕೆಂಪಡರಿದ ಮುಗಿಲುಗಳಲ್ಲಿ
ಗಾಜು ಗಾಜಾದ ಕನಸುಗಳ ಕೆರಳಿಸಿದ ಕುದುರೆ
ಹಿಂದೊಮ್ಮೆ ಸವಾರಿ ಮಾಡಿದ್ದೆ
ಅದೊಮ್ಮೆಲೆ ಗಗನಕ್ಕೆ ನೆಗೆದು
ಮುರಿದ ಕ್ಷಿತಿಜಗಳ ಹಾರಿ
ಸೂತ್ರ ಹರಿದ ಗಾಳಿಪಟ
ಯಾವುದೋ ಸೀಮೆಯಲ್ಲಿ ಚೆಲ್ಲಿ
ಪರಿಚಿತಲ್ಲದೆ ಅಲ್ಲಿ
ಒದ್ದಾಡಿ ತೆವಳಿ ಊರು ಸೇರಿದ್ದೆ
ಹೌದು ಅದೇ ಕುದುರೆ

(-ಕುದುರೆ)

ಹೀಗೆ, ಕುದುರೆಯನ್ನು ಸಂಕೇತವಾಗಿಟ್ಟುಕೊಂಡು ಬದುಕಿನ ಏರಿಳಿತಗಳನ್ನು ಸಾಮಾನ್ಯ ಉಪಮೆಯಗಳ ಮೂಲಕ ಸರಳ ಭಾಷೆಯಲ್ಲಿ ಸುಂದರವಾಗಿ ಚಿತ್ರಿಸುತ್ತಾರೆ, ಕವಿ. ವಯಸ್ಸಾದ ನಂತರ ಮುದುಕ-ಮುದುಕಿಯರ ಬದುಕನ್ನು ಕಂಡ ರೀತಿ ಇದು:

ಅಜ್ಜ ಅಜ್ಜಿಗೆ ಬೇಜಾರು
ನೆನಪೂ ಬೋರು

ಮಗ ಸೊಸೆ ಆಫೀಸಿಗೆ ಹೋದರೆ
ಇವರು ಆಡುತ್ತಾರೆ
ಸ್ಕೂಲಿಗೆ ಹೋದ ಮೊಮ್ಮಗನ
ಆಟಗೆಯ ಜೊತೆಗೆ;

ರಬ್ಬರಿನ ಹಾವನ್ನ ದೂರ ಎಸೆಯುತ್ತಾರೆ
ಕಣ್ಣು ಕಟ್ಟಿಕೊಂಡು
ಕೈಯೂರಿ ಪ್ರಾಣಗಳಾಗಿ ಹುಡುಕುತ್ತಾರೆ

(-ಅಜ್ಜ-ಅಜ್ಜಿ)

ಅಡುಮಾತಿನ ಸಹಜಲಯ, ಪದಪುಂಜಗಳು ಸಾಲುಗಟ್ಟಿ ಬರುತ್ತವೆ. ಆ ಕವಿ ಉಪಮೆಯ ಮೂಲಕ ತೋರಿಸುವ ಪ್ರತಿಕ್ರಿಯೆ ಇದು:

ಈ ಕಡೆ ಕುರುಡ ಮುದುಕ ಕೈಯಾಡಿಸಿ
ಹುಡುಕುತ್ತಾನೆ;
ಎಲ್ಲಿದ್ದೀಯೆ ಮುದುಕಿ?
ಎಲ್ಲಿದ್ದೀಯೆ?

(- ಅಜ್ಜ-ಅಜ್ಜಿ)

ಕವಿ ತರುವ ಅರ್ಧ ವಿರಾಮಗಳು, ಪ್ರಶ್ನಾರ್ಥಕ ಚಿಹ್ನೆಗಳು ತುಂಬ ಅರ್ಥಪೂರ್ಣವಾಗಿವೆ. 'ಎಲ್ಲಿದ್ದೀಯೆ?' ಇದು ಕೊಡುವ ಧ್ವನ್ಯಾರ್ಥ ಅಪೂರ್ವವಾಗಿದೆ. ಕಂಬಾರರ ಓರಗೆಯವರಲ್ಲಿ ಯಾವ ಕವಿಯೂ ಇಂತಹ ಆಡುಮಾತಿನ ಲಯವನ್ನು ಕಾವ್ಯಕ್ಕೆ ಇದಕ್ಕೂ ಚೆನ್ನಾಗಿ ಕಾವ್ಯಕ್ಕೆ ದುಡಿಸಿಕೊಳ್ಳಲಾರ. ಹೀಗೆ ಅನೇಕಾನೇಕ ಉಪಮೆಗಳನ್ನು ಕಂಬಾರರು ಸಂದರ್ಭಕ್ಕೆ ತಕ್ಕಂತೆ ತಮ್ಮ ಕಾವ್ಯ-ಕವನಗಳಲ್ಲಿ ಬಳಸಿ ದುಡಿಸಿಕೊಂಡಿದ್ದಾರೆ. ಕನಸಿನ ಪರಿಯನ್ನು ಕವಿ ಬಣ್ಣಿಸುವ ರೀತಿ ಇದು:

ಹೇಳದೆ ಕೇಳದೆ ಮೈಲಾರ ಲಿಂಗನ
ಗುಡ್ಡರ ಹಿಂಡೊಂದು ನುಗ್ಗಿ
ಹುಡು ಹುಡು ಹುಡು ಅಂತ ಹುಡದಿಯ ಹಾಕಿದನು
ಮನೆಮಠ ಎರಡೊಂದು ಮಾಡಿ

ಕುಡಿದ ಕರಡಿಯ ಹಾಗೆ ಹಾರ್‍ಯಾಡಿ ಕುಣಿದರು
ಬಂಡೆಗಳ ದಿಂಡುರುಳಿದಂತೆ
ನಾಯಾಗಿ ಕೂಗಿದರು ಹದ್ದಾಗಿ ಎರಗಿದರು
ನಾನವರ ಬೇಟೆ ಎಂಬಂತೆ

(-ಒಂದು ಕನಸು)

ಇಲ್ಲಿ ಬಳಕೆಯಾದ 'ಹುಡು ಹುಡು ಹುಡು ಅಂತ ಹುಡದಿಯ ಹಾಕಿ', 'ಬಂಡೆಗಳ ದಿಂಡುರುಳಿದಂತೆ', 'ಕುಡಿದ ಕರಡಿಯ ಹಾಗೆ' ಇಂತಹ ಸಾದೃಶ್ಯಗಳು, ಪದಪುಂಜಗಳು, ಚಿಕ್ಕ ಚಿಕ್ಕ ಪದವಿನ್ಯಾಸದಿಂದ ಕವಿ ಸಮರ್ಥವಾಗಿ ಮತ್ತು ಮನೋಜ್ಞವಾಗಿ ಚಿತ್ರಿಸಿ ತಾವು ಸಾಧಿಸಬೇಕಾದ ಗುರಿಯನ್ನು ಸಾಧಿಸಿದ್ದಾರೆ.

ಇವರು ಮೊಯಿಲಿ ಅವರು-ನೊಂದವರ ಬೆಂದವರ
ಗಾಯಗಳ ಹದಿಗೊಂಡು ಅರಳಿದವರು

ಹೆತ್ತವರ ಹೊತ್ತವರ ಪುಣ್ಯವಂತರ ಕನಸು
ಕಾಲೋಚಿತವನರಿತು ರೂಪುತಳೆದವರು

ನುಡಿಯ ಗುಡಿ ಕಟ್ಟಿದಿರಿ ವಿದ್ಯೆಗಳ ಸಾಕಿದಿರಿ
ಎತ್ತಿ ಹಿಡಿದಿರಿ ಬೃಹದ್ದೇಶಿಯೆಂದು;
ಖುದ್ದಾಗಿ ಕೋಲು ಮೇಸ್ತ್ರಿಯ ಕೆಲಸ ಮಾಡಿದಿರಿ
ಸಾರಿದಿರಿ ಕನ್ನಡವೆ ಸತ್ಯವೆಂದು

(-ಕವಿ ವೀರಪ್ಪ ಮೊಯಿಲಿ)

ಎಂದು ಕವಿ, ವೀರಪ್ಪ ಮೊಯಿಲಿ ಅವರ ಹಿರಿದಾದ ವ್ಯಕ್ತಿತ್ವವನ್ನು ಕನ್ನಡ ನಾಡು-ನುಡಿಗಳ ಬಗ್ಗೆ ಅವರಿಗಿರುವ ಕಾಳಜಿಯನ್ನು ಸ್ವಭಾವೋಕ್ತಿಗಳಿಂದ ಪುಟ್ಟಪುಟ್ಟ ಪದವಿನ್ಯಾಸದಿಂದ, ಸರಳಭಾಷಾ ಪ್ರಯೋಗದಿಂದ ಜೀವಂತವಾಗಿ ಕಡೆದು ನಿಲ್ಲಿಸಿದ್ದಾರೆ. ಕರಿಮಾಯಿ ದೇವತೆಯ ಮಹತ್ವವನ್ನು ಕವಿ ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ:

ಪಕ್ಕದಲ್ಲಿರೋದೇ ಕರಿಮಾಯಿಯ ಗುಡಿ
ಹ್ಯಾಗಿದೆ ನೋಡು
ಬಿರುಕು ಬಿಟ್ಟಿದ್ದರೂ ಗಟ್ಟಿ ಇದೆ ಇನ್ನೂ

ಸತ್ಯದಲಿ ಹುಟ್ಟಿ ಸತ್ಯದಲ್ಲಿ ಬೆಳೆದಳು ತಾಯಿ
ಹಗಲದೀವಟಿಗೆ
ತಾಳೆಗರಿಯ ಬೆಳ್ಗೊಡೆ
ಕೋಲುಗಗ್ಗರ ಕಂಚಿನ ಗುರಾಣಿಯ ಹಿಡಿದು:
ಊರಾಡಿ ಹಣ್ಣು ಹಸಿರಿನ ರೋಗಂಗಳ
ಕರುಕುರಿಗಳ ಬೇನೆ ಬ್ಯಾಸರಿಕೆಗಳ ಹೊರಗಟ್ಟಿದಳು
ನಾಲ್ಕು ಕಾಲಿನ ಗದ್ದಿಗೆ
ಮೊಳಕಾಲುಮಟ ಮುಗುಳು ಮಲ್ಲಿಗೆ
ಹೂಸಂಪಿಗೆ ರಾಶಿಯಲ್ಲಿ
ನವಿಲು ಗರಿಯ ಬೆಡಗಿನ ಸಿಂಹಾಸನದಲ್ಲಿ
ಕುಂತು ಒಡ್ಡೋಲಗಂ ಗೊಂಡು
ಪಾದಕಾಣಿಕೆ ಪಡೆಯುತ್ತ
ಊರವರ ಸಂಕಷ್ಟಕ್ಕೆ ಪರಿಹಾರಕ್ಕೆ ಸೂಕ್ತ
ಕಾರಣಿಕ ನುಡಿದವಳು

(-ಕರಿಮಾಯಿ)

ಇದು ಕಂಬಾರರು ಬಳಸುವ ಆಡುಮಾತಿನ ಶೈಲಿ ಅದು ತುಂಬ ಸಹಜ ಮತ್ತು ಸರಳ ವಾಗಿದೆ. ಆಡುನುಡಿಯ ಸ್ವರಾಂದೋಲನ ಯಾವುದೋ ಕವನದ ಮಾಲೆಗೆ ಭಾರ ಎನಿಸದಂತೆ, ಕೃತಕವೆನಿಸದಂತೆ ತುಂಬ ಸಹಜವಾದ ರೀತಿಯಲ್ಲಿ ಕವನದ ಪಾದಲಯದಲ್ಲಿ ಬೆರೆತು ಕೊಂಡಿದೆ. ಕವಿ ಘಟಪ್ರಭಾ ನದಿಯನ್ನು ಚಿತ್ರಿಸಿದ ರೀತಿಯೂ ತುಂಬ ಮನೋಜ್ಞವಾಗಿದೆ:

ನಮ್ಮೂರೆಂದರೆ ಘಟಪ್ರಭೆಯೆಂಬ ನದಿ
ಓಂ ಪ್ರಥಮದಲ್ಲಿ ಈ ನದಿಯಲ್ಲಿ
ಕಾಲಿಳಿ ಬಿಟ್ಟು ಕೂತದ್ದೇ ನಮ್ಮ ಹಳ್ಳಿ!
ಎಷ್ಟು ತಿಳಿಯಾಗಿತ್ತು ನಮ್ಮೂರ ಹೊಳೆ ಆಗ!
ಹೆಸರು ಗೊತ್ತಿಲ್ಲದ ಹಸಿರು ದೇವರೆಷ್ಟೋ ಮಂದಿ
ನದಿಯಲ್ಲಿ ನೀರಾಟವಾಡಿದುದ ನಾವೆ ಕಂಡಿದ್ದೇವೆ
ದಡದಲ್ಲಿ ಜಂಬು ನೇರಳೆ ಹಣ್ಣು
ಕೆಳಗೆ ತಿಳಿನೀರಲ್ಲಿ ಸಾವಿರಾರು ಕಣ್ಣು!
ಹಗಲು ಸೂರ್ಯನ ಮುಖವಾಡದ ಹರಿದು ಹಂಚಿ
ಅಣಕಿಸಿ ನಗುವ ನೀರು

(-ಘಟಪ್ರಭಾ ನದಿ)

ಇಲ್ಲಿ ನೇರವಾದ ಮತ್ತು ನಿರರ್ಗಳವಾದ ಸಂಭಾಷಣೆಯ ಧಾಟಿ. ಮಾತಿನ ರೀತಿ ಲಯವನ್ನು ಬಿಟ್ಟಿಲ್ಲ ಕವನದ ಲಯಕ್ಕೂ ಭಂಗ ಬಂದಿಲ್ಲ. ಕವಿ ತನ್ನ ಹುಟ್ಟು ನೆಲವನ್ನು ಗಾಢವಾಗಿ ಪ್ರೀತಿಸುತ್ತಾರೆ. ಕಂಬಾರರು ಶಿವಾಪುರವನ್ನು ತಮ್ಮ ನಾಟಕಗಳಲ್ಲಿ ಹೇಗೋ ಕಾವ್ಯದಲ್ಲಿಯೂ ಸ್ಮರಿಸುತ್ತಾರೆ. ಶಿವಾಪುರ ಅವರ ಕಾವ್ಯದ ಸ್ಫೂರ್ತಿಯ ನೆಲೆಯಾಗಿದೆ.

ಸಣ್ಣ ಹಳ್ಳಿ ಅದು, ಹೆಸರು ಶಿವಾಪುರ
ನೀವು ಕೇಳೇ ಇಲ್ಲ
ನಿಮ್ಮ ನಕಾಶೆಯ ಯಾವ ಮೂಲೆಯಲು
ನಮ್ಮ ಊರು ಇಲ್ಲ

ಸಣ್ಣ ಬೀದಿಗಳು ಊರು ಬಿಟ್ಟು
ಬೇರೆಲ್ಲು ಹೋಗುವುದಿಲ್ಲ
ಕಾಲುದಾರಿಯಲ್ಲಿ ಒಳಗೆ ಬರಬೇಕು
ಬೇರೆ ದಾರಿ ಇಲ್ಲ
ಒಳಗೆ ಬಂದರೂ ನಿಮಗೆ ಸಿಗದು

ನಾವಿರುವ ಕೇಂದ್ರ ಬಿಂದು
ಎಲ್ಲಿ ನಿಂತರದೆ ಕೇಂದ್ರ ತಿರುಗುವುದು
ಪರಿಘ ಅದರ ಸುತ್ತು

(-ಶಿವಾಪುರ)

ಇಲ್ಲಿಯೂ ಆಡುಮಾತಿನ ಸರಳ ಸುಂದರ ಶೈಲಿಯನ್ನು ಕಾಣುತ್ತೇವೆ. ಹೀಗೆಯೇ ನೂರಾರು ಸ್ವಭಾವೋಕ್ತಿಗಳನ್ನು, ಆಡುಮಾತಿನ ಧಾಟಿ, ರೀತಿಯನ್ನು ಕಂಬಾರರ ಕವನಗಳಲ್ಲಿ ಎದುರುಗೊಳ್ಳುತ್ತವೆ. ಆ ಸಂದರ್ಭದಲ್ಲಿ ಅವರು ಬಳಸುವ ಭಾಷೆ ನವೀನವೂ ಔಚಿತ್ಯ ಪೂರ್ಣವೂ ಆಗಿದ್ದು ಇಡೀ ನುಡಿ ಅರ್ಥಪೂರ್ಣವಾಗಿ ಮೂಡಿಬಂದಿದೆ. ಕವಿ ಸರಳ ಭಾಷಾ ಪ್ರಯೋಗದಲ್ಲಿ ನವೀನ ಪದಪುಂಜಗಳಲ್ಲಿ ಕಲಾತ್ಮಕ ಯಶಸ್ಸನ್ನು ಸಾಧಿಸಿದ್ದಾರೆ. 'ಟೀವಿ'ಯ ಬಣ್ಣ-ಬೆಡಗುಗಳನ್ನು ಕಂಬಾರರು ಚಿತ್ರಿಸುವ ರೀತಿ ನೋಡಿ:

ನೋಡಿ ನೋಡಿ ಇದರ ಮೋಡಿಯ
ಟೀವಿಯೆಂಬ ಒಕ್ಕಣ್ಣಿನ ಕನ್ನಡಿಯ!

ಹರಿವ ಕಂಗಳ ತನ್ನಲ್ಲೆ ಕೀಲಿಸಿ ಕೊಂಬುದಕೆ
ಗಮ್ಮತ್ತುಗಳ ಕುಣಿವುದೇನು
ಮಜಮೋಜುಗಳ ತುಳುಕುವುದೇನು
ಕಂಗಳ ರೇಪು ಮಾಡುವುದೇನು
ಇಸ್ಪೇಟೆಲೆಯಂತೆ ದೃಶ್ಯಗಳ
ರೀಶಫಲ್ ಮಾಡುವುದೇನು!

(-ಟೀವಿ)

ಇಲ್ಲಿಯ ಭಾಷೆ, ಸ್ವಭಾವೋಕ್ತಿಗಳು ಸರಳ ಸೂಕ್ಷ್ಮವಾಗಿದ್ದು ಟಿ.ವಿಯ ಬಣ್ಣ-ಬೆಡಗುಗಳನ್ನು, ದೃಶಯಗಳನ್ನು ಕವಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಟಿ.ವಿ.ಯ ಬೆಡಗು ಆಧುನಿಕ ಲೋಕಕ್ಕೆ ಕನ್ನಡಿಯಾಗಿರುವುದನ್ನು ಯಾವ ಗೊಂದಲವಿಲ್ಲದೆ ಸರಳವಾಗಿ ಅಷ್ಟೇ ಅರ್ಥವತ್ತಾಗಿ ಬಿತ್ತರಿಸಿದ್ದಾರೆ.

ಹೀಗೆ, ಕಂಬಾರರ ಕಾವ್ಯಶೈಲಿ ಸರಳತೆ, ನೇರತೆಗಳಿಂದಾಗಿ ಕಾವ್ಯಕ್ಕಿಂತ ಲಾಲಿತ್ಯದ ಕಡೆಗೆ ಅದರ ಒಲವು, ಆಡುಮಾತಿನ ಲಯ ಅವರ ಕಾವ್ಯದಲ್ಲಿ ಸಮರ್ಥವಾಗಿ ಬಳಕೆಯಾಗಿರುವುದರಿಂದ ಕವಿ ಮತ್ತು ಸಹೃದಯರ ನಡುವೆ ಸಂವಹನ ನಡೆಸಲು ತುಂಬ ಸೂಕ್ತವಾಗಿದೆ. ಒಟ್ಟಿನಲ್ಲಿ ಕಂಬಾರರ ಕಾವ್ಯದಲ್ಲಿ ಬಳಕೆಯಾದ ಶೈಲಿ ದೇಸಿ ಶೈಲಿ ಒಂದು ಭಾಷೆಯನ್ನು ಸೃಜನಾತ್ಮಕವಾಗಿ ಬಳಸಿದಾಗ ಮಾತ್ರ ಅಂತಹ ಶೈಲಿ ವಿಧಾನ ಮೂಡಿಬರುತ್ತದೆ. ಭಾಷೆಯನ್ನು

ಸೃಜನಾತ್ಮಕವಾಗಿ ಬಳಸುವುದೆಂದರೆ ಚಿಂತನಶೀಲ ಮನಸ್ಸೊಂದು ಭಾಷೆಯ ರೂಢಿಗಡವಾದ ವ್ಯಾವಹಾರಿಕ ಸ್ವರೂಪವನ್ನು ಮುರಿದು ತನ್ನ ಸಮೃದ್ಧವೂ ತೀವ್ರವೂ ಆದ ಅನುಭವಗಳಿಗೆ ತನ್ನ ಭಾಷಿಕ ಮಾಧ್ಯಮವನ್ನು ಕಟ್ಟುವ ಕ್ರಿಯೆಯಲ್ಲಿ ತೊಡಗುವುದು ಎಂದರ್ಥ. ಕಂಬಾರರು ತಮ್ಮ ಕಾವ್ಯದಲ್ಲಿ ಈ ಭಾಷಿಕ ಕ್ರಿಯೆಯನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ.

ಆಕರಗ್ರಂಥ

೧. ಚಂದ್ರಶೇಖರ ಕಂಬಾರ, ೨೦೧೧, ಸಮಗ್ರ ಕಾವ್ಯ, ಸಪ್ನ ಬುಕ್‌ಹೌಸ್, ಬೆಂಗಳೂರು.

೭೩

ಚಂಪಾ ನಾಟಕ : ಶೈಲಿ-ಅಭಿವ್ಯಕ್ತಿಯ ದನಿ

ಒಂದು ಸಾಮಾಜಿಕ ವ್ಯವಸ್ಥೆ ಜಡಗಟ್ಟಿದಾಗ ಅದನ್ನು ಬದಲಿಸುವ, ಅದಕ್ಕೊಂದು ತೀವ್ರ ಚಿಕಿತ್ಸೆ ನೀಡುವ ಮತ್ತು ಅದನ್ನು ಪರಿವರ್ತನೆಗೆ ಅಣಿ ಮಾಡುವ ಕಾರ್ಯವನ್ನು ಕೆಲಮಟ್ಟಿಗಾದರೂ ಸಾಹಿತ್ಯ ಮಾಡುತ್ತದೆ. ವಿಶೇಷವಾಗಿ ನಾಟಕ ಪ್ರಕಾರ ಈ ಬಗೆಯ ಹೊಣೆಯನ್ನು ನಿರ್ವಹಿಸುವಲ್ಲಿ ಪ್ರಧಾನ ಪಾತ್ರ ಆಡುತ್ತದೆ. ಸಾಮಾಜಿಕ ವಿಭಿನ್ನ ಸ್ತರಗಳು, ಅವು ಒಳಗೊಂಡ ವಿವಿಧ ಆರ್ಥಿಕ ವಾಸ್ತವಿಕತೆ, ಸ್ವಾತಂತ್ರ್ಯ ಪ್ರಜಾಪ್ರಭುತ್ವದ ಹೆಸರಿನಲ್ಲಿ ಕೆಲವು ಸಲ ಪ್ರಚೋದಿಸಿ, ಉನ್ಮತ್ತಗೊಳಿಸಿ ಮತ್ತು ಉದ್ವೇಗ ವೈಷಮ್ಯಗಳ ಅಂಚಿಗೆ ತಂದು ನಿಲ್ಲಿಸಿದ ರಾಜಕೀಯ ಅಸ್ತವ್ಯಸ್ತತೆ, ಸಾರ್ವತ್ರಿಕ ಸ್ವೀಕೃತಿಗೆ ಒತ್ತಡ ಹೇರಿದ ವ್ಯಾಪಕ ಸ್ವೇಚ್ಛೆ ಮತ್ತು ಭ್ರಷ್ಟಾಚಾರಗಳು: ಇವೆಲ್ಲವುಗಳಿಂದ ಏನು, ಎತ್ತ, ಯಾವುದು, ಎಲ್ಲಿ ಎನ್ನುವುದು ಸ್ಪಷ್ಟವಾಗಿ ತಿಳಿಯದೆ ದಿಙ್ಮೂಢರಾದ ಜನಸಮುದಾಯದಲ್ಲಿ ವ್ಯಕ್ತಿಗೆ ತನ್ನ ನೆಲವೇ ತನಗೆ ಅನ್ಯವಾದಂಥ, ತಾನಾಡಿದ ಆಡುವ ಮಾತುಗಳೇ ತನಗೆ ಅರ್ಥವಾಗದಂಥ ಒಂದು ವಿಚಿತ್ರ ಪರಕೀಯತೆ ಮತ್ತು ಅನಾಥ ಪ್ರಜ್ಞೆಗಳು ಕಾಡತೊಡಗಿದವು. ತನ್ನ ಗುರುತೇ ತನಗೆ ಸಿಗದಂಥ ಸಾಮಾಜಿಕ ಪರಿಸರದಲ್ಲಿ ಅನಿವಾರ್ಯವಾಗಿ ಉಸಿರಾಡಬೇಕಾದ ವ್ಯಕ್ತಿ ತನ್ನನ್ನು ಗುರುತಿಸಿಕೊಳ್ಳುವ, ತನ್ನವರ ಮಧ್ಯದಲ್ಲಿದ್ದೂ ತಾನೂ ಪರಕೀಯನಾಗದಂತೆ ಎಚ್ಚರಿಕೆ ವಹಿಸುವ ಒಂದು ಗಂಭೀರ ಯತ್ನ ಮಾಡುವುದು ಅನಿವಾರ್ಯವಾಯಿತು. ಇಂಥ ಒಂದು ಸಂದರ್ಭದಲ್ಲಿ ಹುಟ್ಟಿಕೊಂಡ ನಾಟಕಗಳೇ ಅಸಗಂತ ನಾಟಕಗಳು.

ಸಮಾಜದ ದ್ವಂದ್ವಸ್ಥಿತಿ, ಸ್ಥಾಪಿತ ವ್ಯವಸ್ಥೆಯಲ್ಲಿ ಸಿಕ್ಕು ಜಡಗಟ್ಟಿದ ವ್ಯಕ್ತಿತ್ವ ಶೋಷಣೆಗೆ ಪಕ್ಕಾಗಿ ನರಳುವ ಬಹುಜನಸಮುದಾಯ, ಸಾಮಾಜಿಕ ಇಬ್ಬಂದಿತನಗಳಲ್ಲಿ ಗೋಳಿಡುವ ಹೆಣ್ಣು ಗಂಡು ಅನಾಮಿಕರು, ಪ್ರತಿಷ್ಠಿತರು ಹೀಗೆ ಒಂದು ಗೂಢ ಪರಿಸರದ ನಡುವೆ ಉಸಿರಾಡಿಸುವುದೂ ಕಷ್ಟವಾದಂಥ ಕಾಲದಲ್ಲಿ ವ್ಯಕ್ತಿಯನ್ನು ಏಕಾಕಿತನ ಕಾಡುತ್ತದೆ. ಏಕಾಕಿತನ ಕಾಡಿದಷ್ಟೂ ವ್ಯಕ್ತಿ-ಗಂಡಿರಲಿ ಹೆಣ್ಣಿರಲಿ-ತನ್ನನ್ನು ಕುರಿತು ತಾನು ಗಂಭೀರವಾಗಿ ಪ್ರಶ್ನಿಸುವ,

'ತನ್ನತನ'ದ ಮೂಲವನ್ನು ಕೆದಕುವ, ನೆಲೆಯನ್ನು ಅರಿಯುವ ಒಂದು ಗಂಭೀರ ಅನ್ವೇಷಣೆಯಲ್ಲಿ ತೊಡಗುತ್ತಾನೆ. ತನ್ನ ಸುತ್ತಮುತ್ತಣ ಅಸಂಬದ್ಧ ಪರಿಸ್ಥಿತಿಯಿಂದ ಕಂಗೆಟ್ಟ, ವ್ಯಕ್ತಿ ದಿಕ್ಕು ತಪ್ಪದಂತೆ ಮುನ್ನಡೆಯುವ ಸಾಹಸ ಮಾಡುತ್ತಾನೆ; ತನ್ನವರ ಜೊತೆಗೇ ಕದನಕ್ಕೆ ಇಳಿಯುತ್ತಾನೆ. ಸಾಮಾಜಿಕ ಜೀವನದ ಮತ್ತು ವ್ಯಕ್ತಿಯ ಬದುಕಿನ ಅಸಂಬದ್ಧ ಪರಿಸ್ಥಿತಿ ಒಂದು ವಸ್ತುವಾಗಿ ಅದು ನಾಟಕದ ಮೂಲಕ ರಂಗದ ಮೇಲೆ ಪ್ರಯೋಗಗೊಂಡಾಗ ಮನುಷ್ಯನ ನಡವಳಿಕೆಯ ಎಲ್ಲ ಚರ್ಯೆಗಳು, ಎಲ್ಲ ಉದ್ದೇಶಗಳು, ವಂಚನೆ, ಕ್ರೌರ್ಯ, ಸಜ್ಜನಿಕೆ, ಭೋಳೇತನ-ಎಲ್ಲ ಬಯಲಾಗುತ್ತವೆ. ವ್ಯಕ್ತಿ ಮತ್ತು ಅವನು ಬಾಳುವ ಸಮಾಜದ ನಡುವಣ ಅಸಂಬದ್ಧತೆಯ ಮೂಲ ಕಾರಣವನ್ನು ಶೋಧಿಸುತ್ತ, ವಿಡಂಬನೆ, ಲೇವಡಿ, ಚಾಟಿಯೇಟು, ಮೊನಚು, ವ್ಯಂಗ್ಯಗಳ ಮೂಲಕ ಸತ್ಯದದರ್ಶನ ಮಾಡಿಸಬೇಕಾದುದು 'ಅಸಂಗತ' ನಾಟಕದ ಧೋರಣೆ, ಗುರಿ.

ಈ ಕಾರಣದಿಂದ 'ಅಸಂಗತ' ನಾಟಕಗಳಿಗೆ ಒಮ್ಮೊಮ್ಮೆ ಖಚಿತವಾದ ಆಕೃತಿ, ರೂಪ ಇಲ್ಲದಿರಬಹುದು. ಸ್ಫುಟವಾಗಿ ಗೋಚರಿಸುವ ಪಾತ್ರ, ಖಚಿತವಾದ ವಸ್ತು ಅಥವಾ ಕಥೆ ಅಸಂಗತ ನಾಟಕಗಳಲ್ಲಿ ದೊರೆಯದಿರಬಹುದು. ಪಾತ್ರಗಳಿದ್ದರೂ ಅವು ತುಂಬ ತಮಾಷೆಯ ವ್ಯಕ್ತಿಗಳಾಗಿ ಕಾಣಬಹುದು. ಕಥೆ ಎನ್ನುವುದು ನಾಟಕದ ಸಂಭಾಷಣೆಗಳ ಮೂಲಕವೇ ರೂಪುಗೊಳ್ಳುತ್ತ ಹೋಗುವಂಥದು. ಒಮ್ಮೊಮ್ಮೆ ಕನಸಿನ, ಭ್ರಮೆಯ ಛಾಯೆ ಅಲ್ಲಿಯ ಪಾತ್ರಗಳ ನಡವಳಿಕೆಯಲ್ಲಿ ಸುಳಿಯಬಹುದು. ಸಂಭಾಷಣೆ ನೇರವಾಗಿದ್ದರೂ ಗಂಡು ಹೆಣ್ಣು ರಂಗಭೂಮಿಯ ಮೇಲೆ ನಮ್ಮ ಎದುರೇ ಪರಸ್ಪರ ಮಾತಾಡುತ್ತಿದ್ದರೂ, ಅವು ಪ್ರೇಕ್ಷಕನಿಗೆ ಅಸಂಬದ್ಧ ಹರಟೆ ಅಥವಾ ಮೋಜಿನ ವಿಡಂಬನೆಯ ಜಾರುಮಾತು ಎಂದು ಅನ್ನಿಸಬಹುದು. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಬದುಕಿನ ಆಳವಾದ ತಾತ್ವಿಕ ನಿಲುವು ಅಥವಾ ಶೋಧನೆ, ಇಂಥ ಅಸಂಬದ್ಧ ಅವೈಚಾರಿಕ ಎಂದು ತೋರುವ ಸಂಭಾಷಣೆಗಳಲ್ಲಿ ಹುದುಗಿರುವುದು. ಆದ್ದರಿಂದ ಅವೈಚಾರಿಕವೆನಿಸುವ ಅನುಭವಗಳು ರಂಗಭೂಮಿಯ ಮೇಲೆ ಪ್ರಯೋಗಗೊಳ್ಳುತ್ತಿರುವಾಗಲೆ ಆ ವಸ್ತುವಿನ ಮೂಲನೆಲೆ, ವ್ಯಕ್ತಿಯ ಅನ್ವೇಷಣೆಯ ಮೂಲ ಸಮಸ್ಯೆ ಇತ್ಯಾದಿಗಳು ಪ್ರೇಕ್ಷಕನ ಅಥವಾ ಓದುಗನ ಹೃದಯಸ್ಪಂದನೆಗೆ ವಿಚಾರ ಪ್ರಚೋದನೆಗೆ ಕಾರಣವಾಗುತ್ತವೆ.

ಲಂಕೇಶರ 'ತೆರೆಗಳು' ನಾಟಕದಿಂದ ಮೊದಲುಗೊಂಡು ಚಂದ್ರಶೇಖರ ಪಾಟೀಲರ 'ಗೋಕರ್ಣದ ಗೌಡಶಾನಿ'ಯವರೆಗೆ ಈ ಬಗೆಯ ನಾಟಕಗಳಿಂದಾಗಿ ಕನ್ನಡ ರಂಗಭೂಮಿಯಲ್ಲಿ ಹೊಸಗಾಳಿ ಬೀಸಿತು. ನಾಟಕದ ಸಂಭಾಷಣೆಯಲ್ಲಿ ಭಾಷೆಯ ನಿಜವಾದ ಸತ್ವ ಹೊಮ್ಮಿತು. ಹರಿತವಾದ ನೇರ ಆಲೋಚನಾ ಸರಣಿಯಿಂದಾಗಿ ಪಾತ್ರಗಳು ಹೆಚ್ಚು ಹೆಚ್ಚು ಮುಖಾಮುಖಿ ಆದುವು. ಕ್ಲೀಷೆಯಾದ ರಾಚನಿಕ ಚೌಕಟ್ಟಿನ ಪರಿಮಿತಿಯಲ್ಲೇ ಸುಳಿಯುತ್ತಿದ್ದ ಘಟನಾವಳಿ, ವೇಷಭೂಷಣಗಳ ಹಗರಣದಿಂದ ಮುಕ್ತವಾಗುತ್ತ ಮುನ್ನಡೆದ ನಾಟಕದ

ವಸ್ತು ತಮಾಷೆ ಮಾಡುತ್ತಲೇ ಸಮಾಜದ ಗಂಭೀರ ಸ್ತರಗಳ ಸ್ಪರ್ಶ ಮಾಡುವಂತಾಯಿತು. ನೇಪಥ್ಯದ ಬಳಕೆ, ಬೆಳಕು-ಕತ್ತಲೆಯ ಮೋಜು, ರಂಗಸಜ್ಜಿಕೆಯ ಆಡಂಬರಗಳು ಒಂದೊಂದಾಗಿ ಕಳಚಿಕೊಳ್ಳುತ್ತ, ವಾಚಕ-ಪ್ರೇಕ್ಷಕರ ಕುತೂಹಲ ಕೆರಳಿಸಿದ ಈ ನಾಟಕಗಳು ಅಸಂಗತತೆಯ ಒಳಪದರಗಳಲ್ಲಿ ಹುದುಗಿದ ವ್ಯಕ್ತಿ, ಸಮಾಜ-ಸಮುದಾಯಗಳ ನೋವು ಕಾತರಗಳನ್ನು ಅನಾವರಣಗೊಳಿಸುವತ್ತ ವೇಗದ ಹೆಜ್ಜೆಗಳನ್ನಿಡತೊಡಗಿದವು.

ಕವಿಯೆಂದೇ ಹೆಸರಾಗಿದ್ದ ಚಂಪಾ ಅವರು ನಾಟಕದತ್ತ ಹೊರಳಿದುದು ಕನ್ನಡ ರಂಗಭೂಮಿ ಪರಿವರ್ತನೆಯ ಹಾದಿಯಲ್ಲಿದ್ದ ಸಂದರ್ಭದಲ್ಲಿ. ೧೯೬೦ರ ಸುಮಾರಿಗೆ ಅದುವರೆಗೆ ರಂಗಭೂಮಿಯಲ್ಲಿ ಪ್ರಭುತ್ವ ಸಾಧಿಸಿದ್ದ ವಾಸ್ತವ ಮಾರ್ಗ ತನ್ನ ಸರಳತೆಯ ಮಿತಿಗಳಿಂದಾಗಿ ಸ್ವಾತಂತ್ರ್ಯೋತ್ತರದ ಭಾರತದಲ್ಲಿ ಸಂಕೀರ್ಣ ಅನುಭವವನ್ನು ಅಭಿವ್ಯಕ್ತಿಸುವ ಸಾಮರ್ಥ್ಯ ಹೊಂದಿರಲಿಲ್ಲ. ಇದು ಕೇವಲ ನಾಟಕ ಹಾಗೂ ರಂಗಭೂಮಿಗಳಿಗೆ ಸೀಮಿತವಾದ ಸಂಗತಿಯೂ ಆಗಿರಲಿಲ್ಲ. ಕಾವ್ಯ, ಕತೆ, ಕಾದಂಬರಿಗಳಲ್ಲಿ ನವ್ಯತೆ ಆಗಲೇ ಹೊಸ ಹಾದಿ ತೆರೆದಿತ್ತು. ರಂಗಭೂಮಿಯಲ್ಲಿ ವಾಸ್ತವ ಮಾರ್ಗವನ್ನು ನಿರ್ಮಿಸಿದವರಲ್ಲಿ ಪ್ರಮುಖರಾಗಿದ್ದ ಶ್ರೀರಂಗರೇ ಅದರಲ್ಲಿದ್ದ ವಿಶ್ವಾಸ ಕಳೆದುಕೊಂಡು ಹೊಸ ಮಾರ್ಗಗಳ ಶೋಧದಲ್ಲಿದ್ದರು. ೧೯೫೫ರಲ್ಲಿ ಬಂದ ಕತ್ತಲೆ-ಬೆಳಕು ಈ ಹುಡುಕಾಟದ ಫಲ. ೧೯೫೫ರಿಂದ ೧೯೭೫ರವರೆಗಿನ ಕಾಲ ಕನ್ನಡ ರಂಗಭೂಮಿಯಲ್ಲಿ ಹೊಸ ಅಲೆ ಹುಟ್ಟಿಕೊಂಡ ಕಾಲ. ಶ್ರೀರಂಗದ ಕತ್ತಲೆ ಬೆಳಕು, ಕೇಳು ಜನಮೇಜಯಗಳಲ್ಲದೆ ಗಿರೀಶ ಕಾರ್ನಾಡರ ಯಯಾತಿ, ತುಘಲಕ್, ಹಯವದನ, ಲಂಕೇಶರ ನನ್ನ ತಂಗಿಗೊಂದು ಗಂಡು ಕೊಡಿ, ತೆರೆಗಳು, ಚಂದ್ರಶೇಖರ ಕಂಬಾರರ ಋಷ್ಯಶೃಂಗ, ಚಾಳೇಶ, ಚಂದ್ರಶೇಖರ ಪಾಟೀಲರ ಕೊಡೆಗಳು, ಅಪ್ಪ, ಗುರ್ತಿನವರು, ಕುಂಟಾ ಕುಂಟಾ ಕುರವತ್ತಿ ಹಾಗೂ ಟಿಂಗರ ಬುಡ್ಡಣ್ಣ ಈ ಕಾಲದಲ್ಲಿಯೇ ರಂಗಭೂಮಿಯನ್ನು ಕಂಡವು. ನಾಟಕದಲ್ಲಿ ನವ್ಯತೆ ಹುಟ್ಟಿಕೊಳ್ಳುವುದಕ್ಕೆ ಪಶ್ಚಿಮದ ಪ್ರಭಾವ ಒಂದು ಮುಖ್ಯ ಕಾರಣವಾದರೂ ಸಾಹಿತ್ಯದ ಉಳಿದ ಪ್ರಕಾರಗಳಲ್ಲಿಯಂತೆ ಇಲ್ಲಿಯೂ ಕೂಡ ಅದು ಆಂತರಿಕ ಒತ್ತಡಗಳ ಪರಿಣಾಮವಾಗಿಯೇ ತಲೆದೋರಿತು ಎನ್ನುವುದು ವಾಸ್ತವ ಸತ್ಯ. ಚಂಪಾ ಅವರ ವಿಷಯದಲ್ಲಂತೂ ಈ ಮಾತು ಸಂಪೂರ್ಣವಾಗಿ ನಿಜವಾದುದು. ಅವರ ನಾಟಕಗಳ ಶೈಲಿ ಕುರಿತು ಇಲ್ಲಿ ವಿವೇಚಿಸಲಾಗಿದೆ.

ಚಂಪಾ ಅವರ ನಾಟಕಗಳ ಭಾಷಾ ಬಳಕೆಯನ್ನು ಅಧ್ಯಯನ ಮಾಡುವಾಗ ಕಾಲದ ಪರಿಗಣನೆ ಅತ್ಯಂತ ಅಗತ್ಯವಾಗಿರುತ್ತದೆ. ಅವರು ನವ್ಯದ ಕಾಲದ ನಾಟಕಕಾರರು. ಕನ್ನಡದಲ್ಲಿ ಸ್ವತಂತ್ರ ನಾಟಕಗಳು ಅಭಾವವಿದ್ದ ಕಾಲವದು. ಆ ದೃಷ್ಟಿಯಿಂದ ಚಂಪಾ ಮೊದಲಾದವರ ಭಾಷೆ ಪ್ರಯೋಗಾತ್ಮಕವಾಗಿ ಕಂಡು ಬರುತ್ತದೆ. ನಾಟಕಗಳ ಭಾಷೆಯಲ್ಲಿ ಹೆಚ್ಚು ವೈವಿಧ್ಯತೆಯನ್ನು ಚಂಪಾ ಅವರು ತಂದಿದ್ದಾರೆ. ಅವರು ತಮ್ಮ ನಾಟಗಳಲ್ಲಿ ಆಡುಭಾಷೆ ಮತ್ತು ಪ್ರಮಾಣ ಭಾಷೆಯನ್ನು ಹಿತಮಿತವಾಗಿ ಬಳಸಿದ್ದಾರೆ. ಅವರು ಆಧುನಿಕ ಕನ್ನಡ ಮತ್ತು

ಇಂಗ್ಲಿಶ್ ಸಾಹಿತ್ಯವನ್ನು ಜೀರ್ಣಿಸಿಕೊಂಡವರು. ಹೀಗಾಗಿ ಚಂಪಾ ಅವರಿಗೆ ಸಹಜವಾಗಿಯೆ ಭಾಷಾ ಪ್ರಭುತ್ವ ಸಿದ್ಧಿಸಿತು.

ಚಂಪಾ ನಾಟಕ ಶೈಲಿ ದೇಸಿಯತೆಯನ್ನು ಮೈಗೂಡಿಸಿಕೊಂಡಿದೆ. ಅದು ಸರಳ ಮತ್ತು ನೇರವಾಗಿದೆ. ಸ್ವತಂತ್ರವಾದ ಭಾಷಾಭಿವ್ಯಕ್ತಿಯಲ್ಲಿ ಆಡುಭಾಷೆಯ ನಾದವನ್ನು ಆಮೂಲಾಗ್ರವಾಗಿ ಗಿಟ್ಟಿಸಿಕೊಂಡಿದ್ದರಿಂದಲೇ ಅವರ ನಾಟಕಕ್ಕೆ ಗಟ್ಟಿತನ ಬಂದಿದೆ. ನಾಟಕಗಳ ಜನಪ್ರಿಯತೆಗೂ ಇದೇ ಕಾರಣ. ಆಡುಭಾಷೆಯ ನಾಟಕದ ಜೀವನಾಡಿಯಾಗಿದೆ. ಅನಾವಶ್ಯಕ ವರ್ಣನೆಯಾಗಲಿ, ಉಪಕತೆಗಳಾಗಲಿ ಇಲ್ಲವೆಂದೇ ಹೇಳಬೇಕು. ಅವರ ನಾಟಕದ ಪಾತ್ರಗಳನ್ನು, ಸನ್ನಿವೇಶಗಳನ್ನು ಗುಮನಿಸಿದಾಗ ಆಯಾ ಸಂದರ್ಭಕ್ಕೆ ತಕ್ಕಂತೆ ಸ್ವತಂತ್ರ ಸೃಷ್ಟಿಗಳೇ ಆಗಿವೆ. ಪ್ರಾದೇಶಿಕ ಸರಳರಚನೆಗಳು ಸಮರ್ಪಕವಾಗಿ ಮೂಡಿಬಂದಿವೆ. 'ಕುಂಟಾ ಕುಂಟಾ ಕುರವತ್ತಿ' ನಾಟಕದಲ್ಲಿ ಬೂಟು ಪಾಲಿಶ್ ಮಾಡುವ ಕುಂಟ ತಾನು ಪಾಲಿಶ್ ಮಾಡುವ ಬೂಟಿನ ಥಳುಕಿನ ಬಗ್ಗೆ ಈ ರೀತಿ ಹೇಳುತ್ತಾನೆ.

ಬೂಟು ಅನಬೇಕು ಅವನೌನ
ಗಸಗಸ ತಿಕ್ಕಿ ಮಾರೀ ನೋಡಿಕೊಂಡರೆ
ಅಮಾಸಿ ಕಾವಳದಾಗ ಚಿಕ್ಕಿ ಥಕ್ ಅಂದಂಗ ಅನಬೇಕು
ಬೂಟು ಏರಿಸಿಕೊಂಡು ಕುದರಿ ಹಂಗ ಟಕ್‌ಟಕ್ ಅಂತ ಹೊಂಟರ
ಮಾರಿ ನೋಡಽದ ಬಿಟ್ಟು ಅವನೌನ ಮಂದಿ
ಬೂಟಽ ನೋಡಿರಬೇಕು.

ಸಹೃದಯ ವಾಚಕರಿಗೆ ಅರ್ಥವಾಗುವಂತೆ ಭಾಷೆಗೆ ಸಂವಹನಶಕ್ತಿಯಿದೆ. ಒಂದು ನಾಟಕದಲ್ಲಿ ಸಾಹಿತ್ಯಕ ಮೌಲ್ಯ ಎಷ್ಟೇ ಹಿರಿದಾಗಿದ್ದರೂ ಸಹ ಅದರ ಸಂವಹನ ಮಾಧ್ಯಮ ಕೂಡ ಅಷ್ಟೇ ಉತ್ತಮವಾಗಿರಬೇಕು. ಚಂಪಾ ಅವರ ಎಲ್ಲ ನಾಟಕಗಳು ಸಾಮಾಜಿಕ ವಸ್ತುವನ್ನು ಹೊಂದಿವೆ. ವಸ್ತು, ಪಾತ್ರ ಇತ್ಯಾದಿಗಳಲ್ಲಿ ಹೊಸತನವಿದೆ. ಅವರು ತಮ್ಮ ನಾಟಕಗಳಲ್ಲಿ ಪದ್ಯ ಬಂಧವನ್ನು ಅಳವಡಿಸಿದ್ದಾರೆ. 'ಗೋಕರ್ಣದ ಗೌಡ ಶಾನಿ' ನಾಟಕ ಪ್ರಾರಂಭವಾಗುವುದಕ್ಕಿಂತಲೂ ಮುಂಚೆಯೇ ಗಣಪತಿ ಸ್ತೋತ್ರ ನಡೆಯುತ್ತದೆ. ಆಗ ಬಳಕೆಯಾದ ಶಿಶುಪ್ರಾಸದ ಲಯ ಕಿವಿಗೆ ಅಪ್ಪಳಿಸುತ್ತದೆ.

ಬಾರೋ ಬಾರೋ ಗಣಪ್ಪ
ಬಾಳ ಚಂದ ನೀನಪ್ಪ
ಈಟ ಕಣ್ಣು ನಿನಗಪ್ಪ
ಆನಿಸೊಂಡಿ ಯಾಕಪ್ಪ
ದೊಡ್ಡ ಹೊಟ್ಟೆ ಹೊಟ್ಟೆಪ್ಪ
....
....

ನೋಡಿ ನಕ್ಕ ಚಂದಪ್ಪ

ಬಾರೋ ಬಾರೋ ಗಣಪ್ಪ

ಇದರಂತೆ ಬಯಲಾಟದ ಲಯದಲ್ಲಿಯೂ ಪ್ರಾರ್ಥನೆ ನಡೆಯುತ್ತದೆ. ಒಂದೆಡೆ ಶಿಸುಪ್ರಾಸ ಇನ್ನೊಂದೆಡೆ ಬಯಲಾಟದ ಹಾಡು ಹೀಗೆ ಮಿಸಳಭಾಜೀ ಕ್ರಿಯೆ ನಾಟಕದ ಉದ್ದಕ್ಕೂ ನಡೆಯುತ್ತದೆ. ಚಂಪಾ ಅವರು ಆಂಗ್ಲ ಮತ್ತು ಕನ್ನಡ ಮಿಶ್ರಿತ ವಾಕ್ಯಗಳನ್ನು ಬಳಸುತ್ತಾರೆ. 'ಕತ್ತಲ ರಾತ್ರಿ' ನಾಟಕದಲ್ಲಿ ಒಂದು ಪ್ರಸಂಗ ಹೀಗಿದೆ.

ಅವನು : ಹೌದು. Let us force the moment

ಅವಳು : to its crisis--- come on. ಹೂಂ ಹೇಳು ---one

ಅವನು : on----two---three

ಅವಳು : I---could---not---make---it

ಅವನು : ಓಹ್!

ಅವಳು : oh, leave me alone

ಅವನು : ಯಾಕ?

ಕನ್ನಡಾಂಗ್ಲ ಮಿಶ್ರಿತ ವಾಕ್ಯ ರಚನೆ ನಾಟಕದ ಓಜಸ್ಸಿಗೆ ಕಾರಣವಾಗಿದೆ. ಕನ್ನಡಾಂಗ್ಲ ಪದರಚನೆ ಚಂಪಾ ಅವರಿಗೆ ಸಾಧಿಸಿದೆ. ಒಂದು ಭಾಷೆಯನ್ನು ಮಾತನಾಡುವಾಗ ಮತ್ತೊಂದು ಭಾಷೆಯ ಪದಗಳನ್ನು, ವಾಕ್ಯಗಳನ್ನು ಬೆರೆಸುವುದು ಭಾಷಾ ಮಿಶ್ರಣವಾಗಿದೆ (Code Mixing). ಇಲ್ಲಿ ಸಹಜತೆ ಇರುವುದು ಮತ್ತು ಪರಸ್ಪರರಿಗೆ ಭಾಷಾ ಮಿಶ್ರಣ ಅರ್ಥವಾಗುತ್ತದೆ. ಚಂಪಾ ಅವರ ನಾಟಕಗಳಲ್ಲಿ ಈ ಬಗೆಯ ಪ್ರಯೋಗಗಳು ಯಥೇಚ್ಛವಾಗಿ ಕಂಡು ಬರುತ್ತವೆ. ಭಾವ ಸಂವಹನದಲ್ಲಿ ಸೊಗಸುಗಾರಿಕೆಗೆ ಮಹತ್ವ ಕೊಡುವ ಈ ನಾಟಕಕಾರರು ಆ ಉದ್ದೇಶ ಸಾಧನೆಗಾಗಿ ಕೆಲವೆಡೆಗಳಲ್ಲಿ ಭಿನ್ನ ಸ್ತರಗಳ ಭಾಷಿಕ ಆಯಾಮಗಳನ್ನು ಬಳಸಲು ಹಿಂಜರಿಯುವುದಿಲ್ಲ. "ಅಪ್ಪ", 'ಕೊಡೆಗಳು' ಮುಂತಾದ ನಾಟಕಗಳ ಹೆಗ್ಗಳಿಗೆ ಅಲ್ಲಿಯ ಅರ್ಥಪೂರ್ಣ ಸಂಭಾಷಣೆಯಲ್ಲಿ ಕಾಣಬಹುದು. ಅಪ್ಪ ನಾಟಕದ ಒಂದು ಪ್ರಸಂಗ ಹೀಗಿದೆ:

ಬಸವ : ಹಂಗಾರ ಒಂದು ಕತೀ ಹೇಳು

ಅವ್ವ : ಯಾವ ಕತಿ ಹೇಳಲಿ?

ಬಸವ : ಚಂದನ ಕತೀ ಹೇಳು

ಅವ್ವ : ನೀ ನನ್ನ ಹೊಟ್ಯಾಗ ಇದ್ದಾಗ

ಬಸವ : ನಿನ್ನ ಹೊಟ್ಯಾಗ ನನ್ನ ಯಾರ ತಂದು ಹಾಕಿದ್ರು?

....

....

ಅವ್ವ : ಹಂಗಾರ ನಿಮ್ಮ ಅಪ್ಪ ಯಾರು?

ಬಸವ : ನಿಮ್ಮ ಅಪ್ಪ ನಾನು?

ಅವ್ವಾ...... ಅವ್ವಾ...... ಇದು ಬರೇ ಕತೀ ಏನು ಮತ್ತ?

ಮನೆಯಲ್ಲಿ ಮಾತನಾಡುವಂತೆ ಸಹಜವಾದ ವ್ಯಾವಹಾರಿಕ ಕನ್ನಡದ ಬಳಕೆ, ಆಡು ಮಾತಿನ ಲಯ ನಾಟಕಕ್ಕೆ ಕಳೆತಂದಿದೆ. ಚಂಪಾ ಅವರು ಆಡುನುಡಿಯಗತ್ತನ್ನು, ಆಡುನುಡಿಯನ್ನು ಅದರ ಸೊಗಸನ್ನು ಅರ್ಥಪೂರ್ಣವಾಗಿ ಬಳಸಿಕೊಂಡಿದ್ದಾರೆ. ಸಹಜವಾಗಿ ಸಂಭಾಷಣೆ ಬೆಳೆಯುತ್ತಲೇ ಪಾತ್ರಗಳ ಸ್ವಭಾವ ಅನಾವರಣಗೊಳ್ಳುತ್ತದೆ. ಆ ಮೂಲಕ ಸಾಮಾಜಿಕ ಚಲನೆಯೂ ಅನಾವರಣಗೊಳ್ಳುತ್ತ ಹೋಗುತ್ತದೆ. ಆಕರ್ಷಕವಾದ ಸಂಕ್ಷಿಪ್ತವಾದ ಬಂಧ ಇಲ್ಲಿಯ ಇನ್ನೊಂದು ವೈಶಿಷ್ಟ್ಯ. ಕಿರಿದರಲ್ಲಿ ಹಿರಿದಾದ ಅರ್ಥವನ್ನು ಅಡಕವಾಗಿ ಹೇಳುವ ಕಲೆಗಾರಿಕೆ ಚಂಪಾ ಅವರಿಗೆ ಕರಗತವಾಗಿದೆ. ಗಹನವಾದ ತಾತ್ವಿಕ ವಿಚಾರಗಳನ್ನು ಸರಳವಾಗಿಯೂ ಸೂತ್ರ ರೂಪವಾಗಿಯೂ ಸಾಂದ್ರವಾಗಿಯೂ ಹೇಳುವಲ್ಲಿ ಭಾಷೆ ಸಂಪೂರ್ಣ ಯಶಸ್ಸನ್ನು ಸಾಧಿಸಿದೆ. 'ಟಿಂಗರ ಬುಡ್ಡಣ್ಣ' ನಾಟಕದಲ್ಲಿ ಮುದುಕಿ, ಮುದುಕನಿಗೆ ಉಪ್ಪಿಟ್ಟು ಮಾಡಿ ಕೊಡಬೇಕೆಂದಾಗ ಗ್ರಾಮೀಣ ಪ್ರದೇಶದ ಅಡುಗೆ ಮನೆಯ ದೃಶ್ಯ ಕಣ್ಮುಂದೆ ಕಟ್ಟುವಂತೆ ಲೇಖಕರು ಚಿತ್ರಿಸಿದ್ದಾರೆ.

ಏಳ ಏಳ ಮಾವ
ಎಲ್ಲಾ ಸಜ್ಜ ಐತಿ
ನಾಗಂದಗೀ ಮ್ಯಾಲ ಡಬ್ಬಾಗ
ಸಜ್ಜಕ ವಾತಿ
ಹಂಡೇದ ಹಿಂದ ತೊಂಗಲ ಬ್ಯಾಗ
ಕೋತಂಬ್ರಿ ಸಿವುಡೈತಿ
ಅಡಕಲಗಡಿಗ್ಯಾಗ ಉಪ್ಪೈತಿ, ಕಾರೈತಿ
ಒಲೀ ಸಂದ್ಯಾಗ ಒಡಕಲ ಐತಿ
ಒಲೀ ತೋಟ ಮ್ಯಾಗ ಕಡೀಪೆಟಗಿ
ಉದುಗೊಳವಿ ಎಲ್ಲಾ ಐತಿ
ಈಳಿಗಿ ಐತಿ.....

ಅಡುಗೆ ಮನೆಯಲ್ಲಿರುವ ಎಲ್ಲ ಉಪಕರಣಗಳನ್ನು ಚಂಪಾ ಅವರು ಲಯಬದ್ಧ ಭಾಷೆಯಲ್ಲಿ ಹೆಣೆದಿದ್ದಾರೆ. ಆ ಭಾಗ ತನಗೆ ತಾನೆ ಸುಂದರವೂ ಆಕರ್ಷಕವೂ ಆಗಿದೆ. ಚಂಪಾ ಅವರು ಆತ್ಮೀಯವಾದ ಕೌಟುಂಬಿಕ ಪರಿಸರವನ್ನು ಚಿತ್ರಿಸುವಲ್ಲಿ ತಮ್ಮದೇ ಆದ ವಿಶಿಷ್ಟ ಶಕ್ತಿಯನ್ನು ಹೊಂದಿದ್ದಾರೆ. ದಿನನಿತ್ಯ ಬದುಕಿನ ರಸವಂತಿಕೆಯನ್ನು ಅವರು ಸುಂದರವಾಗಿ ಚಿತ್ರಿಸುತ್ತಾರೆ. ಇಂತಹ ಕಡೆ ಚಂಪಾ ಅವರ ಭಾಷೆಯಲ್ಲಿ ಒಂದು ವಿಶಿಷ್ಟವಾದ ರಸಿಕತೆಯ ಹೊಳಪನ್ನೂ ಪ್ರತಿಭೆಯ ಮೆರಗನ್ನೂ ಕಾಣುತ್ತೇವೆ. ಅಚ್ಚ ಕನ್ನಡ ಅಪ್ಪಾಯ

ಮಾನ ಗದ್ಯ, ನಾಟಕದ ಜೀವಕಳೆ ಹೆಚ್ಚಿಸಿದೆ. 'ಗುರ್ತಿನವರು' ನಾಟಕದಲ್ಲಿ 'ಗಂಡ' ಮತ್ತು 'ಹೆಂಡತಿ' ಇಬ್ಬರೂ ವಾಸ್ತವದಿಂದ ಮುಖ ತಿರುವಿದವರಾಗಿದ್ದಾರೆ.

ಗಂಡ : ಅಂಥಾಂಗ

ಹೆಂಡತಿ : ಏನೂ ಅಂಥಾಂಗ

ಗಂಡ : ಥೂ ಇವರಪ್ಪನ ...... ಏನs ಹೇಳಬೇಕಂತ
ಮಾಡಿದ್ದೆ ಮರ್ತs ಹೋತ ನೋಡು
....
....
ಹ್ಞಾ ಸಿಕ್ಕಿತು?

ಹೆಂಡತಿ : ಏನು ಸಿಕ್ಕಿತು?

ಗಂಡ : ನನ್ನ ನಿನ್ನ ಲಗ್ನ ಆಗಿ ಎಷ್ಟು ವರ್ಷ ಆತು?

ಹೆಂಡತಿ : ಇದs ನಿನ್ನ ಪ್ರಶ್ನಾ?

ಹಿತವಾದ ಈ ಸಂಭಾಷಣೆ ವಿಶಿಷ್ಟವಾದ ಬೆಡಗಿನಿಂದ ಕೂಡಿದ್ದು ಮುಂದಿನ ಕಥಾ ಬೆಳವಣಿಗೆಗೆ ಬೆರಳು ಮಾಡುತ್ತದೆ. ಇಲ್ಲಿ ಬರುವ ಮಾತು ಬರೀ ಸಂಭಾಷಣೆಯ ಚಮತ್ಕಾರ ವಾಗಿರದೆ ಭಾವ ಮತ್ತು ಭಾಷೆಯಲ್ಲಿ ಹೊಂದಾಣಿಕೆಯಿದೆ. ಸಾಂಸಾರಿಕ ಚಿತ್ರಗಳು ಬಂದಾಗ ಚಂಪಾ ಅವರ ಭಾಷೆ ಸಹಜ ನೆಲೆಗಟ್ಟಿನಲ್ಲಿ ಸುಂದರವಾದ ಅಭಿವ್ಯಕ್ತಿಯನ್ನು ಕಂಡುಕೊಳ್ಳು ತ್ತದೆ. ಸರಸ ರಸಿಕತೆ ಮತ್ತು ಕಾವ್ಯತ್ವ ಮುಪ್ಪುರಿಕೊಂಡಿರುವ ಈ ಭಾಷೆ ಸಂವಹನ ಗುಣವನ್ನು ಹೊಂದಿದ್ದು ನಾಟಕದ ಸಹಜ ಚಾಲನೆಗೆ ನೆರವಾಗಿದೆ. ಜೀವನದ ವಿವಿಧ ಗತಿಗಳನ್ನು ಸೈದ್ಧಾಂತಿಕ ಅಭಿವ್ಯಕ್ತಿಗೆ ಅಳವಡಿಸುವುದರಲ್ಲಿ ಚಂಪಾ ಅವರು ಸಿದ್ಧಹಸ್ತರು.

ಚಂಪಾ ನಾಟಕ ಭಾಷೆಯಲ್ಲಿ ಜಾಗರೂಕತೆ ಇರುತ್ತದೆ: ಸುಸೂತ್ರತೆ ಇರುತ್ತದೆ. ಅದರಲ್ಲಿ ಭಾಷಾ ಪ್ರಜ್ಞೆ ಹೆಚ್ಚು ಏಕಾಗ್ರತೆಯಿಂದ ಅರ್ಥಪೂರ್ಣವಾಗಿ ಕೆಲಸ ಮಾಡುತ್ತದೆ. ಚಂಪಾ ಅವರು ಹಾವೇರಿ ಪ್ರದೇಶದ ವ್ಯಾವಹಾರಿಕ ಭಾಷೆಯನ್ನೇ ನಾಟಕ ಕಟ್ಟುವ ಕ್ರಿಯೆಯಲ್ಲಿ ಬಳಸಿದ್ದಾರೆ. ಈ ಸಂದರ್ಭದ ಭಾಷೆಯಲ್ಲಿ ಒಂದು ಪುನರ್ ಸಂಯೋಜನೆ ಇರುತ್ತದೆ. ನಾಟಕದೊಳಗೆ ಪ್ರಾಸ-ಛಂದಸ್ಸು-ಅಲಂಕಾರಗಳ ಬಳಕೆಯ ಮೂಲಕ ನಾಟಕದ ಅಭಿವ್ಯಕ್ತಿಯ ಶಕ್ತಿ ಹೆಚ್ಚುತ್ತದೆ. ಭಾಷೆಗೆ ಒಂದು ಬಗೆಯ ಅಡಕತನದ ಸಿದ್ಧಿ ಪ್ರಾಪ್ತವಾಗುತ್ತದೆ. ಅಂದರೆ ಶೈಲಿಯ ಮುಖ್ಯ ತುಡಿತವೆಂದರೆ ಅನುಭವವನ್ನು ಹರಳುಗಟ್ಟಿಸುವ ಪ್ರಯತ್ನ. ಅಲ್ಲಿ ಚಂಪಾ ಅವರ ಪ್ರತಿಭಾ ಶಕ್ತಿ ಮತ್ತು ವಸ್ತು ಪ್ರತಿರೂಪ ಭಾಷೆಯಲ್ಲಿ ಏಕಗೊಂಡಿರುತ್ತದೆ.

ಭಾಷೆಯ ಮೂಲಕ ಅಭಿವ್ಯಕ್ತಿಯನ್ನು ಕಾಣುವ ನಾಟಕದಲ್ಲಿ ಪದ, ವಾಕ್ಯಗಳ ವಿನ್ಯಾಸ, ಕಾಕು, ಸ್ವರ ಭಾವಗಳ ಸಂಯೋಜನೆ ಇಲ್ಲೆಲ್ಲ ಹಲವು ಬಗೆಯ ಆಯ್ಕೆಗೆ ಅವಕಾಶವಿದೆ. ಚಂಪಾ ಅವರು ನಾಟಕದ ಮೂಲಕ ತಮ್ಮ ಪ್ರತಿಭೆಯ ಆವಿಷ್ಕರಣದಲ್ಲಿ ಸಿದ್ಧ ಮಾದರಿಯ ಭಾಷಾ ಪ್ರಯೋಗವನ್ನು ಮೀರಿ ನಡೆಯುತ್ತಾರೆ. ನಾಟಕದಲ್ಲಿ ಭಾಷೆ ಆಡುಮಾತಾಗಿ ಬಂದಾಗ

ಅದರ ಅರ್ಥಾಭಿವ್ಯಕ್ತಿಯ ಸಾಮರ್ಥ್ಯ ಹೆಚ್ಚುತ್ತದೆ. ಅಕ್ಷರಗಳು, ಸ್ವರಗಳು ಪುನರಾವರ್ತನೆಗೊಂಡಾಗ ಭಾವ ಜೀಕುತ್ತದೆ; ಅರ್ಥ ಹೊಮ್ಮುತ್ತದೆ. ಚಂಪಾ ಅವರು ಮೂಲತಃ ಕವಿಯಾದ್ದರಿಂದ ಒಳ್ಳೆಯ ಲಯ ಅವರಿಗೆ ಸಿದ್ಧಿಸಿದೆ. ಸಂಭಾಷಣೆಯ ಚುರುಕು, ವ್ಯಂಗ್ಯ, ಸಾಮಾಜಿಕ ಬಿಕ್ಕಟ್ಟುಗಳ ಶೋಧ, ಹೃದಯ ತಟ್ಟುವಂತಹ ಅರ್ಥ ಸ್ಪಷ್ಟತೆ, ಪ್ರಶ್ನೆಯ ಜೊತೆಯಲ್ಲೇ ಉತ್ತರವನ್ನು ಎಳೆಯುವ ಕಲಾತ್ಮಕತೆ, ತರ್ಕಜ್ಞಾನ ಎಲ್ಲವೂ ಮೇಳೈಸಿರುವುದನ್ನು ಕಾಣಬಹುದು. ಇದರಿಂದ ವಾಕ್ಯಬಂಧಗಳು ತನಗೆ ತಾನೆ ಸುಂದರವಾಗಿರುವುದು ಮಾತ್ರವಲ್ಲದೆ, ಕವಿಯ ಆಶಯಕ್ಕೆ ನೆರವಾಗಿದೆ. ಚಂಪಾ ಅವರಿಗಿರುವ ಅಪಾರ ಶಬ್ದ ಸಂಪತ್ತು, ಪದಬಂಧ, ಶಾಸ್ತ್ರಜ್ಞಾನ ಇವೆಲ್ಲವನ್ನೂ ಸಮರ್ಥವಾಗಿ ಕ್ರಿಯೆಗೊಳಿಸುವ ಸೃಜನಶಕ್ತಿ ವಸ್ತುವನ್ನು ನಾಟಕೀಕರಿಸುವಲ್ಲಿ ಸಫಲವಾಗಿದೆ. ಚಂಪಾ ಅವರು ವಸ್ತು, ಸನ್ನಿವೇಶ, ಪಾತ್ರಗಳಿಗೆ ತಕ್ಕಂತೆ ಸೂಕ್ತವಾದ ಭಾಷೆಯನ್ನು ಸಮರ್ಥವಾಗಿ ಬಳಸಿದ್ದಾರೆ. ಇದರಿಂದಾಗಿ ಭಾಷೆಯಲ್ಲಿ ವೈವಿಧ್ಯ ಸಾಧ್ಯವಾಗಿದೆ.

ಆಕರಗ್ರಂಥಗಳು

೧. ಚಂದ್ರಶೇಖರ ಪಾಟೀಲ, ೨೦೦೬, ಚಂಪಾ ನಾಟಕಗಳು, ಸಪ್ನ ಬುಕ್‌ಹೌಸ್, ಬೆಂಗಳೂರು.

೨. ಅಂಗಡಿ ಎಸ್.ಎಸ್., ೨೦೦೭, ಚಂಪಾ ನಾಟಕ ಭಾಷೆ, ಸಂವಹನ ಪ್ರಕಾಶನ, ಮೈಸೂರು.

೭೪

ಚಂಪಾ ಅವರ ಕಾವ್ಯಶೈಲಿ

ಭಾಷೆಯಂತೆ ಕಾವ್ಯವೂ ಕ್ರಮೇಣ ಬದಲಾವಣೆ ಹೊಂದುತ್ತ ಬೆಳೆಯುವ ಗುಣವುಳ್ಳದ್ದು. ಕಾವ್ಯ ನಾದದ ನಾಡಿಯಾದ ಶೈಲಿ ಅದೇ ರೀತಿ ಬದಲಾವಣೆ ಹೊಂದಿದರೆ ಸ್ವಾಭಾವಿಕ. ಚಂಪಾ ಅವರ ಕಾವ್ಯಶೈಲಿ ಕಾಲಾನುಕ್ರಮದಲ್ಲಿ ವಿಕಾಸ ಹೊಂದುತ್ತ ಬಂದಿದೆ. ೧೯೫೭ರಿಂದ ೨೦೦೪ರವರೆಗೆ ಚಂಪಾ ಅವರ ಹಲವು ಕವನ ಸಂಕಲನಗಳು ಪ್ರಕಟವಾಗಿವೆ. ಈ ನಲವತ್ತೈದು ವರ್ಷಗಳ ಅವಧಿಯಲ್ಲಿ ಕನ್ನಡ ಕಾವ್ಯ ಪ್ರಕಟಿಸಿದ ಧೋರಣೆಗಳು, ಪಡೆದುಕೊಂಡ ಚಹರೆಗಳು ನಮಗೆಲ್ಲ ತಿಳಿದಿರು ವಂತಹವೇ. ಈ ಸಂದರ್ಭದಲ್ಲಿ ಶೈಲಿ ಮತ್ತು ಅಭಿವ್ಯಕ್ತಿ ದೃಷ್ಟಿಯಿಂದ ಚಂಪಾ ಅವರ ಕಾವ್ಯದ ಸ್ಥೂಲ ವಿವೇಚನೆ ಇಲ್ಲಿದೆ.

ಚಂಪಾ ಅವರ ಕಾವ್ಯಶೈಲಿ ಸರಳ ಮತ್ತು ನೇರ. ಸ್ಪಷ್ಟತೆಯೇ ಅವರ ಶೈಲಿಯ ಜೀವಾಳ. ಸಾಮಾಜಿಕ ವಿಡಂಬನೆಯಿದ್ದರೂ ಹೃದಯವಂತಿಕೆಯಿದೆ. ಅಲ್ಲಲ್ಲಿ ಉದ್ವೇಗವಿದೆ, ಬಂಡಾಯದ ನೆಲೆಗಳಿವೆ. ಉದ್ದುದ್ದವಾದ ಸಂಧಿ-ಸಮಾಸಗಳು ಅಲ್ಲಿ ಕಂಡುಬರುವುದಿಲ್ಲ. ಹಿತಮಿತವಾದ ಉಪಮೆ ರೂಪಕಗಳಿಂದ, ಸ್ವಭಾವೋಕ್ತಿಗಳಿಂದ ಅದು ಅವರ ಭಾಷೆಗೆ ಮೆರಗು ಬಂದಿದೆ. ಹಾವೇರಿ ಪರಿಸರದ ವ್ಯಾವಹಾರಿಕ ಶಿಷ್ಟ ಕನ್ನಡ ಉದ್ದಕ್ಕೂ ಬಳಕೆಯಾಗಿದೆ. ಚಂಪಾ ಅವರು ಭಾಷೆಯನ್ನು ಸರಳಗೊಳಿಸಿ ಸಹೃದಯ ವಾಚಕರ ಹತ್ತಿರಕ್ಕೆ ಒಯ್ದದ್ದು ಅವರ ಸಾಧನೆ ಎಂದೇ ಹೇಳಬೇಕು. ಗತ್ತೂಯಿದೆ ಅಲ್ಲೆಲ್ಲ ಚಂಪಾ ಅವರ ಮುದ್ರೆ ಸ್ಪಷ್ಟವಾಗಿದೆ.

ಕಾವ್ಯ ಸೃಷ್ಟಿಯಲ್ಲಿ ಚಂಪಾರವರ ಪ್ರಯೋಗ ಪ್ರವೃತ್ತಿ ಆಗಾಗ ಸ್ವಚ್ಛಂದದತ್ತಲೂ ಹರಿದಿದೆ. ಪದ್ಯಲಯದಿಂದ ಗದ್ಯಲಯದತ್ತ ಒಲೆದಿದೆ. ಅವರ ಮೊದಲ ಕವನ ಸಂಕಲನ 'ಬಾನುಲಿ' ಕವನಗಳಲ್ಲಿ ಗದ್ಯಲಯದ ಸ್ವಚ್ಛಂದ ಸೌಂದರ್ಯವನ್ನು ಸಾಕಷ್ಟು ಕಾಣಬಹುದು. ಸ್ವಚ್ಛಂದ ಲಹರಿಯನ್ನು ಅವರು ಪ್ರಜ್ಞಾಪೂರ್ವಕವಾಗಿ ಪ್ರಯೋಗಿಸಿದರೂ ಅದರ ಸಹಜತೆಗೆ ಕುಂದು ಬಂದಿಲ್ಲ. ಇದು ಅವರ ಕವನಗಳ ವೈಶಿಷ್ಟ್ಯವಾಗಿದೆ.

ಎನ್ನೆದೆಯ ಬಂದರದಿ ಹೊಂಗನಸ ಹೊಸ ಹಡಗು
ಲಂಗರನು ಹಾಕಿ ತಾ ನಿಂತಿರುತಿರೆ
ನೀಲ ಕ್ಷಿತಿಜದ ಆಚೆ ಹೊಳೆವ ನನಸಿಕ ಲೋಕ
ಬಾ, ಬಾರೆ, ಬಾ ಎಂದು ಬಲು ಕರೆದಿರೆ;

ಹಡಗೊಡೆದರೇನಂತೆ? ಕನಸಳಿದವರೇನಂತೆ?
ನನ್ನೆದೆಯ ಬಂದವು ಬರಿದಾಯಿತೆ?
ಅಲ್ಲದೀನನ ದೀಪದಂತಿರುವ ಕಲ್ಪನೆಯು
ಕನಸು ಕಟ್ಟುವ ಕಲೆಯ ಮರೆತಾಯಿತೆ
(ಹೊಂಗನಸು ಹಡಗು, ೧೯೫೭)

ಚಂಪಾ ಅವರು ತಮ್ಮ ಕಾವ್ಯದ ಇಂಗಿತವನ್ನು ಮೊದಲ ಕವನದಲ್ಲಿಯೇ ಸ್ಪಷ್ಟ ಪಡಿಸಿದ್ದಾರೆ. ಆ ಕವನದಲ್ಲಿ ತಮ್ಮನ್ನು ತಾವೇ ಉದ್ಬೋಧಿಸಿಕೊಂಡು ಸಾಗಿದ್ದಾರೆ. ಚಂಪಾರವರು 'ಬಾನುಲಿ' ಸಂಕಲನದ 'ಪ್ರಳಯ ಬಂತಲೋ ಪ್ರಳಯ' ಎಂಬ ಗೀತದಲ್ಲಿ ಸ್ವಚ್ಛಂದ ಲಹರಿಯನ್ನು ಪ್ರಾಸವಿನ್ಯಾಸದಿಂದ ಅಂದಗೊಳಿಸಿದ್ದಾರೆ. ನವ್ಯ ಛಂದದ ಮೊದಲ ಸುಳುಹು ಇಲ್ಲಿ ಕಾಣುತ್ತದೆ.

ನೆಲದ ಮೇಲಿಂದೆದ್ದ ಈ ಭಯಂಕರ ಕೂಗು
ಗಾಳಿ ಗುದುರೆಯನೇರಿ ಗುಡ್ಡಗುಡ್ಡಕ್ಕೆ ಬಡಿದು
ಬಿತ್ತರದ ಬಾಂದಳದ ಗೋಲಗುಮ್ಮಟದಲ್ಲಿ
ಅಲೆದಾಡಿ ನೆಗೆದಾಡಿ ಹತ್ತು ಸಲ ಮಾರ್ನುಡಿದು
ರೇಡಿಯೋ-ಗಂಟಲದ ಧ್ವನಿಯ ಪರದೆಯ ಜಗ್ಗಿ
ಮನೆ ಮನೆಗೆ ನುಗ್ಗಿ
ಎದೆ ಎದೆಯ ಬಾಗಿಲದ ಬಿರುಕಿನಲಿ ಮೊಗಚಾಚಿ
ಪಿಸುಗುಟ್ಟಿ ಉಸುರಿತ್ತು
ಪ್ರಳಯ ಬಂತಲೋ ಪ್ರಳಯ!
(ಪ್ರಳಯ ಬಂತಲೋ ಪ್ರಳಯ!, ೧೯೬೦)

ಶಬ್ದಚಿತ್ರಣ ಮನಂಬುಗುವಂತಿದೆ. ಲಯಕ್ಕೆ ಇಲ್ಲಿ ಕಟ್ಟಿಲ್ಲವೆಂದರೆ ಇಲ್ಲ; ಇದೆ ಎಂದರೆ ಇದೆ. ಚಂಪಾ ಅವರ ಕವನಗಳು ನಮ್ಮ ಪ್ರಾಚೀನರ ಲೌಕಿಕ-ಆಗಮಿಕಗಳಂತೆ-ಯಾವುದೇ ಸೀಳನ್ನು ಪ್ರಕಟಿಸುವುದಿಲ್ಲ ಎಂಬ ಮಾತನ್ನು ಇಲ್ಲಿಯೇ ಹೇಳಬೇಕಾಗಿದೆ. ಚಂಪಾ ಅವರ ಕಾಲಕ್ಕೆ ಅದರ ಅಗತ್ಯವೂ ಅನಿವಾರ್ಯತೆಯೂ ಇರಲಿಲ್ಲ. ಏಕೆಂದರೆ ಅವೆರಡರ ನಡುವಿನ ವೈರುಧ್ಯವನ್ನು ಅವರ ಕವಿತೆ ಸ್ವೀಕರಿಸುವುದು ಗ್ರಹಿಕೆಯ ನೆಲೆಗಿಂತ ಹೆಚ್ಚಾಗಿ ತಂತ್ರದ ನೆಲೆಯಲ್ಲಿ. ಪ್ರಗತಿಶೀಲತೆ ಮತ್ತು ವಾಸ್ತವತೆ ಅವರಿಗೆ

ಮುಖ್ಯವಾಗಿದೆ. ಉದಾಹರಣೆಗೆ ತಮ್ಮ ಹಳ್ಳಿಯ ಸೌಂದರ್ಯವನ್ನು ರೂಪಕದ ರೀತಿಯಲ್ಲಿ ಎತ್ತಿತೋರಿಸಿದ್ದಾರೆ:

ನಮ್ಮೂರ ಹೆಸರೇನು ಎಂದು ಕೇಳುವಿರೇನು?
ಹೇಳಿ ಬಿಡುವದು ಕೂಡ ಒಂದು ನೀತಿ
ಆದರೂ ಆ ಹೆಸರು ಒಡೆಯಲಾರೆನು ನಾನು
ಅಷ್ಟು ನಾಚಿಗೆ ನನಗೆ, ಅಷ್ಟು ಪ್ರೀತಿ
(ಹತ್ತೀ ಮತ್ತೂರು, ೧೯೬೧)

ತಮ್ಮ ಹಳ್ಳಿಯ ಕೋಡಿ ಬಸವನ ಗುಡಿ, ಹಸಿರು ತೋಟದ ಸಾಲು, ಕೆರೆ, ಬಾಳೆ, ಚೊಗಚಿ, ಭಜನೆ ಮುಂತಾದ ಸಂಗತಿಗಳನ್ನು ಅರ್ಥಪೂರ್ಣವಾಗಿ ಹೇಳಿದ್ದಾರೆ. ಕವನದ ಉದ್ದಕ್ಕೂ ಬಳಕೆಯಾದ ಬೆಂಡುಬಾಜೆ, ಊರುಮಾತು, ಡುಮ್ಕೀ ಹೊಡಿ, ಕೆಲಸ ಬೊಗಸೆ-ಈ ಮುಂತಾದ ಸರಳವಾದ ಪದಗಳು, ಪದಪುಂಜಗಳಿಂದ ಹಳ್ಳಿಯ ಸೊಬಗನ್ನು ಕವಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಇಲ್ಲಿ ನಾವು ಆಡಂಬರದ, ಅಲಂಕಾರಿಕ ಭಾಷೆಯನ್ನು ಕಾಣುವುದಿಲ್ಲ. ಈ ರೀತಿ ಇಲ್ಲಿ ಚಂಪಾ ಅವರ ಶೈಲಿ ಸರಳತೆಯಲ್ಲಿಯೇ ತನ್ನ ಗುರಿಯನ್ನು ಸಮರ್ಥವಾಗಿ ಸಾಧಿಸಿದೆ.

ಈ ಮಣ್ಣ ಪಣತೆಯನು ತಂದಿರುವೆನಿದೊ, ಗೆಳತಿ
ಇಂದು ಹಬ್ಬ, ಹಬ್ಬ ಮಾಡೋಣ ಬಾ
ಇದರ ಎದೆ ತುಂಬೆಲ್ಲ ನೀನು ಎಣ್ಣೆಯ ತುಂಬು
ಬತ್ತಿಯೊಂದನು ಹೊಸೆದು ನಡುವೆ ನಿಲಿಸು
(-ಈ ಮಣ್ಣ ಪಣತೆ, ೧೯೬೧)

ಕವಿ ಪಣತೆಯನ್ನು ಸಂಕೇತವಾಗಿಟ್ಟುಕೊಂಡು ಗೆಳತಿಯ ಯೌವನವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾರೆ. ಹೆಣ್ಣಿನ ಪಕ್ವತೆಗೆ, ಮಾಧುರ್ಯಕ್ಕೆ ಅವಳ ತುಂಬು ಶರೀರದ ಏರು ಜವ್ವನವನು ಹೋಲಿಸಿರುವುದು ತುಂಬ ಔಚಿತ್ಯಪೂರ್ಣವಾಗಿದೆ. 'ನಾ ನಿನ್ನ, ನೀ ನನ್ನ ಪ್ರಾರ್ಥಿಸಿದರೆ ಈ ದೀಪ ನಾಲ್ಕಾಗಿ ಬೆಳಗೀತೆ?' ಎಂದು ಹೇಳಿರುವುದು ಧ್ವನಿಪೂರ್ಣವಾಗಿದೆ. ಈ ರೀತಿ ಸರಳ ಭಾಷೆ, ಶೈಲಿಯಲ್ಲಿ ಗೆಳತಿಯ ಯೌವನವನ್ನು ಚಿತ್ರಿಸಿರುವುದು ಕವಿಯ ಜಾಣ್ಮೆಗೆ ಸಾಕ್ಷಿಯಾಗಿದೆ. ಇಲ್ಲಿ ಉಪಮೆ ಇದ್ದರೂ ಇಲ್ಲದಂತೆ ಗದ್ದಲವಿಲ್ಲದೆ ತನ್ನ ಕಾರ್ಯವನ್ನು ನಿರ್ವಹಿಸಿದೆ. ನಾಲ್ಕು ಚರಣಗಳ ಮೂಲಕ ಕವಿತೆ ಸಾಗುವುದರಿಂದ ಗದ್ಯ ಲಯದ ಹೃದ್ಯತೆ ಇನ್ನೂ ಹೆಚ್ಚುತ್ತದೆ. 'ಗಾಂಧೀ ಸ್ಮರಣೆ' ಸಂಕಲನದ 'ಇಂಗ್ಲಂಡಿನಲೊಬ್ಬ ಇಂಡಿಯನ್' ಎಂಬ ಕವನದ ಒಂದು ನಿದರ್ಶನ ಈ ಬಗೆಗೆ.

ಸಾಕ್ಸು ಬನಿಯನ್ನು ಚಡ್ಡಿ ಬೂಟು
ಅಂಡರವೇರು ಶರಟು ಪ್ಯಾಂಟು

ಸ್ವೆಟರು ಕೋಟು ನೆಕ್ ಟಾಯಿ
ಓವರ್ ಕೋಟು ಹ್ಯಾಟು
. . . .
. . . .
ಕಾರು ಪಾರುಗಳೆಲ್ಲ ಗಕ್ಕೆಂದು ನಿಂತಾಗ
ಪುಟು ಪುಟು ಪುಟು ಅಂತ ರೋಡು ದಾಟುತ್ತಾನೆ

(-ಇಂಗ್ಲಂಡಿನಲ್ಲೊಬ್ಬ ಇಂಡಿಯನ್, ೧೯೭೩)

ಆಂಗ್ಲಮಿಶ್ರಿತ ಕನ್ನಡ ನುಡಿಗಳು [ಒಂದು ಬಗೆಯಲ್ಲಿ ಭಾಷಾಮಿಶ್ರಣ], ಸುಂದರವಾದ ಮತ್ತು ಪರಿಣಾಮಕಾರಿಯಾದ ಉಪಮೆಗಳು ಅತಿರಂಜಿತವಾಗಿರದೆ ಸರಳವಾಗಿದ್ದು ಬದುಕಿನ ಬೇರೆ ಬೇರೆ ಹಂತಗಳಿಂದ ಬೇರೆ ಬೇರೆ ಮಾದರಿಗಳಿಂದ ಆರಿಸಿ ತಂದ ವಾಗಿವೆ. ಚಂಪಾ ಅವರ ಇಂತಹ ರಚನೆಗಳು ಶೈಲಿಯ ವೈವಿಧ್ಯಕ್ಕೆ ಉದಾಹರಣೆಗಳು ಮಾತ್ರವಲ್ಲ ಕಾವ್ಯಾಭಿವ್ಯಕ್ತಿಯಲ್ಲಿ ರೂಪಕಗಳನ್ನು ನಿರ್ಮಿಸಿಕೊಂಡು ಹೊರಟ ಇಂತಹ ಕಡೆಗಳಲ್ಲಿ ಮುಕ್ತಛಂದೋಲಯದ ಬಳಕೆ ಯಥಾರ್ಥವಾಗಿದೆ. ಇದೆ ಹದ 'ಸರ್ವಜ್ಞನ ಮ್ಯಾಲೆ ಒಂದು ಕವಿತಾ' ಎಂಬ ಕವನದಲ್ಲಿ ಹೊಸ ಉಪಮೆ ಆಡುಮಾತಿನ ಶೈಲಿ ಯೊಡನೆ ಮೈದೋರಿದೆ:

ತಲೀ ತುಂಬ ತುಡುಗುದನ
ಸಂಕೇಶ್ವರದ ಸಕ್ಕರೀ ಕಾರಖಾನ್ಯಾಗ
ಕಬ್ಬು ಸಕ್ರಿ ಆಗೂದರೊಳಗ
ತುಡುಗುದನ ಹೊಲಾ ಹೊಕ್ಕು ಕಬ್ಬು ತಿಂದಂಗ
ದೇಶ ಎಲ್ಲಾ ಕುರುಕ್ಷೇತ್ರ
ಎಲ್ಲಾ ಕಡಿಗೂ ಲಾಠೀ ಏಟು
ಬೆಂಗಳೂರು ಪೈಲ್ವಾನರ ಬಾಳೀಹಣ್ಣಿನ ಜಂಗೀ ಕುಸ್ತಿ
ಸಂಕೇಶ್ವರದಾಗ ಸರ್ವಜ್ಞನ ಜಯಂತಿ
ಭಾರತ ತುಂಬ ಗಾಂಧೀಜಿ ಪುಣ್ಯತಿಥಿ
ಮನ್ಯಾಗ ನೋಡಿದರ
ಬೆಳತನಕ ಹೇಣತೀ ಮೌನ ಮೆರವಣಿಗಿ

(ಸರ್ವಜ್ಞನ ಮ್ಯಾಲೆ ಒಂದು ಕವಿತಾ, ೧೯೭೪)

ಹೇಳಬೇಕಾದುದನ್ನು ಕಣ್ಮುಂದೆ ಕಟ್ಟುವಂತೆ ಚಿತ್ರಿಸುವ ಶೈಲಿ ಚಂಪಾ ಅವರಿಗೆ ಕರಗತವಾಗಿದೆ. ಉದಾಹರಣೆಗೆ 'ತುಡುಗುದನ ಹೊಲಾಹೊಕ್ಕು ಕಬ್ಬು ತಿಂದಂಗ' ಇಂತಹ ಸರಳವಾದ ಮತ್ತು ಆಡುನುಡಿಯ ವಾಕ್ಯರಚನೆಗಳು ಹಾಗೂ ಉಪಮೆಗಳ ಮೂಲಕ ಅರ್ಥವಂತಿಕೆಯನ್ನು, ಧ್ವನಿರಮ್ಯತೆಯನ್ನು ಸಾಧಿಸಬಲ್ಲರೆಂಬುದಕ್ಕೆ ಆ

ಉಪಮಾ: ಚಿತ್ರಗಳೇ ಸಾಕ್ಷಿಯಾಗಿವೆ. ಜೊತೆಗೆ ನವ್ಯಕಾವ್ಯದ ಸಾಮಗ್ರಿಯೂ ಇಲ್ಲಿ ಸಿದ್ಧಗೊಳ್ಳುತ್ತಿದೆ. ಇವೆಲ್ಲ ಸಾಮಾನ್ಯ ಸಂಗತಿಗಳಲ್ಲ ಸಹೃದಯ ವಾಚಕರನ್ನು ಚಿಂತನೆಗೆ ಹಚ್ಚುತ್ತವೆ. ಬದುಕಿನ ಮಗ್ಗಲುಗಳನ್ನು ಸಂಯಮದಿಂದ, ಸಮರ್ಥವಾಗಿ ಹೇಳುತ್ತಲೇ ಚಂಪಾ ಅವರು ಎಲ್ಲರ ಅಳಲಿಗೆ ಕಂಠವಾಗಿದ್ದಾರೆ. ಅವರ ಶೈಲಿಗೆ ನೈತಿಕ ಹಾಗೂ ಕಲಾತ್ಮಕ ಗುಣವಿದೆ. ಅವರ ಕವನಗಳನ್ನು ಕೊಂಚ ನಿಂತು ಮತ್ತೆ ಓದುವುದು ಮೇಲು ಆಗ ಕಾವ್ಯದ ಆಶಯ ಸ್ಪಷ್ಟವಾಗುತ್ತದೆ.

ದಂತಗೋಪುರದ ಗೋಡೆಯ ಕೆಡವಿ
ಮನಸು ಮನಸುಗಳ ಸೇತುವೆ ಕಟ್ಟಿ
ಹೊಟ್ಟೆ ಕಿಚ್ಚುಗಳ ಅಡವಿಯ ತೊರೆದು
ಬಂದೆವು ನಾವು ಬೈಲಿಗೆ ।
ಜೈ ಜೈ ಕನ್ನಡ ತಾಯಿಗೆ ।
ನಾವು ಹೊರಟೆವು ಜೈಲಿಗೆ ।

(ನಾವು ಹೊರಟೆವು ಜೈಲಿಗೆ, ೧೯೮೨)

ಈ ಕವನ ಗೋಕಾಕ ಚಳುವಳಿಯ ಸಂದರ್ಭವನ್ನು ನೆನಪಿಸುತ್ತಿದೆ. ಬದುಕಿನ ವಾಸ್ತವವನ್ನು ಸಮರ್ಥವಾಗಿ ಮತ್ತು ಧೈರ್ಯವಾಗಿ ಚಿತ್ರಿಸಿ ತಾವು ಸಾಧಿಸಬೇಕಾದ ಗುರಿಯನ್ನು ಕವಿ ಸಾಧಿಸಿದ್ದಾರೆ. ಚಂಪಾ ಅವರು ಆಡುಮಾತಿನ ಶೈಲಿಯ ಜೊತೆಗೆ ನಿಯತ ಲಯವನ್ನು ಅದರ ಎಲ್ಲ ವೈವಿಧ್ಯಗಳೊಂದಿಗೆ ಸಂಯೋಗಿಸುವುದಕ್ಕೆ ಹಲವು ಉದಾಹರಣೆಗಳನ್ನು ಕೊಡಬಹುದು ಅದಕ್ಕೆ ಪೂರಕವಾಗಿ ಅವರ ಪ್ರಾಸಗಾರಿಕೆಯೂ ಸ್ವಲ್ಪ ಹೆಚ್ಚೆನ್ನಿಸುವ ಪ್ರಮಾಣದಲ್ಲಿಯೇ ಕೆಲಸ ಮಾಡುತ್ತದೆ. ಆದರೆ ಬೇಂದ್ರೆ, ಬೆಟಗೇರಿ ಅವರನ್ನು ಗಮನದಲ್ಲಿರಿಸಿಕೊಂಡು ಒಂದು ಸಂಗತಿಯನ್ನು ಲಯಗಾರಿಕೆಯ ಬಗ್ಗೆ ಹೇಳಬೇಕು. ಲಯಗಾರಿಕೆ ಎನ್ನುವುದು 'ಮಾರ್ಗಾಂತರ'ದ ತಂತ್ರಗಳಲ್ಲಿ ಒಂದೆಂದು ಶೈಲಿಶಾಸ್ತ್ರ ಗುರುತಿಸುತ್ತದೆ. ಆದರೆ ಈ ಲಯಗಾರಿಕೆಯ ಸಿದ್ಧಿಗಾಗಿ ರೂಢಿಯ ಗದ್ಯಕ್ಕಿಂತ ಭಿನ್ನವಾದ ವಾಕ್ಯರಚನೆಯನ್ನು ಬೇಂದ್ರೆ, ಬೆಟಗೇರಿ ಅವರು ರೂಪಿಸುತ್ತಾರೆ. ಆದರೆ ಚಂಪಾ ಅವರಲ್ಲಿ ಆಡುಮಾತಿನ ಗದ್ಯಲಯದ ವಾಕ್ಯರಚನೆಯ ಮಾದರಿಗಳೇ ಕೆಲಸ ಮಾಡುತ್ತವೆ.

- ರವಿಯಿಂದ ಸಿಡಿದು ಹೊರಬಿದ್ದು ಮತ್ತವನನೇ
  ಸುತ್ತಿ ಬೆಳಕನು ಸೆಳೆವ ನೆಲದ ತುಂಡು

(-ಮಧ್ಯಬಿಂದು, ೧೯೬೩)

- ನಾನೊಂದು
  ಬೀಜ

ನನಗಿಲ್ಲ
ನೆಲದಾಳದಲ್ಲಿ ಬೆಚ್ಚಗೆ ಮಲಗಿ
ಮೆಲ್ಲಗೆ ಲಯವಾಗಿ

(-ಅರಳು, ೧೯೬೪)

- ನಮ್ಮ ಇಂದ್ರಮ್ಮ ಸುಂದ್ರಮ್ಮ ಮಾರೆಮ್ಮ ಕಾಳಮ್ಮ
ಭಾರತಮ್ಮ ಕನ್ನಡಮ್ಮ ಬಂಗಾಲಮ್ಮ
. . . .
ಒಬ್ಬ ಅಮ್ಮ-ನಮ್ಮ ಕಮ್ಯುನಿಜಮ್ಮ

(-ನಮ್ಮ ಕಮ್ಯುನಿಜಮ್ಮ, ೧೯೭೬)

- ಸಾಯಬೇಕಾದವ್ರು ಸಾಲಗಟ್ಟಿ ನಿಂತಾಗ
  ಎಷ್ಟು ಅವಸರದಿಂದ ಸತ್ತಿ ನೀನು
ಮೈಯಾಗಿನ ಎಣ್ಣೆಲ್ಲ ಬತ್ತಿ ಹೋಗಿದ್ರೂನು
  ಕಡಿತನಕ ಕರಕಾದ ಬತ್ತಿ ನೀನು

(-ಜೇಪಿ ಸತ್ತಾಗ, ೧೯೮೦)

- ಅತ್ತ ಇತ್ತ ನೋಡಿಯೂ ನೋಡದಂತೆ
ಸುತ್ತಿ ಸುಳಿವ ನನ್ನ ಸುಳಿ ನೋಡಿ
ಕೇಳಿದಳು ಜೊತೆಗಾತಿ: "ಏನ್ರೀ ಸಮಾಚಾರ?"

(-ಹುಡುಕಾಟ, ೧೯೯೦)

ಈ ಎಲ್ಲ ಕವನದ ಸಾಲುಗಳನ್ನು ಗಮನಿಸಿದಾಗ ಚಂಪಾ ಅವರು ಅತಿಯಾದ ಪ್ರಯೋಗ ಶೀಲತೆಯನ್ನು ತೊರೆದು ಹಿತವಾದ ಚಿಂತನಾ ಪ್ರಧಾನವಾದ ಮಾರ್ಗವನ್ನು ಅನುಸರಿಸಿದ್ದಾರೆ. ಮಂದಾನಿಲದ ಲಯದ ಗತಿ, ಆಡುಮಾತಿನ ಸಂಭಾಷಣೆಯ ಶೈಲಿ-ಈ ಗತಿ ಎಷ್ಟೊಂದು ಒಳಭಂಗಿ, ಬೆಡಗನ್ನು ಬೀರಿದೆ. ಅಭಿವ್ಯಕ್ತಿಯ ರೀತಿಯೂ ತುಂಬ ಪರಿಣಾಮಕಾರಿಯಾಗಿದೆ. ಪ್ರಾಸ-ವಿಲಾಸ ಹಾಗೂ ಯತಿಯ ಚದುರು ಇಲ್ಲಿ ಎದ್ದು ಕಾಣುವ ಲಕ್ಷಣಗಳು. ಅವರ ಕಾವ್ಯದಲ್ಲಿ ಪ್ರಾಸಗಾರಿಕೆ ಮಾಡುವ ಕೆಲಸದ ಬಗ್ಗೆ ಒಂದು ಸಂಗತಿಯನ್ನು ಗುರುತಿಸಬೇಕು. ನಿಯತ ಲಯದ ಪದ್ಯಗಳಲ್ಲಿ ಅದು ಗದ್ಯದ 'ಕಚ್ಚಾತನ'ವನ್ನು ಸಂಸ್ಕರಿಸುವ ತಂತ್ರವಾಗಿ ಬಳಕೆಯಾದರೆ, ಸಹಜ ಗದ್ಯ ಲಯದ ಕವಿತೆಗಳಲ್ಲಿ ಅದು 'ಮಾರ್ಗಾಂತರದ' ಉಪಕರಣವಾಗುತ್ತದೆ. ಗದ್ಯ ಲಯದ ಕವಿತೆಗಳಲ್ಲಿ ಕಂಡುಬರುವ ಕಾಕುಗಳ ವೈವಿಧ್ಯ ಪ್ರಶ್ನಾರ್ಥಕಗಳು, ಉದ್ಗಾರ ವಾಚಕಗಳು (ಅಲ್ಪವಿರಾಮಗಳೂ ಕೂಡ) ಈ ಮಾತಿಗೆ ನಿದರ್ಶನವನ್ನೊದಗಿಸುತ್ತವೆ. ಗದ್ಯಲಯಕ್ಕೆ ಹೆಚ್ಚು ಹತ್ತಿರವಾದ ಐದು ಮಾತ್ರೆಗಳ ಲಯವನ್ನು ಒಳಸ್ತರದಲ್ಲಿ ಈ ಕವಿತೆಗಳು

ಒಪ್ಪಿಕೊಂಡು, ಮೇಲಿನ ಸ್ತರದಲ್ಲಿ ಅದರ ವಿಭಿನ್ನ ಸಾಧ್ಯತೆಗಳ ಸಂಯೋಗ ಸಂರಚನೆಗಳನ್ನು ಪ್ರಕಟಿಸುತ್ತ ಹೋಗುತ್ತವೆ. ಇದಕ್ಕೆ ಪೂರಕವಾಗಿ ಪ್ರಾಸಗಾರಿಕೆ ಅರ್ಥದ, ಹಾಗೆಯೇ ತರ್ಕದ ಭಾಷಿಕ ಘಟಕಗಳನ್ನು ನಿರ್ಮಿಸುತ್ತ ಹೋಗುತ್ತದೆ. ಇದರ ಪರಿಣಾಮವಾಗಿ ಒಟ್ಟಾರೆಯಾದ ಅಭಿವ್ಯಕ್ತಿ ಕೇವಲ 'ಹೇಳು'ವುದಕ್ಕಿಂತ ಹೆಚ್ಚಾಗಿ 'ಒತ್ತಿ ಹೇಳು'ವುದರ ಕಡೆಗೆ ವಾಲುತ್ತದೆ. ಚಂಪಾ ಅವರ ಕವಿತೆಗಳಲ್ಲಿ ಕಂಡುಬರುವ ವಸ್ತುವಿನ ತಾರ್ಕಿಕ ಬೆಳವಣಿಗೆಯ ಹಿನ್ನೆಲೆಯಲ್ಲಿಯೂ ಈ ಭಾಷಾತಂತ್ರ ಬಳಕೆಯಾಗಿರುವುದನ್ನು ಗುರುತಿಸಬಹುದು. ಲಯಗಾರಿಕೆಯಿಂದ ಕವಿತೆಯ ವಸ್ತು ಆಶಯದ ಕಡೆಗೆ ಮುಂದು ಮುಂದಕ್ಕೆ ಚಲಿಸುತ್ತಿದ್ದರೆ, ಅಲ್ಲಲ್ಲಿ ನಿಲುಗಡೆಯನ್ನು ತರುವ ಪ್ರಾಸಗಾರಿಕೆ ತಂತ್ರವಾಗಿಯೂ ಕೆಲಸ ಮಾಡುತ್ತದೆ. ಇದನ್ನು ಚಂಪಾ ಅವರ ಕಾವ್ಯಮಾರ್ಗದ ಒಂದು ಪ್ರಧಾನ ಲಕ್ಷಣವಾಗಿಯೂ ಗುರುತಿಸಲು ಸಾಧ್ಯವಿದ್ದು, ಇದು 'ನಿನ್ನೆಗಳ ನೆನೆಪು', 'ಟಾಮಿ ಕವನಗಳು', 'ತಟಸ್ಥರು' ಮೊದಲಾದ ಕವಿತೆಗಳಲ್ಲಿ ಹೆಚ್ಚಿನ ಯಶಸ್ಸನ್ನು ಸಾಧಿಸಿದೆ. ಈ ಅಂಶದ ವಿಸ್ತರಣೆಯಾಗಿ ಇನ್ನೂ ಒಂದು ಸಂಗತಿಯನ್ನು ಇಲ್ಲಿಯೇ ಹೇಳಬೇಕು. ಇದು ಚಂಪಾರವರ ವಿಡಂಬನಾತ್ಮಕ ಕವಿತೆಗಳಿಗೆ ಸಂಬಂಧಿಸಿದ್ದು. ಲಯ, ಪ್ರಾಸ, ನಿಲುಗಡೆಗಳನ್ನು ವಿಡಂಬನೆಗೆ ಪೂರಕವಾಗುವಂತೆ, ವಿಡಂಬನೆ ಹೆಚ್ಚು ನಾಟಕೀಯವಾಗಿ ಅಭಿವ್ಯಕ್ತಿಯ ಎಲ್ಲ ಕಾಕುಗಳೊಂದಿಗೆ ಪ್ರಕಟವಾಗುವಂತೆ ಬಳಸಿಕೊಳ್ಳುವ ವಿಧಾನ ಇಲ್ಲಿಯದು. ಚಂಪಾ ಅವರ ಕವಿತೆಗಳ ಹೆಚ್ಚಿನ ಸಿದ್ಧಿ ಇರುವುದು ಈ ಬಗೆಯ ರಚನೆಗಳಲ್ಲಿ ಎನ್ನುವುದು ಆಕಸ್ಮಿಕವೇನಲ್ಲ. ಕೆಳಗಿನವು ಈ ಬಗೆಯ ಅಭಿವ್ಯಕ್ತಿಯ ಪ್ರಾತಿನಿಧಿಕ ನಿದರ್ಶನಗಳೆನ್ನಬಹುದು:

- ಆಗಾಗ ಹುಬ್ಬೇರಿಸುವುದು
  ಬುದ್ಧಿಜೀವಿಗಳ ಲಕ್ಷಣ
  ಅಂತ ನೀವು ತಿಳಿದಿದ್ದರೆ
  ಅದು ಥೇಟ ಹುಂಬರ ಲಕ್ಷಣ

  (ಏರು ಹುಬ್ಬಿನವರೇ, ೧೯೭೬)

- ಗುಂಡಯ್ಯ ಭಂಡಯ್ಯ ಷಂಡಯ್ಯ ಬಾರಯ್ಯ
  ಬಾರೊ ಶ್ರೀಕಂಠಯ್ಯ ಬಾರೋ ಇಬ್ರಾಮಯ್ಯ
  ಬರಡಯ್ಯ ಕೊರಡಯ್ಯ ಒಂದಯ್ಯ ಎರಡಯ್ಯ
  ಮೂರಯ್ಯ ನಾಲ್ಕಯ್ಯ ಐದಯ್ಯ ಆರಯ್ಯ
  ಏಳಯ್ಯ ರಾಜೀವನೇ

  (ರಾಜೀವ ಸುಪ್ರಭಾತ, ೧೯೮೧)

'ಏಳಯ್ಯ ರಾಜೀವನೇ' ಎಂಬ ಸಾಲು ಸಮಕಾಲೀನ ರಾಜಕೀಯ, ಸಾಮಾಜಿಕ ಪದ್ಯವನ್ನು, ಅದು ಚಿತ್ರಿಸುವ ರೀತಿ, ಅದು ಹೊರಡಿಸುವ ಧ್ವನಿ, [illegible]. [illegible]

ಸ್ಪಷ್ಟವಾಗಿದೆ. ಇದು ಚಂಪಾರವರಂತಹ ಸೂಕ್ಷ್ಮ ಸಂವೇದನ ಕವಿಗಳಿಗೆ ಮಾತ್ರ ಸಾಧ್ಯ ಎಂಬುದು ಗಮನಾರ್ಹ.

ಒಟ್ಟಿನಲ್ಲಿ, ಚಂಪಾ ಅವರು ಪ್ರಯೋಗ ಪ್ರಿಯರು; ಅದು ಹಿತವಾಗಿ, ಮಿತವಾಗಿ ಯಶಸ್ವಿಯಾಗಿದೆ. ಆಂಗ್ಲ ಸಾಹಿತ್ಯದ ಆಳವಾದ ಅಭ್ಯಾಸ ಅವರನ್ನು ಈ ದಿಶೆಯಲ್ಲಿ ಪ್ರೇರೇಪಿಸಿರಲು ಸಾಕು. ಆದುದರಿಂದ ಕಾವ್ಯರಚನೆಯ ಹೊಸಸಾಧ್ಯತೆಯಲ್ಲಿ ರೂಪ್ರತಳೆದ ಅನೇಕ ಶೈಲಿಯ ಪ್ರಭೇದಗಳಲ್ಲಿ ಅವರು ಬಗೆಬಗೆಯ ಮಾರ್ಪಾಡುಗಳನ್ನು ಮಾಡಿಕೊಂಡುದುಂಟು. ಇಂತಹ ಮಾರ್ಪಾಡುಗಳಲ್ಲಿ ಕೆಲವನ್ನು ಈ ಮೊದಲೇ ಸಂದರ್ಭೋಚಿತವಾಗಿ ಗಮನಕ್ಕೆ ತರಲಾಗಿದೆ. ಒಂದು ಮಾತು, ಚಂಪಾರವರು ನವ್ಯದ ಸಂದರ್ಭದಲ್ಲಿ ಬರೆದು ಕಾವ್ಯವನ್ನು ಮೆಚ್ಚಿದವರು; ಕಾವ್ಯವನ್ನು ಕಟ್ಟಿದವರು. ಅಂತೆಯೇ ತಮ್ಮ ಕವನಗಳಲ್ಲಿ ಆಡುನುಡಿಯ ಲಯಗಳನ್ನು ಹಿಡಿಯಲು ಯತ್ನಿಸಿದರು, ಸವಾಲುಗಳ ಜೊತೆಗೆ ಸಾಧ್ಯತೆಗಳ ಅನ್ವೇಷಣೆಗಳ ಕಡೆಗೂ ಹೆಜ್ಜೆ ಹಾಕಿದವರು. ಆಧುನಿಕ ಕನ್ನಡ ಕವಿತೆಯ ಸಂದರ್ಭದಲ್ಲಿ ಆಡುನುಡಿ ಹಾಗೂ ಕಾವ್ಯಭಾಷೆಗಳ ಸಂಬಂಧಾಂತರಗಳ ಅಧ್ಯಯನಕ್ಕೆ, ಸಂಬಂಧಿಸಿದಂತೆ ಅವರ ಕಾವ್ಯ ಕುತೂಹಲದ ಸಾಮಗ್ರಿಯನ್ನು ಒದಗಿಸ ಬಲ್ಲದು. ಆಧುನಿಕ ಕನ್ನಡ ಕಾವ್ಯದ ಶೈಲಿಯ ಅಧ್ಯಯನಕ್ಕೆ ಹಾಗೂ ಅದರ ಬೆಳವಣಿಗೆಗೆ ಅದೆಷ್ಟೋಮಟ್ಟಿಗೆ ಅವರು ಕಾರಣರು ಎಂಬುದು ನೆನೆಪಿಡಬೇಕಾದ ಮಾತು.

ಆಕರಗ್ರಂಥ

೧. ಚಂದ್ರಶೇಖರ ಪಾಟೀಲ. ೨೦೦೬. ಚಂಪಾ ನಾಟಕಗಳು. ಸಪ್ನ ಬುಕ್‌ಹೌಸ್. ಬೆಂಗಳೂರು.

೭೫

ಹಿ.ಚಿ. ಬೋರಲಿಂಗಯ್ಯ : ಗದ್ಯಶೈಲಿ

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಗದ್ಯಕ್ಕೆ ವಿಶಿಷ್ಟ ಸ್ಥಾನ ದೊರೆತದ್ದು ಆಧುನಿಕ ಕಾಲದಲ್ಲಿ. ನವೋದಯದ ಸಂದರ್ಭದಲ್ಲಿ ಗದ್ಯ ತನ್ನ ಸ್ಥಾನವನ್ನು ಖಚಿತಗೊಳಿಸಿಕೊಂಡು ಹೊಸ ಆಯಾಮಗಳನ್ನು ಪಡೆಯಿತು. ಕೆಂಪುನಾರಾಯಣನ 'ಮುದ್ರಾಮಂಜೂಷ'ವು ೧೮೨೩ರಲ್ಲಿ ಬೆಳಕು ಕಂಡಿತು. ೧೮೪೦ರಲ್ಲಿ ರಚಿತವಾದ ವಿಲ್ಯಂ ಕ್ಯಾರಿಯ ಬೈಬಲ್ಲಿನ ಕನ್ನಡ ಭಾಷಾಂತರವು ೧೯೨೩ರಲ್ಲಿಯೇ ಪ್ರಕಟವಾಯಿತು. ಇವೆರಡರಲ್ಲಿ ಬೇರೆ ಬೇರೆಯಾದ ರೀತಿಯಲ್ಲಿ ಹೊಸಗದ್ಯ ಇಣುಕಿಹಾಕಿತು. ಮುದ್ರಾಮಂಜೂಷದಲ್ಲಿ ಹಳೆಯ ರೂಪಗಳೊಡನೆ ತುಂಬ ವಿಚಿತ್ರವಾದ ರೀತಿಯಲ್ಲಿ ಹೊಸಗದ್ಯದ ರೂಪಗಳು ಕಾಣಿಸಿಕೊಂಡವು. ಯಾವೊಂದು ವಾಕ್ಯದಲ್ಲಿ ಯಾವೂದೂ ನಿಯಮ ನಿರ್ಬಂಧವಿಲ್ಲದೆ ಹಳಗನ್ನಡ ಹೊಸಗನ್ನಡ ರೂಪಗಳು ಒಂದರೊಳಗೊಂದು ಸೇರಿಕೊಂಡು ಬಂದವು. ಇಷ್ಟರಮಟ್ಟಿಗೆ ಹೊಸಗನ್ನಡದ ಚುಂಚು ಪ್ರವೇಶವು ಸಾಧ್ಯವಾದದ್ದು ಅಂದಿನ ಸಾಂಪ್ರದಾಯಿಕ ವಾತಾವರಣದಲ್ಲಿ ಹೆಚ್ಚಿನ ಸಂಗತಿಯೇ ಸರಿ. ಪೂರ್ತಿಯಾಗಿ ಹೊಸಗದ್ಯವೆನ್ನಬಹುದಾದ ಬರವಣಿಗೆ ೨೦ನೇ ಶತಮಾನದ ಮೊದಲ ದಶಕಗಳಲ್ಲಿ ಕರ್ನಾಟಕದ ಬೇರೆ ಬೇರೆ ಭಾಗಗಳ ಮಾತಿನ ಭಾಷೆಯ ತಳಹದಿಯ ಮೇಲೆ ಆಕಾರ ತಳೆಯತೊಡಗಿತು. ಅದಕ್ಕೆ ಮೊದಲಿಗರಾದ ವ್ಯಕ್ತಿಗಳಲ್ಲಿ ಎಂ.ಎಸ್. ಪುಟ್ಟಣ್ಣ, ಪಂಜೆ ಮಂಗೇಶರಾಯ, ಡೆಪ್ಯೂಟಿ ಚೆನ್ನಬಸಪ್ಪ, ಗಳಗನಾಥ, ಕೆರೂರ ವಾಸುದೇವಾಚಾರ್ಯ ಮತ್ತು ಆಲೂರು ವೆಂಕಟರಾಯ ಇವರನ್ನು ವಿಶೇಷವಾಗಿ ನೆನೆಯಬೇಕು. ಇವರು ಹೊಸಗನ್ನಡ ಗದ್ಯಶೈಲಿಗೆ ಭದ್ರಬುದಾನಿ ಹಾಕಿದರು.

ನವೋದಯ ಮತ್ತು ನವ್ಯಕಾಲದ ಲೇಖಕರಿಂದ ಗದ್ಯ ಬೆಳೆದು ಸುಪುಷ್ಟಗೊಂಡಿತು. ಕಲೆ, ನಾಟಕ, ಕಾದಂಬರಿ, ಜೀವನ ಚರಿತ್ರೆ, ಪ್ರವಾಸ ಸಾಹಿತ್ಯ ಇತ್ಯಾದಿ ಪ್ರಕಾರಗಳಲ್ಲಿ

ನವೋದಯ ಮತ್ತು ನವ್ಯಲೇಖಕರ ಸಾಧನೆ ಹಿರಿದಾದುದು. ಗದ್ಯದ ವೈವಿಧ್ಯತೆಯಿಂದ ಶೈಲಿಯೂ ಕೂಡ ಆಯಾ ಬರಹಗಾರರ ವ್ಯಕ್ತಿತ್ವಕ್ಕೆ ಅನುಗುಣವಾಗಿ ತನ್ನದೇ ಆದ ವೈಶಿಷ್ಟ್ಯವನ್ನು ಪಡೆದುಕೊಂಡಿದೆ. ಬಿ.ಎಂ.ಶ್ರೀ., ಗೋವಿಂದ ಪೈ, ಡಿ.ವಿ.ಜಿ., ಮಾಸ್ತಿ, ಡಿ.ಎಲ್.ಎನ್., ತೀನಂಶ್ರೀ, ಕುವೆಂಪು, ಬೇಂದ್ರೆ, ಕಾರಂತ, ದೇಜಗೌ, ಶಿವರುದ್ರಪ್ಪ, ಚಿದಾನಂದಮೂರ್ತಿ, ಅನಂತಮೂರ್ತಿ, ಕಂಬಾರ, ಕಾರ್ನಾಡ, ಕಲಬುರ್ಗಿ, ಬರಗೂರು. ಗಿರಡ್ಡಿ, ಕಾಳೇಗೌಡ ನಾಗವಾರ, ಬೋರಲಿಂಗಯ್ಯ ಮುಂತಾದ ಬರೆಹಗಾರರು ತಮ್ಮ ತಮ್ಮ ಅಭಿರುಚಿಯ ಪ್ರಕಾರಗಳಲ್ಲಿ ಗದ್ಯ ಸಾಹಿತ್ಯದ ಬೆಳವಣಿಗೆಗೆ ಕಾರಣರಾದರು. ಅಲ್ಲದೆ ತಮ್ಮದೇ ಆದ ವ್ಯಕ್ತಿ ವಿಶಿಷ್ಟ ಶೈಲಿಯನ್ನು ರೂಢಿಸಿಕೊಂಡರು. ಈ ನಿಟ್ಟಿನಲ್ಲಿ ಬೋರಲಿಂಗಯ್ಯ ಅವರ ಸಾಧನೆ ವಿಶಿಷ್ಟವಾದುದು.

ಹಿ.ಚಿ. ಬೋರಲಿಂಗಯ್ಯ ಅವರು ಪ್ರಯೋಗಶೀಲ ಗದ್ಯಕಾರರಾಗಿದ್ದಾರೆ. ಕನ್ನಡ ಜಾನಪದ ಪರಂಪರೆಯನ್ನು ವ್ಯಾಪಕವಾಗಿ ಅಧ್ಯಯನ ಮಾಡಿದ ಅವರು ದೇಶಿ ಸಂಸ್ಕೃತಿಯನ್ನು ಹಿನ್ನೆಲೆಯಾಗಿಟ್ಟುಕೊಂಡು ಮೌಲಿಕ ಗದ್ಯ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ. ಅದು ಅವರಿಗೆ ಇರುವ ಗದ್ಯದ ಬಗೆಗಿನ ಕಾಳಜಿ ದೃಢಪಡಿಸುತ್ತದೆ. ಬೋರಲಿಂಗಯ್ಯ ನವರು ತಮ್ಮ ಚಿಂತನೆಗಳನ್ನು ಗದ್ಯದ ಮೂಲಕ ಅಭಿವ್ಯಕ್ತಗೊಳಿಸಿ ಅದರ ವರ್ಚಸ್ಸನ್ನು ಬೆಳಗಿಸಿದ್ದಾರೆ. ಬೋರಲಿಂಗಯ್ಯನವರ ಸಾಹಿತ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರ ಗದ್ಯದ ವೈಲಕ್ಷಣಗಳನ್ನು ಹಾಗೂ ಅವರ ಅಭಿವ್ಯಕ್ತಿಯ ವೈಶಿಷ್ಟ್ಯಗಳನ್ನು ಒಟ್ಟಾರೆ ಗಮನಿಸುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಬೋರಲಿಂಗಯ್ಯ ಅವರ ಗದ್ಯ ಸಾಹಿತ್ಯವನ್ನು ಗಮನಿಸಿದಾಗ ಒಟ್ಟಾರೆ ಅದು ಸಮಬಂಧ ಶೈಲಿಯ ಅಪೂರ್ವ ನಿರೂಪಣೆಯಾಗಿದೆ. ಎಲ್ಲೆಡೆ ಸಮತೋಲನವನ್ನು ಸಾಧಿಸಿರುವುದು ಸ್ಪಷ್ಟವಾಗಿದೆ. ಅವರ ಅಭಿವ್ಯಕ್ತಿಯಲ್ಲಿ ಸೃಜನಸಾಮರ್ಥ್ಯವಿದೆ; ಸೋಪಜ್ಞತೆಯಿದೆ. ಕಥನ ಗದ್ಯ ಅವರಿಗೆ ಸಹಜವಾಗಿ ಒಲಿದಿದೆ. ಅವರ ಬರಹದಲ್ಲಿ ಆಳವಾದ ಅಂತಃಕರಣದ ಮಿಡಿತವಿದೆ. ಸಿದ್ಧಿಗಳನ್ನು ಗುಲಾಮರನ್ನಾಗಿಸಿ ಅವರನ್ನು ಸಾಗಿಸುತ್ತಿದ್ದ ರೀತಿಯನ್ನು ಹೃದಯಸ್ಪರ್ಶಿಯಾಗಿ ನಿರೂಪಿಸಿದ್ದಾರೆ. "ನಿಗದಿಯಾದ ಬಂದರುಗಳಲ್ಲಿ ಒಟ್ಟುಗೂಡಿಸಿದ ಈ ಅನಾಥ ಮಾನವ ಪ್ರಾಣಿಗಳನ್ನು ಸಮುದ್ರದಲ್ಲಿ ಸಾಗಿಸುತ್ತಿದ್ದ ರೀತಿಯಂತೂ ಅತ್ಯಂತ ಅಸಹ್ಯಕರ. ದೊಡ್ಡ ದೊಡ್ಡ ಹಡಗುಗಳ ನೆಲಕೋಣೆಗಳಲ್ಲಿ ಕುರಿಗಳಂತೆ ತುಂಬಿ, ಮೇಲಿಂದ ಆಹಾರ ಎಸೆಯಲಾಗುತ್ತಿತ್ತು. ಅನೇಕ ವಾರಗಳು, ಕೆಲವೊಮ್ಮೆ ಅನೇಕ ತಿಂಗಳುಗಳು ಆ ಕತ್ತಲಕೂಪದಲ್ಲಿ ಬಾಗಿ ಕುಳಿತು ಸಾಗಣಿಗೆ ಒಳಗಾದ ಅವರಿಗೆ ಹೊರಗೆ ಬರುವ ಅವಕಾಶವಿಲ್ಲ. ಅಲ್ಲಿಯೇ ಮಾಡಿಕೊಂಡ ಮಲಮೂತ್ರಗಳ ದುರ್ವಾಸನೆ ಮತ್ತು ಕೊಳಕಿನಲ್ಲಿ ಉಸಿರಾಡಬೇಕಾದ ಅನಿವಾರ್ಯತೆ. ಇಂತಹ ನರಕಯಾನದಲ್ಲಿ ಉಸಿರುಕಟ್ಟಿ ಸಾಯುತ್ತಿದ್ದವರೇ ಹೆಚ್ಚು"

(ಸಿದ್ಧಿಯರ ಸಂಸ್ಕೃತಿ, ಪು.೯). "... ಹೀಗೆ ಸಾಗಿಸಲ್ಪಟ್ಟ 'ಗುಲಾಮರೆಂಬ ವಸ್ತುಗಳು' ಎರಡು ರೀತಿಯಲ್ಲಿ ಬಿಕರಿಯಾಗುತ್ತಿದ್ದವು. ಸಿರಿವಂತರ ಮನೆಯ ತೊತ್ತುಗಳಾಗಿ ಹಾಗೂ ಸಂಸ್ಥೆಗಳು ಅಥವಾ ಸರ್ಕಾರಗಳು ನಿರ್ವಹಿಸುವ ಕಠಿಣ ಕಾರ್ಯಗಳ ನೊಗಕ್ಕೆ ಹೆಗಲು ಕೊಡುವ 'ಎತ್ತು'ಗಳಾಗಿ. ಬಹುತೇಕ ಹೆಣ್ಣುಮಕ್ಕಳು ಮತ್ತು ಮಕ್ಕಳು ಮನೆಯ ತೊತ್ತುಗಳಾಗಿ ನೇಮಕಗೊಳ್ಳುತ್ತಿದ್ದರು"(ಸಿದ್ಧಿಯರ ಸಂಸ್ಕೃತಿ, ಪು.೧೨). ಇಂತಹ ದುರಂತ ಪ್ರಪಂಚದ ಯಾವ ಜನಾಂಗಕ್ಕೂ ಬಂದಿರಲಾರದೇನೋ. ಬೋರಲಿಂಗಯ್ಯ ನವರ ಗದ್ಯಕ್ಕೆ ಒಂದು ವಿಶಿಷ್ಟ ಸ್ವರೂಪವಿದೆ; ಸೂಕ್ಷ್ಮಸಂವೇದನಾಶೀಲ ಗುಣವಿದೆ.

ಉಜ್ಜನಿ ಚೌಡಮ್ಮನ ಜಾತ್ರೆಯ ಪೂರ್ವಸಿದ್ಧತೆಯನ್ನು ಊರ ದೈವದವರು ಯಾವ ರೀತಿ ಮಾಡುತ್ತಿದ್ದರು ಎಂಬುದನ್ನು ವಿವರಣಾತ್ಮಕ ಶೈಲಿಯಲ್ಲಿ ವಿದ್ಯಾರ್ಥಿ ದಿಸೆಯಲ್ಲೇ ಹೇಳಿದ್ದಾರೆ. "ಸಾಮಾನ್ಯವಾಗಿ ಏಪ್ರಿಲ್ ತಿಂಗಳಿನಲ್ಲಿ ಯುಗಾದಿ ಕಳೆದ ನಂತರ ಚೌಡಮ್ಮನ ಹಬ್ಬ ನಡೆಯುತ್ತದೆ. ಯುಗಾದಿ ಕಳೆದ ಮರುದಿನವೇ ಊರ ಪಂಚಾಯಿತಿ ಕಟ್ಟೆಯಲ್ಲಿ ಏಳೂರು ಮುಖ್ಯಸ್ಥರು ಸಭೆ ಸೇರುತ್ತಾರೆ. ಹಬ್ಬ ಹೇಗೆ ನಡೆಯಬೇಕು. ಎಲ್ಲ ಊರಿನವರೂ ಪ್ರತಿ ಕೆಲಸದಲ್ಲಿ ಹೇಗೆ ಭಾಗವಹಿಸಬೇಕು, ಯಾವ ಸಹಕಾರ ತತ್ವವಿರಬೇಕು, ಯಾವ ಮನರಂಜನಾ ಕಾರ್ಯಗಳನ್ನು ನಡೆಸಬೇಕು, ಎಷ್ಟು ಕಡೆಯಿಂದ ಬೇರೆ ಪೂಜಾರಿಗಳನ್ನು ಕರೆಸಬೇಕು ಮತ್ತು ಯಾವ ಪಟ್ಟಣದಿಂದ ಪಲ್ಲಕ್ಕಿ ತಿದ್ದುವ ಕುಶಲಗಾರರನ್ನು ಕರೆಸಬೇಕು ಇತ್ಯಾದಿಯಾಗಿ ಮಾತುಕತೆಗಳು ನಡೆಯುತ್ತವೆ"(ಉಜ್ಜನಿ ಚೌಡಮ್ಮ, ೨೦೦೧, ಪು.೪೨). ಪುಟ್ಟ ಪುಟ್ಟ ವಾಕ್ಯಗಳು ನವಜವ್ವನೆಯಂತೆ ಜಿಗಿಯುತ್ತ ಉತ್ಸಾಹದಿಂದ ಪುಟಿಯುತ್ತ ನಲುವಿನಿಂದ ಮುನ್ನಡೆಯುತ್ತವೆ. ಬೋರಲಿಂಗಯ್ಯನವರ ಗದ್ಯ ಸಾಹಿತ್ಯದಲ್ಲಿ ಕಂಡುಬರುವ ಗಮನಾರ್ಹ ಅಂಶ ವಸ್ತುನಿಷ್ಠ ಶೈಲಿಯ ವಿವರಣಾತ್ಮಕ ಗುಣ. ಪ್ರತಿಯೊಂದನ್ನು ಸಾದ್ಯಂತವಾಗಿ ಅಲ್ಲಲ್ಲಿಯೇ ವಿವರಿಸಿ ಬಿಡುವುದು ಅವರ ಜಾಯಮಾನವಾಗಿದೆ.

ಬೋರಲಿಂಗಯ್ಯನವರ ಗದ್ಯದಲ್ಲಿ ವಾಸ್ತವತೆಯ ಜೊತೆಗೆ ಸಹೃದಯತೆಯು ಮಿಳಿತವಿದೆ; ಸಣ್ಣ ಕತೆಯ ಓಟವಿದೆ, ನಿರೂಪಣೆಯಲ್ಲಿ ಅಚ್ಚುಕಟ್ಟುತನವಿದೆ. ಚೌಡಮ್ಮನ ಹಬ್ಬದಲ್ಲಿ ಭಕ್ತಾದಿಗಳು ಬೆಂಕಿಯ ಕಿಚ್ಚು ಹಾಯುತ್ತಾರೆ. ಆ ಕಿಚ್ಚಿನ ಕೊಂಡವನ್ನು ಬೇಯಿಸುವ ಕ್ರಮ ಮನೋಜ್ಞವಾಗಿದೆ. "ರಾತ್ರಿ ಸುಮಾರು ಹತ್ತು ಹನ್ನೊಂದು ಗಂಟೆಗೆ ಕೊಂಡದ ಕೆಂಗುರಿ ಏಳೂರಿಗೂ ಕಾಣುತ್ತದೆ. ಉರಿಯಿಂದ ಎದ್ದ ಬೆಂಕಿಯ ಕಿಡಿಗಳು ಸುತ್ತಮುತ್ತಲ ಹಳ್ಳಿಗಳಿಗೆಲ್ಲ ಗೋಚರಿಸುತ್ತವೆ. ಸೌದೆಗಳ ಕಂಪು ತಂಪು ಗಾಳಿಯೊಡಗೂಡಿ
ಸುತ್ತಮುತ್ತಲ ಹಳ್ಳಿಗಳಿಗೆಲ್ಲ ಗೋಚರಿಸುತ್ತವೆ. ಸೌದೆಗಳ ಚಟಪಟ ಶಬ್ದ ಊರ ಜನರೆಲ್ಲರ ಕಿವಿಗಳಿಗೆ ಬೀಳುತ್ತಿರುತ್ತದೆ. ಗಂಧದ ಸೌದೆಗಳ ಕಂಪು ತಂಪು ಗಾಳಿಯೊಡ ಗೂಡಿ ಸುತ್ತಮುತ್ತಲ ಪ್ರದೇಶವನ್ನೆಲ್ಲಾ ಆವರಿಸುತ್ತದೆ. ದೂರದಿಂದ ನೋಡಿದರೆ ಸಾಕ್ಷಾತ್

ಅಗ್ನಿದೇವನೇ ಇಂದು ಉಜ್ಜನಿಗೆ ಅತಿಥಿಯಾಗಿ ಇಳಿದುಬಂದು ತನ್ನ ಜ್ವಾಲಾನಾಲಗೆಗಳನ್ನು ಚಾಚುತ್ತಿರುವನೋ ಎಂಬ ಭಾವನೆ ಮೂಡಿಬರುತ್ತದೆ. ಈ ದೃಶ್ಯವನ್ನು ದೂರದಿಂದಲೇ ನೋಡಬೇಕು. ಹತ್ತಿರದಲ್ಲಿ ತುಂಬಾ ಹವೆ ಕಾವು ನಮ್ಮನ್ನು ದೂರ ಸರಿಸುತ್ತದೆ. ಈ ಸಮಯದಲ್ಲಿ ಸೌದೆಗಳು ಬೆಂಕಿಯ ರಸವನ್ನೇ ಮುಕ್ಕಳಿಸಿ ಉಗಿಯುತ್ತವೆ"(ಉಜ್ಜನಿ ಚೌಡಮ್ಮ, ಪು.೬೮). ಕೊಂಡ ಹಾಯುವ ಮಹದಲು ನಡೆಯುವ ಪೂರ್ವಸಿದ್ಧತೆಯನ್ನು ಅಷ್ಟೇ ಪರಿಣಾಮಕಾರಿಯಾಗಿ ನಿರೂಪಿಸಿದ್ದಾರೆ. "ರಾತ್ರಿ ಸುಮಾರು ಎರಡು ಗಂಟೆಗೆ "ದೇವರು ಎತ್ತುತ್ತಾರೆ" ದೇವರು ಗುಡ್ಡರು ನಿಡಸಾಲೆ ಚೌಡಮ್ಮ, ಉಜ್ಜನಿ ಚೌಡಮ್ಮನ ಪೂಜೆಗಳನ್ನು, ಕರಗದ ಗುಡ್ಡ ಕರಗವನ್ನೂ ಹೊತ್ತುಕೊಳ್ಳುತ್ತಾರೆ. ಧೂಪುಂಡಿಗೆಯವನು ಧೂಪುಂಡಿಗೆ ಹಿಡಿದುಕೊಳ್ಳುತ್ತಾನೆ. ಇವರೆಲ್ಲ ಮನೆದೇವರ ಗುಡಿಯಿಂದ ಹೊರಡುತ್ತಾರೆ"(ಉಜ್ಜನಿ ಚೌಡಮ್ಮ, ಪು.೭೦). ಹೇಳಬೇಕಾದುದನ್ನು ನೇರವಾಗಿ, ಸರಳವಾಗಿ ನಿರೂಪಿಸುವ ಗದ್ಯ ಇದಾಗಿದೆ. ಬೋರಲಿಂಗಯ್ಯನವರ ಬರವಣಿಗೆಯಲ್ಲಿ ಸಂವಹನಶೀಲತೆಯಿದೆ; ತರ್ಕಬದ್ಧತೆಯಿದೆ ಹೀಗಿರುವುದರಿಂದ ಕೊಂಡದ ಭವ್ಯ ಚಿತ್ರಣವನ್ನು ಕಣ್ಮುಂದೆ ನಿಲ್ಲಿಸಿದ್ದಾರೆ. ಅಲ್ಲಿ ಬಂದಿರುವ ವಾಕ್ಯಗಳನ್ನು, ವಾಕ್ಯವೃಂದಗಳನ್ನು ಓದಿದರೆ ಗದ್ಯ ಭಾವನಿಷ್ಠವಾಗಿದೆ; ಶಕ್ತಿಯುತವಾಗಿದೆ.

ಚಿತ್ರಕಶಕ್ತಿ ಬೋರಲಿಂಗಯ್ಯನವರ ಗದ್ಯ ಸಾಹಿತ್ಯದ ವಿಶೇಷ ಗುಣ. ವ್ಯಕ್ತಿ ಚಿತ್ರವಾಗಲಿ, ಸನ್ನಿವೇಶ ದೃಶ್ಯವಾಗಲಿ, ಘಟನೆಯಾಗಲಿ ಕಣ್ಣಿಗೆ ಕಟ್ಟುವಂತೆ ವರ್ಣಿಸಬಲ್ಲ ಸಹಜ ಕಲೆಗಾರಿಕೆ ಅವರಿಗೆ ಒಲಿದಿದೆ. ದಾಸಪ್ಪನ ವೇಷಭೂಷಣಗಳನ್ನು ತುಂಬ ಪರಿಣಾಮಕಾರಿಯಾಗಿ ಲೇಖಿಸಿದ್ದಾರೆ. "ತಲೆಗೆ ಬಿಳಿ ಕೆಂಪು ಮಿಶ್ರವಾದ ಬಟ್ಟೆಯ ಪೇಟ ಅಥವಾ ಹಳದಿ ಬಿಳಿ ಮಿಶ್ರವಾದ 'ಹಳದಿ-ಬಿಳದಿ ಪೇಟ' ತಲೆಗೆ ಯಾವ ಬಣ್ಣದ ಪೇಟ ಸುತ್ತಿದನೋ ಅದೇ ಬಣ್ಣದ 'ನೀಲವಂಗಿ'ಯನ್ನು ಮೈಯ್ಯಿಗೆ ಧರಿಸಬೇಕು. ಅದೇ ಬಣ್ಣದ 'ಕಚ್ಚೆ' ಅಥವಾ 'ಪಂಚೆ'ಯನ್ನು ಉಡಬೇಕು. ಇಷ್ಟರ ಮೇಲೆ ಅಚ್ಚಕೆಂಪು ಅಥವಾ ಅಚ್ಚ ಹಳದಿ ಬಣ್ಣದ 'ವಸ್ತ್ರ'ವನ್ನು ವದಿಯಬೇಕು. ಅಥವಾ ನಡುವಿಗೆ ಕಟ್ಟಿ ಕೊಳ್ಳಬೇಕು. ಬಲಗೈಯಲ್ಲಿ 'ಬೆತ್ತದ ಕೋಲು' ಹಿಡಿದಿರಬೇಕು. ಕಂಕುಳಿನಲ್ಲಿ 'ಜೋಳಿಗೆ' ನೇತು ಹಾಕಿಕೊಂಡಿರಬೇಕು. ಹಣೆಗೆ ಮೂರು ಉದ್ದ 'ನಾಮ'ಗಳನ್ನು ಬಳಿದುಕೊಂಡಿರ ಬೇಕು. ಮಧ್ಯಕೆಂಪು ನಾಮ ಆ ಕಡೆ ಈ ಕಡೆ ಬಿಳಿಯನಾಮಗಳು, ಈ ನಾಮಗಳು ಕೆಲವು ದಾಸಯ್ಯಗಳ ಹಣೆಯಲ್ಲಿ ಹೆಬ್ಬೆರಳು ಗಾತ್ರಕ್ಕೂ ಕೆಲವರ ಹಣೆಯಲ್ಲಿ ಅಂಚಿಕಡ್ಡಿ ಗಾತ್ರಕ್ಕೂ ಇರುವದನ್ನು ನಾವು ನೋಡಬಹುದು. ಅದು ಅವರವರ ಇಷ್ಟ. ದಾಸಪ್ಪಗಳು ಸಾಮಾನ್ಯವಾಗಿ ಚಪ್ಪಲಿ ಹಾಕುವುದಿಲ್ಲ. ಇವಿಷ್ಟು ದಾಸಪ್ಪನ ವೇಷಭೂಷಣಗಳು" (ದಾಸಪ್ಪ-ಜೋಗಪ್ಪ, ೨೦೦೪, ಪು.೯). ವಸ್ತುನಿಷ್ಠತೆಗೆ ಆದ್ಯತೆ ಇರುವ ಇಂತಹ ಶೈಲಿಗೆ ಪಾರದರ್ಶಕ ಗುಣವಿದೆ. ಬೋರಲಿಂಗಯ್ಯನವರ ಗದ್ಯವು ಬಹುಪಾಲು

ಸ್ವಭಾವೋಕ್ತಿಯ ಲಕ್ಷಣದಿಂದ ಕೂಡಿದೆ. ಜಿಜ್ಞಾಸೆಯ ರೂಪದಲ್ಲಿ ಬೌದ್ಧಿಕತೆ ತನ್ನ ಮಾರ್ಗವನ್ನು ನಿರ್ಮಿಸಿಕೊಂಡಿದೆ. ಹೇಳಬೇಕಾದ ಸಂಗತಿಗಳನ್ನು ಸಾರವತ್ತಾಗಿ ಹೇಳುವುದರಲ್ಲಿ ಸೂಕ್ಷ್ಮ ವಿಶ್ಲೇಷಣಾ ಸಾಮರ್ಥ್ಯವಿದೆ.

ಭಾಷೆ ಭಾವಕ್ಕೆ ತಕ್ಕಂತೆ ತನ್ನ ಹದವನ್ನು ಉಳಿಸಿಕೊಳ್ಳುವ ಶೈಲಿ, ಅವರ ಬರೆಹಗಳ ವಿಶೇಷತೆ. ಸಹಜತೆಯೇ ಅವರ ಭಾಷೆಯ ಜೀವಾಳವಾಗಿದೆ. ಸನ್ನಿವೇಶ ರಚನೆ, ಕ್ರಿಯೆಯ ಪರಿಣಾಮವನ್ನು ಅಭಿವ್ಯಕ್ತಿಸುವಲ್ಲಿ ಬೋರಲಿಂಗಯ್ಯನವರ ಸಫಲರಾಗಿದ್ದಾರೆ. ದಾಸಯ್ಯಗಳ ತಿರುಪತಿ ಯಾತ್ರೆಯನ್ನು ಬಣ್ಣಿಸುತ್ತ ಮುಖ್ಯದಾಸಯ್ಯ ಮಠದ ಸ್ವಾಮಿಗಳಿಗೆ ಕಾಣಿಕೆ ಅರ್ಪಿಸುವ ರೀತಿ ಸೋಪಜ್ಞತೆಯಿಂದ ಕೂಡಿದೆ. "ಮುಖ್ಯದಾಸಯ್ಯ ನೇರವಾಗಿ ಮುಖ್ಯಸ್ವಾಮಿಗಳ ಪೀಠಕ್ಕೆ ಕರೆದುಕೊಂಡು ಹೋದ. ಅಲ್ಲಿ ಒಬ್ಬ ಮಂತ್ರಿಗಿರಬಹುದಾ ಎಲ್ಲ ಸವಲತ್ತುಗಳೂ ಇದ್ದಂತೆ ಕಂಡವು. ವರ್ಣರಂಜಿತ ಜಮಖಾನವನ್ನು ನೆಲಕ್ಕೆ ಹಾಕಿದ್ದರು. ನಾಲ್ಕು ಮೂಲೆಗಳಲ್ಲಿಯೂ ತರತರದ ಮೆತ್ತನೆಯ ಕುರ್ಚಿಗಳಿದ್ದವು. ಹಜಾರದ ಮಧ್ಯ ಒಂದು ಪೀಠವಿತ್ತು. ಅದರ ಮುಂದೆ ಹುಲಿಯ ಚರ್ಮವನ್ನು ಹಾಸಲಾಗಿತ್ತು. ಪೀಠದ ಮೇಲೆ ಗೋಡೆಯಲ್ಲಿ ಕೃಷ್ಣನ ಬಾಲಲೀಲೆಗಳನ್ನು ಹೇಳುವ ವಿಧ ವಿಧವಾದ ಚಿತ್ರಗಳಿದ್ದವು. ಫ್ಯಾನ್ ತಿರುಗುತ್ತಿತ್ತು. ನಮ್ಮ ಯಾತ್ರಿಕರು ಆ ಹಾಜರಕ್ಕೆ ಪ್ರವೇಶಿಸಿದರು. ಮುಖ್ಯ ದಾಸಯ್ಯ ಅಲ್ಲಿದ್ದ ಜಮಖಾನದ ಮೇಲೆ ಕುಳಿತುಕೊಳ್ಳಲು ಅವರಿಗೆ ಹೇಳಿದಾಗ ಅದನ್ನು ನಿಜವಾಗಿಯೂ ಕಾಲಿನಲ್ಲಿ ತುಳಿಯಬಹುದೇ ಎಂದು ಅನುಮಾನಿಸಿದರು ನಮ್ಮ ಜನ. ಅದು ಕುಳಿತುಕೊಳ್ಳುವುದಕ್ಕೇ ಇರುವುದು ಎಂದು ಹೇಳಿದ ಮೇಲೆ ಕುಳಿತುಕೊಂಡರು"(ದಾಸಪ್ಪ–ಜೋಗಪ್ಪ, ಪು.೬೫). ಇಂತಹ ಸಂದರ್ಭದಲ್ಲಿ ಸಣ್ಣ ಕತೆಯ ಓಟವೂ ಪ್ರಬಂಧದ ವಿವರವೂ ದೊರಕುತ್ತದೆ. ರಮ್ಯತೆ ಮತ್ತು ಲಾಲಿತ್ಯವನ್ನು ಪಡೆದ ಅವರ ಶೈಲಿಗೆ ಪ್ರಸನ್ನತೆಯ ಗುಣವಿದೆ. ವಾಕ್ಯಗಳು ಸಾವಧಾನಗತಿಯನ್ನು ಸಾಧಿಸಿರುವುದು ಗಮನಾರ್ಹ ಅಂಶವಾಗಿದೆ.

ಬೋರಲಿಂಗಯ್ಯನವರ ಗದ್ಯದಲ್ಲಿ ಪ್ರಖರ ವೈಚಾರಿಕತೆ ಹಾಗೂ ಚಿಂತನಶೀಲತೆಯ ಗುಣವಿದೆ. "ದಕ್ಷಿಣ ಕನ್ನಡದ ಅರಣ್ಯದಲ್ಲಿ ವಾಸವಾಗಿರುವ ಮಲೆಕುಡಿಯರನ್ನು ಭೇಟಿಯಾಗಬೇಕಾದರೆ ಮಂಗಳೂರಿನಲ್ಲಿರುವ ಅವರ ದಣಿಯ ಅಪ್ಪಣೆ ಪಡೆಯಬೇಕಂತೆ ಅದನ್ನು ವಿವರಿಸುವಾಗ... ಹೊಳೆನೀರಿಗೆ ದೊಣ್ಣೆನಾಯಕನ ಅಪ್ಪಣೆ ಎಂಬಂತೆ ಸಾವಿರಾರು ವರ್ಷಗಳಿಂದ ಆ ಮಣ್ಣಿನಲ್ಲಿ ಬದುಕುತ್ತಿರುವ ಮಲೆಕುಡಿಯರನ್ನು ನೋಡಲು ಕೇರಳದ ಬಂಡವಾಳಶಾಹಿಯ ಅಪ್ಪಣೆ ಪಡೆಯಬೇಕಂತೆ? ಇದು ನಮ್ಮ ಪ್ರಜಾಪ್ರಭುತ್ವ! ನಮ್ಮ ಕರ್ನಾಟಕ ಸರ್ಕಾರ ಅರಣ್ಯ ಇಲಾಖೆಯ ಸಿಬ್ಬಂದಿಯೂ ಅವರ ಮಾತಿಗೆ ಸಮ್ಮತಿ ಇದೆ ಎಂಬಂತೆ ಮೌನವಾಗಿ ಕುಳಿತಿದ್ದಾರೆ"(ಗಿರಿಜನ ನಾಡಿಗೆ ಪಯಣ, ೨೦೦೦, ಪು.೫೭). "...ಇಡೀ ಮಲೆನಾಡಿನ ಅರಣ್ಯ ಇಂಥ ಅನೇಕ ಕಾರಣಗಳಿಗಾಗಿ

ರೋದಿಸುತ್ತಿದೆ. ಗಿರಿಜನರು ತಲ್ಲಣಿಸುತ್ತಿದ್ದಾರೆ. ಭೌಗೋಳಿಕವಾಗಿ ನಮ್ಮ ಕರ್ನಾಟಕದ ಹೆಮ್ಮೆ ಎನಿಸಿದ್ದ ಸಹ್ಯಾದ್ರೀ.... ಈ ಸಮಸ್ಯೆಗೆ ಪರಿಹಾರವಿದೆಯೇ?" (ಗಿರಿಜನ ನಾಡಿನ ಪಯಣ, ಪು.೫೮). ಪ್ರಭುತ್ವದ ವಿರುದ್ಧ ತೀವ್ರ ಪ್ರತಿಕ್ರಿಯಿಸುವಾಗ ಭಾಷೆಯಲ್ಲಿ ಹರಿತವಿದೆ. ಗಿರಿಜನರ ಬದುಕನ್ನು ಕುರಿತು ಚಿತ್ರಿಸುವಲ್ಲಿ ಅವರ ಭಾಷೆ ಭಾವಾನುಸಾರಿಯಾದರೂ ವಿಮರ್ಶನ ಪ್ರಜ್ಞೆ ಜಾಗೃತವಾಗಿರುತ್ತದೆ. ಸುಂದರವಾದ ಉಪಮೇಯಗಳು, ರೂಪಕಗಳು, ಶಬ್ದಚಿತ್ರಗಳು ಸೊಗಸಾಗಿ ಅವರ ಗದ್ಯದಲ್ಲಿ ಹೆಣೆದು ಕೊಂಡಿವೆ. ಕರಾವಳಿಯ ದೃಶ್ಯವನ್ನು ಬಣ್ಣಿಸುತ್ತ "...ದೂರದಲ್ಲಿ ತೆರೆತೆರೆಯಾಗಿ ಕಾಣುತ್ತಿದ್ದ ಕಪ್ಪುಕಡಲು, ತಂಗಾಳಿಗೆ ಸುಯ್‌ಗುಡುತ್ತಿದ್ದ ತೆಂಗಿನ ವನ, ಹಾರುವ ಬೆಳ್ಳಕ್ಕಿ, ತೇಲುವ ಬೆಳ್ಮೋಡ ಕರಾವಳಿಯ ವೈಶಿಷ್ಟ್ಯತೆಯನ್ನು ಮೆರೆಯುತ್ತಿದ್ದವು. ವಸಂತಾಗಮನದಿಂದ ಪುಲಕಗೊಂಡಿದ್ದ ಮರಗಿಡ ಬಳ್ಳಿಗಳು ಚಿಗುರು ತುಂಬಿಕೊಂಡು ಪಡುವಣ ಸೂರ್ಯನ ಮಂದರಶ್ಮಿಯಲ್ಲಿ ಹೊಳೆಯತೊಡಗಿದ್ದವು"(ಗಿರಿಜನ ನಾಡಿಗೆ ಪಯಣ, ಪು.೭೦). ಇಂತಹ ಸಂದರ್ಭದಲ್ಲಿ ಅವರ ಗದ್ಯವು ವಾಕ್ಯಮಯವಾದಂತೆ ಭಾಸವಾಗುತ್ತದೆ. ಅಂತಹ ಸಂದರ್ಭದಲ್ಲಿ ಶಬ್ದಚಿತ್ರಗಳು ಅಷ್ಟೇ ಧ್ವನಿಪೂರ್ಣವಾಗಿ ಬಳಕೆಯಾಗಿವೆ.

ಸನ್ನಿವೇಶವನ್ನು ಚಿತ್ರಿಸುವಲ್ಲಿ ಬೋರಲಿಂಗಯ್ಯನವರು ಸಿದ್ಧಹಸ್ತರು. ಅದರಿಂದಾಗಿಯೇ ಸಮರ್ಪಕವಾದ ಗದ್ಯರಚನೆ ಅವರಿಗೆ ಸಾಧ್ಯವಾಗಿದೆ. ಗೊಂಡರ ಹಟ್ಟಿಗಳನ್ನು ಚಿತ್ರಕ ಶೈಲಿಯಲ್ಲಿ ಬಿಡಿಸಿದ್ದಾರೆ. "ಮನೆಯ ಮುಂಭಾಗದಲ್ಲಿ ವಿಶಾಲವಾದ ಕಣ. ಕಣದ ಮಧ್ಯ ಮೇಟಿ. ಕಣದ ಒಂದು ಪಕ್ಕದಲ್ಲಿ ತುಳಸೀ ಕಟ್ಟೆ ಮತ್ತೊಂದು ಪಕ್ಕದಲ್ಲಿ ಭತ್ತದ ಹುಲ್ಲಿನಲ್ಲಿಯೇ ಮುಡಿಕಟ್ಟಿ, ಅದರಲ್ಲಿ ಬತ್ತ ತುಂಬಿ ಯಾವ ಮಳೆಗೂ ಜಗ್ಗದಂತೆ ಭದ್ರಗೊಳಿಸುತ್ತಾರೆ"(ಗಿರಿಜನ ನಾಡಿಗೆ ಪಯಣ, ಪು.೮೮). ಇಂತಹ ಅಭಿವ್ಯಕ್ತಿಯಲ್ಲಿ ವೈವಿಧ್ಯತೆಯಿದೆ. ರಸಭಾವಗಳಿಗೆ ಅನುಗುಣವಾದ ಪದಪುಂಜಗಳು ಸಹಜವಾಗಿ ಅವರ ಗದ್ಯದಲ್ಲಿ ಮೂಡಿವೆ. ಬೋರಲಿಂಗಯ್ಯನವರು ವ್ಯವಸ್ಥೆಯ ವಿರುದ್ಧ ಹರಿತವಾದ ಭಾಷೆಯಲ್ಲಿ ಪ್ರತಿಭಟಿಸುತ್ತಾರೆ. ಗೊಂಡರ ನಾಡಿನಲ್ಲಿ ಲಾವಂಚದ ಕಿಚ್ಚುಬಿದ್ದು ಗೊಂಡರ ಹಾಡಿಗಳು ನಾಶವಾಗುವುದನ್ನು ಕಂಡು ಸಿಡಿಮಿಡಿಗೊಳ್ಳುತ್ತಾರೆ. "ಕೈಗಾ ವಿರುದ್ಧ ಹೋರಾಡುತ್ತಿರುವ ನಾವು ದೂರದ ನರ್ಮದಾ ಯೋಜನೆಯ ಬಗೆಗೆ ಪರಿತಪಿಸುವ ನಾವು ನಮ್ಮ ಸುತ್ತ ಉರಿಯುತ್ತಿರುವ ಈ ಬೆಂಕಿಯ ವಿರುದ್ಧ ಹಾಗೂ ಇಡೀ ಕಾಡಿಗೆ ಹತ್ತಿರುವ ಏಡ್ಸ್ ವಿರುದ್ಧ ಕೂಡ ಸಂಘಟಿತ ಹೋರಾಟ ಮಾಡಬೇಕಾಗಿದೆ"(ಗಿರಿಜನ ನಾಡಿಗೆ ಪಯಣ, ಪು.೮೬). ಇಂತಹ ಸಂದರ್ಭದಲ್ಲಿ ಭಾಷೆ ಬಡಿಗೆಯಾಗುತ್ತದೆ. ಅಂತಹ ಘಟನೆಗಳು ಹಿಂದೆ ಬೋರಲಿಂಗಯ್ಯನವರ ಸಾಮಾಜಿಕ ಕಳಕಳಿ ಮತ್ತು ಪರಿಸರ ಪ್ರಜ್ಞೆ ಜಾಗೃತವಾಗಿದೆ. ಪ್ರವಾಸ ಸಾಹಿತ್ಯದಲ್ಲಿ ಲೇಖಕರು ತಮ್ಮ ಅಭಿಪ್ರಾಯಗಳನ್ನು ಆಪ್ತವಾಗಿ ಇತರರೊಡನೆ ಹಂಚಿಕೊಳ್ಳುತ್ತಾರೆ. ಆಪ್ತತೆಯ ಧಾಟಿಯಲ್ಲಿ ಬೋರಲಿಂಗಯ್ಯನವರ ಗದ್ಯ ತನ್ನ ಉತ್ಕಟತೆಯನ್ನು ಸಾಧಿಸಿದೆ.

ಪ್ರವಾಸ ಸಾಹಿತ್ಯದಲ್ಲಿ ಅವರ ಸೃಜನಾತ್ಮಕ ಪ್ರತಿಭೆ ಎದ್ದುಕಾಣುತ್ತದೆ. ಸನ್ನಿವೇಶದ ಚಿತ್ರಗಳು ಕಣ್ಮುಂದೆ ನಿಲ್ಲುವಷ್ಟು ಚಿತ್ತಾಕರ್ಷಕವಾಗಿವೆ; ಭಾವಗಂಧಿಯಾಗಿ ಅಭಿವ್ಯಕ್ತವಾಗಿವೆ. ಉತ್ತರ ಕನ್ನಡದ ಸಮುದ್ರದ ವರ್ಣನೆಯನ್ನು ತುಂಬ ಸೊಗಸಾಗಿ ರೇಖಿಸಿದ್ದಾರೆ. "ಉನ್ಮತ್ತಸಾಗರ ತನ್ನ ಅಬ್ಬರದ ಅಲೆಗಳನ್ನು ಬೀಸಿ ಬೀಸಿ ದಂಡೆಗೆ ಎಸೆಯುತ್ತ ಆಟವಾಡುತ್ತಿತ್ತು. ಉದ್ದನೆಯ ದಂಡೆ. ದಂಡೆ ಯುದ್ಧಕ್ಕೆ ನಿಶ್ಚಲವಾಗಿ ಬಿದ್ದ ಅಗಾಧ ಮರಳು. ಅಗಾಧ ಕಪ್ಪು ನೀರು ದಂಡೆಗೆ ಬಡಿದು ಹಿಂತಿರುಗುವ ಮೊದಲು ಸಣ್ಣ ಮರಳಿನ ಮೇಲೆ ತಿಳಿಜಲವಾಗಿ ಹರಿದಾಡುತ್ತ ನಿಂತ ಕಾಲಿಗೆ ಪುಳಕ ತರುತ್ತಿತ್ತು. ಡೊಂಕು ಡೊಂಕಾಗಿ ಬಂದ ತೆರೆಗಳು ತಮ್ಮ ಇಷ್ಟಾನುಸಾರ ಮರಳ ಮೇಲೆ ನಲಿದಾಡುತ್ತ ಹೊಸ ಹೊಸ ವಿನ್ಯಾಸವನ್ನೇ ಸೃಷ್ಟಿಸುತ್ತಿದ್ದವು. ನಮ್ಮ ಕಾಲ ಸಪ್ಪಳಕ್ಕೆ ಹೆದರಿದ ಸಣ್ಣಪುಟ್ಟ ಏಡಿಗಳು ಪುಳಪುಳನೆ ಓಡಾಡುತ್ತ ಮರಳಿನೊಳಗೆ ಅಡಗಿಕೊಳ್ಳುತ್ತಿದ್ದವು. ದೂರದೂರದಲ್ಲಿ ಮೀನಿನ ಬೇಟೆಗಾಗಿ ಲಂಗರು ಹಾಕಿದ ದೋಣಿಗಳು ಒಂದೇ ಕಡೆ ನಿಶ್ಚಲವಾಗಿ ನಿಂತಂತೆ ಭಾಸವಾಗುತ್ತಿದ್ದವು"(ಗಿರಿಜನ ನಾಡಿಗೆ ಪಯಣ, ಪು.೧೪೧). ವಿಚಾರಶಕ್ತಿಯ ಗಾಢತೆಯಿಂದ ಮೂರ್ತತ್ವ ಪಡೆದ ಇಲ್ಲಿಯ ಗದ್ಯ ಬಂಧುರವಾಗಿದೆ. ನಿಖರತೆ ಮತ್ತು ಸಹಜತೆಯಿಂದ ಚಿಂತನಗತಿಗೆ ತೆರೆದುಕೊಂಡಿದೆ. ಸುಂದರವಾದ ಪದಪುಂಜಗಳು ಕಾವ್ಯಮಯವಾಗಿ ಗದ್ಯಕ್ಕೆ ಕವಿತ್ವದ ಲೇಪನ ನೀಡಿದೆ. ಪ್ರವಾಸಕಥನದಲ್ಲಿ ದಿನದಿನದ ಅನುಭವಗಳ ನಿರೂಪಣೆ ಕಾದಂಬರಿಯ ಹಾಗೆ ಅಲ್ಲಲ್ಲಿ ಸಣ್ಣ ಕತೆಯಂತೆ ಆರಂಭಗೊಂಡು ಕುತೂಹಲ ಕೆರಳಿಸಿದೆ. ನಿರೂಪಣೆಯಲ್ಲಿ ಸಂವೇದನಶೀಲತೆ ಹೃದಯವನ್ನು ಸ್ಪರ್ಶಿಸುತ್ತದೆ. ತಾವು ಕಂಡ ಅನುಭವಗಳನ್ನು ಸಮರ್ಥವಾಗಿ ಸೆರೆಹಿಡಿದು, ಅವಿಸ್ಮರಣೀಯ ಚಿತ್ತಾರಗಳನ್ನು ಬಿಡಿಸಿದ್ದಾರೆ. ಗಿರಿಜನ ನಾಡಿಗೆ ಪಯಣ ಅವರ ವೈವಿಧ್ಯಮಯ ಭಾಷಾಶಕ್ತಿಗೆ ಹಿಡಿದ ಕನ್ನಡಿ.

ಒಟ್ಟಿನಲ್ಲಿ, ಬೋರಲಿಂಗಯ್ಯ ಅವರ ಗದ್ಯದ ಲಯ ಲವಲವಿಕೆಯಿಂದ ಕೂಡಿದೆ; ಪುಟ್ಟ ಪುಟ್ಟ ವಾಕ್ಯಗಳು ಸಂವಹನಶೀಲವಾಗಿವೆ; ತರ್ಕಬದ್ಧವಾಗಿದೆ. ಗಿರಿಜನ ಮತ್ತು ಜಾನಪದ ಬದುಕಿನ ಎಲ್ಲ ಅನುಭವಗಳಿಗೂ ಸ್ಪಂದಿಸುವ ಅವರ ಗದ್ಯ ಕನ್ನಡ ಭಾಷೆಗೆ ಸಹಜತೆಯ ಜೀವಾಳವನ್ನು, ಗಹನ, ಗಾಂಭೀರ್ಯಗಳನ್ನು ತಂದಿದೆ. ಅವರ ಎಲ್ಲ ಕೃತಿಗಳು ಪ್ರಯೋಗಶೀಲತೆ ಮತ್ತು ಜೀವನ ದರ್ಶನಗಳ ದೃಷ್ಟಿಯಿಂದ ಗದ್ಯ ಸಾಹಿತ್ಯಕ್ಕೆ ಉತ್ತಮ ಕಾಣಿಕೆಗಳಾಗಿವೆ. ತನ್ಮೂಲಕ ಬೋರಲಿಂಗಯ್ಯನವರ ಉತ್ತಮ ಗದ್ಯ ಬರಹಗಾರರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಆಕರಗ್ರಂಥ

೧. ಅಂಗಡಿ ಎಸ್.ಎಸ್., ೨೦೦೬, ಕಾಡುದನಿ (ಹಿ.ಚಿ. ಬೋರಲಿಂಗಯ್ಯ ಅವರ ಸಾಹಿತ್ಯ ಪರಾಮರ್ಶೆ), ಸಿಜಿವಿ ಪಬ್ಲಿಕೇಷನ್ಸ್, ಬೆಂಗಳೂರು.

ಭಾಗ - ೨

ಭಾಷೆ : ಬೋಧನೆ-ಕಲಿಕೆ

೭೬

ಭಾಷಾಕಲಿಕೆ : ಕೆ.ವಿ. ನಾರಾಯಣ ಅವರ ಚಿಂತನೆಗಳು

೧

ಮಗು ಹುಟ್ಟಿದಾಗಿನಿಂದ ಕೊನೆಯವರೆಗೂ ಕಲಿಯುತ್ತಲೇ ಇರುತ್ತದೆ. ಆಹಾರ ಬೇಕಾದಾಗ ಅಳುವುದು, ತಾಯಿಯನ್ನು ಕಂಡಾಗ ನಗುವುದು, ಎತ್ತಿಕೊಳ್ಳುವಾಗ ಕೇಕೆ ಹಾಕುವುದು ಮುಂತಾದ ಕ್ರಿಯೆಗಳು ನಿರಂತರವಾಗಿ ನಡೆಯುತ್ತವೆ. ಮಗುವಿನ ಆಟಪಾಠಗಳು, ಜ್ಞಾನಭಂಡಾರ, ಭಾಷಾಕೌಶಲ್ಯಗಳು ಇವೆಲ್ಲವೂ ಕಲಿಕೆಯ ಕಕ್ಷೆಯಲ್ಲಿ ಬರುತ್ತವೆ. ನೂತನ ವಿಧಾನಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಲ್ಲಿ ಕಲಿಕೆ ವ್ಯಕ್ತವಾಗುತ್ತದೆ. ಸಮಾಜದ ಅಪೇಕ್ಷೆಗಳನ್ನು ನಿರ್ಧರಿಸುವಲ್ಲಿ ಶಿಕ್ಷಣದ ಗುರಿ-ಉದ್ದೇಶಗಳನ್ನು ಈಡೇರಿಸುವಲ್ಲಿ ಕಲಿಕೆ ಕಂಡುಬರುತ್ತದೆ. ಸಾಮಾನ್ಯವಾಗಿ ಕಲಿಕೆ ಎಂದರೆ ಇನ್ನೊಬ್ಬ ವ್ಯಕ್ತಿ ಹೇಳಿಕೊಟ್ಟ ಅಂಶವನ್ನು ತಿರುಗಿ ಹೇಳುವುದು ಎಂಬ ಭಾವನೆ ಇದೆ. ಆದರೆ ಅಷ್ಟು ಮಾತ್ರ ಕಲಿಕೆಯಲ್ಲ. ಅನೇಕ ಅಭ್ಯಾಸ, ಜ್ಞಾನ ಸಂಪಾದನೆ, ಹೊಸ ವಿಷಯಗಳು, ಸಾಮರ್ಥ್ಯಗಳನ್ನು ಮನೋಗತ ಮಾಡಿಕೊಳ್ಳುವುದೂ ಸಹ ಕಲಿಕೆ. ತನ್ನ ಪರಿಸರಕ್ಕೆ ಹೊಂದಿಕೊಂಡು, ತನ್ನ ಅನುಭವಗಳಿಂದ ಲಾಭ ಪಡೆಯುವುದು ಕಲಿಕೆ ಎನ್ನುವರು. ಸಾಮಾನ್ಯವಾಗಿ ಕಲಿಕೆ ಎಂದು ಕರೆಯಬೇಕಾದರೆ ವರ್ತನೆಯಲ್ಲಿ ಬದಲಾವಣೆ ಉಂಟಾಗಬೇಕು. ಈ ಬದಲಾವಣೆ ಹೆಚ್ಚು ಕಡಿಮೆ ಶಾಶ್ವತವಾದದ್ದಾಗಿರಬೇಕು. ಈ ಬದಲಾವಣೆ ವ್ಯಕ್ತಿಯಲ್ಲಿ ಒಂದು ನಿಶ್ಚಿತ ಮಾರ್ಪಾಡು ಮಾಡುತ್ತದೆ. ಈ ಮಾರ್ಪಾಡು ಒಂದು ಅರಿವಿರಬಹುದು, ಕಲಾ ಕೌಶಲ್ಯವಿರಬಹುದು, ಯಾಂತ್ರಿಕ ಜ್ಞಾನವಾಗಿರಬಹುದು, ಬರೆಯುವುದಾಗಿರಬಹುದು, ಓದುವುದಾಗಿರಬಹುದು. ಇದು ವ್ಯಕ್ತಿಯಲ್ಲಿ ಒಂದು ಬದಲಾವಣೆ ಮಾತ್ರ ಇದ್ದೇ ಇರುತ್ತದೆ. ಈ ಬದಲಾವಣೆಯನ್ನೇ ಮನೋವಿಜ್ಞಾನಿಗಳು ಕಲಿಕೆ ಎಂದಿದ್ದಾರೆ. ಅಂದಮೇಲೆ ಕಲಿಕೆ ವ್ಯಕ್ತಿಯಲ್ಲಾಗುವ ಅನುಭವ ಜನ್ಯ ಮಾರ್ಪಾಡಾಗಿದೆ.

ಕಲಿಕೆ ಒಂದು ನಿರಂತರ ಪ್ರಕ್ರಿಯೆ. ಬದಲಾಗುತ್ತಿರುವ ಪರಿಸರದೊಂದಿಗೆ ಹೊಂದಿಕೊಳ್ಳಬೇಕಾದ ಅಗತ್ಯತೆ ಜೀವನದ ಕೊನೆಯವರೆಗೂ ಇರುತ್ತದೆ. ಈ ಹೊಂದಾಣಿಕೆ ಮೂರು ಹಂತಗಳಲ್ಲಿ ನಡೆಯುತ್ತದೆ. ೧. ಪರಿಚಯ, ೨. ದೃಢಪಡಿಸಿಕೊಳ್ಳುವಿಕೆ, ೩. ಅನ್ವಯಿಸಿಕೊಳ್ಳುವುದು. ಹೊಸ ವಿಚಾರಗಳನ್ನು, ವರ್ತನೆಗಳನ್ನು, ಜ್ಞಾನ ಕೌಶಲ್ಯಗಳನ್ನು, ದೃಷ್ಟಿ ಧ್ಯೇಯಗಳನ್ನು ಪರಿಚಯ ಮಾಡಿಕೊಳ್ಳುವುದು ಮೊದಲ ಭಾಗ. ಹಾಗೆ ಕಲಿತದ್ದನ್ನು ದೃಢಪಡಿಸಿಕೊಳ್ಳುವುದು ಎರಡನೆಯ ಹಂತ. ನಂತರ ಈ ವಿಚಾರವನ್ನು ದೈನಂದಿನ ಸಮಸ್ಯೆಗಳಲ್ಲಿ ಅಥವಾ ಕಾರ್ಯ ವಿಧಾನಗಳಲ್ಲಿ ನೂತನ ಸನ್ನಿವೇಶಗಳಲ್ಲಿ ಬಳಸಿಕೊಳ್ಳುವುದು ಅನ್ವಯ. ಅನ್ವಯಿಸಿಕೊಳ್ಳದೆ ಅಥವಾ ಬಳಸದೆ ಕಲಿಕೆ ಸಿದ್ದಿಸದು. ಉದಾ. ಮಕ್ಕಳು ಅಕ್ಷರ ಕಲಿಯುವುದು ಪರಿಚಯ. ಹೀಗೆ ಕಲಿತ ಅಕ್ಷರಗಳನ್ನು ದೃಢಪಡಿಸಿಕೊಳ್ಳಲು ಬರೆಸುವುದು, ಅಭ್ಯಾಸ ಮಾಡುವುದು ಅಗತ್ಯ ನಂತರ ಕಲಿತ ಅಕ್ಷರಗಳನ್ನು ಉಪಯೋಗಿಸಿ ಬರೆಯುವುದು, ಓದುವುದು ಅನ್ವಯವಾಗಿದೆ.

೨

ಕೆ.ವಿ. ನಾರಾಯಣ ಅವರು ಭಾಷಾಕಲಿಕೆಯ ಬಗ್ಗೆ ಮೌಲಿಕವಾದ ಲೇಖನಗಳನ್ನು ಬರೆದಿದ್ದಾರೆ. ಅವರ ಲೇಖನಗಳು **ಭಾಷೆಯ ಸುತ್ತಮುತ್ತ** (೧೯೯೮), **ಮತ್ತೆ ಭಾಷೆಯ ಸುತ್ತಮುತ್ತ** (೨೦೦೧) ಎಂಬ ಕೃತಿಗಳಲ್ಲಿ ಸಂಕಲಿತವಾಗಿವೆ. ಅವರ ಆ ಲೇಖನಗಳ ಹಿಂದಿನ ತಾತ್ವಿಕತೆಯ ಬಗ್ಗೆ ಈ ಸಂಪ್ರಬಂಧದಲ್ಲಿ ಚರ್ಚೆ ಬೆಳೆಸಲಾಗಿದೆ. ನಾರಾಯಣರು ಭಾಷಾಕಲಿಕೆಯ ಸ್ವರೂಪ, ಇಂದಿನ ಶಿಕ್ಷಣ ವ್ಯವಸ್ಥೆ ಅದರ ಭಾಷಾನೀತಿ ಮತ್ತು ಯೋಜನೆಗಳು ಈ ಅಂಶಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ತಮ್ಮ ಲೇಖನಗಳಲ್ಲಿ ಚರ್ಚಿಸಿದ್ದಾರೆ. ಯಾಂತ್ರಿಕ ಕಲಿಕೆಗಿಂತ ಕ್ರಿಯಾತ್ಮಕ ಕಲಿವು, ಸಂವೇದನಾ ರೂಪದ ಕಲಿವು ಮುಖ್ಯವೆಂದು ನಾರಾಯಣರ ನಿಲುವು ಗಟ್ಟಿ ಆಧಾರದ ಮೇಲೆ ನಿಂತಿದೆ.

ನಾಡಿನಾದ್ಯಂತ ಮಕ್ಕಳೆಲ್ಲರಿಗೂ ಈಗ ಕಡ್ಡಾಯ ಶಾಲಾಶಿಕ್ಷಣವನ್ನು ಒದಗಿಸಬೇಕು ಎಂಬ ಭಾಷಾಯೋಜನೆಯನ್ನು ರೂಪಿಸಲಾಗಿದೆ. ಇದರರ್ಥ ಕಲಿಯುವ ಅವಕಾಶ ಎಲ್ಲರಿಗೂ ಕಲ್ಪಿಸುವುದು. ಆದರೆ ಮಕ್ಕಳು ಶಾಲೆಯಲ್ಲಿ ಎಷ್ಟು ಭಾಷೆ ಕಲಿಯಬೇಕು? ಹೇಗೆ ಕಲಿಸಬೇಕು ಈ ಬಗ್ಗೆ ಮಾನದಂಡಗಳಿಲ್ಲ. ನಾರಾಯಣರು **ಶಾಲೆಯಲ್ಲಿ ಕನ್ನಡ** ಎಂಬ ಲೇಖನದಲ್ಲಿ ಆ ಪ್ರಶ್ನೆಗಳನ್ನು ಎತ್ತಿ ಚರ್ಚಿಸಿದ್ದಾರೆ. ಶಾಲೆಯಲ್ಲಿ ಮಕ್ಕಳಿಗೆ ಮಾತೃಭಾಷೆ, ಪ್ರಾದೇಶಿಕ ಭಾಷೆ, ರಾಷ್ಟ್ರ ಭಾಷೆ, ಅಂತರರಾಷ್ಟ್ರೀಯ ಭಾಷೆ ಎಂಬ ಹೆಸರಿನಲ್ಲಿ ಹಲವು ಭಾಷೆಗಳನ್ನು ಕಲಿಸಲಾಗುತ್ತಿದೆ. ಆ ಕಲಿಕೆಯ ಸಂದರ್ಭದಲ್ಲಿ ಉಂಟಾಗುವ ಕಲಿಕೆಯ ಸಮಸ್ಯೆಗಳ ಬಗ್ಗೆ ನಮ್ಮ ತಜ್ಞರು ಗಮನಿಸುವುದಿಲ್ಲ. ವಿದ್ಯಾರ್ಥಿಗಳು ಶಾಲಾ ಶಿಕ್ಷಣದಲ್ಲಿ ಮೊದಲು ಹತ್ತು ವರ್ಷ ಕನ್ನಡವನ್ನು ಯಾವುದಾದರೂ ಹಂತದಲ್ಲಿ ಕಲಿಯಬೇಕು. ಆದರೆ ಕರ್ನಾಟಕದಲ್ಲಿರುವ ಕನ್ನಡೇತರರು ಕನ್ನಡವನ್ನು ಔಪಚಾರಿಕವಾಗಿ ಕಲಿಯದೇ ಇರಬಹುದು. ಅವರ ಕಲಿಕೆಯ ಸಮಸ್ಯೆ

ಗಳೇನು? ಈ ಬಗ್ಗೆ ನಿರ್ದಿಷ್ಟ ಭಾಷಾನೀತಿಗಳಿಲ್ಲ. ಕಲಿಕೆ ಮತ್ತು ಪಠ್ಯಕ್ರಮದಲ್ಲಿ ಏರುಪೇರಾಗಿದೆ. ಇದನ್ನು ಸರಿಪಡಿಸಬೇಕಾಗಿದೆ. ಇದೇ ಲೇಖನದಲ್ಲಿ ಇನ್ನೊಂದು ಸಮಸ್ಯೆಯನ್ನು ನಾರಾಯಣರು ಎತ್ತುತ್ತಾರೆ. ಶಾಲೆಯಲ್ಲಿ ಸಾವಿರಾರು ವಿದ್ಯಾರ್ಥಿಗಳು ಗಣಿತ, ವಿಜ್ಞಾನ ವಿಷಯಗಳನ್ನು ಕನ್ನಡದಲ್ಲಿ ಕಲಿಯುತ್ತಾರೆ. ಆ ಪಠ್ಯಗಳು ಇಂಗ್ಲಿಶಿನಿಂದ ಕನ್ನಡಕ್ಕೆ ಅನುವಾದಗಳಾಗಿವೆ. ತಾತ್ಪರ್ಯವಿಷ್ಟೆ. ಶಾಲಾ ಶಿಕ್ಷಣದಲ್ಲಿ ಕನ್ನಡ ಕಲಿಕೆಯನ್ನು ಕಡ್ಡಾಯ ಮಾಡಿದರೂ ನಾವು ಅದನ್ನು ಅಧಿಕೃತ ಭಾಷೆಯಾಗಿ ಬಳಸುತ್ತಿಲ್ಲ. ಅಂದರೆ ಶಾಲೆಯಲ್ಲಿ ಕನ್ನಡದ ಬಳಕೆಗೆ ಸೂಕ್ತ ಭಾಷಾಯೋಜನೆಗಳನ್ನು ರೂಪಿಸಬೇಕಾಗಿದೆ ಎಂಬ ಅವರ ವಾದ ಸರಿಯಾಗಿದೆ.

ಮಕ್ಕಳು ಕುಟುಂಬ ಪರಿಸರದಲ್ಲಿ ಅನೌಪಚಾರಿಕವಾಗಿ ನಂತರ ಶಾಲೆಯಲ್ಲಿ ಔಪಚಾರಿಕವಾಗಿ ಭಾಷೆಯನ್ನು ಕಲಿಯುತ್ತಾರೆ. ಮಕ್ಕಳ ಭಾಷಾಕೌಶಲ್ಯಗಳು ಅಭಿವೃದ್ಧಿಯಾಗುವುದು ಆ ಎರಡು ಪರಿಸರದಲ್ಲಿ. ಶಾಲೆಯಲ್ಲಿ ವಿಭಿನ್ನ ಸಾಮಾಜಿಕ ಹಿನ್ನೆಲೆಯಿರುವ ಮಕ್ಕಳಿರುತ್ತಾರೆ. ಆಡುಮಾತಿನ ವೈವಿಧ್ಯ ಅಧಿಕವಾಗಿರುತ್ತದೆ. ಅವು ಭಾಷಾಕಲಿಕೆಯಲ್ಲಿ ಪ್ರಭಾವ ಬೀರುತ್ತವೆ. ಆದರೆ ಶಾಲಾ ಪಠ್ಯಪುಸ್ತಕಗಳನ್ನು ಗಮನಿಸಿದರೆ ಕಲಿಕೆಯಲ್ಲಿ ಅವು ಭಾಷೆಯ ರಚನೆಯನ್ನು (ಸಂಧಿ, ಸಮಾಸ ಮುಂತಾದುವು) ತಿಳಿಸಿಕೊಡುತ್ತವೆ. ಈ ಬಗೆಯ ಪ್ರಕ್ರಿಯೆಯನ್ನು ಆಧುನಿಕ ಭಾಷಾತಜ್ಞರು ಒಪ್ಪುತ್ತಿಲ್ಲ. ಮಕ್ಕಳ ಭಾಷಾಕಲಿಕೆಯ ವೈವಿಧ್ಯತೆ ಮತ್ತು ಮಕ್ಕಳ ಮನಸ್ಸು ತಿಳಿದು ಬೋಧನೆ ಮಾಡುವ ವಿಧಾನ ಮುಖ್ಯವಾಗಿದೆ. ಈ ಬಗೆಯ ಚಿಂತನೆಯನ್ನು ನಾರಾಯಣರು **ಶಾಲೆಯಲ್ಲಿ ಭಾಷೆ** ಎಂಬ ಲೇಖನದಲ್ಲಿ ಚರ್ಚಿಸಿದ್ದಾರೆ. ಭಾಷೆಯ ಬಳಕೆಯನ್ನು ಆಧರಿಸಿ ಕಲಿಕೆಯ ವಿಧಾನವನ್ನು ರೂಪಿಸಬೇಕಾಗಿದೆ. ಈಗಿನ ಶಾಲಾ ಶಿಕ್ಷಣದಲ್ಲಿ 'ಓದು' ಮತ್ತು 'ಬರಹ' ಕಲಿಸುವ ವಿಧಾನಗಳು ತುಂಬ ಸಾಂಪ್ರದಾಯಕವಾಗಿವೆ. ಇದರಿಂದ ಕಲಿಕೆ ಯಾಂತ್ರಿಕವಾಗಿ ಸಾಗುತ್ತದೆ. ಆದ್ದರಿಂದ ಬೋಧನೆ ಮತ್ತು ಕಲಿಕೆ ಪರಿಣಾಮಕಾರಿಯಾಗಬೇಕಾದರೆ ಕಲಿಸುವ ವಿಧಾನ ಬದಲಾಗಬೇಕಾಗಿದೆ ಎಂಬುದು ನಾರಾಯಣರ ನಿಲುವು ಚಿಂತನೆಗ ಹಚ್ಚುತ್ತದೆ.

ಭಾಷೆಯನ್ನು ಬಳಸುವ ಪ್ರತಿಯೊಬ್ಬರಿಗೂ ವ್ಯಾಕರಣದ ನಿಯಮಗಳೂ ಗೊತ್ತಿರುತ್ತವೆ. ಕನ್ನಡವನ್ನು ಮಾತನಾಡುವವರಿಗೆ ಕನ್ನಡದ ರಚನೆ ಗೊತ್ತಿರುತ್ತದೆ. ಅವರಿಗೆ ಮತ್ತೆ ವ್ಯಾಕರಣ ಏಕೆ ಹೇಳಿಕೊಡಬೇಕು? ತಾತ್ಪರ್ಯವಿಷ್ಟೆ. ಶಾಲೆಯಲ್ಲಿ ನಾವು ಇಂದು ಬೋಧಿಸುತ್ತಿರುವ ವ್ಯಾಕರಣ ಕನ್ನಡದ ರಚನೆಯಲ್ಲಿ ತಿಳಿಸಲು ಶಕ್ತವಾಗಿಲ್ಲದ ಕಾರಣ ಅಂತಹ ವ್ಯಾಕರಣ ಮಕ್ಕಳಿಗೆ ಬೇಕಿಲ್ಲ. ಉದಾ: 'ಚುನಾವಣೋತ್ತರ' ಎಂಬ ಪ್ರಯೋಗದಲ್ಲಿ ಸಂಧಿ ಕ್ರಿಯೆಯನ್ನು ಯಾವ ನಿಯಮದ ಮೂಲಕ ವಿವರಿಸಬಹುದು. 'ಚುನಾವಣೆ' ಮತ್ತು 'ಉತ್ತರ' ಎಂಬ ಪದಗಳ ನಡುವೆ ಸಂಧಿ ಕ್ರಿಯೆ ನಡೆದಿದೆ. ಇದು ಗುಣಸಂಧಿಯ ನಿಯಮ! ಆದರೆ ಪೂರ್ವಪದ ಚುನಾವಣೆ ಸಂಸ್ಕೃತವಲ್ಲ. ಹಾಗಾದರೆ ಇಲ್ಲಿ ಗುಣಸಂಧಿಯ ನಿಯಮ ಏಕೆ ಅನ್ವಯವಾಗಿದೆ? ವೈಯಾಕರಣಿಗಳು

ಪ್ರಯೋಗಗಳನ್ನು ನಿರಾಕರಿಸಲು ಸಾಧ್ಯವೆ? ಪ್ರಯೋಗಗಳಿಗೆ ಅವರು ಶರಣಾಗಬೇಕಲ್ಲವೆ? ಇಂತಹ ಹಲವಾರು ಸಮಸ್ಯೆಗಳನ್ನು ಪಟ್ಟಿ ಮಾಡುತ್ತ ಹೋಗಬಹುದು. ಇಂದಿನ ಕನ್ನಡದ ರಚನೆಯನ್ನು ವಿವರಿಸಲು ನಮ್ಮ ಸಾಂಪ್ರದಾಯಕ ನಿಯಮಗಳು ವಿಫಲವಾಗಿವೆ. ಈ ಅಂಶವನ್ನು ನಾರಾಯಣರು **ಶಾಲೆಯ ಮಕ್ಕಳಿಗೆ ವ್ಯಾಕರಣ** ಎಂಬ ಲೇಖನದಲ್ಲಿ ಸ್ಥೂಲವಾಗಿ ಮತ್ತು ಅರ್ಥಪೂರ್ಣವಾಗಿ ವಿವೇಚಿಸಿದ್ದಾರೆ. ನಮ್ಮ ಮಕ್ಕಳಿಗೆ ಭಾಷಾ ಬಳಕೆಯ ಸಾಧ್ಯತೆಗಳ ಬಗ್ಗೆ ಅರಿವು ಮೂಡಿಸಬೇಕು. ಅದಕ್ಕೆ ನೆರವಾಗುವ ವೈಚಾರಿಕ ನೆಲೆಯ ವ್ಯಾಕರಣ ರಚನೆಯಾಗಬೇಕು. ಭಾಷೆಯ ಬಳಕೆಯಲ್ಲಿ ನಡೆಯುವ ವ್ಯತ್ಯಾಸಗಳು, ಬದಲಾವಣೆಗಳು ತಿಳಿದುಕೊಳ್ಳಲು ನಮ್ಮ ಶಿಕ್ಷಕರನ್ನು ಸಿದ್ಧಗೊಳಿಸಬೇಕು. ಆ ಮೂಲಕ ವ್ಯಾಕರಣವನ್ನು ಕುರಿತು ನಮ್ಮ ದೃಷ್ಟಿ ಬದಲಾಗಬೇಕು ಎಂಬುದೇ ನಾರಾಯಣರ ವಿಚಾರವಾಗಿದೆ.

ಶಾಲಾ ಶಿಕ್ಷಣದಲ್ಲಿ ಈಗ ಕಲಿಸುತ್ತಿರುವ ವ್ಯಾಕರಣವು ಕನ್ನಡದ ರಚನೆ ಹೇಗಿದೆ? ಹಾಗೆ ಏಕಿದೆ? ಈ ಪ್ರಶ್ನೆಗಳಿಗೆ ಉತ್ತರ ಪಡೆಯಲು ಯತ್ನಿಸುವುದಿಲ್ಲ. ನಮ್ಮ ವ್ಯಾಕರಣಗಳು ಸೂತ್ರ ಮತ್ತು ಉದಾಹರಣೆ ಎಂಬ ಮಾದರಿಗೆ ಸಿಲುಕಿವೆ. ಹೇಗೆ? ಏಕೆ? ಎಂಬ ಪ್ರಶ್ನೆ ಹಾಕಿಕೊಳ್ಳಲಿಲ್ಲ. ಶಾಲೆಯ ಮಕ್ಕಳಿಗೆ ಸೂತ್ರ, ಉದಾಹರಣೆಯನ್ನು ಕಲಿಸಿಕೊಡುವುದಲ್ಲ. ಕನ್ನಡ ಭಾಷೆಯ ಬಳಕೆಯ ವೈವಿಧ್ಯತೆಯ ಕಲಿಕೆ ಮುಖ್ಯ. ಅದರಿಂದ ಭಾಷಾ ಕೌಶಲ್ಯಗಳ ಅಭಿವೃದ್ಧಿ ಆಗುತ್ತದೆ. ಇಂದು ನಾವು ಕಲಿಸುವ ವ್ಯಾಕರಣ ತುಂಬ ಸಾಂಪ್ರದಾಯಕವಾಗಿದೆ. **ಭಾಷೆಯಲ್ಲಿ ಹೇಗೆ ಮತ್ತು ಏಕೆ?** ಎಂಬ ಪ್ರಶ್ನೆಯನ್ನು ಹಾಕಿಕೊಳ್ಳುವುದಿಲ್ಲ. ಆದಕಾರಣ ಅಂತಹ ಶಾಲಾ ವ್ಯಾಕರಣವನ್ನು ಕೈಬಿಡುವುದು ಸೂಕ್ತವೆಂದು ನಾರಾಯಣ ಸಕಾರಣವಾಗಿಯೇ ಹೇಳಿದ್ದಾರೆ.

ನಾರಾಯಣರು **ನಮಗೆಷ್ಟು ಕನ್ನಡಬೇಕು?** ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಒಂದು ಲೇಖನದಲ್ಲಿ ಚರ್ಚಿಸಿದ್ದಾರೆ. ಕನ್ನಡವನ್ನು ಬಳಸುವವರಲ್ಲಿ ಬಹುಪಾಲು ಜನ ಕನ್ನಡವನ್ನು ಮೊದಲ ಭಾಷೆಯಾಗಿ ಕಲಿತವರು. ಕನ್ನಡದಲ್ಲಿ ಹತ್ತಾರು ಭಾಷಾ ಪ್ರಭೇದಗಳಿವೆ; ಗಿರಿಜನರಿಗೆ ತಮ್ಮ ಭಾಷೆ ಹೊರತುಪಡಿಸಿ ಬೇರೆ ಪ್ರಭೇದಗಳ ಪರಿಚಯ ವಿಲ್ಲ; ವಯಸ್ಕರ ಭಾಷಾಪಠ್ಯಕ್ರಮದಲ್ಲಿ ಏಕರೂಪತೆಯಿಲ್ಲ. ಇದರಿಂದ ಮಕ್ಕಳು ಯಾವ ಕನ್ನಡವನ್ನು ಎಷ್ಟು ಕಲಿಯಬೇಕು ಎಂಬ ಪ್ರಶ್ನೆ ಹಾಗೆ ಉಳಿದಿದೆ. ಇಂತಹ ಭಾಷಿಕ ಸ್ಥಿತಿಗಳು ಹೋಗಲಾಡಿಸಲು ಸೂಕ್ತ ಭಾಷಾನೀತಿ ಅವಶ್ಯವಾಗಿದೆ. ಭಾಷಾ ಪ್ರಭೇದಗಳು ಸಂಕೋಚದ ಕೇಂದ್ರಗಳಾಗಬಾರದು; ಹೊಸ ಸಾಧ್ಯತೆಗಳ ಕಡೆಗೆ ನಮ್ಮ ಶಾಲಾ ಶಿಕ್ಷಣ ತೆರೆದುಕೊಳ್ಳಬೇಕಾಗಿದೆ. ಈಗ ಪಠ್ಯಪುಸ್ತಕಗಳನ್ನು ಸರಕಾರವೇ ರಚಿಸಿ ಬಳಸುವ ಮೂಲಕ ಈ ಏರುಪೇರು ತಕ್ಕಮಟ್ಟಿಗೆ ನಿವಾರಣೆಯಾಗಿದೆ.

ನಮ್ಮ ನಾಡಿನಲ್ಲಿ ಸಾಕ್ಷರತೆಯ ಪ್ರಮಾಣವನ್ನು ಹೆಚ್ಚಿಸಲು ತಜ್ಞರು ಹಲವಾರು ಯೋಜನೆಗಳನ್ನು ಜಾರಿಗೊಳಿಸುತ್ತಿದ್ದಾರೆ. ಈ ಕಾರ್ಯಕ್ರಮದ ವ್ಯಾಪ್ತಿಗೆ ಬರುವವರು

ಬಹುಮಟ್ಟಿಗೆ ವಯಸ್ಕರರು. ಅವರಿಗೆ ಕೇಳುವಿಕೆ(ಗ್ರಹಿಕೆ), ಮಾತುಗಾರಿಕೆ ಕೌಶಲ್ಯಗಳು ಮೊದಲೇ ತಿಳಿದಿರುತ್ತವೆ. ಓದು ಮತ್ತು ಬರಹದ ಕೌಶಲ್ಯಗಳನ್ನು ಕಲಿಸುವುದು ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಮುಖ್ಯವಾಗಿರುತ್ತದೆ. ಹಲವು ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳ ಮೂಲಕ ಓದುವ ಕೌಶಲ್ಯವನ್ನು ಕಲಿಸಬಹುದು ಹಾಗೂ ಆ ಕಲಿಕೆ ಅದು ಅವರಿಗೆ ಅನಿವಾರ್ಯ. ಆದರೆ ಬರೆಹದ ಕೌಶಲ್ಯ ಅವರಿಗೆ ಅನಿವಾರ್ಯವಲ್ಲ. ಆಸಕ್ತಿ ಇದ್ದವರು ಕಲಿಯುತ್ತಾರೆ. ಅವರಿಗೆ ಬರೆವಣಿಗೆ ಕೌಶಲ್ಯ ಬಳಸುವ ಸಂದರ್ಭ ತುಂಬ ಕಡಿಮೆ. ಹೀಗೆ, ವಯಸ್ಕರಿಗೆ ಬರೆವಣಿಗೆಯ ಕಲಿಕೆಯನ್ನು ಒತ್ತಾಯ ಪೂರ್ವಕ ವಾಗಿ ಸೇರಿಸುವುದನ್ನು ಕೈಬಿಟ್ಟರೆ ಅಪಾರ ಪ್ರಮಾಣದ ಶ್ರಮ, ಸಮಯ ಮತ್ತು ಹಣ ಉಳಿತಾಯವಾಗುತ್ತದೆ. ಇದರಿಂದ **ವಯಸ್ಕರ ಭಾಷಾಕಲಿಕೆ** ಯಶಸ್ವಿಯಾಗುತ್ತದೆ ಎಂದು ನಾರಾಯಣರು ಸ್ಪಷ್ಟವಾಗಿ ಹೇಳಿದ್ದಾರೆ.

ಕನ್ನಡ ನಾಡಿನಲ್ಲಿ ಇಂಗ್ಲಿಶ್‌ನ್ನು ಎರಡನೆಯ ಭಾಷೆಯಾಗಿ ಕಲಿಸಲಾಗುತ್ತಿದೆ. ಹೊರಜಗತ್ತಿನಲ್ಲಿ ಜ್ಞಾನ ತಿಳಿದುಕೊಳ್ಳುವಲ್ಲಿ ಇಂಗ್ಲಿಶ್ ಜ್ಞಾನ ಅವಶ್ಯ. ಆದರೆ ಇಂಗ್ಲಿಶ್‌ನ್ನು ಹೇಗೆ ಕಲಿಸಬೇಕು ಹಾಗೂ ಕಲಿಯಬೇಕು ಎಂಬುದರ ಬಗ್ಗೆ ಸಾಕಷ್ಟು ಅಧ್ಯಯನ ನಡೆದರೂ ಗೊಂದಲಗಳು ಹಾಗೆ ಉಳಿದಿವೆ. ನಾರಾಯಣರು **ಇಂಗ್ಲಿಶ್‌ನ್ನು ಕನ್ನಡ ಮೂಲಕ ಕಲಿಯುವುದು ಎಂದರೇನು?** ಎಂಬ ಪ್ರಶ್ನೆಯನ್ನು ಎತ್ತಿಕೊಂಡು ನಮ್ಮ ಮಕ್ಕಳು ಉನ್ನತ ಶಿಕ್ಷಣವನ್ನು ಪಡೆಯುವಾಗ ಮತ್ತು ಪಡೆದ ನಂತರ ಇಂಗ್ಲಿಶ್‌ನ್ನು ಎಷ್ಟು ಬಳಸಬೇಕೋ ಅಷ್ಟು ಸಾಮರ್ಥ್ಯವನ್ನು ಪಡೆದುಕೊಂಡಿರುತ್ತಾರೆ. ಇದರಿಂದ ಆಧುನಿಕ ಜೀವನದ ಅವಶ್ಯಕತೆಗಳಿಂದ ಅವರನ್ನು ವಂಚಿತರನ್ನಾಗಿ ಮಾಡಿದಂತಾಗು ವುದಿಲ್ಲ ಎಂಬ ಅವರ ನಿಲುವು ವಿಚಾರ ಪ್ರಚೋದಕವಾಗಿದೆ.

ಮಗುವಿನ ಭಾಷಾಕಲಿಕೆಯ ಅಧ್ಯಯನದಲ್ಲಿ ಶಿಕ್ಷಣತಜ್ಞರು, ಭಾಷಾತಜ್ಞರು ಆಸಕ್ತಿ ತಳೆದಿದ್ದಾರೆ. ಮಗುವಿನ ವಯೋಮಾನವನ್ನು ಅನುಸರಿಸಿ ಹಲವು ಬಗೆಯ ಅಧ್ಯಯನ ಮಾದರಿಗಳು ಬೆಳೆದಿವೆ. ಮಕ್ಕಳ ಕಲಿಕೆ ಮತ್ತು ಗ್ರಹಿಕೆಯ ಬಗ್ಗೆ 'ಸಹಜ ವಾತಾವರಣ ಮಾದರಿ' ರೂಪುಗೊಂಡಿದೆ. ಮಗುವಿನ ಭಾಷಾಕಲಿಕೆಯನ್ನು ಅರಿಯುವವರು ಎರಡು ಗುರಿಗಳನ್ನು ಇಟ್ಟುಕೊಂಡಿರುತ್ತಾರೆ. ಅವು ಯಾವುವೆಂದರೆ ಮಗು ಹೇಗೆ ಮಾತನಾಡು ತ್ತದೆ. ಇನ್ನೊಂದು ಅನ್ಯರ ಮಾತುಗಳನ್ನು ಹೇಗೆ ಗ್ರಹಿಸುತ್ತದೆ. ಈ ಎರಡು ಗುರಿಗಳು ಪರಸ್ಪರ ಪೂರಕಗಳಾಗಿವೆ. ಈ ಅಂಶವನ್ನು ನಾರಾಯಣರು **ಮಗುವಿನ ಭಾಷೆಯ ಅಧ್ಯಯನ** ಎಂಬ ಲೇಖನದಲ್ಲಿ ಅರ್ಥಪೂರ್ಣವಾಗಿ ವಿವೇಚಿಸಿದ್ದಾರೆ. ಅವರು ತಾಳುವ ತೀರ್ಮಾನವೆಂದರೆ ಮಗುವಿಗೆ ಒದಗುವ ಮಾತಿನ ಮಾದರಿಯ ಸ್ವರೂಪವನ್ನು ಅರಿತರೆ ಆಗ ಆ ಮಾದರಿಗಳು ಭಾಷಾಕಲಿಕೆಯಲ್ಲಿ ತುಂಬ ನೆರವಾಗುತ್ತವೆ.

ಮಗು ಹುಟ್ಟಿದ ತಮ್ಮ ಮೊದಲ ತಿಂಗಳುಗಳಲ್ಲೇ ಭಾಷೆಯ ಜ್ಞಾನವನ್ನು ಹೊಂದಿ ರುತ್ತದೆ. ಮಗು ತೊದಲು ಮಾತನಾಡಲು ಆರಂಭಿಸುವುದಕ್ಕೆ ಮುಂಚಿನ ಈ

ಬೆಳವಣಿಗೆಯನ್ನು ನಾರಾಯಣರು **ಮಕ್ಕಳಲ್ಲಿ ಭಾಷಾಕಲಿಕೆಯ ಆರಂಭ** ಎಂಬ ಲೇಖನದಲ್ಲಿ ಮೂರು ಹಂತಗಳಲ್ಲಿ ಗುರುತಿಸುತ್ತಾರೆ. ಅವು ಯಾವುವೆಂದರೆ ಮಾತಿನ ಉತ್ಪತ್ತಿ, ಮಾತಿನ ಗ್ರಹಿಕೆ, ಮಾತಿನ ಪರಸ್ಪರ ಸಂವಹನ ಕ್ರಿಯೆ. ಮಗುವಿನ ಭಾಷಾ ಬೆಳವಣಿಗೆಯಲ್ಲಿ ಅದು ಹುಟ್ಟಿದ ತಕ್ಷಣ 'ಅಳು'ವಿಗೆ ತುಂಬ ಮಹತ್ವವಿದೆ. ಮಗು ಹುಟ್ಟಿದಾಗಿನಿಂದ ೧೨ ತಿಂಗಳುಗಳವರೆಗೆ ಅದರ ಮಾತಿನ ಉತ್ಪಾದನ ಸಾಮರ್ಥ್ಯಗಳಲ್ಲಿ ಅನೇಕ ಬದಲಾವಣೆಗಳಾಗುತ್ತವೆ. ಆ ಬದಲಾವಣೆಗಳನ್ನು ನಾರಾಯಣರು ಈ ರೀತಿ ಗುರುತಿಸಿದ್ದಾರೆ. ೧. ಜೈವಿಕ ಶಬ್ದಗಳು(ಕೆಮ್ಮು, ಹೂಂಕರಿಕೆ ಮುಂತಾದುವು), ೨. 'ಗೂ' ಶಬ್ದ ಮತ್ತು ನಗುವುದು, ೩. ಧ್ವನ್ಯಂಗಳ ಆಟ, ೪. ತೊದಲುನುಡಿ, ೫. ಇಂಪಾದ ಮಾತು. ಎರಡನೆಯ ಹಂತ ಮಾತನ್ನು ಗ್ರಹಿಸುವುದು ಮತ್ತು ಪ್ರತಿಕ್ರಿಯಿಸುವುದು. ಮೂರನೆಯ ಹಂತ ಮಾತಿನ ಪರಸ್ಪರ ಸಂವಹನ ಕ್ರಿಯೆ. ಹೀಗೆ, ಮಗು ಹುಟ್ಟಿದಾಗಿನಿಂದ ಒಂದು ವರ್ಷ ಆಗುವವರೆಗಿನ ಅಂದರೆ ಭಾಷಾಕಲಿಕೆಯ ಆರಂಭ ಹಂತವನ್ನು ತುಂಬ ಅರ್ಥಪೂರ್ಣವಾಗಿ ವಿವರಿಸಿದ್ದಾರೆ.

ನಮ್ಮ ಪ್ರಾಥಮಿಕ ಶಾಲಾ ಶಿಕ್ಷಣದಲ್ಲಿ ಭಾಷಾ ಬೋಧನೆ ಕುರಿತಂತೆ ಅಧ್ಯಯನಗಳು ಕಡಿಮೆ. ಭಾಷೆಯನ್ನು ಹೇಗೆ, ಎಷ್ಟು, ಕಲಿಕೆಯ ಸಾಧನಗಳು ಈ ಬಗ್ಗೆ ಭಾಷಾಯೋಜನೆಗಳನ್ನು ರೂಪಿಸುತ್ತಿಲ್ಲ. ಈ ಬಗ್ಗೆ ಖಚಿತತೆ ಬರಬೇಕಾಗಿದೆ. ಭಾಷಾಶಿಕ್ಷಣದಲ್ಲಿ ಭಾಷಾ ಬೋಧನೆಯನ್ನು ಪಠ್ಯಕ್ರಮ, ಬೋಧನೆ ಹಾಗೂ ಮೌಲ್ಯಮಾಪನ ಎಂಬ ಮೂರು ಹಂತಗಳಲ್ಲಿ ಪರಿಶೀಲಿಸಬಹುದು. ಭಾಷಾಪಠ್ಯಕ್ರಮದ ಹಿಂದೆ 'ಸರಳತೆಯಿಂದ ಸಂಕೀರ್ಣತೆ ಕಡೆಗೆ' ಎಂಬ ತತ್ವ ಬಲವಾಗಿದೆ. ಪಾಠ ಬೋಧನೆಯಲ್ಲಿ ಭಾಷಾಕೌಶಲ್ಯಗಳ ಅಭಿವೃದ್ಧಿಗೆ ಅವಕಾಶ ಕೊಡಬೇಕು. ಬೋಧನೆಯ ಸಿದ್ಧಾಂತಗಳ ಮತ್ತು ವಾಸ್ತವ ಸ್ಥಿತಿಗಳ ನಡುವೆ ಅಗಾಧ ಕಂದರ ಬೀಳುತ್ತಿದೆ; ಬೋಧನೆ-ಕಲಿಕೆ-ಮೌಲ್ಯಮಾಪನದ ನಡುವೆ ಪೂರಕ ಸಂಬಂಧ ಇರಬೇಕು. ಈ ಕುರಿತು ಭಾಷಾಯೋಜನೆ ಅಗತ್ಯ ಎಂದು ನಾರಾಯಣರು **ಪ್ರಾಥಮಿಕ ಶಿಕ್ಷಣ: ಭಾಷಾಬೋಧನೆ** ಎಂಬ ಲೇಖನದಲ್ಲಿ ವಿವೇಚಿಸಿದ್ದಾರೆ.

ಓದುವ ಕ್ರಮದಲ್ಲಿ ಹಲವು ಪಲ್ಲಟಗಳಿವೆ. ನಮಗೆ ಓದು ಕಲಿಸಿದವರು ರೇಖಾತ್ಮಕ ಓದಿನ ತರಬೇತಿಯನ್ನು ನೀಡಿದ್ದಾರೆ. ಈಗಲೂ ಶಾಲೆಯಲ್ಲಿ ಇಂತಹ ಓದನ್ನೇ ಕಲಿಸುವುದು. ಪಾಠವೆಂದರೆ ಮೊದಲನೆಯ ವಾಕ್ಯದಿಂದ ಕೊನೆಯ ವಾಕ್ಯದವರೆಗೆ ಅರ್ಥವತ್ತಾಗಿ ಓದುವುದು, ಆದರೆ ಈಗ ನಮ್ಮ ಓದಿನ ಪಠ್ಯಗಳು ಬೇರೆ ಬೇರೆ ರೀತಿಯ ಓದನ್ನು ಬಯಸುತ್ತವೆ. ಉದಾ: ದಿನಪತ್ರಿಕೆಯ ಓದು, ದೂರದರ್ಶನದ ವಾಹಿನಿಗಳ ಓದು, ಗಣಕಯಂತ್ರಗಳ ಬಳಕೆಯ ಓದು ಅಲ್ಲಿ ವಾಚಕರು ಅವರವರ ಆಸಕ್ತಿಯ ವಲಯವನ್ನು ಆಯ್ಕೆ ಮಾಡಿಕೊಂಡು ಓದುತ್ತಾರೆ. ಇಂತಹ ಹೊಸ ಓದಿಗೆ ನಮ್ಮನ್ನು ನಾವು ಹೊಂದಿಕೊಳ್ಳುವುದು ಅನಿವಾರ್ಯವಾಗಿದೆಯೆಂದು

ನಾರಾಯಣರು **ಓದುವ ಹೊಸ ಬಗೆಗಳು** ಎಂಬ ಲೇಖನದಲ್ಲಿ ಸಲಹೆ ಮಾಡಿದ್ದಾರೆ. ಈ ಅಂಶವನ್ನು ಹಿನ್ನೆಲೆಯಾಗಿಟ್ಟುಕೊಂಡು ನಮ್ಮ ಓದಿನ ಕಲಿಕೆ ಇರಬೇಕಾಗುತ್ತದೆ. ಶಿಕ್ಷಣದಲ್ಲಿ ಓದಿನ ಕೌಶಲ್ಯವನ್ನು ಕಲಿಯುವವರು ಈ ದಿಕ್ಕಿನಲ್ಲಿ ಯೋಚಿಸಬೇಕಾದ ಅವಶ್ಯಕತೆ ಎಂದಿಗಿಂತ ಈಗ ಹೆಚ್ಚಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಪದವಿ ತರಗತಿಗಳಲ್ಲಿ ಭಾಷಾ ಪಠ್ಯಕ್ರಮದ ಉದ್ದೇಶ, ಭಾಷಾಕೌಶಲ್ಯಗಳ ಅಭಿವೃದ್ಧಿಯೋ ಅಥವಾ ಸಾಹಿತ್ಯ ಸಂಸ್ಕೃತಿಗೆ ಪ್ರವೇಶ ಪಡೆಯುವದೋ ಈ ಬಗ್ಗೆ ಭಾಷಾಯೋಜಕರಿಗೆ ಸ್ಪಷ್ಟತೆ ಇಲ್ಲ. **ಪದವಿ ಶಿಕ್ಷಣದಲ್ಲಿ ಭಾಷಾಕೌಶಲ್ಯಗಳ ನಿರ್ವಹಣೆ** ಎಂಬ ಲೇಖನದಲ್ಲಿ ಈ ಬಗ್ಗೆ ಚರ್ಚಿಸಿದ್ದಾರೆ. ಪದವಿ ತರಗತಿಗಳಲ್ಲಿ ಭಾಷಾಕೌಶಲ್ಯಗಳ ಬಳಕೆ ಮತ್ತು ಸಂವಹನ ಕೌಶಲ್ಯಗಳ ಬೆಳವಣಿಗೆಯ ಕಡೆಗೆ ಗಮನಕೊಡುವುದು ವಿದ್ಯಾರ್ಥಿಯ ಸಮಗ್ರ ಬೆಳವಣಿಗೆಯ ದೃಷ್ಟಿಯಿಂದ ಅವಶ್ಯ. ಈ ಲೇಖನದಲ್ಲಿ ನಾರಾಯಣರು ಕೆಲವು ಮೌಲಿಕ ಅಂಶಗಳ ಕಡೆಗೆ ತಜ್ಞರ ಗಮನಸೆಳೆದಿದ್ದಾರೆ. ಪದವಿ ತರಗತಿಗಳ ಭಾಷಾಕಲಿಕೆ-ಬೋಧನೆಗಳ ಉದ್ದೇಶಗಳು ಹೆಚ್ಚು ನಿಖರಗೊಳ್ಳಬೇಕು. ಭಾಷಾಕೌಶಲ್ಯಗಳ ಬಳಕೆಯ ಬಗೆಗೆ ಇರುವ ಅಪಕಲ್ಪನೆಗಳನ್ನು ಮರುಪರಿಶೀಲನೆಗೆ ಗುರಿ ಮಾಡಬೇಕು. ಭಾಷಾಸಂವಹನ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಲು ಹೆಚ್ಚಿನ ಗಮನ ನೀಡಬೇಕು. ಕನ್ನಡ ಮತ್ತು ಇಂಗ್ಲಿಶ್ ಭಾಷೆಗಳ ನಡುವೆ ಇರುವ ಸಂಬಂಧದ ನೆಲೆಗಳನ್ನು ಗಟ್ಟಿಗೊಳಿಸಬೇಕು ಎಂದು ತುಂಬ ಮಹತ್ವದ ಸೂಚನೆಗಳನ್ನು ನೀಡಿದ್ದಾರೆ.

ಭಾಷಾಕಲಿಕೆ, ಬೋಧನೆ, ಕೌಶಲ್ಯಗಳ ಅಭಿವೃದ್ಧಿ ಹಾಗೂ ಹಿಂದಿನ ಭಾಷಾ ಯೋಜನೆಗಳ ಶಕ್ತಿ-ಮಿತಿಗಳನ್ನು ಕುರಿತಂತೆ ನಾರಾಯಣರ ಲೇಖನಗಳು ಅಮೂಲ್ಯವೂ ಉಪಯುಕ್ತವೂ ಆಗಿವೆ. ಭಾಷಾಕಲಿಕೆಯಲ್ಲಿ ಸುಧಾರಣೆ ಅಗತ್ಯ. ಕಲಿಕೆ-ಬೋಧನೆ-ಮೌಲ್ಯಮಾಪನ ಇವುಗಳಲ್ಲಿಯ ಏರುಪೇರುಗಳು ನಿವಾರಣೆಯಾಗಬೇಕಾಗಿದೆ ಎಂಬುದು ಅವರ ಲೇಖನಗಳ ತಿರುಳು. ಕಲಿಕೆಯಲ್ಲಿ ನಮ್ಮ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳೇನು ಎಂಬುದರ ವಾಸ್ತವಿಕ ದೃಷ್ಟಿಕೋನ ಅವರಿಗೆ ಮುಖ್ಯವಾಗಿದೆ. ಹೀಗಾಗಿ ಲೇಖನಗಳ ಉದ್ದಕ್ಕೂ ನಾರಾಯಣರು ತೋರಿಸಿದ ಸೂಚನೆಗಳು ಕೇವಲ ಕರ್ನಾಟಕಕ್ಕೆ ಅಷ್ಟೇ ಅಲ್ಲ ಭಾರತದ ಭಾಷಾಶಿಕ್ಷಣ ವ್ಯವಸ್ಥೆಯ ಬದಲಾವಣೆಗೂ ತೋರುಬೆರಳುಗಳಾಗಿವೆ. ಅವರ ಬರೆಹಗಳಿಗೆ ಗಂಭೀರವಾದ ತಾತ್ವಿಕ ಚಿಂತನೆಯ ಹಿನ್ನೆಲೆಯಿದೆ. ನಾರಾಯಣರು ತಮ್ಮ ಲೇಖನಗಳ ಮೂಲಕ ಭಾಷಾಬೋಧನೆ ಮತ್ತು ಕಲಿಕೆ ಅಧ್ಯಯನಕ್ಕೆ ಹೊಸ ಮಾದರಿಯನ್ನು ರೂಪಿಸಿದರು. ಆ ಕ್ಷೇತ್ರಕ್ಕೆ ಅವರು ಹಾಕಿಕೊಟ್ಟ ಮಾರ್ಗ ಅದ್ವಿತೀಯವಾಗಿದೆ.

೭೭

ಭಾಷಾಬೋಧನೆ : ಆಧುನಿಕ ಚಿಂತನೆ

ಭಾಷಾ ಶಿಕ್ಷಣದ ಗುಣಮಟ್ಟವನ್ನು ಮೌಲೀಕರಿಸುವ ಉದ್ದೇಶದಿಂದ ಆಧುನಿಕ ಬೋಧನಾ ತಂತ್ರಗಳನ್ನು ಶಿಕ್ಷಕರು ಉಪಯೋಗಿಸಬೇಕಾಗಿದೆ. ಅದಕ್ಕೆ ಸಹಾಯಕವಾಗುವಂತೆ 'ಶೈಕ್ಷಣಿಕ ತಂತ್ರಜ್ಞಾನ' ಎಂಬ ಹೊಸ ಜ್ಞಾನಶಾಖೆ ರೂಪುಗೊಂಡಿದೆ. ಶೈಕ್ಷಣಿಕ ತಂತ್ರಜ್ಞಾನವು ಕಲಿಕೆ-ಬೋಧನೆಯ ಪ್ರಕ್ರಿಯೆಯನ್ನು ಸುಧಾರಿಸುವ ಸಾಧನ. ಅದು ಶಿಕ್ಷಣದ ತಾತ್ವಿಕತೆಗಿಂತ ಪ್ರಾಯೋಗಿಕತೆಗೆ ಒತ್ತುಕೊಡುತ್ತದೆ. ತಂತ್ರಜ್ಞಾನದ ಫಲಿತವೇ ಆಧುನೀಕರಣ. ಭಾಷೆಯಂತೆ ತಂತ್ರಜ್ಞಾನವು ನಿರಂತರವಾದ ಪ್ರಕ್ರಿಯೆಯಾಗಿ, ಯಾವಾಗಲೂ ಬದಲಾವಣೆ ಬಯಸುತ್ತದೆ. ಭಾಷಾಧ್ಯಯನಕ್ಕೆ ಹೊಸ ವಿನ್ಯಾಸಗಳನ್ನು ತಂದುಕೊಡುತ್ತದೆ. ಇಂದಿನ ದಿನಗಳಲ್ಲಿ ಬದಲಾದ ಸಮಾಜದ ಪರಿಸರದೊಂದಿಗೆ ಶಿಕ್ಷಣವನ್ನು ಅರ್ಥಪೂರ್ಣ ಅನುಸಂಧಾನ ಗೊಳಿಸಬೇಕಾಗಿದೆ. ಈ ಯುಗದಲ್ಲಿ ಶಿಕ್ಷಣ ಶಿಶು ಕೇಂದ್ರಿತವಾಗಿರುವುದರಿಂದ ವಿದ್ಯಾರ್ಥಿಗಳು ವಿಷಯವನ್ನು ಶಿಕ್ಷಕರಿಗಿಂತ ಹೆಚ್ಚಾಗಿ ಆಧುನಿಕ ಬೋಧನ ಯಂತ್ರಗಳಿಂದ ಕಲಿಯುತ್ತಾರೆ; ಕಲಿಯಲು ಬಯಸುತ್ತಾರೆ. ಇಲ್ಲಿ ವಿದ್ಯಾರ್ಥಿಗಳ ವೈಯಕ್ತಿಕ ಭಿನ್ನತೆಗಳಿಗೆ, ಆಸಕ್ತಿ ಅಭಿರುಚಿಗಳಿಗೆ ಅನುಗಣವಾಗಿ ಕಲಿಕೆಯ ಕ್ರಿಯೆ ನಡೆಯುತ್ತದೆ. ಸಾಂಪ್ರದಾಯಕ ಬೋಧನಾ ವಿಧಾನಗಳು(ಉಪನ್ಯಾಸ ಪದ್ಧತಿ, ಚರ್ಚಾಪದ್ಧತಿ ಮುಂತಾದುವು). ತಮ್ಮನ್ನು ತಾವು ಮೀರುವುದರ ಮೂಲಕ ತಮ್ಮ ಅನನ್ಯತೆಗಳನ್ನು ಗುರುತಿಸುವುದಕ್ಕೆ ಸದಾ ಹವಣಿಸುತ್ತವೆ. ಈ ಪ್ರಕ್ರಿಯೆ ಭಾಷಾ ಶಿಕ್ಷಣದಲ್ಲಿ ಅಂತಸ್ತವಾಗಿರುತ್ತದೆ. ಇನ್ನೊಂದು ಮಾತನ್ನು ಇಲ್ಲಿ ಸ್ಪಷ್ಟಪಡಿಸಬೇಕಾಗಿದೆ. ತಂತ್ರಜ್ಞಾನವೆಂದರೆ ಕೇವಲ ಆಧುನಿಕ ಸಾಧನಗಳ ಮೂಲಕ ನಡೆಯುವ ಬೋಧನೆಯಲ್ಲ ಬದಲಾದ ಪರಿಸ್ಥಿತಿಗೆ ತಕ್ಕಂತೆ ಬೋಧನೆ-ಕಲಿಕೆಯ ಪ್ರಕ್ರಿಯೆಯಲ್ಲಿ ಹೊಸತನ ನೀಡುವುದಾಗಿದೆ. ಇದನ್ನೇ ಇನ್ನೊಂದರ್ಥದಲ್ಲಿ ಹೇಳುವುದಾದರೆ ಆಧುನೀಕರಣವನ್ನು ಮೈಗೂಡಿಸಿಕೊಂಡು ಭಾಷಾಶಿಕ್ಷಣದಲ್ಲಿ ಕ್ರಿಯಾಶೀಲತೆ ತರುವುದಾಗಿದೆ. ಈ ಸಂಪ್ರಬಂಧ

ದಲ್ಲಿ ಶಾಲಾ ಶಿಕ್ಷಣದ ವ್ಯಾಕರಣ ಬೋಧನೆಯಲ್ಲಿ ಚಲನಶೀಲತೆ ತರುವ ಬಗೆಯನ್ನು ಕುರಿತು ಚರ್ಚೆ ಬೆಳೆಸಲಾಗಿದೆ.

ಮಗು ಶಾಲಾ ಶಿಕ್ಷಣವನ್ನು ಪ್ರವೇಶಿಸುವ ಮೊದಲೇ ಭಾಷೆಯ ಎರಡು ಪ್ರಮುಖ ಕೌಶಲ್ಯಗಳನ್ನು(ಆಲಿಸುವಿಕೆ, ಮಾತುಗಾರಿಕೆ) ಕರಗತ ಮಾಡಿಕೊಂಡಿರುತ್ತದೆ. ಉಳಿದೆರಡು ಕೌಶಲ್ಯಗಳನ್ನು(ಓದು, ಬರೆಹ) ಶಾಲೆಯಲ್ಲಿ ತರಬೇತು ಗೊಳಿಸಲಾಗುತ್ತದೆ. ಭಾಷಿಕರು ಮಾತಿನ ಪಾತಳಿಯಿಂದ ಬರೆಹದ ಪಾತಳಿಗೆ ಬಂದದ್ದೇ ಒಂದು ಬಗೆಯ ತಂತ್ರಜ್ಞಾನ. ಸುಲಭವಾದುದನ್ನು ಮೊದಲು ಕಲಿತು ನಂತರ ಕಠಿಣ ವಿಷಯಗಳನ್ನು ಕಲಿಸುವುದು ಭಾಷಾಧ್ಯಯನದ ಪರಿಪಾಠ. ಕೆ.ವಿ. ನಾರಾಯಣರು ಒಂದು ಸಂದರ್ಭದಲ್ಲಿ ಹೇಳಿದ ಮಾತನ್ನೇ ಬಳಸಿ ಹೇಳುವುದಾದರೆ 'ಇದರರ್ಥ ನಮ್ಮ ಸಮಸ್ಯೆಗಳನ್ನು ನಮ್ಮ ಅರಿವಿನ ಕೇಂದ್ರಕ್ಕೆ ತಂದು ಭಾಷಾ ಗೊಂದಲಗಳನ್ನು ನಿವಾರಿಸುವುದು ಭಾಷಾ ಬೋಧನೆಯ ಮುಖ್ಯ ಉದ್ದೇಶ.' ಇದರಿಂದ ಭಾಷಾ ಕಲಿಕೆ ಯಾಂತ್ರಿಕವಾಗದೆ ರಂಜಕವೂ ಕುತೂಹಲ ಕರವೂ ಆಗಿ ಕಲಿಯುವಲ್ಲಿ ಕಲಿಸುವ ಹುಮ್ಮಸ್ಸು ಸದಾ ಹರಿತವಾಗುತ್ತದೆ. ತತ್ಪರಿಣಾಮ ವಾಗಿ ಭಾಷಾಭ್ಯಾಸ ಮತ್ತು ಭಾಷಾ ಚಟುವಟಿಕೆಗಳು ಸೃಜನಶೀಲತೆಯಿಂದ ಕೂಡಿರುತ್ತವೆ.

ಇಂದಿನ ನಮ್ಮ ಶಾಲಾ ವ್ಯಾಕರಣಗಳನ್ನು ಗಮನಿಸಿದಾಗ ಅವು ಕೇವಲ ಸೂತ್ರ ಉದಾಹರಣೆಯ(ಲಕ್ಷ್ಯ-ಲಕ್ಷಣ ಸಂಬಂಧ) ಮಾದರಿಗೆ ಸಿಲುಕಿವೆ. ಭಾಷೆಯ ರಚನೆ ಮತ್ತು ಬಳಕೆಕಗೆ ಒತ್ತುಕೊಟ್ಟಿಲ್ಲ. ಕನ್ನಡವನ್ನು ಮಾತೃಭಾಷೆಯುಳ್ಳವರಿಗೆ ಕನ್ನಡದ ವ್ಯಾಕರಣದ ನಿಯಮಗಳನ್ನು ಕಲಿಸುವುದರಲ್ಲಿ ಅರ್ಥವಿಲ್ಲ. ಅದರ ಬದಲಾಗಿ ಭಾಷಾ ರಚನೆಯ ಹೊಸಸಾಧ್ಯತೆಗಳನ್ನು ರೂಢಿಸಿಕೊಂಡು ಭಾಷಾ ಸೃಜನಶೀಲತೆಗೆ ಅವಕಾಶ ಕೊಡಬೇಕು. ಹೊಸ ಹೊಸ ಪದರಚನೆ, ಬಳಕೆಯ ವಿವರಣೆ, ನಿರೂಪಣೆ ಇವು ಕುತೂಹಲವಾಗಿ ಭಾಷೆಯ ಕ್ರಮಾನುಗತ ಕಲಿಕೆಗೆ ಇಂಬುಗೊಡಬೇಕು. ಈ ನಿಟ್ಟಿನಲ್ಲಿ ಶಾಲಾ ಶಿಕ್ಷಣದಲ್ಲಿ ಭಾಷಾ ಬೋಧನೆ ಮತ್ತು ಕಲಿಕೆಯನ್ನು ಕುರಿತಂತೆ ಚಿಂತನೆ-ಪ್ರಯೋಗಗಳು ನಡೆದಿವೆ. ತತ್ಪರಿಣಾಮವಾಗಿ 'ಅಣುಬೋಧನೆ' ಎಂಬ ಹೊಸ ಪರಿಕಲ್ಪನೆ ಜಾರಿಗೆ ಬಂದಿದೆ.

ಅಣುಬೋಧನೆಯು ಸಾಂಪ್ರದಾಯಿಕ ವರ್ಗಬೋಧನೆಯ ಇತಿಮಿತಿಗಳನ್ನು ವಿಶ್ಲೇಷಿಸಿ ಅದರ ಸಂಕೀರ್ಣತೆಯನ್ನು ಕಡಿಮೆ ಮಾಡುತ್ತದೆ. ಭಾಷಾ ಕೌಶಲ್ಯಗಳನ್ನು ತರಬೇತಿ ನೀಡುವ ಪ್ರಮುಖ ಕಾರ್ಯ ಅಣುಬೋಧನೆಯ ಮೂಲಕ ನಡೆಯುತ್ತದೆ. ಅದು ವರ್ಗದ ಗಾತ್ರವನ್ನು ಮಿತಿಗೊಳಿಸಿ ಚಿಕ್ಕ ಚಿಕ್ಕ ಹಂತಗಳ ಮೂಲಕ 'ರೇಖಾತ್ಮಕ ಸರಣಿ'ಯಿಂದ ಕಲಿಕೆಯ ಕ್ರಿಯೆ ನಡೆಯುತ್ತದೆ.

- ವಿವರಣೆ
- ಸ್ಪಷ್ಟೀಕರಣ
- ಪ್ರಶ್ನಿಸುವಿಕೆ

- ವಿದ್ಯಾರ್ಥಿಗಳ ಪ್ರತಿಕ್ರಿಯೆ
- ಮರುಪೋಷಣೆ
- ಸಂಯೋಜನೆ
- ಮೌಲ್ಯಮಾಪನ

ಈ ಅಂಶಗಳು ಅಣುಬೋಧನೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಘಟಕ: ೧

ವಿಷಯ: ವ್ಯಾಕರಣ (ವಚನ ವ್ಯವಸ್ಥೆ)

ಶಿಕ್ಷಕ: ಕನ್ನಡ ಭಾಷೆಯಲ್ಲಿ ವಸ್ತು, ಪ್ರಾಣಿ ಅಥವಾ ವ್ಯಕ್ತಿಗಳ ಸಂಖ್ಯೆಯನ್ನು ತಿಳಿಸುವ ಶಬ್ದಗಳನ್ನು 'ವಚನ' ಎಂದು ಹೇಳುತ್ತಾರೆ. ವಚನಗಳಲ್ಲಿ ಏಕವಚನ ಮತ್ತು ಬಹುವನಗಳೆಂದು ಎರಡು ವಿಧ. ವಸ್ತು, ಪ್ರಾಣಿ ಅಥವಾ ವ್ಯಕ್ತಿಗಳ ಸಂಖ್ಯೆ ಒಂದು ಎಂದು ತಿಳಿಸುವ ಶಬ್ದ 'ಏಕವಚನ' ಎನಿಸುವುದು. ವಸ್ತು, ಪ್ರಾಣಿ ಅಥವಾ ವ್ಯಕ್ತಿಗಳ ಸಂಖ್ಯೆ ಒಂದಕ್ಕಿಂತ ಹೆಚ್ಚು ಎಂದು ತಿಳಿಸುವ ಶಬ್ದವು ಬಹುವಚನ ಎನಿಸುವುದು.

ಉದಾಹರಣೆ:	**ಏಕವಚನ**	**ಬಹುವಚನ**
	ಹುಡುಗ	ಹುಡುಗರು
	ಮಠ	ಮಠಗಳು
	ನಾನು	ನಾವು

ಪ್ರಶ್ನೆಗಳ ಮೂಲಕ ವಿದ್ಯಾರ್ಥಿಗಳ ಪ್ರತಿಕ್ರಿಯೆ ಬಯಸುವುದು.

ಭಾಷಾ ಚಟುವಟಿಕೆ: ಕೊಟ್ಟಿರುವ ವಾಕ್ಯಗಳಲ್ಲಿ ವಚನ ಬದಲಾಯಿಸಿ ವಾಕ್ಯಬರೆಯಿರಿ.

೧. ಆಟಗಾರ ನಿಯಮ ಬದ್ಧವಾಗಿ ಆಡಿದ

ವಿದ್ಯಾರ್ಥಿ: ಆಟಗಾರರು ನಿಯಮ ಬದ್ಧವಾಗಿ ಆಡಿದರು

೨. ಆ ಮನೆ ಬಹಳ ದೊಡ್ಡದು

ವಿದ್ಯಾರ್ಥಿ: ಆಮನೆಗಳು ಬಹಳ ದೊಡ್ಡವು ಇತ್ಯಾದಿ.

ಅಣುಬೋಧನೆಯಲ್ಲಿ ಸಂಯೋಜನೆ ಮತ್ತು ಡ್ರಿಲ್(ಪುನರಾವರ್ತನೆ) ಮೂಲಕ ಪಾಠ ಸಾಗುವುದರಿಂದ ಕಲಿಕೆ ಅರ್ಥಪೂರ್ಣವಾಗುತ್ತದೆ.

ಘಟಕ: ೨

ವಿಷಯ: ಮಾದರಿಯಂತೆ ಪದ ಗುರುತಿಸುವುದು

ಮಾದರಿ: [ಶಾಲೆ] - ವಿದ್ಯಾರ್ಥಿಗಳು ಕಲಿಯಲು ಸೇರುವ ಸ್ಥಳ ಭಾಷಾಭ್ಯಾಸ

[ ] - ಪುಸ್ತಕಗಳನ್ನು ಸಂಗ್ರಹಿಸಿ ಇಟ್ಟಿರುವ ಸ್ಥಳ

[ ] - ಆಟ ಆಡಲು ಅನುಕೂಲವಾದ ಬಯಲು

ಇದರಂತೆ ಶಿಕ್ಷಕರು ಮಾದರಿಯೊಂದನ್ನು ಕೊಟ್ಟು ಅದರ ಸಾದೃಶ್ಯದ ಮೂಲಕ ಹೊಸ ಪದಗಳನ್ನು ರಚಿಸುವಂತೆ ಸೂಚಿಸಬೇಕು.

ಚಿತ್ರ ಬಿಡುಸುವವ	ಚಿತ್ರಗಾರ
ಮಾಲೆ ಮಾಡುವವ	
ಕಥೆ ಬರೆಯುವವ	
ಬಳೆ ಮಾಡುವವ	

ಇದರಿಂದ ವಿದ್ಯಾರ್ಥಿಗಳಲ್ಲಿ ಕನ್ನಡ ಪದರಚನೆಯ ರಚನೆ ಮತ್ತು ಬಳಕೆಯ ಹೊಸ ಸಾಧ್ಯತೆಗಳ ಪರಿಚಯ ಉಂಟಾಗುತ್ತದೆಯಲ್ಲದೆ ತಾವೇ ಅಂತಹ ಹಲವಾರು ಪದಗಳನ್ನು ರಚಿಸುವ ಕುತೂಹಲ ಬೆಳೆಯುತ್ತದೆ. ಅಲ್ಲದೆ ಮಕ್ಕಳು ಬೋಧನೆ-ಕಲಿಕೆಯ ಪ್ರಕ್ರಿಯೆಯಲ್ಲಿ ಕ್ರಿಯಾಶೀಲರಾಗುತ್ತಾರೆ.

ಘಟಕ: ೩

ವಿಷಯ: ಗಾದೆ

ಭಾಷಿಕ ಚಟುವಟಿಕೆ: ಕೊಟ್ಟಿರುವ ವಿವರಣೆ ಓದಿ ಸೂಕ್ತಗಾದೆಯನ್ನು ಬರೆಯಿರಿ.

"ಮನುಷ್ಯನಿಗೆ ಹಣಬೇಕು. ಆದರೆ ಅದೇ ಎಲ್ಲವೂ ಅಲ್ಲ. ಗಳಿಸಬೇಕು ಎಂಬಾಸೆಯಿಂದ ಚಿಕ್ಕವಸ್ತುವನ್ನು ಕಳವು ಮಾಡಿದರೂ ಮಾನ ಹೋಗುತ್ತದೆ. ಆಗ ಅದು ಏನು ಕೊಟ್ಟರೂ ಬಾರದು".

ವಿದ್ಯಾರ್ಥಿಗಳ:	

ಪ್ರತಿಕ್ರಿಯೆ

ಇದರಂತೆ ಒಗಟು, ನುಡಿಗಟ್ಟು ಮುಂತಾದ ವಾಗ್ರೂಢಿಗಳ ರಚನೆ ಮತ್ತು ಬಳಕೆಯ ಸಾಮಾಜಿಕ ಆಯಾಮ ಕುರಿತು ಭಾಷಿಕ ಚಟುವಟಿಕೆಗಳನ್ನು ರೂಪಿಸಬೇಕು. ಅಂತಹ ಸಂದರ್ಭದಲ್ಲಿ ವಿದ್ಯಾರ್ಥಿಗಳ ಭಾಷಾ ಪ್ರಭೇದಗಳ ಆಡುರೂಪಗಳ ಬಳಕೆಗೂ ಇಲ್ಲಿ ಮುಕ್ತ ಅವಕಾಶವಿದೆ. ಉಪಭಾಷೆಯ ರೂಪಗಳು ಸಂಕೋಚದ ಕೇಂದ್ರಗಳಾಗಬಾರದು. ಕನ್ನಡ ಶಬ್ದಕೋಶ ವಿಸ್ತರಣೆಗೆ ಅವು ನೆರವಾಗುತ್ತವೆ. ಅಷ್ಟೇ ಅಲ್ಲ ಕನ್ನಡ ಭಾಷೆಯ ಸೂಕ್ಷ್ಮಸಂವೇದನ ಶೀಲತೆ ಭಾಷಾಪ್ರಭೇದಗಳ ಆಡುರೂಪಗಳಲ್ಲಿ ಅಡಗಿರುತ್ತದೆ. ಅಣುಬೋಧನೆಯ ಹಿಂದೆ ಭಾಷಿಕ ಚಟುವಟಿಕೆಗಳ ಖಚಿತ ಉತ್ತರ ನೀಡುವ ಅಥವಾ ಖಚಿತ ಉತ್ತರ ಬಯಸುವ ತತ್ವ ಅಡಕವಾಗಿದೆ. ವ್ಯಾಕರಣದ ಮುಖ್ಯ ಉದ್ದೇಶ ಕೇವಲ ಕನ್ನಡ ಭಾಷೆಯ ರಚನೆಯನ್ನು ಕಲಿಸುವುದಲ್ಲ. ಅದರೊಂದಿಗೆ ಕನ್ನಡ ಸಂಸ್ಕೃತಿಯನ್ನು ಪರಿಚಯಿಸುವುದು ಹಾಗೂ ಹೊರಜಗತ್ತಿನೊಂದಿಗೆ ಕನ್ನಡ ಎದುರಿಸುತ್ತಿರುವ ಸವಾಲುಗಳನ್ನು ಎದುರಿಸಲು ಕನ್ನಡವನ್ನು ಸಜ್ಜುಗೊಳಿಸುವ ಬಗೆಯನ್ನು ಕಲಿಸುವುದಾಗಿದೆ.

ಭಾಷಾ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಶಿಕ್ಷಕರು ಇಂತಹ ಹಲವಾರು ಭಾಷಿಕ ಚಟುವಟಿಕೆಗಳನ್ನು ಪುನರಾವರ್ತಿಸುವುದರಿಂದ ವ್ಯಾಕರಣ ಅಧ್ಯಯನ ರಹಸ್ಯಮಯ ಚಟುವಟಿಕೆಯಾಗುವುದಿಲ್ಲ; ಆಗಬಾರದು. ಅಣುಬೋಧನೆಯ ಮೂಲಕ ನಡೆಯುವ ವ್ಯಾಕರಣ ಪಾಠ ವಿದ್ಯಾರ್ಥಿಗಳಲ್ಲಿ ಭಾಷೆಯ ರಚನೆಯ ಬಗ್ಗೆ ಕುತೂಹಲ ಮೂಡಿಸುತ್ತದೆ. ಆಸಕ್ತಿ ಕುದುರಿಸುತ್ತದೆ. ಬೋಧನೆಯ ಸಂದರ್ಭದಲ್ಲಿ ಶಿಕ್ಷಕರು ಸಂದರ್ಭಕ್ಕೆ ತಕ್ಕಂತೆ ಲಭ್ಯವಿರುವ ಆಧುನಿಕ ಪರಿಕರಗಳನ್ನೂ (ಬೋಧನಾ ಸಾಮಗ್ರಿಗಳು) ಉಪಯೋಗಿಸಬೇಕು(ದೂರದರ್ಶನ, ಗಣಕಯಂತ್ರ ಇತ್ಯಾದಿ). ಶಿಕ್ಷಕರು ಅಣು ಬೋಧನೆಯ ಮೂಲಕ ಹಲವಾರು ಭಾಷಿಕ ಚಟುವಟಿಕೆಗಳನ್ನು ಗಣಕ ಯಂತ್ರದಲ್ಲಿ ಯಥಾವತ್ತಾಗಿ ದಾಖಲು ಮಾಡಿ ಕಾಂಪ್ಯಾಕ್ಟ್ ಡಿಸ್ಕ್ ವಿಡಿಯೋ ಡಿಸ್ಕ್‌ಗಳ ಮೂಲಕ ಸಂಗ್ರಹಿಸಿ ತರಗತಿಯಲ್ಲಿ ಬೋಧಿಸಬಹುದು. ಉದಾ. ಕಾರ/ಗಾರ/ಇತ್ತಿ ಪ್ರತ್ಯಯಯುಕ್ತ ಪದರೂಪಗಳು. ಸಮಸ್ತ ರೂಪಗಳು. ಪದ ಪುಂಜಗಳು ಮುಂತಾದ ಪದರೂಪಗಳನ್ನು ಗಣಕ ಯಂತ್ರದಲ್ಲಿ ದಾಖಲಿಸಿ ಅದೇ ಮಾದರಿಯಲ್ಲಿ ಹಲವು ರೂಪಗಳನ್ನು ರಚಿಸುವಂತೆ ವಿದ್ಯಾರ್ಥಿಗಳಿಗೆ ಸೂಚನೆ ಕೊಡಬೇಕು. ಅದರಂತೆ ಸ್ಲೈಡ್, ವಿಡಿಯೋ ಕ್ಯಾಸೆಟ್ ಇಂತಹ ಆಧುನಿಕ ಸಲಕರಣೆಗಳನ್ನೂ ಭಾಷಾಬೋಧನೆಯಲ್ಲಿ ಬಳಸಬೇಕು. ತಂತ್ರಜ್ಞಾನವು ವ್ಯಾಕರಣ ಬೋಧನೆಯ ಸಿದ್ಧಮಾದರಿಗಳನ್ನು(ಅನುಗಮನ ಪದ್ಧತಿ ನಿಗಮನ ಪದ್ಧತಿ) ಮೀರುತ್ತದೆ. ಭಾಷಾ ಬಳಕೆಯ ಹೊಸ ಸಾಧ್ಯತೆಗಳಿಗೆ ಒತ್ತು ಕೊಡುತ್ತದೆ.

ತಂತ್ರಜ್ಞಾನದಿಂದ ಭಾಷೆಯ ಬಹುರೂಪತೆಯನ್ನು ಉಳಿಸಿಕೊಳ್ಳಲು ಸಾಧ್ಯವೆ? ಏಕೆಂದರೆ ಇಲ್ಲಿ ಕೆಲವು ಸಂದರ್ಭದಲ್ಲಿ ಆಧುನಿಕ ಪರಿಕರಗಳ ಮೂಲಕ ಪಾಠವಾಗುವುದ ರಿಂದ ಶಿಕ್ಷಕ-ವಿದ್ಯಾರ್ಥಿಗಳ ಸಂಬಂಧ ಕಡಿಮೆ. ಇದರಿಂದ ವಿದ್ಯಾರ್ಥಿಗಳ ಮಾತಿನ ಪಾತಲಿ ಮೌನವಾಗುತ್ತದೆ. ಇಂತಹ ಸಂದರ್ಭದಲ್ಲಿ ಭಾಷೆಗೆ ತಂತ್ರಜ್ಞಾನವನ್ನು ಸಜ್ಜು ಗೊಳಿಸುವ ಕ್ರಿಯೆ ಔಚಿತ್ಯದಿಂದ ನಡೆಯಬೇಕಾಗಿದೆ. ಭಾಷಾಯೋಜನೆ ಮತ್ತು ಭಾಷಾ ನೀತಿಗಳನ್ನು ರೂಪಿಸುವಾಗ ಭಾಷಾಶಾಸ್ತ್ರಜ್ಞರು ಈ ಬಿಕ್ಕಟ್ಟನ್ನು ಗಮನಿಸಿದ್ದಾರೆ. ಬದಲಾವಣೆ ಜೀವಂತ ಭಾಷೆಯ ಆರೋಗ್ಯದ ಲಕ್ಷಣ. ಹೊಸ ಅಂಶಗಳನ್ನು ಅಳವಡಿಸಿ ಕೊಂಡು ಭಾಷೆ ಚಲನಶೀಲವಾಗಬೇಕು. ಅಂತಹ ಸಂದರ್ಭವಲ್ಲಿ ಸಮಕಾಲೀನ ವಿದ್ಯಮಾನಗಳನ್ನು ಮೈಗೂಡಿಸಿಕೊಂಡು ಭಾಷಾಶಿಕ್ಷಣದಲ್ಲಿ ಪರಿವರ್ತನೆಯಾಗಬೇಕಾದರೆ ತಂತ್ರಜ್ಞಾನವು ಪ್ರಮುಖ ಪಾತ್ರವಹಿಸುತ್ತದೆ ಎಂಬುದು ಅಷ್ಟೇ ಮುಖ್ಯ. ವ್ಯಾಕರಣ ಬೋಧನೆಯಲ್ಲಿ ತಂತ್ರಜ್ಞಾನವನ್ನು ಅಳವಡಿಸುವುದರಿಂದ ಶಿಕ್ಷಕರ ಬೋಧನೆ ಯಶಸ್ವಿ ಯಾಗುತ್ತದೆ; ಮಕ್ಕಳ ಕಲಿಕೆ ಪರಿಣಾಮಕಾರಿಯಾಗುತ್ತದೆ. ಕಲಿಕಾ ಕ್ರಿಯೆಯೂ ಸಂತಸದಾಯಕವಾಗಿ ಭಾಷಾಧ್ಯಯನದ ಗುರಿ-ಉದ್ದೇಶಗಳು ಈಡೇರುತ್ತವೆ.

ಭಾಗ - ೮

ಭಾಷೆ : ಬಂಧುಸೂಚಕಗಳು-ಸಮಾಜ ಮತ್ತು ಸಂಸ್ಕೃತಿ

೭೮

ಸಾಮಾಜಿಕ ಸ್ತರವಿನ್ಯಾಸ ಮತ್ತು ಭಾಷೆ

ಭಾಷೆಯ ಮುಖ್ಯ ಉದ್ದೇಶ ಸಾಮಾಜಿಕ ಸಂಪರ್ಕ. ಭಾಷೆಯಷ್ಟು ಪರಸ್ಪರ ವಿನಿಮಯ ಸಾಮರ್ಥ್ಯ ಬೇರಾವ ಸಂವಹಕ್ಕೂ ಇಲ್ಲ. ಭಾಷೆಯು ಸಂಸ್ಕೃತಿಯ ಮುಖ್ಯ ಅಂಗವಾಗಿರುವುದರಿಂದ ಭಾಷಾ ಸಮುದಾಯದಲ್ಲಿ ಭಾಷಿಕರು ಪರಸ್ಪರ ಆಂತರಿಕ ಸಂಬಂಧವನ್ನು ಹೊಂದಿರುತ್ತಾರೆ. ಭಾಷೆಯನ್ನು ಸಾಮಾಜಿಕ ಚೌಕಟ್ಟಿಗೆ ಒಳಪಡಿಸಿ, ಅದರ ಬಳಕೆಯ ಪರಿಸರದಲ್ಲಿ ಅಭ್ಯಸಿಸಿದರೆ ಸಮಾಜೋ ಭಾಷಿಕ ಅನನ್ಯತೆಯನ್ನು ಗುರುತಿಸಿದಂತಾಗುತ್ತದೆ. ಭಾಷಿಕರ ಸಾಮಾಜಿಕ ವರ್ಗ, ಜಾತಿ, ಅಂತಸ್ತು. ಲಿಂಗ, ವಯಸ್ಸು ಇಂತಹ ಜೈವಿಕ ಅಂಶ ಗಳು ಭಾಷಾ ಬಳಕೆಯಲ್ಲಿ ಪರಿಣಾಮ ಬೀರುತ್ತವೆ ತತ್ಪರಿಣಾಮವಾಗಿ ಭಾಷಾ ಬಳಕೆಯಲ್ಲಿ ವ್ಯತ್ಯಾಸಗಳು ಕಂಡು ಬರುತ್ತದೆ. ಈ ಏಣಿ ಶ್ರೇಣಿ ಕ್ರಿಯೆಗೆ ಸ್ತರ ವಿನ್ಯಾಸವೆಂದು ಕರೆಯುತ್ತಾರೆ. ಬಳಕೆಯ ವಿಭಿನ್ನತೆಯ ಸ್ತರಕ್ಕೆ ಅನುಗುಣವಾಗಿ ಪರಸ್ಪರ ಸಂಬಂಧಿತರಾಗಿರುತ್ತಾರೆ. ಶ್ರೀಮಂತರು ಶ್ರೀಮಂತರ ಜೊತೆಗೆ ಬಡವರು ಬಡವರ ಜೊತೆಗೆ ಹೆಚ್ಚಾಗಿ ಸಂಬಂಧ ಬೆಳೆಸುವುದುಂಟು.

ಭಾಷಾಸಮುದಾಯದಲ್ಲಿಯ ಕಳ್ಳು ಬಳ್ಳಿ, ಸಂಘ ಸಂಸ್ಥೆ ಇವೆಲ್ಲವೂ ಆ ಸಮುದಾಯದ ಸಂಸ್ಕೃತಿಯಿಂದ ನಿರ್ಣಯಿಸಲ್ಪಟ್ಟಿರುವ ವಿಷಯಗಳು. ಇವುಗಳ ಸಂಘಟನೆ, ರಚನೆ, ಇರುವಿಕೆ ಮತ್ತು ಕಾರ್ಯ ನಿರ್ವಹಣೆ ಮುಂತಾದವು ಸಂಸ್ಕೃತಿಯಿಂದ ಪ್ರಭಾವಿತ ವಾಗಿರುತ್ತವೆ. ಸಾಮಾಜಿಕ ಸಂಬಂಧಗಳು ಭಾಷಿಕರ ಪರಸ್ಪರ ಅರಿವು, ಅನುಭವ, ಪ್ರಭಾವ ಹಾಗೂ ಪ್ರಚೋದನೆ ಗಳನ್ನೊಳಗೊಂಡಿರುತ್ತವೆ. ಭಾಷಾಸಮುದಾಯದಲ್ಲಿ ಬ್ರಾಹ್ಮಣರ ಸ್ಥಾನಮಾನ ಬ್ರಾಹ್ಮಣೇತರರಿಗಿಂತ ವಿದ್ಯಾವಂತರ ಸ್ಥಾನ ಅವಿದ್ಯಾವಂತ ರಿಗಿಂತ ಉನ್ನತವಾಗಿರುತ್ತದೆ. ಇದರಂತೆ ಭೂ ಒಡೆಯ ಹಾಗೂ ಕಾರ್ಮಿಕರ ಸ್ಥಾನಮಾನಗಳು, ಕಾರ್ಯ ವೈಖರಿಗಳು ಭೇದ ಗೊಂಡಿವೆ. ವಿದ್ಯಾವಂತರಲ್ಲಿ ಇಂಗ್ಲಿಶ್ ಭಾಷೆಯನ್ನು ಕಲಿತವರಿಗೆ ಪ್ರಾದೇಶಿಕ ಭಾಷೆಯನ್ನು ಕಲಿತವರಿಗಿಂತ ಹೆಚ್ಚಿನ ಮಾನ್ಯತೆಯಿದೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ

ಭಾಷಿಕರು ಉದ್ದಕ್ಕೂ ಒಂದೇ ಸ್ತರದಲ್ಲಿರಬೇಕೆಂಬ ನಿರ್ಬಂಧವಿಲ್ಲ. ಒಬ್ಬ ಭೂಕಾರ್ಮಿಕ ಶ್ರದ್ಧೆಯಿಂದ ದುಡಿದು ಭೂ ಒಡೆಯನಾಗಬಹುದು. ಒಬ್ಬ ಭೂ ಒಡೆಯ ದುರ್ದೈವದಿಂದ ಕಾರ್ಮಿಕನಾಗಬಹುದು. ಸ್ತರ ವಿನ್ಯಾಸದಲ್ಲಿ ಸಾಮಾಜಿಕ ಚಲನೆ ಪ್ರತಿಗಾಮಿಯಾಗಿರುವಂತೆ ಗತಿ ವಿರೋಧಿಯೂ ಆಗಿದೆ.

ಸಾಮಾಜಿಕ ವರ್ಗ ಮತ್ತು ಜಾತಿಗಳು ಸ್ತರ ವಿನ್ಯಾಸದ ಪ್ರಧಾನರೂಪಗಳಾಗಿವೆ. (ಇವುಗಳಲ್ಲಿಯ ಸಾಮ್ಯ ವೈಷಮ್ಯಗಳನ್ನು ಇದೇ ಅಧ್ಯಾಯದ ಕೊನೆಯ ಟಿಪ್ಪಣಿ ಭಾಗದಲ್ಲಿ ಕೊಡಲಾಗಿದೆ). ಸಾಮಾಜಿಕ ವರ್ಗವು ಸಮುದಾಯದ ಒಂದು ಭಾಗವಾಗಿದ್ದು ಇತರ ಭಾಗಗಳಿಂದ ಅಂತಸ್ತಿನ ಆಧಾರದ ಮೇಲೆ ಬೇರೆಯಾಗಿರುವುದು (ಇಲ್ಲಿ ಭಾಗವೆಂದರೆ ನಿರ್ದಿಷ್ಟ ಸಾಮಾಜಿಕ ಸಂಬಂಧಗಳನ್ನೊಳಗೊಂಡ ಜನರ ಗುಂಪು). ಸಾಮಾಜಿಕ ವರ್ಗವು ಭಾಷಿಕರ ಸ್ಥಾನಮಾನವನ್ನವಲಂಬಿಸಿರುತ್ತದೆ. ಸಾಮಾಜಿಕ ವರ್ಗದಂತೆ ಜಾತಿಯೂ ಸಹಿತ ಸಾಮಾಜಿಕ ವ್ಯವಸ್ಥೆಯಾಗಿದ್ದು ಅಲ್ಲಿಯ ಸದಸ್ಯರು ಅದೇ ವರ್ಗದಲ್ಲಿ ಹುಟ್ಟಿಬೆಳೆದು ಆ ಸಾಮಾಜಿಕ ವರ್ಗದ ನಿಯಮಗಳನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುತ್ತಾರೆ. ತಮ್ಮ ಸಾಮಾಜಿಕ ವರ್ಗವನ್ನು ಬಿಟ್ಟು ಮತ್ತೊಂದು ವರ್ಗಕ್ಕೆ ವರ್ಗಾವಣೆಯಾಗುವುದು ಸುಲಭಸಾಧ್ಯವಿಲ್ಲದ ವರ್ಗಕ್ಕೆ ಜಾತಿ ಎನ್ನಲಾಗುತ್ತದೆ. ಜಾತಿ ವ್ಯವಸ್ಥೆಯಲ್ಲಿ ಮೇಲು-ಕೀಳು ಎಂಬ ಭಾವನೆ ಇರುತ್ತದೆ. ಬ್ರಾಹ್ಮಣರು ಉಚ್ಚ ಶ್ರೇಣಿಗೆ ಸೇರಿದರೆ ಹರಿಜನರು ಕೆಳ ಶ್ರೇಣಿಗೆ ಸೇರುತ್ತಾರೆ. ಒಂದು ಭಾಷಾಸಮುದಾಯದ ಭಿನ್ನ ಜಾತಿಗಳ ಮಧ್ಯ ವಿವಾಹ ಸಂಬಂಧ ಏರ್ಪಡುವುದಿಲ್ಲ. ಒಂದು ವೇಳೆ ನಡೆದರೆ ಸಮುದಾಯ ವಕ್ರ ದೃಷ್ಟಿ ಬೀರುತ್ತದೆ. ಜಾತಿ ವ್ಯವಸ್ಥೆಯಲ್ಲಿ ಕುಲಕಸಬುಗಳು ಬೆಳೆದು ಬಂದಿವೆ. ಪುರೋಹಿತ ವರ್ಗದವರು ಅರ್ಚನೆ, ವೈಶ್ಯರು ವ್ಯಾಪಾರ, ಕುಂಬಾರರು ಮಡಕೆ ತಯಾರಿಸುವುದು. ಶೂದ್ರರು ಚರ್ಮಹದಗೊಳಿಸುವಿಕೆ ಮುಂತಾದ ಕೆಲಸಗಳನ್ನು ಮಾಡುವ ಪದ್ಧತಿಯಿದೆ. ಆಧುನಿಕತೆಯ ಸಂಪರ್ಕದಿಂದಾಗಿ ಈಗ ಜಾತಿ ವ್ಯವಸ್ಥೆಯಲ್ಲಿ ಶಿಥಿಲತೆ ಉಂಟಾಗಿದೆ. ಇದು ಭಾಷಾ ಸಮುದಾಯದ ಅಭಿವೃದ್ಧಿಯ ಸಂಕೇತವಾಗಿದೆ.

ಒಂದು ಭಾಷಾ ಸಮುದಾಯದ ಭಾಷಿಕರ ವಯಸ್ಸು, ಲಿಂಗ, ಜಾತಿ ಇಂತಹ ಸಾಮಾಜಿಕ ಅಂಶಗಳು ಆ ಭಾಷೆಯ ರಚನಾತ್ಮಕ ಅಂಶಗಳ ಬದಲಾವಣೆಗೆ (ಧ್ವನಿ, ಪದ, ವಾಕ್ಯ) ಕಾರಣವಾಗುತ್ತವೆ. ಒಂದು ಪ್ರದೇಶದ ಬ್ರಾಹ್ಮಣರ ರಚನೆಯು ಬ್ರಾಹ್ಮಣೇತರ ಭಾಷೆಯ ರಚನೆಗಿಂತ ಭಿನ್ನವಾಗಿರುತ್ತದೆ. ಕಿತ್ತೂರು ಕರ್ನಾಟಕದ ಬ್ರಾಹ್ಮಣರು ಮನೆಯಾಗ (ಮನೆಯಲ್ಲಿ), ಹೋಗಲಿಕ್ಕಿಲ್ಲ (ಹೋಗುವುದಿಲ್ಲ) ಎಂಬ ರೂಪಗಳನ್ನು ಬಳಸಿದರೆ ಬ್ರಾಹ್ಮಣೇತರರು 'ಮನ್ಯಾಗ' 'ಹೋಗುದುಲ್ಲ' ಎಂಬಂತಹ ರೂಪಗಳನ್ನು ಬಳಸುತ್ತಾರೆ.

ಒಂದೇ ಸಮುದಾಯಕ್ಕೆ ಸೇರಿದ ಭಾಷಿಕರು ಅವರವರ ಸ್ಥಾನಮಾನಕ್ಕೆ ತಕ್ಕಂತೆ ಮಾತಾಡುವ ರೀತಿಯಲ್ಲಿ ವ್ಯತ್ಯಾಸವಾಗುವುದುಂಟು. ಉದಾ : ಲಿಂಗಾಯತರು ತಮ್ಮ ಸಮುದಾಯಕ್ಕೆ ಸೇರಿದ ಸ್ಥಿತಿವಂತ ಲಿಂಗಾಯತರ ಮಕ್ಕಳನ್ನು ಗೌರವದಿಂದ

ಸಂಬೋಧಿಸುವುದುಂಟು. 'ಮಲ್ಲು ಊರಿಂದ ಯಾವಾಗ ಬಂದ್ಬೀಯೋ?' ಸಣ್ಣದಸ ಮಲ್ಲಾ ನಮಸ್ಕಾರ', ಹಾಗೆಯೇ ಅರ್ಥಿಕವಾಗಿ ಹಿಂದುಳಿದ ಲಿಂಗಾಯತರ ಮಕ್ಕಳನ್ನು ಏಕವಚನದಿಂದ ಸಂಬೋಧಿಸುವರು. 'ಕಲ್ಲ್ಯಾ ಬಾರಲೇ' 'ಲೇ ರಾಮ್ಯಾ ಎಲ್ಲಿಗಿ ಹೊಂಟೀ' ಸಾಮಾಜಿಕ ಸ್ಥಾನವನ್ನು ಅನುಲಕ್ಷಿಸಿ ಭಾಷಾ ಬಳಕೆಯಲ್ಲಿ ಇಂತಹ ಏಣಿ ಶ್ರೇಣಿಯ ವ್ಯವಸ್ಥೆಯು ಎಲ್ಲ ಸಮುದಾಯದಲ್ಲಿಯೂ ಇದೆ. ಮೇಲ್ವವರ್ಗದ ಕಿರಿಯ ವಯಸ್ಸಿನವರು ಕೆಳವರ್ಗದ ಹಿರಿಯರನ್ನು ಏಕವಚನದಿಂದ ಕರೆಯುವುದುಂಟು. ಹಾಗೆಯೇ ಕೆಳವರ್ಗದ ಹಿರಿಯರು ಮೇಲ್ವವರ್ಗದ ಕಿರಿಯ ವಯಸ್ಸಿನವರನ್ನು ಗೌರವದಿಂದ ಕರೆಯುವುದುಂಟು. 'ಸಣ್ಣದನಿ ಪತ್ರೆಪ್ಪ ಸಾಹುಕಾರರು ಬೆಳಗಾವಿಗೆ ಹೋಗಿದ್ದಾರೆ'. 'ಈರಣ್ಣ ಸಾಹುಕಾರರೇ ನಮಸ್ಕಾರ', ಇಂತಹ ಸಂದರ್ಭದಲ್ಲಿ ಭಾಷಿಕರ ಮನೋವೃತ್ತಿ ಸ್ಪಷ್ಟವಾಗಿ ಗೋಚರಿಸುತ್ತವೆ. ಸಮುದಾಯದಲ್ಲಿ ಭಾಷಿಕರು ತಮ್ಮ ಪ್ರದೇಶದ ಆಡುನುಡಿಯಲ್ಲಿ ವ್ಯವಹರಿಸುತ್ತಾರೆ.

ಔಪಚಾರಿಕ ಮತ್ತು ಅನೌಪಚಾರಿಕ ಸಂದರ್ಭದಲ್ಲಿ ಭಾಷಿಕರು ಒಬ್ಬರನ್ನೊಬ್ಬರು ಸಂಬೋಧಿಸುವ ವಿಧಾನದಲ್ಲಿಯೂ ಭಿನ್ನತೆ ಇರುತ್ತದೆ. ಮಕ್ಕಳು ತಮ್ಮ ಪಾಲಕರ ಜೊತೆಗೆ, ಗುರು ಹಿರಿಯರ ಜೊತೆಗೆ ಗೌರವಯುತವಾಗಿ ವರ್ತಿಸುತ್ತಾರೆ. ಆ ಸಂದರ್ಭದಲ್ಲಿ ಅಪ್ಪ, ಅಜ್ಜ, ಅಣ್ಣಾ, ಅವ್ವ ಮುಂತಾದ ಬಂಧುಸೂಚಕಗಳನ್ನು ಬಳಸುವುದುಂಟು. ಸ್ನೇಹಿತರೊಂದಿಗೆ ಮುಕ್ತವಾಗಿ ವರ್ತಿಸುತ್ತಾರೆ. ಸ್ನೇಹಿತರನ್ನು ಅವರ ಹೆಸರು ಇಲ್ಲವೇ ಕುಲನಾಮ ಹಚ್ಚಿ ಕರೆಯುವುದುಂಟು. ಉದಾ: ಚಳಿಗಾಲದಲ್ಲಿ ಚಳಿಕಾಸುತ್ತಾ ಹಿರಿಯರು, ಮಕ್ಕಳು, ಪರಿಚಿತರು ಎಲ್ಲರೂ ಕೂಡಿ ಮಾತಾಡುತ್ತಾರೆಂದು ಭಾವಿಸಿಕೊಳ್ಳಿರಿ. ಆಗ ಭಾಷೆಯ ಬಳಕೆ ಸಹಜವಾಗಿರುತ್ತದೆ. 'ತಂಡಿಭಾಳ ಅತಿ' 'ತಂಡ್ಯಾಗ (ಚಳಿಗಾಲದಲ್ಲಿ) ಹೋಲಕ್ ಹೋಗಾಕ್ ಆಗುದಿಲ್ಲ', 'ಇನ್ನಷ್ಟು ಹುಲ್ ಹಾಕ್' ಮುಂತಾದ ಮಾತುಗಳಿಂದ ಆರಂಭವಾಗಿ ತಮ್ಮ ಹಳ್ಳಿಯ ಸಾಮಾಜಿಕ ಮತ್ತು ಶೈಕ್ಷಣಿಕ ಸಮಸ್ಯೆಗಳ ಬಗೆಗೆ ಚರ್ಚಿಸುವುದುಂಟು. ಇದರಿಂದ ಭಾಷಿಕರ ಸಾಮಾಜಿಕ ಮನೋವೃತ್ತಿ ಅವರ ಮಾತಿನಲ್ಲಿ ಅಭಿವ್ಯಕ್ತವಾಗುತ್ತದೆ. ಅದರಂತೆ ಊಟಮಾಡಿ ಎದುರಾದ ಪರಿಚಿತರನ್ನು 'ಊಟಾಯಿತಾ' ಎಂದು ಕೇಳುವುದುಂಟು. ಅದು ಅಸಹಜವಾಗಿದ್ದರೂ ಭಾಷಿಕ ವ್ಯವಹಾರವನ್ನು ಮುಂದುವರಿಸುವಾಗ ಹಾಗೂ ಸಾಮಾಜಿಕ ಸಂಬಂಧಗಳನ್ನು ನಿಶ್ಚಯಗೊಳಿಸುವಾಗ ಈ ತರಹದ ಮಾತಿನ ಕ್ರಿಯೆಗಳು ಅವಶ್ಯವಾಗಿವೆ.

ಭಾಷಾ ಸಮುದಾಯದಲ್ಲಿ ಭಾಷಿಕರಿಗೆ ಅರ್ಥಿಕ ಹಾಗೂ ರಾಜಕೀಯ ಸ್ವಾಯತ್ತತೆ ಸಿಕ್ಕಾಗ ಸಮುದಾಯದ ಇತರ ಸದಸ್ಯರ ಮೇಲೆ ಅಧಿಕಾರ ಚಲಾಯಿಸುತ್ತಾರೆ. ಹಳ್ಳಿಗಳಲ್ಲಿ ಮಂಡಲ ಪಂಚಾಯತಿ ಸದಸ್ಯರ, ಅಧ್ಯಕ್ಷರ ಮಾತುಗಳನ್ನು ಗಮನಿಸಿದಾಗ 'ಲೇ ಮಲಿಕ್ಯಾ ನೀರ್ ಬಿಡಲೇ' 'ಯಾಕೋ ತಲಾರಿ ನಿನ್ನೆ ಯಾಕ್ ಬರಲಿಲ್ಲ' ಹೀಗೆ ಸರಕಾರಿ ಅಧಿಕಾರಿಗಳನ್ನು, ಶಿಕ್ಷಕರನ್ನು ದಬಾಯಿಸುತ್ತಾರೆ. ಭಾಷಾ ಸಮುದಾಯದಲ್ಲಿ ಭಾಷಿಕರ ವರ್ಗ, ಜಾತಿ ಹಾಗೂ ಇತರ ಭಾಷಿಕರೊಡನೆ ಅವರು ನಡೆದುಕೊಳ್ಳುವ ರೀತಿ ಇವುಗಳನ್ನು ಅನುಲಕ್ಷಿಸಿ ಅವರ ಸ್ಥಾನಮಾನ ನಿರ್ಧಾರವಾಗುತ್ತದೆ. ವಯಸ್ಸು, ಲಿಂಗ ಮುಂತಾದ ಜೈವಿಕ ಅಂಶಗಳು ಭಾಷೆಯ

ಬಳಕೆಯಲ್ಲಿ ಪ್ರಭಾವ ಬೀರುತ್ತವೆ. ಪ್ರೌಢರಿಗೆ, ವಯಸ್ಸಾದವರಿಗೆ ಸಮುದಾಯದಲ್ಲಿ ಗೌರವವಿದೆ. ಅವರಿಗೆ ಅಜ್ಜ, ಅಣ್ಣಾ, ಯಜಮಾನ ಎಂದು ಸಂಬೋಧಿಸುವುದುಂಟು. ಹಿರಿಯರು ಎದುರಾದಾಗ 'ನಮಸ್ಕಾರ ಅಜ್ಜಾ/ಸಾರ್' ಎಂದು ಹೇಳುವುದುಂಟು. ಭಾಷೆಯ ಬಳಕೆಯನ್ನು ಗಮನಿಸಿದಾಗ ಆ ವ್ಯಕ್ತಿಗಳ ಬಗ್ಗೆ ಗೌರವ ಭಾವನೆ ಇರುತ್ತದೆ. ಎಂಬ ಅಂಶ ಸ್ಪಷ್ಟವಾಗುತ್ತದೆ. ಮೇಲೆ ಹೇಳಿದಂತೆ ವಯಸ್ಸಾದವರು ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿದ್ದರೆ ಗೌರವ ಕೊಡುವುದಿಲ್ಲ. 'ಮುದುಕಾದಿ ಬುದ್ಧಿ ಎಲ್ಲಿ ಇಟುದಿ', 'ಮುದುಕಾದಿ ತಿಳಿಯುದಿಲ್ಲ' ಎಂದು ಕಟಕಿ ಮಾಡುತ್ತಾರೆ. ಆರ್ಥಿಕವಾಗಿ ಸಾಮಾಜಿಕವಾಗಿ ಮುಂದುವರೆದ ಕುಟುಂಬಗಳ ಕಿರಿಯ ವಯಸ್ಸಿನವರಿಗೆ ಗೌರವ ಕೊಡುವುದುಂಟು. ಇಂತಹ ಅಸಮಾನತೆ ಭಾಷೆಯ ಬಳಕೆಯಲ್ಲಿರುತ್ತದೆ. ಸಾಮಾಜಿಕವಾಗಿ ಹೇಳುವುದಾದರೆ ಗಂಡಸರಿಗಿಂತ ಹೆಂಗಸಿಗೆ ಸ್ವಾತಂತ್ರ್ಯ ಕಡಿಮೆ. ಪುರುಷ ಮತ್ತು ಸ್ತ್ರೀಯರ ಮಾತಿನ ಸಂದರ್ಭಗಳಲ್ಲಿ ನಯ ನಾಜೂಕತೆ ಹೆಚ್ಚು, ಲೈಂಗಿಕ ಭಾವನೆ ಬರಬಾರದೆಂದು ಅಥವಾ ಆತ್ಮೀಯತೆ ಉಂಟಾಗಲೆಂದು ಅಣ್ಣಾ, ಅಕ್ಕ ಇಂತಹ ಬಂಧುಸೂಚಕಗಳು ಬಳಕೆಯಾಗುತ್ತವೆ. 'ಹೆಣ್ಣು ಮಕ್ಕಳು ಬಂದ್ರು ಜಾಗ ಬಿಡಿ' 'ಆಯ್ತು ಅಣ್ಣಾರಿ' ಗಂಡಸರು ಗಂಡಸರ ನಡುವೆ, ಹೆಂಗಸರು ಹೆಂಗಸರ ನಡುವೆ ಮಾತಿನ ಸಂದರ್ಭಗಳಲ್ಲಿ ಮುಕ್ತತೆ. ಸಹಜತೆ ಹೆಚ್ಚು. ಗಂಡಸರು, ಹೆಂಗಸರ ಮಧ್ಯ ಮಾತುಗಾರಿಕೆಯಲ್ಲಿ ಸಾಮಾಜಿಕ ನಿಯಂತ್ರಣವಿದೆ.

ಭಾಷಾ ಸಮುದಾಯದಲ್ಲಿ ವೈದ್ಯ-ರೋಗಿ, ವ್ಯಾಪಾರಿ-ಗಿರಾಕಿ, ತಂದೆ-ತಾಯಿ ಮುಂತಾದ ಅವಳಿ ಸಂಬಂಧಗಳನ್ನು ಕಾಣುತ್ತವೆ. ಅವುಗಳ ಸ್ವರೂಪ ಮತ್ತು ಬಳಕೆಯ ವಿಧಾನದಲ್ಲಿ ಭಿನ್ನತೆಯನ್ನು ಗುರುತಿಸಬಹುದಾಗಿದೆ. ಅವುಗಳಿಗೆ ಪ್ರಾದೇಶಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಿದೆ. ಬರಹದ ಕನ್ನಡದಲ್ಲಿ ಬಳಕೆಯಾಗುವ ತಂದೆ-ತಾಯಿ ರೂಪಗಳಿಗೆ ಭಾಷಾ ಪ್ರಭೇದಗಳಲ್ಲಿ ಪರ್ಯಾಯ ರೂಪಗಳಿವೆ. ಉದಾ : ಕಿತ್ತೂರು ಕರ್ನಾಟಕದ ಎಲ್ಲ ಸಮುದಾಯದಲ್ಲಿಯೂ ತಂದೆ, ತಾಯಿಗಳಿಗೆ ಸಂವಾದಿಯಾಗಿ ಅಪ್ಪ ಅವ್ವ ರೂಪಗಳು ಬಳಕೆಯಾದರೆ ಹಳೆ ಮೈಸೂರು ಕಡೆಗೆ ಸಾಮಾಜಿಕ ವರ್ಗವನ್ನು ಅನುಸರಿಸಿ ಅವು ಬಳಕೆಯಾಗುತ್ತವೆ. ಸಾಮಾಜಿಕವಾಗಿ ಮೇಲ್ವರ್ಗದವರಲ್ಲಿ ಅಮ್ಮ, ಅಪ್ಪವೆಂಬ ರೂಪಗಳು. ಕೆಳವರ್ಗದವರಲ್ಲಿ ಅವ್ವ, ಅಪ್ಪ ಅಯ್ಯ ಎಂಬ ರೂಪಗಳು ಬಳಕೆಯಾಗುತ್ತವೆ.

ಭಾಷಾಸಮುದಾಯವು ಭಾಷಿಕರ ಸಂಬಂಧಗಳ ಬಲೆ. ಭಾಷೆಯು ಸಮುದಾಯದ ಪರಿಮಿತಿಯಲ್ಲಿಯೇ ಮೈದಳೆಯುವುದರಿಂದ ಭಾಷಿಕರು ಸಮುದಾಯದಲ್ಲಿ ಬದುಕುವಾಗ ವಿವಿಧ ಪ್ರಕ್ರಿಯೆಗೆ ಒಳಗಾಗುವರು. ಕೆಲವು ವೇಳೆ ಭಾಷಿಕನು ಕ್ರಿಯಾಶೀಲ ವ್ಯಕ್ತಿಯಾಗಿ ಕಾಣಿಸಿಕೊಂಡರೆ ಮತ್ತೆ ಕೆಲವು ವೇಳೆ ನಿಷ್ಕ್ರಿಯನಾಗುವನು. ಭಾಷಿಕರು ಸಮುದಾಯದಲ್ಲಿ ಅಂತಹ ಕ್ರಿಯೆಗೆ ಒಳಗಾಗಿ ವಿವಿಧ ರೂಪಗಳಲ್ಲಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ. ಒಂದು ವೇಳೆ ಭಾಷಿಕರಲ್ಲಿ ಭಿನ್ನಾಪ್ರಾಯಗಳು ತಲೆದೋರಿದಾಗ ಪರಸ್ಪರರ ಅರಿವಿನಿಂದ. ಮನಃ ಪರಿವರ್ತನೆಯಿಂದ ಹಾಗೂ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿ ಸಂಬೋಧನ

ರೂಪಗಳ ಬಳಕೆಯಿಂದ ಭಿನ್ನಾಭಿಪ್ರಾಯಗಳನ್ನು ನಿವಾರಿಸಬಹುದು. ಆ ಮೂಲಕ ಭಾಷಿಕರು ಸಮುದಾಯದ ವ್ಯವಸ್ಥೆಗೆ ಅಡಕಗೊಳಿಸುವ ಕ್ರಿಯೆಗೆ ಭಾಷೆಯ 'ಸಮಾಜೀಕರಣ' ಎನ್ನುವರು. ಸಮುದಾಯದಲ್ಲಿ ಸಮಾಜೀಕರಣ ಕ್ರಿಯೆಯು ನಿರಂತರವಾಗಿ ನಡೆಯುತ್ತಿರುತ್ತದೆ. ಈ ಪ್ರಕ್ರಿಯೆಯಿಂದ ಸಮುದಾಯವು ತನ್ನ ಗೊತ್ತು ಗುರಿಗಳನ್ನು ತಲುಪಲು ಮುನ್ನುಗ್ಗುತ್ತದೆ. ಬಂಧು ಸೂಚಕಗಳು ಸಾಮಾಜಿಕ ಒಪ್ಪಂದವಾಗಿ ಬಳಕೆಯಾಗಿರುತ್ತವೆ. ಒಟ್ಟಿನಲ್ಲಿ ಸಾಮಾಜಿಕ ಸ್ತರ ವಿನ್ಯಾಸವು ಭಾಷಾ ಬಳಕೆಯಲ್ಲಿ ಪ್ರಮುಖ ಪಾತ್ರವಹಿಸುತ್ತಾದೆ.

ಕೊನೆಯ ಟಿಪ್ಪಣಿ

ಅ. ಜಾತಿ ಮತ್ತು ವರ್ಗ ಸಮಾಜದ ಅಭಿನ್ನ ಅಂಶಗಳಾದರೂ ಇವೆರಡರಲ್ಲೂ ಕೆಲವು ವೈಷಮ್ಯಗಳುಂಟು

ಜಾತಿ	ವರ್ಗ
೧. ಚಲನಶೀಲತೆ ಕಡಮೆ, ಭಾಷಿಕರ ಸ್ಥಾನಮಾನ ಹುಟ್ಟಿನಿಂದ ಬಂದಿರುತ್ತದೆ. ಜಾತಿಯ ವರ್ಗಾವಣೆ ಸಾಧ್ಯವಿಲ್ಲ	ಮುಕ್ತ ವ್ಯವಸ್ಥೆಯಾಗಿದೆ, ಭಾಷಿಕರ ಸ್ಥಾನ ಮಾನ ವ್ಯಕ್ತಿಯ ಸಾಧನೆಯಿಂದ ನಿರ್ಧಾರಿತ ವಾಗುತ್ತದೆ.
೨. ಭಾಷಿಕರಲ್ಲಿ ಮಡಿ, ಮೈಲಿಗೆ ಎಂಬ ಭಾವನೆ ರೂಢಿಯಲ್ಲಿರುವುದು. ಭಾಷಿಕರ ಮೇಲೆ ನಿಯಂತ್ರಣ ಹೇರುತ್ತದೆ.	ಇಂತಹ ಕಟ್ಟುಪಾಡುಗಳು ಸಾಮಾಜಿಕ ವರ್ಗದಲ್ಲಿ ಕಂಡುಬರುವುದಿಲ್ಲ
೩. ಜಾತಿ ಜಾತಿಗಳ ನಡುವೆ ಅಪಾರವಾದ ಸಾಮಾಜಿಕ ಅಂತರ ಕಂಡು ಬರುತ್ತದೆ. ಜಾತಿಗಳ ಸಂಖ್ಯೆ ಅಪಾರವಾಗಿರುತ್ತದೆ. (ಭಾರತದಲ್ಲಿ ಸು.೩೦೦೦ ಜಾತಿಗಳಿವೆ)	ವಿಭಿನ್ನ ವರ್ಗಗಳ ನಡುವಿನ ಸಂಬಂಧಗಳು ಅನ್ಯೋನ್ಯವಾಗಿರುತ್ತದೆ.ವರ್ಗಗಳ ಸಂಖ್ಯೆ ಸೀಮಿತ. ಭಾರತದಲ್ಲಿ (ಮೇಲುವರ್ಗ, ಮಧ್ಯಮ ಮತ್ತು ಕೆಳವರ್ಗ ಎಂಬ ಮೂರು ವರ್ಗಗಳಿವೆ).
೪. ಈ ವ್ಯವಸ್ಥೆ ಪ್ರಜಾತಂತ್ರ ವಿರೋಧಿ ಯಾಗಿದೆ. ಇದು ಪರಿಪೂರ್ಣ ಒಳ ಬಾಂಧವ್ಯ ವ್ಯವಸ್ಥೆಯನ್ನು ಹೊಂದಿದೆ	ಇದು ಪ್ರಜಾತಂತ್ರವನ್ನು ಗೌರವಿಸುತ್ತದೆ ಒಳಬಾಂಧವ್ಯವಿದ್ದರೂ ಅದರ ಪ್ರಮಾಣ ಹಾಗೂ ಪ್ರಭಾವ ತುಂಬ ಕಡಮೆ.

ಆ. ಮನೋವೃತ್ತಿಯೆಂದರೆ 'ಅಂತರ್ಗತ ಬಯಕೆ'. ಭಾಷಾ ಮನೋವೃತ್ತಿಯೆಂದರೆ (Language attitude) ವ್ಯಕ್ತಿ ಅಥವಾ ವ್ಯಕ್ತಿಗಳು ಒಂದಕ್ಕಿಂತ ಹೆಚ್ಚು ಭಾಷೆಗಳೊಡನೆ ವ್ಯವಹರಿಸುವಾಗ ಆ ಭಾಷೆಗಳ ಬಗ್ಗೆ ತೋರುವ ಒಲವು ಆ ವ್ಯಕ್ತಿಯ ಭಾಷಾ ಮನೋವೃತ್ತಿ ಯನ್ನು ಬಿಂಬಿಸುತ್ತದೆ. ಭಾಷಿಕರ ಭಾಷಾ ಮನೋವೃತ್ತಿಗಳು ಧನಾತ್ಮಕವಾಗಿರಬಹುದು, ಋಣಾತ್ಮಕವಾಗಿರಬಹುದು ಇಲ್ಲವೇ ತಟಸ್ಥವಾಗಿರಬಹುದು. ಭಾಷಾ ಮನೋವೃತ್ತಿಯು ಭಾಷಿಕರು ಸಂಪರ್ಕವಿಟ್ಟುಕೊಂಡಿರುವ ಭಾಷೆಗಳನ್ನು ಅವಲಂಬಿಸಿರುತ್ತದೆ.

೩. ಭಾಷಿಕರು ಅನೌಪಚಾರಿಕ ಸಂದರ್ಭದಲ್ಲಿ ತಮ್ಮ ಆಡುನುಡಿಯನ್ನು ಔಪಚಾರಿಕ ಸಂದರ್ಭದಲ್ಲಿ ಅದೇ ಭಾಷೆಯ ವ್ಯವಹಾರಿಕ ಶಿಷ್ಟರೂಪವನ್ನು ಬಳಸುವಂತಹ ಪ್ರಕ್ರಿಯೆಗೆ ಸ್ಥೂಲವಾಗಿ 'ದ್ವಿಸ್ತರತೆ'(Daiglossia) ಎನ್ನುವರು. ೧೯೫೯ರಲ್ಲಿ ಫರ್ಗ್ಯೂಸನ್ ಮೊದಲ ಬಾರಿಗೆ ಈ ಪದವನ್ನು ಬಳಸಿದನು.

ಆಕರಗ್ರಂಥಗಳು

ಕನ್ನಡ

ಚಿದಾನಂದಮೂರ್ತಿ ಎಂ., ೧೯೮೧, 'ಕರ್ನಾಟಕ ವ್ಯಕ್ತಿನಾಮಗಳು', ವಾಗರ್ಥ, ಬಾಪ್ಕೊ ಪ್ರಕಾಶನ, ಬೆಂಗಳೂರು

ಚಿದಾನಂದಮೂರ್ತಿ ಎಂ., ೧೯೯೩, 'ಅಬ್ಬೆಯೆಂದತ್ತಿಗೆಯೆಂಬ ಮಾತನ್', ಹೊಸತು ಹೊಸತು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಿದಾನಂದಮೂರ್ತಿ ಎಂ., ೧೯೯೮, 'ವಚನಕಾರರ ಕಳು ಬಳ್ಳಿ ಪರಿಕಲ್ಪನೆ', ವಚನ ಶೋಧ-೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಜೋಗನ್ ಶಂಕರ., ೧೯೯೫, ಗ್ರಾಮಸಮಾಜ, ಜೀವ ಪ್ರಕಾಶನ, ಮೈಸೂರು.

ನಾರಾಯಣ ಕೆ.ವಿ, ಮತ್ತು ಇತರರು, ೨೦೦೦, 'ಭಾಷೆ' ವಿಶ್ವಕೋಶ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪಾಂಡುರಂಗ ಬಾಬು ಡಿ., ೧೯೯೮, 'ಣೇ ಮೀ ಲೇ', ಕನ್ನಡ ಅಧ್ಯಯನ ಸಂ-೫, ಸಂ-೧, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪೀಟರ್ ಜೆ. ಕ್ಲಾಸ್, ೧೯೮೭, 'ತುಳುವ ದರ್ಶನ', ಕನ್ನಡಕ್ಕೆ : ಎ.ವಿ.ನಾವಡ ಮತ್ತು ಸುಭಾಶ್ಚಂದ್ರ, ಪ್ರಾದೇಶಿಕ ವ್ಯಾಸಂಗ, ಕುಂದಾಪುರ

ಮಹಾದೇವಯ್ಯ ಪಿ., ೨೦೦೧, 'ಕನ್ನಡದಲ್ಲಿ ಬಂಧುಸೂಚಕ ಪದಗಳು', ನಮ್ಮ ಕನ್ನಡ, ಸಂಚಿಕೆ ೫೦, (ಸಂ) ಕೆ.ವಿ.ನಾರಾಯಣ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಶ್ರೀಕಂಠಯ್ಯ ತೀ.ನಂ., ೧೯೮೩, (ತೃ.ಆ) 'ಏನಿ ಗಡಿಂ ರೀ', ಸಮಾಲೋಕನ, ಶಾರದಾ ಮಂದಿರ, ಮೈಸೂರು.

ಸೇಡಿಯಾಪು ಕೃಷ್ಣಭಟ್., ೧೯೯೨, 'ಅತ್ತಿಗೆ', ವಿಚಾರ ಪ್ರಪಂಚ, ಕರ್ನಾಟಕ ಸಂಘ ಪುತ್ತೂರು

ಸೋಮಶೇಖರಗೌಡ, ೨೦೦೦, 'ಭಾಷೆ ರಚನೆ ಬಳಕೆ', ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು

ಇಂಗ್ಲಿಶ್

Balasubramanian G., 1999, 'Language and power in the rural context of Tamil Nadu' Indian Linguistics Volume 601-4

Brown Roger W and Margurete Ford., 1966, 'Address in American English' Dell Hymes Education Language in culture and Society [Horper & Row, New York]

Jampt Holmes., 1992 An Introducation To Socio linguistics Longman-London NewYork

Joseph N., 1980, Cultural Impacts in Kinship Terms sociolinguistics and Dialectology (Edit) S.Ages sthlalingom & K.Karunakaran, Annamaki University

Firth J.R., 1966, On Sociological Linguistics in languge in culture and society

Manuel M., 1981, 'Some Unique Kinship terms current in a dialect of KanyKumari District' IJDL-Vol-x

Misra K.S., 1977, 'Terms of Address and second person pronominal us age in Hindi' A Sociolinguistic study Bahri publication Pvt, Ltd.

Peter Trudgill., 1974, 'Sociolinguistic An Introduction' Penguin books Ltd.

Sharma D.D., 1985, 'Kinship terms of reference in Kumauni' (A Socio linguistic Appraisal) IJDL- XIV

Surya Kumari., 1986 'A Sociolinguistic study of Names and Address system in Telugu' IJDL 15:2

Sreedhar M.V., 1980 Correlation Between Marriage practices and Kinship Terms in some Dravidian Language 'Sociolinguistics and Dialectology' Ed- S.Agesthialingom K.KarunaKarna. Annamalai University, Annamalai nagar

೭೯

ಸಾಮಾಜಿಕ ಅವಳಿ ಸಂಬಂಧಗಳು

ಭಾಷಾ ಸಮುದಾಯದಲ್ಲಿ ಸ್ತರವಿನ್ಯಾಸಕ್ಕೆ ಅನುಗುಣವಾಗಿ ಒಬ್ಬ ಭಾಷಿಕ ಇನ್ನೊಬ್ಬ ಭಾಷಿಕರಿಗಿಂತ ಭಿನ್ನವಾದ ಸ್ಥಾನಮಾನಗಳನ್ನು ಹೊಂದಿರುತ್ತಾರೆ. ಭಾಷಿಕರ ವಿಭಿನ್ನ ಸ್ಥಾನಮಾನಗಳಿಂದಾಗಿ ವೈವಿಧ್ಯಮಯವಾದ ಸಾಮಾಜಿಕ ರಚನೆ ಏರ್ಪಟ್ಟಿರುತ್ತದೆ. ಸಾಮಾಜಿಕ ರಚನೆಯು ಸಂಘ ಸಂಸ್ಥೆಗಳ ಮೂಲಕ ನಿಯಂತ್ರಿಸಲ್ಪಟ್ಟಿರುತ್ತದೆ. ಈ ಅಧ್ಯಾಯನದಲ್ಲಿ ಭೂ ಮಾಲಿಕ-ಹಿಡುವಳಿದಾರ, ಒಡೆಯ-ಸೇವಕ, ಸ್ನೇಹಿತರು ಹಾಗೂ ಅಪರಿಚಿತರು ಇವರ ನಡುವಿನ ಸಂಬಂಧಗಳು ಹೇಗೆ ನಿಯಂತ್ರಿಸಲ್ಪಟ್ಟಿರುತ್ತವೆ. ಅವರವರ ಸ್ಥಾನಮಾನಗಳಿಗನು ಗುಣವಾಗಿ ಪರಸ್ಪರರು ಯಾವ ರೀತಿಯಾಗಿ ಸಂಬೋಧಿಸುತ್ತಾರೆ ಹಾಗೂ ಆ ಸಂದರ್ಭದಲ್ಲಿ ನಡೆಯುವ ಭಾಷಿಕ ಕ್ರಿಯೆಗಳನ್ನು ಕುರಿತು ಚರ್ಚಿಸಲಾಗಿದೆ.

ಭೂ ಮಾಲೀಕ-ಹಿಡುವಳಿದಾರ

ಭೂ ಒಡೆಯರರಿಗೆ ಕೆಲವು ಸಂದರ್ಭದಲ್ಲಿ ತಮ್ಮ ಭೂಮಿಯನ್ನು ಉಳಲಿಕ್ಕೆ ಆಗುವುದಿಲ್ಲ (ಮಕ್ಕಳೆಲ್ಲರೂ ನೌಕರಿ ಮಾಡುತ್ತಿರುತ್ತಾರೆ. ಅಥವಾ ಇನ್ನಾವುದೇ ಕಾರಣಗಳಿರ ಬಹುದು). ಅದಕ್ಕಾಗಿ ಅವರು ತಮ್ಮ ಭೂಮಿಯನ್ನು ಕೆಲವು ನಿರ್ಬಂಧನೆಗಳನ್ವಯ ಹಿಡುವಳಿದಾರರಿಗೆ ಅಥವಾ ಗೇಣಿದಾರರಿಗೆ [ಬೇಸಾಯ ಮಾಡಲು ಭೂಮಿಯನ್ನು ಪಡೆಯುವವ ಅಥವಾ ಸಾಗುವಳಿ ಮಾಡಿಕೊಳ್ಳುವವ] ಹಚ್ಚುವುದುಂಟು. ರೈತರೆಲ್ಲರೂ ಗೇಣಿದಾರರಾಗುವುದಿಲ್ಲ. ಕಡಮೆ ಹೊಲ, ಗದ್ದೆ ಹೊಂದಿದ ಹಾಗೂ ಮನೆಯಲ್ಲಿ ನಾಲ್ಕೈದು ಜನ ದುಡಿಯುವ ಜನರಿರುವ ರೈತರು ಇತರರ ಭೂಮಿಯನ್ನು ಗೇಣಿ ಹಿಡಿಯುತ್ತಾರೆ. ಗೇಣಿ ಹಿಡಿಯುವ ಸಂದರ್ಭದಲ್ಲಿ ಭೂ ಮಾಲೀಕ ಮತ್ತು ಹಿಡುವಳಿದಾರರ ಮಧ್ಯ ನಡೆಯುವ ಸಂಭಾಷಣೆಯಲ್ಲಿಯ ಸಂಬೋಧನೆಗಳನ್ನು ಗಮನಿಸಿದಾಗ ಪರಸ್ಪರ ಹೆಸರು ಅಥವಾ ಕುಲನಾಮಗಳನ್ನು ಬಳಸುವುದುಂಟು.

ಭೂ ಮಾಲೀಕ	:	ಸೋಮಲಿಂಗಪ್ಪ ಅಥವಾ ರುದ್ರಾಪುರ ಸಾಹುಕಾರರೆ, ನನ್ನ ಮಕ್ಕಳೆಲ್ಲರೂ ನೌಕರಿ ಮಾಡಲಿಕ್ಕೆ ಹತ್ತಿದ್ದಾರೆ. ನನಗೂ ವಯಸ್ಸಾಗಿದೆ ನಮ್ಮ ೪ ಎಕರೆ ಭೂಮಿಯನ್ನು ಉಳುಮೆ ಮಾಡಲಿಕ್ಕೆ ಆಗುತ್ತಿಲ್ಲ ನಿಮ್ಮ ಮನೆಯಲ್ಲಿ ನಾಲ್ಕೈದು ಜನ ದುಡಿಯುವವರಿದ್ದೀರಿ ನಮ್ಮ ಹೊಲವನ್ನು ನೀವೇ ಮಾಡಿರಿ. ಅದಕ್ಕೆ ಪ್ರತಿಯಾಗಿ ವರ್ಷಕ್ಕೆ ೧೦ ಚೀಲ ಜೋಳ ಕೊಟ್ಟರೆ ಸಾಕು. ಇದಕ್ಕೆ ನೀವೇನು ಅನ್ನುತ್ತೀರಿ.
ಸೋಮಲಿಂಗಪ್ಪ	:	ಮಹಾದೇವಪ್ಪ ಅಜ್ಜರವರೇ ಅಥವಾ ಬಿದರಿ ಅಜ್ಜರವರೆ ನೀವು ಹೇಳಿದ್ದು ತಿಳಿಯಿತು. ವರ್ಷಕ್ಕೆ ೧೦ ಚೀಲ ಆಗುವುದಿಲ್ಲ ೬ ಚೀಲ ಕೊಡುತ್ತೇವೆ.

ಭೂಮಿ ಫಲವತ್ತಾಗಿದ್ದರೆ ಬೇಡಿಕೆ ಹೆಚ್ಚುತ್ತದೆ. ಹಿಡುವಳಿದಾರ ಅದಷ್ಟು ಕಡಮೆ ಹಣಕೊಟ್ಟು, ಭೂಮಿಯನ್ನು ಗೇಣಿ ಹಿಡಿಯಬೇಕೆಂದು ಯತ್ನಿಸಿದರೆ ಭೂ ಮಾಲೀಕ ಹೆಚ್ಚು ಹಣ ತೆಗೆದು ಕೊಂಡು ಗೇಣಿ ಕೊಡಬೇಕೆಂದು ಹವಣಿಸುತ್ತಾನೆ. ಪರಸ್ಪರ ಸಂಭಾಷಣೆಯಲ್ಲಿ ಯಾವುದೇ ಬಗೆಯ ಅಧಿಕಾರ, ಮನೋವೃತ್ತಿ ಇರುವುದಿಲ್ಲ. ಭೂಮಿ ಫಲವತ್ತಾಗಿದ್ದರೆ ಹಿಡುವಳಿದಾರ, ಭೂ ಮಾಲೀಕನನ್ನು ಓಲೈಸುವುದುಂಟು.

ಭೂ ಮಾಲೀಕ	:	ಸೋಮಲಿಂಗಪ್ಪನವರೆ ನಮಗೂ ದಕ್ಕುವುದಿಲ್ಲ.
ಸೋಮಲಿಂಗಪ್ಪ	:	ಬಿದರಿ ಅಜ್ಜರವರೆ ೭ ಚೀಲ ಅಥವಾ ೭ ಸಾವಿರ ರೂಪಾಯಿ ಕೊಡುತ್ತೇನೆ. ನಮಗೂ ಅನುಕೂಲವಾಗುತ್ತದೆ. ದಯವಿಟ್ಟು ನಮಗೆ ಗೇಣಿ ಕೊಡಬೇಕು.
ಭೂ ಮಾಲೀಕ	:	ಸೋಮಲಿಂಗಪ್ಪನವರೆ ಆಗಲಿ. ಭೂಮಿ ಹಾಳು ಮಾಡಬೇಡಿರಿ.

ಗೇಣಿ ವ್ಯವಹಾರದಲ್ಲಿ ವ್ಯಕ್ತಿ ವ್ಯಕ್ತಿಗಳಲ್ಲಿ ಮಾತ್ರ ಸಂಭಾಷಣೆ ನಡೆಯುವುದುಂಟು. ಆ ಸಂದರ್ಭದಲ್ಲಿ ವಯಸ್ಸಿಗೆ ಅನುಗುಣವಾಗಿ ಅಜ್ಜ, ಅಪ್ಪ, ಅಣ್ಣ ಇಂತಹ ಬಂಧು ಸೂಚಕಗಳು ಆವೃತ್ತಿಯಾಗುತ್ತವೆ. ಭೂ ಮಾಲೀಕ ತನ್ನ ಭೂಮಿಯನ್ನು ಗೇಣಿ ಕೊಡುವುದಕ್ಕೆ ಕಿತ್ತೂರು ಕರ್ನಾಟಕ ಪ್ರದೇಶದ ಕಡೆಗೆ 'ಕಣ್ಣೀಲೆ ಹಚ್ಚುವುದು' ಎಂದು ಕರೆಯುವುದುಂಟು.

ಒಡೆಯ-ಸೇವಕ

ಈ ಸ್ತರ ವಿನ್ಯಾಸವು ಎಲ್ಲ ಸಮುದಾಯಗಳಲ್ಲಿಯೂ ಎಲ್ಲ ವಲಯಗಳಲ್ಲಿಯೂ ಇರುತ್ತದೆ. ಅಧಿಕಾರಿ, ಗುಮಾಸ್ತ, ಸಿಪಾಯಿ, ಭೂಮಾಲೀಕ ಆಳು, ಕೂಲಿಕಾರ ಮುಂತಾದವರು. ಇವರಲ್ಲಿ ನಡೆಯುವ ಸಂಭಾಷಣೆಯನ್ನು ಗಮನಿಸಿದಾಗ ಉನ್ನತ ಹುದ್ದೆಯಲ್ಲಿರುವವರು ತಮ್ಮ ಆಧೀನದಲ್ಲಿರುವವರನ್ನು ಹೆಚ್ಚಾಗಿ ಏಕವಚನದಿಂದ ಕರೆಯುವುದುಂಟು. ಅಲ್ಲಿ ಅವನ ಹೆಸರು ಅಥವಾ ಕುಲನಾಮ ಬಳಸುವುದುಂಟು.

ತಹಶೀಲದಾರ : ಬಾರೋ ಹಡಪದ ಅಥವಾ ಮಾರುತಿ ಈ ಪತ್ರ ಬೇಗ ಜಿರಾಕ್ಸ್ ಮಾಡಿಸಿ ಕೊಂಡ ಬಾರಪಾ.

ಮಾರುತಿ : ಹೂಡ್ರಿ ಸಾಹೇಬರೆ ಅಥವಾ ಹೂಡ್ರಿ ಸಾರ್

ಕೆಳದರ್ಜೆಯವರು ಮೇಲದರ್ಜೆಯವರನ್ನು ಸಾಹೇಬ್, ಮೇಷ್ಟು ಎಂದೇ ಸಂಬೋಧಿಸುವುದುಂಟು.

ಭೂ ಮಾಲೀಕ : ಯಾಕಲೇ ನಿಂಗ್ಯಾ, ನಿನಗ ಸರಿಯಾಗಿ ಗಳೆ ಹೊಡ್ಯಾಕ್ ಬರುದಿಲ್ಲ, ಈ ತಿಂಗಳ್ ನಿನಗ ಪಗಾರ ಕೊಡುದಿಲ್ಲ.

ನಿಂಗಪ್ಪ : ಸಾಹುಕಾರರೇ ಹಂಗ ಮಾಡಬ್ಯಾಡ್ರಿ, ನನ್ನ ಹೊಟ್ಟಿಮ್ಯಾಲ ಕಾಲ ಹಾಕಬ್ಯಾಡ್ರಿಪಾ

ಭೂ ಮಾಲೀಕ : ನಿಂಗ್ಯಾ ಇನ್ನು ಮೇಲೆ ಚಂದವಾಗಿ ಗಳೆ ಹೊಡಿ ಬೇಕು.

ನಿಂಗಪ್ಪ : ಧನಿ ಆಗಲಿ.

ಭೂ ಮಾಲೀಕನ ಸಂಬೋಧನೆಯಲ್ಲಿ ಒಂದು ರೀತಿಯ ದರ್ಪ ಇದ್ದರೆ ಕೂಲಿಕಾರನ ಸಂಬೋಧನೆಯಲ್ಲಿ ದೈನ್ಯತೆ ಇರುತ್ತದೆ. ಬಂಡವಾಳ ಶಾಹಿಗಳು ಕೂಲಿಕಾರರನ್ನು ಶೋಷಣೆ ಮಾಡುತ್ತಾರೆ, ಕೂಲಿಕಾರರೆ ಉತ್ಪಾದನೆ ಮಾಡುವವರು ಅವರಿಗೆ ಅವರು ಉತ್ಪಾದನೆ ಮಾಡಿದ ವಸ್ತುಗಳಿಗೆ ತಕ್ಕಂತೆ ಕೂಲಿ ಕೊಡುವುದಿಲ್ಲ. ಕಡಮೆ ಕೂಲಿಕೊಟ್ಟು, ಹೆಚ್ಚು ಉತ್ಪಾದನೆ ಬಂಡವಾಳ ಶಾಹಿಗಳು ಪಡೆಯುತ್ತಾರೆ.

ಭೂ ಒಡೆಯನ ಅಧೀನದಲ್ಲಿ ಸೇವಕರು ಸುಮಾರು ವರ್ಷಗಳವರೆ ಕೆಲಸ ಮಾಡಿದರೆ ಪರಸ್ಪರರಲ್ಲಿ ಪ್ರೀತಿ, ವಿಶ್ವಾಸ ಕುದುರುತ್ತದೆ. ಆಗ ಭೂ ಒಡೆಯ ಹಾಗೂ ಆತನ ಕುಟುಂಬದ ಸದಸ್ಯರಿಗೆ ಸೇವಕನು ಮನೆಯ ಸದಸ್ಯನಂತೆ ಆಗುತ್ತಾನೆ.

ಭೂ ಒಡೆಯ : ದ್ಯಾಮಣ್ಣ ನಾಳೆ ಕೆರಿ ದಂಡಿಗಿ ಮ್ಯಾಗ ಶೇಂಗಾ ಒಣಗ್ ಹಾಕೋಣ ಮನೆಗೆ ಬೇಗ ಬಾರಪಾ.

ಭೂ ಒಡೆಯನ ಹೆಂಡತಿ : ದ್ಯಾಮಣ್ಣ ಮೊದಲ ಊಟ ಮಾಡಿ, ಗಟ್ಟಿ ಆಗು ನಂತರ ನಿನ್ನ ದಗದಾ ಶುರು ಮಾಡಪಾ.

ದ್ಯಾಮಣ್ಣ : (ಅಕ್ಕಾ/ಅಣ್ಣಾ ಎನ್ನುತ್ತಾ) ಹಾಗೆಯೇ ಮಾಡುತ್ತೇನೆ.

ಇಂತಹ ಸಂದರ್ಭದಲ್ಲಿ ಏಣಿ ಶ್ರೇಣಿಯ ಬದಲು ಸಮತಾ ಮನೋಭಾವನೆ ಬರುವುದು. ಇಂತಹ ಸನ್ನಿವೇಶಗಳು ಕಡಮೆ. ಹೆಚ್ಚಾಗಿ ಸೇವಕರು ತಮ್ಮ ಒಡೆಯನನ್ನು ಅಪ್ಪಾ, ಸಾಹುಕಾರ, ಧಣಿ, ಒಡೆಯ, ಮಾಲೀಕ ಎಂದು ಸಂಬೋಧಿಸಿದರೆ, ಯಜಮಾನಿಯನ್ನು ಅವ್ವಾ, ಅಮ್ಮಾ, ಸಾಹುಕಾರತಿ ಎಂದು ಸಂಬೋಧಿಸುವುದುಂಟು.

ಧರ್ಮಾಧಿಕಾರಿ-ಭಕ್ತ

ನಮ್ಮ ರಾಷ್ಟ್ರದಲ್ಲಿ ಪ್ರಾಚೀನ ಕಾಲದಿಂದಲೂ ಹಲವಾರು ಧಾರ್ಮಿಕ ಸಂಸ್ಥೆಗಳು ಅಸ್ತಿತ್ವದಲ್ಲಿದ್ದು ಧರ್ಮ ಪ್ರಸಾರವನ್ನು ಮಾಡುತ್ತಿವೆ. ಕ್ರೈಸ್ತ ಮಿಶನರಿಗಳು, ಬೌದ್ಧಗುರುಗಳು, ಮುಸ್ಲಿಂ ಮುಲ್ಲಾಗಳು, ಜೈನಮುನಿಗಳು, ವೀರಶೈವ ಮಠಾಧಿಪತಿಗಳು ಚರ್ಚು, ಬೌದ್ಧವಿಹಾರ, ಮಸೀದಿ, ಬಸದಿ ಹಾಗೂ ಮಠಗಳಲ್ಲಿ ತಮ್ಮ ಧರ್ಮದ ತಿರುಳನ್ನು ಜನತೆಗೆ ಸರಳವಾದ ಭಾಷೆಯಲ್ಲಿ ಉಪನ್ಯಾಸ, ಪ್ರವಚನ, ಪಠಣ ಮುಂತಾದುವುಗಳ ಮೂಲಕ ಪ್ರಸಾರ ಮಾಡುವರು. ಧರ್ಮಾಧಿಕಾರಿಗಳು ಭಕ್ತರ ಸ್ಥಾನಮಾನಗಳನ್ನು ಗಮನದಲ್ಲಿಟ್ಟು ಕೊಂಡು ಸೂಚಕ ಪದಗಳನ್ನು ಬಳಸುತ್ತಾರೆ.

ಭಕ್ತ	:	ಸ್ವಾಮೀಜಿಗಳು ಇದ್ದಾರೆಯೇ?
ಸೇವಕ	:	ಸ್ವಾಮಿಗಳು ಪವಾಡಿಸಿದ್ದಾರೆ (ಮಲಗಿದ್ದಾರೆ). ಸ್ವಲ್ಪ ಕುತಕೊಳ್ಳಿರಿ
ಧರ್ಮಾಧಿಕಾರಿ	:	ಓ ಓ ಬನ್ನಿರಿ. ಹೇಗಿದ್ದೀರಾ? ಕೆಲಸ ಇದ್ದಾಗ ಸ್ವಾಮಿಗಳ ನೆನೆಪಾಗುತ್ತದೆ.
ಭಕ್ತ	:	ಇಲ್ಲ ಸ್ವಾಮೀಜಿ. ನಿಮ್ಮ ಆಶೀರ್ವಾದ ಸದಾ ಇರಲಿ. ನಾಳೆ ಮಗನ ಮದುವೆಯಿದೆ ತಾವು ದಯ ಮಾಡಿಸಬೇಕು.
ಧರ್ಮಾಧಿಕಾರಿ	:	ಕಲ್ಲಪ್ಪ ನಿಮ್ಮ ಮಗ ನಮ್ಮ ಪ್ರಸಾದ ನಿಲಯದ ವಿದ್ಯಾರ್ಥಿ. ಬರುತ್ತೇವೆ.

ಧರ್ಮಾಧಿಕಾರಿಗಳು ರಾಜಕಾರಣಿಗಳನ್ನು, ಅಧಿಕಾರಿಗಳನ್ನು 'ಸಾಹೇಬ'ರೆಂದೇ ಸಂಬೋಧಿಸುತ್ತಾರೆ. ಸಾಮಾನ್ಯ ಜನರನ್ನು ಏಕವಚನವನ್ನು ಪ್ರಯೋಗಿಸಿ ಅವರ ಹೆಸರು ಇಲ್ಲವೆ ಕುಲನಾಮಗಳನ್ನು ಬಳಸಿ ಸಂಬೋಧಿಸುವುದುಂಟು. ಭಕ್ತರು ವಿಶೇಷವಾಗಿ ವೀರಶೈವ ಧರ್ಮಾಧಿಕಾರಿಗಳನ್ನು 'ಸ್ವಾಮೀಜಿ', 'ಸ್ವಾಮಿಗಳು', 'ಬುದ್ದಿ', 'ಅಪ್ಪಾಗೋಳ್', 'ಅಜ್ಜಾಗೋಳ್', 'ಗುರುಗಳು', 'ಪೂಜ್ಯರು' ಎಂದು ಸಂಬೋಧಿಸುವುದುಂಟು. ಕೆಲವು ಸಂದರ್ಭದಲ್ಲಿ ಮಠಗಳ ಸ್ಥಳದ ಹೆಸರುಗಳನ್ನು ಬಳಸಿ ಸಂಬೋಧಿಸುವುದುಂಟು. 'ನಾಗನೂರು ಶ್ರೀಗಳು' 'ಕೊಟ್ಟೂರು ಶ್ರೀಗಳು', 'ಸುತ್ತೂರು ಶ್ರೀಗಳು' ಮುಂತಾದವು. ಮದುವೆ, ಜಾತ್ರೆ, ಉತ್ಸವ ಸಮಾರಂಭಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ಭಕ್ತರು ಕಾರ್ಯಕ್ರಮದ ವಿವರಗಳನ್ನು ಇನ್ನೊಬ್ಬರಿಗೆ ಪರಿಚಯಿಸುವಾಗ 'ನಾಳೆ ನಾಗನೂರ ಮಠದ ಪೂಜ್ಯ ಶ್ರೀಶ್ರೀಶ್ರೀ ಸಿದ್ಧರಾಮಮಹಾಸ್ವಾಮಿಗಳು ನಮ್ಮ ಹಳ್ಳಿಗೆ ದಯಮಾಡಿಸುತ್ತಾರೆ'. ಗ್ರಾಮಸ್ಥರು ಶ್ರೀಗಳ ಆಶೀರ್ವಾದ ಪಡೆದು ಪುನೀತರಾಗಬೇಕೆಂದೂ ಮಹಾ ಪ್ರಸಾದ ಸ್ವೀಕರಿಸಬೇಕೆಂದು ಭಕ್ತರಲ್ಲಿ ಕೋರುತ್ತಾರೆ. ಧರ್ಮಾಧಿಕಾರಿಗಳು ಒಂದು ಸಮುದಾಯವನ್ನು ನಿಯಂತ್ರಣದಲ್ಲಿಟ್ಟು ಕೊಂಡಿರುವುದರಿಂದ ಹಾಗೂ ಜನರಲ್ಲಿ ಸಾಮಾಜಿಕ ಮೌಲ್ಯವನ್ನು, ನೀತಿ ನಿಯಮಗಳನ್ನು

ತುಂಬಿ ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುವುದರಿಂದ ಭಕ್ತರಿಗೆ ಧರ್ಮಾಧಿಕಾರಿಗಳ ಮೇಲೆ ಅಪಾರ ಶ್ರದ್ಧೆ ಮತ್ತು ಗೌರವವಿರುತ್ತದೆ.

ಸ್ನೇಹಿತರು

ಪ್ರೀತಿ, ವಿಶ್ವಾಸದಿಂದ ಕೂಡಿದ ಸಮ ಮನಸ್ಕ, ಸಮ ವಯಸ್ಕ ವ್ಯಕ್ತಿಗಳು ಗೆಳೆಯರಾಗುತ್ತಾರೆ. ಸ್ನೇಹತ್ವದಲ್ಲಿ ವಯಸ್ಸು ಮತ್ತು ಲಿಂಗ ಬಹುಮುಖ್ಯ ಪಾತ್ರವಹಿಸುತ್ತದೆ. ಸಮವಯಸ್ಸಿನ ಇಬ್ಬರು ಸ್ನೇಹಿತರು ಪರಸ್ಪರರನ್ನು ಅವರ ಹೆಸರು ಇಲ್ಲವೆ ಕುಲನಾಮಗಳಿಂದ ಸಂಬೋಧಿಸುವುದುಂಟು.

'ಪಾಟೀಲರೆ ಸ್ವಲ್ಪ ನಿಲ್ಲಿರಿ, ನಾನು ಬರ್ತೆನ್'

'ನಮ್ಮ ಸ್ನೇಹಿತ ಪಾಟೀಲ ಎನ್ನುವವರು ಬೆಳಗಾವಿಯಲ್ಲಿ
ನೌಕರಿ ಮಾಡ್ತಾರ್'

'ನಮ್ಮ ಸ್ನೇಹಿತ ಮಲ್ಲು ಎನ್ನುವವ ಒಳ್ಳೆಯ ಮನುಷ್ಯ'

ಗೆಳೆತನದಲ್ಲಿ ಆತ್ಮೀಯತೆ, ಸಲಿಗೆಯಿದ್ದರೆ ಏಕವಚನವು ಪ್ರಯೋಗವಾಗುದುಂಟು.

'ಏ ರಾಜಾ ಕ್ಲಾಸಿಗೆ ಟೈಂ ಆಗಿದೆ ಬಾರೊ'

'ಬಿರಾದರ ಏನ್ ಮಾಡಾಕ ಹತ್ತಿಯೋ'

ಸಲಿಗೆಯ ಸಂದರ್ಭದಲ್ಲಿ ಬಾರಲೇ, ಬಾರಲೊ, ಬಾಸ್ವಾಮಿ, ಬಾರಯ್ಯ, ಬಾರಾಕೊ ಮುಂತಾದ ಸಂಬೋಧನೆಗಳು ಬಳಕೆಯಾಗುವುದುಂಟು. ಸ್ನೇಹಿತರಲ್ಲಿ ನಿಕಟತ್ವ ಕಡಮೆ ಇದ್ದರೆ 'ರೀ' ಬಳಕೆಯುಂಟು. 'ನಮಸ್ಕಾರ ಬಿರಾದರವರೆ ಮತ್ತೇನು ವಿಶೇಷ'. ಹುಡುಗನಿಗೆ ಹುಡುಗಿಯರು ಸ್ನೇಹಿತರಿದ್ದರೆ ಕ್ವಚಿತ್ತಾಗಿ ಏಕವಚನ ಬಳಸುವುದುಂಟು.

'ಯಾಕೆ ನಿನ್ನೆ ಕಾಲೇಜಿಗೆ ಬಂದಿರಲಿಲ್ಲ',

ಇಂತಹ ಮಾತುಗಳು ಹೆಚ್ಚಾಗಿ ಪ್ರೇಮಿಗಳಲ್ಲಿ ಅಥವಾ ಹೆಚ್ಚು ಸಲಿಗೆಯಿದ್ದವರಲ್ಲಿ ಬಳಕೆಯಾಗುವುದುಂಟು. ಉಳಿದೆಡೆ ಅವರ ಹೆಸರು ಅಥವಾ ಕುಲನಾಮ ಬಳಸುವುದುಂಟು.

ಅಭಿತೇಜ : 'ದಖನಿಯವರೆ ಅಥವಾ ಮಮತಾ ಅವರೆ ನಿನ್ನೆ ನಾನು ಕ್ಲಾಸಿಗೆ ಬಂದಿರಲಿಲ್ಲ ದಯವಿಟ್ಟು ಹಿಸ್ಟರಿ ನೋಟ್ಸ್ ಕೊಡುತ್ತಿರಾ'

ದಖನಿ : ಅಭಿತೇಜ ಅವರೆ ಕೊಡುತ್ತೇನೆ ಆದರೆ ಬೇಗ ಹಿಂತಿರುಗಿಸಬೇಕು.

ಹುಡಗಿಯರಿಬ್ಬರು ಸ್ನೇಹಿತರಾಗಿದ್ದಾಗ ಅವರ ಹೆಸರು ಇಲ್ಲವೆ ಕುಲನಾಮ ಬಳಕೆ ಯಾಗುವುದುಂಟು.

ಕಮಲೆ : 'ರಾಧ ನಾಳೆ ನಾನು ಶಾಲೆ ಹೋಗುದಿಲ್ಲ, ಮೇಡಂ ಅವರಿಗೆ ಹೇಳು'.

ರಾಧ : ಆಯ್ತು ಹೇಳ್ತಿನಿ.

ಆತ್ಮೀಯತೆಯಿಂದ ಏಕವಚನ ಬಳಸುವುದುಂಟು. 'ಏ ಕಾಶಿ ಲವುಟಬಾರ್ ನೀರಿಗಿ ಹೋಗುಣು'. ಸ್ನೇಹ ವಲಯದಲ್ಲಿ ಸಾಮಾಜಿಕ ಸಂಬಂಧ ವಯಸ್ಸು, ಲಿಂಗ, ಸ್ಥಾನ ಮಾನಗಳಿಗೆ ತಕ್ಕಂತೆ ಸಂಬೋಧನೆಯಲ್ಲಿ ಭಿನ್ನತೆ ಕಂಡುಬರುತ್ತದೆ.

ಅಪರಿಚಿತ-ಪರಿಚಿತ

ಭಾಷಿಕರು ತಮ್ಮ ಸಮ ವಯಸ್ಸಿನ ಅಪರಿಚಿತ ವ್ಯಕ್ತಿಯನ್ನು ಮಾತನಾಡಿಸುವಾಗ ಅಣ್ಣಾ ಎಂದು ಸಂಬೋಧಿಸುವುದುಂಟು. ವಯಸ್ಸಿನಲ್ಲಿ ದೊಡ್ಡವರಿದ್ದರೆ 'ತಾತ' 'ಅಜ್ಜ' ಎಂದೂ ಸಂಬೋಧಿಸುವುದುಂಟು.

'ಅಣ್ಣಾ ಸ್ವಲ್ಪ ಜಾಗ ಬಿಡಪಾ, ನನ್ನ ಕಾಲು ನೋವಾಗಿದೆ'

'ಯಜ್ಜಾ ನಿನಗೆ ಯಾರು ಬೇಕಾಗಿದ್ದಾರೆ?'

'ಯಮ್ಮಾ ಬದನಿಕಾಯಿ ಹೆಂಗ ಕಿಲೊ'

ಹಿರಿಯರು ಕಿರಿಯರನ್ನು ಸಂಬೋಧಿಸುವಾಗ 'ತಂಗಿ' 'ತಮ್ಮ' 'ಅವ್ವ' ಎನ್ನುವುದುಂಟು. ಅವರು ಪ್ರತಿಯಾಗಿ 'ತಾತ'/'ಅಜ್ಜ' ಎನ್ನುವುದುಂಟು.

'ಏ ತಂಗಿ ಅಥವಾ ಏ ತಮ್ಮ ಸರಿದು ಕೂಡ್ರಿ'

'ಯಜ್ಜಾ/ತಾತ ಅಥವಾ ಅಮ್ಮ ಇಲ್ಲಿ ಜಾಗ ಇಲ್ಲ'

ಹುಡುಗಿಯರು ಸಮ ವಯಸ್ಕ ಪುರುಷರನ್ನು 'ಅಣ್ಣಾ' ಎಂದೂ ಸಮ ವಯಸ್ಕ ಪುರುಷರು ಸ್ತ್ರೀಯರನ್ನು 'ಅಕ್ಕಾ' ಎಂದು ಸಂಬೋಧಿಸುವುದುಂಟು.

'ಅಣ್ಣಾ ನಾನು ನೀರ ತರತೇನ್ ಕ್ವಡ ಕೊಡು'

'ಅಕ್ಕಾ ಬೆಂಡೆಕಾಯಿ ಹೆಂಗ್ ಕಿಲೊ'

ಪರಸ್ಪರರಲ್ಲಿ ಯಾವುದೇ ರೀತಿಯ ಲೈಂಗಿಕತೆಯ ಭಾವನೆ ಬರಬಾರದೆಂಬುದೇ ಅದನ್ನು ಹೀಗೂ ಹೇಳಬಹುದು ಸಹೋದರತ್ವದ ಭಾವನೆ ಬರಬೇಕೆಂಬುದೇ. 'ಅಣ್ಣಾ' 'ಅಕ್ಕಾ' ಎಂಬ ಸಹೋದರತ್ವ ಸಂಬೋಧನೆಗಳ ಹಿಂದಿರುವ ಉದ್ದೇಶ. ಇಬ್ಬರು ಸಮ ವಯಸ್ಕ ಸ್ತ್ರೀಯರು ಮಾತನಾಡುವಾಗ 'ಅಕ್ಕಾ ನಿನ್ನ ಕೂಸ್ ಎಷ್ಟ ತಿಂಗಳದಿದೆ?' ಅವಳು ಪ್ರತಿಯಾಗಿ 'ಅಕ್ಕಾ ಐದು ತಿಂಗಳಿದಿದೆ' ಪರಸ್ಪರರು ಸಂಬೋಧಿಸುವಾಗ ಪ್ರೀತಿ, ಗೌರವಾದರಗಳು ಮುಖ್ಯವಾಗುತ್ತವೆ.

ಇಬ್ಬರು ಅಪರಿಚಿತ ಪುರುಷ ವಿದ್ಯಾವಂತರು ಮಾತನಾಡುವಾಗ 'ಸಾರ್' ಎಂದೂ, ಇಬ್ಬರು ಅಪರಿಚಿತ ಸ್ತ್ರೀ ವಿದ್ಯಾವಂತರು ಮಾತನಾಡುವಾಗ 'ಮೇಡಂ', 'ಟೀಚರ್' ಎಂದೂ ಪುರುಷ ವಿದ್ಯಾವಂತರು ಸ್ತ್ರೀ ವಿದ್ಯಾವಂತರೊಡನೆ ಮಾತನಾಡುವಾಗ ಮೇಡಂ, ಟೀಚರ್ ಎಂದೂ ಸ್ತ್ರೀ ವಿದ್ಯಾವಂತರ ಪುರುಷ ವಿದ್ಯಾವಂತರೊಡನೆ ಮಾತನಾಡುವಾಗ ಸಾರ್, ಅಣ್ಣಾರ್ ಎಂದೂ ಸಂಬೋಧಿಸುವುದುಂಟು. ಅಪರಿಚಿತರೊಡನೆ ಮಾತನಾಡುವಾಗ ಯಾವುದೇ ಬಗೆಯ ಆತ್ಮೀಯತೆಯಾಗಲಿ, ನಿಕಟತ್ವವಾಗಲಿ ಇರುವುದಿಲ್ಲ. ತತ್ಕಾಲಿನ ಸಂಬಂಧ ಮಾತ್ರ ಇರುತ್ತದೆ. ಪರಿಚಿತರು, ಪರಿಚಿತರೊಡನೆ ಮಾತನಾಡುವಾಗ ಅಕ್ಕಾ, ಅಣ್ಣಾ, ಅಜ್ಜ, ಅಮ್ಮ ಇವುಗಳ ಜೊತೆಗೆ ಇತ್ತೀಚೆಗೆ ಆಂಟಿ, ಅಂಕಲ್, ಮಾಮ ಎಂದೂ ಸಂಬೋಧಿಸುವುದುಂಟು ಇಲ್ಲಿ ಆತ್ಮೀಯತೆ ಹಾಗೂ ನಿಕಟತ್ವ ಹೆಚ್ಚಿರುತ್ತದೆ.

ಹೀಗೆ ಭಾಷಾ ಸಮುದಾಯದಲ್ಲಿ ವ್ಯಕ್ತಿಗಳ ಮಧ್ಯ ಪರಸ್ಪರ ಸಂಬಂಧ ಮತ್ತು ಸಂಪರ್ಕ ಇರುತ್ತದೆ. ಸಮುದಾಯದ ಕಟ್ಟಳೆಗಳ ಚೌಕಟ್ಟಿನಲ್ಲಿ ಭಾಷಿಕರು ಆಂತರಿಕ ಸಂಬಂಧಗಳನ್ನು ಹೊಂದಿರುತ್ತಾರೆ.

ಆಕರಗ್ರಂಥಗಳು

ಕನ್ನಡ

ಚಿದಾನಂದಮೂರ್ತಿ ಎಂ., ೧೯೮೧, 'ಕರ್ನಾಟಕ ವ್ಯಕ್ತಿನಾಮಗಳು', ವಾಗರ್ಥ, ಬಾಪ್ಕೊ ಪ್ರಕಾಶನ, ಬೆಂಗಳೂರು

ಚಿದಾನಂದಮೂರ್ತಿ ಎಂ., ೧೯೯೩, 'ಅಬ್ಬೆಯೆಂದತ್ತಿಗೆಯೆಂಬ ಮಾತನ್', ಹೊಸತು ಹೊಸತು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಿದಾನಂದಮೂರ್ತಿ ಎಂ., ೧೯೯೮, 'ವಚನಕಾರರ ಕಳು ಬಳ್ಳಿ ಪರಿಕಲ್ಪನೆ', ವಚನ ಶೋಧ-೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಜೋಗನ್ ಶಂಕರ., ೧೯೯೫, ಗ್ರಾಮಸಮಾಜ, ಜೀವ ಪ್ರಕಾಶನ, ಮೈಸೂರು.

ನಾರಾಯಣ ಕೆ.ವಿ. ಮತ್ತು ಇತರರು, ೨೦೦೦, 'ಭಾಷೆ' ವಿಶ್ವಕೋಶ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪಾಂಡುರಂಗ ಬಾಬು ಡಿ., ೧೯೯೮, 'ಣೇ ಮೀ ಲೇ', ಕನ್ನಡ ಅಧ್ಯಯನ ಸಂ-೫, ಸಂ-೧, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪೀಟರ್ ಜೆ. ಕ್ಲಾಸ್, ೧೯೮೭, 'ತುಳುವ ದರ್ಶನ', ಕನ್ನಡಕ್ಕೆ: ಎ.ವಿ.ನಾವಡ ಮತ್ತು ಸುಭಾಶ್ಚಂದ್ರ, ಪ್ರಾದೇಶಿಕ ವ್ಯಾಸಂಗ, ಕುಂದಾಪುರ

ಮಹಾದೇವಯ್ಯ ಪಿ., ೨೦೦೧, 'ಕನ್ನಡದಲ್ಲಿ ಬಂಧುಸೂಚಕ ಪದಗಳು', ನಮ್ಮ ಕನ್ನಡ, ಸಂಚಿಕೆ ೫೦, (ಸಂ) ಕೆ.ವಿ.ನಾರಾಯಣ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಶ್ರೀಕಂಠಯ್ಯ ತೀ.ನಂ., ೧೯೮೩, (ತೃ.ಆ) 'ಏನಿ ಗಡಿಂ ರೀ', ಸಮಾಲೋಕನ, ಶಾರದಾ ಮಂದಿರ, ಮೈಸೂರು.

ಸೇಡಿಯಾಪು ಕೃಷ್ಣಭಟ್., ೧೯೯೨, 'ಅತ್ತಿಗೆ', ವಿಚಾರ ಪ್ರಪಂಚ, ಕರ್ನಾಟಕ ಸಂಘ ಪುತ್ತೂರು

ಸೋಮಶೇಖರಗೌಡ, ೨೦೦೦, 'ಭಾಷೆ ರಚನೆ ಬಳಕೆ', ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು

ಇಂಗ್ಲಿಶ್

Balasubramanian G., 1999. 'Language and power in the rural context of Tamil Nadu' Indian Linguistics Volume 601-4

Brown Roger W and Margurete Ford., 1966, 'Address in American English' Dell Hymes Education Language in culture and Society [Horper & Row, New York]

Jampt Holmes., 1992 An Introducation To Socio linguistics Longman-London NewYork

Joseph N., 1980, Cultural Impacts in Kinship Terms sociolinguistics and Dialectology (Edit) S.Ages sthlalingom & K.Karunakaran, Annamaki University

Firth J.R., 1966, On Sociological Linguistics in languge in culture and society

Manuel M., 1981, 'Some Unique Kinship terms current in a dialect of KanyKumari District' IJDL-Vol-x

Misra K.S., 1977, 'Terms of Address and second person pronominal us age in Hindi' A Sociolinguistic study Bahri publication Pvt, Ltd.

Peter Trudgill., 1974, 'Sociolinguistic An Introduction' Penguin books Ltd.

Sharma D.D., 1985, 'Kinship terms of reference in Kumauni' (A Socio linguistic Appraisal) IJDL- XIV

Surya Kumari., 1986 'A Sociolinguistic study of Names and Address system in Telugu' IJDL 15:2

Sreedhar M.V., 1980 Correlation Between Marriage practices and Kinship Terms in some Dravidian Language 'Sociolinguistics and Dialectology' Ed- S.Agesthialingom K.KarunaKarna, Annamalai University, Annamalai nagar

೮೦

ಕೌಟುಂಬಿಕ ಅವಳಿ ಸಂಬಂಧಗಳು

ಭಾಷಾ ಸಮುದಾಯದಲ್ಲಿ ತಂದೆ, ತಾಯಿ, ಮಕ್ಕಳು, ಮೊಮ್ಮಕ್ಕಳು ಮತ್ತು ಅವರ ಆಶ್ರಿತರು ಹೀಗೆ ಬಂಧುಗಳ ಒಂದು ಗುಂಪಿಗೆ ಕುಟುಂಬವೆನ್ನಬಹುದು. ಸಾಮಾನ್ಯವಾಗಿ ಒಂದು ಕುಟುಂಬಕ್ಕೆ ಸೇರಿದ ಸದಸ್ಯರು ಒಂದೇ ಕಡೆ ವಾಸಿಸುವುದುಂಟು. ಕುಟುಂಬವು ತನ್ನದೇ ಆದ ಸಾಮಾಜಿಕ ಕಾರ್ಯಗಳನ್ನು ಹೊಂದಿದೆ. ಅವುಗಳಲ್ಲಿ ಮುಖ್ಯವಾಗಿ ಸಂಸ್ಕೃತಿಯ ವಿನಿಮಯ, ಸದಸ್ಯರ ಮೇಲೆ ನಿಯಂತ್ರಣ, ಸದಸ್ಯರ ಸಂರಕ್ಷಣೆ ಹಾಗೂ ಸದಸ್ಯರ ವ್ಯಕ್ತಿತ್ವ ಬೆಳವಣಿಗೆ ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತದೆ. ಸಾಮಾಜಿಕ ರಚನೆಯಲ್ಲಿ ಕುಟುಂಬವು ಪ್ರಮುಖ ಪಾತ್ರವಹಿಸುತ್ತದೆ. ಕುಟುಂಬದಲ್ಲಿಯ ಅತ್ತೆ-ಮಾವ-ಭಾವ-ಸೊಸೆ ಮುಂತಾದ ಸದಸ್ಯರ ಸ್ಥಾನಮಾನಗಳು ಭಿನ್ನ ಮತ್ತು ನಿರ್ದಿಷ್ಟವಾಗಿರುತ್ತವೆ. ಈ ಅಧ್ಯಾಯದಲ್ಲಿ ಕುಟುಂಬದ ಭಾಷಾವಲಯದ ಭಾಷಿಕರ ಸಮಾಜೋ ಭಾಷಿಕ ಸಂಬಂಧವನ್ನು ಕುರಿತು ಚರ್ಚಿಸಲಾಗಿದೆ.

ತಂದೆ/ತಾಯಿ-ಮಗ/ಮಗಳು

ಸಾಮಾನ್ಯವಾಗಿ ಹೆತ್ತವರಿಗೆ ಮಾತ್ರ 'ತಂದೆ' 'ತಾಯಿ' ಎಂಬ ರೂಪಗಳು ಬಳಕೆಯಾಗುತ್ತಿದ್ದರೂ ಬಳಕೆಯ ಬೇರೆ ಸಂದರ್ಭದಲ್ಲಿಯೂ ಅವು ಬಳಕೆಯಾಗುತ್ತವೆ ಉದಾ: ಗಂಡಸಿನ ಅಥವಾ ಹೆಂಗಸರ ಹೆಸರಿನ ಕೊನೆಯಲ್ಲಿ (ಅಣ್ಣ,ಅಯ್ಯನಂತೆ) ಸೇರುತ್ತವೆ (ಮಾಹಾದೇವಪ್ಪ, ಚಿನ್ನಪ್ಪ). ಗಂಡಸರನ್ನು ಅಥವಾ ಹೆಂಗಸರನ್ನು ಸಂಬೋಧಿಸುವಾಗ ಸರ್ವ ಸಾಧಾರಣವಾಗಿ ಇವು ಬಳಕೆಯಾಗುತ್ತವೆ. ಹಿರಿಯರು ಕಿರಿಯರನ್ನು ವಾತ್ಸಲ್ಯದಿಂದ ಸಂಬೋಧಿಸುವಾಗಲು ಬಳಸುವುದುಂಟು (ಬಾರಪ್ಪ, ಬಾರಮ್ಮ). ಹಿರಿಯರನ್ನು ಕುರಿತು ಭಕ್ತಿ, ಗೌರವಗಳಿಂದ ಹೇಳುವಾಗಲೂ ಬಳಸುವುದುಂಟು (ಅಪ್ಪಾರೆ/ಅಮ್ಮಾರೆ ತಾವು ಹೇಳಬೇಕು). ಒಂದು ವಸ್ತು ಇನ್ನೊಂದಕ್ಕಿಂತ ಅಧಿಕ ಎಂಬಲ್ಲಿ ಅಪ್ಪ ಬಳಕೆಯಾಗುವುದುಂಟು. 'ಇದು ಅದರಪ್ಪ' (ರೂಢಿ).

ಕಿತ್ತೂರು ಕರ್ನಾಟಕ ಪ್ರದೇಶದಲ್ಲಿ ತಾಯಿಗೆ 'ಅವ್ವ' ಎಂದೂ ಕಲ್ಯಾಣ ಕರ್ನಾಟಕ ಹಾಗೂ ಹಳೇ ಮೈಸೂರು ಪ್ರದೇಶದಲ್ಲಿ 'ಅಮ್ಮ' ಎಂದೂ ಸಂಬೋಧಿಸುವ್ರದುಂಟು. ತಾಯಿ/ತಂದೆ ಪದಗಳಿಗಿಂತ 'ಅವ್ವ'/'ಅಮ್ಮ', 'ಅಪ್ಪ' ಎಂಬ ಪದಗಳು ಹೆಚ್ಚು ಅಪ್ಯಾಯನವಾದುದು. ಮಕ್ಕಳು ತಮ್ಮ 'ಅಪ್ಪ' 'ಅವ್ವ'ಳನ್ನು 'ತಂದೆ'/'ತಾಯಿ'ಗಳೆಂದು ಗುರುತಿಸಬಹುದೆ ಹೊರತು 'ತಂದೆ' 'ತಾಯಿ' ಎಂದು ಸಂಬೋಧಿಸುವುದಿಲ್ಲ. 'ಅವ್ವ', 'ಅಪ್ಪ' ಎಂದೇ ಸಂಬೋಧಿಸುವುದು. 'ಅವ್ವ' 'ಅಪ್ಪ' ಪದಕ್ಕಿರುವ ಭಾವಸಂಪತ್ತು, ಕಳ್ಳು ಬಳ್ಳಿತನ ತಂದೆ/ತಾಯಿ ಪದಗಳಿಗಿಲ್ಲ. ಅವ್ವ/ಅಪ್ಪ ಬದುಕಿಗೆ ಇನ್ನೂ ಹತ್ತಿರವಾಗುತ್ತವೆ.

ಅಪ್ಪ, ಅವ್ವ/ಅಮ್ಮ ಇವುಗಳಿಂದಾದ ಸಾಧಿತ ರೂಪಗಳನ್ನು ನೋಡಿದಾಗ ಅವುಗಳ ಅರ್ಥ ವಲಯ ವಿಸ್ತಾರವಾಗುತ್ತದೆ. ತಾಯಿಯ ತಂಗಿ ಅಥವಾ ಚಿಕ್ಕಪ್ಪನ ಹೆಂಡತಿಗೆ ಉತ್ತರ ಭಾಗದಲ್ಲಿ 'ಚಿಗವ್ವ' [ಚಿಕ್ಕ+ಅವ್ವ] ಎಂದೂ, ದಕ್ಷಿಣ ಭಾಗದಲ್ಲಿ 'ಚಿಕ್ಕಮ್ಮ' [ಚಿಕ್ಕ+ಅಮ್ಮ] ಎಂದೂ ಸಂಬೋಧಿಸುವುದುಂಟು. ಉತ್ತರ ಭಾಗದಲ್ಲಿ ಕೆಲವೆಡೆ 'ಮಾವಂಶಿ' ಎಂದು ಕರೆಯುವುದುಂಟು. ಬಹುಶಃ ಅದಕ್ಕೆ ಮರಾಠಿ ಪ್ರಭಾವ ಇರಬಹುದು. ಅದರಂತೆ ತಂದೆಯ ತಮ್ಮ ಅಥವಾ ಚಿಕ್ಕಮ್ಮನ ಗಂಡನಿಗೆ ಉತ್ತರ ಭಾಗದಲ್ಲಿ ಮರಾಠಿ ಪ್ರಭಾವದಿಂದಾಗಿ 'ಕಾಕಾ' ಎಂದು ಕರೆದರೆ ದಕ್ಷಿಣ ಭಾಗದಲ್ಲಿ 'ಚಿಕ್ಕಪ್ಪ' ಎಂದು ಕರೆಯುವುದುಂಟು. ತಾಯಿಯ ಅಕ್ಕ ಅಥವಾ ದೊಡ್ಡಪ್ಪನ ಹೆಂಡತಿಗೆ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಕ್ರಮವಾಗಿ ದೊಡ್ಡವ್ವ, ದೊಡ್ಡಮ್ಮ ಎಂದು ಕರೆಯುತ್ತಾರೆ. ತಂದೆಯ ಅಣ್ಣ ಅಥವಾ ದೊಡ್ಡಮ್ಮನ ಗಂಡನಿಗೆ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ 'ದೊಡ್ಡಪ್ಪ' ಎಂದು ಸಂಬೋಧಿಸುವುದುಂಟು. ಮರಾಠಿಯ ಪ್ರಭಾವದಿಂದಾಗ ಉತ್ತರ ಭಾಗದಲ್ಲಿ ತಂದೆಗೆ 'ಬಾಬಾ' ಎಂದು ಸಂಬೋಧಿಸುವುದುಂಟು. ವಿದ್ಯಾವಂತರಲ್ಲಿ ಆಂಗ್ಲಭಾಷೆಯ ಪ್ರಭಾವ ಹೆಚ್ಚಾಗಿರುವುದರಿಂದ ತಂದೆ, ತಾಯಿಯರಿಗೆ ಫಾದರ್, ಮದರ್ ಎಂದು ಸಂಬೋಧಿ ಸುವುದುಂಟು. ಮಕ್ಕಳ ಭಾಷೆಯಲ್ಲಿ 'ಡ್ಯಾಡಿ', 'ಮಮ್ಮಿ', ಆಂಟಿ, ಅಂಕಲ್ ಎಂಬ ರೂಪಗಳೇ ಈಗ ಬಳಕೆಗೆ ಬಂದಿವೆ.

ದ್ರಾವಿಡ ಭಾಷೆಗಳಲ್ಲಿ 'ಮಕ್' ಎಂಬುದು ಸಂತಾನಾರ್ಥಕ ಪದ. ಅದರಿಂದಲೇ ಮಗ, ಮಗಳು ರೂಪಗಳು ಬಂದಿರಬಹುದು. ಮಗ ಪದದಿಂದ ದತ್ತುಮಗ, ಸಾಕುಮಗ ಪದಗಳು ಸಾಧಿತವಾಗಿವೆ. ಮಗನ ಅಥವಾ ಮಗಳ ಮಗ ಮೊಮ್ಮಗನಾದರೆ, ಮಗಳು ಮೊಮ್ಮಗಳಾಗುತ್ತಾಳೆ. ಹೆಣ್ಣು ಮಗಳ ಮಗಳನ್ನು ಸೊಸೆಯಾಗಿ ಸ್ವೀಕರಿಸಬಹುದು. ಮಗನ/ ಮಗಳ ಮೊಮ್ಮಗನಿಗೆ 'ಮರಿಮಗ' 'ಗಿರಿಮಗ' ಎಂದು ಕರೆಯುವುದುಂಟು ಮಗ, ಮಗಳು, ಮೊಮ್ಮಗ, ಮೊಮ್ಮಗಳು ರೂಪಗಳು ಸಂಬೋಧನೆಯಲ್ಲಿ ಬಳಕೆಯಾಗುವುದಿಲ್ಲ. ಇನ್ನೊಬ್ಬರಿಗೆ ಪರಿಚಯಿಸುವಾಗ ಬಳಕೆ ಯಾಗುತ್ತವೆ. ತಂದೆ/ತಾಯಿಯರು (ಯಾವಾಗಲೂ) ತಮ್ಮ ಮಗ/ಮಗಳನ್ನು ಹೆಸರಿನಿಂದ ಕರೆಯುತ್ತಾರೆ.

'ಪಾರವ್ವನೀರ ತರೋಗವಾ, ಕುಡಿಯಾಕ್ ನೀರಿಲ್ಲ'
'ದುಂಡಪ್ಪಯಾಳೆ ಆಗೇತಿ ಹೊಲಕ್ ಹೋಗಪಾ'
'ದುಂಡಮ್ಮ ನಿಮ್ಮ ತಂಗಿ ಪಾರಮ್ಮನನ್ನು ಕರೆ'.

ಕೆಲವು ವೇಳೆ ವಾತ್ಸಲ್ಯದಿಂದ ತಂಗಿ, ತಮ್ಮ ಎಂದೂ ಸಂಬೋಧಿಸುವುದುಂಟು. 'ತಂಗಿ/ತಮ್ಮ ಒಂದ್ ಚರಗಿ ನೀರ್ ಕೊಡವಾ' ಕೌಟುಂಬಿಕ ಜೀವನದಲ್ಲಿ ಹೆತ್ತವರ ಬಗೆಗೆ ಅಪಾರ ಗೌರವವಿದೆ. 'ತಂದೆ ನನ್ಹಡದಪ್ಪ ಒಂದು ಬಳುವಲಿ ಕಳಿಸು' 'ಅಂಗಳ ತುಂಬ ಎಳಿಗರ ತವರೂರು ಜಂಗೂಳಿ ಬಂದ್ರು ಕರೆಯಾಕ' 'ಮಳೆಯ ಬಂದರು ಬರಲಿ ಮರದ ಮೇಲಿರುವೆ' 'ಮಳೆ ನಿಂತ್ರು ಮರದಡಿ ಬಿಡದ ಹಡದವ್ವ ನೀ ಬಿಟ್ರೆ ನಿನ್ನ ಮನ ಬಿಡ' ತಂದೆ, ತಾಯಿ, ಮಗ, ಮಗಳ ಸುತ್ತ ಸ್ವಾರ್ಸ್ಯಕರವಾದ ಗಾದೆಗಳು ಬಳಕೆಯಲ್ಲಿವೆ. 'ಅಪ್ಪಗ್ ಅಪ್ಪಾ ಅನ್ನದವ್ ಚಿಕ್ಕಪ್ಪನನ್ನು ಅಪ್ಪಾ ಅಂದಾವೆ'. 'ಅಪ್ಪನೆಟ್ಟ ಆಲದ ಮರವಾದರೆ ನೇಣುಹಾಕಿ ಕೊಳ್ಳಬಹುದೇ?' 'ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ' 'ತಾಯಿ ಮಾತ ಕೇಳದವ ನಾಯಿಗೆ ಬೇಡದ ಅರಿವೆ', 'ತಾಯಿ ಇದ್ದರೆ ತವರೆಚ್ಚು, ತಂದೆ ಇದ್ದರ್ ಬಳಗೆಚ್ಚು' 'ಮಕ್ಕಳಿಲ್ಲದಿದ್ದರೆ ಒಂದು ಕಷ್ಟ, ಇದ್ದಮೇಲೆ ನಾನಾ ಕಷ್ಟ' 'ಮನೆ ತುಂಬ ಹೆಣ್ಣು ಮಕ್ಕಳು ತೋವೆಗೆ ಉಪ್ಪು ಹಾಕುವವರಿಲ್ಲ' 'ಮಗ ಉಂಡರೆ ಕೆಟ್ಟಿಲ್ಲ ಮಳೆ ಆದರೆ ಕೆಟ್ಟಿಲ್ಲ' ಸಾಮಾಜಿಕ ಜೀವನದಲ್ಲಿ ಬಳಕೆಯಾಗುವ ಇಂತಹ ವಾಗ್ರೂಢಿಗಳು ಆ ಬಂಧುಸೂಚಕಗಳ ಸ್ಥಾನಮಾನವನ್ನು ನಿರ್ದೇಶಿಸುತ್ತವೆ. [ಸಂಬಂಧ ವಾಚಿಗಳನ್ನೇ ಸಂಬೋದಿಯಲ್ಲಿ ಬಳಸಬೇಕಾದ ಸಂದರ್ಭಗಳು ಇವೆ. ಇಲ್ಲಿಯೂ ವ್ಯಕ್ತಿಯ ಸಾಮಾಜಿಕ ವ್ಯಾಪ್ತಿಗೆ ಅವಕಾಶ ದೊರೆತು ವ್ಯಕ್ತಿಗತ ನೆಲೆಗಳು ಹಿನ್ನಲೆಗೆ ಸರಿಯುತ್ತವೆ. (ಅಪ್ಪ, ಅಜ್ಜ)].

ಚಂಪು ಸಾಹಿತ್ಯದಲ್ಲಿ ಬಂಧಸೂಚಕ ಪದಗಳು ಭಾವನಾತ್ಮಕ ಸಂಬಂಧದ ಸನ್ನಿವೇಶದಲ್ಲಿ ಬಳಕೆಯಾಗಿರುವುದು ಕಡಮೆ. ಪಂಪಭಾರತದಲ್ಲಿ ಕೃಷ್ಣನು ಕರ್ಣನಿಗೆ 'ನಿನಗಾದಿಯೊಳಬ್ಬೆ ಕೊಂತಿ, ನಿನಗಮ್ಮನ್ ಅಹರ್ಪತಿ' ಎಂದು ಹೇಳಿದಾಗ ಅಬ್ಬೆ (=ತಾಯಿ) ಅಮ್ಮನ್ (=ತಂದೆ) ಪದಗಳು ರಕ್ತ ಸಂಬಂಧದ ಸಂದರ್ಭದಲ್ಲಿ ಬಳಕೆಯಾಗಿವೆ ಯೆಂಬುದು ಸ್ಪಷ್ಟವಾಗುತ್ತದೆ. ವಚನಗಳಲ್ಲಿ ಬಂಧುಸೂಚಕಗಳು ಪ್ರೀತಿ ಪೂರ್ವಕವಾಗಿ (ಭಾವನಾತ್ಮಕ ವಾಗಿ) ಬಳಕೆಯಾಗುತ್ತವೆ. [ವಿವರಣೆಗಳಿಗಾಗಿ ನೋಡಿ ಎಂ. ಚಿದಾನಂದ ಮೂರ್ತಿ ವಚನಕಾರರ ಕಳ್ಳುಬಳ್ಳಿ ಪರಿಕಲ್ಪನೆ, ೧೯೯೮]. ಮಾರಿತಂದೆ, ಮಾಚಿತಂದೆ ಎಂಬ ಹೆಸರುಗಳಲ್ಲಿಯ 'ತಂದೆ' ಭಾಗವು ಅವರು ಹುಟ್ಟಿದಾಗ ಅವರ ತಂದೆ-ತಾಯಿಗಳು ಇಟ್ಟುದ್ದಲ್ಲ, ಜನ ಗೌರವದಿಂದ ಇಟ್ಟದು. ಮಹಾದೇವಿಯಕ್ಕಳು ತನ್ನ ಗೆಳತಿಗೆ ತಾನು ಕಂಡ ಕನಸೊಂದನ್ನು ಹೇಳವಾಗ 'ಅಕ್ಕ ಕೇಳವ್ವ ನಾನೊಂದು ಕನಸುಕಂಡೆ' ಎಂಬ ಮಾತುಗಳಲ್ಲಿ ಗೆಳತಿಯನ್ನು 'ಅಕ್ಕ'. 'ಅವ್ವ' ಎಂದು ಸಂಬೋಧಿಸುತ್ತಾಳೆ. ಬಸವಣ್ಣನ ತಂಗಿ ನಾಗಲಾಂಬಿಕೆ ಬಸವಣ್ಣನನ್ನು 'ಎನ್ನ ಹೆತ್ತ ತಂದೆ' ಎಂದು ಕರೆದಿದ್ದಾಳೆ. ಮುಕ್ತಾಯಕ್ಕ

ತನ್ನ ಅಣ್ಣ ಅಜಗಣ್ಣನನ್ನು 'ನಾ ಎಂತು ಮರೆವೆವಯ್ಯ ಎನ್ನ ಅಜಗಣ್ಣ ತಂದೆಯನು?' ಎಂಬಲ್ಲಿ 'ತಂದೆ' ಪದವು ಭಾವತ್ಮಕವಾಗಿದೆ. ಅಲ್ಲಮನು ಅಕ್ಕಮಹಾದೇವಿಯನ್ನು ಹಲವೆಡೆ 'ಅವ್ವಾ' ಎಂದು ಗೌರವದಿಂದ ಸಂಬೋಧಿಸಿದ್ದಾನೆ. ಶರಣರು ತಮ್ಮ ಸಮಕಾಲೀನರ ಬಗ್ಗೆ ಮಾತನಾಡಿರುವ ರೀತಿ, ಗೌರವ, ಆತ್ಮೀಯತೆಯನ್ನು ತೋರಿರುವ ವಿಧಾನ ಅವರಿಗಿಂತ ಹಿಂದಿನ ಸಾಹಿತ್ಯದಲ್ಲಿ ವಿರಳ.

ಹಳ್ಳಿಗಳಲ್ಲಿ ಯಾರಿಗಾದರೂ ಸಂಕಟ ಬಂದಾಗ ಸಹಾಯ ಮಾಡಿದರೆ 'ಹಡದಪ್ಪ ಪುಣ್ಯ ಹತ್ತಲಿ' 'ಹಡದವ್ವ ವರ್ಷ ತುಂಬ ಗೊಡದ ಗಂಡು ಮಗನ ತಾಯಾಗವ್ವ' ಎಂದು ಭಾವನಾತ್ಮಕವಾಗಿ ಹೇಳುವುದುಂಟು. ಈ ಹೇಳಿಕೆಗಳು ಸಾಂಸ್ಕೃತಿಕವಾಗಿ ಮಹತ್ವ ವನ್ನು ಪಡೆದಿವೆ. ಸಾಮಾಜಿಕ ಜೀವನದಲ್ಲಿ ಈ ಬಂಧುಸೂಚಕಗಳು ಪ್ರಮುಖ ಪಾತ್ರ ವಹಿಸುತ್ತವೆ.

ಗಂಡ - ಹೆಂಡತಿ

ಭಾಷಾಬಳಕೆಯಲ್ಲಿ ಗಂಡ ಹೆಂಡಿರು ಪರಸ್ಪರ ಮಾತನಾಡುವಾಗ ಪರಸ್ಪರರು ಹೆಸರನ್ನು ಹಚ್ಚಿ ಕರೆಯುವುದಿಲ್ಲ. ಒಂದು ವೇಳೆ ಹೆಸರಿಡಿದು ಕರೆದರೆ ಆಯುಷ್ಯ ಕಡಮೆಯಾಗುತ್ತ ದೆಂಬ ನಂಬಿಕೆಯಿದೆ (ಒಂದ ರೀತಿ ನಿಷೇಧವೂಯಿದೆ). ಹೆಂಡತಿಯು ಗಂಡನ ಬಗೆಗೆ ಹೇಳುವಾಗ 'ಇವರ್' ಎಂದೂ ಇಲ್ಲವೇ ಗಂಡನ ಪದನಾಮ ಅಥವಾ ವೃತ್ತಿನಾಮದಿಂದ ಕರೆಯುವುದುಂಟು, ಅಥವಾ 'ನಮ್ಮವರು', 'ಮನೆಯವರು' 'ಯಜಮಾನರು', 'ಹಜ ಬಂಡ್' ಎಂದೂ ಸಂಬೋಧಿಸುವುದುಂಟು. ಗಂಡ ಹೆಂಡತಿಯ ಬಗೆಗೆ ಹೇಳುವಾಗ 'ನಮ್ಮವಳು', 'ಹೆಂಗಸರು', 'ಮನಿಯವರು', 'ಕುಟುಂಬ', 'ಫ್ಯಾಮಿಲಿ' ಎಂದು ಬಳಸುವು ದುಂಟು.

'ಇವತ್ತು ನಳಾ ಬಂದಿಲ್ಲ, ನೀರ್ ತರಾಕ್ ಇವರ್ ಹೋಗ್ಯಾರ್'
'ನಿಮ್ಮ ಸಾರ್ ಯಾವಾಗಲೂ ಪುಸ್ತಕದಾಗ ಇರ್ತಾರ್'
'ನಮ್ಮ ಸಾಹೇಬರ್ ಬಾಳ ಪುಣ್ಯ ಮಾಡ್ಯಾರ್, ನಮ್ಮ
ಮಕ್ಕಳೆಲ್ಲರೂ ಅರಾಮ ಅದಾರ್'
'ಲಾಯಿಟ್ ಬಿಲ್ ತುಂಬಾಕ್ ನಮ್ಮ ಯಜಮಾನರು ಹೋಕ್ಯಾರ್ '

ಕೆಲವೊಮ್ಮೆ ಮಕ್ಕಳ ಮೇಲೆ ಹಾಯಿಸಿ ಬಂಧುಗಳನ್ನು ಸಂಬೋಧಿಸುವುದುಂಟು.

'ಇವರ್ ಅಜ್ಜಗ ಆರಾಮ ಇಲ್ಲ, ದವಾಖಾನೆಗೆ ಹೋಗ್ಯಾನ್'
'ಇವರ್ ಮಾವನ ಸ್ವಲ್ಪಕರಿವಾ'
'ಇವರ್ ತಂದೆ ಆಫೀಸಿಗೆ ಹೋಗ್ಯಾರ್'

ನಗರ ಪ್ರದೇಶದಲ್ಲಿ ಆಧುನೀಕರಣ ಪ್ರಕ್ರಿಯೆಯಿಂದಾಗಿ ಹೆಂಡತಿ ಗಂಡನನ್ನು, ಗಂಡ ಹೆಂಡತಿಯನ್ನು ಹೆಸರಿಡಿದು ಕರೆಯುವುದುಂಟು.

'ಆಫೀಸ್ ರಜೆ ಇದೆಅಂತ್ ಲೋಹಿತ ಹೇಳಿದರು'

'ದೀಪಾವಳಿಗೆ ಬಟ್ಟೆ ತರಲ್ಲಿಕ್ಕೆ ಪಾರಮ್ಮ ಬೆಳಗಾವಿಗೆ ಹೋಗುತ್ತಾಳೆ'

'ವೀಣಾ ಟೈಮ್ ಆಗಿದೆ ಬೇಗ ಡಬ್ಬಿತಾ'

ಗಂಡ, ಹೆಂಡತಿಯನ್ನು ಪರಿಚಯಿಸುವಾಗ ಅಥವಾ ಹೆಂಡತಿಯ ಬಗೆಗೆ ಹೇಳುವಾಗ ಅವಳ ಹೆಸರೆಳದೆ 'ಕುಟುಂಬ', 'ಹೆಣ್ಣು ಮಕ್ಕಳು', 'ಶ್ರೀಮತಿ', 'ಮಿಸಸ್' ಎಂದು ಕರೆಯುವುದುಂಟು.

'ನಮ್ಮ ಹೆಣ್ಣ ಮಕ್ಕಳ ರೊಟ್ಟಿ ಕಾಯಿಪಲ್ಲೆ ಚಲೊ ಮಾಡ್ತಾರ್'

'ನಮ್ಮ ಕುಟುಂಬ ಬೆಳಗಾವಿಗೆ ಹೋಗ್ಯಾರ್'

ಕೆಲವು ವೇಳೆ(ನಾಟಕೀಯವಾಗಿ) ಗಂಡ ಹೆಂಡತಿಯನ್ನು 'ಪ್ರಿಯಾ' ಎಂದೂ ಕರೆದರೆ ಹೆಂಡತಿ ಗಂಡನನ್ನು 'ಕಾಂತಾ' ಎಂದು ಕರೆಯುವುದುಂಟು. ಕೌಟುಂಬಿಕ ಜೀವನದ ರಹಸ್ಯ ವಿಷಯಗಳನ್ನು ಮಾತನಾಡುವಾಗ ಇಬ್ಬರು ಏಕವಚನ ಬಳಸುವುದುಂಟು.

'(ಜೋಳದ) ತೆನೆ ಮೂರ್ರ್ಯಾಕ್ ನಾಲ್ಕಮಂದಿ ಕೆಲಸಗಾರರನ್ನು
ನೀನ ಹೇಳಿಬರೋಗ್'

'ಸೂಟಿಗೆ ಊರಿಗೆ ಹೋಗುತ್ತೇವೆ ಮನೆಯಲ್ಲಿ ನಿಮ್ಮ ವಿದ್ಯಾರ್ಥಿಗಳನ್ನು
ಇಡುವ ವ್ಯವಸ್ಥೆ ಮಾಡಿರಿ'

ಶರಣರು ತಮ್ಮ ಆರಾಧ್ಯ ದೈವವನ್ನು ಗಂಡ ಎಂದೇ ಭಾವಿಸುವುದು ಪ್ರಸಿದ್ಧವಾಗಿದೆ. ಮಹಾದೇವಿಯನ್ನು 'ಇಂದೆನ್ನ ಮನೆಗೆ ಗಂಡ ಬಂದಿಹ ನೆಲಗವ್ವ......... ಚೆನ್ನಮಲ್ಲಿಕಾರ್ಜುನ ಗಂಡನೆನಗೆ' ಎಂದು ಉಕ್ತಿಗಳು ಭಾವನಾತ್ಮಕವಾಗಿ ಕಂಡು ಬರುತ್ತವೆ.

ಸಹೋದರ - ಸಹೋದರಿಯರು

ಸಾಮಾನ್ಯವಾಗಿ ಒಡ ಹುಟ್ಟಿದವರಲ್ಲಿ ಹಿರಿಯವ ಅಣ್ಣನಾಗುತ್ತಾನೆ. ಆದರೆ ಅದರ ಬಳಕೆಯ ಪ್ರಸಾರ ವೈವಿಧ್ಯಮಯವಾಗಿದೆ. ಗಂಡಸರನ್ನು ಪ್ರೀತಿಯಿಂದ ಅಥವಾ ಗೌರವದಿಂದ ಸಂಬೋಧಿಸುವಾಗ ಸರ್ವ ಸಾಧಾರಣವಾಗಿ ಈ ಬಂಧುಸೂಚಕ ಉಪಯೋಗವಾಗುತ್ತದೆ(ಹೋಗೋಯಣ್ಣಾ ಹೋಗ್). ಗಂಡಸರ ಹೆಸರಿನ ಕೊನೆಯಲ್ಲಿ ಗೌರವಾರ್ಥದಲ್ಲಿ ಅಪ್ಪ, ಅಯ್ಯ ಮೊದಲಾದವರಂತೆ ಸೇರುತ್ತದೆ (ಕಲ್ಲಣ್ಣ, ಮಲ್ಲಣ್ಣ). ಬಹುವಚನದಲ್ಲಿ 'ಅಣ್ಣಗೋಳ್'[ಅಣ್ಣಂದಿರರು] ಎಂದೂ ಗೌರವಾರ್ಥದಲ್ಲಿ 'ಅಣ್ಣಾವರ್' ಎಂದೂ ಬಳಕೆಯಾಗುವುದುಂಟು. ತಂದೆಯನ್ನು ಕುರಿತು ಮಾತನಾಡುವಾಗ 'ಅಣ್ಣ', 'ಅಣ್ಣಯ್ಯ' ಎಂದು ಸಂಬೋಧಿಸುವುದು ಕೆಲವು ಸಮುದಾಯದಲ್ಲಿದೆ (ಹೆಚ್ಚಾಗಿ ಬ್ರಾಹ್ಮಣ ಸಮುದಾಯ). ಈ ವಾರ್ಗೀಕವು ನಿರ್ದಿಷ್ಟವಾಗಿಯೂ ಬಳಕೆಯಾಗುತ್ತದೆ (ಅಣ್ಣಪ್ಪ).

ಒಡಹುಟ್ಟಿದವರಲ್ಲಿ ಕಿರಿಯವ ತಮ್ಮನಾಗುತ್ತಾನೆ, ಅದರ ಪ್ರಸಾರವನ್ನು ಗಮನಿಸಿದರೆ ಹಿರಿಯರು ಕಿರಿಯರನ್ನು ಕುರಿತು ಮಾತನಾಡುವಾಗ ಪ್ರೀತಿ ಪೂರ್ವಕವಾಗಿ

ಬಳಕೆಯಾಗುತ್ತದೆ. ತಿರಸ್ಕಾರವನ್ನು ಸೂಚಿಸುವುದಕ್ಕಾಗಿ ವ್ಯಂಗ್ಯವಾಗಿಯೂ ಬಳಕೆಯಾಗುವುದುಂಟು (ಹೋಗೋ ತಮ್ಮಾ ಹೋಗ್). ಈ ವಾರ್ಗೀಕವು ನಿರ್ದಿಷ್ಟವಾಗಿಯೂ ಬಳಕೆಯಾಗುತ್ತದೆ (ತಮ್ಮಣ್ಣ). ಈ ಬಂಧುಸೂಚಕವು ಸಂಬೋಧನೆ ಮತ್ತು ಪರಿಚಯ ಎರಡೂ ಸಂದರ್ಭದಲ್ಲಿಯೂ ಬಳಕೆಯಾಗುತ್ತದೆ. ಬಹುವಚನದಲ್ಲಿ 'ತಮ್ಮಗೊಳ್' (ತಮ್ಮಂದಿರರು) ಎಂದು ಬಳಕೆಯಾಗುವುದುಂಟು.

ಒಡಹುಟ್ಟಿದವರಲ್ಲಿ ಹಿರಿಯವಳು ಅಕ್ಕಳಾಗುತ್ತಾಳೆ ಅದರ ಪ್ರಸಾರವನ್ನು ಗಮನಿಸಿದರೆ ಚಿಕ್ಕಪ್ಪ/ಚಿಕ್ಕಮ್ಮ, ದೊಡ್ಡಪ್ಪ/ದೊಡ್ಡಮ್ಮರ ಮಗಳು ಅಕ್ಕಳಾಗುತ್ತಾಳೆ. ಸಾಮಾಜಿಕ ರಕ್ಷಣೆಗಾಗಿ ಗೌರವವನ್ನು, ಪ್ರೀತಿಯನ್ನು ವ್ಯಕ್ತಪಡಿಸುವಾಗಲೂ ಈ ರೂಪ ಬಳಕೆಯಾಗುವುದುಂಟು. ಇದೊಂದು ವಾರ್ಗೀಕವಾಗಿರುವುದರಿಂದ ಹೆಸರಿನ ಕೊನೆಯಲ್ಲಿ ಸೇರುವುದುಂಟು (ಪಾರಕ್ಕ, ದುಂಡಕ್ಕ, ಚೆನ್ನಕ್ಕ ಮುಂತಾದವು). ಬಹುವಚನದಲ್ಲಿ 'ಅಕ್ಕಗೊಳ್/ಗಳು' (ಅಕ್ಕಂದಿರರು) ಎಂದು ಬಳಕೆಯಾಗುತ್ತದೆ. ಪ್ರೀತಿ ಹಾಗೂ ಗೌರವ ವನ್ನು ವ್ಯಕ್ತಪಡಿಸುವಾಗ ಈ ವಾರ್ಗೀಕವು ನಿರ್ದಿಷ್ಟವಾಗಿ ಬಳಕೆಯಾಗುತ್ತದೆ (ಅಕ್ಕವ್ವ, ಅಕ್ಕಮ್ಮ). ಈ ಬಂಧುಸೂಚಕವು ಸಂಬೋಧನೆ ಹಾಗೂ ಪರಿಚಯ ಎರಡೂ ಸಂದರ್ಭದಲ್ಲಿಯೂ ಬಳಕೆಯಾಗುತ್ತದೆ. ಕರ್ನಾಟಕದ ಉತ್ತರ ಭಾಗದಲ್ಲಿ ಅಕ್ಕಳನ್ನು [ಹೆಚ್ಚಾ ಎಲ್ಲ ಬಂಧುವಾಚಕಗಳನ್ನು] ಸಂಬೋಧಿಸುವಾಗ 'ಯ' ಕಾರ ಹತ್ತುವುದುಂಟು.

'ಯಕ್ಕಾ ಊರಿಂದ ಯಾವಾಗ ಬಂದೀ'
'ಯಕ್ಕಾ ನಳಾ ಬಂದೀವೆ, ಕೈಡಾ ಕೊಡು'
'ಯಕ್ಕಾ ನಮ್ಮವ್ವ ಎಲ್ಲಿಗೆ ಹೋಗಿದ್ದಾಳೆ'

ಒಡಹುಟ್ಟಿದವರಲ್ಲಿ ಕಿರಿಯವಳು ತಂಗಿಯಾಗುತ್ತಾಳೆ. ಆದರೂ ಬೇರೆ ಸಂದರ್ಭದಲ್ಲಿಯೂ ಈ ಬಂಧುಸೂಚಕ ಬಳಕೆಯಾಗುವುದುಂಟು. ಕಿರಿಯ ಹೆಂಗಸರನ್ನು ಸಂಬೋಧಿಸುವಾಗಲೂ ಹೇಳುವುದುಂಟು. 'ತಂಗಿ ನೀರ್ ತರೋಗವಾ' ಬಹುವಚನದಲ್ಲಿ 'ತಂಗಿಗೊಳ್' (ತಂಗಿಯಂದಿರರು) ಎಂದು ಬಳಕೆಯಾಗುತ್ತದೆ. ಪ್ರೀತಿ, ಗೌರವವನ್ನು ತೋರಿಸುವಾಗ ಈ ವಾರ್ಗೀಕವೇ ನಿರ್ದಿಷ್ಟವಾಗಿ ಬಳಕೆಯಾಗುತ್ತದೆ (ತಂಗೆಮ್ಮ, ತಂಗೆವ್ವ). ಈ ಬಂಧುಸೂಚಕವು ಸಂಬೋಧನೆ ಹಾಗೂ ಪರಿಚಯ ಎರಡೂ ಸಂದರ್ಭದಲ್ಲಿಯೂ ಬಳಕೆಯಾಗುತ್ತದೆ.

ಹಿರಿಯ ಸಹೋದರನು ಕಿರಿಯವನನ್ನು ಅವನ ಹೆಸರಿನಿಂದ ಸಂಬೋಧಿಸುವುದುಂಟು.

'ನಮ್ಮ ಉಮೇಶ್‌ನಿಗೆ ದಗದ ಬಾಳ ಆಗತತಿ'
'ಈಶ್ವರಪ್ಪ ಎಲ್ಲಿಗೆ ಹೋಗಿದ್ದಾನೆ? ಅವನು ಬಂದರೆ ನಮ್ಮ ಮನೆಗೆ
ಕಳಿಸಿ ಕೊಡ್ರಿ'

'ನಮ್ಮ ರಮೇಶ ಪುಲಗಡ್ಡಿಯಲ್ಲಿ ನೌಕರಿ ಮಾಡ್ತಾನೆ'

ಕಿರಿಯ ಸಹೋದರ ಅಥವಾ ಸಹೋದರಿಯು ಹಿರಿಯವನನ್ನು 'ಅಣ್ಣಾ' ಎಂಬ ಬಂಧುಸೂಚಕರೊಡನೆ ಸಂಬೋಧಿಸುವುದುಂಟು.

'ಮನ್ಯಾಗ ಅಣ್ಣ ಇಲ್ಲೆನವಾ ಒಂದ್ ಸ್ವಲ್ಪ ಕೆಲಸ ಇತ್ತವಾ'

'ದುಂಡಪ್ಪಣ್ಣಗ್ ಗಳಸುದು ಗೊತ್ತಾಗಲಿಲ್ಲ; ಬಳಸುದು ಗೊತ್ತಾಗಲಿಲ್ಲ'

'ನಮ್ಮ ಮಲ್ಲೇಶಪ್ಪಣ್ಣ ಬಹಳ ಅಪರೂಪ ಮನುಷ್ಯ'

ಹಿಂದಿ ಮತ್ತು ಮರಾಠಿ ಭಾಷೆಯ ಪ್ರಭಾವದಿಂದಾಗಿ 'ಬಯಾ' ಎಂದೂ ಆಂಗ್ಲ ಭಾಷೆಯ ಪ್ರಭಾವದಿಂದಾಗಿ 'ಬ್ರದರ್' ಎಂದೂ ಬಳಕೆಯಾಗುವುದುಂಟು. ಒಡಹುಟ್ಟಿದ ಸಹೋದರರು ಹೆಚ್ಚಾಗಿ 'ಅಣ್ಣಾ' 'ತಮ್ಮಾ' ಎಂದು ನೇರವಾಗಿ ಸಂಬೋಧಿಸುವುದಿಲ್ಲ. ಇನ್ನೊಬ್ಬರಿಗೆ ಪರಿಚಯಿಸುವಾಗ ಬಳಸುವುದುಂಟು.

'ಇವರು ನಮ್ಮ ಅಣ್ಣ'

'ಇವನು ನಮ್ಮ ಅಣ್ಣನ ಮಗ'

'ನಮ್ಮ ತಮ್ಮನ್ ಮಗಳನ್ನು ಗೋಕಾಕಕ್ಕೆ ಕೊಟ್ಟಿದ್ದೇವೆ'

ಕೆಲವು ವೇಳೆ ಅಣ್ಣನಿಗೆ 'ದೊಡ್ಡವ' ಎಂದು ಬೇರೆಯುವರಿಗೆ ಹೇಳುವಾಗ ಬಳಕೆಯಾಗುತ್ತದೆ. ಮದುವೆಗೆ 'ದೊಡ್ಡವ ಯಾಕ್ ಬರಲಿಲ್ಲ' ತಮ್ಮನಿಗೆ 'ಸಣ್ಣವ' ಎಂದೂ ಬಳಕೆಯಾಗುವುದುಂಟು. 'ಅವನು ಸಣ್ಣಾವ ನಾವು ಸಂಭಾಳಿಸಿಕೊಂಡು ಹೋಗಬೇಕು. ಅಣ್ಣನು ತಂಗಿಯನ್ನು ಹೆಸರಿಡಿದು ಕರೆಯುತ್ತಾನೆ. ತಂಗಿಯು ಅಣ್ಣನನ್ನು ಅಣ್ಣಾ ಎಂದು ಸಂಬೋಧಿಸುತ್ತಾಳೆ.

'ಪಾರವ್ವ ಬಾಳ ದಿನ ತವರ ಮನ್ಯಾಗ ಇರಬಾರದವಾ
ನಾನು ನಿಮ್ಮವರು ನಮ್ಮ ಹೆಂಡರು ಯಾರು?'

'ನನಗ ತಂದೆ-ತಾಯಿಯರ ಸುಖ ಗೊತ್ತಿಲ್ಲ ನಮ್ಮ ಅಣ್ಣನ
ಸುಖಾನ ನಮಗೆ ಅತಿ'

ಅಕ್ಕಳು ತಮ್ಮ ತಂಗಿಯನ್ನು ಅವಳ ಹೆಸರಿಡಿದು ಕರೆಯುತ್ತಾಳೆ.

'ಪಾರವ್ವ ಪಂಚಮಿಗಿ ನಾನೂ ಬರ್ತನ್, ನೀನೂ ಬಾ'

'ಪಾರವ್ವ ಮಳಿಮಾರ ದಿನ ಹಳ್ಳಕ್ ಹೋಗ ಬ್ಯಾಡವಾ'

'ಅಕ್ಕಾ (ಯಕ್ಕಾ) ಹುಡುಗೊರನ್ ಕರಕೊಂಡ ಕುರಬ್ಯಾಟಕ್
ಬಾರವಾ'

ಮದುವೆಯಾದ ನಂತರ ಆ ಊರಿನ ಜೊತೆಗೆ ಬಂಧುಸೂಚಕದ ಹೆಸರು ಬರುವುದುಂಟು.

'ಕುರಬ್ಯಾಟ ಪಾರವ್ವ'

'ಚಚಡಿ ದುಂಡವ್ವ'

ಅಕ್ಕನ ಕಕ್ಕುಲತೆಯು ತಂಗಿಯ ಮೇಲೆ ಬಹಳ ಇರುತ್ತದೆ. ಬೀಸುವಾಗ, ಕುಟ್ಟುವಾಗ ಅವಳನ್ನು ಹಾಡದೆ ಆ ಕ್ರಿಯೆ ಕೊನೆಗೊಳ್ಳುವುದಿಲ್ಲ. 'ಆಡೀನ ಮಲಿಹಂಗ ಜೋಡ ನಾವಿಬ್ಬರು ಆಡಬ್ಯಾಡ ತಂಗಿ ಕದನವ| ಜಗಳಕ ಜೋಡೀನ ಹಕ್ಕಿ ಅಗಲ್ಯಾವ್'|| ಎಂದೂ ಅಗಲದಂತೆ ಹೇಳುತ್ತಾಳೆ. ಚಿಕ್ಕ ತಂಗಿ ತಿಳಿಯದೆ ಕದನ ಮಾಡಿದರೆ ಹಾಗೆ ಮಾಡಬಾರ ದೆಂದು ಸಮಾಧಾನ ಹೇಳುತ್ತಾಳೆ. ಅಕ್ಕತಂಗಿಯರಿಗೆ ಕೊನೆಯವರೆಗೂ ತವರು ಮನೆಯ ಆಸೆ ಇದ್ದೆ ಇರುತ್ತದೆ. ತಮ್ಮನಿಗೆ ಹಡೆದು ಹೆಣ್ಣು ಕೊಡಬೇಕೆಂಬ ಆಶೆ ಮೂಡುತ್ತದೆ. 'ಬಸುರಾದರ ತೊಡಬೇಕು ಹಸುರ ತಾಬುತಿ ಕುಬಸ ಹಸರೇಲಿ ಒಳಗೆ ಉಣಬೇಕು| ನನ್ನ ತಮ್ಮ ಹೊಸಬೀಗನಾಗಿ ಬರಬೇಕು| ತಂದೆ/ತಾಯಿಯರಿಗೆ ಸಣ್ಣ ಮಕ್ಕಳ ಮೇಲೆ ಕಾಳಜಿ ಹೆಚ್ಚು ಅಣ್ಣ-ತಮ್ಮಂದಿರರಲ್ಲಿ ವೈಮನಸ್ಸು ಬಂದಾಗ 'ಕಡೆಮಗನ್ ಸಣ್ಣವನಾಗಿ ಸರಕೊರೊ' ಎಂದು ಸಣ್ಣವನನಿಗೆ ಹೇಳುತ್ತಾಳೆ ಸಹೋದರಿಯರಿಗೆ ತಮ್ಮ ಸಹೋದರರ ಮೇಲೆ ಅಪಾರ ವಾತ್ಸಲ್ಯ 'ಹೆಣ್ಣಿನ ಜಲ್ಮಕ ಅಣ್ಣ-ತಮ್ಮಂದಿರರಿರಬೇಕು ಹೊನ್ನು ಕಟ್ಟುವವರು ಉಡಿಯೊಳಗ್, ಬೆನ್ನ ಕಟ್ಟುವರು ಸಭೆಯೊಳಗ್' ಎಂಬ ಭರವಸೆ ಅವರಿಗಿರುತ್ತದೆ.

ಸಹೋದರ, ಸಹೋದರಿಯರ ಸುತ್ತ ಸ್ವಾರಸ್ಯಕರವಾದ ಗಾದೆಗಳು ಬಳಕೆಯಲ್ಲಿವೆ. 'ಹಿರಿಯಣ್ಣನೆಂದರೆ ತಂದೆಯ ಸಮಾನ' 'ಅಕ್ಕನ ಹಗೆ; ಭಾವನ ನಂಟು', 'ಅಕ್ಕನ ಬಂಗಾರವಾದರೂ ಅಕ್ಕಸಾಲಿ ಬಿಡ' 'ಹಿರಿಯಕ್ಕನ ಚಾಳಿ ಮನಿ ಮಂದಿಗೆಲ್ಲ' 'ಅಕ್ಕ ಸತ್ತರೂ ಅಮವಾಸೆ ನಿಲ್ಲೊದಿಲ್ಲ', 'ಅಕ್ಕನ ಹೊಟ್ಟೆಯಲ್ಲಿ ಆರು ತಿಂಗಳು; ತಂಗಿಯ ಹೊಟ್ಟೆಯಲ್ಲಿ ಮೂರು ತಿಂಗಳು' ಇವು ಕೌಟುಂಬಿಕ ಜೀವನದಲ್ಲಿ ಈ ಬಂಧುಸೂಚಕಗಳ ಸ್ಥಾನವನ್ನು ನಿರ್ದೇಶಿಸುತ್ತದೆ.

ಆಧುನಿಕ ಪೂರ್ವ ಸಾಹಿತ್ಯವನ್ನು ವಿಶೇಷವಾಗಿ ವಚನ ಸಾಹಿತ್ಯವನ್ನು ಅವಲೋಕಿಸಿದಾಗ ಅಲ್ಲಿ ಬರುವ ಹೆಸರುಗಳ ಅಂತ್ಯ ಭಾಗಗಳು ವಾರ್ಗೀಕಗಳಾಗಿವೆ. ಬಸವಣ್ಣ, ಚೆನ್ನಬಸವಣ್ಣ, ಅಜಗಣ್ಣ, ಅಕ್ಕಮಹಾದೇವಿ ಅಥವಾ ಮಹಾದೇವಿಯಕ್ಕ, ಅಕ್ಕನಾಗಮ್ಮ, ಮುಕ್ತಾಯಕ್ಕ ಇಂತಹ ಹೆಸರುಗಳಲ್ಲಿ 'ಅಣ್ಣಾ', 'ಅಕ್ಕಾ' ಈ ಭಾಗಗಳು ಜನ ಪ್ರೀತಿಯಿಂದ ಸೇರಿಸಿದ ಭಾಗಗಳು. ಅಕ್ಕ ಮಹಾದೇವಿಗೆ ತಂದೆ ತಾಯಿಗಳು ಇಟ್ಟ ಹೆಸರು 'ಮಾಹಾದೇವಿ' ಎಂದು ಮಾತ್ರ ಜನತೆ ಅವಳನ್ನು ಅಕ್ಕಮಹಾದೇವಿ ಅಥವಾ ಮಹಾದೇವಿಯಕ್ಕ ಎಂದು ಪ್ರೀತಿಯಿಂದ ಕರೆದರು. ಅಕ್ಕನಾಗಮ್ಮಳು ಹಾಗೆಯೇ (ಅವಳು ಬಸವಣ್ಣನ ಅಕ್ಕಳಲ್ಲ). ಬಸವ ಮತ್ತು ಚೆನ್ನಬಸವರ ಹೆಸರುಗಳಿಗೆ 'ಅಣ್ಣ' ಎಂಬ ಉತ್ತರಾರ್ಧವು ಸೇರಲು ಅದೇ ಪ್ರೀತಿಯೇ ಕಾರಣ. ದುಃಖದಲ್ಲಿದ್ದ ಕಿನ್ನರಯ್ಯನನ್ನು ಮಹಾದೇವಿಯಕ್ಕ ಸಮಾಧಾನ ಪಡಿಸುವಾಗ

'ಎಲೆ ಅಣ್ಣಾ ಎಲೆ ಅಣ್ಣಾ ಮರುಳಲ್ಲಾ ಅಣ್ಣಾ
ಎನ್ನ ನಿನ್ನ ಅಳವೆ?'

'ಅಣ್ಣಾ' ಮಾತು ಕೇಳಿ ಕಿನ್ನರಯ್ಯನ ಮನಸ್ಸಿನಲ್ಲಿದ್ದಿರಬಹುದಾದ ಕಲ್ಮಶದ ಶೇಷ ಸಂಪೂರ್ಣವಾಗಿ ದಗ್ಧವಾಗುತ್ತದೆ. ವಚನಗಳಲ್ಲಿ ಎದ್ದು ಕಾಣುವ ಸಂಗತಿಯೆಂದರೆ ವಚನಕಾರರು ಪರಸ್ಪರ ಗೌರವವನ್ನು ವ್ಯಕ್ತಮಾಡಿರುವ ರೀತಿ ಅರ್ಥಪೂರ್ಣವಾಗಿದೆ. 'ಅಣ್ಣಾ' ಈ ಬಂಧುಸೂಚಕವನ್ನು ಬಳಸುವಾಗ ಅದು ಹೊತ್ತು ಕೊಳ್ಳುವ ಭಾವ ಅರ್ಥಗರ್ಭಿತವಾಗಿದೆ. ಕೌಟುಂಬಿಕ ಹಾಗೂ ಸಾಮಾಜಿಕ ಜೀವನದಲ್ಲಿ ಅಣ್ಣ/ತಮ್ಮ/ಅಕ್ಕ/ತಂಗಿ ಇವುಗಳ ಸಂಬೋಧನೆ ಕಳ್ಳು-ಬಳ್ಳಿತನವನ್ನು ಗಟ್ಟಿಗೊಳಿಸುತ್ತವೆ.

ಒಂದು ಅಂಶವನ್ನು ಇಲ್ಲಿ ಗಮನಿಸಬೇಕು. ನಾವು ವ್ಯವಹಾರದಲ್ಲಿ ಕೇವಲ ಶಾಬ್ದಿಕ ಭಾಷೆಯೊಂದನ್ನೇ ಉಪಯೋಗಿಸುವುದಿಲ್ಲ ಮನುಷ್ಯ ಸಂಬಂಧಗಳು ಕೂಡ ಭಾಷೆ ಯಂತೆಯೇ ವರ್ತಿಸುತ್ತವೆ. ನಮ್ಮಲ್ಲಿ ಸೋದರ ಮಾವನ ಅಥವಾ ಸೋದರತ್ತೆಯ ಹಾಗೂ ಅಕ್ಕನ ಮಗಳನ್ನು ಮದುವೆಯಾಗುವುದು ಇದೇ ಕಾರಣಕ್ಕಾಗಿ ಎಂದು ಶಾಸ್ತ್ರಜ್ಞರು ಹೇಳುತ್ತಾರೆ. ಮನೆತನದ ತಾಯಿಯಾದವಳು ತನ್ನ ಮಗನಿಗೆ ತನ್ನ ಅಣ್ಣನ ಮಗಳನ್ನು ತಂದು ಕೊಳ್ಳುವುದೆಂದರೆ ಈ ಎರಡು ಮನೆತನಗಳ ನಡುವೆ ಸಂವಹನ ಕ್ರಿಯೆಯನ್ನು ಮುಂದುವರಿಸಿದಂತೆ. ಕನ್ನಡದಲ್ಲಿ ಇದನ್ನು 'ಬಳ್ಳಿಯಕುಡಿ ತಿರುಗಿಸುವುದು' ಎಂದು ಹೇಳುತ್ತಾರೆ. ಶಂಬಾ ಜೋಶಿಯವರು ಇದಕ್ಕೆ ಸಮಾನವಾದ ನುಡಿಗಟ್ಟನ್ನು ಮರಾಠಿ ಭಾಷೆಯಲ್ಲಿಯೂ ಗುರುತಿಸಿದ್ದಾರೆ (ಮರಾಠಿ ಸಂಸ್ಕೃತಿ ಪು.೬೭, ಕುರ್ತಕೋಟಿ ಅನುವಾದ ೧೯೯೦). ಮನುಷ್ಯ ಸಂಬಂಧಗಳು ಭಾಷೆಯಂತೆಯೇ ಸಂವಹನ ಶಕ್ತಿಯನ್ನು ಪಡೆದಿವೆ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ.

ಅತ್ತೆ- ಮಾವ, ಅಳಿಯ - ಸೊಸೆ

ಸಾಮಾನ್ಯವಾಗಿ ಹೆಂಡತಿಯ ಅಥವಾ ಗಂಡನ ತಾಯಿ; ಸೋದರ ಮಾವನ ಹೆಂಡತಿ; ತಂದೆಯ ಒಡಹುಟ್ಟಿದವಳು ಅತ್ತೆಯಾಗುವುದುಂಟು. ಅದರಂತೆ ಹೆಂಡತಿಯ ಅಥವಾ ಗಂಡನ ತಂದೆ; ಸೋದರತ್ತೆಯ ಗಂಡ; ತಾಯಿಯ ಒಡಹುಟ್ಟಿದವನು ಮಾವನಾಗು ವುದುಂಟು. ಇವು ವಾರ್ಗೀಕಗಳು. ಸಂಬೋಧನೆ ಮತ್ತು ಪರಿಚಯ ಎರಡರಲ್ಲಿಯೂ ಈ ಬಂಧಸೂಚಕಗಳು ಬಳಕೆಯಾಗುವುದುಂಟು. ಪಾರವ್ವತ್ತೆ, ದುಡವ್ವತ್ತೆ, ಮಹಾದೇವಪ್ಪ ಮಾವ, ಚಿನ್ನಪ್ಪಮಾವ. ಅಳಿಯನಿಗೆ ಸೋದರತ್ತೆಯ (ತಂದೆಯ ಒಡಹುಟ್ಟಿದವಳು), ಹಾಗೂ ಸೋದರಮಾವನ (ತಾಯಿಯ ಒಡಹುಟ್ಟಿದವನು) ಜೊತೆಗೆ ನಿಕಟತ್ವ ಹೆಚ್ಚು. ಅತ್ತೆಯನ್ನು ಪ್ರೀತಿ ಹಾಗೂ ಗೌರವದಿಂದ ಅತ್ಯಾ, ಅತ್ತೆಮ್ಮ ಎನ್ನುವುದುಂಟು. ಅತ್ತೆ/ಮಾವಂದಿರರ ಮನೆಯೆಂದರೆ ಸೊಸೆಯಂದಿರರಿಗೆ ಕಾರಾಗೃಹವಿದ್ದಂತೆ (ಈಗ ಅಂತಹ ಪರಿಸ್ಥಿತಿ ಕಡಮೆಯಾಗಿದೆ). ಅಗ ಅವರ ಪಾಲಕರು ಬುದ್ದಿ ಹೇಳಿ ಮಗಳನ್ನು ಗಂಡನ ಮನೆಗೆ ಕಳುಹಿಸುತ್ತಿದ್ದರು. 'ಅತ್ತಿಯ ಮನಿಯಾಗ ಮುತ್ತಾಗಿ ಇರಬೇಕು ಹೊತ್ತು ನೀಡಿದರ| ಉಣಬೇಕು ನನ್ನ ಮಗಳ ತವರೂರ ಹೆಸರ ತರಬೇಕು||' ಎಂಬ ಜಾನಪದ ತ್ರಿಪದಿ ಇದನ್ನೆ

ಸೂಚಿಸುತ್ತದೆ. ಈ ಬಂಧುಸೂಚಕದ ಸುತ್ತಲೂ ಸ್ವಾರಸ್ಯಕರವಾದ ಗಾದೆಗಳು ರೂಢಿಯಲ್ಲಿವೆ. 'ಅತ್ತೆಗೊಂದು ಕಾಲ; ಸೊಸೆಗೊಂದು ಕಾಲ' 'ಸೊಸೆ ತನ್ನ ಅತ್ತಿಯ ಮ್ಯಾಲಿನ ಸಿಟ್ನು ಒಲಿಯ ಮ್ಯಾಲ ತೋರಿಸಿದಳು', 'ಅತ್ತೆಯದು ಆರು ಮೊಳಾ; ಸೊಸೆಯದು ಮೂರು ಮೊಳಾ' ಕೌಟುಂಬಿಕ ಜೀವನದಲ್ಲಿ ಅತ್ತೆಯ ಪಾತ್ರವನ್ನು ಇವು ತಿಳಿಸಿ ಕೊಡುತ್ತವೆ. ಕೌಟುಂಬಿಕ ಜೀವನದ ಸಾಂಸ್ಕೃತಿಕ ಸಂದರ್ಭಗಳಲ್ಲಿ ಸೋದರತ್ತೆ ಮತ್ತು ಸೋದರಮಾವಂದಿರು ಮಹತ್ವದ ಪಾತ್ರವಹಿಸುತ್ತಾರೆ. 'ತಾಯಿ ಸತ್ತರೂ ಸೋದರ ಮಾವ ಇರಬೇಕು' ಎಂಬ ಗಾದೆ ಇದನ್ನೇ ಹೇಳುತ್ತದೆ.

ಮಗಳ ಗಂಡ; ಹೆಂಡತಿಯ ಅಣ್ಣ/ತಮ್ಮ; ತಂಗಿಯ ಗಂಡ ಅಳಿಯನಾಗುತ್ತಾನೆ. ಕೌಟುಂಬಿಕ ಜೀವನದಲ್ಲಿ ಅಳಿಯ ತುಂಬ ಪ್ರಿಯವಾದ ವ್ಯಕ್ತಿ. ಮಗಳ ಗಂಡ ಅಳಿಯನು ಹೆಂಡತಿಯ ತವರಿನಲ್ಲಿ ಗೌರವಾರ್ಹ ವ್ಯಕ್ತಿ. ಸಂಬೋಧಿಸುವಾಗ ಈ ಬಂಧುಸೂಚಕವು ಬಳಕೆಯಾಗುವುದಿಲ್ಲ. ಇನ್ನೊಬ್ಬರಿಗೆ ಪರಿಚಯಿಸುವಾಗ ಮಾತ್ರ ಬಳಕೆಯಾಗುತ್ತದೆ. ಅಳಿಯನಿಗೆ ಸೋದರತ್ತೆ ಮತ್ತು ಸೋದರ ಮಾವಂದಿರರ ಜೊತೆಗೆ ನಿಕಟತ್ವ ಹೆಚ್ಚು.

'ಎ.ಎಸ್.ಪಾಟೀಲರಿಗೆ ಮೂರು ಮಂದಿ ಅಳ್ಯಾರ ಅದಾರ್'
'ಸಣ್ಣ ಅಳ್ಯಾ ಮಾತ್ರ ಬಾಳ ಮೊಂಡ ಅದಾನ್'

ಅಳಿಯನ ಸುತ್ತ ಅನೇಕ ಗಾದೆಗಳು ಬಳಕೆಯಲ್ಲಿವೆ. 'ಅಳಿಯಾ ಮನಿ ಬಳಿಯಾ' 'ಅಳ್ಯಾಗ ಉಪಕಾರ ಮಾಡಿದರ್ ಮಳಲಾಗ ಉಚ್ಚಿ ಹೊಯ್ದಹಾಗೆ' 'ಅಳ್ಯಾನ ಕಣ್ಣು ಬೆಳಗಾದ ಮೇಲೆ' ಇವು ಕೌಟುಂಬಿಕ ಜೀವನದಲ್ಲಿ ಅಳಿಯನ ಸ್ಥಾನವನ್ನು ನಿರ್ದೇಶಿಸುತ್ತವೆ. ಸಾಮಾನ್ಯವಾಗಿ ಮಗನ ಹೆಂಡತಿ, ಅಕ್ಕ-ತಂಗಿಯರ ಮಗಳು; ತಮ್ಮನ ಹೆಂಡತಿ ಸೊಸೆಯರಾಗುತ್ತಾರೆ. ಈ ಬಂಧುಸೂಚಕವು ಸಂಬೋಧನೆಯಲ್ಲಿ ಬಳಕೆಯಾಗುವುದಿಲ್ಲ. ಇನ್ನೊಬ್ಬರಿಗೆ ಪರಿಚಯಿಸುವಾಗ ಬಳಕೆಯಾಗುವುದುಂಟು. ಬಹುಶಃ ಇದರ ಮೂಲ ರೂಪ ಸೂತ್ರಿ ಅಥವಾ ಸೋತ್ರಿ (< ಸಂ. ಸ್ನುಷಾ) ಅಂದರೆ ಮಕ್ಕಳನ್ನು ಹೇರುವವಳು ಎಂದಿರ ಬೇಕು. ಆದರೆ ಈ ರೂಪವು ಎಲ್ಲ ಹೆಂಗಸರಿಗೆ ಅನ್ವಯವಾಗುವಂತೆ 'ವಧು' ಎಂಬರ್ಥ ದಲ್ಲಿ ಬಳಕೆಯಾಗುತ್ತದೆ. ಅದರರ್ಥ ಬಹುಶಃ 'ವಹ್' ಕರೆದು ಕೊಂಡು ಅಥವಾ ಹೊತ್ತುಕೊಂಡು ಬಂದವಳು ಅಂದರೆ ಮದುವೆಮಾಡಿಕೊಂಡು ಬಂದವಳು ಎಂದುದ ರಿಂದಲೇ 'ವಧು' ಶಬ್ದ 'ವದುವಣಗಿತ್ತಿ' ಸೊಸೆ (ಹಿಂದಿ-ಬಹೂ) ಎಂಬ ರ್ಥಗಳನ್ನೂ ಸಂಚಯಿಸಿಕೊಂಡಿದೆ. ತಾಯಂದಿರರು ತಮ್ಮ ಸಹೋದರರ ಮಗಳನ್ನು, ಮಗಳ ಮಗಳನ್ನು ಸೊಸೆಯಾಗಿ ಸ್ವೀಕರಿಸುವುದುಂಟು. 'ನನಗೆ ಇಬ್ಬರು ಸೊಸೆ ಯಂದಿರರಿದ್ದಾರೆ ಒಬ್ಬಳು ಅಣ್ಣನ ಮಗಳು, ಇನ್ನೊಬ್ಬಳು ಮಗಳ ಮಗಳು' (ರೂಢಿ). ಹಿರಿಯರು ಕಿರಿಯ ಹೆಣ್ಣು ಮಕ್ಕಳಿಗೆ 'ಸೊಸೆಯಗಿ ಬಾಳು' (ಮುತ್ತೈದೆ) ಎಂದು ಹರಸುತ್ತಾರೆ. ಗ್ರಾಮೀಣ ಪ್ರದೇಶದ ಕೌಟುಂಬಿಕ ಜೀವನದಲ್ಲಿ ಅತ್ತೆಯಂದಿರರು (ಹೆಚ್ಚಾಗಿ) ಸೊಸೆಯ ಮೇಲೆ ಅಧಿಕಾರ

ಚಲಾಯಿಸುವುದುಂಟು. 'ಅತ್ತೆಯ ಮನೆಯ ಸೊಸೆಯಂತಿರಬೇಕು' ಎಂಬ ನಾಣ್ಣುಡಿ ಇದನ್ನೇ ನಿರ್ದೇಶಿಸುತ್ತದೆ. ಮಾವ-ಸೊಸೆಯಂದಿರರಲ್ಲಿ ಆತ್ಮೀಯವಾದ ಸಾಮಾಜಿಕ ಸಂಪರ್ಕ ಇರುವುದಿಲ್ಲ. ನಿಷಿದ್ಧತೆಯಿರುತ್ತದೆ. ಒಂದು ಬಗೆಯ ಸಾಮಾಜಿಕ ನಿಯಂತ್ರಣವೂ ಯಿರುತ್ತದೆ.

ಸೊಸೆಯ ಸುತ್ತ ಅನೇಕ ಗಾದೆಗಳು ಬಳಕೆಯಲ್ಲಿವೆ. 'ಅತ್ತೆಗೊಂದು ಕಾಲ; ಸೊಸೆಗೊಂದು ಕಾಲ', 'ಸೊಸೆ ಸತ್ತ ಮೇಲೆ ಅತ್ತೆಯೂ ಅತ್ತಳಂತೆ' ಇಂತಹ ಜಾನಪದ ಉಕ್ತಿಗಳು ಸಂಸಾರಿಕ ಜೀವನದಲ್ಲಿ ಅತ್ತೆ-ಸೊಸೆಯಂದಿರರ ಸ್ಥಾನಮಾನವನ್ನು ತಿಳಿಸಿ ಕೊಡುತ್ತವೆ. ಸೊಸೆಯಾವಾಗಲೂ ಅತ್ತೆ ಮಾವಂದಿರರಿಗೆ, ಭಾವ-ಮೈದುನರಿಗೆ ಹಾಗೂ ನಾದುನಿಯರಿಗೆ ವಿಧೇಯಕವಾಗಿಯೇ ಇರಬೇಕು ಎಂಬ ವಾಡಿಕೆ ಗ್ರಾಮೀಣ ಪ್ರದೇಶದಲ್ಲಿ ಈಗಲೂ ಇದೆ.

ಸಾಮಾಜಿಕ ಸಂಬಂಧದ ದೃಷ್ಟಿಯಿಂದ ಯೋಚಿಸಿದರೆ ಅತ್ತೆ-ಮಾವಂದಿರರಿಗೂ ಸೊಸೆಗೂ ಸಂಬಂಧಪಟ್ಟಂತೆ ಹಾಗೂ ಅತ್ತೆ-ಮಾವಂದಿರರಿಗೂ ಅಳಿಯನಿಗೂ ಸಂಬಂಧ ಪಟ್ಟಂತೆ (ಅನೇಕ ಸಮುದಾಯಗಳಲ್ಲಿ) ನಿಷೇಧಾಜ್ಞೆಗಳು ರೂಢಿಯಲ್ಲಿವೆ. ಸೊಸೆಯಾದವಳು ತನ್ನ ಅತ್ತೆಮಾವಂದಿರರ ಹೆಸರನ್ನು ಹೇಳಬಾರದು ಅವರೊಂದಿಗೆ ಸಲೀಸಾಗಿ ಮಾತನಾಡ ಕೂಡದು. ಪರಸ್ಪರರಲ್ಲಿ ಸಲಿಗೆಯಾಗಲಿ, ಸ್ನೇಹವಾಗಲಿ ಬೆಳೆಸಕೂಡದು, ಅಳಿಯ ತನ್ನ ಹೆಂಡತಿಯಲ್ಲಿ ಕಾಣಿಸಿಕೊಳ್ಳುವ ಕೆಲವು ಗುಣಗಳು ಹಾಗೂ ರೂಪ ಸಾದೃಶ್ಯ ತನ್ನ ಅತ್ತೆಯಲ್ಲೂ ಕಾಣಿಸಿಕೊಂಡು, ಅಳಿಯನಾದವನು ಅತ್ತೆಯಲ್ಲಿ ಅನುರಕ್ತನಾಗಬಹುದಾದ ಸಾಧ್ಯತೆಗಳಿರುತ್ತವೆ. ಹಾಗೆಯೇ ಅತ್ತೆಯಾದವಳು ತನ್ನ ಮಗಳ ಜಾಗದಲ್ಲಿ ತಾನಿರುವಂತೆ ಭಾವಿಸಿಕೊಂಡು ಅಳಿಯರೂಪ, ಪ್ರಾಯ, ಸ್ಥಾನಮಾನಗಳ ಬಗ್ಗೆ ವಿಶೇಷ ಭಾವನೆಗಳನ್ನಿಟ್ಟು ಕೊಂಡು ಮನಸ್ಸಿನಲ್ಲೇ ತನ್ನ ಬಯಕೆಯನ್ನು ಈಡೇರಿಸಿ ಕೊಳ್ಳಲು ಹವಣಿಸಬಹುದು. ಮಾವ ಹಾಗೂ ಸೊಸೆಯಂದಿರರಲ್ಲಿಯೂ ಇಂತಹ ಭಾವನೆಗಳು ಬರಬಹುದು. ಹೀಗೆ ಇವರಲ್ಲಿ ಮೂಡಬಹುದಾದ ಲೈಂಗಿಕ ಆಕರ್ಷಣೆಯನ್ನು ತಪ್ಪಿಸುವುದಷ್ಟೆ ಅಲ್ಲದೆ ಪರಸ್ಪರ ಗೌರವ, ವಿನಯ, ಭಕ್ತಿಗಳನ್ನು ಸೂಚಿಸುವುದರ ಕಾರಣವಾಗಿರಬಹುದೆಂಬುದನ್ನು ಅಲ್ಲ ಗೆಳೆ ಯುವಂತಿಲ್ಲ.

ವಿವಾಹದಿಂದ ಬಂದ ಸಂಬಂಧಿಕರಲ್ಲಿ ಸೋದರಮಾವ-ಅಳಿಯ, ಸೋದರತ್ತೆ-ಸೊಸೆ ಇವರು ಮಹತ್ವದ ಸ್ಥಾನವನ್ನು ಹೊಂದಿರುತ್ತಾರೆ. ಇವರುಗಳ ನಡುವೆ ನಗೆಚಾಟಿಕೆಯ ಸಂಬಂಧಗಳಿರುತ್ತವೆ. ಇವರ ಸಂಬಂಧವು ತಂದೆ, ತಾಯಿ, ದೊಡ್ಡಪ್ಪ, ಚಿಕ್ಕಪ್ಪನಂತಿರದೆ ಬೇರೆಯದೇ ಆಗಿರುತ್ತದೆ. ಅಲ್ಲದೆ ಸೋದರಿಯ ಮಗಳು, ಸೋದರ ಮಾವ/ಅತ್ತೆಯ ಮಗಳು ಹೆಂಡತಿಯಾಗಲು, ಅರ್ಹಳಾಗುತ್ತಾಳೆ. ಜನಪದ ಸಾಹಿತ್ಯದಲ್ಲಿ ಮಾವ, ಅಕ್ಕ ಹಾಗೂ ಅತ್ತೆಯ ಮಗಳು ಅಥವಾ ಮಗಳನ್ನು ವರ್ಣಿಸಿರುವ ಅನೇಕ ನಿದರ್ಶನಗಳಿವೆ.

'ಮಾವನ ಮಗಲೇ ಮೋಹದ ಗಿಣಿಯೇ' ಎಂದು ಹಾಡಿರುವುದು ಪರಸ್ಪರರ ಮಧುರ ಭಾವನೆಯನ್ನು ತೋರಿಸುತ್ತದೆ.

ಇದೇ ರೀತಿಯಾಗಿ ತಾಯಿಯ ಸೊದರನಿಗೆ ತನ್ನ ಸಹೋದರಿಯರ ಮಕ್ಕಳ ಮೇಲೆ ಮಮತೆ ಇರುತ್ತದೆ. ಇದು ಪರಸ್ಪರರಲ್ಲಿ ಪ್ರೀತಿ, ವಿಶ್ವಾಸವನ್ನು ಏರ್ಪಡಿಸುವಲ್ಲಿ ನೆರವಾಗುತ್ತದೆ. ಇದರಿಂದ ವಿವಾಹ ಪೂರ್ವದ ಹಗೆತನ, ನಿರ್ಲಕ್ಷ್ಯ ಮತ್ತು ಅಸಹಕಾರ ಭಾವನೆಗಳು ಕಳೆದು ಹೋಗಿ ಎರಡು ಗುಂಪಿನವರು ಹತ್ತಿರದ ಸಂಬಂಧಿಗಳಾಗುತ್ತಾರೆ.

ಅತ್ತಿಗೆ

ಸಂಸ್ಕೃತದ 'ಅತ್ತಿಕಾ' ಎಂಬ ಶಬ್ದಕ್ಕೆ 'ಅಕ್ಕ' ಎಂಬರ್ಥವಿದೆ. ಅದೇ 'ಅತ್ತಿಗೆ' ಎಂದು ಕನ್ನಡದ ರೂಪ ಪಡೆದಿರಬಹುದು. ಆದರೆ ಕನ್ನಡದಲ್ಲಿ ಈ ಶಬ್ದವನ್ನು 'ಅಕ್ಕ' ಎಂಬರ್ಥದಲ್ಲಿ ಯಾವಾಗಲೂ ಉಪಯೋಗಿಸಿಲ್ಲ. ಅತ್ತಿಗೆ ಪದವು ೧. ಅಣ್ಣನ ಹೆಂಡತಿ, ೨.(ಕೆಲವು ಸಲ) ಹೆಂಗಸರನ್ನು ಪ್ರೀತಿ ಅಥವಾ ಗೌರವದಿಂದ ನಿರ್ದೇಶಿಸುವಾಗ ಉಪಯೋಗಿಸುವ ಮಾತು (ಅಕ್ಕ, ಅಮ್ಮ ಎಂಬಂತೆ). ಈ ರೂಪಕ್ಕೆ 'ಅಟ್ಟಿಗೆ' ಎಂಬ ಇನ್ನೊಂದು ರೂಪವಿದೆ. ಇದರರ್ಥ ಪ್ರೀತಿಯುಳ್ಳವಳು, ಪ್ರೀತಿಗೆ ಪಾತ್ರರಾದವಳು; ನಲ್ಲೆ. ಪಂಪ, ಪೊನ್ನ, ನಂಜುಂಡರು 'ಅತ್ತಿಗೆ' ರೂಪವನ್ನು ನಲ್ಲೆ ಎಂಬರ್ಥದಲ್ಲಿ ಬಳಸಿದ್ದರೆ 'ವಡ್ಡಾರಾಧನೆ' ಮುಂತಾದ ಕಡೆಗಳಲ್ಲಿ 'ಅಣ್ಣನ ಹೆಂಡತಿ' ಎಂಬ ಪ್ರಸಿದ್ಧಾರ್ಥದಲ್ಲಿ ಬಳಸಲಾಗಿದೆ. ಹತ್ತನೆಯ ಶತಮಾನದಲ್ಲಿ ಆ ಮಾತಿಗೆ ಅಣ್ಣನ ಹೆಂಡತಿ ಮತ್ತು ನಲ್ಲೆ ಎಂಬ ಎರಡು ಅರ್ಥಗಳೂ ಇದ್ದವು. ಸೇಡಿಯಾಪು ಕೃಷ್ಣಭಟ್ಟರು (೧೯೬೨), ಮತ್ತು ಎಂ.ಚಿದಾನಂದ ಮೂರ್ತಿ (೧೯೬೩) ಅವರು ಈ ಬಗೆಗೆ ಸ್ಪಷ್ಟವಾದ ಲೇಖನಗಳನ್ನು ಬರೆದಿದ್ದಾರೆ. ಕನ್ನಡದಲ್ಲಿ ಈಗ 'ಅತ್ತಿಗೆ' ಎಂಬ ಮಾತು ಎಲ್ಲ ಕಡೆಗಳಲ್ಲಿ ಅಣ್ಣನ ಹೆಂಡತಿ ಎಂಬರ್ಥದಲ್ಲಿ ವ್ಯವಹಾದರಲ್ಲಿದ್ದರೂ ಕಿತ್ತೂರು ಕರ್ನಾಟಕದಲ್ಲಿ ಅದು 'ಹೆಂಡತಿಯ ಅಕ್ಕ' ಎಂಬರ್ಥದಲ್ಲಿಯೂ ಬಳಕೆಯಾಗುತ್ತಿದೆ. ಅದಕ್ಕೆ ಕಾರಣವೂ ಇದೆ. ಹೆಂಡತಿಯ ಅಕ್ಕನನ್ನು ಅಣ್ಣ ಮದುವೆಯಾಗುವ (ಮದುವೆಯಾಗಿರುವ) ಸಾಧ್ಯತೆಯಿರುವುದರಿಂದ ಅವಳು ಮದುವೆಯಾದ ವ್ಯಕ್ತಿ ಬೇರೆಯಾಗಿದ್ದರೂ ಅವನು ಒಂದು ರೀತಿಯಲ್ಲಿ ಅಣ್ಣನಾಗುತ್ತಾನೆ. 'ಹಿರಿ ಅತ್ತಿಗೆ ತಾಯಿಯ ಸಮಾನ' ಗೌರವದಿಂದ ಅವಳನ್ನು 'ಅತ್ತಿಗೆಮ್ಮ' ಎಂದು ಕರೆಯುವುದುಂಟು 'ಬಾಗಲಕೋಟೆಯ ಅತ್ತಿಗೆಮ್ಮ ನ ಸ್ವಭಾವ ಚಲೊ ಬಾಳ ಐತಿ' ಕಿತ್ತೂರ ಕರ್ನಾಟಕ ಪ್ರದೇಶದಲ್ಲಿ ಮರಾಠಿ ಭಾಷೆಯ ಪ್ರಭಾವದಿಂದಾಗಿ ಅತ್ತಿಗೆಯನ್ನು 'ವೈನಿ' ಎಂದೂ ಕರೆಯುತ್ತಾರೆ. ಅತ್ತಿಗೆಯ ಸುತ್ತ ಅನೇಕ ಗಾದೆಗಳು ಬಳಕೆಯಲ್ಲಿವೆ. 'ಅಣ್ಣ ನಮ್ಮವನಾದರೆ ಅತ್ತಿಗೆ ನಮ್ಮವಳೆ?' 'ಬಡವನ ಹೆಂಡತಿ ಊರಿಗೆಲ್ಲ ಅತ್ತಿಗೆ' 'ಅತ್ತೆಯ ಕಷ್ಟಕ್ಕಿಂತ; ಅತ್ತಿಗೆಯ ನೋಟ ಕಷ್ಟ', ಕೌಟುಂಬಿಕ ಜೀವನದಲ್ಲಿ ಅತ್ತಿಗೆಯ ಪಾತ್ರ ಹಿರಿದು.

(ಮಾವ) ಭಾವ-ಮೈದುನ

ಈ ಬಂಧುಸೂಚಕಗಳ ಪ್ರಸಾರ ವೈವಿಧ್ಯಮಯವಾಗಿದೆ. ೧. ಕಿತ್ತೂರು ಕರ್ನಾಟಕ ಪ್ರದೇಶದ ಕಡೆಗೆ ತಾಯಿಯ ಸಹೋದರ, ಸೋದರಮಾಮ, ಗಂಡ/ಹೆಂಡತಿಯ ತಂದೆ ಹಾಗೂ ಅಕ್ಕ/ತಂಗಿಯರ ಗಂಡ ಇವರಿಗೆ 'ಮಾವ' ಎಂದು ಕರೆಯುತ್ತಾರೆ. ಅದಕ್ಕೆ ಕಾರಣ ತಾಯಿಯ ಸೋದರನ ಮಗಳು ಹೆಂಡತಿಯಾಗುವ ಸಾಧ್ಯತೆಯಿರುವುದು. ಇನ್ನೊಂದು ಕಾರಣವೇನೆಂದರೆ ಗಂಡನ ಅಣ್ಣ/ತಮ್ಮದಿಂರರು ಹೆಂಡತಿಯ ಅಕ್ಕ/ತಂಗಿಯರನ್ನು ಮದುವೆಯಾಗುವ (ಮದುವೆಯಾಗಿರುವ) ಸಾಧ್ಯತೆಯಿರುವುದರಿಂದ ಅವಳು ಮದುವೆ ಯಾದ ವ್ಯಕ್ತಿ ಬೇರೆಯಾಗಿದ್ದರೂ ಅವನು ಮಾವನಾಗುತ್ತಾನೆ. ಕೆಲವು ವೇಳೆ ಬಂಧುತ್ವವಿಲ್ಲ ದಿದ್ದರೂ ಆತ್ಮೀಯತೆಯನ್ನು ಸೂಚಿಸುವಾಗಲೂ ಈ ಪದ ಬಳಕೆಯಾಗುತ್ತದೆ. ಗಂಡನ ಅಣ್ಣನನ್ನು ಸಂಬೋಧಿಸುವಾಗ 'ಮಾವ' ಎಂದೂ ಇನ್ನೊಬ್ಬರಿಗೆ ಪರಿಯಚಯಿಸುವಾಗ ಮಾತ್ರ 'ಭಾವ' ಎಂದು ಪ್ರಯೋಗಿಸುವುದುಂಟು.

'ಮಾವ ಯಾಳೆ ಆಗೇತಿ ಊಟಮಾಡ ಬರೀ' (ಸಂಬೋಧನೆ)

'ನನಗೆ ಭಾವ ಒಬ್ಬರಿದ್ದಾರೆ' (ಪರಿಚಯ)

'ಮೈದುನರು ಇಬ್ಬರಿದ್ದಾರೆ'

'ಇವರು ನನ್ನ ಭಾವ; ಒಕ್ಕಲುತನ ಮಾಡ್ತಾರ'

೨. ಹಳೆಯ ಮೈಸೂರ ಪ್ರದೇಶದ ಕಡೆಗೆ 'ಮಾವ' ಮತ್ತು 'ಭಾವ' ಪೂರಕ ಪ್ರಸಾರವನ್ನು ಪಡೆದಿವೆ. 'ಮಾವ' ಪದವು ಗಂಡ/ಹೆಂಡತಿಯ ತಂದೆಗೆ ಹಾಗೂ ಸೋದರ ಮಾವನಿಗೆ ಮಾತ್ರ ಪ್ರಯೋಗವಾಗುತ್ತದೆ. 'ಭಾವ' ಪದವು ಅಕ್ಕ ತಂಗಿಯರ ಗಂಡನಿಗೆ, ಹೆಂಡತಿಯ ಅಣ್ಣ ತಮ್ಮರಿಗೆ ಹಾಗೂ ಗಂಡನ ಅಣ್ಣ ಇವರಿಗೆ ಪ್ರಯೋಗವಾಗುತ್ತದೆ. 'ಭಾವ' ಪದವು ಕಿತ್ತೂರು ಕರ್ನಾಟಕಕ್ಕಿಂತ ಹಳೇ ಮೈಸೂರು ಪ್ರದೇಶದ ಕಡೆಗೆ ಹೆಚ್ಚು ಪ್ರಸಾರವನ್ನು ಪಡೆದಿದೆ ಮತ್ತು ಈ ಪ್ರದೇಶದಲ್ಲಿ ಭಾವ ಪದವು ಸಂಬೋದನೆಯಲ್ಲಿ ಬಳಕೆಯಲ್ಲಿದೆ. 'ಭಾವ ಊಟಾಯ್ತು' (ರೂಢಿ)

೩. 'ಮೈದುನ' ಪದವು ಕಿತ್ತೂರು ಕರ್ನಾಟಕದಲ್ಲಿ ಗಂಡನ ತಮ್ಮನಿಗೆ ಮಾತ್ರ ಬಳಕೆಯಾಗುತ್ತದೆ (ಪರಿಚಯಿಸುವಾಗ).

'ನನಗ್ ಇಬ್ಬರು ಮೈದುನರು ಒಬ್ಬರು ಊರಾಗ ಅದಾರ್'

'ಇನ್ನೊಬ್ಬರು ಪುಲಗಡ್ಡಿಯಲ್ಲಿ ಮಾಸ್ತರ್ ಅಗ್ಯಾರ್'

ಹಳೇಮೈಸೂರು ಕಡೆಗೆ ಪರಿಚಯ ಹಾಗೂ ಸಂಬೋಧನೆ ಎರಡರಲ್ಲೂ ಬಳಕೆ ಯಾಗುತ್ತದೆ.

'ಇವರು ನನ್ನ ಮೈದುನ ತುಮಕೂರದಲ್ಲಿ ಕೆಲ್ಸ ಮಾಡ್ತಾರ್'

ತಂಗಿಯ ಗಂಡನ ತಮ್ಮ ಹಾಗೂ ತಂಗಿಯ ಗಂಡನಿಗೆ ವಾವೆಯಲ್ಲಿ ತಮ್ಮ ಆಗುವುದರಿಂದ ಅವನನ್ನು 'ಮೈದುನ' ಎಂದೇ ಕರೆಯುತ್ತಾರೆ. ಹೆಂಡತಿಯ ತಮ್ಮ ಮೈದುನನಾದರೂ 'ಭಾವ ಮೈದುನ' ಎಂದೇ ಸೂಚಿಸುವುದು.

'ಇವರು ನನ್ನ ಭಾವ-ಮೈದುನ'

ಕೌಟುಂಬಿಕ ಜೀವನದಲ್ಲಿ 'ಮಾವ' 'ಭಾವ' 'ಮೈದುನ' ಎಲ್ಲರೂ ತುಂಬ ಸಾಮರಸ್ಯತೆಯಿಂದಿರಬೇಕಾಗುತ್ತದೆ. ಇರದಿದ್ದರೆ ಅನೇಕ ತೊಂದರೆಗಳುಂಟಾಗುತ್ತವೆ. 'ಭಾವ ಮೈದುನರು ಮುನಿದರ ಬಲಗಾಲ ಹಿಡಿದೇನ್ ಭಾವಯ್ಯನ ಮಡದಿ ನೆಗೆಣ್ಣಿಯರು ಮುನಿದರ್ ಬಾರಕ್ಕ/ಬಾತಂಗಿಯೆಂದು ಕರೆದೇನ್'. ಸಹನ ಶಕ್ತಿ, ಸೌಹಾರ್ದತೆ ಕುಟುಂಬದ ಸದಸ್ಯರಲ್ಲಿ ಇರಬೇಕಾಗುತ್ತಕೆ. ಎಂಬುದು ಇದರಿಂದ ವೇದ್ಯವಾಗುತ್ತದೆ.

ಕೌಟುಂಬಿಕ ಜೀವನದಲ್ಲಿ 'ಮಾವ' ತಮಾಷೆಯ ಹಾಗೂ ಗಂಭೀರ ವ್ಯಕ್ತಿಯೂ ಆಗುತ್ತಾನೆ. 'ಪಂಚಮಿ ಬಂತೋ ಸಮೀಪ, ಮಾವ ಬಂದಾನ ಕರ್‍ಯಾಕ, ಅವರೆನವ್ವಾ ಸಾಹುಕಾರನಾವೆನವ್ವಾ ಬಡುರಾ' ಇಂತಹ ಅನೇಕ ಶಿಶುಪ್ರಾಸಗಳು ಮಾವನ ಸುತ್ತ ರಚಿತವಾಗಿವೆ. ಮಗು ಅಳುತ್ತಿದ್ದಾಗ ತಾಯಿ 'ಅಳಬಾರದು ಮಾವನ ಮುಂದೆ ಹೇಳ್ತೀನಿ' ಎಂದಾಗ ಮಗು ಸುಮ್ಮನಾಗುತ್ತದೆ. 'ಮಾವಯ್ಯ ಸತ್ತರೆ ಏನೆಂದ ಅಳುವೇನು, ಬಾಗಿಲ ಹಿಡ್ಕೊಂಡ ಮಾವಯ್ಯ ನೀ ಊರುವ ದೊಣ್ಣೆ ನಮಗಾದೊ', 'ತಾಯಿ-ತಂದೆ ಸತ್ತರೆ ಸೋದರ ಮಾವ ಇರಬೇಕು', 'ಮಾವ ಕೊಟ್ಟದ್ದು ಮನೆತನಕ, ದೇವರು ಕೊಟ್ಟದ್ದು ಕಡೆತನಕ' ಇಂತಹ ಅನೇಕ ಗಾದೆಗಳು ಪ್ರಚಲಿತದಲ್ಲಿವೆ. ಕೆಲವು ಸಂದರ್ಭದಲ್ಲಿ ಮಾವ ಪದವು ಲಕ್ಷಣಾರ್ಥದಲ್ಲಿಯೂ ಬಳಕೆಯಾಗುತ್ತದೆ. 'ತುಡುಗ ಮಾಡಿ ಮಾವನ ಮನೆ ಸೇರಿದ' (ಸೆರೆಮನೆ) 'ತುಡುಗ ಮಾಡಬಾರದು ಮಾವಗೊಳ್ ಬಂದ ಒದಿತಾರ' (ಯಜಮಾನ) ಕೆಲವು ಸಂದರ್ಭದಲ್ಲಿ ಹೀನಾರ್ಥದಲ್ಲಿಯೂ ಬಳಕೆಯಾಗುತ್ತದೆ. 'ಆಕಿ ಹಿನ್ನೆಯಿಂದ ಮಾವನ ಹಾದಿ ನೋಡಾಕ ಹತ್ಯಾಳ' (ಗೆಣೆಯ). ಹೀಗೆ 'ಮಾವ' ಪದವು ಕೌಟುಂಬಿಕ ಹಾಗೂ ಸಾಮಾಜಿಕ ಜೀವನದಲ್ಲಿ ಮಹತ್ವದ ಪಾತ್ರವಹಿಸಿದೆ; ಬಳಕೆಯಲ್ಲಿ ವಿಭಿನ್ನ ಸಾಮಾಜಿಕ ಆಯಾಮವನ್ನೂ ಪಡೆದು ಕೊಂಡಿದೆ.

ಅಜ್ಜ- ಅಜ್ಜಿ, ಮೊಮ್ಮಗ-ಮೊಮ್ಮಗಳು

ಸಾಮಾನ್ಯವಾಗಿ ತಂದೆ/ತಾಯಿಯ ತಂದೆ (ತಾಯಿ); ತಂದೆ/ತಾಯಿಯ ಚಿಕ್ಕಪ್ಪ (ಚಿಕ್ಕಮ್ಮ) ದೊಡ್ಡಪ್ಪ (ದೊಡ್ಡಮ್ಮ); ಹಿರಿಯ, ವೃದ್ಧ(ವೃದ್ದೆ)ರಿಗೆ ಅಜ್ಜ/ಅಜ್ಜಿ ರೂಪಗಳು ಬಳಕೆಯಾಗುತ್ತವೆ. ಕೆಲವು ಸಂದರ್ಭದಲ್ಲಿ ಹಿರಿಯರ ಹೆಸರಿನ ಕೊನೆ ಗೌರವಾರ್ಥಕವಾಗಿ 'ಅಜ್ಜ' ರೂಪ ಸೇರುವುದುಂಟು. ಇದು ವಾರ್ಗೀಕ. ಉದಾ : ಮಹಾದೇವಪ್ಪಜ್ಜ, ಚೆನ್ನಪ್ಪಜ್ಜ, ಪಾರವ್ವಜ್ಜಿ, ದುಂಡವಜ್ಜಿ. ಕೆಲವೊಮ್ಮೆ 'ಅಜ್ಜ' ಎಂಬ ವಾರ್ಗೀಕವು ನಿರ್ದಿಷ್ಟವಾಗಿಯೂ ಬಳಕೆಯಾಗುತ್ತದೆ. ಉದಾ : ಅಜ್ಜಪ್ಪ. ತಿರಿಹೋದ ಅಜ್ಜನ ಹೆಸರನ್ನು

ಮೊಮ್ಮಗನಿಗೆ ಇಟ್ಟಾಗ ಅವನನ್ನು ಅಜ್ಜಪ್ಪ ಎಂದು ಕರೆಯುವುದುಂಟು. ಸಂಬೋಧನೆ ಮತ್ತು ಪರಿಚಯ ಎರಡೂ ಸಂದರ್ಭದಲ್ಲಿಯೂ ಈ ರೂಪಗಳು ಬಳಕೆಯಾಗುತ್ತವೆ. 'ಅಜ್ಜ' ಬಂಧು ಸೂಚಕಕ್ಕೆ ಸಂವಾದಿಯಾಗಿ ಬಳ್ಳಾರಿ ಸುತ್ತ ಮುತ್ತಲಿನ ಪ್ರದೇಶದಲ್ಲಿ 'ತಾತ' ಎಂದೂ ವಿಜಾಪುರ ಸುತ್ತಮುತ್ತಲಿನ ಪ್ರದೇಶದಲ್ಲಿ 'ಮುತ್ತ್ಯಾ' ಎಂದೂ ಕರೆಯುತ್ತಾರೆ. 'ಮೂ' 'ಮುದು' 'ಮುನ್', 'ಮುತ್' ಎಂಬ ರೂಪಗಳಿಂದ ಹಲವು ದ್ರಾವಿಡ ಶಬ್ದಗಳು ಹುಟ್ಟಿವೆ. ಮುತ್ತ್ಯಾಎಂದರೆ ಮೊದಲಿನವ, ಹಿರಿಯ ಎಂಬರ್ಥ ಬರುತ್ತದೆ. ಮುತ್ತಜ್ಜ ಎಂದರೆ ಅಜ್ಜನಿಗಿಂತ ಹಿರಿಯ. ಮುತ್ತಜ್ಜ, ಮುತ್ತಜ್ಜಿ, ಮೊಮ್ಮಕ್ಕಳು, ಮರಿಮಕ್ಕಳು, ಗಿರಿಮಕ್ಕಳು ಇವು ಮೂರು ತಲೆಮಾರಿನ ಸಂಬಂಧವನ್ನು ಸೂಚಿಸುತ್ತವೆ. 'ವೃದ್ಧ' ಎಂದರೆ ವಯಸ್ಸು ಮೀರಿದವ ಎಂದು ತಿಳಿಯುತ್ತೇವೆ. ಆದರೆ ಆ ಶಬ್ದದ ಮೂಲರ್ಥ 'ಬೆಳೆದವ' [ವೃಧ್-ಬೆಳೆ, ವೃದ್ಧಿ-ಬೆಳವಣಿಗೆ]. ಈ ರೂಪವೇ ಹಿಂದಿಯಲ್ಲಿ 'ಬುಡ್ಡಾ' ಆಗಿದೆ. ಇದು ವಯಸ್ಸಿನಲ್ಲಿ ಮುಪ್ಪಾದವರನ್ನು ತೋರಿಸುತ್ತದೆ. 'ಅಜ್ಜಿ' ಬಂಧು ಸೂಚಕಕ್ಕೆ ಸಂವಾದಿಯಾಗಿ ಬಳ್ಳಾರಿ ಸುತ್ತಮುತ್ತಲಿನ ಪ್ರದೇಶದಲ್ಲಿ 'ಅವ್ವ' ಎಂದೂ ಬೆಳಗಾವಿ ಸುತ್ತಮುತ್ತಲಿನ ಪ್ರದೇಶದಲ್ಲಿ 'ಅಮ್ಮ' ಎಂದೂ ಕರೆಯುತ್ತಾರೆ. [ಅವ್ವ-ಅಮ್ಮ ಇವುಗಳ ಬಳಕೆಯ ಬಗೆಗೆ ಇದೇ ಅಧ್ಯಾಯನದ ಕೊನೆ ಟಿಪ್ಪಣಿ ಭಾಗದಲ್ಲಿ ಚರ್ಚಿಸಲಾಗಿದೆ]. ಮಗ ಅಥವಾ ಮಗಳ ಮಗ ಮೊಮ್ಮಗನಾಗುತ್ತಾನೆ, ಮಗ ಅಥವಾ ಮಗಳು ಮೊಮ್ಮಗಳಾ ಗುತ್ತಾಳೆ.

ಅಜ್ಜ-ಅಜ್ಜಿ ರೂಪಗಳ ಬಳಕೆಯ ಸಾಮಾಜಿಕ ಆಯಾಮವನ್ನು ಗಮನಿಸಿ ಹೇಳುವುದಾದರೆ ಹೆಣ್ಣು ಮಕ್ಕಳ ಮಕ್ಕಳಿಗೆ ಅಜ್ಜ/ಅಜ್ಜಿಯರ ಮೇಲೆ ಸಲಿಗೆ ಹೆಚ್ಚು. ಶಿಶುಪ್ರಾಸಗಳಲ್ಲಿ ಇದರ ಬಗೆಗೆ ಉಲ್ಲೇಖಗಳು ಸಿಗುತ್ತವೆ.

ಹೆಣ್ಣು ಮಗಳ ಮಗ/ಮಗಳು - 'ಕಾಗಿ ಬಾಬಾ ನಮ್ಮ
ಅಜ್ಜ/ಅಜ್ಜಿಯ ತಲಿ
ಕುಕ್ ಬಾ'
ಗಂಡು ಮಗನ ಮಗ/ಮಗಳು - 'ಕಾಗಿ ನಮ್ಮ ಅಜ್ಜ/ಅಜ್ಜಿಯ ಸನೇಕ್
ಬಂದರ್ ನಿನ್ನ ನೋಡ'

ಎನ್ನುವಲ್ಲಿಯ ಹಾಸ್ಯ ಗಮನಾರ್ಹವಾಗಿದೆ. ಗಂಡು ಮಗನ ಮಗನಿಗೆ ತಮ್ಮ ಅಜ್ಜನ ಮೇಲೆ ಕಾಳಜಿಯಿದೆ (ಅವನು ಮನೆಯ ಮೊಮ್ಮಗ). ಹೆಣ್ಣು ಮಗಳ ಮಗ ಅಜ್ಜನಿಗೆ ತಮಾಷೆ ಮಾಡುತ್ತಾನೆ. ಆದರೂ ಅಜ್ಜ-ಅಜ್ಜಿಯರಿಗೆ ಮಗಳ ಮಕ್ಕಳ ಮೇಲೆ ಕಾಳಜಿ, ವಾತ್ಸಲ್ಯ ಹೆಚ್ಚು. ಅಜ್ಜ/ಅಜ್ಜಿಯರ ಸುತ್ತ ಅನೇಕ ಸ್ವಾರಸ್ಯಕರವಾದ ಗಾದೆಗಳು ಬಳಕೆಯಲ್ಲಿವೆ. 'ಅಜ್ಜ/ಅಜ್ಜಿಯಂದಿರರಿಗೆ, ಮೊಮ್ಮಗ/ಮೊಮ್ಮಗಳು ಆಕಳಿಕೆ ಕಲಿಸಿದ ವಂತೆ' 'ಅಜ್ಜ/ಅಜ್ಜಿ ಮದುವೆ ಎಂದರೆ ನನಗೂ ಎಂದ' 'ಅಜ್ಜ ಇಲ್ಲದ ಮನಿ ಮಜ್ಜಿಗಿಲ್ಲದ ಊಟ'. ಕೌಟುಂಬಿಕ ಜೀವನದಲ್ಲಿ ಅಜ್ಜ, ಅಜ್ಜಿಯವರಿಗೆ ಗೌರವದ ಸ್ಥಾನವಿದೆ.

ನಾದುನಿ-ನೆಗೆಣ್ಣೆ-ಸವತಿ

ಸಾಮಾನ್ಯವಾಗಿ ಗಂಡನ ಅಕ್ಕ ಅಥವಾ ತಂಗಿ; ಪತಿಯ ಸಹೋದರಿಯರು 'ನಾದುನಿ' ಯರಾಗುತ್ತಾರೆ. ಈ ಬಂಧುಸೂಚಕವು ಸಂಬೋಧನೆಯಲ್ಲಿ ಬಳಕೆಯಾಗುವುದಿಲ್ಲ. ಇನ್ನೊಬ್ಬರಿಗೆ ಪರಿಚಯಿಸುವಾಗ ಬಳಕೆಯಾಗುತ್ತದೆ. 'ನಾಳೆ ನಮ್ಮ ನಾದಿನಿ ಬರ್ತಾಳೆ' 'ನಮಗೆ ಒಬ್ಬಾಕೆ ನಾದಿನಿ' (ರೂಢಿ). ಹೆಚ್ಚಾಗಿ ನಾದುನಿಯರು ಅತ್ತಿಗೆಯರಿಗೆ ಕಾಟ ಕೊಡುತ್ತಾರೆ. 'ನಾದ್ನಿ ಉಪದ್ರ' ಎಂಬ ನುಡಿಗಟ್ಟು, ಹಾಗೂ 'ಗಂಡ ನನ್ನವನಾದರೂ ನಾದ್ನಿ ನನ್ನವಳಲ್ಲ' 'ಅತ್ತಿಗೆ ನಾದಿನಿ ಅತ್ತೆ ಮಾವಂದಿರ ಜೊತೆಗೆ ಹೊಂದದವಳು ಕತ್ತೆಗೆ ಸಮಾನ' ಎಂಬ ಗಾದೆಗಳು ಇದನ್ನೇ ಸೂಚಿಸುತ್ತವೆ. ಈ ಕಾರಣಕ್ಕಾಗಿ ನಾದಿನಿಯರನ್ನು ಸಂಬೋಧಿಸುವಾಗ ಚಿಗವ್ವ, ಚಿಕ್ಕಮ್ಮ ಎಂದು ಕರೆಯುವುದುಂಟು. ಇದರರ್ಥ ನೀನು ತಾಯಿಯ ಸಮಾನ ಕಾಡಬೇಡ ಎಂಬರ್ಥ ಸೂಚ್ಯವಾಗಿ ವ್ಯಕ್ತವಾಗುತ್ತದೆ.

ಸಾಮಾನ್ಯವಾಗಿ ಭಾವ/ಮೈದುನನ ಹೆಂಡತಿ; ಗಂಡನ ಸಹೋದರನ ಹೆಂಡತಿಯು 'ನೆಗೆಣ್ಣೆ'ಯರಾಗುತ್ತಾರೆ. ಈ ಬಂಧುಸೂಚಕಕ್ಕೆ ಪರ್ಯಾಯವಾಗಿ ಹಳೆಮೈಸೂರು ಕಡೆಗೆ 'ಓರಗಿತ್ತಿ' ಎಂಬ ಪದ ಪ್ರಯೋಗದಲ್ಲಿದೆ (ಓರ+ಅಗ+ಇತ್ತಿ). ಇದು 'ಅಂತಹವರ ಜೊತೆಗೆ ವ್ಯವಹರಿಸುವವಳು' ಎಂಬರ್ಥ ಕೊಡುತ್ತದೆ. ಓರಗಿತ್ತಿ ಎಂದರೆ ಸಮ ವಯಸ್ಕರರ ಜೊತೆಗೆ ಸಹ ಜೀವನ ನಡೆಸುವಳು. ಅವಿಭಕ್ತ ಕುಟುಂಬದಲ್ಲಿ ನೆಗೆಣ್ಣೆಯರು ಹೆಚ್ಚಿರುವುದರಿಂದ ಎಲ್ಲರಿಗೂ ಸೇರಿ 'ನೆಗ್ಯಾಣಿಮಕ್ಕಳು' ಎಂಬ ಪದಪುಂಜ ಬಳಕೆ ಯಲ್ಲಿದೆ. ಪರಸ್ಪರರಲ್ಲಿ ಸಹೋದರಿ ಸಂಬಂಧವಿರುತ್ತದೆ. 'ಅಲ್ಲದಂತಹ ಅತ್ತಿಗೆ, ಬೆಲ್ಲ ದಂತಹ ನಾದುನಿ ನೆಲ್ಲಿಕಾಯಂತಹ ನೆಗೆಣ್ಣೆ| ಕುಡಾಡಿ ಕಲ್ಯಾಣ ತವರ ಮರತೇನ'. ಈ ಬಂಧುವಾಚಕವು ಸಂಬೋಧನೆಯಲ್ಲಿ ಬಳಕೆಯಾಗುವುದಿಲ್ಲ; ಇನ್ನೊಬ್ಬರಿಗೆ ಪರಿಚಯಿಸು ವಾಗ ಬಳಕೆಯಾಗುತ್ತದೆ. 'ಅಡಿಗಿ ಪಡಿಗಿ ನಮ್ಮ ನೆಗ್ಯಾಣಿ ಮಾಡ್ತಾಳ; ಹೊಲದ್ ದಗದಾ ನಾನೇ ಮಾಡ್ತನ್', 'ನೆಗ್ಯಾಣಿಮಕ್ಕಳು ಹೊಂದಕೊಂಡ ಹ್ವಾದರ ಮನಿ ಮುಂದ ಬರುತ್ತವೆ; ಇರದಿದ್ದರ್ ಮನಿ ಮೂರಾಬಟ್ಟಿ ಆಗ್ತಾವ್' ಎಂಬ ನಾಣ್ಣುಡಿ ಗಳು ಕರ್ನಾಟಕದ ಉತ್ತರ ಭಾಗದಲ್ಲಿ ಪ್ರಚಲಿತದಲ್ಲಿವೆ. (ನೆಗೆವೆಣ್ಣು>ನೆಗೆಹಣ್ಣು>ನೆಗೆಣ್ಣೆ/ ನೆಗ್ಯಾಣಿ).

ಸಾಮಾನ್ಯವಾಗಿ ತನ್ನ ಗಂಡನ ಇನ್ನೊಬ್ಬಳು ಹೆಂಡತಿಯರು 'ಸವತಿ'ಯರಾಗುತ್ತಾರೆ (ಉಪಪತ್ನಿ). ಇದರರ್ಥ ಇಬ್ಬರು ಹೆಂಡಂದಿರರಿರುವ ಗಂಡ ಇಬ್ಬರನ್ನೂ ಸಮಾನವಾಗಿ ನೋಡಿಕೊಳ್ಳುವುದು ಎಂದರ್ಥ. ಆದರೆ ಸವತಿಯರಲ್ಲಿ ತುಂಬ ಮತ್ಸರ ಭಾವನೆ ಇರುತ್ತದೆ. 'ಸವತಿ ಮತ್ಸರ ಜಗಳ' ಎಂಬ ನಾಣ್ಣುಡಿ ಇದನ್ನೇ ಹೇಳುತ್ತದೆ. 'ಸವತಿ' ಪದ ಬೇರೆ ಭಾಷಿಕ ಸಂದರ್ಭದಲ್ಲಿ ಪ್ರಯೋಗವಾದಾಗ 'ವಿರೋಧ' ಎಂಬರ್ಥವನ್ನು ಕೊಡುತ್ತದೆ. ಉದಾ : 'ಸವತಿ ಕಣ್ಣು' (ಓರೆನೋಟ, ಮತ್ಸರದೃಷ್ಟಿ). ಜಾನಪದ ಸಾಹಿತ್ಯದಲ್ಲಿ ಬರುವ 'ಸಾವಿರ ಕೊಟ್ಟರೂ ಸವತಿಯ ಮನಿ ಬ್ಯಾಡ' ಎಂಬ ಮಾತನ್ನು ವಿಶ್ಲೇಷಿಸಿದಾಗ ಅಲ್ಲಿ

ಸಹಜೀವನ ಇರುವುದಿಲ್ಲ ಎಂಬುದನ್ನೆ ಅದು ಪ್ರತಿಬಿಂಬಿಸುತ್ತದೆ. 'ಸವತಿಯೆಂದರೆ ಸಾಯುವ ಹೆಣವೂ ಎದ್ದು ಕುತಂತೆ' ಎಂಬ ಗಾದೆಯೂ ಇದನ್ನೆ ಹೇಳುತ್ತದೆ. ಹಿಂದೂ ವಿವಾಹ ಕಾನೂನಿನಿಂದಾಗಿ ಈಗ ಸವತಿಯರ ಸಂಖ್ಯೆ ಇಳಿಯುತ್ತಿದೆ. ಆದರೆ ಜನರ ಬಾಯಿಂದ ಸವತಿ ಅಸ್ತಂಗತಳಾಗಲಿಲ್ಲ. "ಸವತೀ ಹಾಂಗ ಕಾಡತೀ" ಎಂದು ತಾಯಿ ತನ್ನ ಮಗಳನ್ನೇ ಬಯ್ಯುವುದನ್ನು ಕೇಳಿದ್ದೇವೆ.

ಷಡ್ಡಕ್

ಹೆಂಡತಿಯ ಸೋದರಿಯ ಗಂಡನಿಗೆ ಈ ರೂಪ ಬಳಕೆಯಲ್ಲಿದೆ. ಈ ಬಂಧುಸೂಚಕವು ಸಂಬೋಧನೆಯಲ್ಲಿ ಬಳಕೆಯಾಗುವುದಿಲ್ಲ ಇನ್ನೊಬ್ಬರಿಗೆ ಪರಿಚಯಿಸುವಾಗ ಬಳಕೆಯಾಗುತ್ತದೆ.

'ನನಗೆ ಇಬ್ಬರು ಷಡ್ಡಕರಿದ್ದಾರೆ ಒಬ್ಬರು ಬೆಳಗಾವಿಯಲ್ಲಿ,
'ಇನ್ನೊಬ್ಬರು ಮುದಾಪುರದಲ್ಲಿ ನೌಕರಿ ಮಾಡ್ತಾರ್'
'ಇವರು ನನ್ನ ಷಡ್ಕ'

ಷಡ್ಕ ಸಹೋದರರಲ್ಲಿ ನಿಕಟತ್ವ ಕಡಮೆ. ಏಕೆಂದರೆ ಹೆಂಡತಿಯ ಸಹೋದರಿಯರ ಜೊತೆಗೆ ವೈವಾಹಿಕ ಸಂಬಂಧ ಇರುವುದರಿಂದ ಒಂದು ಬಗೆಯ ಸಂಕೋಚವಿರುತ್ತದೆ. ಷಡ್ಕನಿಗೆ ತನ್ನ ಹೆಂಡತಿಯ ಅಕ್ಕ ತಂಗಿಯರ ಜೊತೆಗೆ ಸಲಿಗೆಯಿದ್ದರೆ ಮುಂದೆ ಆಗಬಹುದಾದ ಲೈಂಗಿಕ ಸಂಬಂಧವನ್ನು ಸೂಚಿಸುತ್ತದೆ. ವಿನೋಧ ಸಂಬಂಧಗಳು ವ್ಯಕ್ತಿಗಳ ನಡುವೆ ಸೌಹಾರ್ಧತೆಯನ್ನು ಲೈಂಗಿಕ ಸಂಬಂಧದ ಸಾಧ್ಯತೆಯನ್ನು ಸೂಚಿಸುತ್ತದೆ. 'ಷಡ್ಡಕ್ ನೆಂಟನಲ್ಲ ಮೊಡ್ಡ ಆಯುಧವಲ್ಲ' ಎಂಬ ಗಾದೆ ಇದನ್ನೆ ಪ್ರತಿಧ್ವನಿಸುತ್ತದೆ. ಷಡ್ಡಕರಿಗೆ ತಮ್ಮ ಒಡಹುಟ್ಟಿದ ಸಹೋದರರ ಜೊತೆಗೆ ನಿಕಟತ್ವ ಹೆಚ್ಚು ಷಡ್ಕ, ಸಡ್ಕ, ಸಡ್ಡುಕ, ಸಡ್ಡುಗ ಎಂಬ ರೂಪಗಳು ಪ್ರಾಚೀನ ಕಾವ್ಯಗಳಲ್ಲಿ ದೊರೆಯುತ್ತವೆ. ಇತ್ತೀಚೆಗೆ ಈ ರೂಪದ ಬಳಕೆ ಕಡಮೆಯಾಗುತ್ತಿದೆ. ಅದರ ಬದಲಾಗಿ ಇಂಗ್ಲಿಶಿನ 'ಕೋ ಬ್ರದರ್' ಎಂಬ ಪದವೇ ಹೆಚ್ಚು ಬಳಕೆಯಲ್ಲಿದೆ.

ಕೊನೆ ಟಿಪ್ಪಣಿ

ಅಮ್ಮ-ಅವ್ವ : ಸಾಮಾನ್ಯವಾಗಿ ತಾಯಿ; ಅಜ್ಜಿ ಹಾಗೂ ಗೌರವಾರ್ಹವಾದ ವ್ಯಕ್ತಿಯನ್ನು ಕುರಿತು ಮಾತನಾಡುವಾಗ ಅವರ ಹೆಸರಿನ ಕೊನೆಗೆ ಸೇರಿಸಿ ಅಥವಾ ಸ್ವತಂತ್ರವಾಗಿ ಈ ರೂಪಗಳನ್ನು ಬಳಸುವುದುಂಟು. (ಪಾರ್ವತಮ್ಮ, ದುಂಡಮ್ಮ, ಚನ್ನಮ್ಮ). ಅದರೆ ಪ್ರದೇಶದಿಂದ ಪ್ರದೇಶಕ್ಕೆ ಈ ಸಂಬಂಧವಾಚಕಗಳ ಪ್ರಸಾರ, ಅವು ಪಡೆಯುವ ಅರ್ಥಛಾಯೆ ಹಾಗೂ ಅವುಗಳ ಹರಿದಾಟ ತುಂಬ ಸ್ವಾರಸ್ಯಕರವಾಗಿದೆ.

ಅ. ಹಳಗನ್ನಡದಲ್ಲಿ 'ಅಮ್ಮ' ಎಂಬುದು ತಂದೆಯನ್ನು ಸೂಚಿಸುತ್ತಿತ್ತು. ಆದರೆ ನಡುಗನ್ನಡದ ಕಾಲಕ್ಕೆ 'ಅಮ್ಮ' ಎಂಬುದು ತಾಯಿಗೆ ಅನ್ವಯಿಸುತ್ತದೆ. ತುಳು ಹೊರತು

ಪಡಿಸಿ ನೆರೆಯ ದ್ರಾವಿಡ ಭಾಷೆಗಳಲ್ಲಿ 'ಅಮ್ಮ' ಎಂಬುದು ತಾಯಿಯನ್ನು ಸೂಚಿಸುತ್ತದೆ. ತುಳುವಿನಲ್ಲಿ ಮಾತ್ರ ಇಂದಿಗೂ ಅಮ್ಮೆ ಎಂದರೆ ತಂದೆ, 'ಅಪ್ಪೆ' ಅಂದರೆ ತಾಯಿ ಎಂದರ್ಥ. ಹಳೇ ಮೈಸೂರಿನ ಕೆಲವು ಪ್ರದೇಶಗಳ ಕಡೆಗೆ ಗಂಡು ಮಕ್ಕಳನ್ನು 'ಅಮ್ಮ' ಎಂದೇ ಸಂಬೋಧಿಸುವುದುಂಟು (ಏನಮ್ಮ ಹೇಗಿದ್ದೀಯಾ).

ಆ. ಹಳಗನ್ನಡದಲ್ಲಿ 'ಅಮ್ಮ' ತಂದೆಯನ್ನು ಸೂಚಿಸುತ್ತಿದ್ದರೆ ತಾಯಿಯನ್ನು ಹೇಗೆ ಕರೆಯುತ್ತಿದ್ದರು? ಕಿತ್ತೂರು ಕರ್ನಾಟಕದಲ್ಲಿ ಬಳಕೆಯಲ್ಲಿರುವ 'ಬೇ'ದ ಮೂಲರೂಪ 'ಅಬ್ಬೆ'ಯೆಂಬುದು ಆಗ ತಾಯಿ ಎಂಬರ್ಥದಲ್ಲಿ ಬಳಕೆಯಾಗುತ್ತಿತು. ಇಂದು ಕಿತ್ತೂರು ಕರ್ನಾಟಕದಲ್ಲಿ 'ಬೇ' ಎಂಬುದು ಸ್ತ್ರೀಯರಿಗೆ ಗೌರವ ಸೂಚಕವಾಗಿ ಬಳಕೆಯಾಗುತ್ತದೆ. 'ಯಮ್ಮಾಬೇ', ಯಾವ್ವಾಬೇ, ಯತ್ತಿಬೇ, ಸಾಕ ಬೇ.

ಇ. ಕಿತ್ತೂರು ಕರ್ನಾಟಕದಲ್ಲಿ ಇನ್ನೊಂದು ವೈಶಿಷ್ಟತೆಯನ್ನು ಕಾಣುತ್ತೇವೆ. ಹಳೇ ಮೈಸೂರು ಪ್ರದೇಶದಲ್ಲಿ 'ಅಮ್ಮ' ಎಂಬುದು ತಾಯಿ ಎಂಬರ್ಥವನ್ನು ಸಂಪಾದಿಸಿದರೂ ಕಿತ್ತೂರು ಕರ್ನಾಟಕದಲ್ಲಿ ಅದು ತಾಯಿ ಎಂಬರ್ಥದ ಬದಲಿಗೆ 'ಅಜ್ಜಿ' ಎಂಬರ್ಥ ವನ್ನು ಸೂಚಿಸುತ್ತದೆ (ಇದರ ಹಳಗನ್ನಡ ರೂಪ 'ಅಚ್ಚಿ', 'ಕಾಡಚ್ಚಿ' ಮುಂತಾದವು). ಯಾವ ಕಾರಣದಿಂದ ಅದು ಹೀಗೆ ಅರ್ಥಾಂತರ ಹೊಂದಿತೋ ಹೇಳುವುದು ಕಷ್ಟ. ಆದರೆ ಆ ಪ್ರದೇಶದ ಬ್ರಾಹ್ಮಣ ಸಮುದಾಯದಲ್ಲಿ ಮಾತ್ರ 'ವಿಧವೆ' ಎಂಬರ್ಥವನ್ನು ಸೂಚಿಸುತ್ತದೆ ಯೆಂದು ಸಕಾರಣವಾಗಿ ಹೇಳಬಹುದು. 'ಅಮ್ಮ' ಎಂದರೆ ಅಜ್ಜಿ (ವಯಸ್ಸಾದವಳು). ವಯಸ್ಸಾದ ಹೆಂಗಸರು ವಿಧವೆಯಾಗಿರುವ ಸಂಭವ ಬಹಳ. ಆದ್ದರಿಂದ ಅಮ್ಮ ಎಂದರೆ ವಿಧವೆ (ಬ್ರಾಹ್ಮಣ ಸಮುದಾಯದಲ್ಲಿ ಮಾತ್ರ ಎಂಬುದನ್ನು ಒತ್ತಿ ಹೇಳಬೇಕು).

ಈ. ಕಲ್ಯಾಣ ಕರ್ನಾಟಕದಲ್ಲಿ 'ಅಮ್ಮ' ಎಂದರೆ ತಾಯಿ. ಆದರೆ 'ಅವ್ವ' ಎಂಬುದು 'ಅಜ್ಜಿ' ಎಂಬರ್ಥವನ್ನು ಸಂಪಾದಿಸಿದೆ. ಈ ಅರ್ಥಾಂತರ ಹೇಗಾಯಿತು ಎಂಬುದಕ್ಕೆ ಉತ್ತರಿಸುವುದು ಕಷ್ಟ, ಸಾಧ್ಯ. ಈ ಎಲ್ಲ ಸಂಬಂಧ ಸೂಚಕಗಳು ಸಂಬೋಧಿಸುವಾಗ ಹಾಗೂ ಇನ್ನೊಬ್ಬರಿಗೆ ಪರಿಚಯಿಸುವಾಗ ಬಳಕೆಯಾಗುತ್ತವೆ.

ಆಕರಗ್ರಂಥಗಳು

ಕನ್ನಡ

ಚಿದಾನಂದಮೂರ್ತಿ ಎಂ., ೧೯೮೧, 'ಕರ್ನಾಟಕ ವ್ಯಕ್ತಿನಾಮಗಳು', ವಾಗರ್ಥ, ಬಾಪ್ಕೊ ಪ್ರಕಾಶನ, ಬೆಂಗಳೂರು

ಚಿದಾನಂದಮೂರ್ತಿ ಎಂ., ೧೯೯೩, 'ಅಬ್ಬೆಯೆಂದತ್ತಿಗೆಯೆಂಬ ಮಾತನ್', ಹೊಸತು ಹೊಸತು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಿದಾನಂದಮೂರ್ತಿ ಎಂ., ೧೯೯೮, 'ವಚನಕಾರರ ಕಳು ಬಳ್ಳಿ ಪರಿಕಲ್ಪನೆ', ವಚನ ಶೋಧ-೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಜೋಗನ್ ಶಂಕರ., ೧೯೯೫, ಗ್ರಾಮಸಮಾಜ, ಜೀವ ಪ್ರಕಾಶನ, ಮೈಸೂರು.

ನಾರಾಯಣ ಕೆ.ವಿ, ಮತ್ತು ಇತರರು, ೨೦೦೦, 'ಭಾಷೆ' ವಿಶ್ವಕೋಶ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪಾಂಡುರಂಗ ಬಾಬು ಡಿ., ೧೯೯೮, 'ಣೇ ಮೀ ಲೇ', ಕನ್ನಡ ಅಧ್ಯಯನ ಸಂ-೫, ಸಂ-೧, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪೀಟರ್ ಜೆ. ಕ್ಲಾಸ್, ೧೯೮೭, 'ತುಳುವ ದರ್ಶನ', ಕನ್ನಡಕ್ಕೆ : ಎ.ವಿ.ನಾವಡ ಮತ್ತು ಸುಭಾಶ್ಚಂದ್ರ, ಪ್ರಾದೇಶಿಕ ವ್ಯಾಸಂಗ, ಕುಂದಾಪುರ

ಮಹಾದೇವಯ್ಯ ಪಿ., ೨೦೦೧, 'ಕನ್ನಡದಲ್ಲಿ ಬಂಧುಸೂಚಕ ಪದಗಳು', ನಮ್ಮಕನ್ನಡ, ಸಂಚಿಕೆ ೫೦, (ಸಂ) ಕೆ.ವಿ.ನಾರಾಯಣ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಶ್ರೀಕಂಠಯ್ಯ ತೀ.ನಂ., ೧೯೮೩, (ತೃ.ಆ) 'ಏನಿ ಗಡಿಂ ರೀ', ಸಮಾಲೋಕನ, ಶಾರದಾ ಮಂದಿರ, ಮೈಸೂರು.

ಸೇಡಿಯಾಪು ಕೃಷ್ಣಭಟ್., ೧೯೯೨, 'ಅತ್ತಿಗೆ', ವಿಚಾರ ಪ್ರಪಂಚ, ಕರ್ನಾಟಕ ಸಂಘ ಪುತ್ತೂರು

ಸೋಮಶೇಖರಗೌಡ, ೨೦೦೦, 'ಭಾಷೆ ರಚನೆ ಬಳಕೆ', ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು

ಇಂಗ್ಲಿಶ್

Balasubramanian G., 1999, 'Language and power in the rural context of Tamil Nadu' Indian Linguistics Volume 601-4

Brown Roger W and Margurete Ford., 1966, 'Address in American English' Dell Hymes Education Language in culture and Society [Horper & Row, New York]

Jampt Holmes., 1992 An Introducation To Socio linguistics Longman-London NewYork

Joseph N., 1980, Cultural Impacts in Kinship Terms sociolinguistics and Dialectology (Edit) S.Ages sthlalingom & K.Karunakaran, Annamaki University

Firth J.R., 1966, On Sociological Linguistics in languge in culture and society

Manuel M., 1981, 'Some Unique Kinship terms current in a dialect of KanyKumari District' IJDL-Vol-x

Misra K.S., 1977, 'Terms of Address and second person pronominal us age in Hindi' A Sociolinguistic study Bahri publication Pvt, Ltd.

Peter Trudgill., 1974, 'Sociolinguistic An Introduction' Penguin books Ltd.

Sharma D.D., 1985, 'Kinship terms of reference in Kumauni' (A Socio linguistic Appraisal) IJDL- XIV

Surya Kumari., 1986 'A Sociolinguistic study of Names and Address system in Telugu' IJDL 15:2

Sreedhar M.V., 1980 Correlation Between Marriage practices and Kinship Terms in some Dravidian Language 'Sociolinguistics and Dialectology' Ed- S.Agesthialingom K.KarunaKarna, Annamalai University, Annamalai nagar.

೮೧

ವೃತ್ತಿಸೂಚಕ ಅವಳಿ ಸಂಬಂಧಗಳು

ಭಾಷಾಸಮುದಾಯದಲ್ಲಿ ವಿಭಿನ್ನ ವರ್ಗದ, ವಿಭಿನ್ನ ವೃತ್ತಿಯ ಭಾಷಿಕರಿರುತ್ತಾರೆ. ಅವರು ಬೇರೆ ಬೇರೆ ಭಾಷಿಕ ಸನ್ನಿವೇಶಗಳಲ್ಲಿ ಭಾಷೆಯನ್ನು ಬಳಸುವಾಗ ಭಿನ್ನತೆ ಕಂಡು ಬರುತ್ತದೆ. ಅದು ಸಹಜ. ವ್ಯಾಪಾರಿ-ಗಿರಾಕಿ, ವೈದ್ಯ ರೋಗಿ ಮುಂತಾದ ವೃತ್ತಿ ಸೂಚಕ ಅವಳಿಗಳ ನಡುವೆ ಜೈವಿಕ ಹಾಗೂ ಸಾಮಾಜಿಕ ಸಂಬಂಧಗಳಿರುವುದುಂಟು. ಅವರಲ್ಲಿ ಪರಸ್ಪರ ಪ್ರೀತಿ, ವಾತ್ಸಲ್ಯ ಸಹಕಾರ ಇರುತ್ತದೆ. ಕೆಲವು ಸಂದರ್ಭದಲ್ಲಿ ಅತೃಪ್ತಿ ಕಂಡು ಬರಬಹುದಾದರೂ ಅವೆಲ್ಲವು ಸಮುದಾಯದ ಪರಿಸದಲ್ಲಿಯೇ ಪರಿಹಾರವಾಗುತ್ತವೆ. ಈ ಅಧ್ಯಾಯದಲ್ಲಿ ಭಾಷಾ ಸಮುದಾಯದಲ್ಲಿರುವ ಕೆಲವು ವೃತ್ತಿ ಸಂಬಂಧಗಳಲ್ಲಿ ನಡೆಯುವ ಭಾಷಾ ಕ್ರಿಯೆಗಳನ್ನು ಕುರಿತು ಚರ್ಚಿಸಲಾಗಿದೆ.

ಔಪಚಾರಿಕ-ಅನೌಪಚಾರಿಕ

ಒಂದು ನಿರ್ದಿಷ್ಟ ಸನ್ನಿವೇಶದಲ್ಲಿ ಹಾಗೂ ನಿರ್ದಿಷ್ಟ ಕಟ್ಟಳೆಗಳ ಚೌಕಟ್ಟಿನಲ್ಲಿ ಭಾಷೆ ಬಳಕೆಯಾಗುವ ಪರಿಸರಕ್ಕೆ 'ಔಪಚಾರಿಕ ಭಾಷಾ ಪರಿಸರ' ಎಂದು ಹೆಸರು. ಉದಾ : ವಿದ್ಯಾಸಂಸ್ಥೆ, ಕಂದಾಯ ಇಲಾಖೆ, ಪೊಲೀಸ್ ಇಲಾಖೆ ಮುಂತಾದ ವಲಯಗಳಲ್ಲಿ ಭಾಷೆ ಔಪಚಾರಿಕವಾಗಿ ಬಳಕೆಯಾಗುತ್ತದೆ. ಇಲ್ಲಿ ಕೃತಕತೆ ಹೆಚ್ಚು. ಔಪಚಾರಿಕ ಮತ್ತು ಅನೌಪಚಾರಿಕ ಸನ್ನಿವೇಶಗಳ ಸಾಮಾನ್ಯ ವ್ಯಾತ್ಯಾಸಗಳು ಇದೇ ಅಧ್ಯಾಯದ ಕೊನೆ ಟಿಪ್ಪಣಿ ಭಾಗದಲ್ಲಿ ಕೊಡಲಾಗಿದೆ. ಇಬ್ಬರು ಒಂದೇ ಶ್ರೇಣಿಯ ಅಧಿಕಾರಿಗಳು ಒಬ್ಬರನ್ನೊಬ್ಬರು ಸಂಬೋಧಿಸುವಾಗ ಪರಸ್ಪರ ಕುಲನಾಮ ಇಲ್ಲವೆ ಹೆಸರು ಇಲ್ಲವೆ ಪದನಾಮಗಳನ್ನು ಬಳಸುವುದುಂಟು.

'ಅಪ್ಪ ಸಾಹೇಬರೇ ಸ್ವಲ್ಪ ಕೆಲಸ ಅತಿ ಬರ್ತೀರ'
'ಪಾಟೀಲಸರ್ ಸ್ವಲ್ಪ ಕೆಲಸ ಅತಿ ಬರ್ತೀರಾ'
'ಇಂಜಿನಿಯರರೇ ಸ್ವಲ್ಪ ಕೆಲಸ ಅತಿ ಬರ್ತೀರಾ'

ಹಿರಿಯ ಶ್ರೇಣಿಯ ಅಧಿಕಾರಿಗಳು ಕಿರಿಯ ಶ್ರೇಣಿಯವರನ್ನು ಸಂಬೋಧಿಸುವಾಗ ಅವರ ಹೆಸರು/ಕುಲನಾಮ (ಕೆಲವು ವೇಳೆ ಕ್ವಚಿತ್ತಾಗಿ) ಪದನಾಮಗಳನ್ನು ಬಳಸುವುದುಂಟು.

ಹಿರಿಯ ಶ್ರೇಣಿಯವ : ಗೋಪಾಲ್ ಯಾಕೆ ಎರಡು ದಿವಸಾಯಿತು ಆಫೀಸಿಗೆ ಬಂದಿರಲಿಲ್ಲ

ಕಿರಿಯ ಶ್ರೇಣಿಯವ : ಸಾಹೇಬರೆ, ಮೈಯಲ್ಲಿ ಅರಾಮ ಇರಲಿಲ್ಲ

ಹಿರಿಯ ಶ್ರೇಣಿಯವ : ಆಸ್ಪತ್ರೆಗೆ ತೋರಿಸಿರಿ

ಕಿರಿಯ ಶ್ರೇಣಿಯವ : ಸಾಹೇಬರೆ, ನಿನ್ನೆ ತೋರಿಸಿದ್ದೇನೆ.

ಕಿರಿಯ ಶ್ರೇಣಿಯವರು ಹಿರಿಯ ಶ್ರೇಣಿಯವರನ್ನು ಸಾರ್, ಸಾಹೇಬ್ ಎಂದು ಕರೆಯುವುದುಂಟು. ಕರ್ನಾಟಕದ ಉತ್ತರ ಭಾಗದಲ್ಲಿ 'ಸಾಹೇಬ್' ರೂಪ ಹೆಚ್ಚಾಗಿ ಸರಕಾರಿ ಅಧಿಕಾರಿಗಳನ್ನು ಸಂಬೋಧಿಸಸುವಾಗ ಧಾರಾಳವಾಗಿ ಬಳಕೆಯಾಗುತ್ತದೆ. 'ಡಿ.ಸಿ. ಸಾಹೇಬರು', 'ವಿ.ಸಿ. ಸಾಹೇಬರು', 'ತಹಶೀಲದಾರ ಸಾಹೇಬರು' ಮುಂತಾದವರು. ಅಲ್ಲದೆ ರಾಜಕಾರಣಿಗಳನ್ನೂ ಡ್ರೈವರ್-ಕಂಡಕ್ಟರ್‌ಗಳನ್ನೂ ಸಂಬೋಧಿಸುವಾಗಲೂ ಬಳಕೆಯಾಗುತ್ತದೆ.

'ಎಂ.ಎಲ್.ಎ ಸಾಹೇಬರು, ಎಂ.ಪಿ. ಸಾಹೇಬರು'

'ಡ್ರೈವರ್ ಅಥವಾ ಕಂಡಕ್ಟರ್ ಸಾಹೇಬ್ರ ವೇಳೆ ಆಗೇತಿ ಗಾಡಿ ಬಿಡ್ರಿ'.

ಇದನ್ನು ಗಮನಿಸಿದಾಗ ಈ ಪದದ ಬಳಕೆಯಲ್ಲಿ ಸಾಮಾಜಿಕ ಬದ್ಧತೆ ಇದೆಯೆಂದು ಕಾಣುತ್ತದೆ. ಹಿರಿಯ ಶ್ರೇಣಿಯವರಲ್ಲಿ ಹೆಚ್ಚಾಗಿ ಪ್ರಶ್ನೆ, ಅಧಿಕಾರ ಚಲಾವಣೆ ಒಂದು ರೀತಿಯ ಗತ್ತು ಇದ್ದರೆ ಕಿರಿಯ ಶ್ರೇಣಿಯವರಲ್ಲಿ ವಿಧೇಯಕತೆ, ಸೌಮ್ಯತೆಯಿರುತ್ತದೆ. ಹಿರಿಯ ಶ್ರೇಣಿಯವರು ಕಿರಿಯ ಶ್ರೇಣಿಯವರನ್ನು ಸಂಬೋಧಿಸುವಾಗ ಏಕವಚನದ ಬಳಕೆ ಹೆಚ್ಚು, ಕಿರಿಯ ಶ್ರೇಣಿಯವರು ಹಿರಿಯ ಶ್ರೇಣಿಯವರನ್ನು ಸಂಬೋಧಿಸುವಾಗ ಬಹುವಚನದ ಬಳಕೆ ಹೆಚ್ಚು.

ಔಪಚಾರಿಕ ಸನ್ನಿವೇಶಗಳನ್ನು ಹೊರತು ಪಡಿಸಿ ಕುಟುಂಬ, ಮಾರುಕಟ್ಟೆ, ಬಸ್ ನಿಲ್ದಾಣ ಇಂತಹ ಅನೌಪಚಾರಿಕ ಸನ್ನಿವೇಶಗಳಲ್ಲಿ ಭಾಷೆ ಬಳಕೆಯಾಗುವಾಗ ಯಾವುದೇ ರೀತಿಯ ಕೃತಕತೆ ಇರುವುದಿಲ್ಲ ಇಲ್ಲಿ ಕಿರಿಯ ಶ್ರೇಣಿಯವರು ಹಿರಿಯ ಶ್ರೇಣಿಯವರನ್ನು ಏಕವಚನದಿಂದ ಸಂಬೋಧಿಸುವುದುಂಟು. 'ಮಾಮನಿ ಎಂ.ಎಲ್.ಎ ಇದ್ದಾಗ ಬಾಳ ಮೆರೆದ್; ಈಗ ಮೂಲಿ ಗುಂಪ್ ಆಗ್ಯಾನ್' (ರೂಢಿ).

ಕೂಲಿಕಾರರು ಭೂಮಾಲೀಕರನ್ನು 'ದಣಿ' 'ಸಾಹುಕಾರ' ಎಂದೂ ಭಕ್ತಾದಿಗಳು ಧರ್ಮಾಧಿಕಾರಿಗಳನ್ನು 'ಪೂಜ್ಯರು' 'ಸ್ವಾಮಿಜಿ' 'ಅಪ್ಪಾಗೋಳ್', 'ಅಜ್ಜಾಗೋಳ್' ಎಂದೂ ಸಂಬೋಧಿಸುವುದುಂಟು. ಔಪಚಾರಿಕ ಮತ್ತು ಅನೌಪಚಾರಿಕ ಸನ್ನಿವೇಶಗಳಿಗೆ ತಕ್ಕಂತೆ ಭಾಷಾ ಬಳಕೆ ಭಿನ್ನವಾಗಿರುವಂತೆ ಆ ಸಂದರ್ಭದಲ್ಲಿ ಆಯಾ ವ್ಯಕ್ತಿಗಳನ್ನು ಸಂಬೋಧಿ ಸುವಾಗ ಸಂಬೋಧನಾ ರೂಪಗಳು ಭಿನ್ನವಾಗಿರುತ್ತವೆ.

ವ್ಯಾಪಾರಿ-ಗಿರಾಕಿ

ಮಾರುಕಟ್ಟೆಯಲ್ಲಿ ಬಳಕೆಯಾಗುವಾಗ ಭಾಷೆಯ ರೀತಿಯನ್ನು ಗಮನಿಸಿದಾಗ ವ್ಯಾಪಾರಿಯ ಭಾಷೆಯಲ್ಲಿ ತುಂಬ ನಯಗಾರಿಕೆ ಇರುತ್ತದೆ. ಪ್ರೀತಿ, ಆತ್ಮೀಯತೆಯಿಂದ ಕೂಡಿದ ಪದಗಳನ್ನು ಬಳಸುವುದರಿಂದ ಗಿರಾಕಿಗಳಿಗೆ ಬಹಳ ಹತ್ತಿರವಾಗುತ್ತಾನೆ. ಅವನಿಗೆ ಅಂಗಡಿಯಲ್ಲಿಯ ಸಾಮಾನುಗಳು ಮಾರಾಟವಾಗುವುದು ಮುಖ್ಯ. ವ್ಯಾಪಾರಿ ಮತ್ತು ಗಿರಾಕಿಗಳ ಮಧ್ಯ ತಾತ್ಕಾಲಿಕ ಸಂಬಂಧವಿರುವುದರಿಂದ ಯಾವುದೇ ರೀತಿಯ ಸಾಮಾಜಿಕ ಬದ್ಧತೆ ಇರುವುದಿಲ್ಲ.

ವ್ಯಾಪಾರಸ್ಥರು ಸ್ತ್ರೀ ಗ್ರಾಹಕರನ್ನು ಸಂಬೋಧಿಸುವಾಗ ಅಮ್ಮಾರ, ಅಕ್ಕಾರ್, ಮೇಡಂ/ಟೀಚರ್/ಸಿಸ್ಟರ್‌ಎಂದು ಗೌರವಯುತವಾಗಿ ಸಂಬೋಧಿಸುವುದುಂಟು.

'ಅಮ್ಮಾರ್ ಹಳೆ ಅಕ್ಕಿ ಚೆನ್ನಾಗಿವೆ ೫೦ ಕೆ.ಜಿ ತಗೊಂಡ್ ಹೊಗ್ರಿ'
'ಅಕಸ್ಮಾತ್ ನಿಮಗ್ ಪಸಂದ್ ಬರದಿದ್ದರ್
ವಾಪಸ್ ತಗೋತಿವರಿ'.

ನೌಕರಸ್ಥ ಗಂಡಸರನ್ನು ಸಾರ್, ಸಾಹೇಬ್ ಎಂದು, ಭೂ ಮಾಲೀಕರನ್ನು ದಣಿ, ಸಾಹುಕಾರ ಎಂದು ಸಂಬೋಧಿಸುವುದುಂಟು,

ವ್ಯಾಪಾರಿ : 'ಬನ್ನಿ ಸಾರ್ ಕೂತಕೊಳ್ಳಿ
ತೊಗರಿ ಬೇಳೆ ಚೆನ್ನಾಗಿವೆ ಸಾರ್, ೫ ಕೆ.ಜಿ.
ತೆಗೆದುಕೊಳ್ಳಿರಿ'
ಸಾಹುಕಾರರೆ/ದಣಿ, ನಮ್ಮ ಅಂಗಡಿಗೆ ೧೦ ಚೀಲ
ಜ್ವಾಳಾ ಕೊಡಬೇಕು

ರುದ್ರಗೌಡ : ಊಹೂ, (ತಲೆದೂಗತ್ತ) ಈ ವರ್ಷ ನಮಗ್
ಸಾಲುದಿಲ್ಲ

ವ್ಯಾಪಾರಿ : ಸಾಹುಕಾರರೆ, ನಿಮ್ಮಂತವರು ಈ ರೀತಿ ಅಂದರೆ ಹೇಗೆ?

ವ್ಯಾಪಾರಿಗಳು ಪ್ರತಿ ಹಂತದಲ್ಲಿಯೂ ಗಿರಾಕಿಗಳ ಜೊತೆಗೆ ವಿಶ್ವಾಸಾರ್ಹ ರೀತಿಯಲ್ಲಿ ಮಾತನಾಡುತ್ತಾರೆ. ಆದರೆ ಗ್ರಾಮಾಂತರ ಪ್ರದೇಶದಲ್ಲಿ ಗಿರಾಕಿಗಳೇ ವ್ಯಾಪಾರಸ್ಥರನ್ನು ಗೌರವ ಸೂಚಕವಾಗಿ ಸಂಬೋಧಿಸುವುದುಂಟು.

ಗಿರಾಕಿ : ನಮಸ್ಕಾರ್, ಶೆಟ್ಟರೆ, ಕಲ್ಲೊಳ್ಳಿ ಬೆಲ್ ಬಂದಿದೆಯಾ
ಶೆಟ್ಟರೆ.

ವ್ಯಾಪಾರಿ : ಕಲ್ಲೊಳ್ಳಿ ಬೆಲ್ ಇನ್ನೂ ಬಂದಿಲ್ಲೊ ಕಲ್ಯಾ, ಬೆಳಗಾವಿ
ಬೆಲ್ ಬಂದಿದೆ, ಚಲೊ ಅತಿ ಒಂದ್ ಪೆಂಟಿ ಒಯ್
ಲೇ.

ಗ್ರಾಮಾಂತರ ಪ್ರದೇಶದಲ್ಲಿ ವ್ಯಾಪಾರಿಗಳು ಹಳ್ಳಿಯನ್ನು ನಿಯಂತ್ರಣದಲ್ಲಿಟ್ಟು ಕೊಂಡಿರುತ್ತಾರೆ ಎಂಬುದನ್ನು ಗಮನಿಸಬೇಕು. ಸಣ್ಣ ವ್ಯಾಪಾರಸ್ಥರು-ದೊಡ್ಡ ವ್ಯಾಪಾರಸ್ಥರನ್ನು ಸಾಹುಕಾರ/ದಣಿ ಎಂದು ಕರೆಯುವುದುಂಟು.

ಶಿಕ್ಷಕ-ವಿದ್ಯಾರ್ಥಿ

ಭಾರತೀಯ ಸಮಾಜವು ಪ್ರಾಚೀನ ಕಾಲದಿಂದಲೂ ಕೆಲವು ನೀತಿ-ನಿಯಮಗಳನ್ನು ಹಾಗೂ ತತ್ವಗಳನ್ನು ಪಾಲಿಸಿಕೊಂಡು ಬರುತ್ತಿದೆ. ಇದರಿಂದ ಜನರಲ್ಲಿ ಧರ್ಮ-ನೀತಿ, ಆಚಾರ-ವಿಚಾರಗಳನ್ನು ಮೈಗೂಡಿ ಕೊಂಡಿದೆ. ಸತ್ಯ, ಪ್ರಾಮಾಣಿಕತೆ ಆತ್ಮವಿಶ್ವಾಸ ಹಾಗೂ ಧಾರ್ಮಿಕ ಮನೋಭಾವನೆ ಅವರಲ್ಲಿ ಹೆಚ್ಚಿಸಿದೆ. ಅಹಿಂಸೆ, ಆಧ್ಯಾತ್ಮಿಕತೆಗೆ ವಿಶೇಷ ಮನ್ನಣೆ ನೀಡುವವರು ಹಾಗೂ ಸಮಾಜಕ್ಕೆ ಸೂಕ್ತ ಸಲಹೆ ಮಾರ್ಗದರ್ಶನ ನೀಡುವವರೆ ಶಿಕ್ಷಕರು. ಸಮಾಜದಲ್ಲಿ ಶಿಕ್ಷಕರ ಸ್ಥಾನ ಮಾನ ಉನ್ನತ ಮಟ್ಟದಾಗಿದೆ. ತರಗತಿಯಲ್ಲಿ ಶಿಕ್ಷಕ ಮತ್ತು ವಿದ್ಯಾರ್ಥಿಗಳ ಮಧ್ಯ ನಡೆಯುವ ಸಂಭಾಷಣೆಯಲ್ಲಿನ ಸಂಬೋಧನೆಗಳನ್ನು ಗಮನಿಸಿದಾಗ ಶಿಕ್ಷಕರು ವಿದ್ಯಾರ್ಥಿಗಳನ್ನು ಅವರ ಹೆಸರು ಅಥವಾ ಕುಲನಾಮಗಳನ್ನು ಬಳಸುವುದುಂಟು.

ಶಿಕ್ಷಕ : ಯಾಕಲೇ ಮಲ್ಯಾ ನಿನ್ನೆ ಶಾಲೆಗೆ ಏಕೆ ಬಂದಿರಲಿಲ್ಲ

ವಿದ್ಯಾರ್ಥಿ : ಗುರುಗಳೇ, ನಿನ್ನೆ ಹೊಲಕ್ಕೆ ಹೋಗಿದ್ದೆ

ಶಿಕ್ಷಕ : ಮಗನ್, ಹೊಲಕ್ಕೆ ಹೋದರೆ ಶಾಲೆಗೆ ನಿಮ್ಮ ಅಪ್ಪ ಬರ್ತಾನೆಯೆ? ಇನ್ನೊಮ್ಮೆ ಶಾಲಿ ತಪ್ಪಿಸ ಬೇಡ

ವಿದ್ಯಾರ್ಥಿ : ಆಗಲಿ ಗುರುಗಳೆ

ಶಿಕ್ಷಕ : ನಿನ್ನೆ ಗಣಿತ ವಿಷಯದ ಬಗೆಗೆ ಗೃಹ ಪಾಠ ಕೊಟ್ಟಿದ್ದೆ. ಯಾರು ಮಾಡಿಕೊಂಡು ಬಂದೀರಿ?

ವಿದ್ಯಾರ್ಥಿ : ಸರ್, ನಾನು ಮಾಡಿದ್ದೇನೆ

ಶಿಕ್ಷಕ : ರುದ್ರಾಪುರ್ಯಾ ನೀನು ಏಕೆ ಲೆಕ್ಕ ಮಾಡಿಲ್ಲ, ಮಗನ್ ಊರಾಗ ತಿರುಗಾಡುತ್ತೀಯಾ, ಕುಳಿತುಕೊಂಡು ಓದಬೇಕು.

ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶಿಕ್ಷಕರು ವಿಧ್ಯಾರ್ಥಿಗಳನ್ನು ಹೆಚ್ಚಾಗಿ ಏಕವಚನದಿಂದ ಸಂಬೋಧಿಸುವುದುಂಟು. ಆ ಹಂತದಲ್ಲಿ ವಿದ್ಯಾರ್ಥಿಗಳು ತುಂಬ ವಿನಯದಿಂದ ವರ್ತಿಸುತ್ತಾರೆ. ಪದವಿ ಮತ್ತು ಸ್ನಾತಕೋತ್ತರ ಹಂತದಲ್ಲಿ ವಿದ್ಯಾರ್ಥಿಗಳು ತುಂಬ ವಿನಯದಿಂದ ವರ್ತಿಸುತ್ತಾರೆ. ಪದವಿ ಮತ್ತು ಸ್ನಾತಕೋತ್ತರ ಹಂತದಲ್ಲಿ ವಿದ್ಯಾರ್ಥಿಗಳು ಪ್ರೌಢರಾಗಿರುವುದರಿಂದ ಗುರುಗಳು ತಮ್ಮ ವಿದ್ಯಾರ್ಥಿಗಳನ್ನು ಬಹುವಚನದಿಂದ ಸಂಬೋಧಿಸುತ್ತಾರೆ.

ಶಿಕ್ಷಕರು : ಬಿದರಿ ಅವರೇ, ಗಮಕ ಸಮಾಸದ ಬಗ್ಗೆ ಸಂಪ್ರಬಂಧ ಬರೆದಿದ್ದೀರಾ?

ವಿದ್ಯಾರ್ಥಿ : ಸರ್, ಬರೀತಾ ಇದ್ದೇನೆ ನಾಳೆ ಕೊಡುತ್ತೇನೆ

ಶಿಕ್ಷಕರು : ಬೇಗ ಕೊಡಿರಿ, ಕನ್ನಡ ಅಧ್ಯಯನದಲ್ಲಿ ಪ್ರಕಟಿಸೋಣ
ವಿದ್ಯಾರ್ಥಿ : ಆಯ್ತುಸರ್

ವಿದ್ಯಾರ್ಥಿಗಳು ತಮ್ಮ ಶಿಕ್ಷಕರನ್ನು 'ಗುರುಗಳು', 'ಅಧ್ಯಾಪಕ', 'ಉಪಾಧ್ಯಾಯ', 'ಸರ್', 'ಮಾಸ್ತರ್', 'ಮೇಷ್ಟ್ರು', 'ಓಜಯ್ಯ' ಎಂದು ಕರೆಯುವರು. ವಿದ್ಯಾರ್ಥಿಗಳಿಗೆ ತಮ್ಮ ಶಿಕ್ಷಕರ ಮೇಲೆ ಅಪಾರ ಗೌರವವಿರುವುದರಿಂದ ತಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಸ್ನೇಹಿತ, ತತ್ವಜ್ಞಾನಿ ಹಾಗೂ ಮಾರ್ಗದರ್ಶಕನಂತೆ ವರ್ತಿಸಬೇಕು. ಇದರಿಂದ ಮಕ್ಕಳ ಭವಿಷ್ಯವನ್ನು ರೂಪಿಸಲು ಹಾಗೂ ಸಮಾಜ ಒಪ್ಪುವಂತಹ ಆದರ್ಶ ಗುಣಗಳನ್ನು ಬೆಳೆಸಿಕೊಳ್ಳಲು ಅನುಕೂಲವಾಗಿದೆ.

ವೈದ್ಯ-ರೋಗಿ

ಆರೋಗ್ಯವು ಸಾಮಾಜಿಕ ಗುಣಧರ್ಮಗಳಿಗೆ ಮತ್ತು ಜೀವನದ ಸುಖ ಸಂತೋಷಕ್ಕೆ ಅಡಿಪಾಯವಾಗಿದೆ. ರೋಗ ತಲೆದೋರಿ ದೈಹಿಕ ಆರೋಗ್ಯಕ್ಕೆ ಭಂಗಉಂಟಾದಾಗ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯುತ್ತೇವೆ. ಆಗ ವೈದ್ಯರು ರೋಗಿಯನ್ನು, ರೋಗಿಯು ವೈದ್ಯರನ್ನು ಸಂಬೋಧಿಸುವಾಗ ಭಾಷಾ ಬಳಕೆಯು ಸ್ವಾರಸ್ಯಕರವಾಗಿರುತ್ತದೆ. ವೈದ್ಯರು ೧೫ ವರ್ಷಗಳಿಗಿಂತ ಕಡಮೆ ಇರುವ ಮಕ್ಕಳನ್ನು 'ಬೇಬಿ' 'ಅಮ್ಮಾ' 'ಪುಟಾ' ಎಂದು ಸಂಬೋಧಿಸುವುದುಂಟು.

ವೈದ್ಯ : 'ಏನಮ್ಮಾ ಅರಾಮ ಇಲ್ಲೇನು, ಅಳಬಾರದಮ್ಮಾ
ನಿನಗೆ ಚಾಕಲೇಟ್ ಕೊಡತೇನಿ ಪುಟಾ ಸುಮ್ಮ ಕೂಡ್ರ ಬೇಕು'

೧೫ ರಿಂದ ೨೦ ವರ್ಷದವರನ್ನು ' ಅಪಾ', 'ಅಮ್ಮಾ' ಎಂದು ಸಂಬೋಧಿಸುವುದುಂಟು.

ವೈದ್ಯ : ಏನಪಾ/ಏನಮ್ಮಾ ನಿನಗೆ ಏನು ಆಗಿದೆ?
ರೋಗಿ : ನಾಲ್ಕ ದಿವಸ್ ಆತ ಸಾಹೇಬರೆ, ಸುಸ್ತ ಆಗೇತಿ
ವೈದ್ಯ : ಏನ್ ಆಗಿಲ್ಲಮ್ಮ/ಆಗಿಲ್ಲಪಾ. ಇಂಜಕ್ಷನ್ ಮಾಡ್ತೆನಿ
ಆರಾಮ ಆಗುತ್ತದೆ.
ಅಮ್ಮಾ ಈ ಮಾತ್ರೆ ತೆಗೆದುಕೋ ಅರಾಮ ಆಗುತ್ತೆ.

೨೦ ವರ್ಷ ಮೇಲ್ಪಟ್ಟವರನ್ನು 'ರೀ' ಇಲ್ಲವೇ ಅವರ ಹೆಸರಿನ ಜೋತೆಗೆ 'ಅಣ್ಣಾ' 'ಕಾಕಾ' ಎಂಬ ಬಂಧುಸೂಚಕಗಳನ್ನು ಬಳಸಿ ಸಂಬೋಧಿಸುವುದುಂಟು.

ವೈದ್ಯ : ಮಾದೇವಪ್ಪಣ್ಣಾರ್ ನಿಮ್ಮ ಉಸಿರಾಟದ ತೊಂದರೆ ಈಗ
ಅರಾಮ ಆಗಿದೆಯೋ ಇಲ್ಲ ವೋ?
ರೋಗಿ : ಸಾಹೇಬರೆ, ಹೆಚ್ಚಾಗಿದೆ
ವೈದ್ಯ : ಹಾಗದರೆ ನಾಳೆ ಸ್ವಾಮಾರ್, ಬೆಳಗಾವಿ ಕೆ.ಎಲ್.ಇ
ದವಾಖಾನೆಗೆ ಹೋಗಿ ಬರೋಣ

ರೋಗಿ : ಆಗಲಿ ಸಾಹೇಬರೆ, ಅರಾಮ ಆದರೆ ಸಾಕು.

ನಗರ ಪ್ರದೇಶದಲ್ಲಿ ವೈದ್ಯರಿಗೆ ವಿದ್ಯಾವಂತರು ಸಾರ್ ಎಂದು ಸಂಬೋಧಿಸುವುದುಂಟು. ಗ್ರಾಮಾಂತರ ಪ್ರದೇಶದಲ್ಲಿ 'ಸಾಹೇಬ್' ಎಂಬ ರೂಪವೇ ಪ್ರಯೋಗದಲ್ಲಿದೆ ಡಾಕ್ಟರ್ ಸಾಹೇಬ್/ಡಾಕ್ಟರ್‌ಗೋಳ್ ಎಂಬ ರೂಪಗಳೂ ಬಳಕೆಯಲ್ಲಿವೆ. (ಹೆಚ್ಚಾಗಿ) ವೈದ್ಯರುಗಳು ರೋಗಿಗಳ ಜೊತೆಗೆ ಹಸನ್ಮುಖದಿಂದ ವರ್ತಿಸುತ್ತಾರೆ; ಮಾತನಾಡುತ್ತಾರೆ. ವೈದ್ಯರುಗಳು ಪ್ರೀತಿಯುಕ್ತ ಮಾತುಗಳೇ ರೋಗಿಗಳ ಅರ್ಧ ರೋಗವನ್ನು ನಿವಾರಿಸುತ್ತವೆ.

ವಿಟ-ವೇಶ್ಯೆ

ವೇಶ್ಯಾ ವೃತ್ತಿ ಒಂದು ಜಲ್ವಂತ ಸಾಮಾಜಿಕ ಸಮಸ್ಯೆ. ಹಣ ಇಲ್ಲವೇ ಇತರ ಸೌಲಭ್ಯ ಕೋಸ್ಕರ ಅಭ್ಯಾಸಬದ್ಧವಾಗಿ ಇಲ್ಲವೇ ಆಗಾಗ್ಗೆ ಲೈಂಗಿಕ ಸಂಬಂಧವನ್ನು ಹೊಂದುವವರು ವೇಶ್ಯೆಯರು. ಕಾಮತೃಷೆಗಾಗಿ ವೇಶ್ಯೆಯರ ಜೊತೆಗೆ ಸಂಬಂಧ ಹೊಂದುವವರು ವಿಟರು. ಭೋಗದ ಸಂದರ್ಭದಲ್ಲಿ ಇರ್ವರಿಗೂ ಲಜ್ಜೆ ಇರುವುದಿಲ್ಲ. ವಿಟ ವೇಶ್ಯೆಯನ್ನು ಉದ್ರೇಕಿಸಿ ಏಕವಚನದಲ್ಲಿ ಮಾತನಾಡುತ್ತಾನೆ. ವೇಶ್ಯಯರ ಹೆಸರಿನಿಂದಲೇ ಸಂಬೋಧಿಸುತ್ತಾನೆ. ಸರಸೂ, ಲಕ್ಷ್ಮಿ, ಮಾಲಾ ಮುಂತಾದವು. ಬಾರ್, ಬಾ, ಅಲ್ಲಿಯೇ ಬಾ, ದಾರಿಕಾಯತನ್ ಈರೂಪಗಳಲ್ಲದೆ ಕೈ ಸನ್ನೆ, ಸಂಕೇತ ಇಂತಹ ಅಶಾಬ್ದಿಕ ಸಂವಹನ ಇಲ್ಲಿ ಮಹತ್ವದ ಪಾತ್ರವಹಿಸುತ್ತದೆ.

ವಿಟ : ಎಷ್ಟು ಹೇಳು

ವೇಶ್ಯೆ : ನೂರು ರೂಪಾಯಿ

ವಿಟ : ಐವತ್ತು ಕೊಡ್ತೇನಿ

ವೇಶ್ಯೆ : ಬಾಬಾ, ಲವೂಟ್ ರೊಖ್ಖಾಕೊಡ

ವೇಶ್ಯೆ-ವಿಟವನ್ನು ಬಹುವಚನದಲ್ಲಿ ಸಂಬೋಧಿಸುವುದುಂಟು, (ಹೆಚ್ಚಾಗಿ) ಮಾವ ಎಂದು ಕರೆಯುತ್ತಾರೆ. ವೇಶ್ಯೆ ಮತ್ತು ವಿಟನ ಸಂಬಂಧ ತುಂಬ ತಾತ್ಕಾಲಿಕ, ಹಣ ಸಂಪಾದನೆ ಮತ್ತು ಕಾಮತೃಷೆ ಇಂಗಿಸುವುದು ಇಲ್ಲಿ ಮುಖ್ಯವಾಗಿರುತ್ತದೆ.

ಹಳ್ಳಿಗಳಲ್ಲಿ ಇಟ್ಟುಕೊಳ್ಳುವ ಪದ್ಧತಿ ಇದೆ. ಶ್ರೀಮಂತರು ಪರಸ್ತ್ರೀಯರ ಜೊತೆಗೆ ಅನಧಿಕೃತವಾಗಿ ಸಂಬಂಧ ಹೊಂದಿರುತ್ತಾರೆ (ಉಪಪತ್ನಿ). ಅವರಿಗೆ ಸಾಮಾಜಿಕ ಮನ್ನಣೆ ಇದೆ. ಅದು ಪ್ರತಿಷ್ಠೆ ಅಂಶವೂ ಆಗಿದೆ. ಪರಸ್ಪರರಲ್ಲಿ ಪ್ರೀತಿ ಹೆಪ್ಪುಗಟ್ಟಿರುತ್ತದೆ. ಗೆಣೆಯ ತಿರಿಗೊಂಡಾಗ ಉಪಪತ್ನಿ ಅವನನ್ನು ನೆನೆನೆಸಿ ಅಳುತ್ತಾಳೆ.

ಗೆಣೆಯ ಬಿಟ್ಟರು ಕೂಡ ಗೆಣೆಯನಾಡಿದ ಆಟ
ಮನದಾಗ ಊರಿ ನಿಂತ್ಹಾಂಗ| ಆ ಹುಡುಗಿ
ಚಂಚಣಕ ನೆನೆಸಿ ಅಂತಾಳ||

ಎಂಬ ಮಾತು ಹಳ್ಳಿಗರಲ್ಲಿ ಈಗಲೂ ರೂಢಿಯಲ್ಲಿದೆ.

ಹೀಗೆ ಭಾಷಾಸಮುದಾಯದಲ್ಲಿ ಸಾಮಾಜಿಕ ಸಂಬಂಧಗಳು ವಿಭಿನ್ನತೆಯಿಂದ ಕೂಡಿದ್ದರೂ ಸಾಮಾಜಿಕ ಸ್ಥಿರತೆಗೆ ಧಕ್ಕೆಯನ್ನುಂಟು ಮಾಡುವುದಿಲ್ಲ. ಔಪಚಾರಿಕ ಮತ್ತು ಅನೌಪಚಾರಿಕ ಸಂದರ್ಭಗಳಲ್ಲಿಯ ಭಾಷಾಬಳಕೆಯನ್ನು ತುಲನಾತ್ಮಕವಾಗಿ ಅಧ್ಯಯನ ಮಾಡುವುದರಿಂದ ಭಾಷಾಸಮುದಾಯಗಳ ಸಾಮಾಜಿಕ ವ್ಯವಸ್ಥೆಯನ್ನು ತಿಳಿಯ ಬಹುದಾಗಿದೆ.

ಕೊನೆಟಿಪ್ಪಣಿಗಳು

ಭಾಷಾ ಬಳಕೆ : ಔಪಚಾರಿಕ ಮತ್ತು ಅನೌಪಚಾರಿಕ ಸಂದರ್ಭ(ಸಾಮ್ಯ ವೈಷಮ್ಯಗಳು)

ಔಪಚಾರಿಕ	ಅನೌಪಚಾರಿಕ
೧. ನಿರ್ದಿಷ್ಟ ಕಾರ್ಯ ವಿಧಾನದ ವ್ಯಾಪ್ತಿಯುಂಟು	೧. ಉದ್ದೇಶ ರಹಿತ ಕಾರ್ಯ ವಿಧಾನದ ವ್ಯಾಪ್ತಿ ಉಂಟು
೨. ನಿಯಮಿತವಾದ ಸ್ಥಳ, ವೇಳೆ ಹಾಗೂ ಸಂಕಥನ ಇರುತ್ತದೆ	೨. ಸ್ಥಳ, ವೇಳೆ ಹಾಗೂ ಸಂಕಥನದ ವ್ಯವಸ್ಥೆ ಇಲ್ಲ
೩. ಭಾಷಿಕರ ನಡುವೆ ಪ್ರಾಥಮಿಕ ಸಂಬಂಧವುಂಟು	೩. ಭಾಷಿಕರ ನಡುವೆ ಪ್ರಾಥಮಿಕ ಸಂಬಂಧ ಸಂಬಂಧ ಇರುವುದಿಲ್ಲ
೪. ಭಾಷಾ ಬಳಕೆ ನಿಯಮಿತವೂ	೪. ಭಾಷಾ ಬಳಕೆಯಲ್ಲಿ ಸಹಜತೆ ಉದ್ದೇಶರಹಿತವೂ ಅರ್ಥಇರುತ್ತದೆ. ಪೂರ್ಣವೂ ಆಗಿರುತ್ತದೆ.
೫. ವಿದ್ಯಾಸಂಸ್ಥೆ, ಕುಟುಂಬ, ಧಾರ್ಮಿಕ ಸಂಸ್ಥೆಗಳಲ್ಲಿ ಭಾಷೆ ಔಪಚಾರಿಕ ವಾಗಿ ಬಳಕೆಯಾಗುತ್ತದೆ.	೫. ಬಸ್ ನಿಲ್ದಾಣ, ಪೇಟೆ, ಮದುವೆ ಮುಂತಾದ ಸನ್ನಿವೇಶಗಳಲ್ಲಿ ಭಾಷೆ ಅನೌಪಚಾರಿಕವಾಗಿ ಬಳಕೆಯಾಗುತ್ತದೆ.

ಆಕರಗ್ರಂಥಗಳು

ಕನ್ನಡ

ಚಿದಾನಂದಮೂರ್ತಿ ಎಂ., ೧೯೮೧, 'ಕರ್ನಾಟಕ ವ್ಯಕ್ತಿನಾಮಗಳು', ವಾಗರ್ಥ, ಬಾಪ್ಕೊ ಪ್ರಕಾಶನ, ಬೆಂಗಳೂರು

ಚಿದಾನಂದಮೂರ್ತಿ ಎಂ., ೧೯೯೩, 'ಅಬ್ಬೆಯೆಂದತ್ತಿಗೆಯೆಂಬ ಮಾತನ್', ಹೊಸತು ಹೊಸತು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಿದಾನಂದಮೂರ್ತಿ ಎಂ., ೧೯೯೮, 'ವಚನಕಾರರ ಕಳು ಬಳ್ಳಿ ಪರಿಕಲ್ಪನೆ', ವಚನ ಶೋಧ-೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಜೋಗನ್ ಶಂಕರ., ೧೯೯೫, ಗ್ರಾಮಸಮಾಜ, ಜೀವ ಪ್ರಕಾಶನ, ಮೈಸೂರು.

ನಾರಾಯಣ ಕೆ.ವಿ, ಮತ್ತು ಇತರರು, ೨೦೦೦, 'ಭಾಷೆ' ವಿಶ್ವಕೋಶ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪಾಂಡುರಂಗ ಬಾಬು ಡಿ., ೧೯೯೮, ‘ಣೇ ಮೀ ಲೇ’, ಕನ್ನಡ ಅಧ್ಯಯನ ಸಂ-೫, ಸಂ-೧, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪೀಟರ್ ಜೆ. ಕ್ಲಾಸ್, ೧೯೮೭, ‘ತುಳುವ ದರ್ಶನ’, ಕನ್ನಡಕ್ಕೆ : ಎ.ವಿ.ನಾವಡ ಮತ್ತು ಸುಭಾಶ್ಚಂದ್ರ, ಪ್ರಾದೇಶಿಕ ವ್ಯಾಸಂಗ, ಕುಂದಾಪುರ

ಮಹಾದೇವಯ್ಯ ಪಿ., ೨೦೦೧, ‘ಕನ್ನಡದಲ್ಲಿ ಬಂಧುಸೂಚಕ ಪದಗಳು’, ನಮ್ಮ ಕನ್ನಡ, ಸಂಚಿಕೆ ೫೦, (ಸಂ) ಕೆ.ವಿ.ನಾರಾಯಣ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಶ್ರೀಕಂಠಯ್ಯ ತೀ.ನಂ., ೧೯೮೩, (ತೃ.ಆ) ‘ಏನಿ ಗಡಿಂ ರೀ’, ಸಮಾಲೋಕನ, ಶಾರದಾ ಮಂದಿರ, ಮೈಸೂರು.

ಸೇಡಿಯಾಪು ಕೃಷ್ಣಭಟ್., ೧೯೯೨, ‘ಅತ್ತಿಗೆ’, ವಿಚಾರ ಪ್ರಪಂಚ, ಕರ್ನಾಟಕ ಸಂಘ ಪುತ್ತೂರು

ಸೋಮಶೇಖರಗೌಡ, ೨೦೦೦, ‘ಭಾಷೆ ರಚನೆ ಬಳಕೆ’, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು

ಇಂಗ್ಲಿಶ್

Balasubramanian G., 1999, ‘Language and power in the rural context of Tamil Nadu’ Indian Linguistics Volume 601-4

Brown Roger W and Margurete Ford., 1966, ‘Address in American English’ Dell Hymes Education Language in culture and Society [Horper & Row, New York]

Jampt Holmes., 1992 An Introducation To Socio linguistics Longman-London NewYork

Joseph N., 1980, Cultural Impacts in Kinship Terms sociolinguistics and Dialectology (Edit) S.Ages sthlalingom & K.Karunakaran, Annamaki University

Firth J.R., 1966, On Sociological Linguistics in languge in culture and society

Manuel M., 1981, ‘Some Unique Kinship terms current in a dialect of KanyKumari District’ IJDL-Vol-x

Misra K.S., 1977, ‘Terms of Address and second person pronominal us age in Hindi’ A Sociolinguistic study Bahri publication Pvt. Ltd.

Peter Trudgill., 1974, ‘Sociolinguistic An Introduction’ Penguin books Ltd.

Sharma D.D., 1985, ‘Kinship terms of reference in Kumauni’ (A Socio linguistic Appraisal) IJDL-XIV

Surya Kumari., 1986 'A Sociolinguistic study of Names and Address system in Telugu' IJDL 15:2

Sreedhar M.V., 1980 Correlation Between Marriage practices and Kinship Terms in some Dravidian Language 'Sociolinguistics and Dialectology' Ed- S.Agesthialingom K.KarunaKarna, Annamalai University, Annamalai nagar

೮೨

ವಚನಸಾಹಿತ್ಯ : ಬಂಧುಸೂಚಕಗಳು

೧

ಭಾಷಾ ಸಮುದಾಯದಲ್ಲಿ ಭಾಷಿಕರು ಹಲವು ಬಗೆಯ ಸಾಮಾಜಿಕ ಸಂಬಂಧಗಳಿಂದ ಹೆಣೆದುಕೊಂಡಿರುತ್ತಾರೆ. ಅಂತಹ ಸಂಬಂಧಗಳಲ್ಲಿ ಬಂಧುತ್ವವು [illegible] ಪಾತ್ರವಹಿಸುತ್ತದೆ. ಇಂಗ್ಲಿಶಿನ 'Kinship' ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ಬಂಧುತ್ವ' ಪದ ಬಳಕೆಯಲ್ಲಿದೆ. ಅದರರ್ಥ ಕಳ್ಳುಬಳ್ಳಿ, ನೆಂಟರು ಇತ್ಯಾದಿ. ವ್ಯಕ್ತಿಯು ಸಮಾಜಜೀವಿ. ಬಂಧು ಬಳಗವನ್ನು ತೊರೆದು ಒಂಟಿ ಜೀವನ ನಡೆಸಲು ಸಾಧ್ಯವಿಲ್ಲ. ಬಂಧುತ್ವವು ವ್ಯಕ್ತಿಗಳಿಗೆ ಊರುಗೋಲಿದಂತೆ. 'ಒಂಟಿಬಾಳು ಬಾಳೆ'? ಎಂಬ ಗಾದೆಯನ್ನು ನೆನೆಪಿಸಿಕೊಳ್ಳಬಹುದು. ಜೀವನದ ಅವಶ್ಯಕತೆಗಳ್ನು ಪೂರೈಸಬೇಕಾದರೆ ವ್ಯಕ್ತಿ ಇತರರ ಮೇಲೆ ಅವಲಂಬಿಸಬೇಕಾಗುತ್ತದೆ. ಬಂಧುತ್ವ ಹುಟ್ಟಿನಿಂದಲೇ ಬರುವುದು. ಪಾಲಕರ, ಪೋಷಕರ ಸಂಪರ್ಕದಿಂದ ಅದು ವೃದ್ಧಿಯಾಗುವುದು. ಕುಟುಂಬದ ಮೂಲಉದ್ದೇಶ ಸಂತಾನೋತ್ಪತ್ತಿಯ ಕಾರ್ಯ ಮಾತ್ರವಾಗಿರದೆ ಬಂಧುತ್ವವನ್ನು ಗೊತ್ತು ಪಡಿಸುವುದೂ ಆಗಿದೆ. ಬಂಧುತ್ವವೂ ವಯಸ್ಸು, ಲಿಂಗ, ಜಾತಿ ಹಾಗೂ ಸಾಮಾಜಿಕ ವರ್ಗಗಳನ್ನು ಅವಲಂಬಿಸಿರುತ್ತದೆ. ವ್ಯಕ್ತಿಯ ವೈವಾಹಿಕ ಸಂಬಂಧವು ಕ್ರಮೇಣ ಸಾಮಾಜಿಕ ಬಂಧುತ್ವದೊಡನೆ ಸಮೀಕರಣಗೊಳ್ಳುತ್ತದೆ.

ಬಂಧುತ್ವ ಸೂಚಕಗಳು ಭಾಷಿಕ ರಚನೆಗಳು. ಸಾಮಾಜಿಕ ಭಾಷಾವಿಜ್ಞಾನಿಗಳು ಹೆಸರುಗಳನ್ನು ಸ್ಥಳನಾಮಗಳು ಮತ್ತು ವ್ಯಕ್ತಿನಾಮಗಳೆಂದು ವಿಂಗಡಿಸುತ್ತಾರೆ. ವ್ಯಕ್ತಿನಾಮಗಳನ್ನು ವ್ಯಕ್ತಿನಾಮ, ಕುಲನಾಮ ಮತ್ತು ಸಂಬಂಧ ವಾಚಕಗಳೆಂದು [illegible] ವರ್ಗೀಕರಿಸುತ್ತಾರೆ. ವ್ಯಕ್ತಿನಾಮಗಳ ಕಕ್ಷೆಯಲ್ಲಿ ಬರುವ ಸಂಬಂಧ ವಾಚಕಗಳ ಸಂಖ್ಯೆ ಸೀಮಿತವಾಗಿದ್ದರೂ ಅವುಗಳ ಸಾಮಾಜಿಕ ಅರ್ಥಛಾಯೆ, ಸಾಂಸ್ಕೃತಿಕ [illegible] ವೈವಿಧ್ಯಮಯವಾಗಿದೆ. ಬಂಧುವಾಚಕಗಳ ಬಳಕೆಯಲ್ಲಿ ಭಾಷಿಕರ ವಯಸ್ಸು, ಹಾಗೂ [illegible]

ಹಾಗೂ ಅವರ ಕೌಟುಂಬಿಕ ಮತ್ತು ಸಾಮಾಜಿಕ ಪರಂಪರೆ ಅಡಗಿರುತ್ತದೆ. ಹೀಗಾಗಿ ಬಂಧುವಾಚಕಗಳು ಸಂಸ್ಕೃತಿ ಅಧ್ಯಯನಕ್ಕೆ ಮೌಲಿಕ ಆಕರಗಳಾಗುತ್ತವೆ.

ಬಂಧುವಾಚಕಗಳ ಜೈವಿಕ ಹಾಗೂ ರಾಚನಿಕ ಸ್ವರೂಪವನ್ನು ಅನುಲಕ್ಷಿಸಿ ಮೂರು ರೀತಿಯಾಗಿ ವರ್ಗೀಕರಿಸಬಹುದು.

೧ ಅ. ರಕ್ತ ಸಂಬಂಧ
ಆ. ಇತರ ಸಂಬಂಧ
೨. ಅ. ಪ್ರಾಥಮಿಕ ಸಂಬಂಧ
ಆ. ಅನುಷಂಗಿಕ ಸಂಬಂಧ
೩. ಅ. ಮೂಲರೂಪಗಳು
ಆ. ಸಾಧಿತ ರೂಪಗಳು

ಬಂಧುತ್ವವನ್ನು ತಂದೆ-ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿ ಇವರ ಮೂಲಕ ವಂಶವನ್ನು ನಿರ್ಧರಿಸಿದರೆ ಅದು ರಕ್ತ ಸಂಬಂಧ. ಉದಾ. ಚಿಕ್ಕಪ್ಪ ತಂದೆಗಿಂತ ಚಿಕ್ಕವ, ಚಿಕ್ಕಮ್ಮ ತಾಯಿಗಿಂತ ಚಿಕ್ಕವಳು ಮುಂತಾದುವು. ಇವುಗಳಿಗೆ 'ಕಳ್ಳುಬಳ್ಳಿ' ಎಂದು ಕರೆಯುವರು. ಇವುಗಳನ್ನು ಹೊರತುಪಡಿಸಿ ಸ್ನೇಹ ಸಂಬಂಧ, ಗುರು ಶಿಷ್ಯರ ಸಂಬಂಧ, ನಾಡಿನ ಬಗೆಗಿರುವ ಸಂಬಂಧ ಅದರಂತೆ ವೃತ್ತಿಯ ಬಗೆಗೆ, ವಿದ್ಯಾಸಂಸ್ಥೆಯ ಬಗೆಗಿರುವ ಸಂಬಂಧ ಇವು 'ಇತರ ಸಂಬಂಧ'ಗಳ ವರ್ಗದಲ್ಲಿ ಸಮಾವೇಶಗೊಳುತ್ತವೆ. ತಂದೆ-ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿ ಇವು ನೇರ ರಕ್ತ ಸಂಬಂಧಕ್ಕೆ ಸಂಬಂಧಿಸಿರುವುದರಿಂದ ಇವುಗಳಿಗೆ 'ಪ್ರಾಥಮಿಕ ಸಂಬಂಧ ವಾಚಕ'ಗಳೆಂದು ಕರೆಯುವರು. ಅತ್ತೆ-ಮಾವ-ಅಳಿಯ, ಭಾವ-ಮೈದುನ, ಚಿಕ್ಕಪ್ಪ-ಚಿಕ್ಕಮ್ಮ, ನಾದಿನಿ-ನೆಗೆವೆಣ್ಣೆ (ಓರೆಗಿತ್ತಿ) ಇಂತಹ ಬಂಧು ಸೂಚಕಗಳು ವಿವಾಹದಿಂದ ಇಲ್ಲವೇ ಆಪ್ತತೆಯಿಂದ ಸೃಷ್ಟಿಯಾಗುತ್ತವೆ. ಇವುಗಳಿಗೆ 'ಅನುಷಂಗಿಕ ಸಂಬಂಧವಾಚಕ'ಗಳೆಂದು ಕರೆಯುವರು.

ಕನ್ನಡ ಬಂಧುವಾಚಕಗಳ ರಚನೆಯನ್ನಾಧರಿಸಿ ಹೇಳುವುದಾದರೆ ಅವು ನಾಮಪದ ಮತ್ತು ಗುಣವಾಚಕಗಳ ಕಕ್ಷೆಯಲ್ಲಿ ಬರುತ್ತವೆ. ಅವುಗಳನ್ನು ಮೂಲರೂಪ ಮತ್ತು ಸಾಧಿತ ರೂಪಗಳೆಂದು ವಿಂಗಡಿಸಲಾಗಿದೆ. ಅರ್ಥವತ್ತಾದ ಸ್ವತಂತ್ರ ಪದಗಳೇ ಮೂಲರೂಪಗಳಾಗಿವೆ. ಅವ್ವ, ಅಪ್ಪ, ಮಾವ, ಅಣ್ಣ-ತಂಗಿ ಮುಂತಾದವು. ಇವುಗಳಲ್ಲಿ ಧ್ವನಿಗಳ ಸುಸಂಬದ್ಧವಾದ ಜೋಡಣೆ ಇರುವುದರಿಂದ ಅವು ಅರ್ಥವತ್ತಾದ ಕನಿಷ್ಠ ತಮ ರೂಪಗಳಾಗಿವೆ. ಅದರಂತೆ ಎರಡು ಮೂಲರೂಪಗಳ ಮಧ್ಯೆ ಯಾವುದೇ ಭಾಷಾ ಘಟಕವನ್ನು ಸೇರಿಸಲು ಸಾಧ್ಯವಿಲ್ಲದಂತಹ ರಚನೆಗಳು ಸಾಧಿತ ರೂಪಗಳಾಗುತ್ತವೆ. ಉದಾ. ದೊಡ್ಡಪ್ಪ, ಚಿಕ್ಕಪ್ಪ, ದೊಡ್ಡಮ್ಮ, ಚಿಕ್ಕಮ್ಮ. ಇವುಗಳ ಆಂತರಿಕ ಬೆಳವಣಿಗೆ ಸಾಧ್ಯವಿಲ್ಲ. ಸಾಧಿತ ರೂಪಗಳ ಆಂತರಿಕ ರಚನೆಯನ್ನು ಅವುಗಳ ಅಂಗಗಳಿಂದ ಅದರ ಅರ್ಥವನ್ನು ಹೇಳಬಹುದು. ಉದಾ.

‘ಚಿಕ್ಕಮ್ಮ’, ಚಿಕ್ಕ+ಅಮ್ಮ ಈ ಅಂಗಗಳಿಂದ ತಾಯಿಗಿಂತ ಚಿಕ್ಕವಳಾದವಳು; ಚಿಕ್ಕಪ್ಪನ ಹೆಂಡತಿ. ಇವಲ್ಲದೆ ಇಂತಹ ಬೇರೆ ಬೇರೆ ಕೆಲವು ಸಂದರ್ಭಗಳನ್ನು ಗುರುತಿಸುತ್ತಾರೆ. ಇಂತಹ ಸಂಬಂಧಗಳಿರುವ ಗುಣಧರ್ಮಗಳ ಆಧಾರದ ಮೇಲೆ ‘ಚಿಕ್ಕಮ್ಮ’ ಎಂಬ ಪದಕ್ಕೆ ಅರ್ಥ ಹೇಳಲು ಸಾಧ್ಯ. ಚಿಕ್ಕಮ್ಮ ಎಂಬುದಕ್ಕೆ ಅಮ್ಮನಿಗಿಂತ ಚಿಕ್ಕ ಹೆಂಗಸು ಎಂದರೆ ಅಮ್ಮನ ತಂಗಿ ಎಂಬರ್ಥವಿದೆಯಲ್ಲದೆ ಇತರ ಅಮ್ಮಂದಿರರಿಗಿಂತ ಚಿಕ್ಕವಳಾಗಿರುವ ಅಮ್ಮ ಎಂಬರ್ಥವಲ್ಲ. ಅಮ್ಮನಿಗಿಂತ ಚಿಕ್ಕ ಹೆಂಗಸು>ಚಿಕ್ಕಮ್ಮ. ಇಲ್ಲಿಯ ಸಮಸ್ತ ಪದದ ಅರ್ಥ ‘ತಂಗಿ’ ಅದು ಸಮಸ್ತ ಪದದ ಹೊರಗಡೆ ಇದೆ. ಇದರಂತೆ ದೊಡ್ಡಪ್ಪ (ಅಣ್ಣ), ದೊಡ್ಡಮ್ಮ (ಅಕ್ಕ), ಚಿಕ್ಕಪ್ಪ (ತಮ್ಮ) ಮುಂತಾದುವನ್ನು ಮೇಲಿನಂತೆಯೇ ಪರಿಭಾವಿಸಬಹುದು. ಬಂಧುವಾಚಕಗಳ ರಚನೆಯ ಅಧ್ಯಯನವು ಆಕೃತಿಮಾ ಶಾಸ್ತ್ರದ ಕಕ್ಷೆಯಲ್ಲಿ ಬರುತ್ತದೆ.

ಭಾಷಾ ಸಮುದಾಯಗಳಲ್ಲಿ ಭಾಷಿಕರನ್ನು ಒಗ್ಗೂಡಿಸುವ ಪ್ರಾಥಮಿಕ ಬಂಧನವೇ ಬಂಧುತ್ವವಾಗಿರುವುದರಿಂದ ಅಲ್ಲಿ ಸಾಮಾಜಿಕ ಮನ್ನಣೆ ಬಹುಮುಖ್ಯವಾದುದಾಗಿದೆ. ಬಂಧುವಾಚಕಗಳು ಭಾಷಿಕರು ನಿರ್ವಹಿಸುವ ಸಾಮಾಜಿಕ ಕಾರ್ಯವನ್ನು ನಿರ್ಧರಿಸುತ್ತವೆ. ಬಂಧುಗಳ ಮಧ್ಯ ಉದ್ಭವಿಸುವ ಘರ್ಷಣೆಯನ್ನು ನಿಯಂತ್ರಿಸುವ ಸಾಧನವಾಗಿ ಕುಟುಂಬ ಹಾಗೂ ಸಮಾಜ ಜೀವನದ ನೆಮ್ಮದಿಯ ಬಾಳ್ವೆಗೆ ಸಹಕರಿಸುತ್ತವೆಯಲ್ಲದೆ ಸಾಮಾಜಿಕ ಸಂಬಂಧವನ್ನೂ ಬೆಸೆಯುತ್ತವೆ. ಭಾಷಾಸಮುದಾಯಗಳಲ್ಲಿ ಸಾಂಸ್ಕೃತಿಕ ಹಿತ ಸಂಬಂಧವನ್ನುಂಟು ಮಾಡುವಲ್ಲಿ ಬಂಧುವಾಚಕಗಳು ಮಹತ್ವದ ಪಾತ್ರವಹಿಸುತ್ತವೆ. ಈ ಹಿನ್ನೆಲೆಯಲ್ಲಿ ವಚನಕಾರರು ಬಳಸಿದ ಬಂಧುವಾಚಕಗಳ ಸಾಮಾಜಿಕ ನೆಲೆಯನ್ನು ಪರಿಭಾವಿಸಬೇಕಾಗಿದೆ.

೨

ವಚನ ಸಾಹಿತ್ಯದಲ್ಲಿ ಬಳಕೆಯಾಗುವ ಬಂಧುಸೂಚಕಗಳು ಕೇವಲ ಕುಟುಂಬ ಕೇಂದ್ರೀತವಾಗಿಲ್ಲ. ಅವುಗಳಲ್ಲಿ ಹಲವು ರೀತಿಯ ಆತ್ಮೀಯ ಮತ್ತು ಪ್ರೀತಿಯ ಭಾವನೆಗಳು ತುಂಬಿಕೊಂಡಿರುತ್ತವೆ. ವಚನಗಳಲ್ಲಿ ಬಳಕೆಯಾಗುವ ಬಂಧುಸೂಚಕಗಳ ಅಧ್ಯಯನವು ವಚನಾಧ್ಯಯನದ ಸಾಮಾಜಿಕ ಆಯಾಮವನ್ನು ಎತ್ತಿತೋರಿಸುತ್ತವೆ. ವಚನಕಾರರ ಹೆಸರಿನ ಅಂತ್ಯಭಾಗಗಳು ತುಂಬ ಗಮನಾರ್ಹವಾಗಿವೆ.

- ಬಸವಣ್ಣ
- ಅಕ್ಕಮಹಾದೇವಿ/ಮಹಾದೇವಿಯಕ್ಕ
- ಅಕ್ಕನಾಗಮ್ಮ
- ಮಾರಿತಂದೆ/ಮಾಚಿತಂದೆ
- ಚೆನ್ನಬಸವಣ್ಣ

ಇಲ್ಲಿ ಬಳಕೆಯಾದ ಉತ್ತರರೂಪಗಳು ಸಮಾಜೋ-ಭಾಷಿಕವಾಗಿ ಮುಖ್ಯವಾಗಿವೆ. ಅಣ್ಣ, ಅಕ್ಕ, ತಂದೆ ಈ ಭಾಗಗಳು ಜನ ಪ್ರೀತಿಯಿಂದ ಸೇರಿಸಿದ ಭಾಗಗಳಾಗಿವೆ. ಉದಾ. ಅಕ್ಕಮಹಾದೇವಿಗೆ ತಂದೆ ತಾಯಿಗಳು ಇಟ್ಟ ಹೆಸರು 'ಮಹಾದೇವಿ' ಮಾತ್ರ. ಜನತೆ ಅವಳನ್ನು ಅಕ್ಕಮಹಾದೇವಿ/ಮಹಾದೇವಿಯಕ್ಕ ಎಂದು ಪ್ರೀತಿಯಿಂದ ಕರೆದರು.

ವಚನ ಚಳುವಳಿಯ ಮುಖ್ಯಉದ್ದೇಶ ಸಾಮಾಜಿಕ ಎಚ್ಚರವಾಗಿತ್ತು. ಶರಣರು ತಮ್ಮ ಸಮಕಾಲೀನರ ಬಗ್ಗೆ ಅಣ್ಣ, ಅಕ್ಕ, ತಂದೆ ಹೀಗೆ ಪ್ರೀತಿ ಗೌರವಗಳಿಂದ ಸಂಬೋಧಿಸಿ ಆದರ ವ್ಯಕ್ತಪಡಿಸಿದರು. ಘಟ್ಟಿವಾಳಯ್ಯನು ಒಂದು ವಚನದಲ್ಲಿ ಶರಣರ ಬಂಧು ಬಳಗದಲ್ಲಿ ಒಡಹುಟ್ಟಿದ 'ಶಕ್ತಿ' ತತ್ತ್ವವನ್ನು ಒಬ್ಬೊಬ್ಬ ಶಿವಶರಣರಿಗೆ ಹೊಂದಿಸುವಾಗ ಕೌಟುಂಬಿಕ ಪದಗಳ ಹೇರಳವಾದ ಪ್ರಯೋಗವಿರುವುದನ್ನು ಈ ಕೆಳಗಿನ ವಚನದಲ್ಲಿ ಮನಗಾಣಬಹುದು.

ಅವ್ವ ನೀಲವ್ವನ ಮೋಹದ ಮಗಳೆ
ಅಪ್ಪ ಬಸವಣ್ಣನ ಸುಚಿತ್ತದ ಪುತ್ರಿಯೆ
ನಿಷ್ಕಳಂಕ ಸದ್ಗುರು ಪ್ರಭುದೇವರ ಸತ್ಯದ ಸೊಸೆಯೆ
ಅಣ್ಣ ಮಡಿವಾಳಪ್ಪನ ಭಾವ, ಚೆನ್ನಮಲ್ಲಿಕಾರ್ಜುನನರ್ಧಾಂಗಿಯೆ
ಚಿಕ್ಕಯ್ಯ ಪ್ರಿಯ ಸಿದ್ಧಲಿಂಗನೊಡ ಹುಟ್ಟಿದವಳೆ ಎನ್ನಕ್ಕ ಮಹಾದೇವಿ
ಕೇಳವ್ವ ಮರ್ತ್ಯದ ಜಡಜೀವಿ ಭ್ರಷ್ಟರ ಬಾಳಿವೆ ಎಂದೆ

- ಘಟ್ಟಿವಾಳಯ್ಯ

ಕಿನ್ನರಿಬೊಮ್ಮಯ್ಯ ಅಕ್ಕಮಹಾದೇವಿಯನ್ನು ಕೈಹಿಡಿಯಲು ಹವಣಿಸುತ್ತಾನೆ. ನಂತರ ಅವನಿಗೆ ಅವಳ ಶುಭ್ರ ವ್ಯಕ್ತಿತ್ವ ಅರಿವಿಗೆ ಬಂದು ತೀವ್ರ ಪಶ್ಚಾತ್ತಾಪ ಪಡುತ್ತಾನೆ: ಶೋಕಿಸುತ್ತಾನೆ. ಅದನ್ನು ಕಂಡ ಮಹಾದೇವಿಯಕ್ಕ ಅವನನ್ನು ಸಮಾಧಾನ ಪಡಿಸುತ್ತಾಳೆ.

ಎಲೆ ಅಣ್ಣಾ ಅಣ್ಣಾ, ನೀವು ಮರುಳಲ್ಲಾ ಅಣ್ಣಾ
ಎನ್ನ ನಿನ್ನ ಅಳವೆ?
ಹದಿನಾಲ್ಕು ಲೋಕವ ನುಂಗಿದ ಕಾಮನ ಬಾಣದ ಗುಣ
ಎನ್ನ ನಿನ್ನ ಅಳವೆ?
ವಾರುವ ಮುಗ್ಗಿದೊಡೆ ಮಿಡಿ ಹರಿಯ ಹೊಯ್ವರೆ?
ಮುಗ್ಗಿದ ಭಂಗವ ಮುಂದೆ ರಣದಲ್ಲಿ ತಿಳಿವುದು
ನಿನ್ನನೀ ಸಂಹರಿಸಿ ಕೈದುವ ಕೊಳ್ಳಿರಣ್ಣಾ
ಚೆನ್ನಮಲ್ಲಿಕಾರ್ಜುನನೆಂಬ ಹಗೆಗೆ ಬೆಂಗೊಡದಿರಣ್ಣಾ

- ಅಕ್ಕಮಹಾದೇವಿ

'ಅಣ್ಣಾ' ಎಂಬ ಮಾತು ಕೇಳಿ ಕಿನ್ನರಯ್ಯನಲ್ಲಿದ್ದ ಕಲ್ಮಶದ ಭಾವನೆ ಸಂಪೂರ್ಣ ನಾಶವಾಯಿತು. ಅದಕ್ಕೆ ಪ್ರತಿಯಾಗಿ ಕಿನ್ನರಯ್ಯನು ಅವಳಲ್ಲಿ ಕ್ಷಮಿಸವ್ವ ಎಂದು ಪ್ರಾರ್ಥಿಸುತ್ತಾನೆ.

ಶರಣಾರ್ಥಿ ಶರಣಾರ್ಥಿ ಎಲೆ ನಮ್ಮವ್ವ
ಶರಣಾರ್ಥಿ ಶರಣಾರ್ಥಿ ಕರುಣಸಾಗರ ನಿಧಿಯೆ
ದಯಾಮೂರ್ತಿ ತಾಯೆ, ಶರಣಾರ್ಥಿ
ಮಹಾಲಿಂಗ ತ್ರಿಪುರಾಂತಕ ನೊಡ್ಡಿದ ತೊಡಕು
ನೀವು ಬಿಡಿಸಿದಿರಾಗಿ ನಿಮ್ಮದಯದಿಂದ
ನಾನು ಹುಲಿನೆಕ್ಕಿ ಬದುಕಿದೆನು ಶರಣಾರ್ಥಿ ಶರಣಾರ್ಥಿ ತಾಯೆ!

- ಕಿನ್ನರಿ ಬೊಮ್ಮಯ್ಯ

ಕಿನ್ನರಯ್ಯನಿಗೆ ಪ್ರತಿಯಾಗಿ ಅಕ್ಕಮಹಾದೇವಿ ಅವನನ್ನು ಆಪ್ತವಾದ ಸೋದರ ಭಾವದಿಂದ ಕಾಣುತ್ತಾಳೆ.

ಎನ್ನಂತೆ ಪುಣ್ಯಗೈದವರುಂಟೆ?
ಎನ್ನಂತೆ ಭಾಗ್ಯಂ ಗೈದವರುಂಟೆ?
ಕಿನ್ನರನಂತಪ್ಪ ಸೋದರರೆನಗೆ
ಏಳೇಳು ಜನ್ಮದಲ್ಲಿ ಶಿವಭಕ್ತರೆಬಂಧುಗಳೆನೆಗೆ
ಚೆನ್ನಮಲ್ಲಿಕಾರ್ಜುನನಂತಪ್ಪ ಗಂಡ ನೋಡಾ ಎನಗೆ

- ಅಕ್ಕಮಹಾದೇವಿ

ಅಕ್ಕಮಹಾದೇವಿ ಎಲ್ಲ ಶರಣ-ಶರಣೆಯನರನ್ನು ತನ್ನ ತಂದೆ, ತಾಯಿ, ಅಕ್ಕಗಳೆಂದು ಭಾವಿಸಿದ್ದಾಳೆ. ಮಹಾದೇವಿಯಕ್ಕ ತನ್ನ ಗೆಳತಿಗೆ ತಾನು ಕಂಡ ಕನಸೊಂದನ್ನು ಹೇಳುವಾಗ

ಅಕ್ಕ ಕೇಳವ್ವಾ ಗೆಳತಿ ನಾನೊಂದು ಕನಸುಕಂಡೆ
ಗಿರಿಯ ಮೇಲೊಬ್ಬ ಗೊರವ ಕುಳ್ಳಿರ್ದುದ ಕಂಡೆ

ಎಂಬ ಮಾತುಗಳಲ್ಲಿ ಗೆಳತಿಯನ್ನು ಅಕ್ಕ, ಅವ್ವ ಎಂದು ಸಂಬೋಧಿಸುತ್ತಾಳೆ. ಬಸವಣ್ಣನ ಮನೆಯಲ್ಲಿ ಎಲ್ಲ ಶರಣರೂ ಸೇರಿ ಅವಳಿಗೆ ಕೆಲವು ಮಾರ್ಮಿಕ ಪ್ರಶ್ನೆಗಳನ್ನು ಹಾಕಿದಾಗ ಅವರೆಲ್ಲರನ್ನೂ 'ಅಣ್ಣಗಳಿರಾ' ಎಂದು ಸಂಬೋಧಿಸಿ ಉತ್ತರ ಕೊಡುತ್ತಾಳೆ. ಮುಕ್ತಾಯಕ್ಕ ತನ್ನ ಅಣ್ಣನನ್ನೇ ಗುರುವಾಗಿ ಸ್ವೀಕರಿಸಿದ್ದಾಳೆ.

ಅಂಬರದಲ್ಲಾಡುವ ತುಂಬಿಯ ಬಿಂಬದ ಕಂಬನಿಯೊಳಗಣ ರತ್ನದ
ಬಯಕೆಯಾದ್ಯಂತ ವನೇನೆಂಬೆಯಯ್ಯಾ?
ವೇದಶಾಸ್ತ್ರ ಶ್ರುತಿ ಸ್ಮೃತಿಗಳು ಸ್ತುತಿಸಲರಿಯುವು
ನಾದವಲ್ಲ, ಸುನಾದದ ನಿಲವಲ್ಲ
ಭೇದಿಸುವೆಡೆ ಅಗಮ್ಯ ನೋಡಾ
ಸೊಲಿಲ್ಲದ ಸೊಮ್ಮಿಲ್ಲದ ಘನವನೇನೆಂಬೆನು?
ಎಂತು ಮರೆವೆನಯ್ಯಾ ಎನ್ನ ಅಜಗಣ್ಣ ತಂದೆಯನು?

- ಮುಕ್ತಾಯಕ್ಕ

ಮುಕ್ತಾಯಕ್ಕ ತನ್ನ ಅಣ್ಣ ಅಜಗಣ್ಣನನ್ನು ತಂದೆ ಎಂದು ಕರೆದಿರುವಲ್ಲಿ 'ತಂದೆ' ಎಂಬುದು ಆ ಭಾಷಿಕ ಸಂದರ್ಭದಲ್ಲಿ ಭಾವನಾತ್ಮಕವಾಗಿ ಬಳಕೆಯಾಗಿದೆ. ಬಸವಣ್ಣನವರನ್ನು ಅನ್ಯತ್ರ ಶಿವಶರಣರು ಎಷ್ಟು ವಿಧವಾಗಿ ಸಂಬೋಧಿಸಿದ್ದಾರೆಂಬುದಕ್ಕೆ ಇಲ್ಲಿ ಉದಾಹರಿಸ ಲಾಗಿದೆ.

'ಎನ್ನ ಹೆತ್ತ ತಂದೆ' - ಮಡಿವಾಳ ಮಾಚಯ್ಯ

'ಕಾಮಿಸಿದೆನಯ್ಯ ಬಸವಣ್ಣನ ಭಕ್ತಿಗೆ' - ಸಿದ್ಧರಾಮ

ಎನ್ನ ಕಣ್ಣು ಕಾಲಿಂಗೆ ನೀನೆಯಯ್ಯ ಬಸವಾ' - ಸಿದ್ಧರಾಮ

'ಸಂಗನ ಬಸವಣ್ಣನಿಂದ ಶುದ್ಧ ಪ್ರಸಾದಿಯಾದೆ' - ಬಹುರೂಪಿಚೌಡಯ್ಯ

'ಪ್ರಸಾದಿಯೊಳಗಣ ಭಕ್ತಸ್ಥಲವನಿಂಬುಗೊಂಡರು ಬಸವಣ್ಣನವರು'
- ಷಣ್ಮುಖ ಶಿವಯೋಗಿ

'ಬಸವನೆಂಬ ಬೀಜದ ಮಧ್ಯದಲ್ಲಿ ಲಿಂಗವೆಂಬ ಅಂಕುರ ಉದಯಿಸಿತ್ತು'
- ಷಣ್ಮುಖ ಶಿವಯೋಗಿ

'ಪರಮಗುರು ಸಂಗನ ಬಸವಣ್ಣನ ಶ್ರೀಪಾದ ' - ಷಣ್ಮುಖ ಶಿವಯೋಗಿ

'ಪರಮಗುರು ಬಸವರಾಜ ದೇವರ ದಿವ್ಯ ಶ್ರೀಪಾದ'
- ಷಣ್ಮುಖ ಶಿವಯೋಗಿ

'ಬಕಾರವೆ ಎನ್ನ ಸ್ಥೂಲತನು, ಸಕಾರವೆ ಎನ್ನ ಸೂಕ್ಷ್ಮತನು ವಕಾರವೆ ಎನ್ನ ಕಾರಣತನು' - ಷಣ್ಮುಖ ಶಿವಯೋಗಿ

'ಬಸವಣ್ಣನೆ ಶಿವನು ಶಿವನೆ ಬಸವಣ್ಣನು ಬಸವಣ್ಣ ಶಿವನೆಂಬ ಹೆಸರೆರಡಾದರೇನು ಅಖಂಡ ವಸ್ತು ಒಂದೇ ಆದ ಕಾರಣ'
- ಷಣ್ಮುಖ ಶಿವಯೋಗಿ

'ನಾನು ಬಸವಯ್ಯನ ಮನೆಯ ತೊತ್ತಿನ ಮಗಳು' - ನೀಲಾಂಬಿಕೆ

'ಬಸವಣ್ಣಾ ನೀವು ಮರ್ತ್ಯಕ್ಕೆ ಬಂದಡೆ ಭಕ್ತಿಯ ಬೆಳವಿಗೆ ದೆಸೆದೆಸೆಗೆಲ್ಲ ಪಸರಿಸಿತ್ತಲ್ಲಾ!' - ಅಕ್ಕನಾಗಮ್ಮ

'ಬಸವ ಬಾರಯ್ಯ ಮರ್ತ್ಯಲೋಕದೊಳಗೆ ಭಕ್ತರುಂಟೆ ಹೇಳಯ್ಯ'
- ಅಕ್ಕನಾಗಮ್ಮ

'ಕಾಲರುದ್ರನ ಕಳುಹಿದ ಭಕ್ತಿನಾಮವ ಕೊಟ್ಟು ಬಸವೇಶ್ವರನ'
- ಗುಪ್ತಮಂಚಣ್ಣ

'ಅಪ್ಪ ಬಸವಣ್ಣ' - ಘಟ್ಟಿವಾಳಯ್ಯ

ನಾಗಲಾಂಬಿಕೆ ತನ್ನ ವಚನಗಳಲ್ಲಿ ಅಣ್ಣನ ಮೇಲೆ ಮಮತೆಯ ಮಳೆಯನ್ನೇ ಸುರಿದಿದ್ದಾಳೆ. ತನ್ನ ಅಣ್ಣ ಬಸವಣ್ಣನನ್ನು ಕುರಿತು

ಎನ್ನ ಕುಲಸೂತಕವ ಕಳೆದಾತ ಬಸವಣ್ಣ
ಎನ್ನ ಛಲಸೂತಕವ ಕಳೆದಾತ ಬಸವಣ್ಣ
ಎನ್ನ ತನು ಸೂತಕವ ಕಳೆದಾತ ಬಸವಣ್ಣ
ಎನ್ನಮನಸೂತಕವ ಕಳೆದಾತ ಬಸವಣ್ಣ
ಎನ್ನ ನೆನಹು ಸೂತಕವ ಕಳೆದಾತ ಬಸವಣ್ಣ
ಎನ್ನ ಭಾವಸೂತಕವ ಕಳೆದಾತ ಬಸವಣ್ಣ
ಎನ್ನ ಅರುಹು ಮರಹಿನ ಸಂದು ಸಂಶಯವ ಬಿಡಿಸಿದಾತ ಬಸವಣ್ಣ
ಎನ್ನ ತನ್ನೊಳಗೆ ಇಂಬಿಟ್ಟು ಕೊಂಡಾತ ಬಸವಣ್ಣ
ಎನ್ನ ಎನ್ನೊಳಗೆ ಇಂಬಿಟ್ಟು ಕೊಂಡಾತ ಬಸವಣ್ಣ
ನಿಜದ ನಿರ್ಮಯಲ ಬಾಗಿಲ ನಿಜ ತೋರಿದಾತ ಬಸವಣ್ಣ
ಬಸವಣ್ಣ ಪ್ರಿಯ ಚೆನ್ನಸಂಗಯ್ಯನ ಹೃದಯ ಕಮಲದಲ್ಲಿ
ನಿಜನಿವಾಸಿಯಾಗಿರಿಸಿದ ಎನ್ನ ತಂದೆ ಸಂಗನ ಬಸವಣ್ಣನು

- ನಾಗಲಾಂಬಿಕೆ

ವಚನಗಳಲ್ಲಿ ಎದ್ದುಕಾಣುವ ಸಂಗತಿಯೆಂದರೆ ವಚನಕಾರರು ಪರಸ್ಪರ ಗೌರವದಿಂದ ಕಾಣುವ ರೀತಿ ಅವರ ವ್ಯಕ್ತಿತ್ವವನ್ನು ಪ್ರಕಟಿಸುತ್ತದೆ. ಅದು ಪರಸ್ಪರರಲ್ಲಿ ಸಮಾನತೆಯನ್ನು ಸ್ಥಾಪಿಸುತ್ತದೆ. ಈ ಆದರ್ಶಗಳನ್ನು ಅವರ ವಿನಯಾಚರಣೆಯ ಮಾತುಗಳಿಂದ ತಿಳಿದುಕೊಳ್ಳಬಹುದು. ಅಲ್ಲಮನು ಬಸವಣ್ಣರಲ್ಲಿ ವಿನಯಾಚರಣೆಯ ಸೂಕ್ತಿ ಹೀಗಿದೆ.

- ನಮ್ಮಗೋಗೇಶ್ವರ ಲಿಂಗದಲ್ಲಿ ಸಂಗಣ ಬಸವಣ್ಣನ
ಶ್ರೀಪಾದಕ್ಕೆ ಶರಣೆಂದು ಧನ್ಯರಾಗಬೇಕು - ಅಲ್ಲಮ

ಅಲ್ಲಮ-ಮುಕ್ತಾಯಕ್ಕರಲ್ಲಿ ವಿನಯಾಚರಣೆ :

- ನಿಮ್ಮ ಶರಣ ಅಜಗಣ್ಣಂಗೆ ಶರಣೆಂದು ಬದುಕಿದೆನು.

ಅಲ್ಲಮ-ಮಡಿವಾಳರಲ್ಲಿ ವಿನಯಾಚರಣೆ :

- ಗೋಹೇಶ್ವರನ ಶರಣ ಮಡಿವಾಳನ ಶ್ರೀಪಾದಕ್ಕೆ
ನಮೋ ನಮೋ ಎನುತಿದ್ದೇನು

ಇವೇ ಮೊದಲಾದ ಕಡೆಗಳಲ್ಲಿ ಪರಸ್ಪರರು ಬಳಸಿರುವ 'ಶ್ರೀ ಪಾದ' ಬರಿಯ 'ಕಾಲಿಗೆ ಬೀಳು' ಎಂಬರ್ಥದ ಡಾಂಭಿಕ ಮಾತಾಗಿರದೆ, ಅವರ ವ್ಯಕ್ತಿಗತ ಸಂಸ್ಕೃತಿಯ ಒಂದು ನಿತಾಂತ ಆಚರಣೆಯಾಗಿದೆ. ಹೀಗೆ ಶರಣರು ಲಿಂಗಭೇದವಿಲ್ಲದೆ, ಜಾತಿ ವಯಸ್ಸಿನ

ಭೇದವಿಲ್ಲದೆ ಒಬ್ಬ ಶರಣ ಇನ್ನೊಬ್ಬನಿಗೆ ಗೌರವ ತೋರಿಸಿ ಸಮಾನತೆಯನ್ನು ಮೆರೆಯುವ ದೃಶ್ಯ ಅಪೂರ್ವವಾದುದು. ಶರಣರ ನಡುವೆ ಸಂಭಾಷಣೆಯಲ್ಲಿ ಬಳಕೆಯಾಗುವ

- ಚಿತ್ತೈಸಿರಿ
- ಬಿಜಯಂಗೈಸಿಕೊಂಡು ಬಾ

ಇಂತಹ ವಿನಯಾಚರಣೆಯ ಭಾಷಿಕ ನಿಯೋಗಗಳ ಹಿಂದೆ ಅವರಲ್ಲಿಯ ಪರಸ್ಪರ ಪ್ರೀತಿ ಗೌರವದ ಸಂಕೇತವಾಗಿದೆ. ವಚನಕಾರರು ತಮ್ಮ ಜೊತೆಯವರನ್ನು ಅವರು ತಮ್ಮ ಬಂಧುಗಳಲ್ಲದಿದ್ದರೂ ಅವರನ್ನು ಬಂಧುಗಳಂತೆ ಕಂಡು ದೊಡ್ಡತನ ಪ್ರದರ್ಶಿಸಿದ್ದಾರೆ. ಪ್ರೀತಿ- ವಾತ್ಸಲ್ಯದ ಭಾವನೆಗಳು ಒಂದು ಕುಟುಂಬಕ್ಕೆ ಮಾತ್ರ ಸೀಮಿತವಾಗಿರಬಹುದು,ಅವು ಕುಟುಂಬದ ಆಚೆಗೂ ಅಷ್ಟೇ ತೀವ್ರವಾಗಿ ವ್ಯಕ್ತವಾಗಬೇಕೆಂದು ಶರಣರು ಆಶಿಸಿದರು. ಯಾರೇ ಪರಸ್ಪರರು ಪ್ರೀತಿ ಗೌರವದಿಂದ ಕಂಡಾಗ ಇಬ್ಬರು ಸಮಾನರಾಗುತ್ತಾರೆ. ಡಾ. ಎಂ. ಚಿದಾನಂದಮೂರ್ತಿ ಅವರು ಒಂದು ಸಂದರ್ಭದಲ್ಲಿ ಹೇಳಿದ ಮಾತನ್ನೇ ಬಳಸಿ ಹೇಳುವುದಾದರೆ 'ಹನ್ನೆರಡನೆಯ ಶತಮಾನದ ವಚನ ಚಳುವಳಿ ವ್ಯಕ್ತಿ ಕೇಂದ್ರಿತವಾಗಿರಲಿಲ್ಲ. ಧ್ಯೇಯ ಕೇಂದ್ರಿತವಾಗಿತ್ತು, ಸಮಾಜ ಕೇಂದ್ರಿತವಾಗಿತು'. ಅಲ್ಲಮನು ಅಕ್ಕಮಹಾದೇವಿಯನ್ನು ಕೆಲವೆಡೆ 'ಅವ್ವ' ಎಂದು ಗೌರವದಿಂದ ಸಂಬೋಧಿಸಿದ್ದಾನೆ. ತಾಯಿ ಪದಕ್ಕಿಂತ 'ಅವ್ವ' ಪದ ಹೆಚ್ಚು ಆಪ್ತವಾಗಿದೆ. ಭಾಷೆ ಒಂದು ಸಾಮಾಜಿಕ ಕ್ರಿಯಾವಿಧಾನ ಅದು ಕೇವಲ ವಿಚಾರಗಳ ಪ್ರತಿಬಿಂಬವಲ್ಲ ಸಾಂಸ್ಕೃತಿಕ ವಾಹಕ. ಅವೆರಡು ವಚನ ಭಾಷೆಯಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ,

ಏನಿ ಬಂದಿರಿ? (ಕ್ಷೇಮಾಲಾಪ)
ಹದುಳವಿದ್ದಿರಾ? (ಕ್ಷೇಮಾಲಾಪ)
ಕುಳ್ಳಿ (ವಿಜ್ಞಾಪನೆ)
ಶರಣು (ಭಕ್ತರನ್ನು ಮೊದಲ ಬಾರಿಗೆ ಭೇಟಿ ಮಾಡಿದಾಗ)
'ಶಿವಶರಣು' 'ಶರಣು ಶರಣಾರ್ಥಿ' (ಶರಣು ಎಂದವರಿಗೆ ಪ್ರತಿಯಾಗಿ ಇಮ್ಮಡಿ ಗೌರವ ಸೂಚಿಸುವ ಮಾತು)

ಶರಣರ ನಡುವಿನ ಸುಸಂಬದ್ಧ ಶುಭಾಶಯದ ಬಳಕೆಯ ಮಾತುಗಳಿವು. ಇವು ಬದ್ಧ ಮತ್ತು ಮುಕ್ತ ಎರಡೂ ರೀತಿಯಲ್ಲಿ ಪ್ರಕಟಗೊಳ್ಳುತ್ತವೆ. ಶರಣರು ಪರಸ್ಪರ ಭೇಟಿಯಾದಾಗ ಕೆಲವು ಸಂಜ್ಞೆಗಳ ಮೂಲಕ ಗೌರವ ವ್ಯಕ್ತಪಡಿಸುತ್ತಾರೆ. ಆಗ ಅವರ ಶರೀರಭಾಷೆ ಕೆಲವು ವಚನಗಳಲ್ಲಿ ಅಭಿವ್ಯಕ್ತಗೊಂಡಿದೆ.

ಕೈ ಮುಗಿಯುವಿಕೆ : ಕಂಡಭಕ್ತರಿಗೆ ಕೈಮುಗಿವಾತನೆ ಭಕ್ತ
ತಲೆ ಬಾಗುವಿಕೆ : ಬಾಗಿದ ತಲೆಯ ಮುಗಿದ ಕೈಯ ಬಸವ
ಕಾಲಿಗೆರಗುವಿಕೆ : ನಿಮ್ಮಡಿಗಳಲ್ಲಿ ಸಂದು ಸಂಶಯವುಂಟೆ?

ಕೆಲವು ಭಾಷಿಕ ಸಂದರ್ಭದಲ್ಲಿ ವಾರ್ತಾಲಾಪಕ್ಕೆ ಮೊದಲು ವ್ಯಕ್ತಿ ಪರಿಚಯವನ್ನು ವಚನಕಾರರು ಅಗತ್ಯ ಘಟಕವಾಗಿಟ್ಟುಕೊಳ್ಳುತ್ತಾರೆ. 'ಪತಿಯ ಕುರುಹು ಹೇಳಿದರೆ ಕುಳ್ಳಿರು ಇಲ್ಲದಿರೆ ತೊಲಗು ತಾಯಿ' ಎಂದು ಅಲ್ಲಮ, ಅಕ್ಕನ ಪರಿಚಯವನ್ನು ಮೊದಲಿಗೆ ತಿಳಿಯಲೆಳಸುತ್ತಾನೆ. ಅದೇ ರೀತಿ ಮುಕ್ತಾಯಕ್ಕ - 'ತಾನು ಅಜಗಣ್ಣನ ಬೆನ್ನ ಬಳಿಯವಳು' ಎಂದು ತನ್ನ ಪರಿಚಯ ಮಾಡಿಕೊಳ್ಳುತ್ತಾಳೆ. ಬಸವಣ್ಣನವರು ತನ್ನ ಆರಾಧ್ಯದೈವ ಕೂಡಲ ಸಂಗಮನಾಥನಿಗೆ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದಾರೆ.

ತಂದೆ ನೀನು, ತಾಯಿ ನೀನು;
ಬಂಧು ನೀನು, ಬಳಗ ನೀನು;
ನೀನಲ್ಲದೆ ಮತ್ತಾರು ಇಲ್ಲವಯ್ಯ!
ಕೂಡಲಸಂಗಮದೇವ,
ಹಾಲಲದ್ದು ನೀರಲದ್ದು

ಎಂಬ ವಚನದಲ್ಲಿ ಸಂಗಮನಾಥನಿಗೆ 'ತಂದೆ' ಎಂದು ಸಂಬೋಧಿಸಿ ಆತನೊಡನೆ ಆತ್ಮೀಯ ಸಂಬಂಧ ಬೆಳೆಸಿದ್ದಾರೆ. ಬಸವಣ್ಣನವರು ಅನ್ಯತ್ರ ವಚನಕಾರರನ್ನು ಆಪ್ತಬಂಧು ಗಳಂತೆ ಕಾಣುತ್ತಾರೆ.

ಅಪ್ಪನು ಮಾದಾರ ಚೆನ್ನಯ್ಯ
ಬೊಪ್ಪನು ಡೋಹರ ಕಕ್ಕಯ್ಯ
ಚಿಕ್ಕಯ್ಯ ನೆಮ್ಮಯ್ಯ ಕಾಣಯ್ಯ

ಎಂದಿದ್ದಾರೆ. ಶರಣರು ಪರಸ್ಪರರನ್ನು ಸಂಬೋಧಿಸುವಾಗ ಹಲವಾರು ಸಂಬೋಧನಾ ರೂಪಗಳು ಬಳಕೆಯಾಗಿವೆ.

- ಅಯ್ಯಾ!	- ಎಲ್ಲಿಯದು?
- ಕಂಡಾ, ಕಂಡಣ್ಣಾ	- ಅಂದೆಂತು?
- ಕಾಣಿರೇ	- ಶರಣು
- ಏಕೆ ?	- ಎಲವೋ
- ಕಾಣಿರೋ	- ಎಲ್ಲಿಯದೋ
- ಏಕೋ	- ಅದೆಂತೋ
- ಏತಕೋ	- ಛೀ

ವಚನಕಾರರು ಪರಸ್ಪರರನ್ನು ನಿಕಟವಾಗಿ ಕಾಣಲು ಇಂತಹ ಸಂಬೋಧನೆಯ ರೂಪಗಳನ್ನು ಬಳಸಿದ್ದಾರೆ. ಅಕ್ಕಮಹಾದೇವಿ ತನ್ನ ಆರಾಧ್ಯದೈವ ಚೆನ್ನಮಲ್ಲಿಕಾರ್ಜುನನ್ನು ಹುಡುಕುವ ಪರಿ ಆತ್ಮನಿವೇದನೆಗೆ ಉತ್ತಮ ನಿದರ್ಶನವಾಗಿದೆ.

ಚಿಲಿಮಿಲಿ ಎಂದೋದುವ ಗಿಳಿಗಳಿರಾ!
ನೀವು ಕಾಣಿರೇ? ನೀವು ಕಾಣಿರೇ?
ಸರವರದೊಳಗಾಡುವ ಹಂಸೆಗಳಿರಾ!
ನೀವು ಕಾಣಿರೇ? ನೀವು ಕಾಣಿರೇ?
....
....
ಗಿರಿಗಹ್ವರದೊಳಗಾಡುವ ನವಿಲುಗಳಿರಾ
ನೀವು ಕಾಣಿರೇ? ನೀವು ಕಾಣಿರೇ?
ಚೆನ್ನಮಲ್ಲಿಕಾರ್ಜುನದೇವನೆಲ್ಲದ್ದಾನೆಂಬುದು ಬಲ್ಲಡೆ
ನೀವು ಹೇಳಿರೇ - ಅಕ್ಕಮಹಾದೇವಿ

ಎಂದು ನಾನಾ ವಿಧವಾಗಿ ಪರಿತಪಿಸಿ, ಹುಡುಕಿಕೊಂಡಿರೆಂದು, ಕಂಡಿರೆಂದು ನಿಸರ್ಗಕ್ಕೆ ಮೊರೆಹೊಕ್ಕಿದ್ದಾಳೆ. ಅದರಂತೆ ಇತರೆ ಶರಣರಲ್ಲಿಯೂ ಸಂಬೋಧನ ರೂಪಗಳನ್ನು ಕಾಣಬಹುದು.

‘ತೊರೆಯ ಮೀವಣ್ಣಗಳಿರಾ’ - ಬಸವಣ್ಣ
‘ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೆ ಅಣ್ಣಾ!’ - ಬಸವಣ್ಣ
‘ಕುಲವೆಂದು ಹೋರಾಡುವ ಅಣ್ಣಗಳಿರಾ, ಕೇಳಿರೋ’ - ಸಿದ್ಧರಾಮ
‘ಏಕೆ ಬಂದಿರೋ ಎಲೆ ಅಣ್ಣಗಳಿರಾ?’ - ಉರಿಲಿಂಗದೇವ
‘ಸಮಯಪ್ರಸಾದಿಗಳೆಂದು ಒಪ್ಪವಿಟ್ಟು ನುಡಿದ ಅಣ್ಣಗಳಿರಾ’
- ಅಂಬಿಗರ ಚೌಡಯ್ಯ
‘ಅಕ್ಕ ಕೇಳವ್ವ ನಾನೊಂದು ಕನಸು ಕಂಡೆ’ - ಅಕ್ಕಮಹಾದೇವಿ
‘ಅಕ್ಕಯ್ಯ ನಾನೊಂದು ಕನಸು ಕಂಡೆ’ - ಅಕ್ಕಮಹಾದೇವಿ
‘ನಾತಿರುಹುವ ರಾಟಿಯ ಕುಲಜಾತಿಯ ಕೇಳಿರಕ್ಕಾ’ - ಕದಿರೆರೆಮ್ಮವ್ವೆ
‘ಕಳವಳದ ಮನವು ತಲೆಕೆಳಗಾದುದವ್ವಾ!’ - ಅಕ್ಕಮಹಾದೇವಿ
‘ಮಾಗಿಯ ಕೋಗಿಲೆಯಂತೆ ಮೂಗನಾಗಿದ್ದೆನವ್ವಾ!’- ಗಜೇಶ ಮಸಣಯ್ಯ
‘ಅಂಗೈಯಲ್ಲೊಂದು ಅರಳ್ದ ತಲೆಯ ಹಿಡಿದುಕೊಂಡು ಕಂಗಳ ಮುತ್ತ’
- ಅಲ್ಲಮ ಪ್ರಭು
‘ಪವಣಿಸುವಾಕೆ ನೀನಾರು ಹೇಳಾ ಎಲೆ ಅವ್ವಾ’ - ಅಲ್ಲಮಪ್ರಭು
‘ತಂದೆ ತಾಯಿಗಲ್ಲದ ಕಂದಾ ನಿನಗೆ ನೀನೆ ಹುಟ್ಟಿದೆಯಲ್ಲಾ!’
- ಅಲ್ಲಮಪ್ರಭು

'ಹಿರಿಯರನೆಲ್ಲರ ಹುಟ್ಟಿಸಿದಾತನನರಿಯಿರೊ ಹಿರಿಯರ ಮಕ್ಕಳಿರಾ!'

- ಅಲ್ಲಮಪ್ರಭು

'......ಮೂಗಿಲ್ಲ ತಂಗಿ' - ಅಲ್ಲಮಪ್ರಭು

ಕೆಲವು ವಚನಕಾರರು ಬಂಧುಸೂಚಕಗಳ ಮೂಲಕ ತಾವು ಹೇಳಬೇಕಾದ ಸಾಮಾಜಿಕ ಆಶಯವನ್ನು ಅಭಿವ್ಯಕ್ತಿಸುತ್ತಾರೆ. ಅಂತಹ ಸಂದರ್ಭದಲ್ಲಿ ಬಂಧುಸೂಚಕಗಳನ್ನು ರೂಪಕಗಳನ್ನಾಗಿ ಬಳಸಿಕೊಂಡಿದ್ದಾರೆ.

"ಅತ್ತಿಗೆ ಸತ್ತಳು, ನಾದಿನಿ ಮೊರೆಯಲಿಲ್ಲ,
ಅತ್ತೆಯ ಕಣ್ಣು ಅರೆಯಿತ್ತು, ಮಾವನ ಕಾಲು ಮುರಿಯಿತ್ತು,
ಭಾವನ ಸಂದು ಸಂದುವೆಲ್ಲ ಮುರಿದವು,
ಮೈದುನನ ಮೈಯೆಲ್ಲ ಉರಿಯಿತ್ತು.
ಹಿತ್ತಲಗೋಡೆ ಪಶ್ಚಿಮದ ಬಾಗಿಲು ಬಯಲಾಯಿತ್ತು,
ಇದ ನೋಡಿ ನಾ ನಿಶ್ಚಿಂತ ಲಿಂಗೈಕ್ಯನಾದೆನಯ್ಯ
ಬಸವಪ್ರಿಯ ಕೂಡಲ ಚೆನ್ನಬಸವಣ್ಣ"

- ಹಡಪದ ಅಪ್ಪಣ್ಣ

ಇಂತಹ ಕೌಟುಂಬಿಕ ದೃಷ್ಟಾಂತಗಳನ್ನು ಅಲ್ಲಮ, ಅಕ್ಕಮಹಾದೇವಿ, ಮುಂತಾದವ ರಂತೂ ತುಂಬ ಸಮಂಜಸವಾಗಿ ಬಳಸಿಕೊಂಡಿದ್ದಾರೆ. ಬೆಡಗು ಒಂದು ಅಲೌಕಿಕ ಪ್ರರೂಪ. ವಚನಕಾರರು ಪ್ರಯೋಗಿಸಿರುವ ಪಶು, ಪಕ್ಷಿ, ಪ್ರಾಣಿ, ಸಸ್ಯ, ಖಗೋಳ ಪ್ರತಿಮೆಗಳ ಭಾಷೆಗಿಂತ ಕೌಟುಂಬಿಕ ಪದ ಪ್ರಯೋಗಗಳು ಲೌಕಿಕರಾಗಿ ಬದುಕುವ ವ್ಯಕ್ತಿಗಳಿಗೆ ನಿಕಟವಾದ ಪರಿಣಾಮವನ್ನುಂಟು ಮಾಡಬಲ್ಲುವು.

ವಚನಕಾರರು ಸಣ್ಣವರು ದೊಡ್ಡವರೆನ್ನದೆ ಅಯ್ಯಾ, ಅಣ್ಣ, ತಂದೆ, ಅಕ್ಕ ಮುಂತಾದ ಬಂಧುಸೂಚಕಗಳ ಮೂಲಕ ಆತ್ಮೀಯ ವಾತಾವರಣ ಸೃಷ್ಟಿಸಿ ತಮ್ಮ ಹಾಗೂ ಜನತೆಯಲ್ಲಿ ಸಮಾನತೆಯನ್ನು ಸ್ಥಾಪಿಸಿ ಸಮತಾವಾದ ಸಮಾಜರಚನೆಗೆ ಅಡಿರಚನೆ ಹಾಕಿದರು. ತನ್ಮೂಲಕ ಸಾಮಾಜಿಕ ಬದಲಾವಣೆಗೆ, ಸಮಾಜೀಕರಣಕ್ಕೆ ಅವರು ಕಾರಣರಾದರು. ಅವರ ಅಭಿವ್ಯಕ್ತಿ ಯಲ್ಲಿ ಸಮಾಜವಾದದ ತುಡಿತವಿದೆ. ಶರಣರು ಬಂಧುಸೂಚಕಗಳನ್ನು ಬಳಸುವುದ ರೊಂದಿಗೆ ಭಾಷೆಯ ಅರ್ಥವಲಯವನ್ನು ಹಿಗ್ಗಿಸಿದರು. ಅವರು ಬಳಸಿದ ಬಂಧುಸೂಚಕಗಳ ಅಭ್ಯಾಸದ ಮೂಲಕ ಭಾಷಾ ವೈಶಿಷ್ಟಗಳ ಜೊತೆಗೆ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಅರಿಯಬಹುದಾಗಿದೆ.

ಆಕರಗ್ರಂಥಗಳು

೧. ಅಂಗಡಿ ಎಸ್.ಎಸ್., ೨೦೦೭, ವಚನ ಸಾಹಿತ್ಯ ಭಾಷೆ, ಲಿಂಗಾಯತ ಅಧ್ಯಯನ ಅಕಾಡೆಮಿ, ಬೆಳಗಾವಿ

೨. ಬಸವರಾಜ ಎಲ್.(ಸಂ.), ಅಲ್ಲಮ, ಅಕ್ಕ, ಬಸವಣ್ಣ, ದಾಸಿಮಯ್ಯರ ವಚನಗಳು. ಗೀತಾ ಬುಕ್‌ಹೌಸ್, ಮೈಸೂರು.

೮೩

ಸಂಬಂಧವಾಚಕಗಳು: ಪರಿವರ್ತನೆ ಮತ್ತು ಪ್ರಭಾವ

ಪರಿವರ್ತನಶೀಲತೆ ಭಾಷೆಯ ಲಕ್ಷಣ. ಅದಕ್ಕೆ ಸೌಲಭ್ಯಾಕಾಂಕ್ಷೆ ಮತ್ತು ಅನ್ಯ ಭಾಷಾಸಂಪರ್ಕಗಳು ಮುಖ್ಯ ಕಾರಣಗಳಾಗಿವೆ. ಅನ್ಯಭಾಷಾ ಸಂಪರ್ಕದ ಮೇಲೆ ಸಾಂಸ್ಕೃತಿಕ, ರಾಜಕೀಯ ಹಾಗೂ ವಲಸೆ ಮುಂತಾದ ಅಂಶಗಳು ಪ್ರಭಾವ ಬೀರುತ್ತವೆ. ಭಾಷೆಯ ಘಟಕಗಳಾದ ಬಂಧುವಾಚಕಗಳ ಪರಿವರ್ತನೆಗೂ ಈ ಅಂಶಗಳು ಪ್ರಭಾವಬೀರುತ್ತವೆ. ಕನ್ನಡ ಬಂಧುಸೂಚಕಗಳ ಮೇಲೆ ಸಂಸ್ಕೃತ, ಮರಾಠಿ, ಕನ್ನಡೇತರ ದ್ರಾವಿಡಭಾಷೆಗಳು. ಉರ್ದು ಹಾಗೂ ಇಂಗ್ಲಿಶ್ ಭಾಷೆಗಳ ಬಂಧುಸೂಚಗಳ ಪ್ರಭಾವ ಅಧಿಕವಾಗಿದೆ.

ಸಂಸ್ಕೃತ ಭಾಷೆಯು ಸಂಸ್ಕೃತಿಯ ವಾಹಕವಾಗಿದ್ದ ಕಾಲದಲ್ಲಿ ಇತರ ಭಾರತೀಯ ಭಾಷೆಗಳಂತೆ ಕನ್ನಡವೂ ಸಂಸ್ಕೃತದಿಂದ ಅನೇಕ ಪದಗಳನ್ನು ಸ್ವೀಕರಿಸಿತು. ಅದಕ್ಕೆ ಬಂಧು ಸೂಚಕಗಳು ಹೊರತಲ್ಲ

ಪಿತೃ - ತಂದೆ
ಮಾತೃ - ತಾಯಿ
ಸಹೋದರ - ಅಣ್ಣ ತಮ್ಮ
ಸಹೋದರಿ - ಅಕ್ಕ ತಂಗಿ

ಆದರೆ ಸಂಸ್ಕೃತ ಬಂಧುಸೂಚಕಗಳ ಬಳಕೆ ಕಡಮೆ. ಬರವಣಿಗೆಯಲ್ಲಿ ಮಾತ್ರ (ಸೀಮಿತ ಸಾಮಾಜಿಕ ವರ್ಗದಲ್ಲಿ) ಅವು ಕಾಣಿಸುತ್ತವೆ. ಉತ್ತರ ಗಡಿಭಾಗದಲ್ಲಿ ಮರಾಠಿ ಭಾಷೆಯ ಪ್ರಭಾವ ಅಧಿಕವಾಗಿರುವುದರಿಂದ ನಿತ್ಯ ವ್ಯವಹಾರದಲ್ಲಿ ಮರಾಠಿ ಬಂಧುಸೂಚಕಗಳು ಬಳಕೆಯಾಗುತ್ತವೆ.

ಆಯಿ/ಮಾ - ತಾಯಿ
ಪಾವಣೆರು - ಬೀಗರು

ವೈನಿ - ಅತ್ತಿಗೆ

ಕಾಕಾ - ಚಿಕ್ಕಪ್ಪ

ಮಾಂವಶಿ - ಚಿಕ್ಕಮ್ಮ

ಬಾವ್ - ಸಹೋದರ

ಮುಸಲ್ಮಾನರ ಆಡಳಿತ ಕಾಲದಲ್ಲಿ ನವಾಬರು, ಅಧಿಪತಿಗಳು ಗುಲಬರ್ಗಾ ಸುತ್ತಮುತ್ತಲಿನ ಪ್ರದೇಶದಲ್ಲಿ ಇಸ್ಲಾಂಧರ್ಮ ತುಂಬ ವ್ಯವಸ್ಥಿತವಾಗಿ ನೆಲೆಯೂರುವಂತೆ ಮಾಡಿದರು. ಸಹಜವಾಗಿ ಆ ಭಾಷೆಯ ಬಂಧುಸೂಚಕಗಳ ಪ್ರಭಾವ ಆ ಪ್ರದೇಶದ ಕನ್ನಡದ ಬಂಧುಸೂಚಕಗಳ ಮೇಲಾಯಿತು.

ಮಾ - ತಾಯಿ

ಚಿಚ್ಚಾ/ಚಾಚಾ - ಚಿಕ್ಕಪ್ಪ

ಮಾಮೂ - ಮಾವ

ಬೈಯಾ/ಬಾಯಿ - ಸಹೋದರ

ಬಾಬಾ - ತಂದೆ

ಆಧುನಿಕ ಕಾಲದಲ್ಲಿ ಕನ್ನಡವು ಇಂಗ್ಲಿಶಿನಿಂದ ಸ್ವೀಕರಿಸಿರುವ ಪದಗಳನ್ನು ನೋಡಿದರೆ ಇಂಗ್ಲಿಶ್ ಆಧುನಿಕ ಸಂಸ್ಕೃತಿಯ ಹೆಬ್ಬಾಗಿಲಾಗಿ ಪರಿಣಮಿಸಿರುವದನ್ನು ಗುರುತಿಸಬಹುದು. ಪ್ರತಿಷ್ಠೆ ಮತ್ತು ಅವಶ್ಯಕತೆ ಇದಕ್ಕೆ ಮುಖ್ಯಕಾರಣಗಳಾಗಿವೆ. ಉಚ್ಚಾರಣೆ ಮತ್ತು ಬಳಕೆ ಈ ಎರಡು ಸನ್ನಿವೇಶಗಳಲ್ಲಿಯೂ ಇಂಗ್ಲಿಶ್ ಬಂಧುಸೂಚಕಗಳ ಪ್ರಭಾವ ಕನ್ನಡದ ಮೇಲಾಗಿದೆ.

ಮಮ್ಮಿ-ತಾಯಿ

ಡ್ಯಾಡಿ-ತಂದೆ

ಅಂಟಿ-ಚಿಕ್ಕಮ್ಮ

ಅಂಕಲ್-ಚಿಕ್ಕಪ್ಪ

ಫಾದರ್-ತಂದೆ

ಮದರ್-ತಾಯಿ

ಫಾದರ್-ಇನ್-ಲಾ- ಮಾವ

ಮದರ್-ಇನ್-ಲಾ - ಅತ್ತೆ

ಸನ್-ಇನ್-ಲಾ- ಅಳಿಯ

ಡಾಟರ್-ಇನ್-ಲಾ- ಸೊಸೆ

ಕೋ-ಬ್ರದರ್- ಸಹ ಸಹೋದರ (ಷಡ್ಡಕ)

ಇಂತಹ ಆಂಗ್ಲ ಪದಗಳು ಕನ್ನಡ ಬಂಧುವಾಚಕಗಳನ್ನು ಪಲ್ಲಟ ಗೊಳಿಸಿವೆ. ಪಟ್ಟಣಿಗರಲ್ಲಿ ಅದರಲ್ಲೂ ವಿದ್ಯಾವಂತರಲ್ಲಿ ಆಂಗ್ಲಪದಗಳ ಬಳಕೆ ಹೆಚ್ಚು. ಅನ್ಯಭಾಷೆಯ ಬಂಧುಸೂಚಕಗಳು ನಮ್ಮ ಭಾಷೆಯ ರಚನೆಗೆ ಹೊಂದಿಕೊಳ್ಳುವಂತೆ ಅಲ್ಪಸ್ವಲ್ಪ ವ್ಯತ್ಯಾಸವಾದರೂ ನಮ್ಮ ಭಾಷೆಯ ರಚನೆಯ ನಿಯಮಗಳಿಗೆ ಹೊಂದಿಕೊಳ್ಳುತ್ತತೆಂಬು ದನ್ನು ಗಮನಿಸಬೇಕು (ಮಮ್ಮಿ, ಮಮ್ಮಿಯನ್ನು, ಮಮ್ಮಿಯಲ್ಲಿ).

ಕನ್ನಡ ಬಂಧುಸೂಚಕಗಳ ಮೇಲೆ ಕನ್ನಡೇತರ ದ್ರಾವಿಡ ಭಾಷೆಗಳ ಪ್ರಭಾವ ಹೇರಳವಾಗಿದೆ. ಕರಾವಳಿ ಪ್ರದೇಶದಲ್ಲಿ ತುಳು, ಮಲಯಾಳಂ ಭಾಷೆಗಳ, ಕೋಲಾರ,ಪಾವಗಡ ಪ್ರದೇಶದ ಕಡೆಗೆ ತೆಲುಗು ಭಾಷೆಯ, ಹಳೇ ಮೈಸೂರಿನ ದಕ್ಷಿಣ ಭಾಗದ ಕಡೆಗೆ ತಮಿಳ್ ಭಾಷೆಯ ಬಂಧು ಸೂಚಕಗಳು ಬಳಕೆಯಾಗುತ್ತವೆ. ಕನ್ನಡ ಮತ್ತು ಕನ್ನಡೇತರ ದ್ರಾವಿಡ ಭಾಷೆಗಳು ದ್ರಾವಿಡ ಪರಿವಾರಕ್ಕೆ ಸೇರಿರುವುದರಿಂದ ಅವುಗಳಲ್ಲಿಯ ಬಂಧುಸೂಚಕಗಳಲ್ಲಿಯ ಹೆಸರು ಮತ್ತು ಸಂಬೋಧನೆಯಲ್ಲಿ ಸಾಮ್ಯತೆಯಿದೆ ವಿನಃ ವೈಷಮ್ಯಗಳಿಲ್ಲ (ದ್ರಾವಿಡ ಬಂಧುಸೂಚಕಗಳ ಪಟ್ಟಿಯನ್ನು ಅನುಬಂಧ ಭಾಗದಲ್ಲಿ ಕೊಡಲಾಗಿದೆ ಗಮನಿಸಬಹುದು).

ಒಂದು ಭಾಷೆಯಲ್ಲಿ ಅನೇಕ ಭಾಷಾಪ್ರಭೇದಗಳಿದ್ದರೂ ಅದರಲ್ಲಿಯೂ ನಾಡಿನ ರಾಜಧಾನಿ ಸುತ್ತಮುತ್ತಲಿರುವ ಭಾಷಾಪ್ರಭೇದವು ಹೆಚ್ಚು ಪ್ರಭಾವಿತವಾಗಿರುತ್ತದೆ. ಆ ಪ್ರದೇಶದ ರೂಪಗಳು ಮಾಧ್ಯಮಗಳಲ್ಲಿ ಬಳಕೆಯಾಗುವುದು ಹೆಚ್ಚು. ಈ ಕಾರಣದಿಂದ ಉಳಿದ ಭಾಷಾಪ್ರಭೇದಗಳು ಆ ಪ್ರದೇಶದ ರೂಪಗಳನ್ನು ಸ್ವೀಕರಿಸುವುದುಂಟು. ಉದಾ: ಕಿತ್ತೂರು ಕರ್ನಾಟಕ ಪ್ರದೇಶದವರು ಹಳೇ ಮೈಸೂರು ಪ್ರದೇಶದ ಕಡೆಗೆ ಕೆಲಸ ಮಾಡಿ ಅಥವಾ ಓದಿ ಪುನಃ ತಮ್ಮ ಪ್ರದೇಶಕ್ಕೆ ಬಂದಾಗ ಅವರ ಜೊತೆಯಲ್ಲಿ ಆ ಪ್ರದೇಶದ ಇತರ ಪದಗಳಂತೆ ಬಂಧುಸೂಚಕಗಳು ಪ್ರಯಾಣ ಮಾಡುತ್ತವೆ. (ಹಳೇ ಮೈಸೂರಿ ಪ್ರದೇಶದ ಭಾಷೆ ಬರೆಹದ ಭಾಷೆ ಎಂಬ ಭಾವನೆ ಉತ್ತರದವರಿಗಿದೆ). ಅಮ್ಮ, ಚಿಕ್ಕಮ್ಮ, ತಾತ, ಅತ್ತಿಗೆ ಇತ್ಯಾದಿ ಹಳೇ ಮೈಸೂರಿನ ಪದಗಳು ಅವ್ವ, ಚಿಗವ್ವ, ಅಜ್ಜ, ವೈನಿ ಇತ್ಯಾದಿ ಕಿತ್ತೂರು ಕರ್ನಾಟಕದ ಪದಗಳಿಗಿಂತ ಶ್ರೇಷ್ಠ ಎಂಬ ಭಾವನೆ ಅಲ್ಲಿಯ ಜನರಿಗೆ ಬಂದರೆ ಆಶ್ಚರ್ಯವಿಲ್ಲ. ಹಾಗೆಯೇ ಕಿತ್ತೂರು ಕರ್ನಾಟಕದ ಕಡೆಯ 'ವೈನಿ' ಎಂಬ ಪದವು ಹಳೇ ಮೈಸೂರು ಕಡೆಯಲ್ಲಿ ಕ್ರಮೇಣ ಸ್ಥಾಪಿತವಾಗುತ್ತಿರುವುದನ್ನು ಗುರುತಿಸಬಹುದು.

ಬಂಧುಸೂಚಕಗಳ ಈ ವ್ಯತ್ಯಾಸ ಒಂದೊಂದು ಪ್ರದೇಶಕ್ಕೆ ಮಾತ್ರ ಸೀಮಿತವಾಗಿಲ್ಲ. ಆ ಪ್ರದೇಶದ ಒಳಗೆ ಜಿಲ್ಲೆ ಜಿಲ್ಲೆಗೂ ಭಿನ್ನತೆ ಕಂಡು ಬರುತ್ತದೆ. ಬೆಳಗಾವಿ ಪ್ರದೇಶದ ಕಡೆಗೆ 'ಅಜ್ಜ' ಎಂದರೆ, ವಿಜಾಪೂರದ ಕಡೆಗೆ 'ಮುತ್ಯಾ' ಎನ್ನುತ್ತಾರೆ. ಬಳ್ಳಾರಿ ಕಡೆಗೆ 'ತಾತ' ಎನ್ನುತ್ತಾರೆ. ಈ ಬದಲಾವಣೆ ತಾಲೂಕು-ತಾಲೂಕುಗಳಿಗೂ ಕಂಡು ಬರುತ್ತದೆ. ಬೆಳಗಾವಿ ಜಿಲ್ಲೆಯ ಉತ್ತರ ಭಾಗದಲ್ಲಿ ಅಜ್ಜಿಗೆ 'ಆಯಿ' ಎಂದು ಕರೆದರೆ ದಕ್ಷಿಣಭಾಗದಲ್ಲಿ 'ಅಮ್ಮ' ಎಂದು ಬಳಕೆಯಲ್ಲಿದೆ. ವಿದ್ಯಾವಂತರ ಭಾಷೆಯೂ ವಿದ್ಯಾವಂತರಲ್ಲದವರ ಭಾಷೆಯನ್ನು ಮಾರ್ಪಡಿಸುವುದಕ್ಕೆ ಒಂದು ನಿದರ್ಶನವನ್ನು ಕೊಡಬಹುದು. ಸವದತ್ತಿ

ಸುತ್ತಮುತ್ತಲಿನ ಹಳ್ಳಿಗಳಲ್ಲಿ 'ಅಜ್ಜಿ' ಎಂಬರ್ಥದಲ್ಲಿ 'ಅಮ್ಮ' ಪದ ಬಳಕೆಯಲ್ಲಿದೆ. ಆ ಹಳ್ಳಿಯಿಂದ ಪಟ್ಟಣಕ್ಕೆ ಬಂದ ವಿದ್ಯಾವಂತರು ಇತರರ ಮುಂದೆ ಆ ಪದವನ್ನು ಬಳಸದೆ ಆ ಪದದ ಬದಲು 'ಆಯಿ', 'ಅಜ್ಜಿ' ಎಂಬ ಪದವನ್ನು ಬಳಸುವುದುಂಟು. ಹೀಗೆ 'ಅಜ್ಜಿ' ಎಂಬರ್ಥದಲ್ಲಿ ಬಳಕೆಯಾಗುವ 'ಅಮ್ಮ' ಬಂಧುಸೂಚಕದ ಸ್ಥಾನ ಅಭದ್ರವಾಗುತ್ತ ಬಂದು ಕ್ರಮೇಣ ಆ ಪದವು ಲುಪ್ತವಾಗಿ ಹೋಗಬಹುದು.

ಈ ಮಾತನ್ನು ಎಲ್ಲಾ ಭಾಷಾ ಪ್ರಭೇದಗಳಿಗೂ ಅನ್ವಯಿಸಲು ಬರುವುದಿಲ್ಲವೆಂದು ಕಾಣುತ್ತದೆ. ಎಷ್ಟೋ ಭಾಷಾ ಪ್ರಭೇದಗಳು ಬರೆಹದ ಭಾಷೆಯನ್ನಾಡುತ್ತಿರುವ ಜನರ ಮಧ್ಯ ಅನೇಕ ವರ್ಷಗಳಿದ್ದರೂ ತಮ್ಮ ವೈಲಕ್ಷಣ್ಯಗಳನ್ನು ಅಚ್ಚಳಿಯದೆ ಉಳಿಸಿಕೊಂಡಿ ರುವುದಕ್ಕೆ ನಿದರ್ಶನಗಳಿವೆ. ಅಂತಹ ಜನರು ತಮ್ಮ ಗುಂಪಿನಲ್ಲಿ ಒಂದು ರೀತಿಯಾಗಿ, ಉಳಿದವರ ಜೊತೆಯಲ್ಲಿ ಇನ್ನೊಂದು ರೀತಿಯಾಗಿ ಮಾತನಾಡುವುದುಂಟು. ಬರೆಹದ ಭಾಷೆಯಂತೆಯೇ ಮಾತನಾಡಲು ಪ್ರಯತ್ನಿಸಿದರೆ ಅದು ಬಹಳ ಕೃತಕವಾಗಿ ಕಾಣಿಸುತ್ತದೆ. ಬಂಧುತ್ವಗಳ ಪ್ರಭಾವ ಶೀಘ್ರವಾಗಿ, ಸಾರ್ವತ್ರಿಕವಾಗಿ ನಡೆಯಲು ಭಾಷಾ ಸಮುದಾಯದ ಪ್ರತಿಭಟನೆ ಇದ್ದೇ ಇರುತ್ತದೆ. ಅನ್ಯಭಾಷೆಯ ಬಂಧುಸೂಚಕಗಳನ್ನು ತಕ್ಷಣವೇ ಸ್ವೀಕರಿಸುವುದಿಲ್ಲ ಉದಾ: ಮಮ್ಮಿ, ಡ್ಯಾಡಿ ಇಂತಹ ಪದಗಳು ಸಾಂಸ್ಕೃತಿಕ ಬದಲಾವಣೆಯ ಆವಿಷ್ಕಾರಗಳಾದರೂ ಅವುಗಳ ಬಳಕೆಗೆ ಸ್ವಭಾಷಿಕರ ಪ್ರತಿಭಟನೆ ಇದೆಯೆಂಬುದನ್ನು ಗಮನಿಸಬೇಕು.

ಆಧುನೀಕರಣ ಮತ್ತು ನಗರೀಕರಣಗಳ ಪ್ರಭಾವದಿಂದಾಗಿ ಸಂಸ್ಕೃತಿ ಪ್ರಸರಣವು ತೀವ್ರವಾಗಿ ನಡೆಯುತ್ತಿದೆ. ಅದರಿಂದ ಕುಟುಂಬ ರಚನೆ ಮತ್ತು ವ್ಯವಸ್ಥೆಯಲ್ಲಿ ಬದಲಾವಣೆ ಯಾಗುತ್ತಿದೆ. ಪ್ರೇಮವಿವಾಹ, ಅಂತರ್‌ಜಾತಿವಿವಾಹ ಇವು ಮಾನವನ ಸಾಮಾಜಿಕ ಬಾಂಧವ್ಯ ಗಳ ಮೂಲಸ್ವರೂಪವನ್ನೇ ಆಮೂಲಾಗ್ರವಾಗಿ ಪರಿವರ್ತನೆ ಮಾಡಿ ಮುಕ್ತ ಸಮಾಜ ಸ್ಥಾಪನೆಗೆ ಕಾರಣವಾಗಿದೆ. ತತ್ಪರಿಣಾಮವಾಗಿ ರಕ್ತ ಸಂಬಂಧಿಗಳಲ್ಲಿದ್ದ ಬಾಂಧವ್ಯ ಗಳು ಕಡಿಮೆಯಾಗಿ ರಕ್ತಸಂಬಂಧಿಗಳಲ್ಲದ ಜನರೊಡನೆ ಸಾಮಾಜಿಕ ಬಾಂಧವ್ಯಗಳು ಹೆಚ್ಚುತ್ತಿವೆ. ಇದರಿಂದ ಬಂಧುಸೂಚಕಗಳ ಸಂಬೋಧನೆಯ ವಿಧಾನವೂ ಬದಲಾಗುತ್ತಿದೆ. ಹಳ್ಳಿಗಳಲ್ಲಿ ಕುರುಬ, ಬೇಡ, ಒಕ್ಕಲಿಗ, ಲಿಂಗಾಯತ ಸಮುದಾಯಗಳಲ್ಲಿ ಪರಸ್ಪರು ಬಂಧುವಾಚಕಗಳನ್ನು ಬಳಸಿ ಸಂಬೋಧನೆ ಮಾಡುತ್ತಾರೆ (ಹರಿಜನ ಮತ್ತು ಬ್ರಾಹ್ಮಣರನ್ನು ಹೊರತುಪಡಿಸಿ). ಇಂತಹ ಸಮಾಜ ರಚನಾ ವಿನ್ಯಾಸದಲ್ಲಿ ಉಚ್ಚಸಾಮಾಜಿಕಸ್ಥಾನ ಹೊಂದುವುದು ಮುಖ್ಯವಲ್ಲ ಬಾಂಧವ್ಯಗಟ್ಟಿಗೊಳಿಸುವುದು ಮುಖ್ಯವಾಗಿದೆ. ಸಾಂಸ್ಕೃತಿಕ ಸಂಬಂಧವನ್ನು ಸೂಚಿಸುವ ಬಂಧುವಾಚಕಗಳ ಅಧ್ಯಯನವು ಭಾಷಾ ಸಂಸ್ಕೃತಿಯ ದೃಷ್ಟಿಯಿಂದ ಕೂತುಹಲಕಾರಿಯಾಗಿದೆ.

ಆಕರಗ್ರಂಥಗಳು

ಕನ್ನಡ

ಚಿದಾನಂದಮೂರ್ತಿ ಎಂ., ೧೯೮೧, 'ಕರ್ನಾಟಕ ವ್ಯಕ್ತಿನಾಮಗಳು', ವಾಗರ್ಥ, ಬಾಪ್ಕೊ ಪ್ರಕಾಶನ, ಬೆಂಗಳೂರು

ಚಿದಾನಂದಮೂರ್ತಿ ಎಂ., ೧೯೯೩, 'ಅಬ್ಬೆಯೆಂದತ್ತಿಗೆಯೆಂಬ ಮಾತನ್', ಹೊಸತು ಹೊಸತು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಿದಾನಂದಮೂರ್ತಿ ಎಂ., ೧೯೯೮, 'ವಚನಕಾರರ ಕಳು ಬಳ್ಳಿ ಪರಿಕಲ್ಪನೆ', ವಚನ ಶೋಧ-೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಜೋಗನ್ ಶಂಕರ., ೧೯೯೫, ಗ್ರಾಮಸಮಾಜ, ಜೀವ ಪ್ರಕಾಶನ, ಮೈಸೂರು.

ನಾರಾಯಣ ಕೆ.ವಿ, ಮತ್ತು ಇತರರು, ೨೦೦೦, 'ಭಾಷೆ' ವಿಶ್ವಕೋಶ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪಾಂಡುರಂಗ ಬಾಬು ಡಿ., ೧೯೯೮, 'ಹೇ ಮೀ ಲೇ', ಕನ್ನಡ ಅಧ್ಯಯನ ಸಂ-೫, ಸಂ-೧, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪೀಟರ್ ಜೆ. ಕ್ಲಾಸ್, ೧೯೮೭, 'ತುಳುವ ದರ್ಶನ', ಕನ್ನಡಕ್ಕೆ : ಎ.ವಿ.ನಾವಡ ಮತ್ತು ಸುಭಾಶ್ಚಂದ್ರ, ಪ್ರಾದೇಶಿಕ ವ್ಯಾಸಂಗ, ಕುಂದಾಪುರ

ಮಹಾದೇವಯ್ಯ ಪಿ., ೨೦೦೧, 'ಕನ್ನಡದಲ್ಲಿ ಬಂಧುಸೂಚಕ ಪದಗಳು', ನಮ್ಮ ಕನ್ನಡ, ಸಂಚಿಕೆ ೫೦, (ಸಂ) ಕೆ.ವಿ.ನಾರಾಯಣ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಶ್ರೀಕಂಠಯ್ಯ ತೀ.ನಂ., ೧೯೮೩, (ತೃ.ಆ) 'ಏನಿ ಗಡಿಂ ರೀ', ಸಮಾಲೋಕನ, ಶಾರದಾ ಮಂದಿರ, ಮೈಸೂರು.

ಸೇಡಿಯಾಪು ಕೃಷ್ಣಭಟ್., ೧೯೯೨, 'ಅತ್ತಿಗೆ', ವಿಚಾರ ಪ್ರಪಂಚ, ಕರ್ನಾಟಕ ಸಂಘ ಪುತ್ತೂರು

ಸೋಮಶೇಖರಗೌಡ, ೨೦೦೦, 'ಭಾಷೆ ರಚನೆ ಬಳಕೆ', ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು

ಇಂಗ್ಲಿಶ್

Balasubramanian G., 1999, 'Language and power in the rural context of Tamil Nadu' Indian Linguistics Volume 601-4

Brown Roger W and Margurete Ford., 1966, 'Address in American English' Dell Hymes Education Language in culture and Society [Horper & Row, New York]

Jampt Holmes., 1992 An Introducation To Socio linguistics Longman-London NewYork

Joseph N., 1980, Cultural Impacts in Kinship Terms sociolinguistics and Dialectology (Edit) S.Ages sthlalingom & K.Karunakaran. Annamaki University

Firth J.R., 1966. On Sociological Linguistics in languge in culture and society

Manuel M., 1981, 'Some Unique Kinship terms current in a dialect of KanyKumari District' IJDL-Vol-x

Misra K.S., 1977, 'Terms of Address and second person pronominal us age in Hindi' A Sociolinguistic study Bahri publication Pvt, Ltd.

Peter Trudgill., 1974, 'Sociolinguistic An Introduction' Penguin books Ltd.

Sharma D.D., 1985, 'Kinship terms of reference in Kumauni' (A Socio linguistic Appraisal) IJDL- XIV

Surya Kumari., 1986 'A Sociolinguistic study of Names and Address system in Telugu' IJDL 15:2

Sreedhar M.V., 1980 Correlation Between Marriage practices and Kinship Terms in some Dravidian Language 'Sociolinguistics and Dialectology' Ed- S.Agesthialingom K.KarunaKarna, Annamalai University, Annamalai nagar

೭೪

ಸಂಬೋಧನೆಗಳು : ಸಾಮಾನ್ಯ ಸ್ವರೂಪ

ಭಾಷಿಕರ ಪ್ರದೇಶ, ವರ್ಗ, ಜಾತಿ, ಲಿಂಗ, ವಯಸ್ಸುನ್ನಾಧರಿಸಿ ಸಂಬೋಧನೆಗಳ ಬಳಕೆಯಲ್ಲಿ ಭಿನ್ನತೆ ಕಂಡುಬರುತ್ತದೆ. ಭಾಷಾಸಮುದಾಯದಲ್ಲಿ ಭಾಷಿಕರ ಜೀವನ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಸಂಬೋಧನಾ ರೂಪಗಳು ಮಹತ್ವದ ಪಾತ್ರವಹಿಸುತ್ತವೆ. ಕನ್ನಡದಲ್ಲಿ ಬಳಕೆಯಲ್ಲಿರುವ ಕೆಲವು ಸಂಬೋಧನಾ ರೂಪಗಳ ಸ್ವರೂಪ ವನ್ನು ಇಲ್ಲಿ ವಿವೇಚಿಸಲಾಗಿದೆ. ಕರೆಯುವಾಗ ಇಲ್ಲವೆ ಕೂಗುವಾಗ ಉಪಯೋಗಿಸುವ ಪದಗಳು ಸಂಬೋಧನೆಗಳಾಗಿವೆ. ವ್ಯಾಕರಣ ವರ್ಗಗಳಲ್ಲಿ ಸಂಬೋಧನೆಗಳು ಅವ್ಯಯಗಳ ಕಕ್ಷೆಯಲ್ಲಿ ಬರುತ್ತವೆ. ಕೇಶಿರಾಜ ಹಳಗನ್ನಡದಲ್ಲಿ ಬಳಕೆಯಾದ ಸಂಬೋಧನೆಗಳನ್ನು ಒಂದು ಸೂತ್ರದಲ್ಲಿ ಹೇಳಿದ್ದಾನೆ.

ಸ್ಮರಣ ವಿಚಾರಾ ಮಂತ್ರಣ
ಪರಿಗತ ಮೆನಿಸಿರ್ಪುವೆಲೆಲೆಏ ಎಂಬಿವು ಸಂ
ಚರಿಸುವುದನುದನು ಮತದೊಳ್ ಬ
ಲ್ಲರಿ ನೇಕಾರ ಮದೆಕಾರ ಮವಧಾರಣೆಯೊಳ್ (ಸೂ ೩೨೬)

ಇದರರ್ಥ 'ಎ', 'ಎಲೆಲೆ', 'ಏ' ಎಂಬಿವು ಸ್ಮರಣೆ, ವಿಚಾರ ಹಾಗೂ ಸಂಬೋಧನೆ ಎಂಬರ್ಥಗಳಲ್ಲಿ ಬಳಕೆಯಾಗುತ್ತವೆ. 'ಗಡ' ಎಂಬುದು ಉಚಿತ ಸಂಭಾಷಣೆಯಲ್ಲಿ ಪ್ರಯೋಗವಾಗುತ್ತದೆ ಎಂದಿದ್ದಾನೆ. ಹಳಗನ್ನಡದ ಕಾವ್ಯಗಳಲ್ಲಿ 'ಏನಿಂ', 'ಗಡಿಂ' ಎಂಬ ರೂಪಗಳು ಸಂಬೋಧನೆಯಲ್ಲಿ ಬಳಕೆಯಾಗಿವೆ. 'ಏನಿ' ಸಂಬೋಧನೆಯ ಪ್ರಯೋಗ ನಡಗನ್ನಡದಲ್ಲಿದೆ. 'ಏನಿ ಪಶುಪತಿ ಭಟ್ಟರೇ ಸುಖದೊಳಿರ್ದಿರೆ' (ನಂಬಿಯಣ್ಣನರಗಳೆ) 'ಏನಿ ಬಿಜಯಂ ಗೈದಿದೆ (ಜೈಮಿನಿ ಭಾರತ) 'ಗಡಿಂ ಎಂಬುದು ಹಳಗನ್ನಡದಲ್ಲಿದಂತೆಯೇ ನಡುಗನ್ನಡದಲ್ಲಿಯೂ ಇದೆ (ವಿವರಣೆಗಾಗಿ ನೋಡಿ ತೀ.ನಂ. ಶ್ರೀಕಂಠಯ್ಯ 'ಏನಿ-ಗಡಿಂ-

ರೀ' ಸಮಾಲೋಕನ). ಏನ್+ಇಂ=ಏನಿಂ> ಏನಿ ಆಗಿದೆ. ಹಳಗನ್ನಡದ ಅಂತ್ಯ ಬಿಂದು ನಡುಗನ್ನಡದಲ್ಲಿ ಲೋಪವಾಗುವುದು.

ಸಾಮಾನ್ಯವಾಗಿ 'ಗಡ' ಎಂಬ ಹಳಗನ್ನಡ ಅವ್ಯಯಕ್ಕೆ 'ಇಂ' ಆಖ್ಯಾತ ಪ್ರತ್ಯಯಸೇರಿ 'ಗಡಿಂ' ಆಗಿದೆ [ಗಡ+ಇಂ=ಗಡಿಂ, ಗಡ+ಇ=ಗಡಿ]. ಈ ಎರಡು ರೂಪಗಳು ಪ್ರೇಕ್ಷಕರ ಗಮನವನ್ನು ಸೆಳೆಯಲ್ಲಿಕ್ಕೆ ಬಳಕೆಯಾಗಿವೆ. ಇಲ್ಲೆಲ್ಲ ಬಹುವಚನದ ಸಂಬೋಧನೆಯಿದೆ ಎಂಬುದನ್ನು ಗಮನಿಸಬೇಕು.

'ಏಡ್ರಿ ಆಡಿವೆಪ್ಪ ಅರಾಮ ಇದ್ದಿರಾ'
'ಏಡ್ರಿ ಅಕ್ಕಾರ್ ಅಡಿಗೆ ಆಯ್ತಾ'

ವ್ಯಾಕರಣದ ದೃಷ್ಟಿಯಿಂದ ಯೋಚಿಸಿದರೆ 'ಏನ್' ಸರ್ವನಾಮ. ಆದರೆ ಏನಿಂ (ಏನಿ) ಎಂಬಲ್ಲಿ ಅದು ಅವ್ಯಯದಂತೆ ಪ್ರಯೋಗವಾಗುತ್ತದೆ. ಹೊಸಗನ್ನಡದ 'ಏಡ್ರಿ' ಎಂಬುದು ಏನಿಂ (ಏನಿ) ಎಂಬ ರೂಪಕ್ಕೆ ಸಮಾನವಾಗಿದೆ. ಹೊಸಗನ್ನಡದ ಬಳಕೆಯ ಮಾತಿನಲ್ಲಿ ಏನ್ರಿ ಎಂಬಂತೆಯೇ ಯಾಕ್ರಿ, ಬೇಕ್ರಿ, ಹಾಕ್ರಿ ಎಂಬ ರೂಪಗಳು ಬಳಕೆಯಲ್ಲಿವೆ ಇಲ್ಲೆಲ್ಲ ಯಾಕೆ, ಬೇಕು, ಹಾಕು ರೂಪಗಳಲ್ಲಿ 'ರೀ' ಎಂಬುದು ಸೇರಿದೆ. ಅಷ್ಟೇ ಅಲ್ಲ 'ರೀ' ಎಂಬುದೇ ಸ್ವತಂತ್ರ ಸಂಬೋಧನಾರ್ಥದಲ್ಲಿ ಪ್ರಯೋಗವಾಗುವುದುಂಟು.

'ರೀ (ರಿ) ಕೊಸ್ ಅಳಾಕ್ ಹತ್ತತಿ ಎತ್ತಿಕೊಳ್ಳಿರಿ'
'ರೀ (ರಿ) ಆಫೀಸಿಗೆ ಟೈಯಂ ಆಯ್ತ ನೋಡ್ರಿ'

ಹೆಂಡಂದಿರರು ಗಂಡಂದಿರರನ್ನು ಹೆಸರು ಹಚ್ಚಿಕರೆಯುವುದಿಲ್ಲ 'ರೀ' (ರಿ) ಎಂದೇ ಸಂಬೋಧಿಸುವುದುಂಟು (ಹೆಸರು ಹಚ್ಚಿ ಕರೆದರೆ ಗಂಡನ ಆಯುಷ್ಯ ಕಡಮೆಯಾಗುವುದು ಎಂಬ ನಂಬಿಕೆಯಿದೆ). ಹೊಸಗನ್ನಡದ 'ರೀ' ಎಂಬುದು ಆಧುನಿಕ ಪೂರ್ವ ಕನ್ನಡದ ಇರ್ (<ಇ) ಗೆ ಪ್ರತಿನಿಧಿಯಾಗಿ ಪ್ರಯೋಗವಾಗುತ್ತದೆ. 'ಇರ್' ಸ್ವರಾಂತ್ಯವಾಗಿ 'ಇರಿ' ಆಗಿದೆ [ಬಂದಿರ್>ಬಂದಿರಿ]. ವಚನಗಳಲ್ಲಿ, ಕೀರ್ತನೆಗಳಲ್ಲಿ ಏಕತಾನತೆಯನ್ನು ಮುರಿಯಲು ಆತ್ಮೀಯವಾಗಿ ಸಂಭಾಷಣೆ ಶುರುವಾಗುತ್ತದೆ. ಆ ಸಂದರ್ಭದಲ್ಲಿ ಎಲೋ, ಎಲವೋ ಅಣ್ಣಗಳಿರಾ, ಭೋ, ರೋ ಮೊದಲಾದ ಸಂಬೋಧನಾರೂಪಗಳು ಬಳಕೆ ಯಾಗುತ್ತವೆ. ಇವು ವಚನ ಮತ್ತು ಕೀರ್ತನಗಳ ವೈಶಿಷ್ಟ್ಯಗಳಾಗಿವೆ.

ಆಧುನಿಕ ಪೂರ್ವ ಸಾಹಿತ್ಯದಲ್ಲಿ 'ಅಬ್ಬೆ' ಎಂಬುದಕ್ಕೆ 'ತಾಯಿ' ಎಂಬರ್ಥವಿತ್ತು (ಚಲಬ್ಬೆ, ಅತಿಮಬ್ಬೆ). ಕಿತ್ತೂರು ಕರ್ನಾಟಕದಲ್ಲಿ ವಯಸ್ಸಾದ ಸ್ತ್ರೀಯರನ್ನು ಗೌರವದಿಂದ ಸಂಬೋಧಿಸುವಾಗ 'ಬೇ' ಎಂಬುದನ್ನು ಬಳಸುವುದುಂಟು. ಅದು ಹಿಂದಿನ 'ಅಬ್ಬೆ'ಯ ಅವಶೇಷವಾಗಿದೆ ಅಥವಾ ಸವಕಳಿ ರೂಪವಾಗಿದೆ.

'ಯಮ್ಮಾಬೇ ಊಟಕ್ ಹಚ್ಚಬೇ'
'ಯವ್ವಾಬೇ ಹಾಡ ಬೇ'
'ಯತ್ತಿಬೇ ಬಾರಬೇ'

ಬ್ರಾಹ್ಮಣರನ್ನು ಹೊರತುಪಡಿಸಿ ಎಲ್ಲ ಜಾತಿ, ವರ್ಗದವರು ಬೇ ರೂಪವನ್ನು ಬಳಸುತ್ತಾರೆ. ಕಿತ್ತೂರು ಕರ್ನಾಟಕದಲ್ಲಿ 'ಅ' ಕಾರಾದಿ ಬಂಧುವಾಚಕಗಳನ್ನು ಸಂಬೋಧಿಸುವಾಗ 'ಯ' ಕಾರಾದಿಯಾಗಿ ಬಳಕೆಯಾಗುತ್ತವೆ.

'ಯವ್ವಾಬೇ ಬಾರಬೇ'

'ಯಮ್ಮ ತಿನ್ನಾಕ ಏನ ಅತಿ ಬೇ'

'ಯಪ್ಪ ರೊಕ್ಕಾ ಕೊಡ್'

ಇದೇ ರೀತಿ ಯತ್ತಿ (ಅತ್ತೆ), ಯಕ್ಕ (ಅಕ್ಕ), ಯಜ್ಜ (ಅಜ್ಜ) ಕಿತ್ತೂರು ಕರ್ನಾಟಕ ಪ್ರದೇಶದಲ್ಲಿ ವಯಸ್ಸಾದ ಪುರುಷರನ್ನು ಸಂಬೋಧಿಸುವಾಗ 'ಪೊ'/'ಪೋ' ಎಂಬ ರೂಪಗಳನ್ನು ಬಳಸುವುದುಂಟು.

'ಯಜ್ಜಾ ಪೋ (ಪೊ) ಯಾಳೆ ಆಗೇತಿ ಮನಿಗಿ ಹೋಗ್ ಪೋ'

ಇದೇ ರೀತಿ 'ಯಪ್ಪಾ ಪೋ', 'ಮಾವಾ ಪೋ' ವಯಸ್ಸಾದ ಸ್ತ್ರೀಯರನ್ನು ಸಂಬೋಧಿಸುವಾಗ 'ವೊ'/'ವೋ' ಬಳಸುವುದುಂಟು. 'ಯಮ್ಮಾವೊ ಯಾಳೆ ಆಗೇತಿ ರೊಟ್ಟಿ ಮಾಡವೋ'.

ಮೈಸೂರು ಜಿಲ್ಲೆಯ ಹುಣಸೂರ ಪ್ರದೇಶದ ಕನ್ನಡ ಮಾತಾಡುವ ವಿವಿಧ ಜಾತಿಯವರು (ಮೇಲ್ಜಾತಿ-ಬ್ರಾಹ್ಮಣ, ಲಿಂಗಾಯತ. ಮಧ್ಯಮಜಾತಿ-ತೊರೇರ, ಉಪ್ಪಾರ, ಈಡಿಗ. ಕೆಳಜಾತಿ-ಹೊಲೆಯ, ಮಾದಿಗ) 'ಣೇ ಮೀ ಲೇ' ಎಂಬ ವಿಶಿಷ್ಟ ಸಂಬೋಧನಾ ರೂಪಗಳನ್ನು ಬಳಸುತ್ತಾರೆ. ಡಿ. ಪಾಂಡರಂಗಬಾಬುರವರು ಅವುಗಳ ಸ್ವರೂಪ ಹಾಗೂ ಬಳಕೆಯ ಸಂದರ್ಭವನ್ನು ಗುರುತಿಸಿದ್ದಾರೆ*. 'ಣೇ' ರೂಪವನ್ನು ಮಧ್ಯಮ ಜಾತಿಯವರು ತಮ್ಮೊಳಗೆ ಮಾತ್ರ ಬಳಸುತ್ತಾರೆ.

'ಣೇ ವಸಿಯಸುರ್ಯೋಡು' (ಸ್ವಲ್ಪ ಸಾರು ಕೊಡು)

'ಬಾಣೇ' (ಬಾರೇ)

ಕಿರಿಯರು ಹಿರಿಯರೊಂದಿಗೆ ಮಾತಾಡುವಾಗಲೂ 'ಣೇ' ಬಳಕೆಯಾಗುತ್ತದೆ.

'ಅತ್ತೆ ಹೆಣ್ ಕೊಟ್ಟಿಣೇ' (ಅತ್ತೆ ಹೆಣ್ಣು ಕೊಡುವೆಯಾ)

ಮೇಲ್‌ಸ್ತರದವರು ಕೆಳಸ್ತರದವರನ್ನುದ್ದೇಶಿಸಿ ಮಾತಾಡುವಾಗ 'ಮೀ' ರೂಪದ ಬಳಕೆ ಕಂಡು ಬರುತ್ತದೆ.

'ಮೀ ನಿಂತ್ಕೊ' (ಲೇ ನಿಂತಕೋ)

'ಲೇ' ರೂಪ ಮೇಲ್ಜಾತಿಯವರಲ್ಲಿ ಬಳಕೆಯಾಗುತ್ತದೆ. ಇದು ಆ ಪ್ರದೇಶದ ವ್ಯವಹಾರಿಕ ಶಿಷ್ಟ ಕನ್ನಡದಲ್ಲಿ ಬಳಕೆಯಾಗುತ್ತದೆ.

'ಲೇ ಬಾ ಇಲ್ಲಿ'

'ಲೇ ಅಕ್ಕಾ ಕಾಸುಕೊಡೆ'

ಕಲ್ಯಾಣ ಕರ್ನಾಟಕದಲ್ಲಿ 'ಈಗಾ' ಎಂಬುದು ಸಂಬೋಧನೆಯಲ್ಲಿ ಬಳಕೆಯಾಗುತ್ತದೆ. 'ಈಗಾಬಾಯಿಲ್ಲಿ' 'ಈಗಾನೋಡು' ಗಮನ ಸೆಳೆಯುವುದಕ್ಕಾಗಿ ಇದು ಬಳಕೆಯಾಗುತ್ತಿರಬಹುದು. ಶಿಕ್ಷಣ ಮತ್ತು ಆಧುನೀಕರಣ ಪ್ರಕ್ರಿಯೆಯಿಂದಾಗಿ ಇಂತಹ ಸಂಬೋಧನಾ ರೂಪಗಳ ಬಳಕೆ ಕಡಮೆಯಾಗುತ್ತಿದೆಯಾದರೂ ಗ್ರಾಮೀಣ ಪ್ರದೇಶದ ಕೃಷಿಕಾರ್ಮಿಕರ ಆಡುನುಡಿಯಲ್ಲಿ ಇವುಗಳನ್ನು ಗಮನಿಸಬಹುದಾಗಿದೆ. ಯಕ್ಷಗಾನ ಬಯಲಾಟಗಳಲ್ಲಿ 'ಎಲವೋ' ಎಂಬ ರೂಪ ಬಳಕೆಯಾಗುತ್ತಿದೆ.

'ಎಲವೋ ಸೂತನ ಮಗನೇ ನೀ
ಕಲಹದೊಳತಿ ಸಹಸಿಗನೇ'

ಪ್ರೇಕ್ಷಕರ ಗಮನವನ್ನು ಸೆಳೆಯುವುದು ಇವುಗಳ ಮುಖ್ಯ ಉದ್ದೇಶವಾಗಿರುತ್ತದೆ.

ಮರಾಠಿ ಮೂಲದಿಂದ ಬಂದಿರುವ 'ಬಾಯಿ' ರೂಪ ಪ್ರತಿಷ್ಠಿತ ವರ್ಗದ ಸ್ತ್ರೀ ವ್ಯಕ್ತಿ ನಾಮಗಳ ಕೊನೆಯಲ್ಲಿ ಬರುತ್ತದೆ. ಶಾರದಾಬಾಯಿ, ಜೀಜಾಬಾಯಿ, ಕಸ್ತೂರಿಬಾಯಿ ಅವರನ್ನು 'ಬಾಯಿ' ಎಂದೇ ಸಂಬೋಧಿಸುವುದುಂಟು.

'ಬಾಯಿಯವರೇ ಸಾಹೇಬರು ಇದ್ದಾರೆಯೇ?'

ಗಂಡದಿರರು ತಮ್ಮ ಹೆಂಡಂದಿರರಿಗೆ 'ಬಾಯಿ' ಎಂದೇ ಸಂಬೊಧಿಸುವುದುಂಟು.

'ಮನೆತನದ ಜವಾಬ್ದಾರಿ ಬಾಯಿಯವರೇ ಮಾಡ್ತಾರ'
'ಬಾಯಿ ಅವರೇ ತರಕಾರಿ ಏನು ತರಬೇಕು'

ಇತ್ತೀಚೆತ್ತಲಾಗಿ 'ಬಾಯಿ' ರೂಪ ಸಂಕುಚಿತ ಅರ್ಥವನ್ನು ಪಡೆದಿದೆ ಆಸ್ಪತ್ರೆಯಲ್ಲಿಯ ದಾದಿಯರಿಗೆ ಮಾತ್ರ ಬಳಕೆಯಾಗುತ್ತದೆ. ಅಧಿಕಾರಿಗಳನ್ನು ಕುರಿತು ಮಾತಾಡುವಾಗ 'ಸಾಹೇಬ' ಎಂಬ ಅರ್ಯಾಬಿಕ್ ರೂಪ ಬಳಕೆಯಾಗುತ್ತದೆ.

'ಸಾಹೇಬರೇ ನಾಳೆ ಆಫೀಸಿಗೆ ಬರುವುದಿಲ್ಲ'
'ಬಿದರಿ ಸಾಹೇಬರು ಬಾಳ ಚಲೋ ಅಧಾರ'

ಸಾಹೇಬ ಪದದ ಬಳಕೆಯ ಹಿಂದೆ ಸಾಮಾಜಿಕ ಬದ್ಧತೆಯಿದೆ. ಇಂಗ್ಲಿಶ್ ಭಾಷೆಯ ಪ್ರಭಾವದಿಂದಾಗಿ ಸರ್, ಮಿಸ್ಟರ್, ಮೇಷ್ಟ್ರ ರೂಪಗಳು ಪರಿಚಿತ ಹಾಗೂ ಅಪರಿಚಿರನ್ನು ದ್ದೇಶಿಸಿ ಮಾತಾಡುವಾಗ ಬಳಕೆಯಾಗುವುದುಂಟು.

'ಏನ್ರಿ ಸರ್ ಅಥವಾ ಮೇಷ್ಟ್ರೆ ಚನಾಗಿದ್ದೀರಾ'
'ಗಾಣಿಗಿಸರ್ ಚೆನ್ನಾಗಿ ಪಾಠ ಮಾಡುತ್ತಿದ್ದರು'.

ಸಮ ವಯಸ್ಕರರು ಜಗಳಾಡುವ ಸಂದರ್ಭದಲ್ಲಿ 'ಮಿಸ್ಟರ್' ರೂಪ ಬಳಕೆಯಾ ಗುವುದುಂಟು.

'ಏ ಮಿಸ್ಟರ್ ಸರಿಯಾಗಿ ಮಾತಾಡು'
'ಏ ಮಿಸ್ಟರ್ ಬಾ ಇಲ್ಲಿ'

ದೂರವಾಣಿಯಲ್ಲಿ ಕರೆ ಬಂದಾಗ ಮಾತಾಡುವುದಕ್ಕಿಂತ ಮುಂಚೆ 'ಹಲೋ' ಎಂದು ಹೇಳುವುದುಂಟು. ಭಾಷಿಕರ ಗಮನ ಸೆಳೆಯುವುದೇ ಅದರ ಉದ್ದೇಶವಾಗಿದೆ.

'ಹಲೋ ಸರ್ ನಾನು ಬಿದರಿ ಅವರು ಮಾತಾಡುವುದು
ಚನ್ನಾಗಿದ್ದೀರಾ ಸರ್'
'ಹಲೋ ಮತ್ತೇನು ವಿಶೇಷ'

ಅಂಗವಿಕಲರನ್ನುದ್ದೇಶಿಸಿ ಮಾತಾಡುವಾಗ ಅವರ ಊನವಾದ ಭಾಗವನ್ನು ಅನುಲಕ್ಷಿಸಿ ಸಂಬೋಧಿಸುವುದುಂಟು.

'ಕುಂಟಾ ಎಲೆ ಅಡಕೆ ತಗೊಂದ ಬಾರಲೇ'
'ಕುಡ್ಡ ಇಲ್ಲಿ ಬಾ'
'ಎಲೆ ಕಿವುಡ, ಈ ಕಡೆ ಬಾರಲೇ'

ದ್ವೇಷ, ಅಸೂಯೆ, ಜಗಳ ಇಂತಹ ಆವೇಶದ ಸಂದರ್ಭದಲ್ಲಿ ಪ್ರಾಣಿ ಸೂಚಕಗಳನ್ನು ಬಳಸಿ ಸಂಬೋಧಿಸಿವುದುಂಟು.

'ಏ ನಾಯಿ ಅಂತಹದೇ ಹೋಗಾಚೆ'
'ಏ ಕತ್ತೆ, ಏ ಮಂಗ್ಯಾ'
'ಹಂದಿ ಹಾಗೆ ಗಫ್ ಗಫ್ ತಿನ್ನಬಾರದು'

ಅಪ್ಪ, ಅವ್ವ, ಅಣ್ಣ, ತಮ್ಮ, ತಂಗಿ, ಚಿಕ್ಕಪ್ಪ, ದೊಡ್ಡಪ್ಪ, ಅತ್ತೆ ಈ ಬಂಧುವಾಚಕಗಳು ಸಂಬೋಧನೆಯಲ್ಲಿಯೂ ಇನ್ನೊಬ್ಬರಿಗೆ ಪರಿಚಯಿಸುವಾಗಲೂ ಬಳಕೆಯಾಗುತ್ತವೆ.

'ಅತ್ತಿ ನೀರ ಬಂದಿವೆ ಕ್ವಡಾಕೊಡು'
'ತಂಗಿ ಹೋಲಕ್ಕ ಹೋಗಿ ರೊಟ್ಟಿ ಕೊಟ್ಟ ಬಾರಮ್ಮ'
'ಇವರು ನಮ್ಮ ಅತ್ತಿಯವರು'.

ಸೊಸೆ, ನಾದುನಿ, ನೆಗೆಣ್ಣಿ, ಮೈದುನ, ಅತ್ತಿಗೆ, ಷಡ್ಡಕ್ ಇಂತಹ ಬಂಧುಸೂಚಕಗಳು ಸಂಬೋಧನೆಯಲ್ಲಿ ಬಳಕೆಯಾಗುವುದಿಲ್ಲ ಇನ್ನೊಬ್ಬರಿಗೆ ಪರಿಚಯಿಸುವಾಗ ಬಳಕೆಯಾಗುತ್ತವೆ.

'ಇವರು ನಮ್ಮ ನಾದುನಿ ಜಮಖಂಡಿಯಲ್ಲಿ ಇರ್ತಾರ'
'ಇವರು ನಮ್ಮ ಮೈದುನರು'.

ಮಕ್ಕಳು ಬಳಸುವ ಸಂಬೋಧನೆಯಲ್ಲಿ ಪ್ರಾದೇಶಿಕ ವ್ಯತ್ಯಾಸಗಳು ಕಂಡುಬರುತ್ತವೆ. ಗ್ರಾಮೀಣ ಪ್ರದೇಶದ ಮಕ್ಕಳು ಯಪ್ಪಾ, ಯವ್ವಾ, ತಮ್ಮ್ಯಾ ಎಂದು ಸಂಬೋಧಿಸಿದರೆ ನಗರ ಪ್ರದೇಶದ ಮಕ್ಕಳು ಅಪ್ಪಾಜಿ, ಅವ್ವಾರಿ, ಅಕ್ಕಾರಿ ಎಂದು ಸಂಭೋದಿಸುವುದುಂಟು. ಹಳೆ ಮೈಸೂರು ಕಡೆಗೆ ಮಕ್ಕಳನ್ನು 'ಅಮ್ಮಿ' ಎಂದು ಸಂಬೋದಿಸುವುದುಂಟು. 'ಅಮ್ಮಿ

ಬಾ ಇಲ್ಲಿ', 'ಏನಮ್ಮ ಅಮ್ಮಿ ಹೇಗಿದ್ದೀಯಾ'. ನಾಮವಾಚಕ, ಗುಣವಾಚಕಗಳ ಕೊನೆಯ ಸ್ವರವನ್ನು ದೀರ್ಘಮಾಡಿದರೆ ಸಂಬೋಧನೆ ಯಾಗುವುದುಂಟು.

ಅಣ್ಣಾ ಯಣ್ಣಾ (ಆ)
ಅಣನೇ (ಏ)
ಅಣಂದಿರಾ (ಇರಾ)
ಚಿಕ್ಕವನೇ ಳೇ (ಏ)

ಗೌರವಾರ್ಥದಲ್ಲಿ ಕೆಲವು ಶಬ್ದಗಳ ಮುಂದೆ 'ಅವರು' ಎಂಬ ಬಹುವಚನ ರೂಪ ಬರುತ್ತದೆ. ಆಗ 'ಯ್, ನ್' ಆಗಮಗಳಾಗುವುದು. ಗಾಂಧೀಜಿಯವರೇ, ಅಮ್ಮನವರೇ ಮುಂತಾದವು.

ಭಾಷಿಕರು ಕೆಲವು ಸಂದರ್ಭದಲ್ಲಿ ಅಂದರೆ ಧಾರ್ಮಿಕ ವಿಷಯಗಳನ್ನು ಚರ್ಚಿಸುವಾಗ, ಹಬ್ಬ-ಹರಿದಿನ, ಮದುವೆ-ಜಾತ್ರೆಗಳಲ್ಲಿ ಉಲ್ಲಾಸವಾದಾಗ, ಕೌಟುಂಬಿಕ ತೊಂದರೆಗಳು ಬಂದಾಗ ಅದರಂತೆ ಕೋಪ, ದುಃಖ, ಭಯ, ತಿರಸ್ಕಾರ, ಮೆಚ್ಚುಗೆ, ಆಕ್ಷೇಪ ಇಂತಹ ಆವೇಶದ ಸನ್ನಿವೇಶಗಳಲ್ಲಿ ಅಥವಾ ಅಂತಹ ಮನೋಭಾವಗಳನ್ನು ವ್ಯಕ್ತ ಪಡಿಸುವಾಗ ಅರ್ಥವಿಲ್ಲದ ಶಬ್ದಗಳನ್ನು ಬಳಸುತ್ತಾರೆ. ಅವುಗಳು 'ಭಾವಸೂಚಕಾವ್ಯಯ' ಗಳೆನಿಸುವವು. ಅಯ್ಯೋ, ಅಕ್ಕಟಾ, ಅಕಟಕಟಾ, ಆಹಾ, ಭಲೆ, ಭಲಾ, ಛೆ, ಥೂ, ಅಬ್ಬಾ, ಅಹಹಾ, ಆಹಾ, ಓಹೋ, ಹೋ, ಹೋಹೋ, ಅಃ, ಆಃ, ಓ, ಏ, ಚೀ, ಥು ಮುಂತಾದುವು. ಕೆಲವು ಭಾಷಿಕ ಸಂದರ್ಭಗಳಲ್ಲಿ ಬೈಗಳು ರೂಪಗಳೇ ಸಂಬೋಧನೆಗಳಾಗುತ್ತವೆ. 'ಏ ಐಯ್ಯ' 'ಏ ತುರುಕ', 'ಏ ಮಗನೆ ಬಾರಲೇ ನಿನ್ನ ಐದೇಶಿ ಬಲ್ಲೆ' ಮುಂತಾದುವು. ಗ್ರಾಮೀಣರ ಬದುಕಿನಲ್ಲಿ ಭಾಷೆ ನಿರರ್ಗಳವಾಗಿ ಮಡಿಯಿಲ್ಲದೆ, ನಯನಾಜೂಕುಗಳ ಪರಿವಿಲ್ಲದೆ ಅಭಿವ್ಯಕ್ತವಾಗುತ್ತದೆ. ಆವೇಶದ ಸಂದರ್ಭದಲ್ಲಿ ಬಳಕೆಯಾಗುವ ಸಂಬೋಧನೆಯ ರೂಪಗಳನ್ನು ಭಾಷಿಕರು ವೇಗೋಚ್ಚಾರವಾಗಿ ಹಾಗೂ ಪದಗಳನ್ನು ಮೊಟಕುಗೊಳಿಸಿ ಉಚ್ಚರಿಸುತ್ತಾರೆ.

ಕನ್ನಡದಲ್ಲಿ ಬಳಕೆಯಾಗುವ ಸಂಬೋಧನೆಗಳನ್ನು ಹೀಗೆ ಗುರುತಿಸಬಹುದು. 'ಲೆ/ಲೇ' ಎಂಬ ರೂಪಗಳು ಹಳೇ ಮೈಸೂರು ಕಡೆಗೆ ತಂದೆ/ತಾಯಿಯನ್ನು ಕರೆಯುವಾಗ ಬಳಕೆಯಾಗುತ್ತದೆ. ಅಪಾಲೇ, ಅವ್ವಾಲೇ ಇದೇ ರೂಪವನ್ನು ಕಿತ್ತೂರು ಕರ್ನಾಟಕದ ಕಡೆಗೆ ಆತ್ಮೀಯ ಗೆಳೆಯರನ್ನು ಕರೆಯುವಾಗ ಮಾತ್ರ ಬಳಕೆಯಾಗುತ್ತದೆ. ಯಲ್ಲಾಲೇ, ಕಮಲಿಲೇ. ಇಂತಹ ಕೆಲವು ವ್ಯತ್ಯಾಸವನ್ನು ಬಿಟ್ಟರೆ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ವಯಸ್ಸು, ಲಿಂಗ, ಸಾಮಾಜಿಕ ವರ್ಗಗಳನ್ನಾಧರಿಸಿ ಪೊ/ಪೋ, ವೊ/ವೋ, ಲೊ/ಲೋ, ಬೇ, ರೀ, ಏನೊಂದ್ರೆ, ಎಲೋ/ ಎಲೋ, ಎಲಾ, ಎಲೌ, ಓ, ಎಲೆ/ಎಲೇ, ಎ/ಏ, ಎಲೆಲೆ, ಎಲ್ಲೆ ಅಮ್ಮಾವರೇ, ಅಣ್ಣಾವರೇ, ಸರ್, ಬಾಯಿ, ಹಲೋ, ಮೇಷ್ಟ್ರು, ಸಾಹೇಬ್ ಇಂತಹ ಸಂಬೋಧನೆಗಳು ವಿಭಿನ್ನ ಸಂದರ್ಭ, ಸನ್ನಿವೇಶಕ್ಕೆ ತಕ್ಕಂತೆ ಬಳಕೆಯಾಗುತ್ತವೆ. ಸಂಬೋಧನೆಗಳಿಂದಲೇ ಭಾಷಿಕರ ಪ್ರದೇಶವನ್ನು ಅವರ ಮನೋವೃತ್ತಿಗಳನ್ನು ಹಾಗೂ ಬೇರೆ ಭಾಷಿಕರೊಡನೆ ಹೊಂದಿರುವ ಅವರ ಸಾಮಾಜಿಕ ಸಂಬಂಧವನ್ನು ಗುರುತಿಸಬಹುದು.

ಆಕರಗ್ರಂಥಗಳು

ಕನ್ನಡ

ಚಿದಾನಂದಮೂರ್ತಿ ಎಂ., ೧೯೮೧, 'ಕರ್ನಾಟಕ ವ್ಯಕ್ತಿನಾಮಗಳು', ವಾಗರ್ಥ, ಬಾಪ್ಕೋ ಪ್ರಕಾಶನ, ಬೆಂಗಳೂರು

ಚಿದಾನಂದಮೂರ್ತಿ ಎಂ., ೧೯೯೩, 'ಅಬ್ಬೆಯೆಂದತ್ತಿಗೆಯೆಂಬ ಮಾತನ್', ಹೊಸತು ಹೊಸತು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಿದಾನಂದಮೂರ್ತಿ ಎಂ., ೧೯೯೮, 'ವಚನಕಾರರ ಕಳು ಬಳ್ಳಿ ಪರಿಕಲ್ಪನೆ', ವಚನ ಶೋಧ-೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಜೋಗನ್ ಶಂಕರ., ೧೯೯೫, ಗ್ರಾಮಸಮಾಜ, ಜೀವ ಪ್ರಕಾಶನ, ಮೈಸೂರು.

ನಾರಾಯಣ ಕೆ.ವಿ, ಮತ್ತು ಇತರರು, ೨೦೦೦, 'ಭಾಷೆ' ವಿಶ್ವಕೋಶ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪಾಂಡುರಂಗ ಬಾಬು ಡಿ., ೧೯೯೮, 'ಣೇ ಮೀ ಲೇ', ಕನ್ನಡ ಅಧ್ಯಯನ ಸಂ-೫, ಸಂ-೧, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪೀಟರ್ ಜೆ. ಕ್ಲಾಸ್, ೧೯೮೭, 'ತುಳುವ ದರ್ಶನ', ಕನ್ನಡಕ್ಕೆ : ಎ.ವಿ.ನಾವಡ ಮತ್ತು ಸುಭಾಶ್ಚಂದ್ರ, ಪ್ರಾದೇಶಿಕ ವ್ಯಾಸಂಗ, ಕುಂದಾಪುರ

ಮಹಾದೇವಯ್ಯ ಪಿ., ೨೦೦೧, 'ಕನ್ನಡದಲ್ಲಿ ಬಂಧುಸೂಚಕ ಪದಗಳು', ನಮ್ಮ ಕನ್ನಡ, ಸಂಚಿಕೆ ೫೦, (ಸಂ) ಕೆ.ವಿ.ನಾರಾಯಣ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಶ್ರೀಕಂಠಯ್ಯ ತೀ.ನಂ., ೧೯೮೩, (ತ್ರೈ.ಆ) 'ಏನಿ ಗಡಿಂ ರೀ', ಸಮಾಲೋಕನ, ಶಾರದಾ ಮಂದಿರ, ಮೈಸೂರು.

ಸೇಡಿಯಾಪು ಕೃಷ್ಣಭಟ್., ೧೯೬೨, 'ಅತ್ತಿಗೆ', ವಿಚಾರ ಪ್ರಪಂಚ, ಕರ್ನಾಟಕ ಸಂಘ ಪುತ್ತೂರು

ಸೋಮಶೇಖರಗೌಡ, ೨೦೦೦, 'ಭಾಷೆ ರಚನೆ ಬಳಕೆ', ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು

ಇಂಗ್ಲಿಶ್

Balasubramanian G., 1999, 'Language and power in the rural context of Tamil Nadu' Indian Linguistics Volume 601-4

Brown Roger W and Margurete Ford., 1966, 'Address in American English' Dell Hymes Education Language in culture and Society [Horper & Row, New York]

Jampt Holmes., 1992 An Introducation To Socio linguistics Longman- London NewYork

Joseph N., 1980, Cultural Impacts in Kinship Terms sociolinguistics and Dialectology (Edit) S.Ages sthlalingom & K.Karunakaran, Annamaki University

Firth J.R., 1966, On Sociological Linguistics in languge in culture and society

Manuel M., 1981, 'Some Unique Kinship terms current in a dialect of KanyKumari District' IJDL-Vol-x

Misra K.S., 1977, 'Terms of Address and second person pronominal usage in Hindi' A Sociolinguistic study Bahri publication Pvt, Ltd.

Peter Trudgill., 1974, 'Sociolinguistic An Introduction' Penguin books Ltd.

Sharma D.D., 1985, 'Kinship terms of reference in Kumauni' (A Socio linguistic Appraisal) IJDL- XIV

Surya Kumari., 1986 'A Sociolinguistic study of Names and Address system in Telugu' IJDL 15:2

Sreedhar M.V., 1980 Correlation Between Marriage practices and Kinship Terms in some Dravidian Language 'Sociolinguistics and Dialectology' Ed- S.Agesthialingom K.KarunaKarna, Annamalai University, Annamalai nagar

೮೫

ನಾಟಕದಲ್ಲಿ ಸಂಬೋಧನೆ

ಸಂಗ್ಯಾಬಾಳ್ಯಾ ಗೀತರೂಪಕದಲ್ಲಿ ಬಳಕೆಯಾದ ಸಂಬೋಧನೆ ರೂಪಗಳ ಸ್ವರೂಪವನ್ನು ಈ ಅಧ್ಯಾಯದಲ್ಲಿ ವಿವೇಚನೆಮಾಡಲಾಗಿದೆ. 'ಸಂಗ್ಯಾಬಾಳ್ಯಾ' ಗೀತರೂಪಕವು ಉತ್ತರಕರ್ನಾಟಕ ವ್ಯಾಪ್ತಿಯನ್ನು ಮೀರಿ ಪಶ್ಚಿಮ ಮತ್ತು ದಕ್ಷಿಣ ಕರ್ನಾಟಕದವರೆಗೂ ಪಸರಿಸಿದೆ. ಇತ್ತೀತ್ತಲಾಗಿ ಚಲನಚಿತ್ರವಾಗಿ ನಾಡಿನ ತುಂಬೆಲ್ಲ ಪರಿಚಿತವಾಗಿದೆ. ನೆರೆಯ ಮಹಾರಾಷ್ಟ್ರದಲ್ಲಿಯೂ ಅಷ್ಟೇ ಜನಪ್ರಿಯವಾಗಿದೆ. ಪ್ರದೇಶದಿಂದ ಪ್ರದೇಶಕ್ಕೆ ದಾಟಿಕೊಂಡು ಬರುವಾಗ ನಾಟಕದ ಹಾಡುಗಳ ರಚನೆಯಲ್ಲಿ ಆಯಾ ಪರಿಸರದ ಭಾಷೆ ಪ್ರಭಾವ ಬೀರುತ್ತವೆ. ಸಂಗ್ಯಾಬಾಳ್ಯಾದ ಕರ್ತೃ, ಕಾರಣ, ಘಟನೆಯ ಹಿನ್ನಲೆ ಇವೆಲ್ಲವುಗಳನ್ನು ಪಕ್ಕಕ್ಕೆ ಸರಿಸಿ ರಂಗಭೂಮಿಯಲ್ಲಿ ಅದನ್ನು ನೋಡಿದಾಗ ಮನಸೆಳೆಯುವ ಹಾಡುಗಳು, ಮೈನವರೇಳಿಸುವ ಸನ್ನಿವೇಶ, ಮಜಭೂತಾದ ಪಾತ್ರಸೃಷ್ಟಿ, ಸಹಜ ಮತ್ತು ವಿಶಿಷ್ಟವಾದ ಸಂಬೋಧನೆಗಳು ಮತ್ತು ಸಂಭಾಷಣೆಯ ರೀತಿ ಇವು ಇದರ ವೈಶಿಷ್ಟ್ಯಗಳಾಗಿವೆ. ಜಾನಪದ ಸಣ್ಣಾಟಗಳ ಪಂಕ್ತಿಯಲ್ಲಿ ಸಂಗ್ಯಾಬಾಳ್ಯಾ ಅತ್ಯಂತ ಶ್ರೇಷ್ಠವಾದುದು ಮತ್ತು ಜನಪ್ರಿಯವಾದುದಾಗಿದೆ. ಇದರ ಜನಪ್ರಿಯತೆಗೆ ಮೂರು ಕಾರಣಗಳಾಗಿವೆ.

೧. ಸಾಮಾಜಿಕ ವಸ್ತುವನ್ನೊಳಗೊಂಡ ವಾಸ್ತವಿಕ ಘಟನೆಗಳ ಮೇಲೆ ಈ ನಾಟಕ ರಚನೆಯಾಗಿದೆ.

೨. ನಾಟಕದ ಉದ್ದಕ್ಕೂ ಹಾಸ್ಯ, ಪ್ರಣಯ, ಶೃಂಗಾರಗಳೇ ತುಂಬಿಕೊಂಡಿದ್ದು, ಅವು ಪ್ರೇಕ್ಷಕರನ್ನು ಸೆರೆಹಿಡಿಯುತ್ತವೆ. ಅವುಗಳ ಒಡಲಲ್ಲಿ ದುರಂತ ಅಡಗಿದೆ ಎಂಬುದನ್ನು ಮರೆಯಲಾಗದು.

೩. ಪ್ರಾದೇಶಿಕ ಭಾಷಾವೈಶಿಷ್ಟ್ಯತೆಯನ್ನು ಬಳಸಿಕೊಂಡಿರುವುದರಿಂದ ಪ್ರೇಕ್ಷಕರಿಗೆ ಹೆಚ್ಚು ಹತ್ತಿರವಾಗಿದೆ. ಇದರಿಂತ ಭಾಷಾಸಂಕೀರ್ಣತೆ ದೂರವಾಗಿ ನಾಟಕದ ಆಶಯ ಜನರಿಗೆ ಸುಲಭವಾಗಿ ಅರ್ಥವಾಗುತ್ತದೆ.

ಈ ಎಲ್ಲ ಅಂಶಗಳಿಂದ ಈ ಗೀತರೂಪಕ ಕನ್ನಡ ಜಾನಪದ ರಂಗಭೂಮಿಯ ಮೇಲೆ ತನ್ನದೇ ಆದ ವೈಶಿಷ್ಟ್ಯತೆಯನ್ನು ಪಡೆದುಕೊಂಡಿದೆ. ಈ ಗೀತರೂಪಕದಲ್ಲಿ ಬಳಕೆಯಾದ ಬಂಧುಸೂಚಕಗಳ ಬಳಕೆಯ ಸ್ವರೂಪ ವೈವಿಧ್ಯಪೂರ್ಣವಾಗಿವೆ.

ಈ ಗೀತರೂಪಕದ ಪಾತ್ರಗಳ ಸಂಬಂಧವನ್ನು ಏಳು ಗುಂಪುಗಳಾಗಿ ವರ್ಗೀಕರಿಸ ಬಹುದು.

ಅ.	ಗಂಡ	+	ಹೆಂಡತಿ	+	ತಮ್ಮಂದಿರರು
	ಈರ್‍ಯಾ		ಗಂಗಾ		ಇರಪಕ್ಷಿ, ಬಸವಂತ
ಆ.	ಅತ್ತಿಗೆ	+	ಮೈದುನರು		
	ಗಂಗಾ		ಇರಪಕ್ಷಿ, ಬಸವಂತ		
ಇ.	ಗೆಳೆಯರು				
	ಸಂಗ್ಯಾ	+	ಬಾಳ್ಯಾ		
ಈ.	ಅಳಿಯ	+	ಅತ್ತೆ		
	ಸಂಗ್ಯಾ		ಪರಮ್ಮ		
ಉ.	ಮಿಂಡ	+	ರಂಡಿ		
	ಸಂಗ್ಯಾ		ಗಂಗಿ		
ಊ.	ಒಡೆಯ	+	ಸೇವಕರು		
	ಈರ್‍ಯಾ		ಬ್ಯಾಗಾರಿ		
ಎ.	ವ್ಯಾಪಾರಿ	+	ಗಿರಾಕಿ		
	ಸೇಡಜಿ		ಸಂಗ್ಯಾಬಾಳ್ಯಾ		

ಮೊದಲನೆಯ ಗುಂಪಿನಲ್ಲಿ ಗಂಗಿಯ ಕೌಟುಂಬಿಕ ಸಂಬಂಧವಿದೆ. ಅಲ್ಲಿ ಗಂಗಿಯ ಪಾತ್ರ (ಆದರ್ಶ) ಗೃಹಣಿಯಂತಿದೆ. ಆಕೆ ಸಂಗ್ಯಾನ ಕೂಡ ಹಾದರ ಮಾಡಿ ಕೌಟುಂಬಿಕ ಸಂಬಂಧದಿಂದ ಕಳಚಿ ಅಪರಾದಿಯಾಗಿ ಸಂಪೂರ್ಣ ದುರಂತ ದೆಸೆಹೊಂದುತ್ತಾಳೆ. ಜನರಿಂದ ಹಾಗೂ ಗಂಡ, ಮೈದುನರಿಂದ 'ರಂಡಿ' ಎಂದು ಕರೆಯಲ್ಪಡುತ್ತಾಳೆ ಇವು ಆಯಾ ವ್ಯಕ್ತಿಗಳ ಸಂಬಂಧವನ್ನು ಸೂಚಿಸುತ್ತವೆ. ಪಾತ್ರಗಳು ಆಯಾ ಸಂದರ್ಭಕ್ಕೆ ತಕ್ಕಂತೆ ಸಂಬೋಧಿಸುವ ವಿಧಾನದಲ್ಲಿಯೂ ಬದಲಾವಣೆ ಕಂಡುಬರುತ್ತದೆ. ಸಂಗಪ್ಪ-ಸಂಗಣ್ಣ-ಸಂಗ-ಸಂಗ್ಯಾ, ಈರಪ್ಪ-ಈರಣ್ಣ-ಈರ್‍ಯಾ, ಗಂಗಾ-ಗಂಗಿ ಮುಂತಾದವುಗಳನ್ನು ಸಂಬೋಧಿಸು ವಾಗ ಮೇಲು ಕೀಳು, ಆತ್ಮೀಯತೆ ಈ ಎಲ್ಲ ಭಾವನೆಗಳು ಗಮನಾರ್ಹವಾದವುಗಳಾಗಿವೆ. ಸಂಗ್ಯಾಕೀಳಾಗಿ, ಸಂಗಣ್ಣ, ಸ್ನೇಹ, ಆತ್ಮೀಯತೆ, ಸಂಗಪ್ಪ ಹೆಮ್ಮೆ ಪಡುವಂತಹ ಸನ್ನಿವೇಶ ಆಯಾ ವ್ಯಕ್ತಿಗಳನ್ನು ಕರೆಯುವಾಗ ಅವು ಒಂದು ರೀತಿಯಲ್ಲಿ ಸ್ಥಾನಮಾನದ ಸೂಚಕಗಳಾಗಿ ರುತ್ತವೆ. ಆಯಾವ್ಯಕ್ತಿಗಳನ್ನು ಸಂಬೋಧಿಸುವಾಗ ಪ್ರೇಕ್ಷಕರ ಮನೋಧೋರಣೆ (Atti-

tude) ಬದಲಾಗುತ್ತದೆ. ಇಂತಹ ಸಂಬೋಧನೆಯಲ್ಲಿ ಹೆಚ್ಚು ಒತ್ತುಕೊಟ್ಟು ದೀರ್ಘವಾಗಿ ಉಚ್ಚರಿಸುತ್ತಾರೆ. ಈ ರೀತಿಯ ಉಚ್ಚಾರಣೆ ನಾಟಕೀಯವಾಗಿರದೆ ಸಹಜವಾಗಿರುತ್ತದೆ.

ಈರ್ಯಾ ವ್ಯಾಪಾರಕ್ಕೆ ಹೋಗುವ ಸಿದ್ಧತೆಯಲ್ಲಿದ್ದಾಗ ಈರ್ಯಾ ಮತ್ತು ಗಂಗಾಳ ನಡುವೆ ನಡೆಯುವ ಸಂಭಾಷಣೆಯ ಸಂದರ್ಭದಲ್ಲಿ ಕೆಲವು ಸಂಬೋಧನೆಗಳು ಕಂಡುಬರುತ್ತವೆ. ಅವುಗಳ ರಚನೆ ಸರಳವಾಗಿದ್ದರೂ ನಾಟಕದಲ್ಲಿ ಬಂದಾಗ ನಾಟಕೀಯೆನಿಸುತ್ತವೆ.

ಸಖಿಬಾಬಾ
ಪ್ರಿಯ ನಿಮಗೆ ಕೈ ಮುಗಿಯುವೆ
ಪ್ರಾಣಕಾಂತಾ ನಾ ಹೆಂಗ್ ಜೀವಿಸಲೋ
ಕಾಂತಾ| ಕರಸೀದ ಕಾರಣವೆನೂ
ಕೇಳಕಾಂತೆ|

ಕಿತ್ತೂರ ಕರ್ನಾಟಕದ ಆಡುನುಡಿಯಲ್ಲಿ ಇಂತಹ ಸಂಬೋಧನೆಗಳು ಬಳಕೆಯಾಗುವುದಿಲ್ಲ. ಆದರೆ ಇವು ಈ ಗೀತರೂಪಕದಲ್ಲಿ ಕಾಣಿಸಿಕೊಂಡು ಕೃತಕವಾಗಿ ನಾಟಕೀಯವಾಗಿ ಬಳಕೆಯಾಗಿವೆ. ಅಂದರೆ 'ದ್ವಿಸ್ತರತೆ' (ಡೈಗ್ಲಾಸಿಯಾ) ಇಲ್ಲಿ ಕಂಡು ಬಂದಿದೆ. ಬಹುಶಃ ಕಂಪನಿ ನಾಟಕಗಳ ಪ್ರಭಾವ ಸಂಗ್ಯಾಬಾಳ್ಯಾ ಮೇಲೆ ಆಗಿರಬೇಕು(!) ಬಂಧುವಾಚಕಗಳ ಮತ್ತು ಸಂಬೋದನೆಗಳ ಬಳಕೆಯನ್ನು ನೋಡಿದರೆ ಅವು ವಾಕ್ಯದ ಆರಂಭದಲ್ಲಿ ಅಥವಾ ಮಧ್ಯದಲ್ಲಿ ಹೆಚ್ಚು ಒತ್ತುಕೊಟ್ಟು ದೀರ್ಘವಾಗಿ ಉಚ್ಚರಿಸುವು ದುಂಟು. ಅದು ಸಣ್ಣಾಟಗಳ ಸಂಪ್ರದಾಯವೆಂಬಂತೆ ಕಂಡುಬರುತ್ತದೆ.

ತಂಗಿ ಗಂಗವ್ವ। ನೀನು ಗಂಗವ್ವ ಬಾರವ್ವ ಹೊರಗ
ನಾ ಅತ್ತಿಮನಿ ಸೊಸಿಯಮ್ಮಾ ಹರಸಿ ಯ ಒಗತಾನ
ಬಾರ ಆಯಿ| ಬಂದಿಯ ಭಾಳ ದಿನಕ್
ಮಿತ್ರ ಬಾಳಣ್ಣ ಹೇಳುತ್ತೇನೆ ಕೇಳುವಂತನಾಗು

ಸನ್ನಿವೇಶದ ಜೀವಂತಿಕೆಯ ದೃಷ್ಟಿಯಿಂದ ಇವು ಮುಖ್ಯವಾಗಿವೆ. ವಾಕ್ಯಗಳ ಮಧ್ಯೆ ಬಂದಾಗ ವ್ಯಕ್ತಿನಾಮಗಳು ದೀರ್ಘತೆಯಿಂದ ಉಚ್ಚಾರವಾಗುವುದುಂಟು.

ಇರಪಕ್ಷಿ-ಬಸವಂತ ಬರ್‍ಯಪ್ಪ ತಮ್ಮಗಳಿರಾ
ಹೇಳ್‌ಪರಮ್ಮ| ಅದೇನ್ ಬಿಚ್ಚಿಹೇಳಮ್ಮಾ

ಕೆಲವು ವಾಕ್ಯಗಳಂತು ಸಂಭಾಷಣೆಯ ಸಂದರ್ಭದಲ್ಲಿ ತಟ್ಟನೆ ಎದುರಿನ ಪಾತ್ರಕ್ಕೆ ಪ್ರತಿಕ್ರಿಯಿಸಿದ ರೂಪಗಳಾಗಿ ವ್ಯಕ್ತವಾಗಿರುವುದನ್ನು ಕಾಣುತ್ತೇವೆ. ಈರ್ಯಾ ಗಂಗಾಳಿಗೆ ಬಸವಣ್ಣ ದೇವರಿಗೆ ಹೋಗಬೇಕೆಂದು ಹೇಳಿದಾಗ

ಈರ್ಯಾ- ಕೇಳತಾಂತೇ| ಬಸವಣ್ಣ ದೇವರಾ
ನೀ ಹೋಗಬೇಕ್| ನಾಳಿಸ್ವಾಮಾರಾ.

ಗಂಗಾ-ಮೂರಂತಸ್ತಿನ ಮನೆಯೊಳು ಯಾರ‍್ಯಾರು ಸುಳುವಿಲ್ಲಾ
ಒಂದು ಹಡೆದಿಲ್ಲೋ ಪ್ರಿಯಾ ಕಂದಿಲ್ಲೋ ನನ್ನಧ್ಯಾಯ.

ತನ್ನ ಅಂತರಂಗದ ಆಸೆಯನ್ನು, ತಾರುಣ್ಯದ ಸಹಜ ಬಯಕೆಯನ್ನು ಹೇಳುತ್ತಾಳೆ.

'ಯಮ್ಮಾ ಎಷ್ಟದೂರ ಅತಿ'
'ನನ್ನ ಮಗಳ ಬಂತ ಬಾರ್'

ಮರಡಿ ಬಸವಣ್ಣನ ಜಾತ್ರೆಯಲ್ಲಿ ಸಂಗ್ಯಾದಾರಿಕಟ್ಟಿ ಪ್ರೇಮಯಾಚಿಸಿದಾಗ ಗಂಗಿ ಅವನನ್ನು ಉದ್ದೇಶಿಸಿ

ದೊರಿ ಈರ‍್ಯಾ ನನ್ನ ಪ್ರಾಣಕಾಂತಾ
ಮೈದುನರು| ಇರಪಕ್ಸಿ-ಬಸವಂತ

ವಿವಾಹಿತ ಸ್ತ್ರೀ ವ್ಯಾಮೋಹ ಸರಿಯಲ್ಲವೆಂದು ಸಂಗ್ಯಾನಿಗೆ ಬುದ್ಧಿಹೇಳುತ್ತಾಳೆ. ಈ ಗೀತರೂಪಕದಲ್ಲಿ ಸಂಭಾಷಣೆಗೆ ಹೆಚ್ಚಿನ ಮಹತ್ವವಿದೆ. ಪಾತ್ರಗಳು ಹಾಡುಹೇಳಿ ಹಾಡಿನಲ್ಲಿರುವ ಅರ್ಥವನ್ನು ಸ್ಪಷ್ಟಗೊಳಿಸಲು ಮಾತು ಬೆಳೆಸುತ್ತವೆ. ಪಾತ್ರಧಾರಿಗಳ ಸಂಬೋಧನೆಯಲ್ಲಿ ಯಮ್ಮಾ, ಯಣ್ಣಾ, ಯತ್ತಿ, ಮಿತ್ರ ಇಂತಹ ರೂಪಗಳು ಪುನಃ ಪುನಃ ಆವೃತ್ತಿಯಾಗುತ್ತವೆ. ಇವು ಪಾತ್ರಧಾರಿಗಳಿಗಿರುವ ಸಂಬಂಧವನ್ನು ಸೂಚಿಸುತ್ತವೆ. ಸಂಬೋಧನೆಗಳು ಪಾತ್ರಗಳ ಮಾನಸಿಕ ಸ್ಥಿತಿಯನ್ನು ಸಮರ್ಥವಾಗಿ ಪ್ರೇಕ್ಷಕರಿಗೆ ಅರಿವು ಮಾಡಿಕೊಡುತ್ತವೆ.

ಗೆಳೆಯ ಹೇಳುತ್ತೇನೆ ಕೇಳುವಂತನಾಗು
ಗೆಳೆಯ ಅದೇನಿರುವುದು ಚೆಂದವಾಗಿ ಹೇಳುವಂತನಾಗು

ಮುಂತಾದ ವಾಕ್ಯಗಳು, ಪದಪುಂಜಗಳು ಪ್ರೇಕ್ಷಕರ ಗಮನವನ್ನು ಸೆಳೆಯುತ್ತವೆ. ಪರಮ್ಮ ತನ್ನ ಗಂಡನಿಗೆ 'ಮುದುಕ' ಎಂದೂ ಅವನು ಪರಮ್ಮಳಿಗೆ 'ಮುದುಕಿ' ಎಂದು ಸಂಬೋಧಿಸುತ್ತಾರೆ. ಸಂಬೋಧನೆಯಲ್ಲಿ ಬಳಕೆಯಾಗುವ ಶಬ್ದಚಿತ್ರಗಳಿಂದ ಹೊಸ ಅರ್ಥವಂತಿಕೆ ಹೊಳೆಯತ್ತದೆ.

ಸರದಾರ ನನ್ನ ಗಂಡ ಸರಿಗಿ ಮಾಡಿಸಿಕೊಟ್ರ
ಸರದಾಳಿ ಕೆಳಗ ಬರಿಗೊಳ್ಳ| ಗೆಳೆತೆವ್ವ
ನಗಿ ನಮಗ್ಯಾತಕ||

'ಸರದಾರ' ಎನ್ನುವ ಪದದ ಹಿಂದೆ ಗಂಡ ಎಂತವನೇ ಇರಲಿ ಹೆಂಡತಿಯ ಪಾಲಿಗೆ ಅವನು 'ಸರದಾರ' ಅವನಿರುವವರೆಗೆ ಅವಳು ಏನೇನೂ ಅಪೇಕ್ಷಿಸಲಾರಳು. ಅವನು ಇರದಾಗ 'ಸರದಾಳ ಕೆಳಗ ಬರಿಗೊಳ್ಳ' ಎಂಬ ಸಾಲು ವಿರಹಿಯ ಶೂನ್ಯತೆಯನ್ನು ಚಿತ್ರಿಸುತ್ತದೆ. ಬಾಳ್ಯಾ ಗಂಗಾನ ಹತ್ತಿರ ಬಂದು ಸಂಗ್ಯಾನ ಕೂಡುವಂತೆ ಒತ್ತಾಯಿಸಿದಾಗ ಅವನಿಗೆ ಗಂಗಾ ಹೇಳುವ ಮಾತು ತುಂಬ ಮಾರ್ಮಿಕವಾಗಿದೆ.

ಬಾಳಪ್ಪಣ್ಣಾ ಕಲಿತೇನೋ
ಕುಂಟಲತನಾ
ನನ್ನಸರಿ ಅಕ್ಕಾತಂಗಿ ಇಲ್ಲೇನೊ
ಯಣ್ಣಾ ನಿನಗ್

ಇಲ್ಲಿ ಬಳಕೆಯಾದ 'ಅಣ್ಣಾ' ಎಂಬ ರೂಪ ಅದು ಹೊತ್ತುಕೊಳ್ಳುವ ಭಾವ ಎಷ್ಟು ಹಿರಿದು! (ಸ್ತ್ರೀವಾದಿ ತತ್ವಗಳ ಹಿನ್ನೆಲೆಯಲ್ಲಿ ಇಂತಹ ಹೇಳಿಕೆಗಳನ್ನು ವಿಶ್ಲೇಷಿರಬೇಕಾಗಿದೆ). ಬಾಳ್ಯಾ ಪಾಶ್ಚಾತಾಪಗೊಂಡು ಬಂದದಾರಿಗೆ ಮರಳುತ್ತಾನೆ. ಅನೈತಿಕ ವರ್ತನೆಯನ್ನು ತಡೆಯಲು ಬಂಧುಸೂಚಕಗಳು ಮಹತ್ವದ ಪಾತ್ರವಹಿಸುತ್ತವೆ. ಎಂಬುದು ಗಮನಿಸಬೇಕಾದ ಸಂಗತಿ. ಗೀತರೂಪಕದ ಉದ್ದಕ್ಕೂ 'ಎಲೆಲೆ' ಎಂಬ ಸಂಬೋಧನೆಯ ರೂಪ ಪುನರಾವೃತ್ತಿ ಯಾಗುತ್ತದೆ 'ಎಲೆಲೆ ಸಂಗ್ಯಾ ಸಿಕ್ಕಿ ಬಿದ್ದ್ಯಾನೋ' ಮುಂತಾದವು ಪ್ರೇಕ್ಷಕರ ಗಮನವನ್ನು ಸೆಳೆಯುವುದು ಇವುಗಳ ಮುಖ್ಯ ಉದ್ದೇಶವಾಗಿದೆ.

ಪರಮ್ಮಳು ಸಂಗ್ಯಾನ ಸೋದರತ್ತೆ. ಗಂಗಿಯನ್ನು ಸಂಗ್ಯಾನಿಗೆ ತಂದುಕೊಡುವಲ್ಲಿ ಇವಳು ಮಹತ್ವದ ಪಾತ್ರ ವಹಿಸುತ್ತಾಳೆ. ಗಂಗಿಯ ಮನಸ್ಸನ್ನು ಕದಡುತ್ತಾಳೆ. ಸಂಗ್ಯಾ ಪರಮ್ಮಳನ್ನು 'ಯತ್ತಿ' ಎಂದೇ ಸಂಬೋಧಿಸುತ್ತಾನೆ. 'ಕೇಳಬೇಕ ಕೇಳಬೇಕ ಯತ್ತಿ ಮಾತಾ' ಎನ್ನುವುದನ್ನು ಗಮನಿಸಿದರೆ ಅಳಿಯಂದಿರಿಗೆ ತಮ್ಮ ಸೋದರತ್ತೆಯರ ಮೇಲೆ ಅಪಾರ ಸಲಿಗೆ ಮತ್ತು ಆತ್ಮೀಯತೆ, ಅದರಂತೆ ಅತ್ತೆಯಂದಿರರಿಗೂ ಸೊದರಳಿಯರ ಮೇಲೆ ಅಷ್ಟೇ ವಾತ್ಸಲ್ಯವಿರುತ್ತದೆ. ಸಂಗ್ಯಾನ ಕೊಲೆಯಾದಾಗ ಪರವ್ಮು ತುಂಬ ನೋವು ಪಟ್ಟುಕೊಳ್ಳುತ್ತಾಳೆ.

ಸಂಗ್ಯಾನ ಕೊಂದವರ | ಚೆಂಡಿಚಿವುಟಲಿ
ಸಂಗಪ್ಪನನ್ನಳಿಯ | ಬಂಗಾರದಂತವಾ

ಎನ್ನುವಲ್ಲಿ ಭಾವ ತೀವ್ರತೆಯಿದೆ. ಗುಡಿಯಲ್ಲಿ ಗಂಗಿ, ಪರಮ್ಮ, ಪೂಜಾರಿಯರ ಸಂವಾದದಲ್ಲಿ ಕಂಡುಬರುವ 'ಯಮ್ಮಾಬೇ ಹಿಂದಿನ ಹುಡುಗಿಯಾರ್' 'ಯಾಕೋ ಪೂಜಾರಿ' ಎನ್ನುವಲ್ಲಿ ಹಾಸ್ಯಲಾಸ್ಯವಾಡಿದೆ. ಸಂಗ್ಯಾ-ಗಂಗಿಯರ ಶೃಂಗಾರದ ಉನ್ಮಾದದಲ್ಲಿ

'ಪ್ರಿಯಾಂಗಾತೇ ಫಾಸಿ ಮಾಡಬೇಡ'

ಎಂಬಸಾಲಿನಲ್ಲಿ ವಿರಹದ ತೃಪ್ತಿಯ ಹೋರಾಟ ಬಿಚ್ಚಿಕೊಂಡಿದೆ. ಈರ್ಯಾನಿಗೆ ಹಾದರದ ವಿಷಯ ತಿಳಿದಾಗ ತಾನು ಅಂತವಳಲ್ಲವೆಂದು ಸಮರ್ಥಿಸಿಕೊಳ್ಳುತ್ತಾಳೆ.

ಬಾನನ್ನ ಇರಪಕ್ಷಿ-ಬಸವಂತ| ಬುದ್ದ್ಯುಳ್ಳ ಮೈದುನರ್‍ಯಾ
ಸೇರಲಾರದ ಗಂಡ | ಹಾದರ ಹೊರಿಸ್ಯಾನು

ಗಂಗಿ ತನ್ನ ರಕ್ಷಣೆಗಾಗಿ ಸತ್ಯವನ್ನು ಮರೆಮಾಚಲು ಯತ್ನಿಸುತ್ತಾಳೆ. ಕರ್ನಾಟಕದಲ್ಲಿ 'ಮೈದುನ' ರೂಪ ಸಂಬೋಧನೆಯಲ್ಲಿ ಬಳಕೆಯಾಗುವುದಿಲ್ಲ. ಆದರೆ ಇಲ್ಲಿ ಬಳಕೆಯಾಗಿರುವುದು ಗಮನಾರ್ಹ.

ಸಂಬೋಧನೆಯಲ್ಲಿ ದ್ವಿರುಕ್ತಿಗಳು ಕೇವಲ ಪ್ರಾಸಕ್ಕಾಗಿ ಉಪಯೋಗವಾಗದೆ ಆಯಾ ಸನ್ನಿವೇಶದ ಪಾತ್ರಗಳ ವ್ಯಕ್ತಿತ್ವದ ಮೇಲೆ ಬೆಳಕು ಬೀರುತ್ತವೆ.

ಯಮ್ಮಾ ಯಮ್ಮಾ ಪರಮ್ಮಾ
ಕಾಂತಾ! ನನ್ನ ಕಾಂತಾ
ಎಲೆಎಲೆ ಬ್ಯಾಗಾರಿ ಸುಳ್ಳಾತೊ ಯಾಪಾರಾ.

ಸಂಬೋಧನೆಗಳ ಪುನರುಕ್ತಿಗಳು ನಾಟಕದ ಸೌಂದರ್ಯವನ್ನು ಹೆಚ್ಚಿಸುತ್ತವೆ.

ಸಂಗ್ಯಾಬಾಳ್ಯಾ ಗೀತರೂಪಕದ ಸಂಬೋಧನೆಯ ಘಟಕಗಳನ್ನು ಹೀಗಿವೆ.

ಪುರುಷ ಪಾತ್ರಕ್ಕೆ ಅಪ್ಪಾ, (ಬಾಳಪ್ಪ, ಸಂಗಪ್ಪ ಮುಂತಾದವು), ಮಿತ್ರಾ, ಗೆಳೆಯಾ ಅಣ್ಣಾ (ಯಣ್ಣಾ), ದೊರಿ (ಈರ್‍ಯಾದೊರಿ), ಮೈದುನ

ಸ್ತ್ರೀಪಾತ್ರಕ್ಕೆ ಕಾಂತಾಮಣಿ, ಕಾಮಿನಿ, ಕಾಂತೇ, ಸಖಿಯೇ, ರಮಣಿ, ನಾರಿ, ಯತ್ತಿ, ಯಮ್ಮ, ತಂಗಿ, ಎಕ್ಕಲಹುಡುಗಿ ಉಳಿದ ಪಾತ್ರಗಳಿಗೆ ಎಲೆಬ್ಯಾಗಾರಿ, ರಾವ್ ಸಾಹೇಬರೆ, ಸೇಷ್ಟ ದಾದಾ, ಇವು ಗೀತರೂಪಕದ ಸಂವಿಧಾನಕ್ಕೆ ಕಲೆಯನ್ನು ತಂದುಕೊಟ್ಟಿವೆ.

ಸಂಗ್ಯಾಬಾಳ್ಯಾದ ಭಾಷಾಭಿವ್ಯಕ್ತಿಯಲ್ಲಿ ಸಮಕಾಲೀನ ಪ್ರಜ್ಞೆಯ ತುಡಿತವಿದೆ. ಆಡುಭಾಷೆಯಿಂದ ವ್ಯಕ್ತವಾಗುವ ನಾಟಕಗಳು ಶುಷ್ಕವಾಗುತ್ತದೆ ಎಂಬ ಆರೋಪಕ್ಕೆ ಈ ಗೀತ ರೂಪಕ ಹೊರತಾಗಿ ನಿಲ್ಲುತ್ತದೆ. ಇದರಲ್ಲಿರುವ ಭಾಷೆಯ ಅರ್ಥವಲಯಗಳಲ್ಲಿ ಕಂಡುಬರುವ ತೊಡಕುಗಳನ್ನು ನಿವಾರಿಸಿ ಆಡು ನುಡಿಯ ಆಯಾಮಗಳನ್ನು ಶಿಷ್ಟ ನಾಟಕಗಳಿಗೆ ಪೂರಕಗೊಳಿಸುವ ಕಲಾತ್ಮಕತೆಯನ್ನು ಹೊದಿದೆ. ಈ ಕಾರಣಗಳಿಂದಲೂ ಈ ಗೀತರೂಪಕ ಕನ್ನಡ ಸಣ್ಣಾಟಗಳ ಪಂಕ್ತಿಯಲ್ಲಿ ಮಹತ್ವದ ಸ್ಥಾನವನ್ನು ಪಡೆದಿದೆ. ಈ ಗೀತರೂಪಕದ ಅಭ್ಯಾಸದ ಮೂಲಕ ಭಾಷಾವೈಶಿಷ್ಟ್ಯಗಳ ಜೊತೆಗೆ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಅರಿಯಬಹುದಾಗಿದೆ.

ಆಕರಗ್ರಂಥಗಳು

ಕನ್ನಡ

ಚಂದ್ರಶೇಖರ ಕಂಬಾರ, ಕೀರ್ತಿನಾಥ ಕುರ್ತಕೋಟಿ (ಸಂ.), ೧೯೬೬, ಸಂಗ್ಯಾಬಾಳ್ಯಾ, ಮನೋಹರ ಗ್ರಂಥಮಾಲೆ, ಧಾರವಾಡ.

ಚಿದಾನಂದಮೂರ್ತಿ ಎಂ., ೧೯೮೮, 'ಕರ್ನಾಟಕ ವ್ಯಕ್ತಿನಾಮಗಳು', ವಾಗರ್ಥ, ಬಾಪ್ಕೊ ಪ್ರಕಾಶನ, ಬೆಂಗಳೂರು

ಚಿದಾನಂದಮೂರ್ತಿ ಎಂ., ೧೯೯೩, 'ಅಜ್ಜೆಯೆಂದತ್ತಿಗೆಯೆಂಬ ಮಾತಸ್', ಹೊಸತು ಹೊಸತು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಿದಾನಂದಮೂರ್ತಿ ಎಂ., ೧೯೯೮, 'ವಚನಕಾರರ ಕಳು ಬಳ್ಳಿ ಪರಿಕಲ್ಪನೆ', ವಚನ ಶೋಧ-೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಜೋಗನ್ ಶಂಕರ., ೧೯೯೫, ಗ್ರಾಮಸಮಾಜ, ಜೀವ ಪ್ರಕಾಶನ, ಮೈಸೂರು.

ನಾರಾಯಣ ಕೆ.ವಿ, ಮತ್ತು ಇತರರು, ೨೦೦೦, 'ಭಾಷೆ' ವಿಶ್ವಕೋಶ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪಾಂಡುರಂಗ ಬಾಬು ಡಿ., ೧೯೯೮, 'ಣೇ ಮೀ ಲೇ', ಕನ್ನಡ ಅಧ್ಯಯನ ಸಂ-೫, ಸಂ-೧, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪೀಟರ್ ಜೆ. ಕ್ಲಾಸ್, ೧೯೮೭, 'ತುಳುವ ದರ್ಶನ', ಕನ್ನಡಕ್ಕೆ : ಎ.ವಿ.ನಾವಡ ಮತ್ತು ಸುಭಾಶ್ಚಂದ್ರ, ಪ್ರಾದೇಶಿಕ ವ್ಯಾಸಂಗ, ಕುಂದಾಪುರ

ಮಹಾದೇವಯ್ಯ ಪಿ., ೨೦೦೧, 'ಕನ್ನಡದಲ್ಲಿ ಬಂಧುಸೂಚಕ ಪದಗಳು', ನಮ್ಮಕನ್ನಡ, ಸಂಚಿಕೆ ೫೦, (ಸಂ) ಕೆ.ವಿ.ನಾರಾಯಣ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಶ್ರೀಕಂಠಯ್ಯ ತೀ.ನಂ., ೧೯೮೩, (ತೃ.ಆ) 'ಏನಿ ಗಡಿಂ ರೀ', ಸಮಾಲೋಕನ, ಶಾರದಾ ಮಂದಿರ, ಮೈಸೂರು.

ಸೇಡಿಯಾಪು ಕೃಷ್ಣಭಟ್., ೧೯೯೨, 'ಅತ್ತಿಗೆ', ವಿಚಾರ ಪ್ರಪಂಚ, ಕರ್ನಾಟಕ ಸಂಘ ಪುತ್ತೂರು

ಸೋಮಶೇಖರಗೌಡ, ೨೦೦೦, 'ಭಾಷೆ ರಚನೆ ಬಳಕೆ', ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು

ಇಂಗ್ಲಿಶ್

Balasubramanian G., 1999, 'Language and power in the rural context of Tamil Nadu' Indian Linguistics Volume 601-4

Brown Roger W and Margurete Ford., 1966, 'Address in American English' Dell Hymes Education Language in culture and Society [Horper & Row, New York]

Jampt Holmes., 1992 An Introducation To Socio linguistics Longman-London NewYork

Joseph N., 1980, Cultural Impacts in Kinship Terms sociolinguistics and Dialectology (Edit) S.Ages sthlalingom & K.Karunakaran, Annamaki University

Firth J.R., 1966, On Sociological Linguistics in languge in culture and society

Manuel M., 1981, 'Some Unique Kinship terms current in a dialect of KanyKumari District' IJDL-Vol-x

Misra K.S., 1977, 'Terms of Address and second person pronominal us age in Hindi' A Sociolinguistic study Bahri publication Pvt, Ltd.

Peter Trudgill., 1974, 'Sociolinguistic An Introduction' Penguin books Ltd.

Sharma D.D., 1985, 'Kinship terms of reference in Kumauni' (A Socio linguistic Appraisal) IJDL- XIV

Surya Kumari., 1986 'A Sociolinguistic study of Names and Address system in Telugu' IJDL 15:2

Sreedhar M.V., 1980 Correlation Between Marriage practices and Kinship Terms in some Dravidian Language 'Sociolinguistics and Dialectology' Ed- S.Agesthialingom K.KarunaKarna, Annamalai University, Annamalai nagar

ಭಾಗ - ೯

ಭಾಷೆ : ಸಂಕೀರ್ಣ

೮೬

ಕನ್ನಡ ಶಾಸ್ತ್ರೀಯ ಭಾಷೆ : ಮಾರ್ಗ ಮತ್ತು ದೇಶಿ ತತ್ತ್ವ ಪರಿಕಲ್ಪನೆ

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಕ್ಕಿರುವ ಸಂದರ್ಭದಲ್ಲಿ ಕನ್ನಡದಲ್ಲಿ ರೂಢವಾದ ದೇಸಿ -ಮಾರ್ಗ ತತ್ವ ಪರಿಕಲ್ಪನೆಗಳ ಸ್ವರೂಪವನ್ನು ಪರಿಭಾವಿಸುವುದು ತುಂಬ ಅಗತ್ಯವಾಗಿದೆ. ಸಾಮಾನ್ಯವಾಗಿ 'ಮಾರ್ಗ' ಎಂದರೆ ದಾರಿ ಎಂಬುದನ್ನು ಎಲ್ಲರೂ ಬಲ್ಲರು. ತುಳಿದು ತುಳಿದು ಗಟ್ಟಿ ಆದ ಹೆದ್ದಾರಿಯನ್ನು ಅದು ಸೂಚಿಸುತ್ತದೆ. 'ಮಾರ್ಗ' ಮತ್ತು 'ದೇಸಿ' ಎಂಬ ಪದಗಳನ್ನು ಸಂಗೀತ, ಸಾಹಿತ್ಯ, ನೃತ್ಯ ಮೊದಲಾದ ಕಲೆಗಳ ರೀತಿಯ ಸಂಬಂಧದಲ್ಲಿಯೂ ಬಳಸುವುದುಂಟು. ಶಾಸ್ತ್ರೀಯ ಸಂಗೀತ, ದೇಸಿ ಸಂಗೀತ ಈ ಸಂಬಂಧದಲ್ಲಿ 'ಮಾರ್ಗ' ಸಂಪ್ರದಾಯ ಸೂಚಕವಾಗಿದೆ. 'ದೇಸಿ' ಹೊಸತನವನ್ನು ನಿರ್ದೇಶಿಸುವ ಪದ. 'ಮಾರ್ಗ'ವು ಬಂಧುರ ಹಾಗು ಸುಂದರವೆಂದು ಸ್ವೀಕೃತವಾದ ಕಾವ್ಯಬಂಧವನ್ನು ಚಿತ್ತಕ್ಕೆ ಎತ್ತಿ ಹಿಡಿದಿದೆ; 'ದೇಸಿ'ಯು ಸಹಜವಾಗಿ ಸ್ಫುರಿಸಿದ ಹೊಸ ಮಾರ್ಗಕ್ಕೆ ಮೂಲ. 'ದೇಸಿ' ದೃಢಪಟ್ಟು ಮಾರ್ಗ ವಾಗುತ್ತದೆ. ದೃಢಪಟ್ಟ ಮಾರ್ಗದಲ್ಲಿ ಮತ್ತೆ ದೇಸಿ ಆಗಾಗ ಕೂಡಿಕೊಳ್ಳಬಹುದು. ಸಾಮಾನ್ಯವಾಗ ಜೀವನದ ಎರಡು ಪ್ರಮುಖ ಪ್ರವೃತ್ತಿಗಳನ್ನು ಪ್ರತೀಕಗೊಳಿಸುವಂತಿವೆ. 'ಮಾರ್ಗ', 'ದೇಸಿ' ಎಂಬ ಈ ಎರಡು ಪದಗಳು. ಅವುಗಳ ಹಿನ್ನೆಲೆಯಲ್ಲಿ ಜೀವನದ ಎರಡು ನೆಲೆಗಳು ಇವೆ. ಹಿಂದಿನಿಂದ ಬಂದ ಸಂಪ್ರದಾಯವನ್ನು ಬದುಕಿಸಿ, ನಿಲ್ಲಿಸಿ ಮುಂದುವರಿಸುವ ಪ್ರವೃತ್ತಿ ಒಂದು; ಜೀವನದ ದಾರಿ ಮುಂದುವರಿದಂತೆ ಹೊಸ ಹದವನ್ನು ಮೈಗೂಡಿಸಲೆಳಸುವ ಪ್ರವೃತ್ತಿ ಇನ್ನೊಂದು. ಈ ಎರಡೂ ಪ್ರವೃತ್ತಿಗಳಿಂದ ಜೀವನಕ್ಕೆ ಪ್ರಯೋಜನವಿದೆ.

ಕಾವ್ಯಕ್ಷೇತ್ರದಲ್ಲಿ ಮಾರ್ಗದ ಬಗೆಗೆ ನಮ್ಮ ಪೂರ್ವದ ಕಾವ್ಯಗಳಲ್ಲಿ ಅಲ್ಲಲ್ಲಿ ನಿರ್ದೇಶ ಬಂದಿದೆ. ಕನ್ನಡದಲ್ಲಿ ಉಪಲಬ್ಧವಿದ್ದ ಪ್ರಾಚೀನ ಗ್ರಂಥಗಳಲ್ಲಿ ಅತ್ಯಂತ ಪ್ರಾಚೀನ

ಗ್ರಂಥವಾದ 'ಕವಿರಾಜಮಾರ್ಗ'ದಲ್ಲಿಯೂ ಮಾರ್ಗದ ಸುಳುಹು ಬಂದಿದೆ. ಆ ತರುವಾಯದಲ್ಲಿ ಕನ್ನಡಕ್ಕೆ ಆದಿಕವಿಯಾದ 'ಪಂಪ' ತನ್ನ ಭಾರತದಲ್ಲಿ

ಬಗೆ ಹೊಸ ತಪ್ಪುದಾಗಿ ಮೃದು ಬಂಧದೊಳೊಂದುವುದೊಂದಿ ದೇಸಿಯೊಳ್।
ಪುಗುವುದು ಪೊಕ್ಕ ಮಾರ್ಗದೊಳೆ ತಳ್ವುದು ತಳ್ತೊಡೆ ಕಾವ್ಯಬಂಧ ಮೊ ॥
ಪ್ಪುಗುಮೆಳಮಾವು ಕೆಂದಳಿರ ಪೂವಿನ ಬಿಣ್ಪೊಱೆಯಿಂ ಬಱಲ್ದು ತುಂ।
ಬಿಗಳಿವೆ ತುಂಬಿ ಕೋಗಿಲೆಯೆ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆ ವೋಲ್ ॥
(೧-೮)

ಈ ಪದ್ಯದಲ್ಲಿ ದೇಸಿ ಮತ್ತು ಮಾರ್ಗವನ್ನು ಕುರಿತು ಆಡಿದ ಮಾತು ಗಮನಾರ್ಹವಾಗಿದೆ. ಅದು ಅವನ ಕಾವ್ಯ ರಚನಾ ಶೈಲಿಯೂ ಆಗಿದೆ. ಕನ್ನಡದಲ್ಲಿ ಮಾರ್ಗ ಎಂಬುದನ್ನು ಇಲ್ಲಿ ಕಾವ್ಯ ಪರಿಭಾಷೆಯ ಅರ್ಥದಲ್ಲಿ ಸ್ವೀಕರಿಸಿದರೆ ಆ ಪೂರ್ವದಲ್ಲಿ ಕಾವ್ಯ ಪರಂಪರೆ ಉಂಟಾಗಿತ್ತೆಂಬುದನ್ನು ಕವಿರಾಜಮಾರ್ಗವು ಸೂಚಿಸಿದುದನ್ನು ಪಂಪ ದೃಢಪಡಿಸಿದಂತಿದೆ. ರಾಮಕಥೆಯಂ ಕಿಱಿದಾಗಿರೆ 'ದೇಸಿ', 'ಮಾರ್ಗ' ಮೆಂಬೆಱಡರೊಳಂ ಜಸಂಬಡೆದು ಪಂಡಿತ ಮಂಡಲಿ ಮೆಚ್ಚೆ ತಾನು ಕೃತಿ ಹೇಳಿದುದಾಗಿ ನಾಗಚಂದ್ರನು ತನ್ನ 'ರಾಮಚಂದ್ರ ಚರಿತ ಪುರಾಣ'ದಲ್ಲಿ ('ಪಂಪ ರಾಮಾಯಣ'ದಲ್ಲಿ) ತಿಳಿಯಪಡಿಸಿದ್ದಾನೆ. ಹೀಗೆ ಇನ್ನೂ ನಾಲ್ಕಾರು ಜನ ಕನ್ನಡ ಕವಿಗಳು ತಮ್ಮ ಕಾವ್ಯಗಳಲ್ಲಿ ಮಾರ್ಗದ ಬಗೆಗೆ ನಿರ್ದೇಶನ ಮಾಡಿದ್ದಾರೆ.

ಕನ್ನಡದಲ್ಲಿ ಕಾವ್ಯ 'ಮಾರ್ಗ'ವು ಪಂಪಪೂರ್ವದಲ್ಲಿಯೇ ಏರ್ಪಟ್ಟಿರಬಹುದೇನೋ ಎಂಬ ಭಾವನೆಯನ್ನು ಪಂಪ, ರನ್ನರ (ಲೌಕಿಕ ಆಗಿರಬಹುದು; ಮಾರ್ಗ ದೇಸಿ ಆಗಿರಬಹುದು) ಒಂದೆರಡು ಪದ್ಯಗಳು ಉಂಟು ಮಾಡುವಂತಿವೆ ಯೆಂಬುದು ನಿಜ. ಆದರೆ ನಾವಿಂದು ತಿಳಿದುಕೊಳ್ಳುವ ಅರ್ಥದಲ್ಲಿ 'ಕಾವ್ಯಮಾರ್ಗ' ಪಂಪನಿಂದಲೇ ಪ್ರಾರಂಭವಾಗಿರಬಹುದೆಂದು ತಿಳಿಯುವದೇ ಸಮಂಜಸವಾಗಿ ಕಾಣುತ್ತದೆ. ವಿದ್ವಾಂಸರಿಗೆ ತಿಳಿದು ಬಂದಿರುವ ಕಾವ್ಯಗಳ ಬೆಳಕಿನಲ್ಲಿ ಪರಿಶೀಲಿಸಿದರೆ ಇದೇ ಅಭಿಪ್ರಾಯ ದೃಢವಾಗುತ್ತದೆ. ಚಂಪೂ ಕಾವ್ಯದ ಪೂರ್ಣ ಸ್ವರೂಪವನ್ನು, ಎಂದರೆ 'ಮಾರ್ಗ'ದ ಖಚಿತವಾದ ಸ್ವರೂಪವನ್ನು ನಾವು ಮೊದಲು ಕಾಣವುದು ಪಂಪ, ರನ್ನರ ಕೃತಿಗಳಲ್ಲಿ

ಮಾರ್ಗಕಾವ್ಯಗಳೆಂದರೆ ಚಂಪೂಕಾವ್ಯಗಳೇ. ಅವುಗಳಿಗೆ 'ವಸ್ತುಕ' ಎಂದೂ ಹೇಳುವುದುಂಟು (ಓದುಗಬ್ಬ). ಈವರೆಗೆ ತಿಳಿದಂತೆ ಈ ಪರಿಯ ಮಾರ್ಗಕಾವ್ಯ ಪರಂಪರೆಯನ್ನು ಮೊದಲು ಮಾಡಿದವರು ಪಂಪಾದಿ ಚಂಪೂ ಕವಿಗಳು. ಈ ದೃಷ್ಟಿಯಿಂದ ಪಂಪನ ಮಾರ್ಗವೆಂದರೆ 'ಮಾರ್ಗ'ದಲ್ಲಿ ಪಂಪನ ಕೃತಿಗಳ ಸ್ಥಾನವೆಂದು ಮಾತ್ರವಲ್ಲ; ಪಂಪ ರೂಪುಗೊಳಿಸಿದ ಚಂಪೂ ಕಾವ್ಯಮಾರ್ಗವೆಂದು ಅರ್ಥಮಾಡಿ ಕೊಳ್ಳುವುದು ಲೇಸು. ಕನ್ನಡಕ್ಕೆ ಚಂಪೂ ರೂಪವನ್ನು ಕಾಣಿಕೆಯಿತ್ತ ಪೆಂಪು ಪಂಪನದು ಎಂದು ಹೇಳಲು ಅಭ್ಯಂತರವಿರದು. ಅಂದು "ಸರಸ್ವತಿಗೆ ವಿಲಾಸಮಂ ಪೊಸತು

ಮಾಡಿದ ವಾಗ್ವಿಲಾಸ"ವೇ ಆತನ ಮಾರ್ಗ-ಕಾವ್ಯರಚನಾ-ವಿನ್ಯಾಸ. ದೇಸಿಕಾವ್ಯಗಳೆಂದರೆ ರಗಳೆ, ಸಾಂಗತ್ಯ, ಷಟ್ಪದಿ, ತ್ರಿಪದಿ ಕಾವ್ಯಗಳು. ಇವು ಹಾಡುಗಬ್ಬಗಳು. ಇದನ್ನೇ ಶಾಸ್ತ್ರೀಯ ಭಾಷೆ ನೆಲೆಯಲ್ಲಿ ಅವಲೋಕಿಸಬೇಕಾಗಿದೆ.

ಕೇಂದ್ರ ಸರಕಾರವು ಭಾರತೀಯ ಭಾಷೆಗಳಿಗೆ ಶಾಸ್ತ್ರೀಯ ಸ್ಥಾನಮಾನ ನೀಡುವುದಕ್ಕೆ ತನ್ನದೇ ಆದ ಕೆಲವು ಮಾನದಂಡಗಳನ್ನು ಹಾಕಿಕೊಂಡಿದೆ. ಅವುಗಳು ಹೀಗಿವೆ :

೧. ಒಂದು ಭಾಷೆಯ ಪಠ್ಯಗಳು/ದಾಖಲಾದ ಇತಿಹಾಸ ಒಂದು ಸಾವಿರ ವರ್ಷಕ್ಕೂ ಪುರಾತನವಾಗಿದ್ದಿರಬೇಕು.

೨. ಪ್ರಾಚೀನ ಸಾಹಿತ್ಯ/ಪಠ್ಯಗಳು ತಲೆ ತಲೆಮಾರುಗಳ ಜನರಿಂದ ಅತ್ಯಂತ ಮೌಲಿಕ ಪರಂಪರೆಯೆಂದು ಪರಿಗಣಿತವಾಗಿರಬೇಕು (ಮಾರ್ಗ-ದೇಸಿ).

೩. ಸಾಹಿತ್ಯ ಪರಂಪರೆ ಸ್ವೋಪಜ್ಞವಾಗಿದ್ದು, ಯಾವುದೇ ಬೇರೊಂದು ಭಾಷೆ/ಸಮುದಾಯದಿಂದ ಸ್ವೀಕೃತವಾಗಬಾರದು.

೪. ಶಾಸ್ತ್ರೀಯ ಭಾಷೆ ಮತ್ತು ಸಾಹಿ ತ್ಯ ಪ್ರಸ್ತುತ ಭಾಷೆ ಮತ್ತು ಸಾಹಿತ್ಯಕ್ಕಿಂತ ಭಿನ್ನವಾಗಿರಬೇಕು. ಅಥವಾ ಇತ್ತೀಚಿನ ಸ್ವರೂಪಕ್ಕಿಂತ ಅಥವಾ ಅದರಿಂದ ಬೆಳವಣಿಗೆ ಹೊಂದಿದ ಭಾಷೆಗಳಿಗಿಂತ ಬೇರೆಯದೇ ಎನ್ನಿಸುವ ಹಾಗಿರಬೇಕು.

ಶಾಸ್ತ್ರೀಯ ಭಾಷೆಯೆಂಧು ಗುರುತಿಸುವುದಕ್ಕೆ ಇರುವ ಈ ಎಲ್ಲ ಲಕ್ಷಣಗಳೂ ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕಿವೆ (ಮಾರ್ಗ ಮತ್ತು ದೇಸಿ) ಎಂದು ಹೇಳಬಹುದಾಗಿವೆ.

ಒಂದು ದೇಶದ ಅಥವಾ ಪ್ರದೇಶದ ನಾಗರಿಕತೆ ಮತ್ತು ಸಂಸ್ಕೃತಿಯ ಲಕ್ಷಣಗಳನ್ನು ಅಲ್ಲಿನ ಭಾಷಿಕ ಸ್ವರೂಪದಲ್ಲಿ ಕಾಣುತ್ತೇವೆ. ಮನುಷ್ಯನ ಆಲೋಚನೆ, ವ್ಯವಹಾರ ಹಾಗೂ ಅಭಿವ್ಯಕ್ತಿಯ ಮಾಧ್ಯಮವೇ ಭಾಷೆ. ಭಾಷೆಯೆಂಬುದು ಇಲ್ಲದಿದ್ದರೆ ಇವುಗಳ ಅಸ್ತಿತ್ವವೇ ಅಸಾಧ್ಯ. ಹೀಗೆ ಭಾಷೆ ಮಾನವನ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಯಾವುದೇ ಪ್ರದೇಶದ ಸಾಹಿತ್ಯ ಸೃಷ್ಟಿಯು ಮೊದಲು ಆ ಪ್ರದೇಶದ ಜನಭಾಷೆಯಲ್ಲಿ ನಡೆದು ಕ್ರಮೇಣ ಅದರಿಂದ ಪ್ರೇರಣೆ, ನೆರವು ಪಡೆದು ಶಿಷ್ಟ ಸಾಹಿತ್ಯ ಜನ್ಮ ತಳೆಯುವುದು. ಭಾಷೆಯ ಮುಖ್ಯ ಉ ದ್ದೇಶ ಸಾಮಾಜಿಕ ಸಂಪರ್ಕ. ಅಂತೆಯೇ ಬಿಎಂಶ್ರೀಯವರು 'ಜನವಾಣಿ ಬೇರು ಕವಿವಾಣಿ ಹೂವು' ಎಂದು ಹೇಳಿ, ದೇಸಿಭಾಷೆ ಮತ್ತು ಸಾಹಿತ್ಯಕ್ಕಿರುವ ಪ್ರಾಚೀನತೆ ಹಾಗೂ ಮಹತ್ವವನ್ನು ಮನಗಾಣಿಸಿರುವರು. ಮಾರ್ಗ ಸಾಹಿತ್ಯಕ್ಕೆ ತಾಯಿ ಬೇರು ಈ ದೇಸಿಭಾಷೆ ಮತ್ತು ಸಾಹಿತ್ಯವಾಗಿದೆ. ಈ ತಾಯಿ ಬೇರಿನಿಂದ ಗಾಳಿ, ನೀರು, ಪಡೆದ ಮಾರ್ಗ ಸಾಹಿತ್ಯ ಮುಂಚೂಣಿಗೆ ಬಂದರೆ, ಬೇರು ಸಾಹಿತ್ಯವಾದ ದೇಸಿ ಸಾಹಿತ್ಯ ಸಮಷ್ಟಿಯ ಸೊತ್ತಾಗಿ, ಜನಸಾಮಾನ್ಯರ ಮಧ್ಯದಲ್ಲಿಯೇ ತನ್ನ ಜೀವಂತಿಕೆಯನ್ನು ಪಡೆಯಿತು. ಹೀಗೆ ರಾಜಾಶ್ರಯ, ಪಂಡಿತ ಆಶ್ರಯಗಳಿಂದ ದೂರವೇ ಉಳಿದ ದೇಸಿ ಸಾಹಿತ್ಯ ಸಾಹಿತ್ಯ

ಚರಿತ್ರೆ ದಾಖಲಾಗಲಿಲ್ಲ. ಹೀಗಿದ್ದರೂ ಕನ್ನಡದ ಅನೇಕ ಕವಿಗಳು ತಮ್ಮ ಮಾರ್ಗಕಾವ್ಯ ರಚನೆಗೆ ದೇಸಿ ಸಾಹಿತ್ಯದಿಂದ ಸಾಕಷ್ಟು ನೆರವನ್ನು ಪಡೆದಿದ್ದಾರೆ.

ದೇಸಿ ಸಾಹಿತ್ಯ ಮತ್ತು ಮಾರ್ಗ ಸಾಹಿತ್ಯಗಳ ನಡುವೆ ನಿರಂತರವಾಗಿ ಕೊಳುಕೊಡುವಿಕೆ ನಡೆದಿದೆ. ಆದರೆ ಮಾರ್ಗ (ಕ್ಲಾಸಿಕಲ್) ಸಾಹಿತ್ಯವು ದೇಸಿ ಸಾಹಿತ್ಯಕ್ಕೆ ಕೊಟ್ಟಿದ್ದಕ್ಕಿಂತಲೂ ಪಡೆದುದ್ದೇ ಹೆಚ್ಚು. ಇದನ್ನು ಪ್ರಾಚೀನ ಹಾಗೂ ಆಧುನಿಕ ಕನ್ನಡ ಸಾಹಿತ್ಯಾಧ್ಯಯನದಿಂದ ಮನಗಾಣಬಹುದು. ಕ್ರಿ.ಶ. ೭೦೦ರ ಬಾದಾಮಿಯ ಕಪ್ಪೆ ಅರಭಟ್ಟನ ಶಾಸನ, ಕ್ರಿ.ಶ. ೮೫೦ರ ಕವಿರಾಜಮಾರ್ಗ ಆನಂತರ ವಡ್ಡಾರಾಧನೆ, ಹತ್ತನೆಯ ಶತಮಾನದ ಕವಿಗಳಾದ ಪಂಪ, ರನ್ನ, ನಂತರದ ಜನ್ನ, ನಯಸೇನ, ಹನ್ನೆರಡನೆಯ ಶತಮಾನದ ವಚನ ಸಾಹಿತ್ಯ, ಹದಿನೈದನೆಯ ಶತಮಾನದ ದಾಸರ ಕೀರ್ತನ ಸಾಹಿತ್ಯ, ಕುಮಾರವ್ಯಾಸ, ಲಕ್ಷ್ಮೀಶ, ಹದಿನೆಂಟನೆಯ ಶತಮಾನದ ತತ್ವಪದ ಸಾಹಿತ್ಯ ಆಧುನಿಕರಲ್ಲಿ ಕುವೆಂಪು, ಬೇಂದ್ರೆ, ಕಾರಂತ, ಕೆ.ಎಸ್. ನರಸಿಂಹಸ್ವಾಮಿ, ಬೇಟಗೇರಿ, ಚಂದ್ರಶೇಖರ ಕಂಬಾರ. ಹೀಗೆ ಪ್ರಾಚೀನ ಮತ್ತು ಆಧುನಿಕ ಕವಿ, ಸಾಹಿತಿಗಳು ದೇಸಿ ಸಾಹಿತ್ಯದಿಂದ ಸಾಕಷ್ಟು ವಿಧದಲ್ಲಿ ನೆರವು ಪಡೆದು ತಮ್ಮ ಕೃತಿಗಳ ಕಸುವನ್ನು ಹೆಚ್ಚಿಸಿಕೊಂಡಿದ್ದಾರೆ. ಮಾರ್ಗ ಸಾಹಿತ್ಯ ಯಾಂತ್ರಿಕವಾಗಿ, ತನ್ನ ಚಲನಶೀಲತೆಯನ್ನು ಕಳೆದುಕೊಂಡು ನಿಸ್ತೇಜನಗೊಂಡಾಗ ಅದರ ಚಲನಶೀಲತೆಗೆ ನೆರವು ನೀಡಿದ್ದೇ ದೇಸಿ ಭಾಷೆ ಮತ್ತು ಸಾಹಿತ್ಯ ಎನ್ನಬೇಕು. ಉದಾಹರಣೆಗೆ ಚಂಪುವಿನಂತರ ದೇಸಿ ಸಾಹಿತ್ಯ ರೂಪಗಳೇ (ರಗಳೆ, ಷಟ್ಪದಿ, ತ್ರಿಪದಿ) ಸಾಹಿತ್ಯ ರಚನೆಯಾಯಿತು ಎಂಬುದು ಗಮನಾರ್ಹ ಸಂಗತಿಯಾಗಿದೆ.

ಮಾರ್ಗ ಸಾಹಿತ್ಯ ಕವಿಯ ಆಸ್ತಿಯಾದರೂ ಅದು ನಿರಂತರವಾಗಿ ಬದುಕಬೇಕಾದರೆ, ಅದಕ್ಕೆ ಜನಾಶ್ರಯ ಬೇಕೇ ಬೇಕು. ಪಂಡಿತ ಗೋಷ್ಠಿಗಾಗಿ ಕಾವ್ಯ ರಚಿಸಿದ ಪಂಪ, ರನ್ನರಂಥ ಕವಿಗಳಿಗೂ ಈ ಎಚ್ಚರವಿದ್ದಿತ್ತು. ಅಂತೆಯೇ ಅವರು ಪಂಡಿತರು ಪಾಮರರೂ ಒಪ್ಪುವ, ಮೆಚ್ಚುವಂಥ ಕಾವ್ಯ ಕೃತಿಗಳನ್ನು ಬರೆದು ಇಂದಿಗೂ ಜೀವಂತವಾಗಿರುವುದಕ್ಕೆ ಉದಾಹರಣೆಗಳಾಗಿದ್ದಾರೆ. ಯಾವುದೇ ಭಾಷೆ ಅಥವಾ ಸಾಹಿತ್ಯವಾಗಲಿ ತನ್ನಷ್ಟಕ್ಕೆ ತಾನೆ ಬೆಳೆಯಲಾರದು. ಅದು ತನ್ನ ಕಾಲದ ಸಾಮಾಜಿಕ–ಸಾಂಸ್ಕೃತಿಕ ಪರಿಸರದಿಂದ, ಜನಪದರ ಬದುಕಿನ ದ್ರವ್ಯವನ್ನು ಸ್ವೀಕರಿಸಿಯೋ, ಅದರಿಂದ ಪ್ರೇರಣೆ ಪಡೆದೋ ಬೆಳೆಯುತ್ತದೆ. ಅದನ್ನು ಸಾಹಿತ್ಯ ಮತ್ತು ಯುಗಧರ್ಮ ನೆಲೆಯಲ್ಲಿ ಆಲೋಚಿಸಬೇಕು. ದೇಸಿ ಭಾಷೆ–ಬದುಕಿನ ಬನಿಯನುಂಡು ಬೆಳೆದ ಸಾಹಿತ್ಯವೇ ಜನಸಾಮಾನ್ಯರ ಹತ್ತಿರಕ್ಕೆ ಸುಳಿಯಬಲ್ಲುದು. ಇಲ್ಲದೆ ಹೋದರೆ ಕಾವ್ಯ ಎಷ್ಟೇ ಸುಂದರವಾಗಿದ್ದರೂ ಅದು ಶುಷ್ಕ ಕಾವ್ಯವೆನ್ನಿಸಿ ಬಿಡುತ್ತದೆ. ಮಾರ್ಗ–ದೇಸಿ ಪರಿಕಲ್ಪನೆ ಭಾಷೆ ಹಾಗೂ ಸಾಹಿತ್ಯಕ್ಕೂ ಇದ್ದಿರುವ ಸಂಬಂಧವನ್ನು ಕವಿರಾಜಮಾರ್ಗಕಾರನು ನಿಚ್ಚಳವಾಗಿ ಕಾಣಿಸುತ್ತಾನೆ.

ಕವಿರಾಜಮಾರ್ಗವು ಕನ್ನಡ ಕಾವ್ಯ ಭಾಷೆ ಹಾಗೂ ದೇಸಿ ಭಾಷೆಯ ಸ್ವರೂಪವನ್ನು ಕುರಿತು ಚಿಂತಿಸುತ್ತಾ ಕನ್ನಡ ನಾಡು, ನುಡಿಯ ಬಗ್ಗೆ ಪ್ರಸ್ತಾಪಿಸುತ್ತದೆ. ಕವಿರಾಜಮಾರ್ಗದ ಉದ್ದಕ್ಕೂ ಅಂದರೆ ಕರ್ನಾಟಕದ ಮೇರೆಗಳನ್ನು ಹೇಳುವಾಗ, ಕನ್ನಡಿಗರ ಸ್ವಭಾವವನ್ನು ಹೇಳುವಾಗ, ಮಹಾಕಾವ್ಯ ಲಕ್ಷಣಗಳನ್ನು ಹೇಳುವಾಗ ಇದರ ಮೂಲಕ ಸಂಸ್ಕೃತಿಯ ಅನನ್ಯತೆಯನ್ನು ಸ್ಥಾಪಿಸಲೆತ್ನಿಸುತ್ತದೆ. ಆಡುಮಾತಿನ ಕನ್ನಡಕ್ಕೆ ಕಾವ್ಯಾಭಿವ್ಯಕ್ತಿ ಒದಗಿಸಿಕೊಡುವ ಪ್ರಯತ್ನವನ್ನು ಇಲ್ಲಿ ಕಾಣುತ್ತೇವೆ. ಅದು ಹೀಗಿದೆ. "ಪದನರಿದು ನುಡಿಯಲು ನಡಿದುದ ನರಿಯಲು ಮಾರ್ಪರ್ರಾ ನಾಡವರ್ಗಳ್ ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್" ಎಂಬ ನುಡಿಗಳು ಕನ್ನಡ ಜನಸಮುದಾಯಕ್ಕೆ ಭಾಷೆಯ ಬಳಕೆಯಲ್ಲಿ ಇದ್ದಿರುವ ವಿಶಿಷ್ಟ ಸಾಮರ್ಥ್ಯವನ್ನು ಮತ್ತು ತಮ್ಮ ಸಾಮರ್ಥ್ಯದ ಪ್ರತಿಭೆ ಯಿಂದ ಚತ್ತಾಣ, ಬೆದಂಡೆಗಳಂಥ ದೇಸಿ ಕಾವ್ಯ ಪ್ರಕಾರಗಳನ್ನು ಕಟ್ಟಬಲ್ಲರು ಎಂಬುದನ್ನು ನಿರೂಪಿಸುವ ಕವಿರಾಜಮಾರ್ಗಕಾರನು ತನ್ನ ಹಾಗೂ ತನಗೂ ಹಿಂದಿನ ಕಾವ್ಯ ಭಾಷಾ ಸ್ವರೂಪದ ಮೇಲೆ ಬೆಳಕು ಚೆಲ್ಲುತ್ತಾನೆ. ತನ್ನ ಕಾಲ(ಸಂಸ್ಕೃತ)ದ ಮೂಲಕ ಎದುರಾಗುತ್ತಿರುವ ಪ್ರಾದೇಶಿಕ ಭಾಷೆ ಸಾಹಿತ್ಯದ ತೊಡಕನ್ನು ಬಿಡಿಸಲು ಮಾಡಿದ ಪ್ರಯತ್ನವನ್ನು ಇಲ್ಲಿ ಭಾಷೆ/ಭಾಷಾಪ್ರಭೇದಗಳಲ್ಲಿ ಕಾಣುವೆವು. ಕನ್ನಡ ದೇಸಿ ಭಾಷೆ, ಛಂದೋಮಟ್ಟಗಳನ್ನು ಕಾವ್ಯಾಭಿವ್ಯಕ್ತಿ ಸಜ್ಜುಗೊಳಿಸುವ ಪ್ರಯತ್ನವನ್ನು ಬಾದಾಮಿ ಶಾಸನ ಹಾಗೂ ಹತ್ತನೆಯ ಶತಮಾನದ ಪಂಪಾದಿ ಚಂಪು ಕವಿಗಳ ಕಾವ್ಯದಲ್ಲಿ ನಿಚ್ಚಳವಾಗಿ ಕಾಣುತ್ತೇವೆ.

'ದೇಸಿ ಮತ್ತು ಮಾರ್ಗ' ಎಂಬವು ಮುಖ್ಯವಾದ ಎರಡು ಭಾಷಾ ಮೂಲದ ಪದ್ಧತಿಗಳು. ದೇಶಿಯು ಜನಪದವಾದರೆ, ಮಾರ್ಗ ಶಿಷ್ಟ(ಕ್ಲಾಸಿಕಲ್)ವಾಗಿದೆ. ಪಂಪನು ಹೇಳ ಹೊರಟಿರುವುದು 'ವಿಕ್ರಮಾರ್ಜುನ ವಿಜಯ'ವೆಂಬ ಕಾವ್ಯ ಪ್ರಬಂಧವನ್ನು ಚಂಪು ಶೈಲಿಯ ಮಾರ್ಗಶೈಲಿಯಲ್ಲಿ ರಚನೆಗೆ ತೊಡಗಿದ್ದಾನೆ. ಹೀಗಿದ್ದೂ ತನ್ನ ಕಾವ್ಯಕ್ಕೆ ದೇಸಿ ಕಸುವನ್ನು ತುಂಬದೆ ಹೋಗಿಲ್ಲ. ಪಂಡಿತ-ಪಾಮರರೂ ಮೆಚ್ಚುವ ರೀತಿಯಲ್ಲಿ ಶಿಷ್ಟ ಮತ್ತು ಜನಪದವನ್ನು ಮಾರ್ಗ-ದೇಸಿ ಸ್ವರೂಪದಲ್ಲಿ ಸಮನ್ವಯ ಗೊಳಿಸಿರುವನು. ಶಿಷ್ಟಪದ ಸಾಹಿತ್ಯಾಂತರ್ಗತವಾಗಿರುವ ಜಾನಪದೀಯ ಸತ್ವ-ಸ್ವರೂಪದಲ್ಲಿ ಪೃಥಕ್ಕರಿಸಿ ತೋರಿಸುವ ದಿಟ್ಟತನವನ್ನು ಮೆರೆದಿದ್ದಾನೆ. ಪಂಪನನ್ನು ಅನುಸರಿಸಿದ ರನ್ನ, ಪೊನ್ನ, ಅನಂತರದ ಜನ್ನ, ನಾಗಚಂದ್ರ ಕವಿಗಳೂ, ವಡ್ಡಾರಾಧನೆ ಹಾಗೂ ಧರ್ಮಾಮೃತಗಳಂತಹ ಗದ್ಯ ಕೃತಿಗಳಲ್ಲಿಯೂ ಕೃತಿಕಾರರು ದೇಸಿ ಸಂವೇದನೆ ಮೆರೆದಿರುವರು ಕನ್ನಡ ಕವಿಗಳ ಕಾವ್ಯ ವಸ್ತುಗಳಾದ ರಾಮಾಯಣ ಮತ್ತು ಮಹಾಭಾರತ ಮಾರ್ಗಕಾವ್ಯಗಳ ವಸ್ತುಮೂಲ ದೇಸಿ ಆಗಿರುವುದನ್ನು ಇಲ್ಲಿ ಗಮನಿಸಬೇಕು.

ಹನ್ನೆರಡನೇ ಶತಮಾನದ ಶಿವಶರಣರು ಕನ್ನಡ ಸಾಹಿತ್ಯಕ್ಕೆ ನೀಡಿದ ಅವರ ಅನುಭಾವದ, ವಿಶಿಷ್ಟ ಹಾಗೂ ಸ್ವೋಪಜ್ಞ ಅಭಿವ್ಯಕ್ತಿಯ ವಚನ ಸಾಹಿತ್ಯ ಮಹತ್ವದ್ದಾಗಿದೆ.

ವಚನ ಹೊರಗಿನ ಮಾದರಿಯನ್ನು ಅನುಕರಿಸಿ ಹುಟ್ಟಿದ್ದಲ್ಲ. ದೇಸಿ ಸಾಹಿತ್ಯದಲ್ಲಿದ್ದ, ಮುಕ್ತಗಳು, ತ್ರಿಪದಿಗಳು ವಚನವಾಗಿ ರೂಪುಗೊಂಡವೆಂಬ ಅಭಿಪ್ರಾಯ ಇದೆ. ಆ ಕಾಲದ ಜಡಗಟ್ಟಿದ ಸಾಮಾಜಿಕ-ಧಾರ್ಮಿಕ ವ್ಯವಸ್ಥೆಗೆ ಚಿಕಿತ್ಸೆ ನೀಡಿ ಅವುಗಳನ್ನು ಚಲನಶೀಲಗೊಳಿಸುವುದಕ್ಕೆ ಶ್ರಮಿಸಿದರು. ಅದಕ್ಕೆಂದೇ ಜನನುಡಿಯಾದ ವಚನವನ್ನು ಬಳಸಿಕೊಂಡರು. ಆನು ಒಲಿದಂತೆ ಹಾಡುವೆನು – ಬಸವಣ್ಣ ಘೋಷಿಸಬೇಕಾಯಿತು. ಶಿವಶರಣರ ಪಥದಲ್ಲಿಯೇ ಕ್ರಮಿಸಿದ ಕೀರ್ತನಕಾರರೂ ತಮ್ಮ ರಚನೆಗಳಿಗೆ ದೇಸಿ ಭಾಷೆ ಹಾಗೂ ಧಾಟಿಯ ಸೊಗಡನ್ನು ತುಂಬಿದರು. – 'ನೀನ್ಯಾಕೋ ನಿನ್ನ ಹಂಗ್ಯಾಕೋ', 'ನಿನ್ನ ನಾಮದ ಬಲವೊಂದಿದ್ದರೆ ಸಾಕು', – 'ದುರ್ಜನರು ಜಾಲಿಮರದಂತೆ' ಈ ಸಂದರ್ಭದಲ್ಲಿ ಭಾಷೆ ಬಳಕೆಗೆ, ಆಡುನುಡಿಯನ್ನು ಬಳಸಿದರು. ಅದರಂತೆ ಕುಮಾರವ್ಯಾಸ, ರತ್ನಾಕರವರ್ಣಿ ಮುಂತಾದ ಕವಿಗಳಲ್ಲಿ ದೇಸಿ ಭಾಷೆ ಮತ್ತಷ್ಟು ಹದಗೊಂಡಿತು ಎನ್ನಬಹುದು. ಆಧುನಿಕ ಕವಿ ಕೃತಿಗಳು ದೇಸಿ ಸತ್ವದಿಂದ ಸಾಕಷ್ಟು ನೆರವು ಪಡೆದವು. ಕುವೆಂಪು ತಮ್ಮ ಕಾದಂಬರಿಗಳಲ್ಲಿ ಮಲೆನಾಡಿನ (ಗ್ರಾಮೀಣ) ಬದುಕನ್ನು, ಕಾರಂತರು ಕರಾವಳಿಯ ಕಡಲ ತಡಿಯ ಜನಪದದ ಬದುಕನ್ನು ಕಟ್ಟಿಕೊಟ್ಟರು, ಬೇಂದ್ರೆ, ನರಸಿಂಹಸ್ವಾಮಿ, ಕಂಬಾರ ಮುಂತಾದವರಲ್ಲಿ ದೇಸಿತತ್ವ ಪುನರ್‌ರಚನೆಗೆ ಮೈಯೊಡ್ಡಿ ಕೊಂಡಿತೆಂದು ಹೇಳಬಹುದು. ದೇಸಿಸತ್ವ ಹೀರಿಗೊಂಡು, ಜನಪದ ನಿಲುವುಗಳಿಗಾಗಿಯೇ ಮೈತಳೆದ ದಲಿತ ಬಂಡಾಯ ಕವಿ, ಲೇಖಕರ ಕೃತಿಗಳಲ್ಲಿ ದೇಸಿ ಸಂಸ್ಕೃತಿಯ ಆಶಯ, ಭಾಷೆಯ ಬಳಕೆಯನ್ನು ಕಾಣಬಹುದು.

ಕನ್ನಡ ಮಾರ್ಗ/ದೇಸಿ ಸಾಹಿತ್ಯ ಪರಿಕಲ್ಪನೆಗಳು ಭಾಷೆ ಮತ್ತು ಸಾಹಿತ್ಯಕ್ಕೆ ತಾನಿರುವ ತಾಣದಲ್ಲಿಯೇ ತನ್ನದೇ ಆದ ಜಗತ್ತನ್ನ ನಿರ್ಮಿಸಿಕೊಳ್ಳುವ ಸಾಮರ್ಥ್ಯವಿದೆ. ಹೀಗಾಗಿ ಮಾರ್ಗ ಮತ್ತು ದೇಸಿ ಸಾಹಿತ್ಯಕ್ಕೆ ಅಂತ್ಯವೆಂಬುದಿಲ್ಲ. ಅದು ಕಾಲದಿಂದ ಕಾಲಕ್ಕೆ ಬೇರ ಬೇರೆ ರೂಪಗಳಲ್ಲಿ ಹೊರಹೊಮ್ಮುತ್ತಲೇ ಇರುತ್ತದೆ. ಮಾರ್ಗ ಸಾಹಿತ್ಯಕ್ಕಿಂತಲೂ ತುಂಬ ಪ್ರಾಚೀನವಾಗಿರುವ ದೇಸಿ ಭಾಷೆ ಮತ್ತು ಸಾಹಿತ್ಯವನ್ನು ಶಾಸ್ತ್ರೀಯ ಭಾಷಾ ವ್ಯಾಪ್ತಿಗೆ ಒಳಪಡಿಸುವುದು ಹೆಚ್ಚು ಸೂಕ್ತವೂ, ಸೂಚ್ಯವೂ ಆಗಿದೆ. ಸಾಹಿತ್ಯವೆಂದರೆ ಕೇವಲ ಹಳಗನ್ನಡ ಸಾಹಿತ್ಯವೇ ಮಾತ್ರವಲ್ಲ. ಮಾರ್ಗ ಸಾಹಿತ್ಯ ಒಂದು ನಾಡಿನ ಸಾಂಸ್ಕೃತಿಕ ಬೇರುಗಳು ಕೇವಲ ಮಾರ್ಗ ಸಾಹಿತ್ಯದಲ್ಲಿ ಮಾತ್ರವಿರದೆ, ಅವುಗಳ ಬೇರುಗಳು ಮೂಲತಃ ದೇಸಿ ಭಾಷೆ ಮತ್ತು ಸಾಹಿತ್ಯದಲ್ಲಿರುವುದನ್ನು ಗಮನಿಸಬೇಕು. ಮೊದಲಿಗೆ ಜನ ಹಾಗೂ ಜನ ಭಾಷೆ ಆನಂತರ ಸಾಹಿತ್ಯವಾಗಿರುವುತ್ತದೆ. ದೇಸಿ ಸಾಹಿತ್ಯದಿಂದ ಮಾರ್ಗ ಸಾಹಿತ್ಯ, ಮಾರ್ಗ ಸಾಹಿತ್ಯದಿಂದ ದೇಸಿ ಸಾಹಿತ್ಯ ಒಂದಕ್ಕೊಂದು ಪೂರಕ ಹಾಗೂ ಪ್ರೇರಕದಂತೆ ಕೆಲಸ ಮಾಡುತ್ತ ಬಂದಿದೆ. ಆದಕಾರಣ ಭಾಷಾ ವಿಜ್ಞಾನಿಗಳು ಗ್ರಂಥ ಭಾಷೆಗಿಂತ ಆಡುನುಡಿಗೆ ಒತ್ತು ಕೊಡುತ್ತಾರೆಂಬುದು ಗಮನಿಸ ಬೇಕು.

ಈ ಅಂಶಗಳನ್ನೆಲ್ಲಾ ಗಮನಿಸಿದರೆ ಎಲ್ಲ ಕಾಲದ ಮಾರ್ಗ ಸಾಹಿತ್ಯವು ಒಂದಿಲ್ಲ ಒಂದು ರೀತಿಯಲ್ಲಿ ದೇಸಿ ಭಾಷೆ ಮತ್ತು ಸಾಹಿತ್ಯದಿಂದ ಹಲವಾರು ಅಂಶಗಳ ನೆರವು ಪಡೆದುಕೊಂಡೇ ಇದೆ. ಓರ್ವ ಮಾರ್ಗಕವಿ ಏಕಾಏಕಿ ದೇಸಿಯತೆಯಿಂದ ಪ್ರತ್ಯೇಕಗೊಂಡು ನಿಲ್ಲಲಾರನು. ದೇಸಿ ಅಂಶಗಳು ಆತನ ವಿಚಾರದಲ್ಲಿ, ಅಭಿವ್ಯಕ್ತಿಯಲ್ಲಿ ಹರಳುಗೊಂಡು ಅವು ಅವನ ಕೃತಿಯಲ್ಲಿ ಒಂದಿಲ್ಲ ಒಂದು ರೀತಿ ಎಡೆಪಡೆದು ಕೊಂಡಿರುತ್ತವೆ. ಕೃತಿಯ ವಸ್ತು, ಆಶಯ ಇವುಗಳೇ ಅಲ್ಲದೆ, ತನ್ನ ಸುತ್ತಲಿನ ದೇಸಿ ಅಂಶಗಳಾದ ನಂಬಿಕೆ, ಸಂಪ್ರದಾಯಗಳಿಗೆ ಕವಿಯು ತನಗರಿವಿಲ್ಲದಂತೆ ಋಣಿಯಾಗಿರುತ್ತಾನೆ. ಕವಿಯಲ್ಲಿ ಸಂಸ್ಕಾರಗೊಂಡ ದೇಸಿ ಪ್ರಕ್ರಿಯೆಯು ಸಹಜವಾಗಿಯೇ ಆತನ ಕೃತಿಯಲ್ಲಿ ಪ್ರಕಟಗೊಳ್ಳುತ್ತದೆ. ಪಂಪ, ರನ್ನ, ಕುವೆಂಪುರವರ ರಚನೆಗಳೇ ಇದಕ್ಕೆ ಜಲ್ವಂತ ನಿದರ್ಶನಗಳಾಗಿದೆ. 'ಸೆಟ್ಟಿ ಬಳ್ಳಂಕಿಱಿದು' ಇಂತಹ ಅನೇಕ ಗಾದೆಗಳು, ನುಡಿಗಟ್ಟುಗಳು ಪಂಪ, ರನ್ನರ ಕೃತಿಗಳಲ್ಲಿ ಧಾರಾಳವಾಗಿ ಬಳಕೆಯಾಗಿವೆ. ಹೀಗೆ ಪ್ರಕಟಗೊಳ್ಳುವುದರ ಮೂಲಕವಾಗಿಯೇ ಕವಿ, ಕೃತಿ ಹಾಗೂ ಸಾಹಿತ್ಯ ಪರಂಪರೆ ಜೀವಂತವಾಗಿರುವಂತೆ ನೋಡಿಕೊಳ್ಳುತ್ತದೆ. ಹೀಗೆ ಸಾಹಿತ್ಯ ಪರಂಪರೆಯ ಜೀವಂತಿಕೆಗೆ ಕಾರಣವಾದ ಮಾರ್ಗ/ದೇಸಿ ತತ್ವ - ಪರಿಕಲ್ಪನೆಗಳನ್ನು ಹಾಗೂ ಭಾಷೆ ಮತ್ತು ಸಾಹಿತ್ಯವನ್ನು ಶಾಸ್ತ್ರೀಯ ಭಾಷಾ ಸ್ಥಾನಮಾನದ ದೃಷ್ಟಿಯಿಂದ ಎರಡನ್ನು ಸಮಾನವಾಗಿ ಕಾಣಬೇಕು. ಈ ಎರಡು ತತ್ವಗಳಲ್ಲಿ ಸಾಹಿತ್ಯದಲ್ಲಿ ನಮ್ಮ ಪರಂಪರೆಯ ಎಲ್ಲ ಸಾಧ್ಯತೆಗಳಿವೆ. ಅವೆರಡನ್ನು ಶಾಸ್ತ್ರೀಯ ಭಾಷಾ ಸೌಲಭ್ಯಕ್ಕೆ ಒಳಪಡಿಸಿ ಅಧ್ಯಯನ ನಡೆದರೆ ಕನ್ನಡ ಭಾಷಾಭಿವೃದ್ಧಿ ಸಾಧ್ಯವಾಗುತ್ತದೆ.

ಆಕರಗ್ರಂಥಗಳು

೧. ಕರ್ಕಿ ಡಿ.ಎಸ್. ೧೯೭೪, ಸಾಹಿತ್ಯ-ಸಂಸ್ಕೃತಿ-ಶ್ರುತಿ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೨. ಚಿದಾನಂದಮೂರ್ತಿ ಎಂ., ೨೦೦೦, ಕರ್ನಾಟಕ ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩. ಜಯಶ್ರೀ ದಂಡೆ (ಸಂ.), ೨೦೧೦, ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೮೭

ಭಾಷಾ ಸಮುದಾಯ : ಸಾಮಾನ್ಯ ಸ್ವರೂಪ

ಸಾಮಾಜಿಕ ಭಾಷಾಶಾಸ್ತ್ರದ ಸಂಶೋಧನೆಯ ಫಲವಾಗಿ ಸಮಾಜದ ವಿರಾಟ್ ರೂಪ ದರ್ಶನ ಹೆಚ್ಚು ಹೆಚ್ಚು ಸ್ಫುಟವಾಗುತ್ತಾ ಸಾಗಿದೆ. ವಿಜ್ಞಾನಿಗಳು ಹಲವಾರು ಪ್ರಮೇಯ ಗಳನ್ನು ಸಂಶೋಧನೆಗಾಗಿಯೂ ಸೃಷ್ಟಿಸಿದ್ದಾರೆ. ಅವುಗಳಲ್ಲಿ ಸಮುದಾಯವೂ ಒಂದು. ಸಮುದಾಯ ವನ್ನು ಅನೇಕರು ಅನೇಕ ರೀತಿಯಲ್ಲಿ ಅರ್ಥಮಾಡಿಕೊಳ್ಳುತ್ತಾರೆ. ಸಮಾಜ ಮತ್ತು ಸಮುದಾಯ ಈ ಎರಡು ಶಬ್ದಗಳ ಅರ್ಥವಿನ್ಯಾಸವನ್ನು ಸುಸ್ಪಷ್ಟಗೊಳಿಸುವುದ ರಲ್ಲಿಯೇ ಕೆಲವರು ನಿರತರಾಗಿದ್ದಾರೆ.

ಸಮಾಜವನ್ನು ಮಾನವ ಸಂಬಂಧಗಳ ಒಂದು ವ್ಯವಸ್ಥೆ ಎಂದು ವಿವರಿಸಬಹುದು. ವ್ಯಕ್ತಿ ವ್ಯಕ್ತಿಯೊಳಗಣ ಪರಸ್ಪರ ಸಂಬಂಧಗಳು ಅವರು ಕೈಗೊಳ್ಳುವ ಕ್ರಿಯೆಗಳಿಗನುಗುಣವಾಗಿ ನಿರ್ಮಾಣವಾಗುತ್ತವೆ. ವ್ಯಕ್ತಿಯ ಸ್ಥಾನ, ಅವನ ಕಾರ್ಯರಂಗ, ಹೊಣೆಗಾರಿಕೆ, ಪಾತ್ರ ಇವೆಲ್ಲವೂ ಅವನು ಇನ್ನಿತರೊಡನೆ ಈಗಾಗಲೇ ಇರಿಸಿಕೊಂಡಿರುವ, ಇನ್ನು ಮುಂದೆ ಬೆಳೆಸಿಕೊಳ್ಳಬೇಕಾಗಿರುವಂತಹ ಸಂಬಂಧಗಳ ರೂಪವನ್ನು ನಿರ್ಣಯಿಸುವುದರಲ್ಲಿ ಪರಿಣಾಮ ಕರವಾದ ಪಾತ್ರಗಳನ್ನು ಆಡುತ್ತದೆ.

ಹೀಗೆ, ಸೃಷ್ಟಿಯಾದ ಸಂಬಂಧಗಳು ಅನೇಕ ವ್ಯಕ್ತಿಗಳನ್ನು ಒಂದೊಂದು ತೆರನಾದ ಸಂಬಂಧಗಳ ಬಲೆಯಲ್ಲಿ ಬಂಧಿಸುತ್ತವೆ. ಜೊತೆಗೆ ಈ ಬಂಧನಗಳ ಬಲೆಯಲ್ಲಿ ಜನರು ಅನೇಕ ಗುಂಪುಗಳಾಗಿ ವಿಂಗಡಿಸಲ್ಪಡುತ್ತಾರೆ. ಆ ಜನರು ಹಲವಾರು ರೂಢಿಮೂಲಗಳ ಪ್ರಕಾರ ತಮ್ಮ ತಮ್ಮ ನಡವಳಿಕೆಗಳನ್ನು ಅಳವಡಿಸಿಕೊಂಡು ಜೀವಿಸುತ್ತಾರೆ. ಸಮಾಜ ವ್ಯವಸ್ಥೆಯು ಜನರ ಸ್ವಾತಂತ್ರ್ಯರಕ್ಷಣೆ ಮಾಡಿದಂತೆ ಅವರ ಸ್ವೇಚ್ಛಾಚಾರಕ್ಕೆ ತಡೆಯನ್ನು ಒಡ್ಡುತ್ತದೆ. ಹೀಗೆ ಹಲವಾರು ವಿಧಿ ನಿಷೇಧಗಳ ಸಂಬಂಧಗಳಿಂದ ಕೂಡಿದ ಜೀವನವು ಒಂದು ಜೇಡದ ಬಲೆಯಂತಿರುವುದನ್ನು ಅರಿಯಬಹುದು. ಆದರೆ ಸಮಾಜವು ಸದಾ ಬದಲಾಗುತ್ತಿರುವ ಒಂದು ವ್ಯವಸ್ಥೆ. ಬದಲಾವಣೆಯು ಅಸ್ಪಷ್ಟವಾಗಿಯೂ ಸಾಗುತ್ತದೆ,

ಸುಸ್ಪಷ್ಟವಾಗಿಯೂ ಪ್ರಕಟವಾಗುತ್ತದೆ. ಪರಂಪರೆಯು ಹಿನ್ನೆಲೆಯಾಗಿದ್ದರೂ ನೂತನ ರೂಪವನ್ನು ಪಡೆಯುವಂಥ ಚಿರನೂತನ ವ್ಯವಸ್ಥೆಯಾದ ಸಮಾಜವು ಒಂದು ಪ್ರಕ್ರಿಯೆ ಎಂದು ಸಮಾಜಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ.

ಸಮುದಾಯವು ಒಂದು ದೃಷ್ಟಿಯಿಂದ ಸಮಾಜದ ಪ್ರಕಟರೂಪ. ಏಕೆಂದರೆ ಅದು ಸಮಾಜಕ್ಕೆ ಭೌತಕವಚವನ್ನು ಸಾಧಾರಣವಾಗಿ ಒದಗಿಸಿಕೊಡುತ್ತದೆ. ಸಮುದಾಯವು ದೃಗ್ಗೋಚರವಾಗುವ ಒಂದು ಜನವಸತಿ ಅಥವಾ ನಿವೇಶನ, ಗ್ರಾಮ, ಪ್ರದೇಶ. ರಾಷ್ಟ್ರ. ಇವುಗಳೆಲ್ಲವೂ ಸಮುದಾಯದ ಪ್ರಕಾರಗಳು.

ಸಮುದಾಯಕ್ಕೆ ಕೆಲವು ಮುಖ್ಯವಾದ ವೈಲಕ್ಷಣಗಳಿವೆ. ಅವುಗಳನ್ನು ಭೌತ ಮತ್ತು ಸಾಮಾಜಿಕ ಎಂದು ಎರಡು ಗುಂಪುಗಳಾಗಿ ವಿಭಾಗಿಸಬಹುದು. ಭೌತ ವಾತಾವರಣವು ಜನವಸತಿಯ ಭೌಗೋಳಿಕ ಗಡಿಗಳನ್ನು ನಿರ್ಣಯಿಸುತ್ತದೆ. ಜನರು ತಮ್ಮ ಜೀವನಕ್ಕಾಗಿ ನೆಲೆನಿಂತು ಅನೇಕ ವ್ಯವಹಾರಗಳಲ್ಲಿ ತೊಡಗಿರುವಂಥ ಒಂದು ಪ್ರದೇಶವೇ ಸಮುದಾಯ. ಗ್ರಾಮಕ್ಕೆ, ನಗರಕ್ಕೆ, ಪ್ರದೇಶಕ್ಕೆ ಹಾಗೆಯೇ ರಾಷ್ಟ್ರಕ್ಕೆ ಮಾನ್ಯ ಮಾಡಿದ ಗಡಿರೇಖೆಗಳಿರುತ್ತವೆ. ಆ ರೇಖೆಗಳ ಒಳಗಣ ಭೌತ ಪರಿಸ್ಥಿತಿಯೆಲ್ಲವೂ ಅಲ್ಲಿನ ಜನಜೀವನದ ಮೇಲೆ ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಪ್ರಭಾವ ಬೀರುತ್ತವೆ. ಭೌತವಸ್ತು ವಿಶ್ಲೇಷಣ ಗಳಲ್ಲಿ ಭೂಗುಣ, ಮಣ್ಣಿನ ವಿವಿಧ ಪ್ರಕಾರಗಳು, ಗುಡ್ಡ ಗಾಡುಗಳು, ವನ್ಯ ಮತ್ತು ಸಾಕುಪ್ರಾಣಿಗಳು, ಹವೆ, ಮಳೆ ಗಾಳಿಗಳು, ಬೆಳೆಗಳು, ಖನಿಜಗಳು, ಬೀದಿ-ಕೇರಿಗಳು, ಕಟ್ಟಡಗಳ ನಿರ್ಮಾಣಗಳಲ್ಲಿ, ಉದ್ಯೋಗಗಳಲ್ಲಿ ಉಪಯೋಗಿಸುವ ಉಪಕರಣಗಳು ಇತ್ಯಾದಿಗಳೆಲ್ಲವು ಭೌತವಾತಾವರಣದ ಅಂಶಗಳಾಗಿರುತ್ತವೆ.

ಸಾರ್ವಜನಿಕ ವಾತಾವರಣವು ಅಲ್ಲಿನ ಜನರ ಆರ್ಥಿಕ, ರಾಜಕೀಯ, ನೈತಿಕ, ಮಾನಸಿಕ ಮತ್ತು ವ್ಯವಹಾರಿಕ ಜೀವನಕ್ಕೆ ಸಂಬಂಧಿಸಿದುದು. 'ಈ ಒಂದು ಭೌಗೋಳಿಕ ಗಡಿರೇಖೆ ಯೊಳಗೆ ಜೀವಿಸತೊಡಗಿದ ಜನರು ಅನೇಕ ಉದ್ಯೋಗಗಳಲ್ಲಿ ಹಲವಾರು ವೃತ್ತಿಗಳಲ್ಲಿ ತೊಡಗಿರುತ್ತಾರೆ. ಅವರು ವಿವಿಧ ಧಾರ್ಮಿಕ ಜಾತೀಯ ಗುಂಪುಗಳಲ್ಲಿ, ಕುಟುಂಬ, ವಂಶ, ಬಳಗ ಮುಂತಾದ ಸಾಮಾಜಿಕ ಘಟಕಗಳಲ್ಲಿ ವಿಭಾಗವಾಗಿರುತ್ತಾರೆ. ಅವರವರ ಗುಂಪುಗಳ ರಚನೆ, ಸಾಂಸ್ಕೃತಿಕ ಇತಿಹಾಸ, ಗುರಿಗಮ್ಯಗಳಿಗೆ ಅನುಗುಣವಾಗಿ ಅವರು ಒಬ್ಬರೊಡ ನೊಬ್ಬರು ವ್ಯವಹರಿಸುತ್ತಾರೆ. ಅವರ ಪರಸ್ಪರ ವ್ಯವಹಾರವು, ಅವರು ನೆಲಸಿರುವ ಭೌತವಾತಾ ವರಣದಿಂದಲೂ ಪ್ರಭಾವಿತವಾಗಿರುತ್ತದೆ. ಹಾಗೆಯೇ ಅದು ಭೌತವಾತಾವರಣವನ್ನು ಜನಜೀವನಕ್ಕೆ ಅನುಕೂಲವಾಗಿ ಮಾರ್ಪಡಿಸಿಕೊಳ್ಳುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ'.[೧]

ಮೆಕೈವರ್ ಮತ್ತು ಪೇಜ್ ಎಂಬ ಸಮಾಜಶ್ರಾಜ್ಞರು ಸಮುದಾಯವನ್ನು ಕುರಿತು ಇಂತು ಸೂತ್ರೀಕರಿಸಿದ್ದಾರೆ. "ಸಮುದಾಯವು ಒಂದು ನಿರ್ದಿಷ್ಟ ಪ್ರದೇಶವಾಗಿದು ಸಾಮಾಜಿಕ ಜೀವನಕ್ಕೆ ಅನುಕೂಲವಾಗಿರುವುದಲ್ಲದೆ, ಸಾಕಷ್ಟು ಪ್ರಮಾಣದಲ್ಲಿ ಸಾಮಾಜಿಕವಾದ

ಐಕ್ಯತೆಯೂ ಕಂಡುಬರುತ್ತದೆ. ಸಮುದಾಯಕ್ಕೆ ಮೂಲವಾದುದು ಪ್ರದೇಶ ಮತ್ತು ಸಮುದಾಯಿಕ ಭಾವುಕತೆ. ವ್ಯಕ್ತಿಗಳು ಒಟ್ಟಿಗೆ ಚಿಕ್ಕದಾದ ಅಥವಾ ದೊಡ್ಡದಾದ ಸಮೂಹದಲ್ಲಿ ಕೂಡಿ ಬಾಳ್ವೆ ನಡೆಸಲು ಪ್ರಾರಂಭಿಸಿದಲ್ಲಿ ಸರ್ವರಿಗೂ ಸಾಮಾನ್ಯವಾದ ಜೀವನಪದ್ಧತಿಯು ರೂಪುಗೊಳ್ಳುವುದು ಸಹಜ. ಸಮುದಾಯದ ಸರ್ವೇಸಾಮಾನ್ಯವಾದ ಮುಖ್ಯ ಗುಣವೆಂದರೆ ಅಲ್ಲಿನ ಸದಸ್ಯರಲ್ಲಿ ಸಾಮಾಜಿಕ ಸಂಬಂಧಗಳು ಬೆಳೆದು ಹೆಣೆದುಕೊಂಡಿರುವುದು".[೭]

ಬೇಕರ್ ಬ್ರೌನೆಲ್ ಎಂಬುವರು ಸಮುದಾಯದ ಅರ್ಥವನ್ನು ನಿರೂಪಿಸುವ ಬಗೆ ಹೀಗಿದೆ. "ಸಮುದಾಯವು ವೈವಿಧ್ಯವಾದ ಚಿಕ್ಕ ಜನಸಮೂಹ. ಈ ಸಮೂಹದಲ್ಲಿ ತರುಣರು, ವಯಸ್ಕರು, ಪುರುಷರು, ಸ್ತ್ರೀಯರು, ಅನ್ಯೋನ್ಯ ಭಾವವುಳ್ಳ ನೆರೆಹೊರೆಯವರಂತೆ ಬಾಳ್ವೆ ನಡೆಸುತ್ತಾರೆ. ಇದು ಮುಖಾಮುಖಿ ಪ್ರಾಥಮಿಕ ಸಮೂಹವಾಗಿದ್ದು ಇದರಲ್ಲಿ ಜನಜೀವನಕ್ಕೆ ಸಂಬಂಧಿಸಿದ ದೊಡ್ಡ ಪ್ರಮಾಣದ ಕೆಲಸಗಳು ಪರಸ್ಪರ ಸಹಕಾರದಿಂದ ನಡೆಯುತ್ತವೆ. ಈ ಸಣ್ಣ ಸಮುದಾಯದಲ್ಲಿನ ಸದಸ್ಯರಲ್ಲಿ ಪರಸ್ಪರ ಸಹಕಾರದಿಂದ ನಡೆಯುತ್ತವೆ. ಈ ಸಣ್ಣ ಸಮುದಾಯದಲ್ಲಿನ ಸದಸ್ಯರಲ್ಲಿ ಪರಸ್ಪರ ಪರಿಚಯವಿರುತ್ತದೆ, ಸಮುದಾಯವು ನಮ್ಮದು ಎಂಬ ಮನೋಭಾವ ಮೂಡಿಬರುತ್ತದೆ. ಇಂತಹ ಸ್ವಾಭಾವಿಕ ಸಮುದಾಯದಲ್ಲಿ ಮಾನವಿಕ ಚಟುವಟಿಕೆಗಳು ಅನಾದಿಕಾಲದಿಂದಲೂ ನಡೆಯುತ್ತಾ ಬಂದಿವೆ. ಇಂತಹ ಸಮುದಾಯ ವಿಸರ್ಜಿತವಾದಲ್ಲಿ ಮಾನವಜೀವನ ಜೈವಿಕವಾಗಿ, ನೈತಿಕವಾಗಿ ಹಾಗೂ ಬೌದ್ಧಿಕವಾಗಿಯೂ ನಾಶಹೊಂದುತ್ತದೆ ಮತ್ತು ನಿರರ್ಥಕವಾಗುತ್ತದೆ.[೮] ಹೀಗೆ ಸಮುದಾಯದ ಅರ್ಥವ್ಯಾಪ್ತಿ ವೈವಿಧ್ಯಮಯವಾಗಿದೆ.

ಭಾಷಾ ಸಮುದಾಯ ಭಾಷಿಕರ ಸಾಮಾಜಿಕ ಸಂಬಂಧಗಳ ಬಲೆ. ಭಾಷಿಕರು ಪರಸ್ಪರ ಒಬ್ಬರನ್ನೊಬ್ಬರು ಅರಿತು ನೆಮ್ಮದಿಯಿಂದ ಬಾಳಲು ವ್ಯವಸ್ಥೆಗೊಳಿಸುತ್ತದೆ. ಭಾಷೆ-ಸಂಸ್ಕೃತಿ ಸಮುದಾಯ, ನಡೆ-ನುಡಿ, ಆಚಾರ-ವಿಚಾರಗಳು ಇವು ಸಮುದಾಯದ ಪರಿಮಿತಿಯಲ್ಲಿಯೇ ಮೈದಳೆಯುತ್ತವೆ. ಇದರಿಂದ ಸಮುದಾಯ ಪರಿವರ್ತನ ಶೀಲವಾಗಿರುತ್ತದೆ. ಅದು ಬದಲಾದ ಭಾಷಾ ಪರಿಸರಕ್ಕೆ ತಕ್ಕಂತೆ ತನ್ನ ಕಾರ್ಯವ್ಯಾಪ್ತಿ ವಿಸ್ತರಿಸುತ್ತದೆ. ಸಮುದಾಯದ ಭಾಷಾ ಪರಿಸರವೇ ಭಾಷಾಕಲಿಕೆಗೆ ಕಾರಣವಾಗುತ್ತದೆ. ಭಾಷೆಯ ಮೂಲಕವೇ ಭಾಷಿಕರ ನಡೆ-ನುಡಿ, ಆಚಾರ-ವಿಚಾರಗಳು, ಮನಸ್ಸಿನ ಭಾವನೆಗಳು ಪೀಳಿಗೆಯಿಂದ ಪೀಳಿಗೆಗೆ ಸಾಗಿಸಲ್ಪಡುತ್ತವೆ. ಭಾಷೆ ಕೇವಲ ಪದಗಳನ್ನಷ್ಟೇ ಒಳಗೊಳ್ಳದೆ ಆ ಪದಗಳ ಹಿಂದೆ ಆ ಭಾಷೆಯನ್ನಾಡುವ ಜನಗಳ ಬದುಕು ಹಾಗೂ ಜೀವನ ಕ್ರಮದ ಅನೇಕ ಅಂಶಗಳನ್ನೊಳಗೊಂಡಿರುತ್ತದೆ. ಭಾಷೆ ಈ ಕಾರಣದಿಂದ ಸಂಸ್ಕೃತಿಯ ಅನೇಕ ಅಂಶಗಳನ್ನು ಪೀಳಿಗೆಯಿಂದ ಪೀಳಿಗೆಗೆ ಕೊಂಡೊಯ್ಯುತ್ತದೆ ಎನ್ನಬಹುದು. ಭಾಷಾ ಸಮುದಾಯ ಭಾಷಿಕರು ಕೂಡಿ ಬದುಕುವ ಹಾಗೂ ಭಾಷಿಕರ ಕ್ರಿಯೆ ಅವುಗಳ ಪರಿಣಾಮಗಳನ್ನು ಒಳಗೊಂಡಿರುತ್ತದೆ. ಭಾಷಾ ಸಮುದಾಯದ ಕಕ್ಷೆಯಲ್ಲಿ ಸಮಾವೇಶಗೊಳ್ಳುವ ಅಂಶಗಳು ಹೀಗಿವೆ :

೧. ಒಂದು ಭಾಷಾ ಸಮುದಾಯ ಒಂದು ಭಾಷೆ ಆಡುತ್ತಿರಬೇಕು. ಆ ಸಮುದಾಯದ ಸದಸ್ಯರು ನಿರಂತರವಾಗಿ ಮಾತನಾಡುತ್ತಿರಬೇಕು. ಅವರು ಬಳಸುವ ಭಾಷೆ ಸಮಾನವಾದ ಭಾಷಾ ಅಂಶಗಳಿಂದ ಕೂಡಿರಬೇಕು. ಬೇರೆ ಬೇರೆ ಭಾಷಾಸಮುದಾಯಗಳೊಡನೆ ಹೋಲಿಸಿದಾಗ ಭಾಷೆ ಬಳಸುವ ರೀತಿಯಲ್ಲಿ ವ್ಯತ್ಯಾಸವಿರಬೇಕು. ಹೀಗೆ, ಸಮಾನ ಮಾತುಗಳಿಂದ ಸಂಪರ್ಕವಾದ ಗುಂಪು ಭಾಷಾ ಸಮುದಾಯ ಎನಿಸಿಕೊಳ್ಳುತ್ತದೆ. ಭಾಷಾ ಸಮುದಾಯದಲ್ಲಿ ಒಂದು ಭಾಷೆಯನ್ನು ಉಪಯೋಗಿಸುವ ಜನ ಸಮೂಹವಿದ್ದರೆ ಅಂತಹ ಸಮುದಾಯ 'ಏಕಭಾಷಿಕ ಸಮುದಾಯ' ಆ ಭಾಷಾ ಸನ್ನಿವೇಶ 'ಏಕಭಾಷಾಸ್ಥಿತಿ'. ಭಾಷಾ ಸಮುದಾಯದಲ್ಲಿ ಎರಡು ಭಾಷೆಗಳನ್ನು ಉಪಯೋಗಿಸುವ ಜನ ಸಮೂಹವಿದ್ದರೆ ಅಂತಹ ಸಮುದಾಯ 'ದ್ವಿಭಾಷಾ ಸಮುದಾಯ', ಆ ಭಾಷಿಕ ಸನ್ನಿವೇಶ 'ದ್ವಿಭಾಷಿಕ ಸ್ಥಿತಿ' ಎನಿಸಿಕೊಳ್ಳುತ್ತದೆ. ಭಾಷಾ ಸಮುದಾಯದಲ್ಲಿ ಮೂರು ಅಥವಾ ಮೂರಕ್ಕಿಂತ ಹೆಚ್ಚು ಭಾಷೆಗಳನ್ನು ಉಪಯೋಗಿಸುವ ಜನಸಮೂಹವಿದ್ದರೆ ಅಂತಹ ಸಮುದಾಯ 'ಬಹುಭಾಷಾ ಸಮುದಾಯ'. ಆ ಭಾಷಿಕ ಸನ್ನಿವೇಶವು 'ಬಹುಭಾಷಿಕತೆ' ಎನಿಸಿಕೊಳ್ಳುತ್ತದೆ.

೨. ಭಾಷೆ, ವೈಯಕ್ತಿಕ ಅಭಿವ್ಯಕ್ತಿಯ ಸಂವಹನ ಕ್ರಿಯೆಯಾಗಿರುವಂತೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳಲ್ಲಿ ಪ್ರಕಟವಾಗುವ ವಿಧಾನವನ್ನು ಸಾಮಾಜಿಕ ಭಾಷಾವಿಜ್ಞಾನಿಗಳು ಅಧ್ಯಯನ ಮಾಡುತ್ತ ಬಂದಿದ್ದಾರೆ. ಈ ವ್ಯಾಸಂಗದ ದಿಶೆಯಲ್ಲಿ ದ್ವಿಭಾಷಿಕತೆ ಮತ್ತು ಬಹುಭಾಷಿಕತೆಗಳು ಭಾಷೆಯ ಸಾಮಾಜಿಕ ಮತ್ತು ಸಾಮೂಹಿಕ ಅಭಿವ್ಯಕ್ತಿಯ ಮುಖಗಳಾಗಿವೆ. ಭಾರತೀಯ ಅಥವಾ ಜಾಗತಿಕ ದೃಷ್ಟಿಯಿಂದ ನಮ್ಮ ಆಧುನಿಕ ಸಾಮಾಜಿಕ ವ್ಯವಸ್ಥೆಯನ್ನು ಅವಲೋಕಿಸಿದಾಗ ದ್ವಿಭಾಷಿಕತೆ ಇಲ್ಲವೆ ಬಹುಭಾಷಿಕತೆ ಒಂದು ಬಹುಪ್ರಮುಖವಾದ ಲಕ್ಷಣವಾಗಿರುವಂತೆ ತೋರುತ್ತದೆ. ಹೀಗಾಗಿ ಭಾಷೆಯ ಸಾಂಸ್ಕೃತಿಕ, ಸಾಮಾಜಿಕ ಅಭಿವ್ಯಕ್ತಿ ವಿಧಾನವನ್ನು ಗ್ರಹಿಸಬೇಕಾದುದು ಅತ್ಯಂತ ಉಚಿತವಾದ ಕಾರ್ಯವಾಗಿದೆ.

ಒಂದು ಭಾಷಾಸಮುದಾಯದಿಂದ ಇನ್ನೊಂದು ಭಾಷಾಸಮುದಾಯಕ್ಕೆ ಹೋಗುವ ಭಾಷಿಕನೊಬ್ಬ, ತನ್ನ ಮಾತೃಭಾಷೆಯೊಂದಿಗೆ ಅಲ್ಲಿಯ ಪ್ರಾದೇಶಿಕ ಇಲ್ಲವೆ ಸಾಮಾಜಿಕ ಭಾಷೆಯನ್ನೂ ರೂಢಿಸಿಕೊಳ್ಳಬೇಕಾಗುತ್ತದೆ. ಇಂಥ ಸಂದರ್ಭಗಳಲ್ಲಿ ಎರಡು ಭಾಷೆಗಳ ಪರಸ್ಪರ ವೈಯಕ್ತಿಕ ಅಥವಾ ಸ್ವೇಚ್ಛಾವ್ಯವಹಾರ ದ್ವಿಭಾಷಿಕತೆಗೆ ದಾರಿ ಮಾಡಿಕೊಡುತ್ತದೆ. "ದ್ವಿಭಾಷಿಕತೆ" ಎನ್ನುವುದು ಎರಡು ಭಿನ್ನ ಸನ್ನಿವೇಶಗಳಲ್ಲಿ ವ್ಯಕ್ತಿಯೊಬ್ಬ ಎರಡು ಭಾಷೆಗಳನ್ನು ಪರಸ್ಪರ ಅಭಿವ್ಯಕ್ತಿಗಾಗಿ ವ್ಯವಹರಿಸುವ ವಿಧಾನ. ಅಂದರೆ ದ್ವಿಭಾಷಿಯು ಎರಡು ಭಾಷೆಗಳನ್ನು ತನ್ನ ಅಭಿವ್ಯಕ್ತಿಯಲ್ಲಿ ಪ್ರಕಟಿಸಲೇಬೇಕೆಂಬ ನಿಯಮವಿಲ್ಲ ಅವನು ಎರಡು ಭಾಷೆಗಳನ್ನು ಅರಿತುಕೊಂಡರೆ ಈ ಕಾರ್ಯ ಸ್ವಾಭಾವಿಕವಾಗಿಯೆ ನಡೆಯುತ್ತ ಹೋಗುವುದು ಸಾಧ್ಯ. ಆದರೆ ಇಲ್ಲಿ ಒಂದು ಸಂಗತಿ ಮುಖ್ಯವಾದುದು ದ್ವಿಭಾಷಿಕನಿಗೆ ತನ್ನ ಮಾತೃಭಾಷೆಯೊಂದಿಗೆ ಇನ್ನೊಂದು ಭಾಷೆಯ 'ಗ್ರಹಣ ಸಾಮರ್ಥ್ಯ' ಹಾಗೂ ಜೊತೆಗೆ

ನಿರ್ಮಾಣ ಸಾಮರ್ಥ್ಯವಿರಬೇಕು. ಕೇವಲ ಗ್ರಹಣ ಸಾಮರ್ಥ್ಯವೊಂದೇ ಇದ್ದು ನಿರ್ಮಾಣ ಸಾಮರ್ಥ್ಯವಿಲ್ಲದಿದ್ದರೆ ಆಗ ಅದು "ಅರ್ಧದ್ವಿಭಾಷಿಕತೆ" ಎನ್ನಿಸಿಕೊಳ್ಳುತ್ತದೆ.

ಸಾಮಾಜಿಕ ಭಾಷಾವಿಜ್ಞಾನಿಗಳು 'ಅವಶ್ಯಕತೆಯೇ' ದ್ವಿಭಾಷಿಕತೆ ಉಂಟಾಗಲು ಕಾರಣವೆಂದು ಭಾವಿಸುತ್ತಾರೆ. ಈ ಪ್ರಕ್ರಿಯೆ ನಡೆಯಲು ಅವಶ್ಯಕವಾದ ಕಾಲಮಾನದ ಬಗೆಗೆ ಯಾವುದೇ ನಿರ್ದಿಷ್ಟತೆ ಇಲ್ಲ. ಅದು ವೈಯಕ್ತಿಕವಾಗಿರಬಹುದು ಅಥವಾ ಸಾಮಾಜಿಕ, ಸಾಂಸ್ಕೃತಿಕ ಇಲ್ಲವೆ ರಾಜಕೀಯ ಕಾರಣಗಳಿಂದಲೂ ದ್ವಿಭಾಷಿಕತೆ ಉಂಟಾಗುತ್ತದೆ. ಇಂಥ ಸಂದರ್ಭಗಳಲ್ಲಿ ವೈಯಕ್ತಿಕ ಆಕಾಂಕ್ಷೆ, ಅಭೀಪ್ಸೆಗಳ ಪೂರೈಕೆಗಾಗಿ ಸಾಮಾಜಿಕ ಸ್ವೀಕರಣಕ್ರಿಯೆ ನಡೆಯುವಲ್ಲಿ ಸಾಮಾಜಿಕ ಇಲ್ಲವೆ ನಿರ್ದಿಷ್ಟವಾದ ಉದ್ದೇಶವಿರುತ್ತದೆ. ಕನ್ನಡ ನಾಡಿನಿಂದ ಮಾಹಾರಾಷ್ಟ್ರದ ಮುಂಬೈ-ಪುಣೆಗಳಲ್ಲಿ ಹೋಗಿ ನೆಲೆಸುವವರು ಮರಾಠಿಯನ್ನು ಕಲಿಯ ಬೇಕಾಗಿ ಬಂದಂತೆ. ರವೀಂದ್ರರ ಕೃತಿಗಳನ್ನು ಅಭ್ಯಸಿಸಲು ಬಂಗಾಲಿಯನ್ನು ವ್ಯಾಸಂಗ ಮಾಡಬೇಕಾಗುತ್ತದೆ. ಭಾರತೀಯ ಪರಿಸರದಲ್ಲಿ ದ್ವಿಭಾಷಿಕತೆ ಒಂದು ಸಾಮಾಜಿಕ ಅವಶ್ಯಕತೆ ಯಾಗಿದೆ ಎಂಬುದು ಮುಖ್ಯವಾದ ಸಂಗತಿಯಾಗಿದೆ.

ವೈಯಕ್ತಿಕವಾಗಿ ತನ್ನ ಮಾತೃಭಾಷೆ ತನ್ನೆಲ್ಲ ಮನದಾಸೆಗಳನ್ನು ಈಡೇರಿಸದಿದ್ದರೂ ಒಬ್ಬ ವ್ಯಕ್ತಿ ಭಿನ್ನ ಭಾಷೆಗಳನ್ನು ಅಭ್ಯಸಿಸುವುದುಂಟು. "ಗ್ರೀಕ್" ಭಾಷೆಯವನು ಧಾರ್ಮಿಕ ಉದ್ದೇಶದಿಂದ ಹಿಬ್ರೂ ಭಾಷೆಯನ್ನು ಕಲಿಯುವುದು ಇದಕ್ಕೆ ಒಂದು ಉದಾಹರಣೆ. ಹೀಗೆ ದ್ವಿಭಾಷಿ ತನ್ನ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ವ್ಯವಹಾರಕ್ಕಾಗಿ ಎರಡನೇ ಭಾಷೆಯನ್ನು ಬಳಸುತ್ತ ಹೋಗುತ್ತಾನೆ. ಇದರಿಂದ ಮುಂದೆ ಅವನು ತನ್ನ ಮಕ್ಕಳಿಗೆ ತನ್ನ ಮಾತೃಭಾಷೆ ಯನ್ನು ಕಲಿಸದೇ ಇರುವ ಸಂಭವವೂ ಇದೆ. ಬೇರೊಂದು ಭಾಷೆ ಅವರ ಮಾತೃಭಾಷೆ ಯಾಗುವುದು ಉಂಟು. ಭಾರತದಲ್ಲಿ ಫಾರ್ಸಿಗಳು ತಮ್ಮ ಮಾತೃಭಾಷೆಯನ್ನೂ ಹಾಗೂ ಅದರ ಸಂಸ್ಕೃತಿಯನ್ನೂ ಉಳಿಸಿಕೊಂಡು ಬರಲು ಗುಜರಾತಿಯನ್ನು ಬಳಸುತ್ತ ಬಂದಿರುವು ದನ್ನು ನೋಡಬಹುದು. ಹೀಗೆ ಬೇರೆ ಬೇರೆ ಭಾಷಾಸಮುದಾಯದವರು ಒಂದು ಪ್ರದೇಶ ದಿಂದ ಇನ್ನೊಂದೆಡೆ ಬಂದು ನೆಲಸಿ ತಮ್ಮ ಭಾಷೆ ಸಂಸ್ಕೃತಿಯ ಹಿನ್ನೆಲೆಯಲ್ಲಿ ಪ್ರಾದೇಶಿಕ ಭಾಷೆ, ಸಂಸ್ಕೃತಿಯನ್ನೂ ಒಂದಾಗಿಸುತ್ತ ಸಾಗಿರುತ್ತಾರೆ. ಬೆಂಗಳೂರಿನಲ್ಲಿರುವ ತಮಿಳರು, ಬೆಳಗಾವಿ ಯಲ್ಲಿಯ ಮರಾಠಿಗಳು, ಕಾಸರಗೋಡಿನಲ್ಲಿರುವ ಕನ್ನಡಿಗರು, ಕೋಲಾರ, ಬಳ್ಳಾರಿ ಪ್ರದೇಶಗಳಲ್ಲಿರುವ ತೆಲುಗು ಭಾಷಾಸಮುದಾಯಗಳಲ್ಲಿ ದ್ವಿಭಾಷಾ ಸಂಪರ್ಕವಿಧಾನ ತುಂಬ ಪರಿಣಾಮ ಬೀರಿದೆ ಎಂಬುದು ಅಧ್ಯಯನದಿಂದ ದೃಢಪಟ್ಟಿದೆ. ಹೀಗೆ, ಭಾಷೆಗಳಲ್ಲಿ ಉಂಟಾಗುವ ನಿರಂತರವಾದ ಬದಲಾವಣೆಯಂತೆಯೇ ದ್ವಿಭಾಷಿಕತೆಯಲ್ಲೂ ರಾಜಕೀಯ, ಆರ್ಥಿಕ ಅಥವಾ ಸಾಂಸ್ಕೃತಿಕ ಸ್ಥಿತಿಗಳಿಗನುಗುಣವಾಗಿ ಬದಲಾವಣೆಗಳಾಗುತ್ತಿರುತ್ತವೆ.

೩. ಭಾಷೆ, ಸಂಸ್ಕೃತಿಯ ಮುಖ್ಯ ಅಂಗ. ಸಂಸ್ಕೃತಿಗೆ ಸಂಬಂಧಿಸಿದ ಎಲ್ಲ ಚಟುವಟಿಕೆಯ ಬುನಾದಿ ಭಾಷೆಯಾಗಿರುತ್ತದೆ. ಭಾಷೆ, ಸಮಾಜ ಮತ್ತು ಸಂಸ್ಕೃತಿ ಒಂದನ್ನೊಂದು ಅವಲಂಬಿಸಿವೆ. ಅವು ಪರಸ್ಪರ ಪೂರಕವಾದವುಗಳು. ಭಾಷೆಯು ಸಮಾಜ ಹಾಗೂ

ಸಂಸ್ಕೃತಿಯ ಭಾಗವಾದರೂ ಅವುಗಳ ಸ್ವರೂಪವನ್ನು ಅಧ್ಯಯನ ಮಾಡಲು ಅದು ಅಗತ್ಯ ಸಾಧನವಾಗಿದೆ, ಭಾಷೆಯ ಮೂಲಕ ಒಂದು ಸಮುದಾಯದ ಇತಿಹಾಸವನ್ನು ತಿಳಿದು ಕೊಳ್ಳಬಹುದು. ಉದಾ: ದ್ರಾವಿಡ ಭಾಷೆಗಳ ನೆರವಿನಿಂದ ದ್ರಾವಿಡ ಭಾಷೆಗಳನ್ನಾಡುತ್ತಿದ್ದ ಜನರ ಜೀವನವನ್ನು, ಸಂಸ್ಕೃತಿಯನ್ನು ಅರಿಯಬಹುದಾಗಿದೆ. ಆಯಾ ಭಾಷೆಯನ್ನು ಆಡುವವರ ಸಂಸ್ಕೃತಿ ಮತ್ತು ನಾಗರಿಕತೆಗಳನ್ನು ಭಾಷೆ ಪ್ರತಿಬಿಂಬಿಸುತ್ತದೆ. ಮನೆಯ ವಾತಾವರಣ, ನೆರೆಹೊರೆಯ ಪರಿಸರ, ಶಾಲಾ ಕಾಲೇಜು, ಸಮುದಾಯ, ಆಟಗಳು, ಸ್ನೇಹಿತರು, ಚಲನಚಿತ್ರಗಳು ಮುಂತಾದುವುಗಳು ಮಗು ಅಥವಾ ವ್ಯಕ್ತಿಯ ಭಾಷೆಯ ಮೇಲೆ ಪ್ರಭಾವ ಬೀರುತ್ತವೆ.

ಒಂದು ಭಾಷಾ ಕ್ಷೇತ್ರದಲ್ಲಿ ಏಕಭಾಷಿಕರು, ದ್ವಿಭಾಷಿಕರು ಹಾಗೂ ಬಹುಭಾಷಿಕರು ಇರುತ್ತಾರೆ. ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಏಕಭಾಷಿಕರು ಹೆಚ್ಚು, ಇವರು ಹೆಚ್ಚಾಗಿ ಅವಿದ್ಯಾವಂತರಾಗಿರುತ್ತಾರೆ. ದ್ವಿಭಾಷಿಕರು ಮತ್ತು ಬಹುಭಾಷಿಕರು ಪಟ್ಟಣ ಪ್ರದೇಶ ಗಳಲ್ಲಿ ಮತ್ತು ಗಡಿ ಪ್ರದೇಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿರುತ್ತಾರೆ. ಇವರು ಹೆಚ್ಚಾಗಿ ವಿದ್ಯಾವಂತರು, ಈಗಿನ ವಿಜ್ಞಾನ ಹಾಗೂ ತಂತ್ರಜ್ಞಾನ ಯುಗದಲ್ಲಿ ಮನುಷ್ಯ ಒಂದೇ ಪ್ರದೇಶದಲ್ಲಿ ಒಂದು ಭಾಷೆಯನ್ನು ಕಲಿತು ಒಂದೇ ರೀತಿಯಾಗಿ ಬದುಕಲಾರ, ಬಾಳಲಾರ. ತನ್ನ ಅವಶ್ಯಕತೆಗಳನ್ನು ಪೂರೈಸಲು, ತನ್ನ ಜೀವನವನ್ನು ಸುಗಮವಾಗಿಸಲು ಬೇರೆ ಬೇರೆ ಪ್ರದೇಶಗಳಲ್ಲಿ ಸಂಚರಿಸಬೇಕಾಗುತ್ತದೆ. ಕೆಲವು ವೇಳೆ ಅಲ್ಲಿಯೇ ವಾಸಿಸಬೇಕಾಗುತ್ತದೆ. ಆಗ ಆ ಪ್ರದೇಶದ ಭಾಷೆಯನ್ನು ಕಲಿತು ಅದರಲ್ಲಿ ವ್ಯವಹರಿಸಬೇಕಾಗುವುದು ಅನಿವಾರ್ಯ. ಅಂತಹ ಪ್ರಸಂಗಗಳಲ್ಲಿ ದ್ವಿಭಾಷಿಕ ಮತ್ತು ಬಹುಭಾಷಿಕ, ಬಹುಭಾಷಿಕ ಸಮುದಾಯಗಳು ಕಾಣಿಸಿಕೊಳ್ಳುತ್ತವೆ.

ಒಂದು ಭಾಷಾ ಸಮುದಾಯದಲ್ಲಿ ಭಾಷಿಕರು(ಮಾತೃ ಭಾಷಿಕರು) ಆರ್ಥಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ವಲಸೆ ಮುಂತಾದ ಕಾರಣಗಳಿಂದಾಗಿ ಅನ್ಯಭಾಷೆಯನ್ನು ಕಲಿತು ಅದರಲ್ಲಿ ವ್ಯವಹರಿಸಬೇಕಾಗುತ್ತದೆ. ಮಾತೃಭಾಷೆ ಮತ್ತು ಪರಿಸರದಿಂದ ಕಲಿತ ದ್ವಿತೀಯ ಭಾಷೆ ಇವುಗಳಲ್ಲಿ ಭಾಷಾಸಂಪರ್ಕ ಹೆಚ್ಚಾಗುತ್ತಾ ಹೋದಂತೆ ದ್ವಿಭಾಷಾ ಪರಿಸರ ನಿರ್ಮಾಣ ವಾಗುವುದು. ಒಬ್ಬ ವ್ಯಕ್ತಿ ಒಂದು ಭಾಷೆಯನ್ನು ದ್ವಿತೀಯಭಾಷೆಯಾಗಿ ಸ್ವೀಕರಿಸಿದರೆ ಅದು ಸಾಮಾನ್ಯವಾಗಿ ಜೀವನ ಪರ್ಯಂತ ಇರುತ್ತದೆ. ಏಕೆಂದರೆ ಅದು ಅವನು ವಾಸಿಸುವ ಸಾಮಾಜಿಕ ಪರಿಸರದಿಂದ ರೂಪಕೊಂಡಿರುವ ಭಾಷೆಯಾಗಿರುವುದರಿಂದ ಆ ವ್ಯಕ್ತಿ ತಾನು ವಾಸಿಸುವ ಸಮುದಾಯದ ಸಂಪರ್ಕಕ್ಕಾಗಿ ಅದನ್ನು ಮಾಧ್ಯಮವನ್ನಾಗಿ ಮಾಡಿಕೊಂಡಿರು ತ್ತಾನೆ. ಹೀಗಾಗಿ ಅವನು ಜೀವನ ಪರ್ಯಂತ ಅದನ್ನು ಬಳಸುತ್ತಿರುತ್ತಾನೆ. ಉದಾ:ಕರ್ನಾಟಕ ತೆಗೆದುಕೊಂಡರೆ ಬೆಳಗಾವಿ, ಬೀದರ, ಕೋಲಾರ, ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ಬೆಂಗಳೂರು ಮತ್ತು ಮೈಸೂರಿನ ದಕ್ಷಿಣ ಭಾಗದಲ್ಲಿ ಕ್ರಮವಾಗಿ ಮರಾಠಿ, ತೆಲುಗು, ತುಳು, ತಮಿಳು, ದ್ವಿಭಾಷಾ ಪರಿಸರಗಳಿವೆ. ಈ ಪ್ರದೇಶದ ಜನರು ತಮ್ಮ ಮಾತೃಭಾಷೆಯ ಜೊತೆಗೆ ಸುತ್ತಲಿನ

ಪರಿಸರದ ಭಾಷೆಯನ್ನು ಬಳಸಬಲ್ಲರು. ಅವರು ಕಲಿತ ಪರಿಸರದ ಭಾಷೆ (ದ್ವಿತೀಯ ಭಾಷೆ) ಜೀವನ ಪರ್ಯಂತವಾಗಿ ಉಳಿಯುತ್ತದೆ.

ದ್ವಿಭಾಷಿಕ ಸಮುದಾಯಗಳಿಂದ ಎರಡು ಭಾಷಾಸಮುದಾಯಗಳ ಬೆಳವಣಿಗೆಯ ವಿವಿಧ ಹಂತಗಳನ್ನು, ಸಾಮ್ಯ ವೈಷಮ್ಯಗಳನ್ನು ತಿಳಿದುಕೊಳ್ಳಲು, ಎರಡೂ ಭಾಷಿಕರ ಭಾವನೆ ಆಲೋಚನೆಗಳ ವಿಚಾರ ವಿನಿಮಯಕ್ಕೆ ಎರಡೂ ಸಮುದಾಯಗಳ ಸಂಸ್ಕೃತಿಯನ್ನರಿಯಲು, ಎರಡೂ ಭಾಷೆಗಳ ಸಾಹಿತ್ಯ ಕೃತಿಗಳನ್ನು ಅನುವಾದಿಸಲು, ಎರಡರಲ್ಲೂ ವ್ಯವಹರಿಸಲು ಹಾಗೂ ಎರಡು ಭಾಷೆಗಳ ಶಬ್ದಸ್ವೀಕರಣದಿಂದಾಗಿ ಉಭಯ ಭಾಷೆಗಳ ಪದಕೋಶ ಬೆಳವಣಿಗೆಗೂ ನೆರವಾಗುತ್ತದೆ. ಈ ದ್ವಿಭಾಷಿಕತೆಯ ಪರಿಣಾಮದಿಂದಾಗಿ ಭಾಷಾಮಿಶ್ರಣ, ಭಾಷಾಪಲ್ಲಟ, ಭಾಷಾಸ್ವೀಕರಣ ಮುಂತಾದ ಭಾಷಿಕ ಕ್ರಿಯೆಗಳು, ಭಾಷಾ ಸಮುದಾಯಗಳಲ್ಲಿ ಕಾಣಿಸಿಕೊಳ್ಳುತ್ತವೆ.

೪. ಮಾನವನ ಭಾವನೆಗಳು ಮತ್ತು ಕ್ರಿಯೆಗಳು, ಅವನಾಡುವ ಭಾಷೆಯೊಡನೆ ನಿಕಟ ಸಂಬಂಧವನ್ನು ಹೊಂದಿವೆ. ಅವನ ರಾಷ್ಟ್ರ, ಧರ್ಮ ಮತ್ತು ಆತ್ಮಗೌರವಗಳಿಗೂ ಅವನ ಭಾಷೆಗೂ ಒಂದು ಅವಿಭಾಜ್ಯ ಬಾಂಧವ್ಯವಿದೆ. ಭಾಷೆಯು ಮಾನವನ ಆಟ-ಪಾಠ, ವೃತ್ತಿ, ಮತ್ತು ವಿನೋದಗಳಿಗಾಗಿ ಬಳಕೆಯಾಗುತ್ತದೆ. ಶ್ರೀಮಂತನಿರಲಿ-ಬಡವನಿರಲಿ, ಅನಾಗರಿಕ ನಿರಲಿ-ನಾಗರಿಕನಿರಲಿ ಮಾನವನು ಭಾಷೆಯಿಲ್ಲದೆ ಬದುಕಲಾರ. ಭಾಷಾಧ್ವನಿಗಳಿಗೂ ಅರ್ಥಕ್ಕೂ ಇರುವ ಸಂಬಂಧ ಯಾದೃಚ್ಛಿಕವಾದುದು. ಈ ಸಾಂಸ್ಕೃತಿಕ ಅರ್ಥವನ್ನುಳ್ಳ ಚಿಕ್ಕ ಚಿಕ್ಕ ಘಟಕಗಳು ಹಲವಾರು ಸೇರಿ ಭಾಷೆಯಲ್ಲಿ ಇನ್ನೂ ಸಂಕೀರ್ಣವಾದ ದೊಡ್ಡ ಸಾಂಸ್ಕೃತಿಕ ಘಟಕಗಳನ್ನು ಸೃಷ್ಟಿಮಾಡುತ್ತವೆ. ಭಾಷೆಯ ರಚನೆಯಲ್ಲಿ ಎರಡು ಸಮಾನಾಂತರ ಉಪರಚನೆ ಗಳಿರುತ್ತವೆ. ಅವು ಅಭಿವ್ಯಕ್ತಿ ಮತ್ತು ಭಾವ. ಅವುಗಳ ನಡುವೆ ಸಂಬಂಧದ ಬಲೆಯು ಹೆಣೆದಿರುತ್ತದೆ. ಅಭಿವ್ಯಕ್ತಿ ಎಂದರೆ ಅರ್ಥದಿಂದ ಹೊರತಾದ ಮಾತಾಡಲು ಮತ್ತು ಕೇಳಲು ಸಾಧ್ಯವಾದ ಧ್ವನಿಗಳು, ಪದಗಳು, ಪದಸಮೂಹಗಳು ಮತ್ತು ವಾಕ್ಯಗಳು. ಆಡುಭಾಷೆಯಲ್ಲಿ ಅಭಿವ್ಯಕ್ತಿಯ ವ್ಯವಸ್ಥೆಯನ್ನು ಸಂಪೂರ್ಣವಾಗಿ ವೀಕ್ಷಿಸಬಹುದು. ಭಾವವೆಂದರೆ ಸಾಂಸ್ಕೃತಿಕ ಅರ್ಥಗಳನ್ನು ವರ್ಗೀಕೃತ ಘಟಕಗಳನ್ನಾಗಿ ವಿಂಗಡಿಸುವ ವ್ಯವಸ್ಥೆ ಹಾಗೂ ಅವುಗಳೊಳಗಿನ ಸಂಬಂಧ. ಅಭಿವ್ಯಕ್ತಿ ಮತ್ತು ಭಾವಗಳ ನಡುವೆ ನಿಕಟವಾದ ಸಂಬಂಧವಿರುತ್ತದೆ. ಅಭಿವ್ಯಕ್ತಿಯ ಘಟಕಗಳನ್ನು ಪರಿಭಾವಿಸಿದಾಗ ಅವುಗಳ ಸಂಬಂಧವಿರುವ ಭಾವಗಳು ಹೊರ ಹೊಮ್ಮುತ್ತವೆ. ಭಾವ ಘಟಕಗಳನ್ನು ಅನುಭವಿಸಿದಾಗ ಅವುಗಳ ಸಂಬಂಧ ಹೊಂದಿ ರುವ ಭಾಷಾಭಿವ್ಯಕ್ತಿಯು ಹೊರಹೊಮ್ಮುತ್ತದೆ.

೫. ಒಂದು ಭಾಷಾ ಸಮುದಾಯದಲ್ಲಿ ಬದುಕುತ್ತಿರುವ ಭಿನ್ನ ಕುಲ ಹಾಗೂ ವರ್ಗಗಳು ರೂಪಿಸಿಕೊಂಡು ಬಂದಿರುವ ಸಾಮಾಜಿಕ ವ್ಯವಸ್ಥೆಯ ಒಳರಚನೆಯ ಭಾಗಗಳಾದ ಭಾಷಿಕ ಪ್ರಭೇಧಗಳು ಆ ಕುಲ ಹಾಗೂ ವರ್ಗಗಳ ಅನನ್ಯತೆಯ ಅಭಿವ್ಯಕ್ತಿಗಳಾಗಿವೆ. ಕರ್ನಾಟಕದಲ್ಲಿ ಎಲ್ಲರೂ ಕನ್ನಡವನ್ನೇ ಮಾತನಾಡುತ್ತಿದ್ದರೂ ಎಲ್ಲರ ಕನ್ನಡವೂ ಒಂದೇ ಆಗಿರುವುದಿಲ್ಲ.

ಮೇಲುಸ್ತರದಲ್ಲಿ ಭೌಗೋಳಿಕ ಪ್ರಸಾರವನ್ನು ಗಮನಿಸಿ ಕರಾವಳಿ ಕನ್ನಡ, ಬೆಳಗಾವಿ ಕನ್ನಡ, ಮೈಸೂರು ಕನ್ನಡ, ಧಾರವಾಡ ಕನ್ನಡ ಎಂದು ಉಪಭಾಷಾ ವ್ಯತ್ಯಾಸವನ್ನು ಗುರುತಿಸಿದರೂ ಆ ಕನ್ನಡದೊಳಗೆ ಕುಲ ಹಾಗೂ ವರ್ಗವನ್ನಾಧರಿಸಿದ ಭಾಷಾ ಪ್ರಭೇದಗಳನ್ನೂ ಗುರುತಿಸಬಹುದು. ಶಿವಮೊಗ್ಗ ಜಿಲ್ಲೆಯ ಬೆಟ್ಟದ ಸೆರಗಿನಲ್ಲಿ ವಾಸಿಸುವ ದೀವರು, ಕೋಟೆ ಒಕ್ಕಲಿಗರು, ಕರೆವಕ್ಕಲಿಗರು, ಮಲೆಗೌಡರು ಹಾಗೂ ಹವ್ಯಕರ ಆಡುನುಡಿಗಳಲ್ಲಿ ವ್ಯತ್ಯಾಸ ಕಂಡುಬರುವುದು ಸಹಜವಾಗಿದೆ. ಈ ವ್ಯತ್ಯಾಸ ಕೇವಲ ಶಾಬ್ದಿಕ ನೆಲೆಯಲ್ಲಾಗಿರದೆ ಧ್ವನಿ, ಆಕೃತಿಮಾ ಹಾಗೂ ವಾಕ್ಯಾತ್ಮಕ ಹಂತದವರೆಗೂ ಕಂಡುಬರುತ್ತದೆ. ಇಂತಹ ಪ್ರಭೇದಗಳ ಲ್ಲಾಗಿರುವ ವ್ಯತ್ಯಾಸ ಕೇವಲ ವ್ಯಾಕರಣಾತ್ಮಕವಾಗಿರದೆ ಸಾಂಸ್ಕೃತಿಕವೂ ಆಗಿರುತ್ತದೆ. ಸಮಾಜಾ ಧಾರಿತ, ಕುಲಾಧಾರಿತ ಭಾಷಿಕ ಭಿನ್ನತೆಯನ್ನು ಅರಿಯುವಲ್ಲಿ ಅನೇಕ ವಿದ್ವಾಂಸರು ಪ್ರಯತ್ನಿಸಿ ದ್ದಾರೆ. ೧೯೬೦ರಷ್ಟು ಹಿಂದೆಯೇ ಅಮೇರಿಕೆಯ ವಿಲ್ಯಂ ಮೆಕಾರ್ಮಿಕ್ ಎಂಬ ವಿದ್ವಾಂಸ ಧಾರವಾಡದ ಕನ್ನಡವನ್ನು ಬ್ರಾಹ್ಮಣ ಕನ್ನಡ ಹಾಗೂ ಬ್ರಾಹ್ಮಣೇತರ ಕನ್ನಡ ಎಂದು ವಿಭಾಗಿಸಿ ಬ್ರಾಹ್ಮಣೇತರರ ಕನ್ನಡದಲ್ಲಿ ಹರಿಜನರ ಕನ್ನಡ ಹಾಗೂ ಹರಿಜನೇತರರ ಕನ್ನಡ ಎಂದು ವಿಭಾಗಿಸಿದ್ದಾರೆ. ಈ ಅಧ್ಯಯನ ಕುಲಾಧಾರಿತ ಸಾಮಾಜಿಕ ಭಿನ್ನತೆಯ ಮೊದಲ ಅಧ್ಯಯನವಾಗಿದೆ. ಒಂದೇ ಕುಲದ ವಿದ್ಯಾವಂತ ಹಾಗೂ ಅವಿದ್ಯಾವಂತ, ಬಡವ ಹಾಗೂ ಶ್ರೀಮಂತ ವರ್ಗಗಳ ಮಧ್ಯೆ ಭಾಷಾಸಂವಹನ ಭಿನ್ನತೆ ಇರುವುದನ್ನು ನಾವು ಕಾಣಬಹುದು.

ಹಾಲಕ್ಕಿ ಕನ್ನಡ, ಕುಡಿಯರ ಕನ್ನಡ, ಸೋಲಿಗರ ಕನ್ನಡ, ದೀವರ ಕನ್ನಡ ಎಂಬ ಹಲವಾರು ಜಾತಿಗಳ ಉಪಭಾಷಾ ಭಿನ್ನತೆಯ ಬಗ್ಗೆ ಈಗಾಗಲೇ ಅಧ್ಯಯನ ನಡೆದಿದೆ. ಜಾತ್ಯಾಧಾರಿತ, ಲಿಂಗಾಧಾರಿತ, ವರ್ಗಾಧಾರಿತ, ಪ್ರದೇಶಾಧಾರಿತ ಭಾಷಾ ಭಿನ್ನತೆಯ ಬಗ್ಗೆ ಅಧ್ಯಯನ ನಡೆಯುತ್ತಿದೆ. ಈ ಅಧ್ಯಯನಗಳು ಸಂಸ್ಕೃತಿ, ಜಾತಿ, ಕುಲ, ಪ್ರದೇಶಗಳು ಭಾಷಾ ಸಂವಹನದ ಮೇಲೆ ಬೀರುವ ಪ್ರಭಾವವನ್ನು ಸ್ಥಿರಪಡಿಸಿವೆ. ಹೀಗಾಗಿ ಜಾತಿ, ಕುಲ, ವರ್ಗಗಳಿಗೂ ಹಾಗೂ ಸಂವಹನ ಕ್ರಿಯೆಗೂ ಸಂಬಂಧವಿದೆ ಎಂಬುದು ಈಗ ಒಪ್ಪಿತವಾದ ವಿಚಾರವಾಗಿದೆ.

ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಧಿಗೆ ಸೇರಿದ ಸಂವಹನ ಹೆಚ್ಚಾಗಿ ಗೋಚರವಾಗು ವುದು ಶಾಬ್ದಿಕ ನೆಲೆಗಿಂತ ಅಶಾಬ್ದಿಕ ನೆಲೆಯಲ್ಲಿಯೇ. ಮನುಷ್ಯರ ವರ್ತನೆಗೆ ಸೇರಿದ ಅಶಾಬ್ದಿಕ ಸಂವಹನ ಕ್ರಿಯೆಯನ್ನು ಅರ್ಥಮಾಡಿಕೊಳ್ಳುವುದು ಕ್ಲಿಷ್ಟವಾದ ಕೆಲಸ. ಭಾಷೆಯ ಮೂಲಕ ರೂಪಗೊಂಡ ಅಭಿವ್ಯಕ್ತಿ ಹೆಚ್ಚು ಸ್ಪಷ್ಟ ಹಾಗೂ ನಿರ್ದಿಷ್ಟ ಶಾಬ್ದಿಕ ಸಂರಚನೆಗಳಲ್ಲಿ ಸಾಂದ್ರವಾಗಿ ರೂಪಗೊಂಡಿರುತ್ತದೆ. ಆದರೆ ಭಾಷಿಕೇತರ ಸಂವಹನವನ್ನು ಅರ್ಥಮಾಡಿ ಕೊಳ್ಳುವುದು ತೀರ ಕ್ಲಿಷ್ಟವಾದ ಕಾರ್ಯವೇ ಸರಿ. ಏಕೆಂದರೆ ಭಿನ್ನ ಭಿನ್ನ ಸಂಸ್ಕೃತಿಗಳಲ್ಲಿ ಭಾಷಿಕೇತರ ಅಭಿವ್ಯಕ್ತಿಯ ಭಿನ್ನ ಪ್ರಕಾರಗಳಾಗಿ ಅವು ರೂಪಗೊಂಡಿರುತ್ತವೆ. ಒಂದರ್ಥದಲ್ಲಿ ಇಂತಹ ಸಂವಹನವನ್ನು ಒಡಚುವುದೆಂದರೆ ಅವು ರೂಪಗೊಂಡ ಸಂಸ್ಕೃತಿಯನ್ನೇ ಒಡಚಿ ದಂತೆ. ಭಾಷಿಕ ಸಂವಹನವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಈವರೆಗೆ ನಡೆದಂತೆ

ಭಾಷಿಕೇತರ ಸಂವಹನವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಹೆಚ್ಚಾಗಿ ಆಗದಿರುವುದೂ ಇದಕ್ಕೆ ಕಾರಣವಾಗಿದೆ.

ಭಾಷಾ ಸಮುದಾಯಗಳಲ್ಲಿ ದಲಿತ ಕುಲಗಳನ್ನು ಅಸ್ಪೃಶ್ಯರೆಂದು ಸನಾತರು ಕರೆಯುತ್ತ ಬಂದಿರುವುದರಿಂದ ಅಸ್ಪೃಶ್ಯತೆ ಎಂಬ ಶಬ್ದ ಮಾನವ ಕುಲದ ಸ್ಪರ್ಶ ಸಂಬಂಧದ ಕಂದರವನ್ನು ಸ್ಪಷ್ಟಪಡಿಸುತ್ತದೆ. ಶೂದ್ರರನ್ನೂ ಮಹಿಳೆಯರನ್ನೂ ಸಂಪ್ರದಾಯವಾದಿಗಳು ಅಸ್ಪೃಶ್ಯರೆಂದು ಸಾರುತ್ತ ಬಂದುದು ಮನುಕುಲದ ಅಧಃಪತನಕ್ಕೆ ನಾಂದಿಯಾಯಿತು. ಶೂದ್ರರನ್ನು ಸ್ಪರ್ಶಿಸುವ ಮೂಲಕ ಮೈಲಿಗೆಯಾಗುವೆವು ಎಂದು ನಂಬಿದ ಶೂದ್ರೇತರರು ಅಶಾಬ್ದಿಕ ಸಂವಹನ ಕ್ರಿಯೆಯ ಮೂಲಕ ಸಂವಹನದ ಕಂದರವನ್ನು ತೋಡಿದರು. ತಂದೆ ತಾಯಿ, ಮಕ್ಕಳನ್ನು ಸ್ಪರ್ಶಿಸುವುದರ ಮೂಲಕ ತಮ್ಮ ಸಾಮೀಪ್ಯತೆಯನ್ನು ದೃಢಪಡಿಸುತ್ತಾರೆ. ಮಗುವಿಗೆ ಭಾಷೆ ಬರುವ ಮೊದಲು ಸ್ಪರ್ಶವೇ ಅದರ ಭಾಷೆಯಾಗಿರುತ್ತದೆ. ತಾಯಿಯ ಸ್ಪರ್ಶ ಮಗುವಿಗೆ ಆತ್ಮವಿಶ್ವಾಸವನ್ನು ಮೂಡಿಸುತ್ತದೆ. ಅಮೇರಿಕದ ಪಾದ್ರಿಮ ಬುಡಕಟ್ಟುಗಳಲ್ಲಿ ಒಬ್ಬರ ನ್ನೊಬ್ಬರು ಸ್ಪರ್ಶಿಸುವುದರ ಮೂಲಕ ತಮ್ಮ ಭಾವನೆಗಳನ್ನು ಪರಸ್ಪರರಲ್ಲಿ ವಿನಿಮಯ ಮಾಡಿಕೊಳ್ಳುತ್ತಿದ್ದರು. ಈ ರೀತಿಯ ಸ್ಪರ್ಶ ಭಾಷೆ ಆಡುನುಡಿಯ ಭಾಷೆಗಿಂತ ಪರಿಣಾಮಕಾರಿ ಯಾದುದೆಂಬುದು ಹಾಗೂ ಸಾಮಿತ ನೆಲೆಯಲ್ಲಿ ಅತ್ಯಂತ ಪ್ರಭಾವಶಾಲಿಯೆಂಬುದು ತಿಳಿದ ವಿಚಾರವಾಗಿದೆ. ಅಂದರೆ ಭಾಷಾಸಮುದಾಯದಲ್ಲಿ ಕಂಡುಬರುವ ಸಾಮಾಜಿಕ ಸ್ತರವಿನ್ಯಾಸವು ಒಟ್ಟು ಸಮುದಾಯವನ್ನು ನಿಯಂತ್ರಿಸುತ್ತದೆ.

೬. ಪ್ರತಿಯೊಂದು ಮಗುವೂ ತನ್ನ ತಂದೆತಾಯಿಗಳ ಮತ್ತು ಸಮುದಾಯದ ಭಾಷೆಯನ್ನು ಪ್ರಥಮ ಭಾಷೆಯನ್ನಾಗಿ ಕಲಿಯುತ್ತದೆ. ಅನೇಕರು ಶಿಕ್ಷಣಕ್ಕಾಗಿ ಅಥವಾ ಐತಿಹಾಸಿಕ ಪರಿಸ್ಥಿತಿ ಗಳಿಂದಾಗಿ ಒಂದು ದ್ವಿತೀಯ ಭಾಷೆಯನ್ನೂ ಕಲಿಯುತ್ತಾರೆ. ಎರಡು ಭಾಷೆಗಳು ಸಂಧಿಸುವ ಕಡೆ ಕೆಲವರು ದ್ವಿಭಾಷಿಗಳಾಗಬೇಕಾಗುತ್ತದೆ. ಪ್ರಪಂಚದ ಅನೇಕ ಕಡೆ ದ್ವಿಭಾಷಾ ಸ್ಥಿತಿ ಇದೆ. ಕರ್ನಾಟಕವನ್ನೇ ತೆಗೆದುಕೊಂಡರೂ ಕೋಲಾರ, ಬಳ್ಳಾರಿ, ಬೆಳಗಾವಿ, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ ಬಹುಪಾಲು ಜನ ಎರಡು ಭಾಷೆಗಳನ್ನು ಬಲ್ಲವರು. ಒಬ್ಬ ವ್ಯಕ್ತಿ ಮೂರು, ನಾಲ್ಕು ಭಾಷೆಗಳನ್ನು ಆಡಬಲ್ಲವನಾಗಿದ್ದರೆ ಅವುಗಳಲ್ಲಿ ಯಾವುದು ಎಷ್ಟು ಮುಖ್ಯ ಎಂದು ನಿರ್ಧರಿಸುವುದು ಕಷ್ಟ. ಪ್ರಥಮ ಭಾಷೆಯೊಂದನ್ನು ಬಿಟ್ಟರೆ ಉಳಿದ ಭಾಷೆಗಳಲ್ಲಿ ಯಾವುದು ಎರಡನೆಯದು, ಯಾವುದು ಮೂರನೆಯದು ಎಂದು ಹೇಳುವುದು ಸುಲಭವಲ್ಲ. ಒಬ್ಬ ವ್ಯಕ್ತಿ ಪ್ರಥಮ ಭಾಷೆಯನ್ನು ಮನೆಯಲ್ಲೂ ಎರಡನೆಯನ್ನು ಧಾರ್ಮಿಕ ಪರಿಸರದಲ್ಲೂ ಮೂರನೆಯನ್ನು ಉದ್ಯೋಗದಲ್ಲೂ ಉಪಯೋಗಿಸಬಹುದು.

ಪ್ರತಿಯೊಂದು ಭಾಷೆಗೂ ತನ್ನದೇ ಆದ ನಿರ್ದಿಷ್ಟ ಸ್ಥಾನಮಾನಗಳಿದ್ದರೆ ಅಂತಹ ಕಡೆ ಶಾಶ್ವತವಾಗಿ ದ್ವಿಭಾಷಾಸ್ಥಿತಿ ಉಳಿಯುತ್ತದೆ. ಇಲ್ಲವೆ ದ್ವಿತೀಯ ಭಾಷೆಯನ್ನೂ ಕೇವಲ ಶಾಲಾ ಕಾಲೇಜುಗಳ ವಿಷಯವಾಗಿ ಅಭ್ಯಾಸ ಮಾಡುತ್ತಿದ್ದರೆ ಜನಸಾಮಾನ್ಯರು ಒಂದೇ ಭಾಷಾಸ್ಥಿತಿಗೆ ಹಿಂತಿರುಗಬಹುದು. ಸತತ ಪ್ರಯತ್ನದಿಂದ ಮಾತ್ರ ಅಂತಹ ಕಡೆ ದ್ವಿಭಾಷಾ

ಸ್ಥಿತಿಯನ್ನೂ ಮುಂದುವರಿಸಿಕೊಂಡು ಹೋಗಲು ಸಾಧ್ಯ. ಉದಾ: ಕನ್ನಡದ ಮೇಲೆ ಮರಾಠಿ ಭಾಷೆ, ಸಂಸ್ಕೃತಿಯ ಪ್ರಭಾವ, ಮರಾಠಿಯ ಮೇಲೆ ಕನ್ನಡ ಭಾಷೆ, ಸಂಸ್ಕೃತಿಯ ಪ್ರಭಾವ ಉಂಟಾಗಿ ಒಂದರ ಅಂಶಗಳು ಇನ್ನೊಂದರಲ್ಲಿ ಬೆರೆತಿವೆ. ಎರಡು ಭಾಷಾ ಸಮುದಾಯಗಳ ನಡುವೆ ವ್ಯಾಪಾರ, ವ್ಯವಹಾರ ಹೆಚ್ಚಾಗುತ್ತಾ ಹೋದಂತೆ ಭಾಷಿಕರು ಪರಸ್ಪರರ ಭಾಷೆಯನ್ನು ಅರ್ಥ ಮಾಡಿಕೊಳ್ಳುತ್ತಾರೆ. ಅವರಲ್ಲಿ ಪರಸ್ಪರ ಅರಿವು ಹೆಚ್ಚಿನ ಪ್ರಮಾಣದಲ್ಲಿರುತ್ತದೆ.

ದ್ವಿಭಾಷಾ ಸಂಪರ್ಕ ಈ ಗಡಿ ಪ್ರದೇಶದ ಎಲ್ಲ ಜನರ ಮೇಲೆ ಒಂದೇ ರೀತಿಯಾಗಿರುತ್ತದೆ ಎಂದು ಹೇಳಲು ಬರುವುದಿಲ್ಲ. ಅದು ಭಾಷಿಕರ ವಯಸ್ಸು, ಲಿಂಗ, ಸಾಮಾಜಿಕವರ್ಗ, ಶಿಕ್ಷಣ (ವಿದ್ಯಾವಂತರು, ಅವಿದ್ಯಾವಂತರು) ಈ ಎಲ್ಲ ಅಂಶಗಳನ್ನು ಅವಲಂಬಿಸಿದೆ. ಈ ಪ್ರದೇಶದ ದ್ವಿಭಾಷಾಸ್ಥಿತಿಯು ಒಂದೇ ತೆರನಾಗಿಲ್ಲ. ಕನ್ನಡ ಮಾತೃ ಭಾಷೆಯುಳ್ಳವರಿಗೆ ಮರಾಠಿಯನ್ನು, ಮರಾಠಿ ಮಾತೃ ಭಾಷೆಯುಳ್ಳವರಿಗೆ ಕನ್ನಡವನ್ನು ಅರ್ಥಮಾಡಿಕೊಳ್ಳುವ, ಅಭಿವ್ಯಕ್ತಪಡಿಸುವ ಬರೆಯುವ, ಓದುವ ಸಾಮರ್ಥ್ಯವಿದೆ. ಇಂತಹ ಪೂರ್ಣದ್ವಿಭಾಷಾ ಸ್ಥಿತಿ ಒಂದೆಡೆಯಿದ್ದರೆ ಒಬ್ಬರು ಇನ್ನೊಂದು ಭಾಷೆಯನ್ನು ಅರ್ಥ ಮಾಡಿಕೊಳ್ಳುತ್ತಾರೆ. ಆದರೆ ಅಭಿವ್ಯಕ್ತಪಡಿಸುವ ಸಾಮರ್ಥ್ಯವಿಲ್ಲ. ಇಂತಹ ಅರ್ಧದ್ವಿಭಾಷಿಕತೆ ಇನ್ನೊಂದೆಡೆ ಕಾಣಿಸಿಕೊಂಡಿದೆ. ಕೆಲವೆಡೆ (ನಿಪ್ಪಾಣಿ ಸುತ್ತಮುತ್ತಲಿನ ಪ್ರದೇಶ) ಮರಾಠಿ ಭಾಷೆ ಕನ್ನಡಿಗರ ಬದುಕಿನ ಎಲ್ಲ ವಲಯಗಳನ್ನು ನಿಧಾನವಾಗಿ ಆಕ್ರಮಿಸಿಕೊಳ್ಳುತ್ತಿದೆ. ಇಂತಹ ಸಮಗ್ರ ಭಾಷಾಪಲ್ಲಟವೂ ಕಾಣಸಿಕೊಂಡಿದೆ.

ದ್ವಿಭಾಷಿಕತೆಯ ಪರಿಣಾಮದಿಂದಾಗಿ ಭಾಷಾಮಿಶ್ರಣ, ಭಾಷಾಪಲ್ಲಟ ಕ್ರಿಯೆಗಳನ್ನು ಈ ಪ್ರದೇಶದಲ್ಲಿ ಗುರುತಿಸಬಹುದಾಗಿದೆ (ಕನ್ನಡ ಮರಾಠಿ ಭಾಷಾಮಿಶ್ರಣಕ್ಕೆ ಕೆಲವು ಉದಾಹರಣೆಗಳನ್ನು ಇದೇ ಅಧ್ಯಾಯದಲ್ಲಿ ಕೊಟ್ಟಿದ್ದೇನೆ). ಬ್ಯಾಂಕು, ಅಂಚೆಕಚೇರಿ, ಹೋಟೆಲು ಮುಂತಾದ ಸಾರ್ವಜನಿಕ ಸೇವಾ ಸಂಸ್ಥೆಗಳಲ್ಲಿ ಗುಮಾಸ್ತರು ಹಾಗೂ ಸಿಬ್ಬಂದಿ ವರ್ಗದವರು ಜನರೊಡನೆ ಹೆಚ್ಚಾಗಿ ಕನ್ನಡದಲ್ಲಿ ವ್ಯವಹರಿಸುತ್ತಾರೆ. ಅದರಲ್ಲಿ ಸಂದರ್ಭ ಬದಲಾದ್ದರಿಂದ ಭಾಷಾ ಬಳಕೆ ಬದಲಾಯಿತು. ಇದರಂತೆ ಮರಾಠಿ ಮಾತೃ ಭಾಷೆಯುಳ್ಳ ಭಾಷಿಕರು ಬದಲಾದರೆ ತಮ್ಮ ಭಾಷೆಯನ್ನು ಬದಲಾಯಿಸಿಕೊಳ್ಳುತ್ತಾರೆ. ಕರ್ನಾಟಕದಲ್ಲಿ ಮರಾಠಿ ಮಾತೃ ಭಾಷಿಕರು, ಮಹಾರಾಷ್ಟ್ರದಲ್ಲಿ ಕನ್ನಡ ಮಾತೃ ಭಾಷಿಕರು ವ್ಯವಹಾರ ಹಾಗೂ ಬದುಕಿನ ಹಲವು ವಲಯಗಳಲ್ಲಿ ಆಯಾ ಪ್ರಾಂತೀಯ ಭಾಷೆಗಳನ್ನು (ಕನ್ನಡ/ ಮರಾಠಿ) ಉಪಯೋಗಿಸಿ ಇತರ ಸಂದರ್ಭಗಳಲ್ಲಿ ತಮ್ಮ ಮಾತೃ ಭಾಷೆಯಲ್ಲಿ ವ್ಯವಹರಿಸುವ ಕ್ರಿಯೆ ಕಂಡುಬಂದಿದೆ. ಕನ್ನಡ, ಮರಾಠಿ ಬಳಕೆಯಾಗುವ ವಲಯ ಗಳೆಂದರೆ ಚಲನಚಿತ್ರ ಮಂದಿರಗಳು, ಪೇಟೆ, ರಸ್ತೆಯ, ಅಕ್ಕಪಕ್ಕದಲ್ಲಿ, ಶಾಲಾ ಕಾಲೇಜುಗಳೆಂದು ಸ್ಥೂಲವಾಗಿ ವಿಂಗಡಿಸಬಹುದು. ಆವೇಶ, ಕ್ರೋಧ, ಹರಟೆ, ಜಗಳ ಮುಂತಾದ ಸನ್ನಿವೇಶಗಳಲ್ಲಿಯೂ ಕನ್ನಡ-ಮರಾಠಿ ದ್ವಿಭಾಷಿಕತೆಯನ್ನು ಗುರುತಿಸಬಹುದಾಗಿದೆ. ಉದಾ: ಕನ್ನಡ ಮಾತೃ ಭಾಷೆಯುಳ್ಳ ಮಕ್ಕಳು ಶಾಲೆಯಲ್ಲಿ, ಆಟದ ಮೈದಾನದಲ್ಲಿ ತಮ್ಮ ಸಹಪಾಠಿಗಳೊಂದಿಗೆ

ಕನ್ನಡದಲ್ಲಿ ವ್ಯವಹರಿಸುತ್ತಾರೆ. ಒಮ್ಮೊಮ್ಮೆ ಮಕ್ಕಳು ಶಾಲೆಯಲ್ಲಿ ಮರಾಠಿಯಲ್ಲಿ ಮಾತನಾಡಿದರೆ ತಂದೆ ತಾಯಿಗಳು ಮರಾಠಿಯಲ್ಲಿ ಉತ್ತರಿಸುವರು ಅಥವಾ ಕನ್ನಡದಲ್ಲಿ ಉತ್ತರಿಸುವರು ಹೀಗೆ, ಒಂದು ಕುಟುಂಬದಲ್ಲಿ ಪಾಲಕರು ಮತ್ತು ಮಕ್ಕಳ ನಡುವೆ ಭಿನ್ನ ಭಾಷಾಬಳಕೆಯ ರೀತಿ ಕುತೂಹಲಕಾರಿ ಅಂಶವಾಗಿದೆ. ಕನ್ನಡ-ಮರಾಠಿ ಭಾಷಿಕರು ಮಾತನಾಡು ವಾಗ ಕೆಲವು ಸಂದರ್ಭಗಳಲ್ಲಿ ಉದಾ: ಹಳ್ಳಿಗಳಿಂದ ವ್ಯಾಪಾರಕ್ಕಾಗಿ ಬಂದಂತಹ ಕನ್ನಡ ಮಾತೃಭಾಷೆಯ ರೈತರು ಮರಾಠಿ ವರ್ತಕರೊಡನೆ ಮಾತನಾಡುವಾಗ ಮರಾಠಿ ಮಾತೃಭಾಷೆಯುಳ್ಳ ರೈತರು ಕನ್ನಡ ವರ್ತಕರೊಡನೆ ಮಾತನಾಡುವಾಗ ಪರಸ್ಪರರ ಭಾಷೆ ಅರ್ಥವಾಗದ ಸ್ಥಿತಿಯಲ್ಲಿ ಕೆಲವು ಕನ್ನಡ, ಕೆಲವು ಮರಾಠಿ ಪದಗಳನ್ನು ಸೇರಿಸಿ ಆ ಸಂದರ್ಭದ ಪರಿಮಿತ ಬಳಕೆಗಾಗಿ ಸಂವಹನವನ್ನು ಮಾಡಿಕೊಳ್ಳುವ 'ಪಿಜಿನ್' ಕ್ರಿಯೆಯೂ ಅಲ್ಲಿ ನಡೆಯುತ್ತದೆ.

೭. ಭಾಷಾಸಮುದಾಯದ ಭಾಷಾ ವ್ಯವಹಾರದಲ್ಲಿ ನಡೆಯುವ ಕೆಲವು ವಿಶಿಷ್ಟ ಸಂಕಥನಗಳನ್ನು ಕುರಿತು ಮಾತನಾಡುವಾಗ ವಾಕ್ಯಗಳು ಮುಗಿಯುತ್ತಿದಂತೆಯೇ ಅದಕ್ಕೆ ಸಂಬಂಧಿಸಿದಂತೆ 'ಭಾಷಿಕ ಕ್ರಿಯೆಗಳು' ಸಂಭವಿಸುತ್ತವೆ. ಅವು ಭಾಷಿಕರಿಂದ ನಿರ್ದಿಷ್ಟ ಪರಿಣಾಮವನ್ನು ನಿರೀಕ್ಷಿಸುತ್ತವೆ. ನಿರ್ದಿಷ್ಟ ಉದ್ದೇಶಗಳಿಗನುಗುಣವಾಗಿ ಭಾಷಾಕ್ರಿಯೆಗಳು ನಡೆಯುತ್ತವೆ. 'ಭಾಷಾಘಟನೆ'ಗಳು ಭಾಷಾಕ್ರಿಯೆಗಳನ್ನು ಒಳಗೊಂಡಿರುತ್ತವೆ. ಭಾಷಾ ಕ್ರಿಯೆಗಳು ಜರುಗುವಾಗ ವಾಕ್ಯಗಳು ನೀಡುವ ಅರ್ಥವನ್ನು ಸಂದರ್ಭ ಹಾಗೂ ಸನ್ನಿವೇಶಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿ, ವಿವೇಚಿಸುವುದು ಒಂದು ಭಾಷಿಕ ಚಟುವಟಿಕೆಯ ಸುತ್ತ ನಡೆಯುವ ಭಾಷಿಕ ಕ್ರಿಯೆಗಳು ಸ್ವರೂಪವೇ ಭಾಷಾ ಘಟನೆಯಾಗಿದೆ. ಒಂದು ಭಾಷಾಸಮುದಾಯದಲ್ಲಿ ಭಾಷೆಯನ್ನು ಬಳಸುವಾಗ ಕೆಲವು ವೇಳೆ ನಿರ್ದಿಷ್ಟ ಉದ್ದೇಶಗಳಿಗಾಗಿ ಇನ್ನೊಂದು ಭಾಷೆಯಲ್ಲಿ ವ್ಯವಹರಿಸಿದರೆ ಅಂತಹ ಭಾಷೆ ಸ್ಥಿತಿಗೆ 'ಭಾಷಾ ಜಿಗಿತ' ಅಥವಾ 'ನುಡಿಜಿಗಿತ' ಎನ್ನುವರು. ಉದಾ. ತರಗತಿಯಲ್ಲಿ ಅಧ್ಯಾಪಕರು ೫೦ ನಿಮೀಶ್ ಇಂಗ್ಲಿಶ್‌ದಲ್ಲಿ ೫೦ ನಿಮೀಶ್ ಕನ್ನಡ ದಲ್ಲಿ ಪಾಠ ಮಾಡಿದರೆ ಅದು ನುಡಿಜಿಗಿತ ವಾಗುತ್ತದೆ. ದ್ವಿಭಾಷಿಕರಿಗೆ ಮಾತ್ರ ನುಡಿಜಿಗಿತ ಸಾಧ್ಯ.

ಕನ್ನಡ-ಮರಾಠಿ ಭಾಷಾ ಸಂಪರ್ಕದಿಂದ ಮರಾಠಿ ರೂಪಗಳು ಕನ್ನಡ ಭಾಷಿಕರಲ್ಲಿ, ಕನ್ನಡ ರೂಪಗಳು ಮರಾಠಿ ಭಾಷಿಕರಲ್ಲಿ ಕಂಡು ಬರುತ್ತವೆ. ಭಾಷಾಮಿಶ್ರಣ ಕ್ರಿಯೆ ತುಂಬ ಸಹಜವಾದರೀತಿಯಲ್ಲಿ ನಡೆದಿದೆಯೆಂದು ಹೇಳಬಹುದು ಕೆಲವು ಪ್ರಯೋಗಗಳನ್ನು ಗಮನಿಸ ಬಹುದು.

ಐಸಿರಿ (ವೈಭವ) : ಪೋರಿ ಮದಿವ್ಯಾಗ ಐಸಿರಿ ಆಗಲಿಲ್ಲ (ಹುಡುಗಿಯ ಮದುವೆ ಯಲ್ಲಿ ವೈಭವ ಆಗಲಿಲ್ಲ)

ಖಬರ (ಎಚ್ಚರ) : ಅವನ್ ಮೈಮ್ಯಾಲ ಖಬರ ಇಲ್ಲ (ಅವನ ಮೈಮೇಲೆ ಎಚ್ಚರ ವಿಲ್ಲ)

ವೈನಿ (ಅತ್ತಿಗೆ) : ನಾಳೆ ವೈನಿ ಬರತಾಳ (ನಾಳೆ ಅತ್ತಿಗೆ ಬರುವಳು)

ಅಗಾವ (ಮುಂಚಿತ) : ಅಗಾವ ರೊಖ್ಖಾ ಕೊಟ್ಟೀನಿ (ಮುಂಚಿತವಾಗಿ ದುಡ್ಡು ಕೊಟ್ಟಿದ್ದೇನೆ)

ಚಾಳಿ (ನಡತೆ) : ಮುಲಗಾನ ಚಾಳಿ ನೆಟ್ಟಗಿಲ್ಲ (ಹುಡುಗನ ನಡತೆ ಸರಿಯಿಲ್ಲ)

ಧಡಧಡೀತ (ಗಟ್ಟಿ) : ಮುದಿಕಿ ಧಡಧಡೀತ ಐತಿ (ಮುದಿಕಿ ಗಟ್ಟಿಯಿದ್ದಾಳೆ)

ವಗತಾನ (ಮನೆತನ) : ಪೋರಿಗೆ ವಗತಾನ ಬಂದಿಲ್ಲ (ಹುಡುಗಿಗೆ ಮನೆತನ ಬಂದಿಲ್ಲ)

ಚಾಲು (ಪ್ರಾರಂಭ/ಶುರು) : ಖಾನಾವಳಿ ಚಾಲು ಐತಿ (ಭೋಜನ ಗೃಹ ಶುರುವಾಗಿದೆ)

ಢೀಡ್ (ಒಂದೂವರೆ) : ಭೇಂಡಿ ಢೀಡ್ ರೂಪಾಯಿಗಿ ಕಿಲೋ (ಭೇಂಡಿಕಾಯಿ ಒಂದೂವರೆ ರೂಪಾಯಿಗೆ ಕಿಲೋ)

ಸಂಭಾಷಣೆಯೊಂದರ ಭಾಷಾಮಿಶ್ರಣ ಇಂತಿದೆ. ಲಗ್ನದ ಸಮಾರಂಭವನ್ನು ಮುಗಿಸಿಕೊಂಡು ಮಿರಜ ರೇಲ್ವೆ ನಿಲ್ದಾಣದಲ್ಲಿ ಹೆಣ್ಣಿನ ಕಡೆಯವರು ಬಂದು ತಂಗಿದ್ದಾರೆ ರೈಲು ದಾರಿಯನ್ನು ಕಾಯುತ್ತಿದ್ದಾರೆ. ಆಗ ಅಲ್ಲಿ ನಡೆಯುವ ಮಾತುಕತೆಗಳು ಹೀಗಿರುತ್ತವೆ:

ಒಬ್ಬಳು: ಪಾರಗೋಳೆಲ್ಲಾ ಪಿಂಗಾಳಸ ಹತ್ತಿದ್ದರು ವಾತ ಹೊಂಟೀವಲ್ಲದ ಧಗಿಭಗಿಯಾತ ಅಟಾಪಸವಾರೋಯಾನೋ? ಭಾಜಿಗೆ ಹೋರ್ಗಹೋಗಿ ಯಾವಾಗ ವರಾತ ಹೊಟತೇಂತಿ ಅಂದರೆ ಅವರ ಹಿಂದೆ ಮುಂದ ನೋಡ ಖೈದಾರ ಅದ್ವೆ ನಮ್ಮವರ ಬಂದ್ರ ತಾಯಿ: (ಕೂಸುಗಳೆಲ್ಲ ತೂಕಡಿಸ ಹತ್ತಿದವು ಮೆರವಣಿಗೆಯೂ ಹೊರಡಲಿಲ್ಲದು ಬೇಗಬೇಗ ಏಕೆ ತೀರಿಸಲಿಲ್ಲರೋ ಏನೋ, ಭಾವನವರೇ ಹೊರಗೆ ಹೋಗಿ ಯಾವಾಗ ಮೆರವಣಿಗೆ ಹೊರಡುವುದು ಕೇಳಿರಿ ಎನ್ನಲು ಅವರು ಅನುಮಾನಿಸತೊಡಗಿದರು ಅಷ್ಟರಲ್ಲಿ ನಮ್ಮವರು ಬಂದರವ್ವ).

ಇನ್ನೊಬ್ಬಳು: ನಿನ್ನ ಗಂಡ ಹೊಂದದೇ ಅಪ್ಯಾನ ಸಾಲೀ ಕಲ್ತು ಮನಸ್ಯಾ ಇಂಥವರಲ್ಲಿ ಅಂಜತಾಹೊಯಿಂದ? (ನಿನ್ನ ಗಂಡನು ಹೌದೇನವ್ವಾ? ಅವನೇನು ಶಾಲೆಯನ್ನು ಕಲಿಯುವ ಮನುಷ್ಯನು ಇಂಥವರಿಗೆ ಅಂಜುತ್ತಾನೆ?).

ಕನ್ನಡ, ಮರಾಠಿ ಮಿಶ್ರಿತ ಇಂತಹ ವಾಕ್ಯಗಳು ಔಪಚಾರಿಕ ಮತ್ತು ಅನೌಪಚಾರಿಕ ಸಂದರ್ಭದಲ್ಲಿ ಧಾರಾಳವಾಗಿ ಬಳಕೆಯಾಗುತ್ತವೆ.

೮. ಒಂದು ಪ್ರದೇಶದ ಭಾಷಾಸಮುದಾಯದಲ್ಲಿ ಅನೇಕ ಉಪಭಾಷೆಗಳಿರುತ್ತವೆ. ಬೇರೆ-ಬೇರೆ ಉಪಭಾಷೆಗಳಿಗೆ ತಕ್ಕಂತೆ ಭಾಷಾ ಬಳಕೆ ಬೇರೆ ಬೇರೆಯಾಗುತ್ತ ವಿಶ್ಲೇಷಕ ಒಂದು ಸಮುದಾಯದ ಭಾಷೆಯನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಿಕೊಳ್ಳಬೇಕು. ಆಯ್ದುಕೊಳ್ಳುವ ಭಾಷಾ ಸಾಮಗ್ರಿಗಳು ಸಮುದಾಯದ ಭಾಷೆಯನ್ನು ಪ್ರತಿನಿಧಿಸಬೇಕು. ಉದಾ: ಒಂದು ಭಾಷಾಧ್ವನಿಯನ್ನು ಉಚ್ಚರಿಸಲಿಕ್ಕೆ ಹೇಳಿದರೆ ಕೆಲವರು ದಂತೋಷ್ಠ್ಯ ಘರ್ಷವಾಗಿ ಉಚ್ಚರಿಸುವರು. ಕ್ಷೇತ್ರಕರ್ತ ಇವುಗಳನ್ನೆಲ್ಲಗಮನಿಸಿ ಗುರುತಿಸಿಕೊಳ್ಳಬೇಕಾ

ಗುತ್ತದೆ. ಸಂಭ್ರಮದ ಕಾರ್ಯದಲ್ಲಿ ಮೇಲಿಂದಮೇಲೆ ಸಂಭವಿಸುವ ಭಾಷಿಕ ವ್ಯತ್ಯಾಸಗಳನ್ನು ಕ್ಷೇತ್ರಕರ್ತ ಹುಡುಕಿ ವಿಂಗಡಿಸುತ್ತಾ ಹೋಗಬೇಕಾಗುತ್ತದೆ.

ಭಾಷಿಕ ಸಾಮಗ್ರಿಗಳು ಸ್ವಾಭಾವಿಕ ಅಂಶಗಳನ್ನು ಒಳಗೊಂಡಿರಬೇಕು. ಅಂದರೆ ನಿರೂಪಕರು ಹೇಳಿದ ಹಾಗೆ, ಉಚ್ಚರಿಸಿದ ಹಾಗೆ ಸಾಮಗ್ರಿಗಳು ಇರಬೇಕಾಗುತ್ತವೆ. ಕ್ಷೇತ್ರಕರ್ತ ಸಂಗ್ರಹಿಸಿಕೊಂಡ ಸಹಜ ರೂಪಗಳನ್ನು ಸಮುದಾಯದವರು ಒಪ್ಪುವಂತಿರಬೇಕು. ಒಂದು ವೇಳೆ ಆ ಭಾಷೆಯನ್ನು ಆಡುವ ಸಮುದಾಯದ ಭಾಷಿಕರು ಒಪ್ಪದಿದ್ದರೆ ಕ್ಷೇತ್ರಕರ್ತ ಸಂಗ್ರಹಿಸಿದ ಸಾಮಗ್ರಿಗಳು ಅಸಮಂಜಸವಾಗುತ್ತವೆ, ಕೃತವಾಗಿವೆ ಎಂದು ತಿಳಿಯಬಹುದು. ಕೃತಕ ಭಾಷಾ ರೂಪಗಳಿಂದ ಭಾಷಾಸಮುದಾಯದ ಭಾಷಾ ರಚನೆಯನ್ನು ಕಂಡುಹಿಡಿಯಲಿಕ್ಕೆ ಸಾಧ್ಯವಿಲ್ಲ. ಉದಾ. ಸವದತ್ತಿ ಭಾಗದ ಲಿಂಗಾಯತ ಭಾಷಾಸಮುದಾಯದಲ್ಲಿ ಕೆಳಗಿನ ಕೆಲವು ರೂಪಗಳು ಬಳಕೆಯಲ್ಲಿವೆ :

ಸಾಲಿ	(Sali)	'School'
ಮನಿ	(Mani)	'House'
ಗಿಡಾ	(Gida)	'Tree'

ಆ ಭಾಗದ ಭಾಷೆಯನ್ನು ವಿಶ್ಲೇಷಣೆ ಮಾಡುವ ಕ್ಷೇತ್ರಕರ್ತ ಒಂದು ವೇಳೆ

ಶಾಲೆ	(Sale)	'School'
ಮನೆ	(Mane)	'House'
ಗಿಡ	(Gida)	'Tree'

ಎಂದು ಆಲೇಖಿಸಿಕೊಂಡರೆ ಆತನ ಸಂಗ್ರಹ ಸಂಪೂರ್ಣ ದೋಷಪೂರಿತವಾಗುತ್ತದೆ. ಏಕೆಂದರೆ ವಾಸ್ತವಿಕವಾಗಿ ಆ ಕ್ಷೇತ್ರದಲ್ಲಿ ಆಡುವ ರೂಪಗಳ ಉಚ್ಚಾರವೇ ಬೇರೆ, ಕ್ಷೇತ್ರಕರ್ತ ಆಲೇಖಿಸಿಕೊಂಡದ್ದೇ ಬೇರೆ. ಕಾರಣ ಶಿಷ್ಟ ಕನ್ನಡದ ದೃಷ್ಟಿಯಿಂದ ಕ್ಷೇತ್ರಕರ್ತ ಆಲೇಖಿಸಿಕೊಂಡ ರೂಪಗಳು ಸರಿಯೆನಿಸಿದರೂ ಭಾಷಾವಿಜ್ಞಾನದ ವೈಜ್ಞಾನಿಕ ವಿಶ್ಲೇಷಣೆಯ ದೃಷ್ಟಿಯಿಂದ ದೋಷವಾಗುತ್ತದೆ. ಜನಬಳಕೆಯಲ್ಲಿರುವ, ಆ ಸಮುದಾಯವು ರೂಪಿಸಿಕೊಂಡಿರುವ ಭಾಷೆಯ ಎಲ್ಲ ರಚನಾತ್ಮಕ ಅಂಶಗಳನ್ನು ಒಳಗೊಂಡ ಸಹಜ ರೂಪಗಳೇ ಸ್ವಾಭಾವಿಕತೆಯನ್ನು ಒಳಗೊಂಡಿರುತ್ತವೆ. ಅಂತಹ ಸಹಜ ರೂಪಗಳಿಂದ ಭಾಷಾ ವಿಶ್ಲೇಷಣೆ ಸ್ಪಷ್ಟವಾಗುತ್ತದೆ. ಮತ್ತು ಸಮಂಜಸವಾಗುತ್ತದೆ. ಸಮುದಾಯದಲ್ಲಿ ಭಾಷಾ ಬಳಕೆಯ ಔಪಚಾರಿಕ, ಅನೌಪಚಾರಿಕ ಸನ್ನಿವೇಶಗಳ ವಿವಿಧ ಸಂದರ್ಭಗಳಲ್ಲಿಯ ಭಾಷಾ ರೂಪಗಳನ್ನು ಸಂಗ್ರಹಿಸುವುದು ಬಹಳ ಮುಖ್ಯವಾದುದು. ಅವು ಉತ್ತಮ ಭಾಷಾ ಸಾಮಗ್ರಿಗಳನ್ನು ಪ್ರತಿನಿಧಿಸುತ್ತವೆ. ಅಂತಹ ಭಾಷಿಕ ಸಂದರ್ಭಗಳು ಇಂತಿವೆ:

ಅ. ಭಾಷಿಕರ ವಯಸ್ಸು ಮತ್ತು ಲಿಂಗ :

ಭಾಷಾಸಮುದಾಯದಲ್ಲಿ ವಯಸ್ಸಿಗೆ ತಕ್ಕಂತೆ ಭಾಷಾ ಬಳಕೆ ಬೇರೆಯಾಗುತ್ತದೆ.

ಕಿರಿಯರು, ಯುವಕರು, ಸ್ತ್ರೀಯರು ಮತ್ತು ಮುದುಕರು ಮಾತನಾಡುವ ರೀತಿ ಬೇರೆ ಬೇರೆಯಾಗುತ್ತದೆ. 'ಬಡಗ' ಎಂಬು ಉಪಭಾಷೆಯಲ್ಲಿ ಮುದುಕರ ಭಾಷೆ, ಯುವಕರ ಭಾಷೆಗಿಂತ ಭಿನ್ನವಾಗಿರುತ್ತದೆ ಅದರಂತೆ ಲಿಂಗಕ್ಕೆ ಅನುಗುಣವಾಗಿ ಪುರುಷರ ಭಾಷೆ ಮತ್ತು ಸ್ತ್ರೀಯರ ಭಾಷೆ ಬೇರೆ ಬೇರೆಯಾಗುತ್ತದೆ. ಉದಾ. ಕೊಸಾಟ, ಎಂಬು ಉಪಭಾಷಾ ಸಮುದಾಯದಲ್ಲಿ ಸ್ತ್ರೀಯರ ಭಾಷೆ, ಪುರುಷರ ಭಾಷೆಗಿಂತ ವ್ಯತ್ಯಾಸವಾಗಿರುತ್ತದೆ. ಕ್ಷೇತ್ರಕರ್ತ ಈ ಭಿನ್ನತೆಯನ್ನು ಸರಿಯಾಗಿ ತಿಳಿದಿರಬೇಕು ಮತ್ತು ಅವರು ಉಚ್ಚರಿಸಿದಂತೆ ದಾಖಲಿಸಿ ಕೊಳ್ಳಬೇಕು.

ಆ. ಸಾಮಾಜಿಕ ವರ್ಗಗಳು ಮತ್ತು ವೃತ್ತಿಗಳು :

ಒಂದು ಸಮುದಾಯದಲ್ಲಿ ಒಂದೇ ಭಾಷೆಯನ್ನಾಡುವ ಜನಸಮೂಹವಿದ್ದರೆ, ಭಾಷಿಕವಾಗಿ ಅದೊಂದು ಸಾಮಾಜಿಕ ವರ್ಗವಾಗುತ್ತದೆ. ಸಮುದಾಯದಲ್ಲಿ ಅನೇಕ ಸ್ತರಗಳಿರುವುದರಿಂದ ಭಾಷಾ ಬಳಕೆಯಲ್ಲಿ ಇತರರಿಗಿಂತ ಭಿನ್ನವಾದ ಸ್ಥಾನಮಾನ, ವರ್ಗ, ವೃತ್ತಿಗಳಿಗೆ ತಕ್ಕಂತೆ ಭಾಷಾ ಬಳಕೆಯಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಉದಾ. ಒಂದೇ ಸಮುದಾಯದಲ್ಲಿ ಸಾಮಾಜಿಕ ವರ್ಗಗಳಿಗೆ ತಕ್ಕಂತೆ ಬ್ರಾಹ್ಮಣರ ಭಾಷೆ, ಬ್ರಾಹ್ಮಣೇತರ ಭಾಷೆಗಳಿಗಿಂತ ವ್ಯತ್ಯಾಸವಾಗಿರುತ್ತವೆ. ಅದರಂತೆ ಕೃಷಿಕರು, ವಿಶ್ವಕರ್ಮರು, ಚಮ್ಮಾರರು ಮಾತನಾಡುವ ರೀತಿ ಮತ್ತು ಅವರ ವೃತ್ತಿ ಪದಗಳು ಬೇರೆ-ಬೇರೆಯಾಗಿರುತ್ತವೆ. ಕ್ಷೇತ್ರಕರ್ತ ಸಾಮಾಜಿಕ ವರ್ಗ ಮತ್ತು ವೃತ್ತಿಗಳಿಗೆ ಸಂಬಂಧಿಸಿದಂತೆ ಅನೇಕ ಭಾಷಾ ರೂಪಗಳನ್ನು ಸಂಗ್ರಹಿಸಬೇಕಾಗುತ್ತದೆ.

ಇ. ಆವೇಶದ ಸನ್ನಿವೇಶಗಳಲ್ಲಿಯ ಭಾಷೆ :

ಭಾಷಿಕರು ಕೆಲವು ಸಂದರ್ಭದಲ್ಲಿ ಧಾರ್ಮಿಕ ವಿಷಯಗಳನ್ನು ಚರ್ಚಿಸುವಾಗ, ಹಬ್ಬ, ಹರಿದಿನಗಳಲ್ಲಿ ಉಲ್ಲಾಸವಾದಾಗ, ತೊಂದರೆಗಳು ಬಂದಾಗ, ಮದುವೆ, ಜಾತ್ರೆಗಳಲ್ಲಿ ತಮಗೆ ಸಂತೋಷವಾದಾಗ, ಕೆಲವು ಸಂದರ್ಭದಲ್ಲಿ ಕೋಪಗೊಂಡಾಗ, ರೇಗಿದಾಗ, ದುಃಖವಾದಾಗ, ಹೆದರಿದಾಗ ಮುಂತಾದ ಆವೇಶದ ಸನ್ನಿವೇಶಗಳಲ್ಲಿ ಅವರ ಭಾಷಾ ಬಳಕೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಒತ್ತು, ದೀರ್ಘ, ಕಾಲಾವಧಿ ಇತ್ಯಾದಿ ಕ್ಷೇತ್ರ ಆಯಾ ಸನ್ನಿವೇಶಗಳಲ್ಲಿ ತಕ್ಷಣವೇ ಅವರು ಬಳಸುವ ರೂಪಗಳನ್ನು ಸಂಗ್ರಹ ಮಾಡಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಭಾಷಾ ಬಳಕೆ ಕೃತಕತೆಗಿಂತ ಸಹಜತೆ ಇರುವುದು ಎಂಬುದನ್ನು ಕ್ಷೇತ್ರಕರ್ತ ಗಮನದಲ್ಲಿಟ್ಟುಕೊಳ್ಳಬೇಕು.

ಈ. ವೇಗೋಚ್ಚಾರಣೆ :

ಈ ಬಗೆಯ ವ್ಯತ್ಯಾಸಗಳು ಭಾಷಾ ಸಮುದಾಯದಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತವೆ. ಹೇಳಬೇಕಾಗಿರುವುದನ್ನು ಬೇಗನೆ ಹೇಳಿ ಮುಗಿಸಬೇಕೆಂಬ ಆತುರವು ವೇಗೋಚ್ಚಾರಣೆಗೆ ಮುಖ್ಯ ಕಾರಣ. ಅದು ಸಹಜವಾಗಿ ಎಲ್ಲರಲ್ಲೂ ಇದ್ದೇ ಇರುತ್ತದೆ. ಅಂದರ ಪರಿಣಾಮ ಭಾಷೆಯನ್ನು ವಿಶ್ಲೇಷಿಸುವಾಗ ಧ್ವನಿಮಾಹಂತ ಮತ್ತು ಸಂಧಿ, ಸಮಾಸ ರಚನೆಗಳಲ್ಲಿ

ವ್ಯತ್ಯಾಸಗಳು ಕಾಣಿಸಿಕೊಳ್ಳುತ್ತವೆ, ಅದರಂತೆ ದೀರ್ಘವಾದ ಪದಗಳನ್ನು ಮೊಟಕುಗೊಳಿಸಿ ಉಚ್ಚರಿಸುತ್ತಾರೆ. ಇದು ರೂಪ ಬದಲಾವಣೆಗೂ ಕಾರಣವಾಗುತ್ತದೆ. ಕ್ಷೇತ್ರಕರ್ತ ವೇಗೋಚ್ಚಾರಣೆಯ ವೇಳೆಯಲ್ಲಿ ಬಳಸುವ ಭಾಷಿಕ ರೂಪಗಳನ್ನು ಬರೆದಿಟ್ಟುಕೊಳ್ಳಬೇಕು.

೭. ಒಂದು ಪ್ರದೇಶದ ಭಾಷಾಸಮುದಾಯದಲ್ಲಿ ಬೇರೆ ಬೇರೆ, ಭಾಷಾಪ್ರಭೇದಗಳಿರುತ್ತವೆ. ಭಾಷಿಕರು ಸಂದರ್ಭಕ್ಕೆ ತಕ್ಕಂತೆ ಹಲವು ಭಾಷೆಗಳನ್ನು ಕಲಿಯಬೇಕಾಗುತ್ತದೆ. ಭಾಷಾ ಸಂಪರ್ಕಗಳಾದಾಗ ಹಲವು ಭಾಷಿಕ ಬದಲಾವಣೆಗಳು ಸಮುದಾಯದ ಭಾಷೆಯ ಮೇಲಾಗುತ್ತವೆ. ಸಮುದಾಯಗಳು ಪರಸ್ಪರ ಭಾಷೆಗಳನ್ನು ಕಲಿಯಬೇಕಾಗಿಬರಬಹುದು ಅಥವಾ ಅವುಗಳಲ್ಲಿ ಒಂದು ಸಮುದಾಯದವರು ಮಾತ್ರ ಇನ್ನೊಂದು ಭಾಷೆಯನ್ನು ಕಲಿಯಬಹುದು. ಇಂತಹ ಸಂಪರ್ಕದ ಸಂದರ್ಭದಲ್ಲಿ ಇಡೀ ಸಮುದಾಯವೇ ಇನ್ನೊಂದು ಭಾಷೆ ಕಲಿಯಬಹುದು. ಅಂತಹ ಪ್ರಸಂಗಗಳು ಕಡಿಮೆಯೇ ಅದರ ಬದಲಾಗಿ ಕೆಲವು ಮಧ್ಯವರ್ತಿಗಳು ಭಾಷಾ ಸಂಪರ್ಕ ಸಾಧನಗಳಾಗುತ್ತಾರೆ. ಅಂದರೆ ಒಂದು ಭಾಷಾಸಮುದಾಯದಲ್ಲಿ ಭಾಷಾಕಲಿಕೆಗೆ ಒತ್ತಡಗಳು, ಅನಿವಾರ್ಯತೆ ಇರುತ್ತವೆ ಎಂಬುದು ಗಮನಾರ್ಹ ಸಂಗತಿಯಾಗಿರುತ್ತದೆ. ಭಾಷಾಕಲಿಕೆಯ ನೆಲೆಗಳು ಆಯಾ ಸಮುದಾಯದ ರಚನೆಯನ್ನು ಅವಲಂಬಿಸಿರುತ್ತವೆ.

೮. ಭಾಷಾಸಮುದಾಯವು ಕಾಲ ಮತ್ತು ಸಂದರ್ಭಕ್ಕೆ ತಕ್ಕಂತೆ ಬದಲಾವಣೆಯಾಗುತ್ತದೆ. ಸಮುದಾಯದ ಪರಿವರ್ತನೆಗೆ ತಕ್ಕಂತೆ ಭಾಷಿಕರ ಸಾಮಾಜಿಕ ಸಂಬಂಧಗಳು ಮತ್ತು ಸಾಮಾಜಿಕ ರಚನೆಯಲ್ಲಿ ವ್ಯತ್ಯಾಸವಾಗುತ್ತಲೇ ಇರುತ್ತವೆ. ಭಾಷೆಯಲ್ಲಿ ನಡೆಯುವ ಪರಿವರ್ತನೆಗಳನ್ನು ಭಾಷಾ ಬದಲಾವಣೆಗಳೆಂದು ಕರೆಯಲಾಗುತ್ತದೆ. ಈ ಪರಿವರ್ತನೆ ಭಾಷಾರಚನೆಯ ಯಾವುದೇ ಹಂತದಲ್ಲಾದರೂ (ಧ್ವನಿ, ಪದ, ವಾಕ್ಯ, ಅರ್ಥ) ಉಂಟಾಗಬಹುದು. ಅನೇಕ ಸಂದರ್ಭದಲ್ಲಿ ಭಾಷಾ ಬದಲಾವಣೆ ಸ್ಪಷ್ಟವಾಗಿ ಕಾಣುತ್ತದೆ. ಕೆಲವು ಸಲ ಭಾಷಿಕರ ಅರಿವಿಗೆ ನಿಲುಕದಂತೆಯೇ ಆ ಮಾರ್ಪಾಡು ಆಗುತ್ತಿರುತ್ತದೆ. ಅದು ಜೀವಂತ ಭಾಷೆಯ ಬೆಳವಣಿಗೆಯ ಲಕ್ಷಣವಾಗಿದೆ. ಅನ್ಯಭಾಷೆಯ ಸಂಪರ್ಕ, ಆಡಳಿತ, ವ್ಯವಹಾರ, ಪ್ರಾಂತ ಭೇದಗಳು ಮುಂತಾದ ಕಾರಣಗಳಿಂದ ಭಾಷಾ ಸಮುದಾಯದಲ್ಲಿ ಬದಲಾವಣೆಗಳಾಗುತ್ತವೆ. ಅದರಿಂದ ಭಾಷಾ ಸಮುದಾಯದಲ್ಲಿ ಒಂದು ಪದಕ್ಕೆ ಇದ್ದ ಒಂದು ಅರ್ಥ ಹೋಗಿ ಇನ್ನೊಂದು ಅರ್ಥ ಬರುವುದು.

ಉದಾ. ಕುರುಬ	-	೧. ಬೆಟ್ಟದಲ್ಲಿ ವಾಸಮಾಡುವವನು	೨. ಒಂದು ಜಾತಿಯವನು.
ಅಮ್ಮ	-	೨. ಅಪ್ಪ (ಹ.ಕ)	೩. ತಾಯಿ (ಹೊ. ಕ)
Wife	-	೧. ಹೆಂಗಸು	೨. ಹೆಂಡತಿ
ಕೂಟಿ	-	೧. ಆಹಾರ	೨. ತಂಗಳು

ಹೀಗೆ, ಭಾಷಾಸಮುದಾಯದಲ್ಲಿ ಪರಿವರ್ತನೆ ಉಂಟಾಗುವಾಗ ನೂರಾರು ಭಾಷಿಕ ಪ್ರಕ್ರಿಯೆಗಳು ಕಂಡುಬರುತ್ತವೆ. ಅವು ಆ ಸಮುದಾಯದ ಸಂಸ್ಕೃತಿಯನ್ನು ಅಭಿವ್ಯಕ್ತಿಸುತ್ತವೆ.

೯. ಭಾಷಾಸಮುದಾಯದಲ್ಲಿ ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ (ವ್ಯವಹಾರ, ವಾಣಿಜ್ಯ), ತತ್ಕಾಲಿಕ ಬೇಡಿಕೆಗಳ ಈಡೇರಿಕೆಗಾಗಿ ಬಳಕೆಯಾಗುವ ಭಾಷೆ 'ಪಿಜಿನ್' ಆಗಿದೆ. ಇದು ಯಾವುದೇ ಭಾಷಾಸಮುದಾಯದ ಮಾತೃಭಾಷೆಯಾಗಿರುವುದಿಲ್ಲವಾದರೂ ಸ್ಥಳೀಯ ಭಾಷಾ ಸಮುದಾಯದೊಡನೆ ಮಿಶ್ರಣ ಹೊಂದಿರುತ್ತದೆ ಪಿಜಿನ್ ಭಾಷೆಯ ಪದಕೋಶ ಸೀಮಿತವಾಗಿರುವುದರಿಂದ ಅದನ್ನು ವ್ಯವಸ್ಥಿತ ಅಧ್ಯಯನಕ್ಕೆ ಒಳಪಡಿಸಲಾಗುವುದಿಲ್ಲ. ಒಂದು ವೇಳೆ ನಿರ್ದಿಷ್ಟ ಉದ್ದೇಶಕ್ಕಾಗಿ ವ್ಯವಹಾರ ಮುಂತಾದ ಸಂದರ್ಭದಲ್ಲಿ ಭಾಷೆ ಬಳಕೆಯಾಗುವುದುಂಟು. ಅದು ಕ್ರಮೇಣ, ಕಾಲಾನಂತರದಲ್ಲಿ ಒಂದು ಸಮುದಾಯದ ಮಾತೃ ಭಾಷೆಯಾದರೆ ಅದು 'ಕ್ರಿಯೋಲ್' ಭಾಷೆಯಾಗುತ್ತದೆ. ಪಿಜಿನ್ ಭಾಷೆಯ ಮುಂದಿನ ಹಂತವೇ ಕ್ರಿಯೋಲ್. ಕ್ರಿಯೋಲ್ ಭಾಷೆಯ ಪದಕೋಶ ಹೆಚ್ಚಿರುವುದರಿಂದ ಅದರ ಭಾಷೆಯ ರಚನೆಯನ್ನು ವ್ಯವಸ್ಥಿತ ಚೌಕಟ್ಟಿಗೆ ಅಳವಡಿಸಬಹುದು. ಕ್ರಿಯೋಲಿನ ಅವಶ್ಯಕತೆಗಳು ಪಿಜಿನ್ ಭಾಷೆಯ ಅವಶ್ಯಕತೆಗಳಿಗಿಂತ ಹೆಚ್ಚಾಗಿರುತ್ತವೆ. ಅಲ್ಲದೆ ಕ್ರಿಯೋಲಿನ ಭಾಷಿಕ ವಲಯ ಹೆಚ್ಚಿರುತ್ತದೆ. ಭಾಷಾಸಮುದಾಯದಲ್ಲಿ ದ್ವಿಭಾಷಿಕ ಪರಿಸರಗಳಿಂದಾಗಿ ವಲಸಿಗಳ ಮತ್ತು ಅಲ್ಪಸಂಖ್ಯಾತ ಸಮುದಾಯದಲ್ಲಿ ಇಂತಹ ಭಾಷಿಕ ಪ್ರಕ್ರಿಯೆಗಳು ಕಂಡುಬರುತ್ತವೆ. ನಗರೀಕರಣ, ಆಧುನೀಕರಣ ಪ್ರಕ್ರಿಯೆಗಳೂ ಸಹಿತ ಇವು ರೂಪಗೊಳ್ಳಲು ಕಾರಣಗಳಾಗಿವೆ.

೧೦. ಭಾಷಾಸಮುದಾಯದಲ್ಲಿ ಭಾಷಾ ಬಳಕೆಯ ಸಂದರ್ಭಗಳಲ್ಲಿ ಭಿನ್ನತೆ ಇರುತ್ತದೆ. ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಪಲ್ಲಟಗಳು ಆಗುತ್ತವೆ. ಇದರ ಪರಿಣಾಮವಾಗಿ ಒಂದು ಭಾಷೆಯ ಅಳಿವು, ಉಳಿವಿನ ಪ್ರಶ್ನೆ ಬರುತ್ತದೆ. ಅದಕ್ಕೆ ಸಾಮಾಜಿಕ, ಶೈಕ್ಷಣಿಕ ಕಾರಣಗಳೂಯಿರುತ್ತವೆ. ಆಗ ಮಾತೃಭಾಷಿಕರು ತಮ್ಮ ಭಾಷೆಯ ಅನನ್ಯತೆಯನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಅಂದರೆ ಸಂವಹನ, ಸಂಸ್ಕೃತಿಯವಾಹಕತೆ ಹಾಗೂ ಫಲಪ್ರದ ಜೀವನಕ್ಕೆ ಮಾತೃ ಭಾಷೆ ನೆರವಾಗುವುದು ಅದರ ಸಂರಕ್ಷಣೆ ಮುಖ್ಯವಾಗುತ್ತದೆ. ಆ ಕ್ರಿಯೆಗೆ 'ಭಾಷಾಸಂಗೋಪನೆ' ಎನ್ನುವರು. ಆ ಭಾಷೆಯ ಮೇಲಿರುವ ಪ್ರೀತಿಯಿಂದ ಅದರ ಬೆಳವಣಿಗೆಗೆ, ಸಂರಕ್ಷಣೆಗೆ ಉಪಕ್ರಮಗಳನ್ನು ಕೈಕೊಳ್ಳುವುದು (ಆಡಳಿತ, ಕಾನೂನು, ಶಿಕ್ಷಣ ಕುರಿತು) ಭಾಷಿಕರು ತಮ್ಮ ಸಮುದಾಯದ ಭಾಷಾ ಬಳಕೆಗೆ ಒತ್ತಾಯಮಾಡಿ ಅದಕ್ಕೆ ಅನುಗುಣವಾಗಿ ಭಾಷಾನೀತಿ, ಭಾಷಾಯೋಜನೆಗಳನ್ನು ರೂಪಿಸುತ್ತಾರೆ.

೧೧. ಪ್ರದೇಶದಿಂದ ಪ್ರದೇಶಕ್ಕೆ ಭಾಷಾಬಳಕೆ ಭಿನ್ನವಾಗಿರುತ್ತದೆ. ಭಾಷಿಕರಿಗೆ ಒಂದಕ್ಕಿಂತ ಹೆಚ್ಚು ಭಾಷೆಗಳು ಗೊತ್ತಿದ್ದರೆ ಒಂದು ಪ್ರದೇಶದ ಭಾಷಾಸಮುದಾಯದ ಭಾಷೆಯನ್ನು ಬಳಸುವ ನಿಯಮಗಳನ್ನು ಅಂಗೀಕರಿಸಿ ಆ ಪ್ರದೇಶದ ಭಾಷೆಯನ್ನು ಬಳಸುವುದು. ಭಾಷಾ ಸ್ಥಳಾಂತರ ಕ್ರಿಯೆಯಲ್ಲಿ ಎರಡು ಭಾಷೆಗಳು ಒಂದರ ಪಕ್ಕದಲ್ಲೊಂದು ಕೆಲಸಮಾಡುತ್ತವೆ. ಈ ಕ್ರಿಯೆ ಸಾಮಾನ್ಯವಾಗಿ ಭಾಷಾ ಸಂದರ್ಭದಲ್ಲಿ ಕಂಡುಬರುತ್ತದೆ. ಈ ಕ್ರಿಯೆಗೆ 'ಭಾಷಾ ಪಲ್ಲಟ' ಅಥವಾ 'ನುಡಿಪಲ್ಲಟ' ಎನ್ನುವರು. ಉದಾ. ತಮಿಳ್ ಭಾಷಿಕರು ಸಂದರ್ಭಕ್ಕೆ ತಕ್ಕಂತೆ ಕನ್ನಡದಲ್ಲಿ ವ್ಯವಹರಿಸಿದರೆ ಅದು ನುಡಿಪಲ್ಲಟ. ಈ ಕ್ರಿಯೆ ದ್ವಿಭಾಷಿಕರಿಗೆ ಮಾತ್ರ

ಸಾಧ್ಯ. ಅದರಂತೆ ಒಂದು ಭಾಷಾಸಮುದಾಯ ಅನೌಪಚಾರಿಕ ಸಂದರ್ಭದಲ್ಲಿ ಆಡುನುಡಿಯನ್ನು, ಔಪಚಾರಿಕ ಸಂದರ್ಭದಲ್ಲಿ ಅದೇ ಭಾಷೆಯ ಶಿಷ್ಟರೂಪವನ್ನು ಬಳಸುವ ಕ್ರಿಯೆಗೆ 'ದ್ವಿಸ್ತರತೆ' ಎಂದು ಕರೆಯಲಾಗುತ್ತದೆ. ಉದಾ. ಒಬ್ಬ ಶಿಕ್ಷಕ ತರಗತಿಯಲ್ಲಿ ಮಾತನಾಡುವಾಗ ಶಿಷ್ಟರೂಪವನ್ನು ಬಳಸಿದರೆ, ಮನೆಯಲ್ಲಿ ತನ್ನ ಭಾಷಾಸಮುದಾಯದ ಆಡುಮಾತನ್ನು ಬಳಸುತ್ತಾರೆ. ಈ ಪ್ರಕ್ರಿಯೆಯನ್ನು ದ್ವಿಸ್ತರತೆ ಎಂದು ಗುರುತಿಸಲಾಗುತ್ತದೆ.

೧೨. ಒಂದು ಭಾಷೆಯನ್ನಾಡುವ ಜನರು ಹೆಚ್ಚಾಗಿದ್ದಾಗ ಅವರೊಳಗಿನ ಬೇರೆ ಬೇರೆ ಗುಂಪಿನ ಜನರು ಆಡುವ ಭಾಷೆಯಲ್ಲಿ ಗಣನೀಯವಾದ ವ್ಯತ್ಯಾಸಗಳಿರುತ್ತವೆ. ಈ ವ್ಯತ್ಯಾಸಗಳು ಭೌಗೋಳಿಕವಾಗಿರಬಹುದು, ಐತಿಹಾಸಿಕವಾಗಿರಬಹುದು ಇಲ್ಲವೆ ಸಾಮಾಜಿಕವಾಗಿರಬಹುದು. ಒಂದೇ ಭಾಷೆಯನ್ನಾಡುವ ಜನರಲ್ಲಿ ಒಂದು ಸಾಮಾಜಿಕ ಗುಂಪಿನ ಭಾಷೆಗೂ ಇನ್ನೊಂದಕ್ಕೂ ವ್ಯತ್ಯಾಸಗಳಿರುತ್ತವೆ. ಅಷ್ಟೇ ಏಕೆ ಕೌಟುಂಬಿಕ ಹಾಗೂ ವ್ಯಕ್ತಿಗತ ವ್ಯತ್ಯಾಸಗಳನ್ನು ಅವರ ಮಾತಿನಿಂದ ಕಂಡುಕೊಳ್ಳಬಹುದು. ಭಾಷಾಶಾಸ್ತ್ರಜ್ಞರು ವ್ಯಕ್ತಿಗತ ಭಾಷೆಯನ್ನು ವ್ಯಕ್ತಿಭಾಷೆ ಎಂದೂ ಒಂದು ಗುಂಪಿನ ಭಾಷೆಯನ್ನು ಭಾಷಾ ಪ್ರಬೇಧವೆಂದು ಕರೆಯುತ್ತಾರೆ. ಒಂದು ಪ್ರದೇಶದ ಅಥವಾ ಒಂದು ಸಮುದಾಯದ ಭಾಷಾ ಬಳಕೆಯನ್ನು ಥಟ್ಟನೆ ಗುರುತಿಸಬಹುದು. ಯಾರಾದರೂ ಒಂದು ಭಾಷಾಪ್ರಭೇದವನ್ನು ಆಡಿದಾಗ ಅವನು ಇಂತಹ ಪ್ರದೇಶ/ಸಮುದಾಯಕ್ಕೆ ಸೇರಿದವನೆಂದು ಗುರುತಿಸಬಹುದು. ಈ ಪ್ರಭೇದಗಳು ಭಾಷೆಗೆ ಸಹಜವಾದುವು. ಅಂದರೆ ಭಾಷೆ, ಸಂಸ್ಕೃತಿಯ ಒಂದು ಭಾಗ ಮತ್ತು ಆ ಸಮುದಾಯದ ಜನರು ವ್ಯವಹರಿಸಲು ಅಗತ್ಯವಾದ ಮುಖ್ಯ ಸಾಧನವಾಗಿದೆ. ಸಂದರ್ಭಕ್ಕೆ ತಕ್ಕಂತೆ ಭಾಷೆ ಬದಲಾವಣೆಯಾದಂತೆ ಅದಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸಬೇಕಾಗುತ್ತದೆ. ನಿಯಮಗಳನ್ನು ರೂಪಿಸುವ ವಿಧಾನವೇ 'ಭಾಷಾ ಚಲಕ'. ಔಪಚಾರಿಕ ಮತ್ತು ಅನೌಪಚಾರಿಕ ಸನ್ನಿವೇಶದಲ್ಲಿ ಭಾಷೆಯ ಬಳಕೆ ಭಿನ್ನವಾಗಿರುವುದರಿಂದ ಭಾಷಾಚಲಕದಲ್ಲಿ ವ್ಯತ್ಯಾಸವಾಗುವುದುಂಟು.

೧೩. ಸಾಮಾಜಿಕ ರಚನೆ ಮತ್ತು ಚಲನಶೀಲತೆ ಭಾಷಾ ಸಮುದಾಯದ ಮೂಲಭೂತ ಕಲ್ಪನೆಗಳಲ್ಲಿ ಒಂದು. ಒಂದು ನಿರ್ದಿಷ್ಟ ಭಾಷಾ ಸಮುದಾಯಕ್ಕೆ ಸೇರಿದ ಭಾಷಿಕರು ಭಾಷಾ ಸಂವಹನಕ್ಕಾಗಿ ಪರಸ್ಪರ ಅರಿವಿಗಾಗಿ ಕಾರ್ಯನಿರ್ವಹಿಸುವುದೇ ಸಾಮಾಜಿಕ ರಚನೆ ಎನ್ನುವರು. ಅದರಿಂದ ವಿವಿಧ ವರ್ಗಗಳನ್ನು ಒಂದು ಗೂಡಿಸಲಿಕ್ಕೆ ಅನುಕೂಲವಾಗುವುದು. ಸಾಮಾಜಿಕ ರಚನೆ, ಕಾಲ ಮತ್ತು ಭಾಷಾ ಪರಿಸರಕ್ಕೆ ತಕ್ಕಂತೆ ಬದಲಾಗುತ್ತದೆ. ಅದು ಸಹಜ. ಅದರ ರಚನೆಯನ್ನು ಎರಡು ರೀತಿಯಲ್ಲಿ ಗುರುತಿಸಬಹುದು. **ಔಪಚಾರಿಕ ಭಾಷಾ ಬಳಕೆಯ ಸಾಮಾಜಿಕ ರಚನೆ:** ಸಾಮಾಜಿಕ ರಚನೆಗೆ ಪೂರ್ವಸಿದ್ಧತೆ ಅವಶ್ಯಕವಾಗಿದ್ದು, ವ್ಯವಸ್ಥಿತವಾಗಿ ರಚನೆಗೊಳ್ಳುತ್ತದೆ. ಕಟ್ಟುಪಾಡುಗಳು, ನೀತಿ-ನಿಯಮಗಳು ಇರುತ್ತವೆ. ಅಂದರೆ ಪೂರ್ವ ನಿಯೋಜಿತ ಕಟ್ಟುಪಾಡುಗಳಿಗೆ ತಕ್ಕಂತೆ ಭಾಷೆ ಬಳಕೆಯಾಗುತ್ತಿದ್ದರೆ ಅದಕ್ಕೆ 'ಔಪಚಾರಿಕ ಭಾಷಾಸನ್ನಿವೇಶ' ಎನ್ನುವರು. ಉದಾ. ತರಗತಿಯಲ್ಲಿ ಭಾಷಾಬಳಕೆ, ಪ್ರಾರ್ಥನಾ ಮಂದಿರದಲ್ಲಿ ಭಾಷಾ ಬಳಕೆ. **ಅನೌಪಚಾರಿಕ ಭಾಷಾಬಳಕೆಯ ಸಾಮಾಜಿಕ ರಚನೆ:** ಈ

ಭಾಷಿಕ ಸನ್ನಿವೇಶದಲ್ಲಿ ಭಾಷಾಬಳಕೆಯಲ್ಲಿ ಯಾವುದೇ ರೀತಿಯ ನಿಯಮದ ಚೌಕಟ್ಟು ಇರುವುದಿಲ್ಲ. ಭಾಷಿಕ ಚಟುವಟಿಕೆಗಳು ಪರೋಕ್ಷವಾಗಿ ಕಾರ್ಯನಿರ್ವಹಿಸುತ್ತವೆ. ಉದಾ: ಮಾರುಕಟ್ಟೆಯಲ್ಲಿ ಭಾಷಾಬಳಕೆ, ಬಸ್‌ನಿಲ್ದಾಣದಲ್ಲಿ ಭಾಷಾಯ ಬಳಕೆ ಇಲ್ಲಿ ಭಾಷೆಯನ್ನು ಬಳಸುವಾಗ ಸಹಜತೆ ಇರುತ್ತದೆ. ಇದರಿಂದ ಸಾಮಾಜಿಕ ರಚನೆಯು ಅಮೂರ್ತವಾದದ್ದು. ಅದರ ಭಾಷಾಬಳಕೆಯ ಸಾಮಾಜಿಕ ಆಯಾಮಗಳು ಸದಾ ಬದಲಾಗು ತ್ತವೆ.

೧೪. ಭಾಷಾಸಮುದಾಯದಲ್ಲಿ ನಡೆಯುವ ಸಾಂಸ್ಕೃತಿಕ ಚಟುವಟಿಕೆಗಳ ಔಪಚಾರಿಕ ಮತ್ತು ಅನೌಪಚಾರಿಕ ಸನ್ನಿವೇಶಗಳಲ್ಲಿ ಮಾತನಾಡುವಾಗ ಭಾಷಾಬಳಕೆ ಬೇರೆ ಬೇರೆ ಯಾಗಿರುತ್ತದೆ. ಜಾನಪದ ಕತೆಗಳನ್ನು, ಪುರಾಣಗಳನ್ನು ಹೇಳುವಾಗ ಹೇಳುವವರ-ಕೇಳುವವರ ನಡುವೆ ನಡೆಯುವ ಸಂಭಾಷಣೆಗಳಲ್ಲಿ ಅಂದರೆ ಕತೆ, ಪುರಾಣಗಳ ಬಗ್ಗೆ ಗಂಭೀರ ವಿಷಯಗಳನ್ನು ಕುರಿತು ಚರ್ಚೆಮಾಡುವಲ್ಲಿ ಭಾಷಾಬಳಕೆ ಬೇರೆಯಾಗಿರುತ್ತದೆ. ಅದರಂತೆ ಹಳ್ಳಿಗಳಲ್ಲಿ ನಡೆಯುವ ಧಾರ್ಮಿಕ ಕೇಂದ್ರಗಳಲ್ಲಿ, ಸಭೆ-ಸಮಾರಂಭಗಳಲ್ಲಿ ಗ್ರಾಮಕ್ಕೆ ಸಂಬಂಧಪಟ್ಟಂತೆ ಯಾವುದೇ ಒಂದು ವಿಷಯ, ಘಟನೆಯ ಬಗ್ಗೆ ಭಾಷಾಬಳಕೆ ಗಂಭೀರ ವಾಗಿರುತ್ತದೆ. ಇದರಿಂದ ಆ ಭಾಷೆಯನ್ನಾಡುವ ಸಮುದಾಯದ ಸಂಸ್ಕೃತಿಯನ್ನು ತಿಳಿದಂತಾ ಗುತ್ತದೆ. ಭಾಷಾಸಮುದಾಯದಲ್ಲಿ ನಡೆಯುವ ನಾಟಕ, ಮದುವೆ, ಜಾತ್ರೆ ಇತ್ಯಾದಿ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕಂಡುಬರುವ ಗಾದೆ, ಒಡಪು, ಒಗಟು ಇವುಗಳ ಬಳಕೆಯಲ್ಲಿ ಮಾತಾಡುವ ರೀತಿ ಬೇರೆಯಾಗಿರುತ್ತದೆ. ಭಾಷಾ ಸಮುದಾಯದಲ್ಲಿ ಹೆಸರುಗಳು (ಸ್ಥಳನಾಮಗಳು, ವ್ಯಕ್ತಿನಾಮಗಳು, ಕುಟುಂಬನಾಮಗಳು) ತಮ್ಮದೇ ಆದ ಸಾಂಸ್ಕೃತಿಕ ಅನನ್ಯತೆಯನ್ನು ಹೊಂದಿವೆ. ಹೀಗೆ ಒಂದು ಭಾಷಾಸಮುದಾಯವು ತನ್ನದೇ ಆದ ಧ್ವನಿರಚನೆ, ಪದ ರಚನೆಯನ್ನು ಹೊಂದಿರುವ ಹಾಗೆ ತನ್ನದೇ ಆದ ದೇಸಿ ಸಂಪತ್ತನ್ನು ಹುದುಗಿಸಿಕೊಂಡು ತನ್ನದೇ ಆದ ಭಾಷೆಯ ಸಾಮಾಜಿಕ ಚಹರೆಯನ್ನು ಉಳಿಸಿಕೊಂಡಿರುತ್ತದೆ. ಅವರಾಡುವ ವ್ಯವಹಾರಿಕ ಕನ್ನಡ ಒಂದು ಚಹರೆಯಾದರೆ, ಭಾಷಾಬಳಕೆಯ ಸಾಮಾಜಿಕ ಚಹರೆ ಇನ್ನೊಂದು ಬಗೆಯದಾಗಿದೆ.

ಹೀಗೆ, ಭಾಷಾಸಮುದಾಯವು ಸಾಮುದಾಯಿಕವಾಗಿದ್ದು ಭಾಷೆಯ ಬದಲಾವಣೆಯಂತೆ ಭಾಷೆಯ ಚಲನಶೀಲತೆಯನ್ನು ತನ್ನ ಬೆಳವಣಿಗೆಯ ಮಾನದಂಡವನ್ನಾಗಿಸಿಕೊಂಡಿದೆ. ಭಾಷಾಬಳಕೆಯ ಸಾಮಾಜಿಕ ಆಯಾಮವನ್ನು ಅದು ಒಳಗೊಂಡಿರುತ್ತದೆ. ಅದರ ಮುಖ್ಯ ಉದ್ದೇಶ, ಸಮುದಾಯದಲ್ಲಿ ಭಾಷಿಕರ ಮಧ್ಯೆ ಸಂಪರ್ಕವನ್ನು ಮತ್ತು ಸಂವಹನವನ್ನು ಸಾಧಿಸುವುದೇ ಆಗಿದೆ.

ಅಡಿಟಿಪ್ಪಣಿಗಳು

೧. ಎಚ್.ಎಂ. ಮರುಳಸಿದ್ದಯ್ಯ, ಸಮುದಾಯ ಸಂಘಟನೆ (ಧಾರವಾಡ : ಕರ್ನಾಟಕ ವಿಶ್ವವಿದ್ಯಾಲಯ, ೧೯೬೭), ಪುಟ. ೨-೬.

೨. R.M. Maciver and Charles H. Page, Society (New York : Rine hart and company, June, 1949), p.p. 8-9.

೩. Baker Brownell, uoted by Francis J. Brown, Educational sociology (New Yark : Prentice-Hall, Inc. 1958), p.p. 398-99.

ಆಕರಗ್ರಂಥ

೧. Trudgill P.P., 1974, Sociolinguistics: An Introduction Penguin.

೮೮

ಅಡ್ಡಸೋಗು : ಮನೋಭಾಷಿಕ ವಿವೇಚನೆ

ಜಾನಪದ ರಂಗಭೂಮಿಯಲ್ಲಿ ಕಾಣಿಸಿಕೊಳ್ಳುವ ದೊಡ್ಡಾಟ, ಸಣ್ಣಾಟಗಳ ಕಥಾವಸ್ತುವಿನಲ್ಲಿ ಹಾಸ್ಯ ಪ್ರಸಂಗಗಳು ಕಡಿಮೆ. ಇಲ್ಲವೆಂದೇ ಹೇಳಬೇಕು ನಾಟಕಗಳಲ್ಲಿ ಹಾಸ್ಯ ಸಂಪೂರ್ಣವಾಗಿ ಅಭಿವ್ಯಕ್ತಿಗೊಳ್ಳದಿದ್ದರೆ ಪ್ರೇಕ್ಷಕರಿಗೆ ಬೇಜಾರ ಉಂಟಾಗುವುದು ಸಹಜ. ನಿದ್ರೆ, ಆಕಳಿಕೆ, ತೂಕಡಿಕೆ ಬರುವುದು ಸ್ವಾಭಾವಿಕ. ಇದರಿಂದ ಕೆಲವರು ಮಧ್ಯದಲ್ಲಿ ರಂಗಭೂಮಿಯಿಂದ ಎದ್ದು ಹೋಗುತ್ತಾರೆ. ಈ ಸಮಸ್ಯೆಯನ್ನು ಪರಿಹರಿಸಲು ಪ್ರೇಕ್ಷಕರ ಗಮನವನ್ನು ನಾಟಕದತ್ತ ಸೆಳೆಯಲು ನಾಟಕದ ಮಧ್ಯದಲ್ಲಿ ಅಡ್ಡಸೋಗುಗಳು ಪ್ರವೇಶ ಮಾಡಿದವು. ಈ ಲೇಖನದಲ್ಲಿ ಅಡ್ಡಸೋಗುಗಳ ಉದ್ದೇಶ, ವಸ್ತು, ಸ್ವರೂಪ ಮತ್ತು ಅವುಗಳ ಸಾಮಾಜಿಕ ಮಹತ್ವ ಈ ಅಂಶಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಅಡ್ಡಸೋಗುಗಳ ಬಗ್ಗೆ ಲೇಖನಗಳು ಕನ್ನಡದಲ್ಲಿ ಇನ್ನೂ ಬಂದಿಲ್ಲ. ಕೆಲವರು ಜಾನಪದ ರಂಗಭೂಮಿಯ ಸ್ವರೂಪದ ಬಗ್ಗೆ ಹೇಳುವಾಗ ಪ್ರಾಸಂಗಿಕವಾಗಿ ಅಡ್ಡಸೋಗುಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ ಅಷ್ಟೇ. ಅಡ್ಡಸೋಗುಗಳ ಬಗ್ಗೆ ಹೆಚ್ಚು ಹೆಚ್ಚು ವಿವೇಚನೆ ನಡೆಸಲು ಅಷ್ಟೇ ಏಕೆ ಸಂಶೋಧನೆಗೂ ಅವಕಾಶವಿದೆ, ಅದಕ್ಕೆ ಪ್ರೇರಣೆಯಾಗಲಿ ಎಂಬ ಉದ್ದೇಶದಿಂದ ಈ ಲೇಖನವನ್ನು ಬರೆದಿದ್ದೇನೆ.

'ಅಡ್ಡಸೋಗು' ಈ ಪದಪುಂಜದಲ್ಲಿ 'ಅಡ್ಡ' ಮತ್ತು 'ಸೋಗು' ಎಂಬ ಎರಡು ಭಾಷಿಕ ಘಟಕಗಳಿವೆ. ಸಂಸ್ಕೃತದ ಅರ್ಧಕ್ಕೆ ಸಂವಾದಿಯಾಗಿ ಪ್ರಾಕೃತದಲ್ಲಿ ಅಡ್ಡ ಇದೆ ಅದು ಕನ್ನಡ 'ಅಡ್ಡ' ಆಗಿದೆ. ಉಚ್ಚಾರಣೆಯಲ್ಲಿ 'ಅಡ' ಎಂದು ಪ್ರಯೋಗವಾಗುವುದುಂಟು. ಅಡ್ಡ ಪದಕ್ಕೆ ತಡೆ, ಮಧ್ಯ, ನಡುವೆ, ಪಕ್ಕದಿಂದ ಪಕ್ಕಕ್ಕೆ ಎಂಬ ಅರ್ಥಗಳಿವೆ. ಚೋಹ>ಸೋಗು ಎಂದಾಗಿದೆ. ಇದರರ್ಥ ನಟನೆ, ರೂಪ, ವೇಷ. ಅಡ್ಡಸೋಗು (ಅಡಸೋಗು) ಎಂದರೆ ನಾಟಕದ ಮಧ್ಯ ಕತೆಯನ್ನು ನಿಲ್ಲಿಸಿ ಆಡಿತೋರಿಸುವ ಹಾಸ್ಯಪ್ರಸಂಗಗಳು. (ನಾಟಕದ

ಮಧ್ಯದಲ್ಲಿ ಬರುವ ಹಾಸ್ಯ ಪ್ರಸಂಗಗಳು) ಅಡ್ಡಸೋಗಕ್ಕೆ 'ಅಡ್ಡಹಾಸ್ಯ' ಎಂದು ಕರೆಯಬಹುದು.

ಅಡ್ಡಸೋಗುಗಳ ಉದ್ದೇಶ

೧ ಗಂಭೀರವಾಗಿ ಸಾಗುವ ಬಯಲಾಟಗಳ ಕಥಾ ಪ್ರಸಂಗಗಳು ಪ್ರೇಕ್ಷಕರಿಗೆ ಒಮ್ಮೊಮ್ಮೆ ಅಸಮಾಧಾನವನ್ನು ತರುತ್ತವೆ. ಅದನ್ನು ನಿವಾರಿಸಲು ಅಡಸೋಗಿಗಳು ಆಟದ ಮಧ್ಯ ವಿಭಿನ್ನ ವೇಷ ತೊಟ್ಟು ವ್ಯಂಗೋಕ್ತಿ, ನಟನೆ, ಅಭಿನಯದ ಮೂಲಕ ಹಾಸ್ಯ ಮಾಡಿ ಪ್ರೇಕ್ಷಕರನ್ನು ನಗಿಸಿ ಪರೋಕ್ಷವಾಗಿ ಅವರ ಲಕ್ಷ್ಯವನ್ನು ನಾಟಕದ ಕಡೆಗೆ ಸೆಳೆದು ಹೋಗುತ್ತಾರೆ. ಅಂದರೆ ಹಾಸ್ಯವೇ ಅಡಸೋಗದ ಮುಖ್ಯುದ್ದೇಶ. ನಾಟಕದ ಕತೆಗೂ ಅಡಸೋಗಕ್ಕೂ ಯಾವುದೇ ರೀತಿಯ ಸಾವಯವ ಸಂಬಂಧ ಇರುವುದಿಲ್ಲವೆಂದುದು ಗಮನಿಸಬೇಕಾದ ಸಂಗತಿ.

೨ ಈ ಜಾನಪದ ಕಲೆಗೆ ಸಾಮಾಜಿಕ ಆಯಾಮ ಉಂಟು. ಗ್ರಾಮದ ಕುಂದುಕೊರತೆಗಳನ್ನು, ಗ್ರಾಮದಲ್ಲಿಯ ಕೆಲವರ ಕೆಟ್ಟ ಹವ್ಯಾಸಗಳನ್ನು, ಅರೆಕೊರೆಗಳನ್ನು ಸೂಕ್ಷ್ಮವಾಗಿ ಎತ್ತಿ ವಿಡಂಬನೆ ಮಾಡುವುದು, ಟೀಕಿಸುವುದು ಅವರ ವರ್ತನೆಯಲ್ಲಿ ಪರಿವರ್ತನೆ ತರಲು ಅಡ್ಡಸೋಗುಗಳು ನೆರವಾಗುತ್ತವೆ. ಅಂದರೆ ಸಾಮಾಜಿಕ ವಿಡಂಬನೆ ಅಡ್ಡಸೋಗುಗಳ ಮಹತ್ವದ ಪಾತ್ರವಹಿಸುತ್ತವೆ.

೩ ನಾಟಕಗಳ ಮಧ್ಯ ಅಡಸೋಗಿಗಳು ಬಂದಾಗ ನಾಟಕದ ಪಾತ್ರಧಾರಿಗಳಿಗೆ ಹಾಗೂ ಮುಮ್ಮೇಳ, ಹಿಮ್ಮೇಳ, ಕಲಾಕಾರರಿಗೆ ವಿಶ್ರಾಂತಿ ಸಿಗುವುದ. ಅಡಸೋಗದಿಂದ ನಾಟಕಕ್ಕೆ ಒಂದು ರೀತಿಯ ಕಳೆ ಬರುತ್ತದೆ. ಪ್ರೇಕ್ಷಕರಲ್ಲಿ ಸಂತೋಷ, ತೃಪ್ತಿ, ನೆಮ್ಮದಿ ತಂದು ನಾಟಕವನ್ನು ಪರಿಣಾಮಕಾರಿಗೊಳಿಸುತ್ತವೆ.

ಅಡ್ಡಸೋಗುಗಳ ಕಾಲಾವಧಿ ೧೦-೧೫ ನಿಮಿಷಗಳು. ಸ್ಥಾಯಿಭಾವಗಳಿಗೆ ಸಂಚಾರಿ ಭಾವಗಳು ಪುಷ್ಟಿಕೊಡುವಂತೆ ಇವು ನಾಟಕದ ಕಥಾಪ್ರಸಂಗಕ್ಕೆ ಪುಷ್ಟಿಕೊಟ್ಟು ಪ್ರೇಕ್ಷಕರಿಗೆ ನಾಟಕದ ಬಗೆಗಿನ ಆಸಕ್ತಿಯನ್ನು ಚುರುಕುಗೊಳಿಸಿ ತಕ್ಷಣವೇ ಹೊರಟು ಹೋಗುತ್ತವೆ. ಮುಗ್ಧ ಆಸಕ್ತಿ-ಅಭಿರುಚಿಯ ಗ್ರಾಮೀಣ ಪ್ರೇಕ್ಷಕರಿಗೆ ಇದರಿಂದ ಮನರಂಜನೆ ದೊರೆಯುತ್ತದೆ. ಇಂತಹ ಉಪಯುಕ್ತ ಕಾರ್ಯವನ್ನು ಅಡಸೋಗುಗಳು ಮಾಡುತ್ತಾ ಬಂದಿವೆ. ಅಡ್ಡಸೋಗುಗಳ ವಸ್ತು, ಸ್ವರೂಪ ಗ್ರಾಮೀಣ ಜನಜೀವನಕ್ಕೆ ತೀರ ಹತ್ತಿರವಾದುದು. ಇವು ಪೌರಾಣಿಕ ವಿಷಯಗಳಿಗೆ ಸಂಬಂಧಿಸಿರುವುದಿಲ್ಲ. ಗಾಢ ಚಿಂತನೆಯ ಹಿನ್ನೆಲೆಯೂ ಇರುವುದಿಲ್ಲ. ಸಾಮಾಜಿಕ ವಸ್ತು ಸನ್ನಿವೇಶಗಳನ್ನು ಒಳಗೊಂಡಿರುತ್ತವೆ. ಇವುಗಳನ್ನು ಹೀಗೆ ವಿಂಗಡಿಸಬಹುದು.

- ವಿಚಿತ್ರ ವೇಷ ಧರಿಸುವುದು.
- ಕಾಡು ಪ್ರಾಣಿಗಳ ರಾಕ್ಷಸರ ಮುಖವಾಡ ಹಾಕಿ ಅವುಗಳ ಕೂಗು, ನಡೆಯುವ ರೀತಿಯಲ್ಲಿ ಅನುಕರಣೆ ಮಾಡುವುದು.

- ಸಮುದಾಯದಲ್ಲಿಯ ಕೆಲವು ಘಟನೆಗಳನ್ನು ನೆನಪಿಸಿಕೊಂಡು ಅಭಿನಯಿಸುವುದು (ಕುಟುಂಬ, ಆಸ್ಪತ್ರೆ, ಬಸ್‌ಸ್ಟಾಂಡದಲ್ಲಿಯ ನಡೆಯುವ ಸನ್ನಿವೇಶಗಳು).

ಕೆಲವೊಂದು ವಿಶೇಷವಾದ ಘಟನೆಗಳು ಜ್ಞಾಪಕಕ್ಕೆ ಬರುತ್ತವೆ. ಅಡ್ಡಸೋಗಿಗಳು ವಿಭಿನ್ನ ವೇಷ-ಭೂಷಣಗಳನ್ನು ಧರಿಸಿ ಪ್ರೇಕ್ಷಕರನ್ನು ನಗಿಸುತ್ತಾರೆ. ಶರ್ಟನ್ನು, ಟೋಪಿಯನ್ನು ಉಪರಾಟಿ ಹಾಕಿಕೊಂಡು ಹೆಂಗಸರ ಸೀರೆಯನ್ನು ರುಮಾಲಾಗಿ ಸುತ್ತಿಕೊಂಡು ಧ್ವನಿಯ ಏರಿಳಿತವನ್ನು ಹೆಚ್ಚು-ಕಡಿಮೆ ಮಾಡಿ ಹೆಂಗಸರಂತೆ, ಗಂಡಸರಂತೆ ಮಾತನಾಡುತ್ತಾ ರಂಗದ ಮೇಲೆ ಅಭಿನಯಿಸುತ್ತಾರೆ. ಕೆಲವರು ತೋಳ, ಸಿಂಹ, ಹುಲಿ, ಕರಡಿಯ ವೇಷ ಹಾಕಿಕೊಂಡು ಗುರ್ ಗುರ್ ಎಂದು ಸದ್ದು ಮಾಡುತ್ತ, ಕೂಗುತ್ತ ಬರುತ್ತಾರೆ. ಕೆಲವರು ಅಗಲವಾದ ಶರ್ಟು ಕೊರಳಲ್ಲಿ ಎತ್ತಿನ ಗೆಜ್ಜಿ, ಮುಖಕ್ಕೆ ಕರಿ ಬಣ್ಣ ಕೋರೆಹಲ್ಲುಗಳನ್ನು ಹಚ್ಚಿಕೊಂಡು ರಾಕ್ಷಸ ಪಾತ್ರಗಳಲ್ಲಿ ಬರುವುದುಂಟು. ಕೆಲವರು ಶಿವ-ಪಾವರ್ತಿಯರ ವೇಷಹಾಕಿ ಪ್ರೇರಕ್ಷಕರನ್ನು ಆಶೀರ್ವದಿಸುವರು. ಇನ್ನು ಕೆಲವರು ಬ್ರಾಹ್ಮಣ-ಪುರೋಹಿತರಂತೆ ವೇದಾಂತ ಪಠಣ ಮಾಡುತ್ತಾರೆ. ಅಡ್ಡಸೋಗಿಗಳ ದುಃಖ, ಗಾಂಭೀರ್ಯ, ಮುನಿಸು, ಎಲ್ಲವೂ ನಗೆಯನ್ನು ಹುಟ್ಟಿಸುತ್ತವೆ. ತಮ್ಮ ಹಳ್ಳಿಯಲ್ಲಿಯೇ ಭಿನ್ನವಾದ ಗುಣ ಸ್ವಭಾವ ಹೊಂದಿದ ವ್ಯಕ್ತಿಗಳ ನಡೆಗೆ, ಹೊಟ್ಟಿ, ಮಾತನಾಡುವ ರೀತಿ, ಕುಡಿತ, ಅವರ ಹಾಗೆ ಮಾಡಿ ಪ್ರೇಕ್ಷಕರನ್ನು ನಗಿಸುತ್ತಾರೆ.

ಕುಟುಂಬಗಳಲ್ಲಿ ಗಂಡ ಹೆಂಡಿರ ಜಗಳ, ಗಂಡ ಹೆಂಡತಿಯ ಮುಂದೆ ಬಂಡು ಹೊಡೆಯುವ ಸನ್ನಿವೇಶ ತುಂಬ ವಿನೋದ ಪೂರ್ಣವಾಗಿರುತ್ತದೆ. ಹಳ್ಳಿಗಳಲ್ಲಿ ಮುದುಕ ಮುದುಕಿಯರು ಬೊಚ್ಚು ಬಾಯಿ ತೆಗೆದು ಮಾತನಾಡುವ, ಕೈ ಸನ್ನೆ ಮಾಡಿ ಅಭಿನಯಿಸುವ ಸನ್ನಿವೇಶ ನಿಜಕ್ಕೂ ಹರ್ಷದಾಯಕ. ದಾರಿಗಳಲ್ಲಿ ಮಲವಿಸರ್ಜನೆ ಮಾಡಿದಾಗ ಅದು ನಾರುವ, ನಾರಿದಾಗ ಮೂಗು-ಮುಖ, ಮುಚ್ಚಿಕೊಳ್ಳುವ ಮೂರ್ಛೆ ಬಂದು ಬೀಳುವ ದೃಶ್ಯ ನೋಡಿದಾಗ ನಗೆ ಬರುತ್ತದೆ. ನಿಜ, ಆದರೆ ಅದರ ಹಿಂದೆ ದಾರಿಯಲ್ಲಿ ಮಲವಿಸರ್ಜನೆ ಮಾಡಬಾರದು ಎಂಬ ನೀತಿ ಪಾಠವನ್ನು ಇವು ಕಲಿಸುತ್ತವೆ ಎಂಬುದನ್ನು ಲಕ್ಷಿಸಬಹುದು. ಕೆಲವೊಮ್ಮೆ ಅರೆನಿದ್ದೆಯಲ್ಲಿದ್ದವರನ್ನು ಮೆಲ್ಲನೆ ರಂಗಮಂಟಪದ ಮೇಲೆ ತಂದು ಅವನ ಮೇಲೆ ಬೇವಿನ ಎಲೆ ಹಾಕಿ ವಿಭೂತಿ ಕುಂಕುಮ ಹಚ್ಚಿ ಶೃಂಗರಿಸುವ ಸನ್ನಿವೇಶ ನಗೆಯ ಕಡಲನ್ನೇ ಹರಿಸುತ್ತದೆ. ಪಾತ್ರಗಳಿಗೆ ಕೊಳಕು ಬದ್ನಿಕಾಯಿ, ಅಂಬಲೆ, ಡೊಣ್ಣ ಮೆನಸಿನ ಕಾಯಿ ಎಂದು ಸಂಬೋಧಿಸಿ ಚೇಷ್ಟೆಗೆ ಒಡ್ಡಿದ ಮಾತುಗಳು ನಗೆಯನ್ನು ತರಿಸುತ್ತವೆ.

ಆಸ್ಪತ್ರೆಯಲ್ಲಿ ಕನ್ನಡ ಬಾರದ ಡಾಕ್ಟರ, ಇಂಗ್ಲೀಷ ಬಾರದ ರೋಗಿ ಇವರಲ್ಲಿ ನಡೆಯುವ ಸಂಭಾಷಣೆ ಒಬ್ಬರು ಹೇಳಿದುದು ಇನ್ನೊಬ್ಬರಿಗೆ ಅರ್ಥವಾಗುವುದಿಲ್ಲ. ಕನ್ನಡ, ಇಂಗ್ಲೀಷ, ಉರ್ದು, ಮರಾಠಿ ಬೆರಸಿಹೇಳುತ್ತಿರುವ ಮಾತುಗಳು ಇನ್ನು ಕೇಳಬೇಕೆನಿಸುತ್ತದೆ. ಆಗ ಮಧ್ಯೆ ನರ್ಸ ಬಂದಾಗ ಇಬ್ಬರು ಹುಬ್ಬೇರಿಸಿ ಅವಳತ್ತ ನೋಡುವ ದೃಶ್ಯ ಅಷ್ಟರಲ್ಲಿಯೇ ಸಿಪಾಯಿಯ

ಪ್ರವೇಶ ಅಲ್ಲಿ ನಡೆಯುವ ಮಾತು ಅಭಿನಯ ತುಂಬ ರಂಜನೀಯವಾಗಿ ರುತ್ತವೆ. ಅದನ್ನು ನೋಡುತ್ತಾ ಪ್ರೇಕ್ಷಕರ ಮುಖ ಅರಳುತ್ತದೆ. ಆಗ ಪ್ರೇಕ್ಷಕರ ನಿದ್ದೆ ಸದ್ದಿಲ್ಲದೇ ಹೋಗುತ್ತದೆ ಎನ್ನುವುದನ್ನು ಗಮನಿಸಬೇಕು. ಬಸ್ಸಿನಲ್ಲಿ ಕಂಡಕ್ಟರ ಹುಡಿಗಿಯರ ಹತ್ತಿರ ನಿಂತು ಟಿಕೇಟ ಹರಿಯುವ ದೃಶ್ಯ. ಆಗ ಕಂಡಕ್ಟರನ ಹಾವಭಾವಗಳು ಅಡ್ನಸೋಗಿಗಳು ಅವರಂತೆ ಮಾಡಿತೋರಿಸುತ್ತಾರೆ. ಹೆಣ್ಣಿನ ಬಗೆಗೆ ಇರುವ ಲಘುವಾದ ಕುಚೇಷ್ಟೆ, ವಕ್ರದೃಷ್ಟಿ ಇವುಗಳಲ್ಲಿ ಕಾಣಿಸುತ್ತದೆ. ಅಡ್ನಸೋಗುಗಳ ಮೇಲೆ ಸಿನಿಮಾದ ಪ್ರಭಾವ ಆಗಿರುವುದೇ ಇದಕ್ಕೆ ಕಾರಣವಾಗಿದೆ.

ಅಡ್ನಸೋಗಿಗಳು ಒಮ್ಮೊಮ್ಮೆ ಒಗಟು, ಒಡಪು, ಲಾವಣಿಗಳನ್ನು ಪ್ರಾಸಬದ್ಧವಾಗಿ ಹೇಳಿ ಮಧ್ಯೆ ಮಧ್ಯೆ ಊರಿನ ಪ್ರಮುಖರ ಹೆಸರುಗಳನ್ನು ಸೇರಿಸಿ ಧ್ವನಿ ಏರಿಳಿತಮಾಡಿ ವೇಗವಾಗಿ ಹೇಳುತ್ತಾ ಹೋಗಿ ಪ್ರೇಕ್ಷಕರನ್ನು ನಗುವಿನಲ್ಲಿ ಮುಳುಗಿಸಿ ಬಿಡುತ್ತಾರೆ. ಅಡ್ನಸೋಗಿನಲ್ಲಿ ಪ್ರತಿಯೊಂದು ಪಾತ್ರವು ವಿನೋದದಲ್ಲಿ ಭಾಗಿಯಾಗಿರುತ್ತದೆ ಎನ್ನುವುದನ್ನು ಮರೆಯಲಾಗದು. ಕೆಲವೊಮ್ಮೆ ಮುಮ್ಮೇಳ ಹಿಮ್ಮೇಳ ಕಲಾಕಾರರು, ವಾದ್ಯ ಬಾರಿಸುವವರು ವಿವಿಧ ರೀತಿಯ ಸಂಭಾಷಣೆಗಳನ್ನು ಮಾಡಿ ಪ್ರೇಕ್ಷಕರನ್ನು ನಗಿಸುವರು. ಇಲ್ಲಿ ವಿಷಯ ವಸ್ತುವಿಗಿಂತಲೂ ಹಾಸ್ಯ ಪ್ರಧಾನವಾಗಿರುತ್ತದೆ.

ಅಡ್ನಸೋಗದ ವಸ್ತು ಪಾತ್ರಗಳು ಇಂತಹದೇ ಇರಬೇಕು ಎನ್ನುವ ನಿಯಮವಿಲ್ಲ. ಸಮಾಜದಲ್ಲಿ ನೋಡಿದ ಘಟನೆಗಳು ಬೇಕಾಗಿರಲಿ, ಬೇಡವಾಗಿರಲಿ ಒಂದು ರೂಪಕದ ರೀತಿಯಾಗಿ ರಚಿಸಿ ಬಯಲಾಟಗಳಲ್ಲಿ ಪ್ರದರ್ಶನ ಮಾಡುತ್ತಾರೆ. ಅವು ಪ್ರೇಕ್ಷಕರಿಗೆ ಅರ್ಥವಾಗಿರಬೇಕೆಂದಿಲ್ಲ. ಒಟ್ಟಾರೆ ನಗಿಸುವುದೇ ಇಲ್ಲಿ ಮುಖ್ಯವಾಗಿರುತ್ತದೆ. ಅಡ್ನಸೋಗು ದಲ್ಲಿ ವ್ಯಂಗ್ಯ ಪದಗಳು ಕಲಾವಿದರ ಹಾವಭಾವಗಳು ಅಶ್ಲೀಲ ಅರ್ಥಕೊಡುತ್ತವೆಯಾದರೂ ಹಾಸ್ಯದ ಗುಂಗಿನಲ್ಲಿ ಅವು ಅಶ್ಲೀಲತೆ ಎನಿಸುವುದೇ ಇಲ್ಲ ಎಂಬುವುದು ಗಮನಾರ್ಹ. ಅಡ್ನಸೋಗುಗಳಲ್ಲಿ ಬೈಗಳು, ಧಾರಾಳವಾಗಿ ಬಳಕೆಯಾಗುತ್ತವೆ. ಅವು ತುಂಬ ಲವಲವಿಕೆ ಯಿಂದ ಕೂಡಿದ್ದು ಹಾಸ್ಯಕ್ಕೆ ಎಡೆಮಾಡಿಕೊಡುತ್ತವೆ.

ಅಡ್ನಸೋಗುಗಳಲ್ಲಿ ಹಾಸ್ಯ, ಮನರಂಜನೆಯೇ ಜೀವಾಳವಾಗಿದೆ. ಈ ಕಲಾವಿದರ ಮಾತಿನಲ್ಲಿ, ಅಭಿನಯದಲ್ಲಿ ಸಹಜತೆ ಇರುತ್ತದೆ. ಅವರ ಒಂದೊಂದು ಭಾವಭಂಗಿಯನ್ನು ಕಂಡು ಪ್ರೇಕ್ಷಕರು ಆನಂದಪರವಶರಾಗಿ ನಕ್ಕು ನಕ್ಕು ಸಾಕಾಗಿ ಒಮ್ಮೊಮ್ಮೆ ರಂಗಭೂಮಿ ಬಿಟ್ಟು ಹೊರಗೆ ಎದ್ದು ಬಂದಿರುವ ಸಂದರ್ಭಗಳು ಉಂಟು. ಅವರ ಅಭಿನಯದಂತೆ ಆಡುವ ಮಾತಿನಲ್ಲಿ ಸ್ವಲ್ಪವೂ ಆಭಾಸವಾಗದೇ ಸನ್ನಿವೇಶಕ್ಕೆ ಒಪ್ಪುವಂತೆ ಹಾಸ್ಯಮಾಡುವ ಕಲೆ ಇವರಿಗೆ ಸಿದ್ಧಿಸಿರುತ್ತದೆ. ಅಡ್ನಸೋಗಿಗಳಿಂದ ಅಲೆ ಅಲೆಯಾಗಿ ಬರುವ ಹಾಸ್ಯದ ಮಾತುಗಳು ಆಟವನ್ನು ಸಜೀವಗೊಳಿಸುತ್ತವೆ. ಇದರಿಂದ ಇವರು ಪ್ರೇಕ್ಷಕರ ಗೌರವಕ್ಕೆ ಪಾತ್ರರಾಗಿರು ತ್ತಾರೆ. ಪಗರಣದಲ್ಲಿಯ ಹಾಸ್ಯವೇ ಅಡ್ನಸೋಗಕ್ಕೆ ಪ್ರಚೋದನೆ ನೀಡಿರುವ ಸಾಧ್ಯತೆ ಇದೆ (ಪಗರಣ ಅಡ್ನಸೋಗುಗಳ ಸಾಮ್ಯ ವೈಷಮ್ಯಗಳನ್ನು ಇದೆ ಲೇಖನದ ಅನುಬಂಧ ಭಾಗದಲ್ಲಿ

ಚರ್ಚಿಸಲಾಗಿದೆ). ಅಡ್ಡಸೋಗಿಗಳ ಪಾತ್ರಗಳ ಸಂಖ್ಯೆ ಎರಡರಿಂದ ಮೂರು ಅದಕ್ಕಿಂತ ಹೆಚ್ಚಾಗಿ ಬರುವುದಿಲ್ಲ. ಒಬ್ಬರು ಮುಖ್ಯಪಾತ್ರ, ಇನ್ನೊಬ್ಬರು ಸಹಾಯಕ ರಾಗಿ ಬರುತ್ತಾರೆ. ಸ್ತ್ರೀ ಪಾತ್ರಗಳು ಬರುವುದಿಲ್ಲ. ಪುರುಷರೇ ಸ್ತ್ರೀಪಾತ್ರ ಧರಿಸುತ್ತಾರೆ. ಇಲ್ಲಿ ಕುಣಿತ ಕಡಿಮೆ. ಸಂಭಾಷಣೆ, ಅಭಿನಯ ಹೆಚ್ಚು. ಅವರ ಅಭಿನಯವನ್ನು ನೋಡುವುದು ಮಾತುಗಳನ್ನು ಕೇಳುವುದು ಒಂದು ಸೊಗಸು.

ಅಡ್ಡಸೋಗುಗಳಲ್ಲಿ ಪೂರ್ವ ನಿಯೋಜಿತ ಮಾತುಗಳು ಇಲ್ಲದಿರುವುದರಿಂದ ಮಾತುಗಳಲ್ಲಿ ಕ್ರಮ ತಪ್ಪಿದರೂ ಯಾರೂ ಆಕ್ಷೇಪಣೆ ಮಾಡಲು ಬರುವುದಿಲ್ಲ. ಹಾಸ್ಯದ ಮಧ್ಯೆ ಅವು ಕಾಣಿಸುವುದಿಲ್ಲ. ಇಲ್ಲಿ ಸಾಮಾಜಿಕ ವಿಡಂಬನೆಯಿಂದ ಕೂಡಿದ ತಿಳಿಹಾಸ್ಯವಿರುವುದರಿಂದ ಇಲ್ಲಿಯ ರೂಪಕಗಳು ಹಳ್ಳಿಗರ ಜೀವನ ವಿಧಾನ ಮತ್ತು ಸಮುದಾಯವನ್ನು ಬಿಟ್ಟು ಹೋಗುವುದಿಲ್ಲ. ಅಡ್ಡಸೋಗದ ರೂಪಕಗಳು ದೇಶಿಯ ಮೂಲಸಾಮಗ್ರಿಗಳನ್ನು ಒಳಗೊಂಡಿರುತ್ತವೆ. ಹೀಗಾಗಿ ನಮ್ಮ ಜಾನಪದದ ಹಾಸ್ಯ, ರಸಿಕತೆ ಹಾಗೂ ಗ್ರಾಮದ ಕೆಲವು ಕುಂದುಕೊರತೆಗಳು ನಾಟಕದಲ್ಲಿ ಅಡ್ಡಸೋಗದ ಮೂಲಕ ಪ್ರತಿಬಿಂಬಿತವಾಗುತ್ತ ಹೋಗುತ್ತವೆ ಎಂಬುವುದು ಗಮನಿಸಬೇಕಾದ ಸಂಗತಿ. ಕೆಲವೊಮ್ಮೆ ಅಡ್ಡಸೋಗು ಕಲಾಕಾರರ ಹಾಸ್ಯದ ಮಾತು. ಉದ್ಧಟವಾಗಿ ಸನ್ನಿವೇಶದ ಗಾಂಭೀರ್ಯವನ್ನು ಕಳೆದು ಬಿಡುತ್ತವೆ. ಅಶ್ಲೀ ಅರ್ಥ ಹಚ್ಚಿ ಪ್ರೇಕ್ಷಕರನ್ನು ನಗಿಸುವ ಭರದಲ್ಲಿ ನಾಟಕದ ಸೌಂದರ್ಯ ಮಾಸಿದಂತಾ ಗುವುದು. ಆದರೆ ಅಂತಹ ಪ್ರಸಂಗಗಳು ತುಂಬ ಕಡಿಮೆ ಎಂದೇ ಹೇಳಬೇಕು. ನಾಟಕದ ವಿಷಯ, ವಸ್ತು, ಅಭಿನಯಗಳಲ್ಲಿ ಪ್ರಾದೇಶಿಕ ಭಿನ್ನತೆಗಳು ಇದ್ದರೂ ಅವುಗಳ ಉದ್ದೇಶ ಹಾಸ್ಯ ಹಾಗೂ ಮನರಂಜನೆಯನ್ನುಂಟು ಮಾಡುವುದು ಎಂಬುದನ್ನು ಮರೆಯುವಂತಿಲ್ಲ. ಅಡ್ಡಸೋಗುಗಳು ಜಾನಪದ ರಂಗಭೂಮಿಯ ವಿಶಿಷ್ಟ ಕೊಡುಗೆಗಳಾಗಿವೆ.

ಅಡ್ಡಸೋಗು ಕಲಾಕಾರರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ. ಅಡ್ಡಸೋಗದ ಕರ್ತೃಗಳು ಅನಾಮಧೇಯರು. ಊರಲ್ಲಿಯ ಹಾಸ್ಯ ಸ್ವಭಾವದ ವ್ಯಕ್ತಿಗಳು ತಾವೇ ಒಂದು ರೂಪಕ ಸೇರಿಸಿ ನಗೆ ಹುಟ್ಟಿಸುತ್ತಾರೆ. ಅಡ್ಡಸೋಗು ಮಾಡುವುದು ಒಂದು ಕಲೆ. ಕೆಲವರಿಗೆ ಈ ಕಲೆ ಜನ್ಮದತ್ತವಾಗಿ ಬಂದಿರುತ್ತದೆ. ಇದನ್ನು ಮಾಡುವವರು ಉತ್ತಮ ಕಲಾವಿದರು ಎಂಬುವುದರ ಬಗ್ಗೆ ಅನುಮಾನಗಳಿಲ್ಲ. ಇವರು ಹೆಚ್ಚು ಓದಿದವರಲ್ಲ ಕೇವಲ ಅನುಭವ ಮಾತ್ರದಿಂದಲೇ ಪ್ರಸಂಗಗಳನ್ನು ರಚಿಸಿ ಅಭಿನಯಿಸುತ್ತಾರೆ. ಈ ಕಲಾಕಾರರಿಗೆ ಗ್ರಾಮದ ಸುತ್ತಮುತ್ತಲಿನ ಪರಿಸರದ ಸಂಧಿ-ಗೊಂದಿಗಳ ಪ್ರತಿಯೊಂದು ವಿಷಯಗಳು ಚೆನ್ನಾಗಿ ಗೊತ್ತು. ಸಂದರ್ಭಕ್ಕೆ ಸರಿಯಾಗಿ ಆ ವಿಷಯಗಳನ್ನು, ಘಟನೆಗಳನ್ನು ಸರಿಯಾಗಿ ಜ್ಞಾಪಕದಲ್ಲಿಟ್ಟುಕೊಂಡು ಅವಕಾಶ ಸಿಕ್ಕಾಗ ನಾಟಕದ ಮಧ್ಯ ತಂದು ಅನುಕರಣೆ ಮಾಡಿ ಅಭಿನಯಿಸಿ ಪ್ರೇಕ್ಷಕರನ್ನು ನಗಿಸುತ್ತಾರೆ. ಈ ಕಲಾಕಾರರು ಚತುರ ಮಾತುಗಾರರು. ಮತ್ತು ಚುರುಕು ಬುದ್ಧಿ ಮತ್ತೆ ಹೊಂದಿರುತ್ತಾರೆ. ಅವರು ವಾಸ್ತವಿಕ ಜೀವನದಲ್ಲಿ ಒಳ್ಳೆಯ ಮಾತುಗಾರರಾಗಿದ್ದು ತುಂಬಾ ಚುರುಕಾಗಿರುತ್ತಾರೆ. ಆಗಾಗ ತಮಾಷೆ, ಚೇಷ್ಟೆ ಮಾಡುತ್ತಲೇ

ಇರುತ್ತಾರೆ. ಯಾವಾಗಲೋ, ಎಂದೋ ನೋಡಿದ ಘಟನೆಗಳನ್ನು ತಕ್ಷಣವೇ ರಂಗ ಮಂಟಪದ ಮೇಲೆ ಬಂದು ಅಭಿನಯಿಸಿ ತೋರಿಸುವಾಗ ಅವರ ಕಲಾಪ್ರತಿಭೆ ಮೆಚ್ಚಬೇಕಾದುದು. ಆಶುಭಾಷಣದ ಹಾಗೆ ಮಾತನಾಡುವ ಅವರ ವಾಕ್ ಚಾತುರ್ಯ, ಜ್ಞಾಪಕಶಕ್ತಿ, ಶಬ್ದಭಂಡಾರ, ನೋಡಿದಾಗ, ಕೇಳಿದಾಗ ನಿಜವಾಗಿಯೂ ಆಶ್ಚರ್ಯವಾಗುತ್ತದೆ.

ಅಡ್ಡಸೋಗಕ್ಕಾಗಿ ಪ್ರಸಿದ್ಧಿ ಪಡೆದ ಹಾಸ್ಯಗಾರರು ಇದ್ದಾರೆ. ಈ ಕಲಾಕಾರರಿಗೆ ಅಡ್ಡ ಸೋಗದ ಬಸಪ್ಪ, ಮಲ್ಲಪ್ಪ ಎಂದು ಕರೆಯುವಾಗ ಅಡ್ಡಸೋಗ ವಿಶೇಷಣವಾಗಿ ಅಡ್ಡ ಹೆಸರಾಗಿ ಬಳಕೆಯಾಗುತ್ತದೆ ಎಂಬುವುದನ್ನು ಗಮನಿಸಬೇಕು. ಹಳ್ಳಿಗಳಲ್ಲಿ ನಾಟಕದ ಜನ ಪ್ರಿಯತೆಗೆ ಇವರು ಕಾರಣರಾಗಿದ್ದಾರೆ ಎಂಬುವುದನ್ನು ಮರೆಯಲಾಗದು. ಇತ್ತೀತ್ತಲಾಗಿ ಬಯಲಾಟಗಳು ಕಡಿಮೆಯಾಗುತ್ತವೆ. ಅವುಗಳಿಗೆ ಪೂರಕವಾಗಿ ಬರುವ ಅಡ್ಡಸೋಗುಗಳು ಕಣ್ಮರೆಯಾಗುತ್ತಿರುವುದು ನಿಜವಾಗಿಯೂ ವಿಷಾದನೀಯ ಸಂಗತಿಯಾಗಿದೆ.

ಅನುಬಂಧ

ನಗೆಯನ್ನು ಹುಟ್ಟಿಸುವ ಅಡ್ಡಸೋಗು ಮತ್ತ ಪಗರಣ ಈ ಎರಡು ಜಾನಪದ ಕಲಾ ಪ್ರಕಾರಗಳು ಬೇರೆ ಬೇರೆಯಾಗಿವೆ ಎಂಬುವುದನ್ನು ಲಕ್ಷಿಸಬೇಕು. ಆದರೂ ಇವೆರಡರಲ್ಲೂ ಸಾಮ್ಯ-ವೈಷಮ್ಯಗಳ ಲಕ್ಷಣಗಳಿವೆ. ಈ ಎರಡು ಕಲಾ ಪ್ರಕಾರಗಳ ವಸ್ತು, ವಿಷಯ ಗ್ರಾಮೀಣ ಜನಜೀವನಕ್ಕೆ ಬಹಳ ಹತ್ತಿರವಾಗಿವೆ ಹಾಗೂ ಎರಡರ ಉದ್ದೇಶವು ಹಾಸ್ಯ ಹಾಗೂ ಮನ ರಂಜನೆಯನ್ನುಂಟು ಮಾಡುವುದೇ ಆಗಿದೆ. ಎರಡರಲ್ಲೂ ಸ್ತ್ರೀ ಪಾತ್ರಗಳು ಇರುವುದಿಲ್ಲ. ಪುರುಷರೇ ಸ್ತ್ರೀ ಪಾತ್ರ ಧರಿಸುತಾರೆ. ಇಷ್ಟು ಸಾಮ್ಯ ಅಂಶಗಳನ್ನು ಬಿಟ್ಟರೆ ಉಳಿದೆಲ್ಲದರಲ್ಲಿಯೂ ಇವೆರಡು ಭಿನ್ನತೆಯನ್ನು ಹೊಂದಿವೆ.

ಪಗರಣದಲ್ಲಿ ಹಾಸ್ಯ, ಶೃಂಗಾರ, ವೀರ, ಸನ್ನಿವೇಶಗಳಿಗೆ ಪ್ರಾಧಾನ್ಯತೆ ಇದೆ. ಅಡ್ಡಸೋಗುಗಳಲ್ಲಿ ಕೇವಲ ಹಾಸ್ಯ ಸನ್ನಿವೇಶಗಳಿಗೆ ಪ್ರಾಮುಖ್ಯತೆ ಹೆಚ್ಚು. ಹಬ್ಬ ಹರಿದಿನಗಳಲ್ಲಿ ಜಾತ್ರೆ-ಉತ್ಸವಗಳಲ್ಲಿ ಪಗರಣಿಗ ಕಲಾವಿದರು ವೇಷಭೂಷಣಗಳನ್ನು ಧರಿಸಿ ಬೀದಿ ಬೀದಿಗಳಲ್ಲಿ ಬರುತ್ತಾರೆ. ಪ್ರಮುಖ ವರ್ತುಲಗಳಲ್ಲಿ ಸೋಗು ಮಾಡಿ ಜನರನ್ನು ನಗಿಸುತ್ತಾರೆ. ಸಮಕಾಲಿನ ಸಮಾಜದ ಮತ್ತು ರಾಜಕೀಯ ಸಂಗತಿಗಳು ಇಲ್ಲಿ ಇರುತ್ತವೆ. ಪೌರಾಣಿಕ ಪಾತ್ರಗಳೂ ಇರುವುದುಂಟು ಮತ್ತು ಪಗರಣದ ಕಾಲಾವಧಿ ಮೂರರಿಂದ ನಾಲ್ಕು ಗಂಟೆ ತೆಗೆದುಕೊಳ್ಳುವುದು. ಒಮ್ಮೊಮ್ಮೆ ಇಡೀ ದಿವಸ ಪಗರಣ ನಡೆಯಬಹುದು. ಇಲ್ಲಿ ಕಲಾವಿದರ ಸಂಖ್ಯೆ ಹತ್ತರಿಂದ ಹದಿನೈದರವರೆಗೆ ಇರಬಹುದು ಹಾಗೂ ಪಗರಣದ ಕಥಾ ಪ್ರಸಂಗ ಮತ್ತು ಅಲ್ಲಿ ಬರುವ ಹಾಸ್ಯಕ್ಕೆ ಸಾವಯವ ಸಂಬಂಧ ಇರುತ್ತವೆ. ಅಡ್ಡಸೋಗುಗಳು ಬಯಲಾಟಗಳಲ್ಲಿ ಮಾತ್ರ ಕಾಣಿಸುತ್ತವೆ. ಇಲ್ಲಿ ವೇಷ ಭೂಷಣದ ಜೊತೆಗೆ ಅನುಕರಣೆಗೆ ಪ್ರಧಾನ ಸ್ಥಾನ ಇರುತ್ತದೆ. ಇಲ್ಲಿ ಪೌರಾಣಿಕ ಪಾತ್ರಗಳು ಇರುವುದಿಲ್ಲ. ಅಡ್ಡಸೋಗದ ಕಾಲಾವಧಿ ಹತ್ತರಿಂದ ಹದಿನೈದು ನಿಮಿಷಗಳು ಮಾತ್ರ. ಪಾತ್ರಧಾರಿಗಳು ನಾಲ್ಕರಿಂದ ಐದು. ನಾಟಕದ

ಕಥಾ ಪ್ರಸಂಗಕ್ಕೆ ಹಾಗೂ ಅದ್ದಸೋಗದಲ್ಲಿಯ ಹಾಸ್ಯಕ್ಕೆ ಸಾವಯವ ಸಂಬಂಧ ಇರುವುದಿಲ್ಲ ಎಂಬುವುದನ್ನು ಗಮನಿಸಬೇಕು.

ಪಗರಣದಲ್ಲಿ ವಿಷಯವನ್ನು ಕಲಾವಿದರು ಮುಂಚಿತವಾಗಿಯೇ ರೂಢಿ ಮಾಡಿಕೊಂಡಿರುತ್ತಾರೆ. ಪಗರಣದಲ್ಲಿ ಹಾಡುಗಳು ಮತ್ತು ಮಾತುಗಳು ಅಶ್ಲೀಲತೆ ಮತ್ತು ಒರಟುತನದಿಂದ ಕೂಡಿರುತ್ತವೆ. ಹಾಗೂ ಇಲ್ಲಿ ಅವ್ಯವಸ್ಥೆ ಹಾಗೂ ಶಿಸ್ತಿನ ಅಭಾವ ಇರುವುದರಿಂದ ಸ್ತ್ರೀಯರು ಪಗರಣ ನೋಡಲು ಹಿಂದೇಟು ಹಾಕುತ್ತಾರೆ. ಅದ್ದಸೋಗುಗಳ ಕಲಾವಿದರು ತಾವು ನಾಟಕದಲ್ಲಿ ಮಾಡಬೇಕಾದ ವಿಷಯವನ್ನು ಮುಂಚಿತವಾಗಿ ಅಭ್ಯಾಸ ಮಾಡಿಕೊಂಡಿರುವುದಿಲ್ಲ. ಅದ್ದಸೋಗದ ಮಾತುಗಳಲ್ಲಿ ಅಶ್ಲೀಲತೆ ಕಡಿಮೆ, ವ್ಯಂಗ್ಯ ಹೆಚ್ಚು. ಇವು ನಾಟಕದಲ್ಲಿ ಬರುವುದರಿಂದ ಪ್ರೇಕ್ಷಕರು ಶಾಂತರೀತಿಯಿಂದ ನೋಡುತ್ತಾರೆ. ಹೀಗೆ ಪಗರಣ ಮತ್ತು ಅದ್ದಸೋಗು ಈ ಕಲಾ ಪ್ರಕಾರಗಳಲ್ಲಿ ಸಾಮ್ಯ ವೈಷಮ್ಯಗಳಿದ್ದರೂ ಅವೆರಡರ ಮುಖ್ಯ ಉದ್ದೇಶ ಹಾಸ್ಯ ಎಂಬುವುದನ್ನು ಮರೆಯಲಾಗದು. ಪಗರಣದಲ್ಲಿಯ ಹಾಸ್ಯವೇ ಅದ್ದಸೋಗುಗಳಿಗೆ ಪ್ರಚೋದನೆ ಕೊಟ್ಟಿರಬೇಕು.

ಪಗರಣದ ಬಗ್ಗೆ ಹೆಚ್ಚಿನ ವಿವರಣೆಗಳಿಗೆ ನೋಡಿ : ಪಗರಣ (ಹಗರಣ) ಇತಿಹಾಸದಲ್ಲಿ ಮತ್ತು ಸಮಕಾಲೀನದಲ್ಲಿ - ಎಂ. ಚಿದಾನಂದಮೂರ್ತಿ ಗ್ರಾಮೀಣ (೧೯೭೭) ಪಗರಣ (೧೯೮೩).

೮೯

ಕೋಶರಚನೆ : ಕೆ.ವಿ. ನಾರಾಯಣ ಅವರ ಚಿಂತನೆಗಳು

೧

ಭಾಷೆಯ ಬೆಳವಣಿಗೆಯಲ್ಲಿ ಕೋಶಗಳು ಪ್ರಮುಖ ಪಾತ್ರವಹಿಸುತ್ತವೆ. ಶಬ್ದಗಳ ಮೂಲವನ್ನು ಶೋಧಿಸಿ ಅವುಗಳ ಶಾಸ್ತ್ರೀಯ ನಿರೂಪಣೆಯನ್ನು ಅವು ಮಾಡಿ ಕೊಡುತ್ತವೆ. ಆನ್ವಯಿಕ ಭಾಷಾವಿಜ್ಞಾನದಲ್ಲಿ 'ನಿಘಂಟುಶಾಸ್ತ್ರ' ಎಂಬ ಪ್ರತ್ಯೇಕ ಶಾಸ್ತ್ರ ಆರಂಭವಾಗಿದೆ. ಇಂಗ್ಲಿಶಿನ 'Lexicology' ಸಂವಾದಿಯಾಗಿ 'ನಿಘಂಟುಶಾಸ್ತ್ರ', 'Lexicography' ಸಂವಾದಿಯಾಗಿ 'ನಿಘಂಟುವಿಜ್ಞಾನ' ಎಂಬ ಪದಗಳು ಕನ್ನಡದಲ್ಲಿ ಬಳಕೆಯಲ್ಲಿವೆ. ನಿಘಂಟುವಿನಲ್ಲಿರುವ ಮುಖ್ಯ ನಮೂದುಗಳಿಗೆ Lexeme ಎಂದು ಕರೆಯುವರು. ನಿಘಂಟು ಎಂದರೆ ಸಾಮಾನ್ಯವಾಗಿ ಮುಖ್ಯ ನಮೂದುಗಳ ವಿವೇಚನೆಯೇ ಆಗಿದೆ. ನಿಘಂಟುವಿನ ಅರ್ಥವನ್ನು ಸ್ಫುಟವಾಗಿ ಹೇಳುವುದಾದರೆ ಒಂದು ಭಾಷಾಸಮುದಾಯದ ಮೂಲರೂಪ ಮತ್ತು ಸಮಸ್ತ ರೂಪಗಳನ್ನು ಸಂಗ್ರಹಿಸಿ, ವ್ಯವಸ್ಥಿತವಾಗಿ ಸಂಯೋಜಿಸಿ ಅವುಗಳ ಉಚ್ಚಾರಣೆ, ವ್ಯಾಕರಣವರ್ಗ, ಅರ್ಥ, ಪ್ರಯೋಗ, ನಿಷ್ಪತ್ತಿ ಮುಂತಾದ ಸಂಗತಿಗಳನ್ನು ಉಲ್ಲೇಖಿಸಿ ಪದಗಳನ್ನು ಅಕಾರಾದಿಯಾಗಿ ಸಂಯೋಜಿಸಿರುವ ಕೃತಿಯಾಗಿದೆ. ನಿಘಂಟುಗಳ ರಚನೆ, ಅರ್ಥವ್ಯಾಪ್ತಿ, ವೈವಿಧ್ಯತೆ ಹಾಗೂ ನಿಘಂಟುಗಳ ಅಧ್ಯಯನ ಈ ಎಲ್ಲ ಅಂಶಗಳು ನಿಘಂಟುಶಾಸ್ತ್ರದ ಕಕ್ಷೆಯಲ್ಲಿ ಬರುತ್ತವೆ. ಕನ್ನಡ ಕೋಶರಚನೆಗೆ ಹೊಸ ತತ್ವಗಳನ್ನು ಕೊಡುವುದರ ಮೂಲಕ ಹೊಸ ಆಯಾಮವನ್ನು ಕೊಟ್ಟವರಲ್ಲಿ ಕೆ.ವಿ. ನಾರಾಯಣರು ಪ್ರಮುಖರಾಗಿದ್ದಾರೆ.

೨

ಕೋಶರಚನೆ, ಶಬ್ದಾರ್ಥವಿವೇಚನೆ ಅಧ್ಯಯನಕಾರರಿಗೆ ಅಷ್ಟು ಪ್ರಿಯವಾದ ವಿಷಯವಲ್ಲವೆಂಬುದು ಬಹುಮಟ್ಟಿಗೆ ನಿಜ. ಅದಕ್ಕೆ ಕಾರಣಗಳೇನು ಎಂಬುದರ

ಚರ್ಚೆ ತುಂಬ ಸ್ವಾರಸ್ಯವಾದರೂ ಇಲ್ಲಿಗಂತೂ ಪೂರ್ತಿ ಅಪ್ರಸ್ತುತ. ಆದರೆ ಕೆ.ವಿ. ನಾರಾಯಣ ಅವರಿಗೆ ಅದು ಬಹಳ ಪ್ರಿಯವಾದ ವಿಷಯವಾಗಿದೆ ಎಂಬುದರ ಬಗ್ಗೆ ಸಂದೇಹವಿಲ್ಲ. ಭಾಷಾಧ್ಯಯನದಲ್ಲಿ ಶಬ್ದಾರ್ಥ ವಿವೇಚನೆಯ ಮಹತ್ವವನ್ನು ಅವರು ಕಂಡುಕೊಂಡಿದ್ದಾರೆ. ನಾರಾಯಣರಿಗೆ ಪದಗಳು ಭಾಷಾಧ್ಯಯನದಿಂದ ಸಿಡಿದು ನಿಂತ ಸಂಗತಿಯಾಗಿಲ್ಲ. ಅವರಿಗೆ ಅದರ ಚರ್ಚೆ ಕೇವಲ ಬೌದ್ಧಿಕ ವಸ್ತುವೂ ಅಲ್ಲ. ಶಬ್ದಗಳು ಭಾಷಾಸಮುದಾಯದ ಚಹರೆಯನ್ನು ಪಡೆದಿರುವ ಘಟಕಗಳು. ಈ ನೆಲೆಯಲ್ಲಿ ಕೃಷಿ ಪದಕೋಶಕ್ಕೆ ಅವರು ಬರೆದಿರುವ ಪ್ರಸ್ತಾವನೆಯನ್ನು ನೋಡಬೇಕು. ಪಾಂಡಿತ್ಯ ಮತ್ತು ವಿಮರ್ಶನ ಶಕ್ತಿಗಳು ಪರಸ್ಪರ ವಿರೋಧಗಳಾಗದೆ ಹೇಗೆ ಒಂದು ಇನ್ನೊಂದಕ್ಕೆ ಪೂರಕವಾಗಬಲ್ಲದೆಂಬುದಕ್ಕೆ ಆ ಪ್ರಸ್ತಾವನೆ ಅತ್ಯುತ್ತಮ ನಿದರ್ಶನವಾಗಿದೆ. ಮತ್ತು ಭಾಷಾಧ್ಯಯನದಲ್ಲಿ ಶಬ್ದಾರ್ಥ ವಿವೇಚನೆ ಹೇಗೆ ಹೊಂದಿಕೊಂಡು ಭಾಷೆಯ ರಚನೆಯನ್ನು ಮತ್ತು ಭಾಷೆಯ ಸಾಮಾಜಿಕ ಚಹರೆಯನ್ನು ಅರ್ಥಮಾಡಿಕೊಳ್ಳಲಿಕ್ಕೆ ನೆರವಾಗುತ್ತದೆ ಎಂಬುದರ ಪರಿಚಯವಾಗುತ್ತದೆ. ಭಾಷಾಧ್ಯಯನದ ಬಗ್ಗೆ, ಕೋಶರಚನೆಯ ಬಗ್ಗೆ ಅವರಿಗಿದ್ದ ಸ್ಪಷ್ಟ ಕಲ್ಪನೆಯಾಗಲಿ, ಆಸಕ್ತಿ-ಅಭಿರುಚಿಯಾಗಲಿ, ಮುಂದೆ ಅವರು ಆ ಕ್ಷೇತ್ರದಲ್ಲಿ ಪಡೆದ ಪ್ರಭುತ್ವವಾಗಲಿ ಅವರು ತಮ್ಮ ಗುರುಗಳಾದ ಎಂ. ಚಿದಾನಂದಮೂರ್ತಿ ಅವರಿಂದ ಬಳುವಳಿ ಪಡೆದಂತಹವು ಎಂಬುದರ ಬಗ್ಗೆ ಖಂಡಿತವಾಗಿಯೂ ಅನುಮಾನವಿಲ್ಲ.*

ಸಾಹಿತ್ಯಾಧ್ಯಯನ, ಭಾಷಾಧ್ಯಯನ ಕ್ಷೇತ್ರಗಳಲ್ಲಿ ಹೇಗೋ ಕೋಶರಚನೆಯ ಬಗ್ಗೆಯೂ ನಾರಾಯಣರು ಪಟ್ಟಶ್ರಮ, ಮಾಡಿದ ಆಲೋಚನೆ ಅಪಾರ. ೧೯೯೩ ನವೆಂಬರ್‌ದಲ್ಲಿ ಕನ್ನಡ ವಿಶ್ವವಿದ್ಯಾಲಯದಲ್ಲಿ 'ಭಾಷಾಶಾಸ್ತ್ರ ಶಿಶಿರ ಶಾಲೆ' ನಡೆಯಿತು. ಆಗ ಧ್ವನಿರಚನೆ, ಕೋಶರಚನೆಯ ಬಗ್ಗೆ ಕೆಲವು ಉಪನ್ಯಾಸಗಳನ್ನು ಕೊಟ್ಟರು (ವಿಸ್ತಾರ ವಾದ ಪಾಠ ಮಾಡಲಿಕ್ಕೆ ಕಾಲಾವಕಾಶವಿರಲಿಲ್ಲ). ಆ ಉಪನ್ಯಾಸಗಳ ಟಿಪ್ಪಣಿಗಳು ನನ್ನ ಹತ್ತಿರ ಇವೆ. ಆ ಶಿಶಿರ ಶಾಲೆಯಲ್ಲಿ 'ಕನ್ನಡ ಅಕ್ಷರ ರಚನೆ' ಬಗ್ಗೆ ಅವರು ಕೊಟ್ಟ ಉಪನ್ಯಾಸಗಳು ಆ ಕ್ಷೇತ್ರದಲ್ಲಿ ಹೊಸ ದಿಗಂತವನ್ನೇ ತೆರೆದು ತೋರಿಸಿತು. ಇಂದಿಗೂ ಆ ಉಪನ್ಯಾಸಗಳು

---

* ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಶಾಖೆಯಲ್ಲಿ ಕವಿಕಾವ್ಯ ವಿಮರ್ಶೆಗೆ ಶಿವರುದ್ರಪ್ಪ ಅವರು, ಪಾಂಡಿತ್ಯಕ್ಕೆ ಚಿದಾನಂದಮೂರ್ತಿ ಅವರು ಪ್ರಮಾಣ ಪುರುಷರು. ಜ್ಞಾನಕ್ಕೆ ತಮ್ಮನ್ನೇ ತಾವೇ ಅರ್ಪಿಸಿಕೊಂಡ ಆ ಶ್ರೇಷ್ಠ ಪ್ರಾಧ್ಯಾಪಕರ ಗರಡಿಯಲ್ಲಿ ನಾರಾಯಣರು ಪಳಗಿದುದು ಸಾಹಿತ್ಯಾಧ್ಯಯನ ಮತ್ತು ಭಾಷಾಧ್ಯಯನ ಕ್ಷೇತ್ರದಲ್ಲಿ ಶುಭ ಮುಹೂರ್ತವೆಂದೇ ಹೇಳಬೇಕು. ಹೀಗಾಗಿ ವಿಷಯದ ಆಯ್ಕೆ, ಅಭಿವ್ಯಕ್ತಿ ವಿಧಾನದಲ್ಲಿ ನಾರಾಯಣರು ತಮ್ಮ ಆ ಇಬ್ಬರೂ ಶ್ರೇಷ್ಠ ಪ್ರಾಧ್ಯಾಪಕರ ಪರಂಪರೆಯನ್ನು ಹೊಸ ಆಲೋಚನೆಯ ನೆಲೆಯಲ್ಲಿ ಮುಂದುವರಿಸಿದರು; ಬೆಳೆಸಿದರು ಎಂಬುದು ಬಹಳ ಮುಖ್ಯವಾದ ಸಂಗತಿಯಾಗಿದೆ.

ನನ್ನ ತಲೆಯಲ್ಲಿ ಗುಯ್ ಎನ್ನುತ್ತಿವೆ. ಆಗ ನಾರಾಯಣರು ವ್ಯಕ್ತಪಡಿಸುತ್ತಿದ್ದ ಭಾವಭಂಗಿ ಕಣ್ಣಿಗೆ ಕಾಣಿಸುತ್ತಿದೆ; ಧ್ವನಿಯ ಏರಿಳಿತ ಕಿವಿಗೆ ಕೇಳಿಸುತ್ತಿದೆ. ಮುಂದೆ ನಾನು, ಎಂ.ಫಿಲ್, ಪಿಎಚ್.ಡಿ. ಪದವಿಗಳ ಮುಗಿದ ಮೇಲೂ ಕೋಶರಚನೆಯ ಬಗ್ಗೆ ಬರೆದಿರುವ ಕೃತಿಗಳಲ್ಲಿ, ಲೇಖನಗಳಲ್ಲಿ ಅವರ ಅಭಿಪ್ರಾಯಗಳು, ಮಾತುಗಳು ನುಸುಳಿ ಬಂದಿರುವುದು ನನ್ನ ಗಮನಕ್ಕೆ ಬಂದಾಗ ಸ್ವಲ್ಪ ವಿಚಲಿತನಾದ ಸಂದರ್ಭಗಳೂ ಇಲ್ಲದಿಲ್ಲ. ಆ ಕ್ಷೇತ್ರದಲ್ಲಿ ನಾನು ಬರೆಯುವಾಗ ಅವರ ವಿಚಾರಗಳು ನೆನಪಿಗೆ ಬಂದಿದ್ದರೆ ಆ ಅಭಿಪ್ರಾಯವನ್ನು ಅವರ ಉಪನ್ಯಾಸ ಗಳಿಂದ ಸ್ವೀಕರಿಸಿದ್ದೇನೆ ಎಂದು ಹಲವೆಡೆ ಸೂಚಿಸಿದ್ದೇನೆ(ಉದಾಹರಣೆಗೆ ಕನ್ನಡ ಕ್ರಿಯಾರೂಪಗಳು, ೨೦೦೦, ಪು.೧೦; ಕನ್ನಡ ನಿಘಂಟು ರಚನೆ, ೨೦೦೩, ಅರಿಕೆ ಭಾಗ). ನಾರಾಯಣರು ನಿಘಂಟುಶಾಸ್ತ್ರ ಕುರಿತು ಪ್ರತ್ಯೇಕ ಕೃತಿಯನ್ನು ಬರೆದಿದ್ದರೆ ಆ ಕ್ಷೇತ್ರಕ್ಕೆ ಅದೊಂದು ಅಪೂರ್ವ ಕೊಡುಗೆಯಾಗುತ್ತಿತ್ತು. ಆದರೂ ಒಂದು ಸಮಾಧಾನ ಅವರ ಆಲೋಚನೆಗಳು ಅವರ ವಿದ್ಯಾರ್ಥಿಗಳ ಜ್ಞಾನದ ಭಾಗವಾಗಿ ಅವರ ಟಿಪ್ಪಣಿಗಳಲ್ಲಿ, ತಲೆಯಲ್ಲಿ ಉಳಿದಿವೆ. ಅಲ್ಲಿದ್ದು ಆ ವಿದ್ಯಾರ್ಥಿಗಳನ್ನು ರೂಪಿಸಿವೆ; ರೂಪಿಸುತ್ತಿವೆ.

ನಾರಾಯಣರು ಕೋಶರಚನೆಗೆ ಸಂಬಂಧಪಟ್ಟಂತೆ ಮೌಲಿಕ ಲೇಖನಗಳನ್ನು ಬರೆದಿದ್ದಾರೆ. ಅಲ್ಲಿ ಅವರು ಕಾಣಿಸಿದ ಒಳನೋಟ ಅದ್ಭುತವಾದುದು. ಅವರ ಬರೆಹಗಳ ವೈಶಿಷ್ಟ್ಯವೆಂದರೆ ಅವರು ಹೆಚ್ಚು ಮಾಹಿತಿಯನ್ನಾಗಲಿ, ಉದಾಹರಣೆಗಳನ್ನಾಗಲಿ ಕೊಡುವುದಕ್ಕಿಂತ ಮಾಹಿತಿ, ಉದಾಹರಣೆಗಳನ್ನು ಅಂತಸ್ಥವಾಗಿಟ್ಟುಕೊಂಡು ಅವುಗಳ ಹಿಂದಿರುವ ನಿಯಮಗಳನ್ನು, ಸಿದ್ಧಾಂತಗಳನ್ನು, ಅಧ್ಯಯನದ ಹೊಸ ಸಾಧ್ಯತೆಗಳನ್ನು ಮಂಡಿಸುವುದರ ಕಡೆಗೆ ಹೆಚ್ಚು ಒಲವು ತೋರಿಸುತ್ತಾರೆ. ವಾಸ್ತವವಾಗಿ ವಿದ್ವತ್ ಕ್ಷೇತ್ರದಲ್ಲಿ ಈಗ ನಡೆಯಬೇಕಾದ ಕೆಲಸ ಅದೇ ಆಗಿದೆ. ಆ ಮೂಲಕ ನಾರಾಯಣರು ಕನ್ನಡ ನಿಘಂಟುಶಾಸ್ತ್ರಕ್ಕೆ ಹೊಸತತ್ವಗಳನ್ನು ಪರಿಚಯಿಸಿದರು. ನಿಜ ಹೇಳಬೇಕೆಂದರೆ ನಮ್ಮಲ್ಲಿ ಬಹುಜನಕ್ಕೆ ಗೊತ್ತಿರುವ ಕೋಶರಚನೆಯ ಆಧುನಿಕ ವಿಚಾರಗಳು ನಾರಾಯಣರ ದತ್ತಿಯೇ ಆಗಿದೆ; ಬಳುವಳಿಯೆ ಆಗಿವೆ. ಅವರ ಬರೆಹಗಳ ಆಶಯಗಳನ್ನು ಕುರಿತು ಈ ಸಂಪ್ರಬಂಧದಲ್ಲಿ ವಿವೇಚಿಸಲಾಗಿದೆ.

೩

ಕೋಶರಚನೆಯ ಬಗ್ಗೆಯಾಗಲಿ, ಕೋಶಾಧ್ಯಯನದ ಬಗ್ಗೆಯಾಗಲಿ ನಾರಾಯಣರು ಸಿದ್ಧಮಾದರಿಗಳನ್ನು ಪಲ್ಲಟಗೊಳಿಸುತ್ತಾರೆ. ಒಂದು ಮಾತು, ಅವರು ಹೇಳಿದ್ದೆಲ್ಲ ಆ ಕ್ಷೇತ್ರದಲ್ಲಿ ಓಂಪ್ರಥಮ ಸಂಪೂರ್ಣ ಹೊಸದೇ ಆಗಿರುವುದರಿಂದ ಮೊದಲ ಓದಿಗೆ ಅವರ ಬರೆಹಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟ ಸಾಧ್ಯ. ತಾತ್ಪರ್ಯವಿಷ್ಟೇ, ಅವರ ಬರೆಹಗಳನ್ನು ಓದುವಾಗ, ಗ್ರಹಿಸುವಾಗ ಅಧ್ಯಯನಕಾರರಿಗೆ ಸಿದ್ಧತೆ ಬೇಕು. ನಿತ್ಯ ಪರಿವರ್ತನ ಶೀಲವಾದ ಜೀವಂತ ಭಾಷೆ ನಿರಂತರವಾಗಿ ಬೆಳೆಯುತ್ತಿರುತ್ತದೆ. ಈ

ಪರಿವರ್ತನೆ ಅನಿವಾರ್ಯ ಮತ್ತು ಅಗತ್ಯ. ಭಾಷೆಯ ಅವಿಚ್ಛಿನ್ನ ಬೆಳವಣಿಗೆಯಲ್ಲಿ ಪದಗಳ ರಚನೆಯಲ್ಲಿ ಹಲವು ವ್ಯತ್ಯಾಸಗಳು ಕಂಡುಬರುತ್ತವೆ. ನಾರಾಯಣರು **ಪದಕೋಶ-ಪದಕೋಶ ಬೆಳವಣಿಗೆ** ಎಂಬ ಲೇಖನದಲ್ಲಿ ಹಲವಾರು ಹೊಸ ಸಂಗತಿಗಳನ್ನು ಮೊದಲಬಾರಿಗೆ ಪ್ರತಿಪಾದಿಸಿದ್ದಾರೆ. ಕನ್ನಡ ಪದಕೋಶದ ಬೆಳವಣಿಗೆಯನ್ನು ಗಮನಿಸಿದಾಗ ಅನ್ಯದೇಶ್ಯ ಪದಗಳ ಬಳಕೆ ಹೆಚ್ಚಾದಂತೆ ದೇಶ್ಯಪದಗಳ ಬಳಕೆ ಕಡಮೆಯಾಗುತ್ತ ಬಂದಿತು. ಉದಾ. ಹಾದಿ, ದಾರಿ ಪದಗಳಿರುವಾಗ ರಸ್ತೆ, ರೋಡು ಎಂಬ ಪದಗಳು ಬಂದು ಸೇರಿದವು. ಅಂದರೆ ಅನ್ಯದೇಶ್ಯ ಪದಗಳ ಬಳಕೆಯ ಉದ್ದೇಶ ಕೇವಲ ಪಡೆಯುವ ಭಾಷೆಯ ಕೊರತೆ ತುಂಬುವುದಷ್ಟೇ ಅಲ್ಲ; ಪಡೆಯುವ ಭಾಷೆಯ ಸಮತೋಲತೆಯನ್ನು ಪಲ್ಲಟಗೊಳಿಸುವ ಕ್ರಿಯೆಯೂ ಕಂಡುಬರುತ್ತದೆ. ದೇಶ್ಯಪದಗಳ ಬಳಕೆಯ ಸಂಕೋಚ ಮತ್ತು ಅನ್ಯದೇಶ್ಯ ಪದಗಳ ಬಳಕೆಯ ವಿಸ್ತಾರ ಈ ಹಿನ್ನೆಲೆಯಲ್ಲಿ ನಾರಾಯಣರ ಈ ಚಿಂತನೆ ತುಂಬ ಮುಖ್ಯವಾಗಿದೆ.

'ತನ' ಎಂಬ ತದ್ಧಿತ ಪ್ರತ್ಯಯದ ಸ್ವರೂಪದ ಬಗ್ಗೆ ಬರೆಯುತ್ತ ಅದು ಬಡ, ದೊಡ್ಡ ಎಂಬ ಭಾವವಾಚಕ ಪದಗಳಿಗೆ ಮಾತ್ರ ಹತ್ತುತ್ತದೆ. ಇತರ ಪದಗಳಿಗೆ ಹತ್ತುವುದಿಲ್ಲ. 'ಕಿವಿತನ' ಎಂಬ ಪದ ಅಸಾಧ್ಯ. 'ತನ' ಎಂಬುದು ನಾಮಪ್ರಕೃತಿಗಳ ಭಾವ ಅಂದರೆ ಗುಣ-ಧಮ ಎಂದರ್ಥ. ಅಂತಹ ಪದಗಳು ಭಾಷಿಕರ ಪದಕೋಶದ ಒಟ್ಟು ರಚನೆಯಲ್ಲಿ ಅಂತರ್ಗತವಾಗಿರುತ್ತವೆ. ಅಂತಹ ನಿಯಮಗಳನ್ನು ಬಳಸುವಾಗ ಭಾಷಿಕರು ಜಾಗ್ರತವಾಗಿರುವುದಿಲ್ಲ. ಉದಾ. ಆಡು-ನೋಡು ಮುಂತಾದ ಕ್ರಿಯಾ ಪ್ರಕೃತಿಗಳಿಂದ ಆಟ, ನೋಟ ಎಂಬ ಪದಗಳನ್ನು ಭಾಷಿಕರು ಸಹಜವಾಗಿ ಬಳಸುತ್ತಾರೆ. ಅವರಿಗೆ ಪದರಚನೆಯ ನಿಯಮಗಳು ಗೊತ್ತಿರದಿದ್ದರೂ ಆ ಬಳಕೆಯ ರೀತಿ ಗೊತ್ತಿರುತ್ತದೆ.

ಭಾಷೆಯಲ್ಲಿ ಪದರಚನೆಯ ನಿಯಮಗಳು ಕಾಲದಿಂದ ಕಾಲಕ್ಕೆ ರಚನೆ ಮತ್ತು ಸ್ವರೂಪದಲ್ಲಿ ಬದಲಾವಣೆಯಾಗುತ್ತದೆ. ಪ್ರಾಚೀನ ವ್ಯಾಕರಣಕಾರರ ಪ್ರಕಾರ ತದ್ಧಿತ ಪ್ರತ್ಯಯಗಳು ನಾಮಪ್ರಕೃತಿಗಳಿಗೆ ಮಾತ್ರ ಹತ್ತುತ್ತವೆ. ಈಗ ಕ್ರಿಯಾ ಪ್ರಕೃತಿಗಳಿಗೂ ಅನ್ಯದೇಶ್ಯ ನಾಮಪ್ರಕೃತಿಗಳಿಗೂ ಹತ್ತುತ್ತವೆ. ಉದಾ. ಓಡುಗ, ಓದುಗ, ನೋಡುಗ, ಸ್ಪಿನ್ನಿಂಗ್ ಎಂಬ ಪದಗಳ ರಚನೆಗಳೂ ಸಹಿತ ನಿಯಮಬದ್ಧವಾಗಿವೆ. ಇದರಂತೆ ನಾರಾಯಣರು 'ಇಗ', 'ಇಕೆ' ಪದಗಳು ಶಬ್ದಕೋಶ ಬೆಳವಣಿಗೆ ಹೇಗೆ ನೆರವಾಗುತ್ತವೆ. ಆ ಪ್ರತ್ಯಯಗಳಿಂದ ಸಾಧಿತವಾಗುವ ಪದಗಳ ಸ್ವರೂಪವನ್ನು ಹಾಗೂ ಭಾಷೆಯ ಆಂತರಿಕ ಸಾಧ್ಯತೆಯನ್ನು ಕುರಿತು ಅರ್ಥಪೂರ್ಣವಾಗಿ ವಿವೇಚಿಸಿದ್ದಾರೆ.

ಕನ್ನಡ ಪದಕೋಶವು ಹೊಸರೂಪಗಳಿಗಾಗಿ ಮುಖ್ಯವಾಗಿ ಇಂಗ್ಲಿಶ್ ಮತ್ತು ಸಂಸ್ಕೃತ್ ಭಾಷೆಗಳನ್ನು ಅವಲಂಬಿಸಿರುತ್ತದೆ. ಅವುಗಳ ಸಂಪರ್ಕದ ಪರಿಣಾಮವಾಗಿ

ಪದಕೋಶದಲ್ಲಿಯೂ ವ್ಯತ್ಯಾಸಗಳು ಕಂಡುಬರುತ್ತವೆ. ಆ ಅನ್ಯಭಾಷೆಯ ರೂಪಗಳು ಕನ್ನಡ ಪದರಚನೆಯ ನಿಯಮಗಳನ್ನು ಬಳಸಿ ಹೊಸರೂಪಗಳನ್ನು ರಚಿಸಿಕೊಳ್ಳುತ್ತವೆ. ಈ ರೂಪಗಳು ಹೆಸರಿಗೆ ಸಂಸ್ಕೃತವು, ಇಂಗ್ಲಿಶಿನವು; ಆದರೆ ಅವುಗಳ ರಚನೆ ಹಾಗೂ ಬಳಕೆಯ ಹೊಣೆ ಕನ್ನಡದ್ದು. ಹೀಗಾಗಿ ಅವು ಕನ್ನಡ ಪದಗಳೇ ನಾರಾಯಣರ ಈ ನಿಲುವು ಸ್ವಾಗತಾರ್ಹವಾಗಿದೆ.

ಕನ್ನಡದಲ್ಲಿ ಆಧುನೀಕರಣವು ವೈವಿಧ್ಯವನ್ನು, ಪ್ರಮಾಣೀಕರಣವು ಏಕರೂಪತೆಯನ್ನು ಸೃಷ್ಟಿಸುತ್ತಿದೆ. ಕನ್ನಡ ಪದಕೋಶ ಆಧುನೀಕರಣಕ್ಕೆ ಇಂಗ್ಲಿಶ್‌ನ್ನು, ಪ್ರಮಾಣೀಕರಣಕ್ಕೆ ಸಂಸ್ಕೃತವನ್ನು ಅಶ್ರಯಿಸಿದೆ. ಇದರಿಂದ ಶಬ್ದಕೋಶ ವಿಸ್ತರಣೆಯಾಗುತ್ತಿದೆ ನಿಜ. ಆದರೆ ಕನ್ನಡ ಜ್ಞಾನ ಮಾತ್ರ ಬೆಳೆಯುತ್ತಿಲ್ಲ. ಇಂಗ್ಲಿಶ್ ಪದಗಳನ್ನು ಸ್ವೀಕರಿಸುವಾಗ ಕನ್ನಡವು ರಚನೆಯ ದೃಷ್ಟಿಯಿಂದ ಕೆಲವು ಇಕ್ಕಟ್ಟುಗಳನ್ನು ಎದುರಿಸುತ್ತಿದೆ. ಉದಾ. ನೇಷನ್ ಎಂಬ ಪದಕ್ಕೆ ಕನ್ನಡದಲ್ಲಿ 'ನಾಡು' ಪದ ಬಳಕೆಯಲ್ಲಿದೆ. ಆದರೆ ನೇಷನ್ ಮೂಲದಿಂದ ಸಾಧಿತವಾಗುವ ನೇಷನಲ್, ನೇಷನಲಿಸಂ ಮುಂತಾದ ಪದಗಳಿಗೆ ಕನ್ನಡದಲ್ಲಿ ಪದಗಳಿಲ್ಲ. ಅದಕ್ಕೆ ನಾವು ವಿವರಣಾತ್ಮಕ ನೆಲೆಗೆ ಹೋಗಬೇಕು ಇಲ್ಲವೇ ಸಂಸ್ಕೃತ ಪದರಚನೆಯ ನಿಯಮಗಳನ್ನು ಅನ್ವಯಿಸಬೇಕು. ಕನ್ನಡವು ಈ ಮಾರ್ಗಗಳನ್ನೇ ಹಿಡಿದಿದೆ. ಈ ಲೇಖನದ ಉದ್ದಕ್ಕೂ ನಾರಾಯಣರು ಕನ್ನಡದ ಪದಕೋಶವು ಭಾಷಾಶಾಸ್ತ್ರದ ಆಧುನಿಕ ರಚನೆಯ ನಿಯಮಗಳನ್ನು ಒಳಗೊಳ್ಳುವಲ್ಲಿ ಅನುಸರಿಸುತ್ತಿರುವ ತಂತ್ರವನ್ನು ಕುರಿತು ವಿವೇಚಿಸಿದ್ದಾರೆ.

ವೃತ್ತಿ ಪದಕೋಶ ಎಂಬ ಲೇಖನದಲ್ಲಿ ಹೊಸಚಿಂತನೆಯನ್ನು ಮಂಡಿಸಿದ್ದಾರೆ. ಭಾಷೆಯ ಪದಕೋಶದಲ್ಲಿ ಹಲವು ತಜ್ಞವಲಯಗಳಿರುತ್ತವೆ. ಭಾಷಿಕರಲ್ಲಿ ಬೇರೆ ಬೇರೆ ವಲಯಗಳಿಗೆ ಸಂಬಂಧಿಸಿದವರು ಬಳಸುವ ವಿಶೇಷ ಪದಗಳು ಅಂತಹ ತಜ್ಞವಲಯಗಳಲ್ಲಿ ಕೆಲವು. ಆ ವೃತ್ತಿಪದಗಳು ಆಯಾವೃತ್ತಿಯ ಸಂಬಂಧದಲ್ಲಿ ಮಾತ್ರ ಬಳಕೆಯಾಗುತ್ತವೆ. ಹೀಗಾಗಿ ಸಾಮಾನ್ಯ ಪದಕೋಶದಲ್ಲಿ ವೃತ್ತಿಪದಗಳು ಪ್ರವೇಶ ಪಡೆಯುವ ಸಾಧ್ಯತೆ ಕಡಿಮೆ. ಒಂದು ವೇಳೆ ಹಾಗೆ ಬಂದು ಸೇರಿದರೂ ಅರ್ಥವ್ಯತ್ಯಾಸ ಹೊಂದುತ್ತವೆ. ಅಭಿದಾರ್ಥದಿಂದ ಲಕ್ಷಣಾರ್ಥದೆಡೆಗೆ ಹೊರಳಿರುತ್ತವೆ. ಭಾಷಾಧ್ಯಯನ ಕಾರರು ವೃತ್ತಿಪದಗಳನ್ನು ಸಂಗ್ರಹಿಸುವ ಅಗತ್ಯತೆ ಇದೆ ಎಂದು ಸೂಚಿಸಿದ್ದಾರೆ. ಭಾಷೆಯ ಪದಕೋಶದ ಬೆಳವಣಿಗೆಯ ದೃಷ್ಟಿಯಿಂದ ಅದರ ಸಮತೋಲನದಲ್ಲಿ ಆಗುವ ಏರುಪೇರುಗಳು ಹಾಗೂ ಅದರ ಪದರಚನೆಯ ನಿಯಮಗಳಲ್ಲಿ ಆಗುವ ಪಲ್ಲಟಗಳು ಕುತೂಹಲಕಾರಿಯಾಗಿವೆ. ಭಾಷೆಯ ಚರಿತ್ರೆ ಬರೆಯುವವರಿಗೆ ನಾರಾಯಣರ ಈ ಬರೆಹ ಮಹತ್ವದ ಒಳನೋಟವನ್ನು ಕೊಡುತ್ತದೆ.

ಪದಕೋಶದ: ಎರಡು ಬಗೆಗಳು ಎಂಬ ಲೇಖನದಲ್ಲಿ ಪದಗಳ ಬಳಕೆಯ ಕ್ರಮವನ್ನು ಆಧರಿಸಿ ವಿವರಿಸುತ್ತಾರೆ. ಭಾಷಿಕರು ಪದಗಳನ್ನು ಹಾಗೂ ಭಾಷೆಯ ರಚನೆಯನ್ನು

ತಿಳಿದುಕೊಳ್ಳಬೇಕಾದರೆ ನಾಲ್ಕು ಭಾಷಾಕೌಶಲ್ಯಗಳನ್ನು(ಆಲಿಸುವ, ಮಾತು, ಓದು, ಬರೆಹ) ಅಭಿವೃದ್ಧಿಪಡಿಸಿಕೊಳ್ಳಬೇಕಾಗುತ್ತದೆ. ಭಾಷಿಕರು ಆಡುವ ಎಷ್ಟೋ ಶಬ್ದಗಳನ್ನು ಬರೆಯುವುದಿಲ್ಲ, ಬರೆದು, ಓದಿದ ಎಷ್ಟೋ ಶಬ್ದಗಳನ್ನು ಮಾತನಾಡುವುದಿಲ್ಲ. ಹೀಗಾಗಿ ನಾರಾಯಣರು ಪದಕೋಶದ ಬಳಕೆಯಲ್ಲಿ ಎರಡು ಮುಖ್ಯ ಬಗೆಗಳನ್ನು ಗುರುತಿಸಿದ್ದಾರೆ. ಕ್ರಿಯಾತ್ಮಕ ಪದಕೋಶ ಮತ್ತು ನಿಷ್ಕ್ರಿಯಾತ್ಮಕ ಪದಕೋಶ. ಭಾಷಿಕನೊಬ್ಬ ತಾನೇ ಬಳಸುವ(ಮಾತನಾಡಲು ಮತ್ತು ಬರೆಯಲು) ಪದಕೋಶ ಕ್ರಿಯಾತ್ಮಕ. ತಾನೇ ಬಳಸದಿದ್ದರೂ ಇತರ ಮೂಲಗಳಿಂದ ಬಳಕೆಯಾದಾಗ ಗ್ರಹಿಕೆಗೆ ಒದಗುವ ಪದಕೋಶ ನಿಷ್ಕ್ರಿಯಾತ್ಮಕ. ಪದಕೋಶಕ್ಕೆ ಸಂಬಂಧಿಸಿದ ಮುಖ್ಯ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಪದಕೋಶದಲ್ಲಿ ನಡೆಯುವ ಆಂತರಿಕ ಚಲನೆಯನ್ನು ತಿಳಿದುಕೊಳ್ಳಲು ಆ ಬಗೆಗಳಿಂದ ಸಾಧ್ಯವಾಗುತ್ತದೆ. ಆ ಬಗ್ಗೆ ನಾರಾಯಣರಿಗೆ ಸ್ಪಷ್ಟ ಕಲ್ಪನೆಯಿದೆ ಎಂದೇ ಹೇಳಬೇಕಾಗುತ್ತದೆ.

ನಾರಾಯಣರು ಒಳ್ಳೆಯ ಚಿಂತಕರು ಎಂಬುದಕ್ಕೆ **ಪದಕೋಶದಲ್ಲಿ ಒಳಚಲನೆ** ಎಂಬ ಲೇಖನವನ್ನು ನೋಡಬಹುದು. ಶಬ್ದಕೋಶದಲ್ಲಿ ಪದಗಳು(ದೇಶ್ಯ ಪದಗಳಾಗಲಿ, ಅನ್ಯದೇಶ್ಯ ಪದಗಳಾಗಲಿ) ಈಗಿರುವ ಅರ್ಥದ ಜೊತೆಗೆ ಇನ್ನೊಂದು ಅರ್ಥವನ್ನು ಕೊಡುತ್ತವೆ. ಆ ಪ್ರಕ್ರಿಯೆಗೆ ಒಳಚಲನೆ ಎಂದು ಕರೆದಿರುವುದು ಸೂಕ್ತವಾಗಿದೆ. ಕೃಷಿ ಕ್ರಿಯೆಯನ್ನು ಸೂಚಿಸುವ ಕೃಷಿ, ಬೆಳೆ ಮುಂತಾದ ಪದಗಳ ಕೃಷಿಗೆ ಸಂಬಂಧಪಡದ ಇತರ ಸಂದರ್ಭಗಳಲ್ಲಿಯೂ ಬಳಕೆಯಾಗುತ್ತವೆ. ಉದಾ. ೧. ಸಾಹಿತ್ಯ ಕ್ಷೇತ್ರದಲ್ಲಿ ಅವರು ಕೃಷಿ ಮಾಡಿದ್ದಾರೆ. ೨. ಮುಖದ ಮೇಲೆ ಗಡ್ಡ ಹುಲುಸಾಗಿ ಬೆಳೆದಿದೆ. ಹೀಗೆ ವಾಚ್ಯಾರ್ಥದಿಂದ ಲಕ್ಷಣಾರ್ಥದಲ್ಲಿ ಪದಗಳು ಚಲಿಸತೊಡಗಿ ಕ್ರಮೇಣ ಅವು ಸಾಮಾನ್ಯ ಪದಕೋಶದಲ್ಲಿ ಉಳಿದುಕೊಂಡಿರುತ್ತವೆ. ಎರವಲು ಪದಗಳಲ್ಲಿಯೂ ಈ ಒಳಚಲನೆ ಸಾಧ್ಯ. ಉದಾಹರಣೆಗೆ ಗಣಕದ ಪದಕೋಶದಲ್ಲಿ ಬಳಸುವ 'ಮೆನು' ಉಪಹಾರ ಗೃಹದಲ್ಲಿ 'ತಿನಿಸುಗಳ ಪಟ್ಟಿ' ಎಂಬರ್ಥದಲ್ಲಿ ಬಳಕೆಯಾಗುತ್ತದೆ. 'ಪದಕೋಶದಲ್ಲಿ ನಡೆಯುವ ಈ ಎರಡೂ ಬಗೆಯ ಒಳಚಲನೆಯಲ್ಲಿ ಪದಗಳ ಸಂಖ್ಯೆಯಲ್ಲಿ ಹೆಚ್ಚಳವಾಗದಿದ್ದರೂ ಅರ್ಥ ಸಂಬಂಧದಲ್ಲಿ ವ್ಯತ್ಯಾಸಗಳಾಗುತ್ತವೆ. ಭಾಷಿಕರು ಈ ವ್ಯತ್ಯಾಸಗಳಿಗೆ ಅವಶ್ಯವಾದ ಬಳಕೆಯ ಹೊಂದಾಣಿಕೆಗಳಿಗೆ ಸಿದ್ಧವಾಗಿರಬೇಕಾಗುತ್ತದೆ.' ನಾರಾಯಣರ ಈ ಸೂಚನೆ ಕನ್ನಡ ಭಾಷಾಭಿವೃದ್ಧಿ ದೃಷ್ಟಿಯಿಂದ ಗಮನಾರ್ಹವಾಗಿದೆ.

ಕನ್ನಡ ಪದಕೋಶ ಎಂಬ ಲೇಖನದಲ್ಲಿ ಭಾಷಿಕರು ವೈಯಕ್ತಿಕ ಮತ್ತು ಸಾಮಾಜಿಕ ಕಾರಣಗಳಿಂದಾಗಿ ಪದಗಳ ಅರ್ಥ ವ್ಯತ್ಯಾಸಗಳ ಕ್ರಿಯೆಯನ್ನು ಹೇಳಿದ್ದಾರೆ. ಭಾಷಿಕರಿಗೆ ಅನ್ಯಭಾಷೆಯ ಸಂಪರ್ಕ ಬಂದಾಗ, ಈ ರೀತಿಯ ಬೆಳವಣಿಗೆಗಳು ನಡೆಯುತ್ತವೆ. ಪದಕೋಶದ ಭಾಷಿಕರು ಎರಡೂ ರೀತಿಯ ಪದಗಳನ್ನು ಸಂದರ್ಭಕ್ಕೆ ತಕ್ಕಂತೆ ಬಳಸುತ್ತಾರೆ. ಉದಾ. 'ನೀರು' ಪದ ಸಂವಾದಿಯಾಗಿ ಹಳ್ಳ, ಕೆರೆ, ನದಿ ಮುಂತಾದ

ಪದಗಳ ನೀರಿನ ಸಂಬಂಧದಲ್ಲಿ ಬಳಕೆಯಾಗುತ್ತವೆ. ಈಜು, ಕದಡು ಮುಂತಾದ ಪದಗಳು ನೀರಿನ ಸಂಬಂಧದಲ್ಲಿ ಬಳಕೆಯಾಗುವುದಿಲ್ಲ. ನೀರಿಗೆ ಸಂಬಂಧ ಪಡದ ಹಲವು ಪ್ರಸಂಗಗಳಲ್ಲಿಯೂ ಬಳಸುತ್ತಾರೆ. ಅದನ್ನು ನಾರಾಯಣರು ಉದಾಹರಣೆ ಸಮೇತವಾಗಿ ಸ್ಪಷ್ಟಪಡಿಸುತ್ತಾರೆ. ತಾತ್ಪರ್ಯವೆಂದರೆ ಪದಕೋಶವೆಂದರೆ ಕೇವಲ ಸೀಮಿತ ಪದಗಳ ಸಂಗ್ರಹ ಅಲ್ಲವೆಂಬುದೇ ನಾರಾಯಣರ ಚಿಂತನೆಯ ತಿರುಳಾಗಿದೆ. ಈ ದೃಷ್ಟಿಯಿಂದ ಈ ಲೇಖನಕ್ಕೆ ಒಂದು ಬೆಲೆಯಿದೆ.

ಪರಿಭಾಷಿಕ ಪದಗಳ ಚಲನಶೀಲತೆಯನ್ನು ಕುರಿತು **ಪಾರಿಭಾಷಿಕ ಪದಗಳು** ಎಂಬ ಲೇಖನದಲ್ಲಿ ಅರ್ಥಪೂರ್ಣವಾಗಿ ವಿವರಿಸಿದ್ದಾರೆ. ಪ್ರತಿಯೊಂದು ಅಧ್ಯಯನದ ವಿಷಯಕ್ಕೂ ಅದರದ್ದೆ ಆದ ಪಾರಿಭಾಷಿಕ ಪದಕೋಶ ಇರುತ್ತದೆ. ಒಂದು ಪಾರಿಭಾಷಿಕ ಪದ ಒಂದು ಅಧ್ಯಯನ ಕ್ಷೇತ್ರದಿಂದ ಇನ್ನೊಂದು ಅಧ್ಯಯನ ಕ್ಷೇತ್ರಕ್ಕೆ ದಾಟಿದಾಗ ಅದು ತನ್ನ ಮೂಲಾರ್ಥದ ಜೊತೆಗೆ ಇನ್ನಷ್ಟು ಅರ್ಥಛಾಯೆಗಳನ್ನು ಪಡೆದುಕೊಳ್ಳುತ್ತದೆ. ಉದಾ. 'ಕ್ಯಾನ್ಸರ್' ಎಂಬ ಪದವನ್ನು ವೈದ್ಯನೊಬ್ಬ ಬಳಸಿದಾಗ ಅದಕ್ಕೆ 'ಒಂದು ವಿಧದ ರೋಗ' ಎಂಬ ಅರ್ಥವಿರುತ್ತದೆ. ಇತರ ಭಾಷಿಕ ಸಂದರ್ಭಗಳಲ್ಲಿ ಬಳಕೆಯಾದಾಗ 'ಅಪಾಯಕಾರಿ ಬೆಳವಣಿಗೆ' ಎಂಬರ್ಥ ಬರುತ್ತದೆ.

ಈ ಚಿಕ್ಕ ಉದಾಹರಣೆಯ ಮೂಲಕ ನಾರಾಯಣರು ಪಾರಿಭಾಷಿಕ ಪದಗಳ ಸ್ವರೂಪ ಕುರಿತು ಮೂರು ಸಂಗತಿಗಳನ್ನು ಸ್ಪಷ್ಟಪಡಿಸುತ್ತಾರೆ. ೧. ಭಾಷಿಕರು ಪಾರಿಭಾಷಿಕ ಪದಗಳನ್ನು ಬಳಸುವಾಗ ಹೊಸಪದಗಳನ್ನು ರೂಪಿಸುತ್ತಿಲ್ಲ. ಅದರ ಬದಲಿಗೆ ಆ ಪದಗಳಿಗೆ ಹೊಸ ಅರ್ಥ ಸಾಹಚರ್ಯವನ್ನು ನೀಡುತ್ತಾರೆ. ೨. ಒಂದು ಅಧ್ಯಯನ ಕ್ಷೇತ್ರದ ಪದಗಳು ಇನ್ನೊಂದು ಅಧ್ಯಯನ ಕ್ಷೇತ್ರಕ್ಕೆ ವರ್ಗಾವಣೆಯಾಗುತ್ತವೆ. ಉದಾ. ಸಾಹಿತ್ಯ ವಿಮರ್ಶೆಯ ಪದಗಳು ಭಾಷಾಶಾಸ್ತ್ರಕ್ಕೆ ಹೀಗೆ ಹಲವು ರೀತಿಯ ವರ್ಗಾವಣೆ ನಡೆಯುತ್ತವೆ. ಆಗ ಅರ್ಥವ್ಯತ್ಯಾಸಗಳಾಗುತ್ತವೆ. ೩. ಒಂದು ಅಧ್ಯಯನ ಕ್ಷೇತ್ರದ ಪಾರಿಭಾಷಿಕ ಪದಕ್ಕೆ ವಾಚ್ಯಾರ್ಥ ಮಾತ್ರ ಇರುತ್ತದೆ. ಆದರೆ ಅದು ಸಾಮಾನ್ಯ ಪದಕೋಶಕ್ಕೆ ಬಂದಾಗ ಆ ಪದಕ್ಕೆ ವಾಚ್ಯಾರ್ಥ ಮುಖ್ಯವಾಗಿರುವುದಿಲ್ಲ. ಅದಕ್ಕೊಂದು ಲಕ್ಷಣಾರ್ಥವೂ ಪ್ರಾಪ್ತವಾಗುತ್ತದೆ. ಹೀಗೆ, ಪಾರಿಭಾಷಿಕ ಪದಗಳ ಚಲನಶೀಲತೆಯಿಂದ ಒಂದು ಭಾಷೆಯ ಬೆಳವಣಿಗೆಯ ದಿಕ್ಕು ಹಾಗೂ ಪ್ರವೃತ್ತಿಗಳು ಗೋಚರವಾಗುತ್ತವೆ. ಆ ಒಂದು ಉದಾಹರಣೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಅದರ ಹಿಂದಿರುವ ಭಾಷೆಯ ಚಲನಶೀಲತೆಯನ್ನು ಗುರುತಿಸಿದ ರೀತಿ ಅಸದೃಶ್ಯವಾದುದು. ಇಲ್ಲೆಲ್ಲ ನಾರಾಯಣರ ಚಿಂತನಕ್ರಮ ನಿಸ್ಸಂಶವಾಗಿ ಮೌಲಿಕವಾದುದು; ಏಕಪ್ರಕಾರವಾಗಿ ಸ್ವೀಕಾರ್ಹವಾಗಿರುತ್ತದೆ.

ಡಿ.ಎಲ್. ನರಸಿಂಹಾಚಾರ್ ಅವರು ಕಿಟೆಲ್ ಕೋಶದ ಮಿತಿಯನ್ನು ಹೇಳುತ್ತ ಕನ್ನಡದ ಚಾರಿತ್ರಿಕ ಬೆಳವಣಿಗೆಯನ್ನು ತಿಳಿಸುವ ಹೊಸನಿಘಂಟು ಅಗತ್ಯ ಎಂಬ

ವಾದವನ್ನು 'ಕನ್ನಡಕ್ಕೆ ಹೊಸನಿಘಂಟು' ಎಂಬ ಲೇಖನದಲ್ಲಿ ಪ್ರತಿಪಾದಿಸಿದರು. ಆ ಲೇಖನದಲ್ಲಿ ಅವರು ಕೊಟ್ಟ ಸಲಹೆಗಳೇ ಪರಿಷತ್ತಿನ ನಿಘಂಟುಗಳಿಗೆ ನಾಂದಿಯಾಯಿತು. ಈಗ ಪರಿಷತ್ತಿನ ಕನ್ನಡ-ಕನ್ನಡ ನಿಘಂಟುವಿನ ಎಂಟು ಸಂಪುಟಗಳು ಪ್ರಕಟವಾಗಿವೆ. ಆ ನಿಘಂಟುಗಳ ಮಿತಿಗಳನ್ನು ಕುರಿತು ನಾರಾಯಣರು **ಹೊಸಗನ್ನಡಕ್ಕೆ ಒಂದು ಹೊಸನಿಘಂಟು** ಎಂಬ ಲೇಖನದಲ್ಲಿ ಹೇಳಿದ್ದಾರೆ. ಕ.ಸಾ.ಪ. ನಿಘಂಟುಗಳು ಪ್ರಾಚೀನ ಲಿಖಿತ ಆಕರಗಳನ್ನು ಮಾತ್ರ ಒಳಗೊಂಡಿವೆ. ಹೊಸಗನ್ನಡ ಆಕರಗಳನ್ನು, ಆಡುರೂಪಗಳನ್ನು ಬಳಸಿಕೊಂಡಿಲ್ಲ. ಅಲ್ಲದೆ ಏಕೀಕರಣದ ನಂತರ ಕನ್ನಡದ ಬಳಕೆ ಹೆಚ್ಚಾಗಿದೆ. ಆಡಳಿತ, ಶಿಕ್ಷಣ ಮತ್ತು ಮಾಧ್ಯಮಗಳಲ್ಲಿ ಕನ್ನಡದ ಬಳಕೆ ವ್ಯಾಪಕವಾಗಿ ಒದಗಿ ಬಂದಿದೆ. ಕನ್ನಡದ ಹಲವಾರು ಭಾಷಾಪ್ರಭೇದಗಳು ಈಗ ಮುಖಾಮುಖಿ ಯಾಗುತ್ತಿವೆ. ಈ ಎಲ್ಲ ಕಾರಣಗಳಿಂದಾಗಿ ಕನ್ನಡಕ್ಕೆ ಇನ್ನೊಂದು ನಿಘಂಟುವಿನ ಅವಶ್ಯಕತೆಯಿದೆ. ಈ ಹೊಸ ನಿಘಂಟು ಹೇಗಿರಬೇಕು ಎಂಬುದರ ಬಗ್ಗೆ ಬರೆಯುತ್ತ 'ಈ ಹೊಸನಿಘಂಟು ಕನ್ನಡದ ಹೊಸಬಳಕೆಗಳನ್ನು ಒಳಗೊಳ್ಳಬೇಕು. ಉಪಭಾಷಿಕ ಪದಗಳನ್ನು ದಾಖಲಿಸಬೇಕು. ಬಳಕೆಯಲ್ಲಿರುವ ಪದಗಳ ಹೊಸ ಸಾನ್ನಿಧ್ಯದಲ್ಲಿ ಪಡೆದು ಕೊಳ್ಳುತ್ತಿರುವ ಅರ್ಥವೈವಿಧ್ಯವನ್ನು ಗುರುತಿಸಬೇಕು. ಅಂದರೆ ಇದೊಂದು ಚಾರಿತ್ರಿಕ ನಿಘಂಟಲ್ಲ. ಕನ್ನಡದ ಸದ್ಯದ ಚಲನಶೀಲತೆಯನ್ನು ಹಿಡಿದಿಡುವ ನಿಘಂಟಾಗಬೇಕು'. ಹೊಸನಿಘಂಟು ಕುರಿತು ಅವರ ಈ ಸುಪ್ರಸಿದ್ಧ ಹೇಳಿಕೆ ಬಂದಿರುವುದು ಇದೇ ಲೇಖನದಲ್ಲಿ. ಪದಗಳ ಚಲನಶೀಲತೆ ಮತ್ತು ಬಳಕೆಯಿಂದ ಹೊಸನಿಘಂಟನ್ನು ಹೇಗೆ ರೂಪಿಸಬೇಕಾಗಿದೆ ಎಂಬುದನ್ನು ಸೂಕ್ಷ್ಮವಾಗಿ ಪ್ರತಿಪಾದಿಸಿದ್ದಾರೆ.

ಕ.ಸಾ.ಪ. ನಿಘಂಟುವಿನ ಎಂಟು ಸಂಪುಟಗಳು ಈಗ ಪ್ರಕಟವಾಗಿವೆ. ಆದರೆ ಒಂದರ್ಥದಲ್ಲಿ ಈ ಯೋಜನೆ ಮುಗಿದಿಲ್ಲ. ಪರಿಷ್ಕಾರಗೊಳ್ಳಬೇಕಾಗಿದೆ. ಅದಕ್ಕಾಗಿ ನಾರಾಯಣರು ಹೊಸದಾರಿಯನ್ನು ಹುಡುಕಿದ್ದಾರೆ. ಅದೆಂದರೆ ಲಭ್ಯವಿರುವ ಆಧುನಿಕ ತಾಂತ್ರಿಕ ಸೌಲಭ್ಯಗಳನ್ನು ಬಳಸಿಕೊಳ್ಳುವುದು. ಇದರಿಂದ ಲಭ್ಯವಿರುವ ಮಾಹಿತಿಯನ್ನು ಬೇಕೆಂಬ ರೀತಿಯಲ್ಲಿ ವಿಶ್ಲೇಷಿಸಿದರೆ ನಿಘಂಟು ರಚನೆ ಸುಲಭವಾಗುತ್ತದೆ. ಕನ್ನಡವನ್ನು ಹೊಸ ಅವಕಾಶಗಳತ್ತ ಒಯ್ಯಲು ಸಜ್ಜುಗೊಳಿಸಿದಂತಾಗುತ್ತದೆ. ಈ ಕುರಿತು **ಕನ್ನಡ-ಕನ್ನಡ ನಿಘಂಟಿನ ಕಂಪ್ಯೂಟರೀಕರಣ** ಎಂಬ ಲೇಖನದಲ್ಲಿ ಮೌಲಿಕ ಸಲಹೆಗಳನ್ನು ಕೊಟ್ಟಿದ್ದಾರೆ. ಈಗ ಪ್ರಕಟವಾಗಿರುವ ನಿಘಂಟುಗಳ ಮಾಹಿತಿಯನ್ನು ಯಥಾರೂಪದಲ್ಲಿ ದಾಖಲು ಮಾಡುವುದು. ನಂತರ ಆ ಮಾಹಿತಿ ಕಣಜವನ್ನು ಕಾಂಪ್ಯಾಕ್ಟ್ ಡಿಸ್ಕನಲ್ಲಿ ಸಂಗ್ರಹಿಸ ಬೇಕಾಗುತ್ತದೆ. ಬೇಕೆನಿಸಿದಾಗ ಅದನ್ನು ಕಂಪ್ಯೂಟರ್ ಪರದೆಯ ಮೇಲೆ ಓದಬಹುದು, ಮುದ್ರಿತರೂಪದಲ್ಲಿಯೂ ಪಡೆಯಬಹುದು ಮತ್ತು ಎಲ್ಲ ಬಗೆಯ ಪರಿಷ್ಕರಣ ಕಾರ್ಯವನ್ನು ಆ ಮಾಹಿತಿ ಕಣಜದಲ್ಲಿಯೇ ಮಾಡಬಹುದು. ಹೊಸಪದ ಗಳನ್ನು ಸೇರಿಸುವುದು, ಅರ್ಥ ಹೇಳುವುದು, ವಿವರ ಬದಲಾಯಿಸುವುದು ಇತ್ಯಾದಿ.

ಅಲ್ಲಿ ಅಂತಸ್ಥವಾಗಿರುವ ಮಾಹಿತಿ ಸರಣಿಯನ್ನು ಸುಲಭವಾಗಿ ಹೆಕ್ಕಿ ತೆಗೆಯುವುದು (ಕ್ರಿಯಾಪದಗಳು, ಎರವಲು ಪದಗಳು ಇತ್ಯಾದಿ) ಮತ್ತು ಆ ನಿಘಂಟುಗಳನ್ನು ಪರಿಷ್ಕರಿಸುತ್ತ ಹೊಸ ನಿಘಂಟುಗಳನ್ನು ಸುಲಭವಾಗಿ ರೂಪಿಸಿಕೊಳ್ಳಬೇಕಾಗಿದೆ. ಅದರಿಂದ ಕನ್ನಡ ಭಾಷೆಯ ಅಧ್ಯಯನಕ್ಕೆ ಹೊಸ ಸಾಧ್ಯತೆಗಳನ್ನು ಒದಗಿಸಿ ಕೊಟ್ಟಂತಾಗುತ್ತದೆ. ಇದರಿಂದ ಶ್ರಮ, ವೇಳೆ, ಉಳಿತಾಯವಾಗುತ್ತದೆ. ಕನ್ನಡ ಸಾಹಿತ್ಯ ಪರಿಷತ್ತು ನಾರಾಯಣರ ಈ ಸಲಹೆಗಳನ್ನು ಗಮನಿಸಿ ಆ ನಿಘಂಟುಗಳನ್ನು ಪರಿಷ್ಕರಿಸ ಬೇಕಾಗಿದೆ.

೪

ನಾರಾಯಣರು ಅನೇಕ ಹೊಸಪದಗಳನ್ನು ಟಂಕಿಸಿ, ಚಲಾವಣೆಗೆ ತಂದು ಕನ್ನಡ ಶಬ್ದ ಭಂಡಾರದ ವಿಕಾಸಕ್ಕೂ ಕಾರಣರಾಗಿದ್ದಾರೆ.

Linguistics - ಭಾಷಾಧ್ಯಯನ

Migrater - ವಲಸಿತ(ವಲಸೆ ಹೋದ)

Morphology - ಪದರಚನೆಶಾಸ್ತ್ರ

Phonology - ಧ್ವನಿರಚನೆಶಾಸ್ತ್ರ

Research - ಅಧ್ಯಯನ

Research journal - ಅಧ್ಯಯನ ಪತ್ರಿಕೆ

Research department - ಅಧ್ಯಯನ ವಿಭಾಗ

Research Paper - ಅಧ್ಯಯನ ಪತ್ರಿಕೆ

Word phrase - ಪದಪುಂಜ

ಅದರಂತೆ ಗ್ರಂಥಸಂಪಾದನೆಗೆ ಸಂಬಂಧಪಟ್ಟಂತೆ 'ಶುದ್ಧಪಾಠ'ಕ್ಕೆ ಸಂವಾದಿಯಾಗಿ 'ಒಪ್ಪಿತ ಪಾಠ', 'ಅಳತೆಗೋಲು' ಸಂವಾದಿಯಾಗಿ 'ಮಾಪನಪಟ್ಟಿ', 'ಕನ್ನಡಿಗರ ಇಂಗ್ಲಿಶ್' ಸಂವಾದಿಯಾಗಿ 'ಕಂಗ್ಲಿಶ್' ಅದರಂತೆ 'ಕೋಶಿಯ ಪದರಚನೆ' ಮುಂತಾದ ಪದಗಳನ್ನು ಅವರು ಕಮ್ಮಟಿಸಿದ್ದಾರೆ. ಈ ಪದಗಳು, ಪದಪುಂಜಗಳು ಈಗ ಚಲಾವಣೆಯಲ್ಲಿವೆ; ಬಳಕೆಗೆ ಬಂದಿವೆ. ಅವು ಕೇವಲ ಅನುವಾದಗಳಲ್ಲ, ಪ್ರಬುದ್ಧ ಭಾಷೆಗೆ ಸರಿಸಮಾನವಾಗಿ ನಮ್ಮ ಸಾಮಗ್ರಿಗಳ ಮೂಲಕ ನಡೆಯುವ ಹೊಸಸೃಷ್ಟಿಗಳವು. ಅದು ಕನ್ನಡ ಭಾಷೆಯ ಆಧುನೀಕರಣ ವಿಧಾನಗಳಲ್ಲಿ ಒಂದಾಗಿದೆ. ಹೊಸಪದಗಳನ್ನು ಟಂಕಿಸಿ, ಬಳಕೆಗೆ ಬರುವಂತೆ ಮಾಡಿ ಮಾತೃಭಾಷೆಯ ಶಬ್ದಭಂಡಾರದ ಬೆಳವಣಿಗೆ ಮಾಡುವುದ ಆಧುನೀಕರಣದ ಲಕ್ಷಣವಾಗಿದೆ. ನಾರಾಯಣರು ಈ ಕಾರ್ಯವನ್ನು ಯಶಸ್ವಿಯಾಗಿ ಪೂರೈಸಿದ್ದಾರೆ. ಪ್ರಜಾವಾಣಿ ದಿನಪತ್ರಿಕೆಯಲ್ಲಿ ಎರಡು ವರ್ಷಗಳ ಕಾಲ ಪದಸಂಪದ ಎಂಬ ಅಂಕಣದಲ್ಲಿ ಕನ್ನಡ ಪದಗಳ ರಾಚನಿಕ ವ್ಯತ್ಯಾಸವನ್ನು ರಚನೆ ಮತ್ತು ಬಳಕೆಯ ಸಾಮಾಜಿಕ ನೆಲೆಯಲ್ಲಿ ಅವರು ವಿವರಿಸಿದ ರೀತಿ ತುಂಬ ಪರಿಣಾಮಕಾರಿಯಾಗಿದೆ.

ೞ

ಕನ್ನಡ ನಿಘಂಟುವಿಗೆ ನಾರಾಯಣರ ಕಾಣಿಕೆ ಮೌಲಿಕವಾದುದು. ಅವರು ತಮ್ಮ ಚಿಂತನೆಗಳಿಂದ ಕೋಶರಚನೆಗೆ ಹೊಸದೊಂದು ದಾರಿ ತೆರೆದದ್ದು ಐತಿಹಾಸಿಕವಾಗಿ ಬಹಳ ಮುಖ್ಯವಾಗಿದೆ. ಆ ಬಗ್ಗೆ ಅವರ ಬರೆಹಗಳು ಆ ಕ್ಷೇತ್ರದಲ್ಲಿ ಪ್ರಥಮವಾಗಿ ಬಂದುವಾಗಿದ್ದು ಭಾಷಾಧ್ಯಯನಕಾರರಿಗೆ ಹೊಸ ದಿಗಂತವನ್ನು ತೋರಿಸಿದವು. ಹೊಸಗನ್ನಡ ಕೋಶಗಳ ರಚನೆಗೆ ನಾರಾಯಣರು ಕೆಲವು ಉಪಕರಣಗಳನ್ನು ಕೊಟ್ಟರು. ಇಂದಿಗೂ ಹೊಸ ನಿಘಂಟುಗಳನ್ನು ರಚಿಸುವವರು ಅವರ ಬರೆಹಗಳಿಂದಲೇ ಸ್ಫೂರ್ತಿಯನ್ನೂ ಸೂಚನೆಯನ್ನು ಪಡೆಯಬೇಕಾಗಿದೆ ಎಂಬ ಮಾತು ಬಹುಮಟ್ಟಿಗೆ ನಿರ್ವಿವಾದವಾಗಿದೆ. ಅಲ್ಲಿ ಅವರು ಮಾಡಿದ ವಿವೇಚನೆಯನ್ನು ಮುಂದಿನವರು ಮುಂದುವರಿಸಬೇಕಾಗಿದೆ, ಬೆಳೆಸಬೇಕಾಗಿದೆ ಅದುವೇ ನಾರಾಯಣರಿಗೆ ಕೊಡುವ ನಿಜವಾದ ಗೌರವವಾಗಿದೆ.

ಆಕರಗ್ರಂಥಗಳು

೧. ನಾರಾಯಣ ಕೆ.ವಿ., ೧೯೯೮, ಭಾಷೆಯ ಸುತ್ತಮುತ್ತ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು.

೨. ನಾರಾಯಣ ಕೆ.ವಿ. ೨೦೦೧, ಮತ್ತೆ ಭಾಷೆಯ ಸುತ್ತಮುತ್ತ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೯೦

ಭಾರತೀಯ ಕಾವ್ಯಶಾಸ್ತ್ರ ಪರಿಭಾಷೆ : ಒಂದು ವಿವೇಚನೆ

ಭಾಷೆಯ ಬೆಳವಣಿಗೆಯಲ್ಲಿ ಕೋಶಗಳು ಪ್ರಮುಖ ಪಾತ್ರವಹಿಸುತ್ತವೆ. ಶಬ್ದಗಳ ಮೂಲವನ್ನು ಶೋಧಿಸಿ ಅವುಗಳ ಶಾಸ್ತ್ರೀಯ ನಿರೂಪಣೆಯನ್ನು ಅವು ಮಾಡಿಕೊಡುತ್ತವೆ. ಆನ್ವಯಿಕ ಭಾಷಾವಿಜ್ಞಾನದಲ್ಲಿ 'ನಿಘಂಟುಶಾಸ್ತ್ರ' ಎಂಬ ಪ್ರತ್ಯೇಕ ಶಾಖೆ ಆರಂಭವಾಗಿದೆ. ಇಂಗ್ಲೀಷಿನ 'Lexicology' ಸಂವಾದಿಯಾಗಿ 'ನಿಘಂಟುಶಾಸ್ತ್ರ', 'Lexicography' ಸಂವಾದಿಯಾಗಿ 'ನಿಘಂಟುವಿಜ್ಞಾನ' ಎಂಬ ಪದಗಳು ಕನ್ನಡದಲ್ಲಿ ಬಳಕೆಯಲ್ಲಿವೆ. ನಿಘಂಟಿನಲ್ಲಿರುವ ಮುಖ್ಯ ನಮೂದುಗಳಿಗೆ 'Lexeme' ಎಂಬ, ಕನ್ನಡದಲ್ಲಿ ಅದಕ್ಕೆ ಸಂವಾದಿಯಾಗಿ 'ನಿಘಂಟಿಮ' ಎಂಬ ರೂಪ ಬಳಕೆಯಾಗಿದೆ. ನಿಘಂಟು ಎಂದರೆ ಸಾಮಾನ್ಯವಾಗಿ ನಿಘಂಟಿಮಗಳ (ಮುಖ್ಯ ನಮೂದು) ವಿವೇಚನೆಯೇ ಆಗಿದೆ. ನಿಘಂಟುವಿನ ಅರ್ಥವನ್ನು ಸ್ಫುಟವಾಗಿ ಹೇಳುವುದಾದರೆ, ಒಂದು ಭಾಷಾ ಸಮುದಾಯದ ಮೂಲರೂಪ ಮತ್ತು ಸಮಸ್ತ ರೂಪಗಳನ್ನು ಸಂಗ್ರಹಿಸಿ, ವ್ಯವಸ್ಥಿತವಾಗಿ ಸಂಯೋಜಿಸಿ ಅವುಗಳ ಉಚ್ಚಾರಣೆ, ವ್ಯಾಕರಣ ವರ್ಗ, ಅರ್ಥ, ಪ್ರಯೋಗ, ವ್ಯುತ್ಪತ್ತಿ ಇತ್ಯಾದಿಗಳನ್ನು ಉಲ್ಲೇಖಿಸಿ ಪದಗಳನ್ನು ಅಕಾರಾದಿಯಾಗಿ ಸಂಯೋಜಿಸಿರುವ ಕೃತಿಯಾಗಿದೆ. ನಿಘಂಟುಗಳ ರಚನೆ, ಅರ್ಥವ್ಯಾಪ್ತಿ, ವೈವಿಧ್ಯತೆ ಹಾಗೂ ನಿಘಂಟುಗಳ ಅಧ್ಯಯನ ಈ ಎಲ್ಲ ಅಂಶಗಳು ನಿಘಂಟುಶಾಸ್ತ್ರದ ಕಕ್ಷೆಯಲ್ಲಿ ಬರುತ್ತವೆ.

ನಿಘಂಟಿಮಗಳ ಸ್ವರೂಪವನ್ನು ಅನುಲಕ್ಷಿಸಿ ನಿಘಂಟುಗಳನ್ನು ಏಕಭಾಷಿಕ, ದ್ವಿಭಾಷಿಕ ಮತ್ತು ಬಹುಭಾಷಿಕಗಳೆಂದು ಮೂರು ರೀತಿಯಲ್ಲಿ ವಿಂಗಡಿಸಬದುದು. ಒಂದು ಭಾಷೆಯ ನಿಘಂಟಿಮಗಳಿಗೆ ಅದೇ ಭಾಷೆಯಲ್ಲಿಯೇ ಅರ್ಥಕೊಟ್ಟಿದ್ದರೆ ಅದು ಏಕಭಾಷಿಕ ನಿಘಂಟು (ಉದಾ: ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ಬೃಹನ್ನಿಘಂಟು). ಒಂದು ಭಾಷೆಯ ನಿಘಂಟಿಮಗಳಿಗೆ ಇನ್ನೊಂದು ಭಾಷೆಯಲ್ಲಿ ಅರ್ಥ ಕೊಟ್ಟಿದ್ದರೆ ಅದು ದ್ವಿಭಾಷಿಕ ನಿಘಂಟು (ಉದಾ: ಮಿಶನರಿ ವಿದ್ವಾಂಸರು ಸಿದ್ಧಪಡಿಸಿದ ಕನ್ನಡ-

ಇಂಗ್ಲೀಷ್, ಇಂಗ್ಲೀಷ್ ಕನ್ನಡ ನಿಘಂಟುಗಳು). ಒಂದು ಭಾಷೆಯ ಶಬ್ದಗಳಿಗೆ ಎರಡು ಭಾಷೆಗಳಿಗಿಂತ ಹೆಚ್ಚು ಭಾಷೆಗಳಲ್ಲಿ ಅರ್ಥ ಕೊಟ್ಟಿದ್ದರೆ ಅಥವಾ ಎರಡು ಭಾಷೆಗಳಿಗಿಂತ ಹೆಚ್ಚು ಭಾಷೆಗಳನ್ನು ಉಪಯೋಗಿಸಿಕೊಂಡು ರಚಿತವಾದರೆ ಬಹುಭಾಷಿಕ ನಿಘಂಟು ಎನಿಸಿಕೊಳ್ಳುತ್ತದೆ. (ಉದಾ: ತುಳುನಿಘಂಟು).

ನಿಘಂಟು ರಚನೆ ಒಂದು ಬೌದ್ಧಿಕ ಚಟುವಟಿಕೆ. ಅದು ಕೇವಲ ಶಬ್ದಾರ್ಥಗಳ ನಿರ್ವಚನ ಮಾತ್ರ ಅಲ್ಲ. ಶಬ್ದಗಳ ಚರಿತ್ರೆ ಮತ್ತು ಅವುಗಳ ಸಾಮಾಜಿಕ ಆಯಾಮಗಳನ್ನೊಳಗೊಂಡ ಸಾಂಸ್ಕೃತಿಕ ಪಠ್ಯವೂ ಆಗಿದೆ. ನಿಘಂಟನ್ನು ಸಿದ್ಧಪಡಿಸುವಾಗ ಕೋಶಕಾರ ತಾನು ಸಿದ್ಧಪಡಿಸುತ್ತಿರುವ ನಿಘಂಟಿನ ಉದ್ದೇಶ, ಸ್ವರೂಪ ಸ್ಪಷ್ಟಪಡಿಸಿಕೊಳ್ಳಬೇಕು. ನಂತರ ಪ್ರಾದೇಶಿಕ, ಸಾಮಾಜಿಕ ಭಾಷಾಪ್ರಭೇದಗಳಿಂದ ಹಾಗೂ ಲಿಖಿತ ಮೂಲಗಳಿಂದ ಸಾಮಗ್ರಿಯನ್ನು ಸಂಗ್ರಹಿಸಬೇಕಾಗುತ್ತದೆ. ಒಂದು ಭಾಷಾ ಸಮುದಾಯದ ವಿವಿಧ ಆಯಾಮಗಳ (ಶೈಕ್ಷಣಿಕ, ಸಾಮಾಜಿಕ ಮುಂತಾದವು) ಎಲ್ಲ ಭಾಷಿಕ ರೂಪಗಳು ಒಳಗೊಳ್ಳುವಂತೆ ಕ್ಷೇತ್ರಕಾರ್ಯ ಮಾಡಬೇಕು. ಕೋಶಕಾರ ಸಮುದಾಯದ ಭಾಷಾ ಬಳಕೆಯ ಯಾವುದೋ ಸಂದರ್ಭಗಳನ್ನೂ ಅಥವಾ ಭಾಷಾ ವಲಯಗಳನ್ನೂ ಬಿಡಬಾರದು. ನಂತರ ನಿಘಂಟಿಮಗಳನ್ನು ಅಂತರರಾಷ್ಟ್ರೀಯ ಧ್ವನಿಲಿಪಿಯಲ್ಲಿ (ರೋಮನ್ ಲಿಪಿ) ಆಲೇಖಿಸಿಕೊಂಡು, ಕೋಶದ ಉದ್ದೇಶಕ್ಕೆ ಅನುಗುಣವಾಗಿ ಅರ್ಥ ವಿವರಣೆ ಕೊಡಬೇಕು.

ಕೋಶ ರಚನೆಯಲ್ಲಿ ನಿಘಂಟುಕಾರನು ನಿಘಂಟುಶಾಸ್ತ್ರದ ಮೂಲ ತತ್ವಗಳನ್ನು, ಕ್ಷೇತ್ರಕಾರ್ಯದ ವಿಧಾನಗಳನ್ನು ಅರಿತವನಾಗಿರಬೇಕು. ಧ್ವನಿರಚನಾಶಾಸ್ತ್ರದಲ್ಲಿ ತರಬೇತಿ ಹೊಂದಿರಬೇಕು. ಒಂದು ಕೃತಿಯ ಪ್ರಕೋಶಗಳನ್ನು ಸಿದ್ಧಪಡಿಸುವಾಗ ಕೋಶಕಾರನಿಗೆ ಗ್ರಂಥಸಂಪಾದನೆಯ ತತ್ವಗಳ ಸ್ಪಷ್ಟ ತಿಳಿವಳಿಕೆ ಬೇಕೇಬೇಕು. ನಿಘಂಟು ರಚನೆಗೆ ಭಾಷಾವಿಜ್ಞಾನವೂ ತುಂಬ ನೆರವಾಗುತ್ತದೆ. ಮುಖ್ಯ ನಮೂದುಗಳ ಆಯ್ಕೆಯಿಂದ ಹಿಡಿದು ಅವುಗಳ ಅರ್ಥ, ಉಚ್ಚಾರಣೆ, ವ್ಯುತ್ಪತ್ತಿ ಹಾಗೂ ಜ್ಞಾತಿಶಬ್ದಗಳ ಉಲ್ಲೇಖ ಇತ್ಯಾದಿಗಳಿಗೆಲ್ಲ ಭಾಷಾವಿಜ್ಞಾನದ ವಿವಿಧ ಜ್ಞಾನಶಾಖೆಗಳು ಕೋಶಕಾರನಿಗೆ ನೆರವಾಗುತ್ತದೆ. ಉದಾ: ಒಂದು ಸಮುದಾಯದ ಪದರೂಪವನ್ನು ಆಯ್ಕೆ ಮಾಡಿಕೊಳ್ಳುವಾಗ ಕ್ಷೇತ್ರಭಾಷಾವಿಜ್ಞಾನವು, ಪದಗಳ ವ್ಯುತ್ಪತ್ತಿಗೆ ತೊಡಗುವಾಗ ಐತಿಹಾಸಿಕ ಭಾಷಾವಿಜ್ಞಾನವು, ಭಾಷಾ ಸಮುದಾಯದಲ್ಲಿಯ ಗಾದೆ, ನುಡಿಗಟ್ಟು, ಒಗಟು ಮುಂತಾದ ಭಾಷಿಕ ರೂಪಗಳನ್ನು ಶೋಧಿಸಿ, ಅವುಗಳ ಸಾಂಸ್ಕೃತಿಕ ಮಹತ್ವವನ್ನು ಹೇಳುವಾಗ ಸಾಮಾಜಿಕ ಭಾಷಾವಿಜ್ಞಾನವು ಕೋಶಕಾರನಿಗೆ ನೆರವಾಗುತ್ತದೆ. ಅದರಂತೆ ಒಂದು ಭಾಷಾಸಮುದಾದಯದ ಭಾಷೆಯ ಅಧ್ಯಯನಕ್ಕೆ ನಿಘಂಟುಗಳು ಭಾಷಾಶಾಸ್ತ್ರಜ್ಞರಿಗೆ ನೆರವಾಗುತ್ತವೆ. ತಾತ್ಪರ್ಯವಿಷ್ಟೆ, ನಿಘಂಟು ರಚನೆಗೆ ಭಾಷಾವಿಜ್ಞಾನದ ಸ್ಪಷ್ಟ ತಿಳಿವಳಿಕೆ ಅಗತ್ಯ. ಅವೆರಡು ಪರಸ್ಪರ ಪೂರಕವಾಗಿವೆ. ಪದಗಳ ಅರ್ಥಗಳನ್ನು ಸ್ಪಷ್ಟಪಡಿಸಿಕೊಳ್ಳಲು,

ಭಾಷಾವಿಚಾರದಲ್ಲಿ ಸ್ವಂತ ಸಾಮರ್ಥ್ಯ ಬೆಳೆಸಿಕೊಳ್ಳಲು, ಭಾಷಾಪ್ರಭೇದಗಳ ವೈಶಿಷ್ಟ್ಯಗಳನ್ನು ಅರಿತುಕೊಳ್ಳಲು ಹಾಗೂ ಅನ್ಯಭಾಷೆಗಳನ್ನು ಕಲಿಯಲು ನಿಘಂಟುಗಳು ತುಂಬ ನೆರವಾಗುತ್ತವೆ.

ಮಲ್ಲೇಪುರಂ ಜಿ. ವೆಂಕಟೇಶ ಅವರು ಸಂಸ್ಕೃತ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದವರು. ಸಂಸ್ಕೃತ ಕಾವ್ಯ ಮೀಮಾಂಸೆಯನ್ನು ಕೇಂದ್ರವಾಗಿಟ್ಟುಕೊಂಡು **ಭಾರತೀಯ ಕಾವ್ಯಶಾಸ್ತ್ರ ಪರಿಭಾಷೆ**(೨೦೦೦)ಯನ್ನು ರೂಪಿಸಿದ್ದಾರೆ. ಇದು ಸಂಸ್ಕೃತ ಮತ್ತು ಕನ್ನಡ ಕಾವ್ಯ ಮೀಮಾಂಸೆಯ ಪರಿಭಾಷೆಗಳ ವಿವರಣ ಕೋಶ ಸಂಸ್ಕೃತ ಅಲಂಕಾರ ಗ್ರಂಥಗಳು ಕೇವಲ ರಸ, ಧ್ವನಿ, ಔಚಿತ್ಯ ಇವುಗಳಿಗೆ ಮಾತ್ರ ಸೀಮಿತವಾಗಿಲ್ಲ ಎಂಬುದನ್ನು ಗಮನಿಸಬೇಕು. ಅವು ಸಂಸ್ಕೃತ ಕಾವ್ಯಶಾಸ್ತ್ರದ ಮುಖ್ಯದಾರಿಗಳು. ಅವುಗಳ ಜೊತೆಯಲ್ಲಿಯೇ ಹಲವು ಉಪದಾರಿಗಳಿವೆ ಎಂಬುದನ್ನು ಮರೆಯುವಂತಿಲ್ಲ. ನಾಟಕದ ವಿಷಯದಲ್ಲಿ ಭರತನ ರಸಸಂಬಂಧೀ ಮಾತುಗಳನ್ನು ಆ ಕಾಲದ ದೇಸಿ ಪಠ್ಯಗಳ ಜೊತೆಗೆ ರಂಗಭೂಮಿಯ ಪಠ್ಯಗಳಿಗೂ, ತುಲನಾತ್ಮಕವಾಗಿ ಅಧ್ಯಯನ ಮಾಡಲು ಸಾಧ್ಯವಿದೆ. ಹೊಸ ಆಶಯಗಳ ಹಿನ್ನೆಲೆಯಲ್ಲಿ ಹೊಸ ಪರಿಭಾಷೆಯನ್ನು ರೂಪಿಸಿಕೊಳ್ಳುವ ಸಾಧ್ಯತೆಯಿದೆ. ಸಂಸ್ಕೃತ ಕಾವ್ಯಪರಿಭಾಷೆಯನ್ನು ಇಂದಿನ ಕನ್ನಡ ಕಾವ್ಯಭಾಷೆಯ ಚರ್ಚೆಗೆ ಹೊಸ ಅಧ್ಯಯನದ ನೆಲೆಯಾಗಿ ಹೊಸ ಆಕೃತಿಯಾಗಿ ಪಡೆಯಬಹುದಾಗಿದೆ. ಇದು ಆ ಶಾಸ್ತ್ರದ ಹಿರಿಮೆಯನ್ನು ತೋರಿಸುತ್ತದೆ. ಅಧ್ಯಯನಕಾರರು ಇಂದು ಕಾವ್ಯ ಮೀಮಾಂಸೆಯ ಚರ್ಚೆಯಲ್ಲಿ ಇಂಗ್ಲೀಶ್ ಕಾವ್ಯ ಮೀಮಾಂಸೆಯನ್ನು ಮುಖ್ಯವಾಗಿ ಇಟ್ಟುಕೊಂಡಿರುತ್ತಾರೆ. ಇದು ಸ್ವಾಗತಾರ್ಹ. ಅದರಂತೆ ನಮ್ಮ ದೇಸಿ ನೆಲದ ಸಂಸ್ಕೃತ ಕಾವ್ಯ ಮೀಮಾಂಸೆಯನ್ನು ಅಧ್ಯಯನಕಾರರು ಆಕರವಾಗಿ ಬಳಸಿಕೊಳ್ಳಬೇಕಾಗಿದೆ. ಸಂಸ್ಕೃತ ಮೀಮಾಂಸೆಯ ಹಿನ್ನೆಲೆಯಲ್ಲಿ ಕನ್ನಡ ಮೀಮಾಂಸೆಯ ಚರ್ಚೆ ನಡೆದಾಗ ಅಧ್ಯಯನ ಅರ್ಥಪೂರ್ಣವಾಗುತ್ತದೆ.

ಈ ಹಿನ್ನೆಲೆಯಲ್ಲಿ ಮಲ್ಲೇಪುರಂ ಅವರ ಭಾರತೀಯ ಕಾವ್ಯಶಾಸ್ತ್ರ ಪರಿಭಾಷೆ ರಚನೆಯಾಗಿದೆ. ಇದು ಕನ್ನಡ ಸಾಹಿತ್ಯ ಚಟುವಟಿಕೆಗಳಿಗೆ ಮಾರ್ಗದರ್ಶನ ಗ್ರಂಥವಾಗಿದೆ. ಇದಕ್ಕಿಂತ ಪೂರ್ವದಲ್ಲಿ ಕನ್ನಡದಲ್ಲಿ ಹಲವು ಬಗೆಯ ಕಾವ್ಯಶಾಸ್ತ್ರ ಪರಿಭಾಷೆಗಳು ರೂಪುಗೊಂಡಿದ್ದವು. ಜಿ.ಎಸ್. ಶಿವರುದ್ರಪ್ಪ ಮತ್ತು ಕೆ.ವಿ. ನಾರಾಯಣ ಅವರು ಜೊತೆ ಸೇರಿ "ಕಾವ್ಯಾರ್ಥ ಪದಕೋಶ"ವನ್ನು ಸಿದ್ಧಪಡಿಸಿದ್ದರು. ಅದರಂತೆ, ಓ.ಎಲ್. ನಾಗಭೂಷಣಸ್ವಾಮಿಯವರು "ವಿಮರ್ಶೆಯ ಪರಿಭಾಷೆ"ಯನ್ನು ರಚಿಸಿದ್ದರು. ಇದು ತನ್ನ ಮಿತಿಯಲ್ಲಿಯೇ ಒಂದು ಒಳ್ಳೆಯ ಪ್ರಯತ್ನ. ಮಲ್ಲೇಪುರಂ ಅವರು ಸಿದ್ಧಪಡಿಸಿದ ಈ ಕೋಶವು ಸಂಸ್ಕೃತ ಕಾವ್ಯಮೀಮಾಂಸೆ ಹಾಗು ಕನ್ನಡ ಕಾವ್ಯಮೀಮಾಂಸೆಯ ಪರಿಭಾಷೆಗಳನ್ನು ಚಾರಿತ್ರಿಕ ನೆಲೆಯ ಜಾಡಿನಲ್ಲಿ ಇಟ್ಟು ನೋಡಬೇಕೆನ್ನುವ ಇರಾದೆಯನ್ನು ಪ್ರಮುಖವಾಗಿ ಇಟ್ಟುಕೊಂಡಿದೆ. ಆಯಾ ಪರಿಭಾಷೆಗಳ ಇತಿಹಾಸ, ಅವು ನಡೆದುಬಂದ

ದಾರಿ, ಅವುಗಳಿಗೆ ಪ್ರೇರಿತವಾದ ಅಂಶಗಳು. ಈ ಎಲ್ಲ ಅಂಶಗಳನ್ನು ಮಲ್ಲೇಪುರಂ ಅವರು ಗಮನಿಸಿದ್ದಾರೆ. ಈ ಕೋಶದೊಳಗೆ ಇರುವ ಆಯಾಪರಿಭಾಷೆಗಳ ಅಡಿಯಲ್ಲಿ ಸಂಸ್ಕೃತ ಮತ್ತು ಕನ್ನಡ ಕಾವ್ಯ ತಜ್ಞರ ಮೂಲಪಠ್ಯಗಳ ವಿವರಗಳನ್ನು ನೀಡಿದ್ದಾರೆ. ಇದು ಈ ಕೋಶದ ಹೆಚ್ಚುಗಾರಿಕೆಯಾಗಿದೆ. ಸಂಸ್ಕೃತ ಶ್ಲೋಕಗಳ ಅನುವಾದ ಮಲ್ಲೇಪುರಂ ಅವರದೇ ಆಗಿದೆ. ಈ ಕೋಶದ ಕೆಲವು ನಮೂದುಗಳು ಹೀಗಿವೆ.

ಆಖ್ಯಾಯಿಕೆ

ಇದು ಕಾವ್ಯದ ಒಂದು ಬಗೆಯ ಪ್ರಕಾರ, ಸಂಸ್ಕೃತ ಕಾವ್ಯಮೀಮಾಂಸೆಯಲ್ಲಿ ಕಾವ್ಯದ ಪರಿಕಲ್ಪನೆಯನ್ನು ವಿವರಿಸುವಾಗ ದೃಶ್ಯ ಮತ್ತು ಶ್ರವ್ಯ ಎಂಬೆರಡು ಪ್ರಭೇದಗಳು ಇರುವುದು ಸರಿಯಷ್ಟೆ. ದೃಶ್ಯವೆಂದರೆ ನಾಟಕ, ಶ್ರವ್ಯವೆಂದರೆ ಕಿವಿಯಿಂದ ಕೇಳಿ ಆಸ್ವಾದಿಸುವ ಕಾವ್ಯ. ಒಂದು ಕಣ್ಣಿನದು: ಮತ್ತೊಂದು ಕಿವಿಯದು. ಓದಿಕೊಂಡರೆ ಅಥವಾ ಬೇರೆಯವರು ವಾಚಿಸಿದರೆ ಶಬ್ದರೂಪದ ಮೂಲಕ ಕೇಳಿಸುವ ಕಾವ್ಯ. ವೇದೋತ್ತರಕಾಲದ ಕಾವ್ಯಮೀಮಾಂಸೆಯ ಕಾಲದಲ್ಲಿ 'ಆಖ್ಯಾಯಿಕೆ' ಎಂಬ ಪರಿಭಾಷೆ ಮೊದಲು ಸಿಗುವುದು ಪತಂಜಲಿಯ ವ್ಯಾಕರಣ ಮಹಾಭಾಷ್ಯದಲ್ಲಿ, ಅವನು ವರರುಚಿ ಮಾಡಿದ ಒಂದು ಕಾವ್ಯವನ್ನು ನಿರ್ದೇಶಿಸಿದ್ದಾನೆ. 'ಲುಬಾಖ್ಯಾಯಿಕಾಭ್ಯೋ ಬಹುಲಂ' ಈ ಸೂತ್ರದ ಮೇಲೆ ಭಾಷ್ಯ ಬರೆಯುವಾಗ 'ಆಖ್ಯಾಯಿಕಾ' ಗ್ರಂಥಕ್ಕೆ ಸೇರುವ ವಾಸವದತ್ತಾ ಸಮನೋತ್ತರ ಮತ್ತು ಭೈಮರಥೀ ಈ ಮೂರೂ ಗ್ರಂಥಗಳ ಹೆಸರನ್ನು ಪತಂಜಲಿ ಕೊಟ್ಟಿದ್ದಾನೆ. ಮುಂದೆ 'ಭಾಮಹ'ನಲ್ಲಿ ಇದರ ವಿವರಣೆ ಸಿಗುತ್ತದೆ. ಶ್ರವ್ಯವು ಮಹಾಕಾವ್ಯ, ಆಖ್ಯಾಯಿಕೆ, ಕಥೆ, ಚಂಪೂ, ಅನಿಬದ್ಧ ಎಂಬ ವಿಧಗಳಿವೆ ಎಂದು ಭಾಮಹನು ಹೇಳಿದ್ದಾನೆ. ಅವನು ಈ ಅಂಶಗಳನ್ನು ಮುಂದುವರಿಸಿ ಹೇಳುತ್ತ, ಕಥೆ: ಆಖ್ಯಾಯಿಕೆಗಳು ಗದ್ಯದಲ್ಲಿಯೂ ಮಹಾಕಾವ್ಯ ಪದ್ಯದಲ್ಲಿಯೂ ಚಂಪೂ ಪ್ರಬಂಧವು 'ಗದ್ಯಪದ್ಯ'ಗಳಲ್ಲಿಯೂ ಇರುತ್ತದೆಂದು ಹೇಳುತ್ತಾನೆ.

ಆಖ್ಯಾಯಿಕೆಯ ಬಗೆಗೆ ಭಾಮಹ ಹೇಳುವ ಮಾತು ತುಂಬಾ ಸಂಕ್ಷಿಪ್ತ ಹಾಗೂ ಕ್ವಚಿತ್ತು ಮಾತ್ರ, ಆದರೆ, ಈ ಅಂಶವನ್ನು 'ದಂಡಿ'ಯು ತನ್ನ 'ಕಾವ್ಯಾದರ್ಶ'ದಲ್ಲಿ ಇನ್ನಷ್ಟು ವಿವರಿಸುತ್ತಾನೆ. ಲಲಿತ ಹಾಗೂ ಮಧುರವಾದ ಶಬ್ದಾರ್ಥಗಳಿಂದ ತುಂಬಿದ ಸಮಾಸ ಘಟಿತವಾದ ಗದ್ಯದಲ್ಲಿರಬೇಕು. ಉದಾತ್ತವಾದ ವಿಷಯಗಳನ್ನು ಅದು ಒಳಗೊಂಡಿರಬೇಕು. ಉಚ್ಛ್ವಾಸವೆಂಬ ಹೆಸರಿನ ಅಧ್ಯಾಯಗಳಿದ್ದರೆ ಅಂತಹ ಕಾವ್ಯಕ್ಕೆ 'ಆಖ್ಯಾಯಿಕೆ' ಎನ್ನುತ್ತಾರೆ. ಈ ಆಖ್ಯಾಯಿಕೆಯಲ್ಲಿ ಬರುವ ನಆಯಕ ತನ್ನ ಹಿಂದಿನ ಚರಿತ್ರೆಯನ್ನು ತಾನೇ ಬಾಯಿಂದ ಹೇಳಿಕೊಳ್ಳುತ್ತಾನೆ. "ವಕ್ತ್ರಾ" ಮತ್ತು "ಅಪರವಕ್ತ್ರಾ" ಎಂಬ ಛಂದಸ್ಸಿನ ಪದ್ಯಗಳು ಆಗಾಗ ಮುಂದೆ ಆಗುವ ಘಟನೆಗಳನ್ನು ಸೂಚಿಸಲು ಬರುತ್ತವೆ. ಕವಿಯ ಅಭಿಪ್ರಾಯವನ್ನು ಸೂಕ್ಷ್ಮವಾಗಿ ಒಳಗೊಂಡ ಮುದ್ರೆಗಳಿಂದ

ಅದು ಕೂಡಿರುವುದುಂಟು. ಈ ಅಖ್ಯಾಯಿಕೆಯಲ್ಲಿ ಕನ್ಯೆಯ ಅಪಹರಣ, ಯುದ್ಧ, ವಿರಹ, ನಾಯಕಾಭ್ಯುದಯ ಇವುಗಳಿಂದ ಕೂಡಿರುತ್ತದೆ. ಇದಿಷ್ಟು, ದಂಡಿ ತನ್ನ ಕೃತಿಯಲ್ಲಿ ಆಖ್ಯಾಯಿಕೆಯ ಬಗೆಗೆ ಹೇಳುವ ವಿವರಗಳು. ಇವು ಆಖ್ಯಾಯಿಕೆಯ ಸ್ವರೂಪವನ್ನು ನಿರ್ದಿಷ್ಟ ನೆಲೆಯಲ್ಲಿ ಮಾತ್ರ ಮಂಡಿಸುತ್ತವೆ.

ಮಮ್ಮಟನು ಕಾವ್ಯ ಪ್ರಕಾಶದಲ್ಲಿ 'ಆಖ್ಯಾಯಿಕೆ'ಯ ಬಗೆಗೆ ಪ್ರಾಸಂಗಿಕವಾಗಿ ವಿವರಿಸುತ್ತಾನೆ. ಅವನು ಹೇಳುವುದು ಇಷ್ಟು: (V-೨೨೦)

> ಕ್ವಚಿತ್ ವಕ್ತೃವಾಚ್ಯಾನಪೇಕ್ಷಾಃ ಏವ ತೇ
> ತಥಾ ಹಿ ಆಖ್ಯಾಯಿಕಾಂ ಶೃಂಗಾರೋऽಪಿ ನಮಸೃಣ ವರ್ಣಾದಯಃ

ಆಖ್ಯಾಯಿಕೆಯು, ವಕ್ತೃ ಮತ್ತು ವಾಚ್ಯಗಳ ಅಪೇಕ್ಷೆಯನ್ನು ಮತ್ತು ಪ್ರಬಂಧದ ಉಚಿತ ಗುಣವನ್ನು ಪಡೆದಿರುತ್ತದೆ. ಶೃಂಗಾರವು 'ಆಖ್ಯಾಯಿಕೆ'ಯಲ್ಲಿ ಪ್ರಧಾನರಸ ಆಗಬಹುದು. ಮಮ್ಮಟನ ಕಾವ್ಯಪ್ರಕಾಶಕ್ಕೆ ಇರುವ ಮಧುಮತೀ ವ್ಯಾಖ್ಯಾನಕಾರನು 'ಸಾಹಿತ್ಯ ಮೀಮಾಂಸಾ' ಎಂಬ ಉಪಲಬ್ಧವಾಗದಿರುವ ಕೃತಿಯೊಂದರಿಂದ ಉಲ್ಲೇಖವೊಂದನ್ನು ಹಿಕ್ಕಿ ಕೊಡುತ್ತಾನೆ.

ರಾಜನ ಕಥೆಯನ್ನು ಒಳಗೊಂಡಿರುತ್ತದೆ. ವಿಚಿತ್ರವಾದ ವರ್ಣನೆಗಳಿಂದ ಕೂಡಿ ಹತ್ತು ಉಚ್ಛ್ವಾಸಗಳಿರುತ್ತವೆ. ಪ್ರತಿಯೊಂದು ಉಚ್ಛ್ವಾಸದ ಕೊನೆಯಲ್ಲಿ 'ವಕ್ತ್ರ' ಎಂಬ ಛಂದಸ್ಸನ್ನು ಬಳಸಲಾಗುತ್ತದೆ. ಉಚ್ಛ್ವಾಸದ ಆರಂಭದಲ್ಲಿ 'ಅಪರವಕ್ತ್ರ' ಎಂಬ ಛಂದಸ್ಸನ್ನು ಉಪಯೋಗಿಸಲಾಗುತ್ತದೆ. ಇದಿಷ್ಟು 'ಆಖ್ಯಾಯಿಕೆ'ಯ ಬಗೆಗೆ ಉಪಲಬ್ಧವಿರುವ ವಿವರಗಳು. ಭಾಮಹ ದಂಡಿ ಮತ್ತು ಮಮ್ಮಟ ಈ ಮೂವರು ಅನುಕ್ರಮವಾಗಿ ಆಖ್ಯಾಯಿಕೆಯನ್ನು ಕುರಿತು ವಿವರಗಳ ನೆಲೆಯಲ್ಲಿ ಚರ್ಚಿಸುತ್ತಾರೆ.

ಕನ್ನಡ ಕಾವ್ಯಮೀಮಾಂಸೆಯಲ್ಲಿ ಉದಯಾದಿತ್ಯನು 'ಉದಯಾದಿತ್ಯಾಲಂಕಾರ'ದಲ್ಲಿ

> "ಪದ್ಯದೊಳೆ ಸರ್ಗಬಂಧಂ ಗದ್ಯದೊಳಾಖ್ಯಾಯಿಕಾ."

ಎಂದು ಭಾಮಹನ ಮಾತನ್ನೇ ನಿರ್ವಚಿಸುತ್ತಾನೆ. ಕನ್ನಡದ ಯಾವೊಬ್ಬ ಲಕ್ಷಕಾರನೂ 'ಆಖ್ಯಾಯಿಕೆ'ಯ ಬಗೆಗೆ ಮಾತನಾಡುವುದಿಲ್ಲ. ಕಥೆ ಮತ್ತು ಆಖ್ಯಾಯಿಕೆ ಇವೆರಡು ಒಂದೇ ಜಾತಿ. ಒಂದಕ್ಕೆ ಎರಡು ಹೆಸರನ್ನಿಡಲಾಗಿದೆ. ಉಳಿದ ಗದ್ಯಭೇದಗಳೂ ಇದರಲ್ಲೇ ಅಂತರ್ಗತವಾಗುತ್ತವೆಂದು ಭಾಮಹ ಹೇಳುವ ಮಾತನ್ನು ಕನ್ನಡದ ಕಾವ್ಯ ಮೀಮಾಂಸಾಕಾರರು ಚರ್ಚಿಸದಿರುವುದು ಆಶ್ಚರ್ಯ. ಮೂಲತಃ 'ಆಖ್ಯಾಯಿಕೆ' ಸಂಸ್ಕೃತದ್ದು ಆಗಿರುವುದರಿಂದ, ಕನ್ನಡದ ಕಾವ್ಯಸಂದರ್ಭಕ್ಕೆ ಈ ಪರಿಕಲ್ಪನೆಯ ನೆಲೆ ಅಷ್ಟು ಮುಖ್ಯವಾಗಲಿಲ್ಲವೆಂದು ತೋರುತ್ತದೆ.

'ಅಮರಕೋಶ'ದಲ್ಲಿ ಅಮರಸಿಂಹನು "ಆಖ್ಯಾಯಿಕೋಪಲಬ್ಧಾರ್ಥಾ" ಪುರಾಣದ ಐದು ಲಕ್ಷಣಗಳನ್ನು ಕುರಿತು ಹೇಳುವಾದ ಆಖ್ಯಾಯಿಕೆಯ ಉಪಲಬ್ಧಾರ್ಥವೆಂದು

ಹೇಳುತ್ತಾನೆ. 'ಸತ್ಯವಾದ ಚರಿತ್ರೆಯುಳ್ಳ ಗ್ರಂಥ' ಎಂಬುದು ಅಮರಸಿಂಹನು ಕೊಡುವ ವಿವರಣೆ. ಉಳಿದ ಕೋಶಗ್ರಂಥಗಳಲ್ಲಿ ಇದಕ್ಕಿಂತ ಹೆಚ್ಚಿನ ವಿವರಣೆ ಬಂದಿಲ್ಲ.(ಹೆಚ್ಚಿನ ಓದಿಗೆ: ಭಾಮಹ-೧-೨೫-೧೮, ದಂಡಿ-೧-೨೩-೩೦, ಮಮ್ಮಟ-೮-೨೨೦, ಪತಂಜಲಿ ಮಹಾಭಾಷ್ಯ ಪು. ೩೧೫ ಕೌಲಗಿ ಶೇಷಾಚಾರ್ಯ: ಅಲಂಕಾರಶಾಸ್ತ್ರ, ಪು.೮)

ರಸ

ಕಾವ್ಯ-ಕಲೆಗಳಿಂದ ಸಹೃದಯರ ಅನುಭವಕ್ಕೆ ಬರುವ ಆಹ್ಲಾದ ವಿಶೇಷವನ್ನು ಸೂಚಿಸಲು ಭಾರತೀಯ ಕಾವ್ಯಚಿಂತಕರು ಬಳಸುವ ವಿಶಿಷ್ಟವಾದ ಪಾರಿಭಾಷಿಕ ಪದವೇ ರಸ. 'ರಸ್ಯತೇ ಆಸ್ವಾದ್ಯತೆ ಇತಿ ರಸಃ' ಎಂದು ಲಾಕ್ಷಣಿಕರು ಇದನ್ನು ನಿರ್ವಚಿಸಿದ್ದಾರೆ. ಇದು ಅತ್ಯಂತ ಪ್ರಾಚೀನವಾದ ಶಬ್ದ. ಋಗ್ವೇದ ಸಂಹಿತೆಯಲ್ಲಿ ಇದರ ಪ್ರಯೋಗ ಮೊದಲು ಸಿಗುತ್ತದೆ. ಅಲ್ಲಿ ಇದಕ್ಕೆ ನಾನರ್ಥಗಳಿವೆ. ನೇರವಾಗಿ 'ಕಾವ್ಯ'ಕ್ಕೆ ಸಂಬಂಧಿಸಿದಂತೆ ಪ್ರಯೋಗಗೊಂಡಿಲ್ಲ. ಹೀಗೆ ನೋಡಿವರೆ ಭರತನ ನಾಟ್ಯಶಾಸ್ತ್ರದಿಂದಲೇ ಈ ಪದವು ಅಸ್ವಾದ್ಯ, ಚರ್ವಮ ಎಂಬ ಅರ್ಥದ ನೆಲೆಯಲ್ಲಿ ಪ್ರಯೋಗಗೊಂಡಿತು. ಭರತನ ರಸಸೂತ್ರ ಇದಕ್ಕೆ ಪ್ರಸಿದ್ಧಿ "ವಿಭಾವಾನುಭವ ವ್ಯಭಿಚಾರಿಭಾವ ಸಂಯೋಗಾತ್ ರಸನಿಷ್ಪತ್ತಿಃ" ಎಂಬ ಸೂತ್ರವು ಹಲವು ಬಗೆಯ ವ್ಯಾಖ್ಯಾನಗಳಿಗೆ ಈಡಾಗಿದೆ. ಶ್ರೀ ಶಂಕುರ, ಅಭಿವನಗುಪ್ತ ಮತ್ತು ಲೊಲ್ಲಟರು ನಡೆಸಿದ ವಾಗ್ವಾದಗಳು ಕಾವ್ಯಚಿಂತನೆಯ ಸಂದರ್ಭದಲ್ಲಿ ಪ್ರಮುಖವಾಗಿವೆ. ರಸದ ಸ್ವರೂಪವನ್ನು ಕುರಿತು ಬೇಕಾದಷ್ಟು ಚರ್ಚೆ ನಡೆದಿದೆ. ನಾಟ್ಯಶಾಸ್ತ್ರದಲ್ಲಿ ಅದನ್ನು ವರ್ಣಿಸುವಾಗ "ರಸ ಇತಿ ಕಃ ಪದಾರ್ಥಃ?" ಎಂದು ಪ್ರಶ್ನೆ ಎದ್ದು "ಆತ್ರೋಚ್ಯತೇ ಆಸ್ವಾದ್ಯತ್ವಾತ್ ಕಥಮಾಸ್ವಾದ್ಯೋ ರಸಃ? ಯಥಾ ಹಿ ನಾನಾವ್ಯಂಜನ ಸಂಸ್ಕೃತಂ ಅನ್ನಂ ಭುಂಜಾನಾ ತದ್‌ನಾನ್ ಆಸ್ವಾದಯಂತಿ ಸಮನಸಃ ಪುರುಷಃ, ಹರ್ಷಾದೀಂಶ್ಚ ಅಲಿ ಅಧಿಗಚ್ಛಂತಿ ತಥಾ ನಾನಾಭಾವ ಅಭಿನಯ ವ್ಯಂಜನಾನ್ ವಾಕ್ ಅಂಗ ಸತ್ವೋಪೇತಾನ್ ಸ್ಥಾಯಿಭಾವಾನ್ ಆಸ್ವಾದಯಂತಿ ಸಮನಸಃ ಪ್ರೇಕ್ಷಕಾ, ಸತ್ಮಾತ್ ನಾಟ್ಯರಸಾಃ ಇತಿ ವ್ಯಾಖ್ಯಾತಾಃ" ಎಂದು ಹೇಳಿದರು. ಊಟದ ರಸದಲ್ಲಿ ವ್ಯಂಜನಗಳನ್ನು ಹೇಗೋ ನಾನಾಭಾವ ಅಭಿನಯ ವ್ಯಂಜಿತಾನ್ ಎಂಬ ಮಾತು ಮುಂದೆ ಬರಲಿದ್ದ ವ್ಯಂಜನಾ ವೃತ್ತಿಗೆ ಧ್ವನಿಪ್ರಪಂಚಕ್ಕೆ ಹಾರುವಂತಾಯಿತು ಎಂಬ ವಿ.ಸೀ. ಅವರ ಮಾತು ಮುಖ್ಯ.

ರಸಕ್ಕೆ ಭಾವವು ಮೂಲವಷ್ಟೆ. ಸಾಧಾರಣೀಕೃತವಾದ ಭಾವವು ರಸತ್ವವನ್ನು ತಾಳುತ್ತದೆ. ಲೋಕದಲ್ಲಿ ಭಾವವೊಂದು ವೈಯಕ್ತಿಕವೂ ಕ್ರಿಯಾಪೇಕ್ಷಿಯೂ ಆಗಿದ್ದರೆ; ಅದು ಕಾವ್ಯದಲ್ಲಿ ರಸವಾದಾಗ ಸರ್ವಾತ್ಮಕವೂ ಆಸ್ವಾದ್ಯವೂ ಆದ ಸ್ಥಿತಿಯನ್ನು ಪಡೆಯುತ್ತದೆ. ಹೀಗೆ ಸಹೃದಯದಿಂದ ಅಸ್ವಾದ್ಯವಾಗುವ ಅನುಭವ ವಿಶೇಷವೇ ರಸ. ಈ ರಸವನ್ನು ಕಾವ್ಯಚಿಂತಕರು ಅಲೌಕಿಕ, ಬ್ರಹ್ಮಾನಂದ ಸಹೋದರ ಮತ್ತು ಸಕಲ ಪ್ರಯೋಜನ ಮೌವೀಭೂತ ಎಂದು ವರ್ಣಿಸಿದ್ದಾರೆ.

ಹೆಚ್ಚಿನ ಓದು: ೬-೪, ಆನಂದವರ್ಧನ ೨-೩ ರಿಂದ ೧೫; ರುದ್ರಟ ೧೨-೫, ೬ ಮಮ್ಮಟ: ೪-೧೨-೩; ವಿಶ್ವನಾಥ ೩-೨೩೯-೬೦; ರುಯ್ಯಕ ಪುಟ ೨೧೧: ಅಭಿನವ ಭಾರತೀ: ೧-೩೪೧ V. Raghavan: The number of Rasas V.C.128: ಕೆ. ಕೃಷ್ಣಮೂರ್ತಿ; ರಸೋಲ್ಲಾಸ ಪುಟ ೫ ರಿಂದ ೧೨; P.S. Naidu: The Rasa Doctrine and the concept of suggestion in Hindu Aesthetics(Journal of the Annamalai University X- 1). ನಾಗವರ್ಮ: ಸೂತ್ರ ೧೯೭ ರಿಂದ ೨೦೨ ಸಾಳ್ವ: ರಸರತ್ನಾಕರ ಪುಟ: ೫ ರಿಂದ ೧೨: ಕವಿಕಾಮ ೪-೩೦ ವಿ.ಸೀ. ಸಮೀಕ್ಷೆ 'ಎರಡನೆಯ ನಾಗವರ್ಮ' ಐ.ಬಿ.ಎಚ್. ಪ್ರಕಾಶನ, ೧೯೭೩, ಪು. ೧೬೨.

ಹೀಗೆ ನಮೂದುಗಳ ರಚನೆಯ ವಿನ್ಯಾಸವಿದೆ. ಮುಖ್ಯ ನಮೂದು, ಅದರ ವಿವರಣೆ, ಸ್ವರೂಪ, ವೈಶಿಷ್ಟ್ಯ ಇತ್ಯಾದಿಗಳು ಅರ್ಥಪೂರ್ಣವಾಗಿ ಮೂಡಿಬಂದಿವೆ. ಹೆಚ್ಚಿನ ಓದು ಆ ನಮೂದಿನ ಅಧ್ಯಯನಕ್ಕೆ ಪೂರಕವಾಗಿದೆ. ಈ ಕೋಶಕ್ಕೆ ವಿಸ್ತೃತವಾದ ಐದು ಅನುಬಂಧಗಳಿವೆ. ಮೊದಲನೆಯ ಅನುಬಂಧವು ಬಹುತೇಕ ಸಂಸ್ಕೃತದ ಎಲ್ಲ ಅಲಂಕಾರಶಾಸ್ತ್ರ ಗ್ರಂಥಗಳ ವಿವರವಾದ ಯಾದಿಯನ್ನು ಒಳಗೊಂಡಿದೆ. ಎರಡನೆಯ ಅನುಬಂಧವು ಕನ್ನಡಕ್ಕೆ ಅನುವಾದವಾಗಿ ಬಂದಿರುವ ಅನುವಾದ ಗ್ರಂಥಗಳ ಯಾದಿಯನ್ನು ಒಳಗೊಂಡಿದೆ. ಮೂರನೆಯ ಅನುಬಂಧವು ಕನ್ನಡದಲ್ಲಿ ಪ್ರಕಟವಾದ ಸ್ವತಂತ್ರ ಕಾವ್ಯಶಾಸ್ತ್ರ ಚಿಂತನ ಗ್ರಂಥಗಳ ವಿವರಗಳನ್ನು ಒಳಗೊಂಡಿದೆ. ನಾಲ್ಕನೆಯ ಅನುಬಂಧವು ಇಪ್ಪತ್ತನೆಯ ಶತಮಾನದಲ್ಲಿ ರಚಿತವಾದ ಸ್ವತಂತ್ರ ಕಾವ್ಯಶಾಸ್ತ್ರ ಕಾವ್ಯ ಚಿಂತನೆಯ ಮುಖ್ಯ ಗ್ರಂಥಗಳನ್ನು ಒಳಗೊಂಡಿದೆ. ಐದನೆಯ ಅನುಬಂಧವು ೧೯೧೭ನೇ ಇಸ್ವಿಯಲ್ಲಿ ಪ್ರಕಟವಾದ ಲೇಖನದಿಂದ ಹಿಡಿದು ಈಚಿನವರೆಗೆ ಪ್ರಕಟವಾದ ವಿಸ್ತೃತವಾದ ಲೇಖನ ಸೂಚಿಯನ್ನು ಒಳಗೊಂಡಿದೆ. ಈ ಎಲ್ಲ ಅನುಬಂಧಗಳು ಗ್ರಂಥಾಧ್ಯಯನಕ್ಕೆ ಪೂರಕವಾಗಿವೆ.

ಪ್ರಸ್ತುತ ಕೋಶವು ಕಾವ್ಯಶಾಸ್ತ್ರಗಳ ಅಧ್ಯಯನ ಆಸಕ್ತರಿಗೆ, ವಿದ್ಯಾರ್ಥಿಗಳಿಗೆ, ವಿದ್ವಾಂಸರಿಗೆ ತುಂಬ ನೆರವಾಗುತ್ತದೆ. ಸ್ವತಃ ಸಂಸ್ಕೃತ ಮತ್ತು ಕನ್ನಡವನ್ನು ಆಳವಾಗಿ ಅಭ್ಯಸಿಸಿದ ಮಲ್ಲೇಪುರಂ ಅವರ ವಿದ್ವತ್ತಿನಿಂದ ಈ ಪುಸ್ತಕಕ್ಕೆ ಅಧಿಕಾರತ್ವ ಪ್ರಾಪ್ತವಾಗಿದೆ. ಒಟ್ಟಾರೆ ಪ್ರಸ್ತುತ ಕೃತಿಯು ಕನ್ನಡ ಕಾವ್ಯಶಾಸ್ತ್ರದಲ್ಲಿ ಆಸಕ್ತರಾಗಿರುವವರು ಅತ್ಯವಶ್ಯ ಮತ್ತೆ ಮತ್ತೆ ಉಪಯೋಗಿಸಿಕೊಳ್ಳಬೇಕಾದ ಪುಸ್ತಕವೆಂಬುದರಲ್ಲಿ ಅನುಮಾನವಿಲ್ಲ.

ಭಾಗ - ೧೦

ಭಾಷೆ : ಅಧ್ಯಯನ ಸೂಚಿ

೯೧ ಕನ್ನಡದಲ್ಲಿ ವ್ಯಾಕರಣ ಅಧ್ಯಯನ

೯೨ ಕನ್ನಡದಲ್ಲಿ ಭಾಷಾಧ್ಯಯನ

೯೩ ಇಂಗ್ಲಿಶಿನಲ್ಲಿ ಕನ್ನಡ ಭಾಷಾಧ್ಯಯನ

೯೪ ಕನ್ನಡದಲ್ಲಿ ನಾಮಾಧ್ಯಯನ

೯೫ ಕನ್ನಡದಲ್ಲಿ ಕೋಶಾಧ್ಯಯನ

೯೧

ಕನ್ನಡದಲ್ಲಿ ವ್ಯಾಕರಣ ಅಧ್ಯಯನ

೧

ಕನ್ನಡ ವ್ಯಾಕರಣಗಳ ಸಮಸ್ಯೆಗಳ ಬಗ್ಗೆ ಹೊಸಬೆಳಕು ಚೆಲ್ಲುವ ಕೆಲವು ಮುಖ್ಯ ಗ್ರಂಥಗಳ, ಲೇಖನಗಳ ಅವಲೋಕನವನ್ನು ಈ ಸಮೀಕ್ಷೆಯಲ್ಲಿ ಮಾಡಲಾಗಿದೆ. ಕನ್ನಡ ವ್ಯಾಕರಣ ಬರೆಹಗಳ ರಚನೆ, ನಿರೂಪಣೆಯನ್ನಾಧರಿಸಿ ಮೂರು ಬಗೆಯಲ್ಲಿ ವಿಂಗಡಿಸಬಹುದು. ೧. ಹಳಗನ್ನಡ ವ್ಯಾಕರಣಗಳು, ೨. ಕ್ರೈಸ್ತಮಿಶನರಿಗಳು ರಚಿಸಿದ ವ್ಯಾಕರಣಗಳು, ೩. ಹೊಸಗನ್ನಡ ವ್ಯಾಕರಣಗಳು. ಇವಲ್ಲದೆ ಹಳಗನ್ನಡ ವ್ಯಾಕರಣಕ್ಕೆ ಬರೆಯಲ್ಪಟ್ಟ ಟೀಕೆಗಳೂ ವ್ಯಾಕರಣ ಸಾಹಿತ್ಯದಲ್ಲಿ ಸಮಾವೇಶಗೊಳ್ಳುತ್ತವೆ.

ಹಳಗನ್ನಡ ವ್ಯಾಕರಣದಲ್ಲಿ 'ಶಬ್ದಸ್ಮೃತಿ', 'ಶಬ್ದಮಣಿದರ್ಪಣ', 'ಕರ್ನಾಟಕ ಭಾಷಾಭೂಷಣ' ಹಾಗೂ 'ಶಬ್ದಾನುಶಾಸನ' ಇವು ಸಮಾವೇಶಗೊಳ್ಳುತ್ತವೆ. ವ್ಯಾಕರಣ ನಿಯಮಗಳನ್ನು ಸೂತ್ರೀಕರಿಸಿ ನಿರೂಪಿಸಿರುವುದು ಇವುಗಳ ಪ್ರಮುಖ ವೈಶಿಷ್ಟ್ಯವೆನ್ನಬಹುದು. ಹಳಗನ್ನಡದ ಪದರಚನೆಗೆ ಸಂಬಂಧಪಟ್ಟಂತೆ ಸಂಜ್ಞಾ, ಸಂಧಿ, ನಾಮ, ಸಮಾಸ, ತದ್ಧಿತ, ಆಖ್ಯಾತ, ಅವ್ಯಯ ಹೀಗೆ ಹಲವು ವಿಷಯಗಳನ್ನು ಕುರಿತ ಸೂತ್ರಗಳಿವೆ. ಇವು ವ್ಯಾಕರಣಾಭ್ಯಾಸಿಗಳು ಪ್ರೌಢಮಟ್ಟದವರಾಗಿದ್ದು ಅತಿಸಂಕೀರ್ಣ ಪರಿಕಲ್ಪನೆಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳುವ ಮಟ್ಟದಲ್ಲಿ ಇದ್ದರೆಂದು ಸೂಚಿಸುತ್ತವೆ.

೧೯ನೆಯ ಶತಮಾನದ ಆಸುಪಾಸಿನಲ್ಲಿ ಮಿಶನರಿಗಳು ಕೆಲವು ಅಭ್ಯಾಸಿ ವ್ಯಾಕರಣಗಳನ್ನು ರಚಿಸಿದರು. ಕ್ರೈಸ್ತ ಮತಪ್ರಚಾರಕರು ಅಂದು ಲಭ್ಯವಿದ್ದ ಅನೇಕ ಶಾಸ್ತ್ರಗಳನ್ನು ಅಭ್ಯಾಸ ಮಾಡಿ, ಅವು ಸಾಮಾನ್ಯಮಟ್ಟದ ಅಭ್ಯಾಸಿಗಳಿಗೆ ಎಟುಕುವುದಿಲ್ಲ ಎಂಬುದನ್ನು ಅರಿತಿರಬೇಕು. ಆದುದರಿಂದಲೇ ಆ ವ್ಯಾಕರಣಗಳ ಸಾರವನ್ನು ಸಂಗ್ರಹಿಸಿ ಅಂದಿನ ಭಾಷಾರಚನೆಯನ್ನು ಗಮನಿಸಿ ಶಾಲಾಮಟ್ಟದ ಹಾಗೂ ಸಾಮಾನ್ಯ

ಅಭ್ಯಾಸಿಗಳಿಗೆ ಉಪಯೋಗವಾಗುವಂತಹ ಅನೇಕ ವ್ಯಾಕರಣಗಳನ್ನು ರಚಿಸಿದರು. ವಿಲ್ಯಂಕ್ಯಾರಿ ಅವರ The Grammar of the Cannada Language (೧೮೧೭), ಜಾನ್ ಮೆಕೆರೆಲ್‌ರ Karnatak Vyakaran (೧೮೨೦), ಥಾಮಸ್ ಹಡಸನ್ಸ್‌ರ An Elementary Grammar of Canarese Language (೧೮೬೪), ಜೀಗ್ಲರ್ ಅವರ A Practical Key to Canarese language (೧೮೭೨), ಎಫ್. ಕಿಟೆಲರ A Grammar of Kannada language (೧೯೦೩) ಇವು ಪ್ರಮುಖವಾಗಿವೆ. ಇದರಿಂದ ವ್ಯಾಕರಣವನ್ನು ಶಾಸ್ತ್ರೀಯ ಸಂಕೋಲೆಯಿಂದ ಬಿಡಿಸಿ ಅದನ್ನು ಸಾಮಾನ್ಯ ಜನರೂ ಓದಿ ಅರ್ಥ ಮಾಡಿಕೊಳ್ಳಬಹುದಾದ ಸ್ಥಿತಿ ನಿರ್ಮಾಣವಾಯಿತು. ಅನೇಕ ವ್ಯಾಕರಣ ಗ್ರಂಥಗಳನ್ನು ಔಪಚಾರಿಕ ಶಿಕ್ಷಣವಿಲ್ಲವೆಂದು ಸ್ವಂತ ಓದಿನಿಂದಲೂ ಅಭ್ಯಾಸ ಮಾಡಬಹುದಾದ ಸ್ಥಿತಿ ಏರ್ಪಟ್ಟಿತು. ಈ ಪರಿಪಾಠ ಮುಂದಿನ ಅನೇಕ ಶಾಲಾವ್ಯಾಕರಣಗಳಿಗೆ ನಾಂದಿಯಾಯಿತು.

ಇದೇ ಅವಧಿಯಲ್ಲಿ ವ್ಯಾಕರಣವನ್ನು ಪ್ರೌಢ ವಿಷಯವಾಗಿ ಅಭ್ಯಾಸ ಮಾಡುವವರಿಗಾಗಿ ಗ್ರಂಥಗಳು ದೇಶೀಯ ಪಂಡಿತರುಗಳಿಂದ ರಚಿತವಾದವು. ಇವುಗಳ ಪೈಕಿ ಧೊಂಡೊ ನರಸಿಂಹ ಮುಳುಬಾಗಿಲರ 'ಕನ್ನಡ ಕೈಪಿಡಿ' (೧೮೯೦), ವೈ. ಕೃಷ್ಣಾಚಾರ್ಯರ 'ಕರ್ನಾಟಕ ವ್ಯಾಕರಣ' (೧೮೯೭), ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯರ 'ಕರ್ನಾಟಕ ವ್ಯಾಕರಣ' (೧೮೩೮) ಪ್ರಮುಖವಾದವು.

ವ್ಯಾಕರಣವನ್ನು ಅಭ್ಯಾಸ ವಿಷಯವಾಗಿ ಗಮನದಲ್ಲಿಟ್ಟುಕೊಂಡು ಅನೇಕ ವ್ಯಾಕರಣಗಳು ರಚಿತವಾದವಷ್ಟೆ. ಇವಲ್ಲದೆ ಕನ್ನಡ ಭಾಷೆಯನ್ನು ಕುರಿತಂತೆ ಅನೇಕ ಪ್ರೌಢಗ್ರಂಥಗಳಲ್ಲಿಯೂ ವ್ಯಾಕರಣದ ಪ್ರಸ್ತಾಪವಿದೆ. ಅಲ್ಲದೆ ದ್ರಾವಿಡ ಭಾಷೆಗಳನ್ನು ಕುರಿತಂತೆ ರಚಿತವಾದ ಅನೇಕ ಗ್ರಂಥಗಳಲ್ಲಿ ಹಲವು ವ್ಯಾಕರಣಾಂಶಗಳ, ಪ್ರಕ್ರಿಯೆಗಳ ಹಾಗೂ ಭಾಷಾಲಕ್ಷಣಗಳ ವಿಷಯ ಪ್ರಸ್ತಾಪವಾಗಿದೆ. ಇಲ್ಲಿ ವ್ಯಾಕರಣ ಪ್ರಕ್ರಿಯೆಗಳಲ್ಲಿ ಪ್ರೌಢಮಟ್ಟದ ವಿಶ್ಲೇಷಣೆ, ತೌಲನಿಕ ಅಧ್ಯಯನ, ಭಾಷಾಬೆಳವಣಿಗೆಯ ಐತಿಹಾಸಿಕ ದೃಷ್ಟಿಕೋನಗಳನ್ನು ಕಾಣಬಹುದು. ಈ ನಿಟ್ಟಿನಲ್ಲಿ ರಾಬರ್ಟ್ ಕಾಲ್ಡ್‌ವೆಲ್ಲರ A Comparative Grammar of the Dravidian or South Indian Family of Languages (೧೮೫೬) ಹಾಗೂ ಕಿಟೆಲ್‌ರ ವ್ಯಾಕರಣ ಪ್ರಮುಖವಾಗಿವೆ. ಆರ್. ನರಸಿಂಹಾಚಾರ್ಯರ The History of Kannada Language ಗ್ರಂಥವೂ ಈ ದಿಸೆಯಲ್ಲಿ ಮಹತ್ವದ ಕೃತಿ.

೨

ಕಿಟೆಲ್, ರೈಸ್, ಆರ್. ನರಸಿಂಹಾಚಾರ್ ಮುಂತಾದ ಹಿರಿಯ ವಿದ್ವಾಂಸರ ೧೯ನೆಯ ಶತಮಾನದ ಕೊನೆಯ ಹಾಗೂ ೨೦ನೆಯ ಶತಮಾನದ ಆರಂಭ ದಶಕಗಳಲ್ಲಿ ನಾಗವರ್ಮ, ಕೇಶಿರಾಜ ಮತ್ತು ಭಟ್ಟಾಕಲಂಕರ ವ್ಯಾಕರಣ ಪಠ್ಯಗಳನ್ನು ಪ್ರಕಟಿಸಿದ್ದರು.

ಆದರೆ ಅವುಗಳ ವ್ಯಾಕರಣ ವಿಷಯಗಳನ್ನು ಕುರಿತು ವಿಶ್ಲೇಷಣ ಆರಂಭವಾದ್ದು ೨೦ನೆಯ ಶತಮಾದ ಮೂರು, ನಾಲ್ಕನಯ ದಶಕಗಳಲ್ಲಿ. ಇದು ಹುಲುಸಾಗ ಲಾರಂಭಿಸಿದ್ದು ಈ ಶತಮಾನದ ಉತ್ತರಾರ್ಧದ ಆರಂಭದಲ್ಲಿ ನಡೆದ ಕೆಲಸಗಳಿಂದರೂ ಪೂರ್ಣಪ್ರಮಾಣದಲ್ಲಲ್ಲ. ಬಿಡಿಲೇಖನಗಳ ಪ್ರಯತ್ನಗಳೇ ಹೆಚ್ಚು. ಇವು ಪೂರ್ವ ಪಂಡಿತರ ಸಂಪ್ರದಾಯಕ್ಕನುವಾಗಿದ್ದು, ವೈವಿಧ್ಯ ವೈಶಿಷ್ಟ್ಯಗಳು ಕಡಿಮೆಯೇ.

೧೯೫೦ರ ಈಚೆಗೆ ನಮ್ಮ ಪ್ರಾಚೀನ ವೈಯಾಕರಣರ ಪಠ್ಯಗಳು ಮತ್ತೆ ಪರಿಷ್ಕೃತವಾಗಿ ಮುದ್ರಣಗೊಂಡಿವೆ. ಈಚೆಗೆ ಗುರುಲಿಂಗ ಕಾಪಸೆಯವರು 'ಕಾವ್ಯಾವಲೋಕನ'ದ ಶಬ್ದಸ್ಮೃತಿ ಭಾಗವನ್ನು ೧೯೭೮ರಲ್ಲಿ ಮತ್ತೆ ಸಂಪಾದಿಸಿ ಪ್ರತ್ಯೇಕವಾಗಿ ಪ್ರಕಟಿಸಿದ್ದಾರೆ. ಕೇಶಿರಾಜನ 'ಶಬ್ದಮಣಿದರ್ಪಣ'ದ ಹಲವು ಪರಿಷ್ಕರಣಗಳು ಈಚೆಗೆ ಹೊರಬಂದಿವೆ. ಇವುಗಳಲ್ಲಿ ೧೯೬೪ರಲ್ಲಿ ಡಿ.ಎಲ್. ನರಸಿಂಹಾಚಾರ್ಯರಿಂದ ಗ್ರಂಥ ಸಂಪಾದನಾ ಕ್ರಮಕ್ಕನುಗುಣವಾಗಿ ಸಂಪಾದಿತವಾಗಿ ಹೊರಬಂದಿರುವ ಪರಿಷ್ಕರಣವೇ ಪ್ರಮಾಣ ಪೂರ್ವಕವೂ ಶಾಸ್ತ್ರ ಶುದ್ಧವಾದದೂ ಆಗಿದೆ. ಇದನ್ನು ಅತ್ಯಧಿಕ ಪ್ರಮಾಣದಲ್ಲಿ ಬಲಸಿಕೊಂಡು ತ.ಸು. ಶಾಮರಾವ್ ಮತ್ತು ಎಚ್. ನಂಜೇಗೌಡರು ದರ್ಪಣದ ಒಂದು ಪರಿಷ್ಕರಣವನ್ನು ಕೆಲವು ಹೆಚ್ಚಿನ ವಿವರಗಳೊಂದಿಗೆ ತಂದಿದ್ದಾರೆ. ೧೯೭೭ರಲ್ಲಿ ಡಿ.ಕೆ. ಭೀಮಸೇನಾರಾಯರು ಉಸ್ಮಾನಿಯಾ ವಿಶ್ವವಿದ್ಯಾಲಯದ ಹಸ್ತಪ್ರತಿಯನ್ನು ಬಳಸಿಕೊಂಡು ಪರಿಷ್ಕರಿಸಿದ ದರ್ಪಣದ ಆವೃತ್ತಿ ಹೊರಬಂದಿದೆ. ಈ ಕೃತಿಯ ಪರಿಷ್ಕರಣ ಹಾಗೂ ಮುದ್ರಣ ವಿಧಾನಗಳು ತುಂಬ ನಿರಾಸೆಯನ್ನುಂಟು ಮಾಡುವಂಥ ವಾಗಿವೆ. ಪದ್ಮನಾಭಶರ್ಮರ ದರ್ಪಣದ ಕೃತಿ ಬೃಹತ್ತಾಗಿದ್ದರೂ ಅನೇಕ ವಾದಗ್ರಸ್ತ ಸಂಗತಿಗಳನ್ನೊಳಕೊಂಡಿದೆ. ಇಲ್ಲಿ ಅನೇಕ ಕನ್ನಡ ಶಬ್ದಗಳಿಗೆ ಕೊಟ್ಟಿರುವ ಅರ್ಥ ತಪ್ಪುತಪ್ಪಾಗಿದೆ. ಮಳಗಿಯವರು, ಕಲಬುರ್ಗಿಯವರು ದರ್ಪಣದ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಇವುಗಳ ಉಪಯುಕ್ತತೆ ತುಂಬ ಕಡಿಮೆ. ಪದ್ಮನಾಭಶರ್ಮರವರು ಪ್ರಕಟಿಸಿರುವ ಭಟ್ಟಾಕಲಂಕನ 'ಶಬ್ದಾನುಶಾಸನ' ಮೂಲ ಕೃತಿಗೆ ಅಪಚಾರವನ್ನೆಸಗು ವಂತಿದೆ. ಮುಂದೆ ಎಲ್. ಬಸವರಾಜು ಅವರು ಪರಿಷ್ಕರಿಸಿದ ದರ್ಪಣದ ಆವೃತ್ತಿ ಹೊರಬಂದಿತು. ೧೯೪೪ರಲ್ಲಿ ಟಿ.ವಿ. ವೆಂಕಟಾಚಲಶಾಸ್ತ್ರಿಯವರು ಪರಿಷ್ಕರಿಸಿದ ದರ್ಪಣದ ಆವೃತ್ತಿ ಶಾಸ್ತ್ರ ಶುದ್ಧವಾಗಿದೆ. ಎಸ್.ಎಸ್. ಅಂಗಡಿ ಅವರು ವಿದ್ಯಾರ್ಥಿಗಳಿಗ ಅನುಕೂಲವಾಗುವಂತೆ 'ಸರಳ ಶಬ್ದಮಣಿ ದರ್ಪಣ' ಎಂಬ ಹೆಸರಿನಿಂದ ಸಂಪಾದಿಸಿದ್ದಾರೆ.

೩

ಈ ಮೂರು ದಶಕಗಳಲ್ಲಿ ಕನ್ನಡ ವ್ಯಾಕರಣಗಳ ಬಗ್ಗೆ ಪುಸ್ತಕ ರೂಪದಲಿ ಪ್ರಕಟವಾಗಿರುವ ಕೃತಿಗಳು ಕೆಲವೇ. ಜಿಳಿಗಿರಿಯವರ 'ಆಲೋಕ' ಈ ಗಕ್ಕಿನಲ್ಲಿ ಒಂದು ಅತ್ಯುತ್ತಮ ರಚನೆ. ವ್ಯಾಕರಣ ವಿಷಯವನ್ನು ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ

ಚೊಕ್ಕವಾಗಿ ವಿಶ್ಲೇಷಿಸಬಹುದೆಂಬುದಕ್ಕೆ ಇದೊಂದು ಶ್ರೇಷ್ಠ ನಿದರ್ಶನ. ಸಂಧಿ ಪ್ರಕರಣದ ಮುಂದಿನ ವಿಷಯಗಲಿಗೆ ಅವರು ವ್ಯಾಖ್ಯಾನ ಯಾಕೆ ಬರೆಯಲಿಲ್ಲವೋ ತಿಳಿಯುವುದಿಲ್ಲ. ಸಮಸ್ಯೆಗಳ ಮೂಲಭೂತ ಸಮಸ್ಯೆಗಳನ್ನು ಒಳಹೊಕ್ಕು ಬಿಡಿಸಲು ಯತ್ನಿಸಿರುವ ಒಂದು ಮೌಲಿಕ ಪ್ರಯತ್ನವು ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟರ 'ಕನ್ನಡ ಸಮಾಸಗಳು' ಕೃತಿಯಲ್ಲಿದೆ. ಇದೇ ಲೇಖಕರು ದರ್ಪಣದ ಎಂಟು ಪ್ರಕರಣಗಳನ್ನು ಹೊಸಗನ್ನಡದಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಅವರ ಕನ್ನಡ ಸಮಾಸಗಳು ಕೃತಿಯಲ್ಲಿರುವ ಹೊಸ ಬಗೆಯ ವಿವೇಚನೆ ಇದರಲಿಲ್ಲವೆಂದೇ ಹೇಳಬೇಕಾಗುತ್ತದೆ. ಟಿ.ಶಂಬುಲಿಂಗಪ್ಪ ಅವರ 'ಕೇಶಿರಾಜನ ಶಬ್ದಮಣಿ ದರ್ಪಣದ ಸೂತ್ರಸಾರ' ವ್ಯಾಕರಣ ವಿಷಯಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಬರೆದಿರುವ ಪುಸ್ತಕಕ. ವ್ಹಿ. ಶಿವಾನಂದರ 'ಶಬ್ದಮಣಿದರ್ಪಣ ವಿಳಾಸ' ಕಲಬುರ್ಗಿ ಅವರ 'ಪ್ರತಿಬಿಂಬ' ಬೀಳಗಿ ಅವರ 'ಪ್ರತಿಫಲನ' ಹಾಗೂ ಅಬ್ದುಲ್ ಬಷೀರ್‌ರ 'ದರ್ಪಣ ದೀಪಿಕೆ' - ಇವು ವಿದ್ಯಾರ್ಥಿಗಳನ್ನು ಲಕ್ಷ್ಯದಲ್ಲಿಟ್ಟು ಕೊಂಡು ರಚಿತವಾಗಿವೆ. ಎ.ಎಂ.ವಿ. ಸೀತಾರಾಮಯ್ಯನವರ 'ಪ್ರಾಚೀನ ಕನ್ನಡ ವ್ಯಾಕರಣ ಗಳು' ದೊಡ್ಡಸ್ವಾಮಿಯವರು 'ಹಳಗನ್ನಡ ವ್ಯಾಕರಣಗಳ ತೌಲನಿಕ ವಿಶ್ಲೇಷಣೆ' ಪ್ರಾಚೀನ ಕನ್ನಡ ವ್ಯಾಕರಣಗಳನ್ನು ತೌಲನಿಕ ಪರಿಶೀಲನೆಗೆ ಗುರಿಪಡಿಸಿರುವ ಕೃತಿಗಳು. ಮೊದಲನೆಯದಕ್ಕಿಂತ ಎರಡನೆಯದು ದೊಡ್ಡದು. ಆದರೆ ಮೊದಲನೆಯದರಲ್ಲಿರುವ ವಿಶದತೆ, ಅಚ್ಚುಕಟ್ಟು ನಿರೂಪಣೆ, ಹೊಸತನ ಎರಡನೆಯದರಲ್ಲಿಲ್ಲ. ಅಲ್ಲದೆ ಎರಡನೆಯ ಕೃತಿಯಲ್ಲಿ ವಿಶ್ಲೇಷಣೆ ಭಾಗಕ್ಕಿಂತ ಉದ್ಧೃತ ಭಾಗಗಳೇ ಹೆಚ್ಚಾಗಿವೆ. ದರ್ಪಣವನ್ನು ಕುರಿತು ಕುಳ್ಳಿಯವರು ಭಾಷಾಶಾಸ್ತ್ರ ದೃಷ್ಟಿಯಿಂದ ಬರೆದಿರುವ ಕೃತಿ ಇಂಗ್ಲಿಶಿನಲ್ಲಿದೆ. ಭಟ್ಟಾಕಲಂಕನ ವ್ಯಾಕರಣದಲ್ಲಿ ಪ್ರಸ್ತಾಪಿತವಾಗಿರುವ ಸಂಗತಿಗಳನ್ನು ಉಪ್ಪಂಗಳ ರಾಮಭಟ್ಟರು 'ಕರ್ನಾಟಕ ಶಬ್ದಾನುಶಾಸನ' ಕೃತಿಯಲ್ಲಿ ವಿವೇಚಿಸಿದ್ದಾರೆ. ಕನ್ನಡ ವ್ಯಾಕರಣಗಳ ಮೇಲಾಗಿರುವ ಸಂಸ್ಕೃತ ವ್ಯಾಕರಣ ಸಂಪ್ರದಾಯಗಳ ಪ್ರಭಾವವನ್ನು ಶ್ರೀ ಪಿ. ಕೃಷ್ಣಭಟ್ಟರ ಅಧ್ಯಯನ ಮೌಲಿಕವಾಗಿದೆ. ಪ್ರಕೃತ ಲೇಖಕರ 'ಕನ್ನಡ ಕ್ರಿಯಾರೂಪಗಳು' ದರ್ಪಣದ ಧಾತುಪಾಠವನ್ನು ಆಧುನಿಕ ಕೋಶರಚನೆಯ ಹಿನ್ನೆಲೆಯಲ್ಲಿ ಪರಿಷ್ಕರಿಸಿದ ಕೃತಿಯಾಗಿದೆ. ಪ್ರಮಾಣ ಕನ್ನಡ ಹಾಗು ಆಡುನುಡಿಯ ಕ್ರಿಯಾರೂಪಗಳು ಸೇರಿರುವುದು ಇಲ್ಲಿಯ ಹೊಸ ಸಂಗತಿ. ಈ ಅವಧಿಯಲ್ಲಿ ಡಿ. ಗಂಗರಾಜು, ಎ.ಕೆ. ಪುಟ್ಟರಾಮು, ಕೆ. ಹನುಮಂತರಾವ್, ಎಲ್. ಗುಂಡಪ್ಪ, ನೀ. ಗಿರಿಗೌಡ, ಎಂ.ಪಿ. ಮಂಜಪ್ಪ ಶೆಟ್ಟಿ, ಆಯ್.ಎಸ್. ಅರಳಗುಪ್ಪಿ ಮುಂತಾದ ಲೇಖಕರು ಅರುವತ್ತಕ್ಕೂ ಹೆಚ್ಚು ಶಾಲಾವ್ಯಾಕರಣಗಳನ್ನು ರಚಿಸಿದ್ದಾರೆ. ವಿದ್ಯಾರ್ಥಿಗಳನ್ನೇ ಗಮನದಲ್ಲಿಟ್ಟುಕೊಂಡು ರಚಿತವಾಗಿರುವ ಇವು ತೀ.ನಂ.ಶ್ರೀಕಂಠಯ್ಯ ಅವರ 'ಕನ್ನಡ ಮಧ್ಯಮ ವ್ಯಾಕರಣ', ಟಿ.ವಿ. ವೆಂಕಟಾಚಲಶಾಸ್ತ್ರೀ ಅವರ 'ಹೊಸಗನ್ನಡ ವ್ಯಾಕರಣ'ವ ಮಟ್ಟಕ್ಕೆ ಬರುವುದಿಲ್ಲ.

ಈ ಅವಧಿಯಲ್ಲಿ ವ್ಯಾಕರಣ ವಿಷಯಗಳನ್ನು ಕುರಿತು ಕೆಲವು ವಿಚಾರಪೂರ್ಣ ಲೇಖನಗಳೂ ಅಚ್ಚಾಗಿವೆ. ಸೇಡಿಯಾಪು ಅವರ 'ಪಂಚಮೀ ವಿಭಕ್ತಿ', 'ಗಮಕ ಸಮಾಸ', ಮುಳಿಯವರ 'ಕನ್ನಡ ಅಕ್ಷರಮಾಲೆ', ಬಿಳಿಗಿರಿ ಅವರ 'ಗಮಕ ಸಮಾವು ಸಮಾಸವೆ?', ಕುಶಾಲಪ್ಪಗೌಡರ 'ಲಿಂಗ'ಗಳನ್ನು ಕುರಿತ ಲೇಖನಗಳು ಹೊಸ ವಿಷಯಗಳನ್ನೊಳಗೊಂಡಿವೆ. ವಿ. ಕೃಷ್ಣಸ್ವಾಮಿ ಅಯ್ಯಂಗಾರ್ ಅವರ 'ಗಮಕಸಮಾಸ', 'ಸತಿಸಪ್ತಮಿ', ಕವಿರಾಜಮಾರ್ಗದಲ್ಲಿ 'ಕಾರಕ ವಿಚಾರ' ಕುರಿತಾದ ಬರೆಹಗಳು ಮೌಲಿಕವಾದವು. ಅನಂತನಾರಾಯಣ, ಎಂ.ವಿ. ಸೀತಾರಾಮಯ್ಯ ಮುಂತಾದವರು ತದ್ಧಿತ ಪ್ರತ್ಯಯಗಳನ್ನು ಕುರಿತ ಲೇಖನಗಳು ಕುತೂಹಲಕರವಾಗಿವೆ. ಚಿದಾನಂದ ಮೂರ್ತಿ ಅವರ 'ಕನ್ನಡ ವ್ಯಾಕರಣಕಾರರು ಮತ್ತು ಸ್ವೀಕರಣ ವಿಚಾರ' ದರ್ಪಣದ ಅಪಭ್ರಂಶ ಪ್ರಕರಣವನ್ನು ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ ಮೌಲಿಕ ಬರೆಹ. ವಿಲ್ಯಂ ಮಾಡ್ತಾ ಅವರು ವ್ಯಾಕರಣ ವಿಷಯಗಳಲ್ಲಿ ಕೆಲವನ್ನು ಭಾಷಾಶಾಸ್ತ್ರದ ದೃಷ್ಟಿಯಿಂದ ಪರಿಶೀಲಿಸಿರುವುದು, ಆ ಸಂಬಂಧದಲ್ಲಿ ಕೆಲವೆಡೆ ಸರಿಯಾದ ನಿರ್ಣಯ ಗಳನ್ನು ತಳೆದಿರುವುದು ಉಲ್ಲೇಖನೀಯವಾಗಿದೆ. ಕನ್ನಡ ವರ್ಣಮಾಲೆ, ಸಂಧಿಗಳನ್ನು ಕುರಿತಾದ ತಾರಾನಾಥರ ಬರೆಹಗಳು ಹೊಸಬಗೆಯ ವಿವೇಚನೆಯಿಂದ ಕೂಡಿವೆ. ಅನುಸ್ವರ ಕನ್ನಡ ವರ್ಣಮಾಲೆ ಹಾಗೂ ದರ್ಪಣದ ಕೆಲವು ಸೂತ್ರಗಳನ್ನೇ ಕುರಿತು ಸಂಗಮೇಶ ಬಿರಾದರ, ಲಲಿತಮ್ಮ, ಲಿಂಗದೇವರು ಹಳೇಮನೆ ಹಾಗೂ ಲೀಲಾವತಿ ಇವರೇ ಮುಂತಾದವರು ಬಿಡಿಬರೆಹಗಳನ್ನು ಪ್ರಕಟಿಸಿರುವುದುಂಟು.

ಈ ಅವಧಿಯಲ್ಲಿ ರಚಿತಗೊಂಡ ವ್ಯಾಕರಣಗಳ ಸ್ವರೂಪವನ್ನು ಗುಣಲಕ್ಷಣಗಳನ್ನು ಹೀಗೆ ಹೇಳಬಹುದು.

೧. ಬಹುಪಾಲು ವ್ಯಾಕರಣಗಳು ದರ್ಪಣವನ್ನು ಆಧರಿಸಿಯೇ ರಚಿತವಾಗಿವೆ

೨. ಭಾಷಾಶಾಸ್ತ್ರ ದೃಷ್ಟಿಕೋನದಿಂದ ಆಗಿರುವ ಕೆಲಸ ಕಡಿಮೆಯದಾಗಿರುವುದಲ್ಲದೆ, ಆ ತತ್ವಗಳನ್ನು ಇಲ್ಲಿ ಅಳವಡಿಸಿಕೊಂಡು ಸರಿಯಾದ ಫಲಿತಾಂಶಗಳನ್ನು ಪಡೆದಿರುವ ಸಂದರ್ಭಗಳು, ಬರೆಹಗಳು ಹೆಚ್ಚಿಲ್ಲ.

೩. ಈ ಅವಧಿಯ ವ್ಯಾಕರಣ ರಚನಾ ಪದ್ಧತಿಯಲ್ಲಿ ಗಮನಾರ್ಹವೆನ್ನಬಹುದಾದ ವ್ಯತ್ಯಾಸಗಳೇನೂ ಕಂಡುಬರುವುದಿಲ್ಲ. ಒಂದೆರಡು ಗ್ರಂಥಗಳನ್ನು ಬಿಟ್ಟರೆ ಸೂತ್ರ ಪದ್ಧತಿಯಿಂದ ನಿರೂಪಣಾ ಪದ್ಧತಿಗೆ ವ್ಯಾಕರಣ ನಿರೂಪಣೆಯಲ್ಲಿ ಬದಲಾವಣೆ ಯನ್ನು ಗುರುತಿಸಬಹುದು.

೪. ಹೆಚ್ಚಿನ ಬರೆಹಗಳಲ್ಲಿ ಪದರಚನೆಗೆ ಒತ್ತುಕೊಡಲಾಗಿದೆ. ಧ್ವನಿಗೆ ಸಂಬಂಧಪಟ್ಟಂತೆ ಕೇವಲ ವರ್ಣಮಾಲೆಯ ಪರಿಚಯಾತ್ಮಕವಾದ ಪ್ರಸ್ತಾಪವನ್ನು ಕೆಲವು ಬರೆಹಗಳನ್ನು ಕಾಣಬಹುದು.

೫. ಕೇಶಿರಾಜಾದಿಗಳ ವಿಷಯ ನಿರೂಪಣೆಯ ಸರಿ ತಪ್ಪುಗಳ ವಿವೇಚನೆ, ಹೊಸಗನ್ನಡ ಭಾಷೆಯ ನಿರೂಪಣೆ ಈ ಅವಧಿಯ ಅಧ್ಯಯನದಲ್ಲಿ ನಡೆಯದಿರುವುದು ಬಹುದೊಡ್ಡ ಕೊರತೆ.

೪

ನಡುಗನ್ನಡ ಕಾಲದಲ್ಲಿ ಭಾಷೆಯ ದೃಷ್ಟಿಯಿಂದ ಹಲವಾರು ಮಾರ್ಪಾಟುಗಳು ಕಂಡುಬಂದಿವೆ. ಉದಾ: ವಚನಕಾರರ ಭಾಷಿಕ ಪ್ರಯೋಗಗಳು. ಇವನ್ನೆಲ್ಲ ಸಮರ್ಪಕ ವಾಗಿ ದಾಖಲಿಸಿ ಭಾಷಿಕ ರಚನೆಯ ವೈವಿಧ್ಯವನ್ನು ಗುರುತಿಸಿ ಸೂಕ್ತ ಉದಾಹರಣೆ ಗಳೊಡನೆ ಬರೆದ ಯಾವ ವ್ಯಾಕರಣವು ಈ ಕಾಲಘಟ್ಟದಲ್ಲಿ ಕಂಡುಬರುವುದಿಲ್ಲ.

ವ್ಯಾಕರಣಕ್ಕೆ ಸಂಬಂಧಪಟ್ಟಂತೆ ಅದರ ಕಲಿಕೆಗೆ ಸಂಬಂಧಪಟ್ಟ ಅಂಶ ಪ್ರಮುಖ ವಾದುದು. ವ್ಯಾಕರಣ ಕಲಿಕೆ ಭಾಷಾಕಲಿಕೆಯ ಪ್ರಮುಖ ಅಂಗವಾಗಿದ್ದು ಹಿಂದೆ ಅದು ಪ್ರತ್ಯೇಕ ಶಿಸ್ತಿನ ವಿಷಯವಾಗಿತ್ತು. ಸೂತ್ರಗಳ ಕಂಠಪಾಠ ಅನಿವಾರ್ಯ ವಾಗಿತ್ತು. ಆದರೆ ಸೂತ್ರಗಳಿಗೆ ನೀಡುವ ವಿವರಗಳು ಬಹುಮಟ್ಟಿಗೆ ಪ್ರಯೋಗ ಸಿದ್ಧವಾಗಿದ್ದು ಅಂದಿನ ಬಳಕೆಯ ರೀತಿಯನ್ನೇ ಆಧರಿಸಿದ್ದವು. ಇದರಿಂದ ವ್ಯಾಕರಣ ಹಾಗೂ ದೈನಂದಿನ ಭಾಷೆ ಎಂದರೆ ಅಂದಿನ ಶಿಷ್ಟರೂಪಗಳಾಗಿದ್ದವು. ಇಂದಿನ ಪರಿಸ್ಥಿತಿ ಹಾಗಿಲ್ಲ. ಇಂದು ವ್ಯಾಕರಣ ಶಾಸ್ತ್ರದಲ್ಲಿ ಕಂಡುಬರುವ ತಾರ್ಕಿಕ ವಿವರಣೆ, ನಿಯಮಗಳು, ಪ್ರಯೋಗಗಳು ದೈನಂದಿನ ಭಾಷೆಯ ರಚನೆಯಿಂದ ಭಿನ್ನವಾಗಿವೆ. ವ್ಯಾಕರಣ ಕಲಿಕೆ, ಕಬ್ಬಿಣ ಕಡಲೆಯಾಗಿ ಪರಿಣಮಿಸಿದೆ. ಈ ಕೊರತೆಯನ್ನು ತುಂಬಲು ವ್ಯಾಕರಣ ನಿರೂಪಣೆಯ ರೀತಿಯೇ ಬದಲಾಗಿ ಕನ್ನಡಕ್ಕೆ ಕನ್ನಡದ್ದೇ ಆದ ವ್ಯಾಕರಣ ಅತ್ಯಗತ್ಯ ವಾಗಿದೆ.

ನಿಜಕ್ಕೂ ಹೊಸಗನ್ನಡಕ್ಕೆ ಅದರದ್ದೇ ಆದ ಒಂದು ವ್ಯಾಕರಣವಿದೆ. ಅದು ಹಳಗನ್ನಡ ವ್ಯಾಕರಣಕ್ಕಿಂತ ಸ್ವಲ್ಪ ಭಿನ್ನವಾಗಿದೆ. ಸಂಸ್ಕೃತ, ಇಂಗ್ಲಿಶ್ ಮೊದಲಾದ ಭಾಷೆಗಳ ವ್ಯಾಕರಣಗಳಿಗಿಂತ ಬಹಳ ಭಿನ್ನವಾಗಿದೆ. ಕನ್ನಡ ಭಾಷಾ ರಚನೆಯ ನಿಜತ್ವ ಶೋಧನೆ ಯನ್ನು ಡಿ.ಎನ್. ಶಂಕರಭಟ್ಟರು ಮಾಡಿದ್ದಾರೆ. ಅವರ 'ಕನ್ನಡ ವಾಕ್ಯಗಳು', 'ಕನ್ನಡ ಶಬ್ದರಚನೆ', 'ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ' ಇಂತಹವು ಮಾರ್ಗಪ್ರವರ್ತಕ ಕೃತಿಗಳಾಗಿವೆ. ಕನ್ನಡದಲ್ಲಿ ಬಳಸುತ್ತಿರುವ ಪದರಚನೆಗಳನ್ನು, ವಾಕ್ಯ ರಚನೆಗಳನ್ನು ಪರಿಶೀಲಿಸಿ, ಅವುಗಳ ಆಂತರಿಕ ರಚನೆ ಮತ್ತು ಸಂಬಂಧಗಳನ್ನು ಗುರುತಿಸಿ, ಸೂತ್ರ, ನಿಯಮಗಳನ್ನು ನಿರೂಪಿಸಿ 'ಇದು ಕನ್ನಡ ವ್ಯಾಕರಣ' ಎಂದು ಖಚಿತವಾಗಿ ನಿರ್ಣಯಿಸಿದ್ದಾರೆ. ಕನ್ನಡದ್ದೇ ವ್ಯಾಕರಣ ಹೇಗೆ ಸಂಸ್ಕೃತಕ್ಕಿಂತ ಭಿನ್ನವಾಗಿದೆ ಮತ್ತು ಹೇಗೆ ಇದು ಕನ್ನಡಕ್ಕೆ ಸಹಜ ಪೋಷಕವಾಗಿದೆ ಎಂಬ ಸಂಗತಿಗಳನ್ನು ಪ್ರಸಕ್ತ ಕೃತಿಯಲ್ಲಿ ವಿವರಿಸಿದ್ದಾರೆ. ಪ್ರೌಢಶಾಲೆಗಳಲ್ಲಿ ಎಂತಹ ವ್ಯಾಕರಣ ಕಲಿಸಬೇಕು, ವಿಶ್ವವಿದ್ಯಾಲಯಗಳಲ್ಲಿ

ಕನ್ನಡ ವ್ಯಾಕರಣಗಳ ಮೇಲೆ ಹೇಗೆ ಸಂಶೋಧನೆ ನಡೆಸಬೇಕು ಎಂಬುದರ ಬಗ್ಗೆ ಮಾರ್ಗದರ್ಶನವನ್ನೂ ಮಾಡಿದ್ದಾರೆ. ಕೆ.ವಿ. ನಾರಾಯಣರ 'ಶಾಲೆಯ ಮಕ್ಕಳಿಗೆ ವ್ಯಾಕರಣ' ಎಂಬ ಲೇಖನ ಈ ದಿಕ್ಕಿನ ಗಮನಾರ್ಹ ಪ್ರಯತ್ನ. ಶಂಕರಭಟ್ ಮತ್ತು ನಾರಾಯಣರ ವಿಚಾರಗಳನ್ನು ಭಾಷಾತಜ್ಞರು, ಶಿಕ್ಷಣ ತಜ್ಞರು ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ.

ಕನ್ನಡವು ಕೂಡ ಕಳೆದ ಅರವತ್ತು ವರ್ಷಗಳಿಂದ ಸಾಕಷ್ಟು ಬದಲಾವಣೆಯಾಗಿದೆ. ಈ ನಡುವೆ ಅನ್ಯಭಾಷೆಗಳ ಪ್ರಭಾವವು ಸಾಕಷ್ಟಾಗಿದೆ. ಇವೆಲ್ಲವನ್ನೂ ದಾಖಲಿಸುವ ಪ್ರಯತ್ನ ಆಗಬೇಕಾಗಿದೆ ಎಂಬ ಹಂಬಲದೊಂದಿಗೆ, ಈ ಹಿಂದೆ ಕನ್ನಡ ವ್ಯಾಕರಣ ಕ್ಷೇತ್ರದಲ್ಲಿ ನಡೆದ ಅಧ್ಯಯನ ಸೂಚಿಯನ್ನು ಕೊಡಲಾಗಿದೆ.

ಅ. ಗ್ರಂಥಗಳು

೧. ಅಂಗಡಿ ಎಸ್.ಎಸ್., ೨೦೦೦, ಕನ್ನಡ ಕ್ರಿಯಾರೂಪಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಅಂಗಡಿ ಎಸ್.ಎಸ್., ೨೦೦೬, ಸರಳ ಶಬ್ದಮಣಿ ದರ್ಪಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ಅಬ್ದುಲ್ ಬಷೀರ್ ಜಿ., ೧೯೮೮, ದರ್ಪಣದೀಪಿಕೆ(ಶಬ್ದಮಣಿದರ್ಪಣ ವ್ಯಾಖ್ಯಾನ), ಸನಾ ಪ್ರಕಾಶನ, ಬೆಂಗಳೂರು

೪. ಅರಳಗುಪ್ಪಿ ಆಯ್.ಎಸ್., ೧೯೯೬, ಹೊಸಗನ್ನಡ ವ್ಯಾಕರಣ, ಸಮಾಜ ಪುಸ್ತಕಾಲಯ, ಧಾರವಾಡ

೫. ಉಪ್ಪಂಗಳ ರಾಮಭಟ್ಟ, ೧೯೮೬, ಕನ್ನಡ ವೈಯಾಕರಣ 'ಭಟ್ಟಾಕಲಂಕ', ಅಕಲಂಕ ಪ್ರಕಾಶನ, ಕುಂಜಿಬೆಟ್ಟು, ಉಡುಪಿ

೬. ——— ೧೯೯೫, ಕರ್ನಾಟಕ ಶಬ್ದಾನುಶಾಸನ ವಿವೇಚನೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೭. ಕಲಬುರ್ಗಿ ಎಂ.ಎಂ., ೧೯೭೮, ಪ್ರತಿಬಿಂಬ(ಶಬ್ದಮಣಿದರ್ಪಮ ವ್ಯಾಖ್ಯಾನ), ಸತೀಶ ಪ್ರಕಾಶನ, ಗುಲಬಾರ್ಗ

೮. ಕುಶಾಲಪ್ಪ ಗೌಡ ಕೆ., ೧೯೮೬, ಕನ್ನಡ ಭಾಷೆ ಮತ್ತು ವ್ಯಾಕರಣಗಳ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೯. ———೧೯೯೨, ಕನ್ನಡ ವ್ಯಾಕರಣ: ಸಾಂಪ್ರದಾಯಿಕ ಹಾಗೂ ಭಾಷಾ ವೈಜ್ಞಾನಿಕ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೦. ಕೃಷ್ಣಮಾಚಾರ್ಯ ಶ್ರೀರಂಗಪಟ್ಟಣ, ೧೮೮೨, ಹೊಸಗನ್ನಡ ನುಡಿಗನ್ನಡಿ, ಬಾಸೆಲ್ ಮಿಶನ್, ಮಂಗಳೂರು

೧೧. ಗಿರಿಗೌಡ ನೀ., ೧೯೭೫, ಕನ್ನಡ ವ್ಯಾಕರಣ ಪರಿಚಯ, ಡಿವಿಕೆ ಮೂರ್ತಿ, ಪ್ರಕಾಶಕರು, ಮೈಸೂರು
೧೨. ತೆಕ್ಕುಂಜ ಗೋಪಾಲಕೃಷ್ಣಭಟ್, ೧೯೭೦, ಕನ್ನಡ ಸಮಾಸಗಳು, ಡಿವಿಕೆ ಮೂರ್ತಿ, ಪ್ರಕಾಶಕರು, ಮೈಸೂರು
೧೩. ——— ೧೯೯೯, ಕೇಶಿರಾಜದರ್ಪಣ (ಶಬ್ದಮಣಿದರ್ಪಣ ವ್ಯಾಖ್ಯಾನ), ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ
೧೪. ದೊಡ್ಡಸ್ವಾಮಿ, ೧೯೬೯, ಶಬ್ದಮಣಿದರ್ಪಣದ ದಿಗ್ದರ್ಶನ ದೊಡ್ಡಸ್ವಾಮಿ ದೊಡ್ಡನಹಳ್ಳಿ, ಮದ್ದೂರು (ಮಂಡ್ಯ ಜಿ.)
೧೫. ———೧೯೮೦, ಹಳಗನ್ನಡ ವ್ಯಾಕರಣಗಳ ತೌಲನಿಕ ವಿಶ್ಲೇಷಣೆ, ದೊಡ್ಡಸ್ವಾಮಿ, ದೊಡ್ಡನಹಳ್ಳಿ, ಮದ್ದೂರು.
೧೬. ನರಸಿಂಹಯ್ಯ ಕೆ.ಆರ್., ೧೯೧೮, ಕರ್ನಾಟಕ ವ್ಯಾಕರಣ ಸಾರಂ, ರತ್ನಾಕರ್ ಅಂಡ್ ಕಂಪನಿ, ಪ್ರಿಂಟರ್ಸ್, ಬೆಂಗಳೂರು
೧೭. ಪದ್ಮನಾಭ ಶರ್ಮ ಡಿ. ಭುವನಹಳ್ಳಿ, ೧೯೭೬, ಶಬ್ದಮಣಿದರ್ಪಣಂ (ನಲ್ನುಡಿ ವ್ಯಾಖ್ಯಾನ ಸಹಿತ), ಪದ್ಮಾಂಬ ಪ್ರಕಾಶನ, ಬೆಂಗಳೂರು
೧೮. ಪೂಜಾರ ಮ.ಪ್ರ., ೧೯೫೨, ಕೆಲವು ಕನ್ನಡ ವ್ಯಾಕರಣ ವಿಚಾರಗಳು, ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್, ಧಾರವಾಡ
೧೯. ———೧೯೯೭, ಕನ್ನಡ ನುಡಿಗನ್ನಡಿ(ಮೂರು ಭಾಗಗಳು ಮರುಮುದ್ರಣ), ಸಮಾಜ ಪುಸ್ತಕಾಲಯ, ಧಾರವಾಡ
೨೦. ಬಿಳಿಗಿರಿ ಎಚ್.ಎಸ್., ೧೯೬೯, ಆಲೋಕ(ಭಾಗ ೧), ಅಕ್ಷರ ಪ್ರಕಾಶನ, ಸಾಗರ
೨೧. ಬೀಳಗಿ ಎಚ್.ಎಂ., ೧೯೮೬, ಪ್ರತಿಫಲನ (ಶಬ್ದಮಣಿದರ್ಪಮ ವಿವರಣೆ), ಸಮಾಜ ಪುಸ್ತಕಾಲಯ, ಧಾರವಾಡ
೨೨. ಮಂಗೇಶರಾವ್ ಪಿ., ೧೯೫೨, ಕನ್ನಡ ಮೂಲ ವ್ಯಾಕರಣ, ಬಾಸೆಲ್ ಮಿಶನ್ ಬುಕ್ ಡಿಪೊ, ಮಂಗಳೂರು
೨೩. ಮರುಳಯ್ಯ ಸಾ.ಶಿ. ಮತ್ತು ಶಾಲಿನಿ ಪ್ರಭು, ೧೯೯೭, ಕೇಶಿರಾಜನಗರಡಿಯಲ್ಲಿ, ರಾಗಿಣಿ ಶಿಕ್ಷಣ ಪ್ರತಿಷ್ಠಾನ, ಬೆಂಗಳೂರು
೨೪. ವೆಂಕಟಾಚಲಶಾಸ್ತ್ರೀ ಟಿ.ವಿ., ೧೯೯೦, ಹೊಸಗನ್ನಡ ವ್ಯಾಕರಣ, ಬಿ.ಎಂ.ಶ್ರೀ, ಸ್ಮಾರಕ ಪ್ರತಿಷ್ಠಾನ, ಬೆಂಗಳೂರು
೨೫. ಶಂಕರಭಟ್ ಡಿ.ಎನ್., ೧೯೯೯, ಕನ್ನಡ ಶಬ್ದರಚನೆ, ಕ್ರೈಸ್ಟ್ ಕಾಲೇಜು, ಬೆಂಗಳೂರು
೨೬. ——— ೨೦೦೦, ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ, ಭಾಷಾ ಪ್ರಕಾಶನ, ಮೈಸೂರು

೨೭. ಶಿವಾನಂದ ವಿ., ೧೯೭೨, ಶಬ್ದಮಣಿದರ್ಪಮ ವಿಳಾಸ (ಶಬ್ದಮಣಿದರ್ಪಣದ ವಿವರಣೆ), ವಿಜಯ ಬುಕ್ ಡಿಪೊ, ಗದಗ
೨೮. ಶ್ರೀಕಂಠಯ್ಯ ತೀ.ನಂ., ೧೮೭೨, ಕನ್ನಡ ಮಧ್ಯಮ ವ್ಯಾಕರಣ, ಗೀತಾಬುಕ್ ಹೌಸ್, ಮೈಸೂರು
೨೯. ಶ್ರೀ ಕೃಷ್ಣಭಟ್ ಪಿ., ೧೯೮೯, ಕನ್ನಡ ವ್ಯಾಕರಣ ಪರಂಪರೆಯ ಮೇಲೆ ಸಂಸ್ಕೃತದ ಪ್ರಭಾವ, ವಿದ್ಯಾ ಪ್ರಕಾಶನ, ಕಾಸರಗೋಡು
೩೦. ಶ್ರೀನಿವಾಸನ್ ಎಸ್., ೧೯೭೧, ಕೇಶಿರಾಜ, ಡಿವಿಕೆ ಮೂರ್ತಿ, ಮೈಸೂರು
೩೧. ಸಂಗಮೇಶ ಬಿರಾದರ, ೧೯೮೫, ವೈಯಾಕರಣ ಎರಡನೇ ನಾಗವರ್ಮ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೩೨. ಸಿದ್ಧಲಿಂಗಯ್ಯ ಹೆಚ್., ೧೯೭೩, ಕನ್ನಡ ವ್ಯಾಕರಣ, ಶರತ್ ಪ್ರಕಾಶನ, ಮೈಸೂರು
೩೩. ಸೀತಾರಾಮಯ್ಯ ಎಂ.ವಿ., ೧೯೭೫, ಶಾಸ್ತ್ರಸಾಹಿತ್ಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
೩೪. ———೧೯೭೯, ಪ್ರಾಚೀನ ಕನ್ನಡ ವ್ಯಾಕರಣಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು
೩೫. ಸೀತಾರಾಮಯ್ಯ ವಿ (ಸಂ.), ೧೯೭೩, ಎರಡನೇ ನಾಗವರ್ಮ, ಐಬಿಹೆಚ್ ಪ್ರಕಾಶನ, ಬೆಂಗಳೂರು
೩೬. ———೧೯೭೭, ವ್ಯಾಕರಣಗಳು, ಐಬಿಹೆಚ್ ಪ್ರಕಾಶನ, ಬೆಂಗಳೂರು
೩೭. ಸೇಡಿಯಾಪು ಕೃಷ್ಣಭಟ್, ೧೯೭೪, ಕನ್ನಡ ವರ್ಣಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೩೮. ಕನ್ನಡ ಕೈಪಿಡಿ (ಸಂ.೧), ೧೯೭೫, ಹಳಗನ್ನಡ ವ್ಯಾಕರಣ (೧ನೇ ಭಾಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
೩೯. ಆರ್.ಡಿ.ಜಿ., ೧೯೯೪, ಕನ್ನಡ ವ್ಯಾಕರಣ ದೀಪಿಕೆ, ಕರ್ನಾಟಕ ಬುಕ್ ಏಜನ್ಸಿ, ಬೆಂಗಳೂರು

ಆ. ಲೇಖನಗಳು

೧. ಅನಂತನಾರಾಯಣ ಎಚ್.ಎಸ್., ೧೯೭೬, 'ಕನ್ನಡದಲ್ಲಿ ಸಂಸ್ಕೃತದ ಕೆಲವು ಪ್ರತ್ಯಯಗಳು' (ತೀ.ನಂ.ಶ್ರೀಕಂಠಯ್ಯ ಅಭಿನಂದನ ಗ್ರಂಥ)
೨. ಅಸ್ಸನ್ ಕೆ., ೧೯೮೫, 'ತದ್ಧಿತ–ತತ್ಸಮ ಶಬ್ದಗಳಲ್ಲಿ ಪ್ರಥಮ ಸ್ವರಾದೇಶ' ಒಂದು ಅನ್ವಯಿಕ ವಿಶ್ಲೇಷಣೆ, ಕರ್ನಾಟಕ ಭಾರತಿ ೧೭-೩
೩. ಕಲಬುರ್ಗಿ ಎಂ.ಎಂ., ೧೯೬೮, ಶಬ್ದಮಣಿದರ್ಪಣದ ಅನ್ವಯವೃತ್ತಿ ಮತ್ತು ಅರ್ಥವೃತ್ತಿ ಕರ್ನಾಟಕ ಭಾರತಿ ೧.೧

೪. ——— ೧೯೮೮, ಕ್ಷಳಸೂತ್ರ, ಮಾರ್ಗ ಸಂ. ೨
೫. ——— ೧೯೮೮, ಶಬ್ದಮಣಿದರ್ಪಣದ ಸಮುಚ್ಚಯಗಳು ಮಾರ್ಗ ಸಂ.೨
೬. ಕೃಷ್ಣಸ್ವಾಮಿ ಅಯ್ಯಂಗಾರ್ ವಿ., ೧೯೬೫, ಗಮಕಸಮಾಸ ಕನ್ನಡ ನುಡಿ ೨೮೪
೭. ——— ೧೯೬೫, ಸತಿಸಪ್ತಮಿ ಕನ್ನಡ ನುಡಿ ೨೮-೭
೮. ——— ೧೯೬೭, ಗಮಕಸಮಾಸ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೫೨-೧
೯. ——— ೧೯೬೫, ಕವಿರಾಜಮಾರ್ಗದಲ್ಲಿ ಕಾರಕ ವಿಚಾರ ಕನ್ನಡ ನುಡಿ ೨೮-೨
೧೦. ಕುಂದಣಗಾರ್ ಕೆ.ಜಿ., ೧೯೩೩, ಕೇಶಿರಾಜನು ಜೈನನೇ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೧೮-೧
೧೧. ——— ೧೯೩೪, ಕೇಶಿರಾಜನು ಜೈನನಲ್ಲ ಬ್ರಾಹ್ಮಣನು ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೧೯-೧
೧೨. ಕುಶಾಲಪ್ಪಗೌಡ ಕೆ., ೧೯೭೨, ದ್ವಿತೀಯಾ ವಿಭಕ್ತಿ, ಪ್ರಬುದ್ಧ ಕರ್ನಾಟಕ ೫೪-೩
೧೩. ——— ೧೯೭೪, ತೃತೀಯಾ ವಿಭಕ್ತಿ, ಕರ್ನಾಟಕ ೫೫-೧
೧೪. ——— ೧೯೭೪, ಚತುರ್ಥಿ ವಿಭಕ್ತಿ, ಪ್ರಬುದ್ಧ ಕರ್ನಾಟಕ ೫೫-೪
೧೫. ——— ೧೯೭೪, ಪಂಚಮಿ ವಿಭಕ್ತಿ, ಪ್ರಬುದ್ಧ ಕರ್ನಾಟಕ ೫೬-೧
೧೬. ——— ೧೯೭೫, ಷಷ್ಠಿ ವಿಭಕ್ತಿ, ಪ್ರಬುದ್ಧ ಕರ್ನಾಟಕ ೫೬-೪
೧೭. ——— ೧೯೭೬, 'ಲಿಂಗವೊಂಬತ್ತುತೆರಂ', ಶ್ರೀಕಂಠತೀರ್ಥ (ತೀ.ನಂ.ಶ್ರೀ. ಅಭಿನಂದನ ಗ್ರಂಥ)
೧೮. ಕುಳ್ಳಿ ಜೆ.ಎಸ್., ೧೯೬೮, 'ಕನ್ನಡ ಅಕ್ಷರ ಪದ್ಧತಿಯ ಮೇಲೆ ಸಂಸ್ಕೃತದ ಪ್ರಭಾವ', ಕರ್ನಾಟಕ ಭಾರತಿ ೧-೧
೧೯. ——— ೧೯೬೯, ಕನ್ನಡ ಭಾಷೆಯಲ್ಲಿ ಬಿಂದು, ಕರ್ನಾಟಕ ಭಾರತಿ ೨-೨
೨೦. ಕೇಶವಭಟ್ಟ ಟಿ., ೧೯೬೩, 'ಚತುರ್ಥಿ ವಿಭಕ್ತಿ', ಸಾಹಿತ್ಯ ನಂದನ, ಮೈಸೂರು
೨೧. ಕೊಲ್ಲಾರಯ್ಯ ಜೆ.ಬಿ., ೧೯೫೪, 'ಕನ್ನಡ ವೈಯಾಕರಣರು', ಬಾಗಿನ (ಎಸ್.ವಿ. ರಂಗಣ್ಣ ಅಭಿನಂದನ ಗ್ರಂಥ)
೨೨. ಗೋವಿಂದ ಪೈ ಎಂ., ೧೯೩೫, ನಾಗವರ್ಮರು ಎಷ್ಟು ಮಂದಿ?, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೨೦-೧ ಮತ್ತು ೨೦-೨
೨೩. ಚಿತ್ರಲಿಂಗಯ್ಯ ಎಂ.ವಿ., ೧೯೭೬, 'ಕನ್ನಡ ಅಪಭ್ರಂಶಗಳಲ್ಲಿ ಕೊಳ್ಗೊಡಗೆ', ಶ್ರೀಕಂಠ ತೀರ್ಥ (ತೀ.ನಂ.ಶ್ರೀ. ಅಭಿನಂದನ ಗ್ರಂಥ)
೨೪. ಚಿದಾನಂದಮೂರ್ತಿ ಎಂ., ೧೯೮೧, 'ಕನ್ನಡ ವ್ಯಾಕರಣಕಾರರು ಮತ್ತು ಸ್ವೀಕರಣ ವಿಚಾರ', ವಾಗರ್ಥ, ಬಾಪ್ಕೊ ಪ್ರಕಾಶನ, ಬೆಂಗಳೂರು
೨೫. ——— ೧೯೮೧, ಶಾಸನಗಳಲ್ಲಿ 'ಟ್' ಸ್ವನಿಮಕ್ಕೆ ಸಂಬಂಧಿಸಿದ ಲಿಪಿಸಮಸ್ಯೆ ಮತ್ತು ಕೇಶಿರಾಜ ವಾಗರ್ಥ

ಲೇಖನಗಳು

ಅಂಗಡಿ ಎಸ್.ಎಸ್., ೧೯೯೮, 'ಸಂಗ್ಯಾಬಾಳ್ಯಾ ಭಾಷಾಪ್ರಯೋಗ', ಶೋಧನ, ಪಾರ್ವತಮ್ಮ ಪ್ರಕಾಶನ, ಯರಝುರವಿ

——— ೧೯೯೮, 'ಚಕೋರಿಶಬ್ದ ಶಿಲ್ಪ', ಕಂಬಾರರ ಕಚೋರಿ, (ಸಂ.) ಕೆ.ಸಿ. ಶಿವಾರೆಡ್ಡಿ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು

ಅನ್ವನ್ ಕೆ., ೧೯೮೫, 'ತದ್ಧಿತ-ತತ್ಸಮ ಶಬ್ದಗಳಲ್ಲಿ ಪ್ರಥಮ ಸ್ವರಾದೇಶ: ಒಂದು ಅನ್ವಯಿಕ ವಿಶ್ಲೇಷಣೆ', ಕರ್ನಾಟಕ ಭಾರತಿ ೧೭.೩

ಕುಶಾಲಪ್ಪಗೌಡ ಕೆ., ೧೯೭೬, 'ಲಿಂಗವೊಂಬತ್ತು ತೆರಂ', ಶ್ರೀಕಂಠ ತೀರ್ಥ, (ಸಂ.) ಎಂ. ಚಿದಾನಂದಮೂರ್ತಿ ಮತ್ತು ಇತರರು

——— ೧೯೬೮, 'ಕನ್ನಡದಲ್ಲಿ ವರ್ತಮಾನ ಕ್ರಿಯೆ', ಪ್ರಬುದ್ಧ ಕರ್ನಾಟಕ, ೫೦-೨, ೧೦-೧೯

'ಕನ್ನಡಭಾಷೆ' (೮೫೦-೧೧೫೦), ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂ. ೨, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

——— ೧೯೬೯, 'ಕನ್ನಡ ಭಾಷೆಯಲ್ಲಿ ಬಿಂದು', ಕರ್ನಾಟಕ ಭಾರತಿ, ೨-೧; ೬೪-೭೦

ಕುಳ್ಳಿ ಜೆ.ಎಸ್., ೧೯೮೦, 'ಕನ್ನಡದಲ್ಲಿ ಘರ್ಷಧ್ವನಿಗಳು' ಅಧ್ಯಯನ, (ಸಂ.) ಎಂ. ಚಿದಾನಂದಮೂರ್ತಿ

ಕೆಂಪೇಗೌಡ ಕೆ., ೧೯೯೧, 'ಧ್ವನಿವಿಜ್ಞಾನ ವಿಶ್ಲೇಷಣೆ' ಸಂಶೋಧನೆ, (ಸಂ.) ಎಂ. ಚಿದಾನಂದಮೂರ್ತಿ ಗೌರವ ಸಂಪುಟ, ಲಕ್ಷ್ಮಣ ತೆಲಗಾವಿ

ಗೀತಾಚಾರ್ಯ ನಾ., ೧೯೮೫, 'ಕನ್ನಡದಲ್ಲಿ ತಾಲವ್ಯೀಕರಣ', ಸಾಧನೆ ಸಂ. ೧೪, ಸಂಚಿಕೆ ೩

ಚಿದಾನಂದಮೂರ್ತಿ ಎಂ., ೧೯೮೧, 'ಕನ್ನಡ ಉಪಭಾಷೆಯೊಂದರಲ್ಲಿ ತಾಲವ್ಯೀಕರಣ ಮತ್ತು ಕಂಠ್ಯೀಕರಣ', ವಾಗರ್ಥ, ಬಾಪ್ಕೊ ಪ್ರಕಾಶನ, ಬೆಂಗಳೂರು

ಬಿಳಿಗಿರಿ ಹೆಚ್.ಎಸ್., ೧೯೬೮, 'ಕನ್ನಡಧಾತುಗಳ ರಚನಾ ವ್ಯವಸ್ಥೆ', ಸಾಕ್ಷಿ

——— ೧೯೯೫, 'ವಡ್ಡಾರಾಧನೆಯಲ್ಲಿ ಆಡುಮಾತಿನ ಶೈಲಿ', ವರಸೆಗಳು ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು

——— ೧೯೯೫, 'ಖಡಿಯಾ ವರ್ಣಸಮಾಯವರಗೆಳು', ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು

ಮಹೇಶ್ವರಯ್ಯ ಹೆಚ್.ಎಂ., ೧೯೮೪, 'ಕನ್ನಡದ ರ್, ಲ್, ಳ್, ವ್ಯಂಜನಗಳ ಸ್ಪೆಕ್ಟ್ರೋಗ್ರಾಫಿಕ್ ವಿಶ್ಲೇಷಣೆ', ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂ. ೬೮, ಸಂಚಿಕೆ ೩

—— ೧೯೮೭, 'ಕನ್ನಡ ಪದಗಳ ಸ್ವರಮಧ್ಯದಲ್ಲಿ ಬರುವ ಸ್ಪರ್ಶವ್ಯಂಜನಗಳ ಸ್ಪೆಕ್ಟ್ರೋಗ್ರಾಫಿಕ್ಸ್ ವಿಶ್ಲೇಷಣೆ', ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ. ೭೧, ಸಂಚಿಕೆ ೨-೧

—— ೧೯೮೮, 'ಕನ್ನಡ ಮಹಾಪ್ರಾಣಗಳ ಸ್ಪೆಕ್ಟ್ರೋಗ್ರಾಫಿಕ್ ವಿಶ್ಲೇಷಣೆ', ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ. ೭೩, ಸಂಚಿಕೆ ೩

—— ೧೯೯೧, 'ಕನ್ನಡ ಸ್ವರಗಳ ಸ್ಪೆಕ್ಟ್ರೋಗ್ರಾಫಿಕ್ ವಿಶ್ಲೇಷಣೆ', ಸಂಶೋಧನ, (ಸಂ.) ಲಕ್ಷ್ಮಣ್ ತೆಲಗಾವಿ

ಪಾಡ್ರವಿಲ್ಯಂ, ೧೯೭೧, 'ಕನ್ನಡ ಧ್ವನಿಮಾಗಳು ಅಂದು–ಇಂದು', ಕರ್ನಾಟಕ ಭಾರತಿ ೩-೪

—— ೧೯೭೧, 'ಕನ್ನಡದಲ್ಲಿ ಪ್ರತ್ಯಯಗಳು', ಕರ್ನಾಟಕ ಭಾರತಿ ೫-೪

—— ೧೯೭೨, 'ಕನ್ನಡದಲ್ಲಿ ಸಮಾಸ', ಕರ್ನಾಟಕ ಭಾರತಿ ೪-೪

—— ೧೯೭೫, 'ಕನ್ನಡ ವಾಕ್ಯ', ಕರ್ನಾಟಕ ಭಾರತಿ ೫-೩

—— ೧೯೭೮, 'ಕನ್ನಡ ಅನುನಾಸಿಕ ಮತ್ತು ಅನನುನಾಸಿಕಗಳು', ಕರ್ನಾಟಕ ಭಾರತಿ ೧೧-೧

ರಾಜಪುರೋಹಿತ ಬಿ.ಬಿ., ೧೯೯೧, 'ಕನ್ನಡ ಧ್ವನಿ ವಿಶ್ಲೇಷಣೆಯ ಬೆಳಕಿನಲ್ಲಿ ಇಂದಿನ ಬರವಣಿಗೆಯ ಪುನರಾವಲೋಕನೆ'. ಸಂಶೋಧನ, (ಸಂ.) ಲಕ್ಷ್ಮಣ್ ತೆಲಗಾವಿ

ರಾಮಚಂದ್ರ ಸಿ.ಎಸ್., ೧೯೮೬, 'ಕನ್ನಡದಲ್ಲಿ ನಾಮ ಪ್ರತ್ಯಯಗಳು', ಸಾಧನೆ, ಸಂ. ೧೫, ಸಂಚಿಕೆ ೨

—— ೧೯೮೮, 'ಶ್ರೀ ರಾಮಾಯಣ ದರ್ಶನದಲ್ಲಿನ ಸಮಾಸಗಳು ಒಂದು ವಿಶ್ಲೇಷಣೆ', ಸಾಧನೆ, ಸಂ. ೧೭, ಸಂಚಿಕೆ ೧-೨

ರಾಮಸ್ವಾಮಿ ಚೆ., ೧೯೮೧, 'ಕನ್ನಡದಲ್ಲಿ ಸ್ವರ್ವನಾಮ ಪ್ರತ್ಯಯಗಳು', ಕನ್ನಡ ಭಾಷಾನುಯೋಗ, ಸ್ವಂತಿಕಾ ಪ್ರಕಾಶನ ಸುಳ್ಯ (ದ.ಕ.)

ಶಂಕರಭಟ್ ಡಿ.ಎನ್., ೧೯೬೨, 'ಕನ್ನಡ ಧಾತುಗಳ ವೈಶಿಷ್ಟ್ಯ', ಸಾಕ್ಷಿ

—— ೧೯೭೮, 'ಧ್ವನಿಪರಿವರ್ತನೆ ಮತ್ತು ವರ್ಣಪರಿವರ್ತನೆ', ಪ್ರಬುದ್ಧ ಕರ್ನಾಟಕ ೪೩-೪

ಸವದತ್ತಿಮಠ ಎಸ್.ಡಿ., ೧೯೮೮, 'ಧರ್ಮಾಮೃತ ಭಾಷಾವಿಜ್ಞಾನದ ದೃಷ್ಟಿಯಲ್ಲಿ', ಸಾಧನೆ ಸಂ. ೧೭, ಸಂಚಿಕೆ ೧-೨

ಸೋಮಶೇಖರ ಗೌಡ ಕೆ., ೧೯೯೨, 'ಭಾಷಾವಿಜ್ಞಾನ: ಇತ್ತೀಚಿನ ಪ್ರವೃತ್ತಿಗಳು', ಮಾನ (ಸಂ.) ಎಸ್.ಎಲ್. ಭೈರಪ್ಪ ಮತ್ತು ಇತರರು, ಗೀತಾ ಬುಕ್‌ಹೌಸ್, ಮೈಸೂರು

೨. ಸಾಮಾನ್ಯ ಮತ್ತು ಐತಿಹಾಸಿಕ ಭಾಷಾವಿಜ್ಞಾನ

ಕೃತಿಗಳು

ಓಂಕಾರಪ್ಪ ಸಿ., ೧೯೯೫, 'ಕುಮಾರವ್ಯಾಸ ಭಾರತ ಭಾಷಾವೈಜ್ಞಾನಿಕ ವಿಶ್ಲೇಷಣೆ', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಕುಳ್ಳಿ ಜೆ.ಎಸ್., ೧೯೭೩, 'ಐತಿಹಾಸಿಕ ಭಾಷಾವಿಜ್ಞಾನ', ಸಿರಿಗನ್ನಡ ಪ್ರಕಾಶನ, ಧಾರವಾಡ

——— ೧೯೬೭, 'ಆಧುನಿಕ ಭಾಷಾವಿಜ್ಞಾನ', ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

——— ೧೯೭೨, 'ಭಾಷಾಸೌಧ', ಸಿರಿಗನ್ನಡ ಪ್ರಕಾಶನ, ಧಾರವಾಡ

ಕೆಂಪೇಗೌಡ ಕೆ., ೧೯೮೧, 'ಭಾಷಾವರ್ಗೀಕರಣ', ಭಾರತಿ ಪ್ರಕಾಶನ, ಮೈಸೂರು

——— ೧೯೭೩, 'ಸಾಮಾನ್ಯ ಭಾಷಾವಿಜ್ಞಾನ', ಭಾರತಿ ಪ್ರಕಾಶನ, ಮೈಸೂರು

——— ೧೯೯೭, 'ಭಾಷೆ ಮತ್ತು ಭಾಷಾವಿಜ್ಞಾನ', ಭಾರತಿ ಪ್ರಕಾಶನ, ಮೈಸೂರು

ಕೇಶವಭಟ್ಟ ಟಿ., ೧೯೯೩, 'ಭಾಷಾದೀಪಿಕೆ', ಶಾರದಾ ಪ್ರಕಾಶನ, ಮೈಸೂರು

ಚಿದಾನಂದಮೂರ್ತಿ ಎಂ., ೧೯೬೫, 'ಭಾಷಾವಿಜ್ಞಾನದ ಮೂಲತತ್ವಗಳು', ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು

ಚಿದಾನಂದಮೂರ್ತಿ ಎಂ., ೧೯೮೧, 'ವಾಗರ್ಥ', ಬಾಪ್ಕೊ ಪ್ರಕಾಶನ, ಬೆಂಗಳೂರು

ನೇಗಿನಹಾಳ ಎಂ.ಬಿ., ೧೯೮೨, 'ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ', ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಶಿವಾನಂದ ವಿ., ೧೯೮೧, 'ಭಾಷಾವೈಜ್ಞಾನಿಕ ನೆಲೆಯಲ್ಲಿ ಪದಗಳ ಚರಿತ್ರೆ', ಧ್ವನಿ, ಪ್ರತಿಮಾ ಪ್ರಕಾಶನ, ಕಲಬುರ್ಗಿ

ಸವದತ್ತಿಮಠ ಎಸ್.ಡಿ., ೧೯೯೮, 'ಭಾಷಾಲೇಖ', ರೂಪರಶ್ಮಿ ಪ್ರಕಾಶನ, ಕಲಬುರ್ಗಿ

ಲೇಖನಗಳು

ಉಷಾಮೂರ್ತಿ, ೧೯೭೩, 'ಭಾಷೆ ಎಂದರೇನು?', ಕನ್ನಡ ನುಡಿ, ೩೬-೮, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕುಶಾಲಪ್ಪಗೌಡ ಕೆ., ೧೯೭೮, 'ಭಾಷೆ ಮತ್ತು ಸಾಹಿತ್ಯದ ಪ್ರಯೋಜನ', ಕನ್ನಡ ನುಡಿ, ೪೧-೧೩, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ನರಸಿಂಹಾಚಾರ್ ಡಿ.ಎಲ್., ೧೯೭೧, 'ಕನ್ನಡದಲ್ಲಿ ಶಬ್ದರಚನೆ', ಪೀಠಿಕೆಗಳು-ಲೇಖನಗಳು, ಡಿ.ವಿ.ಕೆ. ಮೂರ್ತಿ, ಮೈಸೂರು.

ನೇಗಿನಹಾಳ ಎಂ.ಬಿ., ೧೯೯೮, 'ಕೆ.ಜಿ. ಕುಂದಣಗಾರರ ಭಾಷೆ ಮತ್ತು ಸಾಹಿತ್ಯ', ನೇಗಿನಹಾಳ ಪ್ರಬಂಧಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ರಾಮ ಎಂ., ೧೯೮೭, 'ಕೇರಳ ವಿಶ್ವವಿದ್ಯಾಲಯದಲ್ಲಿ ಭಾಷಾಶಾಸ್ತ್ರಗಳು ಬೆಳೆದು ಬಂದ ಬಗೆ', ಜಯವಂತ (ಸಂ.) ಸಂಗಮೇಶ ಬಿರಾದರ.

ರಾಮಸ್ವಾಮಿ ಚೆ., ೧೯೭೪, 'ಭಾಷಾವಿಜ್ಞಾನದ ಪ್ರಾಮುಖ್ಯತೆ', ಕರ್ನಾಟಕ ಭಾರತಿ, ಸಂಪುಟ ೭, ಸಂಚಿಕೆ ೨.
ಸೋಮಶೇಖರಗೌಡ, ೧೯೯೮, 'ಕನ್ನಡ ಭಾಷೆ ಮಹಾಮಾರ್ಗ', (ಸಂ.) ಸದಾನಂದ ಕನವಳ್ಳಿ ಮತ್ತು ಇತರರು

ತೌಲನಿಕ ಭಾಷಾವಿಜ್ಞಾನ

ಕೆಂಪೇಗೌಡ ಕೆ., ೧೯೮೭, 'ತೌಲನಿಕ ದ್ರಾವಿಡ ಭಾಷಾವಿಜ್ಞಾನದ ಪರಿಚಯ', ಭಾಷಾವಿಜ್ಞಾನ ಭಾರತಿ, ಮೈಸೂರು.
ನಾಗರಾಜಯ್ಯ ಹಂಪ., ೧೯೬೬, 'ದ್ರಾವಿಡ ಭಾಷಾವಿಜ್ಞಾನ', ಡಿ.ವಿ.ಕೆ. ಮೂರ್ತಿ, ಮೈಸೂರು
——— ೧೯೭೨, 'ದ್ರಾವಿಡ ಸಂಖ್ಯಾವಾಚಕಗಳು', ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
ಲೋಕಾಪುರ ರಂ.ಶಾ., ೧೯೯೪, 'ಹಳಗನ್ನಡ ಮತ್ತು ಮರಾಠಿ', ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ
ಸಂಗಮೇಶ ಸವದತ್ತಿಮಠ, ೧೯೭೬, 'ದ್ರಾವಿಡ ಭಾಷಾವ್ಯಾಸಂಗ', ರೂಪರಶ್ಮಿ ಪ್ರಕಾಶನ, ಕಲಬುರ್ಗಿ
——— ೧೯೭೯, 'ದ್ರಾವಿಡ ಜನಾಂಗ', ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೩. ಸಾಮಾಜಿಕ ಭಾಷಾವಿಜ್ಞಾನ

ಕೃತಿಗಳು

ಕೃಷ್ಣಪರಮೇಶ್ವರಭಟ್, ೧೯೯೫, 'ಕನ್ನಡ ತೆಲುಗು ದ್ವಿಭಾಷಿಕತೆಯ ಅಧ್ಯಯನ', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ನಾರಾಯಣ ಕೆ.ವಿ., ೧೯೯೮, 'ಭಾಷೆಯ ಸುತ್ತಮುತ್ತ', ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು
——— ೧೯೯೮, 'ದ್ವಿಭಾಷಿಕತೆ', ಕನ್ನಡ ವಿಶ್ವವಿದ್ಯಾಲಯ, ಹಂಪಿ
ಮಹೇಶ್ವರಯ್ಯ ಹೆಚ್.ಎಂ., ೧೯೯೭. 'ಭಾಷೆ ಮತ್ತು ಸೃಜನಶೀಲತೆ', ಸಹಿತಾ ಪ್ರಕಾಶನ, ಧಾರವಾಡ
ಮಾಡ್ತವಿಲ್ಯಂ, ೧೯೮೭, 'ಜನಪದ ಭಾಷಾವಿಜ್ಞಾನ', ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ರಾಜೇಶ್ವರಿ ಮಹೇಶ್ವರಯ್ಯ, ೧೯೮೨, 'ಭಾಷೆ–ಸಮಾಜ–ಸಂಸ್ಕೃತಿ', ಆರ್.ಸಿ. ವಸ್ತ್ರದ, ಧಾರವಾಡ
ಶಿವಾನಂದ ವಿ., ೧೯೯೨, 'ಶಬ್ದಮಣಿ ದರ್ಪಣದಲ್ಲಿ ಗ್ರಾಂಥಿಕ–ವ್ಯಾವಹಾರಿಕ ಶೈಲಿಗಳು– ಒಂದು ಸಮಾಜೋಭಾಷಿಕ ವಿಶ್ಲೇಷಣೆ', ವಿದ್ಯಾನಿಧಿ ಪ್ರಕಾಶನ, ಗದಗ

ಶ್ರೀಧರ್ ಎಸ್.ಎನ್., ೧೯೯೫, 'ಇಂದಿನ ಕನ್ನಡ ರಚನೆ ಮತ್ತು ಬಳಕೆ', ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲೇಖನಗಳು

ಅಂಗಡಿ ಎಸ್.ಎಸ್., ೧೯೯೮, 'ಕರ್ನಾಟಕದಲ್ಲಿ ಕನ್ನಡ ಮರಾಠಿ ದ್ವಿಭಾಷಿಕತೆ', ಶೋಧನ ಪಾರ್ವತಮ್ಮ ಪ್ರಕಾಶನ, ಯರಝುರವಿ

ಗೋಪಾಲಕೃಷ್ಣ ವಿ., ೧೯೭೮, 'ಭಾಷಾಸಂಪರ್ಕದ ಅಧ್ಯಯನ', ಕರ್ನಾಟಕ ಭಾರತಿ, ಸಂ. ೧೧, ಸಂಚಿಕೆ ೨

ಚಿದಾನಂದಮೂರ್ತಿ ಎಂ., ೧೯೮೧, 'ಲಂಬಾಣಿ ಜನ ಮತ್ತು ಅವರ ಭಾಷೆ', ವಾಗರ್ಥ ಬಾಪ್ಕೊ ಪ್ರಕಾಶನ, ಬೆಂಗಳೂರು

೧೯೮೧, 'ವಾರ್ತಾ ಮಾಧ್ಯಮದಲ್ಲಿ ಕನ್ನಡ ಭಾಷೆಯ ಆಧುನೀಕರಣ', ವಾಗರ್ಥ ಬಾಪ್ಕೊ ಪ್ರಕಾಶನ, ಬೆಂಗಳೂರು

ಮಹೇಶ್ವರಯ್ಯ ಹೆಚ್.ಎಂ., ೧೯೯೦, 'ಜಾನಪದ ಭಾಷಿಕ ಆಟಗಳು', ಜಾನಪದ ಸಂವಹನ ಸಹಿತಾ ಪ್ರಕಾಶನ, ಧಾರವಾಡ

ಮಾಡ್ತವಿಲ್ಯಂ, ೧೯೮೧, 'ಭಾಷಾವಿಜ್ಞಾನ ಮತ್ತು ಜನಪದ ವಿಜ್ಞಾನ', ಬೆಳ್ವೊಲ, ಧಾರವಾಡ, (ಸಂ.) ಎಂ.ಎಸ್. ಸುಂಕಾಪುರ ಮತ್ತು ಇತರರು

೧೯೯೧, 'ಸಂಕೇತ ವಿಜ್ಞಾನ ಮತ್ತು ಜಾನಪದ', ಸಂಶೋಧನ, (ಸಂ.) ಲಕ್ಷ್ಮಣ್ ತೆಲಗಾವಿ

೧೯೮೭, 'ಭಾಷೆ ಮತ್ತು ಸಂಸ್ಕೃತಿ', ಜಯವಂತ (ಸಂ.) ಸಂಗಮೇಶ ಬಿರಾದರ, ತುಂಗಳ (ಜಿ. ಬಾಗಲಕೋಟೆ)

ರಾಜೇಶ್ವರಿ ಮಹೇಶ್ವರಯ್ಯ, ೧೯೮೭, 'ಸಾಮಾಜಿಕ ಭಾಷಾವಿಜ್ಞಾನ', ಜಯವಂತ (ಸಂ.) ಸಂಗಮೇಶ ಬಿರಾದರ, ತುಂಗಳ (ಜಿ. ಬಾಗಲಕೋಟೆ)

ಶಾಸ್ತ್ರೀ ಕೆ.ಜಿ., ೧೯೯೩, 'ಭಾಷಾಬಾಂಧವ್ಯ: ವೈಜ್ಞಾನಿಕ ದೃಷ್ಟಿ', ಭಾಷೋಪಾಸಕ, ಧಾರವಾಡ

ಶ್ರೀರಂಗ, ೧೯೯೪, 'ಭಾಷೆ ಮತ್ತು ಜೀವನ, ಸಾಹಿತ್ಯ, ಸಂಸ್ಕೃತಿ ಮತ್ತು ಸಮಾಜ', ವಿಸೀ ಸಂಸ್ಮರಣ ವೇದಿಕೆ, ಬೆಂಗಳೂರು

ಹೆಗಡೆ ಜಿ.ಎಂ., ೧೯೮೦, 'ಭಾರತೀಯ ಪರಿಸರದಲ್ಲಿ ದ್ವಿಭಾಷಿಕತೆ', ಅಧ್ಯಯನ (ಸಂ.) ಎಂ. ಚಿದಾನಂದಮೂರ್ತಿ

೪. ಭಾಷಾಚರಿತ್ರೆ

ಕೃತಿಗಳು

ಕುಲಕರ್ಣಿ ಪ್ರಗೋ., ೧೯೬೭, ಕನ್ನಡ ಭಾಷೆಯ ಚರಿತ್ರೆ, ಬೆಳಗಾವಿ

ಕೃಷ್ಣಯ್ಯ ಎಂ.ಎಚ್., ೧೯೯೩, 'ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ', ಸುವಿದ್ಯಾ ಪ್ರಕಾಶನ, ಬೆಂಗಳೂರು

ಕೃಷ್ಣರಾವ್ ಕೆ.ಎಂ., ೧೯೬೮, 'ಕನ್ನಡ ಭಾಷಾಸ್ವರೂಪ', ಉಷಾ ಸಾಹಿತ್ಯ ಮಾಲೆ, ಮೈಸೂರು

ಜಾಗೀರದಾರ್ ಆರ್.ವಿ., ೧೯೩೩, 'ಶಾರದೆಯ ಸಂಸಾರ ಅಥವಾ ಭಾಷಾಶಾಸ್ತ್ರ', ಕರ್ನಾಟಕ ಸಾಹಿತ್ಯ ಮಂದಿರ, ಧಾರವಾಡ

ಧಾರವಾಡಕರ ರಾ.ಯ., ೧೯೫೯, ಕನ್ನಡ ಭಾಷಾಶಾಸ್ತ್ರ, ಗೀತಾ ಬುಕ್‌ಹೌಸ್, ಮೈಸೂರು.

ನಾಗರಾಜಯ್ಯ ಹಂಪ., ೧೯೮೦, 'ಭಾಷಾವಿಜ್ಞಾನಿಗಳು', ಪ್ರಗತಿ ಪ್ರಿಂಟರ್ಸ್ ಆಂಡ್ ಪಬ್ಲಿಷರ್ಸ್, ಬೆಂಗಳೂರು

ಪುಟ್ಟಪ್ಪ ಕೆ.ವಿ. (ಸಂ.), ೧೯೫೫, 'ಕನ್ನಡ ಕೈಪಿಡಿ' ಸಂ.೧, ಭಾಗ ೪, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ರಾಮಚಂದ್ರರಾವ್ ಬಿ., ೧೯೯೮, ಕನ್ನಡ ಭಾಷೆಯ ಇತಿಹಾಸ, ಡಿವಿಕೆ ಮೂರ್ತಿ, ಮೈಸೂರು

ಶಂಕರಭಟ್ ಡಿ.ಎನ್., ೧೯೭೯, 'ಕನ್ನಡ ಭಾಷೆಯ ಸಂಕ್ಷಿಪ್ತ ಚರಿತ್ರೆ', ಭಾಷಾ ಪ್ರಕಾಶನ, ಪುಣೆ

——— ೧೯೭೦, 'ಭಾಷೆಯ ಬಗ್ಗೆ ನೀವೇನು ಬಲ್ಲಿರಿ', ಭಾಷಾ ಪ್ರಕಾಶನ, ಪುಣೆ

——— ೧೯೯೫, 'ಕನ್ನಡ ಭಾಷೆಯ ಕಲ್ಪಿತ ಚರಿತ್ರೆ', ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲೇಖನಗಳು

ಮಾಡ್ತವಿಲ್ಯಂ, ೧೯೮೬, 'ಭಾಷಾವಿಜ್ಞಾನದ ಇತಿಹಾಸ', ಕರ್ನಾಟಕ ಭಾರತಿ ೮, ೨-೩

೫. ಕ್ಷೇತ್ರ ಭಾಷಾವಿಜ್ಞಾನ ಮತ್ತು ಮನೋಭಾಷಾವಿಜ್ಞಾನ

ಅಂಗಡಿ ಎಸ್.ಎಸ್., ೧೯೯೬, 'ಭಾಷಾಕ್ಷೇತ್ರಕಾರ್ಯ', ಸಮಾಜ ಪುಸ್ತಕಾಲಯ, ಧಾರವಾಡ

ಅಂಗಡಿ ಎಸ್.ಎಸ್., ೨೦೧೨, 'ಮನೋಭಾಷಾವಿಜ್ಞಾನ', ಕಿಕ್ಕೇರಿ ಪ್ರಕಾಶನ, ಬೆಂಗಳೂರು.

ಮಾಡ್ತವಿಲ್ಯಂ, ೧೯೭೦, 'ಭಾಷಾಪ್ರಭೇದದ ವಿಶ್ಲೇಷಣೆ ವಿಧಾನ', ಕರ್ನಾಟಕ ಭಾರತಿ, ಸಂ. ೯, ಸಂಚಿಕೆ ೧-೨

——— ೧೯೮೩, 'ಜನಪದ ಭಾಷಾವಿಜ್ಞಾನ ಕ್ಷೇತ್ರಕಾರ್ಯ', ಕರ್ನಾಟಕ ಭಾರತಿ, ಸಂ. ೧೫, ಸಂಚಿಕೆ ೩೫

——— ೧೯೮೬, 'ಕ್ಷೇತ್ರ ಭಾಷಾವಿಜ್ಞಾನದ ಉದ್ದೇಶ ಮತ್ತು ವ್ಯಾಪ್ತಿ', ಕರ್ನಾಟಕ ಭಾರತಿ, ಸಂ. ೧೯, ಸಂ.೨

——— ೧೯೮೭, 'ನಿರೂಪಕ', ಕರ್ನಾಟಕ ಭಾರತಿ ಸಂ. ೩೦, ಸಂಚಿಕೆ ೩
ರಾಘವೇಂದ್ರರಾವ್ ಎಚ್.ಎಸ್., ೧೯೮೧, 'ಮನೋಭಾಷಾವಿಜ್ಞಾನ ಕೆಲವು ಅಧ್ಯಯನ ಕ್ಷೇತ್ರಗಳು', ವಿಶ್ಲೇಷಣೆ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು

೬. ಭಾಷಾಬೋಧನೆ ಮತ್ತು ಭಾಷಾ ಕಲಿಕೆ

ಕರಿಗಣ್ಣವರ ಎ.ಜಿ., ೧೯೯೮, 'ಕನ್ನಡ ಭಾಷಾಬೋಧನೆ', ವಿದ್ಯಾನಿಧಿ ಪ್ರಕಾಶನ, ಗದಗ
ಕಾಶೀನಾಥ ಎಚ್.ಎಂ. ಮತ್ತು ಇತರರು, ೧೯೯೦, 'ಬೋಧನಾ ಮಾದರಿಗಳು', ಡೆಪ್ಯುಟಿ ಚೆನ್ನಬಸಪ್ಪ, ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನ, ಧಾರವಾಡ
ಕೃಷ್ಣ ಸಿ. (ಪಂಡಿತ), ೧೯೮೪, 'ಭಾಷೆ ಮತ್ತು ಕನ್ನಡ ಭಾಷಾಬೋಧನೆ', ವಿದ್ಯಾನಿಧಿ ಪ್ರಕಾಶನ, ಗದಗ
——— ೧೯೯೮, 'ಬೋಧನಾ ಕೌಶಲ್ಯಗಳು ಮತ್ತು ತಂತ್ರಗಳು', ವಿದ್ಯಾನಿಧಿ ಪ್ರಕಾಶನ, ಗದಗ
ನಂಜುಂಡಸ್ವಾಮಿ ಎ.ಎಸ್., ೧೯೮೯, 'ಭಾಷಾಬೋಧನೆ', ಸಮಾಜ ಪುಸ್ತಕಾಲಯ, ಧಾರವಾಡ
ಬುರ್ಲಿ ಎಸ್.ಎಸ್., ೧೯೯೧, (ಅನು) ಭಾರತದಲ್ಲಿ ಮಾತೃಭಾಷೆಯ ಬೋಧನೆಯ ಬಗ್ಗೆ ಸಲಹೆಗಳು (ಆಂಗ್ಲ ಮೂಲ: ರಾಯಬರ್ನ್ ಡಬ್ಲ್ಯು.ಎಮ್.)
ಮಾತ್ತಪಿಳ್ಳೆ, ೧೯೭೭, 'ಅನ್ಯಭಾಷಾಬೋಧೆ', ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ರಮಣ ಬಿ.ವಿ., ೧೯೭೨, 'ಕನ್ನಡ ನುಡಿ ಬೋಧನೆ', ಸರ್ವೋದಯ ಬುಕ್ ಡಿಪೋ, ಚಿಕ್ಕಪೇಟೆ (ಕೊಡಗು)
ವೀರಭದ್ರಪ್ಪ ಬಿ.ವಿ., ೧೯೭೮, 'ದ್ವಿತೀಯ ಭಾಷಾಬೋಧನೆ', ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಲೇಖನಗಳು

ಚಿದಾನಂದಮೂರ್ತಿ ಎಂ., ೧೯೯೫, 'ಮಾತೃಭಾಷೆಯಲ್ಲಿ ಶಿಕ್ಷಣ', ಕನ್ನಡ ವಾರ್ಷಿಕ ೧೯೯೩, ಕನ್ನಡ ವಿಶ್ವವಿದ್ಯಾಲಯ, ಹಂಪಿ
ನಾರಾಯಣ ಕೆ.ವಿ., ೧೯೯೫, 'ಪ್ರಾಥಮಿಕ ಶಿಕ್ಷಣ: ಭಾಷಾಬೋಧನೆ', ಕನ್ನಡ ವಾರ್ಷಿಕ ೧೯೯೩, ಕನ್ನಡ ವಿಶ್ವವಿದ್ಯಾಲಯ, ಹಂಪಿ
——— ೧೯೯೯, 'ವಯಸ್ಕ ಭಾಷಾಕಲಿಕೆ', ನಮ್ಮ ಕನ್ನಡ-೩೭, ಕನ್ನಡ ಭಾಷಾಭಿವೃದ್ಧಿ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ಮಲ್ಲಿಕಾರ್ಜುನ ಭ., ಯದುರಾಜನ್ ಎಸ್.ಎಸ್., 'ಹೊಸಹೆಜ್ಜೆ', ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ, ಮೈಸೂರು

ಮಹೇಶ್ವರಯ್ಯ ಹೆಚ್.ಎಂ., ೧೯೯೦, 'ಮಗು ಮತ್ತು ಭಾಷೆ', ಜಾನಪದ ಸಂವಹನ, ಸಹಿತಾ ಪ್ರಕಾಶನ, ಧಾರವಾಡ

೭. ಶೈಲಿಶಾಸ್ತ್ರ

ಕೃತಿಗಳು

ಕನ್ನಡಶೈಲಿ ಕೈಪಿಡಿ, ೧೯೯೫, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜವರೇಗೌಡ ದೇ., ೧೯೯೧, 'ಕುವೆಂಪು ಶೈಲಿ', ಸಹ್ಯಾದ್ರಿ ಪ್ರಕಾಶನ, ಮೈಸೂರು

——— ೧೯೯೧, ಗದ್ಯಶೈಲಿ, ಧಾರವಾಡ.

ತಿರುಮಲೇಶ್ ಕೆ.ವಿ., ೧೯೮೭, 'ಬೇಂದ್ರೆಯವರ ಕಾವ್ಯಶೈಲಿ', ಕ್ರೈಸ್ಟ್ ಕಾಲೇಜು, ಕನ್ನಡ ಸಂಘ, ಬೆಂಗಳೂರು

ದೇಸಾಯಿ ಶಾಂತಿನಾಥ, ೧೯೮೦, 'ಸಾಹಿತ್ಯ ಮತ್ತು ಭಾಷೆ', ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ನಾರಾಯಣ ಕೆ.ವಿ., ೧೯೯೦, 'ಶೈಲಿಶಾಸ್ತ್ರ', ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು

ರಂಗಣ್ಣ ಎಸ್.ವಿ., ೧೯೭೧, 'ಶೈಲಿ ೧-೨-೩೪', ಕಾವ್ಯಾಲಯ ಪ್ರಕಾಶನ, ಮೈಸೂರು

ಲೇಖನಗಳು

ಕೃಷ್ಣಪರಮೇಶ್ವರ ಭಟ್ಟ, ೧೯೭೪, 'ಕಾವ್ಯಭಾಷೆ ಭಾಷಾವೈಜ್ಞಾನಿಕ ವಿವೇಚನೆ', ಸಾಧನೆ ೩-೧

೧೯೮೪, 'ನವೋದಯ ಕಾವ್ಯದ ಭಾಷೆ', ಬೆಳ್ವೊಲ, ಧಾರವಾಡ

ತಿರುಮಲೇಶ ಕೆ.ವಿ., ೧೯೮೬, 'ಸಾಹಿತ್ಯದಲ್ಲಿ ಶೈಲಿ', ದಶವಾರ್ಷಿಕ ಸಾಹಿತ್ಯ ವಿಮರ್ಶೆ, (ಸಂ.) ಎಲ್.ಎಸ್. ಶೇಷಗಿರಿರಾವ್, ಬೆಂಗಳೂರು

ನಾರಾಯಣ ಕೆ.ವಿ., ೧೯೯೭, 'ಪಂಪನ ಶೈಲಿ', ಬೇರು-ಕಾಂಡ-ಚಿಗುರು

——— ೧೯೯೭, 'ಕನಕದಾಸರ ಕೀರ್ತನೆಗಳ ಶಬ್ದಶಿಲ್ಪ', ಬೇರು-ಕಾಂಡ-ಚಿಗುರು

——— ೧೯೯೭, 'ಕೆ.ಎಸ್.ಎನ್. ಅವರ ಕಾವ್ಯಭಾಷೆ', ಬೇರು-ಕಾಂಡ-ಚಿಗುರು

——— ೧೯೯೭, 'ಗೋವಿಂದ ಪೈ ಅವರ ಭಾವಗೀತೆಗಳು; ಶೈಲಿಶಾಸ್ತ್ರದ ನೆಲೆಯಲ್ಲಿ ಟಿಪ್ಪಣಿಗಳು', ಬೇರು-ಕಾಂಡ-ಚಿಗುರು, ವಿವೇಕ ಪ್ರಕಾಶನ, ಬೆಂಗಳೂರು

ಮಾಡ್ತವಿಲ್ಯಂ, ೧೯೮೨, 'ಸಾಹಿತ್ಯ ಮತ್ತು ಭಾಷಾವಿಜ್ಞಾನ', ಸಾಧನೆ, ಸಂ. ೧೧, ಸಂಚಿಕೆ ೧೧

——— ೧೯೮೨, 'ಭಾಷಾವೈಜ್ಞಾನಿಕ ಸಾಹಿತ್ಯ ವಿಮರ್ಶೆ', ಮಾನ (ಸಂ.) ಎಸ್.ಎಲ್. ಭೈರಪ್ಪ, ಗೀತಾ ಬುಕ್ ಹೌಸ್, ಮೈಸೂರು

——— ೧೯೮೮, 'ಕನ್ನಡ ಜನಪದ ಸಾಹಿತ್ಯ-ಭಾಷಾವೈಜ್ಞಾನಿಕ ವಿವೇಚನೆ', ಕರ್ನಾಟಕ ಭಾರತಿ ೨೧-೧

ರಾಘವೇಂದ್ರರಾವ್ ಹೆಚ್.ಎಸ್., ೧೯೮೧, 'ಕಾವ್ಯ ಮತ್ತು ಶೈಲಿಶಾಸ್ತ್ರಗಳ ಸಂಬಂಧದ ಹಿನ್ನೆಲೆಯಲ್ಲಿ ರತ್ನನ ಪದಗಳು-ಒಂದು ಪ್ರಯೋಗ', ವಿಶ್ಲೇಷಣೆ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು

ಶಂಕರ ಡಿ.ಎ., ೧೯೮೦, 'ಸಾಹಿತ್ಯದಲ್ಲಿ ಶೈಲಿ', ವಿಮರ್ಶಾ ತತ್ವಗಳು ಮತ್ತು ಪ್ರಾಯೋಗಿಕ ವಿಮರ್ಶೆ, (ಸಂ.) ವಿ.ಕೃ. ಗೋಕಾಕ್, ಐ.ಬಿ.ಹೆಚ್. ಬೆಂಗಳೂರು

ಶಿವರುದ್ರಪ್ಪ ಜಿ.ಎಸ್., ೧೯೭೪, 'ಕನ್ನಡ ಕವಿಗಳ ಭಾಷಾಪ್ರಜ್ಞೆ', ಸಾಧನೆ, ಸಂ. ೩, ಸಂಚಿಕೆ ೧

೯೩

ಇಂಗ್ಲಿಶಿನಲ್ಲಿ ಕನ್ನಡ ಭಾಷಾಧ್ಯಯನ

ಆಧುನಿಕ ಭಾಷಾಶಾಸ್ತ್ರವು ಅನೇಕ ಶಾಖೆ, ಉಪಶಾಖೆಗಳಲ್ಲಿ ಬೆಳವಣಿಗೆ ಹೊಂದುತ್ತಲಿದೆ. ವಿಲ್ಯಂ ಜೋನ್ಸನಿಂದ ಚೋಂಸ್ಕಿವರೆಗಿನ ಇನ್ನೂರು ವರ್ಷಗಳ ಅವಧಿಯಲ್ಲಿ ಸಸೂರು, ಸಫೀರ್, ಬ್ಲೂಮ್ ಫೀಲ್ಡ್, ಪೈಕ್, ಹಾಕೆಟ್ ಮುಂತಾದವರು ಈ ಕ್ಷೇತ್ರಕ್ಕೆ ಅಮೂಲ್ಯ ಕಾಣಿಕೆ ಸಲ್ಲಿಸಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿ ಭಾಷೆಯನ್ನು ಸಾಮಾಜಿಕ ಹಿನ್ನೆಲೆಯಲ್ಲಿ ವಿವರಿಸುವ ಪ್ರಯತ್ನಗಳು ನಡೆದಿವೆ. ಈ ನಿಟ್ಟಿನಲ್ಲಿ ಕನ್ನಡ ಭಾಷೆ, ಉಪಭಾಷೆಗಳನ್ನು ವಿಶ್ಲೇಷಿಸುವ ಕೆಲಸ ನಡೆಯಬೇಕಾದುದು ಅವಶ್ಯಕವಾಗಿದೆ.

ಮಿಶನರಿಗಳ ಆಗಮನವು ಕನ್ನಡ ಭಾಷಾಧ್ಯಯನದಲ್ಲಿ ಮಹತ್ವದ ಘಟ್ಟವಾಗಿದೆ. ಕನ್ನಡ ಬಾರದವರು ಸುಲಭವಾಗಿ ಕನ್ನಡವನ್ನು ಕಲಿಯುವುದಕ್ಕೆ ಅನುಕೂಲವಾಗುವಂತೆ ಮಿಶನರಿಗಳು ಇಂಗ್ಲಿಶಿನಲ್ಲಿ ಕನ್ನಡ ವ್ಯಾಕರಣಗಳನ್ನು ರಚಿಸಿದರು. ಭಾರತವನ್ನು ರಾಜಕೀಯವಾಗಿ ವಶಪಡಿಸಿಕೊಳ್ಳುವ ಗುರಿಯ ಭಾಗವಾಗಿ ಕನ್ನಡ ಭಾಷೆಯ ಸ್ವರೂಪವನ್ನು ತಿಳಿದುಕೊಳ್ಳಬೇಕೆಂಬುದೇ ಅವರ ಉದ್ದೇಶ. ಅಂತಹ ವ್ಯಾಕರಣಗಳೆಂದರೆ ವಿಲ್ಯಂ ಕ್ಯಾರಿ ಅವರ 'The Grammer of Carnataka' (೧೮೧೭), ಜಾನ್ ಮೆಕೆರಲ್‌ರ 'Carnataka Vyakarana' (೧೮೨೦), ಥಾಮಸ್ ಹಡ್ಸನ್ ಅವರ 'An elementary Grammer of Carnataka' (೧೮೫೯), ಜೀಗ್ಲರ್ ಅವರ 'A practical key of the Canarese Language' (೧೮೭೦), ಕಿಟಲ್ ಅವರ 'A Grammer of Kannada Language' (೧೯೦೩); ಇವು ಕನ್ನಡ ಭಾಷಾಧ್ಯಯನ ಕ್ಷೇತ್ರಕ್ಕೆ ಗಮನಾರ್ಹ ಕೊಡುಗೆಗಳಾಗಿವೆ. ಮಿಶನರಿಗಳ ನಂತರ ಸ್ಥಳೀಯ ವಿದ್ವಾಂಸರು ಕನ್ನಡ ಭಾಷೆಯ ಸ್ವರೂಪವನ್ನು ಇಂಗ್ಲೀಶಿನಲ್ಲಿ ವಿವರಿಸುವ ಕೆಲಸ ಮುಂದುವರೆಸಿದರು. ಆರ್. ನರಸಿಂಹಾಚಾರ್, ಎ.ಎನ್. ನರಸಿಂಹಯ್ಯ, ಜಿ.ಎಸ್. ಗಾಯಿ, ಕೆ. ಕುಶಾಲಪ್ಪ ಗೌಡ ಇವರ ಚಾರಿತ್ರಿಕ ಅಧ್ಯಯನಗಳು ಇಲ್ಲಿ ಉಲ್ಲೇಖನೀಯವಾಗಿವೆ.

೧೯೫೦ ರಿಂದ ೧೯೬೫ರವರೆಗಿನ ಒಂದೂವರೆ ದಶಕದಲ್ಲಿ ಕನ್ನಡ ಭಾಷಾಧ್ಯಯನ ಕ್ಷೇತ್ರ ಇನ್ನೂ ವ್ಯಾಪಕವಾಯಿತು. ಆಧುನಿಕ ಭಾಷಾಶಾಸ್ತ್ರವು ಹಲವು ವಿದ್ವಾಂಸರನ್ನು ಆಕರ್ಷಿಸಿತು. ಕನ್ನಡ ಭಾಷೆ, ಉಪಭಾಷೆಗಳನ್ನು ವರ್ಣನಾತ್ಮಕ, ತೌಲನಿಕ, ಐತಿಹಾಸಿಕ ದೃಷ್ಟಿಕೋನಗಳಿಂದ ವಿಶ್ಲೇಷಿಸುವ ಪ್ರಯತ್ನ ಆರಂಭವಾಯಿತು. ಆರ್.ಸಿ. ಹಿರೇಮಠರ 'The Structure of Kannada', ವಿಲ್ಯಂ ಬ್ರೈಟ್‌ರ 'An out line of Colloquial Kannada', ಹಾ.ಮಾ. ನಾಯಕರ 'Kannada : Literacy and Colloquial' ಇವು ಆಡುನುಡಿಯನ್ನು ಗಮನದಲ್ಲಿಟ್ಟುಕೊಂಡ ಅಧ್ಯಯನಗಳು. ಎಂ. ಚಿದಾನಂದಮೂರ್ತಿ, ಎಚ್.ಎಸ್. ಬಿಳಿಗಿರಿ, ಜೆ.ಎಸ್. ಕುಳ್ಳಿ, ವಿಲ್ಯಂಮಾಡ್ತ, ಡಿ.ಎನ್.ಶಂಕರಭಟ್ಟ, ಕೆ.ವಿ. ನಾರಾಯಣ, ರಾಜಪುರೋಹಿತ, ಎಸ್.ಎನ್. ಶ್ರೀಧರ ಮುಂತಾದ ವಿದ್ವಾಂಸರು ಆಧುನಿಕ ಭಾಷಾಶಾಸ್ತ್ರ ತತ್ವಗಳ ನೆಲೆಯಿಂದ ಕನ್ನಡ ಭಾಷೆಯ ಬಳಕೆ ಹಾಗೂ ಸಾಮಾಜಿಕ ಆಯಾಮವನ್ನು ವಿವೇಚಿಸುವ ಸಂಪ್ರಬಂಧಗಳನ್ನು ರಚಿಸಿದ್ದಾರೆ.

ಕನ್ನಡ ಭಾಷೆಯ ಸ್ವರೂಪವನ್ನು ಕುರಿತ ಇಂಗ್ಲಿಶ್ ಅಥವಾ ಕನ್ನಡದ ಅಧ್ಯಯನಗಳು ಹೆಚ್ಚಾಗಿ ವರ್ಣನಾತ್ಮಕ ಭಾಷಾಧ್ಯಯನ ಕ್ಷೇತ್ರದಲ್ಲಿ ನಡೆದಿವೆ. ಭಾಷಾಶಾಸ್ತ್ರದ ಇತರ ಶಾಖೆಗಳಿಗೆ ಸಂಶೋಧಕರ ಪ್ರವೇಶವಾಗಿಲ್ಲ. ಕನ್ನಡ ಭಾಷೆ, ಉಪಭಾಷೆಗಳನ್ನು ವರ್ಣನಾತ್ಮಕ ವಿಧಾನದ ಮೂಲಕ ಅಧ್ಯಯನ ಮಾಡುವುದು ಈಗ ಅಷ್ಟು ಉಪಯುಕ್ತವಲ್ಲ. ಪಾಶ್ಚಿಮಾತ್ಯರು ತಮಗೆ ಅಪರಿಚಿತ ಭಾಷೆಯನ್ನು ಕಲಿಯುವುದಕ್ಕೆ ವರ್ಣನಾತ್ಮಕ ಅಧ್ಯಯವನ್ನು ರೂಢಿಸಿಕೊಂಡರು. ಅವರಿಗೆ ಅದರ ಅವಶ್ಯಕತೆಯೂ ಇತ್ತು. ಅವರು ಹಾಕಿಕೊಟ್ಟ ಧ್ವನಿ, ಧ್ವನಿಮಾ, ಆಕೃತಿಮಾ ಈ ಚೌಕಟ್ಟಿನಲ್ಲಿ ಕನ್ನಡದ ರಚನೆಯನ್ನು ಅಭ್ಯಸಿಸುವವರು, ತಾವು ವಿಶ್ಲೇಷಿಸುವ ಭಾಷಾಸಮುದಾಯ ಭಾಷಾರೂಪಗಳನ್ನು ತುಂಬುತ್ತಾ ಹೋಗುತ್ತಾರೆ. ಈ ವಿಧಾನದಿಂದ ಒಂದು ಭಾಷೆಯ ಮೇಲ್ಮೈ ರಚನೆ ಮಾತ್ರ ತಿಳಿದುಬರುತ್ತದೆ.

ಕನ್ನಡದಲ್ಲಿ ಭಾಷಾಧ್ಯಯನ ಭಾಷೆ, ಉಪಭಾಷೆಗಳ(ಭಾಷಾ ಸಮುದಾಯದ) ಸಾಮಾಜಿಕ ಆಯಾಮದ ಕಡೆಗೆ ಮುಖ ಮಾಡಬೇಕು. ಕೇವಲ ಭಾಷೆಯ ರಚನೆಯನ್ನು ನೋಡುವುದಷ್ಟೇ ಅಲ್ಲ, ಭಾಷಾ ಸಮುದಾಯದ ವಿವಿಧ ಸ್ತರಗಳಲ್ಲಿ ಭಾಷೆಯ ಬಳಕೆಯ ರೀತಿಯನ್ನು, ಬಳಕೆಯಲ್ಲಾಗುವ ಮಾರ್ಪಾಟುಗಳನ್ನು ಶೋಧಿಸಬೇಕು. ಅಂತಹ ಸಂದರ್ಭದಲ್ಲಿ ವರ್ಣನಾತ್ಮಕ ವಿಶ್ಲೇಷಣೆ ಅಧ್ಯಯನದ ಒಂದು ಭಾಗವಾಗಿ ಮಾತ್ರ ಬರಬಹುದು. ಇಡಿ ಅಧ್ಯಯನವೇ ಅದಾಗಬಾರದು. ಇಲ್ಲಿ ಕನ್ನಡ ಭಾಷೆ, ಉಪಭಾಷೆಗಳನ್ನು ಕುರಿತು ಆಂಗ್ಲ ಭಾಷೆಯಲ್ಲಿ ನಡೆದ ಅಧ್ಯಯನದ ಸೂಚಿಯನ್ನು ಕೊಡಲಾಗಿದೆ.

DESCRIPTIVE LINGUISTIC

Andronov M.S. (1969), The Kannada Language (Trans. from Russian by V. Korotky), Nauka Publishing House, Moscow.

Aronoff, M & S.N. Sridhar (1984), 'Agglutination and composition in Kannada Verbal Morphology Lexical Semantics (C.L.S. parasession Volume),. Chocago Linguistic Society.

________ (1988) 'Prefixation in Kannada in Theoretical MorphologyApproaches in modern linguistics' (Ed), M. Hammond & M. Noonan Academic Press, Newyork.

Biligiri, H.S. (1955) The nasal phonemes of kannada, Indian Linguisties, Vol-16.

________ (1957) Kannada Verb, Vol-2, Indian Linguistics.

________ (1962) conjugational system of kannada [According to old kannada grammarians and a modem assesment] kannada studies 2-1 8-22

________ (1959) kannada verb: two models, Indian linguistics vol-18 no-2.

Bhat, D.N.S. (1971) An outline grammar of Havyaka, Deccan College, Poona.

________ (1963) kannada verb morphology Vaddaradhane bulletin of the deccan college, Poona.

Bhat, K.P. (1978) phonology of kannada studies in early dravidian grammars(ed) S.Agestslingum, N. Kumaraswami, Annamali university.

Bhat,V.G. (1981)The verblbeeku/in kannada(ed)agesthalingum, N. Rajasekaran Nair, dravidian syntax, Annamalai university.

Chandrashekar (1988) Lexical morphology and phonology of Kannada University of Ottawa.

Chandraiah,B.N. (1979) The passive voice in kannada(ed) G.N.Reddy & P. Somashekaran, proceeding of second All India conforence of Dravidian linguists, Tirupati D.L.A Trivandrum.

Chidanandamurthy.M. (1972) A palatalization & velarization dialect of kannada I.J.D.L. 1-242-5

———— (1976) Case system in standard colloqual kannada dravidian case system (ed) Agesthalingu D. & Kushalappagowda Annamlai University.

————(1984) Further light on palataization and velarization in kannada dialets I.J.D.L 13.2.

Dashko,M.A(l965) Glago lv screrenennom literaturnom ozyki kannada [The verb in modem literacy kannada] moscow.

D'souza (1970) A study in the central analysis of basic sentence pattern in Kannada and English C.I E&FL, Hyderabad.

Gai, G.S. (1940)The inclusive and exclusive first person plural in kannada.Bulletien of the Deccan college, Poona, Vol-l

———— (1950)Middle demonstrative/ul in old kannada.

———— (1955) pronouns in vaddaradhane, Indian linguistic 15:25-51

Ganapati, T. (1981) The plural in Kannada and English CLE&FL, Hyderabad.

Giridhar,P.P. (1992) A case grammar of Kannada, C I.I.I Mysore.

Gurubasavegowda, K.S. (1971) Negation in kannada (ed) H.S.Biligiri, papers and talks, Mysore C.I.I.L.

Herold Spencer (1914). A kanarese Grammer, wesleyan press, Mysore.

Hiremath R.c. (1957), Vowel Phonemes of kannada I.K.U.D 1:2.

———— (1961) 1980, The structure of kannada K.U.D. Compound Verb in Kannada, Proceeding of the Seminar Annamali nagar.

———— (1956), Formation of Adverbs in Kannada, Deccan College, Poona.

Iyer L.v. Ramaswamy (1932) A problem of Dravidian Phonology: Tamil Medeivl (YS.) and Kannada(s) Journal of the Oriental Reaserch, Madras.

John Shamrao (1854), A Kannada Grammer.

Katti Y.R. (1879), Outline of Kanarese Grammer, Bombay, Basel Mission Press.

Kary, William (1817), A Grammer of the Kamataka Language, Serampur Mission Press.
Kitter F. (1982 Print) A Grammer of the Kannada Language, Asian Educational Services, New Delhi.
Kulli J.S. (1969), Concept of Phoneme in Kannada Grammarians R.S Panchamukhi Felicitation Volume.
_________ (1976) Kesiraja's Sabdhamani Dgrpana (Ph.D. thesis), K.U.D.
_________(1976) Kesiraja's Treatment of Case (ed) Agesthialingum & K.Kushalappagowda, Dravidian Case System, Annamali University.
_________(1976) Stem-fornatives in Kannada, Proceeding of the third All India Conference of Dravidian Lingusts, R.c. Hiremath & J.S. Kulli (ed).
_________ (1978) Review of Descriptive Grammer of Pampa Bharata, U.D.L. Trivandrum.
_________ (1981) Personal Pronoun in Kannada Papers in Linguistics (ed) M.S. Sunkapur & J.S. Kulli, Sharat Prakashan, Mysore.
Kushalappagowda K. (1961), Descriptive Grammar of Vadda rad hane.Annarnali University.
_________(1967) Vower Phonemes in Gowda Kannada, J.K.U.-Humanities.
_________(1969) The phoneme, Kannada Studies, Mysore 3.1 :51-9.
_________(1972) A grammar of Kannada, Annamali University.
_________ (1976) The Noun Classification in Kannada, Procee-dings of the seminors on Dravidian Linguistic (ed) S. Agesthialingum & P.S.Subrahmaniam, Annamali University.
_________ (1978) Kesiraja's and his verb morphology studies in Early Dravidian Grammar (ed) S. Agestalingum & N. Kumara swamiraja, Annamali University.
_________ (1978) Passive voice in Kannada, Annauls of Oriental Research, xxviii-1 University of Madras.
_________ (1991) A Course in Modern Kannada, University of Madras.

Madtha, William (1981) Sandhi in Kannada, Papers in Linguistics (ed) M.S. Sunkapur & J.S. Kulli, Sharat Prakashan, Mysore.

________ (1976) Case System of Kannada Dravidian Case System (ed) S. Agesthalingum & K. Kushalappagowda,Annamali University.

________ (1981) 'Co-ordinate Sentences in Kannada', Dravidan Syntax (ed) S. Agestalingum & N.B. Nair, Annamali University,

________ (1986) Digital Phonetics J.K.U. Humatics, K.U.D.

________ (1984) The Christian Konkani of South Kanara - A Linguistic Anaysis, Ph.D. thesis, K.U.D.

________ (1976) 'Adjective in Kannada' The proceedings of the third All Indian Conference of Dravidan Linguistcs (ed) R.e. Hiremath & J.S. Kulli, K.U.D.

________(1972) Tense in Kannada, J.K.e. Humatics, K:U.D.

Mahilamma V (1971). 'Tense formation in Kannada', proceedings of the First All India Conferece of Dravidian Linguistics Trivandrum, D.L.A.

Murigeppa A. (1984), 'Numerals in Kannada', Papers in Kannada Linguistics, Brundavana Publishers. Mysore.

Nadakarni M.V (1971) The nature of Adjective in Kannada, Indian Linguistics, 32.1.

Nadakarni M.V (1971) The sentential complements on nouns in Kannada, Indian Linguistics, 32.3.

Nayak H.M. (1967) Kannada literary and colloqual -A Study of two style, Rao & Raghavan, Mysore.

Coexistence of Phonomic System and old Kannada Grammar, Kannada Studies. Vol-I.

Panditharadhya M.N.Y. (1976), Kannada Riddles: Descriptive Analysis proceedings of the third All India Conferenc of Dravidian linguistics (ed) R.C. Hiremath, J.S. Kulli, K.U.D.

Rajapurohit B.B. (1965), Grammar of Vachana Literature, K.U.D.

________(1973) Compound Verbal Construction in Kannada, LJ.D.L. 2.2, 316-20.

________(1982) Acoustic characteristric of Kannada, C.I.I.L.

________ [1986 (ed)] A coustic studies in Indian Languages, C.I.I.L.

________(1971) 'Case suffixes in Kannada', Historicals & Descriptive study First All India Conference of Dravidian linguistics, Trivandram.

Rajaram S. (1971) 'Kannada Verbal Bases', proceedings of First All India Conference of Dravidian Linguistics, (ed) V.I. Subramaniam, E. Valentine, D.L.A.: Trivandrum.

________(1981) Personal Pronouns: A Contrasti ve Analysis of Tamil & Kannada, Papers in Linguistics, (ed) M.S.Sunkapur & *I.S.* Kulli, Sharat Prakashan, Mysore.

Ramachandrarao B. (1972) Descriptive Grammar of Pampabharnt, University of Mysore.

________(1976) Transitive, Intransitive and Causetive verb in Pampabharata, Third seminar of Dravidian Linguistics, Annamalinagar (ed) S. Agestalingam, S.Y. Shanmugam.

Ramaswami C. (1981), The infinive in Kannada, Papers in Linguistics (ed) M.S. Sunkapur, J.S. Kulli, Sharat Prakashan, Mysore.

Rangan K. & B. Mallikarjun (1981) Causative Constructions in Kannada, Papers in Linguistics, M.S. Sunkapur, J.S.Kulli (ed) Shart Prakashan, Mysore.

Ranganath M.R. (1982) Morpho-Phonemic Analysis of the Kannada Language, C.I.I.L., Mysore.

Satry Deviprasad (1973), Descriptive Analysis of Vakkaliga Kannada, Deccan.College, Poona.

Saudattimath S.D. (1988), Harihar's Ragales - A linguistic Analysis, Karnataka University, Dharwad.

Schiffman, Harold F. (1968), Morphophonemics of the Kannada Verb, Glossa 2.2.

________(1983) A Reference Grammer of spoken Kannada, University of Washington Press.

________(1984) Morphophenemics in Kannada, Seminar on Grammatical theory in Kannada.

Seetharamaiah M.Y. (1966), The case system of Kannada, Kannada Studies, Vol, 2. No.2.

Shastri K.G. (1965), Keshiraj's Sabdamanidarpana as a Descriptive Grammer of Old Kannada, Seminar on 'Grammatical theories in Kannada', Mysore.

________(1977) A linguistic perspective of a few Kannada proverbs, 7th All India Conference of Dravidian Linguistics, Bangalore.

Shastry M.R. (1965), Derivative suffixes, seminar on Grammatical theory in Kannada, Annamali University.

Specncer H. (1950), A Kannada Grammer, Revised Edited by W.Perston wesley Press, Mysore.

Sreekantaiya T.N. (1925), Mutation of / i,u.e. / and /0/ in Kannada, proceeding of 8th All India Oriental Conference, Mysore.

________(1954) Affricates in Kannada, Indian Linguistic 14,546-5-2.

Sreedhar B.H.(1976), Some problems of Gender and case suffixes in Kannada, Proceedings of the third All India Conference of Dravidian linguistic, K.UD. (ed) R.C. Hiremath & J.S. Kulli.

Sridhar S.N. (1976) Dative subjects papers, from the Twelfth regional meeting of the Chicago linguistic society.

________(1979) Dative subjects & the nation of subject linga Vol. 49.

________(1989) 'Kannada' Descriptive Grammar, Routledge, London.

________(1988) Congition and sentence production: A Cross Lingustic study, springer verlag, New York.

________ & M. Aronoff (1988) 'A Lexicaist Analysis of Kannada Participle Compounds', Department of ling us tics, State University.of New York at Stony brook.

Talawar M.R. (1994) Lingustic Analysis ofHaijon Dialect in Belguam District, K.U.D.

Thomas Hudson (1859) An Elementary Grammer of the Kannada, Wesleyan Mission Press, Mysore.

Upadhyaya U.P. (1972), Kannada Phonetic Reader, C.LI.L., Mysore.

Varadarajrao G. (1972) A note on Vibhaki Pallata in Kannada, pro-ceeding of the first All India Conference of Dravidian linguistics Trivandrum, D.L.A.

________(1976) A note on Gamak Compound in Kannada, proceeding of third All India Conference of Dravidian lingustcs (ed) RC. Hiremath, I.S. Kulli, K.U.D.

Venkateshayya M.G. (1951) Behaviour of infinitive morpheme in. Kannada, Q.J.M.S. XLII.

________(1959) A preliminary Inquiry in Kannada, Quartery Journal of Mythic Society, Bangalore.

________(1961) Behaviour of Sentences in Kannada Prose Q.J.M.S.

________(1968) The behaviour of the Cerebral pheneme in the kannada language Q.1.M.S.L-I-4.

________(1967) The initial surd medial sonant postulate in Kannada Q.1.M.S. XLV3.

William, Bright (1958) An outline of Colloguial Kannada Poona, Deccan College.

________(1970) Phonological Rules in Literary and Colloquial, Kannada J oumal of the American Oriental Society 90.1.

Ziegler F. (1853) A practical key to the Kannada Language, Asian Educational Services, New Delhi.

II. HISTORICAL LINGUISTICS

Ananthanarayan H.S. (1978), 'Sanskrit influence on Shabdamanidarpana', Agestalingam S. & Kumarswami Raja S., Studies in Early Dravidian Grammars, Annamalainagar, Annamali University.

Awalikar D.N. (1961) Some Kannada Words in Old Marthi, Journal of Kamataka University-S.

Bean, Susan S. (1978), Symbolic & Pragmatic Semantics: A Kannada System of Address, University of Chicago Press, Chicago.

Bhat K.P. (1972) 'Personal names in the Naiks', proceeding of the second All India Conference of Dravidian linguistics G.N. Reddy & P. Somsekharan Nair (ed) D.L.A. Travendrum.

Bhat D.N.S. (1969) Some Sound change in Havyaka & Kannada, Indian-Linguistics 25:67-70.

________(1972) Sound change, Bhasha Prakashan, Poona.

————(1975) 'Must' in Kannada I.1.D.L. Vol.iv., (1979) Vectors in Kannada, I.1.D.L. Vol. iv.

Bhat V.G, (1982) Agent suppression in Kannada & Telu, I.1.D.L. (1981) Gopula in Kannada, (ed) M.S. Sunkapur & J.S.Kulli, Papers in Linguistics, Sharat Prakashan, Mysore

Biligiri H.S. (1966), Conjugational System of Kannada (According to old Kannada Grammarians & a modem Assessment), Kannada Studies.

Chidanandamurthy M. (1968), The problem of Loan Words in Shabdhamanidarpan, Kannada - Studies 5.

————(1969) Semantic change in sanskrit loan words in cutivated Dravidian with special reference to Kannada, Semi nor on Dravidian linguistic-Il, Annamali University.

————(1972) Formation of Echo Words in Kannada(ed) G.N. Reddy &P. Somasekaram, proceeding -Of second All Indian Conference of Dravidian Linguistics.

————(1976), 'Manipravalam' in Kannada in (ed) R.C. Hiremath & J.S. Kulli preceeding of Dravidian Linguistics, K.U.D.

Gai G.S. (1946), Historical Grammar of Old Kannada (Based Entirely on the Kannada inscription of the 8th, 9th & 10th Centuries A.D.), Deccan College, Poona.

Pronouns in Vaddaradhane, Vol-16, Indian Linguistics;

Ganapat T. (1977), English Loan words in Kannada, C.!. E&FL, Hydernbad.

Hiremath R.c. (1967), Place names in Karnataka, Studies in Iridian Linguistics.

————(1972), Linguistics investigation of some please names in Karnataka, Journal of Indian History xxxi,

Javaregowda D. (1965), Contribution of Shabdamanidarpana to words and understanding of the History of Kannada Language. Kannada Studies-2.2.

Joseph P.M. (1984), Prakrit influence on Apabramsha Prakarana of Shabdamanidarpana, I.1.D.L. 13.2.

Kedilaya A.S. (1970), Foreign Loan - words in Kannada (Arabic & Persian) Madran University of Madras.

Kittel F. (1903), 'A Grammar of Kannada language in English' Comprising the three Dialects of the Language. Baselmission. Book and Tract Depository Mangalore. Re-printed 1982, Asian Educational Services, New Delhi.

Krishnamurthi G.VR. (1972), 'A Brief Account of Kannada Loans in Telugu' second All India Conference of Dravidian Linguistics, Tirupathi.

Kulli J.S. (1968), Some Typological observation on Kannada, Journal of Karnataka University, Dharwad.

———(1972), Case of internal reconstruction in Kannada, Third All India Linguistics Conference, Hyderbad.

———(1974), Some place names of Bijapur-Gulbarga area, An India Place Name Society Conference, Bangalore.

———(1991), History of Grammatical Theories in Kannada, International School of Dravidian Linguistics, Travandrum.

Kushalappa Gowda (1972), A Grammar of Kannada (Based on the Inscription of Coorg, South Kanara & North Kanara Districts 1000 to 1400 AD.), Annamalai University, Annamalainagar.

———(1971). 'The impact of Linguistic change on the format of Kannada Poetry', Annauls of the Oriental research. xxvii-2.2, Madras University.

———(1981), 'The 11th Century Inscription of Shravanabelagola': A phonological study, Annauls of Oriental Research. xxx-2. Madras University.

———(1984), The Kannada Language of a Historical pers-pective. Annuals of Oriental Research. xxxii, Madras University.

Mariyappa Bhat.M (1954), Obsolete words in Kannada, Annauls of oriental Research. Volume xii part I & II.

———(1954), Kannada Language of the 19th century - Asample. Annals of oriental Research of the University of Madras.

Narasimhaiah.AN (1935), 'History of 'R' in Kannada', in proceed-ings of Transaction of 8th oriental conference, Mysore.

————(1936), 'The History of 'P' in kanarese', B SOS Volume 8:693-80.

————(1941), 'A Grammar of the oldest kanarese, Inscription' The university ofMyssre.

Narasimhachar.R (1 934), Hi story of Kannada language, Prasaranga Mysore university, Mysore.

————(1965), A Kannada Grammar of the 19th century, seminar on Grammtical theories in Kannada, Annamali university.

Nayak.H.M (1965), Co-existence of Phonemic' systems and an old Kannada Grammar, Kannada studies 1-14-22.

Rajacam.S (1976), The case Grammar of Becoming in kannada Kusha-JappaGowda (ed) Annamali university, Annamalinagar.

Ramaswamy.C (1974), The Language of Kannada Inscriptions of Nothern Kannada from 1000 to 1400 A.D. (un published P.hd Thesis). Annamali university, Annamali nagar.

Sridhar.S.N (1974), The Aryanizaytion of the Kannada Lexicon in language borroaing, H.vanolphen (ed) Department of oriental & African Language & Literatures, University of Texas, Austin.

Sree Kantaiah.T.N (1955), The Kannada language through the age Karnatak Darshana. [Volume presentsd to shri R.R.Diwakar on his 60th Birthday] Bombay.

Subbarao.T'V (1972), Some English Loan Translation in Telugu & Kannada proceeding of the second All India Conference of Dravidian Linguistics, Tirupati.

————(1976), Kannada borrowing in to Telugu, proceeding of the third All India conference of Dravidian Linguistics K.U.D (ed) R.C. Hiremath, J.S. Kulli.

Upadhyaya, U.P (1969), Sanskrit Borrowing in Vakkaliga, Linguistic survey Bulletien, Poona.

Varadarajarao.G. (1972), 'Shithila dvitva' in old kannada, second All India comference of Dravidian Linguists Tirupati.

III. COMPARATIVE-LINGUISTIC

Adinarayana Gupta C.B (1987), Auxiliary verbs in English and Kannada, (Un-published Dessertation), CIE&FL, Hyderabad.

Ananthanarayana H.S. (1984), Influence of Sanskrit on Kannada Compound Formation, LJ.D.L. 13.2.

Aronoff M. & S.N. Sridhar (1983), Morphological Levels in English & Kannada or Atarizing Reagan Interaction of Levels (CLS. parasession Volume), Chicago Linguistic Society P.P. 3-16, Also in Rules and the Lexicon, Edward Gussman (ed) Catholic University of Lublin.

Bhat D.N.S. (1964), Some Sound Change in Havyaka and Kannada, Indian Linguistics, Vol-25.

Bhat V.G. (1982) Agent Suppression it) Kannada & Tulu, LJ.D.L., Vol-II, No.2.

Chandrika T. (1971), The phoneme oftheIndo-Aryan: Konkani, Hindi and Nepali - A Comparision with the Dravidian Malayalam, Kannada and Telugu, Proceedings of All India Conference of Dravidian Linguistics Trivandrum.

Cole P. & S.N. Sridhar (1977), Clause Union and Relational Grammar Evidence from Hebrew and Kannada Linguistic Inquiry, Vol-8, No.4

D'Souza (1972), The system of Tense in English and Kannada, CIE&EL. Hyderabad.

Ganapati T. (1968), Sentence patterns in Kannada & English: A contrastive study, C.I.E.F.L., Hyderabad.

Kulli J.S. (1968), Some Typolical observation on Hindi & Kannada Phonology, Journal of Karnataka University, Dharwad.

————(1969), Some Typological observation on Hindi & Kannada Morphology Journal of K.U.D.

Kulli J.S. (1970), Some Typological observation on Hindi & Kannada Syntax, Journal of K.U.D.

————(1979) Influence of Sanskrit on Kannada Grammatical System, 'In Seminar on the influence of sanskrit on Dravidian' Grammatical System, K.U.D.

———(1980), Influence of Sanskrit and Prakrit on Kannada, A Tenth All India Dravidian Linguistic Conference, Delhi.

Madha, Williarri (1984), The Relationship between Konkani and Kannada, XV ALL India Konkani Sahitya Parishad, Bangalore.

Nadakarni M.V. (1970), N.P. Embedded structrures in Kannada and Konknoi un published Ph.b. thesis, University of California at Los Angeles.

Navada Ramakrishna (1964), Numeral Adjectives of Hindi Kannada Gaveshna, Agra.

Patkar Panduranga (1880), Sanskrit-Kannada Sabda utpatti Pandit-Awalikar (1981), The Marati -Kannada Relationship, Mysore University.

Rajaram S. (1967), A Comparative Analysis of Tamil and Kannada (un published p.hd thesis) Annamalai university, Annamalainagar.

———(1981), Personal Pronouns: A Contrastive analysis of Tamil and Kannada. Papers in LInguistics. M.M. Sunkapur & J.S.Kulli (ed) Mysore, sharad Prakasha.

Shastry.N.R (1983), Kannada V/s English Tense. Hyderabad. C.I.E&FL.

Sridhar S.N. (1976), 'On the Notion of subject in Kannada' in the notion of subject in South Asian studies, University of Wisconsin, Madison.

Subbarao T.K. (1972), Some English loan translations in Telugu & Kannada, proceeding of the second All Indi a conference of Dravidian LInguistics (ed) G.N. Reddy & P. Soma- sekharan D.L.A of India Trivadrum.

Tirumalesh K.y. (1976), The Passive in English and Kannada: A cross linguistics study, unpublished Militt thesis C.I.E&FL, Hyderabad.

———(1979), Reordering rules in Kannada & English unpublished Ph.D. thesis, c.r. E&FL, Hyderabad.

Upadhayaya, P. Susheela (1973), Hindi-Kannada, Common Vocabu-lary c.I.I.L., Mysore.

———(1976) Comparative Study of Kannada dailects, Mysore University.

Umarji YR. (1952), The influence of Sanskrit Directly or through prakrit on Kannada, Bombay.

________(1964) Typological Comparision of Kannada & English, Secondary Education 9-1.

Viswanath L. (1963-64), Kanarese and English, A Comparison of their phonologies, U.K. University, College of North Waes.

೯೪

ಕನ್ನಡದಲ್ಲಿ ನಾಮಾಧ್ಯಯನ

ಹೆಸರುಗಳಲ್ಲಿ ಒಂದು ಭಾಷಿಕ ಸಮುದಾಯದ ಸಾಂಸ್ಕೃತಿಕ ಚರಿತ್ರೆ ಇರುತ್ತದೆ. ಇದರ ಅಧ್ಯಯನವೇ 'ನಾಮವಿಜ್ಞಾನ'. ನಾಮ ಅಧ್ಯಯನದಲ್ಲಿ ಇದರ ಮುಖ್ಯ ಅಂಗಗಳು ಎರಡು. ವ್ಯಕ್ತಿಗಳಿಗೆ ಇಟ್ಟ ಹೆಸರುಗಳ ಅಧ್ಯಯನ 'ವ್ಯಕ್ತಿನಾಮ ವಿಜ್ಞಾನ'. ಸ್ಥಳಗಳಿಗೆ ಇಟ್ಟ ಹೆಸರುಗಳ ಅಧ್ಯಯನ 'ಸ್ಥಳನಾಮ ವಿಜ್ಞಾನ'. ಇತ್ತೀಚೆಗೆ ನಾಮಗಳ ಅಧ್ಯಯನವು ಪ್ರತ್ಯೇಕ ಜ್ಞಾನ ಶಾಖೆಯಾಗಿ ಬೆಳೆಯುತ್ತಿದೆ. ಅದರಲ್ಲೂ ನಾಮ ವಿಜ್ಞಾನಿಗಳು ಸ್ಥಳನಾಮ ಅಧ್ಯಯನಕ್ಕೆ ಹೆಚ್ಚು ಒಲವು ತೋರುತ್ತ ಬಂದಿದ್ದಾರೆ.

ಸ್ಥಳನಾಮಗಳನ್ನು ಕುರಿತ ಶಾಸ್ತ್ರೀಯ ಅಧ್ಯಯನದ ಇತಿಹಾಸ ೧೮ನೆಯ ಶತಮಾನಕ್ಕಿಂತ ಹಿಂದೆ ಹೋಗದು. ಸ್ಥಳನಾಮಗಳ ಮಹತ್ವವನ್ನು ಮೊದಲು ಮನಗಂಡವನು ಜರ್ಮನಿಯ ಗಾತ್ ಫ್ರೀಡ್ ವಿಲ್ಹೇಜ್ ಲೀಬ್ನಿಜ್(೧೬೬೮); ಪಶ್ಚಿಮ ಯೂರೋಪಿನಲ್ಲಿ ಅದರಲ್ಲೂ ಇಂಗ್ಲೆಂಡಿನಲ್ಲಿ ಈ ಬಗ್ಗೆ ವಿಶೇಷ ಅಧ್ಯಯನ ನಡೆದಿದೆ. ಇದಕ್ಕಾಗಿ ಅಧ್ಯಯನ ಕೇಂದ್ರಗಳು ಸ್ಥಾಪನೆಗೊಂಡಿವೆ. ಅಂತಾರಾಷ್ಟ್ರೀಯ ಸಮ್ಮೇಳನಗಳು ನಡೆದಿವೆ. ಆಂಗ್ಲ ಸ್ಥಳನಾಮ ಸಂಶೋಧನ ಸಂಸಥೆಯು ೧೯೨೩ರಲ್ಲಿ, ಅಮೇರಿಕನ್ ಸ್ಥಳನಾಮ ಸಂಸ್ಥೆಯು ೧೯೫೧ರಲ್ಲಿ ಅಸ್ತಿತ್ವಕ್ಕೆ ಬಂದವು. ಆಂಗ್ಲ ಸ್ಥಳನಾಮ ಸಂಸ್ಥೆಯು ಇಂಗ್ಲೆಂಡಿನ ಸ್ಥಳನಾಮಗಳ ಬಗ್ಗೆ ೪೬ ಸಂಪುಟಗಳನ್ನು ಪ್ರಕಟಿಸಿದೆ. ಅಮೇರಿಕದ ನಾಮ ಸಂಸ್ಥೆಯು 'ನೇಮ್ಸ್' ಎಂಬ ಹೆಸರಿನ ಪತ್ರಿಕೆಯನ್ನು ಪ್ರಕಟಿಸುತ್ತಿದೆ. ಇಲ್ಲಿಯವರೆಗೆ ಸ್ಥಳನಾಮ ವಿಜ್ಞಾನಕ್ಕೆ ಸಂಬಂಧಿಸಿದ ೧೫ ಅಂತಾರಾಷ್ಟ್ರೀಯ ಸಮ್ಮೇಳನಗಳು ನಡೆದಿವೆ.

ಭಾರತದಲ್ಲಿ ಸ್ಥಳನಾಮಗಳನ್ನು ಕುರಿತು ಲೇಖನಗಳು ಐದಾರು ದಶಕಗಳಿಂದ ವಿರಳವಾಗಿ ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿವೆ. ಇವುಗಳ ಅಧ್ಯಯನಕ್ಕೆ ಪೂರ್ಣ ಸ್ವರೂಪ ನೀಡಿದವರು ಪುರಾತತ್ವ ತಜ್ಞ ಎಚ್.ಡಿ. ಸಂಕಾಲಿಯಾರವರು. ಸ್ಥಳನಾಮಗಳು ಆಯಾ ಕಾಲದ ಭಾಷೆಯ ಸ್ಥಿತಿಗತಿಗಳನ್ನು ನಿರ್ಣಯಿಸುವಲ್ಲಿ, ಸಾಂಸ್ಕೃತಿಕ ವೈಶಿಷ್ಟ್ಯತೆಗಳನ್ನು

ಗ್ರಹಿಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆಂದು ಅವರು ವಿಶದಪಡಿಸಿದರು. ಆ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಮಾರ್ಗದರ್ಶನ ನೀಡಿ ನಾಮಗಳ ಅಧ್ಯಯನಕ್ಕೆ ಕಾರಣರಾದರು. ಸುಮತಿ, ಶೋಭನ ಗೋಖಲೆ, ಟಿ.ಕೆ. ಶೇಷಾದ್ರಿ ಮೊದಲಾದವರು ಗುಜರಾತ, ಮಹಾರಾಷ್ಟ್ರ, ಹಿಂದಿ ವಲಯದ ಸ್ಥಳನಾಮಗಳನ್ನು ಕುರಿತು ಕೆಲಸ ಮಾಡಿದ್ದಾರೆ. ಭಾಷಾಶಾಸ್ತ್ರದ ಹಿನ್ನಲೆಯಲ್ಲಿ ಬಂಗಾಳಿ ಸ್ಥಳನಾಮಗಳನ್ನು ಅಧ್ಯಯನ ಮಾಡಿದವರು, ಭಾಷಾತಜ್ಞ ಸುನೀತ ಕುಮಾರ ಚಟರ್ಜಿಯವರು. ಪ್ರಕಾಶ್ ಕುರ್ಲ್ ಎಂಬ ವಿದ್ವಾಂಸರು ಉತ್ತರ ಪ್ರದೇಶದ ಸ್ಥಳನಾಮಗಳನ್ನು ಸಾಮಾಜಿಕ ಭಾಷಾಶಾಸ್ತ್ರದ ಹಿನ್ನಲೆಯಲ್ಲಿ ಪರಿಶೋಧಿಸಿದ್ದಾರೆ. ೧೮೯೩ರಲ್ಲಿ ಪ್ರಕಟವಾದ 'ಮದ್ರಾಸ ಆಡಳಿತಕೋಶ' ಕೆಲವು ಸ್ಥಳನಾಮಗಳ ವ್ಯುತ್ಪತ್ತಿಯನ್ನು ನಿರೂಪಿಸಿದೆ. ಭಾಷಾಶಾಸ್ತ್ರ ದೃಷ್ಟಿಯಿಂದ ತಮಿಳು ಸ್ಥಳನಾಮ ಕ್ಷೇತ್ರದಲ್ಲಿ ದುಡಿದವರಲ್ಲಿ ಆರ್.ಡಿ. ಸೇತುಪಿಳ್ಳೆಯವರಿಗೆ ಅಗ್ರಸ್ಥಾನ ಸಲ್ಲಬೇಕು. ೧೯೫೬ರಲ್ಲಿ 'ತಮಿಟಗಂ ಊರುಂಪೇರುಂ' ಎಂಬ ಅವರ ಉದ್ಗ್ರಂಥ ಅಚ್ಚಾಯಿತು. ೧೯೦೨ರಲ್ಲಿ ಕೆ.ಪಿ. ಪದ್ಮನಾಭ ಮೆನನ್ 'ಮಲಬಾರ್ ಸ್ಥಳನಾಮಗಳು' ಎಂಬ ಲೇಖನ ವೊಂದನ್ನು ಪ್ರಕಟಿಸಿದರು. ಪಿ. ರಾಮಕೋಟಿ, ರಾಮವರ್ಮ ಅಪ್ಪನ್, ತಂಬೂವನ್, ಕೆ.ಪಿ. ಅಚ್ಚುತ ಮೆನನ್, ಟಿ. ಲಕ್ಷ್ಮಣ ಪಿಳ್ಳೆ ಮತ್ತು ಟಿ.ಕೆ. ಜೋಸೆಫ್ ಇವರು ಕೇರಳ ಸ್ತಳನಾಮಗಳ ಬಗೆಗೆ ಕೆಲಸ ಮಾಡಿದವರು. ಕೇತು ವಿಶ್ವನಾಥ ರೆಡ್ಡಿಯವರು 'ಕಡಪ ಊರ್ಲಪೇರ್ಲು' ಆಂಧ್ರಪ್ರದೇಶದ ಸ್ಥಳಾನಾಮಗಳ ಬಗೆಗೆ ಸಾಮಾಜಿಕ ಭಾಷಾಶಾಸ್ತ್ರ ದೃಷ್ಟಿಯಿಂದ ಅಧ್ಯಯನ ಮಾಡಿದ್ದಾರೆ. ಇಲ್ಲಿಯೇ ನಂಬೂದರಿ, ವಿ.ವಿ. ವಳತ್, ಟಿ. ಬಾಲಕೃಷ್ಣನಾಯರ್, ಕೆ.ಎಂ. ಜಾರ್ಜ್ ಮೊದಲಾದವರ ಹೆಸರುಗಳನ್ನು ನೆನೆಯಬೇಕು.

ಕರ್ನಾಟಕದ ಸ್ಥಳನಾಮಗಳ ಬಗೆಗೆ ದೃಷ್ಟಿಯಿಂದ ನಮ್ಮ ಗಮನಸೆಳೆದ ಗ್ರಂಥ ವೆಂದರೆ 'ಕಿಟೆಲ್ ನಿಘಂಟು'. ಕಿಟೆಲ್ ನಿಘಂಟು ಕೆಲವು ಊರುಗಳ ಹೆಸರುಗಳನ್ನು ಗುರುತಿಸುತ್ತದೆಯೇ ಹೊರತು ಅವುಗಳ ನಿಷ್ಪತ್ತಿಯ ಬಗ್ಗೆ ತಟಸ್ಥವಾಗಿದೆ. ಹಯವದನ ರಾಯರು ಮೈಸೂರು ಗೆಜೆಟಿಯರಿನಲ್ಲಿ ಕೆಲವು ನಾಮಗಳನ್ನು ಕುರಿತು ನಡೆಸಿರುವ ವಿಶ್ಲೇಷಣೆ ಸಮರ್ಪಕವಲ್ಲದಿದ್ದರೂ ಆ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಕೆಲವು ಸೂಚನೆಗಳು ದೊರೆಯುತ್ತವೆ. ನಂತರ ಆರ್.ಸಿ. ಹಿರೇಮಠ, ದೇಜಗೌ ಅವರ ಬರೆಹಗಳು ಸ್ಥಳನಾಮಗಳು ಅಧ್ಯಯನದ ಬಗ್ಗೆ ಸಂಶೋಧಕರ ಆಸಕ್ತಿಯನ್ನು ಕೆರಳಿಸಲು ಯತ್ನಿಸಿದವು.

ಭಾರತೀಯ ಸ್ಥಳನಾಮ ಸಂಸ್ಥೆಯು ೧೯೭೮ರಲ್ಲಿ ಮೈಸೂರಿನಲ್ಲಿ ಆಸ್ತಿತ್ವಕ್ಕೆ ಬಂದಿತು. ಈ ಸಂಸ್ಥೆಯು ಪ್ರತಿವರ್ಷ ರಾಜ್ಯದ ಒಳಹೊರಗೆ ವಾರ್ಷಿಕಾಧಿವೇಶನವನ್ನು ನಡೆಸುವುದರೊಂದಿಗೆ 'Studies in Indian Place Names' ಹೆಸರಿನ ಸಂಪತ್ರಿಕೆಯನ್ನು ಪ್ರಕಟಿಸುತ್ತಿದೆ. ಇಲ್ಲಿಯವರೆಗೆ ೨೪ ರಾಷ್ಟ್ರೀಯ ಸ್ಥಳನಾಮ ಸಮ್ಮೇಳನಗಳು ನಡೆದಿವೆ. ಇದರಿಂದ ನಾಮಗಳ ಅಧ್ಯಯನಕ್ಕ ಒಂದು ವಿಶೇಷ ಗತಿ ಪ್ರಾಪ್ತವಾಗಿದೆ.

ಕರ್ನಾಟಕ ಸರಕಾರ ಈಗ ಅಸ್ತಿತ್ವದಲ್ಲಿರುವ ಗ್ರಾಮಗಳನ್ನು ಪಟ್ಟಿ ಮಾಡಿ 'A list of Villages in the Mysore State' (೧೯೬೮) ಮತ್ತು 'ಕರ್ನಾಟಕ ಗ್ರಾಮಸೂಚಿ' (೧೯೮೫) ಎಂಬ ಎರಡು ಸ್ಥಳನಾಮಗಳ ಕೋಶಗಳನ್ನು ಪ್ರಕಟಿಸಿದೆ. ಶಾಸನಗಳನ್ನು ಅನುಲಕ್ಷಿಸಿ ಕರ್ನಾಟಕದ ಗ್ರಾಮಗಳಿಗೆ ಇದ್ದ ಪ್ರಾಚೀನ ನಾಮಗಳ ಸೂಚಿಯನ್ನು ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಭಿವೃದ್ಧಿ ವಿಭಾಗವು ಸಿದ್ಧಪಡಿಸುತ್ತಿದೆ. ಈ ಮೂರು ಆಕರ ಸಾಮಗ್ರಿ ರೂಪ ಗ್ರಂಥಗಳು ಸ್ಥಳನಾಮ ಅಧ್ಯಯನಕ್ಕೆ ದಿಕ್ಸೂಚಿಯಂತೆ ನೆರವಾಗುತ್ತವೆ. ರಾಜ್ಯದ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ನಾಮಗಳನ್ನು ಕುರಿತು ಎಂ.ಫಿಲ್., ಪಿಎಚ್.ಡಿ. ಅಧ್ಯಯನಗಳನ್ನು ಇಲ್ಲಿ ಅವಶ್ಯ ನೆನೆಯಬೇಕು.

ಕರ್ನಾಟಕದಲ್ಲಿ ಸ್ಥಳನಾಮಗಳನ್ನು ಕುರಿತಂತೆ ವಿದ್ವಾಂಸರು ಅಧ್ಯಯನ ನಡೆಸಿದುದು ಇತ್ತೀಚೆಗೆ. ೧೯ನೇ ಶತಮಾನದಲ್ಲಿ ಕರ್ನಲ್ ಮೆಕೆಂಝಿ ಸ್ಥಳ ಚರಿತ್ರೆಗಳಾದ ಕೈಫಿಯತ್ತುಗಳನ್ನು ಬರೆಸಿದರೂ, ಅವು ಅಲ್ಲಿಯ ಶಾನುಭೋಗರೋ ವಿದ್ಯಾವಂತರೋ ಬರೆದುಕೊಟ್ಟವುಗಳಾಗಿವೆ. ಅವರು ಅಲ್ಲಿಯ ಸ್ಥಳಪುರಾಣಗಳನ್ನೋ ಪ್ರಚಲಿತ ವದಂತಿಗಳನ್ನೋ ಅವಲಂಬಿಸಿರುವುದರಿಂದ, ಈ ಘಟ್ಟದಲ್ಲಿ ನಾಮ ವ್ಯಾಸಂಗಕ್ಕೆ ಉಪಯುಕ್ತ ಮಾಹಿತಿ ದೊರೆಯಲಿಲ್ಲವೆಂದೆ ಹೇಳಬೇಕು. ಹೀಗಾಗಿ ಪಿ. ಹಯವದನರಾಯ ಮತ್ತು ಆರ್.ಸಿ. ಹಿರೇಮಠರ ಲೇಖನಗಳು ಪ್ರಾರಂಭದೆಸೆಯ ಗಮನಾರ್ಹ ಲೇಖನಗಳಾಗಿವೆ.

ಕರ್ನಾಟಕದ ಸ್ಥಳನಾಮಗಳ ಮೇಲೆ ಮೊಟ್ಟಮೊದಲ ಕ್ಷ-ಕಿರಣ ಹರಿಸಿದವರೆಂದರೆ ಶಂಬಾ ಜೋಶಿಯವರು. ಅವರು 'ಕಂನಾಡ ಕತೆ'ಯಲ್ಲಿ ಸ್ಥಳನಾಮ ಅಧ್ಯಯನದ ಪರಿಣಾಮವಾಗಿ ಮೂಡಿದ ತತ್ವಗಳನ್ನು ಪ್ರತಿಪಾದಿಸಿರುವರಲ್ಲದೆ, ಅವುಗಳ ಹಿನ್ನೆಲೆಯಲ್ಲಿ ಇತಿಹಾಸ, ಪುರಾಣ, ಧರ್ಮ, ಜನಾಂಗ ಮತ್ತು ಸಂಸ್ಕೃತಿಯ ಮೇಲೆ ಮಹತ್ವಪೂರ್ಣವಾದ ಬೆಳಕು ಚೆಲ್ಲಿದರು. ಸೇಡಿಯಾಪುರವರ 'ಕೆಲವು ದೇಶನಾಮಗಳು' ಎಂಬ ಕೃತಿ ಶಬ್ದಾರ್ಥ ವಿಶ್ಲೇಷಣೆಗೆ ಸಂಬಂಧಿಸಿದ್ದರೂ, ತಮ್ಮ ವಾದಕ್ಕೆ ಪೂರಕವಾಗಿ ಅವರು ಸ್ಥಳನಾಮಗಳನ್ನು ಬಳಸಿಕೊಳ್ಳುತ್ತಾರೆ. ಶಂಬಾ ಮತ್ತು ಸೇಡಿಯಾಪು ಅವರು ಸ್ಥಳನಾಮಗಳ ಅಧ್ಯಯನಕ್ಕೆ ಹೊರಟವರಲ್ಲ. ಶಂಬಾ ಅವರು ಕರ್ನಾಟಕ ಸಂಸ್ಕೃತಿಯ ನೆಲೆಯನ್ನು ಶೋಧಿಸುವಾಗ, ಸೇಡಿಯಾಪುರವರು ಶಬ್ದಾರ್ಥಗಳನ್ನು ವಿವೇಚಿಸುವಾಗ ನಾಮಗಳನ್ನು ಪೂರಕವಾಗಿ ಬಳಸಿಕೊಳ್ಳುತ್ತಾರೆ. ಇವುಗಳ ತರುವಾಯ ಕೆಮ್ತೂರು ರಘುಪತಿ ಭಟ್ಟರ(ಆರ್ಕೆ) 'ತಮಿಳುನಾಡಿನ ಸ್ಥಳನಾಮಗಳು' ಸ್ಥಳನಾಮಗಳನ್ನು ಕುರಿತ ವೈಜ್ಞಾನಿಕ ಕೃತಿಯಾದರೂ, ಅಲ್ಲಿ ನಾಮಗಳ ಸಾಮಾಜಿಕ ಆಯಾಮಕ್ಕೆ ಒತ್ತು ಬಿದ್ದಿಲ್ಲ. ಎಂ. ಚಿದಾನಂದಮೂರ್ತಿ ಅವರ ಭಾಷಾ ವಿಜ್ಞಾನಕ್ಕೆ ಸಂಬಂಧಿಸಿದ ಸಂಪ್ರಬಂಧಗಳ ಸಂಕಲನ 'ವಾಗರ್ಥ'ದಲ್ಲಿ ೭ ಲೇಖನಗಳು ಸ್ಥಳ ಮತ್ತು ವ್ಯಕ್ತಿನಾಮಗಳಿಗೆ ಸಂಬಂಧಿಸಿವೆ. ಅವರು ಭಾಷೆ, ಸಮಾಜ, ಸಂಸ್ಕೃತಿ, ಮಾನವಶಾಸ್ತ್ರ ಮತ್ತು ಜಾನಪದ ಇಂತಹ

ಅನ್ಯಶಿಸ್ತುಗಳ ಮೂಲಕ ನಾಮಗಳನ್ನು ಗ್ರಹಿಸುತ್ತಾರೆ. ವಿ. ಗೋಪಾಲಕೃಷ್ಣರ 'ಸ್ಥಳನಾಮ ಅಧ್ಯಯನಗಳು', ಅರ್ಕೆ ಮಣಿಪಾಲರ 'ಹೆಸರಿನಲ್ಲೇನಿದೆ?' ಸ್ಥಳನಾಮಗಳನ್ನು ಕುರಿತು ಲೇಖನಗಳ ಸಂಕಲನಗಳಾಗಿವೆ. ಭಾಷಾಶಾಸ್ತ್ರ ದೃಷ್ಟಿಯಿಂದ ಮಾತ್ರ ನಾಮಗಳನ್ನು ವಿಶ್ಲೇಷಿಸುವ ಮಾಡುವ ಇವರ ಪ್ರಯತ್ನ ತುಂಬ ತಾಂತ್ರಿಕವಾಗಿದೆ. ದೇ. ಜವರೇಗೌಡರ 'ಸ್ಥಳನಾಮ ವ್ಯಾಸಂಗ', ಎಂ.ಎಂ. ಕಲಬುರ್ಗಿ ಅವರ 'ಕನ್ನಡ ನಾಮವಿಜ್ಞಾನ' ನಾಮಶಾಸ್ತ್ರವನ್ನು ಸೈದ್ಧಾಂತಿಕ ಚೌಕಟ್ಟಿಗೆ ಒಳಪಡಿಸಿದೆ. ಈ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಕೈಪಿಡಿಯಂತೆ ಸಹಕರಿಸುತ್ತವೆ.

ಈವರೆಗೆ ನಡೆದಿರುವ ಸ್ಥಳನಾಮಗಳ ಅಧ್ಯಯನವನ್ನು ಗಮನಿಸಿದಾಗ, ಚರಿತ್ರೆಕಾರರು ಚಾರಿತ್ರಿಕವಾಗಿ, ಭಾಷಾಶಾಸ್ತ್ರಜ್ಞರು ಭಾಷಿಕವಾಗಿ ವಿಶ್ಲೇಷಿಸುವ ಕೆಲಸ ಮಾಡಿದ್ದಾರೆ. ನಾಮಗಳ ಅಧ್ಯಯನವು ಅನೇಕ ಜ್ಞಾನಶಿಸ್ತುಗಳ ಸಹಾಯ ಪಡೆದು ನಡೆದರೆ ಒಂದು ಪ್ರದೇಶದ ಸಾಂಸ್ಕೃತಿಕ ಚಿತ್ರಣ ದೊರೆಯುತ್ತದೆ. ಆ ಪ್ರದೇಶದ ಭಾಷೆ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಸ್ವಾರಸ್ಯವಾದ ಅನೇಕ ಸಂಗತಿಗಳು ತಿಳಿದುಬರುತ್ತವೆ. ಈ ನಿಟ್ಟಿನಲ್ಲಿ ಕರ್ನಾಟಕದ ಸ್ಥಳನಾಮಗಳ ಬಗೆಗೆ ಇನ್ನೂ ದೊಡ್ಡ ಕೆಲಸ ನಡೆಯಬೇಕಾಗಿದೆ. ಕರ್ನಾಟಕದಲ್ಲಿ ನಾಮಗಳ ಬಗೆಗೆ ಬಂದಂತಹ ಕೃತಿ ಹಾಗೂ ಲೇಖನಗಳ ಸೂಚಿಯನ್ನು ಕೆಳಗೆ ಕೊಡಲಾಗಿದೆ.

ಅ. ಕೃತಿಗಳು

೧. ಶಂ.ಬಾ. ಜೋಶಿ, ೧೯೪೭, ಎಡೆಗಳು ಹೇಳುವ ಕಂನಾಡ ಕತೆ, ಮಾಧವ ಬಲ್ಲಾಳ ಬಂಧುಗಳು, ಸಾಧನಕೇರಿ, ಧಾರವಾಡ.

೨. ಸೇಡಿಯಾಪು ಕೃಷ್ಣಭಟ್ಟ, ೧೯೭೫, ಕೆಲವು ದೇಶನಾಮಗಳು, ಸಾಹಿತ್ಯ ಸಂಘ, ಮಣಿಪಾಲ.

೩. ಕೆಮ್ತೂರು ರಘುಪತಿ ಭಟ್ಟ, ೧೯೭೯, ತುಳುನಾಡಿನ ಸ್ಥಳನಾಮಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೪. ಎಂ. ಚಿದಾನಂದಮೂರ್ತಿ, ೧೯೮೧, ವಾಗರ್ಥ, ಬಾಪ್ಕೊ ಪ್ರಕಾಶನ, ಬೆಂಗಳೂರು.

೫. ವಿ. ಗೋಪಾಲಕೃಷ್ಣ, ೧೯೮೭, ಸ್ಥಳನಾಮ ಅಧ್ಯಯನಗಳು, ವಿದ್ಯಾಗಿರಿ ಪ್ರಕಾಶನ, ದಾರಿನಾಯಕನ ಪಾಳ್ಯ, ಕೋಲಾರ ಜಿಲ್ಲೆ.

೬. ಆರ್ಕೆ, ಮಣಿಪಾಲ, ೧೯೮೯. ಹೆಸರಿನಲ್ಲೇನಿದೆ?, ನ್ಯೂ ಸ್ಟಾರ್ ಪಬ್ಲಿಕೇಶನ್ಸ್, ಬೆಂಗಳೂರು.

೭. ಎಂ.ಎಂ. ಕಲಬುರ್ಗಿ, ೧೯೮೯, ಕನ್ನಡ ನಾಮವಿಜ್ಞಾನ, ಬೆಂಗಳೂರು ವಿಶ್ವ ವಿದ್ಯಾಲಯ, ಬೆಂಗಳೂರು.

೮. ದೇ.ಜವರೇಗೌಡ, ೧೯೯೦, ಸ್ಥಳನಾಮ ವ್ಯಾಸಂಗ, ಸಹ್ಯಾದ್ರಿ ಪ್ರಕಾಶನ, ಮೈಸೂರು.

೯. ಜಗದೀಶ ಮಠದ, ೧೯೯೫, ಕೈಪಿಯತ್ತುಗಳಲ್ಲಿ ನಿರೂಪಿತವಾದ ಸ್ಥಳನಾಮಗಳ ಅಧ್ಯಯನ (ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್. ನಿಬಂಧ.

೧೦. ವಿಶ್ವನಾಥ, ೧೯೯೬, ಸಕಲೇಶಪುರ ಪರಿಸರದ ಸ್ಥಳನಾಮಗಳು, ದೇವಿ ಪ್ರಕಾಶನ, ಮೈಸೂರು.

೧೧. ______ ೧೯೯೬, ಸ್ಥಳನಾಮಗಳು, ಸಂವಹನ ಪ್ರಕಾಶನ, ಮೈಸೂರು.

೧೨. ಭಂಡೆ ವೈಜನಾಥ, ಬೀದರ್ ಜಿಲ್ಲೆಯ ಸ್ಥಳನಾಮಗಳು (ಅಪ್ರಕಟಿತ), ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ. ನಿಬಂಧ.

೧೩. ಕೆ.ಎ.೦ ವೀರಭದ್ರ ಶರ್ಮ, ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು(ಅಪ್ರಕಟಿತ), ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ. ನಿಬಂಧ.

೧೪. ವಿ. ಗೋಪಾಲ ಕೃಷ್ಣ, ಕೋಲಾರ ಜಿಲ್ಲೆಯ ಸ್ಥಳನಾಮಗಳು: ಒಂದು ಅಧ್ಯಯನ (ಅಪ್ರಕಟಿತ), ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ. ನಿಬಂಧ.

ಆ. ಲೇಖನಗಳು

೧. ಕಲಬುರ್ಗಿ ಎಂ.ಎಂ., ೧೯೮೮, 'ಬನವಾಸಿ ಸ್ಥಳನಾಮ ವಿವೇಚನೆ'(ಮಾರ್ಗ ಸಂ.೨ರಲ್ಲಿ)

೨. ______ ೧೯೮೮, 'ಊರ ಹೆಸರುಗಳ ಕೊನೆಯ –ವರ, –ವಾರ'(ಮಾರ್ಗ ಸಂ.೨ರಲ್ಲಿ)

೩. ______ ೧೯೮೮, 'ಧಾರವಾಡ ಗ್ರಾಮನಾಮ ವಿವೇಚನೆ'(ಮಾರ್ಗ ಸಂ.೨ರಲ್ಲಿ)

೪. ______ ೧೯೮೮, 'ಅಡ್ಡಹೆಸರು'(ಮಾರ್ಗ ಸಂ.೨ರಲ್ಲಿ)

೫. ______ ೧೯೮೮, 'ವೀರಶೈವ ವರ್ತಕ ವರ್ಗದ ಅಡ್ಡ ಹೆಸರುಗಳು'(ಮಾರ್ಗ ಸಂ.೨ರಲ್ಲಿ)

೬. ಕಲಬುರ್ಗಿ ಎಂ.ಎಂ., ೧೯೮೮, 'ಸ್ತ್ರೀ ನಾಮಗಳ ಕೊನೆಯಲ್ಲಿ ಬರುವ –ಬಾಯಿ'(ಮಾರ್ಗ ಸಂ.೨ರಲ್ಲಿ)

೭. ಕೆಮ್ಮೊರು, ರಘುಪತಿ ಭಟ್ಟ, ೧೯೭೬, 'ಸ್ಥಳನಾಮಗಳಲ್ಲಿ ಸಂಸ್ಕೃತೀಕರಣ', ಮಾನವಿಕ ಕರ್ನಾಟಕ ಸಂ.೬, ಸಂ.೪.

೮. ______ ೧೯೭೭, 'ಬೆ(ಮೆ)ಳ್ ಊರುಗಳು', ಅಧ್ಯಯನ, ಯುಗಪುರುಷ

೯. ______ ೧೯೭೭, 'ಕುಕ್ಕೆ' – 'ಸ್ಥಳನಾಮ ರೂಪನಿಷ್ಪತ್ತಿ', ಯುಗಪುರುಷ

೧೦. ______ ೧೯೭೭, 'ಕಾರ್ಕಳ ಹೆಸರು ಹೇಗೆ ಬಂದಿತು?' ಕಲಾದರ್ಶನ

೧೧. ______ ೧೯೯೮, 'ಕುಕ್ಕೆ' – 'ಕನ್ನಡ ನಾಮವಿಜ್ಞಾನ', ಮಹಾಮಾರ್ಗ(ಎಂ.ಎಂ. ಕಲಬುರ್ಗಿ ಅಭಿನಂದನ ಗ್ರಂಥ)

೧೨. ಗೋಪಾಲಕೃಷ್ಣ ವಿ., ೧೯೯೧, 'ಸ್ಥಳನಾಮ ಅಧ್ಯಯನದಲ್ಲಿ ಶಾಸನಗಳ ಉಪಯೋಗ', 'ಸಂಶೋಧನ' (ಎಂ. ಚಿದಾನಂದಮೂರ್ತಿ ಅಭಿನಂದನ ಗ್ರಂಥ)

೧೩. ನರ್ಕಳ ಮೂರಪ್ಪ ಶೆಟ್ಟಿ, ೧೯೬೯, 'ಮಂಗಳೂರು–ಈ ಹೆಸರು ಹೇಗಾಯಿತು?', ಪ್ರಭಾತ

೧೪. ಪಂಜೆ ಮಂಗೇಶರಾಯ, ೧೯೩೧, 'ಸ್ಥಳನಾಮ', ಸ್ವದೇಶಾಭಿಮಾನಿ

೧೫. ರಮೇಶ ಕೆ.ವಿ., ೧೯೯೧, 'ಸ್ಥಳನಾಮಶಾಸ್ತ್ರ', ಸಂಶೋಧನ

೧೬. ಶಿವರಾಮಯ್ಯ ಪಿ., ೧೯೨೭, 'ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ವಿಶೇಷ ಸ್ಥಳಗಳು', ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ. ೧೨, ಸಂ.೩

೧೭. ಸವದತ್ತಿಮಠ ಎಸ್.ಡಿ., ೧೯೭೩, 'ಮನೆತದ ಅಡ್ಡ ಹೆಸರುಗಳು', ಕರ್ನಾಟಕ ಭಾರತಿ, ಸಂ. ೫, ಸಂ.೪

೧೮. Abhishankar K., 1982, Origin of Certain Place Names of Karnataka, The Place names societs of India, Vol.III.

೧೯. Abhishankar K., 1984, Some Reflection on Personal Names Ibid, Vol.IV

೨೦. Anant Kulakarni, 1992, some more DEITY, Based Village Names from Athani Taluk, Ibid Vol. XIII

೨೧. Bhadri K.M., 1982, Some interesting place names in Karnataka, Ibid Vol. III.

೨೨. Bhadri K.M., 1984, Some interesting surnames form North Karnataka, Ibid Vol. IV

೨೩. Chandriah B.N., 1984, A Study of some place names in Karnataka, Ibid Vol. V

೨೪. Chidandamurthy M., 1980, A note on the Etymology of the generic morpheme 'Vera' found in place names, Ibid Vo.I

೨೫. Gai G.S. 1980, Studies in Ancient Geography of Karnataka-I, Ibid Vol. I

೨೬. Gai G.S. 1981, Studies in Ancient Geography of Karnataka-II, Ibid Vol. II

೨೭. Gai G.S. 1984, Studies in Ancient Geography of Karnataka-III, Ibid Vol. IV

೨೮. Gai G.S. 1984, Studies in Ancient Geography of Karnataka-IV, Ibid Vol. V
೨೯. Havanur S.K., 1987, Computer Analysis for the Study of place Name's Ibid Vol. IX
೩೦. Javaregowda, 1980, Some Street Names of Mysore City, Ibid Vol. I
೩೧. ______ 1981, Some Stray thoughts on Nick Names, Ibdi Vol. II
೩೨. ______ 1982, A note on name Change, Ibid Vol. III
೩೩. ______ 1984, Methodology of Place name study, Ibid Vol. IV
೩೪. ______ 1986, A case for the national Dictionary of place names, Ibid Vol. VII
೩೫. ______ 1995, A study of Village names of Mysore District, IJDL Vol. XXIV-I
೩೬. Jayavanth Kulli, 1982, Some place names of Bijapur and Gulbarga Area, The places nemas society of idnia, Mysore Vol. III
೩೭. Kemtur Raghupati Bhatta, 1977, Some Interersting Inscriptional Place names in South Kanar, Souvenir Third Annual Congress of the Epigraphical Society of India held at Udupi
೩೭. Kotraiah C.T.M., 1982, Thirumaladevi pattana present Hospet near Hampi, The place names society of India, Mysore, Vol. III
೩೮. ______ 1987, Hampe-Vijayanagar-Name through Hisoty, Ibid Vol. IX
೩೯. ______ 1992, Note on the place name Barkuru, Ibid Vol. XIII
೪೦. ______ 1993, Connotation of the Kannada Term Kari, Ibid Vol. VII
೪೧. Lakshmi Katragadd, 1997, A study of some place names of Vijayanagar period, Ibid Vol.XVII
೪೨. Madhav N. Katti, 1981, Numerical Territorial, Division in Karnataka, Ibid Vo. II
೪೩. Madhav N. Katti, 1982, Name of Dynastics and rulers of karnataka, Ibid Vol. III
೪೪. Madhav N. Katti, 1984, Tklhe term Mieliga, Ibid Vol. V

೪೫. Nagaraju D.M., 1992, Yelandur-A place name, Ibid Vol. XIII

೪೬. Narasimha Murthy A.V., 1992, Place name perfixes Hosa and hale in Karnataka, Ibid Vol. XIII

೪೭. ______ 1982, Identification of the name of 'Kadamba Kind', Ibid Vol. III

೪೮. ______ 1984, Some Interesting names and terms in the memorial Epigraphs from Kellaputtige, Ibid Vol. VI

೪೯. ______ 1987, The Suffix 'Angadi', Ibid Vol. IX

೫೦. ______ 1990, Chikkamangalor-Study of place name, Ibid Vol. XI

೫೧. ______ 1991, Study of some place names of Karnatak, Ibid Vol. XII

೫೨. Radha Patel, 1984, Some place names in Hossan District, Ibid Vol. XV

೫೩. Raghunat Bhat H.R., 1982, Balligave-Atoponym, Ibid Vol. III

೫೪. Raghunat Bhat H.R., 1986, Identification of place names mentioned in the Varuna Inscription, Ibid Vol. VII

೫೫. Raghunat Bhat H.R., 1990, Identification of two place names mentioned in the Banavasi Kadamba Inscription, Ibid Vol. XI

೫೬. Rajapurohit B.B., 1980, Regiona Features in Naming place in Karnataka, Ibid Vol. I

೫೭. Rajapurohit B.B., 1981, Distribution of suffix Uru in Karnataka, Ibid Vol. II

೫೮. Rajapurohit B.B., 1984, Distribution of Halli and Pura suffix in Karnataka, Ibid Vol. IV

೫೯. Sampath M.D., 1986, Study of place and personal names of North Kanara, Ibid Vol. XVIII

೬೦. Sampath M.D., 1989, Place Kakati and its improtance, Ibid Vol. X

೬೧. Shanmugam P., 1992, Place names with Puram, suffix in the Vijayanagar period, Ibid Vol. XIII

೬೨. Venkatesha, 1982, Some important place names in Karnataka, Ibid Vol. III

೯೫

ಕನ್ನಡದಲ್ಲಿ ಕೋಶಾಧ್ಯಯನ

ಭಾಷಾ ಬೆಳವಣಿಗೆಯಲ್ಲಿ ಕೋಶಗಳು ಪ್ರಮುಖ ಪಾತ್ರವಹಿಸುತ್ತವೆ. ಶಬ್ದಗಳ ಮೂಲವನ್ನು ಶೋಧಿಸಿ ಅವುಗಳ ಶಾಸ್ತ್ರೀಯ ನಿರೂಪಣೆಯನ್ನು ಅವು ಮಾಡಿಕೊಡುತ್ತವೆ. ಅನ್ವಯಿಕ ಭಾಷಾಶಾಸ್ತ್ರದಲ್ಲಿ ನಿಘಂಟು ರಚನಾಶಾಸ್ತ್ರ ಎಂಬ ಪ್ರತ್ಯೇಕ ಶಾಖೆ ಆರಂಭವಾಗಿದೆ.

ನಿಘಂಟು ರಚನೆಯ ಕ್ಷೇತ್ರ ಇತರ ಶಾಸ್ತ್ರ ಕ್ಷೇತ್ರಗಳಿಗೆ ಹೋಲಿಸಿದಾಗ ಅಷ್ಟೇನೂ ಸಂಪದ್ಯುಕ್ತವಾದುದಲ್ಲವೆಂದೇ ಹೇಳಬೇಕು. ಇತರ ಕ್ಷೇತ್ರಗಳೊಂದಿಗೆ ಹೋಲಿಸಿದಾಗ ಇಲ್ಲಿ ಕೆಲಸ ಮಾರುವ, ಮಾಡಲು ತೊಡಗಿರುವ ಜನ ಕಡಿಮೆಯೇ. ಆಗಿರುವ ಕೆಲಸವೂ ವೈವಿಧ್ಯರಹಿತವಾಗಿದ್ದರೂ ಮೊದಲು ಗುದ್ದಲಿಯೇಟೇ ಬೀಳದ ನೆಲದ ತುಣುಕುಗಳು ಹಲವು ಇಲ್ಲಿ ಉಳಿದುಕೊಂಡಿವೆಯಾದರೂ ಆಗಿರುವ ಅಲ್ಪಪ್ರಮಾಣದ ಕೆಲಸ ಅರೆಕೊರೆಗಳೊಂದಿಗೂ ತೃಪ್ತಿಯನ್ನುಂಟುಮಾಡುವಷ್ಟು ಸಕ್ರಮವೂ ಶಾಸ್ತ್ರಶುದ್ಧವೂ ಆಗಿದೆಯೆಂಬುದು ನೆಮ್ಮದಿಯ ಸಂಗತಿ. ಕನ್ನಡದಲ್ಲಿ ಬಗೆಬಗೆಯ ಕೋಶಗಳಿವೆಯಾದರೂ ಅವುಗಳ ರಚನಾ ವಿಧಾನವನ್ನು ತಿಳಿಸುವ ಬರೆಹಗಳು ಕಡಿಮೆ. ೧೯೯೩ರಲ್ಲಿ ಜಿ. ವೆಂಕಟಸುಬ್ಬಯ್ಯನವರ 'ಕನ್ನಡ ನಿಘಂಟುಶಾಸ್ತ್ರ ಪರಿಚಯ' ಪ್ರಕಟವಾಯಿತಾದರೂ ಈವರೆಗೆ ಕೋಶರಚನಾ ವಿಧಾನವನ್ನು ತಿಳಿಸಿಕೊಡುವ ಲೇಖನಗಳು, ಗ್ರಂಥಗಳು ತುಂಬ ಕಡಿಮೆ. ವೆಂಕಟಸುಬ್ಬಯ್ಯನವರ ಈ ಕೃತಿ ಈ ವಿಷಯದಲ್ಲಿ ಮೊದಲ ಪ್ರಯತ್ನವಾದುದರಿಂದ ಅದರಲ್ಲಿ ವಿವರಗಳ ಅಭಾವ, ಚಾರಿತ್ರಿಕಾಂಶಗಳ ಕೊರತೆ, ತಮ್ಮ ಸ್ವಂತ ಅನುಭವಗಳನ್ನು ಹೇಳಿರುವುದು ಮುಂತಾದ ಅರೆಕೊರೆಗಳಿದ್ದರೂ ಐತಿಹಾಸಿಕವಾಗಿ ಅದು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಇಂತಹದೊಂದು ಪುಸ್ತಕ ಬಂದ ಮೇಲೂ ನವೀನವಾಗಿ ಆಲೋಚನೆ ಮಾಡಬಹುದೆಂಬುದಕ್ಕೆ ವಿಲ್ಯಂಮಾಡ್ತ ಮತ್ತು ಆರ್.ವೈ. ಕುಲಕರ್ಣಿ ಅವರು ಜೊತೆ ಸೇರಿ ಬರೆದ 'ನಿಘಂಟು ರಚನಾ ವಿಜ್ಞಾನ' ಎಂಬುದು ಉತ್ತಮ ನಿದರ್ಶನ(೧೯೯೪).

ಅದರಲ್ಲಿಯ ಆರಂಭದ ಮೂರು ಲೇಖನಗಳಲ್ಲಿ ನಿಘಂಟುವಿನ ಸ್ವರೂಪ, ಇತಿಹಾಸ ಹಾಗೂ ನಿಘಂಟು ರಚನೆಯ ತಾತ್ವಿಕಾಂಶಗಳ ಬಗ್ಗೆ ವಿವೇಚನೆಯಿದ್ದರೆ ಮಿಕ್ಕ ಮೂರು ಲೇಖನಗಳಲ್ಲಿ ನಿಘಂಟು ರಚನೆಯ ತತ್ವಗಳನ್ನು ವೃತ್ತಿ ಪದಕೋಶಗಳಿಗೆ ಅನ್ವಯಿಸಿ ನಿರೂಪಿಸಿದ್ದಾರೆ.

ಕೆ.ವಿ. ನಾರಾಯಣರ 'ಭಾಷೆಯ ಸುತ್ತಮುತ್ತ' (೧೯೯೪) ಒಂದು ಬೆಲೆಯುಳ್ಳ ಪುಸ್ತಕ. ಭಾಷಾಧ್ಯಯನಕ್ಕೆ ಸಂಬಂಧಿಸಿದ ಕೃತಿಯಿದು. ಅದರಲ್ಲಿಯ 'ಪದಕೋಶ ಭಾಗ' ಕೋಶಾಧ್ಯಯನ ಕ್ಷೇತ್ರಕ್ಕೆ ಗಣ್ಯ ಕೊಡುಗೆಯಾಗಿದೆ. ಅದರಲ್ಲಿ ನಾರಾಯಣರು ಮೊದಲ ಬಾರಿಗೆ ಆಧುನಿಕ ಕೋಶ ರಚನೆಗೆ ಕೆಲವು ಪರಿಭಾಷೆಗಳನ್ನು, ಪರಿಕಲ್ಪನೆಗಳನ್ನು ಒದಗಿಸಿ ಕೊಟ್ಟಿದ್ದಾರೆ. ಪದಕೋಶದಲ್ಲಿ ಒಳಚಲನೆ, ಪದಗಳ ಚಲನಶೀಲನೆ, ಕೋಶಿಯ ಮತ್ತು ಕೋಶೋತ್ತರ ಮುಂತಾದುವು. ಕನ್ನಡ ನಿಘಂಟು ರಚನೆಯನ್ನು ಮರುಪರಿಶೀಲನೆಗೆ ಒಳಪಡಿಸುವ, ಪಾರಂಪರಿಕ ಅಧ್ಯಯನ ಶಿಸ್ತನ್ನು ಒಡೆಯುವ ಹೊಸಗನ್ನಡಕ್ಕೆ ಒಂದು ಹೊಸ ನಿಘಂಟು ಎಂಬುದು ಮೌಲಿಕ ಬರೆಹ. ಕೋಶರಚನಾ ವಿಧಾನದ ಬಗೆಗೆ ಅಧ್ಯಯನ ಮಾಡುವವರು ನಾರಾಯಣರ ಈ ಬರೆಹಗಳು ಮಾದರಿಯಾಗಿವೆ.

ಕನ್ನಡ ಭಾಷೆಯ ಪದರಚನೆಯನ್ನು ಕುರಿತು ಪ್ರಕಟವಾಗಿರುವ ಕೆಲವು ಲೇಖನಗಳು ಉಲ್ಲೇಖನ ಯೋಗ್ಯವಾದವು. ಡಿ.ಎಲ್. ನರಸಿಂಹಾಚಾರ್ಯರ 'ಪೀಠಿಕೆಗಳು-ಲೇಖನಗಳು' ಪುಸ್ತಕದಲ್ಲಿ ಸೇರಿರುವ 'ಕನ್ನಡದಲ್ಲಿ ಶಬ್ದರಚನೆ', 'ಕನ್ನಡಕ್ಕೆ ಹೊಸ ನಿಘಂಟು' ಇವು ಹೊಚ್ಚಹೊಸ ಸಂಗತಿಗಳನ್ನು ನಿರೂಪಿಸುವ ಬರೆಹಗಳು. ಶಂಬಾ ಅವರ 'ಕಂನುಡಿಯ ಹುಟ್ಟು' ಸೇಡಿಯಾಪುರವರ 'ಕೆಲವು ದೇಶನಾಮಗಳು' ಚಿದಾನಂದಮೂರ್ತಿಯವರ 'ಹೊಸತು ಹೊಸತು', 'ವಾಗರ್ಥ'ದಲ್ಲಿಯ ಕೆಲವು ಬರೆಹಗಳಲ್ಲಿ ಸಾಂಸ್ಕೃತಿಕ ಶಬ್ದಗಳ ಅರ್ಥಛಾಯೆಗಳನ್ನು ಪುನಾರಚಿಸಲು ಯತ್ನಿಸುತ್ತಾರೆ. ಆದರೆ ಅವು ಶುದ್ಧ ಕೋಶಾಧ್ಯಯನ ದೃಷ್ಟಿಯಿಂದ ಚರ್ಚಿಸಿದ ಬರೆಹಗಳಲ್ಲ. ಸಾಂಸ್ಕೃತಿಕ ಅಧ್ಯಯನ ದೃಷ್ಟಿಯಿಂದ ಅವು ಮಹತ್ವಪೂರ್ಣ ಶೋಧನೆಗಳಾಗಿವೆ.

ಪ್ರಾಚೀನ ಕೋಶಗಳ ಬಗೆಗೆ ಹೇಳಬೇಕಾದರೆ ಎರಡನೆಯ ನಾಗವರ್ಮನ 'ಅಭಿದಾನ ವಸ್ತುಕೋಶ' ಹಾಗೂ ಮಂಗರಾಜನ 'ಅಭಿನವಾಭಿಧಾನ' ಈ ನಿಘಂಟುಗಳ ವಿದ್ವತ್ ಪುನರ್ ಪರಿಷ್ಕಾರ ಆಗಬೇಕಾಗಿದೆ. ಎನ್. ಬಸವಾರಾಧ್ಯರು ನಾಗವರ್ಮ ಮತ್ತು ಮಂಗರಾಜರ ಕೋಶಗಳನ್ನು ಹೊರತುಪಡಿಸಿ ಮಿಕ್ಕ ಪ್ರಾಚೀನ ಕೋಶಗಳನ್ನು 'ಹಳಗನ್ನಡ ನಿಘಂಟು' ಎಂಬ ಶೀರ್ಷಿಕೆಯಲ್ಲಿ ವ್ಯವಸ್ಥಿತವಾಗಿ ಸಂಪಾದಿಸಿದ್ದಾರೆ. ಆದರೆ ಅವುಗಳಲ್ಲಿ ಹೊಸತೇನಿಲ್ಲ.

ಈ ಕ್ಷೇತ್ರದ ಇತ್ತೀಚಿನ ಸಾಧನೆ ಪ್ರಗತಿಶೀಲವಾಗಿದ್ದರೂ, ಶಾಸ್ತ್ರಶುದ್ಧವಾಗಿದೆಯೆನಿಸು ವಂತಿದ್ದರೂ ಕೋಶರಚನೆ ಹಾಗೂ ಪರಿಶೀಲನೆಯಲ್ಲಿ ಹೊಸತನ ಕಡಿಮೆ. ಕಣ್ಣು ಕುಕ್ಕುವಂತಹ ಮಹತ್ವಪೂರ್ಣ ಶೋಧನೆಗಳು ಕೋಶ ತತ್ವ ಹಾಗೂ ಸಿದ್ಧಾಂತಗಳನ್ನು

ಕುರಿತು ಕಡಿಮೆ.ಈ ಕ್ಷೇತ್ರದಲ್ಲಿ ಆಗಬೇಕಾದ ಕೆಲಸವಂತೂ ಅಪಾರವಾಗಿದೆ. ಕನ್ನಡ ಪ್ರಮುಖ ಕವಿಗಳ ಕೋಶ ಶಿಲ್ಪಗಳ ಅಧ್ಯಯನವಾಗಿಲ್ಲ; ಸಂಸ್ಕೃತ ಮತ್ತು ಅನ್ಯ ದ್ರಾವಿಡ ಕೋಶಗಳೊಡನೆ ಕನ್ನಡ ಕೋಶಗಳ ಸ್ವರೂಪದ ಹೋಲಿಕೆಯಾಗಲಿ ಕನ್ನಡ ಕೋಶ ಮೀಮಾಂಸೆಯಾಗಲಿ ಆಗಿಲ್ಲ. ಈಚೆಗೆ ವಿಶಿಷ್ಟ ಉದ್ದೇಶವುಳ್ಳ ನಿಘಂಟುಗಳು ರಚಿತವಾಗಿರುವುದು ಕನ್ನಡ ಭಾಷಾಭಿವೃದ್ಧಿಯ ಸೂಚಕವಾಗಿದೆ. ಈ ಕ್ಷೇತ್ರದಲ್ಲಿ ಈವರೆಗೆ ನಡೆದಿರುವ ಅಧ್ಯಯನವನ್ನು ಈ ಕೆಳಗೆ ಕೊಡಲಾಗಿದೆ.

ಕನ್ನಡ ಗ್ರಂಥಗಳು

ಅಂಗಡಿ ಎಸ್.ಎಸ್., ೧೯೯೮, 'ಕುಂಬಾರ ವೃತ್ತಿ ಪದಕೋಶ' ಲಿಂಗಾಯತ ಅಧ್ಯಯನ ಸಂಸ್ಥೆ ಶ್ರೀ ವಿರಕ್ತಮಠ, ದೇಶನೂರು, ಬೆಳಗಾವಿ ಜಿಲ್ಲೆ

ವಿಲ್ಯಂಮಾಡ್ತ, ಆರ್.ವೈ.ಕುಲಕರ್ಣಿ., ೧೯೯೪, 'ನಿಘಂಟು ರಚನಾ ವಿಜ್ಞಾನ' ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿಲ್ಯಂ ಮಾಡ್ತ., ೧೯೯೪ 'ಕಿಟೆಲ್ ಜೀವನ ಸಾಧನೆ ಮತ್ತು ಕೋಶರಚನೆ' ಕನ್ನಡ ವಿಶ್ವವಿದ್ಯಾಲಯ, ಹಂಪಿ

ವೆಂಕಟಸುಬ್ಬಯ್ಯ.ಜಿ., ೧೯೯೩ 'ಕನ್ನಡ ನಿಘಂಟುಶಾಸ್ತ್ರ ಪರಿಚಯ' ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖನಗಳು

ಅಂಗಡಿ ಎಸ್.ಎಸ್., ೧೯೯೮, 'ಕರ್ನಾಟಕದಲ್ಲಿ ಕ್ಷೌರಿಕರು ಮತ್ತು ಅವರ ವೃತ್ತಿಪದಗಳು ಶೋಧನ, ಪಾರ್ವತಮ್ಮ ಪ್ರಕಾಶನ, ಯರಝುರವಿ

——— ೧೯೯೯. 'ನಿಘಂಟು ಕ್ಷೇತ್ರಕ್ಕೆ ಎಸ್.ಆರ್. ಗುಂಜಾಳರ ಕೊಡುಗೆ', ಗ್ರಂಥಾಲಯ ಅಂತರ್ಜಲ (ಸಂ.) ಎಸ್.ಎಸ್. ಪಾಟೀಲ, ಕರ್ನಾಟಕ ಗಡಿನಾಡ ಗ್ರಂಥಾಲಯ ಸಂಘ, ಇಂಡಿ, ಬಿಜಾಪುರ.

ಕೆಂಪೇಗೌಡ ಕೆ., ೧೯೮೮, 'ಕೋಶವಿಜ್ಞಾನ' ಪ್ರಬುದ್ಧ ಕರ್ನಾಟಕ ಸಂ-೭೦, ಸಂಚಿಕೆ- ೧ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಕುಲಕರ್ಣಿ ಬಿ.ಎಸ್., ೧೯೭೧, 'ಕಿಟೆಲ್ ಕೋಶ ಮತ್ತು ಪಂಪರಾಮಾಯಣ' ಕನ್ನಡಕ್ಕೆ ಕಿಟೆಲ್‌ರ ಕೊಡುಗೆ' (ಸಂ) ವಾಮನಬೇಂದ್ರೆ, ಬಿ.ಟಿ. ದೇಸಾಯಿ ಕಿಟೆಲ್ ಕಾಲೇಜು, ಧಾರವಾಡ ಪು. ೧೦೧-೪

ಕುಲಕರ್ಣಿ ಆರ್.ವೈ., ೧೯೮೮, 'ಕನ್ನಡದಲ್ಲಿ ವೃತ್ತಿಪದಕೋಶಗಳು' ಕರ್ನಾಟಕ ಭಾರತಿ ೨೦.೩-೪೫-೫೦ ಕ.ವಿ.ವಿ. ಧಾರವಾಡ

——— ೧೯೯೨, 'ವೃತ್ತಿಪದಕೋಶಗಳ ರಚನಾಕ್ರಮ', ಕರ್ನಾಟಕ ಭಾರತಿ, ೨೪.೪-೩೫-೪೩, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಕೊಟ್ರಶೆಟ್ಟಿ ಎಂ.ಬಿ., ೧೯೭೧, 'ಕಿಟೆಲ್‌ಕೋಶದ ಮಾತೃಕೆಗಳು' ಕನ್ನಡಕ್ಕೆ ಕಿಟೆಲ್‌ರ ಕೊಡುಗೆ (ಸಂ) ವಾಮನಬೇಂದ್ರೆ, ಬಿ.ಟಿ. ದೇಸಾಯಿ ಕಿಟೆಲ್ ಕಾಲೇಜು, ಧಾರವಾಡ, ಪು-೯೫-೧೦೦

ಕೃಷ್ಣಭಟ್ಟ ಎಸ್., ೧೯೭೩, 'ಸಮಾನ ಪಾರಿಭಾಷಿಕ ಶಬ್ದಕೋಶದ ಅವಶ್ಯಕತೆ' ಸುಧಾ ೧೨-೮-೧೯೭೩

ಕೃಷ್ಣಮೂರ್ತಿ ಕೆ., ೧೯೭೧, 'ಕಿಟೆಲ್‌ಕೋಶ ಮತ್ತು ಅಷ್ಟೆಕೋಶ' ಕನ್ನಡಕ್ಕೆ ಕಿಟೆಲ್ ಕೊಡುಗೆ, ಪು. ೧೨೦-೨

——— ೧೯೭೪, 'ಕೋಶರಚನೆ' ಭಾರತೀಯ ಸಾಹಿತ್ಯ ಚರಿತ್ರೆ ಸಂ-೩ ಭಾಗ-೨ ಶಾಸ್ತ್ರಸಾಹಿತ್ಯ. ಮೂಲ-ಮಾರಿಸ್ ವಿಂಟರ್‌ನಿಟ್ಸ್ ಕ.ವಿ.ವಿ. ಧಾರವಾಡ

ಗಂಗಾಧರಾಚಾರ್ ಹೆಚ್.ಹೆಚ್., 'ವಿಶ್ವಕರ್ಮರ ಶಬ್ದಕೋಶ' ಸಾಧನೆ ಸಂಪುಟ-೧೫, ಸಂಚಿಕೆ-೨, ಬೆಂಗಳೂರು ವಿಶ್ವವಿದ್ಯಾಲಯ

ಗುಂಡಪ್ಪ ಎಲ್., 'ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು' ಕನ್ನಡ ನುಡಿ ೨೧-೨, ಪು. ೫೧-೫೨

ಚಿದಾನಂದಮೂರ್ತಿ ಎಂ., ೧೯೭೨, 'ಕನ್ನಡ ಶಬ್ದಸಾಗರ' (ಜೆ.ಎಂ. ಹನಸೋಗೆಯವರ ಕೃತಿ) ಹಾಗೂ 'ಹವ್ಯಕ ಪದ ಸಂಚಯ' (ಟಿ. ಕೇಶವ ಭಟ್ಟರ ಕೃತಿಯ ವಿಮರ್ಶೆ) ಸಾಹಿತ್ಯ ವಾರ್ಷಿಕ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಚೈತ್ರ., ೧೯೭೪, 'ಕನ್ನಡ ಸಮಾನಾರ್ಥಕೋಶ' (ಜೆ.ಎಂ. ಹನಸೋಗೆಯವರ ಕೃತಿಯ ವಿಮರ್ಶೆ) ಸುಧಾ ೧೦-೧೧-೭೪

ಜವಳಿ ಬಿ.ಸಿ., ೧೯೭೧, 'ಕಿಟೆಲ್ ಕೋಶ ಹಾಗೂ ಬಸವಪುರಾಣ' ಕನ್ನಡಕ್ಕೆ ಕಿಟೆಲ್‌ರ ಕೊಡುಗೆ

ಜಾಗೀರದಾರ್ (ಸೀತಾರಾಮ್)., ೧೯೭೬, 'ಅಮರಕೋಶದ ಒಬ್ಬ ಪ್ರಾಚೀನ ಕನ್ನಡ ವ್ಯಾಖ್ಯಾತ' ಕನ್ನಡ ಸಾಹಿತ್ಯ ಪರಿಷ್ಪತ್ರಿಕೆ ೬೧-೨, ಪು. ೫೫-೬೦

ತಾತಾಚಾರ್ಯ ಆರ್., ೧೯೬೧, 'ಕಿತ್ತೀಳೆವೂ ಕನ್ನಡವೂ' ಕನ್ನಡ ಸಾಹಿತ್ಯ ಪರಿಷ್ಪತ್ರಿಕೆ, ಪು. ೨೩೩-೪೫

ನರಸಿಂಹಾಚಾರ್ ಡಿ.ಎಲ್., 'ಕನ್ನಡದಲ್ಲಿ ಶಬ್ದರಚನೆ' 'ಕನ್ನಡಕ್ಕೆ ಹೊಸ ನಿಘಂಟು' 'ನಿಘಂಟು ರಚನೆ (ಪೀಠಿಕೆಗಳು ಲೇಖನಗಳು ಡಿ.ವಿ.ಕೆ. ಮೂರ್ತಿ ೧೯೭೧)

ನಾಗರಾಜಯ್ಯ ಹಂಪ., ೧೯೭೬, 'ಕನ್ನಡ ನಿಘಂಟು' ಸಾಹಿತ್ಯ ವಾರ್ಷಿಕ ೧೯೭೬

——— ೧೯೭೧, 'ಕುಮಾರವ್ಯಾಸ ನಿಘಂಟು' (ಎನ್. ಕೆ. ಕುಲಕರ್ಣಿಯವರ ಕೃತಿ) ಶ್ರೀವತ್ಸ ನಿಘಂಟು (ಟಿ.ವಿ. ವೆಂಕಟಾಚಲಶಾಸ್ತ್ರೀ ಕೃತಿ ವಿಮರ್ಶೆ) ಸಾಹಿತ್ಯ ವಾರ್ಷಿಕ

ನಾಗೇಗೌಡ ಎಚ್.ಎಲ್., ೧೯೭೦, 'ಗ್ರಾಮೀಣ ಶಬ್ದಕೋಶದ ಅಗತ್ಯ' ಕನ್ನಡ ನುಡಿ ೩೩-೨೩ ಪುಟ-೨

ನಾಯಕ ಹಾ.ಮಾ., ೧೯೭೯, 'ತುಳುವಿಗೊಂದು ನಿಘಂಟು' ಪ್ರಜಾಮತ ೧೮-೧೧-೧೯೭೯.

——— ೧೯೯೭, ವೆಂಕಟಾಚಲಶಾಸ್ತ್ರೀಯವರ 'ಶ್ರೀವತ್ಸ ನಿಘಂಟು' ಶ್ರೀಮುಖ(ಟಿ.ವಿ. ವೆಂಕಟಾಚಲಶಾಸ್ತ್ರೀಯವರ ಅಭಿನಂದನ ಗ್ರಂಥ) (ಸಂ) ಡಾ. ಪ್ರಧಾನ ಗುರುದತ್ತ ಮತ್ತು ಇತರರು

ನಾರಾಯಣ ಕೆ. ೧೯೭೬ 'ಕನ್ನಡ ಭಾಷೆಯಲ್ಲಿ ನಿಘಂಟು' ಸಾಹಿತ್ಯಜೀವಿ ಪ್ರೊ. ಜಿ. ವೆಂಕಟಸುಬ್ಬಯ್ಯ ಅಭಿನಂದನ ಗ್ರಂಥ (ಸಂ) ಎಲ್.ಎಸ್. ಶೇಷಗಿರಿರಾವ್

ನಾರಾಯಣ ಕೆ.ವಿ., ೧೯೯೮, 'ಕನ್ನಡ ಕನ್ನಡ ನಿಘಂಟಿನ ಕಂಪ್ಯೂಟರೀಕರಣ ಕನ್ನಡ ಪದಕೋಶ'

——— 'ಪದಕೋಶ' (ಪದಕೋಶದ ಬೆಳವಣಿಗೆ, ವೃತ್ತಿ ಪದಕೋಶ)

——— 'ಪದಕೋಶ ಎರಡು ಬಗೆಗಳು'

——— 'ಪದಕೋಶದಲ್ಲಿ ಒಳಚಲನೆ'

——— 'ಪಾರಿಭಾಷಿಕ ಪದಗಳು'

——— 'ಹೊಸಗನ್ನಡಕ್ಕೆ ಒಂದು ಹೊಸ ನಿಘಂಟು' 'ಭಾಷೆಯ ಸುತ್ತಮುತ್ತ' (೧೯೯೮) ಕನ್ನಡ ಸಂಘ ಕ್ರೈಸ್ಟ್ ಕಾಲೇಜ್, ಬೆಂಗಳೂರು

ನಾರಾಯಣ ಪಿ.ವಿ., 'ರನ್ನ ನಿಘಂಟು' (ರನ್ನ ಕವಿಕಾವ್ಯ ವಿಮರ್ಶೆ), ಪು. ೧೪೫-೧೫೨

ನಾರಾಯಣರಾವ್ ಜಿ.ಟಿ., ೧೯೮೫, 'ಕನ್ನಡ ಅಭಿವರ್ಧನೆಯಲ್ಲಿ ವಿಶ್ವಕೋಶಗಳ ಕೊಡುಗೆ' ಕನ್ನಡದ ಅಳಿವು-ಉಳಿವು (ಸಂ) ಎಲ್.ಎಸ್. ಶೇಷಗಿರಿರಾವ್

ನಾವಡ ಎ.ವಿ., ೧೯೪೮, 'ಗೋವಿಂದ ಪೈ ಅವರ ಭಾಷಾ ಪ್ರಯೋಗಗಳು' ವಿವಕ್ಷೆ ಕರ್ನಾಟಕ ಸಂಘ, ಪುತ್ತೂರು

ಪದ್ಮನಾಭ ಕೇ ಕುಣ್ಣಾಯ ಕೆ., ೧೯೯೫, ತುಳು ಇಂಗ್ಲಿಶ್ ಶಬ್ದಕೋಶ 'ಸಾರ್ಥಕ'(ಪ್ರೊ. ಎಂ. ಮರಿಯಪ್ಪ ಭಟ್ ಸಂಸ್ಮರಣ ಗ್ರಂಥ) ಸಂ. ಡಾ. ಶ್ರೀ ಕೃಷ್ಣಭಟ್ ಅರ್ತಿಕಜೆ)

ಪಾಂಡುರಂಗ ಭಟ್ಟ, ೧೯೯೫, 'ಸಂಸ್ಕೃತ ಕೋಶ ಶಾಸ್ತ್ರಕ್ಕೆ ಕರ್ನಾಟಕದ ಕೊಡುಗೆ' 'ಸಾರ್ಥಕ' (ಪ್ರೊ. ಎಂ. ಮರಿಯಪ್ಪ ಭಟ್ ಸಂಸ್ಮರಣ ಗ್ರಂಥ)

ಪಾದೇಕಲ್ಲು ವಿಷ್ಣುಭಟ್ಟ, ೧೯೯೫, 'ಸಂಸ್ಕೃತಕೋಶ ಶಾಸ್ತ್ರಕ್ಕೆ ಕರ್ನಾಟಕದ ಕೊಡುಗೆ', 'ಸಾರ್ಥಕ' (ಪ್ರೊ. ಎಂ. ಮರಿಯಪ್ಪಭಟ್ ಸಂಸ್ಮರಣ ಗ್ರಂಥ)

ಬಸವಾರಾಧ್ಯ ಎನ್., ೧೯೭೦, 'ಕನ್ನಡ ನಿಘಂಟು ಕನ್ನಡ ಸಾಹಿತ್ಯ ಪರಿಷತ್ತಿನ ಅಪೂರ್ವ ಸಾಧನೆ' ಸುಧಾ ೨೭-೧೨-೭೦

—— ೧೯೭೧, 'ನಿಘಂಟು ಕ್ಷೇತ್ರಕ್ಕೆ ಕಿಟೆಲ್‌ರ ಕಾಣಿಕೆ' ಕನ್ನಡಕ್ಕೆ ಕಿಟೆಲ್‌ರ ಕೊಡುಗೆ ಪ್ರ - ಕಿಟೆಲ್ ಕಾಲೇಜು, ಧಾರವಾಡ

ಬಸವಾರಾಧ್ಯ ಎನ್., ೧೯೭೬, 'ಕನ್ನಡ ನಿಘಂಟು ಕ್ಷೇತ್ರಕ್ಕೆ ತೀನಂ ಶ್ರೀ ಅವರ ಕೊಡುಗೆ' ಶ್ರೀಕಂಠ ತೀರ್ಥ (ಪ್ರೊ. ತೀನಶ್ರೀ ಸ್ಮಾರಕ ಗ್ರಂಥ (ಸಂ) ಎಂ. ಚಿದಾನಂದ ಮೂರ್ತಿ ಮತ್ತು ಇತರರು

—— ೧೯೮೧, 'ಸಿರಿಗನ್ನಡ ಅರ್ಥಕೋಶ (ಶಿವರಾಮ ಕಾರಂತ ಕೃತಿ ವಿಮರ್ಶೆ)' ಪ್ರಜಾವಾಣಿ ೧-೧೧-೧೯೮೧

—— ೧೯೯೧, 'ರೀವ್, ಕಿಟೆಲ್, ಜಿಗ್ಲರ್ ಮುಂತಾದವರಿಂದ ಕನ್ನಡ ನಿಘಂಟು ಕಾರ್ಯ' ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂ-೬, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

—— ೧೯೯೧, 'ನಿಘಂಟುಶಾಸ್ತ್ರ ಮತ್ತು ಕನ್ನಡ ನಿಘಂಟುಗಳು' 'ಸಂಶೋಧನ' (ಎಂ. ಚಿದಾನಂದ ಮೂರ್ತಿ ಗೌರವ ಸಂಪುಟ) ಸಂ- ಲಕ್ಷ್ಮಣ್ ತೆಲಗಾವಿ.

—— ೧೯೯೫, 'ಕಿಟೆಲ್‌ರ ಕನ್ನಡ ಇಂಗ್ಲಿಶ್ ನಿಘಂಟು ಒಂದು ಅವಲೋಕನ' 'ಸಾರ್ಥಕ' (ಪ್ರೊ. ಎಂ. ಮರಿಯಪ್ಪ ಭಟ್ ಸಂಸ್ಮರಣ ಸಂಪುಟ)

—— 'ಕನ್ನಡ ನಿಘಂಟುಗಳು' ಕನ್ನಡ ನುಡಿ ೨೦-೧೯ ಪು-೨೭೦-೭೪.

—— 'ಕನ್ನಡ ನಿಘಂಟುಶಾಸ್ತ್ರ, ಚಿನ್ನದ ಬೆಳಸು ಭಾಗ-೨' ಹೊಂದೆನೆ-೩ ಪು. ೪೭

—— 'ಕನ್ನಡ ನಿಘಂಟು ಕೃಷ್ಣಶಾಸ್ತ್ರಿಗಳು' ಪ್ರಬುದ್ಧಕರ್ನಾಟಕ ೫೦-೧, ಪು. ೩೪೧-೪೩

ಬೇಂದ್ರೆ ವಿ.ಡಿ., ೧೯೭೧, 'ಅಂಬಿಕಾತನಯದತ್ತ ಕಿಟೆಲ್ ಕೋಶಾಭ್ಯಾಸ ಕನ್ನಡಕ್ಕೆ ಕಿಟೆಲ್‌ರ ಕೊಡುಗೆ' (ಸಂ) ವಿ.ಡಿ. ಬೇಂದ್ರೆ, ಬಿ.ಟಿ. ದೇಸಾಯಿ ಕಿಟೆಲ್ ಕಾಲೇಜು, ಧಾರವಾಡ.

ಮರಿಯಪ್ಪ ಭಟ್ ಎಂ., ೧೯೭೧, 'ಕಿಟೆಲ್ ಕೋಶ ಮರು ಸಂಪಾದನೆ' ಕನ್ನಡಕ್ಕೆ ಕಿಟೆಲ್‌ರ ಕೊಡುಗೆ, ಕಿಟೆಲ್ ಕಾಲೇಜ್, ಧಾರವಾಡ

ಮಲ್ಲೇದೇವರು ಹೆಚ್.ಪಿ., ೧೯೭೧,'ಕಿಟೆಲ್‌ಕೋಶದ ಅಚ್ಚಗನ್ನಡ ಶಬ್ದಗಳು' ಕನ್ನಡಕ್ಕೆ ಕಿಟೆಲ್‌ರ ಕೊಡುಗೆ, ಕಿಟೆಲ್ ಕಾಲೇಜ್, ಧಾರವಾಡ

ಮಹೀದಾಸ ಬಿ.ವಿ., ೧೯೯೫, 'ಕನ್ನಡದಲ್ಲಿ ನಿಘಂಟುಗಳು' ಸಾರ್ಥಕ(ಪ್ರೊ. ಎಂ. ಮರಿಯಪ್ಪ ಭಟ್ ಸಂಸ್ಮರಣ ಗ್ರಂಥ)

ಮಹೇಶ್ವರಯ್ಯ ಹೆಚ್.ಎಂ., ೧೯೯೦, 'ಮಲೆನಾಡಿನ ಕೃಷಿಕರ ವೃತ್ತಿ ಪದಕೋಶ' ಕರ್ನಾಟಕ ಭಾರತಿ ಸಂ. ೧೮, ಸಂಚಿಕೆ ೧

ಮಾಡ್ತವಿಲ್ಯಂ, ೧೯೯೫, 'ವೃತ್ತಿಪದಕೋಶ ಸ್ವರೂಪ ಮತ್ತು ರಚನೆ' ಅಭಿಜ್ಞಾನ(ಡಾ. ಕೆ. ಕೃಷ್ಣಮೂರ್ತಿ ಅಭಿನಂದನ ಗ್ರಂಥ) ಸಂ. ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ ಮತ್ತು ಇತರರು

ಮಾಡ್ತವಿಲ್ಯಂ, ೧೯೯೫, 'ಏಕಭಾಷಿಕ ನಿಘಂಟು ರಚನೆ' ಸಾರ್ಥಕ (ಪ್ರೊ. ಎಂ. ಮರಿಯಭಟ್
ಸಂಸ್ಮರಣ ಗ್ರಂಥ (ಸಂ) ಶ್ರೀ ಕೃಷ್ಣಭಟ್ ಅರ್ತಿಕಜೆ

ಮಹಾದೇವಯ್ಯ ಟಿ.ಆರ್., ೧೯೯೧ 'ವಚನಕಾರರ ಶಬ್ದಕೋಶ' ಸಂಶೋಧನ (ಎಂ.ಚಿದಾನಂದಮೂರ್ತಿ ಗೌರವ ಸಂಪುಟ) ಸಂ: ಲಕ್ಷ್ಮಣ್ ತೆಲಗಾವಿ

——— 'ಕನ್ನಡದಲ್ಲಿ ನಿಘಂಟುಶಾಸ್ತ್ರ' ಸಾಧನೆ ಏಪ್ರಿಲ್, ಜೂನ್ ೧೭-೩೧.

ಮೂಲಗತ್ತಿ ದೇವಾನಂದ 'ಚಮ್ಮಾರರು ಮತ್ತು ಅವರ ಉಪಕರಣಗಳು ವಿಚಕ್ಷಣ ನೋಟ' ಸಾಧನೆ ಸಂ-೧. ೨ ಸಂಚಿಕೆ-೧೯

ರಘುನಾಥರಾವ್ ಆರ್., 'ಕರ್ನಾಟಕ ನಿಘಂಟುಗಳ ಸಂಸ್ಕರಣ' ೧-೨, ಕನ್ನಡ ಸಾಹಿತ್ಯ ಪರಿಷತ್ತಿನ ಪತ್ರಿಕೆ ಪು. ೧೪೫-೫೬

ರಾಜಗೋಪಾಲಾಚಾರ್ಯ ಎಂ., ೧೯೯೫, 'ಸಂಸ್ಕೃತ ಕೋಶಗಳ ಬೆಳವಣಿಗೆ' ಅಭಿಜ್ಞಾನ (ಡಾ. ಕೆ.ಕೃಷ್ಣಮೂರ್ತಿ ಅಭಿನಂದನ ಗ್ರಂಥ) ಸಂ. ಟಿ.ವಿ. ವೆಂಕಟಾಚಲಶಾಸ್ತ್ರೀ ಮತ್ತು ಇತರರು

ವಸಂತಕುಮಾರ ತಾಳ್ತಜೆ., ೧೯೯೫, 'ನಾನಾರ್ಥ ಪದಕೋಶ' 'ಅಭಿಜ್ಞಾನ'(ಡಾ. ಕೆ ಕೃಷ್ಣಮೂರ್ತಿ ಅಭಿನಂದ ಗ್ರಂಥ) ಸಂ (ಟಿ.ವಿ. ವೆಂಕಟಾಚಲಶಾಸ್ತ್ರೀ ಮತ್ತು ಇತರರು

ವೆಂಕಟಾಚಲಶಾಸ್ತ್ರೀ ಟಿ.ವಿ., ೧೯೮೧, 'ಕರ್ನಾಟಕ ನಿಘಂಟು' ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತೆ ಐದನೆಯ ಸಂಪುಟ ಮೈಸೂರು ವಿಶ್ವವಿದ್ಯಾಲಯ ಮೈಸೂರು

——— ೧೯೮೧, 'ಕರ್ನಾಟಕ ಶಬ್ದಸಾರ'

——— ೧೯೮೮, 'ಸಂಸ್ಕೃತ ಮತ್ತು ಕನ್ನಡ ನಿಘಂಟು' ಸಾಹಿತ್ಯ ಪ್ರಬುದ್ಧ ಕರ್ನಾಟಕ, ಸಂಪುಟ-೭೦ ಸಂಚಿಕೆ-೧ ಮೈಸೂರು ವಿಶ್ವವಿದ್ಯಾಲಯ, ಮೈಸೂರು

——— ೧೯೯೧, 'ಕನ್ನಡ ನಿಘಂಟು ರಚನೆಯಲ್ಲಿ ಶಬ್ದಾರ್ಥ ವಿಚಾರದ ಕೆಲವಂಶಗಳು' ಹಳೆಯಹೊಸ್ಸು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

ವೆಂಕಟಸುಬ್ಬಯ್ಯ ಜಿ., ೧೯೮೫, 'ಕನ್ನಡದ ಮುನ್ನಡೆಯಲ್ಲಿ ನಿಘಂಟುಗಳು' ಕನ್ನಡದ ಅಳಿವು ಉಳಿವು (ಸಂ) ಎಲ್.ಎಸ್. ಶೇಷಗಿರಿರಾವ್, ಕನ್ನಡ ಭಾಷಾಭಿವೃದ್ಧಿ ಸಮೀಕ್ಷೆ, ಬೆಂಗಳೂರು

ಶರ್ಮಾ ತಿ.ತಾ., ೧೯೪೨, 'ಜಾನ್‌ಸನ್ ಅವರ ನಿಘಂಟು' 'ಕನ್ನಡ ನುಡಿ' ಕ.ಸಾ.ಪ. ಸಂಪುಟ-೫, ಸಂಚಿಕೆ-೧೫

ಶಾಂತವೀರಯ್ಯ ಹಿ.ಚಿ, ೧೯೭೦, 'ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು' ಸಂಯುಕ್ತ ಕರ್ನಾಟಕ ೨೪-೧೨-೭೦

——— ೧೯೮೫, 'ಕನ್ನಡ ನಿಘಂಟುಗಳು (ಹಕ್ಕಿನೋಟ)' ಕನ್ನಡದ ಅಳಿವು-ಉಳಿವು (ಸಂ) ಎಲ್.ಎಸ್. ಶೇಷಗಿರಿರಾವ್, ಕನ್ನಡ ಭಾಷಾಭಿವೃದ್ಧಿ ಸಮೀಕ್ಷೆ, ಬೆಂಗಳೂರು

ಶಾಂತವೀರಯ್ಯ ಹಿ.ಚಿ., ೧೯೯೫, 'ಪ್ರೊ. ಎಂ. ಮರಿಯಪ್ಪಭಟ್ಟರ ಅರ್ಥಕೋಶ' ಸಾರ್ಥಕ (ಎಂ. ಮರಿಯಪ್ಪಭಟ್ಟ ಸಂಸ್ಮರಣ ಗ್ರಂಥ) ಸಂ ಶ್ರೀ ಕೃಷ್ಣಭಟ್ ಅರ್ತಿಕಜೆ

ಶಾನಭಾಗ ಡಿ.ಎನ್., ೧೯೭೧, 'ಕಿಟೆಲ್ ಕೋಶದ ಸಂಸ್ಕೃತ ಶಬ್ದಗಳು' ಕನ್ನಡಕ್ಕೆ ಕಿಟೆಲ್‌ರ ಕೊಡುಗೆ', ಪ್ರ: ಕಿಟೆಲ್ ಕಾಲೇಜ್‌ನ, ಧಾರವಾಡ

ಶಾಲಿನ ರಘುನಾಥ., ೧೯೯೫, 'ಅಭಿದಾನರತ್ನಮಾಲಾ ಕರ್ನಾಟಕ ಟೀಕೆ' ಸಾರ್ಥಕ (ಪ್ರೊ. ಎಂ. ಮರಿಯಪ್ಪಭಟ್ ಸಂಸ್ಮರಣ ಗ್ರಂಥ) ಸಂ ಶ್ರೀ ಕೃಷ್ಣಭಟ್ ಅರ್ತಿಕಜೆ.

ಶಾಸ್ತ್ರೀ ಕೆ.ಜಿ., ೧೯೭೧, 'ಕಿಟೆಲ್‌ಕೋಶ ಮತ್ತು ದಾಸ ಸಾಹಿತ್ಯ' ಕನ್ನಡಕ್ಕೆ ಕಿಟೆಲ್‌ರ ಕೊಡುಗೆ, ಪ್ರ-ಕಿಟೆಲ್ ಕಾಲೆಜ್, ಧಾರವಾಡ

ಶಿವಾನಂದ ವಿ., 'ಒಕ್ಕಲುತನ ವೃತ್ತಿಪದಕೋಶ' ೧ ಕರ್ನಾಟಕ ಭಾರತಿ ಸಂಪುಟ-೧೦ ಸಂಚಿಕೆ-೪

——— ೧೯೮೫, 'ಕನ್ನಡ ವೃತ್ತಿಪದಕೋಶ' ೩ ಎಲೆಬಳ್ಳಿ ತೋಟದ ವೃತ್ತಿಪದಗಳು ಕರ್ನಾಟಕ ಭಾರತಿ ಸಂಪುಟ-೧೦ ಸಂಚಿಕೆ-೭

——— ೧೯೮೭, 'ಕನ್ನಡ ವೃತ್ತಿಪದಕೋಶ' ೪ ಕರ್ನಾಟಕ ಭಾರತಿ ಸಂಪುಟ-೧೧ ಸಂಚಿಕೆ-೪

——— ೧೯೭೮, 'ಲಿಂಗಮಂತ್ರಿಯ ಕಬ್ಬಿಗರ ಕೈಪಿಡಿ' ಈ ಕಾಲದ ಶಾಸ್ತ್ರಗ್ರಂಥಗಳು ಸಮಗ್ರ ಕನ್ನಡ ಸಾಹಿತ್ಯ ಚರಿತೆ ಸಂ-೪ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಶ್ರೀಕಂಠಯ್ಯ ತೀ.ನಂ., ೧೯೮೩, 'ಆಕ್ಸ್‌ಫರ್ಡ್ ಇಂಗ್ಲಿಷ್ ಡಿಕ್ಷನರಿ' ಸಮಾಲೋಕನ

ಶ್ರೀನಿವಾಸ ಪಾ.ಶ., ೧೯೭೦, 'ರೆ. ಎಫ್. ಕಿಟೆಲ್‌ರ ಕನ್ನಡ ಇಂಗ್ಲಿಶ್ ಅರ್ಥಕೋಶ' ಕನ್ನಡಪ್ರಭ ೨೩-೩-೧೯೭೦

ಶೆಟ್ಟಿ ಮ.ಗ., ೧೯೬೯, 'ಕನ್ನಡ ಕನ್ನಡ ನಿಘಂಟು ಒಂದು ಸಮೀಕ್ಷೆ' ಕನ್ನಡ ನುಡಿ ೩೨-೨

ಶೇಷಾದ್ರಿ ವಿ.ಆರ್., ೧೯೯೫, 'ಔಷಧಿಕೋಶಂ' ಸಾರ್ಥಕ (ಪ್ರೊ. ಎಂ. ಮರಿಯಪ್ಪ ಭಟ್ ಸಂಸ್ಮರಣ ಗ್ರಂಥ) ಸಂ. ಡಾ. ಶ್ರೀ ಕೃಷ್ಣಭಟ್ ಅರ್ತಿಕಜೆ

ಸರಸ್ವತಿ ವಿಜಯಕುಮಾರ್., ೧೯೯೫, 'ಅಭಿಧಾನ ವಸ್ತುಕೋಶ' 'ಸಾರ್ಥಕ' (ಪ್ರೊ.ಎಂ. ಮರಿಯಪ್ಪಭಟ್ ಸಂಸ್ಮರಣ ಗ್ರಂಥ) ಸಂ ಶ್ರೀ ಕೃಷ್ಣಭಟ್ ಅರ್ತಿಕಜೆ

ಸೇಡಿಯಾಪು ಕೃಷ್ಣಭಟ್., ೧೯೯೨, 'ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಮಾದರಿ ಪುಟಗಳು'

——— ೧೯೯೨, 'ತುಳುವಿನ ವಿಶಿಷ್ಟ ಎಕಾರದ ಬಗೆಗೆ ತುಳು ನಿಘಂಟುವಿಗೆ ಪತ್ರಗಳು' ವಿಚಾರ ಪ್ರಪಂಚ (ಸಂ) ಪಾದೇಕಲ್ಲು ವಿಷ್ಣುಭಟ್, ಕರ್ನಾಟಕ ಸಂಘ, ಪುತ್ತೂರು, ದಕ್ಷಿಣ ಕನ್ನಡ

ಸೋಮಶೇಖರ್., ೧೯೭೧, 'ಕಿಟೆಲ್‌ರ ಶಬ್ಬಕೋಶದಲ್ಲಿಯ ಕೆಲವು ಹಿಂದಿ ಶಬ ಗಳ ಅರ್ಥಪರಿವರ್ತನೆ' 'ಕನ್ನಡಕ್ಕೆ ಕಿಟೆಲ್‌ರ ಕೊಡುಗೆ ಪ್ರ-ಕಿಟೆಲ್ ಕಾಲೇಜ್, ಧಾರವಾಡ

ಹನಸೋಗೆ ಜೆ.ಎಂ., ೧೯೭೨ 'ಕನ್ನಡ ಸಾಹಿತ್ಯದಲ್ಲಿ ನಿಘಂಟುಗಳ ವರ್ಗೀಕರಣ' ಕನ್ನಡ ನುಡಿ-೩ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಆಂಗ್ಲ ಬರೆಹಗಳು

Basavaradhya. N., 1980, 'Preparation of Kannada-Kannada Dictionary on Historical Principles' Lexicography in India (ED); by : B.G Misra CIIL Mysore, 79-88

Gurunath Joshi., 1980, 'A Brief survey of Dictionary in Karnataka' Lexicography in India (Ed) by; B.G. Misra C. I. I. L Mysore, 60-69.

Karte S.M., 1965, Lexicography, Annamalainagar Annamala University.

Kedilay, A.S., 1971, 'Kittel's Dictionary and Tamil Dictionary' Kittle's Contribution to Kannada (Ed) by; V.D. Bendre and B.T. Desai Kittel college, Dharwar

——— 1980, 'History of Dictionaries in Kannada with special reference to Billingual Dictionaries' Lexicography in India (Ed) by; M.G. Misra C.I.I.L. Mysore 70-78

Kulkarni. R.Y., 1984, 'A Linguistic Analysis of weavers occupar-tional vocabulary in Kannada' (Unpublished M.phil dessertation submitted to osmonia university, Hydrabad)

Subramanium V. I, 1971, 'Kittle's Influence on malayalam Lexicon' Kittle's contribution to Kannada (Ed) V.D. Bendri and B.T Desai Kittle college, Dharwar

Zgusta, Ladislav., 1971, 'Manual of Lexicography' the Hague, Mouten and company



ಭಾರತೀಯ ಭಾಷಾಧ್ಯಯನದಲ್ಲಿ ಸುನೀತಕುಮಾರ ಚಟರ್ಜಿ, ಸುಕುಮಾರಸೇನ್, ಭ. ಕೃಷ್ಣಮೂರ್ತಿ ಅವರ ಅಧ್ಯಯನಗಳು 'ಭಾಷೆಯ ರಚನೆ'ಗೆ ಒತ್ತುಕೊಟ್ಟು ರಚನೆಗೊಂಡವು. ಅದು 'ಪಾಶ್ಚಿಮಾತ್ಯ ಅಧ್ಯಯನ ಮಾದರಿ'. ಪೂರ್ವೋಕ್ತ ಪದಗಳು, ಪದಪುಂಜಗಳು ದೇಸಿಯ ಪದಗಳಾಗಿದ್ದಾಗ ಸಿದ್ಧಮಾದರಿಯ ನಿಯಮಗಳು ಪಲ್ಲಟಗೊಳ್ಳುತ್ತವೆ. ಆಗ ಭಾಷಾಧ್ಯಯನದಲ್ಲಿ 'ದೇಸಿ ಮಾದರಿ' ರೂಪುಗೊಂಡಿತು. ಈ ಹೊಸಚಿಂತನ ಕ್ರಮ ಕನ್ನಡದ ಸಂದರ್ಭದಲ್ಲಿ ಡಿ.ಎನ್. ಶಂಕರಭಟ್ಟ, ಕೆ.ವಿ. ನಾರಾಯಣ ಅವರಿಂದ ರೂಪುಗೊಂಡಿತು. 'ಭಾಷೆ' ಸಂಸ್ಕೃತಿಯ ಮುಖ್ಯ ಅಂಗ. ಅದನ್ನು ಸಾಮಾಜಿಕ ಚೌಕಟ್ಟಿನಲ್ಲಿ ನೋಡಬಯಸುವ ಮಾದರಿ ಎಂ. ಚಿದಾನಂದಮೂರ್ತಿ ಅವರಿಂದ ಕನ್ನಡದಲ್ಲಿ ಮೂಡಿಬಂದಿತು. ಡಾ. ಅಂಗಡಿ ಅವರ ಅಧ್ಯಯನ ಎಂ. ಚಿದಾನಂದಮೂರ್ತಿ ಅವರ ಮಾದರಿಯನ್ನು ಸ್ಥೂಲವಾಗಿ ನೆನಪಿಸುತ್ತದೆ. ಕನ್ನಡದ ರಚನೆ, ಬಳಕೆ, ಕಾವ್ಯ ಭಾಷೆಯ ಅರ್ಥದ ನೆಲೆಗಳನ್ನು ಸಮಾಜೋಭಾಷಿಕದ ಕಡೆಗೆ ಅಧ್ಯಯನ ಮಾಡಲು ಡಾ. ಅಂಗಡಿ ಅವರ ಬರೆಹಗಳು ಬೆಳಕು ತೋರಿಸಿವೆ. ಅವರ ಭಾಷಾಧ್ಯಯನಕ್ಕೆ ಸಾಹಿತ್ಯ, ಸಂಸ್ಕೃತಿ, ಛಂದಸ್ಸು ಇವುಗಳೆಲ್ಲ ಅಂಟಿಕೊಂಡಿರುತ್ತವೆ. ಈ ವೈಚಾರಿಕ ಪಾತಳಿಯಲ್ಲಿ ಅವರ ಭಾಷಾಧ್ಯಯನ ರೂಪುಗೊಂಡಿದೆ. ಅದರಿಂದ ಭಾಷಾಧ್ಯಯನಕ್ಕೆ ಸಂಬಂಧಿಸಿದಂತೆ ಹೊಸದಾರಿ ತೆರೆದು ಕನ್ನಡ ಭಾಷೆಯ ಚಲನಶೀಲತೆಯನ್ನು, ಭಾಷೆಯ ಸಾಮಾಜಿಕ ಚಹರೆಯನ್ನು, ಭಾಷಾಬಳಕೆಯ ಹೊಸಸಾಧ್ಯತೆಯನ್ನು ಗುರುತಿಸುವುದು ಅವರಿಗೆ ಮುಖ್ಯವಾಗಿದೆ.